ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

4—1—1968

೨೦
ಪೈಸೆ

"ಹುಚ್ಚ"

ಲೇಖಕ: ಶ್ರೀ "ಗೌರೀಶ್ವರ"

"ಯೂರಪ್ಪಾ ನೀನು?" ಕುಮುದಿನಿ ಕೇಳಿದಳು.

"ಇಲ್ಲಿಯ ಜನರೆಲ್ಲರೂ ನನ್ನನ್ನು ಹುಚ್ಚನೆಂದೇ ಸಂಬೋಧಿಸುತ್ತಿದ್ದಾರೆ ತಾಯೀ!" ಅವನೆಂದ.

ಕುಮುದಿನಿಗೆ ಆಶ್ಚರ್ಯವಾಯಿತು—'ನಿಜವಾಗಿಯೂ ಹುಚ್ಚನಾದವನೋರ್ವನು ತನ್ನನ್ನೇ ಹುಚ್ಚನೆಂದು ಸಂಭೋಧಿಸಿಕೊಳ್ಳುವುದು ಸಾಧ್ಯವೇ? ಹೌದು, ಒಂದು ರೀತಿಯಿಂದ ಸಾಧ್ಯವೂ ಹೌದು, ಕಾರಣ ಹುಚ್ಚರು ಹುಚ್ಚರೇ ಅಲ್ಲವೇ? ಹುಚ್ಚತನದ ಅಥವಾ ಜ್ಞಾನದ ಅರಿವು ಅವರಿಗಿರುವುದೇ? ಅಂಥವರು ತಮ್ಮನ್ನು ಹುಚ್ಚನೆಂದೇ ಒಂದು ನೇಳೆ ತಿಳಿದು ಕೊಂಡರೂ ಅದಕ್ಕೆ ಆಚ್ಚರಿ ಪಡಲಾದೀತೇ?

ಆದರೆ ಕಮುದಿನಿಗೆ ಈ ಹುಚ್ಚನ ನಡೆ, ನುಡಿ, ವರ್ತನೆಗಳಿಂದ ಈತ ಪೂರ್ಣ ಹುಚ್ಚನೆಂದು ಖಚಿತ ಪಡಿಸಿ ಕೊಳಲು ಮನಸ್ಸಿಲ್ಲವಾಯಿತು. ಅವಳು ಕೇಳಿಯೇ ಕೇಳಿದಳು- 'ಹಾಗಾದರೆ, ನೀನು ಹುಚ್ಚನೇ?'

"ಸಮಾಜವೇ ನನ್ನನ್ನು ಹುಚ್ಚನೆಂದು ಕರೆಯುತ್ತಿರುವಾಗ ನಾನೇಕೆ ಅಲ್ಲವೆನ್ನಲಿ ತಾಯೀ...?"

ಹುಚ್ಚನಾದರೆ ಈತ ಈ ರೀತಿ ಮಾತನಾಡಿಯಾನೇ? ಮಾತು ಕೇಳಿದರೆ ಜ್ಞಾನಿಯಂತಿದೆಯಲ್ಲ! ಅದೇಕೆ ಈತ ಈ ರೀತಿ ಮಾತಾಡಲಾರ, ಎಷ್ಟೆಂದರೂ ಹುಚ್ಚನಲ್ಲವೇ! ಕುಮುದಿನಿಯ ತಲೆ ಕೆಲಸ ಮಾಡಲಾರದಾಯಿತು. ಆದರೂ ಕೆದಕಿ ಕೇಳಿದಳು-"ಹಾಗಾದರೆ,... ಸಮಾಜವು ಮಾತ್ರ ನಿನ್ನನ್ನು ಹುಚ್ಚನೆಂದು ತಿಳಿದು ಕೊಂಡಿರುವುದೇ, ಅಥವಾ ನಿನ್ನ ಮನಸ್ಸಿನಲ್ಲಿಯೂ ತಾನು ಹುಚ್ಚನೇ ಹೌದೆಂಬ ಭಾವನೆಯು ತುಂಬಿಕೊಂಡಿದೆಯೇ?

'ಸಮಾಜಕ್ಕೂ ನನಗೂ ಭೇದವೆಲ್ಲಿ? ಸಮಾಜವನ್ನು ನಾನು ಶತಿಶಃ ಇಲ್ಲ, ಅಥವಾ ನಾನು ಸಮಾಜಬಾಹಿರನೂ ಅಲ್ಲ—ಸಮಾಜದಲ್ಲಿರುವವರೆಲ್ಲರೂ ಮಾನವರೇ, ನಾನೂ ಮಾನವನೇ! ಎಲ್ಲರನ್ನೂ ಸೃಷ್ಟಿಸಿದ ಸೃಷ್ಟಿಕರ್ತನೇ ನನ್ನನ್ನೂ ಸೃಜಿಸಿದ. ಎಲ್ಲರಂಗೂ ಕೊಡುವಂತಹ ಹೃದಯವನ್ನೇ ನನಗೂ ಕೊಟ್ಟ, ಅಂದಾಗ ಸಮಾಜದ ಭಾವನೆಗಳು ನನ್ನ ಭಾವನೆಗಳಿಂದ ವ್ಯತಿರಿಕ್ತವೇಕಾಗಬೇಕು ತಾಯೀ ...?"

ಕುಮುದಿನಿ ದಂಗಾದಳು. ಈತ ಒಂದೋ ಪೂರ್ಣ ಹುಚ್ಚನಿರಬೇಕು, ಇಲ್ಲವೇ ಬಹುದೊಡ್ಡ ಜ್ಞಾನಿಯಿರಬೇಕು; ಎಂದು ಖಚಿತವಾಯಿತವಳಿಗೆ. ಅಂತೂ ಈ ಮನುಷ್ಯನ ಮೂಲವನ್ನು ಕಂಡು ಹಿಡಿಯುವ ಆಸೆಯಾಯಿತು ಕುಮುದಿನಿಗೆ-

"ಹುಚ್ಚಾ...., ನೀನು ನನ್ನನ್ನೂ ಹುಚ್ಚಳಾಗಿಸುತ್ತಿರುವೆಯಲ್ಲಾ! ನೀನು ಹುಚ್ಚನಂತೂ ಅಲ್ಲ! ನೀನಾರೋ ದೊಡ್ಡ ಮಹಾತ್ಮ! ನಿನ್ನಲ್ಲಿರುವ ಅಗಾಧ ಜ್ಞಾನಿಶ್ಯದ 'ಕ್ಷ' ಕಿರಣಗಳು ನಿನ್ನ ಮೊಗದಲ್ಲಿ ಕಂಡು ಬರುತ್ತಿವೆ. ಇಂದಿನ ಸಮಾಜದ ಹುಚ್ಚುತನವನ್ನೇ ನೀನು "ಹುಚ್ಚ" ಎಂದು ಕರೆದಿರಬೇಕು. ಆದ್ದರಿಂದಲೇ, ಆ ಹುಚ್ಚು ಸಮಾಜ ನಿನ್ನನ್ನು 'ಹುಚ್ಚ' ಎಂದು ಭಾವಿಸಿದೆ! ಏನನ್ನುವೆ?"

"...ತಾಯೀ....ಅಂತಿದ್ದರೆ, ತಾನು.... ಸಮಾಜಬಾಹಿರರೇ...?" ಹುಚ್ಚ ಕೇಳಿದ.

"ಅರರೆ....ಹೌದು, ಈಗ ನಾನು ನಿಜವಾಗಿಯೂ ಹುಚ್ಚಿಯೇ ಹೌದು! ನಾನು ಹುಚ್ಚನೆಂದೆನಿಸಿದವನೊಬ್ಬನನ್ನು ಕೆದಕಿ ಅವನ ಅಮೂಲಾಗ್ರ ವಿವರವನ್ನು ಸಂಗ್ರಹಿಸುವ ಪ್ರಯತ್ನಕ್ಕೆ ಕೈಯೊಡ್ಡಿ ಅವನ ಬಾಯಿಂದಲೇ "ನೀನು ಹುಚ್ಚಿಯೋ?" ಎಂದು ಕೇಳಿಸಿಕೊಂಡ ನಂತರವೂ ತಾನು ಹುಚ್ಚಿಯಲ್ಲವೇ? ಆದರೆ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು! ಕಳ್ಳನನ್ನು ಹಿಡಿಯುವ ಪತ್ತೇದಾರನು ಕಳ್ಳತನದ ಮರ್ಮವನ್ನರಿತಿರಬೇಕು! ನಿನ್ನ ವಿಷಯಗಳನ್ನೆಲ್ಲ ಸಂಗ್ರಹಿಸುವ ನನ್ನ ಕಾರ್ಯ ಸಫಲವಾಗ ಬೇಕಾದರೆ ನಾನು ಹುಚ್ಚಳಂತಾಗದೆ ನಿರ್ವಾಹವೇ ಇಲ್ಲ! ಅದಂತಿರಲಿ, ನೀನು ಈ ರೀತಿ ಹರಕು ಬಟ್ಟೆಗಳಿಂದ ಮೈ ಮುಚ್ಚಿಕೊಂಡು, ಎಣ್ಣೆ ಕಾಣದ ನಿನ್ನ ಕೂದಲುಗಳನ್ನು ಗಾಳಿಗೆ ಹಾರಾಡಿಸಿಕೊಂಡು, ಮನುಷ್ಯರು ತಿನ್ನದಿರುವ ಈ ಆಹಾರವನ್ನು ತಿಂದುಕೊಂಡು ಜೀವಿಸುತ್ತಿರುವ ಕಾರಣವೇನು?" ನೇರವಾಗಿಯೇ ಕೇಳಿದಳು ಕುಮುದ.

ಹುಚ್ಚ ಹೇಳಿದ—"ತಾಯೀ! ಹುಚ್ಚ ಫಿಗೆಲ್ಲಿಯೊದರೂ ಸ್ಥಾನಮಾನಗಳು ದೊರಕುವುದಿದೆಯೇ? ಸಮಾಜವು ಸಂಪೂರ್ಣ ಉಪಯೋಗಿಸಿ ಹರಕಾದ ಚಿಂದಿ ಬಟ್ಟೆಗಳೇ ಹುಚ್ಚನ ಹೊಚ್ಚ ಹೊಸತಾದ ಉಡುಪು! ಕೃತಕ ವಸ್ತುಗಳನ್ನೇ ಚಪ್ಪರಿಸುವ ಇಂದಿನ ಸಮಾಜದ ಸಭ್ಯರು ನನ್ನ ಆಹಾರದ ರುಚಿಯನ್ನೇನು ಬಲ್ಲರು? ದಿನೇ ದಿನೇ ಪ್ರಕೃತಿಯಿಂದ ದೂರ ಹೋಗುತ್ತಿರುವ, ಕೃತಕತೆಯಿಂದ ತುಂಬಿದ ಜನರು, ಕೃತಕ ಆಹಾರವನ್ನೇ ತಿಂದು, ಈ ಪ್ರಾಕೃತಿಕ ಆಹಾರವನ್ನೇ ನನಗೆ ಬಿಟ್ಟುಕೊಟ್ಟರೆ ಇದೇ ನನಗೆ ಪಡ್ರಸ ಭೋಜನವಲ್ಲವೇ? ಪ್ರಕೃತಿಯೇ ಸಮಾಜದ ಮಾತೆಯಲ್ಲವೇ? ಹಾಗಿದ್ದರೆ ಈ ಹುಚ್ಚ ಪ್ರಕೃತಿ ಮಾತೆಯ ಮಡಿಲಲ್ಲಿ ತನ್ನ ತಲೆಯನ್ನೊರಗಿಸಿದ್ದರೆ ಆಶ್ಚರ್ಯವೇನು?"

ಕುಮುದಿನಿಗೆ ಎಳೆ ಸಿಕ್ಕಿತು—"ಹಾಗಿದ್ದರೆ ನೀನು ಫಿಜವಾಗಿ ಹುಚ್ಚನಲ್ಲ! ಸಮಾಜ ನಿನ್ನನ್ನು ಹುಚ್ಚನನ್ನಾಗಿ ಮಾಡಿದೆಯೆಂದು ನಿನ್ನ ಬಾಯಿ ಮಾತಿನಿಂದಲೇ ಖಚಿತವಾಯಿತಲ್ಲ ...!

"ಸರಿ ತಾಯಿ,...ನಾನು ಹುಚ್ಚನಲ್ಲವೆಂಬುದು ತಮಗಾದರೂ ತಿಳಿಯಿತಲ್ಲ, ಅಷ್ಟೇ ನನಗೂ ಬೇಕಾದುದು!....ಅಪ್ಪಣೆ ಕೊಡಿ ತಾಯಿ....'

ಹುಚ್ಚನು ಮೆಲ್ಲನೆ ಮುಂದಡಿಯಿಡ ತೊಡಗಿದನು. ಆದರೆ ಕುಮುದಿನಿ ಅವನನ್ನಲ್ಲಿಗೇ ಬಿಡುವವಳೇ! ಹುಚ್ಚನನ್ನು ಕೆದಕಿ ಇನ್ನು ವಿಚಾರಗಳನ್ನು ಸಂಗ್ರಹಿಸಿಕೊಂಡವಳು ಆತನನ್ನು ಅವನ ಪಾಡಿಗೆ ಬಿಟ್ಟಳೆ, ಆ ಮನುಷ್ಯನನ್ನು ಹುಚ್ಚನೆಂದು ಕರೆದ ಸಮಾಜದವಳೇ ಅವಳೂ ಆಗಲಾರಳಲ್ಲ? ಕುಮುದಿನಿಗದು ಇಷ್ಟವಿರಲಿಲ್ಲ. ಹುಚ್ಚನ ಕೊನೆಯ ಮಾತನ್ನವಳು ಗುಣಾಗುಣಿಸಿದಳು. "ಸರಿ ತಾಯೀ....., ನಾನು ಹುಚ್ಚನಲ್ಲವೆಂಬುದು ತಮಗಾದರೂ ತಿಳಿಯಿತಲ್ಲ,... ಅಷ್ಟೇ ನನಗೂ ಬೇಕಾದುದು!' ಛೆ, 'ಇವನಲ್ಲೇನೋ ಇನ್ನೂ ವಿಶೇಷವಿರಬೇಕು" ಎಂದು ದೃಢವಾಯಿತು ಕುಮುದಿನಿಗೆ, "ಇವನ ಜೀವನವೇನೋ ಸ್ವಾರಸ್ಯವಾದ ಕಥಾವಸ್ತುವಿನಿಂದ ಕೂಡಿದಯಂಬುದಂತ್ಲಿ ಅನುಮಾನವಿಲ್ಲ. ಸಮಾಜದ ಹಲವು ಮಂದಿಗಳಿಗೆ ಈತನು ತಾನು ಹುಚ್ಚನಲ್ಲವೆಂಬುದನ್ನು ಮನಗಾಣಿಸಲು ಶತ ಪ್ರಯತ್ನಪಟ್ಟಿದ್ದಾನೆ! ಇದು, ಆತನ ಆ ಕೊನೆಯ ಮಾತಿನಿಂದಲೇ ವ್ಯಕ್ತವಾಗುವುದಿಲ್ಲವೇ? ಆದರೆ ಈತ ನಿರಂತರನಾಗಿರುವನೆಂಬುದು ಸಂಪೂರ್ಣ ಸತ್ಯ. ಇವನನ್ನು ನೋಡಿದವರೆಲ್ಲರೂ ಹುಚ್ಚನೆಂದೇ ತಿಳಿದು ಆತನ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ಅವನ ವಾಡಿಯುಲ್ಲಿರುವ ಸತ್ಯಾಂಶವನ್ನು ಗುರುತಿಸದಿದ್ದರೆ, ಅದು ಸಮಾಜದ ತಪ್ಪೇ, ಅಥವಾ ಈತನ ತಪ್ಪೇ?

(ಹಸ್ತೊಂದನೇ ಪುಟ ನೋಡಿರಿ)

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಇದರ

ಅಧ್ಯಕ್ಷರು ಡೈರೆಕ್ಟರ್‌ಗಳು,

ಕಾರ್ಯನಿರ್ವಾಹಕ ವರ್ಗದವರು

ಮತ್ತು ನೌಕರರು

ಇಮ್ಮಡಿ

ಹಿತೈಷಿಗಳಿಗೂ, ಪಾಲುದಾರರಿಗೂ

ಮತ್ತು

ಸ್ನೇಹಿತರಿಗೂ

ಹೊಸ ವರ್ಷ

ಸುಖಪ್ರದ ಮತ್ತು ಸಿದ್ಧಿದಾಯಿ ಆಗಲೆಂದು

ಶುಭಾಶಯಗಳನ್ನು ಅರ್ಪಿಸುತ್ತಾರೆ.

ಎಂ. ಸುಂದರರಾಮ ಶೆಟ್ಟಿ

ಅಧ್ಯಕ್ಷ

VB-52-KEC(N)

ಕುಂದಾಪುರ

ಮುನ್ಸಿಫ್ ಕೋರ್ಟನಲ್ಲಿ

O. S. 593/66.

ಶಂಕರ ರಾವ್ —ವಾದಿ

ಮತ್ತು

ದೇವಪ್ಪ ಶೇರೆಗಾರ ಕೂಡಾ—ಪ್ರತಿವಾದಿರು

ಸಪ್ಲಿಮೆಂಟ್ ಪ್ರತಿವಾದಿ ನಾಂಯುಣ ಶೇರೆಗಾಂ—ಬಗ್ಗನ ಮಂಜಯ್ಯ ಶೇರೆಗಾರನ ವಾಗ, ಕುಂದಾಪುರ ಕಸಬಾ.

ವಾದಿಯು ಗೇಣಿ ಬಾಕಿ ಬಗ್ಗೆ ಪ್ರತಿವಾದಿರ ಮೇಲೆ ಮಾಡಿದ ಮೇಲೆ ಕಾಣಸಿದ ದಾವಯು ತಾರೀಕು 28-1-68ಕ್ಕೆ ತಪ್ಪಿಗೆ ಯಿಟ್ಟಿರುತ್ತದೆಂತಲೂ ಸದ್ರಿ ದಿವ್ಸ ಸಪ್ಲಿಮೆಂಟನ ಪ್ರತಿವಾದಿಯು ಕೋರ್ಟು ಮುಂದೆ ಹಾಜ್ರಾಗಲಿಕ್ಕೆ ತಪ್ಪಿದ್ದು ಆತನ ಪರೋಕ್ಷದಲ್ಲಿ ದಾವೆಯ ಮುಂದಿನ ತನ್ನ ನಡೆಯುವದೆಂತಲೂ ಸಹಾ ಈ ಮೂಲಿಕ ಸದ್ರಿ ನಿನೇ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

G. Sanjiva Rao,

Vakil for Plff.

ತಾ. 22-12-67, ಕುಂದಾಪುರ.

ಫೋನ್ 226

ಕರಾವಳಿ ಕಿರಣ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೮	೪—೧—೧೯೬೮	No. 18

ನಿನಗಿಂತ ಹಿರಿಯರಿಲ್ಲ

ಶ್ರೀ ಬಸವಣ್ಣನವರ ಎಂಟನೆಯ ಶತಮಾನೋತ್ಸವ ಕನ್ನಡನಾಡಿನಲ್ಲಿ, ಕನ್ನಡಿಗರಿಯವ ಹೊರನಾಡಿನಲಿ ಅದ್ದೂರಿಯಿಂದ ನಡೆಯುತ್ತಿದೆ. ಬಸವ ಕಲ್ಯಾಣದಲ್ಲಿ ಅತ್ಯಂತ ವೈಭವದಿಂದ ಇದು ನೆರವೇರುತ್ತಿದೆ. ಬಸವಣ್ಣನವರ ವ್ಯಕ್ತಿತ್ವ, ಅವರು ಸಮಾಜಕ್ಕೆ, ಸಮಾಜೋದ್ಧಾರಕ್ಕೆ ನೀಡಿದ ಕಾಣಿಕೆ, ಅವರ ಸಾಹಿತ್ಯಕ ಸೇವೆ ಎಂದು ಮುಂತಾದುವುಗಳ ಮೇಲೆ ತಾಸುಗಟ್ಟಲೆ ಭಾಷಣಗಳು ನಡೆಯುತ್ತಿವೆ. ಅವರ ಚರಿತ್ರೆ—ಕೃತಿಗಳೂ ಬೆಳಕಿಗೆ ಬರುತ್ತವೆ. ಬಸವಣ್ಣನವರು ತೋರಿದ ದಾರಿಯಲ್ಲಿ ನಡೆಯುವುದರಿಂದಲೇ ಮಾನವ ಕಲ್ಯಾಣವೆಂಬ ಆಶ್ಚರ್ಯವೇದಿಕಾರೂಢರಿಂದ ಹೊರಡುತ್ತಿದೆ. ನೆರೆದ ಜನ ಸಂದೋಹ ಅದ್ದೂರಿಯಿಂದಲೇ ಕರತಾಡಿಸುತ್ತಿದೆ. ತಲೆದೂಗುತ್ತಿದೆ, ಬೇಷ್ ಬೇಷ್ ಎಂದು ಆಕ್ಷ ಸಂತೋಷವನ್ನೂ ಅಭಿವ್ಯಕ್ತಗೊಳಿಸುತ್ತಿದೆ, ಮುಂದೆ? ಬಸವ ಅಪ್ಪಮ ಶತಮಾನೋತ್ಸವಕ್ಕಾಗಿ ಸರಕಾರ ಏನು ಮಾಡಿದೆ ಎಂದು ವಿಧಾನ ಸಭೆಯಲ್ಲಿ ಯಾರಾದರೂ ಕೇಳಿದರೆ, ಮಂತ್ರಿವರ್ಯರ ಉತ್ತರ ತಯಾರಿರುತ್ತದೆ—"ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ..."

ಇದಕ್ಕೆ ಸೊದಲು ನಾವು ಪುರಂದರ ದಾಸ, ಕನಕದಾಸರ ಚತುಶ್ಶತಮಾನೋತ್ಸವವನ್ನು ಆಚರಿಸಿದ್ದೇವೆ. ದಾಸವರೇಣ್ಯರ ಜೀವನ—ತ್ಯಾಗ—ಅಂತರ್ಭಾವ—ವಿರಕ್ತಿಯ ಬಗ್ಗೆ ಘಟಾನುಘಟಿಗಳಿಂದ ಭಾಷಣ ಕೇಳಿದ್ದೇವೆ; ಅವರ ಕೀರ್ತನೆಗಳನ್ನು ಹಾಡಿಸಿ ನಮ್ಮ ಆತ್ಮ ಸಂತೋಷ ಪಡೆದಿದ್ದೇವೆ, ಅವರು ಸಮಾಜಕ್ಕೆತೋರಿದ ದಾರಿಯಿದು, ಇದರಲ್ಲಿ ನಡೆದರೆ ಮಾತ್ರ ನಮ್ಮ ಸಮಸ್ಯೆಗಳಿಗೆಂದು ಸಮಾಧಾನ ಲಭಿಸೀತು ಎಂಬ ಕೈಗಂಬವನ್ನು ನೋಡಿದ್ದೇವೆ. ಆದರೆ, ನಾವ್ಯಾವ ದಾರಿಯಲ್ಲಿ ನಡೆಯುತ್ತಿದ್ದೇವೆ? ನಮ್ಮ ಅಂತರಂಗ—ಬಹಿರಂಗ ಅಭಿವ್ಯಕ್ತಿಯು ಯಾವುದರ ಮೂಲಕ ಯಾವುದರತ್ತ ಸಾಗುತ್ತಿದೆ? ದಾಸವರ್ಯರಂತೆ ದೇವ ದುರ್ಲಭ, ತ್ಯಾಗ ಮಾಡುವುದು ಸಾಮಾನ್ಯ ಜನತೆಗೆ ಸಾಧ್ಯವಿಲ್ಲ. ವಿರಕ್ತಿಯಲ್ಲಿ ಅನುರಕ್ತವಾಗುವಷ್ಟು ಜನತೆಯ ಅಂತರಾತ್ಮ ಪರಿಪಕ್ವವಾಗಿಲ್ಲ. ಆದರೊಜನತೆಯಲ್ಲಿ ದೇವರ ಭಯವಾದರೂ ಮೂಡಿದೆಯೆ? ಮೂಡಿಸುವುದು ಸಾಧ್ಯವಾಗಿದೆಯೆ? ದಾಸರ ಕೀರ್ತನೆಗಳನ್ನು ಹಾಡುವ ಸಂಪ್ರದಾಯ ತಿಳಿದ ಹಕ್ಕಿಯು ರೆಕ್ಕೆಯ ಮೇಲೆ ಕುಳಿತು ದೂರ ದೂರವೋಡಿ ಹೋಗುತ್ತಿದೆ. ಈ ದಾಸರು ಅಕಸ್ಮಾತ್ತಾಗಿ ನಾಲ್ಕು ಶತಮಾನಗಳು ಕಳೆದ ಮೇಲೆ ಅವತರಿಸಿ ಕೆಲವು ದಿನ ತಿರುಗಾಡಿ ಮತ್ತೆ ಅದೃಶ್ಯರಾದರು. ಮಹಾತ್ಮಾ ಬಸವಣ್ಣನವರು ಸುನರವತರಿಸಿ ಬೇಕಾದರೆ ಎಂಟು ಶತಮಾನಗಳು ಹಿಡಿದುವು. ಅವರ ವಚನ ಸುಧೆಯ ಪಾನವನ್ನು ಜನವಿದೀಗ ಮಾಡಿಕೊಳ್ಳುತ್ತಿದೆ. ಉಚ್ಚ-ನೀಚ ಭೇದಭಾವದಿಂದ ಸಮಾಜ ದುರವಸ್ಥೆಗೆ ಗುರಿಯಾದಾಗ, ಈ ಭೇದವನ್ನು ಅಳಿಸಲು ಬದ್ಧಕಂಕಣರಾಂದ ಬಸವಣ್ಣನವರ ಜೀವನ ಅವ್ಯತಪೂರ್ಣವಾದುದು. ತನ್ನ ಈ ಆದರ್ಶ ಸಾಧನೆಗೆ ಎಡೆಹಾಯ್ದು ವಿಘ್ನ ವಿಷ್ಟಾರಗಳೆಲ್ಲವನ್ನೂ ಕಚ್ಚೆದೆಯಿಂದ ಎದುರಿಸಿ ಗುರಿ ಮುಟ್ಟಿದ ಇವರ ಸಾಮಾಜಿಕ ನಿಷ್ಠೆ, ದೈವಭಕ್ತಿ ಪ್ರಶಂಸಾರ್ಹವಾದುದು. "ನನಗಿಂತ ಕಿರಿಯರಿಲ್ಲ, ನಿನಗಿಂತ ಹಿರಿಯರಿಲ್ಲ" ಎಂದು ಸಾರಿದ ಬಸವಣ್ಣನವರ ವಚನ ದೈವ ಭಕ್ತಿಗೊಂದು ಉದಾಹರಣೆ ಜನತೆಯಲ್ಲಿ ದೈವ ಭಕ್ತಿಯು ಹ್ರಾಸವಾಗುತ್ತ ಬರುತ್ತಿದೆ, ಇದರ ಹೇತುಗಾಮವೇ ಹಿರಿಯರಲ್ಲಿ ಕಿರಿಯರಿಗೆ ಭಕ್ತಿ—ಭಯ—ವಿಶ್ವಾಸಗಳು ಹಾರಿ ಹೋಗುತ್ತಿರುವುದು. ದೇಶದಲ್ಲಿ ಎಲ್ಲ ವಲೆಗಳಲ್ಲಿಯೂ ತಲೆದೋರುತ್ತಿರುವ ವಿದ್ಯಾರ್ಥಿ ಅಶಾಂತಿಗೆ ಹಿರಿಯರಲ್ಲಿ ಅನರಿಗಿರುವ ಅವಿಶ್ವಾಸವೇ ಕಾರಣವೆನ್ನಬಹುದಾದರೆ, ಹಿರಿಯರಲ್ಲಿ ತಮಗಿಂತ ಹಿರಿಯರಾದವರ ಮೇಲೆ ವಿಶ್ವಾಸ—ಶ್ರದ್ಧೆಗಳಿಲ್ಲದಿರವುದೇ ಇದಕ್ಕೆ ಹೇತುವೆನ್ನಬೇಕು.

ಮಹಾ ಪುರುಷರ ಜಯಂತಿಯು ನೆನಪಿನದಲ್ಲದಿದ್ದರೂ ಅವರ ಸ್ಮರಣೆ ಮಾಡಿಕೊಳ್ಳುವುದು ಒಳ್ಳೆಯದು; ಇದಕ್ಕಿಂತ, ಅವರ ವ್ಯಕ್ತಿತ್ವದ ಪ್ರಭಾವವು ಜನತೆಯಲ್ಲಿ ಮೂಡುವುದು ಅಪೇಕ್ಷಣೀಯ. ಈ ಬಗೆಯ ಉತ್ಸವಗಳು ನೆರೆಯ ನೀರಿನಂತೆ ಕೆಲವು ದಿನ ದಡವೇರಿ ಹರಿಯುತ್ತದೆ, ಮುಂದೆಂದು ದಿನ ಒಣಗಿ ಹೋಗುತ್ತದೆ—ಇದು ಸಾಮಾನ್ಯರ ಅನುಭವ—ಅಂತಲೇ ಒಂದು ಗಜ್ಜಲ—ಗೌಜಿಗಳ ಜಾತ್ರೆ ಮಳೆ ಬಂದ ಕೂಡಲೇ ನೆಲವೆಲ್ಲ ನೀರಿನಿಂದ ತುಂಬಿ ತುಳುಕಾಡಬಹುದು; ಒಂದೆರಡು ದಿನಗಳಲ್ಲೇ ಈ ನೀರು ಅದೃಶ್ಯವಾಗ ಬಹುದು. ಆದರೂ, ಭೂಮಿಯೊಳಗೆ ಫೀರಿನ ಅಲೆಯು ಸದಾಕಾಲ ದೃಷ್ಟಿಗೋಚರವಾದುದು. ಇದಕ್ಕೆ ವರ್ಣನೆ ಗುಣವೇ ಕಾರಣ. ಮಹಾಪುರುಷರ ಜಯಂತಿಯು ಪರಿಣಾಮಗಳೂ ಇದಕಂತ ಮಾನವನ ಹೃದಯಾಂತರಾಳದಲ್ಲಿ ಸದಾ ಮನೆಮಾಡಬೇಕು, ಇಲ್ಲವಾದರೆ ಥಿಯೇಟರಿನಲ್ಲಿ ನಡೆಯುವ ಸಿನಿಮಾ ಬೀದಿಬಾಗಿಲಿನಲ್ಲಿನ ಡೊಂಬರಾಟ ಮತ್ತು ಇಂತಹ ಉಚ್ಚಮಟ್ಟ ನಡುವೆ ಯಾವ ಅಂತರವೂ ಇಲ್ಲವಾಗುವುದು. "ಸಂತೆ ನೆರೆಯಿತ್ತು ನಾನಾಪರಿಯಲ್ಲಿ, ಪಂಥಸ್ತರೊಳೀದರು ತಂತಮ್ಮ ದಾರಿಯಲಿ" ಎಂಬಂತಾಗುತ್ತದೆ. ಇದಕ್ಕಾಗಿಯೇ ನಮ್ಮ ಶಕ್ತಿ-ಸಂಪತ್ತುಗಳು ವ್ಯಯವಾಗ ಬಾರದು.

ದಿ| ಮ. ರಾಮಮೂರ್ತಿ

'ನಗುವಳು ಹೆಡತಲೆಯ ಮೃತ್ಯು' ಎಂದೊಬ್ಬ ಕವಿ ಹಾಡಿದ್ದಾನೆ. ಕನ್ನಡದ ಜನಪ್ರಿಯ ಸಾಹಿತಿ, ಕನ್ನಡ ಚಳುವಳಿಯ ಹಿರಿಯ ಮ. ರಾಮಮೂರ್ತಿಯವರ ಅಕಾಲ ಅಕಸ್ಮಿಕ ನಿಧನವೂ ಇದಕ್ಕೊಂದು ಉದಾಹರಣೆಯೆನಿಸಿತು. ತಮ್ಮ ಹಿರಿಯನಿಲ್ಲಿ ಹೊಸತಾಗಿ ತೋಡುತ್ತಿದ್ದ ಬಾವಿಯನ್ನು ನೋಡಲು ತಮ್ಮಬ್ಬರು ಮಕ್ಕಳೊಡನೆ ಹೋದ ರಾಮಮೂರ್ತಿಯವರು ಬಾವಿಯ ಹಕ್ಕದಲ್ಲಿ ನಿಂತು ನೋಡುತ್ತಿರುವಾಗಲೇ ಪಕ್ಕ ಕುಸಿದು ಮಣ್ಣಿನಲ್ಲಿ ಸಮಾಧಿಹೊಂದಿದರು—ಜತೆಯಲ್ಲಿ ಇವರು ಮಕ್ಕಳೂ. ಮೃತ ಶರೀರಗಳನ್ನು ಬಹು ಹೊತ್ತಿನ ನಂತರ ಅಗೆದು ಹೊರ ತೆಗೆಯಲಾಯಿತು. ಅಂತ್ಯ ಸಂಸ್ಕಾರದಲ್ಲೂ ಅಪಾರ ಜನರು ಸೇರಿದ್ದರು.

ಶ್ರೀ ರಾಮ ಮೂರ್ತಿಯವರು ಕನ್ನಡದ ಚಳುವಳಿಗಾರರು; ಕಾದಂಬರಿಕಾರರು, ಕನ್ನಡದಲ್ಲಿ ಉತ್ತಮ ಪತ್ರಿಕೆದಾರ ಕಾದಂಬರಿಗಳನ್ನು ಬರೆದು ಅತ್ಯಂತ ಜನಪ್ರಿಯರಾದವರು. ಸಾಹಿತ್ಯದ ಪ್ರತಿಭೆ ವಂಶಗತವಾಗಿ ಇವರಿಗೆ ಬಂದುದು. ಅವರ ವೃದ್ಧ ತಂದೆ ವೀರಕೇಸರಿ ಸೀತಾರಾಮ ಶಾಸ್ತ್ರಿಯವರು ಕನ್ನಡ ಪತ್ರಿಕೋದ್ಯಮದ ಭೀಷ್ಮಾಚಾರ್ಯರೆಂದು ಹೆಸರು ಪಡೆದವರು.

ಕ್ರಮಲ ಅರಳಿಳಿಸ್ತ ಸುಮಾಳ ಬೀರುತ್ತಿರುವಷ್ಟರಲ್ಲೇ ಅದು ಅನೆಯ ಸೊಂಡಿಲಿಗೆ ಸಿಕ್ಕಿತ. ದಿ| ರಾಮಮೂರ್ತಿಯವರ ವಿಧವೆ ಕಮಲಮ್ಮ, ವೃದ್ಧಪಿತ ಸೀತಾರಾಮ ಶಾಸ್ತ್ರಿ ಮತ್ತವರ ಕುಟುಂಬದ ಈ ಹೃದಯ ವಿದ್ರಾವಕ ದುಃಖವಲ್ಲಿ ಸಮಸ್ತ ಕನ್ನಡಿಗರೂ ಸಹಭಾಗಿಯಾಗಿದ್ದಾರೆ, ಕಣ್ಣೀರು ಮಿಡಿಯುತ್ತಾರೆ. ಮೃತರಾತ್ಮಗಳು ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುತ್ತಾರೆ.

ನರಸಣ್ಣನ ಸರಸ

'ರೂಪಾಯಿಗೆ ಸಡಿಯಕ್ಕಿ ಕೊಡಲು ಮದ್ರಾಸ್ ಸರಕಾರ ಲಾಟರಿ ಟಿಕೇಟು ಮಾರ ಹೊಡಗುತ್ತಂತೆ...'

'ಕೇರಳದ ಗಾಳಿ ಮದ್ರಾಸಕ್ಕೂ ಬಡಿಯುತ್ತಂತಾಯ್ತು...'

ವಚನ ಸುಧೆ

ಜೀರ್ಣ ಮಾನ್ನಂ ಪ್ರಶಂ ಸಂತಿ
ಭಾಯೋಂ ಚ ಗತಯೌವನಾಂ
ಶೂರಂ ವಿಜಿತ ಸಂಗ್ರಾಮಂ
ಗತಶಾರಂ ತಪಸ್ವಿನಂ॥

ಜೀರ್ಣವಾದ ಮೇಲೆ ಅನ್ನವನ್ನು, ಯೌವನ ಕಳೆದ ಮೇಲೆ ಪಾಡಿಯನ್ನು, ಯುದ್ಧ ಗೆದ್ದ ಮೇಲೆ ಸೈನಿಕನನ್ನು, ಜ್ಞಾನಗಳಿಸಿದ ಮೇಲೆ ತಪ್ಪಜ್ಞಾನಿಯನ್ನು ಸಜ್ಜನರು ಮರೆತು ಬಿಡುವುದಿಲ್ಲ.

ಕಲಾವಿದರಿಗೆ ಸನ್ಮಾನ

ಕಲಾವಿದರಾದ ಸರ್ವಶ್ರೀಯುತರು. ಎಲ್. ಎನ್. ಸಿಂಗ್, ವಿಠ್ಠಲರಾಯಸಿಂಗ್, ಬಿ ವಿಠಲಾಚಾರ್ಯ, ಹಾರ್ಮೋನಿಯಂ ಕೃಷ್ಣರಾವ್, ಎಂ. ಎಲ್. ರಾಮು, ಟಿ. ಎನ್. ಬಾಲಕೃಷ್ಣ ಇವರನ್ನು ಅವರವರು ತಂತಮ್ಮ ಕ್ಷೇತ್ರಗಳಲ್ಲಿ ಸಲ್ಲಿಸಿದ ಕಲಾಸೇವೆಯನ್ನು ಸ್ಮರಿಸಿ ಸನ್ಮಾನಿಸಲು ಬೆಂಗಳೂರಿನಲ್ಲೊಂದು ಸನ್ಮಾನ ಸಮಿತಿಯು ರಚಿತವಾಗಿದೆ. "ಕನ್ನಡ ಕಲಾವಿದರ ಸನ್ಮಾನ ಸಮಿತಿ" ಎಂಬ ಹೆಸರಿನ ಈ ಸಮಿತಿಯು ನಂಬ್ರ ೪, ಬಸವನಗುಡಿ ರಸ್ತೆ, ಬಸವನಗುಡಿ, ಬೆಂಗಳೂರು ಇಲ್ಲಿದ್ದು, ಶ್ರೀ ಕೆ. ವೀರಪ್ಪನವರೇ ಅಧ್ಯಕ್ಷರು ಇದರ ಅಕ್ಷರಶಾಗಿದ್ದಾರೆ. ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಈ ಸನ್ಮಾನ ಸಮಾರಂಭದಲ್ಲಿ ಕನ್ನಡಿಗರು ಸಹಕರಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಭೂಮಿ ನಾರಾಯಣ್ ಮತ್ತು ಕೆ. ವಿ. ಗಂಗರತ್ನರು ವಿನಂತಿಸಿಕೊಂಡಿದ್ದಾರೆ.

ಯುದ್ಧದ ತಪ್ಪನ್ನು ಪರಿಪಡಿಸಲು ಅಳ ಮಧ್ಯ ಸಾಧನವಾಗಿದೆ ಅದು ಹಾನಿಯನ್ನು ಕಡಿಮೆ ಮಾಡುವುದರ ಬದಲು ಇಮ್ಮಡಿಗೊಳಿಸುವುದು.

—ಥಾಮಸ್ ಜೆಫರ್‌ಸನ್

IN THE COURT OF THE MUNSIF OF COONDAPOOR

S. C. No. 460/1967

Between

K Narashimma Karanth

—*Plaintiff.*

and

Ruzario Dalmedi—

Residing at Pandeshwar

Village, Udipi Taluk. *Defendant.*

To

The Defendant

Please take notice that the above suit filed by the plaintiff for recovery of Rent, stands posted to 22-1-1968 at 11 A. M. before the above Court You are hereby requested to ap[illegible] above Court on that day either in person or through a duly appointed pleader, failing which you will be declared Ex Parte and further orders will be passed

(By order of the Court)

Sd.) K. Ramappayya, B A, B L.

Advocate for Plaintiff.

Coondapoor, 29-12-1967.

ಮುಖಚಿತ್ರ

ಅತಿಥಿಪ್ರಿಯ ರಾಷ್ಟ್ರಪತಿ
ಡಾ| ಜಾಕೀರ್ ಹುಸೇನ್
ತಮ್ಮಲ್ಲಿಗೆ ಬರುವ ಪ್ರತಿಯೊಬ್ಬರನ್ನೂ
ಮೋಹಕ ಮುಗುಳ್ನಗೆಯಿಂದ
ಸ್ವಾಗತಿಸುವ ಅಮೋಘ ಕಲೆ
ಅವರ ಕರಗತವಾಗಿದೆ.

ನೇಯ ರಾಜ್ಯದಲ್ಲಿ

ದಾರಿದ್ರ್ಯಮೇಕಂ ಗುಣವೃಂದಹಾರಿ

"ಇಲ್ಲಿ ಕೇಳಿದ್ರಾ?"

"ಕೇಳ್ದಾನೇ ಇದ್ದೇನೆ. ಕಿವಿಯೇನೂ ಹೊಟ್ಟು ಹೋಗಿಲ್ಲಾನ್ನು ..."

"ಯಾರದ್ದು?"

"ಮತ್ಯಾರದ್ದು ನಂದು ನಿಂದು ಮತ್ತು ಊರವರದ್ದೋ ... ಜತೆಗೆ ನಾಲಿಗೇನೂ ಅಡ್ಡ ಬೀಳ್ಲಿಲ್ಲ..."

"ಅದ್ರಿಂದ್ಲೇ ಇರ್ಬೇಕು, ಹೀಗೆಲ್ಲಾ ನಡೆಯೋದು. .."

'ನಡೀತಾದ್ರೂ ಏನೀಗ?"

"ನೋಡ್ರಿ, ಕೋಸನ್ ಜೇಗನ್‌ನಲ್ಲಿ ಒಬ್ಬ ವಿಶ್ವದೇವನಂತೆ..."

"ವಿಶ್ವದೇವ?"

"ಹೆಜ್ಜಿಂ...'

"ಯಾವ ವಿಶ್ವದೇವನೇ ಇವ? ನಮ್ಮ ಪುರೋಹಿತ್ರು ಪಿಂಡ ಹಾಕಿಸೋವಾಗ, ಮಣೆ ಮೇಲೆ ಅಡಿಕೆಯಿಟ್ಟು ಸ್ಥಾಪನೆ ಮಾಡ್ತಾರಲ್ಲಾ, ಆ ವಿಶ್ವದೇವ ..?"

'ಛೆ, ಛೆ .ಅದಂತದ್ರಿ?'

"ಎಂಥದೂಂದ್ರೆ, ಕಲ್ಲಿನ ತಂಡಿನಲ್ಲಿ ದೇವರನ್ನು ಕಾಣುವವ್ರು ಹಣ್ಣಾಡಕೆಯಲ್ಲಿ ವಿಶ್ವದೇವನನ್ನೇಕೆ ಕಾಣಬಾರದು? ನವಿದ್ಯತೇ ಕಾಷ್ಠೇ ದೇವೆ...."

"ಸಾಕು ಮಾಡೀಂದ್ರೆ .ಇದು ಅಂಥದ್ದಲ್ಲ. ಈ ವಿಶ್ವದೇವನ ಹೆಸ್ರು ಅರ್ಥಾನ್ ಅವನು ತನ್ನ ಐವತ್ತು ಮಂದಿ ಶಿಷ್ಯರನ್ನು ಕೂರಿಸಿ ಭವಿಷ್ಯವಾಣಿಯನ್ನು ತಿಳಿಸಿದ ...."

"ಏನಂತೆ?'

'ನೋಡಿ, ಈ ಕ್ರಿಸ್‌ಮಸ್ ಸಮಯದಲ್ಲಿ ಅಣಿಸವಾರ ನಡೆಯುತ್ತದೆ. ಇದರಲ್ಲಿ ದುಷ್ಟ ನಿಗ್ರಹವಾಗುತ್ತದೆ; ಶಿಷ್ಯರು ಮಾತ್ರ ಬದುಕುಳಿಯುತ್ತಾರೆ. ಆ ಶಿಷ್ಯರು ಸೀತದ ಮನೆಮಾಡಿ ಅದರೊಳಗೆ ಕುಳಿತು ಬಿಟ್ಟರಂತೆ ..ಕ್ರಿಸ್ಮಸ್ ಹಬ್ಬ ಮುಗಿಸಿ ಹೊರ ಬಂದು ನೋಡುವಾಗ,...'

'ಈ ಲೋಕ ಇದ್ದಕ್ಕಿದ್ದಂತೇ ಇಷ್ಟಂತೆ...."

"ಹೆಜ್ಜಿಂ....ಅಂದ್ರೆ ಎಲ್ಲರೂ ಎಲ್ಲವೂ ಸತ್ ಅಂತ ಅವಿಶ್ವದೇವ ಪ್ರಶಸ್ತಿಪತ್ರ ನೀಡಿದಂತಾಯ್ತಲ್ಲಾ ..."

"ಯಾರಲ್ಲಾಂತಾರೆ? ಭಗವಂತನ ಸೃಷ್ಟಿಯಲ್ಲಿ ಕಟ್ಟಿದು ಎಂಬುದೇ ಇಲ್ಲವೆಂದು ಧರ್ಮ ವೇದೋಪನಿಷತ್ತು ಎಂದೋ ಸಾರಿ ಬಿಟ್ಟವೆ, ನೋಡು. ನಾವ ಆ ವಿಶ್ವದೇವನ ಶಿಷ್ಯರಿಗಿಂದು ಗೊತ್ತಾಯಿತು.?

"ಅದು ಸರೀನ್ನಿ ಹಿಂದೂ ಧರ್ಮ ಸಂಸ್ಕೃತಿ— ಜೋತಿಷ್ಯದ ಬಗ್ಗೆ ಅವಹೇಳನ ಮಾಡುವುದು ಸುಸಂಸ್ಕೃತತೆಯ ಲಕ್ಷಣ. ಹಿಂದೂ ಮಹಾಪುರುಷರ ಹವಾಡಗಳನ್ನು ಅಸಂಬದ್ಧ ಕಂತೆಯೆನ್ನುವವರೂ ಈಗ ಅಸಂಬದ್ಧತೆಯ ದಾರಿ ತುಳಿಯುತಿದ್ದಾರೆ...'

'ಹೌದೇನೇ? ಇನ್ನೊಂದು ಸುದ್ದಿ ಕೇಳ್ದಿಯಾ?"

"ಏನು?'

"ಅಲ್ಲಾ, ಪಾಕಿಸ್ತಾನದಲ್ಲಿ ಪ್ರತಿವರ್ಷ ಎರಡು ಸಾವಿರ ಜನರನ್ನು ನಿರ್ವೀರ್ಯಗೊಳಿಸಲಾಗುತ್ತಿದೆಯಂತೆ."

"ಅಂದರೆ?'

ಕುಟುಂಬ ಯೋಜನೆಯನ್ನು ಕಾರ್ಯಪತಗೊಳಿಸುವ ಕ್ರಮವಿದು...'

"ಅಂದರೆ, ಜನ ಸಂಖ್ಯಾ ಸಮಸ್ಯೆ ಪಾಕಿಸ್ತಾನಕ್ಕೂ ಇದೆಯೇನು?'

"ಇಲ್ಲದೆ ಮತ್ತೆ? ಮೂರ್ಖಲ್ ಅಯೂಬ ಖಾನರು ಈ ಬಗ್ಗೆ ಕಟ್ಟಳಿಟ್ಟಿನಿಂದ ವರ್ತಿಸತೊಡಗಿದ್ದಾರೆ. ."

'ಅದ್ರೆ, ಮುಸಲ್ಮಾನರ ಧರ್ಮ ಸಂತಾನ ಪ್ರತಿಬಂಧವನ್ನು ವಿರೋಧಿಸುತ್ತೆ ಎಂದನ್ನುತ್ತಾರಲ್ಲಾ...."

"ಇಸ್ಲಾಮನ್ನೇ ಏಕಮೇವ ರಾಷ್ಟ್ರೀಯ ಧರ್ಮವೆಂದು ಘೋಷಿಸಿಕೊಂಡ ಪಾಕಿಸ್ತಾನವೇ ಇದನ್ನು ಅನ್ವಯಿಸ ಪಾಗ್ರಜಾಸ್ಥತೀಕ ಭಾರತೀಯರಿಗೆ. ..'

'ಅಲ್ರಿ, ಕೆಲದಿನಗಳ ಹಿಂದೆ ಯೂರೋಪ್ ಮುಸಲ್ಮಾನರೇ ಇದು ಕುರಾನಿಗೆ ವಿರುದ್ಧವಲ್ಲ ಅಂತ ಹೇಳಿದ್ದರಲ್ಲಾ ..'

"ಹೌದು, ಹೌದು.... ಇದೇ ಬಗೆಯಲ್ಲಿ ಏಕಪತ್ನೀವ್ರತ ಕಾಯದೆಯನ್ನು ಭಾರತೀಯ ಮುಸಲ್ಮಾನರಿಗೂ ಅನ್ವಯಿಸಲಾಗುತ್ತದೆ ಭಾರತದಲ್ಲಿ. ."

"ಅದು ಸರೀನ್ನಿ... ಆದ್ರೆ ಕ್ರೈಸ್ತರು ಮಾತ್ರ ಸಂತಾನ ನಿರೋಧ ವಿರೋಧಿಯಾಗಿದ್ದಾರೆ.'

"ಉಳಿದವರು ಕುಟುಂಬ ಯೋಜನೆ ಮಾಡಿಕೊಂಡ್ರೆ, ಕೆಲ ವರ್ಷಗಳಲ್ಲಿ ಹಿಂದುಸ್ತಾನ ಮುಸ್ಲಿಂ ಸ್ಥಾನವೋ ಕ್ರಿಸ್ತಸ್ಥಾನವೋ ಆಗಿ ಬಿಟ್ಟೀತೆಂಬ ಹೆದರಿಕೆಯೇ ಇದರ ಮುಂದಿರುವ ಪ್ರಶ್ನೆ....'

"ಅದಕ್ಕೇನು ಮಾಡಬೇಕೂಂತೀಯ?"

'ನೋಡಿ, ಯಾವ ಕಾಲದ ಶಾಸ್ತ್ರ ಏನೇ ಹೇಳಿರಲಿ, ಯಾವ ಧರ್ಮ ಏನೇ ವಿಧಿಸಿರಲಿ, 'ಯುಗ ಧರ್ಮ' ಒಂದಿದೆ ತಾನೆ?'

"ಮತ್ತೆ, ಇಲ್ಲದೆ ಸಾಧ್ಯವೆ? ಆದುದರಿಂದ್ಲೇ ಇಂದಿನ ಕಾರೂಬಾರೂ ನಡೆಯುತ್ತೆ.'

'ಯುಗಧರ್ಮ ಹೆಚ್ಚಿನದುಏಕೆ ಕೇಳಿ. ಕೃಷಿ ಮಾಡುವುದು ರೈತನ ಧರ್ಮ ಅದನ್ನು ಒಳ್ಳೆಯ ರೀತಿಯಿಂದ ಮಾಡಿ, ದೇಶಕ್ಕೆ ಕುಂಬ ಆಹಾರವನ್ನು ಒದಗಿಸಿ ಅಭಾವ ಹರಣವನ್ನು ಸಾಧಿಸುವುದು ಅವನ ಇಂದಿನ ಯುಗಧರ್ಮ...."

'ಹೆಜ್ಜಿಂ ಸತ್ತೆ '

"ಇದ್ದವರ ಒಳಿತಿಗಾಗಿ, ಕಲ್ಯಾಣಕ್ಕಾಗಿ ಇಲ್ಲದವರ ಮುಖಗಳನ್ನು ಜಗತ್ತಿಗೆ ತೋರಿಸದಿರುವುದು ಗೃಹಸ್ಥರ ಯುಗಧರ್ಮ..."

"ಛಲೆ, ಛಲೆ ...ನೀನು ಭಾರೀ ಛಾಟಿ ಇದ್ದೀಯ?"

"ಅವರವರ ಧರ್ಮವನ್ನು ಅವರವರು ಬಿಡದೆ ಪಾಲಿಸಲಿ ಯಾವುದೇ ಧರ್ಮ ಹುಟ್ಟಿದ ಮಕ್ಕಳನ್ನು ಅಶನ—ವಸನಗಳಲ್ಲಿ ಚಿತ್ರ ಹಿಂಸೆಗೆ ಗುರಿಮಾಡುವ ಅಧಿಕಾರವನ್ನು ಯಾವ ಹೆತ್ತವರಿಗೂ ನೀಡಿರುವುದಿಲ್ಲ.'

"ಅಲ್ರಿ, ನಿನ್ನೆನೇ ನ್ಯಾಮಿಲಿ ಪ್ಲಾನಿಂಗ್ ಆಫೀಸರ್ ಎಗಿ ಮಾಡಿದ್ರೆ ತುಂಬ ಲಾಭ ಆಗ್ತಿತ್ತು...."

"ಹೌದು, ಹೌದು, ನನ್ನಿಂದ್ಲೂ ದುಡಿಸೋ ಯೋಜನೆ..."

"ಅಲ್ರಿ, ಆದೂ ಯುಗಧರ್ಮವಾಗೋದಿನ ನಿಕಟ ಭವಿಷ್ಯದಲ್ಲೇ ಬಂದರೂ ಬರಬಹುದು .

"ಹೆಜ್ಜಿಂ ...ಆಗ . ನೋಡೋಣ....'

"ನೋಡೇ, ಇನ್ನೊಂದು ತಮಾಷೆ..."

"ಏನದು?"

'ಮತ್ತೇನಿಲ್ಲ. ಪ್ರತಿಭಟನಾ ಪತ್ರ ಕಳಿಸುವುದರಲ್ಲಿ ಭಾರತೀಯರೇ ಅಗ್ರಗಣ್ಯರೆಂದು ತಿಳಿದಿದ್ದೆ. ಆದ್ರೆ, ಈಗ ನೋಡುವಾಗ, ಕೆಂಪು ಚೀನೀಯರು ಇದರಲ್ಲೂ ನಮ್ಮ ಮೆಟ್ಟಿ ನಿಂತಿದ್ದಾರೇಂತ ತೋರುತ್ತೆ....."

"ಏನಾಯಿತೀಗ?"

"ಕೇಳು, ಚೀನೀಗಳು ಸರಕಾರವೀಗ ಳಳಿಸಲೆಯ ತೀವ್ರ ಪ್ರತಿಭಟನೆ—ಎಚ್ಚರಿಕಾ ಪತ್ರ ಕಳಿಸಿದೆಯಂತೆ ..."

"ಯಾರಿಗೆ?"

"ಮತ್ಯಾರಿಗೆ. ಅಮೆರಿಕಕ್ಕೆ. ."

"ಹೌದು, ಇದು ನಾವೂ ಹೆಮ್ಮೆಪಟ್ಟುಕೊಳ್ಳಬೇಕಾದ ಸಂಗತಿ . "

"ಯಾಕೆ?'

'ಕೆಂಪು ಚೀನೀಯರಿಗೆ ಪ್ರತಿಭಟನಾ ಪತ್ರ ಬರೆಯುವ ಕಲೆಯನ್ನು ನಾವೇ ಕಲಿಸಿ ಕೊಟ್ಟವರು ..ಅದಕ್ಕಾಗಿ .."

"ಹೆಜ್ಜಿಂ....ಅದು ಸರೀನ್ನಿ ..."

'ಅಲ್ರಿ, ಕಾಶ್ಮೀರದ ಹುಲಿ ಶೇಕ ಅಬ್ದುಲ್ಲಾರ ಮೇಲಿನ ಎಲ್ಲ ಕಿರ್ಬಂಧಗಳನ್ನೂ ಈಗ ತಗದು ಹಾಕಿದ್ದಾರಂತೆ—ಅದನ್ನು ಅವ್ರು ತಿರಸ್ಕರಿಸಿದರಂತೆ. ಏನಾದು ತಮಾಷೇಂತ..."

"ಅಲ್ರಿ, ಇದ್ರಲ್ಲಿ ಶೇಕ ಅಬ್ದುಲ್ಲಾ ಅಂಗೀಕರಿಸೋದೇನು ಬಂತು?'

'ಯಾಕೆ?'

'ಈಗ ಶೇಖರು ಮುಕ್ತರು. ಅವರು ಏನು ಮಾಡುವುದಕ್ಕೂ ಎಲ್ಲಿ ಹೋಗುವುದಕ್ಕೂ, ಏನಾಡುವುದಕ್ಕೂ ಸ್ವತಂತ್ರರು. ಅವರು ಮಾಡಲಿ, ಹೋಗಲಿ, ಆಡಲಿ, ಬಿಡಲಿ, ಸರಕಾರಕ್ಕೇನಂತೆ?"

'ಹೆಜ್ಜಿಂ....ಅದು ಹಾಗಾಯ್ತು....ಮತ್ತೆ ನೋಡಿ ಚೀನಾವು ಇತ್ತೀಚೆಗೆ ಮಾಡಿದ ಅಣ್ವಸ್ತ್ರ ಸ್ಫೋಟ ಅಯಿಕಸ್ವಿಯೂ ಯಿತಂತೆ...."

"ನೂರು ಜನರನ್ನು ಕೊಂದೇ ವೈದ್ಯ ವಿಶಾರದನಾದ ಬೇಕು... ಇನ್ನೊಂದು ಭಾರೀ ಸುದ್ದಿ ಕೇಳಿದ್ದೀಯ?'

"ಏನು?"

"ಭಾರತ ಸರಕಾರವು ರಾಜ ಧನ ರದ್ದು ಮಾಡಲು, ರಾಜರಿಗಿರುವ ವಿಶೇಷ ಸವಲತ್ತುಗಳನ್ನು ನಿಲ್ಲಿಸಲು ನಿರ್ಧಾರ ಮಾಡಿದೆಯಂತೆ. ಇದನ್ನು ರಾಜರಿಗೆ ತಿಳಿಸಿದರೂ ಅವರಿಂದ ಯಾವ ಪ್ರತಿಕ್ರಿಯೆಯೂ ಹೊರಡಲಿಲ್ಲ."

"ಹೆಜ್ಜಿಂ....ಅದೂ ಸರೀನ್ನಿ. ಯುಗಧರ್ಮದ ಮುಂದೆ ರಾಜ ಮಹಾರಾಜರೂ ತಲೆ ತಗ್ಗಿಸಲೇ ಬೇಕಾಗುತ್ತದೆ. ಹಾಗಿರುವಾಗ, ಇದನ್ನರಿತು ತೊಂಡು ತಾವಾಗಿ ತಲೆ ತಗ್ಗಿಸಿದರೆ, ಒಳಿತು....ಇಲ್ಲವಾದರೆ...'

"ಅಂತೂ ನೀನು ಇಂದಿರಮ್ಮನ ಸಮರ್ಥಕಳಾಂತಾಯ್ತು.'

"ಯಾಕೆ?'

"ಹೂಕೇಂದ್ರೆ, ಇಂದಿರಮ್ಮನ ನೀತಿಯೇ ನಿನ್ನ ನೀತಿ ಅನ್ನುವಂತಾಗಿದೆ. ಹೆಂಗಸರೆಲ್ಲಾ ಹಾಗೆಯೇ ಅನ್ನು...."

(ಮುಂದುವರೆದ ಪುಟ ನೋಡಿರಿ)

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುಮೇರಿಯನ್ ಅರಸ ಹಮ್ಮುರಬಿ

ಬರೆದವರು— ಶ್ರೀ ಸ. ನಾರಾಯಣ

ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ಬಯಲಿನಲ್ಲಿರುವ ಮೆಸಪಟೋಮಿಯೂ ವಿಶಾಲ ಮೈದಾನವು ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ವ್ಯಾಜ್ಯ ವಸ್ತು ಸಂಶೋಧನಾ ಕಾರ್ಯಗಳ ಕಾರಣದಿಂದ ಈ ವಿಶಾಲ ಮೈದಾನ ಸಂಸ್ಕೃತಿಯ ತಾರು ಎಂದು ತಿಳಿದು ಬರುತ್ತದೆ. ಸಂಶೋಧನೆಗಳಿಂದ, ಸಾಕ್ಷ್ಯಾಧಾರಗಳಿಂದ ಪ್ರಾಚೀನ ನಾಗರಿಕತೆ, ಸಂಸ್ಕೃತಿ, ವೈಭವಗಳ ಪರಿಚಯವಾಗುತ್ತದೆ. ಆರಂಭದಲ್ಲಿ ಈ ಫಲವತ್ತಾದ ಪ್ರದೇಶಕ್ಕೆ ಸುತ್ತಮುತ್ತಲಿನ ಜನ ಬಂದು ವಾಸಿಸಲಾರಂಭಿಸಿದರು. ಇಲ್ಲಿಯೇ ನೆಲೆಸಿದ ಜನ ನಗರಗಳನ್ನು ಕಟ್ಟಿ ನಾಗರಿಕರಾಗಿ ಜೀವಿಸಲಾರಂಭಿಸಿದರು. ಫಲವತ್ತಾದ, ಪ್ರಸಿದ್ಧವಾದ ಈ ಪ್ರದೇಶಕ್ಕೆ ಆಹಾರ ವಸತಿಗಳನ್ನು ಹುಡುಕುತ್ತಾ ಬಂದ ಅನಾಗರಿಕ ಜನ ಹದೇ ಹದೇ ವಲಸೆ ಬಂದು ನೀತಿಸಲಾರಂಭಿಸಿದರು. ಇಂತಹ ಪರಿಸ್ಥಿತಿಯೂ ಇಲ್ಲಿಯ ಜನ ಮಾನವ ಜೀವನಕ್ಕೆ ಅತ್ಯವಾದ ಸಮಾಜ ನಗರಗಳನ್ನು ನಿರ್ಮಿಸಿಕೊಂಡು, ಅನೇಕ ಸೌಲಭ್ಯಗಳಿಗೆ ಉಪಾಯಗಳನ್ನು ಕಂಡುಹಿಡಿದು ಪ್ರಚಾರಕ್ಕೆ ತಂದರು ಎಂದು ಇತಿಹಾಸಕಾರರು ಹೇಳುತ್ತಾರೆ.

ಆರು ಸಾವಿರ ವರ್ಷಗಳ ಹಿಂದೆ ಮೆಸಪಟೋಮಿಯೂ ಪ್ರದೇಶದಲ್ಲಿ ಸುಮೇರಿಯನ್ ಎನ್ನುವ ಜನಾಂಗದವರು ವಾಸಿಸುತ್ತಿದ್ದರು. ಅವರು ಅನೇಕ ನಗರಗಳನ್ನು ಕಟ್ಟಿ ಕೈಗಾರಿಕೆ, ವ್ಯಾಪಾರ, ವ್ಯವಸಾಯ ವೃತ್ತಿಗಳನ್ನು ಅವಲಂಬಿಸಿ ಜೀವಿಸುತ್ತಿದ್ದರು. ಈಚೆಗೆ ಈ ಮೈದಾನಗಳಲ್ಲಿ ನಡೆದ ಭೂ ಶೋಧನೆಗಳಿಂದ ಆಗಿನ ಕಾಲದ ಹಾಳು ಗೋಡೆಗಳು, ಕೋಟೆಗಳ ಅವಶೇಷಗಳು, ಮನೆ ದೇವಾಲಯಗಳ ಅಸ್ತಿಭಾರಗಳು ಮಡಿಕೆ ಚೂರುಗಳು, ಆಭರಣಗಳು, ಮಣ್ಣು ಹಲಗೆಗಳ ಮೇಲೆ ಬರೆದಿಟ್ಟ ಗ್ರಂಥಗಳು ಮೊದಲಾದುವನ್ನು ಭೂಗರ್ಭದಿಂದ ಹೊರತೆಗೆದಿದ್ದಾರೆ. ಈ ಸಂಶೋಧನೆಯ ಆಧಾರದಿಂದ ಸುಮೇರಿಯನ್ನರ ಬದುಕು—ನುಡಿ, ಆಚಾರ ವಿಚಾರ ವ್ಯವಹಾರಾದಿಗಳನ್ನು ನಾವು ತಿಳಿಯಲು ಅವಕಾಶವಾಗಿದೆ. ವರ್ಷಕ್ಕೆ ಹನ್ನೆರಡು ತಿಂಗಳು, ವಾರಕ್ಕೆ ಏಳುದಿನ, ದಿನಕ್ಕೆ ಇಪ್ಪತ್ನಾಲ್ಕು ಗಂಟೆಗಳು, ಗಂಟೆಗೆ ಅರುವತ್ತು ನಿಮಿಷಗಳು, ನಿಮಿಷಕ್ಕೆ ಅರುವತ್ತು ಸೆಕಂಡುಗಳು ಎಂದು ಇಂದು ಕಾಲಗಣನೆಮಾಡುವ ಈ ಕ್ರಮ ಸುಮೇರಿಯನ್ನರ ಪದ್ಧತಿಯನ್ನು ಅನುಸರಿಸಿ ಆಚರಣೆಗೆ ಬಂದುದು ಎಂಬುದು ಅಧಿಕ ಜನತೆಗೆ ತಿಳಿಯದು.

ಚಕ್ರದ ಬಂಡಿಗಳು, ನೀರಿನ ಕಾಲುವೆಗಳು, ಬರವಣಿಗೆ (ಲಿಪಿ) ಮುಂತಾದ ಅನೇಕ ವಿಷಯಗಳಲ್ಲಿ ಸುಮೇರಿಯನ್ನರು ಪರಿಣಿತರಾಗಿದ್ದರು. ಮೆಸಪಟೋಮಿಯ ಪ್ರದೇಶಕ್ಕೆ ವಲಸೆ ಬಂದ ಉಳಿದ ಜನಾಂಗಗಳೂ ಸುಮೇರಿಯನ್ನರ ದೇವತಾ ಪೂಜೆ, ರೀತಿ, ಲಿಪಿ, ಆಚಾರಗಳನ್ನು ಅರಿತು ಅನುಸರಿಸ ತೊಡಗಿದರು.

ಮೆಸಪಟೋಮಿಯ ಪ್ರದೇಶದಲ್ಲಿದ್ದ ಅನೇಕ ನಗರಗಳಲ್ಲಿ ಆಗಾಗ್ಗೆ ಪರಸ್ಪರ ಯುದ್ಧಗಳಾಗುತ್ತಿದ್ದವು. ನೆರೆಹೊರೆಯ ನಗರಗಳನ್ನು ಗೆದ್ದು ಸಾಮ್ರಾಜ್ಯದ ಚಕ್ರವರ್ತಿ ಆಗಬೇಕೆಂಬ ಆಸೆಯು ಬಹು ರಾಜರಿಗಿತ್ತು. ಬಲಿಷ್ಠರು ಕಪ್ಪ ಕಾಣಿಕೆಗಳನ್ನು ಪಡೆಯುತ್ತಿದ್ದರು. ಅವಂಲ್ಲಿ ನಗರ ದೇವತೆಯ ಆರಾಧನೆ ವಿಶೇಷವಾಗಿತ್ತು. ಕೊನೆಗೆ ಬೇಬಿಲಾನ್ ನಗರದ ಹಮ್ಮುರಬಿ ಎಂಬ ಅರಸನು ಮೆಸಪಟೋಮಿಯೂ ಪ್ರದೇಶವನ್ನು ಪೂರ್ಣವಾಗಿ ತನ್ನ ಆಳ್ವಿಕೆಗೆ ಒಳಪಡಿಸಿಕೊಂಡನು.

ಕ್ರಿ. ಪೂ. ೨೧೨೩ರಲ್ಲಿ ಪಟ್ಟಕ್ಕೆ ಬಂದ ಹಮ್ಮುರಬಿ ೪೨ ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಅವನ ಜೀವನ, ರಾಜ್ಯಭಾರ ಕ್ರಮ ದಿಗ್ವಿಜಯಗಳನ್ನು ತಿಳಿಸುಲು ಅನೇಕ ಆಧಾರಗಳು ದೊರೆಯುತ್ತವೆ. "ಯೂರಿಂದಲೂ ನುಗ್ಗಲಾಗದ ಕಡಿದಾದ ಕಣಿವೆಯನ್ನು ನಾನು ತೆರೆದೆನು. ಸುಮೇರಿಯನ್ನರನ್ನು ಅಕ್ಕಡ್ ಎಂಬ ಪ್ರಾಂತ್ಯದವರನ್ನು ಒಂದುಗೂಡಿಸಿ ರಾಜ್ಯಭಾರ ಮಾಡಿದೆನು" ಎಂದು ಒಂದು ಶಾಸನದಲ್ಲಿ ಹಮ್ಮುರಬಿ ಹೇಳಿಕೊಳ್ಳುತ್ತಾನೆ. ಮೆಸಪಟೋಮಿಯೂ ಪ್ರದೇಶದ ಭದ್ರತೆ, ಪ್ರಗತಿಗಳಿಗೆ ಹಮ್ಮುರಬಿ ವಿಶೇಷವಾಗಿ ಶ್ರಮಿಸಿದನು. ಸಾಮ್ರಾಜ್ಯದ ಸುತ್ತಲಿದ್ದ ದಂಗೆ, ಹಾಹಾಕಾರಗಳಲ್ಲಿ ತೊಡಗಿದ್ದ ಅನಾಗರಿಕರನ್ನು ಓಡಿಸಿ, ದೇಶದ ಎಲ್ಲೆಗಳನ್ನು ಕಾಯಲು ಸೈನ್ಯವನ್ನು ಪಾಳೆಯಗಳಲ್ಲಿ ನಿಲ್ಲಿಸಿದನು. ಜನತೆಯಲ್ಲಿ ಶಾಂತಿ, ತೃಪ್ತಿ ನೆಲೆಸಿತ್ತು. "ನೀರು ಸಾಲದು, ವ್ಯವಸಾಯಕ್ಕೆ ನೀರಿಲ್ಲ, ಎಂದು ಯಾರೂ ಅಪವಾದಿಸುವಂತಿರಲಿಲ್ಲ. ಎಲ್ಲಿ ನೋಡಿದರೂ ಧಾನ್ಯದ ರಾಶಿ, ದನಕರುಗಳಿಗೆ ಹುಂಬು ಹುಲ್ಲು, ನೀರು; ಯೂಫ್ರೆಟಿಸ ನದಿಯ ಪ್ರವಾಹವನ್ನು ತಡೆಯಲು ನಾನು ಒಂದು ಅಡ್ಡ ಗೋಡೆಯನ್ನು ಕಟ್ಟಿದೆನು" ಎಂದು ಹಮ್ಮುರಬಿ ತನ್ನ ಒಂದು ಶಾಸನದಲ್ಲಿ ತಿಳಿಸುತ್ತಾನೆ. ಅದೇ ಶಾಸನದಲ್ಲಿ ಮತ್ತೊಂದು ಕಡೆ "ದೇವರು ನನ್ನನ್ನು ಕರೆದು ಈ ಜನರನ್ನು ಆಳುವುದಕ್ಕೆ ನಿಯಮಿಸಿದಾಗ, ನಾನು ಅವರ ಹಿತವನ್ನೇ ಬಯಸಿ, ಅದಕ್ಕಾಗಿ ದೇಶದಲ್ಲಿ ಸತ್ಯವೂ ನ್ಯಾಯವೂ ನೆಲೆಯೂರಿರುವಂತೆ ಮಾಡಿದೆನು" ಎಂದು ಹೇಳಿರುವನು.

ನ್ಯಾಯಾಲಯಗಳ ಶಿಕ್ಷೆ, ತೀರ್ಪು, ನ್ಯಾಯ ನಿರ್ಣಯ ಕಾನೂನು ರಚನೆ, ಅಪರಾಧಿಗಳನ್ನು ಪತ್ತೆ ಮಾಡಿ, ಸಾಕ್ಷಿಗಳ ಮೂಲಕ ವಿಚಾರಣೆ ಮಾಡಿ ಗೊತ್ತಾದ ಶ್ರವ ದಂತೆ ಶಿಕ್ಷಿಸುವುದು. ಈ ಕ್ರಮವನ್ನು ಹಮ್ಮುರಬಿಯು ರಾಜ್ಯದಾದ್ಯಂತ ಬಳಕೆಗೆ ತಂದನು. ಇಂದು ನಮಗೆ ಪರಿಚಿತವಾಗಿರುವ ಅತ್ಯಾಧುನಿಕ, ನವನಾಗರಿಕ ಕಾನೂನುಗಳು, ನಿಯಮ ನಿಬಂಧನೆಗಳು, ಧರ್ಮ, ಸತ್ಯ, ನೀತಿಗಳು ಹಮ್ಮುರಬಿಯ ಕಾಲದಲ್ಲಿಯೇ ಆಚರಣೆಯಲ್ಲಿದ್ದವು. ಬೇರೆ ಬೇರೆ ನಗರಗಳಲ್ಲಿ ಆಚರಣೆಯಲ್ಲಿದ್ದ ಕ್ರಮವನ್ನು ಪರಿಶೀಲಿಸಿ ಅವುಗಳ ಆಧಾರದ ಮೇರೆಗೆ ನ್ಯಾಯ ನಿಯಮ ಶಿಕ್ಷೆಗಳನ್ನು ಆಚರಣೆಗೆ ತಂದನು. ದಂಡ-ಹೆಂಡತಿ ತಂದೆ-ಮಕ್ಕಳು, ಯಜಮಾನ-ಆಳು, ಸಾಹುಕಾರ-ಸಾಲಗಾರ ಇವರ ಸಂಬಂಧ ಹೆಣ್ಣು ಭಾದ್ಯತೆ ಆಸ್ತಿ ವಾಸ್ತಿಗಳವೂರಾಟ; ಗುತ್ತಿಗೆ ಮೊದಲಾದ ವ್ಯವಹಾರಗಳ ಆಚರಣೆಯನ್ನು ಬಳಕೆಗೆ ತಂದ. ಕಸುಬುದಾರರಿಗೆ, ಕೆಲಸಗಾರರಿಗೆ ಕೀಡುವ ನ್ಯಾಯವಾದ ಸಂಬಳ. ಕೆಲಸವನ್ನು ಕೆಡಿಸಿದರೆ ದಂಡ, ದ್ವೇಷ, ಅಸಡ್ಡೆಗಳಿಂದ ತಪ್ಪು ಮಾಡಿದರೆ ಶಿಕ್ಷೆ ಇವುಗಳೆಲ್ಲವನ್ನು ಇಗದಿ ಮಾಡಿದ. ಜಾತಿ, ಅಧಿಕಾರ, ವಯಸ್ಸುಗಳ ಮದದಿಂದ ತಪ್ಪುಮಾಡಿದರೆ ಶಿಕ್ಷೆಯನ್ನು ಕ್ರಮವನ್ನು ಅನುಸರಣೆ ತಂದ. ಹೀಗೆಯವನ ಅಳ್ವಿಕೆಯ ಅವಧಿಯಲ್ಲಿ ಅನೇಕ ಆಗತ್ಯ ಮೂರ್ಪಾಡುಗಳಾದುವು. ಆಗಿನ ಕಾಲದ ಜನರಿಗೆ ಪರಿಚೋರುವಂತೆ ಸುಮಾರು ೩೦೦ ಕಾನೂನುಗಳನ್ನು ರಚಿಸಿ ಅವುಗಳನ್ನು ಸಾಮ್ರಾಜ್ಯದ ಮುಖ್ಯ ನಗರಗಳಲ್ಲಿ ಕಲ್ಲು ಕಂಬಗಳ ಮೇಲೆ ಕೆತ್ತಿಸಿ ಪ್ರಕಟಿಸಿದ. ಇದರಿಂದ ಜನಸಾಮಾನ್ಯರಿಗೆ ಕಾನೂನುಗಳ ಪರಿಚಯವಾದುದಲ್ಲದೆ ಅವರು ಅನುಸರಿಸಬೇಕಾದ ಕ್ರಮವೂ ತಿಳಿಯಿತು.

ಕ್ರಿ. ಶ ೧೯೦೧ರಲ್ಲಿ ಫ್ರಾನ್ಸ್ ದೇಶದ ಸಂಶೋಧಕನೊಬ್ಬನು ಹಮ್ಮುರಬಿಯ ಶಾಸನ ಕಂಬವನ್ನು ಸೂಸ ಪಟ್ಟಣದಲ್ಲಿ ಪತ್ತೆ ಮಾಡಿದನು. ಅದರಲ್ಲಿ ಸೂರ್ಯದೇವನೂ ಪ್ರತ್ಯಕ್ಷವಾಗಿ ಹಮ್ಮುರಬಿಯ ಕೈಗೆ ಕಾನೂನುಗಳನ್ನು ನೀಡುವ ಹಾಗೆ ಮಾಡಲು ಒಂದು ಚಿತ್ರವಿದೆ. ಅಷ್ಟರ ಸಾಲುಸಾಲಾಗಿ ಸುಮಾರು ೨೮೦ ಕಾನೂನುಗಳನ್ನು ಕೆತ್ತಿಸಿರುವನು. ಶಾಸನಗಳ ಅಂತ್ಯದಲ್ಲಿ ಹಮ್ಮುರಬಿಯ ಅಳ್ವಿಕೆಯಲ್ಲಿ ನಡೆದ ಮುಖ್ಯ ಸಂಗತಿಗಳ ವಿವರಣೆ ಇರುತ್ತದೆ.

(ಸಂಪುಟ ಪುಟ ನೋಡಿರಿ)

ಕುಂದಾಪುರ

ಮುನ್ಸಿಫ್ ಕೋರ್ಟಿನಲ್ಲಿ

S. C. 555/1967.

ನಾಗಪ್ಪ ಶೇರಿಗಾರ —ವಾದಿ.

ಮತ್ತು

ಇ. ಎಮ್. ಪಲೇರಿ ಸ್ವಾಮಿ — ಪ್ರತಿವಾದಿ.

ಇ. ಎಮ್. ಮೀರಾನ ಸ್ವಾಮಿ

ಮಗ, ಕುಂದಾಪುರ ತಾಲೂಕು

ಯಡ್ತರೆ ಗ್ರಾಮ.

ಪ್ರತಿವಾದಿಯು ವಾದಿಗೆ ತಾರೀಖು 24-11-66ರಲ್ಲಿ ರೂ. 150-00ಕ್ಕೆ ಬರೆಕೊಟ್ಟದಿನಾಂಕು ನೋಟಿನ ಹಣಗಳನ್ನು ಬರ ಮಾಡಿಕೊಳ್ಳಲಿಕ್ಕೆ ಮಾಡಿದ ದಾವೆಯು ತಾ. 22-1-1968ಕ್ಕೆ ಮೇರೆ ಕಾಣಿಸಿದ ಕೋರ್ಟು ಮುಂದೆ ಕಡ್ಡಾಯ ಯಿಟ್ಟು [illegible] ಸದ್ರಿ. ದಿನ ಪ್ರತಿವಾದಿಯು ಕೋರ್ಟು ಮುಂದೆ ಹಾಜ್ರಾಗಲಿಕ್ಕೆ ತಪ್ಪಿದ್ದರೆ ಸದ್ರಿ ದಾವೆಯ ಮುಂದಿನ ಕಡ್ಡಾಯ ನಡೆಯುವುದೆಂತಲೂ ಸಮಾಜ ಮೂಲ್ಯ ಸದ್ರಿ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

G. Sanjiva Rao,

Vakil for Plaintiff.

ತಾ. 22-12-1967, ಕುಂದಾಪುರ.

ಕೃಷಿ ರಾಷ್ಟ್ರವನ್ನು ಉಣಿಸುತ್ತದೆ

ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ

ಆಧುನಿಕ ಕೃಷಿ ಪದ್ಧತಿಯ ಬಳಕೆಯೇ ರಾಷ್ಟ್ರವನ್ನು ಸ್ವಯಂಪೂರ್ಣಗೊಳಿಸಿ, ನಾಡಿನ ಆರ್ಥಿಕ ಬದುಕನ್ನು ಸುಭದ್ರ ಅಡಿಪಾಯದ ಮೇಲೆ ನಿಲ್ಲಿಸಬಲ್ಲುದು.

ಹೊಲದ ಸಾಗುವಳಿಯಲ್ಲಿ ಯಾಂತ್ರೀಕರಣ ಮತ್ತು ನವೀನ ವಿಧಾನದ ಅನುಸರಣೆಯನ್ನು ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ ಕೆಲವೊಂದು ಆರಿಸಲಾದ ಪ್ರದೇಶಗಳ ಕೃಷಿಕರಿಗೆ ನೀರಾವರಿ ಕಂಪ್ಪ ಸೆಟ್ಟು ಉಳುಮೆ ಯಂತ್ರ, ಟ್ರಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿಕರಂಗಕ್ಕೆ ಇನ್ನೂ ವಿಶಿಲಾಗಿ ಮತ್ತು ಪ್ರಾಪಕ ನೆಲೆಯಲ್ಲಿ ನೆರವನ್ನು ನೀಡಲು ಬಯಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಅಮೃತಾಂಜನ

ಎಲ್ಲಾ ರೀತಿಯ ನೋವುಗಳಿಗೆ ನಿಶ್ಚಿತ

ಎಲ್ಲಾ ರೀತಿಯ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಕಾರ್ಕಳ ಕಾರ್ಕಳ

ಭಾರತೀಯತಾ ಬಾವಲ್ಲಿ ಬಟ್ಟೆ ಬದಲಾಯಿಸುವ ಭಾಷಾ ಬ್ಯಾಸ್ಕರ

ಬರೆದವರು: ಶ್ರೀ ಶಿವಶಂಕರ

ಸಾಮ್ರಾಜ್ಯ ಲಾಲಿಸೀ ಹಾಗೂ ಮತಾಂಧ ಮಹಮ್ಮದೀಯರು ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಖುರಾನು ಹಿಡಿದುಕೊಂಡು ಆಕ್ರಮಣ ನಡೆಸುತ್ತಾ ಬಂದರು, ತ್ಯಾಗ ಶೀಲ ಹಾಗೂ ಪರಮತ ಸಹಿಷ್ಣು ಭಾರತೀಯರೂ ಅದನೆ ದುರಿಸದೆ ಬಿಡಲಿಲ್ಲ. ಆದರೆ ಜಗಾಂದನಂತಹ ದೇಶದ್ರೋಹಿ ಪಾಪಿಗಳಿಂದಾಗಿ ಸ್ವಾತಂತ್ರ್ಯ ಪ್ರಿಯ ಭಾರತೀಯರು ಗುಲಾಮರಾಗ ಬೇಕಾಯಿತು. ಅಲ್ಲದೆ ಅಕ್ಷರನು ಹಿಂದೂ ಧರ್ಮವನ್ನು ಹಿಳುಕಿ ಹಾಕಲು ತನ್ನ ಹೊಸ ಮತವನ್ನು ಪಂಡಾಗ ಬೆಳ್ಳಗಿರುವದೆಲ್ಲಾ ಹಾಲೆಂದು ನಂಬವ ನಿಷ್ಠಪಟೆ ಹಾಗೂ "ಖೋಳ್ಳ" ಹಿಂದೂಗಳು ಅದಕ್ಕೆ ಬಲಿಯಾಗಿ "ಮತಭ್ರಮೆ" ಗೊಳಗಾದರು. ಈ ಹಿಂದೆ ಹೂಣರು, ಶಕರಾದಿ ಆಕ್ರಮಣಗಾರರು ದಂಡೆತ್ತಿಕೊಂಡು ಬಂದು ರಕ್ತದ ಹೊಳೆ ಹರಿಸಿದ್ದರೂ, ಎಲುಬುಗೂಡುಗಳ ಪರ್ವತಗಳನ್ನೇ ಉಂಟು ಮಾಡಿದ್ದರೂ, ಆ ದೊರಗು ಕಬ್ಬಿಣವನ್ನು ಭಾರತೀಯ ಧಾರ್ಮಿಕ ಹರಿತಾಲ್ಲಿ ಚಿನ್ನವನ್ನಾಗಿ ಮಾರ್ಪಡಿಸಿರುತ್ತದೆ. ಕಬೀರನು ಆ ದಾರಿಯಲ್ಲಿ ಸಾಗಿದನಾದರೂ ಮಹಮ್ಮದೀಯರನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೆ ಹೋಯಿತು. ಹಾಗಿದ್ದರೂ ಭಾರತೀಯರು ದಿಕ್ಕೆಡಲಿಲ್ಲ. ಅವರ ತಾಳ್ಮೆ ಹಾಗೂ ಸಹನೆಯ ಫಲವಾಗಿ ಮಹಮ್ಮದೀಯರಲ್ಲಿ ಮನೆಮಾಡಿಕೊಳ್ಳುವಂತಾಯಿತು, ಮುಂದಕ್ಕೆ ಪಾಕಿಸ್ಥಾನಕ್ಕೂ ಫಲವಾಯಿತು. ಈ ಸಂಪರ್ಕದ ಫಲವಾಗಿ ಉರ್ದು ಭಾಷೆ ಉಂಟಾಗಿರುತ್ತದೆ. ಆ ಭಾಷೆಯೊದರೋ ಇತ್ತ ಭಾರತೀಯವೂ ಇರುವದಿಲ್ಲ, ಅತ್ತ ಅರಬ್ಬಿ ಭಾಷೆಯೂ ಇರುವದಿಲ್ಲ. ಅದೊಂದು ಕಲಬೆರಕೆ ಇದೆ. ಕೇಳಲಿಕ್ಕೆ ಹತ್ತಿರದ ಹಿಂದಿಯು ಹಾಗೆಯೇ ಇದ್ದರೂ ನೋಡಲಿಕ್ಕೆ ಪ್ರಾಕಾರದಾಡೆಯ ಪರ್ಷಿಯನ್ ಇದೆ. ಅಂದರೆ ಅರೇಬಿಯಾದ ಮರಳುಗಾಡಿನ ಕಲ್ಲು ಹರಳು ಭಾರತೀಯತೆಯ ಪ್ರವಾಹಕ್ಕೆ ಸಿಕ್ಕಿ ಸಾಲಿಗ್ರಾಮ ಅಗದೆ ಬೇರೆಯೇ ವಿಶಿಷ್ಟ ರೂಪವನ್ನು ಪಡೆದಿರುತ್ತದೆ. ಆ ಕಲ್ಲಿನಿಂದಂತೂ ಮನೆ ಕಟ್ಟಿಕೊಳ್ಳಲೂ ಸಾಧ್ಯ ಇರುವದಿಲ್ಲ. ಅದರ ಪಾಲಿಗೆ ಅದನ್ನು ಬಿಟ್ಟುಬಿಡಬೇಕಾಗಿರುತ್ತದೆ. ಸಾಲಿಗ್ರಾಮವೆಂದು ಪೂಜಿಸಲಿಕ್ಕೆ ಸಾಧ್ಯವೇ ಇರುವದಿಲ್ಲ. ಹಾಗಿದ್ದರೂ ಆ ಕಲ್ಲು ರಾಜಕೀಯ ಅಂಧರನ್ನು ಉರುಳಿಸಿಬಿಡುತ್ತದೆ. ಅಲ್ಲದೆ ರಾಜಕೀಯ ತಂತ್ರಗಳನ್ನು ಕಡೆಯವನ್ನು ಸೇರಿಸಿ ಹಾಗಾಟಕೆ ನಡೆಸುವದೂ ಇದೆ.

ಈ ರೀತಿ ಮಾಡಿ ಉಸಿರು ಕಟ್ಟಿಸಿಬಿಡುವ ಉರ್ದುವಿನ ಕುರಿತು ಯೋಚಿಸುವಾಗ ನಮ್ಮ ಕಣ್ಣೆದುರಿನಲ್ಲಿ ಒಂದು ರೀತಿಯ ಜನರ ಚಿತ್ರ ಬಂದು ನಿಲ್ಲುತ್ತದೆ. ಅವರ ಉಡುಗೆ-ತೊಡುಗೆ, ರೀತಿ-ರಿವಾಜು ಮಾತು-ಕೃತಿ, ನಡೆ-ನುಡಿ ಎಲ್ಲವೂ ನಮಗೆ ಚಿತ್ರವಿಚಿತ್ರವಾಗಿ ಕಂಡುಬರುತ್ತದೆ. ಆ ಜನರಾದರೋ ನೂರಾರು ವರ್ಷಗಳಿಂದ ಇದೇ ಮಣ್ಣಿನಲ್ಲಿದ್ದು ಕೊಡು, ಇಲ್ಲಿಯ ನೀರನ್ನು ಕುಡಿದುಕೊಂಡು, ಗಾಳಿಯನ್ನು ಸೇವಿಸಿಕೊಂಡಿರುವವರಾದರಾದರೂ ತಾವು ಅಂಗ್ಲರ ಪ್ರತಿನಿಧಿಗಳಂತೆ ನಡೆದುಕೊಳ್ಳುತ್ತಿದ್ದಾರೆ. ಶಾಂತ ಸ್ವಾತಂತ್ರ್ಯ ಸಮಗದ ಸಮಯ ಮಹಮ್ಮದೀಯರಂತೆ ಇವರು ಕೆಲವರು ಅದರಲ್ಲಿ ಭಾಗವಹಿಸಿದ್ದುಂಟು. ಆದರೂ ಅವರು ಭಾರತೀಯರನ್ನು ಈ ದೇಶದ ವಾಸ್ತವಿಕತೆಯ ರೀತಿಯಲ್ಲಿ ನೋಡುವದಿಲ್ಲ. ತಾವು 'ಇಂಡಿಯನ್ನ'ರೆಂದು ಕರೆದ ಕೊಳ್ಳಲು ಅವರಲ್ಲಿ ಹೆಚ್ಚಿನವರು ಸಿದ್ಧರಿರುವದಿಲ್ಲ. ಆದರೆ ಅವರನ್ನು ಆಂಗ್ಲೇಯರೆಂದು ಅಲಂಗಿಸಿಕೊಳ್ಳಲು ಆಂಗ್ಲೇಯರು ಆಣಿಯಾಗಿರುವುದಿಲ್ಲ. ಆದುದರಿಂದ ಅವರು ತಾವು 'ಏಂಗ್ಲೊ-ಇಂಡಿಯನ್'ರೆಂದು ಕರೆದುಕೊಳ್ಳುತ್ತಿದ್ದಾರೆ. ಇವರು ಇಂಡಿಯನರೋ ನೋನ್-ಇಂಡಿಯನರೋ ಇದನ್ನು ಅವರ ಕೃತಿಯೇ ಸ್ಪಷ್ಟಪಡಿಸುತ್ತದೆ. ಇವರನ್ನು ಕಂಡಾಗ "ಇಂಡಿಯನ್"ರು ಇಲಿಗಳಾಗಿ ಬಿಡುತ್ತಾರೆ. ಕೆಲ ಭಾರತೀಯರು ಅವರನ್ನು ಬೆದರಿಸುವದೂ ಉಂಟು. ಹಾಗಿದ್ದರೂ ಅವರಿಗೆ ವಿಶಿಷ್ಟ ಸ್ಥಾನಮಾನಗಳಲ್ಲಿದ್ದು ಚುನಾವಣೆಯಲ್ಲಿ ಅವರ ಪ್ರತಿನಿಧಿಯು ವಿಧಾನ ಸಭೆಯಿಂದ ಲೋಕಸಭೆಯವರೆಗೂ ಹೋಗಬಹುದು. ಶಮಿಳು ನಾಡಿನಲ್ಲಂತೂ ಅವರನ್ನು ದೊರೆಗಳೆಂದೂ ಸಟ್ಟಗಾರರೆಂದೂ [ಕಾನೂನು ನಿರ್ಮಾಪಕರು] ಕರೆಯಲಾಗುತ್ತಿದೆ. ಅದಕ್ಕೆ ಇರುವದು ಒಂದೇ ಒಂದು ಕಾರಣ.

ಆಕ್ರಮಣಗಾರ ಆಂಗ್ಲೇಯರನ್ನು ಅ ಸನದಿಂದ ಆಟ್ಟಿ ಇಪ್ಪತ್ತು ವರ್ಷಗಳು ಸಂದಿವೆಯಾದರೂ ಅವರು ಆಳೆನಂತಾಗಿದ್ದಲ್ಲಿ ಎಲ್ಲೆಲ್ಲೂ ಅವರ ಭಾಷೆಯೇ ಕೇಳಿ ಬರುತ್ತಿದೆ. ನಮ್ಮ ಕಣ್ಣುಗಳಿಗೆ ಕಂಡು ಬರುವದಾದರೂ ಎಲಿಜಬೆಥ್ ರಾಣಿಯ ಬದಲಿಗೆ ಇಂದಿರಾಗಾಂಧಿಯ ರೂಪ ಅಷ್ಟೇ. ಅಥವಾ ಮಾಂಟ್ ಬೆಟನ್‌ನ ಬದಲಿಗೆ ಮುಂಬಾಜ್ ಪೇಸಾಯಿ ಅಥವಾ ಭವಾನಿ ಅಷ್ಟೇ. ಅಳ್ವಿಕೆಯಲ್ಲೇನೂ ಬದಲಾಗಿಲ್ಲ. ಹಿಡಿತ ಶಿಥಿಲವಾಗಿರಬಹುದು ಅಷ್ಟೇ. ಹಿಂದೆ ಕ್ರಿಸ್ತೀಯ ಮತಕ್ಕೆ ಬದಲಾದಲ್ಲಿ ಭಕ್ತಿ—ಸ್ಥಾನ ಸಿಗುತ್ತಿದ್ದಲ್ಲಿ ಇಂದು ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದರೆ ಸಾಳು ಪದವಿ ಸಿಗುತ್ತದೆ. ಇನ್ನೇನಾದರೂ ಬದಲಾಗಿದ್ದಲ್ಲಿ ಅದು ಸರಕಾರೀ ಕಾರ್ಯಾಲಯ ಹಾಗೂ ಪ್ರಜಾ ಪ್ರತಿನಿಧಿ ಸಭೆಯ ಮೇಲೆ ಹಾರಾಡುತ್ತಿದ್ದ ಧ್ವಜ. ಅಲ್ಲೂ ಗೀಟುಗೀಟಿನ ಯೂನಿಯನ್ ಜೇಕಿನ ಬದಲು ನೆಡುವೆ ಗೀಟು-ಗೀಟುಳ್ಳ ತ್ರಿವರ್ಣ ಇದೆ. ಇನ್ನೊಂದು ಗಮನಾರ್ಹ ವಿಷಯವೆಂದರೆ, ಅಂದು ಭಾರತಕ್ಕೆ ಇತರ ರಾಷ್ಟ್ರಗಳು ಗಾಲಬೋರಂತಾಗಿದ್ದಲ್ಲಿ, ಇಂದು ಬಡಭಾರತವು ಅನ್ಯಾನ್ಯ ದೇಶಗಳತ್ತ ದೈನ್ಯದೃಷ್ಟಿಯನ್ನು ಬೀರಿ, ಭಿಕ್ಷಾಂದೇಹಿ ಎನ್ನಬೇಕಾಗಿರುವದು—ಸಾಲ ತೀರಿಸಲಾಗದ ದುಃಸ್ಥಿತಿಯಲ್ಲಿ.

ಮಹಾತ್ಮ ಮೋಕ್ಷನದಾಳ ಕರಂಚಂದ ಗಾಂಧೀಜೀಯವರು ಸ್ವದೇಶಿ ಸ್ವರವನ್ನೆತ್ತುತ್ತಿದ್ದರು. ಶ್ರೀಮದ್ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನ್ ಹೇಳಿರುವ ಮಾತುಗಳು ನಮಗೆ ಸ್ವದೇಶೀಯರೇ ಇವೆ. ಪರಮತ ಅಪೇಕ್ಷ ಮೋಕ್ಷಕವಾಗಿದ್ದರೂ ಸ್ವಧರ್ಮವನ್ನು ತ್ಯಜಿಸಬಾರದು. ಹಾಗಿದ್ದಲ್ಲಿ ಪರಭಾಷೆ ಅಪೇಕ್ಷ ಮೋಕ್ಷಕವಾಗಿದ್ದರೂ ಸ್ವದೇಶಿಯ ಭಾಷೆಗಳಿಗೆ ಎಳ್ಳುನೀರು ಬಿಟ್ಟು ಬಿಡುವದು ಅಥವಾ ಸ್ವದೇಶೀಯ ಭಾಷೆಗಳಿಗೆ ವಿಕಾರ ದಶೆ ಮಾಡಿಸಿ, ಪರದೇಶಿ ಭಾಷೆಗೆ ದ್ಯಾದಶಿ ಮಾಡಬದು ಯಾವ ನ್ಯಾಯವಿದೆ? ಭಾರತೀಯಾಂತರು ಇತ್ತ ಅದೇತಕ್ಕೆ ಗಮನ ಹರಿಸುವದಿಲ್ಲ? ಭಾರೀ ಭಾರಿ ಕೈಗಾರಿಕೆ, ಉತ್ಪಾದನೆ, ನಿರ್ಮಾಣದ ವಿಷಯ ಹಾಗಿರಲಿ, ಮಾತಿನ ಮಟ್ಟಕ್ಕೂ ನಾವು ಪರಾವಲಂಬಿಗಳಾಗಿದ್ದೇವೆ. ನಮ್ಮ ನಾಲಗೆಯಲ್ಲೇ ನಾವು ಮಾತಾಡುತ್ತಿಲ್ಲ. ಅದೇ ಆಕ್ರಮಣಗಾರ ನಾಲಗೆಯಿಂದ ಮಾತಾಡುತ್ತಿದ್ದೇವೆ. ಅವರ ಉಚ್ಚಾರವನ್ನು ಎಂಜಲನ್ನು 'ಗೌರವ'ದಿಂದ ಉಪಯೋಗಿಸುತ್ತಿದ್ದೇವೆ (ರಾಜಕೀಯದಲ್ಲೂ) ಹೊಲೆಯರ'ನ್ನು ಕಂಡಾಗ ಹಾರಿ ಬೀಳುವ ಜನರುವರೂ ಆಂಗ್ಲ ಶಾಸ್ತ್ರಿಯನ್ನು ಕಂಡಾಗ ಸಾಷ್ಟಾಂಗಕ್ಕೆ ಸಿದ್ಧರಾಗುತ್ತಾರೆ! ಭಾರತೀಯ (ರಾಜಕೀಯ) ಬಾಲಕನನ್ನು ಕಂಡೊಡನೆ ಬೆದರಿಸುತ್ತ ಬೆಣಕ್ಕೆ ಬಾಯಿ ಬಿಡುವ ವಯೋವೃದ್ಧರೂ ಆಂಗ್ಲೇಯ ಅಂಗನೆಯನ್ನು ಕಂಡೊಡನೆ ಪಾಷಾಣ ಹೃದಯಿಗಳಾಗಿದ್ದವರು ಪುಷ್ಪ ಸದೃಶ ಮೃದುವಾಗಿ ಬಿಡುತ್ತಾರೆ!

ಯುವನರನ್ನು, ಹೂಣರನ್ನು, ಶಕರನ್ನು ಹಿಂದೆ ಭಾರತೀಯರು ಜೀರ್ಣಿಸಿಕೊಂಡು ಅವರನ್ನು ಭಾರತೀಯರನ್ನಾಗಿಸಿರುವರು. ಅದು ನಮ್ಮ ಧಾರ್ಮಿಕ ಧ್ವಜ ಗೌರವದಿಂದ ಗಗನದಲ್ಲಿ ಹಾರಾಡುತ್ತಿದ್ದಾಗ ಸಾಧ್ಯವಾಯಿತು. ಆದರೆ ನಂತರ ಗತಿ ಬದಲಾಯಿತು. ದಿಲ್ಲಿ ಘಾದಷಾಹೀ ಬಳಗ ಭಾರತೀಯ ಭಗಿನಿಯರನ್ನು ಬಲಾತ್ಕಾರದಿಂದ ಬಲಾಯಿಸಲಾರಂಭಿಸಿದಾಗ ನಮ್ಮ ಧಾರ್ಮಿಕ ಹಾಗೂ ಆಡಳಿತ ಜೀರ್ಣಾಶಕ್ತಿ ಕುಂದಿ ಹೋಯಿತು, ಪಾರುಪತ್ಯಗಾರಿಕೆ ಧೂಳಿಪಟವಾಯಿತು. ಆಕ್ರಮಣಕಾರರ ದಿಲ್ಲಿ ದೊರೆಗಳನ್ನು ಭಾರತದ ದೊರೆಗಳೆನ್ನಲೂ ಅವರು ಯೋಚಿಸದಿದ್ದ ಕಾರಣ ಪಾಕಿಸ್ಥಾನದ ನಿರ್ಮಾಣಕ್ಕೆ ನಾಂದಿಯಾಯಿತು. ಆದುದರಿಂದ ಮಹಮ್ಮದೀಯರನ್ನು ಜೀರ್ಣಿಸಿಕೊಳ್ಳಲು ನಮ್ಮಿಂದ ಸಾಧ್ಯವಾಗಲಿಲ್ಲ. ಕಾಂಗ್ರೆಸ್ಸು ಆಡಳಿತ ಅಂಕುಶವನ್ನು ಕೈಯಲ್ಲಿ ಹಿಡಿದುಕೊಂಡಿದ್ದರೂ ಕೇರಳದಲ್ಲಿ ಮುಸ್ಲಿಂ ಲೀಗಿನ ಮುಂದೆ ಮಂಡಿಯೂರಬೇಕಾಯಿತು. ಉರ್ದುವನ್ನು ದ್ವಿತೀಯ ರಾಜ್ಯ ಭಾಷೆಯನ್ನಾಗಿ ಪರಿಗಣಿಸಬೇಕೆನ್ನುವ ಕೂಗೆದ್ದೊಡನೆ ಪ್ರಾಂತಾಗವು ಕರ್ಣಶವಾಗಿ ಕೇಳಿಬಂತು. ಆಗ ಬಿಹಾರ್ ಮಾತ್ರ ಬೆದಂದಲ್ಲ.; ಥಿಲ್ಲಿಯೇ ನಡುಗಿ ಹೋಗಿತ್ತು. ಸರ್ವ ಕಲ್ಮಷಗಳನ್ನು ಶುದ್ಧಗೊಳಿಸುವ ಶಕ್ತಿಯುಳ್ಳ ಗಂಗಾಜಲವೂ ಮಹಮ್ಮದೀಯರ ಮನಸ್ಸನ್ನು ಶುದ್ಧಗೊಳಿಸಲಾರದೆ ಹೋಯಿತು! ಇದಕ್ಕೆ ಹಿಂದೆಯೇ ತಿಳಿಸಿರುವರಂತೆ, ಗಂಗಾಗುಪ್ತ ತನ್ನ ಮೂತೆಯನ್ನು ಜಾರಿಯೆಂದು ಹೊಗಳಲಿಕ್ಕಾರಂಭಿಸಿದ್ದೇ ಕಾರಣ ಇದೆ. ಅವರು ಭಾರತೀಯ ಗಂಗಾಪ್ರವಾಹ ಹಾಗೂ ಭಾಷಾಪ್ರವಾಹದ ಮಹಾತ್ಮೆಯನ್ನು ಮರೆತು ಬಿಟ್ಟರು.

ಪತನ ಪ್ರಗತಿ ಅಲ್ಲಿಗೇನೇ ನಿಲ್ಲಲಿಲ್ಲ. ಆಕ್ರಮಣಗಾರ ಮಹಮ್ಮದೀಯರಿಗೆ ಮಣಿಯನ್ನು ಅರ್ಪಿಸುವಲ್ಲಿಗೆನೇ ಪತನ ಚಕ್ರ ನಿಲ್ಲಲಿಲ್ಲ. ತದನಂತರ ಆಗಮಿಸಿದ ಆಂಗ್ಲೇ ಅಂಗನೆಯ ಹಿಂದುಗಡೆ ಅಂಗಲಾಚುತ್ತ ಅಲೆದಾಡುವಷ್ಟು ಪ್ರಗತಿಶೀಲರಾಗಿ ಬಿಟ್ಟೆವು ನಾವು! ನಮ್ಮ ಧಾರ್ಮಿಕ ಧ್ವಜ ಧರೆಗಿಳಿದು ಬಿಟ್ಟಿತು ರಾಷ್ಟ್ರೀಯತೇಯು ಅಸ್ಮಿತೆಯು ವಿಕೃತಿಯೇ ವಿಶಿಷ್ಟ ಗುಣ, ನಾಗಾರಿಕತೆಯೆನ್ನುವ ಕಿನ್ಯಜ್ಞಾನ"ಆಂಗ್ಲ ಅಂಗನೆಯ 'ವರಪ್ರಸಾದ"ದಿಂದ ನಮಗೆ ಲಭಿಸಿತು. ನಮ್ಮನ್ನು ನಾವೇ ಜರೆದಾಡಿಕೊಳ್ಳಲಾರಂಭಿಸಿದೆವು ಇದೊಂದು ದೇಶವಾಗಿರಲಿಲ್ಲ, ಇಲ್ಲೊಂದು ರಾಷ್ಟ್ರವಿರಲಿಲ್ಲ. ಇಲ್ಲಿಯ ಜನರು ಒಗ್ಗಟ್ಟಿನಿಂದ ನಾಗರೀಕರಾಗಿ ಇರಲಿಲ್ಲ. "ದೈವ ಕೃಪೆಯಿಂದ ಆಂಗ್ಲೇಯರು ಆಗಮಿಸಿದರು! ನಮಗೆ ದೇಶದ ಚಿತ್ರವನ್ನು ಮುಂದಕ್ಕಿಟ್ಟರು. ನಮ್ಮನ್ನೊಂದು ರಾಷ್ಟ್ರವನ್ನಾಗಿ ಮಾಡಿದರು! ನಮ್ಮಲ್ಲಿ ಒಗ್ಗಟ್ಟಿನ ಅನುಭವವನ್ನುಂಟು ಮಾಡಿದರು! ನಾಗರೀಕರನ್ನಾಗಿ ಮಾಡಿದರು! ಭಾಷಾ ವರದಾನದಿಂದ ಸುಶಿಕ್ಷಿತರನ್ನಾಗಿ ಮಾಡಿದರು.

ಹಾಗಾದಲ್ಲಿ ಆಂಗ್ಲರು ಆಕ್ರಮಣ ನಡೆಸುವ ಪೂರ್ವ, ಭಾರತ ಒಂದು ದೇಶವಾಗಿರಲಿಲ್ಲವೆನ್ನ? ಕನ್ಯಾಕುಮಾರಿಯಿಂದ ಕೈಲಾಸದ ವರೆಗೂ ಜನರು ಹೋಗುತ್ತಿದ್ದರು, ಬರುತ್ತಿದ್ದರು. ಇದೆಂತ ಸಾಧ್ಯವಾಯಿತು? ಕೇರಳದ ಬ್ರಾಹ್ಮಣ ನೇಪಾಲದಲ್ಲಿ ಅರ್ಚಕನಾಗಲು ಸಾಧ್ಯವೆಂತು? ಉಜ್ಜಯಿನಿಯ ಕವಿ ಸಿಂಹಳದಲ್ಲಿ ಸಂಚರಿಸಲೆಂತು ಸಾಧ್ಯ? ಆಗ ದ್ರಾವಿಡ ಕಳ್ಳಗಂ, ದ್ರಾವಿಡ ಮುನ್ನೇತ್ರ ಕಳ್ಳಗಂ, ಬಸವ ಸೇನೆ, ಶಿವಸೇನೆ ಅಕಾಲಿದಳ, ಹಿಂದಿಸೇನೆ, ವಗೈರೆ ಕಳಂಕಗಳೂ, ಸೇನೆದಳೂ ಇರಲಿಲ್ಲ. ಜನತೆ ಇಷ್ಟಬಂದಂತೆ ಈದೇಶದಲ್ಲಿ ಎಲ್ಲೆಲೂ ಸ್ವತಂತ್ರರಾಗಿ ಸಂಚರಿಸುತ್ತಿದ್ದರು: ಎಲ್ಲಿ ಬೇಕಾದರೂ ಉದ್ಯೋಗಕ್ಕೆ ಸೇರುತ್ತಿದ್ದರು. ಇದಕ್ಕೆ ಒಗ್ಗಟ್ಟೆನ್ನುವುದೇ? ಇಂದಿನ ದುಃಸ್ಥಿತಿಗೆ ಒಗ್ಗಟ್ಟೆನ್ನುವುದೇ? ಕಾಲ ಬದಲಾಗಿರುವಂತೆ ಶಬ್ದದ ಅರ್ಥವೂ ಬದಲಾಗಿದೆ ಏನು?

ನಾವಿಂದು ಸುರಕ್ಷಿತರಾಗಿದ್ದೇವೆ! ನಾಗರಿ

ಕರಾಗಿದ್ದೇವೆ! ಆಂಗ್ಲ ಭಾಷೆಯಲ್ಲಿ ಮಾತಾಡಲು ಕಲಿತಿದ್ದೇವೆ. ಹಾಗೇನೇ 'ಹಿಂದೂ' ಅಥವಾ 'ಭಾರತೀಯ' ಶಬ್ದವು ಇಪ್ಪತ್ತನೇ ಶತಮಾನ ಕ್ರಿ. ಪೂ. ದ ಶಬ್ದಹಳೆಯವದನ್ನು ನಾವು ಶೋಧಿಸಿರುವೆವು. ಆ ಹಳೆಯ, ಅಂಧಕಾರ ಶಾಲದ ಪದಗಳನ್ನು ನಾವಿಂದು ನಾಗರಿಕರು ಉಪಯೋಗಿಸಬಹುದೇ? ಅದು ನಾಚಿಕೆಗೇಡು ಅಲ್ಲವೇ? ಇಂದು ಯಾರಾದರೂ ಆ ಪದಗಳನ್ನು ಉಪಯೋಗಿಸುವರಾದಲ್ಲಿ ಅವರು ಪ್ರಸಿದ್ಧಾಮಿಗಳ, ಹಳೆಯ ಕಂದಾಚಾರಿಗಳು, ಗೊಡ್ಡು ಸಂಪ್ರದಾಯದವರೇ ಇರಬೇಕು. ಆ ಪದಗಳನ್ನು ಬಳಕೆಗೆ ತಂದಲ್ಲಿ ತಾನೇ ಷ್ಟ. ಪ್ರಪಂಚದಲ್ಲಿಹರಿಹಂಚಾಗಿ ಬೀಡುಬಿಟ್ಟಿದ್ದ ಯುರೋಪ್ಯರು ಇಸ್ರೇಲಿಗೆ ಬಂದು ಇಪ್ಪತ್ತು ವರ್ಷಗಳೊಳಗೆ ಅದೆಂತು ಪ್ರಪಂಚದ ದೃಷ್ಟಿಯನ್ನು ಸೆಳೆದು ಕೊಂಡರು! ಆಂಗ್ಲ ಭಾಷಾ ಪ್ರಣೀತ ಯೆಹೋದ್ಯ ವಿಜ್ಞಾನಿ, ರಷ್ಯಾದಲ್ಲಿದ್ದ ಯೆಹೋದಿ, ಜರ್ಮನಿಯಲ್ಲಿದ್ದ ಯೆಹೋದಿ ಆ ಅನ್ಯಾನ್ಯ ಭಾಷೆಗಳಿಗೆ ಪರಕೀಯ ಸ್ಥಾನವನ್ನಿತ್ತು ಎಲ್ಲ ರೀತಿಯಲ್ಲೂ ಯೆಹೋದ್ಯರಾಗಿ ಬಿಟ್ಟರು. ಅವರ ಭಾಷೆಯನ್ನು ಸತ್ತ ಭಾಷೆಯನ್ನಲಾಗುತ್ತಿತ್ತು. ಆದರೆ ಇಂದು! ನಮಗೆ ಇದು ಸಾಧ್ಯ ಇಲ್ಲವೇನು? ಅದೆಂತು ಸಾಧ್ಯ? ಆ ಜನರಾದರೋ ತಾವು ಯೆಹೋದ್ಯರೆಂಬುದನ್ನು ಮರೆಯಲಿಲ್ಲ. ನಾವೂ ಹಿಂದೂಗಳೆಂಬುದನ್ನು ಮರೆತಿಲ್ಲವಾದರೂ ಆ ಪದಕ್ಕೆ ಬಹಿಷ್ಕಾರ ಹಾಕಿ ಜಾತೀಯತೆಯ ಬಣ್ಣ ಕೊಟ್ಟು ಬಿಟ್ಟಿದ್ದೇವೆ. ಮತ್ತೆ ಒಂದಾಗುವ ಅದೆಂತು ಸಾಧ್ಯ? ಆದರೆ ಯೆಹೋದ್ಯರಂತೆ ನಾವೂ ಹಿಂದೂಗಳೆಂಬುದನ್ನು ಗುರುತಿಸಿಕೊಂಡೆನೆಂದರೆ ನಂತರ ಹಿಂದೂತ್ವದ ಕಣಕಣಕ್ಕೂ ನಮ್ಮ ಜೀವನ ಪರ್ಯಂತ ಸಿಗಲು ಹಿಂಜರಿಯಲಾರೆವು. ಆ ಬೆಕ್ಕಿಗಿಂದು ಗಂಟೆಕಟ್ಟುವವರ್ಯಾರು? ಹಿಂದೂತ್ವದ ಜಾಗೃತಿ ನಮ್ಮಲ್ಲಿ ಆಯಿತೆಂದರೆ ನಂತರ ನಾವು ಹಿಂದೀಯನ್ನಾಗಲೀ, ತಮಿಳನ್ನಾಗಲೀ, ಕನ್ನಡವನ್ನಾಗಲೀ, ಸಂಸ್ಕೃತವನ್ನಾಗಲೀ, ಭಾರತದ ಅದ್ಯಾವ ಭಾಷೆಯನ್ನೇ ಆಗಲಿ ನಾವು "ನಾಶವಾಗಲಿ" ಎನ್ನಲಾರೆವು. ಅವೆಲ್ಲವೂ ನಮ್ಮದೇ ಭಾಷೆಗಳವೆ. ಭಾರತೀಯ ಭಾಷಾ ತಾವರೆಯ ಭಿನ್ನ ಭಿನ್ನ ದಳಗಳವು. ಪ್ರತಿಯೊಂದು ದಳವೂ ಕಮಲದ ಅಂಗವೇ ಇದೆ. ಹಾಗೆಯೇ ಭಾರತದ ಪ್ರತಿಯೊಂದು ಭಾಷೆಯೂ ಭಾರತದ ಭಾಷೆಯೇ ಇದೆ. ಆಂಗ್ಲ ವ್ಯಾಮೋಹಿಗಳು ಇಲ್ಲಿ ಇನ್ನೊಂದು ಆಟವನ್ನಾಡುತ್ತಾರೆ. ಆಂಗ್ಲ ಭಾಷೆಯೂ ಭಾರತದ ಭಾಷೆಯೇ ಇದೆಯಂತೆ ಆಂಗ್ಲ ಭಾಷೆಯನ್ನಾಡುವವರೂ ಇಷ್ಟ ಇರುವ ಕಾರಣದಿಂದಾಗಿ ಆಂಗ್ಲಭಾಷೆ ಅಂತಾರಾಷ್ಟ್ರೀಯ ಭಾಷೆ ಇರುವದರಿಂದ ಅದು ಭಾರತದ ಭಾಷೆಯೇ ಇದೆಯಂತೆ! ಇಂಗ್ಲೆಂಡಿನಲ್ಲಿ ಭಾರತೀಯರು ಕೆಲವರಾದರೂ ಇದ್ದಾರೆ. ಶಾಮನಾಪೆಲ್ಲಿನಲ್ಲಿ ಭಾರತವು ದೊಡ್ಡ ದೇಶವಿದೆ. ಭಾರತದ ಯಾವದಾದರೊಂದು ಭಾಷೆಯನ್ನು ಇಂಗ್ಲಿಂಡಿನವರು ರಾಜ್ಯಭಾಷೆಯನ್ನಾಗಿ ಪರಿಗಣಿಸಲು ಸಿದ್ಧರಿದ್ದಾರೆಯೇ? ಹಿಂದೆ ಅದೇ ಇಂಗ್ಲೆಂಡಿನಲ್ಲಿ ಫ್ರೆಂಚ್ ರಾಜ್ಯ ಭಾಷೆಯಾಗಿತ್ತು. ಆದರೆ ಅದನ್ನು ಆಂಗ್ಲ ದೇಶಭಕ್ತರು ಸಹಿಸಲಿಲ್ಲ. ನಮ್ಮಲ್ಲಿ ಆ ರೀತಿ ದೇಶಭಕ್ತಿ ಇಲ್ಲವೇನ? ಇದ್ದಲ್ಲಿ ಇಂಗ್ಲೀಷೇ ಇರಬೇಕೆಂದು ಇಷ್ಟೆಲ್ಲಾ ಗಲಭೆ ನಡೆಯುತ್ತಿದ್ದೇವೆಯೇ? ಆಂಗ್ಲವ್ಯಾಮೋಹಿಗಳ ಪ್ರಚಾರ ಭರದಿಂದಾಗಿ ಇಂಗ್ಲಿಷು ಅಂತಾರಾಷ್ಟ್ರೀಯ ಭಾಷೆಯೆನ್ನುವ ಭ್ರಮೆ ಬಹಳಷ್ಟು ಭಾರತೀಯರಲ್ಲಿದೆ. ಜಪಾನಿಗೂ ನಾವು ಆಂಗ್ಲಭಾಷೆಯಲ್ಲಿ ಬರೆಯಬಹುದು, ಆ ಸೋವಿಯಟಕ್ಕೂ ಬರೆಯಬಹುದು. ಅದು ಅಂತಾರಾಷ್ಟ್ರೀಯ ಭಾಷೆ ಅಲ್ಲವೇನು? ಎಂತಹ ವಾದ! ಜಪಾನಿನ ರಾಜ್ಯಭಾಷೆ ಆಂಗ್ಲ ಇರುವದಿಲ್ಲ. ಹೆಚ್ಚೇಕೆ? "ಇಂದಿನ ಅವೇರಿಕನರ ಪೂರ್ವಜರು ಆಂಗ್ಲೇಯರೇ ಇದ್ದಾರೆ. ಹಾಗಿದ್ದರೂ ಅವರು ಆ ಭಾಷೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸದೆ ಅಮೆರಿಕನ್ ಭಾಷೆಯೆನ್ನುವದನ್ನುಂಟು ಮಾಡಿಕೊಂಡಿದ್ದಾರೆ. ಏನೇ ಇದ್ದರೂ ಅವರು ಒಂದೇ ಮತದ ಶಿಷ್ಯರೆಗಳ. ಪ್ರಪಂಚದಲ್ಲಿ ಅದ್ಯಾವ ರಾಷ್ಟ್ರವೂ ಅನ್ಯಭಾಷೆಯನ್ನೆತನ್ನ ರಾಜ್ಯ ಭಾಷೆಯೆಂದು ಗೌರವಿಸಲಾರದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ರಶ್ಯಾಕ್ಕೆ ರಾಯಭಾರಿಯಾಗಿ ಹೋಗಿದ್ದಾಗ ಆಂಗ್ಲ ಭಾಷೆಯಲ್ಲಿ ಅಧಿಕಾರ ಪತ್ರವನ್ನು ಕೊಂಡೆಯಿದ್ದರು. ಅದನ್ನು ರಷ್ಯ ಸರ್ಕಾರ ತಿರಸ್ಕರಿಸಿತು. ಅಂದು ನಡೆದ ಆ ಅಪಮಾನಕರ ದುರ್ಘಟನೆಯ ನಂತರ ಭಾರತ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಜ್ಞಾನೋದಯ ವಾಗಿದ್ದು, ಅದೀಗ ಅನ್ಯಾನ್ಯ ದೇಶಗಳಿಗೆ ಕಳುಹಿಸುವ ಅಧಿಕಾರ ಪತ್ರಗಳನ್ನು ಹಿಂದಿಯಲ್ಲಿ ಕಳುಹಿಸಲಾರಂಭಿಸಿದೆ. ಅದೇ ರೀತಿ ಅದ್ಯಾವ ರಾಷ್ಟ್ರವು ನಮ್ಮ ಮುಖಕ್ಕೆ ಉಗುಳ ಬೇಕಾಗಿದೆಯೋ? ಅದಕ್ಕಿಂತ ಮುಂಚೆತವಾಗಿ ನಾವೇ ಎಚ್ಚೆತ್ತುಕೊಳ್ಳುವದು ಒಳ್ಳೆಯದು.

ಇದೀಗ ಉತ್ತರಾಯಣ ಆರಂಭವಾಗಿದ್ದಾದೆ. ಭಾರತೀಯರಾದ ನಮ್ಮಲ್ಲಿ ಭಾಷಾ ಭಾಷ್ಕರ ಬಟ್ಟೆ ಬದಲಾಯಿಸುವ ಸುಮಂಗಲಕರ ಕಾಲ ಸಮೀಪಿಸಿದೆ. ನೈಸರ್ಗಿಕ ನಿಯಮದಂತಾದರೂ ನಾವು ಬುದ್ಧಿ ಕಲಿತ ಕೊಂಡು ಭಾರತೀಯರಾ ಭಾಷಾ ಭಾಷ್ಕರಕ್ಕೆ ವಂದಿಸುವೆ.

"ಅನುಗಾ ೧೯೬೭"

ವಿಶ್ವದ ಎಲ್ಲಾ ಖಾದ್ಯ ವಸ್ತುಗಳ ಪ್ರದರ್ಶನ

'ಇಂಗೂ, ಕರಿಬೇವೂ, ಇದ್ದರೆ ಮಂಗನ್ನೂ ಅಡಿಗೆ ಚೆನ್ನಾಗಿ ಮಾಡ ತ್ತಳೆ!' ಅಂತ ಒಂದು ಹಳೆಯ ಗಾದೆ ಇದೆ. ಅಂದರೆ, ಆ ಎರಡು ವಸ್ತುಗಳಿಗೆ ಅಷ್ಟೊಂದು ಪ್ರಾಶಸ್ತ್ಯ! ಆ ವುಗಳನ್ನಿಟ್ಟುಕೊಂಡು ಅಡಿಗೆ ಮಾಡುವ ಮಂಗನ್ನನ ಹಸ್ತಗುಣದ ಬಲದಿಂದ ಅಡಿಗೆ ಚೆನ್ನಾಗಿ ಆದರೂ, ಅವಳಿಗೆ ಪ್ರಶಂಸೆ ಇಲ್ಲ. ಹಿಂದೆ, ವಿದೇಶೀಯರು ವ್ಯಾಪಾರದ ನೆಪದಲ್ಲಿ ನಮ್ಮ ದೇಶಕ್ಕೆ ಬಂದು ಸಮೃದ್ಧವಾಗಿ ಬೆಳೆಯುತ್ತಿದ್ದ ಸಂಭಾರ ಪದಾರ್ಥಗಳನ್ನು ಹಡಗುಗಳಲ್ಲಿ ದಂಬಿಸಿಕೊಂಡು ಹೋಗುತ್ತಿದ್ದರು. ಅದಕ್ಕೆ ಮನ್ನ ಈ ಪದಾರ್ಥಗಳ ಬಗ್ಗೆ ಯಾರೂ ಅಷ್ಟಾಗಿ ಗೊತ್ತಿರಲಿಲ್ಲ. ನಮ್ಮ ವಾರಿಗಳ, ನಾವಿಕರ ಓಡಾಟದಿಂದಾಗಿ ಆ ದೇಶದ ಅಡಿಗೆ ಪದ್ಧತಿಗಳು ನಮ್ಮ ದೇಶಕ್ಕೂ, ನಮ್ಮ ದೇಶದ ಪದ್ಧತಿಗಳು ಬೇರೆ ಬೇರೆದೇಶಗಳಿಗೂ ಪ್ರಯಾಣ ಮಾಡತೊಡಗಿದುವು ಒಂದೊಂದು ದೇಶದಲ್ಲಿ ಒಂದೊಂದು ಬಗೆಯ ಅಡಿಗೆಗೆ ಪ್ರಾಶಸ್ತ್ಯವಿರುತ್ತದೆ. ಅಡಿಗೆಗಳಲ್ಲಿ ಇಂತಿಷ್ಟೇ ವೈವಿಧ್ಯತೆಗಳವೆಯೆಂದು ಯಾರೂ ಹೇಳಲು ಸಾಧ್ಯವಿಲ್ಲ ಹಾಗೆ ಕೇಳಿತ್ತಿರವಾಗಲೇ ಹೊಸದೊಂದು ಬಗೆಯ ಅಡಿಗೆ ಹುಟ್ಟಿಕೊಳ್ಳುತ್ತಿರುತ್ತದೆ. ನಮ್ಮ ದೇಶದಲ್ಲಿಯೇ ಒಂದೊಂದು ಮೂಲೆಯಲ್ಲಿ ಒಂದೊಂದು ಬಗೆಯ ಅಡಿಗೆಯನ್ನು ತಯಾರಿಸುತ್ತಾರೆ. ಅವುಗಳ ಬಗ್ಗೆಯೇ ನಮಗೆ ತಿಳಿದಿಲ್ಲವೆಂದ ಮೇಲೆ, ಜಗತ್ತಿನ ನಾನಾ ಭಾಗಗಳ ಜನರು ಯಾವ ಯಾವ ಬಗೆಯ ಉಣಿಸುಗಳನ್ನು ತಿನ್ನುತ್ತಾರೆಂದು ನಮಗೆ ತಿಳಿಯುವುದು ತಾನೆ ಹೇಗೆ?

ಇದೇ ಕಾರಣಕ್ಕಾಗಿಯೇ, ಪ್ರಪಂಚದ ಹಲವಾರು ದೇಶಗಳಲ್ಲಿನ ಪಾಕ ಶಾಸ್ತ್ರದ ಬಗ್ಗೆ ಎಲ್ಲರಿಗೂ ತಿಳುವಳಿಕೆಯನ್ನುಂಟುಮಾಡುವ ಸಲುವಾಗಿಯೇ, ಪಶ್ಚಿಮ ಜರ್ಮನಿಯಲ್ಲಿ ಎರಡು ವರ್ಷಕ್ಕೊಮ್ಮೆ 'ಅನುಗಾ' ಎಂಬ ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ. ಈ ಬಾರಿ ನಡೆದ ಅನುಗಾ ಪ್ರದರ್ಶನವು ವರ್ಷೇ ವರ್ಷೇ ಅದರ ಜನಪ್ರಿಯತೆಯು ಏರತ್ತಲೇ ನಡೆದಿತೆಯೆಂಬುದನ್ನು ದೃಢೀಕರಿಸಿತು. ಒಂಭತ್ತು ದಿನಗಳ ಪರ್ಯಂತ ನಡೆದ ಈ ಪ್ರದರ್ಶನದಲ್ಲಿ ಐವತ್ತೊಂಭತ್ತು ದೇಶಗಳಿಂದ ಆಗಮಿಸಿದ್ದ ೩೧೪ ಸಂಸ್ಥೆಗಳು ಪಾಲ್ಗೊಂಡಿದ್ದವು. ೩೫,೦೦೦ ವೀಕ್ಷಕರು ಪ್ರದರ್ಶನವನ್ನು ವೀಕ್ಷಿಸಿದರಲ್ಲದೆ, ೪೪ ದೇಶಗಳಿಂದ ತಜ್ಞರು ಬಂದು ಇದನ್ನು ಅವಲೋಕಿಸಿದರು.

ಪ್ರದರ್ಶನವನ್ನು ಅತ್ಯಂತ ವಿಶಾಲವೂ, ಆಕರ್ಷಣೀಯವೂ, ಸೌಕರ್ಯಯುತವೂ ಆದ ಮೈದಾನಗಳಿಂದ ಕೂಡಿದ ೧೪೫,೦೦೦ ಚದರ ಮೀಟರ್ ವಿಸ್ತೀರ್ಣದ ಆವರಣದಲ್ಲಿ ಏರ್ಪಡಿಸಲಾಗಿತ್ತು. ಇಷ್ಟೆ ನಡೆದ ವ್ಯಾಪಾರವೂ ನಿರೀಕ್ಷೆಗೆ ಮೀರಿದುದಾಗಿತ್ತು.

ಅನುಗಾದಲ್ಲಿ ಭಾಗವಹಿಸಿದ ಸಂಸ್ಥೆಗಳು ಒಟ್ಟು ೩೧೪ ಎಂದಿದ್ದರೆ, ಅದರಲ್ಲಿ ೨೭೫ ಸಂಸ್ಥೆಗಳು ಎಂದರೆ, ಹೆಚ್ಚುಕಡಿಮೆ ಅರ್ಧದಷ್ಟು ವಿದೇಶೀ ಸಂಸ್ಥೆಗಳೇ ಆಗಿದ್ದವು ಕೊಸ ವ್ಯವಹಾರಗಳಲ್ಲಿನ ಅರಂಭಗಳು, ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು, ವಸ್ತುಗಳನ್ನು ಹೋಲಿಸಿ ನೋಡಲು ಈ ವಿದೇಶೀ ವಾರ್ತಾಳ್ಳುವಿಕೆ ಬಲು ಸಹಾಯಕಾರಿಯಾಗಿತ್ತು. ಈ ಭಾಗಗಳ ಜನಪ್ರಿಯವಾಗಿರುವ ವಸ್ತುಗಳ ಮೇಲೆ ಜನರ ಗಮನವು ಹರಿಯಂತೆಯೇ ಇದೇ ನೊಟ್ಟೆಯೆಂದಲು ಪ್ರದರ್ಶಿತವಾದ ವಸ್ತುಗಳ ಮೇಲೆಯೂ ಅಷ್ಟೇ ಗಮನವು ಬಿದ್ದಿತ್ತು. ಇದರಲ್ಲಿ ಪಾಲ್ಗೊಂಡಿದ್ದ ಈ, ಎಫ್. ಟಿ. ಎ. (EFTA) ಮತ್ತು COMECON ರಾಷ್ಟ್ರಗಳು ಐರೋಪ್ಯ ವರ ಮಾರುಕಟ್ಟೆ (EEC)ಯು ವಿಧಿಸಿದ್ದ ಅತಿ ಹೆಚ್ಚಿನ ತೆರಿಗೆಗಳನ್ನು ಖಂಡಿಸಿದವು. ಹಾಗಿದ್ದರೂ, ದೇಶೀ ವಸ್ತುಗಳಿಗೆ ಉತ್ತಮ ಗಿರಾಕಿ ದೊರಕಿತು. ಮದ್ಯ, ರೊಟ್ಟಿ, ಮುಂತಾದ ವಸ್ತುಗಳು, ಬೆಣ್ಣೆ ಮುಂತಾದ ವಸ್ತುಗಳಲ್ಲಿ ಏಕ ಮಾರುಕಟ್ಟೆಗೆ ಸೇರಿದ ರಾಷ್ಟ್ರಗಳಲ್ಲೇ ವಿಪರೀತ ಪೈಪೋಟಿಯಿರುವುದಾಗಿ ಕಂಡ ಬಂದಿತು.

ಅಂತರಾಷ್ಟ್ರೀಯ ಆಹಾರ ಮಾರುಕಟ್ಟೆಯು ಯಾವ ರೀತಿ ತಳೆದಿದೆಯೆಂದು ತಿಳಿಯಲಿಚ್ಛಿಸುವವರೆಲ್ಲಾ "ಅನುಗಾ"ಕ್ಕೆ ಭೇಟಿ ಕೊಡಲೇ ಬೇಕು. ಪ್ರದರ್ಶಿತವಾಗುತ್ತಿರುವ ಪದಾರ್ಥಗಳ ವೈವಿಧ್ಯ ಹಾಗೂ ಸಂಖ್ಯೆಯು ವರ್ಷೇ ವರ್ಷೇ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗುತ್ತಿದೆ.

ಆಹಾರ ತಯಾರಿಕೆಗೆ ಸಂಬಂಧಪಟ್ಟ ಯಂತ್ರಗಳನ್ನು ಪ್ರದರ್ಶಿಸಲಾಗಿದ್ದು ಮಳಿಗೆಗಳ ವಿಶೇಷ ಆಕರ್ಷಣೆಗಳನ್ನು ಒದಗಿಸಿದವು. ಆಹಾರ ಪದಾರ್ಥಗಳನ್ನು ಸೀಸೆ ಡಬ್ಬಗಳಲ್ಲಿ ಶೇಖರಿಸಿಡುವುದು, ಶೀತ ಸಾಧನಗಳಲ್ಲಿ ರಕ್ಷಿಸಿಡುವುದು, ಸ್ವಯಂಚಾಲಿತ ಯಂತ್ರಗಳಿಂದ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸುವುದು, ಮಂತಾದುವನ್ನು ವೀಕ್ಷಕರು ಹೆಚ್ಚಾಗಿ ಪ್ರಶಂಸಿಸಿದರು. ಈ ಯಂತ್ರ ವಿಭಾಗದಲ್ಲಿ ಪಶ್ಚಾ ಮಾರಾಟ ಹಾಗೂ ಬೇಡಿಕೆಗಳು ಅತಿ ಹೆಚ್ಚಾಗಿದ್ದವೆಂದು ತಿಳಿದು ಬಂದಿದೆ.

ಪಶ್ಚಿಮ ಜರ್ಮನಿಯದ್ದು ಯಾವಾಗಲೂ ಆಹಾರ ಪದಾರ್ಥಗಳನ್ನು ಹೊರದೇಶಗಳಿಂದ ತರಿಸಿಕೊಳ್ಳುವುದರಲ್ಲಿ ಮೇಲುಗೈ ಆದುದಂದಲೇಯೋ ಏನೋ, ಜರ್ಮನಿಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವುದು "ಅನ ಗಾ" ಪ್ರದರ್ಶನವು ಹೊರದೇಶಗಳನ್ನು ವಿಶೇಷ ರಾಗಿ ಆಕರ್ಷಿಸುತ್ತಿದೆ.

ನಿಜವಾದ ಕಾರಣ

ಒಬ್ಬ—"ನಿನ್ನನ್ನ ಚೆನ್ನಾಗಿ ಬಯ್ಯಬೇಂದು ಯದೇಷ್ಟ ಶಾಖು ಕುಡಿದು ನಿನ್ನ ಮನೆಯಂಗಳದ ವರೆಗೂ ಬಂದೆ..."

ಇನ್ನೊಬ—"ಏ ತ್ತೇ'ನಾಯ್ತು?..."

"ನೀನು ಮನೆಯಲ್ಲೇ ಇರುವುದಾಗಿ ತಿಳಿದು ಹಿಂತಿರುಗಿ ಹೋಗಿ...."

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರೆಯಲ್ಲಿ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇನೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಮೆನೇಜರ್, ನವಯುಗ.

ಸುಮೇರಿಯನ್ ಅರಸ ಹಮ್ಮುರಬಿ

(ಐದನೇ ಪುಟದಿಂದ)

ಕೆಲವು ಕಾನೂನುಗಳ ಉದಾಹರಣೆಯನ್ನು ಇಲ್ಲಿ ನೋಡಬಹುದಾಗಿದೆ.

ಒಬ್ಬನು ಇನ್ನೊಬ್ಬನ ಕಣ್ಣನ್ನು ಕುರುಡು ಮಾಡಿದರೆ, ಅವನ ಕಣ್ಣನ್ನು ಕುರುಡು ಮಾಡತಕ್ಕದ್ದು. ಒಬ್ಬನು ಇನ್ನೊಬ್ಬನ ಹಲ್ಲು ಮುರಿದರೆ, ಅವನ ಹಲ್ಲನ್ನು ಮುರಿಯ ತಕ್ಕದ್ದು. ಮುರಿದದ್ದು ಒಬ್ಬ ಕೇಳು ಜಾತಿಯವನ ಹಲ್ಲಾದರೆ ಒಂದು ಮಾನ (ಬೆಳ್ಳಿಯ ಮೂರನೆಯ ಭಾಗ) ದಂಡ ಕೊಡ ಬೇಕಾದ್ದು.

ಕೀಳು ಜಾತಿಯವನು ಕೀಳು ಜಾತಿಯವನನ್ನು ಹೊಡೆದರೆ ಹತ್ತು ಬೆಳ್ಳಿ ನಾಣ್ಯಗಳನ್ನು ದಂಡ ಕೊಡತಕ್ಕದ್ದು.

ಜಗಳದ ನಡುವೆ ಅಜ್ಞಾನದಿಂದ ಒಬ್ಬನು ಇನ್ನೊಬ್ಬನನ್ನು ಹೊಡೆದು ಗಾಯ ಪಡಿಸಿದರೆ ಹೊಡೆದವನು ವೈದ್ಯನಿಗೆ ಹಣವನ್ನು ಕೊಡತಕ್ಕದ್ದು.

ಖೂನ ವಿಚಾರಣೆ ನಡೆಯುತ್ತಿರುವಾಗ ಸಾಕ್ಷಿಗಳನ್ನು ಬೆದರಿಸಿದವನಿಗೆ ಮರಣ ದಂಡನೆ. ಒಂದು ಸಲ ತೀರ್ಪನ್ನು ಕೊಟ್ಟ ಮೇಲೆ, ಅದನ್ನು ಬದಲಾಯಿಸಿದ ನ್ಯಾಯಾಧೀಶರನ್ನು ಆ ಸ್ಥಾನದಿಂದ ತೆಗೆಯ ತಕ್ಕದ್ದು.

ಹೊಸದಾಗಿ ಕಟ್ಟಿದ ಮನೆಯು ಕುಸಿದು ಬಿದ್ದು ಯಜಮಾನ ಸತ್ತರೆ ಮನೆ ಕಟ್ಟಿದವನ್ನು ಕೊಲ್ಲ ತಕ್ಕದ್ದು. ಸತ್ತದ್ದು ಯಜಮಾನನ ಮಗನಾದರೆ ಕಟ್ಟಿದವನ ಮಗನನ್ನು ಪ್ರತಿಯಾಗಿ ಕೊಲ್ಲತಕ್ಕದ್ದು.

ಹಮ್ಮುರಬಿಯ ಕಾಲದಲ್ಲಿ "ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು" ಎಂಬುದೇ ನ್ಯಾಯಾಲಯಗಳ ಆಧಾರವಾಗಿತ್ತು. ಆಗಿನ ಶಿಕ್ಷೆಗಳು ಈಗ ವಿಧಿಸುವ ಶಿಕ್ಷೆಗಳಿಗಿಂತ ಕ್ರೂರವಾಗಿರುತ್ತಿದ್ದವು. ಆಕಾಲದ ಕಾನೂನನ್ನು ಓದಿದಾಗ ಆಕಾಲದ ಜನಜೀವನದ ಪರಿಚಯವಾಗುತ್ತದೆ. ಕೆಲ ವಿಷಯಗಳಲ್ಲಿ ಮೆಸಪಟೋಮಿಯದ ಜನ ಇಂದಿನವರಿಗಿಂತಲೂ ನಾಗರಿಕರು, ಸುಸಂಸ್ಕೃತರು ಎಂದು ತಿಳಿದು ಬರುತ್ತದೆ. ಆ ಕಾಲದಲ್ಲಿ ಸ್ತ್ರೀಯರಿಗಿದ್ದ ಸೌಲಭ್ಯಗಳು, ಸಮಾನತೆ, ಹಕ್ಕು ಬಾಧ್ಯತೆಗಳು ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಸಹ ಇಲ್ಲ. ವಿದ್ಯಾರ್ಜನೆಗೆ ಪುರುಷರಂತೆ ಸ್ತ್ರೀಗೂ ಅವಕಾಶವಿತ್ತು. ಸರ್ಕಾರದ ಅಧಿಕಾರಿಗಳಾಗಿ, ವರ್ತಕರಾಗಿ, ಅರ್ಚಕಿಯರಾಗಿ ಅನೇಕ ಸ್ತ್ರೀಯರು ಕೆಲಸಮಾಡುತ್ತಿದ್ದರು. ವಿವಾಹ ಪೂರ್ವದಲ್ಲಿರಲಾಗೂ ಅನಂತರ ತಮ್ಮ ಸ್ವಂತ ಹಣ, ಮನೆ, ಗದ್ದೆ, ತೋಟ ಮೊದಲಾದ ಆಸ್ತಿಗಳನ್ನಿರಿಸಿಕೊಂಡು ಆಡಳಿತ ನಡೆಸುವ ಅಧಿಕಾರವಿತ್ತು. ಅವಕಾಶವಿತ್ತು. ಆ ಕಾಲದಲ್ಲಿ ತಂದೆ-ತಾಯಿಯರು ತಮ್ಮ ಆಸ್ತಿಯನ್ನು ಗಂಡು-ಹೆಣ್ಣು ಮಕ್ಕಳಿಗೆ ಸಮವಾಗಿ ಹಂಚುತ್ತಿದ್ದರು. ಅಂದರೆ ಸಮಾಜದಲ್ಲಿ ಸ್ತ್ರೀಯರಿಗೆ ಪುರುಷರಂತೆಯೇ ಸ್ಥಾನಮಾನಗಳಿದ್ದವು ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಶಕ್ತಿ ಸಾಮರ್ಥ್ಯಗಳಿಂದ ಹಮ್ಮುರಬಿ ರಾಜ್ಯದಲ್ಲಿ ಹಲವಾರು ಸಂಪ್ರದಾಯಗಳನ್ನು ಆಚರಣೆಗೆ ತಂದ. ವಿರೋಧಿಗಳನ್ನು ಅಡಗಿಸಿದ ಶಿಸ್ತು, ನೀತಿ, ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ವ್ಯವಸ್ಥೆ ಮಾಡಿದ.

ಆದರೆ ಜನನ ಮರಣಾನಂತರ ಸಮರ್ಥ ಅರಸರಿಲ್ಲದೆ ದೇಶದಲ್ಲಿ ಹಾಹಾಕಾರ ಎದ್ದಿತು. ಮೆಸಪಟೋಮಿಯಾದ ಸಂಪತ್ತು, ಶ್ರೇಷ್ಠತೆ ಗುಣ ಅರಿತಿದ್ದ ಶತ್ರುಗಳು ದಾಳಿ ಮಾಡಿದರು. ಟೇಬಲನ್ ನಗರದವರಿಗಿಂತ ಅತಿ ಕ್ರೂರಿಗಳಾದ, ನಾಗರಿಕತೆ, ಸಂಸ್ಕೃತಿಗಳ ಪರಿಚಯವಿಲ್ಲದ ಅಸ್ಸೀರಿಯಾ ದೇಶದವರು ಕ್ರಿ. ಪೂ. ೧೨೭೫ರಲ್ಲಿ ಹಮ್ಮುರಬಿಯ ರಾಜಧಾನಿಯನ್ನು ಪ್ರವೇಶಿಸಿದರು. ಮುಂದೆ ಸುಮಾರು ಐದಾರು ಶತಮಾನಗಳ ವರೆಗೂ ಮೆಸಪಟೋಮಿಯಾ ಪ್ರದೇಶ ರಾಜಕೀಯ ಅಲ್ಲೋಲಕಲ್ಲೋಲಗಳ ಕೇಂದ್ರವಾಯಿತು. ಆದರೆ ಹಮ್ಮುರಬಿ ಬಳಕೆಗೆ ತಂದ ಸಪ್ತಸಂಪ್ರದಾಯಗಳು ಮುಂದಿನ ಅನೇಕ ರಾಜ್ಯಗಳಿಗೆ ಮಾದರಿಯಾದವು. ಪ್ರಕೃತಿಯ ಪ್ರಕೋಪದಿಂದ ಈ ಪುರಾತನ ನಾಗರಿಕ ನಗರಗಳು ತಮ್ಮ ವೈಭವ, ನಾಗರಿಕತೆ, ಸಂಸ್ಕೃತಿಗಳನ್ನು ಕಳೆದುಕೊಂಡು ಕಳೆಮುಂದಿ ಭೂಗರ್ಭದಲ್ಲಿ ಅಡಗಿಕೊಳ್ಳಬೇಕಾಯಿತು. ಈ ಪುರಾತನ ನಗರಗಳ ನಾಗರಿಕತೆ, ಸಂಸ್ಕೃತಿಗಳ ಅವಶೇಷಗಳ ಪರಿಚಯವಾಗಲು ಮತ್ತೆ ಸುಮಾರು ಆಯಸಾವಿರ ವರ್ಷಗಳು ಬೇಕಾಯಿತು.

ನೀವೂ ಅರಿಯಿರಿ

ಭಾರತದ ಪ್ರಧಾನ ಗ್ರಾಹಕ ಅಮೇರಿಕಾ

ಎಚ್. ಎಂ. ನಾರಾಯಣ ಭಟ್

೧೯೬೫–೬೬ರಲ್ಲಿ ಭಾರತದ ಪ್ರಧಾನ ಗ್ರಾಹಕನೆಂಬ ಮಾನ್ಯತೆ ಅಮೇರಿಕಾಕ್ಕೆ ಸಲ್ಲುತ್ತದೆ. ಆ ಬಳಿಕ ಅನುಕ್ರಮವಾಗಿ ಮಾನ್ಯತೆ ಪಡೆದ ರಾಷ್ಟ್ರಗಳು ಯುನೈಟೆಡ್ ಕಿಂಗ್ಡಮ್, ರಷ್ಯಾ ಮತ್ತು ಜಪಾನ್ ದೇಶಗಳಾಗಿವೆ. ಭಾರತದಿಂದ ನಿರ್ಯಾತವಾದ ಪ್ರಧಾನ ವಸ್ತುಗಳು ಸಣಬು, ಚಾ, ಕಬ್ಬರೆ, ಗೋಡಂಬಿ, ಕಾಳುಮೆಣಸು, ಚರ್ಮ, ಎಣ್ಣೆ, ಸುಗಂಧ ದ್ರವ್ಯಗಳು ಇತ್ಯಾದಿ. ೨೬-೧೯೬೬ರಂದು ಅಮೇರಿಕಾದ ಕ್ಷಿಪಣಿಯೊಂದು ಚಂದ್ರ ಗ್ರಹದ ಮೇಲೆ ಇಳಿದು ಅಲ್ಲಿಂದ ಚಾರಿತ್ರಿಕ ಛಾಯಚಿತ್ರಗಳನ್ನು ಭೂಮಿ ಸುತ್ತ ಕಳಿಹಿಸಿತು. ಆ ಗಗನ ಯಾನದ ಯಂತ್ರಿಕ ಚಟುವಟಿಕೆಗೆ ಮೈಕಾದ ಅಗತ್ಯವಿತ್ತು. ಮೈಕಾವನ್ನು ಅಮೇರಿಕಾ ದೇಶವು ಹೆಚ್ಚಾಗಿ ಭಾರತದಿಂದಲೇ ಕೊಳ್ಳುತ್ತದೆ. ೧೯೬೫–೬೬ರಲ್ಲಿ ಅಮೇರಿಕವು ರೂ. ೨೧ ಲಕ್ಷ ಬೆಲೆಯ 'ಕಾಗೆಭಂಗಾರ'ವನ್ನು ಆಯಾತ ಮಾಡಿಕೊಂಡಿತು.

ಭಾರತದ ಇತರ ವಸ್ತುಗಳನ್ನೂ ಅಮೇರಿಕಾ ಕೊಳ್ಳುತ್ತಿದೆ. ಗೋಡಂಬಿಯಿಂದ ಮಸಾಲೆ ಪುಡಿ ಸಹಿತ ಅನೇಕ ವಸ್ತುಗಳನ್ನು ಭಾರತವು ಆ ದೇಶಕ್ಕೆ ನಿರ್ಯಾತ ಮಾಡುತ್ತಿದೆ.

೧೯೬೫–೬೬ರಲ್ಲಿ ಒಟ್ಟು ರೂ. ೧೪೬.೮ ಕೋಟಿ ಬೆಲೆಯ ಸಾಮಗ್ರಿಗಳನ್ನು ಭಾರತವು ಅಮೇರಿಕಾಕ್ಕೆ ನಿರ್ಯಾತ ಮಾಡಿತು.

೧೯೯೦ ಶತಮಾನದಲ್ಲಿ ನ್ಯೂ ಇಂಗ್ಲಾಂಡಿನ ಹೆಪ್ಪುಗಟ್ಟಿದ ಸಮುದ್ರದಿಂದ 'ಮಂಜುಗಡ್ಡೆ'ಗಳನ್ನು ಭಾರತಕ್ಕೆ ತರುತ್ತಿದ್ದ ಅಮೇರಿಕನ್ ಹಡಗುಗಳು ಸುಗಂಧ ದ್ರವ್ಯಗಳನ್ನೂ ಸಂಬಾರ ಜೀನಸುಗಳನ್ನೂ ಹೇರಿಕೊಂಡು ಮರಳುತ್ತಿದ್ದವು.

ಆದರೆ ಈಗ ಹಾಗೆ ಮಂಜುಗಡ್ಡೆಗಳನ್ನು ತರುವ ಬದಲಾಗಿ ಯಂತ್ರೋಪಕರಣಗಳನ್ನೂ ನಿತ್ಯೋಪಯೋಗಿ ವಸ್ತುಗಳನ್ನೂ ತಂದು ಇಲ್ಲಿಂದ ವಿವಿಧ ಕೈಗಾರಿಕೆಗಳಿಗೆ ಅಗತ್ಯವಿರುವ "ಕಚ್ಚಾ ಸಾಮಗ್ರಿ"ಗಳನ್ನು ಹೇರಿಕೊಂಡು ಹೋಗುತ್ತವೆ.

ರೂ. ೧೪–೭೪ ಕೋಟಿ ಬೆಲೆಯ ಗೋಡಂಬಿ; ರೂ. ೬೪.೧೨ ಕೋಟಿಯ ಸಣಬು; ರೂ. ೮ ೦೩ ಕೋಟಿಯ ಗೋಣಿ ಚೀಲಗಳು; ರೂ. ೪.೩೪ ಕೋಟಿಯ ಸಕ್ಕರೆ; ರೂ. ೩.೩ ಕೋಟಿಯ ವಿಗ್ರಹ ಮತ್ತದರ ಉಪವಸ್ತುಗಳು; ರೂ. ೫ ೯೫ ಕೋಟಿಯ ಹತ್ತಿ ಬಟ್ಟೆಗಳು; ರೂ. ೪.೧೯ ಕೋಟಿಯ ಚರ್ಮ; ರೂ. ೩.೨೩ ಕೋಟಿಯ ಎಣ್ಣೆ; ರೂ. ೩.೧೮ ಕೋಟಿಯ ಚಾ; ರೂ. ೨.೨೫ ಕೋಟಿಯ ಮ್ಯಾಂಗಫೈಸ್ ಅದುರು ಮುಂತಾದವುಗಳು ೧೯೬೫–೬೬ರಲ್ಲಿ ಭಾರತದಿಂದ ಅಮೇರಿಕಾಕ್ಕೆ ನಿರ್ಯಾತವಾದ ಪ್ರಧಾನ ಸಾಮಗ್ರಿಗಳು.

[—ಸಂಗ್ರಹ]

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

Ask for

AZAD

nitbit

BISCUITS

Azad Industries, Mangalore-1

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಾಲವಾದ ಹೊಟೆಲ್.

ದಾರಿದ್ರ್ಯಮೇಕಂ ಗುಣವೃಂದಹಾರಿ

(ನಾಲ್ಕನೇ ಪುಟದಿಂದ)

"ಹೇಗೆ?"

"ಮತ್ತು ಹೇಗೆ? ಯಾರಾದ್ರೂ ಒಬ್ರು ಹೇಳಿದ್ದನ್ನ ಪೂರ್ಣ ನಂಬಿ ಬಿಡೋದು. ಶಾಲೆಯಲ್ಲಿ ಬಾಯಿಪಾಠ ಮಾಡುವಲ್ಲೇ ಇದರ ಮೊದಲ ಕಲ್ಲು ಬಿದ್ದಿರುತ್ತೆ...'

"ಅಲ್ರಿ, ನೋಡಿ, ಫಿಮ್ಮ ರಾಜಾಜಿ ಅನ್ನುತ್ತಾರೆ, ಭಾಷಾ ಮಸೂದೆಗೆ ರಾಷ್ಟ್ರಪತಿಗಳ ಅನುಮತಿ ಪಡೆದುಕೊಳ್ಳುವುದು ಬೇಡ, ಮಸೂದೆಯನ್ನೆ ಹಿಂತೆಗೆದುಕೊಳ್ಳಿ. ಈ ಶಾಸನವು ಯಾರಿಗೂ ಹಿತವುಂಟು ಮಾಡಿಲ್ಲ; ಚಳವಳಿ ಬೆಳೆಯುತ್ತಲೇ ಇದೇಂತ...."

"ಹೌದು. ಅದಕ್ಕೆ ಇಂದಿರಮ್ಮ ಉತ್ತರ ನೀಡಿದ್ರುಂತಲ್ಲಾ—ಶಾಸನ ಮಾಡದೆ ಇದ್ರೂ ಚಳವಳಿ ನಡೆಯುತ್ತೆ....'

'ಹ್ಞೂಂ....'

'ಆದರೆ, ಎರಡೂ ಸಂದರ್ಭಗಳಲ್ಲಿ ಚಳವಳಿ ನಡೆದರೂ ಅದರ ಸ್ವರೂಪದಲ್ಲಿ ವ್ಯತ್ಯಾಸವಿರುತ್ತದೆ. ಎಂದು ರಾಜಾಜಿಯವರ ಸಮಾಧಾನ....'

'ಅದೇ ನೋಡಿ, ಈಗ ಯಾರಾದರೂ ಏನು ಮಾಡಬೇಕು? ಇಂದಿರಮ್ಮ ಇಟ್ಟ ಹೆಜ್ಜೆಯೇ ಸರಿಯಾದದ್ದು...'

'ಎಷ್ಟಾದರೂ ನಮ್ಮ ಇಂದಿರಮ್ಮ ತಾನೆ?'

'ಅಲ್ಲವೇ ಮತ್ತೆ? ದೇಶ ಅನುಸರಿಸಬೇಕಾದ್ದು ಯುಗ ಧರ್ಮವನ್ನು ಭಾವೋದ್ರೇಕ ಧರ್ಮವಲ್ಲ...."

'ಹ್ಞೂಂ, ಒಪ್ಪಿಕೊಳ್ಳೋಣ, ಆದ್ರೆ, ಕರ್ನಾಟಕ—ಮಹಾರಾಷ್ಟ್ರ ಗಡಿವಿವಾದದ ವಿಷಯದಲ್ಲಿ ಇಂದಿರಮ್ಮನ ಹವಣಿಕೆ....'

"ಛೆ....ಛೆ....ಇದ್ರಲ್ಲಿ ಇಂದಿರಮ್ಮ ಏನು ಮಾಡಿದ್ರು? ಅದೆಲ್ಲಾ, ರಾಷ್ಟ್ರೀಯ ಅಭಿಮತ, ಜನಾಭಿಪ್ರಾಯ ಎಲ್ಲಾ, ಚವ್ಹಾಣರ ಕುತಂತ್ರ....'

'ಅಂತೂ ನಿನ್ನ ಇಂದಿರಮ್ಮ ಸುತ್ತಳಿ ಬಂಗಾರ..."

"ಹಾಗೇನೂ ಇಲ್ಲಾನ್ನಿ. ಯಾವ ಮಾರ್ಕೇಟಿನಲ್ಲೂ ಸಿಗದ ಬಂಗಾರ ನಮಗೆ ಬೇಕೂಂದ್ರೆ ಎಲ್ಲಿ ಸಿಗುತ್ತೆ? ಅದ್ರು ನೋಡಿ, ಕಾಳಿದಾಸ ಅಂದಿದ್ದಾನಂತೆ-ನಿಕೋ ಹಿದೋಷೋ ಗುಣ ಸನ್ನಿಪಾತೇ ನಿಮಜ್ಜತಿಯೋಕಿರಣ ಶಶಾಂಕ ಅಂತ..."

"ಹ್ಞೂಂ....ಹಲವು ಗುಣವಿರುವಾಗ ಒಂದು ದುರ್ಗುಣ ಅಗಣ್ಯವೆಂದು ತಾನೇ ನೀನೆನ್ನೋದು?"

"ಹ್ಞೂಂ..."

"ಅದ್ರ ನೋಡು- ಅದೇ ಕಾಳಿದಾಸನಿಗೆ ಮತ್ತೊಬ್ಬ ಸವಾಲು ಹಾಕಿದ್ದಾನೆ—ದಾರಿದ್ರ್ಯ ಮೇಕಂ ಗುಣವೃಂದ ಹಾರಿ ....ಅಂತ"

'ಏನೋಪ್ಪಾ..."

"ಏನಿಲ್ಲನ್ಮ್ಯಾ..."

ಸರಿ, 'ಸಾಕು ಮಾಡಿ ನಿಮಗೇನು? ಗಂಟೆ ಆಗಲೇ ಹನ್ನೊಂದು..."

"ಹಿ...."

"ಮತ್ತೆಂಥದು? ನೀವು ಬರುದಾಗ್ಲೇ ಹಂಬತ್ತಾದವರೆ...."

"ಅಲ್ಲ, ಹನ್ನೊಂದೂವರೆ...'

'ಓ...ಭಾರಿ...'

—ಗೋರಾ.

ಶ್ರೀಕೃಷ್ಣ ಕರ್ಣ

ಕಡೆಗೆ ಭೂಸಜಲದಿಯನು ನಿಜ
ವ ನೋಳ್ಪಿಕ್ಷವರು
ಕೊಡುವೆನೆನ್ನುತ ಜನಕ ತಿಳಿಸ
ಲೋಸುಗವೆನಲು
ಕಡಗೋಲನೊಂದರಲಿ ನೇಣ
ನಿನ್ನೊಂದರಲಿ ಇಪಿತೆರಡು ಕೈಗಳಲಿ ತಾ,
ಪಿಡಿದಿರುವ ಯತಿವರರ ಭಕುತಿ
ಬಂಧನವಶನು
ಒಡೆಯನಾ ಶಿವದೆಳ್ಳಯೂರಿಗೆ
ವಿಭೂಷಣನು
ಬಡವನಾದೆನಗೆ ಸಂಪ್ರೀತನಾಗಲಿ ಸದಾ
ಶ್ರೀಕೃಷ್ಣ ಪರಮಾತ್ಮನು ॥

ಶ್ರೀಹರಿ

ಕರೆಯುವರು ಶಿವನೆಂದು, ಶೈವರವನಂ,
ಬ್ರಹ್ಮ
ಪರಮನೆಂದೊರೆಯುವರು
ವೇದಾಂತಿಗಳು, ಮತ್ತು
ವರ ಬೌದ್ಧರಾ ಬುದ್ಧನೆಂದು ಪೇಳುವ
ರಿನ್ನ ನೈಯಾಯಿಕರು ಸರ್ವರು,
ಸ್ಥಿರಚರಗಳಿಗೆ ಕರ್ತನೆಂದು, ಜೈನರು
ಮುದದಿ
ಅರುಹಂತನೆನ್ನುವರು, ಕರ್ಮವೆಂದಾ
ವೇದ—
ಪರರಾದ ಮೀಮಾಂಸಕರು ಕಥಿಸಲಾ
ಹರಿಯು ಕರುಣಿಸಲಿ ಮಂದಿಷ್ಟನ ॥

ಶ್ರೀವಿಷ್ಣು

ಶಾಂತವಾಗಿದೆ ಮೂರ್ತಿ, ಭೂಜಗದಲಿ
ಮಲಗಿಹನು
ನಾಭಿಯೊಳು ಪದ್ಮವಿದೆ ಸುರಶಿಕರ
ನಾಯಕನು.
ವಿಶ್ವಕಾಧಾರಕನು ಗಗನ ಮಂಡಲ
ಸಮನು
ಮೇಘಶ್ಯಾಮವರ್ಣ ಶುಭ ಸುಂದರಾಂಗಾ
ನ್ವಿತನು
ರಮೆಯ ರಮಣನೆ ಕಮಲ ದಳ
ನಯನನಾಗಿಹನು
ಯೋಗಿ ಹೃದಯಧ್ಯಾನಗಮ್ಯ ಭವಭಯ
ಹರನು
ಸಕಲ ಜಗದೀಶನಾ ವಿಷ್ಣುವನು
ನಮಿಸುವೆನು.

—ಶ್ರೀ ಕೆ. ನಾರಾಯಣಾಚಾರ್,
ಶಿರೋಮಣಿ, ವಿದ್ವಾನ್, ಹುಮಚ

ಕೃತಿ ಪರಿಚಯ

ನಿಮಗೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಹಸುರು ಕನಸು

ಬರೆದವರು: ಶ್ರೀ ಎಸ್. ಗೋಪಿಚಂದ ರಾವ್.

ಪ್ರಕಾಶನ: ಎ. ಎಂ. ಜೆ. ಸಾಹಿತ್ಯ ಪ್ರಕಾಶನ, ಉಡುಪಿ, ದ. ಕ.

ಪುಟಗಳು: ೮೦. ಬೆಲೆ: ರೂ. ೧-೦೦.

ಕನ್ನಡ ಸಾಹಿತ್ಯದಲ್ಲಿ ವಿರಿಳತಗಳು ಉಂಟೇ ಉಂಟು. ಕಾದಂಬರಿಗಳ ಪ್ರವಾಹದ ಕಾಲವೊಂದಿತ್ತು. ಹಾಗೇ ಕಣ್ಣಿಕತಾ ಸಂಕಲನಗಳ ಸ್ರೋತಸ್ಸು ಬಂದೊದಗಿತ್ತು. ಸ್ರೋತಸದಲ್ಲಿ ಉತ್ತಮವಾದುದನ್ನು ಹೆಕ್ಕಿ ತೆಗೆದ, ಕಲಾಪೂರ್ಣ ಕೃತಿಗಳನ್ನು ಎತ್ತಿ ತೋರಿಸುವ ವಿಮರ್ಶಕರ ಅಭಾವ ಅಂದಿಗೂ ಇದೆ, ಇಂದಿಗೂ ಇದೆ.

ಪ್ರಕೃತ, ನಮ್ಮ ಮುಂದಿರುವ ಶ್ರೀ ಗೋಪಿಚಂದರಾಯರ "ಹಸುರು ಕನಸು" ಸಾಹಿತ್ಯ ಲೋಕದಲ್ಲಿ ಎಂದೆಂದಿಗೂ ಹಸುರಾಗಿರುವ ಹಂಬಲದಿಂದೊದಗೂಡಿದೆ. ಅವರು ಕತಾ ಸಂಕಲನದಲ್ಲಿ ಪೋಣಿಸಿದ ಎಂಟೂ ಕತೆಗಳು ಭಾರತ ಸ್ವಾತಂತ್ರ್ಯೋತ್ಸವದಂದಿನಿಂದ ತೋರುತ್ತಿರುವ ಅಭಿವೃದ್ಧಿ, ಸಾಮಾಜಿಕ ಕ್ರಾಂತಿಯ ಪ್ರತಿಫಲಕವಾಗಿವೆ. ಪೂರ್ಣಿಸಿದ ರೀತಿ ಕೂಡಾ ಒಂದರ ಹಿಂದೊಂದರಂತೆ ಕ್ರಮವತ್ತಾದ ಅಭಿವೃದ್ಧಿಯ ಹೆಜ್ಜೆಯಂತಿದೆ.

ಮೊದಲನೆಯ ಕತೆ 'ಹಸುರು ಸ್ವಂ' ದಲ್ಲಿ ವರ ದಕ್ಷಿಣೆಯ ಪದ್ಧತಿಯ ಕ್ರೂರತನವನ್ನು ಪ್ರಕಟಿಸಿ ಅದನ್ನು ಅಳಿಸುವ ದಿಟ್ಟತನ ಹೆಣ್ಣಿನದ್ದೆ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ೪ ನೇಯ ಕತೆಗಳಲ್ಲಿ 'ಹಸುರು ಕಣ್ಣು' ಮತ್ತು 'ಹಸುರು ನೀರು ರೈತರ ಹೊಸವರ್ಗ ಅನುಸರಣೆ. ಚಿತ್ರವನ್ನೊಳಗೊಂಡಿವೆ. 'ಹಸುರು ಮನೆ' ಅನಿವಾರ್ಯ ಕಾರಣಗಳಿಂದಾಗಿ ಬಾಲ್ಯದಲ್ಲೇ ಹಳ್ಳಿ ಬಿಟ್ಟ ಹುಡುಗನೊಬ್ಬ ಹದಿನೈದು ವರ್ಷಗಳ ನಂತರ ಹಳ್ಳಿಗೆ ಹಿಂತಿರುಗಿದಾಗ ಆದ ಅಭಿವೃದ್ಧಿ ಕಾರ್ಯಗಳ ಅನುಭವಗಳ ವರ್ಣನೆ. 'ಹಸುರು ಹಡುಗ' ಸೇವಾ ಕಾರ್ಯತತ್ಪರತೆಯ ಒಂದು ಸಾಮಾನ್ಯ ದೃಶ್ಯವಾದರೆ "ಹಸುರು ಮೂಲೆ"ಯಲ್ಲಿ ವಿಧವೆಯೊಬ್ಬಳ ಕೆಚ್ಚರು ಆದರ್ಶ ಹೊರಹೊಮ್ಮಿದೆ. "ಹಸುರು ಹಗಳೆ"ಯಲ್ಲಿ ಭಾರತೀಯ ತಾಯಿಯೊಬ್ಬಳ ಒಂದು ಮುಖವನ್ನು ನೋಡಬಹುದು

ಇವೆಲ್ಲಾ ಕತೆಗಳಿಂದ ಹೊರತಾಗಿರುವ "ಹಸುರು ರೂಪಾಯಿ"ಯಲ್ಲಿ ಮಾಡಿತನದ ವಿಭಿನ್ನ ಸೊಬಗಿನ ಮನೋಹರಾಕಲಾಟವು ಪ್ರಕಟವಾಗಿದೆ.

ಶ್ರೀ ಗೋಪಿಚಂದರಾಯರ ಶೈಲಿ ಸಾಮಾನ್ಯ ಓದುಗರಿಗೂ ಸಲುಕುವಂತಹದಾಗಿದೆ. ಅವರ ಈ ಕೃತಿಯನ್ನು ಸ್ವಾತಂತ್ರ್ಯೋತ್ಸವ ಭಾರತೀಯ ಪ್ರಗತಿಪರ ಸಮಾಜದ ಸ್ಪಷ್ಟ ಚಿತ್ರಣದ ಪ್ರಕಟಿಸೆಯುತ್ತ ಸರಿದಿದೆ. ಆದುದರಿಂದಲೇ ಇದು ಹೊಸ ಬಗೆಯ ಸಂಕಲನ—ಅದರ ಶಕ್ತಿ ಇತರತ್ರವೂ ಹರಡಿದರೆ, ಕನ್ನಡಿಗರಿಗೆ ಇನ್ನೂ ಉತ್ತಮವಾಗ ಬಹುದಿತ್ತು. ಅವರ ಬರವಣಿಗೆಗಳು ಕನ್ನಡಿಗರಿಂದ ಆದರದ ಸ್ವಾಗತ ಗಳಿಸಿವೆ. ಈ ಸಂಕಲನವೂ ಸ್ವಾಗತ ಬಯಸುವುದರೆ ಅದೇನೂ ಮಹತ್ವದ್ದು.

ಪ್ರಕಟಕರು ಈ ರೀತಿ ದ್ವೈಮಾಸಿಕವಾಗಿ ಹೊಸ ಕಲಾವಿದರ ಪರಿಚಯ ಮಾಡಿಸುತ್ತಿರುವುದು ಒಳ್ಳೆಯದು.

—ಚೇತನ ಬಸ್ರೂರು

ಸಹಕಾರ ಚಿತ್ರ ಸುಧಾ ಲಿಮಿಟೆಡ್‌ನ ಕಾರ್ಯಕಾರಿ ಸಮಿತಿ

ಸಹಕಾರ ಚಿತ್ರಸುಧಾ ಲಿಮಿಟೆಡ್, ಬೆಂಗಳೂರು, ಈ ಸಂಘದ ೪ ನೇಯ ವಾರ್ಷಿಕ ಅಧಿವೇಶನವು ಸಂಘದ ಆವರಣದಲ್ಲಿ ತಾ. ೨೪.೧.೧೯೬೮ ನೇ ಬುಧವಾರ ಜರುಗಿದ್ದು ಒಮನೇ ಸಾಲಿನ ಕಾರ್ಯಕಾರಿ ಸಮಿತಿಗೆ ಕೆಳಕಂಡವರು ಆಯಿರೋಧವಾಗಿ ಆರಿಸಲ್ಪಟ್ಟಿದ್ದಾರೆ—

ಡಾ| ಪಿ. ಎಸ್. ರೈ, (ಅಧ್ಯಕ್ಷರು); ಶ್ರೀ ಎಸ್. ವಿ. ಸುಬ್ರಹ್ಮಣ್ಯಂ (ಉಪಾಧ್ಯಕ್ಷರು), ಎಸ್. ಪಟ್ಟಾಭಿರಾಮಯ್ಯ, (ಗೌ. ಕಾರ್ಯದರ್ಶಿ), ಟಿ. ಜ್ಞಾನಿಣ್ಣ (ಗೌ. ಖಜಾಂಚಿ) ಮತ್ತು ಶ್ರೀಗಳಾದ ಆರ್. ಟಿ. ನಾರಾಯಣ, ಎಸ್. ಬಿ. ಸೂರಿಣ್ಣ, ಎಸ್. ಸುಂದರನ್, ಟಿ. ಪದ್ಮನಾಭಯ್ಯ, ಬಿ. ಕೆ. ಮರಿಯಪ್ಪ, ಗಿರಿಯಪ್ಪನವರು, ಗೌ| ಸದಸ್ಯರಾಗಿಯೂ, ಸದರಿ ಸಾಲಿಗೆ ಶ್ರೀ ಸಿ. ಲಕ್ಷ್ಮೀನಾರಾಯಣ ರಾವ್, ಅಡ್ವೋಕೇಟ್‌ರವರು ಸಂಸ್ಥೆಯ ಹೋಲ್. ಲೀಗಲ್ ಅಡ್ವೈಸರ್ ಆಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು.

ಜಿಲ್ಲೆಯಲ್ಲಿ ಸೈನ್ಯಕ್ಕೆ ಭರ್ತಿ

ಭೂಸೇನೆಯ ಸೈನ್ಯಕ್ಕೆ ಮತ್ತು ನೌಕಾದಳಕ್ಕೆ ಅಭ್ಯರ್ಥಿಗಳನ್ನು ಈ ಕೆಳಗಿನ ಸ್ಥಳಗಳಲ್ಲಿ ಆಯ್ಕೆ ಮಾಡಲಾಗುವುದು. ನೇರಲಿಚ್ಛಿಸುವ ಅಭ್ಯರ್ಥಿಗಳು ತಮ್ಮ ಹಾಲೆಯ ಮತ್ತು ಗುಣನಡತೆಯ ಸರ್ಟಿಫಿಕೇಟುಗಳನ್ನು ತಮ್ಮೊಂದಿಗೆ ಕರತಕ್ಕದ್ದು.

ತಾ. ೬.೨.೬೮ರಂದು ಕುಂದಾಪುರ; ತಾ. ೧೦.೨.೧೯೬೮ರಂದು ಉಡುಪಿ; ತಾ. ೧೧.೨.೧೯೬೮ ಮತ್ತು ೧೨.೨.೧೯೬೮ರಂದು ಮಂಗಳೂರು.

ಅಭ್ಯರ್ಥಿಗಳನ್ನು ಕುಂದಾಪುರ ಮತ್ತು ಉಡುಪಿಗಳಲ್ಲಿ ಅಲ್ಲಿನ ಸ್ಥಾನೀಯ ಮುಂದಿರಗಳಂತೆ ಮಂಗಳೂರಿನಲ್ಲಿ ಪಾಂಡೇಶ್ವರದಲ್ಲಿರುವ ಮುನ್ಸಿಪಲ್ ಸ್ಥಾನೀಯ ಮುಂದಿರಗಳಲ್ಲಿ ಆಯ್ಕೆ ಮಾಡಲಾಗುವುದು.

ಹಿಂಸಾತ್ಮಕ ಆಕಾಂಕ್ಷೆಗಳು ಹಿಂಸಾತ್ಮಕ ಅಂತ್ಯವನ್ನು ಕಾಣಿಸುವುವು. ಅವುಗಳ ಗೆಲುವಿನೊಡನೆ ನಾವೂ ಬರುವುದು.

—ಶೇಕ್ಸ್‌ಪೀಯರ್

ಸುಸ್ಥಿತಿ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಎಲ್ಲೆಲ್ಲ ಏನೇನು?

"ಸಿಂಡಿಕೇಟ್ ಕುಟುಂಬ"

ಮಣಿಪಾಲದ ಸಿಂಡಿಕೇಟ್ ಬ್ಯಾಂಕ್, ಲಿ. ಇದರ ಡೈರೆಕ್ಟರ್ ಮಂಡಳಿಯಿಂದ ನಿವೃತ್ತರಾದ ಚೆಯರ್‌ಮ್ಯಾನ್ ಪದ್ಮಶ್ರೀ ಡಾ| ಮಾಧವ ಪೈ, ಡೈರೆಕ್ಟರರಾದ ಶ್ರೀ ಎಂ. ಎಸ್. ಪ್ರಭು ವೀರೂರ್‌ಕರ್, ಶ್ರೀ ಸಿ. ವಿ. ಶ್ಯಾನುಭೋಗ, ಶ್ರೀ ಎಲ್. ಎಚ್. ಪ್ರಭು ಮತ್ತು ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಇವರನ್ನು ಬ್ಯಾಂಕಿನ ನಿಬಂಧಿಯವರು ಇತ್ತೀಚೆಗೆ ಸತ್ಕರಿಸಿ ಬೀಳ್ಕೊಟ್ಟರು. ನಿವೃತ್ತರಾದವರಿಗೊಂದು ಸನ್ಮಾನಪತ್ರವನ್ನು ಈಗಿನ ಚೆಯರ್‌ಮ್ಯಾನ್ ಮತ್ತು ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ಅವರು ಓದಿ ಅರ್ಪಿಸಿದರು. ಇದರಲ್ಲಿ ನಿವೃತ್ತರಾದ ಡೈರೆಕ್ಟರರು ಬ್ಯಾಂಕಿಗೆ ಸಲ್ಲಿಸಿದ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಿ ಅವರ ಸಲಹೆ ಮುಂದೆಯೂ ದೊರೆಯಲೆಂದು ಹಾರೈಸಲಾಗಿತ್ತು.

ಉತ್ತರ ರೂಪವಾಗಿ ಡಾ| ಪೈಯವರು ಮಾತನಾಡುತ್ತ, ಬ್ಯಾಂಕು ಬೆಳೆದುಬಂದ ಕ್ರಮವನ್ನೂ ಪ್ರಗತಿಗೆ ಅಡ್ಡವಾಗಿ ಬಂದ ವಿಘ್ನವಿಡ್ಡೂರಗಳನ್ನು ಎದುರಿಸಿದ ಬಗೆಯನ್ನೂ ವಿವರವಾಗಿ ವಿವರಿಸುತ್ತ ಸಾಮೂಹಿಕ ಸನ್ನಿವೇಶಗಳಿಗೆ ಹೊಂದಿಕೊಳ್ಳುವಲ್ಲಿ ಬ್ಯಾಂಕು ಆರಂಭದಿಂದಲೂ ಪ್ರಥಮ ಸ್ಥಾನ ಪಡೆದಿದೆಯೆಂದೂ ಇದೇ ಪರಂಪರೆಯು ಮುಂದೆಯೂ ಬೆಳೆಯಲೆಂದೂ ಹೇಳಿದರು. ಬ್ಯಾಂಕಿನ ಬಗ್ಗೆ ತನ್ನ ಹಂಬಲವನ್ನು ವ್ಯಕ್ತಪಡಿಸುತ್ತ ಅವರು ಬ್ಯಾಂಕಿನಲ್ಲಿ ೧೦,೦೦೦ ಕುಟುಂಬಗಳು ೧,೦೦೦ ಶಾಖೆಗಳ ಇರಬೇಕೆಂದೂ, ಮಣಿಪಾಲದಲ್ಲಿ ಪ್ರಧಾನ ಕಾರ್ಯಾಲಯವಿದ್ದು, ಬ್ಯಾಂಕಿನ ನೌಕರರೆಲ್ಲರೂ ಅಲ್ಲಿಯೇ ನೆಲೆಸಬೇಕು, ಅವರ ಮಕ್ಕಳು ಇಲ್ಲಿಯೇ ಶಿಕ್ಷಣ ಪಡೆಯಬೇಕು. ಇಲ್ಲೊಂದು "ಸಿಂಡಿಕೇಟ್ ಕುಟುಂಬ" ವಾಗಬೇಕು. ಇದನ್ನು ಫಿಮ್ಮ ಜೊಸ ನಾಯಕ ಶ್ರೀ ಟಿ. ಎ. ಪೈಯವರು ಸಾಧಿಸಲು ಸಮರ್ಥರು. ಅವರ ಸಹಕಾರಕ್ಕೆ ನೀವೆಲ್ಲರೂ ಕಂಕಣಬದ್ಧರಾಗಬೇಕೆಂದರು. ಯಾವುದೇ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕೆಂದು ಅವರು ಕರೆಕೊಟ್ಟರು.

ತನ್ನ ಜೀವನದ ಕುರಿತು ಮಾತನಾಡುತ್ತ, "ನನಗೆ ಇನ್ನೇನೂ ಹೇಳಲು, ಮಾಡಲು ಬಾಕಿ ಇಲ್ಲ. ಹೇಳಬೇಕಾದುದೆಲ್ಲವನ್ನೂ ಹೇಳುತ್ತಲೇ ಬಂದಿದ್ದೇನೆ. ಮಾಡಬೇಕಾದುದೆಲ್ಲವನ್ನೂ ಮಾಡುತ್ತ ಬಂದಿದ್ದೇನೆ. ಹಾಗಾಗಿ ನನಗೆ ಅತೃಪ್ತಿಯಿಲ್ಲ; ನಾವು ಕರೆಯಬಂದಾಗ ಅಪೂರ್ಣ ಕಾರ್ಯಗಳಿವೆಯೆಂದು ಮರುಗುವ ಪ್ರಮೇಯ ನನಗಿಲ್ಲ" ಎಂದು ನುಡಿದು ತನ್ನ ತೆರೆದ ಹೃದಯದಿಂದ ಪರಿಶ್ರಮ ಮತ್ತು ನಿಷ್ಠೆಗಳಿಂದ ತಂತಮ್ಮ ಕರ್ತವ್ಯ ನಿರ್ವಹಿಸುವಂತೆ ಕರೆನೀಡಿದರು.

ಇತರ ನಾಲ್ವರು ಡೈರೆಕ್ಟರರು ತಮ್ಮ ಬ್ಯಾಂಕ್ ಮತ್ತು ಪದ್ಮಶ್ರೀ ಪೈಯವರ ಸಂಬಂಧದ ಬಗ್ಗೆ ಮೆಚ್ಚುಗೆತೃಪ್ತಿಗಳನ್ನು ವ್ಯಕ್ತಪಡಿಸಿ, ತಮ್ಮ ಸಹಕಾರ ಬ್ಯಾಂಕಿಗೆ ಮುಂದೆಯೂ ದೊರೆಯುವುದೆಂದು ಆಶ್ವಾಸನೆ ನೀಡಿದರು.

ಶ್ರೀ ಆರೂರರು ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲೊಂದು ಉಚಿತ ಘಾಸಾಗೆ ಸ್ಥಾಪಿಸಲು ರೂ. ೫,೦೦೦ದ ಕೊಡುಗೆ ನೀಡುವುದಾಗಿ ಘೋಷಿಸಿದರು. ಶ್ರೀ ಟಿ. ಎ. ಪೈಯವರು ಇದೇ ಆಸ್ಪತ್ರೆಯಲ್ಲಿ ನೌಕರರ ಉಪಯೋಗಕ್ಕೆಂದು ೧೦೦ ಹಾಸಿಗೆಗಳ ವಾರ್ಡೊಂದನ್ನು ಸ್ಥಾಪಿಸಲು ರೂ. ೭೦ ಸಾವಿರದ ದಾನವನ್ನು ಘೋಷಿಸಿ, ನೌಕರ ವರ್ಗದವರು ತಮ್ಮ ಒಂದು ವಾರದ ವೇತನವನ್ನು ದಾನ ನೀಡಬೇಕೆಂದು ವಿನಂತಿಸಿಕೊಂಡರು.

ಕೊನೆಯಲ್ಲಿ ಶ್ರೀ ಎಚ್. ಎಸ್. ರಾಯರು ಧನ್ಯವಾದವನ್ನರ್ಪಿಸಿದರು.

ಪದ್ಮಶ್ರೀ ಪೈಯವರು ಬ್ಯಾಂಕಿನ ಸ್ಥಾಪಕ-ಡೈರೆಕ್ಟರರು. ಶ್ರೀ ಶೀರೂರ್ಕರರು ೧೯೫೦ರಿಂದ, ಶ್ರೀ ಶ್ಯಾನುಭಾಗರು ೧೯೫೦ರಿಂದ, ಶ್ರೀ ಪ್ರಭುಗಳು ೧೯೫೫ರಿಂದ ಮತ್ತು ಶ್ರೀ ಆರೂರರು ೧೯೫೫ರಿಂದ ಬ್ಯಾಂಕಿನ ಡೈರೆಕ್ಟರರಾಗಿದ್ದರು. ಇವರೆಲ್ಲರೂ ಯೋಜನೆ-ಸೇವೆ-ಸಲಹೆ-ಸಹಕಾರಗಳು ಬ್ಯಾಂಕಿನ ಯಶಕ್ಕೆ ಕಾರಣ. ದೀರ್ಘಕಾಲದ ಅನುಭವವಿರುವ ಈ ಡೈರೆಕ್ಟರರನ್ನು ಬೀಳ್ಕೊಡಲು ಸೇರಿದ ಸಭೆಯ ವಾತಾವರಣವು ಉತ್ಸಾಹವಿರಲಿಲ್ಲವಾದರೂ ಕೃತಜ್ಞತಾಭಾವದಿಂದ ತುಂಬಿತ್ತು.

ಮಂತದಾರ ಪಟ್ಟಿ

ಮೈಸೂರು ಸೈಯದ್ ಪದವೀಧರ ಮತದಾರ ಕ್ಷೇತ್ರದ ಮತದಾರರ ಯಾದಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಜಿಲ್ಲಾ ಆಫೀಸುಗಳು, ತಾಲೂಕಾ ಆಫೀಸುಗಳು, ಮೈಸೂರು ಮತ್ತು ಮಂಗಳೂರು ನಗರ ಸಭೆಗಳಲ್ಲಿ ಪೂರ್ವಭಾವಿಯಾಗಿ ದಶಂಬರ ೨೭ರಂದು ಪ್ರಕಟಿಸಲಾಗಿದೆ. ಇದರ ಬಗ್ಗೆ ಆಪೇಕ್ಷೆ ಇಲ್ಲವೇ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಜನವರಿ ೧೦, ೧೯೬೮ರೊಳಗೆ ಸಂಬಂಧಿತ ತಹಸೀಲ್ದಾರರಿಗೆ ಅಥವಾ ತತ್ಸಂಬಂಧಿತ ಅಧಿಕಾರಿಗಳಿಗೆ ನಿಯಮಿತ ಫಾರ್ಮುಗಳಲ್ಲಿ ತಿಳಿಸಬಹುದು ಎಂದು ಪತ್ರಿಕಾಪ್ರಕಟಣೆಯೊಂದು ಹೊರಟಿದೆ.

ವಿದ್ಯಾರ್ಥಿಗಳಿಗೆ ಕರೆ

ಮಂಗಳೂರಿನ ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ವೇಳೆ ೧೯೬೭ರಲ್ಲಿ ೧೧ನೆ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು. ಇವರನ್ನು ಉದ್ದೇಶಿಸಿ ನವಭಾರತ ದೈನಿಕದ ಸಂಪಾದಕರಾದ ಶ್ರೀ ಸಂಜೀವ ವಿ. ಕುಡ್ವರು ಮಾತನಾಡುತ್ತ, ಸ್ವಾತಂತ್ರ್ಯಾನಂತರ ದೇಶದಲ್ಲಿ ಹಲವಾರು ಸಮಸ್ಯೆಗಳು ಎದ್ದಿದ್ದು, ಇವುಗಳನ್ನು ಸರಿಪಡಿಸಿ, ದೇಶವನ್ನು ಸುಭದ್ರವಾಗಿ ಕಟ್ಟುವದು ಇಂದಿನ ವಿದ್ಯಾರ್ಥಿಗಳದೆಂದರು ಮುಂದಿನ ಹೊಣೆ ಎಂದು ತಿಳಿಸಿದರು. ವಿದ್ಯಾರ್ಥಿಗಳ ಪರವಾಗಿ ಶ್ರೀ ಕೃಷ್ಣ ಕುಡ್ವರು ಈ ಕೈರೆಯನ್ನು ಸ್ವೀಕರಿಸಿದರು. ಸಂಘದ ಅಧ್ಯಕ್ಷ ಶ್ರೀ ಎಂ. ಜೆ. ಕಾಮತರು ಅಂಂಭಗಲ್ಲಿ ಸಾಗತಿಸಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಮಂಡಳಿಯ 64ನೇ ವಾರ್ಷಿಕೋತ್ಸವ

ಮೊಗವೀರ ವ್ಯವಸ್ಥಾಪಕ ಮಂಡಳಿಯ 64ನೇ ವಾರ್ಷಿಕೋತ್ಸವವೂ, ಮೊಗವೀರ ರಾತ್ರಿ ಶಾಲೆಯ ಪಾರಿತೋಷಕ ವಿತರಣಾ ಸಮಾರಂಭವೂ 17--12--1967ರಂದು ಶ್ರೀ ಎಂ. ಮಧ್ವರಾಜ್ ಬಿ. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯೊಡನೆ ಬಳಿಕ ಮಂಡಳಿಯ ಅಧ್ಯಕ್ಷ ಶ್ರೀ ಎಚ್. ಕೆ. ಪುತ್ರನರು ಶ್ರೀ ಮತ್ತು ಶ್ರೀಮತಿ ಮಧ್ವರಾಜರನ್ನೂ, ಸಭಿಕರನ್ನೂ ಸ್ವಾಗತಿಸಿ, ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಜತೆಕಾರ್ಯದರ್ಶಿ ಶ್ರೀ ಉಮೇಶ ಆರ್. ಪುತ್ರನ ರಂದ ಸ್ವಸ್ತಿ ವಾಚನವಾದ ನಂತರ ಶ್ರೀಮತಿ ಮನೋರಮಾ ಮಧ್ವರಾಜರು ಪಾರಿತೋಷಕ ವಿತರಣೆಗೈದರು. ಜತೆ ಕೋಷಾಧಿಕಾರಿ ಶ್ರೀ ಎನ್. ಎಸ್. ಶಂತ್ರನರು ಹೊಸದಾಗಿ ಸೇರಿದ ಸದಸ್ಯರ ಹೆಸರುಗಳನ್ನೂ ದಾನ ಕೊಟ್ಟ ಗ್ರಾಮಸಭೆ ಮತ್ತು ಮಹಾಸಭೆಯ ಹೆಸರುಗಳನ್ನೂ ಓದಿ ಹೇಳಿದರು.

ನೆರೆದ ಅತಿಥಿಗಳಲ್ಲಿ ಸರ್ವಶ್ರೀ ಜಿ. ಎನ್. ವೈದ್ಯ, ಎ. ಎಸ್. ಕೆ. ರಾವ್, ಬಿ. ಎಸ್. ಕೋಡಿಕಲ್, ಗೋಪಾಲ ಆರ್. ಕೋಟ್ಯಾನ್, ಡಿ. ಎ. ಕರ್ಕೇರ ಮತ್ತು ಬಿ. ವಿ. ರಾವ್ ರವರು ಮಂಡಳಿಯ ಗೈಡ ಸೇವೆಯನ್ನು ಕೊಂಡಾಡಿದರು.

ಅಧ್ಯಕ್ಷರು ಮಂಡಳಿಯ ಸೇವೆಯನ್ನು ಶ್ಲಾಘಿಸಿ, ಏಳಿಗೆಯನ್ನು ಬಯಸಿ ಭಾಷಣವಿತ್ತರು. ಕೊನೆಗೆ ಮಂಡಳಿಯ ಉಪಾಧ್ಯಕ್ಷರಾದ ಶ್ರೀ ಆರ್. ಎಲ್. ಕೋಟ್ಯಾನ್‌ರವರು ಧನ್ಯವಾದಗಳನ್ನು ಅರ್ಪಿಸಿದರು. ಶಿಲಾ ಬಾಲಕಿಯರಿಂದ ಹಾಸ್ಯ ಪ್ರದರ್ಶನ ಮತ್ತು ಶ್ರೀ ಜಿ. ಕೆ. ಯಕ್ಷಗಾನ ಮಂಡಳಿಯವರಿಂದ ಬಯಲಾಟ ಪ್ರದರ್ಶನವಿತ್ತು.

ಮೌನವು ಸತ್ಯ ಭಕ್ತನ ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಮಹತ್ವದ ಅಂಗ.
—ಮಹಾತ್ಮಾ ಗಾಂಧಿ

ಸಿದ್ಧಿಗಳಿಗೆ ಬೆನ್ನು ಹತ್ತುವದು ಒಂದು ಭ್ರಮೆ

(ರವಿಶಂಕರ ಮಹಾರಾಜ)

ನಮ್ಮಲ್ಲಿ ಯೋಗ ಮಾರ್ಗದಿಂದ ಅನೇಕರು ವಿವಿಧ ಸಿದ್ಧಿಗಳನ್ನು ಸಂಪಾದಿಸಿದ್ದಾರೆ. ಸಾಮಾನ್ಯ ಜನರಿಗೆ ಇಂಥ ಸಿದ್ಧಿಗಳ ಕಡೆಗೆ ಆಕರ್ಷಣ ಹೆಚ್ಚು. ಆದ್ದರಿಂದ ಯೋಗಿಗಳಿಗೂ ಇದೊಂದುದೊಡ್ಡ ಪ್ರಲೋಭನವಾಗಿದೆ. ಆದ್ದರಿಂದ ಅವರಿಗೂ ಇಂಥ ಸಿದ್ಧಿಗಳ ಪ್ರದರ್ಶನ ಮಾಡಬೇಕೆಂಬ ಮೋಹ ಹುಟ್ಟುತ್ತದೆ.

ಆದರೆ ಇದು ಪ್ರದರ್ಶನ ಮಾಡತಕ್ಕ ವಿಷಯವಲ್ಲ. ಇಂಥ ಸಿದ್ಧಿಗಳು ಅನಾಯಾಸವಾಗಿ ಪ್ರಾಪ್ತವಾಗಿರಬೇಕು. ಮತ್ತು ಜನರನ್ನು ತಮ್ಮ ಕಡೆಗೆ ಎಳೆದುಕೊಳ್ಳುವ ಉದ್ದೇಶದಿಂದ ಇಂಥ ಸಿದ್ಧಿಗಳನ್ನು ಉಪಯೋಗಿಸಿಕೊಳ್ಳಬಾರದು. ಇಲ್ಲವಾದರೆ ಅಂಥ ಸಿದ್ಧಿಗಳಿಂದ ಹೆಚ್ಚಿನ ಅನರ್ಥವೇ ಆಗುವದು.

೧೮ ವರ್ಷ ಯೋಗಸಾಧನೆ ಮಾಡಿ ಒಬ್ಬಾತ ನೀರಿನ ಮೇಲೆ ನಡೆಯುವ ಸಿದ್ಧಿ ಸಾಧಿಸಿದ್ದ. ಅದನ್ನು ಕಂಡು ರಾಮದಾಸ ಸ್ವಾಮಿಗಳು ಹೇಳಿದ್ದರು—ಈ ಸಾಧನೆಯಲ್ಲಿ ಇಷ್ಟೆಲ್ಲ ವರ್ಷ ಕಳೆಯುವ ಬದಲು ಜೆನ್ನಾಗಿ ಈಜಲು ಕಲಿತುಕೊಂಡರೆ ಸಾಕಿತ್ತು. ಒಂದು ನದಿಯನ್ನು ದಾಟಲು ಮಾಡಿದ ಸಾಧನೆಯನ್ನೇ ಸಂಸಾರ ಸಾಗರ ದಾಟಲು ಮಾಡಿದ್ದರೆ ಎಷ್ಟು ಜೆನ್ನಾಗಿತ್ತು?

ಕೈ ಹಿಡಿದು ಉದ್ಧರಿಸು

೧

ಅಮ್ಮಾ ನೀ ದೊರಾದೆ ಅನಾಥ ನಾನಾದೆ
ಬಾಳು ಬರಿದಾಯಿತು! ನೀನಿಲ್ಲದೆನಗೆಗೆ!!
ನಾನಿಂದು ಪರದೇಶಿ ನೀ ಕೈಲಾಸದಿ
ಕಂದನಿಗೆ ಸುರಿಸುವ ದುಃಖದ ಬಾಳು
ಹಿತವರು ನನಗಿಲ್ಲ! ನಿನ್ನಯ ಜನರಿಲ್ಲ
ಜೀವನ ಗೋಳು ಸಾಕಮ್ಮ ಬಾಳು

೨

ನೀನಿಲ್ಲದ ಬಾಳು ಸ್ಮಶಾನದಂತೆ
ಕತ್ತಲೆ ಮುಸುಕಿದ ಶಶಿಯಂತೆ
ಬರಿದಾದ ಜನ್ಮ ಸಾಂತಮ್ಮ ನನಗೆ
ಶೂನ್ಯ ಪ್ರಪಂಚ ಆಂ! ನಾತಿರೆನು

೩

ಹಿತ ಬಯಸುವ ಆಪ್ತರಾರಿಲ್ಲ
ವಲ್ಗತೆ ಬೀರುವ ತಾಯ್ತಂದೆಗಳಿಲ್ಲ
ಜಗಕ ಭಾರಾಗಿ ಹುಟ್ಟಿಸಿದೆಂತಮ್ಮ
ಕಾರಿಯಿನ ಕಷ್ಟದಲಿ ನಬಿಡೆಂತಮ್ಮ

೪

ಪಾಪಾಪರಿಯು ವಿಚಿತ್ರ ದಾರಿಯಲಿ
ಜೀವ ಸಾವಿನ ಪ್ರೇಮ ದಾಟಿಯಲಿ
ಕಷ್ಟವೆಂಬುದು ಬಿಡಿಸು ನನಗೆ
ನಾ ಬರುವೆನಿಂದು ನಿನ್ನ ಬಳಿಗೆ

೫

ಅಂದಿನ ದಿನವು ಮನದೊಳಗೆ ಬರುತಿದೆ
ಸ್ಮರಿಸಿ ಸ್ಮರಿಸಿ ಬಳಲುತಿರುವೆನು ಪಾಪನು
ಇಂದಿಲ್ಲ ಪಾಳೆ ಎಂದಾದರೊಮ್ಮೆ ಬಾಳದಿ
ಕೈಹಿಡಿದು ಉದ್ಧರಿಸು ನಿನ್ನ ಕಂದನನು.

ಕಮಲಾತನಯಕೃಷ್ಣ.

॥ ಶ್ರೀ ಪೇಜಾವರ ಮಠಾಧೀಶ ಪ್ರಶಸ್ತಿಃ ॥

ಶ್ರೀಮದ್ವಿಶ್ವೇಶ ತೀರ್ಥಾಖ್ಯ
ಚಂದ್ರೋಽಯಂ ಭಾತಿಭೂತಲೇ।
ಭಾಸ್ವತ್ಕವಿಗುರೂಪೇತಃ ಸಮೌಮ್ಯೋ
ಮಂಗಲಾಧಿಕಃ ॥ ೧ ॥

ಮಂದಂ ವಿನಾ ಸಚಲತಾ, ಮಾಧ್ವ-
ದುಗ್ಧಾಬ್ಧಿ ಸಂಭವಃ।
ವಿರಕ್ತಾನಾಂ ಸದಾಹ್ಲಾದೀ,
ಭಕ್ತಾನಾಂ ತೋಷಕೃತ ಥಾ ॥ ೨ ॥

ಉದಾಶಯಃ ಸುಧೀಃ ಶಶ್ವತ್ಸಲ-
ದಾಯೀ ಸುಸೇವಿತಃ।
ಪರ್ಯಾಯ ಪೂಜಾಪೀಠಸ್ಥಃ ಕೃಷ್ಣ
ಸೇವಾಖಿಲಾಷಕಃ ॥ ೩ ॥

ಚಕಾಸ್ತಿ ನೋ ಹೃದಾಕಾಶೇ ಸದ್ವಿದ್ಯಾ
ಗಣರಂಜಿತಃ।
ಭೂಯಾತ್ ಸದಾನಂದಕರಃ
ದ್ವಿಜರಾಜಃ ಸದೌಕಸಾಂ ॥ ೪ ॥

—ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು.

[12—12—67]

ಹೊಸ ಪ್ರಕಟಣೆಗಳು

ಕನಕಪ್ರಭೆ—ಕನಕ ಕಂಕಲನ (ಬೇಂದ್ರೆ, ರೈ, ವೆಂಕಟರಾಜ, ಗೋವಿಂದಾಚಾರ್ಯ); ಪ್ರಕಾಶನ: ಕರ್ನಾಟಕ ಸಂಘ, ಉಡುಪಿ. ಪುಟಗಳು: ೩೬; ಬೆಲೆ: ರೂ. ೧.೦.

ಹವಾಡಗಳ ಸಿದ್ಧಾಂತ-ಮೂಲ ಲೇಖಕರು: ಶ್ರೀ ಯೋಗಾನಂದ ಪರಮಹಂಸ; ಅನುವಾದಕರು: ಶ್ರೀ ಎ. ಹಿ. ಸುಬ್ಬಯ್ಯ; ಪ್ರಕಾಶನ: ಶ್ರೀ ಪುರಂದರ ರೈ, ಪುಣಚ, ಪುತ್ತೂರು, ದ. ಕ.; ಪುಟಗಳು: ೨೦; ಬೆಲೆ: ರೂ. ೦.೩೦.

ವಿಮರ್ಶೆ ಯಥಾವಕಾಶ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 384/67

ಚಂದಮ್ಮ ಶೆಡ್ತಿ —ವಾದಿಳು
ಗುಲಾಬಿ ಹೆಗ್ಗಡ್ತಿ ಸಹಾ— ಪ್ರತಿವಾದಿರು

ಸದ್ರಿ ವಾದಿಳ ಕಡೆಯಿಂದ ಈ ಮೂಲ್ಕ ಜಾಹೀರ್‌ಮಾಡಿಕೊಳ್ಳುವದೇನೆಂದ್ರೆ—

ಪ್ರತಿವಾದಿರು 1. ಗುಲಾಬಿ ಹೆಗ್ಗಡ್ತಿ 2. ಪದ್ಮಾವತಿ ಹೆಗ್ಗಡ್ತಿ 3. ಸಂಜೀವ ಹೆಗ್ಗಡೆ 4 ವಿಟ್ಟಲ ಹೆಗ್ಗಡೆ 5. ಜಗನ್ನಾಥಹೆಗ್ಗಡೆ—ಮುತ್ತಕ್ಕಹೆಗ್ಗಡ್ತಿ ಮಕ್ಕಳು

1ನೇ ಪ್ರತಿವಾದಿಳು ನ್ಯೂ ದಿಲ್ಲಿಯಲ್ಲಿಯೂ 2—3ನೇ ಪ್ರತಿವಾದಿರು ಕೊರ್ಗಿ ಗ್ರಾಮದಲ್ಲಿಯೂ 4ನೇ ಪ್ರತಿವಾದಿ ಶಿರಿಯಾರ ಗ್ರಾಮದ ಸ್ವಾಬರಕಟ್ಟೆಯಲ್ಲಿಯೂ 5ನೇ ಪ್ರತಿವಾದಿ ಬೆಂಗಳೂರು ಶಹರನಲ್ಲಿಯೂ ಇರುತ್ತಿರೆ ವಾದಿಳು ಮತ್ತು ಪ್ರತಿವಾದಿರು ವಗೈರೆ ಕುಟುಂಬದೊಳಗಿಂದ ಹಿಸೆ ಪಟ್ಟಿ ಶರ್ತದಂತೆ ವಾದಿಳಿಗೆ ಪ್ರತಿವಾದಿರ ಕುಟುಂಬದ ಅಗ್ನಿ ಜವಾಬ್ದಾರಿಯಿಂದ ಹಿಸೆ ಬರ್ತಿಬಗ್ಗೆ ನಿಶ್ಚಯ ಬೇಕಾದ ಕ್ರೋಢಿ ವಿಶ್ವಾವಸು ಸಂವತ್ಸರ ಸಂವತ್ಸರಗಳ ಒಟ್ಟು ಅಸ್ಲು ಒಟ್ಟು ಕೂಡಾ ರೂ 671—60P. ಪ್ರತಿವಾದಿರಿಂದ ಬರಬೇಡಿಕೊಳ್ಳುವರೆ ವಾದಿಳು ಮಾಡಿದ ದಾವೆಯು ತಾ. 21-1-68ಕ್ಕೆ ಅಪ್ಪೈರ್ ತಕ್ಕಿಗೆ ಯಿದೋ ಜಾಗಿಯದೆ. ಆಕರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಸ್ವತಯಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಳ ಕಡೆಯಿಂದ ಈ ಮೂಲ್ಕ ತಿಳಿಯ ಸಜ್ಜಿದೆ.

M. Anthaya Shetty
Advocate for Pltf.
Kundapur, Date 20--12--67

"ಹುಚ್ಚ"

(ಎರಡನೇ ಪುಟದಿಂದ)

ಕುಮುದಿನಿಯ ತಲೆ ಚುರುಕಾಗಿ ಕೆಲಸ ಮಾಡಿತು. "ಈತನನ್ನು ಇಷ್ಟು ಕೆದಕಿ ಪ್ರಶ್ನೆಗಳ ಅವನ ವಿಚಾರವನ್ನು ತಿಳಿಸುವ ಕುತೂಹಲವಿದ್ದವಳು ಈತನಕ ನಾನೊಬ್ಬಳೆ! ತನ್ನ ಸತ್ಯ ಸ್ಥಿತಿಯನ್ನು ಗುರುತಿಸಲಾಗದ, ಇಂದಿನ ಸಮಾಜದ ದೌರ್ಬಲ್ಯದ ದೆಸೆಯಿಂದಾಗಿ ಈತ ವಿರಾಗಿಯಾಗಿದ್ದರೆ ಅಚ್ಚರಿಯಿಲ್ಲ! ಸಮಾಜದ ಒಬ್ಬ ಮನುಷ್ಯನನ್ನಾದರೂ ತನ್ನತ್ತ ಒಲಿಸಿ, ನಿಜಸ್ಥಿತಿಯ ಅರಿವನ್ನು ಅವನಿಗೆ ಮಾಡಿಕೊಡುವ ಮಹೋದ್ದೇಶವನ್ನೇತ ತನ್ನ ಜೀವನದಲ್ಲಿಟ್ಟು ಕೊಂಡಿರಲೂಬಹುದು. ಇಂದು ನಾನವನ ವಿಚಾರವನ್ನರಿತಿದ್ದೇನೆ. ಅವನ ಜೀವನ ಈವನ ಗುರಿಯನ್ನು ತಲುಪಿದೆ. ತಾನು ಈ ತನಕ ಹುಚ್ಚನೆಂದ ನಿಸಿಕೊಂಡು ಜೀವಂತನಾಗಿರುವುದರ ಸಾಫಲ್ಯವನ್ನು ಇಂದು ಅವನು ಕಂಡುಕೊಂಡಿರುವನು. ಹಾಗಿದ್ದರೆ, ಇನ್ನವನು ತನ್ನನ್ನೂ ಉಳಿಸಿಕೊಂಡಾನೇ? ಈ ದುರ್ಬಲ ಸಮಾಜದ ಮೌಢ್ಯವನ್ನು ಕಂಡು ಹೇಸಿ, ತನ್ನ ಉದ್ದೇಶ ಸಾಧನೆಯಾದ ಬಳಿಕ, ತನ್ನ ಶರೀರವನ್ನು ಗಂಗಾ ಮಾತೆಗೋ, ಅಗ್ನಿದೇವತೆಗೋ ಅರ್ಪಿಸಲಾರನೇ?"

ಕುಮುದಿನಿ ತಲೆಯೆತ್ತಿ ನೋಡಿದಳು. ಅನತಿದೂರದಲ್ಲಿ ತಲೆಯನ್ನು ತಗ್ಗಿಸಿಕೊಂಡು ದಾರು ಕಾಲು ಹಾಕುತ್ತ ಮುಂದುವರಿಯುತ್ತಿರುವ ಹುಚ್ಚನೆನಿಸಿ ಕೊಂಡವನ ವರೆಗೂ ಅವಳು ದೃಷ್ಟಿಯನ್ನು ಹಂಸಿದಳು. ಮತ್ತೆ ತಡಮಾಡಲಿಲ್ಲ. ಅವನ ಬೆನ್ನತ್ತಿ ಓಡಿದಳು. ಕೊನೆಗೂ ಅವನನ್ನು ಹಿಡಿದೇ ಹಿಡಿದಳು! ಹುಚ್ಚ ತಲೆಯೆತ್ತಿ ನೋಡಿದ ನಿಸ್ತೇಜವಾದ ಅವನ ಮುಖದ ಮೇಲೆ ನೀರಸವಾದ ನಗುಮೊಂದು ತೇಲಿತು. ಕುಮುದಿನಿಯೊಡನೆ ಕೇಳಿದ—

'ಇದೇನು, ಪುನಃ ಬೆನ್ನಟ್ಟಿದಿರಿ ತಾಯೀ..?'

ಕುಮುದಿನಿ ಹೇಳಿದಳು—"ಮಹಾತ್ಮ ಎಲ್ಲಿಗೆ ಹೊರಟಿರುವೆ?.... ಏನು ನಿಶ್ಚಯ ಮಾಡಿರುವೆ?"

'....ಹ್ಹ..... ತಾಯೀ, ಹುಚ್ಚನೊಬ್ಬ ನೆಲ್ಲಿಗೆ ಹೋದಾನು?...ಅವನೇನು ನಿಶ್ಚೈಸಿಯಾನು....! ಆದರೆ,... ಒಂದು ವಿಚಾರ. ತಾಯೀ, ತಾವು ನನ್ನ ನಿಜ ಸಂಗತಿಯನ್ನು ಮನದಂಡು, ನಾನು ಹುಚ್ಚನಲ್ಲವೆಂಬ ದನ್ನು ಅರಿತ ಕೊಂಡಿರುವಿರಿ. ಇಷ್ಟು ಸಮಯ ಜೀವಿಸಿದುದಕ್ಕೆ ಯೋಗ್ಯ ಫಲವಿಂದು ನನಗೆ ಸಿಕ್ಕಿತು. ನಾನು ಧನ್ಯ!....ಆದರೆ, ತಾಯೀ....., ನನ್ನನ್ನು ಹುಚ್ಚನಲ್ಲನೆಂದು ಅರಿತುಕೊಂಡ ತಮ್ಮನ್ನು ಈ ಹುಚ್ಚ ಸಮಾಜ 'ಹುಚ್ಚ'ಯೆಂದು ಕರೆಯುದೆ ಬಿಡುವುದೇ?" ತನ್ನ ದೆಸೆಯಿಂದಾಗಿ ಭವಿಷ್ಯವಲ್ಲಿ ಓರ್ವ ನಾರಿ ಅನ ಭವಿಸ ಬೇಕಾದಂತಹ ದುಃಖವನ್ನು ಮನಗಂಡು ಸಹೃದಯಿಯಾದ ಆ ಮನುಷ್ಯನ ಹೃದಯ ಕರಗಿ, ಅವರ ಕಪೋಲಗಳನ್ನು ತೋಯಿಸಿತು. ಅತ ಹೇಳುತ್ತಲೇ ಇದ್ದ— ....ತಾಯೀ, ಸಮಾಜದ ಚಾಚ್ಚುನುಡಿಗಳನ್ನು ತಾಳಿಕೊಳ್ಳುವ ಸಾಮರ್ಥ್ಯ ತಮ್ಮಲ್ಲಿರಲಾರದು, ಈ ಅಡ್ಡ ದಾರಿಯಲ್ಲಿ ಭಂದಿಂದ ಮುಂದುವರಿಯುತ್ತಿರುವ ಸಮಾಜವನ್ನು ಸರಿದಾರಿಗೆ ಎಳೆದು ತಂದು, ಭಾರತ ಮಾತೆಯ ಕೂಲೆಯ ಧಾರತೀಯರಿಂದಲೇ ಆಗುವುದನ್ನು ತಪ್ಪಿಸುವ ಶಕ್ತಿ ತಮ್ಮಲ್ಲಿರಬಹುದೇ? ಈಗಿನ ಸಮಾಜದ ಅಂಜುಬುರುಕರ ಹೃದಯಗಳಲ್ಲಿ ಧೈರ್ಯದ ಬೀಜವನ್ನು ಬಿತ್ತಿ, ಅವರನ್ನು ಕಚ್ಚೆದೆಯವರನ್ನಾಗಿಸಿ, ಭಾರತ ಮಾತೆಯನ್ನು ವರರ ದಾಳಿಯಿಂದ ತಪ್ಪಿಸಬಲ್ಲ ಸಮರ್ಥಯೋಧರನ್ನು ನಿರ್ಮಿಸಲು ತಾವು ಸಮರ್ಥರಾಗ ಬಲ್ಲರಾ?....'

ಕುಮುದಿನಿ ನಕ್ಕು ಹೇಳಿದಳು—"ಮಹಾತ್ಮನೇ, ನನಗೀಗ ಗೊತ್ತಾಯಿತು. ನೀನು ಕವಿ!"

ದಿಗ್ಭ್ರಾಂತನಾಗಿ ಕೇಳಿದ ಅವನು— "...ತಮಗೆ ಹೇಗೆ ತಿಳಿಯಿತು...?"

"ನಿನ್ನ ಮಾತಿನ ಧಾಟಿಯಲ್ಲೇ ಅರಿತುಕೊಂಡೆ" ಕುಮುದಿನಿ ನುಡಿದಳು—"ಆದರೆ, ಇಷ್ಟು ಯೋಗ್ಯವಾದ ವಿಚಾರಗಳಿಂದ ಕೂಡಿದ ನಿನ್ನ ಕಾವ್ಯಧಾರೆಯನ್ನು ಕಂಡು ಮರುಳಾಗದ ಈ ಸಮಾಜವನ್ನೇ ನಾನು ಹುಚ್ಚನೆನ್ನುವೆ!"

'... ...ತಾಯೀ...ಇಷ್ಟು ಉತ್ಸಾಹದಿಂದ ನನ್ನನ್ನು ಕೆದಕಿ ನನ್ನ ಇತಿಹಾಸವನ್ನು ತಿಳಿದುಕೊಂಡು, ಸಮಾಜವು ಹುಚ್ಚನೆನ್ನುತ್ತಿದ್ದರೂ ಕಡೆಗಣಿಸಿ, ನನ್ನನ್ನು ಆದರಿಸಿದ ತಮ್ಮನ್ನು ನಾನೊಮ್ಮೆ ಪ್ರಶ್ನಿಸಬಯಸುವೆ. ತಾವು ಯಾರು? ನನ್ನ ಬಗೆಗೆ ತಮಗಿಷ್ಟು ಕುತೂಹಲವುಂಟಾಗಲು ಕಾರಣವೇನು?'

"ಕುಶಲ ಚಿತ್ರಕಾರನ ತನ್ನ ಚಿತ್ರಗಳಿಗೆ, ಪ್ರಕೃತಿಯ ವಿವಿಧ ದೃಶ್ಯಗಳನ್ನೇಯಾವ ರೀತಿ ಆಧಾರವಾಗಿಟ್ಟು ಕೊಳ್ಳುವನೋ, ಅಂತೆಯೇ ನಾನು ಸಮಾಜದ ಚಿತ್ರಗಳನ್ನು ಲೇಖನಿಯ ಮೂಲಕ ಕಾಗದದಲ್ಲಿ ಚಿತ್ರಿಸುವ ಕತೆಗಾರನೆ! ಸಮಾಜದ ಸಬಲತೆ— ದುರ್ಬಲತೆಗಳೇ ನನ್ನ ಕೃತಿಗಳ ಆಧಾರ! ಸಮಾಜದ ಕಷ್ಟ—ನಷ್ಟಗಳ ಬಗ್ಗೆ ಚಿಂತಿಸಿ – ಚರ್ಚಿಸಿ, ಅವುಗಳನ್ನು ಹೋಗಲಾಡಿಸುವುದೇ ನನ್ನ ಧ್ಯೇಯ! ನಾನು, ನನ್ನ ಕತೆಯನ್ನು ಬರೆಯುವೆ! ಅಂತೆಯೇ ನಿನ್ನಂತಹ ಮಹಾತ್ಮರನ್ನು ಹುಚ್ಚರನ್ನಾಗಿಸಿದ ಈ ಮೂರ್ಖ ಸಮಾಜವನ್ನು ಹಳಿಯುವೆ! ನಿನ್ನಂತೆಯೇ ಹುಚ್ಚರಾಗಿರುವ ಅನೇಕರನ್ನು ಇನ್ನಾದರೂ ಸಮಾಜವು ಗುರುತಿಸಿ, ಆದರಿಸುವಂತೆ ಪ್ರೇರೇಪಿಸುವೆ! ಭಾರತ ಮಾತೆಯ ಸೇವೆಗೆ ಕಂಕಣ ಬದ್ಧರಾದ ಬುದ್ಧಿ ಮುಚ್ಚಿದ ಕೆಂಡಗಳ ಬೂದಿಯನ್ನು ಝಾಡಿಸಿ ಪ್ರಜ್ವಲಿಸ ಮಾಡುವೆ!....ನನ್ನೊಂದಿಗೆ ಬಾ...ಇನ್ನು ನಾವು ಸಹೋದರರು.! ನೀನು ಸಮಾಜದಲ್ಲಿಯೇ ಇದ್ದು ಕೊಂಡು "ಹುಚ್ಚ" ಎಂಬ ಗುಪ್ತ ನಾಮದಿಂದ, ವೀರ ಕಾವ್ಯಗಳನ್ನು ಬರೆದು ಹಾಡಿ, ಜನರ ಹೃದಯವನ್ನು ಸೆಳೆ! ಇಂತು ನಾವೀರ್ವರೂ ಸಾಹಿತ್ಯ ಸೇವೆಯನ್ನು ಮಾಡುತ್ತ ಭಾರತೀಯ ಸೇವೆಯಲ್ಲಿ ನಿರತರಾಗಿರೋಣ !!"

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone 261448

The only Qualified optometrist of South

Shetty's Optics & Contact Lens Clinic

London Qualified Optometrists

೭ ಈಗನ್ ಬೋಸ್ಟ್ರೀಟ್, ಬಾರ್ಝೋರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ - ೧.

ಲಂಡನ್ ಕಂಬೇತಾದ ಹಾಗೂ ಜಗದ್ವ್ಯಾಪಿ ಅನುಭವವುಳ್ಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಹವಾನಿಗಳು ಆದ್ಯತ್ಯ ಭಾಗಗಳಿರುವ 'ಬೈಫೋಕಲ್ಸ್ ಲೆನ್ಸ್'ನ ತಜ್ಞರು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ್ಕ ಟಾನಿಕ್ ಮಾರಿಯಾದ ಆಯುರ್ವೇದ ವಿಧಿಗಳು ಮತ್ತು ದಕ್ಷ ವೈದ್ಯಕೀಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ.
ಅಂದರೆ ನೀವು ತಿಳ್ಳದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S. R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

NAVAYUGA 4-1-1960
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿನೋದ ಲಹರಿ

'ಖಾನಾ' ನಿರೋಧ ಶಾಸನ ಬರಬಹುದೇ?

ಬರೆದವರು: ಶ್ರೀ ಮ. ಗೋ. ರಾವ್

"ಏನು ಶಣೇ.... ರಸಕಾಮಣೆ.... ಕ್ರಿಯೊಪೀಲೆ.... ಮದಗಜ...."

"ಏನು ಹೇಳೋದು.... ನೀವು ಯಾವಾಗ್ಲೂ ಹೀಗೇ.... ತಮಾಸೆಯೇ ಏನು ...."

"ಆಂ....ತಡೆ...ತಡೆ....ಮುಂದೆ ಹೋಗಬೇಡ. ಜೀವನವನ್ನು ಆನಂದಗೊಳಿಸಲು ಮನರಂಜನೆಯೂ ಒಂದು ಮುಖ್ಯ ಸಾಧನ. ಅದಕ್ಕೆ ಹೇಳ್ತಿರೋದು 'ವಿನೋದಂ ವಿದ್ಯಾ ಭೂಷಣಂ' ಅಂತ"

"ನಿಮ್ಮ ಈ ಭೂಷಣಂ ಗೀಷಣಂ ನನಗ್ಯಾವುದೂ ಅರ್ಥವಾಗೋದಿಲ್ಲ"

'ನಿನಗೆ ಅರ್ಥವಾಗದಿದ್ದರೂ ಅಷ್ಟೊಂದು ಗಾಬರಿ ಪಟ್ಕೊಳ್ಳೋ ಪ್ರಮೇಯವೂ ಇಲ್ಲ....ಅಂ....ಅಂ....'

"ಈಗ....?"

"ಒಂದು ಹೊಸ ಸುದ್ದಿ ನಿನಗೆ ತಿಳಿಸಬೇಕಂದಿದ್ದೇನೆ."

"... ...."

"ಏನ್ ಸಂತೋಷ ಆದ್ದೆ? ಅದು ನನಗೆ ನಿನಗೆ ಸಂಬಂಧ ಪಟ್ಟದ್ದು ಅಲ್ಲ ಶಣೇ...."

'ಅಂದರೆ...ಮತ್ತೆ....ಯಾರಿಗೆ....?'

"ಅಂದರೆ ಲೋಕದ ವಿಚಾರ.ರಾಜಕೀಯ ವಿಚಾರ ಮೂಲಕ...."

"ನಮಗದರಿಂದೇನಾಗಬೇಕು. ರಾಜ್ಯದ ವಿಷಯ ತಿಳಿದ ನಮ್ಮ ಮನೆ ಉದ್ಧಾರವಾಗುತ್ತದೋ....?"

'ನೋಡು...ನಿನ್ನಲ್ಲಿರುವುದೇ ಇದು—ಉದ್ಧಾರ...ಶಿವದಾರ....ಸೂಜಿದಾರ ಅಂತ, ಇದಕ್ಕೇ ಅನ್ನೋದು ಅಧುನಿಕ ಅಜ್ಞಾನಿಗಳೂ ಅಂತ."

'ಅದ್ಯಾಗೆ ಅಜ್ಞಾನಿಗಳಾಗೋದು?"

"ಈಗಿನ ಕಾಲದಲ್ಲಿ ಸಮಾಜದ ಅಂತರಂಗವನ್ನರಿತುಕೊಂಡು ಸಮಾಜವೆಂಬ 'ಯಾತ್ರಿಕ' 'ಸಂಸ್ಕೃತಿ' ಎಂಬ ಬಂಡಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿರುವಾಗ....

"ಮಾಡುತ್ತಿರುವಾಗ...."

'ನಾವು ಮಾತ್ರ ಹಿಂದುಳಿದರೆ...'

'ಚೆನ್ನಾಗುವುದು...'

"ಏನು ಚೆನ್ನಾಗುವುದು? ಸಮಾಜ ನಮ್ಮನ್ನು ಚೆನ್ನಾಗಿ ಜರೆದೀತು. ಅ ರೀತಿ ಇದೆ ಇಂದಿನ ಸಮಾಜದ ಜನರ ದೃಷ್ಟಿಕೋಣ. ಒಬ್ಬ ಧೂಮ ಪಾನ ಮಾಡಿದ್ದೆ ಮತ್ತೆಷ್ಟು ಮದ್ಯಪಾನ...."

"ಆಂ..."

"ಊಂ..."

"ಅದೇ ಆ ವಿಷಯ... ಮದ್ಯಪಾನದ ವಿಷಯ ನಿಮ್ಮಲ್ಲಿ ಕೇಳ್ಬೇಕೆಂದಿದ್ದೆ."

"ಏನು ಕೇಳೋದು. ಮದ್ಯಪಾನ ಅರ್ಥವಾಗದಿದ್ದರೆ "ವಾಟೇಸುಪಾನ'ವೆಂದಿಟ್ಟು ತೊಂಡರೆ ಸರಿಹೋಯ್ತು.'

"ಅದು ಅರ್ಥವಾಯಿತು. ಆದರೆ ಅದರ ಬಗ್ಗೆ ನಮ್ಮ ಸರಕಾರ ತಳೆದಿರೋ ನೀತಿ...

"ಆ ನೀತಿ...ರೀತಿಗಳೆಲ್ಲಾ ನಾವು ವಿಮರ್ಶಿಸ ಬಾರದು. ಸರಕಾರ ಮದ್ಯಪಾನ ನಿಷೇಧ ಶಾಸನವನ್ನು ರದ್ದು ಮಾಡಿರುವುದು ಮಾತ್ರ ಎಲ್ಲ ಕಡೆ ಹಬ್ಬಿ ವಾಟೇಸು ಪ್ರೊಡ್ಯೂಸರುಗಳಿಗೆಲ್ಲ ಗರಬಡಿದಂತಾಗಿದೆಯಂತೆ.'

"ಹಾಗಾದರೆ ಇನ್ನು ಮುಂದೆ ಕಳ್ಳ ಬಟ್ಟಿಗಳು....?" "ಹಿಂದಿದ್ದ ಕಳ್ಳ ಭಟ್ಟಿಗಳೆಲ್ಲ ಮುಂದಕ್ಕೆ ಬಹಿರಂಗ ಭಟ್ಟಿಗಳೆಂಬ ನವನಾಮದಿಂದ ಪ್ರಕಟಿಯಾಗ ಬಲ್ಲುದು ಅಷ್ಟೆ.' "ಒಂದು ರೀತಿಯಲ್ಲಿ ಸಹಕಾರ ಕೈಗೊಂಡ ನೀತಿ ಸರಿಯೂದುದು'

"ಅದ್ಯಾವುದು ವಿಧಗೆ"

"...ಸ್ಥಾನ...ಒಂ... ಎಸ್ಟ್ರಾಸಿಗ ಘೋಷ ಹಾಕಿ ಇಟ್ರು ಅ ನ್ನ ನಮಗೆ ನೋಡ್ಬೇಕು ಎಂಬ ಆಸೆ ಉ ಸುವುದು. ಇ ಭ ವಿಕವೇ.ಅನ್ನು ಮುಂದಕ್ಕೆ ಅದೂ ಜಾ ಕ.ಭಿ ಂತೆ ಓಡಿಸಾರಿ ಪಾನೀಯ ವಾಗಿ ಒಹುದು. ಅಲ್ಲವೇ?"

"ಒಂದಂ ಫ ಲ ನಿನ್ನ ವಾದ ವೈಖರಿ. ಘಟನಾ.ಘಟಗಳೆಲ್ಲಾ ಕೂಡಿ ತಲೆಯೋಡಿಸಿ ಸುರಾಪಾನಕ್ಕೆ ಈ ರೀತಿಯ ಹೊಸ ಮದ್ದನ್ನು ಸಿದ್ಧಗೊಳಿಸಿದ್ದಾರೆ.'

"ಅಳವಾಗಿ ಯೋಚಿಸಿದರೆ ಇನ್ನು ಮುಂದೆ ಜೀವನ ನಿರ್ವಹಣೆಯೇ ಬಹಳ....'

"ಎದ್ ಎದ್ ಎಪ್ಪಡಿ ಎಪ್ಪಡಿ ನಡಕಿಟ್ಟು ಅದ್ ಅದ್ ಅಪ್ಪಡಿ ಅಪ್ಪಡಿ ನಡಕ್' ಎಂದು ತಮಿಳಿನಲ್ಲೊಂದು ಮಾತಿದೆ. ಆದ್ರಿಂದ ಈ ಧರಿತ್ರಿಯಲ್ಲಿರೋ ಮಾನವ ಕೋಟಿಗಳೆಲ್ಲ ಮಾಡುವ ಕರ್ಮಗಳು ಕರ್ತೃ ರಹಿತವಾದುದು. ಈ ಜೀವ ನೆಪ ಮಾತ್ರಕ್ಕೆ...."

"ಉದು ಸರಿ ಎಲ್ಲಾ ಮಾತನಾಡುವ "ತಿನ್ನುವ' ಗೊಂದೆಗಳು. 'ಮತ್ತೊಂದು ಮಾತು ಕಣೇ ಈ ಪಾನನಿರೋಧ ಶಾಸನ ರದ್ದಾದುದರ ಬೆನ್ನಿನಲ್ಲೇ "ಖಾನ ನಿರೋಧ' ಶಾಸನ ಜ್ಯಾರಿಗೆ ತಂದರೆ ಹೇಗಾದೀತು?'

'ಈಗಾಗಲೇ ಅರ್ಥ ಖ ನಾ ನಿರೋಧ ಶಾಸನ ಜ್ಯಾರಿ ಮಾಡಿದ ಹಾಗೆಯೇ ಆಗಿದೆ.

"ಪಾನನಿರೋಧ ರದ್ದತಿಯಿಂದಾಗಿ ತ ಲಬ. ಇದಾ...ದೆ ಎಂಬ ಅಂದಾಜಿನಿಂದ ಅದನ್ನ ರದ್ದು ಮಾಡಲು ನಿಶ್ಚೈಸಿದರ. ಇನ್ನು ಖಾನಾ ನಿರೋಧ ಶಾಸನ ಮಾಡಿ..."

"ಊಂ. ಸಾಕು ನಿಮ್ಮ ರಾಜಕೀಯ ಲಹರಿ. ದೀಸವಾಗಿ..."

"ಅಜ್ಞಾಪರಿಪಾಲಕನು ನಾನು ಹೇ ನನ್ನ ರಾಜ್ಞೀ!'

"ಆಯ್ತೋ...'

"ಶ..."

ಪುಡಿಗತೆಗಳು

೨ 'ಚಾಶಕ್ಕರ ಯೋಗ' ನ್ಯಾಯ

"ಕಾಕತಾಲ ನ್ಯಾಯ"; "ಹೆಂಡತ್ತೀರ ನ್ಯಾಯ" "ಗಜ ಕೇಸರಿಯೋಗ ನ್ಯಾಯ" ಮೊದಲಾದ ಅನೇಕ ನ್ಯಾಯಗಳಿರುವಂತೆ "ಚಾಶಕ್ಕರ ಯೋಗ ನ್ಯಾಯ'ವೂ ಇದೆ. ಇದು ಇತ್ತೀಚಿನ ಹೊಸ ಯೋಗ ನ್ಯಾಯ.

ಈಗ ಹೆಚ್ಚಾಗಿ ಎಲ್ಲರೂ ಕುಡಿಯುವುದು ಚಾ—ಅಥವಾ ಚಹಾ. ಕಾಫಿಗಿಂತ ಚಹಾದ ಕೀರ್ತಿಯೇ ಹೆಚ್ಚೆಂಬುದಕ್ಕೆ, ಕಾಫಿಯನ್ನು ವಿನಿಯೋಗಿಸುವ ಸಮೂಹಂಭಗಳಿಗೆ ಕ ಡ "ಟೀ ಪಾರ್ಟಿ ಎಂದೇ ಹೇಳ ತ್ತಾರೆ. ಟೀ...ಗೆ ಇನ್ನೇ ನು ಬೇಕು?

ನೀವು ದಿನಾ ಮೂರಾರು ಬಾರಿ ಚಹಾ ಕುಡಿಯುತ್ತಿದ್ದರೂ ಕುಡಿಯುವ ಆ ಚಾ ಒಂದೇ ರೀತಿ ಸೂಗಿರ...ಯೆ? ಕುಡಿಯುವಾಗಿನ ನಿಮ್ಮ ಮನಃಭಾವ ಒಂದೇ ವಿಧವಾದ ಆನಂದವನ್ನು ತೋರಿಸುತ್ತೆಯೆ? ಕಷಾಯದ ಹಾಗೊಮ್ಮೆ ಔಷಧದ ಹಾಗೊಮ್ಮೆ ಕೆಸರುಂಡಿಯ ಹಾಗೊಮ್ಮೆ ತರಿ ತಿಂದ ಹಿಟ್ಟು ಕಲಸಿದ ಹಾಗೂ ನಿಮ್ಮ ಕೈಗೆ ಬಂದೀತೆ. ಅದು ತನ್ನ ರುಚಿಯನ್ನ ನಿಮ್ಮ ನಿಮ್ಮ ಮನಸ್ಸಿಗೆ ಬೋಧಿಸಿ ಮಾಡುವುದರೊಳಗೇ ಖಾಲಿಹೂಗಿಯೂ ಬಿಡುತ್ತೆ. ಪಾಪ, ಈಗೀಗ ಇನ್ನೂ ಅಲ್ಪ ಪ್ರಮಾಣದ್ದಾಗಿದೆ. ಬಾಯಿಬಿಟ್ಟು ಆಕ್ಷೇಪಣೆ ಹೇಳುವಷ್ಟು ಬೆಲೆಯನ್ನೂ ಅದು ಪಡೆದಿರುವುದಿಲ್ಲ. ಅಂತೆಯೇ ನಿಮ್ಮ ಕಡೆ ಅಸಂತುಷ್ಟತೆಯನ್ನು ಬಾಯಿ ಮುಚ್ಚಿ ಸಹಿಸಿಕೊಂಡೇ ಕರ್ಚೀಫಿನಿಂದ ಒರಿಸಿ ನುಂಗಿಕೊಳ್ಳುತ್ತೀರಿ.

ಹಾಗಂತ ನೀವೇನೂ ಚಾವನ್ನು ಬಿಟ್ಟು ಬಿಡುವುದಿಲ್ಲ. ಕುಡಿದೇ ಕುಡಿಯುತ್ತೀರಿ. ಆಕಸ್ಮಾತ್ ಯಾವಾಗಾದರೊಮ್ಮೆ, ಎಂದಾದರೊಂದು ದಿನ ನಿಮ್ಮ ಮನಸ್ಸು ಬಯಸುವಂತಹ ರುಚಿಯೂದ ಚಹಾ ನಿಮಗೆ ಸಿಗುತ್ತದೆ. ಆಗ ನಿಮ್ಮ ಮುಖ ಬಹಳ ಸಂತೋಷದಿಂದ ಅರಳುತ್ತದೆ.

ಆದರೆ ಮತ್ತೊಮ್ಮೆ ಅಂತಹುದೇ ಚಹಾ ಸಿಗಬೇಕಾದರೆ ಅದು ನಿಮ್ಮ ಇಚ್ಛೆಯಲ್ಲ, ಚಹಾ ಮಾಡುವವನ ಮಾಡುವಿಕೆಯ ಇಚ್ಛೆಯೂ ಅಲ್ಲ. ಅದೊಂದು ಆಕಸ್ಮಿಕ ಪುಣ್ಯಫಲ. ಅದೃಶ್ಯ. ಅದುವೇ "ಚಾಶಕ್ಕರಯೋಗ ನ್ಯಾಯ'.

"ನವಗಿರಿನಂದ"

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಿಡ್ಡಲ್ ವೆಂಕಟ್ರಾವ್, ಎಲ್. ಐ. ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ನಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹಂಗ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

Edited, Printed and Published by D. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



11—1—1968

೨೦ ಪೈಸೆ

ಆದರ್ಶದ ಆಸೆ

ಬರೆದವರು :
ಶ್ರೀಮತಿ ಬಿ. ರಮಾನಾಗೇಶ್

"ರುದ್ರಾಣಿ ಕೆಲಸ ಬಿಟ್ಟಾಳಂತೆ'

"ಯಾಕೆ? ಇಂಥ ರೂ ಸಿಕ್ಕುತಿತ್ತಲ್ಲೆ?'

"ರುದ್ರಾಣಿ ಎಂದರೆ ಯಾರು?"

"ಓ ಮೊನ್ನೆ ನಾವಿಬ್ಬರೂ ಹೋಗುವಾಗ ಓಡೋಡಿ ನಡೆಯುತಿದ್ದಳಲ್ಲಾ'

"ಓ, ಅವಳಾ ಹೆಲ್ತ್ ವಿಸಿಟರ್ ಅಲ್ಲವೇ?'

"ಅವಳಾ ಅಂದಿಯಲ್ಲಾ, ಅವಳ ವಿಚಾರ ನಿನಗೆ ಗೊತ್ತಾ?"

"ಸ್ವಲ್ಪ ಗೊತ್ತು"

'ಹೇಗೆ?'

"ಅವಳಿಗೆ ಮೊದಲು ಕೆಲಸ ದೊರತದ್ದು ನೆಲಮಂಗಲದಲ್ಲಿ ಆಗ ಅವಳನ್ನು ಕಾಣ ಬೇಕಿತ್ತು. ಕೆಂಪು ಟೊಮೆಟೊ ಹಣ್ಣು ಇದೆಯಲ್ಲಾ ಆ ತರ ಇದ್ದು. ಆಗ ಅವಳಮೇಲೆ ಎಲ್ಲರಿಗೂ ಒಂದು ಕಣ್ಣಿತ್ತು'

"ಅದು ಹೂವಾಗಲ್ಲಾ ಹಾಗೆ ಅಲ್ವಾ?'

"ಹಾಗೆ ಹೀಗೆ ಎಲ್ಲಾ ಅಲ್ಲಾ"

"ಮತ್ತೆ ಹೇಗೆ?'

"ಅವಳ ಆಸ್ಪತ್ರೆಯಲ್ಲಿ ಮುದಿ ಗೊಡ್ಡು ಒಂದು ಇತ್ತು. ಅವನು ಅಲ್ಲಿಯ ಡಾಕ್ಟ್ರು

'ಮುದಿಗೊಡ್ಡು ಏನು ಮಾಡೀತು?'

"ಅದಕ್ಕೆ ನರ್ಸುಗಳ ಗಲ್ಲ ಸವರುವ ಕೆಲಸ'

"ಓ ಅಂಥಾ ವಿಶೇಷ ಕೆಲಸಕ್ಕೆ ಅವನು ಡಾಕ್ಟ್ರೆ? ಅಂದ ಹಾಗೆ ಇವಳ ಗಲ್ಲವನ್ನೂ ಸವರಿದ. ಮುಂದೆ?'

"ಇವಳ ಗಲ್ಲ ಮುಟ್ಟೋಕೆ ಅಷ್ಟು ಸುಲಭದ ಹೆಣ್ಣಲ್ಲ ಇವಳು'

"ಹಾಗಾದರೆ ಏನಾಯಿತು?'

"ಸಾಲ್ಯಾರು ಸಾರಿ ಅವಳನ್ನು ಮಾತನಾಡಿಸಿ, ಹೊತ್ತಲ್ಲದ ಹೊತ್ತಲ್ಲಿ ಡ್ಯೂಟಿಗೆ ಕರೆದು ನೋಡ್ದಂತೆ. ಇವಳು ಹೋಗಲೇ ಇಲ್ಲ. ಮೇಲಕ್ಕೆ ರಿಪೋರ್ಟು ಮಾಡ್ತೇನೆ ಅಂದ್ದಂತೆ. ನಾನ್ನೊಡ್ಕೊಳ್ತೇನೆ ಅಂದ್ದಂತೆ. ಮುಂದೆ ಖಾಡ ಖಾಡಾ ವೈರ ಬೆಳೆಯಿತು. ಈತನಹಿಂಸೆ ಅವಳ ಅತ್ತನ ಗಂಡಹಿಗೆ ಎಲ್ಲವನ್ನೂ ತಿಳಿಸಿದಳು. ಅವರು ಆರೋಗ್ಯ ಮಂತ್ರಿಗಳಿಗೆ ಫೋನ್ ಮಾಡಿದ್ರು ಡಾಕ್ಟ್ರು ಉಪದ್ರವದಿಂದ ಪಾರಾದಳು'

"ಹೆಂಗುಸರಿಗೆ ಆಫೀಸು ಕೆಲಸ ಹೇಳ್ಬಿಡ್ದೆ ಅಲ್ಲಾ. ಅದರೆ ಜೀವನಕ್ಕೆ ಬೇರೆ ದಾರಿ ಇಲ್ಲದಿದ್ರೆ ಏನು ಮಾಡುವ ಹಾಗಿದೆ ಹೇಳು?"

'ಅಷ್ಟೆ ಅಲ್ಲ, ಅನಂತರ ಆರಂಭವಾದದ್ದು ಅವಳ ಕೆಲಸದ್ದೇ ಕಿರುಕುಳ, ಸಾರ್ವಜನಿಕರ ಕಿರುಕುಳ"

"ಅಂದರೆ?'

"ಅವಳ ಕೆಲಸವೆಂದರೆ ಗರ್ಭಿಣಿಯರು, ಹಡೆದವರ, ಸಣ್ಣ ಮಕ್ಕಳ ಮೇಲ್ವಿಚಾರ ತೆಗೆದುಕೊಳ್ಳುವುದು, ಆಗತ್ಯ ಕಂಡಲ್ಲಿ ಇವಳೇ ಹೆಂಗೆಗೆ, ಇಂಜಕ್ಷನ್ನಿಗೆ ಹೋಗಬೇಕಾಗುತಿತ್ತು".

'ಮತ್ತೆ ತಿರುಗಾಡುವುದು ಆ ಕೆಲಸದ ನೈತ್ಯ ರೂಢಿ ಎಂತ ಕಾಣುತ್ತದೆ ಅಲ್ಲವೇ?'

"ಹೌದು, ಅವಳ ಕೈಕೆಳಗೆ ನಿರ್ದಿಷ್ಟ ಸಂಖ್ಯೆಯ ದಾಯಿಯರು ಇರುತ್ತಾರೆ. ಅವರ ಕೆಲಸದ ಮೇಲ್ವಿಚಾರಿಕೆ ತೆಗೆದುಕೊಳ್ಳಬೇಕು.

"ಅವಳ ಕೆಲಸ ಇರುವುದು ಹೆಂಗಸರ ಬಳಿಯಲ್ಲಿ. ಒಂದು ತರದ ಸಮಾಧಾನವೂ ಇರಬೇಕು"

"ಆ ಸಮಾಧಾನದ ಕುರಿತು ಹೇಳುತ್ತೇನೆ ಕೇಳು. ಒಂದು ದಿನ ರಾತ್ರಿ, ಗಂಟೆ ೯ ಕಳೆದಿದೆ. ಆಕೆ ಮಲಗಲು ತಯಾರು ಮಾಡುವಾಗ ಒಬ್ಬ ಕುಡಿದು ಬಂದ ಗಂಡಸು ಬಂದನಂತೆ. ತನ್ನ ಹೆಂಡ್ತಿಗೆ ಜೋರು ಬೇನೆ. ಕೂಡಲೇ ಸಹಾಯಕ್ಕೆ ಬರಬೇಕೆಂದು ತೊಡಲಿದನಂತೆ. ಅವಳು ಅವನನ್ನು ದಾಯಿಯ ಮನೆಗೆ ಕಳಹಿಸಿದಳಂತೆ. ದಾಯಿ, ಅವಳ ರಿಜಿಸ್ಟ್ರಿ ತೆಗೆದು ಗರ್ಭಿಣಿಯರು ಆ ಸ್ಥಳದಲ್ಲಿದ್ದಾರೆಯೇ ಎಂದು ನೋಡಿಕೊಂಡಳಂತೆ. ಅಲ್ಲಿ ಯಾರೂ ಇಲ್ಲವೆಂದು ಖಚಿತವಾದ ಮೇಲೆ ತನಗೆ ಬರಲು ಸಾಧ್ಯವಿಲ್ಲ, ತನ್ನ ಮಗುವಿಗೆ ವಿಪರೀತ ಜ್ವರ. ಅವನು ವಾರ್ಡಿನ ಮಿಡ್‌ವೈಫನ್ನು ಕೇಳಿಕೊಳ್ಳಲು ಹೇಳಿದಳಂತೆ. ಹಾಗೆ ಒಳಗೆ ಹೋಗಿ ಹೊರಗೆ ಬರುವದರೊಳಗೆ ಜಗುಲಿಯ ಮೂಲೆಗೆ ತಗುಲಿ ಹಾಕಿದ ಸ್ಟೆತಸ್ಕೋಪ್ ಮತ್ತು ವಾಚೂ ಅವನೊಂದಿಗೆ ಹೊರಟು ಹೋಗಿತಂತೆ'

'ಹೇಗಿದೆ ಕೆಲಸದ ಸಮಾಚಾರ"

"ಇಷ್ಟೆ ಅಲ್ಲ. ಒಂದು ದಿನ ರಾತ್ರೆ ೧೦ ಗಂಟೆ ಸುಮಾರಿಗೆ ತನ್ನ ಮನೆಯಲ್ಲಿ ಹರಿಣಿಯ ಹೊಟ್ಟೆನೋವೆಂದು ಹೇಳಿ ಕರೆಯಲು ಕಾರನ್ನು ತೆಗೆದುಕೊಂಡು ಬಂದ ಜನದೊಡನೆ ಹೋದ ದಾಯಿಯನ್ನು ದೂರಕ್ಕೆಲ್ಲೋ ಕರೆದೊಯ್ದು ಬಲಾತ್ಕಾರ ಮಾಡಿ ಕೆಡಿಸಿ ಬಿಟ್ಟರಂತೆ'

'ಹೀಗೂ ಇದೆಯೇ? ಸಹಾಯಕ್ಕೆ ಹೋದರೆ ಸಾಯಬೇಕಾದ ಪರಿಸ್ಥಿತಿ"

'ಈಗೀಗ ರುದ್ರಾಣಿಗೂ ಈ ಕೆಲಸದಲ್ಲಿ ದೇಸರ ಬಂದಿದೆ. ಒಂದು ಕಾಲದಲ್ಲಿ ಸೇವಾ ಭಾವನೆಯಿಂದ ಹೊಂಟವಳು ಆವಳು. ಈಗಾದರೊ 'ಮೊದಲು ನಾನು ಅನಂತರ ನೊಂದ ಜೀವಿಗಳು' ಅನುತ್ತಾಳೆ.

'ಅದೂ ಹೌದೆನ್ನು. ನಿನಗೆ ಹೇಗೆ ಗೊತ್ತು ಅವಳು'.

"ನಾನೂ ಆ ಸಮಯದಲ್ಲಿ ನೆಲಮಂಗಲದಲ್ಲಿದ್ದೆ. ನಮ್ಮಿಬ್ಬರ ಸ್ನೇಹವಾದುದು ಸಿನೇಮಾ ಥಿಯೇಟರಿನಲ್ಲಿ. ಅದರೆ ಬಹಳ ಮುಂದಕ್ಕೆ ನಮ್ಮ ಗೆಳೆತನ ಬೆಳೆದಿತು. ಅವಳಂತವಳಿಗೆ ಖಂಡಿತವಾಗಿಯೂ ಈ ಕೆಲಸವಲ್ಲ" ಎಂದು ಅಗರಿಬ್ಬರೂ ತಮ್ಮ ಮಾತಿಗೆ ಕೊನೆ ಎಳೆದರು.

o o o

ಜೂನ್ ತಿಂಗಳ ಕೊನೆಯ ವಾರದ ಮೊದಲ ಕ್ಲಾಸು. ಕ್ಲಾಸನ್ನು ಸೇರಿದವರು ೫೦ ಮಂದಿ. ೫೦ ಊರುಗಳಿಂದ ಬಂದವರು. ಮೊದಲ ನೋಟಕ್ಕೆ ಸಿಕ್ಕಿದ ಮಾತುಗಳಿವು.

"ಈ ಪ್ರಪಂಚದ ಮೂಲಕ ನಾನು ದಾಟುಹೋಗುವುದೂ ಒಂದೇ ಸಲ. ಆದುದರಿಂದ ನಾನು ಒಳ್ಳೆಯದನ್ನು ನನ್ನಿಂದ ಮಾಡಲು ಸಾಧ್ಯವೋ ನನ್ನ ಜತೆ ಜೀವಿಗಳಿಗಾಗಿ ಎಷ್ಟು ದಯೆಯನ್ನು ತೋರಿಸಲು ಸಾಧ್ಯವೋ ಅದೆಲ್ಲವನ್ನೂ ಈಗಲೇ ನಾನು ಮಾಡಬೇಕು. ಮಾಳೆಗೆಂದು ತಳ್ಳುವಂತಿಲ್ಲ; ಉಪೇಕ್ಷೆ ಮಾಡುವಂತಿಲ್ಲ; ಯಾಕೆಂದರೆ ಈ ಹಾದಿಯಾಗಿ ನಾನು ಮತ್ತೆ ಬರಲಾರೆ"

ಆ ದಿನದ ತರಬತಿಯಲ್ಲಿ ಮಾತನಾಡಿದ ಉಪಾಧ್ಯಾಯರೆಲ್ಲರೂ ಸೇವೆಯ ಕುರಿತು ಜತೆಯಾಗಿ ಬರುವ ರೋಗಿಗಳ ಕುರಿತು ಹೇಳಿದುದೇ ಹೆಚ್ಚು. ಬೇರೆಯವರಿಗಾಗಿ ಕರುಣೆ ತೋರಿಸಿ, ಸೇವೆ ಮಾಡಿ ಅವರ ಕೆಲಸದಲ್ಲಿ ಸಫಲತೆಯನ್ನು ಕಾಣಬೇಕತ್ತು.

ಅದರೆ ಚೆಲ್ಲು ನಾರಾಯಣಿ ಬಂದುದೇ ಸುಖದ ಜೀವನದಧ್ಯೇಯದಿಂದ. ಅವಳ ಅಭ್ಯಾಸವನ್ನು ಭ್ರಷ್ಟಾಚಾರದಿಂದ ತನ್ನ ಸಮೀಪದವಳೊಂದಿಗೆ ವ್ಯಾಸಂಗ ಮಾಡುತ್ತಾ ಕ್ಲಾಸಿನ ಹೊರ ಬರುತ್ತಿರುವುದನ್ನು ಕೇಳಿ ರುದ್ರಾಣಿ ರುದ್ರಿಯೇ ಆಗಿದ್ದಳು.

ಆದರೆ ಪ್ರಥಮ ಖಂಡಿಯ ಏನೂ ಹೇಳುವಂತಿರಲಿಲ್ಲ!

o o o o o

ಆದರ್ಶದ ದೆನ್ನು ಹತ್ತಿ ಬಾಳನ್ನು ಸಾಗಿಸಲು ಹೊರಟ ರುದ್ರಾಣಿಗೆ ತನ್ನ ತಂದೆಯ ವೈಗವನ್ನು ನೋಡುವ ಸಂದರ್ಭವೇ ಸಿಕ್ಕಿರಲಿಲ್ಲ. ಆಕೆ ತಾಯಿಯ ಹೊಟ್ಟೆಯಲ್ಲಿರುವಾಗಲೇ ಅವಳ ತಂದೆ ತೀರಿಕೊಂಡಿದ್ದರು. ಈಗ ತಾಯಿಗಿರುವ ಸರ್ವ ಆಶ್ರಯವೇ ಆಕೆ. ಬಾಲ್ಯ ಮುಡಿ ಅಕ್ಕಿಯ ಅಶನಾರ್ಥ; ಇರಲು ಒಂದು ಮನೆ; ಮನೆಗೆ ತಾಗಿಕೊಂಡಿರುವ ತೋಟ; ಇವರಿಬ್ಬರ ಪಾಲಿನ ಎಲ್ಲಾ ಸಂಪತ್ತಾಗಿತ್ತು.

ಹೆಳ್ಳಿಯ ರುದ್ರಾಣಿ ಎಸ್. ಎಸ್. ಎಲ್. ಸಿ. ಮುಗಿಸಿದ ಬಳಿಕ ಒಂದು ವರ್ಷ ತಾಲೂಕು ಆಫೀಸಿನಲ್ಲಿ ಗುಮಾಸ್ತೆಯಾಗಿದ್ದಳು. ಅನಂತರ ಹೆಲ್ತ್ ವಿಸಿಟರ್ ಟ್ರೈನಿಂಗಿಗೆ ಸೇರಿಕೊಂಡು ಸೇವೆಯ ಆದರ್ಶದಿಂದ ತನ್ನ ಕೆಲಸವನ್ನು ಆರಂಭಿಸಿದ್ದಳು.

ತಾಯಿಯೊಡನೆ ತನ್ನ ಒಬ್ಬನೇ ಅಣ್ಣನ ಕೈಕಾಲು ಹಿಡಿದು ಅವನ ಮಗನಿಗೇರ ರುದ್ರಾಣಿಯನ್ನು ಕೊಡಲು ಪ್ರಯತ್ನಿಸುತಿದ್ದರು. ಕೃಷಿ ವಿಷಯದಲ್ಲಿ ಪದವೀಧರನಾದ ತನ್ನ ಮಗನಿಗೆ ಅನುಕೂಲವಂತ ಮನೆಯಿಂದ ಹುಡುಗಿಯನ್ನು ತರಬೇಕೆಂದು ರುದ್ರಾಣಿಯ ಮಾವ ಯೋಚಿಸುತಿದ್ದರು.

ತನ್ನ ತಾಯಿ ತನ್ನ ಬದುಕಿನ ಕುರಿತಾಗಿ ಹರಿಸು ಆಕ್ಕಿ ವಹಿಸುತಿದ್ದಳಾದರೂ ರುದ್ರಾಣಿಯ ತಲೆಯೊಳಗೆ ತಿರುಗುತಿದ್ದುದು ಸೇವೆಯೊಂದೇ. ಗಂಡಾರದ ಬಲೆಯಲ್ಲಿ ಸಿಕ್ಕು ತಾಯಿ ಪಟ್ಟ ಭವಣೆಗಳನ್ನು ತಾಯಿಯ ಬಾಯಿಯಿಂದ ಕೇಳಿ ಕೇಳಿದಾಗಲೆಲ್ಲಾ ಕಣ್ಣೀರು ಸುರಿಸಿದಾಕೆ. ಅಣ್ಣನಾದರೋ ತಮಗೆ ಕೊಡುವ ಬೆಲೆಯನ್ನು ಅರಿತಾಕೆ. ಹಾಗಾಗಿ ತಾಯಿಯ ಮಾತಿಗೆ ಸೇವಾಕಾರ್ಯದ ನೆಪಹೂಡುತ್ತ ಮುಂದೂಡುತ್ತಿದ್ದಳು. ಸಾಕಷ್ಟು ಸಂವಾದಿಸಿ ಒಂದು ನೆಲೆಗೆ ಬರುವ ಆಸೆಯನ್ನು ತಾಯಿಗೆ ತೋರಿಸುತ್ತಿದ್ದಳು.

ಒಂದು ದಿನ ಅವರ ಮೇಲಾಧಿಕಾರಿಗಳಾದ ಡಿ.ಎಚ್.ಒ. ಇನ್‌ಸ್ಪೆಕ್ಷನಿಗೆಂದು ಬಂದಿದ್ದರು. ರುದ್ರಾಣಿ ಅವರ ಕಣ್ಣಿಗೆ ಮೊದಲ ಬಾರಿಗೆ ಬಿದ್ದಳು. ಹಲವಾರು ಹೆಣ್ಣುಗಳನ್ನು ತನ್ನ ಮಗ್ಗಲಲ್ಲಿ ಮಲಗಿಸಿಕೊಂಡ ಅಭ್ಯಾಸದವರು. ರುದ್ರಾಣಿಯನ್ನು ಬಂಗ್ಲೆಗೆ ಬರವಾಡಿಕೊಂಡರು. ಕಾರಣತಿಳಿಯದ ರುದ್ರಾಣಿ ಪೇದೆಯನ್ನು ತನ್ನೊಡನೆ ಬರುವಂತೆಕೇಳಿಕೊಂಡಿದ್ದಳು.

ಸಂಜೆ ೫ ಗಂಟೆಗೆ ಹೋಗಿ ಕಾದು ಕುಳಿತ ರುದ್ರಾಣಿಗೆ ರಾತ್ರಿ ೮ ಗಂಟೆಗೆ ಕರೆ ಬಂತು.

"ಏನಮ್ಮಾ ಯಾವಊರವರು ನೀವು?' ರುದ್ರಾಣಿ ಹೇಳಿದಳು.

"ಓ..."

"... ... "

"ಈ ಊರು ಹೇಗೆನಿಸುತ್ತದೆ"

"ಚೆನ್ನಾಗಿದೆ"

"ಫ್ಯಾಮಿಲಿ ಪ್ಲಾನಿಂಗ್ ಅನುಸರಿಸುವಲ್ಲಿ ಹೆಂಗುಸರನ್ನು ಒಪ್ಪಿಸುವುದರಲ್ಲಿ ನೀವು ಬಹಳ ಸಹಾಯ ಮಾಡಬೇಕು"

"ಮಾಡುತ್ತಾ ಇದ್ದೇನೆ".

"ನಿಮ್ಮ ಹೆಸರಲ್ಲಿ ಕೇಸುಗಳೇ ಇಲ್ಲವಲ್ಲ.'

"ದಾಯಿಯ ಹೆಸರಲ್ಲೇ ಇರಲಿ ಎಂದು ಬಿಟ್ಟಿದ್ದೇನೆ. ನಾಲ್ಕು ಕಾಸು ಸಿಕ್ಕುವುದಾದರೆ ಅವರಿಗೆ ಸಿಗಲಿ"

"ನಿಮಗೆ ಬೇಡವೇ ಕಾಸು?"

"ಬೇಡವೆಂದಲ್ಲ ನನಗಿಂತಲೂ ಅವರಿಗೆ ಕಷ್ಟ ಹೆಚ್ಚು"

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ ೩% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಿ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೧೯	೧೧—೧—೧೯೬೮	No. 19

ಪರ್ಯಾಯ ಮಹೋತ್ಸವ

ಸನಾತನ ಭಾರತ ಹಲವಾರು ಪುಣ್ಯ ಜೀವಿಗಳಿಗೆ ಜನ್ಮವಿತ್ತ ಪಾವನ ನಾಡು. ವೇದಕಾಲದಿಂದಲೂ ನಮ್ಮ ದೇಶ ಇಡೀ ಜಗತ್ತಿಗೆ ಧಾರ್ಮಿಕ ಸಂದೇಶವನ್ನೂ ಆಧ್ಯಾತ್ಮಿಕ ಜೀವನದ ಸಾರ್ಥಕತೆಯನ್ನೂ ಸಾರಿ ಹೇಳಿದೆ. ಹಿಂದೂ ಧರ್ಮವು ಹಲವಾರು ಎಡರು ತೊಡರುಗಳನ್ನು ಎದುರಿಸಿದರೂ ಇಂದಿಗೂ ಒಂದು ಪ್ರಧಾನ ಧರ್ಮವಾಗಿ ಉಳಿದುಕೊಂಡು ಬಂದಿದೆ.

ಹಿಂದೂ ಧರ್ಮದ ಸಜೀವಕರಲ್ಲಿ ಅಗ್ರಗಣ್ಯರೆನಿಸಿಕೊಂಡವರು ದ್ವೈತ ಮತ ಸಂಸ್ಥಾಪನಾಚಾರ್ಯ ಮಧ್ವಾಚಾರ್ಯರು. ಅವರು ತಮ್ಮ ಅಗಾಧವಾದ ಪಾಂಡಿತ್ಯ ಹಾಗೂ ಪ್ರತಿಭೆಗಳಿಂದ ತಾನು ಅಖಿಲ ಭಾರತ ಪ್ರಸಿದ್ಧಿಯ ಯತಿವರರಾದುದಲ್ಲದೆ, ಉಡುಪಿಯನ್ನು ಅಖಿಲ ಭಾರತ ಖ್ಯಾತಿಯ ಒಂದು ಯಾತ್ರಾಸ್ಥಳ ಹಾಗೂ ಧಾರ್ಮಿಕ ಕೇಂದ್ರವನ್ನಾಗಿ ಮಾಡಿರುತ್ತಾರೆ. ಉಡುಪಿ 'ಶ್ರೀಕೃಷ್ಣನ ಉಡುಪಿ'ಯೆನಿಸಿಕೊಂಡುದೂ ಅವರ ಕಾಲದಲ್ಲಿ.

ಮಧ್ವಾಚಾರ್ಯರಿಂದ ಬೆಳಕಿಗೆ ಬಂದ ಉಡುಪಿ, ಇಂದು ದ್ವೈತ ಮತ ಸಿದ್ಧಾಂತದ ಕೇಂದ್ರವಾಗಿದೆ. ಅಷ್ಟ ಮಠದ ಯತಿಗಳಿಂದ ಲೂ ಶ್ರೀಕೃಷ್ಣನ ದೇವಾಲಯದಿಂದಲೂ ಈ ಕ್ಷೇತ್ರ ಸಾವಿರಾರು ಭಕ್ತ ಜನರಿಗೆ ಆಧಾರಣೀಯವಾಗಿ ಪರಿಣಮಿಸಿದೆ. ಜನಮನ ರಂಜಿಸುವ ಹಾಗೂ ಅದ್ದೂರಿಯ ವೈಭವದಿಂದಎಂಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯ ಮಹೋತ್ಸವವು ಒಂದು ಅಪೂರ್ವವಾದ ಹಬ್ಬವೆನಿಸಿಕೊಂಡಿದೆ ಈ ನಾಡಿನಲ್ಲಿ.

ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಈ ಪರ್ಯಾಯ ಮಹೋತ್ಸವ ಕಾರ್ಯಕ್ರಮ ಇಂದಿಗೂ ಚಾಚೂ ತಪ್ಪದೆ ಶ್ರದ್ಧಾಭಕ್ತಿಯಿಂದ ನಡೆದು ಬರುತ್ತಿದೆ. ಉಡುಪಿಯ ಶ್ರೀಕೃಷ್ಣನ ಪೂಜಾದಿಗಳನ್ನು ನಿರ್ವಹಿಸುವ ಅಧಿಕಾರವನ್ನು ಒಬ್ಬರು ಮಠಾಧೀಶರು ಇನೊಬ್ಬರಿಗೆ ಬಿಟ್ಟು ಕೊಡುವ ಮಾರಂಭವೇ ಪರ್ಯಾಯ. ಈ ಉತ್ಸವ ನಮ್ಮ ದೇಶದಲ್ಲೇ ಒಂದು ಅಪೂರ್ವ ಸಮಾರಂಭ.

ಅದರಲ್ಲೂ ಇದೇ ತಾ. 18ರಂದು ನಡೆಯುವ ಪರ್ಯಾಯ ಮಹೋತ್ಸವಕ್ಕೆ ಎಲ್ಲೆಲ್ಲಿದ ಕಳೆ ಬಂದಿದೆ. ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಈ ಬಾರಿ ಪರ್ಯಾಯ ಪೀಠವನ್ನೇರಲಿದ್ದಾರೆ. ಹದಿನಾಲ್ಕು ವರ್ಷಗಳ ಹಿಂದೆ ಮೊದಲಬಾರಿಗೆ ಪರ್ಯಾಯ ಪೀಠವನ್ನೇರಿದ್ದ ಶ್ರೀಗಳು ತಮ್ಮ ಪೂಜಾ ಅವಧಿಯಲ್ಲಿ ಅತ್ಯುತ್ಕೃಷ್ಟವಾದ ಸಂಪ್ರದಾಯಗಳನ್ನು ಹಾಕಿಕೊಟ್ಟು ಆದರ್ಶವನ್ನು ತೋರಿಬರು. ಅವರು ತಮ್ಮ ಸಾತ್ವಿಕತೆ ಹಾಗೂ ಶುದ್ಧಿಗಳಿಂದ ತಮ್ಮ ಪರ್ಯಾಯ ಕಾಲವನ್ನು ಜನ ಮೆಚ್ಚುವ ರೀತಿಯಲ್ಲಿ ಕಳೆದರು. ತಮ್ಮ ನಿರಾಡಂಬರ ವ್ಯಕ್ತಿತ್ವ ಹಾಗೂ ಆದರ್ಶಗಳಿಂದ ಎಲ್ಲರ ಪ್ರೀತಿಗೆ ಪಾತ್ರರಾದರು.

ಪರ್ಯಾಯ ಪೀಠ ತ್ಯಜಿಸಿ ನಂತರದ ಈ ಹದಿನಾಲ್ಕು ವರುಷಗಳಲ್ಲಿ ಅವರು ಅಖಿಲ ಭಾರತ ವ್ಯಾಪ್ತಿಯ ವ್ಯಕ್ತಿತ್ವ ಹೊಂದಿರುತ್ತಾರೆ. ಅವರು ದ್ವೈತ ಮತ ಪ್ರಸಾರದ ಜೊತೆಗೇಹಿಂದೂ ಧರ್ಮದ ಪುನರುತ್ಥಾನಕ್ಕೆ ದುಡಿದರು. ಸಂಸ್ಕೃತ ಭಾಷಾ ಅಭ್ಯಾಸ ಕೇಂದ್ರಗಳನ್ನು ತೆರೆದು ಅದರ ಉಳಿವಿಗೆಗೆ ಕಾರಣರಾದರು. ಅಲ್ಲಲ್ಲಿ ವಿದ್ಯಾರ್ಥಿ ಭವನಗಳನ್ನು, ಪೂಜಾ ಮಂದಿರಗಳನ್ನು ತೆರೆದು ಜನಮನವನ್ನು ಗೆದರು. ಸ್ವತಃ ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಗಳಿಸಿದವರೂ, ವಾಗ್ಮಿಗಳೂ ಆದ ವಿಶ್ವೇಶ ತೀರ್ಥರು ತಮ್ಮ ಭಾಷಣಗಳಿಂದ ಹಿಂದೂ ಧರ್ಮದ ರಕ್ಷಣೆಗೆ ನೆರವಾಗಿ ನಿಂತರು; ದುಡಿದರು.

ವಿಶ್ವೇಶ ತೀರ್ಥರು ಆಧುನಿಕ ಪ್ರಜ್ಞೆಯ ಯತಿವರರು. ಅವರು ಇಂದು ತನ್ನ ಕಾರ್ಯಕ್ಷೇತ್ರವನ್ನು ಕೇವಲ ದ್ವೈತ ಮತ ಪ್ರಸಾರಕ್ಕೆ ಮಾತ್ರ ಸೀಮಿತಗೊಳಿಸಿಲ್ಲ. ಅವರು ದೇಶದ ಸಮಸ್ಯೆಗಳ ಕುರಿತು, ಜನರ ಕಷ್ಟಕಾರ್ಪಣ್ಯಗಳ ಕುರಿತು, ತಾಯ್ನಾಡಿನ ಏಳಿಗೆಯ ಕುರಿತು ಸದಾ ಚಿಂತಿಸುತ್ತಲೇ ಇರುತ್ತಾರೆ. ತಮ್ಮ ವಿಚಾರಪೂರಿತ ಭಾಷಣ ಹಾಗೂ ಲೇಖನಗಳ ಮೂಲಕ ತಮ್ಮ ದೇಶದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡಿದ್ದಾರೆ. ಬದಲಾಗುತ್ತಿರುವ ಈ ಜಗತ್ತಿನೊಂದಿಗೆ ತಾನೂ ಬದಲಾಗಿ, ಧಾರ್ಮಿಕತೆಯನ್ನು ಬೆಡದೆ ಆಧುನಿಕತ್ವ ತಂದ ಅಪೂರ್ವ ವ್ಯಕ್ತಿತ್ವ ಶ್ರೀ ವಿಶ್ವೇಶತೀರ್ಥರದು.

ಪೂಜ್ಯ ಶ್ರೀ ಶ್ರೀಗಳ ಈ ಬಗೆಯ ವ್ಯಕ್ತಿತ್ವ, ಕಾರ್ಯಗಳು ಅವರನ್ನು ಇಂದು ಎಲ್ಲರೂ ಕೊಂಡಾಡುವಂತೆ ಮಾಡಿವೆ. ಅವರು ಇಂದು ಕೇವಲ ದ್ವೈತ ಮತಾನುಯಾಯಿಗಳಿಗೆ ಮಾತ್ರ ಪೂಜ್ಯರಲ್ಲ, ಸಮಸ್ತ ಹಿಂದೂ ಜನಾಂಗದ ಆದರ ವ್ಯಕ್ತಿತ್ವಕ್ಕೆ ಮಾರು ಹೋಗಿದೆ. ಅವರ ಮೇಲೆ ಊರಿನ, ಪರವೂರಿನ ಜನ ತೋರಿಸುವ ವಿಶೇಷ ಭಕ್ತಿ ಹಾಗೂ ಗೌರವಗಳು ಈ ಬಾರಿಯ ಪರ್ಯಾಯಕ್ಕೆ ಇಷ್ಟಿಷ್ಟಿದೆ ಮೆರುಗು ಕೊಟ್ಟಿವೆ.

ಈ ಬಾರಿಯ ಪರ್ಯಾಯ ಮಹೋತ್ಸವವನ್ನು ಪ್ರಶಸ್ತಿಕರವಾಗೂ ಸಂಘಟಿತ ರೀತಿಯಲ್ಲಿ ಜರಗಿಸಬೇಕೆಂದು ಉಡುಪಿಯಲ್ಲಿ ಈಗಾಗಲೇ ಜನ ತಾವಾಗಿಯೇ ಮುಂದೆ ಬಂದು ದುಡಿಯುವ ಪಣತೊಟ್ಟಿದ್ದಾರೆ. ಇದು ಶ್ರೀ ವಿಶ್ವೇಶ ತೀರ್ಥರ ಜನಪ್ರಿಯತೆಗೆ ನಿದರ್ಶನ.

ಪರ್ಯಾಯ ಪೀಠವನ್ನು ತ್ಯಜಿಸಲಿರುವ ಶ್ರೀ ಕಾಣಿಯೂರು ಮಠಾಧೀಶರು ತಮ್ಮ ಎರಡು ವರ್ಷಗಳ ಪೂಜಾ ಅವಧಿಯಲ್ಲಿ ಉದಾರವಾದ ಜನ ಮನ್ನಣೆಗಳಿಸಿ, ಹೆಸರು ಪಡೆದಿದ್ದಾರೆ. ಸಂಸ್ಕೃತ ಅಭ್ಯಾಸ ಕಳೆ, ಸಂಗೀತಗಳಿಗೆ ಅವರಿತ್ತ ಪ್ರೋತ್ಸಾಹ ಅನುಪಮವಾದುದು. ತಮ್ಮ ಪ್ರಥಮ ಪರ್ಯಾಯದ ಅವಧಿಯಲ್ಲಿ ಅವರು ಅನೇಕ ಅನ ಕಾರ್ಯಗಳು ಪ್ರಮುಖ ಸ್ಥಿಗಳನ್ನು ಮಾಡಿರುತ್ತಾರೆ.

ಪೂಜ್ಯ ಶ್ರೀಗಳ ವರ್ಷದ ಅಧಿಕಾರ ತ್ಯಾಗ ಹಾಗೂ ಸ್ವೀಕಾರದ ಈ ಕಾಲದಲ್ಲಿ ನವಯುವಕ ಅವರಿಗೆ ತನ್ನ ಭಕ್ತಿಯ ರಸ್ಸವಾದ ಕೃತಜ್ಞತೆಗಳನ್ನು ಅರ್ಪಿಸುವುದರೊಂದಿಗೆ, ಮುಂದಿನ ಪರ್ಯಾಯ ಶ್ರೀಗಳು ಯಶಸ್ವಿಯಾಗಿ ತಮ್ಮ ಕಾರ್ಯಕ್ರಮಗಳನ್ನು ನಿರ್ವಹಿಸಿ, ಉಡುಪಿಯ ಕೀರ್ತಿ ಇನ್ನಷ್ಟು ಬೆಳಗಲಿ ಎಂದು ಪ್ರಾರ್ಥಿಸುತ್ತದೆ.

> **ವಚನ ಸುಧೆ**
>
> ನ ದೇ ರಾತ್ರೌ ಸುಖಂ ಕೇಚಿತ್
> ನ ಸರ್ಪ ಇವ ವೇಶ್ಮನಿ
> ಯಃ ಕೋಪಯತಿ ನಿರ್ದೋಷಂ
> ನಿರ್ದೋಷೋಽಭ್ಯಂತರಂ ಜನಮ್॥
>
> ತಾನೇ ದೋಷಿಯಿದ್ದು ನಿರ್ದೋಷಿ ಆತ್ಮೀಯ ವ್ಯಕ್ತಿಯನ್ನು ರೊಚ್ಚಿಗೇಳಿಸುವವನು ಸರ್ಪವಾಸವಿರುವ ಮನೆಯಲ್ಲಿ ನೆಲಸುವವನಂತೆ ರಾತ್ರಿ ಸುಖವಾಗಿ ನಿದ್ರಿಸಲಾರನು.

ಶ್ರೀ ಪೂರ್ಣಪ್ರಜ್ಞಾಚಾರ್ಯರ
ಮೂಲಸಿಂಹಾಸನಾರೋಹಣ ಮಾಡಲಿರುವ

ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು

ಧರ್ಮಪ್ರಜಾರ ಹಾಗೂ ಶ್ರೀಕೃಷ್ಣನ ಪೂಜಾ ವಿನಿಯೋಗಾದಿಗಳಿಗಾಗಿ ಶ್ರೀ ಮನ್ಮಧ್ವಾಚಾರ್ಯರು ಸುಮಾರು ೬೦೦ ವರ್ಷಗಳಷ್ಟು ಹಿಂದೆ ಉಡುಪಿಯಲ್ಲಿ ನೇಮಿಸಿದ ಎಂಟು ಮಂದಿ ಬಾಲ ಸನ್ಯಾಸಿಗಳಲ್ಲೊಬ್ಬರಾದ ಶ್ರೀ ಪೇಜಾವರ ಮಠದ ಶ್ರೀ ಅಧೋಕ್ಷಜ ತೀರ್ಥ ಶ್ರೀಪಾದಂಗಳವರ ಪರಂಪರೆಯಲ್ಲಿ ಮೂವತ್ತನಾಲ್ಕನೆಯವರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಪೂರ್ವಾಶ್ರಮದ ಹೆಸರು ನೆಂಕಟಿಗ ಮಣಾಚಾರ್ಯ ರಾಮಕುಂಜ ಎಂಬಲ್ಲಿ, ತಂದೆ ಶ್ರೀ ನಾರಾಯಣಾಚಾರ್ಯ, ತಾಯಿ ಶ್ರೀಮತಿಶಕ ಲಕ್ಷ್ಮಾತರುಗಳಿಗೆಸುದ್ದಿನ ಕುವರನಾಗಿ ತಾ. 21-4-1931 ರಲ್ಲಿ ಜನಿಸಿದರು. ತಮ್ಮ ಏಳನೇ ವರ್ಷ ಪ್ರಾಯದವ್ಯಯೇ ಆಗಿನ ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವಮಾನ್ಯ ತೀರ್ಥ ಶ್ರೀಪಾದಂಗಳವರಿಂದ ಸನ್ಯಾಸ ದೀಕ್ಷೆಯನ್ನು ಸ್ವಪ್ರೇರಣೆಯಿಂದ ಪಡೆದುಕೊಂಡು ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಎಂಬ ನಾಮಾಂಕಿತರಾದರು.

ಸಂಸ್ಕೃತ ಹಾಗೂ ಸಾಹಿತ್ಯ ತರ್ಕ ವೇದಾಂತಶಾಸ್ತ್ರಗಳನ್ನು ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರಿಂದ ಶಾಸ್ತ್ರೀಯವಾಗಿ ಮತ್ತು ಸಮಗ್ರವಾಗಿ ದೊರಕಿದುದರಿಂದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಪಾಂಡಿತ್ಯ ಉಜ್ವಲವಾಗಿ ಬೆಳಗಿತು. ಗುರು-ಶಿಷ್ಯರು ಒಬ್ಬರನ್ನೊಬ್ಬರು ಅರಿತುಕೊಂಡು ವಿದ್ಯಾರ್ಜನೆ ಮಾಡಿಕೊಂಡರೆ ಎಂತಹ ಕ್ಲಿಷ್ಟವಾದ ಸಮಸ್ಯೆಯ ಪರಿಹಾರವನ್ನು ಅರಿಯಬಹುದೆಂಬುದಕ್ಕೆ ಉದಾಹರಣೆ ಶ್ರೀ ಶ್ರೀಗಳವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ನಾಧಿಸಿ ತೋರಿಸಿದ್ದಾರೆ.

ಶ್ರೀ ಶ್ರೀಗಳವರು 1952ರಲ್ಲಿ ತಮ್ಮ ಮೊದಲ ಪರ್ಯಾಯವನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಅಲ್ಲದೆ ತಮ್ಮ ಪರ್ಯಾಯ ಕಾಲದಲ್ಲಿ 1953ರಲ್ಲಿ ಅಖಿಲ ಭಾರತ ಮಾಧ್ವ ತತ್ತ್ವಜ್ಞಾನ ಸಮ್ಮೇಲನವನ್ನು ಜರುಗಿಸಿ ಮಾಧ್ವ ಪಂಥದ ಎಲ್ಲ ಪೀಠಾಧಿಪತಿಗಳನ್ನು ಒಂದೆಡೆ ಕರೆಯಿಸಿ ಮಾಧ್ವ ತತ್ವದ ವಿವೇಚನೆ ಮಾಡಿಸಿದ್ದಾರೆ. ಅಖಿಲ ಭಾರತ ಮಾಧ್ವ ಮಹಾಮಂಡಳವನ್ನು ಸ್ಥಾಪಿಸಿ ಆಗಾಗ್ಗೆ ಅಲ್ಲಲ್ಲಿ ಸಮ್ಮೇಲನವನ್ನೂ ಜರುಗಿಸುತ್ತಿದ್ದಾರೆ. ಇಂತಹ ಸಮ್ಮೇಲನವು ಈಗಾಗಲೇ ಅರು ಬಾರಿ ಜರುಗಿದೆ. ಶ್ರೀ ಶ್ರೀಗಳವರು ಈ ಮಂಡಳದ ಅಧ್ಯಕ್ಷರಾಗಿದ್ದಾರೆ. ಮಂಡಳದ ಮುಖ್ಯ ಕಛೇರಿಯು ಬೆಂಗಳೂರಿನಲ್ಲಿದೆ.

ಬೆಂಗಳೂರಿನ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ಮತ್ತು ಶ್ರೀಕೃಷ್ಣ ಸೇವಾಶ್ರಮ ಶ್ರೀ ಶ್ರೀಗಳವರಲ್ಲಿರುವ ಧಾರ್ಮಿಕ ಪ್ರಜ್ಞೆಯ ಸಂಕೇತವಾಗಿದೆ. ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಕುಲಪತಿಗಳೂ, ಶ್ರೀಕೃಷ್ಣ ಸೇವಾಶ್ರಮದ ಅಧ್ಯಕ್ಷರೂ ಆಗಿದ್ದಾರೆ. ಮಂಗಳೂರಿನಲ್ಲಿ ಸಂಸ್ಕೃತಿ ಮಂದಿರವನ್ನು ಸ್ಥಾಪಿಸಿರುತ್ತಾರೆ.

ಶ್ರೀ ಶ್ರೀಗಳವರು ತಮ್ಮ ಬಾಲ್ಯದ ಸ್ಥಿತಿಯಿಂದಲೂ ಧರ್ಮದ ಬಗ್ಗೆ ಇಷ್ಟೆಯ

(ಹತ್ತನೇ ಪುಟ ನೋಡಿರಿ)

ಮುಖಚಿತ್ರ

ತಾ. 18—1—68ರಂದು ಪರ್ಯಾಯ ಪೀಠವನ್ನೇರಲಿರುವ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

ವಿಜಾರ—ಮಂಥನ

ಯಕ್ಷಗಾನ ಕಲೆಯ ಕುರಿತು ಹಂಬಲ

ಲೇಖಕರು: — ಶ್ರೀ ವಾಸುದೇವ ನಾಯಕ್

ವಿಶಾಲ ಕರ್ನಾಟಕದಲ್ಲಿ ವಿಖ್ಯಾತವಾಗಿ ಹೆಸರು ಗಳಿಸಿಕೊಂಡು ಮೆರೆಯುವ ಜಾನಪದ ಕಲೆಯನ್ನಿಸಿದ ಯಕ್ಷಗಾನದ ಹುಟ್ಟಿಗೆ ಮೂಲ-ದಕ್ಷಿಣ ಕನ್ನಡ ಜಿಲ್ಲೆ. ಅಲ್ಲಿರುವ ಬಹು ಮಂದಿ ಕಲಾರಾಧಕರು ಶತಮಾನಗಳ ಕಾಲದಿಂದ ಆರಾಧಿಸಿ ಬಂದುದರಿಂದ ಈ ಕಲೆಯು ಜೀವಂತ ಕಲೆಯಾಗಿ ಬಹು ಮಂದಿಗಳಿಗೆ ರಕ್ತಗತವಾಗಿ—ಜೀವನದಲ್ಲಿ ಹಾಸು ಹೊಕ್ಕಾಗಿ ತನ್ನಿಂದ ತಾನೇ ಉಜ್ವಲವಾಗಿ ಬೆಳೆದು ಬಂದಿತು ಜಿಲ್ಲೆಗೆನೇ ಹೆಸರು ತಂದಿರುವುದು ಅತ್ಯಾನಂದದ ವಿಚಾರವಾಗಿದೆ. ಈ ಕಲೆಯು ವಿಶಾಲ ಕೀರ್ತಿಗೆ ಉತ್ತರ ಕನ್ನಡದ ಕಲಾವಿದರೂ, ಕೇರಳದಲ್ಲಿರುವ ಕನ್ನಡ ಭಿಮಾನಿಗಳೂ, ಧಾರವಾಡ, ಶಿವಮೊಗ್ಗಾ, ಮೈಸೂರು, ಬೆಂಗಳೂರು, ಬೊಂಬಾಯಿ ಮುಂತಾದೆಡೆಯ ಮಹಾನುಭಾವರೂ, ಕಲಾಕೋಕಿಲರೂ ಕಾರಣರೆಂಬುದನ್ನೂ ನಾವೆಲ್ಲರೂ ಒಪ್ಪಲೇಬೇಕು. ಆದರೆ ಬೇಸರವಿಷ್ಟೆ. ಈ ಯಕ್ಷಗಾನ ಕಲೆಯು ರಾಜ್ಯದಾದ್ಯಂತ—ರಾಷ್ಟ್ರದಾದ್ಯಂತ ಸರ್ವವ್ಯಾಪಿಯಾಗಿ ಕೀರ್ತಿಗಳಿಸುವ ಸುದಿನವನ್ನು ನಾವೆಂದು ಕಂಡೇವು? ಅರಿತಿಯ ಮನ್ನಣೆ ಹೊಂದಲು ಯಾವ ಪ್ರಯತ್ನಗಳು ಅವಶ್ಯ ಎಂಬ ಕುರಿತು ಇಲ್ಲಿ ನಾನು ತಿಳುವಳಿಕೆ ಹೊಂದಿದ ಕೆಲ ಬಲ್ಲವರ ಅಭಿಪ್ರಾಯಗಳನ್ನು ವಾಚಕರ ಮುಂದಿರಿಸಿದ್ದೇನೆ.

ಈ ಹಿಂದೆ ಜಿಲ್ಲೆಯಲ್ಲಿ ಯಕ್ಷಗಾನ ಕ್ಕಾಗಿ ಹೋರಾಡಿ ದುಡಿದು ಕಲಾ ಪ್ರಾಥಿಮೆಯಿಂದ ಜನರನ್ನು ದಂಗುಬಡಿಸಿ ಕೀರ್ತಿಶೇಷರಾದ ಡಿ. ಕವಿಭೂಷಣ ವೆಂಕಪ್ಪ ಸೆಟ್ಟಿ; ಅರ್ಕುಳ ಸುಬ್ರಾಯಾಚಾರಿ; ನಾರಾಯಣ ಕೆಲ್ಲೆ; ಒಡೆಯರು, ರಂಗಪ್ಪಯ್ಯ, ಬಾಣಣ್ಣ ಶೆಣೈ ಮುಂತಾದ್ಯನೇಕ ಕಲಾ ಪಟ್ಟಿಗಳನ್ನು ನಾವೆಲ್ಲರೂ ಸ್ಮರಿಸಬೇಕಾಗಿದೆ. ಭಾಗವತಿಗೆಯಲ್ಲಿ ಪರಿಣಿತರಾದ ಬಲಿಪ ನಾರಾಯಣ ಭಾಗವತರು, ಸೈಂದಪ್ಪ ರೈ, ದಾಸ ಭಾಗವತರು, ಕಂಡಚ್ಚರು, ವಂಜುನಾಥ ಭಾಗವತರು, ಇತ್ಯಾದಿ ಮಹನೀಯರನ್ನು ಸ್ಮರಿಸಬೇಕಾಗಿದೆ.

ಪ್ರಸಂಗಗಳನ್ನು ರಚಿಸಿ ಮಾರ್ಗದರ್ಶನ ನೀಡಿದ ಮಹಾನುಭಾವರಲ್ಲಿ ಪ್ರಥಮ ಸ್ಥಾನ ಪಾತ್ರಿ ಸುಬ್ಬನವರಿಗೆ ಸಲ್ಲಬೇಕು; ಅದೇ ಕವಿ ಪರಂಪರೆಯಲ್ಲಿ ದೇವಿದಾಸ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುದ್ದಣ ಮೊದಲಾದ ಸರ್ವ ಮಹನೀಯರನ್ನೂ ಸಂದಿಸಬೇಕಾಗಿದೆ.

ಇತ್ತೀಚೆಗೆ ಹೆಸರುವಾಸಿಯಾಗಿ ಖ್ಯಾತಿಪೆತ್ತ ಶ್ರೀಮಾನ್ ಮೊಳಲಿ ಶಂಕರನಾರಾಯಣ ಶಾಸ್ತ್ರಿಗಳು, ಎಡ್ವೋಕೇಟ್ ಬಾಲಕೃಷ್ಣ ರಾಯರು, ಶ್ರೀಶ್ರೀಣಿ ಗೋಪಾಲಕೃಷ್ಣ ಭಟ್; ಹಂದಾಸರು, ಕುರ್ಯ ವಿಠಲ ಶಾಸ್ತ್ರಿಗಳು, ದೇರಾಜೆ ಸೀತಾರಾಮಯ್ಯನವರು, ಪೆರ್ಲ ಕೃಷ್ಣ ಭಟ್ಟರು, ಕೆ.ಕೆ.ರೈಯವರು, ಶಂಕರನಾರಾಯಣ ಸಾಮಗರು, ರಾಮದಾಸ ಸಾಮಗರು, ಕುಂಬಳೆ ನಾರಾಯಣ ಹೆಗ್ಡೆಯರು, ಕುಂಬಳೆ ಸುಂದರನವರು ಇನ್ನೂ ಬಹು ಮಂದಿ ಕಲಾಕೋವಿದರು ಈಗಲೂ ಈ ಕಲೆಯ ಮೇಲಿನ ಅಭಿಮಾನದಿಂದ ಈ ಕಲಾದೇವಿಯ ಸೇವೆ ಮಾಡುತ್ತಾ ಯಥಾಶಕ್ತಿ ಮಾಡಿ-ಬಹು ಮಂದಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಹಿಂದೊಮ್ಮೆ ಶ್ರೀಮಾನ್ ಬಾಲಕೃಷ್ಣರಾಯರು ಯಕ್ಷಗಾನ ಕಲಾರಾಧಕರ—ಕವಿಗಳ ಪ್ರಸಂಗಗಳನ್ನು ಶೇಖರಿಸಿ ಅ ಕುರಿತು ವಿವೇಚಿಸಿ ಒಂದು ಅಧಿವೇಶನವನ್ನು ಮಾಡಿ ಈ ಕಲೆಯನ್ನು ರಚನಾತ್ಮಕವಾಗಿ ಪುನರ್ಭಿಟಿಸಬೇಕೆಂದು ಪ್ರಯತ್ನಿಸಿದ್ದರು. ಆದರೆ ಆ ಪ್ರಯತ್ನವು ಸಂಪೂರ್ಣ ಯಶಸ್ವಿಯಾಗಲಿಲ್ಲ. ಅವರ ಕರೆಗೆ ಸಾಮೂಹಿಕ್ಕಬೆಂಬಲ ದೊರಕದಿದ್ದುದೇ ಕಾರಣವೆಂದು ಊಹಿಸಬಹುದು. ಹಳೇ ಪ್ರಸಂಗಗಳನ್ನು ಹುಡುಕಿ ತಾಡವಾಲೆಗಳಿಂದ ಸಂಗ್ರಹಿಸಿ ವಿಜ್ಞಾನ ದೃಷ್ಟಿಯಿಂದ ಶ್ರೀ ವೆಂಕಟರಾಯಾಚಾರ್ಯರು ಸುರತ್ಕಲಿನಿಂದ ಪ್ರಕಟಪಡಿಸಿ ಈ ಕಲಾದೇವಿಯ ಸೇವೆ ಮಾಡುತಿದ್ದಾರೆ. ಕಡತೋಕ ಮಂಜುನಾಥ ಭಾಗವತರು ಆಗಾಗ ಯಕ್ಷಗಾನದ, ಪರವಾಗಿ ಲೇಖನಗಳನ್ನು ಬರೆದು ವಿಚಾರ ವಿನಿಮಯಕ್ಕಾಗಿ ಕರೆ ಕೊಡುತ್ತಿದ್ದಾರೆ. ಯಕ್ಷಗಾನ ಪತ್ರಿಕೆಯನ್ನು ನಡೆಸುತ್ತಿದ್ದರು. ಯಕ್ಷಗಾನದಲ್ಲಿ ನಾವೀನ್ಯತೆಗಳನ್ನು ಅಳವಡಿಸಿಕೊಂಡು ಮನರಂಜನೆಯ ಮಹದುದ್ದೇಶ ಸೂರೈಸುವ ಕಾರ್ಯಭಾಗದಲ್ಲಿ ಜಿಲ್ಲೆಯ ಖ್ಯಾತಿಪೆತ್ತ ದಶಾವತಾರ ಮೇಳಗಳು ಬಹುಮುಖಗಳ ಪ್ರತಿಭೆಯಿಂದ ಚಿರಕಾಲ ಉಳಿಯುವಂತೆ ಸೇವೆ ಸಲ್ಲಿಸಿ ದುಡಿಯುತಿದ್ದಾರೆ.

ಶಿಶಿಲದ ಶ್ರೀಮಾನ್ ಸೀತಾರಾಮ ಕೆದಿಲಾಯರು ಯಕ್ಷಗಾನ ಛಂದಸ್ಸು ಎಂಬ ಚಿಕ್ಕ ಪೊತ್ತಿಗೆ ಮುದ್ರಿಸಿ ಯಕ್ಷಗಾನಕ್ಕೂ ಒಂದು ಕ್ರಮವಿದೆ ಎಂಬ ಪ್ರಥಮ ಪಾಠ ಜನತೆಯ ಮುಂದಿರಿಸಿದ್ದಾರೆ. ಸೀತಾನದಿ ಗಣಪಯ್ಯ ಸೆಟ್ಟರು ಐತಿಹಾಸಿಕ ಇತ್ಯಾದಿ ನೂತನ ಪ್ರಸಂಗಗಳನ್ನು ರಚಿಸಿ ಈ ದೇವಿಗೆ ಕಾಣಿಕೆಯಾಗಿ ಸಮರ್ಪಿಸಿ ದುಡಿಯುತಿದ್ದಾರೆ.

ಇವೆಲ್ಲಕ್ಕೂ ಕಲಶ ಪ್ರಾಯವಾಗಿ ಕನ್ನಡ ನಾಡಿನ ಹಿರಿಯ ಲೇಖಕರೂ ವಿಚಾರ ಪೂರ್ಣರೂ ಆದ ಶ್ರೀಮಾನ್ ಶಿವರಾಮ ಕಾರಂತರವರು ಯಕ್ಷಗಾನ ಕಲೆಯ ಕುರಿತು ಗ್ರಂಥವೊಂದನ್ನು ಕರುಣಿಸಿ ಪಾಶ್ಚಾತ್ಯ ಜನಾಂಗಕ್ಕೂ ಈ ಕಲೆಯ ಪರಿಚಯ ನೀಡಿ ಮಹೋನ್ನತ ಸೇವೆ ನಡೆಸಿದ್ದಾರೆ.

ಕಡಂದಲೆ ರಾಮರಾಯರಿಂದ ಪರಿಶೀಲಿಸಲ್ಪಟ್ಟು ಅಚ್ಚಾದ ಕೃತಿಗಳು ಅಪಾರವಿವೆ. ಗುಪ್ತವಾಗಿದ್ದು ಎಲೆಯ ಮರೆಯ ಕಾಯಿಗಳಂತೆ ಸೇವೆ ಸಲ್ಲಿಸಿ ಈ ಕಲೆಯು ಬಹುಕಾಲ ಬಾಳುವಂತೆ ಅಳಿದುಡಿಯುವ ಹಿರಿಯ ಕಿರಿಯ ಕಲೋಪಾಸಕರು ಬಹು ಸಂಖ್ಯೆಯಲ್ಲಿದ್ದಾರೆ.

ಈ ಕಲೆಯ ಸರ್ವತೋಮುಖ ಏಳಿಗೆಗಾಗಿ ಕೆಲ ವರ್ಷಗಳ ಹಿಂದೆ ಬದಿಯಡ್ಕದಲ್ಲಿ ಯಕ್ಷಗಾನ ಪರಿಷತ್ತು ಶ್ರೀಮಾನ್ ಪಾಂಡೇಶ್ವರರವರ ಅಧ್ಯಕ್ಷತೆಯಲ್ಲಿ ಜರಗಿ ಪಂಡಿತ ಪ್ರಾಮುಖರಾದಿ ಬಹು ಸಂಖ್ಯೆಯ ಮಹಾಸಭೆಯಲ್ಲಿ ಕಲೆಯ ಕುರಿತು ವಿಚಾರ ವಿನಿಮಯ, ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ದಿವಂಗತ ಮಂಜೇಶ್ವರ ಗೋವಿಂದ ಪೈಗಳವರೂ ಆಗಾಗ ಪೌರಾಣಿಕ-ಐತಿಹಾಸಿಕ ಆಧಾರಗಳನ್ನು ನೀಡಿ ಈ ಕಲಾ ವೃದ್ಧಿಕ್ಕೆ ನೀರೆರೆದು ಪೋಷಿಸಿದ್ದಾರೆ.

ನಾಡಿನಾದ್ಯಂತ ವಿಪುಲವಾದ ಯಕ್ಷಗಾನ ಸಂಘಗಳು ಜಾಗೃತವಾಗಿದ್ದು ಕಲಾ ದೇವಿಯನ್ನಾರಾಧಿಸಿ ಸೇವೆಸಲ್ಲಿಸುತಿದ್ದಾರೆ. ಕಾಂಜನದ ಸಂಗೀತ ಪೀಠವರು ಯಕ್ಷಗಾನಕ್ಕೆ ಅಪಾರ ಸೇವೆ ಸಲ್ಲಿಸುತ್ತಾ ಇದ್ದಾರೆ. ಮಠಾಧಿಪತಿಗಳೂ, ತುಂಬಾ ಆಸ್ಥೆಯಿಂದ ಈ ಕಲೆಗೆ ಪ್ರೋತ್ಸಾಹ ನೀಡುತ್ತಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳಾಧಿಕಾರಿಗಳಾಗಿ ವರ ಜಿಸಿದ್ದು, ಕೀರ್ತಿ ಶೇಷರಾದ ಹಿಂದಿನ ಖಾವಂದರು ಮೈಸೂರಲ್ಲಿ ಬಿಡಾರ ಕೃಷ್ಣಪ್ಪನವರ ಕಾಲದಿಂದಲೂ ಯಕ್ಷಗಾನದ ಭೇರಿ ಮೊಳಗಿಸಿದ್ದಾರೆ. ಆ ಮೇಲೆ ಪಟ್ಟಕ್ಕೆ ಬಂದ ನಮ್ಮ ಕಾಲದಲ್ಲಿಯೇ ನಾವು ಕಂಡು ಮಾತನಾಡುವ 'ಮಂಜುನಾಥ' ಎಂಬಭಿಧಾನ ಪಡೆದ ರಾಜರ್ಷಿ ಡಿ. ಶ್ರೀ ಮಂಜಯ್ಯ ಹೆಗ್ಡೆಯವರು ಯಕ್ಷಗಾನ ಕಲಾಭಿವೃದ್ಧಿಗೆ ಜಿಲ್ಲೆಯಲ್ಲಿಯೇ ವಿಖ್ಯಾತವಾದ ಸೇವೆ ಸಲ್ಲಿಸಿದ್ದಾರೆ. ಈಗ ಶ್ರೀ ಧರ್ಮಸ್ಥಳ ಕ್ಷೇತ್ರಾಧಿಕಾರಿಗಳಾಗಿ ಕ್ಷೇತ್ರದ ಸರ್ವತೋಮುಖ ಏಳಿಗೆಗೆ ಸದಾ ಹಂಬಲಿಸುವ ಧರ್ಮದರ್ಶಿ ಶ್ರೀ ರತ್ನವರ್ಮ ಹೆಗ್ಡೆರವರು ಅತ್ಯಾದರದಿಂದ ಈ ಕಲಾದೇವಿಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಾರೆ.

ಆದರೆ ಆದೇನೋ ಈ ಕಲೆಯು ಬಹು ಮಂದಿಗಳ ಆದರಕ್ಕೆ ಪಾತ್ರವಾಗದಿದ್ದರೂ, ಪ್ರಯತ್ನಕ್ಕೆ ತಕ್ಕಷ್ಟು ಫಲವು ದೊರಯದೆ, ಕೆಲ, ಕೆಲವು ನ್ಯೂನ್ಯತೆಗಳನ್ನು ಇನ್ನೂ ಸರಿಪಡಿಸಲಿಕ್ಕಿದೆಯೋ? ಎಂಬಂತ್ತಿದೆ. ಉದಾಹರಣೆಗಾಗಿ ನಿಡ್ಲೆ ಯಕ್ಷಗಾನ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನದಿಂದ ಶ್ರೀಮಾನ್ ದೇರಾಜೆ ಸೀತಾರಾಮಯ್ಯನವರು ಕೆಲವು ಹಿತಕೂಡನೆಗ

(ಒಂಭತ್ತನೇ ಪುಟ ನೋಡಿರಿ)

ನೀವು ಅಥವಾ ನಿಮ್ಮ ಮಕ್ಕಳು... ನಾವು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿನ್ಹೆ

ಮಹಾಭಾರತದ ಭವ್ಯ ಸಾಂಸ್ಕೃತಿಕ ಮೌಲ್ಯ

ಮಾನವ ಸಂಸ್ಕೃತಿಯ ಉದಯ ಕಾಲದಿಂದ ಭಾರತ ದೇಶದ ಮಹಾ ಕಾವ್ಯವಾದ ಮಹಾಭಾರತಕ್ಕೆ ವಿಷಯದಲ್ಲಾಗಲಿಗಾತ್ರದಲ್ಲಾಗಲಿ ಹೋಲಿಕೆಯೂಗುವಂಥವೇನು ಕೃತಿಗಳು ಅತ್ಯಲ್ಪವೆಂದುಹೇಳಬೇಕು. ಆದರೆ ಮಹಾಭಾರತವನ್ನು ಒಂದು ಮಹಾ ಕಾವ್ಯವೆಂದು ಪರಿಗಣಿಸುವದು ಸಾಧ್ಯವೆ? ಶಬ್ದದ ಯುರೋಪಿಯನ್ ಅರ್ಥದಲ್ಲಿ ಮಾತ್ರ ಹಾಗೆ ಹೇಳಬಹುದು. ಯಾಕೆಂದರೆ ಸಂಸ್ಕೃತದ ಇತಿಹಾಸ ಎಂಬುದಕ್ಕೆ ಇಪಾಸ್ (ಮಹಾಕಾವ್ಯ) ಎಂಬ ಗ್ರೀಕ್ ಪದವು ಭಾಷಾಂತರವಾಗಿದೆ. ಮತ್ತೆ ಇತಿಹಾಸವೆಂದರೆ ಏತಿಹಾಸಿಕ ವಿವರಣೆಯೇ ಆಗಿದೆ ಈ ಜಿಜ್ಞಾಸೆ ಏನೇ ಇರಲಿ, ಮಹಾಭಾರತವಂತೂ ಒಂದು ಸಂಕೀರ್ಣ ಕೃತಿಯಾಗಿದ್ದು ಅದರಲ್ಲಿ ನಾನಾ ಸಾಹಿತ್ಯರೂಪಗಳು ಅಡಕವಾಗಿವೆ.

ಮಹಾಭಾರತದಿಂದ ಪ್ರಭಾವಿತವಾಗದಂಥ ಯಾವ ಅಂಶ ಭಾರತದ ಜನ ಜೀವನದಲ್ಲಿ ಇದೆಯೆಂದು ಹೇಳುವುದು ಕಷ್ಟ. ಮೊಟ್ಟ ಮೊದಲನೆಯದಾಗಿ ಇದು ಪ್ರಧಾನವಾಗಿ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಪ್ರಾಚೀನ ಭಾರತದ ಮಹಾನ್ ಕವಿ ಹಾಗೂ ನಾಟಕಕಾರ ಕಾಳಿದಾಸನಿಗೆ ಮಹಾಭಾರತವೆ ಸ್ಫೂರ್ತಿಯಾಯಿತು. "ಅರ್ಥಶಾಸ್ತ್ರ"ದ ಕರ್ತೃವೂ ಮುಖ್ಯವಾಗಿ ಮಹಾಭಾರತದ ಹನ್ನೆರಡನೇ ಪರ್ವದ ಮೊದಲನೇ ಭಾಗವನ್ನೇ ಆಧರಿಸಿ ತಮ್ಮ ಕೃತಿ ನಿರ್ಮಿಸಿದರು. "ಪಂಚತಂತ್ರ" ಮತ್ತು "ಹಿತೋಪದೇಶ" ದಂತ ನೀತಿಕತೆಗಳ ಮೂಲವೂ ಹನ್ನೆರಡು ಮತ್ತು ಹದಿಮೂರನೇ ಪರ್ವಗಳಲ್ಲಿ ಬರುವ ದೃಷ್ಟಾಂತ ಕಥೆಗಳೇ ಆಗಿವೆ. ತೃತೀಯ ಪರ್ವದಲ್ಲಿಯ "ನಳೋಪಾಖ್ಯಾನ" "ಬಾಲ ರಾಮಾಯಣ" "ಮಾರ್ಕಂಡೇಯನ ಕತೆ" ಮೊದಲಾದವೆಲ್ಲ ವೃತ್ತಾಂತಕಥನ ಸಾಹಿತ್ಯಕ್ಕೆ ಉತ್ತಮ ನಿದರ್ಶನಗಳಾಗಿವೆ. (ಬೇತಾಳ ಪಂಚವಿಂಶತಿ ಮತ್ತು "ದಶಕುಮಾರ ಚರಿತ"ಗೆ ಹೋಲಿಸಿ ನೋಡಬಹುದು) ಆದರೆ ಮಹಾಭಾರತದ ಹಿರಿಮೆ ಇರುವುದು ಇದರಲ್ಲಷ್ಟೇ ಅಲ್ಲ. ಎರಡು ಎರಡೂವರೆ ಸಹಸ್ರ ವರ್ಷಗಳಿಂದ ಭಾರತದ ಜನರು ಈ ಅದ್ಭುತ ಕೃತಿಯನ್ನು ಸ್ಮರಣೆಯಲ್ಲಿಟ್ಟುಕೊಂಡು ಬಂದಿದ್ದಾರೆ. ಹೀಗೆ ಅಮರವಾಗಿರುವುದರಲ್ಲೇ ಇದರ ನಿಜವಾದ ಹಿರಿಮೆ ಇದೆ. ಅಂತಯೆ ಇದನ್ನೂ ಒಂದು "ಸ್ಮೃತಿ"ಎಂದು ಕರೆಯುತ್ತಿದ್ದರೆ ಆಶ್ಚರ್ಯವೇನಿಲ್ಲ.

"ಶಿಲಾವ್ಯಾಖ್ಯಾನ"

ವಿಷ್ಣು ಪಾದದಿಂದ ಗಂಗೆಯು ಪ್ರವಹಿಸಿದಾಗ ಅರ್ಭಟಿಸುವ ಹೆಣ್ಣು ಹುಲಿಯಂತಿದ್ದ ಆ ರಭಸದ ಪ್ರಚಂಡ ಪ್ರವಾಹವನ್ನು ಯಾವ ಮರ್ತ್ಯರೂ ಅಸ್ಪೃಶ್ಯ ದೇವಾಧಿ ದೇವತೆಗಳೂ ತಡಗಟ್ಟುವುದು ಸಾಧ್ಯವಿಲ್ಲದೆ ಹೋಯಿತು....ಗಂಗೆ ಪ್ರವೇಶಿಸುವ ದ್ವಾರವೆ ಗಂಗಾದ್ವಾರ. ಇಲ್ಲಿಂದ ಗಂಗೆಯು ಭವ್ಯವಾಗಿ ಶ್ರೀ ಮದ್ಗಾಂಭೀರ್ಯದಿಂದ—ಭಗೀರಥನ ತಪ್ಪಸ್ಸಿನಿಂದಾಗಿ ಹಿಮಾಲಯದ ದಕ್ಷಿಣದ ಬಯಲಿಗೆ ಹರಿಯುತ್ತ ದಿಲೀಪನ ಸಂತತಿಯವರಿಗೆ ಜೀವನ ಸಮೃದ್ಧಿಯನ್ನು ನೀಡುವ ವರದಾನವಾಗಿ ತುಂಬಿ ಹರಿದಳು. ಈ ಭವ್ಯ ಗಂಗಾವತರಣದ ಚಿತ್ರವನ್ನು ನಾವು ದಕ್ಷಿಣ ಭಾರತದ ಮಹಾಮಲ್ಲಪುರದಲ್ಲಿ ಕೂಡ ಕಾಣಬಹುದು. ಕ್ರಿಸ್ತಾನಂತರ ಎಳನೇ ಶತಮಾನಕ್ಕೆ ಸೇರಿದ ಶಿಲಾ ಚಿತ್ರಗಳು ಇವಾಗಿವೆ.

ಮಹಾಮಲ್ಲಪುರದ (ಮಹಾಬಲಿಪುರ) ಉಬ್ಬು ಶಿಲಾ ಚಿತ್ರಗಳ ನಿರ್ಮಾಪಕರು ನಿಸ್ಸಂದೇಹವಾಗಿ ಇವುಗಳನ್ನು ಮಹಾಭಾರತದ ಕಥೆಗಳೊಂದಿಗೆ ಸಂಬಂಧಿಸಿದ್ದಾರೆ. ಇಲ್ಲಿಯ ರಥಗಳು, ಸ್ತಂಭಗಳು ಒಂದೊಂದೂ ಒಂದೊಂದು ಕಥೆಗೆ ಸಂಬಂಧಿಸಿದ್ದು ಮಹಾಭಾರತದಲ್ಲಿ ಶುದ್ಧಗಳಲ್ಲಿ ವರ್ಣಿತವಾದ ಅಂಶ ಇಲ್ಲಿ ಶಿಲೆಯಲ್ಲಿ ಬಣ್ಣಿಸಲ್ಪಟ್ಟಿದೆ. ಮಹಾಭಾರತದ ಮುಖ್ಯ ಪಾತ್ರಗಳ ಹೆಸರುಗಳನ್ನೂ ಇಲ್ಲಿಯ ದೇಗುಲಗಳಲ್ಲಿಗಿರುವುದನ್ನು ಕಾಣಬಹುದು. ಗಂಗಾವತರಣದ ಚಿತ್ರಣ ದಕ್ಷಿಣ ಭಾರತದಲ್ಲಿ, ಮದುರಾಸು ರಾಜ್ಯದ ಕರಾವಳಿಯಲ್ಲಿ ಕಂಡುಬರುತ್ತಿದ್ದರೂ ಅದರ ಮುಖ್ಯ ಪಾತ್ರಗಳನ್ನು ಮಾತ್ರ ನಾವು ಇಲ್ಲಿ ಕಾಣಲಾರೆವು. ಅಂದರೆ ಗಿರೀಶ ಮತ್ತು ಗಂಗೆ ಇವರನ್ನು ಕಾಣಲಾರೆವು. ಒಂದು ತೆಳು ಪರದೆಯ ಮರೆಯಲ್ಲಿ ಅವು ಅಡಗಿಕೊಂಡಿರಬೇಕು. ಅವುಗಳನ್ನು ಕಂಡುಹಿಡಿಯಲು ಕಲಾತ್ಮಕ ಪ್ರಯತ್ನ ಅಗತ್ಯ.

ವಿಷ್ಣು ಮತ್ತು ಶಿವ

ಮಹಾಭಾರತವನ್ನು ಪರಿಸಿದಂತೆ ಒಂದು ಪ್ರಶ್ನೆಯು ಉದ್ಭವವಾಗುತ್ತದೆ. ಈ ಮಹಾಕಾವ್ಯದ ಕೇಂದ್ರ ವ್ಯಕ್ತಿ ಯಾರು? ಕೃಷ್ಣನೆ? ಯುಧಿಷ್ಠರನೇ ಅರ್ಜುನನೆ? ಭೀಮನೆ? ಗಿರೀಶನ ಭುಜಗಳ ಮೇಲೆ ಬೀಳುವ ಗಂಗೆ ವಿಷ್ಣುವಿನಪಾದದಿಂದ ಹರಿಯುತ್ತಾಳೆ. ಗಂಗಾಜಲದಿಂದ ತುಂಬಿ ಸಾಗರದೋಪಾದಿಯಲ್ಲಿ ತೋರುವ ಶಿವನ ಆದಿ ಸ್ಥಾನದಲ್ಲಿ ಕೂಡ, ಶಿವದೇವಾಲಯದ ಪಕ್ಕದಲ್ಲೇ ವಿಷ್ಣುವಿನ ದೇವಾಲಯವೂ ಒಂದಿದೆ.

"ಶಿಲಾವ್ಯಾಖ್ಯಾನ"ದ ಪ್ರಾಚೀನ ನಿರ್ಮಾಪಕರು (೭ ಮತ್ತು ಎನೇ ಶತಮಾನದವರು) ಈ ಮಹಾಕಾವ್ಯದ ವ್ಯಾಖ್ಯಾನವನ್ನು ಹೇಗೆ ಮಾಡಿದರು? ಯಾರು ಸರಿ, ಯಾರು ತಪ್ಪು ಎಂದು ಹೇಳುವುದೇ ಕಷ್ಟವೆನಿಸುವಂಥ ಪರಾತನ ಕಾಲದ ಊಳಿಗಮಾನ್ಯ ಕಾಳಗದ ಕಾಲಾನುಕ್ರಮದ ಕಥೆಯಂತೆ ಕಂಡರೆ? ಅಥವಾ ವಿಷ್ಣು ಮತ್ತು ಶಿವನ ಕಾಳಗದ ಪುರಾಣ ಕಥೆಯಾಗಿ ನೋಡಿದರೆ? ಕೃಷ್ಣನೇ ಪರ್ವದ ಹೊರಾವರಣವೆಲ್ಲ ಶೈವ ಮತ್ತು ವೈಷ್ಣವ ಪಂಥದ ಘರ್ಷಣೆಯಾಗಿ ಕಾಣಿಸುತ್ತವೆ. ಅದರೆ ಅದೇ ಕೇಂದ್ರ ವಸ್ತುವಾಗಿಲ್ಲ. ಅಥವಾ ಕೇಂದ್ರ ವಸ್ತುವೆಂಬುದೇ ಇರಲಿಕ್ಕಿಲ್ಲವೆ? ಮಹಾಮಲ್ಲಪುರದ ಶಿಲಾ ವ್ಯಾಖ್ಯಾನ "ಗಂಗಾವತರಣ"ವೇ ಮಹಾಭಾರತದ ಪರಮ ಸಾರಭೂತವೆಂಬುದೆ ತೋರಿಸುತ್ತದೆ. ಆದರೆ ರಾಮಾಯಣವನ್ನೇಕೆ ತೋರಿಸುತ್ತಿಲ್ಲ? ರಾಮಾಯಣದಲ್ಲಿ ಕೂಡ ಗಂಗಾವತರಣದ ಕಥೆ ಬರುತ್ತದೆ. ಮಹಾಮಲ್ಲಪುರದ ಶ್ರೇಷ್ಠ ಕಲಾವಿದರಿಗೆ, ಆಲೋಚಕರಿಗೆ ಮಹಾಭಾರತವೇ ಬಾಯಾರಿ ಬರಡಾದ ಭೂಮಿಗೆ ಒಂದು ಪರಮಪಾವನ ಜೀವನದಾಯಿ ಗಂಗಾ ಸಲಿಲವಾಗಿ, ಅತ್ಯೋದ್ಧಾರದ ಗಂಗೆಯೂ ಯಾಗಿ ಕಾಣುತ್ತದೆ.

ಭಗವದ್ಗೀತೆ ಮಹಾಭಾರತದ ಅಧ್ಯಾತ್ಮಿಕ ಗಂಗೆ

ಅನೇಕ ಶತಮಾನಗಳಿಂದ ಭಾರತದ ಜನ ಭಗವದ್ಗೀತೆಯನ್ನು ಮಹಾಭಾರತದ ಅಧ್ಯಾತ್ಮ ಗಂಗೆಯಾಗಿ ಕಾಣುತ್ತ ಬಂದಿದ್ದಾರೆ. ಶೈವರು ವೈಷ್ಣವರು ಹೀಗೆ ಇಬ್ಬರ ಮನ್ನಣೆಗೂ ಪಾತ್ರವಾದ ಕೃತಿಗಳಲ್ಲಿ ಇದೊಂದಾಗಿದೆ. ಅನೇಕ ಹಿಂದೂಗಳು ಪ್ರತಿ ಪ್ರಾತಃಕಾಲವೂ ಭಗವದ್ಗೀತೆಯ ಶ್ಲೋಕಗಳನ್ನು ಪಠಿಸುತ್ತಾರೆ. ಭಗವದ್ಗೀತೆಯಷ್ಟು ಬೇರಾವ ಭಾರತೀಯ ಪುರಾತನ ಕಾವ್ಯವೂ ಅಷ್ಟೊಂದು ವಿಶಾಲವಾಗಿ ಹರಡಿಕೊಂಡಿಲ್ಲ. ಶ್ರೀ ಶಂಕರಾಚಾರ್ಯರು (೯-ಎನೇ ಶತಮಾನ) ಮತ್ತು ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು ಅವರಂಥ ಮಧ್ಯಯುಗೀನ ತಾತ್ವಿಕ ಆಧಾರ ಸ್ತಂಭಗಳು (ಶೈವ-ವೈಷ್ಣವ ಆಚಾರ್ಯರು) ಭಗವದ್ಗೀತೆಗೆ ಭಾಷ್ಯ ಬರೆದಿದ್ದಾರೆ. ಮೂಲ ಪ್ರತಿಯ ಆಧಾರದ ಮೇಲೆ ಇವರು ಪ್ರಾಚೀನ ಪರಂಪರೆಗೆ ಅನುಗುಣವಾಗಿ ತಮ್ಮ ತಮ್ಮ ತಾತ್ವಿಕ ನೋಟಗಳನ್ನು ಬಿತ್ತರಿಸಿದ್ದಾರೆ. ಈ ಕಾಲದಲ್ಲಿ-ಭಾರತದ ಇಬ್ಬರು ಗಣ್ಯ ದಾರ್ಶನಿಕರು ಅಂದರೆ ಅರವಿಂದ ಘೋಷ್ ಮತ್ತು ಡಾ.ಎಸ್. ರಾಧಾಕೃಷ್ಣನ್ ಅವರುಗಳೂ ಭಗವದ್ಗೀತೆಯನ್ನು ಭಾಷಾಂತರಿಸಿ ಟೀಕೆಗಳನ್ನು ಬರೆದಿದ್ದಾರೆ.

ಭಗವದ್ಗೀತೆ ಬಹು ಕಾಲದಿಂದ ಭಾರತದ ತಾತ್ವಿಕ ಚಿಂತನೆಗೆ ಒಂದು ನಿಜವಾದ ಒರೆಗಲ್ಲಾಗಿ ನಿಂತಿದೆ. ಇದರ ನೋಟ ಬಂದಿರುವಷ್ಟೇಕು, ಟೀಪ್ಪಣಿಗಳ ಒಂದು ಸರಳ ಪರಿಶೀಲನೆಯೆಂದರೂ ಕೂಡ ಅದೇ ಒಂದು ದೊಡ್ಡ ಶಾಸ್ತ್ರೀಯ ಅಧ್ಯಯನ ಕಾರ್ಯವಾಗುತ್ತದೆ. ಭಾರತೀಯ ತತ್ವಶಾಸ್ತ್ರ ವಿಕಾಸದ ಅಧ್ಯಯನವಾಗುತ್ತದೆ.

ಮಹಾಭಾರತದ ಪ್ರಧಾನ ತಾತ್ವಿಕ ಪ್ರವಾಹ ಭಗವದ್ಗೀತೆಯೆ ಆಗಿದ್ದರೂ ಅದರಲ್ಲಿ ಇಂಥದು ಇದೊಂದೇ ಆಗಿಲ್ಲ. ಮಹಾಭಾರತದಲ್ಲಿ ಇಂಥ ತಾತ್ವಿಕ ಚಿಂತನೆಗಳು ಅನೇಕಾನೇಕವಾಗಿದ್ದು ಒಂದೊಂದ

[ಎಂಟನೇ ಪುಟ ನೋಡಿರಿ]

ಹದಿನೆರಡು ಖಾತೆಗಳಲ್ಲಿ ಒಂದು ಸಿಂಡಿಕೇಟ್ ಬ್ಯಾಂಕಿನಲ್ಲಿ

ದೇಶದ ಎಲ್ಲಾ ಬ್ಯಾಂಕುಗಳ ಠೇವಣಾತಿಗಳಲ್ಲಿ ಪ್ರತೀ ಹದಿನೆರಡು ಖಾತೆಗಳಲ್ಲಿ ಒಂದು ಸಿಂಡಿಕೇಟ್ ಬ್ಯಾಂಕಿನಲ್ಲಿದೆ.

ಸಿಂಡಿಕೇಟ್ ಬ್ಯಾಂಕಿನ ಒಟ್ಟು 9,05,000 ಠೇವಣಾತಿದಳಲ್ಲಿ ಸೇಕಡಾ 91-3ಷ್ಟು ಖಾತೆಗಳು ರೂಪ್ಯಾ 1500/- ಮತ್ತು ಕಡಿಮೆ ಮೊತ್ತದ ಸಾಮಾನ್ಯ ಠೇವಣಾತಿಗಳಾಗಿವೆ.

ಸಿಂಡಿಕೇಟ್ ಬ್ಯಾಂಕು ಕಳೆದ ನಲ್ವತ್ತೈದು ವರ್ಷಗಳಿಂದಲೂ ಜನ ಸಾಮಾನ್ಯರ ಸೇವೆಯಲ್ಲಿ ನಿರತವಾಗಿದೆ. "ಬ್ಯಾಂಕ್ ಖಾತೆಯನ್ನು ತೆರೆಯಲು ಮಂದಿಯ ಬಳಿಯಿರುವ ಯಾವ ವಸ್ತುವೂ ಚಿಕ್ಕದಲ್ಲ" ಎಂಬುದು ಆರಂಭದ ದಿನದಿಂದಲೂ ಸಿಂಡಿಕೇಟ್ ಬ್ಯಾಂಕಿನ ಮೂಲಸೂತ್ರವಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಜನಸಾಮಾನ್ಯರ ಸೇವೆಯಲ್ಲಿ

ಅಮೃತಾಂಜನ
ಎಲ್ಲಾ ನೋವುಗಳಿಗೂ ಅದೆ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
ಸ್ಟಾಂ ಪರ್ಸ್ ಹಾಯದ
ಜಾಕಿ ಡಾರಿ

ಪರಿಚಯ

ಮದಾಮ ರೋಲಾ

ಬರೆದವರು: ಶ್ರೀ ಸಿ. ನಾರಾಯಣ

ಫ್ರಾನ್ಸ್ ದೇಶದಲ್ಲಿ ನಡೆದ ರಾಜ್ಯ ಕ್ರಾಂತಿಯಲ್ಲಿ ಭಾಗವಹಿಸಿ, ಸಾಮಾನ್ಯ ಜನರ ಜೀವನವನ್ನೂ ಪರಿಶುದ್ಧಗೊಳಿಸಲು ಪ್ರಯತ್ನಿಸಿ ತನ್ನ ತಾಯ್ನಾಡಿನ ಉದ್ಧಾರದ ಚಿಂತೆಯಲ್ಲಿಯೇ ಕೊನೆಯುಸಿರು ಎಳೆದ ಧೀರ ಮಹಿಳೆ ಮದಾಮ ರೋಲಾ.

ಮದಾಮ ರೋಲಾ ಸಾಧಾರಣ ತಂದೆ—ತಾಯಿಯರ ಅಸಾಧಾರಣ ಏಕೈಕ ಪುತ್ರಿ. ಒಬ್ಬಳೇ ಮಗಳೆಂದು ತಂದೆ ತಾಯಿಯರು ಮದಾಮಳನ್ನು ಅಕ್ಕರೆಯಿಂದಲೇ ಬೆಳೆಸಿದರು. ಕಿರಿಯ ವಯಸ್ಸಿನಲ್ಲಿಯೇ ಮದಾಮಳ ಜ್ಞಾನ, ಧೈರ್ಯ, ಅಂತಃಕರಣ, ಭಾವುಕತೆ ಉತ್ಸಾಹ ವಿಶೇಷವಾಗಿದ್ದವು. ತಾರುಣ್ಯದಲ್ಲಿ ಮದಾಮಳು ಇತಿಹಾಸ, ಸಂಗೀತ, ಚಿತ್ರಕಲೆ, ವಿಜ್ಞಾನ, ನೃತ್ಯಗಳನ್ನು ಅಭ್ಯಸಿಸಿದಳು. ಪಂಡಿತಳಾದಳು. ಸಾಮಾನ್ಯ ಮಟ್ಟದ ಜನತೆಯ ಸರಳ ಜೀವನವನ್ನು ಆಪೇಕ್ಷಿಸುತ್ತಿದ್ದ ಮತ್ತು ಸಾಮಾನ್ಯ ಸರಳಜೀವನದ ಆಭಿರುಚಿ ಇದ್ದ ಮದಾಮಳಿಗೆ ಫ್ರಾನ್ಸ್ ದೇಶದ ಆಗಿನ ವಿಲಾಸಮಯ ಜೀವನ ಬೇಸರ ಉಂಟು ಮಾಡಿತು.

ಒಂದು ಬಾರಿ ಮದಾಮಳು ತನ್ನ ಅಜ್ಜಿಯೊಂದಿಗೆ ಶ್ರೀಮಂತರ ಮನೆಯೊಂದಕ್ಕೆ ಭೋಜನಕ್ಕಾಗಿ ಹೋಗಿದಳು. ಶ್ರೀಮಂತರ ಮನೆಗಳಲ್ಲಿ—ಕುಲೀನರ ಮನೆಗಳಲ್ಲಿ ಕೆಳ ವರ್ಗದ ಸಾಮಾನ್ಯ ಜನತೆಯನ್ನು ಶೋಷಿಸುವುದನ್ನು, ಅತ್ಯಾಚಾರ ನಡೆಸುವುದನ್ನು ಕಂಡು ಅವಳ ಹೃದಯ ಮರುಗಿತು. ಮತ್ತೊಮ್ಮೆ ವರ್ಸಾಯಿ ರಾಜಭವನದಲ್ಲಿ ವಿಲಾಸೀ ಜೀವನವನ್ನು ಕಂಡು ಅವಳ ಹೃದಯ ತಳಮಳಗೊಂಡಿತು.

ಮದಾಮಳನ್ನು ಓರ್ವ ಕುಲೀನ ಶ್ರೀಮಂತ ವ್ಯಾಪಾರಿಗೆ ಕೊಟ್ಟು ವಿವಾಹ ಮಾಡಲು ಅವಳ ತಂದೆ ನಿರ್ಧರಿಸಿದರು. ಆದರೆ ಮದಾಮಳು ಈ ವಿವಾಹಕ್ಕೆ ಸಮ್ಮತಿಸದೆ ತನ್ನ ಅಭಿಪ್ರಾಯವನ್ನು ತಿಳಿಸಿದಳು. "ನನಗೆ ವ್ಯಾಪಾರಿ ಸೇರುವುದಿಲ್ಲ. ಶ್ರೀಮಂತ ವರನನ್ನು ನಾನು ಮೆಚ್ಚಲಾರೆ. ನನ್ನ ಮನೋವಿಚಾರಗಳಿಗೆ ಸರಿ ಹೊಂದುವ ವಿಚಾರವಂತನಿಗೆ ನನ್ನ ಹೃದಯವನ್ನು ಅರ್ಪಿಸುವೆ. ವಿವಾಹ ಪೈಸರ್ಗಿಕ ಪವಿತ್ರ ಬಂಧನ. ನನ್ನ ಮನೋಭಿಪ್ರಾಯಗಳಿಗೆ ಸರಿ ಹೋಡಿಯೊದ ಪತಿ ದೊರೆಯುವ ವರೆಗೆ ಅವಿವಾಹಿತಳಾಗಿಯೇ ಇರುತ್ತೇನೆ" ಎಂದು ತಿಳಿಸಿದಳು.

ಅನೇಕ ವರ್ಷಗಳ ತರುವಾಯ ಮದಾಮಳ ಮನೋಭಿಪ್ರಾಯ-ಭಾವನೆಗಳಿಗೆ ಅನುರೂಪನಾದ ಪತಿ ದೊರೆತ. ಅವನ ಹೆಸರು ರೋಲಾ ಎಂಬುದಾಗಿತ್ತು. ಆಗ ಅವನ ವಯಸ್ಸು ಐವತ್ತು ವರ್ಷ. ವಧು ವರರು ಅಂದರೆ ಮದಾಮ ಮತ್ತು ರೋಲಾ ವಿವಾಹವಾಗಲು ಪರಸ್ಪರ ಒಪ್ಪಿದರೂ ಮದಾಮಳ ತಂದೆ ಮುದುಕನಿಗೆ ಮಗಳನ್ನು ಕೊಡಲು ನಿರಾಕರಿಸಿದ. ತಂದೆಯ ವಿರೋಧದಿಂದ ಮನನೊಂದ ಮದಾಮಳು ಮನೆಯಿಂದ ಹೊರಟು ಪೈರಾಗ್ಯದಿಂದ ಜೀವಿಸಲಾರಂಭಿಸಿದಳು. ಕೊನೆಗೆ ಮದಾಮಳ ತಂದೆಯ ಮನಸ್ಸು ಬದಲಾಯಿತು. ಮದಾಮ ಮತ್ತು ರೋಲಾ ಇವರ ವಿವಾಹ ನೆರವೇರಿತು.

ವಿವಾಹ ನೆರವೇರಿದ ತರುವಾಯ ಪತಿ ಪತ್ನಿಯರಿಬ್ಬರೂ ಎಮಿನ್ಸ್ ನಗರಕ್ಕೆ ತೆರಳಿ ಸಾರ್ವಜನಿಕ ಕಾರ್ಯಗಳಲ್ಲಿ, ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿದರು. ಕೆಲವರ್ಷಗಳ ತರುವಾಯ ರೋಲಾ ಪತ್ನಿಯೊಂದಿಗೆ ತನ್ನ ಮೂಲಭೂಮಿಗೆ ತೆರಳಿದ. ಅಲ್ಲಿ ರೈತರ ಜೀವನದ ಸಂಪರ್ಕ ಉಂಟಾಯಿತು. ಮದಾಮ ಮತ್ತು ರೋಲಾ ರೈತರ ಕಷ್ಟ ಸುಖಗಳಲ್ಲಿ ಪಾಲ್ಗೊಂಡು ಒಕ್ಕಲಿಗರ (ರೈತರ) ಉದ್ಧಾರಕ್ಕಾಗಿ ದುಡಿಯಲು ನಿರ್ಧರಿಸಿದರು.

ರೈತರ ಜೀವನವನ್ನು ಹಸನುಗೊಳಿಸಲು ಮದಾಮಳು ಪತಿಯೊಂದಿಗೆ ಪ್ರಯತ್ನ ನಡೆಸಲು ಆರಂಭಿಸಿದ ಕೆಲವೇ ದಿವಸಗಳಲ್ಲಿ ಫ್ರಾನ್ಸ್ ದೇಶದಲ್ಲಿ ರಾಜ್ಯ ಕ್ರಾಂತಿಯ ಜ್ವಾಲ್ಯಾಮಾಲಿ ಕಾಣಿಸಿ ಕೊಂಡಿತು. ದೇಶದ ಮೂಲೆ ಮೂಲೆಗೂ ಕ್ರಾಂತಿಯ ಕಿಡಿ ಹಾರಿತು. ಮೂನ�ನ ಜನಾಂಗದ ಕಲ್ಯಾಣಕ್ಕೆ, ಶ್ರೀಮಂತ (ಕುಲೀನ) ಮನೆತನದ ಜನತೆಯ ಮನೋವಿಕಾಸಕ್ಕೆ ಕ್ರಾಂತಿ ಒಂದು ಪ್ರಮುಖ ಸಾಧನ ಎಂಬುದನ್ನು ಗ್ರಹಿಸಿದ ಮದಾಮಳು ಕ್ರಾಂತಿಯಲ್ಲಿ ಪತಿಯೊಂದಿಗೆ ಭಾಗವಹಿಸಿದಳು.

ಗಿರ್ಂಡಿನರಲ್ಲಿ ಸುರ ಸಮಿತಿಯ ಸದಸ್ಯನಾಗಿ ಪರಿಶಕ್ತಿನಲ್ಲಿ ಭಾಗವಹಿಸಲು ರೋಲಾ ಪ್ಯಾರಿಸಿಗೆ ತೆರಳಿದ. ಅವನೊಡನೆ ಮದಾಮಳೂ ಪ್ರಯಾಣ ಬೆಳೆಸಿದಳು. ತನ್ನ ಅಸಾಧಾರಣ ಪಾಂಡಿತ್ಯ, ಪ್ರತಿಭೆ, ಉಪನ್ಯಾಸದ ಮೂಲಕ ಅನೇಕ ಫಿರಟ ನಿಷ್ಠಾವಂತ ಅನುಯಾಯಿಗಳನ್ನೂ ಸಿದ್ಧಮಾಡಿದನು.

ರಾಜ್ಯ ಕ್ರಾಂತಿಯ ಕಾಲದಲ್ಲಿ ಪ್ಯಾರಿಸ ನಗರದಲ್ಲಿ ಬ್ರಿಸೋ, ಪಿತಿಯನ, ಬುಜೋ ಮೊದಲಾದವರು ಪ್ರಮುಖ ಜನಪ್ರಿಯರಾಗಿದ್ದರು. ಫ್ರಾನ್ಸಿನಲ್ಲಿ ಪ್ರಜಾರಾಜ್ಯ ಸ್ಥಾಪಿಸಬೇಕೆಂಬ ಹಂಬಲ ಇವರದಾಗಿತ್ತು. ಇವರು ಮದಾಮಳ ಯೋಗ್ಯ ಸ್ಥಾನಮಾನ, ವಿದ್ವತ್ಪೂರ್ಣ ಪ್ರತಿಭೆ, ಸರಳ ಮನೋಭಾವ, ಜನಪ್ರೀಯತೆಗಳನ್ನು ಗಮನಿಸಿ ಅವಳೊಂದಿಗೆ ಸಹಕರಿಸಿ ಕೆಲಸ ಮಾಡಲು ಸಿದ್ಧರಾದರು.

ಮದಮರೋಲಾ ಮತ್ತು ಅವಳ ಅನುಯಾಯಿಗಳ ಸತತ ಪರಿಶ್ರಮ, ಹೋರಾಟ, ಪ್ರಯತ್ನದ ಫಲವಾಗಿ ರಾಜ್ಯದ ಅಧಿಕಾರ ಅವಳ ಅನುಯಾಯಿಗಳೇ ಆದ 'ಗಿರೊಂಡಿಸ್ಟ್'ರ ಕೈ ಸೇರಿತು. ಮದಾಮಳ ಪತಿ ರೋಲಾರ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲ ರಚನೆಯಾಯಿತು.

ಮದಾಮ ರೋಲಾಳಿಗೆ ಅಸಂಖ್ಯಾತ ಅನುಯಾಯಿಗಳು, ಅಭಿಮಾನಿಗಳು ಇದ್ದಂತೆಯೇ ಅಧಿಕ ಸಂಖ್ಯೆಯಲ್ಲಿ ವಿರೋಧಿಗಳೂ ಇದ್ದರು. ಅವರ ಪ್ರಾಬಲ್ಯವೂ ಹೆಚ್ಚಾಗಿಯೇ ಇತ್ತು. ಫ್ರಾನ್ಸ್ ರಾಜ್ಯದ ರಾಜಧೀತಿಯೂ ಯಾವ ಸ್ಥಿರ ಸ್ಥಾನಮಾನವನ್ನು ಪಡೆದಿರಲಿಲ್ಲ. ಮದಾಮಳ ನಿಕಟ ಅನುಯಾಯಿಗಳಾದ 'ಗೊರಂಡಿಸ್ಟ್'ರ ಹಸ್ತಗತವಾಗಿದ್ದ ರಾಜ್ಯದ ಅಧಿಕಾರ ಸೂತ್ರವನ್ನು ಪಶಪಡಿಸಿಕೊಳ್ಳಲು ವಿರೋಧಿಗಳು ಸದಾ ಜಾಗ್ರತರಾಗಿಯೇ ಇದ್ದರೂ ಕೊನೆಗೆ ಸಂಚಿನಿಂದ ರಾಜ್ಯದ ಅಧಿಕಾರವನ್ನು ಕೈಗೆ ತೆಗೆದುಕೊಂಡರು. ಪೂರ್ಣ ಅಧಿಕಾರ ವಿರೋಧಿಗಳ ವಾಲಾಯಿತು. ವಿರೋಧಿಗಳು ಅಷ್ಟಕ್ಕೇ ಸಂತುಷ್ಟವಾಗದೆ ಮದಾಮ ಮತ್ತು ಅವಳ ಪತಿ ರೋಲಾ ಇವರ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾದರು. ಪತಿಪತ್ನಿಯರ ವಿರುದ್ಧ ಭಾಷಣಗಳನ್ನು ಮಾಡಿ ಜನಮನವನ್ನು ಕಲಕಿದರು. ಕೊನೆಗೆ ಮದಾಮ ರಾಜಕೀಯದಿಂದ ದೂರ ಸರಿದು ಪತಿ ರೋಲಾರೊಂದಿಗೆ ಮನೆಗೆ ಹೋಗುವಂತೆ ಮಾಡಿದರು. ಪತಿ ರೋಲಾ ಮೇಲೆ ವಿರೋಧಿಗಳು ಹೊರಿಸಿದ್ದ ಪ್ರಬಲ ಅಪವಾದವನ್ನು ಮದಾಮ ಯುಕ್ತಿಯಿಂದ—ಜಾಣ್ಮೆಯಿಂದ ದೂರಮಾಡಿದಳು. ರೋಲಾ ನಿರಪರಾಧಿ ಎಂಬುದನ್ನು ವಾದಿಸಿದಳು.

ಪತಿ ನಿರ್ದೋಷಿಯೂದ ಎಂಬ ಸಂತೋಷಕ್ಕೆ ಮದಾಮ ಸಂತೋಷ ಕೂಟವೊಂದನ್ನು ಏರ್ಪಡಿಸಿದಳು. ರೋಲಾ ಪ್ಯಾರಿಸ್ ನಗರದಲ್ಲಿರಲಿಲ್ಲ. ಸಂಜೆಯ ಸಮಯ ಮದಾಮಳು ಪತಿಗೆ ಪತ್ರ ಬರೆಯಲು ಕುಳಿತಿದ್ದಳು. ಅದೇ ವೇಳೆಗೆ ಕೆಲ ಸೋಲೀತರು ಮನೆಯ ಬಾಗಿಲು ಮುರಿದು ಒಳಕ್ಕೆ ಪ್ರವೇಶಿಸಿ ಮದಾಮಳನ್ನು ಬಂಧಿಸಿದರು. ಇದು ವಿರೋಧಿಗಳ ಕಾರ್ಯ ಎಂಬುದು ಮದಾಮಳಿಗೆ ಮನವರಿಕೆಯಾಯಿತು. ಮದಾಮಳನ್ನು ಬಂಧಿಸಿದ ತರುವಾಯ ಅವಳನ್ನು ಕರೆದೊಯ್ಯುತ್ತಾ ಒಬ್ಬ ಪೋಲೀಸ ಅಧಿಕಾರಿ "ನೀವು ಸಾಹಸೀ ಮಹಿಳೆ, ಶಾಂತಿ ಮತ್ತು ಧೈರ್ಯದಿಂದ ನ್ಯಾಯಾಧೀಶರ್ಕ್ಷೆಗೆ ಮಾಡಿ" ಎಂದು ತಿಳಿಸಿದ. "ಮಹಾಶಯ! ನ್ಯಾಯವಿದ್ದಿದ್ದರೆ ನಾನು ಇಲ್ಲಿ ಇರುತ್ತಿದ್ದೆನೆ? ಈಗಲೂ ನನಗೆ ಜೀವದ ಮೇಲೆ ಆಸೆ ಇಲ್ಲ. ಎಂತಹ ಅನ್ಯಾಯಗಳನ್ನು ಸಹಿಸಲು ಸಿದ್ಧಳಿದ್ದೇನೆ" ಎಂದು ಮದಾಮ ನಗುತ್ತಾ ನುಡಿದಳು.

ಮದಾಮಳು ಜೈಲಿನ ಕತ್ತಲೆ ಕೋಣೆಯಲ್ಲಿ ಅನೇಕ ದಿನಗಳನ್ನು ಕಳೆದಳು. ವಿಷ ತಿಂದು ಆತ್ಮಹತ್ಯೆ ಮಾಡಿಕೊಳ್ಳಲೂ ಯೋಚಿಸಿದಳು. ಆದರೆ ಪತಿ-ಪುತ್ರರ ಪ್ರೀತಿ ಅವಳನ್ನು ಸದಾ ಸೆಳೆಯುತ್ತಿತ್ತು. ಎಂದಾದರೂ ಒಂದು ದಿನ ತಾನು ಬಂಧನದಿಂದ ಮುಕ್ತಳಾಗುತ್ತೇನೆ. ಪತಿ-ಪುತ್ರರೊಂದಿಗೆ ಸುಖವಾಗಿ ಜೀವಿಸುತ್ತೇನೆ ಎಂಬ ಆಸೆ ಅವಳಲ್ಲಿ ಮನೆಮಾಡಿ ಕೊಂಡಿದ್ದು ಅವಳ ಧೀರತೆಯ, ಬಾಳನ್ನೆ ಆಶಾಜ್ಯೋತಿಯಾಗಿ ಉಳಿದಿತ್ತು.

ದಿನದಿನದ ಯಾತನೆಯಿಂದ ಮದಾಮಳ ದೇಹ ಸೋತಿತು. ಜೈಲಿನ ಅಸಹನೀಯ ಕಠಿಣ ಯಾತನೆಗಳಿಂದ ಅವಳ ದೇಹ ಜರ್ಜರಿತವಾದ ಸಂದರ್ಭದಲ್ಲಿಯೇ "ಮದಾಮ ರೋಲಾಳಿಗೆ ಫಾಸಿ ಶಿಕ್ಷೆ" ಎಂಬ ತೀರ್ಪು ಹೊರಟಿತ್ತು.

೧೯೯೩ನೆಯ ಇಸವಿ ನವೆಂಬರ ತಿಂಗಳ ಎಂಟನೆಯ ತಾರೀಕು. ಫಾಸಿ ಶಿಕ್ಷೆಯನ್ನು ಅನುಭವಿಸುವ ಮುಂಚೆ ಮದಾಮ ರೋಲಾ ವಧಾಸ್ಥಾನದಲ್ಲಿ ನಿಂತು ದೀರ್ಘವಾದ ನಿಟ್ಟುಸಿರು ಬಿಟ್ಟು "ಸ್ವತಂತ್ರತೆ! ನಿನ್ನ ಹೆಸರಿನ ಮೇಲೆ ಮನುಷ್ಯರು ಎಷ್ಟು ಅಪರಾಧ ಮಾಡಿದ್ದಾರೆ!" ಎಂದು ಉದ್ಗರಿಸಿದಳು. ಅದೇ ಅವಳ ಅಂತಿಮ ನುಡಿಯಾಯಿತು.

ಶಾಂತಿಯೇ ನಿಜವಾದ ಶೂರರು ಬಯಸುವ ವಿಜಯ.

ಂ ಂ

ಧೃತಿ, ಕ್ಷಮೆ, ದಯೆ, ಆಸ್ತೇಯ, ಶುಚಿತ್ವ, ಇಂದ್ರಿಯನಿಗ್ರಹ, ಬುದ್ಧಿ, ವಿದ್ಯೆ, ಸತ್ಯ ಅಕ್ರೋಧ-ಈ 10 ಧರ್ಮ ಲಕ್ಷಣಗಳು.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. C. 647/1967

ವಾದಿ— H. ಗಜೇಂದ್ರರಾವ್

ಪ್ರತಿವಾದಿ— ಅಂತೋನಿ ಡಿ. ಶಿಲ್ವ

ಕುಂದಾಪುರ ತಾಲ್ಲೂಕ್ ಕೋಟೇಶ್ವರ ಗ್ರಾಮದಲ್ಲಿರುವ ಬಾಪ್ಟಿಸ್ಟ್ ಡಿ. ಶಿಲ್ವರ ಮಗ ಅಂತೋನಿ ಡಿ. ಶಿಲ್ವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಯ ತಂದೆಗೆ ಪ್ರತಿವಾದಿಯು ತಾ. 24—6—60ರಲ್ಲು ಬರೆಕೊಟ್ಟ ಬಾಡಿಗೆ ಕರಾರಿಗೆ ಕಾರಣವಾದ ಸ್ಥಳ ಕಟ್ಟಡ ಸ್ವಾಧೀನತೆ ಬಗ್ಗೆ ಬಾಡಿಗೆ ಬಾಕಿ ಬಗ್ಗೆ ಸದಾ ವಾದಿಯು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 18.1.68 ಕ್ಕೆ ಮೇಲಿನ ಕೋರ್ಟನಲ್ಲಿ ತಕ್ಕಾಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟ್ ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪಿಸುವುದಾಗಿ ಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಲಾಯಿತು.

N. S. Parameshwariah
Advocate for Plff.

Coondapoor Date, 1—1—68

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. C. 564/1967

ವಾದಿ—G. ಸರ್ವೇಶ್ವರ ಸೋಮಯಾಜಿ

ಪ್ರತಿವಾದಿರು— ರಾಮಚಂದ್ರ ಉಪಾಧ್ಯ ಉಡ್ಪಿ ತಾಲ್ಲೂ ವಾರಂಬಳ್ಳಿ ಗ್ರಾಮದಲ್ಲಿರುವ ವಾಸುದೇವ ಉಪಾಧ್ಯಾಯ ಮಗ ರಾಮಚಂದ್ರ ಉಪಾಧ್ಯಾಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಬರಬೇಕ್ಕ ಕಳೆದ ಮುಮ್ಮುಖಿ ಕಂದಾಯದ ಅದಿ ಲಗ್ಯಾನ ಮೂಲಗೇಣಿ ಗೇಣಿ ಬಾಕಿ ಬರಬೇಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 20—1—1968ಕ್ಕೆ ಮೇಲಿನ ಕೋರ್ಟನಲ್ಲಿ ತಕ್ಕಾಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ, ಸದ್ರಿ ದಿನ್ನ ಮೇಲಿನ ಕೋರ್ಟ್ ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪಿಸುವುದಾಗಿ ಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಲಾಯಿತು.

N. S. Parameshwariah
Advocate for Plff.

Coondapoor, Date 1—1—1968

ಗನ್ನಾವರಕ್ಕೆ ಹೋಗಿದ್ದಿರಾ?

"ನನಗಿಗೆವದು ಕೇವಲ ಐದು ಎಕರೆ ಭೂಮಿ. ಇದೇ ನಮ್ಮ ಕುಟುಂಬಕ್ಕೆ ಜೀವನಾಧಾರ. ಈಗಾಗಲೇ ನಮಗೆ ಎರಡು ಮಕ್ಕಳು. ಇಷ್ಟೇ ಸಾಕು,'—ಎಂದವಳು ರಾಧಾ.

ಇವಳು ಗನ್ನಾವರಂ ತಾಲೂಕಿನ ಅಬ್ಬಾಸೆರೆ ಗ್ರಾಮದವಳು. ರಾಧಾಳಿಗೆ ಸರಿಯಾದ ಶಿಕ್ಷಣವಿಲ್ಲ. ಆದರೂ ಅವಳು ಬುದ್ಧಿವಂತೆ, ತನ್ನ ಭವಿಷ್ಯದ ಬಗ್ಗೆ ಸಾಕಷ್ಟು ಗಮನ ಕೊಡಬಲ್ಲವಳು.

"ಗನ್ನಾವರಂ ಜಮೀನ್ದಾರೀ ವಿನಾಶವಾದ ಮೇಲೆ ನಮಗೆ ದೊರೆತ ಈ ಭೂಮಿ ಅಷ್ಟೇನೂ ಫಲವತ್ತಾಗಿಲ್ಲ. ಇದರಿಂದಲೇ ನಮ್ಮ ಜೀವನ ರಥ ಸಾಗಬೇಕು" ಎಂದು ಉದ್ಗಾರವೆತ್ತಿದ ರಾಧಾಳ ಪತಿ ರಂಗರಾವ್.

"ರಾಸಾಯನಿಕ ಗೊಬ್ಬರವನ್ನು ಬಳಸಿದರೆ ಆಧುನಿಕ ಕೃಷಿ ವಿಧಾನಗಳನ್ನು ಅನುಸರಿಸಿದರೆ ಇದೇ ಭೂಮಿಯಲ್ಲಿಯೇ ಎರಡರಷ್ಟು ಬೆಳೆ ಬರಬಹುದಲ್ಲ. ನಿಮಗೆ ಹೆಚ್ಚು ಮಕ್ಕಳಿದ್ದರೆ ತೊಂದರೆಯೇನು?

"ಹೆಚ್ಚು ಮಕ್ಕಳಿದ್ದರೆ ನಮ್ಮ ಹೊಲಗದ್ದೆಗಳು ಹಿಸಿಹೋಗಿ ಚೂರು ಚೂರಾಗಿ ನಮ್ಮ ಮಕ್ಕಳ ಮುಂದಿನ ಜೀವನಕ್ಕೆ ತುಂಬ ಕಷ್ಟವಾಗಬಹುದು."

"ಆದರೆ ಈಗ ನಿನಗಿರುವುದು ಎರಡೇ ಎರಡು ಮಕ್ಕಳಷ್ಟೆ. ಅವಸರವೇಕೆ?"

"ಅವಸರವೇಕೆ?... ನನಗೆ ಮೊದಲನೆ ಮಗುವಾದಾಗಲೇ ಸಾಕೆಂದ. ಕಂಡಿತ್ತು" ಎಂದಳು ರಾಧಾ. ಅವಳ ಮಾತಿನಲ್ಲಿ ದೃಢ ನಿರ್ಧಾರದ ಛಾಯೆ ಇತ್ತು. ನಿಶ್ಚಿಂತವ ನೋಭಾವದ ಧ್ವನಿ ಇತ್ತು.

"ನಾವು ನೂಲ ತ್ತೇವೆ, ಹಾಲು ಮಾರುತ್ತೇವೆ. ಆದರೂ ನಮ್ಮ ಆದಾಯ ಮಕ್ಕಳ ಸಂಖ್ಯೆಯ ಪಾಲಿನ ಪೋಷಣೆಗೆ ಸಾಕಾಗುವುದಿಲ್ಲ. ಹೇಗೂ ಕುಂಟುತ್ತಾ ನಡೆದಿದೆ ಜೀವನ"—ಎಂದ ರಂಗರಾವ್.

ತನ್ನ ಮುದ್ದು ಮಕ್ಕಳ ಬೆನ್ನು ತಟ್ಟುತ್ತ ರಾಧಾ ಗಂಡನೊಂದಿಗೆ ಶಿಬಿರದಿಂದ ಹೊರಬಂದು ಅಲ್ಲೇ ಕಾಯುತ್ತಿದ್ದ ಜೀಪ ಸ್ನೇಹಿ ಎಲ್ಲರೊಡನೆ ತನ್ನ ಹಳ್ಳಿಗೆ ಸಾಗಿದಳು.

ಎರಡೂ ಸಾವಿರಕ್ಕೂ ಹೆಚ್ಚು

ರಾಧಾ ಒಬ್ಬಳೇ ಅಲ್ಲ. ಗನ್ನಾವರಂ ಶಿಬಿರದಿಂದ ರಾಧಾಳಂತಹ ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರು ಶಸ್ತ್ರಕ್ರಿಯೆ ಮುಗಿಸಿಕೊಂಡು ಹೊರಬಂದರು ಇವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಚಿಂತೆ ಇತ್ತು.

ಗನ್ನಾವರಂ ಆಂಧ್ರ ಪ್ರದೇಶದಲ್ಲಿದೆ. ವಿಜಯವಾಡದಿಂದ ಗನ್ನಾವರಕ್ಕೆ ಹನ್ನೆರಡು ಮೈಲಿ ದೂರ. ಇಷ್ಟಿನ ಶಿಬಿರಕ್ಕೆ ಬಂದ ಮಹಿಳೆಯರಲ್ಲಿ ಶೇಕಡ 99ರಷ್ಟು ಬೇಸಾಯದ ಕೆಲಸದಲ್ಲಿ ನಿರತರಾದವರು. ಅವರೆಲ್ಲರಿಗೂ ತಮ್ಮ ತಮ್ಮ ಕುಟುಂಬವನ್ನು ಮಿತಗೊಳಿಸುವ ಆಸೆ.

ಇಲ್ಲಿನ ಶಿಬಿರದ ರಿಜಿಸ್ಟ್ರೇಶನ್ ಕೇಂದ್ರ. ಇದೇ ರಿಜಿಸ್ಟ್ರೇಶನ್ನಿಗಾಗಿ ನಿಂತಿರುವ ಮಹಿಳೆಯರ ಉದ್ದವಾದ ಸಾಲು. ಇವರೆಲ್ಲ ಕುಟುಂಬ ಯೋಜನೆಯ ಕರೆಗೆ ಕಾನೂನು ಮುಂದು ತಾನು ಮುಂದೆಂದು ಓಗೊಟ್ಟವರು.

ಸಾರ್ವತ್ರಿಕ ಸಹಕಾರ

ಡಾ|| ಸಿ. ಎಲ್. ರಾಯುಡು ಅವರು ಗನ್ನಾವರದ ಒಂದು ಪಂಚಾಯ್ತಿ ಸಮಿತಿ ಅಧ್ಯಕ್ಷರು ಇವರ ಕರೆಗೆ ಒಗೊಟ್ಟು ಬಂದವರು ಒಬ್ಬರಲ್ಲ, ಇಬ್ಬರಲ್ಲ ನೂರಾರು ಜನ. ಸುಮಾರು ಐದುನೂರು ಮಂದಿ ಅಧ್ಯಾಪಕರು ಮುನ್ನೂರು ಮಂದಿ ಮಹಿಳಾ ಮಂಡಳಗಳ ಸದಸ್ಯೆಯರು, ನಾನ್ನೂರು ಮಂದಿ ಯುವಕ ಮಂಡಳಗಳ ಸದಸ್ಯರು ಹಾಗೂ ಅನೇಕಾನೇಕ ಡಾಕ್ಟರುಗಳು ಸ್ವಯಂ ಸೇವೆಯಲ್ಲಿ ನಿರತರಾಗಿದ್ದರು.

ಒಸ್ತೆಯ ಎಡಬಲದ ಗಿಡಮರಗಳು, ದೀಪಸ್ತಂಭಗಳು ಹಾರು ಕಟ್ಟಿಡಲ್ಪಟ್ಟ ಕಂಬಿ ತ್ರಿಕೋಣಾಗಾಲಿಂದ ರಾರಾಜಿಸಿ ಶಿಬಿರದ ಕಡೆಗೆ ಸಾಲುಸಾಲಾಗಿ ಬರುತ್ತಿದ್ದವರನ್ನೆಲ್ಲ ಸ್ವಾಗತಿಸುತ್ತಿದ್ದವು.

ದಿನಕ್ಕೆ ನೂರು ಶಸ್ತ್ರಕ್ರಿಯೆಗಳು

ಈ ಶಿಬಿರ ಕಳೆದ ಅಕ್ಟೋಬರ್ ತಿಂಗಳಲ್ಲಿ ರೂಪುಗೊಂಡಿತು. ಮೊದಲನೇ ತಿಂಗಳಲ್ಲಿ ಶಸ್ತ್ರಕ್ರಿಯೆಯನ್ನು ಬಯಸುವ ಮಹಿಳೆಯರ ಹೆಸರನ್ನು ನೊಂದಾಯಿಸಲಾಯಿತು. ಮುಂದಿನ ತಿಂಗಳಲ್ಲಿ ಪಂಚಾಯ್ತಿ ಸದಸ್ಯರು ಮಹಿಳಾ ಡಾಕ್ಟರುಗಳೊಡನೆ ಹಳ್ಳಿಗಳನ್ನು ಸುತ್ತಿಬಂದರು. ವೈದ್ಯಕೀಯ ಪರೀಕ್ಷೆ ಮಾಡಿ ಔಷಧಿ ಹಂಚಿದರು. ವಿಟಮಿನ್ ಮಾತ್ರೆಗಳನ್ನು ಕೊಟ್ಟು ನಿರ್ಬಲರಾದ ಮಾತೆಯರನ್ನು ಶಸ್ತ್ರಕ್ರಿಯೆಗೆ ಅನುಗೊಳಿಸಿದರು.

ಗನ್ನಾವರದ ಈ ಶಿಬಿರವನ್ನು ನಿರ್ಮಾಣ ಮಾಡಲು ಹೆಚ್ಚು ಸಮಯ ಹಿಡಿಯಲಿಲ್ಲ. ಆಂಧ್ರ ಪ್ರದೇಶದ ಹಲವಾರು ಶೈಕ್ಷಣಿಕ ಸಂಸ್ಥೆಗಳಿಂದ ಬಂದ ನುರಿತ ಡಾಕ್ಟರ್‌ಗಳು ದಿನಕ್ಕೆ ಒಂದ ನೂರರಂತೆ ಇಲ್ಲಿ ಶಸ್ತ್ರಕ್ರಿಯೆ ಮಾಡಿದರು. ಒಂದು ಶಸ್ತ್ರಕ್ರಿಯೆಗೆ ಕೇವಲ ಆರರಿಂದ ಎಂಟು ನಿಮಿಷಗಳು ಸಾಕಾಗಿದ್ದವು. ನಾಲ್ಕು ಗಂಟೆಯ ಅವಧಿಯಲ್ಲಿ ಮೂರು ಶಸ್ತ್ರಕ್ರಿಯೆಗಳು ಮುಗಿದವು. ಶಸ್ತ್ರಕ್ರಿಯೆಯ ನಂತರದ ಹನ್ನೆರಡು ಗಂಟೆಗಳಲ್ಲಿ ಮಹಿಳೆಯರು ಅತ್ತಿತ್ತ ತಿರುಗಾಡಲು ಶಕ್ತರಾದರು. ನಾಲ್ವತ್ತೆಂಟು ಗಂಟೆಗಳಲ್ಲಿ ಸಾಮಾನ್ಯ ಆಹಾರ ಸೇವನೆ ಮಾಡತೊಡಗಿದರು' ಶಸ್ತ್ರಕ್ರಿಯೆ ನಂತರ ಕಾಣಿಸಿಕೊಳ್ಳಬಹುದಾದ ಯಾವ ತೊಂದರೆಗಳೂ ಇಲ್ಲಿ ಇದ್ದಿಲ್ಲ. ಇಲ್ಲಿ ಕೆಲಸ ಭರದಿಂದ ಸಾಗಿತ್ತು. ಆರು ಮಹಿಳೆಯರಿಗೆಂದೇ ಕಾಲಕ್ಕೆ ಶಸ್ತ್ರಕ್ರಿಯೆ. ತಾತ್ಕಾಲಿಕವಾಗಿ ರಚಿಸಲಾದ ಆಸ್ಪತ್ರೆ. ಆದರೂ ಎಲ್ಲ ಅನುಕೂಲತೆಗಳು ಇಲ್ಲಿ ಇದವು. ಇನ್ನೂ ಕಾರ್ಯಾರಂಭ ಮಾಡದ ಕಾರ್ಖಾನೆಯ ಒಂದು ಭಾಗದಲ್ಲಿತ್ತು ಈ ಆಸ್ಪತ್ರೆ. ಈ ಭಾಗವೇ ಶಿಬಿರದ ಕೇಂದ್ರ ಬಿಂದು. ಅಲ್ಲದೆ ತಾಳೆಯ ಗರಿಗಳನ್ನು ಹೊದಿಸಿದ ಹನ್ನೆರಡು ಶೆಡ್ಡುಗಳಿದ್ದವು. ವೈದ್ಯಕೀಯ ಸಂಘ ಸಂಸ್ಥೆಗಳಿಂದ ಎರವಲಾಗಿ ತಂದ 200 ಕಬ್ಬಿಣದ ಮಂಚಗಳು. ಬಿಡಿಸಿದಿಂದ ತಯಾರಿಸಿದ 500 ಮಂಚಗಳು. ಹೀಗೆ ಈ ಶಿಬಿರ ಸಾವಿರ ಹಾಸಿಗೆಯ ಒಂದು ತಾತ್ಕಾಲಿಕ ಆಸ್ಪತ್ರೆಯೇ ಆಗಿತ್ತು.

ಆಸ್ಪತ್ರೆಯಲ್ಲಿ ಎಲ್ಲೆಲ್ಲೂ ಶಿಸ್ತು, ಕೊನೆಯಿಲ್ಲದ ಉತ್ಸಾಹ. ಈ ಶಿಬಿರವನ್ನು ನೋಡಿದರೆ ಸೇನಾ ಶಿಬಿರದಂತೆ ಕಾಣುತ್ತಿತ್ತು. ಸರ್‌ಪಂಚರೇ ಸ್ವಯಂ ಸೇವಕರಾಗಿದ್ದರು. ಇತರ ಹಳ್ಳಿಗರು ನಿಃಸ್ವಾರ್ಥ ಸೇವೆ ಸಲ್ಲಿಸಿದರು. ಶಸ್ತ್ರಕ್ರಿಯೆಗೆ ಬಂದ ಮಹಿಳೆಯರ ಜತೆ ಅವರ ಚಿಕ್ಕಮಕ್ಕಳೂ ಬಂದಿದ್ದರು. ಮಹಿಳಾ ಮಂಡಳದ ಸದಸ್ಯೆಯರು ಈ ಮಕ್ಕಳಿಗೆಲ್ಲ ಸ್ನಾನ ಹಾಗೂ ಊಟ ಮಾಡಿಸುತ್ತಿದ್ದರು. ಇದೊಂದು ಹೃದಯಂಗಮ ದೃಶ್ಯವಾಗಿತ್ತು. ಇಲ್ಲಿಗೆ ಬಂದ ಸ್ತ್ರೀಯರಿಗೆಲ್ಲ ಮಹಿಳಾ ಮಂಡಳದ ಸದಸ್ಯೆಯರೇ ಆಪ್ತಗೆಳತಿಯರು, ಮಾರ್ಗದರ್ಶಿಕೆಯರು.

ಒಂದೇ ಒಂದು ನೊಣವಿಲ್ಲ

ಹಳ್ಳಿಗರೆಲ್ಲ ಈ ಶಿಬಿರದ ಯಶಸ್ಸಿಗೆ ನಾ ಮುಂದು ನೀ ಮುಂದು ಎಂದು ಮುಂದೆ ಬಂದು ಐವತ್ತು ಚೀಲ ಲಕ್ಕಿಯನ್ನು ಉಚಿತವಾಗಿ ನೀಡಿದರು. ಶಿಬಿರದಲ್ಲಿ ಊಟದ ವ್ಯವಸ್ಥೆ ಇತ್ತು. ಸರ್‌ಪಂಚರೇ ಇದರ ಮೇಲ್ವಿಚಾರಕರು, ಯುವಕ ಮಂಡಳದ ಸದಸ್ಯರೇ ಬಡಿಸುವವರು. ಶಸ್ತ್ರಕ್ರಿಯೆಯಾಳಿಕೆ ಮಹಿಳೆಯರಿಗೆ ಹಾಲು, ಬ್ರೆಡ್ಡುಗಳನ್ನು ಇಲ್ಲಿ ಕೊಡಲಾಗಿತ್ತು.

ಮಹಿಳೆಯರು ತಂಗಿದ ಶೆಡ್ಡುಗಳು ಶುಚಿಯಾಗಿದ್ದವು. ಅಲ್ಲಿ ಒಂದೇ ಒಂದು ನೊಣವೂ ಕಾಣಬರಲಿಲ್ಲ. ಆರೋಗ್ಯಕ್ಕೆ ಹಾನಿಕರವಾದ ಯಾವ ಕೊಳೆಯೂ ಹೊಲಸುಗಳೂ ಅಲ್ಲಿರಲಿಲ್ಲ.

ಇಲ್ಲಿಗೆ ಬರುವ ಮಹಿಳೆಯರಿಗೆ ಉಚಿತವಾದ ವಸತಿ ಸೌಕರ್ಯವಿತ್ತು. ಅದರೂ ಟಾಂಗಾ, ಲಾರ್ಸ್, ಎತ್ತಿನ ಗಾಡಿ ಎಂದು ಬಗೆ ಬಗೆಯ ವಾಹನಗಳಲ್ಲಿ ಇವರು ಶಿಬಿರಕ್ಕೆ ಬರುತ್ತಿದ್ದರು.

ಡಾಕ್ಟರರು, ದಾಯಿಗಳು ರಾತ್ರಿ ಹಗಲು ಎಚ್ಚರಿಕೆಯಿಂದಿದ್ದು, ಮಹಿಳೆಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಇದರಿಂದ ಶಿಬಿರಕ್ಕೆ ಬಂದ ಮಹಿಳೆಯರಲ್ಲಿ ಧೈರ್ಯ ತುಂಬಿತ್ತು, ವಿಶ್ವಾಸ ಹುಟ್ಟಿತ್ತು.

ಈ ಶಿಬಿರ ನಾಲ್ಕು ವಾರಗಳ ಕಾಲ ನಡೆಯಿತು. ಇದರ ಮುಕ್ತಾಯ ಕಾರ್ಯಕ್ರಮ ಕಳೆದ 15ರಂದು ಜರುಗಿತು. ನಮ್ಮ ದೇಶದಲ್ಲಿ ಇಂತಹ ದೊಡ್ಡ ಶಿಬಿರ ನಡೆದುದು ಇದೇ ಮೊತ್ತಮೊದಲ ಸಲ. ಇದು ದೇಶದ ಇಂತಹ ಅನೇಕ ಶಿಬಿರಗಳಿಗೆ ಮಾರ್ಗದರ್ಶಕವಾಗುವುದರಲ್ಲಿ ಸಂದೇಹವಿಲ್ಲ.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

R. E. P. 426/1967
R. E. A. 513/1967
O. S. 747/1965

ಜಾರ್ಲಿಸ್ ಜೋಕಿಮಿನೇಜಸ
—ಅರ್ಜಿದಾರ

ಗೋವಿಂದ ಯೂನಿ ಈಶ್ವರಶೆಟ್ಟಿಗಾರ್, ಸೋಮಯಾನ ಡೊಂಬ ಸೆಟ್ಟಿಗಾರನ ಮಗ, ಮಂಗಳೂರು ತಾಲ್ಲೂಕು ಕಲ್ಲಾಪು ಗ್ರಾಮದ ಕಂಚನ ಕೆರೆ —ಎದ್ರಿ

ಸದ್ರಿ ಎದ್ರಿ ಅದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ಸದ್ರಿ ಡಿಕ್ರಿಯಲ್ಲಿ ಮೂಂಟಕ್ಕೆ ಸಿಧಿಯಿರುವ ಸ್ತ್ರೀಂಸ್ತ್ರಗಳನ್ನು ಯೇಲಂಗೆ ಅಪೇಕ್ಷಿಸಿ ಅರ್ಜದಾರನು ದಾಖ್ಲು ಮಾಡಿದ ಯೇಲಂಯ ಸ್ತ್ರಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ಮತ್ತು ಯೇಲಂ ಸಮಯ ಅರ್ಜದಾರರಿಗೆ Bid ನ set off ಸಮಯ ಶರ್ತ ಕೊಡಿಸಬೇಕಾಗಿ ಅರ್ಜದಾರನು ದಾಖ್ಲು ಮಾಡಿದ R. E. A. 513/1967ನ್ನು ನಿಮಗೆ ನೋಟೀಸಿನ ಬಗ್ಗೆ ಕೊಡಾ ತಾ. 17—1—1968ಕ್ಕೆ ಯೆ ಡೋಜಾಗಿಯುದೆ. ಅಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ನೀವು ಪೆಳ್ಳಂಡ ಕೋರ್ಟ್ ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡಕ್ಕಾದ್ದು, ಕಪ್ಪುದ್ರೆ ನಿನ್ನ ಗೈರ ಹಾಸ್ರಯಲ್ಲಿ ಸದ್ರಿ ಅಮ್ಲಜ್ಯಾರಿ ತೀರ್ಮಾನಿಸಲಾಗುವದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಲಾಯದೆ.

K. V. Kamath
Advocate for Petitioner

Karkala, 24—12—67

ಓಲೆ

‡‡‡

ತಲ್ಲಿತು ನೀವೇ ಬರೆದು ಕಳುಹಿಸಿದ
ಪುಸ್ತಕ ನನ್ನಯ ಕಡೆಗೆ
ಮನೆಯರೆಲ್ಲರು ಓದಿಯೆ ಕೊಟ್ಟೆರು
ಕಂತರ ನನ್ನಯ ಕೈಗೆ!

ಅಣ್ಣಾ—ಅಕ್ಕಾ ಅಪ್ಪಾ—ಅಮ್ಮಾ
ನಕ್ಕರು ನನ್ನನು ನೋಡಿ
ಓಹೋ! ನಿನ್ನಯ ಗಂಡನ ನೋಡೇ
ಕರೆದಿಹ ಕವಿತೆಯ ಮಾಡಿ!

'ನನ್ನವಳುಬಲ ಜಾಣೆ' ಎಂದಿಹರಲ್ಲಾ?
ಹೇಗೆ ತಿಳಿಯಿತು ನಿಮಗೆ
ನನ್ನ ಕಂಡ ಮರುದಿನವೇ ಬರೆದಿಂಗಾ?
ಯೋಚನೆ ಹೊಳೆಯಿತು ಹೇಗೆ?

'ರಾಮಗಿರಿಗೆ ನೂರು ಮೈಲು'
ಎನ್ನುವುದೇ?
ರಾಮಗಿರಿಗೆ ಅರೇ ಮೈಲು!
ಪ್ರಕಟಿತ ಕವಿತೆ 'ನಿಮ್ಮ ನೆರಪು'
ತರುವುದೇ?
ನಾ ನೆನೆಸುವೆ ನಿಮ್ಮ ದಿನಾಲು!

—"ಮಲ್ಲಾರಿ"

ಕುಂದಾಪುರ
ಮುನ್ಸಿಫ್ ಕೋರ್ಟ್‌ನಲ್ಲಿ

R.E.P. 215/67.
O. S. 87/1933.

ಶ್ಯಂಗಾರಿ ಅಮ್ಮ ... . . ಅರ್ಜಿದಾರಳು,
ಮತ್ತು
ವೀರಾಕ್ಷಿ ದಾಯಿ ಕೊಡಾ..... . ಎದ್ರಿರು.

ಎದ್ರಿ ವಿರಾಕ್ಷಿ ಬಾಯಿ, ನಾರಾಯಣ ಉಪ್ಪರ ವಿಧವೆ. ಹಾಲಿ ಕುಂದಾಪುರ ತಾಲೂಕು ಸಳ್ಳೂರು ಗ್ರಾಮದಲ್ಲಿರುವವಳು—

ಅಮ್ಲಜಾರಿ ಅರ್ಜದಾರಳು ತನ್ನ ತಾಯಿಯುಳ್ಳಲಾಗಿ ಮೃತಪಟ್ಟ ಗಾರಾನ್ನಗೆ ಡಿಕ್ರಿ ವಿಧಿಸ್ಕಾರಾ ಬರಬೇಕಾದ ಕ್ರೂಢಿ ಸಂಪತ್ತಿನ ಬಾಬ್ತು ಬಾಕಾಯ್ದಾ ಅಕಸಾತ್ಕರ್ದ ಹಣಗಳಿಗೆ ಮಾಡಿದ ಮೇಲೆ ಕಾಣಿಸಿದ ಅಮ್ಲಜಾರಿಯು ತಾ. 5—4—1968ಕ್ಕೆ ತಮ್ಮಗೆ ಯಿಟ್ಟಿರುತ್ತದೆಂತಲೂ ಸದ್ರಿ ದಿವ್ಸ ಎದ್ರಿಳು ಕೋರ್ಟ್ ಮುಂದೆ ಹಾಜರಾಗಲಿಕ್ಕೆ ತಪ್ಪದ್ರೆ ಸದ್ರಿ ದಿವ್ಸ ಕರೆಕ್ಕೆದಲ್ಲಿ ಮುಂದಿನ ಕಾನೂನಡೆಯುವುದೆಂತಲೂ ಈ ಮೂಲ್ಕ ತಿಳಿಸೋಣಾಗುತ್ತದೆ.

G. Sanjiva Rau
Vakil for Petitioner

ಕುಂದಾಪುರ, 4—1—68

ಮಹಾಭಾರತದ ಭವ್ಯ ಸಾಂಸ್ಕೃತಿಕ ಮೌಲ್ಯ

[ಬದನೇ ಪುಟದಿಂದ]

ನ್ನೂ ಸ್ವತಂತ್ರವಾಗಿ ಪರಿಸಬಹುದಾಗಿದೆ. ಒಂದೊಂದರ ಮೇಲೂ ಪ್ರವಚನ ಪಡೆಸಬಹುದಾಗಿದೆ

ಎಲ್ಲ ಮನುಕುಲದ ಪರಂಪರೆ

ವಿಲ್ಕಿನ್ಸ್ ಭಗವದ್ಗೀತೆಯನ್ನು ಭಾಷಾಂತರಿಸಿದಾಗ ಅದು ಮೊಟ್ಟ ಮೊದಲ ಬಾರಿಗೇ ಯುರೋಪಿಗೆ ಪರಿಚಿತವಾಯಿತು. ಪಶ್ಚಿಮದ ಗಣ್ಯ ದಾರ್ಶನಿಕರ (ಗಟೆ, ಹೆಗೆಲ್ ಮೊದಲಾದವರು) ಗಮನಸೆಳೆದಂತೆ ಇದರ ಪ್ರಭಾವ ಪ್ರಚಂಡವಾಯಿತು. ಇದರಿಂದ ಇಂಗ್ಲೆಂಡಿನಲ್ಲಿ ಮಾತ್ರವೇ ಅಲ್ಲ ಫ್ರಾನ್ಸಿನಲ್ಲಿ, ಅದರಲ್ಲೂ ಮುಖ್ಯವಾಗಿ ಜರ್ಮನಿಯಲ್ಲಿ ಸಂಸ್ಕೃತ ಭಾಷಾಧ್ಯಯನಕ್ಕೆ ವಿಶೇಷ ಸ್ಫೂರ್ತಿ ಉಂಟಾಯಿತು.

ವಿಲ್ಕಿನ್ಸ್‌ರ ಭಾಷಾಂತರ ಪ್ರಕಟವಾದ ಮೂರು ವರ್ಷಗಳ ಬಳಿಕ ಇಂಗ್ಲೀಷ್ ಭಾಷೆಯಿಂದ ರಷ್ಯನ್ ಭಾಷೆಗೆ ಭಗವದ್ಗೀತೆಯ ಭಾಷಾಂತರಗೊಂಡಿತು. ಪಶ್ಚಿಮದಲ್ಲಿ ಈ ಕೃತಿ ಸಾಕಷ್ಟು ಪರಿಚಿತವಾಗಿದೆ. ಕೇವಲ ವಿದ್ವಾಂಸರು ಮಾತ್ರವೇ ಇದನ್ನು ಓದುವುದಿಲ್ಲ, ಸಾಕಷ್ಟು ದೊಡ್ಡ ವಾಚಕ ವೃಂದವೂ ಇದಕ್ಕಿದೆ. ಸೂರು ಮುಖ್ಯ ಯುರೋಪಿಯನ್ ಭಾಷೆಗಳಲ್ಲಿ ಭಗವದ್ಗೀತೆಯ ಅನೇಕ ಭಾಷಾಂತರಗಳು ಬೇಕುಗಳೊಡನೆ ಬಂದಿವೆ

ರಷ್ಯಾದಲ್ಲಿ ಮಹಾಭಾರತ

ರಷ್ಯದ ಸಂಸ್ಕೃತ ಪಂಡಿತ ಮಂಡಲಿಯಾಗೆ ನೋಡಿದರೆ ಮಹಾಭಾರತಕ್ಕೆ ಅಲ್ಪ ಗಮನವಿತ್ತು ಬೌದ್ಧ ಸಾಹಿತ್ಯ ವ್ಯಾಸಂಗದಲ್ಲೇ ಹೆಚ್ಚಾಗಿ ತೊಡಗಿತೆಂದು ಹೇಳಬೇಕು. ನಳ—ದಮಯಂತಿಯರ ಕೆಲವೇ ಕೆಲವು ದೃಷ್ಟಾಂತ ಕಥೆಗಳು ಪ್ರಕಟವಾಗಿವೆ. ಕೇವಲ ಸೋವಿಯೆತ್ ವರ್ಷಗಳಲ್ಲಿ ಮಾತ್ರವೇ ಭಾರತದ ಹಿರಿಯ ಕಾವ್ಯಗಳ ಅಧ್ಯಯನ ಆರಂಭವಾಯಿತು. ೧೯೫೦ರಲ್ಲಿ ವ್ಲಾದಿಮಿರ್ ಕಲ್ಯಾನೋವ್ ಮಹಾಭಾರತದ ಆದಿಪರ್ವವನ್ನೂ ನಂತರ ಕೆಲ ವರ್ಷಗಳ ಬಳಿಕ ಸಭಾ ಪರ್ವವನ್ನೂ ಭಾಷಾಂತರಿಸಿದರು.

ಆದರೆ ಸಂಪೂರ್ಣ ಮಹಾಭಾರತದ ಭಾಷಾಂತರ ಈಗ ನನಗಿರುವುದು ಒಂದೇ ಒಂದು ಎಂಬುದು ನಿಜವಾಗಿಯೂ ಖೇದದ ಸಂಗತಿ. ಗತ ಶತಮಾನದ ತೊಂಬತ್ತರ ಕಾಲದಲ್ಲಿ ಪ್ರತಾಪ ಚಂದ್ರ ರಾಯ್ ಗದ್ಯ ರೂಪದಲ್ಲಿ ಇದನ್ನು ಇಂಗ್ಲೀಷಿಗೆ ಅನುವಾದಿಸಿದರು. ಇದರ ಚಲಾವಣೆ ಎಷ್ಟೊಂದು ಚಿಕ್ಕದಾಗಿತ್ತೆಂದರೆ ಅದು ಪ್ರಕಟವಾದೊಡನೆ ಕೂಡ ಒಂದು ಪ್ರತಿಯನ್ನು ಪಡೆಯುವುದು ಕಷ್ಟವಾಯಿತು. ಇಂದು ಇದು ಕೇವಲ ಗ್ರಂಥ ವಿವರಣ ಪಟ್ಟಿಗೆ ಬೇಕಾದ ವಿರಲ ಕೃತಿಯಾಗಿ ಮಾತ್ರ ಉಳಿದಿದೆ.

ಇಂಥ ಒಂದು ಸುಂದರವಾದ ಹಿರಿಮೆಯ ಅದ್ಭುತ ಆತ್ಮಕ ಕೃತಿ ಎಲ್ಲ ಮಾನವಾಳಿಗೆ ಪರಿಚಯವಾಗದೆ ಉಳಿದಿದೆಯೆಂಬುದನ್ನು ನಾವು ಅತ್ಯಂತ ದುಃಖದಿಂದ ಗಮನಿಸಬೇಕಾಗಿದೆ. ಇದು ಎಲ್ಲರ ಕೈಗೂ ಸಾಧ್ಯವಾದಷ್ಟು ಬೇಗನೆ ಎಟುಕುವಂತಾಗಬೇಕಾಗಿರುವುದು. ಅಗತ್ಯ. ಈ ಘನವಾದ ಕಾರ್ಯ ಮೊಟ್ಟ ಮೊದಲನೆಯದಾಗಿ ಭಾರತೀಯ ಪಂಡಿತರಿಂದಲೇ ನಡೆಯಬೇಕು. ಯಾಕೆಂದರೆ ಗತ ಕಾಲದ ಘನ ಪರಂಪರೆಯ ವಾರಸುದಾರರು ಅವರೇ ಆಗಿದ್ದಾರೆ.

ಚಿಂತನ— ಮಂಥನ

ಕಳೆದು ಹೋದ ದಿನಗಳು

ಶ್ರೀ ಬಿ. ನರಸಿಂಗ ರಾವ್.

"ನಾವು ಚಿಕ್ಕವರಿದ್ದಾಗ ಅಕ್ಕಿಗೆಷ್ಟು ಬೆಲೆ ಅಂತಿರಾ? ರೂಪಾಯಿಗೆ ಹತ್ತು ಸೇರು ಅಕ್ಕಿ. ಗೊನೆ ಬಾಳೆ ಹಣ್ಣಿಗೆ ನಾಲ್ಕಾಣೆ .. ನವಗೆ ಆಗ ಸಂಬಳ ತಿಂಗ್ಳಿಗೆ ಅರ್ವತ್ತು ಸಿಕ್ಕಿದ್ರೂ ಮನೇಲಿ ದಾರಿದ್ರ್ಯ ಇರ್ಲಿಲ್ಲ. ಈಗೇನಂತೀರಿ? ತಿಂಗ್ಳಿಗೆ ನಾಲ್ಕುನೂರು ಸಿಕ್ಕಿದ್ರೂ ಮನೇಲಿ ಹೊಟ್ಟೆಗಿದ್ರೆ ಒಟ್ಟೆಗಿಲ್ಲ. ಬಟ್ಟೆಗಿದ್ರೆ ಹೊಟ್ಟೆಗಿಲ್ಲ ಅನ್ನೋ ಸ್ಥಿತಿ..." ಎಂದು ನನ್ನಜ್ಜ ಮಾತ್ರವಲ್ಲ ಎಲ್ಲರ ಅಜ್ಜಯ್ಯನೂ ಹೇಳುತ್ತಾನೆ.

ಕಳೆದು ಹೋದ ದಿನಗಳು ಚಿನ್ನದ ದಿನಗಳು ಎಂದೇ ಎಲ್ಲರ ಅಭಿಪ್ರಾಯ. ಹಿಂದೆ ರೂಪಾಯಿಗೆ ಎಷ್ಟು ಸೇರು ಅಕ್ಕಿ ಅಂತ ಕೇಳುತಿದ್ದರೆ ಇಂದು ಅಕ್ಕಿಗೆ ಸೇರಿಗೆ ಎಷ್ಟು ರೂಪಾಯಿ ಅಂತ ನಾವು ಕೇಳುತಿದ್ದೇವೆ. ಹಣ-ಕಾಸಿನ ಬೆಲೆ ಇಳಿದಿದೆ. ಕಾಲ ಮುಂದರಿಯುತಿದ್ದಂತೆ ಕೇವಲ ಹಣಕಾಸಿನ ಬೆಲೆಯೂ ಅಲ್ಲ ಮಾನವನ ಬೆಲೆಯೂ ಇಳಿದಿದೆ. ಹಿಂದೆ ಮುಂದಾಳುಗಳ ಕರೆಗೆ ಓಗೊಟ್ಟು ತ್ಯಾಗಗೈದ ಜನರಿದ್ದರೆ; ಇಂದು ಸ್ವತಃ ಎಲ್ಲರೂ ಮುಂದಾಳುಗಳಾಗಿದ್ದಾರೆ. ಹೀಗಿರುವಾಗ ಇಂದು ಮುಂದಾಳುಗಳನ್ನು ಹಿಂಬಾಲಿಸುವವರಾರು?

"Old is Gold" ಎಂಬ ಮಾತು ಇಂಗ್ಲೀಷಿನಲ್ಲಿದೆ ಹಳೆಯ ವಸ್ತುಗಳು ಹಳೆಯ ದಿನದಷ್ಟೆ ಉತ್ಕೃಷ್ಟವಾಗಿವೆ ಹಿಂದೆ ಕಾಲಾಣೆ ಕೊಟ್ಟು ಪಡೆದ ಒಂದು ವಸ್ತು ಇಂದು ಕಾಲು ರೂಪಾಯಿಗೆ ದೊರೆಯುವುದು ಕಷ್ಟ. ದೊರೆತರೂ ಹಿಂದಿನದಷ್ಟು ಉತ್ಕೃಷ್ಟವಿರದೆಂಬುದು ಖಾತ್ರಿ ಇಂದು ಎಲ್ಲಿ ನೋಡಿದರೂ ಕೃತ್ರಿಮತೆ ತುಂಬಿ ತುಳುಕಾಡುತ್ತಿದೆ.

ನನ್ನ ಅಜ್ಜ ಚಿಕ್ಕವರಿದ್ದಾಗ ಗೈಯುತ್ತಿದ್ದ ಕೆಲಸ ನನ್ನಿಂದ ಮಾಡಲಸಾಧ್ಯ ನನ್ನಜ್ಜ ತಂಗಳನ್ನವನ್ನುಂಡು ಸವಿದರೆ ನನಗೇಕೋ ಹೇಸುಗೆ.

ನಾವು ಬೆಳೆದು ಹೋದಂತೆಲ್ಲ ನಮ್ಮ ಬಾಲ್ಯ, ಕಳೆದು ಹೋದ ದಿನಗಳ ಬಗ್ಗೆ ದುಃಖಿಸುತ್ತಾ ಇರುತ್ತೇವೆ. ನಮ್ಮ ಗತ ವೈಭವಗಳನ್ನು ವರ್ತಮಾನದ ಕಷ್ಟಕಾರ್ಪಣ್ಯಗಳಿಂದ ತೂಗಿ ನೋಡಿ ನಮ್ಮ ವರ್ತಮಾನ ಪರಿಸ್ಥಿತಿಯನ್ನು ಹಳಿಯುವುದು ಮಾನವ ಸ್ವಭಾವ, "ನಾವಿನ್ನೂ ಚಿಕ್ಕವನಿದ್ದರೆ ... ಹೈಸ್ಕೂಲು ವಿದ್ಯಾರ್ಥಿಯಾಗಿದ್ದರೆ.... ಹಳ್ಳಿಲ್ಲ ...ಏನೇನೂ ತಿಳಿಯದ ಮುಗ್ಧ ಹುಡುಗನಾಗಿದ್ದರೆ .." ಎಂದು ಕನಸು ಕಾಣದವನ್ಯಾರು.? ನಾವು ಬಾಲ್ಯದಲ್ಲಿ ಕಾಣುತ್ತಿದ್ದ ಹಲವೊಂದು ದೃಶ್ಯಗಳು ಇಂದು ನಾವು ಸ್ವತಃ ಅನುಭವಿಸುವಾಗ ಅದುಲ್ಲೇನೂ ಸಂತಸ ತೋಡದು. ಹಿಂದೆ ಪೇಂಟ್, ಸೂಟು ಧರಿಸಿ ನಡೆವವರನ್ನು ಕಂಡಾಗ ನನಗೂ ಹಾಗೆ ಮಾಡಲು ತೋಚಿತ್ತು. ಆದರೆ ಅ ಸಾಧ್ಯವಾಗಿತ್ತು. ಆದರೆ ಇಂದು ಸಾಧ್ಯವಿದ್ದರೂ ಹಾಗೆ ಮಾಡಲು ತೋಚ ವುದಿಲ್ಲ. ದೂರದ ಬೆಟ್ಟ ನುಣ್ಣಗೆ. ನಾವು ದೊಡ್ಡವರಾದ ಮೇಲೆ, ಖರ್ಚು ಮಾಡಲು ಕೈತುಂಬಾ ಹಣ ದೊರೆತಾಗ ಏನೊಂದು ಸುಖ. ಅಂತ ತಿಳಿದ ಹಲವರ ಏಕೆಎಲ್ಲರ ಆಶೆಯು ಫಲಾಶೆಯಲ್ಲಿ ಅಂತ್ಯವಾಗಿದೆ.

ಬಾಲ್ಯದಲ್ಲಿ ಕಲಿತ ಶಾಲೆ, ಬಾಲ್ಯದ ಮಿತ್ರರು, ಬಾಲ್ಯದಲ್ಲಿ ಕೇಳಿದ ಗೀತೆಗಳು ಇವೆಲ್ಲ ಬಾಳಿನುದ್ದಕ್ಕೂ ನಮ್ಮನ್ನು ಬಿಡದೆ ಇರುತ್ತವೆ. ಯಾವ ಹೊಣೆಗಾರಿಕೆಯೂ ಇಲ್ಲದ ಬಾಲ್ಯದ ಸುದಿನಗಳನ್ನು ನೆನೆದು, ಏಕಾಕಿಯಾಗಿ ಚಿಂತಿಸುತ್ತಾ ನಾನು ಮನತುಂಬಾ ಅತ್ತದ್ದಿದೆ. ಬಾಲ್ಯದ ಮಿತ್ರರು ಇಂದು ಉದ್ಯೋಗಕ್ಕಾಗಿ ಎಲ್ಲೆಲ್ಲಾ ಹರಡಿ ಕೊಂಡಿದ್ದಾರೆ. ಅವರನ್ನು ಅಕಸ್ಮಾತ್ ಕಂಡಾಗ ಕಳೆದ ದಿನಗಳ ನೆನೆಪು ಮರುಕಳಿಸಿ ಸಂತಸದಲ್ಲಿ ನಾನೆಷ್ಟೋ ಬಾರಿ ಅತ್ತು ಬಿಟ್ಟಿದ್ದೇನೆ. "ಬಚಪನ್‌ಕೆ ದಿನ ಬಲಾನ ದೇಖಾ .." ಎಂಬ ಗೀತೆ ನಾನು ಚಿಕ್ಕಂದಿನಲ್ಲಿ ಕೇಳಿದಾಗ ಅದೇನೋ ಅನರ್ಥವೆನಿಸಿತ್ತು. ಆದರೆ ಇಂದು ನನಗೆ ಅದೇ ಅತೀ ಮಧುರ ಗೀತೆಯೆಂದು ಕಾಣುತ್ತದೆ.

ಬಾಲ್ಯದಲ್ಲಿ ಕಂಡ ಕನಸುಗಳು ಹಲವು. ಅದು ನನಸಾದರೆ ಎಷ್ಟು ಉತ್ಕೃಷ್ಟವಿತ್ತು ಎಂದೂ ನೆನಸಿದ್ದೆ. ಆದರೆ ಅವು ನನಸಾದಾಗ ನಾನು ಬಯಸಿದ ಸಂತಸವನ್ನೂ ಪಡೆಯಲಿಲ್ಲ.

ಇಂದಿನ ದಿನವೇ ನಾಳೆಗೆ ನಿನ್ನೆ. ಇಂದು ನಾವು ಸುಖದಲ್ಲಿ ಬಾಳುತ್ತಿದ್ದರೂ, ನಿನ್ನೆಯ ಕಷ್ಟದ ದಿನಗಳನ್ನು ನೆನೆದಾಗಲೂ ಆನಂದವನ್ನನುಭವಿಸುತ್ತೇವೆ. 'our sweetest songs are those which tell us of the saddest thoughts' ಎಂದು ಆಂಗ್ಲ ಕವಿ ಶೆಲ್ಲಿ ಅಂದಿದ್ದಾನೆ. ಎಷ್ಟಂದರೂ ಹೊನ್ನಿನ ನಿನ್ನೆಯು ಇಂದಿನಿಂದಲೂ ಸಿಹಿ. ಬಾಳಿನಲ್ಲಿ ನಾವು ಮುಂದರಿಯುತ್ತೇವೆ ಅಂದಾಗ ಮರಣದ ಕಡೆಗೂ ಮುಂದಡಿಯಿಡುತ್ತೇವೆ ಎಂದರ್ಥ.

ನಿನ್ನೆಯನ್ನೆ ನೆನೆದು ಇಂದನ್ನು ಹಳಿದು ದುಡಿಯ ಬಾರದು. ನಿನ್ನೆ ಹೊನ್ನಾಗಿತ್ತು, ನಿಜ ಆದರೆ ಇಂದನ್ನು ಮಣ್ಣು ಮಾಡಲಾಗದು. ಏಕೆಂದರೆ ಇಂದು ನಾಳೆಗೆ ನಿನ್ನೆ ಅಂದನಷ್ಟೆ?

ನಿನ್ನೆಗಳಿಸಿದ ಅನುಭವ ಜ್ಞಾನದೊಡನೆ ಇಂದನ್ನು ಸುಖದಲ್ಲಿ ಕಳೆಯಬೇಕು. ವೃಥಾ ಮನಸ್ಸಿಗೆ ಚಿಂತೆ ಹಚ್ಚಿಗೊಡಲಾಗದು. ಚಿಂತೆಯಲ್ಲಿ ಕಳೆದ ಸಮಯ ನಮ್ಮನ್ನು ಚಿತೆಯ ಕಡೆಗೆ ಬೇಗ ಸಾಗಿಸುತ್ತದೆ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 771

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾಕೀಸುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಎಲ್ಲೆಲ್ಲಿ ಏನೇನು?

ಅ ಭಾ ಮಾಧ್ವಮಂಡಲದ ಅಧ್ಯಕ್ಷರಾಗಿ ಶ್ರೀ ಶ್ರೀ ಭಂಡಾರಕೇರಿ ಶ್ರೀಗಳವರ ಆಯ್ಕೆ

ಬೆಂಗಳೂರು, ದಿ. 25—ಅಖಿಲ ಭಾರತ ಮಾಧ್ವ ಮಹಾಮಂಡಲದ ಸಕಲ ಸದಸ್ಯರ ಮುಂದೆ ಪರಿಸಿದ ಸಭೆಯು ಇಂದು ಬೆಳಿಗ್ಗೆ ಮಾಧ್ವ ಯುವಕ ಸಂಘದ ಕಚ್ಚೆಡದಲ್ಲಿ ಸೇರಿ ೧೯೬೭-೬೮ ವರ್ಷದ ಬಗ್ಗೆ ಶ್ರೀ ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದಂಗಳವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಭೆಯ ಅಧ್ಯಕ್ಷತೆಯನ್ನು ಮಂಡಲದ ಉಪಾಧ್ಯಕ್ಷರಾದ ಶ್ರೀ ಬಂಲಿ ಬಿಂದುಮಾಧವಾಚಾರ್ಯರು ವಹಿಸಿದ್ದರು.

ಈ ಸಭೆಯಲ್ಲಿ ೧೯೬೬-೬೭ ವರದಿ, ವಿವಿಧ ವಿಭಾಗಗಳ ಲೆಖ್ಖಪತ್ರ, ೧೯೬೭-೬೮ರ ಅಂದಾಜು ಪತ್ರಿಕೆ, ಶಿಕ್ಷಣ ನಿಧಿಯ ವಿಷಯಗಳನ್ನು ಪರಿಶೀಲಿಸಿ ಒಪ್ಪಿಗೆಯನ್ನೀಯಲ್ಪಟ್ಟವು. ಸಾತನ ಮಠಕ್ಕೆ ಬರ ಜನ ಸದಸ್ಯರನ್ನು ಕೇಂದ್ರ ಸಮಿತಿಗೆ ಆಯ್ಕೆ ಮಾಡಿತು. ಸಭೆಯು ಕಳೆದ ವರುಷದಲ್ಲಿ ಅಧ್ಯಕ್ಷತೆ ವಹಿಸಿ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದ ಶ್ರೀ ಶ್ರೀ ಪೇಜಾವರ ಮಠದ ಶ್ರೀಗಳವರಿಗೆ ಪ್ರಣಾಮಗಳನ್ನು ಮತ್ತು ಶ್ರೀ ಬಿ. ವೆಂಕಟೇಶಾಚಾರ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಉಡುಪಿಯಲ್ಲಿ ಅ. ಭಾ. ಮಾಧ್ವ ಮಂಡಲದ ಪ್ರದರ್ಶನ

ಬೆಂಗಳೂರು, ದಿ.೨೨-ಅಖಿಲಭಾರತಮಾಧ್ವ ಮಂಡಾಮಂಡಲದ ಪರವಾಗಿ ಇದೇ ಜನವರಿಯಿಂದ ೨೦ರ ವರೆಗೆ ಪ್ರದರ್ಶನವೊಂದನ್ನು ಉಡುಪಿಯ ರಥಬೀದಿಯಲ್ಲಿರುವ ಶ್ರೀ ಭೀಮನಕಟ್ಟೆ ಮಠದಲ್ಲಿ ಏರ್ಪಡಿಸಬೇಕೆಂದು ಯೋಚಿಸಲಾಗಿದೆ. ಈ ಪ್ರದರ್ಶನದಲ್ಲಿ ಮಾಧ್ವ ತತ್ವಜ್ಞಾನಕ್ಕೆ ಸಂಬಂಧಪಟ್ಟ ಪ್ರಾಚೀನ ಗ್ರಂಥಗಳ ದರ್ಶನ, ಮಾಧ್ವ ಗ್ರಂಥಗಳ ಮಹಾಂಟ ಕೇಂದ್ರ, ಆಕರ್ಷಕ ಹಂಡಿ-ಕುಣ್ಣವಾದಿಗಳ ಚಿತ್ರಪಟಗಳು, ಶಿಕ್ಷಣ ನಿಧಿ, ಮಂಡಲದ ರಚನಾತ್ಮಕ ಕಾರ್ಯಕ್ರಮಗಳ ಚಿತ್ರಪಟಗಳು, ತೀರ್ಥಕ್ಷೇತ್ರಗಳ ಪ್ರದರ್ಶನ ಪಠಿಯ ಚಿತ್ರಪಟಗಳು, ಧರ್ಮಾಭಿಮಾನಿಗಳಿಗೆ ಉಪಯುಕ್ತ ವಸ್ತು ಮೊದಲಾದುವುಗಳ ವೈವಿಧ್ಯತೆಯು ಸೇರಿಕೊಂಡಿದುವುದು. ಅಲ್ಲದೆ ಹರಿದಾಸ ಸಾಹಿತ್ಯ ದರ್ಶನವು ಆಗಲಿದೆ.

ಈ ಪ್ರದರ್ಶನವನ್ನು ಉಡುಪಿಯಲ್ಲಿ ಸಂಕ್ರಮಣೋತ್ಸವ ಹಾಗೂ ಪರ್ಯಾಯ ಉತ್ಸವ ನಿಮಿತ್ತವಾಗಿ ಸಂಘಟಿಸಲಾಗಿದ್ದು ಸಕಲ ಅಭಿಮಾನಿಗಳು ಇದರ ಪ್ರಯೋಜನ ಪಡೆಯಬೇಕೆಂದು ಮಂಡಲದ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಅನಂತ ತಡೆಸರು ಪಿನ್ನವಿಸುತ್ತಾರೆ.

ಯಕ್ಷಗಾನ ಕಲಾಮಂಡಲ

ಉಡುಪಿ—ಆದಿ ಉಡುಪಿ ಹಾ. ಎ. ಶಾಲೆಯ ಸಭಾಭವನದಲ್ಲಿ ಎಳ್ಳಮಾವಾಸ್ಯೆಯ ಅಂಗವಾಗಿ ಯಕ್ಷಗಾನ ಕಲಾಮಂಡಲದವರಿಂದ ಡಾ| ಯು. ಪಿ. ಉಪಾಧ್ಯ ಇವರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಾಲಕ್ಷೇಪ ಜರಗಿತು. ಎಡಿಗಾರರು ಲಕ್ಷ್ಮೀನಾರಾಯಣ ಉಪಾಧ್ಯಾಯರು ವ್ಯಾಸ್ತಾವಿಕವಾಗಿ ಮಾತನಾಡಿದ ಬಳಿಕ ಸಂಗತ ಕಲಾವಿದರುಗಳ ಬಗ್ಗೆ ಸಂತಾಪ ಸೂಚಿಸಲು ಮೌನ ಪ್ರಾರ್ಥನೆ ಆಚರಿಸಲಾಯಿತು. ಅನಂತರ "ಕರ್ಣಾರ್ಜುನರ ಕಾಳಗ"ಎಂಬ ಕಥಾಭಾಗವನ್ನು ಶ್ರೀ ಕೆ. ನಾರಾಯಣ ಸಟ್ಟರ ಹಾಡುಗಾರಿಕೆಯೊಂದಿಗೆ, ಶ್ರೀಗಳಾದ ಮಟ್ಟಿ ಸುಬ್ಬರಾಯ ಮತ್ತು ಸಗ್ರಿ ಕಿಟ್ಟಾಚಾರ್ಯರ ಮೃದಂಗವಾದನದಿಂದಲೂ, ಶ್ರೀ ಮಟ್ಟಿ ಗೋವರ್ಧನ ರಾಯ ಇವರ ಚೆಂಡೆವಾದನದಿಂದಲೂ ಕಲಾ ಪರಿಪೂರ್ಣವಾಗಿ ನಡೆಯಿತು.

ಪಾತ್ರಧಾರಿಗಳಾಗಿ ಶ್ರೀಗಳಾದ ಪೊಳ್ಳ ದೇವಪ್ಪ ಸಟ್ಟ, ಮಟ್ಟಿಕೋಟೆ ಸುಬ್ಬರಾಯ, ಸೀತಾನದಿ ಗಣಪಯ್ಯ ಸಟ್ಟ, ಪಿ. ಯಲ್. ಎನ್. ಉಪಾಧ್ಯಾಯ, ಮಟ್ಟಲ್ ಕೃಷ್ಣಯ್ಯ ಸಟ್ಟ, ಕೆ. ರಾಘವಾಚಾರ್ಯ, ಪೈ. ರಾಘವೆಟ್ಟ, ವೆಂಕಟಾಚಲ ರಾವ್, ಮೊದಲಾದವರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ಶ್ರೀ ಪೊಳ್ಳ ದೇವಪ್ಪ ಸಟ್ಟರು ಧನ್ಯವಾದವರ್ಪಿಸಿದಬಳಿಕ ಮಂಗಲಾಚರಣೆ ಜರಗಿತು.

ಜಲಾನ್ವೇಷಣೆ ಪ್ರದರ್ಶನ

ಮಣಿಪಾಲ್ ನೆಹರೂ ಸ್ಮಾರಕ ಲೈಬ್ರೇರಿಯಲ್ಲಿ ಏರ್ಪಡಿಸಲಾಗಿರುವ ಜಲಾನ್ವೇಷಣೆ ಪ್ರದರ್ಶನವನ್ನು ಡಾ| ಟಿ ಮಾಧವ ಪೈಯವರು ಉದ್ಘಾಟಿಸಿದರು. ಅಮೇರಿಕನ್ ಸಾಂಸ್ಕೃತಿಕ ಕೇಂದ್ರದ ಪರವಾಗಿ ಡೈರೆಕ್ಟರ್ ಶ್ರೀ ಎಡ್ವರ್ಡ್ ಟಿ ಸ್ಟೆಯವರು ಸ್ವಾಗತಿಸಿ ಇಂದು ನೀರಿನ ಅವಶ್ಯಕತೆಯನ್ನು ವಿವರಿಸಿದರು. ಡಾ| ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ನೀರಿನ ಬಳಕೆಯೂ ಹೆಚ್ಚುತ್ತಿದೆ. ಆದ್ದರಿಂದ ಈಗ ಈ ಜಲಾನ್ವೇಷಣೆಯ ಪ್ರದರ್ಶನ ಸ್ವಾಗತಾರ್ಹವೆಂದರು.

ಶ್ರೀ ಟಿ ರಮೇಶ ಪೈಗಳವರು ಅಂದಿನ ಮುಖ್ಯ ಭಾಷಣಕಾರರಾಗಿ ಮಂಗಳೂರು ಹಾರ್ಬರ್ ಇಲಾಖೆಯ ಚೀಫ್ ಇಂಜಿನಿಯರ್ ಶ್ರೀ ಸಿ ವಿ ರಾಜಗೋಪಾಲರವರ ಪರಿಚಯ ಮಾಡಿಸಿಕೊಟ್ಟರು. ಶ್ರೀ ಸಿ ವಿ. ರಾಜಗೋಪಾಲರವರು ಮಾತನಾಡುತ್ತಾ ನೀರಿನ ಸದುಪಯೋಗ ಮಾಡಿ ಸ್ವಾವಲಂಬಿಗಳಾಗಿ ಜೀವಿಸಲು ಹೇಗೆ ಸಾಧ್ಯವೆಂದು ತಿಳಿಸಿದರು. ಡಾ| ಎಚ್. ಶಾಂತಾರಾಮ್‌ರವರು ವಂದನಾರ್ಪಣೆಗೈದರು.

ಹೊಸ ವರ್ಷದ ಗೌರವ ಸನ್ಮಾನ

ಉಡುಪಿ—ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಮತ್ತು ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಹೊಸ ವರ್ಷದ ಆದಿಯಲ್ಲಿ ಈ ಜಿಲ್ಲೆಯ ವಯೋವೃದ್ಧ ಸಫಲ ಜೀವಿಗಳನ್ನು ಪ್ರಶಸ್ತಿಯನ್ನಿತ್ತು ಗೌರವಿಸುವ ಸಮಾರಂಭವು ಕಾ. ೧೧ರಂದು ಕಲ್ಯಾಣ ಥಿಯೇಟರಿನಲ್ಲಿ ಡಾ| ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಪೈಗಳವರು ಸ್ವಾಗತಿಸುತ್ತಾ ಸಮಾಜದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗಳಿಗೆ ಸನ್ಮಾನ ಸಲ್ಲಿಸುವದಕ್ಕೆ ಈ ಸಭೆಯನ್ನು ನಡೆಸಿಕೊಂಡು ಬಂದಿರುತ್ತೇವೆಂದು ಹೇಳಿದರು. ಶ್ರೀ ಟಿ. ರಮೇಶ ಪೈಗಳವರು ಮಾತನಾಡುತ್ತಾ ದಿ| ಉಪೇಂದ್ರ ಪೈಗಳವರು ೧೯೪೦ನೇ ಇಸವಿಯಲ್ಲಿ ಆರಂಭಿಸಿದ ಈ ಸನ್ಮಾನ ಸಭೆಯ ಉದ್ದೇಶವನ್ನು ವಿವರಿಸಿದರು.

ಶ್ರೀಗಳಾದ ಎಸ್. ಎನ್. ಮೂಡಬಿದ್ರೆ, ಕೆ. ಆರ್. ಕಾರಂತ, ಟಿ. ಎನ್. ರಾವ್, ಪಿ ಶಿ ಪೋನ್ಸಿಬೋರ್, ಡಿ ಜೆಡ್ ಸೋಜ್ ರವರು ಸನ್ಮಾನ ವ್ಯಕ್ತಿಗಳಾಗಿದ್ದರು. ಶ್ರೀಗಳಾದ ಎ ಟಿ ಅಲ್ಸೆ, ಪಿ. ಶ್ರೀಪತಿ ಆಚಾರ್ಯ, ಟಿ. ರಮೇಶ ಪೈ ಮತ್ತು ಡಾ| ವಿ. ಕೃಷ್ಣ ರಾಯರು ಈ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಎಸ್. ಎನ್. ಮೂಡಬಿದ್ರೆಯವರು ಡಾ| ಪೈಗಳ ವಿಧಾಯಕ ಕಾರ್ಯಕ್ರಮ ದಿ| ಉಪೇಂದ್ರ ಪೈಗಳ ಜೀವನಾದರ್ಶವನ್ನು ಕೊಂಡಾಡಿದರು; ಶ್ರೀ ಕೆ. ಆರ್. ಕಾರಂತರು ದೇಶದ ಆರ್ಥಿಕ ಪರಿಸ್ಥಿತಿ ಮೊದಲಾದವುಗಳಿಂದಾಗಿ ಅರಾಜಕತೆ ಬೆಳೆಯುತ್ತಿದೆಯೆಂದೂ ಜನಸಾಮಾನ್ಯರ ಸ್ಥಿತಿಗತಿ ಅತ್ಯಂತ ಶೋಚನೀಯವಾಗಿದೆಯೆಂದೂ ಹೇಳಿದರು. ಡಾ| ಪೈ ಹಾಗೂ ಎಕಾಡೆಮಿಯ ಕಾರ್ಯಗಳನ್ನು ಶ್ರೀ ಕಾರಂತರು ಪ್ರಶಂಸಿಸಿದರು.

ಶ್ರೀ ಟಿ. ಎನ್. ರಾಯರು ಎಕೆಡೆಮಿಯ ಮುಖಾಸಾಧನೆಗಳನ್ನೂ, ಪರಿಶ್ರಮವನ್ನೂ ಕೊಂಡಾಡಿದರು. ಪಿ| ಶಿ| ಪೋನ್ಸಿಬೋರ್, ಡಿ. ಜೆ. ಟಿ. ಸೋಜಾರವರು ಮಾತನಾಡಿ ಡಾ| ಮಾಧವ ಪೈಗಳು ವಿದ್ಯಾರ್ಥಿಗಳಿಗೆ ಯೋಗ್ಯ ಮಾರ್ಗದರ್ಶನ ಮಾಡುತ್ತಿದ್ದಾರೆ. ಅದಕ್ಕಾಗಿ ಅವರನ್ನು ನಾವು ಸನ್ಮಾನಿಸಬೇಕಾಗಿದ್ದೆವೆಂದು ಅವರು ನಮ್ಮನ್ನು ಸನ್ಮಾನಿಸುತ್ತಿದ್ದಾರೆ. ಇದು ಅವರು ಉದಾರಾಂತಃಕರಣವುಳ್ಳ ಜನರು ಎಂಬುದನ್ನು ವ್ಯಕ್ತಪಡಿಸುತ್ತದೆಯೆಂದೂ ಹೇಳಿದರು.

ಡಾ| ಕೆ. ಕೃಷ್ಣಸ್ವಾಮಿಯವರು ಧನ್ಯವಾದವನ್ನು ಸಮರ್ಪಿಸಿದರು.

ಯಕ್ಷಗಾನ ಕಲೆಯ ಕುರಿತು ಹಂಬಲ

[ನಾಲ್ಕನೇ ಪುಟದಿಂದ]

ಳನಿತ್ತುದನ್ನು ಇಲ್ಲಿ ನೆನಪು ಮಾಡುತ್ತೇನೆ. ಕಲೆಯಲ್ಲಿ ಅಳವಾಗಿ ಭಾಷಾಜ್ಞಾನವಿರಬೇಕು. ಹಂಪಾ ಪುರಾಣಗಳನ್ನು ವಾಚಿಸಿ ಅಗಾಧ ಪಾಂಡಿತ್ಯವನ್ನು ಸಂಪಾದಿಸಬೇಕು. ತಾನು ಮೇಲು ತಾನು ಮೇಲಾಗಬೇಕೆಂಬ ಅಭಿಲಾಷೆಯೊಂದಿಗೆ ಕಥಾಧಾರಣೆಗೆ, ಪುರಾಣದ ಹಿನ್ನೆಲೆಗೆ ಭಂಗ ಬರುವಂತಹ ಮಾತುಗಾರಿಕೆಗೆ ಹೋಗಬಾರದು. (ವಾಲಿಯು ರಾಮನಲ್ಲಿ ಪೌರಾಣಿಕ ರೀತ್ಯಾ ಕೋಲಬೇಕಾದುದೇ ನ್ಯಾಯ- ಹಾಗಿರುವಲ್ಲಿ ರಾಮಪದನ್ನು ಗೆಲ್ಲಬೇಕೆಂಬ ಅಭಿಪ್ರಾಯ ಪ್ರದರ್ಶಿಸಬಾರದು.) ಮಾತಿಗಲ್ಲ ಧಾವ ಗಾಂಭೀರ್ಯಗಳಿರಬೇಕು. ಪಾತ್ರಕ್ಕೆ ಸರಿಯಾದ ಗೌರವ ಸ್ವರಭಾರಗಳನ್ನು ಹೊಂದಿಸಿ ಮಾತನಾಡಬೇಕು. ನವರಸಗಳ ಪರಿಪೂರ್ಣ ಜ್ಞಾನ ವಿದ್ದು ಸದಾಗ ಓಳವರಿತು—ಸನ್ನಿವೇಶ ಸಂದರ್ಭಗಳಿಗೆ ಹೊಂದಿಕೊಂಡು ಮಾತನಾಡಬೇಕು. ಹಚ್ಚೆಯ ಪರುಣರು ವಿರಾಮವನ್ನು ಈ ಕಲೆಯ ಅಭಿವೃದ್ಧಿಗಾಗಿ ಉಪಯೋಗಿಸಿ ಪಂಡಿತರಾಗ ಬಹುದು. ಈ ಕಲೆಯು ನೈತಿಕ—ರಾಜಕೀಯ, ಸಾಮಾಜಿಕ, ಧಾರ್ಮಿಕ ಪರಂಪರೆಗೆ ಅತ್ಯಂತ ಮಹತ್ವದ್ದಾಗಿದೆ ಸುಸ್ತಕ ಭಂಡಾರಗಳನ್ನು ಹೆಚ್ಚಿಸಿ ಅಧ್ಯಯನ ನಡೆಸಬೇಕು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಪೆರ್ಲ ಕೃಷ್ಣ ಭಟ್ಟರು ಮೂಢರು ಸಹಾ ಅಭ್ಯಾಸ ಮಾಡಿ ಶ್ರಮಿಸಿದರೆ ಕೆಲವೇ ವರ್ಷಗಳಲ್ಲಿ ಈ ಕಲೆ ದೇವಿಯ ಕೃಪೆಯಿಂದ ಪಂಡಿತರಾಗ ಬಹುದು ಎಂದರಲ್ಲದೆ ಹಿಂದಿನ ಶಿಕ್ಷಕರುಕ್ಷಿಗಳು ಈ ಕಲಾದೇವಿಯ ಕೃಪೆಯಿಂದ ಅದ್ಭುತ ಕೀರ್ತಿಯನ್ನು ಗಳಿಸಿದ್ದಾರೆ ಎಂದು ವಿವರಿಸಿದರು. ಈ ಸೂಚನೆಗಳೆಲ್ಲವೂ ಅಭ್ಯಾಸಿಗಳಿಗೆ ಅವಶ್ಯ—ಇರಲಿ, ಈ ಯಕ್ಷಗಾನ ಕಲೆಯು ಸರ್ವತೋಮುಖ ಏಳಿಗೆ ಹೊಂದಲು ಹಿರಿಯರಂತೆ ಕಿರಿಯರಾದ ನಾವೂ ಹಂಬಲ ವಿರೋಣ.

ಜನವರಿ ೨೬

ಭಾರತೀಯರಿಂದ ನಮಗೊಂದು ಪರಮ ಪವಿತ್ರ ದಿನ. ಪ್ರಜಾರಾಜ್ಯ ದಿನೋತ್ಸವದ ಸಂಚಿಕೆ ನೆನಪನ್ನು ಚಿರಂತನವಾಗಿರಿಸಲು

ನವಯುಗವು

ನಾಡಿನ ಖ್ಯಾತ ಚರಿತ್ರಕಾರರು ರಾಜಕೀಯ, ಹಾಗೂ ಸಾಂಸ್ಕೃತಿಕ ಮೌಲ್ಯವುಳ್ಳ ಲೇಖನಗಳಿಂದ ಕೂಡಿದ

ಪ್ರಜಾರಾಜ್ಯ ವಿಶೇಷ ಸಂಚಿಕೆ

ಒಂದನ್ನು ಎಂದಿನಂತೆ ಹೊರಡಿಸುವುದು.

ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಪ್ರತಿಯೆಡೆಯಲ್ಲೂ ವಿಶಾಲವಾಗಿ ಪ್ರಚಾರವಾಗುವ ಈ ಸಂಚಿಕೆಯು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ, ದ. ಕ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಛಂದಸ್ಸು

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳುಹಿಸಲಾಗುವುದು.

ಲಘು ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಶ್ರೀ ಅಡ್ವಾನ್ಸಿನ ಗುಟ್ಟು

ಅದೇ ಒಂದು ಆಫೀಸು.ಅಲ್ಲಿ ಸುಮ್ಮ ಸೀನ ನೂತೈವತ್ತು ಸಂಬಳದ ಒಬ್ಬ ಗುಮಾಸ್ತ. ಇನ್ನೂ ಅವನ ಸಹೋದ್ಯೋಗಿಗಳು ಅನೇಕರಿದ್ದಾರೆ. ಅವರೆಲ್ಲ ಸೀನನಿಗಿಂತಹೆಚ್ಚಿಗೆ ಸಂಬಳಗಳೂ ಇದ್ದವು. ಇನ್ನೂರಕ್ಕಿಂತ ಮೇಲೆ ಮುನ್ನೂರರವರೆಗೆ ಸಂಬಳ ಪಡೆಯುವವರೂ ಇದ್ದಾರೆ.

ಎಲ್ಲರೂ ತಮ್ಮ ತಮ್ಮ ಗಳಿಕೆಗಳು ಬಡಮೆಯೆಂದೂ ಖರ್ಚು ವಿಪರೀತವೆಂದೂ ಮುಖಗಳನ್ನು ಸೊಟ್ಟ ಸೊಂಟ ಮಾಡಿಕೊಂಡು ಮಾತಾಡಿಕೊಳ್ಳುವವರೇ. ಇಂತಹ ಮಾತಿನಲ್ಲಿ ಮಾತ್ರ ಗಳಿಕೆಯ ತಾರತಮ್ಯಗಳಿಲ್ಲವೇ ಇಲ್ಲ. ಸೀನ ಮಾತ್ರ ಆ ಮಾತುಗಳಿಗೆ ಬಾಯಿ ಹಾಕುವವನೇ ಅಲ್ಲ. ಸಿಕ್ಕುವ ಸಂಬಳದಲ್ಲೇ ತನ್ನ ಜೀವನವನ್ನು ಸರಿದೂಗಿಸಿ ಕೊಳ್ಳುತ್ತಾ ಇದ್ದ—ಮಾತಾಡಿ ಪ್ರಯೋಜನವೇನು ಅಂತ.

ಎಲ್ಲರೂ ಆಗಾಗ ಹೆಚ್ಚು ಸಿಗಬೇಕೆಂದು ಒತ್ತಾಯ ಪಡಿಸುತ್ತಲೇ ಇದ್ದರು. ಅದಕ್ಕಾಗಿ ಪ್ರತಿ ಹದಿನೈದನೇ ತಾರೀಕಿಗೆ ಅರ್ಧ ಸಂಬಳದಷ್ಟು ಅಡ್ವಾನ್ಸು ಕೇಳಬಹುದೆಂದು ಮೆನೇಜುಮೆಂಟಿನವರು ತಿಳಿಸಿದರು.

ಸೀನನ ಸಹೋದ್ಯೋಗಿಗಳೆಲ್ಲಾ ಅಡ್ವಾನ್ಸು ಪಡೆಯ ಲಾರಂಭಿಸಿದರು. ಹಾಗೆ ಅಡ್ವಾನ್ಸು ಪಡೆಯುವಂತೆ ಸೀನನಿಗೂ ಹೇಳಿದರು. ಹೀಗೆ ಅಡ್ವಾನ್ಸು ಪಡೆಯುವುದರಿಂದ ಮೇನೇಜುಮೆಂಟಿನವರಿಗೆ, ಪರಿಣಾಮಕಾರಿಯೂಗುತ್ತದಂತೆ: ಉದ್ಯೋಗಿಸ್ಥರಿಗೆ ಸಿಗುವ ಸಂಬಳ ಸಾಲದೆಂಬ ಭಾವನೆಗೆ ಪುಷ್ಟಿ ಬರುತ್ತದಂತೆ. ಅದರಿಂದ ಸಂಬಳ ಏರಿಸಿದರೂ ಏರಿಸಿಯಾರು—ಎಂದುಕೊಂಡು ಸೀನನೂ ಕೆಲವು ತಿಂಗಳು ಅಡ್ವಾನ್ಸು ಪಡೆದ. ಆ ಭಾವನೆ ಸುಳ್ಳಾಯಿತು. ಅಡ್ವಾನ್ಸಿನಿಂದ ಅವನು ಕಂಡ ಫಲವೆಂದರೆ, ತಿಂಗಳಲ್ಲಿ ಅವನಿಗೆ ತಿಳಿಯದಂತೆಯೇ ಹೆಚ್ಚು ಖರ್ಚಾಗುವುದೇ. ಇನ್ನು ಅಡ್ವಾನ್ಸು ತೆಗೆದುಕೊಳ್ಳಬಾರದೆಂದು ನಿರ್ಧರಿಸಿದನು.

ಆ ತಿಂಗಳು ಎಲ್ಲರೂ ಅಡ್ವಾನ್ಸು ಅರ್ಜಿ ಸಲ್ಲಿಸಿದಾಗ ಸೀನ ಸುಮ್ಮನಿದ್ದ.

"ಏಕೆ" ಎಂದು ಕೇಳಿದರು ಒಬ್ಬರು.

"ಸೀನಯ್ಯನವರಿಗೇನು? ನಮ್ಮ ಹಾಗೋ? ಖರ್ಚು ಕಡಮೆ." ಎಂದರು ಇನ್ನೊಬ್ಬರು. ಇವರೆಲ್ಲಾ ಸೀನನಿಗಿಂತಲೂ ಹೆಚ್ಚು ಸಂಬಳದವರೇ.

ಆಗ ಸೀನ ನಿಧಾನವಾಗಿ ಹೇಳಿದ: "ಅಡ್ವಾನ್ಸು ತೆಗೆದುಕೊಳ್ಳುವುದರಿಂದ ಹೆಚ್ಚು ಖರ್ಚು ಮಾಡುವಷ್ಟು ಹಣ ಉಂಟೆಂಬುದೇ ವಾಸ್ತವಾರ್ಥ. ಏಕೆಂದರೆ ಅಡ್ವಾನ್ಸೆಂಬುದು ನಮ್ಮ ನಮ್ಮ ಸಂಬಳದ ಹಣ ತಾನೆ? ಹೆಚ್ಚು ಖರ್ಚು ಮಾಡುವಷ್ಟು ಶ್ರಾಣವುಳ್ಳವರು ತಾನೇ ಅಡ್ವಾನ್ಸು ಪಡೆದು ಖರ್ಚು ಮಾಡೋದು?"

ಇದನ್ನು ಕೇಳಿ ಎಲ್ಲರೂ ಗಾಬರಿಗೊಳಗಾಗಿ ಬಿಟ್ಟರು.

—"ನವಗಿರಿನಂದ".

ವಿವಾಹ ಸಮಾರಂಭಗಳು

ಉಡುಪಿಯಸಾಮ್ರಾಜ್ಯದ್ಯಾಸ್ಥರ್ ಶ್ರೀ ಬಿ. ರಾಮರಾಯ ಶೆಟ್ಟಿ, ಬಿ. ಎ ಎಲ್. ಟಿ. ಇವರ ಪುತ್ರಿ ಸೌ. ಗೀತಾಳನ್ನು ದಿ| ಕಡತಾರು ಸಂಕು ಅಜಿಲರ ಪುತ್ರ ಶ್ರೀ ಚಂದ್ರಶೇಖರ ಅಜಿಲರು ತಾ| 28—12—67ರಂದು ಮಂಗಳೂರು ಡಾನ್ ಬಾಸ್ಕೋ ಹಾಲಿನಲ್ಲಿ ವಿವಾಹವಾದರು.

ಉಡುಪಿ, ತಾಲೂಕು ಬೋರ್ಡ್ ಸದಸ್ಯ ಶ್ರೀ ಬಿ. ಕಾಳಪ್ಪ ಶೆಟ್ಟರ ಪುತ್ರಿ ಚಿ|ವಿನೋದಳನ್ನು ನಿ| ಕೊಲ್ಲೆ ಬೆಟ್ಟುಗುತ್ತು ವಾಸು ಶೆಟ್ಟರ ಪುತ್ರ ಚಿ. ಚಂದ್ರಶೇಖರ ಶೆಟ್ಟರು ತಾ. 2—1—68ರಂದು ಉಡುಪಿಯ ಲಾ ಕಾಲೇಜ್ ಕಂಪೌಂಡ್‌ನಲ್ಲಿ ನಿರ್ಮಿಸಲಾದ ಭವ್ಯ ಹಾಗೂ ವಿಶಾಲ ಚಪ್ಪರದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಬೆಲ್ಲಿಯ ಎಲ್ಲ ಕಡೆಗಳಿಂದಲೂ ಹೊರ ಜಿಲ್ಲೆಗಳಿಂದಲೂ ಬಹು ಸಂಖ್ಯೆಯಲ್ಲಿ ಬಂಧುಮಿತ್ರರು ಆಗಮಿಸಿ ಪದ್ಧತಿಯಂತೆ ಆಶೀರ್ವದಿಸಿದರು. ಈ ವಿವಾಹ ಸಮಾರಂಭದ ಅಂಗವಾಗಿ ಶ್ರೀ ಬಿ. ಕಾಳಪ್ಪ ಶೆಟ್ಟರು ತಾ. 3ರಂದು ತಮ್ಮ ಕಿನ್ನಿಮಾಲ್ಕಿಯ ನಿವಾಸದಲ್ಲಿ ಭೋಜನಕೂಟವೊಂದನ್ನು ಏರ್ಪಡಿಸಿದ್ದರು.

ಶ್ರೀ ಎಸ್. ರಾಮಶೆಟ್ಟಿ ಪುತ್ರಿ ಚಿ| ಸೌ| ಗೀತಾಳನ್ನು ದಿ| ಕೊಲ್ಲಬೆಟ್ಟುಗುತ್ತು ವಾಸು ಶೆಟ್ಟರ ಪುತ್ರ ಚಿ. ಜಯಾನಂದಶೆಟ್ಟರು ಉಡುಪಿಯ ಲಾ ಕಾಲೇಜಿನ ಕಂಪೌಂಡನಲ್ಲಿ ತಾ. 2—1—68ರಂದು ವಿಜೃಂಭಣೆಯಿಂದ ವಿವಾಹವಾದರು.

ವರ್ಯಾಯ ವಸ್ತುಪ್ರದರ್ಶನದ ಉದ್ಘಾಟನೆ

ಉಡುಪಿ, ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಸಹಾಯಾರ್ಥವಾಗಿ ಉಡುಪಿ ಪಟ್ಟಣ ಸರಕಾರೀ ಆಸ್ಪತ್ರೆಯ ವರಾಂಡದಲ್ಲಿ ಏರ್ಪಡಿಸಲಾದ ಉಡುಪಿ ಪರ್ಯಾಯ ವಸ್ತುಪ್ರದರ್ಶನವನ್ನು ಜನವರಿ ತಾ. 6ರಂದು ಮೈಸೂರು ರೇಶ್ಮೆ ಇಲಾಖೆಯ ಉಪಸಂಚಾಲಕ ಶ್ರೀ ಎಂ. ದಯಾನಂದ ಸಾಗರ್‌ರವರು ಉದ್ಘಾಟಿಸುತ್ತಾ ಇಂಥ ಪ್ರದರ್ಶನಗಳಲ್ಲಿ ನಾವು ಉತ್ಪಾದಿಸಿದ ವಸ್ತುಗಳನ್ನು ಪ್ರದರ್ಶಿಸಿ ಜನಸ್ತೋಮಗೊಳಿಸಿ ಯೋಗ್ಯ ಗಿರಾಕಿಗಳು ದೊರಕುವಂತೆ ಮಾಡುವುದು ಅಗತ್ಯವೆಂದು ಹೇಳಿದರು. ಕಾಲೇಜಿನ ದಕ್ಷ ಶಿಕ್ಷಕರು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರಶಂಸಿಸಿದರು. ಈ ವಿದ್ಯಾಸಂಸ್ಥೆಯ ಸಹಾಯಾರ್ಥವಾಗಿ ನಡೆಯುವ ಈ ಪ್ರದರ್ಶನ ಯಶಸ್ವಿಯಾಗಲೆಂದೂ ಹಾರೈಸಿದರು.

ಶ್ರೀ ಎಸ್. ಕೆ. ಅಪೂಸ್, ಎಂ.ಎಲ್.ಎ.ಯವರು ಪ್ರದರ್ಶನದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಪೂರ್ಣಪ್ರಜ್ಞ ಕಾಲೇಜಿನ ಹೃಯಕ್ಕೆ ಶುಭ ಕೋರಿದರು. ಕಳೆದ ಸರೇಕ್ಷೆಯಲ್ಲಿ ಪ್ರಥಮ ರ್‍ಯಾಂಕು ಗಳಿಸಿದ ಶ್ರೀ ಎಸ್. ಸದಾಶಿವ ರಾಯರು ವಿದ್ಯಾರ್ಥಿಗಳ ಪರವಾಗಿ ಮಾತನಾಡಿದರು.

ಅಧ್ಯಕ್ಷ ಸ್ಥಾನದಿಂದ ಡಾ| ಟಿ ಮಾಧವ ಪೈಗಳು ಮಾತನಾಡುತ್ತಾ ಇಲ್ಲಿಯ ಜನರು ಶ್ರೇಷ್ಠಮಂತರಲ್ಲ. ಅವರ ಸಂಪತ್ತು ವಿದ್ಯೆ. ವಿದ್ಯಾವಂತರು ನಿರುದ್ಯೋಗಿಗಳಾಗಿದ್ದರೂ ಅವರ ಹಿರಿಯರು ಅವಿದ್ಯಾವಂತರನ್ನು ಪಡೆಯಲಿಚ್ಛಿಸುವುದಿಲ್ಲ. ಜಿಲ್ಲೆಯ ಶೈಕ್ಷಣಿಕ ಮಟ್ಟ ಅತ್ಯಂತ ಮೇಲಕ್ಕೆತ್ತಲಾಗಿರುವುದರಿಂದಲೇ ಸಂಧ್ಯಾಕಾಲದ ಕಾಲೇಜು ಆರಂಭವಾದ ಒಂದು ವರ್ಷದಲ್ಲಿಯೇ ಇಷ್ಟು ಉನ್ನತಮಟ್ಟಕ್ಕೆ ಬರುವಂತಾಗಿದೆಯೆಂದರು. ಆರಂಭದಲ್ಲಿ ಮಂಡಳಿಯ ಅಧ್ಯಕ್ಷ ಶ್ರೀ ವಿ. ಜಿ. ಕೆದ್ಲಾಯರು ಸ್ವಾಗತಿಸಿ ಸಂಧ್ಯಾಕಾಲೇಜಿನ ವಿವರಗಳನ್ನಿತ್ತು ಪ್ರದರ್ಶನದ ಉದ್ದೇಶವನ್ನು ಹೇಳಿ ಸಹಕಾರವನ್ನು ಕೋರಿದರು.

ಶ್ರೀ ಪೂರ್ಣಪ್ರಜ್ಞ ಸಂಧ್ಯಾಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ರಾಮೋದರ ರಾಯರು ಧನ್ಯವಾದ ಸಮರ್ಪಿಸಿದರು.

ಶ್ರೀ ಕೃಷ್ಣ ದೇವರಿಗೆ ಹಸಿರುವಾಣಿ ಹೊರೆ ಸಮರ್ಪಣೆ

ಉಡುಪಿ—ತಾ. 6ರಂದು ಎಂ ಪಿ ಸಿ ಸಿ. ಸದಸ್ಯ ಶ್ರೀ ಅತ್ತಾವರ ಸತೀಶ ಹೆಗ್ಗಡೆಯವರು ಶ್ರೀ ಕೃಷ್ಣ ದೇವರಿಗೆ ಶ್ರೀ ಕಾಣಿಯೂರು ಮಠದ ಶ್ರೀಪಾದಂಗಳವರ ಸನ್ನಿಧಿಯಲ್ಲಿ ಹಸಿರುವಾಣಿ ಹೊರೆಗಳನ್ನು ವಿಜೃಂಭಣೆಯಿಂದ ಅರ್ಪಿಸಿದರು. ಶ್ರೀ ಸ್ವಾಮಿಯವರು ಶ್ರೀ ಹೆಗ್ಗಡೆಯವರನ್ನು ಆಶೀರ್ವದಿಸಿದರು.

ಶ್ರೀ ವೇಜಾವರ ಮಠಾಧೀಶರಿಗೆ ಸ್ವಾಗತ, ಸನ್ಮಾನ

ಶ್ರೀ ವೇಜಾವರ ಮಠಾಧೀಶ ಶ್ರೀವಿಶ್ವೇಶತೀರ್ಥ ಶ್ರೀಪಾದಂಗಳವರು ಪರ್ಯಾಯ ಪೂರ್ವಭಾವಿಯಾಗಿ ಧರ್ಮಪ್ರಚಾರ ಮತ್ತು ತೀರ್ಥಯಾತ್ರಾ ಸಂಚಾರವನ್ನು ಮುಗಿಸಿ ತಾ. 7—1—68ರಂದು ಉಡುಪಿಯನ್ನು ಪ್ರವೇಶಿಸಿದರು. ಉಡುಪಿ ಕಿನ್ನಿಮೂಲ್ಕಿ ರಸ್ತೆಯಲ್ಲಿರುವ ಜೋಡುಕಟ್ಟೆಯ ಬಳಿ ಸಂಜೆ ಶ್ರೀಪಾದಂಗಳವರನ್ನು ಸ್ವಾಗತಿಸಿ ಜೋಡುಕಟ್ಟೆಯಿಂದ ಕೋಳಿದ ಪೇಟೆ, ತೆಂಕಪೇಟೆಯಾಗಿ ರಥಬೀದಿಗೆ ಮೆರವಣಿಗೆಯಿಂದ ಕರೆದೊಯ್ಯಲಾಯಿತು ಅನಂತರ ರಥಬೀದಿಯ ಶ್ರೀ ಪೇಜಾವರ ಮಠದ ಎದುರುಗಡೆಯ ಶ್ರೀ ಆನಂದತೀರ್ಥ ಮಂಟಪದಲ್ಲಿ ಶ್ರೀ ಪಾದಂಗಳವರನ್ನು ಸಾರ್ವಜನಿಕ ನೆಲೆಯಲ್ಲಿ ಪರ್ಯಾಯ ಶ್ರೀ ಕಾಣಿಯೂರು ಮಠಾಧೀಶ ಶ್ರೀವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಡಾ| ಸಿ. ವಿ. ರಾಯರಿಂದ ಸ್ವಾಗತವಾದ ಬಳಿಕ ವಿವಿಧ ಸಂಘಸಂಸ್ಥೆಗಳಿಂದ ಹಾರಾರ್ಪಣೆಯಾಗಿ ಭಾಷಣಗಳಾದವು.

ಶ್ರೀ ನರಸಿಂಹಾಚಾರ್ಯ ಸನ್ಮಾನ ಸಮಿತಿ, ಉಡುಪಿ.

ಉಡುಪಿ ಜನತೆಯ ಪ್ರತ್ಯಾದರಗಳಿಗೆ ಪಾತ್ರರಾದ ಪಡುಪೇಟೆ ಶ್ರೀ ಯಂ. ನರಸಿಂಹ ಆಚಾರ್ಯರನ್ನು ಸಾರ್ವಜನಿಕ ನೆಲೆಯಲ್ಲಿ ಪರ್ಯಾಯ ಶ್ರೀಗಳವರ ಸನ್ನಿಧಿಯಲ್ಲಿ ಸನ್ಮಾನಿಸುವುದಾಗಿ ನಿರ್ಧರಿಸಿದ್ದು ಈ ಬಗ್ಗೆ ತಮ್ಮ ಸರ್ವವಿಧದ ಪ್ರೋತ್ಸಾಹ ಸಹಕಾರವನ್ನು ಕೋರುತ್ತೇವೆ. ಈ ಬಗ್ಗೆ ತಾವು ಮನಃಸಂತೋಷದಿಂದ ನೀಡುವ ಸಹಾಯ ಧನವನ್ನು ಒಡನಯೇ ಶ್ರೀ ಜಿ. ಎ. ಆಚಾರ್ಯ, ಕೋಶಾಧಿಕಾರಿ, ಆಚಾರ್ಯ ಸನ್ಮಾನ ಸಮಿತಿ, ರಥಬೀದಿ, ಉಡುಪಿ,ಇವರಿಗೆಲ್ಲಪ್ಪಿಸಿಕೊಡಬೇಕಾಗಿ ಜೊತೆ ಕಾರ್ಯದರ್ಶಿಗಳಾದ ಶ್ರೀ ಯು. ವಾಸುದೇವ ಭಟ್ಟ ಮತ್ತು ಶ್ರೀ ಕೆ ಲಕ್ಷ್ಮೀನಾರಾಯಣ ಭಟ್ಟರು ಪ್ರಸಿದ್ಧಿಸುತ್ತಾರೆ.

ಶ್ರೀ ಭದ್ರಗಿರಿ ಕೇಶವದಾಸರಿಗೆ ಸ್ವಾಗತ

ಪಾತ್ರಿಸಾಮ್ರಾಜ್ಯದಲ್ಲಿ ಭಕ್ತಿಯೋಗವನ್ನು ಪ್ರಚಾರ ಮಾಡಿ ಸ್ವದೇಶಕ್ಕೆ ಹಿಂದಿರುಗಿದ ಶ್ರೀ ಕೇಶವದಾಸರು ಇತ್ತೀಚೆಗೆ ಉಡುಪಿಗೆ ಆಗಮಿಸಿದಾಗ ಸಂಭ್ರಮದಿಂದ ಸ್ವಾಗತವೀಯಲಾಯಿತು.

ಉಡುಪಿ ಲಾ ಕಾಲೇಜು, ಸಿಂಡಿಕೇಟ್ ಬ್ಯಾಂಕ್, ರೋಟರಿಕ್ಲಬ್‌ಗಳು ಮತ್ತು ಎಂ. ಜಿ. ಎಂ. ಕಾಲೇಜಿನ ಪರವಾಗಿ ಲಾ ಕಾಲೇಜ್ ಆವರಣದಲ್ಲಿ ಸ್ವಾಗತ ಸಮಾರಂಭವು ಏರ್ಪಡಿಸಲ್ಪಟ್ಟಿತು. ಶ್ರೀ ಟಿ.ರಮೇಶ ಪೈಗಳವರು ಸ್ವಾಗತಿಸಿದರು. ಶ್ರೀ ಕೆ. ಕೆ. ಪೈಯವರು ಅಭಿನಂದನಾ ಪತ್ರವನ್ನು ಅರ್ಪಿಸಿದರು. ಶ್ರೀ ಕೇಶವದಾಸರು ಪಾಶ್ಚಾತ್ಯದೇಶದಲ್ಲಿಯ ತಮ್ಮ ಅನುಭವಗಳನ್ನು ವಿವರಿಸಿದರು. ಲಾ ಕಾಲೇಜಿನ ವಿದ್ಯಾರ್ಥಿಪರವಾದ ಶ್ರೀ ದೇಶಪಾಂಡೆಯವರು ವಂದನಾರ್ಪಣೆಗೈದರು.

ಹಂದ್ಯಾಟ ದಿನಾಚರಣೆ

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಸಂಧ್ಯಾಟದ ದಿನಾಚರಣೆಯು ತಾ. 5—1—68ರಂದು ಎಕ್ಸಿಕ್ಯೂಟಿವ್ ಶ್ರೀ ಜಿ. ಸಿ. ರೆಗೋರವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಸಂಧ್ಯಾಟಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿದ್ದರು.

ಸಾಂಸ್ಕೃತಿಕದಲ್ಲಿ ಪ್ರಿನ್ಸಿಪಾಲರಾದ ಗುರುರಾಜ ಭಟ್ಟರು ತಮ್ಮ ಸ್ವಾಗತ ಭಾಷಣದಲ್ಲಿ ಮುಖ್ಯ ಅತಿಥಿಗಳ ವಿಶಿಷ್ಟಪೂರ್ಣವಾದ ಯೋಗ್ಯತೆಗಳನ್ನೂ ಸ್ಪಷ್ಟೀಕರಿಸಿ ಅಂತಹ ಮಹನೀಯರ ಆಶೀರ್ವಾದವನ್ನು ಕೋರಿದರು. ಶ್ರೀ ರಿಚರ್ಡ್ ಡಿಸೋಜರು ವರದಿಯನ್ನು ಓದಿದೇಳಿದ ನಂತರ ಬಹುಮಾನ ವಿತರಣೆ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಸ್ಥೆಯ ಬಹುಮುಖ ಪ್ರಗತಿಯನ್ನು ಶ್ಲಾಘಿಸಿ, ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಂಪೂರ್ಣ ಮನಸಿಟ್ಟು ಯೋಗ್ಯವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಭಾರತದ ಉತ್ತಮ ಪ್ರಜೆಗಳಾಗಬೇಕೆಂದರು.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

R. E. P. 449/1967
O. S. 417/1968

ಖಲೀಫ್ ಹಸನ ಸ್ಯಾಬ..ಅನ್ಸಾಜಾಂಡಿ ಅರ್ಜಿದಾರ

ಮತ್ತು

ಮೈದೀನ ಸ್ಯಾಬ ಕೂಡಾ —ಎದ್ರಿರು

8ನೇ ಎದ್ರಿ ಹಮ್ಮದಸ್ಯಾಬ್ ಮೂರಾ ಸ್ಯಾಬರ ಮಗ—ಕಾನಾಡಿ ಗ್ರಾಮದ ಕಂಡ್ಲೂರಲ್ಲಿರುವವರು—

ಅರ್ಜಿದಾರನು ಮೇಲೆ ಕಾಣಿಸಿದ ಡಿಕ್ರಿಯ ಅಮ್ಲಜಾರ ಬಗ್ಗೆ ಮಾಡಿದ ಅರ್ಜಿಯು. ತಾ. 5—1—68ಕ್ಕೆ ತನ್ನಾಗೆ ಯಿಟ್ಟರುತ್ತದೆಂತ್ರ ಸದ್ರಿ ದಿನ 8ನೇ ಎದ್ರಿಯು ಕೋರ್ಟುಮುಂದೆ ಹಾಜ್ರಾಗಲಿಕ್ಕೆ ಸೂಚಿಸಿದ್ದೆ. ಆಕಸ ಪರೋಕ್ಷದಲ್ಲಿ ಮುಂದಿನ ಹುಕುಂ ಆಗುವುದೆಂತಲೂ ಸದರಿ ಈ ಮುಖ್ಯ ಗದ್ರಿ 8ನೇ ಎದ್ರಿಗೆ ತಿಳಿಸೋಣಾಗುತ್ತದೆ.

G. Sanjiva Rao
Vakil for Petitioner

ಕುಂದಾಪುರ, ತಾ. 5—1—68

ವಿಷಯ ಸೂಚಿ

ಪುಟ ೧—೧—೧೧ ಕಾಲಮ ೧—೧—೧೧ ಕಾಲಮ

(ಮೂರನೇ ಪುಟದಿಂದ)

ನ್ನು ಹೊಂದಿದವರಾಗಿದ್ದಾರೆ. ಅಖಿಲ ಭಾರತ ಗೋವಧ ನಿರೋಧ ಚಳುವಳಿಯಲ್ಲಿ ಶ್ರೀ ಶ್ರೀಗಳವರ ಪಾತ್ರ ಹಿರಿದು.

ಶ್ರೀ ಶ್ರೀಗಳವರು ಇತ್ತೀಚೆಗೆ ಗೀತಾಸಾರೋದ್ಧಾರವೆಂಬ ಉದ್ಗ್ರಂಥವನ್ನು ಬರೆದು ಧಾರ್ಮಿಕ ಜಿಜ್ಞಾಸುಗಳ ಜ್ಞಾನ ದಾಹವನ್ನು ತೀರಿಸಿದ್ದಾರೆ.

ಇದೀಗ ಶ್ರೀ ಶ್ರೀಗಳವರು ದ್ವಿತೀಯ ಬಾರಿಯಾಗಿ ತಾ 18-1-1968ರಂದು ಶ್ರೀ ಕೃಷ್ಣ ಪೂಜಾ ಪರ್ಯಾಯೋತ್ಸವದ ಅಂಗವಾಗಿ ಶ್ರೀ ಸರ್ವಜ್ಞಾಚಾರ್ಯರ ಮೂಲ ಸಿಂಹಾಸನಾರೋಹಣ ಮಾಡಲಿರುವರು.

ಶ್ರೀಗಳವರಿಗೆ ಆಯುರಾರೋಗ್ಯಗಳನ್ನಿತ್ತು ಇನ್ನೂ ಹೆಚ್ಚಿನ ಧರ್ಮ ಪ್ರಚಾರ ಹಾಗೂ ಶ್ರೀ ಕೃಷ್ಣನ ಪೂಜಾ ಭಾಗ್ಯಗಳನ್ನು ಕರುಣಿಸಲಿ ಎಂದು ನಾವು ಈ ಶುಭ ಸಂದರ್ಭದಲ್ಲಿ ಶ್ರೀ ಶ್ರೀಗಳವರ ಪಟ್ಟದ ದೇವರು ಶ್ರೀ ರಾಮ ವಿಠಲ ಹಾಗೂ ಶ್ರೀ ಕೃಷ್ಣನಲ್ಲಿ ಪ್ರಾರ್ಥಿಸುತ್ತೇವೆ.

—ಎಸ್. ಪದ್ಮನಾಭ ನಾಯಕ್.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. C. 591/67

ವಾದಿ— ಕೆ. ಶ್ರೀನಿವಾಸ ಉಪ್ಪ, ನಾಗಪ್ಪ ಉಪ್ಪನ ಮಗ, ಕೋಟೇಶ್ವರ

ಪ್ರತಿವಾದಿ—ಕೃಷ್ಣಯ್ಯ ಬುದ್ಧ, ಸರ್ವೋತ್ತಮ ಬುದ್ಧನ ಮಗ, ಪ್ರೊ: ಬಳ್ಳಾಸ್ಟಾಂಡ್ ಹೋಟೆಲ್, ಕಾಣಿಗಾಲ್

ಪ್ರತಿವಾದಿಗೆ ತಿಳಿಯಪಡಿಸಿದ್ದು—

ನಿಮ್ಮಿಂದ ವಾದಿಗೆ ಕೃಷ್ಣಾಧಿ ಸಂ|ರಕ್ಕೆ ಬರತಕ್ಕ ಮೂಲಗೇಣಿ ಮೊಕ್ಕಾರು ರೂ. 91:50 ಕ್ಕೆ ವಾದಿ ಮೇಲ್ಕಂಡ ದಾವಾ ಮಾಡಿದ್ದು ತಮಿಗೆ ಬಗ್ಗೆ ತಾ 1—2—68ಕ್ಕೆ ಇಟ್ಟರುತ್ತದೆ. ನಿಮಗೆ ಉಪಾಧ್ಯಾಯರೆ ನಾಂ ರೂ ಇದ್ದರೆ ಸದ್ರಿ ದಿನ ಹಗಲು 11ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜೇಳಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ತೀರ್ಮಾನವಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

A. S. N. Hebbar
ವಾದಿ ಕಡೆ ಎಡ್ವೋಕೇಟ್

ಕುಂದಾಪುರ, 5—1—1968

ಆದರ್ಶದ ಆಸೆ

[ಎರಡನೇ ಪುಟದಿಂದ]

ಎಂದು ಆಕೆ ಉತ್ತರಿಸುತಿದ್ದಂತೆಯೇ ಆರೋಗ್ಯಾಧಿಗಳು ರುದ್ರಾಣಿಯ ಹತ್ತಿರಕ್ಕೆ ಬಂದರು. ರುದ್ರಾಣಿ ಬೆದರಿ ಬಿಳಿಚಾದಳು!

"ಮುಟ್ಟ ಬೇಡಿ ನಾನು ಈ ದಿನವೇ ಹೊರಗೆ" ಎಂದು ತನ್ನಲ್ಲಿದ್ದವೆಲ್ಲಾ ಧೈರ್ಯವನ್ನೂ ಒಟ್ಟು ಕೂಡಿಸಿ ಹೇಳಿ ಬಿಟ್ಟಳು. ಎದ್ದು ನಿಂತು ಹೊರ ಹೊರಟು ಬಿಟ್ಟಳು.

ಂ ಂ ಂ ಂ

ಆದರ್ಶಕ್ಕೆ ಪ್ರತಿಯಾಗಿ ನೀತಿಗೆಟ್ಟು ಬದುಕನ್ನು ಸಾಗಿಸಬೇಕಾದ ಎರಡನೇಯ ಪೆಟ್ಟನ್ನು ಅವಳು ತಿಂದಳು. ತನ್ನ ನೋವಿನ ಕುರಿತು ತಾಯಿಯ ಬಳಿ ತೋಡಿಕೊಂಡು ಅತ್ತಳು. ತಾಯಿಯ ಹೃದಯದಲ್ಲಿ ಸಹಾನುಭೂತಿಯ ಮಾತನ್ನಾಡಿದರೂ, ಅಣ್ಣನ ಮಗನ ಜಾತಕಕ್ಕಾಗಿ ಅಣ್ಣನ ಬಳಿಗೋಡಿದರು.

ಇದಾದ ಕೆಲವೇ ಸಮಯದಲ್ಲಿ ಆಕೆಗೆ ವಿಲೆನಾಡಿನ ಹಳ್ಳಿಯೊಂದಕ್ಕೆ ವರ್ಗವಾಯಿತು. ಅಲ್ಲಾದರೋ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ ಸರ್ವಾಧಿಕಾರಿ. ಡಾಕ್ಟರರು ಪಾಪದವರು. ನೀತಿವಂತರು.

ಒಂದು ದಿನ ಏಳು ಮೈಲು ದೂರವಿರುವ ಹಳ್ಳಿಗೆ ರುದ್ರಾಣಿ ಹೋಗಿದ್ದಳು. ಆಕೆ ಸಂದರ್ಶಿಸ ಬೇಕಾದ ಮನೆಯೊಂದರಲ್ಲಿ ಒಬ್ಬಾಕೆ ಹೊಟ್ಟೆ ನೋವಿನಿಂದ ಮೂರು ದಿನಗಳಿಂದ ನರಳುತಿದ್ದಳು. ತಾಯಿ ಮೂರು ದಿನಗಳಿಂದಲೂ ಆಕೆಯ ಬಳಿಯಲ್ಲೇ ಇದ್ದಳು. ರುದ್ರಾಣಿ ತಾಯಿಗೆ ಬಿಡುವು ಕೊಟ್ಟು ತಾನು ಕುಳಿತುಕೊಂಡಳು. ಅದೇ ದಿನ ಸಂಜೆ ಐದು ಗಂಟೆಯ ಹೊತ್ತಿಗೆ ಆಕೆಗೆ ಪ್ರಸವವಾಯಿತು. ಉಳಿದ ಕೆಲಸಗಳನ್ನು ತಾಯಿ ಮುಗಿಸಿದಳು. ರುದ್ರಾಣಿ ತನ್ನ ಮನೆಗೆ ಓಡೋಡಿ ಹೊರಟಳು. ಮಧ್ಯದಲ್ಲೊಂದು ಕಾಡನ್ನು ದಾಟಬೇಕಿತ್ತು. ಅಲ್ಲಿ ಒಕ್ಕಿದರು ಹೆಲ್ತ್ ಇನ್‌ಸ್ಪೆಕ್ಟರರು. ಅವಳಿಗೆ ತನ್ನ ವಿಪತ್ತು ಏನೆಂದು ತಿಳಿದು ಬೆವರಿದಳು. ಹೆಜ್ಜೆ ಕೀಳಲಾಗಲಿಲ್ಲ. ಸೈಕಲಿನಿಂದ ಇಳಿದ ಹೆಲ್ತ್ ಇನ್‌ಸ್ಪೆಕ್ಟರರು ರುದ್ರಾಣಿಯ ಜತೆಯಾಗಿ ನಡೆಯ ತೊಡಗಿದರು. ತೀರಾ ಸವಿಪಕ್ಕೆ ಬಂದರು. ಇಷ್ಟೇನು ಕೈಹಿಡಿದೇ ಬಿಟ್ಟರು. ಕೈಕೊಸರಿ ದವಡೆಗೊಂದು ಏಟು ಬಿಗಿದಳು ರುದ್ರಾಣಿ. ಆಗಲೇ ಪೂರ್ತಿ ಬೆವತು ಹೋಗಿ ಕುಸಿಯುವುದರಲ್ಲಿದ್ದ ರುದ್ರಾಣಿಗೆ ಆ ದಿನ ತಡವಾಗಿ ಬಂದ ಬಸ್ಸೊಂದು ಆಸರೆಯನ್ನು ಕೊಟ್ಟಿತು. ಹೇಗೆ ಬಸ್ಸು ಹತ್ತಿದಳೋ ಹೇಗೆ ಕುಳಿತಳೋ ದೇವರೇ ಬಲ್ಲ. ಮನೆಗೆ ಬಂದವಳೇ ತನ್ನ ಸ್ಥಿತಿಯನ್ನು ತಾಯಿಗೆ ಹೇಳಿ ರೋದಿಸಿದಳು. ಇದನ್ನು ಕೇಳಿದ ತಾಯಿ ಎರಡೇ ಎರಡು ದಿನಗಳಲ್ಲಿ ಅಣ್ಣನನ್ನು ಒತ್ತಾಯಿಸಲು ಅಣ್ಣನ ಮನೆಗೋಡಿದರು!

ಂ ಂ ಂ

ಈ ಘಟನೆ ನಡೆದ ಬಳಿಕ ಕೆಲಸಕ್ಕೆ ಹೋಗುವ ಆಸೆಯನ್ನು ಮುಂದರಿಸದಾದಳು. ಸೇವೆಯ ಆದರ್ಶದಿಂದ ಪವಿತ್ರವಾಗಿದ್ದು ಜೀವನದುದ್ದಕ್ಕೂ ಸಾಗಬೇಕೆಂಬ ಆಶಯ ಆಕೆಯದು.

ಮನಃ ಒಮ್ಮೆ ಈ ಪ್ರಪಂಚದ ಮೂಲಕಣಾನುಚಾದುಹೋಗುವುದುಂಟೇಸಲ. ಆದುದರಿಂದ ಏನು ಒಳ್ಳೆಯದನ್ನು ನನ್ನಿಂದ ಮಾಡಲು ಸಾಧ್ಯವೋ ನನ್ನ ಜತೆ ಜೀವಿಗಳಿಗಾಗಿ ಎಷ್ಟು ದಯೆಯನ್ನು ತೋರಿಸಲು ಸಾಧ್ಯವೋ ಅದೆಲ್ಲವನ್ನೂ ಈಗಲೇ ನಾನು ಮಾಡಬೇಕು. ನಾಳೆಗೆಂದು ಮುಂದಕ್ಕೆ ತಳ್ಳುವಂತಿಲ್ಲ. ಯಾಕೆಂದರೆ ಈ ಜಾದಿಯಾಗಿ ನಾನು ಮತ್ತೆ ಬರಲಾರೆ" ಎಂದು ಸ್ಮರಿಸಿಕೊಂಡಳು. ಅದಕ್ಕೆ ಅರ್ಥವಿದೆ. ಬಹು ಅಮೂಲ್ಯವಾದ ಅರ್ಥವಿದೆ. ನನ್ನಿಂದ ಮಾಡಲು ಸಾಧ್ಯವಿದೆ. ಆದರೆ ಪರಿಸ್ಥಿತಿಗೆ ಶರಣು ಹೊಂದಿ ಆದರ್ಶದ ಸೇವೆ ಸಾಧ್ಯವಾದ. ಮಾಡಲಾರೆ ಎಂಬ ನಿರ್ಣಯಕ್ಕೂ ಬಂದಳು. ಸೇವೆಯ ಆದರ್ಶದಿಂದ ಪವಿತ್ರವಾಗಿದ್ದು ಜೀವನದುದ್ದಕ್ಕೂ ಸಾಗಬೇಕೆಂಬ ಆಶಯ ಆಕೆಯದು. ಆದರೆ ಸಾಧ್ಯವಾಗದುದಕ್ಕಾಗಿ ತುಂಬಾ ಬೇಸರಿಸುತ್ತಾ ಹೊನ್ನಮ್ಮ ಕಲ್ಯಾಣಪುರನ್ನು ಎಣಿಸಿಕೊಳ್ಳುವಂತಾಯಿತು.

ಸೇವೆಗೆಂದು ಹೊರಟ ಹೊನ್ನಮ್ಮ ಯಾವುದೋ ಗಳಿಗೆಯಲ್ಲಿ ಶ್ರೀಧರನ ಸೋಸಕ್ಕೆ ಒಳಗಾಗಿ ಗರ್ಭವತಿ ಮಾಡಿಕೊಂಡು ಪಟ್ಟ ಕಷ್ಟವು ಅವಳ ಮನಸ್ಸಿನ ತೆರೆಯ ಇದಿರು ಹಾದು ಹೋಯಿತು.

ರೊಡ್ಡಿಗಳ್ಳನ ಮೋಸದ ಬಲೆಗೆ ಬಿದ್ದ ಕಲ್ಯಾಣಿ ಈಗ ಹೆಲ್ತ್ ಇನ್ಸ್‌ಪೆಕ್ಟರನ ಸ್ವೇಯಸಿ; ಅವಳ ಬಾಳಿನ ಕತ್ತಲು ಎಣಿಸಿ ತಲೆ ತಿರುಗುವಂತಾಯಿತು!

ಸೇವೆಗೆಂದು ಹೊರಟ ತನ್ನ ಸೈಕೆಳಗಿರುವ ದಾಯಿಗಳು ಪವಿತ್ರತೆಯನ್ನು ಮೇಲಾಧಿಕಾರಿಗಳಿಂದ ಕೆಲಸ ಉಳಿಸಿಕೊಳ್ಳುವುದಕ್ಕಾಗಿ ಕಳೆದುಕೊಳ್ಳಬೇಕಾದ ಸಂದರ್ಭಗಳನ್ನೆಲ್ಲಾ ಎಣಿಸಿಕೊಂಡು ತನಗೆ ಸೇವಾ ಆದರ್ಶ ಬೇಡ ಎಂಬ ನಿರ್ಧಾರವನ್ನು ಮಾಟ್ಟುವಂತಾದಳು.

ತನ್ನದು ನಿತ್ಯ ಹೋರಾಟ!

ನಿತ್ಯ ಚಿಂತೆ!!

ನಿತ್ಯ ಕಣ್ಣೀರು!!!

ಎಂದು ಯೋಚಿಸುತ್ತಿರುವಾಗಲೇ ತಾಯಿ ಅಲ್ಲಿಗೆ ಬಂದವರು "ರುದ್ರಾಣಿ" ಎಂದರು.

"ಏನಮ್ಮಾ"

"ಅಣ್ಣನ ಮಗನ ಜಾತಕದೊಂದಿಗೆ ನಿನ್ನ ಜಾತಕ ಉತ್ತಮವಾಗಿ ಹೊಂದುತ್ತದೆಂದು ಅಣ್ಣ ಹೇಳಿ ಕಳುಹಿಸಿದ್ದಾರೆ".

"ಅಪ್ಪನ ಜಾತಕ ನಿನ್ನ ಜಾತಕ ಹೊಂದಿಕೆಯಾದಂತೆಯೇ?'

"ಅದು ನನ್ನ ಹಣೆ ಬರಹ!"

'ಇದು ನಿನ್ನ ಹಣೆ ಬರಹ!"

"ಹಾಗೆ ಹೇಳಬಾರದು. ಗುಂಡಪ್ಪ ಬಹಳ ಒಳ್ಳೆಯವ ಸಣ್ಣಂದಿನಿಂದಲೂ ನಾನು ಕಂಡಿದ್ದೇನೆ."

"ನಾಲ್ಕಾರು ದಿನ ಯೋಚಿಸಲು ಬಿಡಮ್ಮಾ ಎಂದು ಹೇಳಿ ತನ್ನ ಆ ದಿನದ ಎಲ್ಲಾ ಯೋಚನೆಗಳಿಂದ ದೂರ ಸರಿಯಲು ಎದ್ದು ನಿಂತಳು.

ಂ ಂ ಂ

ದೇವರಿಗೆ ತುಪ್ಪದ ದೀಪ ಹಚ್ಚುತ್ತಾ ನ್ನೆ ಮಗಳು ಕೆಲಸ ಬಿಟ್ಟು ಮದುವೆಗೆಂದು ಒಪ್ಪಿದ್ದಕ್ಕೆ ದೇವರನ್ನು ಭಕ್ತಿ ಪೂರ್ವಕವಾಗಿ ವಂದಿಸಿ ಪೂಜೇಗೆಸಿದರು ರುದ್ರಾಣಿಯ ತಾಯಿ.

ನಾಲ್ಕಾರು ದಿನಗಳ ಚಿಂತನೆಗಳಲ್ಲಿ ಕಳೆದು ರುದ್ರಾಣಿ ತಾನೀಗ ಮಾಡುತ್ತಿರುವೆನೆಂದು ತಿಳಿದಿರುವ ಸಮಾಜ ಸೇವೆಗಿಂತ ಕುಟುಂಬದ ಸೇವೆಯೇ ಶ್ರೇಷ್ಠ ಎಂಬ ನಿರ್ಣಯಕ್ಕೆ ಬಂದಳು. ಅವಳ ನಿಶ್ಚಯದಿಂದ ಸಂತೋಷಗೊಂಡ ತಾಯಿ ಅಣ್ಣನ ಮನೆಗೋಡಿ ಮುಂದಿನ ಏರ್ಪಾಡಿಗೆ ಸನ್ನಾಹ ಮಾಡಿದರು.

ನಗೆ ಬಿಂದು

ವೈದ್ಯರ ಸೂಚನೆ

ರೋಗಿಯನ್ನು ಪರೀಕ್ಷಿಸಿದ ವೈದ್ಯರು ಹೇಳಿದರು :—

"ನಿಮ್ಮಲ್ಲಿಯೇ ದನಗಳಿದ್ದಿದ್ದರೆ ಒಂದು ಕುಡ್ಯೆಯಂತೆ ಹತ್ತು ದಿನ ಕುಡಿದು ಬನ್ನಿ; ಕೆಲಸದವಳು ಕರೆಯುವುದಾದರೆ ಹದಿನೈದು ದಿನ; ನೆರೆಮನೆಯಿಂದ ತರುವುದಾದರೆ ಇಪ್ಪತ್ತುದಿನ; ಸಹಕಾರ ಸಂಘದಿಂದಾದರೆ ಒಂದು ತಿಂಗಳು; ಹೋಟೆಲಿನಿಂದಾದರೆ ಆರು ತಿಂಗಳು ಕಳೆದು ಬನ್ನಿ. ಆಗಿನ ಸ್ಥಿತಿ ಹೇಗೆಂದು ನೋಡಿ ಔಷಧ ನಿರ್ಣಯಂ ಮಾಡೋಣ."

ಂ ಂ ಂ

ಅಷ್ಟೇ ದೂರ

'ಇಲ್ಲಿಂದ ಉಡುಪಿಗಾಗಿ ಕುಂದಾಪುರಕ್ಕೆಷ್ಟು ದೂರ?..."

"ಕುಂದಾಪುರದಿಂದ ಉಡುಪಿಗಾಗಿ ಇಲ್ಲಿಗಿರುವಷ್ಟೇ ಮೈಲಿ....'

ಂ ಂ ಂ

ಸಲ್ಲಾಪಕ್ಕೆ ಶಿಕ್ಷೆ

"ನೀವು ಚಿಕ್ಕಂದಿನಲ್ಲಿ ತರುಣಿಯರೊಂದಿಗೆ ಸರಸ ಸಲ್ಲಾಪಗಳಲ್ಲೇ ಪಾಸ್ಟ್ ಪಡ್ಡಿರಿ?...."

"ಹೌದು...."

'ಆ ಬಗ್ಗೆ ಏನಾದರೂ ಶಿಕ್ಷೆ ಲಭಿಸಿತ್ತೆ?...."

"ಅದೇ ತಾನೆ—ನನ್ನ ಪತ್ನಿ!....'

ಂ ಂ ಂ

ಸುಲಭ ಉಪಾಯ

'ಇದು ಯಾವುದಮ್ಮಾ, ಕಂಕುಳದಲ್ಲಿರುವ ಮಗು?....'

'ಅದು ನೆರೆಮನೆಯಿಂದ ಮೂರು ಗಂಟೆಗಳ ಕಾಲಕ್ಕೆಂದು ಬಾಡಿಗೆಗೆ ತಂದದ್ದು....'

"ನಿನಗೇನು, ಭ್ರಾಂತಿ; ಮಗುವನ್ನು ಬಾಡಿಗೆಗೆ ತಂದದ್ದು? ಯಾಕೆ? ಎಷ್ಟು ಬಾಡಿಗೆ?....'

"ತಾಸಿಗೆ ಒಂದಾಣೆ; ಈ ಉಪಾಯವಲ್ಲವಾದರೆ ಈ ತಿಕ್ಕಾಟದ ವೇಳೆ ಬಸ್ಸಿನಲ್ಲಿ ಕುಳಿತುಕೊಳ್ಳಲು ಸೀಟೇ ದುರ್ಲಭ ...."

ಎಚ್. ಎಂ. ವಿಜಯನಾರಾಯಣ.

READ & ADVERTISE IN NAVAYUGA WEEKLY

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಪ್ರಾಪಿಕ್ ಖಾತರಿಯಾದ ಆಯುರ್ವೇದ ಔಷಧಿ ಮತ್ತು ವೆಚ್ಚ ವೈದ್ಯಕೀಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

Ask for
AZAD
nitbit
BISCUITS
Azad Industries, Mangalore-1

NAVAYUGA 11-1-1968
Registered with the Registrar of News Papers for India under No K N 3048/57

REGD. No. B. C. 176
LICENCE No. 31
Licensed to Post without Prepayment

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಕೆಚ್ಚಿನ ಕಿಡಿಗಳು

ಲೇಖಕರು: ಶ್ರೀ ಬೇಳಲ ರಾಮನಾಯಕ. ಪ್ರಕಾಶನ: ಗೀತಾಪ್ರಕಾಶನ, ಕಾಸರಗೋಡು

ಪುಟಗಳು: ೧೦೦ ಬೆಲೆ: ರೂ. ೧.೫೦.

ಅನಾದಿಯಿಂದಲೂ ಶಕ್ತಿ ಪೂಜೆ ಪರಂಪರೆಯೊಗ ಬಂದ ಸ್ವತ್ತು. ಅಂತೆಯೇ ಶಕ್ತಿವಂತ ಶಕ್ತಿವಂತೆಯರ ಕೆಚ್ಚಿನ ಕತೆಗಳೂ ನಮ್ಮ ಪರಂಪರಾಗತ ಸಂಪತ್ತು. ಈ ಬಗೆಯ ಶೌರ್ಯಮಿಗಳ ವೀರ ವೀರೆಯರ ಸವಿನೆನಪು ಪದಾ ನಮ್ಮಲ್ಲಿರುತ್ತದೆ. ವೀರರಲ್ಲ — ಮೂಸ್ತಗಲ್ಲುಗಳು ನಾಡಿನ ಮೂಲೆ ಮೂಲೆಯಲ್ಲೂ ಸಿಗುತ್ತವೆ. ಇವರ ಕತೆಗಳನ್ನು ಹಾಡುಗಟ್ಟಿ ಹಾಡುವ ಸಂಪ್ರದಾಯ ವೂ ನಮ್ಮಲ್ಲಿದೆ. ಜಾನಪದಗೀತೆಗಳು ಈ ಸಂಪ್ರದಾಯದ ಪ್ರಥಮ ಉದಾಹರಣೆ.

"ಕೆಚ್ಚಿನ ಕಿಡಿಗಳು" ಹೆಸರೇ ಸೂಚಿಸುವಂತೆ ಈ ಬಗೆಯ ಪರಾಕ್ರಮ ಶೀಲರ ಚರಿತ್ರ ಸಂಕಲನ. ಬಾಲದೇವಪೂಂಜ, ಸಂಕಣ ನಾಯಕ, ವಾಯಿಲರಸರಂತಹ ಪುರುಷರೊಡನೆಮಲ್ಲಿ, ಮಲ್ಲಮ್ಮ, ಓಬವ್ವಮೊದಲಾದವುಹಿಳೆಗರೂ ಕೂಡಿಬಿಟ್ಟಿರಲ್ ಕೆಚ್ಚಿನ ಕಿಡಿಗಳ ಪರಿಚಯಇಲ್ಲಿದೆ. ಪ್ರತಿ ವ್ಯಕ್ತಿಯೂ ತನ್ನ ಕೆಚ್ಚನ್ನು ತೋರಿಸಿ ಕಿಚ್ಚು ಕೆಚ್ಚಿದ ಸೋಮಂಜಕರು ಕೂ ತೂಹಲದಾಯಿ ಸಾಥೆ ಯು ಇಲ್ಲಿದೆ. ಇಂತಹ ವೀರರ ಪರಿಚಯ ಹತವೀರ್ಯರ ರಕ್ತ ದಲ್ಲಿ ವೀರ ರಸ ಉಕ್ಕೇರುವುದಕ್ಕೆ ಸಹಾಯಕವಾಗುವುದು.

ಶ್ರೀ ನಾರಾಯರು ತಮ್ಮ ಸಂಗ್ರಹದಿಂದ ಈ ಆಕ್ಷಾಶ ಕಿಡಿಗಳನ್ನು ಕನ್ನಡಿಗರ ಮುಂದೆ ಉಗುಳಿದ್ದಾರೆ. ಅವರ ಬತ್ತಳಿಕೆಯಲ್ಲಿ ಇನ್ನೆಷ್ಟು ಕಿಡಿಗಳಿವೆಯೋ! ಅವೆಲ್ಲವನ್ನೂ ಕನ್ನಡಿಗರು ಬಯಸುವರೆ ತಪ್ಪಾಗದು.

ಶ್ರೀ ನಾಯಕರ ಭಾಷೆ ಮತ್ತು ಶೈಲಿ ಸ್ವಾಭಾವಿಕವಿದೆ. ಪ್ರಭಾವೋತ್ಪಾದಕವಿದೆ. "ನಾನು ಹೇಳಿಕೊಡದೆ ನನ್ನ ಕತ್ತಿಯೂ ಹಸುಳೆಯೇ ನೆನ್ನೂ?" ಎಂಬ ಬಾಲಕ ದೇವಪೂಂಜನ ಮಾತೊಂದೇ ಸಾಲದೆ ಕಿಡಿಯೇಳುವುದಕ್ಕೆ? ಇದೇ ಬಗೆಯ ಸರಳ ಸುಂದರತೆ ಓದುಗರನ್ನು ಮುಗ್ಧಗೊಳಿಸುತ್ತದೆ. ತುಳುನಾಡಿನ ಕೆಚ್ಚಿಗಳ ಪರಿಚಯದಲ್ಲಿ ತುಳು ಮಾತುಗಳೂ ಹುದುಗಿರುವುದರಿಂದ ಸಹಜತೆಯು ತಾನಾಗಿಯೇ ಒಡಿ ಮೂಡಿದೆ "ಕೆಚ್ಚಿನ ಕಿಡಿಗಳು" ಕನ್ನಡದ ಕೆಚ್ಚಿನ ಕಿಡಿಗಳ ಪರಿಚಯ, ಕನ್ನಡಿಗರ ಕೆಚ್ಚಿನ ಕಿರು ಹೊತ್ತಗೆ.

ಕೀಲಕ ಸಂವತ್ಸರದ ಶ್ರೀ ಕೃಷ್ಣ ಪಂಚಾಂಗ:

ಶ್ರೀ ಪಾರಂಪಳ್ಳಿ ವಿಷ್ಣು ಮೂರ್ತಿ ಅಡಿಗಳ ಮಗ ಶ್ರೀ ಲಕ್ಷ್ಮೀನಾರಾಯಣ ಅಡಿಗರಿಂದ ಗಣಿಸಿ ಪರಿಶೋಧಿಸಲ್ಪಟ್ಟು ಉಡುಪಿ ಫಲಿಮಾರು ಮಠದ ಆಸ್ಥಾನ ವಿದ್ವಾನ್ ಶ್ರೀ ಭಂ. ನಾರಾಯಣಾಚಾರ್ಯರಿಂದ ವಿಮರ್ಶಿಸಲ್ಪಟ್ಟ ಪಂಚಾಂಗವಿದು. ಕಳೆದ ೨೭ವರ್ಷಗಳಿಂದಲೂ ಹಿಂದೂ ಜನತೆಗೆ ನಿತ್ಯ ನೈಮಿತ್ತಿಕ ಕಾರ್ಯಕಲಾಪಗಳಿಗೆ ಮಾರ್ಗದರ್ಶಕವಾಗಿ ನಿಂತ ಈ ಪಂಚಾಂಗವು ವರ್ಷಭವಿಷ್ಯಾದಿ ಇತರ ಜೋತಿಷ್ಯ ವಿಚಾರ ಸಂಗ್ರಹವೂ ಒಳಗೊಂಡಿದೆ. ಇಷ್ಟಿದ್ದರೂ ಇಂದಿನ ತುಟ್ಟಿ ದಿನಗಳಲ್ಲೂ ಪಂಚಾಂಗದ ಬೆಲೆ ಬರಿಯ ಇಪ್ಪತ್ತೈದು ಪೈಸೆ. ಸಂವತ್ಸರ ಆರಂಭಕ್ಕೆ ಬಹಳಷ್ಟು ಮೊದಲೇ ಪ್ರಕಟವಾಗುವ ಈ ಪಂಚಾಂಗವನ್ನು ಸರ್ವರೂ ಉಪಯೋಗಿಸಿ ಕೊಳ್ಳಬಹುದು ಇದರ ಪ್ರಕಾಶಕರು ಮೆಜಸ್ಟಿಕ್ ಪ್ರೆಸ್, ಉಡುಪಿ, ದ. ಕನ್ನಡ.

ಪಚ್ಚಾದಾಯಿ

ಕೊಂಕಣಿ ಭಾಷೆಯ ಮಾಸ ಪತ್ರಿಕೆ ಪಚ್ಚಾದಾಯಿ ಯ ದೀಪಾವಳಿ ವಿಶೇಷ ಸಂಚಿಕೆಯನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಇದರಲ್ಲಿ ಕನ್ನಡ ಮತ್ತು ದೇವನಾಗರಿ ಲಿಪಿಯ ಹಲವಾರು ಉಪಯುಕ್ತ ಬರಹಗಳಿವೆ. ಕನ್ನಡ ಸಾಹಿತ್ಯಕ ಕೊಂಕಣಿಯೋ ಆಧಾರ, ಶಿಕ್ಷಣ ಸಮಸ್ಯಾಂಕ ಏಳು ಪರಿಹಾರ, ಕೊಚ್ಚಿ ಕೊಂಕಣಿ, ಶ್ರೀ ಸತ್ಯನಾರಾಯಣ ಕಥಾಸಾರ ಮೊದಲಾದುವು ಉತ್ತಮ ಲೇಖನಗಳು. ವರ್ಷ ಭವಿಷ್ಯವೂ ಇದರಲ್ಲಿದೆ. ಈ ಪತ್ರಿಕೆಯ ಸಂಪಾದಕರು: ಶ್ರೀ ಬ. ವಾ. ಬಾಳೇ. ವಾರ್ಷಿಕ ಚಂದಾ ರೂ. ೫—೨೫. ಬಿಡಿ ಪ್ರತಿ ರೂ. ೦—೫೦ ದೀಪಾವಳಿ ಸಂಚಿಕೆಯ ಬೆಲೆ. ರೂ ೧—೦೦ ಶ್ರೀ ವೆಂಕಟೇಶ್ವರ ಪಬ್ಲಿಕೇಶನ್ಸ್, ಅಲ್ಕೆ, ಮಂಗಳೂರು—೩. ಇವರಿಂದ ಪ್ರಕಾಶಿಸಲ್ಪಡುವ "ಪಚ್ಚಾದಾಯಿ"ಗೆ ಶುಭವನ್ನು ಬಯಸುತ್ತೇವೆ.

—ಗೋರಾ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು. ಡಾ। ಕೊರಿಡ್ಡಲ್ ವೆಂಕಟ್ರಾವ್, ಎಲ್. ಐ. ಎಮ್.

'Ably written- Quite up to date valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರ ಖತರ ಎಲ್ಲ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S 478/1967

ಯುತ್ತರಿ ಸೂರ್ಯಂಣ ಶೆಟ್ಟಿ —ವಾದಿ
ಮರ್ಲಿ ಹೆಂಗ್ಸು ಕೂಡಾ—ಪ್ರತಿವಾದಿರು

ಸದ್ರಿ ವ್ಯವಹಾರಕ್ಕೆ 7ನೇ ಪ್ರತಿವಾದಿ. ನಾರಾಯಣ, ಮರ್ಲಿ ಹೆಂಗ್ಸಿನ ಮಗ. 8ನೇ ಪ್ರತಿವಾದಿ ನಾರಾಯಣ, 9ನೇ ಪ್ರತಿವಾದಿ ಮಂಜಯ್ಯ, 10ನೇ ಪ್ರತಿವಾದಿ ಮರ್ಲಿಹೆಂಗ್ಸು—ಚಿಕ್ಕಮ್ಮ ಹೆಂಗ್ಸಿನ ಮಕ್ಕಳು.

ಕುಂದಾಪುರ ತಾಲ್ಲೂ ಬೈಂದೂರು ಗ್ರಾಮದ ಸರ್ವಹಿಸ್ಸೆಲ್ಲಿರುವವರು. —ಇವರಿಗೆ

ನೀವು ಕೂಡಾ ಪ್ರತಿವಾದಿರು ಮೇಲ್ಕಂಡವಾದಿಗೆ ತಾ. 29—6—1966ರಲ್ಲು ಬರೆಸಿಕೊಟ್ಟ ದಿನಮಂಡು ನೋಟಿನ ಅಸಲು ಬಡ್ಡಿ ರೂ. 618-02ಪೈಸೆಮುಂದಿನ ಬಡ್ಡಿ ಖರ್ಚು ಸಹಿತ ಬರೆಮಾಡಿ ಕೊಳ್ಳುವರೇ ವಾದಿಯು ದಾಖಲು ಮಾಡಿದ ದಾವಾ ತಾ. 20-1-1969 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಈ ಕಾರಣ ನಿಮ್ಮ ಅಕ್ಷೇಪ ಯಾ ಸಬಾಬು ಇದ್ದರೆ ಸದ್ರಿ ದಿನಕ್ಕೆ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಸ್ವತಹ ವ ಪ್ಲೀಡರ್ ಮೂಲಕ ಹಾಜರಾಗಿ ಜಾಪ್ತೀಲು ಮಾಡಿಕೊಳ್ಳಿ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ನಂಬ್ರಪಸ್ಸು ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿದಿರಲಿ.

By order of the court

ಎ. ರಾಜೀವ ಶೆಟ್ಟಿ,
ಬಿ. ಎ., ಬಿ. ಎಲ್., ಡಿ. ಎಲ್.,
ವಾದಿಯ ಪರ ಎಡ್ವೋಕೇಟ್

ಕುಂದಾಪುರ, ತಾ. 1—1—1968

ಎತ್ತಿನೊಡನೆ

೧

ಗಾಡಿ ಎಳೆಯೆಲೊ ಎತ್ತೆ, ಗಾಡಿ
ಎಳೆಯೆಲೋ ಎತ್ತೆ!
ಗಾಡಿ ಎಳೆದರೆ ನಿನಗೆ ಹೊಟ್ಟೆಗಿಹುದು,
ಮೂಟೆಗಳ ತುಂಬಿರುವ ಗಾಡಿ ಎಳೆದರೆ
ನಿನಗೆ
ಆಹಾರ ಸರಿಯಾಗಿ ದೊರಕಬಹುದು?

೨

ಹಿಂದೆ ಶಿವ ನಿನ್ನೊಡನೆ ಏನೆಂದು
ಹೇಳಿದನು
ಅಂತೆ ಬ ವಿಯೆ ಡೆ ಎಂದು ಸಾರಿರು
ವೆಯೊ?
"ಒಂದು ಊಟ'ಕೆ ಬದಲು 'ಮೂರೂ
ಟ ಮಾಡಿ'
ಇಂತೆಂದು ತಪ್ಪಾಗಿ ನುಡಿದಿರು
ವೆಯೊ?

೩

'ಜನರ ಸೇವೆಯ ಮಾಡಿ ಜೀವಿಸಿರು
ನೀನಿಲ್ಲ'
ಎಂದ ಶಿವ ನಿನ್ನನ್ನ ಶಾಪಿಸಿದನೆ?
ಎಲೆ ನಂದಿ! ಶಂಕರನು ನಿನಗೆಷ್ಟು ಬವಣೆ
ಯನು
ಇತ್ತಿರ ವನೆಂಬ ದನು ಜಗವಂಯದೆ?

೪

ಆಧುನಿಕ ಯಂತ್ರಗಳ ಸಾಕಷ್ಟು
ಇಹವಿಲ್ಲಿ
ಆದರೂ ಜನಕೆಲ್ಲ ನೀನೆ ಬೇಕು
ನೀನೆ ಪಡ್ಡೆಯುಳುವೆ, ನೀನೆ
ಗಾಡಿಯನೆಳೆವೆ
ನಿನಗಾನ್ನು ಬಹ ಕಾಲ ಶಾಂತಿ ಬೇಕು.
ಜೀವ ಕೈಯಲಿ ಹಿಡಿದು ಗಾಡಿಯೆಳೆ
ದರು ನಿನಗೆ
ಬಾರು ಕೋಲಿನ ಏಟು ತಪ್ಪಲಿಹುದೆ?
ಮಳೆಗಾಲ ಕೆಸರಲ್ಲಿ ತಿರುದಿಗದ್ದರೆ ನಿನಗೆ
ಒಂದಿನಿತ ಆಹಾರ ಸಿಕ್ಕಬಹುದೆ....?
ಗಾಡಿ ಎಳೆಯೆ ಕೋ ಎತ್ತೆ, ಗಾಡಿ
ಎಳೆಎಲೋ ಎತ್ತೆ!
ಗಾಡಿ ಎಳೆದರೆ ನಿನ್ನ ಹೊಟ್ಟೆಗುಂಟು,
ಹೊರೆಗಳನು ಹೊರಿಸಿರುವ ಗಾಡಿ
ಎಳೆದರೆ ನಿನ್ನ
ಒಡೆಯನಿಗೆ ದೊರಕುವುದು ಹಣದ
ಗಂಟು!

—ನ. ಭ. ನೆಂಪು

ಹೊಸ ಪ್ರಕಟಣೆಗಳು

೧. ಪೂಜ್ಯ ಧರ್ಮಮೂರ್ತಿ ಮಂಜಯ್ಯ ಹೆಗ್ಗಡೆಯವರು — ಬರೆದವರು: ಶ್ರೀ ಪಾರ್ವತೀಶ ವರ್ಧಮಾನ ಹೆಗ್ಗಡೆ ಪ್ರಕಾಶಕರು: ಶ್ರೀ ಮಹಾವೀರ ಭಜನಾ ಮಂಡಳಿ, ಮೂಡಬಿದಿರೆ, ದ. ಕ.; ಪುಟಗಳು: ೧೦೪, ಬೆಲೆ: ರೂ. ೧.೫೦.

೨. ಪರಮ ಪೂಜ್ಯಗುರುದೇವ ಕ್ಷುಲ್ಲಕ ಶ್ರೀ ಶಾಂತಿಸಾಗರ ವರ್ಣಿಜಯವರು: — ಲೇಖಕರು: ಶ್ರೀ ಪಾರ್ವತೀಶ ವರ್ಧಮಾನ ಹೆಗ್ಗಡೆ; ಪ್ರಕಾಶಕರು: ಶ್ರೀ ಮಹಾವೀರ ಭಜನಾ ಮಂಡಳಿ, ಮೂಡಬಿದಿರೆ (ದ. ಕ.); ಪುಟಗಳು. ೪೪, ಬೆಲೆ. ರೂ. ೧-೦೦.

ವಿಮರ್ಶೆ ಯಥಾವಕಾಶ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



18—1—1968

10 ಪೈಸೆ

ಕಥಾ ಪ್ರಪಂಚ

ಪ್ರೇಮ ಪ್ರಪಂಚ

ಬರೆದವರು — ಶ್ರೀ ಪ್ರೇಪತಿ ಚಂಪ

"ನನ ಮಗುವನ್ನು ಕಾಪಾಡಿ ಡಾಕ್ಟರ್, ನನ್ನ ಮಗೂನ ಕಾಪಾಡಿ" ಎಂದು ರೋದಿಸುತ್ತಾ, ಕಮಲೆ ಡಾಕ್ಟರರ ಹಿಂದೆ ಓಡಿದಳು.

"ನೀವೇನೂ ಆಧೈರ್ಯ ಪಡಬೇಡಿ. ದೇವರ ದಯದಿಂದ ಏನೂ ಆಗಲಿಕ್ಕಿಲ್ಲ. ಈ ಸಮಯದಲ್ಲಿ ನೀವೇ ಹೀಗೆ ಧೈರ್ಯಗೆಟ್ಟರೆ ಮಗುವನ್ನು ನೋಡಿ—ಕೊಳ್ಳುವ ವರಾರು? ಈಗ ತಾನೇ ಇಂಜೆಕ್ಷನ್ ಕೊಟ್ಟಿದ್ದೇನೆ. ಈ ಮಾತ್ರೆಗಳನ್ನು ಔಷಧಿಯೊಂದಿಗೆ ಕೊಡಿರಿ" ಎಂದು ತನಗೇ ಧೈರ್ಯವಿಲ್ಲದಿದ್ದರೂ ಸಾಂತ್ವನದ ನುಡಿ ನುಡಿದರು ಡಾಕ್ಟರ್ ಗಿರೀಶ್.

"ಮಗುವಿಗೆ ಏನೂ ಆಗಲಿಕ್ಕಿಲ್ಲವಲ್ಲಾ ಡಾಕ್ಟರ್."

"ಇಲ್ಲಮ್ಮಾ ಮತ್ತೆ 'ಟೆಂಪರೇಚರ್' ಜಾಸ್ತಿಯಾದರೆ ಕೂಡಲೇ ದವಾಖಾನೆಗೆ ಜನ ಕಳಿಸಿ? ಎಂದು ಹೇಳಿ ಹೊರಟರು.

ಕಮಲೆ ಡಾಕ್ಟರರು ಹೋದ ದಿಕ್ಕನ್ನೇ ನೋಡುತ್ತ ತನಗೊದಗಿದ ಸ್ಥಿತಿಯನ್ನು ಕುರಿತು ಚಿಂತಿಸತೊಡಗಿದಳು—

ಹೌದು. ಅಂದು ನನಗೆ ಎಲ್ಲವೂ ಇತ್ತು. ತಂದೆ, ತಾಯಿ, ಬಂಧು, ಬಳಗ, ಎಲ್ಲಕ್ಕಿಂತ ಮಿಗಿಲಾಗಿ ಪತಿ. ಆದರೆ ಇಂದು? ನಾನು ಏಕಾಂಗಿ. ನನ್ನ ಮಗುವನ್ನು ಬಿಟ್ಟರೆ ನನಗಾರೂ ಇಲ್ಲ.

ತನ್ನ ಬಗ್ಗೆ ತಂದೆತಾಯಿಗಳಿಗೆ ಎಷ್ಟು ಹೆಮ್ಮೆ ಇತ್ತು. ಅದೇ ತಾನೇ ನಾನು S. S. L. C. ಪಾಸಾಗಿದ್ದೆ ಕಾಲೇಜಿಗೆ ನನ್ನನ್ನು ಕಳಿಸಬೇಕೆಂದು ತಂದೆಯವರ ಆಶೆ. ಆದರೆ ತಾಯಿ ಇದಕ್ಕೆ ತಪ್ಪಿ ರುದ್ಧ.

"ನಿಮಗೆ ಬೇರೇನೂ ಕೆಲಸವಿಲ್ಲವೇ? ಹುಡುಗಿಗೆ ಹದಿನಾರು ವರ್ಷ ದಾಟಿತ್ತಾ ಬಂತು. ಇನ್ನೂ ಕಲಿಸಬೇಕಂತೆ. ಕಮಲೆಯ ಓರಗೆಯ ಎಲ್ಲರ್ಗೂ ಸುನಂದಾ ಈಗಾಗಲೇ ಒಂದೊಂದು ಮಗುವಿನ ತಾಯಿಯಂತಾಗಿ ಅತ್ತೆಯ ಮನೆಯಲ್ಲಿ ನೆಮ್ಮದಿಯಿಂದ ಕಾಲ ಕಳೆಯುತ್ತಿದ್ದಾರೆ. ಕಾಲೇಜೂ ಬೇಡ, ಗೀಲೇಜೂ ಬೇಡ. ಆದಷ್ಟು ಬೇಗ ಮದುವೆ ಮಾಡಿ ಕೈತೊಳೆದು ಕೊಳ್ಳುವುದು ಒಳ್ಳೆಯದು".

"ಇಲ್ಲ ಶಾಂತೂ, ಈಗ ಕಾಲ ಬದಲಾಗಿದೆ. ಈಗಿನ ವರಗಳು ಒಂದಿಷ್ಟಾದರೂ ವಿದ್ಯೆಯಿದ್ದ ಹುಡುಗಿಯರನ್ನೇ ಬಯಸುವುದು"

"ವಿದ್ಯೆಗೇನು, S. S. L. C. ವರೆಗೆ ಕಾಲೆಗೆ ಮಣ್ಣು ಹೊತ್ತದು ಸಾಂದೇ? ಅವಳು B. A., M. A. ಕಲಿತು ದುಡಿಯ ಬೇಕಾಗಿಲ್ಲ"

"ನಾನು ಹಾಗೆಂದೆನೇ? ಕೇವಲ S. S. L. C. ಯಲ್ಲಿ ಪ್ರಪಂಚ ಜ್ಞಾನ ಸಿಗುವುದಿಲ್ಲ. ಆತ್ಮ ಸಂತೋಷಕ್ಕೆ, ಜ್ಞಾನಾಭಿವೃದ್ಧಿಗೆ, ಕಾಲೇಜು ಶಿಕ್ಷಣ ಅಗತ್ಯ. ಕಲಿತ ಮೂರ್ಖರಿಂದ ಮುಂದಿನ ಜನಾಂಗವನ್ನು ಸತ್ಪ್ರಜೆಗಳನ್ನಾಗಿ ಮಾಡಬಹುದು ಎಂದು ರಾಷ್ಟ್ರ ನಾಯಕರೂ ಅನ್ನುತ್ತಿದ್ದಾರೆ."

"ಅನ್ನುವವರು ತಮ್ಮ ಮಕ್ಕಳನ್ನು ಕಾಲೇಜಿಗೆ ಕಳಿಸಲಿ. ಹೆಂಗಸರ ವಿಚಾರ ನಿಮಗೆ ಗಂಡಸರಿಗೆ ಏನು ತಿಳಿಯುತ್ತದೆ ಮಣ್ಣು. ನಾನು ಮನೆಬಿಟ್ಟು ಹೊರ ಹೊರಟರೆ ಸಾಕು, ನಿಮ್ಮ ಮಡಳಿಗೆ ವರ ಗೊತ್ತಾಯ್ತೆ? S. S. L. C. ನೂ ಮುಗಿಸಿದಳಲ್ಲಾ. ಹೆಣ್ಣು ನೋಡಲು ಯಾರೂ ಬಂದಿಲ್ಲವೇ? ಹದಿನಾರು ವರ್ಷಕ್ಕೆ ಇಪ್ಪತ್ತು ವರ್ಷದವಳಂತೆ ಬೆಳೆದು ನಿಂತಿದ್ದಾಳಲ್ಲಾ. ಅವಳಿಗೇನಪ್ಪಾ ವರಗಳಿಗೆ ಕೊರತೆಯೇನು? ನಾನು ಮುಂದು, ತಾನು ಮುಂದು ಎಂದು ವಂದಕ್ಷಿಣೆ ಕೇಳಿದೆಯೆ ಬಂದಾರು, ಎನ್ನುವಾಗ ನನ ಗೆಷ್ಟು ವೇದನೆಯಾಗುತ್ತಿದೆಯೆಂಬುದು ನಿಮಗೇನು ಗೊತ್ತು?"

"ಈಗ ನಾನು ಮತ್ತು ನೀನು ವ್ಯರ್ಥ ಕಚ್ಚಾಡಿ ಪ್ರಯೋಜನವಿಲ್ಲ. ಏನು ಮಾಡಿದರೂ ನಾವು ಕಮಲೆಯ ಹಿತವನ್ನೆ ಬಯಸುವವರಲ್ಲವೇ? ಅವಳ ಇಚ್ಛೆ ಹೇಗಿದೆಯೋ ಹಾಗೆ ಮಾಡಿದಂತಾಯ್ತು ಎಂದು ತನ್ನ ಕೊನೆಯ ನಿರ್ಧಾರವನ್ನು ತಿಳಿಸಿದ್ದರು ತಂದೆ.

ನನ್ನ ಗೆಳತಿಯರಿಬ್ಬರು ಕಾಲೇಜಿಗೆ ಸೇರಲು ನಿಶ್ಚಯಿಸಿದ್ದರಿಂದ, ನನಗೂ ಸೇರುವ ಇಚ್ಛೆ ಮೂಡಿತ್ತು. ಆದರೆ ತಾಯಿ ಏನೆನ್ನುವರೊ ಎನ್ನುವ ಭೀತಿ. ಕೊನೆಗೆ ಕಾಲೇಜಿಗೆ ಸೇರಲೇಬೇಕೆಂದು ನಿಶ್ಚಯಿಸಿ, ತಂದೆಯವರಿಗೆ ತಿಳಿಸಿದೆ. ತಾಯಿ ಗೊಣಗುಟ್ಟುತ್ತಾ, ತನ್ನ ಒಪ್ಪಿಗೆಯಿತ್ತುದರಿಂದ ಹೋದ ಜೀವ ಬಂದಂತಾಯ್ತು.

ತಾಯಿಯ ಒಪ್ಪಿಗೆ ಸಿಕ್ಕಿದುದೇ ತಡ ನಾನು ಗರಿಗೆದರಿದ ಹಕ್ಕಿಯಂತಾದೆ. ಕಾಲೇಜಿಗೆ ಕಾಲಿಟ್ಟ ದಿನದಿಂದ ನನ್ನ ಜೀವನದ ಗತಿ ಬದಲಾಯಿಸಿತು. ಎಲ್ಲವೂ ಹೊಸತು. ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಹುಡುಗಿಯರ ಶಾಲೆಯಲ್ಲೇ ಮುಗಿಸಿದ್ದರಿಂದ ಗಂಡು ಹುಡುಗರ ಹಚ್ಚಿನ ಸರಿಚಯವಿರಲಿಲ್ಲ. ಕಾಲೇಜಿಗೆ ಸೇರಿದ ದಿನದಿಂದೇ ಅವರ ಮಂಕು ಚೇಷ್ಟೆಯು ಪರಿಚಯವಾಯ್ತು. ನಾನು ಬರೇ "ಹೆಳ್ಳಿಯ ಸುಗ್ಗಿ" ಎಂದು ಅವರ ಅಭಿಪ್ರಾಯ. ಕಾಲೇಜು ಜೀವನಕ್ಕೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು. ವಿದ್ಯಾರ್ಥಿಗಳ ಮೋಜು ಕ್ಲಾಸಿನಲ್ಲಿಯೂ ನಡೆಯುತ್ತಿತ್ತು. ಹುಡುಗಿಯರ ಕೃಪೆಗಾಗಿ ಹಾಕ್ಯವಾಗಿ ಮಾತಾಡುವುದು, ಸಿಳ್ಳೆಯೂ ನಟರಂತೆ ರಂಗು ರಂಗಿನ ಡ್ರೆಸ್ ಹಾಕಿಕೊಂಡು, ಅವರನ್ನೇ ಅನುಕರಿಸಿ ನಡೆಯುವುದು. ಹೀಗೆ ಹುಡುಗಿಯರ ಗಮನ ತಮ್ಮಕಡೆ ಸೆಳೆಯುವ ಪ್ರಯತ್ನ ನಡೆದೇ ಇತ್ತು. ಅಪ್ಪಿ ತಪ್ಪಿಯಾದರೂ ಇಂತಹ ಸಂದರ್ಭಗಳಲ್ಲಿ ಕಳ್ಳನದಿಂದ ಅವರತ್ತ ಕಣ್ಣು ತಿರುಗಿಸಿದರೆ ಹತ್ತಾರು ಮುಖಗಳು ನನ್ನನ್ನೇ ದಿಟ್ಟಿಸುವ ಅಪೂರ್ವ ದೃಶ್ಯ ಕಾಣುತ್ತಿತ್ತು. ನಾನು ನೋಡಿದರೆ ಸಾಕು ಕೋತಿಯಂತೆ ಹಲ್ಲು ಗಿಂಜಲು ಪ್ರಾರಂಭಿಸುವರು. ಒಂದು ವೇಳೆ ಯಾರನ್ನಾದರೂ ನೋಡಿ ಪ್ರತಿನಕ್ಕರೆ, ಆತನಿಗೆ ಸ್ವರ್ಗಕ್ಕೆ ಮೂರೇ ಗೇಣು. ಕಾಲೇಜು ಬಿಟ್ಟನಂತರ ಬೀದಿಯಲ್ಲಿ ಆತನ ಪಾರುಷದ ಪ್ರದರ್ಶನ.

'ನೀವು ಮಣ್ಣು ಹೊರಲಿಕ್ಕೆ ಹೋಗ್ರೋ ಊರನ್ನು ಕಣ್ಣೆತ್ತಿಯೂ ನೋಡದ "beauty queen" ಈದಿನ ನನ್ನನ್ನು ನೋಡಿ ನಕ್ಕದ್ದೇನಕ್ಕದ್ದು. ಅವಳಿಗೆ ನನ್ನ ಮೇಲೆ love ಬಿದ್ದಿದೆ ಕಣೋ"

"ಬಡಾಯಿ ಸಾಕುಮಾಡೋ ದೊಡ್ಡ ಮನುಷ್ಯ" ಎಂದು ಯಾರಾದರೂ ಅಂದರೆ.

"ನಾನು ಬೆಟ್ ಕಟ್ತೇನೆ, ನಾಳೇನೇ ಬೇಕಾದರೆ ನಾನೊಂದು "love letter" ಬರೆಯುತ್ತೇನೆ, ಉತ್ತರ ಬಾರದಿದ್ದರೆ ಮತ್ತೆನೋಡು" ಎಂದು ಕೋಪದಿಂದಲೇ ಹೋಗುವನು. ಇಂತಹ ಹಲವಾರು ಕಿಡಿಗೇಡಿಗಳ ಪತ್ರಗಳು ನನ್ನ ಕಸದ ಬುಟ್ಟಿಯಲ್ಲಿ ಛಿದ್ರಿಸುತ್ತಿದ್ದವು

ನನ್ನ ಸೀನಿಯರ್ ಕ್ಲಾಸಿನ ರಮೊಗೆ ಇಂತಹ ರೋಮಿಯೋಗಳನ್ನು ಕುಣಿಸುವುದರಲ್ಲಿ ತುಂಬ ಆಸಕ್ತಿ. ತನ್ನನ್ನು ಹಿಂಬಾಲಿಸುವ ಹುಡುಗರ ತಂಡವನ್ನು ನೋಡಿ, ಮುಗುಳ್ನಗುವುದು, ಅವರು ಸ್ವಲ್ಪ ಮುಂದುವರಿದು, ಇವಳನ್ನು ಮಾತಾಡಿಸಲು ಪ್ರಯತ್ನಿಸಿದರೆ, ಅವಕಾಶ ಕೊಟ್ಟು ನಂತರ ಒನ್ಸಲೇ ಪ್ರಪಾತಕ್ಕೆ ತಳ್ಳಿದಂತೆ ಮಾರ್ಗದ ಮಧ್ಯದಲ್ಲೇ ಅವರ ಮರ್ಯಾದೆ ಕಳೆಯುವುದು, ಅವಳ ದಿನಚರಿಯಾಗಿತ್ತು.

ರಮೊಳ ಬಗ್ಗೆ ಚೆನ್ನಾಗಿ ತಿಳಿದಿದ್ದ ವಿದ್ಯಾರ್ಥಿಗಳೂ ಅವಳನ್ನು ಕೆಣಕಲು ಪ್ರಯತ್ನಿಸುತ್ತಿದ್ದಿಲ್ಲ. ಅವಳಿಗೂ ಬಹಳ ಜಂಭ, ತಾನು ಹುಡುಗರನ್ನು ಕೋತಿಯಂತೆ ಕುಣಿಸುತ್ತೇನೆಂದು. ಇವಳ ಜಂಭವನ್ನು ಕಂಡು ಇತರ ಕೆಲವು ಹುಡುಗಿಯರಿಗೆ ಅಸೂಯೆ.

ಇವಳೇನು ಮಹಾ ಊರ್ವಶಿಯೋ, ಅಥವಾ ರಂಭೆಯೋ? ತಾನೇ ಹುಡುಗರ ಗೆಳೆತನ ಮಾಡಲು ಪ್ರಯತ್ನಿಸಿ, ಇವಳ ಕಾರ ಮುಸುಡಿಗೆ ಯಾರೂ ಮರುಳಾಗದಿದ್ದರೆ, ನಂತರ ಹುಡುಗರನ್ನೇ ದೂರುವುದು." ಎನ್ನುತ್ತಿದ್ದರು. ಆದರೆ ಅವಳ ಅರ್ಥಟದ ಪರಿಚಯವಿದ್ದ ಸುಂದ್ಯಾದಷ್ಟು ಹುಡುಗಿಯರು ಬಾಯಲ್ಲಿ ಗೊಣಗುಡುತ್ತಿದ್ದರೇ ವಿನಾ ಗಟ್ಟಿಯಾಗಿ ಬಾಯಿ ಬಿಡುತ್ತಿದ್ದಿಲ್ಲ. ಕೆಲವೊಬ್ಬೆ ಇಂತಹ ಗೊಣಗಾಟಗಳು ತನ್ನ ಅಪ್ತ ಗೆಳತಿಯರಿಂದ ರಮೊಳ ಕಿವಿಗೂ ಮುಟ್ಟುತ್ತಿತ್ತು.

'ಯಾರೇ ಅವಳು ಸುಂದ್ಯಾದೆಗೆಟ್ಟವಳು, ನನ್ನ ಬಗ್ಗೆ ಇಲ್ಲಸಲ್ಲದ್ದನ್ನಾಡಿದ್ದು? ನನ್ನೆದುರಿಗೆ ಹೇಳಬೇಕಿತ್ತು, ಅವಳನ್ನು ಸಿಗಿದು ಕಂಬಕ್ಕೆ ತೋರಣ ಕಟ್ಟುತ್ತಿದ್ದೆ" ಎನ್ನುತ್ತಿದ್ದಳು.

ಕಾಲೇಜಿನ ಈ ವಾತಾವರಣದಲ್ಲಿ ಒಂದು ವರ್ಷ ಹೇಗೆ ಕಳೆಯಿತೆಂದೇ ತಿಳಿಯಲಿಲ್ಲ. ಅಭ್ಯಾಸದ ಕಡೆಗೆ ಚೆನ್ನಾಗಿ ಗಮನವಿತ್ತಿದ್ದರಿಂದ ಒಳ್ಳೆಯ ಅಂಕ ಸಿಗುತ್ತಿತ್ತು. ಹುಡುಗರ ಯಾವ ಚೆಲ್ಲಾಟಕ್ಕೂ ಗಮನವೀಯದೆ ತನ್ನಷ್ಟಕ್ಕೇ ನಾಣಿದ್ದುದರಿಂದ ಯಾರ ಅಪಕೃಪೆಗೂ ಪಾತ್ರಳಾಗಿಲ್ಲ.

ಒಂದು ದಿನ ಅವಸರವಸರವಾಗಿ ಕಾಲೇಜಿಗೆ ಹೊರಟಿದ್ದೆ. ಆಗಲೇ ಗಂಟೆ ೨½ ಗೆ ಸರಿಸಿಸಿತ್ತು. ಇನ್ನೂ ನಡೆಯಲು ಅರ್ಧ ಮೈಲಿನ ಹಾದಿಯಿದೆಯೆಂದು ಕೊಂಡು, ಅರ್ಧ ಓಡುತ್ತಾ, ಅರ್ಧ ಬೀಸುಗಾಲು ಹಾಕುತ್ತಾ ನಡೆಯುತ್ತಿದ್ದೆ. ಕಾಲೇಜಿಗೆ ಸಮೀಪಿಸುತ್ತಿರುವಾಗ, ಅತಿ ವೇಗದಿಂದ ಎಮರುಗಡೆಯಿಂದ ಒಂದು ಲಾರಿ ಬಂದಿತ್ತು. ಲಾರಿ ನನ್ನನ್ನು ಸಮೀಪಿಸುತ್ತಿರುವಷ್ಟರಲ್ಲಿ ನನ್ನ ಹಿಂದಿನಿಂದ ಬಂದು ಮುಂದೆ ಹೊರಟ ಸೈಕಲಿಗೆ ಢಿಕ್ಕಿ ಹೊಡೆದು, ಸೈಕಲ್ ಸವಾರನ ಸಮೇತ ಚರಂಡಿಗೆ ಬಿತ್ತು. ನನ್ನ ಕಣ್ಣೆದುರಲ್ಲೇ ನಡೆದ ಆಕಸ್ಮಿಕ ದುರಂತದಿಂದ ನನಗೆ ಕಣ್ಣು ಕತ್ತಲೆ ಬಂದಂತಾಯ್ತು. ಲೋರಿ ಯುವನು ಲಾರಿ ನಿಲ್ಲಿಸುವುದನ್ನು ಬಿಟ್ಟು, ವಾಹನವನ್ನು ಇನ್ನೂ ವೇಗದಿಂದ ಓಡಿಸಿದ. ಬೀದಿಯ ಅಕ್ಕಪಕ್ಕಗಳಲ್ಲಿ ಯಾರೂ ಇರಲಿಲ್ಲ. ಚಂಡಿಗೆ ಬಿದ್ದ ವ್ಯಕ್ತಿಯ ಕಡೆಗೆ ಓಡಿದೆ. ವ್ಯಕ್ತಿ ಕಾಲೇಜಿನ ವಿದ್ಯಾ

(ಹನ್ನೊಂದನೇ ಪುಟ ನೋಡಿರಿ)

ಸುನ್ನವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ

ಶೇವಹಾತಿಗಳ ಮೇಲೆ ೩% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ೪½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3



ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೦	೧೮—೧—೧೯೬೮	No. 20

ಕಾಂಗ್ರೆಸ್ ಅಧಿವೇಶನ

ಹೈದರಾಬಾದಿನಲ್ಲಿ ಜರಗಿದ ಚರಿತ್ರಾರ್ಹ ಕಾಂಗ್ರೆಸ್ ಅಧಿವೇಶನವು ಕಳೆದ ವಾರ ೧೧ರಂದು ಮುಕ್ತಾಯಗೊಂಡಿತು. ಈ ಬಾರಿಯ ಕಾಂಗ್ರೆಸ್ ಅಧಿವೇಶನಕ್ಕೆ ಎರಡು ದೃಷ್ಟಿಯಿಂದ ಮಹತ್ವಿಕೆ ಬಂದಿತು. ಮೊದಲನೆಯದಾಗಿ, ಚತುರ್ಥ ಮಹಾಚುನಾವಣೆಯ ಬಳಿಕ ನಡೆಯುತ್ತಿರುವ ಪ್ರಥಮ ಅಧಿವೇಶನವಿದು. ಎರಡನೆಯದಾಗಿ; ಕನ್ನಡಿಗರೊಬ್ಬರು ಕಾಂಗ್ರೆಸ್ ಗದ್ದುಗೆಯೇರಿ ಸೇರಿದ ಅಧಿವೇಶನವಿದು.

ಕಾಂಗ್ರೆಸ್ ಅಧಿವೇಶನಗಳೆಂದರೆ ಒಂದು ದೊಡ್ಡ ಜಾತ್ರೆಮಾತ್ರ ಎಂದುಹೇಳುವ ಕಾಲವೂ ಇತ್ತು. ಅಧಿವೇಶನ ಸೇರುವಲ್ಲಿಗೆ ಅದೊಂದು ಜಾತ್ರೆಯೇ ನಿಜ. ಆದರೆ, ವಿಚಾರವಂತರ ಪಾಲಿಗೆ ಇದು ವಿಚಾರ ವೇದಿಕೆಯೂ ಹೌದು.

ಚತುರ್ಥ ಮಹಾಚುನಾವಣೆಯ ಬಳಿಕ ಈ ದೇಶದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳಿಂದಾಗಿ, ಚುನಾವಣೆಯಲ್ಲಿ ಕಾಂಗ್ರೆಸ್ ಅನುಭವಿಸಿದ ಹಲವು ಅಸರೀಕ್ಷಿತ ಸೋಲು. ಕಾರಣದಿಂದಾಗಿ, ಕಾಂಗ್ರೆಸ್ ಅಧಿವೇಶನಕ್ಕೆ ವಿಶೇಷ ಮಹತ್ವ ಬಂದಿದೆ. ಕಾಂಗ್ರೆಸ್ ಬಗ್ಗೆ ಜನಪ್ರಿಯತೆಯನ್ನು ಪುನಃ ಗಳಿಸುವ ದಾರಿಯನ್ನು ಕಂಡುಕೊಳ್ಳುವುದಂ ಹತಗ, ಅದನ್ನೊಂದು ಸುದೃಢ ಪಕ್ಷವನ್ನಾಗಿ ಬಳಿಸಿಕೊಂಡು ಹೋಗುವ ಕುರಿತೂ ಕಾಂಗ್ರೆಸ್ ಆಲೋಚಿಸಬೇಕಾದ ಸ್ಥಿತಿ ಒದಗಿದೆ. ಸಮಾಜವಾದ ಕಲ್ಯಾಣ ರಾಷ್ಟ್ರವನ್ನು ನಿರ್ಮಿಸುವ ಸಾಗಬೇಕಾದಲ್ಲಿ ಎಡೆಯಲ್ಲಿ ಕಾರ್ಯಕ್ರಮಗಳ ಕುರಿತೂ ಯೋಚಿಸಬೇಕಾಗಿತ್ತು. ಮಾತ್ರವಲ್ಲ ಹಲವು ರಾಜ್ಯಗಳಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳ ಕುರಿತೂ ಪರ್ಯಾಲೋಚನೆ ನಡೆಸಬೇಕಾಗಿತ್ತು. ಈ ಎಲ್ಲಾ ವಿಚಾರಗಳೂ ಸದಸ್ಯರಿಂದ ಚರ್ಚಿಸಲ್ಪಟ್ಟು, ಸೂತ್ರ ಮಾರ್ಗದರ್ಶನ ದೊರೆಯಬೇಕೆಂಬುದು ಸರ್ವಥಾನ ಕರವಾದ ಸಂಗತಿ.

ಶ್ರೀ ನಿಜಲಿಂಗಪ್ಪನವರು ತನ್ನ ಅಧ್ಯಕ್ಷ ಭಾಷಣದಲ್ಲಿ ಕಾಂಗ್ರೆಸಿನ ಹಾಗೂ ದೇಶದ ಮುಂದಿರುವ ಹಲವಾರು ಸಮಸ್ಯೆಗಳ ಕುರಿತು ಬಿಚ್ಚು ಮನಸ್ಸಿನಿಂದ ಆಡಿದ್ದಾರೆ. ಇವುಗಳಲ್ಲಿ ಅತಿ ಪ್ರಾಮುಖ್ಯದ ಹಾಗೂ ಹೊಸತಾದ ವಿಚಾರ ಎಂದರೆ ಕೇಂದ್ರವು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ದಾಗೂ ಧನ ಸಹಾಯ ಈಯುವುದರ ಜತೆಗೆ ಅಧಿಕ ಜವಾಬ್ದಾರಿಯನ್ನು ಹೇರುವದು. ಈ ವರೆಗೆ ಈ ವಿಚಾರವಾಗಿ ಅಭಿಪ್ರಾಯ ಮಂಡಿಸಿದವರೇ ಇಲ್ಲ. ಪ್ರತಿಯೊಂದು ಲೋಕದೋಷಗಳಿಗೂ ರಾಜ್ಯ ಸರಕಾರಗಳು ಕೇಂದ್ರವನ್ನು ದೂರುವುದರಲ್ಲಿ ಮುಂದಾಗಿ, ಜವಾಬ್ದಾರಿಯನ್ನು ದಾಟಿಸಿ ಬಿಡುತ್ತಿದ್ದುವು.

ರಾಜ್ಯದ ಮುಖ್ಯಮಂತ್ರಿಯಾಗಿ ಬಹುಕಾಲ ಕಾರ್ಯ ನಿರ್ವಹಿಸಿದ ಅನುಭವಿ ನಿಜಲಿಂಗಪ್ಪನವರು ಈ ಕುರಿತು ಪಟ್ಟ ಅಭಿಪ್ರಾಯ ಮನನಾರ್ಹವಾದುದು. ಕೇಂದ್ರವು ತನ್ನ ವರಮಾನದ ಒಂದಂಶವನ್ನು ರಾಜ್ಯಗಳಿಗೆ ಇತ್ತು. ಅವುಗಳ ಮೇಲೆ ಸೂಕ್ತ ಜವಾಬ್ದಾರಿಯನ್ನು ಹೊರಿಸುವುದರಿಂದ ತನ್ನ ಕಾರ್ಯವನ್ನು ಸರಳಗೊಳಿಸಿದಂತಾಗುತ್ತದೆ. ರಾಜ್ಯಗಳು ತಮ್ಮ ಹೊಣೆ ತಪ್ಪಿಸಿಕೊಳ್ಳಲು ಕೇಂದ್ರದ ಕಡೆಗೆ ಬೊಟ್ಟು ಮಾಡಿ ತೋರಿಸುವುದೂ ಇಲ್ಲವಾಗುತ್ತದೆ. ತಮಗೆ ದೊರಕಿದ ಆರ್ಥಿಕ ಸೌಲಭ್ಯವನ್ನು ರಾಜ್ಯಗಳು ಸದುಪಯೋಗಗೊಳಿಸಿದಂತಾಗುತ್ತದೆ. ರಾಜ್ಯ-ಕೇಂದ್ರಗಳ ನಡುವಣ ವಿರಸ ದೂರವಾಗುವುದೂ ಸಾಧ್ಯವಿದೆ. ಈ ಒಂದು ಹೊಸ ಘೋಷಣೆಯನ್ನು ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಯಿಂದ ಪ್ರಕಟಿಸಿದ್ದುದರಿಂದ ಈ ಸೂಚನೆಗೆ ರಾಷ್ಟ್ರೀಯ ಪಟ್ಟದ ಪ್ರಾಮುಖ್ಯತೆ ಬಂದಿದೆ. ಈ ಕುರಿತು ಸಂಬಂಧಿಸಿದವರು ಸೂಕ್ತವಾಗಿ ಕಾರ್ಯಕ್ರಮ ಕೈಗೊಳ್ಳಬಹುದು.

ಶ್ರೀ ನಿಜಲಿಂಗಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಭಾಷಾ ಪ್ರಶ್ನೆ, ಗಡಿವಿವಾದಗಳ ಕುರಿತೂ ಪ್ರಸ್ತಾಪಿಸಿದರು. ಕರ್ನಾಟಕದ ಮುಖ್ಯ ಮಂತ್ರಿಯಾಗಿರುವ ಅವರು ನೇರವಾಗಿ ಕರ್ನಾಟಕದ ಪರವಾಗಿಯೇ ಮಾತನಾಡಬಹುದಿತ್ತು. ಆದರೆ ಅಜಾತ ಶತ್ರುಗಳಾದ ನಿಜಲಿಂಗಪ್ಪನವರು ವೈಮನಸ್ಯ— ಮಹಾರಾಷ್ಟ್ರಗಳ ಗಡಿ ವಿವಾದಗಳ ನೇರ ಪ್ರಸ್ತಾಪ ಮಾಡದೇನೇ ರಾಷ್ಟ್ರದ ಐಕ್ಯತೆಯನ್ನು ಸಮರ್ಥಿಸಿ, ವಿಶಾಲ ಭಾವನೆಯ ಅಗತ್ಯ ಎಂದಷ್ಟೇ ಹೇಳಿದರೇ ಹೊರತು ಕರ್ನಾಟಕದ ಹೆಸರು ಮಾತಾಡಲಿಲ್ಲ. ಇದು ಅವರು ಅಖಿಲ ಭಾರತ ವ್ಯಾಪ್ತಿಯ ನಾಯಕನಾಗಲು ಎಷ್ಟು ಆಸೆಪಡುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಅವರ ವಿಶಾಲ ಹಾಗೂ ಉದಾರ ಧೋರಣೆ ಎಲ್ಲರೂ ಮೆಚ್ಚುವಂಥದು.

ದೇಶದ ಇಂದಿನ ಪರಿಸ್ಥಿತಿಯ ಪ್ರಸ್ತಾಪವನ್ನು ನಿಜಲಿಂಗಪ್ಪನವರು ಮಾಡಿ ಭಾಷಣದ ಹೆಸರಿಲ್ಲಿ ಗಡಿ ವಿವಾದದಲ್ಲಿ ನವಿಧೀರಿಸಿ ಕುರಿತು ಗೊಂದಲ ಸಲ್ಲದೆಂದು ಎಚ್ಚರಿಸಿದರು. ಇಂದು ಎಲ್ಲಾ ರೋಗಕ್ಕೂ ಒಂದೇ ಮದ್ದಂತೆ ಹಿಂಸಾಚಾರವೇ ತಾಂಡವವಾಡುತ್ತಿದೆ. ಲೂಟಿ, ಗೊಂದಲ, ಹಿಂಸಾಚಾರ, ದೊಂಬಿಗಳು ಮೇರೆಮೀರಿ ಹರಡಿದೆ. ಇದರಿಂದ ದೇಶ ಅಪಾರವಾದ ನಷ್ಟ ಅನುಭವಿಸಬೇಕಾಗಿ ಬಂದಿದೆ. ಭಿನ್ನಾಭಿಪ್ರಾಯಗಳ ಪರಿಹಾರ ಹಿಂಸೆಯಿಂದ ಆಗುವುದಿಲ್ಲ. ಬದಲು ಅದು ಹೆಚ್ಚುತ್ತಾ ಹೋಗುವುದು. ಯಾವುದೇ ಕಾರಣಕ್ಕಾಗಲಿ ಹಿಂಸಾಚಾರಕ್ಕೆ ಮರೆಹೋಗುವುದನ್ನು ನಿಜಲಿಂಗಪ್ಪನವರು ಖಂಡಿಸಿದ್ದಾರೆ.

ಕಾಂಗ್ರೆಸ್ಸನ್ನು ಬಲಪಡಿಸುವುದು ನಮ್ಮ ಶಕ್ತಿಯನ್ನು ಉತ್ಪಾದಕ ಕಾರ್ಯಗಳಿಗೆ ವ್ಯಯಿಸುವ ಅಗತ್ಯತೆ, ಯುವಜನರ ಕರ್ತವ್ಯ, ರಾಷ್ಟ್ರೀಯ ಭಾವೈಕ್ಯತೆಯ ಅವಶ್ಯಕತೆಯ ಕುರಿತು ಅವರು ಒತ್ತಿ ಹೇಳಿದ್ದಾರೆ. ಕಾಂಗ್ರೆಸು ಮುಂದೆಯೂ ಶಕ್ತಿಶಾಲಿಯಾಗ ಬೇಕಾದರೆ ಹೂವ ದಾರಿಯಲ್ಲಿ ಮುನ್ನಡೆಯ ಬೇಕು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಕಾಂಗ್ರೆಸ್ ಇಂದು ಒಂದು ಸಂಧಿ ಕಾಲವನ್ನು ಎದುರಿಸುತ್ತಿದೆ. ಚುನಾವಣೆಯ ನಂತರವಂತೂ ಕಾಂಗ್ರೆಸಿನ ಶಕ್ತಿ ಕುಂದಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲೇ, ಅದರ ಚಾಲಕನ ಪಟ್ಟ ನಿಜಲಿಂಗಪ್ಪನವರ ಪಾಲಿಗೆ ಬಂದಿದೆ. ಕಾಂಗ್ರೆಸಿನೊಳಗೇ ಇರುವ ವಿವಿಧ ಅಭಿಪ್ರಾಯಗಳ ಜನರನ್ನು ಒಲಿಸಿ, ಕಾಂಗ್ರೆಸ್ಸನ್ನು ಇಷ್ಟಪಟ್ಟು ಬಲಪಡಿಸುವ, ಜನಪ್ರಿಯಗೊಳಿಸುವ ಗುರುತರವಾದ ಹೊಣೆ ಶ್ರೀ ನಿಜಲಿಂಗಪ್ಪನವರ ಮೇಲಿದೆ. ಅವರು ಈ ಕಾರ್ಯದಲ್ಲಿ ಸಮರ್ಥಸಾಚಿಯಾಗಿ ಗೆದ್ದು ಬರಲಿ ಎಂದು ಹಾರೈಸುತ್ತೇವೆ.

ಕಾಂಗ್ರೆಸ್ ಆವಡಿಯ ಅಧಿವೇಶನದಲ್ಲೇ ಸಮಾಜವಾದಿ ರಾಷ್ಟ್ರ ನಿರ್ಮಾಣದ ಗುರಿಯನ್ನು ಘೋಷಿಸಿತು. ಆದರೆ ಈ ಗುರಿಯನ್ನು ಮುಟ್ಟುವಲ್ಲಿ ಮಾತ್ರ ಇನ್ನೂ ರಾಷ್ಟ್ರ ಜಯಶಾಲಿಯಾಗಿಲ್ಲ. ಸಾಮಾನ್ಯ ಜನರು, ಮಧ್ಯಮ ವರ್ಗದವರು ಕೂಲಿಕಾರರ ಪಾಡು ದಿನದಿಂದ ದಿನಕ್ಕೆ ನಿಕೃಷ್ಟವಾಗುತ್ತಾ ಬರುತ್ತಿದೆ. ಮೂರು ಪಂಚವಾರ್ಷಿಕ ಯೋಜನೆಗಳ ಬಳಿಕವೂ ಜನ ಸಾಮಾನ್ಯರಿಗೆ ಸುಖ ಸಿಕ್ಕಿಲ್ಲ. ಇದು ಯಾರ ತಪ್ಪೆಂದು ದೂರನ್ನೂ ದೋಷಿಸುವಂತಿಲ್ಲ. ಆದರೆ ಸರಕಾರದ ಹೊಣೆ ಹೊತ್ತ ಕಾಂಗ್ರೆಸ್ ಇದಕ್ಕೆ ಉತ್ತರ ಹೇಳಬೇಕಾಗಿ ಬಂದಿದೆ. ಟೀಕೆಗೆ ಗುರಿಯಾಗ ಬೇಕಾಗಿದೆ.

ನಿಜಲಿಂಗಪ್ಪನವರು ಜನಪ್ರಿಯ ವ್ಯಕ್ತಿಗಳು. ಅವರ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ ಕಳೆದುಕೊಂಡಿದ್ದ ಜನಪ್ರಿಯತೆಯನ್ನು ಪುನಃಗಳಿಸಿಕೊಂಡು ರಾಷ್ಟ್ರ ನಿರ್ಮಾಣದ ಮಹಾಯಜ್ಞದಲ್ಲಿ ಸೂತ್ರಧಾರಿಯಾಗಿ ಮುಂದರಿಯಲಿ ಎಂದು ಹಾರೈಸುತ್ತೇವೆ. ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಯನ್ನಿರುವ ಮೊದಲ ಕನ್ನಡಿಗ ಶ್ರೀ ನಿಜಲಿಂಗಪ್ಪನವರಿಗೆ ಕಾಂಗ್ರೆಸ್ ರಥವನ್ನು ಸುಗಮವಾಗಿ ಮುನ್ನಡೆಸಿಕೊಂಡು ಹೋಗುವ ಶಕ್ತಿ ಚೈತನ್ಯ ಬಲವು ಜನರಿಂದ ದೊರಕಲಿ ಎಂದು ಆಶಿಸುತ್ತೇವೆ.

ಮುಖ ಪತ್ರದಲ್ಲಿ

ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಜರಗುವ ರಂಜನೀಯ ಉತ್ಸವಗಳ ದೃಶ್ಯ.

ಜೂನೋತ್ಸವ
ಮತ್ತು
ತೆಪ್ಪೋತ್ಸವ

ವಚನ ಸುಧೆ

ಯಃ ಕಶ್ಚಿದಸ್ಯಸ ಬಂಧೋ
ಮಿತ್ರಭಾವೇನ ವರ್ತತೇ
ಸ ಏವ ಬಂಧುಸ್ತ್ವನ್ಮಿತ್ರಂ
ಸಾ ಗತಿಸ್ತಾ ಪರಾಯಣಂ ॥

ಪೂರ್ವ ಪರಿಚಯ-ಸಂಬಂಧವಿಲ್ಲದಿದ್ದರೂ ಮಿತ್ರನಂತೆ ನಮ್ಮೊಡನೆ ವರ್ತಿಸುವವನು ನಮ್ಮ ಮಿತ್ರನು, ಅವನೇ ಆಶ್ರಯದಾತನು.

ಸಿಂಡಿಕೇಟ್ ಬ್ಯಾಂಕಿನ ಟೇಕ್ಸ್ ಸರ್ವಿಸ್ ಯೋಜನೆ

ಮಣಿಪಾಲ—ತನ್ನ ಗ್ರಾಹಕರ ಟೇಕ್ಸ್‌ನ ಸಮಸ್ಯೆಗಳನ್ನು ಎದುರಿಸಲು ಸಿಂಡಿಕೇಟ್ ಬ್ಯಾಂಕ್ ಸಹಾಯ ಹಸ್ತ ನೀಡುವ ಹೊಸ ಯೋಜನೆಯೊಂದನ್ನು ಜಾರಿಗೆ ತಂದಿದೆ. ಈ ಯೋಜನೆಗೆ ಅನುಗುಣವಾಗಿ "ಇಯರ್ ಮಿಸ್ ಅಡಾಯ" ವಿರುವವರ ಇನ್‌ಕಮ್ ಟ್ಯಾಕ್ಸ್ ರಿಟರ್ನ್ ಕಳುಹಿಸುವುದು ಹಾಗೂ ಇನ್ನಿತರ ಕಾರ್ಯಗಳನ್ನು ಬೇಕಾದ ನಿರ್ವಹಿಸುವುದು, ಅಲ್ಲದೆ ಎಲ್ಲಾ ತೆರಿಗೆದಾರರಿಗೂ ತೆರಿಗೆಯ ಕುರಿತು ಮಾಹಿತಿ ಪ್ರಕಟಿಸುವುದು, ಪ್ರಸ್ತುತ ೫೦,೦೦೦ ಜನಸಂಖ್ಯೆ ಇರುವ ನಗರಗಳಲ್ಲಿರುವ ಶಾಖೆಗಳು ಈ ಕಾರ್ಯವನ್ನು ನಿರ್ವಹಿಸುತ್ತವೆ. ಅಲ್ಲದೆ ಉಡುಪಿ, ಮಣಿಪಾಲಗಳಿಗೂ ಈ ಯೋಜನೆ ವಿಸ್ತರಿಸಲಾಗಿದೆ. ಈ ಸೌಲಭ್ಯದ ವಿವರಗಳೂ ಅದಕ್ಕೆ ತೆರಬೇಕಾದ ಫೀಸಿನ ಕುರಿತಾದ ಚಿತ್ರ ಹೊತ್ತಗೆಯನ್ನು ಬೇಕಾದ ಬಿಡುಗಡೆಗೊಳಿಸಿದೆ. ಗ್ರಾಹಕರು ತಮಗೆ ಸಮೀಪ ವಿರುವಶಾಖೆಗಳಲ್ಲಿ ಈ ಕುರಿತು ವ್ಯವಹರಿಸಬಹುದು.

In the Court of the Civil Judge of Mangalore

S. E. P. 147/1967
in S. C. 74/64

Between

Sri Krishnapur Mutt, Udipi . Petitioner

and

Simon Denis Souza and others ... Respondents.

To

2nd respondent Phillip Souza S/o Francis Amissi Souza, Ulia, Podukodi village, Mangalore Taluk.

Please take notice that the above execution petition for recovery of amount due stands posted to 5—2—68 for your appearance and you may appear on that day at 11 A M. in the said Court in person or by counsel and put forth your contentions and in case of your failure to do so, will be set exparte and the matter decided on merits.

B. O.

Sd. P. Janardhan Rao,
Advocate for petitioner.

Mangalore, 11—1—1968.

ವಿಶೇಷ ಲೇಖನ

ಬುಡಕಟ್ಟು ಜನಾಂಗದ ಬದುಕಿಗೆ ಬೆಳಕು

ಭಾರತದ ಗ್ರಾಮಾಂತರ ಜೀವನಕ್ಕೆ ಹೊಸ ಮನ್ವಂತರವನ್ನು ತರಲು ಸಮುದಾಯ ಅಭಿವೃದ್ಧಿ ಬ್ಲಾಕುಗಳು ಶ್ರಮಿಸುತ್ತಿರುವಂತೆ, ನಾಗರಿಕತೆಯ ಜಾಡಿನಿಂದ ದೂರ ಉಳಿದಿರುವ ಬುಡಕಟ್ಟು ಜನಾಂಗದ ಪ್ರಗತಿಗೆ "ಬುಡಕಟ್ಟು ಜನಾಂಗ ಅಭಿವೃದ್ಧಿ ಬ್ಲಾಕು"ಗಳು ಕೆಲಸ ಮಾಡುತ್ತಿವೆ. ನಮ್ಮ ದೇಶದಲ್ಲಿ ಬುಡಕಟ್ಟು ವರ್ಗಕ್ಕೆ ಸೇರಿದವರ ಸಂಖ್ಯೆ ಸುಮಾರು ಮೂರು ಕೋಟಿ. ಅವರೆಲ್ಲರ ಆರ್ಥಿಕ—ಸಾಮಾಜಿಕ—ಜೀವನದಲ್ಲಿ ಹೊಸ ಬೆಳಕನ್ನು ಚೆಲ್ಲಲು ಈ ಬ್ಲಾಕುಗಳು ಶ್ರಮಿಸಿ ಪ್ರಭಾವ ಬೀರಿವೆ. ಕೆಲವು ಸ್ವಯಂ ಸೇವಾ ಸಂಸ್ಥೆಗಳೂ ಸರಕಾರೀ ಶಾಖೆಗಳೊಂದಿಗೆ ಸಹಕರಿಸಿ ಈ ಜನಾಂಗದ ಏಳಿಗೆಗೆ ಮಾರ್ಗ ಕಲ್ಪಿಸಿಕೊಟ್ಟಿವೆ.

ಪ್ರಗತಿ ಪಥ

ಬುಡಕಟ್ಟು ವರ್ಗಕ್ಕೆ ಸೇರಿದ ಸುಮಾರು ಒಂದು ಕೋಟಿ ಇಪ್ಪತ್ತೈದು ಲಕ್ಷ ಜನರು ಸುಮಾರು ನಾಲ್ಕು ನೂರು "ಬುಡಕಟ್ಟು ಜನಾಂಗ ಅಭಿವೃದ್ಧಿ ಬ್ಲಾಕುಗಳ ಮತ್ತು 43 ವಿಶೇಷ ಬಹುಮುಖಿ ಪ್ರಯೋಜನದಭಿವೃದ್ಧಿ ಬ್ಲಾಕುಗಳ ಕಕ್ಷೆಯಲ್ಲಿ ಈಗಾಗಲೇ ಬಂದಿರುತ್ತಾರೆ. ಪ್ರತಿಯೊಂದು ಬ್ಲಾಕೂ ಸುಮಾರು ಐದು ನೂರು ಚದರ ಕಿಲೋ ಮೀಟರ್ ಕ್ಷೇತ್ರವನ್ನು ವ್ಯಾಪಿಸಿರುತ್ತದೆ. ಮತ್ತು 25,000 ಜನರಿಗೆ ಸೇವೆ ಸಲ್ಲಿಸುತ್ತದೆ. ಈ ಬ್ಲಾಕುಗಳು ತೃತೀಯ ಯೋಜನಾ ಅವಧಿಯಲ್ಲಿ ಸುಮಾರು ಹದಿನೈದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿವೆ. ಈ ಬ್ಲಾಕುಗಳು ವಿವಿಧ ಶಾಖೆಗಳಿಂದ ಹಣ ದೊರಕಿಸಲು ಸದಾ ಪ್ರಯತ್ನ ಮಾಡಿವೆ.

ಕೃಷಿ ಅಭಿಮುಖ ಅಭಿವೃದ್ಧಿ

ಈ ಜನಾಂಗದ ಮುಖ್ಯ ವೃತ್ತಿ ಬೇಸಾಯವೇ ಆಗಿದೆ. ಚಿಕ್ಕ ಹಿಡುವಳಿಗಳು, ನೀರಾವರಿ ಸೌಕರ್ಯದ ಅಭಾವ, ಪರಂಪರಾಗತ ಕೃಷಿ ವಿಧಾನ—ಈ ಕಾರಣಗಳಿಂದಾಗಿ ಬುಡಕಟ್ಟು ಜನಾಂಗದ ಆರ್ಥಿಕ ಪರಿಸ್ಥಿತಿ ವಿಶೇಷವಾಗಿ ಹದಗೆಟ್ಟಿತ್ತು. ಅವರ ಸಮಸ್ಯೆಗಳನ್ನು ಪರಿಹರಿಸಲು ಈ ಬ್ಲಾಕುಗಳು ನಿರಂತರ ಪ್ರಯತ್ನಗಳನ್ನು ಮುಂದುವರಿಸಿದವು. ಸಹಾಯಧನ—ಸಹಿತ-ಸಾಲ ಪದ್ಧತಿಯನ್ನು ಈ ಬ್ಲಾಕ್‌ಗಳಲ್ಲಿ ಜಾರಿಗೆ ತರಲಾಯಿತು. ಇವಲ್ಲದೆ ಇಷ್ಟಿತರ ಸೌಕರ್ಯಗಳನ್ನು ಇವುಗಳಿಗೆ ನೀಡಲಾಯಿತು.

ಈ ಬ್ಲಾಕ್‌ಗಳು ಐದು ವರ್ಷ ಅವಧಿಯ ಎರಡು ಹಂತಗಳಲ್ಲಿ ಕಾರ್ಯವೂಡುತ್ತಿದ್ದು, ಪ್ರಥಮ ಹಂತದಲ್ಲಿ ಕೇಂದ್ರ ಗೃಹ ಮಂತ್ರಿ ಶಾಖೆಯಿಂದ ಹತ್ತು ಲಕ್ಷ ರೂಪಾಯಿ ಮೊತ್ತದ ಸಹಾಯವನ್ನು ಸಡೆಯುವವು. ದ್ವಿತೀಯ ಹಂತದಲ್ಲಿ ಐದು ಲಕ್ಷ ರೂಪಾಯಿಗಳನ್ನು ಪಡೆಯುವವು. ಇದಲ್ಲದೆ ಸಮುದಾಯ ಅಭಿವೃದ್ಧಿ ಮಂತ್ರಿ ಶಾಖೆಯೂ ಈ ಬ್ಲಾಕುಗಳಿಗೆ ಪ್ರಥಮ ಹಂತದಲ್ಲಿ ಹನ್ನೆರಡು ಲಕ್ಷ ರೂಪಾಯಿಗಳನ್ನೂ ಮತ್ತು ದ್ವಿತೀಯ ಹಂತದಲ್ಲಿ ಐದು ಲಕ್ಷ ರೂಪಾಯಿಗಳನ್ನೂ ನೀಡುತ್ತದೆ.

ಬುಡಕಟ್ಟು ವರ್ಗದ ಬೇಸಾಯಗಾರರು

ಈ ಬ್ಲಾಕುಗಳಿಗೆ ಸೇರಿದ ಬುಡಕಟ್ಟು ವರ್ಗದ ಬೇಸಾಯಗಾರರಿಗೆ ಉಳಿದ ಸಾಮಾನ್ಯ ರೈತರಿಗೆ ಸಿಗದೆ ಹೋದ ಅನೇಕ ರಿಯಾಯಿತಿಗಳು ದೊರಕಿವೆ.

ಹಣ್ಣಿನ ಗಿಡಗಳನ್ನು ಬೆಳೆಸಲು ಹಗಲುವ ವೆಚ್ಚದಲ್ಲಿ ಶೇಕಡ 75ರಷ್ಟು, ಮತ್ತು ಸೀಮೆ ಗೊಬ್ಬರಕೊಳ್ಳುವಲ್ಲಿ ಶೇಕಡ 25ರಷ್ಟು ಸಹಾಯಧನ, ಭೂಸಾರ ರಕ್ಷಣೆಗೆ ಸಹಾಯಧನಗಳನ್ನು ಇವರು ಪಡೆದಿದ್ದಾರೆ. ಸುಧಾರಿಸಿದ ಕೃಷಿ ಉಪಕರಣ ಕೊಳ್ಳಲೂ, ಸಸ್ಯ ರಕ್ಷಣೆಗೆಂದೂ ಇವರು ಸಹಾಯ ಧನ ದೊರಕಿಸಿದ್ದಾರೆ. ಬಾವಿಗಳನ್ನು ರಚಿಸಿದಾಗ ಅದರ ವೆಚ್ಚದ ಅರ್ಧ ಭಾಗವನ್ನು ಸಹಾಯಧನ ರೂಪದಲ್ಲಿ ಪಡೆಯಲಾಗಿದೆ. ಪಂಪಿಂಗ್ ಸೆಟ್ ಅಥವಾ ಪರ್ಷಿಯನ್ ಚಕ್ರಗಳನ್ನು ಕೊಂಡುಕೊಳ್ಳುವಾಗ ಈ ಬೇಸಾಯಗಾರರು ಧಾರಾಳ ಸಹಾಯಧನ ಪಡೆದಿದ್ದಾರೆ.

ವಿಶೇಷ ಸೌಕರ್ಯ

ಸಹಾಯಧನದ ನೆರವೊಂದೇ ಅಲ್ಲ ಇವರಿಗೆ ದೊರೆತದ್ದು. ಬುಡಕಟ್ಟು ಜನಾಂಗದ ಪಂಚಾಯ್ತಿ ರಾಜ್ಯಗಳು ವಿಶೇಷ ಸೌಲಭ್ಯಗಳನ್ನು ಪಡೆದಿವೆ. ಬಾವಿಗಳನ್ನು ಕಟ್ಟಿಸಲು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಕಟ್ಟಡಗಳನ್ನು ರಚಿಸಲು, ಗ್ರಾಮಗಳಲ್ಲಿ ಶೌಚ ಕೂಪಗಳನ್ನು ನಿರ್ಮಿಸಲು, ಚರಂಡಿಗಳನ್ನು ರಚಿಸಲು ಈ ಪಂಚಾಯ್ತಿಗಳಿಗೆ ಉದಾರ ಸಹಾಯ ದೊರೆತಿದೆ. ಕೃಷಿ ಪ್ರದರ್ಶನ ಮತ್ತು ಬೆಳೆ ಸ್ಪರ್ಧೆಗಳನ್ನು ಏರ್ಪಡಿಸಿದಾಗ ಅದ ವೆಚ್ಚವನ್ನೆಲ್ಲ ಈ ಪಂಚಾಯ್ತಿಗಳು ಸಹಾಯ ಧನ ರೂಪದಲ್ಲಿ ದೊರಕಿಸಿವೆ.

ಈ ಬ್ಲಾಕುಗಳಿಗೆ ಇದು ವರೆಗೂ ದೇಶದ ಬುಡಕಟ್ಟು ಜನಾಂಗದ ಶೇಕಡ 33 ರಷ್ಟು ಜನರಿಗೆ ಮತ್ತು ಸೇವೆ ಸಲ್ಲಿಸಲು ಸಾಧ್ಯವಾಗಿವೆ. ಸದ್ಯೋಭವಿಷ್ಯದಲ್ಲಿ ಇನ್ನೂ ಬಹಳಷ್ಟು ಇಂತಹ ಜನರು ಈ ಬಗೆಯ ಬ್ಲಾಕುಗಳ ರಕ್ಷಣೆಯಲ್ಲಿ ಬರಲಿರುವರು. ತಮ್ಮ ಬದುಕಿನಲ್ಲಿ ಹೊಸ ಬೆಳಕನ್ನು ಕಾಣಲಿರುವರು!

ಡೆಂಟಲ್ ಎಸೋಸಿಯೇಶನ್‌ನಿಂದ ವಿದ್ಯಾರ್ಥಿಗಳಿಗೆ ಬಹುಮಾನ

ಮಣಿಪಾಲ, ಜ. ೧೦—ಇಂಡಿಯನ್ ಡೆಂಟಲ್ ಅಸೋಸಿಯೇಶನ್ನಿನ ಸ್ಥಳೀಯ ಶಾಖೆ ತನ್ನ ಕಾರ್ಯಕಲಾಪಗಳಲ್ಲಿ ವಿಶೇಷ ಆಸಕ್ತಿ ವಹಿಸುವ ಉತ್ತಮ ವಿದ್ಯಾರ್ಥಿಗಳಿಗೆ ಕೊಡುವುದಕ್ಕಾಗಿ ಭಾರತದಲ್ಲಿ ಆಧುನಿಕ ದಂತಶಾಸ್ತ್ರವನ್ನು ರೂಪಿಸಿರುವ ಕರ್ನಲ್ ಎನ್. ಎನ್. ಬೆರಿಯರ ಹೆಸರಿನಲ್ಲಿ ಇಲ್ಲಿಯ ಡೆಂಟಲ್ ಸರ್ಜರಿ ಕಾಲೇಜಿಗೆ ಒಂದು ಫಲಕ ಪ್ರಸ್ತುತಿದೆ.

ಈ ವರ್ಷ ಅದು ಕುಮಾರಿ ಪ್ರೇಮಾ ಎಸ್. ರಾಬರ್ಟ್ಸ್ ಹಾಗೂ ಶ್ರೀ ಬಿ. ಎಸ್. ಎಸ್. ಶ್ರೀಕೃಷ್ಣರವರಿಗೆ ಲಭಿಸಿದೆ.

ಡೆಂಟಲ್ ಸರ್ಜರಿ ಕಾಲೇಜಿನ ದಂತಶಾಸ್ತ್ರ ವಿದ್ಯಾರ್ಥಿಗಳ ಸಂಘ ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಅತಿ ಹೆಚ್ಚು ಭಾಗವಹಿಸಿದವರಿಗೆ ಕೊಡುವುದಕ್ಕಾಗಿ ಆಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ಅಧ್ಯಕ್ಷರ ಸೇವೆಯ ಬಗ್ಗೆ ಮೆಚ್ಚುಗೆಯಾಗಿ ಡಾ| ಟಿ. ಎಂ. ಎ. ಪೈ ಫಲಕವನ್ನು ಆರಂಭಿಸಿದೆ.

ಈ ಬಾರಿ ಅದನ್ನು ಕುಮಾರಿ ಪಿ. ಪಿ. ಜೇಸನಾ ಹಾಗೂ ಶ್ರೀ ಜಾರ್ಜ್ ಸಿ. ವರ್ಗೀಸ್‌ರವರು ಗಳಿಸಿದ್ದಾರೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 568/1967.

ವಾದಿ— ಶೀನಪ್ಪ ಶೆಟ್ಟಿ, ಕೊರ್ಗಿ ಮನೆ ಬಳ್ಳಮ್ಮ ಶೆಟ್ಟರ ಮಗ, ಕನ್ಯಾನ ಗ್ರಾಮದ ಬಿಂದಾಡಿಯಲ್ಲಿರುವವ.

ಪ್ರತಿವಾದಿ— ಹಿರಿಯಂಣ ಶೆಟ್ಟಿ, ಇಟ್ಟಪ್ಪ ಶೆಟ್ಟರ ಮನೆ ಅಂಕಮ್ಮ ಶೆಟ್ಟರ ಮಗ- ನಂಬ್ರ 1ನೇ ಶಿರೂರು ಗ್ರಾಮದಲ್ಲಿರುವವ

ಈ ನಾವೆಯ ವಾದಿಯು ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ನೀವು ವಾದಿಯಿಂದ ಸಡದ ರೂಪ್ಯಾ 225.00ಕ್ಕೆ ತಾರೀಕು 7-8-61ರಲ್ಲಿ ಬರೆಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿಯಲ್ಲಿ ಶಿರೂ ಸ್ಕಾರ ನಸೂಲು ಬಂದದ್ದು ಹೋಗ್ತ ಬಾಕಿ ಬಪ ಹಣ ಬಡ್ಡಿ ಕೂಡಾ ರೂ. 229.00ನ್ನು ಬರಪಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲಿನ ದಾವೆಯು ತಾರೀಕು 21-1-1968ಕ್ಕೆ ಸದ್ರಿ ಕೋರ್ಟ್‌ನಲ್ಲಿ ತಸ್ಕಿಗೆ ಯಿಟ್ಟಿರುತ್ತದೆ. ಆ ಯಾರಿಸು ಇಸ್ಮ ಅಕ್ಷೇಪವಿದ್ದಲ್ಲಿ ಮೇಲಿನ ಕೋರ್ಟ್‌ನಲ್ಲಿ ತಸ್ಕಿ ದಿವ್ಸ ಹಾಜ್ರಾಗಿ ಜ್ಯಾಬೀರು ಮಾಡಕಳ್ಳದ್ದು. ತಪ್ಪಿದ್ದ ಯಕ್ಸಪಾರ್ಟ ಮಾಡಿ ಡಿಕ್ರಿ ಮಾಡಕೋಗುತ್ತದೆ ಯಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

M. M. Hegde,
Advocate for Plaintiff.

Date 6—1—1968.



ಈ ಪ್ರಚಾರದಲ್ಲಿರುವ ಟಿಬಿ ಮೊಹರು ಮಾರಾಟ ಚಳವಳಿಯು ಜನವರಿ 26ಕ್ಕೆ ಕೊಳೆಗೊಳ್ಳುತ್ತದೆ. ಆದ ದರಿಂದ ಆ ತಾರೀಕಿನ ನೊದಲು ಟಿಬಿ ಮೊಹರುಗಳನ್ನು ಪಡಕೊಳ್ಳಲು ಮರೆಯಬೇಡಿರಿ ಒಂದ ಟಿಬಿ ಮೊಹರಿನ ಬೆಲೆ ಹತ್ತು ಪೈಸೆ ಮಾತ್ರ.

ಮೈಸೂರು ರಾಜ್ಯ ಟಿಬಿ ಸಮಿತಿಯು ಮೊಹರು ಮಾರಾಟ ಹಣವನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಉಪಯೋಗಿಸುತ್ತದೆ.

(a) ಬಡ ಕ್ಷಯರೋಗಿಗಳಿಗೆ ಔಷಧಿಗಳನ್ನು ಧರ್ಮಾರ್ಥ ಒದಗಿಸಲಿಕ್ಕೆ,
(b) ಮೂಳೆ ಕ್ಷಯರೋಗಿಗಳಿಗೆ ಬೆನ್ನೆಲುಬಿನ ಬಿಗಿ ಪಟ್ಟಿಗಳನ್ನು ಒದಗಿಸಲಿಕ್ಕೆ,
(c) ಮೊದಲು ಕ್ಷಯರೋಗಿಗಳಾಗಿದ್ದವರ ಪುನರ್‌ನಿವೇಶನಕ್ಕೆ,
(d) ಟಿಬಿ ಸಂಸ್ಥೆಗಳ ಬಡವರ ನಿಧಿಯನ್ನು ಹೆಚ್ಚಿಸಲಿಕ್ಕೆ,
(e) ಕ್ಷಯ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಬಡ ಕ್ಷಯರೋಗಿಗಳ ಪ್ರಯಾಣ ವೆಚ್ಚವನ್ನು ವಹಿಸಲಿಕ್ಕೆ,
(f) ಆರೋಗ್ಯ ಶಿಕ್ಷಣದ ಬಗ್ಗೆ ಪ್ರಸಾರ ಮತ್ತು ಪ್ರಚಾರ ಮಾಡಲಿಕ್ಕೆ,
(g) ಟಿಬಿ ಕೆಲಸಗಾರರ ಸಂಸತ್ತುಗಳನ್ನು ವ್ಯವಸ್ಥಾಪಿಸಲಿಕ್ಕೆ,
(h) ಟಿಬಿ ಕೆಲಸಗಾರರ ಮಾರ್ಗದರ್ಶಕಕ್ಕಾಗಿ ಒಂದು ವಾಚನ ಭಂಡಾರವನ್ನು ನಡೆಸಲಿಕ್ಕೆ.

ಟಿಬಿ ಮೊಹರುಗಳನ್ನು ಖರೀದಿಸಿರಿ ಮತ್ತು ಕ್ಷಯರೋಗದ ವಿರುದ್ಧ ಹೋರಾಡಲು ಸಹಾಯಮಾಡಿರಿ

ಮೊಹರುಗಳು ಮೈಸೂರು ರಾಜ್ಯ ಟಿಬಿ ಎಸೋಸಿಯೇಶನ್, ರಾಣಿ ಸರಳಾದೇವಿ ಎಜುಕೇಶನ್ ಇನ್ಸ್ಟಿಟ್ಯೂಟ್ ಬಿಲ್ಡಿಂಗ್, ಜಯನಗರ, ಬೆಂಗಳೂರು. ಜಿಲ್ಲಾ ಟಿಬಿ ಸಂಸ್ಥೆಗಳು ಮತ್ತು ಇತರ ಏಜನ್ಸಿಗಳಲ್ಲಿ ಮಾರಾಟಕ್ಕೆ ಸಿಗುತ್ತವೆ.

18ನೇ ಟಿಬಿ ಮೊಹರು ಮಾರಾಟ ಚಳವಳಿ
(ಭಾರತ ಕ್ಷಯ ನಿರೋಧಕ ಸಂಘ, ನವದೆಹಲಿ ಇವರಿಂದ ಸಂಘಟಿತ)

ಸ್ಥಳದಾನ ಮಾಡಿದವರು
Inter-Continental Trading Corporation, Bombay.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R.E.P. 218 of 1967.
in O. S. 294 of 1957.

ಕೆ. ಗಿರಿಯಂಣ ಶೆಟ್ಟಿ.....ಅರ್ಜಿದಾರ.

ಮತ್ತು

ಮುದ್ದು ಶೆಟ್ಟಿ ಕೂಡಾ.....ಎದ್ರಿರು.

1. ಮುದ್ದು ಶೆಟ್ಟಿ, 2. ಲಚ್ಚು ಶೆಡ್ತಿ—ನರ್ಸಿ ಶೆಡ್ತಿರ ಮಕ್ಕಳು; 3. ವಾರಿಜ ಶೆಟ್ಟಿ, 4. ಪುಷ್ಪ ಶೆಟ್ಟಿ—ಗಿರಿಜ ಶೆಟ್ಟಿ ಮಕ್ಕಳು; 5. ಸಾನಂದ ಶೆಟ್ಟಿ-ಲಚ್ಚು ಶೆಟ್ಟಿರ ಮಗಳು—ಉಡುಪಿ ತಾಲೂಕು ಕೊಂಗ್ರಪಾಡಿ ಗ್ರಾಮದಲ್ಲಿರುವವರು—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ಅರ್ಜಿದಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರತ್ತಗಳನ್ನು ನೆರವೇರಿಸುವರೆ ತಾ. 22-1-68ಕ್ಕೆ ಇಟ್ಟಿದೆ. ನಿಮ್ಮ ದೇನಾದರೂ ಅಕ್ಷೇಪವಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ನಿಮ್ಮ ಗೈರಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By order of Court)
K. Balachandra Rao
Advocate for Petitioner.

Udipi, 4-1-1968.

ಯಕ್ಷ ಪ್ರಶ್ನೆ

ಆಹಾರದ ಭೂತನೃತ್ಯ

ಆಹಾರವೆಂಬುದು ಜಾಗತಿಕ ಸಮಸ್ಯೆ. ದೇಶ—ದೇಶಗಳಲ್ಲಿ, ದೇಶದ ವಿವಿಧ ಭಾಗ—ಭಾಗಗಳಲ್ಲಿ, ಒಂದು ಭಾಗದ ಬೇರೆ ಬೇರೆ ಆದಾಯ ಪ್ರಮಾಣವುಳ್ಳವರಲ್ಲಿ ಸರಿಸಮವಾಗಿ ವಿತರಣೆಯಾಗದಿರುವುದೇ ಇದಕ್ಕೆ ಮುಖ್ಯ ಕಾರಣ. ಜಾಗತಿಕ ಪರಿಶೀಲನಾನಂತರ, ಒಟ್ಟಿನಲ್ಲಿ ಪ್ರಮಾಣದಲ್ಲಾಗಲೀ, ಗುಣದಲ್ಲಾಗಲಿ, ಇಂದು ಆಹಾರದ ಅಭಾವ ವಿಲ್ಲವೆಂದು ತಿಳಿದುಬಂದಿದೆ. ಆದರೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ (ಇವುಗಳ ವಿಸ್ತೀರ್ಣ ಜಾಗತಿಕ ವಿಸ್ತೀರ್ಣದ ಮೂರರಲ್ಲೆರಡಂಶ) ಇವೆರಡರ ಅಭಾವವು ಭೂತಾಕಾರವಾಗಿ ತಲೆಯೆತ್ತಿ ನಿಂತಿದೆ. ಕೋಟ್ಯಂತರ ಸಂಖ್ಯೆಯ ಪ್ರಜೆಗಳು ವಿದೇಶಿತ ಸರಾಸರಿ ಪ್ರಮಾಣದಷ್ಟು ಆಹಾರವನ್ನು ಪಡೆಯುತ್ತಿಲ್ಲ.

ಯುಕ್ತರಾಷ್ಟ್ರ ಸಂಘದ ಆಹಾರ ಮತ್ತು ಕೃಷಿ ಸಂಸ್ಥೆಯು ಒಬ್ಬ ಸರ್ವಸಾಮಾನ್ಯ ಮನುಷ್ಯನಿಗ ಬೇಕೆಂದು ಗೊತ್ತುಮಾಡಿದ ಸರಾಸರಿ ಪ್ರಮಾಣದಷ್ಟು ಆಹಾರವಿಂದು ದಕ್ಷಿಣ ಏಶ್ಯಾದ ಹೆಚ್ಚಿನ ದೇಶಗಳಲ್ಲಿ ಆಫ್ರಿಕಾ ಮತ್ತ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಲಭ್ಯವಿಲ್ಲ. ಈ ದೇಶಗಳ ಬಳಸುವ ಸರಾಸರಿ ಪ್ರಮಾಣ ಮತ್ತು ಗುಣಯುಕ್ತ ಆಹಾರದ ಸೇಕಡಾ ೨೫ರಷ್ಟು ಮಾತ್ರ ಬಹಳ ಬಡವರು ಪಡೆಯುತಿದ್ದಾರೆ. ಈ ವರ್ಗದ ಹಸುಗೂಸುಗಳು, ಹೂರ್ವ ಶಾಲಾವ್ರಾಯದ ಮಕ್ಕಳು, ಗರ್ಭವತಿಯರು ಮತ್ತು ಕೂಸಿನ ತಾಯಂದಿರು ಹೆಚ್ಚಾಗಿ ಅಭಾವ ಪೀಡಿತರಾಗಿದ್ದಾರೆ.

ಗ್ರಾಮರ ಪ್ರಮಾಣದಲ್ಲಿಯೇ ಜಾಗತಿಕ ಜನಸಂಖ್ಯೆಯು ಬೆಳೆಯುತ್ತ ಬಂದಲ್ಲಿ ಗ್ರಾಮಗಳಲ್ಲಿ ಸೇ. ೨೦ರಷ್ಟು ಹೆಚ್ಚು ಕೆಲೋರಿಯಷ್ಟು ಆಹಾರ ಬೇಕು. ನಡುವಿನ ಎರಡು ದಶಕಗಳಲ್ಲಿ ಕುಟುಂಬ ಯೋಜನೆಯನ್ನು ಪರಿಣಾಮಕಾರಿಯಾಗಿ ವ್ಯವಹೃತಗೊಳಿಸಿದರೂ ಈ ಹೆಚ್ಚುವರಿಯು ಸೇ. ೪೦ರಷ್ಟಾದರೂ ನಿಲ್ಲುವುದ ಕಂಡಿತ.

ಈಗಿನ ಜನಸಂಖ್ಯಾಭಿವೃದ್ಧಿಯ ಪ್ರಮಾಣದಲ್ಲೇ ಜನಸಂಖ್ಯೆಯು ಹೆಚ್ಚುತ್ತಿದ್ದರೆ, ಎಂದಿಗಾದಂತೆ ಸೇ. ೧೧ರಷ್ಟು ಹೆಚ್ಚು ಕೆಲೋರಿಯಷ್ಟು ಆಹಾರ ಬೇಕಾಗುತ್ತದೆ. ಜನನ ನಿಯಂತ್ರಣದ ಕ್ರಮಗಳಿಂದಾಗಿ ವೃದ್ಧಿಯು ಕಡಿಮೆಯಾದರೂ ಸೇ. ೮ರಷ್ಟಾದರೂ ಅಗತ್ಯ ಬೇಕು. ಜಾಗತಿಕ ಸಮೀಕ್ಷೆಯಂತೆ ಪಂಚಸಾಲಿನಲ್ಲಿ ಸೇ. ೧೧ರಷ್ಟು ಮತ್ತು ಬ್ರೇಜಿಲ್‌ಗೆ ಸೇ. ೧೧ ಹೆಚ್ಚು ಕೆಲೋರಿಯಾಂ ಬೇಕಾಗುತ್ತದೆ.

ಜಾಗತಿಕ ಆಹಾರ ಸಮಸ್ಯೆಯು ಈಗಾಗಲೇ ಬಡವಾಗಿರುವ, ಆಹಾರ ಸ್ವಾವಲಂಬನವನ್ನು ಸಾಧಿಸಲಾಗದ, ಅಭಿವೃದ್ಧಿ ಹೊಂದುತ್ತಿರುವ, ಜನನ ಸಂಖ್ಯೆಯು ಅತ್ಯಧಿಕವಿರುವ ದೇಶಗಳಲ್ಲೇ ಭೂತಾಕಾರ ತಳೆದಿದೆ. ಈ ದೇಶಗಳ ಆಹಾರ ಪ್ರಶ್ನೆಯನ್ನು ಉತ್ತರಿಸಲು ಮುಂದಿನೆರಡು ದಶಕಗಳಲ್ಲಿ ಈಗಿನ ಇನ್ನೂಡಿಯಷ್ಟು ಆಹಾರಬೇಕೇ ಬೇಕು.

ಸಂತಾನ ನಿಯಂತ್ರಣವು ಮುಂದಿನ ಸಮಸ್ಯೆಗಳಿಗೆ ಅಲ್ಪಮಟ್ಟಿನ ಪರಿಹಾರ ಸೂಚಿಸಬಹುದೇ ಹೊರತು, ಈ ಎರಡು ದಶಕಗಳ ಸಮಸ್ಯೆಗೆ ಯಾವ ಪರಿಹಾರವನ್ನೂ ಸೂಚಿಸಲಾಗದು. ಏಕೆಂದರೆ ಜಾಗತಿಕ ಜನಸಂಖ್ಯೆಯು ಪರಮಾವಧಿ ಮತ್ತು ಅಲ್ಪಾವಧಿ ಸಂಖ್ಯೆಯ ಅಂತರ ಮುಂದಿನೆರಡು ದಶಕಗಳಲ್ಲಿ ಬರಿಯ ಇಲಿಯ ಮಿಲಿಯುವಿದ್ದರೆ, ಈ ಶತಮಾನದ ಕೊನೆಯಲ್ಲಿ ಇದೇ ಅಂತರವು ೧೧೫ ಬಿಲಿಯದಷ್ಟಾಗುವುದು. ಗ್ರಾಮರ ನಂತರ ಆಹಾರ- ಜನಸಂಖ್ಯಾ ಪ್ರಮಾಣವು ತಲೆಕೆಳಗಾಗದಂತೆ ಸಾಂಜಾಗ್ರತೆಯ ಕ್ರಮವೆಂದು ಈಗಲೇ ಕುಟುಂಬ ಯೋಜನೆಯನ್ನು ಭರದಿಂದ ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಕುಟುಂಬ ಯೋಜನೆಯ ಪ್ರಚಾರ ಮತ್ತು ಸಾಧನೆಗಳು ತೃಪ್ತಿಕರವಾಗಿಯೇ ನಡೆಯುತ್ತಿರುವುದರಿಂದ, ಆಹಾರದ ಪ್ರಶ್ನೆ ಗ್ರಾಮರ ನಂತರ ಅತಿ ಮುಖ್ಯ ಸಮಸ್ಯೆಯಾಗಿ ಉಳಿಯಲಾರದು. ಆದರೆ, ಮುಂದಿನೆರಡು ದಶಕಗಳೇ ಗಂಭೀರ ಆಹಾರ ಪ್ರಶ್ನೆಯು ತಾಂಡವವಾಡುವ ಸಮಯ. ಈ ಅವಧಿಯಲ್ಲಿ ಸಮಸ್ಯೆಯನ್ನೆದುರಿಸುವಲ್ಲಿ ಜಗತ್ತು ಸಶಕ್ತವಾದರೆ, ಮುಂದೆ ಆಹಾರದ ಪೂರೈಕೆಯೊಂದು ಜಟಿಲ ಪ್ರಶ್ನೆಯಾಗಿಯೇ ಉಳಿಯಲಾರದು.

ಹಿರೀಯೋರ್ಗರಣದಲ್ಲಿ ಪಾಕಶಾಸ್ತ್ರವು ಮುಂದುವರಿದಿದೆ. ಅದು ಪ್ರತಿ ದಿನವೂ ಎರಡು ಸಾವಿರ ನಾಗರಿಕರನ್ನು ನಿರ್ವೀರ್ಯಗೊಳಿಸಲು ಸಂಕಲ್ಪ ಮಾಡಿದೆ. ಭಾರತದಲ್ಲಿ ಹಂಕಿ ಪ್ರಯೋಗವೂ ಯಶಗಳಿಸಿದೆ. ಕುಟುಂಬ ಯೋಜನೆಯು ಅವಶ್ಯಬೆಂಬ ಭಾವನೆ ಜನಸಾಮಾನ್ಯರಲ್ಲೂ ಮೂಡುತ್ತಿದೆ. ಆದರೂ ಅಭಿವೃದ್ಧಿ ಹೊಂದಿದ ದೇಶದಲ್ಲಿ ಮಕ್ಕಳು ಕಡಿಮೆ ಸಂಖ್ಯೆಯಲ್ಲಿರಬೇಕೆಂದು ದಂಪತಿಗಳು ಬಯಸಿದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಾತಾವರಣ ಇದಕ್ಕೆ ಪ್ರತಿಕೂಲವಿರುತ್ತದೆ. 'ಅಷ್ಟ ಪುತ್ರ ಸೌಭಾಗ್ಯವತೀ ಭವ' ಎಂದು ಸುಮಂಗಲೆಗೆ ಆಶೀರ್ವಾದ ಮಾಡುವ ಸಂಪ್ರದಾಯ ಭಾರತೀಯರದ್ದು.

ಉತ್ತರಾಧಿಕಾರಿಗಳ ಬಗ್ಗೆ ವಿಶೇಷ ಚಿಂತಾಗ್ರಸ್ತರಾದ ಭಾರತೀಯರ ಸ್ವಭಾವ ಕೆಲವು ವಿದೇಶೀಯರಿಗೆ ವಿಚಿತ್ರವಾಗಿ ಕಾಣುತ್ತದೆ. ಭಾರತೀಯ ದಂಪತಿಗಳು ತಮ್ಮ ಅಂತ್ಯ ಸಂಸ್ಕಾರಕ್ಕಾಗಿ ಗಂಡು ಮಗನನ್ನು ಬಯಸುತ್ತಾರೆ. ಒಬ್ಬನು ಅಶಕ್ತ, ಅಸವ ಧನಾದರೆ, ಅಥವಾ ಅಕಾಲಿಕ ಮೃತ್ಯುವಿಗೆ ಗುರಿಯಾದರೆ ಎಂಬ ಭಯದಿಂದವರು ಇಬ್ಬರು ಗಂಡು ಮಕ್ಕಳನ್ನಾದರೂ ಪಡೆಯ ಬಯಸುತ್ತಾರೆ. ಇದಕ್ಕಾಗಿ ಭಾರತೀಯ ಹೆಣ್ಣು ನಾಲ್ಕು ಮಕ್ಕಳಿಗಾದರೂ ಜನ್ಮ ನೀಡಲೇ ಬೇಕಾಗುತ್ತದೆ. ಇದುಂದಾಗಿಯೇ ಕುಟುಂಬ ದೊಡ್ಡದಾಗುತ್ತದೆ.

ಪೌಷ್ಟಿಕಾಹಾರಾದ ಕೊರತೆಯಿಂದಾಗಿ ಶಿಶು ಮರಣದ ಪ್ರಮಾಣವೂ ಹೆಚ್ಚುತ್ತದೆ. ಅಮೆರಿಕೆಯಲ್ಲಿ ಇದು ಸಾವಿರಕ್ಕೆ ೨೮ ಇದ್ದರೆ, ಏಶ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕೆಗಳಲ್ಲಿ ಪ್ರತಿ ಸಾವಿರಕ್ಕೆ ೧೦೦ರಿಂದ ೨೦೦ರಷ್ಟಿದೆ. ಹಾಗಾಗಿ ಅನಭಿವೃದ್ಧ ದೇಶಗಳಲ್ಲಿ ಮಿತ ಸಂತಾನದ ಬಗ್ಗೆ ಅನುಕೂಲಾಭಿಪ್ರಾಯ ಮೂಡಿಸುವುದರೊಡನೆಯೆ ನಿಕಟ ಭವಿಷ್ಯದ ಆಹಾರ ಸಮಸ್ಯೆಯನ್ನೆದುರಿಸಲು ಕೆಲವು ಅನಿವಾರ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ.

ಕೃಷಿರಂಗವು ಆಧುನಿಕ ವಿಜ್ಞಾನದ ಸಹಾಯವನ್ನು ಪಡೆದುಕೊಂಡು ಉತ್ಪನ್ನವನ್ನು ಹೆಚ್ಚಿಸಬೇಕು. ಬೇಸಾಯವನ್ನೂ ವಾಣಿಜ್ಯೋದ್ಯಮವೆಂದು ಪರಿಗಣಿಸಿ ನಡೆಯಬೇಕು. ಯಂತ್ರ ಸಾಧನ, ರಾಸಾಯನಿಕಾದಿ ಗೊಬ್ಬರ, ಉತ್ತಮ ತಳಿಯ ಬೀಜ, ಕೀಟ ನಿರೋಧಕ, ನೀರಾವರಿ-ಮೊದಲಾದ ಆಧುನಿಕ ಸಾಲಭ್ಯಗಳ ಪೂರ್ಣ ಪ್ರಯೋಜನವನ್ನು ನೆವ್ಯ ರೈತರು ಪಡೆಯಲು ಮುಂದಾಗಬೇಕು. ರೈತ ಜನರು ತಮ್ಮ ಬೆವರಿಗೆ ತಕ್ಕ ಬೆಲೆಯನ್ನು ಪಡೆಯುವಂತಾಗಬೇಕು; ತನ್ನ ಬೆವರಿನ ಬೆಲೆಯು ಭೂಮ್ಯಾಧಿಕನು ಪಡೆಯುವುದಾದರೆ, ಆತನೇಕೆ ಉತ್ಸುಕನಾದಾನು? ರೈತನ ಆರ್ಥಿಕ ಸ್ಥಿತಿಗಳನ್ನು ಸುಧಾರಿಸಬೇಕು. ಸಾಂಪ್ರದಾಯಿಕ ಬೇಸಾಯದಲ್ಲೇ ಮುಕ್ತಿ ಕಂಡು ನಿರಾಶನಾಗಿಯೇ ದಿನಯೂಪನೆ ಮಾಡುವ ರೈತನಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಬೇಕು. ಆತನಲ್ಲಿ ಪರಂಪರೆಯಿಂದ ಬಂದಿರುವ ಅಜ್ಞಾನ — ಅಲ್ಪಜ್ಞಾನಗಳನ್ನು ದೂರಮಾಡಿ ಸಾವಯವ ತಂತ್ರ—ಯಂತ್ರಗಳಲ್ಲಿ ಆತನಿಗೆ ವಿಶ್ವಾಸ ಹುಟ್ಟಿಸಬೇಕು.—ಆತನು ತನ್ನ ಗದ್ದೆಯಲ್ಲಿ ಲಾಭದಾಯಕವಾಗಿ ದುಡಿಯುವ ಏರ್ಪಾಡು ಮಾಡಬೇಕು.

ಕೃಷಿಯನ್ನು ತಿರಸ್ಕಾರ ದೃಷ್ಟಿಯಿಂದ ಕಂಡು ನಗರಗಳತ್ತ ಆಕರ್ಷಿತರಾಗುವವರ ಸಂಖ್ಯೆ ಭಾರತದಲ್ಲಿ ಹೆಚ್ಚುತ್ತಿದೆ. ಅದರೆ, ಹೀಗೆ ನಗರಕ್ಕೆ ಧಾವಿಸುವವರು ತಂತ್ರಜ್ಞಾನ ವಿಲ್ಲದವರು; ಹಾಗಾಗಿ ನಗರಗಳಲ್ಲಿಯೂ ಅವರಿಗೆ ಸೂಕ್ತವಾದ ಉದ್ಯೋಗ ದೊರೆಯುವುದಿಲ್ಲ. ಅಂದರೆ, ಮಾನವ ಶಕ್ತಿಯ ಸಂಪೂರ್ಣ ಉಪಯೋಗವನ್ನು ಪಡೆಯಲು ದೇಶವು ಸಂಪೂರ್ಣ ಅಸಫಲವಾಗಿದೆ. ಇದರಿಂದಾಗಿ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚುತ್ತಲೇ ಬರುತ್ತದೆ. ಒಡನೆಯೇ ನಿರುದ್ಯೋಗ ಸಮಸ್ಯೆಯೂ ಬೆಳೆಯುತ್ತದೆ. ಬಡತನ- ಅನಾರೋಗ್ಯಗಳ ತಾಂಡವವಾಡುತ್ತವೆ.

ವಿಶ್ವಸಂಸ್ಥೆಯ ಪ್ರಾಯೋಜಕತ್ವದಲ್ಲಿ ಶಿಕ್ಷಣ ಕೆಲ ಕಾಲ ನೀಡಿದ ಮೇಲೆ ಔದ್ಯೋಗಿಕ ಶಿಕ್ಷಣ ನವ್ಯಮಟ್ಟದ್ದೊದಾಗಬೇಕು. ಪ್ರತಿಯೊಬ್ಬರೂ ಒಂದನ್ನೊಂದು ಬಯಸಿ ಉ

(ಎಂಟನೇ ಪುಟ ನೋಡಿರಿ)

ಉಳಿತಾಯದ ಅಣೆಕಟ್ಟು

ಹರಿಯುವ ನೀರು ತೊರೆಯಾಗಿ, ಹೊಳೆಯಾಗಿ ದಾರಿಗುಂಟ ಸಾಗುವಾಗ ಅಲ್ಲಲ್ಲಿ ಕವಲೊಡೆದು ಬಂಜರು ನೆಲ, ಮರುಭೂಮಿ ಶಿಲಾಮಯ ಪ್ರದೇಶಗಳಲ್ಲಿ ಹರಿದು ನೀರಿನ ಅಪವ್ಯಯವಾಗುತ್ತದೆ. ನೀರಿನ ಅಪವ್ಯಯವನ್ನು ತಡೆಹಿಡಿಯಲು ಅಣೆಕಟ್ಟನ್ನು ಹಾಕಿ, ನೀರನ್ನು ಶೇಖರಿಸಿ, ಅವಶ್ಯಕ ಸಂದರ್ಭದಲ್ಲಿ ಸೂಕ್ತವಾಯ ಮತ್ತಿನ್ನಿತರ ಉಪಯುಕ್ತಕರ ಉದ್ದೇಶಕ್ಕಾಗಿ ನೀರು ದೊರೆಯುವಂತೆ ಮಾಡುತ್ತಾರೆ.

ನಿಮ್ಮ ಆದಾಯವು ಸಾಮಾನ್ಯವಾಗಿ ಒಂದೇ ದಾರಿಯಿಂದ ಹರಿದು ಬರುತ್ತದೆ. ಅದನ್ನು ವೆಚ್ಚಮಾಡಲು ಇರುವ ದಾರಿಗಳು ನೂರು. ಹಣದ ಅಪವ್ಯಯವನ್ನು ತಡೆಹಿಡಿದರೆ, ಅದನ್ನು ಉಪಯುಕ್ತ ಮಾರ್ಗದಲ್ಲಿ ಬಳಸಲು ಹೊಳೆಗೆ ಅಣೆಕಟ್ಟನ್ನು ಹಾಕಿದಂತೆ ನಿಮ್ಮ ಮಿತಿಗಳ ಯಾವಿಗೆ ಒಂದು ಕಟ್ಟನ್ನು ಹಾಕಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ತೆರೆದ ಉಳಿತಾಯ ಖಾತೆಯೇ ನಿಮ್ಮ ವ್ಯಯದ ದಾರಿಗೆ ಹಾಕಿದ ಅಣೆಕಟ್ಟು. ಹಣ ನಿಮ್ಮ ಖಾತೆಯಲ್ಲಿ ಜಮೆಯಾಗಿ, ಪ್ರಯೋಣ ಹದು ಬೆಳೆದು, ಅವಶ್ಯಕ ಬಿದ್ದಾಗ ಉಪಯುಕ್ತ ಮಾರ್ಗದಲ್ಲಿ ಅದನ್ನು ಬಳಸಬಹುದು.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

"NAVAYUGA' Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಪರಿಚಯ

ಅನುಭವ ಮಂಟಪ

ಬರೆದವರು. ಶ್ರೀ ಸ. ನಾರಾಯಣ

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಮುಖಂಡತ್ವದಲ್ಲಿ ವಿಚಾರ ಕ್ರಾಂತಿ—ಧಾರ್ಮಿಕ ಕ್ರಾಂತಿ ಉಂಟಾದವು. ಈ ಕ್ರಾಂತಿಗಳು ಕನ್ನಡ ನಾಡಿನಲ್ಲಿ ಹೊಸ ಪರಂಪರೆಯೊಂದು ಬೆಳೆಯಲು ಕಾರಣವಾದವು. ಜನ ಸಾಮಾನ್ಯರ ವಿಚಾರ ದೃಷ್ಟಿ, ಧಾರ್ಮಿಕ ಪ್ರಜ್ಞೆ ಹೊಸ ರೂಪ ತಾಳಿದವು. ಜನ ಸಾಮಾನ್ಯರ ಉದ್ಧಾರಕ್ಕೆ ಸರ್ವಜನ ಏಳಿಗೆಗೆ ಬಸವಣ್ಣನವರು ಮತ್ತು ಅವರ ಅನುಯಾಯಿಗಳು ವಿಶೇಷವಾಗಿ ಶ್ರಮಿಸಿದರು. ಶಿವ ಶರಣ—ಶರಣೆಯರ ನಿಸ್ವಾರ್ಥ ಕೂರ್ಣ ಸೇವೆಯಿಂದ ಕನ್ನಡನಾಡು ಹೊಸ ಸ್ವರೂಪ ತಾಳಿತು.

ನೀತಿಯುತ ನಿರ್ಮಲ ಜೀವನವನ್ನು ವೀರಶೈವ ಧರ್ಮ ಬೋಧಿಸಿತು. ಶಿವಶರಣ—ಶರಣೆಯರು ಹೇಳಿದ ಭಕ್ತಿ, ಜ್ಞಾನ, ವೈರಾಗ್ಯಗಳ ಸಾರ ಸರ್ವಸ್ವ ಅವರು ಹೇಳಿದ ವಚನಗಳಲ್ಲಿ ಅಡಗಿದೆ. ಬಸವನವರು ಹಾಗೂ ಅವರ ಅನುಯಾಯಿಗಳು ತಾವು ಹೇಳಿದ ತತ್ವಗಳನ್ನು, ಭಕ್ತಿ, ಜ್ಞಾನ, ವೈರಾಗ್ಯಗಳನ್ನು ತಮ್ಮ ಜೀವನದಲ್ಲಿಯೇ ಅನುಷ್ಠಾನಕ್ಕೆ ತಂದರು. ಅವರ ಜೀವನದ ಅನುಸರಣೆಯೇ ಬೇರೆ, ಬೋಧನೆಯೆ ಬೇರೆ ಆಗಿರಲಿಲ್ಲ. ನುಡಿದಂತೆ ನಡೆದರು. ನಡೆದಂತೆ ನುಡಿದರು. ತತ್ವಗಳ ಹೆಸರಿನಲ್ಲಿ ನಡೆಯುತ್ತಿದ್ದ ಹೋರಾಟಗಳನ್ನು ಗಮನಿಸಿ ವೀರಶೈವ ಮತಕ್ಕೆ ಧರ್ಮಕ್ಕೆ ಶಾಂತಿ ಮಂತ್ರದ ರಕ್ಷಾ ಕವಚ ತೊಡಿಸಿ ಭಕ್ತಿ, ಜ್ಞಾನ, ವೈರಾಗ್ಯಗಳ ಮೆರಗು ಕೊಟ್ಟು ನಿತ್ಯ ಘಾತನವಾಗಿ ಪ್ರಕಾಶಿಸುವಂತೆ ಮಾಡಿದರು. ವೀರಶೈವ ಧರ್ಮ-ತತ್ವಗಳ ಅರುಣ ಕಿರಣಗಳು ಕೇವಲ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ವ್ಯಾಪಿಸಿದವು.

ಬಾಗೇವಾಡಿಯ ಬಡ ಕುಟುಂಬ ಒಂದರಲ್ಲಿ ಜನ್ಮ ತಾಳಿದ ಕಿರು ಹಣತೆ ಕೆಲ ಕಾಲದಲ್ಲಿಯೇ ಕನ್ನಡ ನಾಡಿನಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಪಡೆದು ನೂರಾರು ಸಾಧಕರ—ಸಮಾಜೋದ್ಧಾರಕರ ಬಾಳಿನಲ್ಲಿ ದಾರಿ ದೀಪಿಗೆಯಾಯಿತು. ಬಸವಣ್ಣನವರಿಗೆ ಪೂರ್ವದಲ್ಲಿಯೇ ವೀರಶೈವ ಧರ್ಮವಿತ್ತು. ವೀರಶೈವ ಧರ್ಮಕ್ಕೆ ತತ್ವಗಳಿಗೆ ಹೊಸ ಸ್ವರೂಪವನ್ನು ಕೊಟ್ಟು ವಿನೂತನ ಆಧ್ಯಾತ್ಮಿಕ ಶಕ್ತಿ-ಮಾನ್ಯತೆಗಳನ್ನು ಗಳಿಸಿಕೊಟ್ಟ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ.

ಬಸವಣ್ಣನವರು ತಮ್ಮ ನಿಜ ಜೀವನದಲ್ಲಿ ಅನೇಕ ವಿನೂತನ ಸಾಹಸಗಳನ್ನು ಮೆರೆಸಿದರು. ಮತ, ಧರ್ಮ, ತತ್ವಗಳ ಜನ ಸಾಮಾನ್ಯರ ನಿಲುವಿಗೆ ದೂರವಿರಬಾರದು ಎಂಬುದು ಅವರ ಆಶಯವಾಗಿತ್ತು. ದೃಷ್ಟಿಯೊಗಿತ್ತು. ಬ್ರಹ್ಮದರು ಮಾತ್ರವೇ ಅಲ್ಲ ಬಡವರೂ; ಪಂಡಿತರು ಮಾತ್ರವೇ ಅಲ್ಲ ಪಾಮರರೂ ಭಗವಂತನ ಪ್ರಾಪ್ತಿಗೆ ಯೋಗ್ಯರು ಎಂಬುದನ್ನು ಅರಿತು ಬೋಧಿಸಿದರು. ಸಕಲ ಮಾನವರೂ ಒಂದೇ; ಮಾನವರಲ್ಲಿ ಅಂತರವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

ವ್ಯಕ್ತಿ ವೈಶಿಷ್ಟ್ಯ ಪ್ರಚಾರಕ್ಕೆ ವ್ಯಕ್ತಿ ವಿಮುಕ್ತಿಗಳ ದೃಷ್ಟಿಯಿಂದ ವೀರಶೈವ ಧರ್ಮ ಜನ್ಮ ತಾಳಲಿಲ್ಲ. ಪಾಂಡಿತ್ಯ—ಪ್ರತಿಭೆಗಳಿಂದ ಗಹನ ತತ್ವಗಳನ್ನು ಪ್ರತಿಪಾದಿಸಿ ಜನತೆಯನ್ನು ಮೆಚ್ಚಿಸುವ ದೃಷ್ಟಿಯಿಂದ ಶಿವ ಶರಣ—ಶರಣೆಯರು ವಚನಗಳನ್ನು ರಚಿಸಲಿಲ್ಲ. ಮೇಲ್ಮಟ್ಟದಲ್ಲಿ ನಿಂತು ಶಿವ ಶರಣರು ಜನ ಸಾಮಾನ್ಯರನ್ನು ಕಾಣಲಿಲ್ಲ. ಅವರ ವಟ್ಟದಲ್ಲಿ ನಿಂತು ಜನತೆಯನ್ನು, ಮಾನವ ಧರ್ಮವನ್ನು ಅವರ ದೃಷ್ಟಿಯಿಂದಲೇ ನೋಡಿದರು. ಆಧ್ಯಾತ್ಮಿಕ ಸಾಧನೆಯ ಆನಂದ, ಶಾಂತಿ ಸೈರ್ಮಲ್ಯಗಳು ಸರ್ವರಿಗೂ ಸಮಾನವಾಗಿ ದೊರೆಯ ಬೇಕು ಎಂಬುದೇ ಅವರ ನಿಲುವಾಗಿತ್ತು. ಆ ನಿಲುವಾಗಿಯೇ ಅವರು ನುಡಿದರು.

ವೀರಶೈವ ಧರ್ಮ ವಿಶ್ವಧರ್ಮದ ಪ್ರತಿನಿಧಿಯೂಗಿದೆ. ಶರಣರು ಲೋಕಧರ್ಮವನ್ನು ಬೋಧಿಸಿದರು. ವೀರಶೈವ ತತ್ವಗಳಲ್ಲಿ ವಿಶ್ವ ಧರ್ಮಸಾರ ಅಡಗಿದೆ. ಜಡತ್ವದಲ್ಲಿ ಬಾಳುವ ವ್ಯಕ್ತಿ, ಆಸೆ, ಆಕಾಂಕ್ಷೆ, ನೋವು—ನಲಿವು, ಸುಖ-ಸಂತೋಷಗಳನ್ನು ಮರೆಯಲು ಸಾಧ್ಯವಿಲ್ಲ. ಅಲ್ಲದೆ ಈ ಲೋಕದ ಬಾಳಿವೆಯಿಂದ ದೂರನಾಗಿ ಸದಾ ಪರಲೋಕದ ಚಿಂತೆ ಮಾಡುವುದು ಅಸಾಧ್ಯ—ನಿರರ್ಥಕ ಎಂಬುದನ್ನು ಸ್ಪಷ್ಟಪಡಿಸಿದರು. ಇಹಲೋಕ—ಪರಲೋಕಗಳೆರಡೂ ಒಂದಕ್ಕೊಂದು ಪೂರಕ ಎಂಬುದು ಶರಣರ ವಚನಗಳಿಂದ ತಿಳಿದು ಬರುತ್ತದೆ. ಈ ಲೋಕದಲ್ಲಿ ಬಾಳುವ ವ್ಯಕ್ತಿ ಆದರ್ಶಗಳನ್ನು ಅರಿತು ಬಾಳಬೇಕು, ನೀತಿಯನ್ನು ಅರಿತು ಬಾಳಬೇಕು, ದುಡಿದು ಜೀವಿಸಬೇಕು ಎಂದು ಬೋಧಿಸಿದರು. ಯಾರೂ ಹೊತ್ತಿನ ಅನ್ನಕ್ಕಾಗಿ ಇನ್ನೊಬ್ಬನನ್ನು ದೇಹಿ ಎಂದು ಬೇಡ ಬಾರದು ಅಂದರು. ಕಾಣದ ಕೈಲಾಸಕ್ಕಾಗಿ ಪರಿತಪಿಸುವುದು ಬೇಡ ಎಂದು "ಕಾಯಕವೇ ಕೈಲಾಸ" ಎಂದು ಸಾರಿದರು. ಅರಸ--ಆಳು, ಬಡವ-ಬಲ್ಲಿದ, ಸುರುಷ-ಸ್ತ್ರೀ, ಹಿರಿಯ—ಕಿರಿಯ ಮೇಲ್ಜಾತಿ-ಕೀಳ್ಜಾತಿ ಮೊದಲಾದ ಭೇದ ಭಾವನೆಗಳನ್ನು ತೊಡೆಯಲು ಪ್ರಯತ್ನಿಸಿದರು. ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಮಾನವರಲ್ಲಿ ಅಂತರವಿಲ್ಲ, ಎಲ್ಲರೂ ಸೋದರರಂತೆ ಬಾಳಬೇಕು ಎಂದು ಉಪದೇಶ ಮಾಡಿದರು.

ಉನ್ನತ ತತ್ವಗಳಿಗೆ ಸಾರ್ವತ್ರಿಕವಾಗಿ ಸುಂದರ ಸ್ವರೂಪವನ್ನು ಕೊಡಲು, ವೀರಶೈವ ಧರ್ಮದ ಸತ್ಯ ಸಂಗತಿಗಳನ್ನು ಸಾರ್ವಜನಿಕರಿಗೆ ಪರಿಚಯ ಮಾಡಿಕೊಡಬು ಬಸವಣ್ಣನವರು ಯೋಚಿಸಿ "ಅನುಭವ ಮಂಟಪ"ವನ್ನು ಸ್ಥಾಪಿಸಿದರು. ಅನುಭವ ಮಂಟಪ ಶರಣ—ಶರಣಯರ ಜ್ಞಾನಿಗಳ ತಾರುಮನೆಯೊಯಿತು ಆಧ್ಯಾತ್ಮಿಕ ಜ್ಞಾನದೀಗುಲವಾಯಿತು. ಈ ವಿಚಾರ ಗೋಷ್ಠಿಯಲ್ಲಿ ಸಾಮಾನ್ಯ-ಅಸಮಾನ್ಯ ಶಿವಶರಣ-ಶರಣೆಯರು ಭಾಗವಹಿಸುತ್ತಿದ್ದರು. ಅವರು ಚರ್ಚಿಸಿದ ಸಂಗತಿಗಳು ಆಧ್ಯಾತ್ಮಿಕ ದೃಷ್ಟಿ, ಸರ್ವಜೋದ್ಧಾರ ಸಂಗತಿಗಳನ್ನು ಒಳಗೊಂಡಿರುತ್ತಿದ್ದವು. ಅನುಭವ ಮಂಟಪ ಶರಣ ಶರಣೆಯರ ಕಾಡ.ಹರಟೆಯ ಕಟ್ಟೆಯಾಗದೆ ಜ್ಞಾನದ ಗೋಷ್ಠಿಯಾಗಿ, ವೀರಶೈವಧರ್ಮ ವಿಶ್ವಧರ್ಮ ಪ್ರತಿಪಾದಿಸಿದ ವೇದಿಕೆಯಾಗಿ ವಿಶಿಷ್ಟ ರೂಪ ತಾಳಿತು. ಈ ಅನುಭವ ಮಂಟಪದ ಮೂಲಕ ವೀರಶೈವ ಧರ್ಮ ತನ್ನ ಪ್ರತ್ಯೇಕ ಸ್ವರೂಪದಿಂದ ಸಜೀವಧರ್ಮವಾಗಿ ಪ್ರಕಾಶಿಸಿತು.

ಜ್ಞಾನ, ಭಕ್ತಿಗಳು ಅನುಭಾವಕ್ಕೆ ನೆಲೆಯಾಗಿ ಫಲ್ಲುತ್ತವೆ. ಅನುಭಾವದ ಮುಷ್ಟಿಯಲ್ಲಿ ವ್ಯಕ್ತಿ ಹಣ್ಣಾಗುತ್ತಾನೆ. ಅವನ ಜೀವನ ಪರ್ವವಾಗುತ್ತದೆ. ಅವನ ಆಚಾರ, ವಿಚಾರ, ದೃಷ್ಟಿಗಳು ಪಾವನವಾಗುತ್ತವೆ. "ಅನುಭವ ಮಂಟಪ" ಅನುಭಾವವನ್ನು ಸಾಧಿಸಬೇಕೆಂಬುದೇ ಬಸವಣ್ಣನವರ ವಿಶಾಲ ದೃಷ್ಟಿಯಾಗಿತ್ತು. ಅವರ ಯೋಜನೆ ಯಶಸ್ವಿಯಾಯಿತು. ಅನುಭವ ಮಂಟಪ ಆಧ್ಯಾತ್ಮಿಕ ಪ್ರಯೋಗ ಕ್ಷೇತ್ರವಾಯಿತು.

ಅನುಭವ ಮಂಟಪದಲ್ಲಿ ಶೂನ್ಯ ಸಿಂಹಾಸನವೇ ಪ್ರಧಾನ ಪೀಠ. ಅದು 'ಅರಿವಿನಂಬರ ಪೀಠ'. ಇವೆರಡನ್ನು ಓದುವರ ಸಾದಿ ಕವಿಗಳು ಹೃದಯಂಗಮವಾಗಿ ವರ್ಣಿಸುತ್ತಾರೆ. ಅಧಿಕಾರ ಲಾಲಸೆಯಿಂದ ಕೀರ್ತಿ ಕಾಮನೆಯಿಂದ ಅಪೇಕ್ಷಿಸಿದವರು ಶೂನ್ಯ ಸಿಂಹಾಸನವನ್ನು ಏರಲು ಅವಕಾಶವಿರಲಿಲ್ಲ. ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳಿಂದ ಅತೀತನಾದ ಮಹಾವ್ಯಕ್ತಿ ಒಬ್ಬನೇ ಆ ಪೀಠವನ್ನು ಏರಲು ಅರ್ಹನಾಗಿದ್ದವನು. ಅಂತಹ ಕಾಯ್ದಿಟ್ಟ ಭವ್ಯ ಪೀಠವನ್ನು ಪ್ರಭು ದೇವರು ಅಲಂಕರಿಸಿ ಆ ಸ್ಥಾನಕ್ಕೆ ಮಾನ್ಯತೆಯನ್ನು ಗಳಿಸಿ ಕೊಟ್ಟರು. ಶೂನ್ಯ ಸಿಂಹಾಸನದಲ್ಲಿ ಕುಳಿತು ಪ್ರಭು ದೇವರು ಕೀರ್ತಿ ಪಡೆಯಲಿಲ್ಲ ಆದರೆ ಪ್ರಭು ದೇವರು ಆ ಸ್ಥಾನದಲ್ಲಿ ಕುಳಿತು ಸಿಂಹಾಸನಕ್ಕೆ ಕೀರ್ತಿ ಗಳಿಸಿಕೊಟ್ಟರು. ಶಿವ ಶರಣ ಯೋಗಿ ಶ್ರೇಷ್ಠ, ಸಿದ್ಧರಾಯಣ್ಣನವರು 'ಕಂಠಲದ ನಿಜವನ್ನು' ಬಸವಣ್ಣನವರಿಂದ ಅರಿಯಲು ಅನುಭವ ಮಂಟಪಕ್ಕೆ ಆಗಮಿಸುತ್ತಾರೆ. ಈ ಮೂಲಕ ಕಲ್ಯಾಣದಲ್ಲಿ ಸ್ಥಾಪಿತವಾದ ಅನುಭವ ಮಂಟಪದ ಕೀರ್ತಿ ಹತ್ತು ದಿಕ್ಕುಗಳಿಗೂ ಹರಡುತ್ತದೆ.

ಆಧ್ಯಾತ್ಮಿಕ ಶಕ್ತಿ-ಸಂಘಟನೆಗಳ ಕೇಂದ್ರವಾದ ಅನುಭವ ಮಂಟಪಕ್ಕೆ ನಾಡು ನೆರೆ ನಾಡುಗಳಿಂದ ಭಕ್ತರು, ಶರಣರು-ಶರಣೆಯರು ತಂಡ ತಂಡವಾಗಿ ಬಂದು ಸೇರಿದರು. ಕಲ್ಯಾಣನಗರ ಶಿವ ಭಕ್ತ—ಭಕ್ತಿಯರ, ಜ್ಞಾನಿ—ಯೋಗಿಗಳ, ಪಂಡಿತರ ಕೈಲಾಸವಾಯಿತು. ಈ ಮಹಾಕ್ಷೇತ್ರಕ್ಕೆ ಮತ್ತೊಬ್ಬ ಅಪೂರ್ವ ವ್ಯಕ್ತಿಯ ಆಗಮನವೂ ಆಯಿತು. "ಭವಿಯ ಸೋಕದೆ, ಅಂಗ ಸಂಗವಂ ತೊರೆದು, ಲಿಂಗ ಸಂಗದೊಳು ಅವಿಂಳ ಸಂಗಿಯಾಗಿ ತನ್ನ, ದಿವ್ಯ ರೂಪ ಲಾವಣ್ಯವನೆಡೆಗೊಂಡು, ಷೋಡಶ ಪ್ರಾಯದ ಯೌವನದ ಸುಖದ ಸುಗ್ಗಿ, ಶಿವನೊಲ್ಲರವಶಿವ ನೈದಿ, ಸರ್ವ ಕರಣಾಶಕ್ತ ಅಂಬಿಗಾಹುತಿಯ ಶಿಕ್ಕೆ, ದಿಂಗಂಬರದುಡಿಗೆಯನ್ನುಟ್ಟು ಸನ್ನ ಕೇಶವೆಂಬ ಅಂಬರದ ಮುಸುಕಿಟು ಲೌತಿಕ ಲಜ್ಜಾಭಾವಮಂ ತೊರೆದು, ಚೆನ್ನ ಮಲ್ಲಿಕಾರ್ಜುನನ ವಿಕಟಾವಸ್ಥೆಯೊಳ್ ತನ್ನ ಮರೆದು, ಉಡುತಡಿಯ ಅಕ್ಕ ಮಹಾದೇವಿ ಕಲ್ಯಾಣ ನಗರಕ್ಕೆ ಬರುತ್ತಾಳೆ. ಪ್ರಭುದೇವರು ನೀಡಿದ ಪರೀಕ್ಷೆಯಲ್ಲಿ ಉತ್ತೀರ್ಣಳಾಗುತ್ತಾಳೆ. ಅಕ್ಕಮಹಾದೇವಿಯ ದೃಢ ನಿಶ್ಚಯ, ವೈರಾಗ್ಯ, ಭಕ್ತಿ, ಜ್ಞಾನಗಳನ್ನೂ ಕಂಡು ಅನುಭವ ಮಂಟಪ ತಲೆದೂಗುತ್ತದೆ. ಅನುಭವ ಮಂಟಪದಲ್ಲಿ ಮಹಾದೇವಿಯಕ್ಕಗೆ ಯೋಗ್ಯ ಸ್ಥಾನ ದೊರೆಯುತ್ತದೆ.

ಅನುಭವ ಮಂಟಪ ಯಾರ ಬರುವನ್ನೂ ಬೇಡವೆನ್ನಲಿಲ್ಲ. ವಿವಿಧ ವ್ಯಕ್ತಿ, ಜಾತಿ, ಮತಗಳಿಗೆ ಸೇರಿದವರೆಲ್ಲರಿಗೂ ಆಹ್ವಾನ ಕೊಡಿತು, ಆಶ್ರಯನೀಡಿತು. ಅಲ್ಲಿ ಬೆಲೆ ಇದ್ದುದು ವ್ಯಕ್ತಿಯ ಶಿವಾನುಭವ ಮಹತ್ವಕ್ಕಷ್ಟೆ—ಅವನ ಸಾಮಾಜಿಕ ಸ್ಥಿತಿಗಲ್ಲಿ ಉದಾರ ದೃಷ್ಟಿಯಿಂದ ಅನುಭವ ಮಂಟಪ ಸಮಾನತೆಗೆ ಭದ್ರವಾದ ಬುನಾದಿಯನ್ನು ಹಾಕಿತು. ಅನುಭವ ಮಂಟಪದ ಕೀರ್ತಿಯಿಂದ ಆಕರ್ಷಿತಲ್ಪಟ್ಟ ಕಲ್ಯಾಣನಗರಕ್ಕೆ ಬಂದು ಉಳಿದ ಒಬ್ಬೊಬ್ಬ ವ್ಯಕ್ತಿಯೂ ಅಸಮಾನ್ಯರೇ ಆಗಿದ್ದರು. ರಾಜ್ಯ ಭೋಗ ತ್ಯಾಗ ಮಾಡಿಬಂದ ಕಲ್ಲುಳುಂಕಯಸಕಲೇಶ ಮಾದರಸ, ರಾಜ್ಯತೊರೆದುಕಟ್ಟಿಗೆ ಹೊರೆ ಮಾರಿ ಜೀವಿಸುತ್ತಿದ್ದ ಕಾಶ್ಮೀರದ ಅರಸು ಮೋಳಿಗೆ ಮಾರಯ್ಯ, ಅಂಬಿಗ ಚೌಡಯ್ಯ, ಕ್ಷೌರಿಕ ಹಡಪದ ಅಪ್ಪಣ್ಣ, ವೇಕಾರ ಜೇಡರ ದಾಸಿಮಯ್ಯ, ಶಿಂಪಿಗ ಶಂಕರ ದಾಸಿಮಯ್ಯ ಅಗಸ ಮಡಿವಾಳ ಮಾಚಯ್ಯ, ದಪಗಾರ ರಾಮಣ್ಣ, ಸುಂಕದ ಬಂಕಣ್ಣ, ಅಕ್ಕನಾಲಿಗ ಬೊಮ್ಮಣ್ಣ, ಸಿಪಾಯಿ ಮಾದಣ್ಣ, ತೊಗಲ ಗಾರ ಜೋಹರ ಕಕ್ಕಯ್ಯ ತಳವಾರ ರಾಮದೇವ, ಮೊಚ್ಚೆಗಾರ ಮಾದರ ಚನ್ನಯ್ಯ ವೈದ್ಯ ಸಂಗಣ್ಣ, ಹಗ್ಗಮಾಡುವ ನುಲಿಯಚಂದಯ್ಯ ಬೇಡರ ರಂಗಯ್ಯ, ಸೂಜಿಕಾರ ರಾಮಿಶಂದೆ, ಹಳೆಯ ಕಂಚುಹಿಡಿತ್ತಾಳೆ ಮಾರುವ ಚಿಕ್ಕದೇವ, ಕನ್ನಡಿಕಾರ ಅಮ್ಮಿದೇವ, ಲೋಹರ ಕೇತಯ್ಯ, ಡೋಬಿಗಾರ ಬೊಮ್ಮಣ್ಣ, ಶ್ರೀಮಂತ ಆದಯ್ಯ ಆಯದಕ್ಕಿಯ ಮಾರಯ್ಯ ಮೊದಲಾದ ಶರಣರಿದ್ದರು.

ಕೇವಲ ಶರಣರು ಮಾತ್ರವೇ ಇರದೆ ಅವರ ಸಮಾನ ಸ್ಥಾನದಲ್ಲಿ ಮಹಿಳೆಯರು ಇದ್ದುದು ಅನುಭವ ಮಂಟಪದ ಮತ್ತೊಂದು ವೈಶಿಷ್ಟ್ಯ. ಮಹಾದೇವಿ, ಸತ್ಯಕ್ಕ, ಮುಕ್ತಾಯಕ್ಕ, ರೆಮ್ಮವ್ವೆ, ಸೋಮವ್ವೆ, ಸುವರ್ಣಾದೇವಿ, ಫೀಲಲೋಚನೆ, ಲಕ್ಷ್ಮವ್ವ, ಲಿಂಗಮ್ಮ, ರಾಯಮ್ಮ, ಕಾಳವ್ವೆ, ರೇಚವ್ವೆ, ಗಂಗಾಬಿಕೆ, ಗಂಗಮ್ಮ, ವೀರಮ್ಮ, ಗೂಗ್ಗವ್ವೆ, ಮಸಳಾಮ್ಮ, ಕಾಯಮ್ಮ, ಗುಡ್ಡವ್ವೆ, ನೀಲಾಂಬಿಕೆ, ಅಕ್ಕಾನಾಗಾಯಿ, ಬೊಂತಾದೇವಿ, ರೇಶಮ್ಮ ಮೊದಲಾದ ಅನೇಕ ಶಿವಶರಣೆಯರು ಅನುಭವ ಮಂಟಪದಲ್ಲಿ ಭಾಗವಹಿಸುತ್ತಿದ್ದರು. ಸುಮಾರು ೩೬ ಮಂದಿ ಶಿವಶರಣೆಯರ ವಚನಗಳು ಉಪಲಬ್ಧವಿವೆ.

ಫ್ಲೇಟೋ ಸಂಗ್ರಹಿಸಿದ ಸಾಕ್ರೆಟೀಸ ಸಂಭಾಷಣೆಗಳು, ತಮಿಳುನಾಡಿನ ಸಂಘ ಸಾಹಿತ್ಯ, ಮಧ್ಯರಾಲದ ಪರ್ಷಿಯಾ ದೇಶ

ದ ಸೂಫಿ ಸಾಹಿತ್ಯ ಇವುಗಳನ್ನು ಅನುಭವಮಂಟಪದ ಸಾಹಿತ್ಯಕ್ಕೆ ಊಹಿಸಬಹುದು. ಸಂಘಶಕ್ತಿಯ ಮಹತ್ವ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಕಾಣಬರುತ್ತದೆ. ವ್ಯಕ್ತಿಯನ್ನು ಅವಲಂಬಿಸದೆ ತತ್ವ, ಧರ್ಮಗಳ ಮೇಲೆ ತಲೆಯೆತ್ತಿ ನಿಂತ ಹಿರಿಮೆ ವೀರಶೈವ ಧರ್ಮದ್ದು. ಶರಣರ ವಿಚಾರದೃಷ್ಟಿ, ತತ್ವ ಪ್ರತಿಪಾದನೆ ವಿಶೇಷಜಗೆಯವು.

ಅನುಭವ ಮಂಟಪದ ಸತ್ಯಚಿತ್ರಣ ಹರಿಹರನೆಯ ಶತಮಾನದಲ್ಲಿದ್ದ ಗೂಳೂರು ಸಿದ್ಧವೀರಣಾಚಾರ್ಯನ 'ಶೂನ್ಯ ಸಂವಾದನೆ'ಯಲ್ಲಿ ಇದೆ. ರೀತಿನೀತಿಯ ದೃಷ್ಟಿಯಿಂದ ಶೂನ್ಯ ಸಂವಾದನೆ ಕನ್ನಡದಲ್ಲಿ ಅಪೂರ್ವ ಗ್ರಂಥ. ಭಾರತ ಹಲವು ಧರ್ಮಗಳ, ತತ್ವಗಳ ಭಾವನೆಗಳ ನೆಲೆ. ವೀರಶೈವ ಧರ್ಮತತ್ವ ಅನುಭವಮಂಟಪದ ಮೂಸೆಯಲ್ಲಿ ಅಪರಂಜಿಯಾಯಿತು.

ಧರ್ಮದ ಬೆಳಕು ಬಿತ್ತರಿಸಲು ಆಗತ್ಯವಾದ ಭೂಮಿಕೆ ಅನುಭವ ಮಂಟಪದಲ್ಲಿ ಶಿವ ಶರಣ-ಶರಣೆಯರಿಂದ ಸಿದ್ಧವಾಯಿತು. ಶೀಲವೇ ಸರ್ವಸ್ವ. ಶೀಲವೇ ಸೌಂದರ್ಯ, ಶೀಲವೇ ಸಂಪತ್ತು. ಎಂಬುದನ್ನು ಅವರು ನಿರೂಪಿಸಿದರು. ತೀರ್ಥ ಯಾತ್ರೆಗಳನ್ನು, ಭಗವಂತನನ್ನು ಬಹಿರಾಡಂಬರ ಸಾಧನಗಳಿಂದ ಪೂಜಿಸುವುದನ್ನೂ ಬಹಿಷ್ಕರಿಸಿದರು. "ತನ್ನ ತಾನರಿದು ತಾನಾರೆಂದು ತಿಳಿದೊಡೆ ತಾನೇ ದೇವನೋಡಾ ಅಪ್ರಮಾಣ ಕೂಡಲ ಸಂಗಮದೇವ" ಎಂದರು ಬಸವಣ್ಣನವರು. ಭಕ್ತನಿಗೆ ಭಗವಂತ ಒಬ್ಬನೇ. ವಿಶಾಲ ಮನಸ್ಸಿನಿಂದ ಒಬ್ಬ ದೇವರನ್ನೇ ನೆಚ್ಚಿ, ಅರ್ಚಿಸಬೇಕು ಎಂದು "ದೇವನೊಬ್ಬ ನಾಮ ಹಲವು" ಎಂದು ಸಾರಿದರು. ಭಗವಂತನ ಸಾಕ್ಷಾತ್ಕಾರಕ್ಕೆ, ಅವನ ಅರಿವಿಗೆ ಕೆಲವು ಮನೋಭಾವನೆಗಳು ದೂರವಾಗಬೇಕಾಗುತ್ತದೆ. ಅಹಂಕಾರ ಅಡಗಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ಬಸವಣ್ಣನವರು "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ"ಎಂದು ಹೇಳಿದರು.

"ಷಟ್ ಸ್ಥಲ"ಗಳನ್ನು ಸಿಯೋಜಿಸಿ ತಮ್ಮ ಧರ್ಮತತ್ವ ಶಾಸ್ತ್ರೋಕ್ತವಾಗುವಂತೆ ಮಾಡಿದರು ಶಿವಶರಣರು. ಇನ್ನು ಬಸವಣ್ಣನವರು ಷಟ್ ಸ್ಥಲ ಮಾರ್ಗಿಗಳಾಗಿ ಕಂಗೊಳಿಸಿದರೂ ಬಸವಣ್ಣ, ಅಲ್ಲಮ ಪ್ರಭು, ಸಿದ್ಧರಾಮಣ್ಣ, ಅಕ್ಕಾಮಹಾದೇವಿ, ಚನ್ನ ಬಸವಣ್ಣ ಮೊದಲಾದವರು ಮತ ಧರ್ಮಗಳ ಜಂಜಾಟದಲ್ಲಿ ತೊಳಲುತ್ತಿದ್ದವರಿಗೆ ಯೋಗ್ಯ ಮಾರ್ಗದರ್ಶನ ಕೊಡಿ ಅವರನ್ನು ಗುರಿಗೆ ಕರೆದೊಯ್ದು ಮುಟ್ಟಿಸಿದರು. ಸಮಾಜದ ಮೇಲೆ ಹೊಸ ಬೆಳಕು ಚೆಲ್ಲಿದರು.

ಅನುಭವ ಮಂಟಪ ಜ್ಞಾನಿಗಳ, ಪಂಡಿತರ ಮಾತ ಗೋಷ್ಠಿಯಾಗಿ ಉಳಿಯಲಿಲ್ಲ. ಅದು ಭಕ್ತಿ, ಜ್ಞಾನ, ವೈರಾಗ್ಯ, ಕರ್ಮಗಳನ್ನು ಬೋಧಿಸುವ ದಿವ್ಯ ವೇದಿಕೆಯಾಯಿತು. ಸಜೀವ ಸಾಧಕರ ಪ್ರಯೋಗ ಕ್ಷೇತ್ರವಾಯಿತು. ಭಕ್ತರು, ಯೋಗಿಗಳು, ಸಾಮಾನ್ಯರು, ಅಸಾಮಾನ್ಯರು ಆದಿಯಾಗಿ ಜಾತಿಯರಿಂದ ಪಂಡಿತರ ವರೆಗೆ ಸಕಲರಿಗೂ ಅನುಭವ ಮಂಟಪ ಜ್ಞಾನ ಪೀಠವಾಯಿತು.

ಅನುಭವ ಮಂಟಪದಲ್ಲಿ ಶಿವ ಶರಣ-

ವಿವೇಚನೆ

ವಿಶ್ವಾಸ ಬೇಕು, ವಿಶ್ವಾಸವಿಡಬೇಕು

ಬರೆದವರು :
ಶ್ರೀ ಬಿ. ನರಸಿಂಗ ರಾವ್

"ಯಾರಲ್ಲೂ ವಿಶ್ವಾಸವಿಲ್ಲ, ಯಾರನ್ನೂ ನಂಬುವವರಿಲ್ಲ, ಹೀಗಿದೆ ನಮ್ಮ ಸ್ಥಿತಿ"ಯೆಂದು ಯಾರೋ ಮುದಾಳುಗಳು ನುಡಿದಿದ್ದರು. "ಒಂದು ಲಕ್ಷ್ಯ, ಒಬ್ಬ ಮುಂದಾಳು, ಒಂದು ಜನಾಂಗ" ಎಲ್ಲಾ ಗಾಳಿಗೆ ತೂರಿಹೋದ ಆದರ್ಶಗಳಾಗಿವೆ. ಅನುಯಾಯಿಗಳಿಲ್ಲದ ಜನ ಮುಂದಾಳುಗಳು, ಲಕ್ಷ್ಯವಿಲ್ಲದ ಜನರು, ವಿಶ್ವಾಸವಿಡಲಸಾಧ್ಯದ ಜನರೂ ಇಂದು ತುಂಬಿ ಹೋಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಲಕ್ಷ್ಯವೊಂದನ್ನು ಇಟ್ಟು, ಅದನ್ನು ಪಡೆದೇ ತೀರುವೆ ಎಂಬ ಆತ್ಮವಿಶ್ವಾಸದಿಂದೊಡಗೂಡಿ, ಅದಿಶೆಗೆ ಮುಂದರಿಯಲು ಮಾರ್ಗದರ್ಶನ ಮಾಡಬಲ್ಲವನನ್ನು ನಂಬಿ ಮುಂದಡಿಯಿಡಬೇಕು. (ಏಳು! ಎದ್ದೇಳು! ಗುರಿ ತಲುಪದ ತನಕ ವಿಶ್ರಮಿಸದಿರು ಎಂದಿದ್ದಾರೆ ವಿವೇಕಾನಂದರು.) ಈ ತರಹದ ಮನೋಧಾರ್ಢ್ಯವಿದ್ದರೆ ಮಾತ್ರ ದಡಿಯಲು ಉತ್ಸಾಹ.

'ಕಾಲಕ್ಕನುಸರಿಸಿ ಕೋಲ'ವೆಂಬ ನಾಣ್ಣುಡಿಯಿದೆ. ದಿನಕ್ಕಿಷ್ಟವೂ ನಮ್ಮ ಬಾಳಿನಲ್ಲಿ ನಾವು ಅನುಭವಿಸುವ ಬಹುಸಂಭವಗಳನ್ನು ನಾವು ಎದುರಿಸಬೇಕು, ಧೈರ್ಯದಿಂದ ಎದುರಿಸಬೇಕು. ಸೋಲು ಗೆಲುವಿನ ಪ್ರಶ್ನೆ ಮತ್ತೆ. ಸೋತರೂ ಅದರಲ್ಲೊಂದು ಸಂತೃಪ್ತಿಯಿದೆ— ಎದುರಿಸಿದನಲ್ಲಾ ಎಂದು. ಗೆಲ್ಲುವೆನೆಂಬ ವಿಶ್ವಾಸದಿಂದ ಮತ್ತೊಮ್ಮೆ ಅದನ್ನು ಎದುರಿಸಬೇಕು. ಹೀಗೆ ಮುಂದರಿಸುವುದೇ ಬಾಳಿನ ಚಕ್ರ. ಕೆಲವೊಮ್ಮೆ ದುಃಖ, ಮತ್ತೊಮ್ಮೆ ಸುಖ, ಮಗದೊಮ್ಮೆ ನೋವು, ಮತ್ತೆ ನಲಿವು, ಕಹಿ—ಸಿಹಿ ಇತ್ಯಾದಿ. ಯಾವಾಗಲೂ ಬಾಳು ಹಸನಾಗಿ, ಸುಖದಲ್ಲೆ ಸಾಗಿದರೆ ಅದರಲ್ಲೂ ರುಚಿಯಿರದು. ಬಾಳಿನಲ್ಲಿ ಹೊಸತನ್ನು ಕಾಣಬೇಕು; ಸುಂಟು ಮಾಡಬೇಕು. ದಿನವೂ ಸಿಹಿ ತಿಂಡಿಯನ್ನುಣ್ಣುವವನಿಗೆ ಎಂದಾದರೂ ಖಾರದ ವಸ್ತು ತಿಂದಾಗ ಎಷ್ಟೊಂದು ರುಚಿಯೆನಿಸೀತು! ಭಯ, ಸಂಶಯ, ಅಸೂಯೆ. ಇವುಗಳಿಂದ ಮುಕ್ತನಾಗಬೇಕು. ಪ್ರಪಂಚವನ್ನು ನಿಯಂತ್ರಿಸಲು ಒಂದು ಅನಂತ ಶಕ್ತಿಯಿದೆ ಎಂದು ಅನುಭವದಿಂದ ನಾವು ತಿಳಿಯಬಹುದು. ಇದರಿಂದಲೇ ಮಾನವನು ವಿಶ್ವಾಸವನ್ನು ಬೆಳೆಯಲುಗೊಡಬಹುದು.

ರಚನಾತ್ಮಕ ಯೋಚನೆಯಲ್ಲಿ ನಾವು ಚಿಂತಿಸಬೇಕು. "ಒಂದೂ ಮಾಡಲಾರೆ. ನನ್ನಿಂದ ಅದು ಮಾಡಲು ಸಾಧ್ಯವಾದೀತೆ?" ಎಂಬ ಶಂಕೆ, ಭಯವನ್ನು ದೂರ ಮಾಡಬೇಕು ಸಾಹಸಿಗಳಿಗೆ ಇದೊಂದು ಪ್ರಶ್ನೆಯೇ ಅಲ್ಲ.

ಒಬ್ಬರಲ್ಲಿ ಇನ್ನೊಬ್ಬರಿಗೆ ವಿಶ್ವಾಸವಿಡಲು ಆಸಾಧ್ಯವಿದ್ದಲ್ಲಿ ಈ ಜಗತ್ತಿನಲ್ಲಿ ಮಾನವಕೋಟಿ ಹೇಗೆ ಬಾಳುತಿತ್ತು? ಉದಾಹರಣೆಗೆ ಇಂದು ಬೇಕಿಂಗ್ ವ್ಯವಸಾಯ ಇಷ್ಟೊಂದು ಪ್ರಗತಿ ಹೊಂದಲು ಕಾರಣ? ಅದೇ ವಿಶ್ವಾಸ. ರೇವಣಿದಾರರಿಗೆ ಬೇಂಕಿನಲ್ಲಿರುವ ವಿಶ್ವಾಸ. ತಾನು ರೇವಣಿಯನ್ನು ಕಳೆದುಕೊಳ್ಳುವೆ ಎಂದು ನೆನೆದು ಎಲ್ಲರೂ ಹಣವನ್ನು ಮನೆಯಲ್ಲಿ ಇಟ್ಟಿದ್ದಾದರೆ ಇಂದು ಬೇಂಕಿಂಗ್ ವ್ಯವಸಾಯವೇನಾಗಿರುತ್ತಿತ್ತು?

ಮಹಾವಿಜ್ಞಾನಿಗಳು ವಿಜ್ಞಾನ ಸಂಶೋಧನಾಲಯಗಳಲ್ಲಿ ಸದಾ ಪ್ರಯೋಗದಲ್ಲೆ ಮಗ್ನರಾಗಿರುತ್ತಾರೆ. ಅವರಿಗೆ ತಮ್ಮ ಪ್ರಯೋಗ ಅಸಫಲವಾದೀತೆಂಬ ಸಂಶಯವಿಲ್ಲ, ಎಂದಾದರೂ ತಾನು ಗೆಲ್ಲುವೆನೆಂಬ ವಿಶ್ವಾಸದಿಂದಲೇ ಅವರು ಹೊಸ ಹೊಸ ಪ್ರಯೋಗವನ್ನು, ಒಮ್ಮೆ ಸೋತರೆ ಮತ್ತೊಮ್ಮೆ, ಮಗದೊಮ್ಮೆ ಪಡೆಸಿ ಕೊನೆಗೆ ಜಯಗಳಿಸುತ್ತಾರೆ.

ಪೆಟ್ರೋಲ್ ಇಲ್ಲದೆ ವಾಹನ ಓಡದು ಅದೇ ರೀತಿ ಮಾನವನೆಂಬ ವಾಹನವು, ತನ್ನ ಗುರಿಯ ಕಡೆ ತಲುಪಲು ವಿಶ್ವಾಸ ಆತ್ಮವಿಶ್ವಾಸವೇ ಶಕ್ತಿ ನೀಡಬಲ್ಲುದು. ದಾರಿತಪ್ಪಿದಾಗ ನಾವು ಅನಂತ ಶಕ್ತಿಯನ್ನು ಮರೆ ಹೋಗಬೇಕು "ಅನಂತ ಶಕ್ತಿ"ಯಲ್ಲಿ ವಿಶ್ವಾಸವಿಡದಾತ, ಒಮ್ಮೆ ಸೋತಾಗ ಸಂಪೂರ್ಣ ಸೋತು ಸುಸ್ತಾಗುವ. ಮಹಾತ್ಮಾ ಗಾಂಧೀಜಿಯವರಿಗೆ ದೇವರಲ್ಲಿದ್ದ ವಿಶ್ವಾಸವೇ ಸ್ವಾತಂತ್ರ್ಯದ ಮಹಾ ಗುರಿಯನ್ನು ತಲುಪುವಂತೆ ಮಾಡಿತು. ಅವರೆನ್ನುತ್ತಾರೆ—"ಪರಿಸ್ಥಿತಿಗಳು ಪ್ರತಿಕೂಲವಾಗಿ ವರ್ತಿಸುವಾಗ, ಒರ್ವ ಅಸ್ತಿಕನ, ವಿಶ್ವಾಸಕನ ಶಕ್ತಿ ಪರೀಕ್ಷೆ ಒದಗುತ್ತದೆ. ಕಾರ್ಮೋಡಗಳು ನಮ್ಮ ಆಕಾಶ ಬಾನಿನಲ್ಲಿ ತುಂಬಿದಾಗಲೂ, ಅವುಗಳಿಂದ ಸರವಣ್ಮತನ ಅಭಯ ಹೊತ್ತದ ಅಸದೃಶ ಪ್ರಕಾಶವನ್ನು ಕಾಣುವಾತನೇ ವಿಶ್ವಾಸ, ನಮ್ಮ ಅನುಭವವೂ, ಜ್ಞಾನವೂ ನಮಗೆ ಕೈದೀವಿಗೆ ಆಹುದು. ಆದರೂ ವಿಶ್ವಾಸವಿಡ ಬೇಕಾದದ್ದು ಅತೀ ಮುಖ್ಯ. ಅದೇ ಅತನಿಗೆ ಮಾರ್ಗದರ್ಶಿ"

Ask for
AZAD
nitbit
BISCUITS
Azad Industries, Mangalore-1

ಶರಣೆಯರು, ಜ್ಞಾನಿಗಳು, ಯೋಗಿಗಳು, ಪಂಡಿತರು, ಪಾಮರರು ನಡೆಸಿದ ವಿಚಾರ ಮಥನದಿಂದ ಅಮೃತ ಸದೃಶ ಸಾಹಿತ್ಯ ಹುಟ್ಟಿತು. ಶಿವ ಶರಣ ಶರಣೆಯರ ವಚನಗಳು ಸಾಹಿತ್ಯ ಸೃಷ್ಟಿಯಲ್ಲಿ ಬಿಂದುಗಳಂತೆ ಉಳಿದವು. ಶಿವ ಶರಣ—ಶರಣೆಯರ ವಚನ ಸಾಹಿತ್ಯವೆತ್ತು ಜೀವನ ಮುಂದಿನ ಅನೇಕ ಕವಿಗಳಿಗೆ ಸ್ಫೂರ್ತಿ ಮತ್ತು ದಿವ್ಯ ಮಾರ್ಗದರ್ಶನ ನೀಡಿದವು. ಹರಿಹರ, ರಾಘವಾಂಕ, ಜಾಮರಸ, ವಿರೂಪಾಕ್ಷ ಪಂಡಿತ, ಷಡಕ್ಷರಿ, ಘಿಜಗೂಣ ಶಿವಯೋಗಿ ಮೊದಲಾದ ಶಿವಸರ್ಮರೆ ಕೃತಿಗಳ ಶ್ರೇಷ್ಠತೆಗೆ ಅನುಭವ ಮಂಟಪದ ಮಾಹಾಮಥನವೇ ಕಾರಣವೆಂದು ಹೇಳಬಹುದು. ಅನುಭವ ಮಂಟಪದ ಅನಂತರ ಸುಮಾರು ಐದು ಶತಮಾನಗಳ ನಂತರ ಮೆರೆದ ಕನ್ನಡ ಖಾಡಿಫ ಕ್ರಾಂತಿಕಾರಿ ಕವಿ ಸರ್ವಜ್ಞನಿಗೆ ಶಿವ ಶರಣ—ಶರಣೆಯರ ವಚನಗಳು ಸ್ಫೂರ್ತಿ ನೀಡಿರುವುದು—ಆಧಾರವಾಗಿರುವುದು. ಅವುಗಳ ವ್ಯಾಪಕತೆ, ಜಗಜ್ಜೇಯತೆಗಳಿಗೆ ಜೀವಂತ ಸಾಕ್ಷಿಯಾಗಿದೆ. ವಚನಕಾರರಿಂದ ಮತ್ತು ವಚನಗಳಿಂದ ಕನ್ನಡ ನಾಡು ನುಡಿಗಳಿಗೆ ಅಮೂಲ್ಯ ಸೇವೆ ಸಂದಿದೆ. ಜನಸಾಮಾನ್ಯರಿಗೆ ಅರಿವಾಗದ ಪಂಡಿತರ ಭಾಷೆ ಭಾವನೆಗಳಿಂದ ಮುಕ್ತರನ್ನಾಗಿ ಅವರಿಗೆ ಧರ್ಮಗಳ ಅರಿವು ಮಾಡಿಸಲು ನಡೆಸಿದ ಪ್ರಯತ್ನದಲ್ಲಿ ಶರಣರು ಯಶಸ್ವಿಗಳಾಗಿದ್ದಾರೆ. ಪಂಡಿತರ ಪಾಂಡಿತ್ಯ ಪ್ರತಿಭೆಗಳಿಂದ ದೂರ ಬಂದಿದ್ದ ಸಾಮಾನ್ಯರಿಗೂ ಪ್ರಿಯವಾಗುವ ತಾಯ್ನುಡಿಯಲ್ಲಿ ಸಕಲ ಸಂಗತಿಗಳನ್ನು ಸುಂದರವಾಗಿ, ಸ್ಪಷ್ಟವಾಗಿ ಬೋಧಿಸಿದುದು ಶಿವ ಶರಣ ಶರಣೆಯರ ವೈಶಿಷ್ಟ್ಯ. ಕನ್ನಡ ಸಾಹಿತ್ಯ ಸರಸ್ವತಿಯನ್ನು ವಚನಶ್ರೀಯಿಂದ ಸಿಂಗರಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ವಿಶ್ವ ಧರ್ಮವನ್ನೇ ಗುರಿಯಾಗಿಟ್ಟುಕೊಂಡು ಜನ್ಮತಾಳಿದ ಸೂಫಿಧರ್ಮ "ದೀನ್ ಇಲಾಹಿ"ಧರ್ಮ ತಲೆ ಎತ್ತಿ ನಿಲ್ಲಲಾಗಲಿಲ್ಲ. ಆದರೆ ಇದೇ ದೃಷ್ಟಿಯಿಂದ ರೂಪುಗೊಂಡ ವೀರ ಶೈವ ಧರ್ಮ ಜೀವಂತವಾಗಿ ಉಳಿದಿದೆ. ಅನುಭವ ಮಂಟಪ ಕನ್ನಡನಾಡಿನ ಸಾಹಿತ್ಯ ಧರ್ಮಗಳ ಪರಂಪರೆಗೆ ಹೊಸ ಶಕ್ತಿ ಕೊಟ್ಟು ಬಾಳಿಸಿತು. "ಸಕಲ ಜೀವಾತ್ಮರಿಗೆ ಲೇಸಹಬಯಸುವವರಿಲ್ಲ, ಕುಲಜರು" ಎನ್ನುವ ಘನತ್ವ ವಿಶ್ವ ಬಂಧುತ್ವಕ್ಕೆ ಅಡಿಗಲ್ಲಾಗಿದೆ.

ಲಲಿತ ಕಲೆಗಳ ಸುವರ್ಣಯುಗ

ಮೂಲ: ಶ್ರೀ ರಾಮ-ಲಾಲ ಶುಕ್ಲ
ಅನು: ಶ್ರೀ ವಿಂ. ವಿ. ಶರ್ಮಾ ಕಡ್ಡಲಸೆ

ಕಲೆಗೆ ವ್ಯಾಖ್ಯೆಯನ್ನು ಕೊಡುವದು ಸುಲಭ ಸಾಧ್ಯವಲ್ಲ. ಯಾಕಂದರೆ ವ್ಯಾಖ್ಯೆಮಾಡ ಹೋದಂತೆಲ್ಲ ಅದು ವಿಸ್ತೃತವು ಗೂಢವೂ ಆಗುತ್ತ ಹೋಗುತ್ತದೆ. ಒಂದು ವೇಳೆ ಪ್ರಯತ್ನ ಪಟ್ಟು ವ್ಯಾಖ್ಯೆಯನ್ನು ರಚಿಸಲು ಯತ್ನಿಸಿದರೆ, ಪ್ರಾಯಃ ವ್ಯಾಖ್ಯೆಯೆ ಅಂತರ್ಧಾನಗೊಳ್ಳುತ್ತದೆ. ಹಾಗೆಂದು ವ್ಯಾಖ್ಯೆ ಮಾಡದಿದ್ದರೂ ಕಲೆಯ ಸ್ವರೂಪ ತಿಳುವಳಿಕೆ ಮೂಡಿ ಬರಲಾರದು.

ಸಂಕ್ಷೇಪವಾಗಿ ಹೇಳುವದಾದರೆ ಕಲೆಯ ಪ್ರಯೋಜನ ವ್ಯಷ್ಟಿವ್ಯಾದೀ ಹೃದಯದ ಸಮಷ್ಟಿವಾದೀ ಚಿತ್ರವಾಗಿರುತ್ತದೆ. ಕಲೆಯ ಸ್ವಾಭಾವಿಕ ತಾತ್ಪರ್ಯ ಹೃದಯ ರಂಜನೆಯೇ ಆಗಿದೆ.

ಅನ.ಭೂತಿಯ ಅಭಿವ್ಯಕ್ತಿಯೇ ಕಲೆಯು

ಕಲೆಯು ಕಲೆಗಾಗಿ ಇದೆ.
ಕಲೆಯು ಜೀವನಕ್ಕಾಗಿ ಇದೆ.
ಕಲೆಯು ಆದರ್ಶಕ್ಕಾಗಿ ಇದೆ.
ಕಲೆಯು ಸಮೂಹಕ್ಕಾಗಿ ಇದೆ.
ಕಲೆಯು ಪ್ರಪಂಚಕ್ಕಾಗಿ ಇದೆ.

ಮಾನವ ಹೃದಯವು ಅನೇಕ ಅನುಭೂತಿಗಳ ಕ್ರೀಡಾ ಸ್ಥಳವಾಗಿರುವದು. ಮತ್ತು ಮನಸ್ಸಿನ ಹಲವಾರು ಬಗೆಯ ಭಾವನೆಗಳ ಉಗಮಸ್ಥಾನವಾಗಿರುವದು. ಕವಿ, ಗಾಯಕ, ಶಿಲ್ಪಕಾರ, ಚಿತ್ರಕಾರ, ವೃತ್ತಕಾರ, ಮುಂತಾದವರು ಏನನ್ನು ಕೊಡುತ್ತಾರೋ ಆಲೋಚಿಸುತ್ತಾರೋ ಅಥವಾ ನಿರ್ಮಿಸುತ್ತಾರೋ ಅವೆಲ್ಲವೂ ಕಲಾಕಾರರ ಭಾವನೆಗಳ ವಿಲಾಸವಾಗಿವೆ. ಆದ್ದರಿಂದ ಅಶಂಕೆ ಮತ್ತು ಸ್ವಪ್ರೇರಣೆಯ ಆಧಾರದಿಂದ ಲಲಿತ ಕಲೆಗಳು ಅನಾದಿ ಎಂದು ಹೇಳಬಹುದು. ಕಲೆಗಳ ವಿಷಯದಲ್ಲಿ ಒಂದು ವೇಳೆ ತುಲನಾತ್ಮಕವಾಗಿ ಅಭ್ಯಾಸವನ್ನು ಮಾಡಿದರೆ ಪ್ರಕೃತಿಯ ಸೌಂದರ್ಯವು ಎಂದೂ ಹಳೆಯದಾಗಲ್ಲವೆಂಬ ಸಂಗತಿ ಗೊತ್ತಾಗುತ್ತದೆ. ಆದರೆ ಕಲಾಕಾರರ ಮನಸ್ಸಿನಲ್ಲಿ ಉದ್ಭವಿತ ಭಾವನೆಗಳ ರೂಪರೇಖೆಗಳು ಯಾವಾಗ ಕ್ರಿಯಾಪ್ರಿಯವಾಗಿ ಸೌಂದರ್ಯವನ್ನು ತಳೆಯುತ್ತವೆಯೋ ಆಗ ಪ್ರೇಕ್ಷಕರ ಧ್ಯಾನವು ಕಲಾಕಾರನಿಂದ ನಿರ್ಮಿತವಾದ ಲಲಿತ ಕಲೆಗಳ ಸೌಂದರ್ಯದಲ್ಲಿಯ ಭಾವನೆಗಳ ಮಾಧುರ್ಯವನ್ನು ಸವಿಯುವದರಲ್ಲಿ ಲೀನವಾಗುತ್ತದೆ.

ಆದಿಕಾಲ, ರಾಮಾಯಣಕಾಲ, ಮತ್ತು ಮಹಾಭಾರತ ಕಾಲದಲ್ಲಿ ಉಂಟಾದ ಸುಮಧುರ ಕ್ರೀಡೆ ಅತೀತ ಸ್ಮೃತಿಗಳಲ್ಲಿ ಲಲಿತ ಕಲೆಗಳ ಧ್ವನಿಗಳು ಇಂದಿಗೂ ಕಲಾಪ್ರೇಮಿಯಾದ ಮಾನವನ ಹೃದಯವನ್ನು ಆಕರ್ಷಿಸಿ ಕೊಂಡು ಉತ್ತರೋತ್ತರ ಪ್ರಗತಿ ಶೀಲನನ್ನಾಗಿ ನಿರ್ಮಿಸುವ ಪ್ರಶಸ್ತ ಮಾರ್ಗವನ್ನು ಸಿದ್ಧಗೊಳಿಸುತ್ತವೆ. ಆದರೆ ಬೌದ್ಧ ಕಾಲದಲ್ಲಿ ಲಲಿತ ಕಲೆಗಳು ವಿಕಾಸಗೊಂಡಷ್ಟು ಮತ್ತು ಪ್ರಸಿದ್ಧಿಯು ಪ್ರಸ್ಫುಟಗೊಂಡಷ್ಟು ಇನ್ನಾವ ಕಾಲದಲ್ಲಿಯೂ ಆಗಿಲ್ಲ. ಆದ್ದರಿಂದಲೇ ಬೌದ್ಧರ ಕಾಲವನ್ನು ಲಲಿತ ಕಲೆಗಳ ಸುವರ್ಣ ಯುಗವೆಂದು ಕರೆಯುತ್ತಾರೆ.

ಬೌದ್ಧರ ಕಾಲದಲ್ಲಿ ಅವರ ಸಂಸ್ಕೃತಿ ಪ್ರಸಾರವು ಏಶಿಯಾ ಮತ್ತು ಯುರೋಪದ ಹಲವಾರು ಭಾಗಗಳಲ್ಲಿ ನಡೆದಿರುತ್ತವೆ. ಆದ್ದರಿಂದ ದೇಶ-ವಿದೇಶಗಳಲ್ಲಿ ಬೌದ್ಧ ಧರ್ಮದ ಪ್ರಭಾವ ಈಗಲೂ ಕಂಡು ಬರುತ್ತಿದ್ದರೆ ಅದು ಲಲಿತ ಕಲೆಗಳೊಡನೆ ಇಟ್ಟುಕೊಂಡ ಸಂಬಂಧದ ಕಾರಣದಿಂದಲೇ ಎಂದು ಹೇಳಬೇಕು. ಯಾಕಂದರೆ ವಿಶೇಷ ಧಾರ್ಮಿಕ ಗೊಂದಲದಲ್ಲಿ ಬೌದ್ಧ ಧರ್ಮದ ಪ್ರಸಾರ ಬೆಳೆಯಿತು. ಮತ್ತು ಒಂದು ಪರಿವರ್ತನ ಶೀಲ ಯುಗದ ಆರಂಭವನ್ನು ಎಸಗಿತು. ಕಲೆಗಳ ಉದ್ದೇಶ ಹೊಸ ಕಾಲದ, ಹೊಸ ಕಲೆಯ, ಹೊಸ ಮಾತನ್ನು ತಿಳಿಸುವದೇ ಆಗಿದೆ.

ಭಾರತ, ಬ್ರಹ್ಮದೇಶ, ಲಂಕಾ, ಸಯ್ಯಾಂ, ಜಾವಾ, ಚೀನ, ಜಪಾನ, ತಿಬೇಟಗಳಲ್ಲಿ ಬೌದ್ಧ ಕಾಲದ ಚಿತ್ರಕಲೆ ಮತ್ತು ಮೂರ್ತಿ ಕಲೆಗಳ ಅಂಶಗಳು ಸಿಕ್ಕಿದ್ದರ ಮೇಲಿಂದ ಎಲ್ಲಿ ಎಲ್ಲಿ ಬೌದ್ಧ ಧರ್ಮದ ಸದುಪದೇಶಗಳ ಪ್ರಸಾರವಾಯಿತೋ ಅಲ್ಲೆಲ್ಲ ಪ್ರತಿಭಾ ಸಂಪನ್ನ ಕಲಾಕಾರರು ಅವಶ್ಯವಾಗಿ ಇದ್ದರು ಎಂಬ ಸಂಗತಿಯು ತಿಳಿದು ಬರುತ್ತದೆ. ಅಜಂತೆಯ ೧೨ ಗುಹೆಗಳಲ್ಲಿ ಕಂಡು ಬರುವ ಕೆಲವು ಚಿತ್ರಗಳು ಪ್ರಚ್ಛಾಯವಾಗಿವೆ. ಅಂತೆಯೇ ಭಗ್ನಾವಶೇಷಗಳು ಇಂದಿನ ವರೆಗೂ ಸುಮಧುರ ಭಾವನೆಗಳ ಕಡೆ ಸಂಕೇತ ಮಾಡುತ್ತವೆ ಹಾಗೆ ನೋಡಿದರೆ ಆ ಗುಹೆಯಲ್ಲಿಯ ಎಲ್ಲ ಚಿತ್ರಗಳು ಬೌದ್ಧ ಕಾಲದ ಇತಿಹಾಸಕ್ಕೆ ಸಂಬಂಧಿಸಿವೆ. ಯಾಕಂದರೆ ಕಲಾ ಮರ್ಮಜ್ಞರಿಂದ ನಿರ್ಮಿತವಾದ ಬುದ್ಧನ ಜೀವನದ ಹಲವು ಕೃತಿಗಳು ಇಂದಿಗೂ ತಕ್ಷಶಿಲೆ, ಕುಶೀನಗರ, ಪಾಟಲೀಪುತ್ರ, ಸಾಂಚಾಥ, ನಾಲಂದಾಗಳಲ್ಲಿ ಪ್ರಾಚೀನ ಕಾಲದ ಭಾವನೆಗಳನ್ನು ರಹಸ್ಯೋದ್ಘಾಟನೆ ಮಾಡುತ್ತವೆ.

ಭಗವಾನ ಬುದ್ಧನ ಅನೇಕ ಕಲಾತ್ಮಕ ಮೂರ್ತಿಗಳು ಇಂದಿಗೂ ದೃಷ್ಟಿಗೋಚರವಾಗುತ್ತವೆ. ಕುಶಲ ಕಲಾಕಾರರ ಕುಶಲತೆಯನ್ನು ಪ್ರದರ್ಶಿಸುವದರ ಜೊತೆಗೆ ಇವು ಆ ಕಾಲದ ಶಾಂತಿ ಮತ್ತು ಸುದ್ಭಾವನೆಗಳ ಕಡೆಗೆ ಬೊಟ್ಟು ಮಾಡಿ ತೋರಿಸುತ್ತವೆ ಅಲ್ಲಲ್ಲಿ ಸುಭಗವಾನ ಬುದ್ಧನ ಮೂರ್ತಿಯು ಪ್ರಾಚೀನ ಕಲೆಯ ಅಮರ ಸತ್ಯದ ಪ್ರಾಕಾರ ಜೀವನವನ್ನು ಪ್ರಕಟಿಸುತ್ತ ಕಲಾಕಾರನ ಗೌರವವನ್ನು ಗೌರವಾನ್ವಿತಗೊಳಿಸುತ್ತ ನಿಂತಿದೆ. ಪ್ರಾಚೀನ ಕಾಲದ ಗಾಯನ ಮತ್ತು ವಾದನಗಳ ಸಾಧನಗಳಿಂದ ಬೌದ್ಧ ಕಾಲದಲ್ಲಿ ಸಂಗೀತ ಕಲೆಗೆ ಪ್ರಾಧಾನ್ಯವಿತ್ತೆಂದು ತರ್ಕಿಸಲು ಅವಕಾಶವಿದೆ. ಅಲ್ಲದೆ ಬೌದ್ಧ ಭಿಕ್ಷುಗಳು ಹಾಡುತ್ತ ಧರ್ಮ ಪ್ರಸಾರ ಮಾಡಿರಬೇಕು. ಯಾಕಂದರೆ ಶಿಕ್ಷಣ, ಜಾಗೃತಿ ಮತ್ತು ವಿಕಾಸದಲ್ಲಿ ಸಂಗೀತ ಕಲೆಯ ಘನಿಷ್ಠ ಸಂಬಂಧವಿದೆ. ಮತ್ತು ಸಂಗ್ರಹಾಲಯದಲ್ಲಿಯ ಗಾನ-ವಾದನ ಸಾಮಗ್ರಿಗಳನ್ನು ಈಕ್ಷಿಸಿದಾಗ ಆ ಕಾಲದಲ್ಲಿ ಲಲಿತ ಕಲೆಗಳ ಸರ್ವತೋಮುಖ ಪ್ರತಿಭೆಯ ಸಂಗತಿ ಮನಸ್ಸಿಗೆ ಹೊಳೆಯುತ್ತದೆ. ವಾದ್ಯಸಾಮಗ್ರಿಯುಕ್ತ ಚಿತ್ರಕಲೆಯ ಅವಲೋಕನೆಯಿಂದ ವೃತ್ತ ಕಲೆಯು ಕೂಡಾ ಬೆಳೆದಿತ್ತು ಎಂದು ಗೊತ್ತಾಗುತ್ತದೆ.

ನಾಲಂದಾ ವಿಶ್ವವಿದ್ಯಾಲಯದಲ್ಲಿ ಅನೇಕ ಕಲೆಗಳ ಕುರಿತಾಗಿ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಕೇವಲ ಭಾರತೀಯ ವಿದ್ಯಾರ್ಥಿಗಳಲ್ಲದೆ ವಿದೇಶದಿಂದಲೂ ಜ್ಞಾನದಾಹವುಳ್ಳವರು ಇಲ್ಲಿಗೆ ಆಗಮಿಸಿ ಸಂಗೀತ ಕಲೆ, ಶಿಲ್ಪಕಲೆ, ಚಿತ್ರಕಲೆ, ವೇದದರ್ಶನ, ಕಾವ್ಯ ಮುಂತಾದ ವಿಷಯಗಳನ್ನು ಅಭ್ಯಸಿಸುತ್ತಿದ್ದರು. ಆದ್ದರಿಂದ ಬೌದ್ಧ ಕಾಲದಲ್ಲಿ ಕಲಾಮರ್ಮಜ್ಞರ ಮೂಲಕ ನಿರ್ಮಿತವಾದ ಮತ್ತು ಪ್ರಸ್ಫುಟವಾದ ಪ್ರತಿಭೆ, ಭಗವಾನ ಬುದ್ಧನ ಸದುಪದೇಶಗಳಲ್ಲಿ ಲಲಿತ ಕಲೆಗಳ ಘನಿಷ್ಠ ಸಂಬಂಧ ಇವೆಲ್ಲ ವಾಸ್ತವಿಕ ಸತ್ಯಗಳ ಸಮುಚಿತ ಆಧಾರದ ಮೇಲೆ ಬೌದ್ಧಕಾಲವನ್ನು "ಲಲಿತ ಕಲೆಗಳ ಸುವರ್ಣಯುಗ" ಎಂದು ಕರೆದರೆ ಅಸಂಗತವಾಗಲಾರದು.

ಆಹಾರದ ಭೂತನೃತ್ಯ

(ಐದನೇ ಸುಟದಿಂದ)

ದ್ಯೋಗದಲ್ಲಿ ತರಬೇತಿ ಹೊಂದಿ ಮುಂದೆ ಸ್ವತಂತ್ರವಾಗಿ ಜೀವನ ನಿರ್ವಹಿಸುವ ಅವಕಾಶ ದೊರೆಯಬೇಕು. ಕೃಷಿ ವಿಷಯದಲ್ಲಿ ಶಿಕ್ಷಣ ಪಡೆದವನು ಅಧುನಿಕ ರೀತಿಯಲ್ಲಿ ಕೃಷಿ ಮಾಡಬಲ್ಲ, ಉತ್ಪನ್ನವನ್ನು ಹೆಚ್ಚಿಸಿಕೊಳ್ಳಬಲ್ಲ.

ಜನತೆಗೆ, ಜನತೆಯೂ ತನ್ನ ಆಹಾರಾಭ್ಯಾಸವನ್ನು ತುಸು ಬದಲಾಯಿಸಿಕೊಂಡರೆ, ಪೌಷ್ಟಿಕ ಆಹಾರದ ಕೊರತೆಯೂ ಇಲ್ಲವಾಗುವುದು. ಉದಾಹರಣೆಗಾಗಿ ಅಕ್ಕಿಯನ್ನೇ ಮುಖ್ಯಾಹಾರವಾಗಿ ಬಳಸುವವರು ತುಸು ಗೋಧಿಯನ್ನು ಪೂರಕವಾಗಿ ಉಪಯೋಗಿಸುವುದರಿಂದ, ಪರಿಣಾಮ ಒಳ್ಳೆಯದಾಗುವುದು.

ಮುಂದಿನ ಎರಡು ದಶಕಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅನುಸರಿಸುವ, ಕಾರ್ಯವಿಧಾನದಲ್ಲಿ ನಿಧಾನತೆ ಸಲ್ಲದು; ಇವುಗಳ ಸಾಧನೆಯೇ ಹಸಿವಿನಿಂದ ಜನತೆಯನ್ನು ಬಿಡುಗಡೆ ಮಾಡಬಲ್ಲ ಪರಿಹಾರೋಪಾಯವೆಂದು ಖಂಡಿತವಾಗಿ ಹೇಳಬಹುದು.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಟೆಲಿಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಶ್ಚಿಮಾತ್ಯರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಪ್ರತ್ಯುತ್ತರ

'ಒಂದು ಕಾಲದಲ್ಲಿ ಹೀಗೆಯೇ ನಾನೂ ವಿಸಿ ಬೆಳೆಸುತ್ತಿದ್ದೆ; ಆದರೆ, ಮುಖಕ್ಕೆ ಅಲಂಕಾರವಲ್ಲವೆಂದು ಕಂಡಾಗ ಅದನ್ನು ಬೋಳಿಸಿದೆ....'

ಇನ್ನೊಬ್ಬ—"ಒಂದು ಕಾಲದಲ್ಲಿ ನಿನ್ನ ಮುಖದಂತೆಯೇ ನನ್ನ ಮುಖವೂ ಇತ್ತು. ಆದರೆ ಅದನ್ನು ಬೋಳಿಸಲು ಸಾಧ್ಯವಾಗದಿದ್ದುದರಿಂದ ನಾನು ಬಳೆಸಿದ....

ನಿಧನ

'ಕಿಷ್ಕಿಂಧೋಳಿ ಶ್ರೀ ಮುಂಡ್ಕೂರು ರೆಂಜಿಗುತ್ತು ತಾಮರಾಯ ಶೆಟ್ರು ತಾ. 2-1-68ರಂದು ತಮ್ಮ 12ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದ ಕಮಲ ಮಹಾಲಕ್ಷ್ಮಿಯವರ ಸ್ವರ್ಗಸ್ಥರಾದರು. ಶ್ರೀಯುತರು ಮುಂದೈಯ ಸಂಬಂಧಿಗಳಾದ ಸರ್ವ ಪ್ರಥಮ ಸಾಧಾರಣರಲ್ಲಿ ಒಬ್ಬರಾಗಿದ್ದರು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦.

ಕಾಂಗ್ರೆಸಿನ ಐಕ್ಯತೆ ಬಲಗೊಳಿಸಬೇಕು.

ಅದರ ಹೆಬ್ಬಾಗಿಲನ್ನು ತತ್ವನಿಷ್ಠರಿಗೆ ತೆರೆದಿಡೋಣ

ಶ್ರೀ॥ ಅತ್ರಾಡಿ ಸತೀಶ ಹೆಗ್ಡೆ, ಎಂ. ಎ. ಸಿ. ಸದಸ್ಯರು, ಉಡುಪಿ.



ಭಾರತದ ಪ್ರಭುತ್ವವನ್ನು ಭದ್ರವಾದ ನೆಲೆಯಲ್ಲಿ ಬೆಳೆಸಿಕೊಂಡು ಬಂದ ಸಂಸ್ಥೆ ಕಾಂಗ್ರೆಸ್. ಸ್ವಾತಂತ್ರ್ಯ ಚಳವಳಿಯನ್ನು ಸಂಘಟಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಸಂಸ್ಥೆಯೂ ಕೊಂಗ್ರೆಸು. ಭಾರತಕ್ಕೊಂದು ಉತ್ಕೃಷ್ಟವಾದ ಘಟನೆಯನ್ನು ರಚಿಸಿ ಆ ಮೂಲಕ ಇಲ್ಲಿಯ ಪ್ರಜಾಸತ್ತೆಗೆ ಒಂದು ಹೊಸ ಸ್ಫೂರ್ತಿಯನ್ನು ಕೊಡಿಹುದು ಕೊಂಗ್ರೆಸ್. ಆದರೆಇದೇ ಕೊಂಗ್ರೆಸ್ ಇಂದು ಭಾರತದಲ್ಲಿ ಜನಪ್ರಿಯತೆಯನ್ನು ಕಳೆದುಕೊಂಡಂತಿದೆ; ಕಾರಣವೇನ ?

ಎಲ್ಲರೂ ಒಂದೊಂದು ಬಗೆಯಲ್ಲಿ ಹೇಳುತ್ತಾರೆ. ಎಲ್ಲರೂ ಹೇಳುವುದು ಸರಿ. ಎಲ್ಲರೂ ಹೇಳುವುದು ತಪ್ಪು ನಮ್ಮ ಜನಬದಲಾವಣೆಯನ್ನು ಅಪೇಕ್ಷಿಸುತ್ತಾರೆ. ಒಂದೇ ಬಣ್ಣ, ಒಂದೇ ರುಚಿ, ಒಂದೇ ಕೋಸು, ಒಂದೇವಿಚಾರಧಾರೆಯನ್ನು ಜನ ಸಹಿಸಿಕೊಂಡಿರುವುದಿಲ್ಲ. ಹೊಸತಿಗೆ ಅವಕಾಶ ಕೊಡೋಣ, ಹೊಸತನ್ನು ಆಹ್ವಾನಿಸೋಣ ಎನ್ನುವ ವಿಸೋಧರ್ಮ ಹಲವಾರಿದೆ. ಪರಿಣಾಮವಾ-ಬದಲಾವಣೆಗೆ ಮುಖ್ಯ ವ್ಯಕ್ತಿಗಳಾಗಿ ಕಾಂಗ್ರೆಸ್ಸು ಅನೇಕ ಕಡೆ ಸೋತುದಕ್ಕೆ ಮನುಷ್ಯ ಹೊಸತಿನ ಭವ ರದ ಬೆನ್ನತ್ತಿ ಹೋದುದೇ ವಿಖ್ಯ ಕಾರಣ. ಉಳಿದ ಕಾರಣಗಳೆಲ್ಲ ಗೌಣ

ಕಾಂಗ್ರೆಸ್ಸಿನಲ್ಲಿ ಮೂಲಸಿದಅನ್ಯೋಣ ಬೇರೆ ಯಾವ ಪಕ್ಷ ಹೊಲಸಿಲ್ಲದೆ ಪಂಶುದ್ಧವಾಗಿವೆ? ಕಾಂಗ್ರೆಸ್ಸಿಗೆ ಧ್ಯೇಯವಿಲ್ಲ ಎನ್ನುತ್ತಾರೆ. ಧ್ಯೇಯಾನಿಷ್ಠವೆನ್ನಿಸಿಕೊಂಡ ಹಲವು ಪಕ್ಷಗಳು ಅಧಿಕಾರಕ್ಕಾಗಿ ಬಿಹಾರದಲ್ಲಿ, ಬಂಗಾಲದಲ್ಲಿ, ಉತ್ತರಪ್ರದೇಶದಲ್ಲಿ ತಮ್ಮ ಧ್ಯೇಯಕ್ಕೆ ವಿರುದ್ಧವಾದ ರಾಜಕೀಯ ಪಕ್ಷದಲ್ಲಿ ಕೂಡಿದ್ದುದನ್ನು ನೋಡುತ್ತಿಲ್ಲವೆ? ಭ್ರಷ್ಟಾಚಾರಿಗಳು, ಅಧಿಕಾರ ಲಂಪಟರು, ಜನದ್ರೋಹಿಗಳು ಎಂದು ಕಾಂಗ್ರೆಸ್ಸಿನಲ್ಲಿದ್ದಾಗ ದೂರುತಿದ್ದವರನ್ನೇ ಅವರು ಕಾಂಗ್ರೆಸ್ ಬಿಟ್ಟೊಡನೆ ನಿಸ್ವಾರ್ಥಿಗಳು! ಉತ್ತಮ ಕಾರ್ಯಕರ್ತರು ಎಂದು ಕರೆಯುತ್ತಾರೆ. ಇದೊಂದು ವೈಚಿತ್ರ್ಯ.

ಆದರೆ ಈ ಬಾರಿಯ ಚುನಾವಣೆಯು ಒಳ್ಳೆಯ ಪಾಠಕಲಿಸಿತು. ಕಾಂಗ್ರೆಸೊಂದೇ ದೇಶದ ರಾಜಕೀಯ ಭವಿಷ್ಯ ಬರೆಯ ಬಲ್ಲದು. ಬೇರಾವುದೂ ಅದನ್ನು ಅಲುಗಿಸಲಾರವಲ್ಲ ಎನ್ನುವ ಅಹಂಭಾವಕ್ಕೆ ಯೋಗ್ಯ ಶಾಸ್ತಿ ಸಿಕ್ಕಿತು. ಕಾಂಗ್ರೆಸ್ಸಿನ ವಿರೋಧಿಗಳು ಕೇವಲ ವಿರೋಧಕ್ಕಾಗಿ ಮಾತ್ರ ಹೇಳಿದವರಾಗಿದ್ದಾರೆ. ಆಡಳಿತವನ್ನು ನಿಭಾಯಿಸಬಲ್ಲರೇ ಎಂಬುದು ಜನರಿಗೆ ಪ್ರತ್ಯಕ್ಷ ಮನದಟ್ಟಾಗಿ ಮುಕ್ತಾಯಿತು. ಇಂದು ಕಾಂಗ್ರೆಸ್ಸೇತರ ಸಂಕಾಂಗಳು ನಡೆಸಿದ ಆಡಳಿತ ಪದ್ಧತಿಯು ಸ್ವಾನುಭವದಿಂದ ಕಾಂಗ್ರೆಸ್ಸಿನ ಕೇರ್ತಿ ಹೆಚ್ಚಿ ಪ್ರತಿಷ್ಠೆ ಮೆರೆದಿದೆ. ಕಾಂಗ್ರೆಸ್ಸಿನ ಧೋರಣೆ, ಆಡಳಿತ ಪದ್ಧತಿ, ಭಾರತದ ಪ್ರಜಾಸತ್ತೆಯನ್ನು ಉಳಿಸಬಲ್ಲುದೆಂದು ಜನಸಾಮಾನ್ಯರು ಮನದಟ್ಟು ಮಾಡಿಕೊಳ್ಳುವಂತಾಗಿದೆ. ಹಾಗೆಂದ ಮಾತ್ರಕ್ಕೆ ಕಾಂಗ್ರೆಸ್ಸು ನಿರಾಳಂಕವಾಗಿ ಮೊದಲಿನಂತೆಯೇ ಅಜಾಗ್ರತವಾಗಬಹುದೆಂಬುದಕ್ಕೆ ಅರ್ಥವಿಲ್ಲ. ಅದು ತನ್ನ ನಿಷ್ಠೆಯಿಂದ ದುಡಿದು ತನ್ನ ಕಳೆದುಕೊಂಡ ಜನಪ್ರಿಯತೆಯನ್ನು ಉಳಿಸಿಕೊಳ್ಳಬೇಕು. ಆ ಬಗ್ಗೆ ಜನರಲ್ಲಿ ಸಂಘಟಿಸಿ ಎನೇ ಭವ ಬೆಳೆಸಬೇಕು ಪುಣ್ಯವಶಾತ್ ಮೈಸೂರಿಗೆ ಯೋಗ್ಯ ಕಾಂಗ್ರೆಸ್ ಆಡಳಿತವೇ ದೊರೆತಿದೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಇಂಥ ಪದ ಅಜಾತಶತ್ರುಗಳೆನಿಸಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ಸಿನ ಭಾವಿ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾಗಿದ್ದಾರೆ. ಮೈಸೂರಿನ ಸುಸುತ್ರರೊಬ್ಬರು ಅಖಿಲ ಭಾರತ ಕಾಂಗ್ರೆಸ್ಸಿಗೆ ದಾರಿ ತೋರುವುದು ಇದು ಪ್ರಥಮ ಬಾರಿ. ಆದರೆ ಹತ್ತು ಹಲವು ಕಡೆಗಳಿಂದ ಎಳೆದಾಡುವ ಇಂದಿನ ರಾಜಕೀಯದ ವಿಭಿನ್ನ ಪ್ರವೃತ್ತಿಗಳವರೂ ಶ್ರೀ ನಿಜಲಿಂಗಪ್ಪನವರ ಬಗ್ಗೆ ಏಕಾಭಿಪ್ರಾಯ ಸೂಚಿಸಿರುವುದು ಒಂದು ಹೊಸ ಆಶಾವಾದವೇ.

ಹಾಗೆಯೇ ರಾಜ್ಯದಲ್ಲೂ ಡಾ॥ ನಾಗಪ್ಪ ಆಳ್ವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದು ಸಂತೋಷ. ಅವರು ಸೌಜನ್ಯಯುತ ಹಾಗೂ ಜನಪ್ರಿಯ ವ್ಯಕ್ತಿತ್ವ ಉಳ್ಳವರು ಸಫಲಸಾಧಕರು; ಯೋಗ್ಯ ಸಂಘಟಿತರು ಎಂಬುದನ್ನು ಕಳೆದ ಆರು ತಿಂಗಳಿಂದ ರಾಜ್ಯ ಕಾಂಗ್ರೆಸ್ ಅಧ್ಯಕ್ಷಪದವಿಯ ಆಡಳಿತದಲ್ಲೇ ತೋರಿಸಿಕೊಟ್ಟಿದ್ದಾರೆ.

ಇದೀಗ ನಮ್ಮ ರಾಜ್ಯದಲ್ಲಿ ಕಾಂಗ್ರೆಸಿಗರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಕಾಂಗ್ರೆಸ್ಸಿನ ಐಕ್ಯತೆ ಅತೀ ಪ್ರಾಮುಖ್ಯದ್ದಾಗಿದೆ. ಇಂದು ರಾಜ್ಯದ ಕಾಂಗ್ರೆಸ್ಸಿನಲ್ಲಿ ಗುಂಪುಗಾರಿಕೆ, ಜಾತೀಯತೆ, ಅಸೂಯೆ ಪ್ರವೃತ್ತಿ, ಹಟ ಸಾಧನೆಯೇ ಮೇಲೆದ್ದು ನಿಂತಿದೆ. ಈ ಬಗ್ಗೆ ಕಾಂಗ್ರೆಸ್ಸಿಗರ ಮೊದಲೇ ಕಲಹ ನಡೆಯುತ್ತಿದೆ. ಇದನ್ನು ಕಡೆಗಟ್ಟಲು ಶ್ರೀ ನಿಜಲಿಂಗಪ್ಪನವರು ಬಹು ಸಮರ್ಥವಾಗಿ ಕಾರ್ಯನಿರ್ವಹಿಸಿದರೇನೋ ನಿಜ. ಆದರೆ ಒಬ್ಬ ವ್ಯಕ್ತಿಯಿಂದ ಮಾತ್ರವೇ ಇದು ಆಗುವ ಕೆಲಸವಲ್ಲ. ಎಲ್ಲರೂ ಒಟ್ಟಾಗಿ ಏಕಮತದಿಂದ ದೇಶ ಸೇವಾ ಸ್ಪೂರ್ತಿಯಿಂದ ಮಾಡುವ ಕೆಲಸ ಇದಾಗಿದೆ.

ಕಳೆದ ಚುನಾವಣಾ ಕಾಲದಲ್ಲಿ ಎಷ್ಟೋ ಮಂದಿ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್‌ಪಕ್ಷದಿಂದ ದೂರಸರಿದಿದ್ದಾರೆ. ಅವರೆಲ್ಲರನ್ನೂ ನಾವು ಶತ್ರುಗಳೇ ಪ್ರತ್ಯೇಕಿಸಿ ಅವರ ಮೇಲೆ ಹಟಸಾಧನೆ ತೋರುವ ಬದಲು ಅವರ ಸ್ವಾಗತಕ್ಕೆ ಸಿದ್ಧರಾಗಬೇಕು. ತಪ್ಪು ಎಲ್ಲರಿಂದಲೂ ಆಗುತ್ತದೆ. ಅಸಂದರ್ಭದಲ್ಲಿ ಕೆಲವೊಂದು ಅನ್ಯಾಯವೂ ಆಗಬಹುದು. ಆದು ಮನುಷ್ಯನ ಸಹಜ ದೌರ್ಬಲ್ಯ ಎಂಬ ವಿಶಾಲ ಭಾವನೆಯಿಂದ ಕಾಂಗ್ರೆಸ್ಸಿಗರು ಆ ಸಹೋದರರನ್ನು ಮನ ಒಲಿಸುತ್ತಲೇ ಒಂದು ಹೆಜ್ಜೆ ಮುಂದೆ ಹೋದರೆ ಅವರ ಮನಸ್ಸು ಬದಲಾಗಿ ಕಾಂಗ್ರೆಸ್ಸಿನ ಕಡೆಗೆಒಲಿಯು ಬಹುದು. ಈ ವಿಚಾರದಲ್ಲಿ ಹಟಸಾಧನೆ ಅಸೂಯೆ ಒಳ್ಳೆಯದಲ್ಲ. ಅದ ದರಿಂದ ಈಗ ಕಾಂಗ್ರೆಸ್ಸನ್ನು ಬಲಪಡಿಸಲು ಅದರ ತತ್ವವನ್ನು ಒಪ್ಪುವ ಎಲ್ಲರನ್ನೂ ಸ್ವಾಗತಿಸಲು, ಕಾಂಗ್ರೆಸ್ಸಿಗರು ಸಿದ್ಧರಾಗಬೇಕು. ಉದಾರ ಹೃದಯದಿಂದ ಅವರನ್ನು ಸ್ವಾಗತಿಸಬೇಕು.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಧರ್ಮ ದರ್ಶನ.

ಹಾರದಲ್ಲಿರುವ ಸೂತ್ರದಂತೆ ಪ್ರತಿ ಮತದಲ್ಲಿಯೂ ನಾನಿದ್ದೇನೆ. ಎಲ್ಲಿಲ್ಲಿ ಮಾನವನನ್ನು ಮೇಲೆತ್ತಿ, ಪರಿಶುದ್ಧಗೊಳಿಸುವ ಶಕ್ತಿ ವಿಶೇಷ, ಪಾವಿತ್ರ್ಯಗಳಿವೆಯೋ ಅಲ್ಲೆಲ್ಲಾ ನಾನಿರುವೆನು —ಶ್ರೀ ಕೃಷ್ಣ

ಂ ಂ ಂ

ನಮ್ಮ ನಮ್ಮ ಜಾತಿ, ಮತಗಳ ಎಲ್ಲೆ ಕಟ್ಟಿನ ದೊರಗೂ ಪರಿಪೂರ್ಣರಾದ ಜ್ಞಾನಿಗಳಾದ ಉದ್ದಾಮ ಮಾನವರಿದ್ದಾರೆ

—ವ್ಯಾಸ

ಂ ಂ ಂ

ಧರ್ಮದಲ್ಲಿ ಮತಕ್ಕಾಗಿ ನಡೆಸುವ ಹಿಂಸೆ—ಅಸಹಿಷ್ಣುತೆಗಳಿಗೆ ಸ್ಥಾನವಿಲ್ಲ. ಅದು ಪ್ರತೀ ಸ್ತ್ರೀ ಪುರುಷರಲ್ಲಿಯ ದೈವಿಕಾಂಶವನ್ನು ಗುರ್ತಿಸುವುದು. ಮಾನವ ಕುಲವು ತನ್ನ ನೈಜ ದೈವಿಕತೆಯನ್ನು ಕಂಡುಕೊಳ್ಳಲು ಅದು ತನ್ನ ಸರ್ವಶಕ್ತಿಯಿಂದ ಪ್ರಯತ್ನಿಸುವುದ.

—ವಿವೇಕಾನಂದ.

ಂ ಂ ಂ

ಸಾಧು ಪುರುಷನೊಬ್ಬನು ಒಂದು ತ್ರಿಕೋಣಾಕಾರದ ಗಾಜಿನ ಮೂಲಕ ಹಗಲು ರಾತ್ರಿಗಳನ್ನು ನೋಡುತ್ತಾ ನಗುತ್ತಿದ್ದ. ಆ ಗಾಜಿನ ಮೂಲಕ ಆತನಿಗೆ ಕಾಣಿಸುತ್ತಿದ್ದ ಕೆಂಪು, ನೀಲಿ, ಹಳದಿ ಬಣ್ಣಗಳೇ ಆತನ ನಗುವಿಗೆ ಕಾರಣ. ಈ ಬಣ್ಣಗಳು ಸುಳ್ಳಾದಂತೆ ಈ ಪ್ರಪಂಚವೂ ನಶ್ವರ ಎಂದು ತಿಳಿದುಕೊಂಡ. ಆತ ನಗುತ್ತಿದ್ದ.

—ರಾಮಕೃಷ್ಣ ಪರಮಹಂಸರು

ಂ ಂ ಂ

ಮಾನವನಲ್ಲಿ ದೇವನನ್ನು ಪ್ರಕಟಗೊಳಿಸುವುದೆಂತು ಎಂಬ ಮೂಲಸತ್ಯ ಸಂಶೋಧನೆಯೇ ಸಕಲ ಧರ್ಮಗಳ ಆದ್ಯ ಕರ್ತವ್ಯ. ಈ ಗುರಿ ಇಲ್ಲದ ಧರ್ಮ ಅಧರ್ಮವೆನಿಸೀತು.

—ವಿವೇಕಾನಂದ

ಂ ಂ ಂ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 279/1967.

ಮೀರಿ ಲೂರೊ —ವಾದಿ.

ಜೋರ್ಜ್ ಆರ್. ರೊಡ್ರಿಗ್ಸ್—ಪ್ರತಿವಾದಿರು.

ಪ್ರತಿವಾದಿರು—

2. Anthoney Rodrigues;
4. Louis Rodrigues;
5. Annie Rodrigues—Sons of Fermino Rodrigues—residing in Gangulli.
7. Gracy Rodrigues, widow of George Rodrigues, Gangulli.

—ಇವರಿಗೆ.

ವಾದಿಯು ಕೈಪಿತಿನ A ಶೆಡ್ಯೂಲ್ ಆಸ್ತಿಗಳನ್ನು R.E.P. 607/03ನೇ ಅಮ್ಲಜ್ಜಾರಿ ಪ್ರಕಾರ ನಿಮ್ಮ ಅಂಶ ಹಕ್ಕನ್ನು ಯೇ ಲಂಮ್ಮಿಗೆ ಪಡೆದು ಆ ಮೂರಿತ ನಿಮ್ಮ ಮೇರೆ ಹಿತ ದಾವೆ ಮಾಡಿರುವುದರಿಂದ ಸದ್ರಿ ದಾವೆಯಲ್ಲಿ ನಿಮ್ಮನ್ನೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 9-2-1968ಕ್ಕೆ ವೇಳ್ಳಾಗ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಞಾಪನೆ ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಸ್ಕು ಶಿವಾಯ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಯೂ ಮೂಲಕ ತಿಳಿಸಿಲಾಗಿಯದೆ.

K. Raghunath Sheno,
Advocate for Plaintiff.

Coondapoor, 10-1-1968.

ಕೃಷಿಕರ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘದ ನೇತೃತ್ವದಲ್ಲಿ ತಾ. ೨೦ರಂದು ಕೃಷಿಕರ ಸಮ್ಮೇಳನವು ಕಾರ್ಕಳದಲ್ಲಿ ನಡೆಯಿತು. ಶ್ರೀ ಕೆ. ಬಿ. ಜನಾರ್ದನ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಬೋಳ ರಘುರಾಮ ಶೆಟ್ಟಿಯವರು ಸ್ವಾಗತಿಸಿ ಸಮ್ಮೇಳನವನ್ನು ಕರೆದ ಉದ್ದೇಶವನ್ನು ವಿವರಿಸಿದರು.

ಪಟ್ಟಿಯ ಶ್ರೀ ಕೆ. ವಿ. ಕರ್ಮಾ ಅವರು ತಮ್ಮೂರಿನಲ್ಲಿ ಲೆವ್ವಿ ಅಧಿಕಾರಿಗಳು ನಡೆಸುತ್ತಿರುವ ಅಜ್ಞಾಯ ಬಲಾತ್ಕಾರಗಳನ್ನು ತಿಳಿಸಿದರು. ಶ್ರೀ ವಾಳ ನಾರಾಯಣ ಬರ್ಮಯವರು ಲೆವ್ವಿ ಕಾನೂನಿನಿಂದ ರೈತ ಜನರಿಗೆ ತುಂಬ ಅನ್ಯಾಯವಾಗುತ್ತಿದೆಯೆಂದೂ ಇದನ್ನು ತಡೆಗಟ್ಟಲು ರೈತರೆಲ್ಲರೂ ಸಂಘಟಿತರಾಗಬೇಕೆಂದೂ ಕರೆಕೊಂಡರು. ಹಂಪರಪುರದ ಶ್ರೀ ವಿಷ್ಣುಮೂರ್ತಿ ಭಟ್ಟರು ಮಾತನಾಡುತ್ತಾ ರೆಸ್ಟ್ ನೋಟೀಸಿನಲ್ಲಿ ತಾರೀಖು ಹಾಕದೆ ಸಾಗುವಳಿ ಆಗಿದೆಯೋ ಇಲ್ಲವೋ ಎಂದು ಕೂಡ ನೋಡದೆ ಲೆವ್ವಿ ವಸೂಲು ಮಾಡುವ ಸರಕಾರಿ ಮರ್ಜಿಯನ್ನೂ, ಮನಸಿಗೆಬಂದ ಸಂಗತಿಗಳ ಮೇಲೆ ಹೊಡೆದ

ಪ್ರೇಮ ಪ್ರಪಂಚ

(ಎರಡನೇ ಸಂಚಿಕೆಯಿಂದ)

ಧೈರ್ಯವೇ ಆಗಿದ್ದ. ಗಾಬರಿಯೂಗುವಂಥಹ ಪೆಟ್ಟೇನೂ ಆಗಿಲ್ಲವಾದರೂ ಆತನಿಗೆ ಹೆದರಿಕೆಯಿಂದಲೇ ಸ್ಮೃತಿತಪ್ಪಿತ್ತು. ಸ್ತ್ರೀ ಸಹಜ ನಾಚಿಕೆಯನ್ನು ಬಿಟ್ಟು ಆತನನ್ನು ಮೆಲ್ಲನೆ ಬೀಳಿಸಿ ರಸ್ತೆಯ ಪಕ್ಕಕ್ಕೆ ತಂದು ಮಲಗಿಸಿದೆ. ಮುಂಗೈಯ ಚರ್ಮ ಸುಲಿದು ಹೋದುದರಿಂದ ರಕ್ತ ಚಿಮ್ಮುತಿತ್ತು. ಕಾಲುಗಳಲ್ಲೂ ಅಲ್ಲಲ್ಲಿ ರಕ್ತ ಬಂದು ಪೇಂಟ್‌ನಲ್ಲಿ ರಕ್ತದ ಕಲೆಯಾಗಿತ್ತು. ಮುಂಗೈಯ ರಕ್ತ ತೀವ್ರವಾಗಿ ಹರಿಯತೊಡಗಿದಾಗ ನಾನು ಗಾಬರಿಗೊಂಡೆ. ಬೇರಾವ ಉಪಾಯ ಗಾಣದೆ, ಸೀರೆಯ ಸೆರಗಿನ ತುಂಡೊಂದನ್ನು ಹರಿದು, ಗಾಯವನ್ನು ಕಟ್ಟಿದೆ. ಸ್ವಲ್ಪ ಗಾಳಿಹಾಕಲು ಅವನಿಗೆ (ಹಾಂ!.. ಅಲ್ಲಲ್ಲ ಅವರಿಗೆ) ಸ್ಮೃತಿ ಬಂತು. ಎದ್ದು ಕುಳಿತರು. ನನ್ನ ಪ್ರಥಮ ಚಿಕಿತ್ಸೆಯ ಅರಿವಾಗಿ, ಕೃತಜ್ಞತೆ ತುಂಬಿದ ಕಣ್ಣುಗಳಿಂದ ನನ್ನನ್ನು ನೋಡತೊಡಗಿದರು. ನನ್ನ ನಾಚಿಕೆ ಅಷ್ಟರ ವರೆಗೆ ಎಲ್ಲಿಗೆ ಹೋಗಿತ್ತೋ ಏನೋ? ಕೂಡಲೇ ನನ್ನ ಮುಖ ಆರಕ್ತವಾಯಿತು.

"ನಿಮ್ಮಿಂದ ತುಂಬ ಉಪಕಾರವಾಯಿತು" ಎಂದು ಬಲು ಕಷ್ಟದಿಂದ ಉಸುರಿದರು. ಅವರು ಎದ್ದು ಕುಳಿತುದನ್ನು ನೋಡಿ ನನ್ನ ಶ್ರಮ ಸಾರ್ಥಕವಾಯಿತೆಂದು ಹಿಗ್ಗಿದೆ.

ಕಾಲೇಜಿಗೆ ತಡವಾಗಿ ಹೊರಟಿದ್ದ ವಿದ್ಯಾರ್ಥಿಗಳಿಬ್ಬರು, ತಮ್ಮ ಮಿತ್ರನ ಅವಸ್ಥೆಯನ್ನು ನೋಡಿ ಓಡಿ ಬಂದು, ಟ್ಯಾಕ್ಸಿ ತಂದು ಆಸ್ಪತ್ರೆಗೆ ಕರೆದೊಯ್ದರು.

ಮತ್ತೆ ಒಂದೆರಡು ದಿನಗಳ ವರೆಗೆ ಅವರ ಭೇಟಿಯಿಲ್ಲ. "ಇನ್ನೂ ಅವರಿಗೆ ಸಂಪೂರ್ಣ ಗುಣವಾಗಿಲ್ಲ ವೆಂದುಕೊಂಡೆ. ಆದರೂ ಗಳಿಗೆ ಗಳಿಗೆಗೂ ಅವರನ್ನು ಕಾಣುವ ತವಕ ನನಗರಿವಿಲ್ಲದಂತೆಯೇ ಹೆಚ್ಚಾಗುತ್ತಿತ್ತು. ಕ್ಲಾಸಿನ ಪಾಠದ ಕಡೆಗೆ ಗಮನ ಕಡಿಮೆಯಾಗ ತೊಡಗಿತು. ಪಾಠದ ಕಡೆಗಿದ್ದ ನನ್ನ ಅಮನಸ್ಕತೆಯನ್ನು ಗುರುತಿಸಿದ ಲೆಕ್ಚರರೊಬ್ಬರು. "What do you mean by cottage industry ಎಂದಾಗ, "MYX" ಎಂದು ತೊದಲಿ ಎಲ್ಲರ ನಗೆಗೀಡಾಗಿದ್ದೆ.

ಇನ್ನೊಂದು ದಿನ ಕಳೆಯಿತು. ಕಾಲೇಜು ಬಿಟ್ಟ ನಂತರ ಅವರನ್ನು ಆಸ್ಪತ್ರೆಗೆ ಸಾಗಿಸಲು ನೆರವಾದ ವಿದ್ಯಾರ್ಥಿಗಳಲ್ಲೊಬ್ಬ ಮುಂದಿನಿಂದ ಹೋಗುತ್ತಿದ್ದನು. 'ಅವರ' ಬಗ್ಗೆ ಕೇಳಬೇಕೆಂದು ನಾಲಿಗೆಯ ತುದಿಯ ವರೆಗೆ ಬಂದಿದ್ದ ಮಾತನ್ನು ನುಂಗಿಕೊಂಡೆ. ಏಕೆಂದರೆ ನನ್ನ ಸುತ್ತಲಿದ್ದ ಹೂರಾರು ಕಣ್ಣುಗಳು ನಮ್ಮನ್ನೇ ನೋಡಿಯಾವು ಎಂಬ ಬೆದರಿಕೆಯಿಂದ.

ಅಂದು ಶನಿವಾರ. ನಮಗೆ ಅರ್ಧದಿನ ಮಾತ್ರ ಪಾಠವಿತ್ತು. ಕ್ಲಾಸು ಮುಗಿಸಿ ಮರಳುವಾಗ ಮುಂಗೈಗೆ ಚಿಕ್ಕದೊಂದು ಬೆಂಡೇಜ್ ಹಾಕಿಕೊಂಡಿದ್ದ. 'ಅವರ' ಭೇಟಿಯಾಯಿತು. ಅದೇ ಮುಗುಳ್ನಗೆ. ಸ್ವರದಮ್ಮಸ, ಕುಂಡುರು ಕೂದಲು, ಸ್ಫುಲ ದೇಹ. ನನಗೆ ಅವರನ್ನು ನೋಡಿ ಹೇಗೆ ಹೇಗೋ ಆಯಿತು. ಅವನತಶಿರಳಾದ ನನ್ನನ್ನು ಅವರೇ ಕರೆದು ಮಾತಾಡಿಸಿದರು.

"Excuse me. ನಿಮ್ಮ ಉಪಕಾರವನ್ನು ನಾನು ಎಂದೂ ಮರೆಯಲಿಕ್ಕಿಲ್ಲ. ಆ ಸಮಯದಲ್ಲಿ ದೇವರಂತೆ ಬಂದು ನನ್ನನ್ನು ಉಪಚರಿಸಿದಿರಿ."

"ಹಾಗೇನೂ ತಿಳಿದುಕೊಳ್ಳಬೇಡಿ. ಅಷ್ಟು ದೊಡ್ಡ ಮರ್ಯಾದೆಗೆ ನಾನು ತಕ್ಕವಳಲ್ಲ. ಏನೋ ಸಮಯ ಬಂತು. ಕೈಲಾದ ಸಹಾಯ ಮಾಡಿದೆ." ಎಂದು ತೊದಲಿದೆ.

"ನಿಮ್ಮ ಹೆಸರೇನು??

"ಕಮಲಾ, ನಿಮ್ಮದು.?"

"ಕೃಷ್ಣಮೂರ್ತಿ. ಫೈನಲ್ ಇಯರ್ ನಲ್ಲಿದ್ದೇನೆ."

ಇನ್ನೂ ಮಾತಾಡುವುದಕ್ಕೇನಿದೆ? (ಏನಿಲ್ಲ!?) ಆದರೂ ಏನಾದರೂ ಮಾತನ್ನಾಡಬೇಕೆಂಬ ಒಳಮನಿಕೆ. ಇಷ್ಟು ಮಾತನ್ನೂ ಯಾವ ಧೈರ್ಯದಿಂದ ಮಾತಾಡಿದೆನೋ? ಅವರಿಗೂ ಹಾಗೆಯೇ ಅನಿಸಿರಬೇಕು. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದೆವು. ಹತ್ತಿರದಲ್ಲೇ ಯಾರದೋ ಪೆಟ್ಟಿನ ಸಪ್ಪಳ ಕೇಳಿ ಇಬ್ಬರೂ ಒಮ್ಮೆಲೇ ಬೆಚ್ಚಿ ಬಿದ್ದೆವು.

"ನಾನಿನ್ನು ಬರ್ತೇನೆ" ಎಂದು ಹುಡುಗಿಯರ ಕೋಣೆಯತ್ತ ಧಾವಿಸಿದೆ.

ಅಂದಿನಿಂದ ನಾನು ಪ್ರೇಮ ಪ್ರಪಂಚಕ್ಕೆ ನುಗ್ಗಿದೆನೆಂದು ಹೇಳಬಹುದು. ವಾಸ್ತವ ಪ್ರಪಂಚದಿಂದ ಭಿನ್ನವಾದ ಈ ಹೊಸ ಪ್ರಪಂಚ ನನಗೆ ಆನಂದವನ್ನೀಯ ತೊಡಗಿತು.

ಅವರೆಷ್ಟು ಸುಂದರವಾಗಿದ್ದಾರೆ. ಅವರ ಮಧುರ ಮಾತುಗಳನ್ನು ಗಂಟೆಗಟ್ಟಲೆ ಕೇಳಬೇಕೆನಿಸುತ್ತಿದೆ. ಮದುವೆಯಾಗುವುದಾದರೆ ಅವರನ್ನೇ ಎಂದು ನನ್ನ ಹೆಚ್ಚು ಸುನಸ್ಸು ನಿರ್ಧರಿಸಿಯೂ ಆಯಿತು. ಅದರೆ? ಅಂಗೆಗೆ ಇದು ಒಪ್ಪಿಗೆಯಿರ ಬಹುದೋ? ಅವರ ಭಾವವೆ ಹೇಗಿರಬಹುದು.? ನನ್ನ ಬಗ್ಗೆ ಯಾವ ದೃಷ್ಟಿಯನ್ನಿಟ್ಟಿರಬಹುದು? ಒಂದು ವೇಳೆ ನನ್ನ ನಿರ್ಧಾರವನ್ನು ಕೇಳಿ ನಿರಾಕರಿಸಿದರೆ? ನೀನು ನನ್ನ ಸೋದರಿಯಂತೆ ಎಂದರೆ? ಛೇ! ಹಾಗೆ ಹೇಳಲಾರರು. ಕಾಲೇಜು ಹುಡುಗರ ಹೆಣೆಬರಹ ನನಗೆ ಗೊತ್ತಿಲ್ಲವೇ?

ಅವರು ಎಂದೂ ಹುಡುಗಿಯರ ಬೆನ್ನು ಹತ್ತಿದುದಾಗಲೀ, ಗೇಲಿ ಮಾಡಿದುದನ್ನಾಗಲೀ ನಾನು ನೋಡಿರಲಿಲ್ಲ. ಅವರ ಮನಸ್ಸು ಹೇಗಿರಬಹುದು? ಅವರಭಾವನೆಗಳೇನು? ಎಂಬ ಚಿಂತನೆಯಲ್ಲೇ ಧಾನುವಾರದ ರಜೆ ಕಳೆದೆನು.

ಸೋಮವಾರ ಅವರನ್ನು ಯಾವಾಗ ಕಂಡೇನೆಂಬ ಆಶೆ. ಕಾಲೇಜು ಬಿಟ್ಟ ನಂತರವಾದರೂ ಸಿಗಬಹುದು ಎನ್ನುವ ತೃಪ್ತಿಯಿಂದ ಕಾಲೇಜು ಬಿಟ್ಟೊಡನೆ ಅವರಿಗಾಗಿ ಕಾಯ ತೊಡಗಿದೆ. ಎಲ್ಲರಿಗಿಂತಹಿಂದಿನಿಂದ ಬರುತ್ತಿರುವವರು ಅವರೇ ಅಲ್ಲವೇ? ಹೌದು ಅವರೇ ಎಂದು ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಿರುವಾಗ,

"ಯಾರನ್ನು ಕಾದು ನಿಂತಿದ್ದೀಯೇ? ಎಲ್ಲರೂ ಹೊರಬಾಯಿಯಲ್ಲಾ? ಓಹೋ ಪ್ರಣಯಿಯನ್ನೇ?" ಎನ್ನುತ್ತಾ ರಮೂ ಕೈಗೆ ತಿವಿದಳು.

ಹೌದೆನ್ನಲೇ? ಕೋಪವಿಂದ, "ಯಾರನ್ನು ಕಾದು ನಿಂತರೆ ನಿನಗೇನು?" ಎಂದು ಕಟುವಾಗಿಯೇ ಉತ್ತರಿಸಿದೆ.

"ಎಷ್ಟು ದಿನ ಮುಚ್ಚಿಡುತ್ತೀ ನಾನೂ ನೋಡುತ್ತೇನೆ." ಎನ್ನುತ್ತಾ ಬುಸುಗುಟ್ಟುತ್ತಾ ಹೊರಟು ಹೋದಳು.

ನಾನು ಅವರನ್ನೇ ಕಾದು ನಿಂತಿದ್ದೇನೆಂದು ಅವರಿಗೆ ತಿಳಿಯಿತು. ನನ್ನೆಡೆಗೇ ಬಂದರು. 'ಏನು ಮಿಸ್, ಇವತ್ತು ಮನೆಗೆ ಹೊರಡುವುದಿಲ್ಲವೇ?" ಅಷ್ಟರ ವರೆಗಿದ್ದ ನನ್ನ ಧೈರ್ಯವೆಲ್ಲ ಉಸುಗಿ ಹೋಯ್ತು. ನಾಚಿಕೆಯಿಂದ ಕೆಂಪಾದೆ. ಅಂತೂ ಬಹುಕಷ್ಟದಿಂದ 'ಹೋಗಬೇಕು' ಎಂದೆ. ಇಬ್ಬರೂ ಹೊರಟೆವು. ದಾರಿಯುದ್ದಕ್ಕೂ ಹಲವಾರು ಪ್ರಶ್ನೆ ಕೇಳಿದರು. ನಾನು ಸಂಕೋಚದಿಂದ 'ಹಾಂ' 'ಹೂಂ' 'ಹೌದು' 'ಇಲ್ಲ'ವೆಂದು ಉತ್ತರಿಸುತ್ತಿದ್ದೆ.

ಸ್ವಲ್ಪದಿನ ಕಳೆಯುವುದರಲ್ಲೇ ಅವರೂ ನನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದಾರೆಂಬ ಸಂಗತಿ ತಿಳಿಯಿತು. ಪ್ರೇಮ ಗಾಢವಾದ ನಂತರ ಅವರು ಏ ಜಾತಿಯವರೆಂದು ತಿಳಿದು ಗಾಬರಿಗೊಂಡೆ. ಅಷ್ಟರ ವರೆಗೆ ನನ್ನಲ್ಲಿ ಜಾತಿಯ ಪ್ರಶ್ನೆಯೇ ಎದ್ದಿಲ್ಲ. ವಿಜಾತಿಯವರಾದರೇನು ಪ್ರೇಮಕ್ಕೆ ಜಾತಿಗೀತಿಯ ಪ್ರಶ್ನೆಯೆದೆಯೇ? ಅಲ್ಲದೆ ಕಾಲೇಜಿನ ಪೆಟ್ಟಿಲನ್ನು ಹತ್ತಿದ ನಾವು ಜಾತಿಗೀತಿ ಎನ್ನುವುದು ಮೂರ್ಖತನ ಎಂದುಕೊಂಡೆ. ಗಾಂಧೀಜಿಯವರೂ ಕೂಡ ಭಾರತದ ಜಾತಿಭೇದಗಳ ಬಗ್ಗೆ ಕಟುವಾಗಿ ಟೀಕಿಸುತ್ತಿದ್ದರಲ್ಲಾ ಎಂದು ಸಮಾಧಾನಗೊಂಡೆ. ನಾನು ಪ್ರೇಮ ವ್ಯವಹಾರಕ್ಕೆ ಕೈಹಾಕುವ ಮುನ್ನ ಅಷ್ಟಾದ ಜಾತೀಯ ವಾದಿಯಾಗಿದ್ದೆನೆಂಬ ವಿಚಾರ ನನಗೆ ಮರೆತೇ ಹೋಗಿತ್ತು.

ಒಂದುದಿನ ಅವರು ಬರೆದಿದ್ದ ಪ್ರೇಮ ಪತ್ರವನ್ನು ಉತ್ತರದೊಂದಿಗೆ ವ್ಯಾಸಿಟಿ ಬೇಗಿನಲ್ಲಿಟ್ಟಿದ್ದೆ. 'ಬೆಲ್' ಆದಕೂಡಲೇ ಕ್ಲಾಸಿಗೆ ಹೋಗುವ ಅವರದಲ್ಲಿ ಬೇಗನ್ನು 'ಲೇಡೀಸ್ ರೂಮಿ'ನಲ್ಲಿಯೇ ಬಿಟ್ಟಿದ್ದೆ. ರಮಾಳಿಗೆ ಬಿಡ ವಿದ್ದುದರಿಂದ, ಅವಳು ಲೇಡೀಸ್ ರೂಮಿನಲ್ಲಿಯೇ ಇದ್ದಳು. ನಾನು ಕ್ಲಾಸಿಗೆ ಹೋದ ನಂತರ ನನ್ನ ಬೇಗನ್ನು ಜಪ್ತಿ ಮಾಡಿ, ಎರಡು ಪತ್ರಗಳನ್ನು ಹಾರಿಸಿ ಬಿಟ್ಟಳು. ಲೆಕ್ಚರರ ಕ್ಲಾಸಿಗೆ ಬಂದ ನಂತರ ಬೇಗ್‌ನ ನೆನಪಾಯ್ತು. ಪೀರಿಯೆಡ್ ಮುಗಿಯದೆ ಹೊರಗೆ ಹೋಗಂತಿಲ್ಲ. ಆ ಪೀರಿಯೆಡ್ ಮುಗಿದ ಕೂಡಲೇ ಲೇಡೀಸ್ ರೂಮಿಗೆ ಧಾವಿಸಿದೆ. ಬೇಗಿನಲ್ಲಿದ್ದ ಪತ್ರಗಳು ಇಲ್ಲದ್ದನ್ನ ಕಂಡು ತಣ್ಣೀರೆರಚಿದಂತಾಯ್ತು.

ಒಂದೆರಡು ದಿನ ಕಳೆದ ನಂತರ ಕಾಲೇಜಿನ function ಮುಗಿಸಿ ಮನೆಗೆ ಹೊರಡುವಾಗಲೇ ತಡವಾಗಿತ್ತು.

ತಂದೆತಾಯಿಯರಿಬ್ಬರೂ ಬಾಗಿಲಲ್ಲಿಯೇ ನಿಂತುಕೊಂಡು ನನ್ನನ್ನೇ ಕಾಯುತ್ತಿದ್ದರು. "ಏನೇ, ಕಾಲೇಜಿನಿಂದ ಬರಲು ಇಷ್ಟು ತಡವಾಯ್ತು?" ತಂದೆಯ ಮೊದಲನೇ ಪ್ರಶ್ನೆ.

"ಒಂದು function ಇತ್ತಪ್ಪಾ" ಎಂದು ನೆಗುತ್ತಾ ಒಳಸರಿದೆ.

"ಹಿಲ್ಲಿಲ್ಲ. ಯಾರೊಡನೆ ತಿರುಗಾಡಕ್ಕೆ ಹೋಗಿದ್ದೆ? ಸತ್ಯ ಹೇಳು. ಆ ಮೇಲೆ funtoion ಇತ್ತಂತೆ function."

"ಇಲ್ಲಪ್ಪಾ. ನಿನ್ನಾಣೆಯಾಗಿಯೂ function ಇತ್ತಪ್ಪಾ. ಮೈಯೆಡೀ ಬೆವರಲಾರಂಭಿಸಿತು.

'ಆಣೆ ಪ್ರಮಾಣ ಮಾಡಿ ಅವರನ್ನು ಕೊಲ್ಲಲಿಕ್ಕೂ ತಯಾರಿದ್ದಿಯಲ್ಲಾ...'

ತಾಯಿಯ ಅಬ್ಬರದ ಧ್ವನಿ ಕೇಳಿ ಬೆಚ್ಚಿ ಬಿದ್ದೆ.

"ಇದ್ಯಾರ ಸತ್ರ ಬೊಗಳು ಬೇಗ. ಪ್ರಾಣಕಾಂತನಂತೆ, ಹೃದಯೇಶ್ವರನಂತೆ, ಎರಡು ವರ್ಷ ಕಾಲೇಜಿನಲ್ಲಿ ಇದನ್ನೇ ಕಲಿತದ್ದೋ!?' ತಂದೆಯ ಧ್ವನಿ ಕಠೋರವಾಗ ತೊಡಗಿತು.

ಹೆದರಿಕೆಯಿಂದ ಅಲ್ಲೇ ಕುಳ್ಳಿರಿಸಿದೆ. "ಹುಂ ಹೇಳು ಸೇವಿಸುವುದಾದರೂ ಸಜಾತಿಯವನಾರೂ ನಿನಗೆ ಸಿಗಲಿಲ್ಲವೇ?"

'ಪ್ರೇಮಕ್ಕೆ ಜಾತಿ ನೀತಿಯಿಲ್ಲಪ್ಪಾ' ಇದ್ದ ಧೈರ್ಯದಿಂದಲೇ ತೊದಲಿದೆ.

'ಅಷ್ಟು ಹೇಳುವಷ್ಟೂ ನಿನ್ನ ನಾಲಿಗೆ ಉದ್ದವಾಯಿತಲ್ಲವೇ?' ಎಂದು ಕೋಪದಿಂದ "ಟಸ್ಸನೆ" ಕೆನ್ನೆಗೊಂದು ಕೊಟ್ಟರು. ಜೀವನವಲ್ಲಿ ಬೆಂದಲುಬಾರಿಗೆ ಪೆಟ್ಟು

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



NAVAYUGA 10—1—1960
Registered with the Registrar
of News Papers for India
nder No. R. N. 3546/'57

REGD. No: B. G. 176
LICENCE No. 31
Licensed to Post without Prepayment

ತಾಯಿ ಅಷ್ಟರಲ್ಲಿಯೇ ತನ್ನ ರಾಮಾಯಣ ಸ್ವಾರಂಭ ಮಾಡಿದ್ದಳು.

ಇನ್ನು ನಾನು ನಾಲ್ಕು ಮಂದಿಯಲ್ಲಿ ಮುಖವೆತ್ತದ ಹಾಗೆ ಮಾಡಿಬಿಟ್ಟೆಯಲ್ಲೇ ನಿಳಗ್ಯಾಕೇ! ದುರ್ಬುದ್ಧಿ ಬಂತಪ್ಪಾ. ವಿನ್ನಂತವಳು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದರ ಕೈಂಕ ನಾನು ಬಂಜೆಯಾಗಿದ್ದರೇಲೇಸಿತ್ತು. ಮನೆತನದ ಗೌರವಕ್ಕೆ ಮಸಿ ಬಳಿದುಬಿಟ್ಟೆಯಲ್ಲಾ ಎಂದು ಗೋಳೋ ಎಂದು ಅಳಲಾರಂಭಿಸಿದರು.

ತಂದೆಯವರು ಕೊನೆಯದಾಗಿ, "ನೀನು ಇಷ್ಟರವರೆಗಾದ ದನ್ನು ಮರೆತು ಬಿಡು. ಕಾಲೇಜಿಗೂ ಹೋಗುವ ಅವಶ್ಯಕತೆಯಿಲ್ಲ. ಮನೆಯ ಅಂಗಳ ಬಿಟ್ಟು ಹೊರಕ್ಕೆ ನಡೆಸೆಯೊಡರೆ ಸೀಳಿ ತೋಣಿ ಕಟ್ಟೆಯೇನು" ಎಂದರು.

ಕಣ್ಣೀರಸುತ್ತಾ ನನ್ನ ಓದುವ ಕೋಣೆಯನ್ನು ಸೇರಿದೆ. ಊಟ ತಿಂಡಿ ಬೇಡವಾಯ್ತು. ನಾನು ಯಾವುದಾದರೂ ನಿರ್ಧಾರಕ್ಕೆ ಬರಲೇ ಬೇಕಿತ್ತು. ಒಂದೋ ತಂದೆಯವರಂದಂತೆ ನಡೆಯುವುದು. ಅದು ನನ್ನಿಂದ ಅಸಾಧ್ಯ. ಅಥವಾ ಕೃಷ್ಣ ಮೂರ್ತಿಯೊಂದಿಗೆ ಎಲ್ಲಿಗಾದರೂ ಓಡಿ ಹೋಗುವುದು. ಎರಡೂ ಅಸಾಧ್ಯವಾದರೆ ಕೊನೆಗೆ ಉಳಿದುದು ಒಂದೇ ಮಾರ್ಗ.

'ಅತ್ತ—ಹತ್ತೆ. ಅಯ್ಯೋ! ಹೆಸರನ್ನು ನೆನೆಯುವಾಗಲೇ ಮೈ ಜುಂ! ಎನಿಸುತ್ತಿದೆ. ಒಮ್ಮೆ ಅರ್ಪಿಸಿದ ಮನವನ್ನು ಇನ್ನೊಬ್ಬನಿಗೆ ಅರ್ಪಿಸಿ ಪ್ರೇಮಿಸುವುದಂತೂ ವ್ಯಭಿಚಾರವೆಂದು ತೀರ್ಮಾನಿಸಿದೆ. ರಾತ್ರಿಯಿಡೀ ವಿಚಾರ ಮಾಡಿ ಪತ್ರವೊಂದನ್ನು ಬರೆದೆ. ಆದರೆ ಅದನ್ನು Post ಮಾಡಬೇಕಲ್ಲಾ. ಪಕ್ಕದ ಮನೆಯ ಹುಡುಗನನ್ನು ಕರೆದು, ತಿಂಡಿಗೆಂದು ಹತ್ತು ಪೈಸೆಯನ್ನಿತ್ತು, ಯಾರಿಗೂ ತಿಳಿಯದಂತೆ Post ಮಾಡಿ ಬಾ' ಎಂದು ಕಳಿಸಿದೆ ದೈವವಶಾತ್ ಅವರಿಗೆ ಸಮಯಕ್ಕೆ ಸರಿಯಾಗಿ ಪತ್ರ ಸಿಕ್ಕಿತ್ತು. ಉತ್ತರವನ್ನು ಬರೆದು ನನ್ನ ಅಪ್ತಗೆಳತಿಯೋರ್ವಳ ಮೂಲಕ ಕಳಿಸಿದರು. ಓದಿ ನೆಮ್ಮದಿಯ ನಿಟ್ಟುಸಿರು ಬಿಟ್ಟೆ.

ಐದನೇ ದಿನ ರಾತ್ರಿ ಒಂದು ಗಂಟೆಗೆ ಗಂಟುಮೂಟೆ ಕಟ್ಟಿ ಹೊರಡಬೇಕೆಂದು ತಿಳಿಸಿದ್ದರು. ಮನೆಯ ಪಕ್ಕದ ಬೀದಿಯ ಮೂಲೆಯಲ್ಲಿ ಟ್ಯಾಕ್ಸಿ ತಂದು ನಿಲ್ಲಿಸುವುದಾಗಿ ತಿಳಿಸಿದ್ದರು ನಾವೆಣಿಸಿದಂತೆಯೇ ಎಲ್ಲವೂ ಸುಗಮವಾಗಿ ನಡೆದುವು.

ಮರುದಿನ ರೈಲಿನ ಮೂಲಕ ಮುಂಬಾಯಿಗೆ ಹೊರಟೆವು. ಮನೆಬಿಟ್ಟು ಹೊರಡುವಾಗ ಗಂಟಲು ತುಂಬಿ ಬಂದಿತ್ತು. ಇನ್ನು ಈ ಊರಿಗೆ ಹಿಂದಿರುಗಲಿದೆಯೋ? (ಯಾರಿಗೆಗೊತ್ತು?) ಬೊಂಬಾಯಿಯನ್ನು ಸೇರಿದ ಕೆಲವೇ ದಿನಗಳೊಳಗೆ ರಿಜಿಸ್ಟರ್ಡ್ ವಿವಾಹವಾದೆವು. ಹುಣ್ಣಿಕ್ಕೆ ಒಂದು ವ್ಯಾಪಾರೀ ಸಂಸ್ಥೆಯಲ್ಲಿ ಅವರಿಗೆ ನೌಕರಿಯೂ ಸಿಕ್ಕಿತು. ವರಮಾನವು ಸಾಕಷ್ಟಿದ್ದುದರಿಂದ ಹಣದ ಕೊರತೆಯಿರಲಿಲ್ಲ. ನೆಮ್ಮದಿಯಿಂದ ಐದು ವರ್ಷ ಸಂಸಾರ ಮಾಡಿದರೂ, ತಂದೆ ತಾಯಿಗಳ ಚಿಂತೆ ನನ್ನನ್ನು ಆಗಾಗ ಕಾಡುತ್ತಿತ್ತು.

ಕಿಶೋರ್ ಹುಟ್ಟಿದ ನಂತರ ನನ್ನ ಚಿಂತೆ ಕಡಿಮೆಯಾಯಿತು. ಚಿಂತಿಸಲು ಸಮಯವೇ ಸಿಗುತ್ತಿರಲಿಲ್ಲ. ಕಿಶೋರನ ಬಾಲಲೀಲೆಗಳನ್ನು ನೋಡಿ ನಾವಿಬ್ಬರೂ ಆನಂದದಿಂದ ನಲಿದಾಡುತ್ತಿದ್ದೆವು. ಈ ಸುಖಸಂಸಾರವನ್ನು ನೋಡಿ ವಿಧಿಗೂ ಹೊಟ್ಟೆಕಿಚ್ಚಾಯಿತೋ ಏನೋ? ನನ್ನ ಸಂಸಾರ ವಿಧಿಯ ವಿಕಟಾಟ್ಟಹಾಸಕ್ಕೆಬಲಿಯಾಗಿ ನುಚ್ಚುನೂರಾಯಿತು!

ಅಂದು ಅವರು ಆಫೀಸಿನಿಂದ ಬೇಗ ಮರಳಿದ್ದರು. ಅವರ ಕಳಾಹೀನವಾದ ಮುಖವನ್ನು ಕಂಡೊಡನೆ ನಾನು ಗಾಬರಿಗೊಂಡಿದ್ದೆ. ಹಣೆ ಮುಟ್ಟಿ ನೋಡಲು ಕೆಂಡದಂತೆ ಸುಡುತ್ತಿತ್ತು. ವಸ್ತ್ರ ಬದಲಿಸಲು ಹೇಳಿ ಹಾಸಿಗೆ ಬಿಡಿಸಿ ಮಲಗಿಸಿದೆ. ಕಾಲಿನಿಂದ ಕುತ್ತಿಗೆಯ ವರೆಗೆ ಬೆಚ್ಚನೆ ಹೊದಿಸಿದೆ. ಬೇಗಬೇಗನೇ ಕಾಫಿ ತಯಾರಿಸಿ ಕುಡಿಸಿದೆ. ಕಿಶೋರನನ್ನು ಮಲಗಿಸಿ, ಡಾಕ್ಟರರಲ್ಲಿಗೆ ಓಡಿದೆ. ಡಾಕ್ಟರ್ ಬರುವುದರೊಳಗಾಗಿ ಜ್ವರದ ಅಮಲಿನಲ್ಲಿ ಹುಚ್ಚುಚ್ಚಾಗಿ ಮಾತಾಡಲು ಪ್ರಾರಂಭಿಸಿದ್ದರು. "ಅಯ್ಯೋ ದೇವರೇ ನನ ಮಾಂಗಲ್ಯವನ್ನು ಕಾಪಾಡು" ಎಂದು ಮೊರೆಯಿಟ್ಟೆ.

ಡಾಕ್ಟರರು ಪರೀಕ್ಷಿಸಿ, ಇಂಜೆಕ್ಷನ್ ಕೊಟ್ಟು, ತಮ್ಮ ಮಾಮೂಲೀ ಮಾತು "ಗಾಬರಿ ಏನಿಲ್ಲ" ಎಂದು ಹೇಳಿ ಹೊರಟರು, ಹೊರಡುವಾಗ ಪುನಃ ಪಕ್ಕಕ್ಕೆ ಕರೆದು, 'ಸ್ವಲ್ಪ careful ಆಗಿ treat ಮಾಡಿ. ನಾನು ರಾತ್ರಿ ಗಂಟೆಗೆ ಬರುತ್ತೇನೆ' ಎಂದು ಹೊರಟರು. ನನ್ನ ಜಂಘಾಬಲವೇ ಉಡುಗಿ ಹೋಯ್ತು. ಮಲಗಿದ್ದ ಕಿಶೋರ್‌ನನ್ನೇ ಎದೆಗವಚಿಕೊಂಡು ಜೀವನ್ನು ಪ್ರಾರ್ಥಿಸಲಾರಂಭಿಸಿದೆ. ಎಳು ಗಂಟೆಯ ಹೊತ್ತಿಗೆ ಅವರು ಕಣ್ಣು ತೆರೆದರು. "ನೀರು" ಎಂದರು. ಓಡಿ ಹೋಗಿ ಸ್ವಲ್ಪ ಬಿಸಿ ನೀರು ಕುಡಿಸಿದೆ. ಸ್ವಲ್ಪ ಸ್ವಲ್ಪ ಕುಡಿಯುತ್ತಿದ್ದಂತೆಯೇ, ಅವರ ಕಣ್ಣುಗಳ ಬೊಂಬೆ ತಿರುಗಲಾರಂಭಿಸಿತು! ನನ್ನ ಕೈಕಾಲು ಗಡಗಡ ನಡುಗಲಾರಂಭಿಸಿದುವು. "ಕಮಲಾ" ಎಂದು ಅರಚಿದವರೇ ಧೊಪ್ಪನೆ ಹಾಸಿಗೆಯ ಮೇಲೆ ಬಿದ್ದವರು ಮತ್ತೆ ಏಳಲೇ ಇಲ್ಲ.

ಧೈರ್ಯದಿಂದ ಅವರ ಅಂತ್ಯವಿಧಿಗಳನ್ನು ತೀರಿಸಿದೆ. ಅವರೇ ಸತ್ತನಂತರ ನಾನೇಕೆ ಬದುಕಿರಬೇಕು ಎಂದು ಮನಃಬದ ಭಂದಲ್ಲಿ ಎಣಿಸಿದ್ದೆನಾದರೂ, ಕಿಶೋರನ ಮುಖಕಂಡು ಸುಮ್ಮನಿದ್ದೆ. ಅವರು ಬದುಕಿದ್ದಾಗ, "ನಮ್ಮ ಜೀವನ ಹೀಗಾಯಿತು. ಕಿಶೋರನಿಗಾದರೂ ಚೆನ್ನಾಗಿ ಕಲಿಸಿ, ಡಾಕ್ಟರನನ್ನಾಗಿ ಮಾಡಬೇಕು" ಎನ್ನುತ್ತಿದ್ದರು.

ಅವರ ಆಸೆಯನ್ನು ನೆರವೇರಿಸುವುದ ಕ್ಕಾದರೂ ನಾನು ಬದುಕಿರಬೇಡವೇ?

ಆದರೆ ಇಂದು ಆ ಆಸೆ ನಿರಾಸೆಯಾಗುವ ಸಂಭವ ಬಂದಿದೆ. "ದೇವಾ ನನ್ನ ಕಿಶೋರನಳ್ಳು ಬೇಗನೆ ಗಣಸಡಿಸು" ಎಂದು ದೇವರಲ್ಲಿ ಮೊರೆಯಿಟ್ಟೆಳು. "ಅಮ್ಮಾ ನೀರು" ಎಂದು ಒಳಗಿನಿಂದ ಕಿಶೋರ್ ಕೂಗಿದಾಗ ಕನಸಲೆ ಎದ್ದು ಒಳಗೋಡಿದಳು.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಶೀಘ್ರ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಮೆನೇಜರ್, ನವಯುಗ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊಂಡ್ಲಲ್ ವೆಂಕಟ್ರಾವ್, ಎಲ್. ಐ. ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪುತ್ತೂರು ಮುನ್ಸಿಫ್ ಕೋರ್ಟ್‌ನಲ್ಲಿ

R.L.A. 757/67.
R.E.P. 557/1966. O.S. 63/66.

B. ಚಿದಾನಂದ ರಾವ್..... ಅರ್ಜಿದಾರ.
ಪದ್ಮಯ್ಯ ಗೌಡ, ಮುಂಡೋಡಿ
ತಿಂಮಪ್ಪ ಗೌಡರ ಮಗ, ಸುಳ್ಯ
ತಾಲ್ಲೂಕ ದೇವಚಳ್ಳ ಗ್ರಾಮ.....ಎದ್ರಿ.

ಎದ್ರಿಯ ಸ್ತ್ರೀರಾಸ್ತಿಯನ್ನು ಅರ್ಜಿದಾರನು ಹಾಜ್ರುಪಡಿಸಿದ ಯೇಲಂ ಯಿಸ್ತಿಹಾರ ಪ್ರಕಾರ ಯೇಲಂ ಬಗ್ಗೆ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೂ, ಯೇಲಂ ಸಮಯ ಅರ್ಜಿದಾರನ ಕಡೆಯಿಂದ ದರ್ಖಾಸ್ತಿಗೆ ನಲ್ಲುವರೆ ಪನಿ.ಕರನು ಕೊಡಿಸುವಂತೆ ಕೂಡಾ ಮಾಡಿದ ಅರ್ಜಿಯ ನೋಟೀಸುಗಳ ವ್ಯಾದೆ ತಾ. 7-2-1968ಕ್ಕೆ ಇಟ್ಟಿರುತ್ತದೆ. ಆದ್ರಿಂದ ಎದ್ರಿಯು ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ವ್ಯಾದೆ ದಿನ 11 ಘಂಟೆಗೆ ಈ ಕೋರ್ಟ್ ಮುಂದೆ ಹಾಜ್ರಾಗಿ ಬರಬೆಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಎದ್ರಿಯನ್ನು ತಿವಾಯಿ ಎಂತ ಮಾಡಿ ಈ ಅರ್ಜಿದಾರಿಯನ್ನು ಯುಕ್ತ ಕಂಡಂತೆ ಮುಂದರಿಸಲಾದೀತು— ಎಂತ ಈ ಕೋರ್ಟ್ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd.) B. Ramachandra Rao,
M. A., B.L.,
Pleader for Petitioner.

ತಾರೀಖು 6-1-1968, ಪುತ್ತೂರು, S. K.

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S. C. 316/67.

M. ದಾಧಾಕೃಷ್ಣ ಪೈ.....ವಾದಿ.
ಮತ್ತು
M. ಗಂಗೋಜಿ.....ಪ್ರತಿವಾದಿ

ಮಂಗಳೂರು ತಾಲೂಕು ಉರ್ಲಾಳ ಪೋಲೀಸ್ ಸ್ಟೇಶನ್ ಹೆಡ್ ಕಾನ್‌ಸ್ಟೇಬಲ್ M. ಗಂಗೋಜಿಗೆ—

ನಾವಿರು ನಿಂಮ ಮೇಲೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 8-2-68ಕ್ಕೆ ಇಟ್ಟಿದೆ. ಆ ದಿವ್ಸ ಬೆಳಿಗ್ಗೆ 10 ಗಂಟೆಗೆ ಕೋರ್ಟ್ ಮುಂದೆ ಹಾಜ್ರಾಗಿ ಉಡಾವರಿಸುವಿರೆ ತಪ್ಪಿದಲ್ಲಿ ನಿಂಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲ್ಪಡುವುದು.

(Sd.) D. P. KOTIANKAR,
B. A., LL. B.,
Advocate for Plaintiff

ಉಡುಪಿ, D/— 10-1-68.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೬೮

REPUBLIC DAY SPECIAL 1968

30
ಪೈಸೆ



ರಥ ಚಲಿಸುವ ದಾರಿಯಲ್ಲಿ

ಸಹಸ್ರಾರು ಭಾವುಕರು ರಥದ ಹಗ್ಗಕ್ಕೆ ಕೈನೀಡಿ, ಅದನ್ನು ಶಕ್ತಿಯನ್ನು ತಮ್ಮಲ್ಲಿ ತುಂಬಿಸಿ, ತೇರಿನ ಗಾಲಿಗಳನ್ನು ಮುಂದಕ್ಕೆ ಚಲಿಸುತ್ತಾರೆ. ಚಕ್ರಗಳ ಜತೆಗೆ ರಥ ಕೂಡಾ ಸಾಗುತ್ತದೆ. ಸಾವಿರ ಭುಜಗಳ ಬಲವೇ ರಥವನ್ನು ಮುಂದೂಡುವ ಚೇತನ.

ಅನಂತ ಶಕ್ತಿಯು ಸಂಘಟನೆಯೇ ಬೆಳೆಯುತ್ತಿರುವ ಸಂಸ್ಥೆಯ ಸಂಚಲನ ಶಕ್ತಿ. ಅಸಂಖ್ಯಾತ ಮಂದಿ ನೌಕರರ, ಗಿರಾಕಿಗಳ, ಶೇರುದಾರರ, ಹಿತೈಷಿಗಳ ಸಹಕಾರದ ಹಸ್ತವೇ ಸಿಂಡಿಕೇಟ್ ಬ್ಯಾಂಕನ್ನು ಪ್ರಗತಿಯ ದಾರಿಯಲ್ಲಿ ಚಲಿಸಿದ ಅವ್ಯಕ್ತ ಶಕ್ತಿ. ತೀರಾ ಚಿಕ್ಕ ಗಾತ್ರದಲ್ಲಿ ಅಸ್ತಿತ್ವಕ್ಕೆ ಬಂದ ಈ ಬ್ಯಾಂಕು ತನ್ನ ದೀರ್ಘಕಾಲದ ದಕ್ಷ, ಪ್ರಾಮಾಣಿಕ ಸೇವೆಯಿಂದ ಜನರ ವಿಶ್ವಾಸವನ್ನು ಗಳಿಸಿ, ಪೂರ್ಣ ಚೈತನ್ಯವನ್ನು ಮೈತುಂಬಿಸಿಕೊಂಡು, ಇಂದು ಬ್ರಹ್ಮರಥದ ಗಾತ್ರದಲ್ಲಿ ಬೆಳೆದಿದೆ. ಬೆಳೆದು ಜಡವಾಗಿ ನಿಂತಿಲ್ಲ. ಸಹಸ್ರ ಭುಜಬಲದಿಂದ ಏರು ದಾರಿಯಲ್ಲಿ ದ್ರುತಗತಿಯಿಂದ ಮುನ್ನಡೆಯುತ್ತಿದೆ. ಬಡುಮುಖದ ಆರ್ಥಿಕ ಸೇವೆಯನ್ನು ವ್ಯಾಪಕ ಪ್ರಮಾಣದಲ್ಲಿ ನೀಡಲು ತನ್ನ ಪಯಣವನ್ನು ಮುಂದುವರಿಸುತ್ತಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಫೋನ್ : 226
ಸಂಪುಟ ೪೭
ಸಂಚಿಕೆ ೨೧

ನವಯುಗ

ಸ್ಥಾಪಕರು:
ದಿ ಎ. ಬಿ. ಶೆಟ್ಟರು

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ - ಸಂಪಾದಕ

ಪ್ರಜಾರಾಜ್ಯ ವಿಶೇಷಾಂಕ - ೧೯೬೮

ಹೃದಯವೀಣೆ ಐಕ್ಯಗಾನ ಮಿಡಿಯಬೇಕು

ರಾಷ್ಟ್ರೀಯ ಪರ್ವದಿನ, ಪ್ರಜಾಪ್ರಭುತ್ವದಿನ, ಮತ್ತೊಮ್ಮೆ ಬಂದಿದೆ; ಸಂವಿಧಾನದಲ್ಲಿಯೋ ದುಃಖದಲ್ಲಿಯೋ ತನ್ನ ಮರೆಯ ಬೇಡಿ ಎಂದು ಕರೆ ನೀಡಿದೆ.

ಪರದಾಸ್ಯ ಶೃಂಖಲೆಯಿಂದ ಬಂಧಮುಕ್ತವಾಗಿ ಜನತೆಯೇ ಜನಾರ್ಧನನೆಂದು ಘೋಷಿಸಿದ ದಿನ, ಜನವರಿ ೨೬. ನಮ್ಮನ್ನು ನಾವೇ ನಮಗೆ ಬೇಕಾದಂತೆ ಆಳಿಕೊಳ್ಳುವ ದೀಕ್ಷೆ ತೊಟ್ಟ ಮಹಾದಿನ, ಜನವರಿ ೨೬.

ನಾವಿಂದು ಸ್ವತಂತ್ರರು ಪ್ರಜಾಸತ್ತೆಯ ಶೈವಾರಿಗಳು ನಮ್ಮನ್ನು ಉಳಿಸಿ ಬೆಳೆಸುವ ಸರ್ ಸಾಹಸಿಗಳು; ಜತೆಗೆ ನಮ್ಮನ್ನು ಸರ್ವನಾಶದತ್ತ ಮುಂದೂಡುವ ದುಸ್ಸಾಹಸಿಗಳೂ.

ನಾವು ದೇವತ್ವದ ವೇದಿಯಲ್ಲಿ ಕುಣಿಯುವ ಮಾನವರಾಗಬೇಕೆ? ಅಥವಾ ದೇವತ್ವದಿಂದ ದೂರವುಳಿದು ಮಾನವತೆಯನ್ನು ಮೆಟ್ಟಿಸಿಲ್ಲುವ ದಾನವರಾಗಬೇಕೆ? ಈ ಪ್ರಶ್ನೆಯನ್ನು ಉತ್ತರಿಸ ಬೇಕಾದವರು ನಾವು; ಪರದೇಶೀಯರಲ್ಲ.

ದಟ್ಟದರಿದ್ರರಾಗಿದ್ದು, ಸುಖ ಸಾಲಭ್ಯಗಳಿಂದ ವಂಚಿತರಾಗಿದ್ದ ನಾವಿಂದು ಸಮೃದ್ಧಿಯ ದಾರಿಯಲ್ಲಿ ನಡೆಯುತಿದ್ದೇವೆ. ನಮ್ಮ ವ್ಯಕ್ತಿಗತ ಆದಾಯ, ರಾಷ್ಟ್ರೀಯ ವರಮಾನ, ಅವಶ್ಯಕತೆಗಳು, ಇಷ್ಟಾರ್ಥ ಸಿದ್ಧಿಯ ಪ್ರಮಾಣ ಎಲ್ಲವೂ ಏರಿವೆ. ಬದಲಾಗುತ್ತಿರುವ ಜಗತ್ತಿನಲ್ಲಿ ಹಾವೂ ಸಡಕ್ಕರಾಗುವ ಹೇರಾಸೆಯನ್ನು ನಾವೂ ಇಟ್ಟುಕೊಂಡಿದ್ದೇವೆ. ಇದನ್ನು ಸಾಧಿಸುವಲ್ಲಿ ಯಶಗಳಿಸುತಿದ್ದೇವೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯೇನೋ ಮುಗ್ಗರಿಸಿತು.-ದೇಶದಲ್ಲಿ ಬಡೆದ ಬಂಗಾಲ, ಶತ್ರುಗಳೊಡನ ಸಾದ ಹೊಡೆದಾಟಗಳಿಂದ ಆರ್ಥಿಕ— ಆನ್ನಿಕ ಕ್ಷೇತ್ರಗಳು ಕುಂಠಿತವಾದುವು—ಆದರೂ ಹಿಂಜರಿಯದ ನಾವು ನಮ್ಮ ಗತಿಯನ್ನು ತುಸು ಮುಂದಗೂಳಿಸುತ್ತ ಮುಂದುವರಿಯುತಿದ್ದೇವೆ — ಈ ವರ್ಷ ಪ್ರಕೃತಿಯು ನಮ್ಮ ಮೇಲೆ ಕರುಣೆ ತೋರಿದೆ—ಪರಿಣಾಮ ಮುಂದಿನ ಕೆಲವೇ ವರ್ಷಗಳಲ್ಲಿ ಪೆಟ್ಟಾಗಾಗುವ ಆಶಯ ನಮ್ಮದು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ದೇಶದ ರಾಜಕೀಯ ನಕ್ಷೆ ಬದಲಾಗಿದೆ—ಕೆಲವೆಡೆ ಸ್ಥಾಪಿತವಾಗಿದ್ದ ಸಂಯುಕ್ತ ರಂಗದ ಹಲವು ಸಮಗಾರರ —ಸರಕಾರ ಗೊತ್ತು—ಗುರಿಯಿಲ್ಲದೆ ಅರಾಜಕತೆಗೆಡೆಮಾಡಿ ಕೊಟ್ಟಿದೆ. ಪಶ್ಚಿಮ ಬಂಗಾಳದ ಹಗರಣ ಅಜಯ್ ಸಂಪುಟದ ಪದಚ್ಯುತಿಯಿಂದ ಬೇರೊಂದು ರೂಪಕ್ಕೆ ಪರಿವರ್ತನೆಯಾಗಿದೆ. ಡಾ। ಪಿ. ಸಿ. ಘೋಷರು ತಪ್ಪ ಅಲ್ಪ ಅನುಹೂಯಿ ಮತ್ತು ಕಾಂಗ್ರೆಸ್ಸಿನ ಬೆಂಬಲದಿಂದ ಸರಕಾರ ರಚಿಸಿ ಕೆಚ್ಚೆದೆ ತೋರಿಸಿದರೂ ಈಗ ಕಾಂಗ್ರೆಸ್ ಪಕ್ಷದಲ್ಲೇ ಭಿನ್ನಮತ ಕಾಣಿಸಿದೆ. ಘೋಷ್ ಸಂಪುಟದಲ್ಲಿ ವಿಧಾನ ಸಭೆಯನ್ನೂ ವಿಶ್ವಾಸ ವ್ಯಕ್ತ ಪಡಿಸದೆ ಇರುವಾಗ, ರಾಜ್ಯಪಾಲ ಧರ್ಮವೀರರ ಕ್ರಮ ಅಜಯ್ ರಂಗದ ಕಟು ಟೀಕೆಗೆ ಗುರಿಯಾಗಿದೆ; ಇದೇ ಪರಿಸ್ಥಿತಿ ವಿಕೋಪಕ್ಕೇರಿದರೆ, ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ವಿಡದವರದೇ ಕೈ ಮೇಲಾಗುತ್ತದೆ.

ಉತ್ತರಪ್ರದೇಶ-ಬಿಹಾರಗಳಲ್ಲಿ ಜ್ವಾಲೆ ಏಳ ತೊಡಗಿದೆ. ಪಂಜಾಬು, ಮಧ್ಯಪ್ರದೇಶಗಳಲ್ಲಿ ಹೊಸ ಸಂಪುಟಗಳು ಅಧಿಕಾರ ಪಡೆದಿವೆ. ಒಡಿಸ್ಸಾ-ಕೇರಳಗಳು ಒಂದು ದಾರಿಯಲ್ಲಿ ಮುನ್ನಡೆದಿವೆ— ವಿದ್ರುಟ ಅನಭಿಷಿಕ್ತ ದೊರೆಯಂತೆಯೇ ಅಧಿಕಾರ ನಿರ್ವಹಿಸುತ್ತಿದೆ. ಕಾಂಗ್ರೆಸ್ ಸರಕಾರಗಳೂ ನಮ್ಮ ದಾರಿಯಲ್ಲಿ ತಾವೇ ನಡೆಯುತ್ತಿವೆ.

ಒಟ್ಟಿನಲ್ಲಿ, ರಾಜ್ಯಕೀಯ ರಂಗದಲ್ಲಿ ಪ್ರಜಾಪ್ರಭುತ್ವದ ಚಾಕಟ್ಟಿನೊಳಗೇನೇ ಉಳಿಯಲು ಭಗೀರಥ ಪ್ರಯತ್ನ ನಡೆಯುತ್ತಿದೆ— ಇದು ಅತೃಪ್ತಿಕರವೆನ್ನುವಂತಿಲ್ಲ.

ರಾಜ್ಯಕೀಯ ಸ್ವಾರ್ಥಲಾಲಸಿಗಳಿಂದಲೇ ರಾಜ್ಯಕೀಯ ಕೋಲಾಹಲವೆದ್ದರೆ, ಸಂಕುಚಿತ ಭಾವನೆಯ ಸ್ವಾರ್ಥಿಗಳು ಭಾಷೆ—ಪ್ರಾಂತಗಳ ಕೋಲಾಹಲವೆಬ್ಬಿಸುತಿದ್ದಾರೆ. ಮಹಾರಾಷ್ಟ್ರ—ಕರ್ನಾಟಕ—ಕೇರಳ ಸೀಮೆಯ ವಿವಾದದ ಮೇಲೆ ಮಹಾಜನ ಆಯೋಗದ ವರದಿಯ ಬಗ್ಗೆ ಒಮ್ಮತವಾಗಿಲ್ಲ, ಆಗುವ ಲಕ್ಷಣಗಳೂ ಕಾಣುವುದಿಲ್ಲ. ಅಂತರಾಜ್ಯೀಯ ಸಂಬಂಧಗಳು ದಿನದಿನಕ್ಕೂ ಶಿಥಿಲವಾಗುತ್ತ ಇದೆ— ಇದಕ್ಕೆಲ್ಲ ಕೇಂದ್ರದಲ್ಲಿ ಸರ್ವಾರ್ಥ, ಧೈರ್ಯಸ್ಥಿತ ಸರಕಾರದ ಅಭಾವವೇ ಕಾರಣವೆಂದು ಕೆಲವರ ಅಂಬೋಣ.

ಪಾರ್ಲಿಮೆಂಟು ಭಾಷಾತಿದ್ದುಪಡಿ ಮಸೂದೆಯನ್ನು ಸಹುಮತದಿಂದ ಮಂಜೂರು ಮಾಡಿದೆ. ದೇಶದಲ್ಲಿ ಬೇಕಾದಷ್ಟು ಗೊಂದಲ—ಹಿಂಸಾಚಾರಗಳಿಗೆ ಕಾರಣವಾದ ಈ ಮಸೂದೆಯು ಉತ್ತರ ದಕ್ಷಿಣಗಳೆಂಬ ಬೇದ ಭಾವನೆಯನ್ನು ಮತ್ತಷ್ಟು ಹೆಚ್ಚಿಸಿದೆ. ಉತ್ತರದಲ್ಲಿ ಇಂಗ್ಲಿಷ್ ವಿರೋಧೀ ಚಳವಳಿಯು ಉಗ್ರ ಹಿಂಸಾ ರೂಪತಾಳಿದರೆ, ದಕ್ಷಿಣದಲ್ಲಿ ಹಿಂದೀ ವಿರೋಧೀ ಚಳವಳಿ ಹಿಂಸಾಮಾರ್ಗದಲ್ಲೇ ಮುಂದುವರಿಯುತ್ತಿದೆ. ಇವುಗಳ ಬೆಲೆ ತೆರಬೇಕಾದವರು ನಾವೇ ಎಂಬುದು ಪ್ರಶ್ನೆ. ವಿಶೇಷ ನಮ್ಮಲ್ಲಿಲ್ಲದಿರುವುದು ಶೋಚನೀಯ. ಸರಕಾರಿ ಸೊತ್ತುಗಳಿಗೆ ನಷ್ಟವುಂಟು ಮಾಡಿದರೆ, ಅದನ್ನು ತುಂಬಿಕೊಡ ಬೇಕಾದವರು ಯಾರು? ನಾವೇ ಕರ ತೆತ್ತು ತಾನೆ? ಖಾಸಗಿ ಸೊತ್ತುಗಳ ನಷ್ಟವೆಂದರೆ ರಾಷ್ಟ್ರೀಯ ನಷ್ಟ ತಾನೆ? ಉದ್ರೇಕವನ್ನು ದೂರವಿಟ್ಟು ಪ್ರಾಸಂಗಿಕ ವ್ಯವಧಾನವನ್ನು ಬಳಸಿ ಕಾರ್ಯಶೀಲರಾಗುವ ಪ್ರವೃತ್ತಿ ನಮ್ಮಲ್ಲಿ ಬೆಳೆದು ಬರಬೇಕು. ಭಾಷಾ ಮಸೂದೆಯಲ್ಲಿ ಇಂಗ್ಲಿಷ್—ಹಿಂದಿ ಎರಡೂ ಭಾಷೆಗಳ ಬಳಕೆಗೆ ಅವಕಾಶ ಮಾಡಿ ಕೊಟ್ಟಿರುವಾಗ ಆ ಬಗ್ಗೆ ಚಳುವಳಿ ಹೂಡುವುದೆಂದರೆ, ಜನಶಕ್ತಿಯ ಸಂಪೂರ್ಣ ಅಪವ್ಯಯವಲ್ಲದೆ ಮತ್ತೇನು?

ಅಸಮ್ಮತಿಯನ್ನು ವ್ಯಕ್ತ ಪಡಿಸುವ ಅಧಿಕಾರ ಪ್ರಜಾಪ್ರಭುತ್ವದಲ್ಲಿ ಜನತೆಗಿದೆ. ಆದರೆ, ಶಾಂತಹ ಅಸಮ್ಮತಿ ಅಹಿಂಸಾತ್ಮಕವಾಗಿ ನಡೆಯಬೇಕೇ ಹೊರತು ಹಿಂಸಾಂತ್ಮಕವಾಗಿಯಲ್ಲ. ರಕ್ತರಂಜಿತ ಮಾರ್ಗವನ್ನು ರಕ್ತ ಸೇಚನೆಯಿಂದಲೇ ಪರಿಶುದ್ಧಗೊಳಿಸುವುದು ಸಾಧ್ಯವಿಲ್ಲ. ಕಟ್ಟಿಗೆಯ ನ್ನು ಹಾಕಿ ಬೆಂಕಿಯನ್ನು ತಣಿಸಲು ಶಕ್ಯವಿಲ್ಲ. ಹಿಂಸಾತ್ಮಕ ಚಳುವಳಿಗೆ ಉತ್ತೇಜನ ಕೊಡುವುದೆಂದರೆ, ದುಷ್ಟರ ಬಗ್ಗೆ ಅನಚಿತ ಅನುಕಂಪ ತೋರಿಸಿದಂತೆ—ಇದರಿಂದ ಸಮಾಜ ವ್ಯವಸ್ಥೆಯೇ ಶಿಥಿಲವಾಗುತ್ತದೆ— ಪ್ರಜಾಪ್ರಭುತ್ವ ಅರಾಜಕತೆಯಲ್ಲೋ, ಸರ್ವಾಧಿಕಾರದಲ್ಲೋ ಪರ್ಯವಸಾನ ಹೊಂದುತ್ತದೆ. ಇದಕ್ಕೆ ನಾವು ಅವಕಾಶ ಕೊಡಬಾರದು. ನಾವೆಲ್ಲರೂ "ಭಾರತೀಯತೆ"ಯನ್ನು ಮೈಗೂಡಿಸಿಕೊಂಡು ನಡೆದರೆ ಮಾತ್ರ ಕೂಪದಿಂದ ಮೇಲೇಳಬಹುದು.

ನಮ್ಮ ಪ್ರಮುಖ ಸಮಸ್ಯೆಗಳಲ್ಲಿ ಅತಿ ಸಂತಾನವೂ ಒಂದು. ಆರ್ಥಿಕ ಕುಸಿತ, ಅಶಾಂತಿಗಳಿಗೆ ದುಡಿಯ ಬಲ್ಲವರಿಗೆ ಉದ್ಯೋಗಾವಕಾಶದ ಅಭಾವವೇ ಕಾರಣ. ಮಿತ ಸಂತಾನ ಯೋಜನೆಯನ್ನು ಸರಕಾರ ಜನಪ್ರಿಯಗೊಳಿಸುತ್ತಿದೆ. ಜೀವ-ಆರೋಗ್ಯ (ಶಾರೀರಿಕ—ಮಾನಸಿಕ)ಗಳಿಗೆ ಧಾಕ್ಕೆತಟ್ಟದಂತೆ ಕುಟುಂಬ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ನಿಜಕ್ಕೂ ಪ್ರಶ್ನೆಯೇ.

ನಮ್ಮ ಮುಂದಿರುವ ಪ್ರಶ್ನೆಗಳನ್ನು ಗಮನಿಸುತ್ತ ಹೋದರೆ ಚೇಡರ ಬಲೆಯಾಗುತ್ತದೆ. ಆದರೂ ಅದರಿಂದ ಹೊರಬೀಳಲು ತ್ರಿಕರಣ ಪೂರ್ವಕ ಪ್ರಯತ್ನಿಸಿದರೆ, ನಾವು ನಿಜಕ್ಕೂ ಸಿದ್ಧಿ ಪಡೆಯುತ್ತೇವೆ. "ಮಗು ನಡೆಯಲು ಕಲಿಯುವಾಗ ಬಹಳ ಪ್ರಯತ್ನದಿಂದಲೇ ಕಲಿಯುತ್ತದೆ. ಅದು ದೊಡ್ಡದಾದ ಮೇಲೆ ತಾನು ನಡೆಯುತ್ತೇನೆಂಬ ಕಲ್ಪನೆಯೇ ಇಲ್ಲದಂತೆ ಸಹಜವಾಗಿ ನಡೆಯುತ್ತದೆ"—ನಮ್ಮಲ್ಲೂ ಮಗುವಿನಂತೆ ನಡೆಯಲೇಬೇಕೆಂಬ ಇಚ್ಛೆ ಹೃದಯದಾಳದಿಂದ ಮೂಡಿ ಬಂದು ಅದು ಕಾರ್ಯಗತವಾದರೆ— ಸಮಸ್ಯಾ ಜಾಲದಿಂದ ಬಿಡುಗಡೆ ಹೊಂದಿಯೇ ತೀರುತ್ತೇವೆ.

ಹೃದಯ ವೀಣೆ ಐಕ್ಯಗಾನ ಮಿಡಿಯಬೇಕು—ನಾಲಿಗೆಯಲ್ಲ.

ನಿವೇದನೆ

ಅಕ್ಷರಿಕ್ಷೆಯವಾಗಿ ವಿಶೇಷ ಸಂಚಿಕೆಯ ಗಾತ್ರ ಹಿರಿದಾಯಿತು—ಅದರೂ ಕೆಲವು ಉತ್ತಮ ಲೇಖನಗಳು ಬೆಳಕಿಗೆ ಬಾರದೆ ಉಳಿದುವು. ಕೊನೆಯ ಗಳಿಗೆಯಲ್ಲಿ ಅವಸರ-ಅವಸರವಾಗಿಯೇ ಮುಂದುವರಿಯುವುದು ಅನಿವಾರ್ಯವಾಯಿತು. ಹಾಗಿದ್ದರೂ ಹಿಂದಿನಂತೆಯೇ 'ವಿಶೇಷ ಸಂಚಿಕೆ' ಯ ಉನ್ನತ ಮಟ್ಟವನ್ನು ಉಳಿಸಿಕೊಳ್ಳುವಲ್ಲಿ ನಾವು ಸಮರ್ಥರಾಗಿದ್ದೇವೆಂದು ಹೇಳಬಹುದು.

ಈ ಸಂಚಿಕೆಯ ತಯಾರಿಯಲ್ಲಿ ನೆರವಾದ ಲೇಖಕ ಬಂಧುಗಳು, ಜಾಹಿರಾತುದಾರರು ಮತ್ತಿತರ ಅಭಿಮಾನಿಗಳಿಗೆ 'ನವಯುಗ'ವು ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಮುಂದೆಯೂ ಅವರ ಸಹಕಾರವನ್ನು ಹಾರೈಸುತ್ತದೆ.

ನಿಮಗೆಲ್ಲರಿಗೂ ಪ್ರಜಾಪ್ರಭುತ್ವದಿನದ ಶುಭಾಶಯಗಳು.

(ಮೂಡಬಿದ್ರೆಯ ಪುಟಕ್ಕೆ)

ದೂರದೃಷ್ಟಿಯ, ವ್ಯವಹಾರ ಕುಶಲರಾದ ವಿಜಯಾ ಬ್ಯಾಂಕಿನ ಚೆಯರ್‌ಮೇನ್

ಶ್ರೀ ಯಂ. ಸುಂದರ್‌ರಾಮ್ ಶೆಟ್ಟಿ

With best compliments from:

HOTEL MAYUR

The Most Modern & Uptodate

Boarding Lodging & Restaurant

Housed in a Newly constructed multi storied palacious building

"SHRI SHAKTI NILAYA" COEN ROAD, HUBLI.

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ವ್ಯಾಪಾರಿ ಮಧ್ಯವರ್ತಿ ಕೇಂದ್ರದಲ್ಲಿ ಭವ್ಯ ಅತ್ಯಾಧುನಿಕ ನಾಲ್ಕು ಅಂತಸ್ತಿನ ನೂತನ ಕಟ್ಟಡದಲ್ಲಿ
ಸುಸಜ್ಜಿತ ವ್ಯವಸ್ಥೆಯೊಂದಿಗೆ ಸ್ವಾಗತಿಸುವ

ಹೋಟೆಲ್ ಮಯೂರ

ಊಟ, ವಸತಿ ಮತ್ತು ಉಪಾಹಾರ ಗೃಹ

"ಶ್ರೀ ಶಕ್ತಿ ನಿಲಯ" ಕೊಯಿನ್ ರೋಡ್, ಹುಬ್ಬಳ್ಳಿ.

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ಮಿಲಿಯಾಂತರ ಜನರ ಮೆಚ್ಚಿಗೆಗೆ ಪಾತ್ರವಾದ

30 ಪ್ರಖ್ಯಾತ **30**

ನಂಬ್ರ 'ಮೂವತ್ತು' ಮಾರ್ಕಿನ

ಬೀಡಿಗಳು

ತಯಾರಕರು:

ದಿ ಭಾರತ್ ಬೀಡಿ ವರ್ಕ್ಸ್ (ರಿ.), ಕಾರ್ಕಳ.

ಪೌರಕೀಯರಿಂದ ರಸ ಹಿಂಡಿದ ಕಬ್ಬಿನಂತೆ ಬಡವಾಗಿ ನಮ್ಮ ಕೈಗೆ ಬಂದ ಸ್ವತಂತ್ರ ಭಾರತದ ಪ್ರಧಾನಿ ಪಟ್ಟವನ್ನು ಸ್ವೀಕರಿಸಿ ಪಂಚಶೀಲ, ಪಂಚವಾರ್ಷಿಕ ಯೋಜನೆ ಮೊದಲಾದ ಯೋಚನೆ, ಯೋಜನೆಗಳಿಂದ ಭಾರತದ ಪುನರುದ್ಧಾರಕ್ಕೆ ಶ್ರಮಿಸಿ, "ಜಗತ್ತಿನ ಶಾಂತಿ ಸಹ ಬಾಳ್ವೆಗಳಿಗಾಗಿ ಭಾರತವು ನಿರಂತರ ಶ್ರಮಿಸುತ್ತಿದೆ' ಎಂದು ಎತ್ತಿ ತೋರಿಸಿದ ಪಂಡಿತ ಜವಾಹರ ಲಾಲ ನೆಹರೂ ಅವರು ಒಮ್ಮಿಂದೊಮ್ಮೆಗೆ ಕೊನೆಯುಸಿರೆಳೆದಾಗ ಎಲ್ಲರಲ್ಲೂ ಎದ್ದ ಪ್ರಶ್ನೆಯೊಂದೇ...."ಇನ್ನು ಯಾರು?"

ಮೂರ್ತಿ ಸಣ್ಣದಾದರೂ....

ವಿಶ್ವದ ಕುತೂಹಲವನ್ನೇ ಕೆರಳಿಸಿದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಂದೆ ಬಂದು—

"ನಾನು!" ಎಂದವರು ಶಾಸ್ತ್ರೀಜಿ. ಇಂಥ ಸಹ ಉನ್ನತ ಪದವಿಯೊಂದನ್ನು ಅವರು ಬಯಸಿಲ್ಲದಾದರೂ, ಸಮಯ ಸನ್ನಿವೇಶಗಳು ಅವರ ಯೋಗ್ಯತೆಯನ್ನು ತಿಳಿದುಕೊಂಡು ಈ ಹೊಣೆಗಾರಿಕೆಯನ್ನು ಅವರ ಭುಜಗಳ ಮೇಲೆ ಹೊರಿಸಿದುವು. ಮೂರ್ತಿ ಸಣ್ಣದು ಅದರ ಕರ್ತೃತ್ವದ ಕಲ್ಪನೆ, ಕಾರ್ಯದಕ್ಷತೆಯ ಅರಿವು ಜನ ಸಾಮಾನ್ಯರಿಗೆ ಅರುವರಿಗೆ ಇದ್ದುದೂ ಸಣ್ಣ ರೂಪದಲ್ಲೆ. ಅವರು ಅಧಿಕಾರದಲ್ಲಿ ಉಳಿದುದೂ ಸಣ್ಣ ಅವಧಿಯೇ. ಆದರೆ ಆ ಅವಧಿಯಲ್ಲಿ ಅವರು ಸಾಧಿಸಿದ ಕೆಲಸ, ಆ ಕೆಲಸದ ಕೀರ್ತಿ, ಅದರಿಂದ ಅವರಿಗೆ ದೊರಕಿದ ಅಮರತ್ವ ಮಾತ್ರ ಬಹು ದೊಡ್ಡದು! ಆಧುನಿಕ ಭಾರತದ ಭವ್ಯ ಇತಿಹಾಸದಲ್ಲಿ ಅವರಿಗೆ ಸಲ್ಲಬೇಕಾದ ಸ್ಥಾನ ಜಗತ್ತಿನ ಶಾಂತಿಯ ಹೋರಾಟದ ಚರಿತ್ರೆಯಲ್ಲಿ ಅವರದಾಗಿ ಉಳಿಯುವ ಮಾನ ಇವುಗಳು ಎಂದೆಂದಿಗೂ ದೊಡ್ಡದಾಗಿಯೇ ಇರುವುವು.

ಸರಳತೆ-ನಿಸ್ವಾರ್ಥ ಮತ್ತು ತ್ಯಾಗ

ಕೆಲವರು ಹುಟ್ಟಿನಿಂದ ಮಹಾತ್ಮರು; ಅವರ ಕ್ರಿಯಾ ಶಕ್ತಿ ಪವಾದದಂತೆ. ಅವರೆ ಇನ್ನು ಕೆಲವರು ಶ್ರೀಸಾಮಾನ್ಯನಾಗಿಯೇ ಜನ್ಮವೆತ್ತಿ ತನ್ನ ವ್ಯಕ್ತಿತ್ವದ ಶ್ರೇಷ್ಠತೆಯಿಂದ ಅಮರರಾಗುವುದುಂಟು. ಇಂತವರಲ್ಲಿ ಶಾಸ್ತ್ರಿಯವರು ಅಗ್ರಗಣ್ಯರು! ಅವರ ಸರಳತೆ ನಿಸ್ವಾರ್ಥ ಬುದ್ಧಿ, ತ್ಯಾಗ, ತಾಳ್ಮೆ ಮತ್ತು ದೃಢತೆಗಳು ಅನುಕರಣೀಯವಾದುವುಗಳು! ಯಾವುದೇ ಕಠಿಣ ಪ್ರಸಂಗ ಎದುರಾಗಲೀ ಅವನ್ನು ಅತ್ಯಂತ ಸಮಾಧಾನದಿಂದ ವಿವೇಚಿಸಿ ತಾಳ್ಮೆಯಿಂದಲೇ ಅವುಗಳನ್ನು ಜಯಿಸುವ ಕಲೆ ಅವರಿಗೆ ಕರಗತವಾಗಿತ್ತು. ಎಂಥ ವಿವಾದಗಳ ಶೀರ್ಷಾಸನಗಳಲ್ಲಿಯೂ ಅವರು ಎತ್ತಿದ ಕೈ. ಪ್ರಧಾನಿಯಾಗುವುದಕ್ಕೆ ಮೊದಲು ಗೃಹ ಮಂತ್ರಿಯಾಗಿ ಅವರು ತೋರಿಸಿದ ಕಾರ್ಯ ಸಾಧನೆಯೇ ನೆಹರೂರವರ ಮನಸ್ಸನ್ನು ಸೂರೆಗೊಂಡಿತ್ತು. ಕಾನೂರಾಜ ಸೂತ್ರದಂತೆ ಅಧಿಕಾರ ಬಿಟ್ಟು ಶಾಸ್ತ್ರೀಜಿಯವರು ಹೊರನಡೆದಾಗ ತನ್ನ ಬಲಗೈಯನ್ನು ಕಳಕೊಂಡಂತಾಯಿತವರಿಗೆ ಅದಕ್ಕಾಗಿಯೇ ಅವರನ್ನು ತಿರುಗಿ ಶಾಖಾದಿತ ಮಂತ್ರಿಯನ್ನಾಗಿ ಅಂದರೆ ತನ್ನ ವೈಗತ ಸಹಾಯಕನನ್ನಾಗಿ ನೇಮಿಸಿಕೊಂಡರವರು! ಇದರಿಂದಲೇ ನಿಚಾರ ಶೀಲರಾದ ರಾಜಕೀಯ ತಜ್ಞರಿಗೆ ನೆಹರೂರವರು

ಶ್ರೀ ಮಜಿಬೈಲು ಭಾಸ್ಕರ ಭಂಡಾರಿ

ಶಾಂತಿ ಸಾಧನೆಯಲ್ಲೇ ಕೊನೆಯುಸಿರು

ಸ್ವತಂತ್ರ ಭಾರತದ ಪ್ರಧಾನಿಯೂದ ಕಿರಿಯ ಮೂರ್ತಿ ಲಾಲ ಬಹದ್ದೂರ ಶಾಸ್ತ್ರಿಯವರು ವಿಶ್ವವ್ಯಕ್ತಿಯೂಗಿ ಪರಿಣಮಿಸಿದ ಕತೆ ಕುತೂಹಲಕಾರಕ; ಅವರ ಸರಳ ನಮಗಿಂದು ಸ್ಫೂರ್ತಿದಾಯಕ. ಕುಸುಮ ಕೋಮಲತೆ - ವಜ್ರಕಠೋರತೆಗೊಂದು ಉತ್ತಮ ಪ್ರದರ್ಶನವೆನಿಸಿದ ಶಾಸ್ತ್ರಿಯವರಲ್ಲಿದ್ದ ಧೀಮಂತಿಕೆ ಇಂದು ಭಾರತಕ್ಕೆ ಬೇಕಾಗಿದೆ.

ಶಾಸ್ತ್ರಿಯವರಲ್ಲಿ ತನ್ನ ಉತ್ತರಾಧಿಕಾರಿಯಾಗಲು ಬೇಕಾದ ಗುಣಗಳನ್ನು ಕಂಡುಕೊಂಡಿದ್ದರೆಂಬುದು ಸ್ಪಷ್ಟವಾಗಿತ್ತು! ಪ್ರಧಾನಿಯೂದ ಬಳಿಕಂತೂ ಯಾರೂ ಕನಸಿನಲ್ಲೂ ನಿರೀಕ್ಷಿಸದ ಕ್ರಿಯಾಶೀಲತೆಯಿಂದ ಅವರು ಜನ-ಭೇರಿ ಹೊಡೆದರು.!

ಹೂವಿಗಿಂತ ಮೃದು.... ...ಕಲ್ಲಿಗಿಂತ ಕಠಿಣ

ಹೊರ ನೋಟದಿಂದಲೇ ಶಾಸ್ತ್ರೀಜಿಯವರನ್ನು ಪ್ರೀತಿಕರುಣೆಗಳ ಶಾಂತ ಮೂರ್ತಿ ಎಂದು ಹೇಳಬಹುದಿತ್ತು. ಆದರೆ ತಕ್ಕಂತೆಯೇ ಅವರ ಮನಸ್ಸು ಹೂವಿಗಿಂತ ಮೃದುವಾಗಿತ್ತು. ಯಾವಾಗಲೂ ಅವರ ಬಡಕಲು ಗಲ್ಲದಲ್ಲಿ ವಿನುಗುವ ಮುಗ್ಧ ಮಗುವಿನ ನಗೆಯು ಗಾಂಧೀಜಿಯವರ ನಗುವನ್ನು ನೆನಪು ತರುವಂತಿತ್ತು. ತೂಗಿದ ಮಾತುಗಾರಿಕೆ ನಿರಾಡಂಬರ ಜೀವನ, ಬಡತನದ ಮಹಾಕುಲುಮೆಯಲ್ಲಿ ಬೆಂದು ಪರಿಶುದ್ಧವಾದ ಪುಕ್ಕಳಿ ಚಿನ್ನದಂತಿರುವ ಅವರ ವ್ಯಕ್ತಿತ್ವ ಅವರಲ್ಲಿ ಕೋಮಲತೆಯ ಆಜ್ಞಾಶಕ್ತಿಯಿತ್ತು. ಹಾಗೆಂದು ಮಹಾಶ್ಚರಲ್ಲಿರಬೇಕಾದ ಕಲ್ಲಿಗಿಂತ ಕಠಿಣವಾದ ದೃಢತೆಯೂ ಅವರಲ್ಲಿತ್ತೆಂಬುದನ್ನು ಜಗತ್ತು ತಿಳಿಯುವುದಕ್ಕೆ ಅವಕಾಶವೂ ದೊರೆತುದುಂಟು ಯಾವುದೇ ನಿರ್ಧಾರವನ್ನಾದರೂ ಒಮ್ಮೆ ಕೈಗೊಂಡರೆ ಸರಿ! ಮತ್ತೆ ಅದರಿಂದ ಕದಲುವಂತಿಲ್ಲ. ಪಾಕಿಸ್ತಾನದ ಆಕ್ರಮಣದ ವೇಳೆ ಅವರು ತೋರಿದ ಧೈರ್ಯ, ಸ್ಥೈರ್ಯ, ಜನರ ಮೇಲೆ ಬೀರಿದ ಪ್ರಭಾವ ಯುಗಯುಗಾಂತರಗಳ ಜನಕ ವಾರೆಯದಿರುವಂಥವುಗಳಾಗಿವೆ.

ಆದರ್ಶ ಪುರುಷ

ಭವ್ಯ ಭಾರತದಲ್ಲಿ ಬಾಳಿ ಬೆಳಗಿದ ಅನೇಕ ಆದರ್ಶ ಪುರ ಪುರಲ್ಲಿಶಾಸ್ತ್ರೀಜೀಯವರು ವ್ಯಾಯಶಃ ಅತ್ಯಂತ ಶ್ರೇಷ್ಠ ತರದವರಲ್ಲಿ ರಾರಾಜಿಸುತ್ತಾರೆ. ಅವರ ಜೀವನ ಬಾಲ್ಯದಿಂದಲೇ ಆದರ್ಶ ಜೀವನ ಸಾಹಸೀ ಜೀವನವೂ ಹೌದು. ವಿದ್ಯಾರ್ಥಿಯಾಗಿದ್ದಾಗನದೀ ದಾಟಲು ಹಣವಿಲ್ಲದೆ, ಈಜಿ ದಾಟಿದ ಛಲ ಅವರದು. ಅವನ್ನು ಗಡೆ ಜನಕ ಉಳಿಸಿಕೊಂಡ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಕೈರೋದ ಶೃಂಗ ಸಮ್ಮೇಳನಕ್ಕೆ ಹೋದಾಗ ಸ್ವತಃ ತನ್ನ ಕೈಯಿಂದಲೇ ಮುಳ್ಳು ಹೌತೆಯ ಚಟ್ಟಿಯನ್ನು ಮೂಡಿಕೊಡುತಂತೆ. ಭಾರತದಂತಹ ವಿಶಾಲ ರಾಷ್ಟ್ರದ ಪ್ರಧಾನಿಯಾಗಿದ್ದರೂ ಕೂಡಾ ತನ್ನದೇ ಆದ ಒಂದು ಮನೆ ಅವರಿಗಿರಲಿಲ್ಲವೆಂದರೆ ಯಾರು ತಾನೇ ನಂಬಬಹುದು? ಒಮ್ಮೆ ಮಂತ್ರಿಯಾದರೆ ಹತ್ತು ತಲೆಮಾರುಗಳ ತನಕ ಬೇಕಾಗುವ ಆಸ್ತಿಗಳಿಸಲು ಯತ್ನಿಸುವ ಈಗಿನ ರಾಜಕೀಯ ಧುರೀಣರಿಗಂತೂ ಅವರೊಂದು ಪಾಠವಾಗಿದ್ದಾರೆ. ಮುಂದಿನ ಜನಾಂಗವಾದ ಇಂದಿನ ಮಕ್ಕಳಿಗೂ ಅವರು ಆದರ್ಶಪುರ ಪರಂಗುವುದರಲ್ಲಿ ಸಂಶಯವಿಲ್ಲ. ರಾಷ್ಟ್ರದ ಭದ್ರತೆ ಮತ್ತು ಸ್ಥಾವಲಂಬನೆಗಾಗಿ 'ಜೈ ಜವಾನ್! ಜೈ ಕಿಸಾನ್' ಎಂಬ ಘೋಷಣೆಯನ್ನು ಎಬ್ಬಿಸಿದ ಅವರು ದೇಶದ ಬೆನ್ನೆಲುಬಾದರೈತನ ಕಡೆ ಸರಕಾರದ ಹಾಗೂ ಜನರ ದೃಷ್ಟಿಯನ್ನು ಹರಿಸಿದ್ದಾರೆ. ತನ್ನ ಸರಳ, ಸುದೃಢ ವ್ಯಕ್ತಿತ್ವದಿಂದಾಗಿ ಬಹಳ ಕಾಲ ಶಕ್ತಿವಾಗಿ ಹೋರಾಡಿದ್ದರೂ, ತಾಷ್ಕೆಂಟನಲ್ಲಿ ಅಯೂಬ ಖಾನರ ಮನಸ್ಸನ್ನು ಗೆದ್ದು ತಾಷ್ಕೆಂಟು ಒಪ್ಪಂದದ ಮೂಲಕ ಜಗತ್ತಿನ ಶಾಂತಿಯ ಮಹಾ ಸಂಶುಟದಲ್ಲಿ ಅಜರಾಮರವಾದ ಅಧ್ಯಾಯವೊಂದನ್ನು ಬರೆದುದಲ್ಲದೆ. ತಾನು ಕೊನೆಯುಸಿರೆಳೆದಾಗ ಅಯೂಬಖಾನರೇ ಕಣ್ಣೀರಿಟ್ಟು ತನ್ನ ಕಳೇಬರಕ್ಕೆ ಕೈಕೊಡುವಂತೆ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಾಮರ್ಥ್ಯ ಅವರೊಬ್ಬರಿಗೆ ಸಾಧ್ಯವಿತ್ತೇ ಹೊರತು ಸಾಮಾನ್ಯರಿಗಲ್ಲ!

ಇಂದು ಶಾಸ್ತ್ರಿಗಳ ಭೌತಿಕ ಶರೀರ ಈ ಪ್ರಪಂಚದಿಂದ ಕಣ್ಮರೆಯಾಗಿದ್ದರೂ ಅವರ ಸ್ಮರಣೆ ನಮಗೆ ಸ್ಫೂರ್ತಿದಾಯಕವಾಗಬೇಕು. ನಿಸ್ವಾರ್ಥದಂಥ ದುಡಿಯುವ ಸೇವಾ ಬುದ್ಧಿ ನಮ್ಮಲ್ಲಿ ಉದಯವಾಗಬೇಕು! ಅವರು ತನ್ನ ಅಧಿಕಾರದ ಅಲ್ಪ ಅವಧಿಯಲ್ಲಿ ತೋರಿಸಿದ ಆದರ್ಶವನ್ನು ನಮ್ಮ ಜೀವಮಾನದ ಅವಧಿಯಲ್ಲಾದರೂ ತೋರಿಸುವ ಧೈರ್ಯ ನಮ್ಮಲ್ಲಿ ಬರಲೆಂದು ಪರಮಾತ್ಮನನ್ನು ಪ್ರಾರ್ಥಿಸುವುದು ನಮ್ಮ ಕರ್ತವ್ಯವಾಗಬೇಕು!

ಸಂಕ್ರಾಂತಿಯ ಶುಭಾಶಯಗಳೊಂದಿಗೆ ಈಗ ಮಾರಾಟಕ್ಕಿವೆ

1. "ಬಾರಾಬಕಿ ರ್‍ಯಾಫಲ್" ಟಿಕೆಟ್ 1 ಕ್ಕೆ ರೂ. 1.00 ಅಥವ 15 ಟಿಕೆಟ್‌ಗಳ ಪುಸ್ತಕ 1 ಕ್ಕೆ ರೂ. 10.00, 4 ಪುಸ್ತಕಗಳಿಗೆ ರೂ 36.00 ಪ್ರಥಮ ಬಹುಮಾನ ರೂ. 1, 10, 000 ಹಾಗೂ ಇನ್ನಿತರ 1006 ಬಹುಮಾನಗಳಿವೆ.
ಕ್ಲೋಸಿಂಗ್ 11.3.68 ಡ್ರಾಯಿಂಗ್ 21-4-68

2. 'ಡಿ. ಬಿ. ಜಾಂಟೀಸ್' ಟಿಕೆಟ್ 1ಕ್ಕೆ ರೂ 1.00, 14 ಟಿಕೆಟ್‌ಗಳ ಪುಸ್ತಕ 1ಕ್ಕೆ ರೂ. 21.00 ಪ್ರಥಮ ಬಹುಮಾನ ರೂ. 10,000. ಒಟ್ಟು ಬಹುಮಾನಗಳು 400ಕ್ಕೂ ಹೆಚ್ಚು.
ಕ್ಲೋಸಿಂಗ್ 15-4-68 ಡ್ರಾಯಿಂಗ್ 30.4.68

3. 'ಕೇರಳ ಸ್ಟೇಟ್ ಗಾರ್ನಾಮೆಂಟ್ ಲಾಟರಿ' ಟಿಕೆಟ್ 1ಕ್ಕೆ ರೂ 1.00 ಅಥವ 10 ಟಿಕೆಟ್‌ಗಳ ಪುಸ್ತಕ 1ಕ್ಕೆ ರೂ. 9.00 ಪ್ರಥಮ ಬಹುಮಾನ ರೂ. 50,000. ಒಟ್ಟು ಬಹುಮಾನಗಳು 93.
ಕ್ಲೋಸಿಂಗ್ 25-1-68 ಡ್ರಾಯಿಂಗ್ 26.1.68

4. 'ಪಿ. ಸಿ. ಜಾಂಟೀಸ್ ಫಂಡ್' ಟಿಕೆಟ್ 1ಕ್ಕೆ ರೂ 1.00 ಅಥವ 20 ಟಿಕೆಟ್‌ಗಳ ಪುಸ್ತಕ 1 ಕ್ಕೆ ರೂ. 9.00 4 ಪುಸ್ತಕಗಳಿಗೆ ರೂ. 30.00 ಪ್ರಥಮ ಬಹುಮಾನ ರೂ. 30,000. ಒಟ್ಟು ಬಹುಮಾನಗಳು 168.
ಕ್ಲೋಸಿಂಗ್ (ಮುಂದುವರಿದಿದೆ) 6—3—68 ಡ್ರಾಯಿಂಗ್ (ಮುಂದುವರಿದಿದೆ) 18—2—68

6. "ರೆಡ್ ಕ್ರಾಸ್ ಹಾಸ್ಪಿಟಲ್ ಸ್ಟಿಕ್ಕರ್" ಟಿಕೆಟ್ 1 ಕ್ಕೆ ರೂ. 1.00 ಅಥವ 15 ಟಿಕೆಟ್‌ಗಳ ಪುಸ್ತಕ 1ಕ್ಕೆ ರೂ. 10.00 4 ಪುಸ್ತಕಗಳಿಗೆ ರೂ. 36.00. ಬಹುಮಾನ ಶೇಕಡ 50. ಒಟ್ಟು 83 ಬಹುಮಾನಗಳಿವೆ.
ಕ್ಲೋಸಿಂಗ್ 6 ಎಪ್ರಿಲ್ 68 ಡ್ರಾಯಿಂಗ್ 6 ಮೇ 68

8. 'ಕೆ. ಸಿ. ಜಾಂಟೀಸ್ ಫಂಡ್' ಟಿಕೆಟ್ 1 ಕ್ಕೆ ರೂ. 1.00, 14 ಟಿಕೆಟ್‌ಗಳ ಪುಸ್ತಕ 1ಕ್ಕೆ ರೂ. 10.00 4 ಪುಸ್ತಕಗಳಿಗೆ 36.00 ಪ್ರಥಮ ಬಹುಮಾನ ರೂ. 1, 16, 000. ಒಟ್ಟು ಬಹುಮಾನಗಳು 600ಕ್ಕೂ ಹೆಚ್ಚು.
ಕ್ಲೋಸಿಂಗ್ 10-2-68 ಡ್ರಾಯಿಂಗ್ 25.2.68

ಅಂಚೆಯ ಮೂಲಕ ಟಿಕೆಟ್ ಬಯಸುವವರು ಟಿಕೆಟ ಬೆಲೆಯೊಂದಿಗೆ 15 ಪೈಸೆ ಹೆಚ್ಚಾಗಿ ಮನಿಆರ್ಡರ್ ಅಥವ ಪೋಸ್ಟಲ್ ಆರ್ಡರ್ ಮೂಲಕವಾಗಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಟಿಕೆಟ ಗಳನ್ನು ತಂತಮಗಳ್ಳುವುದಾಗಿ ಕೋರಿಕೆ ಟಿಕೆಟ್‌ಗಳು ಬೆಳಗ್ಗೆ ೪೦೦೦ ರಿಂದ [illegible] ತನಕವೂ ಕೆಳಕಂಡ ವಿಳಾಸದಲ್ಲಿ ದೊರಕುತ್ತವೆ.

ಮನೋರಂಜನ ಎಂಟರ್ ಪ್ರೈಸಸ್ (ಪ್ರೊಪ್ರೈಟರ್: ಪಿ. ಶಿವರಾಮ ಹೊಳ್ಳ) ನಂ. ೪೦, ೦ ಮಾರ್ಕೆಟ್ ರಸ್ತೆ, [ಆದಿದೇವ ಪಾಸ್ಟಲ್ ಸಮೀಪ] ಗಾಂಧಿನಗರ, ಬೆಂಗಳೂರು-೨.

In the Court of the Munsif of Udipi

S. C No. 361/66

Between

Madhavacharya — Plff.

and

Pandu Kamath and others — Defts.

NOTICE

Is hereby given to Smt. Gowri and Smt Vatsala daughters of Pandu Kamath residing at Matadaugady of Udyavar village of Udipi Taluk that the above suit where you are impleaded as defts. 5 and 6 stands posted to 12—2—1968 for your appearance and that you may state your objections if any, before the above Court on that day.

P. N. K. Rao,
Advocate for Plff.

Udipi, S. K., Dated 18-1-68.

ಹೊಸ ವರ್ಷ ಹಾಗೂ ಪ್ರಜಾಪ್ರಭುತ್ವ ದಿನದ ಶುಭ ಸಂದರ್ಭದಲ್ಲಿ
ನಮ್ಮ ಸಕಲ ಗ್ರಾಹಕರಿಗೂ ಹಿತೈಷಿಗಳಿಗೂ ಶುಭಾಶಯಗಳು!

ನಮ್ಮ ರಾಜಧಾನಿ ಬೆಂಗಳೂರನ್ನು ಸಂದರ್ಶಿಸುವಾಗ ನೆನಪಿನಲ್ಲಿಡಬೇಕಾದ ಹೆಸರು—

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರೋಡು

ಬೆಂಗಳೂರು - 2

ಎಲ್ಲಾ ತರದ ಅನುಕೂಲತೆಗಳಿರುವ ಉತ್ಕೃಷ್ಟ ದರ್ಜೆಯ ವಸತಿ, ಭೋಜನ ಹಾಗೂ ಉಪಾಹಾರ ಮಂದಿರ.
ಕಾರ್ ಪಾರ್ಕಿಂಗ್ ವ್ಯವಸ್ಥೆ, ಬಾತ್ ರೂಂ ಲಗ್ತೀಕರಿಸಿದ ರೂಮುಗಳು, ಮತ್ತು ಫೆಮಿಲಿ ರೂಮುಗಳ ಸೌಕರ್ಯ.
ಶಾಂತ ವಾತಾವರಣ! ನಿಮ್ಮ ಸ್ವಾಗತ-ಸತ್ಕಾರಗಳಿಗೆ ಅನುಭವಶಾಲಿ ಮೇಲ್ವಿಚಾರಣೆ!

ಪ್ರೊ: ಟಿ. ಎಸ್. ಶೆಟ್ಟಿ

When you are in Bangalore
Visit

HOTEL SATKAR

Boarding & Lodging

Near Corporation Office, 9, Mission Road,

BANGALORE-2

With the best compliments of the season

From

KAMAT HOTEL

Restaurant & Boarding

SHESHADRIPURAM, BANGALORE-20.

ನಮ್ಮ ಅಪಾರ ಗ್ರಾಹಕರಿಗೂ ಹಿತೈಷಿಗಳಿಗೂ
ಪ್ರಜಾಪ್ರಭುತ್ವ ದಿನದ ಶುಭಾಶಯಗಳು

ಕಾಮತ್ ಹೊಟೆಲ್

ಶೇಷಾದ್ರಿಪುರಂ, ಬೆಂಗಳೂರು-20

ರುಚಿಕರ ತಿಂಡಿ ತಿನಸುಗಳು! ಶುಚಿಕರ ಪೇಯ ಪಾಕೀಯಗಳು! ಪುಷ್ಟಿಕರ ಸೌಕರ್ಯ ಸೌಲಭ್ಯಗಳು!
ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆಯಲ್ಲಿ ನಗರದ ಪ್ರೀತ್ಯಾದರಗಳಿಗೆ ಪಾತ್ರವಾಗಿ ಪ್ರಗತಿ ಪಥದಲ್ಲಿ ಪಡೆಯುತ್ತಿರುವ -
ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ.

ನಿಮ್ಮ ಸಂದರ್ಶನ ಸಂತೃಪ್ತಕಾಗಿರಲಿ!

R. B. Kamath
Proprietor

Phone: 29012

ಪ್ರಿನ್ಸಿಪಾಲ್ ಶ್ರೀ ಪಿ. ಗುರುರಾಜ ಭಟ್ಟ

ತುಳುನಾಡಿನ ನಾಲ್ಕು ಪ್ರಾಚೀನ ಶಾಸನಗಳು

ನಡೆದ ಕತೆಗೆ ಇತಿಹಾಸವೆಂದು ಹೆಸರು. ಏನು ನಡೆದಿತ್ತು ಎಂಬುದನ್ನು ಊಹಾಪೋಹೆಯ ಮೇಲೆಯೇ ಬರೆಯುತ್ತ ಹೋದರೆ, ಅದು ಇಸ್ಕೀಟಿನ ಮನೆಯಾಗುತ್ತದೆ. ಕಲ್ಲರೆಡಗಳು, ತಾಮ್ರ ಶಾಸನಗಳು, ಪ್ರಾಚೀನ ತಾಳೆಗರಿಗಳು ಮತ್ತು ಪ್ರಾಮಾಣಿಕ ಸಾಹಿತ್ಯಗಳ ಕಲ್ಲು ಸುಣ್ಣಗಳಿಂದಲೇ ಇತಿಹಾಸದ ಭವ್ಯ ಸೌಧ ನಿರ್ಮಾಣವಾಗುತ್ತದೆ. ಪ್ರಿನ್ಸಿಪಾಲ್ ಭಟ್ಟರು ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದ ನಾಲ್ಕು ಶಾಸನಗಳ ಪರಿಚಯವನ್ನಿಲ್ಲಿ ಮಾಡಿಕೊಟ್ಟಿದ್ದಾರೆ.

ನಮ್ಮ ಇತಿಹಾಸವನ್ನು ದಾಖಲೆಗಳ ಆಧಾರದಿಂದ ಬರೆಯಬೇಕು. ಇತಿಹಾಸದ ಪುಟಗಳಿಂದ ಅಂತೆ-ಕಂತೆಗಳು ಮರೆಯಾಗಬೇಕು. ಕಾಲಗಣನೆಯ ನಿರ್ದಿಷ್ಟತೆಯನ್ನು ಹೊಂದಿಕೊಂಡು ಜನ ಜೀವನದ ದರ್ಪಣವಾಗಬೇಕು ಇತಿಹಾಸ. ಸಾಧಾರವಾದ ದಾಖಲೆಗಳೆಂದರೆ ಕಲ್ಲರಹಗಳು, ತಾಮ್ರ ಶಾಸನಗಳು, ಓಲೆಗರಿಗಳಲ್ಲಿ ಕಂಡು ಬರುವ ಸಾಹಿತ್ಯ ಹಾಗೂ ಇತರ ನಂಬಿಕೆಗೆ ಯೋಗ್ಯವಾದ ಬರಹಗಳು. ನಮ್ಮಲ್ಲಿಯ ಐತಿಹಾಸಿಕ ಜ್ಞಾನವನ್ನು ಈ ಆಧಾರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಒಮ್ಮಿಂದೊಮ್ಮೆ ನಮ್ಮ ಅಜ್ಞಾನದ ಬಗೆಗೆ ನಮಗೇ ಬೇಸಂವಾಗಬಹುದು.

ತುಳುನಾಡು ಎಂದರೆ ಈಗಣ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಗೇರುಸೊಪ್ಪೆ ವರೆಗಿನ ಪ್ರದೇಶವನ್ನೊಳಗೊಂಡ ಈ ಭೂಭಾಗದ ಇತಿಹಾಸವು ಯೋಗ್ಯ ರೀತಿಯಲ್ಲಿ ಇನ್ನೂ ಬರೆಯಲ್ಪಡಬೇಕಷ್ಟೆ! ಈ ಬರವಣಿಗೆಗೆ ಶಾಸನಗಳು ಬಹಳ ಉಪಯುಕ್ತವಾಗಿವೆ. ಅಂತಹ ಉಪಯುಕ್ತವಾಗುವ ಶಾಸನಗಳಲ್ಲಿ ನಾಲ್ಕನ್ನು ಆರಿಸಿ ಈ ಲೇಖನದಲ್ಲಿ ಉದಾಹರಿಸಿದೆ.

ಪುತ್ತೂರು ತಾಲೂಕಿನ ಬಂಟ್ರಾ ಎಂಬಲ್ಲಿ ಶ್ರೀಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದೊರಕಿದ ಲೇಖ—

ಈ ಶಿಲಾ ಶಾಸನದಲ್ಲಿ ತೇದಿಯಿಲ್ಲದಿದ್ದರೂ ಲಿಪಿ ಆಧಾರದ ಮೇಲೆ ಮತ್ತು ಇದರ ಸಾಹಿತ್ಯದ ಶೈಲಿಯನ್ನಾಧರಿಸಿ ಇದನ್ನು ಕನಿಷ್ಠ ಪಕ್ಷ 8—9ನೇ ಶತಕಗಳಿಗೆ ಅನ್ವಯಿಸಬಹುದು. ಈ ಶಾಸನವು ಒಂದು ರಾಜಕೀಯ ಒಪ್ಪಂದವನ್ನೊಳಗೊಂಡಿದೆ. ನರಸಿಂಗದುರರಾಜ, ರಾಜಮಲ್ಲನ್ನುಗ ರಾಜ, ಒಬ್ಬ ಕದಂಬ ಅರಸ ಮತ್ತು ವೃಷಮಲ್ಲ ರಾಜ—ಎಂಬ ಈ ನಾಲ್ಕು ವ್ಯಕ್ತಿಗಳೊಳಗೆ ಆದ ಒಪ್ಪಂದವಿದು. ಈ ಒಪ್ಪಂದ ಪ್ರಕಾರ ಈ ನಾಲ್ಕು ವ್ಯಕ್ತಿಗಳೂ ವೈಮನ್ಯವನ್ನು ತೊರೆದು ಐಕ್ಯಮತ್ಯದಲ್ಲಿರಬೇಕೆಂದಿದೆ. ಪರಸ್ಪರ ಒಪ್ಪಂದದ ಮುಖೇನ ಶಾಂತಿ ಸಾಧನೆಯ ನಿದರ್ಶನವಿದು. ಈಶಾಸನದಲ್ಲಿರಉಲ್ಲೇಖವಾದ ಹಲ ಕಲವು ವಿಷಯಗಳು ಗಣನೀಯವಾಗಿವೆ. 'ದೇಗುಲ ದುಳ' ಎಂಬ ಪದದಿಂದ ಈ ಕಾಲದಲ್ಲಿ ದೇವಾಲಯ ನಿರ್ಮಾಣ ಪ್ರಿಯೆಯ ಸ್ಪಷ್ಟತೆ ತಿಳಿದು ಬರುತ್ತದೆ. ನಮ್ಮ ನಾಡಿನಲ್ಲಿ ದೇವಾಲಯಗಳನ್ನು ನಿರ್ಮಿಸುವ ಪದ್ಧತಿಯು ಸುಮಾರು ಕ್ರಿಸ್ತ ಶಕದ ಆದಿಯಿಂದಲೇ ಇದ್ದಂತೆ ಕಂಡು ಬರುತ್ತದೆ. 'ಶ್ರೀಧರ ಪಟ್ಟರುಂ ಮೇಧಾವಿ ಭಟ್ಟರುಂ' ಎಂಬ ಮಾತುಗಳಿಂದ ಬ್ರಾಹ್ಮಣ್ಯವು ಈ ಪ್ರದೇಶದಲ್ಲಿ ಸುಮಾರು ಒಳನೇ ಶತಮಾನಕ್ಕೆ ಸರಿಯಾಗಿ ನೆಲೆಯೂರಿತ್ತೆನ್ನಬಹುದು. 'ಭಟ್ಟ'ನೆನ್ನುವ ಪದವು ಗೌರವಾನ್ವಿತವಾದುದು. ಈಗಣ ಡಾಕ್ಟರ್ ಓಫ್ ಫಿಲೋಸೊಫಿ ಎಂಬ ಡಿಗ್ರಿಗೆ ಸದೃಶವಾದುದು. ಈ ದಾಖಲೆಯಲ್ಲಿ 'ಕುಕ್ಕೆಯ ವಿಶ್ವರುಂ' ಎಂಬ ಉಲ್ಲೇಖವಿದೆ. ಈಗಣ ಪ್ರಸಿದ್ಧ ಕ್ಷೇತ್ರ ಸ್ಥಳವಾದ ಸುಬ್ರಹ್ಮಣ್ಯಕ್ಕೆ ಕುಕ್ಕೆ ಎಂಬುದಾಗಿ ಪ್ರಾಚೀನ ಕಾಲದಿಂದಲೂ ಕರೆಯುತ್ತಿದ್ದರೆಂಬುದಕ್ಕೆ ಇದು ಸ್ಪಷ್ಟವಾದ ದೃಷ್ಟಾಂತ. 'ಕುಕ್ಕೆ' ಶಬ್ದದ ವ್ಯುತ್ಪತ್ತಿಯು ಕಂಠಾಗಿ ತುಂಬಾ ಊಹಾಪೋಹೆಗಳವೆ ಆದರೂ ಇದಕ್ಕೆ 'ಕಂದ' ಎಂಬ ಸ್ಥಳೀಯ ಭಾಷೆಯ (ತುಳು) ಅರ್ಥವನ್ನಿತ್ತರೆ ಸಮಂಜಸವಾಗುವುದೆಂದು ನನ್ನ ಅಭಿಪ್ರಾಯ. ಸುಬ್ರಹ್ಮಣ್ಯವು ಹಳಗಾಲದಿಂದಲೂ ಸ್ಕಂದಾರಾಧನೆಗೆ ಪ್ರಸಿದ್ಧವಾದುದು. ತುಳು ನಾಡಿನಲ್ಲಿ ಇಂದಿಗೂ ನಾಗಾರಾಧನೆ ಮತ್ತು ಸ್ಕಂದಾರಾಧನೆ ಅಭೇದ್ಯವಾಗಿದೆ. ಪೆರ್ಗಡೆಗಳ ಉಲ್ಲೇಖವೂ ಈ ಶಾಸನದಲ್ಲಿ ಕಂಡು ಬರುತ್ತದೆ. ಸುಮಾರು ಒನೇ ಶತಕಕ್ಕೆ "ಪೆರ್ಗಡೆ"ಎಂಬೀ ಉಲ್ಲೇಖವಿರಬೇಕಾದರೆ ಇದಕ್ಕೆ ಸ್ವಲ್ಪ ಸಮಯವಾದರೂ ಹಿಂದಕ್ಕೆ ಸಮಾಜದಲ್ಲಿ 'ಪೆರ್ಗಡೆ"ಗಳ(ಪೆಗ್ಗಡೆಗಳ) ಸ್ಥಾನಮಾನವಿದ್ದಿರಬೇಕು. ಹೆಗ್ಗಡೆಯು ಊರಿನ ಮುಖ್ಯಸ್ಥನಿದ್ದನೆನ್ನುವುದರಲ್ಲಿ ಸಂದೇಹವಿರಲಾರದು. 'ನಾಯಕ' ಎಂಬ ಸಂಸ್ಕೃತ ಪದವು, "ನಾಯಿಗ" ಎಂಬ ಕನ್ನಡ ರೂಪದಿಂದ ಬರೆಯಲ್ಪಟ್ಟಿದೆ. ಈ ಶಾಸನ ದೊರೆತಿರುವ ಪ್ರದೇಶ ಹಾಗೂ ಅದರ ನೆರೆಹೊರೆಯಲ್ಲಿ ರಾಜಕೀಯ ವ್ಯವಸ್ಥೆಯಿತ್ತೆಂದೂ ಸಾಮಾಜಿಕ ಸಂಘಟನೆಯಿತ್ತೆಂದೂ ಸನಾತನ ಧರ್ಮದ ಬಲವಾದ ಹಿನ್ನೆಲೆಯಿತ್ತೆಂದೂ ಈ ಶಾಸನದಿಂದ ಉದ್ಘೋಷವಾಗುತ್ತದೆ.

"ದೇಗುಲದುಳ" ಒಲಗದ ಪಳಿಯರುಂ ಶ್ರೀಧರ ಪಟ್ಟರುಂ ಮೇಧಾವಿ ಭಟ್ಟರುಂ ಪುರೆಯಕಿತ್ತರರುಂ ಪಜ್ಜಿಯಣರುಂ ಕುಕ್ಕೆಯ ವಿಶ್ವರುಂ ಕಣಕಯುಂ ಮಸ್ತಿಪ್ಪ...ಳು ನಾಡನುರುಡೆಯೊರುಂ ಜಯಬಾಮ ನಾಯಿರರುಂ ಕೋಟಿವಳ್ಳಿಯಳ್ಳಯರುಂ ವಯಸುರಿ ಶ್ರೀವಿಕ್ರಮ ಪೊಯ್ಗುರುವಲ್ಲದ ಉತ್ತಮಪೊಯ್ಗುರು ನರಸಿಬ್ಗ ಪೊಯ್ಗುರುಂ ಅನೆಬರು ಪೆರ್ಗಡೆಗಳು ಮಿಳ್ದುಕೊಯೊಳ್ವ್ವವಸ್ಥೆ ಏವುಡ ಪಗೆಯುಂ ಪಳಿಯು ಮೆಸಗೆಯು ಮುಮುನ್ದಲ್ದೆ".

ಕಾಸರಗೋಡು ತಾಲೂಕಿನ ತಳಿಂಗೆರೆ ಎಂಬಲ್ಲಿ ದೊರಕಿದ ಜಯಸಿಂಹನ ಶಾಸನ

ಈ ಶಿಲಾ ಶಾಸನವು ಸುಮಾರು ಕ್ರಿ. ಶ. 10ನೇ ಶತಮಾನಕ್ಕೆ ಅನ್ವಯಿಸಿದ್ದೆಂದು ವಾಸನ ಶಾಲೆಯವರು ತೀರ್ಮಾನಿಸಿದ್ದಾರೆ ಇದರಲ್ಲಿ ಉಕ್ತವಾಗಿರುವ ಅರಸನು ಜಯಸಿಂಹನೆಂದಿದೆ. ಪ್ರಾಯಶಃ ಈ ಅರಸನು ಕುಂಬಳೆ ರಾಜ್ಯವನ್ನು ಆಳುತ್ತಿದ್ದವನೆಂದು ತಿಳಿಯಬಹುದು. ಜಯಸಿಂಹನು ಪುತ್ತೂರು ಎಂಬಲ್ಲಿ (ಕುಂಬಳೆ ಸಮೀಪ) ಕನ್ಯಾದಾನವಾಗಿ ಮೋಚಬ್ಬರಸಿ ಎಂಬವಳಿಗೆ ಭೂಮಿಯನ್ನು ಕೊಟ್ಟಂತೆ ತಿಳಿಯುತ್ತದೆ. ಈ ಮೋಚಬ್ಬರಸಿಯು ಗುಡ್ಡ, ಶಿಲಾಮಯವಾದ ಈ ಭೂಮಿಯನ್ನು ಫಲವತ್ತಾದ ಪ್ರದೇಶವಾಗಿ ಪರಿವರ್ತಿಸಿದಂತೆಯೂ ಅದರಲ್ಲಿ ಒಂದು ವಸತಿ ಗೃಹವನ್ನೂ ಒಂದು ತೋಟವನ್ನೂ ನಿರ್ಮಿಸಿದಂತೆಯೂ ಈ ಪ್ರದೇಶದ ಸುತ್ತಲೂ ಒಂದು ಕಂದಕವನ್ನು ರಚಿಸಿದಂತೆಯೂ ಕಂಡು ಬರುತ್ತದೆ. ಈ ಶಾಸನದ ಒಕ್ಕಣೆಯು ಅಂತ್ಯಭಾಗವು ಸಾರಸ್ಯವಾಗಿದ. ದಾನವಾಗಿತ್ತ ಈ ಭೂಮಿಯು ಒಡೆತನವು ಪಾರಂಪರ್ಯವಾಗಿ ಜೋಗನ್ವೆ ಎಂಬವಳ ಕುಟುಂಬದಲ್ಲಿ ಹೆಣ್ಣಿನ ಮೂಲಕ ಬರಬೇಕೆಂಬುದು ಉಲ್ಲೇಖಿಸವಾಗಿದೆ. ಈ ಒಕ್ಕಣೆಯು ಆಳಿಯ ಸಂತಾನದ ನಿರ್ದಿಷ್ಟ ಸೂಚನೆಯೋ ಏನೋ ಎಂಬ ಅನುಮಾನವನ್ನು ವ್ಯಕ್ತಪಡಿಸಬೇಕಾಗುತ್ತದೆ. ಆದರೆ ಅಳಿಯ ಸಂತಾನ ಕ್ರಮ ಪ್ರಕಾರ ಹೆಣ್ಣಿನ ಮೂಲಕವೇ ಸ್ಥಿರಾಸ್ತಿಯು ಅನುಭವವೆಂದಿರುವಾಗ ಪ್ರತ್ಯೇಕವಾಗಿ ಈ ಶರತ್ತಿನ ಉಲ್ಲೇಖವೇಕೆ ಎನ್ನುವ ಪ್ರಶ್ನೆ ಏಳುತ್ತದೆ. ರಾಜಕೀಯ ಇತಿಹಾಸದ ದೃಷ್ಟಿಯಲ್ಲಿ ಈ ಶಾಸನ ಪ್ರಾಮುಖ್ಯವಾಗಿದೆ. ಎಂದಿನಿಂದ ಕುಂಬಳೆ ರಾಜ್ಯವು ಅಸ್ತಿತ್ವಕ್ಕೆ ಬಂತೆನ್ನುವುದು ಇಂದಿಗೂ ಅನಿಶ್ಚಿತವಾಗಿ ಉಳಿದಿದೆ. ಏನೇ ಇರಲಿ, ಕ್ರಿ. ಶ. 10ನೇ ಶತಮಾನಕ್ಕೆ ಈ ರಾಜ್ಯವು ಸ್ವತಂತ್ರವಾಗಿ ರಾಜತಂತ್ರವನ್ನು ನಡೆಸುತ್ತಿತ್ತೆಂದೂ ಈ ಕಾಲದ ಈ ರಾಜ್ಯದ ಒಬ್ಬ ಅರಸನು ಜಯಸಿಂಹನೆಂದೂ ತೀರ್ಮಾನಿಸಲು ಈ ಶಾಸನವು ಇಂಬನ್ನೀಯುತ್ತದೆ. 11ನೇ ಶತಕದಲ್ಲಿ ಒಬ್ಬ ಜಯಸಿಂಹನೂ 14ನೇ ಶತಕದಲ್ಲಿ ಒಬ್ಬ ಜಯಸಿಂಹನೂ ಕುಂಬಳೆ ಮನೆತನದಲ್ಲಿದ್ದರೆಂದು ದಾಖಲೆಗಳಿಂದ ತಿಳಿದು ಬರುತ್ತದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಸ್ಪಷ್ಟೀಕರಿಸಬೇಕಾಗಿದೆ. ಸುಮಾರು ಹತ್ತನೇ ಶತಮಾನಕ್ಕೆ ಕನ್ನಡ ಭಾಷೆಯು ಕುಂಬಳೆ ರಾಜ್ಯದಲ್ಲಿ ಬಳಕೆಯಲ್ಲಿತ್ತೆಂಬುದು ವಿದಿತ. ಕನಿಷ್ಠ ಪಕ್ಷಕ್ಕೆ ಸುಮಾರು 10ನೇ ಶತಮಾನದಿಂದ ಈ ಪ್ರದೇಶ ಕನ್ನಡ ಭಾಗವಾಗಿದ್ದಿರಬೇಕೆಂದು ಇದರಿಂದ ತಿಳಿಯುತ್ತದೆ. ಈ ಕುಂಬಳೆ ಮನೆತನದ ಅರಸರು ಶ್ರೀಮತ್ ಬನವಸೆ ಪುರವರಾಧೀಶ್ವರ ಸೂರ್ಯಕುಲ

(ಮುನ್ನತ್ತೆರಡನೇ ಪುಟ ನೋಡಿರಿ)

THE PANGAL NAYAK BANK LIMITED

Registered Office.

Court Road, UDIPI. (Mysore State)

(Scheduled Bank)

ESTD . 1920

SHORT—TERM and FIXED DEPOSITS accepted on attractive terms.

INTEREST UPTO 8%.

SAVINGS BANK ACCOUNT opened. Interest at 4%.

Withdrawals by cheques without any restrictions whatsoever.

24 Branches spread in Mysore & Kerala States at . . . Bangalore, Tumkur, Hassan, Belur, Shimoga, Bhadravathi, Mangalore, Kargal, Surathkal, Kumgal, Kasaragod, Kanhangad, Nileshwar, Katapadi, Nagamangala, Chikmayakanahalli, Huliyar etc. etc.

..... NAYAK BANK IS YOUR OWN BANK .....

ಯುಗಾದಿ

(ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.)

[ಗಣರಾಜ್ಯೋತ್ಸವ ನಿಮಿತ್ತ ಕೇಂದ್ರ ಸರ್ಕಾರ ಏರ್ಪಡಿಸಿದ್ದ ಅಖಿಲ ಭಾರತ ರಾಷ್ಟ್ರೀಯ ಕವಿ ಗೋಷ್ಠಿಯಲ್ಲಿ ಕನ್ನಡದ ಪರವಾಗಿ ಭಾಗ ವಹಿಸಿದ್ದ ಶ್ರೀ ಕಯ್ಯಾರರು ಅಯ್ಕೆಯಾಗಿದ್ದು, ಅವರ ಈ ಪದ್ಯವು ದಿನಾಂಕ ೨೫-೧-೬೮ರ ರಾತ್ರಿ ೯-೩೦ಕ್ಕೆ ಪ್ರಾರಂಭವಾಗುವ ಕವಿ ಗೋಷ್ಠಿಯಲ್ಲಿ ಪ್ರಸಾರವಾಗುವುದು. ಕನ್ನಡದ ಆಕಾಶವಾಣಿ ಕೇಂದ್ರಗಳಲ್ಲಿ ಸ್ವತಃ ಕವಿಗಳೇ ಹಾಡಿದ ಪದ್ಯಗಳೂ, ಇತರ ಎಲ್ಲಾ ಆಕಾಶವಾಣಿ ಕೇಂದ್ರಗಳಲ್ಲಿಯೂ ಅಕವಿತೆಯ ಪ್ರಾಂತೀಯ ಭಾಷಾಂತರವೂ ಪ್ರಸಾರವಾಗುತ್ತದೆ. ಈ ಸಲದ ರಾಷ್ಟ್ರೀಯ ಕವಿ ಗೋಷ್ಠಿಯಲ್ಲಿ ಒಟ್ಟು ೧೫ ಮಂದಿ ಖ್ಯಾತ ಕವಿಗಳು ಭಾಗವಹಿಸುತ್ತಾರೆ.]

ಅನಾದಿ ಯುಗಾದಿಯು ಚೇತನವೆ
ವಿಜಯ ಚೇತನ ಸಿಕೇತನವೆ
ಅನಂತ ನವೀನ ಚಿರಂತನವೆ
ಮಣಿವೆ ನಿನಗೆ ಮಂಗಲ ದಿವವೆ.
ಅನಾದಿ ಯುಗಾದಿಯು ಚೇತನವೆ.

ಬಂಗಾರದ ಚಿಂಕೆಯ ಮರಿಯೆ
ಕಹಿ ಬಾಳಿಗೆ ಸವಿ ಸವರಿರುವೆ
ಅಶೋಕದ ಶೋಕಿಪ ಸಿರಿಯೆ
ವರುಷ ಮುಗಿಯ ಹರುಷವ ತರುವೆ.
ಅನಾದಿ ಯುಗಾದಿಯು ಚೇತನವೆ.

ಂ ಂ ಂ

ಕಂಪಿತ ಕಲಕಂಠದಿಂದ
ಪಕ್ಷಿಲಕ್ಷ ಕೂಜನ
ಮಂದ ಗಂಧ ಶೀತವಾತ
ರಮ್ಯಕೆ ರೋಮಾಂಚನ

ಬಾನು ಬಯಲು ಬಾನು ಕಡಲು
ಸೌಂದರ್ಯದಿ ಮಿಂದಿದೆ
ಸಗ್ಗ ಬುವಿಗೆ ತಗ್ಗಿ ಬರಲು
ಸುಗ್ಗಿ ಹಿಗ್ಗಿ ಬಂದಿದೆ.

ಎದೆಯ ಕದವ ತೆರೆಯುತಿರೆ
ಒಳಗೆ ಬೆಳಕು ಹರಿಯಿತು
ಹೂವಳೆಸಳು ಬಿರಿಯುತಿರೆ
ತುಂಬಿ ಹಾಡು ಪೊರೆಯಿತು

ಎಂಥ ದಿವ್ಯ ಸುಪ್ರಭಾತ
ಇದು ಯುಗಾದಿ ಗಾದಿಯು
ಹೊಸತು ವರ್ಷಕೆನಿತು ಹರ್ಷ
ನವ್ಯತೆಗೆ ಬುನಾದಿಯು.
ಅನಾದಿ ಯುಗಾದಿಯ ಚೇತನವೆ.

ಂ ಂ ಂ

ಮುಂಜಾವದಿ ಮಿಂದು ಬನ್ನಿ
ಹಣ್ಣುಕಾಯಿ ಹೊನ್ನು ತನ್ನಿ
ಭಕ್ತಿಯಿಂದ ಬಂದು ಸುತ್ತು
ಒಡೆಯ ನಡಿಗೆ ಕಾಣ್ಕೆಯಿತ್ತು
ಶಿರವ ಬಾಗಿ ನಿಲುವುದು
ಶುಭವು ನಿಮಗೆ ಸಲುವುದು.

ಹಿರಿಯರವರು ಕಾದ ಹಿಡಿ
ಕಿರಿಯರಿವರು ಹರಕೆ ಕೊಡಿ
ಬಂಧುಬಳಗವೊಂದೆ ಗೂಡಿ
ಮನೆಯ ಮನವ ಬೆಳಗಿ ಬಿಡಿ
ಯುಗಾದಿಯಂದು ಎಲ್ಲರು
ಕೂಡಿ ಬಾಳಬಲ್ಲರು.

ತಂದೆ- ತಾಯಿ ತವರು ನೆನೆದು
ಮಗಳು ಮುದ್ದು ಬಂದಳಿಂದು
ಅಳಿಯ ಬಳಿಯೊಳಿಹನುನಿಂದು
ಮದುವೆಯೊಗಿ ವರುಷವೊಂದು
ಸಂದಿತೀ ಯುಗಾದಿಗೆ
ಬಸಿರಿಯೊಳೆ ನಾಚಿಕೆ.

ಬಂದರವರು ಬಂದರಿವರು
ಬಂದರವರು ಭರದಲಿ
ನದಿಗಳಿಂದ ನದಗಳಿಂದ
ಹರಿದ ನೀರು ಕಡಲಲಿ
ಎಲ್ಲವೊಂದು ಕೂಡಲಿ
ಇಲ್ಲಿ ಹಬ್ಬ ಮಾಡಲಿ.

ಹರಕು ಚಿಂದಿ ಹರಿದು ಬಿಟ್ಟು
ಹೊಸತು ಪಟ್ಟಿ ಬಟ್ಟೆಯುಟ್ಟು
ಸಂಕಟಗಳ ಸಾಯಿ ಸುಟ್ಟು
ಬಾಳ ಬೆಳಗೆ ಪಣವ ತೊಟ್ಟು
ನುಗ್ಗಿ ಮುಂದೆ ಹೋಗಿರಿ
ಹಿಗ್ಗಿ ಹೆಜ್ಜೆ ಹಾಕಿರಿ.

ಮನಕೆ ಸುಖವ ತಂದಿಹುದು
ಬುವಿಗೆ ಭಾಗ್ಯ ಬಂದಿಹುದು
ಚಿಂತೆ ಸಂತೆ ಸಂದಿಹುದು
ನಮ್ಮ ಎಳ್ಳ ಮುಂದಿಹುದು
ಈ ಯುಗಾದಿ ದಿವದಲಿ
ನೆನೆವುದಿದನು ಮನದಲಿ.

ಬದುಕಿನಲ್ಲಿ ಬೆಂದವರೆ
ಬೆಳಕಿನಲ್ಲಿ ಮಿಂದವರೆ
ಕೊಳಕನೆಲ್ಲ ತೊಳೆದವರೆ
ಸಾವು ನೋವು ಕಳೆದವರೆ
ಇದೊ ಯುಗಾದಿ ಬಂದಿದೆ
ಹೊಸ ಹುರುಪನ ತಂದಿದೆ.
ಅನಾದಿ ಯುಗಾದಿಯ .....

ಂ ಂ ಂ

ವಿಕ್ರಮಾಂಕ ಜೊರೆಗು ಮಿಗಿಲು
ಶಾತವಾಹನಾಂಕನೆನಲು
ಯುಗ ಪುರುಷನ ಕೀರ್ತಿಯಿಂದೆ
ನವರತ್ನದ ಕಾಂತಿ ಕುಂದೆ
ತೊಡಗಿತಾ ಯುಗಾದಿಯು
ಶಕ ವರುಷಕೆ ಆದಿಯು

ರೋಗ ಶೋಕ ಮುಪ್ಪು ಮರಣ
ಕರುಣೆ ಕರುಳ ಕೊರೆಯುತಿರೆ
ಧರೆಯು ಸಿರಿಯ ಮಡದಿ ಮಗನ
ಮೋಹ ಮಮತೆ ಮರೆಯುತಿರೆ
ಬುದ್ಧ ಬೆಳಕ ಬೀರಿದ
ಹೊಸ ಯುಗವನು ಸಾರಿದ.

ಕೈಗೆ ಕಾಲ್ಗೆ ಬೊಳೆಯ ಜಡಿಯ
ಶಿಲುಬೆಗಿಕ್ಕಿ ಸಾಯಿ ಬಡಿಯ
ಅವರ ತಪ್ಪ ಕ್ಷಮಿಸು ಎಂದು
ಪೊರೆಯನಿಟ್ಟ ತಂದೆಗಂದು
ಕ್ರಿಸ್ತ ಸತ್ತು ಬದುಕಿದ
ಯುಗವೊಂದನು ತೊಡಗಿದ.

ಅರೇಬಿಯದ ಮರಳು ಧರೆಗೆ
ಧರ್ಮಾಮೃತ ಧಾರೆ ಸುರಿಸೆ
ಹಚ್ಚೆ ಹಸಿರು ಹೆಚ್ಚೆ ನೆಲಕೆ
ಶಾಂತಿ ಸೋದರತೆಯ ಮೆರೆಸೆ
ನಬಿಯ ನುಡಿಯು ದನಿಸಿತು
ಯುಗ ನವೀನವೆನಿಸಿತು.

ದ್ವೇಷದಲ್ಲಿ ಪ್ರೀತಿಯನ್ನು
ಮೋಸದಲ್ಲಿ ನೀತಿಯನ್ನು
ಭೀರುವಿನಲಿ ಶೂರತೆಯನು
ಅಡಿಪೆಯಲ್ಲಿ ಬಿಡುಗಡೆಯನು
ತಂದ ತಾತ ಗಾಂಧಿಯು
ನವಯುಗಕವ ನಾಂದಿಯು.

ಆನೆ ಕುದುರೆ ತೇರು ಜೋಡಿ
ಸಾವಿರ ಶಾಲಾಳು ಕೂಡಿ
ಯಾರ ಮನೆಯೊ ಸೂರೆ ಗೈದ
ಯಾವನೊಬ್ಬ ಶೂರನಿದ್ದ
ಪಟ್ಟವಣಿಯನೇರಿದ
ಯುಗಾದಿ ಹಬ್ಬ ಸಾರಿದ

ಸಿಂಹಾಸನ ನಡುಗುತಿತ್ತು
ರಾಜ ಮಕುಟ ಕಳಚಿ ಬಿತ್ತು
ಕ್ರಾಂತಿ ಗರ್ಭದಾಳ ಸೀಳಿ
ಚೆಮ್ಮುಗು ಪೊರೆಯುತಿದೆ ಕೇಳಿ
ಸಮತೆಗಿಹುದೆ ಹಾದಿಯು
ಜನತೆಗದೆ ಯುಗಾದಿಯು.

ನೋಯುವಂತೆ ಹೊಡೆದವರು
ಸಾಯುವಂತೆ ತಡೆದವರು
ಸ್ವರ್ಗದಲ್ಲಿ ಬಿದ್ದವರು
ನರಕದಿಂದ ಎದ್ದವರು
ಕಡೆದು ಬಂದ ದಾರಿ
ಯುಗಾದಿಯೆಂದು ಸಾರಿ
ಅನಾದಿ ಯುಗಾದಿಯು.....

ಂ ಂ ಂ

ನಿನ್ನೆಯ ಕಣ್ಣೀರ ಕುಡಿದು
ನೋವ ನೆನೆದು ಮರುಗದಿರಿ
ನಾಳೆಯೊಂದು ಬಾಳಿಗೆಂದು
ಬುತ್ತಿ ಹೊತ್ತು ತಿರುಗದಿರಿ
ಇಂದು ಸುದಿನ ಬಂದಿದೆ
ಹೊಸ ಯುಗವನೆ ತಂದಿದೆ.

ಬೇವು ಬೆಲ್ಲ ಬೆರೆಸಿ ತಿಂದು
ಬದುಕಿಗೆ ಭರವಸೆಯ ತಂದು
ಆಳದ ಪಾತಾಳ ಸಿಗಿದು
ಅಗಲದ ಗಗನಕ್ಕೆ ನೆಗೆದು
ಜೀವ ಧ್ವಜವು ಹಾರಲಿ
ಈ ಯುಗಾದಿಗೇರಲಿ.

ಂ ಂ ಂ

ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನನೆ ಮಂಗಲ ದಿವವೆ.

ದಿ ನ್ಯೂ ಭುವನೇಂದ್ರ
ಆಯುರ್ವೇದಿಕ್ ಫಾರ್ಮಸಿ,
ಕಟಪಾಡಿ, ದ. ಕನ್ನಡ.

ಸತ್ವಪೂರ್ಣ ಮೂಲಿಕೆಗಳ ಆಯ್ಕೆ—
ಶಾಸ್ತ್ರ ಶುದ್ಧ ತಯಾರಿಕೆ—
ದಕ್ಷ ವೈದ್ಯಕೀಯ ಸಲಹೆ—
ಪರಿಪೂರ್ಣ ಅನುಭವದ ಹಿನ್ನಲೆ—

ಇವುಗಳಿಂದ

ದಿನೇ ದಿನೇ ಅಸಂಖ್ಯ ಗ್ರಾಹಕರನ್ನು
ತನ್ನೆಡೆಗೆ ಆಕರ್ಷಿಸುತ್ತಿರುವ
ಆಯುರ್ವೇದ ಔಷಧಿಗಳ ಬೃಹನ್ನಿರ್ಮಾಣ ಸಂಸ್ಥೆ.

THE NEW BHUVANENDRA
AYURVEDIC PHARMACY,
KATAPADI, S. KANARA.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ
ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್



ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ಪಲ್ಲೆ

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:- ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ಮುಂದವಾಗುತ್ತಿರುವ ಮಲೆನಾಡಿನ ಸಾಂಸ್ಕೃತಿಕ ಸಂಪ್ರದಾಯಗಳು

ಎಂ. ವಿ. ಶರ್ಮಾ, ತದ್ದಲಸೆ

ನಮ್ಮ ಹಳೆಯ ಶಿಷ್ಟ ಸಂಪ್ರದಾಯಗಳನ್ನು, ಆಚಾರ ವಿಚಾರಗಳನ್ನು ಬರಿಯ ಗೊಡ್ಡು ವಿಚಾರಗಳೆಂದು ತಿರಸ್ಕರಿಸುವ ಧಾವನೆ ನವನಾಗರಿಕತೆಯ ಪ್ರಭಾವದಿಂದ ಬೆಳೆದು ಬಂದಿದೆ. ಆದರೆ ವಿಚಾರಿಸಿ ನೋಡಿದಲ್ಲಿ, ನಮ್ಮ ಮಲೆನಾಡಿನ ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ ತುಂಬಾ ಮೌಲ್ಯವಿದೆ. ಇದನ್ನರಿತು ನಾವು ಅವುಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದರೇನೇ ನಮ್ಮ ಪ್ರಾಚೀನ ಸಂಸ್ಕೃತಿ ಬದುಕೀತು.

ಸಾಹಿತ್ಯವು ಸಮಾಜದ ಪ್ರತಿಬಿಂಬದಂತೆ. ಸಂಪ್ರದಾಯಗಳ ಸಂಸ್ಕೃತಿಯು ಜೀವಂತ ಪ್ರತಿಬಿಂಬ ಪ್ರತಿಸೃಷ್ಟಿ. ಅವು ಆಯಾಯ ದೇಶದ ಜನರ ನಡೆನುಡಿಗಳಿಗನುಸಾರವಾಗಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಸಂಗತಿಗಳನ್ನೊಳಗೊಂಡು ಆಚರಣೆಯಲ್ಲಿವೆ. ಸಂಪ್ರದಾಯಗಳನ್ನು ಸುಧಾರಣೆಯೆಂದು ತಿಳಿಯುವದು ತಪ್ಪು. ಅನ್ಯ ಜನರಲ್ಲಿಯ ತೆರೆದಿಟ್ಟ ಸ್ನೇಹ-ಸೌಹಾರ್ದದ ಪಣ್ಯ ದೇವಾಲಯದ ಬಾಗಿಲುಗಳಾಗಿವೆ.

ಮಲೆನಾಡಿನಲ್ಲಿ ಅನೇಕ ಉತ್ತಮ ಸಾಂಸ್ಕೃತಿಕ ಸಂಪ್ರದಾಯಗಳು ಬೆಳೆದು ಬಂದುದು ಇಂದು-ನಿನ್ನೆಗುಲ್ಲ. ಅವುಗಳಿಗೆ ಭವ್ಯ ಪರಂಪರೆಯಿದೆ. ಇಲ್ಲಿಯ ಜನ ಬಹು ಹಿಂದಿನಿಂದಲೂ ಅವುಗಳ ಮಹತ್ವವನ್ನರಿತು ಅವುಗಳನ್ನು ಉಳಿಸಿ—ಬೆಳೆಸಿ ಆಚರಿಸಿಕೊಂಡು ಬಂದಿರುತ್ತಾರೆ. ಸಂಪ್ರದಾಯಗಳಲ್ಲಿ ಕೆಲವಕ್ಕೆ ಧಾರ್ಮಿಕ, ಪೌರಾಣಿಕ ಹಿನ್ನೆಲೆಗಳಿರುತ್ತವೆ. ಮತ್ತೆ ಕೆಲವಕ್ಕೆ ಐತಿಹಾಸಿಕ, ಸಾಮಾಜಿಕ ಅಸ್ತಿತ್ವವಿದೆ.

ಮಲೆನಾಡಿನ ಇತಿಹಾಸ ಪುಟವನ್ನೊಮ್ಮೆ ತಿರುವಿ ನೋಡಿದಾಗ ಇಲ್ಲಿಯ ಜನ-ಜೀವನದ ಸ್ವಾಸ್ಥ್ಯ ಸಂಘಟನೆಗೆ, ಸುಧಾರಣೆ ಪ್ರಗತಿಗೆ ಸಂಪ್ರದಾಯಗಳು ಕಾರಣವಾಗಿದ್ದು ಕಂಡು ಬರುತ್ತದೆ. ಅಲ್ಲದೆ ಇಲ್ಲಿಯ ಜನಕ್ಕೆ ರಾಜಕೀಯ ಪೌಲಭ್ಯ ಸಹಕಾರಗಳು ದೊರೆಯದೆ ಇದ್ದಾಗಲೂ ಅಂಥ ಸಂಪ್ರದಾಯಗಳಿಂದಲೇ ಜೀವನಕ್ಕೆ ಬೇಕಾದ ನೆಮ್ಮದಿ, ವಿಚಾರ ಜಾಗೃತಿ, ಲೋಕಾನುಭವಗಳನ್ನು ಪಡೆಯುತ್ತಿದ್ದುದು ಅತಿ ಗಮನಾರ್ಹ!

ಮಲೆನಾಡಿನ ಜೀವನಕ್ರಮ ಅಲ್ಲಿನ ಭೂಗುಣ, ಹವಾಗುಣಗಳಿಗನುಗುಣವಾಗಿ ಉಳಿದ ನಾಡುಗಳಿಗಿಂತ ತೀರ ಭಿನ್ನವಾಗಿದೆ. ಅಂತೆಯೇ ಅಲ್ಲಿ ಉಳಿದ ನಾಡುಗಳಿಗಿಂತ ಭಿನ್ನವಾದ ಕೆಲವು ಸಂಪ್ರದಾಯಗಳು ಆಚರಣೆಯಲ್ಲಿವೆ. ಸಂಪ್ರದಾಯಗಳು ಮೂಲತಃ ಒಂದೇ ಆಗಿದ್ದರೂ ಆಚರಣೆಯ ರೀತಿಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ವೈದ್ಯರ ಸಂಪ್ರದಾಯಗಳು

ಮಲೆನಾಡು ರೋಗಗಳ ತವರೂರು. ಆದರೆ ಅಂಥ ರೋಗಗಳನ್ನೆಲ್ಲ ಇಲ್ಲಿಯ ಗಾಂವಠೀ ವೈದ್ಯರು ಎದುರಿಸುತ್ತಿದ್ದರು. ಎಷ್ಟೋ ರೋಗಗಳ ಮೇಲೆ ಇಂದಿನ ಪದವೀಧರ ಡಾಕ್ಟರರಿಗಿಂತಲೂ ಅವರ ಪ್ರಯೋಜನವೇ ಹೆಚ್ಚು ಯಶಸ್ವಿಯಾಗುತ್ತದೆಂದು ಹೇಳುತ್ತಾರೆ.

ಈ ರೀತಿ ಔಷಧ ಕೊಡುವದಕ್ಕೆ ಮೂಲಿಕಾ ಪ್ರಯೋಗವೆಂದು ಹೆಸರು. ಏಕಮೂಲಿಕಾ ಮತ್ತು ಬಹು ಮೂಲಿಕಾ ಪ್ರಯೋಗಗಳು ಮಲೆನಾಡಿನ ತುಂಬಾ ಸಾಮಾನ್ಯ ಪ್ರತಿಯೊಂದು ಹಳ್ಳಿಗೊಂದರಂತೆ ಸಿಕ್ಕೇ ಸಿಕ್ಕುತ್ತದೆ. ಇದಕ್ಕೆ ಹಣದ ವಿಲೀನಿಕರಣವೂ ಇಲ್ಲ. ಇವು ಕೆಲವು ಅದ್ಭುತವಾಗಿಯೂ, ವಿಚಿತ್ರವಾಗಿಯೂ ಇವೆ. ಔಷಧ ಬೇಕಾದವರು ಬೆಳಗ್ಗೆ ನಸುಕಿನಲ್ಲೇ ಎದ್ದು ಒಂದು ಹೆಂಗಿನಕಾಯಿ ತೆಗೆದುಕೊಂಡು ಮೂಲಿಕೆಯ ಹತ್ತಿರ ಹೋಗಿ ಫಲಕ ಮರ್ಪಿಸಿ ಪ್ರಾರ್ಥಿಸಿಕೊಂಡು ಬೇಕಾದಷ್ಟು ಮೂಲಿಕೆ ಕಿತ್ತುಕೊಂಡ ಬರುವರು. ರೋಗಿಯು ಕಡೆಗುವನಿಗೂ ಔಷಧ ಪ್ರಯೋಗದ ವಿಚಾರ ತಿಳಿಸಿ ಪಥ್ಯ ಪಾನಗಳ ವಿಧಾನ-ನಿಧಾನಗಳನ್ನು ಹೇಳಿ ಕಳಿಸುವನು. ಎಷ್ಟೋ ಕುಟುಂಬದ ಔಷಧಕ್ಕೆ ಹೇಳ ಬೇಕಾದ, ಕೇಳ ಬೇಕಾದ ಅವಶ್ಯಕತೆಯೇ ಇರುವದಿಲ್ಲ. ಅದು ಅಷ್ಟು ಜನಿತವಾಗಿ ಪ್ರಸಿದ್ಧವಾಗಿಯೇ ಇದೆ.

ಕೆಲವು ಔಷಧ ಕೊಡುವ ಕ್ರಮ, ವಿಧಾನಗಳನ್ನು ನೋಡಿದಾಗ ನಮಗೆಸಖೇದಾಶ್ಚರ್ಯವಾಗುವದು. ಅವರಿಗೆ ರೋಗದ ಪರಿಜ್ಞಾನವೇ ಇರುವದಿಲ್ಲ. ಜನ ಬಂದು ಕೇಳಿದೊಡನೆ ತಮ್ಮ ಹಿಂದಿನ ಉಪದೇಶಸ್ಥರು ಹೇಳಿ ಕೊಟ್ಟಂತ ಮೂಲಿಕೆಯನ್ನು ತಂದು ಕೊಡುತ್ತಾರೆ. ಇಷ್ಟೇ ಅವರಿಗೆ ತಿಳಿದಿರುವದು. ಆದರೂ ಅವರಿಂದ ಭಾರೀ ಪ್ರಯೋಜನವಾಗುತ್ತಿದ್ದುದು ಕಂಡು ಬರುತ್ತಿದೆ. ಇದರಲ್ಲಿ ಇನ್ನೂ ಒಂದು ಚಮತ್ಕಾರ್ಯವಿದೆ. ಬೇರೊಬ್ಬರು ಕೊಡುವ ಔಷಧ ತನಗೆಗೊತ್ತಿದೆಯೆಂದು ತಾನೇ ಅದನ್ನತಗೆದ ಕೊಂಡುಬಂದರೆ ಅದೇರೋಗಕ್ಕೆ ಉಪಯೋಗಿಸಿದರೆ ಗುಣವಾಗದೆ ನಂತರ ಅವರಿಂದಲೇ ಮೂಲಿಕೆ ಪಡೆದು ಉಪಯೋಗಿಸಿ ಗುಣಹೊಂದಿದ ಉದಾಹರಣೆ ಅನೇಕ ಉಂಟು. ಇದನ್ನೆಲ್ಲಾ ಗಮನಿಸಿದಾಗ ಇಷ್ಟು ಮಾತ್ರ ಊಹಿಸಬಹುದು. ಹಿಂದೆ ಈ ಕುಟುಂಬದ ಒಬ್ಬ ಮಹನೀಯರು ಧನ್ವಂತರಿಯನ್ನು ಆರಾಧಿಸಿ ಸಿದ್ಧಿ ಪಡೆದಿರಬಹುದು. ಅಥವಾ ಆ ರೀತಿ ಸಿದ್ಧಿ ಪಡೆದವರಿಂದ ಉಪದೇಶ ಹೊಂದಿರಬಹುದು. ಈ ಮಾತನ್ನು ಇಲ್ಲಿಯ ಅನೇಕರು ಹೇಳುತ್ತಾರೆ. ಬಹು ಮಟ್ಟಿಗೆ ಇದು ಸತ್ಯವೆಂತಲೂ ಅನ್ನಿಸುತ್ತಿದೆ.

ಕೆಲವು ಔಷಧಗಳ ಪ್ರಯೋಗ ತೀರ ವಿಚಿತ್ರ. ಇಂತಿಂಥ ರೋಗಕ್ಕೆ ಇಂತಿಂಥ ಕುಟುಂಬದ ಔಷಧವೆಂದು ಸಿದ್ಧವಾಗಿಯೇ ಇರುತ್ತದೆ. ಒಬ್ಬ ರೋಗಿಯು ಮುಂದೆ ಆ ಹೆಸರನ್ನು ಹೇಳಿದರೆ ನಂತರ ಅದನ್ನೇ ತಂದು ಉಪಯೋಗಿಸಿಯೇ ತೀರಬೇಕಂತೆ. ಇನ್ನೂ ಕೆಲವು ಔಷಧಕ್ಕೆ ಔಷಧ ಹಚ್ಚುವಾಗ ಕೊಡುವಾಗ, ಆ ಕುಟುಂಬದ ಹೆಸರು ಹೇಳಬೇಕಂತೆ. ಇವೆಲ್ಲ ಶ್ರದ್ಧಾಮೂಢ್ಯಗಳೋ ಅಥವಾ ಅತಿ ಭಾವನೆಯ ಹಗಲುಗನಸುಗಳೋ ಏನೋ.

ಇದರಂತೆ ಇನ್ನೂ ಕೆಲವು ಔಷಧಗಳ ಉಪಯೋಗಗಳು ತೀರಾ ಆಶ್ಚರ್ಯಕರವಾಗಿವೆ. ಒಂದಕ್ಕೆ ಬೆಳಕೇ ಆಗುವದಿಲ್ಲ. ಇನ್ನೊಂದಕ್ಕೆ ಸ್ತ್ರೀಯರು ಬಳೆಗಳ ಶಬ್ದವಾಗಬಾರದು. ಮತ್ತೊಂದಕ್ಕೆ ಬೇರೊಂದು ವಿಧ. ಕೆಲವು ಔಷಧಗಳನ್ನು ರವಿವಾರ ಗುರುವಾರ ಮಾತ್ರವೇ ಕೊಡುತ್ತಾರೆ. ಇನ್ನು ಕೆಲವು ಕಡೆ ಹಲವು ಮಾತ್ರೆಗಳಿವೆ. ಅವು ಸ್ವಾದಿ, ಬಿಳಿ, ಕೆಂದಿ, ಇಷ್ಟೇ ಮುಂತಾದ ರಾಜರ ಕಾಲದಲ್ಲಿ ತಯಾರಿಸಿದವುಗಳಿರಬೇಕೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಎಷ್ಟೋ ಮಾತ್ರೆಗಳ ಉಪಯೋಗವೇ ತಿಳಿಯದೆ ಹಾಗೆಯೇ ಇವೆ. ಇವುಗಳ ಉಪಯೋಗವೂ ತೀರ ವಿಚಿತ್ರ- ಭೇದಿಯ ಮಾತ್ರೆಯನ್ನು ಮೇಲ್ಮುಖ ಮಾಡಿ ತೆಯ್ದು ನೆಕ್ಕಿಸಬೇಕೆಂದಿದ್ದರೆ, ಭೇದಿ ಹೆಚ್ಚಾದಾಗಲೂ ಅದೇ ಮಾತ್ರೆಯನ್ನು ಕೆಳಮುಖ ಮಾಡಿ ನೆಕ್ಕಿಸಬೇಕೆಂದಿದೆ.

ಸಾಮಾನ್ಯ ಎರಡು— ಮೂರು ಹಳ್ಳಿಗೊಂದರಂತೆ ಒಂದೊಂದು ಸಿದ್ಧ ವೈದ್ಯರ ಮನೆತನವಿದೆ. ನಿಃಸ್ವಾರ್ಥವಾಗಿ ಅನೇಕ ಜನರಿಗೆ ತಮ್ಮ ವೈದ್ಯಕೀಯ ಪ್ರಯೋಜನವನ್ನೊದಗಿಸಿ ನಿಷ್ಠಾವಂತ ವೈದ್ಯರುದಳಾಗಿರುತ್ತಾರೆ.

ಸುಗ್ಗೀ ಸಂಪ್ರದಾಯಗಳು

ಈ ಸುಗ್ಗೀ ಸಂಪ್ರದಾಯಗಳು ಸಂಪೂರ್ಣವಾಗಿ ಮಲೆನಾಡಿನ ರೈತ ಕುಟುಂಬದವರಿಂದ ಆಚರಿಸಲ್ಪಡುತ್ತವೆ. ರೈತರು ಉಳುವಾಗ, ಬಿತ್ತುವ ಸಮಯದಲ್ಲಿ ಮತ್ತು ಕಣದಲ್ಲಿ ಒಕ್ಕೆ ತೂರುವಾಗ ಅನುಸರಿಸುತ್ತಿರುವ ಸಂಪ್ರದಾಯಗಳು ಉಲ್ಲೇಖನಾರ್ಹ! ರೈತನ ಪಂಚ ಪ್ರಾಣವೂ ಭೂದೇವಿ; ಪ್ರತಿ ಹೆಜ್ಜೆಯಲ್ಲಿಯೂ ಆತ ಭೂಮಿ ತಾಯಿಯನ್ನು ಪೂಜಿಸಿ, ಹೃದಿ ಪಡಿಸಿ ಮುನ್ನುಗ್ಗುತ್ತಾನೆ. ತಾಯಿಯೆಂದು ವಂದಿಸಿ ಪ್ರೀತಿಸುತ್ತಾನೆ. ಶಕ್ತಿಯೆಂದು ಆರಾಧಿಸುತ್ತಾನೆ. ಈ ಸಂಪ್ರದಾಯವನ್ನೂ ಉಳಿದು ಬೆಳೆದು ಬಂದಿದೆ. ನೇಗಿಲ ಪೂಜೆ, ಭೂ ಪೂಜೆ, ಬಲೀಂದ್ರನ ಪೂಜೆ, ಹೊಸ ಕದಿರಿನ ಪೂಜೆ, ಮುಂತಾಗಿ ರೈತ ವರ್ಷದ ತನ್ನ ಜೀವ ಮಾನದ ವಿವಿಧ ಹಂತದಲ್ಲಿ ಭೂ ದೇವಿಗೆ ತನ್ನ ಭಯ— ಭಕ್ತಿಯಿಂದೊಡಗೂಡಿದ ಗೌರವವನ್ನು ಸಲ್ಲಿಸುತ್ತಾನೆ. ನಿಜಕ್ಕೂ ರೈತನ ಜೀವನದಲ್ಲಿ ಆತ ಭೂತಾಯಿಗೆ ಮತ್ತು ಸಿರಿದೇವಿಗೆ ನೀಡಿರುವ ಪ್ರಾಧಾನ್ಯ ಶ್ಲಾಘನೀಯ.

ಮಳೆಗಾಲದಲ್ಲಿ ಹೆಚ್ಚು ಕೆಲಸವಿರದಿ

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

ಕೃಷಿಯ ಉನ್ನತಿಗೆ ರೈತರ ಏಳ್ಗೆಗೆ

5 ಅಶ್ವಶಕ್ತಿಯಿಂದ 13 ಅಶ್ವಶಕ್ತಿವರೇಗೆ ಕುಲ್ಕ್ಯೆ ಇಂಜಿನಿಯರಿಂಗ್ ವರ್ಕ್ಸ್, ಇಚ್ಚಲ್‌ಕರಂಜಿ, ಕೋಲಾಪುರ ಜಿಲ್ಲೆ ಇವರಿಂದ ತಯಾರಿಸಲ್ಪಟ್ಟ ಪ್ರಖ್ಯಾತ "ಇವಾನ್" ಕ್ರೂಡ್ ಆಯಿಲ್ ಇಂಜಿನ್ ಪಂಪುಸೆಟ್ಟುಗಳೂ, ಪಟ್ಟಣವಾಸಿಗಳಿಗೂ ಹಳ್ಳಿಯ ಕೃಷಿಕರಿಗೂ, ತೋಟಗಳಿಗೂ, ಗದ್ದೆಗಳಿಗೂ ನೀರಿನ ಸರಬರಾಯಿ ಬಗ್ಗೆ ½ ಅಶ್ವಶಕ್ತಿಯಿಂದ 30 ಅಶ್ವಶಕ್ತಿಯವರೇಗಿನ ಸದರ್ನ್ ಇಂಜಿನಿಯರಿಂಗ್ ಇಂಡಸ್ಟ್ರಿಯಲ್ ಕೊಯಂಬುತ್ತೂರು ಇವರಿಂದ ತಯಾರಿಸಲ್ಪಟ್ಟ ಯಸ್. ಇ. ಐ. (S. E. I.) ಇಲೆಕ್ಟ್ರಿಕ್ ಮೋಟಾರುಗಳೂ ಸದಾ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿವೆ. 3 ಅಶ್ವಶಕ್ತಿಯ ಕ್ರೂಡ್ ಆಯಿಲ್ ಇಂಜಿನ್‌ಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿವೆ. ಕ್ರೂಡ್ ಆಯಿಲ್ ಇಂಜಿನ ಬಿಡಿಭಾಗಗಳೂ ನಮ್ಮಲ್ಲಿ ಮಾರಾಟಕ್ಕೆ ಸದಾ ಸಿದ್ಧವಿವೆ. ಪ್ರಖ್ಯಾತವಾದ ಗಣೇಶ್ ಫೇನುಗಳೂ, ಇಲೆಕ್ಟ್ರಿಕ್ ಮೋಟಾರುಗಳಿಗೆ ಬೇಕಾಗುವ ಬ್ಲೂ ಪೀಟರ್ ಸ್ಟಾರ್ಟರ್‌ಗಳೂ, ಮನೋಸ್ವಿಚ್‌ಗಳೂ ಸದಾ ಮಾರಾಟಕ್ಕೆ ನಮ್ಮಲ್ಲಿ ಸಿದ್ಧವಿವೆ.

ಬೇಂಕುಗಳ ಮೂಲಕವೂ, ಸೊಸೈಟಿಗಳ ಮುಖಾಂತರವೂ, ಭೂ ಅಭಿವೃದ್ಧಿ ಬೇಂಕುಗಳ ಮುಖಾಂತರವೂ ಸುಲಭ ಕಂತುಗಳಲ್ಲಿ ಒದಗಿಸಿ ಕೊಡಬಹುದು.

ಇವುಗಳಿಗೆ ಏಕೈಕ ವಿತರಕರು:

"ಸ್ವಾಮಿ ಇಲೆಕ್ಟ್ರಿಕಲ್ಸ್"

ರಿಜಿಸ್ಟರ್ಡ್ ಆಫೀಸು:
ಮಂಗಳೂರು ರಸ್ತೆ,
ಕಾರ್ಕಳ.

ಮಾರಾಟ ವಿಭಾಗ:
ಬಲ್ಮಠ ರಸ್ತೆ,
ಮಂಗಳೂರು-1.
ಫೋನು ನಂ. 5450.

"...ಅ ಮನೆಯೋ?"

"ಹೌದು ಅದೇ ಮನೆ"

"ಅದು ಖಂಡಿತ ನಿನಗೆ ಬೇಡಪ್ಪಾ, ಸುಳ್ಳಂತೇ ಸಿಗುತ್ತದೆಂದರೂ ಬೇಡ"

"ಯೋಚಿಸ್ಪಾ ಏನಾಗಿದೆ. ಅದು ಊರಿಗೆ ಅಷ್ಟೇನೂ ದೂರವಲ್ಲ. ರಸ್ತೆಗೆ ತಾಗಿಯೇ ಇದ್ದ ಹಾಗೆ ಇದೆ. ನೀರು-ಸುತ್ತಲೂ ವಿಶಾಲತೆ, ಹೀಗೆ ಎಲ್ಲವೂ ಅನುಕೂಲ ಇದೆಯಲ್ಲಾ"

"ಏನೇ ಇರಲಪ್ಪಾ, ನಿನಗೆ ಅದು ಖಂಡಿತ ಬೇಡ".

ಒಂದೇ ಉಸುರಿನಲ್ಲಿ ಖಂಡ ತುಂಡವಾಗಿ ಹೇಳಿಬಿಟ್ಟ ಗೋವಿಂದಜ್ಜ.

ಇದರಿಂದಾಗಿ ನನ್ನ ಕುತೂಹಲ ಮತ್ತಷ್ಟು ಕೆರಳಿತು. "ಏನಾಗಿದೆ, ಏನದೆ ಆ ಮನೆಯಲ್ಲಿ" ಮತ್ತೊಮ್ಮೆ ಕೇಳಿಯೇ ಬಿಟ್ಟೆ.

"ಆ ಸಂಗತಿಯೂ ಬೇಡ, ಅದು ದೆವ್ವದ ಮನೆ. ಅಲ್ಲಿ ಉಳಿದವರಂತೂ ಒಳ್ಳೆಯವರಾಗಿಲ್ಲ. ನೀನು ಕಟ್ಟಿಂಬಸ್ತ. ಹೆಂಡತಿ ಮಕ್ಕಳು ಇದ್ದಾರೆ. ಇಲ್ಲಿಗೆ ಬಂದ ಮೇಲೆ ನೀನು ಸರಿಯಾಗಿರ ಬೇಕು.'

"ಅದು ಸರಿ ಈಗ ಯಾರೂ ಇಲ್ಲವೇನು?"

"ಇಲ್ಲವೆಂತಲೇ ಹೇಳಬೋದು ಕೆಲವು ವರ್ಷಗಳಿಂದ ಒಬ್ಬ ಕಪನೀಪತಿ ನಮ್ಮೂರಿಗೆ ಬಂದಿದ್ದಾನೆ. ಹಿಂದಿಲ್ಲ ವಂದಿಲ್ಲ. ಅವನೊಬ್ಬ ಆಗಾಗ ಅಲ್ಲಿಗೆ ಬಂದು ಹೋಗಿ ಮಾಡುತ್ತಾನೆ".

"ನೀನು ಆ ದೆವ್ವವನು ಎಂದಾದರೂ

ಶ್ರೀ ತದ್ವಲಸೆ ವಿಶ್ವೇಶ್ವರ ಶರ್ಮಾ

ನಾನು ಕಂಡ ಆಧುನಿಕ ದೆವ್ವ

ದೆವ್ವದ ಮನೆಯೆಂದು ಹೊರಾದ ಆ ಮನೆಗೆ ಯಾರೊಬ್ಬರೂ ಬರುಗೆಗೆ ಬರುವುದಿಲ್ಲ. ರಾತ್ರಿ ದೆವ್ವಗಳು ಬಂದು ವಿಹರಿಸುವುದನ್ನು ಕೇಳಿದವರಿದ್ದಾರೆ; ದೂರದಿಂದ ನೋಡಿದವರೂ ಇರಬಹುದು. ಈ ದೆವ್ವಗಳು ಆ ಮನೆಗೇನೇ ಏಕೆ ಬರುತ್ತವೆ? ವಿಷಯ ಲಂಪಟ ದೆವ್ವಗಳ ವಿಷಯ ತೃಪ್ತಿಗಾಗಿಯೋ ವಿಸಲಿಡುವ ವಿಷಯಾಭಿಲಾಷಿಗಳ ಸಂಪು ಬಯಲಿಂದಾಗ ಆ ಮನೆ ದೆವ್ವದ ಮನೆಯಾಗಿಯೇ ಉಳಿಯಬೇಕಾಯ್ತು.

ನೋಡಿದ್ದೆಯಾ ಗೋವಿಂದಜ್ಜಾ!"

'ಅಯ್ಯೋ! ನೋಡುವ ಮಾತೆರಲಿ, ಆಗಾಗ ಕೇಳಿಬರುವ ಸಪ್ಪಳ, ವಿಕಾರಅಟ್ಟಹಾಸ, ಇವನ್ನೆಲ್ಲಾ ಕೇಳಿದರೆ ಸಾಕು. ಮೈಯಲ್ಲಿ ಛಳಿ ಬಂತ್ತದೆ. ಆಗಲೂ ನೋಡಲು ಸಾಧ್ಯವೇನು?'

'....ಅಂದರೆ...ನೀನೇನೂ ದೆವ್ವವನ್ನು ನೋಡಲಿಲ್ಲ. ಹೇಗೆದೆ ಎನ್ನುವುದೂ ತಿಳಿದಿಲ್ಲ'.

'ಇಲ್ಲಪ್ಪಾ, ನಮ್ಮ ಹಿಂದಿನವರು ಹೇಳುತ್ತಿದ್ದರು. ದೆವ್ವ ದೊಡ್ಡದಾಗಿರುತ್ತದೆ. ತುಂಬಾ ಕೂದಲು, ಆ ಕರಾಳ ವಿಕರಾಳ ಸ್ವರೂಪು, ಕೋರೆದಾಡೆ ಕೆಂಪನ್ನ ಕಣ್ಣು, ಉದ್ದ ಮೂಗು, ಕಪ್ಪಾದ ಮೈಬಣ್ಣ'

"ಸರಿ! ಆಯ್ತು ಬಿಡು. ಮಕ್ಕಳೆಲ್ಲಾ ದ್ರೂ ಕೇಳಿದ್ರೆ ಹೆದರಿಕೊಂಡಾರು. ಇನ್ನೊಮ್ಮೆ ಸಿಗುತ್ತೇನೆ" ಎನ್ನುತ್ತಾ ಹೊರಟೆ.

ಹೊಸಪೇಟೆಯ ಸರ್ಕಾರಿಕ್ಕೆ ನಾನು ಗ್ರಾಮಸೇವಕನಾಗಿ ಬಂದಿದ್ದೆ. ನಾನ್ತ ವ್ಯಕ್ತಿ ಮನೆಯಿರಲಿಲ್ಲ. ಅಲ್ಲಿ ಇಲ್ಲಿ ಎಲ್ಲಾ ಕಡೆಗೂ ಹುಡುಕಾಡಿದೆ. ಮನೆ ಸಿಗದ ಮೂಲಕ ಕೆಲವು ದಿನ ಹೋಟೆಲಿನಲ್ಲಿಯೇ ಉಳಿಯಬೇಕಾಯಿತು. ಆಗಾಗ ಗೋವಿಂದಜ್ಜನ ವನೆಗೆ ಹೆಚ್ಚಿಗೆ ಹೋಗಿ ಬರುತ್ತಿದ್ದೆ; ಅವ ದೂರದ ಸಂಬಂಧಿಕನೂ ಆಗಿದ್ದ.

ಆ ಮನೆಯ ಸಂಗತಿ ಗೋವಿಂದಜ್ಜನು ಹೇಳಿದ-ದಿನಿಂದ ನನ್ನ ಮನಸ್ಸಿನಲ್ಲಿ "ದೆವ್ವ"ದ ವಿಚಾರ ಸುಳಿದಾಡುತ್ತಿತ್ತು. ಅದು ಹೇಗಿದೆ? ನೋಡಲು ಸಿಗುತ್ತದೆಯೇ? ಅಥವಾ ಅದು ಸುಳ್ಳೇ ಇರಬೇಕು. ಹೀಗೆಲ್ಲಾ ವನಸ್ಸಿನಲ್ಲಿ ತಾಳಲಾಡುತ್ತಿತ್ತು.

ಕೆಲವೊಂದು ಸಂದರ್ಭದಲ್ಲಿ ನಾನು ನಿರೀಕ್ಷಿಸುತ್ತಲೂ ಇದ್ದೆ. ಎಲ್ಲಿಯಾದರೂ ಸಪ್ಪಳವಾದಾಗ ಇದು ದೆವ್ವದ ಸಪ್ಪಳ ಬೇನು ಎಂತಲೂ ಕೇಳುತ್ತಿದ್ದೆ.

ಆ ಕಪನೀಪತಿ ಸಾಧುವಿನ ಬಗ್ಗೆ ನಾನು ಹೆಚ್ಚು ವಿಚಾರ ಮಾಡುತ್ತಿದ್ದೆ. ಅವನು ಜಾಳೆ ಅಲ್ಲಿ ಬರುತ್ತಾನೆ? ದೆವ್ವವಿದ್ದರೂ ಅದನ್ನು ಎದುರಿಸಿ ಉಳಿದುಕೊಳ್ಳುವ ಶಕ್ತಿಯು ಳ್ಳವನೋ ಹ್ಯಾಗೆ? ಅವನ ಇನ್ನಿತರ ಉದ್ಯೋಗಗಳೇನು? ಅವನಿಗೆ ಯಾರು ಬಂಧು ಸಂಬಂಧವಿದೆ? ಮುಂತಾದ ವಿಷಯಗಳೂ ನನ್ನ ಅಭ್ಯಾಸದ ವಿಷಯಗಳೇ ಆದವು.

ಗ್ರಾಮಸೇವಕನಾಗಿ ಕೆಲಸ ನಿರ್ವಹಿಸಿದ ಮೇಲೆ ನನಗೆ ಅಲ್ಲಿಯ ಅನೇಕರ ಪರಿಚಯವಾಯಿತು. ನಾನೂಜಿತ ಕಾರ್ಯಕರ್ತರು, ಮುಖಂಡರ ಪರಿಚಯದ ಜೊತೆಯಲ್ಲಿ ಕಪನೀಪತಿ ಸಾಧುಗಳ ಪರಿಚಯವೂ ಆಯಿತ, ಆಗಾಗ ಅವರು ಸಿಕ್ಕಾಗೆಲ್ಲಾ ಕ್ಷೇಮ ವಿಚಾರ ಮಾಡುತ್ತಿದ್ದುದಲ್ಲದೇ "ಸ್ವಾಮಿ, ಹೋಟೆಲ್ ಊಟ ರುಚಿಸೋದಿಲ್ಲ, ಬೇಗ ಬಿಡಾರ ತೆಗೆಕೊಂಡ್ಬನ್ನಿ" ಎನ್ನುತಿದ್ದರು. ಕೆಲವೊಂದು ಸಂಭ

(ಇಸ್ತತ್ತಿಂಟನೇ ಪುಟ ನೋಡಿರಿ)

With Best Compliments from:

The United Trading Corporation & Workshop (Private) Limited,

Attavar, Nandigudde Road,

MANGALORE.

Dealers for

Hindustan Ambassador Cars.

ಭಾರತದ ಸ್ತ್ರೀಯರ ಆದರ್ಶ ಹೀಗಲ್ಲವೆ ?

ಶ್ರೀಮತಿ ಐರೋಡಿ ವಸಂತ
ಕುಮಾರಿ ಬಿ. ಎಸ್ಸಿ ಸಿ.

'ಮನದನ್ನನೊಳು ಮೂಢವನ ಭಾವಿಸೆ ನೋಳ್ಪವೆನೆ, ಸತಿಯರಿಗಿರಿದೇ ಮಹಿ?' (ಹದಿಬದೆಯ ಧರ್ಮ-೨೬)

ಪ್ರಾಣ ಜೀವನದ ಗೊಂಬೆಯಾಡಿಸುವ ಪ್ರವೃತ್ತಿ ಭಾರತೀಯ ಸ್ತ್ರೀಯರಲ್ಲಿ ಹೆಚ್ಚುತ್ತಿರುವ ಇಂದು ಸಿನೆಮಾ ತಾರೆಯರೇ ಸಂಸ್ಕೃತಿ ನಿರೂಪಕರಾಗಿದ್ದಾರೆ. ಆದರೆ, ಇದು ಭಾರತೀಯ ಸಂಸ್ಕೃತಿಗೆ ಶುಭಾರಂಭವಾಯಿತುವುದರಿಂದ, ನಮ್ಮ ಸ್ತ್ರೀಯರಿಗೆ ಭಾರತೀಯ ಆದರ್ಶವನ್ನು ತೋರಿಸಿಕೊಡುವುದು ಸ್ತ್ರೀ ಸಮಾಜದ ಕರ್ತವ್ಯ.

'ಭಾರತದ ಸ್ತ್ರೀಯರಿಗೆ ಆದರ್ಶರು ಯಾರು? ಈ ಯುಗದಲ್ಲಿ ಇವರು ಯಾರನ್ನು ಆದರ್ಶರನ್ನಾಗಿ ಮಾಡಿಕೊಂಡಿದ್ದಾರೆ? ಇಂದಿನ ಭಗಿನಿಯರು ತಪ್ಪು ಮಾರ್ಗವನ್ನು ಹಿಡಿದಿರುವರೇ? ಅವರು ತಪ್ಪು ಮಾರ್ಗವನ್ನು ಹಿಡಿದಿದ್ದರೆ ಇನ್ನಾದರೂ ಉಚಿತ ಸನ್ಮಾರ್ಗವನು ಹಿಡಿಯಲು ಸಾಧ್ಯವಿಲ್ಲವೇ?"—ಇಂತಹ ಅನೇಕ ಪ್ರಶ್ನೆಗಳನ್ನು ಭಾರತ ಸಂಸ್ಕೃತಿಯು ಮಹಿಳಾ ಸಮಾಜಕ್ಕೆ ಕೇಳುತ್ತಿದೆ. ಭಾರತದ ಸಂಸ್ಕೃತಿಯೇನೋ ಶ್ರೀ ಮದ್ರಾಮಾಯಣಕ್ಕೆ ಸೊಬಗನ್ನು ತಂದ ಸೀತಾಮಾತೆಯನ್ನೇ ಆದರ್ಶ ಸ್ತ್ರೀ ರತ್ನವೆಂದು ಎತ್ತಿ ಹಿಡಿದಿದೆ. ಆದರೆ ಇಂದಿನ ಮಹಿಳಾ ಸಮಾಜವು ತನ್ನ ಆದರ್ಶತೆಗಾಗಿ ಸಿನೇಮಾ ತಾರೆಯರ ಕಡೆಗೆ ನೋಡುತ್ತಿದೆ. ಭಾರತೀಯರು ನೀತಿ ಮತ್ತು ಗುಣಾಕ್ಕೆ ಪ್ರಾಮುಖ್ಯತೆಯನ್ನು ಕೊಡುವ ವರೆಗೆ ವರ್ತಮಾನ ಕಾಲದ ಮಹಿಳೆಯರ ದೃಷ್ಟಿಯು ದೋಷಪೂರಿತವಾದುದೆನ್ನಬೇಕಾಗುತ್ತದೆ. ಅದರೂ ಅವರು ಭಾರತದ ಉಚ್ಚ ಸಂಸ್ಕೃತಿಯ ಸರನದಿಂದ ತಮ್ಮ ಮಾರ್ಗವನ್ನು ಬದಲಿಸಲು ಸಾಧ್ಯವಿದೆ; ಭಾರತದ ಸ್ಥಾನಮಾನ ಸ್ತ್ರೀಯರ ಯಾವ ಗುಣಗಳಿಂದ ಪ್ರಾಪ್ತವಾದುವೆಂದು ಯೋಚಿಸುವುದರಿಂದ ತಮ್ಮ ಮಾರ್ಗವನ್ನು ಕದಲಿಸಲು ಸಾಧ್ಯವಿದೆ. ಸಾರಾಂಶ—ಸ್ವರ್ಣ ಭಾರತದ ಸ್ತ್ರೀ ಸಂಸ್ಕೃತಿಯು ದುರ್ವಾಸನೆಯಿಂದ ಮುಗ್ಧದಂತೆ ನೋಡುವುದು ಪ್ರತಿಯೊಬ್ಬ ಮಹಿಳೆಯ ಆದ್ಯ ಕರ್ತವ್ಯ.

ಭಾರತದ ನಾರಿಯರ ಜೀವನದಲ್ಲಿ ಹಾಸು ಹೊಕ್ಕಾದ ಸಿನೆಮಾ ನಟಿಯರಲ್ಲಿ ಹಲವರು ಭಾರತ ಸಂಸ್ಕೃತಿಯ ಕಗ್ಗೊಲೆಗಾಗಿಯೇ ಜನಿಸಿದವರು. ಅವರಿಗೆ ನಗ್ನತೆ—ಲಜ್ಜಾ ಹೀನತೆಯೇ ಅಲಂಕಾರ; ವಿಷಯ ಸುಖಗಳ ಪ್ರಚೋದನೆಯೇ ಅವರ ಜೀವನದ ಪಂಚಪ್ರಾಣ. ಇವುಗಳ ಪ್ರಚಾರವೇ ಅವರ ಜೀವನದ ಧ್ಯೇಯ! ಹೀಗೆ ಸ್ತ್ರೀ ಸಂಸ್ಕೃತಿಯ ಚಿತ್ರ ಹಿಂಸೆಯು ಸಿನೆಮಾಗಳ ಮೂಲಕ ಏಕ ಪ್ರಕಾರವಾಗಿ ಪ್ರಚಾರವಾದರೆ ಇನ್ನೆರಡು ಮೂರು ದಶಕಗಳಲ್ಲೇ— ಶಾರುಣ್ಯವನ್ನು ಪ್ರವೇಶಿಸುವ ನಮ್ಮ ಬಾಲೆಯರಿಗೆ ಅವರೇ ಆರಾಧ್ಯ ದೇವತೆಗಳಾಗುವುದರಲ್ಲಿ ಸಂದೇಹವಿಲ್ಲ. ಭಾರತದ ಪ್ರಾಚೀನ ಸ್ತ್ರೀ ಸಂಸ್ಕೃತಿಯ ಹಿರಿಮೆಯನ್ನು ಹೇಳುವವರೂ ಕೇಳುವವರೂ ಇಲ್ಲದಿದ್ದ ಮೇಲೆ ಆ ಏಕಪಕ್ಷದ ಪ್ರಚಾರವು ಜಯಶೀಲವಾಗಿಯೇ ತೀರ ಬೇಕಾಗುತ್ತದೆ. ಅದನ್ನು ನಮ್ಮ ಮಹಿಳಾ ಜಗತ್ತು ತಡೆಗಟ್ಟಿ ಭವ ತರಣಿಯವಂಗೆ ಸನ್ಮಾರ್ಗ ದರ್ಶಕರಾಗಬೇಕು. ಸ್ತ್ರೀಯರೆಲ್ಲಾ ಸಿನೆಮಾ ನಟಿಯರ ಅಧ್ಯಾತ್ಮ ವರ್ತನೆಗಳನ್ನು 'ಶಾಂಪಾಂ ಪಾಪಂ' ಎನ್ನುವುದರಿಂದ, ಮಾತೃತರಸ್ಕರಿಸುವುದರಿಂದ ನಮ್ಮ ಮಹಿಳಾ ಜಗತ್ತಿಗೆಂದಿಗೂ ಕ್ಷೇಮವಾಗದು; ಅದು ಸಾಂಕಷ್ಟ ಫಲ ಕೊಡದು. ಇಂತಹ ಸಿನೇಮಾ ನಟಿಯರಿಂದಲೇ ಊರಲ್ಲೆಲ್ಲಾ ಬೀಸಿಯ ಕಾಮಣ್ಣರ ಸಂಖ್ಯೆ ಏರುತ್ತಿದೆ. ಇದನ್ನು ಮಹಿಳೆಯರು ಯೋಚಿಸಬೇಕಾದ ವಿಚಾರ.

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಸ್ತ್ರೀಯರು ಗೌರವಿಸಲ್ಪಡುವಲ್ಲೆಲ್ಲಾ ದೇವತೆಗಳೂ ಸಂತೋಷಹೊಂದುತ್ತಾರೆ. ಗೌರವಿಸಲ್ಪಡುವ ಸ್ತ್ರೀಯರು ಭಾರತ ಸಂಸ್ಕೃತಿಯ ಪೋಷಕರಾಗಬೇಕು. ಇಂತಹ ಸ್ತ್ರೀಯರ ಕುರಿತೇ ಸ್ವಾಮಿ ವಿವೇಕಾನಂದರು ಒಂದು ಭಾಷಣದಲ್ಲಿ 'ಶ್ರೀ ರಾಮನಂತಹ ಪುರುಷರು ಹಿಂದೆ ಹುಟ್ಟಿದ್ದಾರೆ; ಮುಂದೆ ಹುಟ್ಟಲೂ ಸಾಧ್ಯವಿದೆ. ಆದರೆ ಸೀತಾದೇವಿಯಂತಹ ನಾರೀಮಣಿ ಜಗತ್ತಿನ ಆದಿಯಿಂದಲೂ ಹುಟ್ಟಿರಲಿಲ್ಲ. ಮುಂದೆ ಹುಟ್ಟುವ ಭರವಸೆಯೂ ಇಲ್ಲ." ಎಂಬುದನ್ನು ಭಾರತದ ಯಾವ ಮಹಿಳೆಯೂ ಮರೆಯಲು ಸಾಧ್ಯವುಂಟೇ? ನಮ್ಮ ಪ್ರಾಚೀನ ಇತಿಹಾಸದಲ್ಲಿ ದ್ರೌಪದಿ, ಸಾವಿತ್ರಿ, ದಮಯಂತಿ, ಚಂದ್ರಮತಿ, ವೈಶ್ರೀಯ ಮೊದಲಾದವರೆಲ್ಲಾ ಜ್ವಲಂತ ಸ್ತ್ರೀ ರತ್ನವೆನ್ನಿಸಿದ್ದರೂ, ಇವರಾರೂ ಮಹಾಮಾತೆ ಸೀತಾದೇವಿಯ ತೂಕಕ್ಕೆ ಬರಲಾರರು. ಈಕೆಯು ವಾಲ್ಮೀಕಿಯ ದೃಷ್ಟಿಯಲ್ಲೂ ಸ್ವರ್ಗ ಸೀಮೆಯ ದಿವ್ಯದೇವತೆ! ಅಂತಹ ಜನಾದ ಶ್ರೀ ರಾಮನು ಒಬ್ಬರ ಜಕನ ಮಾತಿಗೆ ಕಿವಿಗೊಟ್ಟು ತನ್ನ ಧರ್ಮ ಪತ್ನಿಯಾದ ಸೀತೆಯನ್ನು ಅರಣ್ಯಕ್ಕೆ ಬಲಿಯ

(ಇಪ್ಪತ್ತೇಳನೇ ಪುಟ ನೋಡಿರಿ)

ದಿ ಶಂಕರ್ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್
ಮಂಗಳೂರು
(ದಕ್ಷಿಣ ಕನ್ನಡ ಜಿಲ್ಲೆ)

ಹತ್ತೊಂಭತ್ತನೆಯ ಗಣರಾಜ್ಯ ದಿನದಂದು
ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED
MANGALORE

ಪ್ರೊ. ಎಂ. ಎಸ್. ಎಸ್. ರಾವ್

ವಿಜ್ಞಾನ ಮತ್ತು ಆಧುನಿಕ ಯುದ್ಧ ಕಲೆ

ದ್ವಿತೀಯ ಜಾಗತಿಕ ಯುದ್ಧವನ್ನು ಅಟಂಬಾಂಬು ಕೊನೆಗೊಳಿಸಿತು; ಆದರೆ, ಅದರ ಪರಿಣಾಮವನ್ನು ಇನ್ನೂ ಜನ ಉಣ್ಣುತ್ತಿದೆ. ವಿಜ್ಞಾನವು ಅಭಿವೃದ್ಧಿಗೊಳ್ಳುತ್ತ ಬಂದಂತೆ, ಯುದ್ಧ ಕಲೆಯೂ ಸಂಪೂರ್ಣನೆ ಹೊಂದುತ್ತಿದೆ. ಆಧುನಿಕ ಯುದ್ಧವೆಂದರೆ, ಬಾಂಬು ಸುರಿಸಿ ನಾಶ ಮಾಡುವುದು ಮಾತ್ರವಲ್ಲ; ಚಿತ್ರ ಹಿಂಸೆಯೂ ಸಾಧ್ಯ; ಅಂದರೆ, ಅದಷ್ಟು ಭೀಕರ! ಪ್ರಳಯಂಕರ! ಇದು ಹೇಗೆ?

ಹಿಂದಿನ ಕಾಲದಲ್ಲಿ ನಡೆಯುತ್ತಿದ್ದ ಯುದ್ಧಗಳಿಂತೆ ಇಂದಿನ ಯುದ್ಧ ವೈಖರಿ ಮತ್ತು ಅದರ ತಾಂತ್ರಿಕ ಕಲೆ ತೀವ್ರ ಭಿನ್ನವಾಗಿದೆ! ಆಧುನಿಕ ಯುದ್ಧವು ಹೆಚ್ಚೆಚ್ಚು ಶಾಸ್ತ್ರೀಯ ಮತ್ತು ಯಾಂತ್ರಿಕ ಸ್ವರೂಪದ್ದೂ ಆಗಿದೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಆಧುನಿಕ ರೀತಿಯ ಯುದ್ಧವನ್ನು ವೈಜ್ಞಾನಿಕ ಮತ್ತು ಯಂತ್ರಸಾಧನಗಳಿಂದ ನಡೆಸಲಾಗುತ್ತದೆ. ಇಂದಿನ ಯುದ್ಧವು ಅಷ್ಟಾಗಿ ಸೈನಿಕ ಸೈನಿಕರ ನಡುವೆ ನಡೆಯದೆ, ಹೆಚ್ಚಾಗಿ ಯಂತ್ರ ಸಾಧನಗಳ ನಡುವೆಯೇ ಆಗುತ್ತದೆ. ಇಂತಹ ಯುದ್ಧದಲ್ಲಿ ಒಬ್ಬೊಬ್ಬ ಸೈನಿಕನ ಪರಾಕ್ರಮ, ಧೈರ್ಯ, ಸಾಹಸ ಮುಂತಾದುವುಗಳಿಗೆ ಅಷ್ಟು ಮಹತ್ವವಿಲ್ಲ. ಇಂದಿನ ಯುದ್ಧದಲ್ಲಿ ಹೋರಾಡುವ ಸೈನಿಕರು ಶಸ್ತ್ರಗಳನ್ನು ಕೊಂಡು ನಾಶ ಮಾಡಲು ಅನೇಕ ಬಗೆಯ ಮಾರಕ ಯಾಂತ್ರಿಕ ಸಾವಗ್ರಿಗಳನ್ನು ಬಳಸಿಕೊಳ್ಳುವುದುಂಟು. ಹೀಗಾಗಿ ಇಂದಿನ ಕಾಲದಲ್ಲಿ ಸೈನಿಕರ ವಿಜಯವೆಂಬುದು ಹೆಚ್ಚಾಗಿ ಉತ್ತಮ ತರದ ಮಾರಕ ಯಂತ್ರ ಸಾಮಗ್ರಿ ಸಲಕರಣೆಗಳನ್ನೇ ಅವಲಂಭಿಸಿರುತ್ತದೆ.

ಇನ್ನೂ ಒಂದು ವಿಷಯ. ಆಧುನಿಕ ರೀತಿಯ ಯುದ್ಧವೆಂಬುದು ಯಾವಾಗ ಬೇಕಾದರೂ ಜಗತ್ತಿನಾದ್ಯಂತ ಪಸರಿಸಬಲ್ಲ ಸಾಧ್ಯತೆಯನ್ನು ಹೊಂದಿರುತ್ತದೆ. ಶೀಘ್ರ ವೇಗದ ಸಂಚಾರ ಸಾಗಾಣಿಕೆ ಸೌಲಭ್ಯಗಳ ಶೋಧದಿಂದ ವಿಜ್ಞಾನವು ದೂರದೂರ ಪ್ರದೇಶದಲ್ಲಿ ನಡುವೆ ಇರುವ ಅಂತರವನ್ನು ಬಹು ಮಟ್ಟಿಗೆ ಮೊಟುಕುಗೊಳಿಸಿದೆ. ವಿಮಾನ ಸಂಚಾರ ಸಾಗಾಣಿಕೆಗಳಲ್ಲಿ ಹೆಚ್ಚಿನ ವೇಗ ಮಿತಿಯನ್ನು ಸಾಧಿಸಿರುವುದರಿಂದ ಜಗತ್ತು ಹಿಂದೆಂದಿಗಿಂತಲೂ ಇಂದು ಕಿರಿದಾದಂತೆ ಭಾಸವಾಗುತ್ತದೆ. ಈ ಕಾರಣದಿಂದ ಯಾವುದೇ ಎರಡು ದೇಶಗಳ (ರಾಷ್ಟ್ರ) ಕಡುವೆ ಯುದ್ಧದ ಕಿಡಿ ಹಾರಿತೆಂದರೆ, ಅದು ಇತರ ದೇಶಗಳಿಗೂ ಪಸರಿಸಬಹುದಲ್ಲದೇ ಆ ದೇಶಗಳನ್ನು ಯುದ್ಧಕುಂಡದೊಳಗೆ ಸೆಳೆದು ಕೊಳ್ಳಬಲ್ಲದು.

ಇಂದಿನ ವೈಜ್ಞಾನಿಕ ರೀತಿಯ ಯುದ್ಧವು ನಾಗರಿಕ ಮತ್ತು ಸೈನಿಕಪಡೆಯವರಿಬ್ಬರನ್ನೂ ಬಳಗೊಳ್ಳುತ್ತದೆ. ವೈಜ್ಞಾನಿಕ ರೀತಿಯ ಯುದ್ಧವು ಹೆಸರಿಗೆ ಯುದ್ಧ ಭೂಮಿಯೆನಿಸಿಕೊಂಡ ಜಾಗದಲ್ಲಿಷ್ಟೇ ಅಲ್ಲದೆ, ಸಾಮಾನ್ಯ ನಾಗರಿಕರು ಅಂತಹ ಹೋರಾಟಕ್ಕೆ ಎಳೆಪ್ಪೂ ಸಂಬಂಧಿಸಿರದಿದ್ದರೂ, ಅವರ ಮನೆ, ಮಂದಿರಗಳ ವರೆಗೂ ವಿಸ್ತರಿಸಲ್ಪಡುತ್ತದೆ. ಇದರಿಂದ ಯುದ್ಧದಲ್ಲಿ ತೊಡಗಿದ ಇಡೀ ರಾಷ್ಟ್ರದ ಜನತೆಯನ್ನು ಗಾಬರಿಗೊಳಿಸುವಂತೆಯೂ, ಅನ್ಯೈರ್ಯಗೊಳಿಸುವಂತೆಯೂ ಮಾಡುತ್ತದೆ. ಕಳೆದ ಎರಡನೆ ಮಹಾಯುದ್ಧದಲ್ಲಿ ಇಂಗ್ಲೆಂಡ್ ದೇಶವೊಂದರಲ್ಲಿಯೇ ಪ್ರತಿನಿತ್ಯ ರಾತ್ರಿ ೫೦-೧೦೦ ಬಾಂಬರ ವಿಮಾನಗಳು ಬಾಂಬುಗಳನ್ನೆಸೆದು ದಾಳಿಮಾಡುತ್ತಿದ್ದುವೆಂದು ತಿಳಿದುಬಂದಿದೆ. ಇಂತಹ ದುಷ್ಕೃತ್ಯದಿಂದ ಇಂಗ್ಲೆಂಡ್ ದೇಶದ ನಾಗರಿಕರ ಜೀವನಕ್ಕೆ ಭಕ್ಷೆಯಾಗುತ್ತಿದ್ದ ಪ್ರಮಾಣವನ್ನು ಊಹಿಸಿಕೊಳ್ಳಬಹುದು. ಹೀಗೆ ಎಷ್ಟೋ ಮುಗ್ಧ ಹಾಗೂ ನಿಷ್ಪಾಪ ಮಕ್ಕಳು, ವೃದ್ಧರು ಮತ್ತು ಸ್ತ್ರೀಯರು ಕೂಡ ವೈಜ್ಞಾನಿಕ ರೀತಿಯ ಯುದ್ಧದಲ್ಲಿ ಜೀವಕ್ಕೆ ಎರವಾಗುವುದು ಸಾಮಾನ್ಯ ಮತ್ತು ಅನಿವಾರ್ಯ.

ಆಧುನಿಕ ರೀತಿಯ ಯುದ್ಧದ ಅತ್ಯಂತ ಗಮನಾರ್ಹವಾದ ಹಾಗೂ ಭೀಕರವಾದ ವಿಷಯವೆಂದರೆ, ಅದರ ಬೃಹದ್ವ್ಯಾಪಕ ವಿನಾಶಕಾರಕ ಶಕ್ತಿ. ಅದು ವೈಜ್ಞಾನಿಕ ಪರಿಣಾಮಗಳ ನೇರ ಪರಿಣಾಮವಷ್ಟೇ! ವಿನಾಶಕಾರಕ ಶಕ್ತಿಯುಳ್ಳ ಅಸಂಖ್ಯ ಸಾಧನೋಪಕರಣಗಳು ವಿಜ್ಞಾನದ ಪರಿಶ್ರಮದಿಂದಾಗಿ ಅಸ್ತಿತ್ವಕ್ಕೆ ಬಂದಿವೆ. ಸಬ್‌ಮೆರಿನ್‌ಗಳು, ಸುರಂಗ ತೋಡುವ ಸ್ಫೋಟಕ ವಸ್ತುಗಳು, ಟ್ಯಾಂಕುಗಳು, ದೂರದೂರದ ವರೆಗೆ ಸುರಿಯಬಹುದಾದ ಬಂದೂಕುಗಳು, ಭೀಕರ ಸ್ಫೋಟಕ ದ್ರವ್ಯಗಳು, ವಿಷಪೂರಿತ ವಾಯುಗಳು, ಮತ್ತು ವಾಯುವಿನಲ್ಲಿ ಹಾರಾಡುವ, ತೂರಾಡುವ ಬಾಂಬುಗಳು, ಇವೇ ಮೊದಲಾದುವು ಯುದ್ಧದಲ್ಲಿ ತೊಡಗಿಸಬಹುದಾದ ಮಾರಕ ಅಸ್ತ್ರಗಳು, ಆಯುಧಗಳು.

ಅಂದ ಮೇಲೆ ಆಧುನಿಕ ಯುದ್ಧವೆಂದರೆ ಒಂದು ಪರಿಪೂರ್ಣ ಹಾಗೂ ಬಹುಮುಖ ಸ್ವರೂಪದ ಯುದ್ಧವೆಂತಲೇ ಹೇಳಬೇಕು. ಇನ್ನೊಂದು ರೂಪದಲ್ಲಿ ಹೇಳುವುದಾದರೆ, ನಮ್ಮ ಇಂದಿನ ಕಾಲದಲ್ಲಿ ನಡೆಯುವ ಯುದ್ಧವು ಬರೀ ನೆಲದ ಮೇಲಷ್ಟೇ ನಡೆಯುವುದೆಂದರ್ಥವಲ್ಲ. ಅದು ಸಮುದ್ರದ ಮೇಲೆ ಮತ್ತು ವಾಯುವಿನಲ್ಲಿ ಕೂಡ ನಡೆಯುವ ಹೋರಾಟ. ವಿಧ್ವಂಸಕ ನೌಕೆಗಳು, ಸಬ್‌ಮೆರಿನ್‌ಗಳು, ಸಾಗಾಣಿಕೆ ವಿಮಾನಗಳು, ಸ್ಫೋಟಕ ವಸ್ತುಗಳು, ಮುಂಬಾಂಬುಗಳು ಸಮುದ್ರದ ಮೇಲೆ ಬಳಸುವ ವಿಧ್ವಂಸಕ ಸಾಧನಗಳು, ಜೆಟ್ ಬಾಂಬರುಗಳು ಮತ್ತು ಶಬ್ದವೇಗದಲ್ಲಿ ಹಾರುವ ವಿಮಾನಗಳು, ವಾಯುವಿನಲ್ಲಿ ಹಾರಾಡಿ, ಭೂಮಿಯ ಮೇಲೆ ಸಾಕಷ್ಟು ಹಾನಿಯನ್ನುಂಟುಮಾಡಬಲ್ಲವು. ಸ್ವಲ್ಪದರಲ್ಲಿಯೇ ಹೇಳುವುದಾದರೆ ವೈಜ್ಞಾನಿಕ ರೀತಿಯ ಸೋರಾಡುವ ಯುದ್ಧದಲ್ಲಿ ಜನರ ವಿತ್ತ ಜೀವಗಳಿಗೆ ರಕ್ಷಣೆಯೆಂಬುದೇ ಇಲ್ಲ. ಹೀಗೆ ವೈಜ್ಞಾನಿಕ ರೀತಿಯ ಯುದ್ಧದಲ್ಲಿ ಇಡೀ ದೇಶವೇ—ಹಲವು ಸಾರಿ, ಅನೇಕ ದೇಶಗಳು ಕೂಡ—ಯುದ್ಧಜ್ವಾಲೆ ಅಥವಾ ಕುಂಡದಲ್ಲಿ ಸಿಕ್ಕಂತಾಗುತ್ತದೆ.

ಕಳೆದ ಎರಡನೆಯ ಮಹಾಯುದ್ಧ ಮುಗಿದ ನಂತರ ಅಣ್ವಸ್ತ್ರಗಳ ವಿನಾಶಕಾರಕ ಶಕ್ತಿಯನ್ನು ವರ್ಧಿಸಲು ಅತ್ಯಂತ ತೀವ್ರ ಗತಿಯಲ್ಲಿ ಸಂಶೋಧನೆಗಳು ಮುಂದುವರಿಯುತ್ತವೆ. ಹಿರೋಶಿಮ ಮತ್ತು ನಾಗಸಾಕಿಗಳ ಮೇಲೆ ಹಾಕಿದ ಅಣುಬಾಂಬುಗಳು ಈಗಿನ ಹಳೆಯ ಮಾತಾಗಿ ಸತ್ವರಹಿತವೂ ಆಗಿದೆಯೆಂದು ಪರಿಗಣಿಸಲಾಗಿದೆ. ಅದಕ್ಕಿಂತಲೂ ಹೆಚ್ಚು ವಿಧ್ವಂಸಕ ಶಕ್ತಿಯುಳ್ಳ ಜಲಜನಕ ಬಾಂಬು ಈಗ ಸಿದ್ಧವಾಗಿದೆ. ಈಗೀಗ, ಸಾವಿರಾರು ಟನ್ನುಗಳಷ್ಟು ವಿಧ್ವಂಸಕ ಶಕ್ತಿಯುಳ್ಳ (ಟಿ. ಎನ್. ಟಿ.) ಬಾಂಬುಗಳನ್ನು ವಿಜಾರ ಮಾಡುತ್ತಿಲ್ಲ. ಲಕ್ಷಲಕ್ಷ ಟನ್ನುಗಳಷ್ಟು ಪ್ರಮಾಣದಲ್ಲಿ ಭೀಕರವೂ ವಿನಾಶಕಾರಿಯೂ ಆದ ಬಾಂಬುಗಳನ್ನು ನಿರ್ಮಿಸುವ ಸಿದ್ಧತೆಗಳೂ ನಡೆಯುತ್ತಿವೆ. ಅದರಿಂದ ೫೦ ಮೆಗಟನ್ ೧೦೦ ಮೆಗಟನ್‌ಗಳಷ್ಟು ತೂಕವುಳ್ಳ ಬೃಹತ್ ಬಾಂಬುಗಳನ್ನು ಈಗಾಗಲೇ ಶೋಧಿಸಲಾಗಿದೆ. ಅಂತಹ ಬಾಂಬುಗಳ ಅವಾರ ಸಂಗ್ರಹವು ಈಗೀಗ ಅಮೆರಿಕ ಮತ್ತು ರಶ್ಯ ದೇಶಗಳಲ್ಲಿ ಕಾರ್ಯರೂಪಕ್ಕೆ ಬಂದಿದೆಯೆಂದು ತಿಳಿದುಬಂದಿದೆ.

ಅಣುಶಕ್ತಿಯ ಶೋಧದಿಂದ ಹಾಗೂ ಅದರ ಮೂಲಕ ಅಣುಬಾಂಬುಗಳ ಸೃಷ್ಟಿಯಿಂದ ಯುದ್ಧಕಲೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾದಂತಾಗಿದೆ. ಕಳೆದ ಎರಡನೆಯ ಮಹಾಯುದ್ಧದಲ್ಲಿ ಜಪಾನ್ ದೇಶದ ಹಿರೋಶಿಮ ಮತ್ತು ನಾಗಸಾಕಿ ಪ್ರದೇಶಗಳ ಮೇಲೆ ಎಸದ ಎರಡು ಅಣುಬಾಂಬುಗಳಿಂದ ಅವಾರ ಜೀವಹಾನಿ ಮತ್ತು ಆಸ್ತಿ ಹಾನಿ ಉಂಟಾಯಿತು. ಹಿರೋಶಿಮದಲ್ಲಿ ಸುಮಾರು ೮೦,೦೦೦ ಜನರು ಸತ್ತರೆಂದು ವರದಿಯಾಗಿದೆ. ಹೀಗೆ ಅಣುಬಾಂಬು ಅಕ್ಷರಶಃ ಸರ್ವ ಪ್ರಾಣಿ ಮಾನವರಂತಿಯಾಗಿ ಎಲ್ಲ ಸಜೀವಗಳವೆಲೂ ವಿನಾಶವೆಂಬ ಹೊದಿಕೆಯನ್ನು ಹರಡಿತು.

ಹಿರೋಶಿಮದ ಮೇಲೆ ನಡೆದ ದಾಳಿಯ ನಂತರ ಬೋಕಿಯೋದ ಆಕಾಶವಾಣಿಯು ಹೀಗೆ ವರದಿ ಮಾಡಿದೆ—

"ಸತ್ತವರನ್ನು ಗುರುತಿಸಲಿಕ್ಕೆ ಸಾಧ್ಯವಿಲ್ಲದಷ್ಟು ದೇಹಗಳು ಸುಟ್ಟು ಭಸ್ಮವಾಗಿವೆ. ಇದರಿಂದ ಅಧಿಕಾರಿಗಳಿಗೆ ನಾಗರಿಕರ ಸುಗಣ ಸಂಖ್ಯೆಯನ್ನೇ ನಿಗದಿಪಡಿಸುವುದು ದುಸ್ತರವಾಯಿತು."

ಅಳಿದುಳಿದ ಹಬವಾರು ಜನರ ಪೈಕಿ ಕೆಲವರು ತಾವು ಸುರಕ್ಷಿತವಾಗಿ ಪಾರಾದೆವೆಂದು ಭಾವಿಸಿದವರು ಕೂಡ, ಅನಂತರ ಕೆಲಕಾಲದ ಮೇಲೆ ಸತ್ತು ಕೂದಲು ಉದುರುತ್ತಿರುವುದಾಗಿಯೂ, ಇನ್ನು ಕೆಲವರು ಅತ್ಯಂತ ಕೃಶಕ್ತರಾದುದಾಗಿಯೂ, ಮತ್ತೆ ಕೆಲವರು ರಕ್ತಹೀನತೆಯಿಂದ ಬಳಲುತ್ತಿರುವುದಾಗಿಯೂ ಕಂಡುಕೊಂಡರು. ಬಾಂಬುಗಳಿಂದ ಉತ್ಪನ್ನವಾದ ಉಷ್ಣತೆಯ ಜ್ವಾಲೆಯು ದೂರದೂರದಲ್ಲಿರುವ ವಸ್ತುಗಳನ್ನು ಸಹ ಸುಟ್ಟು ಭಸ್ಮ ಮಾಡಿತು. ಒಂದೊಂದು ಬಾಂಬು ಕೂಡ ೨೦,೦೦೦ ಟನ್ನುಗಳಷ್ಟು 'ಡೈನಮೈಟ್' ಅಥವಾ 'ಟಿ.ಎನ್.ಟಿ.' ಯಂತಹ ಸ್ಫೋಟಕ ವಸ್ತುಗಳ ಶಕ್ತಿ ಪಡೆದಿತ್ತಂತೆ. ಹಿರೋಶಿಮದ ಮೇಲೆದಾಳಿ ಮಾಡಿದ ಬಾಂಬಲ್ಲಿದ್ದ ಸ್ಫೋಟಕ ವಸ್ತು "ಯುರೇನಿಯಂ ೨೩೫" ಎಂಬುದಾಗಿತ್ತು, ನಾಗಸಾಕಿಯ ಮೇಲೆ ದಾಳಿಮಾಡಿದ ಬಾಂಬಿನಲ್ಲಿ ಇದ್ದ ಸ್ಫೋಟಕ ವಸ್ತುವೇ "ಪ್ಲುಟೋನಿಯಂ".

ಈಗೀಗ ಸೃಷ್ಟಿಸಲಾಗಿರುವ ಭೀಕರ ಬಾಂಬುಗಳಲ್ಲಿ ಜಲಜನಕ ಬಾಂಬುಗಳು ಕೂಡ ಅಷ್ಟೇನೂ ಮಹತ್ವದವಲ್ಲ ಎಂದು ಭಾವಿಸಲಾಗುತ್ತದೆ. ರಷ್ಯ ಮತ್ತು ಅಮೆರಿಕ ದೇಶಗಳು ಮೂರು ಹಂತಗಳುಳ್ಳ ಒಂದು ಹೊಸ ಬಗೆಯ ಬಾಂಬನ್ನು (Sandwich or Triple Bomb) ವೈಜ್ಞಾನಿಕ ಪ್ರಯೋಗಗಳಿಂದ ಸಿದ್ಧಪಡಿಸುತ್ತಿರುವುದಂತೆ. ಅದರಲ್ಲಿ ಅಣುವಿಭಜನೆ, ಸಂಯೋಜನೆ, ಮತ್ತೆ ವಿಭಜನೆ ಈ ರೀತಿ ಹಂತ ಹಂತಗಳಲ್ಲಿ ರೂಪಾಂತರ ಹೊಂದುವ ವ್ಯವಸ್ಥೆ ಮಾಡಲಾಗಿದೆ. ಇಂತಹ ಯೋಜನೆಯಲ್ಲಿ ಜಲಜನಕಬಾಂಬಿಗೆ ಯುರೇನಿಯಂ ೨೩೫ ಎಂಬ ವಸ್ತುವಿನ ಲೇಪನವನ್ನು ಕೊಡಲಾಗುತ್ತದೆ. ಇದರಿಂದ ಅಂತಹ ಬಾಂಬುಗಳು ಇನ್ನಷ್ಟು ಹೆದರಿಕೆಟ್ಟ. ಶತ್ರುರಾಷ್ಟ್ರಗಳ ಮೇಲೆ ದಾಳಿ ಮಾಡಲು ಅವನ್ನು ಉಪಯೋಗಿಸಿದಾಗ, ಅಣುವಿಕಿರಣ ಹೊಂದಿ ವಿಭಜನೆಗೊಳ್ಳುವ ವಸ್ತುಗಳು ಜಗತ್ತಿನಾದ್ಯಂತ ಚಲ್ಲಾಪಿಲ್ಲಿಯಾಗಿ ಹರಡುವ ಸಾಧ್ಯತೆ ಇದೆ.

ಇದರ ಕಥೆ ಇಷ್ಟಕ್ಕೇ ಮುಗಿದಿಲ್ಲ. ಜೀವ ರಾಸಾಯನಿಕ ಗಂಡಾಂತರ ನಿಯಮಗಳನ್ನು ಬಳಸಿಕೊಂಡು ಬಂದು ಹೊಸ ಬಗೆಯ ಯುದ್ಧವನ್ನೇ ಹೂಡುವ ಸಾಧ್ಯತೆಗಳೂ ಇಲ್ಲದಿಲ್ಲ; ಅಂದರೆ ಬಾಂಬುಗಳಲ್ಲಿ ಬೆಕ್ಟೀರಿಯ, ಮತ್ತು ವೈರಸ್ ಎಂಬ ರೋಗಾಣುಗಳನ್ನು ತುಂಬಿ ದೇಶದೇಶಗಳಮೇಲೆ ದಾಳಿ ಮಾಡಿದಾಗ, ಅದರಿಂದ ವಿಶಾಲ ಜನತೆಯ ಮೇಲೆ ಭೀಕರ ಹಾಗೂ ಸಿಡುಗು ರೋಗಗಳಷ್ಟು ಉಂಟು ಮಾಡುವುದರಿಂದಲೂ, ಭೂಮಿ, ಗಾಳಿ, ಪ್ರಾಣಿ ಮತ್ತು ಬೆಳಗಳ ಮೇಲೆ ವಿಷ ವಸ್ತುಗಳನ್ನು ಚೆಲ್ಲಿ ಸಾಮೂಹಿಕವಾಗಿ ನಾಶ ಮಾಡುವುದರಿಂದಲೂ ಸ್ತ್ರೀ ಪುರುಷರನ್ನು ನಿರ್ವೀರ್ಯರೂ ಅಶಕ್ತರೂ, ರಕ್ತಹೀನರೂ ದೈಹಿಕ ಹಾಗೂ ಮಾನಸಿಕ ರೋಗಗಳಂತಹ ವಿಕಾರಗಳಿಗೆ ಬಳಗಾದವರೂ ಆಗುವಂತೆ ಮಾಡಿ, ಸಾಮೂಹಿಕ ಕಗ್ಗೊಲೆ ಹಾಗೂ ಪ್ರಳಯ ತಾಂಡವವಾಡುವಂತೆ ಮಾಡಬಲ್ಲದು. ಇದನ್ನೆಲ್ಲ ನೋಡಿದರೆ ಜೀವ ಶಾಸ್ತ್ರದ ಕೆಲವು ಗಂಡಾಂತರ ನಿಯಮಗಳ

(ಇಪ್ಪತ್ತಾರನೇ ಪುಟ ನೋಡಿರಿ)

ಶಿಕ್ಷಣ ಎತ್ತ ಸಾಗಿದೆ ?

ಸರ್ವಾಂಗೀಣ ಕ್ರಾಂತಿಯೇ ಭಾರತದ ದುಗುಡ ದುಮ್ಮಾನಗಳ ಪರಿಹಾರ ಮಾರ್ಗವೆಂಬ ಸ್ವರವೇಳುತ್ತಿದೆ. ಭಾವಿ ಜನಾಂಗ ನಿರ್ಮಿಸುವ ಪರಮ ಪವಿತ್ರ ಕ್ಷೇತ್ರವಾದ ಶಿಕ್ಷಣದಲ್ಲೂ ಬಲವತ್ತರ ಕ್ರಾಂತಿಯಾಗಬೇಕು; ಪಾಶ್ಚಾತ್ಯ ಸಾಹಿತ್ಯ— ಸಂಸ್ಕೃತಿ —ಮೋಹಗಳ ಅನುಕರಣೆಯಿಂದ ಅರೆ ಭಿರಂಗಿಯವರಾದ ಭಾರತೀಯರನ್ನು ಸ್ವೇಚ್ಛ ಭಾರತೀಯರನ್ನಾಗಿ ಮಾಡುವುದೇ ನಮ್ಮ ಶಿಕ್ಷಣದ ಗುರಿಯಾಗಬೇಕು. ಇದನ್ನು ಹೇಗೆ ಸಾಧಿಸಬಹುದು?

ಶ್ರೀ ಬ. ನ. ಸುಂದರರಾಯರು

ಭಾರತದಲ್ಲಿಂದು ಪ್ರಚಲಿತವಾಗಿರುವ ಶಿಕ್ಷಣ ಪದ್ಧತಿ ಬ್ರಿಟಿಷರ ಕಾಲದಿಂದ ನಡೆದು ಬಂದದ್ದು. ಬ್ರಿಟಿಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಈ ಬಗೆಯ ಶಿಕ್ಷಣ ಪದ್ಧತಿಯನ್ನು ಪ್ರಾರಂಭಿಸಿದ ಉದ್ದೇಶವೇ ಬೇರೆ. ಬ್ರಿಟಿಷ್ ದಳಗಳಿಗೆ ತಲೆಬಾಗಿ, ಅವರು ಹೇಳಿದಂತೆ ಕೇಳುವ ಕೇವಲ ಗುಲಾಮರ ಸೈನ್ಯವನ್ನು ಸೃಜಿಸುವದೇ ಆ ಶಿಕ್ಷಣ ಪದ್ಧತಿಯ ಉದ್ದೇಶವಾಗಿತ್ತು. ಆಗ "ಸಂಸ್ಕೃತಿ" ಎಂಬ ಆಕರ್ಷಕ ಪದದಿಂದ ಭಾರತೀಯರನ್ನು ಮುಗ್ಧಗೊಳಿಸಿ, ಕೇವಲ ಸಾಹಿತ್ಯಪ್ರದವಾದ ಶಿಕ್ಷಣವನ್ನು ಮಾತ್ರ ಕೊಡಲಾಯಿತು. ಈ ಶಿಕ್ಷಣ ಪದ್ಧತಿ ನಮ್ಮ ಆವಶ್ಯಕತೆಗಳನ್ನೂ ಕುಂದು ಕೊರತೆಗಳನ್ನೂ ಪರಿಹರಿಸುವಂಥದಾಗಲಿಲ್ಲ. ದೇಶಾಭ್ಯುದಯಕ್ಕೆ ಸಾಧಕವಾಗುವಂತಹ ಕಾರ್ಯದಳಿಗೆ ಬೆಂಬಲ ಕೊಡುವುದಕ್ಕೆ ಮತ್ತು ದೈಹಿಕ ದುಡಿಮೆಗೆ ಪ್ರತಿಯಾದ ಒಂದು ಮನೋಭಾವವನ್ನು ಈ ಶಿಕ್ಷಣ ಪದ್ಧತಿ ಬೆಳೆಸಿತು. ತತ್ಪರಿಣಾಮವಾಗಿ ಸಾಹಿತ್ಯಾಭಿರುಚಿಯುಳ್ಳ ಕೆಲ ಜನರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಬಹಳ ಶ್ರದ್ಧೆಯಿಂದ ಮಾಡಿ, ದೊಡ್ಡ ಅಧಿಕಾರ ಮತ್ತು ಪದವಿಗಳನ್ನು ಬ್ರಿಟಿಷ್ ಸರ್ಕಾರದಲ್ಲಿ ಗಳಿಸಲಾರಂಭಿಸಿದರು. ಇವರ ಅಧೀನರಾಗಿ ಉಳಿದವರೆಂದರೆ ನಾಡಿನ ಸಂಪದುದ್ಯಮದಲ್ಲಿ ಭಾಗಿದಳಾದ ರೈತರು, ವ್ಯಾಪಾರಗಾರರು ಮತ್ತು ಕೈಗಾರಿಕೆಯ ಕಸುಬುದಾರರು.

ಆಗಿನ ಶಿಕ್ಷಣ ಪದ್ಧತಿಯಲ್ಲಿ ಎದ್ದು ಕಾಣುತ್ತಿದ್ದ ಒಂದು ಅಂಶವೆಂದರೆ ಇಂಗ್ಲೀಷ್ ಭಾಷಾ ವ್ಯಾಮೋಹ. ಇದರೊಂದಿಗೆ ಜನರನ್ನು ಆಕರ್ಷಿಸುತ್ತಿದ್ದ ಮತ್ತೊಂದು ಅಂಶವೆಂದರೆ ಅಧಿಕಾರ ಮತ್ತು ದರ್ಪ. ತಮ್ಮ ನಡೆನುಡಿಗಳಿಂದ ಆದರ್ಶ ವ್ಯಕ್ತಿಗಳೆನಿಸಿದ್ದ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾಡಿನ ಸಂಪದುದ್ಯಮಗಳಿಗೆ ಪ್ರೋತ್ಸಾಹ ನೀಡುತ್ತಿದ್ದ ಜನರೂ ಸಹ ಇಂಗ್ಲೀಷ್ ಭಾಷಾ ಪರಿಣತರಾಗಲಾರಂಭಿಸಿದರು. ಇದರ ಗಹನ ಪರಿಣಾಮ ಏನಾಯಿತೆಂದರೆ, ನಾಡಿನ ರೈತಾದಿ ಜನಗಳಿಗೂ ಈ ಇಂಗ್ಲೀಷ್ ಭಾಷಾ ಪರಿಣತರಿಗೂ ಅಜಗಜಾಂತರ ವ್ಯತ್ಯಾಸ ತಲೆಯೆತ್ತಿತು. ವಿದ್ಯಾವಂತರೆನಿಸಿದವರೇ ದೇಶದ ಹಿತ ಶತ್ರುಗಳೆನಿಸಿದರು. ರೈತಾದಿ ವರ್ಗ ಹಿಂದುಳಿಯಿತು. ಸಂಪದುದ್ಯಮಿಗಳು ಕೇವಲ ಜೀವನೋಪಾಯಕ್ಕಾಗಿ ಕಸುಬುಗಳನ್ನು ಮುಂದುವರಿಸಿದರಷ್ಟೆ. ದೇಶಕ್ಕೆ ಅವರಿಂದ ಯಾವ ಉಪಯೋಗವೂ ದೊರೆಯದಾಯಿತು.

ಇದರ ಅಂತಿಮ ಪರಿಣಾಮವೇ ನಾವೀಗ ಕಾಣುತ್ತಿರುವ—ವಿದ್ಯಾವಂತರೆನಿಸಿಕೊಂಡವರ ದುರ್ಗತಿ ಮತ್ತು ಇಡೀ ಜನಾಂಗದ ಆರ್ಥಿಕ ದುಃಸ್ಥಿತಿ.

ಂ ಂ ಂ ಂ

ಭಾರತವೀಗ ಸ್ವತಂತ್ರ ರಾಷ್ಟ್ರವೆನಿಸಿದೆ. ಆದರೆ ಆದರ ಶಿಕ್ಷಣ ಪದ್ಧತಿ ಮೂಲ ಸ್ವತಂತ್ರವಾಗಿರದೆ ಇನ್ನೂ ಬ್ರಿಟಿಷರು ಹಾಕಿಕೊಟ್ಟ ಜಾಡನ್ನೇ ಅದು ಅನುಸರಿಸುತ್ತಿದೆ. ಬ್ರಿಟಿಷರು ಜಾರಿಗೆ ತಂದ ಶಿಕ್ಷಣ ಪದ್ಧತಿಯ ದೋಷಗಳೇ ಈ ಶಿಕ್ಷಣ ಪದ್ಧತಿಯಲ್ಲೂ ಇನ್ನೂ ಉಳಿದು ಬಂದಿವೆ. ಬ್ರಿಟಿಷರ ಶಿಕ್ಷಣ ಕೇವಲ ಸಾಹಿತ್ಯಪ್ರದವಾಗಿತ್ತು. ಕೇವಲ ಸಾಹಿತ್ಯದ ದೃಷ್ಟಿಯೊಂದನ್ನೇ ಗುರಿಯಾಗಿಟ್ಟು ಕೊಂಡು ಬ್ರಿಟಿಷರು ತಮ್ಮ ಶಿಕ್ಷಣ ಪದ್ಧತಿಯನ್ನು ಸಾಂಸ್ಕೃತಿಕ ಶಿಕ್ಷಣ ಎಂದು ಕರೆದರು. ಮೈ ಬಗ್ಗಿಸಿ ದುಡಿಯುವ ಅವಕಾಶವನ್ನೇ ಮರೆಸಿ ಈ ಬಗೆಯ ಶಿಕ್ಷಣ ಸುಖ ಜೀವನಕ್ಕೆ ದಾರಿ ಮಾಡಿ ಕೊಟ್ಟಿತು.

ಈ ಶಿಕ್ಷಣದ ಮತ್ತೊಂದು ಫಲವೆಂದರೆ ಪಾಶ್ಚಾತ್ಯ ನಾಗರೀಕತೆಯ ಅನುಕರಣ. "ಸಂಸ್ಕೃತಿ ಎಂಬುದು ಕೇವಲ ಒಂದು ಭ್ರಾಂತಿ" ಎಂಬ ಭಾವನೆ ಜನರಲ್ಲಿ ಬೇರೂರ ತೊಡಗಿತು. ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಸ್ಕಾಟ್, ಮಿಲ್ಟನ್, ಥ್ಯಾಕರೆ, ಟೆನಿಸನ್—ಮೊದಲಾದವರ ಗ್ರಂಥಗಳನ್ನೋದಿ ಇವುಗಳ ಬಗ್ಗೆ ಇಂಗ್ಲೀಷಿನವರೇ ಬರೆದ ನೋಟ್ಸುಗಳನ್ನೂ, ವಿಮರ್ಶೆಗಳನ್ನೂ ಜೆನ್ನಾಗಿ ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ತೇರ್ಗಡೆಯಾಗತೊಡಗಿದರು. ಭಾರತೀಯ ವಿದ್ಯಾರ್ಥಿಗಳು ಇಂಗ್ಲೀಷಿನಲ್ಲೇ ಮಾತನಾಡತೊಡಗಿ, ಇಂಗ್ಲೀಷ್ ಕಾದಂಬರಿಗಳನ್ನೆ ಓದಿ, ಬುದ್ಧಿಸಾಮರ್ಥ್ಯ ಸಾಧನೆಗೆ ಇಂಗ್ಲೀಷ್ ಭಾಷೆಯೇ ಕಾರಣವೆಂದು ಸಿದ್ಧಾಂತಮಾಡಿ, ಈ ವಿದ್ಯಾರ್ಥಿಗಳು 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯನ್ನು ಸಾರ್ಥಕಗೊಳಿಸಿಯೇ ಬಿಟ್ಟರು.

ಂ ಂ ಂ

ಈ ಬಗೆಯ ದೋಷಗಳು ಈಗಲೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇದ್ದೇ ಇವೆ. ಯಾವ ಸುಧಾರಣೆಯೂ ಆಳವಾಗಿ ಬೇರೂರದೆ ಹೋಗುವದು ಇದಕ್ಕೆ ಮುಖ್ಯ ಕಾರಣವಾಗಿದೆ. ಇಂತಹ ರಾಷ್ಟ್ರಘಾತಕ, ನಿರ್ವೀರ್ಯ ಶಿಕ್ಷಣದಿಂದ ನ್ಯಾಯಗಾರರು ಮತ್ತು ನೇಯ್ಗೆಯವರು—ಇವರೇ ಮೊದಲಾದ ಸಂಪದುದ್ಯಮಿಗಳು ನಿರುತ್ಸಾಹಿಗಳಾದರು; ಹಾಗೂ ಹಿಂದೆ ಬಿದ್ದರು ಆರ್ಥಿಕ ಮುಗ್ಗಟ್ಟು ಇದೇ ಕಾರಣದಿಂದಲೇ ಹದಗೆಟ್ಟಿತು. ಇದನ್ನು ಸರಿಪಡಿಸುವುದು ಇಂದಿಗೂ ಸಾಧ್ಯವಾಗಿಲ್ಲ.

ಆದ್ದರಿಂದ, ಇಂದಿನ ಆರ್ಥಿಕ ಪರಿಸ್ಥಿತಿ ಸರಿಹೊಂದಬೇಕಾಗಿದ್ದರೆ, ವಿಶ್ವವಿದ್ಯಾನಿಲಯದ ದೋಷಗಳ ನಿವಾರಣೆ ಅತ್ಯಾವಶ್ಯಕ. ಈ ವಿಶ್ವವಿದ್ಯಾನಿಲಯಗಳ ಪದವೀದರರೇ ಪ್ರಾಥಮಿಕ ಶಾಲೆ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರಾಗುವುದರಿಂದ, ಈ ಶಿಕ್ಷಣದ ದೋಷಗಳು ಎಳೆತನದಿಂದಲೇ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬೇರೂರತೊಡಗುತ್ತವೆ.

ಇಂದಿನ ಸಮಾಜದಲ್ಲಿ ಕಾಣ ಬರುವ ಮತ್ತೊಂದು ಕೊರತೆಯೆಂದರೆ ಎಲ್ಲೆಲ್ಲೂ ಪದವೀಧರರಿಗೆ ಮಾತ್ರ ಸುಸಂಸ್ಕಾರವಿದ್ದು ಕಲಾವಂತರಿಗೆ ಕುಶಲಕರ್ಮಿಗಳಿಗೆ ಮತ್ತು ಸಂಪದುದ್ಯಮಿಗಳಿಗೆ ಈ ಅವಕಾಶವೇ ತಪ್ಪಿ ಹೋಗಿರುವುದು. ಹೀಗಾಗಿ ಪದವೀಧರರಲ್ಲದವರು ನಿಷ್ಕಾರಣವಾಗಿ ಜೀವನದಲ್ಲಿ, ಬೀಸರ ಕೊಂದು, ಅಶ್ಪೃಶ್ಯರೂ ನಿಸ್ತೇಜರೂ ಆಗುತ್ತಿದ್ದಾರೆ.

ಮತ್ತೊಂದು ಕೊರತೆಯೆಂದರೆ ಜೀವನದ ಆವಶ್ಯಕತೆಗಳಿಗೆ ಈ ಶಿಕ್ಷಣ ಸ್ವಲ್ಪವೂ ಉಪಯುಕ್ತವಾಗಿಲ್ಲದೇ ಇರುವುದು. ಇಂದಿನ ಆಹಾರಾಭಾವದಿಂದ ಹುಟ್ಟಿರುವ ದಾಹಾಕಾರ, ದೇಶದಲ್ಲಿ ತಲೆದೋರಲಾರಂಭಿಸಿರುವ ಕ್ಷಾಮ ಪರಿಸ್ಥಿತಿ, ಜನತೆಯಲ್ಲಿ ಕಾಣ ಬರುತ್ತಿರುವ ಜಗುಪ್ಸೆ, ನಿರುತ್ಸಾಹ, ನಿರಾಶಾ ಭಾವನೆ—ಇವೆಲ್ಲಕ್ಕೂ ಕಾರಣವೆಂದರೆ ಭಾರತದ ಜನತೆ ಸರಿಯಾದ ಮತ್ತು ಉಪಯುಕ್ತವಾದ ಶಿಕ್ಷಣ ಪಡೆಯದೆ ದೇಶದ ಏಳಿಗೆಗೆ ಸ್ವಲ್ಪವೂ ಶ್ರಮಿಸದೇ ಇರುವುದು.

ಶಿಕ್ಷಣದ ಮತ್ತೊಂದು ಬೃಹತ್ ಪರಿಣಾಮವೆಂದರೆ ಇಂದಿನ ಹೊಸ ಪೀಳಿಗೆಯ ಜನತೆಗೆ ನಮ್ಮ ಸನಾತನ ಹಿಂದೂ ಧರ್ಮದಲ್ಲಿ ಶ್ರದ್ಧೆಯೆಂಬುದು ಲವಲೇಶವೂ ಉಳಿಯದಿರುವುದು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಈ ಸನಾತನ ಹಿಂದೂ ಧರ್ಮವನ್ನು ಳಿಸಿ; ಬಾಳಿಸಲು ಯಾವ ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ಇದಕ್ಕೆ ಬದಲಾಗಿ ದೇಶಾದ್ಯಂತ ನಾಯಿ ಕೊಡೆಗಳಂತೆ ಕ್ರಿಶ್ಚಿಯನ್ ಮಿಷನರಿಗಳ ಕಾನ್ವೆಂಟುಗಳು

(ಇಪ್ಪತ್ತೈದನೇ ಪುಟ ನೋಡಿರಿ)

ಜಾಹೀರಾತು

ದಕ್ಷಿಣ ಕನ್ನಡ ವ ಇನ್ನಿತರ
ಮಹಾ ಮೈಸೂರು ಪ್ರಾಂತ್ಯದಲ್ಲಿರುವ

ಪ್ರೇಕ್ಷಣೀಯ ಸ್ಥಳ
ಸಂದರ್ಶನ ಮಾಡುವವರಿಗೆ
ಸಾರಿಗೆ ಸೌಕರ್ಯಕ್ಕಾಗಿ
ನಮ್ಮ ಬಸ್ಸುಗಳು ಸದಾ ಸಿದ್ಧವಿವೆ.

ದಿ. ಹನುಮಾನ್
ಟ್ರಾನ್ಸ್‌ಪೋರ್ಟ್ ಕಂಪೆನಿ
ಪ್ರೈವೇಟು ಲಿಮಿಟೆಡ್
ಉಡುಪಿ, ದ. ಕ. ಜಿಲ್ಲೆ.

ಟೆಲಿಫೋನ್:
ಮೆನೇಜಿಂಗ್ ಡೈರೆಕ್ಟರ್ 19
ಡೈರೆಕ್ಟರ್ ಇನ್‌ಚಾರ್ಜ್ ಆಫ್ ವರ್ಕ್ಸ್ } 19A

ಟೆಲಿಗ್ರಾಮ್:
"ಹನುಮಾನ್ ಕೊ"

ಪರದೇಶೀಯರೂ ಪರಧರ್ಮೀಯರೂ ಆದ ಬ್ರಿಟಿಷರು ನಮ್ಮ ಈ ಭಾರತ ರಾಷ್ಟ್ರವನ್ನು ಆಳುತ್ತಿದ್ದಾಗ, ಭಾರತೀಯರು ತಮ್ಮ ಮನಸ್ಸಿನಲ್ಲಿ—"ನಾವು ಪರಕೀಯರಿಗೆ ಅಡಿಯಾಳುಗಳಾಗಿದ್ದೇವಲ್ಲ—ಸ್ವಾತಂತ್ರ್ಯವಿಲ್ಲದೆ ಪರಾಧೀನರಾಗಿದ್ದೇವಲ್ಲ—ಗುಲಾಮರೆನ್ನಿಸಿದ್ದೇವಲ್ಲ-ಹಾ ವಿಧಿಯೇ, ನಮಗೆ ಸ್ವರಾಜ್ಯ ಪ್ರಾಪ್ತವಾಗಿ, ನಮ್ಮವರಿಗೆ ಸ್ವಾತಂತ್ರ್ಯ ಪ್ರಾಪ್ತವಾಗಿ, ನಮ್ಮವರೇ ಆಡಳಿತ ನಡೆಸುವವರಾದರೆ, ನಮ್ಮ ದೇಶ, ನಮ್ಮ ಜನತೆ ಸುಖ ಸಂತೋಷಗಳಲ್ಲಿ ನಲಿಯಬಹುದಲ್ಲವೆ? ಸಕಲ ವಿಧ ಸಮೃದ್ಧಿಗಳನ್ನೂ ಪಡೆದು ನೆಮ್ಮದಿಯಿಂದ, ಶಾಂತಿಯಿಂದ ಜೀವಿಸಬಹುದಲ್ಲವೆ" ಎಂದು ಕನಸು ಕಾಣುತ್ತಿದ್ದರು. ಜನತೆಯ ಇಷ್ಟಾನುಸಾರ ಸ್ವರಾಜ್ಯ ಲಭಿಸಿತು. ಸ್ವಾತಂತ್ರ್ಯ ಪ್ರಾಪ್ತವಾಯಿತು. ನಮ್ಮವರೇ ಆಡಳಿತ ವಹಿಸಿ ದೇಶಾಧಿಪತಿಗಳಾದರು. ಸ್ವಾತಂತ್ರ್ಯ ಭಾರತದಲ್ಲಿ ಜೀವಿಸಿ ಇಪ್ಪತ್ತು ವರ್ಷಗಳನ್ನೂ ಕಳೆದದ್ದಾಯಿತು. ಇಂದು ಅಂದಿನ ಕನಸನ್ನು ನೆನಪಿಸಿಕೊಂಡರೆ--ಸ್ವರಾಜ್ಯ ಪ್ರಾಪ್ತವಾಯಿತೆಂದು ಸಂತೋಷವಾಗ ವುದಿಲ್ಲ; ಸ್ವಾತಂತ್ರ್ಯ ಪ್ರಾಪ್ತವಾಗಿದ್ದರೂ ಇದೆಂತಹ ಅಪಭ್ರಂಶ ಸ್ವಾತಂತ್ರ್ಯ ಎಂಬಂತೆ ತೋರ ತೊಡಗಿದೆ. ಸುಖ ಸಂತೋಷ ಸಮೃದ್ಧಾನ ಮುಂತಾದುವುಗಳೆಲ್ಲ ಎಲ್ಲೋ ಅಜ್ಞಾತವಾಗಿವೆ ಜನತೆ ನಿಶ್ಚಿಂತೆಯಿಂದ ದೇವತೆಗೆ ಬಲಿಯಾಗುತ್ತಿದ್ದಾರೆ- ನಿತ್ಯ ಎರಡು ವೇಳೆ ಊಟಮಾಡಿ ಬದುಕಿದರೆ ಸಾಕಲ್ಲ—ಎಂದು ಬಡಜನತೆ ಕಣ್ಣು ಕಣ್ಣು ಬಿಡುತ್ತಿದೆ. ಅಹಾರಧಾನ್ಯಗಳ ಬೆಲೆ ಒಂದಕ್ಕೆ ನಾಲ್ಕರಷ್ಟಾಗಿದೆ. ಹೆಚ್ಚರಷ್ಟಾಗಿದೆ. ನಮ್ಮ ದೇಶದಲ್ಲಿನ ಸಂಪತ್ಸಮೃದ್ಧಿಯಲ್ಲದೆ, ಪರದೇಶಗಳಿಂದ ಹತ್ತಾರು ಸಹಸ್ರ ಕೋಟಿ ರೂಪಾಯಿಗಳ ಸಾಲದ ಹಣ ಬಂದೊದಗಿದೆ. ಧನವಂತರು ಒಂದು ಕಡೆ ಲಕ್ಷಲಕ್ಷವಾಗಿಗಳಿಸಿ ಬಲಿಯುತ್ತಿದ್ದಾರೆ. ಬಡವರು ಇನ್ನೂ ಅಧೋಗತಿಗಿಳಿಯುತ್ತಿದ್ದಾರೆ. ಎಷ್ಟೋ ಕುಟುಂಬಗಳವರು ಬದುಕಿ— ಬಾಳ್ವೆ ಮಾಡಿ ಕಾಂಡಿರಲು ಸಾಧ್ಯವಿಲ್ಲದೆ-ಬೇರೆ ಮಾರ್ಗ ಕಾಣದೆ, ಮಕ್ಕಳು ಮರಿಗಳನ್ನೂ ವಿಷವಿತ್ತು ಕೊಂದು ತಾವೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು — ಆಗಾಗ ಪತ್ರಿಕಾ ವಾರ್ತೆಗಳು ಸಾರುತ್ತಿವೆ.

ಆಡಳಿತ ನಡೆಸುತ್ತಿರುವ ನಮ್ಮದೇ ಆದ ಸರ್ಕಾರ—ಇದಕ್ಕೆಲ್ಲ ಕೊಡುವ ಉತ್ತರ ಒಂದೇ! "ಜನ ಸಂಖ್ಯೆ ಅಪಾರ ಹೆಚ್ಚಿ ಹೋಗಿದೆ. ದಿನ ದಿನವೂ ಲಕ್ಷಾಂತರ ಸಂಖ್ಯೆಯಿಂದ ಹೆಚ್ಚುತ್ತಿದೆ. ಆದುದರಿಂದ ಎಷ್ಟು ಬೆಳೆದರೂ, ಎಷ್ಟು ಕಡ ತಂದರೂ ಎಷ್ಟು ಬೇಡಿ ತಂದರೂ ಸಾಲದಾಗಿದೆ." ಇದಕ್ಕೆ ಪರಿಹಾರ. "ಜನನ ನಿಯಂತ್ರಣ. ಜೊಗಸರು ಮಕ್ಕಳನ್ನು ಹಡೆಯಬೇಡಿ. ಗಂಡಸರು ರಕ್ತ ಚಿಕಿತ್ಸೆ ಮಾಡಿಸಿಕೊಂಡು ಪ್ರಜಾ ಉತ್ಪಾದನಾ ಸಾಮರ್ಥ್ಯವನ್ನು ಕುಂಠಿತಗೊಳಿಸಿಕೊಳ್ಳಿ—ಅಭ್ಯಾಸ್ ನಪುಂಸಕರಾಗಿ."

ಯಾವ ಪವಿತ್ರ ಭಾರತ ಭೂಮಿಯಲ್ಲಿ ಭಗವಂತನೇ ಅವತಾರ ಮಾಡಿ ಸಂಚರಿಸಿದನೋ, ಜನಸ್ತೋಮರಾದ ಮಹಾಪುರುಷರನೇಕ ಸಂಖ್ಯೆಯಿಂದ ಜನ್ಮಾಪೇತ್ತಿ ಧರ್ಮ ಸತ್ಯನ್ಯಾಯ ನೀತಿಗಳ ಪರಿಪಾಲಕ

ಶ್ರೀ ಸುಬೋಧ ಎಂ. ರಾಮು.

ನೈತಿಕ ಪುನ ಸ್ಥಾನವೇ ಶಾಂತಿ ಸ್ಥಾಪ ಏಕೈಕ ಮಾರ್ಗ

ಹಿರಿಯರನ್ನು ಕಿರಿಯರು ಅನುಸರಿಸುತ್ತಾರೆ, ಸಂಪನ್ನರನ್ನು ಅಸಂಪನ್ನರೂ ಅನುಕರಿಸುತ್ತಾರೆ. ನಾಯಕರನ್ನು ಪ್ರಜೆಗಳೂ ಹಿಂಬಾಲಿಸುತ್ತಾರೆ. ಸ್ವಾರ್ಥ, ಅಧರ್ಮ, ಅನ್ಯಾಯ, ಅತ್ಯಾಚಾರ ಮೊದಲಾದುವುಗಳಿಗೆ ಮೂರು ಹೂಡಿದ ಆಡಂಬರಪ್ರಿಯ ನಾಯಕರಿಂದಲೇ ಜನತೆಯಲ್ಲಿ ಅಶಾಂತಿ—ಅತೃಪ್ತಿ ಪರಿಡಿದೆ. ನಾಯಕರು ಮಹಾತ್ಮಾ ಗಾಂಧಿಯವರಂತೆ ಸಾರಳ್ಯ ನಿರಾಡಂಬರ ನಿಸ್ವಾರ್ಥ, ನ್ಯಾಯ, ಧರ್ಮ, ಸದಾಚಾರ ಸಂಪನ್ನರಾದರೆ, ದೇಶ ಉನ್ನತಿ ಹೊಂದೀತು. ನೈತಿಕ ಪುನರುತ್ಥಾನವೊಂದೇ ನಮ್ಮ ಇಂದಿನ ಮುಖ್ಯ ಅಗತ್ಯ.

ರಾಗಿ ಜೀವಿಸಿ ಭೂದೇವತೆಗಳೆನ್ನಿಸಿದರೋ ಅಂತಹ ದೇಶವಿಂದು, ಅಧಃಪತನ ಹೊಂದಿ ಕಂಗಾಲ ಸ್ಥಿತಿಗಿಳಿದು ನಿಂತಿದೆ. ಜಾತಿ ಜಾತಿಗಳವರಲ್ಲಿ, ರಾಜ್ಯರಾಜ್ಯಗಳವರಲ್ಲಿ ಪರಸ್ಪರ ಕಚ್ಚಾಟ ಹೊಡೆದಾಟಗಳು. ಎಲ್ಲರೂ ಭಾರತದೇಶಮಾತೆಯ ಪುತ್ರ ಪುತ್ರಿಯರು ಎಂಬ ಭಾವನೆ ಎಂದೋ ಶೂನ್ಯರೆಯಾಗಿ ಹೋಯಿತು. ಪ್ರಕೃತ—ತಂದೆ ಮೃತನಾದ ತರುವಾಯ ಗೇಣುಜೋಟು ನೆಲಕ್ಕಾಗಿ ಕಚ್ಚಾಡುವ ನೀತಿಗೇಡಿ ಮಕ್ಕಳಂತಾಗಿದೆ—ಇಂದಿನ ಭಾರತೀಯರ ಸ್ಥಿತಿ! ಪರಸ್ಪರ ಪ್ರೀತಿ ವಿಶ್ವಾಸ, ದೇಶಾಭಿಮಾನ, ಧರ್ಮಾಭಿಮಾನಗಳು ಮಾಯವಾಗಿ, "ನಾನು-ನನ್ನದು, ನಾವು-ನಮ್ಮದು" ಎಂಬ ಸ್ವಾರ್ಥಸಾಧನೆಯಲ್ಲಿ ದೇಶದ ವಿವಿಧ ಜಾತಿ ಮತ ಪಂಥ ಪಂಗಡಗಳೂ ಮುಳುಗಿ—ಆ ತಮ್ಮ ಸ್ವಾರ್ಥತೆಯು ಫಲಕಾರಿಯಾದರೆ ಅದೇ ಪ್ರಗತಿ ಸಾಧನೆ ಎಂಬ ಮೋಹಕ್ಕೆ ಬಲಿಬಿದ್ದು ನರಳುತ್ತಿದ್ದಾರೆ. ನೀತಿ ಧರ್ಮ ನ್ಯಾಯ ಮುಂತಾದುವೆಲ್ಲ ಪತನವಾಗಿವೆ. ಇಂದಿನ ಕಷ್ಟ ದುಃಖಗಳಿಗೆಲ್ಲ— ಈ ನೀತಿ ನ್ಯಾಯ ಧರ್ಮಗಳ ಪತನವೇ ಮೂಲ ಕಾರಣ!—ಇದನ್ನು ಒಳಗಣ್ಣಿನಿಂದ ನೋಡಿ ಮನನಮಾಡಿಕೊಂಡು ಜಾಗ್ರತಾಂದರೆ ಮಾತ್ರ—ಉತ್ಥಾನ ಮಾರ್ಗ ಗೋಚರವಾದೀತು!

ಮಹಾತ್ಮಾ ಗಾಂಧಿಯವರು ದಕ್ಷಿಣಾಫ್ರಿಕಾದಿಂದ ಇಕ್ಕೆಗೆ ಬಂದಾಗ್ಗೆ—ಪರದೇಶೀಯರ ಆಡಳಿತದಿಂದ ನೊಂದ ಜನತೆ ಹೀಗೆಯೇ ಒಂದು ಬಗೆಯ ಅಶಾಂತತೆಯಿಂದ ತಲ್ಲಣಿಸುತ್ತಿತ್ತು; ಆದರೆ, ಅದನ್ನು ಪರಿಹರಿಸಿ, ಜನತೆಯಲ್ಲಿ ಐಕ್ಯಮತ್ಯ, ದೇಶಪ್ರೇಮ, ಧರ್ಮನಿಷ್ಠೆ, ಕಾಯಕತತ್ಪರತೆ ಇವುಗಳನ್ನು ಪುನಃ ಪ್ರತಿಷ್ಠಾಪಿಸಲು ಅವರೇನು ಅಲ್ಲಂದ ಲಕ್ಷಾಂತರ ಕೋಟ್ಯಾಂತರ ದ್ರವ್ಯನಿಧಿಯನ್ನು ಹೊತ್ತು ತಂದು ಜನತೆಗೆ ಹಂಚಿ ಕಾರ್ಯ ಸಾಧನೆಮಾಡಿದರೇ ಅವರು ಅಲ್ಲಂದ ಕೇವಲ ವಿತ್ತಹಸ್ತದಿಂದ, ಏಕವಸ್ತ್ರಧಾರಿಯಾಗಿ ಬಂದು—ಭಾರತ ದೇಶೀಯರಲ್ಲಿ ಪರಸ್ಪರ ಪ್ರೇಮ, ವಿಶ್ವಾಸ, ದೇಶಾಭಿಮಾನ, ಸ್ವಧರ್ಮಾಭಿಮಾನ, ಇವುಗಳನ್ನು ತಮ್ಮ ಸತ್ಯ ನಿಷ್ಠೆ-ವೈರಾಗ್ಯ, ಪರಿಶ್ರಮ, ಸ್ವಕೀಯ ಮಾರ್ಗ, ಭಗವದ್ಭಕ್ತಿ, ಈ ಸದ್ಗುಣಗಳ ಮೂಲಕ ಬಿತ್ತಿ ಬೆಳೆಸಿದರು. ತಮ್ಮ ತ್ಯಾಗ ಬುದ್ಧಿಯನ್ನು—ಶತಾಂಶ ಸ್ವಯೋಗಕ್ಕೆಟ್ಟು — ಈ ನೇಪೀಯರಲ್ಲಿ ಮೋತಿಲಾಲ್ ನೆಹರೂ, ಚಿತ್ತರಂಜನ ದಾಸ್ ಮುಂತಾದ ರಾಜಾಧಿರಾಜರನ್ನು ಮೀರಿಸುವಂತೆ ಜೀವಿಸುತ್ತಿದ್ದವರ ಹೃದಯಗಳಲ್ಲಿ ಸ್ವಾರ್ಥ ತ್ಯಾಗವನ್ನು ಪ್ರಜ್ವಲಿಸಿದರು. ತಾವು ವಿರಕ್ತ ಜೀವನವನ್ನು ನಡೆಯಿಸಿ ಇತರ ಲಕ್ಷಾಂತರ ಜನರು ತೋರಿಕೆಗಾದರೂ ಒರಟು ಖಾದಿ ಬಟ್ಟೆಯನ್ನು ಮಿತವಾಗಿ ಉಪಯೋಗಿಸುವಂತೆ ಆದರ್ಶವಾದರು.

ಒಟ್ಟಿನಲ್ಲಿ ಪ್ರಜಾ ನಾಯಕರ, ತಮ್ಮ ಜೀವನವನ್ನು ಜನತೆಗೆ ಆದರ್ಶವಾಗಿರುವಂತೆ, ನೀತಿ, ನ್ಯಾಯ, ಧರ್ಮ, ಸತ್ಯ ಈ ಮಾರ್ಗಗಳಿಗೆ ಕುಂದುತಾರದಂತೆ ನಡೆಸಿದರೆ, ಜನತೆಯೂ ಗಹ—'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೇ ಜನಾಃ' ಎಂಬಂತೆ, ತಮ್ಮ ಧುರೀಣರನ್ನು ಅನುಸರಿಸಿ—ಅನುಕರಿಸಿ ನಡೆದಾರು. ಆದರೆ ಇಂದಿನ ಜನ ನಾಯಕರು, ಆಡಂಬರದ ಜೀವನ, ಸತ್ಯಧರ್ಮ ನೀತಿ ನ್ಯಾಯಗಳ ಲಕ್ಷ್ಯವಿಲ್ಲದೆ, ಮನಬಂದಂತೆ ನಡೆದು ಧನಗಳಿಸುವ ಕಾರ್ಯದಲ್ಲಿ ತತ್ಪರರಾಗಿರುವಿಕೆ, ಸ್ವಾರ್ಥ ಸಾಧನೆಗಾಗಿ ಎಂತಹ ಅನ್ಯಾಯ, ಅಸತ್ಯ, ಅಸಾಧು ಕಾರ್ಯಕ್ಕಾದರೂ ಹಿಂಜರಿಯದೆ ಮದ್ದಾನೆಯಂತೆ ಮುನ್ನುಗ್ಗುವಿಕೆ ಇತ್ಯಾದಿ ಉದಾಹರಣೆಗಳಿಂದ ಇತರರೂ ಪ್ರೇರಿತರಾಗಿ—ಒಬ್ಬರನ್ನು ನೋಡಿ ಮತ್ತೊಬ್ಬರು, ಒಬ್ಬರನ್ನು ಅನುಕರಿಸಿ—ಮತ್ತೊಬ್ಬರು, ಹೀಗಾಗಿ ಎಲ್ಲೆಲ್ಲೂ ಅನೀತಿ-ಸ್ವಾರ್ಥತೆ, ದಂಭ, ದುರಾಚಾರ ಇತ್ಯಾದಿಗಳು ತಾಂಡವವಾಡತೊಡಗಿವೆ.

ಈ ಹಾವಳಿಯಿಂದಲೇ ಎಷ್ಟು ಧನವಿದ್ದರೂ, ಧಾನ್ಯವಿದ್ದರೂ, ವಾಹನ ಸಾಧನಗಳಿದ್ದರೂ, ಅಭಾವ ತಪ್ಪಲಿಲ್ಲ. ನಿತ್ಯ ಕ್ಷಾಮ ನೀಗಲಿಲ್ಲ. ನೀತಿ-ನ್ಯಾಯಗಳ ಪುನರುತ್ಥಾನವಾದರೆ ಮಾತ್ರವೇ ಸಕಲ ಸಮೃದ್ಧಿಗಳೂ ಸಾರ್ಥಕನೆನ್ನಿಸುವುವು.

ಆದರೆ ನೀತಿ—ಧರ್ಮ—ನ್ಯಾಯ— ನಿಷ್ಠೆ ಇವುಗಳ ಪುನರುತ್ಥಾನ ಹೇಗಾದೀತು? ಅತ್ಯಂತ ದೇಶವು ಅಧಃಪತನ ಹೊಂದಿರುವಾಗ ಜನ ಸಾಮಾನ್ಯರಲ್ಲಿ ಅಲ್ಲೊಬ್ಬ ಇಲ್ಲೊಬ್ಬ ವ್ಯಕ್ತಿ ನ್ಯಾಯ ನಿಷ್ಠನಾಗಿದ್ದರೆ-ಧರ್ಮ ತತ್ಪರನಾಗಿದ್ದರೆ, ಸತ್ಯ ಪ್ರೇಮಿಯಾಗಿದ್ದರೆ ಆದರಿಂದ ಅವನೊಬ್ಬ ಆಶ್ಚರ್ಯದ್ದಾರವಾದೀತಷ್ಟೆ! ಅದುಲೋಕಕ್ಕೆ ಆದರ್ಶವಾಗಿ ಜನಾಂಗವೇ ಜಾಗೃತಿಗೊಳ್ಳಲು ಸಾಧ್ಯವಾಗಲಾರದು. ಆದರೆ ಲಕ್ಷಾಂತರ ಕೋಟ್ಯಾಂತರ ಜನತೆಯ ಮೇಲೆ ಆಡಳಿತ ನಡೆಸುವಂತಹ ಅಧಿಕಾರ ಸಂಪನ್ನ ರಾಗಿರುವ ರಾಜ್ಯಪಾಲರಂತಹ, ಮಂತ್ರಿ ಮಹೋದಯರಂತಹ ವ್ಯಕ್ತಿಗಳೂ—ದೇಶನಾಯಕ ಸ್ಥಾನಗಳಲ್ಲಿ ಮಂಡಿಸಿರುವ ವ್ಯಕ್ತಿ ಮಹಾಶಯರೂ ಸತ್ಯ ನಿಷ್ಠರಾದರೆ, ಧರ್ಮ ತತ್ಪರರಾದರೆ, ನೀತಿ ನ್ಯಾಯಮಾರ್ಗವನು ಶರಣಿಯಲ್ಲಿ ನಿರತರಾದರೆ ಆಗ ಮಾತ್ರ ಅದು ಲೋಕಕ್ಕೆ ಆದರ್ಶವಾಗಿದ್ದು ಜನ ಸಾಮಾನ್ಯರಿಗೆ ಮಾರ್ಗದರ್ಶಕವಾದೀತು!

"ಆಚಾರಃ ಪ್ರಥಮೋಧರ್ಮಃ ಧರ್ಮಸ್ಯ ಪ್ರಭುರಚ್ಯುತಃ" ಎಂದು ಪ್ರಾಜ್ಞರ ವಾಕ್ಯವಿದೆ. ಸತ್ಯ ಧರ್ಮ ನ್ಯಾಯ ನಿಷ್ಠೆ ಇವುಗಳೆಲ್ಲ, ಲೋಕ ಪ್ರಭುವಾದ ಪರಮೇಶ್ವರನ ಪ್ರಸಾದದಿಂದ ಮನುಷ್ಯ ವ್ಯಕ್ತಿಯಲ್ಲಿ ಒಡಮೂಡಿ ಬರುವ ಸದ್ಗುಣಗಳು. ಅವುಗಳನ್ನು ಮಾನವ ಹೃದಯದಲ್ಲಿ ಪ್ರತಿಷ್ಠಾಪಿಸಲು, ಅಲ್ಲಿ ಮೊದಲು ಭಗವದ್ಭಕ್ತಿಗೆ ಎಡೆ ಇರಬೇಕು. ಹೃತ್ಪೂರ್ವಕವಾಗಿ ಭಗವಂತನನ್ನು ನಂಬಿ, ತನ್ನ ಸಕಲ ಕಾರ್ಯಗಳಿಗೂ ನಿಯಂತ್ರಣಾಧಿಕಾರಿ ತನ್ನ ಅಂತರ್ಯಾಮಿಯಾಗಿರುವ ಭಗವಂತನೇ—ಎಂದು, ಕೇವಲ ಪರತಂತ್ರನಂತಿರುವ ವ್ಯಕ್ತಿ, ಮಾತ್ರವೇ ಸತ್ಯ ಮಾರ್ಗದಲ್ಲಿ ಧರ್ಮ ತತ್ಪರನಾಗಿ, ನ್ಯಾಯ ಪಥವನ್ನು ಮೀರದೆ, ಸಕಲ ಪ್ರಾಣಿಗಳಲ್ಲೂ ಭಗವಂತನ ಸಾನ್ನಿಧ್ಯ ವಿದೆಯೆಂಬುದನ್ನು ಮನಗಂಡು—ಮನಸ್ಸಾಕ್ಷಿಗನುಸಾರವಾಗಿ ನಡೆಯಲು ಸಾಧ್ಯ! ಮಹಾತ್ಮಾ ಗಾಂಧಿಯವರು ನಾಲ್ವತ್ತುಕೋಟಿ ಭಾರತೀಯರಿಗೆ ಮುಂದಾಳಾಗಿ ನಿಂತು — ಅಧ್ಯಾತ್ಮಿಕ ಶಸ್ತ್ರಾಸ್ತ್ರ ಸುಸಜ್ಜಿತವಾದ—-ಬಲಿಷ್ಟ ಬ್ರಿಟಿಷ್ ಸರ್ಕಾರವನ್ನು ಎದುರಿಸಿ—ಎದೆಗೊಟ್ಟು ನಿಂತಿದ್ದರಾದರೂ, ಅವರ ಹೃದಯದಲ್ಲಿ ಸದಾರಾಮನಾಮಜಪವನ್ನು ಮರೆತಿಲ್ಲ. ಸದಾ ಭಗವದವಲಂಬನೆಯಿಲ್ಲದೆ ಯಾವ ಕಾರ್ಯವನ್ನೂ ಕೈಗೊಳ್ಳುತ್ತಿರಲಿಲ್ಲ. ಭಗವದ್ಗೀತಾ, ತುಳಸೀ ರಾಮಾಯಣ ಮುಂತಾದ ಧರ್ಮ ಗ್ರಂಥಗಳಲ್ಲಿ ಉಕ್ತವಾದ ಅಮರ ವಾಕ್ಯಗಳನ್ನು ತಮಗೆ ಮಾರ್ಗದರ್ಶಕವಾಗಿಟ್ಟು ಕೊಂಡು —ತಮ್ಮ ಲೌಕಿಕ ವ್ಯವಹಾರಗಳನ್ನು ನಡೆಸುತಿದ್ದುದರಿಂದ ಅವರು ಮಾರ್ಗ ತಪ್ಪಿ ನಡೆಯಲು ಅವಕಾಶವಿರಲಿಲ್ಲ. ಸ್ವಯಂ ತ್ಯಾಗ ನಿಷ್ಠರಾದುದರಿಂದ ಅವರನ್ನು ಪ್ರತಿಭಟಿಸಿ ನಡೆಯಲು ಯಾರಿಗೂ ಸಾಧ್ಯವಿರಲಿಲ್ಲ. ಹೀಗೆ ಜನತಾ ಧುರೀಣನಾದವನು ತನ್ನ ಹೊಣೆಗಾರಿಕೆಯನ್ನರಿತು, ಮನಸ್ಸಾಕ್ಷಿಗೆ ಅಧೀನನಾಗಿ ನಡೆಯಲು ಸಿದ್ಧನಾದಾಗ ಮಾತ್ರ, ಅವನು ಲೋಕಕ್ಕೆ ಮಾರ್ಗದರ್ಶಕನಾಗಬಲ್ಲವನಾಗುವನು.

ಆದರೆ ದುರ್ದೈವ ವಶವಾಗಿ, ನಮ್ಮ ಇಂದಿನ ಜನತಾ ಧುರೀಣರು ಸ್ವಾರ್ಥಪರರಾಗಿದ್ದಾರೆ. ಅಧಿಕಾರ ದಾಹ ಪೀಡಿತರಾಗಿದ್ದಾರೆ, ಧನ ಕನಕಾದಿ ಐಹಿಕ ಸುಖ ಸಂಪತ್ತುಗಳ ದಾಸರಾಗಿದ್ದಾರೆ! ಅಧಿಕಾರವು ಹೆಸ್ತಗತವಾಗಿರುವ ಅಲ್ಪಾವಧಿಯಲ್ಲೇ ಸಾಧ್ಯವಿದ್ದಷ್ಟನ್ನು ಗಳಿಸಿಬಿಡೋಣ ಎಂಬ ಆತುರದಲ್ಲಿ ನೆರೆಯವನ ದೇಶದ ಬಡಜನತೆಯ ಹಿತ ಚಿಂತೆಯನ್ನು

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

'ಇತಿಹಾಸ ಪುರಾಣಾಭ್ಯಾಂ ವೇದಾರ್ಥ ಮುಪಬೃಂಹಯೇತ್' ಎಂದರೆ, ವೇದಾರ್ಥವನ್ನು ಇತಿಹಾಸ— ಪುರಾಣಗಳಿಂದ ವಿಸ್ತರಿಸಬೇಕೆಂದು ಪ್ರಾಚೀನ ಸೂಕ್ತಿಯಿದೆ. ಅಂತೆ, 'ಜಯೋ ನಾಮೇತಿಹಾಸೋಽಯಂ' ಎಂಬುದು ಭಾರತ—ಮಹಾಭಾರತವೆಂದು ವಿಸ್ತಾರಗೊಂಡ ಮೂಲ ಕೃತಿಯನ್ನು ಕುರಿತು ಹೇಳಿದ ಮಾತು. ಪುರಾಣಗಳೆಂದರೆ, ಅಗ್ನಿ ಮೊದಲಾದ ಹದಿನೆಂಟು ಮಹಾಪುರಾಣಗಳೂ, ಆದಿತ್ಯ ಪುರಾಣ ಮುಂತಾದ ಹದಿನೆಂಟು ಉಪಪುರಾಣಗಳೂ ಹೇಳಲಾಗಿವೆ. ಇವೆಲ್ಲಾ ಆರ್ಯರ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿವೆ. ಇವನ್ನು ಬೇರೆ ಬೇರೆ ನಾಡ ನುಡಿಗಳಲ್ಲಿ ಅನುವದಿಸಿ, ಸಂಗ್ರಹಿಸಿ, ರೂಪಾಂತರಿಸಿ ಬರೆದ ಕೃತಿಗಳು ಹಲವಾರು ಇವೆ. ಪ್ರಸ್ತುತ, ಆ ಆದಿತ್ಯಪುರಾಣ ಹಾಗೂ ಇತರ ಪುರಾಣಗಳಲ್ಲಿ ಇರುವ 'ಶಿವ ಕಥಾಮೃತ'ವನ್ನು ಒಟ್ಟಿಸಿದ 'ಆದಿತ್ಯಪುರಾಣ'ವೆಂಬ ಕನ್ನಡ ಪದ್ಯ ಕಾವ್ಯದ ೧೫ ಸಂಧಿಗಳ (೧೧ನೆಯ ಸಂಪುಟದ) ತುಸ ಪರಿಚಯವಿಲ್ಲಿದೆ.

"ಮುದಮಿಹುಪೊಲಾದಿತ್ಯ ಪೌರಾ ॥
ಣದಲಿ ಸಾರವನುಳಿದ ಪೌರಾ |
ಖದ ಕಥಾಸಾರದಲಿ ಕೆಲವನು
ಕೂಡಿ ಸಂಗ್ರಹಿಸಿ ॥
ಮದನಹರ ಸಂಪ್ರೀತಿಗೋಸುಗ |
ವಿದನು ವಿಸ್ತರಿಸುವೆನು ಮಾಡುವ |
ಮದುವೆಗೆಲ್ಲರು ನೆರೆದಡತಿ
ಮಾಂಗಲ್ಯವೆಂತಂತೆ ॥

೦ ೦ ೦

ಶಬ್ದಮಣಿ ಮೊದಲಾದ ಶಾಸ್ತ್ರದ |
ಹೊದ್ದಿಕೆಯು ಸಾಹಿತ್ಯಕಲ್ಲದ |
ಶುದ್ಧಷಟ್ಪದಿ ಹಾಡುಗಬ್ಬಗಳಿಂಗೆ
ಬೇಡಂದು ॥
ಸಿದ್ಧ ನೂತನ ಕವಿಗಳುಸುರಿದ |
ಪದ್ಧತಿಯೊಳಾನೆಡಹಿ ಬೀಳುತ ।
ಬುದ್ಧಿಯುರಿವಂತೊರೆವೆನೀ |
ಬೆಳ್ಳಡಿಯ ಬೆರಕೆಯಲಿ ॥

೦ ೦ ೦

ಶಿವಕಥಾಮೃತವೆಂಬ ಹೆಸರೀ |
ಶಿವಕೃತಿಗೆ ಮಂಗಲಕೆ ಮಂಗಲ |
ಭವಜರಾಮರಣಾರ್ತಿ
ಯೆಂಬುದರಿಂದ
ಮೇದಿನಿಗೆ ॥

ಶಿವನು ಕಾಶೀಪತಿಯ ನಾಯಕ ।
ನವರಿವರ ನುಡಿಯಲ್ಲ ಶಿವನೇ |
ಕವಿಯೆನಲು ಕೇಳ್ದವರ ಭಾಗ್ಯಕೆ
ಪಡಿಯ ಜಗದೊಳಗೆ ॥

೦ ೦ ೦

ಯೋಗಿಗಳಿಗಿದು ಮುಕುತಿ ಲಕ್ಷ್ಮೀ ।
ಯೋಗಭಕ್ತಿಂಗಮಲ ಪದವಿಯ ।
ಭೋಗಿ ಕರ್ಮಿಗೆ ನಾಕಸುಖವನು ।
ರಾಗ ಸಿದ್ಧಿಯನು ॥
ಈಪಳ್ಳೆಹಿಳ ಭಾಗ್ಯ ಸುಖದು ।
ದ್ಯೋಗ ನೊಂದರಿಗಖಿಳ ದುಃಖ |
ತ್ಯಾಗವೆನಲೀ ಶಿವಕಥಾಮೃತ
ಕಾವ್ಯ ರಂಜಿಸಿತು ॥"

ಈ ಕೃತಿಯಲ್ಲಿ ಕವಿಯ ಹೆಸರು ಸ್ಪಷ್ಟವಾಗಿ ಹೇಳಲ್ಲ. ಆದರೆ, 'ಶಿವನೇ ಕವಿ' ಯೆಂಬ ಈ ಮೇಲಿನ ಪದ್ಯದಲ್ಲಿ ಹೇಳಿದಂತೆ, ಕವಿಯ ಹೆಸರು ಶಿವನೆಂದಿರಬಹುದೆಂದು ಒಮ್ಮೆ ನಮಗೆ

ಶ್ರೀ ಕೆ. ವೆಂಕಟ್ರಾಯಾಚಾರ್ಯ, ಸುರತ್ಕಲ್ಲು

ಕನ್ನಡ ಆದಿತ್ಯಪುರಾಣ

'ಕವಿರಾಜ ಕಂಠೀರವ'ನಿಂದ ರಚಿತವಾದ ಕನ್ನಡ ಆದಿತ್ಯಪುರಾಣವೊಂದು ಸರಳಗನ್ನಡದ ಕಾವ್ಯ. ಇದರಲ್ಲಿ ವೇದಾಂತ ತತ್ವಗಳನ್ನು ತಿಳಿಗನ್ನಡದಲ್ಲಿ ವಿವರಿಸಿರುವುದು ಮಾತ್ರವಲ್ಲ, ಪುರಾಣಗಳಿಗೆ ಸಂಬಂಧಿಸಿದ ಹಲವು ಕಥೆಗಳೂ ಇವೆ. ಈ ಸಟ್ಟಿದೀಕಾವ್ಯದ ಪುಟ್ಟ ಪರಿಚಯವೂ, ಮೊದಲ ಹದಿನೈದು ಸಂಧಿಗಳ ಕಥೆಯ ಸಿಂಹಾವಲೋಕನವೂ ಇಲ್ಲಿದೆ.

ಸಾದಾ ಕಾಣಬರುತ್ತದೆ. ಇದರ ಬಗ್ಗೆ ಬೇರೆ ಪುರಾವೆಗಳಿಲ್ಲ. ಈ ಕೃತಿಯ ಕೊನೆಯಲ್ಲಿ (೪೮ನೆಯ ಸಂಧಿಯ ಕೊನೆಗೆ) 'ಕವಿರಾಜ ಕಂಠೀರವ'ನು ಇದನ್ನು ರಚಿಸಿದನೆಂದಿದೆ. ಈ ಕವಿಯು "ಸುಲಭ ಶಂಕರನಾರಾಯಣನೆ ಶೃಪಾಧ್ಯಿ ಶರಣಾಗು" ಎಂದು ಸ್ತುತಿಸಿದ್ದಾನೆ. ಅಂತೆ, "ಈ ಕವಿ ಪ್ರಾಯಶಃ ಶಿವಮೊಗ್ಗ— ಚಿಕ್ಕಮಗಳೂರು ಮತ್ತು ಮಂಗಳೂರು ಪ್ರಾಂತ್ಯಗಳಲ್ಲಿ ಇದ್ದವನೆಂದು ಊಹಿಸಬಹುದಾಗಿದೆ. ಈತನ ಗ್ರಂಥವು ತಾಳಿಯೋಲೆಯಲ್ಲಿ ಆ ಭಾಗದಲ್ಲಿಯೆ ಸಿಕ್ಕಿದೆ"ಯೆಂದೂ ಕೇಳುತ್ತದೆ. (ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಗಳು: ಕನ್ನಡ ಆದಿತ್ಯಪುರಾಣದ ಪೀಠಿಕೆ), ಅದು ಮಾತ್ರವಲ್ಲ,

"ವರ ತನುತ್ರಯದೊಳಗೆ ದೀಕ್ಷೆಯ ।
ನೊರೆದು ಮಂತ್ರ ಸುಪಿಂಡನೆಂದು ।
ಧರಿಸಿ ನರಜನ್ಮವನು ಹರಮಯ
ವೆನಿಸಿ
ಶಿವನೊಳಗೆ ॥
ಬೆರಸಿಹೆಮ್ಮನು ಮುಕ್ತಿಪದದೊಳ |
ಗಿರಿಸಿದಮಲ ಶೃಂಗಸುರ ಗುರು |
ವರ ನಮೋ ಶ್ರೀ ರಾಮ ಚಂದ್ರ
ಕೃಪಾಧ್ಧಿ ಶರಣಾಗು ॥'

ಎಂದು ಶ್ರೀ ಶೃಂಗೇರಿ ಮಠದ ಶ್ರೀರಾಮಚಂದ್ರ ಭಾರತೀ ಗುರುಗಳನ್ನು (ಇಸ್ವಿ 1508-60) ಸ್ಮರಿಸಿದ್ದಾನೆ. ಕನ್ನಡದಲ್ಲಿಯ "ಶುಕಸಪ್ತತಿ" ಪದ್ಯ ಕಾವ್ಯದಲ್ಲಿರುವ ಆದಿತ್ಯ ಸ್ತುತಿಗೂ, ಇದರಲ್ಲಿಯ ಆದಿತ್ಯ ಸ್ತುತಿಗೂ ಸಾಮ್ಯವಿದೆ. ಅಂದರೆ, ಅವರ ಕವಿಯೂದ "ಶರಜಾನಾಗ ಮಂತ್ರೀಶ"ನು ಹದಿಮೂರನೆ ಶತಕದ ಕೊನೆಯಲ್ಲಿನ ಕೆಳದಿ ಬಸವಕ್ಷೇತ್ರೀಶನನ್ನು ಹೆಸರಿಸಿದ್ದಾನೆ. ಆದುದರಿಂದ, ಈ ಆದಿತ್ಯಪುರಾಣದ ಕವಿಯು ಹದಿನಾರನೆಯ ಶತಕದಕೊನೆಯಲ್ಲಿದ್ದಿರಬೇಕು. ಈ ಆದಿತ್ಯ ಪುರಾಣದಲ್ಲಿ ಹಲವೆಡೆ ವೀರಶೈವ ಸಂಪ್ರದಾಯದ ನುಡಿಗಳಿವೆ. ಅರ್ಥಾತ್, ಈ ಕವಿ ಮೊದಲು ಶೈವನಾಗಿ ಇದ್ದು, ಮತ್ತೆ ವೀರಶೈವನಾಗಿರಬಹುದೆಂಬ ಇದರ ಪಾಂಥಾಷಿಕ ಶಬ್ದಗಳಿಂದ ನಿರ್ಧರಿಸಿ ಬಹುದಾಗಿದೆ.

ಸಂಸ್ಕೃತದ ಸೌಂಪುರಾಣವು 'ಶಿವಕಥಾಶ್ರಯ ವೆಂದೇ ಹೇಳಲಾಗಿದೆ. ಆ ಮೇರೆಗೆ, ಈ ಕವಿಯು ಅಂತಹ 'ಶಿವ ಕಥಾಮೃತ'ವನ್ನು ಇತರ ಪುರಾಣಗಳಿಂದಲೂ ಸಂಚಯಿಸಿದ್ದಾನೆ. ಇದರಲ್ಲಿ ೪೮ ಸಂಧಿಗಳು, ಸಾಧಾರಣ ೨||| ಸಾವಿರ ಪದ್ಯಗಳಿವೆ. ಇದರ ೧೫ ಸಂಧಿಗಳುಳ್ಳ ೧೧ನೆಯ ಸಂಪುಟವು ಇತ್ತೀಚೆಗೆ ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯಲ್ಲಿ ಮುದ್ರಿತವಾಗಿದೆ. ಪ್ರಕಟಿತವಾಗಿದೆ. ಆ ೧೫ ಸಂಧಿಗಳ ಸಾರಾಂಶ-ಪರಿಚಯವಿಲ್ಲಿ ಬರೆಯಲಿಳಿಸಿದೆ.

ಇಲ್ಲಿ ಮೊದಲಾಗಿ ನಾಂದೀ ಸಂಧಿಯಲ್ಲಿ ವಿವಿಧ ದೇವತಾಸ್ತುತಿಗಳೂ, ಕವಿ ಕಾವ್ಯ ವಿಚಾರಗಳೂ ಹೇಳಲಾಗಿವೆ; ಕೆಲವೆಡೆಯ ಹಾಡುಗಳು ಬಲು ಚೆನ್ನಾಗಿವೆ:

"ಕರಿಮುಖಕ್ಕೆದೊಳಖಿಳ ವಿಘ್ನವ |
ಪರಿಹರಿಸಿ ವಾಣೀ ಸ್ವರೂಪದಿ |
ಪರಮ ಶಬ್ದಾರ್ಥಗಳ ನೊಂದವಿಸಿ
ಗುರುವಿನಾಕೃತಿಯ ॥
ಧರಿಸಿ ಭಕ್ತಿ ಜ್ಞಾನ ಸಿದ್ಧಿಯ।
ಕರುಣಿಸಿದ ಕರುಣಾ ಸುಧಾ ನಾ|
ಗರದ ಕಲಿಗಣನಾಥ ಬೆಳಗೆನ್ನ ಯ
ಮನೋಗೃಹವ ॥

೦ ೦ ೦

ಅಕಳಟಾವಿಗಳೆಂಬ ವರ್ಣಾ।
ಷ್ಟಕವೆ ತನು ವೇದಾಗವೂದ ।
ಪ್ರಕರವಿಂದ್ರಿಯ ವೃಂದವೆನೆವೋಂ
ಕಾರವೇ ಹೃದಯ॥
ಸಕಲ ವೇದಾಂತವೆ ಮುಖಾಬ್ಜ ।
ಪ್ರಕಟ ಶಬ್ದ ಬ್ರಹ್ಮವರ ಮೂ।
ತ್ರಕೆ ಸರಸ್ವತಿ ನೀಡೆವ.ಗೆ
ಶಬ್ದಾರ್ಥ ಕೌಶಲವ॥

ಈ ಯೆರಡು ಪದ್ಯಗಳ ಸುರಸತೆ ರಸಿಕ ವೇದ್ಯವೇ ಆಗಿದೆ. ಏನೆಂದರೆ, ವಿಘ್ನೇಶ್ವರ, ಸರಸ್ವತಿ ಹಾಗೂ ಗುರುಗಳು ಏಕಶಕ್ತಿ ರೂಪಗಳೆಂದು ಮೊದಲ ಪದ್ಯದಿಂದ ತಿಳಿಯುತ್ತದೆ. ಎರಡನೆಯದರಲ್ಲಿ, ಸರಸ್ವತಿಯು ಅಕ್ಷರಾಂಕಿತ ಗಾತ್ರೆಯೆಂದು ಸ್ಪಷ್ಟಿಸಲಾಗಿದೆ. ಇನ್ನು,

"ಹಾಳೆ ಬಾಳೆಯ ದೊನ್ನೆಯೂದರಿ|
ಯಾಲ ಸವಿ ಕೆಟ್ಟಿಸುದೆ ಮತ್ತವಿ |
ತಾ ಲಲಿತ ಲಕ್ಷಣಗಳಲ್ಲದೆಯದರೊ
ಳೆಸೆದರ್ ॥
ಸ್ಥೂಲ ಧರ್ಮ ರಹಸ್ಯವಳಿವುದೆ|
ಹಾಳು ಕವಿತೆಯದೆಂದು ನೋಡದೆ |
ಲಾಲಿಸಿದಡಿಹಪರಕೆ ಬಹು
ಪುರುಷಾರ್ಥ ಉಂಟೆಂದು॥"

ಇದರ ಸಂಧಿಗಳ ಕೊನೆಗೆ ಹೆಚ್ಚಾಗಿ ವಿಶ್ವನಾಥ, ಕಾಶೀನಾಥನೆಂದು ಮೊದಲಾದ ಮುದ್ರಿಕೆಗಳು ಪರ್ಯಾಯತಃ ಹೇಳಿವೆ. ಎರಡನೆಯ ಸಂಧಿಯಲ್ಲಿ, ಮನುವಿಗೆ ಆದಿತ್ಯನೊಲಿದ ಕತೆಯಿದೆ. ಮನುವಿಗೆ ಸದ್ಯುಮ್ನನೆಂಬ ಮಗ ಹುಟ್ಟಿದುದು (ಗುರುಡಳು ಹೇಳಿದಂತೆ ಹೆಣ್ಣಾದು ಗಂಡಾದುದು), ಸುದ್ಯುಮ್ನನು ಒಮ್ಮೆ "ಶಿವಗಿರಿಜೆಯರ" ಕೇಳಿ ವನವನ್ನು ಹೊಕ್ಕು, ಶಾಪದಿಂದ ಮುನಿಃ ಹೆಣ್ಣಾದುದು; ಆಕೆಯಲ್ಲಿ (ಇಳೆಯಲ್ಲಿ)ಬುಧನಿಂದ ಪುರೂರವನು ಹುಟ್ಟಿದುದು; ಸುದ್ಯುಮ್ನನ ಮುಕ್ತಿಯೂ ಹೇಳಿದೆ! ಮನುವಿಗೆ ಮತ್ತ ಇಕ್ಷ್ವಾಕು ಮೊದಲಾದ ಹತ್ತು ಮಂದಿ ಮಾಳ್ಳಗಾಗಿ; ಲೋಕವನ್ನೆಲ್ಲಾ ಗೆದ್ದರು. ಮನುವು ಆದಿತ್ಯನಿಂದ ಸತ್ಯ ಸುಖದ ವಿಚಾರ ತಿಳಿದನು ಎಂದಿದೆ.

ಮೂರನೆಯ ಸಂಧಿಯಿಂದ ಹತ್ತನೆಯ ಸಂಧಿಯುನಕ ಶಿವತತ್ತ್ವ ನಿರ್ಣಯ ವಿಶ್ವಾಧಾರ ವಿಚಾರ, ಜಗತ್ ಸೃಷ್ಟಿಯ ವಿಷಯ, ಶಿವಭಕ್ತಿಯ ಮಹಿಮೆ, ಕಲಿಯ ಧರ್ಮ, ಕಲಿಯುಗದ ಧರ್ಮ, ಕಲಿವರ್ತನೆಗಳು ಹಾಗೂ ಪ್ರಾಯಶ್ಚಿತ್ತಗಳೂ ಹೇಳಿವೆ. ವ್ಯಾಸನು ಕಾಶಿಗೈದಿ, ಅಲ್ಲಿಯ ದೇವದೇವನ ಹಾಗೂ ತತ್ಪರಿವಾರ ದೇವತೆಗಳ ಮತ್ತು ಗಣಗಳ ಸಂದರ್ಶನಮಾಡಿದ್ದು ಒಂದು ಸಂಧಿಯಲ್ಲಿ (೧೧ನೆಯದರಲ್ಲಿ) ಇದೆ. ಈ ಎಂಟೊಂಬತ್ತು ಸಂಧಿಗಳಲ್ಲಿ ಹೆಚ್ಚಿನ ಪದ್ಯಗಳಲ್ಲಿ ಸರಳ ರೀತಿಯಾಗಿ ವೇದಾಂತಾದಿ ವಿಚಾರಗಳು ವಿವರಿಸಿವೆ. ಮತ್ತೆ ನಾಲ್ಕು ಸಂಧಿಗಳೆಂದರೆ, ದಕ್ಷಯಜ್ಞಾರಂಭ, ದಧೀಚಿಯ ಶಾಪ, ದಾಕ್ಷಾಯಣಿಯ ಅಂತರ್ಧಾನ ಮತ್ತು ವೀರೇಶ್ವರನ ಅವತಾರದಿಂದ ದಕ್ಷಯಾಗ ಧ್ವಂಸಗಳು ಬಣ್ಣಿಸಲಾಗಿವೆ. ಈ ಕತೆಯ ಪರಿಚಯ ಎಲ್ಲರಿಗೂ— ಸಂಸ್ಕೃತೇತರ ಭಾಷಾವಿದರಿಗೂ— ತಿಳಿಯತಕ್ಕದೇ ಇದೆ: ಹರ ಶರಣರು ಈ ಕತೆಯಲ್ಲಿ "ವೀರೇಶ" ಚರಿತೆಯನ್ನು ಹೆಚ್ಚುಗೊಳ್ಳುವರು. ಹರಿಹರರ ಅಭೇದವನ್ನು ಸಾರುವ ಭಾಗವತ ಪಂಥದವರು ಈ ಆಖ್ಯಾನ ಹಾಡುವರು. ಯಕ್ಷಗಾನ ಸಾಹಿತ್ಯದಲ್ಲೂ ದಕ್ಷಯಜ್ಞ — ವೀರೇಶನ ಅವತಾರದ ಕತೆಯು ಪ್ರಸಿದ್ಧವೇ ಇದೆ. ಆದುದರಿಂದ ಇಲ್ಲಿ ಈ ಕವಿಯ ಚಾತುರ್ಯವನ್ನು ಕುರಿತು ತುಸ ಪರಿಚಯಿಸುವುದು ಸೂಕ್ತವಾಗಿದೆ!

"ಮೊದಲ ದಕ್ಷನು ಬ್ರಹ್ಮನಂಗು ।
ಷ್ಟದಲಿ ಜನಿಸಿದನೆರಡನಯ ಜ ।
ನ್ಮದಲಿ ಪ್ರಾಚೇತಸನ ಮಗನವ
ನಜನು ಭುವನಗಳ ॥
ಅಧಿಪತಿತ್ವವನೀಯ ಕನ್ನಯ್ಯ।
ರುದಿಸಲರುವತ್ತವರನಿತ್ತನು ।
ವಿಧಿಯ ಪೌತ್ರಾದ್ಯರಿಗೆಯೊಬ್ಬಳ
ನೀಶ್ವರಂಗಿತ್ತ ॥

೦ ೦ ೦

ಎಲ್ಲರಿತ್ತರು ಕಪ್ಪವನು ಸಿರಿ |
ವಲ್ಲಭನು ಮನ್ನಿಸಿದನಜನನ |
ಗೆಲ್ಲ ಭಾಗ್ಯವನೊಪ್ಪಿಸಿದ ನಿನ್ನುಳಿದ
ಸುರಗಿರರು ॥
ಇಲ್ಲ, ಈಶ್ವರನೊಬ್ಬನೇ ಕಡು ।
ಬಲ್ಲಿದನು, ಎನ್ನಯ ಕುಮಾರಿಯ |
ವಲ್ಲಭನ, ಮನ್ನಿಸನೆ ನೋಡುವೆ
ನೆನುತ ಹೊರವಂಟ ॥"

ಆಗ ದಕ್ಷನ ಸುತ್ತಲೂ ಅವಶಕುನದ ಛಾಯವು, ಕೈಲಾಸವೇ ಕಾಣದಾದುದು. ಹರನ ನಾಮಸ್ಮರಣೆಯು ಬಳಿಕ ಕೈಲಾಸ ಕಾಣಿಸಿತು. ಬಾಗಿಲ ಬಳಿಯ ನಂದೀಶ್ವರನು 'ಎಂಬೆಕೆಯ ತಂದೆಯುಲಾ'ಯೆನುತ ಒಳ ಹೊಗಿಸಿದನು. 'ವಿಶ್ವಾಧೀಶ್ವರನ ಮಾಯೆ' ಆತನನ್ನು ಹೊಕ್ಕು 'ಮಾವನೆನ ಗಳಿಯನು ಶಿವನು ಮನ್ನಿಸುವ'ನೆಂದೇ ದಕ್ಷನು ಸಭೆಗೈದಿದನು.

'ನೋಡದವನನು ನುಡಿಸದಿರೆ ವಾ ।
ತಾಡಿದಪು ತನ್ನೊಳಗೆ, ಮರುಳಗೆ |
ಮಾಡಿದನು ಮದುವೆಯನು
ಮಗಳನು
ಮೋಸಹೋದೆನಲಾ ॥
ಮಾಡದೇಡವೆ ತನಗೆ ಪೂಜೆಯು |
ಗಾಡಗರ್ವ ಶಿವಂಗೆ ತಕ್ಕುದ

(ಇಪ್ಪತ್ತಮೂರನೇ ಪುಟ ನೋಡಿರಿ)

ಲೇಖಕರು

ಶ್ರೀ "ನವಗಿರಿನಂದ"

ಸರಿಸಮಾನತೆ

ಸರಿಸಮಾನತೆಯ ಬಿರುಗಾಳಿ ಭರದಿಂದ ಬೀಸುತ್ತ ಸಮಾಜದ ಬೇರೆ ಬೇರೆ ಅಂಗಾಂಗಗಳನ್ನು ಅಲುಗಾಡಿಸುತ್ತಿರುವ ಈ ಕಾಲದಲ್ಲಿ—ಗಂಡ-ಹೆಂಡಿರ ಮಧ್ಯೆಯೂ ತನ್ನ ಕಾರುಬಾರು ತೋರಿಸದೆ ಇದ್ದೀತೆ? ಇದರ ಪರಿಣಾಮ ಕಾಣು ನೋಡಬೇಕು; ಶ್ರೀ ಲಕ್ಷ್ಮೀ, ಶ್ರೀ ವನಜಾ, ಶ್ರೀ ಶೋಭಾ ಎಂದು ಮುಂತಾದ ನಾಮಾಭೀಯಗಳೇ ಶಾಸನಬದ್ಧವಾಗುವ ಕಾಲಬಂದರೂ ಬಂದೀತು.

ಇನ್ನು ಬರೆಯುವವನು ಸಂಕೇತ ನಾಮದೊಳಗೆ ಹುದುಗಿರುವುದರಿಂದ ಸರಿ ಹೋಯಿತು. ಇಲ್ಲದಿದ್ದರೆ, ಈ ಲೇಖನದ ಫಲಿತವನ್ನು ಈ ಲೇಖಕನ ಹೆಸರಿಗೂ ಅಂಟಿಸಿಕೊಳ್ಳಬೇಕಾಗಿ ಬರುತ್ತಿತ್ತು. ಒಂದು ವೇಳೆ ಮತಂಡೆ ಎಂದಾದರೂ ಈ ಲೇಖಕನ ನಿಜನಾಮ ಬಯಲಾಗುವ ಕಾಲ ಬಂದರೆ ಆಗ, ಮುಚ್ಚುಮರೆ ಏಕೆ? ನನ್ನ ಅರ್ಧಾಂಗಿನಿಯ ಹೆಸರನ್ನೂ ನನ್ನ ಹೆಸರಿನೊಂದಿಗೆ ಸೇರಿಸಬೇಕಾಗಿ ಬರುತ್ತೆ. ಹಿಂದೆ ಆಗಿಹೋದ ಸಾಹಿತಿಗಳ ಚರಿತ್ರೆಯನ್ನು ಬರೆಯುವವರಿಗೆ ಆಯಾ ಸಾಹಿತಿಗಳ ಹೆಂಡತಿಯ ಹೆಸರೂ ತಿಳಿಯುವಂತಾಗುವುದು ಒಳ್ಳೆಯದಲ್ಲವೆಂದು ಯಾರಿಗೂ ಕಾಣಲಿಕ್ಕಿಲ್ಲ. ಆದರೆ ನನ್ನ ಮಟ್ಟಿಗೆ ಅದೆಲ್ಲ ಭವಿಷ್ಯತ್ತಿಗೆ ಸೇರಿದ ಮಾತು. ನಾನೇನೋ ಸಂಕೇತದೊಳಗೆ ಹುದುಗಿಕೊಂಡು ಕಿರುಕುಳವವನು. ಬೇರೆ ಯಾರಾದರೂ ದೊಡ್ಡದೊಡ್ಡವರಿಗೆ ಆಲೋಚಸಲು ಇದೊಂದು ಸಣ್ಣ ಅಥವಾ—ಯಾರಿಗೆ ಗೊತ್ತು— ದೊಡ್ಡದಾದ ವಸ್ತುವೋ ಏನೋ?

ಪ್ರಶ್ನೆ ಏನೋ ಈ ಲೇಖಕನ ಮನೆಯಲ್ಲಿ ಗಂಡಹೆಂಡಿರೊಳಗೆ ಎದ್ದದ್ದು. ಅದೇ ದೊಡ್ಡದಾಗಿ ಮುಂದೆ ವಾಡಿಳಗೂ ಬರಲಾರದೆಂದು ಹೇಳುವುದು ಹೇಗೆ?

ಸಂದರ್ಭ ಇಷ್ಟೇ. ಪೋಸ್ಟು ಜವಾನ ತಂದುಕೊಟ್ಟ ಕಾಗದದಲ್ಲಿದ್ದ ನನ್ನ ಹೆಸರು ನೋಡಿ ನಾನು ಆಶ್ಚರ್ಯದಿಂದ ಬಾಯಿ ತೆರೆದೆ. ನನ್ನ ಹೆಸರಿನ ಜತೆಯಲ್ಲೇ ಅಂಟಿಕೊಂಡು ನನ್ನ ಹೆಂಡತಿಯ ಹೆಸರೂ ಇತ್ತು. ಅದು ನನ್ನ ತಂಗಿಯೇ ನನಗೆ ಬರೆದ ಪತ್ರ.

"ಏನೂಂದ್ರೆ, ಕಾಗದ ಕೈಲಿ ಹಿಡಿದುಕೊಂಡು ಬಾಯಿ ತೆರೆದು ಫಿಂತಿದೀರಲ್ಲಾ!" ಎಂದಳು ನನ್ನವಳು.

'ಮತ್ತೇನಿಲ್ಲ,ನಮ್ಮ ಪದ್ಮಾ ಬರೆದ ಕಾಗದ. ಅಡ್ರೆಸ್ಸಿನಲ್ಲಿ ನನ್ನ ಹೆಸರು ಹೇಗೆ ಬರೆದಿದ್ದಾಳೆ ನೋಡು' ಎಂದು ನನ್ನ ಆಶ್ಚರ್ಯ ಅವಳಿಗೂ ಹಂಚಿ ಕೂಡುತ್ತ.

ಅವಳು ಕಾರ್ಡು ನೋಡಿ—"ಬಿ! ಇಷ್ಟೇನಾ?' ಅಂದು ಬಿಟ್ಟಳು ತೆರೆದ ಬಾಯಿಗೇ. ಆ ಮೇಲೆ ಮುಂದುವರಿಸಿದಳು. "ನನ್ನ ಹೆಸರಿಗೆ ಕಾಗದ ಬರುವಾಗ, ಆ ಮೇಲೆ ನಿಮ್ಮ ಹೆಸರೂ ಬರೆಯುತ್ತಾರೋ ಇಲ್ಲವೋ! ಹಾಗೆಯೇ ನಿಮ್ಮ ಹೆಸರಿಗೆ ಕಾಗದ ಬರೆಯುವಾಗಲೂ ಹೀಗೇ ಅಡ್ರೆಸ್ ಬರೀಬೇಕು ಅಂತ, ಪದ್ಮಾವತಿಗೂ ಇನ್ನೂ ಬೇರೆ ಬೇರೆ ಸ್ನೇಹಿತೆಯರಿಗೂ ನಾನೇ ಕಾಗದ ಬರೆದಿದ್ದೇನೆ. ಅವರ ಕಡೆಯಿಂದ ಬರೆಯಲ್ಪಡುವ ಕಾಗದಗಳೆಲ್ಲ ಇನ್ನು ಮೇಲೆ ಹೀಗೇ ಬರುತ್ತೆ." ಎಂದಳು.

"ಇದೇನು ಖಾಚಿಕೆಗೇಡು! ತೀರ ಹೊಸತಾಗಿದೆಯಲ್ಲ ನಿನ್ನ ಆಟ?"

"ಆಟವೇನು ಬಂತ್ರೀ? ಇವತ್ತು ಹೊಸತು ಅನ್ನುವಿರಿ. ಎಲ್ಲರೂ ಹೀಗೇ ಬರೆಯಲಿಕ್ಕೆ ಶುರುಮಾಡಿ ಬಿಟ್ಟರೆ ಹಳತಾಗಿ ಮಾಮೂಲಾಗುತ್ತೆ.'

"ಹೆಂಡತಿಗೆ ಕಾಗದ ಬರೆಯುವಾಗ ಗಂಡನ ಕೇರ್ ಆಫ್ ಹಾಕಿ ಬರೆಯುವುದು ರೂಢಿ."

'ಹಾಗೆಯೇ ಗಂಡನಿಗೆ ಕಾಗದ ಬರೆಯುವಾಗಲೂ ಹೆಂಡತಿಯ ಕೇರ್ ಆಫ್ ಯಾಕೆ ಹಾಕಬಾರದು? ಗಂಡ ಮನೆಯಲ್ಲಿಲ್ಲದಿರುವಾಗ ಕಾಗದವನ್ನು ಜೋಪಾನ ಖಾಗಿಟ್ಟು ಕೊಡುವವಳು ಹೆಂಡತಿ ಅಲ್ಲ ನೇನು? ಇದರಲ್ಲೇನು ಮರ್ಯಾದೆ ಕಮ್ಮಿಯಾಗುತ್ತದೆ? ಒಂದು ಸಾರಿ ನಮ್ಮೂರಿಗೆಲ್ಲ ರಾಣಿಯ ಗಂಡ ಅನ್ನಿಸಿಕೊಂಡವನು ಬರಲಿಲ್ಲವೆ?"

"ಅದು ದೊಡ್ಡ ಪ್ರಭುಗಳ ಮನೆತನದ ವಿಷಯ."

"ದೊಡ್ಡ ದೊಡ್ಡ ಸಿನಿಮಾ ತಾರೆಯರ ಗಂಡಂದಿರೂ, ಇಂತಹ ತಾರೆಯ ಗಂಡ ಅಂತಲೇ ಹೆಸರು ಬರೋದಿಲ್ಲವೆ?"

"ಅದೆಲ್ಲ ಪ್ರಸಿದ್ಧ ಸ್ತ್ರೀಯರ ಕತೆಯಾಯಿತು. ಆದರೆ ಎಲ್ಲಾ ಗೃಹಿಣಿಯರೂ ಹೀಗೆ ತಮ್ಮ ಹೆಸರನ್ನು ಮುಂದೆ ಹಾಕಿಕೊಳ್ಳುವುದು ಏನು ಚೆಂದಾ ಅಂತ?"

'ಮುಂದೆ ಹಾಕಿಕೊಳ್ಳಬೇಕಂತ ಯಾರ್ರೀ ಅಂದದ್ದು? ಗಂಡೂ ಹೆಣ್ಣೂ ಸರಿಸಮಾನ ಎಂಬ ನ್ಯಾಯ ಉಂಟೋ ಇಲ್ಲೋ? ಅದನ್ನೇ ಹೇಳ್ತಿರೋದು. ಆದರೆ ನಿಮ್ಮಂಥ ಗಂಡಂದಿರಲ್ಲಾ ಕತಗಿತೆ ಬರೆಯುವಾಗ ನಿಮ್ಮ ಹೆಸರನ್ನು ಮಾತ್ರವೇ ಹಾಕಿಕೊಳ್ತೀರಿ, ಹೌದಾ? ಆದರೆ ಹೆಂಡಿರನ್ನು ನೋಡಿ. ಸ್ತ್ರೀ ಸಾಹಿತಿಗಳಲ್ಲಿ ಅನೇಕರು ತಮ್ಮ ಹೆಸರಿನೊಂದಿಗೆ ಗಂಡನ ಹೆಸರನ್ನು ಸೇರಿಸಿಕೊಂಡೇ ಇರುತ್ತಾರೆ. ಇಂಥಾ ಉದಾರತನ ಗಂಡುಸರಲ್ಲಿದೆಯೆ? ಇದು ನಿಮ್ಮ ಭೇದ ನೀತಿ ಅಲ್ಲವೆ?"

ಬೆಚ್ಚಿಬಿದ್ದ. ಕಣ್ಣು ಇಪ್ಪಗಲ ತೆರೆದುಕೊಂಡಿತು.

'ಓಹೊಹೊ! ನಾನಿನ್ನು ಮೇಲೆ ಏನಾದರೂ ಪ್ರಕಟನಾರ್ಹದ್ದು ಬರೆಯುವಾಗ ನನ್ನ ಹೆಸರಿನ ಹಿಂದೆ ನಿನ್ನ ಹೆಸರನ್ನೂ ಹಾಕಿಕೊಳ್ಳಬೇಕಂಬುದೇ ನಿನ್ನ ಅಭಿಪ್ರಾಯ. ಹೌದಾ?" ಎಂದೆ.

"ಹೌದೂಂದೆ. ನಾನು ಏನಾದರೂ ಬರೆದರೆ—ನನ್ನಿಂದ ಆಗೋದಿಲ್ಲಾ ಅನ್ನಿ—ನನ್ನಂಥ ಮಹಿಳೆಯರು ಬರೆದರೆ ತಮ್ಮ ಗಂಡನ ಹೆಸರನ್ನೂ ಹಾಕಿ ಕೊಳ್ಳುತ್ತಾರೋ ಇಲ್ಲವೊ? ಹಾಗೆ ಒಬ್ಬ ಲೇಖಕಮಾಡಿದ್ದಾನೆಯೇ? ಇಲ್ಲಾನ್ನಿ."

'ತಡಿ ತಡೀ. ಕೆಲವು ಗಂಡುಸರು ಅವರ ಹೆಂಡ್ತೀ ಹೆಸರಿನಲ್ಲಿ..."

"ಅದು ನನಗೆ ಗೊತ್ತು ಬಿಡ್ರಿ. ಸ್ವಲ್ಪ ಪುಳ್ಳಕನವ್ಳಳ್ಳವರು ಹಾಗೂ ಬರೀತಾರಂತೆ. ಅವರ ವಿಷಯ ನಮಗೆ ಯಾಕೆ? ಇದು ಗಂಡೂ ಹೆಣ್ಣೂ ಸರಿಸಮಾನತೆಯ ಮಾತು. ಎಲ್ಲಾ ಗಂಡು ಲೇಖಕರೂ ತಮ್ಮ ಹೆಸರಿನ ಹಿಂದೆ ಅವರ ಶ್ರೀಮತಿಯ ಹೆಸರನ್ನೂ ಪ್ರಕಟಿಸಲಿ. ಅದಕ್ಕಾಗಿ ನೀವು ನಿಮ್ಮ ಸ್ನೇಹಿತರಾದ ಒಬ್ಬರು ಸಂಪಾದಕರನ್ನು ಹಿಡೀರಿ."

'ಹಿಡಿದು ನಾನೇನು ಮಾಡಲಿ? ನಾನು ಸಂಕೇತದೊಳಗಿರುವವನಾದೆನಲ್ಲ?"

'ನಿಮ್ಮ ವಿಷಯ ಅಲ್ರೀ ನಾ ಹೇಳಿದ್ದು. ನೀವು ಸಂಕೇತದೊಳಗಿಂದ ಎಂದಾದರೂ ಧೈರ್ಯದಿಂದ ಹೊರಗೆ ಬರುತ್ತಿರಲಿಲ್ಲ; ಆವಾಗ ಹಾಕಿ ಕೊಂಡರೆ ಸಾಕು. ಮುಖ್ಯ ಈ ಹೊಸರೀತಿಗೆ ಪತ್ರಿಕೆಯ ಮುಖಾಂತರ ಪ್ರಚಾರ ಸಿಕ್ಕಬೇಕು ಅಂದೆ."

"ಸರಿ, ಸಂಪಾದಕರ ಮನಸ್ಸಿಗೆ ಬಂದರೆ ತಾನೇ ಪ್ರಚಾರದ ಮಾತು? ಸಂಪಾದಕರು ಅಂದರೆ ಕಸದ ಬುಟ್ಟೀ ಅಂತಿನಲ್ಲೇ ಕೂತುಕೊಂಡಿರುವವರು ಅಂತ ಗೊತ್ತೋ ನಿನಗೆ?'

"ಕೂತಿದ್ರೆ ಅವರಿಗೇನು ವಿಚಾರ ಇಲ್ಲಾ ಅಂತಲೋ ನಿಮ್ಮ ಅಭಿಪ್ರಾಯ? ಸರಿಯಾಗಿ ಬರೀಲಿಕ್ಕೂ ಗೊತ್ತಿಲ್ಲದವಳ ಹೆಸರನ್ನೂ ಯಾವ ಕರ್ಮಕ್ಕೆ ಹಾಕೋದೂ ಅಂತ ಇಡೀ ಲೇಖನವನ್ನೇ ಕಸದ ಬುಟ್ಟಿಗೆ ಎಸೆದುಬಿಡ್ತಾರೇನು? ಹಾಗಿದ್ದರೆ ಅವರ ಹೆಂಡತೀಗೇ ಈ ವಿಷಯ ಕುಂತು ನಾನು ಕಾಗದಾ ಬರೀತೇನೆ. ಆಗ ನಿಮ್ಮ ಸಂಪಾದಕರು ಬಗ್ಗಿ ಕಸದ ಬುಟ್ಟೀನ ಹುಡುಕಿ ಹೆಕ್ಕಿಕೊಳ್ಳುತ್ತಾರೆ.'

'ಹೂಂ, ಹೆಂಗುಸರು ಮನಸ್ಸು ಮಾಡಿಬಿಟ್ರೆ ಏನನ್ನಾದರೂ ಮಾಡಿಸಿಯಾರು. ಆದರೂ...."

'ಯಾಕೆ ಎಳೆತೀರಿ? ಸುಮ್ಮ ಸುಮ್ಮನೇ ಹೆಂಡ್ತೀ ಹೆಸರು ಯಾಕೆ ಸೇರಿಸಿಕೊಳ್ಳೋದು ಅಂತ ತಾನೇ ಯೋಚನೆ? ಈಗ ಸಂಕೇತದೊಳಗೆ ಹುದುಗಿರುವ ನಿಮ್ಮನ್ನೇ ತೆಗೆದುಕೊಳ್ಳಿ. ನಿಮ್ಮ ಪ್ರತಿ ಬರವಣಿಗೇಲಿಯೂ ನನ್ನ ಸಹಾಯ ಉಂಟೋ ಇಲ್ಲವೋ? ಇಲ್ಲಾ ಅಂದರೆ ನಾನು ಒಪ್ಪಲಾರ. ನಿಮ್ಮ ಅನುಭವಗಳ ಆಧಾರದಲ್ಲಿ ತಾನೇ ಅದೂ ಇದೂ ಬರೀತಾ ಇದ್ದೀರಿ? ನಿಮ್ಮ ಅನುಭವ ಅಂದರೆ ನನ್ನ ಅನುಭವ ಸದಾ ಸೇರಿಕೊಂಡೇ ಇರುತ್ತೆ. ಅದನ್ನೆಲ್ಲಾ ಹೇಳದೆ ಕೇಳದೆ ಖಾಚಿಕೊಂಡು ಬರೀತೀರಿ. ನೀವು ಬರೆದ ಎಷ್ಟೋ ಪ್ರೇಮ ಕತೆಗಳಲ್ಲಿ, ಹಂಡ ಹೆಂಡ್ರು ಮಕ್ಕಳು-ಮರಿಗಳ ವ್ಯವಹಾರದ ಕತೆಗಳಲ್ಲಿ ನನ್ನಿಂದ ಪಡೆದ ಅನುಭವ ಸದಾ ಬೆರೆತಿದೆಯೇ ಇಲ್ಲವೋ, ಸತ್ಯ ಹೇಳಿ".

ಡತೋಸ್ಕಿಯೂದ ನಾನು "ನಿಜ ನಿಜ ನಿಜ" ಅಂದೆ ತಗ್ಗಿದ ದನಿಯಿಂದ.

"ಎಲ್ಲಾ ಲೇಖಕರಿಗೂ ಹಾಗೇನೇ. ಹೆಂಡ್ತಿ ಸಹಾಯ ಇಲ್ಲದೆ, ಅಥವಾ ಹೆಂಣ್ಣುಗಳ ಸಹಾಯವಿಲ್ಲದೆ ಅವರೊಬ್ಬರಿಗೇ ಅನುಭವದ ರಸ ಆಕಾಶದಿಂದ ಇಳಿದು ಬಿದ್ದುತ್ತೇನು ಅವರ ತಲೇ ಮೇಲೆ? ಅದಕ್ಕೇ ಕೇಳುತ್ತೇನೆ ಹೆಂಡತಿಯ ಹೆಸರನ್ನು ಯಾಕೆ ಸೇರಿಸಿಕೊಳ್ಳಬಾರದು ಗಂಡು ಲೇಖಕರು?' ಸವಾಲಿನ ಹಾಗೆ ಕೇಳಿದಳು.

ನಾನು ಯೋಚನೆ ಮಾಡುತ್ತಿರುವಾಗ ಮತ್ತೆ ಅವಳ ವಾಗ್‌ಝರಿ ಹರಿಯಿತು:

'ಹೆಂಡತಿಯ ಹೆಸರನ್ನು ಸೇರಿಸಿಕೊಳ್ಳುವ ಅಭ್ಯಾಸ ಮೊದಲಿನಿಂದಲೇ ಇರುತ್ತಿದ್ದರೆ ಹಿಂದಿನ ಎಷ್ಟೋ ದೊಡ್ಡ ದೊಡ್ಡ ಕವಿಗಳ ಜೀವನ ಚರಿತ್ರೆಯನ್ನು ಹುಡುಕಾಡುವವರಿಗೆ, ಅವರ ಹೆಂಡತಿಯ ಹೆಸರು ಕೂಡ ಗೊತ್ತಾಗುತ್ತಿತ್ತು. ಎಲ್ಲರೂ ಸಂತೋಷವಾಗುತ್ತಿತ್ತು. ಆಗಿ ಹೋದ ಮಹಾ ಕವಿಗಳ ಹೆಂಡತಿಯರ ಹೆಸರನ್ನೂ ತಿಳಿಯಬೇಕೆಂಬ ಕುತೂಹಲ ಜನರಿಗಿರುವುದಿಲ್ಲವೆ? ಆ ವಿಷಯದಲ್ಲಿ ನಮ್ಮ ಮುದ್ದಣ ಕವಿ ಗಟ್ಟಿಗ ಅನ್ನಬಹುದು. ಆತ ತನ್ನ ಹೆಂಡತಿಯ ಹೆಸರನ್ನು ಕಥಾಪ್ರಾಯಿಕೆಯ ಹಾಗೇ ಮಾಡಿ ಕೊಂಡು ಬಿಟ್ಟಿದ್ದಾನೆ—ಜಾಣ"

"ತಡಿ ತಡೀ. ಒಬ್ಬನಿಗೆ ನಾಲ್ವತ್ತು ಹೆಂಡತಿಯರಿದ್ದರೆ? ಹಿಂದಿನ ಕಾಲದವರಿಗೆಲ್ಲ ಅನೇಕ ಹೆಂಡತಿಯರಿದ್ದರಲ್ಲ?"

"ಇದ್ದರೆ ಎಲ್ಲರ ಹೆಸರನ್ನೂ ಹಾಕಿ ಕೊಳ್ಳಬೇಕಾದ್ದೇ?'

"ಅಂದರೆ ಕವಿಕುಲ ಮೌಳಿ ಸಂಪನ್ನರಾಯ ನಾಗಾಂಬಿಕಾ ತುಂಗಮ್ಮ ಭದ್ರಮ್ಮ ಸುಗುಣಾಂಬಿಕಾ ಕೇಶರಬ್ಬೆ ಮಹಾಕವಿ ವಿರಚಿತಮಪ್ಪ ಅಂತ ಹಾಕ್ಕೊಂಡ್ರೆ ಚೆಂದಾಗಿರುತ್ತೆ ಅನ್ನುವಿಯೂ?"

"ಚೆಂದಾಗಿರೋಲ್ಲ ಅನ್ನುವಿರೇನು? ಇಲ್ಲದಿದ್ದರೆ ಬೇಡ. ಅದು ಹಿಂದಿನ ಕಾಲದ ಮಾತು; ಈಗ ಯೂಂದ್ದಾರೆ ಹೇಳಿ, ಆಸ್ಟ್ರೂ ಉದ್ದದ ಹೆಂಡತಿಯರ ಮಾಲೆ ಧರಿಸಿಕೊಂಡಂಥಾ ಗಂಡುಸು? ಒಬ್ಬನಿಗೆ ಒಬ್ಬಳೇ ಅಂತ ನ್ಯಾಯ ಬೇಲೆ ಬಂದಿದೆಯಲ್ಲಾ?'

"ಆದರೂ ಈ ಅಭಿಪ್ರಾಯಕ್ಕೆ ನೀನೂ ನನ್ನ ತಂಗಿಯೂ ಒಪ್ಪಿಬಿಟ್ಟರೆ ಸಾಕೆ? ಎಲ್ಲಾ ಹೆಂಗಸರೂ ಒಪ್ಪಬೇಡವೆ?'

'ಒಪ್ಪುವಂಥಾ ಅಂತ ಯಾಕೆ ಸಂಶಯಪಡುತ್ತೀರಿ?"

"ಯಾಕೆ ಅಂದರೆ, ಸಾಮಾನ್ಯವಾಗಿ ಹುದುಗಿ ಸಂಕುಚಿತರಾಗಿರುವುದೇ ಹೆಂಗುಸರ ಸ್ವಭಾವ. ಅದೇ ಅವರಿಗೆ ಭೂಷ

(ಇಪ್ಪತ್ತೆರಡನೇ ಪುಟ ನೋಡಿ)

ಸಮಸ್ತ ಭಾರತಕ್ಕೆ ಶಕ್ತಿ-ಪ್ರಾಣ-ಶಾಂತಿ ದಾಯಕವಾದ ಸಂಸ್ಕೃತ ವಾಙ್ಮಯದಲ್ಲಿ ಸ್ತೋತ್ರ ಸಾಹಿತ್ಯ ವಿಭಾಗವೊಂದೇ ಅ ವಾಙ್ಮಯದ ಅಮರ ಯಶಸ್ಸಿನ ಧ್ವಜ ಪಟವಾಗಿದೆ. ಅಗ್ನಿದೇವಿಯನ್ನಿಜ ವೇದಗ ಳಿಂದಾರಂಭಿಸಿ ಇತ್ಯಾದಿಗಳವರೆಗೆ ಪ್ರತಿ ಯೊಂದು ಸಾಹಿತ್ಯ ವೃಂದದಲ್ಲೂ ಇರುವ ಸ್ತೋತ್ರಗಳು ಪುಷ್ಪಗಳೊಳಗಿನ ಮಕ ರಂದದಂತೆ ಸುಗಂಧ ಮತ್ತು ಆಘ್ರಾಯ ನಕಾರಿಯಾಗಿ ಭಕ್ತ ಭ್ರಮರಗಳನ್ನು ತ ಮ್ಮೆಡೆಗೆ ಆಕರ್ಷಿಸುತ್ತಿವೆ. ಪರಮೇಶ್ವರ ನನ್ನು ಪ್ರತ್ಯಕ್ಷೀಕರಿಸುವ ಸುಲಭ ಮಾರ್ಗ ವಾದ ಭಕ್ತಿ ಮಾರ್ಗದಲ್ಲಿ ಈ ಸ್ತೋತ್ರಗ ಳು ಸಾಂದ್ರತಮಾಲ ವೃಕ್ಷಗಳ ನಡುವಿನ ರಾಜಮಾರ್ಗವೆನ್ನಿಸಿದೆ.

ಸಂಸ್ಕೃತ ಭಾಷೆಯಲ್ಲಿ ವಿಪುಲ ಸ್ತೋ ತ್ರ ಸಾಹಿತ್ಯಗಳು ಬೆಳೆದು ಬಂದಂತೆ, ತ ಮಿಳು ಭಾಷೆಯಲ್ಲೂ ಈ ವಿಧದ ಸಾಹಿ ತ್ಯಗಳು ಅಸಂಖ್ಯವಾಗಿವೆ. ಕನ್ನಡ ನಾಡಿನ ವೈಷ್ಣವ ಭಕ್ತರನ್ನು ದಾಸ-ಪಂಥೀಯ ರೆಂದು ಕರೆದಂತೆ, ತಮಿಳು ನಾಡಿನ ವೈ ಷ್ಣವ ಭಕ್ತರನ್ನು ಆಳ್ವಾರ್ ಎಂದು ಕರೆ ಯುವ ಪದ್ಧತಿ ಇದೆ. ಆಳ್ವಾರ್ ಎಂಬ ಪದಕ್ಕೆ ಮುಳುಗಿದವರೆಂದರ್ಥ. ಇವರು ಭಗವಂತನ ಭಕ್ತಿ ಸ್ತೋತ್ರದಲ್ಲಿ ಮುಳುಗಿ ಮಿಂದು ಬ್ರಹ್ಮಾನಂದವನ್ನನುಭವಿಸಿ ಆ ಆನಂದವನ್ನು ಭಕ್ತಿಗೀತೆಗಳ ಮೂಲಕ ಜನ ಸಮಾಜದಲ್ಲಿ ಹಂಚಿದರು. ಈ ಆಳ್ವಾ ರರು ಹಾಡಿದ ಭಕ್ತಿಗೀತೆಗಳು ಪ್ರಬಂಧ ಗಳೆಂದೂ, ಶಿವಭಕ್ತರ ಹಾಡುಗಳು ತೇ ವಾರಗಳು ಅಥವಾ ತಿರುವಾಚಕಗಳೆಂದೂ ಕರೆಯಲ್ಪಡುತ್ತವೆ. ತಮಿಳಿನಲ್ಲಿ ಆಳ್ವಾರ್ ಎಂಬುದು ಪುಲ್ಲಿಂಗ; ಆಂ ಡಾಳ್ ಎಂಬುದು ಇದರ ಸ್ತ್ರೀಲಿಂಗರೂಪ. ಇವರ ಭಕ್ತಿಗೀತೆಗಳೇ ತಮಿಳು ನುಡಿಗೆ ಸಂಸ್ಕೃತದ ಸ್ಥಾನ ಮಾನವನ್ನು ತಂದವು. ಈ ಆಳ್ವಾರ ಮತ್ತು ಆಂಡಾಳರ ಸಾಹಿತ್ಯ ಗಳಿಗೆ ದ್ರಾವಿಡ ವೇದ ಅಥವಾ ದ್ರವಿಡೋ ಪನಿಷತ್ತೆನ್ನುತ್ತಾರೆ. ಆಳ್ವಾರರು ಹನ್ನೆ ರಡು ಮಂದಿಯಾದರೂ ಇವರ ಗೀತೆಗಳ ಯಶಸ್ಸು ವಿಶ್ವವ್ಯಾಪಿಯಾದುದು. ಇದ ರಲ್ಲಿ ಕುಲಶೇಖರ ಆಳ್ವಾರರು ಮಧು ರೆಯ ಪ್ರಾಂತದ ರಾಜರು; ಗೋದಾದೇವಿ ಯೊಬ್ಬಳು ಆಂಡಾಳ್. ಇವಳು ಆಯೋ ನಿಜಯಾಗಿದ್ದು ವಿಪ್ರವಂಶಜರಾದ ಪೆರಿ ಯಾಳ್ವಾರರ ಸಾಕುಮಗಳು. ಇನ್ನೊಬ್ಬ ಆಳ್ವಾರನು ಅಂತ್ಯಜ; ಮತ್ತೊಬ್ಬನು "ಕಳ್ಳರ್" ಕುಲದವನು. ತಿರುಮಳಿಶೈ ಯವರ ಜಾತಿಯೇ ತಿಳಿಯದು; ಉಳಿದ ವರೆಲ್ಲಾ ಬ್ರಾಹ್ಮಣರು. ಈ ಆಳ್ವಾರ ರೆಲ್ಲಾ ವೈಷ್ಣವ ಸಾಧುಸಂತರು, ಜ್ಞಾನಿ ಗಳು, ಭಕ್ತರ ಪರಂಪರೆಗೆ ಸೇರಿದವರು. ಇವರೆಲ್ಲರನ್ನೂ ಇತಿಹಾಸಜ್ಞರು ಸಲ್ಲವರ ಕಾಲದವರೆನ್ನುತ್ತಾರೆ. ಕ್ರಿ. ಶ. ಎಳ ನೆಯ ಶತಮಾನದಿಂದ ಒಂಭತ್ತನೆಯಾ ಶತಮಾನದ ಮಧ್ಯಭಾಗದವೇ ಆಳ್ವಾರರ ಕಾಲವೆಂದು ಸಂಶೋಧಕರ ಅಭಿಪ್ರಾಯ. ಇವರೆಲ್ಲಾ ತಮಿಳುನಾಡಿನ ತಾಮ್ರಪರ್ಣಿ, ಪೈಗೈ, ಪಾಲಾರ್, ಕಾವೇರಿ ನದಿ ಗಳ ತೀರ ಪ್ರದೇಶದಲ್ಲಿ ಜನ್ಮವೆತ್ತಿ, ಬಾಳಿ, ಆ ಪ್ರದೇಶಕ್ಕೆ ಪವಿತ್ರತೆಯನ್ನುಣ್ಣಿಸಿ ಪೋಷಿಸಿದರು.

ಆಳ್ವಾರರೆಲ್ಲಾ ಸ್ವಾಗತ ಅಥವಾ ಭಾ

ಶ್ರೀ ಯು. ನಾ. ಉಡುಪ, ವಿದ್ವಾನ್, ಕುಂದಾಪುರ.

ಶ್ರೀ ಕುಲಶೇಖರ ಆಳ್ವಾರ್ ಅವರ ಭಕ್ತಿಗೀತೆಗಳು

ಕನ್ನಡದ ವೈಷ್ಣವ ಭಕ್ತರು ದಾಸ ಸಾಹಿತ್ಯವನ್ನು ನಿರ್ಮಿಸಿ ಅಜರಾಮರ ರಾದರು. ತಮಿಳುನಾಡಿನಲ್ಲೂ ಇದೇ ಬಗೆಯ ಪರಂಪರೆಯು ಆಳ್ವಾರ್ ಎಂಬ ಹೆಸರಿನಿಂದ ಸುಪ್ರಸಿದ್ಧವಾಯಿತು ಆಳ್ವಾರರು ಸ್ತೋತ್ರವಾಙ್ಮಯದಿಂದ ಸಾಹಿತ್ಯವನ್ನು ಬೆಳಗಿಸಿದರು. ಇವರಲ್ಲಿ ಪ್ರಸಿದ್ಧರಾದ ಶ್ರೀ ಕುಲಶೇಖರ ಆಳ್ವಾರ್ ಮತ್ತವರ ಭಕ್ತಿಗೀತೆಗಳ ಮೇಲೆ ಶ್ರೀ ಉಡುಪರು ಬೆಳಕು ಚೆಲ್ಲಿದ್ದಾರೆ.

ಗವತ ಮತದ ಅನುಯಾಯಿಗಳು. ಯಾ ದವ ವಂಶಕ್ಕೆ ಸೇರಿದ ವಾಸುದೇವ ಕೃಷ್ಣ ನೇ ಈ ಭಾಗವತ ಧರ್ಮದ ಪ್ರಥಮಾ ಚಾರ್ಯ. ಈ ಮತಕ್ಕೆ ಪಾಂಚರಾತ್ರ ಮತ ವೆಂದೂ ಹೇಳುವುದುಂಟು. ಈ ಭಾಗವತ ಧರ್ಮವು ಆ ಕಾಲದ ವೈದಿಕ ಧರ್ಮಕ್ಕೆ ಅನುಕೂಲವಾಗಿದ್ದಿಲ್ಲ; ಮಾತ್ರವಲ್ಲ, ಅ ನೇಕ ವಿಷಯದಲ್ಲಿ ಇದು ಆ ಮತಕ್ಕೆ ವಿರೋಧವಾಗಿಯೂ ಇತ್ತು. ಭಾಗವತ ಧರ್ಮದಲ್ಲಿ ಏಕೇಶ್ವರವಾದ, ಯಜ್ಞಯಾ ಗಾದಿಗಳ ನಿರಸನ, ಪ್ರಾಣಿ ಬಲಿಯ ಪ್ರತಿಬಂಧವು ಪ್ರಾಮುಖ್ಯವಾಗಿತ್ತು. ಪಾಂ ಚರಾತ್ರಮತವೂ ಬಹಳ ಪ್ರಾಚೀನವಾ ದುದು. ವಿಷ್ಣುಚೇಂದ್ರ ಸಂಹಿತೆಯು—ಕೇ ಶವನಿಂದ ಐದು ರಾತ್ರಿಗಳಲ್ಲಿ ಅನಂತ, ಗ ರುಡ, ವಿಷ್ವಕ್ಸೇನ, ಬ್ರಹ್ಮ ಮತ್ತು ರುದ್ರ ರು ಈ ಶ್ರದ್ಧಾ ಶಾಸ್ತ್ರವನ್ನು ಕೇಳಿದುದ ರಿಂದ ಇದಕ್ಕೆ ಪಂಚರಾತ್ರವೆಂಬ ಹೆಸರುಂ ಟಾಯಿತೆಂದು ಹೇಳುತ್ತದೆ. ನಾರದೀಯ ಸಂಹಿತೆಯು — ತತ್ತ್ವ, ಮುಕ್ತಿಪ್ರದ, ಭಕ್ತಿ ಪ್ರದ, ಯೌಗಿಕ ಮತ್ತು ವೈಶೇಷಿಕ ಗಳೆಂಬ ಐದು ಪ್ರಕಾರದ ರಾತ್ರ (ಜ್ಞಾನ) ಗಳನ್ನು ಈ ಧರ್ಮವು ಹೇಳುವುದರಿಂದ ಇ ದಕ್ಕೆ ಪಾಂಚರಾತ್ರವೆಂದು ಹೆಸರಾಯಿ ತೆಂದು ಹೇಳುತ್ತದೆ.

ಡಾ! ಭಾಂಡಾರರಕರು ಪಾಂಚರಾತ್ರವ ನ್ನು ಸಾಮಾನ್ಯವಾಗಿ ಭಾಗವತ ಧರ್ಮ ವೆಂದೇ ಹೇಳಿದ್ದಾರೆ. ಶ್ರೀ ಶಂಕರಾಚಾ ರ್ಯರು ತಮ್ಮ ಬ್ರಹ್ಮ ಸೂತ್ರ ಭಾಷ್ಯದ ಲ್ಲಿ ಸರಮತಗಳನ್ನು ಖಂಡಿಸುವಾಗ ಪಾಂ ಚರಾತ್ರಮತವನ್ನೂ ಖಂಡಿಸಿದ್ದಾರೆ. ಇ ವರ ಭಾಷ್ಯದಲ್ಲೂ ಭಾಗವತ ಮತ್ತು ಪಾಂಚರಾತ್ರಗಳನ್ನು ಸಮಾನಾರ್ಥದ ಲ್ಲಿ ಪ್ರಯೋಗಿಸಿದ್ದಾರೆ. ಶ್ರೀ ರಾಮಾ ನುಜರೂ ತಮ್ಮ ಶ್ರೀ ಭಾಷ್ಯದಲ್ಲಿ ವ್ಯ ತ್ಯಾಸವನ್ನು ಸೂಚಿಸಿಲ್ಲ. ಶ್ರೀ ಪಿ. ಟ್ರಿಶ್ರೀ ನಿವಾಸಯ್ಯಂಗಾರರು ಈ ಎರಡು ಮತಗ ಳ ನ್ಯತ್ಯಾಸವು ಅ ವ ರು ಉಚ್ಚರಿಸುವ ಮಂತ್ರಗಳನ್ನವಲಂಬಿಸಿದೆಯೆಂದೂ ಭಾ ಗವತರು 'ಓಂ ನಮೋ ಭಗವತೇ ವಾಸು ದೇವಾಯ'ಎಂಬ ದ್ವಾದಶಾಕ್ಷರಿ ಮಂತ್ರ ವನ್ನೂ, ಪಾಂಚರಾತ್ರರು "ಓಂ ನಮೋ ನಾರಾಯಣಾಯ," ಎಂಬ ಅಷ್ಟಾಕ್ಷರಿ ಮಂತ್ರವನ್ನೂ ಪಠಿಸುವರೆಂದೂ ಹೇಳು ತ್ತಾರೆ. ಇನ್ನೇ ಈ ಮತಗಳ ವೈಶಿಷ್ಟ್ಯಂ ತ!

ಪಾಂಚರಾತ್ರಮತವು ಬಹು ಪ್ರಾಚೀ ನವಾಗಿದ್ದು ಭಾಗವತ ಧರ್ಮದ ತತ್ತ್ವ ಗಳನ್ನೂ ಒಳಗೊಂಡಿದ್ದುದಲ್ಲದೆ, 'ಭಗ ವಂತನು ಪ್ರೇಮಮಯನು; ಕರುಣಾಸಾ ಗರನು. ಅವನಿಗೆ ಜಾತಿ ಕುಲ, ಸ್ತ್ರೀ ಪುರು ಷರೆಂಬ ಭೇದಗಳಿಲ್ಲ. ಅವನು ಎಲ್ಲರಿಗೂ ಒಲಿಯುವನು. ಆತನಿಗೆ ನಾಲ್ಕು ವರ್ಣ ದವರೂ ಸಮಾನರು. ಜಾತಿಯಲ್ಲಿ ಮೇ ಲುಕೀಳೆಂದಿಲ್ಲ. ಮೋಕ್ಷವೇ ಜನರ ಜೀವ ನದ ಗುರಿ. ಇವರಿಗೆ ಸೂತಕ ಮೈಲಿಗೆ ಗಳೆಂದಿಲ್ಲ." ಈ ಎಲ್ಲಾ ಸೂತ್ರಗಳು ಭಕ್ತ ಮಾರ್ಗದವರಿಗೆ ಹಿತಕರವಾದವುಗಳು. ಈ ತತ್ತ್ವವನ್ನೇ ಆಳ್ವಾರರೊಬ್ಬರು "ಕುಲಂ ಕರಂ ಶೆಲ್ವಂ ತಂದಿಡುವರ್" 'ಭಗವದ್ಭ ಕ್ತಿಯು ಕುಲವಿಲ್ಲದವನಿಗೆ ಕುಲವನ್ನೂ, ಸಿರಿ ಇಲ್ಲದವನಿಗೆ ಸಿರಿಯನೂ ತರುತ್ತದೆ' ಎಂದು ಘೋಷಿಸಿದ್ದರು. 'ಜ್ಯೋತಿ ಮು ಟ್ಟಿದ ಬತ್ತಿಯೆಲ್ಲಾ ಜ್ಯೋತಿಯಪ್ಪುವ ಯ್ಯಾ. ಸಾಗರವ ಮುಟ್ಟಿದ ನದಿಗಳೆಲ್ಲಾ ಸಾಗರವಪ್ಪುವಯ್ಯಾ' ಎಂದ ವೀರ ಶೈವ ವಚನಕಾರರ ಮಾತುಗಳೂ ಆಳ್ವಾರರ ಮಾತಿನ ಛಾಯೆಯಾಗಿವೆ.

ಕುಲಶೇಖರ ವರ್ಮನೆಂಬ ರಾಜನೂ, ಕುಲಶೇಖರ ಆಳ್ವಾರರೂ ಬಬ್ಬರೇ ಎಂದು ಕೆಲವರ ಅಭಿಪ್ರಾಯವಿದೆ. ಆದರೆ ಇವರ ಲ್ಲಿ ಕುಲಶೇಖರ ವರ್ಮನು ಪಾಂಡ್ಯ ದೇ ಶದ ರಾಜನು; ವಿಷ್ಣು ಭಕ್ತರಾದ ಕುಲ ಶೇಖರ ಆಳ್ವಾರರು ಮಧುರೆಯ ಸುತ್ತ ಮುತ್ತಲಿನ ಪ್ರದೇಶದ ರಾಜರಾಗಿದ್ದರೆಂ ದು ಹಲವರೂ, ಕೆಲವರು ಇವರು ಚೇರ ದೇಶದ ರಾಜರಾಗಿದ್ದರೆಂದೂ, ಶ್ರೀ ಜಿ. ಪಿ. ರಾಜರತ್ನಂ—ಅವರು ಈ ಭಕ್ತ ಕವಿ ಯು ಅನಂತಶಯನದ ರಾಜರಾಗಿದ್ದರೆಂ ದೂ ಹೇಳುತ್ತಾರೆ. ಒಂದು ಪಂಗಡದವರು ಈ ಆಳ್ವಾರರ ವಂಶೀಯರುತಿರುವಾಂಕೂ ರ ರಾಜಮನೆತನದವರೆಂದೇ ಸಾ ಧಿ ಸು ತ್ತಾರೆ. ಇದಕ್ಕೆ ಚರಿತ್ರೆಯಲ್ಲೆಲ್ಲೂ ಆಧಾ ರ ದೊರಯುವುದಿಲ್ಲ. ತಿರುವಾಂಕೂರು ರಾಜವಂಶಾವಳಿಯ ಕಾಲಕ್ಕೂ ಕುಲಶೇ ಖರ ಆಳ್ವಾರರ ಕಾಲಕ್ಕೂ ನೂರಾರು ವ ರ್ಷಗಳ ವ್ಯತ್ಯಾಸವಿದೆಯೆಂದು ಬಹುಜನರು ಅಭಿಪ್ರಾಯ ಪಡುತ್ತಾರೆ. ಹಾಗಾದರೆ ಭಕ್ತಿ ಗೀತೆಗಳ ಆಳ್ವಾರರು ಯಾರು?

ಕುಲಶೇಖರರೆಂಬ ಹೆಸರಿನ ರಾಜರು ಪಾಂಡ್ಯರಲ್ಲಿ, ಅನೇಕರಿದ್ದಂತೆ ತೋರು ತ್ತದೆ. ಇವರಲ್ಲಿ ತ್ರಿಭುವನ ಕುಲಶೇಖರ ನೂ (ಕ್ರಿ. ಶ. ೧೧೩೬), ಒಂದನೆಯ ಮ ತ್ತು ಎರಡನೆಯ ಜಟಾವರ್ಮ ಕುಲಶೇ ಖರರೂ (೧೧೯೦—೧೨೧೬; ೧೨೩೭—೧೨೫೯), ಒಂದನೆಯ ಮತ್ತು ಎರಡ ನೆಯ ಮಾರವರ್ಮ ಕುಲಶೇಖರರೂ (೧೨೬೮—೧೩೧೦; ೧೩೧೪—೧೩೪೪) ಮುಖ್ಯರು. ಇವರಲ್ಲಿ ೧೨ನೆಯ ಶತಮಾ ನದ ಆದಿಯಲ್ಲಿದ್ದ ತ್ರಿಭುವನ ಕುಲಶೇಖ ರ ವರ್ಮನೆಂಬ ರಾಜನು ತಪತೀ ಸಂವ ರಣ, ಸುಭದ್ರಾದ ನಂಜಯವೆಂಬೆರಡು ಸಂಸ್ಕೃತ ನಾಟಕಗಳನ್ನೂ, ಆಶ್ಚರ್ಯ ಮಂಜರಿ ಎಂಬ ಇನ್ನೊಂದು ಸಂಸ್ಕೃತ ಗ್ರಂಥವನ್ನೂ ಬರೆದಂತೆ ತೋರುತ್ತದೆ. ಈ ರಾಜನೂ ಭಕ್ತಿ ಗೀತೆಯ ಆಳ್ವಾರ ರು ಬೇರೆ ಬೇರೆ ಎಂಬುದಕ್ಕೆ ಬೇರೆಲಿನ ಗ್ರಂಥಗಳೇ ಪ್ರಬಲ ಸಾಕ್ಷಿಯಾಗಿದೆ. ಭಕ್ತಿ ಗೀತೆಯ ಆಳ್ವಾರರು ಸಂಸ್ಕೃ ತದಲ್ಲಿ ನಾಟಕವನ್ನಾಗಲೀ ಕಾವ್ಯವ ನ್ನಾಗಲೀ ಬರೆದುದಕ್ಕೆ ಬಲವಾದ ಸಾಕ್ಷಿ ಗಳಾವುವೂ ಇಲ್ಲ. ತ್ರಿಭುವನ ಕುಲಶೇ ಖರವರ್ಮನ ನಾಟಕಗಳಲ್ಲಾಗಲೀ, ಗ್ರಂ ಥದಲ್ಲಾಗಲೀ ಮುಕುಂದಮಾಲಾ ಸ್ತೋ ತ್ರದ ಸೂಚನೆಯೂ ಕಂಡುಬರುವುದಿಲ್ಲ; ಅಲ್ಲದೆ ಆತನಿಗೆ ಆಳ್ವಾರ್ ಎಂಬ ಹೆಸರಿ ದ್ದಂತೆಯೂ ತೋರುವುದಿಲ್ಲ.

ಚಿದಂಬರದ ವಿಷ್ಣು ದೇವಾಲಯವ ನ್ನು ಕ್ರಿ. ಶ. ೭ನೆಯ ಶತಮಾನದ ಉತ್ತ ರಾರ್ಧದಲ್ಲಿ ಕುಲಶೇಖರನೆಂಬೊಬ್ಬನು ಕ ಟ್ಟಿಸಿದನೆಂದು ಇತಿಹಾಸವು ಹೇಳುತ್ತದೆ. ಆದರೆ ಇವನು ಆಳ್ವಾರನಲ್ಲ; ಕೇರಳೋ ತ್ಪತ್ತಿ ಎಂಬ ಗ್ರಂಥದಲ್ಲಿ ಕ್ರಿ. ಶ. ೮೫೦ರ ಲ್ಲಿ ಚೇರವಾನ ಪೆರುಮಾಳನು ಸಿಂಹಾಸ ನವೇರಿ, ಆಗ ಪ್ರಬಲರಾಗಿದ್ದ ಮಾಪಿಳೈ ಯರ ಹಾವಳಿಯನ್ನು ತಡೆಯುವುದಕ್ಕಾ ಗಿ ತನ್ನ ರಾಜ್ಯದ ಕೊಲಿಕೂಡಲ್(ಮಧು ರೆ), ಕೂರಿಉರೈಯೂರ್, ಮತ್ತು ಕೊಂಗು ರಾಜ್ಯಗಳನ್ನು ಚಿಕ್ಕ ಚಿಕ್ಕ ವಿ ಭಾಗ ಮಾಡಿ ೧೮ವರ್ಷ ಆಳಿ ಕೀರ್ತಿ ಶೇ ಷನಾದನು ಎಂದಿದೆ. ಈ ಪೆರುಮಾಳ ನೇ ಕುಲಶೇಖರ ಆಳ್ವಾರರಾಗಿರಬಹು ದು.

ಮಧುರೆಯ ಪಶ್ಚಿಮ ಭಾಗದಲ್ಲಿ ವಿಮ ಸಾಕ್ಷಿ ಮಂದಿರದಿಂದ ಅರ್ಧ ಮೈಲುದೂ ರದಲ್ಲಿ ಸುಂದರರಾಜ ಪೆರುಮಾಳವೆಂಬ ವಿಷ್ಣು ದೇವಾಲಯವಿದೆ. ಈ ಮಂದಿರದ ಲ್ಲಿ ರಾಮಾಯಣ ಕಥಾ ಪ್ರಸಂಗದ ಸುಂ ದರ ಚಿತ್ರಗಳು ಅಸಂಖ್ಯ ಇವೆ. ಈ ಸುಂ ದರರಾಜ ಪೆರುಮಾಳನ ಭಕ್ತರು ಕುಲಶೇ ಖರ ಪೆರುಮಾಳರಿರಬಹುದು? ಈ ದೇವಾ ಲಯದ ರಾಮಾಯಣದ ಚಿತ್ರಗಳಲ್ಲಾ ಈ ಪೆರುಮಾಳರ ಕಾಲದಲ್ಲಿ ರಚಿತವಾ ಗಿರಬಹುದೇ ಇದು ವಿಚಾರಿಸಬೇಕಾದ ವಿಚಾರ. ಇವರ ಮುಕುಂದ ಮಾಲೆಯ ಲ್ಲಿ 'ಘುಷ್ಯತೇ ಯಸ್ಯ ನಗರೇ ರಂಗಯಾ ತ್ರಾ ದಿನೇ ದಿನೇ' ಎಂದು ಶ್ರೀರಂಗ ಕ್ಷೇ ತ್ರದ ಪ್ರಶಸ್ತ್ಯವನ್ನು ಎತ್ತಿ ಹೇಳಿ, ಅನಂ ತಶಯನ ಕ್ಷೇತ್ರದ ಪ್ರಸ್ತಾಪವನ್ನೇ ಹೇಳ ದಿರುವುದರಿಂದ ಇವರು ಅನಂತಶಯನದ ರಾಜಮನೆತನದವರಲ್ಲವೆಂದು ನಿಶ್ಚಯ ವಾಗಿ ಹೇಳಬಹುದು. ಅನಂತಶಯನದ ರಾಜರೆಲ್ಲ ಅಲ್ಲಿಯ ಸದ್ಧನಾಭ ಭಕ್ತರು.

ಭಕ್ತಿಗೀತೆಯ ಆಳ್ವರರು ರಾಜರೂ ಭಕ್ತೋತ್ತಮರಾಗಿದ್ದರೆಂಬುದಕ್ಕೆ 'ಅಂಬು ಜಾಕ್ಷ ಚರಣಾಂಬುಜಪಟ್ಟದೇನ ರಾಜ್ಞಾ

(ಇಪ್ಪತ್ತೊಂಬತ್ತನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು!

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶುದ್ಧ ಶಾಕಾಹಾರಿ ಶುಚಿ-ರುಚಿಯಾಗಿ ಭೋಜನ, ಕಾಫಿ ಮತ್ತು ತಿಂಡಿ-ತಿನಿಸುಗಳು ಲಭ್ಯ. ಕೃಷ್ಣಾಷ್ಟಮಿ ಸಂದರ್ಭದಲ್ಲಿ ಹೊಟೆಲ್.

ಸರ್ವರಿಗೂ

ಪ್ರಜಾರಾಜ್ಯ ದಿನದ ಶುಭಾಶಯಗಳು

ನವಜೀವನ ಟ್ರೈಲರ್ ವರ್ಕ್ಸ್

ಪುತ್ತೂರು, ಕಲ್ಯಾಣಪುರ
(ಉಡುಪಿ)

ದೀರ್ಘ ಕಾಲದ ಅನುಭವ!

ಉತ್ತಮ ಮಂಗಳೂರು ಹಂಚು ತಯಾರಿಕೆ,
ಶೀಘ್ರ ಪೂರೈಕೆ.

ಬಿ. ಜಗಜ್ಜೀವನದಾಸ ಶೆಟ್ಟಿ, L M. E
ಮ್ಯಾನೇಜರು.

JAWAHAR 3 H P Pumping Set

JAWAHAR

Standard Diesel Engines and Pumping sets

ಜವಾಹರ್

ಸ್ಟೆಂಡರ್ಡ್ ಡಿಸೆಲ್ ಇಂಜನುಗಳು
ಮತ್ತು ಪಂಪುಸೆಟ್ಟುಗಳು

ಅನುಭವಸ್ಥ ಧೃತನ ಪ್ರಥಮ ಆಯ್ಕೆ 'ಜವಾಹರ್' ಡಿಸೆಲ್ ಎಂಜನುಗಳು—ಯಾಕೆಂದರೆ?

* 'ಜವಾಹರ್' ಸರಳವಾದ ಜಗತ್ಪ್ರಸಿದ್ಧ "ಪೀಟರ್" ಪರಸ ಉತ್ಕೃಷ್ಟ ಸಂಯೋಜನೆಯ ಇಂಜಿನು.
* 'ಜವಾಹರ್' ತಾಂತ್ರಿಕ ತಜ್ಞರ ಕಟ್ಟುನಿಟ್ಟಾದ ಮೇಲ್ವಿಚಾರಣೆಯಲ್ಲಿ ತಯಾರಿಕೆ.
* 'ಜವಾಹರ್' ಕಾರ್ಖಾನೆಯಿಂದ ಮಾರುಕಟ್ಟೆಗೆ ಬರುವ ಮುಂಚೆಯೇ ದೀರ್ಘಕಾಲದ ವೈಜ್ಞಾನಿಕ ಪರೀಕ್ಷೆಗೆ ಒಳಪಟ್ಟಿರುತ್ತದೆ.
* 'ಜವಾಹರ್' ಅತಿ ಸುಲಭದಲ್ಲಿ ಸ್ಟಾರ್ಟ್ ಆಗುವಂತೆ ಅಳವಡಿಸಿರುತ್ತದೆ.
* 'ಜವಾಹರ್' ಡಿಸೆಲ್ ಎಂಜಿನ್ ಅತಿ ಕಡಿಮೆ.
* 'ಜವಾಹರ್' ಒಂದೆಡೆಯಿಂದ ಇನ್ನೊಂದೆಡೆಗೆ ಸುಲಭವಾಗಿ ಸಾಗಿಸಲು ಟ್ರೋಲಿಯ ಮೇಲೆ ಅಳವಡಿಸಲ್ಪಟ್ಟಿರುತ್ತದೆ.
* 'ಜವಾಹರ್' ಕೆಲಸಮಾಡುವಿಕೆಯ ಸಂಗ್ರಹ ಕಾಲದ ಸೇವೆಯಾಗಿ ಧೃತನ ಮೆಚ್ಚುಗೆಯ ಸ್ವತ್ತುವಾಗಿದೆ.

CEECO

Electric Motors, Pumps and Monoblocs

ಜೀಕೊ

ಇಲೆಕ್ಟ್ರಿಕ್ ಮೋಟಾರುಗಳು,
ಮೊನೊಬ್ಲೋಕುಗಳು ಮತ್ತು ಪಂಪುಗಳು
ತಾಂತ್ರಿಕ ತಜ್ಞರಿಂದಲೂ, ಅನುಭವಸ್ಥ
ಧೃತರಿಂದಲೂ ಮೆಚ್ಚುಗೆಯನ್ನು ಪಡೆದು
ದೇಶದಲ್ಲೆಲ್ಲಾ ಪ್ರಖ್ಯಾತಿಗೊಂಡ ಹೆಸರು ಜೀಕೊ

* ತಯಾರಿಕೆಯ ಪ್ರತಿ ಹಂತದಲ್ಲಿ ವೈಜ್ಞಾನಿಕ ಮೇಲ್ವಿಚಾರಣೆ.
* ತನ್ನ ಪರಿವಿಗೆಗೊಳಪಟ್ಟ ಕೆಲಸ ಮಾಡುವ ಬಗ್ಗೆ ಪ್ರತಿ ಮೋಟಾರು ಪರೀಕ್ಷೆಗೆ ಒಳಪಟ್ಟೇ ಕಾರ್ಖಾನೆಯಿಂದ ಮಾರಾಟಕ್ಕೆ ಬರುವುದು.
* ಅತೀ ಕಡಿಮೆ ವಿದ್ಯುತ್ ಬಳಕೆಯಿಂದಾಗಿ ಹೆಚ್ಚಿನ ಉಳಿತಾಯ.
* ಮೋಟಾರು ಬಿಡಿಯಾಗದಂತೆ ಉತ್ಕೃಷ್ಟ ತಂತ್ರದ ವಿಶೇಷ ವ್ಯವಸ್ಥೆ.
* ತನ್ನ ಕಾರ್ಯದಕ್ಷತೆಯಲ್ಲಿ ಎಲ್ಲಕ್ಕಿಂತ ಮಿಗಿಲಾದುದು
* ಬ್ರಿಟಿಷ್ ಸ್ಟ್ಯಾಂಡರ್ಡ್‌ಗನುಗುಣವಾಗಿ ತಯಾರಿಕೆ.



'GEECO' Monobloc Pumpset

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು.

ವಿಕ್ಟರ್ ಟ್ರೇಡಿಂಗ್ ಕೋರ್ಪೊರೇಶನ್, ಫಳನೀರ್ ರೋಡ್, ಮಂಗಳೂರು-1.

ಪ್ರಜಾಪ್ರಭುತ್ವದ ಪ್ರಯೋಗಾಲಯದಲ್ಲಿ ಪ್ರಮುಖ ಪ್ರಯೋಗ

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಭಾರತೀಯ ಪ್ರಜಾಪ್ರಭುತ್ವವೊಂದು ಪ್ರಯೋಗಾಲಯವಾಗಿ ಪರಿಣಮಿಸಿದೆ. ಇಲ್ಲಿ ಒಂದಲ್ಲ ಹಲವು ಪ್ರಯೋಗಗಳು ನಡೆಯುತ್ತಿವೆ. ಇವುಗಳಲ್ಲಿ ಸರಿಯೂ ಇವೆ, ತಪ್ಪೂ ಇರಬಹುದು. ಚೊಳ್ಳನ್ನು ಜಾಡಿಸಿ ಕಾಳನ್ನು ಹೆಕ್ಕುವ ಪ್ರಯೋಗವಿಂದು ಅತ್ಯಂತಾವಶ್ಯಕವೆನಿಸಿದೆ.

ಪ್ರಜಾಪ್ರಭುತ್ವವೆಂದಲ್ಲಿ ಪ್ರಜೆಗಳ ಪ್ರಭುತ್ವ ನಡೆಯುತ್ತಿದೆನ್ನುವದು ಅಭಿಪ್ರಾಯ. ನಮ್ಮ ನೆಚ್ಚಿನ ನಾಡು ಭಾರತದಲ್ಲಿ ಪ್ರಜಾಪ್ರಭುತ್ವ ನಡೆಯುತ್ತಿದೆನಲಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಯಾವೊಬ್ಬ ಪ್ರಜೆಯನ್ನಾಗಲೀ ಚುನಾಯಿಸಿ ಪ್ರಭುತ್ವ ನಡೆಸಲು ಕಳುಹಿಸುವರು. ಯಾರನ್ನು ಬೇಕಾದರೂ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನಾಗಿ ಕಳುಹಿಸಬಹುದು. ಅಂದರೆ ಅಧಿಕ ಮತ ಪಡೆದವನು ಪ್ರತಿನಿಧಿಯಾಗಲು ಅರ್ಹನಾಗುತ್ತಾನೆ. ಇದು ಪ್ರತಿಯೋರ್ವ ವ್ಯಕ್ತಿಗೆ ಸಂಬಂಧಪಟ್ಟ ಸಂಗತಿಯೇ ಸರಿ. ಈ ರೀತಿ ಪ್ರತಿನಿಧಿಸಲ್ಪಟ್ಟವರಿಗೆ ಸೂಕ್ತವಾಗಿ ಆಡಳಿತ ನಡೆಸಲು ಸಾಧ್ಯವಾಗುತ್ತದೆಯೇ? ಅವರಲ್ಲಿ ತಾತ್ವಿಕಸಾಮ್ಯತೆ ಇರುವದು ಬಹಳಕಷ್ಟ. ಒಂದೇಒಂದು ವಿಷಯದಲ್ಲಿ ಸಾಮ್ಯತೆಇರಬಹುದಾದಲ್ಲಿ ಅದು ಮಾತೃದೇಶದ ಪ್ರಗತಿ. ಅಂದರೆ, ಸ್ವದೇಶ ಬಾಂಧವರ ಸೇವೆ. ಈ ಗುರಿಯನ್ನು ಮುಟ್ಟಲು ಇರುವ ದಾರಿಗಳು ಹಲವಾರು. ಎಲ್ಲರೂ ಒಂದೇ ದಾರಿಯಲ್ಲಿ ಹೋಗಲಾರರು. ಅವರವರು ಅವರವರಿಗೆ ಸುಲಭ ಹಾಗೂ ಶೀಘ್ರವೆನಿಸಿದ ಪಥದಲ್ಲಿ ಸಾಗಲು ಸಹಜವಾಗಿ ಇಚ್ಛಿಸುತ್ತಾರೆ. ಇಲ್ಲಿ ಪಂದ್ಯಾಟಕ್ಕೆ ಆಸ್ಪದವಿದೆ. ಅದು ಗುದ್ದಾಟಕ್ಕೂ ಎಡೆ ಮಾಡಿಕೊಡಬಹುದು. ಇದುವೇ ನೈಜ ಪ್ರಜಾಪ್ರಭುತ್ವ ಇದೆಯಾದರೂ ಇಂದಿನ ಕಾಲದಲ್ಲಿ ಈ ಪ್ರಯೋಗಕ್ಕೆ ವಿಜಯ ದುರ್ಲಭ. ಅದಕ್ಕೆ ಕಾರಣ ಹಲವಾರು ಇವೆ.

ವೈಯಕ್ತಿಕ ಪ್ರತಿನಿಧಿಗಳನ್ನಾರಿಸುವ ಬದಲು ಸಾಮೂಹಿಕ ಪ್ರತಿನಿಧಿಗಳನ್ನು ಆರಿಸುವ ಪ್ರಯೋಗವಿಂದು ನಡೆದಿರುತ್ತದೆ. ಪ್ರಜಾಪ್ರತಿನಿಧಿಯಾಗಲು ಬಯಸುವವನು ತನ್ನ ವೈಯಕ್ತಿಕ ಗುಣ, ಸಾಮರ್ಥ್ಯಗಳ ಮೇಲೆಯೇ ಪ್ರಜೆಗಳ ಬೆಂಬಲವನ್ನು ಬಯಸದೆ ಪಕ್ಷದ ಹೆಸರನ್ನೂ ಉಪಯೋಗಿಸಿ ಕೊಳ್ಳುತ್ತಾನೆ. ಒಂದೇ ಪಕ್ಷದವರಲ್ಲಿ ಸಮಾನ ಯೋಜನೆ ಅಥವಾ ಗುರಿ ಇದೆಯೆನ್ನಲಾಗುತ್ತಿದೆ. ಇಂದು ಅವನ್ನು ಸುಳ್ಳೆಂದು ಸ್ಪಷ್ಟಪಡಿಸಲಾಗಿದೆಯಾದರೂ ವೈಯಕ್ತಿಕ ಪ್ರಜಾಪ್ರತಿನಿಧಿಗಳ ಸಮೂಹಕ್ಕಿಂತ ಇದು ಒಳ್ಳೆಯದೆನ್ನುವ ಭಾವನೆ ಇನ್ನೂ ಜನತೆಯಲ್ಲಿದೆ. ಇಲ್ಲಿ ವ್ಯಕ್ತಿಯು ತನಗಾಗಿ ಮತಗಳನ್ನು ಯಾಚಿಸುವದಿಲ್ಲ; ಪಕ್ಷಕ್ಕಾಗಿ ಯಾಚಿಸುತ್ತಾನೆ. ಹಿಂದೆ ಪೂರ್ವಜರು ಮಾಡಿದ ಪುಣ್ಯದ ಫಲ ಸಂತತಿಯವರಿಗೆ ಸಿಗುತ್ತಿತ್ತಾದಲ್ಲಿ ಇಂದು ಪಕ್ಷ ಸ್ಥಾಪಕರ ಹಾಗೂ ಪ್ರಮುಖರ ಪ್ರಭಾವದ ಫಲ ಪ್ರತಿನಿಧಿಗಳಿಗೆ ಸಿಗುತ್ತದೆ. ಈ ಪ್ರಯೋಗಕ್ಕೆ ಇಂದು ಬೆಂಬಲ ಸಿಗುತ್ತಿದೆ. ಪಕ್ಷೇತರರಿಗೆ ಇಂದು ಬೆಂಬಲ ಸಿಗುತ್ತಿರುವದಿಲ್ಲ.

ಎರಡು ಅಥವಾ ಮೂರು ಪಕ್ಷಗಳಿರುವಲ್ಲಿ ಇಂತಹ ಪ್ರಯೋಗ ಫಲಪ್ರದವಾಗಬಹುದು. ನಮ್ಮ ದೇಶದಲ್ಲಿ ಪಕ್ಷಗಳಿಗೆ ಬರಗಾಲ ಬಂದಿರುವದಿಲ್ಲ. ನಾಯಿ ಕೊಡೆಗಳ ಹಾಗೆ ಅವು ಬೆಳೆಯುತ್ತಿವೆಯೆಂದು ಅಣಕಿಸಲಾಗುತ್ತಿದೆ. ಕುಟುಂಬ ಯೋಜನೆಯಂತೆ ಪಕ್ಷ ಯೋಜನೆಯ ಪ್ರಚಾರವೂ ನಡೆಯುತ್ತಿದೆಯಾದರೂ ಪಾರ್ಟಿಗಳೂ ದಲಗಳೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇವೆ. ಅದ್ಯಾವ ವಂಕಿ ಇದನ್ನು ತಡೆದೀತು? ಪ್ರಜಾಪ್ರಭುತ್ವದಲ್ಲಿ ಅಂತಹ ವಂಕಿಧಾರಣೆ ಸಾಧ್ಯ ಇರುವದಿಲ್ಲ. ಹಾಗಾಗಿ ಪಕ್ಷೋಪಪಕ್ಷಗಳ ಹೆಸರುಗಳನ್ನು ಪಯೋಗಿಸಿಕೊಂಡು ಚುನಾಯಿಸಲ್ಪಟ್ಟ ಪ್ರತ್ಯೇಕ ಪ್ರತ್ಯೇಕ ಪ್ರತಿನಿಧಿಗಳ ಸಮೂಹಕ್ಕು ಪಕ್ಷದ ಗಂಧಗಾಳಿಯೂ ಇಲ್ಲದೆ ತನ್ನ ಕಾಲ ಮೇಲೆ ತಾನೇ ನಿಂತ ಕೊಂಡು ಚುನಾಯಿಸಲ್ಪಟ್ಟ ಸದಸ್ಯರ ಸಮೂಹಕ್ಕೂ ಭಾರೀ ಅಂತರ ಇರಲು ಸಾಧ್ಯ ಇರುವದಿಲ್ಲ. ಅದರಲ್ಲೂ ಇಂದಿನ ಅಂತರ್ಜಾಗದಾಟಗಳನ್ನು ಕಾಣುವಾಗ ಪಕ್ಷದ ಅಗತ್ಯವೇ ಇಲ್ಲವೆನ್ನುವ ಅಭಿಪ್ರಾಯಕ್ಕೆ ಉಂಟಾಗುತ್ತದೆ. ಏನೇ ಇದ್ದರೂ ಇಲ್ಲಿ ಕೆಲವು ಗುಂಪುಗಳನ್ನಾದರೂ ಕಾಣಬಹುದು. ಮಾನವನು ಸಮೂಹ ಜೀವಿಯೆನ್ನುವದನ್ನು ಪಕ್ಷ ಪದ್ಧತಿ ಸಮರ್ಥಿಸುತ್ತದೆ.

ಪಕ್ಷದ ವತಿಯಿಂದಲೋ ವೈಯಕ್ತಿಕ ಸಾಮರ್ಥ್ಯದಿಂದಲೋ ಚುನಾವಣಾ ಕಣದಲ್ಲಿ ಕಾಲಿಟ್ಟವನನ್ನು ಪ್ರಜೆಗಳು ಚುನಾಯಿಸಿ ಆಡಳಿತದ ಅಂಗಳಕ್ಕೆ ಕಳುಹಿಸುತ್ತಾರೆ. ಈ ಕ್ರಮವು ಪಂಚಾಯತು ಸಭೆಯಿಂದ ಲೋಕ ಸಭೆಯ ವರೆಗೆ ಅಥವಾ ಹಳ್ಳಿಯಿಂದ ದಿಲ್ಲಿಯ ವರೆಗೂ ಬಳಕೆಯಲ್ಲಿದೆ. ಈ ರೀತಿ ಚುನಾಯಿಸಲ್ಪಟ್ಟವರಿಂದಲೇ ಇಂದು ಆಡಳಿತ ನಡೆಯುತ್ತಿದೆಯೇ? ಎಲ್ಲಾ ಕೆಲಸವನ್ನು ಅವರಿಂದ ಮಾಡಲು ಸಾಧ್ಯ ಇರುವದಿಲ್ಲ. ಪಕ್ಷವ್ಯಾಮೋಹ ಹಾಗೂ ಬಂಧನಕ್ಕೊಳಗಾಗಿರುವ ಇವರಿಂದ ಸರ್ವ ಜನರೂ ಒಳ್ಳೆಯದನ್ನು ಫೀಕ್ಷಿಸಲು ಸಾಧ್ಯ ಇರುವದಿಲ್ಲ. ಅದು ದರಿಂದ ಇಂತಹ ಬಂಧನಕ್ಕೊಳಗಾಗದ ಜನರ ನೆರವೂ ಸಾರ್ವಜನಿಕರಿಗೆ ಅತ್ಯಗತ್ಯ. ಅಲ್ಲದೆ ಪ್ರತೀಯೊಂದು ಕೆಲಸಕ್ಕು ಪ್ರತಿನಿಧಿಗಳನ್ನು ಆರಿಸಿ ಕಳುಹಿಸಲು ಸಾರ್ವಜನಿಕರಿಗೆ ಸಾಧ್ಯವೂ ಇರುವದಿಲ್ಲ. ಅವರಿಗೆ ಅದೇ ಕೆಲಸವೇನು? ಅವರು ಕೆಲವರನ್ನು ಚುನಾಯಿಸಿ ಕಳುಹಿಸುತ್ತಾರೆ. ಇತರ ರಂಗದಲ್ಲಿ ದಕ್ಷರು ತಮ್ಮ ವೈಯಕ್ತಿಕ ಸಾಮರ್ಥ್ಯದ ಮೇಲೆ ಸುನ್ನ ಡೆದು ಜನತಾ ಸೇವೆಯನ್ನು ನೌಕರಿಯಂತೆ ಮಾಡುತ್ತಾರೆ ಅದನ್ನು ಜನತಾ ನೌಕರಿ ಅನ್ನುವ ಬದಲು ಸರಕಾರೀ ನೌಕರಿಯೆನ್ನಲಾಗುತ್ತಿದೆ.

ಸಾರ್ವಜನಿಕ ಚುನಾವಣೆ ಹಾಗೂ ಆಡಳಿತ ಆರಿಕೆಯಲ್ಲದೆ ಇನ್ನೊಂದು ರೀತಿಯ ಚುನಾವಣೆಯೂ ನಮ್ಮ ದೇಶದಲ್ಲಿ ಪ್ರಚಾರದಲ್ಲಿದೆ. ಸಾರ್ವಜನಿಕರಿಂದ ಚುನಾಯಿಸಲ್ಪಟ್ಟ ಭಿನ್ನ ಭಿನ್ನ ಪಕ್ಷಗಳವರು ಕೆಲವು ಸ್ಥಾನಗಳಿಗೆ ತಮ್ಮ ಸಾಮರ್ಥ್ಯದ ಮೇಲೆ ಕೆಲವರನ್ನು ಚುನಾಯಿಸುವದುಂಟು. ಸಾರ್ವಜನಿಕರಿಂದ ಚುನಾಯಿಸಲ್ಪಟ್ಟವರು ಜನತೆಯ ಮೇಲೆ ಕಾನೂನು ಕಾಯಿದೆಗಳ ಅಸ್ತ್ರಗಳನ್ನೂ ತಯಾರಿಸಬಹುದು. ಅವುಗಳನ್ನು ಜನತೆಯ ಮುಂದಕ್ಕೆ ಬರಿಸುವಂತಹ ಕೆಲಸವನ್ನು ಅವರು ಮಾಡಬೇಕಾಗುತ್ತದೆ. ಅವರ ಅನುಮತಿ ಇಲ್ಲವಾದಲ್ಲಿ ಸಾರ್ವಜನಿಕರು ಪ್ರಜೆಗಳು- ಸುಮ್ಮನಿರಬೇಕಾಗುತ್ತದೆ. ಅದೇ ರೀತಿ ಅದರ ಪ್ರಯೋಗಕ್ಕೆ ಸರಕಾರೀ ಉದ್ಯೋಗಸ್ಥರು ಚಟುವಟಿಕೆಯೂ ಅತ್ಯಗತ್ಯ ಒಂದಕ್ಕಿನ್ನೊಂದು ಕೊಂಡಿಯಲ್ಲಿ ಸಿಕ್ಕಿಸಲ್ಪಟ್ಟಿರುತ್ತದೆ. ಒಂದು ಗಾಲಿ ಉರುಳಿದಲ್ಲಿ ಸಂಕೋಲೆ ಸಂಬಂಧಇರುವ ಇನ್ನೊಂದು ಗಾಲಿ ಉರುಳುತ್ತದೆ. ಅದಕ್ಕೆ ಸಂಬಂಧಿಸಲ್ಪಟ್ಟ ಇನ್ನೊಂದು ಗಾಲಿ ಮತ್ತೆ ಉರುಳುತ್ತದೆ. ಹೀಗೆ ಈ ಗ್ರಹಗಳು ಗರಗರನೆ ಅಲ್ಲವಾದರೂ ಕ್ರಮವರ್ತಿ ತಿರುಗುತ್ತಿವೆ. ಎಲ್ಲದರೂ ಆಕ್ರಿಯೆಯ ಕಾಲದಲ್ಲಿ ಘರ್ಷಣೆಬಂದಾಗ ಅದರಪ್ರತಿಕ್ರಿಯೆ ಜನತೆಯಮೇಲುಂಟಾಗುತ್ತದೆ. ಇದರ ಅನುಭವ ಇಂದು ಜನತೆಗೆ ಆಗಿರುತ್ತದೆ.

ಇಂದು ಆಳದುಳಿದಿರುವ ಭಾರತವನ್ನೂ ಒಂದು ರಾಷ್ಟ್ರವೆನ್ನಲಾಗುತ್ತಿದೆ. ರಾಷ್ಟ್ರವೆಂದ ಮೇಲೆ, ಪ್ರಜಾಪ್ರಭುತ್ವ ಪದ್ಧತಿಗನುಸಾರವಾಗಿ ಆಡಳಿತ ಅಂಗಳವನ್ನು ನೋಡಿಕೊಳ್ಳಲು ಪ್ರತಿನಿಧಿಗಳನ್ನು ಪ್ರಜೆಗಳು ಚುನಾಯಿಸಿ ಕಳುಹಿಸಬೇಕು. ಇಂದು ರಾಷ್ಟ್ರಪ್ರಗತಿಯ ಲಗಾಮನ್ನು ಪ್ರತಿನಿಧಿಗಳ ಕೈಗೀಯುವಂತೆ ಇನ್ನೂ ಹಲವಾರು ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿರುತ್ತದೆ. ಇದು ಪಂಚಾಯತು, ತಾಲೂಕು, ಜಿಲ್ಲೆಗಳ ಮಟ್ಟಕ್ಕೆ ಸೀಮಿತವಾಗಿರದೆ ಅಧಿಕಾರದ ಅಂಕುಶವನ್ನು ಪಡೆದಿರುವ ವಲಯಕ್ಕೆ ಸಂಬಂಧಿಸಿದೆ. ರಾಷ್ಟ್ರದ ಒಳಗೆ ಅದ್ಯಾವ ವಂಕಿ ಪ್ರಯೋಗಕ್ಕೂ ಒಳಗಾಗದೆ ಬೆಳೆಯುತ್ತಿರುವ ರಾ

(ಹತ್ತೊಂಭತ್ತನೇ ಪುಟ ನೋಡಿರಿ)

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ

ಪ್ರಜಾರಾಜ್ಯ ದಿನದ ಶುಭಾಶಯಗಳು!



ಕಿಲೋಸ್ಕರ್

ಕಿಲೋಸ್ಕರ್

ಪಂಪ್ ಸೆಟ್ ಗಳನ್ನು

ಉಪಯೋಗಿಸುವುದರಿಂದ

ಆಹಾರೋತ್ಪಾದನೆಯ ಕ್ಷೇತ್ರದಲ್ಲಿ ಯಶಸ್ಸು ನಿಶ್ಚಿತ.

ಕಿಲೋಸ್ಕರ್ ಪಂಪು ಸೆಟ್ಟುಗಳು ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ಮಿತ ವ್ಯಯದ ನಿರ್ವಹಣೆಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿವೆ. ಸಣ್ಣ ಹಿಡುವಳಿದಾರರಿಗಂತೂ ಅತ್ಯನುಕೂಲವಾಗಿವೆ.

ವಿತರಣೆಗಾರರು:

ಕರ್ಕೇರಾ ಸನ್ಸ್ & ಕೊ.

ಮೈದಾನ್ ವೆಸ್ಟ್ ರೋಡ್, ಮಂಗಳೂರು-1

Phone: 3967

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು ಈಗ ಹೊಸ ರೂಪದಲ್ಲಿ ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕುಮ್ ಸೋಪ್ ಪ್ಲ್ಯಾಂಟ್
ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ
ಮತ್ತು ಸುವಾಸನೆ ಬದಲಾಗಿಲ್ಲ

ಮೈಸೂರು ಸರಕಾರದ ಸಾಬೂನು ಕಾರ್ಖಾನೆ, ಬೆಂಗಳೂರು.

With best compliments

from

M. KRISHNA

Proprietor

Sree Krishna Motor Service,

HASSAN (MYSORE STATE)

PHONE 247

ಗತಕಾಲದ ತುಳುನಾಡಿನ

ಡಾ. ಕೊ. ವ್ಯಾ. ರಮೇಶ.

ಮಾನವ ಪರಂಪರೆಯ ರಾಜಕೀಯ ಇತಿಹಾಸದಲ್ಲಿ ಆಧುನಿಕ ಕಾಲವನ್ನು ಪ್ರಜಾಪ್ರಭುತ್ವದ ಯುಗವೆನ್ನಬಹುದು. ಈ ಚೆಗೆ ನಡೆದು ಹೋಗಿರುವ ಅನೇಕ ರಾಷ್ಟ್ರೀಯ ಕ್ರಾಂತಿಗಳು ಶತಮಾನಗಳ ಪೀಡಕ ಪ್ರಭುತ್ವದಿಂದ ನರಳುತ್ತಿದ್ದ ಜನತೆಗೆ ರಾಜಕೀಯ ಸ್ವಾತಂತ್ರ್ಯವನ್ನು ಒದಗಿಸಿ ಕೊಡುವ ನೆಪದಿಂದ ಪರಂಪರಾಗತ ಅರಸು ಮನೆತನಗಳನ್ನು ಉರುಳಿಸಿ, ತಮಗೆ ತಾವೇ ಪ್ರಭುಗಳೆಂಬ ಭಾವನೆಯನ್ನು ಜನ ಸಾಮಾನ್ಯರಲ್ಲಿ ಹುಟ್ಟಿಸಿವೆ. ಅದರ ಜೊತೆಗೆ ಸ್ಥಾಪಿತಗೊಂಡ ಪ್ರಜಾಪ್ರಭುತ್ವಗಳಲ್ಲಿ ಹೆಚ್ಚಿನವು ತಾವು ಹುಟ್ಟಿಕೊಂಡ ಕೆಲವೇ ದಿನಗಳಲ್ಲಿ ಪ್ರಬಲವಾದೊಂದು ವ್ಯಕ್ತಿಯ ಅಲ್ಲವೆ ಸೈನಿಕ ಅಥವಾ ರಾಜಕೀಯ ಸಂಚು ಕೂಟದ ನಿರಂಕುಶಾಧಿಕಾರದಲ್ಲಿ ಮುಕ್ತಾಯಗೊಂಡಿರುತ್ತವೆ. ಇದರಲ್ಲಿ ದುಃಖದ ಸಂಗತಿಯೆಂದರೆ ಯುದ್ಧಾತದ್ವಾ ಅಧಿಕಾರವನ್ನು ವಶಪಡಿಸಿಕೊಂಡವರು ತಮ್ಮ ನಿರಂಕುಶ ಪ್ರಭುತ್ವವನ್ನು ಸ್ಥಿರಗೊಳಿಸಿಕೊಳ್ಳುವಲ್ಲಿ ಅಸಹಾಯಕ ಪ್ರಜೆಯನ್ನು ಕೇವಲ ಒಂದು ಸಾಧನವನ್ನಾಗಿ ಮಾತ್ರವೆ ಉಪಯೋಗಿಸಿಕೊಳ್ಳುತ್ತಿರುವಂತಿದೆ. ಅಂತಹ ನಿರಂಕುಶ ಆಡಳಿತಗಳೂ ಇಂದಿನ ರಾಜಕೀಯ ಪರಿಭಾಷೆಯಲ್ಲಿ ಪ್ರಜಾಪ್ರಭುತ್ವಗಳೆಂದೇ ಕರೆಯಲಾಗುತ್ತಿರುವದು. ರಾಜ ಮಹಾರಾಜರುಗಳನ್ನು ಪದಚ್ಯುತಗೊಳಿಸಿ ಅದರೆ ಅವರ ಸ್ಥಾನ ಸ್ವಾರ್ಥಪರರಾಗಿ ದಿಕ್ಕಿಲ್ಲದ ಪ್ರಜೆಗಳ ಮೇಲೆ ಅಧಿಕಾರ ಚಲಾಯಿಸುವುದೇ ಪ್ರಜಾಪ್ರಭುತ್ವವೆಂದಾದಲ್ಲಿ ಅದು ಇತ್ತೀಚೆಗೆ ಹುಟ್ಟಿದ ಹೊಸತೆಂದು ಆಡಳಿತ ವಿಧಾನವೇ ಸರಿ. ಹಾಗಲ್ಲದೆ, ಆಡಳಿತದ ಕ್ರಮಬದ್ಧ ಶ್ರೇಣಿಯ ತುತ್ತ ತುದಿಯಲ್ಲಿ ರಾಜನನ್ನು ಅನುವಂಶಿಕ ರಾಜನೇ ಇರಲಿ ಅಥವಾ ಜನ ಸಾಮಾನ್ಯರಿಂದ ಚುನಾಯಿತನಾದ ನಿರ್ವಾಹಕನೇ ಇರಲಿ, ಯಾವೊಂದು ಸರಕಾರವು ಸಾಮಾನ್ಯ ಪ್ರಜೆಗಳ ಸುಖ ಸಂತೋಷಗಳನ್ನೆ ಮೂಲವಾಗಿಕೊಂಡು, ಆಡಳಿತ ಕ್ಷೇತ್ರದಲ್ಲಿ ಅವರಿಗೆ ಸ್ಥಾನಮಾನಗಳನ್ನೂ ನಿರ್ವಾಹಕ ಅವಕಾಶಗಳನ್ನೂ ಜವಾಬ್ದಾರಿಯನ್ನೂ ಒದಗಿಸಿ ಕೊಡುವುದೋ ಅದೇ ಪ್ರಜಾಪ್ರಭುತ್ವವೆಂದಾದಲ್ಲಿ ಅಂತಹ ಆಡಳಿತ ವಿಧಾನವು ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಬಂದಿದೆ. ನಾಗರಕರ, ಹಳೆಗರ, ಒಕ್ಕಲಿಗರ ಮತ್ತು ವರ್ತಕರ ಪ್ರಾತಿನಿಧಿಕ ಸಂಘಗಳು ಪ್ರಾಚೀನ ಕಾಲದಿಂದಲೂ ಕರ್ನಾಟಕದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ವಹಿಸಿದ್ದ ಪ್ರಮುಖ ಪಾತ್ರವನ್ನು ವಿಶದವಾಗಿ ತಿಳಿಯಿಗೊಡುವ ಪುರಾವು ಶಾಸನಗಳು ಕರ್ನಾಟಕದ ಮೂಲೆ ಮೂಲೆಗಳಲ್ಲಿ ದೊರೆತಿವೆ. ಕರ್ನಾಟಕದ ಪ್ರತಿಯೊಂದು ಗ್ರಾಮದಲ್ಲೂ 'ಮಹಾಜನರು' ಎಂಬ ಪ್ರಾತಿನಿಧಿಕ ಸಭೆಯೊಂದಿರುತ್ತಿತ್ತು. ಈ ಸಭೆಗೆ 'ಸ್ವಾಧ್ಯಾಯ ಧ್ಯಾನ ಮೌನಾನುಷ್ಠಾನ ರೂ ಜಪ ಸಮಾಧಿಶೀಲ ಗುಣ ಸಂಪನ್ನರೂ' ಸಕಲ ಶಾಸ್ತ್ರ ವಿಶಾರದರೂ ಧಾರ್ಮಿಕರೂ ಆದ ಪ್ರಜೆಗಳನ್ನು ಸದಸ್ಯರನ್ನಾಗಿ ಆರಿಸಲಾಗುತ್ತಿತ್ತು. ಇನ್ನು 'ಅಯ್ಯಾವಳಿ (ಬಿಜಾಪುರ ಜಿಲ್ಲೆಯ ಇಂದಿನ ಐಹೊಳೆ) ಯ ೫೦೦ ಸ್ವಾಮಿಗಳು', 'ನಾನಾ ದೇಶಿಗಳು', 'ಉಭಯ ನಾನಾ ದೇಶಿಗಳು', 'ಮುಮ್ಮುಡಿ ದಂಡಂಗಳು', "ನಾಡು" ಮುಂತಾದ ವರ್ತಕರ ಮತ್ತು ಜನ ಸಾಮಾನ್ಯರ ಸಂಘಗಳು ಕರ್ನಾಟಕದ ಸರ್ವತೋಮುಖ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದವು.

ಇಂದಿನ ಕರ್ನಾಟಕದ ಒಂದು ಜಿಲ್ಲೆಯೆನಿಸಿರುವ ತುಳುನಾಡಿನಲ್ಲಿ ದೊರೆತಿರುವ ಶಾಸನಗಳಿಂದ ತಿಳಿದು ಬರುವಂತೆ ಆ ನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಬಂದ ಪ್ರಾತಿನಿಧಿಕ ಸಂಘಗಳ ಸಂಕ್ಷಿಪ್ತ ಇತಿಹಾಸವನ್ನು ನೀಡುವುದೇ ಈ ಲೇಖನದ ಮುಖ್ಯೋದ್ದೇಶ.

ಕ್ರಿ. ಶ. ೮—೧೦ನೆಯ ಶತಮಾನಗಳಲ್ಲಿ ಶಿವಳ್ಳಿ ಗ್ರಾಮ (ಅಂದರೆ ಇಂದಿನ ಉದ್ಯಾವರದ ಸುತ್ತ ಮುತ್ತಲು) ದಲ್ಲಿ ೧೦೦೦ ಮಂದಿ ಸದಸ್ಯರನ್ನೊಳಗೊಂಡ "ಸಾಸಿರವರು" ಎಂಬ ಮಹಾಜನ ಸಂಘವಿದ್ದಿತೆಂದೂ, ಪ್ರಾಚೀನ ತುಳುನಾಡಿನ ರಾಜಧಾನಿ ಉದಯಪುರ (=ಇಂದಿನ ಉದ್ಯಾವರ)ದಲ್ಲಿ ವ್ಯವಸಾಯಗಾರರ ಹಕ್ಕು ಬಾಧ್ಯತೆಗಳನ್ನು ಕಾದಿರಿಸುವ ಸಲುವಾಗಿ 'ಉದಯಪುರ್ಲ್ ನಗರದ ಎಳ್ಳತ್ತೈಕ್ಕಲು' ಎಂಬ ಒಕ್ಕಲಿಗರ ಸಂಘವೊಂದಿತ್ತೆಂದೂ, "ಪದಿನೆಂಟು ಪಟ್ಟಣ"ವೆಂಬ ಹೆಸರಿದ್ದ ಮತ್ತು ತುಳುನಾಡಿನ ಹದಿನೆಂಟು ನಗರಗಳ ನಾಗರಿಕರ ಪ್ರಾತಿನಿಧಿಕ ಸಂಘಗಳ ಒಕ್ಕೂಟವೊಂದಿತ್ತೆಂದೂ ಆ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ.

ಕ್ರಿ. ಶ. ೧೧ನೆಯ ಶತಮಾನದಿಂದೀಚೆಗಿನ ತುಳುನಾಡಿನ ಶಾಸನಗಳಲ್ಲಿ ಇಂತಹ ಪ್ರಾತಿನಿಧಿಕ ಸಂಘ ಸಂಸ್ಥೆಗಳ ಉಲ್ಲೇಖವು ಹೆಚ್ಚು ಸಂಖ್ಯೆಯಲ್ಲಿ ಕಾಣಸಿಗುತ್ತದೆ. ಹಂದಾಡಿ ಮತ್ತು ಕೋಟೆ ಗ್ರಾಮಗಳಲ್ಲಿ ೧೦೦೦ ಮಂದಿ ನೀಲಾವರ ಮತ್ತು ಕುಡಿಕೂರು ಗ್ರಾಮಗಳಲ್ಲಿ ೩೦೦ ಮಂದಿ ಮತ್ತು ಬ್ರಹ್ಮಾವರ ಮತ್ತು ಶಿವಪುರ ಗ್ರಾಮಗಳಲ್ಲಿ ೧೦೨ ಮಂದಿ ಸದಸ್ಯರಿದ್ದ 'ಮಹಾಜನ' ಸಂಸ್ಥೆಗಳಿದ್ದವು. ಅಲ್ಲದೆ 'ಊರು', 'ಗ್ರಾಮ' ಮುಂತಾದ ಗ್ರಾಮೀಣ ಸಂಘಗಳೂ ಅಂದಿನ ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತವೆ.

ಮಧ್ಯ ಯುಗೀನ ತುಳುನಾಡಿನಲ್ಲಿ ವಾಣಿಜ್ಯವು ತಳ್ಳ ಮಟ್ಟಿಗೆ ಅಭಿವೃದ್ಧಿಗೊಂಡಿದ್ದು ಆ ನಾಡಿನ ಪ್ರಧಾನ ವಾಣಿಜ್ಯ ಕೇಂದ್ರಗಳಲ್ಲಿಯ ವರ್ತಕ ಸಂಘಗಳು ಆ ಕಾಲದ ಹಲವು ಶಾಸನಗಳಲ್ಲಿ ಉಲ್ಲೇಖವಾಗಿರುತ್ತವೆ. ಅಂತಹ ಸಂಘಗಳೆಂದರೆ ೧. ಪಟ್ಟಣ, ೨. ಸೆಟ್ಟಿಕಾರ ಮತ್ತು ೩. ಹಂಜಮಾನ. ಇವುಗಳ ಸೈಕೆ 'ನಗರ' ಸಂಘವನ್ನು 'ಸಮಸ್ತ ನಗರ', 'ನಗರ' ಮತ್ತು 'ನಗರ ಸಮೂಹ'ವೆಂದೂ 'ಹಂಜಮಾನ'ವನ್ನು 'ನಗರ ಹಂಜಮಾನ'ವೆಂದೂ ಸಹ ಶಾಸನಗಳಲ್ಲಿ ಹೆಸರಿಸಲಾಗಿದೆ. 'ನಗರ' ಶಬ್ದವು ಸಂಸ್ಕೃತ ಭಾಷೆಯ 'ನಗರ' ಶಬ್ದದ ಪರಿವರ್ತಿತ ರೂಪವೆಂಬುದರಲ್ಲಿ ಸಂದೇಹಕ್ಕೆಡೆಯಿಲ್ಲ. ಅಂದ ಮೇಲೆ ತುಳುನಾಡಿನ ಪ್ರಧಾನ ವರ್ತಕ ಪಟ್ಟಣಗಳಲ್ಲಿದು ವ್ಯಾಪಾರಿಗಳ ಪ್ರಾತಿನಿಧಿಕ ಸಂಘಗಳಿಗೇ "ನಗರ"ವೆನ್ನುತ್ತಿದ್ದರೆಂದು ಗ್ರಹಿಸ ಬಹುದಾಗಿದೆ. ಬಹುಶಃ 'ನಗರ'ವು ವಿದೇಶೀ ಸರಕುಗಳ ವ್ಯಾಪಾರ ಕೈಕೊಳ್ಳುತ್ತಿದ್ದ ತುಳುನಾಡಿನ ವರ್ತಕರ ಸಂಘವಿದ್ದಿರಬೇಕು. ಅದರಂತೆಯೆ "ಸೆಟ್ಟಿಕಾರ" ಶಬ್ದವು ಸ್ವದೇಶೀ ಸರಕುಗಳ ಮಾರಾಟ ಮಾಡುತ್ತಿದ್ದ ತುಳುನಾಡಿನ ವ್ಯಾಪಾರಿಗಳ ಸಂಘದ ಹೆಸರಿದ್ದಿರಬೇಕು. ಕುಂಬಳೆ, ಮಂಗಳೂರು, ಬಾರಕೂರು, ಬಸರೂರು, ಬೈಂದೂರು, ಕಾರಕಳ, ಮೂಡಬಿದುರೆ, ವೇಣೂರು ಮುಂತಾದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿಯ ಶಾಸನಗಳಲ್ಲಿ ಆಯಾ ನಗರದ ವರ್ತಕ ಸಂಘಗಳ ಉಲ್ಲೇಖಗಳು ಕಂಡು ಬರುತ್ತವೆ.

ಇನ್ನು "ಹಂಜಮಾನ" ಅಥವಾ 'ನಗರ ಹಂಜಮಾನ' ಶಬ್ದವು ಅರಬಿ, ಪರ್ಶಿಯಾ ಮುಂತಾದ ವಿದೇಶಗಳಿಂದ ಸರಕುಗಳನ್ನು ಹಡಗುಗಳ ಮೂಲಕ ತುಳುನಾಡಿಗೆ ಸಾಗಿಸಿ ವ್ಯಾಪಾರ ನಡೆಸುತ್ತಿದ್ದ ವಿದೇಶೀ ವ್ಯಾಪಾರಿಗಳ ಸಂಘವನ್ನು ಗುರುತಿಸುತ್ತದೆ. "ಹಂಜಮಾನ" ಶಬ್ದವು ಪರ್ಶಿಯನ್ ಭಾಷೆಯ "ಅಂಜುಮಾನ್" ಶಬ್ದದ ತದ್ಭವ ವಿದ್ದು ಆದು ಹಳ್ಳಿಮ ಕರಾವಳಿಯಲ್ಲಿ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕರಾವಳಿಯಲ್ಲಿ ಅಲ್ಲಲ್ಲಿ ನೆಲೆಸಿದ್ದ ಪರ್ಶಿಯನ್ ವ್ಯಾಪಾರಿಗಳ ವಾಸಿಯುಗಳನ್ನು ಸೂಚಿಸುತ್ತದೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ. "ಹಂಜಮಾನ" ಶಬ್ದವು ವಿದೇಶೀ ವರ್ತಕರನ್ನೇ ಸೂಚಿಸುತ್ತದೆಯೆಂಬುದಕ್ಕೆ ಕ್ರಿ. ಶ. ೧೪೨೭ರಲ್ಲಿ ಹುಟ್ಟಿದ (ಉತ್ತರ ಕನ್ನಡ ಜಿಲ್ಲೆಯ) ಕಾಯ್ಕಣಿಯ ಶಾಸನವೊಂದರಲ್ಲಿ ಉಮ್ಮರ ಮಂಕಾಲಿಯೆಂಬಾತನು "ಹಂಜಮಾನ ಮುಖ್ಯ"ನಿದ್ದನೆಂದು ಹೇಳಲಾಗಿರುವುದು ಒಂದು ಮುಖ್ಯ ಆಧಾರ. ಏಕೆಂದರೆ ಆ "ಹಂಜಮಾನ ಮುಖ್ಯ"ನ "ಉಮ್ಮರ" (—ಉಮರ್) ಎಂಬ ಹೆಸರು ಪರ್ಶಿಯನ್ನರಲ್ಲಿ ಬಳಕೆಯಲ್ಲಿದ್ದ ಅಂಕಿತ ನಾಮವಷ್ಟೇ ಅಲ್ಲದೆ ಅವನನ್ನು 'ಮರಕ್ಕಾಲ'ನೆಂದು ಕರೆದಿರುವುದರಿಂದ ಅವನು ಕೆಡಲು ದಾಟಿ ತುಳುನಾಡಿಗೆ ಬಂದು ನೆಲೆಸಿದ್ದ ವ್ಯಾಪಾರಿಯೆಂದೂ ಆಗುತ್ತದೆ.

ಕ್ರಿ. ಶ. ೧೪ನೆಯ ಶತಮಾನದ ಮಧ್ಯ ಭಾಗದಲ್ಲಿ ತುಳುನಾಡು ಮೊದಲು (ಕ್ರಿ. ಶ. ೧೩೩೩ರಿಂದ ೧೩೪೮ರ ವರೆಗೆ) ಹೊಯ್ಸಳರ ಮತ್ತು ಅನಂತರ (ಕ್ರಿ. ಶ. ೧೩೪೫ರಿಂದ) ವಿಜಯ ನಗರ ಸಾಮ್ರಾಜ್ಯದವರ ಕೈ ಸೇರಿತು. ಕ್ರಿ. ಶ. ೧೪—೧೬ನೆಯ ಶತಮಾನಗಳಿಗೆ ಸಂಬಂಧಿಸಿದಂತೆ ತುಳುನಾಡಿನದ್ದಕ್ಕೂ ನೂರಾರು ಸಂಖ್ಯೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಸಾಮಾನ್ಯ ಪ್ರಜೆಗಳ, ಒಕ್ಕಲಿಗರ, ವರ್ತಕರ ಮತ್ತು ಯೋಧ ವರ್ಗದವರ ಅನೇಕ ಸಂಘ ಸಂಸ್ಥೆಗಳು ಉಲ್ಲೇಖವಾಗಿರುತ್ತವೆ. ಮಧ್ಯಯುಗದಂತೆಯೆ 'ನಾಡು', 'ಊರು', 'ಗ್ರಾಮ' ಮುಂತಾದ ಸಂಘಗಳೂ ೬೦ ಒಕ್ಕಲು, ೭೦ ಒಕ್ಕಲು, ಜಗತ್ತು, ಜನನ ಮುಂತಾದ ವ್ಯವಸಾಯಕಾರರ ಒಕ್ಕೂಟಗಳೂ ಆ ಕಾಲದ ಶಾಸನಗಳಲ್ಲೂ ಉಲ್ಲೇಖವಾಗಿವೆ. ಅಲ್ಲದೆ ಮೂಡಬಿದುರೆಯ ನಾಲ್ವರು, ಮೂರು ಕೇರಿಯ ೧೫೦, ಮಣಿಗಾರ ಕೇರಿಯ ೧೫೦, ಹತ್ತು ಕೇರಿಯ ೭೭೦ ಮತ್ತು ವೇಣೂರಿನ ೩೬೪ ಮಂದಿ 'ಎಳೆಮೆಗಳು' ಅಥವಾ 'ಎಳೆಮೆಗೊಳಗಾದವರು' ಎಂಬ ಸಂಘದ ಪ್ರಸ್ತಾಪವೂ ಅಂದಿನ ಶಾಸನಗಳಲ್ಲಿ ಕಂಡು ಬರುತ್ತದೆ.

ವಿಜಯ ನಗರ ಕಾಲದಲ್ಲಿ ತುಳುನಾಡಿನ ಸ್ವದೇಶಿ ಮತ್ತು ವಿದೇಶಿ ವ್ಯಾಪಾರವು ಅಭೂತಪೂರ್ವ ಪ್ರಮಾಣದಲ್ಲಿ ಬೆಳೆಯಿತು. ವರ್ತಕರ ಸಂಖ್ಯೆ ಮಾತ್ರವೆ ಅಲ್ಲದೆ ಅವರ ಸಂಪತ್ತು ಸಾಮಾಜಿಕ ಸ್ಥಾನಮಾನಗಳೂ ಬಹಳಷ್ಟು ಹೆಚ್ಚಿದವು. ವಿಜಯನಗರ ಕಾಲದಲ್ಲಿ ಹುಟ್ಟಿದ ಶಾಸನಗಳಲ್ಲಿ ಹೆಚ್ಚಿನವಲ್ಲಿ ನಗರ, ಸೆಟ್ಟಿಕಾರ, ಹಂಜಮಾನ ಸಂಘಗಳ ಪ್ರಸ್ತಾಪವು ಕಾಣಸಿಗುತ್ತದೆ. ಬಾರಕೂರಿನ ಮೂರುಕೇರಿ, ಚೌಳಿಯ ಕೇರಿ, ಮಣಿಗಾರ ಕೇರಿಗಳಲ್ಲಿ ಮೂರು ಮಂದಿ, ಕೋಟೆಕೇರಿಯಲ್ಲಿ ನಾಲ್ಕು ಮಂದಿ ಮತ್ತು ಹತ್ತು ಕೇರಿಯಲ್ಲಿ ಹದಿನಾರು ಮಂದಿ ಸದಸ್ಯರಿದ್ದ ಸೆಟ್ಟಿಕಾರ ಸಂಘಗಳು ಅಸ್ತಿತ್ವದಲ್ಲಿದ್ದವು. ಮೂಡಬಿದುರೆ ಮತ್ತು ವೇಣೂರಿನ ಸೆಟ್ಟಿಕಾರ ಸಂಘಗಳಲ್ಲಿ ಅನುಕ್ರಮವಾಗಿ ಎಂಟು ಮತ್ತು ಹದಿನಾರು ಸದಸ್ಯರುಗಳಿದ್ದರು.

ಈ ಮೇಲಿನ ಸಂಘಗಳಷ್ಟೇ ಅಲ್ಲದೆ ಹೊಯ್ಸಳ ಮತ್ತು ವಿಜಯನಗರ ಕಾಲದ ತುಳುನಾಡಿನ ಶಾಸನಗಳಲ್ಲಿ "ಎರಡು ಕೋಲಬಳಿ," "ಹತ್ತು ಕೋಲ ಬಳಿ' ಎಂಬ ಸಂಘಗಳ ಪ್ರಸ್ತಾಪವೂ ಕಂಡು ಬರುತ್ತದೆ. "ಕೋಲು" ಎಂಬ ಶಬ್ದವು ಸೈನ್ಯ ಶಿಕ್ಷಣವನ್ನು ಸೂಚಿಸುವುದರಿಂದಲೂ "ಕೋಲ ಬಳಿಯ ೫೦೦೦ ಆಳು" ಮುಂತಾದ ಪ್ರಯೋಗಗಳು ಶಾಸನಗಳಲ್ಲಿ ಕಾಣಸಿಗುವುದರಿಂದಲೂ, ಕೋಲ ಬಳಿಯು ಯೋಧ ವರ್ಗದವರ ಒಕ್ಕೂಟಗಳ ಹೆಸರು

ಪ್ರಾತಿನಿಧಿಕ ಸಂಘಗಳು

ಮನುಷ್ಯ ಸಂಘ ಜೀವಿ. ಪ್ರಾಚೀನ ಕಾಲದಲ್ಲೂ ಆತ ತನ್ನ ಹಾಗೂ ತನ್ನವರ ಒಳಿತಿಗಾಗಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದ. ರಮ್ಯ ಇತಿಹಾಸವನ್ನೊಳಗೊಂಡ ಪ್ರಾಚೀನ ತುಳು ನಾಡು ಇಂತಹ ಹಲವಾರು ಪ್ರಾತಿನಿಧಿಕ ಸಂಘ ಸಂಸ್ಥೆಗಳಿಂದೊಡಗೂಡಿತ್ತು. ಅಂತಹ ಸಂಘ ಸಂಸ್ಥೆಗಳು ಪ್ರಭಾವಶಾಲಿಗಳೆನಿಸಿದ್ದುವು ಮಾತ್ರವಲ್ಲ ಉತ್ತಮ ಕಾರ್ಯಗಳನ್ನೂ ನಿರ್ವಹಿಸಿದ್ದುವು. ಗತ ಇತಿಹಾಸದ ಮೇಲೆ ಕ್ಷ-ಕಿರಣ ಬೀರುವ ಸಂಶೋಧನಾತ್ಮಕ ಲೇಖನವಿದು.

ತ್ತೆಂದು ಊಹಿಸ ಬಹುದಾಗಿದೆ.

ಯಾವುದೇ ಒಂದು ನಗರದ ಅಥವಾ ಗ್ರಾಮದ ಬೇರೆ ಬೇರೆ ಸಂಘಗಳ ಒಕ್ಕೂಟವನ್ನು "ಹಲರು" ಅಥವಾ "ಸಮಸ್ತ ಹಲರು" ಎಂದು ಕರೆಯುವುದು ವಾಡಿಕೆಯಾಗಿತ್ತು. ನಿರ್ವಹಣಾ ಕ್ಷೇತ್ರದಲ್ಲಿ ವಿಜಯ ನಗರದ ರಾಜ್ಯಪಾಲರುಗಳಿಗೆ ನೇರವಾಗಿ ಕೆಳಿತ್ತಿದ್ದ ಅಧಿಕಾರ ವರ್ಗವನ್ನು "ಕಟ್ಟಳೆಯವರು" ಎಂದು ಕರೆಯಲಾಗಿದ್ದು, ತುಳುನಾಡಿನ ಸಂಘಗಳಲ್ಲಿಯೂ ಆ ಕಟ್ಟಳೆಯಲ್ಲಿ ಸೇರಿದ್ದವು.

ಇನ್ನು ಈ ಸಂಘಗಳ ರಚನೆ ಮತ್ತು ಚಟುವಟಿಕೆಗಳ ಬಗ್ಗೆ ಶಾಸನಗಳಿಂದ ತಿಳಿದು ಬರುವ ವಿಷಯಗಳನ್ನು ಪರಿಶೀಲಿಸೋಣ. ಈ ಸಂಘಗಳ ಸದಸ್ಯರನ್ನೂ ಆರಿಸಲಾಗುತ್ತಿದ್ದ ವಿಧಾನಗಳ ಬಗ್ಗೆ ಏನೂ ತಿಳಿಯದಾಗಿದೆ. ಆದರೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ನೈಪುಣ್ಯಗಳಿಸಿದವರನ್ನೆ ಈ ಸಂಘಗಳ ಸದಸ್ಯರನ್ನಾಗಿ ಆರಿಸಲಾಗುತ್ತಿತ್ತೆಂದು ಮಾತ್ರ ಖಚಿತವಾಗಿ ಹೇಳಬಹುದು. ಉದಾಹರಣೆಗೆ ಮೂಡಬಿದುರೆಯ ಮಹಾಜನರು "ಪರಶುರುಷಾರ್ಥಕಾರಿಗಳ್, ದಾನಶೀಲರ್, ಗುರುಜನ ಭಕ್ತರ್, ಕವಿಜನ ಸ್ತುತರ್, ಪರಮದಯಾಪರರ್, ಪಂಡಿತ ಚಾಣರ್, ಜಿನ ಮಾರ್ಗ ದೀಪಕರ್' ರಂಗಿದ್ದರೆಂದು ಆ ಊರ ಶಾಸನವೊಂದರಲ್ಲಿ ಹೇಳಲಾಗಿದೆ. ಅದೇ ನಗರದ ಎಂಟು ಪ್ರಜೆಸಟ್ಟಿಕಾರರು 'ಅಯಾರಾಭಯ ಭೈಷಜ್ಯ ಶಾಸ್ತ್ರದಾನ ಧರ್ತ್ತಾವಧಾನರೂ ನೂತನ ಪುರಾತನ ಜೈತ್ಯಾಲಯ ಪ್ರಾಕಾರೋದ್ಧರಣಾ ಪರಿಣತಾಂತಃಕರಣರೂ ಸಮ್ಯಕ್ತ್ವಾದ್ಯನೇಕ ಗುಣಗಣಾಲಂಕೃತರೂ' ಆಗಿದ್ದಂತೆ.

ಈ ಸಂಘಗಳು ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಜೀವನದಲ್ಲಿ ಮಹತ್ವದ ಪಾತ್ರವಹಿಸಿದ್ದವೆಂದು ಈ ಮೊದಲ ಹೇಳಿರುವೆನು. ವಿಜಯನಗರದ ಸಾಮ್ರಾಟರ ನಿರೂಪದಿಂದ ತುಳುನಾಡನ್ನು ಆಳುತ್ತಿದ್ದ ರಾಜ್ಯಪಾಲರುಗಳಿಗೆ ಆಡಳಿತ ಕ್ಷೇತ್ರದಲ್ಲಿ ನೆರವು ನೀಡುತ್ತಿದ್ದರಷ್ಟೇ ಅಲ್ಲದೆ ಈ ಸಂಘದವರು ಆ ಕಾಲದ ಶಾಸನಗಳಲ್ಲಿ ದಾನಿಗಳಾಗಿಯೂ, ದಾನ ಪಡೆಯುವವರಾಗಿಯೂ, ದಾನಪಡೆ ನಿರ್ವಾಹಕರಾಗಿಯೂ ಪ್ರತಿಪಾಲಕರಾಗಿಯೂ, ಹಕ್ಕತೆಗೂ ಸಾಮ್ರಾಜ್ಯದ ಅಧಿಕಾರಿಗಳಿಗೂ ಮತ್ತು ತುಳುನಾಡಿನ ತುಂಡರಸರುಗಳಿಗೂ ಸಾಮ್ರಾಜ್ಯದ ಅಧಿಕಾರಿಗಳಿಗೂ ನಡುವೆ ಮೈಮನಸ್ಯ ತಲೆದೋರಿದ ಕೆಲವು ಸಂದರ್ಭಗಳಲ್ಲಿ ಮಧ್ಯಸ್ಥಗಾರರಾಗಿಯೂ ಕಾಣಿಸಿಕೊಳ್ಳುತ್ತಾರೆ. ಈ ಸಂಘಗಳು ವಹಿಸಿದ್ದ ಇಂತಹ ಪಾತ್ರಗಳಲ್ಲಿ ಕುತೂಹಲಕಾರಿಯಾದ ನಾಲ್ಕೈದು ಘಟನೆಗಳನ್ನು ಓದುಗರ ಮುಂದಿಡಲು ಬಯಸುತ್ತೇನೆ.

ಕ್ರಿ. ಶ. ೧೪೩೫ರಲ್ಲಿ ವಿಜಯನಗರ ಸಾಮ್ರಾಟನ ನಿರೂಪದಿಂದ ಬಾರಕೂರು ರಾಜ್ಯವನ್ನಾಳುತ್ತಿದ್ದ ಅಣ್ಣಪ್ಪ ಒಡೆಯನು ಯಾವುದೋ ರಾಜಕಾರ್ಯದ ಮೇಲೆ ಶಿವಳ್ಳಿಗು ಮೇಲೆ ದಾಳಿಮಾಡಿ ಆ ಊರನ್ನು ಸುಟ್ಟು ಹಾಕಿದನು. ಈ ಗೊಂದಲದಲ್ಲಿ ಉಡುಪಿಯ ಶ್ರೀಕೃಷ್ಣ ಮಠದ ಕೃಷ್ಣ ವಿಗ್ರಹವು ಸ್ಥಾನಭ್ರಷ್ಟವಾಯಿತು. ಹೀಗೆ ತಮಗಾದ ಕಷ್ಟನಷ್ಟಗಳಿಂದ ದುಃಖಿಸುತ್ತಿದ್ದ ಶಿವಳ್ಳಿಯ ಗ್ರಾಮದವರನ್ನು ಬಾರಕೂರಿನ ಹತ್ತು ಕೇರಿಯ 'ಹಲರು' ಸಂತೈಸಿದರಷ್ಟೇ ಅಲ್ಲದೆ ನಡೆದು ಹೋದ ಸಂಗತಿಯನ್ನು ಸಾಮ್ರಾಟನ ಕಿವಿ ಮುಟ್ಟಿಸಿ ಶಿವಳ್ಳಿಯವರಿಗೆ ತಕ್ಕ ಪರಿಹಾರವನ್ನು ದೊರೆಯುವಂತೆಯೂ ಮಾಡಿದರು.

ಕೆಲವೊಮ್ಮೆ ವರ್ತಕ ಸಂಘಗಳೂ ಸಾಮ್ರಾಜ್ಯದ ಅಧಿಕಾರಿಗಳಿಗೂ ನಡುವೆ ಮೈಮನಸ್ಯ ಹುಟ್ಟಿದ್ದ ಪ್ರಸಂಗಗಳೂ ಶಾಸನಗಳಲ್ಲಿ ಉಲ್ಲೇಖವಾಗಿವೆ. ಕ್ರಿ ಶ. ೧೪೦೪—೧೫೧೮ರಲ್ಲಿ ಇಂತಹ ಘಟನೆಯೊಂದು ನಡೆಯಿತು. ಆ ದಿನಗಳಿಗೆ ಸಾಮ್ರಾಟರ ಪ್ರತಿನಿಧಿಯಾಗಿ ಬಾರಕೂರು ರಾಜ್ಯವನ್ನಾಳುತ್ತಿದ್ದ ಮಹಾಬಲ ದೇವನು ಬಾರಕೂರು ಪಟ್ಟಣದ 'ನಖರ ಹಂಜಮಾನ ಮುಂತಾದ ಹತ್ತು ಕೇರಿಯ ಹಲರ ಸಟ್ಟಿಕನ, ಅನ್ಯ ಮನ್ಯ ಸಮಯ ಸಂಕೇತ'ಗಳನ್ನು ಕೆಡಿಸಿದನಾಗಿ ಆ ಬಗ್ಗೆ ಸಾಮ್ರಾಟನಲ್ಲಿ ಮೊರೆಯಿಡಲಾಯಿತು. ಚಕ್ರವರ್ತಿಯ ಆಜ್ಞೆಯ ಮೇರೆಗೆ ಗೋವೆಯ ರಾಜ್ಯಪಾಲ ಬಾಚಣ್ಣನು ಬಾರಕೂರಿಗೆ ಆಗಮಿಸಿ ವಿಚಾರಣೆ ನಡೆಸಿ ಅನ್ಯಾಯವಾಗಿ ಕಷ್ಟನಷ್ಟಗಳಿಗೊಳಗಾಗಿದ್ದ ಹತ್ತು ಕೇರಿಯ ಹಲರಿಗೆ ಸೂಕ್ತ ಸಂದಾಯಗಳನ್ನು ನೀಡಿದನು.

ಇದಂತೆಯೆ ಕ್ರಿ. ಶ. ೧೪೧೧ರಲ್ಲಿ ಮಂಗಳೂರು ರಾಜ್ಯವನ್ನಾಳುತ್ತಿದ್ದ ತಿಮ್ಮಣ್ಣ ಒಡೆಯನು ಮಂಗಳೂರು ನಗರದ ಹಂಜಮಾನದವರ ಮೇಲೆ ಅನ್ಯಾಯವೆಸಗಿದ್ದನು. ಹಂಜಮಾನದವರು ದಿನ ತಪ್ಪದೆ ತಮ್ಮ ಪೂರ್ವ ಮರ್ಯಾದೆಯನ್ನು ಅನುಸರಿಸುತ್ತ ಬಂದಿದ್ದರೂ ತಿಮ್ಮಣ್ಣ ಒಡೆಯನು ವಿನಾಕಾರಣ ತನ್ನ ಸೈನ್ಯವನ್ನು ಅವರ ಮೇಲೆ ಅಟ್ಟಿ ಅವರನ್ನು ಕಷ್ಟಕ್ಕೀಡು ಮಾಡಿದ್ದನು. ಈ ಸುದ್ದಿ ಸಾಮ್ರಾಟನ ಕಿವಿ ಮುಟ್ಟಿದೊಡನೆಯೆ ಅವನು ಮಂಗಳೂರು ನಗರದ ಹಂಜಮಾನದವರಿಗೆ ಸೂಕ್ತ ಸಂದಾಯಗಳನ್ನು ನೀಡುವಂತೆ ತಿಮ್ಮಣ್ಣ ಒಡೆಯನಿಗೆ ಆಜ್ಞೆ ವಿಧಿಸಿದನು.

ಕ್ರಿ. ಶ. ೧೪೨೭ರಲ್ಲಿ ತಿಮ್ಮಣ್ಣ ಒಡೆಯನು ಸೈದೆ ತುಳು, ಕೊಂಕಣ ರಾಜ್ಯಗಳನ್ನಾಳುತ್ತಿದ್ದಾಗ ಅವನಿಗೂ (ಉತ್ತರ ಕನ್ನಡ ಜಿಲ್ಲೆಯ) ಹೊನ್ನಾವರ ನಗರದ "ಹಂಜಮಾನ ಮುಖ್ಯ" ಉಮ್ಮರ ಮರಕ್ಕಾಲನಿಗೂ ನಡುವೆ ಮೈಮನಸ್ಯ ತಲೆದೋರಿತು. ರಾಜ್ಯಪಾಲನ ದಾಳಿಯನ್ನು ಎದುರಿಸಲಾರದೆ ಹೋದ ಉಮ್ಮರ ಮರಕ್ಕಾಲನು ತನ್ನ ಸಕಲ ಪರಿವಾರಗಳೊಡನೆ (ಉತ್ತರ ಕನ್ನಡ ಜಿಲ್ಲೆಯ) ಕಾಸರಕೋಡಿಗೆ ಧಾವಿಸಿದವನೆ ನಗರಿ ರಾಜ್ಯದ ರಾಜನಿಂದ ಸಹಾಯ ಬೇಡಿದನು. ಇದರಿಂದ ಉದ್ರಿಕ್ತನಾದ ತಿಮ್ಮಣ್ಣ ಒಡೆಯನು ಕಾಸರಕೋಡಿಗೆ ಮುತ್ತಿಗೆ ಹಾಕಿದಾಗ ನಗರಿ ರಾಜನ ವೀರರು ಹಂಜಮಾನ ಮುಖ್ಯನನ್ನೂ ಅವನ ಪರಿವಾರದವರನ್ನೂ ದೋಣಿಗಳ ಮೂಲಕ ಸುರಕ್ಷಿತ ಪ್ರದೇಶಕ್ಕೆ ಸಾಗಿಸಿ ಅಳಿವಿನಿಂದ ಪಾರು ಮಾಡಿದರು.

ಇನ್ನು ಬೇರೆ ಬೇರೆ ಸಂಘಗಳ ನಡುವೆ ಕೆಲವೊಮ್ಮೆ ವಿರೋಧ ಭಾವ ಹುಟ್ಟುತ್ತಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ, ಕ್ರಿ. ಶ. ೧೪೩೦ರಲ್ಲಿ ಬಾರಕೂರು ಪಟ್ಟಣದ ಚೌಳಿಯ ಕೇರಿಯ ಹಲರಿಗೂ ಮೂರುಕೇರಿಯ (ಮೂವರು ಸಟ್ಟಿಕಾರರೊಳಗಾದ) ಸಮಸ್ತ ಹಲಂಗೂ ನಡುವೆ ಘಟ್ಟದ ಮೇಲಣಿಂದ ಆ ಮದು ಮಾಡಿಕೊಳ್ಳಲಾಗುತ್ತಿದ್ದ ಧಾನ್ಯಗಳನ್ನು ಮಾರುವ ವಿಷಯವಾಗಿ ಭಿನ್ನಾಭಿಪ್ರಾಯ ಹುಟ್ಟಿ ಹಿಂಸಾಕೃತ್ಯಗಳಿಗಿಟ್ಟುಕೊಂಡಿತು. ಕೊನೆಗೂ ಆಗ ರಾಜ್ಯಪಾಲನಾಗಿದ್ದ ಚಂಡರಸ ಒಡೆಯನು ಚೌಳಿಯ ಕೇರಿಯ ಹಲರನ್ನೂ ಮೂರು ಕೇರಿಯ ಸಮಸ್ತ ಹಲರನ್ನೂ ಕರೆಸಿ ಬುದ್ಧಿವಾದ ಹೇಳಿ ಸಮಾಧಾನದ ಒಪ್ಪಂದವೊಂದನ್ನು ಬರೆಸಿದ ನಂತರವೆ ಶಾಂತ ವಾತಾವರಣವು ಹಿಂತಿರುಗಿತು.

ಕ್ರಿ. ಶ. ೧೪೬೪ರಲ್ಲಿ ಒದವೊಂದನ ಹೊಲಗಳ ಒಡೆತನದ ವಿಷಯವಾಗಿ ಬಾರಕೂರಿನ ಹತ್ತು ಕೇರಿಯ 'ಸೆಟ್ಟಿಕಾರರು' ಮತ್ತು 'ನಖರ ಹಂಜಮಾನ'ದವರ ಪಕ್ಷಕ್ಕೂ ನಿಡುಂಬೂರರು, ಮೂಡಿಲರು, ಬಲ್ಲಾಳರು ಮುಂತಾದ ತುಳುನಾಡಿನ ಕೆಲವು ಪ್ರಧಾನಶಾಲೀ ಮನೆತನಗಳ ಪಕ್ಷಕ್ಕೂ ನಡುವೆ ಭಿನ್ನಾಭಿಪ್ರಾಯ ತಲೆದೋರಿದಾಗ ಬಾರಕೂರಿನ ರಾಜ್ಯಪಾಲ ವಿಶಾಲಸಾಮ ಮಧ್ಯ ಪ್ರವೇಶಮಾಡಿ ವಿಚಾರಣೆ ನಡೆಸಿ ಸಟ್ಟಿಕಾರರಿಗೂ ಹಂಜಮಾನದವರಿಗೂ ಅನುಕೂಲವಾದಂತಹ ತೀರ್ಪನ್ನು ನೀಡಿದನು.

ಮೇಲೆ ಕೊಟ್ಟಿರುವ ಈ ಕೆಲವು ಪ್ರಕರಣಗಳು ತುಳುನಾಡಿನ ಗತಕಾಲದ ಆಗು ಹೋಗುಗಳಲ್ಲಿ ಆ ಸಂಘಗಳಿಗೆ ದೊರೆತಿದ್ದ ಸಾಪ್ರಧಾನ್ಯತೆಯನ್ನು ಸ್ಪಷ್ಟಪಡಿಸುತ್ತವೆಯಷ್ಟೆ. ಶಾಸನಗಳಲ್ಲಿ ಕಂಡು ಬರುವ ಸಮಸ್ತ ಹಲರ ಸಾವಿರ ಅಳಿ ಮುಂತಾದ ಸ್ಥಾನೋದಗಳು ಆ ಸಂಘದಲ್ಲಿ ತಮ್ಮ ರಕ್ಷಣೆಗಾಗಿ ಸೈನ್ಯಗಳನ್ನು 'ಕಟ್ಟಿ ಪಾಲಿಸುವಷ್ಟು ಪ್ರಬಲವಾಗಿದ್ದವೆಂಬುದನ್ನು ತೋರಿಸಿ ಕೊಡುತ್ತವೆ.

ಧಾರ್ಮಿಕ ಕ್ಷೇತ್ರದಲ್ಲಿ ಈ ಸಂಘಗಳು ತುಳುನಾಡಿಗೆ ಸಲ್ಲಿಸಿದ ಸೇವೆ ಅಮೂಲ್ಯವಾದದ್ದು. ನಖರ ಸಂಘದವರು ಶೈವ ಧರ್ಮವಲಂಬಿಗಳೂ ಸಟ್ಟಿಕಾರ ಸಂಘದವರು ಜಿನ ಭಕ್ತರೂ ಆಗಿದ್ದರೆಂದು ಶಾಸನಗಳ ಆಧಾರದ ಮೇಲೆ ಸಾಮಾನ್ಯವಾಗಿ ಹೇಳಬಹುದು. ಕ್ರಿ. ಶ. ೧೧೫೪ರಲ್ಲಿ ಬಸರೂರಿನಲ್ಲಿ ಆ ಊರಿನ ನಖರ ಸಂಘದವರು "ನಖರೇಶ್ವರ"ವೆಂಬ ಈಶ್ವರದೇವಾಲಯವನ್ನು ಕಟ್ಟಿಸಿದ್ದರು. ಕ್ರಿ. ಶ. ೧೪-೧೬ನೆಯ ಶತಮಾನಗಳಿಗೆ ಸೇರಿದ ಶಾಸನಗಳಿಂದ ಬಾರಕೂರು, ಮಂಗಳೂರು, ಪಣಂಬೂರು ಮುಂತಾದ ಇನ್ನೂ ಕೆಲವೆಡೆಗಳಲ್ಲೂ ಈ ಸಂಘದವರು ಕಟ್ಟಿಸಿದ "ನಖರೇಶ್ವರ" ದೇವಸ್ಥಾನಗಳಿದ್ದವೆಂದು ತಿಳಿದು ಬರುತ್ತದೆ. ನಖರೇಶ್ವರ ದೇವಾಲಯಗಳಲ್ಲಿ ವಿನಾಯಕನಿಗೂ ಪ್ರಾಧಾನ್ಯತೆ ಕೊಡಲಾಗಿದ್ದು, 'ನಖರೇಶ್ವರದ ಗಣಪತಿಯು' ಅನೇಕ ಶಾಸನಗಳಲ್ಲಿ ಉಲ್ಲೇಖನಾರಿರುತ್ತಾನೆ.

ಮೂಡಬಿದುರೆಯ ಸೆಟ್ಟಿಕಾರರು 'ನೂತನ ಪುರಾತನ ಜೈತ್ಯಾಲಯ ನಿರ್ಮಾಪನೋದ್ಧರಣ ಪರಿಣತಾಂತಃಕರಣ'ರೆಂದು ಹೊಗಳಿಕೊಂಡಿರುವುದನ್ನು ಮೇಲೆ ತೋರಿಸಿ ಕೊಟ್ಟಿದ್ದೇನೆ. ಮೂಡಬಿದುರೆ, ಕಾರಕಳ, ವೇಣೂರು ಮುಂತಾದ ಜೈನರ ಕೇಂದ್ರಗಳಲ್ಲಿಯ ಸುವಿಖ್ಯಾತ ಜಿನ ಬಸದಿಗಳು ಹಲವು ಸೆಟ್ಟಿಕಾರ ಸಂಘದವರಿಂದ ಆಗಿಂದಾಗ್ಗೆ ಜೀರ್ಣೋದ್ಧಾರ ಮಾಡಲ್ಪಟ್ಟಿದ್ದನ್ನು. ಮೂಡಬಿದುರೆಯ ತ್ರಿಭುವನ ಚೂಡಾಮಣಿ ಜೈತ್ಯವು ಸಿಂಹಿರುವುದು. ಆ ನಗರದ ಎಂಟು ಪ್ರಜೆ ಸೆಟ್ಟಿಕಾರರನ್ನೊಳಗೊಂಡ "ಸಮಸ್ತ ಹಲರು" ಕ್ರಿ. ಶ. ೧೪೯೯ರಲ್ಲಿ ತಮ್ಮ ಗುರುಗಳಾದ ಅಭಿನವ ಚಾರುಕೀರ್ತಿ ಪಂಡಿತ ದೇವರಿಗೆ ದಾನವಾಗಿ ಕೊಟ್ಟ ನೆಲದ ಮೇಲೆ, ಅಲ್ಲದೆ ಆ ಜೈತ್ಯಾಲಯವನ್ನು "ಜಗದಂಶ್ಚರ್ಯ ಮಸ್ಪಂತು ಮಾಡಿಸಿದ"ವರಲ್ಲಿ ಅಗ್ರಗಣ್ಯರೂ ಅವರೇ.

ಹೀಗೆ ವಾಣಿಜ್ಯವು ಅಭಿವೃದ್ಧಿಗೊಂಡು ಅದರಿಂದ ಅಪಾರ ಸಂಪತ್ತುಗಳನ್ನೂ ಗಳಿಸಿದ ವರ್ತಕ ಸಂಘದವರು ದೇವಾಲಯಗಳ ಮತ್ತು ಬಸದಿಗಳ ನಿರ್ಮಾಣಕ್ಕೂ, ಜೀರ್ಣೋದ್ಧಾರಕ್ಕೂ ಸೂಜೆ-ಶುನಸ್ಕಾರಗಳಿಗೂ ಎಂಬು ಧನಕನಕಾದಿ ದಾನಗಳನ್ನು ನೀಡಿ, ಅದರ ಮೂಲಕ ಜನ ಸಾಮಾನ್ಯರ ಆರ್ಥಿಕ ಪರಿಸ್ಥಿತಿಯು ಸಾಕಷ್ಟು ಸುಧಾರಿಸುವಂತೆ ಮಾಡಿದ್ದರೆಂದು ಆ ಕಾಲದ ಶಾಸನಗಳಿಂದ ಗ್ರಹಿಸಬಹುದಾಗಿದೆ. ಆದರೆ ಈ ನನ್ನ ಹೇಳಿಕೆಗೆ ವಿವರಣೆ ನೀಡಲು ಇಲ್ಲಿ ಸ್ಥಳಾವಕಾಶವಿಲ್ಲ.

ಗ್ರಂಥ ಸೂಚಿ:

1. Annual Report on South Indian Epigraphy, 1901-40
2. Karnataka Inscriptions Vol. I.
3. South Indian Inscriptions Vol. VII and IX, Part II.

ನೇತ್ರ ರಕ್ಷಣೆಗಾಗಿ—
ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ—
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)

ಸಂಪೂರ್ಣವಾಗಿ ಅದೃಶ್ಯ; ಕನ್ನಡಕದಂತೆ ನಿಮ್ಮ ಮುಖದ ಸೌಂದರ್ಯಕ್ಕೆ ಅಡ್ಡ ಬರುವಂತಿಲ್ಲ; ಆಗಾಗ ಬದಲಾಯಿಸುವ ಅವಶ್ಯವಿಲ್ಲ.



ಇಂದೇ ಸಂದರ್ಶಿಸಿರಿ

Shetty's OPTICS & CONTACT LENS CLINIC

London Qualified Optometrists

ಶೆಟ್ಟಿಸ್ ಆಪ್ಟಿಕ್ಸ್ & ಕಾಂಟ್ಯೆಕ್ ಲೆನ್ಸ್ ಕ್ಲಿನಿಕ್

೭ ಈಗೆನ್ ಬೋಸ್ಟ್ರೀಟ್, ಬಾಝುಖಾರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ - ೧.

- ಲಂಡನ್ ತರಬೇತಾದ ಹಾಗೂ ಜಗದ್ವ್ಯಾಪಿ ಅನುಭವವುಳ್ಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.
- ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು
- ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರಿನ ೧೪ ಅನ್ಯಶ್ಯ ಭಾಗಗಳಿರುವ 'ಪೆರಿಲೆಕ್ಸ್ ಲೆನ್ಸ್'ನ ತಜ್ಞರು.

With best compliments from

HOTEL TOURIST

(Regd.)

Race Course Road, Ananda Rao Circle

BANGALORE-9.

High Class Vegetarian Boarding, Lodging & Restaurant.

Phone—72381 (5 lines) Grams— HOTELTOUR

ಮಹಾನಗರದಲ್ಲಿ
ಮಹೋನ್ನತ ಊಟ ಮತ್ತು ವಸತಿ ಗೃಹ

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ರೇಸ್ ಕೋರ್ಸ್ ರೋಡ್, ಆನಂದ ರಾವ್ ಸರ್ಕಲ್

ಬೆಂಗಳೂರು - 9

ಪ್ರೊ. ಕೆ. ಗುರುರಾಜಾಚಾರ್

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ. ರೋಡು, ಬಂಡಿ ಸೇಶಮ್ಮ ಚೌಲ್ಟ್ರಿ,

ಬೆಂಗಳೂರು - 9.

ದರವನ್ನು ಬಹಳ ಕಡಿಮೆ ಮಾಡಿದೆ

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ 'ಮೈಸೂರು ಟೈಪ್ ಫೌಂಡ್ರಿ'ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.

THE MYSORE TYPE FOUNDRY

LETTERS FOUNDERS

S. C. Road, Bandi Seshamma Choultry

BANGALORE-9.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಜ್ಯ ಸಮೂಹ! ಆಂಗ್ಲೇಯ ಆಕ್ರಮಣ ಗಾರರನು, ಹೊಗಗಟ್ಟಿದ ಮೇಲೆ ನಿಜವಾ ಗಿ ಬ ಕೇ ರಾಷ್ಟ್ರದ ಆಗ ಹೋ ಗಿನ ಅಂಕುಶವನ್ನು ತಮ್ಮ ಪ್ರತಿನಿಧಿಗಳಿ ಗೆ ಮಾತ್ರ ಕೊಡಬೇಕಾಗಿತ್ತು. ಆಕ್ರಮ ಣಗಾರರ ಕ್ರೂರ ದಬ್ಬಾಳಿಕೆ ನಡೆಯುತ್ತಿ ದ್ದಾಗಲೂ ಕಲವಾರ ರಾಜ ರಾಣಿಗಳ ಅಲ್ಪಿಕೆ ಅಥವಾ ದರ್ಬಾರು ಇಲ್ಲಿ ನಡೆ ಯುತ್ತಿತ್ತು. ಆಕ್ರಮಣಗಾರರನ್ನು ಅ ಟ್ಟಿದ ಮೇಲೆ ರಾಷ್ಟ್ರೀಯರು ಏಕತೆಗಾಗಿ ಸರ್ದಾರ ಪಟೇಲರು "ಅಶ್ವಮೇಧ ನಡೆಸಿ ದರಾದರೂ ರಾಷ್ಟ್ರದ ಗರ್ಭದಲ್ಲಿ ಹಲ ವಾರು ರಾಜ್ಯಗಳು ಹುಟ್ಟಿದುವು. ರಾಜ್ಯ ಗಳ ಶಾಸಕರನ್ನು ಪ್ರತಿನಿಧಿಗಳು ಆರಿಸು ವರು, ಇಲ್ಲಿ ರಾಜ್ಯದ ವಿಧಾನ ಸಭೆಗೆ ಪ್ರ ತಿನಿಧಿಗಳನ್ನು ಜನಾಯಿಸಲಾಗುತ್ತದೆ. ಈ ಪ್ರತಿನಿಧಿಗಳು ಹಾಗೂ ಜನತೆಯಲ್ಲಿ ಕೆಲಪಂಗಡದವರುವಿಧಾನ ಪರಿಷತ್ತಿಗೆ ಪ್ರ ತಿನಿಧಿಗಳನ್ನು ಚುನಾಯಿಸುವರು. ವಿಧಾ ನ ಸಭೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರತಿ ನಿಧಿಗಳಿರುವ ಪಕ್ಷಕ್ಕೆ ಸೇರಿದ ಪ್ರತಿನಿಧಿಗ ಳು ಶಾಸಕ ವರ್ಗದವರಾಗುತ್ತಾರೆ. ವಿಧಾ ನ ಸಭೆ ಹಾಗೂ ಪರಿಷತ್ತಿನ ಕಾರ್ಯಕಲಾ ಪಗಳನ್ನು ನಡೆಸಲು ಅವರು ಒಬ್ಬರನ್ನು ಚುನಾ ಯಿ ಸಿ ಕೊ ಳ್ಳು ತ್ತಾ ರೆ. ಆವ್ಯ ಕ್ತಿಯೂ ಜನತೆಯಿಂದಲೇ ಚುನಾಯಿಸ ಲ್ಪಟ್ಟವರಲ್ಲಿ ಒಬ್ಬನಿರುತ್ತಾನೆ. ಅವರನ್ನು ಸಭಾಧ್ಯಕ್ಷರೆನ್ನಲಾಗುತ್ತದೆ. ಅವರೂ ಜ ನತೆಯ ಪ್ರತಿನಿಧಿಯೇ ಇದ್ದಾರೆ. ಸಭೆಯ ಲ್ಲಿ ಬಹು ಸಂಖ್ಯೆ ಇರುವ ಪಕ್ಷಕ್ಕೆ ಸ್ವಾ ಭಾವಿಕವಾಗಿ ಅವರು ಸೇರಿದವರಾಗುತ್ತಾ ರೆ. ಆದರೆ ನಿಷ್ಪಕ್ಷಪಾತದ ದೃಷ್ಟಿಯಿಂದ ಅಂಸಲ್ಪಟ್ಟವರು ಪಕ್ಷಕ್ಕೆ ರಾಜೀನಾಮೆ ಕೊಡುತ್ತಾರೆ.

ಈಗ ಏಕ ಪಕ್ಷದ ಆಡಳಿತವು ಬದಲು ಬಹು ಪಕ್ಷ ಆಡಳಿತವೂ ಅಲ್ಲಿಲ್ಲಿ ನಡೆ ಯುತ್ತಿರುವದರಿಂದ ಸಂಯುಕ್ತ ದಳದವ ರು ಆರಿಸಿದ ವ್ಯಕ್ತಿ ಅಲ್ಲಿರಲು ಸಾಧ್ಯವಾ ಗುತ್ತದೆ. ಇವರೂ ಪಕ್ಷ ರಾಹಿತರೇ ರುದ ಮಟ್ಟದಿಂದ ಮೇಲಿರಬೇಕು.

ಜನತೆಯು ವಿಧಾನ ಸಭೆಗೆ ಪ್ರತಿನಿಧಿ ಗಳನ್ನು ಚುನಾಯಿ ಸಿ ಕಳಹಿಸುವಂತೆ ಲೋಕ ಸಭೆ ಗೂ ಅಂದರೆ ರಾಜ್ಯದ್ದು ಮಾ ತ್ರವಲ್ಲ ಇಡೀ ರಾಷ್ಟ್ರದ ಆಡಳಿತ ಅಂಗ ಣಕ್ಕೆ ಪ್ರತಿನಿಧಿಗಳನ್ನು ಕಳುಹಿಸುವರು. ಲೋಕ ಸಭೆಗೆ ಚುನಾಯಿಸಿ ಆರಿಸಲ್ಪಟ್ಟ ವರು ಹಾಗೂ ವಿಧಾನ ಸಭೆಗೆ ಚುನಾಯಿ ಸಲ್ಪಟ್ಟವರು ಕಲೆತು ರಾಜ್ಯ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುತ್ತಾರೆ. ಇಲ್ಲಿ ಲೋಕ ಸಭೆಯ ಸದಸ್ಯರು ಮಾತ್ರ ತಮ್ಮ ಸಭಾಧ್ಯಕ್ಷರನ್ನು ತಾವೇ ಆರಿಸಿ ಕೊಳ್ಳುವರು. ರಾಜ್ಯ ಸಭೆಯ ಪ್ರತಿನಿಧಿ ಗಳಿಗೆ ಆ ಹಕ್ಕು ಇರುವದಿಲ್ಲ. ಅಂದರೆ ಲೋಕ ಸಭಾಧ್ಯಕ್ಷರು ಲೋಕ ಸಭೆಯ ಸದಸ್ಯರೇ ಇರಬೇಕು. ರಾಜ್ಯ ಸಭೆಯ ಅ ಧ್ಯಕ್ಷರು ಹಾಗಲ್ಲ. ಲೋಕ ಸಭೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳಿರುವ ಪ ಕ್ಷದವರು ಆಡಳಿತ ಅಂಕುಶವನ್ನು ಕೈ ಯಲ್ಲಿ ತೆಗೆದುಕೊಳ್ಳುತ್ತಾರೆ. ಅವರು ಮಂ ತ್ರಿ ಮಂಡಲವನ್ನು ರಚಿಸಿಕೊಳ್ಳುತ್ತಾರೆ. ರಾಜ್ಯ ಸಭೆ, ಲೋಕ ಸಭೆ ಹಾಗೂ ವಿ ಧಾನ ಸಭೆಯ ಸದಸ್ಯರು ಯಾವ ಯೋ

ಪ್ರಜಾಪ್ರಭುತ್ವದ ಪ್ರಯೋಗಾಲಯದಲ್ಲಿ ಪ್ರಮುಖ ಪ್ರಯೋಗ

(ಹದಿನಾಲ್ಕನೇ ಪುಟದಿಂದ)

ಗ್ಯ ಭಾರತೀಯನನ್ನಾದರೂ ರಾಷ್ಟ್ರದ ಅಧ್ಯಕ್ಷ ಹಾಗೂ ಉಪಾಧ್ಯಕ್ಷನನ್ನಾಗಿ ಆರಿಸಿಕೊಳ್ಳುತ್ತಾರೆ. ಈ ಉಪಾಧ್ಯಕ್ಷರೇ ರಾಜ್ಯ ಸಭೆಗು ಸಭಾಧ್ಯಕ್ಷರಾಗುತ್ತಾರೆ.

ಭಾರತದ ಅಧ್ಯಕ್ಷ ಅಲ್ಲದೆ ಉಪಾಧ್ಯ ಕ್ಷರನ್ನು ಭಾರತದ ಜನತೆಯು ಚುನಾ ಯಿಸುವದಿಲ್ಲ. ಅವರಿಂದ ಚುನಾಯಿಸ ಲ್ಪಟ್ಟವರು ಆರಿಸಿಕೊಳ್ಳುತ್ತಾರೆ. ಇವರೇ ಪ್ರಧಾನರು, ಅವರೇ ಆರ್ಥಿಕ ಮಂತ್ರಿ, ಇವರೇ ಗೃಹ ಮಂತ್ರಿ. ಹೀಗೆ ಮಂತ್ರಿಗ ಳನ್ನು ಜನತೆ ನೇರವಾಗಿ ಚುನಾಯಿಸುವ ದಿಲ್ಲ. ಅದಕ್ಕು ಒಂದು ಮಿತಿ ಇದೆ. ಮಿತಿ ಇರುವಾಗಲೇ ಇಂದು ಮೋಜು ನಡೆಯು ತ್ತಿದೆಯಾದಲ್ಲಿ ಮಿತಿ ಇಲ್ಲವಾದ್ದಲ್ಲಿ ಮೋ ಜಿಗೂ ಮಿತಿ ಇಲ್ಲದೆ ಹೋಗುತ್ತದೋ ಏನೋ! ಅ ಲ್ಲದೆ ಪ್ರಜಾಪ್ರಭುತ್ವದ ಪರಿಹಾಸ್ಯವೇ ನಡೆಯಬಹುದು. ಪ್ರತಿ ಯೊಂದು ಸ್ಥಾನಕ್ಕು— ಸರಕಾರೀ ಉದ್ಯೋಗಕ್ಕೂ— ಚ ನಾವಣೆಯ ದಂಡ ಮಾನ ಉಪಯೋಗಿಸಿದಲ್ಲಿ ಇನ್ನೇನು ತಾ ನೇ ಆದೀತು? ಲೋಕಸಭೆಸದಸ್ಯನಾಗಬೇ ಕಾದಲ್ಲಿಅವನಿಗೆಅಧಿಕಮತದೊರಕಿದರೆಸಾ ಕು. ಅವನುಕಾನೂನುಸದವಿಧೀರನಾಗಿರು ವದು ಅವಶ್ಯಕವಿಲ್ಲ. ಅವನು ಕಾನೂನು ಸಂಬಂಧಪಟ್ಟ ಮಸೂದೆಗಳನ್ನು ತರಲ ಸಾಧ್ಯವಿದೆ. ಉಪಾಧ್ಯಾಯನನ್ನು ಜನತೆ ಮತ ಹಾಕಿ ಆರಿಸಬೇಕಾಗಿಲ್ಲ ಆದರೆ ಲೋಕಸಭೆಯಲ್ಲಿ ಅ-ಆ ಗೊತ್ತಿಲ್ಲದವನು ಕಂಡಾ ವಿದ್ಯಾಸಂಬಂಧ ಮಸೂದೆಗಳ ನ್ನು ತರಬಹುದು. ಜಿಲ್ಲಾಧಿಕಾರಿ, ನ್ಯಾಯಾಧಿಕಾರಿ,ನ್ಯಾಯಾಧೀಶಮುಂತಾ ದವರನ್ನು ಜನತೆ ಮತ ಹಾಕಿ ಕಳುಹಿಸ ಬೇಕಾಗಿಲ್ಲ. ಅಯಾಯಾ ಹುದ್ದೆಗಳಿಗೆ ಬೇಕಾದ ಶಿಕ್ಷಣ ಹಾಗೂ ದೇಹದಾರ್ಢ್ಯತೆ ಇದ್ದರೆ ಸಾಕು. (ಇಂದು ಬೇರೊಂದು ವಿಷಯವೂ ಬೇಕು) ಆದರೂ ಈ ತಜ್ಞರ ಜಟ್ಟು ಇರುವದು ಮಂತ್ರಿಮಂಡಲದ ಕೈಯಲ್ಲಿ--ಅಂದರೆ ಜನತಾ ಪ್ರತಿನಿಧಿಗಳ ಕೈಯಲ್ಲಿ. ಜನತೆಯೇ ಅದಕ್ಕೆ ಕಾರಣ ತಾನೇ!

ಇದರಲ್ಲಿ ಸ್ವಲ್ಪವಾದರೂ ಸ್ವತಂತ್ರ ರಾಗಿ ಉಳಿದಿರಬಹುದಲ್ಲವರು ನ್ಯಾಯಾಂಗ ವಿಭಾಗದವರು. ನ್ಯಾಯಾಧಿಕಾರಿ ಹಾ ಗೂ ನ್ಯಾಯಾಧೀಶರನ್ನು ಜನತೆಯಾಗಲೀ ಜನತೆಯಪ್ರತಿನಿಧಿಗಳಾಗಲೀ ನೇಮಿಸುವ ದಿಲ್ಲ. ಚುನಾಯಿ ಸ ದಿರಲಿ, ಇವರಿಗೆ ಜನತಾ ಪ್ರತಿನಿಧಿಗಳನ್ನು ಬಂಧಿಸುವ ಅಧಿಕಾರವೂ ಇದೆ! ತಪ್ಪು ಮಾಡಿದಲ್ಲಿ ಯಾರಾದರೇನು? ಅವರು ಈ ಹಕ್ಕನ್ನು ಉತ್ತರ ಪ್ರದೇಶದ ಮಂತ್ರಿಗಳಬ್ಬರು ಪರೀಕ್ಷಿಸಿ ನೋಡಿದರು.ನ್ಯಾಯ ಶಾಖೆಗೂ ಮತ್ತ ಚಲಾವಣೆ ನಡೆಸಬೇಕೆಂದು ಕೇರ ಳದ ಮುಖ್ಯಮಂತ್ರಿ ಕಾಮ್ರೇಡ್ ಈ. ಯಂ. ಯಸ್. ನಂಬೂದರಿಪಾಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರು ವರಲ್ಲದೆ, ಪ ಚಲಿತ ಪದ್ಧತಿಯು ಬಂಡ ವಾಳಶಾಹಿಗಳ ಜೊಂಬೆಯಾಟವೆಂದಿದ್ದಾ ರೆ. ಪ್ರತಿಯೊಬ್ಬರೂ ಒಂದೊಂದು ರಂಗ ದತ್ತ ಬೆಟ್ಟು ತೋರಿಸಿದಲ್ಲಿ ಇದಕ್ಕೆ ಕೊನೆ ಅದೆಲ್ಲೊ! ಚುನಾವಣೆ ಇಲ್ಲದ ದಿನ ಇರ ಲಿಕ್ಕಿಲ್ಲ! ಏನು ಮೋಜು! ಆಗ ಇತರ ಕೆಲಸಗಳನ್ನು ಮಾಡುವವರ್ಯಾರು?

ರಾಷ್ಟ್ರಾಧ್ಯಕ್ಷರನ್ನು ಪ್ರತ್ಯಕ್ಷನಾಗಿ ರಾಷ್ಟ್ರದ ಜನತೆ ಚುನಾಯಿಸುವದಿಲ್ಲ ವಾದರೂ ಜನತಾ ಪ್ರತಿನಿಧಿಗಳು ಆರಿಸಿ ಕೊಳ್ಳುತ್ತಾರೆ ರಾಜ್ಯಪಾಲರ ವಿಷಯ ಹಾಗಲ್ಲ. ರಾಜ್ಯದ ಜನತೆಗೂ, ರಾಜ್ಯದ ಪ್ರತಿನಿಧಿಗಳಿಗೂ ಅಲ್ಲಿ ಉಸಿರೆತ್ತಲೇನೂ ಇರುವದಿಲ್ಲ. ಕೇಂದ್ರಮಂತ್ರಿ ಮಂಡಲ ಯಾವ ಪಕ್ಷದ ಕೈಯಲ್ಲಿರುತ್ತದೊ ಅವರ ದರ್ಬಾರು ಅಲ್ಲಿ ನಡೆಯುತ್ತದೆ. ರಾ ಷ್ಟ್ರಾಧ್ಯಕ್ಷರು ಗೌರವದಿಂದ ಅದಕ್ಕೆ ಅ ಸ್ತು ಅನ್ನಬೇಕು. ಆ ಪಕ್ಷದ ಕೃಪೆಯಿಂದ ತಾನೇ ಅವರು ಅಸನ ಅಲಂಕರಿಸಲು ಸಾ ಧನವಾಗುವದು? ಕೇಂದ್ರ ಮಂತ್ರಿ ಮಂಡ ಲವು ರಾಜ್ಯಪಾಲ ಹಾಗೂ ಮುಖ್ಯ ನ್ಯಾ ಯಾಧೀಶ ಮುಂತಾದ ದಾಳಗಳನ್ನು ರಾ ಷ್ಟ್ರಾಧ್ಯಕ್ಷರ ಕೈಯ್ಯಿಂದ ನಡೆಯುತ್ತದೆ. ಹಾಗೆ ಬಂದವರು-ಪರೋಕ್ಷವಾಗಿ ಜನ ತೆಯಿಂದ ಆರಿಸಲ್ಪಟ್ಟವರಾದರೂ-ಪ್ರತ್ಯ ಕ್ಷವಾಗಿ ಜನತೆಯಿಂದ ಆರಿಸಲ್ಪಟ್ಟ ಪ್ರತಿ ನಿಧಿಗಳ ಮೇಲೆ ಹತೋಟಿ ಇಟ್ಟುಕೊಳ್ಳು ತ್ತಾರೆ. ಬಂಗಾಲ, ಹರಿಯಾಣ ಹಾಗೂ ಪಂಜಾಬು ನಮ್ಮ ಕಣ್ಮುಂದೆ ಇರುವ ನಿ ದರ್ಶನಗಳು.

ರಾಜ್ಯಪಾಲರು ರಾಷ್ಟ್ರಾಧ್ಯಕ್ಷರ ಪ್ರ ತಿನಿಧಿಗಳಿದ್ದಾರೆ. ರಾಜ್ಯಗಳಲ್ಲಿ ಅಧಿಕ ಸಂ ಖ್ಯೆಯನ್ನು ಪಡೆದಿರುವ ಪಕ್ಷದವರನ್ನು ಕ ರೆದು ಮಂತ್ರಿಮಂಡಲವನ್ನು ರಚಿಸಲು ಇವರು ಏರ್ಪಾಡು ಮಾಡಿಕೊಡ ಬೇಕು. ರಾಜಸ್ಥಾನದಲ್ಲಿ ನಡೆದುದೇನು? ವಿಧಾನ ಸಭೆಯ ಅರ್ಧಕ್ಕಿಂತಲೂ ಹೆಚ್ಚಿನ ಸಂಖ್ಯೆ ಯಲ್ಲಿ ಸದಸ್ಯರು ಅಲ್ಲಿಯ ರಾಜ್ಯಪಾಲರ ನ್ನು ಕೇಳಿಕೊಂಡರು ರಾಷ್ಟ್ರಾಧ್ಯಕ್ಷರನ್ನೇ ಕಂಡರು. ಏನಾದರೂ ಪ್ರಯೋಜನ ಸಿ ಕ್ಕಿತೇನು? ಅದಕ್ಕೆ ಕಾರಣವೇನು? ಈ ಪ್ರದರ್ಶಕರು ಒಂದೇ ಪಕ್ಷಕ್ಕೆ ಸೇರಿದವರ ಲ್ಲ-ಸಂಯುಕ್ತ ದಳದವರು. ಹರಿಯಾಣ ಹಾಗೂ ಪಂಜಾಬಿನಲ್ಲಿ ಇದಕ್ಕೆ ತೀರಾ ವಿರುದ್ಧ ರೀತಿಯ ಕ್ರಮ ಕೈಗೊಳ್ಳಲಾ ಯಿತು. ಕಮ್ಯೂನಿಸ್ಟರು, ಅಕಾಲಿಗಳ, ಮುಸ್ಲಿಂ ಲೀಗಿನವರ, ದ್ರಾವಿಡ ಮುನ್ನೇ ಟ್ರ ಕ್ಷಗಂ (ಹಿಂದಿನ ದಾಟಿಯಲ್ಲಿ) ಹಾಗೂ ಅಂತಹ ದೇಶ ದ್ರೋಹಿ ಅಲ್ಲದೆ ವಿ ಭಜಕರ ಕೈಯ್ಯಿಂದ ತಪ್ಪಿಸಿಕೊಳ್ಳಲು ಜನತೆ ಹಾತೊರೆಯುವದು ಸ್ವಾಭಾವಿಕ ವಿದೆ. ಕಾಂಗ್ರೆಸ್ಸಿನ ಮೇಲಿನ ಕೋಪ ಹಾ ಗೂ ಸ್ಥಳೀಯ ಆಮಿಷ ಮತ್ತು ಬಲಾತ್ಕಾ ರಗಳಿಗೊಳಗಾದ ಜನತೆ ಕ್ಷಣಿಕ ಅಗಾಧ ಧನದಿಂದ ಅಂತಹ ದುಃಶ್ಚಿಹ್ನೆಗಳನ್ನು ಅ ಸವಕ್ಕೇರಿಸಿದರೂ ಅವುಗಳ ನಾಶವನ್ನು ಬಯಸುವದೇನೂ ಅಶ್ಚರ್ಯವಲ್ಲ. ಸಂವಿಧಾನದ ಪ್ರಕಾರ ಅಧಿಕ ಸಂಖ್ಯೆಯ

ಪ್ರಜಾರಾಜ್ಯ ದಿನದ

ಹಾರ್ದಿಕ ಶುಭಾಶಯಗಳು

ಅರ್ಪಿಸುವವರು:

ಆರ್. ಎನ್. ಶೆಟ್ಟಿ

ಕಂಟ್ರಾಕ್ಟರ್, ::: ಬಿ. ಎಚ್. ರೋಡ್,

ಶಿರಸಿ—ಉತ್ತರ ಕನ್ನಡ

ಲ್ಲುಳ್ಳವರು ಅಧಿಕಾರ ನಡೆಸಬೇಕು. ಹರಿಯಾಣದಲ್ಲಿ ಸಂಯುಕ್ತ ದಳದವರ ಸಂಖ್ಯೆ ನಿಖರವಾಗಿ ಆಗ ಜಾಸ್ತಿಯೇ ಇತ್ತು. ಪಕ್ಷಾಂತರದ ನೆವ ಹೇಳಿ ಸಂಯುಕ್ತ ಮಂತ್ರಿ ಮಂಡಲವನ್ನು ಬೀಳಿಸಲಾಯಿತು. ಇದು ಘಟನೆಗೆ ವಿರುದ್ಧವಲ್ಲವೇನು? ಪ್ರಜಾಪ್ರಭುತ್ವಧೋರಣೆಗೆ ಧಕ್ಕೆಅಲ್ಲವೇನು? ಆಗಿನ ಮುಖ್ಯಮಂತ್ರಿಶ್ರೀ ವೀರೇಂದ್ರ ಸಿಂಘೆರನ್ನು ರಾಜ್ಯಪಾಲರು ಕರೆದು ಬಹುಮತ ಇದೆಯೋ, ತೋರಿಸಲು ಹೇಳಬಹುದಿತ್ತಲ್ಲಾ?ಬಿರ್ಲಾ ಸರಕಾರವೇನೋ ಹೋಯಿತು—ಅದರೊಂದಿಗೆ ಪ್ರಜಾಪ್ರಭುತ್ವ!

ಬಂಗಾಲದಲ್ಲಿ ರಾಜಕೀಯ ಪಕ್ಷಗಳಿಗೇನೂ ಬರಗಾಲವಿಲ್ಲ. ಅಲ್ಲಿ ಸಮ್ಮಿಶ್ರ ಮಂತ್ರಿ ಮಂಡಲವಿತ್ತು. ಅದರಿಂದ ಒಬ್ಬ ಮಂತ್ರಿ ಹಾಗೂ ಕೆಲ ವಿಧಾನ ಸಭಾ ಸದಸ್ಯರು ಬೆಂಬಲವನ್ನು ಹಿಂತೆಗೆದು ಕೊಂಡೊಡನೆ ಆಕ್ಷನ ರಾಜ್ಯಪಾಲರು ಆಗಿನ ಮುಖ್ಯ ಮಂತ್ರಿ ಶ್ರೀ ಅಜಯ ಮುಖರ್ಜಿಯವರನ್ನು ಅಹ್ವಾನಿಸಿ ವಿಧಾನ ಸಭೆ ಕರೆಯಲು ತಿಳಿಸಿದರು. ದಶಂಬರ ಹದಿನೆಂಟಕ್ಕೆ (೧೯೬೭) ತಾವು ಸಭೆ ಕರೆಯುವದಾಗಿ ಅವರು ಹೇಳಿದರು. ರಾಜ್ಯಪಾಲರಿಗೆ ಈ ನೆವನ ಸಾಕಾಯಿತು. ನಕ್ಸಲಾಬರಿಯಲ್ಲಿ ಉತ್ತ ನದಿ ಹರಿದಾಗ, ನೆತ್ತರಿನಿಂದಲೇ ನಕ್ಷೆಯನ್ನು ಬರಿದಾಗ ಗಮ್ಮನೆ ಇದ್ದ ರಾಜ್ಯಪಾಲರು, ದಿಲ್ಲಿಯ ಅದೇ ಶಕ್ಯನುಸಾರವಾಗಿ ಹರಿಯಾಣದ ಹರಿಸಾಣದಲ್ಲಿ ಬಂಗಾಲದ ಬರಿಗಾಲನ್ನೂ ಹಾಕಿಬಿಟ್ಟರು. ದಶಂಬರ ಹದಿನೆಂಟರವರೆಗೆ ಸಮಯ ಕೊಡುತ್ತಿದ್ದಲ್ಲಿ ಸೇನೆಗೆ ಸ್ವಲ್ಪ ಶ್ರಮವಾಗಬಹುದಿತ್ತು,ಅಷ್ಟೇ;ಬಂಗಾಲದಲ್ಲಿ ರಕ್ತದ ಹೊಳೆ ಹರಿದಿತೆಂದು ಅಜಯ ಮುಖರ್ಜಿ ಗುಡುಗುಟ್ಟಿದ ಮೇಲೆ ಶ್ರೀ ಧರ್ಮವೀರರಿಗೆ ಸುಮ್ಮಗಿರಲು ಸಾಧ್ಯವಾಗಲಿಲ್ಲ. ಆದರೆ ನಕ್ಸಲಾ ಬರಿ ದಂಗೆಯ ಸಮಯ ಸಂಮ್ಮಿಶ್ರದಳವನ್ನು ಮುಗಿಸಿಬಿಡುತ್ತಿದ್ದಲ್ಲಿ ಅವರು ಜನತೆಯ ಅಭಿನಂದನೆಗೆ ಪಾತ್ರರಾಗುತ್ತಿದ್ದರು. ಅದರ ಬದಲು ಈಗ ಬಹಳ ಜಾಗರೂಕತೆ ವಹಿಸಿಕೊಂಡು ದಶಂಬರ ಹದಿನೆಂಟರ ವರೆಗೆ (ದಂಟಾಗುವ ವರಗೆ?) ತಾಳ್ಮೆಯಿಂದಿರಬಹುದಿತ್ತು. ಪ್ರಜಾಪ್ರಭುತ್ವದ ವಿಷಯವದು, ಸಮ್ಮಿಶ್ರ ಮಂತ್ರಿ ಮಂಡಲವು ಕೇಂದ್ರ ಗೃಹಮಂತ್ರಿ ಶ್ರೀ ಛವಾನ್ ಅಥವಾ ಪ್ರಧಾನಿ ಇಂದಿರಾಜೀ ಅಥವಾ ರಾಷ್ಟ್ರಾಧ್ಯಕ್ಷರ ಕೃಪೆಯಿಂದ ಅಧಿಕಾರಕ್ಕೆ ಬಂದಿರಲಿಲ್ಲ. ಪ್ರಜಾಪ್ರಭುತ್ವ ರಾಜ್ಯದಲ್ಲಿ ಪ್ರಜೆಗಳ ಮತಕ್ಕೆ ಗೌರವ ಕೊಡಲೇಬೇಕು. ಅದೇ ರೀತಿ ಪ್ರಜಾಪ್ರಭುತ್ವದಲ್ಲಿ ಶ್ರೀ ಘೋಷರ ಮಂತ್ರಿ ಮಂಡಲವನ್ನು ಜನತೆದಲ್ಲಿ ಕೂತುಕೊಳ್ಳುವದೂ ಪ್ರಜಾಪ್ರಭುತ್ವಕ್ಕೆ ಭೂಷಣವಲ್ಲ. ಹರಿಯಾಣದಲ್ಲಿ ಪುನರ್ ಮತದಾನ ನಡೆಯಬಹುದಾದಲ್ಲಿ ಬಂಗಾಲದಲ್ಲಿ ಏತಕ್ಕೆ ಕೂಡದು? ಇದು ಪ್ರಜೆಗಳ ಪ್ರಶ್ನೆ. ಪ್ರಜಾಪ್ರಭುತ್ವದತ್ತ ಶ್ರೀ ಅಜಯ ಕುಮಾರ ಮುಖರ್ಜಿಯವರ ಗಮನವಿರುತ್ತಿದ್ದಲ್ಲಿ ಅವರೂ ಹಿಡಿದ ಹಟವನ್ನು ಬಿಟ್ಟು ಒಂದು ರೀತಿಯ ಒಪ್ಪಂದಕ್ಕೆ ಬರಬಹುದಾಗಿತ್ತು. ಅದೂ ಬೇಡ. ಶ್ರೀ ಧರ್ಮವೀರರು ಶ್ರೀ ಘೋಷರನ್ನು ಮುಖ್ಯ ಮಂತ್ರಿಯೆಂದು ಘೋಷಿಸಿದ ಮೇಲಾದರೂ ವಿಧಾನ ಸಭೆಯಲ್ಲಿ ತಕ್ಕಿರುವ ಸಂಖ್ಯಾಬಲದ ದರ್ಶನೆ ಮಾಡಿಸಬಹುದಿತ್ತು. ಅದರ ಬದಲು ಅಲ್ಲಿ ಕಮ್ಯೂನಿಸ್ಟರ ಕೊಲೆಗಡುಕತನದಾಟ ನಡೆಯಿತು. ಅವರು ಸಬ್ಬ ಜನತಾ ಪ್ರತಿನಿಧಿಗಳೋ, ಗೂಂಡಾಗಳ ಪ್ರತಿನಿಧಿಗಳೋ! ಪ್ರಜಾಪ್ರಭುತ್ವದಲ್ಲಿ ಗೂಂಡಾಗಿರಿಗೆ ಸ್ಥಾನವಿಲ್ಲ, ಅಲ್ಲಿ ಜನತೆಯ ಮತಕ್ಕೆ ಮಾತ್ರ ಸ್ಥಾನವಿದೆ. ಜನತೆಯ ಬೆಂಬಲವನ್ನು ಕಳೆದುಕೊಂಡ ಮೇಲೆ ಗೂಂಡಾಗಿರಿ ನಡೆಸಿ ಪ್ರಯೋಜನವೇನು? ಕಮ್ಯೂನಿಸ್ಟರಿಗೆ ಇದೊಂದು ನೆವನ ಬೇಕಾಗಿತ್ತು. ಬೆಂಗಾಲದ ಬೆಂಕಿಯನ್ನು ಭಾರತದಲ್ಲೆಲ್ಲೂ ಉರಿಸಲು ಅವರು ಪ್ರಯತ್ನಿಸಿದರು. ಜನತೆ ಅದಕ್ಕೆ ಮಾರು ಹೋಗಲಿಲ್ಲ. ಕಮ್ಯೂನಿಸ್ಟ್ ಶಕಿಯ ಬಾಲವೇ ಸುಟ್ಟು ಹೋಯಿತು.

ಶ್ರೀ ಅಜಯ ಮುಖರ್ಜಿಯವರಂತೆಯೇ ಕಮ್ಯೂನಿಸ್ಟರ ಕೈಯ್ಯಲ್ಲಿ ಸಿಕ್ಕಿಕೊಂಡವರು ಅಲ್ಲಿನ ಸಭಾಧ್ಯಕ್ಷ ಶ್ರೀ ವಿಜಯ ಕುಮಾರ ಬೆನರ್ಜಿಯವರು. ಶ್ರೀ ಧರ್ಮವೀರರು ಶ್ರೀ ಅಜಯ ಮುಖರ್ಜಿಯವರಿಗೆ ಉದ್ದದ ಹಗ್ಗವನ್ನೇ ಕೊಟ್ಟಿದ್ದರು. ಆದರೆ ಪಂಜಾಬಿನಲ್ಲಿ ಹಾಗಲ್ಲ. ಅಲ್ಲಿ ಶ್ರೀ ಗುರ್ನಾಮ ಸಿಂಘ ಬಹಳ ಸುಲಭದಲ್ಲಿ ಮೋಸ ಹೋಗಿ ಬಿಟ್ಟರು. ಅವರ ಮಂತ್ರಿ ಮಂಡಲ ಉರುಳಿದೊಡನೆ ಅವರು ಗುರ್ರ್ ಗುರ್ರ್ ಅನ್ನಲಿಲ್ಲ. ವಿಧಾನ ಸಭೆ ಸೇರಲು ಅಡ್ಡಿ ಬರಲಿಲ್ಲ, ಹೊಸ ಮಂತ್ರಿಗಳನ್ನು ಹಿಡಿದು ಬಡಿಯಲಿಲ್ಲ. ತಮ್ಮ ಸಂಖ್ಯಾಬಲವನ್ನು ತೋರಿಸಲು ಪ್ರಯತ್ನಿಸಿದರು. ಅಲ್ಲಿಯ ಸಭಾಧ್ಯಕ್ಷ ಶ್ರೀ ಜೋಗೀಂದ್ರ ಸಿಂಘ ಮೆನ್ನರವರು ಶ್ರೀ ಲಕ್ಷ್ಮಣ ಸಿಂಘ ಗಿಲ್ಲರವರ ಮಂತ್ರಿ ಮಂಡಲ ನ್ಯಾಯಪೂರ್ಣವೆಂದರು. ಬಂಗಾಲದ ಸಭಾಧ್ಯಕ್ಷ ಶ್ರೀ ವಿಜಯ ಕುಮಾರ ಬೆನರ್ಜಿಯವರು ಶ್ರೀ ಪಿ. ಸಿ. ಘೋಷರ ಸರಕಾರ ನ್ಯಾಯರಹಿತವೆಂದು ಹೇಳಿ ಸಭೆಯನ್ನು ಮುಂದಕ್ಕೆ ಹಾಕಿದ್ದರು! ಬಂಗಾಲದ ಅನ್ಯಾಯ, ಪಂಜಾಬಿನಲ್ಲಿ ನ್ಯಾಯವೇನು? ಇದರಲ್ಲಿ ಪ್ರಜಾಪ್ರಭುತ್ವವೂವುದು? ಇಲ್ಲಿ ಶ್ರೀ ವಿಜಯ ಕುಮಾರ ಬೆನರ್ಜಿಯವರಿಗೆ ಹೊಸ ಮಂತ್ರಿ ಮಂಡಲ ಬಂದಾಗ ಸಭಾಧ್ಯಕ್ಷ ಸ್ಥಾನ ಸಿಗುವದಿಲ್ಲ. ಹಾಗೂ ಶ್ರೀ ಗಿಲ್ಲ್ ಸರಕಾರದಲ್ಲಿ ಆಶ್ವಾಸನ ಕೂಟ್ಟ ಮೇಲೆಯೇ ಅಲ್ಲಿನ ಮನ್ನರು ತಮ್ಮ ನಿರ್ಧಾರವನ್ನು ಬಹಿರಂಗ ಪಡಿಸಿರುವರೆಂಬ ವಾದವು ರಾಜಕೀಯ ಭಾಷಣಗಳ ವೇದಿಕೆಗೆ ಮೀಸಲು.

ಎರಡು ರಾಜ್ಯಗಳಲ್ಲೂ ಪ್ರಜಾಪ್ರಭುತ್ವದ ಕೊರಲನ್ನೇ ಎಬ್ಬಿಸಲಾಗುತ್ತಿದೆ. ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಯಿತೆಂದು ಕಮ್ಯೂನಿಸ್ಟ್ ಪ್ರೇರಿತ ಶಕ್ತಿಗಳು ದಂಗೆ ಎಳ್ಳತ್ತಿವೆ. ಆದರೆ ಅದೇ ಸಂಜಾಬಿನಲ್ಲಿ ಅಂತಹ ಕೊಲೆ—ದಂಗೆಗಳು ಜರಿದಿಲ್ಲ. ಪ್ರಜಾಪ್ರಭುತ್ವ ಇರುವದು ಎಲ್ಲಿ? ಬಂಗಾಲದಲ್ಲಿ ಶ್ರೀ ಧರ್ಮವೀರರು ಶ್ರೀ ಅಜಯ. ಮುಖರ್ಜಿಯವರಿಗೆ ಒಂದು ವಾರದ ಸಮಯವನ್ನಾದರೂ ಕೊಟ್ಟಿದ್ದರು. ಹರಿಯಾಣದ ಶ್ರೀ ಬಿ. ಎನ್. ಚಕ್ರವರ್ತಿ ಹಾಗೆ ಮಾಡದೆ, ಅಲ್ಲಿ ನೇರ ರಾಷ್ಟ್ರಾಧ್ಯಕ್ಷರ ಆಡಳಿತ ಬರುವಂತೆ ಮಾಡಿದರು. ಪಂಜಾಬಿನಲ್ಲಿ ಶ್ರೀ ಗುರ್ನಾಮ ಸಿಂಘರು ಸ್ಪಷ್ಟ ಉತ್ತರಕೊಡುವ ಮುಂಚೆಯೇ ಶ್ರೀ ಗಿಲ್ಲ್‌ರನ್ನು ಮುಖ್ಯ ಮಂತ್ರಿಯೆಂದು ಘೋಷಿಸಲಾಯಿತು. ಈ ರೀತಿಯ ತಾರತಮ್ಯತೆಯು ರಹಸ್ಯವಾದರೂ ಏನು? ಅಧಿಕಾರ ದಾಹ! ಮೂರು ರಾಜ್ಯಗಳನ್ನು ರಾಷ್ಟ್ರಾಧ್ಯಕ್ಷರ ಆಡಳಿತಕ್ಕೊಳಪಡಿಸಬಹುದಾಗಿತ್ತಲ್ಲವೇ? ಹರಿಯಾಣದಲ್ಲಿ ಇಂತಹ ಘೋಷ—ಗಿಲ್ಲ್ ಸಿಗುತ್ತಿದ್ದಲ್ಲಿ ಅಲ್ಲೂ ವಿಚಿತ್ರ ರೀತಿಯ ಮಂತ್ರಿ ಮಂಡಲಕ್ಕೆ ಕೇಂದ್ರವು ಪಟ್ಟಾಭಿಷೇಕ ಮಾಡುತ್ತಿತ್ತೋ ಏನೋ! ಶ್ರೀ ಘೋಷರ ಹಾಗೆ ಪಟ್ಟು ತಿನ್ನಲು ಅಲ್ಲಿ ಯಾರೂ ಸಿಗಲಿಲ್ಲ!

ಇಂದು ಕೇಂದ್ರವು ಕಾಂಗ್ರೆಸ್ಸೇತರ ಮಂತ್ರಿ ಮಂಡಲಗಳನ್ನು ಬೀಳಿಸುತ್ತಿರುವದನ್ನು ಶಾಣುವಾಗಿ ಜನಂವಣಾ ಪೂರ್ವ ತಿರು ಕಾಮಂಂಜನಾಡಾರರವು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು ಕೊಂಡು ಹೇಳಿರುವ ಮಾತುಗಳು ನೆನಪಿಗೆ ಬರುತ್ತಿವೆ. ಆಡಳಿತದ ಅಂಕುಶ ಕಾಂಗ್ರೆಸ್ಸಿಗರ ಕೈಯಿಂದ ತಪ್ಪಿತೆಂದರೆ ಇಲ್ಲಿ ಸೇನೆಯ ಆಡಳಿತವೇ ನಡಯುತ್ತದೆ! ದಂಗೆ ಏಳುತ್ತದೆ! ರಾಷ್ಟ್ರ ಹಾಳಾಗುತ್ತದೆ! ಕಾಂಗ್ರೆಸ್ಸೇತರ ಪಕ್ಷಗಳು ಆಡಳಿತ ನಡೆಸುವಂತಿಲ್ಲ! ಇಂತಹ ಮಾತುಗಳನ್ನೇ ಇನ್ನೂ ಕೆಲವರು ಹೇಳಿರುವರಾದರೂ ತಿರು ಕಾಮರಾಜರು ಆಗ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದುದರಿಂದ ಅದಕ್ಕೆ ವಿಶೇಷತ ಇದೆ. ತಿರು ಕಾಮರಾಜರ ಮಾತುಗಳ ಹಿಂದುಗಡೆ ಇರುವ ಕಾಮನೆಯಾದರೂ ಏನು? ಕಾಂಗ್ರೆಸ್ಸೇತರ ಮಂತ್ರಿ ಮಂಡಲ ಇಲ್ಲಿ ಇರಲು ಸಾಧ್ಯವಿಲ್ಲ! ಅದಕ್ಕಾಗಿ ಅದೇನು ಮಾಡಲೂ ಅವರು ಅಣಿ!

ಈ ಹಿನ್ನೆಲೆಯಲ್ಲೇ ಭಾಷಾ ತಿದ್ದುಪಡಿ ಮಸೂದೆಯನ್ನು ತರಲಾಗಿದೆನ್ನಲಾಗುತ್ತಿದೆ. ತಮಿಳು ನಾಡಿನಲ್ಲಿ ಕಾಂಗ್ರೆಸ್ಸಿನ ಕಾಲಜಾಡದ ಮೇಲೆ ದ್ರಾವಿಡ ಮುನ್ನೇಟ್ರ ಕಳ್ಳಗಂ ಈಗ ಬಹಿರಂಗವಾಗಿ ಬ್ರಾಹ್ಮಣ ದ್ವೇಷಾಗ್ನಿಯನ್ನು ಕಾರುವದಿಲ್ಲ, ಪ್ರತ್ಯೇಕತಾ ಕೊರಲನ್ನೆಬ್ಬಿಸುತ್ತಿಲ್ಲವಾದರೂ ಹಿಂದಿ ಸಂಪರ್ಕ ಭಾಷೆ ಆಗುವದಕ್ಕೆ ಅದು ಅಡ್ಡ ಬರುತ್ತದೆ. ಅದಕ್ಕೆ ವಿರುದ್ಧ ರೀತಿಯಲ್ಲಿ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿರುವ ಕಾಂಗ್ರೆಸ್ಸೇತರ ಸಂಯುಕ್ತ ಮಂತ್ರಿಮಂಡಲವು ಹಿಂದಿ ಸಂಪರ್ಕ ಭಾಷೆಯಾಗಬೇಕೆಂದು ಹಟ ಹಿಡಿಯುತ್ತದೆ.ಈಮೂರು ಹಣ್ಣುಗಳನ್ನು ಭಾಷಾತಿದ್ದುಪಡಿಯ ಒಂದೇ ಕಲ್ಲನಲ್ಲಿ ಉರುಳಿಸಿ ಬಿಡಲು ಕಾಂಗ್ರೆಸ್ ಕಾಯುತ್ತಿದೆ. ಆದುದರಿಂದಲೇ ಮದರಾಸು, ಉತ್ತರ ಪ್ರದೇಶ ಮತ್ತುಮಧ್ಯಪ್ರದೇಶಗಳಲ್ಲಿ ಕಾಂಗ್ರೆಸ್ಸಿಗರೇ ವಿದ್ಯಾರ್ಥಿಗಳನ್ನೆತ್ತಿ ಕಟ್ಟಿದ್ದಾರೆ. ಭಾಷಾಂಧರಿಗೆ ಏನೂ ಹೊಳೆಯುವದಿಲ್ಲ. ವಿದ್ಯಾರ್ಥಿಗಳಿಗಂತೂ ವಿಶೇಷ ಚಟುವಟಿಕೆ ಬೇಕಾಗಿರುತ್ತದೆ. ಈ ಸಲದ ಭಾಷಾ ಬಡಿದಾಟದಲ್ಲಿ ಗಲಭೆಕೋರರು ಬೆಂಬೂರಿನ ಬಳಿ ಕೊಚ್ಚಿನ್ ಮಯಲಿಗೆ ಬೆಂಕಿ ಕೊಟ್ಟು ಸುಟ್ಟಾಗ, ಅಲ್ಲಿಗೆ ಕಾಮಗಾರಿ ಮಂತ್ರಿ ವಿರುಕರುಣಾನಿಧಿಯವರು ಬಂದಿದ್ದು 'ಏತಕ್ಕೆ ಸುಟ್ಟರೆಂದು ಕೇಳಿದಾಗ ಅವರ ಮೇಲೆಯೇ ಕಲ್ಲುಗಳು ಬಿದ್ದವೆನ್ನಲಾಗುತ್ತಿದೆ. ಇದರಲ್ಲಿ ಯಾರ ಕೈವಾಡ ಇರಬಹುದು? ದೇಶದಾದಂಯ್ಯ ಗಲಭೆ ನಡೆಸಿ, ದಂಗೆ ಎಬ್ಬಿಸಿ ಅಧಿಕಾರ ಪಡೆದು ಬೇಕೆಂದು ಕಮ್ಯೂನಿಸ್ಟರು ಹವಣಿಸುತ್ತಿರುವರಾದಲ್ಲಿ;ಕಾಂಗ್ರೆಸ್ಸೇತರ ಮಂತ್ರಿ ಮಂಡಲಗಳನ್ನು ಮಣ್ಣುಮುಕ್ಕಿಸಲು ಕಾಂಗ್ರೆಸ್ಸ್ ಕಾರ್ಯಪ್ರವೃತ್ತವಾಗಿದೆ.ಇದೆಲ್ಲವೂ ಪ್ರಜಾಪ್ರಭುತ್ವದ ಹೆಸರನಲ್ಲೇ ನಡೆಯುತ್ತಿದೆ!

ಪ್ರಜಾಪ್ರಭುತ್ವದ ಪ್ರಯೋಗಾಲಯದಲ್ಲಿಂದು ಪ್ರಮುಖ ಪ್ರಯೋಗಗಳು ನಡೆಯುತ್ತಿವೆ? ಇದರಲ್ಲಿ ಪ್ರತಿಯೋರ್ವ ಪ್ರಜೆಯ ಭಾಗವೂ ಇದೆ. ನಮ್ಮ ನೆಚ್ಚಿನ ತಾಯ್ನಾಡಿನಲ್ಲಿ ಪ್ರಜಾಪ್ರಭುತ್ವ ಉಳಿಯಬೇಕೇ? ಪ್ರಜಾಪ್ರಭುತ್ವ ನಮಗೇನೂ ಹೊಸತಲ್ಲವದಿಲ್ಲ. ಇದು ಗಣಪತಿಯ ದೇಶವಿದೆ. ಪೂಜೆಯಲ್ಲಿ ಮೊತ್ತ ಮೊದಲು ಗಜವದನ ಶ್ರೀ ಗಣಪತಿಗೇನೇ ಪೂಜೆ ನಡೆಯುತ್ತದೆ. ಅವನೇ ಇಂದಿನ ಗಣರಾಜ್ಯವನ್ನೂ ರಕ್ಷಿಸಬೇಕು. ಅದಕ್ಕಾಗಿ ಅವನ ಬಳಿ ನಾವು ಪ್ರಾರ್ಥಿಸಬಹುದು. ಅಲ್ಲದೆ ಶ್ರೀ ಸುಭಾಷ್‌ಬಾಬು, ಸ್ವಾಮಿ ವಿವೇಕಾನಂದ ಹಾಗೂ ಶ್ರೀ ಲಾಲಾಲಜಪತರಾಯ್ ಮುಂತಾದ ಧೀರರು, ವೀರರು ಹುಟ್ಟು ಹಬ್ಬವನ್ನಾಚರಿಸುತ್ತ ಉತ್ಸಾಹ ಪಡೆಯುತ್ತ ಅಗ್ಗದ ರಾಜಕೀಯದಿಂದ ಮೇಲೆದ್ದು ಸಗ್ಗ ಭಾರತವು ನ್ಯಾಗಿ ಪವಿತ್ರ ಭಾರತದ ನಾಡನ್ನು ಮಾಡಲು ಒಂದಾಗ ಬೇಕಾಗಿರುತ್ತದೆ. ಇಲ್ಲವಾದಲ್ಲಿ, ಇಂದು ಪ್ರಜಾಪ್ರಭುತ್ವದ ದಿನಾಚರಣೆ ಇರುವಂತೆ ಏಕಾದಶಿಯೂ ಇದೆ, ಮುಂದಕ್ಕೆ ಎಂದೆಂದೂ ಪ್ರಜಾಪ್ರಭುತ್ವಕ್ಕೆನೇ ಏಕಾದಶಿ ಬಂದೀತು.

ನಗೆ ಬಿಂದು

ಹಾಗಾದರೆ ಇದು

ತಂದೆ—"ಮಗನೆ! ಒಮ್ಮೆ ಧಾರವಾಡ (ರೇಡಿಯೋ) ಹಿನ್ ಮಾಡು...."

ಮಗ—"ಕರೆಂಟ್ ಇಲ್ಲವ್ವಾ..."

"ಹಾಗಾದರೆ ಬೆಂಗಳೂರು ಆದೀತು. ಅಲ್ಲಿ ಕರೆಂಟ್ ಇರಬಹುದು..."

o o o

ಎಂಪ್ಲೋಯ್‌ಮೆಂಟಿಗೆ ಯೋಗ್ಯತೆ

ಒಬ್ಬ—"ಸಾರ್! ನಾನು ತಲೆಯಿಂದಲೇ ಜೀವಿಸುವವನು....ಸಾಹಿತಿ....ಕವಿ.. ಯಾವುದಾದರೂ ಒಂದು ಒಳ್ಳೆ ಉದ್ಯೋಗ ಬೇಕು....'

ಇನ್ನೊಬ್ಬ—"ಸಾರ್! ನಾನೂ ತಲೆಯಿಂದಲೇ ಜೀವನ ನಡೆಸುವವ..."

ಅಧಿಕಾರಿ— "ಸಾಹಿತಿಯೋ? ಕವಿಯೋ?"

"ಅಲ್ಲ; ಬಾರ್ಬರ್...."

o o o

ಸುಲಭ ಉಪಾಯ

ವೈದ್ಯ—"ನಿಮಗೆ ಈ ಉಬ್ಬಸ ಬಾಧಿಸಿ ಎಷ್ಟು ಸಮಯವಾಯ್ತು?

ರೋಗಿ—"ಈ ಇಳಿ ವಯಸ್ಸಿನಲ್ಲಿ ನಿಮ್ಮ ಪ್ರಶ್ನೆಗೆ ನಿರ್ದಿಷ್ಟವೂ ಸ್ಪಷ್ಟವೂ ಆದ ಉತ್ತರ ಕೊಡುವುದು ಕಷ್ಟ...ಉಬ್ಬಸವರಿದಿದ್ದ ದಿನಗಳೇ ಕಡಿಮೆ, ತಿಂಗಳುಗಳೂ ವರ್ಷಗಳೂ ತೀರಾ ಕಡಿಮೆ..."

ಎಚ್. ಎಂ. ವಿಜಯನಾರಾಯಣ

ಶ್ರೀ ಕುಲಶೇಖರ ಆಳ್ವಾರ್ - ಅವರ ಭಕ್ತಿಗೀತೆಗಳು

(ಹಿನ್ನೆರೆಡನೇ ಪುಟದಿಂದ)

ಕೃತಾಕೃತಿರಿಯಂ ಕುಲಶೇಖರೇಣ"ಎಂಬ ಸ್ತೋತ್ರದ ಕೊನೆಯ ಶ್ಲೋಕವೇ ಸಾಕ್ಷಿ. ಈ ಆಳ್ವಾರರಿಗೆ ಪದ ಮತ್ತು ಶರಣಿಬ ಇಬ್ಬರು ಸ್ನೇಹಿತರಿದ್ದಂತೆಯೂ ಇವರು ಉತ್ತಮ ಕವಿಗಳೂ, ಬ್ರಾಹ್ಮಣೋತ್ತಮರೂ, ಮಿತ್ರರೂ ಆಗಿದ್ದರೆಂದು 'ಕವಿಲೋಕವೀಕಾ ಮಿತ್ರೇ ದ್ವಿಜ ನ್ಮವರ ಪದ್ಮತರೌ' ಎಂದು ಆಳ್ವಾರರೇ ಹೊಗಳಿರುವರು. ಇದರಿಂದ ಇವರೂ ಕಲವು ಸಂಸ್ಕೃತ ಅಥವಾ ತಮಿಳು ಕವಿತೆಗಳನ್ನು ಬರೆದಿರಬಹುದಲ್ಲದೆ, ಮುಕುಂದಮಾಲಾ ಸ್ತೋತ್ರದಲ್ಲೂ ಈ ಮಿತ್ರರಿಬ್ಬರ ಕೈವಾಡವಿದೆಯೇ ಎಂಬ ಸಂದೇಹ ತೋರುತ್ತದೆ.

ಶ್ರೀ ಎನ್. ರುದ್ರಪತಿ, ಎಂ. ಎ. ಅವರು ತಮಿಳು ಪಾರ್ ಎಂಬ ತಮ್ಮ ಗ್ರಂಥದಲ್ಲಿ—"ಕುಲಶೇಖರ ಆಳ್ವಾರರು ಚೇರ ದೇಶದ ರಾಜರು. ಇವರ ಕಾಲ ಎಂಟನೆಯ ಶತಮಾನ. ಇವರಿಗೆ ಶ್ರೀರಂಗದ ರಂಗನಾಥನಲ್ಲಿ ವಿಶೇಷ ಭಕ್ತಿ ಇತ್ತು. ಕೊನೆಗೆ ಇವರು ಲೌಕಿಕ ವ್ಯವಹಾರಗಳಲ್ಲಿ ಅನಾಸಕ್ತರಾಗಿ ರಂಗನಾಥನ ಸೇವೆಯಲ್ಲೇ ಇದ್ದು ಭಕ್ತವೃಂದದಲ್ಲೇ ಕಾಲಕಳೆಯ ತೊಡಗಿದರು. ಇವರಿಗೆ ರಾಮಾಯಣ ಶ್ರವಣದಲ್ಲಿ ತುಂಬಾ ಶ್ರದ್ಧೆ ಇತ್ತು. ಇವರು ತಮ್ಮ ಕೊನೆಯ ಕಾಲದಲ್ಲಿ ರಂಗನಾಥನ ಸೇವೆಯಲ್ಲೇ ತತ್ಪರರಾಗಿದ್ದು ಅತನಲ್ಲೇ ಐಕ್ಯರಾದರು. ಇವರ ಪೂರ್ವದ ಪಾಶುರಗಳಿಗೆ ಪೆರುಮಾಳ್ ತಿರುಮೊಳಿ ಎಂಬ ಹೆಸರು ಬಂದಿದೆ' ಎಂದಿದ್ದಾರೆ. ತಮಿಳು ಸಾಹಿತ್ಯದ ಕುರಿತು ಬರೆದ ಶ್ರೀ ಎನ್. ಅನಂತರಂಗಾಚಾರ್ಯರು— 'ಇವರು ವೈಷ್ಣವ ಆಳ್ವಾರುಗಳು. ಸರಳ ಭಕ್ತರು. ದಾರ್ಶನಿಕರಲ್ಲ....ಇವರು ಪೆರುಮಾಳ್ ತಿರುಮೊಳಿ ಎಂಬ ನೂರ ಎಂಬತ್ತು ಮೂರು ಪಾಶುರಗಳ ಪ್ರಬಂಧವನ್ನು ರಚಿಸಿದ್ದಾರೆ' ಎನ್ನುತ್ತಾರೆ. ಶ್ರೀ ಜಿ. ಪಿ. ರಾಜರತ್ನಂ— ಇವರು "ತಮಿಳುನಾಡಿನ ಚೇರಗಡ ಅಸ್ತ್ರ ಪ್ರಜಾಂದಲ್ಲಿರದ ಪೆರುಮಾಳ್ ತಿರುಮೊಳಿ ಎಂಬ ಮುನ್ನೂರು ಪದ್ಯಗಳಲ್ಲಿ ಭಗವಂತನ ಬಗೆಗೆ ಅವರು ಬೆಳೆಸಿಕೊಂಡಿದ್ದ ಹಂಬಲದ ಪರಾಮಾವಧಿಯನ್ನು ಕಾಣಬಹುದು' ಎಂದಿದ್ದಾರೆ. ಇಲ್ಲಿ ಪಾಶುರಗಳ ಸಂಖ್ಯೆಯನ್ನು ಮೂವತ್ತು ಮೂರು ವಿಧವಾಗಿ ಹೇಳಿದ್ದಾರೆ!

ಕುಲಶೇಖರ ಆಳ್ವಾರರಿಗೆ ಭಕ್ತಿಗೆ ತಕ್ಕ ಜ್ಞಾನ, ಜ್ಞಾನಕ್ಕೆ ತಕ್ಕ ವೈರಾಗ್ಯ ವಿತ್ತು. ಇತರರಿಗೆ ತಮಿಳಲ್ಲಿ ಪಾಂಡಿತ್ಯ ವಿದ್ದಂತೆ ಸಂಸ್ಕೃತ ಸಾಹಿತ್ಯದಲ್ಲೂ ಪ್ರಭುತ್ವವಿತ್ತೆಂಬುದಕ್ಕೆ ಇವರ ಮುಕುಂದಮಾಲಾ ಸ್ತೋತ್ರವೇ ಸಾಕ್ಷಿಯಲ್ಲಿದೆ. ವೈಷ್ಣವ ಸ್ತೋತ್ರಗಳಲ್ಲಿ ಮುಕುಂದಮಾಲಗೆ ಅಗ್ರಾಸನವಿದೆ. ಇದು ಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುವುದು. ವೈಷ್ಣವ ಸ್ತೋತ್ರಗಳಾದ ಜಯದೇವ ಕವಿಯ ಗೀತಗೋವಿಂದ, ಲೀಲಾಶುಕನ ಶ್ರೀಕೃಷ್ಣ ಕರ್ಣಾಮೃತ, ಶ್ರೀಕೃಷ್ಣ ಚೈತನ್ಯನ ಜಗನ್ನಾಥ ಸ್ತೋತ್ರ ಮತ್ತು ಕುಲಶೇಖರ ಆಳ್ವಾರರ ಮುಕುಂದಮಾಲೆ, ಪುಷ್ಪದಂತನ ಮಹಿಮ್ನ ಸ್ತೋತ್ರ, ಮೂಕಕವಿಯ ಪಂಚಶತಿ, ಶ್ರೀ ಶಂಕರಾಚಾರ್ಯರ ಸೌಂದರ್ಯಲಹರಿ ಮತ್ತು ಶಿಗಾನಂದ ಲಹರಿ, ವೇದಾಂತದೇಶಿಕರ ಲಕ್ಷ್ಮೀಸಹಸ್ರ, ಜಗನ್ನಾಥ ಪಂಡಿತನ ಗಂಗಾಲಹರಿ, ಶ್ರೀ ವಿದ್ಯಾರಣ್ಯರ ದೇವ್ಯಪರಾಧಕ್ಷಮಾಪಣ ಸ್ತೋತ್ರ, ಶ್ರೀ ವಾಸಿಷ್ಠ ಗಣಪತಿ ಶಾಸ್ತ್ರಿಗಳ ಶ್ರೀಕೃಷ್ಣಾಕ್ಷರ ಮಾಲಿಕಾ ಮತ್ತು ಶ್ರೀ ತಾರಕ ರಾಮನಾಮ ಸ್ತುತಿಗಳೂ ಸಮಾನ ತೂಕದವು. ಇವುಗಳೆಲ್ಲಾ ಭಕ್ತಿಸಾಹಿತ್ಯದ ಪ್ರಧಾನ ಗ್ರಂಥಗಳು. ಇವೆಲ್ಲಾ ಆಧ್ಯಾತ್ಮ ಪ್ರಪಂಚದಲ್ಲಿ ಬೆಲೆಬಾಳತಕ್ಕವು.

— ೨ —

ಶ್ರೀ ಪೆರುಮಾಳ್ ತಿರುಮೊಳಿಯು ಕುಲಶೇಖರ ಆಳ್ವಾರರ ದೈವಿಕ ಪ್ರೇಮವನ್ನು ಬಯಲಿಗಿಡುವ ಗ್ರಂಥ. ಆಳ್ವಾರರು ಭಗವಂತನನ್ನು ಎಂದು ನೋಡುವೆನೋ ಎಂಬ ಕಾತರದಲ್ಲಿದ್ದಾಗ, ಮಿಂಚಿ ಮಾಯವಾದ ಭಗವಂತನ ವಿರಹದಿಂದ ದಹಿಸುತ್ತಿರುವಾಗ, ಅತನ ದರ್ಶನಾನಂದದಲ್ಲಿ ಮೈಮರೆತಾಗ, ಜನಗಿದ ಆನಂದ ಲಹರಿಯೇ ಈ ಭಕ್ತಿಗೀತೆಗಳು—ಪಾಶುರಗಳು; ಇವೆಲ್ಲಾ ಹೃದಯಂಗಮವಾಗಿ ಮಾರ್ಮಿಕವಾಗಿವೆ.

'ನೀನು ನನ್ನನ್ನು ಉದ್ಧಾರ ಮಾಡದಿದ್ದರೆ ನಾನು ದುಃಖಪಡುವೆ. ಈಭಾಗವೇನೂ ನನಗೆ ಹೊಸದಲ್ಲ. ಆದರೆ ನಿನ್ನಲ್ಲಿ ಶರಣಾಗತನಾದವನೊಬ್ಬನು ಸೋತನೆಂದರೆ ನಿನಗೇ ಅಪಖ್ಯಾತಿ' ಎಂದು ಯಾಮುನಾಚಾರ್ಯರು ದೇವರನ್ನು ಕಾಡಿದಂತೆಯೂ, 'ದೇವರು ನನ್ನನ್ನು ಆಲಿಂಗಿಸಲಿ ಅಥವಾ ಅಜೆಗೆ ದೊಬ್ಬಲಿ, ಹಿಡಿದುಕೊಂಡು ಹೊಡೆಯಲಿ ಅಥವಾ ಬಿಡಿಯಲಿ—ಅವನೇ ನನ್ನ ಪ್ರಾಣನಾಥ. ನನಗೆ ಇನ್ನಾರೂ ಗತಿ ಇಲ್ಲ' ಎಂದು ಗೋಳಿಟ್ಟ ಭಕ್ತಾಗ್ರಣಿ ಶ್ರೀ ಚೈತನ್ಯರಂತೆಯೂ ಆಳ್ವಾರರ ಹೃದಯದ ಭಕ್ತಿ ಪ್ರಪತ್ತಿಗಳು ಹಲವು ಭಾವಗೀತೆಗಳಾಗಿ ಮಾನವ ಉದ್ಧಾರಕ್ಕಾಗಿಯೇ ಹೊರ ಹೊಮ್ಮಿದುವು. ಆ ಗೀತೆಗಳು ಮಾನವರ ಭಕ್ತಿ ದಾರಿದ್ರ್ಯವನ್ನು ಹೋಗಲಾಡಿಸಬಲ್ಲುವು; ಭವರೋಗವನ್ನು ಪರಿಹರಿಸಬಲ್ಲುವು. ಈ ಗೀತೆಗಳಲ್ಲಿ ಭಗವಂತನಿಗೆ ಸಂಬಂಧಪಟ್ಟ ಹಲವು ಭಾವಗಳಿವೆ; ಹಲವು ರಸಗಳಿವೆ; ತತ್ತ್ವಗಳ ಹಲವು ದೃಷ್ಟಿಗಳು ಇಲ್ಲಿ ಸಂಗಮವಾಗಿವೆ!

ಆಳ್ವಾರರು ರಾಜರಾಗಿದ್ದೂ ಲೌಕಿಕ ಸುಖ ಸಂಪತ್ತುಗಳನ್ನೆಲ್ಲಾ ಒಂದು ಹುಲ್ಲುಕಡ್ಡಿಗಿಂತ ಕಡಿಮೆಯೆಂದು ಭಾವಿಸಿದ್ದರು. 'ಆಕಾಶವನ್ನು ಬೆಳಗುವ ಚಂದ್ರನಂತೆ ಬೆಳುಪಾಗಿರುವ ಈ ಬೆಳ್ಗೊಡೆಯು ನೆಲಲ್ಲಿ ಅಟ್ಟಹಾಸದಿಂದ ಕುಳಿತು, ಚಕ್ರವರ್ತಿಯಾಗಿ ಆಳುವ ರಾಜನ ಸಂಪತ್ತನ್ನು ನಾನೆಂದೂ ಸಂಪತ್ತೆಂದು ಭಾವಿಸಲಾರ. ಲೌಕಿಕರು ಬಾವಿ ನೀರು ಸುಂಸುವ್ಯಐಶ್ವರ್ಯವು ನನಗೆ ಕುರುಬು ಕವಡೆಗಿಂತ ಕಡಿಮೆ ಬೆಲೆಯದು. ಈ ಸಂಪತ್ತಿಗಿಂತ ತಿರುವೇಂಗಡದ ಬೆಟ್ಟಗಳಲ್ಲಿ ಹುಚ್ಚುಹೂ ನಲಾಗಿ ಹರಿಯುವ ಕಾಡು ಹೊಳೆಯೇ ಲೇಸು. ಇದನ್ನೇ ಭಗವಂತನು ನನಗೆ ಅನುಗ್ರಹಿಸಲಿ', ಆಳ್ವಾರರ ಈ ಉದಾತ್ತ ಧ್ಯೇಯವು ಅಧ್ಯಾತ್ಮ ಮಾರ್ಗದಲ್ಲಿ ಅದರ್ಶವಾದುದು. ಅವರು ರಂಗನಾಥನನ್ನು ಎಂದೂ ಮರೆಯಲಾರರು. ಅವನ ಪ್ರಸನ್ನತೆಗಾಗಿಯೇ ಅವರ ಬದುಕು. ಅತನ ಚರಣಾಸ್ಪೃಷ್ಟಕ್ಕಾಗಿಯೇ ಅವರು ಸದಾಹಾತೊರೆಯುತ್ತಿರುವವರು. "ದೇವನು ಸುಖಗಳನ್ನೂ ದುಃಖಗಳನ್ನೂ ಕೊಡಲು ಶಕ್ತನು; ಅವನೊಡನೆ ಅವುಗಳನ್ನು ಪರಿಹರಿಸುವ ಬೇಗದ ಕೈಯೂ ಇದೆ. ದೇವಾ, ಅದಕ್ಕಾಗಿ ನಿನ್ನ ಪಾದಗಳೇ ನನಗೆ ಶರಣು. ಹೆತ್ತ ತಾಯಿಯು ಮಗುವನ್ನು ನೂಕಿದರೂ, ಮಗುವು ತನ್ನ ತಾಯಿಯನ್ನು ಬಿಟ್ಟು ಹೋಗುವುದುಂಟೆ?'

ಆಳ್ವಾರರು ದೇವ ದೇವನ ದೋಷಗಳನ್ನು ಎತ್ತಿ ಹೇಳಲಾರರು, ಅತನ ಕರುಣೆಯನ್ನು ನೆನಪಿಸಿಕೊಂಡಾಗಲೆಲ್ಲಾ ಅವರು ರೋಮಾಂಚನಗೊಳ್ಳುವರು. ಅತನು ಅವರ ಪ್ರಾಣೇಶ್ವರ, ಅವರು ಅವನ ಸಹಧರ್ಮಿಣಿ. ಗಂಡನು ಕಂಡವರೊಡನೆ ವ್ಯವಹರಿಸಿ ಹಳಿಯುವ ಹೊಗಳುವ ಕಾರ್ಯ ಮಾಡಿದರೂ, ಅವರು ಬೇರೊಬ್ಬನನ್ನು ಹಳಿಯುವುದಿರಲಿ—ಅತನ ವ್ಯವಹಾರಗಳನ್ನೂ ಮನಸ್ಸಿಗೆ ತಾರರು. ಅವರು ಭಾರತ ಸಂಸ್ಕೃತಿಯ ಕುಲಸ್ತ್ರೀ. ಗಂಡನು ಕೈ ಬಿಟ್ಟರೂ ಅತನ ಧ್ಯಾನವನ್ನು ಬಿಡದ ಶ್ರೀ ಸೀತಾದೇವಿಯೇ ಆಳ್ವಾರರು!

ಪರಮಾತ್ಮನು ಭವರೋಗಕ್ಕೆ ಮಹಾವೈದ್ಯ. ವೈದ್ಯನು ರೋಗಿಯ ಆರೋಗ್ಯ ಲಾಭಕ್ಕಾಗಿ ಅತನನ್ನು ಕತ್ತರಿಸಿ ಚುಚ್ಚಿ ಹಿಂಸೆ ಕೊಟ್ಟರೂ ರೋಗಿಯು ವೈದ್ಯನನ್ನೆಂದೂ ಮರೆಯಲಾರ, ಹಾಗೆಯೇ ಪ್ರಜಾಬಾಲನು ಆಳ್ವಾರರನ್ನು ಎಡೆಬಿಡದೆ ಗೋಳುಬಿಸಿದರೂ ಅವರು ಎಂದೂ ಅತನ ಕರುಣಾ ಕಟಾಕ್ಷವನ್ನು ಮರೆಯಲಾರರು. ಮಳೆ ಹೊಯ್ಯುವುದನ್ನು ನೋಡಗಳು ಅನೇಕಕಾಲ ಮರೆತಿದ್ದರೂ, ಹೆಣ್ಣನೆಯ ಗಿಡ ಮರಗಳು ಮರೆಯಲಾರವಲ್ಲ? ಅವು ಕತ್ತೆತ್ತಿ ಮೋಡಗಳನ್ನು ನೋಡುತ್ತಿರುವಂತೆಯೇ ಆಳ್ವಾರರು ಘನಶ್ಯಾಮನ ಕಡೆಗೇ ನೋಡುತ್ತಿದ್ದಾರೆ; ಅವನ ದರ್ಶನಕ್ಕಾಗಿ ಅವರ ಹೃದಯವು ಸದಾ ತುಡಿದುಕೊಳ್ಳುತ್ತಿದೆ!

'ನದಿಗಳಲ್ಲಾ ಕಂಡ ಕಡೆಗೆ ಹರಿದರೂ ಕೊನೆಗೆ ಸಾಗರವನ್ನೇ ಸೇರುವಂತೆ ನನ್ನ (ಆಳ್ವಾರರ) ಮನಸ್ಸು ಎಲ್ಲೆಲ್ಲಿ ಅಲೆದರೂ ಕಡೆಗೆ ಸಚ್ಚಿದಾನಂದನಲ್ಲಿ ಐಕ್ಯವಾಗುವ ರಸ ನಿಮಿಷವನ್ನೇ ಕಾಯ್ದಿರುವುದು'.

ಕುಲಶೇಖರ ಆಳ್ವಾರರಿಗೆ ಶ್ರೀರಂಗಮಹಾಕ್ಷೇತ್ರ ತ್ಯಾಗವಾದ ಸುಂದರ ಸನ್ನಿವೇಶವು ರೋಮಾಂಚಕಾರಿಯವಾದುದು. ಈ ಪುಣ್ಯದಿನದ ಅನಂತರವೇ ಅವರು ಮಧುರೆಯ ಸುಂದರ ರಾಜ್ಯ ಪೆರುಮಾಳ್ ದೇವಾಲಯವನ್ನು ಶ್ರೀ ಮದ್ವಾಮಾಯಣದ ಶಿಲ್ಪಚಿತ್ರಗಳಿಂದ ಅಲಂಕರಿಸಿದರೆಂದು ಹೇಳುತ್ತಾರೆ. ಅವರು ಶ್ರವಣಭಕ್ತಿಗೆ ಆದರ್ಶರು. ಇವರು [illegible] ಬಾಲ ಸೆಗಳ ಮೂಲಕ ಶ್ರೀರಾಮಚಂದ್ರನ ಅನನ್ಯ ಭಕ್ತರಾಗಿಯೇ ಇದ್ದರು. ಒಂದು ದಿನ ಪುರಾಣಿಕರೊಬ್ಬರು ಶ್ರೀಮದ್ರಾಮಾಯಣವನ್ನು ವಾಚನ ಮಾಡುತ್ತಿದ್ದಾಗ ರಾವಣನಿಂದ ಸೀತಾಪಹರಣವನ್ನು ವಿವರಿಸತೊಡಗಿದರು. ದುಷ್ಟಾತ್ಮ ರಾವಣನು ಸೀತಾದೇವಿಯು ಗೋಳಿಡುತ್ತಿದ್ದರೂ ದಮನಿಸದೆ ಬಲಾತ್ಕಾರದಿಂದ ಆಕೆಯನ್ನು ಹೊತ್ತುಕೊಂಡು ನಡೆದುಬಿಟ್ಟನು. ತನ್ನೆಯರಾಗಿ ಕೇಳುತ್ತಿದ್ದ ಆಳ್ವಾರರ ಕವಿಗೆ ಈ ಮಾತು ಬಿದ್ದೊಡನೆ ಅವರ ಕಣ್ಣುಗಳು ಕೆಂಪಾಯಿತು. ಹುಬ್ಬುಗಳು ಕುಡಿಯತೊಡಗಿದುವು; ದೇಹವು ಆವೇಶದಿಂದ ಕಂಪಿಸತೊಡಗಿತು. "ದುಷ್ಟಧೂರ್ತ ರಾವಣನು ಸೀತಾಮಾತೆಯನ್ನು ಅಪಹರಿಸಿಕೊಂಡು ಹೋದನೆ? ನಾನಿನ್ನೂ ಜೀವಿಸಿರುವಾಗ ನಮ್ಮ ಕುಲದೇವತೆಯಾದ ಆ ಲೋಕಮಾತೆಯನ್ನು ರಾವಣನು ಕದ್ದೊಯ್ದನೆ? ಈ ಕ್ಷಣದಲ್ಲೇ ಅವನನ್ನು ಹಿಡಿದು ಬಡಿದು ಕಡಿದು ನನ್ನ ತಾಯಿಯನ್ನು ಸಂತೈಸಿ ಶ್ರೀರಾಮರ ಬಳಿಗೆ ಕರೆದು ತಂದು ಬಿಡುವೆನು." ಎಂದು ಕುದುರೆಯನ್ನು ಏರಿ ಖಡ್ಗವನ್ನು ಝಳಪಿಸುತ್ತಾ ಕಲ್ಲು ಮುಳ್ಳುಗಳನ್ನೂ, ಗುಡ್ಡಕಾಡುಗಳನ್ನೂ ನೋಡದೆ ಸರಳರೇಖಾಕೃತಿಯಲ್ಲಿ ಮುಂದೆ ಮುಗ್ಗಿ ಬರುತ್ತಿರುವಾಗ ದಾರಿಯಲ್ಲಿ ಹೆದ್ದೆರೆಗಳ ಸಮುದ್ರ ಸಿಕ್ಕಿತು. ಆಗ ಆವೇಶದಲ್ಲಿ ಮೈಮರೆತ ಆಳ್ವಾರರಿಗೆ ನೀರಿನ ಮೇಲೆ ಕುದುರೆ ಓಡಲಾರದೆಂಬ ಭಾವವೂ ಉಳಿದಿರಲಿಲ್ಲ! ಅವರು ಏಕಪ್ರಕಾರವಾಗಿ ಸಮುದ್ರದ ಮೇಲೆ ಸಾಗುತ್ತಿರುವಾಗ ಶ್ರೀರಾಮಚಂದ್ರನು ಸೀತಾ ಲಕ್ಷ್ಮಣ ಸಮೇತನಾಗಿ ತಾನೇ ಅವರಿಗೆ ಇದಿರಾಗಿ ಬಂದು, ಸೀತೆಯನ್ನು ಬಿಡಿಸಿಕೊಂಡು ಖಂಡ ವಿಜಯವನ್ನು ಹೇಳಿ ಆಳ್ವಾರರನ್ನು ಸಮಾಧಾನಮಾಡಲು, ಅವರು ತಮ್ಮ ಪ್ರೇಮ ಮೂರ್ತಿಗೆ ಬಂದಿದ್ದ ಕಷ್ಟಗಳನ್ನು ನೆನೆದು ಬಿಕ್ಕಿಬಿಕ್ಕಿ ಅಳಲು, ಶ್ರೀರಾಮಚಂದ್ರ ಮತ್ತು ಸೀತಾಮಾತೆಯು, ''ವತ್ಸಾ, ಅಧೀರನಾಗಬೇಡ' ಎಂದು ಭಕ್ತಶ್ರೇಷ್ಠರಾದ ಆಳ್ವಾರನನ್ನು ಆಲಿಂಗಿಸಿ ಸಮಾಧಾನ ಮಾಡಿ ಅದೃಶ್ಯರಾದರು. ಆಳ್ವಾರರು ಶ್ರೀ ಸೀತಾರಾಮರ ಕಾರುಣ್ಯವನ್ನು ನೆನೆಯುತ್ತಾ ಕೃತಕೃತ್ಯರಾಗಿ ಹೊಂಪುಳಿ ಹೋಗುತ್ತಾ ಊರಿಗೆ ಹಿಂತಿರುಗಿದರು. ನಿಜವಾಗಿಯೂ ಅವರು ಪರಾಭಕ್ತಿಯ ಆತ್ಯುಚ್ಚ ಪ್ರತೀಕ!

— ೩ —

ಶ್ರೀ ಮುಕುಂದ ಮಾಲೆಯೆಂಬ ಸ್ತೋತ್ರ ಕುಸುಮಾಂಜಲಿಯನ್ನು ಆಳ್ವಾರರೇ ಸಂಸ್ಕೃತ ಭಾಷೆಯಲ್ಲಿ ಬರೆದು ಶ್ಯಾಮಸುಂದರನಿಗೆ ಅರ್ಪಿಸಿದರೆಂದು ಅಂಬುಜಾಕ್ಷ ಚರಣಾಂಬುಜ ಸಟ್ಟದೇವ ರಾಜ್ಞಾಕೃತಾಕೃತಿರಿಯಂ ಕುಲಶೇಖರೇಣ' 'ಶ್ರೀಕೃಷ್ಣನ ಪಾದಾರವಿಂದಗಳಿಗೆ ಭ್ರಮರದಂತಿರುವ ರಾಜನಾದ ಕುಲಶೇಖರನಿಂದ ಈ ಸ್ತೋತ್ರವು ರಚಿಸಲ್ಪಟ್ಟಿತು' ಎಂದು ಈ ಸ್ತೋತ್ರದ ಕೊನೆಗೆ ತಾವೇ ಹೇಳಿದ್ದಾರೆ. ಈ ಮಾಲೆಯ ಪುಷ್ಪಗಳೆಲ್ಲಾ ಅವರ ಹೃದಯದ ಭಕ್ತಿ, ಪ್ರೇಮದಲಾದ ದಿವ್ಯ ಭಾವಗಳ ಪರಾಗದಿಂದ ತುಂಬಿವೆ. ಈ ಸ್ತೋತ್ರದಲ್ಲಿ ಶ್ರೀಮದ್ಭಗವದ್ಗೀತೆಯ ಸಮಗ್ರ ಸಾರವನ್ನು ಸಂದರ್ಶಿಸಬಹುದು. ಗೀತೆಯ ಹದಿನೆಂಟು ಅಧ್ಯಾಯಗಳನ್ನು ನಿಶ್ಚವೂ ಮನನ ಮಾಡಲವಕಾಶವಿಲ್ಲದವರಿಗೆ ಮು

ಕುಂದಮಾಲಾ ಸ್ತೋತ್ರದ ಫಲವತ್ತು ಶ್ಲೋಕಗಳನ್ನು ಮನನಮಾಡುವುದರಿಂದ ಅದೇ ಮನಃಪ್ರಸಾದವು ಪ್ರಾಪ್ತವಾಗುತ್ತದೆ. ಕುಲಶೇಖರ ಆಳ್ವಾರರು ನಿಜವಾಗಿಯೂ ಪ್ರಾತಃಸ್ಮರಣೀಯರು.

ಶ್ರೀ ಮಾಳಿಂದ ಮೂಲೆಯಲ್ಲಿ ಆಳ್ವಾರರು ಭಗವಂತನನ್ನು ಸಂಬೋಧಿಸಿದ ಸಂಬೋಧನೆಗಳೆಲ್ಲಾ ಹೃದಯಹಾರಿಯಾದವುಗಳು. ಅತನು ಭವಲುಂಠನ ಕೋವಿದ, ಸಂತಾಪ್ತರ, ನಾರದಾದಿ ಮುನಿಬೃಂದವಂದಿತ; ಅತನ ಹಾಸವು ಶತ್ರುಚ್ಛೇದೈಕ ಮಂತ್ರ, ಸಕಲ ಮುನಿಸಮದಾಕ್ಷ್ಯ ಸಂಪೂಜ್ಯ ಮಂತ್ರ, ಸಂಸಾರೋತ್ತಾರ ಮಂತ್ರ, ಜನ್ಮ ಸಾಫಲ್ಯ ಮಂತ್ರ. ಅದು ವೈದ್ಯ ಶಾಸ್ತ್ರಕ್ಕೆ ಎಂದೆಂದೂ ಎಟುಕದ ವ್ಯಾಮೋಹ ಪ್ರಶಮೌಷಧವು, ಸಂಜೀವನೈಕೌಷಧವು, ಭಕ್ತರಿಗೆ ಅತ್ಯಂತಹಿತೌಷಧವು, ಸ್ತ್ರೀಯಃ ವ್ಯಾಪ್ತಿಕರೌಷಧವು. ಅದಕ್ಕಾಗಿಯೇ ನಾರಾಯಣನ ಪಾದಪಂಕಜಗಳಗೆನವುಸ್ಮರಿಸುತ್ತೇನೆ. ಅತನ ಆರಾಧನೆಯನ್ನು ಮಾಡುತ್ತೇನೆ. ಅವನ ಫಿರ್ಮಾಲ ನಾಮವನ್ನು ಸ್ಮರಿಸುತ್ತೇನೆ. ಮಾನವಶೀ, "ಇದಂ ಶರೀರಂ ಅವಶ್ಯಂ ಪತತಿ; ಕಿಮೌಷಧೈಃ ಕ್ಲಿಶ್ಯಸಿ? ನಿರಾಮಯಂ ಕೃಷ್ಣರ ಸಾಯನಂ ಪಿಬ' 'ಈ ಶರೀರವು ನಿಜವಾಗಿಯೂ ಬಿದ್ದು ಹೋಗುತ್ತದೆ. ಇದರ ರಕ್ಷಣೆಗಾಗಿ ಯಾಕೆ ಔಷಧಗಳಿಂದ ಕ್ಲೇಶ ಪಡುವೆ? ಶ್ರೀ ಕೃಷ್ಣ ರಸಾಯನವನ್ನು ಪಾನಮಾಡು' ನಿಜವಾಗಿಯೂ ಈ ಔಷಧದಿಂದ ಮರ್ತ್ಯನು ಅಮರ್ತ್ಯನಾಗುವನು.

ಮಾನವನ ಅಂತಃಶತ್ರುಗಳಲ್ಲಿ ಕಾಮವು ಪ್ರಬಲವಾದುದು. ದೈವಾನುಗ್ರಹ ಶಾಸ್ತ್ರಾರವಾದ ಮೇಲೂ ಇದರ ಒಂದಂಶ ಮನಸ್ಸಿನಲ್ಲಿ ಇದ್ದೇ ಇರುವುದೆಂದಿದ್ದಾರೆ ಭಗವಾನ್ ಶ್ರೀ ಶ್ರೀ ರಾಮಕೃಷ್ಣ ಪರಮಹಂಸರು. ಆದರೆ ಅದು ಅಗ ವಿಷದ ಹಲ್ಲು ಕಿತ್ತ ಹಾವಿನಂತಿರುತ್ತದಂತೆ. ಈ ಪ್ರಬಲ ಶತ್ರುವಿನಿಂದ ಶ್ರೀ ಕುಲಶೇಖರ ಆಳ್ವಾರರೂ ಭಾಧಿತರಾಗಿದ್ದಿರಬೇಕು. ಅವರು ಮಾನವನ್ನು ಸಂಬೋಧಿಸಿ ,ಎಲೈ ಮನ್ಮಥನೆ, ವಿಷಯಾಸಕ್ತರನ್ನು ಪೀಡಿಸುವಂತೆ ನನ್ನನ್ನು ಪೀಡಿಸಬೇಡ. ಈಶ್ವರನು ಮೊದಲೇ ತನ್ನ ಫಾಲ ನೇತ್ರದಿಂದ ನಿನ್ನನ್ನು ಕೃಶನನ್ನಾಗಿ ಮಾಡಿರುವನು. ಶ್ರೀಕೃಷ್ಣನ ಪಾದ ಕಮಲಗಳಿಗೆ ಆಶ್ರಯವಾದ ನನ್ನ ಮನಸ್ಸಿನಲ್ಲಿ ನೀನು ಪ್ರವೇಶಮಾಡಲು ಯತ್ನಿಸಿದರೆ ಆ ಗೋಪಾಲ ಚೂಡಾಮಣಿಯು ಚಕ್ರಾಯುಧನು ನಿನ್ನನ್ನು ನಿರ್ನಾಮ ಮಾಡುತ್ತದೆ' ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ನಿಜವಾಗಿಯೂ ರಾಮನಿದ್ದಲ್ಲಿ ಕಾಮನಿರಲಾರ.

ಶ್ರೀ ಆಳ್ವಾರರು ಭಗವಾನ್ ದೇವಕೀನಂದನನ್ನು ಸ್ಮರಿಸದ ವೇದಾಧ್ಯಯನವು ಆರಣ್ಯರೋದನ, ಯಜ್ಞಯಾಗಾದಿ ವೇದೋಕ್ತ ಕರ್ಮಾಚರಣೆಗಳು ಕೇವಲ ಶರೀರಶೋಷಣೆ; ಸಪ್ತಸಂತಾನ ರೂಪದಾದ ತಟಾಕಾದಿ ನಿರ್ಮಾಣ ಕಾರ್ಯಗಳು ಬೂದಿಯಲ್ಲಿ ಮಾಡಿದ ಹೋಮ, ಗಂಗಾದಿ ತೀರ್ಥಸ್ನಾನಗಳು ಗಜಸ್ನಾನ ಎಂದು ಘೋಷಿಸಿದ ಘೋಷಣೆಯು ಎಷ್ಟು ಅರ್ಥವತ್ತಾದುದು! ಎಲ್ಲಾ ಕರ್ಮಗಳ ಪ್ರಾಣವೇ ಭಗವನ್ನಾಮ! ಅದಕ್ಕಾಗಿ 'ನಾನಾ ಜ್ಞಾನಮಪಾಸ್ಯಚೇತಸಿ ಪರೋನಾರಾಯಣಾಯೇತ್ಯಮುಂ ಮಂತ್ರಂ ಸಪ್ರಣವಂ ಪ್ರಣಾಮ ಸಹಿತಂ ಪ್ರಾವರ್ತಯಧ್ವಂ ಮುಹುಃ' 'ಅಜ್ಞಾನವನ್ನು ಬಿಟ್ಟು ಮನಸ್ಸಿನಲ್ಲಿ 'ಓಂ ನಮೋ ನಾರಾಯಣಾಯ' ಎಂಬ ಮಂತ್ರವನ್ನು ಪ್ರಣಾಮ ಪುರಸ್ಸರವಾಗಿ ಪುನಃ ಪುನಃ ಆವರ್ತನ ಮಾಡಿರಿ' ಮಾನವರೇ, "ಜಿಹ್ವೇ ಕೀರ್ತಯ ಕೇಶವಂ, ಚೇತೋ ಭಜ ಮುರಾರಿಪುಂ, ಅಚ್ಯುತ ಕಥಾಃ ಶ್ರೋತ್ರದ್ವಯ ತ್ವಂ ಶೃಣು, ಮೂರ್ಧನ್ನ ಮೂಧೋಕ್ಷಜಮ್' 'ನಾಲಿಗೆಯೇ, ಕೇಶವನನ್ನು ಸದಾ ಕೊಂಡಾಡು, ಮನಸ್ಸೇ, ವಾಸುದೇವನನ್ನು ಯಾವಾಗಲೂ ಧ್ಯಾನಮಾಡು, ಕಿವಿಗಳೆ, ಅಚ್ಯುತನ ದಿವ್ಯ ಕಥೆಗಳನ್ನು ನಿತ್ಯ ಕೇಳಿರಿ. ಶಿರಸ್ಸೇ, ಲಕ್ಷ್ಮೀ ಮನೋಹರನಿಗೆ ಪುನಃ ಪುನಃ ಪ್ರಣಮಿಸುವುದು' ಆಗಲೇ ನಮ್ಮ ಜೀವನದ ಕಷ್ಟ ಕಾರ್ಪಣ್ಯಗಳೆಲ್ಲಾ ಪರಿಹಾರವಾಗುವುವು. ಅಗಾಧವೂ ದುಸ್ತರವೂ ನಿಸ್ತರೇಯವೂ ಆದ ಭವಜಲಧಿಯು 'ತಾವಕೀ ಭಕ್ತಿರೇಕಾ ತಾರಯಿಷ್ಯತ್ಯವಶ್ಯಂ' ನಿನ್ನ ಭಕ್ತಿಯೊಂದೇ ನನ್ನನ್ನು ಅವಶ್ಯವಾಗಿ ಸಂಸಾರ ಸಾಗರದಿಂದ ದಾಟಿಸುತ್ತದೆ. ಅದಕ್ಕಾಗಿ 'ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯ ಸ್ವನಾರಾಯಣಂ' 'ವೃಥಾ ಕಾಲಹರಣ ಮಾಡದೆ ಭಕ್ತಿಧ್ಯಾನಗಳಿಂದ ಶ್ರೀ ಹರಿಯನ್ನು ಸೇವಿಸಿರಿ'— ಇದೇ ಆಳ್ವಾರರ ಕೊನೆಯ ತೀರ್ಮಾನ!

'ಜನ್ಮ ಜನ್ಮಾಂತರೇಷಿ ತ್ವತ್ಪಾದಾಂಭೋರುಹಯುಗ ಗತಾ ನಿಶ್ಚಲಾ ಭಕ್ತಿರಸ್ತು'.

ಸರಿಸಮಾನತೆ

(ಹನ್ನೊಂದನೇ ಪುಟದಿಂದ)

ಣ ಅಂತಲೂ ಹೇಳುತ್ತಾರಷ್ಟೆ? ಹಾಗಿರುವಾಗ ಗಂಡನ ಹೆಸರಿಗೆ ಅಂಟಿಕೊಂಡ ಹಾಗೆ ಥಾಣಾ ಡಂಗುರಾ ಆಗಿ ಮೆರೆಯೋದನ್ನು ಲಜ್ಜೆಯುಳ್ಳ ಹೆಂಗಸರು ಒಪ್ಪಿಯಾರೇನೆ?"

'ನಿಮ್ಮದು ಹಳೇ ಕಾಲದ ರೀತಿಯ ಮಾತು; ಹೆಸರು ಪ್ರಕಟವಾದ ಕೂಡಲೇ ಅವಳು ಬೀದಿಗೆ ಬಿದ್ದಳೂಅಂತ ಅರ್ಥವೂ? ಲಗ್ನಪತ್ರಿಕೇಲಿ ಪ್ರಕಟಿಸುವುದಿಲ್ಲೇನು ವದುವಿನ ಹೆಸರನ್ನು? ಮದುವೇಲಿ ಬೀದಿ ಬೀದಿ ಮೆರವಣಿಗೆ ಹೋಗೋದಿಲ್ಲೇನು? ಆಗಹೋಗದಿರುವ ಲಜ್ಜೆ ಆ ಮೇಲೆ ಪ್ರಕಟವಾದಾಗ ಹೋಗುತ್ತದಂತೊ? ಕತೆಗಾರ್ತಿಯರು ಮಾತ್ರ ತಮ್ಮ ಹೆಸರಿನ ಹಿಂದೆ ತಮ್ಮ ಗಂಡನ ಹೆಸರನ್ನೂ ಹಾಕಿಕೊಳ್ಳುವಾಗ...."

"ತಡಿತಡೀ. ಹೆಣ್ಣು ಲೇಖಕರು ಯಾಕೆ ತಮ್ಮ ಗಂಡಂದಿರ ಹೆಸರನ್ನೂ ಸೇರಿಸಿ ಹಾಕಿಕೊಳ್ಳುತ್ತಾರೆ ಗೊತ್ತೇ? ಪದ್ಮಾ, ಮಮತಾ, ಪ್ರೇಮಾ, ಶೋಭಾ ಎಂದು ಮುಂತಾಗಿರುವ ಕತೆಗಾರ್ತಿಯರ ಹೆಸರುಗಳನ್ನು ನೋಡಿ. ಆ ಕತೆಗಳಲ್ಲಿ ಬರುವ ಪ್ರೇಮಗೀತಗಳನ್ನು ಓದಿ ಭಾವಪರವಶರಾಗಿ ಯಾರಾದರೂ ಅದರ ಲೇಖಕಿಗೇ ಹುಚ್ಚುಚ್ಚಾಗಿ ಪತ್ರಗಿತ್ರ ಬರೆದುಬಿಡಬಾರದೆಂತಲೇ ಹಿಂದ ತನ್ನ ಗಂಡನೂ ಇದ್ದಾನೆ ಎಂದು ಎಚ್ಚರಿಕೆ ಕೊಡಲಿಕ್ಕಾಗಿ."

"ಆಹಾಹಾ! ಚೆನ್ನಾಗಿದೆ ನಿಮ್ಮ ವ್ಯಾಖ್ಯಾನ. ಅದೇ ಬಗೆಯ ರಕ್ಷೆ. ಗಂಡುಸರಿಗೂ ಯಾಕೆ ಬೇಡ ಎಂಬುದೇ ನನ್ನ ಪ್ರಶ್ನೆ. ಗಂಡುಸರ ಹೆಸರನ್ನು ನೋಡಿ, ಅವರು ಬಣ್ಣಿಸುವ ಪ್ರೇಮಗೀತಮಗಳನ್ನು ಓದಿ ಯಾವ ಬೋಸುಡಿಯಾದರೂ ಅವರಿಗೆ ಹುಚ್ಚುಚ್ಚಾಗಿ ಕಾಗದ ಬರೆಯದ ಹಾಗೆ ಹಿಂದೆಯೇ ಹೆಂಡತಿಯ ಹೆಸರೂ ಇರುವುದು ಒಳ್ಳೆಯದಲ್ಲವೇನು? ಗಂಡುಸರಿಗೆ ಹಾಗೆ ಕಾಣದ ಬಂದರೂ ಪರವಾಗಿಲ್ಲ. ಬೇರೆ ಹೆಣ್ಣಿನ ಜತೆ ಚೆನ್ನಾಗಿ ಚಕ್ಕಂದ ವಾಡಬಹುದೆಂತಲೋ? ಎಂಥ ಅನ್ಯಾಯ! ಗಂಡು ಹೆಣ್ಣು ಸರಿಸಮಾನ ಅಂತ ಅಂದ ಬೇಕಾದರೆ ನಾನು ಹೇಳಿದ ಹಾಗೆ ಮಾಡಲೇ ಬೇಕು."

ನಾನು ಕಣ್ಣು ಮುಚ್ಚಿ ಆಲೋಚಿಸತೊಡಗಿದೆ. ಅವಳು ಮುಂದುವರಿಸಿದಳು:

"ಇದಕ್ಕೆ ಅಷ್ಟೆಲ್ಲ ಆಲೋಚನೆ ಯಾತಕ್ಕೊ? ಪ್ರಾಂಜಲ ಮನಸ್ಸಿನಿಂದ ನಿಮ್ಮನ್ನೂ ನನ್ನನ್ನೂ ಕುರಿತು ಆಲೋಚನೆ ಮಾಡಿ, ನೀವು ಏನು ಬರೆದರೂ ಮೊದಲು ಓದಿ ಮೆಚ್ಚುವವಳೋ, ಕೊಚ್ಚುವವಳೋ ನಾನು ತಾನೆ? ನಾನು ಅಂದರೆ ಯಾರು? ನಿಮ್ಮ ಅರ್ಧಾಂಗಿ. ಇದಕ್ಕೆ ಅಷ್ಟು ಯೋಚನೆ ಯಾಕೋ? ಏನೋ ಅವಮಾನವಾದ ಹಾಗೆ?'

"ತಡಿ ತಡೀಂದೆ. ಅಸಲು ಅವಮಾನವೋ ಅಭಿಮಾನವೋ ಗೊತ್ತಾಗದೆ ಬೇಚಾಡುತ್ತಾ ಇದ್ದೇನೆ ಕಣೆ. ಉದಾಹರಣೆಗೆ ಮಿಸೆಸ್ ನಾರಾಯಣ್ ಎಂದರೆ ನಾರಾಯಣನ ಹೆಂಡತಿ ಎಂಬ ಹಾಗೆಯೇ ಮಿಸ್ಟರ್ ಲಕ್ಷ್ಮೀ ಅಂತ ನಾರಾಯಣನನ್ನು ಕರೆಯಲಿಕ್ಕೆ ಆಗುತ್ತೆಯೆ?"

"ಯಾಕಾಗೋದಿಲ್ಲ? ಮಿಸೆಸ್, ಮಿಸ್ಟರ್ ಬದಲಿಗೆ ಶ್ರೀಮತಿ ಶ್ರೀಯುತ ಅನ್ನಿ ಬೇಕಾದರೆ. ಮೊದಮೊದಲು ಏನೋ ಒಂದು ಥರಾ ಕಂಡೀತು; ಕ್ರಮೇಣ ಸರಿ ಹೋಗುತ್ತೆ. ಇದಕ್ಕಾಗಿ ನೀವೇಕೆ ಸುಮ್ಮನೆ ತಲೆ ಚಟ್ಟು ಮಾಡಿಕೊಳ್ಳಬೇಕು? ಇದು ಸರ್ವಸ್ತ್ರೀ ಸಮಾಜದ ಪ್ರಶ್ನೆ. ಅಖಿಲ ಭಾರತಕ್ಕೆ ಮಹಿಳಾಮಣಿಯೇ ಪ್ರಥಮ ಮಂತ್ರಿಣಿಯಾಗಿ ಇಂದಿರುವ ಈ ಕಾಲದೇ ಈ ಪ್ರಶ್ನೆಯ ಚರ್ಚೆಗೆ ಸರಿಯಾದ ಕಾಲ. ನಾನು ನಮ್ಮ ಮಹಿಳಾ ಮಂಡಳಿಯ ಅಧ್ಯಕ್ಷಣೀ ಹತ್ತಿರ ಈ ವಿಚಾರ ಹೇಳಿದ್ದೇನೆ. ಅವರೂ ಚಲೋದಿದೆ ಅಂತ ಒಪ್ಪಿದ್ದಾರೆ. ಬೇಗದಲ್ಲೇ ಸಭೆ ಸೇರಿಸಿ ತೀರ್ಮಾನ ಹಾಕಿ ನಮ್ಮ ಪ್ರಥಮ ಮಂತ್ರಿಣಿಯ ಕಡೆದೆ ಕಳಿಸುತ್ತೇವೆ. ನೋಡ್ತಾ ಇರಿ—ಗಂಡನ ಹೆಸರಿನ ಜತೆಯಲ್ಲಿ ಹೆಂಡತಿಯ ಹೆಸರನ್ನೂ ಹಾಕಲೇಬೇಕು ಅಂತ ಕಾಯಿದೆಯೇ ಬರುತ್ತೆ".

'ಹಾಗಾದರೆ ನಾನೇಕೆ ಸುಮ್ಮನೆ ಬೇಚಾಡಲಿ? ತಂಗಿಯ ಪತ್ರ ಓದುವ' ಎಂದು ನಾನು ಕಾದದವನ್ನು ಬಿಡಿಸಿದೆ.

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

PLEASE PATRONIZE OUR ADVERTISERS

ಕನ್ನಡ ಆದಿತ್ಯಪುರಾಣ

(ಹತ್ತನೇ ಸುಟದಿಂದ)

ಮಾಡುವೆನು ತಾನೆನುತ
ಹೊರವಂಟನು
ಸಭಾಂತರವ ||"

"ಈಶನನು ಹೊರಗಳೆದು ಯಜ್ಞವನು ಮಾಡುವೆ'ನೆನ್ನುತಾ, ದಕ್ಷನು ಶಕ್ತಿ ಸನ್ನಾಹಗೊಳಿಸಿದನು. ದಕ್ಷನ ಅರುವತ್ತು ಕುಮಾರಿಯರಲ್ಲಿ "ನೋಡಲೊಬ್ಬಳೆ ಕಡಿಮೆ'ಯಾಗಿ ಉಳಿದವರೆಲ್ಲಾ ನೆರೆದಿದ್ದರು. "ಭುವನ ಸ್ತೋತ್ರವು ವಂದ್ಯನ ರಾಣಿ ಮರುಗಿದಳೀಶನವು ನೋಡಿ!" ಇನ್ನೊಂದು ಸಂಧಿಯಲ್ಲಿ "ಖೂಳ ದಕ್ಷಿಂಗಜನು ಖುದಿಯ ಹೇಳಿ ತೊಲಗೆ, ದಧೀಚಿ ಬೋಧಿಸಿ ಕೇಳದಿರೆ ಶಾಪವನು ಕೊಟ್ಟನು ಯಜ್ಞವಳಿವಂತೆ' ಎಂಬುದು ವಿವರಿಸಲಾಗಿದೆ. ಕೈಲಾಸಕ್ಕೆ ನಾರದನು ಹೋಗಿದ್ದು ದಕ್ಷನ ಯಾಗದ ವಿಚಾರ ತಿಳುಹಲು ದಾಕ್ಷಾಯಣಿಯೊಬ್ಬಳೇ ಹೊರಟು ಬಂದು, ದಕ್ಷನೊಡನೆ ಮಾತಾಡಿ, ಶಿವನಿಂದೆಯನ್ನು ಕೇಳಿ ಕೊರಗಿದಳು. "ಗಿರಿಶನಿಂದಕ ನಿನ್ನೊಳುದಿಸಿದ ಪುರಿತ ದೇಹವೆ ಬೇಡೆನುತ್ತುರಿ ದಡಗಿದಳು ದೇವಿ' ಎಂಬುದು ಮೂರನೆಯ ಸಂಧಿಯಲ್ಲಿದೆ.

ಈ ಮುಂದಿನ ಕೊನೆಯ ಸಂಧಿಯಲ್ಲಿ ವೀರೇಶನವತಾರವಾಗಿ ದಕ್ಷನ ತಲೆಯನ್ನು ಕತ್ತರಿಸಿದ ಕತೆಯಿದೆ. ಆ ಮೊದಲ ಪದ್ಯವಿದು:

"ಮೃಡಗ ಬನ್ನಹ ಮಾಡಿದುದು ಸಭೆ |
ಯಡಗುತೆಂದಳು ದೇವಿ ದಕ್ಷನ |
ಕಡಿದು ಪೂರ್ಣಾಹುತಿಯನಗ್ನಿಗೆ
ಕೊಡುವುದೆಂದನು.||
ನಡೆಸಬೇಕಲ್ಲದಡೆ ಜಗವಿದು |
ಕಡುವುದೀರ ದ್ರೋಹದಿಂದೆನೆ |
ಮೃಡನ ಭಾಳಾಂಬಕದಿ ವೀರೇಶ್ವರನು
ಹೊರವಂಟ ||"

ವೀರೇಶದಿಂದ ಹತನಾದ ದಕ್ಷನು ಶಿವನಿಂದ ಕುರಿಯ ತಲೆಯನ್ನು ಹೊಂದಿಸಿಕೊಂಡನು. ಮತ್ತೆ ಅತನು ವಿನಾದನೆಂಬುದೇ ಇಲ್ಲಿಯ ವೈಶಿಷ್ಟ್ಯವೊಂದು: ಅತನು ಕಾಶಿಯಲ್ಲಿ ದಕ್ಷೇಶ ಲಿಂಗವನ್ನು ಸ್ಥಾಪಿಸಿ ಪೂಜಿಸಿ, 'ದ್ರೋಹ ವಿನಾಶವಾಗಲು' ಶಿವಲಿಂಗದಲ್ಲಿ ಐಕ್ಯವಾದನು!

ಈ 'ಶಿವಕಥಾಮೃತ'ವೆಂಬ ಹೆಸರಿನ ಕನ್ನಡ ಆದಿತ್ಯಪುರಾಣದ ೧೫ ಸಂಧಿಗಳನ್ನು ಓದಿದರ ಮುಂದಿನ ಸಂಧಿಗಳನ್ನು (ಸಂಪುಟಗಳನ್ನು) ಓದಲು ವಾಚಕರು ಅತುರ ಪಡುವರೆನ್ನಲು ಸಂದೇಹವಿಲ್ಲ! ಕನ್ನಡಿಗರು ಉದಾರದಿಂದ ಸಹಕರಿಸಿದರೆ ಈ ಪುರಾಣ ಕಾವ್ಯ ಬೇಗನೇ ಪೂರ್ಣವಾಗಿ ಪ್ರಕಟಗೊಳ್ಳುತ್ತದೆ! ಇತಿ ಶಮ್!



ಶ್ರೀ ಶಿವುಂಜಿ ಪರಾರಿ

ಕೇಳಿದ ಕತೆಗಳು

ಕತೆ ಚಿಕ್ಕದಿದ್ದರೂ ಅದರ ತಿರುಳು ದೊಡ್ಡದು. ಈ ಬಗೆಯ ನಾಲ್ಕು ಕತೆಗಳನ್ನು ಶ್ರೀ ಶಿವುಂಜಿ ಪರಾರಿಯವರ ಲೇಖನಿ ಮುಂದಿಟ್ಟಿದೆ.

ವಿಧಾತನೊಂದು ದಿನ

ತನ್ನೆಲ್ಲ ಸೇವಕರನ್ನು ಕರೆದು—"ನೀವು ಪೃಥ್ವಿಗೆ ಹೋಗಿ ನನಗಾಗಿ ಒಂದು ಅಮೂಲ್ಯವೂ, ಅಪೂರ್ವವೂ ಆದ ಉಪಹಾರವನ್ನು ತರಬೇಕು. ಯಾರು ನಿಜವಾದ ಅಮೂಲ್ಯ ವಸ್ತುವನ್ನು ತರುವರೋ, ಅವರು ನನ್ನ ನಿಕಟ ಸೇವಕರಾಗುವರು' ಎಂದು ಆದೇಶವಿತ್ತನು.

ಆ ಸೇವಕರೆಲ್ಲರೂ ಪೃಥ್ವಿಯ ಬಳಿಗೆ ಧಾವಿಸಿದರು. ಪ್ರತಿಯೊಬ್ಬರೂ ತಮತಮಗೆ ಅಮೂಲ್ಯವೆನಿಸಿದ ಒಂದೊಂದು ವಸ್ತುವನ್ನು ಆರಿಸಿ ಭಗವಂತನ ಬಳಿ ಹಿಂತಿರುಗಿ ಬಂದರು. ಭಗವಂತನು ಎಲ್ಲವನ್ನೂ ನೋಡಿದು ಎಲ್ಲವನ್ನೂ ಪರೀಕ್ಷಿಸಿದ. ಆದರೆ ಆ ಯಾವ ವಸ್ತುವೂ ಅವನಿಗೆ ತೃಪ್ತಿಯನ್ನೀಯಲಿಲ್ಲ. ಪ್ರತಿಯೊಂದು ವಸ್ತುವನ್ನು ನೋಡಿದಾಗಲೂ ಭಗವಂತನಿಗೆ, ಇದಕ್ಕಿಂತಲೂ ಅಪೂರ್ವವಾದುದೊಂದಿದೆ ಎಂದು ಅನಿಸುತ್ತಿತ್ತು. ಆದರೂ ಅವನು ನಿರಾಶನಾದಲಿಲ್ಲ. ಅವನ ಒಬ್ಬ ಸೇವಕನಿನ್ನೂ ಹಿಂತಿರುಗಿ ಬಂದಿರಲಿಲ್ಲ. ಭಗವಂತ ಉತ್ಸುಕತೆಯಿಂದ ಅವನ ದಾರಿ ಕಾಯಲಾರಂಭಿಸಿದನು. ಪ್ರತೀಕ್ಷೆಯ ಕ್ಷಣಗಳು ಮುಗಿದುವು. ಆ ಸೇವಕ ಹಿಂತಿರುಗಿ ಬಂದನು. ಅವನ ಮುಷ್ಟಿಯೊಳಗೆ ಸಣ್ಣದೊಂದು ಪುಟ್ಟಣವಿತ್ತು. ಅವನು ಮುಂದ ಬಂದು ನಮ್ರವಾಗಿ ಭಗವಂತನ ಮುಂದೆ ಪುಟ್ಟಣವನ್ನರಿಸಿ ಕುಳಿತುಕೊಂಡನು. ಪುಟ್ಟಣದೊಳಗೆ ಒಂದು ಹಿಡಿ ಮಣ್ಣು ಇತ್ತು. ಭಗವಂತನು ಚಕಿತನಾಗಿ—"ಇದೇನು? ಈ ಹಿಡಿ ಮಣ್ಣನ್ನು ಯಾಕೆ ತಂದಿರುವೆ?" ಎಂದು ವಿಸ್ಮಯದಿಂದ ಪ್ರಶ್ನಿಸಿದನು.

ಸೇವಕನು ಕೈಜೋಡಿಸಿ, ತಲೆವಾಗಿದನು. "ಭಗವನ್, ಭೂಮಿಯ ಮೇಲೆ ನಾನು ಕಾಡು—ಮೇಡು, ನದಿ-ತಟಾಕ, ಗಿರಿ-ಪರ್ವತಗಳೊಂದನ್ನೂ ಬಿಡದೆ ತಿರುಗಾಡಿದೆ. ಪ್ರತಿಯೊಂದು ಸ್ಥಳದಲ್ಲಿಯೂ ನಾನು ಅಪೂರ್ವವೂ ಅಮೂಲ್ಯವೂ ಆದ ವಸ್ತುವಿಗಾಗಿ ಹುಡುಕಾಡಿದ. ಆದರೆ ಇದಕ್ಕಿಂತ ಪವಿತ್ರವಾದ ಯಾವ ವಸ್ತುವನ್ನೂ ನಾನು ಕಾಣಲಿಲ್ಲ. ಹಾಗೆ ನೋಡಿದರೆ, ಇದು ಬರೇ ಒಂದು ಹಿಡಿ ಮಣ್ಣು ಮಾತ್ರ. ಆದರೂ ಅಸಾಧಾರಣವಾದುದು. ತನ್ನ ಮಾತೃಭೂಮಿಯ ರಕ್ಷಣೆಗಾಗಿ ರಣರಂಗದಲ್ಲಿ ನಗುನಗುತ್ತಾ ಪ್ರಾಣವನ್ನು ಒಪ್ಪಿಸಿದ ಶ್ರದ್ಧಾಳು ವೀರನ ಪಾದಧೂಳಿ ಇದು' ಎಂದನು.

ಭಗವಂತನ ಮುಖ ನಿಗುರಿತು. ಭಗವಂತನು ಭಕ್ತಿಯಿಂದ ತನ್ನೆರಡೂ ಕೈಗಳನ್ನು ಚಾಚಿ ಆ ಹಿಡಿ ಮಣ್ಣನ್ನೆತ್ತಿ ತನ್ನ ಮಸ್ತಕದಲ್ಲಿ ಧರಿಸಿದನು. "ವೀರರ ಸ್ಥಾನವೂ ಸರ್ವೋಚ್ಚವಾದುದು. ನಿನ್ನ ಉಪಹಾರವು ನಿಜವಾಗಿಯೂ ಅಪ್ರತಿಮವಾದುದು" ಎಂದು ಭಗವಂತನು ಉದ್ಗರಿಸಿದಾಗ ಅವನ ಕಂಠವೂ ಗದ್ಗದವಾಗಿತ್ತು.

ನಮ್ರತೆ

ನೀರು ತುಂಬಿದ ಗಡಿಗೆಯ ಮುಚ್ಚಳವಾಗಿ ಕುಳಿತಿದ್ದ ಸಣ್ಣದೊಂದು ಪಾತ್ರೆ, ಒಂದು ದಿನ ಗಡಿಗೆಯೊಡನೆ ತನ್ನ ಅಸಮಾಧಾನವನ್ನು ಸೂಚಿಸಿತು.—"ನೀನು ಹತ್ತಿರ ಬಂದ ಪಾತ್ರೆ ಸಣ್ಣದಿರಲಿ, ದೊಡ್ಡದಿರಲಿ, ಯಾವುದನ್ನೂ ಗಮನಿಸದೇನೇ ಅವೆಲ್ಲವನ್ನೂ ಶೀತಲ ಜಲದಿಂದ ತುಂಬುವೆ. ನಿನ್ನ ಬಳಿ ಬಂದವರೆಲ್ಲರೂ ನಿನ್ನ ನೀರಿನಿಂದ ತೃಪ್ತರಾಗಿಯೇ ಹಿಂತಿರುಗುವರು. ಆದರೆ ನಾನು ಮಾತ್ರ ಯಾವಾಗಲೂ ನಿನ್ನ ಹತ್ತಿರವೇ, ನಿನ್ನ ತಲೆಯ ಮೇಲೆಯೇ ಇರುವೆನಾದರೂ, ನೀನಂದೂ ನನ್ನನು ಗಮನಿಸಿಯೇ ಇಲ್ಲ. ನಿನ್ನೊಡನೆಯೇ ನಾನು ಬದುಕುತ್ತಿದ್ದರೂ ನಾನು ಸದಾ ತೃಷಿತನಾಗಿಯೇ ಇದ್ದೇನೆ. ಇಂತಹ ಪಕ್ಷಪಾತವು ನಿನಗೆ ಸರಿಯೇ?" ಎಂದು ಮುಚ್ಚಳವು ಗೂಣಗಾಡಿತು.

"ಇದರಲ್ಲಿ ಪಕ್ಷಪಾತವೇನೂ ಇಲ್ಲವಲ್ಲ ತಮ್ಮಾ" ಎಂದು ಶಾಂತವಾಗಿ ಉತ್ತರಿಸಿತು ಗಡಿಗೆ. "ಬೇರೆ ಪಾತ್ರೆಗಳೆಲ್ಲವೂ ನನ್ನಬಳಿ ಬಂದು ಬಾಗುತ್ತವೆ. ಆದುದರಿಂದ ನಾನು ನನ್ನಲ್ಲಿರುವ ಶೀತಲ ಜಲದಿಂದ ಅವುಗಳನ್ನು ತಣಿಸುವುದು ಸಾಧ್ಯವಾಗುತ್ತದೆ. ಆದರೆ ನೀನೆಂದೂ ಬಾಗಿಲ್ಲ. ಅಹಂಕಾರದಿಂದ ಉನ್ನತನಾಗಿ ನೀನು ಸದಾ ನನ್ನ ತಲೆಯ ಮೇಲೆಯೇ ಕುಳಿತಿರುವೆ. ಅದಕ್ಕೆಂದೇ ನಿನ್ನನ್ನು ತಣಿಸುವುದು ನನಗೆ ಸಾಧ್ಯವಾಗಿಲ್ಲ. ಒಂದೊಮ್ಮೆ ವಿನಯದಿಂದ ತುಸು ಬಾಗಿದೆಯಾದರೆ ನೀನೂ ಪರಿಪೂರ್ಣ ಉಳಿಯಲಾರೆ. ನಮ್ರತೆಯಿಂದಲೇ ಮಾನವತೆಯು ದೊರಕುವುದು ತಮ್ಮಾ" ಎಂದು ಉಪದೇಶಿಸಿತು ಗಡಿಗೆ.

ಒಂದು ಅಕ್ಷರ

ಒಮ್ಮೆ ದೇವತೆಗಳು, ರಾಕ್ಷಸರು ಮತ್ತು ಮಾನವರು ತಾವು ಒಳ್ಳೆಯವರಾಗಬೇಕು, ನಮ್ಮ ಜೀವನ ಪವಿತ್ರವಾಗಬೇಕು ಎಂದು ನಿಶ್ಚಯಿಸಿ ಪ್ರಜಾಪತಿ ಬ್ರಹ್ಮನಿಂದ ಈ ಬಗೆಗೆ ಉಪದೇಶ ಪಡೆಯಲೆಂದು ಸತ್ಯಲೋಕಕ್ಕೆ ಹೋದರು. ಈ ಮೂವರೂ ತಮ್ಮ ಮನೋಕಾಮನೆಯನ್ನು ಅವನ ಮುಂದಿರಿಸಿದಾಗ ಬ್ರಹ್ಮನು ಒಮ್ಮೆ ಮುಗುಳ್ನಗೆ ಬೀರಿ—"ದ" ಎಂದನು.

ಸುರಾಸುರ ಮಾನವರು ಸಂತುಷ್ಟರಾಗಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು. ಸ್ವರ್ಗಲೋಕ ಭೋಗ ವಿಲಾಸದ ಸಾಮಗ್ರಿಗಳಿಂದ ತುಂಬಿ ಕೊಂಡಿದೆ. ನಾವು ದೇವತೆಗಳು ಭೋಗ ಲೋಲುಪರಾಗಿ ಉಳಿಯುದೆಲ್ಲವನ್ನು ಮರೆಯುತ್ತಿದ್ದೇವೆ. ಅದಕ್ಕೆಂದೇ ಒಂದು ದಿನ ಸ್ವರ್ಗದಿಂದಲೂ ವಂಚಿತರಾಗುತ್ತೇವೆ. ಆದುದರಿಂದಲೇ ಪ್ರಜಾಪತಿಯು ನಮ್ಮ ಉದ್ಧಾರಕ್ಕಾಗಿ 'ದ' ಅಂದರೆ 'ದಮನ' ಅರ್ಥಾತ್ ಇಂದ್ರಿಯ ಸಂಯಮದ ಉಪದೇಶವಿತ್ತಿರುವನು', ಎಂದು ಕೊಂಡರು ದೇವತೆಗಳು.

ಇಡೀ ಜೀವನವನ್ನೇ ಸಂಗ್ರಹ ಕಾರ್ಯಕ್ಕಾಗಿ ನಾವು ವಿನಿಯೋಗಿಸುತ್ತೇವೆ. ಸುಂದರವಾದ ವಸ್ತು ಯಾವುದೇ ಇರಲಿ. ಅದನ್ನು ಹೇಗಾದರೂ ವಶಪಡಿಸಿಕೊಳ್ಳಬೇಕು ಎಂಬುದರಲ್ಲಿಯೇ ನಮ್ಮ ಆಯುಷ್ಯ ಕಳೆದು ಹೋಗುತ್ತದೆ. ಅದಕ್ಕೆಂದೇ ಪ್ರಜಾಪತಿಯು 'ದ' ದ ಮೂಲಕ ನಮಗೆ ದಾನದ ಉಪದೇಶ ಎತ್ತಿರುವನು. ದಾನದಿಂದಲೇ ನಮ್ಮ ಜೀವನವು ಪವಿತ್ರವಾಗುವುದು" ಎಂದು ಮಾನವರು ಹಂಬಿದರು.

"ನಾವು ಸ್ವಭಾವತಃ ಹಿಂಸಾಪ್ರಿಯರು. ಕ್ರೋಧ ಮತ್ತು ಹಿಂಸೆ ಶ್ವಾಸೋಚ್ಛ್ವಾಸದಷ್ಟೇ ಸಹಜ ಕ್ರಿಯೆ ನಮಗೆ. ಆದುದರಿಂದ 'ದ' ಅಂದರೆ ದಯೆಯಿಂದ ಮಾತ್ರ ನಮ್ಮ ಉದ್ಧಾರವಾಗಬಲ್ಲುದು ಎಂದೇ ಪ್ರಜಾಪತಿಯು ನಮಗೆ ಹೀಗೆ ಉಪದೇಶಿಸಿದನು" ಎಂದು ತಿಳಿದರು ದಾನವರು.

ಜಯಂತಿ

ಸಂತ ವಿನೋಬಾ ಅವರು ಚಿಕ್ಕವರಾಗಿದ್ದಾಗ, ಪ್ರೈಮರಿ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ಒಂದು ದಿನ ಯೂರೋಪಿಯನ್ ರಾಣಿ ಪ್ರತಾಪನ ಹುಟ್ಟು ದಿನ ಎಂದು ಹೇಳುವುದನ್ನು ಕೇಳಿದರು. ಆ ಸ್ವಾತಂತ್ರ್ಯಪ್ರಿಯನ ಹೆಬ್ಬವನ್ನು ಆಚರಿಸಬೇಕು ಎಂದು ಅವರ ಬಾಲಕ ಮನ ನಿರ್ಧರಿಸಿತು. ಆದರೆ ಶಾಲೆಯ ನಾಲ್ಕು ಗೋಡೆಯ ಮಧ್ಯದಲ್ಲಿ ಈ ಸಭೆ ಜರುಗಿಸಲು ಅವರ ಮನಸ್ಸು ಒಪ್ಪಲಿಲ್ಲ.

ವಿನೋಬಾ ಶಾಲೆಯ ಮಕ್ಕಳನ್ನೆಲ್ಲ ಒಟ್ಟು ಸೇರಿಸಿಕೊಂಡು ಪಕ್ಕದ ಕಾಡಿಗೆ ಹೋದರು. ವೈಭವದಿಂದಲೇ ಪ್ರತಾಪ ಜಯಂತಿಯನ್ನು ಆಚರಿಸಿದ್ದಾಯಿತು. ಶಾಲೆಯ ಹುಡುಗರೆಲ್ಲರೂ ಒಟ್ಟಾಗಿ ಶಾಲೆಗೆ ತಡವಾಗಿ ಬಂದದ್ದನ್ನು ಕಂಡು ಮಾಸ್ಟರರ ಕೋಪ ನೆತ್ತಿಗೇರಿತು. "ಯಾಕ್ರೋ ತಡಮಾಡಿಕೊಂಡು ಬಂದಿರಿ?' ಎಂದು ಅವರು ಅಬ್ಬರಿಸಿದರು. ನಿರ್ಭೀತ ವಿನೋಬಾ ಸತ್ಯವನ್ನೇ ಹೇಳಿದರು.

"ಶಾಲೆಯಲ್ಲಿಯೇ ಆಚರಿಸಬಹುದಿತ್ತಲಾ ಈ ಜಯಂತಿಯನ್ನು?"

"ಹಾದು ಸರ್, ಆದರೆ ನೆರೆಮನೆಯಲ್ಲಿ ಸ್ವಾತಂತ್ರ್ಯವೀರನ ಜಯಂತಿಯನ್ನು ಆಚರಿಸುವುದು ಅಷ್ಟು ಸರಿಯೆನಿಸಲಿಕ್ಕಿಲ್ಲ ಅಂದುಕೊಂಡೆ." ಎಂದು ವಿನೋಬಾ ಉತ್ತರಿಸಿದಾಗ ಮಾಸ್ಟರ್ ಗಿರುತ್ತರಾಗಿದರು.

[ಶ್ರೀ ಕೃಷ್ಣ ಅವರ ಸಂಗ್ರಹದಿಂದ]

ಅಭ್ಯಾಸಬಲ

ಪ್ರಶ್ನೆ—"ನೀವೇಕೆ ಕಿವಿಗಳಲ್ಲಿ ಬೆರಳುಗಳನ್ನೆತ್ತಿ ಹಿಡಕೊಂಡೇ ಪಠ್ಯ ಓದುವಿರಿ?"

ಉತ್ತರ—"ಇದು ನನ್ನ ಪಠ್ಯ ಬರೆದ ಕಾಗದ..."

o o o o

ನೈತಿಕ ಪುನರುತ್ಥಾನವೇ ಶಾಂತಿ ಸ್ಥಾಪನೆಗೆ ಏಕೈಕ ಮಾರ್ಗ

(ಸಂಭೃತ್ತನೇ ಪುಟದಿಂದ)

ಮರೆತು ಸ್ವಾರ್ಥ ಚಿಂತನೆಯಲ್ಲಿ ಮುಳುಗಿದ್ದಾರೆ. ಇಂಥವರೆ ಇವರ ಅನುಯಾಯಿಗಳ, ಪರಿವಾರದ ಆದರ್ಶ ಇಂದು ಜನ ಸಾಮಾನ್ಯರಿಗೆ ದೊರೆಯುತ್ತಿದೆ. ಒಂದೆರಡು ರಾಜ್ಯಗಳಲ್ಲಲ್ಲ— ಎಲ್ಲೆಲ್ಲೂ ಇದೇ ಹಾಡಾಗಿದೆ. ಧನ ಬೆಂಬಲದಿಂದ ಒಂದು ಪಕ್ಷವನ್ನು ಸೇರಿ ಮುಖಂಡನೆನ್ನಿಸಿ— ಚುನಾವಣೆ ಮುಂತಾದುವುಗಳಲ್ಲಿ ಆರಿಸಿ ಬರುವುದು, ಅಲ್ಲಿ ತನ್ನ ಸ್ವಾರ್ಥ ಪೂರ್ಣವಾಗಲಿಲ್ಲವೆಂದು ತೋರಿದೊಡನೆಯೇ ಆ ಪಕ್ಷವನ್ನು ಠಾಲಿಂದೊದೆದು ತಳ್ಳಿ ಮತ್ತೊಂದು ಪಕ್ಷ ಹಾರುವುದು—ಇಂತಹ ಸಾರ್ಥಪರ ಜನನಾಯಕರ ಮುಂದೆಯೇ ಇಂದು ದೇಶವನ್ನು ಅಧೋಗತಿಗಿಳಿಸಲು ಕಾರಣವಾಗಿದೆ.

ಸರಿ, ಮುಂದೇನು? ಆದ್ಯಂತ ದೇಶದ ಧುರೀಣವರ್ಗವೇ ಹೀಗೆ ಸ್ವಾರ್ಥಸಾಧನ ಕಾರ್ಯತತ್ಪರವಾಗಿ ಜನತೆಯನ್ನು ಮರತಿರುವಾಗ—ಮುಂದಿನ ಮಾರ್ಗವೇನು ಎಂಬ ಹತಾಶ ಸ್ಥಿತಿ ಇಂದು ಉಂಟಾಗಿದೆ. ಆನೆ ಹಳ್ಳಕ್ಕೆ ಬಿದ್ದಾಗ ಮತ್ತೊಂದು ಆನೆಯೇಬಂದು ಅದನ್ನು ಎತ್ತಬೇಕಲ್ಲದೆ ಕ್ಷುದ್ರಮೃಗಗಳು ಏನು ಮಾಡಬಲ್ಲುವು? ಹೀಗಿದೆ ಇಂದಿನ ಸ್ಥಿತಿ! ಇಂದು ರಾಜರುಗಳ ಅಧಿಕಾರ ತಪ್ಪಿ ಪ್ರಜೆಗಳೇ ರಾಜ್ಯವಾಗಿದೆಯಷ್ಟೆ! ಮುಂದೆ ನಡೆಯಬೇಕಾದ ತಮ್ಮ ಹಿತಸಾಧನೆಯ ಕಾರ್ಯಕ್ಕೆ ಪ್ರಜೆಗಳೇ ಮುಂದಾಗಬೇಕು. ತಮ್ಮ ಹಿತರಕ್ಷಣೆಗೆ ಹೊಣೆಹೊತ್ತು ತಮ್ಮ ಪ್ರತಿನಿಧಿಗಳೆಂದೆನಿಸಿಕೊಂಡು ಸಭೆ ಮನೆಗಳಲ್ಲೂ ಮಂತ್ರಿ ಪದವಿಗಳಲ್ಲೂ ಕುಳಿತು, ತಮ್ಮ ಯೋಗ ಕ್ಷೇಮವನ್ನು ಮರೆತ ಅಂತಹ ನಾಮ ಮಾತ್ರ ಪ್ರತಿನಿಧಿಗಳನ್ನು ಪ್ರತಿಭಟಿಸಿ ಅಯಾ ಸ್ಥಾನಗಳಿಂದ ಹೊರಕ್ಕೆಳೆಯಬೇಕು. ಮುಂದೆ ಧರ್ಮಬೀರುಗಳೂ ನ್ಯಾಯ ನಿಷ್ಠರೂ ಸತ್ಯ ಪ್ರೇಮಿಗಳೂ ನಿಸ್ಪೃಹರೂ ಆದ ಪ್ರಜಾತಿಕ ರಕ್ಷಕರನ್ನು ಅಂತಹ ಜವಾಬುದಾರಿ ಸ್ಥಾನಗಳಿಗೆ ಚುನಾಯಿಸಲು ಶ್ರಮ ಸಂಕಲ್ಪರಾಗಬೇಕು.

ಇದು ಒಂದು ಭಾಗವಾಯಿತು. ನಮ್ಮ ಇಂದಿನ ರಾಜ್ಯ ಸ್ಥಿತಿ ಈ ದುರ್ಗತಿಗಿಳಿಯಲು, ನಮ್ಮ ನಾಡಿನ ವಿದ್ಯಾಭ್ಯಾಸದ ಧ್ಯೇಯ ಹದಗೆಟ್ಟು ಮಾರ್ಗ ತಪ್ಪಿರುವುದೇ ಮುಖ್ಯ-ಮೂಲಕಾರಣವೆಂದರೆ ತಪ್ಪಲ್ಲ! ನಮ್ಮ ಬಾಲಕ ಬಾಲಕಿಯರಿಗೆ ಇಂದು ದೊರೆಯುತ್ತಿರುವ ಶಿಕ್ಷಣ ಶಿರೋಭಾರವಾಗಿದೆ. ಹೊರಲಾರದಷ್ಟು ಪುಸ್ತಕಗಳ ಅಗಾಧ ವಿಷಯಗಳು ಒಮ್ಮೆಯೇ ಅವರಿಗೆ ಬೋಧವಾಗ ಬೇಕೆಂಬ ಹಂಬಲ ತೊಲಗ ಬೇಕು. ಕಾಲೇಜು ತರಗತಿಗಳಲ್ಲಿ ಬೋಧವಾಗುವಷ್ಟು ವಿಷಯ ಬಾಹುಳ್ಯ ಮಕ್ಕಳಿಗೇಕೆ ಹೊರೆಯಾಗಬೇಕು ಎಂದು ವಿದ್ಯಾಧಿಕರು ಯೋಚಿಸಲಾಗದೆ? ಅವರಿಗೆ ನೀತಿ ಪಾಠಗಳು, ಮಹಾ ಭಕ್ತರು, ದೇಶ ಭಾಂಧವರು, ಧರ್ಮಾತ್ಮರ ಮಹಾಸುರುಷರ ಜೀವಿತೋದಾಹರಣೆಗಳು, ಭಗವಂತನಲ್ಲಿ ಭಕ್ತಿ, ನೆರೆ ಹೊರೆಯವರಲ್ಲಿ ಪ್ರೇಮ ಎಶ್ವಾಸಗಳು,

ಶ್ರೀ ಎಚ್. ಎಂ. ನಾರಾಯಣ ಭಟ್

ಬೇಡಿಕೆ ಹೆಚ್ಚುತ್ತಿರುವ ಕಲೆ-ಕರತಾಡನ

ಪ್ರಾಚೀನ ಕಾಲದಿಂದಲೂ ಕರತಾಡನ ಕಲೆ ಮಾನವ ಸಮಾಜದ ಅವಿಭಾಜ್ಯ ಅಂಗವಾಗಿ ಮೈಗೂಡಿ ಬಂದಿದೆ. ದಿನದಿನಕ್ಕೂ ಇದರ ಬಗ್ಗೆ ಬೇಡಿಕೆಯು ಹೆಚ್ಚುತ್ತಲೇ ಇದೆ. ಅದುದರಿಂದಲೇ ಇದುವರೆಗೆ ನಾನಾ ಮುಖವಾಗಿ ಬೆಳೆದು ಬಂದ ಕರತಾಡನ ಕಲೆಗೆ ಉಜ್ವಲ ಭವಿಷ್ಯ ಕಂಡಿತಕ್ಕೂ ಇದೆ.

ಕರತಾಡನ, ಕರತಾಡನ, ಕರಘೋಷ, ಕೈಚಪ್ಪಾಳೆ, ಹಸ್ತಾರವ ಇತ್ಯಾದಿ ಶಬ್ದಗಳನ್ನು ಕೇಳದವರು ತೀರ ವಿರಳ. ಇದ್ದರೆ ಕಿವುಡರು—ಹುಟ್ಟು ಕಿವುಡರಾಗಿರಬೇಕು! ಜೀವಮಾನದಲ್ಲಿ ಒಮ್ಮೆಯಾದರೂ ಕೈಚಪ್ಪಾಳೆ ಹೊಡೆಯದವರಿದ್ದಾರೆಯೆ? ಇದ್ದರೆ, ಹುಟ್ಟುವಾಗಲೇ ಒಂದು ಕೈಯನ್ನು ಕಳಕೊಂಡವರಾಗಿರಬೇಕು. ಜಗತ್ತಿನಲ್ಲಿ ಎಲ್ಲರೂ ಕರತಾಡನಕ್ಕೆ ಸಂಬಂಧಪಟ್ಟವರು, ಮತಾಚಾರಗಳಲ್ಲಿ, ಸಂಪ್ರದಾಯಗಳಲ್ಲಿ, ಸಿನಿಮಾ ನಾಟಕ ಮಂದಿರಗಳಲ್ಲಿ, ಚರ್ಚಾ ಸಭೆಗಳಲ್ಲಿ, ಬಹಿರಂಗ ಸಭೆಗಳಲ್ಲಿ, ಗಲ್ಲಿ-ಬೀದಿಗಳಲ್ಲಿ, ಪೈಪೈದಾನಗಳಲ್ಲಿ, ಪ್ರಚಾರ ಕಾರ್ಯದಲ್ಲಿ ಇತ್ಯಾದಿಗಳೆಲ್ಲೆಲ್ಲಾ ಕರತಾಡನವು ಒಂದು ಪ್ರಧಾನ ಪಾತ್ರ ವಹಿಸಿರುತ್ತದೆ. ಹೀಗೆ 'ಕೈಚಪ್ಪಾಳೆ'ಯು ವಿಶ್ವವ್ಯಾಪಿಯೆನ್ನಬಹುದಾಗಿದೆ.

ಕರತಾಡನದ ಪ್ರಚಾರ ಹಾಗೂ ಪ್ರಾಧಾನ್ಯತೆಯ ಕುರಿತು ಹಲವರು ಸಾಹಿತಿಗಳೂ ಕವಿಗಳೂ ಬರೆದಿದ್ದಾರೆ.

'ಎರಡು ಕೈಗಳು ಪರಸ್ಪರ ಹೊಡೆದಾಗ ಮಾತ್ರವೇ ಶಬ್ದವುಂಟಾಗುವು'ದೆಂಬ ನೀತಿವಾಕ್ಯವನ್ನು ಎರಡು ವಿಭಾಗಗಳಾಗಿನ ಸವಿವಾದ ತೀರ್ಮಾನಕ್ಕೆಂದುಪ್ರವೇಶಿಸುವ ಮಧ್ಯಸ್ಥರು ಪ್ರಯೋಗಿಸುವುದಿದೆ

ಪತ್ರಿಕಾ ಸಾಹಿತ್ಯದಲ್ಲಿಯೂ ಕರತಾಡನದ ಪ್ರವೇಶ ಪ್ರಭಾವ ಬೀರಿದೆ. (ಕರತಾಡನ) (ಹಸ್ತಾರವ) (ಸುದೀರ್ಘಕರತಾಡನ) ಇತ್ಯಾದಿ ಶಬ್ದಗಳನ್ನು 'ಬ್ರೈಕೆಟ್' ಸಹಿತ ಪ್ರಕಟಿಸಿದ ವಿಧಾನ ಸಭಾ ವರದಿಗಳೂ ಲೋಕ ಸಭಾ ವರದಿಗಳೂ ಪುರಸಭಾ ವರದಿಗಳೂ ಪತ್ರಿಕೆಗಳಲ್ಲಿನ ವರದಿಗಳನ್ನಲ್ಲಿ ಸ್ಮರಿಸಿಕೊಳ್ಳಬಹುದು.

ನೃತ್ಯ ಕಲೆಯಲ್ಲಿ ಕೈಚಪ್ಪಾಳೆಗೆ ವಿಶಿಷ್ಟ ಸ್ಥಾನವಿದೆ. ವಾದ್ಯೋಪಕರಣಗಳಿಲ್ಲದಿದ್ದರೂ 'ನೃತ್ಯ'ವು ಉತ್ತೇಜನಕಾರಿಯಾಗುವಂತೆ ಇದು ಸಹಾಯ ಮಾಡಿದೆ. ಗಾನ—ಸಂಗೀತ ಕಾರ್ಯಕ್ರಮಗಳಲ್ಲಂತೂ ಕೈಚಪ್ಪಾಳೆ ಮತ್ತು 'ಕೈತಾಳ' ಅಳವಡಿಕೆಯಾಗಿರುತ್ತದೆ. ವಾದ್ಯೋಪಕರಣಗಳ ಚಟುವಟಿಕೆಯೂ ಪ್ರಯೋಗದೊಡನೆ ಸಾರ್ವತ್ರಿಕ ಹರಡಿರುವುದಾದರೂ 'ಕೈತಾಳ'ವು ತನ್ನ ಹಿರಿಮೆಯನ್ನೂ ಪ್ರಶಸ್ತಿಯನ್ನೂ ಉಳಿಸಿಕೊಂಡಿದೆ.

"ಕೆಕೊಟ್ಟಕೈಳೆ" (ಕೈಚಪ್ಪಾಳೆ ಹೊಡೆಯುತ್ತಾ ನರ್ತಿಸುವುದು) ಯೆಂಬುದು ಕೇರಳದಲ್ಲಿ ಪರಂಪರಾಗತವಾಗಿ ಪ್ರಚಾರದಲ್ಲಿದೆ. 'ಓಣಂ' ಹಬ್ಬದ ವೇಳೆ ಸಾಧಾರಣವಾಗಿರುವ "ಕಮ್ಮಾಟಿಕ್ಕಳೆ"ಯಲ್ಲಿ ಕೈಚಪ್ಪಾಳೆ ಹೊರತುವಾದ್ಯೋಪಕರಣಗಳ ಬಳಕೆಯಿಲ್ಲ, ಈ ಬಗೆಯ ನೃತ್ಯಗಾನಗಳಲ್ಲಿ ಕೈಚಪ್ಪಾಳೆಯನ್ನು ತಾಳಕ್ಕನುಗುಣವಾಗಿ ಹೊಡೆಯುವರು. 'ಪುರಿಕ್ಕಳೆ'ಯಲ್ಲಿ ಚೆಂಡೆವಾದ್ಯಗಳೊಂದಿಗೇ ಕೈತಾಳದ ಪ್ರಯೋಗವನ್ನೂ ಕಾಣಬಹುದಾಗಿದೆ.

ಅಗಾಗ ಒಂದೇ ಕೈಯಿಂದಲಾದರೂ ತಾಳ ಹೊಡೆಯುವ ಸಂಗೀತಗಾರರಿದ್ದಾರೆ. ಕೆಲವು ಬಾರಿ ಎರಡೂ ಕೈಗಳಿಂದಲೂ ತಾಳ ಹೊಡೆಯುವ ಭಾವವತರಿದ್ದಾರೆ. ಕೈಬೆಟ್ಟನ ತಾಳ ತಪ್ಪಿದರೆ ಸಂಗೀತವು "ಅಪಶ್ರುತಿ"ದಲ್ಲಾಗುವುದೆನ್ನುವರು.

"ಮೂಪಿಳೆ ಪಾಟು"ಗಳಲ್ಲಿ ಕರತಾಡನ ವಿಶಿಷ್ಟ ಪರಂಪರೆಯದೂ, ಭಜನೆಗಳಲ್ಲಿಯೂ ಕೈತಾಳಕ್ಕೆ ವಿಶಿಷ್ಟ ಪಾತ್ರವಿದೆ.

ನಾಟಕ, ಸಿನೆಮಾ, ಯಕ್ಷಗಾನ ಪ್ರದರ್ಶನಗಳಲ್ಲಿ ಕೈಚಪ್ಪಾಳೆ ಬೆಳೆಯುತ್ತ ಬರುತ್ತಿದೆ.

"ಕರತಾಡನ" ಪರಿಣತರನ್ನು ಬಾಡಿಗೆಗೆ ನೇಮಿಸುವ ಪದ್ಧತಿಗಳೂ ಇಲ್ಲದಿಲ್ಲ. ಹೀಗೆ ಬಾಡಿಗೆಗೆ ನೇಮಿಸುವ ಪದ್ಧತಿ ರೋಮವರಲ್ಲಿನ ನಾಟಕ ರಂಗಗಳಲ್ಲಿ ಪ್ರಾಚೀನವೆನ್ನಲಾಗಿದೆ. ವಿದೇಶಗಳಲ್ಲಿ ಹೆಚ್ಚಿನ ಕೇಂದ್ರಗಳಲ್ಲಿಯೂ ಈ ಪದ್ಧತಿ ಇನ್ನೂ ಪ್ರಚಾರದಲ್ಲಿದೆ. ಈ ಪದ್ಧತಿಯ ವಿರುದ್ಧ ಅಲ್ಲಿನ ಜನರೂ ಪತ್ರಿಕೆಗಳೂ ದನಿಯೆಬ್ಬಿಸಿದ್ದೂ ಉದ್ದೇಶಿತ ಫಲ ದೊರೆಯಲಿಲ್ಲ.

ಹಲವು ರಾಷ್ಟ್ರಗಳಲ್ಲೂ ಕರತಾಡನವು ಮತ ಸಂಬಂಧ ಮತ್ತು ಸಾಮಾಜಿಕ ಆಚರಣೆಗಳಲ್ಲೂ ಅಂಥ ವಿಶ್ವಾಸಗಳಲ್ಲೂ ಪ್ರವೇಶಿಸಿದೆ. ಒಂದು ಕೈಯ ಹೆಬ್ಬೆರಳನ್ನೂ ಬೇರೊಂದು ಬೆರಳನ್ನೂ ಸೇರಿಸಿ ಹೊಡೆಯುವುದು; ಎರಡೂ ಕೈಗಳ ಅಂಗೈಗಳನ್ನು ಮಾತ್ರವೇ ಹೊಡೆಯುವುದು ಮುಂತಾದ ವಿಧಾನಗಳಿಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ವಿಭಿನ್ನ ಅರ್ಥವಿದೆ. ಕಲಾವಿದರನ್ನೂ ಭಾಷಣಗಾರರನ್ನೂ ಪ್ರೋತ್ಸಾಹಿಸಲು ಕರತಾಡನವನ್ನು ಸಾರ್ವತ್ರಿಕವಾಗಿ ಬಳಸುವುದಿದೆ. 'ಕರತಾಡನ' ವಿಧಾನಗಳಲ್ಲಿ ಹೆಚ್ಚಿನ ಸುಧಾರಣೆಗಳಾದಂತೆ ತೋರುವುದಿಲ್ಲ. ಕರತಾಡನವೂ ಒಂದು ಕಲೆ. ಇದರ ವಿಕಸನ ಸಾಧ್ಯತೆಗಳಿಲ್ಲದಿರವು.

ಕೇರಳದಲ್ಲಿ ಕುಂಭಕರ್ಣ ಕ್ಷೇತ್ರಗಳೂ ಕೆಲವಿವೆ. ಕುಂಭಕರ್ಣ ವಿಗ್ರಹದಿರುವುದೆಂದು ನಮಸ್ಕರಿಸುವ ಮುನ್ನ ಭಕ್ತರು ಕರತಾಡನ ಮಾಡುವುದಿದೆ. ನಿದ್ರಿಸುವ ಕುಂಭಕರ್ಣನು ಎಚ್ಚರಗೊಳ್ಳುವುದಕ್ಕಾಗಿ ಈ ಪದ್ಧತಿಯಂತೆ! ತ್ರಿಶೂರಿನ ಕ್ಷೇತ್ರದಲ್ಲಿ ಈ ಪದ್ಧತಿಯೊಗಲೂ ಪಾಡಿಕೆಯಲ್ಲಿದೆ.

ಬ್ರಾಹ್ಮಣರು ಸಂಧ್ಯಾವಂದನೆ ಮತ್ತು ಪೂಜಾವೇಳೆ ವಿಶಿಷ್ಟ ವಿಧಾನದಲ್ಲಿ ಕರತಾಡನ ಮಾಡುವುದಿದೆ.

ಮೃತಾತ್ಮಿಶ್ರಗಳ ಇಲ್ಲವೆ ಹಿರಿಯರ ಪುಣ್ಯದಿನ (ಶ್ರಾದ್ಧ)ದಂದು ಪಿಂಡ ಸಹಿತ ಬಲಿಯರ್ಪಿಸಿದ ಬಳಿಕ ಕರತಾಡನದಮೂಲಕ ಕಾಗೆಗಳನ್ನು ಆಮಂತ್ರಿಸುವುದಿದೆ.

ಮಂತ್ರವಾದಿಗಳು ದುಶ್ಶಕ್ತಿಗಳ ಉಚ್ಚಾಟನೆ ಮಾಡುವ ವೇಳೆ ತಂತಮ್ಮ ಉಪಾಸನಾ ಮೂರ್ತಿಗಳನ್ನು ಆಹ್ವಾನಿಸಲು ಕರತಾಡನವನ್ನೇರ್ಪಡುವರು.

ಮುಂದೆ ಹೋಗುವವರನ್ನೋ ದೂರ ಇರುವವರನ್ನೋ ಕರೆಯುವುದಕ್ಕಾಗಿ ಕರತಾಡನ ಮಾಡುವುದಿದೆ. ನಿರ್ದಿಷ್ಟ ಹಾಗೂ ಶುಭ ಕಾರ್ಯಗಳಿಗಾಗಿ ಹೊರಟು ಹೋಗುವವರನ್ನು ಕೈಹಟ್ಟಿ ಕರೆಮಾಡುವುದೆಂಬ ಒಂದು ನಿಯಮವೂ ಸಮಾಜದಲ್ಲಿದೆ. ಹಾಗೆ ಹಿಂದಿನಿಂದ ಕರೆದರೆ ! ಹೊರಟ ಕಾರ್ಯ ಸಾಫಲ್ಯವಿದರಲೇ ಸಾಧ್ಯತೆ ಹೆಚ್ಚೆಂಬ ಅಂಥ ವಿಶ್ವಾಸವಿದೆ.

ಕೈ ಹಟ್ಟಿ ಭಾಷೆ ಹಾಕುವುದು—ಶಪಥ ಮಾಡುವುದಿದೆ.

ಜಾತಿ ಭ್ರಷ್ಟರಾದ ಹೆಂಗಸರನ್ನು ಹೊರಕ್ಕೆ ತಳ್ಳುವಾಗ ನಂಬೂದರಿಯರು ನೆರವೇರಿಸುವ ಒಂದು ಕ್ರಿಯೆಗೆ ಕೈ ಹಟ್ಟುವುದೆನ್ನುವರು. (ಕೈಕೊಟ್ಟ. ವಿವಾ

ಪ್ರಾಚೀನ ಮೂಷ್ಟದಲ್ಲಿ ದಯೆ ವಿಶ್ವಾಸಗಳು, ಪರೋಪಕಾರ ಮನೋವೃತ್ತಿ ಇವುಗಳಲ್ಲಿ ಶಿಕ್ಷಣ ದೊರೆವಂತಾಗಬೇಕು. ಚಿಕ್ಕಂದಿನಿಂದಲೇ ಆಡಂಬರ, ಅಹಂಕಾರ ಮಮಕಾರಗಳು, ಇವು ಬೆಳೆಯದಂತೆ ಶಿಕ್ಷಕರು ಜಾಗ್ರತೆ ವಹಿಸಬೇಕು. ಮಕ್ಕಳು ಹೀಗೆ ಬೆಳೆದು ಸಿದ್ಧರಾದರೆಂದರೆ—ತಮ್ಮ ಪ್ರಾಯದಲ್ಲಿ ಲೌಕಿಕ ಜೀವನದ ಜವಾಬುದಾರಿಯನ್ನು ಹೊರುವ ಸಂದರ್ಭದಲ್ಲೂ ಸಹ ಅಂತಹ ಸದ್ಗುಣಗಳೇ ವ್ಯಾಪ್ತವಾಗುವುವು. ನಮ್ಮ ವಿದ್ಯಾಧಿಕಾರಿಗಳು ಇಷ್ಟು ಕಾಲದಳಂದ ಅಳೆದು ಸುರಿಯುತ್ತ ಸುಧಾರಣೆಗಳನ್ನು ಮಾಡುತ್ತಿದ್ದರೂ, ಇನ್ನೂ ಪರದೇಶೀಯ ಶಿಕ್ಷಣ ಪದ್ಧತಿಗಳ ಅಣುಕರಣದಲ್ಲೇ ಮುಂದುವರಿಯುತ್ತಿದೆಯಲ್ಲದೆ, ನಮ್ಮ ನಾಡಿಗೆ ಸ್ವಾಭಾವಿಕವಾದ, ಸ್ವದೇಶ ಶಿಷ್ಟಿಗೆ ಸಾಧಕವಾದ, ಸ್ವಧರ್ಮ ಪಾಲನೆಗೆ ಸಹಕಾರಿಯಾದ ಒಂದು ಬಗೆಯ ಸರಳ ಶಿಕ್ಷಣ ಪದ್ಧತಿ ಏರ್ಪಡದೆ ಇರುವುದು ಶೋಚನೀಯ.

ಈ ಧ್ಯೇಯಕ್ಕನುಸಾರವಾದ ಶಿಕ್ಷಣ ಪದ್ಧತಿಯೇರ್ಪಟ್ಟು—ಒಂದು ತಲೆಮಾರಿನ ಭಾರತ ಸಂತಾನರು ಆ ಧ್ಯೇಯನಿಷ್ಠ ಶಿಕ್ಷಣದಲ್ಲಿ ಪಳಗಿ-ಪರಿಣತರಾಸರೆಂದರೆ, ಅಂದು ಮೇಲೆ ಹೇಳಿರುವಂತಹ ನೈತಿಕ ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳೆಲ್ಲ. ನಮ್ಮ ಭಾರತೀಯ ತತ್ವ ಧೋರಣೆಯನ್ನನುಸರಿಸಿ—ರೂಪುಗೊಂಡು ಬೆಳೆಯ ಸಾಗುವುವು. ಹೀಗೆ ನೈತಿಕ ಪುನರುತ್ಥಾನವಾದಂದಿಗೆ ಮಾತ್ರ ದೇಶದಲ್ಲಿ ನಿಜವಾದ ಶಾಂತಿ ಸ್ಥಾಪನೆ ಆದೀತು. ಸ್ವಾತಂತ್ರ್ಯವೂ ಸ್ವರಾಜ್ಯವೂ ಪ್ರಾಪ್ತವಾದುದು ಸಾರ್ಥಕವೆನ್ನಿಸೀತು!

ಹದ ವೇಳೆ ವಧೂವರರು ಪರಸ್ಪರ ಕೈ ಹಿಡಕೊಂಡು ಮಂಟಪಕ್ಕೆ ಪ್ರದಕ್ಷಿಣೆ ಬರುವರು.

ಮಂಚಿಸಿದನೆನ್ನುವುದರ ಬದಲಾಗಿ ಕೈ ಕೊಟ್ಟ'ನೆನ್ನುವ ಪದ ವಾಡಿಕೆಯಿದೆ.

ಮಧ್ಯಾಹ್ನದ ವೇಳೆ ವಿಜಾಣ ಪ್ರದೇಶದಲ್ಲಿನ ಕೊಳಗಳಿಗೆ ಸ್ನಾನಕ್ಕೆಳಿಯುವ ಮುನ್ನ ಕರತಾಡನ ಮಾಡುವ ಪದ್ಧತಿಯಿದೆ. ಕರತಾಡನದ ಶಬ್ದ ಕೇಳಿದ ಪಾವುಗಳೂ ಮೊಸಳೆಗಳೂ ದೂರಕ್ಕೆ ಸರಿವವೆಂಬ ವಿಶ್ವಾಸವಿದರ ಹಿನ್ನೆಲೆಯೂಗಿದೆ.

ಸಾರ್ವಜನಿಕ ಸಮಾರಂಭಗಳಲ್ಲಿಯೂ ಸಭೆಗಳಲ್ಲಿಯೂ ಕರತಾಡನ ಧ್ವನಿಯನ್ನು ಧಾರಾಳವಾಗಿ ಕೇಳಬಹುದಾಗಿದೆ. ಅಧ್ಯಕ್ಷರನ್ನೂ ಉದ್ಘಾಟಕರನ್ನೂ ಸ್ವಾಗತಿಸುವಾಗ-ಹಾರಾರ್ಪಣೆ ಮಾಡುವಾಗ- ಭಾಷಣ ಪ್ರಾರಂಭವಾದಾಗ-ಆಗಾಗ-ಕೊನೆಗೆ ಸಭಾ ನಂತರವೂ ಕರತಾಡನ ಶಬ್ದವು ಆ ವಾತಾವರಣವನ್ನು ಆವರಿಸುತ್ತದೆ. ಕೆಲ ಮಂದಿ ಭಾಷಣಗಾರರನ್ನು ಕರತಾಡನಗಳ ಮೂಲಕ ಪ್ರೋತ್ಸಾಹಿಸುವುದೂ ಅನುಮೋದಿಸುವುದೂ ಇದೆ. ಭಾಷಣ ವಿರಸವಾದಾಗ ಭಾಷಣಕಾರನನ್ನು ಕರತಾಡನಗಳ ಮೂಲಕವೇ ತಳ್ಳಿ ಹಾಕುವುದೂ ಇದೆ.

ಹೀಗೆಯೇ ಕರತಾಡನಗಳಲ್ಲದ ಸಮಾರಂಭಗಳೂ ಜರಗುವುದಿದೆ. ಸಂತಾಪ ಸೂಚಕ ಸಭೆಗಳಲ್ಲಿ ಕರತಾಡನ ಕೂಡದೆಂಬ ನಿಯಮ.

ನಮ್ಮ ದೇಶದಲ್ಲಿ ಸಾಧಾರಣವಾಗಿ ಸಭೆಗಳಲ್ಲಿ ಪ್ರಶಂಸಿಸಲ್ಪಟ್ಟ ಅನುಮೋದಿಸಲ್ಪಟ್ಟ ಭಾಷಣಕಾರರೂ ಅವರ ಬಗ್ಗೇ ಕರತಾಡನ ಮಾಡುವುದಿಲ್ಲ.ಆದರೆ ಸೋವಿಯಟ್ ದೇಶದಲ್ಲಿ ಈ ಪದ್ಧತಿಯೂ ಇದೆಯೆನ್ನಲಾಗಿದೆ.

ಅನುಮೋದನೆ,ಆಹ್ಲಾದ ಸೂಚನೆಗಾಗಿ ಕರತಾಡನವು ಸಾಧಾರಣವಾಗಿ ವಿಶ್ವವ್ಯಾಪಿ ಪದ್ಧತಿಯಾಗಿರುವಂತಿದೆ.

ಪ್ರಚಾರ ಸಾಧನವಾಗಿಯೂ ಕರತಾಡನವು ಉಪಯೋಗಿಸಲ್ಪಡುತ್ತದೆ. ಈ ವಿಧಾನವು ಅಮೂಲ್ಯವಾದುದೂ . ಅದೇ ಸಮಯ ವೆಚ್ಚವಿಲ್ಲದುದೂ ಆಗಿದೆ.

'ಮೇಜಿಕ್' ಪ್ರದರ್ಶಿಸುವ ಅನೇಕ ಮೂರಾಟಗಾರರಿದ್ದಾರೆ. ಇವರು ನಗರದೊಳಗೆ ವಿವಿಧೆಡೆಗಳಲ್ಲಿ ಅಥವಾ ನಗರದಿಂದ ನಗರಕ್ಕೆ— ಉತ್ಸವದಿಂದ ಉತ್ಸವಕ್ಕೆ—ಸಂತೆಯಿಂದ ಸಂತೆಗೆ ಪರ್ಯಟನೆ ಮಾಡುವರು. ತಮ್ಮ ವಶವಿರುವ ಸಾಧನಗಳ ವಿಕ್ರಯದ ಬಗ್ಗೆ ಜನಸಂದಣಿಯನ್ನು ಸೇರಿಸಬೇಕಾಗಿ ಬಂದಲ್ಲೆಲ್ಲಾ ಇವರು ಪ್ರೇಕ್ಷಕರಿಂದ ಅನೇಕ ಬಾರಿ ಸದೇ ಪದೇ ಕರತಾಡನ ಮಾಡುವಂತೆ ನಿರ್ದೇಶಿಸಿ ಕಾರ್ಯ ಸಾಧಿಸುತ್ತಾರೆ. ಮೇಜಿಕ್ ನೋಡಲು ಆಕಾಂಕ್ಷೆಯಿಂದ ಕಾದಿದ್ದವರನೇಕರೂ ಅಲ್ಲಿ ಪ್ರಚಾರ ಮಾಡಿದ ಸಾಧನಗಳನ್ನು ಬಿರಿದಿಸುತ್ತಾರೆ. ಇಂತಹ ಜನಸ್ತೋಮದ ಕರತಾಡನದ ಸದ್ದು ಗದ್ದಲ ಕೇಳಿ ಇತರರೂ ಅಲ್ಲಿಗೆ ಆಕರ್ಷಿಸಲ್ಪಡುವರು.

ತಮ್ಮ ಭಾಷಣಗಳನ್ನು ಆಗಾಗ ಕರತಾಡನಗಳ ಮೂಲಕ ಪ್ರೋತ್ಸಾಹಿಸಬೇಕೆಂದು ಶ್ರೋತೃವೇದಿಕೆಯನ್ನೇರುವ ಮುನ್ನವೇ ಸ್ನೇಹಿತರನ್ನಪೇಕ್ಷಿಸಿರುವ "ಫೋಟಾ ಥುರೀಣ"ರಿದುತ್ತಾರೆ.

ಒಂದು ರಾಷ್ಟ್ರದ ಆಡಳಿತೆಯು ಹೊಣೆ ಹೊತ್ತವರು ಇತರ ರಾಷ್ಟ್ರಗಳನ್ನು ಸಂದರ್ಶಿಸಿದಾಗ ಅಲ್ಲಿ 'ಭವ್ಯ ಸ್ವಾಗತ" ಲಭಿಸಿದ್ದಾಗಿ ಪತ್ರಿಕಾವರದಿಗಳಿರುತ್ತವೆ. ಅಲ್ಲಿನ ಕರತಾಡನ ಘೋಷಣೆಗಳನ್ನೂ ವಾರ್ತಾ ಚಿತ್ರಕಾರರೂ, ಭಾವ ಚಿತ್ರಕಾರರೂ, ಫಿಲ್ಮ್ ವಿಭಾಗದವರೂ "ಷಟ್" ಮಾಡಿ ತಂತಮ್ಮ ದೇಶಗಳಿಗೆ ಕಳುಹುವರು. ಕರತಾಡನದ ಘೋಷಣೆಗಳನ್ನು ರೇಡಿಯೋ ನಿಲಯಗಳಿಂದಲೂ ಪ್ರಸಾರ ಮಾಡಲಾರುವುದು. ಇದರಿಂದಾಗಿ ತಮ್ಮ ಆಡಳಿತಗಾರರಲ್ಲಿ ಆ ರಾಷ್ಟ್ರದ ಜನರ ಗೌರವಾದರಗಳೂ ಅಭಿಮಾನವೂ ಹೆಚ್ಚಲು ಅನುಕೂಲವಾಗುತ್ತದೆ.

ಕರತಾಡನ ಮಾಡುವ ಮಂದಿ— ಪಂಣತರನ್ನು ಬಾಡಿಗೆಗೆ ನೇಮಿಸುವ ರೂಢಿ ವಿದೇಶಗಳಲ್ಲಿನ ಅನೇಕ ಕಲಾ ಸಂಸ್ಥೆಗಳಲ್ಲಿ ಅನೇಕ ವರ್ಷಗಳಿಂದಲೂ ಇದೆಯೆನ್ನಲಾಗಿದೆ.

ಪ್ರಾಚೀನ ಕಾಲದಿಂದಲೇ ಕರತಾಡನವು ಮನುಷ್ಯನ ಜೀವನದೊಂದಿಗೆ ಹೊಂದಾಣಿಕೆಗೊಂಡಿದೆ ದಿನದಿಂದ ದಿನಕ್ಕೆ "ಕರತಾಡನ"ಕ್ಕೆ 'ಡಿಮಾಂಡ್' ಕೂಡಾ ಹೆಚ್ಚಾಗುತ್ತಾ ಬರುತ್ತಿದೆ.ಈ ವಿಶಿಷ್ಟ ಕಲೆಗೆ ಇನ್ನೂ ವಿಕಸನ ಸಾಧ್ಯತೆಗಳಿವೆ.

(ಸಂಗ್ರಹ)

ಶಿಕ್ಷಣ ಎತ್ತ ಸಾಗಿದೆ?

(ಎಂಟನೇ ಪುಟದಿಂದ)

ತಲೆಯೆತ್ತಿವೆ. ಈ ಶಾಲೆಗಳಲ್ಲಿ ಓದುವ ಮಕ್ಕಳಲ್ಲಿ ಶೇಕಡಾ ಎಂಬತ್ತೈದರಷ್ಟು ಮಕ್ಕಳು ಹಿಂದೂಗಳೆಂದ ಮೇಲೆ ಹಿಂದೂಗಳ ಸನಾತನ ಧರ್ಮ ಶ್ರದ್ಧೆ ಇದರಿಂದಲೇ ವ್ಯಕ್ತವಾಗುತ್ತದೆ.ಈ ಕ್ರೈಸ್ತ ಶಾಲೆಗಳಂತೂ ಭಾರತೀಯರನ್ನು ಸುಲಿಗೆ ಮಾಡುತ್ತಲಿವೆಯೆಂದೇ ಹೇಳಬೇಕು. ಹಿಂದೂ ಧರ್ಮವನ್ನು ಈ ಕ್ರೈಸ್ತ ಶಾಲೆಗಳು ಅಪಪ್ರಚಾರಮಾಡುತ್ತವೆ; ತಮ್ಮ ಶಾಲೆಗಳಲ್ಲಿ ಓದುವ ಹಿಂದೂ ವಿದ್ಯಾರ್ಥಿಗಳಿಗೆ ಹಿಂದೂ ಧರ್ಮವನ್ನನುಸರಿಸದಂತೆ ಬೋಧೆ ಮಾಡುತ್ತಿವೆ. ಹಿಂದೂ ವಿದ್ಯಾರ್ಥಿನಿಯರು ತಮ್ಮ ಹಿಂದೂ ಧರ್ಮಕ್ಕನುಸಾರವಾಗಿ ಬಳೆ ತೊಡುವುದನ್ನು, ಹೂ ಮುಡಿಯುವುದನ್ನು ಮತ್ತು ಹಣೆಯ ಮೇಲೆ ಕುಂಕುಮವಿಡುವುದನ್ನು ಈ ಶಾಲೆಗಳು ನಿಷೇಧಿಸಿವೆ. ಬಲಾತ್ಕಾರದಿಂದ ಹಿಂದೂ ವಿದ್ಯಾರ್ಥಿನಿಯರು ಈ ಸಂಪ್ರದಾಯಗಳನ್ನು ತೊರೆಯುವಂತೆ ಮಾಡಲಾಗುತ್ತಿದೆ. ಇದೇ ಕಾಲ್ಕು ತಿಂಗಳಿಗೆ ಮುಂಚೆ ಮುಂಬಯಿಯ ಕ್ರೈಸ್ತ ಶಾಲೆಯೊಂದರಲ್ಲಿ ಈ ರೀತಿಯ ಘಟನೆ ನಡೆಯಿತು. ಮತ್ತು ಇನ್ನೂ ಅನೇಕ ಕಡೆಗಳಿಂದ ಇಂತಹ ದೂರುಗಳು ಕೇಳಿ ಬರುತ್ತಿವೆ.

ಇವುಗಳಿಗೆಲ್ಲಾ ಕಾರಣವೆಂದರೆ ಇಂದಿನ ಶಿಕ್ಷಣ ವಿಧಾನದಲ್ಲಿ ಅನನುಭವಿಗಳ ಅಜಾಗರೂಕತೆಯಿಂದಾಗಿ ಜನತೆಯ ಮೇಲೆ ಯಾವುದೊಂದು ಹಿಡಿತವೂ ಇಲ್ಲದಿರುವುದು. ಭಾರತೀಯರ, ಮೂಲ ಸಂಪತ್ತಾದ ಹಿಂದೂ ಧರ್ಮವನ್ನು ಅಲ್ಲಡಲೆಯುವಷ್ಟು ಕ್ರೈಸ್ತರಿಗೆ ಸಲಿಗೆ ಕೊಟ್ಟಿರುವ ಈ ಶಿಕ್ಷಣ ಕ್ರಮ ನಿಜಕ್ಕೂ ವಿಪತ್ಕಾರಕವಾದುದು.

ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಿರುವಂತಹ ಈ ಸಂದರ್ಭದಲ್ಲಿ ಶಿಕ್ಷಣದಲ್ಲಿ ಕ್ರಾಂತಿಯಾಗಲೇ ಬೇಕು. ಬ್ರಿಟಿಷರ ಕಾಲದಿಂದ ನಡೆದು ಬಂದ ಶಿಕ್ಷಣ ಕ್ರಮದಲ್ಲಿ ಬದಲಾವಣೆಯಾಗಲೇ ಬೇಕು. ಇಲ್ಲದಿದ್ದರೆ ಈ ಶಿಕ್ಷಣ ಪದ್ಧತಿ ಮತ್ತಷ್ಟು ವಿಪತ್ಕಾರಕವಾಗುತ್ತ ಹೋಗಿ ನಮ್ಮ ಸಂಸ್ಕೃತಿಯೇ ನಿರ್ನಾಮವಾದೀತು.

ಇಂದಿನ ಶಿಕ್ಷಣಕ್ರಮದಲ್ಲಿ ಸುಧಾರಣೆ ಮಾಡಲು ಎಷ್ಟೋ ಪರಿಹಾರಗಳಿವೆ.

ಜನಗಳ ನಿತ್ಯಜೀವನದ ಅವಶ್ಯಕತೆಗಳ ಮೇಲೆ ವಿಶ್ವವಿದ್ಯಾನಿಲಯಗಳನ್ನು ರಚಿಸಬೇಕು. ಇದರಿಂದ ರಾಷ್ಟ್ರದ ಸಾಮಾಜಿಕ, ಆರ್ಥಿಕ ಮತ್ತು ದೇಶದ ಸಂರಕ್ಷಣಾ ಸಮಸ್ಯೆಗಳನ್ನು ನಿವಾರಿಸಬಹುದು. ದೇಶದ ಹಿತಕ್ಕಾಗಿ ಪ್ರತಿಯೊಬ್ಬನೂ ಕೆಲಸ ಮಾಡಬೇಕು. ಇಂತಹ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಸೇವೆಗೈಯದವನನ್ನು ಸಮಾಜದ್ರೋಹಿಯೆಂದು ಘೋಷಿಸಬೇಕು. ಹೀಗೆ ಜನತೆಗೆ ಉಪಯುಕ್ತವಾಗುವಂಥ ಯಾವುದಾದರೂ ವಸ್ತುಗಳ ತಯಾರಿಕೆಯನ್ನು ಕಲಿಸಿ ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಅರ್ಥಶಾಸ್ತ್ರ, ಭಾಷೆ, ಇವುಗಳನ್ನು ಕಲಿಸಿ, ನಮ್ಮ ನಾಡಿನ ಸಂರಕ್ಷಣಾ ಕಾರ್ಯದಲ್ಲಿ ನಿರತರಾಗುವಂತೆ ಪ್ರೇರೇಪಿಸಿ ವಿಶ್ವವಿದ್ಯಾನಿಲಯಗಳು ಶಿಕ್ಷಣ ವಿಧಾನದಲ್ಲಿ ಸುಧಾರಣೆ ತರಬಹುದು.

ವಿಶ್ವವಿದ್ಯಾನಿಲಯದ ಪಠ್ಯಕ್ರಮವನ್ನು ಬದಲಾಯಿಸಿ ಆಂಗ್ಲ ಲೇಖಕ ಗ್ರಂಥಗಳನ್ನು ಬಿಟ್ಟು ನಮ್ಮ ವಿದ್ಯಾರ್ಥಿಗಳ ಮನೋಗುಣಕ್ಕನುಸಾರವಾಗಿ ನಮ್ಮ ಸಂಸ್ಕೃತಿ ಮತ್ತು ಧರ್ಮ ಪ್ರಸಾರಕ್ಕನುಸಾರವಾಗಿ ಪಠ್ಯಕ್ರಮವನ್ನು ನಿರ್ಮಿಸ ಬಹುದು.ಕೈಗಾರಿಕೆಗೆ ಮತ್ತು ವ್ಯವಸಾಯಕ್ಕೆ ಸಂಬಂಧ ಪಟ್ಟಂತೆ ಪಠ್ಯ ಕ್ರಮವನ್ನು ರಚಿಸಿ ವಿದ್ಯುಚ್ಛಕ್ತಿಗೆ ಅತ್ಯಾವಶ್ಯಕವಾದ ಸಾಮಗ್ರಿಗಳ ತಯಾರಿಕೆಯಲ್ಲಿ,ಗಡಿಯಾರಗಳ,ನಿರ್ಮಾಣದಲ್ಲಿ, ಮೋಟಾರು, ಹಡಗು, ಯಂತ್ರಗಳ, ಮತ್ತಿತರ ರಕ್ಷಣಾ ಸಾಮಗ್ರಿಗಳ ನಿರ್ಮಾಣದಲ್ಲಿ,ವಿಮಾನಗಳ, ರೇಡಿಯೋಗಳನಿರ್ಮಾಣದಲ್ಲಿ, ಮರಮುಟ್ಟುಗಳತಯಾರಿಕೆಯಲ್ಲಿ ಗಾಜು ಮತ್ತು ಪಿಂಗಾಣಿ ಸಾಮಾನುಗಳ ತಯಾರಿಕೆಯಲ್ಲಿ, ಔಷಧಿಗಳ, ರಾಸಾಯನಿಕ ವಸ್ತುಗಳ, ಎಣ್ಣೆ ಮತ್ತು ಸಾಬೂನುಗಳ, ಪ್ಲಾಸ್ಟಿಕ್ಸ್ ವಸ್ತುಗಳ, ಸಿಮೆಂಟ್ ಮತ್ತು ಕಾಗದದ ತಯಾರಿಕೆಯಲ್ಲಿ, ಚರ್ಮದ ಕೆಲಸದಲ್ಲಿ, ಮಗ್ಗದ ಕೆಲಸದಲ್ಲಿ ವಿದ್ಯಾರ್ಥಿಗಳಿಗೆ ತರಬೇತು ನೀಡಬಹುದು. ಈ ವಿಷಯದಲ್ಲಿ ಗ್ರಾಮ ವಿದ್ಯಾಪೀಠಗಳ ಸ್ಥಾಪನೆ ಅತ್ಯವಶ್ಯವಾಗಿರುತ್ತದೆ. ಪ್ರತಿ ವಿಶ್ವವಿದ್ಯಾನಿಲಯದಲ್ಲೂ ಸೈನಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿ, ದೇಶ ಸಂರಕ್ಷಣೆಯ ಕಾರ್ಯದಲ್ಲೂ ವಿದ್ಯಾರ್ಥಿಗಳಿಗೆ ತರಬೇತಿ ನೀಡಬಹುದು.

ಇಂಜಿನಿಯರಿಂಗ್, ವೈದ್ಯಕೀಯ ಮ

ಪ್ರಜಾರಾಜ್ಯ ದಿನದ ಶುಭಾಶಯಗಳು

ಮನೆ ಮಡದಿಯರಿಗೆ ಮನ ಮೆಚ್ಚುವ ಸುದ್ದಿ
ಹೋಟೇಲು ಮಾಲಿಕರಿಗೆ ಅಚ್ಚ ಹೊಸ ಸುದ್ದಿ
ಕೃಷಿಕರಿಗೆಲ್ಲ "ವಿಜಯದ" ಸುದ್ದಿ

ಇವೆಲ್ಲ "ಸಂಜಯ ಇಂಡಸ್ಟ್ರೀಸ್"ನ ಸಿದ್ಧಿ!

ಮನೆಗಳಿಗೆ, ಹೋಟೇಲುಗಳಿಗೆ ಅತ್ಯವಶ್ಯವಾದ ಅರಿಕ್ಷಣದಲ್ಲಿ ಕಡಿಮೆ ವೆಚ್ಚದಲ್ಲಿ ಕಡೆಯುವ ಯಾಂತ್ರಿಕ ಕಲ್ಲುಗಳನ್ನೂ ಅಲ್ಲದೆ, ಕೃಷಿಕರಿಗೆ ಇಲೆಕ್ಟ್ರಿಕ್ ಪಂಪುಸೆಟ್ಟುಗಳನ್ನೂ ಆಯಿಲ್ ಇಂಜಿನುಗಳನ್ನೂ ಸುಲಭ ಕಂತುಗಳಲ್ಲಿ ಒದಗಿಸುವ ಏರ್ಪಾಡು ಮಾಡಿದ್ದೇವೆ.

ವಿಶೇಷ ಮಾಹಿತಿಗೆ ಕೂಡಲೇ ಸಂಪರ್ಕಿಸಿ

ಸಂಜಯ ಇಂಡಸ್ಟ್ರೀಸ್

ಬಿಜ್ರಿ ರಸ್ತೆ, ಮಂಗಳೂರು—1

ತ್ತು ನ್ಯಾಯಶಾಸ್ತ್ರ ವಿಭಾಗದಲ್ಲಿ ಸಂಶೋಧನೆಗಳನ್ನು ನಡೆಸಿ, ಅದರ ಅಧಿಕಾರದ ಮೇಲೆ ವಿಶ್ವ ವಿದ್ಯಾನಿಲಯಗಳು ಶಿಕ್ಷಣಮಂಟಪವನ್ನು ರಚಿಸಬೇಕು. ಈ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ಪಾಶ್ಚಾತ್ಯರ ಔಷಧಿ ಅಂಗಾಂಗಗಳ ಪಾರಾಟ ಪ್ರತಿನಿಧಿಗಳಾಗಿ ಬಿಟ್ಟಿವೆ. ಈ ಕಾಲೇಜುಗಳಲ್ಲಿ ಪಾಶ್ಚಾತ್ಯ ಶಿಕ್ಷಣ ಕ್ರಮವನ್ನೇ ಅನುಸರಿಸಲಾಗಿದೆ. ಈ ವಿಧದ ಅನುಕರಣೆಯಿಂದ ನಮ್ಮ ದೇಶದ ಮುನ್ನಡೆ ಎಂದಿಗೂ ಸಾಧ್ಯವಾಗಲಾರದು. ನಮಗೆ ಅವಶ್ಯವಾದ ಯಂತ್ರೋಪಕರಣಗಳನ್ನು ನಿರ್ಮಿಸುವಂತಹ, ತಯಾರಿಸುವಂತಹ ಸಾಮರ್ಥ್ಯ ನಮ್ಮ ವಿದ್ಯಾರ್ಥಿಗಳಿಗೆ ಗೊದಗುವಂತೆ ಶಿಕ್ಷಣ ಕ್ರಮವಿರಬೇಕು. ಇಂದಿನ ಮೆಡಿಕಲ್ ಕಾಲೇಜುಗಳೂ ಪಾಶ್ಚಾತ್ಯ ಔಷಧಿಗಳ ಮಾರಾಟಿಗಾರರನ್ನು ಸೃಜಿಸುತ್ತಿವೆ. ಇದನ್ನು ನಿವಾರಿಸಿ ಶಿಕ್ಷಣ ಕ್ರಮವನ್ನು ಬದಲಾಯಿಸಿ, ನಮಗ ಬೇಕಾದ ಔಷಧಿಗಳನ್ನು ನಮ್ಮ ದೇಶದಲ್ಲಿಯೇ ತಯಾರಿಸುವಂತೆ ಈ ವೈದ್ಯಕೀಯ ವಿದ್ಯಾರ್ಥಿಗಳಿಗೆ ತರಬೇತು ನೀಡಬೇಕು. ಈ ದಿಸೆಯಲ್ಲಿ ಆಯುರ್ವೇದದ ಪುನರುದ್ಧಾರ, ಆಯುರ್ವೇದ ಔಷಧಿಗಳ ಬಳಕೆ ವೈದ್ಯಕೀಯ ವಿಜ್ಞಾನದ ಮುನ್ನಡೆಗೆ ಬಹುಮಟ್ಟಿಗೆ ಪೂರಕವಾದೀತು.

ನ್ಯಾಯಶಾಸ್ತ್ರದಲ್ಲಿಯೂ ಸಂಶೋಧನೆಗಳು ನಡೆಯಬೇಕು. ಸುಪ್ರೀಂ ಕೋರ್ಟಿನ ಕೈಕೆಳಗೆ ಒಂದು ನ್ಯಾಯಶಾಸ್ತ್ರ ವಿಶ್ವವಿದ್ಯಾಲಯ ಸ್ಥಾಪಿತಗೊಂಡು, ಅಲ್ಲಿ ಶ್ಯಾಯಾಂಗಕ್ಕೆ ಸಂಬಂಧಿಸಿದ ಸಂಶೋಧನಾ ಕಾರ್ಯ ನಡೆಯಬೇಕು ಮತ್ತು ರಾಷ್ಟ್ರಕ್ರಮಬದ್ಧವಾದ ಅತ್ಯುತ್ತಮ ನ್ಯಾಯವಿದಗಳನ್ನು ಸಿದ್ಧಪಡಿಸಬೇಕು.

ವಿದ್ಯಾಭ್ಯಾಸದಲ್ಲಿ ಶಿಕ್ಷಣ ಮಾಧ್ಯಮ ಬಹಳ ಪ್ರಮುಖ ಪಾತ್ರವನ್ನು ಹೊಂದಿದೆ. ಪರಕೀಯ ಭಾಷೆಯಾದ ಇಂಗ್ಲೀಷ್ ಮೂಲಕ ವ್ಯಾಸಂಗ ಮಾಡುವುದರಿಂದ ಬಹಳ ಮಂದಿ ವಿದ್ಯಾರ್ಥಿಗಳಿಗೆ ಶ್ರಮವಾಗುತ್ತದೆ. ಆದ್ದರಿಂದ ಆಯಾ ಪ್ರಾಂತೀಯ ಭಾಷೆಗಳೇ ಶಿಕ್ಷಣ ಮಾಧ್ಯಮವಾಗಿರಬೇಕಾದುದು ಸೂಕ್ತವಾಗಿರುತ್ತದೆ. ಇದನ್ನು ಜಾರಿಗೆ ತರಬೇಕಾದರೆ ಅಧ್ಯಾಪಕರಿಗೆ ಆಯಾ ಪ್ರಾಂತೀಯ ಭಾಷೆಗಳಲ್ಲಿ ಬೋಧಿಸುವ ಸಾಮರ್ಥ್ಯವನ್ನು ಪಡೆಮಾಡಿಕೊಳ್ಳಲು ತುಸು ಅವಧಿ ಕೊಡಬೇಕು. ಇಂಜಿನಿಯರಿಂಗ್, ವೈದ್ಯಕೀಯ ಮತ್ತು ನ್ಯಾಯಶಾಸ್ತ್ರ ಅಧ್ಯಾಪಕರುಗಳಿಗೆ ಇನ್ನೂ ಹೆಚ್ಚಿನ ಅವಧಿಯನ್ನು ನೀಡಬಹುದು. ಕೇಂದ್ರ ಸರಕಾರದವರು ಇದೇ ರೀತಿ ರಾಷ್ಟ್ರಭಾಷೆಯಾದ ಹಿಂದಿಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಬಹುದು.

ವಿಶ್ವವಿದ್ಯಾಲಯಗಳ ಮೇಲೆ, ವಿದ್ಯಾ ಸಂಸ್ಥೆಗಳ ಮೇಲೆ, ಹತೋಟಿಯಿಟ್ಟುಕೊಳ್ಳಲು ಸರಕಾರ ಏನತ್ತೊಂದು ಕ್ರಮ ಕೈಗೊಳ್ಳಬಹುದು. ವಿದ್ಯಾಸಂಸ್ಥೆಗಳಿಗೆ, ವಿಶ್ವವಿದ್ಯಾನಿಲಯಗಳಿಗೆ 'ಗ್ರಾಂಟ್' ಕೊಡುವ ಪದ್ಧತಿಯನ್ನು ಪ್ರಸಾರಪಡಿಸಬೇಕು. ಇಂದಿನ ವಾತಾವರಣಕ್ಕೆ ತಕ್ಕಂತೆ ಕಲಸ ಮಾಡುವ ವಿದ್ಯಾ ಸಂಸ್ಥೆಗಳಿಗೆ ಧನಸಹಾಯ ಮಾಡಿ ಸಾಕಷ್ಟು ಕ್ರಮಗಳನ್ನು ಲಂಘಿಸುವ ಸಂಸ್ಥೆಗಳಿಗೆ 'ಗ್ರಾಂಟ್' ಕೊಡುವುದರಲ್ಲಿ ಸ್ವಲ್ಪ ಭಾಗವನ್ನು ಬೋನಾವಾಡಬೇಕು.

ಈ ಎಲ್ಲ ಕ್ರಮಗಳನ್ನು ನಮ್ಮ ಸರ್ಕಾರ ಕೈಗೊಂಡರೆ ಶಿಕ್ಷಣ ವಿಧಾನದಲ್ಲಿ ಕ್ರಾಂತಿಯಾಗಿಯೇ ಆಗುತ್ತದೆ. ಮತ್ತು ಶಿಕ್ಷಣದ ಮಟ್ಟ ಮೇಲಕ್ಕೇರುತ್ತ ಹೋಗುತ್ತದೆ.

ಶಿಕ್ಷಣ ವಿಧಾನದಲ್ಲಿ ಆಗಬೇಕಾದ ಮತ್ತೊಂದು ಸುಧಾರಣೆಯೆಂದರೆ ಸರ್ಕಾರೀ ನೌಕರಿಗೆ ಸೇರಬಯಸುವವರಿಗೆ ವಿಶೇಷ ಪ್ರೌಢ ಶಿಕ್ಷಣ ನೀಡುವುದು. ಇಂದಿನ ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿರುವವರಲ್ಲಿ ಶೇಕಡಅರುವತ್ತರಷ್ಟು ಜನ ನೌಕರಿಗಳಿಗಾಗಿ ಪದವೀಧರರಾಗಬೇಕೆಂಬ ಗುರಿಯಿಟ್ಟು ಕೊಂಡಿರುವವರು ; ಸಂಸ್ಕೃತಿ—ಸಾಧನೆ ಇವರ ಗುರಿಯಲ್ಲ. ಹೀಗಾಗಿ ಇಂದಿನ ವಿಶ್ವ ವಿದ್ಯಾನಿಲಯಗಳು ವಾಸ್ತವವಾಗಿ ಉದ್ಯೋಗ ಶಾಲೆಗಳಾಗಿವೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ತಮಗೆ ಬೇಕಾದ ಸರ್ಕಾರಿ ನೌಕರರನ್ನು ತಾವೇ ತರಬೇತುಕೊಟ್ಟು ಸಂಪಾದಿಸಿಕೊಳ್ಳಬೇಕು. ಇದಕ್ಕೆ ಪ್ರೌಢ ಶಾಲೆಯ ಶಿಕ್ಷಣವನ್ನು ಕನಿಷ್ಠ ವಿದ್ಯಾರ್ಹತೆಯಾಗಿಟ್ಟು ಕೊಳ್ಳಬಹುದು. ಉದಾಹರಣೆಗೆ ಡೆಹ್ರಾಡೂನ್‌ನಲ್ಲಿರುವ ಸೈನಿಕ ಶಿಕ್ಷಣಾಲಯದಲ್ಲಿ ಹೀಗೆ ಪ್ರೌಢ ಶಾಲಾ ಶಿಕ್ಷಣವನ್ನು ಮುಗಿಸಿದವರನ್ನೇ ಆರಿಸಿಕೊಂಡು ಅವರಿಗೆ ವಿಶೇಷ ಸೈನಿಕ ಶಿಕ್ಷಣ ನೀಡಲಾಗುತ್ತಿದೆ. ಇದೇ ಕ್ರಮ ಉಳಿದಲ್ಲಿ ಸರ್ಕಾರಿ ನೌಕರಿಗಳೂ ಅನ್ವಯಿಸುತ್ತದೆ. ಏಕೆಂದರೆ ಪದವೀಧರರೇ ಅತ್ಯುತ್ತಮ ಅಧಿಕಾರಿಗಳಾಗುತ್ತಾರೆಂಬುದು ಕೇವಲ ಒಂದು ಭ್ರಾಂತಿ.

ಇಷ್ಟೇ ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ವ್ಯಾವಹಾರಿಕ ಭಾಷೆಯಾಗಿ ಆಯಾ ಪ್ರಾಂತೀಯ ಭಾಷೆಗಳನ್ನು ಅಥವಾ ರಾಷ್ಟ್ರಭಾಷೆಯಾದ ಹಿಂದಿ ಭಾಷೆಯನ್ನು ಬಳಸುವುದು ಸೂಕ್ತವಾದುದು. ಹಿಂದಿ ಬಲ್ಲವರು ದಕ್ಷಿಣದ ಯಾವುದಾದರೊಂದು ಭಾಷೆಯನ್ನರಿತಿರುವುದು ಮತ್ತು ಹಿಂದಿ ಮಾತೃಭಾಷೆಯಲ್ಲದವರು ಹಿಂದಿಯನ್ನರಿಯುವುದು ಅತ್ಯಾವಶ್ಯಕವಾದುದು. ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಭಾರತೀಯ ಪ್ರತಿನಿಧಿಗಳು ಹಿಂದಿಯನ್ನೆ ಬಳಸುವುದೊಳ್ಳೆಯದು. ಅಲ್ಲದೆ ಭಾರತೀಯರು ಹಿಂದಿಯಲ್ಲಿ ಅಥವಾ ಭಾರತೀಯ ಭಾಷೆಗಳಲ್ಲೇ ಮಾತನಾಡುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ಇಷ್ಟೆಲ್ಲ ಸುಧಾರಣೆಗಳನ್ನು ತಂದರೆ ಶಿಕ್ಷಣ ವಿಧಾನದ ಮಟ್ಟವು ಏರುತ್ತ ಹೋಗಿ, ನಮ್ಮ ದೇಶದ ಎಷ್ಟೋ ಆರ್ಥಿಕ ಸಮಸ್ಯೆಗಳಷ್ಟು ಪರಿಹರಿಸಬಹುದು. ಈ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ನಿವಾರಿಸಲ್ಪಟ್ಟದ್ದೇ ಆದರೆ ಜನ ಸಂಸ್ಕೃತಿ ಮತ್ತು ಧರ್ಮದೆಡೆಗೆ ಗಮನ ವಿತ್ತಾರು. 'ಬಡತನವ ಹೊತ್ತು ಆನೆ ದೊರಕೆ ಫಲವೇನರ್ಕ್ಕ ನೀಂಡಿಸಿದರ್ ಪೂತ್ತು ಆದ್ಯ ದೊರಕೆ ಫಲವೇನು?' ಎಂದು ಕವಿ ರಂಘವಾಂಕನು ಹೇಳಿರುವಂತೆ ಈ ಅರೆಹೊಟ್ಟೆಯ ಜನತೆಗೆ ಸಂಸ್ಕೃತಿಯ ಗೊಡವೆಯೇಕೆ? ಆದ್ದರಿಂದ ಶಿಕ್ಷಣದಲ್ಲಿ ಕ್ರಾಂತಿಯಾದರೆ ಅದು ಈ ಎಲ್ಲ ಕ್ಷೇತ್ರಗಳಲ್ಲೂ ಪಸರಿಸಿ, ಇಂದಿನ ಮುಗ್ಗಟ್ಟು ಪರಿಹಾರವಾಗಿ, ಶಿಕ್ಷಣಕ್ಕೂ ಸಂಸ್ಕೃತಿಗೂ ಜನತೆಯು ಪ್ರೋತ್ಸಾಹ ನೀಡುವ ಕಾಲವೂ ಬಂದೀತು.

ವಿಜ್ಞಾನ ಮತ್ತು ಆಧುನಿಕ ಯುದ್ಧ ಕಲೆ

(ಬಳಿಕ ಪುಟದಿಂದ)

ನ್ನು ಅನುಸರಿಸಿ ಧಾಳಿ ಮಾಡಬಹುದಾದ ಯುದ್ಧ ಮಾತ್ರ ಅಣು ಬಾಂಬುಗಳ ಧಾಳಿಯಿಂದ ವಿನಾಶಗೊಳಿಸುವುದಕ್ಕಿಂತಲೂ ಅನೇಕ ಪಟ್ಟು ಭೀಕರವೂ, ಕ್ರೂರವೂ, ಸರ್ವನಾಶವೂ ಆಗುತ್ತದೆಯೆಂಬುದರಲ್ಲಿ ಸಂದೇಹವೇ ಇಲ್ಲ.

ಇತ್ತೀಚಲಾಗಿ ವಿಜ್ಞಾನವು ಮಾನವನ ಕೈಯಲ್ಲಿ ಇರಿಸಿರುವ ವಿವಿಧ ಬಗೆಯ ನಿರ್ದೇಶಿತ ಆಕಾಶ ಬಾಣಗಳನ್ನು (guided missiles) ಸಹ ನಾವು ನಿರ್ಲಕ್ಷಿಸುವಂತಿಲ್ಲ. ಆಕಾಶದಿಂದ ಭೂಮಿಗೆ, ಭೂಮಿಯಿಂದ ಆಕಾಶಕ್ಕೆ, ಭೂಮಿಯ ಮೇಲೇ ಒಂದು ಸ್ಥಳದಿಂದ ಇನ್ನೊಂದು ಅತಿದೂರದ ಸ್ಥಳಕ್ಕೆ, ಮತ್ತು ಆಕಾಶದಲ್ಲಿಯೇ ಒಂದು ಗುರಿಯಿಂದ ಇನ್ನೊಂದು ಅತಿ ದೂರದ ಗುರಿಗೆ ಗುರಿಯಿಡಬಲ್ಲ ಆಕಾಶಬಾಣಗಳನ್ನು ಈಗ ಸಿದ್ಧಗೊಳಿಸಲಾಗಿದೆ. ಕೆಲವು ಅಂತರ ಖಂಡಕ್ಷಿಪಣಿಗಳನ್ನು ೫,೦೦೦ ಮೈಲಿಗಳ ವರೆಗೆ ನಿಶ್ಚಿತ ಗುರಿಯಿಟ್ಟು ಹಾರಿಸಬಹುದಾಗಿದೆ. ಆಕಾಶದಿಂದ ಭೂಮಿಯ ಕಡೆಗೆ ಭಾರವಾದ ಬಾಂಬನ್ನು ಅತ್ಯಂತ ದೂರದಲ್ಲಿದ್ದ ಗುರಿಯನ್ನು ಮುಟ್ಟಿ ನಾಶಪಡಿಸಲು ಬಳಸಿ, ಸಾಕಷ್ಟು ವಿಚಿತ್ರವಾಗಿಯೂ, ಕ್ಷಿಪ್ರವಾಗಿಯೂ ದಾಳಿಮಾಡಬಹುದಾಗಿದೆ. ಇಂತಹ ನಿರ್ದೇಶಿತ ಆಕಾಶ ಬಾಣಗಳನ್ನು ವಿಮಾನದಿಂದ ಬಾಂಬುಗಳ ಮೂಲಕ ಕೆಳಗಿಳಿಸಿ ಅಥವಾ ಕೆಡವಿ, ನಿರ್ದಿಷ್ಟ ಗುರಿಯ ಕಡೆಗೆ ಹೋಗಿ ತಲಪುವಂತೆ ಮೊದಲು ಒಂದು ಪೂರಕ ಸಾಧನವೆಂದು ಬಳಸಲಾಗುತ್ತಿದೆ.

ಇಂದು ಜಗತ್ತಿನಲ್ಲಿ ಎಲ್ಲ ಕಡೆಯೂ ವೈಜ್ಞಾನಿಕ ರೀತಿ ನಿರ್ದೇಶಿಸಲ್ಪಟ್ಟು ನಡೆಯಬಹುದಾದ ಯುದ್ಧದ ವಿಚಾರ ಹಾಗೂ ಭೀತಿಯೇ ಅನೇಕ ಜನರ ಮನಸ್ಸಿನಲ್ಲಿ ಕಾಡುತ್ತಿದೆ. ಹೀಗಾಗಿ ಜಗತ್ತಿನ ನಾನಾ ಭಾಗಗಳಲ್ಲಿ ಒಮ್ಮೊಮ್ಮೆ ಸ್ಥಿರತೆಯ ಅಭಾವ ಹಾಗೂ ಗಂಡಾಂತರದ ಭೀತಿ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಅದರಲ್ಲಿಯೂ ಕಳೆದ ಬಂದೆರಡು ಮಹಾ ಯುದ್ಧಗಳ ಭೀಕರ ದೌರ್ಜನ್ಯವನ್ನೂ ದಾರುಣ ಪರಿಸ್ಥಿತಿಯನ್ನೂ ಕಂಡು ಅನುಭವಿಸಿದ ಜಪಾನ್, ಜರ್ಮನಿ ಕೊರಿಯಾ ಮುಂತಾದ ದೇಶಗಳ ಜನರು ಯುದ್ಧವೆಂಬ ಹೆಸರನ್ನು ಕೇಳಿದರೆ ಸಾಕು, ಇಂದಿಗೂ ನಡುಗುತ್ತಾರೆ ಹಾಗೂ ಕಣ್ಣೊರಸಿ ಕೊಳ್ಳುತ್ತಾರೆ.

ಹೀಗೆ ಇಡಿ ಯುದ್ಧ ತಂತ್ರ ಮತ್ತು ಕಲೆಯೆಂಬುದೇ ಇಂದು ವಿಜ್ಞಾನದಿಂದ ಸಂಪೂರ್ಣವಾಬದಲಾವಂಕಗಾಗಿದೆ. ಇನ್ನು ಮುಂದೆ ವೈಜ್ಞಾನಿಕ ರೀತಿ ನಿರ್ದೇಶಿಸಲ್ಪಟ್ಟು ನಡೆಯಬಹುದಾದ ಯುದ್ಧ ಮಾತ್ರ ಇಡಿ ಜಗತ್ತನ್ನೇ ವಿನಾಶಗೊಳಿಸಬಹುದು; ಮತ್ತು ಮಾನವ ಪೀಳಿಗೆಗೆ ಸಂಪೂರ್ಣ ಅಳಿಗಾಲವನ್ನೇ ತಂದು ಸಂಸ್ಕೃತಿಯ ನಾಮಾವಶೇಷ ಹಾಗೂ ಪ್ರಕೃತಿಯ ಸರ್ವನಾಶ ಮಾಡಬಹುದು.

[ಧಾರವಾಡದ ಆಕಾಶವಾಣಿಯ ಕೃಪೆಯಿಂದ]

RANGE OF PRODUCTS **RANGE OF PRODUCTS**

Squashes, Crushes, Syrups, Biccola & Brinda (Special Syrups) Pickles, Tomato Ketchup, Sweets & Toffees.

Canned Pineapple & Mango slices Mango Pulp Pineapple Juice, Tomato Juice, Fruit Cocktail, Jams, Ginger, Preserve (a delicious desert relieves indigestion and gastric trouble)

Sales Depot: **Bhavanthi Street, Mangalore-1.** Phone: 3266

ಭಾರತದ ಸ್ತ್ರೀಯರ ಆದರ್ಶ ಹೇಗಲ್ಲವೆ?

(ಅರನೇ ಪುಟದಿಂದ)

ಗಿ ಅರ್ಪಿಸಿದಾಗ, ಆ ಮಹಾ ತಾಯಿ, "ಕರುಣಾಳು ರಾಘವನಲ್ಲಿ ಶಪ್ಪಿಳ್ಳ,ಪೆಣ್ಣಾಗಿ ಸಂಭವಿಸಿ ಒಡಲಂಪೊರೆಯದೆನ್ನೊಳ್ ಅಪರಾಧಂ'ಎಂದು ತೀರ್ಮಾನಕ್ಕೆ ಬಂದು ದೆಂದರೆ ಕ್ಷಮೆಯ ಸೀಮಾತೀತವಾಗಲಿಲ್ಲವೇ? ಇಂತಹ ಮನೋಭಾವನೆಯು ಸ್ತ್ರೀ ನೆಮ್ಮ ಭಾರತ ಸಂಸ್ಕೃತಿಗೆ ಮಾತ್ರ ಸಾಧ್ಯ. ಈ ಅನಾಥ ಸ್ಥಿತಿಯಲ್ಲೂ "ರಾಮನಂ ಭುವನಾಭಿರಾಮನಂ" ಸ್ಮರಿಸುವ ದೇವ ಮಾನವಿಯ ಪರಂಪರೆಯವರನ್ನು ನಮ್ಮಜಲಚಿತ್ರಗಳು ಕೊಲೆ ಮಾಡುವುದನ್ನು ನಾವು ಭೀಗುಟ್ಟದೆ, ಅವನ್ನು ಮೆಚ್ಚಿ ಪಿಶಾಚ ಸಂಸ್ಕೃತಿಯ ಪೋಷಕರಾಗ ಬೇಕೆ? ಇಂದಿನವರೆಗೆ ಸೀತಾಮಾತೆಯಂತಹ ಭಾರತೀಯರ ಪೂಜಾಮೂರ್ತಿಯು ಸಹಸ್ರಮಾನಗಳಿಗಾದರೂ ಮೈಮ್ಮೆ ಜನಿಸಿ, ಭಾರತದ ಸ್ತ್ರೀ ಪ್ರಪಂಚವನ್ನು ಸಂಸ್ಕರಿಸುತ್ತದೆ ಎಂಬ ಭರವಸೆಯಿಂದಿದ್ದ ನಮಗೆ ಇನ್ನು ಮುಂದೆ ಆ ನಿರೀಕ್ಷೆಯು ವಿಫಲವಾಗುವುದರಲ್ಲಿದೆ!

ಇತಿಹಾಸ ಯುಗದಲ್ಲೂ ನಮ್ಮ ಸ್ತ್ರೀ ಪ್ರಪಂಚವು "ಶೊಟ್ಟಲು ತೂಗುವ ಕೈ ಜಗವನ್ನಾಳ ಬಲ್ಲದು' ಎಂಬುದನ್ನು ಘೋಷಿಸಿತ !ಝಾನ್ಸಿರಾಣಿ ಲಕ್ಷ್ಮೀಬಾಯಿ, ಬೆಳವಡಿ ಮಲ್ಲಮ್ಮ, ಕರ್ಮದೇವಿ ಮೊದಲಾದ ಮಹಿಳೆಯರು ಸಪ್ಪೆ ಬಿದ್ದ ಸುರುಷರ ಧಮನಿಯಲ್ಲೂ ನವಚೇತನವನ್ನುಂಟು ಮಾಡಿದವಂತರಾದರು. ಲಕ್ಷ್ಮೀಬಾಯಿಗೆ ಜನ್ಮ ಭೂಮಿಯೇ ಜನನಿಗಿಂತ ಹೆಚ್ಚೆಂದು ತೂರಿ ಆಕೆಯ ಸೇವೆಯಲ್ಲೇ ದೇಹ ಬಿಟ್ಟಳು! ಶತ್ರುಗಳೂ ಆಕೆಯ ಹೋರಾಟಕ್ಕೆ ಜಯಕಾರ ಹಾಕಿದರು. ಬೆಳವಡಿ ಮಲ್ಲಮ್ಮನು ತನ್ನ ಪತಿ ಈಶ್ವರ ಪ್ರಭುರಾಯ ರಣರಂಗದಲ್ಲಿ ಗಾಯಾಳುವಾಗಿ ಬಿದ್ದೊಡನೆ, ಮೊಲೆಯುಣ್ಣುವ ತನ್ನ ಕಂದನನ್ನು ದಾಸಿಯ ಕೈಗೊಪ್ಪಿಸಿ ರಣರಂಗಕ್ಕೆ ಧಾವಿಸಿದಳು. ಹುನ್ನಃ ಕನ್ನಡಿಗರ ಸೇವೆಯಲ್ಲಿ 'ಹರಹರ ಮಹಾದೇವ" ಎಂಬ ಘೋಷಣೆಯು ಮುಗಿಲು ಮುಟ್ಟಿ ಶತ್ರುಗಳಾದ ಮರಾಟಿಗರು ನುಸುಗಿ ಹೋದರು. ಚಿತ್ತೂರಿನ ಕರ್ಮದೇವಿಯು ಸಾಕ್ಷಾತ್ ಮಹಿಷಮರ್ದಿನಿಯಾಗಿ, ರಣರಂಗದಲ್ಲಿ ಗುಡುಗಾಡಿ, ಕುತುಬುದ್ದೀನನ್ನು ಗಾಯಗೊಳಿಸಿದಳು! ಗುಜರಾತದ ಸುಲ್ತಾನನು ಚಿತ್ತೂರಿನ ದುರ್ಗವನ್ನು ಮುತ್ತಿದಾಗ ಅಲ್ಲಿನ ರಾಣಿ ಜವಾಹಿರ ಬಾಯಿಯು ಸುಲ್ತಾನನಿಗೆ ಮೃತ್ಯು ದೇವತೆಯಾಗಿ ಕಾಣಿಸಿದಳು! ಚಿತ್ತೂರಿನ ಪದ್ಮಿನಿ ಶಪ್ಪ ಲಜ್ಜೆಯ ರಕ್ಷಣೆಗಾಗಿಯೇ ಖಿಲ್ಜಿ ಅಲ್ಲಾವುದ್ದೀನನಿಗೆ ನಿಳು ಕೆರೆಯ ಫೀರು ಕುಡಿಸಿ, ಸಾವಿರಾರು ಮಂದಿ ಸಖಿಯರೊಡನೆ ಅಗ್ನಿ ಪ್ರವೇಶ ಮಾಡಿದುದನ್ನು ಯಾವ ಭಾರತದ ನಾರಿಯರು ಮರೆಯ ಬಲ್ಲರು? ನಮ್ಮ ಭಾರತದ ನಾರಿಯರು ಮಾತ್ರ ಸ್ತ್ರೀಯರಿಂದ ಭಿನ್ನರಾಗಿ, ಮಾನವನ್ನೇ ಪ್ರಾಣಕ್ಕಿಂತ ಮಿಗಿಲಾಗಿ ಭಾವಿಸಿದುದನ್ನು ಯೋಚಿಸುವಾಗ ಯಾವ ಸ್ತ್ರೀಗೆ ರೋಮಾಂಚನವಾಗದು? ರಾಣೋಜ ಮನೆತನದ ಜಸವಂತ ಸಿಂಹನು ಔರಂಗಜೇಬನೊಡನೆ ಹೋರಾಡಿ, ಸೋತು ರಾಜಧಾನಿಗೆ ಓಡಿಬಂದಾಗ ಆತನ ಪತ್ನಿ ಚಂದ್ರಾದೇವಿಯು—ಯುದ್ಧಭೂಮಿಗೆ ಬೆನ್ನು ತೋರಿಸಿ ಬಂದವನು ನನ್ನ ಪತಿಯಲ್ಲ—ಎಂದು ಕೋಟೆಯ ಬಾಗಿಲನ್ನೇ ತೆಗೆಯಲಿಲ್ಲವಂತೆ! ಸಿಂಹವಾಹಿನಿಯ ಸಂತಾನದ ಸ್ತ್ರೀಯರು ಇಂದು ಮಾನಾಭಿಮಾನಗಳಿಗೆ ಗೌರವ ಕೊಡುತ್ತಿರುವರೇ? ಸಿಂಹಿಣಿಯು ಸದಾ ಸಿಂಹಿಣಿಯಾಗಿ ಬಾಳುವುದರಲ್ಲೇ ಭೂಷಣ ಹುಲಿಯು ಬಣ್ಣಕ್ಕೆ ನಂಬೆ ಸುಟ್ಟುಕೊಂಡರೂ ಎಂದೂ ಹುಲಿಯು ಬಣ್ಣಬಾರದು.

ಕ್ರಿ. ಶ ೧೮೫೭ರಲ್ಲಿ ಜನರಲ್ ಸ್ಮೀಮನ್‌ರು ಜಬ್ಬಲ್‌ಪುರದ ಕಲೆಕ್ಟರರಾಗಿದ್ದರು. ಆಗ ಅಲ್ಲಿಯ ಗೌರವ ಗೃಹಸ್ಥರೊಬ್ಬರು ಸ್ವರ್ಗಸ್ಥರಾಗಲು, ಅವರ ಪತ್ನಿಯು ಸಹಗಮನಕ್ಕೆ ಸಿದ್ಧರಾದರು. ಇದನ್ನು ಕೇಳಿ ಸ್ಲೀಮನ್‌ರು ತಡೆಯೊಡ್ಡಿದರೂ, ಪತಿಯ ಮರಣಾನಂತರ ಪನ್ನನರವಾಡಿಗಳೆಲ್ಲಾ ಸತ್ತಿರುವುದನ್ನೂ, ತಾನು ಸಹಗಮನವಾಗದಿದ್ದರೂ ಕೆಲವು ಗಳಿಗೆಯಲ್ಲೇ ಸಾಯುವೆನೆಂದೂ ಅವರಿಗೆ ಮಂದಟ್ಟು ಮಾಡಿ, ತಾನು ಸಹಗಮನವಾಗಿ ಪತಿಯ ಶರೀರದ ಬೂದಿಯೊಂದಿಗೆ ತನ್ನ ಶರೀರದ ಬೂದಿಯನ್ನೂ ಮಿಶ್ರ ಮಾಡಿಕೊಂಡಳು! ಅಗ್ನಿ ನಾರಾಯಣನ ಆಕೆಯ ಪವಿತ್ರದೇಹವನ್ನು ದಹಿಸುವಾಗ ಆಕೆ ಚಿಟ್ಟೆನ್ನಲಿಲ್ಲ! ಸುಟ್ಟುಸಿರನ್ನೂ ಬಿಡಲಿಲ್ಲ! ಹಿಂದೂ ಸಂಸ್ಕೃತಿಯ ಸ್ತ್ರೀಯರ ಪತಿ ಪ್ರೇಮವು ಹೇಗೆ ಸರ್ವೋಚ್ಚವಾದುದೋ ಹಾಗೇ ರುದ್ರ ಭಯಂಕರವಾದುದೂ ಹೌದು. ಭಾರತದ ಪತಿವ್ರತಾ ಸ್ತ್ರೀಯರೆಲ್ಲಾ ಭಾರತ ಸಂಸ್ಕೃತಿಯ ಉತ್ಕೃಷ್ಟೋತ್ತಮ ವಾಖ್ಯಾನಗಳು!

ಪುರಾಣಕಾಲ ಮತ್ತು ಐತಿಹಾಸಿಕ ಯುಗದ ಆದರ್ಶ ಸ್ತ್ರೀಯರ ಪುಣ್ಯ ವಿಚಾರಗಳನ್ನು ಮೆಲುಕಾಡಿದ ಮೇಲೆ, ವರ್ತಮಾನಕಾಲದ ಆದರ್ಶ ಸ್ತ್ರೀಯರ ಸಿಂಹಾವಲೋಕನವು ಹಿತಕರವಾದದ್ದೇ. ಮೊನ್ನೆ ಮೊನ್ನೆ ಪರಂಧಾಮವನ್ನೈದಿದ ಶ್ರೀ ರಾಮಕೃಷ್ಣ ಪರಮಹಂಸರ ಪೂರ್ವಾಶ್ರಮದ ಪತ್ನಿ ಶ್ರೀ ಶಾರದಾ ದೇವಿಯವರು ಯಾವ ಯುಗದ ಸ್ತ್ರೀಯರಿಗೂ ಆದರ್ಶತೆಯಲ್ಲಿ ಒಂದು ವೀಸದಷ್ಟೂ ಕಡಿಮೆಯೆನಿಸಿಲ್ಲ. ಇವರು ಭಾರತದ ಸ್ತ್ರೀಯರ ಹೃನ್ಮಂದಿರದಲ್ಲಿ ಪೂಜಿಸಲ್ಪಡುವ ಶ್ರೇಷ್ಠ, ಸುಪ್ತ ಸುವರ್ಣ ಪ್ರತೀಕ! ಸ್ವಾಮಿ ವಿವೇಕಾನಂದರು ಈ ದಿವ್ಯ ಮಾತೆಯ ಆಶೀರ್ವಾದವನ್ನು ಪಡೆದ ಮೇಲೆಯೇ ಅಮೇರಿಕಾಕ್ಕೆ ಪ್ರಯಾಣ ಮಾಡಿ, ಅಲ್ಲಿ ಅಜರಾಮರವಾದ ಕೀರ್ತಿ ಶಾಲಿಗಳಾಗಿ ಹಿಂತಿರುಗಿದರು. ಸ್ವಾಮಿ ವಿವೇಕಾನಂದರು ಮುಸ್ಲಿಂ ಫಕೀರನೊಬ್ಬನ ಮಾತಿದ ಕಾರ್ಯದಿಂದ ಆರೋಗ್ಯ ಕಟ್ಟಿ ನರಳುತ್ತಿರುವಾಗ ಶ್ರೀ ಶಾರದಾ ದೇವಿಯವರು ಮಾಪ್ರ ಆ ದುಷ್ಟಶಕ್ತಿಯನ್ನು ತನ್ನ ಆತ್ಮಶಕ್ತಿಯಿಂದ ನಾಶ ಮಾಡಲು ಸಮರ್ಥರಾದರು. ಇವರು ತಪೋಮಯಜೀವನದಿಂದ ಪ್ರತ್ಯಕ್ಷ ಶಕ್ತಿ ದೇವತೆಯೇ ಆಗಿದ್ದರು. ಇವರಿಂದ ಭಾರತದ ಸ್ತ್ರೀ ಸಂಸ್ಕೃತಿಯ ಮೇಲೆ ಉಜ್ವಲ ಪ್ರಕಾಶವು ಬಿತ್ತು!

ಮಹಾತ್ಮಾ ಗಾಂಧೀಜಿಯು ಪತ್ನಿ ಕಸ್ತೂರಿ ಬಾ ಭಾರತದ ಸ್ತ್ರೀಯರು ಹೇಗೆ ಬಾಳಬೇಕೆಂದು ತಮ್ಮ ಜೀವನದಿಂದ ವಿಶ್ರುತ ಪಡಿಸಿದರು. ಗಾಂಧೀಜಿ ಎಂಬ ಜ್ವಲಂತ ಕುಲುಮೆಯಲ್ಲಿ ಕಸ್ತೂರಿಬಾ ಕರಗಿ, ಪತ್ಥಳಿ ಚಿನ್ನವಾಗಿ ಹೊರ ಬಂದರು. ಗಾಂಧೀಜಿ ತಮ್ಮ ದಾಂಪತ್ಯ ಜೀವನದಲ್ಲಿ ಕಸ್ತೂರಿಬಾರವರೊಡನೆ ಎಷ್ಟೋ ಹುಚ್ಚಾಟಗಳನ್ನು ನಡೆಸಿದರೂ ಅವರು ವಿಚಲಿತರಾಗದೆ ಧೈರ್ಯದ ಮೇರುವಾಗಿ ನಿಂತು ಗಾಂಧೀಜಿಗೆ ಸನ್ಮಾರ್ಗದರ್ಶಕರಾದುದನ್ನು ಯಾರೂ ಮರೆಯುವಂತಿಲ್ಲ. ಪ್ರಸಿದ್ಧ ಬ್ಯಾರಿಸ್ಟರರ ಪತ್ನಿಯಾಗಿದ್ದಾಗಲೂ ಕಸ್ತೂರಿಬಾ ತಮ್ಮ ಗೃಹ ಕಾರ್ಯಗಳನ್ನು ಮರೆಗೊತ್ತಿದವರಲ್ಲ. ಮುಂದೆ ಗಾಂಧೀಜಿಯು ಪವಿತ್ರ ಭಾರತದ ಉಸ್ತುವಾರಿಯಾಗಿದ್ದಾಗಲೂ ಅತನ ಬೆನ್ನು ಬಿಡದೆ, ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ಸಮಸ್ತ ಭಾರತೀಯರಿಂದಲೂ 'ಧನ್ಯೆ—ಮಾನ್ಯೆ' ಎನ್ನಿಸಿಕೊಂಡ ಕಸ್ತೂರಿಬಾರವರಿಗಿಂತ ಮಿಕ್ಕಿದ ಆದರ್ಶ ಸ್ತ್ರೀಯರು. ಈ ಕಾಲದಲ್ಲಿ ಇನ್ನಾರು? ಭಾರತದ ಉತ್ತಮ ನಾಯಕರೆನಿಸಿದ್ದ ಶ್ರೀ ಅಲಬಹದ್ದೂರ ಶಾಸ್ತ್ರಿಗಳ ಪತ್ನಿಯಾದ ಲಲಿತಾ ಶಾಸ್ತ್ರಿಯವರ ಜೀವನವು ಯಾವ ಮಹಿಳೆ ಆನಂದವನ್ನುಂಟುಮಾಡದು? ಸಾರಾಂಶ—ಭಾರತದ ಆದರ್ಶ ಸ್ತ್ರೀಯರೆಲ್ಲಾ, "ಪತಿಗೆ ಪಾತಿವ್ರತ್ಯವೇ ಭೂಷಣ" ಎಂದು ಬದುಕಿ ಬಾಳಿದವರು.

ಸದ್ಯ ನಮ್ಮ ಜನಾಂಗದ ವ್ಯಕ್ತಿಪ್ರಪಂಚದಲ್ಲಿ ತಲೆಯೆತ್ತಿ ಬಾಳ ಬೇಕಾದರೆ ಅದು ಮೊದಲು ತಾಯಿ. ಬೇರನ್ನು ಭಾರತದ ಸಂಸ್ಕೃತಿಗು ಅಳಕ್ಕೆ ಇಳಿಸಿ ಅ ಸಾರದಿಂದ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡು ತನ್ನನ್ನು ಕಬಳಿಸಲು ಬರುತ್ತಿರುವ ದುಷ್ಟ ಶಕ್ತಿಗಳನ್ನು ಬಗ್ಗು ಬಡಿಯಬೇಕು. ಅದರ ಬದಲು ತಾನೇ ಅದುಷ್ಟ ಶಕ್ತಿಗಳ ಕಡೆಗೆ ಧಾವಿಸಿದರೆ ಪೂಜ್ಯ ಸಂಸ್ಕೃತಿಯ ಗತಿಯೇನು? ಚಲಚ್ಚಿತ್ರದ ಹೊಯ್ಗಾಲೆಯರು ಹಣಕ್ಕಾಗಿ ಆಭಾಸ-ಅಶ್ಲೀಲ ಚಿತ್ರಗಳನ್ನು ಪೋಷಿಸಿದ ಮಾತ್ರಕ್ಕೆ ಹಲವು ಸಾವಿರ ವರ್ಷಗಳಿಂದ ಬೆಳೆದು ಬಂದ ಭಾರತದ ಸಂಸ್ಕೃತಿ ಒಮ್ಮೆಗೇ ಧೂಳೀಧೂಸರಿತವಾಗಲು ಸಾಧ್ಯವಿಲ್ಲ. ಮಹಿಳೆಯರ ದುರದೃಷ್ಟದಿಂದ ಅವರ ಅಧಃಪತನಕ್ಕೆ ವಿಧಿಯು ಅನುಕೂಲವಾದಬೇಕು. ಹಾಗಾಗದಂತೆ ಭಾರತದ ಮಹಿಳೆಯರು ತಮ್ಮ ಜೀವನಪಥದಲ್ಲಿ ಇಂದೇ ಎಚ್ಚೆತ್ತು ಅಶ್ಲೀಲ ಚಿತ್ರಗಳಿಗೆ ವಿಮುಖರಾದರೆ ಅವರ ಧೀರವರ್ತನೆಗಾಗಿ ಭಾರತ ಮಾತೆಯು ನಿಜವಾಗಿಯೂ ಆನಂದ ಭಾಷ್ಪವನ್ನುದುರಿಸುವಳು! ಬ್ರಹ್ಮರ್ಷಿ ವಸಿಷ್ಠನನ್ನು ವಿಶ್ವಾಮಿತ್ರನ ದೈವಾತಿಶಕ್ತಿಯಿಂದ ಕೆಡಿಸಿದಾಗ ವಸಿಷ್ಠನ ಕಾಮಧೇನುವು ಮೈ ಕೆ ತಾವಿ, ವಿಶ್ವಾಮಿತ್ರನನ್ನು ಉಸಿ ತಜೇಯ ಸೈನ್ಯವನ್ನು ಹುಟ್ಟುಹಾಕಿ ಮಾಡಬಲ್ಲ ವೀರಸಂಸರ ಕುಳನ್ನೇ ಚೆಲ್ಲಿದಂತೆ,ನಮ್ಮ ಸದ್ವರ್ತನೆ, ಸಂಸ್ಕೃತಿ ರಕ್ಷಣೆಯ ಧೀಕ್ಷೆಗೆ ಮೆಚ್ಚಿ ಭಾರತ ಮಾತೆಯು ನಮ್ಮಲ್ಲೇ ಅವತರಿಸಿ ವಿದ್ವಾಂಸನಾದ ಯಾಜ್ಞವಾಲ್ಕ್ಯನನ್ನು ವಾಗ್ಬಾಣಗಳಿಂದ ಇರಿಸಿದ ಗಾರ್ಗೇಯಿಯಂತಹ ಸ್ತ್ರೀಯನ್ನೂ, ಯುಗ್ವೇದದ ಹಲವು ಸೂತ್ರಗಳನ್ನು ರಚಿಸಿದ ಲೋಪಾಮುದ್ರೆಯಂತಹ ತಪಸ್ವಿನಿಯರನ್ನೂ, ಮೂಕಪ್ರೇಮ, ಪಾತಿವ್ರತ್ಯಗಳನ್ನು ಮೈಗೂಡಿಸಿಕೊಂಡ, ಪ್ರಾತಃಸ್ಮರಣೀಯರಾದ ಸೀತಾ ಸಾವಿತ್ರಿಯರಂತಹ ಮಹಿಳೆಯರನ್ನೂ, ಕನ್ನಡಿಗರ ಅಕ್ಕ ಮಹಾದೇವಿ, ರಜಪೂತರ ಮೀರಾಬಾಯಿಯಂತಹ ಭಕ್ತೋತ್ತಮೆಯರನ್ನು ಪುನಃ ಪ್ರಸವಿಸಿ ಇನ್ನೊಮ್ಮೆ ಭಾರತವನ್ನು ಕೀರ್ತಿ ಜ್ಯೋತಿಯಿಂದ ಬೆಳಗುವಂತೆ ಮಾಡಬಲ್ಲಳು. ಆಗ ಬೃಹದಾರಣ್ಯಕೋಪನಿಷತ್ತಿನಲ್ಲಿ ಸೂಚಿಸಿದಂತೆ ಕುಲಸ್ತ್ರೀಯರೆಲ್ಲಾ ಪಂಡಿತೆಯರನ್ನೂ, ಕೀರ್ತಿ ಮಂಡಿತೆಯರನ್ನು ಪ್ರಸವಿಸಿ, ಭಾರತದ ಕೀರ್ತಿ ಜ್ಯೋತಿಯನ್ನು ಬೆಳಗಿಸುವ ತೈಲವಾಗುವರು! ಅಂದು ನಿನೆ ಮೂಸಟೆಯರಿಗೂ ಭಾರತದ ಸ್ತ್ರೀಯರು ಪ್ರಾಣಿ ಜೀವನದ ಹೆಣ್ಣು ಗೊಂಬೆಗಳಲ್ಲ ಎಂಬುದು ಮಂದಟ್ಟಾಗುವುದು. ಆದೇ ವ ಹಿಳೆಯರ ಸರ್ವೋದಯದ ಕಾಲ!

ಭಾರತದ ಕುಲಸ್ತ್ರೀಯರಿಂದ ಎಂದೆಂದೂ ವರ್ಣ ಸಂಕರವಾಗದಿರಲಿ! ಭಾರತ ಸಂಸ್ಕೃತಿಯು ಪ್ರಪಂಚವು ಭೂತಕಾಲಕ್ಕಿಂತ ವಿಗಿಲಾಗಿ, ಪೃಥ್ವಿಯ ದಶದಿಕ್ಕುಗಳಲ್ಲೂ ಹರಡಿ, ಜಗತ್ತಿನ ಸ್ತ್ರೀ ಪ್ರಪಂಚದ ಹೃದಯದ ಅಂಧಕಾರವನ್ನು ತೊಲಗಿಸಲಿ! ಅದು ಎಂದೆಂದೂ ಪೌರಸ್ತ್ಯ ಸಂಸ್ಕೃತಿಯಾಗಿಯೇ ಶೋಭಿಸಲಿ!

ನಗೆ ಬಿಂದು

ಅಷ್ಟೂ ಅವಸರ

ಪ್ರೇಯಸಿ— 'ನಿನಗೊಬ್ಬನಿಗೇ ನನ್ನ ಈ ಜೀವನ ಮುಡಿಪು..ಬೇಗನೇ ನಮ್ಮ ವಿವಾಹವಾಗಬೇಕು...'

ಪ್ರಿಯತಮ—"ಮೂರ ನಾಲ್ಕು ತಿಂಗಳು ಕಳೆಯಲಿ..."

"ಅದೇಕೆ? ಎರಡು ತಿಂಗಳು ಕಳೆದರೆ ನನ್ನನ್ನು ವಿವಾಹವಾಗುವುದಾಗಿ ರಮೇಶ ಭಾಷೆ ಹಾಕಿದ್ದಾನೆ."

° ° °

ಅವಧಿಯಿದೆ

ಪತ್ರಿಕೆಯ ಓದುಗಾರ—"ಏನಿದ್ದರೂ ಈ ಆಹಾರದ ಕಾಟವು ಬೇಗನೆ ತೀರುವ ಹಾಗಿಲ್ಲವೆಂದಲ್ಲವೆ? ಮಂತ್ರಿಯೂ ಹೇಳುತ್ತಿರುವುದು.! ..."

ಬೇರೊಬ್ಬ—"ಅದು ಹೇಗೆ ಬೇಗ ಪರಿಹಾರ ಸಾಧ್ಯ! ಮಂತ್ರಿ ಐದು ವರ್ಷದ ಅವಧಿಗಲ್ಲವೆ—ಸತ್ಯ ಪ್ರತಿಜ್ಞಾ ವಿಧಿ ಸ್ವೀಕರಿಸಿದ್ದು?...."

° ° °

ತಿಳಿಸ ಬೇಡವೆ?

ಯಜಮಾನ—"ಅಲ್ಲ,....ಎಷ್ಟು ಹೊತ್ತಿನಿಂದ ಕಾಗಿ ಕರೆಯುತ್ತಿದ್ದೇನೆ....'

ನೌಕರ—'ಏನು! ಕೇಳಿಸಲಿಲ್ಲ..ಬೇರೇನೋ ತಲೆಯಲ್ಲಿ ಅಡಗಿ ತಾಳೆಯುತ್ತಿದ್ದೆ...."

"ಹಾಗಾದರೂ ಮೊದಲೇ ತಿಳಿಸಬಾರದಾಗಿತ್ತೆ?'

—ಎಚ್. ಎಂ. ವಿಜಯನಾರಾಯಣ

ನಾನು ಕಂಡ ಆಧುನಿಕ ದೇವ್ವ

(ಐದನೇ ಪುಟದಿಂದ)

ಸಂಸ್ಥೆಗಳಲ್ಲೂ ಈ ಮಂಡಾಶಯರೇ ಹೆಚ್ಚಿನ ಅಧಿಕಾರ ಗಳಿಸಿದ್ದರು

ಯಾವದೇ ಸಾರ್ವಜನಿಕ ಸಮಾರಂಭವಿರಲಿ, ಇವರದೇ ಕೈವಾಡವಿತ್ತು. ಸ್ವಾಗತಾಧ್ಯಕ್ಷರ ಭಾಷಣದಿಂದ ಹಿಡಿದು, — ಉದ್ಘಾಟಕ ಅಧ್ಯಕ್ಷರ, ಆಭಾರ ಮನ್ನಿಸುವವರ ಹೀಗೆ ಎಲ್ಲರ ಭಾಷಣವನ್ನೂ ಯಾರ್ಯಾರಿಂದಲೋ ಬರೆಯಿಸಿ ಎಲ್ಲಕ್ಕೂ ಇವರೆ ಸೂತ್ರಚಾಲಕರಾಗಿ ಇರುತ್ತಿದ್ದರು. ಕೆಲವೊಂದು ಕಡೆಯಲ್ಲಂತೂ ಇವರಿರದಿದ್ದರೆ ಏನೂ ನಡೆಯುತ್ತಲೇ ಇರಲಿಲ್ಲ.

ಹೀಗೆಯೇ ಇವರು ಕೆಲವು ವ್ಯಕ್ತಿಗಳನ್ನೂ ತಮ್ಮ ಕೈಗೊಂಬೆಯಂತೆಯೇ ಮಾಡಿಕೊಂಡಿದ್ದರು. ಇವರು ಹೇಳಿದಂತೆ ಅವರೂ ಸದಾ ನಡೆಯುತ್ತಿದ್ದರು. ಹಾಗಾಗಿ ಇವರಲ್ಲಿ ಸೇವೆ, ಅಧಿಕಾರದಗಳೆಲ್ಲ ಕೇಂದ್ರೀಕೃತವಾಗಿದ್ದವು.

ದೆವ್ವದ ಸಂಗತಿ ಇವರ ಹತ್ರ ಕೇಳೋಣವೇ ಎಂತಲೂ ಅನ್ನಿಸುತ್ತಿತ್ತು. ಆದರೂ ಮನಸ್ಸು ಮುಂದಾಗಲಿಲ್ಲ. ಆ ಮನೆಯ ಕಡೆಗೆ ಬರುವ ಚಲನೆ ವಲನಗಳ ಬಗ್ಗೆ, ಮಾತುಕತೆಯ ಬಗ್ಗೆಯೇ ಹೆಚ್ಚಿನ ಕುತೂಹಲ ಬೆಳೆಯಿತು.

ಗೋವಿಂದಜ್ಜನ ಹತ್ತಿರ ಕೇಳಿದಾಗಲೂ ಹೇಳುತ್ತಿದ್ದ "ಮೂರಾಯ, ಆ ಸ್ವಾಮಿಯ ಸುದ್ದಿ ನಿನಗೆ ಬೇಡ, ಅವ ಏನು ಬೇಕಾದ್ರೂ ಮಾಡಬಲ್ಲ."

ಎಷ್ಟೋ ದಿನ ನಾನು ಊಟ ತೀರಿಸಿ ಗೋವಿಂದಜ್ಜನ ವರಾಂಡದಲ್ಲಿಯೇ ತಾಸೇಡು ತಾಸು ಸುಮ್ಮನೇ ಕುಳಿತು ಕಾಲ ಕಳೆಯುತ್ತಿದ್ದೆ. ನನ್ನ ದೃಷ್ಟಿಯೆಲ್ಲ ಆ ಮನೆಯ ಕಡೆಗೇ ಇರುತ್ತಿತ್ತು. ಕತ್ತಲಲ್ಲಿ ಕೆಲವು ವ್ಯಕ್ತಿಗಳ ಓಡಾಟವೂ ನಡೆಯುವುದನ್ನು ನೋಡಿದಾಗ ಒಮ್ಮೆ ಕುತೂಹಲವಾದರೂ ಒಮ್ಮೆ ಭಯವೂ ಆಗುತ್ತಿತ್ತು. ಗೋವಿಂದಜ್ಜನ ಹತ್ತಿರ ಕೇಳಿದಾಗ "ದೆವ್ವಗಳು ಆಗಾಗ ಕೂಡಿಕೊಳ್ಳುತ್ತವೆ. ಕೀನು ಮಿಂಡಿತಾ ನೋಡಕೂಡದ." ಎಂತಲೂ ಭಯಪಡಿಸುತ್ತಿದ್ದ. ಆದರೂ ಅದು ಹೇಗಿದೆಯಂತ ನೋಡುವ ಲವಲವಿಕೆ ಹೆಚ್ಚುತ್ತಲೇ ಇತ್ತು.

ಆ ದಿನ ಅಮಾವಾಸ್ಯೆ, ಸಂಪೂರ್ಣ ಕಗ್ಗತ್ತಲೆ. ನೀನು ಹೊರಗೆ ಕೂಡ್ರಬಾರದು ಎಂತಲೂ ಗೋವಿಂದಜ್ಜ ಹೇಳಿದ್ದ. ಆದರೂ ನನಗೆ ಎಲ್ಲಿಲ್ಲದ ಉತ್ಸಾಹ. ಬ್ಯಾಟರಿ ಇಟ್ಟುಕೊಂಡು ಸುಮ್ಮನೆ ಕುಳಿತುಕೊಂಡೆ. ಮೈಕೊರೆಯುವ ಛಳಿಯೊಂದು ಬಾಧಿಸುತ್ತಲೇ ಇತ್ತು.

ಸುಮಾರು ಹತ್ತೊಂದು ಘಂಟೆಯ ಮೇಲಾಗಿರಬಹುದು. ಎರಡು ವ್ಯಕ್ತಿಗಳು ನಿಧಾನವಾಗಿ ಹೆಜ್ಜೆ ಇಡುತ್ತ ಬರುತ್ತಿರುವುದು ಆ ಕಾರ್ಗತ್ತಲೆಯಲ್ಲಾದರೂ ಮಸಕುಮಸಕಾಗಿ ಕಾಣಿಸತೊಡಗಿತು. ನಾನು ಉಸಿರು ಬಿಗಿಹಿಡಿದು ಗಮನಿಸುತ್ತಲೇ ಕುಳಿತೆ.

ಬಾಗಿಲ ವರೆಗೂ ಬಂದು ಬಾಗಿಲು ತೆರೆದು ಒಂದು ವ್ಯಕ್ತಿ ಮಾಯವಾದಂತೆ ಹಿಂದೆ ಹೋಯಿತು. ಮತ್ತೊಂದು ಒಳಗೆ ಸರಿದು ಬಾಗಿಲು ಹಾಕಿಕೊಂಡಿತು. ಮತ್ತೊಂದು ಅರ್ಧ ಘಂಟೆಯಲ್ಲಿಯೂ ಹೀಗೆ ನಡೆಯಿತು. ನಾನೂ ನಿಧಾನ ಹೆಜ್ಜೆಯಿಡುತ್ತ ಆ ಮನೆಯ ಕಿಟಕಿಯತ್ತ ಸರಿದೆ. ಕಿಟಕಿಯ ಬಾಗಿಲು ಸಂದಿನಿಂದ ಸಂಣ ದೀಪದ ಬೆಳಕು ಅಸ್ಪಷ್ಟ ಗುಸುಗುಸು—ನಗು—ನಗು ಮಾತು ಕೇಳಿ ಬರುತ್ತಿತ್ತು.

ಬಾಗಿಲನ್ನು ಸ್ವಲ್ಪ ನೂಕಿದೆ. ಸಂಣ ರಂಧ್ರದಿಂದ ಒಳಗಿನ ದೃಶ್ಯ ಕಾಣತೊಡಗಿತು. ವ್ಯಕ್ತಿ ಯಾರೆಂದು ಪರಿಚಯವಾಗದಿದ್ದರೂ ಒಂದು ಹೆಣ್ಣು ಒಂದು ಗಂಡು ಎಂಬುದು ಮಾತ್ರ ತಿಳಿದುಬಂತು. ರಾಸಲೀಲೆಯಲ್ಲಿ ಮಗ್ನರಾಗಿದ್ದ ದೃಶ್ಯ ಸ್ಪಷ್ಟವಾಗಿತ್ತು.

ದೆವ್ವಗಳಲ್ಲಾ ಈ ಶೃಂಗಾರವಿದೆಯೇ ಎಂಬ ವಿಚಾರ ಮೂಡಿತು. ಏನೇ ಇರಲಿ, ಬೆಳಗ್ಗೆ ಈ ದೆವ್ವಗಳನ್ನು ನೋಡೋಣ ಎಂದುಕೊಂಡೆ. ಹೊರ ಮತ್ತು ಹಿತ್ತಿಲ ಬಾಗಿಲು ಎಳೆದುಕೊಂಡು ಗೋವಿಂದಜ್ಜನನ್ನು ಎಬ್ಬಿಸಿದೆ.

"ಗೋವಿಂದಜ್ಜಾ, ಒಂದು ಚಮತ್ಕಾರವಾಗಿದೆ. ದೆವ್ವಗಳನ್ನ ಹಿಡಿದಿದ್ದೇನೆ.... ಎಂದು ವಿಷಯ ತಿಳಿಸಿದೆ.

"ಅಯ್ಯೋ! ಅವರಲ್ಲಿಯೂ ಪ್ರಣಯಿಗಳುಂಟು, ಅಕಾಲಿಕವಾಗಿ— ಅತ್ಪತ್ತಿಯಿಂದ ಸತ್ತವರು ಹಾಗೆ ಕೂಡಿಕೊಳ್ಳುತ್ತಾರಂತೆ."

"ಏನೇ ಇರಲಿ, ಈಗ ಸುಮಾರು ನಾಲ್ಕು ಘಂಟೆ ಆಗಿದೆ. ನಸುಕು ಹರಿಯುವಾಗ ನಾವು ಅಲ್ಲಿಯೇ ನಿಲ್ಲೋಣ."

ಗೋವಿಂದಜ್ಜನಿಗೆ ಧೈರ್ಯ ತುಂಬಿಸಿ ಇಬ್ಬರೂ ಅಲ್ಲಿಯೇ ಕುಳಿತೆವು. ಪ್ರಣಯದ ಅವಧಿ ಮುಗಿದು ಬಾಗಿಲು ತೆರೆಯಲು ಪ್ರಯತ್ನಿಸಿತು ಒಳಗಿನ ವ್ಯಕ್ತಿ. ಆದರೆ ತೆರೆಯಲು ಸಾಧ್ಯವೇ ಆಗಲಿಲ್ಲ.

ನಸುಕು ಹರಿಯುತ್ತಿರುವಾಗ ಬಾಗಿಲ ಚಿಲಕ ತೆಗೆದುಹಾಕಿದೆ. ಒಳಗಿನ ದೆವ್ವಗಳು ಹೊರಬಂದವು. ಅವರು ನಿಜವಾಗಿಯೂ ದೆವ್ವಗಳಾಗಿರದೆ — ಒಬ್ಬರು ಊರಿನ ದೊಡ್ಡ ಖಾದೀಟೋಪಿ ಮುಖಂಡರು- ಮತ್ತೊಬ್ಬಳು ದಾವಾಖಾನೆಯ ದಾಯಿ.

ಅವರು ಹೋಗುತ್ತಿದ್ದಂತೆ ನೋಡುತ್ತಲೇ ನಿಂತ ಗೋವಿಂದಜ್ಜ ಇದೇನು?ಎಂದು ಕೇಳಿದ.

ಆ ವ್ಯಕ್ತಿಗಳು ಏನೂ ಮಾತಾಡದೇ ಸಾಗಿದರು. ಮಾರನೆಯ ದಿನವೇ ಆ ಸರ್ಕಲದಿಂದ ವರ್ಗವಾದ ಹೆಕ್ಕುಂ ಬಂದಿತು.

ಕಚೇರಿಯವರ ಮತ್ತು ಅವರ ಹಿಂಬಾಲಕರ ಬಗ್ಗೆ ಏನೂ ವಿಚಾರಿಸುವ ಪ್ರಸಂಗವೇ ಇರಲಿಲ್ಲವಾಗಿತ್ತು. ಆ ಮನೆಯನ್ನು ಹೀಗೆಯೇ ಬೇಕು ಬೇಕಾದವರ ಪ್ರಣಯ ವ್ಯವಹಾರವನ್ನೋ ದ್ರೂತ, ಕುಡಿತ, ಕಳ್ಳ ವ್ಯಾಪಾರ ಮುಂತಾದದುಷ್ಟ ಚೇಷ್ಟೆಗಳನ್ನು ನಡೆಸುವುದಕ್ಕೆ ಬಳಸಿಕೊಳ್ಳುತ್ತಿರುವರೆಂದು ತಿಳಿದು ಬಂತು. ಜನ ಸಾಮಾನ್ಯರ ಲಕ್ಷ್ಯ ಆ ಕಡೆಗೆ ಹರಿಯಬಾರದೆಂದು "ಇದು ದೆವ್ವದ ಮನೆ" ಎಂದು ಹೇಳಿಸಿದ್ದಿರಬೇಕೆಂದು ಗೋವಿಂದಜ್ಜನಿಗೆ ಹೇಳಿದೆ. ಆದರೂ ಅರಿಮನಸ್ಸಿನಿಂದಲೇ ಹೇಳಿದ—"ಏನಪ್ಪಾ ದೆವ್ವದ ವಿಚಾರವೇ ತಿಳಿಯುವದು" ಎಂದು.

"ಹೌದು ಎಂಥೆಂಥ ದೆವ್ವಗಳು ಇರುತ್ತವೆ" ನೋಡು ಎಂದೆ.

M/s. M. L. Shetty & Sons

New Karnataka Stores,

Imperial Tobacco Dealers &

No **30** Beedies Stockists.

KARWAR

ನಮ್ಮ ಸಕಲ ಗ್ರಾಹಕರಿಗೆ— ಯಾವತ್ತೂ ಹಿತೈಷಿಗಳಿಗೆ
ನಂಬರ್ **30**ರ ಬೀಡಿ — ನಮ್ಮ ಸ್ಟಾಕಿಸ್ಟರಿಗೆ
ಹಾರ್ದಿಕ ಶುಭಾಶಯಗಳು!



(ಪ್ರೊಪ್ರೈಟರ್:- ಎಂ. ಎಲ್. ಶೆಟ್ಟಿ)

ಎಂ. ಎಲ್. ಶೆಟ್ಟಿ ಎಂಡ್ ಸನ್ಸ್

ನ್ಯೂ ಕರ್ನಾಟಕ ಸ್ಟೋರ್ಸ್,

ಕಾರವಾರ

ಕನಡ ನಲುಡಿ ಮುತ್ತುಗಳು

— ೧ —

ಅಹಾ! ದುರ್ಜನ ಸಂಗದಲಿ
ಮಾನದ ಹಾನಿಯು ಆಗಾಗ,
ಬೆಂಕಿಯು ಲೋಹದ ಸಂಗವನೆಸಗಿರೆ,
ಕೊಡತಿಯು ಹೊಡೆತವ ತಿನ್ನುತಿದೆ.

— ೨ —

ಆಹಾರ ನಿದ್ರೆ ಭಯ ವೈಥ ನಂಗಳು
ನಾಲ್ಕು
ಪಶುಗಳಿಗು ಮನುಜರಿಗು ಸರಿಸಮಾನ.
ಮನುಜರಿಗೆ ಧರ್ಮವೊಂದೇ
ಅಧಿಕವಾಗಿಹುದು.
ಧರ್ಮವನ್ನುಳಿದವರು ಪಶು ಸಮಾನ.

— ೩ —

ಉದ್ಯಮದಿಂದಲೆ ಕಾರ್ಯದ ಸಿದ್ಧಿಯು
ಚಿತ್ತದ ಅಭಿಲಾಷೆಯ ನಲ್ಲ.
ಮಲಗಿದ ಸಿಂಹದ ಬಾಯಿಗೆ ಮೃಗಗಳು
ಎಂದೂ ಬೀಳವು ಸುಲಭದಲಿ.

— ೪ —

ಉದ್ಯಮ, ಸಾಹಸ, ಧೈರ್ಯ ಹಾಗೆಯೆ
ಬುದ್ಧಿಯು, ಶಕ್ತಿ, ಪರಾಕ್ರಮವು
ಯಾವೆಡೆ ನೆಲಸಿಹುವೀ ಷಡ್ಗುಣಗಳು
ಅಲ್ಲಿಯೆ ದೈವಾನುಗ್ರಹವು.

— ೫ —

ಆಲಸಿಗೆಂತೂ ವಿದ್ಯೆಯು ಇಲ್ಲ.
ವಿದ್ಯೆಯು ಇರದಿರೆ ಹಣವಿಲ್ಲ.
ನಿರ್ಧನ ಮನುಜಗೆ ಮಿತ್ರರು ಎಲ್ಲಿ?
ಮಿತ್ರರು ಇಂದಿರೆ ಸುಖವೆಲ್ಲಿ?

— ೬ —

ಜನ್ವನದೇಳಿಗೆ, ಧನಸಂಪತ್ತು,
ಅಧಿಕಾರದ ಮದ, ಅವಿವೇಕ,
ಒಂದೊಂದೂ ಇವು ಅನರ್ಥಕಾರಿ
ನಾಲ್ಕೂ ಸೇರಿರೆ ಮತ್ತೇನು?

(ಸಂಸ್ಕೃತದಿಂದ)

—ಅಮ್ಮೆಂಬಳ ಶಂಕರನಾರಾಯಣ.

ಹೂವು ಆರನೇ ಇಂದ್ರಿಯವಿದ್ದಂತೆ. ಅದಿಲ್ಲದೆ ಉಳಿದ 5 ಇಂದ್ರಿಯಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ.

ಮುಂದವಾಗುತ್ತಿರುವ ಮಲೆನಾಡಿನ ಸಾಂಸ್ಕೃತಿಕ ಸಂಪ್ರದಾಯಗಳು

(ನಾಲ್ಕನೇ ಪುಟದಿಂದ)

ದ್ದಾಗ, ಅಂದರೆ ಭತ್ತದ ನೆಟ್ಟಿ ಮುಗಿದಾಗ ಪುರಾಣಿಕರನ್ನು ಆದರಿಸಿಕೊಂಡು ಸಪ್ತಾಹ ಮಾಡುತ್ತಾರೆ. ಇದಕ್ಕೋಸ್ಕರವೇ ಎರಡು—ಮೂರು ಪಳ್ಳಿಗೊಂದರಂತೆ ಒಂದು ಪುರಾಣ ಕಟ್ಟೆಯಿರುತ್ತಿತ್ತು. ಅಲ್ಲಿಯ ಜನಕ್ಕೆ ಹೆಚ್ಚು ಶಿಕ್ಷಣವಿಲ್ಲದಿದ್ದರೂ ಪುರಾಣ ಕಟ್ಟೆಯ ಮೂಲಕ ಭಾರತ—ರಾಮಾಯಣಗಳ ಕಥೆ ಕೇಳಿ ಹೆಚ್ಚು ಅನುಭವ ಸಂಪಾದಿಸುತ್ತಿದ್ದರು. ಆಗ ಊರ ಹಿರಿ-ಕಿರಿಯರೆಲ್ಲರ ಸಮ್ಮಿಲನವಾಗುತ್ತಿತ್ತು. ಒಂದೊಂದು ಮನೆಯಲ್ಲಿ ಒಂದೊಂದು ದಿನವೂ ನಡೆಯುತ್ತಿತ್ತು. ಇದಕ್ಕೆ 'ಸರ್ಕೆ' ಎಂದು ಪುರಾಣಿಕರಿಗೆ ದಕ್ಷಿಣೆ ಕೊಡುವದಿದೆ.

ಕೆಲವು ಹಳ್ಳಿಗಳಲ್ಲಿ ಯಕ್ಷಗಾನ, ಗವಟಿ ಪಾಂಗು, ಆಗಡಿ, ಮುಂತಾದ ಆಟದ ಕೂಟಗಳಿರುತ್ತಿತ್ತು. ಆ ಮೇಳಗಳು ಬೇಸಿಗೆಯಲ್ಲಿ ಊರಿನ ತುಂಬಾ ಆಟವಾಡಿ ಜನಕ್ಕೆ ಮನರಂಜನೆ, ರಸಾನುಭವಗಳನ್ನು ಕೊಡುತ್ತಿದ್ದರು. ಇದರಲ್ಲಿ ಯಕ್ಷಗಾನ ಆಟದ ಮೇಲೆ ಹೆಚ್ಚು ಪ್ರಾಮುಖ್ಯವಿದ್ದು, ಎಷ್ಟೋ ಜನಕ್ಕೆ ಓದಲು ಬರೆಯಲು ಬಾರದಿದ್ದರೂ ಪರಂಪರಾಗತವಾಗಿ ಬಂದ ಈ ಸುಗ್ಗೀ ಸಂಪ್ರದಾಯವನ್ನು ಸುಲಭವಾಗಿ ಅರಗಿಸಿಕೊಂಡು ಜನಕ್ಕೆ ಆಮೋದ—ಪ್ರಮೋದಗಳನ್ನು ಒದಗಿಸುತ್ತಿದ್ದರು. ಆಟದ ಮೂಲಕ ಜೀವನದ ಪಾಠ ಕಲಿಸುತ್ತಿದ್ದರು.

ರೈತನ ಈ ಪೂಜೆಗಳಿಗೆ, ಮನರಂಜನಾ ಸಂಪ್ರದಾಯಗಳಿಗೆ ಕೆಲವಕ್ಕೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಅಸ್ತಿತ್ವವಿದೆ. ಕೆಲವಕ್ಕೆ ಯಾವ ಅಸ್ತಿತ್ವವೂ ಆಧಾರವೂ ಇಲ್ಲ. ಅವು ಕೇವಲ ಶ್ರದ್ಧಾ ಭಕ್ತಿಗಳ ಮೂಲಕ ಉಳಿದು ಬೆಳೆದು ಬಂದಿವೆ. ಆದರೆ ಅವನ್ನು ಸರಿಯಲ್ಲವೆಂದು ತಿರಸ್ಕರಿಸುವದು ತಪ್ಪು. ರೈತನ ಸಂಪ್ರದಾಯ ಬದ್ಧ ಪೂಜೆ ಪುರಸ್ಕಾರಗಳು ಅವುಗಳ ಹಿಂದಿರುವ ದಿವ್ಯ ಕಲ್ಪನೆ ಮತ್ತು ಅನ್ನ ಕೊಡಿಸಿದ ಭೂದೇವಿ ಮತ್ತು ಶಕ್ತಿ ಕೊಡಿಸಿದ ಕುಲದೇವತೆಗಳ ಬಗೆಗಿನ ಆತನ ಗೌರವ ಮತ್ತು ಪೂಜ್ಯ ಭಾವನೆಗಳನ್ನು ನಾವು ತಿಳಿದುಕೊಳ್ಳಬೇಕು.

ಸಮಾರಂಭದ ಸಂಪ್ರದಾಯಗಳು

ಸಂಸ್ಕಾರದ ಶುಭ ಶೋಭನ ಸಮಾರಂಭಗಳಲ್ಲಿ ಆಚರಿಸುವ ಸಂಪ್ರದಾಯಗಳು ತುಂಬಾ ಹಿಗ್ಗಿನವು. ಆ ಸಂಪ್ರದಾಯಗಳಿಗೆ ಐತಿಹಾಸಿಕ ಅಥವಾ ಪೌರಾಣಿಕ ಹಿನ್ನೆಲೆಗಿಂತ ಸಾಮಾಜಿಕ ಅಸ್ತಿತ್ವ ಹೆಚ್ಚು. ವೈದಿಕ ಕರ್ಮಾಂಗಗಳು ಎಷ್ಟು ವಿಧಿಯುಕ್ತವಾಗಿ ನಡೆಯುತ್ತವೆಯೋ ಹಾಡುಗಳಿಗೂ ಅಷ್ಟೇ ಪ್ರಾಧಾನ್ಯತೆಯುಂಟು. ಇವೆಲ್ಲ ಜಾನಪದ ಹಾಡುಗಳು. ಆಯಾ ಸಂಸ್ಕಾರದ ಕ್ರಿಯೆ, ಅರ್ಥಗಳನ್ನೆಲ್ಲ ಒಳಗೊಂಡಿವೆ. ಇದರಿಂದ ಹೆಣ್ಣುಮಕ್ಕಳಿಗೂ ಆಯಾ ಕರ್ಮಾಂಗಗಳ ಯಥಾರ್ಥ ಪರಿಚಯವಾಗುತ್ತದೆ. ಯಾವ ಸುಧಾರಿತ ಜನಾಂಗದಲ್ಲೂ ಇಲ್ಲಿ ಅನುಭವಿಸುವ ಸ್ಪಷ್ಟ ರಸನಿರೂಪಗಳನ್ನು ಅನುಭವಿಸುವದಿಲ್ಲ.

"ಮದುವೆದಾಂಪತ್ಯಜೀವನದ ಮೊದಲನೆಯ ಸಂಕೇತ-ಗಂಡುಹೆಣ್ಣನ್ನು ದೈವಕೂಡಿದ ರಥದಲ್ಲಿ ತಂದು ಪತಿ-ಪತ್ನಿಯರೆಂಬ ಅರಿಕೆ ಮಾಡಿಕೊಡುವ ಸಾಧನ "ಮದುವೆ" ಗಂಡು ಹೆಣ್ಣಿನ "ಪ್ರಣಯ" ಜೀವನದ ಸ್ವಭಾವಕ್ಕನುಸಾರವಾಗಿ ಬಂದುದಾಗಿದೆ. ಗಂಡಿಗೆ ಹೆಣ್ಣೇ ಕಣ್ಣು; ಹೆಣ್ಣಿಗೆ ಗಂಡೇ ಜಗತ್ತನ್ನು ಪರೀಕ್ಷಿಸುವಬೆರಗಲ್ಲು. ಇಂಥ ಮದುವೆಯ ಸನ್ನಿವೇಶಗಳಲ್ಲಿ ಅನುಸರಿಸುವ ಮಲೆನಾಡಿನ ಸಂಪ್ರದಾಯಗಳು ನೋಡಲು ತುಂಬ ಹರ್ಷದಾಯಕ.

ಗಂಡು ಧಾರೆಯ ಮಂಟಪಕ್ಕೆ ಬಂದಾಗಲೇ, ಶಾಸ್ತ್ರ, ಮುಗಿಸಿದ ಪುರೋಹಿತರು, ವಧು-ವರರಿಗೆ ಪರಸ್ಪರ ಕೆನ್ನೆಗಳಿಗೆ ಅರಿಶಿನ ಹಚ್ಚಲು ಹೇಳುತ್ತಾರೆ. ಇದೇ ಅವರ ದಾಂಪತ್ಯ ಜೀವನದಲ್ಲಿನ ಪ್ರಥಮ ಸ್ಪರ್ಶ, ಮಧುರ ನೋಟವೆರಡರ ಮಿಲನವಾಗುವದೂ ಆಗಲೇ. ಮದುವೆ ಮಂಟಪದಿಂದ ಪ್ರಾರಂಭವಾದ ಈ ಮಧುರ ಲೀಲೆ ಮದುವೆಯ ಮರುದಿನದವರೆಗೂ ಬೆಳೆದು ಬರುತ್ತದೆ. ಧಾರೆಯಾಗಿ ವಧುವಿಗ ತಾಳಿ ಕಟ್ಟಿದ ನಂತರ, ವರನು ವಧುವಿನ ಕೈ ಹಿಡಿದು ನೆರೆದವರ ಎದುರಿನಲ್ಲೇ ತುಳಸೀ ಪ್ರದಕ್ಷಿಣೆ ಮಾಡಬೇಕಾಗುತ್ತದೆ. ಅನಂತರ ಸೂರ್ಯ ನಮಸ್ಕಾರ. ಆ ಮೇಲೆ ವಧು-ವರರನ್ನು ಮನೆಯೊಳಗೆ ಸ್ವಾಗತಿಸುತ್ತಾರೆ. ಅಲ್ಲಿಂದ ಮುಂದೆ ಹೆಣ್ಣುಮಕ್ಕಳ ಉತ್ಸಾಹಪೂರಿತ ಕಾರ್ಯಕ್ರಮಗಳೂ ಜರಗುತ್ತವೆ. ವಧುವಿನಿಂದ ವರನ ಹೆಸರು ಹೇಳಿಸಿ ವರನಿಂದ ವಧುವಿನ ಹೆಸರು ಹೇಳಿಸಿ, ನಲಿಯುತ್ತಾರೆ. ಬಳಿಕವಧುವರರಿಗೆ ಜಾಳೆಯ ಹಣ್ಣು, ಹುಸ್ಪವನ್ನು ಬಡಿಸಿ, ತಾವೂ ಬಡಿಸಿಕೊಂಡು ತಿನ್ನಬೇಕು. ಮುಂದೆ ವರ ತನ್ನ ಬೆರಳನುಂಗುರವನ್ನು ವಧುವಿಗೆ ತೊಡಿಸಬೇಕು.

ಮದುವೆಯ ಮರುದಿನ ಓಕುಳಿಯ ದಿನ. ಓಕುಳಿ ತುಂಬಿದ ಪಾತ್ರೆಯಲ್ಲಿ ಉಂಗುರವನ್ನು ಹಾಕಿ ವಧುವರರು ಅದನ್ನು ಮೊದಲು ಒಂದೇಬಾರಿಗೆ ಹುಡುಕಿ ತೆಗೆಯಲು ಹೋರಾಡುತ್ತಾರೆ. ಅನಂತರ ಒಬ್ಬರಿಗೊಬ್ಬರು ಓಕುಳಿ ಎರಚಿಕೊಳ್ಳುವರು. ಮದುವೆಯಾದ ಎಂಟನೆ ದಿನಗಳ ಮೇಲೆ "ಧಾರೆ ದೀಪ"ದ ಶಾಸ್ತ್ರವಿರುತ್ತದೆ. ಆಗ ಅಳಿಯ ಮಾವನ ಮನೆಗೆ ಹೋಗಿ ಬರಬೇಕು.... ಹಾಗೆ ಹೋದಾಗ ಧಾರೆಯಾದ ದಿನ ನೆಟ್ಟ "ಜಾಲ-ಗಂಬ"ವೊಂದನ್ನು ವರ ಒಂದೇ ಕೈಯಿಂದ ಎಲ್ಲರೆದುರಿಗೆ ಕಿತ್ತಿಸಿಯಬೇಕು.

ಹೀಗೆ ಮಲೆನಾಡಿನ ಮದುವೆ ಸಮಾರಂಭದ ಪ್ರತಿ ನಿಮಿಷದಲ್ಲೂ ಮಧುರ

ರಾಷ್ಟ್ರದ ಹಿತವನ್ನೇ ಚಿಂತಿಸುವ!
ರಾಷ್ಟ್ರಕ್ಕೆ ಹಿತವನ್ನೇ ಮಾಡುವ!!
ರಾಷ್ಟ್ರಕ್ಕೆ ಕೀರ್ತಿ ಬರುವಂತೆ ಬಾಳುವ!!!

ಭಾರತ ಗಣರಾಜ್ಯೋತ್ಸವದ
ಈ ಪವಿತ್ರ ದಿನದಂದು
ಇದುವೇ
ನಮ್ಮೆಲ್ಲರ ಪ್ರತಿಜ್ಞೆಯಾಗಿರಲಿ!

- ಕೊರ್ಪೊರೇಶನ್ ಬೇಂಕ್ -

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ : 1906)

ರಿಜಿಸ್ಟರ್ಡ್ ಆಫೀಸು :
ಉಡುಪಿ

ಆಡಳಿತ ಆಫೀಸು :
ಮಂಗಳೂರು

ಕೆ. ರಾಮಚಾಸ್ ನಾಯಕ್
ಜನರಲ್ ಮೆನೇಜರ್.

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
ಪ್ರಜಾರಾಜ್ಯ ದಿನದ ಶುಭಾಶಯಗಳು !

ಶ್ರೇಷ್ಠತೆಯ ಹೆಗ್ಗುರುತು—

ಉಡುಪಿ ಶ್ರೀ ಕೃಷ್ಣ ವಿಲಾಸ

ಕಾರವಾರ (ಉತ್ತರ ಕನ್ನಡ)

ವಿನಯಶೀಲ ಉಪಚಾರ
ಶುಚಿ-ರುಚಿ ಉಪಾಹಾರ

ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಕೆ. ಸಂಜೀವ ರಾವ್
ಪ್ರೊಪ್ರೈಟರ್.

ಗಳಿಗೆಗಳು ವಧುವರರಿಗೆ ಕಾದಿರುತ್ತವೆ. ಈ ಎಲ್ಲ ಸಂಪ್ರದಾಯಗಳ ಅರ್ಥವೇನು? ಸಾಮಾಜಿಕ ಮೌಲ್ಯವೇನು?

ಮದುವೆಯಾಗಿ ಮುಂದೆ ಬಾಳಬೇಕಾದ ಎರಡು ಜೀವಗಳನ್ನು ಜತ್ತಿರಕ್ಕೆ ತಂದು ಒಬ್ಬರಿಗೊಬ್ಬರಲ್ಲಿ ಅನುರಾಗ ಮೂಡಿಸುವದೇ ಆ ಎಲ್ಲ ವಿನೋದ ಸಂಪ್ರದಾಯಗಳ ಉದ್ದೇಶ. ಪ್ರಥಮವಾಗಿ ವರನಕೆನ್ನೆಗೆ ಅರಶಿನ ಹಚ್ಚುವ ಸಮಯ, ವಧುವಿಗೆ ನಾಚಿಕೆ ಎನಿಸಿದರೂ ಒಂದು ಬಗೆಯ ಅಭಿಮಾನ, ಅನುರಾಗ ಮೂಡುವದು ಸಹಜ. ಬಂಧುಬಳಗದೆದುರು ವಧುವಿನ ಕೈಹಿಡಿದು ಹೊರಟ ವರನಿಗೆ ತನ್ನನ್ನು ಹಂಬಾಲಿಸುತ್ತಿರುವ ಹೆಣ್ಣು ತನ್ನವಳು ಎಂಬ ಭಾವನೆ ಮೂಡಿಬರುವದೆ ಸ್ವಾಭಾವಿಕ.

ಪತಿಗೆ ಪ್ರಥಮವಾಗಿ ಬಡಿಸುವಾಗ ಲಜ್ಜೆಯಿಂದ ಕೈನಡುಗಿ ಒಂದು ಚಮಚ ತುಪ್ಪ ಹೆಚ್ಚಾಗಿ ಬಿದ್ದರೂ ವರ ಮತ್ತು ನೆರೆದವರು ಭಾವಿಸುವದೇನು? ಆಕೆ ಪತಿಯ ಮೇಲೆ ಇರುವ ಮಧುರ ಪ್ರೇಮ ಪಂದಲ್ಲವೇ? ಪತಿ– ಪತ್ನಿಯರು ಬರಲಿಗೆ ಉಂಗುರ ತೊಡಿಸುವಾಗ ಪತಿಯ ಹೆಸರು ಪತ್ನಿಯ ಹೃದಯದಲ್ಲಿ ಅಚ್ಚಳಿಯದೆ ಮನೆ ಮಾಡುವದು ಖಚಿತ. ಓಕಾಳಿಯೂಟದಲ್ಲಿ ಸಮಾನ ಭಾವನೆ, ಆಕಾಂಕ್ಷೆಗಳು ಹೆಡೆಯೆತ್ತಿ ಫಲ್ಲುತ್ತವೆ. ಒಂದೇ ಕೈಯಲ್ಲಿ ನೆಲದಲ್ಲಿ ನೆಟ್ಟ 'ಜಾಲುಗಂಬ'ವನ್ನು ಕಿತ್ತೆಸುವ ಪತಿಯ ದಾರ್ಢ್ಯವನ್ನು ಯಾವ ಹೆಣ್ಣು ಕಂಡು ಫಲಿಯಲಾರಳು?

ಈ ಬಗೆಯ ವಿವಾಹ ಸಮಾರಂಭ ಸಮಯದ ವಿನೋದ ಸಂಪ್ರದಾಯಗಳು ಸಾಮಾಜಿಕ ಆಸೆ ಅಕ್ಕರೆಗಳ ಫಲ. ವಧುವರರ ಪ್ರಥಮ ದಿನಗಳಲ್ಲೇ ಅವರನ್ನು ಹೃದಯ ಪೂರ್ವಕ ಬಂಧಿಸುವ ಯೋಜನೆಗಳಾಗಿವೆ.

ಹಬ್ಬ—ಹರಿದಿನ ಸಂಪ್ರದಾಯಗಳು

ಹಬ್ಬ—ಹರಿದಿನಗಳಲ್ಲಿ ಇಷ್ಟ-ಮಿತ್ರರ ಆಗಮನಕ್ಕೆ ಹೆಚ್ಚು ಮಹತ್ವವಿದೆ. ಅತಿಥಿ ಸತ್ಕಾರಕ್ಕಂತೂ ಮಲೆನಾಡು ಹೆಸರಾದ ನಾಡು. ಅತಿಥಿ ಬಂದೊಡನೆ ಮುತ್ತೈದೆಯರು ನೀರಿನ ತಂಬಿಗೆ ತಂದಿಟ್ಟು ನಮಸ್ಕರಿಸುತ್ತಾರೆ. ಅತಿಥಿಯನ್ನು ದೇವರಂತೆ ಕಾಣುವದು. ಅದೆಷ್ಟು ಸುಂದರ ಸಂಪ್ರದಾಯ.

ನಮ್ಮ ಪೂರ್ವಿಕರ ಕಲ್ಪನೆ, ರಸಿಕತೆ, ವ್ಯವಹಾರ ಜ್ಞಾನಗಳು ಸಮರಸದಿಂದ ಕೂಡಿ ರಚಿತವಾದ ಸಂಪ್ರದಾಯಗಳು ಹುಟ್ಟಿದ ಸಂಪ್ರದಾಯಗಳಾಗಿವೆ. ಧಾರ್ಮಿಕ ಮತ್ತು ಸಹಕಾರೀ ಭಾವನೆಗಳನ್ನು ನೈಗೂಡಿಸಲು ಗ್ರಾಮಗ್ರಾಮದಲ್ಲಿ ಒಂದು ಸೀಮೆಗೊಂದು ದೇವಾಲಯಗಳಿವೆ. ಅಲ್ಲಿ ಆಗಾಗ ದೀಪೋತ್ಸವ, ಮುಂತಾದ ಉತ್ಸವಗಳು ನೆರವೇರಬೇಕು. ಆಗ ಅದರ ಫಲಿತ್ತ ಜನರೆಲ್ಲ ಸೇರಿ ದೇವತಾರಾಧನೆಯ ಮೂಲಕ ಜೀವನ ಸಮಸ್ಯೆಗಳನ್ನು ವಿಚಾರಿಸಿ ಮುಂದಿನ ಹೊಸ ದಾರಿಯ ಕಲ್ಪನೆ ಮೂಡಿಕೊಳ್ಳುತ್ತಿದ್ದರು.

ದೀಪಾವಳಿಗೆಯ ದಿವ ರಾತ್ರಿ ಹಳ್ಳಿಯ ಉತ್ಸಾಹದ ತರುಣರು ತಂಡ ತಂಡವಾಗಿ ಜ್ಯೋತಿಯನ್ನು ಹಿಡಿದು ಎಲ್ಲರ ಮನೆಗೆ ಹೋಗಿ ಜಾನಪದ ಕಥನ ಕವನಗಳನ್ನು ರಾಗವಾಗಿ ಹೇಳಿ ಉಡುಗೊರೆ ಪಡೆದು ಬರುತ್ತಾರೆ. ಅದನ್ನು ವ ಲೆನಾಡಿನಲ್ಲಿ "ಅಂಡಿಗೆ ಪಂಡಿಗೆ" ಅನ್ನುತ್ತಾರೆ.

ಇನ್ನು ವಿಜಯದಶಮಿ, ಕಾಮನ ಹುಣ್ಣಿಮೆಗಳಲ್ಲಿ ಕೋಲಾಟ, ನೃತ್ಯಗಳು, ಹುಲಿವೇಷ ಮತ್ತು ಇತರ ಮನೋರಂಜನೆಗಳು ಎಲ್ಲ ಕಡೆಯಂತೆಯೇ ಇಲ್ಲಿಯೂ ಇವೆ. ಆದರೆ ಗೌರೀ ಹಬ್ಬದ ದಿವ ನಡೆಯುವ ಕಾಯಿಜೂಡು—ಮತ್ತು ವಿಜಯದಶಮಿಯ ದಿನದ ವಿವಿಧ ಸ್ಪರ್ಧೆಗಳು ಇಲ್ಲಿಗೇ ವಿಶೇಷ. ನಾಡಿನ ಎಲ್ಲ ಕಡೆಯಲ್ಲಿರುವ ಹಬ್ಬದಲ ಆಚರಣೆಗಳು ಇಲ್ಲಿಯೂ ಇವೆ. ಹೆಚ್ಚಾಗಿಯೆಂದರೆ ಆ ಹಬ್ಬಗಳ ಜೊತೆ, ಕೆಲವು ಸ್ಥಳೀಯ ಜಾತ್ರೆಗಳು, ಪುಣ್ಯಸ್ನಾನಗಳು, ಇನೇ ರೂಢಿಯಲ್ಲಿವೆ. ಎಳ್ಳು ಅಮಾವಾಸ್ಯೆ ದಿವ ತೀರ್ಥಹಳ್ಳಿಯಲ್ಲಿ ನಡೆಯುವ ಪರಶುರಾಮ ತೀರ್ಥಸ್ನಾನ ಮತ್ತು ರಥೋತ್ಸವ, ಹುಲಿಕಲ್ಲು ನರಸಿಂಹ ಸ್ವಾಮಿ ರಥೋತ್ಸವ ಹೀಗೆ ವಿವಿಧ ರಥೋತ್ಸವಗಳು ನಡೆಯುತ್ತವೆ. ಪ್ರತಿ ವರ್ಷ ಅಂದು ಜಾತ್ರೆಯನ್ನು ಕೂಡಿಸುತ್ತಾರೆ. ಕೆಲವು ಕಡೆ ದನಗಳ ಜಾತ್ರೆಯನ್ನು ಸಹ ಕೂಡಿಸುತ್ತಾರೆ. ಅಂದು ಸುತ್ತಮುತ್ತ ರೈತರು ತಮ್ಮ ಕುಟುಂಬದವರೊಡನೆ ಬಂದು ದೇವರಿಗೆ ಪೂಜೆ ಸಲ್ಲಿಸಿ ಜಾತ್ರೆ ನೋಡಿ ಮನೆಗೆ ಮರಳುತ್ತಾರೆ.

ಇತ್ತೀಚೆಗೆ ಈ ಸಂಸ್ಕೃತಿ, ಸಂಪ್ರದಾಯಗಳು ಮಲಿನವಾಗುತ್ತ ಬಂದಿವೆ. ಪ್ರತಿ ಹಳ್ಳಿಯಲ್ಲೂ ದೃಷ್ಟಿ ದೋಷ ತೆಗೆಯುವ ಮಂತ್ರಗಾರರಿದ್ದರು. ನಗರದ ಸಂಪರ್ಕದಿಂದ ಅವು ಗುಣವಾಗಿಯೂ ಕಾಣುತ್ತಿಲ್ಲ.

ಅನೇಕ ವರ್ಷದಳಿಂದ ಮಲೆನಾಡಿನ ಜೀವನ ಪ್ರಣಾಲಿಯಲ್ಲಿ ಹರಿದು ಬಂದಂಥ ಈ ಸುಂದರ, ಸಂಸ್ಕೃತ ವಿಧಿ ಸಂಪ್ರದಾಯಗಳೆಲ್ಲ ಮಲೆನಾಡಿನ ಸಂಸ್ಕೃತಿಯಲ್ಲಿ ತುಂಬಾ ಸತ್ವಶಾಲಿಯೂದುದೆಂದು ತಿಳಿಯಲು ಯಾವ ಸಂದೇಹವೂ ಇಲ್ಲ

'ವಂಕಿ'ಯೊಡವೆ

"ನಿನಗೊಂದು ಒಡವೆ ತೊಡಿಸುವಾಸೆಯಿದೆಯೆ ನಗೆ
ಎನ್ನರಸಿ, ತುಟಿ ತೆರೆದು ತೋರಿ ಬಿಡು ಮುಗುಳು ನಗೆ,
ಅದು ಇರಲಿ, ಮೊಗ್ಗು ಮಲ್ಲಿಗೆಯೆರಳಿದಂಥ ಬಗೆ
ಮಧುರ ಮಧುವಂ ಹೀರಿ ದುಂಬಿಯಂ ಕರೆವ ಪಾಗೆ" ॥ ೧ ॥

ಂಂ ಂಂ ಂಂ ಂಂ

ಆಫೀಸಿನಲ್ಲೊಬ್ಬ ನಾ ಕಾರಕೂನ,
ತಿಂಗಳಲಿ ಪಡೆಯುತಿಹೆನತ್ಯಲ್ಪ ವರಮಾನ
ಹೆಗಲು ಹೊತ್ತೆಲ್ಲ ಭಾರಿ ಕೆಲಸದ ಭಾರ
ಅದರೂ ಮಾನಕ್ಕೆ ಬಂದಿಹುದು ಸಂಚಕಾರ. ॥ ೨ ॥

ಂಂ ಂಂ ಂಂ ಂಂ

ಲಂಚಕ್ಕೆ ಕೈಯೆಂಡ್ಡೆ ಸಿಕ್ಕೆ ಬೀಳುವೆನಂತೆ
ತಂಬಿಗೆಯ ನೀರಲ್ಲಿ ನಾಣ್ಯ ಕಾಣುವಂತೆ;
ಅಧಿಕಾರಿ ವರ್ಗಕ್ಕೆ ದಕ್ಕುವುದು "ನೋಟೆ" ಕಂತೆ
ನಾ ರದ ನೀರಲ್ಲಿ ಸಂಪತ್ತು ತೋರದಂತೆ. ॥ ೩ ॥

ಂಂ ಂಂ ಂಂ ಂಂ

ಜೀವನದಿ ತುಂಬಿಹುದು ಸಂಕಷ್ಟ ತಾಪ
ಪರಿಹಾರ—ನಲ್ಲೆಯ ಲಿ ಲಲ್ಲೆ ಸಲ್ಲಾಪ
ಪರಿಣಾಮ? ಅವಳೊಂದು ಹೆಂಗೆ ಯಂತ್ರ
"ಅಷ್ಟ ಪುತ್ರ ಸೌಭಾಗ್ಯವತೀ ಭವ" ಹರ್ಷ ಮಂತ್ರ ॥ ೪ ॥

ಂಂ ಂಂ ಂಂ ಂಂ

ಹತ್ತು ವರ್ಷಗಳಲ್ಲಿ ಎಂಟು ಮಕ್ಕಳ ತಂದೆ,
ಮರ್ಯಾದೆ ಬದುಕಿಂಗೆ ಗತಿಯೇನ ಮುಂದೆ!
ದಶ ವರ್ಷ ಸಂದಾಗ ಹೊಸತೆಷ್ಟು ಮತ್ತೆ ?
ಸಂಸಾರ ಸಾಕೆನ್ನ; ನಾ ಬದುಕಿಯೂ ಸತ್ತೆ. ॥ ೫ ॥

ಂಂ ಂಂ ಂಂ ಂಂ

'ಎನ್ನ ಪ್ರೇಮದ ನಲ್ಲೆ ನಿನಗೊಂದು ಗುಟ್ಟನೊಡವೆ
ಅದರಿಂದೆ ಸಂಸಾರ ಭಾರವಂ ಇಳಿಸುತಿರುವೆ.
ನಾನಾಗಲಾರೆ ಇನ್ನೊಂದು ಕೂಸಿಂಗೆ ತಂದೆ
ಅದಕಾಗಿ ತೊಡಬೇಕು "ವಂಕಿಯೊಡವೆ"ಯೊಂದನೆಂದೆ" ॥ ೬ ॥

ಶ್ರೀ ಪಿ. ಶ್ಯಾಮ ಭಟ್, ಹೆರಡಾಲ

Ask for

AZAD

nitbit

BISCUITS

Azad Industries, Mangalore-1

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾಫಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾಫಿಕ್
ಖಾತರಿಯಾದ ಆಯುರ್ವೇದ ಔಷಧಿ ಮತ್ತು ದೆಹ್ಲಿ ವೈದ್ಯಕೀಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

Telegram: SAHAKARI Telephone: 4637

The S. K. A. C. M. S. Ltd.,

SAHAKARI MAHAL,

MANGALORE-1.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಲಿಮಿಟೆಡ್

ಸಹಕಾರಿ ಮಹಲ್,

ಮಂಗಳೂರು - 1.

ಅಡಿಕೆ, ಯಾಲಕ್ಕಿ. ಕಾಳುಮೆಣಸು, ಗೇರುಬೀಜ, ತೆಂಗಿನ ಕಾಯಿ ವಗೈರೆ (ಅಕ್ಕಿ ಭತ್ತ ಹೊರತು) ವ್ಯವಸಾಯದ ಎಲ್ಲಾ ಉತ್ಪತ್ತಿಗಳನ್ನು ಕಮಿಷನ್ ವ್ಯಾಪಾರಕ್ಕೆ ಪಡಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಹೊಸ ವರ್ಷ ಹಾಗೂ ಪರ್ಯಾಯೋತ್ಸವದ ಹಾರ್ದಿಕ ಶುಭಾಶಯಗಳು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ, ಉಡುಪಿ, ಫೋನ್: 66

ಉತ್ತಮ ಪವಸು ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಖಾತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ.

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ತೆಂಕಪೇಟೆ, ಉಡುಪಿ. ಫೋನ್: 66

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸ್ಟೀಲು ಕವಾಟು, ಸೋಫಾ ಕಂಬೆಡ್, ಹೊಲಿಗೆ ಯಂತ್ರಗಳು, ಗಡಿಯಾರಗಳು, ಎಲ್ಲಾ ತರದ ಸ್ಟೈನ್‌ಲೆಸ್ ಸ್ಟೀಲಿನ ಪಾತ್ರೆಗಳು, ಉಡುಗೊರೆಯ ಸಾಮಾನುಗಳು ಇತ್ಯಾದಿಗಳಿಗೆ ಇಂದೇ ಸಂದರ್ಶಿಸಿರಿ!

ಮ್ಯಾನೇಜರು: ಯು. ರಾಘವೇಂದ್ರ ಕೃಷ್ಣ ಭಟ್.

ಆರೋಗ್ಯಕರ ಹಾಗೂ ರುಚಿಕರವಾದ ಊಟ, ತಂಡಿ ತಿನಸು ಹಾಗೂ ಚಾ, ಕಾಫಿ ವಗೈರೆ ಪಾನೀಯಗಳಿಗೆ ಇಂದೇ ಸಂದರ್ಶಿಸಿರಿ!!

ಗೋಪಾಲಾಶ್ರಮ

ಊಟ-ಉಪಾಹಾರ ಗೃಹ

ಹೆಡ್ ಪೋಸ್ಟ್ ಆಫೀಸು ರಸ್ತೆ, ಕೋಳದ ಪೇಟೆ, ಉಡುಪಿ.

ಫೋನ್: 266

ಸಂಚಾಲಕರು: ಯು. ರಾಘವೇಂದ್ರ ಕೃಷ್ಣ ಭಟ್.

THE BHARATH MOTOR SERVICE

Maidan III Cross Road

MANGALORE-1

(Phone : 3446)

We provide special buses at moderate charges for the conveyance of marriage, excursion and tourist parties.

P. S: Special concession allowed for students' educational tours.

ತುಳುನಾಡಿನ ನಾಲ್ಕು ಪ್ರಾಚೀನ ಶಾಸನಗಳು

[ಒಂದನೇ ಪುಟದಿಂದ]

ತಿಲಕ ಸಾಹಸದ ಸಂಜಯಸಿಪ್ಪಯರತ್ನಾಕರ ಸರಸ್ವತೀ ಕರ್ಣಕುಂಡಲಾಭರಣ ಶ್ರೀ ಮದನೇಶ್ವರ ಪಾದ ಪದ್ಮಾರಾಧಕ ಶ್ರೀ ವೀರ ಪ್ರತಾಪ ಕುಂಬಳೆ ಧರ್ಮ ಸಿಂಹಾಸನದ" ಎಂಬೀ ಬಿರುದಾಂಕಿತರಾಗಿದ್ದರೆಂದು ತಿಳಿದು ಬರುತ್ತದೆ. ಎಂದಾಗ ಈ ಪ್ರದೇಶವುಕರ್ನಾಟಕದಭಾಗವೇ ಆಗಿತ್ತೆಂದು ಇತಿಹಾಸ ತಿಳಿಸುತ್ತದೆ.

ಉದ್ಯಾವರದ ಶಂಭು ಕಲ್ಲು ಭೈರವ ದೇವಸ್ಥಾನದಲ್ಲಿ ದೊರಕಿದ ಶಾಸನ

ಶಾಸನ ವಿಭಾಗವು ಪ್ರಕಟಿಸಿದಂತೆ ಈ ಶಾಸನವು ಕೆಳಗಿನಂತಿದೆ.

ಸ್ವಸ್ತಿಶ್ರೀ ವಿಭೂತ ವಿಸ್ತೀ—
[ರ್ಣ] ಪಿತಾಮಹಾವಲೋಕನಸ
[ಂ]—
ವರ್ದ್ಧಿತ ಕುಲಾಭಿಮಾನಸ—
ಕಳ ಶ್ರೀಮತ್ ಆಳುವರಸರು.
ಪಳ್ಳಿ [ಯೊಡೆಯೊ]ನು ರಾಜ್ಯಂಗೆ—

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 534/1967
R. I. A. 1882/67
I. A. IV
I. A. V

ಚಂದ್ರಭಾಗಿ ಅಮ್ಮ—ವಾದಿ-ಅರ್ಜಿದಾರಳು ಅಬ್ದುಲ್ಲ ಬ್ಯಾರಿ ಕೂಡಾ—ಪ್ರತಿವಾದಿರು —ಎದ್ರಿರು

2. ಅಪ್ಪು ಪಾಟಾಳಿ-ಪಕೀರ ಪಾಟಾಳಿಯ ಮಗ- D 4, 8. ಮಂಮದ ಬ್ಯಾರಿ ಮೊದುಬ್ಯಾರಿಮಗ D.3,5.ಮೀಗು ಸೂಜಾರಿ-ಮುತ್ತ ಸೂಜಾರಿ ಮಗ-D14 I.A.Vಲ್ಲಿ —ಎದ್ರಿರು

6. ರಾಗಳಿ ಸಂಕಪ್ಪ ರೈ, ಕೊರಮಾ ಕೊರಗಪ್ಪ ರೈ ಮಗ- D.11

7. ರಾಜಂಮ—ಗೋಪಾಲರ ಹೆಂಡ್ತಿ— D. 17, I. A. IVಲ್ಲಿ —ಎದ್ರಿರು

ಎಲ್ಲರು ನಟ್ಟಿಗೆ ಮುಡ್ನೂರು ಗ್ರಾಮದ ಈಶ್ವರ ಮಂಗಲದಲ್ಲಿ —ಎದ್ರಿರು

(Defendants 4-8-11-14-17, ಇವರಿಗೆ

ಪ್ರತಿವಾದಿರು ಯಾ ಅವರ ಕಡೆ ಜನರು ವಾದಿಗೆ ಹಕ್ಕಿನ ದಾವಾ ಅಸ್ತಿಗೆ ಅಕ್ರಮ ಪ್ರವೇಶ ಮಾಡದಂತೆ ಶಾಶ್ವತ ಇಂಜಂಕ್ಷನಿಗೆ ಪ್ರತಿವಾದಿರ ಮೇಲೆ ವಾದಿಯು ಮಾಡಿದ ದಾವೆಯಲ್ಲಿ ಕೋರ್ಟನವರು ಕೊಡೋಣದ ಟೆಂಪರರಿ ಇಂಜಂಕ್ಷನ್ ಯತ್ನಂಮನ್ನು ಉಲ್ಲಂಘನೆ ಮಾಡಿದ್ರಿಂದ ಅವರ ಮೇಲೆ Contempt of court Proceedings ಶಾಸನ ಕ್ರಮ ಮಂದರಿಸುವಂತೆ ಬರಕೊಂಡ ಅರ್ಜಿಗೆ ನೋಟೀಸಿನ ವ್ಯಾದಿ ತಾ. 16—2—1968ಕ್ಕೆ ಇಟ್ಟಿರುವುದರಿಂದ ಎದ್ರಿರು ತಮ್ಮ ಅಕ್ಷೇಪಗಳೇನಾದರೂ ಹೇಳುವದಿದ್ದರೆ ಆ ದಿನ 11 ಘಂಟೆಗೆ ಈ ಕೋರ್ಟುಗೆ ಮುಂದೆ ಹಾಜ್ರಾಗಿ ಬರಹಮೂಲಕ ಉದಹರಿಸ ತಕ್ಕದ್ದು. ಅದಕ್ಕೆ ತಪ್ಪಿದರೆ ಅವರನ್ನು ಶಿಕ್ಷೆಯಾ ಎಂತ ಮಾಡಿ ಈ ವ್ಯವಹಾರಿಯನ್ನು ಯುತ್ತಿಕಂಡಂತೆ ತೀರ್ಮಾನಿಸಲಾಗುವದು ಎಂತ ಈ ಕೋರ್ಟುಗೆ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Sd. B. Ramachandra Rao
M. A. B. L
Pleader for Plaintiff

ತಾರೀಖು, 10—1—68

ನೊಕ್ಕಾರಿ ಪುತ್ತೂರು S. K.

ಪ್ರಾಚೀನ ಶಾಸನಗಳು

ಯ್ಯೆ ಬೆಳ್ಳವತ್ತ ಮುನ್ನೇವ ಗೆರಿ
ಯುಸ್ಸಾ—
ಲ್ಕರು ಮೂ[ಸ]ರ್ಧಿ ಪರಿಯಿರಂಕಾಳ.
ಸಳ ಕೇಶರಿಯು ಶಾಪು ಮೊಯಿಚಣ್ಣ
[ಳೊ] ಮರಕೊಲ್ಲನು
ಎಳನೀರ[ಚ]ನ್ದನು[ಸ]ಮರ ಪಾಳು ಎ
ಳ[ವಾ]ಳು ಬಳಿ[ಪುರ]ದ
ನಕರದೆರ್ವತ್ತೊಕ್ಕಲು ಮುಪ್ಪದೊ[ರೊ]ಳ
ಮಲ್ಲಿ ಅ[ಗಿ]
ಬಿಲ್ಲಿವನುಂ ಕುಂದ ಪೋಲು ನುಂ ಅಂ
[ಖ]ರುಂ
ಮೂಗುಡಯಂ ನಾಕ್ಕೆ ಯೂರಂ ಕಾಪು
ಮಾಗಿ ಸಿವಾಳಿ. ಸಾಸಿಬ್ಬರಿಯಂ ಜೊಕ
ಪಾಳಿಯು ಬಂಟ್ಟ—
ರು ಮಲಿಯು ಸಮ್ಬು ಕಲ್ಲ ದೇವಗ್ಗರ್ಗ
ಮ್ಬುಳೆರ್ವತ್ತಮ್ಬಳ್ಳಿ [ಯೊ] ಡೆಯೂ...ರ
ಮೂ ಕಡ ವಿಡಕಲ್ಲಾಯು—
ಗೊರವರ್ಪ್ಪಡಿದೋ ರೀಶಾಸನ ಮೆವರ ಬ
ಳಯೊಳಾರಾಳ್ವೆಳ್ಳ... ಳು ಕಲ್ಲುಳ [ಪಾ]
ಳ್ವೊಂಪ್ಪೊದಲಂಗಿ ಯೊಬ್ಬನಾ—
ಳ್ವೊ ನಾವೂ ನಾನು ಮಾ ಧರ್ಮಮಳ
ಪೋ ಪ್ಪಾರನಾಸಿಯ ನಳದೋನ್ವ [ಸು]
ವಮ್ಮೊರ್ವರು ಮೂಕೊಳ್ಳೂಂ ತವ್ವಚ್ಚಿ
ಯೊ—
ಳ್ವ [ಕ್ಕೊ]ಮ್ಬಚ್ಚಿ ಮಹಾಪಾ—
[ತ]ಕಮಂ ಗಯ್ದೋನಿದು ಚ—
[ನ್ದ್ರಾ]ದಿತ್ಯ ಕಳುಳಿನ ನ್ನಿಲ್ಲುದಂ.
ಶ್ರೀ ಕಾಳಾದಿತ್ಯನ್
ದರೆಗೊಳಾಣ್ಮ ಮ್ಬರೆ ದೋನ್॥

ತುಳುನಾಡಿನ ರಾಜಕೀಯ ಕೇಂದ್ರಗಳಲ್ಲಿ ಪ್ರಾಮುಖ್ಯವಾದ ಉದ್ಯಾವರದಲ್ಲಿ (ಉದಯ ಪುರ) ದೊರಕಿದ ಹತ್ತಾರು ಶಾಸನಗಳಲ್ಲಿ ಈ ಶಾಸನವು ಅಮೂಲ್ಯವಾದುದು. ಇದರಲ್ಲೂ ತೇದಿ ಕಂಡುಬರುವುದಿಲ್ಲ. ಆದರೆ ಸಾಹಿತ್ಯ ಶೈಲಿ ಮತ್ತು ಲಿಪಿಯ ಪರಿಶೀಲನೆಯಿಂದ ಯಿ ದಾಖಲೆಯು ಸುಮಾರು ಕ್ರಿ. ಶ. 8ನೇ ಶತಕಕ್ಕೆ ಹೊಂದಿಕೆಯಾಗುತ್ತದೆ. ಈ ಲೇಖದ ಪ್ರಾರಂಭವು ಅಪೂರ್ವವಾಗಿದೆ. ಶ್ರೀ ಸ್ವಸ್ತಿ ಅಳುಪ ಅರಸುಮನೆತನಕ್ಕೆ ಸೇರಿದ ಆಳುವರಸ (ಈತನನ್ನು ಎರಡನೇ ಆಳುವರಸನೆನ್ನಬಹುದು)ನ ಕಾಲದ ಲೇಖವಿದು. ಪಿತಾಮಹನೆಂದರೆಬ್ರಹ್ಮ. ಬ್ರಹ್ಮನಿಂದವೋಡಲ್ಪಟ್ಟ ಕುಲವನ್ನುಳ್ಳಿಈಅರಸನು ಅಳುತ್ತಿರಲು ಎಂಬುದಾಗಿ ಪ್ರಾರಂಭವಾದುತ್ತದೆ. ಬ್ರಹ್ಮನಿಗೆ ಪ್ರಾರ್ಥನೆಯು ಶಾಸನರೂಪದಲ್ಲಿ ಬರುವುದು ಬಹಳ ವಿರಳ. ಈ ಶಾಸನದಲ್ಲಿ ಅಧಿಕಾರಿಗಳಿಂದ ಎರಡು ತಪ್ಪುಗಳಾದಂತೆ ಕಂಡು ಬರುತ್ತದೆ. "ಪಳ್ಳಿಯೊಡೆಯ' ಎಂಬುದು 'ಪಟ್ಟಿಯೊಡೆಯ' ಎಂದಾಗಬೇಕು. ಪಟ್ಟಿಯೆಂದರೆ ಶಿವಮೊಗ್ಗೆ ಜಿಲ್ಲೆಯ ಪಟ್ಟಿ ಪೊಂಬುಚ್ಚಪುರ (ಈಗಣ ಹುಂಬುಚ್ಚ). ಆಳುವರಸರು 7ನೇ ಶತಮಾನಕ್ಕಿಂತ ಮೊದಲು ಪಟ್ಟಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿಕೊಂಡಿದ್ದಂತೆ ತಿಳಿದುಬರುತ್ತದೆ. ಆದುದರಿಂದ ಅವರಿಗೆ 'ಪಟ್ಟಿಯೊಡೆಯ' ಎಂಬ ಬಿರುದಿತ್ತು. ಅಂತೆಯೇ "ಉದಿಳಿಪುರ'ವು ಉದಯಪುರವಾಗಬೇಕು. ಉದಯಪುರವೇ ರೂಪಾಂತರವಾಗಿ ಈಗಿನ ಉದ್ಯಾವರವಾಗಿದೆ. ಉದಯಪುರವು ನಗರವೆಂಬುದಾಗಿ ಉಲ್ಲೇಖಿಗೊಂಡಿದೆ. ಇಲ್ಲಿ ಬರುವ ಇತರ ಹೆಸರುಗಳೂ ಚಾರಿತ್ರಿಕ ವೈಶಿಷ್ಟ್ಯವುಳ್ಳದು:— ಕಾಪು, ಜೊಕಪಾಳಿ (ಈಗಣ ಜೊಕ್ಕಾಡಿ) ಎಳನೀರು (ಎಡನೀರು)ಸಿವಾಳಿ (ಶಿವಳ್ಳಿ ಯಾ ಶಿವಳ್ಳಿ). ಕಾಪು ಉದಯಪುರದ ಕಾವಲು ಸ್ಥಳವೆನ್ನಲು ಸಾಧ್ಯವಿದೆ. ಶಿವಳ್ಳಿಯು ಪ್ರಾಚೀನ ಕಾಲದಿಂದಲೂ ಒಂದು ಹಿರಿದಾದ ಬ್ರಾಹ್ಮಣ್ಯದ ಕೇಂದ್ರವಾಗಿತ್ತು. "ಸಿವಾಳಿಯು ಸಾಸಿಬ್ಬರು" ಎಂಬುದರಿಂದ ಶಿವಳ್ಳಿಯ ಜನತೆ ಎಂಬುದಾಗಿ ತಿಳಿಯಬಹುದು.

ಈ ಶಾಸನದಲ್ಲಿ ಅಪ್ಪಷ್ಟ ನುಡಿಗಳು ತುಂಬಾ ಇವೆ. ಶಂಭುಕಲ್ಲ ದೇವರಿಗೆ ಕೊಟ್ಟ ದತ್ತಿ ಶಾಸನವಿದಾಗಿದೆ. ಉದಯಪುರದ ಶಂಭುಕಲ್ಲು ದೇಗುಲದ ಪ್ರಾಚೀನತೆಯನ್ನು ಇದರಿಂದ ತಿಳಿಯಬಹುದು. ನಮಗೆ ಇತ್ತಲಂಗೆ ದೊರಕಿದ್ದ ಒಂದು ಚಿಕ್ಕ ಶಾಸನವು ಸುಮಾರು ಕ್ರಿ. ಶ. 7—8ನೇ ಶತಕಗಳದ್ದಿದ್ದು ಸ್ವಸ್ತಿ ಶ್ರೀ ಈಶ್ವರ ಎಂದು ಓದುತ್ತದೆ. ಶಂಭುಕಲ್ಲ ದೇವರು ಈಶ್ವರನೆಂದೂ ಈಶ್ವರನಿಂದ (ಶಂಭು) ಈ ದೇವಸ್ಥಾನದ ಖಂಡಿಗೆ ಶಂಭುಕಲ್ಲು ಎಂಬೀ ಹೆಸರು ಬಂತೆಂದೂ ತಿಳಿಯಬಹುದು. ಈ ದೇಗುಲವು ಈಗ ಸಂಪೂರ್ಣ ಪಾಳುಬಿದ್ದರೂ ಗಜಪೃಷ್ಠಾಕಾರದಲ್ಲಿರುವ ಅದರ ಸ್ಥಳ ವಿನ್ಯಾಸವೂ ನಂದಿ ಮಂಟಪದಲ್ಲಿರುವ ಪ್ರಾಚೀನ ನಂದಿಯ ಶಿಲಾ ಪ್ರತಿಮೆಯೂ ಚಾರಿತ್ರಿಕ ಅವಶೇಷಗಳಾಗಿ ನಿಂತಿವೆ.

ಆಳುವರಸನು ಈ ಶಾಸನವನ್ನು ಶಂಭುಕಲ್ಲ ದೇಗುಲದ ಗೊರವರಿಗೆ ಕೊಟ್ಟಂತೆ ಕಂಡು ಬರುತ್ತದೆ. "ಗೊರವರ್ಪಡಿ ದೋರೀಶಾಸನ' ಎಂಬುದರಿಂದ ಇದು ಸ್ಪಷ್ಟವಾಗುತ್ತದೆ. ಗೊರವರೆಂದರೆ ಕಾಳಾಮುಖ ಪಂಥಕ್ಕೆ ಸೇರಿದವರು. ಅವರಲ್ಲಿ ಮುಖಂಡರೂ ಶಾಸ್ತ್ರಿಗಳೂ ಆದವರು ಶಿವಾಲಯಗಳಲ್ಲಿ ಪೂಜೆ, ಸಂಸ್ಕಾರಗಳನ್ನು ಮಾಡುವವರು ಗೊರವರಾಗಿದ್ದರು ಉದಯಪುರದಲ್ಲಿ ಕಾಳಾಮುಖ ಪಂಥವು ಬಲವಾಗಿತ್ತೆಂದೂ ದೇಗುಲದ ಆಡಳಿತ ವ್ಯವಸ್ಥೆ ಅವರ ಕೈಯಲ್ಲಿತ್ತೆಂದೂ ಇದರಿಂದ

ದಿ ಸೌತ್ ಕೆನರಾ ಸೆಂಟ್ರಲ್
ಕೋ-ಓಪರೇಟಿವ್ ಬೇಂಕ್
ಲಿಮಿಟೆಡ್

ಕೊಡಿಯಾಲ್‌ಬೈಲ್ - ಮಂಗಳೂರು-3

ಸ್ಥಾಪನೆ. 1914 ಫೋನ್: 3469

ತಂತಿ: CENCOBANK

ಠೇವಣಾತಿಗಳ ಮೇಲೆ ಸೇಕಡ 5½ ರಿಂದ 7½ ರ ವರೆಗಿನ ಆಕರ್ಷಕ ಬಡ್ಡಿಯೊಂದಿಗೆ ಖಾತ್ರಿಯಾದ ಭದ್ರತೆಯ ಭರವಸೆ.

ನಿಮ್ಮ ಠೇವಣಿ ಹಣವನ್ನು ದೇಶದ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಉಪಯೋಗಿಸಲಾಗುವುದು.

B. Prabhakara Rao, M.A., B.L., Vice-President.
B. Narayana Nayak, President.
K. P. Jagannatha Rao, B Com, Secretary.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. L. P. 507/1966

ವಾದಿ —ನಂದ್ಯಪ್ಪಸಟ್ಟಿ

ಪ್ರತಿವಾದಿ—ವೀರಣ್ಣ ಶೆಟ್ಟಿ, ಮುತ್ತಪ್ಪ ಶೆಟ್ಟಿ ಮಗ, ಕೆದೂರು ಗ್ರಾಮ, ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನಂದ್ರೆ—

ಮೇಲಿನ ಅಮಲ್ಜಾರಿಯಲ್ಲಿ ಜಪ್ತಾದ ಸ್ತಿರಾಸ್ತಿಗಳ ಯೇಲಂ ಕಾರ್ತಿ ವಾದಿಯು ಯೇಲಂ ಯಿಸ್ತಿಹಾರು ದಾವೆಲು ಮಾಡಿರುತ್ತಾನೆ. ಯಿಸ್ತಿಹಾಂತ ದರ್ಖ ನಿರ್ಣಯಿಸುವರೆ ಅಮಲ್‌ಜಾರಿಯನ್ನು ತಾ. 7—2—68 ಕ್ಕೆ ತಸ್ತಾಗೆ ಯಿಟ್ಟಿರುತ್ತದೆ. ಆ ಕಾರಣ ನಿಮ್ಮದೇನಾದರೂ ಆಕ್ಷೇಪಯಿದ್ದರೆ ಆ ದಿನ ಬೆಳಗ್ಗೆ 11 ಘಂಟೆಗೆ ಮೇಲಿನ ಕೋರ್ಟನಲ್ಲಿ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗತಿ ತಿಳಿಯಿದೆ.

ಕೋರ್ಟು ಹುಕುಂ ಪ್ರಕಾರ

Y. Tejappa Shetty
Advocate for Plff

Coondapoor, 21—12—1967

ಸೇವಾದೀಕ್ಷಿತ ಸಂಸ್ಥೆಗಳು

ಸಿಂಡಿಕೇಟ್ ಬ್ಯಾಂಕ್ ಲಿ.

ರಾಷ್ಟ್ರದ ಆವಶ್ಯಕತೆಗಳನ್ನು ಮುಂದಾಗಿಯೇ ಗಮನಿಸಿ, ಅವನ್ನು ಸಾಧಿಸುವಲ್ಲಿ ಸಿಂಡಿಕೇಟ್ ಬ್ಯಾಂಕ್ ಯಾವಾಗಲೂ ಮುಂದು. ಬಹಳ ಸಣ್ಣ ಉಳಿತಾಯ ಯೋಜನೆ ಸಿಗ್ನಿಯಿಂದ ಆರಂಭವಾಗಿ ಹಲವಾರು ಚಿಕ್ಕ ದೊಡ್ಡ ಉಳಿತಾಯ ಯೋಜನೆಗಳು ಇಲ್ಲಿವೆ. ಆಹಾರೋತ್ಪನ್ನ ಹೆಚ್ಚಿಸುವ ಸಲುವಾಗಿ ಕೃಷಿಕರಂಗಕ್ಕೆ ಆರ್ಥಿಕ ತಾಂತ್ರಿಕ ಸಹಾಯ ನೀಡುವ ವಿಭಾಗ ಸಿಂಡಿಕೇಟಿನ ಹೊಸ ಆದರ್ಶ. ಹುದುಗಿರುವ ಸಂಪತ್ತನ್ನು ಬಹಿರಂಗಕ್ಕೆ ತಂದು, ಅದನ್ನು ದೇಶಹಿತಕ್ಕಾಗಿ ಒದಗಿಸುವಲ್ಲಿ ಸಿಂಡಿಕೇಟ್ ಬ್ಯಾಂಕು ತನ್ನ ಸ್ಥಾಪನೆಯಿಂದಲೂ ಮುಂದು. ಇಂದು ಇದರ ಶಾಖೆಗಳು ಜನ

ಹಿರಿದುತ್ಸಾಹದ ಮಾರ್ಗದರ್ಶಕ
ಡಾ| ಮಾಧವ ಪೈ

ತಾ ಸೇವೆಯಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿವೆ. ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ ತರುವ ಸರಕಾರದ ಯೋಜನೆಯನ್ನು ಸಿಂಡಿಕೇಟ್ ಈಗಾಗಲೇ ಒಗ್ಗಿಸಿಕೊಂಡಿದೆ. ದಶಂಬರ ತಿಂಗಳಲ್ಲಿ ಪದ್ಮಶ್ರೀ ಡಾ|ಮಾಧವ ಪೈಯವರ ಸ್ಥಾನದಲ್ಲಿ ತರುಣ ಶ್ರೀ ಟಿ. ಎ. ಪೈಯವರು ಪೂರ್ಣಾವಧಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬ್ಯಾಂಕಿನ ಸ್ಥಾಪನೆಯಾದಂದಿನಿಂದಲೂ ಡಾ| ಪೈಯವರ ನೇರ ಸೂಕ್ಷ್ಮ ಮಾರ್ಗದರ್ಶನದಿಂದ ಅದು ಬೆಳೆದು ಹೆಮ್ಮರವಾಗಿ ಇಂದು ನಿಂತಿದೆ. ಇದೀಗ ವಿಶಾಲ ಬ್ಯಾಂಕಿಂಗ್ ಅನುಭವವಿರುವ ಶ್ರೀ ಟಿ. ಎ. ಪೈಯವರು ಈ ಮರವನ್ನು ಬೆಳೆಸಲು ಸೊಂಟ ಕಟ್ಟಿದ್ದಾರೆ. ಬ್ಯಾಂಕಿನ ಚೀಫ್ ಆಫೀಸರ್ ಶ್ರೀ ಕೆ. ಕೃಷ್ಣ ಮತ್ತಿತರ ಸಿಬ್ಬಂಧಿಗಳ ಸಂಪೂರ್ಣ ಸಹಕಾರ ಅವರಿಗಿದೆ. ದೇಶದ ಬ್ಯಾಂಕಿಂಗ್ ಹವ್ಯಾಸಿಗಳಲ್ಲಿ ಇನ್ನೆರಡು ಜನರಲ್ಲಿ



ಅ. ಭಾ. ಕೀರ್ತಿಯ
ಸೂಕ್ಷ್ಮ ಮನೋಭಾವದ
ಶ್ರೀ ಟಿ. ಎ. ಪೈ

ಒಬ್ಬರು ಸಿಂಡಿಕೇಟನ್ನು ತನ್ನ ಬ್ಯಾಂಕಾಗಿ ಆರಿಸಿಕೊಂಡಿದ್ದಾರೆ-ಇದು ಹೆಮ್ಮೆಯ ವಿಷಯ. ಸದ್ಯೋಭವಿಷ್ಯದಲ್ಲಿ ಬ್ಯಾಂಕ್ ಇನ್ನೂ ಪ್ರಗತಿಯಾಗುವುದೆಂದು ಬೆಳೆಯಲಿ ಎಂದು ಹಾರೈಸುತ್ತೇವೆ

ವಿಜಯಾ ಬ್ಯಾಂಕ್ ಲಿ.

ರಜತೋತ್ಸವವನ್ನು ಆಚರಿಸಿದ ನಂತರವೇ ಶೆಡ್ಯೂಲ್ಡ್ ಬ್ಯಾಂಕಾಗಿ ಪರಿವರ್ತನೆ ಹೊಂದಿದ ವಿಜಯಾ ಬ್ಯಾಂಕ್ ಆನಂತರ ರಭಸದ ಪ್ರಗತಿಯನ್ನು ಹೊಂದುತ್ತ ಮುನ್ನಡೆಯುತ್ತಿದೆ. ಗಣಿಗರಲ್ಲಿ ಸ್ಥಾಪನೆಯಾದ ಈ ಬ್ಯಾಂಕು ಇಂದು ಮೈಸೂರು, ಕೇರಳ, ಮಹಾರಾಷ್ಟ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಒಟ್ಟು ಅಜಿ ಶಾಖೆಗಳನ್ನು ಹೊಂದಿದೆ. ಹಲವಾರು ಚಿಕ್ಕ ಬ್ಯಾಂಕುಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡು, ದೇಶದ ಜನತೆಗೆ ವಿಸ್ತೃತ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಮುಂದುವರಿಯುತ್ತಿದೆ. ಮಧ್ಯಮ ವರ್ಗದ ಬ್ಯಾಂಕ್‌ಗಳಲ್ಲಿ ಅಗ್ರಗಣ್ಯ ಸ್ಥಾನ ಪಡೆದ ವಿಜಯಾ ಬ್ಯಾಂಕ್ ಸುಭದ್ರ ಪಂಚಾಂಗದ ಮೇಲೆ ನಿಂತಿದೆ. ಇದಕ್ಕೆ ಚೆಯರ್‌ಮ್ಯಾನ್ ಶ್ರೀ ಎಂ. ಸುಂದರರಾಮ ಶೆಟ್ಟರ ಉತ್ಸಾಹ ಮತ್ತು ಪ್ರಗತಿ ಪ್ರಿಯತೆಯೇ ಕಾರಣ. ಕಾರ್ಯದರ್ಶಿ ಕ್ರಿಯಾಶೀಲ ಹಾಗೂ ಅನುಭವಿ ಶ್ರೀ ಪಿ. ಜಯರಾಮ ಶೆಟ್ಟಿ ಮತ್ತು ಉಪಕಾರ್ಯದರ್ಶಿ ಕಾರ್ಯಮಗ್ನ ಶ್ರೀ ವಿಠಲ ಶೆಟ್ಟರ ಕಾರ್ಯದಕ್ಷತೆಯೂ ಇದಕ್ಕೆ ಪ್ರೋತ್ಸಾಹಕಾರಕ. ಮುಂದಿನ ವರ್ಷಗಳಲ್ಲಿ ಬ್ಯಾಂಕು ಉತ್ಕರ್ಷದ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುತ್ತೇನೆ.

ಸದ್ವೈದ್ಯ ಶಾಲಾ (ವ್ರಾ.) ಲಿ.

ನಂಜನಗೂಡಿನ ಹಳ್ಳು ಉಜ್ಜುವ ಪುಡಿಯನ್ನು ಬಳಕೆಮಾಡುವವರು ಯಾರು? ಇದು

ಊಹಿಸ ಬಹುದು. ನಮ್ಮ ನಾಡಿನಲ್ಲಿ ಕಾಳಾಮುಖ ಪಂಥವು ಒಮ್ಮೆ ಪ್ರಸಿದ್ಧಿ ಹೊಂದಿತೆನ್ನ ಬಹುದು.

ಪ್ರಾಚೀನ ಕನ್ನಡ ಸಾಹಿತ್ಯದ ರೂಪರೇಷೆಗಳನ್ನು ತಿಳಿಯಲನುಕೂಲವಾಗುವ ಶಾಸನವಿದು.

ಎರ್ಪತ್ತೊಕ್ಕಲು—ಎಪ್ಪತ್ತೊಕ್ಕಲು
ಪಡಿದೋರ್ — ಪಡೆದರು
ಅಳದೋನ್ —ಅಳಿಸಿದವನು
ಬಳ್ದೋನ್ —ಬಳಸಿದವನು
ಬರೆದೋನ್ —ಬರೆದವನು
ಗೆಯ್ದೋನ್ —ಮಾಡಿದವನು.

ಉಡುಪಿ ತಾಲೂಕಿನ ವಡ್ಡರ್ಸೆ ಮಹಾಲಿಂಗೇಶ್ವರ ದೇಗುಲದಲ್ಲಿ ದೊರಕಿದ ಶಾಸನ

ನಮ್ಮ ಜಿಲ್ಲೆಯಲ್ಲಿ ದೊರಕಿದ ಶಾಸನಗಳಲ್ಲಿ ಈ ಶಾಸನವು ಅತಿ ಪ್ರಾಚೀನವಾದುದೆಂದು ತಿಳಿಯಲ್ಪಟ್ಟಿದೆ. ಇದನ್ನು ಕ್ರಿ. ಶ. 7ನೇ ಶತಮಾನಕ್ಕೆ ಅನ್ವಯಿಸಿದ್ದಾರೆ. ಇದು 'ವಡ್ಡರ್ಸೆ ಶಾಸನ' ಎಂಬುದಾಗಿ ಶಾಸನ ವಿಭಾಗದವರಿಂದ ಕರೆಯಲ್ಪಟ್ಟಿದೆ. ಇದರಲ್ಲೂ ಹೆಚ್ಚಿನ ಅಂಶ ಹಾಳಾಗಿ ಹೋಗಿದೆ. ಇದರ ವೈಶಿಷ್ಟ್ಯವನ್ನು ಈ ಕೆಳಗಿನಂತೆ ತಿಳಿದುಕೊಳ್ಳ ಬಹುದು.

ವಡ್ಡರ್ಸೆಗೆ 'ಪೊಡ್ಡರಸೆ' ಎಂಬ ಹೆಸರಿತ್ತು. ಇದು ಒಂದು ರಾಜಕೀಯ ಕೇಂದ್ರವಾಗಿತ್ತು. ಈ ಶಾಸನವನ್ನು ಬರೆದಾತ "ಕನಕ ಶಿವನ್" ಎಂಬವನು. ಕಂದವರ್ಮನೆಂಬ ಒಬ್ಬ ಅರಸನ ಹೆಸರು ಉಲ್ಲೇಖಗೊಂಡಿದೆ. ಇದು ಕುಂದವರ್ಮನೆಂಬುದಾಗಿಯೂ ಇದ್ದಿರ ಬಹುದು. ಇದರಲ್ಲಿ 17ಮಂದಿ ಬ್ರಾಹ್ಮಣರಿಗೆ 17 ಕಂಚು ಮತ್ತು 17 ಕೇಳ್ಗಂಚು ಸಟ್ಟುಗಗಳನ್ನು ದಾನವಾಗಿತ್ತ ವಿಷಯ ತಿಳಿದು ಬರುತ್ತದೆ. ಕಂಚು ಎಂದರೆ ಊಟ ಮಾಡುವ ಬಟ್ಟಲು ಎಂದೂ ಕೇಳ್ಗಂಚು ಎಂದರೆ ಚಿಕ್ಕ ಬಟ್ಟಲೆಂದೂ ತಿಳಿಯ ಬಹುದು. ಕ್ರಿ. ಶ. 7ನೇ ಶತಮಾನಕ್ಕೆ ಪೊಡ್ಡರಸೆಯಲ್ಲಿ ಬ್ರಾಹ್ಮಣ್ಯವಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದಕ್ಕಿಂತ ಸ್ವಲ್ಪ ಸಮಯವಾದರೂ ಹಿಂದಕ್ಕೆ ಇಲ್ಲಿ ಬ್ರಾಹ್ಮಣ ಸಮುದಾಯವಿದ್ದಿರಬೇಕು. 'ಬನ್ನ ಸತ್ತಿಗಾರ' ಎಂಬ ಉಲ್ಲೇಖದಿಂದ ಬನ್ನಾಡಿಯ ಒಬ್ಬ ಅಧಿಕಾರಿ ಎಂದು ಅರ್ಥವಿಸಬಹುದು. ಪೊಡ್ಡರಸೆಯು ಸುಮಾರು 12ನೇ ಶತಮಾನದವರೆಗೂ ಒಂದು ರಾಜ್ಯವಾಗಿ ಉಳಿದಂತೆ ದಾಖಲೆಗಳಿಂದ ತಿಳಿದುಬರುತ್ತದೆ. ಈಗಲೂ ಕೋಟೆಯ ಕುರುಹುಗಳಿವೆ. ಇಲ್ಲಿಯ ಶ್ರೀ ಮಹಾದೇವನ ದೇಗುಲವು ಪ್ರಾಚೀನತೆಯ ಲಕ್ಷಣಗಳನ್ನು ಒಳಗೊಂಡಿದೆ. ಶಿಲ್ಪದಲ್ಲಿ ಸುಮಾರು 8—9ನೇ ಶತಕಗಳಷ್ಟಾದರೂ ಹಳೆದಿರಬೇಕು. "ಪಡುವಳ್ಳಿ"ಎಂದು ನಮೂದಿಸಿದ ಈ ಊರು ಉತ್ತರ ಕನ್ನಡ ಜಿಲ್ಲೆಯ ಬಟಗಳದ ಸಮೀಪವಿರುವ 'ಪಾಡುವಳ್ಳಿ' (ಹಾಡುವಳ್ಳಿ) ಇದ್ದಿರಲೂಬಹುದು.

ದಕ್ಷಿಣ ಕನ್ನಡ ಜಿಲ್ಲೆಯು ಆಳವ ವೇಡ 6000 ಎಂದು ಹೆಸರು ಪಡೆದಿತ್ತು. ಕ್ರಿ. ಶ. 2ನೇ ಶತಕದ ಟೊಲೆಮಿಯ ಭೂಗೋಳದಲ್ಲಿ ನಮೂದಿಸಲ್ಪಟ್ಟ 'ಓಲ ಪ್ಯೊರಾ' ಎಂಬುದು ಆಳವ ವೇಡವೆನ್ನುವುದರಲ್ಲಿ ಸಂದೇಹವಿಲ್ಲ. ಹಾಗಾದರೆ ಕ್ರಿ. ಶ. 2ನೇ ಶತಕಕ್ಕೆ ನಮ್ಮ ಜಿಲ್ಲೆಯು ಒಂದು ಸುವ್ಯವಸ್ಥಿತ ರಾಜಕೀಯ ಘಟಕವಾಗಿತ್ತೆಂದು ಅನುಮಾನಿಸಲು ಕಾರಣವಿದೆ. ಸುಮಾರು 7ನೇ ಶತಕದ ವಡ್ಡರ್ಸೆಯ ಈ ಶಾಸನವೂ ಈ ತೀರ್ಮಾನಕ್ಕೆ ಬೆಂಬಲವನ್ನೀಯುತ್ತದೆ. ಇನ್ನೂ ಪ್ರಾಚೀನ ಶಾಸನಗಳು ಅನ್ವೇಷಣೆ ಮೂಲಕ ದೊರಕಬಹುದು. ಈ ಶಾಸನಗಳನ್ನಾಧರಿಸಿ ಇತಿಹಾಸದ ವಿಮರ್ಶೆ ಅಗತ್ಯ.

ಕಳೆದ ಐವತ್ತು ವರುಷಗಳಿಂದ
ಉತ್ತಮ ಸೇವೆಯನ್ನು ಸಲ್ಲಿಸಿಕೊಂಡು ಬರುತ್ತಿರುವ
ಗದಗಿನ ಅತ್ಯುತ್ತಮ ರೆಸ್ಟೋರೆಂಟ್ ಎಂದರೆ

ಗದಗ ರೆಸ್ಟೋರೆಂಟ್

ಸ್ಟೇಶನ್ ರೋಡ್, ಗದಗ

ಮನಮೆಚ್ಚುವ ವ್ಯವಸ್ಥೆ, ರುಚಿಕರವಾದ ತಿಂಡಿತಿನಿಸುಗಳು
ಇವುಗಳೇ ನಮ್ಮ ವೈಶಿಷ್ಟ್ಯ.

ಉಪಾಹಾರ ಕೂಟಗಳ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ
ಮಾಡಲಾಗುವುದು.

ಒಮ್ಮೆ ಸಂದರ್ಶಿಸಿರಿ!

GADAGA
RESTAURANT
STATION ROAD,
GADAG

ಸದ್ವೈದ್ಯ ಶಾಲೆಯ ತಯಾರಿಕೆ. ಇವರ ಹಲ್ಲುಉಜ್ಜುವಪುಡಿ ಲೋಕಪ್ರಸಿದ್ಧಿಯನ್ನು ಪಡೆದಿದೆ. ಅನುಭವಸಿದ್ಧ ಮತ್ತು ಆತ್ಯಂತ ಪ್ರಭಾವಶಾಲಿ ಆಯುರ್ವೇದೀಯ ಸಿದ್ಧೌಷಧಗಳು ಸುವಿಖ್ಯಾತವಾಗಿವೆ. ಅಗರು ಬತ್ತಿ, ಕೂದಲೆಣ್ಣೆ, ಸೆಂಟ್ ಮೊದಲಾದ ಸುಗಂಧ ದ್ರವ್ಯಗಳು ಚಿತ್ತಾಕರ್ಷಕವಾಗಿವೆ. ನಂಜನಗೂಡಿನ ತಯಾರಿಕೆಗಳು ಇಡಿಯ ದಕ್ಷಿಣ ಭಾರತದಲ್ಲಿ ತನ್ನ ಹೆಸರನ್ನು ಶಾಶ್ವತಗೊಳಿಸಿವೆ. ಅನುಭವಿ ತಜ್ಞರ ಮಾರ್ಗದರ್ಶನದಲ್ಲಿಯೇ ಇವುಗಳ ತಯಾರಿಯಾಗುವುದೇ ಇದಕ್ಕಿರುವ ಏಕಮೇವ ಕಾರಣ. ಸದ್ವೈದ್ಯ ಶಾಲೆಯ ಪ್ರಧಾನ ಕಾರ್ಯಾಲಯ ನಂಜನಗೂಡಿನಲ್ಲಿದ್ದು, ವಿಶಾಲ ಸೇವೆ ಸಲ್ಲಿಸುವ ಉದ್ದೇಶದಿಂದ ಮೈಸೂರು, ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ತನ ಶಾಖೆಗಳನ್ನು ತೆರೆದು ಗ್ರಾಹಕರಿಗೆ ಸರಿಯಾದ ರೀತಿಯಲ್ಲಿ ಸೂರೈಯ್ಯಯಾಗುವಂತೆ ವ್ಯವಸ್ಥೆ ಮಾಡಿದೆ. ಜನೋಪಕಾರಿ ಸಂಸ್ಥೆಯಾದ ಸದ್ವೈದ್ಯಶಾಲೆ ಇನ್ನೂ ಬೆಳೆದು ಜನಸೇವೆಯನ್ನು ಮಾಡುತ್ತಿರಲಿ.

ಯುನೈಟೆಡ್ ಟ್ರೇಡಿಂಗ್ ಕಾರ್ಪರೇಶನ್ ಎಂಡ್ ವರ್ಕ್ ಶಾಪ್ (ಪ್ರೈ.) ಲಿ.

ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ನಗರ ಮಂಗಳೂರಿನಲ್ಲಿರುವ ಈ ಸಂಸ್ಥೆಯು ತನ್ನ ಪ್ರಾಮಾಣಿಕತೆಗೆ ಹೆಸರು ಪಡೆದಿದೆ. ಇದರ ಮುಖ್ಯ ವ್ಯವಹಾರ ಹಿಂದುಸ್ಥಾನ್ ಅಂಬಾಸಡರ್ ಕಾರುಗಳ ವಿತರಣೆ. ಜಿಲ್ಲೆಯ ಪ್ರಮುಖ ಸಾರಿಗೆ ಸಂಸ್ಥೆಯಾದ ಶಂಕರ್ ವಿಟ್ಟಲ್ ಮೋಟಾರ್ ಕಂಪೆನಿಯ ಅಂಗಸಂಸ್ಥೆಯಿದು ಎನ್ನಬಹುದು. ತನ್ನ ಪ್ರಾಮಾಣಿಕ ವ್ಯವಹಾರದಿಂದ ದಿನದಿನಕ್ಕೂ ಇದು ಉನ್ನತ ಪಥಗಾಮಿಯಾಗುವುದರಲ್ಲಿ ಸಂದೇಹವಿಲ್ಲ.

ಶಂಕರ ವಿಟ್ಟಲ್ ಮೋಟಾರು ಕಂಪೆನಿ ಲಿ.

ದ. ಕ. ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆಯನ್ನೂ ಪ್ರಾಸಗಿ ಕ್ಷೇತ್ರದಲ್ಲಿಯೇ ಇರುವುದಾದರೆ, ಅದಕ್ಕೆ ಈ ವ್ಯವಸ್ಥೆಯು ಅತ್ಯುತ್ತಮವಾಗಿರುವುದೇ ಕಾರಣ. ಈ ಸುವ್ಯವಸ್ಥೆಗೆಗೆ ಶಂಕರ ವಿಟ್ಟಲ್ ಮೋಟಾರ್ ಕಂಪೆನಿಯೂ ತನ್ನ ಸಮರ್ಪಕ ಸೇವೆಯನ್ನು ಬಹುಕಾಲದಿಂದ ಸಲ್ಲಿಸುತ್ತಿದೆ. ಜಿಲ್ಲೆಯಹಿರಿಯ ಸಾರಿಗೆಸಂಸ್ಥೆಗಳಲ್ಲಿ "ಶಂಕರ್ ವಿಟ್ಟಲ್" ಒಂದಾಗಿದ್ದು ಜಿಲ್ಲೆಯ ಪ್ರಮುಖ ನಗರಗಳ ಪಡುವೆ ತನ್ನ ಬಸ್ಸುಗಳನ್ನು ಓಡಿಸುತ್ತಿದೆ. ಕಂಪೆನಿಯು ಸಮರ್ಥ ಆಡಳಿತಗಾರರ ಮಾರ್ಗದರ್ಶನದಲ್ಲಿ ಪ್ರಯಾಣಿಕರಿಗೆ ಅತ್ಯಧಿಕ ಸೌಲಭ್ಯವೊದಗಿಸುತ್ತಿದೆ.

ವಿಕ್ಟರ್ ಟ್ರೇಡಿಂಗ್ ಕೋರ್ಪರೇಶನ್—

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ 'ಜವಾಹರ್' ಸ್ಟೇಂಡರ್ಡ್ ಡಿಸೆಲ್ ಇಂಜಿನ್‌ಗಳು ಮತ್ತು ಪಂಪು ಸೆಟ್ಟುಗಳು ಹಾಗೂ 'ಜೇಕೋ' ಇಲೆಕ್ಟ್ರಿಕ್ ಮೋಟಾರುಗಳು, ಮೊನೋ ಬ್ಲೋಕುಗಳು ಮತ್ತು ಪಂಪುಗಳ ವಿತರಣೆಗಾರರು ಇವರು. ರೈತಾಪಿ ಜನರಿಗೆ ಅತ್ಯಧಿಕ ಲಾಭದಾಯಕವಾಗಿರುವ ಈ 'ಜವಾಹರ್' ಮತ್ತು 'ಜೇಕೋ' ಗಳ ವಿಶಿಷ್ಟ ರೀತಿಯ ತಯಾರಿಕೆಗಳಾಗಿದ್ದು ಇವುಗಳು ಅತ್ಯಂತ ಜನಪ್ರಿಯವಾಗಿವೆ. ವಿಕ್ಟರ್ ಟ್ರೇಡಿಂಗ್ ಕೋರ್ಪರೇಶನ್‌ನ ಸೇವೆ ಪ್ರಶಂಸನೀಯ.

ಮೈಸೂರು ಸರಕಾರದ ಸಾಬೂನು ಕಾರ್ಖಾನೆ

ಮೈಸೂರು ಗಂಧದ ಸಾಬೂನು ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ಹೆಸರು ಪಡೆದುದು. ಇದರ ಸುವಾಸನೆಯು ಮನಮೋಹಕವಾದುದು. ಇದುವರೆಗೆ ಗೋಲಾಕಾರದಲ್ಲಿ ತಯಾರಾಗುತ್ತಿದ್ದ ಈ ಸಾಬೂನು ಈಗ ಚೌಕಾಕಾರದಲ್ಲಿ ಬರತೊಡಗಿದೆ. ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕುಂ ಸೋಪ್ ಪ್ಲಾಂಟ್ ಇದಕ್ಕೆ ಕಾರಣ. ಬಹುಜನರ ಮೆಚ್ಚುಗೆಯನ್ನು ಪಡೆದಿರುವ ಈ ಸ್ಯಾಂಡಲ್ ಸೋಪ್ ತನ್ನ ಜನಪ್ರಿಯತೆಯನ್ನು ದಿನದಿನಕ್ಕೂ ಹೆಚ್ಚಿಸಿಕೊಳ್ಳುತ್ತಿದೆ.

ಶ್ರೀ ಕೃಷ್ಣಾ ಮೋಟರ್ ಸರ್ವಿಸ್

ರಾಷ್ಟ್ರೀಕರಣದ ಗಾಳಿಯು ರಾಜ್ಯದ ಸಾರಿಗೆ ವ್ಯವಸ್ಥೆಯಲ್ಲಿ ಭರದಿಂದ ಬೀಸತ್ತಿದ್ದರೂ ಪ್ರಾಸಗಿಯವರ ಸಮರ್ಥ ಸಾರಿಗೆ ವ್ಯವಸ್ಥೆಯನ್ನು ಜನತೆ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಇದರಿಂದಾಗಿಯೇ ಹಲವಾರು ಪ್ರಾಸಗಿ ಮೋಟಾರು ಕಂಪೆನಿಗಳು ಇನ್ನೂ ತಮ್ಮ ಸೇವೆಯಲ್ಲಿ ತಲ್ಲೀನವಾಗಿವೆ. ಹಾಸನದ ಶ್ರೀ ಎಂ. ಕೃಷ್ಣರವರ ಮಾಲಿಕತ್ವದಲ್ಲಿನ ಶ್ರೀ ಕೃಷ್ಣಾ ಮೋಟರ್ ಸರ್ವಿಸ್ ಇಂತಹ ಸಂಸ್ಥೆಗಳಲ್ಲಿ ಒಂದಾಗಿದ್ದು, ಜನತೆಗೆ ಸುವ್ಯವಸ್ಥಿತವಾಗಿ ಉತ್ತಮವಾದ ಪ್ರಯಾಣ ಸೌಕರ್ಯಗಳನ್ನು ಒದಗಿಸುತ್ತದೆ. ಮುಂದೆಯೂ ಒದಗಿಸುವುದರಲ್ಲಿ ಸಂದೇಹವಿಲ್ಲ.

ಭಾರತ್ ಮೋಟಾರ್ ಸರ್ವಿಸ್

ಪ್ರಯಾಣಿಕರ ಸುಖ ಕಷ್ಟಗಳನ್ನು ಸರಿಯಾಗಿ ಮನಗಂಡವರ ಒಡೆತನದಲ್ಲಿನ ಭಾರತ್ ಮೋಟಾರ್ ಸರ್ವಿಸ್ ತನ್ನ ಪ್ರಯಾಣಿಕರಿಗೆ, ಅತ್ಯುತ್ತಮ ಸೌಲಭ್ಯಗಳನ್ನು ನೀಡುತ್ತಿದೆ. ಸುಖ ಪ್ರಯಾಣಕ್ಕಾಗಿಯೇ ಹೆಸರು ಪಡೆದಿದೆ. ಮದುವೆ, ಪ್ರವಾಸ ಇತ್ಯಾದಿಗಳಿಗೆ ರಿಯಾಯತಿಯ ದರದಲ್ಲಿ ಬಸ್ಸುಗಳ ವ್ಯವಸ್ಥೆಯನ್ನು ಮಾಡುತ್ತಿದೆ. ಶೈಕ್ಷಣಿಕ ಪ್ರವಾಸಗಳಿಗೆ ವಿಶೇಷ ರಿಯಾಯತಿಯಿದೆ. ಜಿಲ್ಲೆಯ ಸುವ್ಯವಸ್ಥಿತ

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

ಶ್ರದಸು ನಂಬ್ರ 511/1967

ಚಂದ್ರಭಾಗಿ ಅಮ್ಮ —ವಾದಿಯ
1, ಶಿವರಾಮ ರೈ ಸಿ. ರಾಮಕೃಷ್ಣರೈ —ವಾದಿಯ ಚಂದ್ರಭಾಗಿ ಅಮ್ಮನ ಮಕ್ಕಳು—ಪುತ್ತೂರು ತಾಲೂಕು ಮುಡ್ನೂರು ಗ್ರಾಮದ ಈಶ್ವರ ಮಂಗಲ —ಪ್ರತಿವಾದಿಯ

ಇವರಿಗೆ

ಪ್ರತಿವಾದಿಯ ವಾದಿಗೆ ಪಕ್ಕನ ದಾವಾ ಅರ್ಜಿಗಳಿಗೆ ಅಕ್ರಮ ಪ್ರವೇಶ ಮಾಡದಂತೆ ಯಾ ವಾದಿಗೆ ಆದೇಶ ಕಾರಣ ಪ್ರವೇಶಿಸದಂತೆಯು ಶಾಶ್ವತ ಇಂಜಂಕ್ಷನ್‌ಗೆ ಮಾಡಿದ ದಾವೆಯಲ್ಲಿ ಕೈಪತ್ರ ನೋಟೀಸಿನ ವ್ಯಾದೆ ತಾ. 31—1—1968ಕ್ಕೆ ಇಟ್ಟಿರುವುದರಿಂದ ಪ್ರತಿವಾದಿಯ ತಮ್ಮ ಅಕ್ಷೇಪಗಳೇನಾದರೂ ಹೇಳುವದಿದ್ದರೆ ಆದಿನ 11 ಘಂಟೆಗೆ ಈ ಕೋರ್ಟ ಮುಂದೆ ತಪ್ಪದೆ ಹಾಜ್ರಾಗಿ ಬರಬೇಕೂ ಅಳ ಉದಹರಿಸಿ ತಕ್ಕದ್ದು. ಇದಕ್ಕೆ ತಪ್ಪದೆ ಅವರನ್ನು ತಿಳಾಯ ಎಂತ ಮಾಡಿ ಈ ದಾವೆಯನ್ನು ಮುಂದಿನ ತನ್ನಿಯಿಂದ ಏಕತರಂತೆ ತೀರ್ಮಾನಿಸಲಾಗುವದು ಎಂತ ಈ ಕೋರ್ಟ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Sd. B. Ramachandra Rao
M. A. B. L.
Pleader for Plaintiff

ತಾರೀಕು, 18—1—68

ಮೇಲ್ಕಾಂಡ; ಪುತ್ತೂರು, S.K.

ಆತ ಕಾರ್ಖಾನೆಯೊಂದರಲ್ಲಿ ಅಸಿಸ್ಟೆಂಟ್ ಫೋರ್‌ಮನ್. ವ್ರಯೋಗ ಶಾಲೆಯ ಅಸಿಸ್ಟೆಂಟ್ ಆಗಿ ಆತ ಜೀವನೋಪಾಯವನ್ನು ಪ್ರಾರಂಭಿಸಿದ. ಕೇವಲ ಏಳು ವರ್ಷಗಳಲ್ಲಿ ಈ ಹುದ್ದೆಗೇರಿದ್ದಾನೆ. ಹೇಗೆ? ಆತನ ಮಾತಿನಲ್ಲೇ ಕೇಳೋಣ; "ಇತರರು ಕಷ್ಟದ ದುಡಿಮೆಯಿಂದ ಮಾಡಲಾರದೆ ಇರುವುದೇ ನನ್ನೂ ನಾನು ಸಾಧಿಸಿಲ್ಲ. ನಿಜ, ನಾನು ಯಾವುದೇ ಕೆಲಸವನ್ನಾದರೂ ಜವಾಬ್ದಾರಿಯ ಭಾವನೆಯೊಡನೆ ಮಾಡುತ್ತೇನೆ. ನನ್ನ ಕೆಲವು ಸಹೋದ್ಯೋಗಿಗಳು ತುಂಬ ಮಕ್ಕಳನ್ನು ಹೊಂದಿದ್ದು, ಅವರನ್ನು ಸಾಕಲು ಪಡುತ್ತಿರುವ ಕಷ್ಟವನ್ನು ಕಂಡಿದ್ದೇನೆ. ನನಗೆ

ಬ್ಬರೇ ಮಕ್ಕಳು. ನನ್ನಿಂದ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಅವರನ್ನು ಮುಂದಕ್ಕೆ ತರುವುದು ನನ್ನ ಅಪೇಕ್ಷೆ. ನಾನು ಸುಖಿ..."

ಆತ ಸುಖಿ—

ನೀವು?



ತ ಸಾರಿಗೆ ವ್ಯವಸ್ಥೆಗೆ ತನ್ನ ಸೇವೆಯನ್ನೂ ನಿರ್ವಂಚನೆಯಿಂದ ಭಾರತ್ ಮೋಟಾರ್ ಸರ್ವಿಸ್ ಸಲ್ಲಿಸುತ್ತಿದೆ.

ಹೊಟೇಲ್ ಮಯೂರ್—

ಹೋಟೆಲು ಉದ್ದಿಸೆಯಲ್ಲಿ ಗ್ರಾಹಕರ ಮನಮೆಚ್ಚುವಂತೆ ನಾನಾ ಪ್ರಕಾರದ ಸೌಲಭ್ಯಗಳನ್ನು ನೀಡಿ ಅವರ ತೃಪ್ತಿಯನ್ನೇ ತನ್ನ ಗುರಿಯಾಗಿಟ್ಟುಕೊಂಡಹೋಟೆಲ್ 'ಹೋಟೆಲ್ ಮಯೂರ್' ಉತ್ತರ ಕರ್ನಾಟಕದ ವ್ಯಾಪಾರ ಕೇಂದ್ರ ಹುಬ್ಬಳ್ಳಿಯ ಕೇಂದ್ರ ಸ್ಥಳದಲ್ಲಿದ್ದು ಗಿರಾಕಿಗಳನ್ನು ಆಕರ್ಷಿಸುವ ಈ ಹೋಟೆಲ್ ಪ್ರಶಂಸಾರ್ಹ ಸೇವೆ ಸಲ್ಲಿಸುತ್ತಿದೆ ಆತ್ಯಾಧುನಿಕ ಸೌಲಭ್ಯಗಳು, ಶುಚಿ ರುಚಿಯಾದ ಊಟ, ವಸತಿ ಮತ್ತು ಉಪಾಹಾರಗಳಿಗೆ ಹೆಸರಾಂತ ಹೋಟೆಲ್ ಇದು. ಇದರ ಪ್ರಯೋಜನ ಎಲ್ಲರೂ ಪಡೆದುಕೊಳ್ಳಲಿ.

ಬಲ್ಲಾಳ್ ಮೋಟರ್ ಸರ್ವಿಸ್—

ಬಲ್ಲಾಳ್ ಮೋಟರ್ ಸರ್ವಿಸ್ ಬಸ್ ಪ್ರಯಾಣಿಕರ ವೆಚ್ಚದ ಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಪಟ್ಟಣಗಳನ್ನೂ ಗ್ರಾಮೀಣ ಪ್ರದೇಶಗಳನ್ನೂ ಜೋಡಿಸುವ ಕಾರ್ಯದಲ್ಲಿ ಇದರದು ಸೇಲುಗೈ. ಮೊತ್ತ ಮೊದಲಿಗೆ ಲಕ್ಸರೀ ಬಸ್ಸುಗಳನ್ನು ತನ್ನ ಪ್ರಯಾಣಿಕರಿಗೆ ಒದಗಿಸಿದ ಕೀರ್ತಿ ಬಲ್ಲಾಳ್ ಮೋಟರ್ ಸರ್ವಿಸ್‌ಗೆ ಸೇರಿದ್ದು. ಮಂಗಳೂರು- ಬೊಂಬಾಯಿಗಳ ನಡುವೆ ಟೂರಿಸ್ಟ್ ಬಸ್ಸುಗಳನ್ನು ಓಡಿಸುವ ಈ ಸಾರಿಗೆ ಸಂಸ್ಥೆ ಪ್ರಯಾಣಿಕರ ಸುಖ ಪ್ರಯಾಣ ಮತ್ತು ಸೌಕರ್ಯಗಳನ್ನೇ ತನ್ನ ಧ್ಯೇಯವನ್ನಾಗಿ ಇಟ್ಟು ಕೊಂಡು ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದೆ.

ಕಾಂಗಾಳ್ ಸಂಯುಕ್ತ ಬ್ಯಾಂಕ್ ಲಿ.

ಮೈಸೂರು ಮತ್ತು ಕೇರಳ ರಾಜ್ಯಗಳ ಒಟ್ಟು ೨೪ ಶಾಖೆಗಳಿರುವ ಪಾಂಗಾಳ

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. 348/1964,
R. E. P. 78/1967

ಬಾಲಕೃಷ್ಣ ಶೆಟ್ಟಿ —ಅರ್ಜಿದಾರ

ಮತ್ತು

ಹರಿಪ್ಪ ಶ್ಯಾನುಭಾಗ ಕೂಡಾ —ಎದ್ರಿರು ಇವರೊಳಗೆ

೨ನೇ ಪ್ರತಿವಾದಿ ವೃತ ಶ್ರೀನಿವಾಸ ಶ್ಯಾನುಭಾಗರ ವಾರೀಸುದಾರರು.—

1. ದಯಾನಂದ ಶೆಟ್ಟಿ, ಶ್ರೀನಿವಾಸ ಶಾನುಭಾಗರ ಮಗ, 6. ಚಂದ್ರಕಾಂತ ಶೆಟ್ಟಿ-3. ಪೋಷನವಾಸ, 7. ರಂಘವೇಂದ್ರ-ಮೈನರ್—ರಕ್ಷಕ 1ನೇಯವ-1ನೇ ದಯಾನಂದ ಶ್ಯಾನುಭಾಗರ ಮಕ್ಕಳು. ಉಡ್ಪಿ ತಾಲೂಕು ಮಾಬುಪಾಡಂಬೂರು ಗ್ರಾಮದ ಬಸ್ಸಂಜೆ.

ಮೇಲ್ಕಂಡ ಅಮಲ್ಜಾರಿಗೆ ಕಾರಣವಾದ ಕ್ರಿಯೆ ಹಕ್ಕನ್ನು ತಾರೀಕು 13-6-1961 ನೇ ರಜಿಸ್ಟ್ರಿ ಸಿಂಹ ಕ್ರಯ ಸಾಧನ ಮೂಲಕ ಸಾಡದ ಅರ್ಜಿದಾರನು ದಾಖಲು ಮಾಡಿದ ಗದ್ರಿ ಅಮಲ್ಜಾರಿಯಲ್ಲಿ ಶಿ. ಪ್ರೊ. ಕೋಡಿನ 31ನೇ ಅರ್ಟಿಕಲ್ 16ನೇ ರೂಲು ಪ್ರಕಾರ ನಮಗೆ ಸೋಟೀಸು ಆಗಬೇಕೆಂತ ಕೋರ್ಟು ಹುಕುಂ ಪ್ರಕಾರದ ಬಾಬಿನಲ್ಲಿ ನಿವ್ವಾದೇನಾದರೂ ಆಕ್ಷೇಪಣೆಯಿದ್ದರೆ ತಾರೀಕು 31—1—68 ನೇ ದಿವ್ಸ ಪೂರ್ವಾಹ್ನ 11ಘಂಟೆಗೆ ಹಾಜ್ರಾಗಿ ಕೋರ್ಟು ಮುಂದೆ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಸದ್ರಿ ನಿವ್ವಾದೇನಾದರೂ ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao,
Advocate for Petitioner.

Udipi, 20—1—1968.

ನಾಯಕ್ ಬ್ಯಾಂಕ್ ತನ್ನ ಠೇವಣಾತಿದಾರರಿಗೆ ಸೇ. ಅರ ವರೆಗೂ ಬಡ್ಡಿಯನ್ನು ಕೊಡುತ್ತದೆ: ತನ್ಮೂಲಕ ಅವರ ಹಣವು ಬೆಳೆಯುವಂತೆ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಗತಿಪಥ ಭೃಮಣ ಮಾಡುತ್ತಿರುವ ಈ ಬ್ಯಾಂಕು ಬ್ಯಾಂಕಿಂಗ್ ವ್ಯವಹಾರವಲ್ಲದೆಯೂ ನಿರ್ವಹಿಸುತ್ತದೆ.

ನ್ಯೂ ಭುವನೇಂದ್ರ ಆಯುರ್ವೇದಿಕ್ ಫಾರ್ಮಸಿ—

ದೀರ್ಘಕಾಲದ ಅನುಭವಿಗಳ ನೇತೃತ್ವದಲ್ಲಿ ಶಾಸ್ತ್ರಪ್ರಸಿದ್ಧ ಆಯುರ್ವೇದ ಔಷಧಿಗಳ ತಯಾರಿ ಮತ್ತು ಪೂರೈಕೆಗಳಿಗೆ ಹೆಸರಾದ 'ನ್ಯೂ ಭುವನೇಂದ್ರ' ಅತ್ಯಂತ ಜನಪ್ರಿಯ ಆಯುರ್ವೇದ ಔಷಧಿ ನಿರ್ಮಾಣ ಸಂಸ್ಥೆ. ಆಯುರ್ವೇದ ವೈದ್ಯಕೀಯ ಸಲಹೆಯನ್ನೂ ಇದು ಕೊಡುತ್ತಿದೆ. ಇದು ದಿನದಿಂದ ದಿನಕ್ಕೆ ಗ್ರಾಹಕರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತ ಬೆಳೆದು ಬರಲಿ.

ಸ್ವಾಮಿ ಇಲೆಕ್ಟ್ರಿಕಲ್ಸ್:

ಇವೂನಿ ಕ್ರೂಡ್ ಆಯಿಲ್ ಇಂಜಿನ್ ಪಂಪು ಸೆಟ್ಟು, ಯಸ್. ಇ. ಪಿ. ಇಲೆಕ್ಟ್ರಿಕ್ ಮೋಟಾರುಗಳ ಏಕ ಮಾತ್ರ ವಿತರಣೆಗಾರರಿವರು. ರೈತ ಜನರಿಗೆ ಬೇಕಾಗುವ ಈ ಪಂಪು ಸೆಟ್ಟು, ಮೋಟಾರುಗಳನ್ನು ಬೇಂಕು, ಸೊಸೈಟಿ, ಭೂ ಅಭಿವೃದ್ಧಿ ಬೇಂಕುಗಳ ಮೂಲಕ ಸುಲಭ ಕಂತುಗಳಲ್ಲಿ ಇವರು ಪೂರಯಿಸುತ್ತಾರೆ. ಗಣೇಶ ಫ್ಯಾನ್, ಟ್ಯೂಬ್ ಲೈಟ್ ಸ್ಟಾರ್ಟರ್, ಮೆನ್ಸೋ ಸ್ವಿಚ್‌ಗಳಿಗೂ ಸ್ವಾಮಿ ಇಲೆಕ್ಟ್ರಿಕಲ್ಸ್ ಹೆಸರಾಂತಿದೆ.

ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ

ದಕ್ಷಿಣ ಕನ್ನಡ ಜಿಲ್ಲೆಯ ಸಾರಿಗೆ ವ್ಯವಸ್ಥೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದ ಸಾರಿಗೆ ಸಂಸ್ಥೆಯಿದು. ಜಿಲ್ಲೆಯ ವಿವಿಧ ಮುಖ್ಯ ರಸ್ತೆಗಳಲ್ಲಿ ದೈನಂದಿನ ಸರ್ವಿಸ್ ಬಸ್ಸುಗಳನ್ನು ಇದು ಓಡಿಸುತ್ತಿದೆ. ಜಿಲ್ಲೆಯ ಮತ್ತು ವೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸುವವರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಒದಗಿಸುವಲ್ಲಿ "ಹನುಮಾನ್" ಮುಂದಿದೆ.

ನವಜೀವನ ಟೈಲರ್ ವರ್ಕ್ಸ್—ಉಡುಪಿ ಸಮೀಪದ ಪುತ್ತೂರಿನ ನವಜೀವನ ಟೈಲರ್ ವರ್ಕ್ಸ್ ಉತ್ತಮ ಹಂಚುಗಳ ತಯಾರಿಕೆಗೆ ಹೆಸರು ಪಡೆದಿದೆ. ಬಹು ಕಾಲದ ಅನುಭವದಿಂದ ತಯಾರಾಗುವ ಇಲ್ಲಿನ ಮಂಗಳೂರು ಹಂಚು ಬಾಳಿಕೆಗೂ ತಾಳಿಕೆಗೂ ಕೀರ್ತಿ ಪಡೆದಿದೆ. ಗ್ರಾಹಕರ ಪೂರಯ್ಕೆಯಲ್ಲಿ ಶ್ರೇಷ್ಠತೆಯೂ ಇದರ ವೈಶಿಷ್ಟ್ಯ. ಮಾಜಿ ಎಂ. ಎಲ್. ಎ. ಶ್ರೀ ಬಿ. ಜಗಜ್ಜೀವನ ದಾಸ ಶೆಟ್ಟರ ಒಡೆತನದಲ್ಲಿನ ಈ ಹಂಚಿನ ಕಾರ್ಖಾನೆಗೆ ಉತ್ತಮ ಭವಿಷ್ಯವಿದೆ.

ಸಂಜಯ ಇಂಡಸ್ಟ್ರೀಸ್—

ಊಂತ್ರಿಗ ಕಡಯುವ ಕಲ್ಲುಗಳು, ಇಲೆಕ್ಟ್ರಿಕ್ ಪಂಪು ಸೆಟ್ಟುಗಳ, ಆಯಿಲ್ ಇಂಜಿನ್‌ಗಳನ್ನು ಸುಲಭ ಕಂತುಗಳಲ್ಲಿ ಒದಗಿಸುವ ಸಂಸ್ಥೆ ಸಂಜಯ ಇಂಡಸ್ಟ್ರೀಸ್. ಮನೆಯ ಗೃಹಿಣಿಯರಿಗೆ, ಹೋಟೆಲ್ ಒಡೆಯರಿಗೆ ಮತ್ತು ರೈತ ಜನರಿಗೆ ಏಕ ಪ್ರಕಾರವಾದ ಸೇವೆ—ಸೌಲಭ್ಯಗಳನ್ನು ಪೂರೈಸುವ ಈ ಸಂಸ್ಥೆಯ ಜನಪ್ರಿಯತೆ ದಿನೇ ದಿನೇ ಬೆಳೆಯುತ್ತಿದೆ.

ಭಾರತ್ ಇಂಡಸ್ಟ್ರಿಯಲ್ & ಕ್ಯಾಟಿಂಗ್ ಕಂಪೆನಿ

ನಾನಾ ಪ್ರಕಾರದ ಹಣ್ಣುಗಳ ರಸ, ಉಪ್ಪಿನಕಾಯಿ ಮೊದಲಾದುವನ್ನು ತಯಾರಿಸಿ ಜನತೆಗೆ ಪೂರೈಸುವ 'ಬಿಕ್ಕೋ' ಸಂಸ್ಥೆಯನ್ನು ಯಾರೂ ಮರೆಯಲಾರರು. ತರುಣೋತ್ಸಾಹಿ ಶ್ರೀ ಕೆ. ಗೋವಿಂದ ಸೆಟ್ಟರ ನಾಯಕತ್ವದಲ್ಲಿ ಪ್ರಗತಿಪಥವೂ ನವಾಗಿ ಬೆಳೆದು ಬರುತ್ತಿರುವ 'ಬಿಕ್ಕೋ'ಗೆ ಉನ್ನತ ಭವಿಷ್ಯವನ್ನು ಹಾರೈಸುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿ.

೧೯೦೬ರಷ್ಟು ಹಿಂದೆ ಸ್ಥಾಪಿತವಾದ ಕೋರ್ಪೊರೇಶನ್ ಬ್ಯಾಂಕು ಎಲ್ಲಾ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಿ ತನ್ನ ಗ್ರಾಹಕರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ. ದಕ್ಷಿಣ ಭಾರತದ ಪ್ರಮುಖ ನಗರಗಳಲ್ಲಿ ಹರಡಿದ ಇದರ ಶಾಖೆಗಳು ಸುಭದ್ರ ಬ್ಯಾಂಕಿಂಗ್ ವ್ಯವಹಾರಕ್ಕೆ ಹೆಸರು ಪಡೆದಿವೆ. ದೇಶದ ಆರ್ಥಿಕ ಪುನಾರಚನೆಯಲ್ಲಿ ತನ್ನ ಪಾಲಿನ ಸೇವೆಯನ್ನು ಸಲ್ಲಿಸುವ ಗುರಿಯಲ್ಲಿ ಕೋರ್ಪೊರೇಶನ್ ಯಶಗಳಿಸುತ್ತಿದೆ.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಲಿ.

ಕೃಷಿಕರ ಏಳಿಗೆಗಾಗಿಯೇ ಸ್ಥಾಪಿತವಾದ ಈ ಸಂಘ ಕೃಷಿಕರ ಉತ್ಪತ್ತಿಯಾದ ಅಡಿಕೆ, ಯಾಲಕ್ಕಿ, ಕಾಳು ಮೆಣಸು, ಗೇರುಬೀಜ, ತೆಂಗಿನಕಾಯಿ ಮೊದಲಾದ ಬೆಳೆಗಳನ್ನು ಕಮಿಷನ್ ವ್ಯಾಪಾರಕ್ಕೆ ಪಡೆದ ಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುತ್ತದೆ. ರೈತ ಜನರಿಗೆ ಉತ್ತಮ ಸೇವೆ ಸಲ್ಲಿಸುವ ಈ ಸಂಘಕ್ಕೆ ಶುಭಭಯಸುತ್ತೇವೆ.

ಸೌತ್ ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಬ್ಯಾಂಕ್ ಲಿ.

ಜಿಲ್ಲೆಯ ಕೇಂದ್ರ ಸಹಕಾರಿ ಬೇಂಕು ಇದು. ರೈತಾಂತಿಗಳ ಮೇಲೆ ಆಕರ್ಷಕ ಬಡ್ಡಿಯನ್ನು ಪ್ರತ್ರಿಯೂದ ಭದ್ರತೆಯನ್ನೂ ನೀಡುತ್ತದೆ. ದೇಶದ ಕೃಷಿ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಅವಶ್ಯಕವಾದ ಆರ್ಥಿಕ ನೆರವನ್ನು ಒದಗಿಸುವ ಈ ಬೇಂಕಿನ ಗುರಿ ಯಶಗಳಿಸುತ್ತಿದೆ

ಸೌತ್ ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿ.

ಭತ್ತ, ಗೋವಿ ಮತ್ತದರ ಉತ್ಪನ್ನಗಳು, ಎಣ್ಣೆ ಮತ್ತು ಮಗ್ಗದ ಬಟ್ಟೆ, ವಿವಿಧ ಧಾನ್ಯಗಳು, ಎಣ್ಣೆ, ಹಶು ಆಹಾರ, ಕಬ್ಬಿಣ, ಉಕ್ಕು—ಇತ್ಯಾದಿಗಳ ವ್ಯಾಪಾರ ಮಾಡುವ ಸಹಕಾರಿ ಸಂಸ್ಥೆಯಿದು. ಜಿಲ್ಲೆಯ ಚಿಲ್ಲರೆ ವ್ಯಾಪಾರಿಗಳಿಗೆ ರಿಯಾಂ ಆಗಿ ಇದು ಪೂರಯ್ಕೆ ಮಾಡುತ್ತದೆ. ಜನ ಸೇವೆಗಾಗಿಯೇ ತನ್ನ ಕಾನು ವಿಸ್ತರಿಸಿಕೊಂಡಿದೆ.

ಮೆಸರ್ಸ್ ಐರೋಡಿ ರಾಧಾಕೃಷ್ಣ ಪೈ.

ಮನೆಮರಗಳಿಗೆ ಬೇಕಾಗುವ ತಂತ್ರ, ಕಂಬ, ಹತ್ತಾಳೆ, ಸ್ಟೀಲ್, ಎಲ್ಯುಮಿನಿಯಂ—ಮಾಡಿ ಕಾಡಿಗಳಿಗೆ ಉಡುಪಿಯಲ್ಲಿ ಹೊಂದಾಂತ ಮಳಿಗೆಯಿದು. ನ್ಯಾಯವಾದ ಬೆಲೆ, ಪ್ರತ್ರಿಯೂದ ಒಡನೆ—ಇವರ ವೈಶಿಷ್ಟ್ಯ. ರಿಯಾಂ ಅಥವಾ ಚಿಲ್ಲರೆಯಾಗಿ ಇಲ್ಲಿ ಸ್ಟೂಲುಗಳು ದೊರೆಯುತ್ತವೆ. ಉಡುಪಿ ಪ್ರತ್ರಿಯ ಪೂರಯ್ಕೆಯಲ್ಲಿ ಅಪಾರ ಅನುಭವವಿರುವ ಹೊಸ್ಸ ಸಂಸ್ಥೆಯಿದು.

With best compliments from

V. R. BHAGWAT

Merchant & Agent, L. I. C.

SIRSI (N. K)

ವಿ. ಆರ್. ಭಾಗ್ವತ

ವ್ಯಾಪಾರಿಗಳು ಹಾಗೂ ಜೀವ-ವಿಮಾ ಏಜೆಂಟರು

ಶಿರಸಿ (ಉತ್ತರ ಕನ್ನಡ)

೧) ಅಡಿಕೆ, ಮೆಣಸು, ಯಾಲಕ್ಕಿ ವ್ಯಾಪಾರಿಗಳು
೨) ತೋಕ ಕಿರಾಣಿ ಜೀನಸುಗಳ ವ್ಯಾಪಾರಿಗಳು
೩) ಏಜೆಂಟರು ಜೀವ ವಿಮಾ

ತಮ್ಮ ಸಮೃದ್ಧ ಜೀವನಕ್ಕೆ ಮಕ್ಕಳ ಶಿಕ್ಷಣ ವ ಮದುವೆಗೆ ಕುಟುಂಬದ ಭದ್ರತೆಗೆ ನಮ್ಮ ದೇಶದ ಕಲ್ಯಾಣಕ್ಕೆ

ಜೀವ ವಿಮಾ ಉಳಿತಾಯವೇ

ಸರ್ವಶ್ರೇಷ್ಠ ಉಳಿತಾಯ

● ಜೀವ ವಿಮಾ ಸಂಬಂಧಿ ಸಲಹೆ, ಪಾಲಿಸಿದಾರರಿಗೆ ಸಾಲ ವಗೈರೆ ದೊರಕಿಸಿ ಕೊಡುವುದೇ ಮೊದಲಾದ ಸೇವೆಯನ್ನು ಉಚಿತವಾಗಿ ನೀಡಲಾಗುವುದು.

AGENTS for

Life & General Insurance

Licence D 62771

Code No. 638632

Life Insurance Provides Money When You Need It Most

ಕರ್ಕೇರಾ ಸನ್ಸ್ & ಕೋ

ಆಹಾರ ಸ್ವಾವಲಂಬನೆಯನ್ನು ಸಾಧಿಸುವುದು ಪಮ್ಮ ಆದ್ಯ ಕರ್ತವ್ಯ. ಇದಕ್ಕೆ ಧೀರಾವರಿಯ ಸೌಲಭ್ಯವೊಂದು ಮಹಾ ಸಾಧನ. ಕಿರ್ಲೋಸ್ಕರ್ ಪಂಪುಗಳು ನೀರು ಎತ್ತುವುದರಲ್ಲಿ ತಮ್ಮ ಸಾಮರ್ಥ್ಯವನ್ನು ದೀರ್ಘ ಕಾಲದಿಂದಲೂ ತೋರಿಸಿಕೊಟ್ಟಿವೆ. ದೀರ್ಘ ಬಾಳಿಕೆ ಮತ್ತು ಮಿತವ್ಯಯದ ನಿರ್ವಹಣೆ ಈ ಪಂಪು ಸೆಟ್ಟುಗಳ ವೈಶಿಷ್ಟ್ಯ. ದೇಶದಲ್ಲೆಲ್ಲಾ ಸುಪ್ರಸಿದ್ಧವಾದ ಈ ಕಿರ್ಲೋಸ್ಕರ್ ಪಂಪುಸೆಟ್ಟುಗಳ ವಿತರಣೆಗಾರರಾದ ಕರ್ಕೇರಾ ಸನ್ಸ್ & ಕೋ ಇವರು ನಂಬಿಗೆಯ ವ್ಯವಹಾರಕ್ಕೆ ಹೆಸರು ಪಡೆದವರು.

ಹೋಟೆಲ್ ಸತ್ಕಾರ್—

ಶ್ರೀ ಟಿ. ಎಸ್. ಶೆಟ್ಟಿಯವರು ಹುಬ್ಬಳ್ಳಿಯಲ್ಲಿದ್ದುಕೊಂಡು ಹೋಟೆಲ್ ಉದ್ದಿಮೆಯಲ್ಲಿ ತುಂಬ ಅನುಭವಗಳಿಸಿದವರು. ಈಗ ಅವರು ಬೆಂಗಳೂರು ಮಹಾನಗರಕ್ಕೂ ನಮ್ಮ ಅನುಭವೀ ನೇತೃತ್ವದಲ್ಲಿ ಹೋಟೆಲ್ ಸತ್ಕಾರದ ಮೂಲಕ ಸೇವೆ ಸಲ್ಲಿಸುತಿದ್ದಾರೆ. ಸರ್ವ ಅನುಕೂಲತೆಗಳಿಂದ ಕೂಡಿದ ಆತ್ಯುತ್ತಮ ಮಟ್ಟದ ವಸತಿ, ಭೋಜನ ಮತ್ತು ಉಪಾಹಾರ ಮಂದಿರವಾದ ಹೋಟೆಲ್ ಸತ್ಕಾರ ಜನಸತ್ಕಾರವನ್ನೇ ತನ್ನ ಮುರಿಯನ್ನಾಗಿಟ್ಟುಕೊಂಡಿದೆ. ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ, ರೂಂಗಳಿಗೆ ಬಾತ್ ರೂಮುಗಳು ಅಲ್ಲದೆ ಪೆಮಿಲಿ ರೂಮುಗಳ ಸೌಕರ್ಯ— ಇನೆಲ್ಲವುಗಳಿಗೆ ಕಲಶವಿಟ್ಟಂತೆ ನಗರದ ಕೋಲಾಹಲಮಯ ವಾತಾವರಣದಲ್ಲಿ ಯೂಪುಶಾಂತ ವಾತಾವರಣ ಗ್ರಾಹಕರನ್ನು ಆದರದಿಂದ ಸ್ವಾಗತಿಸಿ ಸತ್ಕರಿಸುವಸಿ ಬ್ಬಂಧಿ ಇವೆಲ್ಲವುಗಳಿಂದ ಹೋಟೆಲ್ ಸತ್ಕಾರ್ ತನ್ನ ಹೆಸರನ್ನು ಅನ್ವರ್ಥಗೊಳಿಸಿದೆ.

ಕಾಮತ್ ಹೋಟೆಲ್—

ಬೇರೆ ಬೇರೆ ಪ್ರಮುಖ ನಗರಗಳಲ್ಲಿ ಶ್ರೀ ಆರ್. ಬಿ. ಕಾಮತರು ಹೋಟೆಲುಗಳನ್ನು ತೆರೆದು ಒಂದು ಹೋಟೆಲ್ ಸಮುದಾಯವನ್ನೇ ನಡೆಸುತ್ತಿರುವ ಅನುಭವಿಗಳು ತಮ್ಮ ವಿನಯ ಶೀಲ ಉತ್ಸಾಹೀ ಮನೋಭಾವವನ್ನು ಸೌಕರರಲ್ಲಿಯೂ ಒಡಮೂಡಿ ಬರುವಂತೆ ಮಾಡಿದವರು. ಇದರಿಂದಲೇ ಜನತೆಯ ಪ್ರೀತ್ಯಾದರಗಳಿಗೂ ಪಾತ್ರವಾಗಿ ಪ್ರಗತಿ ಪಥದಲ್ಲಿ ಕಾಮತ್ ಹೋಟೆಲ್ ಮುನ್ನಡೆಯುತ್ತಿದೆ. ರುಚಿಕರವಾದ ತಿಂಡಿ ತಿಪಸುಗಳು, ಶುಚಿಕರ ಪೇಯ ಪಾನೀಯಗಳು ತೃಪ್ತಿಕರ ಸೌಕರ್ಯ—ಸೌಲಭ್ಯಗಳು ಗ್ರಾಹಕರ ಮನ ಮೆಚ್ಚಿಸುತ್ತವೆ. ಮಹಾನಗರದ ಉತ್ತಮ ಫಲಾಹಾರ ಮತ್ತು ಭೋಜನ ಮಂದಿರವಾದ ಕಾಮತ್ ಹೋಟೆಲ್ ತನ್ನ ಗ್ರಾಹಕಿಗಳ ಮನಸ್ಸನ್ನು ಸದಾ ಸೆರೆ ಹಿಡಿದಿರುತ್ತದೆ. ಮೆನೇಜರ್ ಶ್ರೀ ಕೆ. ನ್ಯಾಸರಾಯರ ವ್ಯಕ್ತಿತ್ವ ಇದಕ್ಕೆ ಚಿನ್ನದ ಮೆರುಗನ್ನು ಕೀಡಿದೆ.

ಭಾರತ್ ಬೀಡಿ ವರ್ಕ್ಸ್—

೩೦ ನಂಬ್ರದ ಬೀಡಿಯ ಹೆಸರನ್ನು ಕೇಳದವರಿಲ್ಲ. ಹೊಗೆ ಸೇವನೆಯ ಆನಂದವನ್ನು ಅನುಭವಿಸುವವರಿಗೆ ಈ ಬೀಡಿಗಳು ತೃಪ್ತಿಯನ್ನೂ ಆನಂದವನ್ನೂ ನೀಡುತ್ತವೆ. ಇದರ ತಯಾರಕರಾದ ಕಾರ್ಕಳದ ಭಾರತ್ ಬೀಡಿ ವರ್ಕ್ಸ್ ಜಿಲ್ಲೆಯಲ್ಲಿನ ಹೆಸರಾಂತ ಬೀಡಿ ತಯಾರಕರಲ್ಲಿ ಒಬ್ಬರು. ಮೈಸೂರು ರಾಜ್ಯದಲ್ಲೂ ಇತರತ್ರವೂ ನಂಬ್ರ ೩೦ರ ಬೀಡಿಗಳು ಹೆಸರುವಾಸಿಯಾಗಿವೆ. ಉತ್ತಮ ಹೊಗೆಸೊಪ್ಪಿನ ಆಯ್ಕೆ, ನುರಿತವರಿಂದ ತಯಾರಿ ಮತ್ತು ಅನುಭವಿಗಳಿಂದ ಪೂರಯ್ಕೆಗಳುಗಳು ಈ ಬೀಡಿಗಳ ವಿಶೇಷತೆ. ಬೀಡಿ ಉದ್ದಿಮೆಯಲ್ಲಿ ದಿನದಿಂದ ದಿನಕ್ಕೆ ಪ್ರಗತಿಯ ಗತಿಯನ್ನು ಹೊಂದುತ್ತಿರುವ ಭಾರತ ಬೀಡಿ ವರ್ಕ್ಸ್ ಒಂದು ಆದರ್ಶ ಸೇವಾಧಿರತ ಸಂಸ್ಥೆ.

ಶೆಟ್ಟೀಸ್ ಆಪ್ಟಿಕ್ಸ್ ಕಾಂಟೆಕ್ಟ್ ಲೆನ್ಸ್ ಕ್ಲಿನಿಕ್—

ಇಲ್ಲಿನ ಕಾಂಟೆಕ್ಟ್ ಲೆನ್ಸ್ ತಜ್ಞರು ದಕ್ಷಿಣ ಕನ್ನಡಿಗರಿದ್ದು ಇವರು ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು; ಲಂಡನ್ನಿನಲ್ಲಿ ತರಬೇತಿ ಹೊಂದಿದವರು, ವಿಶ್ವವ್ಯಾಪೀ ಅನುಭವಿಗಳು — ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರಿನ 14 ಅದೃಶ್ಯ ಭಾಗಗಳಿರುವ ವೆರಿಲೆಕ್ಸ್ ಲೆನ್ಸ್‌ನ ತಜ್ಞರು. ಬೊಂಬಾಯಿಯಲ್ಲಿ ಜಿಲ್ಲೆಯ ಕೀರ್ತಿ, ಘನತೆ-ಪ್ರತಿಭೆಗಳನ್ನು ಬೆಳಗಿಸುವ ಈ ಕ್ಲಿನಿಕ್ ಒಂದು ಆದರ್ಶ ಕ್ಲಿನಿಕ್.

ಹೊಟೇಲ್ ಟೂರಿಸ್ಟ್—

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಉನ್ನತ ಮಟ್ಟದ ಊಟ-ವಸತಿಗಳಿಗೆ ಹೆಸರಾಗುವುದು, ಶ್ರೀ ಕೆ. ಗುರುರಾಜಾಚಾರ್ಯ ಮ್ಯೂಲಿಕತ್ವದಲ್ಲಿನ ಹೊಟೇಲ್ ಟೂರಿಸ್ಟ್. ಸಸ್ಯಾಹಾರಿಗಳೆಲ್ಲರೂ ಇದನ್ನು ಮೆಚ್ಚಿಕೊಂಡಿದ್ದಾರೆ. ದೀರ್ಘಕಾಲದ ಅನುಭವದಿಂದ ಜನತೆಯ ಅಭಿರುಚಿಯನ್ನು ಅರಿತುಕೊಂಡು ಅದನ್ನು ಈಡೇರಿಸುವಲ್ಲಿ ಹೋಟೇಲ್ ಟೂರಿಸ್ಟ್ ಯಾವಾಗಲೂ ಒಂದು ಹೆಜ್ಜೆ ಮುಂದು. ಆದುದರಿಂದಲೇ ಬೆಂಗಳೂರು ಜನತೆಯ ಮನೆ ಮಾತು ಹೋಟೆಲ್ ಟೂರಿಸ್ಟ್.

ನನ್ನ ಪ್ರೋತ್ಸಾಹಕರಿಗೂ ಹಿತೈಷಿಗಳಿಗೂ

ಪ್ರಜಾರಾಜ್ಯ ದಿನದ ಶುಭಾಶಯಗಳು!

ಆತ್ರಾಡಿ ಸತೀಶ ಹೆಗ್ಡೆ

ಎಂ. ಪಿ. ಸಿ. ಸಿ. ಮೆಂಬರ್,

ಉಡುಪಿ.

ಡಾ। ಕೆ. ನಾಗಪ್ಪ ಅಳ್ಳೂರು ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟ ಶುಭ ಸಂದರ್ಭದಲ್ಲಿ ಶ್ರೀ ಸತೀಶ ಹೆಗ್ಡೆಯವರು ಉಡುಪಿ ಜನತೆಯ ಪರವಾಗಿ ಹಾರಾರ್ಪಣೆಗೈದು ಅಭಿನಂದನೆ ಸಲ್ಲಿಸಿ ತಮ್ಮ ಸಹಕಾರದ ಭರವಸೆ ನೀಡುತ್ತಿದ್ದಾರೆ.

● ಕುಮಾರಿ ಬಿಲ್ಲೆಗಳು ●

ಕಠಿಣ ದಿನಗಳಿಗೆ ಕಾತರ ಮತ್ತು ಮನಸ್ಸು ಕಡವಾಗುವ ಹೆದರಿಕೆ ನಿವಾರಿಸಲು ಹೆಂಗಸರಿಗೆ ಆದರ್ಶ ಆಯುರ್ವೇದೀಯ ಸಮ್ಮತ್ರ ಔಷಧ.

ಸಾಮಾನ್ಯ ರೂ. 5/- ಮಧ್ಯಮ ರೂ. 7/- ಉತ್ತಮ ರೂ. 9/-

P. DEVEE & CO., (N-J) Calcutta-40.

ಸ್ವೋಕಿಶ್ವರು!-ರಾಜಾ ಮೆಡಿಕಲ್ ಹಾಲ್, ಬೆಂಗಳೂರು. ಕೆಂಟೋನ್‌ಮೆಂಟ್

ದೃಢ ನಿಲುವೆಯು, ಜನರೊಲುಮೆಯ ಸಿಂಡಿಕೇಟ್ ಬ್ಯಾಂಕಿನ ಚೀಫ್ ಆಫೀಸರ್ ಶ್ರೀ ಕೆ. ಕೆ. ಪೈ

(ಇನೇ ಪುಟದಿಂದ)

ದಂಡವತ್ ಪ್ರಣಾಮ

ಉಡುಪಿಯಲ್ಲಿ ಶ್ರೀ ಮದಾನಂದ ತೀರ್ಥರ ಸರ್ವಜ್ಞ ಪೀಠವನ್ನು ಏರಿ ಮುಂದಿನ ಎರಡು ವರ್ಷಗಳ ಕಾಲ ಶ್ರೀಕೃಷ್ಣನ ಸೇವಾ ದೀಕ್ಷೆಯನ್ನು ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ತಾ. ೧೮ರಂದು ಕೈಕೊಂಡರು. ಈ ಬಾರಿಯ ಈ ಪರ್ಯಾಯ ಮಹೋತ್ಸವವು ಬಹಳಷ್ಟು ವಿಜೃಂಭಣೆ—ವೈಭವಗಳಿಂದ ನೆರವೇರಿತು. ದಿಗ್ವಿಜಯ ಮುಗಿಸಿ ಉಡುಪಿ ಪುರಪ್ರವೇಶ ಮಾಡಿದ ಶ್ರೀ ಶ್ರೀಯವರಿಗೆ ನಾಗರಿಕ ಸನ್ಮಾನವು ಜರಗಿತ್ತು. ಪರ್ಯಾಯ ಮಠಕ್ಕೆ ಹಸುರುವಾಣಿ ಹೊರೆಯನ್ನು ಅತ್ಯಂತ ವಿಜೃಂಭಣೆಯಿಂದ ಅರ್ಪಿಸಲಾಯಿತು. ತಲೆ ಹೊರೆಗಳಲ್ಲಿಯಲ್ಲದೆ ಅಲಂಕೃತ ಗಾಡಿಗಳೂ ಲೋರಿಗಳೂ ಹಸುರುವಾಣಿಯನ್ನು ಬಿರುದು ಬಾವಲಿಗಳೊಂದಿಗೆ ಮೆರವಣಿಗೆಯಲ್ಲಿ ಹೊತ್ತು ತಂದ ದೃಶ್ಯ ಚಿತ್ತಾಕರ್ಷಕವಿತ್ತು. ಜೋಡುಕಟ್ಟೆಯಿಂದ ಆರಂಭವಾದ ಪರ್ಯಾಯ ಮೆರವಣಿಗೆಯು ಕಲೆ-ಸಂಸ್ಕೃತಿಗಳ ಸಂಗಮವಾಗಿ ಅದ್ವಿತೀಯವಾಗಿತ್ತು. ಈ ಬಗೆಯ ಪರ್ಯಾಯ ಮೆರವಣಿಗೆ ಇದುವರೆಗೂ ನಡೆದಿಲ್ಲವೆಂದರೂ ಪಡೆಯುತ್ತದೆ. ಪರ್ಯಾಯ ದಿನದಿಂದ ಮೂರು ದಿನಗಳು ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳೂ ಪಡೆದಿವೆ. ಈ ಬಾರಿಯ ಪರ್ಯಾಯಕ್ಕೆ ಆಗಮಿಸಿದ ಭಗವದ್ಭಕ್ತರ ಸಂಖ್ಯೆಯೂ ಅಪಾರವಿತ್ತು. ಶ್ರೀ ಪೇಜಾವರ ಮಠ ಮತ್ತು ನಾಗರಿಕರ ಸಮಿತಿಗಳ ಸಂಯುಕ್ತ ಪ್ರಯತ್ನದ ಈ ಪರ್ಯಾಯೋತ್ಸವ ಆಧ್ಯಾತ್ಮಿಕ ಮೌಲ್ಯದಿಂದ ಕೂಡಿತ್ತು.

ಕಳೆದೆರಡು ವರ್ಷಗಳಕಾಲ ಪರ್ಯಾಯ ಪೀಠಾರೂಢರಾಗಿದ್ದ ಶ್ರೀ ಕಾಣಿಯೂರು ಮಠದ ಶ್ರೀ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀ ಪಾದಂಗಳವರು ಹೊಸ ಪಾಠದ ತುಳಿದು ಅತ್ಯಂತ ಯಶಸ್ವಿಯಾಗಿ ತಮ್ಮ ಪರ್ಯಾಯವನ್ನು ಮುಗಿಸಿದ ವೇಳೆ ಅವರನ್ನೂ ಸನ್ಮಾನಿಸಲಾಯಿತು. ಸಪ್ತೋತ್ಸವವು ತಾ. ೯ರಂದು ಆರಂಭವಾಗಿದ್ದು, ಅಂದಿನಿಂದಲೇ ನಾನಿರಾರು ಭಕ್ತರು ಬರತೊಡಗಿದ್ದರು. ಅನ್ನದಾನಾದಿಗಳೂ ಧಾರ್ಮಿಕ—ಸಾಂಸ್ಕೃತಿಕ ಕಾರ್ಯಕ್ರಮಗಳೂ ಅಂದೇ ಆರಂಭವಾಗಿದ್ದುವು.

ಉಭಯ ಶ್ರೀ ಶ್ರೀಯವರಿಗೂ 'ನವಯುಗ'ದ ದಂಡವತ್ ಪ್ರಣಾಮಗಳು.

Telegram: "FOOD" Telephone: 5012

THE
SOUTH KANARA CENTRAL CO-OPERATIVE
WHOLESALE STORES LTD.,
POST BOX NO. 124,
'SAHAKARI MAHAL', MANGALORE-1.

DEALERS IN

Rice, Wheat and Wheat Products,
Mill Cloth, Handloom Cloth, Silk,
Grains and Provisions etc.

Oil and Oil Cakes, Cattle Food,
Manures and Insecticides,
Consumer Goods, Kerosene,
Iron and Steel
etc. etc.

Sri K. B. Jmaraja Hegde, B Sc., LL B., Vice-President
Sri S. Narsapaya, B A., B.L., President.

• ಉಡುಪಿಯು ಭಾರತದಲ್ಲಿ 808 ವರ್ಷಗಳಿಂದ ಪ್ರಸಿದ್ಧ ಕ್ಷೇತ್ರ!

• ಐರೋಡಿಯವರ ಪಾತ್ರೆಭಂಡಾರವು 88 ವರ್ಷಗಳಿಂದ ಉಡುಪಿಯಲ್ಲಿ ಪ್ರಸಿದ್ಧ!!

ಕಡಿಮೆ ಕ್ರಯದಲ್ಲಿ
ಉತ್ತಮ ಸೌಂದರ್ಯದ
ಮನೆ, ಮಠ,
ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು,
ಸ್ಟೀಲು, ಎಲ್ಯುಮಿನಿಯಮ್
ಪಾತ್ರೆಗಳು
ರಟ್ಟಿ ಆಗಿಯೂ ಚಿಲ್ಲರೆಯಾಗಿಯೂ
ಸಿಗುವ ಒಂದೇ ಅಂಗಡಿ

ಮೆಸರ್ಸ್
ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿ, ಅನಂತೇಶ್ವರ ಸನ್ನಿಧಿ,
ರಥಬೀದಿ, ಉಡುಪಿ, ದ. ಕನ್ನಡ.
ವಿಶೇಷ ಸೂಚನೆ.— ದೇವಕಾರ್ಯದ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

With best compliments
from

BALLAL
MOTOR SERVICE

MOODABIDRI - - MANGALORE

NAVAYUGA
25-1-1968

REGD. No. B. G. 176
LICENCE No. 31
Licensed to Post
without Prepayment

ಪ್ರಜಾಪ್ರಭುತ್ವ ದಿನದ ಶುಭಾಶಯಗಳು !

ವಿಶ್ವಾಸಾರ್ಹ ನಂಬಿಕೆ

ನಿಮ್ಮ ಉಯಿಲಿನ ಉದ್ದೇಶವನ್ನು ಕಾರ್ಯಗತಮಾಡುವ ಸಂದರ್ಭದಲ್ಲಿ ಎಲ್ಲ ಇಚ್ಛೆಗಳು ಪೂರ್ಣವಾಗಿ ಸಾಧಿಸಲಾಗುವುದೆಂಬ ಭರವಸೆಗಾಗಿ ನೆಚ್ಚಿನ ಹಿತೈಷಿಗಳ ನೆರವನ್ನು ಆಶಿಸುವುದು ಸ್ವಾಭಾವಿಕ. ಅಂಥ ವ್ಯಕ್ತಿಯೊಬ್ಬರ ನೆರವು ದೊರಕಿತೆಂದು ಭಾವಿಸೋಣ — ಸಾಧನಾಮಾರ್ಗದ ಕೆಲ ಸಂದರ್ಭಗಳಲ್ಲಿ ಒದಗಬಹುದಾದ ಅನಾನುಕೂಲಗಳನ್ನು ಅವರು ಸಹಿಸಬಲ್ಲವರೇ, ಹಾಗೂ ಸಹಿಸಿದರೆ ಉದ್ದೇಶವನ್ನು ಪೂರ್ಣ ಸಾಧಿಸಬಲ್ಲವರೇ — ಎಂಬ ಶಂಕೆಯು ಉದ್ಭವಿಸುವುದು ಸಹಜ !

ಇಂಥ ಇಕ್ಕಟ್ಟಿನಲ್ಲಿ ನೀವು ಬ್ಯಾಂಕನ್ನು ವಿಶ್ವಾಸದಿಂದ ನೆಚ್ಚಿದರೆ ಇಚ್ಛಾ ಸಾಧನೆಗೆ ಅವಶ್ಯಕವಾದ ಗುಣ-ಲಕ್ಷಣಗಳ ನೆರವಿನಿಂದ ಎಲ್ಲ ಶಂಕೆ-ಅಪಾಯಗಳ ಪೂರ್ಣ ನಿವಾರಣೆಯಾಗಿ ನಿಮ್ಮ ಇಚ್ಛೆಯು ಸತ್ಸಂಕಲ್ಪವಾಗುವುದು.

ವಿಜಯ ಬ್ಯಾಂಕ್ ಲಿಮಿಟೆಡ್



ರಿಜಿಸ್ಟರ್ಡ್ ಆಫೀಸು
"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್"
ಪ್ರೆಟಿಯೋಸಾ ಹಿಲ್ ರೋಡು
ಮಂಗಳೂರು-3

ನಮ್ಮ ಸೇವೆಗಾಗಿ ನಮ್ಮ ಶಾಖೆಗಳು ಈಗ ಮೈಸೂರು ರಾಜ್ಯದಲ್ಲಿ—55, ಕೇರಳ ರಾಜ್ಯದಲ್ಲಿ—25, ಮದ್ರಾಸು ರಾಜ್ಯದಲ್ಲಿ—5 ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ—2 ಇವೆ.

ಶ್ರೀ ಯಂ. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೇನ್.

ಶ್ರೀ ಪಿ. ಜಯರಾಮ ಶೆಟ್ಟಿ,
ಸೆಕ್ರೆಟರಿ

ಶ್ರೀ ಯಸ್. ವಿಠಲ ಶೆಟ್ಟಿ
ಡಿ. ಸೆಕ್ರೆಟರಿ

ಶ್ರೀ ಪಿ. ಯಂ. ಹೆಗ್ಡೆ
ಆಡಿಟರ್.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



1—2—1968

೨೦ ಪೈಸೆ

ಕಥಾ ಪ್ರಪಂಚ

ತಂದೆಯಂತೆ ಮಗ

ಬರೆದವರು :
ಶ್ರೀಮತಿ ಅಸಂದಿ ಸದಾತಿವರಾವ್

"ಅಮ್ಮಾ, ನಾನು ಆಫೀಸಿಗೆ ಹೋಗಿ ಬರ್ತೇನೆ."

"ಹೂಂ. ಜಾಗ್ರತೆ" ಎನ್ನುತ್ತಾ ನಡು ಮನೆಯಿಂದ ಚಾವಡಿಗೆ ಕಾಲಿರಿಸಿ, ಸೈಕಲ್ ಹಿಡಿದು ಅಂಗಳ ದಾಟಿದ ಮಗನನ್ನೇ ನಿಂತು ನೋಡಿ ಅವನು ಹೋದ ಬಳಿಕ ದೀರ್ಘವಾದ ಉಸಿರು ಬಿಟ್ಟು ಸೀತಮ್ಮ ಬಾಗಿಲು ಜಾಕಿಕೊಂಡಳು.

ದಿನಂಪ್ರತಿ, ಆದಿತ್ಯವಾರದ ಹೊರತು, ಜನಾರ್ದನ ಅಮ್ಮನನ್ನು ಕೂಗಿ ಕರೆದು ಆಫೀಸಿಗೆ ಹೋಗುವ ವಾಡಿಕೆ. ಸೀತಮ್ಮ ಮಗನಿಗೆ ದಿನಾ ಎಚ್ಚರ ಹೇಳುವುದು ರೂಢಿಯಾಗಿತ್ತು. ಅವಳ ಪಾಲಿಗೆ ಇಪ್ಪತ್ತೆಂಟು ವರ್ಷವಯಸ್ಸಿನ ಜನಾರ್ದನ ಇನ್ನೂ ಎಳೆಯ ಮಗು. ಅವಳ ಜೀವನದ ಆಧಾರಸ್ತಂಭವಾಗಿದ್ದ ಅವನು ಅಮೂಲ್ಯ ವಸ್ತು.

ತಾಯಿ, ಮಗ, ನಗರದಲ್ಲಿ ಪುಟ್ಟ ಬಿಡಾರ ಹೂಡಿ ಎಂಟು ವರ್ಷಗಳೇ ಸಂದಿದ್ದುವು. ಜನಾರ್ದನ ಆಫೀಸೊಂದರಲ್ಲಿ ಪ್ರಾಕಾರಿಗೆ ಸೇರಿದ ಬಳಿಕ ಸೀತಮ್ಮನಿಗೆ ಇರಲು ಒಂದು ಕೆಲಿ ದೊರಕಿತ್ತು. ಅಷ್ಟರ ತನಕ ಬಂಧುಗಳ ಮನೆಯಲ್ಲಿ ಕೆಲಸ ಮಾಡಿ ಹೇಗಾದರೂ ಜೀವನ ಸಾಗಿಸಿದ್ದಳು. ಮಗನಿಗೆ ವಿದ್ಯಾಭ್ಯಾಸ ಮಾಡಿಸಿದ್ದಳು. ಜನಾರ್ದನನ ತಂದೆಯು ಅವಳ ಪಾಲಿಗೆ ಇದ್ದರೂ ಸತ್ತಂತೆ ಆದುದೇ ಅವಳ ಕಷ್ಟ ಜೀವನಕ್ಕೆ ಕಾರಣ.

ಅಡುಗೆ ಮನೆಯಲ್ಲಿ ಪಾತ್ರೆಗಳನ್ನು ಒರವಾಗಿರಿಸಿ, ಮಧ್ಯಾಹ್ನದ ಅಡುಗೆಗೆ ತರಕಾರಿ ಕತ್ತರಿಸಿ, ಬೆಂಕಿ ಉರಿ ಹೆಚ್ಚಿಸಿ, ಇತ್ತ ಬಂದಾಗ ಪಕ್ಕದ ಮನೆ ವಿಶಾಲಿ ಬಂದಳು, "ಸೀತಮ್ಮಾ ಫಿಮ್ಮ ಮಗನಿಗೆ ಮದುವೆ ಫಿಕ್ಸಿಯವಾಗಿದೆಯಂತೆ. ಹೌದೆ?' ಎಂದು ಪ್ರಶ್ನಿಸಿದಳು.

'ನಿಶ್ಚಯವಾಗಿಲ್ಲ, ಒಂದೆರಡು ಕಡೆ ಹುಡುಗಿ ನೋಡುತ್ತಾ ಇದ್ದೇನೆ. ಹೇಗೂ ಮದುವೆಯಾಗುವ ವಯಸ್ಸಾಯಿತಲ್ಲ.'

"ಹೌದು. ಯಾರೋ ಹೇಳಿದರು, ಹುಡುಗಿ ನೋಡಲು ಹೋಗಿಯಾಯಿತು. ಒಪ್ಪಿಗೆಯೂ ನಿಶ್ಚಯವಾಯಿತು ಎಂದು.'

"ಯಾರ ಮಗಳಂತೆ? ಅದನ್ನು ತಿಳಿಸಿದರೆ?"

'ಯಾರು ನಿಮ್ಮ ಅಣ್ಣನ ಕಿರಿಮಗಳು ವಸಂತಿಯನ್ನು."

"ಹೌದು." ಎಂದಳು ಸೀತಮ್ಮ.

'ನೋಡಿದುದು ನಿಜ. ಆದರೆ ಜಾತಕ ಕೂಡಿ ಬರಲಿಲ್ಲ. ಮತ್ತೆ ಸಂಬಂಧಿಕರ ನಡುವೆ ನೆಂಟಸ್ತನ ಬೇಡ ಎಂದ ಜನಾರ್ದನ"

"ಹಾಗೆ ಅನಿ."

"ಎಷ್ಟು ಬೇಗನೆ ಸುದ್ದಿ ಊರೆಲ್ಲಾ ಹರಡುತ್ತದೆ?"

"ಹುಡುಗ, ಹುಡುಗಿಯರು ಇದ್ದೊಡನೆ ಮದುವೆ ಸಮಾಚಾರ ಹರಡುತ್ತದೆ."

"ಎಲ್ಲಿಯೂ ನಿಜವಾಗ್ಲಿಲ್ಲ. ಹಾಗಾದರೆ."

"ಇಲ್ಲ." ಅಷ್ಟರಲ್ಲಿ ಒಲೆಯಲ್ಲಿ ಉರಿ ಹೆಚ್ಚಿಸಿದ ನೆನಪಾಗಿ ಸೀತಮ್ಮ "ಈಗ ಬಂದೆ' ಎಂದು ಒಳ ಹೋದರು.

"ನನಗೂ ಕೆಲಸವಿದೆ" ಎಂದು ವಿಶಾಲಿ ಹೋದಳು.

ಸೀತಮ್ಮ ಸ್ನಾನ ಮುಗಿಸಿ, ಮಡಿ ಉಟ್ಟು, ದೇವರ ಪಟದ ಮುಂದೆ ದೀಪ ಹಚ್ಚಿಟ್ಟು ನಮಸ್ಕಾರ ಮಾಡಿ ಅಡುಗೆ ಮಾಡಲು ಒಳಹೋದರು.

ದೇವರೊಡನೆ ದಿನಾ, "ಮಗನಿಗೆ ಒಳ್ಳೆಯದನ್ನು ಮಾಡು" ಎಂಬ ಪ್ರಾರ್ಥನೆ ಅವನು ಜನ್ಮತಳೆದಾರಭ್ಯ ಸಲ್ಲಿಸುತಿದ್ದರು.

ವಿಶಾಲಿ ಹೇಳಿದಂತೆ ಅಣ್ಣನ ಮಗಳ ನೈ ಸೊಸೆಯಾಗಿ ತರುವುದೆಂಬ ಯೋಚನೆ ಸೀತಮ್ಮನಿಗಿತ್ತು. ಆದರೆ ಮಗ ಒಪ್ಪಲಿಲ್ಲ. ಅಲ್ಲದೆ ಹಿಂದೆ ಅಣ್ಣನ ಮನೆಯಲ್ಲಿದ್ದಾಗ ಅತ್ತಿಗೆಯ ವರ್ತನೆ, ಅವಳ ಮನವನ್ನು ತುಂಬಾ ನೋಯಿಸಿತ್ತು. ಎರಡು ವರ್ಷಗಳಿಂದ ಮಗನೊಡನೆ "ಮದುವೆಯಾಗು" ಎಂದು ಸೀತು ಹೇಳುತಿದ್ದಳು. ಆದರೆ ಅವನು ಆ ಮಾತಿಗೆ ಗಮನವೇ ಕೊಟ್ಟಿರಲಿಲ್ಲ. ಇತ್ತೀಚೆಗೆ ಸೀತಮ್ಮನಿಗೆ ಎರಡು ವಾರ ಜ್ವರ ಬಂದು, ಹಾಸಿಗೆ ಹಿಡಿಸಿದಾಗ, ಜನಾರ್ದನನಿಗೆ, ಮನೆಯಲ್ಲಿ ತಾಯಿಯ ಜತೆ ಇನ್ನೊಬ್ಬಳು ಇದ್ದರೆ ಒಳ್ಳೆಯದು ಎಂಬ ಅರಿವು ಬಂದಿತ್ತು. ಅದರಿಂದ ಜ್ವರದಿಂದ ಎದ್ದ ತಾಯಿಯ ಮಾತಿಗೆ ಪ್ರತಿಹೇಳದೆ 'ಹೂಂ'ಗುಟ್ಟಿದನು. ಸೀತಮ್ಮ ಅಣ್ಣನ ಮನೆಗೆ ಹೋಗಿ ಬಂದಳು. ಬಂಧುಗಳ ಮನೆಗೆ ಭೇಟಿ ಕೊಟ್ಟಳು. 'ಮಗನಿಗೆ ಮದುವೆಯಾಗುವ ಯೋಚನೆ ಇದೆ' ಎಂದು ಅಪ್ತರೊಡನೆ ಹೇಳಿದಳು. ಬಂದ ಜಾತಕದಲ್ಲಿ ಎಂಡು, ಮೂರು ಸರಿ ಹೋಗುತ್ತಿದೆ ಎಂದು ತಿಳಿದಿತ್ತು. ಈ ಯೋಚನೆಯಲ್ಲಿಯೇ ಅವಳು ಇರುತಿದ್ದಳು.

ಅಡುಗೆ ಕೆಲಸ ಪೂರ್ತಿಯಾಗುತ್ತಾ ಬಂದಿತ್ತು. ಕದ ತಟ್ಟಿದ ಸದ್ದಾಯಿತು. ಹೋಗಿ ಬಾಗಿಲು ತೆರೆದಾಗ ಶ್ರೀನಿವಾಸರಾಯರು. ಸೀತಮ್ಮನ ಸಂಬಂಧಿಕರು.

"ಬನ್ನಿ ಶೀನಣ್ಣ" ಎಂದು ಸೀತಮ್ಮ ಹೇಳಿ, ಕುರ್ಚಿಯನ್ನು ಮುಂದಿರಿಸಿದಳು.

"ಈಗ ಕುಳಿತುಕೊಳ್ಳಲು ಸಮಯವಿಲ್ಲ. ನಿನ್ನೊಡನೆ ಒಂದು ಮಾತನಾಡುವ ಕೆಲಸವಿದೆ ಎಂದು ಬಂದೆ."

"ಅದೇನು ಅಷ್ಟು ಅವಸರ?"

"ಬೆಳಗಿನ ಬಸ್ಸಿನಲ್ಲಿ ಬಂದೆ. ಈಗಲೇ ಹಿಂತಿರುಗಿ ಹೋಗಬೇಕು. ಮನೆಯಲ್ಲಿ ದೇವರ ಪೂಜೆಗೆ ಕೂಡಾ ಈಗ ಜನ ಇಲ್ಲ."

'ಹಳ್ಳಿಯಲ್ಲಿ ಜನ ಸಿಗುವುದಿಲ್ಲಾ ಎಂದರೆ?'

"ಹಳ್ಳಿಯವರೆಲ್ಲಾ ಪೇಟೇಕಡೆ ಬಂದು ಬಿಸುತ್ತಾರೆ. ನನ್ನ ಮಕ್ಕಳು ಇಬ್ಬರೂ ಈಗ ಇಲ್ಲಿ ವಿದ್ಯಾಭ್ಯಾಸಕ್ಕೆಂದ ಬಂದಿದ್ದಾರೆ." ಕುರ್ಚಿ ಎಳೆದು ಕುಳಿತುಕೊಳ್ಳುತ್ತಾ ಶ್ರೀನಿವಾಸರಾಯರು, ಮಾತು ಮುಂದುವರಿಸಿದರು.

"ನಿನ್ನ ಮಗನಿಗೆ ಮದುವೆಯಾಗದೇ ಕಲ್ಲಾ? ಯಾರೋ ಹೇಳಿದರು ಹೆಣ್ಣು ಹುಡುಕುತಿದ್ದಾರೆ ಎಂದು.'

"ಹೌದು." ಎಂದಳು ಸೀತಮ್ಮ.

"ನನ್ನ ಮಗಳ ಜಾತಕ ತಂದಿದ್ದೇನೆ. ನಿನ್ನ ಮಗನ ಜಾತಕದೊಡನೆ ಸರಿ ಹೋಗುತ್ತದೋ ಎಂದು ನೋಡು." ಎನ್ನುತ್ತಾ ಕಿಸೆಯಿಂದ ಕಾಗದದ ಕಟ್ಟನ್ನು ತೆಗೆದು, ಅದರಿಂದ ಬರೆದಿರಿಸಿದ ಪ್ರತಿ ಒಂದನ್ನು ಇತ್ತರು.

ಸೀತಮ್ಮ "ದೇವರಿಚ್ಛೆ ಇದ್ದ ಹಾಗೆ ಆಗುತ್ತದೆ." ಎನ್ನಲು.

"ಅದು ನಿಜ, ಆದರೆ ಮನುಷ್ಯರು ಮಾಡುವ ಪ್ರಯತ್ನ ಮಾಡಬೇಕಲ್ಲಾ. ಜಾತಕ ಕೂಡಿ ಬಂದರೆ ಮುಂದಿನ ಕೆಲಸ."

"ಹೂಂ. ನೆಂಟಸ್ತನ ಫನಗೆ ಒಪ್ಪಿಗೆ."

"ಹಾಗಾದರೆ ಮುಕ್ಕಾಲು ಪಾಲು ಕೆಲಸ ಆದಂತೆ. ನಾನಿನ್ನು ಬರ್ತೇನೆ. ಜನಾರ್ದನ ಬರಲು ತಡವಿದೆ ತಾನೆ?" ಎಂದು ಎದ್ದರು.

"ಇಲ್ಲ. ಕುಳಿತುಕೊಳ್ಳಿ. ಬಾಯೊರಿಕೆ ಕುಡಿದು ಹೋಗಿ" ಎಂದು ಸೀತಮ್ಮ ಒತ್ತಾಯ ಮಾಡಿ ಕುಡಿಯಲು ಒಂದು ಲೋಟ ಹಾಲು ತಂದಿತ್ತಳು. ಆ ಬಳಿಕ ಶ್ರೀನಿವಾಸರಾಯರು ಅಲ್ಲಿಂದ ಹೊರಟರು.

ಸೀತಮ್ಮನಿಗೆ ಈ ಸಂಬಂಧ ನಡೆದರೆ ಚೆನ್ನಾದೀತು ಎಂದು ತೋರಿತು. ಆಫೀಸಿನಿಂದ ಮಗ ಬಂದೊಡನೆ ಎಲ್ಲಾ ಸಮಾಚಾರ ತಿಳಿಸಿದರು.

ಸೀತಮ್ಮನ ಮನಸ್ಸಿದ್ದಂತೆ, ಜನಾರ್ದನನ ವಿವಾಹ ಶ್ರೀನಿವಾಸರಾಯರ ಮಗಳು ಲಲಿತೆಯೊಡನೆ ನಡೆದು ಹೋಯಿತು. ಸೀತಮ್ಮ ಸಂಭ್ರಮದಿಂದ ಸೊಸೆಯನ್ನು ಮನೆಗೆ ಬರಮಾಡಿ ಕೊಂಡಳು.

ಸೀತಮ್ಮ ನಡ ಮನೆಯಲ್ಲಿ ದೇವರ ಪೂಜೆಗೆ ಬತ್ತಿ ಮಾಡುತ್ತಾ ಇದ್ದಳು. ಸೊಸೆ ಮನೆಗೆ ಬಂದ ಬಳಿಕ ಅವಳ ದಿನಚರಿಯಲ್ಲಿ ಕೊಂಚ ವ್ಯತ್ಯಾಸವಾಗಿತ್ತು.

ಜನಾರ್ದನ ಕಾಫಿ ಫಲಾಹಾರ ತೆಗೆದುಕೊಂಡ ಬಳಿಕ, ಸೀತಮ್ಮ ಮಗ ಹೋಗುವ ತನಕ ಸಣ್ಣ ಪಟ್ಟ ಕೆಲಸ ಮಾಡುತ್ತಾ ಇರುತಿದ್ದಳು, ಈಗ ಕೆಲಸದ ಅರ್ಧ ಜವಾಬ್ದಾರಿಕೆ ಲಲಿತೆ ವಹಿಸಿಕೊಂಡಿದ್ದಳು. ಅದರಿಂದ ಆರಾಮಾಗಿ ಕುಳಿತುಕೊಳ್ಳುವಂತೆ ಸೀತಮ್ಮನಿಗೆ ಅನುವು ಇತ್ತು.

ಮಗ ಆಫೀಸಿಗೆ ಹೋಗುವುದನ್ನೇ ನಿರೀಕ್ಷಿಸುತಿದ್ದಳು. ಚಾವಡಿ ಬಾಗಿಲು ಹಾಕಿದ ಸದ್ದು ಕೇಳಿಬಂತು. ಬಹುಶಃ ಹೋಗಿರಬೇಕು ಎಂದು ಕುಳಿತಲ್ಲಿಂದ ಎದ್ದಳಾಕೆ. ಲಲಿತೆ ಇತ್ತ ಬರುತಿದ್ದಳು. "ಜನಾರ್ದನ ಹೋದನೆ?' ಎಂದು ಪ್ರಶ್ನಿಸಿದಳು.

"ಹೌದು."

ಸೀತಮ್ಮನಿಗೆ ಇಷ್ಟರ ತನಕ ಮಗ ತನ್ನೊಡನೆ ಹೇಳದೆ ಹೋಗುತ್ತಿರಲಿಲ್ಲ. ಇಂದು ಹಾಗೆ ಹೊರಟು ಹೋದ ಎಂದನ್ನಿಸಿತು.

"ಆಫೀಸಿಗೆ ಹೋದನೆ? ಅಥವಾ ಬೇರೆಲ್ಲಿಗಾದರೂ ಹೋದನೆ?'

"ಇಲ್ಲ. ಆಫೀಸು ಇದೆ ಇಂದು. ಅಲ್ಲಿಗೆ ಹೋದದ್ದು.'

'ಮಧ್ಯಾಹ್ನದ ಅಡುಗೆಗೆ ಸಿದ್ಧಪಡಿಸಬೇಕು."

"ಹೂಂ. ಮಾಡುವಾ." ಎಂದು ಲಲಿತೆ ತನ್ನ ಕೋಣೆಗೆ ನಡೆದಳು.

ಎಷ್ಟು ಹೊತ್ತಾದರೂ ಅವಳು ಹೊರಗಡೆ ಬಂದಿಲ್ಲ. ತಾನು ಹತ್ತು ದಾಟಿತು.

ಸೀತಮ್ಮ ಕುಳಿತಲ್ಲಿಂದ ಮೆಲ್ಲನೆ ಎದ್ದರು. ಅಡುಗೆ ಕೋಣೆಯಲ್ಲಿ ಒಲೆ ಉರಿ ಆರಿ ಹೋಗಿತ್ತು.

ಒಲೆ ಹತ್ತಿಸತೊಡಗಿದಾಗ, ಲಲಿತೆ ಬಂದು ನಾನು ಮಾಡ್ತೇನೆ. ನೀವು ಮಾಡುವುದು ಬೇಡ" ಎಂದಳು.

'ಸರಿ. ಹೊತ್ತಾಯಿತು ಎಂದು ಬಂದೆ'

"ಹೆಣ್ಣೆರಡರ ಒಳಗೆ ಅಡುಗೆ ಮಾಡಿದರಾಯಿತಲ್ಲ.' ಎಂದು ಲಲಿತೆ ಕೆಲಸಕ್ಕೆ ತೊಡಗಿದಳು.

ತಮಗಿಂತ ಶ್ರೀಮಂತರ ಮಡಳು; ಏನಾದರು ಅಂದರ ಸಿಟ್ಟುಗೊಂಡಾಳು ಎಂದು ಸೀತಮ್ಮ ಮಾತಾಡದ ಹೊರ ಬಂದಳು.

ದಿವಸಗಳು ಕಳೆದಂತೆ ಮಗನಲ್ಲಿ ಸೂಕ್ಷ್ಮ ಬದಲಾವಣೆಯಾಗುವುದನ್ನು ಅವಳು ಗಮನಿಸಿದಳು. ಒಮ್ಮೊಮ್ಮೆ ದೂರ

[ಹದಿನೈದನೇ ಪುಟನೋಡಿರಿ]

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಕನ್ನಡ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಾಖೆ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೨	೧—೨—೧೯೬೮	No. 22

ಏಕತೆಗಿದು ಪೂರಕವಲ್ಲ

ಮದ್ರಾಸ ರಾಜ್ಯದ ಆನಭಿಷಿಕ್ತ ದೊರೆಯೆನಿಸಿದ ಶ್ರೀ ಅಣ್ಣಾದೊರೈಯವರ ಸರಕಾರವು ಅನೇಕ ದಿಟ್ಟ ಹೆಜ್ಜೆಗಳನ್ನಿಟ್ಟಿದೆ. ಇದೀಗ ಹಿಂದಿಯ ಎದೆಯ ಮೇಲೆಯೇ ತನ್ನ ಎಡ ಪಾದವನ್ನಿಟ್ಟು ಅದನ್ನು ಪಾತಾಳಕ್ಕೆ ವೆಟ್ಟಲು ಆರಂಭ ಮಾಡಿದೆ. ಇತ್ತೀಚೆಗೆ ಮದ್ರಾಸ ಶಾಸನ ಸಭೆಯು ಅವಸರ-ಅವಸರವಾಗಿ ಸೇರಿ, ಭಾಷಾ ಪ್ರಶ್ನೆಯನ್ನು ಹಾಗೆಯೇ ಪರಿಶೀಲಿಸಿ ಅಂತಹುದೇ ಅವಸರದ ಘೋಷಣೆಯನ್ನು ಕೈಕೊಂಡು ವಕ್ರಮಾರ್ಗವನ್ನು ಹಿಡಿದಿದೆ—ವಿಧ್ವಂಸಕರಿಗೆ ತಮ್ಮ ಪಂಡಿತೆಯನ್ನು ಮುಂದುವರಿಸಲು ಅವಕಾಶವೊಂದನ್ನು ಮಾಡಿಕೊಟ್ಟಿದೆ; ಕೇಂದ್ರ ಸರಕಾರವನ್ನು ಬೇಚಿನಲ್ಲಿ ಸಿಕ್ಕಿಸುವ ಕುತಂತ್ರವನ್ನಾಡಿದೆ.

ಮದ್ರಾಸ ರಾಜ್ಯದಲ್ಲಿ ಸುಮಾರು ೨೨೦೦ ಸೆಕೆಂಡರಿ ಶಾಲೆಗಳಿದ್ದು ಇಲ್ಲಿ ಸುಮಾರು ಮೂರು ಸಾವಿರ ಹಿಂದೀ ಅಧ್ಯಾಪಕರು ದುಡಿಯುತಿದ್ದರು. ತನ್ನ ಹೊಸ ಘೋಷಣೆಯದನ್ವಯ ಮದ್ರಾಸ ರಾಜ್ಯವು ತ್ರಿಭಾಷಾ ಸೂತ್ರಕ್ಕೆ ತಿಲಾಂಜಲಿಯಿತ್ತು ದ್ವಿಭಾಷಾ ಸೂತ್ರವನ್ನು ಪುರಸ್ಕರಿಸಿದೆ. ಇನ್ನು ಮುಂದೆ ಮದ್ರಾಸದ ವಿದ್ಯಾರ್ಥಿಗಳಿಗೆ ಪಾಠ ಶಾಲೆಗಳಲ್ಲಿ ಹಿಂದಿಯನ್ನು ಕಲಿಯುವ ಅವಕಾಶವೇ ಇಲ್ಲ; ಆದ್ದರಿಂದ ಎನ್. ಸಿ. ಸಿ, ಎ. ಸಿ. ಸಿಗಳನ್ನು ಕೂಡಾ ಅಮಾನತು ಗೊಳಿಸಿ ಸರಕಾರ ಆಜ್ಞೆ ಮಾಡಿರುವುದರಿಂದ ಹಿಂದಿ ಶಬ್ದಗಳನ್ನೂ ಕೇಳುವ ಹಾಗಿಲ್ಲ. ಹಿಂದೀ ಸಿನೆಮಾಗಳಿಗೆ ಹಾಡುಗಳಿಗೆ ವಿರೋಧಿಗಳು ನಿಷೇಧ ಹೇರಿರುವುದನ್ನು ನೆನಪಿಸಿಕೊಂಡರೆ, ಡಿಎಂಕೆಯು "ಹಿಂದಿ"ಯನ್ನು ಮದ್ರಾಸದಿಂದ ಉಚ್ಚಾಟನೆ ಮಾಡಲು ಕ್ರಮ ಕೈಕೊಂಡು, ಕೇಂದ್ರ ಸರಕಾರದ ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದೆ. ಕುತ್ಯಕ್ಕೆ, ಹಿಂದೀ ಮಾತೃ ಭಾಷೆಯಾಗಿರುವವರಿಗೆ ಅದನ್ನು ಕಲಿಯುವ ಅವಕಾಶವನ್ನು ಸದ್ಯ ಇಲ್ಲಿಸಿರುವುದಿಲ್ಲ; ಇನ್ನೊಂದು "ಚಳುವಳಿ" ಆರಂಭವಾದರೆ, ಅದಕ್ಕೂ ಡಿಎಂಕೆ ಹಿಂದೆ ಮುಂದೆ ನೋಡುವುದಿಲ್ಲ. ಎನ್. ಸಿ. ಸಿ, ಎ. ಸಿ. ಸಿಗಳಲ್ಲಿನ ಆಜ್ಞಾಪದಗಳಲ್ಲಿ ಹಿಂದಿ ಶಬ್ದಗಳು ಕೂಡಿರುವುದೇ ಅವುಗಳ ಮೇಲಿನ ವಕ್ರದೃಷ್ಟಿಗೆ ಕಾರಣ. ಇವು ಇಂಗ್ಲಿಷ್ ಅಥವಾ ತಮಿಳಿನಲ್ಲಿರುವುದಾದರೆ ಮಾತ್ರ ಅವನ್ನು ಮುಂದುವರಿಸಲು ಅವಕಾಶವಂತೆ.

ಭಾರತದಂತಹ ವಿಶಾಲರಾಯ ರಾಷ್ಟ್ರಕ್ಕೆ ತ್ರಿಭಾಷಾ ಸೂತ್ರವೊಂದೇ ತಾರಕವೆಂದು ಹಿಂದೆ ರಾಜ್ಯ ಸರಕಾರಗಳು ಒಂದಾಗಿ ಒಪ್ಪಿ, ಆದರಂತೆ ಹಿಂದಿಯನ್ನು ಕಲಿಕಲು ತೊಡಗಿದ್ದುವು. ಅಧಿಕಾರಾರೂಢ ಪಕ್ಷವು ಬದಲಾದೊಡನೆಯೇ ಸರಕಾರದ 'ಮುಖ್ಯ ನೀತಿ'ಯೂ ಬದಲಾಗುತ್ತ ಹೋದರೆ, ಇದಕ್ಕೆ ಕೊನೆಯೆಲ್ಲಿ ಎಂದು ಯಾರಾದರೂ ಕೇಳಬಹುದು. ಮುಖ್ಯನಾಗಿ ಭಾಷಾ ತಿದ್ದುಪಡಿ ವಿಧೇಯಕದಲ್ಲಿಯಾರ ಮೇಲಾದರೂ ಹಿಂದಿಯನ್ನು ಬಲಾತ್ಕಾರವಾಗಿ ಹೇರುವುದಿಲ್ಲವೆಂಬ ಆಶ್ವಾಸನೆಯಿರುವಾಗ, ಅದರ ಅಧ್ಯಯನದ ಅವಕಾಶದಿಂದ ವಿದ್ಯಾರ್ಥಿಗಳನ್ನು ವಂಚಿಸುವುದೆಂದರೆ, ಘೋರ ಅನ್ಯಾಯ. ಮದ್ರಾಸದ ಮಾದರಿಯನ್ನು ಅನುಸರಿಸಿ, ಕರ್ನಾಟಕದ ರಾಜಧಾನಿ ಹಾಗೂ ಕೆಲವು ನಗರಗಳಲ್ಲಿ ವಿಧ್ವಂಸಕ ಕ್ರಿಯೆಗಳು ನಡೆದು ಜನತೆಯ ವಿತ್ತ ಜೀವಿತಗಳಿಗೆ ಅಪಾಯ ಹಾನಿಯುಂಟಾಗಿದೆಯೆಂದು ಓದುತ್ತೇನೆ. ಆಂಧ್ರ ಪ್ರದೇಶಕ್ಕೂ ಈ ಹಿಂಸಾವೃತ್ತಿಯ ಗಾಳಿ ಬೀಸುತ್ತಿದೆಯೆಂದೂ ಕೇಳುತ್ತೇವೆ ಮತ್ತೆ ಕೇರಳೀಯರಿಗೇನು ವಿಷಯಿಲ್ಲವೆ? ಮದ್ರಾಸ ದಂತಹ ಚಳುವಳಿಯು ಉತ್ತರ ಭಾರತದಲ್ಲಾ ಬಗಿಗೊಂಡು ಅಲ್ಲಿನ ರಾಜ್ಯಗಳು ಇಂಗ್ಲಿಷ್ ಭಾಷೆಗೆ ವಿಟ್ಟುಗೋಲು ಹಾಕಿದರೆ (ಬಿಹಾರದ ವಯಾವಾಯಾ ಪ್ರಸಾದ ಸಿಂಹರ ಸಂಯುಕ್ತ ದಳದ ಸರಕಾರ ಈಗ ಪದಚ್ಯುತ, ಎಸ್. ಎಸ್. ಎಲ್. ಸಿ ಗೆ ಇಂಗ್ಲಿಷ್ ಐಚ್ಛಿಕ ವಿಷಯವಲ್ಲವೆಂದು ಸಾರಿಬಿಟ್ಟಿದೆ) ಮತ್ತೆ ನಾವೆಲ್ಲರೂ ಒಂದಾಗುವ ದಾರಿಯಾವುದು? ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಬೇರೆ ಬೇರೆ ರಾಜ್ಯಗಳು ಒಂದಾಗಿ ಬದುಕುವುದೆಂತು ಸಾಧ್ಯ?

ಡಿ. ಎಂ. ಕೆ. ಮೊದಲಿನಿಂದಲೂ ಪ್ರತ್ಯೇಕತೆಯನ್ನು ಎತ್ತಿ ಹಿಡಿಯುವ ಪಕ್ಷ. ತಾನು ವಿರೋಧಿ ಪಕ್ಷವಾಗಿದ್ದಾಗಲೇ ಅದು ಹಿಂದಿಯ ಬಗ್ಗೆ ಚಳುವಳವೆಬ್ಬಿಸಿ ಜನತೆಯನ್ನು ಅಡ್ಡಾದಾಂಗಿಳೆದಿದೆ. ಇದೀಗ ತಾನಂದು ಇಟ್ಟಿದ್ದ ಬೆಂಕಿಯಲ್ಲಿ ತಾನೇ ಬೇಗುತ್ತಿದೆ—ಪ್ರತ್ಯೇಕ ದ್ರವಿಡ ಸ್ಥಾನದ ಬೇಡಿಕೆಯನ್ನು ತನ್ನ ಪಕ್ಷವು ಬಿಟ್ಟಿಕೊಟ್ಟಿದೆಯೆಂದೂ, ರಾಷ್ಟ್ರದ ಐಕ್ಯ ಸ್ಥಾಪನೆಯು ಎಲ್ಲಕ್ಕಿಂತ ಮುಖ್ಯವೆಂದೂ ಘೋಷಿಸುವ ಅಣ್ಣಾ ದೊರೈಯವರಿಗೆ ಸಂಪರ್ಕ—ಒಡನಾಟಗಳಿಂದಲೇ ಐಕ್ಯ ಭಾವಬೆಳೆಯುವುದೆಂದೂ ಇದಕ್ಕೆ ಹಿಂದಿಯ ಅಧ್ಯಯನ ಅನುಕೂಲವಾಗುವುದೆಂದೂ ತಿಳಿಯದೆ ಹೋದುದು ವಿಪರ್ಯಾಸದ ಸಂಗತಿ. ದೇಶದ ಐಕ್ಯ ಶಕ್ತಿ ಸಂವರ್ಧನೆಗಾಗಿ ಸರ್ವಾತ್ಮಾಗಕ್ಕೂ ಸಿದ್ಧವಾಗಿರಬೇಕಾದ ಈ ಸಂಕ್ರಾಂತಿ ಸಮಯದಲ್ಲಿ, ಹೊಂದಾಣಿಕೆಯ ಕಾರ್ಯ ಮಾಡುವುದನ್ನು ಬಿಟ್ಟು ಕಿಚ್ಚಿಗೆ ಕೈ ಹಾಕುವ ಕೆಲಸ ಅನಪೇಕ್ಷಣೀಯ. ವಿಧಾನ ಸಭೆಯ ಕೆಲವು ಸದಸ್ಯರು ಮಾನವಾಗಿರುವಾಗಲೇ ತನ್ನವರ ಜೇಬಿನ ಸಹಾಯದಿಂದ ದ್ವಿಭಾಷಾ ನಿರ್ಣಯವನ್ನು ಮಾಡಿ, ಆದರಂತೆ ಆಜ್ಞೆಯನ್ನೂ ಹೊರಡಿಸಿ, ಪ್ರತಿಕ್ರಿಯೆಯನ್ನು ಎದುರು ನೋಡುವ ಅಣ್ಣಾ ಸರಕಾರ ದೇಶದ ಏಕತೆಗೆ ಪೂರಕವಾದ ಕಾರ್ಯವನ್ನು ಮಾಡಲಿಲ್ಲ ಎಂದು ನಿಶ್ಚಯವಾಗಿ ಹೇಳಬಹುದು.

ಹಲ ಸಮಗಾರರ ಚರ್ಮ

ಬಹುದಿನಗಳಿಂದ ತೂಗುಯ್ಯಾಲೆಯಾಡುತ್ತಿದ್ದ ಬಿಹಾರದ ಸಂಯುಕ್ತರಂಗದ ಮಹಾಮಹಿಮ ಪ್ರಸಾದ ಸಿಂಹರ ಸಂಪುಟವು ಅವಿಶ್ವಾಸ ನಿರ್ಣಯದಿಂದಾಗಿ ಬಿದ್ದು ಹೋಯಿತು. ಆದರಂತೆ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದರು. ಶೋಷಿತ ದಳದ ನಾಯಕ ಮಂಡಲ್‌ರವರ ನಾವಾಯಕರಣೀಕೃತ ಶ್ರೀ ಎಸ್. ಪಿ. ಸಿಂಗ್‌ರವರು ಹೊಸ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿದರು. ಇವರಿಗೆ ಶೋಷಿತದಳ ಮತ್ತು ಕಾಂಗ್ರೆಸ್ ಪಕ್ಷಗಳ ಬೆಂಬಲವಿದೆ. ಬಹುಸಂಖ್ಯಾಕವಾದ ಕಾಂಗ್ರೆಸ್ ತಾನು ಸರಕಾರವನ್ನು ರಚಿಸದೆ ಇತರರಿಗೆ ಬೆಂಬಲ ಕೊಡುವುದನ್ನು ಇತ್ತೀಚೆಗೆ ಪರಿಪಾಠವನ್ನಾಗಿ ಮಾಡಿಕೊಂಡಂತಿದೆ. ಪಂಜಾಬು, ಪಶ್ಚಿಮ ಬಂಗಾಳಗಳಲ್ಲೂ ಇದು ಮಾಡಿದ್ದು ಹಾಗೇನೇ. ಬಿಹಾರದ ಹೊಸ ಸಂಪುಟವಾದರೂ ಸ್ಥಿರ ಸರಕಾರವನ್ನುಳಿಸಿಕೊಳ್ಳುವಲ್ಲಿ ಯಶಗಳಿಸಲಿ. ಇನ್ನು ಉತ್ತರಪ್ರದೇಶದ ಚರಣ ಸಿಂಗರ ಸರಕಾರವೊಂದಿದೆ. ಅದೂ ಬೆಕ್ಕಿನ ತಲೆಯ ಮೇಲಿಟ್ಟ ದೀಪ. ಚರಣ ಸಿಂಗರ ಬದಲಿಗೆ ಹೊಸ ನಾಯಕನ ಆಯ್ಕೆಯಾಗಲಿದೆಯಂತೆ—ಅಲ್ಲೂ ಸಂಯುಕ್ತ ಬಹುಮತ ! ಕಳೆದುಕೊಳ್ಳುವಂತಹ ಘಟನೆಗಳೇ ನಡೆಯುತ್ತಿದೆ. ಬಹುಪಕ್ಷಗಳು ಒಂದಾಗಿ ರಚಿಸುವ ಸರಕಾರಗಳು ಈ ಬಗೆಯಾಗಿ ದುರಂತಕ್ಕೀಡಾಗುವುದನ್ನು ಕಾಣುವಾಗ ಹಲವು ಸಮಗಾರರ ಕೈಯ ಚರ್ಮದ ನೆನಪು ಬರುತ್ತದೆ.

ಜನಮತ

ಬಂಟ್ವಾಡಿಯಲ್ಲೇ ಸೇತುವೆ ಬೇಕು

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಹರಿಯುವ ಕೊಲ್ಲೂರು ನದಿಗೆ ಗಜ್ಜಾಡಿ-ಆಲೂರು ಪಿ. ಡಬ್ಲ್ಯೂ. ಡಿ. ರಸ್ತೆಯ ಬಂಟ್ವಾಡಿಯಲ್ಲಿ ಸೇತುವೆಯೊಂದು ಆಗಬೇಕೆಂದು ಮೈಸೂರು ಸರಕಾರವು ಬಹಳ ಹಿಂದೆಯೇ ಎಲ್ಲವನ್ನೂ ಪರಿಶೀಲನೆ ನಡೆಸಿ ನಿಶ್ಚಯಿಸಿತ್ತು. ಈ ಬಗ್ಗೆ ಎಸ್ಟಿಮೇಟನ್ನೂ ಮಾಡಲಾಗಿತ್ತು. 1962—63ರ ಮುಂದಡಪತ್ರದಲ್ಲಿ ಕೂಡ ಈ ಸೇತುವೆಯ ನಿರ್ಮಾಣಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಆನಂತರ ರಾಷ್ಟ್ರದಲ್ಲಿ ನೇಫಿಸಲಾದ ತುರ್ತುಪರಿಸ್ಥಿತಿಯಿಂದಾಗಿ ಬಂಟ್ವಾಡಿ ಸೇತುವೆಗಾಗಿ ಟೆಂಡರ್ ಕರೆಯುವುದನ್ನು ಮುಂದುವರಿಸಿತು.

ಇದೀಗ ಬಹು ಸಮಯಾನಂತರ ತುರ್ತು ಪರಿಸ್ಥಿತಿಯು ರದ್ದಾಗಿದೆ. ಆದುದರಿಂದ ಈ ಸೇತುವೆಯ ನಿರ್ಮಾಣದ ಬಗ್ಗೆ ಮತ್ತೆ ಮುಂದುವರಿಯುವುದು ಸಾಧ್ಯವಾಗಿದೆ. ಆದರೆ, ಮಧ್ಯೆ ಕೆಲವು ಅಸಕ್ತ ವ್ಯಕ್ತಿಗಳು ಈ ಸೇತುವೆಯನ್ನು ಸ್ಥಾನಾಂತರಿಸಲು ಒಳಗಿಂದೊಳಗೆ ಪ್ರಯತ್ನ ನಡೆಸುತಿದ್ದಾರೆಂದು ತಿಳಿದು ಬರುತ್ತದೆ. ಬಂಟ್ವಾಡಿಯಲ್ಲಿ ಸೇತುವೆಯಾದರೆ, ಕೊಲ್ಲೂರಿಗೆ ಹೋಗಲು, ಜಿಲ್ಲೆಯ ಉತ್ತರ—ಪೂರ್ವದ ಒಳನಾಡಿಗೆ ಹೋಗಲು, ಕೊಲ್ಲೂರು ಘಾಟಿಯ ವಾಲಕ ಕಬ್ಬಿಣದ ಅದುರುಗಳನ್ನು ಕರಾವಳಿಗೆ ಸಾಗಿಸಲು ನೇರವಾದ ಹತ್ತಿರದ ಮಾರ್ಗವೊಂದು ದೊರೆಯಂತಾಗುತ್ತದೆ. ಇಷ್ಟೆಂದು ಉಪಯೋಗ—ಲಾಭದಾಯಕವಾದ ಸೇತುವೆಯನ್ನು ಸ್ಥಾನಾಂತರಗೊಳಿಸುವುದರಿಂದ ಕೆಲವೇ ಸಣ್ಣಭದ್ರ ವ್ಯಕ್ತಿಗಳಿಗೆ ಲಾಭವಾದರೂ ಆಗಬಹುದು; ಹೆಚ್ಚಿನವರಿಗಾಗದು. ಇದೇ ತಾ. 6ರಂದು ಗಂಗೊಳ್ಳಿ ಸಂಕದ ಉದ್ಘಾಟನಾ ಸಮಾರಂಭದ ವೇಳೆ ಜಿಲ್ಲೆಗೆ ಆಗಮಿಸಲಿರುವ ಮಂತ್ರಿಗಳು ಬಂಟ್ವಾಡಿ ಸೇತುವೆಯ ಬಗ್ಗೆ ಅವಶ್ಯಕ ಕ್ರಮ ಕೈಗೊಳ್ಳಬೇಕು—ಎಂದು ನಾಗರಿಕರು ಕೇಳಿಕೊಳ್ಳುತ್ತಾರೆ.

ಆಕಾಶವಾಣಿ ಭಾಷಣ

5-2-1968ನೆ ಸೋಮವಾರ ರಾತ್ರಿ ತಾನು 9-15ಕ್ಕೆ ಆಕಾಶವಾಣಿಯ ಬೆಂಗಳೂರು ನಿಲಯದಿಂದ ಸಿಂಡಿಕೇಟ್ ಬ್ಯಾಂಕಿನ ಚೆಯರ್‌ಮನ್ ಶ್ರೀ ಟಿ. ಎ. ಪೈ ಅವರು 'ರಾಷ್ಟ್ರೀಯ ಜೀವನದಲ್ಲಿ ಹೊಸ' ಎಂಬ ವಿಷಯದ ಮೇಲೆ 10 ನಿಮಿಷಗಳ ಕಾಲ ಭಾಷಣ ಮಾಡಲಿರುವರು.

ಸಾರ್ವಜನಿಕ ನಿಯಂತ್ರಣದ ಸಂಬಂಧದಲ್ಲಿ ಇತರ ಬ್ಯಾಂಕುಗಳಿಗೆ ಆದರ್ಶ ಪ್ರಾಯವೆಂದು ಪರಿಗಣಿತವಾದ ಸಿಂಡಿಕೇಟ್ ಬ್ಯಾಂಕು ಶ್ರೀ ಪೈ ಮತ್ತು ಹಿಂದಿನ ಚೆಯರ್‌ಮೆನ್ ಡಾ| ಪೈಯವರ ನೇತೃತ್ವದಲ್ಲಿ ಅದ್ವಿತೀಯವಾಗಿ ಸೇವೆ ಸಲ್ಲಿಸಿದೆ. ಶ್ರೀ ಪೈಯವರು ನಿಯೋಜಿತ 'ನೇಶನಲ್ ಕ್ರೆಡಿಟ್ ಕೌನ್ಸಿಲ್'ನ ಸದಸ್ಯರಾಗಿ ಹೆಸರಿಸಲ್ಪಟ್ಟಿದ್ದಾರೆ. ಶ್ರೀ ಪೈಯವರ 'ಭಾರತೀಯ ಬ್ಯಾಂಕಿಂಗ್' ಮತ್ತದರ ಭವಿಷ್ಯದ ಮೇಲಿರುವ ವಿಚಾರಧಾರೆಯು ಮುಂದಿನ ವರ್ಷದಲ್ಲಿ ಸಾಕಷ್ಟು ಬೆಳಕಿಗೆ ಬರುವುದೆಂದು ಆಶಿಸಬಹುದು.

ವ್ಯಕ್ತಿ ಸ್ವಾತಂತ್ರ್ಯತೆ ಮಾನವನ ಸೌಖ್ಯ ಮತ್ತು ಘನತೆಗೆ ಅತ್ಯಂತ ಅವಶ್ಯವಾದದ್ದು.

ಮುಖಚಿತ್ರ

ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆಯುವ ಪೂಜಾದೃಶ್ಯವೊಂದು

ಮುಂದುವರಿಸಿ

ಜಾತ್ಯತೀತತೆ ನಮಗೆ ಹೊಸತಲ್ಲ

ಸಂತ ಕಬೀರರು ಇದನ್ನು ಸಮರ್ಥಿಸಿದ್ದರು

"ಶರಣರ ಮಹಿಮೆಯನ್ನು ಮರಣದಲ್ಲಿ ನೋಡು" ಎಂಬ ಒಂದು ಪದ ಪ್ರಯೋಗವಿದೆ. ಕಬೀರದಾಸರ ಬದುಕಿನಂತೆಯೇ ಅವರ ಸಾವೂ ಒಂದು ಪವಾಡವೆನಿಸಿತು. ಕಬೀರದಾಸರು ಮರಣ ಹೊಂದಿದಾಗ ಹಿಂದುಗಳು ಮತ್ತು ಮುಸಲ್ಮಾನರಲ್ಲಿ ಶವ ಸಂಸ್ಕಾರದ ಬಗ್ಗೆ ಕಲಹವೇರ್ಪಟ್ಟಿತು. ಹಿಂದುಗಳು ಅವರ ಶವವನ್ನು ಸುಡಬಯಸಿದರೆ, ಮುಸಲ್ಮಾನರು ಅದನ್ನು ಹೂಳಬಯಸಿದರು. ಕಲಹದ ನಿವಾರಣೆಗೆ ಕಬೀರರು ಸೂಚಿಸಿದ ಮಾರ್ಗವೇ ಬೇರೆ.

ಶವದ ಮೇಲಣ ವಸ್ತ್ರವನ್ನು ತೆಗೆದಾಗ, ಆ ಶವ ಇದ್ದ ಸ್ಥಳದಲ್ಲಿ ಹೂವುಗಳ ರಾಶಿ ಕಂಡು ಬಂತು. ಈ ರಾಶಿಯಲ್ಲಿ ಅರ್ಧವನ್ನು ಹಿಂದುಗಳು ವಾರಣಾಸಿಗೂ, ಇನ್ನುಳಿದ ಅರ್ಧವನ್ನು ಮುಸಲ್ಮಾನರು ಗೋರಖಪುರಕ್ಕೂ ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡಿದರಂತೆ.

ಜೀವನದುದ್ದಕ್ಕೂ ಎರಡು ಮಹಾನ್ ಧರ್ಮಗಳ ತತ್ವಗಳನ್ನು ಸಮರಸಗೊಳಿಸಲು ಶ್ರಮಿಸಿದ ಮಹಾತ್ಮರ ಜೀವನವೊಂದು ಹೀಗೆ ಉದಾತ್ತ ರೀತಿಯಲ್ಲಿ ಅಂತ್ಯಗೊಂಡಿತಂತೆ. ಕಬೀರದಾಸರ ಜೀವನ ಚರಿತ್ರೆಯಲ್ಲಿ ಈ ಘಟನೆಯು ಪ್ರಸ್ತಾಪವಿದೆ.

ಕಬೀರದಾಸರು ಭಾರತದ ಮಹಾನ್ ಸಂತರಲ್ಲಿ ಒಬ್ಬರು. ದೇವರನ್ನು ಮೆಚ್ಚಿಸಲು ಭಕ್ತಿಯೇ ಮುಖ್ಯ, ಧರ್ಮ ಮುಖ್ಯವಲ್ಲವೆಂಬ ತತ್ವವನ್ನು ಅವರು ದೃಢವಾಗಿ ನಂಬಿದ್ದರು. ಅಲ್ಲಾ ಮತ್ತು ರಾಮ ಇಬ್ಬರೂ ಒಂದೇ ಎಂದು ಅವರು ಭಾವಿಸಿದ್ದರು. ಆದರ್ಶ ಮತ್ತು ಈಶ್ವರ ಬಗ್ಗೆ ಅವರು ಆಗಾಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ವ್ರತ ಪ್ರಧಾನವಾದ; ಆಡಂಬರದಿಂದ ಕೂಡಿದ ಧರ್ಮವನ್ನು ಅವರು ಎಂದಿಗೂ ಸಹಿಸುತ್ತಿರಲಿಲ್ಲ. ದೇವರನ್ನು ಬೇರೆ ಎಲ್ಲಿಯೂ ಹುಡುಕಬೇಕಾಗಿಲ್ಲ. ಅವನು ಭಕ್ತನ ಅಂತರಾತ್ಮದಲ್ಲಿದ್ದಾನೆ ಎಂಬುದು ಕಬೀರದಾಸರ ಅಭಿಪ್ರಾಯವಾಗಿತ್ತು. ಕಬೀರದಾಸರು ಭಕ್ತಿ ಪರವಶರಾಗಿ ಅನೇಕ ಸಲ ಹೀಗೆ ಹಾಡುತ್ತಿದ್ದರು.

ಒಬ್ಬನೇ ಭಗವಂತ, ನಿನ್ನೊಳಗೆ ಅಡಗಿಹನು, ಧ್ಯಾನದಾ ಬಲದಿಂದ. ಚಿತನೆಯು ನೆಪದಿಂದ ಜೀವನ ಕಾಣಲಾರೆ.
ನಿನ್ನೊಳಗೆ ದೇವರಿಹನೆಂದು ನಂಬದ ನೀನು, ಎನಿತು ಓದಿದರೇನು? ಎನಿತು ಪರಿಸಿದರೇನು?
ಎದೆಯೊಳಗೆ ವಂಚನೆಗೆ ತಾಣವನ್ನಿತ್ತು ಎನಿಸು ದೇವನ ಜಪಿಸಿದರೇನು? ಅವ ತೀರ್ಥಯಾತ್ರೆ ನಿನಗೇನನ್ನಿತೀತು."

ಕಬೀರ ಪಂಥ—ಜಾತಿ-ಮತ ಧರ್ಮಗಳಿಂದ ಅತೀತವಾಗಿತ್ತು. ಈ ಬಂಧುತ್ವವನ್ನು ಸೇರಿದವರು ಮತ ಸಂಬಂಧವಾದ ಎಲ್ಲಾ ಭಿನ್ನಾಭಿಪ್ರಾಯಗಳನ್ನು ತೊರೆಯುತ್ತಿದ್ದರು. ಹೀಗೆ ಕುಲದವರೂ ಕಬೀರ ಪಂಥವನ್ನು ಸೇರಲು ಅವಕಾಶವಿತ್ತು. ಹಿಂದು ಧರ್ಮದ ಇಂತಹ ದೀನ—ದುರ್ಬಲರ ಕಷ್ಟ ನಿವಾರಣೆಗಾಗಿ ಕಬೀರದಾಸರು ಬದಲವಾಗಿ ಶ್ರಮಿಸಿದರು.

ಕಬೀರರಿಗೆ ಜಾತಿ ಅಥವಾ ಪ್ರತನಿಯ ಮಗಳಲ್ಲಿ ನಂಬಿಗೆ ಇರಲಿಲ್ಲ. ಅವರು "ಮೋ ಹೋ ಕಡಾನ ಧುವಮೋ ಬಂದೇ" ಎಂಬ ತಮ್ಮ ಒಂದು ಪದ್ಯದಲ್ಲಿ ದೇವರ ಅಸ್ತಿತ್ವದ ಬಗ್ಗೆ ಪ್ರಸ್ತಾಪಿಸುತ್ತ ಈ ರೀತಿ ಹೇಳಿದ್ದಾರೆ.

"ಎಲೈ ಸೇವಕನೇ, ನೀನು ನನಗಾಗಿ ಎಲ್ಲಿ ಹುಡುಕುತ್ತಿರುವೆ? ಕಾಬಾದಲ್ಲಾಗಲಿ, ಕೈಲಾಸದಲ್ಲಾಗಲಿ ನಾನು ಇಲ್ಲ. ವ್ರತಾಚಾರಗಳಲ್ಲಿ, ಸಮಾರಂಭಗಳಲ್ಲಿ ಯೋಗ—ತ್ಯಾಗಗಳಲ್ಲಿ ನಾನು ಇಲ್ಲ. ನೀನು ನಿಜವಾದ ಶ್ರದ್ಧೆಯವನಾಗಿದ್ದರೆ ಕ್ಷಣ ನನ್ನನ್ನು ಕಾಣುತ್ತಿಯೇ. ಕ್ಷಣ ಮಾತ್ರದಲ್ಲಿ ನನ್ನನ್ನು ಸೇರುತ್ತೀಯೇ" (ಸಜ್ಜನರುಗಳೇ ದೇವರು ಎಲ್ಲರ ಉಸಿರಿನ ಉಸಿರು ಎಂದು ಕಬೀರ ಹೇಳುತ್ತಾರೆ.)

ಇಂಜನಿಯರಿಂಗ್ ಕ್ಷೇತ್ರದ ಸಾಹಸೀ ವ್ಯಕ್ತಿ

ಡಾ॥ ಎ. ಯುಸ್. ಅಡಕೆ.

ಬರೆದವರು: ಬಸವರಾಜ ಕುಂಟೋಜಿ

ಮಾನವ ತನ್ನ ಬುದ್ಧಿ ಶಕ್ತಿ, ಕಾರ್ಯಶಕ್ತಿಗಳಿಂದ ಭೂಭಾಗವನ್ನೇ ಬದಲು ಮಾಡಬಲ್ಲನೆಂಬುದಕ್ಕೆ, ಹುಬ್ಬಳ್ಳಿಯ ಕೆ. ಯಂ. ಸಿ (ಕರ್ನಾಟಕ ಮೆಡಿಕಲ್ ಕಾಲೇಜು) ದಕ್ಷಿಣ ಕನ್ನಡ ಜಿಲ್ಲೆಯ ಸುರತ್‌ಕಲ್‌ನ ಕೆ. ಆರ್. ಇ. ಸಿ. ಎರಡು ಜ

"ಹೋ ಖುದಾ ಮಸಜದ್ ಮಸ್ತಾಹೈ" ಎಂಬ ಇನ್ನೊಂದು ಪದ್ಯದಲ್ಲಿ ಅವರು ದೇವರು ಮಸೀದಿಯಲ್ಲಾಗಲಿ ಮೂರ್ತಿಯಲ್ಲಾಗಲಿ ಇಲ್ಲವೆಂದು ಹೇಳಿದ್ದಾರೆ.

ಪೂರ್ವದಲ್ಲಿ ಹರಿ, ಪಶ್ಚಿಮದಲ್ಲಿ ಅಲ್ಲಾ ಇದ್ದಾರೆ ನಿಮ್ಮ ನಿಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಿ. ಅಲ್ಲಿ ನಿಮಗೆ ಇಬ್ಬರ ಸಾಕ್ಷಾತ್ಕಾರವೂ ಆಗುತ್ತದೆ, ಎಂದು ತಾವು ಅಲ್ಲಾ ಮತ್ತು ರಾಮ ಈ ಇಬ್ಬರ ಕರುಣೆಯ ಶಿಶು ಎಂದೂ ಅವನೇ ನನ್ನ ಗುರು ಅವನೇ ನನ್ನ ಪೀರ ಎಂದೂ ಹೇಳಿಕೊಂಡಿದ್ದಾರೆ.

ಹಿಂದೂಗಳ ಧರ್ಮದ ಬಾಹ್ಯ ಆಡಂಬರಗಳನ್ನೂ ಕಟ್ಟಳೆಗಳನ್ನೂ ಕಟುವಾಗಿ ಟೀಕಿಸಿದ್ದರಿಂದ, ಕಬೀರರು ಸಂಪ್ರದಾಯ ಹಿಂದುಗಳ ಕೋಪಕ್ಕೆ ಗುರಿಯಾಗಿದ್ದರೆ, ಆಶ್ಚರ್ಯವೇನೂ ಅಲ್ಲ. ಕಬೀರರಿಗೆ ಮುಸಲ್ಮಾನ ಧರ್ಮದ ಇಂತಹ ಆಡಂಬರವೂ ಸೇರುತ್ತಿರಲಿಲ್ಲ, ಅಷ್ಟೇ ಕಟುವಾಗಿ ಅವುಗಳನ್ನು ಖಂಡಿಸುತ್ತಿದ್ದರು. ಕಬೀರದಾಸರು ಒಂದು ಕಡೆ ಹೀಗೆ ಹೇಳಿದ್ದಾರೆ.

"ಸದಾ ಕಲಹದಲಿ ತೊಡಗಿರುವ ನಿನಗೆ
ವಿವೇಕದ ಸುಳಿವು ಕಿಂಚಿತ್ತು ಇಲ್ಲ.
ಈ ಜಂಜಡವನ್ನೆಲ್ಲ ತೊರೆದು
ರಾಮನನ ಧ್ಯಾನಿಸು ಓ ಮೂರ್ಖ
ಮಾನವೇ."

ಕಬೀರದಾಸರ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳೂ ಜಾತಿ—ಪಂಥಗಳ ಭೇದವಿಲ್ಲದ ಜಾತ್ಯತೀತ ಕುಟುಂಬಕ್ಕೆ ಸೇರಿದವುಗಳಾಗಿದ್ದವು.

ಭಕ್ತಿ ಸಂಥದ ಮಹಾ ಸಂತ ಕಬೀರರು, ಜನಮನದಲ್ಲಿ ಜಾತ್ಯತೀತ ಭಾವನೆಯನ್ನು ಹಿಂದೆಯೇ ಬೆಳೆಯಿಸಿ ಬೆಳಗಿಸಿದರು.

ಕ್ಕ ನಿದರ್ಶನಗಳನ್ನು ಕಾಣಬಹುದು. ಆ ವೆರಡರ ಅಭಿವೃದ್ಧಿಗೆ ಕಾರಣರಾದ ಆ ಜಾದೂಗಾರರೆ ಡಾ॥ ಆಪ್ಪಾಸಾಹೇಬ ಶಿಟ್ಟಿಯಪ್ಪ ಅಡಕೆ. ಹುಬ್ಬಳ್ಳಿ, ಕೆ. ಯಂ. ಸಿ. ಯ ರೂಪರೇಖೆಗಳನ್ನು ಎಳೆದ ಅವರು, ಸುರತ್‌ಕಲ್ ಕೆ. ಆರ್. ಇ. ಸಿ. ಯಲ್ಲಿ ಸಕಲ ಸೌಕರ್ಯಗಳನ್ನು ಒದಗಿಸಲು ಎಲೆಯ ಮರೆಯ ಕಾಯಂತೆ ಶ್ರಮಪಡಾಡಿದರು. ಈಗ್ಗೆ ಆರೇಳು ವರುಷದ ಕೆಳಗೆ ಕುರಚಲು ಗಿಡಗಳಿಂದ ತಗ್ಗು ದಿನ್ನೆಗಳ ಫಿರ್ಜನ ಪ್ರದೇಶದಲ್ಲಿ ಇಂದು ತಾಂತ್ರಿಕ ವಿದ್ಯಾ ಮಂದಿರ ತಲೆ ಎತ್ತಿದೆ. ಒಂದು ದಶಕದಲ್ಲಿ ಆಗುವ ಕೆಲಸವನ್ನು ಐದಾರು ವರುಷಗಳಲ್ಲಿ ಮಾಡಿತೋರಿಸಿದ್ದಾರೆ. ಇವರ ಅ ಕಾರ್ಯ ಶಕ್ತಿಯನ್ನು ಪರದೇಶದ ತಂತ್ರಜ್ಞರು ಮನಸಾರೆ ಹೊಗಳಿದ್ದಾರೆ.

ಮಹಾರಾಷ್ಟ್ರದಲ್ಲಿ ಹುಟ್ಟಿ, ಮೈಸೂರಲ್ಲಿ ಬೆಳೆದ ಅವರು ಅಚ್ಚ ಕನ್ನಡಿಗರು. ಜಿಲ್ಲಾ ಬೋರ್ಡ್ ಇಂಜಿನಿಯರಿಂದ ಉಪಕುಲಪತಿ ಸ್ಥಾನಕ್ಕೆ ಏರಿದ ಅವರು ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದ್ದಾರೆ. ನಮ್ಮ ದೇಶದ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಇಂಜನಿಯರೊಬ್ಬರು ಉಪಕುಲಪತಿಯಾದದ್ದು ಕಾಣುತ್ತದೆ. "How to win friends and influence people" ಎನ್ನುವ ಪುಸ್ತಕ ಒದುವ ಬದಲು ಡಾ॥ ಅಡಕೆಯವರನ್ನು ನೋಡಿದರೆ ಸಾಕು. ಎಂಥವರನ್ನೂ ಮನಸೆಳೆವ ಅವರ ವ್ಯಕ್ತಿತ್ವ ಯಾವ ಕೈಲುಗಳನ್ನು ಕಟ್ಟಿದಡ ಕಾರ್ಯ ಗುಣ ಅವರ ಘನತೆಗೆ ಕಾರಣವಾದವು.

ಅರವತ್ತರ ಗಡಿದಾಟಿದ ಅಡಕೆಯವರು ಕಾರ್ಯಶಕ್ತಿಯಲ್ಲಿ ಯುವಕರನ್ನು ಮೀರಿಸುತ್ತಾರೆ. ಪಾವಟೆಯುವರಿಂದ ತೆರವಾದ ಕರ್ನಾಟಕ ವಿಶ್ವ ವಿದ್ಯಾನಿಲಯದ ಉಪಕುಲಪತಿ ಸ್ಥಾನಕ್ಕೆ ಡಾ॥ ಅಡಕೆ ಸರಿಯಾದ ವ್ಯಕ್ತಿ. ಇವರ ಉಪಕುಲಪತಿ ಪದದಲ್ಲಿ ಕರ್ನಾಟಕ ವಿಶ್ವ ವಿದ್ಯಾನಿಲಯ ಹೊಸ ಜೀವನ ಪಡೆಯುವದರಲ್ಲಿ ಸಂದೇಹವಿಲ್ಲ.

ಕುಂದಾಪುರ ಮುನ್ಸಿಫ್ ಕೋರ್ಟನಲ್ಲಿ

O. S. 424/1967
R. I. A. 635/1967

ವಾದಿ— G. ಅಣ್ಣಪ್ಪ ಖಾರ್ವಿ
ಪ್ರತಿವಾದಿರು-G. ಖಾಸನ ಖಾರ್ವಿ ಕೂಡಾ ಕುಂದಾಪುರ ತಾಲ್ಲೂ ಗಂಗೊಳ್ಳಿ ಗ್ರಾಮದಲ್ಲಿರುವ ತಿಮ್ಮಪ್ಪ ಖಾರ್ವಿ ಮಗ G. ಮಾಧವ ಖಾರ್ವಿ | ಸುಬ್ಬಣ್ಣ ಖಾರ್ವಿ ಮಗ G. ಕೃಷ್ಣ ನ್ಯಾಕ | ಕೂಡಾ 2 ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ-

ವಾದಿಯು ದಾವಾ ದೇವಸ್ಥಾನಗಳಲ್ಲಿ ವಾದಿಯು ಜೀವಾಂತ್ಯದ ವರೆಗೆ ಪೂಜೆ ವಗೈರೆ ನಡೆಯುವಾವರೆ ಶಾಶ್ವತ ಇಂಜಂಕ್ಷನ್ ಬಗ್ಗೆ ಮತ್ತು ಪ್ರತಿವಾದಿರು ನ ಅವರ ಕಡೆಯವರು ಪ್ರವೇಶಿಸದ ಹಾಗೆ ಟೆಂಪರರಿ ಇಂಜಂಕ್ಷನ್ ಮೂಲ್ಕ ಇರ್ಫಂಧಿಸುವ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 22—2—1968ಕ್ಕೆ ಮೇಲಿನ ಕೋರ್ಟನಲ್ಲಿ ಕನ್ಸಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳ ತಕ್ಕದ್ದು ಎಂದು ಸಾರಿ, ಈ ಮೂಲ್ಕ ತಿಳಿಯ ಪಡಿಸಿದೆ.

N. S. Parameshwariah
Advocate for Plff.

Date 24—1—68, Coondapoor

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ್ದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬೆಳ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ವಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಿಯಾಯಿತಿಗಳಿಗೆ ವಿಶೇಷ ಸವಲತ್ತುಗಳುಂಟು.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಂದಾಪುರ ಮುನ್ಸಿಫ್ ಕೋರ್ಟನಲ್ಲಿ

S. C. 636/1967

ವಾದಿರು— ಶುಬ್ಬಮ್ಮ ಶೆಟ್ಟಿ ಕೂಡಾ
ಪ್ರತಿವಾದಿರು— ಸುಬ್ಬಮ್ಮ ಶೆಟ್ಟಿ ಕೂಡಾ ಕುಂದಾಪುರ ತಾಲ್ಲೂ ಪೈಂದೂರು ಗ್ರಾಮದ ಕಾರೆಕಟ್ಟೆಯಲ್ಲಿರುವ ಅಣ್ಣಪ್ಪ ಶೆಟ್ಟಿ ಅಳಿಯ ಶುಬ್ಬಯ್ಯ ಶೆಟ್ಟಿಗೆ ಈ ಮೂಲ್ಕ ತಿಳಿಯಪಡಿಸಾವುದೇನೆಂದರೆ—

ಪ್ರತಿವಾದಿರಿಂದ ವಾದಿರಿಗೆ ಬರತಕ್ಕ ಕಳೆದ ಕ್ರೋಧಿ ಸಂವತ್ಸರದ ಮೂಲಗೇಣಿ ಗೇಣಿ ಬಾಕಿ ಬರವಾಡಿಕೊಳ್ಳುವದ ವಾದಿರು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 15—2—68ಕ್ಕೆ ಕನ್ಸಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳ ತಕ್ಕದ್ದು ಎಂದು ಸಾರಿ, ಈ ಮೂಲ್ಕ ತಿಳಿಯ ಪಡಿಸಿದೆ.

N. S. Parameshwariah
Advocate for Plff.

Date 24—1—68, Coondapoor

ನಿಮಗೂ ಗೊತ್ತಿರಲಿ

ನಮ್ಮ ರಾಷ್ಟ್ರಾಧ್ಯಕ್ಷರು

ಬರೆದವರು :
ಶ್ರೀ ಎಚ್. ಎಂ. ನಾರಾಯಣ ಭಟ್.

ಭಾರತದ 'ರಾಷ್ಟ್ರಪತಿ' ಯೆಂದರೇ ಪಕ್ಷದ ಅಥವಾ ವ್ಯಕ್ತಿಯ ಆಟದ ಗೊಂಬೆಯಲ್ಲ. ರಾಷ್ಟ್ರದ ಅತ್ಯುನ್ನತ ಆಡಳಿತಾಧಿಕಾರಿಯ ನೆಲೆಯಲ್ಲಿ ಮಹೋನ್ನತ ಹೊಣೆಗಾರಿಕೆಯೂ ಅಧಿಕಾರವೂ ಅವರಿಗಿದೆ. ಸಂವಿಧಾನದ ನಿಬಂಧನೆಗಳ ಪರಿಪಾಲನೆ ಹಾಗೂ ಸಂರಕ್ಷಣೆ ಮಾಡುವುದಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿಯೇ ಅಧಿಕಾರ ಗದ್ದುಗೆಯನ್ನೇರುವುದು.

ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯಗಳ ಶಾಸನ ಸಭೆ. ಸದಸ್ಯರು ರಾಷ್ಟ್ರಾಧ್ಯಕ್ಷರನ್ನು ಚುನಾಯಿಸುವರು, ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆಯನ್ವಯದ ಮತದಾನದ ಮೂಲಂ ಚುನಾವಣೆಯೊಡಗುತ್ತದೆ.

ರಾಷ್ಟ್ರಪತಿಯಾಗಿ ಚುನಾಯಿಸಲ್ಪಡುವ ವ್ಯಕ್ತಿಗೆ ೩೫ ವಯಸ್ಸು ತುಂಬಿರಬೇಕು; ಭಾರತದ ಪ್ರಜೆಯೂ ಮತದಾರನೂ ಆಗಿರಬೇಕು. ಚುನಾಯಿಸಲ್ಪಟ್ಟರೆ ಅಧಿಕಾರಾವಧಿ ಐದು ವರ್ಷ.

ಅಧಿಕಾರಿಗಳ ನೇಮಕ, ಪಾರ್ಲಿಮೆಂಟಿನ ಸಭೆ ಕರೆಯುವುದು, ಸಭೆಯನ್ನು ಮುಂದೂಡುವುದು, ನಿರ್ದೇಶಗಳನ್ನೋ ಸಂದೇಶಗಳನ್ನೋ ನೀಡುವುದು, ಸಭೆಯನ್ನೇ ವಿಸರ್ಜಿಸುವುದು. ಅಲ್ಲಿ ಭಾಷಣ ಮಾಡುವುದು. ಆರ್ಡಿನೆನ್ಸುಗಳನ್ನು ಘೋಷಿಸುವುದು, ಮಂಜೂರಾದ ಮಸೂದೆಗಳಿಗೆ ಅಂತಿಮ ಅಂಗೀಕಾರ ನೀಡುವುದು, ಅಪರಾಧಿಗಳಿಗೆ ಮಾಫಿ ನೀಡುವುದು, ಶಿಕ್ಷೆಯನ್ನು ರಿಯಾಯಿತಿ ಮಾಡುವುದು ಇತ್ಯಾದಿಗಳು ರಾಷ್ಟ್ರಾಧ್ಯಕ್ಷರ ಪ್ರಧಾನ ಅಧಿಕಾರಗಳು.

ಭಾರತದ ಸೈನ್ಯ ವಿಭಾಗಗಳ ಪರಮ ಶ್ರೇಷ್ಠಾಧಿಕಾರಿಯೂ ಪಂಚೋನ ತ ಆಡಳಿತಾಧಿಕಾರಿಯೂ!

ಸಂವಿಧಾನದ ನಿಯಮಗಳನ್ನು ಉಲ್ಲಂಘಿಸಿದರೆ ರಾಷ್ಟ್ರಾಧ್ಯಕ್ಷರನ್ನೂ ಆ ಸ್ಥಾನದಿಂದ ಬದಲಾಯಿಸಬಹುದು—ಈ ಅಧಿಕಾರ ಪಾರ್ಲಿಮೆಂಟಿಗೆ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ನೆಲೆ ನಿಲ್ಲಿಸುವುದಕ್ಕಾಗಿಯೇ ರಾಷ್ಟ್ರಾಧ್ಯಕ್ಷರಿಗೆ ಇಷ್ಟೆಲ್ಲಾ ಅಧಿಕಾರವಿರುವುದು.

ಯುದ್ಧ ಕಾಲದಲ್ಲೂ ಅಂತಃಕಲಹ ಕಾಲದಲ್ಲೂ ವಿಧಾನ ಸಭಾಸದರೋ ಗುಂಪುಗಳೋ ಪಾರ್ಲಿಮೆಂಟರಿ ಪದ್ಧತಿಗೆ ವ್ಯತಿರಿಕ್ತವಾಗಿ ಪ್ರವರ್ತಿಸುವಾಗಲೂ ವಿಧಾನ ಸಭೆಯ ಚಟುವಟಿಕೆ ಸ್ತಂಭನಾವಸ್ಥೆಗಿಳಿಯುವ ಸಂದರ್ಭದಲ್ಲೂ ರಾಷ್ಟ್ರದ ಯಾವ ಭಾಗದಲ್ಲಾದರೂ ಅರಾಜಕತೆ ವ್ಯಾಪಿಸಿದ್ದಾಗಿ ಕಂಡಾಗಲೂ ರಾಷ್ಟ್ರದ ಸರ್ವೋನ್ನತ ಅಧಿಕಾರಿಯ ನೆಲೆಯಲ್ಲಿ ಅಧ್ಯಕ್ಷರು ಪ್ರವೇಶಿಸಿ ಪಾರ್ಲಿಮೆಂಟರಿ ಪ್ರಜಾಪ್ರಜಾಪ್ರಭುತ್ವ ಪದ್ಧತಿಯನ್ನು ಸುವ್ಯವಸ್ಥಿತವನ್ನಾಗೊಳಿಸಬಹುದು.

ವಿಧಾನ ಸಭೆಯನ್ನು ರಾಷ್ಟ್ರಾಧ್ಯಕ್ಷರು ವಿಸರ್ಜಿಸುವುದು ಸಂವಿಧಾನಕ್ಕೆ ವಿರೋಧವೆಂಬವರೂ ಇದ್ದಾರೆ. ಆದರೆ, ಸಂವಿಧಾನದ ವ್ಯವಸ್ಥೆಗಳನ್ನನುಸರಿಸಿಯೇ ರಾಷ್ಟ್ರಾಧ್ಯಕ್ಷರು ಕೈಗೊಳ್ಳುವ ನಿರ್ಧಾರವು ಸಂವಿಧಾನಕ್ಕೆ ವಿರುದ್ಧವಾಗುವುದು ಹೇಗೆ?

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ತತ್ವಗಳನ್ವಯ ಹೇಗಾದರೂ ರಾಜ್ಯದ ಅಧಿಕಾರವನ್ನೇರಿ ಅಲ್ಲಿದ್ದುಕೊಂಡೇ ಎಲ್ಲಾ ಪ್ರಜಾಪ್ರಭುತ್ವ ತತ್ವಗಳನ್ನೂ ವಿರೋಧಿಸುವವರೂ ಇರಬಹುದು. ಆಗಲೂ ಜನಾಧಿಪತ್ಯವನ್ನು ರಕ್ಷಿಸುವ ಹೊಣೆಗಾರಿಕೆಯೂ ಅಧಿಕಾರವೂ ಅಧ್ಯಕ್ಷರದೇ ಆಗಿದೆ.

ರಾಷ್ಟ್ರಪತಿಯ ಪ್ರತಿನಿಧಿಗಳೂ ರಾಜ್ಯಗಳ ಪರಮೋನ್ನತ ಅಧಿಕಾರಿಗಳೂ ಆದ ರಾಜ್ಯಪಾಲರಿಗೂ ಇಂತಹದೇ ಅಧಿಕಾರಗಳಿವೆ. ಅವೆಲ್ಲಾ ಪ್ರಜಾಪ್ರಭುತ್ವದ ರಕ್ಷಣೆಯ ಹಿತದೃಷ್ಟಿಯಿಂದ ಮಾತ್ರ.

ಯಾವುದೇ ಅಧಿಕಾರದ ದುರುಪಯೋಗವಾಗುವ ಸಂಭವವಿಲ್ಲವೆಂಬ ಬರುವುದಿಲ್ಲ. ಈ ಬಗ್ಗೆಯೇ ಪಾರ್ಲಿಮೆಂಟಿಗೂ ವಿಶಿಷ್ಟಾಧಿಕಾರವಿರುವುದು.

ಮುಖ್ಯ ಮಂತ್ರಿಯೋ ವಿಧಾನ ಸಭಾ ಸದಸ್ಯರೋ ತಪ್ಪು ಮಾಡುವ ಸಂಭವವೂ ಇದೆ. ವಿಧಾನ ಸಭಾ ಸದಸ್ಯರ ಬಹುಮತದ ಬೆಂಬಲವಿಲ್ಲವೆಂದಾದ ಬಳಿಕವೂ ಮುಖ್ಯ ಮಂತ್ರಿಯು ಆ ಸ್ಥಾನಕ್ಕೇ ಅಂಟಿಕೊಳ್ಳುವುದು ಪ್ರಜಾಪ್ರಭುತ್ವ ತತ್ವಕ್ಕೆ ಭೂಷಣವಾಗದು. ಅಂತಹ ಸಂದರ್ಭದಲ್ಲಿ ರಾಜ್ಯಪಾಲರು ಪ್ರವೇಶಿಸ ಬೇಕಾದುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ರಾಜ್ಯಪಾಲರು ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಮಾತ್ರವೆಂದು ಬೇರೆ ಹೇಳಬೇಕಾಗಿಲ್ಲ.

ರಾಷ್ಟ್ರಾಧ್ಯಕ್ಷರಾಗಲೀ, ಪಾರ್ಲಿಮೆಂಟಾಗಲೀ, ರಾಜ್ಯ ವಿಧಾನ ಸಭೆಗಳಾಗಲೀ ಕೇಂದ್ರ—ರಾಜ್ಯ ಮಂತ್ರಿ ಸಂಪುಟಗಳಾಗಲೀ ತಪ್ಪು ಮಾಡಿದರೆ ಸೂಕ್ತ ಪರಿಹಾರ ವಿಧಿಗಳೂ ಸಂವಿಧಾನದಲ್ಲಿ ಅಡಕವಾಗಿವೆ.

ಅಹಂಕಾರವು ಅಲ್ಪ ಬುದ್ಧಿಯ ಲಕ್ಷಣ. ಉದ್ಯಮದಿಂದಲೇ ಕಾರ್ಯಸಿದ್ಧಿಯಲ್ಲದೆ. ಬರೇ ಬಯಕೆಗಳಿಂದಲ್ಲ.

ಒಳ್ಳೇತನದ ವೈಭವವನ್ನು ಮಹಾತ್ಮರೇ ಅರಿಯುವರು.

ಒಂದು ವಿವರಣೆ

"ಶಾಕಾಹಾರಿಗಳಿಗೂ ಮಾಂಸಾಹಾರಿಗಳಿಗೂ ಇರುವ ಪ್ರಮುಖ ವ್ಯತ್ಯಾಸವೇನು?"

"ಮನುಷ್ಯನ ಸಹಿತ ಎಲ್ಲಾ ಸಸ್ತನ ಪ್ರಾಣಿ ವರ್ಗಗಳೂ ಶಾಕಾಹಾರಿಗಳಾಗಿಯೇ ಹುಟ್ಟಿತ್ತವೆ...ಮತ್ತೆ ಮಾತ್ರ ಕೆಲವು ಮಾಂಸಾಹಾರಿಗಳಾಗುತ್ತವೆ.?

"ಹಾಗಂದರೆ?...."

"ಹುಟ್ಟಿ ಸ್ವಲ್ಪ ಸಮಯದವರೆಗೂ ಹಾಲನ್ನೇ ಕುಡಿಯುತ್ತವೆ. ಎಂದರ್ಥ."

ಂ ಂ ಂ

—ಎಚ್.ಎಂ. ವಿಜಯನಾರಾಯಣ, ಪೆರಾಲ.



ಆತ ಕಾರ್ಖಾನೆಯೊಂದರಲ್ಲಿ ಅಸಿಸ್ಟೆಂಟ್ ಫೋರ್‌ಮನ್. ಪ್ರಯೋಗ ಶಾಲೆಯ ಅಸಿಸ್ಟೆಂಟ್ ಆಗಿ ಆತ ಜೀವನೋಪಾಯವನ್ನು ಪ್ರಾರಂಭಿಸಿದ. ಕೇವಲ ಏಳು ವರ್ಷಗಳಲ್ಲಿ ಈ ಹುದ್ದೆಗೇರಿದ್ದಾನೆ. ಹೇಗೆ? ಆತನ ಮಾತಿನಲ್ಲೇ ಕೇಳೋಣ; "ಇತರರು ಕಷ್ಟದ ದುಡಿಮೆಯಿಂದ ಮಾಡಲಾರದೆ ಇರುವುದೇ ನನ್ನೂ ನಾನು ಸಾಧಿಸಿಲ್ಲ. ನಿಜ, ನಾನು ಯಾವುದೇ ಕೆಲಸವನ್ನಾದರೂ ಜವಾಬ್ದಾರಿಯ ಭಾವನೆಯೊಡನೆ ಮಾಡುತ್ತೇನೆ. ನನ್ನ ಕೆಲವು ಸಹೋದ್ಯೋಗಿಗಳು ತುಂಬ ಮುಕ್ಕಳನ್ನು ಹೊಂದಿದ್ದು, ಅವರನ್ನು ಸಾಕಲು ಪಡುತ್ತಿರುವ ಕಷ್ಟವನ್ನು ಕಂಡಿದ್ದೇನೆ. ನನಗೆ

ಬರೇ ಮುಕ್ಕಳು. ನನ್ನಿಂದ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಅವರನ್ನು ಮುಂದಕ್ಕೆ ತರುವುದು ನನ್ನ ಆಶೆಯೂ. ನಾನು ಸುಖಿ..."

ಆತ ಸುಖಿ—

ನೀವು?



ವಿವೇಚನೆ

ಹಿಂದಿ ಹಿರಣ್ಯಗರ್ಭನನ್ನು ಹಿಡಿಯಲು ಹವಣಿಸುವ ರಾಹು

ಬರೆದವರು: ಶ್ರೀ ತಿಮಪ-ಕರ.

ಅಂತಾರಾಷ್ಟ್ರೀಯ ಖ್ಯಾತಿವೆತ್ತಿರುವ ವ್ಯಕ್ತಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು. ಆದು ಮುಟ್ಟದ ಸೊಪ್ಪಿಲ್ಲವೆಂಬಂತೆ ಶ್ರೀ ರಾಜಾಜಿ ಮುಟ್ಟದ ವಿಷಯ ಇರುವದಿಲ್ಲ. ಇವರು ಬಹುಮುಖ ಪ್ರತಿಭೆಯುಳ್ಳವರು. ತಮಿಳುನಾಡಿಗೆ ಬಂದ ದರದೇಶದ ಪ್ರಮುಖರು ಇವರನ್ನು ಕಾಣದೆ ಹೋಗುವದಿಲ್ಲ. ಈಗಂತೂ ಇವರು ಎಂದೋ ಅರ.ವತ್ತು ದಾಟಿದ ವಯೋವೃದ್ಧರೇ ಇರುವರಾದರೂ ಬಾಲಕರಂತೆ ಚಟುವಟಿಕೆ ಉಳ್ಳವರಿದ್ದಾರೆ. ಇಂದಿನ ರಾಜಕೀಯ ರಾದ್ಧಾಂತಗಳ ಚಕ್ರವರ್ತಿಯವರು ಶ್ರೀ ರಾಜಗೋಪಾಲಾಚಾರಿ.

ಅವರ ಚಟುವಟಿಕೆ ಹಾಗೂ ತೀಕ್ಷ್ಣ ಬುದ್ಧಿವಂತಿಕೆಗೆ ಮೂರುಹೋದವರಲ್ಲಿ ಶ್ರೀ ಮೋಹನದಾಸ ಕರಂಚಂದ ಗಾಂಧೀಜೀಯವರೂ ಒಬ್ಬರು. ಶ್ರೀ ಗಾಂಧೀಜೀಯವರು ತನ್ನ ಮಗನನ್ನು ಶ್ರೀ ರಾಜಾಜಿಯವರ ಮಗಳಿಗೆ ಮದುವೆ ಮಾಡಿಕೊಟ್ಟಿದ್ದರು. ಶ್ರೀ ಮೋ. ಕ. ಗಾಂಧೀಜೀಯವರ ಮಮತೆಯ ಮಗನು ಇಷ್ಟೆ ಹಿಂದಿ ಪ್ರಚಾರಕ್ಕಾಗಿ ಬಂದಿದ್ದರು. ಆ ಪ್ರಚಾರ ಪ್ರವಾಹದಲ್ಲಿ ಶ್ರೀ ರಾಜಾಜಿಯವರ ಮುದ್ದಿನ ಮಗಳು ಕೊಚ್ಚಿಕೊಂಡು ಹೋದಳು. ಅವರೀರ್ವರ ಪ್ರಣಯದ ಫಲವಾಗಿ ಇಂದು ಇಲ್ಲಿ ನೈಜ ತಾಜಮಹಲ್ ಹಿಂದೀ ಪ್ರಚಾರ ಸಭೆ ಇದೆ. ಆದರಿಂದು ಶ್ರೀ ಮೋ. ಕ. ಗಾಂಧೀಜೀಯವರಾಗಲೀ ಅವರ ಮಗನಾಗಲೀ ನಮ್ಮೊಡನಿರುವದಿಲ್ಲ. ತಮಿಳು ನಾಡಿನ ಹಿಂದೀ ಲಕ್ಷ್ಮಿ ಇಂದು ವಿಧವೆ ಇದ್ದಾಳೆ. ನನ್ನ ದೇವನೇ ಹೋದಮೇಲೆ ದ್ವೈತಕವಾದರೂ ಏತಕ್ಕೆ? ಅಂತೆಯೇ ಭಾರತದ ರಾಜಕೀಯ ಬಾನಲ್ಲಿ ರಾರಾಜಿಸುತ್ತಿದ್ದ ರಾಜಾಜಿ ಇಂದು ರಾದ್ಧಾಂತವೆಬ್ಬಿಸುತ್ತಿರುವ ರಾಜಾಜಿಯಾಗಿ ಬಿಟ್ಟಿದ್ದಾರೆ. ಹಿರಿಮೆಯಿಂದ ನಿಂತಿದ್ದ ಹಿಂದೀ ಪ್ರಚಾರ ಸಭೆಯು ಹಿಡಿ ಜನರ ಪರಿದಾಟದಿಂದಾಗಿ ಸ್ತಬ್ಧವಾಗಿ ಬಿಟ್ಟಿದೆ.

ಶ್ರೀಮಾನ್ ಚ. ರಾ. ಯವರು ಗವರ್ನರ್ ಜನರಲ್, ಕೇಂದ್ರದ ಮಂತ್ರಿ, ರಾಜ್ಯದ ರಾಜ್ಯಪಾಲ, ಮುಖ್ಯಮಂತ್ರಿಯಾಗಿದ್ದು ಈಗ ಮಾಜಿಯಾಗಿ ಬಿಟ್ಟಿದ್ದಾರೆ. ಪದವಿ ಪಥದಲ್ಲಿ ಪತನ ದಿಸೆಯಲ್ಲಿ ಕಳಗಿಳಿದುಕೊಂಡು ಬಂದವರಿಂದು ವಾತಾವಳಕ್ಕಿಳಿದು ಬಿಟ್ಟಿದ್ದಾರೆ. ಭಾರತದ ರಾಜಕೀಯ ಬಾನಲ್ಲಿ ಧ್ರುವತಾರೆಯಂತಿದ್ದವರು ಇಂದು ಧೂಮಕೇತುವಾಗಿ ಬಿಟ್ಟಿದ್ದಾರೆ. ಭಾರತದ ಬಾನಲ್ಲಿ ಹಿಂದಿ ಹಿರಣ್ಯಗರ್ಭನನ್ನು ತರಿಸಿದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರಂದು ಹಿಂದಿ ಹಿರಣ್ಯ ಗರ್ಭನನ್ನು ಹಿಡಿಯಲು ಹವಣಿಸುತ್ತಿರುವ ರಾಹುವಾಗಿದ್ದಾರೆ.

ತನ್ನ ಮಗಳನ್ನು ಗಾಂಧೀಜಿಯವರ ಮಗನಿಗೆ ಕೊಟ್ಟಾಗ ಅಲ್ಲವಾದರೂ, ಅವರು ಪದವಿಯಲ್ಲಿ ಇದ್ದಾಗ ಅದೆಂದೂ ಹಿಂದಿಯನ್ನೆದುರಿಸಿರಲಿಲ್ಲ. ಅವರು ಮದ್ರಾಸಿನ ಮುಖ್ಯ ಮಂತ್ರಿಯಾಗಿದ್ದಾಗ ಇಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಲು ಏರ್ಪಾಡುಮಾಡಿಸಿದ್ದರು. ಅದನ್ನೆದುರಿಸಿದವರನ್ನು ಶಿಕ್ಷೆಸಿದ್ದರು. ಅಂತಹ ಹಿರಿಯ ವ್ಯಕ್ತಿಗೆ ಇಂದಿನ ಧಾವಿ ಬಡಿದಾಟದಿಂದ ಮನನೋಯುವದು ಸ್ವಾಭಾವಿಕವೇ ಇದೆ. ತಮಿಳುನಾಡಿನಲ್ಲಿ ಬ್ರಿಟಿಷರ ವಿಷ ಬೀಜ ಅದಾಗಲೇ ನಿಡವಾಗಿರುತ್ತದೆ. ಅದು ಜಸ್ಟೀಸ್ ಪಾರ್ಟಿಯ ರೂಪದಲ್ಲಿ ಹುಟ್ಟಿತು. ಅನಂತರ ಆರ್ಯ ದ್ರಾವಿಡ ಶುದ್ಧವಾದದ ಚಂಡ ಮಾರುತವನ್ನು ಬೀಸಿ ದ್ರಾವಿಡ ಕಳ್ಳಗಂ ಹುಟ್ಟಲು ಅದು ಕಾರಣವಾಯಿತು. ಆದರಿಂದ ದ್ರಾವಿಡ ಮುನ್ನೇಟ್ರ ಕಳ್ಳಗಂ ಹುಟ್ಟಿದೆ. ಇವರು ಹಿಂದಿಯೆಂದರೆ ಹಾರಿ ಬೀಳುವದರಲ್ಲೇ ನೂ ಆಶ್ಚರ್ಯವಿಲ್ಲ. ಗಾಂಧೀಜಿಯರಲ್ಲಂತೂ ಅಗುಂಪಿನವರು ತಮಿಳುನಾಡನ್ನು ತಲ್ಲಣಿಸಿಬಿಟ್ಟಿರು. ಆಗ ಅವರು ನಡೆಸಿರುವ ಅತ್ಯಾಚಾರ ಅಷ್ಟಿಷ್ಟಲ್ಲ. ಅಂದಿನಿಂದ ಒಂದಲ್ಲ ಇನ್ನೊಂದು ರೂಪದಲ್ಲವರು ಹಿಂದಿಯನ್ನು ಹೀಯಾಳಿಸುತ್ತಿದ್ದಾರೆ. ಈ ಸಲದ ವಿಶೇಷವೆಂದರೆ ಉತ್ತರದಲ್ಲೂ ಇದರ ವಿಷಗಾಳಿ ಹರಡಿರುತ್ತದೆ. ಉತ್ತರ ಪ್ರದೇಶದ ವಿದ್ಯಾರ್ಥಿಗಳು ನಾಶಕಾಂಕ ಕೃತ್ಯಗಳಲ್ಲಿ ತಾವು ತಮಿಳುನಾಡಿನ ಕರುಣಾಂಗಿತ ಹಿಂದಿಲ್ಲವೆಂಬುದನ್ನು ಜಾಹೀರು ಪಡಿಸುತ್ತಿದ್ದರು. ಇವೆಲ್ಲವನ್ನೂ ಕಂಡ ರಾಹು ಕಾರಣಿಯ ಹೃದಯ ವೇದನೆಗೊಳಗಾಗದಿದ್ದಿತೇ? ಆದುದರಿಂದಲೇ ಶ್ರೀ ರಾಜಾಜಿಯವರು ಲೋಕಸಭೆಯಲ್ಲಿ ಭಾಷಾ ತಿದ್ದುಪಡಿ ಮಸೂದೆಯು ಬಂದಾಗ ಭಾಷಾಪ್ರಶ್ನೆಗೆ (ಸಮಸ್ಯೆಗೆ) ರಜೆ ಕೊಡಬೇಕೆಂದು ಹೇಳಿರುವರು. ಈಗಿನ ಬಿಸಿ ವಾತಾವರಣ ತಣ್ಣಗಾಗುವ ತನಕ ಸಮಸ್ಯೆಗೆ ರಜೆಕೊಡಬೇಕು! ಹಿಂಸಾ ಕೃತ್ಯಗಳನ್ನು ಕಂಡು ಇವರಿಗೆ ಬಹಳ ವ್ಯಥೆಯಾಗಿರುತ್ತದೆ. ಇದೇ ವಿಷಯವನ್ನು ಅವರು ಪ್ರಚಲಿತ ಪ್ರಧಾನರಿಗೆ ತಿಳಿಸುತ್ತ ಸಂವಿಧಾನದ ಹದಿನೇಳನೇ ವಿಭಾಗವನ್ನು ತೆಗೆದುಹಾಕಲಾಗಿದೆಯೆಂದು ತಿಳಿಸಿದಲ್ಲಿ ಹಿಂದಿಗೆ ವಿರುದ್ಧವಾಗಿ ಗಲಾಟೆ ಮಾಡಲು ಅವಕಾಶ ಇಲ್ಲವೆಂದೂ ತಿಳಿಸಿರುವರು. ಹದಿನೇಳನೆ ಭಾಗದ ಪ್ರಕಾರ ೧೯೬೫ರ ನಂತರ ನಮ್ಮ ದೇಶದ ಸಂಪರ್ಕ ಭಾಷೆ ಹಿಂದಿ ಇದೆ. ಅದನ್ನು ತೆಗೆದುಹಾಕಿದಲ್ಲಿ ಹಿಂದಿ ಆಗ ವ್ಯಾವಹಾರಿಕ ಭಾಷೆಯಾಗಿರದೆ ಆಂಗ್ಲ ಭಾಷೆಯೇ ಇರುತ್ತದೆ. ಇಂತಹ ಅದೆಷ್ಟೋ ಸುಣ್ಣನೆಯ ನುಡಿಗಳನ್ನು ನೋಡಿರುವ ಶ್ರೀಮತಿ ಇಂದಿರಾಜೀಯ ವರು ಶ್ರೀ ರಾಜಾಜಿಯವರ ರಾಗಕ್ಕೆ ಒಲಿಯುವದುಂಟೇ? ಒಡನೆ ಅದಕ್ಕೆವರು ಉತ್ತರವನ್ನು ಕೊಡಲಿಲ್ಲ. ಶ್ರೀ ರಾಜಾಜಿಯವರಿಗೆ ಪತ್ರ ಬರೆದಲ್ಲಿ ಅವರು ಉತ್ತರ ಕೊಡುತ್ತಾರೆಯೇ? ಅವರಿಂದ ಮರು ಪತ್ರ ಪಡೆಯುವವನು "ಅದೃಷ್ಟ ಶಾಲಿ"ಯೇ ಇರಬೇಕು. ಆ ಪತ್ರವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಅನುಮತಿಯನ್ನು ಶ್ರೀ ರಾಜಾಜಿಯವರು ಶ್ರೀಮತಿ ಇಂದಿರಾ ಗಾಂಧೀಜೀಯವರ ಬಳಿ ಕೇಳಿದಾಗ, ಅವರ ಕಾರ್ಯದರ್ಶಿಯವರು ಕಾಯಿಲು ತಿಳಿಸಿದರು. ಅನಂತರ 'ಪ್ರಾ ಮಾಣಿಕ' ಇಂದಿರಾ ಗಾಂಧಿಯವರು ಪ್ರಿಯ ರಾಜಾಜಿಯವರಿಗೆ ಉದ್ದದ ಪತ್ರ ಬರೆದು, ಭಾಷಾ ಸಮಸ್ಯೆಯನ್ನು ಬಗೆಹರಿಸದೆ ಬದಿಗೆ ಸರಿಸುವುದು ಸರಿಯಲ್ಲವೆಂದೂ, ಸಂವಿಧಾನದ ಭಾಗವನ್ನು ಕಿತ್ತುಹಾಕುವದರಿಂದ ಇನ್ನು ಹೆಚ್ಚು ಕಷ್ಟ ಸಮಸ್ಯೆಗಳು ತಲೆದೋರುತ್ತವೆಯೆಂದೂ, ಆದರಿಂದ ತೀವ್ರಗಾಮಿ ಶಕ್ತಿಗಳಿಗೆ ಗಲಾಟೆ ಮಾಡಲು ಸಂದರ್ಭ ಸಿಗುತ್ತದೆಯೆಂದೂ, ನೂತನ ಮಸೂದೆಯಿಂದ ಹಿಂದಿಯೇತರ ರಾಜ್ಯದವರಿಗೆ ಪ್ರಯೋಜನ ಇದೆಯೆಂದೂ ಮರ್ಯಾದೆ ಸಹಿತ ತಿಳಿಸಿದರು. ಆದರೂ ಶ್ರೀ ರಾಜಾಜಿ ಸುಮ್ಮಗಾಗಲಿಲ್ಲ. ಪುನಃ ಶ್ರೀಮತಿ ಇಂದಿರಾಜೀಯವರಿಗೆ ಬರೆದರು. ಅದಕ್ಕೆ ಉತ್ತರವಾಗಿ ಶ್ರೀಮತಿ ಇಂದಿರಾಜೀಯವರು ಬರೆಯುತ್ತ ಸಂವಿಧಾನದ ಹದಿನೇಳನೆ ಭಾಗವನ್ನು ತೆಗೆದು ಹಾಕುವದರಿಂದ ಅದೆಂತು ಗಲಾಟೆ ಶಮನವಾಗುತ್ತದೆಂದು ಧೈರ್ಯದಿಂದ ಕೇಳಿದರಲ್ಲದೆ, ಪತ್ರವ್ಯವಹಾರಗಳ ಪ್ರಕಟಿಸಲೂ ಅನುಮತಿಕೊಟ್ಟರು. ಕೊನೆಯಲ್ಲಿ, ಸಂವಿಧಾನದ ಭಾಗವನ್ನು ತೆಗೆದುಹಾಕುವದರಿಂದ ಗಲಾಟೆ ನಿಂತು ಹೋಗುವದಿಲ್ಲವೆಂಬುದನ್ನು ಶ್ರೀ ರಾಜಾಜಿಯವರು ಒಪ್ಪಿಕೊಂಡರೂ ತನ್ನ ಹಟವನ್ನೇ ಸಾಧಿಸಲು ಹವಣಿಸಿದರು ಮತ್ತು ಭಾಷಾಂದನ್ನು ಅದೃಷ್ಟದ ತಲೆಯ ಮೇಲೆ ಹೊರಿಸಿಬಿಟ್ಟರು.

ಇಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಭಾಷಾ ತಿದ್ದುಪಡಿ ಮಸೂದೆಯನ್ನು ಭಾಷಾ ಸಮಸ್ಯೆಗೆ ಪರಿಹಾರ ರೂಪವಾಗಿ ತಂದಿರುವದಿಲ್ಲ. ಅವರು ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಉರುಳಿಸಲು ಪ್ರಯತ್ನಿಸಿರುವರು. ಭಾಷಾ ತಿದ್ದುಪಡಿ ಮಸೂದೆಗೆ ವಿರುದ್ಧವಾಗಿ ಹಿಂದಿ ರಾಜ್ಯದಲ್ಲೂ ಹಿಂದಿಯೇತರ ರಾಜ್ಯಗಳಲ್ಲೂ ಗಲಾಟೆ ನಡೆಯುತ್ತದೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಹಾಗೆ ಗಲಾಟೆ ನಡೆದಾಗ ನ್ಯಾಯಹಾಗೂ ಕಾನೂನು ಇಲ್ಲವೆಂಬ ನೆ

(ಹಿನ್ನೊಂದನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 208/67

ಕಲ್ಯಾಣಿ ಶೆಟ್ಟಿ —ವಾದಿ

ಮತ್ತು

ಪೊರಲ. C. ಸಾಲ್ಯಾನ ಚಂದು ಪೂಜಾರಿಯ ಮಗ, ಉಡುಪಿ ತಾಲೂಕು, ಪಾದೂರು ಗ್ರಾಮದ ಪಾದೂರುಗುತ್ತು ಬಳಿಯರುವವನು —ಪ್ರತಿವಾದಿ.

ಪ್ರತಿವಾದಿಯೊದ ನಿಮಗೆ ತಿಳಿಸುವುದೇನಂದ್ರೆ:—

ನೀವು ವಾದಿಯ ಬಳಿಗೆ ಬಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಅಸ್ತಿ ಬಾಬ್ತು 31—3—64 ಮತ್ತು 31—3—66ನೇ ವ್ಯಾಡೆಗಳಿಗೆ ಬರತಕ್ಕ ಬಾಲಗೇಣಿ ಗೇಣಿ ಬಡ್ಡಿ ಕೂಡಾ ರೂ 411—61ಕ್ಕೆ ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಸದ್ರಿ ದಾವೆಯು ತಾ. 7-2-1968ಕ್ಕೆ ನಿಮಗೆ ಆಕೇರ ನೋಟಿಸಿಗೆ ಇಟ್ಟಿರುತ್ತಾರೆ. ಆ ಕಾರಣ ನಿಮಗೆ ಅಕ್ಷೇಪ ಇದ್ದರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ದಾವೆ ತೀರ್ಮಾನವಾಗುವುದು. ಎಂತಹ ಈ ಕೋರ್ಟು ಹುಕುಂ ಪ್ರಕಾರ ನಿಮಗೆ ತಿಳಿಸಿಯದೆ.

Bola Raghurama Shetty,
B. A., L. L. B.,
Advocate for Plaintiff

Karkala, Date, 20—1—1968

ಸಿಂಡಿಕೇಟ್ ಬ್ಯಾಂಕ್
—ಮಹಿಳಾ ಶಾಖೆಗಳ ಪ್ರವರ್ತಕರು

ಮಹಿಳೆಯರಲ್ಲಿ ಬ್ಯಾಂಕಿಂಗ್ ಪರಿಜ್ಞಾನವನ್ನು ಬೆಳೆಸಿ ಉತ್ಪೇಜಿಸುವ ಗುರಿಯಿಂದ ಸಿಂಡಿಕೇಟ್ ಬ್ಯಾಂಕು 1960ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಮಹಿಳಾ ಶಾಖೆಯನ್ನು ತೊಡಗಿತು. ಅಂದಿನಿಂದ ಬ್ಯಾಂಕಿನ ಮಹಿಳಾ ಶಾಖೆಗಳು ಹೈದರಾಬಾದ್, ಮದರಾಸು, ದೆಹಲಿ, ಮೈಸೂರು, ತಿರುವನಂತಪುರ ಮೊದಲಾದ ಪ್ರಮುಖ ನಗರಗಳಿಗೆ ವಿಸ್ತರಿಸಿದುವು. ಜತೆಗೆ ದೇಶದ ದೊಡ್ಡ ಪಟ್ಟಣಗಳಲ್ಲಿ ಮಹಿಳೆಯರಿಂದ ನಡೆಸಲ್ಪಡುವ ಉಳಿತಾಯ ವಿಭಾಗಗಳನ್ನೂ ಈ ಬ್ಯಾಂಕು ತೆರೆದಿದೆ.

ಸಿಂಡಿಕೇಟ್ ಬ್ಯಾಂಕು ವ್ಯಾಪಕ ಪ್ರಮಾಣದಲ್ಲಿ ಮಹಿಳೆಯರಿಗೆ ತನ್ನಲ್ಲಿ ಉದ್ಯೋಗ ಕೊಡಿಸಿದ ದೇಶದ ಸರ್ವ ಪ್ರಥಮ ಬ್ಯಾಂಕಿಂಗ್ ಸಂಸ್ಥೆಯಾಗಿದೆ. ಜಾಗೂ ನಾಡಿನಲ್ಲಿ ಮಹಿಳಾ ಶಾಖೆಗಳನ್ನೂ, ಮಹಿಳೆಯರಿಂದ ನಡೆಸಲ್ಪಡುವ ಕಾರ್ಯ ವಿಭಾಗಗಳನ್ನೂ ತೆರೆದ ಪ್ರಪ್ರಥಮ ಸಂಸ್ಥೆಯೆನ್ನಲೂ ಬಹುದು.

ಹೊಸ ಹೊಸ ಸೇವಾಕ್ಷೇತ್ರಗಳನ್ನು ತನ್ನ ಕಾರ್ಯವರ್ತುಲದಲ್ಲಿ ತಂದು ನಾಡಿನ ಹೆಚ್ಚು ಹೆಚ್ಚು ಮಂದಿಯನ್ನು ತನ್ನ ಮಡಿಲಲ್ಲಿ ಸೇರಿಸಲು ಸಿಂಡಿಕೇಟ್ ಬ್ಯಾಂಕ್ ಆಶಿಸುತ್ತದೆ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ರಾಮಗಿರಿಯಲ್ಲಿನ

ಪ್ರಕೃತಿ-ಸೊಬಗು

ಬರೆದವರು: "ಮಲ್ಲಾರಿ"

'ಪೂಜಿಸಿದರೆ ದೇವರು ಲಾಲಿಸಿದರೆ ಮಕ್ಕಳು' ಎಂಬಂತೆ ಅನ ಭವಿಸಿದರೆ 'ಪ್ರಕೃತಿ-ಸೊಬಗು', ಕಾಯಿ ಹಣ್ಣಾಗ ಬೇಕಾದರೆ ಒಂದು ಕಾಲ ಬೇಕು. ಅದೇ ರೀತಿ ನಮ್ಮೂರು 'ರಾಮಗಿರಿ'ಯ ಸೌಂದರ್ಯವನ್ನು ಬೇರೆಯವರಿಗೆ ಹಂಚುವ ಭಾಗ್ಯ ಇಂದು ಕೈಗೂಡಿದೆ.

ಮುಂಜಾನೆ ಅರುಣ ದೇವ ತನ್ನ ಕನಕ ರಥವೇರಿ ರಾಮಗಿರಿಯನ್ನು ಏರುತ್ತಿರುವನು. ನೀಲ ಗಗನದಲ್ಲಿ ಬಗೆ ಬಗೆಯ ಚಿತ್ರ ಚಿತ್ರಿಸುತ್ತಿದ್ದಾನೆ. ಆ ದಿವ್ಯ ಕಲೆಗೆ, ಅನಂತ ಸೌಂದರ್ಯಕ್ಕೆ ಉಪಮೆ ಕೊಡಲು ಸಾಧ್ಯವೇ? ನಾನು ನಿಧಾನವಾಗಿ ಬೆಟ್ಟದ ಮೆಟ್ಟಲುಗಳನ್ನು ಹತ್ತುತ್ತಾ ಸಿಂಹಾವಲೋಕನ ಗೈದೆ. ಮೇಲೆ ಸೇವನಾತೀತವಾದ ಸ್ವಚ್ಛ ಸಾಹಸೋಪಮ ನೀಲ ಗಗನ; ವರ್ತುಲ ಗೊಮ್ಮಟೆ. ಸಿಂಹಂಕಾರದಲ್ಲಿ ಬಾಯಿ ತೆರೆದು ನಿಂತಿವೆ ಬಂಡೆಗಳು. ಕೈ ಬೀಸಿ ಕರೆಯುತಿವೆ ಮರಗಳು. ಸುತ್ತಲೂ ವಿಸ್ತಾರವಾದ ಬಯಲು, ಬಯಲಿಗೆ ಮರಗು ಹಸಿರ ತೋರಣ ಮಾಲೆ ಪಚ್ಚೆ ಹಸಿರು. ಹಸಿರ ಮಧ್ಯ ಮಿಂಚುತ್ತ ಕೆರೆ ಕಾಲುವೆಗಳು.

ಪ್ರಥಮಃ ಗಣಾನಾಥನಿಗೆ ನಮಿಸಿ ನಡೆದೆ ಮುಂದೆ. ಮೆಟ್ಟಲೇರುತ್ತಿದ್ದಂತೆ ಪಾದಿಕೆಗಳು ಕಾಣುತ್ತಿವೆ. ಅಷ್ಟರಿಂದ ಮುಂದೆ ನಡೆದರೆ ಅಮೃತಮಯ ಅಲೌಕಿಕವಾದ ಶಾಂತಿಯನ್ನು ನೀಡುವ ಶ್ರೀಕಾರಸಿದ್ಧ ಸ್ವಾಮಿಯ ದೇವಾಲಯ. ಗುಡಿಯನ್ನು ಪ್ರದಕ್ಷಿಣೆ ಮಾಡಿ ಒಳಗೆ ನಡೆದರೆ, ಅ ಪರಿಗೆ ಒಳಗಿನ ಪೂಜೆಯ ಗಂಭೀರವಾದ ಎಲ್ಲರ ಮನವನ್ನು ಸಳೆಯುವ ಘಂಟಾನಾದ. ತೀರ್ಥ ಪ್ರಸಾದ ವಿನಿಯೋಗ. ಬೆಟ್ಟ ಹಿಡಿದು ಬಂಡೆಯ ಮೇಲೆ ಬಂದು ಕುಳಿತೆ. ಅಷ್ಟರಲ್ಲಿ ಪ್ರತ್ಯಕ್ಷನಾದ ರಾಮನ ಭಂಟ ಹನುಮಂತ. ಹಿಂದ ರಾಮ—ಸೀತೆಯರು ವಾಸ ಮಾಡಿದ ಸ್ಥಳ ನಮ್ಮ ರಾಮಗಿರಿ. ರಾಮನಿಂದ ಮಾನವನ್ನು ದೂರ ಮಾಡಿದರ ರಾಮನೇನು ಉಳಿದಿ? ಫಲದ ಮೇಲ ಕಾಲಿಡದ ವೃಕ್ಷಗಳೂಡನ ಚಿಲ್ಲಾಟವಾಡುವ ಮಂಕ್ಯಾನ್ನು ಎದಗನಚಿಗೊಂಡು ಕೊಂಬೆ ಕೊಂಬಗ ಹಾರುವ ರಮಣೀಯ ದೃಶ್ಯ ಸುಂದರ ಅಮರ!

ಆ ಕೋಕಿಲೆ! ಅದು ಹೇಗ ತಾನೆ ಮರೆಯಲಿ? ಯಾರ ಬರವ ಕಾಯುತಿದಯೊ? ಕರಿಕಟ್ಟಿ ಕಂಬಿ, ಮಾರಗಿದ ಹಗುರ ನಲಿಯುವಾ ಈ ವೈಭವದಾತ ಹೊರು? ಎಂದೆನ್ನುತಿದೆ ಆ ಕೋಕಿಲೆ! ಕೂ...ಕೂ.... ಎನುತ.

ತಂಗಾಳಿ! ಬಿಸುವುದೆಲ್ಲಿಂದ, ಸೇರುವುದೆಲ್ಲಿಗ, ಸುತ್ತಲೂ ಬೀಸಿ! ಒಡಲನು ಸೋಕಿ, ಎಲೆಗಳನೊಡನಾಡಿ, ಹಿರಿಯರಗಳ ಹಾಯ್ದು, ಕಂಪ ಹೊತ್ತು ತಂದು ನಮ್ಮ ಎದೆಯ ಸ್ಪರ್ಶಿಸುವುದು, ನಮ್ಮ ಜಾಗೃತಗೊಳಿಸುವುದು, ಕಿವಿಯಲಿ ಪಿಸುಗುಡುವುದು ಆ ಗಾಳಿ!

ಕಾವ್ಯಧೇನು! ಎಷ್ಟು ಪ್ರೇಮಲ? ವತ್ಸಲ! ವೈಲಿಗಳಾಜಿಯಿಂದ ತನ್ನ ಕರುಗಾಗಿ ತುಂಬಿದಾ ಕಚ್ಚಲ ಹೊತ್ತು ಓಡೋಡಿ ಬರುವಾ ಸುಂದರ ಸನ್ನಿವೇಶ ಮತ್ತೂ ಸುಂದರ! ಪ್ರಕೃತಿಯಲ್ಲಿ ಬೆಳೆದು ನಾವು ಈಚೆಗೆ ಯಂತ್ರದಂತೆ ಪ್ರಕೃತಿಯಿಂದ ವಿಮುಖರಾಗುತ್ತಿದ್ದೇವೆ ನಮ್ಮ ಎದುರಿಗ ಎಲ್ಲೆಲ್ಲೂ ಸೌಗಸನ ಆಟವ ಆಡಿ ಜೆಲ್ಲಿದ್ದಾನೆ ಪ್ರಕೃತಿ. ಅವುಗಳನ್ನೂ ನಾವು ಕಣ್ಣಿಟ್ಟಿ ನೋಡದೆ, ಶತ್ರುವಾದಾಗೂ ಕ್ಷಣಿಕವಾದ ಪ್ರಾಪಂಚಿಕ ಪ್ರಯೋಜನಕ್ಕಾಗಿ ಹಾತ ರಿಯುತ್ತಿದ್ದೇವೆ. ನಿಂತಲ್ಲೇ ಸುತ್ತಲೂ ನನ್ನಪೂಲಿ. ಎಷ್ಟದ ಯಾ ಸ್ಪರ್ಶ ಸೊಬಗು. ಎಂದ್ದೂ ಗಮನಿಸದ ಊನ ವಂಧ್ಯ ಗಲಭಗಳ್ಲಿ ತಿಳಿಗುವುದು, ಅರಬೆತ್ತಲೆಯಾಗಿ ತಿಳಿಗುವ ತರಳಿಯಂ ಓಡಿಗೆ ನೋಡುವುದು, ಬಸ್ಸು ಲಾರಿಗಳ ಧೂಳ-ಸಂತ!

ಇವನ್ನ ಮರೆತು ಫಿತ್ತ ನೂತನ ಸುಂದರ, ಅಮರ ಪ್ರಕೃತಿ—ಸೊಬಗನ್ನ ಆನಂದಿಸಿ ತಣಿಯಿರಿ.

ಪ್ರಕೃತಿ ಸೊಬಗೇ ಅಮೃತ ಸೊಬಗು!

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 26-4-1966.

ಧರ್ಮ ಜ್ಯೋತಿ ನಂದಿತು!

'ದಾಸಪ್ರಕಾಶ'ದ ಒಡೆಯರಾಗಿದ್ದ ಜನಪ್ರೀಯರಾದ ಶ್ರೀ ಕುತ್ತೆತ್ತೂರು ಸೀತಾರಾಮರಾಯರು ತಾ. 15-1-1968 ರಂದು ಅಪರಾಹ್ನ ಶಾಸು 4ಕ್ಕೆ (ಮದ್ರಾಸದ) ಪರಶುವಾಕದಲ್ಲಿರುವ ಸ್ವಗೃಹ 'ದಾಸಪ್ರಸಾದ'ದಲ್ಲಿ ಶ್ರೀಕೃಷ್ಣ ಚರಣಾರವಿಂದವನ್ನು ಸೇರಿದರೆಂದು ತಿಳಿಸಲು ತುಂಬ ವಿಷಾದವೆನಿಸುತ್ತದೆ.

ಶ್ರೀ ಸೀತಾರಾಮರಾಯರು ಭಕ್ತಿ ಶಿರೋಮಣಿ ಶ್ರೀ ಗೋವಿಂದದಾಸ ದಂಪತಿಗಳ ತೃತೀಯ ಪುತ್ರರಾಗಿ 9-4-1899 ರಂದು ಜನಿಸಿದರು. ತಮ್ಮ ತಾರುಣ್ಯದಲ್ಲಿ ಮದ್ರಾಸಕ್ಕೆ ತೆರಳಿ, ಅಲ್ಲಿ ಸ್ವಪರಿಶ್ರಮದಿಂದಲೇ ಹೋಟೇಲು ಉದ್ದಿಮೆಯಲ್ಲಿ ಅಗ್ರಗಾಮಿಯಾಗಿ ಅಗ್ರಣ್ಯ ಸ್ಥಾನವನ್ನು ಗಳಿಸಿದವರು. ಇಂದು 'ದಾಸಪ್ರಕಾಶ' ಗ್ರೂಪ್ ಹೋಟೇಲುಗಳು ಗಳಿಸಿರುವ ಸ್ಥಾನ-ಮಾನಗಳಾ ಶ್ರೀ ಸೀತಾರಾಮರಾಯರ ದೆವರಿನ ಬೆಲೆಯೆಂದರೂ ತಪ್ಪಲ್ಲ.

ಶ್ರೀ ಸೀತಾರಾಮರಾಯರದು ಧಾರ್ಮಿಕ ಮನೋವೃತ್ತಿ. ತಮ್ಮ ಊರು ಕುತ್ತೆತ್ತೂರು, ಅರಾಧ್ಯದೇವ ಶ್ರೀಕೃಷ್ಣನ ಅವಾಸಭೂಮಿ ಉಡಿಪಿ. ತಮ್ಮ ಜಿಲ್ಲೆ ದಕ್ಷಿಣ ಕನ್ನಡ. ಮದ್ರಾಸ ನಗರಗಳಲ್ಲಿ ಅವರು ತಮ್ಮ ಸಂಪತ್ತಿನ ಪ್ರಯೋಜನವನ್ನು ಬಹಳಷ್ಟು ಮಾಡಿದರು. ಧಾರ್ಮಿಕ ರಂಗದಲ್ಲಿ ಹಲವಾರು ಕಾರ್ಯಕ್ರಮಗಳಿಗೆ ಮಾನವ ದುರ್ಲಭ ಶ್ರದ್ಧಾಬುದ್ಧಿಯಿಂದ ದಾನ-ಧರ್ಮ ಮಾಡುತಿದ್ದ ಇವರು ಶಿಕ್ಷಣ ಸಂಸ್ಥೆಗಳಿಗೂ ಮುಕ್ತ ಹಸ್ತದಿಂದ ಸಹಾಯ ಮಾಡುತಿದ್ದರು. ಅಶ್ಯಂತ ಉದಾರದಿಳೂ, ದೈವ-ಪಿತೃ-ಗುರು ಭಕ್ತರೂ ಆದ ಇವರು ಇವರೆಲ್ಲರ ಸೇವೆಗೆ ಸದಾ ಸಿದ್ಧರಿದ್ದರು. ತನ್ನ ಮನೆಯಲ್ಲೂ ಪ್ರತಿನಿತ್ಯವೂ ಪೂಜೆ—ಆರಾಧನೆಗಳನ್ನು ಪಡೆಸುತ್ತಿದ್ದರಲ್ಲದೆ, ವಿಶೇಷ ದಿನಗಳಲ್ಲಿ ಅನ್ನದಾನಾದಿಗಳನ್ನೂ ಮಾಡುತಿದ್ದರು. ಮದ್ರಾಸದಲ್ಲೂ ಮಾಧ್ವತತ್ವ ಪ್ರಚಾರದ ಬಗ್ಗೆ ಅವಿಶ್ರಾಂತವಾಗಿ ದುಡಿಯುತಿದ್ದರು. ಈ ಬಗೆಯ ಸೇವೆಯಿಂದಲೇ ಧರ್ಮಭೂಷಣ, ಶ್ರೀಕೃಷ್ಣ ಸೇವಾ ಧುರೀಣ, ಯತಿವಿದ್ವಜ್ಜನ ಪ್ರಿಯ, ಪಿತೃ ಭಕ್ತ, ಕರಾಡಯಾ, ಹರಿಭಕ್ತ, ಶಿಖಾಮಣಿ, ಸಮಾಜ ಭೂಷಣ, ಧರ್ಮಪ್ರಸನ್ನ ಇತ್ಯಾದಿ ಬಿರುದುಗಳನ್ನು ಗಳಿಸಿದ್ದಾರೆ. ಇತ್ತೀಚೆಗೆ ತಮ್ಮ ಶತಾಯುಷಿ ಮಾತೃಶ್ರೀ ಮತ್ತ ಪರಿವಾರದೊಡನೆ ಬದರೀ ಯಾತ್ರೆಯನ್ನು ಪೂರೈಸಿ ಬಂದಿದ್ದಾರೆ.

ದಿ! ಸೀತಾರಾಮರಾಯರದು ಸಫಲ ಸಾರ್ಥಕ ಜೀವನ. ಅವರೊಂದು ಧರ್ಮ ಜ್ಯೋತಿ. ಅವರ ನಿಧನದಿಂದ ಯಶಸ್ವೀ ಆತ್ಮವೊಂದು ಶ್ರೀಕೃಷ್ಣ ಪರಮಾತ್ಮನಲ್ಲಿ ಲೀನವಾಯಿತು. ಅವರ ಅಭಾವದಿಂದ ಸಮಾಜದ ಹಲವಾರು ರಂಗಗಳು ನೋಯುವುದು ಸಹಜ. ವಿಧಿಲೀಲೆಯನ್ನು ಎದುರಿಸುವ ಶಕ್ತಿ ಮಾನವನಿಗಿಲ್ಲ. ಆದುದರಿಂದ, ವಿಧಿಯ ಈ ವಿಕಟಾಟ್ಟಹಾಸದ ಹೃದಯ ಭೇದಿದುಃಖವನ್ನು ಸಹಿಸುವಶಕ್ತಿಯನ್ನು ದಿವಂಗತರ ವೃದ್ಧ ಮಾತೆಯರೂ, ಕುಟುಂಬದವರಿಗೂ, ಹಿತಚಿಂತಿಗರಾದ ನಮಗೆಲ್ಲರಿಗೂ ನೀಡುವಂತೆ ಶ್ರೀಕೃಷ್ಣನಲ್ಲಿ ಭಕ್ತಿಪೂರಸ್ಸರವಾಗಿ ಪ್ರಾರ್ಥಿಸೋಣ. ಮೃತರಾತ್ಮಕ್ಕೆ ಚಿರಶಾಂತಿ ಕೋರೋಣ.

ಮಿಲಾಗ್ರಿಸ್ ಕಾಲೇಜ್

ವಾರ್ಷಿಕೋತ್ಸವ

ಕಲ್ಯಾಣಪುರ, ಮಿಲಾಗ್ರಿಸ್ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು, ತಾ-14—1—1968ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅರಂಭದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಪ್ರಾರ್ಥನೆ ಮತ್ತು ಸ್ವಾಗತ ಗೀತೆಯನ್ನು ಹಾಡಿದರು. ತದನಂತರ ಪ್ರಿನ್ಸಿಪಾಲರು ಅಧ್ಯಕ್ಷರಿಗೂ ಮತ್ತು ಮುಖ್ಯ ಅತಿಥಿಗಳಿಗೂ ಹಾರಗಳನ್ನು ಅರ್ಪಿಸಿದರು. ಬಳಿಕ ಅಧ್ಯಕ್ಷರಿಗೂ ಅತಿಥಿಗಳಿಗೂ ಸ್ವಾಗತಗಳನ್ನು ಬಯಸಲಾಯಿತು. ಶ್ರೀ ರಾಜಗೋಪಾಲರು ಸಂದೇಶಗಳನ್ನು ಓದಿದರು. ಪ್ರಿನ್ಸಿಪಾಲ್ ಶ್ರೀ ಗುರುರಾಜ ಭಟ್ಟರು ಕಾಲೇಜಿನ ಪ್ರಥಮ ವಾರ್ಷಿಕ ವರದಿಯನ್ನೂ ಓದಿದರು. ಎಂ. ಜಿ. ಯು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸದಾಶಿವ ಭಟ್ಟರು ಬಹುಮಾನ ವಿತರಣೆ ಗೈದರು. ಅಧ್ಯಕ್ಷರು ಮಾತನಾಡುತ್ತಾ ಕಾಲೇಜಿನ ತೀಕ್ಷ್ಣ ಪ್ರಗತಿ ಮತ್ತು ಮುನ್ನಡೆಯಂಬಾಶ್ಚರ್ಯವನ್ನೂ ಅಹ್ಲಾದವನ್ನೂ ಉಂಟು ಮಾಡುತ್ತದೆ ಎಂದರು. ಕಾಲೇಜಿನ ಶ್ರೇಯೋಭಿವೃದ್ಧಿಗಾಗಿ [illegible] ಕೊನೆಯಲ್ಲಿ ಫಾದರ್ ಗೊನ್ಸಾಲ್ವಿಸ್ ಅವರು ಧನ್ಯವಾದಗಳನ್ನು ಅರ್ಪಿಸಿದರು. ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಮೂಹಂಬಧ ಕೊನೆಯಲ್ಲಿ ಭರತನಾಟ್ಯ, ನಾಟಕ ಮೊದಲಾದ ವಿನೋದಾವಳಿಗಳನ್ನು ಪ್ರದರ್ಶಿಸಿದರು.

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ಮಲೆನಾಡ ಪ್ರದೇಶದಲ್ಲಿ
ಕಳೆದ ಕಾಲು ಶತಮಾನಕ್ಕಿಂತಲೂ ಹೆಚ್ಚಿನ ಕಾಲ
ಹೋಟಲು ಉದ್ಯಮದ ಮೂಲಕ
ಸೇವೆಯನ್ನು ಕೈಕೊಂಡು ಬಂದಿರುವ—

ಮನೋಹರ ಕೆಫೆ

(ನೆಲ್ಲಿಪ್ರಕಾಶ್ ಬಿಲ್ಡಿಂಗ್)
ಉಪಹಾರ, ಊಟ ಮತ್ತು ವಸತಿ ಗೃಹ
ನೆಹ್ರು ರೋಡ್ — ಶಿವಮೊಗ್ಗಾ
ಮೈಸೂರು ರಾಜ್ಯ

ಇತ್ತೀಚೆಗೆ ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿದ
ಹಾಗೂ ಪ್ರಜಾರಾಜ್ಯ ದಿನದ ಶುಭ ಸಂದರ್ಭದಲ್ಲಿ
ಅಸಂಖ್ಯಾತ ಗ್ರಾಹಕರಿಗೆ, ಹಿತೈಷಿಗಳಿಗೆ
ಇನ್ನೂ ಮಿಗಿಲಾದ ಸೇವೆಯನ್ನು ನೀಡುವ ಆಶ್ವಾಸನೆಯನ್ನು ನೀಡುತ್ತದೆ.
ಪರಿಶುದ್ಧ, ಪ್ರಾಮಾಣಿಕ ಸೇವೆಯೇ ನಮ್ಮ ಧ್ಯೇಯ.

ಮ್ಯಾನೇಜರು: ಪಿ. ಕೆ. ಜನಾರ್ಧನ ನೆಲ್ಲಿ.

NELLI PRAKASH
MANOHAR CAFE
RESTAURANT, BOARDING & LODGING
NEHRU ROAD : SHIMOGA
PROP: P. K. JANARDHANA NELLI

ಕುಮಾರ ಪರ್ವತದ ನೆರಳಿನ

ಧರ್ಮ—ಸಂಸ್ಕೃತಿ, ಪ್ರಾಚೀನತೆ—ಅರ್ವಾಚೀನತೆ
ಪರಮ ಪುನೀತ ಕ್ಷೇ

ಪರಶುರಾಮ ಸೃಷ್ಟಿಯಲ್ಲಿ ಸಪ್ತ ಪುಣ್ಯ ಕ್ಷೇತ್ರಗಳು ಪ್ರಸಿದ್ಧ. ಇವುಗಳಲ್ಲಿ ಶ್ರೀ ಸುಬ್ರಹ್ಮಣ್ಯ ಅಗ್ರಮಾನ್ಯ. ಇದು ಭಕ್ತ ಜನರನ್ನು ಆಕರ್ಷಿಸುವ ಸುಂದರ ಪವಿತ್ರ ಕ್ಷೇತ್ರ—ಭಕ್ತರಕ್ಷಕ ಕಾರ್ತಿಕೇಯ ಕೃಪಾ ಛಾಯೆಯಿಂದ ನಿತ್ಯಪೂತವೆನಿಸಿದ ದಿವ್ಯ ಭವ್ಯ ತೀರ್ಥ ಕ್ಷೇತ್ರ.

ಪಡುಗಡಲ ತೀರದ ಅಗಲ ಕಿರಿದಾದ ಜಿಲ್ಲೆ ದಕ್ಷಿಣ ಕನ್ನಡ—ಇದಕ್ಕೆ ಹಳೆಯ ಹೆಸರು ತುಳುನಾಡು- ಪುತ್ತೂರು ತಾಲೂಕಿನಿಂದ ಮೂಡಲಿಗೆ (ಪುತ್ತೂರು—ದರ್ಬೆ—ಸುಬ್ರಹ್ಮಣ್ಯ. ಪುತ್ತೂರು—ಬೆಳ್ಳಾರೆ—ಸುಬ್ರಹ್ಮಣ್ಯ) ಪಡುವಲಗಟ್ಟಗಳ ಬುಡದಲ್ಲಿ ರಾರಾಜಿಸುತ್ತಿರುವ ಕ್ಷೇತ್ರ ಸುಬ್ರಹ್ಮಣ್ಯ.

ಜಿಲ್ಲೆಯ ರಾಜಧಾನಿ ಮಂಗಳೂರಿನಿಂದ ಪುತ್ತೂರಿಗಾಗಿಯೂ ಮಾಣಿಗಾಗಿಯೂ—ಸುಬ್ರಹ್ಮಣ್ಯವನ್ನು ತಲಪಬಹುದು. ಗಟ್ಟದ ಮೇಲಿನವರು ಸಕಲೇಶಪುರಕ್ಕಾಗಿಯೂ ಬರಬಹುದು. ಮಡಿಕೇರಿಯಿಂದಲೂ ನೇರಾಗಿ ಬರಲು ಬೇಕಾದ ಸಾರಿಗೆ ಅನುಕೂಲವಿದೆ.

ಈಯೆಲ್ಲ ಮಾರ್ಗಗಳಿಂದಲೂ ಪ್ರತಿನಿತ್ಯ ನೂರಾರು ಭಕ್ತ ಮಹಾಶಯರು ಶ್ರೀ ಕ್ಷೇತ್ರವನ್ನು ಸಂದರ್ಶಿಸುತ್ತಾರೆ. ಶ್ರೀ ಸುಬ್ರಹ್ಮಣ್ಯನ ದರ್ಶನ ಲಾಭ ಪಡೆಯುತ್ತಾರೆ; ತಮ್ಮ ಜನ್ಮ ಸಾರ್ಥಕವಾಯಿತೆಂದು ಸಂತೋಷಗೊಳ್ಳುತ್ತಾರೆ. ದೇಗುಲದ ಕಡೆಯಿಂದ ಒದಗುವ ಆದರೋಪಚಾರದಿಂದ ಸಂತೃಪ್ತರಾಗುತ್ತಾರೆ. ಇದಕ್ಕೇನು ಕಾರಣ?

ರೋಚಕ ಇತಿಹಾಸ

ಬಹಳ ಹಿಂದಿನ ಕಥೆ. ಕುಕ್ಕೆ ಸುಬ್ರಹ್ಮಣ್ಯವೆಂದು ಈ ಕ್ಷೇತ್ರಕ್ಕೆ ಅಂದಿನ ಹೆಸರು. ಸರ್ಪರಾಜನಾದ ವಾಸುಕಿಗೆ ಒಂದು ಬಾರಿ ಗರುಡ ಬಾಧೆಯುಂಟಾಯಿತು. ಅದರಿಂದ ವಿಮೋಚನೆ ಹೊಂದಲು ವಾಸುಕಿಯು ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಶಿವನನ್ನು ಕುರಿತು ತಪಸ್ಸು ಮಾಡಿದನು. ತಪಸ್ಸಿನಿಂದ ಮೆಚ್ಚಿದ ಮಹಾದೇವನು ಪ್ರತ್ಯಕ್ಷನಾಗಿ ತಾರಕಾಸುರನ ವಧೆಯನಂತರ ಶ್ರೀ ಕುಮಾರ ಸ್ವಾಮಿಯು ಇಲ್ಲಿಗೆ ಆಗಮಿಸುವನೆಂದೂ ಆತನ ಕಲಾಂಶಭೂತನಾಗಿ ವಾಸುಕಿಯು ಲೋಕ ಪೂಜ್ಯನಾಗುವನೆಂದೂ ಅನುಗ್ರಹಿಸಿದನು. ಶಿವನ ಪುತ್ರ ಸೇನಾಧಿ ಕುಮಾರ ಸ್ವಾಮಿ ಕುಮಾರ ಪರ್ವತದಲ್ಲಿ ಸೇನಾಧಿಪತ್ಯವನ್ನು ಪಡೆದು ಲೋಕಭಕ್ಷಕ ತಾರಕಾಸುರನನ್ನು ಧ್ವಂಸಮಾಡಿದ ಬಳಿಕ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಒಂದಂಶದಿಂದ ವಾಸುಕಿಯಲ್ಲಿದ್ದುಕೊಂಡು ನೆಲಸಿದನು. ಕ್ಷೇತ್ರ ಪುರಾಣದಲ್ಲಿ ಈ ಕಥೆಯು ವಿಸ್ತೃತವಾಗಿದ್ದು ಅದನ್ನು ಓದುವಾಗ ಮನಸ್ಸು ರಸರೋಮಾಂಚನವಾಗುತ್ತದೆ.

ಪ್ರಭಾವಶಾಲೀ ಕ್ಷೇತ್ರ

ಶ್ರೀ ಸುಬ್ರಹ್ಮಣ್ಯವೆಂಬ ಹೆಸರು ಸುಬ್ರಹ್ಮಣ್ಯನ ಆವಾಸದಿಂದಾಗಿ ಮುಂದೆ ಪ್ರಸಿದ್ಧವಾಯಿತು. ಕುಮಾರಸ್ವಾಮಿಯ ಸೇನಾಧ್ಯಭಿಷೇಕದ ನೀರು ಮೇಲಿನ ಬೆಟ್ಟದಿಂದ ಇಳಿದು ಎರಡು ಕವಲಾಗಿ ಹರಿದು ಶ್ರೀ ಕ್ಷೇತ್ರವನ್ನು ಆಲಂಗಿಸಿ ಮತ್ತೆ ಒಂದಾಗುತ್ತದೆ. ಈ ಕುಮಾರ ಧಾರೆಯು ಅತ್ಯಂತ ಪಾವನ ತೀರ್ಥವೆನಿಸಿದೆ. ಶ್ರೀ ಸುಬ್ರಹ್ಮಣ್ಯನ ಪ್ರಸಾದವು ಎಲ್ಲ ವಿಧದ ಸರ್ಪದೋಷ, ವಿಷಬಾಧೆ, ಅಪಸ್ಮಾರ, ಚರ್ಮವ್ಯಾಧಿ ಹಾಗೂ ಇನ್ನೂ ಹಲವಾರು ರೋಗಗಳಿಗೆ ಸಿದ್ಧೌಷಧವೆಂಬುದು ಅನುಭವ ವೇದ್ಯವಾಗಿದೆ. ಭಾರ್ಗವ ಪರಶುರಾಮನು ಇಲ್ಲಿನ ಧಾರಾತೀರ್ಥದಲ್ಲಿ ಮಿಂದು ಮಾತೃಹತ್ಯಾ ಪಾಪದಿಂದ ವಿಮೋಚನೆ ಪಡೆದನು. ಅಸಿಕ ವಧಾ ಮುಖಿಯ ಶಾಪದಿಂದ ರಾಕ್ಷಸಿಯಾಗಿ ಹುಟ್ಟಿದ ಅದಿತಿಯು ಇದೇ ತೀರ್ಥದಲ್ಲಿ ಮಿಂದು ಶ್ರೀ ಸುಬ್ರಹ್ಮಣ್ಯನ ದರ್ಶನದಿಂದ ಪೂರ್ವ ರೂಪವನ್ನು ಪಡೆದಳು. ಇಲ್ಲಿನ ಮೂಲ ವ್ಯಕ್ತಿಕ ಚರ್ಮರೋಗ ನಿವಾರಕವಾಗಿದೆ—ಈ ನಂಬಿಕೆ ಎಂದೂ ಸುಳ್ಳಾಗಿಲ್ಲ.

ತನ್ನನ್ನು ನಂಬಿದವರಿಗೆ ತನ್ನ ತಾನೇ ಒಪ್ಪಿಸಿ ಬಿಡುವ ಉದಾರ ಹೃದಯ ಭಕ್ತ ಕುಟುಂಬಿ ಭಕ್ತವಂತ. ತನ್ನ ಭಕ್ತರ ನಂಬಿಕೆಯನ್ನು ಆತನೆಂದೂ ಸುಳ್ಳಾಗಗೊಡುವುದಿಲ್ಲ.

ಅತ್ಯಪೂರ್ವ ಸೇವೆ —ಮಡೆಸ್ನಾನ

ಶ್ರೀ ಸುಬ್ರಹ್ಮಣ್ಯದ ಮಡೆಸ್ನಾನವು ಒಂದು ಅದ್ಭುತ ಸೇವೆ—ಹೃದಯದಾಳದಿಂದ ಭಕ್ತಿ ಹೊರಹೊಮ್ಮಿ ಬರುವ ಸನ್ನಿವೇಶ. ಧಾರಾತೀರ್ಥದಲ್ಲಿ ಮಿಂದು 'ಅನ್ನದಾತ ಶ್ರೀ ಸುಬ್ರಹ್ಮಣ್ಯೇಶ್ವರನ ಪಾದಕ್ಕೆ "ಗೋವಿಂದಾ...." ಎಂದು ದೇವರ ಪವಿತ್ರ ನಾಮದ ಪಾವನ ಸ್ಮರಣೆ ಮಾಡುತ್ತ "ಮಡೆಸ್ನಾನ"ಮಾಡುತ್ತಾರೆ. ಈ ಎಂಜಲೆಲೆಯ ಮೇಲೆ ಹೊರಳಾಡುತ್ತ ಸೇವೆಯನ್ನು ಸಲ್ಲಿಸಿಯೇ ಭಗವಾನ್ ಕೃಷ್ಣನ ಮಗ ಸಾಂಬನು ತನ್ನ ಕುಷ್ಟ ರೋಗದಿಂದ ಪಾರಾದನು. 'ಮಡೆ ಸ್ನಾನ' ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಹಿರಿಯ ಸೇವೆಗಳಲ್ಲಿ ಒಂದಾಗಿದೆ.



ಬ್ರಹ್ಮ ರಥೋತ್ಸವ

ನಿತ್ಯೋತ್ಸವ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ವರ್ಷವಿಡಿ ಒಂದಲ್ಲಪೊಂದು ಉತ್ಸವ ನಡೆಯುತ್ತಿರುತ್ತದೆ. ಶ್ರೀ ಸುಬ್ರಹ್ಮಣ್ಯ ಷಷ್ಠಿಯು ಇಲ್ಲಿನ ವಾರ್ಷಿಕೋತ್ಸವ ನಡೆಯುವಕಾಲ. ಈ ಕಾಲಾವಧಿ ಜಾತ್ರೆಯು ಮಾಘ ಶುದ್ಧದಲ್ಲಿ ಜರಗುತ್ತದೆ. ಅತ್ಯಂತ ಪ್ರೇಕ್ಷಣೀಯವಾದ ಈ ಜಾತ್ರೆಗೆ ಅಸುಪಾಸಿನ ಹಳ್ಳಿಗಳಿಂದ ನೂರಾರು ಭಕ್ತರು ಮಾತ್ರವಲ್ಲ; ದೂರ—ದೂರದಿಂದಲೂ ಭಕ್ತವೃಂದ ಕಿಕ್ಕಿರಿದು ಬರುತ್ತದೆ. ವಿಶಾಲವಾದ ತೇರುಬೀದಿ ಜನರ ನೆರವಿಯಿಂದ ತುಂಬಿ ತುಳುಕುತ್ತದೆ. ಉತ್ಸವಗಳಲ್ಲಿಯೂ ನಾನಾ ಪ್ರಕಾರವಿದೆ. ಅಲಂಕರಿಸಿದ ರಥಗಳು, ಶೇಷವಾಹನ, ಅಶ್ವವಾಹನ, ಮಯೂರವಾಹನ, ಪುಷ್ಪಂಥ, ಛಂಡಿ, ಪಾಲಕಿ ಮತ್ತು ಡೋಲಾ-ಹೀಗೆ ನಾನಾ ವಾಹನನಾಗಿ ಸುಬ್ರಹ್ಮಣ್ಯನ ಸಂದರ್ಶನ ಲಾಭ ಪಡೆಯುವ ಏಕಮಾತ್ರ ಕ್ಷೇತ್ರ ಶ್ರೀ ಸುಬ್ರಹ್ಮಣ್ಯ ಎಂದರೆ ಅತಿಶಯೋಕ್ತಿಯಿಲ್ಲ.

ಧಾರ್ಮಿಕ ಜಾಗೃತಿ

ಕಿರುಷಷ್ಠಿಯು ಪುಷ್ಯ ಶುದ್ಧದಂದು ನಡೆಯುತ್ತದೆ. ಇದೇ ಸಂದರ್ಭದಲ್ಲಿ ಧರ್ಮ ಸಮ್ಮೇಳನವೂ ಹಲವು ವರ್ಷಗಳಿಂದಲ್ಲಿ ನಡೆದು ಬಂದಿದೆ. ಈ ವರ್ಷದಾ. 5—1—1968ರಂದು ಧರ್ಮ ಸಮ್ಮೇಳನವು ನಡೆಯಿತು. ಆಡಳಿತ ಸಮಿತಿಯ ಅಧ್ಯಕ್ಷ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತ ಭಾಷಣ ಮಾಡಿದರು. ಮೆನೇಜರ್ ಶ್ರೀ ಯಸ್. ರಾಮಕೃಷ್ಣ ಭಟ್ಟರು ವರದಿಯನ್ನೋದಿದರು. ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಲ್

ಭಕ್ತ ಜನರ ಸಹಾಯದಿಂದ ಕಟ್ಟಿಸಲಾದ ಭಕ್ತಗಳ ವಸತಿ ಶ್ರೇಣಿ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ

ಭಕ್ತಿಭಾವಿಸಿಕೊಂಡು ಭಕ್ತಜನರಿಗೆ ಸಂತೃಪ್ತಿ ನೀಡುವ ಸ್ಥಾನದಿಂದ ಪವಿತ್ರರಾಗಿರಿ.



ತೀರ್ಥಸ್ನಾನ

ಡಾ. ಶಂಕರ ವೆಂಕಾಶಿಯವರು ಉದ್ಘಾಟಿಸಿದರು. ಶ್ರೀ ಯು. ಕೆ. ವಾಸುದೇವಾಚಾರ್ಯರಿಂದ ಕಾವ್ಯವಾಚನ ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಂದ "ಹಿಂದೂ ಧರ್ಮ, ಅಂದು— ಇಂದು" ಎಂಬ ವಿಷಯದ ಮೇಲೆ ಭಾಷಣಗಳು ನಡೆದವು. ಅಧ್ಯಕ್ಷತೆ ವಹಿಸಿದ್ದ ಶ್ರೀ ಫಲಿಮಾರು ಶ್ರೀ ಶ್ರೀಯವರು ಶ್ರೀ ಕ್ಷೇತ್ರದಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡುವುದು ಶ್ಲಾಘನೀಯವೆಂದರು. ದೇವಸ್ಥಾನದ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ಬಾಲಕೃಷ್ಣ ರೈಯವರು ಧನ್ಯವಾದಾರ್ಪಣೆ ಮಾಡಿದರು. ಅಂದು ಸಂಜೆ "ಭಕ್ತ ಮಾರ್ಕಂಡೇಯ ಚರಿತ್ರೆ" ಯೆಂಬ ಹರಿಕಥೆ ನಡೆಯಿತು. ಇದನ್ನು ನಡೆಸಿ ಕೊಟ್ಟವರು ಭವರಸ ಕೀರ್ತನಾಲಂಕಾರ ಶ್ರೀ ಯುತ. ಯನ್. ಶಿವಲಿಂಗ ಸ್ವಾಮಿ ಹಿರೇಮಠ್ ಅವರು.

ರಾತ್ರಿ "ಶರಸೇತು ಬಂಧನ" ಮತ್ತು "ಸುಭದ್ರಾ ಹರಣ" ವೆಂಬ ಯಕ್ಷಗಾನಗಳು ನಡೆದುವು. ಶ್ರೀಗಳಾದ ಬಲಿಪ ನಾರಾಯಣ ಭಾಗವತ (ಭಾಗವತರು) ಪಿ. ವಿ. ಕೃಷ್ಣರಾವ್ (ಮೃದಂಗ), ಕುದ್ರೆಕೋಡ್ಲು ರಾಮ ಭಟ್ಟ (ಚೆಂಡೆ) ಇವರು ಹಿಮ್ಮೇಳವನ್ನೊದಗಿಸಿದ್ದರು. ಶ್ರೀಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಯನ್. ಕೃಷ್ಣ ಭಟ್, ದೇರಂಜೆ ಸೀತಾರಾಮಯ್ಯ, ಕೆ. ಶಾಂತ ರೈ, ಯನ್. ವಿ. ಕೃಷ್ಣರಾವ್— ಈ ಪ್ರಸಿದ್ಧ ಕಲಾವಿದರು ಭಾಗವಹಿಸಿದ್ದರು.

ಹೀಗೆ ಧರ್ಮ-ಸಂಸ್ಕೃತಿ ಪ್ರಚಾರಕಾರ್ಯದಲ್ಲಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನವು ಅನೇಕ ಕಾರ್ಯಕ್ರಮಗಳನ್ನು ಕೈಕೊಂಡು ಜನ ಜಾಗೃತಿಯನ್ನು ಸಾಧಿಸುತ್ತಿದೆ.

ಭಕ್ತ ಮಹಾಶಯರು ಶ್ರೀ ದೇವಸ್ಥಾನದಲ್ಲಿ ನಾನಾ ಪ್ರಕಾರದ ಸೇವೆಯನ್ನೂ ಹರಕೆಗಳನ್ನೂ ಸಲ್ಲಿಸುವ ಅವಕಾಶವಿದೆ. ತಮ್ಮ ಶಕ್ತಿಗನುಸಾರ, ಹವಣಿಸ್ವವಾದ ಸೇವೆಯನ್ನಿವರು ಸಲ್ಲಿಸಬಹುದು.

ಆದರ್ಶ ಆಡಳಿತೆ

ಅತ್ಯಂತ ಪ್ರಾಚೀನ ಇತಿಹಾಸವುಳ್ಳ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತೆಯು ಹೊಯ್ಸಳ ಬಲ್ಲಾಳರ ಬಳಿಕ ಶಿಥಿಲವಾಗುತ್ತ ಬಂತು. ಮಹಾಮಾರಿಯು ಹರಡಿದುದರಿಂದ ಶ್ರೀ ಕ್ಷೇತ್ರವು ತೀರ ಹೀನಸ್ಥಿತಿಗೆ ಬಂತು. ಆದರೆ, ಇತ್ತೀಚೆಗಿನ ಮೂವತ್ತೈದು ವರ್ಷಗಳಿಂದ ಶ್ರೀ ಕ್ಷೇತ್ರದ ಚಿತ್ರ ಬದಲಾಯಿಸಿದೆ. ಭಕ್ತಜನರನ್ನು ಆಕರ್ಷಿಸುವುದು ಮಾತ್ರವಲ್ಲದೆ ಅವರ ಮನಸ್ಸಿಗೆ ಸಂಪೂರ್ಣ ತೃಪ್ತಿ-ಸಮಾಧಾನಗಳು ಲಭ್ಯವಾಗುವಂತೆ ಈ ಕ್ಷೇತ್ರದ ಅಭಿವೃದ್ಧಿ ಬಹುಮುಖವಾಗಿ ನಡೆಯ ತೊಡಗಿದೆ. ಯಾತ್ರಿಕ ಭಕ್ತರಿಗೆ ತಂಗಲು ಭಕ್ತಗಳ ನಿರ್ಮಾಣವಾಗಿದೆ. ಸಂಚಾರಕ್ಕೆ ಅಡ್ಡಿಯಾಗಿದ್ದ ನದಿ—ನದಗಳಿಗೆಲ್ಲ ಸೇತುವೆಯಾಗಿರುವುದಲ್ಲದೆ, ಉತ್ತಮ ಮಟ್ಟದ ರಸ್ತೆಗಳ ನಿರ್ಮಾಣವೂ ಆಗಿದೆ, ವಾಹನ ಸೌಕರ್ಯವಿದೆ. ಕ್ಷೇತ್ರದೊಳಗಿನ ಹಲವಾರು ಪ್ರೇಕ್ಷಣೀಯ ಸ್ಥಳಗಳಿಗೆ ಸರಿಯಾದ ದಾರಿಯ ನಿರ್ಮಾಣ— ಜೀರ್ಣವಾದ ಗುಡಿ—ಗೋಪುರಗಳ ಜೀರ್ಣೋದ್ಧಾರ. ಮೊದಲಾದುವು ಇತ್ತೀಚೆಗಿನ ವರ್ಷಗಳಲ್ಲಿ ದೇವಸ್ಥಾನ— ಸರಕಾರ— ಅಸ್ತಿಕ ಮಹಾಶಯರ ಮುಮ್ಮುಖ ಪ್ರಯತ್ನರಳು ಒಮ್ಮುಖವಾಗಿ ಹರಿದುದರಿಂದಾದ ಅಭಿವೃದ್ಧಿ ಕಾರ್ಯಗಳು. ಧರ್ಮದರ್ಶಿಗಳ ಅವಿರತ ಶ್ರಮ— ಸೇವೆಗಳಿಂದಾಗಿ ದೇವಸ್ಥಾನದಲ್ಲಿ ದೇವತ್ವದ ವಾತಾವರಣವು ನಿರ್ಮಾಣವಾಗಿದೆ—ಮಲೇರಿಯಾ ರೋಗದಿಂದು ಹೇಳಿ ಹೆಸರಿಲ್ಲದಂತಾಗಿದೆ; ಜನ ವಸತಿ ಹೆಚ್ಚಿದೆ; ಶ್ರೀ ಸುಬ್ರಹ್ಮಣ್ಯೇಶ್ವರ ಹೈಸ್ಕೂಲು ಶ್ರೀ ದೇಗುಲದ ಆಡಳಿತೆಯ ಉದಯೋನ್ಮುಖ ಪ್ರೌಢ ಶಾಲೆ.

ಅತೋತ್ತರಗಳು

ಶ್ರೀ ದೇಗುಲದ ಧರ್ಮದರ್ಶಿಗಳು ಇನ್ನೂ ಹಲವಾರು ಆಶೋತ್ತರಗಳನ್ನಿಟ್ಟುಕೊಂಡಿದ್ದಾರೆ. ಹುಡಿಯುವ ಶೀರಿನ ಪೂರೈಕೆ, ಶಾಶ್ವತ ಗೋಪುರ ರಚನೆ, ಕುಮಾರ ಪರ್ವತಕ್ಕೆ ಮಾರ್ಗ ರಚನೆ, ಜೊಸ ಬ್ರಹ್ಮರಥದ ನಿರ್ಮಾಣ ಇವು ಅತ್ಯವಶ್ಯವಾದರೆ, ಹೆಚ್ಚುತ್ತಿರುವ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಅಧಿಕ ಸಂಖ್ಯೆ ಭಕ್ತಗಳು, ಭಕ್ತರಿಗೆ ಹಲವಾರು ವಿಧದ ಇನ್ನಿತರ ಅನುಕೂಲಗಳನ್ನು ಒದಗಿಸುವ ಇರಾದೆ ಅವರದು. ಭಗವದ್ಭಕ್ತರ ನೆರವಿನಿಂದ ಇವೆಲ್ಲವನ್ನೂ ಸಾಧಿಸುವ ಆಶಯವನ್ನವರು ಕೊಂಡಿದ್ದಾರೆ.

ಅನುಸರಿಸ ಮೇಲ

ಯಾತ್ರಿಕರಿಗೆ ಬೇಕು ಬೇಕಾದ ಸೌಲಭ್ಯಗಳನ್ನೊದಗಿಸುವುದಲ್ಲದೆ, ದೇವಾಲಯದ ಉತ್ಪನ್ನವನ್ನು ವಿನಿಯೋಗಿಸುವುದೂ ಒಂದು ಉತ್ತಮ ಆದರ್ಶ. ಕೃಷಿ ರಂಗದತ್ತವೂ ಶ್ರೀ ದೇಗುಲವು ದೃಷ್ಟಿ ಹಾಯಿಸಿ ಅದಲ್ಲೂ ತನ್ನ ಸಂಪನ್ಮೂಲವನ್ನು ವಿನಿಯೋಗಿಸುತ್ತದೆ. ಹೀಗೆ ಧರ್ಮ, ಸಂಸ್ಕೃತಿ, ವಿದ್ಯೆ, ಸಾಹಿತ್ಯ, ಕೃಷಿ ಇತ್ಯಾದಿ ನಾನಾ ರೂಪದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡು ಪ್ರಾಚೀನತೆ-ಆಧುನಿಕತೆಗಳನ್ನು ಹೊಂದಿಸಿಕೊಂಡು ಮುನ್ನಡೆಯುವ ಧಾರ್ಮಿಕ ಕ್ಷೇತ್ರಗಳ ಸಂಖ್ಯೆ ಬಹಳ ಕಡಮೆ -ಅನುಸರಿಸ ಮೇಲವಿದು.

ನೋಡಿ ದಣಿಯದ ಸ್ಥಳಗಳು

ಶ್ರೀ ಕ್ಷೇತ್ರದ ಆಸುಪಾಸಿನಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳು ಯಾತ್ರಾರ್ಥಿ ಭಕ್ತಜನರನ್ನು ಕೈಯತ್ತಿ ಕರೆಯುತ್ತವೆ. ಈಯೆಲ್ಲ ಸ್ಥಳಗಳಿಗೂ ತಮ್ಮದೇ ಆದ ಇತಿಹಾಸವಿದೆ. ಇದು ಶ್ರೀ ಕ್ಷೇತ್ರದ ಇತಿಹಾಸದೊಡನೆ ಸುಸಂಬದ್ಧವಾಗಿದೆ. ಕುಕ್ಕೆಲಿಂಗಗಳು, ಭೈರವ ದೇವರ

ಶ್ರೀ ಕ್ಷೇತ್ರದ ಬ್ರಹ್ಮರಥ



ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಮಾನೋಹರ ನೋಟ

ಸುಬ್ರಹ್ಮಣ್ಯದಲ್ಲಿ ತಾ. 5—1—68ರಂದು ಜರಗಿದ ಧರ್ಮ ಸಮ್ಮೇಲನದಲ್ಲಿ ಸಮಾಗಮಿಸಿದ ಮುಖ್ಯ ಅತಿಥಿಗಳು

ಆಡಳಿತ ಸಮಿತಿಯ ಸದಸ್ಯರೊಡನೆ

ಎಡದಿಂದ—ಶ್ರೀ ಕೆ. ಸುಬ್ರಹ್ಮಣ್ಯ ಗೌಡ, B. A LL B, ಚೆಯರ್‌ಮೇನ್, ಕೌನ್ಸಿಲ್ ಹಿಂದ್ ಟ್ರಸ್ಟೀಸ್. ಶ್ರೀ ಡಿ. ಕೆ. ಹೆಬ್ಬಾರ್, ಟ್ರಸ್ಟಿ. ಶ್ರೀ ಯು. ಕೆ. ವಾಸುದೇವಾಚಾರ್, ಶ್ರೀ ಬನ್ನಂಜೆ ಗೋವಿಂದಾಚಾರ್, ಶ್ರೀ ಶ್ರೀ ರಘುವಲ್ಲಭ ತೀರ್ಥ ಶ್ರೀ ಪಾದಂಗಳವರು, ಡಾ| ಶಂಕರ್, ಆರ್. ಮೊಹಾಶಿ.

ಗುಡಿ, ಉಮಾಮಹೇಶ್ವರ, ಶ್ರೀ ಸಂಪುಟ ನರಸಿಂಹ ದೇವರ ಗುಡಿ, ಬಲ್ಲಾಳರಾಯನ ವಿಗ್ರಹ, ಶ್ರೀ ಸುಬ್ರಹ್ಮಣ್ಯ ಮಠ, ಶೃಂಗೇರಿ ಮಠ, ಆದಿ ಸುಬ್ರಹ್ಮಣ್ಯ ಗುಡಿ—ಇವು ದೇವಾಲಯದ ಸುತ್ತುಮುತ್ತಲಿನಲ್ಲಿವೆ. ವಾಸುಕಿಯು ಹಲೆ ಮರೆಸಿಕೊಂಡಸ್ಥಳವೆನ್ನುವ ಬಿಲದ್ವಾರ, ಗೋ



ಬಿ. ಬಾಲಕೃಷ್ಣ ರೈ, ತಾಲೂಕು ಬೋರ್ಡ್ ಮೆಂಬರ್, ಉಪ್ಪಿನಂಗಡಿ. (ಟ್ರಸ್ಟಿ)



15 ವರ್ಷಗಳಿಂದಲೂ ಟ್ರಸ್ಟಿಗಳಾಗಿದ್ದುಕೊಂಡು ಶ್ರೀಕ್ಷೇತ್ರಾಭಿವೃದ್ಧಿಗಾಗಿಯೂ ಸಂದರ್ಶಕರ ಸೌಕರ್ಯಕ್ಕಾಗಿಯೂ ಶಕ್ತಿಮೀರಿ ಶ್ರಮಮಾಡುವುದರಿಂದ ದುಡಿದು ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾದ

ಶ್ರೀ ಬಿ. ನಾರಾಯಣ ಶೇಕರು

ನಾವೂರು, ಬೆಳ್ತಂಗಡಿ.

ಗರ್ಭತೀರ್ಥ, ಧಾರಾತೀರ್ಥ, ಮತ್ಸ್ಯ ತೀರ್ಥ, ಪಂಚಮಿತೀರ್ಥ—ಇವೆಲ್ಲವೂ ಒಂದೂವರೆ ಮೈಲಿದಳ ಪರಿಸರದಲ್ಲಿನ ಪ್ರೇಕ್ಷಣೀಯ ಸ್ಥಳಗಳು.

ಕುಮಾರ ಸ್ವಾಮಿಯ ನೆರಳು

ಸುಮೂರು ಳ ಸಾವಿರ ಅಡಿಯೆತ್ತರದ ಕುಮಾರ ಪರ್ವತ ಶ್ರೀ ಕ್ಷೇತ್ರಕ್ಕೆ ಸದಾ ನೆರಳು ನೀಡುತ್ತಿದೆ. ಸುಮೂರು ೧೨ ಮೈಲು ದೂರದಲ್ಲಿರುವ ಇದಕ್ಕೆ ಹೋಗುವ ದಾರಿ ಅತ್ಯಂತ ದುರ್ಗಮವಿದೆ. ಇದು ಒಂದೇ ಶಿಖರದಂತೆ ಕಂಡರೂ ಮೂರು ಶಿಖರಗಳಿಂದ ಕೂಡಿದೆ. ಏಳು ಹೆಡೆಗಳಂತೆ ಕಂಡು ಬರುವ ಶೇಷ ಪರ್ವತ, ಸಿದ್ಧ ಪರ್ವತ, ಕುಮಾರ ಪರ್ವತವೆಂದು ಇದನ್ನು ಹೆಸರಿಸುತ್ತಾರೆ.

ಕೃಪಾದೃಷ್ಟಿಯಿರಲಿ

ಫಿಸರ್ಗ ಪ್ರಿಯರಿಗೂ ಆಧ್ಯಾತ್ಮ ಪ್ರಿಯರಿಗೂ ಸಂಸ್ಕೃತಿ ಪ್ರಿಯರಿಗೂ, ಆಧುನಿಕತಾ ಪ್ರಿಯರಿಗೂ ಎಳ ಸಮಾನಾಗಿ ಚಿತ್ತಾಕರ್ಷಕವಾದ ಶ್ರೀ ಕ್ಷೇತ್ರವು ಪ್ರಗತಿ ಪಥ ಭ್ರಮಣ ಮಾಡುತ್ತಿದೆ. ಅನುಭವಿಗಳೂ ಸೇವಾಶೀಲರೂ ಆದ ಧರ್ಮದರ್ಶಿ ಮಂಡಳಿ ಮತ್ತು ದೇಗುಲದ ಸಿಬ್ಬಂದಿ ವರ್ಗ ಭಕ್ತ ಜನ ಸಮುದಾಯದ ಸಂಪೂರ್ಣ ಸಹಕಾರದಿಂದ ಶ್ರೀ ಕ್ಷೇತ್ರದ ಅಭಿವೃದ್ಧಿ ಸಾಧಿಸ ಬಲ್ಲವು.

ಶ್ರೀ ಕ್ಷೇತ್ರದ ಪುರಾಣ—ಇತಿಹಾಸಾದಿಗಳ ಪರಿಪೂರ್ಣ ವಿವರಗಳನ್ನು ದೇಗುಲವು ಪ್ರಕಟಿಸಿದೆ. ಮಲೆನಾಡಿನ ನೆರಗಿನಡಿ, ಕುಮಾರಸ್ವಾಮಿಯ ಆವಾಸದಿಂದ ಪರಮಪುನೀತವಾದ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಆದರ್ಶ ಭಾರತೀಯ ಕ್ಷೇತ್ರಗಳಲ್ಲಿ ಒಂದು. ಮುಂದಿನ ದಿನಗಳಲ್ಲಿ ಇದು ಇನ್ನೂ ಉನ್ನತವಾಗಿ ಅಭಿವೃದ್ಧಿ ಹೊಂದುವಂತೆ ಶ್ರೀ ಕ್ಷೇತ್ರದ ಅಧಿದೇವತೆ ಕುಮಾರ ಸ್ವಾಮಿಯು ಎಲ್ಲರನ್ನೂ ಅನುಗ್ರಹಿಸಲಿ.

ಸುಬ್ರಹ್ಮಣ್ಯ ಕ್ಷೇತ್ರವನ್ನು ಸಂದರ್ಶಿಸಿ ಪುಣ್ಯ ಭಾಗಿಗಳಾಗಿರಿ

ಎಲ್ಲೆಲ್ಲಿ ಏನೇನು?

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ವಾರ್ಷಿಕೋತ್ಸವ ಸಮಾರಂಭವು ಡಾ| ಎಂ. ಡಿ. ಅಡಪ್ಪರವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಮಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಬಿ. ರಾಜಾರಾಮ ಸಮಿತರು ಸ್ವಸ್ತಿವಾಚನ ಮಾಡಿದರು. ಅದಕ್ಕುತ್ತರವಾಗಿ ವಿದ್ಯಾರ್ಥಿ ಭವನದ ಕಾರ್ಯದರ್ಶಿ ಶ್ರೀ. ಕೆ. ಬಿ. ಸುರೇಶ ರೈಯವರು ಮಾತಾಡಿದರು. ಪ್ರಾರಂಭದಲ್ಲಿ ಭವನದ ಸಾಪರಿಂಟೆಂಡೆಂಟ್ ಶ್ರೀ ಎಸ್. ಆರ್. ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳೆಲ್ಲೊಬ್ಬರಾದ ಶ್ರೀ ಕೆ ರಮೇಶ ಶೆಟ್ಟಿಯವರು ವರದಿಯೋದಿದರು.

ಶ್ರೀಮತಿ ಭವಾನಿ ಅಡಪ್ಪರು ಆಟೋಟಗಳಲ್ಲಿ ವಿಜೇತರಾದವರಿಗೆ ಬಹುಮಾನವಿತರಣೆ ಗೈದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಬಹುಮಾನಗಳನ್ನು ಭವನದ ಮಾಜಿ ಸಾಪರಿಂಟೆಂಡೆಂಟ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿಯವರು ವಿತರಣೆ ಗೈದರು.

ಡಾ| ಅಡಪ್ಪರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ವೃತ್ತಿಯಾಯ ವೃತ್ತಿಯೇ ಮುಖ್ಯವಾದುದು. ವಿದ್ಯಾರ್ಥಿಗಳು ತಮ್ಮ ಜ್ಞಾನಾರ್ಜನೆಯ ನಂತರ ವೃತ್ತಿಯಾಯ ವೃತ್ತಿಯನ್ನು ಕೈಗೊಂಡು ದೇಶಸೇವೆಯನ್ನು ಮಾಡಬೇಕೆಂದು ಹೇಳಿದರು. ಕಾರ್ಯದರ್ಶಿ ಶ್ರೀ ಕೆ. ಬಿ. ಸುರೇಶ ರೈಯವರು ವಂದನಾರ್ಪಣೆ ಮಾಡಿದರು.

ಎಂ. ಜಿ. ಎಂ. ಕಾಲೇಜಿನಲ್ಲಿ ಹೊಸ ಹಳೆಯ ವಿಚಾರಗಳ ಸಂಕೀರ್ಣ

ಕಳೆದ ತಾ. 11 ಮತ್ತು 12ರಂದು ನಡೆದ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಬಸವೇಶ್ವರ ಮತ್ತು ಭಗಿನಿ ನಿವೇದಿತಾರ ಶತಮಾನೋತ್ಸವ ಹಾಗೂ ಕಾಲೇಜಿನ ವರ್ಧಂತಿ ದಿನ ಹೊಸ ಹಳೆಯ ವಿಚಾರಗಳ ಸಂಕೀರ್ಣವೇರ್ಪಟ್ಟಿತು.

ಬಸವೇಶ್ವರರ ಅಷ್ಟ ಶತಮಾನೋತ್ಸವದ ಅಧ್ಯಕ್ಷ ಸ್ಥಾನವಹಿಸಿದ್ದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಬಸವಣ್ಣನ ಆದರ್ಶವು ತಾತ್ವಿಕವಾದುದೆಂದೂ ಇಂದಿನ ಸಾಮೂಹಿಕ ಸನ್ನಿವೇಶವನ್ನು ಉತ್ತಮಗೊಳಿಸುವುದರಲ್ಲಿ ಯೂವ ಪಾತ್ರ ವಹಿಸಬಲ್ಲುದೆಂಬುದನ್ನು ವಿವರಿಸಿದರು ಮೊದಲು ಟಿ. ನ. ಮಂಗಳಾರದರು ನೋಡದಂ ಭಗಿನಿನಿವೇದಿತಾರ ವಿಷಯ ಮಾತಾಡಿದರು, ಅಂದು "ಅಲೆಕ್ಸಾಂಡರ್" ಮತ್ತು "ಜಯಸರಾಜಯ" ನಾಟಕಗಳನ್ನು ಅಡಲಾಯಿತು.

ಕಾಲೇಜ್ ವರ್ಧಂತ್ಯುತ್ಸವದ ದಿನದಂದು ಶ್ರೀ ವೇಣುವರ ಶ್ರೀಗಳವರು ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮನ್ವಯದ ಮನೋವೃತ್ತಿ ಕಳೆಯ ಬೇಕೆಂದು ಆಶೀರ್ವಾದ ಮಾಡಿದರು. ಸ್ವಾಗತ ಭಾಷಣ ಮಾಡಿದ ಡಾ| ನೂಧವ ಸ್ವೆಗಳವು ವಿದ್ಯೆಯ ಒಂದು ಅವಶ್ಯಕ ಉಪಕರಣವಾಗಿದೆಯೆಂದರು. ಸಮಾರಂಭದ ಅಧ್ಯಕ್ಷ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರುಎಲ್ಲ ವಿದ್ಯಾಲಯಗಳ ಪ್ರಶಸ್ತಿ ವಿಜೇತರಿಗೆ ಹಿತವಚನವಿತ್ತರು.

ಕಾಲೇಜಿನ ವಾರ್ಷಿಕ ವರದಿಯೊಪ್ಪಿಸಿದ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ವಾರ್ಷಿಕ ಪ್ರಶಸ್ತಿಗಳಿಸಿದ 31 ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಇಂಥಾ ಫಲಿತಾಂಶವುದ. ಕ. ಜಿಲ್ಲೆಯ ಇತಿಹಾಸದಲ್ಲೇ ಅಭೂತಪೂರ್ವವೆಂದರು.

ವರ್ಧಂತಿ ಉತ್ಸವದ ದಿನ ಶ್ರೀ ಸುತ್ತಿನ. ರವರ ಅಧ್ಯಕ್ಷತೆಯಲ್ಲಿ ಶ್ರೀ ಫಲಿಮಾರು ಶ್ರೀಗಳವರ ನೇತೃತ್ವದಲ್ಲಿ ಸೇರಿದ ಕವಿಸಮ್ಮೇಳನದಲ್ಲಿ ಶ್ರೀ ಕಿಂಗ್ಸ್ಟಾಣ್ಣ ರೈ, ಪೆರ್. ನಾ. ಗಾಡ್ಗಿ, ಗುಂಡ್ಮಿ ಎಕ್ಕಾಂಡ, ಬನ್ನಂಜೆ, ಕೂರಾಡಿ ಅಡಿಗ, ಎಂ. ಸೀತಾರಾಮ್ ಭಟ್ಟರೇ ಮೊದಲಾದ ಹೆಸರಾಂತ ಕವಿಗಳು ಭಾಗವಹಿಸಿದ್ದರು. ಅಂದು ರಾತ್ರಿ ಕಾಲೇಜಿನ ನಾಟಕ ಸಂಘದವರು "ದೊಡ್ಡ ಫಿಟೋಕ್ಷಿ" ಎಂಬ ಸಂಸ್ಕೃತ ನಾಟಕವನ್ನೂ "ಸಾಧ್ವಸ್ತ್ರಾಳಗಿ"ವೆಂಬ ಬಯಲಾಟವನ್ನೂ ಆಡಿದರು.

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆ

ತಾ. 31—1—68ರಂದು ಸಿಂಡಿಕೇಟ್ ಬ್ಯಾಂಕಿನ ನಿಜಾಮ್‌ಬಾದ್ ಶಾಖೆಯು "ಶಿವಾಜಿ ಭವನ" 7.5.441/1 ಕೃಷ್ಣಗಂಜ್, ನಿಜಾಮ್‌ಬಾದ್ (ಆಂಧ್ರಪ್ರದೇಶ) ಎಂಬಲ್ಲಿ ತೆರೆಯಲ್ಪಟ್ಟಿದೆ. ನಿಜಾಮ್‌ಬಾದ್ ಜಿಲ್ಲೆಯಲ್ಲಿ ಈ ಶಾಖೆಯು ಬ್ಯಾಂಕಿನ ಪ್ರಥಮ ಶಾಖೆಯಾಗಿದೆ. ಈ ಶಾಖೆಯ ತೆರೆಯುವಿಕೆಯಿಂದಾಗಿ ಇದೀಗ ಸಿಂಡಿಕೇಟ್ ಬ್ಯಾಂಕಿಗೆ 219 ಶಾಖೆಗಳಾದಂತಾಯಿತು. ಸಿಂಡಿಕೇಟ್ ಬ್ಯಾಂಕಿನ ಶಾಖೆಯೊಂದು ನಿಜಾಮ್‌ಬಾದಿನಲ್ಲಿ ಸ್ಥಾಪನೆಯಾಯ್ದುದನ್ನು ಸರ್ವ ವಿಧದ ಜನರೂ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ.

ಎ. ಎಲ್. ಎನ್. ರಾವ್ ಟ್ರಸ್ಟ್‌ನಿಂದ ಉದಾರ ಧನ ಸಹಾಯ

ಉಡುಪಿಯ ಸುಪ್ರಸಿದ್ಧ ಎಡ್ವೋಕೇಟ್ ಆರೂರು ಲಕ್ಷ್ಮೀನಾರಾಯಣ ರಾವ್ ಮತ್ತು ಅವರ ಮಕ್ಕಳು 1967ನೇ ವರ್ಷಕ್ಕೆ ಹಿಂದಿನ ವರ್ಷಗಳಂತೆ ಎ. ಎಲ್. ಎನ್. ರಾವ್ ಟ್ರಸ್ಟ್ ಮತ್ತು ಇತರ ಸಂಸ್ಥೆಗಳಿಂದ ಈ ಕೆಳಗಿನ ಸಂಸ್ಥೆಗಳಿಗೆ ಕೆಳಗಿನ ವಿವರಂಸಿದಂತೆ ಧನ ಸಹಾಯ ಮಾಡಿರುವುದು ಅಭಿನಂದನೀಯವೂ ಅಭಿನಂದನೀಯವೂ ಆಗಿದೆ.

1, ಕಸ್ತೂರ್ ಬಾ ಜನರಲ್ ಆಸ್ಪತ್ರೆ, ಮಣಿಪಾಲ, ಒಂದು ಬೆಡ್ ಬಾಗೆ ರೂ. 3000/- 2, ಅಮ್ಮಾರು ಹಾಯರ್ ಸೆಕೆಂಡರಿ ಶಾಲಾ ಕಟ್ಟಡಕ್ಕೆ ರೂ. 3000/- 3, ಪರ್ಯಾಯಪ್ರಜ್ಞಾ ಸಂಸ್ಥಾ ಕಾಲೇಜಿಗೆ ಲೈಬ್ರೆರಿಗಾಗಿ ರೂ. 1000/- 4, ಉಡುಪಿ ಬೋರ್ಡರ್ ಹಾಯರ್ ಸೆಕೆಂಡರಿ ಶಾಲೆಗೆ ಒಂದು ವಿದ್ಯಾರ್ಥಿವೇತನಕ್ಕೆ ರೂ. 1000/- 5, ಗೋಳಿಯಂಗಡಿ ಬೋರ್ಡರ್ ಹೈಸ್ಕೂಲಿಗೆ ಒಂದು ವಿದ್ಯಾರ್ಥಿ ವೇತನಕ್ಕೆ ರೂ. 1000/- 6, ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿಗೆ ಬೆನಿಫಿಟ್ ಟ್ರಸ್ಟ್ ಫಂಡಿಗೆ ಒಂದು ವಿದ್ಯಾರ್ಥಿವೇತನಕ್ಕೆ ರೂ. 1000/- 7, ಹಿಂದೂ ವಿದ್ಯಾದಾಯಿನಿ ಸಂಘ, ಸುಂಕಲ್ ರೂ. 1000/- 8, ಬಪ್ಪನಾಡು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಗೆ ರೂ. 1000/- 9, ಜನತಾ ವಿದ್ಯಾವರ್ಧಕ ಸಂಘ, ಕಂಬದಕೋಣೆ, ಕುಂದಾಪುರ ತಾಲೂಕು ರೂ. 1000/- 10, ಮೊಳಹಳ್ಳಿ ಶಿವರಾಮ್ ಸ್ಮಾರಕ ನಿಧಿ, ಕಿಟ್ಟೆಲ್ ರೂ. 1000/- 11, ಹಿಂದೂ ಕುಷ್ಟ ನಿವಾರಣಾ ಸಂಘ, ಮಂಗಳೂರು, ರೂ. 1000/- 12, ಶ್ರೀ ಸ್ವಾಮಿ ಶ್ರದ್ಧಾನಂದ ಸೇವಾಶ್ರಮ ಮಂಗಳೂರು 1000/-13, ಜನಾರ್ದನಾಲಾಲ್ ಸ್ಮಾರಕ ನಿಧಿಗೆ ರೂ. 1000/- 14, ರಾಮಕೃಷ್ಣ ಸೇವಾ ಸಮಾಜ, ಮುಕ್ತೂರು ರೂ. 500/- 15, ಬೋರ್ಡರ್ ಡಾ| ಎ| ಶಾಂತಾ ಕಟ್ಟಡ ಸಮಿತಿ, ಮುಕ್ತೂರು, ರೂ. 500/- 16, ಶಾರದಾ ಸೊಸೈಟಿ, ಸೇನುಕ್ಕೂರು ರೂ. 501/- 17, ಪಡುಬಿದ್ರಿ ದೇವಸ್ಥಾನ ಜೀರ್ಣೋದ್ಧಾರ ಕಮಿಟಿಗೆ ರೂ. 200/- 18, ಬೆಳ್ಳಾರ್ಕೆ ದೇವಸ್ಥಾನ ಜೀರ್ಣೋದ್ಧಾರ ಕಮಿಟಿಗೆ ರೂ.100/ 19, ಕರಂಬಳ್ಳಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿಗೆ ರೂ. 100/— ಈ ಧನಸಹಾಯವಲ್ಲದೆ ಎಂ. ಎಸ್. ಸಿ. ಓದುವ ಇಬ್ಬರು ವಿದ್ಯಾರ್ಥಿಗಳಿಗೆ ರೂ 600ರಂತೆ ಸಾಲರೂಪದ ವಿದ್ಯಾರ್ಥಿವೇತನವನ್ನು ಸಹ ನೀಡಿದ್ದಾರೆ.

ಪರ್ಯಾಯ—ಯಕ್ಷಗಾನ

ಉಡುಪಿ, ಪರ್ಯಾಯ ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀ ಪಾದಂಗಳವರ ಉದಾರಾಶ್ರಯದಿಂದ ರಥಬೀದಿಯಲ್ಲಿ ರಚಿಸಲ್ಪಟ್ಟಿರುವ ಶ್ರೀಕೃಷ್ಣ ಮಂಟಪದಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥರವರಂದಂಗಳವರು ಪುರಾಣ ಪ್ರವಚನವೇರುವ ಸಮಾರಂಭದ ಪೂರ್ವ ಅವಧಿ ಕಾಲಕ್ಷೇಪವಾಗಿ ಯಕ್ಷಗಾನ ಕಲಾ ಮಂಡಲ(ರಿ) ಉಡುಪಿ ಇದು ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ರಂಜಿಸಲಾಯಿತು ಯಕ್ಷಗಾನ ಕೂಟದ ಶ್ರೀ ಕೆ. ನಾರಾಯಣ ಕಟ್ಟಿಂ ಹಾಡುಗಾರಿಕೆಯಿಂದ ನೆರೆದಿರುವಿಲ್ಲಿ ಸ್ಮ

ಹಿಂದಿ ಹಿರಣ್ಯಗರ್ಭನನ್ನು ಹಿಡಿಯಲು ಹವಣಿಸುತ್ತಿರುವ ರಾಹು

(ಆರನೇ ಪುಟದಿಂದ)

ನೆವನ ಹೇಳಿ ಆ ರಾಜ್ಯಗಳಲ್ಲಿರುವ ಕಾಂಗ್ರೆಸ್ಸೇತರ ಮಂತ್ರಿ ಮಂಡಲಗಳನ್ನು ಸುಲಭವಾಗಿ ಬೀಳಿಸಿ ಬಿಡಬಹುದು. ಈ ವಿಷಯ ಶ್ರೀ ಚ. ರಾ. ಯವರಿಗೆ ಗೊತ್ತಿಲ್ಲವೆಂದಲ್ಲ. ಅವರೂ ಗುರಿ ಇಟ್ಟೇ ಕಲ್ಲು ಬಿಸಾಡಿದ್ದಾರೆ.

ಕಲ್ಲಿಕೋಟೆಯಲ್ಲಿ ದಶಂಬರ ೨೮, ೨೯ ಮತ್ತು ೩೦ ವ್ಯತ್ತರಂದು ಭಾರತೀಯ ಜನಸಂಘದವರ ಮಹಾಧಿವೇಶನ ನಡೆದಿತ್ತು. ಅಲ್ಲಿ ನಾಯಕ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಮಾತನಾಡುವ ಸಂದರ್ಭದಲ್ಲಿ ಮಾತಾಡುತ್ತ ಶ್ರೀ ರಾಜಾಜಿಯವರು ಕಾಂಗ್ರೆಸ್ಸಿನ ಕಾಲಕ್ಷೇಪಿಯ ಯುಬಾಷಾ ಸಮಸ್ಯೆಯ ಬಹಗ್ಗವನ್ನು ಪಹೋಗಿಸುತ್ತಿರುವದಾಗಿ ಅವರು ಹೇಳಿರುವರು. ಸ್ವತಃ ಶ್ರೀ ರಾಜಾಜಿಯವರೇ ಹಾಗೆ ಹೇಳಿದ್ದು. ಶ್ರೀ ಅಚಲ ಬಿಹಾರಿ ವಾಜಪೇಯಿಯವರಿಗೂ ಅದೇ ಮಾರ್ಗದರ್ಶನ ಮಾಡಿದ್ದಾರಂತೆ!

ಇಲ್ಲಿ ಒಂದು ವಿಷಯ ಸ್ಪಷ್ಟವಾಗುತ್ತದೆ, ಶ್ರೀ ರಾಜಾಜಿಯವರಿಗೆ ಹಿಂದಿಯ ಮೇಲೆ ಹಗೆಯೂಗಲೀ, ಇಂಗ್ಲೀಷಿನ ಮೇಲೆ ವ್ಯಾಮೋಹವ ಗಲೀ ಇರುವದಿಲ್ಲ. ಅವರಿಗೆ ಕಾಂಗ್ರೆಸ್ಸು ಹೇಗಿಂಗಿಗೆ ಹೊಡೆಯಲು ಇದೊಂದು ಸಂಧಿನ ಇದೆ ಸುಷ್ಟೇ. ಅವರಿಗೇಕೆ ಕಾಂಗ್ರೆಸ್ಸಿನ ಮೇಲೆ ಅಷ್ಟು ಹಗೆ? ಹಿಂದೆಯೇ ನೋಡಿರುವಂತೆ ಶ್ರೀ ರಾಜಾಜಿಯವರನ್ನು ಗವರ್ನರ್ ಹುದ್ದೆಯಿಂದ ಕೇಂದ್ರದ ಮಂತ್ರಿ, ರಾಜ್ಯದ ರಾಜಪಾಲ, ಆ ಮೇಲೆ ಮುಖ್ಯಮಂತ್ರಿಯೆಂದು ಕೆಳಗಳಿಸುತ್ತಾ ಬಂದ ಕಾಂಗ್ರೆಸ್ ನಾಯಕರುಗಳು ಅವರನ್ನು ಮನೆಗೆ ಕಳುಹಿಸಿಬಿಟ್ಟಿತು. ಆದ್ರೂ ಪ್ರಜಾತಂತ್ರ ಪದ್ಧತಿಗೆ ವಿರುದ್ಧವಾಗಿ ದ್ರಾವಿಡ ಕಳ್ಳಗಮನ್ನು ಬಹಳ ಸೂಳಿಗೆ ಹಾಕಿಕೊಳ್ಳಬೇಕೆಂದು ತಮಿಳ್ನಾಡಿನ ಕೈರಾನ್ ತಿರು ಕಾಮರಾಜರನ್ನು ಮುಖ್ಯಮಂತ್ರಿ ಪದವಿಗೇರಿಸಿ, ತೀವ್ರ ರಾಜಕಾರಣಿ ಹಿರಿಯ ವ್ಯಕ್ತಿ ಶ್ರೀ ರಾಜಾಜಿಯವರನ್ನು ಪೂರ್ಣವಾಗಿ ಕೆಳಕ್ಕಳಿಸಲಾಯಿತು. ಮುನಿದಿದ್ದ ಶ್ರೀ ರಾಜಾಜಿ, ಕಾಮರಾಜ್ ರಾಗೂ ಅವರೊಂದಿಗೆ ಕಾಂಗ್ರೆಸ್ಸಿನ ಸ್ವಾಹಾ ಮಾಡಲು, ಅಧಿಕಾರದಿಂದ ಅಧಃಪತನದ ಅಂತಿಮ ಅಂತಸ್ತಿಗೆ ತಲುಪುವ ಪಥ ಮಾಡಿಕೊಂಡಿದ್ದಾರೆ. ಕಾನು ಸಾಯುವದರೊಳಗೆ ಕಾಂಗ್ರೆಸ್ಸಿನ ಸಾವನ್ನು ಕಂಡೇ ಪ್ರಾಣ ಬಿಡಬೇಕೆಂದು ಅವರು ದೃಢ ನಿಶ್ಚಯ ಮಾಡಿಕೊಂಡಿದ್ದಾರೆ. ಆದರೆ ಅದಕ್ಕಾಗಿ ಅವರು ಎಹೋ ರಾತ್ರಿ ಪ್ರಯತ್ನಿಸುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತು.

ಶ್ರೀಮತಿ ಇಂದಿರಾ ಗಾಂಧಿಯವರು ಶ್ರೀ ರಾಜಾಜಿಯವರ ಮಾತಿಗೆ ಕಿವಿ ಕೊಡಲಿಲ್ಲ. ಇನ್ನು ಉಳಿದಿರುವ ದಾರಿ? ಅದಷ್ಟೇ ಅನಂತರ ನಾವು ಕಂಡದ್ದು, ಅನುಭವಿಸಿದ್ದು. ದಶಂಬರ ದಿನಾಂಕ ೨೦ರಂದು ಶ್ರೀ ರಾಜಾಂಜಿ ಖಂಡಾತುಂಡವಾಗಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಬರೆದು ಬಿಟ್ಟರು. ಅದಾದೊಡನೆ ಅಲ್ಲಿಯ ವಿದ್ಯಾರ್ಥಿಗಳು ದಂಗೆ ಎದ್ದರು. ಕಾಲೇಜುಗಳನ್ನು ವರ್ಜ ಬೇಕಾಯಿತು; ಪರೀಕ್ಷೆ ಇಲ್ಲ. ಮಾತಾಡುವವರ ಮೇಲೆ ಹಲ್ಲೆ ನಡೆಸಲಾಯಿತು. ಸಿಕ್ಕಿದ ಗೋಡೆ, ಹಲಗೆಗಳ ಮೇಲೆ ಹಿಂದಿ ನಾಶವಾಗಲೆಂದು ಬರೆಯಲಾಯಿತು. ಸಂಸ್ಕೃತ ವಾಕ್ಯಗಳನ್ನು ಕಪ್ಪು ಮಾಡಲಾಯಿತು. ಜನತೆಯ ಯೋಗಕ್ಷೇಮಕ್ಕೆನೇ ಕಪ್ಪು ಬಳಿಯಲಾಯಿತು. ಅಷ್ಟಾದರೂ ಅದು ತಪ್ಪೆಂದು ರಾಜಕಾರಣಿ ಹೇಳುವ ಗೋಜಿಗೆ ಹೋಗಲಿಲ್ಲ. ಅದರ ಬದಲು ಉತ್ತರದ ವಿದ್ಯಾರ್ಥಿಗಳ ಹಾಲಿಗೆ ಸೇರಬೇಡಿರೆಂದು 'ಬುದ್ಧಿವಾದ' ಹೇಳಿದರು. ಅಂದರೆ ಅದರ ಅರ್ಥ ಏನು? ಉತ್ತರ ಪ್ರದೇಶದ ವಿದ್ಯಾರ್ಥಿಗಳು ಅಂಗಡಿಗಳ ನಾಮಫಲಕಗಳಿಗೆ ತಾರು ಬಳಿದಲ್ಲಿ, ನೀವು ಕರಿಕಾಂಗಿಟ್ಟಿಗಳಿಗೆನೇ ತಾರು ಕಟ್ಟಿರಿ! ಅವರು ಬಸ್ಸು ಸುಟ್ಟಲ್ಲಿ, ನೀವು ರೈಲನ್ನೇ ಸುಡಿರಿ! ತಾತನ ಧರ್ಮಕ್ಕೆ ಮಕ್ಕಳಂತೆ ವಿದ್ಯಾರ್ಥಿಗಳು ಕುಣಿದರು. ಇಲ್ಲಿ ಪ್ರೇತ ನೃತ್ಯ ನಡೆಯಿತ! ಇಲ್ಲಿ ಶ್ರೀ ರಾಜಾಜಿ ತನ್ನ ವೈಶಿಷ್ಟ್ಯವನ್ನು ವ್ಯಕ್ತಪಡಿಸಿದ್ದಾರೆ. ದ್ರಾ. ಮು. ಕ. ದವರಂತೆ ಇವರು ಹಿಂದಿ ನಾಶವಾಗಲೆಂದು ಹೇಳಲಿಲ್ಲ ಅದರ ಬದಲು ಹಿಂದಿ ಬೇಡವೆಂದು ಹೇಳಿದರು, ಅಷ್ಟೇ. ಇದು ಶ್ರೀ ರಾಜಾಜಿಯವರಿಗೂ ದ್ರಾ. ಮು. ಕ. ಕ್ಕೂ ಇರುವ ವ್ಯತ್ಯಾಸ.

ಹಿಂದಿ ಯಾಕೆ ಬೇಡ? ಅದು ಭಾರೀ ದೊಡ್ಡ ಅಲ್ಪಸಂಖ್ಯಾತ ಭಾಷೆ ಇದೆಯೂ ದರೂ ಇಂಗ್ಲೀಷನ್ನು ಸ್ಥಾನಪಲ್ಲಟ ಮಾಡಲು ಅದರಿಂದ ಸಾಧ್ಯವಿಲ್ಲ. ಇಂಗ್ಲೀಷ್ ಇಲ್ಲದಿದ್ದಲ್ಲಿ ದೇಶದ ದಶಾವಿಕ್ಯಗಳನ್ನು ಒಂದಾಗಿಸಲು ಸಾಧ್ಯವಿಲ್ಲ ಇದಕ್ಕೋಸ್ಕರ ಇಂಗ್ಲೀಷ್ ಇರಬೇಕೆಂದು ಶ್ರೀ ರಾಜಾಜಿ ಸ್ಪಷ್ಟಪಡಿಸಿರುವರು.

ಇಂಗ್ಲೀಷಿನ ಇರವಿಕೆಗಾಗಿ ಶಾಸನೇನು ಮಾಡುತ್ತೇನೆಂಬುದನ್ನು ಶ್ರೀ ರಾಜಾಜಿ ತಿಳಿಸಿರುವರು. ಅವರ ತೊಂಭತ್ತನೇ ಹುಟ್ಟು ಹಬ್ಬವನ್ನು ತಮಿಳುನಾಡಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಅಧಿಕಾರದಲ್ಲಿರುವ ದ್ರಾ ಮು. ಕ. ಅಲ್ಲಲ್ಲಿ ಜ

(ಹದಿಮೂರನೇ ಪುಟ ನೋಡಿರಿ)

ನಾವೆಲ್ಲ ಕೂಡಿ

ಆಚರಿಸಬೇಕಾದ ದಿನ ಇದು

ನಾವು ಸ್ವಾತಂತ್ರ್ಯಭುಕ್ತ ರಾಷ್ಟ್ರವಾಗಿ ಹದಿನೆಂಟು ವರ್ಷ ಕಳೆದವು. ನಮ್ಮ ದೇಶದ ಬಗ್ಗೆ ನಮಗೆ ಅಭಿಮಾನವಿದೆ. ಅಚಲ ವಿಶ್ವಾಸವಿದೆ. ಇಂದು ನಮ್ಮೆಲ್ಲರ ಒಗ್ಗಟ್ಟಿನಲ್ಲಿ ನಮ್ಮ ರಾಷ್ಟ್ರದ ಶಕ್ತಿ ಸಲ್ಲದೆ ಎನ್ನುವದನ್ನು ನೆನಪಿಸಲ್ಲಿದೋಣ. ನಮ್ಮ ಸಮೃದ್ಧಿ ಸಾಧ್ಯವಾಗಲೂ ಐಕ್ಯತೆಯೇ ಮೂಲಾಧಾರ ಎನ್ನುವದನ್ನು ಮರೆಯದಿರೋಣ.

ನಮ್ಮ ಮುಂದಿರುವ ಗುರಿ ದೊಡ್ಡದು. ಅದನ್ನು ಸಾಧಿಸಲು ನಾವು ಸಣ್ಣ ಮಾಡ್ಬೇಕಾದ್ದೇನೆ ಏಕೆಂದರೆ

ನಾವು ದೊಡ್ಡ ದೇಶದ ದೊಡ್ಡ ಜನ



67/405

ಮೂಲ: ಶ್ರೀ ತಿಲಕರಾಜ ಗೋಸ್ವಾಮಿ

ಅನು: ಶ್ರೀ ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್

ಜ್ಯೋತಿಸರ, ಭಗವದ್ಗೀತೆಯ ಜನ್ಮಭೂಮಿ

ವಿಶ್ವೋಪನಿಷತ್ತು ಶ್ರೀ ಭಗವದ್ಗೀತೆಯು ಉಪದೇಶಿಸಲ್ಪಟ್ಟ ಜ್ಯೋತಿಸರ ಲಕ್ಷ್ಯಕ್ಕೆ ಮಾಡಾಶಯರಿಗೆ ಗೀತೆಯ ಅಮರ ಸಂದೇಶವನ್ನು ಸ್ಮರಿಸಿಕೆ ತರುತ್ತಿದೆ. ಇಂದಿಗೂ "ಗೀತಾ ಜಯಂತಿ"ಯ ಶುಭ ದಿನದಂದು ಇಲ್ಲಿ ಗೀತಾ ಪಠಣ ಶ್ರವಣಗಳು ನಡೆಯುತ್ತಿವೆ.

ಮಹಾಭಾರತದ್ವಯ ಪವಿತ್ರಭೂಮಿಯೊಡ ಕುರುಕ್ಷೇತ್ರದಲ್ಲಿ ಪುರಾತನ ದೇವಾಲಯಗಳನ್ನೂ ಸರೋವರಗಳನ್ನೂ ಸಂದರ್ಶಿಸಿದ ನಂತರ ನಾವು ಜ್ಯೋತಿಸರಕ್ಕೆ ಹೊರಟೆವು. ಜ್ಯೋತಿಸರವು ಕುರುಕ್ಷೇತ್ರದಿಂದ ಪಶ್ಚಿಮಕ್ಕೆ ಐದು ಮೈಲು ದೂರದಲ್ಲಿದೆ. ಇದು ಭಗವಾನ್ ಶ್ರೀ ಕೃಷ್ಣನು ಮಹಾಭಾರತ ಯುದ್ಧಾರಂಭದಲ್ಲಿ ಅರ್ಜುನನಿಗೆ ಗೀತೋಪದೇಶವನ್ನು ಮಾಡಿದ ಪವಿತ್ರ ಸ್ಥಳವಾಗಿದೆ.

ಆ ಪವಿತ್ರ ಭೂಮಿಯ ಕಡೆಗೆ ನಮ್ಮ ಕಾರು ವೇಗದಿಂದ ಹೋಗುತ್ತಿದ್ದಾಗ ನನ್ನ ಹೃದಯದಲ್ಲಿ ಶ್ರದ್ಧಾ ಭಕ್ತಿ ಭಾವನೆಗಳು ಉದಯಿಸುತ್ತಿದ್ದವು "ಕೆಲವೇ ಕ್ಷಣಗಳ ನಂತರ ಭಗವಾನ್ ಶ್ರೀ ಕೃಷ್ಣನು ಎಲ್ಲಿ ದಿವ್ಯ ಗೀತೆಯನ್ನು ಹಾಡಿದನೋ, ಜಗತ್ತಿಗೆ ಮಾನವನ ಕರ್ತವ್ಯಗಳನ್ನೂ ಜೀವನದ ಸನಾತನ ತತ್ವಗಳನ್ನೂ ಪ್ರತಿಪಾದಿಸಿದನೋ ಅಲ್ಲಿಗೆ ಮುಟ್ಟಿ ನಾನು ತಲೆ ಬಾಗಿಸುವೆನು. ಮತ್ತು ಭಗವಂತನ ಪಾದಧೂಳಿಯಿಂದ ಸಮ್ಮಿಶ್ರವಾದ ಆ ಪಾವನ ಸರೋವರದ ಅಮೃತ ರಸವನ್ನು ಆಸ್ವಾದಿಸುವೆನು" ಇವೇ ನನ್ನ ಮನಸ್ಸನ್ನು ತುಂಬಿಕೊಂಡ ಭಾವನೆಗಳು.

ಜ್ಯೋತಿಸರ ಗ್ರಾಮದಲ್ಲಿ ನಮಗೆಂದು 'ಊರು ಬಾಗಿಲು' ಗೋಚರಿಸಿತು. ಅಲ್ಲಿ 'ಗೀತಾ ಕೀ ಜನ್ಮ ಭೂಮಿ' ಎಂದು ಬರೆದಿತ್ತು.

ನಾವು ದೇವಾಲಯವನ್ನು ಪ್ರವೇಶಿಸಿದೆವು. ಆಧುನಿಕ ಭಾರತದ ನಿರ್ಮಾತೃಗಳು ಮತ್ತು ಮಹಾವಿಚಾರವಂತರಿಗೆ ಸ್ಫೂರ್ತಿದಾಯಕವಾದ ಉಪದೇಶವಿತ್ತ ಭಗವದ್ಗೀತೆಯು ಎಲ್ಲಿ ಉದಯವಾಯಿತೋ ಅಂತಹ ಪವಿತ್ರ ಭೂಮಿಯಲ್ಲಿ ನಾವು ನಿಂತುಕೊಂಡೆವು.

ಈ ಪವಿತ್ರಗ್ರಂಥದ ಉಪದೇಶಗಳನ್ನು ಸರಿಯಾಗಿ ವ್ಯಾಖ್ಯಾನಿಸಿ ಪ್ರಚುರ ಪಡಿಸಿದಲ್ಲಿ ಅದು ಈ ಪ್ರಪಂಚದಲ್ಲಿ ನೊಂದು, ಕಂಗೆಟ್ಟು, ನಿರಾಶರಾದ ಮಾನವರಿಗೆ ಶಾಂತಿ ಮತ್ತು ಜ್ಞಾನದ ಬೆಳಕನ್ನು ತೋರಿಸಬಲ್ಲುದೆಂಬುದರಲ್ಲಿ ಸಂದೇಹವಿಲ್ಲ.

ನಾವು ಕಷ್ಟ ಯಾವತ್ರ ಧಾರಿಯೊಡ ಒಬ್ಬ ಮಹಾತ್ಮರನ್ನು ನೋಡಿದೆವು. ಅವರು ಆ ಸ್ಥಳದ ಚಾರಿತ್ರಿಕ ಮತ್ತು ಧಾರ್ಮಿಕ ಮಹತ್ವವನ್ನು ನಮಗೆ ವಿವರಿಸಿದರು. ಮಹಾಭಾರತ ಯುದ್ಧಾರಂಭ ಕಾಲದಲ್ಲಿ ಪಾಂಡವ ವೀರನಾದ ಅರ್ಜುನನು ಎರಡು ಕಡೆಗಳಲ್ಲೂ ಯುದ್ಧ ಸನ್ನದ್ಧರಾಗಿ ಸಾಲಾಗಿ ನಿಂತಿರುವ ತನ್ನ ಬಂಧುವರ್ಗದವರನ್ನು ನೋಡಿ ಶೋಕ ಸಂವಿಗ್ನವಾನಸನಾಗಿ ಯುದ್ಧಮಾಡಲು ಫಿರಾಕರಿಸಿದ ಸ್ಥಳವೇ ಇದೆಂದು ಅವರು ನಮಗೆ ಹೇಳಿದರು. ಅನಂತರ ಇಲ್ಲೇ ಅವನ ರಥದ ಸಾರಥ್ಯವನ್ನು ಕೈಗೊಂಡಿದ್ದ ಭಗವಾನ್ ಶ್ರೀ ಕೃಷ್ಣನು ಗೀತೆಯ ತತ್ವೋಪದೇಶವನ್ನು ಮಾಡಿದನು.

ಪವಿತ್ರವಾದ ಸರಸ್ವತೀ ನದಿಯು ಒಂದು ಸೂಕ್ಷ್ಮ ಪ್ರವಾಹ ರೂಪದಲ್ಲಿ ಈ ಜ್ಯೋತಿ ಸರದ ಹತ್ತಿರ ಹರಿಯುತ್ತದೆ. ಮಹಾ ಭಾರತವು ಹೇಳುವಂತೆ ಸರಸ್ವತೀ ತೀರದಲ್ಲಿ ಮುನಿಗಳೂ ಯೋಗಿಗಳೂ ಸಾವಿರಾರು ಶಿಷ್ಯರಿಂದೊಡಗೂಡಿ ವಾಸಮಾಡುತ್ತಿದ್ದರು. ವೇದಾಧ್ಯಯನ ಮಾಡುತ್ತಾ ಯಜ್ಞಗಳನ್ನು ಮಾಡುತ್ತಿದ್ದರು. ಅವರ ಆಶ್ರಮಗಳು ವಿದ್ಯಾಮಂದಿರಗಳಾಗಿದ್ದವು.

ಒಂದು ಕಾಲದಲ್ಲಿ ಜ್ಯೋತಿಸರವು ಸಮ್ರಾಟ್ ಹರ್ಷವರ್ಧನನ ರಾಜಧಾನಿಯೊಡ ಸ್ಥಾನೇಶ್ವರದ ಒಂದು ಭಾಗವಾಗಿದ್ದಿತು. ಆದಿ ಶಂಕರಾಚಾರ್ಯರು ಬದರೀ ಮತ್ತು ಕೇದಾರಕ್ಕೆ ಹೋಗುವ ಮಾರ್ಗವಾಗಿ ಈ ಸ್ಥಳಕ್ಕೆ ಬಂದಿದ್ದರೆಂದು ಹೇಳಲಾಗುತ್ತಿದೆ. ಎಲ್ಲಾ ಕಾಲಗಳಲ್ಲೂ ಎಲ್ಲಾ ಜೀವನಕ್ರಮದ ಧಾರ್ಮಿಕ ಮಹಾಪುರುಷರು, ಮುನಿಗಳೂ ಸನ್ಯಾಸಿಗಳೂ ಇಲ್ಲಿಗೆ ಬರುತ್ತಿದ್ದರು. ಗುರು ನಾನಕದೇವ, ಗುರುಗೋವಿಂದ ಸಿಂಗ ಮತ್ತು ಬಂದಾ ಬಹದೂರ್—ಇವರು ತೀರ್ಥಯಾತ್ರಿಕರಾಗಿ ಇಲ್ಲಿಗೆ ಬಂದು ಗೀತಾ ಪಠನ ಮಾಡಿದ್ದಾರೆಂದು ಐತಿಹ್ಯದಿಂದ ತಿಳಿದು ಬರುತ್ತದೆ. ೧೯೬೨ರಲ್ಲಿ ಸೂರ್ಯಗ್ರಹಣ ಕಾಲದಲ್ಲಿ ಸಾಮ್ರಾಟ್ ಅಕ್ಬರನು ಕುರುಕ್ಷೇತ್ರಕ್ಕೆ ಬಂದಿದ್ದನು. ಆಗ ಅವನು ಜ್ಯೋತಿಸರಕ್ಕೂ ತನ್ನ ಗೌರವವನ್ನು ಅರ್ಪಿಸಲಿಕ್ಕಾಗಿ ಬಂದಿದ್ದನು.

ಜ್ಯೋತಿಸ್ಸರೋವರ ಮತ್ತು ಅಕ್ಷಯ ವಟ

ಜ್ಯೋತಿಸರದಲ್ಲಿ "ಜ್ಯೋತಿಸ್ಸರಸ್" ಎನ್ನುವ ಒಂದು ಕೆರೆ ಮತ್ತು ಎರಡು ವಟ (ಆಲ) ವೃಕ್ಷಗಳು ಹೊರತು ಬೇರೇನೂ ಸ್ಮಾರಕವು ಕಂಡುಬರುವುದಿಲ್ಲ. ಈ ಎರಡು ವೃಕ್ಷಗಳಲ್ಲಿ ಒಂದು ಅಕ್ಷಯವಟವೆಂದು ಪ್ರಸಿದ್ಧವಾಗಿ ಗೀತೋಪದೇಶದ ಕುರುಹೆಂದು ಭಾವಿಸಲ್ಪಡುತ್ತಿದೆ.

ಯಾತ್ರಿಕರು ಪಾವನವಾದ ಜ್ಯೋತಿಸ್ಸರಸ್ಸಿನಲ್ಲಿ ಮಿಂದು ಆ ಪವಿತ್ರ ವಟ ವೃಕ್ಷದ ಮುಂದೆ ತಲೆ ಬಾಗಿಸುತ್ತಾರೆ. ಶ್ರೀಕೃಷ್ಣ ಭಗವಂತನ ಮಹಿಮೆಯಿಂದ ಈ ವೃಕ್ಷವು ಸಾವಿರಾರು ವರ್ಷಗಳಿಂದಲೂ ಇಲ್ಲಿ ಸ್ಥಿರವಾಗಿ ನಿಂತಿದೆಯೆಂದು ಜನರು ನಂಬಿರುತ್ತಾರೆ. ಇನ್ನೊಂದು ವಟ ವೃಕ್ಷವು ಒಂದು ಶಿವಾಲಯದ ಭಗ್ನಾವಶೇಷದ ಮೇಲೆ ನಿಂತಿದೆ. ಈ ಪುರಾತನ ದೇವಾಲಯವನ್ನು ಮಸಲ್ಮಾನರು ಸ್ಥಾನೇಶ್ವರ ಪಟ್ಟಣವನ್ನು ಲೂಟಿ ಮಾಡಿದಾಗ ಧ್ವಂಸಪಡಿಸಿದರೆಂದು ಹೇಳುತ್ತಾರೆ. ಈ ದೇವಾಲಯದ ಭಗ್ನಾವಶೇಷದ ಮೇಲೆ ಕಾಶ್ಮೀರದ ಮಹಾರಾಜರೊಬ್ಬರು ಸುಮಾರು ೧೬೦ ವರ್ಷಗಳ ಮೊದಲು ಒಂದು ಹೊಸ ದೇವಾಲಯವನ್ನು ಕಟ್ಟಿಸಿದರು. ೧೯೨೪ರಲ್ಲಿ ದರ್ಭಾಂಗದ ಮಹಾರಾಜರು ಅಕ್ಷಯ ವಟದ ಸುತ್ತ ಒಂದು ಕಟ್ಟೆಯನ್ನು ಕಟ್ಟಿಸಿದರು.

ಭಾರತದ ವಿಭಜನೆಯಾದ ಮೇಲೆ ಪಂಜಾಬಿನ ಸನಾತನ ಧರ್ಮ ಸಭೆಯು ಮತ್ತು ಜ್ಯೋತಿಸರದ ಹಿಂದೂ ವಿಶೇಷ ಈ ಪವಿತ್ರ ಕ್ಷೇತ್ರದ ಪುನರುದ್ಧಾರದ ಕೆಲಸವನ್ನು ಕೈಗೊಂಡವು.

ಭಗವದ್ಗೀತಾ ಮಂದಿರವು ಕಟ್ಟಲ್ಪಟ್ಟಿದೆ. ಇಲ್ಲಿ ಗೀತಾ ಕಥಾ ವಸ್ತುವಿಗೆ ಸಂಬಂಧಿಸಿದ ವಿಗ್ರಹಗಳು ಸ್ಥಾಪಿಸಲ್ಪಟ್ಟಿವೆ. ೧೯೪೮ರಲ್ಲಿ ಕಾಳಿಕಾ ದೇವಾಲಯವು ನಿರ್ಮಾಣಗೊಂಡಿತು. ಆಗ ದೇವಿಯ ವಿಗ್ರಹವು ರಾವಲ್ಪಿಂಡಿಯಿಂದ ತರಲ್ಪಟ್ಟಿತ್ತು. ಸರೋವರವನ್ನು ಸರಿಯಾಗಿ ತೋಡಿ ಘಾಟುಗಳನ್ನು ಕಟ್ಟಿಸಿದರು. ಈಗ ವರ್ಷದ ಎಲ್ಲಾ ಸಮಯಗಳಲ್ಲಿ ಯಾತ್ರಿಕರು ಬಂದು ಸ್ನಾನಮಾಡಿ ಸರೋವರದ ಮೆಟ್ಟಲುಗಳಲ್ಲಿ ಪೂಜಾನುಷ್ಠಾನಗಳನ್ನು ಮಾಡಬಹುದು.

ಗೀತಾಜಯಂತಿಯ ಮತ್ತು ಸೂರ್ಯಗ್ರಹಣಗಳ ಸಮಯಗಳಲ್ಲಿ ದೇಶದ ನಾನಾ ಕಡೆಯ ಯಾತ್ರಿಕರು ಭಗವದ್ಗೀತೆಯ ಈ ಪವಿತ್ರ ಭೂಮಿಯ ಸಂದರ್ಶನಕ್ಕಾಗಿ ಇಲ್ಲಿ ಬಂದು ಸೇರುತ್ತಾರೆ. ಅವರು ಆ ಪುಣ್ಯ ಸರೋವರದಲ್ಲಿ ಸ್ನಾನಮಾಡುತ್ತಾರೆ. ಅಕ್ಷಯ ವಟಕ್ಕೆ ಪುಷ್ಪವನ್ನು ಅರ್ಪಿಸಿ ಸರೋವರದ ನೀರನ್ನು ಹೊಕ್ಕುತ್ತಾರೆ. ಗೀತೆಯ ಪಠನ ಮತ್ತು ಶ್ರವಣಗಳನ್ನು ಮಾಡುತ್ತಾರೆ. ಪೂಜೆ, ಯಜ್ಞ ಮತ್ತು ಧಾರ್ಮಿಕ ಅನುಷ್ಠಾನಗಳನ್ನು ನಡೆಸುತ್ತಾರೆ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ಕತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಟಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

Ask for

AZAD

nitbit

BISCUITS

Azad Industries, Mangalore-1

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ

"ನವಜೀವ ಕಲ್ಪಂ" (ರಿ.)

(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯಬಾಯಿಕ ಹಾಗೂ ಉಲ್ಲಾಸಕರ ಮಾತ್ರೆಗಳ ಅಮರಿಯಾದ ಆಯುರ್ವೇದ ಔಷಧಿ ಮತ್ತು ದೇಹ ವೈದ್ಯಕೀಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY

BHADRAVATI (MYSORE)

ಹಿಂದಿ ಹಿರಣ್ಯಗರ್ಭನನ್ನು ಹಿಡಿಯಲು ಹವಣಿಸುವ ರಾಹು

(ಹಸ್ತೊಂದನೇ ಪುಟದಿಂದ)

ನ್ಯೋತ್ಸವ ಆಚರಿಸಲು ವಿಶೇಷ ಏರ್ಪಾಡುಗಳನ್ನು ಮಾಡಿತ್ತು. ಇದು ಸಾಲದೋ ಎಂಬಂತೆ, ಒಂದೆರೆ ಸಭೆಗೆ ಏರ್ಪಾಡು ಮಾಡಲು ಸ್ವತಃ ಅವರೇ ವ ನವಭಿಲಾಷೆಯನ್ನು ವ್ಯಕ್ತ ಪಡಿಸಿದರು. ಆಚಾರ್ಯರ ಆಗ್ರಹಕ್ಕೊಳಗಾಗಿರ ವ ದ್ರಾ. ಮು. ಕ. ಅದಕ್ಕೆ ಏರ್ಪಾಡು ಮಾಡಿತು. ಅಲ್ಲ ವ ಯೋವೃದ್ಧ ಶ್ರೀ ರಾಜಾಜಿ ಮಾಕಾಡುತ್ತ ತನ್ನ ವಂಶದ ಶೇಷ ಜೀವನವನ್ನು ಇಂಗ್ಲೀಷಿಗಾಗಿಅರ್ಪಿಸಿರುವೆನೆಂದು ಘೋಷಿಸಿದರು. ಸರಕಾರೀ ಭಾಷಾ ತಿದ್ದ ಪಡಿ ಮಸೂದೆಯ ನ್ನೆದುರಿಸಿ, ಅದರ ಮಂಡಿವನ್ನು ಕಾಣುವದಾಗಿಯೂ ಅವರು ಹೇಳಿರುವರು. ತನ್ನ ಆಸೆಯು ಆಂಗ್ಲ ಭಾಷೆಯನ್ನವರು ಹೊಗಳಿದರು. ಹಿಂದಿಯನ್ನು ತೆಗಳಿದರು. ಸುಮಾರು ನೂರು ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ಆಂಗ್ಲ ಭಾಷೆಯು ಇಲ್ಲಿ ಆಡಳಿತ ಭಾಷೆಯಾಗಿದ್ದು ಭಾರತದ ಎಲ್ಲಾ ಭಾಗಗಳಲ್ಲೂ ಸರಿಸಮವಾಗಿ ಹಬ್ಬಿದೆ ಇಷ್ಟಲ್ಲದೆ ಸ್ಕಂತಲೂ ಇಂಗ್ಲೀಷು ದೇಶವನ್ನು ಒಂದುಗೂಡಿಸಿರುತ್ತದೆ! ಇದು ಅವರ ಇಂದಿನ ವಾದ!

ಇದು ಆಂಗ್ಲೇಯ ನಾಗಲೀ, ಒಂದೂ ಗೊತ್ತಿಲ್ಲದ ಜರ್ಚಸ್ಪನಾಗಲೀ ಆಡಿರುವ ಮಾತುಗಳಲ್ಲ. ಭಾರತದ ಮಾಜಿ ಗವರ್ನರ್ ಜನರಲ್ ಆಗಿರುವ ಮಾತುಗಳು. ಆಂಗ್ಲಭಾಷೆಯ ಆಡಳಿತದಂತೆ ಆಂಗ್ಲೇಯರು ಅಲ್ಲಿಕೆಯೂ ಇಲ್ಲಿ ನೂರು ವರ್ಷಗಳಿಗಿಂತಲೂ ಹಿಂದಿನಿಂದ ನಡೆದ ಕೊಂಡು ಬಂದಿತ್ತು. ಅದನ್ನೇಕೆಕ್ಕೆ ಶ್ರೀ ರಾಜಾಜಿ ಎದುರಿಸಿದರು? ಗವರ್ನರ್—ಜನರಲ್ ಆಗಲಿಕ್ಕೇನು? ನೂರು ವರ್ಷಗಳಿಂದ ಇದ್ದ ಅವರೇ ಗವರ್ನರ್‌ಜನರಲ್ ಆಗಿರಬಹುದಿತ್ತಲ್ಲಾ? ಅದು ಅಲ್ಲದೆ, ಆಂಗ್ಲ ಭಾಷೆ ದೇಶವನ್ನು ಒಂದುಗೂಡಿಸಿತೆನ್ನುವದಕ್ಕಿಂತ ಆಂಗ್ಲೇಯರು ಒಂದುಗೂಡಿಸಿದರೆನ್ನುವದೇ ಸರಿಯಾದೀತು! ಅಂತಹ ಜನರನ್ನು ಇಲ್ಲಿಂದೇತಕ್ಕೆ ಹಿಡಿಸಲಾಯಿತು? ಕೇವಲ ಅಧಿಕಾರ ವ್ಯಾಮೋಹವೇನು? ಅಧಿಕಾರದಿಂದ ಇಳಿದೂಡನ ಅದೇ ಹಳಯ ಬಾಲ ಕಳೆದುಕೊಂಡ ನರಿಯನುಡಿಗಳು! ಅದರೆ ಜನರಿಗೆ ಆಂಗ್ಲರ ಇಸ್ಟ್ರೀಟಲ್ಲಿ ಕಟ್ಟಡವ ಒಗ್ಗಟ್ಟಿನ ಅಂಶ್ಯ ಗೊತ್ತು. ಆಂಗ್ಲೇಯರಿಂದಲಾ ಬ್ರಹ್ಮಪ್ರದೇಶ, ಶ್ರೀಲಂಕ ಮುಂತಾದ ಪ್ರತ್ಯೇಕವಾಯಿ ತಲ್ಲಿವ ಸಂಸ್ಥಾನ ಸಿಕ್ಕಿತು ಅಲ್ಲ ಕೂರ್ಯಸ್ಥಿತ್ತು. ಶ್ರೀಸ್ವಾಮಿ ನ್ನು ಕೈಬಿಟ್ಟು ಹೋಗಿಯಿತ್ತಿದ ಅಲ್ಲದ ಅವರ ಆಳ್ವಿಕೆ ತಾಲದ್ದು ಫ್ರೆಂಚರು ಯಾಗೂ ಪೋರ್ತುಗೀಸರ ದಬ್ಬಾಳಿಕೆಯೂ ಇಲ್ಲ ನಡೆಯುತ್ತಿತ್ತು ಮತ್ತು ಸಂಸ್ಥಾನಗಳ ಸಂಖ್ಯೆಗೆ ಕೊಂತ ಇಲ್ಲಿ ಬ್ರಿಟಿಷರು ಬಿಟ್ಟು ಹೋದ ಮೇಲ್ಲಿನೇ ಫ್ರೆಂಚ ನ್ನು ಪೋರ್ತುಗೀಸರನ್ನು ಯೂರಂಗಳಲ್ಲಿ ಹುಸಿರುವದು. ಮತ್ತು ಎಲ್ಲದ ಸಂಸ್ಥಾನಗಳನ್ನು ಅಶ್ವಮೇಧ ಇಲ್ಲದೆನೇ ಕೇಂದ್ರದ ಆಡಳಿತಕ್ಕೊಳಪಡಿಸಿದ್ದು? ಅನಂತರ ರಾಜ್ಯ ರಚನೆಯಾಯಿತು. ನೈಜಸ್ಥಿತಿ ಇದಾದರೂ ಶ್ರೀ ರಾಜಾಜಿ ಎಲ್ಲಿಲ್ಲಿಗೋ ನಮ್ಮ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಹಿಂದಿ ಇಂದು ಎಷ್ಟು ಜನರಿಗೆ ಗೊತ್ತು? ಹಿಂದಿ ಬಲ್ಲವರ ಸಂಖ್ಯೆ ಹೆಚ್ಚೇ? ಆಂಗ್ಲಭಾಷೆ ಅರಿತಿರುವವರ ಸಂಖ್ಯೆಯೆ? ಹಿಂದಿ ಬಲ್ಲವರ ಸಂಖ್ಯೆಯೇ ಹೆಚ್ಚು ಹಾಗಿದ್ದ ದಾಟಿರುವ ಶ್ರೀ ರಾಜಾಜಿ ಅದೇನೇನೋ ಆಡುತ್ತಿದ್ದಾರೆ!

ದಕ್ಷಿಣ ಇಂಡಿಯಾದ ಮೇಲೆ ಹಿಂದಿ ವಿಜಯ ವೈಜಯಂತಿಯನ್ನು ಹಾರಾಡಿಸದಂಗೆ ಎದುರಿಸಲು ಅವರೊಡನೆ ಮದರಾಸಿನ ಪ್ರಜಲಿತ ವಂತ್ರಿ ವಂಡಲ, ನೆರೆಕರೆಯ ರಾಜ್ಯಗಳೂ ಕೈಸೇರಿಸಿಯೂವೆಂದು ಆಶೆ ವ್ಯಕ್ತಪಡಿಸಿದ್ದಾರೆ. ಇದು ವ ನ ಸ್ವಿನಲ್ಲೇ ವಂಡಿಗೆ ವಂಕ್ಯುವದೆಂಬುದು ಅವರಿಗೆ ಗೊತ್ತು. ಆದ ದರಿಂದಲೇ ನಂತರದ್ದ ಮಾತಿನಲ್ಲಿ ತನ್ನ ಒಂಟಿ ಹೋರಾಟದ ಕುರಿತು ಅವರು ತಿಳಿಸಿರುವರು. ವ ದರಾಸು ಸರಕಾರದ ಮುಖ್ಯ ಮಂತ್ರಿಯವರು ಇಂಗ್ಲೀಷ್ ಇನ್ನಿಲ್ಲವಂತೆ ಮಾಡಬಹುದಾದರೂ ಇತರರು ತನಗೆ ನೆರವೀಯಬೇಕಂದು ಅವರು ಕೇಳಿಕೊಂಡಿದ್ದಾರೆ. ಅಂದರೆ ತಿರು ಅಣ್ಣಾದೊರೈಯವರ ವ ಲೆ ವಿ ಪ್ರ ರಾಜಾಜಿಯವಂಗೆ ಈ ವಿಷಯುಲ್ಲಿ ನಂಬಿಕೆ ಇಲ್ಲವೆಂದಂಯಿತ.

ದ್ರಾ ಮು ಕ ದ ಅಜಮಾಯಿದ ನಂತರ ತಿರು ಅಣ್ಣಾದೊರೈಯವರ ರ ಜಕೀಯ ಗುರು ತಿರು ಈ ವೆ ರಾ ಸ್ವಾಮಿ ನಾಯ್ಕರ್ ಅಂ ತಿರು ಅಣ್ಣಾದೊರೈಯವರಿಗೆ ಹಿತ್ತಿರದವನಾಗಿ ಒಟ್ಟಿದ್ದಾರೆ. ಅದುದರಿಂದ ತಿರು ರಾಮಸ್ವಾಮಿ ನಾಯ್ಕರ್ ರವರು ತವಿಳು ನಾಡುಜನರು ಭಿನ್ನವಂದು ಹಳಿಸಿದಾಗಲೂ ತಿರು ಅಣ್ಣಾದೊರೈಯವ್ವನಿಂದೇರಾಯಿತು. ಈ ರಾಜಾಸ್ವಾಮಿನಾಯ್ಕರ್ ಶ್ರೀ ರಾಜಾಜಿಯವರ ಹಿಂದೀಹೋರಾಟದ ರಹಸ್ಯವನ್ನು ಬಯಲಿಗೆ ಇದಿರುವರು.

ತನ್ನ ಶೇಷ ಜೀವನವನ್ನು ಹಿಂದಿ ಸಂಪರ್ಕಶಾಹಿಯಾಗ ವುದರ ವಿರುದ್ಧವಾಗಿ ಕಳೆಯುತ್ತೇನೆನ್ನುವ ಶ್ರೀ ರಾಜಾಜಿ ಅವರೇ ಭಾಷಾ ಸಮಸ್ಯೆಗೆ ರಜೆ ಕೊಡಲು ಬೇರೆಯವರಿಗೆ ಹೇಳುತ್ತಿದ್ದಾರೆ. ಇವರೇ ಏಕೆ ರಜೆ ತೆಗೆದುಕೊಳ್ಳಬಾರದು? ಅನ್ಯರಿಗೆ ಆಂದದ್ದು ಇವರಿಗೂ ಅನ್ವಯಿಸುತ್ತದೆಯಲ್ಲವೇ?

ಈ ರಹಸ್ಯದ ಅರಿವು ತಿರು ಅಣ್ಣಾದೊರೈಯವರಿಗೂ ಆಯ ತೆಂದರೆ ಅ ಅವರು ತಿರು ರಾಜಾಜಿಯವರ ರಾಜಕೀಯ ರಾದ್ಧಾಂತದಲ್ಲಿ ಭಾಗವಹಿಸುವದಿಲ್ಲ. ಆಗ ದ್ರಾ ಮು. ಕ.ದಿಂದ ತಿರು ಅಣ್ಣಾದೊರೈಯವರನ್ನು ಉಚ್ಚಾಟಿಸಿಗೊಳಿಸಿ, ದ್ರಾ. ಮು. ಕ ವನ್ನು ಧೂಳುಧೂಸರಗೊಳಿಸಿ ತನ್ನ ಸ್ವಾಂಶ್ರ ಪಾರ್ಟಿಯನ್ನು ಬೆಳೆಸಲು ಶ್ರೀ ರಾಜಾಜಿ ಯವರಿಗೆ ಸಾಧ್ಯವಾಗುತ್ತದೆ. ದ್ರಾ. ಮು. ಕ.ದಂತಹ ತ ಚ್ಚ ಪ್ರತ್ಯೇಕತಾ ಮನೋಭಾವನೆಯುಳ್ಳ, ಸಮಾಜವಾದಿ ವ ನೋಭಾವನೆಯುಳ್ಳ ಪಕ್ಷದ ಕೈಯಲ್ಲಿ ಆಡಳಿತದ ಅಂಕುಶವನ್ನು ಬಿಡಲು ಶ್ರೀ ರಾಜಾಜಿ ಸಿದ್ಧರಿಲ್ಲ. ಆದರೂ ಕಾರ್ಯಸಿದ್ಧಿಗಾಗಿ ಕತ್ತೆಯ ಕಾಲನ್ನು ಅವರೀಗ ಹಿಡಿಯ ಬೇಕಾಗಿರ ತ್ತದೆ. ಮುಂದೆ ತಾನೇ ಒಬ್ಬಂಟಿಗನಾಗಿಯೇ ಹೋ ರಾಡುವದಾಗಿ ಅವರು "ಅಶ್ವಾಸನೆ"ಕೊಡುತ್ತಿದ್ದಾರೆ. ಅಂದರೆ ವಿದ್ಯಾರ್ಥಿಗಳೇ ಅಲ್ಲದ ಇತರ ವ ತದಾರರೇ ದ್ರಾ. ಮು. ಕ. ಕ್ಕ ವ ತದಾನಮಾಡುವ ಬದಲು ಸ್ವತಂತ್ರಪಾರ್ಟಿಗ ವ ತದಾನ ಮಾಡುವಂತೆಗಲೇ ಅವರು ಜನರ ಣ ಪ್ರಜ ರಕ್ಕೆ ಅರಂಭಿಸಿ ಬಿಟ್ಟಿದ್ದಾರೆ.

ಇಂಗ್ಲೀಷಿನ ಇರುವಿಕೆಗಾಗಿ ಹೀಗೆಲ್ಲಾ ಹ ರಿಂಡತ್ತಿರ ವ ಶ್ರೀ ರಾಜಾಜಿಯವರಂಗ ಇಂಗ್ಲೀಷನ್ನು ತನ್ನ ಪಾರ್ಟಿಗೂಂದು ಹ ಗೂ ಸಿ ದಂ ವದು ಅಶ್ಚರ್ಯ. ಅವರ ತೂಭ್ಯತ್ವನೇ ಜ್ಞಾನದಿಂದ ದಂಪಲಗಳ ತವರ ವ ಷ್ಟ ಮಗುವೊಂದನ್ನತ್ತನ ಮಕಾಣುವಂತಾಯ ಕೇಳಿಕೆಂಡು. ಆಲೂರ ಶ್ರೀ ರಾಜಾಜಿಗೆ ಉತ್ತರದ ಪ ಸರೇ ಪರ್ವತ ಸಿಕ್ಕಿತು. ಈ ರೀತಿ ಅವರು ಪ್ರಾಂತಿಯನ್ನು ತಂದು ಪ್ರಯತ್ನಿಸುತ್ತಿದ್ದಾರೆಯೇ ವಿನ, ಎಲಿಜಭಥಳ್ಳನ್ನು ತಂಲಿಕ್ಕಾಗಿ ಅಲ್ಲ.

ತನ್ನ ಶೇಷ ಜೀವನವನ್ನು ಶ್ರೀ ರಾಜಾಜಿ ನಿಡವಾಂಗಿ ಹಿಂದಿಗೆದ ರಾಗಿ ಹೋರಾಡುವದಕ್ಕಾಗಿ ಅರ್ಪಿಸಿರುವರಂದಲ್ಲಿ ಭಾಷಾ ಮಸೂದೆಯನ್ನು ಮುಂದೂಡುವದಿಂದ ಹಾಗೂ ಸಮ್ಮೇಳನದಿಂದ ಅವರಿಗೇನು ಪ್ರಯೋಜನವಿದೆ?

ಈಗ ನಾವೊಂದು ನಿರ್ಣಯಕ್ಕೆ ಬರಬಹುದ —ಶ್ರೀ ರಾಜಾಜಿಯವರಿಗೆ ಹಿಂದಿಯ ಮೇಲೆ ಯೂವ ವಿಧದ ಹಗೆಯೂ ಇರುವದಿಲ್ಲ. ಇತ್ತೀಚೆಗೆ ಅವರು ತನ್ನ ಸ್ವ ರಾಜ್ಯದಲ್ಲಿ ಲೇಖನ ಬರೆದು ಇಲ್ಲಿಯ ವ್ಯಾಪಾರೀ ಜನರನ್ನು ಹಿಂದಿ ಒಗ್ಗಟ್ಟಿನ ದ್ವಾರದಿಂದ ಪೋಣಿಸಿಗುತ್ತದ್ದೆಂದು ಬರೆದಿರುತ್ತಾರೆ. ಅಂಗ್ಲೇಯರು ಇಲ್ಲಿಗೆ ವ್ಯಾಪಾರಿಗಳಾಗಿ ಬಂದಿದ್ದರೆಂಬುದು ಚಟ್ಟನೆ ಜ್ಞಾಪಕಕ್ಕೆ ಬರದಿರಲಂದು. ಅದಕ್ಕಿಂತಲೂ ಇಲ್ಲಿಯ ವ್ಯಾಪಾರಿಗಳನ್ನು ಒಂದುಗೂಡಿಸುವಶಕ್ತಿ ಹಿಂದಿಗಿದ್ದಲ್ಲಿ ಎಲ್ಲಾ ಜನರನ್ನು ಒಂದುಗೂಡಿಸುವ ಶಕ್ತಿ ಅದಕ್ಕಿಲ್ಲವೇನು? ಆದ ದರಿಂದಲೇ ಹಿಂದಿ ಹಿರಣ್ಯಗರ್ಭನನ್ನು ಹಿಡಿಯಲು ಹವಣಿಸುತ್ತಿರುವ ರಾಹು ತಾನೆಂಬಂತೆ ಅವರು ಆಚವಾಡುತ್ತಿರುವರಂದೂ, ಹಿಂದೀ ಕೋಲನ್ನು ಅವರು ಕಾಂಗ್ರೆಸ್ಸ್ ಹೋರಿಗೆ ಬಡಿಯಲು ಪ್ರಯೋಗಿಸುತ್ತಿದ್ದಾರೆಂಬುದಂತೂ ನಿಜವಿದೆ.

Prohibitory order

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. L. P. No. 161/67

in

O. S. No. 20/66

ಅನಂತಪತಿ ಕೊಡಂ—ಅರ್ಜಿದಾರರು (ವಾದಿ)

ಸುನಂದಾ ದೇವಿ, ನೇಮಿರಾಜ ಒಲ್ಲಾಳ ಪತ್ನಿ, ಮಂಗಳೂರು ತಾಲೂಕು, ಪಕನಾಡಿ ಕಟ್ಟು ಪದವು ಎಂಬಲ್ಲಿ ವಾಸ್ತವ್ಯ. P O Bikarnakatte —ಎದುರು-ಪ್ರತಿವಾದಿ

ಸದ್ರಿ ಎದುರಿಗೆ ಕೋರ್ಟ್ ಹುಕುಮ್ ಪ್ರಕಾರ ಈ ಮುಂದಿನ ಕೊಡೊ ಇಂಗುವ ಪ್ರಸಿದ್ಧಿಟು ಅರ್ಜಿದಾರರ ವಿನಂತಿರ—

ಅರ್ಜಿದಾರ್ರು ನಿಮ್ಮ ಮೇಲೆ ನಷ್ಟದ ಮೇಲಿನ ಅಮ್ಲದಾವುಮ್ಲು ಸಲ್ಲಿಸಿದ್ದಾರೆ ಕೊಡಿದಿನ ಮೇಲೆ ಅರ್ಜಿದಾರ ಕೊಟ್ಟಿರುವ ಮೇರಗೆ, ನಿಮ್ಮ ಒಕ್ಕಿನ ಬೆಳ್ತಂಗಡಿ ತಾಲ್ಲೂಕಿನ ಗ್ರಾಮದ

ಸ ನಂ.	ಸ ಬಿ. ನಂ.	ವಿಸ್ತೀರ್ಣ ಎಕ್ರೆ.	ಕೀರ್ಣ ರೂ.
19	1	3—93	12—50
19	6	0—89	3—81
19	7	0—11	0—28
19	9	0—19	0—15
19	2	0—85	0—59
19	3	0—91	8—91

ಈ ಅಸ್ತಿ ಇದರ ಕೊಮ್ಮಿ, ಕಾಡು, ಕರೆ, ಕಟ್ಟಡಗಳು, ಇಂಗ, ಇಂಬಳ್ಳು ಇತ್ಯಾದಿ ಕಾಸಿರುವ ಸಸ್ಯಾದಿ ಮೂಲ ಪಕ್ಕೆನ ಅಸ್ತಿಯನ್ನು ಕೋರ್ಟ್ ಹುಕುಮ್ ಪ್ರಕಾರ ಜಪ್ತು ಪಡಿಸಿಯದಂತಲೂ, ನಿಮ್ಮ ಸ್ವಾಧೀನ ಅಸ್ತಿಯನ್ನು ಯಾವ ರೀತಿಯಿಂದಲೂ, ಜವಾಬ್ದಾರಿಯಾ ಪಂಗಿಸಿದ ಮಾಡಕೂಡದಂತೆ ಆಜ್ಞೆ ನಲ್ಲಪಟ್ಟಿದ್ದೇರಂತಲೂ, ಈ ಕುರಿತು ನಿಮ್ಮ ಅಭ್ಯಂತರ ಇದ್ದೇನೆಂದೂ ಇದ್ದರೆ ತಾರೀಕು 5—3—1968ನೇ ಸೂರ್ಯಾಸ್ತ ಗಂಟೆ 10 ಕ್ಕೆ ಕೋರ್ಟ್ ಮುಂದೆ ಹಾಜರಾಗಿ ಉದಹರಣ ತಕ್ಕದಂತಲೂ ಈ ಮುಂದಿನ ನಿಮಗೆ ತಿಳಿಯ ಪಡಿಸಿಯದೆ.

Sd. Nemiraja Shetty

Advocate for Petitioner

ಬೆಳ್ತಂಗಡಿ, 22—1—68

READ & ADVERTISE IN NAVAYUGA WEEKLY

ಹೆಲ್ತ್ ಎಸೋಸಿಯೇಶನ್ ಆಫ್ ಇಂಡಿಯಾ

ಆರೋಗ್ಯಾಭಿವೃದ್ಧಿಯನ್ನು ಸಾಧಿಸುವ ಸ್ವಯಂಪ್ರೇರಿತ ಸಂಸ್ಥೆಯೊಂದು ದಿ ಹೆಲ್ತ್ ಎಸೋಸಿಯೇಶನ್ ಆಫ್ ಇಂಡಿಯಾ ಎಂಬ ಹೆಸರಿನಿಂದ ಸ್ಥಾಪಿತವಾಗಿದೆ. ಇದರ ಕಾರ್ಯಾಲಯವು 3, ರೆಡ್ ಕ್ರಾಸ್ ರೋಡ್, ನವದೆಹಲಿ—1 ಇಲ್ಲಿದೆ. ಕೇಂದ್ರ ಆರೋಗ್ಯ ಸಚಿವ ಡಾ| ಎಸ್. ಚಂದ್ರಶೇಖರ್ ಇದರ ಪ್ರಥಮ ಅಧ್ಯಕ್ಷರು. ಆರೋಗ್ಯ ಸೇವೆಗಳ ಸೈರೆಕ್ಟರ್ ಜನರಲ್ ಡಾ| ಕೆ. ಎನ್. ರಾವ್ ಚೆಯರ್‌ಮ್ಯಾನ್ ಆಗಿದ್ದಾರೆ.

ದೇಶದಲ್ಲಿ ಆರೋಗ್ಯ ಶಿಕ್ಷಣವನ್ನು ಪ್ರಚಾರ ಮಾಡುವುದು, ವ್ಯಕ್ತಿ—ಸಮಾಜಗಳು ಆರೋಗ್ಯದ ಮಹತ್ವವನ್ನರಿಯುವಂತೆ ಮಾಡುವುದು, ಸಾಧ್ಯವಿರುವಲ್ಲಿ ಸರಕಾರ ಪ್ರತಿನಿಧಿಗಳೊಡನೆ ಸಹಕರಿಸುವುದು ಇದರ ಉದ್ದೇಶ. ವೈದ್ಯಕೀಯ ಲಕ್ಷ್ಯ, ಕುಟುಂಬ ಯೋಜನೆ, ಪ್ರಸೂತಿ, ಶಿಶು ಹಿತಚಿಂತನೆಗಳ ಕಡೆಗೂ ಎಸೋಸಿಯೇಶನ್ ಗಮನಹರಿಸುವುದು. ಕಥೆ, ಲಾವಣಿ, ನಾಟಕ, ಕೀರ್ತನೆ, ಚಲಚ್ಚಿತ್ರ, ಮುದ್ರಿತ ಸಾಹಿತ್ಯಗಳ ಮೂಲಕ ಮಿದು ತನ್ನ ಕಾರ್ಯ ಸಾಧನೆಗೆ ತೊಡಗುವುದು. ಪ್ರತಿ ನಾಗರಿಕನೂ ಇದ ಕ್ಷೇಮದನ್ನಾಗಲು ಅನುಕೂಲಗುವಂತೆ ಸದಸ್ಯತನ ಚಂದಾವನ್ನು ಬಹಳ ಕಡಿಮೆ ಯಾಗಿಟ್ಟಿದೆ. ಕಾಲಕ್ರಮೇಣ ದೇಶದ ಎಲ್ಲ ರಾಜ್ಯಗಳಲ್ಲೂ ಈ ಸಂಘದ ರಾಜ್ಯ ಶಾಖೆಗಳು ಸ್ಥಾಪನೆಗೊಳ್ಳುವ ಸಿರೀಕ್ಷೆಯಿದೆ. ಸಮಗ್ರ ದೇಶದ ಜನತೆಯು ಈ ಸಂಘದಿಂದ ಉಪಕೃತವಾಗುವುದೆಂದು ಹಾರೈಸಬಹುದು.

ಕೊಸ್ಮೊ ಪೊಲಿಟನ್ ಕ್ಲಬ್

ಉಡುಪಿಯ ಅಜ್ಜರಕಾಡಿನಲ್ಲಿ ಸರಕಾರಿ ಆಸ್ಪತ್ರೆಯ ಎದುರುಗಡೆ ಕೊಸ್ಮೊ ಪೊಲಿಟನ್ ಕ್ಲಬ್ ಎಂಬ ಹೊಸತೊಂದು ಕ್ಲಬ್ ತಾ. 26—1—68ರಂದು ಪ್ರಾರಂಭಿಸಲ್ಪಟ್ಟಿರುವುದು. ಇದಕ್ಕೆ ಶ್ರೀ ಎಂ. ಮಧ್ವರಾಜರು ಅಧ್ಯಕ್ಷರಾಗಿಯೂ, ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ಲಕ್ಷ್ಮಣ ಶೇಟರು ಉಪಾಧ್ಯಕ್ಷರಾಗಿಯೂ ಎಡ್ವೋಕೇಟ್ ಶ್ರೀ ಪಿ. ಶಿವಾಜಿ ಶೆಟ್ಟಿ ಮತ್ತು ಎಕ್ಸಿಕ್ಯೂಟಿವ್ ಇಂಜನಿಯರ್ ಸರ್ವಸರ್ ಅಸಿಸ್ಟೆಂಟ್ ಇಂಜನಿಯರರ ಜತೆ ಕಾರ್ಯದರ್ಶಿಗಳಾಗಿಯೂ ಮುಖ್ಯ ಶ್ರೀ ವಿ. ಕೆ. ಶೆಟ್ಟಿರು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟಿದ್ದಾರೆಂದು ತಿಳಿದು ಬರುತ್ತದೆ.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 346/1967

ನಾಗಪ್ಪ ಹತ್ವಾರ
ವಾದಿ—

ಪ್ರತಿವಾದಿಗಳು— ಕೊಲ್ಲು ಹೆಂಗ್ಸು ಕೂಡಾ ಉಪ್ಪುತಾಲ್ಲ ಮಣಿಯರು ಗ್ರಾಮದಲ್ಲಿರುವ ಕೊಲ್ಲು ಹೆಂಗ್ಸಿನ ಮಕ್ಕಳು ಕೂಸಾ| ಗಿರಿಯಾ| ಕಾಪ್ಕ| ಕಾವೇರಿ ಹೆಂಗ್ಸಿನ ಮಗಳು ಕಾವೇರಿ| ಚಂದು ಹೆಂಗ್ಸಿನ ಮಕ್ಕಳು ಜಬ್ಬಾ| ಸಂಜಾ| ನೀಲಾ ಹೆಂಗ್ಸಿನ ಮಕ್ಕಳು ಶಿವ, ನಾರಾಯಣ| ಅಣ್ಣಯ್ಯ| ಕೂಡಾ ಜನರಿಗೆ ಈ ಮೂಲ್ಯತಿಳಿಯ ಪಡಿಸುವುದೇನೆಂದರೆ—

ಪ್ರತಿವಾದಿಗಳಾದಿಗೆ ತಾ. 28_7_52ರಲ್ಲು ರೂಪಾಯಿ 1000_00ಕ್ಕೆ ರಿ. ಸಿ ಬರಕೊಟ್ಟ ಸ್ಟಿಗಿಆಸ್ತಿ ಈಡು ದಸ್ತಾವೇಜಿನ ಬಾಬ್ತು ಆಸು ಬಡ್ಡಿ ಹಣಗಳನ್ನು ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 1—3—1968ಕ್ಕೆ ಮೇಲಿನ ಕೋರ್ಟ್‌ನಲ್ಲಿ ಕಾಯ್ಕೆಗೆ ಇರುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಮೇಲಿನ ಕೋರ್ಟ್ ಮುಂದೆ ಹಗಲು 11ಗಂಟೆಗೆ ತಾವಾಗಿ ಜ್ಞಾಪಿಸಿ ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲ್ಯ ತಿಳಿಯ ಪಡಿಸಿದೆ.

N. S. Parameshwariah
Advocate for Plff.
Date 20—1—68, Coondapoor

ಜೈ ಜವಾನ್

ನಮ್ಮ ಹಿಮಾಲಯದ ಗಡಿ ಪೂರ್ಣ ಹಿಮಮಯ ಪ್ರದೇಶ. ಅಲ್ಲಿನ ಚಳಿಗಾಲದ ತಿಂಗಳುಗಳಂತೂ ಬಹು ದುರ್ಭರ. ಎಲ್ಲೆಡೆ ಹಿಮ. ಕೊಟ್ಟೆದು ಚಳಿ, ಕೊಂಡುದು ಚಳಿ. ಒಂದೇ ಒಂದು ಹುಲ್ಲಿನ ಎಸಳು ಕಾಣಿಸದು. ಬೇಸರು ತರುವ ಏಕಾಂತತೆ, ಚೀತ್ಕರಿಸುವ ಗಾಳಿಯು ಆಗಾಗ ಬೀಸಿ ರುದ್ರ ಪ್ರಶಾಂತತೆಯನ್ನು ಕದಡುವದು.

ನಿಸರ್ಗದ ಈ ಸವಾಲನ್ನು ಎದುರಿಸಿ ಹಿಮಗಿರಿ ಶೃಂಗದಲ್ಲಿ ನಿಂತಿದ್ದಾನೆ ಭಾರತದ ಗಡಿ ರಕ್ಷಕ—ನಮ್ಮ ಜವಾನ. ಈ ಕೆಲ ವರುಷಗಳಲ್ಲಿ ಪ್ರಕೃತಿಯ ಕಾಠಿಣ್ಯವನ್ನು ಅರಿತು ಅರಗಿಸಿಕೊಳ್ಳಲು ಕಲಿತಿದ್ದಾನೆ ನಮ್ಮ ಯೋಧ. ಕೊರೆಯುವ ಚಳಿಯೂಗಲೀ ಶಿಖರದ ಔನ್ನತ್ಯಗಳಾಗಲೀ ಅವನನ್ನು ಇಂದು ಕಂಗೆಡಿಸಲಾರವು. ರಕ್ಷಣಾ ವಿಭಾಗದ ವೈಜ್ಞಾನಿಕರು ನಮ್ಮ ಸೈನಿಕರ ಬಾಳು ಹಿಮಗಿರಿ ಸದಳದಲ್ಲಿಯೂ ಸಹನೀಯವಾಗಲೆಂದು ಅನೇಕ ಹೊಸ ಸಂಶೋಧನೆಗಳನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ. ತನ್ನ ಸಹಜ ಸಾಮರ್ಥ್ಯದೊಂದಿಗೆ ನಮ್ಮ ಜವಾನ ಭೂಮಿ, ಹವಾಮಾನಗಳ ವೈಪರೀತ್ಯಗಳನ್ನು ನಗುಮೊಗದಿಂದ ಎದುರಿಸಲು ಸದಾ ಸಿದ್ಧ. ಅವನಿಗೆ ಗೊತ್ತು, ಇಡೀ ದೇಶವೇ ತನ್ನ ಹಿಂದೆ ಇದೆ ಎಂದು. ಗಡಿ ರಕ್ಷಣೆಯ ಕಾರ್ಯದಲ್ಲಿ ನಿರತನಾದ ಜವಾನನನ್ನು 'ಜೈ ಜವಾನ್' ಎಂದು ದೇಶಕ್ಕೆ ದೇಶವೇ ಅಭಿನಂದಿಸುತ್ತದೆ.

ವಿವಾಹ ಸಮಾರಂಭ

ದಿ. ಉಪ್ಪೂರು ಕೃಷ್ಣಯ್ಯ ಶೆಟ್ರ ಪುತ್ರ ಶ್ರೀ ವಿಠಲ ಶೆಟ್ಟರು ಶ್ರೀ ಬಾಲಂತಿ ಬೆಟ್ಟು ಭುಜಂಗ ಸುಲಾಯರ ಪುತ್ರಿ ಕುಮಾರಿ ಸೇವಂತಿಯನ್ನು ದಿ| ಉಪ್ಪೂರು ಕೃಷ್ಣಯ್ಯ ಶೆಟ್ರ ಪುತ್ರ ಶ್ರೀ ಕರುಣಾಕರ ಶೆಟ್ಟರು ನೀರೆ ಸರೋಳಿ ಬಾಕ್ಕಾರು ಚಂದಯ ಶೆಟ್ರ ಪುತ್ರಿ ಕುಮಾರಿ ಜಯಲಕ್ಷ್ಮಿಯನ್ನೂ ತಾ. 25—1—68ರಂದು ಉಡುಪಿ ಕಲ್ಯಾಣ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಲೋಕ ಸೇವಾ ವೃಂದದ ಮತ್ತು ವಿದ್ಯಾ ಸಂಸ್ಥೆಗಳ ವಾರ್ಷಿಕೋತ್ಸವ

ತಾ. 18-1-68ರಂದು ಲೋಕ ಸೇವಾ ವೃಂದದ ಮತ್ತು ಲೋಕ ಸೇವಾ ವಿದ್ಯಾ ಸಂಸ್ಥೆಗಳ ಜತೆ ವರ್ಧಂತ್ಯುತ್ಸವವು ಡಾ. ಎಸ್. ಪಿ. ಪೈಯವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು. ವಾಡಿಕೆಯ ಕಾರ್ಯಕ್ರಮಗಳಾದ ಬಳಿಕ ಡಾ| ಪೈಯವರು ಮಾತನಾಡುತ್ತಾ ಮಕ್ಕಳ ಬಗ್ಗೆ ಹೆತ್ತವರು ಹಾಗೂ ಅಧ್ಯಾಪಕರು ತುಂಬಾ ಎಚ್ಚರಿಕೆ ವಹಿಸಬೇಕೆಂದು, ಸಕಾರಣವಾಗಿ ವಿವರಿಸಿ ಲೋಕ ಸೇವಾ ವೃಂದದ ವಾತಾವರಣವು ಶಾಂತಿನಿಕೇತನದಂತೆ ಇರುವುದೆಂದೂ ಹೇಳಿದರು. ಧನ್ಯವಾದಾರ್ಪಣೆ ನಂತರ ಮನರಂಜನೆಯ ಕಾರ್ಯಕ್ರಮಗಳಾಯುವು.

ತಾ. 20-1-68ರಂದು ಲೋಕಸೇವಾವೃಂದಕ್ಕೆ ಸಾಗರದ ಎಮ್. ಎಲ್. ಎ.ಗಳಾದ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಸಂದರ್ಶನ ಏರ್ಪಡಿಸಿ ಲೋಕ ಸೇವಾ ಕ್ಯೆಯರ್ ಸೆಕೆಂಡರೀ ಶಾಲೆಯಲ್ಲಿ ದೇಶದ ನವನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿಗಳ ಹೊಣೆಗಾರಿಕೆಯ ಕುರಿತು ವಿಚಾರಪೂರ್ಣ ಉಪನ್ಯಾಸ ಮಾಡಿದರು.

ಪ್ರಜಾಪ್ರಭುತ್ವ ದಿನಾಚರಣೆ

ಉಡುಪಿ ನಗರ ಸಭೆಯ ವತಿಯಿಂದ ಪ್ರಜಾಪ್ರಭುತ್ವ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟಿತು. ಬೆಳಿಗ್ಗೆ ಶಾಲಾ ಮಕ್ಕಳು ಮೆರವಣಿಗೆಯಿಂದ ಗಾಂಧಿ ಮೈದಾನದಲ್ಲಿ ಬಂದು ಸೇರಿದ ಮೇಲೆ ನಗರ ಸಭಾಪತಿ ಶ್ರೀ ಕೆ. ಮಂಜುನಾಥ ಮಧ್ಯಸ್ಥರಿಂದ ರಾಷ್ಟ್ರ ಧ್ವಜಾರೋಹಣವಾಗಿ ಸರ್ಕಾರಿಯ ಪೇಜಾವರ ಮಠದ ವತಿಯಿಂದ ಮಕ್ಕಳಿಗೆ ಸಿಹಿಂಡಿ ಹಂಚಲಾಯಿತು. ಸಂಜೆ ಶ್ರೀ. ಎ. ಜಿ. ಅಳ್ವಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಬೇಳಂಜೆ ಸಂಜೀವ ಹೆಗ್ಡೆಯವರಿಂದ ಬಹುಮಾನ ವಿತರಣೆಯಾಯಿತು. ಬಳಿಕ ಶ್ರೀಗಳಾದ ಬಿ. ವಿ. ಕೆದಲಾಯ್ಯರು, ಆನಂತರ ಕೃಷ್ಣ ಅವರಿಂದ ಭಾಷಣಗಳಾದುವು. ಆನಂತರ ಕೃಷ್ಣ ವೇಷ ಸ್ಪರ್ಧೆ, ಜಾನಪದ ನೃತ್ಯ ಹಾಗೂ ವಿನೋದಾವಳಿಗಳಾಗಿ ಅಧ್ಯಕ್ಷರ ಭಾಷಣವಾಯಿತು.

ವಿಶ್ವ ಹಿಂದೂ ಪರಿಷತ್ತಿನ ದ. ಕ. ಜಿಲ್ಲಾ ಶಾಖೆಯ ಉದ್ಘಾಟನೆ

ತಾ. 14—1—68ರಂದು ಉಡುಪಿಯ ಶ್ರೀ ಕೃಷ್ಣಾಪುರ ಮಠದ ಶ್ರೀ ಕೃಷ್ಣ ಕಲಾ ಮಂದಿರದಲ್ಲಿ ಶ್ರೀ ಪೇಜಾವರ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಸ್ವಾಮಿ ಶ್ರದ್ಧಾನಂದಜೀಯವರು ವಿಶ್ವಹಿಂದೂ ಪರಿಷತ್ತಿನ ದ. ಕ. ಜಿಲ್ಲಾ ಶಾಖೆಯನ್ನು ಉದ್ಘಾಟಿಸಿದರು.

ಆರಂಭದಲ್ಲಿ ವಿಶ್ವ ಹಿಂದೂ ಪರಿಷತ್ತಿನ ದ. ಕ. ಜಿಲ್ಲಾ ಶಾಖೆಯ ಉಪಾಧ್ಯಕ್ಷ ಶ್ರೀ ಡಿ. ಪುಟ್ಟಸ್ವಾಮಿಯವರು ಸ್ವಾಗತಿಸಿದರು. ಸ್ವಾಮಿ ಶ್ರದ್ಧಾನಂದಜೀಯವರು ಉದ್ಘಾಟನಾ ಭಾಷಣ ಮಾಡುತ್ತಾ ಪುಣ್ಯಭೂಮಿ ಭಾರತದಲ್ಲಿ ಜನಿಸಿದ ನಮಗೆ 'ಹಿಂದು' ಎನ್ನುವುದಕ್ಕೆ ಅಭಿಮಾನವಿರಬೇಕು. ಹಿಂದುಗಳು ತಮ್ಮಲ್ಲಿಯೇ ಸಂಘಟನಾತ್ಮಕವಾದ ರೀತಿಯಲ್ಲಿ ಮುಂದೆ ಬರಬೇಕೆಂದು ಹೇಳಿದರು. ಅವರು ಸಂಕಾದದ ಜಾತ್ಯಾತೀತ ಧೋರಣೆಯ ಕುರಿತು ಪ್ರಸ್ತಾಪಿಸಿ ಜಗತ್ತಿಗೇ ಮಹಾ ತತ್ವಗಳನ್ನು ಕೊಡಿದ ಶಂಕರ, ಮಧ್ವ, ವಸಿಷ್ಠ, ವ್ಯಾಸ ಮುಂತಾದವರ ತತ್ವಕ್ಕೆ ಈ ರಾಷ್ಟ್ರದಲ್ಲಿಯೂ ಮೌಲ್ಯತೆ ಬಂದುಂತಾಯಿತು ಎಂದರು. ನಾವು ಎಲ್ಲ ಧರ್ಮವನ್ನು ಸಹಿಸುತ್ತೇವೆ ಆದರೆ ಎಲ್ಲರ ಧರ್ಮವೂ ಒಂದೇ ಎನ್ನುವ ಮಾತನ್ನು ಒಪ್ಪಲಾರೆವೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಇಂದು ದೇಶದಲ್ಲಿ ಅನೈಕ್ಯ, ಪರಸ್ಪರ ದ್ವೇಷ, ಅಸೂಯೆಗಳುಇರುವುದು, ನಮ್ಮ ಧರ್ಮ ಸಂಸ್ಕೃತಿಯ ಪ್ರಭಾವ ಜನರಲ್ಲಿ ಇಲ್ಲದಿರುವುದೇ ಆಗಿದೆ. ಧರ್ಮ ಸಂಸ್ಕೃತಿ ಬೆಳೆದಷ್ಟು ನಮ್ಮ ದೇಶ ಜೀವಂತ ರಾಷ್ಟ್ರವಾಗುತ್ತದೆ, ನಮ್ಮ ದೇಶದ ಮುಖಂಡರು ಧರ್ಮ ಸಂಸ್ಕೃತಿಯನ್ನು ಅಲಕ್ಷಿಸಿದ್ದರಿಂದಲೇ ದೇಶದಲ್ಲಿ ಅರಾಜಕತೆ ಹಾಗೂ ಗೊಂದಲಗಳಿಗೆ ಕಾರಣವಾಗುತ್ತಲಿದೆಯೆಂದರು.

ಕೊನೆಯಲ್ಲಿ ಜಿಲ್ಲಾ ಶಾಖೆಯ ಕಾರ್ಯದರ್ಶಿ ಶ್ರೀ ಶ್ರೀಧರ ಭಟ್ಟರು ವಂದನಾರ್ಪಣೆ ಗೈದರು.

ಪೇಜಾವರ ಶ್ರೀಗಳವರಿಗೆ ಪುರಸಭೆಯ ಸನ್ಮಾನ

ಪರ್ಯಾಯ ಪೀಠವೇರುವ ಶ್ರೀ ಪೇಜಾವರ ವಿಶ್ವೇಶತೀರ್ಥ ಶ್ರೀ ಪಾದಂಗಳವರನ್ನು ಉಡುಪಿ ನಗರ ಸಭೆಯವರು ತಾ. 14ರಂದು ಮಾನಪತ್ರವನ್ನಿತ್ತು ಸನ್ಮಾನಿಸಿದರು.

ಆರಂಭದಲ್ಲಿ ನಗರ ಸಭಾಪತಿ ಶ್ರೀ ಕೆ. ಎಂ. ಮಧ್ವರಾಜರು ಸ್ವಾಗತಿಸಿ ಮಾನಪತ್ರಾರ್ಪಣೆಮಾಡಿದರು. ಶ್ರೀಗಳವರು ತಮ್ಮ ಉತ್ತರದಲ್ಲಿ ಉಡುಪಿಯ ಮಹಾತ್ಮೆಯನ್ನು ವರ್ಣಿಸಿ ನಾಗರಿಕರಿಗೆ ಲೌಕಿಕದ ಜತೆಯಲ್ಲಿ ಆಧ್ಯಾತ್ಮಿಕ ಶಕ್ತಿಯ ಮೂಲಕ ಮುಂದುವರಿಯ ಬೇಕೆಂದರು. ನಗರ ಸಭೆಯ ಕುರಿತು ಪ್ರಸ್ತಾಪಿಸಿ ಮುನಿಸಿಪಾಲಿಟಿಯೆಂದರೆ ಶರೀರದ ಶುಚಿತ್ವವನ್ನು ಕಾಪಾಡುವಂತೆ ನಗರದ ಶುಚಿತ್ವವನ್ನೂ ನಾವು ಕಾಪಾಡಬೇಕೆಂದರು. ಕೊನೆಯಲ್ಲಿ ಕೌನ್ಸಿಲರು ಶ್ರೀ ಎನ್. ಸೀತಾರಾಮ ಕಾಮತರು ಧನ್ಯವಾದ ಸಮರ್ಪಿಸಿದರು.

ಒಂದು ಅಂಚಿಕೆ

"ಆಪ್ತಾ! ಬಸ್ ಪ್ರಯಾಣ ದರವನ್ನು ಸ್ವಲ್ಪ ಹೆಚ್ಚಿಸಲಾಗುವುದು ಎಂದು ಪತ್ರಿಕೆಯಲ್ಲಿದೆ..."

"ಇರಲಿ. ಆ ಹೆಚ್ಚಳವೆಷ್ಟೆಂದಾಗಲೀ ಎಂದಿನಿಂದಪೂರ್ವಕಾಲ ಸ್ತ್ರಾಳುತ್ವವೆಂದಾಗಲೀ (Retrospective effect) ವಿವರ ವಿದೆಯೇ?... ಯಾಕೆಂದರೆ, ಸರಕಾರೀ ಕಾರ್ಯ ತಾನೆ!"

—ಎಚ್. ಎಂ. ವಿಜಯನಾರಾಯಣ,
ಪೆಜಾಲ

ಇದೀಗಲೇ ಹೊಸತಾಗಿ ಶೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone: 261448

The only Qualified optometrist of South

Shetty's Optics & Contact Lens Clinic

London Qualified Optometrists

೭ಈ'ಗೆನ್ ಬೋಸ್ಟ್ರೀಟ್, ಬಾಝುಬಾರ್‌ಗೇಟ್ ಪೋಸ್ಟ್ ಆಫೀಸಿನ ಎದುರು
ಬೊಂಬಾಯಿ - ೧.

ಲಂಡನ್ ಶಿಕ್ಷಣಕ್ಕಾದ ಹಾಗೂ ಜಗದ್ವ್ಯಾಪಿ ಅನುಭವವುಳ್ಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರನ ೧೮ ಅದೃಶ್ಯ ಭಾಗಗಳಿರುವ 'ಬೈಫೋಕಲ್ಸ್ ಲೆನ್ಸ್'ಗಳ ತಜ್ಞರು.

ತಂದೆಯಂತೆ ಮಗ

(ಎರಡನೇ ಸುಟದಿಂದ)

ವಾಗಿದ್ದ ಪತಿಯ ಯೋಚನೆ ಕಾಡತೊಡಗುತ್ತಿದ್ದ. ಜನಾರ್ದನನ ಚಿಕ್ಕ ಮಗ ವಾಗಿರುವಾಗಲೇ ಸೀತಮ್ಮನ ಗಂಡ ಅವಳನ್ನು ತ್ಯಜಿಸಿ, ಇನ್ನೊಂದು ವಿವಾಹವಾಗಿದ್ದನು. ಸೀತಮ್ಮ ಮಗುವಿನ ಹತೆ, ತಾಯಿ ಮನೆಗೆ ಹೋಗಿ ಇರಬೇಕಾಗಿತ್ತು. ಒಂದಲ್ಲ ಒಂದು ದಿವಸ ಬಳಿಗೆ ಸೇರಿಸಿಯಾನು ಎಂದು ಕಾದು ಕಾದು ಅವಳು ಈಗ ವೃದ್ಧೆಯಾಗಿದ್ದಳು. ಜನಾರ್ದನನಿಗೂ ತಂದೆಯ ಮೇಲೆ ಪ್ರೀತಿ ಇರಲಿಲ್ಲ. ದೂರವಾಗಿದ್ದ ತಂದೆ ದೂರವೇ ಇರಲಿ ಎಂದಾತನ ಯಸ್ಸಿಗೆ ಬಂದ ಬಳಿಕ ಇದ್ದ ಬಿಟ್ಟಿದ್ದನು. ಸೀತಮ್ಮ ತನ್ನ ಒಂದೇ ಆಸರೆಯಾಗಿದ್ದ ಮಗನನ್ನೇ ಹೊಂದಿಕೊಂಡು ಇದ್ದಳು. ಈಗ ಆ ಆಧಾರಕ್ಕೂ ಭದ್ರತೆ ಇರುವಂತೆ ಕಾಣಿಸಲಿಲ್ಲ.

ವಿವಾಹವಾಗಿ ಆರು ತಿಂಗಳುಗಳಲ್ಲಿ ಜನಾರ್ದನ ತಾಯಿಯೊಡನೆ ಮಾತನಾಡುವುದನ್ನೇ ಬಿಟ್ಟಿದ್ದನು.

ಸೀತಮ್ಮನೇ, 'ಪೇಟೆ ಕಡೆ ಹೋಗುತ್ತಿಯಾ?" ಎಂದ ಸಂಜೆ ಕೇಳಿದರೆ,

"ಹೌದು' ಎಂದು ಚಿಕ್ಕ ಉತ್ತರ ಕೊಟ್ಟು ಹೋಗುತಿದ್ದ, ಹಿಂದ 'ಅಮ್ಮನಿಗೆ ಏನು ಬೇಕು?' ಎಂದು ಕೇಳುತಿದ್ದನು.

ಈಗ ಸೀತಮ್ಮನೇ, 'ಹೋದರ ವೀಳಯದೆಲ, ಅಂಕೆ ತಗೆದುಕೊಂಡು ಬಾ' ಎನ್ನುತಿದ್ದಳು.

'ಹುಂ' ಎಂದು ಒಂದೆರಡು ಬಾರಿ ತಂದಿತ್ತಿದ್ದನು. ಒಮ್ಮೆ "ಇಲ್ಲಿಯೇ ಸವಾಪದ ಅಂಗಡಿಯಿಂದ ಕೆಲಸದಾಕಯ ಒಳಿತರಿಸು" ಎಂದನು.

ಬಳಿಕ ಸೀತಮ್ಮ ಮಗನೊಡನೆ ಎಲೆ ಅಡಿಕೆ ಪ್ರಸ್ತಾಪ ಎತ್ತಲಿಲ್ಲ. ದಿನಾ ಸಂಜೆ ಬರುವಾಗ ಕಾಗದದ ಕಟ್ಟುಗಳು ಅವನ ಕೈಯಲ್ಲಿ ಇರುತಿದ್ದುವು.

'ಲಲಿತಾ, ತಗದುಕೊಂಡು ಹೋಗು' ಎಂದು ಪತ್ನಿಯ ಕೈಗೆ ಒಪ್ಪಿಸುತಿದ್ದನು.

ಸೀತಮ್ಮ ಇವನು ಇದ್ದರೂ ಅತ್ತನೋಡುತ್ತಿರಲಿಲ್ಲ.

ವೃದ್ಧಾಪ್ಯದಲ್ಲಿ ಸುಖವಾಗಿ ಇರಬೇಕು ಎಂಬ ಆಸೆ ಯಿಟ್ಟು ಕೊಂಡಿದ್ದಳು ಅವಳು. ಆದರೆ ಈಗ ಹಿಂದಿಗಿಂತಲೂ ಹೆಚ್ಚಿನ ತೊಂದರೆ ಅನುಭವಿಸಬೇಕೆಂದು ತೋರಿತು.

ಲಲಿತೆಯದೇ ಯಿಷ್ಟವೂ ನಿಕ. ಸೀತಮ್ಮನಿಗೆ ಒಂದು ಗುಟುಕು ಕಾಫಿಯಾದರೂ ಬೇಕಾಂದೂ ಸಾಸಮುನ್ನೇ ಕೇಳಬೇಕು.

ಮಗನೊಡನೆ ಒಮ್ಮೆ ಹೇಳಿದಳು,

'ನೋಡು ಜನಾ, ನಾನೆನ್ನು ಕಷ್ಟ ಪಟ್ಟು ನಿನ್ನನ್ನು ಸಾಕಿ ಸಲಹಿದೆ. ವೃದ್ಧಾಪ್ಯದಲ್ಲಿ ಕಷ್ಟಿಂತಯೂಗಿ ಬಾಳಬೇಕು ಎಂದು ಆಶಿಸಿದೆ. ಈಗ ನನಗೆ ಸಂಯೂಗಿ ಉಣ್ಣಲೂ ಎಡೆ ಇಲ್ಲ ಎಂದಂಗಿದೆ.'

ಜನಾರ್ದನ, "ಲಲಿತಾ ಅಮ್ಮನಿಗೆ ನೀನು ಉಣಬಡಿಸುವುದಿಲ್ಲವೆ?' ಎಂದು ಸತ್ನಿಯೊಡನೆ ವಿಚಾರಿಸಿದನು.

"ಹೀಗೂ ಹೇಳ್ತಾರೆಯೆ? ಏನು ನಾನೊಬ್ಬಳೇ ಎಲ್ಲಾ ತಿಂದು ಕೇಗುತ್ತೇನೆಯ?' ಎಂದುತ್ತರವಿತ್ತಳು.

ಒಂದರಡು ದಿನ ಅತ್ತೆ ಎಂದರೆ ಕೊಂಚ ಗೌರವ ಕೊಡುತಿದ್ದಳು. ಮುಂದೆ ಪುನಃ ಹಿಂದಿನಂತೆಯೇ ಅತ್ತೆಯ ಮೇಲೆ ಸಿಡುಕು, ಅಸಮಾಧಾನ ಗುಣಗುಟ್ಟುವಿಕೆ ಆರಂಭವಾಯಿತು. ಮಗನೊಡನೆ ಹೇಳುವಾ ಎಂದರೆ, ಎಷ್ಟು ಬಾರಿ ರೂಡುವುದು? ಬೇಡ ಅವಳ ಬಾಲಿಗೆ ಅವಳೇ ಎಂದುಕೊಂಡಳು.

ಮಗನೊಡನೆ, ಒಂದು ಸಂಜೆ, ಈ ಬಾರಿ "ಊರಿನ ಜಾತ್ರೆಗೆ ನಾನು ನನ್ನ ಅಣ್ಣನಲ್ಲಿಗೆ ಹೋಗಿ ಬರ್ತೇನೆ' ಎಂದಳು.

"ಹೂಂ ಹೋಗಿ ಬಾ' ಎಂದನವನು.

'ಲಲಿತೆಯೂ ಬರಲಿ, ಒಟ್ಟಿಗೆ ಹೋಗಿ ಬರುತ್ತೇನೆ."

ಆಗ ಲಲಿತೆ, ನಾನು ಬರೋದಿಲ್ಲಾ. ನನ್ನ ಅಣ್ಣ ಇಲ್ಲಿಯೇ ಈ ಬಾರಿ ಪರೀಕ್ಷೆ ಮುಗಿದು ರಜಾ ಆರಂಭವಾದಾಗ ಬಂದಿರುತ್ತಾನೆ ಎಂದಳು.

ಸೀತಮ್ಮನಿಗೆ ಕಳವಳವಾಯಿತು. ತೋರಿಸಲಿಲ್ಲ ಮನೆಯಲ್ಲಿ ಅವಳು ಒಬ್ಬಳೇ ದೂರದವಳು ಎನಿಸಿತು. ಮರುದಿನ ಅಣ್ಣನ ಮನೆಗೆ ಹೊರಟು ಹೋದಳು. ಎಂದಿನಂತೆ ಜನಾರ್ದನ ಬಟ್ಟೆ ಹತ್ತಿಸಲು ಬರಲಿಲ್ಲ. ಆಫೀಸಿನ ಅಳತೆ ಟಿಕೇಟು ಮಾಡಿ ಕೊಡಲು ಏರ್ಪಾಡು ಮಾಡಿದ್ದನು.

ಸೀತಮ್ಮ ಕಣ್ಣಲ್ಲಿ ನೀರು ತುಂಬಿಕೊಂಡೇ ಅಣ್ಣನ ಮನೆಗೆ ಹೊರಟರು.

ಒಂದು ವಾರದಲ್ಲಿ ಹಿಂತಿರುಗುವೆನೆಂದು ಸೀತಮ್ಮ ಬಂದಿದ್ದಳು ಅವಳು ಅಣ್ಣನಲ್ಲಿಗೆ ಬಂದ ನಾಲ್ಕನೆಯ ದಿನ ಜನಾರ್ದನನ ಪತ್ರ ಬಂತು. ಮಾವನಲ್ಲಿ ಅವನು ವಿನಂತಿಸಿ ಬರೆದಿದ್ದನು.

"ಅಮ್ಮನಿಗೆ ಪೇಟೆ ಹವೆ ಹಿಡಿಸೋದಿಲ್ಲ. ಕಳ್ಳಿಯಲ್ಲಿ ನಿಮ್ಮ ಮನೆಯಲ್ಲಿ ಇರಲಿ. ಖರ್ಚಿಗೆ ಬೇಕಾದರೆ ತಿಂಗಳು ತಿಂಗಳು ಹಣ ಕಳುಹಿಸುತ್ತೇನೆ.

'ಸೀತೇ ನಿನ್ನ ಮಗನ ಪತ್ರ ಬಂದಿದೆ. ನೀನು ಇಲ್ಲಿಯೆ ಇರಬೇಕಂತ ಖರ್ಚಿಗೆ ಬೇಕಾದರೆ ಹಣ ಕಳುಹಿಸುತ್ತಾನಂತೆ' ಎಂದು ಅಣ್ಣ ಶ್ಯಾಮರಾಯ ಪತ್ರ ಓದಿ ಹೇಳಿದನು.

ಸೀತಮ್ಮ ಅಳಲಾರಂಭಿಸಿದಳು.

"ಅಳುವುದೇಕೆ? ಕೈ ಹಿಡಿದ ಗಂಡ ತೊರೆದು ಬಿಟ್ಟ ಎಂದು. ನೀನು ಜೀವಕ್ಕೆ ಸಾಗಿಸದೆ ಇದ್ದೆಯಾ? ಈಗ ಮಗನಿಗೆ ಹೆಚ್ಚಾಗಿದೆ ಎಂದು ನಾನು ಬಿಡಲಾರೆ. ಇಷ್ಟಯೇ ಇದ್ದೆ ಬಿಡು' ಎಂದ. ತಂಗಿಯನ್ನು ಸಮಾಧಾನ ಪಡಿಸಿದರು.

ಅದು ನಿಜ. ತಂದೆಯಂತೆ ಮಗ ಎಂದು ಅವಳು ಕಣ್ಣೊರಸಿಕೊಂಡಳು.

ಶ್ರೀ ತಿಲಕ ಪಂಚಕಮ್!

ಮ|| ವಿ|| ತಿಲಕಂ ಭಾರತ ಭಾಗ್ಯ ರಕ್ಷ ತಿಲಕಂ ಸ್ವಾತಂತ್ರ್ಯ ಸೂರ್ಯೋಜ್ವಲಂ
ತಿಲಕಂ ಸತ್ಕುಲ ರಕ್ಷ "ರಕ್ಷಗಿರಿ' ಯಾ ಮಹೇಶ್ವರೀ ರಕ್ಷ ಶ್ರೀ
ತಿಲಕಂ ರಾಷ್ಟ್ರದ ಪೂರ್ವ ರತ್ನಗಳೊಳಂ ಸದ್ರಕ್ಷ ಸದ್ಭಾಷಣಂ
ತಿಲಕಂ ವೀರ ಮಹಾತ್ಮ ಲೋಕ ಮಾನ್ಯ ನಮರಂ ಶ್ರೀ ನೀಲಕಂಠೇಶ್ವರಾ ||

ಶಾ|| ವಿ|| ವಿದ್ವನ್ಮಾನ್ಯ ವಿಶೇಷವಾಗ್ಮಿ ವಿಬುಧಂ ಜ್ಯೋತಿಷ್ಯ ಮಾರ್ತಾಂಡನೈ
ವಿದ್ವದ್ಭೂಷಣ ನ್ಯಾಯ-ಶಾಸ್ತ್ರಿ ತಿಲಕಂ ಸ್ವಾತಂತ್ರ್ಯದಾಚಾರ್ಯ ತಾಂ
ಗೀತಾಧ್ಯಾಸ ರಹಸ್ಯ ಗ್ರಂಥವದು ಸತ್ಸಾಹಿತ್ಯ ರಕ್ಷಂ ವಲಂ
ಸಾಹಿತ್ಯಾಂಬುಧಿ ಸೂರ್ಯ ಕಾವ್ಯ ತಿಲಕಂ ಶ್ರೀನೀಲಕಂಠೇಶ್ವರಾ || ೨ ||

ತಪ್ತಾಗಾಂದೆ ಶಾಂತಿಯೇಂ? ಬಳಂಗೇಂ? ಜ್ಞಾನೋಪದೇಶಂ ಮಹಾ
ಧೂರ್ತ ಸ್ವಾರ್ಥಿಗಳಿಂಗೆ ಸತ್ಯ ದಯೆಯೇಕಿಂಗ್ಲೀಷುಂ ರಾಷ್ಟ್ರಮಂ
ಕ್ರಾಂತಿ ಜ್ವಾಲೆಯು ಕಾಣದೇಂತ್ಯಜಪರೇಂ? ಸ್ವಾತಂತ್ರ್ಯ ಮೇ ಪೌರುಷಂ
ನಿನ್ನಾ ಕೇಸರಿ ವೀರ ಘೋಷವದುವೇ ಶ್ರೀನೀಲಕಂಠೇಶ್ವರಾ || ೩ ||

ಲಾಲ್ಬಾಲ್ಪಲರ ಪುತ್ರ ಪಂಗಡದೊಳಂ ನೀನಿರ್ದೆ ಸಿಂಹಂ ಸ್ವಯಂ
ಕ್ರಾಂತಿ ಜ್ಯೋತಿ ಸ್ವತಂತ್ರ ಭಾರತಕೆ ಕೀಂ ನಾಂಯೇ ಸ್ವರೂಪಂ ದಿಟಂ
ನಂದಾ ದೀಪದ ಪೋಲ್ ಪರಾರ್ಥಿಯೆನೆ ಕೀನೇನ್ ಧನ್ಯನೋ ಪೂಜ್ಯನೋ!
ನಿನ್ನಾ ಸಂಸ್ಮರಣಾಂ ಪುಣೀತ ಮಧುರಂ ಶ್ರೀನೀಲಕಂಠೇಶ್ವರಾ || ೪ ||

ದಾಸ್ಯ ತ್ಯಂಖಲೆಯನ್ನು ಕಿತ್ತೊಗೆಯೆ ಸರ್ ಸ್ವಾತಂತ್ರ್ಯ ಸದ್ಭೋಷದಿಂ
ರಂಷ್ಟ್ರೀತ್ಥಾನವ ಸಾಧಿಲ್ ಸೆಣಸುತಂ ಕಂಠಾಗೃಹಂ ಸೇರ್ದೆ ನೀ
ಕಾರಾಗೃಹದಲ್ಲಿ ರಾಜ್ಯ ಧಾಮ ನಿನಗಾದಾವಾಸ ಮತ್ತು ಹೂವೆಂಬ ಪೋಲ್
ಧೀರೋದಾತ್ತರ ಸ್ಥೈರ್ಯ ಶಕ್ತಿಗಣೆಯೇಂ ಶ್ರೀನೀಲಕಂಠೇಶ್ವರಾ || ೫ ||

ಶ್ರೀ ಕೆ. ಎನ್. ಭಟ್ಟ, ತಿರಾಡಿಪಾಲ್

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಸೆಳೆಯುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಟುಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೊ ಗೊಂಚಲು	1—70
ಪಂಚಗಜ್ಞಾಯ	2—00
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಸುಡಮುನ್ನುಗಳು	1—50
ವಿಚಿತ್ರ ಕಳ್ಳಸಂಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—50
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಟಲಾಗಿಗೆ ಬರೆದುಂ

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA 1—2—1968
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃತಿ ಪರಿಚಯ

ಪುಸ್ತಕಗಳಿಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಜಲಪಾತ: ಲೇಖಕರು: ಶ್ರೀ ಎಸ್. ಎಲ್. ಭೈರಪ್ಪ.

ಪ್ರಕಾಶಕರು: ಸಾಹಿತ್ಯ ಭಂಡಾರ, ಹೆಬ್ಬಳ್ಳಿ.

ಪುಟಗಳು: ೨೪೭, ಬೆಲೆ: ರೂ.೪-೦೦

"ಜಲಪಾತ" ಶ್ರೀ ಭೈರಪ್ಪನವರ ಹೊಸ ಸಾಮಾಜಿಕ ಕಾದಂಬರಿ. "ಕರ್ಮವೀರ" ಸಾಪ್ತಾಹಿಕದಲ್ಲಿ ಧಾರಾವಾಹಿಯಾಗಿ ಬೊಡಲು ಪ್ರಕಟವಾದ ಈ ಕಾದಂಬರಿ ಈಗ ಪುಸ್ತಕ ರೂಪದಲ್ಲಿ ಕನ್ನಡಿಗರ ಕೈ ಸೇರಿದೆ.

ಶ್ರೀ ಭೈರಪ್ಪನವರು ಒಂದೊಂದು ಪ್ರಶ್ನೆಯನ್ನು ಎತ್ತಿಕೊಂಡೇ ಒಂದೊಂದು ಕಾದಂಬರಿ ಬರೆಯುತ್ತಾರೆ. ಸೃಷ್ಟಿ ಶಕ್ತಿಯಿಂದ ವಿಜೃಂಭಿಸುವ ಜೀವನ ಪ್ರವೃತ್ತಿ ಮತ್ತು ಆ ಶಕ್ತಿಯನ್ನು ಹತ್ತಿಕ್ಕುವ ಜೀವನ ಪರಿಸ್ಥಿತಿಗಳ ಸಂಘರ್ಷವೇ 'ಜಲಪಾತ'ದ ಮೂಲವಸ್ತು. ನೀರು ಮತ್ತು ಮಣ್ಣುಗಳ ಶಕ್ತಿಯಿಂದ ವನಶ್ರೀ ಅರಳುತ್ತದೆ; ಗಂಡು-ಹೆಣ್ಣುಗಳ ಮೂಲಶಕ್ತಿಯಿಂದಲೇ ಜೀವನ ವಿಕಾಸ ಸಾಧ್ಯವಾಗುತ್ತದೆ: ಬೌದ್ಧಿಕ ಸ್ತರದಲ್ಲಿ ಕಲಾ ಸೌಂದರ್ಯವೂ ಆವಿರ್ಭವಿಸುತ್ತವೆ. ಇವೆಲ್ಲವೂ ಒಂದೇ ಮೂಲ ಶಕ್ತಿ—ಇದನ್ನು 'ಜಲಪಾತ'ದಲ್ಲಿ ಪ್ರತೀಕಾತ್ಮಕವಾಗಿ ವಿವೇಚಿಸಲಾಗಿದೆ. ಸಂಯೋಗದ ಕರೆ ಮತ್ತು ಕ್ರಿಯೆ, ಗರ್ಭದ ವಿಕಾಸ, ಜನನ ಕ್ಕೆ ಪೂರ್ವಭಾವಿಯಾದ ನೋವಿನ ಅನುಭವ— ಇವೆಲ್ಲವೂ ಸಹಜ ಸರಳವಾಗಿಯೇ ಕಾದಂಬರಿಯಲ್ಲಿ ಮೂಡಿವೆ. ಸೃಷ್ಟಿಯ ಧ್ಯೇಯವನ್ನು ಕಡೆಗಣಿಸಿದ ಡಾ। ನಾಡ ಗೌಡ ದಂಪತಿಗಳ ದುರಂತ ಚಿತ್ರ ಸೃಷ್ಟಿ ಶಕ್ತಿಯ ಆಳವನ್ನೂ ಜನ ಜೀವನದಲ್ಲಿದರಅವಿಭಾಜ್ಯತೆಯನ್ನೂ ಸೂಚಿಸುತ್ತದೆ; ಮತ್ತು ಅದರಿಂದಲೇ ಜೀವನವು ವನಶ್ರೀಯಂತೆ ಸುಂದರವಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಕಥಾ ನಾಯಕನಾದ ಒಂದು ಗಂಡು, (ಶ್ರೀಪತಿ) ನಾಯಕಿಯಾದ ಹೆಣ್ಣು (ವಸುಂಧರಾ) ತಂತಮ್ಮ ಸ್ವಂತ ಅನುಭವವನ್ನು ತಿಳಿಸುವ ರೀತಿಯಲ್ಲಿ ಈ ಕಾದಂಬರಿಯು ರಚಿತವಾಗಿದೆ.

ಜೋಗದ ಜಲಪಾತದಲ್ಲಿ ಸೃಷ್ಟಿ ಶಕ್ತಿಯು ಲಯಪೂರ್ಣವಾಗಿ ಶಾಂತಿಯನ್ನು ಬಿಂಬಿಸುತ್ತದೆ. ಖಂಡಲಾದ ವನಶ್ರೀ ಗರ್ಭವತಿಯಾದ ಸ್ತ್ರೀ ಮತ್ತು ವರ್ಷಾಕಾಲದ ಘಂತರ ವಿಕಸಿಸುವ ವನಸೌಂದರ್ಯ, ಎರಡರ ಅಂತರ್ಯದಲ್ಲೂ ಒಂದೇ ಸೃಷ್ಟಿ ಶಕ್ತಿಯನ್ನು ಪ್ರಕಟ ಮಾಡುತ್ತದೆ—ಲಯ ಮತ್ತು ಅವರೋಧದ ಶಕ್ತಿಯನ್ನು ಎದ್ದು ತೋರಿಸಿ, ಅನಂತತೆಯ ಶಕ್ತಿಯ ಜೊತೆಗೆ ತಾಪಸಿಯ ಶಾಂತಿಯನ್ನೂ ಕೊಡುತ್ತದೆ. ಬೊಂಬಾಯಿಯ ಸಮುದ್ರದಲ್ಲಿನ ಎತ್ತರೆತ್ತರವಾದ ಅಲೆಗಳು ಆ ಕೊಳೆಯ ನೀರಿನಿಂದಲೂ ಬಿಳಿಯ ನೊರೆಯನ್ನೂ ತುಂತುರುಗಳನ್ನೂ ಸೃಷ್ಟಿಸುತ್ತದೆ.

ಇಡಿಯ ಕಾದಂಬರಿಯನ್ನು ಓದಿದ ಮೇಲೆ ಇದೊಂದು "ಪ್ರತೀಕಾತ್ಮಕ"ವಾದ ಕಾದಂಬರಿಯೆಂದು ಮನವರಿಕೆಯಾಗಬಹುದು. ಮೇಲೆ ಹೇಳಿದ ಜಲಪಾತ, ವನಶ್ರೀ—ಕೊಳೆಯ ಸಮುದ್ರ ಎಲ್ಲವೂ ಒಂದೊಂದು ಬಗೆಯ ಪ್ರತೀಕ. ಡಾ। ನಾಡಗೌಡ, ಕಲಾವಿದ ಶ್ರೀಪತಿ ರೆಬೆಲ್ಲೊ ಇವರ ಚರಿತ್ರೆಗಳು ಕಲಾತ್ಮಕವಾಗಿ, ಪ್ರತೀಕಾತ್ಮಕವಾಗಿ ಇಲ್ಲಿ ಚಿತ್ರಿಸಲ್ಪಟ್ಟಿವೆ. ಇಲ್ಲಿನ ವರ್ಣನೆ ವಿವರಣೆಗಳಲ್ಲಿ ಪ್ರತೀಕಾತ್ಮಕತೆಯೂ ಇದೆ, ವಾಸ್ತವಿಕತೆಯೂ ಇದೆ. ಆಳವಾದ ಅಭ್ಯಾಸ, ಭಾವಾತ್ಮಕ ಶ್ರದ್ಧೆ ಮತ್ತು ಸುವಿಸ್ತೃತ ಅನುಭವಗಳು ಶ್ರೀ ಭೈರಪ್ಪನವರಲ್ಲಿ ಮುಪ್ಪುರಿಗೊಂಡಿವೆ — ಇದರ ಫಲವಾಗಿಯೇ ಹೊರಬಂದ "ಜಲಪಾತ" ಮಾನವ-ಸೃಷ್ಟಿ-ಸೌಂದರ್ಯಗಳ ಪರಸ್ಪರ ಮೇಳವನ್ನು ಹೊರಸೂಸುವ ಸುಂದರ ಕಾದಂಬರಿ

ಲೇಖಕರ ಭಾಷೆ ಸರಳ ಸುಂದರ; ಶೈಲಿಯಲ್ಲಿ ಭಾವಾತ್ಮಕತೆ ಒಡೆದು ಬಂದಿದ್ದರೂ ಸುಬೋಧವಿದೆ. ಸಾಮಾನ್ಯ ವಸ್ತುವನ್ನಾದರೂ ಹೊಸ ರೀತಿಯಲ್ಲಿ ಹೊಸ ಜಾಡಿಯಲ್ಲಿ ಒಯ್ಯುವ ಕಲಾಭಿಜ್ಞತೆ ಶ್ರೀ ಭೈರಪ್ಪನವರಲ್ಲಿ ಹಾಸುಹೊಕ್ಕಾಗಿದೆ. ಲೇಖನಿಯಲ್ಲೂ ಅವರು ವೀಣೆಯ ನುಡಿಯನ್ನು ನುಡಿಸಬಲ್ಲರು ಎಂಬುದಕ್ಕೆ ಅವರ 'ಜಲಪಾತ'ವೊಂದು ಜ್ವಲಂತ ಉದಾಹರಣೆ.

—ಗೋರಾ.

ಪುಡಿಗತೆಗಳು

ಲ ಭಿಕ್ಷುಕನಿತ್ತ ಭಿಕ್ಷೆ

ದಸರಾ ರಜೆಯಲ್ಲಿ ಕುಶಾಲಾಗಿ ಸಿನಿಮಾ ನೋಡುವಾ ಅಂತ ನಾನು ಮನೆಯವರನ್ನೆಲ್ಲಾ ಕರೆದುಕೊಂಡು ಹೊರಟೆ. ಥಿಯೇಟ್ರು ಒಟ್ಟು ಏಳು ಮಂದಿಗಳಿರುವ ತುಂಬಾ ಸಂಸಾರ. ಸಿನಿಮಾ ಥಿಯೇಟರಿನ ಕಿಟಕಿಗಳ ಮುಂದೆಲ್ಲ ಭಾರೀ ಭಾರೀ ಉದ್ದುದ್ದದ ಕ್ಯೂ ಮಾಲೆಗಳು ನಿಂತಿದ್ದುವು.

ನಾನೂ ನನ್ನ ಪರಿವಾರದೊಂದಿಗೆ ಒಂದು ಕ್ಯೂ ಹಿಡಿದೆ. ಪೋಣಿಸಿಕೊಂಡೆ. ಎರಡ್ಡು ಗಂಟೆ ಹೊತ್ತು ನಿಂತು ಇರ್ಕಾಲು, ಒಂದೂವರೆ ಕಾಲು, ಕುಕ್ಕುರಗಾಲುಗಳಿಂದ, ವಿಧವಿಧ ವಕ್ರ ಸುಳಿಯ ದೈವ ಕೈಭಂಗಿಗಳಿಂದ ತಪಸ್ಸು ಸಾಗಿಸಿದೆ. ಕೆಲವರು ತಮ ತಮಗೆ ತಿಳಿದಷ್ಟು ಸಿನಿಮಾ ಫಟಿಫಟಿಯರ ಸ್ತೋತ್ರಗಳನ್ನು ಪಠಿಸಿಕೊಂಡಿದ್ದರು. ಭಿಕ್ಷುಕ ಹುಡುಗರು ನಮಗೆ ಸ್ವಲ್ಪ ಪುಣ್ಯಭಾರವನ್ನು ಒದಗಿಸಲು ಪ್ರಯತ್ನ ಪಡುತ್ತಾ ಇದ್ದರು. ನಾನು ಎರಡು ಪೈಸಾ ಭಿಕ್ಷುಕನಿಗೆ ದಾನ ಮಾಡಿದೆ.

ಟಿಕೆಟ್ ಕೊಡುತ್ತಾ ಕೊಡುತ್ತಾ, ಕ್ಯೂಮಾಲೆ ಥಿಯೇಟರಿನ ಗರ್ಭದೊಳಗೆ ಹೋಗುತ್ತಾ ಹೋಗುತ್ತಾ, ನನ್ನ ಸರದಿ ಬಂತು ಅನ್ನುವಾಗ ಟಿಕೆಟ್ ಖಿಂಡಿ ಧಬ್ ಅಂತ ಮುಚ್ಚಿಕೊಂಡಿತು. ಟಿಕೆಟ್ ಕ್ಲೋಸ್.

ಕೂಡಲೇ ನನ್ನ ಪರಿವಾರದೊಂದಿಗೆ ಓಡಿದೆ ಮೇಲಿನ ಕ್ಯೂ ಕ್ಲಾಸಿಗೆ. ತುರುಕಿಕೊಂಡೆ ಆ ಕ್ಯೂನಲ್ಲಿ. ಜೇಬಿನ ಹಣ ಪೂರಾ ತೆಗೆದು "ಏಳು ಟಿಕೆಟ್" ಎನ್ನುತ್ತಾ ಖಿಂಡಿಯಲ್ಲಿ ಹಣ ಹಾಕಿದೆ. "ಒಂದು ಪೈಸಾ ಕಡಮ ಇದೆ" ಎಂದ.

ಜೇಬೆಲ್ಲಾ ವರಿಸಿ ನೋಡಿದೆ. ಇಲ್ಲ. ಟಿಕೆಟ್ ಕೊಡುವವ ಹಣವೆಲ್ಲಾ ವಾಪಾಸು ತಳ್ಳಿ ಹಿಂದಿನವರಿಗೆ ಕೊಡುತ್ತಾ ಇದ್ದ ನಾನು ಕ್ಯೂನಿಂದ ಸಿಡಿದುಕೊಂಡು ಎಲ್ಲರ ಮುಖಾನೂ ನೋಡಿದೆ. ಅವರವರ ಪಾಡು ಅವರವರಿಗೆ.

ನಾನು ನಿರಾಶೆಯಿಂದ ಆ ಭಿಕ್ಷುಕ ಹುಡುಗನ ಹತ್ತಿರ ಹೋಗಿ, ನನ್ನ ಕಷ್ಟ ಹೇಳಿಕೊಂಡು "ಒಂದು ಪೈಸಾ ಕೊಡಪ್ಪಾ! ನಾವು ಸಿನಿಮಾ ನೋಡದ ಪುಣ್ಯಾನಿನಗೂ ಬರುತ್ತೆ" ಎಂದು ಬೇಡಿದೆ.

ಭಿಕ್ಷುಕರ ನೋವು ಭಿಕ್ಷುಕನಿಗೇ ಗೊತ್ತು.

ಕೂಡಲೇ ಕೊಟ್ಟ ಒಂದು ಪೈಸೆ.

ಸಿನಿಮಾ ನೋಡಿದೆವು. ಬೇರೆ ಕಾಸಿಲ್ಲದ್ದರಿಂದ, ಮಿಠಾಯಿ ಬಿಸ್ಕೇಟು ಅನ್ನುವ ಹುಡುಗರನ್ನು ಸವಾಧಾನ ಮಾಡಲು ಸಾಕೋ ಸಾಕಾಯಿತು. ಮತ್ತೆ ಅವರನ್ನು ಎತ್ತೀ ಹೊತ್ತು ನಡೆದುಕೊಂಡು ಮನೆಗೆ ಬಂದು ಬೀಳುವಾಗ, ಇನ್ನೆಂದೂ ಬೇಡಪ್ಪಾ ಅನಿಸಿತು.

—'ನವಗಿರಿನಂದ'

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿರು, ಗರ್ಭಿಣಿಯರು! ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಸ್ವಾಹಿವೈದ್ಯ. ಹೊರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ರೆ ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ವಯಮಾಡಿ ಅದಷ್ಟು ತ್ವರೆಯ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾದಂತಾಗುವುದು.

ಮೆನೇಜರ್, ನವಯುಗ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



NAVAYUGA

8—2—1968

೨೦ ಪೈಸೆ

ಕಥಾ ಪ್ರಸಂಚ

ಶುಭಾನುಬಂಧ

ಕಥೆಗಾರರು:
ಎಚ್. ಸುಬ್ರಾಯ ಭಟ್ಟ, ಚೋನಾಳಿ.

"ಅದನ್ನಿನ್ನೂ ಯೋಚಿಸುತ್ತಿರುವೆಯಾ ರಾಧೆ? ಅದನ್ನು ಮರೆತು ಬಿಡೆಂದು ಆ ದೆಷ್ಟು ಬಾರಿ ಹೇಳಬೇಕಮ್ಮಾ ನಿಂಗೆ?" ಎಂದು ಕುಳಿತುಯೋಚಿಸುತ್ತಿದ್ದ ಮಗಳ ಮೈಯಡವಿ ಹೇಳಿದರು ವಿಶಾಲಾಕ್ಷಮ್ಮ.

ತಾಯಿಯ ಮಾತನ್ನು ಕೇಳಿದ ರಾಧೆಗೆ ಅಳು ತಡೆಯಲಾಗಲಿಲ್ಲ. ತಾಯಿ ಅದೆಷ್ಟು ಸಲೀಸಾಗಿ ಹೇಳಿದ್ದರೋ ಅವಳಿಗದು ಅಷ್ಟೇ ಕಠಿಣವಾಗಿ ತೋರ ತೊಡಗಿತು.

ಮಗಳ ಕಣ್ಣುಗಳಲ್ಲಿ ಹನಿಯೂಗಿ ಹರಿದು ಬರುವ ಕಣ್ಣೀರನ್ನು ಕಂಡು "ನಿನ್ನ ಸಂಕಟದರಿವು ನನಗೂ ತಿಳಿದಿದೆ ರಾಧ. ಆದರದಕ್ಕೆನ್ನು ಬೇರಾವದಾರಿಯೂ ಇಲ್ಲದಿರುವಾಗ ವ್ಯರ್ಥ ಕಣ್ಣೀರಿಂದೇನು ಪ್ರಯೋಜನ ಹೇಳು?" ಎಂದು ಮಗಳ ಕಣ್ಣೀರನ್ನು ತಮ್ಮ ಸೆರಗಿನ ತುದಿಯಿಂದ ಉಜ್ಜಿ ಬೆಗೆದರು.

ರಾಧೆಯ ಕಣ್ಣೀರು ನಿಂತಿದ್ದರೂ ಒಳಗುದಿಯ ತೊಡಗಿದ್ದ ಸಂಕಟ ಅವಳನ್ನು ದಹಿಸುತ್ತಲೇ ಇತ್ತು. ತುಂಬು ಯೌವ್ವನೆ ರಾಧೆಯ ಮುಖ ಬಿದಿಗೆಯ ಚಂದ್ರನಂತೆ ದಿನ ದಿನಕ್ಕೆ ಕಳಾಹೀನವಾಗುತ್ತಿತ್ತು.

ದಿನವೂ ನಕ್ಕು ನಲಿಯುತ್ತಿದ್ದ ಮಗಳು ಒಮ್ಮಿಂದೊಮ್ಮೆಲೆ ದುಃಖದಾವೇಗದಿಂದ ಮೂಲೆ ಹಿಡಿದುದನ್ನು ಕಂಡ ತಂದೆ ತಾಯಿಗಳು ಹೌಹಾರಿದರು. ಬೇರೆ ಗಂಡು ದಿಕ್ಕಿಲ್ಲದ ದಂಪತಿಗಳು ರಾಧೆಯನ್ನೇ ಗಂಡೆಂದು ಭಾವಿಸಿ ಮಮತೆಯಿಂದಲೇ ಬೆಳೆಯಿಸಿದ್ದರು. ಮಗಳ ಆಸೆ ಆಕಾಂಕ್ಷೆಗಳಿಗಾವ ಅಡೆ ತಡೆಯೂ ಹೆತ್ತವರಿಂದ ಬರುತ್ತಿದ್ದಿಲ್ಲ.

ಹೈಸ್ಕೂಲು ಪೂರೈಸಿದಾಗ ಮಗಳ ಮುಂದಿನ ಓದುವಿಕೆಗೆ ವಿಶಾಲಾಕ್ಷಮ್ಮನ ಪ್ರೋತ್ಸಾಹವಿದ್ದಿಲ್ಲ.

"ಹೆಣ್ಣಿಕ್ಕಳಿಗೆ ಹೆಚ್ಚು ಓದಿನ ಅವಶ್ಯಕತೆ ಇಲ್ಲ. ಮುಂದೊಂದು ದಿನ ಮನೆ ಮಕ್ಕಳನ್ನು ನೋಡಿಕೊಳ್ಳಲು ಗೃಹಜ್ಞಾನವಿರಬೇಕು. ಅದನ್ನು ಈಗಾದರೂ ಕಲಿತುಕೊ ರಾಧ." ಎಂದು ಮಗಳನ್ನು ಹತ್ತಿರ ಕುಳ್ಳಿರಿಸಿಕೊಂಡು ಹೇಳಿದ್ದರಾಪ.

ಆಗವಳು "ನಿಂಗೊತ್ತಿಲ್ಲವಮ್ಮ, ಹೈಸ್ಕೂಲಿನ ಓದೂ ಒಂದು ಓದೇ? ಕಾಲೇಜಿಗೇನೂ ಮನೆಯಿಂದ ಬಹುದೂರವಿಲ್ಲ. ಸುಮ್ಮನೆ ನೀವು ಇಲ್ಲದ್ದನ್ನು ನನ್ನ ತಲೆಗೆ ಹಚ್ಚಬೇಡ." ಎಂದು ತಾಯಿಯ ಬಾಯನ್ನು ಚುಚ್ಚಿದ್ದಳು.

ತಂದೆ ಶ್ರೀಪತಿರಾಯರಂತೂ ಮಗಳು ಹೇಗೆ ಹೇಳಿದರೆ ಹಾಗೆ ಆಂದುಕೊಂಡಿದ್ದವರು.

ಮಗಳ ಮಾತಿಗೆ ತಾಯಿ ಕೂಡಾ ಹೆಚ್ಚು ವಾದಿಸಲು ಹೋಗಿಲ್ಲವಾಗ. ಹಾಗಾಗಿ ರಾಧೆ ನಿರಾತಂಕವಾಗಿಯೇ ಕಾಲೇಜು ಸೇರಿದಳು.

ದಿನವೂ ಮನೆಗೆಲಸವನ್ನೆಲ್ಲಾ ತಾಯಿಯೇ ಮಾಡಿ ಪೂರೈಸುತ್ತಿದ್ದರೂ ಆಗಾಗ ಮಗಳೊಡನೆ "ನಿನ್ನ ಓದಿನೊಡನೆ ಸ್ವಲ್ಪ ಸ್ವಲ್ಪ ಮನೆಗೆಲಸವನ್ನೂ ನೋಡಿಕೋ ರಾಧ. ಇಲ್ಲವಾದರೆ ಮುಂದೊಂದು ದಿನ ತುಂಬಾ ಕಷ್ಟವಾದೀತು." ಎಂದು ತಮ್ಮ ಅನುಭವಾಮೃತವನ್ನು ಹೇಳಲು ಮರೆಯುತ್ತಿದ್ದಿಲ್ಲ. ಆ ಮಾತಿಗವಳು "ನೀನಿನ್ನೂ ಹತ್ತೊಂಭತ್ತನೆ ಶತಮಾನದಲ್ಲಿದ್ದಿ ಕಣೆ, ಈಗಾವ ಕೆಲಸ ಕಲಿಯಲು ಕೂಡಾ ಹೆಚ್ಚೇನೂ ಸಮಯ ಬೇಕಿಲ್ಲ. ಎಲ್ಲವುದಕ್ಕೂ ಪುಸ್ತಕಗಳು ದೊರಕುವಾಗ ಅದನ್ನು ನೋಡಿ ಮಾಡುವುದೇನು ಕಷ್ಟ ಬಿಡು." ಎಂದನ್ನುತ್ತಿದ್ದಳು.

"ಇನ್ನಾಯ್ತು ಬಿಡು. ಪುಸ್ತಕದ ಬದನೆಕಾಯಿ ಊಟಕ್ಕೆ ಬಂದಾಯ್ತು. ನಾನಾಡುವುದೆಲ್ಲಾ ನಿನ್ನ ಒಳ್ಳೆಯದಕ್ಕೆ ರಾಧ." ಎಂದು ತಮ್ಮ ಕೆಲಸದತ್ತ ಹೊರಳಿದರೆ,

"ಇವಳೊಬ್ಬಳು ಅಮ್ಮ. ಏನು ಗೊತ್ತಿಲ್ಲ ಅಂದುಕೊಂಡು ಕಾದಂಬರಿ ಪುಸ್ತಕ ಹಿಡಿದು ಕುಳಿತು ಬಿಡುತ್ತಿದ್ದಳು.

ಮಗಳನ್ನು ಕಾಲೇಜಿಗೆ ಕಳಿಸಿದ ವಿಶಾಲಾಕ್ಷಮ್ಮನಿಗೆ ಮನದಲ್ಲೇ ಭಯ ಉಂಟಾಗಿತ್ತು. ಹಾಗೆಂದು ಯಾರೊಡನೆ ಹೇಳಿಕೊಳ್ಳಬೇಗೆಂದು ತಿಳಿಯುತ್ತಿದ್ದಿಲ್ಲ.

ಪ್ರಾಯ ಬಲಿತ ಗಂಡು ಹೆಣ್ಣು ಒಂದೆಡೆ ಸೇರಿ ಕಲಿಯುವುದೆಂದರೆ ಅವರಿಗದು ದೊಡ್ಡ ಅಪಾಯವೆಂದು ಕಾಣುತ್ತಿತ್ತು.

ದಿನವೂ ಮಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದರು. ಮಗಳ ಉಡಿಗೆ ತೊಡಿಗೆಗಳಲ್ಲಾಗುತ್ತಿದ್ದ ಬದಲಾವಣೆ ಕಂಡು ನುಂಗಲಾರದ ತುತ್ತಿನಂತೆ ಸಂಕಟ ಪಡುವರಾಗ. ಹಾಗೇಕೆಂದು ಮಗಳನ್ನಾಕ್ಷೇಪಿಸಲು ಮಾತ್ರ ಹಿಂದೇಟು ಹಾಕುತ್ತಿದ್ದರು.

ಹೀಗೆಯೇ ಯಾರ ಅಡೆ ತಡೆಯನ್ನೂ ಲಕ್ಷಿಸದೆ ದಿವಗಳು ಒಂದರ ಮೇಲೊಂದಾಗಿ ಉರುಳುರುಳಿ ಹೋದುವು.

ಂ ಂ ಂ

ಅದೊಂದು ದಿನ ವಿಶಾಲಾಕ್ಷಮ್ಮ ಗಂಡನನ್ನು ಜೆನ್ನಾಗಿಯೇ ಶಾಂಟೆಗೆ ತೆಗೆದುಕೊಂಡರು.

"ನಾನು ಹಿಮಗೆಷ್ಟು ಹೇಳಿದರೂ ತಿಳಿಯುತ್ತಿಲ್ಲ. ದಿನವೂ ರಾಧೆ ಮನೆಗೆ ಬರೋದು ಕತ್ತಲಾಗುತ್ತದಂದ್ರೆ ನೀವದನ್ನು ಕಿವಿ ಮೇಲೇ ಹಾಕ್ಕೊಂಡಂತಿಲ್ಲ. ಪ್ರಾಯ ಬಂದ ಹುಡುಗಿಯನ್ನು ಹಾಗೆಲ್ಲಾ ಸ್ವೇಚ್ಛೆಯಾಗಿ ಬಿಡೋದು ಅಪಾಯವೆಂದು ಇನ್ನೆಷ್ಟು ಬಾರಿ ಹೇಳ್ಬೇಕು ನಿಂಗೆ?" ಎಂದರು. ವಿಶಾಲಾಕ್ಷಮ್ಮನ ಮಾತು ಕೊನೆ ಮುಟ್ಟುವಷ್ಟರಲ್ಲಿ ರಾಧೆ 'ಟಪ್....ಟಪ್' ಚಪ್ಪಲು ಸದ್ದಿನೊಡನೆ ಮನೆಯ ವರಾಂಡ ಪ್ರವೇಶಿಸಿದ್ದಳು.

ಮಗಳನ್ನು ದಿಟ್ಟಿಸಿದ ರಾಯರಿಗಾಗ ಆಶ್ಚರ್ಯದ ಹೊಸ್ತಿಲಲ್ಲಿ ಅಡಿಯನ್ನಿಟ್ಟಿದ್ದ ರಾಧೆಯ ಅಂಗ ಸೌಂದರ್ಯ ಕಂಡು ಆಶ್ಚರ್ಯವೆನಿಸಿತು. ಅಂದಿನವರೆಗೆ ಮಡದಿ ಹೇಳುತ್ತಿದ್ದರೂ ಅದವರ ಕಿವಿ ಹೊಕ್ಕಂತಿರಲಿಲ್ಲ. ತಮ್ಮ ಮಗಳಾಗ ಇಂದು ನಿನ್ನೆಯ ಅಡುವ ಶಿಶುವೆಂದೇ ಭಾವಿಸಿದ್ದರು. ಈಗದು ಅವರ ಮನಕ್ಕೆ ಅಪಾಯಕಾರಿಯೆಂಬುದನ್ನು ಸೂಚಿಸುವಂತಿತ್ತು. ಒಳ ಹೋಗುತ್ತಿದ್ದ ಮಗಳನ್ನು "ರಾಧೆ" ಎಂದು ಕರೆದರು.

"ಏನಪ್ಪಾ?? ಎಂದು ತಂದೆಯ ಬಳಿ ಹೋಗಿ ನಿಂತಳು.

"ದಿನವೂ ನೀನು ಮನೆಗೆ ಬರುವುದು ತಡವಾಗಲು ಕಾರಣವೇನು ಮಗು?"

"ಯಾವುದಾದರೂ ಇತರ ಕಾರ್ಯಕ್ರಮದಿಂದ ಸ್ವಲ್ಪ ತಡವಾಗಿ ಬಿಡುತ್ತದಪ್ಪಾ!"

"ಅದರೂ ಅದಷ್ಟು ಬೇಗ ಮನೆ ಸೇರಬೇಕು ನೀನು. ಇಲ್ಲವಾದರೆ ಊರವರ ಬಾಯಿಗೆ ಅಡಲು ಆಹಾರವಾಗ ಬೇಕಾಗುವುದು. ಅದಕ್ಕಿಂತಲೂ ಹೆಚ್ಚು ನಿನ್ನಮ್ಮ ನಿನಗಾಗಿ ತುಂಬಾ ಭಯ ಪಡುವಳು."

"ಅಮ್ಮನಿಗೇನೂ ಗೊತ್ತಿಲ್ಲವಪ್ಪ. ಸುಮ್ಮನೆ ಇಲ್ಲದ್ದನ್ನೇ ಯೋಚಿಸುವಳು."

"ಅದು ಹೇಗೂ ಇರಲಿ. ಸಾಧ್ಯವಾದಷ್ಟು ಹೆರವರ ಬಾಯಿಗೆ ಬೀಳದಂತೆ ಜಾಗ್ರತೆ ವಹಿಸಬೇಕು ರಾಧ."

"ಹಾಗೇ ಆಗಲಪ್ಪಾ!" ಎಂದು ತನ್ನ ಕೋಣೆ ಸೇರಿ ಬಟ್ಟೆ ಬದಲಿಸಿದಳು.

ಆದರೆ ಅಂದವಳಿಗೆ ತನ್ನನ್ನೆಂದೂ ಕೇಳದ ತಂದೆ ಇಂದೇಕೆ ಹೀಗೆಂದರೆಂಬುದೇ ಅರ್ಥವಾಗಲಿಲ್ಲ. ಇಂದವರ ಮಾತಿನಲ್ಲಿ ತನ್ನ ನಡತೆಯಲ್ಲೇನೋ ಸಂಶಯ ತಳೆದಂತಿದೆ.

ತನ್ನ ಮತ್ತು ರಮಾಕಾಂತನ ಸ್ನೇಹ ಚಾರದ ತಿಳಿಗಾಳಿ ಸೋಂಕಿರೆ ಬಹುದೇ ಎಂಬ ಅನುಮಾನ ಮೂಡಿತು. ಅದರದು ಅರೆಕ್ಷಣದಲ್ಲಿ ಹಾಗಿರಲಾರದೆಂದೇ ಭಾವಿಸಿ ನಿಶ್ಚಿಂತಳಾಗಿ ನಿದ್ದೆ ಹೋದಳು.

ಂ ಂ ಂ

ಪ್ರಾಯ ಭರಿತ ಗಂಡು ಹೆಣ್ಣು ಒಂದಾಗುವುದು ನಿಸರ್ಗ ನಿಯಮ. ಸಿಕ್ಕಿದ ಅವಕಾಶವನ್ನು ಕಳೆದುಕೊಳ್ಳುವವರು ಅಪರೂಪವೆಂದೇ ಹೇಳಬೇಕು.

ಕಾಲೇಜಿನ ಪತ್ರಿಕಾ ಸಂಪಾದಕ ರಮಾಕಾಂತನ ಪರಿಚಯ ರಾಧೆಗೆ ಅನಾಯಾಸವಾಗಿಯೇ ದೊರಕಿತು. ಅವಳ ಲೇಖನ ಹುಚ್ಚು ಬೆಳೆದಂತೆ ರಮಾಕಾಂತನ ಪರಿಚಯ ಸ್ನೇಹದತ್ತ ವಾಲಿ ಅವರಿಬ್ಬರನ್ನೂ ಹತ್ತಿರ ಸೆಳೆದೊಯ್ಯಿತು.

ಮುಂದೆ ದಿನದಲ್ಲಿ ತುಸು ಸಮಯವಾದರೂ ಜೊತೆಯಾಗಿ ಕುಳಿತು ಹಂಟಿ ಹೊಡೆಯುವುದು ರೂಢಿಯಾಯಿತು. ಅದಕ್ಕಾಗಿ ಸಂಜೆ ಕಾಲೇಜು ಬಿಟ್ಟೊಡನೆ ಗಾಂಧಿ ಪಾರ್ಕಿನ ಮೂಲೆಯ ಕಲ್ಲು ಬೆಂಚೆಂದು ನಿರ್ಣಯಿಸಿಕೊಂಡಿದ್ದರವರಿಬ್ಬರು.

ಮೊದಮೊದಲು ಸಾಹಿತ್ಯ ಲೇಖನವನ್ನೇ ಚರ್ಚಿಸುತ್ತಿದ್ದವರು ಮುಂದೆ ಪ್ರೇಮ ಸಂಭಾಷಣೆಗೂ ಆರಂಭಿಸಿದರು.

ಅದರಿಂದವಳಿಗೆ ತಂದೆಗೆ ವಜನವಿಸ್ತಂತೆ ಮನೆಗೆ ಬೇಗ ಹೋಗಲು ಸಾಧ್ಯವಾಗುತ್ತಿರಲಿಲ್ಲ.

ಮಗಳ ಧಡತೆಯಲ್ಲಿ ವ್ಯತ್ಯಾಸ ಕಾಣದ ವಿಶಾಲಾಕ್ಷಮ್ಮ ಮಗಳ ಮದುವೆಗೆ ಒತ್ತಾಯ ತಂದರು.

ಆಗ ರಾಯರಿಗೂ ಇದು ಸರಿಯೆನಿಸಿತು. ಇದ್ದೊಬ್ಬ ಮಗಳನ್ನು ಯೋಗ್ಯವರನಿಗಿತ್ತು ಕೈತೊಳೆದು ಕೊಳ್ಳುವುದೇ ಉತ್ತಮವೆನಿಸಿತು.

ಅಲ್ಲಲ್ಲಿ ಗಂಡಿನ ಶಪಾಸಣೆಗೂ ತೊಡಗಿದರು. ತನ್ನ ಮದುವೆಯ ಬಗ್ಗೆ ತಂದೆ ನಡೆಸುತ್ತಿದ್ದ ಪರಾನ್ವೇಷಣೆ ಕಂಡು ತಬ್ಬಿಬ್ಬಾದಳು.

ನಾಚಿಕೆ ಬಿಟ್ಟು ನಾನು ರಮಾಕಾಂತನನ್ನು ಮನಸಾರೆ ಪ್ರೀತಿಸಿರುವೆನೆಂದು ಹೇಳಲು ಆಗವಳಿಗೆ ಸಾಧ್ಯವಾಯ್ತು. ಅವಳೊಡನೆ ತಂದೆ ಕೇಳಿದ್ದರೆ ಹೇಳುತ್ತಿದ್ದಳೊ ಏನೋ! ಆದರೆ ಆ ಬಗ್ಗೆ ತಂದೆ ಏನನ್ನೂ ಅವಳೊಡನೆ ಕೇಳಿಯೇ ಇರಲಿಲ್ಲ. ಹಾಗಿರುವಾಗ ಅವಳದನ್ನು ಹೇಳುವುದಾದರೂ ಹೇಗೆ?

ಮನದಲ್ಲಿಯೇ ಕೊರಗ ತೊಡಗಿದಳು.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ,

ಶೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಈ ಕವಿತೆ ರಚಿತ

ಹರಿಭಕ್ತಿ ಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಾಂ ಪ್ರತಿಗಳಿಗೆ ವಿಚಾರಿಸಿರಿ:

ಭವಯುಗ ಪ್ರೆಸ್, ಉಡುಪಿ.

ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೩	೮—೨—೧೯೬೮	No. 23

ಹಿಂದೀ ವಿರೋಧ ಗಾಳಿ

ದಕ್ಷಿಣ ಕನ್ನಡದ ಮುಖ್ಯ ನಗರ ಮಂಗಳೂರಿನಲ್ಲೂ ಹಿಂದೀ ವಿರೋಧದ ಕಿಡಿಗಳು ಸ್ಫೋಟಗೊಂಡು, ಇದರಿಂದ ಜಿಲ್ಲೆಯ ಇತಿಹಾಸದಲ್ಲೇ ಅಲಾಧಿ ಚಾರ್ಜು— ಗೋಲಿಬಾರು ಮೊದಲಾದುವುಗಳು ಮೊತ್ತ ಮೊದಲಿಗೆ ನಡೆದುವು. ಹಿಂಸಾತ್ಮಕಗಳಿಗಂತೂ ಕಡೆಯೆಂಬುದಿಲ್ಲ. ಇದನ್ನು ವಿದ್ಯಾರ್ಥಿಗಳ ತಲೆಯ ಮೇಲೆ ಹೊರಿಸುವವರು ಕೆಲವರಾದರೆ, ಪೋಲೀಸರ ಮೇಲೆ ಹೊರಿಸುವವರುಮತ್ತೆ ಕೆಲವರು. ವಿದ್ಯಾರ್ಥಿ ಚಳುವಳಿಯೇ ಇರಲ್ಲವೆಂದೂಇದಕ್ಕೆಸಮಾಜದಲ್ಲಿ ನವಿದ್ಯಾರ್ಥಿಗಳಲ್ಲದ ದುಷ್ಟ ಶಕ್ತಿಗಳೇಕಾರಣವೆಂದೂ ಹೇಳುತ್ತಿರುವವರೂ ಇದ್ದಾರೆ. ಗಲಭೆಗೆ ತಕ್ಕಸಿದ್ಧತೆಯನ್ನು ಯಾರೇ ಮಾಡುತ್ತಿರಲಿ,ಅಲ್ಲಿ ಪೋಲೀಸರು ಶಾಂತಿ ಸುವ್ಯವಸ್ಥೆಯ ಹೊಣೆಯಿಂದ ದೂರವಿರುವುದು ಕರ್ತವ್ಯ ಬಾಹಿರವಾಗುವುದು. ಅವರು ಅಗಮಿಸಲೇ ಬೇಕಾಗುತ್ತದೆ. ಇದರಿಂದಲೇ ಪರಿಸ್ಥಿತಿ ವಿಕೋಪಕ್ಕೆ ಹೋಗುವುದೆಂದರೆ ಪೋಲೀಸರ ಮೇಲೆ ಚಿದ್ದು ತೀರಿಸಿಕೊಳ್ಳ ಬೇಕೆಂಬ ಕೆಲವರಲ್ಲಿನ ಕೀಳು ಮಟ್ಟದ ಮನೋಭಾವನೆಯೇ ಕಾರಣ. ಮಂಗಳೂರಿನಲ್ಲಿ ಈ ಚಳವಳಿ-ಅಂದೋಲನದ ಜ್ವಾಲೆ ಒಂದಕ್ಕಿಂತ ಹೆಚ್ಚು ಬಾರಿ ಯೆದ್ದಿತು. ಇದೀಗ ತುಸು ಸಮಾಧಾನಗೊಂಡಂತಿದ್ದರೂ, ಒಳ ನುಸುಳಿದ ಜ್ವಾಲಾಮುಖಿ ಮಾತ್ರ ಸದ್ಯ ಜಿಲ್ಲೆಯ ಇತರ ತ್ರಅಸಾಧಾರಣ ಪರಿಸ್ಥಿತಿಯುಂಟಾಗಿಲ್ಲ- ಇದು ಸಂತೋಷದ ಸಂಗತಿ.

ಪ್ರತಿಯೊಂದು ಚಳುವಳಿ, ಪ್ರದರ್ಶನದ ಪ್ರಚೋದಕರು ಶಾಂತಿಯುತವಾಗಿಯೇ ಅದನ್ನು ನಡೆಸಬೇಕೆಂದು ಸಂಕಲ್ಪಿಸುತ್ತಾರೆ. ಅದರಲ್ಲಿ ಭಾಗವಹಿಸುವವರೂ ಆರಂಭದಲ್ಲಿ ಶಾಂತಿ ಮಂತ್ರವನ್ನೇ ಪಠಿಸುತ್ತಾರೆ. ಆದರೆ, ಹೀಗೆ ಶಾಂತವಾಗಿ ಆರಂಭವಾದುದು ಅಶಾಂತಿ—ಹಿಂಸಾವೃತ್ತಿಗಳಲ್ಲಿ ಸರ್ಯವಸಾನಗೊಳ್ಳುತ್ತದೆ. ಇದು ಮಂಗಳೂರು-ಬೆಂಗಳೂರು- ಮೈಸೂರು ಮದ್ರಾಸು—ಚಿತ್ತೂರು—ಮೊದಲಾದೆಡೆಯ ಹಿಂದೀ ವಿರೋಧಿ ಅಂದೋಲನದ ಕಥೆ ಮಾತ್ರವಲ್ಲ, ಇತ್ತೀಚೆಗಿನ ಕೆಲವೊಂದು ವರ್ಷಗಳಿಂದ ದೇಶದ ವಿಶಾಲ ಭಾಗದಲ್ಲಿ ಚಳುವಳಿಯ ಹೆಸರಲ್ಲಿ ನಡೆಯುತ್ತಿರುವ ಹಿಂಸಾಕಾಂಡಗಳ ಕಥೆಯೂ ಹಾಗೆ. ನಾಗರಿಕರ ವಿತ್ತ—ಜೀವಿತಗಳಿಗೆ, ಸರಕಾರಿ ಸೊತ್ತುಗಳಿಗೆ ಕಷ್ಟವನ್ನುಂಟು ಮಾಡುವುದು ಎಂದರೆ, ಪ್ರಗತಿ ಪಥದಲ್ಲಿ ಹಿಂದೆ ಸರಿಯುವುದು ಎಂದೇ ಅರ್ಥ. ಈ ಬಗೆಯ ಅನಾಗರಿಕ ವರ್ತನೆ ದೇಶಕ್ಕೆ ಶೋಭಾಯಮಾನವಾಗುವುದಿಲ್ಲ. ಅರಂಭವಾದ ಈ ಅಹಿಂಸೆ—ಶಾಂತಿಗಳಿಗೆ ನೆಮ್ಮದಿಗೆ ಚಳುವಳಿ ಹಿಂಸೆ—ಅಶಾಂತಿಗಳಿಗೆ ಹೇಗೆ ಪರಿವರ್ತನೆ ಹೊಂದುತ್ತದೆ? ಇದಕ್ಕೆ ನೂರಾರು ಉತ್ತರಗಳಿರಬಹುದಾದರೂ ದುಷ್ಟ ಶಕ್ತಿಗಳು ಇದರಲ್ಲಿ ಹೊಕ್ಕು ಪೈಶಾಚಿಕ ನೃತ್ಯವಾಡುತ್ತವೆ ಎಂದು ಒಂದೇ ಮಾತಿನಲ್ಲಿ ಹೇಳಬಹುದು. ಆಂದೋಲನದ ಪ್ರವರ್ತಕರಲ್ಲಿ ಈ ಬಗೆಯ ದುಷ್ಟ ಶಕ್ತಿಗಳನ್ನು ದೂರವಿಡುವ ಕೆಚ್ಚು ಯಿಲ್ಲವೆಂದ ಮೇಲೆ, ಶಾಂತಿಯುತ ಆಂದೋಲನ ಸಂಘಟಿಸುವುದರಲ್ಲಿ ಅರ್ಥವೇನಿದೆ? ಕುರುಡನಿಗೆ ಕನ್ನಡಿನೋಡುವ ಹಂಬಲವೇಕೆ? ಸಂಘಟಕರು ಅಶಕ್ತತೆಯನ್ನು ಮನಗಂಡೂ ಆಂದೋಲನ ಸಂಘಟಿಸುದೆಂದರೆ—ಅದೊಂದು 'ಚಟ' ವೆಂಬುದಾಗಿ ಮಾತ್ರ ಹೇಳಬೇಕು.

ಮಹಾತ್ಮಾ ಗಾಂಧಿಯವರು ಅಹಿಂಸಾತ್ಮಕ ಶಾಂತಿಯುತ ಆಂದೋಲನವನ್ನು ಆರಂಭಿಸಿದ ಧೀರ ಪುರುಷರು.ಅವರಿಗೆಜನತೆಯ ಮೇಲೆ ಅಷ್ಟೊಂದುಪ್ರಭುತ್ವ ವಿತ್ತು; ಅವರ ಪ್ರತಿ ಮಾತನ್ನು ಸಮಸ್ತ ಭಾರತೀಯರು ಗೌರವಿಸುತ್ತಿದ್ದರು. ಆದುದರಿಂದಲೇ ಅವರ ನಾಯಕತ್ವದಲ್ಲಿ ಹಿಂಸಾವೃತ್ತಿಗೆ ಆಂದೋಲನದಲ್ಲು ತಿಯಗುತ್ತಿರಲಿಲ್ಲ. ಒಂದು ವೇಳೆ, ಹಿಂಸಾವೃತ್ತಿಯು ಕಾಮ ಮಾತ್ರಕ್ಕಾದರೂ ತಲೆದೋರಿತೆಂದರೆ, ಆಂದೋಲನ ಬಂದ್-ತಮಗೆ ಪ್ರಾಯಶ್ಚಿತ್ತ! ತನ್ನ ಆತ್ಮ ಶುದ್ಧವಿಲ್ಲ. ಹಾಗಾಗಿ ತನ್ನವರ ಆತ್ಮ ಶುದ್ಧವಿಲ್ಲವೆಂದು ಹೇಳಿ, ಆತ್ಮ ಶುದ್ಧಿಗಾಗಿ ಏಕಶನ ವ್ರತವನ್ನೂ ಅವರು ಕೈಕೊಂಡದ್ದುಂಟು. ಆದರೆ, ಇಂದೇನು ನಡೆಯುತ್ತಿದೆ? ಸಂಘಟನಾ ಶಕ್ತಿಯಿಲ್ಲದುದರಿಂದ ದುಷ್ಟ ಶಕ್ತಿಗಳ ಕೈವಾಡದೇ ಪ್ರಬಲವಾಗಿ ಹಿಂಸೆ—ಅಶಾಂತಿಗಳಿಗೆ ಆಂದೋಲನ ಕಾರಣವಾಗುತ್ತದೆ. ಇದನ್ನೆಲ್ಲಾ ಪ್ರತ್ಯಕ್ಷವಾಗಿ ಕಂಡು ಅನುಭವಿಸಿದ ಮೇಲೆಯೂ "ಆಂದೋಲನಕ್ಕೆ ಮನವೊಡುವುದೆಂದರೆ, ಹಿಂಸಾವೃತ್ತಿಗೆ ದಾರಿ ಮಾಡಿಕೊಡುವುದೆಂದೇ ಅರ್ಥ. ಪ್ರಜಾಪ್ರಭುತ್ವದ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಶಾಂತ ವಿಧಾನಗಳಿಂದ ಪ್ರದರ್ಶಿಸುವ ಅಧಿಕಾರ ಹೊಂದಿದ್ದಾರೆ, ಆದರೆ, ಸಭೆ—ಮೆರವಣಿಗೆಗಳು ಹಿಂಸೆಗೆ ಕಾರಣವಾಗುವುದಾದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಅವನ್ನು ಇಡೆಗಡಿರುವುದೇ ಕ್ಷೇಮ. ಮಹಪೊಲಿಸುವ ಮಾರ್ಗ ತಿಳಿದೇ ಇದೆ. ಸಮ್ಯಜನತೆ ಇದನ್ನು ಎಷ್ಟು ಬೇಗ ಅರಿಯುತ್ತಾರೆಯೋ ಅಷ್ಟು ದೇಶಕ್ಕೆ ಕ್ಷೇಮ.

ಕೆಚ್ಚಿನ ಕಿಡಿ

ಸಂಸ್ಕೃತ, ಕನ್ನಡ, ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳಲ್ಲಿ ಸರಿಸಾಟಿಯಿಲ್ಲದ ಇತರ ಹಲವಾರು ದೇಶೀಯ ಭಾಷೆಗಳಲ್ಲಿ ಪರಿಶ್ರಮವೂ ಇದ್ದ ಪಂಡಿತವರೇಣ್ಯ ಡಾ| ಎ. ಆರ್. ಕೃಷ್ಣ ಶಾಸ್ತ್ರಿಯವರು ಹೃದಯಘಾತದಿಂದ ತಾ. ೧೧ರಂದು ನಿಧನರಾದರು. ಶ್ರೀ ಶಾಸ್ತ್ರಿಯವರಿಗೆ ಇದೇ ಫೆಬ್ರವರಿ ೧೨ಕ್ಕೆ ೭೮ವರ್ಷಗಳು ಪೂರ್ತಿಯಾಗುತಿದ್ದುವು. ಮೈಸೂರಿನ ಪ್ರಾಚ್ಯ ಪುಸ್ತಕಾಲಯದಲ್ಲಿ ಪಂಡಿತರಾಗಿ ಸೇರಿಕೊಂಡ ಶಾಸ್ತ್ರಿಯವರು ಮುಂದೆ ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹಾಯಕ ಪ್ರೊಫೆಸರರಾದರು. ೧೯೪೫ರಲ್ಲಿ ಉದ್ಯೋಗದಿಂದ ನಿವೃತ್ತರಾಗುವಾಗ ಅವರು ಮಹಾರಾಜ ಕಾಲೇಜಿನ ಪ್ರೊಫೆಸರರಾಗಿದ್ದರು. ಡಾ| ಶಾಸ್ತ್ರಿಯವರು ಸುಮಾರು ೧೪ ಗ್ರಂಥಗಳನ್ನು ಬರೆದಿದ್ದಾರೆ. ಇವರ 'ಬಂಕಿಂಚಂದ್ರ' ಪುಸ್ತಕಕ್ಕೆ ೧೯೬೩ರಲ್ಲಿ ಸಾಹಿತ್ಯ ಅಕೆಡೆಮಿಯ ಪ್ರಶಸ್ತಿ ಲಭಿಸಿದೆ. ಇವರ ಮಹಾ ಬ್ರಾಹ್ಮಣ, ವಚನ ಭಾರತ—ಮೊದಲಾದುವೂ ಕನ್ನಡದ ಒಂದೊಂದು ಅನುಪಮ ಕೃತಿಗಳು. ಕನ್ನಡ ನಿಘಂಟು ಸಂಪಾದಕ ಮಂಡಳಿಯ ಮೊತ್ತಮೊದಲ ಅಧ್ಯಕ್ಷರಾಗಿದ್ದು ನಿಘಂಟು ರಚನೆಯ ಮಾರ್ಗವನ್ನು ತೋರಿಸಿಕೊಟ್ಟ ಅದ್ವಿತೀಯ ಗುರುವರೇಣ್ಯರು. ಕನ್ನಡ ಸೇವೆಯ ದೀಕ್ಷೆಯನ್ನು ತೊಟ್ಟು ಹೊಸ ಸಾಹಿತ್ಯ ನಿರ್ಮಾಣ ಶಕ್ತಿಗಳಲ್ಲಿ ಒಬ್ಬರಾಗಿ ದುಡಿದ ಕನ್ನಡ ಸೇವಕರು. 'ಪ್ರಬುದ್ಧ ಕರ್ನಾಟಕ' ತೈಮಾಸಿಕದ ಆರಂಭದಲ್ಲಿ ಅದರ ಬೆಳವಣಿಗೆಗೆ ಗೆಸೂತ್ರ ಪಾತ್ರಹಾಕಿದವರು. ಶ್ರೀಯುತರನ್ನು ೧೯೪೧ರಲ್ಲಿ ಹೈದರಾಬಾದದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದ ನೀಡಿ ಕನ್ನಡಿಗರು ತಮ್ಮ ಗೌರವವನ್ನು ಪ್ರದರ್ಶಿಸಿದ್ದರು.

ಕನ್ನಡದ ಕೆಚ್ಚೆದೆಯ ಶ್ರೀ ಶಾಸ್ತ್ರಿಯವರು ಕನ್ನಡ ಸಾಹಿತ್ಯ ವಿಶಾಲ ಮನೋವೃತ್ತಿಯ ಜೀವಾಳವಾಗಿದ್ದರು. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

ವಚನ ಸುಧೆ

ಕೃಷ್ಣಾ ಭೂಮಿಯದಕಂ
ಪಾರ್ ಚತುರ್ಥ ಚ ಸೂನೃತಾ
ಸತಾಮೇತಾನಿ ಗೇಹೇಷು
ನೋಚ್ಛಿದ್ಯಂತೇ ಕದಾಚನಾ

ಹುಲ್ಲಿನ ಚಾಪೆ, ನೆಲ, ನೀರು ಮತ್ತು ಸಿಹಿಯಾದ ಮಾತು—ಇವುಗಳಿಗೆ ಸಜ್ಜನರ ಮನೆಯಲ್ಲಿ ಬಂಗಾಲವಿಲ್ಲ.

ಶ್ರೀ ಕೆ. ಪಿ. ಜೆ. ಪ್ರಭುಗಳಿಗೆ ಸತ್ಕಾರ

ಮಂಗಳೂರು, ಶ್ರೀ ಕೆ. ಪಿ. ಜೆ. ಪ್ರಭುರವರು ಕೆನರಾ ಬ್ಯಾಂಕಿನ ಪೂರ್ವಾವಧಿ ಅಧ್ಯಕ್ಷರಾಗಿ ಮತ್ತು ಪ್ರಧಾನ ಕಾರ್ಯಕಾರಿ ಅಧಿಕಾರಿಯಾಗಿ ಆಯಸ್ಕಟ್ಟಿದ್ದನ್ನು ಅಭಿನಂದಿಸಿ ಮಂಗಳೂರಿನ ಜನತೆ ಅವರಿಗೆ ಕಳೆದ ತಾ. ೨೬ರಂದು ಮೋತಿಮಹಲಿನಲ್ಲಿ ಸನ್ಮಾನ ವನ್ನೇರ್ಪಡಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರಿನ ಬಿಷಪ್ ರೈಟ್ ರೆವರೆಂಡ್ ಡಾ| ಬೇಸಿಲ್ ಎಸ್. ಡಿಸೋಜರವರು ವಹಿಸಿದ್ದರು. ಶ್ರೀ ಜೆ. ಎಚ್. ಎಂ. ಸೋಮೇಶ್ವರರವರು ಸ್ವಾಗತ ಬಯಸಿದರು. ಶ್ರೀ ಪ್ರಭುಗಳ ಸೇವೆಯನ್ನು ಶ್ಲಾಘಿಸಿ ನಗರಪಿತ ಎಸ್. ಸಿ. ಕೆಮೊರಿಂಗ್ ಅಧಿಕಾರಿ ಲೆ| ಕರ್ನಲ್ ಬಿ. ಸಿ. ಜೋಶಿ, ಶ್ರೀ ಗಜಾನನ ರಾವ್ ಪಂಡಿತ್, ಡಾ| ಸಿ. ನಂಕಟರಾವ್, ಮತ್ತು ಶ್ರೀ ಎಸ್. ಆರ್. ಸುಬ್ಬಯ್ಯರವರು ಮಾತನಾಡಿದರು.

ಶ್ರೀ ಪ್ರಭುರವರು ಮಾತನಾಡುತ್ತಾ ವಾಣಿಜ್ಯ ಬ್ಯಾಂಕು ಸಮಾಜ ಸೇವಾ ಪ್ರಜ್ಞೆಯನ್ನು ಬೆಳೆಸಿಕೊಂಡು ವಿದ್ಯಾ ಪ್ರಸಾರ, ಕೃಷಿ ಅಭಿವೃದ್ಧಿ ಮತ್ತು ಸಣ್ಣ ಕೈಗಾರಿಕೆಗಳ ಹಿತಾಸಕ್ತಿಗಳ ಮೂಲಕ ರಾಷ್ಟ್ರದ ಮೇಲ್ಮೆಯನ್ನೇ ಹಾರೈಸುತ್ತದೆ ಎಂದರು. ಅವರು ಮುಂದುವರಿಯುತ್ತಾ ತನ್ನ ಬ್ಯಾಂಕಿನ ಪ್ರಗತಿಗೆ ನೌಕರ ವರ್ಗದೊಡನೆ ತೇಲಿ ಹೋಲ್ಡರ್ಸ್ ಮತ್ತು ಡೈರೆಕ್ಟರ್ಸ್ ಬೋರ್ಡುಗಳು ಕಾರಣವಾಗಿರುವುದರಿಂದ ತಮಗೆ ಗೌರವ ಸನ್ಮಾನಗಳೆಲ್ಲಾ ಬೇಂಕಿನ ಜನ ಸಂಪತ್ತಿಕ್ಕೆ ಸೇರಿದುದಾಗಿದೆ. ಕೆನರಾ ಬ್ಯಾಂಕು ಜನತೆಗೆ ಕೃಷ್ಟಿಕರ ಸೇವೆಯನ್ನಿತ್ತು, ಪೂರ್ಣ ಜೀವನವನ್ನು ತೆಸುವಂಥ ರಾಷ್ಟ್ರಹಿತಾಸಕ್ತಿಗನುಸಾರವಾಗಿ ಬದುಕುವಂತೆ ಮಾಡುತ್ತಿದೆಯೆಂದರು ಅಂತ್ಯದಲ್ಲಿ ಶ್ರೀ ಎಸ್. ಲಕ್ಷ್ಮೀನಾರಾಯಣ ಶೆಟ್ಟರವರ ಪರವಾಗಿ ಶ್ರೀ ಬಿ. ಪಿ. ದಾಸ್‌ಗುರು ಅಭಿನಂದನೆಗಳನ್ನಿತ್ತರು.

ತಾ. ೨೬ರಂದು ಮಂಗಳೂರಿನ ಚೇಂಬರ್ ಆಫ್ ಕಾಮರ್ಸ್, ಲಯನ್ಸ್ ಕ್ಲಬ್, ಸರಕಾರಿ ಗಣ್ಯ ಅಧಿಕಾರಿಗಳು, ನಗರ ಸಭಾಧ್ಯಕ್ಷರು, ಪತ್ರಿಕೋದ್ಯಮಿಗಳು ಹಾಗೂ ಇತರ ಮುಂದಾಳುಗಳಾಗಿ ಸೇರಿ ಶ್ರೀ ಕೆ. ಪಿ. ಜೆ. ಪ್ರಭುಗಳಿಗೆ ಸನ್ಮಾನ ಕೂಟವೊಂದನ್ನು ಮೋತಿ ಮಹಲಿನಲ್ಲಿ ಏರ್ಪಡಿಸಿದ್ದರು.

ಧರ್ಮಾರ್ಥ ಅಕ್ಕಿ ಹಂಚೋಣ

ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರೂ ಮಾಜಿ ಎಂ. ಎಲ್. ಎ ಗಳೂ ಆದ ಶ್ರೀ ಎಂ. ಮಧ್ವರಾಜರು ವರ್ಷಂಪ್ರತಿಯಂತೆ ಈ ಬಾರಿ ತನ್ನ 38ನೇ ಹುಟ್ಟು ಹಬ್ಬದ ನಿಮಿತ್ತವಾಗಿ ಮಲ್ಪೆಯ ಕೊರೊನೆಶನ್ ಕ್ಯಾನಿಂಗ್ ಕಂಪನಿಯ ಸಹಕಾರದಲ್ಲಿ ಸುಮಾರು 3500 ಮಂದಿಗೆ ಸುಮಾರು 119 ಮುಡಿ ಅಕ್ಕಿಯನ್ನು ದೊಡ್ಡವರಿಗೆ ಒಂದು ಸೇರು ಅಕ್ಕಿ ಮತ್ತು 36 ಪೈಸೆ ಚಿಕ್ಕವರಿಗೆ 2 ಪಾವು ಅಕ್ಕಿ ಮತ್ತು 10 ಪೈಸೆಯಂತೆ ವಿತರಣೆ ಗೈದರು.

ನರಸಣ್ಣನ ಪರಸ

ಬಂಗಾಳದ ಕಾಂಗ್ರೆಸ್ ಕಚ್ಚಾಡತೊಡಗಿದ್ದರಿಂದ ಡಾ| ಘೋಷರು ಸರಿಗೆಯ ಮೇಲೆ ನಡೆಯುತ್ತಿದ್ದಾರಂತೆ....

ಮುಖಪುಟಚಿತ್ರ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಭಕ್ತವೃಂದದ ಕಣ್ಣುಗಳಿಗೆ ತಂಪು ಕೀಡುವ ಮಯೂರ ವಾಹನೋತ್ಸವ

ಸಂಶೋಧನೆಗಳಿಂದ

ಜಾನುವಾರು ಉತ್ಪನ್ನಗಳ ಸುಧಾರಣೆ

ಭಾರತೀಯರು ಬಳಸುವ ಆಹಾರ ವಸ್ತುಗಳನ್ನು ಹೆಚ್ಚು ಸತ್ವಶಾಲಿಯಾಗಿ ಅಭಿವೃದ್ಧಿ ಪಡಿಸಬೇಕಾದರೆ ಪಶು ವಿಜ್ಞಾನಗಳ ಸಂಶೋಧನೆ ಪ್ರಬಲಗೊಳ್ಳಬೇಕಾದ ಅಗತ್ಯ ಅತ್ಯಂತ ಮುಖ್ಯವಾಗಿದೆ. ಇಂದು ಜಾಗೆಯೇನಮ್ಮ ವ್ಯವಸಾಯದಲ್ಲಿ ಹೆಚ್ಚು ಉತ್ಪತ್ತಿ ಆಗಬೇಕಾದರೂ ಸಹ ಈ ಸಂಶೋಧನೆಯ ಅಗತ್ಯ ಅಷ್ಟೇ ಇದೆ.

ನಮ್ಮ ನಾಡಿನ ಪಶು ಮತ್ತು ಕೋಳಿಗಳ ಸಂಖ್ಯೆ ಜನ ಸಂಖ್ಯೆಯಷ್ಟೇ ಇದೆ. ಹೀಗಾಗಿ ಜನರೂ ಪಶುಗಳೂ ತಮ್ಮ ಬಾಳ್ವೆಗಾಗಿ ಸೀಮಿತ ಆಹಾರ ಸಂಪನ್ಮೂಲವಿರುವ ಈ ನಾಡಿನಲ್ಲಿ ಸ್ಪರ್ಧೆ ನಡೆಸಬೇಕಾದುದು ಅನಿವಾರ್ಯವಾಗಿದೆ.

ಕೋಳಿಗಳು ಬಹು ಶೀಘ್ರ ಬೆಳೆಯುತ್ತವೆ ಮತ್ತು ಜಾಗ್ರತೆಯಲ್ಲಿ ಸಮೃದ್ಧವಾಗಿ ಪಶು ಸಸಾರಜನಕ ವಸ್ತುಗಳನ್ನು ಉತ್ಪಾದಿಸುತ್ತವೆ. ಆದರಿಂದಾಗಿ ಕೋಳಿ ಸಾಕಾಣಿಕೆಯನ್ನು ವ್ಯಾಪಕವಾಗಿ ನಡೆಸಲಾರಂಭಿಸಿದರೆ ಈ ಅಗತ್ಯ ವಸ್ತುವಿನ ಪೂರೈಕೆ ಶೀಘ್ರವಾಗಿ ನೆರವೇರುತ್ತದೆ.

ನಮ್ಮ ನಾಡಿನಲ್ಲಿ ೧೧ ಕೋಟಿ ೬೦ ಲಕ್ಷ ಕೋಳಿಗಳಿವೆಯೊದರೂ ಇವು ಶಲಾ ವರ್ಷ ಒಂದಕ್ಕೆ ಸರಾಸರಿ ೬೩ ಮೊಟ್ಟೆಗಳನ್ನು ಮಾತ್ರಾ ಇಕ್ಕುತ್ತಿವೆ. ಇದರಿಂದ ಮಾನವರ ಬಳಕೆಗೆ ಅಗತ್ಯಕ್ಕಿಂತ ಬಹಳ ಕಡಿಮೆಯ ಮೊಟ್ಟೆ ದೊರೆಯುತ್ತಿದೆ. ಪೌಷ್ಟಿಕ ಆಹಾರ ಸಲಹಾ ಸಮಿತಿಯವರ ಅಭಿಪ್ರಾಯದ ಪ್ರಕಾರ ನಾಡಿನ ಪ್ರತಿಯೊಬ್ಬರಿಗೂ ಕನಿಷ್ಟ ಪಕ್ಷ ದಿನಕ್ಕೊಂದು ಮೊಟ್ಟೆ, ಊಟದ ಜೊತೆಗೆ ಒಡಗಬೇಕು, ಇದರಲ್ಲಿ ಅರ್ಧದಷ್ಟನ್ನಾದರೂ ಗುರಿಯಾಗಿಟ್ಟುಕೊಂಡು ಸಾಧಿಸಬೇಕಾದರೆ ಉತ್ತಮ ಕೋಳಿಗಳನ್ನು ಆರಿಸಿಕೊಳ್ಳಬೇಕು.

"ಪ್ರತಿಯೊಂದು ಕೋಳಿಯೂ ವರ್ಷಕ್ಕೆ ೨೦೦ರಿಂದ ೨೨೫ ಮೊಟ್ಟೆಗಳನ್ನು ಇಕ್ಕುವಂತೆ ಸಂಶೋಧನಾ ಕಾರ್ಯಗಳನ್ನು ಬಿಡದೆ ಪಡೆಸಬೇಕು. ವೈಜ್ಞಾನಿಕ ಸಂಶೋಧನೆಗಳಿಂದ ದೊರೆತಿರುವ ಜನನೋಪಕರಣಗಳು ಈ ರೀತಿ ಮೊಟ್ಟೆ ದೊರೆಯಬಹುದಾದ ಸಾಧ್ಯತೆಗಳ ಬಗ್ಗೆ ಭರವಸೆ ನೀಡುವಂತಹವಾಗಿವೆ. ಆದರಿಂದ ಹೆಚ್ಚು ಮೊಟ್ಟೆ ಇಕ್ಕುವ ತಳಿಯ ಕೋಳಿಗಳನ್ನು ಅಭಿವೃದ್ಧಿಪಡಿಸಿ ಪ್ರಗತಿಪರವಾಗಿ ಬಹು ಪಟ್ಟು ಜಾಸ್ತಿ ಮಾಡಬೇಕಾಗಿದೆ.

ಕೇವಲ ಕಡಿಮೆ ಮೊಟ್ಟೆಗಳನ್ನಿಡುವ ಜಾತಿ ಕೋಳಿಗಳ ಬದಲಿಗೆ ಹೆಚ್ಚು ಮೊಟ್ಟೆಯಿಡುವ ಕೋಳಿಗಳನ್ನು ಸಾಕಿದರೆ ಮಾತ್ರ ಈ ಕೆಲಸ ಸಾಧ್ಯವಾಗುತ್ತದೆ. ಅಂಥ ಕೋಳಿಗಳ ಸಂಖ್ಯೆ ಸಹ ಹೆಚ್ಚಿಸಬೇಕಾಗುತ್ತದೆ.

ಕ್ಷೀರೋತ್ಪನ್ನ

ಪೌಷ್ಟಿಕ ಆಹಾರ ಸಲಹಾ ಸಮಿತಿಯವರು ತಿಳಿಸಿರುವಂತೆ ಪ್ರತಿಯೊಬ್ಬರಿಗೆ ದಿನನಿತ್ಯ ಹತ್ತು ಔನ್ಸುಗಳಷ್ಟು ಹಾಲು ದೊರೆಯ ಬೇಕಾದರೆ, ಹೆಚ್ಚು ಹೆಚ್ಚು ಹಾಲು ಕರೆಯುವ ಹಸುಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ.

ಹೆಚ್ಚು ಹಾಲು ಕರೆಯುವ ನೂತನ ತಳಿಯನ್ನು ಸೃಷ್ಟಿಸುವ ಪ್ರಯತ್ನಗಳು ಸಂಶೋಧನಾ ವಲಯದಲ್ಲಿ ನಡೆಯುತ್ತಿವೆ. ಭಾರತೀಯ ಹಸುಗಳಿಗೆ ವಿದೇಶೀ ಉತ್ತಮ ಹೋರಿಗಳ ಸಂಸರ್ಗ ಮಾಡಿಸಿ ಮಿಶ್ರತಳಿ ಉತ್ಪತ್ತಿ ಮಾಡಲಾಗುತ್ತಿದೆ. ಪಶ್ಚಿಮ ಬಂಗಾಳದ ಹಜರಿಂಘಟ ಕೇಂದ್ರ ಸಂಶೋಧನಾ ಕೇಂದ್ರದಲ್ಲಿ ಹರಿಯಾನ ಜಾತಿಯ ಹಸುಗಳಿಗೆ ವಿದೇಶೀ ಬೀಜಾರೋಪ ಮಾಡಿಸಿ ನೂತನ ಕರೆಯುವ ಜಾತಿಯ ಹಸುಗಳನ್ನು ಉತ್ಪಾದಿಸುವ ಪ್ರಯತ್ನ ನಡೆಸಲಾಗಿದೆ.

ಇಂಥದೇ ಇತರ ಕೆಲವು ಯೋಜನೆಗಳು ನಾಡಿನ ವಿವಿಧ ಭಾಗಗಳಲ್ಲಿ ನಡೆಯುತ್ತಿವೆ. ಈ ದಿಶೆಯಲ್ಲಿ ಕರ್ನೂಲ್‌ನಲ್ಲಿರುವ ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆಯೂ ಸಹ ಸಂಶೋಧನೆ ನಡೆಸುತ್ತಿದೆ.

ಈ ವರೆಗಿನ ಸಂಶೋಧನೆಗಳೆಲ್ಲಾ ಮಿಶ್ರತಳಿ ಹಸುಗಳಿಂದ ಹೆಚ್ಚು ಹಾಲು ಉತ್ಪಾದನೆಯೊಗುತ್ತಿದೆಯೆಂಬ ಅಂಶವನ್ನು ಖಚಿತಪಡಿಸಿದೆ. ಉತ್ತಮ ಗುಣ ಮತ್ತು ಹೆಚ್ಚು ಪ್ರಮಾಣದ ತುಪ್ಪಟ ಮತ್ತು ಪ್ರತಿ ಪ್ರಾಣಿಗೆ ಹೆಚ್ಚು ಮಾಂಸ ದೊರೆಯುವಂತಾಗಲು ಕುರಿ ಉತ್ಪನ್ನಗಳ ಸಂಬಂಧವಾದ ಸಂಶೋಧನೆಗಳೂ ಸಮಾನವಾದ ಪ್ರಾಮುಖ್ಯತೆ ಪಡೆದಿವೆ.

ಈ ದಿಶೆಯಲ್ಲಿ ನಡೆಸಲಾಗಿರುವ ಸಂಶೋಧನೆಗಳಿಂದಶಲಾ ಳರಿಂದ ಸೌಂಡು ಉಣ್ಣೆ ಪ್ರತೀವರ್ಷಕೊಡಬಲ್ಲ ಮಿಶ್ರತಳಿ ಕುರಿಗಳನ್ನು ಸೃಷ್ಟಿಸಲಾಗಿದೆ. ನಮ್ಮ ಸ್ಥಳೀಯ ಕುರಿಗಳು ಕೊಡುವ ಉಣ್ಣೆ ೨ ಪೌಂಡುಗಳು ಮಾತ್ರ. ಅಧಿಕ ಉತ್ಪನ್ನ ನೀಡುವ ಪ್ರಾಣಿಗಳಿಗೆ ಉತ್ತಮ ಆಹಾರ ಮತ್ತು ರೋಗಗಳಿಂದ ರಕ್ಷಿಸುವ ನಿಗಾ ಹೆಚ್ಚಾಗಿ ಅಗತ್ಯವಿದೆ.

ಈ ಬಗ್ಗೆ ಸಹ ಸಂಶೋಧನೆಗಳು ನಡೆದು ಅಂತಹ ಪ್ರಾಣಿಗಳಿಗೆ ಅಗತ್ಯವಾದ ಔಷಧಿಗಳನ್ನೆಲ್ಲ ಕಂಡು ಹಿಡಿಯಲಾಗಿದೆ. ದನಗಳ ದೊಡ್ಡ ರೋಗ ಕಾಲು ಜ್ವರ ಮೊದಲಾದ ಅಸಂಖ್ಯಾತ ಕಾಯಿಲೆಗಳಿಗೆ ಗೆಲ್ಲ ಮದ್ದು ಕಂಡು ಹಿಡಿಯಲಾಗಿದೆ. ಜಾನುವಾರುಗಳನ್ನು ಬೆಳೆಸುವ ವೃತ್ತಿಯನ್ನು ಇನ್ನು ಮುಂದೆ ಒಂದು ಕೈಗಾರಿಕೆಯಾಗಿ ಅಭಿವೃದ್ಧಿ ಪಡಿಸಬೇಕಾಗುತ್ತದೆ.

ಆದರಿಂದಾಗಿ ಪ್ರತಿ ಪ್ರಾಣಿಯ ಉತ್ಪಾದನಾ ಸಾಮರ್ಥ್ಯದ ಹೆಚ್ಚಳ, ಒಂದು ಘಟಕ ಭೂಮಿ ಒಂದು ಘಟಕ ಮಾನವ ಶಕ್ತಿ, ಒಂದು ಘಟಕ ಬಂಡವಾಳ ಇವುಗಳೆಲ್ಲದರಲ್ಲೂ ಪರಮಾವಧಿ ಉತ್ಪಾದನೆ ಪಡೆಯುವ ಕಡೆಗೆ ಸಂಶೋಧನೆಯ ದೃಷ್ಟಿಯೆಲ್ಲ ಕೇಂದ್ರೀಕೃತವಾಗಬೇಕಾಗಿದೆ. ಭೂಮಿಯ ಸಂಪನ್ಮೂಲವು ಸೀಮಿತವಾದ ಕಾರಣ ಒಂದು ಘಟಕ ಭೂಮಿಯ ಬೀಜವರಿ ನೆಡಿಕೆ ಸಾಮರ್ಥ್ಯವನ್ನು ಹೆಚ್ಚಿಸುವುದು ತೀರ ಅಗತ್ಯವಾಗಿದೆ.

ಈ ದೃಷ್ಟಿಯನ್ನಿಟ್ಟುಕೊಂಡೇ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಸಂಶೋಧನಾ ಕಾರ್ಯಗಳನ್ನು ನೆರವೇರಿಸುತ್ತಿದೆ. ಬೇರೆ ಬೇರೆ ಹವಾಗುಣದ ಪ್ರದೇಶಗಳಲ್ಲಿ ದೊರೆಯುವ ಹವಾ ವಿವರಗಳನ್ನು ಪಡೆದು ಈ ಸಂಶೋಧನೆಗಳನ್ನು ನಡೆಸಲಾಗುತ್ತಿದೆ.

ಭಾರತೀಯ ಪಶುವೈದ್ಯ ಸಂಶೋಧನಾ ಸಂಸ್ಥೆ ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆ, ಕೇಂದ್ರೀಯ ಕುರಿ ಮತ್ತು ಉಣ್ಣೆ ಸಂಶೋಧನಾ ಸಂಸ್ಥೆ, ಹುಲ್ಲುಗಾವಲು ಮತ್ತು ಪಶು ಆಹಾರ ಸಂಶೋಧನಾ ಸಂಸ್ಥೆ, ಮೀನುಗಾರಿಕೆ ಸಂಸ್ಥೆಗಳು—ಇವೆಲ್ಲ ಪಶು ವಿಜ್ಞಾನಗಳ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಪ್ರಮುಖ ಸಂಸ್ಥೆಗಳಾಗಿವೆ.

ಇವಲ್ಲದೆ ಅನೇಕ ರಾಜ್ಯ ಸಂಶೋಧನಾ ಕೇಂದ್ರಗಳೂ ಈ ಕುರಿತು ಸಂಶೋಧನೆಗಳನ್ನು ನಡೆಸುತ್ತಿವೆ.

ಜಾನುವಾರು ಸಾಂಕ್ರಾಮಿಕ ರೋಗ ನಿವಾರಣೆಗಾಗಿ ನೂತನ ಸಂಶೋಧನಾ ಕೇಂದ್ರವನ್ನು ಪುಣೆಯಲ್ಲಿ ಸ್ಥಾಪಿಸಲು ಯೋಚಿಸಲಾಗಿದೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬೆಳಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಿಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಎಲ್ ಐ ಸಿ ಯ ಆರನೇ ವ್ಯಾಲ್ಯುವೇಶನ್

ಎಲ್ ಐ ಸಿ ಯ ಮಾರ್ಚ ೩೧, ೧೯೬೭ರ ವರೆಗಿನ ಆರನೇ ಮೌಲ್ಯ ಮಾಪನವು ನಡೆದು ಅದರ ಪರಿಣಾಮ ಪ್ರಕಟವಾಗಿದೆ. ಮೌಲ್ಯ ಮಾಪನದಂತೆ ಎಲ್ ಐ ಸಿ ಯು ರೂ. ೭೨.೨೮ ಕೋಟಿ ಲಾಭ ಗಳಿಸಿದ್ದು, ಇದರಲ್ಲಿ ರೂ. ೬೮.೬೭ ಕೋಟಿಗಳನ್ನು ಲಾಭದಲ್ಲಿ ಪಾಲ್ಗೊಳ್ಳಲು ಅರ್ಹವಾದ ಪಾಲಿಸಿಗಳಿಗೆ ಹಂಚುವುದಕ್ಕೂ ರೂ. ೩.೬೧ ಕೋಟಿಗಳನ್ನು ಕೇಂದ್ರ ಸರಕಾರಕ್ಕೂ ತೆಗೆದಿರಿಸಲಾಗಿದೆ.

ಪಾಲಿಸಿಗಳಲ್ಲಿ ಹೋಲ್ ಲೈಫ್ ಪಾಲಿಸಿಗಳಿಗೆ ಪ್ರತಿ ಸಾವಿರದ ಮೇಲೆ ಪ್ರತಿ ವರ್ಷಕ್ಕೆ ರೂ. ೨೦ರಂತೆಯೂ ಎಂಡೋಮೆಂಟ್ ಪಾಲಿಸಿಗಳಿಗೆ ಪ್ರತಿ ಸಾವಿರದ ಮೇಲೆ ಪ್ರತಿ ವರ್ಷಕ್ಕೆ ರೂ. ೧೬ರಂತೆಯೂ ಬೋನಸ್ ನೀಡುವುದಾಗಿ ಪ್ರಕಟಿಸಿದೆ. ಹಿಂದಿನ ವಿಮಾ ಕಂಪನಿಗಳ ಪಾಲಿಸಿಗಳ ಮೇಲೂ ನಿಯಮಾನುಸಾರ ಬೋನಸ್ ದರಗಳನ್ನು ಗೊತ್ತು ಮಾಡಲಾಗಿದೆ. ಪಾಲಿಸಿದಾರರಿಗೆ ಬೋನಸ್ ಸೂಚನೆಯನ್ನು ಪ್ರತ್ಯೇಕವಾಗಿ ಕಳಿಸಲಾಗುವುದು.

೩೧-೩-೧೯೬೭ರಲ್ಲಿದ್ದಂತೆ ಎಲ್ ಐ ಸಿಯ ಜ್ಯಾರಿಯಲ್ಲಿದ್ದ ಪಾಲಿಸಿಗಳು ೧, ೨೧, ೨೨ ಸಾವಿರ. ಇವುಗಳ ವಿಮಾ ಮೊಬಲಗು ಮತ್ತು ಬೋನಸ್ ರೂಪಾಯಿ ೪೭.೫೩,೬೬೫ ಸಾವಿರ. ಅನ್ಯುಟೀಸ್ ಪಾಲಿಸಿಗಳು ೧೧,೬೨೫. ಇದಕ್ಕಾಗಿ ಕೊಡಬೇಕಾದ ವಾರ್ಷಿಕ ಹಣ ರೂ. ೨,೯೬,೩ ಸಾವಿರ.

ಈ ಮೌಲ್ಯ ಮಾಪನದ ಅವಧಿಯಲ್ಲಿ ಎಲ್ ಐ ಸಿಯು ಸಂಪಾದಿಸಿದ ನಿವ್ವಳ ಬಡ್ಡಿ ಸೇ. ೫ ೦೪ ಆಗಿತ್ತು. ಈ ದರ ಹಿಂದಿನ ಮೌಲ್ಯ ಮಾಪನಾವಧಿಯಲ್ಲಿ ಸೇ. ೪.೫೧ ಆಗಿತ್ತು. ರೀಸೀವಲ್ ಪಿರ್ಚೆಸ ಪ್ರಮಾಣವು ಸೇ. ೧೩.೩೨ರಿಂದ ೧೫.೩೩ ಕ್ಕೆ ಏರಿರುತ್ತದೆ.

ಸುವರ್ಣ ಮಹೋತ್ಸವ

ಕಟಪಾಡಿ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯ ಸುವರ್ಣ ಮಹೋತ್ಸವವು ಇದೇ ತಾ. ೨೬ ಮತ್ತು ೨೭ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಮೊದಲ ದಿನ ಬೆಳಿಗ್ಗೆ ಶ್ರೀ ಭಾಸ್ಕರ ಶೆಟ್ಟಿ ಎಂ. ಎಲ್. ಎ. ಅವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಸಂಜೆ ಪದ್ಮ ಶ್ರೀ ಡಾ|| ಟಿ. ಮಾಧವ ಸೈಗಳು ಶ್ರೀ ಕೆ. ವಾಸುದೇವ ಕಿನಿಯವರು ಉಚಿತವಾಗಿ ಕಟ್ಟಿಸಿಕೊಟ್ಟ ಶ್ರೀ ಕುಂಜಾಲು ಮುಕುಂದ ಕಿನಿ ಸ್ಮಾರಕ ಬಯಲು ರಂಗಮಂಟಪವನ್ನು ಉದ್ಘಾಟಿಸಿದ ಬಳಿಕ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮಗಳು ಜರಗಿದವು. ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣ ಮಾಡಿದ ತರುವಾಯ ೫೦ ವರ್ಷಗಳ ವರೆಗಿ ಒಡಲ್ಪಟ್ಟು, ಹಳೆ ವಿದ್ಯಾರ್ಥಿ ಡಾಗೂ ಶುಕ್ರಾರು ಬೋರ್ಡು ಹೈಸ್ಕೂಲ್ ಹೆಡ್ ಮಾಸ್ಟರ್ ಶ್ರೀ ಎಂ. ಅಣ್ಣಪ್ಪ ಸ್ವಸ್ತಿವಾಚನ ಗೈದರು. ಬಳಿಕ ಬಹುಮಾನ ವಿತರಣೆ ಗೈದು ಅಧ್ಯಕ್ಷರು ಶಾಲೆಯ ಉನ್ನತಿಯ ಮಟ್ಟವನ್ನು ಕೊಂಡಾಡಿ ಮಾತನಾಡಿದರು. ಮರುದಿನ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಪ್ರಿನ್ಸಿಪಾಲ್ ಡಾ|| ಎಸ್. ಆರ್. ಮೊಕಾಶಿಯವರು ಸುವರ್ಣೋತ್ಸವ ಸಂಚಿಕೆಯನ್ನು ಉದ್ಘಾಟಿಸಿದರು.

ನೀವೂ ತಿಳಿಯಿರಿ

ಪರಿವಾರದ ಪರಿಹಾರ ಎಂತು?

ಬರೆದವರು: ಶ್ರೀ ಕೆ. ಸಚ್ಚಿದಾನಂದ ಉಡುಪ

ಎರಡು ದೇಶಗಳ ಸಂಸ್ಕೃತಿಗಳ ಮೇಲದಿಂದ ಮಗುದೊಂದು ಬಗೆಯ—ಇವುಗಳಂದ ಬೇರೆಯೊದ ಮತ್ತೊಂದು ಸಂಸ್ಕೃತಿಯು ಉತ್ಪತ್ತಿಯಾಗುವುದು. ಈ ಸಂದರ್ಭದಲ್ಲಿ, ಸಮೂಜದಲ್ಲಿ ಅನೇಕ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುವುವು. ಅವುಗಳಲ್ಲಿ ವಿವಾಹದ ಸಮಸ್ಯೆಯೂ ಒಂದು.

ಪರಿವಾರದ ಉಗಮ

ಯೋಗ್ಯ ಪರಿವಾರ ಮನೆ ತುಂಬಿ ಬೆಳಗಬೇಕಾದರೆ ಸ್ತ್ರೀ ಪುರುಷರ ಮಿಲನ ಅತ್ಯಗತ್ಯ. ನಮ್ಮ ದೇಶದಲ್ಲಿ ಇವರ ಮಿಲನ ವಿವಾಹದ ನಂತರವೇ ಎನ್ನಬಹುದು. ಅದರೂ ಜನರು ತಮ್ಮ ವಿವಾಹದ ರೀತಿಯಿಂದ ಮಗಳನ್ನು ಜೆನ್ನಾಗಿ ಅರಿತು ಕೊಂಡಿಲ್ಲ. ಸುಯೋಗ್ಯ ಪರಿವಾರದ ಉಗಮವಾಗಬೇಕಾದರೆ ವಿವಾಹದ ಕುರಿತು ಮದುವೆ ಮಾಡಿಕೊಳ್ಳುವ ಮೊದಲು ಜೆನ್ನಾಗಿ ತಿಳಿದುಕೊಳ್ಳಬೇಕು.

ಇಂದು ನಾವು ವಿದ್ಯಾವಂತ ಯುವಕರು ವಿದ್ಯಾಹೀನ ಯುವತಿಯನ್ನು ಮದುವೆಮಾಡಿಕೊಳ್ಳುವುದನ್ನು ಅಲ್ಲಿ—ಇಲ್ಲಿ ಕಾಣುತ್ತಿದ್ದೇವೆ. ಇಷ್ಟಿಂದಲೇ ಅನೇಕ ಪ್ರಾಕಾರದ ಮಾನಸಿಕ ತೊಂದರೆಗಳ ಜನ್ಮವಾಗುತ್ತದೆ. ತಂದೆ ತಾಯಿಗಳು ಪ್ರಾಯಸ್ಥ ಹುಡುಗಿಯನ್ನು ಮನೆಯಲ್ಲೇ ಇರಿಸಿಕೊಳ್ಳುವುದು ಅಯೋಗ್ಯ—ಅಸಭ್ಯ ಎಂಬ ಹಿರಿಯರ ಮಾತನ್ನು ಮರುಕಳಿಸಿ, ತಮ್ಮ ಮಗಳ ಮದುವೆಯನ್ನು ಹೇಗಾದರೂಮಾಡಿ ತೀರಿಸಿ ತಲೆಯ ಮೇಲಿನ ಭಾರವಾದ ಹೊರೆಯನ್ನು ಇಳಿಸಿಕೊಳ್ಳುತ್ತಾರೆ.

ನ್ಯೂನತೆಗಳು

ಒಂದು ಬೇಳೆ ಹೆಣ್ಣು ನೋಡಲು ಅಂದವಾಗಿ ಕಾಣಿಸದಿದ್ದರೆ ಪರರು, ಸುಂದರ ಹೆಣ್ಣನ್ನು ತೋರಿಸಿ ತದನಂತರ 'ಡೋಂಗಿ' ಮದುವೆ ಮಾಡಿ ಮುಗಿಸುತ್ತಾರೆ. ಅಂತೂ ಇಂತಹ ಹೆಣ್ಣು ಗಂಡನ ಮನೆಯಲ್ಲಿ 'ನರಕ'ದ ಜೀವನವನ್ನು ಭೋಗಿಸುತ್ತಾಳೆ. ಯುವಕರೂ ಬೇಸರದ ಜೀವನವನ್ನು ಸಾಗಿಸುತ್ತಾರೆ. ಅವನ ಉತ್ಸಾಹ ಲಾಭವನ್ನು ಪಡೆಯದೆ ನಷ್ಟವನ್ನು ಉಣ್ಣುತ್ತದೆ. ಅಲ್ಲದೆ ಅವನು ಅನೇಕ ರೀತಿಯ ಮಾನಸಿಕ ರೋಗರುಜಿನಗಳಿಗೆ ಆಹ್ವಾನವನ್ನೀಯುತ್ತಾನೆ. ಸ್ತ್ರೀಯು ಉದರ ರೋಗ ಮೂಲೆ ಹಿಡಿಣ್ಣು ಮೊದಲಾದ ರೋಗಕ್ಕೆ ತುತ್ತಾಗುತ್ತಾರೆ. ಇವೆಲ್ಲವೂ ಇಚ್ಛಾರಹಿತ ಪತ್ನಿಯರಿಂದ ಎನ್ನಬಹುದು.

ಇನ್ನು ಅನೇಕ ಮಹಿಳೆಯರು ಮದುವೆ ಮಾಡಿದ ನಂತರ ಪತಿಯ ಕುರಿತು ಅಸ್ಪೃಂದು ಅಭಿರುಚಿಯಿರದೆ, ಆತ್ಮಹತ್ಯೆ ಮಾಡಿಕೊಳ್ಳುವರು. ಇದೇ ರೀತಿ ಯುವಕರು ಮೇಲೆ ಹೇಳಿದಂತೆ, ಅಯೋಗ್ಯ ಸ್ತ್ರೀಯರನ್ನು ವಿವಾಹವಾಗಿ ಕೊನೆಗೆ ಸಂಕಟದ ಹೊಳೆಯಲ್ಲಿ ಈಜುತ್ತಾರೆ. ಇಂತಹ ಯುವಕರು ಉದರ ರೋಗ, ಹೃದಯ ರೋಗ, ತಲೆ ಸಿಡಿತ, ಅನಾಕಾರಣವಾಗಿ ಭಯ ಹಾಗೂ ಚಿಂತೆಗಳಿಂದ ಕೂಡಿದ ಜೀವನದಲ್ಲಿ ಜೀವಿಸುತ್ತಾರೆ. ಈ ರೀತಿ ಪತಿ ಪತ್ನಿಯರ ಅಶಾಂತಿಯ ಹೂವಿನ ಮೊಗ್ಗೆ ಅರಳುವ ಮೊದಲೇ ಮುದ್ದಾಡಿ ಕೆಳಗುರುಳಿ ಬೀಳುತ್ತದೆ. ಪವಯುವಕ ಯುವತಿಯರ ಪ್ರೇಮ ಶಕ್ತಿಗೆ ಅಂತ್ಯವಾಗುತ್ತದೆ. ಅವರ ಪ್ರಕಾಶದ ಕಾಂತಿಯು ನಂದಿಹೋಗಿ ಕಾಂತಿ ಹೀನವಾಗುತ್ತದೆ. ಪತಿಯು ಶಕ್ತಿ ಹೀನಳಾಗುತ್ತಾನೆ. ಪತಿಯು ವಿರಹದ ಬೇನೆಯಲ್ಲಿ ಗೊಡ್ಡಾಗುತ್ತಾಳೆ. ಈ ತರಹದ ದಾಂಪತ್ಯ ಜೀವನವು ಮರಣಕ್ಕೆ ಕಾರಣವಾಗುತ್ತದೆ.

ಕೆಲವು ಯೋಗ್ಯ ಪರಿವಾರದವರು ತಮ್ಮ ಹುಡುಗ ಹುಡುಗಿಯರಿಗೆ ವಿದ್ಯಾಭ್ಯಾಸವನ್ನು ಕಲಿಯುವ ಸದವಕಾಶ ಕಲ್ಪಿಸಿ ಆರ್ಥಿಕ ಸ್ವಾವಲಂಬನೆಯ ಬೆಳಕು ಹರಿಯಿಸಿ ವಿವಾಹ ಮಾಡುವ ಯೋಜನೆ ಹೊಡುತ್ತಾರೆ. ಪರಂತು ಈ ವೇಳೆಯಲ್ಲಿ ಕೆಲವು ಯುವಕರು ವಿವಾಹ ಮಾಡಿಕೊಂಡರೂ ಇನ್ನು ಕೆಲವು ಪ್ರಾಯಸ್ಥರು ಅವಿವಾಹಿತರಾಗಿ ಜೀವನ ಸಾಗಿಸುತ್ತಾರೆ. ವಿದ್ಯಾಲಯಗಳಲ್ಲಿ ಅನೇಕ ಉಪಾಧ್ಯಾಯಿಯರು ಇದೇ ರೀತಿಯಾಗಿ ಸಮೂಜದ ಕುಂದು ಕೊರತೆಗಳಿಂದ ಮದುವೆಯಾಗದೆ ಇರುವುದನ್ನು ಗಮನಿಸ ಬಹುದು. ಅಭಿರುಚಿಯಿಲ್ಲದ ವರನನ್ನು ಪಡೆಯುವುದ್ಕಿಂತ ಅವಿವಾಹಿತರಾಗಿ ಇರುವುದೇ ಇವರಿಗೆ ಉತ್ತಮ ದಾರಿ.

ಕನ್ಯಾದಾನ ಹಾಗೂ ಪ್ರಾಣಿಹಾನಿ

ಕನ್ಯಾದಾನ, ಇದು ಪ್ರಾಚೀನ ಕಾಲದ ಹಿರಿಯರ ಕೊಡುಗೆ. ನಾವು ನಮ್ಮ ಕನ್ಯೆಯ ಜೊತೆಗೆ ವಸ್ತ್ರ, ಬಂಗಾರ, ಹಣ, ಪಶು ಇತ್ಯಾದಿಗಳನ್ನು ದಾನಮಾಡಿ, ಅಂದಿಗೆ ನಮ್ಮ ಕನ್ಯೆಯ ಕೂಡೆ ಇರುವ ಅಧಿಕಾರವನ್ನು ಮುಗಿಸುತ್ತೇವೆ. ಒಂದು ವೇಳೆ ತಂದೆ ತಾಯಿಯವರಿಗೆ ಹೆಣ್ಣಿನ ಜೊತೆಗೆ ಹಣ,ಬಂಗಾರಾದಿಗಳನ್ನು ಕೊಡಲು ಅಸಾಧ್ಯವಾದಲ್ಲಿ ಅವರನ್ನು ಮಾನಸಿಕ ತೊಂದರೆಗೆ ಒಳಪಡಿಸಿ ಪ್ರಾಣಹಾನಿಮಾಡುವ ವ್ಯವಸ್ಥೆಯೂ ಆಗುತ್ತದೆ.

"ಯುವತಿಯೋರ್ವಳು ತನ್ನ ಉಟ್ಟ ಬಟ್ಟೆಗೆ ಬೆಂಕಿ ಹಚ್ಚಿಸಿ, ಸುಟ್ಟು ಭಸ್ಮವಾದಳು"—ಇದನ್ನು ಪತ್ರಿಕೆಗಳಲ್ಲಿ ಕಂಡು ಮೂಗಿನ ತುದಿಗೆ ಬೆರಳುಗಳನ್ನು ಕೊಂಡುಹೋಗುವೆವು. ಆದರೆ ಮೂಲಕಾರಣವೇ ಬೇರೆ. ಹಿಂದೂ ಧರ್ಮದ ಅನುಸಾರವಾಗಿ ಯಾವತ್ತು ಹಿಂದೂ ವ್ಯಕ್ತಿಯು ತನ್ನ ಪತ್ನಿಯಿರುವ ವರೆಗೆ ಬೇರೊಬ್ಬಳನ್ನು ಮದುವೆಯಾಗಬಾರದು. ತನ್ನ ಪತ್ನಿಯನ್ನು ಕೊಂದು ಮತ್ತೊಬ್ಬಳನ್ನು ಮದುವೆಯಾಗುವವರೂ ಇದ್ದಾರೆ ಎನ್ನಬಹುದು.

ಒಮ್ಮೊಮ್ಮೆ ಪತಿ ಪತ್ನಿಯರಲ್ಲಿ ಸ್ನೇಹ ತುಂಬಿ ಮುಂದುವರಿಯುತ್ತದೆ. ಮಧ್ಯದಲ್ಲಿಯೊಂದು ತೊಡಕು ಎಡವಿ ಬೀಳುತ್ತದೆ. ಪತಿಯು ಪತಿಯನ್ನು ಅತಿಯಾಗಿ ಪ್ರೀತಿಸುವುದನ್ನು ಕಂಡು ಅಳಿಯ ಸೊಸೆಯರು ಅಸೂಯೆ, ಹೊಟ್ಟೆಯಲ್ಲಿ ಕುದಿಯುವುದುಂಟು. ಅವಳು ಮತ್ತಷ್ಟು ಸುಂದರಿಯಾಗಿ ಬಿಟ್ಟರೆ ಮುಂದಿನ ವಿಚಾರ ತಿಳಿಸುವುದು ಅನಗತ್ಯ. ಒಂದು ಕಡೆ, ಒಂದು ಪರಿವಾರದಲ್ಲಿ ಈ ರೀತಿಯೇ ಆಯಿತು. ಯುವತಿ ಸುಶಿಕ್ಷಿತ-ಸುಂದರಿಯಾಗಿದ್ದಳು. ಈ ಯುವತಿಗೆ ಹಿಂದೆಯೂ ಅನೇಕ ತರಹದ ಮಾನಸಿಕ ಹಾಗೂ ಶಾರೀರಿಕ ರೋಗವೂ ಬಂದಿತ್ತು. ಯುವತಿಯ ಗಂಡನಿಗೆ ತನ್ನ ಸ್ವಂತ ವ ನೆಯಲ್ಲೇ ಅಂದರೆ ತನ್ನ ತಂದೆಯ ಮನೆಯಲ್ಲೇ ಇದ್ದ ಜೀವನ ಮುಂದುವರಿಸ ಬೇಕಾಯಿತು. "ವಿಧವೆಯನ್ನು ಕಂಡಾಗಲೆಲ್ಲಾ ಸುಶಿಕ್ಷಿತವಂಹಿಳೆ ಸ್ನಾನ ಮಾಡಬೇಕು" ಇದು ಸೊಸೆಯೋರ್ವಳ ಅಭಿಮತ. 'ಒಂದು ವೇಳೆ ಈ ರೀತಿಯಾಗಿ ವಿಧವೆಯನ್ನು ಕಂಡಾಗ ಸ್ನಾನ ಮಾಡದಿದ್ದರೆ ತಾನೇ ಸ್ವತಃ ವಿಧವೆಯಾಗುತ್ತೇನೆ ಎಂದು ಯುವತಿಗೆ ಸೊಸೆ ಅಂದಳು ಮಗುದೊಮ್ಮೆ ಈ ಯುವತಿಯ ಮನೆಗೆ ಖಂದಾಗ ಸೊಸೆಯ ಗಂಡ ತೀರಿ ಹೋದ. ಮಹತ್ತರವಾದ ಆಪತ್ತಿನ ಬೋಜವನ್ನು ಈ ಸೊಸೆ ಯುವತಿಯ ಮೇಲೆ ಹೊರಿಸಿದಳು. ಇದರ ಕಾರಣವಾಗಿ ಯುವತಿಯ ಮಾನಸಿಕ ಹಾಗೂ ಶಾರೀರಿಕ ರೋಗವೂ ಅಭಿವೃದ್ಧಿಯಾಯಿತು. ಮರುದಿನವೇ ಸಾವನ್ನಪ್ಪಿದಳು.

ಎಷ್ಟೋ ನವಯುವಕರು ತಮ್ಮ ಹೆಂಡತಿಯ ಮನೆಗೆ ಬರುವಾಗಲೇ ಅವಳ ಮದುವೆಯಾಗುವ ಹಿಂದಿನ ಪ್ರೇಮ ಚಿತ್ರಣವನ್ನು ಕೇಳುತ್ತಾನೆ. ಒಂದು ವೇಳೆ ಈ ವಿಚಾರದಲ್ಲಿ ಸ್ತ್ರೀ ಅಸ್ಪೊಂದು ಅಭಿರುಚಿ ತೋರಿಸದಿದ್ದರೆ ಪತಿಯು ದುಃಖಿತನಾಗುತ್ತಾನೆ. ಒಮ್ಮೆ ಇದೇ ರೀತಿ ಗಂಡ ಮದುವೆಯ ಪ್ರಥಮ ದಿನಗಳಲ್ಲಿ ಮನೆಗೆ ಖಂದಾಗ ತನ್ನ ಹೆಂಡತಿಯಲ್ಲಿ 'ಹಿಂದಿನ ಪ್ರೇಮ ವಿಚಾರಗಳನ್ನು ತಿಳಿಸಬೇಕೆ'ಂದು ಒತ್ತಾಯ ಪಡಿಸಿದ. ಪತ್ನಿ ಯಾವ ತೊಂದರೆಗಳಿಲ್ಲದೆ ಸರಾಗವಾಗಿ ಕಟು ಸತ್ಯವನ್ನು ನುಡಿದಳು. ಮರುದಿನ ಈ ವಿಷಯದಿಂದ ಗಂಡ ಪತ್ನಿಗೆ ವಿಷವನ್ನು ತಿನ್ನಿಸಿ ತಾನು ಮೃತ್ಯುವಶನಾದ. ಇದು ಮಾನವನ ಅಜ್ಞಾನತನ. ತಪ್ಪು ತಿಳುವಳಿಕೆಯೆ ಕಾರಣ. ಈ ರೀತಿಯ ಯುವಕ ಯುವತಿಯರು ಶ್ರೀ "ಬರ್ಟ್ರಾಂಡ್ ರಸಲ್"ರ ಆಧುನಿಕ ಮನೋ ವೈಜ್ಞಾನಿಕ ವಿಚಾರಗಳಲ್ಲಿ ಕಾಣಬಹುದು. ಇವುಗಳನ್ನು ಓದಿ ತಿಳಿಯುವುದೂ ಅಗತ್ಯ.

ಅಜ್ಞಾನವೆಂಬುದು ಮಾನವನಿಗೆ ಕೆಟ್ಟದರಲ್ಲಿ ಒಳ್ಳೆಯದನ್ನು ತಿಳಿಸುವುದು. ಮಾನವನೂ ಪಶುಜೀವನವಾಗುತ್ತಾನೆ. ಇದನ್ನು ಸಾಮರ್ಥ್ಯ ಹೀನವನ್ನಾಗಿ ಪರಿವರ್ತಿಸುತ್ತಾನೆ. ಯಾವಾಗ ಮನುಷ್ಯನು ಅಜ್ಞಾನವನ್ನು ಸಾಮರ್ಥ್ಯಹೀನವನ್ನಾಗಿ ಮಾಡುತ್ತಾನೋ ಅವನು ಅನೇಕ ರೀತಿಯ ರೋಗರುಜಿನಗಳನ್ನು ಆಹ್ವಾನಿಸುತ್ತಾನೆ. ಇಂದು ನಾವು ಅಧರ್ಮವನ್ನು ಧರ್ಮವಾಗಿ ಕಾಣುತ್ತೇವೆ. ನಾವು ನಾರಿಯನ್ನು ಪರಾಧೀನ ವ್ಯಕ್ತಿಯಾಗಿ ಇಡಲು ಇಚ್ಛಿಸುತ್ತೇನೆ. ನಮ್ಮ ಮುಂದೆ ಮತ್ತೊಂದು ರಾಷ್ಟ್ರವು ಸ್ವತಂತ್ರವಾಗಿದೆ. ಅಲ್ಲಿಯೂ ಜನರು ಜೀವಿಸುತ್ತಾನೆ. ಅವರ ಜೀವನ 'ನಾವು ಯಾರಿಗೂ ಸೇವಕರಾಗ ಕೂಡದು' ಎನ್ನುತ್ತದೆ. ಸೇವಕರಾಗುವುದು ಅಧರ್ಮ ಪರಾಧೀನ ತಾಯಿಯು ಮಕ್ಕಳು ಪರಾಧೀನರು, ಅತ್ಯಾಚಾರಿಗಳು. ಒಂದೊಮ್ಮೆ ನಮ್ಮಲ್ಲಿ ಸ್ವತಂತ್ರ ಪ್ರಾಗರಿಕರಾಗಿ ಇದುಕೆ ಬಾಳಬೇಕೆಂಬ ಹಂಬಲ ವಿದ್ದರೆ ಸಾಮಾಜಿಕ ವ್ಯವಸ್ಥೆಯನ್ನು ಶುದ್ಧಗೊಳಿಸ ಬೇಕು. ನಮ್ಮಲ್ಲಿರುವ ಜಾತಿ ಸಂಧದ ಕೊಳಕನ್ನು ಶುದ್ಧ ಜಾಲರಿಯಲ್ಲಿ ಜಲ್ಲಿಸಬೇಕು.

ಪ್ರಪಂಚದ ಸುತ್ತ ನಿಮ್ಮ ಹಣ ಸಂಚರಿಸಬೇಕೇ?

ಅಂತರಾಷ್ಟ್ರೀಯ ವಾಣಿಜ್ಯವನ್ನು ಕೈಗೊಂಡಿರುವ ವರ್ತಕರಿಗಾಗಿ ಸಿಂಡಿಕೇಟ್ ಬ್ಯಾಂಕು ಅಂತರಾಷ್ಟ್ರೀಯ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ತರದ ಸೇವೆಯನ್ನು ಕೈಗೊಳ್ಳುತ್ತದೆ. ದೇಶದ ಪ್ರಮುಖ ನಗರಗಳಲ್ಲಿರುವ ನಮ್ಮ ವಿದೇಶೀ ವಿನಿಮಯ ಆಫೀಸುಗಳ ಮೂಲಕವೂ ಜಗತ್ತಿನಾದ್ಯಂತ ಪಸರಿಸಿರುವ ನಮ್ಮ ವಿದೇಶೀ ವಿನಿಮಯ ಪ್ರತಿನಿಧಿಗಳ ಮೂಲಕವೂ, ಹಣ ಪಾವತಿ, ಬಿಲ್ಲು ಪತ್ರ, ಆಮದು—ರಫ್ತು ಇದೇ ಮೊದಲಾದ ಸೇವೆಯನ್ನು ಕೈಗೊಂಡು ನಿಮ್ಮ ಹಣ ಪ್ರಪಂಚದ ಸುತ್ತ ಸಂಚರಿಸುವಂತೆ ಮಾಡುವೆವು.

ವಿಶ್ವದಾದ್ಯಂತ ಬ್ಯಾಂಕಿಂಗ್ ಸೇವೆಗೆ

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

READ & ADVERTISE IN NAVAYUGA WEEKLY

ಇಂಡಿಯಾದಲ್ಲಿ ಇಂಗ್ಲೀಷೇ ಇರಬೇಕೆನ್ನುವ ಇಂಗ್ಲೀಷ್ ಇನಿಯರು

ಬರೆದವರು : ಶ್ರೀ ಶಿವಶಂಕರ

ಬಂಗಾಲದಲ್ಲಿ ಮಹಮ್ಮದೀಯರ ಆಕ್ರಮಣದ ಇತಿಶ್ರೀ ಮಾಡಿದ ಹಿಂದೂಗಳು ಆಂಗ್ಲರ ಆಕ್ರಮಣವನ್ನು ಆಮಂತ್ರಿಸಿದರು. ಭಗವಂತನೇ ಬ್ರಿಟಿಷರನ್ನು ಭಾರತಕ್ಕೆ ಕಳಿಸಿರುವದಾಗಿ ಅಂದು ಮುಗ್ಧ ಹಿಂದೂಗಳ ನಡುವೆ ಕೆಲವರು ಪ್ರಚಾರ ನಡೆಸಿದರು. ಇಂಗ್ಲೀಷ್ ಜರಿಯೆಯ ಮೀಸೆ ಪ್ರವೇಶಿಸಲು ಎಡೆ ಕೊಟ್ಟಂತಾಯಿತು.

ನೂರು ವರ್ಷಗಳ ನಂತರ ಭಾರತೀಯತಾ ಭಾಸ್ಕರನ ಪುನರುದಯವಾಯಿತು. ರಾಜಾಧಿರಾಜರೂ ಶ್ರೀ ಸಾಮಾನ್ಯನೂ ಭುಜಕ್ಕೆ ಭುಜಕೊಟ್ಟು ಬ್ರಿಟಿಷರನ್ನೋಡಿಸಲು ಒಂದಾದರು. ಆಗ ಮದರಾಸಿನಲ್ಲಿ ಕೆಲವರು ಅವರ ಕಾಲನ್ನೆಳೆದು ಬಿಟ್ಟರು. ತಮಿಳ್ನಾಡಿನ ಇತಿಹಾಸಕ್ಕೆ ಅವರು ತಾರು ಹಚ್ಚಿದರು. ಬ್ರಿಟಿಷರನ್ನೋಡಿಸುವದೇ?—ಬೇಡವೆಂದರವರು!

ಹುಲಿ ನರ ಮಾಂಸದ ರುಚಿ ಕಂಡಿತು, ಅದಕ್ಕೆ (ಬ್ರಿಟಿಷರಿಗೆ) ಈ ಎರಡು ಪ್ರಾಂತ್ಯಗಳ ಪ್ರಜೆಗಳ ಮಾಂಸ ಹೆಚ್ಚು ರುಚಿಯೆನಿಸಿತು. ಆ ಎರಡು ಪ್ರಾಂತ್ಯಗಳ ಜನರನ್ನು ತನ್ನ ಇಚ್ಛೆಯನುಸಾರವಾಗಿ ಕೊಬ್ಬಿಸಿತು. ಕೊಬ್ಬಿಸಲು ಸರ್, ರೈಟ್ ಹೊನರೇಬಲ್, ರಾವ್ ಬಹದೂರ್ ಮುಂತಾದ ಅಮಲು ಮಿಶ್ರಿತ ಸಾಮಾಗ್ರಿಗಳನ್ನು ಅವರು ಕೊಟ್ಟರು.

ಸ್ವಾತಂತ್ರ್ಯ ಸಮರದ ಪುನರಾವೃತ್ತಿಯನ್ನು ತಪ್ಪಿಸಲು ಚತುರ ಬ್ರಿಟಿಷರು ಕಾಂಗ್ರೆಸ್ ಕಾಗರಕದ ಬೀಜವನ್ನು ಹಾಕಿದರು. ಕಬ್ಬಿಣವನ್ನೇ ಭಂಗಾರವನ್ನಾಗಿ ಬದಲಾಯಿಸುವ ಭಾರತೀಯರು ಕಾಗರಕ ಕಾಂಗ್ರೆಸ್ಸನ್ನು ಬದಲಾಯಿಸಿ ಬಿಟ್ಟರು. ತಮ್ಮ ರಕ್ಷಣೆಯ ಆಯುಧವನ್ನಾಗಿ ಬ್ರಿಟಿಷರು ಯಾವದನ್ನು ಫಿಕ್ಸಿಸಿದ್ದರೋ, ಅದೇ ಅವರ ಅಂತ್ಯಕ್ಕೆ ಆಯುಧವಾಯಿತು. ಆದರೂ ಅದು ಒಂದೆರಡು ದಿನಗಳ ಅಥವಾ ಚಮತ್ಕಾರಿಕ ಘಟನೆಯಲ್ಲ. ಶಾಂತಿಪ್ರಿಯ ಕಾಂಗ್ರೆಸ್ಸಿನಲ್ಲಿ ತೀವ್ರಗಾಮಿಗಳು ತಲೆಯೆತ್ತಿದ್ದರು. 'ಸ್ವರಾಜ್ಯವೇ ನಮ್ಮ ಜನ್ಮಸಿದ್ಧ ಹಕ್ಕೆ'ಂದರು. ಮಂದಗಾಮಿಗಳು ಮೌನವಾಗಿ ಉಳಿದರೇ?—ಇಲ್ಲ. ದೈವಕೃಪೆಯಿಂದ ಕಡಲಿನಾಚೆಯಿಂದ ಬಂದಿರುವ ನಾಗರಿಕ ಬ್ರಿಟಿಷರ ಆಳ್ವಿಕೆಯೇ ಇಲ್ಲಿ ಮುನ್ನಡೆಯಬೇಕೆಂದೂ, ಆದರೆ ಅವರು ಇಂಗ್ಲೇಂಡಿನಲ್ಲಿದ್ದು ಆಳದೆ ಡೆಲ್ಲಿಗೆ ಬಂದಿರಬೇಕೆಂದರು. ಭಾರತವನ್ನು ಒಂದು "ಶಾಸನ"ದೊಳಗೆ ತಂದು ಉಪಕಾರ ಮಾಡಿರುವ ಬ್ರಿಟಿಷರನ್ನು ನಾವು ಓಡಿಸುವದೇ? ನಾಗರಿಕ ಜನರ ಸಂಪರ್ಕದಿಂದ ನಾವು ದೂರಕ್ಕುಳಿಯುವದೇ? ಸೂರ್ಯ ಮುಳುಗದ ಸಾಮ್ರಾಜ್ಯ ಹೊಂದಿರುವ ಇಂಗ್ಲೀಷರನ್ನು ನಮ್ಮಿಂದ ದೊಡೆದೋಡಿಸಲು ಸಾಧ್ಯವೇ? ಇಂತಹ ಅದೆಷ್ಟೋ ಒಡಕು ಸ್ವರಗಳು ಅಂದು ಕೇಳಿ ಬಂದಿದ್ದುವು. ಸ್ವಾತಂತ್ರ್ಯ ಪ್ರಿಯರು, ದೇಶಭಕ್ತರು ಅತ್ತ ಗಮನ ಕೊಡಲಿಲ್ಲ. ಯೂನಿಯನ್ ಬಾಳನ್ನು ಕೆಳಗಿಳಿಸಿಯೇ ಬಿಟ್ಟರು.

ಚತುರ ಬ್ರಿಟಿಷರು ತಮ್ಮ ಬುದ್ಧಿವಂತಿಕೆಯನ್ನು ತೋರಿಸಿಯೇ ಹೋದರು. ತಮ್ಮ ಪರವಾಗಿ ವಾದ ಹೂಡುವ ಜನರ ಗುಂಪೊಂದನ್ನು ಅವರು ತಯಾರಿಸಿಯೇ ಇಲ್ಲಿಂದ ಕಾಲ್ತೆಗೆದರು. ಕಾಂಗ್ರೆಸ್ಸ್ ತನ್ನ ಕೈಯಿಂದ ಜಾರಿದೊಡನೆ ಅವರು ಸ್ಥಳೀಯ ಪಕ್ಷ ಹಂಡಡಗಳನ್ನು ನಿರ್ಮಿಸಿದರು. ಮದರಾಸಿನಲ್ಲಿ ಜಸ್ಟೀಸ್ ಪಾರ್ಟಿ ಪ್ರಬಲವಾಗಿತ್ತು. ವಿದ್ಯಾಭ್ಯಾಸ ಅದರಲ್ಲೂ ಚರಿತ್ರೆಯ ಮೂಲಕ ನಮ್ಮಲ್ಲಿ ಪ್ರತ್ಯೇಕತಾ ಮನೋಭಾವನೆಯ ವಿಷ ಬೀಜವನ್ನು ಅವರು ಅದಾಗಲೇ ಬಹಳ ಜೆನ್ನಾಗಿ ಬಿತ್ತಿದ್ದರು.

ಭಾರತದಲ್ಲಿ ಆಂಗ್ಲ ಭಾಷೆಯನ್ನು ಸರಕಾರೀ ಭಾಷೆಯನ್ನಾಗಿ ಮಾಡಿದುದರ ವಿರುದ್ಧ ಇಂಗ್ಲೇಂಡಿನ ಶಾಸನ ಸಭೆಯಲ್ಲಿ ಕೆಲವರು (ಉದಾರವಾದಿಗಳು?) ವಿರುದ್ಧವಾಗಿ ವಾದ ಹೂಡಿದರು. ಆಗೊಬ್ಬನು ಎದ್ದು ನಿಂತು ಭವಿಷ್ಯತ್ತಿನ ಕುರಿತು ಹೇಳಿದನು—ಆಂಗ್ಲೇಯರ ಆಳ್ವಿಕೆ ಭಾರತದಲ್ಲಿ ಬಹಳ ದಿನ ಬಾಳಲಾರದು. ಅಲ್ಲಿಂದ ನಾವು ಎಂದಾದರೂ ಒಂದು ದಿನ ಕಾಲ್ತೆಗೆಯಲೇ ಬೇಕಾಗುತ್ತದೆ. ನಾವು ಆಂಗ್ಲ ಭಾಷೆಯನ್ನಲ್ಲಿ ಆಡಳಿತದ ಭಾಷೆಯನ್ನಾಗಿ ಮಾಡಿದಲ್ಲಿ ಮುಂದಕ್ಕೆ, ನಮ್ಮ ಆಳ್ವಿಕೆ ಅಂತ್ಯವಾದರೂ, ಅದು ಅಲ್ಲಿ ಆಡಳಿತ ಭಾಷೆಯಾಗಿಯೇ ಉಳಿಯುತ್ತದೆ. ಭಾರತೀಯರೆ ನಾಲಗೆಯನ್ನು ಬದಲಾಯಿಸಿ, ಪೆಡುಳೆನ್ನು ಮೂಸಡಿಸಿ ಇಂಗ್ಲೀಷ್ ಭಾಷೆಯನ್ನಾಡುವ ಇಂಡಿಯನ್ನರನ್ನಾಗಿ ಪರಿವರ್ತಿಸಿದಲ್ಲಿ ಪರೋಕ್ಷವಾಗಿ ನಮ್ಮ ಸಾಮ್ರಾಜ್ಯವೇ ಅಲ್ಲಿರುತ್ತದೆ.

ಅಬ್ಬಾ! ಎಂತಹ ಭವಿಷ್ಯದ್ವಾಣಿ!

ಆಕ್ರಮಣಗಾರ ಆಂಗ್ಲೇಯರನ್ನು ಹೊರಗೆ ಕಳುಹಿಸಿದೆವು. ಆಡಳಿತ ಭಾಷೆ ಇಂಗ್ಲೀಷೇ ಇರಬೇಕೆಂದು ಇಲ್ಲಿ ನಾವು ಬೊಬ್ಬೆ ಹೊಡೆಯುತ್ತಿದ್ದೇವೆ. ಆದರಲ್ಲಿ ಮೇಲೆ ತಿಳಿಸಿರುವ ಎರಡು ಪ್ರಾಂತ್ಯಗಳೇ ಪ್ರಮುಖ ಪಾತ್ರವನ್ನು ವಹಿಸಿರುವದು ಗಮನೀಯ ವಿಷಯವಿದೆ.

ಪದವಿ ಪಥದಲ್ಲಿ ಪಡಿಯಿಂದ ಪಡಿಗೆ ಪತಿತರಾಗುತ್ತ ಬಂದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ತಮ್ಮ ವೈಯಕ್ತಿಕ ಹಗೆಯನ್ನು ಸಾಧಿಸಿಕೊಳ್ಳುವ ಏಕಮೇವ ಉದ್ದೇಶದಿಂದ ಅಖಂಡ ಕಾರ್ಯಪ್ರವೃತ್ತರಾಗಿದ್ದಾರೆನ್ನುವದು ವಿವೇಕಶಾಲಿಗಳಿಗೆ ವೇದ್ಯವಾಗಿರುತ್ತದೆ. ಶ್ರೀ ಚ. ರಾ.ರವರ ಹಗೆಯ ಹೊಳೆ ತನ್ನ ದಾರಿಯಲ್ಲಿ ಸಿಕ್ಕಿದುದನ್ನೆಲ್ಲಾ ಕೊಚ್ಚಿಕೊಂಡು ಹೋಗುತ್ತಿದೆ. ತನ್ನ "ಧ್ಯೇಯಪೂರ್ತಿಗಾಗಿಯೇ ಅವರು ಸ್ವ. ಪಾರ್ಟಿಯನ್ನು ಸ್ಥಾಪಿಸಿಕೊಂಡಿದ್ದಾರೆ. ಇಂದು ತನ್ನ 'ಧ್ಯೇಯಸಾಧನೆ'ಗಾಗಿ ಶ್ರೀ ರಾಜಾಜಿ ಒಂದು ರಾಜಕೀಯ ಪಕ್ಷವನ್ನು ಕಟ್ಟಿಕೊಂಡು ರಾಜಕೀಯವನ್ನಾಡುತ್ತಿದ್ದಾರೆ. ಇತ್ತ ಬಂಡವಾಳಶಾಹಿಗಳ ಪರವಾಗಿ ಅದೇನೇನೋ ನುಣ್ಣನೆಯ ನುಡಿಗಳನ್ನಾಡುತ್ತ ಅವರನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡಿರುವಂತೆ ರಾಜೋಪಾಜರನ್ನು ತನ್ನ ತಂಡಕ್ಕೆ ಸೇರಿಸಿಕೊಂಡಿದ್ದಾರೆ. ಇದಾದ ಮೇಲೆ ಇನ್ನುಳಿದಿರುವದು ಎರಡೇ ಎರಡು ಗುಂಪು. ಒಂದು—ಇಂಡಿಯನರೆಂದು ಜೇಳಿಕೊಳ್ಳಲು ನಾಚಿಕೆಪಡುತ್ತಿರುವ ಹಾಗೂ ಆಂಗ್ಲೇಯರಲ್ಲವೆಂದು ದೂರಕ್ಕೋಡಿಸಲ್ಪಟ್ಟಿರುವ ಆಂಗ್ಲೋ-ಇಂಡಿಯನರ ಗುಂಪು. ಇನ್ನೊಂದು—ಆಂಗ್ಲೇಯರ 'ಅನುಗ್ರಹ'ಕ್ಕೆ ಪಾತ್ರರಾಗಿ ಬಿರುದು ಬಾವಲಿಗಳನ್ನು ಪಡೆದುಕೊಂಡು ಭಾರತೀಯರಾಗಿ ಬಾಳಲು ಇಷ್ಟಪಡದೆ, ತಮ್ಮ ಚರ್ಮವನ್ನು ಶಪಿಸುತ್ತಿರುವ ಬೂದು ಕಪಿಗಳ ತಂಡ. ಈ ಇಂಗ್ಲೀಷ್ ಇನಿಯರನ್ನು ತನ್ನ ಕಾರ್ಯಸಾಧನೆಗಾಗಿ ಶ್ರೀ ರಾಜಾಜಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಅವರು ರಾಜಕೀಯ ಮಾಡಕೆಯನ್ನೂ ಅಡಿಸಿದ್ದಾರೆ. ಮತ್ತು ಆಂಗ್ಲ ಭಾಷೆಯ ಬೆಲ್ಲವನ್ನು ಮೇಲಕ್ಕೆ ಸವರಿ, ಹಿಂದೀ ವಿರೋಧೀ ಮನೋಭಾವನೆಯ ಕೆಂಪಿರುವೆಗಳನ್ನು ಮೇಲಕ್ಕೆ ಬಿಟ್ಟು ಅವರು ಆಟ ನೋಡುತ್ತಿದ್ದಾರೆ.

'ಆಂಗ್ಲ ಪ್ರವಾಹ'ದನ ಭವಿಷ್ಯದ್ವಾಣಿ ಸತ್ಯವಾಯಿತು. ಸೂರ್ಯ ಅಸ್ತಮಿಸದ ಬ್ರಿಟಿಷ್ ಸಾಮ್ರಾಜ್ಯ ಬಿರುಕು ಬಿಟ್ಟಿತು. ಆಂಗ್ಲ ಭಾಷೆಯ ಆಡಳಿತ ಭಾರತದಲ್ಲಿ ಉಳಿದು ಕೊಂಡಿತು. ಅದನ್ನುಳಿಸಿಕೊಳ್ಳುವ ಸಲುವಾಗಿ ಇಂದು ಇಂಗ್ಲೀಷ್ ಇನಿಯರು ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರ ನೇತೃತ್ವದಲ್ಲಿ ಒಂದಾಗಿರುವರು. ತಮ್ಮ ಧ್ವನಿ ಪರೀಕ್ಷೆಗಾಗಿ ಅವರೊಂದು ಸಭೆಯನ್ನು ಕರೆಯಲು ಪ್ರಯತ್ನಿಸಿದರು. ಅದಕ್ಕೆ ಸ್ಥಳ?—ಬೆಂಗಳೂರು, ಶಾಂತ ಹಾಗೂ ಸುಂದರ ನಗರ. ಅಲ್ಲಿ ಮಿಸ್ಟರ್ ಕೋದಂಡರಾಯರು, ಮಿಸ್ಟರ್ ಗುಂಡಪ್ಪ ಮುಂತಾದ ಪ್ರಮುಖ ವ್ಯಕ್ತಿಗಳಿದ್ದಾರೆ. ಆದರೆ ಅವರೇ ಅಲ್ಲಿನ ಜನತೆ ಇರುವದಿಲ್ಲ. ಜನತೆ ರೊಚ್ಚಿಗೆದ್ದಲ್ಲಿ? ಹಿಂದೆ...ಆಂಗ್ಲೇಯರ ಆಕ್ರಮಣದ ಅಂತ್ಯಕ್ಕೆ ಭಾರೀ ಜನತೆ ಮುಂದಕ್ಕೆ ಬಂದಿದ್ದಾಗ ಹಿಂದುಳಿದಿದ್ದ ಮೆಡ್ರಾಸ್! ಮದ್ರಾಸಿನ ಪಂಗಿ ಹೊಳೆಯಿತು. ಮದರಾಸು ಮಹಾ ನಗರದಲ್ಲಿ ಇಂಗ್ಲೀಷ್ ಕನ್ವೆನ್ಶನ್‌ಗಾಗಿ ಭಾರೀ ಏರ್ಪಾಡಾಯಿತು. ಇಂಗ್ಲೀಷ್ ಇನಿಯರು ಅಲ್ಲಿ ಬಂದು ಸೇರಿದರು; ನಾಲದುದಕ್ಕೆ ಕೆಲವು ವಿದ್ಯಾರ್ಥಿಗಳನ್ನು ಕರೆತರಿಸಿಕೊಂಡರು. ಇದರಲ್ಲಿ ಭಾರತದ ಭಾಷಾಮಂಡಿಗಳನ್ನು ಸಂಸ್ಕೃತ ದಾರದಲ್ಲಿ ಪೋಣಿಸಬೇಕು, ಭಾರತದ ಐಕ್ಯ ಸಂಸ್ಕೃತದಿಂದ ಮಾತ್ರ ಸಾಧ್ಯವೆಂದಿರುವ ಶ್ರೀ ಕುಂಜ್ರು ಇದೀಗ ಇಂಗ್ಲೀಷೇ ಇರಬೇಕೆನ್ನುವವರೊಟ್ಟಿಗೆ ಸೇರಿಕೊಂಡರು! ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ರಷ್ಯಾಕ್ಕೆ ರಾಯಭಾರಿಯಾಗಿ ಹೋದಾಗ ಅವರು ಸಂಬಂಧಪಟ್ಟ ಅಧಿಕಾರ ಪತ್ರಗಳನ್ನು ಕೊಂಡೊಯ್ದದ್ದು ಆಂಗ್ಲಭಾಷೆಯಲ್ಲಿದ್ದುದನ್ನು, ರಷ್ಯಾ ಸರಕಾರ ಅದನ್ನು ಸ್ವೀಕರಿಸದೆ ಅವರಿಗೆ ಛೀಮಾರಿ ಹಾಕಿತು—ತಾವು ಆಂಗ್ಲರ ಆಶ್ರಯದಲ್ಲಿರುವ ಇಂಡಿಯೂದ ರಾಯಭಾರಿಯನ್ನು ಬರಮಾಡಿಕೊಳ್ಳುವದಿಲ್ಲವೆಂದೂ, ಸ್ವತಂತ್ರ ಭಾರತದ ರಾಯಭಾರಿಯನ್ನು ಸ್ವಾಗತಿಸುವೆವೆಂದೂ ಹೇಳಿದರು. ಅನಂತರ ಹಿಂದೀ ಭಾಷೆಯಲ್ಲಿ ಪತ್ರಗಳನ್ನು ಅವರು ಕೊಟ್ಟು ಅಲ್ಲಿ ನಿಂತರು. ಈಗ ಅವರು ಅಧಿಕಾರದ ಅಂತಸ್ತಿನಲ್ಲಿ—ಪದವಿಯ ಸೀರೆದಲ್ಲಿರುವದಿಲ್ಲ! ಅಂತಲೇ ಇಂಗ್ಲೀಷ್ ಮೋಹ.

ಡಿಸೆಂಬರ ನಾಲ್ಕರಂದು (೧೯೬೭) ಶನಿವಾರ ದಿವಸ ಇಂಗ್ಲೀಷ್ ಇನಿಯರ ಕನ್ವೆನ್ಶನ್ ಮದ್ರಾಸಿನಲ್ಲಿ ನಡೆಯಿತು. ಭಾರತದ ಮಾಜಿ ಸರ್ವೋಚ್ಚ ನ್ಯಾಯಾಧಿಪತಿ ಮಿಸ್ಟರ್ ಶ. ಸುಬ್ಬರಾವ್ ಅವರು ಕನ್ವೆಶ್ಶನ ಉದ್ಘಾಟನೆ ಮಾಡಿದರು. ವಿವಿಧ ವಿರೋಧಿ ಪಕ್ಷಗಳು ಸೇರಿ ಶ್ರೀಯುತರ

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದಿಯ ಔಷಧಿ ಮತ್ತು ದಕ್ಷ ವೈದ್ಯಕೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ನ್ನು ಭಾರತದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರೂ ಅವರು ಜಯಶಾಲಿಗಳಾಗಿಲ್ಲ. ಇದೀಗ ಪುನ: ಸ್ವತಂತ್ರ ಪಾರ್ಟಿಯ "ಆಶ್ರಯ"ದಲ್ಲಿ ನಡೆಯುವ ಕನ್ವೆನ್ಶನಿನ ತೀರ್ಮಾನಕ್ಕೆ ಜಯಸಿಗುವದುಂಟೇ? ಮಹನೀಯರು ಮದಾಮೇಧಾವಿ ಇದ್ದರೂ ಆ ರೀತಿ ಸೋಲಲು ಕಾರಣವೇನು? ಅವರ ಹಿಂದೀ ವಿರೋಧಿ ಮನೋಭಾವನೆ ಮತ್ತು ಆಂಗ್ಲ ಭಾಷಾ ವ್ಯಾಮೋಹವೇ. ಇಂತಹವರು ರಾಷ್ಟ್ರಾಧ್ಯಕ್ಷರಾಗಿ ಬಿಟ್ಟಲ್ಲಿ ಅವರ "ಆಡಳಿತ" ನಡೆಯುವ ವರೆಗೆ ಆಂಗ್ಲ ಭಾಷೆ ಆಡಳಿತ ಭಾಷೆಯಾಗಿರುವದಲ್ಲಿ ಸಂದೇಹವೇ ಇಲ್ಲ. ಶ್ರೀಯುತರು ಕನ್ವೆನ್ಶನ್ನು ಉದ್ಘಾಟಿಸುತ್ತ ಭಾಷಾಸಮಸ್ಯೆಯ ಕುರಿತು ಯಾರೂ ಮಾತೆತ್ತಬಾರದು. ಅದನ್ನು ಮುಂದಿನ ಜನಾಂಗಕ್ಕೆ ಬಿಟ್ಟು ಬಿಡಬೇಕು. ಸಮಸ್ಯೆ ಪರಿಹಾರವಾಗುವ ವರೆಗೆ ಈಗಿನ ಸ್ಥಿತಿ ಮುಂದರಿಯಬೇಕೆಂಬುದು ಅದರ ತೀರ್ಪು. ಅದು ಯಾಕೆ ಹಾಗಾಗಬೇಕೆಂಬುದಕ್ಕೆ ಅವರು ಕಾರಣಕೊಟ್ಟಿದ್ದಾರೆ. ಈಗ ನಮ್ಮ ದೇಶ ಸ್ಥಿರವಾಗಿಲ್ಲ (ಸ್ಟೇಬಲ್?) ಬಲಶಾಲಿಯಾಗಿಲ್ಲವೆಂಬುದು ಅವರ ಅಭಿಪ್ರಾಯ. ಸ್ವಾತಂತ್ರ್ಯ ಚಳುವಳಿಯ ಸಮಯ ಮೂಕಲವರು ಹಾಗೆಯೇ ಹೇಳುತ್ತಿದ್ದರು. ಅಂತಸ್ತು, ಅಧಿಕಾರದಲ್ಲಿದ್ದವರು ಅಥವರ ತವೂ ಆಂಗ್ಲೇಯರ ಆಳ್ವಿಕೆಯೇ ಇರಬೇಕೆಂದು ಆಶಿಸಿಕೊಂಡಿದ್ದರು. ಇಷ್ಟು ದೊಡ್ಡ ದೇಶದ ಆಡಳಿತದ ಅಂಕುಶವನ್ನು ಕೈಯ್ಯಲ್ಲಿ ತೆಗೆದುಕೊಳ್ಳಲು ನಮ್ಮಲ್ಲಿ ಬಲವಿಲ್ಲವೆಂದು ಅವರು ಹೇಳುತ್ತಿದ್ದರು. ಸ್ವಾತಂತ್ರ್ಯ ಪ್ರೇಮಿಗಳು ಅತ್ತ ಮನಸ್ಸನ ಕೊಡಲಿಲ್ಲ; ಸ್ವರಾಜ್ಯವೇ ನಮ್ಮ ಜನ್ಮಹಕ್ಕೆಂದು ಘೋಷಿಸಿದರು. ಮುಕ್ಕಾಲು ಭಾಗ (ಪೂರ್ಣವಲ್ಲವಾದರೂ) ಜಯಶಾಲಿಗಳಾದರು. ಆಂಗ್ಲ ಭಾಷಾ ಆಡಳಿತದ ಪ್ರಶ್ನೆಯೂ ಹಾಗೆಯೇ ಇದೆ. ಇಂಗ್ಲೀಷ್ ಇಫಿಯರ ತರ್ಕದಿಂದಾಗಿ ದಿನ ಕಳೆಯಬಹುದು, ಅಷ್ಟೇ. ಆಂಗ್ಲೇಯರ ಹಿಂದುಡೆ ಆಂಗ್ಲ ಭಾಷೆಯೂ ಹೊರಗಟ್ಟಲ್ಪಡುತ್ತದೆಂಬುದರಲ್ಲಿ ಸಂದೇಹವಿಲ್ಲ. ಕನ್ವೇನ್ಶನಿಗೆ ರಾಜ್ಯ ಸರ್ಕಾರದ ಪೂರ್ಣ ಸಹಕಾರವಿದ್ದರೂ ಕೆಲವರು ಪ್ರತಿಭಟನೆಯ ಸ್ವರವನ್ನತ್ತಿರುವರು. ಇದು ಸಾಧಾರಣ ವಿಷಯವಲ್ಲ. ಭಾರತೀಯ ಭಾಷಾ ಭಾಸ್ಕರನ ಉದಯದ ಪೂರ್ವ ಆಂಗ್ಲ ಮೋಡ ತನ್ನ ಕರಾಳ ಛಾಯೆಯನ್ನು ಪಸರಿಸಿರುತ್ತದೆ. ಅದರಲ್ಲೇ ಇದು ಬೆಳೆದಿರುವ ಶ್ರೀ ಸುಬ್ಬರಾಯಂತಹವರಿಗೆ ಭಾರತೀಯ ಭಾಷಾ ಭಾಸ್ಕರನ ಕಿರಣವನ್ನು ಕಾಣಲು ಕಸಿವಿಸಿಯಾಗುತ್ತಿರಬಹುದು. ಅಥೈಕ್ಯತುಂಬಿರಬಹುದು, ಅಷ್ಟೇ. ಆಕಸ್ಮಿಕವಿನಲ್ಲಿರುವರಾಯರಿಗೆ ಇಂಗ್ಲೀಷ್ ಪಂಕೇಯರ ಭಾಷೆ ಇರುವದಿಲ್ಲ. ಭಾಷೆಗೆ ಜನಾಂಗದುಮತ ಅಥವಾ ರಾಷ್ಟ್ರೀಯತೆ ಇಲ್ಲವೆಂದವರು ತಿಳಿಸಿರುವರು. ಶ್ರೀ ಸಾಮಾನ್ಯರಿಗೆ ಇದು ಅರ್ಥವಾಗಬಹುದೇನು?— ಇಂಗ್ಲೆಂಡಿಗೆ ಇಂಗ್ಲೀಷಿದು, ಫ್ರಾನ್ಸಿಗೆ ಫ್ರೆಂಚ್ ಇದೆ, ರಷ್ಯಾಕ್ಕೆ ರಷ್ಯಾ ಭಾಷೆ, ಜರ್ಮನಿಗೆ ಜರ್ಮನ್, ಜಪಾನಿಗೆ ಜಪಾನ್ ಭಾಷೆ ಇದೆ, ಸರ್ಬಿಯಾಕ್ಕೆ ಸರ್ಬಿಯನ್, ಅರೇಬಿಯಾಕ್ಕೆ ಅರೇಬಿಕ್....ಹೀಗೆ ಆಯಾಯಾ ರಾಷ್ಟ್ರಗಳಲ್ಲಿ ಆಯಾಯ ದೇಶದ ಭಾಷೆ ಆಡಳಿತ ಭಾಷೆಯಾಗಿ ಇದೆ. ಭಾರತಕ್ಕೊಂದು ಭಾರತೀಯ ಭಾಷೆ ಬೇಡವೇನು? ಭಾರತದಲ್ಲಿ ಹಲವಾರು ಭಾಷೆಗಳಿರುವದರಿಂದ ಅದು ಅಸಾಧ್ಯವೆಂದು ಕೆಲವರು ಹೇಳಬಹುದು. ಬ್ರಿಟಿಷರೋ, ಮೊಗಲರೋ, ಶಕರೋ, ಹೂಣರೋ ಆಕ್ರಮಣ ನಡೆಸುವ ಪೂರ್ವ ನಮ್ಮ ದೇಶದ ಜನರು ಅದೆಂತು ಅಸೇತು ಹಿಮಾಚಲ ಭೂಮಿಯಲ್ಲಿ ಅಡೆತಡೆ ಇಲ್ಲದೆ ಸಂಚರಿಸುತ್ತಿದ್ದರು? ಅದೆಂತು ಕೈಲಾಸಕ್ಕೆ ಹೋಗುತ್ತಿದ್ದರು? ಖಂಡಿತವಾಗಿ ಒಂದು ಕೊಂಡಿ ಅಥವಾ ಸಂಪರ್ಕ ಭಾಷೆ ಇದ್ದೇ ಇರಬೇಕು. ಅದು ಸಂಸ್ಕೃತವಿದೆ. ಅದನ್ನೇ ಸರಕಾರೀ ಭಾಷೆಯನ್ನಾಗಿ ಸಾರಿ ಭಾಷಾ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ. ಅದರಿದು ಬಹುಮತದ ಕಾಲ. ಭಾರತೀಯ ಭಾಷಾ ಭಾಸ್ಕರನನ್ನು ಕಾಣಲು ಜನತೆಯಲ್ಲಿ ನೈಜಕಣ್ಣಿರಬೇಕು. ಅದರದೇ ಆದ ಭಾಷೆ ಇಲ್ಲದ ರಾಷ್ಟ್ರವೊಂದು ಸ್ವತಂತ್ರ ರಾಷ್ಟ್ರವೆನಿಸಿಕೊಳ್ಳಲು ಯೋಗ್ಯವೇನು? ಮತದ ಮಾತು ಬೇರೆ. ಒಂದೇ ಮತ ಹಲವಾರು ದೇಶಗಳಲ್ಲಿರಬಹುದು. ಕ್ರಿಸ್ತೀಯ ರಾಷ್ಟ್ರಗಳಲ್ಲಿ ಒಂದೇ ಭಾಷೆ ಎಲ್ಲೆಡೆಯೂ ರಾಷ್ಟ್ರಭಾಷೆಯಾಗಿರುವದಿಲ್ಲ. ಆಂಗ್ಲ ಭಾಷೆಯು ಅಮಲಿನಲ್ಲಿ ಅವರು ಸಂಸ್ಕೃತವು—ನಮ್ಮ ಹೆಚ್ಚಿನ ಭಾಷೆಗಳ ತಾಯಿ—ಪರದೇಶದ ಭಾಷೆಯೆಂದಾಡಿದರು. ಬ್ರಿಟಿಷರ ಚರಿತ್ರೆಯ ಪರಿಜ್ಞಾನವಿದು. ಸಂಸ್ಕೃತವು ಆರ್ಯರ ಭಾಷೆ ಇದೆ! ಆರ್ಯರು ಭಾರತಕ್ಕೆ ಹೊರ ದೇಶದಿಂದ ಬಂದು ದ್ರಾವಿಡರನ್ನು ದಕ್ಷಿಣಕ್ಕೋಡಿಸಿ ನೆಲಸಿರುವವರು! ಶ್ರೀ ಬಾಲಗಂಗಾಧರ ತಿಲಕರಂತಹ ನೈಜ ಮೇಧಾವಿಗಳು ಈ ಕಟ್ಟು ಕಥೆಯ ನಿಜ ಸ್ವರೂಪವನ್ನು ಬಯಲಿಗೆಳೆದಿರುವರು. ನೈಜ ಭಾರತೀಯನು ತಾನು ಪರದೇಶದವರ ಸಂತಾನವೆಂದು ಹೇಳಿಕೊಳ್ಳಲಾರ. ಆರ್ಯರೆಂಬ ಜನಾಂಗವೇನೂ ಇಲ್ಲ; ಅಂತೆಯೇ ದ್ರಾವಿಡರೆಂಬ ಪ್ರತ್ಯೇಕ ಪ್ರಜೆಗಳಿಲ್ಲ. ಇಲ್ಲಿರುವವರು ಭಾರತೀಯರಿದ್ದಾರೆ. ಇಲ್ಲಿ ಪುನ: ನಮ್ಮ ಹೆಚ್ಚಿನ ಭಾಷೆಗಳ ತಾಯಿ ಸಂಸ್ಕೃತವೆಂದಿರುವರು. ಅವರ ಮಾತಿನ ಪ್ರಕಾರ ದ್ರಾವಿಡ ಭಾಷೆಗಳ, ಅದರಲ್ಲೂ, ತಮಿಳಿನ ತಾಯಿ ಸಂಸ್ಕೃತ ಇರುವದಿಲ್ಲ! ನಮ್ಮ ದೇಶದಲ್ಲೇ ನಮ್ಮನ್ನು ನಾವೇ ಪರಕೀಯರೆಂದು ಹೇಳಿಕೊಡುತ್ತಿರುವ ಆಂಗ್ಲ ಭಾಷೆ ಇನ್ನು ಆಡಳಿತದ ಅಂತಸ್ತಿನಲ್ಲಿ ಇರಬೇಕೇನು?

ಇಂಗ್ಲೀಷ್ ಕನ್ವೆನ್ಶನಿಗಾಗಿ ಪ್ರಯತ್ನಪಟ್ಟವರಲ್ಲಿ ಪ್ರಮುಖರು ಆರ್ಕಾಟು ಮೊದಲಿಯರ್ ಸಹೋದರರು. (ರಾಮಲಕ್ಷ್ಮಣ!) ಕನ್ವೆನ್ಶನಿನ ಅಧ್ಯಕ್ಷ ಸ್ಥಾನವು ಶ್ರೀ ರಾಮಸ್ವಾಮಿ ಮೊದಲಿಯಾರ್ ರವರಿಗೆನೇ ಮೀಸಲಾಗಿತ್ತು. ಅವರು ಕೂಡಾ ಉತ್ತರ—ದಕ್ಷಿಣದ ಉಪಟಳದಿಂದ ಬೇಸತ್ತಿರುವವರೇ. ಇಂಗ್ಲೀಷಿನ ಇನಿಯನು ಶಾಶ್ವತವಾದರೂ ಉತ್ತರದ ಭಾಷೆಗಳಮೇಲೆ ಅಥವಾ ದಕ್ಷಿಣದ ಇತರ ಶ್ರೀಮಂತ ದ್ರಾವಿಡ ಭಾಷೆಗಳ ಮೇಲೇನೂ ಹಗತನವಿಲ್ಲವೆಂದು ಹೇಳಲು ಹೋಗಿ ತನ್ನ ಮನಸ್ಸಿನಲ್ಲಿ ಉತ್ತರ—ದಕ್ಷಿಣ, ಆರ್ಯ— ದ್ರಾವಿಡ ಭಾವನೆಯಿರುವದನ್ನು ಸ್ಪಷ್ಟಪಡಿಸಿದ್ದಾರೆ.

ಪದವಿಯ ಪೀಠದಿಂದ ಪೇಟೆಯ "ಪ್ಲೇಟ್ ಫಾರ್ಮಿ"ಗೆ ಬಂದ ಮೇಲೆನೇ ಶ್ರೀ ರಾಜಾಜಿ ಮುಂತಾದವರಂತೆ ಹೊರಜಗತ್ತಿನ ಅರಿವಾದದ್ದು. ಪಂಡಿತ ಹೃದಯನಾಥ ಕುಂಜ್ರುರವರಿಗೆ ಆಂಗ್ಲಭಾಷೆ ಇಲ್ಲಿಂದ ಹೋಯ್ತೆಂದಲ್ಲಿ ಅನ್ಯರಾಷ್ಟ್ರಗಳೊಂದಿಗೆ ನಾವು ಸಂಪರ್ಕವನ್ನಿಟ್ಟುಕೊಳ್ಳುವಂತಿಲ್ಲವೆಂಬುದವರ ಅಭಿಪ್ರಾಯ. ಎ. ಬಿ. ಸಿ. ಡಿ. ಬಾರದ ಯಂತ್ರ ವಿಶಾರದರು ಜಪಾನಿನಿಂದ, ಜರ್ಮನಿಯಿಂದ ನಮ್ಮ ದೇಶಕ್ಕೆ ಇಂದೂ ಬರುತ್ತಿಲ್ಲವೇನು? ಇಲ್ಲಿ ವಿದ್ಯಾಭ್ಯಾಸ ಪಡೆದವರೆಲ್ಲರೂ ಇಂಗ್ಲಿಷ್ ಬಲ್ಲ ಹೊರಜಗತ್ತಿಗೆನೇ ಹೋಗುವವರೇನು? ಅಲ್ಲಿಯ ಶ್ರೀ ಸಾಮಾನ್ಯನ ಬಳಿ ಇವರು ಇಂಗ್ಲೀಷಿನಲ್ಲಿ ಮಾತಾಡಲು ಸಾಧ್ಯವೇನು.? ಲೂಸ್ ಪ್ರಿಯ ಶ್ರೀ ಚಂದ್ರಶೇಖರರವರು ರೋಮನ್ ಕಥೋಲಿಕರಮಹಾಗುರು ಶ್ರೀ ಪೇಪರನ್ನು ಕಂಡು ಆಶೀರ್ವಾದಪಡೆಯಲು ಹೋಗಿದ್ದಾಗ ಇವರು ಇಂಗ್ಲೀಷಿನಲ್ಲಿ ಮಾತಾಡಿದರು. ಆದರೆ ಕಥೋಲಿಕರ ಗುರು ಇಟಲಿ ಭಾಷೆಯಲ್ಲಾಡಿದರು. ಜಗತ್ತಿಗೆ ಇಂದು ಮುಖ್ಯವಾಗಿ ಬೇಕಾಗಿರುವದು ಇಂಗ್ಲಿಷ್ ಭಾಷೆ ಅಲ್ಲ. ಶಾಂತಿ ಮಂತ್ರ—ಅದನ್ನು ಭಾರತದ ಭಾಷೆಗಳಲ್ಲಿರುವ, ಮುಖ್ಯವಾಗಿ ಸಂಸ್ಕೃತ, ಗ್ರಂಥಗಳ ಅಧ್ಯಯನ, ಕಾರ್ಯಚಟುವಟಿಕೆಯಿಂದ ಮಾತ್ರ ಸಾಧ್ಯ ಈ ದೃಷ್ಟಿಯಿಂದಲೂ ಸಂಸ್ಕೃತ ನಮ್ಮ ರಾಷ್ಟ್ರ ಭಾಷೆ ಮಾತ್ರವಲ್ಲ ಪುನರ್ ಅವಿಭಜಿತ ಜಗತ್ತಿನ ಸಂಪರ್ಕ ಭಾಷೆಯಾಗಲೇ ಬೇಕು. ಶ್ರೀ ಕುಂಜ್ರುರವರ ಅಭಿಪ್ರಾಯದಂತೆ ಮಾನವನು ಆಡಳಿತ ಅಥವಾ ಸಂಪರ್ಕ ಭಾಷೆಯನ್ನು ಮಾತ್ರ ಕಲಿತುಕೊಳ್ಳಬೇಕಾದ ಅನ್ನುವದು ಸರಿ ಏನು? ಜಪಾನಿಗೆ ಹೋಗುವ ಇಲ್ಲಿಯ ರಾಯಭಾರಿಗೆ ಜಪಾನಿ ಭಾಷೆ, ಜರ್ಮನಿಗೆ ಹೋಗುವವನಿಗೆ ಜರ್ಮನ್ ಭಾಷೆ, ಇಂಗ್ಲೇಂಡಿಗೆ ಹೋಗುವವನಿಗೆ ಇಂಗ್ಲೀಷ್, ಫ್ರಾನ್ಸಿಗೆ ಹೋಗುವವನಿಗೆ ಫ್ರೆಂಚ್....ಹೀಗೆ ಆಯಾಯಾ ರಾಷ್ಟ್ರಗಳಿಗೆ ಹೋಗುವವರಿಗೆ ಆಯಾಯಾ ಭಾಷೆಗೊತ್ತಿರಲೇ ಬೇಕು. ಈ ಮಟ್ಟದಿಂದ ಮೇಲ್ಮಟ್ಟವನ್ನು ಆಂಗ್ಲ ಭಾಷೆಗಿತ್ತು ನಾವು ಇತರ ಅನ್ಯ ಭಾಷೆಗಳನ್ನು ದ್ವಿತೀಯ ಶ್ರೇಣಿಗೆ ತರುವದು ಅಂತಾರಾಷ್ಟ್ರೀಯ ಸಂಪರ್ಕದ ದೃಷ್ಟಿಯಿಂದಲೂ ಸರಿ ಇರುವದಿಲ್ಲ. ನಮಗೆ ಆ ರಾಷ್ಟ್ರಗಳು ಮಾಡಿರುವ ಅನ್ಯಾಯವಾದರೂ ಏನು? ನಮ್ಮ ಮೇಲೆ ಆಕ್ರಮಣ ನಡೆಸದೆ ಇದ್ದದ್ದು ತಾವೇ? ಅದನ್ನಂತೇ ಚೈನಾ ತನ್ನ ರಾಷ್ಟ್ರಲಗೆಯನ್ನು ಚಾಚುತ್ತಿದೆ.

ಶ್ರೀ ರಾಜಾಜಿಯವರ ರಾಗಕ್ಕನುಸ್ವಾರವಾಗಿ ರಥ ಬಿಟ್ಟವರು ಶ್ರೀ ರತ್ನಸ್ವಾಮಿಯವರು. ಆಂಗ್ಲ ಭಾಷೆಯು ಬದಲು ಪ್ರಾದೇಶಿಕ ಭಾಷೆಗಳನ್ನು ವಿದ್ಯಾರಂಗಗಳಲ್ಲಿ ಮಾಧ್ಯಮ ಭಾಷೆಯನ್ನಾಗಿ ಮಾಡಿದಲ್ಲಿ ಮುಂದೇನಾದೀತೆಂಬುದನ್ನು ಶ್ರೀ ರಾಜಾಜಿ ಹೇಳಿರುವದನ್ನು ಈ ಕನ್ವೆನ್ಶನಿನಲ್ಲಿ ಮಿಸ್ಟರ್ ರತ್ನಸ್ವಾಮಿಯವರು ತಮ್ಮ ಭಾಷಣದಲ್ಲಿ ತಿಳಿಸಿದರು. ಹಲವಾರು ರಾಜ್ಯಗಳಲ್ಲಿ ಅಲ್ಲಲ್ಲಿಯ ಭಾಷೆ ಮಾಧ್ಯಮ ಭಾಷೆಯಾಗಿ ಬಿಟ್ಟಲ್ಲಿ, ಸಂಪರ್ಕದ ನೆವನದಿಂದ, ಕೇಂದ್ರ ಸರಕಾರವು ಹಿಂದಿಯನ್ನು ತರುತ್ತದೆಂಬುದೇ ಅವರ ಭಯ. ಇಂಗ್ಲೀಷ್ ಇರಲಿ, ಹೋಗಲಿ ಚಿಂತಿಲ್ಲ- ಆದರೂ ಹಿಂದಿ ಬರಕೂಡದು! ಎಂತಹ ಮನಸ್ಸು!

ಹಿಂದಿಯ ಮೇಲಿರುವ ತನ್ನ ಜ್ಞಾನವನ್ನು 'ಪ್ರೇಂಕಾ'ಗಿ ಪ್ರಕಟಿಸಿದವರು ಮಿಸ್ಟರ್ ಪ್ರೇಂಕ್ ಅಂಥೋಣಿಯವರು, "ಇಲ್ಲಿ ಹಿಂದಿಗೆ ನಿಜವಾಗಿ ಸ್ಥಳ ಇರುವದಿಲ್ಲ, ಮುಂದೆಂದೂ ಸಿಗುವಂತಿಲ್ಲ. ಇದಕ್ಕೆ ಕಾರಣವೆಂದರೆ ಪ್ರಾಥಮಿಕ ಕಣ ಪುಸ್ತಕದ ಪೂರ್ಣ ಕೊರತೆಯೆ ಇದೆ." ಏನು ಆಶ್ಚರ್ಯ! ಎಂತಹ ಜ್ಞಾನ! ಹಿಂದಿಯಲ್ಲಿ ಹೆಚ್ಚು ಶಬ್ದಗಳಿರುವದೇ, ಇಂಗ್ಲೀಷಿನಲ್ಲೇ? ಅದು ಹಾಗಿರಲಿ. ಮಿಸ್ಟರ್ ರಂತಹವರು 'ಬ್ರಿಟಿಷರೇ ತೊಲಗಿರಿ' ದಾಗ (೧೯೪೨) ಅಂತಹದ್ದೇ ಅಪಸ್ವರ ಎತ್ತಿದ್ದರು. ಆಡಳಿತದ ಜ್ಞಾನ, ಸಾಮರ್ಥ್ಯ ಇರುವ ಭಾರತೀಯರಾರೂ ಇಲ್ಲವೆಂಬುದು ಆಗಿನ ಅವರ ಅಭಿಪ್ರಾಯ! ಇಂದೂ ಹಾಗೆಯೇ? ಹಿಂದಿಯೇ ಏಕೆ? ಇನ್ನಾವ ಅದಕ್ಕಿಂತಲೂ ಅಧಿಕತರ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿದಲ್ಲಿ ಎಲ್ಲಾ ವಿಷಯಗಳು ತಾವೇ ತಾವಾಗಿ ಬಂದು ಸೇರುತ್ತವೆ. ಬಹುಮತ ಭಾರತೀಯರು ಒಮ್ಮೆ ನಿಶ್ಚಯಿಸಿ, ತೀರ್ಮಾನಕ್ಕೆ ಬಂದರೆಂದರೆ ತೀರಿತು. ಅನಂತರ ಹಿಂದಿನಿಂದ ಕಾಲಡ್ಡ ಇಡದೆ ಪೂರ್ಣ ಸಹಕಾರವನ್ನಿತ್ತಲ್ಲಿ ಎಲ್ಲಾ ಸುಲಭ ಸಾಧ್ಯ. ಸ್ವತ: ಇಂಗ್ಲೇಂಡಿನಲ್ಲೇ ನಡೆದುದಾದರೂ ಏನು? ಅಲ್ಲಿನ ಶ್ರೀಸಾಮಾನ್ಯ ಅದನ್ನೆದುರಿಸಿ ತನ್ನ ಭಾಷೆಯನ್ನಲ್ಲಿ ರಾಷ್ಟ್ರ ಭಾಷೆಯನ್ನಾಗಿಸಿಕೊಂಡನು. ಮಿಸ್ಟರ್ ಪ್ರೇಂಕ್ ಅಂಥೋಣಿಯವರಿಗೆ ಭಾರತೀಯ ಭಾಷೆಗಳ ಮೇಲೆ ಕೋಪ, ಆಂಗ್ಲ ಭಾಷೆಯಮೇಲೆ ವ್ಯಾಮೋಹ ಮತ್ತುಮಮತೆ ಇರಬಹುದು. ಆದರೆ ಶ್ರೀಸಾಮಾನ್ಯ ಭಾರತೀಯನಿಗೆ ಹಾಗಿಲ್ಲ. ಅವನಿಗೆ ಯಾವದಾದರೂ ಭಾರತದ ಭಾಷೆಯೇ ಇಲ್ಲಿನ ಆಡಳಿತ ಭಾಷೆಯಾಗಿರಬೇಕು. ಇತರರ ಭಾಷೆ ಅದೆಷ್ಟು ಸುಂದರ, ಆಕರ್ಷಣೀಯವೇ ಅನ್ನಿಸಿದರೂ ಅತೀವ ಹತ್ತಿರದ ಪ್ರೀತಿಯ ಭಾಷೆಯಾಗಿರಲು ಸಾಧ್ಯ. ಇತರವು ಭಯವನ್ನುಂಟು ಮಾಡುವಂತಹವೇ ಇವೆ. ಅದನ್ನು ಬಿಟ್ಟು "ಸ್ವದೇಶಿ—ಸ್ವದೇಶದ ಭಾಷೆ"ಇದಕ್ಕೆ ಅರ್ಥವಾದರೂ ಏನಿದೆ?

ಕನ್ವೆನ್ಶನಿನಲ್ಲಿ ಭಾಷಣವಿತ್ತವರಲ್ಲಿ ಪ್ರಮುಖರೆಂದರೆ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು. ಅವರ ಮಾತು ಗಾಂಧಿವಾದಿಯವುಗಳಾಗಿರಲಿಲ್ಲ. ಅಲ್ಲದೆ ಅವರು ತಮ್ಮ ನಿಮುಖ ಧೋರಣೆಯನ್ನು ಇಲ್ಲೂ ತೋರಿಸದೆ ಸುಮ್ಮಗುಳಿಯಲಿಲ್ಲ. 'ವಿದ್ಯಾರಂಗದಲ್ಲಿ ರಾಜಕೀಯವಾದಿಗಳು ಕೈ ಹಾಕಬಾರದು, ಅಂತೆಯೇ ರಾಜಕೀಯ ರಂಗದಲ್ಲಿ ವಿದ್ಯಾರ್ಥಿಗಳು ಕೈ ಹಾಕಬಾರದು.' ಇದು ಹಿರಿಯ ರಾಜಕಾರಣಿ ವಯೋವೃದ್ಧ ಶ್ರೀ ರಾಜಾಜಿಯವರ ಹಿತವಾದ. ಆದರೆ ಇದೇ ರಾಜಕಾರಣಿ ಚುನಾವಣೆಯ ಸಮಯ ಹೇಳಿದ್ದಾದರೂ ಏನು? "ವಿದ್ಯಾರ್ಥಿಗಳು ಕೂಡಾ ಈ ದೇಶದ ಪ್ರಜೆಗಳಿದ್ದಾರೆ. ಅವರಿಗೆ

(ಬಂಭತ್ತನೇ ಪುಟ ನೋಡಿರಿ)

ಅಂತಃಕಲಹಗಳು ಅಪಾಯಕರ

ಎಚ್. ಎಂ. ನಾರಾಯಣ ಭಟ್

ಅನೈಕ್ಯದಿಂದಾಗಿಯೇ ನಮ್ಮ ದೇಶವು ಸ್ವಾತಂತ್ರ್ಯವನ್ನೂ ಸಕಲ ವೈಭವಗಳನ್ನೂ ಕಳೆಕೊಂಡು ವಿದೇಶೀಯರ ದಾಸ್ಯ ಶೃಂಖಲೆಗೆ ವಿಧೇಯವಾಗುವ ದುರ್ಗತಿಯೊದಗಿತ್ತು. ಆದರೆ ಮಹಾಪ್ರಳಯ ತ್ಯಾಗ, ನಿಷ್ಠೆ ಮತ್ತು ಹೋರಾಟಗಳಿಂದ ಒಗ್ಗಟ್ಟು ಬಲವಾಗಿ ಸ್ವಾತಂತ್ರ್ಯ ಲಭಿಸಿತು. ಇನ್ನೊಮ್ಮೆ ಆ ಪವಿತ್ರ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗದಿರಲಿ.

ರಾಮಾಯಣ, ಮಹಾಭಾರತ ಮುಂತಾದ ಪವಿತ್ರ ಗ್ರಂಥಗಳ ಮೂಲಕವೂ ಗೌತಮ ಬುದ್ಧದೇವನ ಸಂದೇಶಗಳ ಮೂಲಕವೂ ಭಾರತೀಯ ಸಂಸ್ಕೃತಿಯು ಶ್ರೇಷ್ಠ ಪರಂಪರೆಯು ಅತ್ಯುನ್ನತ ಪರ್ವತ ಶ್ರೇಣಿಯನ್ನೂ ಮಹಾ ಸಾಗರಗಳನ್ನೂ ದಾಟಿ ವಿದೇಶಗಳಲ್ಲಿಯೂ ಹರಡಿತು. ಬಡಗು ಭಾಗದಿಂದ ಉಂಟಾಗಬಹುದಾಗಿದ್ದ ಆಕ್ರಮಣಗಳನ್ನು ಒಂದೂವರೆ ಸಾವಿರ ಮೈಲಿಗೂ ಮಿಕ್ಕಿ ನೀಳಕ್ಕೆ ವಿಸ್ತೃತವಾದ ಹಿಮಾಲಯ ಪರ್ವತಗಳ ಸಾಲು ತಡೆಗಟ್ಟುತ್ತಾ ಬಂತು. ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ವಿವಿಧ ರೀತಿಯ ಆಕ್ರಮಣ ಭೀತಿಗಳೂ ಇವೆ.

ಹಿಮಾಲಯವು ಶತ್ರುಗಳ ಆಕ್ರಮಣವನ್ನು ಇದಿರಿಸಿ ತಡೆಗಟ್ಟುತ್ತಿದ್ದ ಹಳೆಯ ಕಾಲದಲ್ಲೂ ಪರ್ಷಿಯಾ, ಮಧ್ಯ ಏಶಿಯಾ, ಚೈನಾ ಮುಂತಾದೆಡೆಗಳಿಂದ ಜನರು ಅತ್ತಿತ್ತ ಸಾಗುತ್ತಲಿದ್ದರು.

ವಾಯವ್ಯ ಸರಹದ್ದಿನ ಪರ್ವತಗಳೆಡೆಯಲ್ಲಿ ಆರ್ಯರು ಭಾರತವನ್ನು ಪ್ರವೇಶಿಸಿದ್ದರು. ಪಶ್ಚಿಮದಿಂದ ಅಲೆಕ್ಸಾಂಡರನ ಸೇನೆಗಳೂ ಆಕ್ರಮಿಸಿದ್ದವು. ಸಮರ ಖಂಡದಿಂದ ತುಂಟ ತೈಮೂರನು ಇಂದ್ರಪ್ರಸ್ಥದತ್ತ ಸೇನಾಸಹಿತ ಧಾವಿಸಿದ್ದನು. ಆತನ ಹಿಂಬಾಲಿಗರು ಮೊಗಲ ಸಾಮ್ರಾಜ್ಯದ ಸಿಂಹಾಸನವನ್ನೂ ಏರಿದ್ದರು.

ಅಷ್ಟೇ ಅಲ್ಲ. ಯಹೂದ್ಯರು, ಪಿನೀಶಿಯನ್ನರು, ಅರಬಿಯನ್ನರು, ಚೀನೀಯರು, ಮತ್ತು ಭಾರತೀಯರು ವಿವಿಧ ಕಾಲಗಳಲ್ಲಿ ಸಮುದ್ರವನ್ನೂ ಆಳಿದ್ದರು. ಪೋರ್ಚುಗೀಸರ ಆಗಮನದಿಂದಾಗಿ ಭಾರತೀಯರ ಸಮುದ್ರಾಧಿಪತ್ಯ ಕುಸಿಯಲಾರಂಭಿಸಿತು. ವಿದೇಶೀ ಜನಾಂಗಗಳು ಭಾರತವನ್ನು ಆಳಿದವು.

ಇವೆಲ್ಲಾ ಹಳೆಯ ಚರಿತ್ರೆ. ಈಗ ಚೈನಾದ ಮತ್ತು ಪಾಕಿಸ್ತಾನದ ಸಂಧಾನ್ವಾನಗಳನ್ನು ಕೇಳಿದ್ದೇವೆ. ಅವು ರಾಷ್ಟ್ರೀಯ ಸಮಗ್ರತೆಗೇ ಸಮಸ್ಯೆಯನ್ನೊಡ್ಡಿವೆ. ನಮ್ಮ ಸ್ವಾತಂತ್ರ್ಯ ಹಿಂದಿನ ಕಾಲದಲ್ಲಿ ನಷ್ಟವಾದುದು ಹೇಗೆಂದು ಎಲ್ಲರೂ ಒಮ್ಮೆ ಆತ್ಮಪರೀಕ್ಷೆ ಮಾಡುವುದಗತ್ಯ.

ನಾವು ಒಗ್ಗಟ್ಟಾಗಿರುತ್ತಿದ್ದರೆ ಆ ಕಾಲದ ಆಯುಧ ಶಕ್ತಿಯಿಂದಲೇ ನಾವು ವಿದೇಶೀಯರ ಆಕ್ರಮಣಗಳನ್ನು ಯಶಸ್ವಿಯಾಗಿ ತಡೆಗಟ್ಟಬಹುದಾಗಿತ್ತು.

ಭಾರತದ ಬಡಗು-ವಾಯವ್ಯಭಾಗದ ಕೈಬರ್ ಕಣಿವೆ ಕ್ರಿ. ಪೂ. ೩೨೩ ರಿಂದ ಕ್ರಿ. ಶ. ೧೭೫೧ರ ವರೆಗೆ ಅನೇಕ ಆಕ್ರಮಣಗಳಿಗೂ ಮೂಕ ಸಾಕ್ಷ್ಯ ವಹಿಸಿದೆ. ಬ್ರಿಟಿಷ್ ಆಡಳಿತದ ವೇಳೆ ಈ ಕಣಿವೆಯ ಮೂಲಕವಾಗಬಹುದಾಗಿದ್ದ ಆಕ್ರಮಣಗಳನ್ನು ತಡೆಯಲು ವಾಯವ್ಯ ಸರಹದ್ದಿನಲ್ಲಿ ಒಂದು ಸೈನಿಕ ಸಂಸ್ಥಾನವೇ ಸ್ಥಾಪಿಸಲಾಗಿತ್ತು; ಕಾಶ್ಮೀರದ ವಾಯವ್ಯ ಭಾಗದ ಚಿತ್ರಾಲ್, ಗಿಲ್‌ಜಿಟ್ ಎಂಬೀ ಸಣ್ಣ ಮುಸ್ಲಿಂ ರಾಜ್ಯದ ಸಂರಕ್ಷಣೆಯನ್ನು ಗಿಲ್ಗಿಟರಲ್ಲಿ ಬ್ರಿಟಿಷ್ ಸರಕಾರ ವಹಿಸಿಕೊಂಡಿತು. ರಷ್ಯನರ ಒತ್ತಡ ಹೆಚ್ಚಾಗಿದ್ದ ಆ ಕಾಲದಲ್ಲಿ ಇದು ಒಂದು ತಂತ್ರವೂ ಆಗಿತ್ತು. ಬ್ರಿಟಿಷರು ಬರ್ಮಾವನ್ನೂ ಸ್ವಾಧೀನಪಡಿಸಿದರು. ಟಿಬೇಟನ್ನು ಅಧೀನವಾಗಿಟ್ಟುಕೊಂಡರು. ಮಕ್‌ಮಹೋನ್ ರೇಖೆ ಇಂಡಿಯಾ—ಚೈನಾ ನಡಿಯಾಗಿ ಚೀನೀಯರು ಅಂಗೀಕರಿಸುವಂತೆಸಗಿದರು.

ಭಾರತದ ರಕ್ಷಣೆಗಾಗಿಯೂ ಬ್ರಿಟನ್ ಸೂಕ್ತ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಆಡಳಿತೆಯಲ್ಲಿದ್ದ ಬ್ರಿಟಿಷರೇ ವಿದೇಶೀಯರಾಗಿದ್ದರು. ಅವರು ಬಿಟ್ಟು ಹೋದಾಗ ನಮ್ಮೊಳಗಿನ ಭಿನ್ನಾಭಿಪ್ರಾಯ—ಕಲಹಗಳಿಂದಾಗಿ ಇಂಡಿಯಾ ವಿಭಜಿಸಲ್ಪಟ್ಟಿತು. ಇದರಿಂದಾಗಿ ಸಮಸ್ಯೆಗಳು ಮಾತ್ರ ದ್ವಿಗುಣಗೊಂಡಿತು. ರಾಷ್ಟ್ರರಕ್ಷಣಾ ಸಮಸ್ಯೆ ವಿಷಮವಸ್ಥೆಯನ್ನೂ ಸೃಷ್ಟಿಸಿತು.

ಚೈನಾ—ಪಾಕಿಸ್ತಾನ್ ಪರಸ್ಪರ ಒಪ್ಪಂದ ಭಾರತಕ್ಕೆ ಹಾನಿಕರ. ಗಿಲ್‌ಜಿಟ್ ಮೂಲಕ ಚೀನೀಯರು ಸಂಚರಿಸುವ ಸ್ವಾತಂತ್ರ್ಯವನ್ನು ಪಾಕಿಸ್ತಾನದಿಂದ ಗಳಿಸಿದರು. ವ್ಯಾಪಾರ ವಹಿವಾಟುಗಳಿಗೂ ಕಳ್ಳ ವ್ಯಾಪಾರಕ್ಕೂ ಸೈನಿಕ ಪ್ರಾಧಾನ್ಯತೆಯ ನುಸುಳುವಿಕೆಗೂ ಚೀನೀಯರು ಇದರಿಂದ ಪ್ರಯೋಜನ ಹೊಂದಬಹುದು. ಭಾರತದ ವಿರುದ್ಧವಾಗಿ ವಿಷೋಗಳನ್ನೂ ನಾಗಾಜನರನ್ನೂ ಪ್ರೇರೇಪಿಸಿ ಚೈನಾ ಮತ್ತು ಪಾಕಿಸ್ತಾನಗಳು ಸಿದ್ಧತೆ ನಡೆಸುತ್ತಿರುವ ವರದಿಗಳಿದ್ದವು. ಟಿಬೇಟಿನಲ್ಲಿ ಚೀನೀ ಸೈನ್ಯಶಾಹೆಗಳಿವೆ. ನೇಪಾಳಕ್ಕಾಗಿ ಬಂಗಾಳದ ಗಡಿತನಕವೂ ಸಾರಿಗೆ ಸುಲಭವಾದುದರಿಂದ ಚೀನೀಯರು ರಸ್ತೆಯನ್ನೂ ನಿರ್ಮಿಸಿರುವರೆನ್ನಲಾಗಿದೆ.

ಇಂತಹ ಸಂದರ್ಭದಲ್ಲಿ "ಇಸಂ" ಅಥವಾ 'ಮತ' ಇಲ್ಲದೆ "ಭಾಷೆ"ಗಳ ಹೆಸರಲ್ಲಿ ಭಾರತೀಯರಾದ ನಾವು ಅಂತಃಕಲಹ ಶೂರತನ ಪ್ರದರ್ಶಿಸುವ ಅವಿವೇಕ ವರ್ತನೆಯೂ ಶತ್ರುಗಳಿಗೆ ಸಹಾಯಕವಾಗುವ ಭೀತಿಯಿದೆ. ಬಹಳ ಕಷ್ಟ ಪಟ್ಟು ನಮ್ಮ ಪೂರ್ವಿಕರು ಗಳಿಸಿದ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗದಿರಲೆಂಬುದೇ ನಮ್ಮೆಲ್ಲರ ದಿವ್ಯ ಮಂತ್ರವಾಗಿರಲಿ! ಅಂತಃಕಲಹಗಳು ವಿರೋಧಿಗಳಿಗೆ ತೆರೆದು ಕೊಡುವ ಮಹಾದ್ವಾರಗಳು.

ಮೈಸೂರು ಉಪಕರಣಗಳ ಕಾರ್ಖಾನೆ, ಹಾಸನ

ಮೈಸೂರು ಸರಕಾರ.

ಉತ್ತಮ ದರ್ಜೆಯ ಉಪಕರಣಗಳ ಮತ್ತು ಸಾಧನೆಗಳ ತಯಾರಕರು:-

1. ಶ್ರೇಷ್ಠ ದರ್ಜೆಯ ಉಕ್ಕಿನಿಂದ ತಯಾರಿಸಲ್ಪಡುತ್ತವೆ.
2. ನುರಿತ ಕೆಲಸಗಾರರಿಂದ ಅತ್ಯಾಧುನಿಕವಾದ ರೀತಿಯಲ್ಲಿ ಹದಕೊಡಲಾಗುತ್ತದೆ.
3. ಮಾರುವ ಮುನ್ನ ಎಲ್ಲ ಉಪಕರಣಗಳನ್ನು ವಿಶೇಷ ರೀತಿಯಲ್ಲಿ ಪರೀಕ್ಷಿಸಲಾಗುತ್ತೆ.
4. ನೀವು ಕೊಡುವ ಹಣಕ್ಕೆ ಖಾತ್ರಿಯಾದ ಮೂಲುಗಳು—
   ಕಾರಣ ಅವು ಯಾವ ತರಹ ಕಠಿಣ ಕೆಲಸಗಳಲ್ಲಿಯೂ ಉಪಯೋಗಕರವಾಗಿರುತ್ತವೆ.
   ಮತ್ತು ಬಹಳ ಕಾಲ ನೀವು ಅದನ್ನು ತೃಪ್ತಿಕರವಾಗಿ ಉಪಯೋಗಿಸಬಹುದು.
5. ವ್ಯವಸಾಯಕ್ಕೆ, ಕಾಮಗಾರಿ ಕೆಲಸಗಳಿಗೆ 'ಟೀ' ಮತ್ತು ಕಾಫಿ ತೋಟಗಳ ಕೆಲಸಕ್ಕೆ ಅಗತ್ಯವಾದದ್ದು.

ನಿಮ್ಮ ಅಗತ್ಯಗಳಿಗೆ ಫ್ಯಾಕ್ಟರಿಯಲ್ಲಿ ಅಥವಾ ನಿಮ್ಮ ಪ್ರಾಂತ್ಯದಲ್ಲಿ ಇರುವ
ನಮ್ಮ ಅಧಿಕೃತ ಏಜಂಟರಲ್ಲಿ ವ್ಯವಹರಿಸಿರಿ.

ಇಂಡಿಯಾದಲ್ಲಿ ಇಂಗ್ಲೀಷೇ ಇರಬೇಕೆನ್ನುವ ಇಂಗ್ಲೀಷ್ ಇನಿಯರು

(ಏಳನೇ ಪುಟದಿಂದ)

ಮತಪೀಯುವ ಹಕ್ಕಿದೆಯೆಂದಲ್ಲಿ ಅವರೇ ತಕ್ಕೆ ಚುನಾವಣಾ ರಂಗದಲ್ಲಿ ಭಾಗವಹಿಸಬಾರದು?" ವಿದ್ಯಾರ್ಥಿಗಳ ಪರವಾಗಿ ಅಗ ಅವರು ವಕಾಲತ್ತು ವಹಿಸಿಕೊಂಡು ವಾದ ಹೂಡಿದ್ದರು! ಈಗ! ಅದು ರಾಜಕೀಯ ವೇದಿಕೆ! ಅಂದಿಗದು ಸುಖ! ಇಂದಿಗೆ ಇದು ಸುಖ!

ಇಂಗ್ಲೀಷ್ ಇಲ್ಲಿಂದ ಹೋಗಿ ಬಿಟ್ಟಲ್ಲಿ ಇದೊಂದು ದೇಶವೆನ್ನುವ ಅಧ್ಯಾಯ ಮುಕ್ತಾಯವಾಗುತ್ತದೆ. ದೇಶ ಒಡೆದು ಚೂರು ಚೂರಾಗುತ್ತದೆ. ಅಧಿಕಾರದಲ್ಲಿದ್ದಾಗ ಅದವರಿಗೆ ಇದೆಲ್ಲಾ ಹೊಳೆಯಲೇ ಇಲ್ಲವಲ್ಲಾ! ಅದೆಷ್ಟೆಷ್ಟೋ ಅಂತಸ್ತುಗಳನ್ನು ಕಂಡು ಕೆಳಗಿಳಿದು ಅಪಮಾನದಿಂದ ಸಾಮಾನ್ಯ ಮಟ್ಟಕ್ಕಿಂತ ಕೆಳಗಿಳಿದ ಮೇಲೆ ಇದೀಗ ಇವರಿಗೆ ಜ್ಞಾನೋದಯವಾಗುತ್ತಿದೆ! ಇಂಗ್ಲೀಷ್ ಮಾಡುತ್ತಿರುವದೂ ಅದೇ ಕೆಲಸವನ್ನು ಆಡಳಿತ ಅಂತಸ್ತಿನಿಂದ ಆಂಗ್ಲ ಭಾಷೆ ಕೆಳಗಿಳಿದು, ಇಲ್ಲಿಯ ಜನರಲ್ಲಿ ಇಲ್ಲಿರುವ ಎಲ್ಲಾ ಭಾಷೆಗಳು ಭಾರತೀಯ ಭಾಷೆಗಳೇ, ಅಂದರೆ, ನಮ್ಮ ಭಾಷೆಗಳೇ ಇವೆಯೆಂಬ ಜ್ಞಾನ ಬಂದರೆ ಸಾಕು. ಅನಂತರ ಭಾಷಾ ಬಡಿದಾಟ ನಡಿಸಲು ಅದ್ಯಾರಿಗೂ ಸಾಧ್ಯವಾಗದು. ಇದು ಶ್ರೀ ರಾಜಾಜಿಯವರಿಗೆ ಗೊತ್ತು. ಜನರು ಹೇಡೆದಾಡಿಕೊಳ್ಳದೆ, ಒಂದೇ ರಾಷ್ಟ್ರದವರೆಂಬ ತಿಳುವಳಿಕೆಯುಂದಿದ್ದಲ್ಲಿ ಅನೇಕಾನೇಕ ರಾಜಕೀಯ ಪಕ್ಷಗಳ ಅವಶ್ಯಕತೆಯೂದರೂ ಏನು? ಪಕ್ಷಗಳ ಹೆಸರಿಲ್ಲದೆನೇ ಭಿನ್ನ ಭಿನ್ನ ವ್ಯಕ್ತಿಗಳು ಚುನಾವಣೆಗೆ ನಿಂತು, ಗೆದ್ದು ಬಂದವರು ಒಂದೇ ಕುಟುಂಬದವರಂತೆ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಸಾಧ್ಯವಿದೆ. ಅಗ ಶ್ರೀ ರಾಜಾಜಿಯವರನ್ನು ಕರೆದು ಕೇಳುವವರಾರು?

ಇವರ ವಾದಕ್ಕಿಂತಲೂ ಇವರಾಡಿರುವ ಇನ್ನೊಂದು ಮಾತು ಅತ್ಯಂತ ಅಪಾಯಕಾರಿ ಇದೆ. ಕೇಂದ್ರ ಸರಕಾರದ ಬಳಿ ಭಾರೀ ಸೈನ್ಯ ಇದೆ. ಅದು ಹಿಂದಿಯನ್ನು ಹರುತ್ತದೆ. ಉತ್ತರದವರು ಅದಕ್ಕೆ ಬೆಂಬಲ ನೀಡುತ್ತಾರೆ. ಇದನ್ನು ಎದುರಿಸಲೇಬೇಕು. ಇಂಗ್ಲೀಷು ಇರಲೇಬೇಕು. ಹಿಂದಿ ಹಿಂಗಿ ಹೋಗಲಿ. ಅದಕ್ಕಾಗಿ ನಾವು (ದಕ್ಷಿಣದವರು) ಒಂದಾಗಬೇಕು. ನಾವೇ ಸೈನ್ಯವೆಂದು ತಿಳಿದುಕೊಳ್ಳಬೇಕು ಮತ್ತು ಯುದ್ಧಮಾಡಬೇಕು. ಈ ಯುದ್ಧ ಶೀಘ್ರ ಕೊನೆಗೊಳ್ಳಲಾರದು. ಈ ರೀತಿ ಅವರು ಕಾಳಗಕ್ಕೆ ವೀಳ್ಯವಿತ್ತಿದ್ದಾರೆ. ಅವರ ಆವಂತ್ರಣದ ಫಲಿತಾಂಶವನ್ನು ನಾವು ಕಾಣುತ್ತಿದ್ದೇವೆ. ಯುದ್ಧವೆಂದರೆ ಹೇಗೆ? ಕೇಂದ್ರ ಸರಕಾರಕ್ಕೆ ಸೇರಿದ ರೈಲುಗಳನ್ನು ಸುಡುವದು, ಅಂಚೆ ಮುಂತಾದ ಕಾರ್ಯಾಲಯಗಳ ಮೇಲೆ ಧಾಳಿ ನಡೆಸುವದು. ಅಲ್ಲದೆ ಧ್ವಜವನ್ನು ಕೆಳಗಿಳಿಸುವದು ಕೇಂದ್ರಕ್ಕೆ ಬೆಂಬಲವಾಗಿರುವ (!) ಉತ್ತರ ಭಾರತೀಯರೆನಿಸಿಕೊಂಡವರಿರುವ ಸ್ಥಳಗಳ ಮೇಲೆ ಧಾಳಿ ನಡೆಸಿ ಕೊಲೆ, ಸುಲಿಗೆ ನಡೆಸುವದು.... ಇತ್ಯಾದಿ, ಇತ್ಯಾದಿ. ತಮಿಳ್ನಾಡಿನಲ್ಲಿ ಇಂದು ನಡೆಯುತ್ತಿರುವದಾದರೂ ಏನು? ಇದೇ ಅಲ್ಲವೇನು?

ಈ ಹಿಂದೆಯೇ ತಿರು ರಾಜಾಜೀಯವರು ಸಂಕ್ಷಿಪ್ತ ಮಹಾಭಾರತವನ್ನು ತಮಿಳಿನಲ್ಲಿ ಕೂಡಾ ಬರೆದಿರುವರಾದರೂ ಈಗ ಪುನಃ ಮಹಾಭಾರತವನ್ನು ಬರೆಯುತ್ತಿದ್ದಾರೆ! ಯಾಕೆ? ಯುದ್ಧದ ಕೊರೆತ್ತಿರುವ ತಿರು ರಾಜಾಜಿಗೆ ಉತ್ತರದ ಮಹಾಭಾರತವೇತಕ್ಕೆ? ಮಹಾಭಾರತದಲ್ಲಿ ಅ ಚಾರ್ಯರಿದ್ದಾರೆಂದಲ್ಲಿ- ಅಲ್ಲಿ ರಕುಣಿ ಇದ್ದಾನೆ. ಅವನ ಪಾತ್ರದ ಪೂರ್ಣ ಅಭ್ಯಾಸಕ್ಕಾಗಿಯೇ, ಬಹುಶಃ ಶ್ರೀ ರಾಜಾಜಿ ಈ ಕಾರ್ಯದಲ್ಲಿ ಕೈಹಾಕಿದ್ದಾರೆ ಶೇಷ ಜೀವನದಲ್ಲಿ ನಡೆಯುತ್ತಿರುವ "ಜಗಳ"ದಲ್ಲಿ ಇದೊಂದು ಭಾಗವೂ ಇರಬಹುದು.

ಇಂತಿದೆ ಇಂಡಿಯಾದಲ್ಲಿ ಇಂಗ್ಲೀಷೆ ಇರಬೇಕೆನ್ನುವ ಇಂಗ್ಲೀಷ್ ಇನಿಯರ ಕನ್ಪೆನ್ಪಿನ ಕಥೆ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 235/67

ಕೆ. ಶೂರಂಣಿ ಶೆಟ್ಟಿ ಮತ್ತು — ವಾದಿ

ಮಂಜುನಾಥ ನ್ಯಾಕ — ಪ್ರತಿವಾದಿ

ಇವರೊಳಗೆ

ಪ್ರತಿವಾದಿ- ಮಂಜುನಾಥ ನ್ಯಾಕ್, ಮತ್ತು ಪ್ರ ನ್ಯಾಕರ ಮಗ. ಉಡ್ಪಿ ತಾಲ್ಯ ಉಳಿಯೂರಗೋಳಿ ಗ್ರಾಮದ ಸಂತೆಕಟ್ಟೆ, ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ನೀವು ತಾ. 9-9-66ರಲ್ಲು ಬರ್ಸಿ ಕೊಟ್ಟ ಡಿಮಾಂಡ್ ನೋಟು ಬಾಬ್ತು ವಾದಿಗೆ ಬಹಾ ಅಕ್ಕು ಬಡ್ಡಿ ಬಾತಿಗೆ ವಾದಿರು ಪಾಕ್ಕು ಮಾಡಿದ ಮೇಲಿನ ಪಾವೆಯು ತಾರೀಕು 17-9-68ಕ್ಕೆ ತನ್ನಿಗೆ ಯಿಟ್ಟಿರುವುದರಿಂದ ಪಾವೆಯಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು, ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳುವುದು.

By order of the court

Y. C. S. Hegde

Advocate for Plff.

ಉಡ್ಪಿ, 27—1—68

ಎಲ್ಲೆಲ್ಲಿ ಏನೇನು?

ಲಾ ಕಾಲೇಜ್ ದಿನಾಚರಣೆ

ಉಡುಪಿಯ ಲಾ ಕಾಲೇಜು ದಿನಾಚರಣೆಯು ತಾ. 24-1-69ರಂದು ಜೀವನವಿಮಾ ಕಾರ್ಪೊರೇಶನ ದಿವಿಜನಲ್ ಮೆನೇಜರ್ ಶ್ರೀ ಎಸ್. ಹರಿಹರನ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಪ್ರಿನ್ಸಿಪಾಲ್ ಡಿ. ಜಿ. ದೇಶಪಾಂಡೆಯವರು ಸ್ವಾಗತಿಸಿದರು. ಕಾಲೇಜಿನ ಹಳೆ ವಿದ್ಯಾರ್ಥಿ ಶ್ರೀ ಎಚ್. ಎಸ್. ಕೆ ದ್ದಾಯರು ಸ್ವಸ್ತಿ ವಾಚನ ಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಡಾ| ಪೂಧವ ಪ್ರೈಗಳು ಶಿಕ್ಷಣದ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು. ಲಲ್ಲಿಪೆ ಕಾಯಿದೆಯ ಜ್ಞಾನವು ವಕೀಲರುಗಳಿಗೆ ಎಷ್ಟರ ಮಟ್ಟಿಗೆ ಇರ ಇ...ಗೂ, ಸಾರ್ವಜನಿಕರಿಗೂ ಅವಶ್ಯವಾಗಿಬೇಕೆಂದು ನುಡಿದರು.

ಕಾಲೇಜ್ ಯೂನಿಯನ್ ಕಾರ್ಯದರ್ಶಿ ಶ್ರೀ ಚೆನ್ನ ಬಸಪ್ಪನವರು ಧನ್ಯವಾದ ಸಮರ್ಪಿಸಿದ ಮೇಲೆ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಕನ್ನಡ, ಇಂಗ್ಲೀಷ್ ನಾಟಕಗಳು ಅಭಿನಯಿಸಲ್ಪಟ್ಟವು.

ಆಯುರ್ವೇದ ಕಾಲೇಜಿನ ವಾರ್ಷಿಕೋತ್ಸವ

ಉಡುಪಿಯ ಆಯುರ್ವೇದ ಕಾಲೇಜಿನ ವಾರ್ಷಿಕೋತ್ಸವವು ತಾ. 24-1-68 ರಂದು ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ರಬೀಂದ್ರ ನಾಯ್ಕರು ಮುಖ್ಯ ಅತಿಥಿಗಳಾಗಿದ್ದರು. ಆರಂಭದಲ್ಲಿ ಡಾ| ಗೋಪಿನಾಥರ ಸ್ವಾಗತ ಭಾಷಣದ ತರುವಾಯ ವಿದ್ಯಾರ್ಥಿ ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಪಿ. ಮಂಜುನಾಥ ಹೆಗ್ಡೆಯವರು ಸಂದೇಶ ವಾಚನ ಗೈದರು. ಪ್ರಿನ್ಸಿಪಾಲ್ ಡಾ| ಎಚ್. ವಿಜಯೇಂದ್ರ ಮಾರ್ಕಾಯವರು ವರದಿಯೊಪ್ಪಿಸಿದರು.

ಶ್ರೀ ಕು. ಶಿ. ಹರಿದಾಸ ಭಟ್ಟರು ಆಯುರ್ವೇದದ ಮಹತ್ವವನ್ನು ವಿವರಿಸುತ್ತಾ ಅಧ್ಯಾಪಕರೂ ವಿದ್ಯಾರ್ಥಿಗಳೂ ಅದರ ಪ್ರಗತಿಗಾಗಿ ಪ್ರಯತ್ನಿಸಬೇಕೆಂದರು. ಶ್ರೀ ನಾಯ್ಕರು ತಮ್ಮ ಭಾಷಣದಲ್ಲಿ ಕಾಲೇಜಿನ ಅಡಳಿತ ಸಮಿತಿಯು ಸಾಧ್ಯವಿರುವ ನೆರವನ್ನು ಕಾಲೇಜಿನ ಪ್ರಗತಿಗಾಗಿ ನೀಡುವರಾಗಿ ಹೇಳಿದರು. ಕೊನೆಯಲ್ಲಿ ಡಾ| ಕೆ. ಆರ್. ಭಾಗವತರಿಂದ ವಂದನಾರ್ಪಣೆ ಹಾಗೂ ವಿದ್ಯಾರ್ಥಿಗಳಿಂದ ಯಶಸ್ವೀ ನಾಟಕ ಪ್ರದರ್ಶನವಾಯಿತು.

ವಾರ್ಷಿಕೋತ್ಸವ

ಉಡುಪಿಯ ಆಯುರ್ವೇದ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ದ. ಕ ಜಿಲ್ಲಾ ವೈದ್ಯಾಧಿಕಾರಿ ಶ್ರೀ ಎ. ಡಿ. ಪೌಲ್‌ರವರ ಅಧ್ಯಕ್ಷತೆಯಲ್ಲಿ ತಾ 25-1-68 ರಂದು ಜರಗಿತು.

ಕಾಲೇಜು ಯೂನಿಯನ್ ಅಧ್ಯಕ್ಷ ಶ್ರೀ ಎಂ. ನಾರಾಯಣ ಭಟ್ಟರು ಆರಂಭದಲ್ಲಿ ಸ್ವಾಗತಿಸಿ ವರದಿಯೊಪ್ಪಿಸಿದ ತರುವಾಯ ಯೂನಿಯನ್ ಕಾರ್ಯದರ್ಶಿ ಶ್ರೀ ಪಿ. ಮಂಜುನಾಥ ಹೆಗ್ಡೆಯವರು ಸಂದೇಶ ವಾಚನ ಗೈದರು. ಶ್ರೀಮತಿ ಪೌಲ್‌ರವರು ಬಹುಮಾನ ವಿತರಣೆ ಗೈದರು

ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಎಂ. ಮಧ್ವರಾಜರು ತಮ್ಮ ಭಾಷಣದಲ್ಲಿ ಪ್ರಾಚೀನ ವೈದ್ಯವಾದ ಆಯುರ್ವೇದವು ತಂಬ ಪ್ರಭಾವವುಳ್ಳದ್ದಾಗಿದೆ ಮತ್ತವಲ್ಲದೆ ಶಾಶ್ವತ ಗುಣಕಾರಿಯಾಗಿದೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಡಾಕ್ಟರುಗಳ ಅಭಾವವಿರುವಲ್ಲಿ ಆಯುರ್ವೇದದ ಡಾಕ್ಟರುಗಳು ಗ್ರಾಮೀಣ ಸೇವೆಗಾಗಿ ಮುಂದೆ ಬರುತ್ತಿರುವುದು ಸ್ವಾಗತಾರ್ಹವಾಗಿದೆಯೆಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಯುರ್ವೇದದ ಪ್ರೌಢ ಪದ್ಧತಿಗೆ ಸರಕಾರದಿಂದ ಯೋಗ್ಯ ನೆರವು ದೊರಕುತ್ತಿದ್ದರೆ ಅದು ಕ್ಷಿಪ್ರಗತಿಯಲ್ಲಿ ಮುಂದುವರಿಯುತ್ತಿತ್ತೆಂದೂ ಉಡುಪಿ ಆಯುರ್ವೇದ ಕಾಲೇಜು ಯೋಗ್ಯರೀತಿಯಲ್ಲಿ ಮುಂದುವರಿಯುವುದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಕೊನೆಯಲ್ಲಿ ಜತೆಕಾರ್ಯದರ್ಶಿ ಶ್ರೀ ಬಾಲಕೃಷ್ಣ ಆಚಾರ್ಯರು ಧನ್ಯವಾದಾರ್ಪಣೆ ಮಾಡಿದ ಮೇಲೆ ಕಾಲೇಜು ವಿದ್ಯಾರ್ಥಿಗಳಿಂದ "ರಾಜಪುತ್ರ ವಿಜಯ"ವೆಂಬ ಯಕ್ಷಗಾನ ಬಯಲಾಟವು ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿತು

ಹಿಂದೂ ಹಾಯರ್ ಸೆಕೆಂಡರಿ ಶಾಲಾ ವಾರ್ಷಿಕೋತ್ಸವ

ಶಿರ್ವ ಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲೆ ಮತ್ತು ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 21-1-69ರಂದು ಬ್ಲೋಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಪಿ. ರಂಗನಾಥ ನೆಲ್ಲೆಯವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು.

ಶ್ರೀ ಬಿ. ಜಯರಾಮ ಸೆಟ್ಟಿ ಸ್ವಾಗತಿಸಿ, ವರದಿಯನ್ನೋದುತ್ತ ವರದಿ ವರ್ಷದಲ್ಲಿ ಶಾಲೆಗೆ ಪಿ. ಯು. ಸಿ. ಪರೀಕ್ಷೆಯಲ್ಲಿ ಮೂರನೆ ಮತ್ತು ಸಿದನೆಯ ರ್‍ಯಾಂಕುಗಳು, ಸಿಲನೆಯ ತರಗತಿಯ ಜಿಲ್ಲಾ ಮಟ್ಟದ ಪರೀಕ್ಷೆಯಲ್ಲಿ ಐದನೆಯ ರ್‍ಯಾಂಕೂ, ಪ್ರಾಂತೀಯ ರೆಡ್ ಕ್ರೋಸ್ ಪರೀಕ್ಷೆಯಲ್ಲಿ ಎರಡು ರ್‍ಯಾಂಕುಗಳೂ ದೊರೆತಿವೆಯೆಂದು ತಿಳಿಸಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಗಣೇಶ ಕಾಮತರು ಹಳೆ ವಿದ್ಯಾರ್ಥಿ ಸಂಘದ ವರದಿಯನ್ನೋದಿದರು. ಶ್ರೀ ಕೆ. ಜಗನ್ನಾಥ ಶೆಟ್ಟಿ ಸ್ವಸ್ತಿ ವಾಚನವನ್ನೂ ಶ್ರೀ ಕೆ. ವಾಸುದೇವನ ಶೆಟ್ಟಿ ಸಂದೇಶ ವಾಚನವನ್ನೂ ಗೈದರು.

ಡಾ| ಎಸ್. ರಾಜಶೇಖರ ಹೆಗ್ಡೆಯವರು ಕ್ರೀಡೋತ್ಸವದ ಉದ್ಘಾಟನೆಯನ್ನೂ ಡಾ| ಯು. ಕೆ ಆಚಾರ್ಯರವರು ಧ್ವಜಾರೋಹಣವನ್ನು ಗೈದರು. ಶ್ರೀ ಬಿ. ಚಂದ್ರಹಾಸ ಹೆಗ್ಡೆಯವರ ಕೃಪೆಯಿಂದ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯ್ತು.

ಶ್ರೀ ಪುರಂದರೋತ್ಸವ ಉದ್ಘಾಟನೆ

ಬೆಂಗಳೂರು ಜ. ತಾ. 26 ಇಲ್ಲಿನ ರಾಜಾಜಿನಗರದ ದಾಸಾಶ್ರಮದಲ್ಲಿ ಐದು ದಿನಗಳ ಶ್ರೀ ಪುರಂದರೋತ್ಸವವನ್ನು ಶ್ರೀ ಆರ್. ಆರ್. ದಿವಾಕರ್‌ರವರು ಇನ್ನೆ ಉದ್ಘಾಟಿಸಿದರು ಶ್ರೀ ಭದ್ರಗಿರಿ ಕೇಶವದಾಸರು ಸ್ವಾಗತ ಭಾಷಣ ಮಾಡಿದರು.

"ಶ್ರೀ ಪುರಂದರ ದಾಸರ ಕೀರ್ತನೆಗಳು ಬಹು ಸರಳವೂ, ಸುಂದರವೂ ಆಗಿವೆ" ಎಂದು ತಿಳಿಸುತ್ತಾ ಶ್ರೀ ದಿವಾಕರರು 'ಇಂದೋ ಸಿಸ್ಟೆಯೋ ಅವು ರಚಿಸಲ್ಪಟ್ಟಂತೆ ನಿತ್ಯಸೂತನವಾಗಿವೆ' ಎಂದು ತಿಳಿಸಿದರು.

ಶ್ರೀ ಸಾಂಪದ್ರಿ ರಾಯರು ಶ್ರೀ ಪುರಂದರ ದಾಸರ 'ಸರಳ ಜೀವನ ಉನ್ನತ ಚಿಂತನ'ವನ್ನು ಭಾವ ಪೂರ್ವಕ ವಿವರಿಸಿದರು.'

ಬಳಿಕ ಶ್ರೀ ಆರ್. ಕೆ. ಶ್ರೀಕಂಠನ್ ಮತ್ತು ವೃಂದದವರು ಬಹು ಮಧುರವಾಗಿ ಭಕ್ತಿಯುಕ್ತ ಶ್ರೀ ಪುರಂದರ ದಾಸರ ಕೀರ್ತನೆಗಳನ್ನು ಹಾಡಿದರು.

ಬ್ಯಾಂಕುರಾಷ್ಟ್ರೀಕರಣದ ಮೊದಲು ಕೈಗಾರಿಕೆಗಳ ರಾಷ್ಟ್ರೀಕರಣವಾಗಬೇಕು

ಕಳೆದ ತಾ. 28ರಂದು ಪೈದರಾಬಾದಿನಲ್ಲಿ ಮೊತನಾಡುತ್ತಾ ಇಂಡಿಕೇಟ್ ಕಾಂಗ್ರೆಸ್‌ನ ಶ್ರೀ ಟಿ. ಎ. ಪೈಗಳವರು ಭಾರತದಲ್ಲಿ ಪ್ರತಿಯೊಂದು ವಿಭಾಗ, ವ್ಯಕ್ತಿ, ಗ್ರಾಮಕ್ಕೂ ಸಂಬಂಧವಾಗುವಂತಹ ರೀತಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ವಿಸ್ತರಿಸಬೇಕು ಎಂದು ಹೇಳಿದರು. ಅವರು ಸೆಕುಂದರಾಬಾದಿನ ರೋಟರಿ ಕ್ಲಬ್ಬಿನಲ್ಲಿ ಬ್ಯಾಂಕುಗಳ ಮೇಲೆ ಸಾರ್ವಜನಿಕ ಹತೋಟಿಯ ಕುರಿತು ಮಾತನಾಡುತ್ತಿದ್ದರು.

ನಮ್ಮ ದೇಶದ ಬಡಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಅವರಿಗೆ ತಕ್ಕ ಅವಕಾಶ ಕೊಡಬೇಕು. ಜನರಿಗೆ ಈ ಬ್ಯಾಂಕಿನ ಸಂಪೂರ್ಣ ಜ್ಞಾನವನ್ನು ತಿಳಿಯ ಪಡಿಸಲು ಬ್ಯಾಂಕುಗಳಿಗೆ ಸಾಧ್ಯವಾಗಿಲ್ಲ ಬ್ಯಾಂಕುಗಳನ್ನು ವಿಶಾಲಗೊಳಿಸುವ ಬದಲು ಅದರ ಉದ್ದೇಶವನ್ನು ಜನರಿಗೆ ತಿಳಿಯಪಡಿಸಬೇಕು. ಭಾರತದ ಬೇಂಕುಗಳನ್ನು ವಿದೇಶೀ ಬೇಂಕುಗಳಿಗೆ ಜೋಡಿಸಿರುತ್ತಾ ಅವರು ಭಾರತದ ಎಲ್ಲಾ ಬೇಂಕುಗಳ ಒಟ್ಟು ರೇವಣಾತಿಯನ್ನು ಸೇರಿಸಿದರು ಅವೇರಿಕೆದ ಒಂದು ಬ್ಯಾಂಕಿನ ರೇವಣಾತಿಯಷ್ಟು ಆಗಲಾರದು ಎಂದರು.

ಬ್ಯಾಂಕುಗಳ ಪ್ರತಿಯೊಂದು ಕಾರ್ಯವೂ ಸಾಮಾಜಿಕ ಪ್ರಜ್ಞೆಯಂತಾಗ ಬೇಕು ಎಂದವರು ಒತ್ತಿ ಹೇಳಿದರು. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಇದು ಸಾಧ್ಯವಿಲ್ಲ. ಕೈಗಾರಿಕೆಗಳ ರಾಷ್ಟ್ರೀಕರಣವಾಗದೆ ಬ್ಯಾಂಕುಗಳ ರಾಷ್ಟ್ರೀಕರಣ ವಿವೇಚನಾ ರಹಿತ ಎಂದರು.

ಸೌಹಾರ್ದ ಸಮ್ಮೇಳನ

ಮಂಗಳೂರಿನಲ್ಲಿರುವ ಮೈಸೂರು ಸೌಹಾರ್ದ ಸಂಘ (ರಿಜಿಸ್ಟರ್ಡ್) ಇದರ ಐದನೇ ವಾರ್ಷಿಕೋತ್ಸವವು ಇತ್ತೀಚೆಗೆ ಪುರಭವನದಲ್ಲಿ ಮಣಿಪಾಲ ಅಕಾಡಮಿ ಆಫ್ ಜನರಲ್ ಎಜ್ಯುಕೇಶನ್ನಿನ ರಿಜಿಸ್ಟ್ರಾರ್ ಅದ ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೌಹಾರ್ದ ಸಹಕಾರಗಳೇ ರಾಷ್ಟ್ರೀಯತೆಯ ಸಾದನವೆಂದರು. ಇದಕ್ಕಾಗಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಸಿ. ಮೆಲ್ಲಯ್ಯನವರು ವ್ಯವಸ್ಥೆಯಾಗಿ ಇಲಾಖೆಯ ಡೆಪ್ಯುಟಿ ರೈರೆಕ್ಟರ್ ಶ್ರೀ ಕೆ. ಅಂಕೇ ಗೌಡರು ಭಾಷಣಿಸಿದರು.

ಅರಂಭವಲ್ಲಿ ಶ್ರೀ ಆರ್. ಕೃಷ್ಣಯ್ಯನವರಿಂದ ದ್ರಾಷ್ಟಿನೆಯೊದ ಬಳಿಕ ಸಂಘದ ಅಧ್ಯಕ್ಷ ಶ್ರೀ ಕೆಸಾನ ರಾಮಚಂದ್ರರವರು ಸ್ವಾಗತಿಸಿದ್ದರು. ಶ್ರೀಮತಿ ಶಾಂತಾ ಪದ್ಮನಾಭಯ್ಯನವರು ಬಹುಮಾನ ವಿತರಣೆ ಗೈದರು.

ಉಡುಪಿಯಲ್ಲಿ ಕರ್ನಾಟಕ ಜಾನಪದ ಕಲಾ ಪ್ರದರ್ಶನ

ಇದೇ ತಾ. 27ರಂದು ಉಡುಪಿಯ ಪರ್ಯಾಯ ವಸ್ತುಪ್ರದರ್ಶನದಲ್ಲಿ ಶ್ರೀಗಳಾದ ಜಿ. ಎನ್. ಪರಶಿವಯ್ಯ ಮತ್ತು ಪಿ. ಆರ್. ತಿಪ್ಪೇಸ್ವಾಮಿಯವರ ನಿರ್ದೇಶನದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಸುಮಾರು 66ಮಂದಿಯನ್ನೊಳಗೊಂಡ ಅಪೂರ್ವ ಕಲಾ ಪ್ರದರ್ಶನ ಜರಗಿತು.

ಈ ಕಲಾಪ್ರದರ್ಶನವನ್ನು ಶ್ರೀ ಎಂ. ಮಧ್ವರಾಜರು ಉದ್ಘಾಟಿಸಿದರು. ಇದರಲ್ಲಿ ಕೋಲಾಟ, ಕಂಸಾಳೆ ನೃತ್ಯ, ಕೊರಗರ ಕುಣಿತ ಮೊದಲಾದವುಗಳು ಪ್ರಕಟಿಸಲ್ಪಟ್ಟವು. ಕೊನೆಯಲ್ಲಿ ಶ್ರೀ ಪಿ. ಆರ್. ಕಡಿಯೂರರು ಧನ್ಯವಾದಾರ್ಪಣೆ ಗೈದರು.

ಪತ್ರಿಕಾ ಪ್ರಕಟಣೆ

ದ. ಕ. ಜಿಲ್ಲಾ ಮೆಜಿಸ್ಟ್ರೇಟರು ಈ ಕೆಳಕಂಡ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದಾರೆ:—

ಸಾರ್ವಜನಿಕರು, "ಇಂಡಿಯನ್ ಆರ್ಮ್ಸ್ ಆಕ್ಟ್ 1959"ರ ಪ್ರಕಾರ ರಸದಾರಿಗಳ ನಿವೇದನೆ, ಅಕ್ಷೇಪಣಾ ರಹಿತ ಸರ್ಟಿಫಿಕೇಟುಗಳ ನೀಡಿಕೆ ಮತ್ತು ವಾಹನ ರಸದಾರಿಗಳನ್ನು ಪಡೆಯಲು ಮೇಜಿಸ್ಟ್ರೇಟರುಗಳಿಗೆ 25 ಪೈಸೆ ಕೋರ್ಟು, ಫೀ ಸ್ಟಾಂಪ್ ಲಗತ್ತಿಸಿ ಅರ್ಜಿಯನ್ನು ಸಲ್ಲಿಸುತ್ತಿರುವುದು ಜಿಲ್ಲಾ ಮೆಜಿಸ್ಟ್ರೇಟರ ಗಮನಕ್ಕೆ ಬಂದಿದೆ. ಆದರೆ ಮೈಸೂರು ಕೋರ್ಟು ಫೀ ಆಕ್ಟ್ ಪ್ರಕಾರ 75 ಪೈಸೆ ಸ್ಟಾಂಪನ್ನು ಲಗತ್ತಿಸ ಬೇಕಾಗುವುದು ಆದುದರಿಂದ ಸಾರ್ವಜನಿಕರು ಇಂತಹ ಅರ್ಜಿಯನ್ನು ಸಲ್ಲಿಸುವಾಗ 75ಪೈಸೆ ಸ್ಟಾಂಪನ್ನು ಲಗತ್ತಿಸಬೇಕು. ಈಗಾಗಲೇ 25 ಪೈಸೆ ಸ್ಟಾಂಪನ್ನು ಹಚ್ಚಿ ಅರ್ಜಿಗಳನ್ನು ನೀಡಿದರೆ ಅಂತಹ ಅರ್ಜಿಗಳಿಗೆ ಕಡಿಮೆಯಾದ 50ಪೈಸೆ ಸ್ಟಾಂಪನ್ನು ಸಲ್ಲಿಸಿ ಅವರ ಅರ್ಜಿಗಳ್ಳು ಸಂಬಂಧಪಟ್ಟ ಮೇಜಿಸ್ಟ್ರೇಟರುಗಳಿಂದ ಇತ್ಯರ್ಥವಾಗಲು ಅನುಕೂಲ ಮಾಡಿಕೊಳ್ಳಲು ಸಾರ್ವಜನಿಕರಿಗೆ ಸೂಚಿಸಲಾಗಿದೆ.

ಪುರಂದರದಾಸರ ಪುಣ್ಯ ದಿನಾಚರಣೆ

ಮದ್ರಾಸ್ ಸರಶುವಾಳದಲ್ಲಿರುವ ದಿವಂಗತ ಭಕ್ತ ಶ್ರೀ ಸೀತಾರಾಮರಾಯರ ಸ್ವಗೃಹವಾದ ವಾಸಸ್ಥಾನದಲ್ಲಿ 30-1-1968ರಲ್ಲಿ ಶ್ರೀ ಪುರಂದರ ದಾಸರ ಪುಣ್ಯ ದಿನಾಚರಣೆಯು ವಿಜೃಂಭಣೆಯಿಂದ ನಡೆಯಿತು. ಶ್ರೀ ಸೀತಾರಾಮರಾಯರ ತಂದೆಯವರಾದ ಭಕ್ತ ಶ್ರೀ ಗೋವಿಂದದಾಸರ ಭಜನ ಪದ್ಧತಿಯನ್ನು ಅನುಸರಿಸಿ ಶ್ರೀ ರಾಯರ ಅಣ್ಣತಮ್ಮಂದಿರುಗಳು ಮಕ್ಕಳು ಮೊಮ್ಮಕ್ಕಳು ತಿರುವಲ್ಲಿಕೇಣಿಯ ದಾಸ ಸಂಘದ ಪ್ರತಿನಿಧಿಗಳೊಡನೆ ಭಜನೆಯನ್ನು ಮಾಡಿದರು. ಬೆಳಗ್ಗೆ ಶ್ರೀ ಪುರಂದರದಾಸರ ಅಲಂಕೃತವಾದ ಪಟದಮುಂದೆ ಈ ಭಜನಗೋಷ್ಠಿಯು ನರ್ತನ ಸೇವೆಯೊಡನೆ ದಾಸ ಪ್ರಸಾದದಿಂದ ಹೊರಟು, ಗಂಗಾಧರೇಶ್ವರ ದೇವಾಲಯದ 4 ಬೀದಿಗಳಲ್ಲಿಯೂ, ಇತರ ಪ್ರಧಾನ ಮಾರ್ಗಗಳಲ್ಲಿಯೂ, ತಿರುಗಿಸಾತ್ತು, 12 ಗಂಟೆಗೆ ದಾಸ ಪ್ರಸಾದಕ್ಕೆ ಬಂದು ಸೇರಿತು. ಮಧ್ಯಾಹ್ನದಲ್ಲಿ ಶ್ರೀ ಪುರಂದರದಾಸರ ವಿಶೇಷಾರಾಧನೆಯೂ, ಸಂಜೆ ಕೀರ್ತನಕಾರ ಮೈಸೂರಿನ ದರಿಸರ್ಪೋತ್ತಮ ದಾಸರಂದ ಶ್ರೀ ಪುರಂದರದಾಸರ ಚರಿತ್ರೆಯ ವಿಷಯವಾಗಿ ಅವೋಘವಾದ ಹರಿಕಥೆಯೂ ನಡೆದು, ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಧನ್ಯವಾದದೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ಕುಷ್ಟರೋಗ ದಿನಾಚರಣೆ

"ಹಿಂದೂ ಕುಷ್ಟ ನಿವಾರಣಾ ಸಂಘ"ಉಡುಪಿ ಶಾಖೆ "ಉಡುಪಿ ರೋಟರೀ ಕ್ಲಬ್"ಗಳ ಜಂಟಿ ಆಶ್ರಯದಲ್ಲಿ ಇವರಿಗೆ 30ರಂದು ವಿಶ್ವಕುಷ್ಟರೋಗ ದಿನಾಚರಣೆಯು ನೆರವೇರಿಸಲ್ಪಟ್ಟಿತು. ಕಾರ್ಯದರ್ಶಿ ಡಾ|| ಮೋಹನ್ ದಾಸ್ ಪೈ ಕೆ. ಇವರು ಪ್ರಸ್ತಾವಿಕ ಭಾಷಣ ಮಾಡಿ ಕುಷ್ಟರೋಗವನ್ನು ಸಮ್ಮ ರಾಷ್ಟ್ರದಿಂದ ಹೋಗಲಾಡಿಸಲು ವಿಶೇಷ ಪ್ರಚಾರ ಅಗತ್ಯವೆಂದರು. ಕುಷ್ಟರ್‌ಬಾ ಜನರಲ್ ಆಸ್ಪತ್ರೆಯ ಡಾ|| ಜಿ. ಎನ್. ಶೆಟ್ಟರು ಈ ರೋಗ ಕ್ಕೆ ಚಿಕಿತ್ಸೆಯ ವಿಧಾನದ ಕುರಿತು ಭಾಷಣವಿತ್ತರು. ಈ ಸಂಘದ ಕೋಶಾಧಿಕಾರಿ ಶ್ರೀಮತಿ ಶಾಂತಿ ಆರ್. ಪೈಯವರು ದುರದೃಷ್ಟ ರೋಗಿಗಳಿಗೆ ಪಾದರಕ್ಷೆಗಳನ್ನು ಧರ್ಮಾರ್ಥ ಕೊಡುವುದಕ್ಕಾಗಿ ಒಂದು ಸಾವಿರ ರೂಗಳ ಚೆಕ್ಕನ್ನು ಕೊಡುಗೆಯಾಗಿತ್ತರು. ಇದನ್ನು ಮೆಡಿಕಲ್ ರಿಲೀಫ್ ಸಮಿತಿಯ ಪರವಾಗಿ ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವೀಕರಿಸಿದರು. ಸಂಘದ ಅಧ್ಯಕ್ಷ ಡಾ|| ಟಿ. ಎಂ. ಎ. ಪೈಯವರು ಮಣಿಪಾಲದಲ್ಲಿ ಆಗಲಿರುವ ಕುಷ್ಟರೋಗಿಗಳ ಪುನರ್ವಸತಿಯ ಕುರಿತಾದ ಬೃಹದ್ ಯೋಜನೆಯ ವಿವರಗಳನ್ನಿತ್ತರು.

ಗೃಹ ಪ್ರವೇಶ ಸಮಾರಂಭ

ಪೂನಾದಲ್ಲಿ ಪ್ರಸಿದ್ಧ ಹೊಟೆಲ್ ಉದ್ಯಿಮೆದಾರರಾದ ಶ್ರೀ ಜಿ. ಎಂ. ಶೆಟ್ಟಿ ಇವರು "ಪಾಕಶಾಲಾ, ನವಿಪೇಟೆ, ಪೂನಾ, ಇಲ್ಲಿ ನೂತನವಾಗಿ ರಚಿಸಿದ 'ಯಶೋಧನ" ಎಂಬ ಗೃಹದ ಪ್ರವೇಶೋತ್ಸವವು ಇದೇ ತಾ. 30ರಂದು ವಿಜೃಂಭಣೆಯಿಂದ ನೆರವೇರಿತು. ಈ ಸಂಬಂಧ ಶ್ರೀ ಜಿ. ಎಂ. ಶೆಟ್ಟರು ಸಂಜೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಶ್ರೀ ಬಿ. ರಾಜೀವ ಶೆಟ್ಟರ ನಿಧನ

ವಿಜಯಾ ಬ್ಯಾಂಕಿನ ಡೈರೆಕ್ಟರ್‌ಲ್ಲೊಬ್ಬರಾಗಿ ಸೇವೆ ಸಲ್ಲಿಸಿದ್ದ ಶ್ರೀ ಬಿ. ರಾಜೀವ ಶೆಟ್ಟಿ, ಬಿ. ಎ. ಎಲ್. ಎಲ್. ಬಿ. ಇವರು ಕಳೆದ 30ರಂದು ಮಂಗಳೂರಿನಲ್ಲಿ ನಿಧನಹೊಂದಿದರು. ಇವರು ಯುನೈಟೆಡ್ ಇಂಪೋರ್ಟರ್ಸ್ (ಬಾಂಬೆ) ಪ್ರೈವೇಟ್ ಲಿಮಿಟೆಡ್, ಮಂಗಳೂರು ಇದರ ಮೇನೇಜರರಾಗಿದ್ದರಲ್ಲದೆ, ಚತುರಕಾರ್ಯ ನಾರಾಹಕರೂಬಾಣಾಕ್ಷರೂ ಆಗಿದ್ದರು.

ದಿವಂಗತರ ಗೌರವಾರ್ಥವಾಗಿ ತಾ. 31 ನೇ ಅಂದಾಜ್ಜಿ ವಿಜಯಾ ಬ್ಯಾಂಕಿನ ಹೆಡ್ ಆಫೀಸಿಗೆ ರಜೆ ಕೊಡಲಾಗಿತ್ತು.

ಶ್ರೀ ಪಡುಬಿದ್ರಿ ಕರಿಯಣ್ಣ ಶೆಟ್ರ ನಿಧನ

ನಿಷ್ಠಾವಂತ ಕಾಂಗ್ರೆಸ್ ಹಾಗೂ ಗಾಂಧೀ ಭಕ್ತರಾಗಿ ಅನಾಹಕಾರ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಕೂಡಾ ಅನುಭವಿಸಿದ್ದ ಶ್ರೀ ಪಡುಬಿದ್ರಿ ಕರಿಯಣ್ಣ ಶೆಟ್ರು 30-1-68ರಲ್ಲಿ ನಿಧನ ಹೊಂದಿದರು. ಇವರು ಖಾದಿ ಪ್ರೇಮಿಯಾಗಿದ್ದು ಖಾದಿ ಕೇಂದ್ರವನ್ನು ಕೂಡಾ ಸ್ಥಾಪಿಸಿದ್ದರು. ಊರಿನ ಅಭಿವೃದ್ಧಿ ಕಾರ್ಯಗಳಲ್ಲಿ ಆಸಕ್ತಿ ವಹಿಸಿ ದುಡಿದು ಜನಪ್ರಿಯರಾಗಿದ್ದರು.

ಹಿಂದೀ ಆಂದೋಲನ

ಹಿಂದಿ ಬೇಡವೆಂಬ ಚಳವಳಿಯು ಗಾಳಿ ಉಡುಸಿ, ಮಣಿಪಾಲಕ್ಕೂ ಬೀಸಿ ಶಾಂತ ರೀತಿಯ ಮೆಂಪಣಗೆಯೊಂದು ತಾ. 30ರಂದು (ಮಣಿಪಾಲದಲ್ಲಿ) ಜರಗಿತು, ತಾ. 30ರಂದು ಕಾಲೇಜುಗಳಿಗೆ ರಜೆ ಸಾರಲಾಯಿತು. ತಾ. 500ದು ಚಳವಳಿಯ ಸೂಚನೆ ತೋರಿದೊಡನೆ ಕಾಲೇಜುಗಳಿಗೆ ರಜೆ ನೀಡಲಾಗಿದೆ.

ವಿವಾಹ ಸಮಾರಂಭ

ದಿ| ಪದ್ಮ ಮೇಗಿನಮನೆ ಚಿಕ್ಕಯ್ಯ ಅಳ್ವರ ಪುತ್ರ ಶ್ರೀ ಕರುಣಾಕರ ಅಳ್ವರ ವಿವಾಹವು, ನಡುಪದವಾಗುತ್ತು ಶ್ರೀ ಬೇಜ ಶೆಟ್ರ ಪುತ್ರಿ ಸೌ| ವಸಂತಿಯೊಂದಿಗೆ ಇದೇ ತಾ. 400ರಂದು ಮಂಗಳೂರು ಕೆಥೋಲಿಕ್ಕಲ್ ಬಾನಲ್ಲಿ ವಿಜೃಂಭಣೆಯಿಂದ ಜರಗಿತು.

ಶ್ರೀ ಚಿತ್ತೂರು ವೆಂಕಪ್ಪ ಶೆಟ್ಟರ ಪುತ್ರ ಶ್ರೀ ಕುಸುಮಾಕರ ಶೆಟ್ರ ವಿವಾಹವು ಶ್ರೀ ವಕೀಲ್ ಎಚ್. ಪಾಣ್ಣ ಆಳ್ವರ ಪುತ್ರಿ ಸೌ| ಪುಷ್ಪ ಅವರೊಂದಿಗೆ ಇದೇ ತಾ. 400ರಂದು ಕುಂದಾಪುರ ಟೋರ್ಸ್ ಹೈಸ್ಕೂಲಿನ ಕಲಾ ಮಂದಿರದಲ್ಲಿ ವೈಭವದಿಂದ ನೆರವೇರಿತು.

ಉಡ್ಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. No. 259/64.

ಬಾಬ ಪೂಜಾರಿ —ವಾದಿ.

ಮತ್ತು

ಮಿಸಾ ಮೇರಿಡಮೆಲ್ಲೊ (ಪೌತಿ) ಕೂಡಾ —ಪ್ರತಿವಾದಿರು.

3. ಬಾಬು ಪಿರೇರಿ ಯಾನೆಜೋನ್ ಮ್ಯಾಕಲಿಯಮ್, 4. ವಿನ್ಸಿ ಪಿರೇರಿ ಯಾನೆ ವಿನ್ಸಾಸೆಂಟಿ ಪಾಲ್ಲ. 5. ಫ್ರೇಂಕಿ ಪಿರೇರಿ ಯಾನೆ ಫ್ರಾಂಸಿಸ್ ಸಾಲೇರಿ ಲಾಜರಸ್. 6. ಸ್ಟೇಫಿ ಪಿರೇರಿ ಯಾನೆ ಸ್ಟೆಫಿ ಸಲಸ್, ಮಾರ್ಗರೇಟ್ ಡಮೆಲ್ಲ ಮಕ್ಕಳು—ಉಡ್ಪಿ ತಾಲ್ಲೂ ಪುತ್ತೂರು ಗ್ರಾಮ.

ವಾದಿಯು ದಾಖಲು ಮಾಡಿದ ಮೇಲಿನ ದಾವೆಯು 30ರಿಂದ 6ನೇ ವರೆಗಿನ ಪ್ರತಿವಾದಿರ ನೋಟೀಸಿನ ಬಗ್ಗೆ ತಾ. 16-2-68ಕ್ಕೆ ಇಟ್ಟಿದೆ. ಸದ್ರಿ ಪ್ರತಿವಾದಿರು ಸದ್ರಿ ತಾ. 16-2-68ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಅವರ ಗೈರು ಹಾಜ್ರಿಯಿಂದ ಸದರಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

Sd. Gratian C. Rego
Pleader for Plaintiff

ಉಡ್ಪಿ, ತಾರೀಕು, 5—2—68

ಅಗ್ಮಾರ್ಕ್ ಗುರುತಿನ ವಸ್ತುಗಳನ್ನೇ ಯಾಕೆ ಕೊಳ್ಳಬೇಕು?

ನೀವು ಬೆಣ್ಣೆ, ತುಪ್ಪ, ಮೊಟ್ಟೆ, ಜೇನು ತುಪ್ಪ ಇತ್ಯಾದಿ ವಸ್ತುಗಳನ್ನು ಕೊಳ್ಳುವಾಗ ಅದರ ಮೇಲೆ ಅಗ್‌ಮಾರ್ಕ್ ಗುರುತು ಇದೆಯೇ ಎಂದು ನೋಡಿ ಅಗ್‌ಮಾರ್ಕ್ ಗುರುತು ಇದ್ದರೆ ಆ ವಸ್ತು ಒಳ್ಳೆಯದೆಂದು ಖಾತರಿ ಮಾಡಿಕೊಳ್ಳಬಹುದು. ಸರ್ಕಾರವು ಚೆನ್ನಾಗಿ ಪರೀಕ್ಷಿಸಿ, ವರ್ಗೀಕರಿಸಿ, ಪ್ಯಾಕ್‌ಮಾಡಿ ಮಾರಾಟ ಮಾಡಲಾಗುವ ಕೃಷಿ ಉತ್ಪನ್ನ ವಸ್ತು, ಅದಕ್ಕೆ ಸಂಬಂಧಿಸಿದ ಇತರ ವಸ್ತುಗಳಿಗೆ ಕೊಡುವ ಚಿಹ್ನೆಯೇ ಅಗ್‌ಮಾರ್ಕ್.



ಅಗ್‌ಮಾರ್ಕ್ ಚಿಹ್ನೆ
ಶ್ರೇಷ್ಠತೆಯ
ಸಂಕೇತ

67/375

ಋಣಾನುಬಂಧ

(ಎರಡನೇ ಪುಟದಿಂದ)

ಮದುವೆಯ ತರಾತುರಿ ಹೆಚ್ಚಿದಂತೆ ಕಾಲೇಜನ್ನೂ ಬಿಡಬೇಕಾಯಿತು.

ಮೊದಲು ದಿನಕ್ಕೊಮ್ಮೆ ಭೇಟಿಯಾಗುತ್ತಿದ್ದ ರಮಾಕಾಂತನ ಮುಖದರ್ಶನವೂ ಮುಂದೆ ಸಿಂತು ಹೋಯಿತು.

ರಮಾಕಾಂತನ ಮೇಲೆ ಅಪಾರ ವಿಶ್ವಾಸವನ್ನಿಟ್ಟಿದ್ದ ರಾಧೆ ಮತ್ತಾವ ಗಂಡುಗಳನ್ನೂ ಒಪ್ಪದಾದಳು. ಮಗಳ ಮನಸ್ಸಿಗೆ ವಿರೋಧವಾಗಿ ನಡೆಯಲು ತಂದೆ ತಾಯಿಗಳೂ ಮುಂದಾಗಲಿಲ್ಲ. ಒಂದು ದಿನ ಬೆಳಿಗ್ಗೆ ಮಗಳೊಡನೆ ರಾಯರು ಕೇಳಿದರು, 'ರಾಧೆ! ನೀನು ಹೀಗೆಯೇ ಬಂದಂಡುಗಳನ್ನೆಲ್ಲಾ ಒಲ್ಲೆಯನ್ನುತ್ತಾ ಹೋದರೆ ಮುಂದೆ ಹೀಗೆಯೇ ಉಳಿಯ ಬೇಕಾದೀತು. ಆದ್ದರಿಂದ ನೀನೀಗ ಯಾವುದಾದರೊಂದನ್ನು ಒಪ್ಪಲೇ ಬೇಕು.'ಎಂದರು.

ತಂದೆಯ ಮಾತಿಗೆ ಯಾವ ಉತ್ತರವನ್ನೂ ಕೊಡದಾಗ, 'ಹೇಳು ರಾಧೆ. ನಿನ್ನ ಮನಸ್ಸಿನಲ್ಲಿರುವುದಾದರೂ ಏನೆಂದು ಹೇಳಿ ಬಿಡು.' ಎಂದರು ಮತ್ತೊಮ್ಮೆ.

ಆಗವಳು ಸ್ವಲ್ಪ ಧೈರ್ಯ ತಾಳಿ ಹೇಳಿದಳು.. "ನನ್ನ ಮನಸ್ಸಿನಂತೆ ನಡೆಯುವಿರಾ?"

"ಮದುವೆಯಾಗುವವಳು ನೀನು ಹಾಗಿರುವಾಗ ನಿನ್ನ ಮನಸ್ಸಿನಂತೆ ನಡೆಯ ಬೇಕಾದುದು ಅವಶ್ಯಕವಾದ ವಿಚಾರ"

"ಅಪ್ಪಾ....."

"ಮತ್ತೇನು ಸಂಶಯ? ಹೇಳು ರಾಧೆ"

'ನಾನೀಗಾಗಲೇ ಒಬ್ಬರನ್ನು ಮನಸಾರೆ ಪ್ರೀತಿಸಿರುವೆನಪ್ಪಾ' ತಾಯಿಯೊಡನೆ ಹೇಳಲಾಗದ್ದನ್ನು ತಂದೆಯೊಡನೆ ನಾಚಿಕೆ ಬಿಟ್ಟು ಹೇಳಿದಳು.

ಮಗಳ ಮಾತನ್ನು ಕೇಳಿ ರಾಯರಿಗೆ ಉಸಿರೇ ನಿಲ್ಕಿ ಕೊಂಡಂತಾಯಿತು. ಆದರೂ ಸಾವರಿಸಿಕೊಂಡು ಕೇಳಿದರು,

"ಯಾರವನೆಂದು ಹೇಳು?"

"ಕಾಲೇಜು ಪತ್ರಿಕಾ ಸಂಪಾದಕ ರಮಾಕಾಂತ"

"ಯಾರು ರಮಾಕಾಂತನನ್ನೇ ನೀನು ಪ್ರೀತಿಸಿರೋದು?"

ಆ ಮಾತಿನಲ್ಲಿ ಆಶ್ಚರ್ಯ ಕಾತರವೆರಡೂ ಕಾಣುತ್ತಿತ್ತು.

"ಅದೇಕಪ್ಪಾ ಹಾಗೆ ಕೇಳುವೆ. ನಿನಗೂ ಅವರ ಪರಿಚಯವಿದೆಯೇ?"

"ಚೆನ್ನಾಗಿ ಇದೆ ರಾಧೆ. ನಮ್ಮ ಆಫೀಸಿನ ಹೆಡ್ ಗುಮಾಸ್ತ ಸುಗುಣಾನಂದರ ಮಗನವನು.'

'ಹಾಗಾದರೆ ಮತ್ತೇನು ಯೋಚನೆಯಪ್ಪಾ'

"ಅವನ ಮದುವೆಯ ಇಚ್ಛಿತಾರ್ಥದ ಕರೆಯೋಲೆ ಬಂದಿದೆಯಲ್ಲ ರಾಧೆ."

ಆ ಮಾತನ್ನು ಕೇಳಿದ ರಾಧೆಗಾದ ದುಃಖ ತಡೆಯದಾಯಿತು. ರಮಾಕಾಂತನನ್ನು ಆದರ್ಶ ಯುವಕನೆಂದು ಭಾವಿಸಿ ಅವನೊಡನೆ ಅದೆಷ್ಟೋ ವೇಳೆ ಸಲುಗೆಯಿಂದಲೇ ನಡೆದಿದ್ದಳು. ಅದರವನೊಂದು ದಿನವೂ ಮರ್ಯಾದೆಯ ಸೀಮೆ ದಾಟದುದನ್ನು ಕಂಡು ಮತ್ತೂ ಅವನತ್ತ ಆಕರ್ಷಿತಳಾಗಿದ್ದಳು.

ತನ್ನ ಹೆತ್ತವರಿಂದ ತಮ್ಮಿಬ್ಬರ ಮದುವೆಗೆಂದೂ ಆತಂಕಬಾರದೆಂಬ ಭರವಸೆಯನ್ನು ತಾಳಿ ಮುಂದಿನ ಬಾಳಿನ ಆಶಾಸೌಧವನ್ನು ಮನಸ್ಸಿನಲ್ಲಿ ಕಟ್ಟಿಕೊಂಡಿದ್ದಳು. ಆದರೆಲ್ಲವೂ ಬುಡ ಮೇಲಾಗಿ ಹೋದುದನ್ನು ಕಂಡಾಗ ಕಣ್ಣೀರೇ ಕೆಳಗಿಳಿಯಿತು.

"ಅಳಬೇಡ ರಾಧೆ. ಎಲ್ಲವೂ ದೈವಾಧೀನ. ಯಾವುದಕ್ಕೂ ಋಣಾನುಬಂಧ ಬೇಕು." ಎಂದು ಮೇಲೆದ್ದರು.

ಅಂದಿನಿಂದ ರಾಧೆಗೆ ಯೋಚನೆ ಪ್ರಾಪ್ತಿಯಾಯಿತು.

ತಂದೆ ತಾಯಿಗಳ ಹಿತವಚನ ಮಗಳ ಮುಂದೆ ದಿನವೂ ನಡೆಯುವುದು. ಆದರೆಲ್ಲವೂ ಕಿವುಡರಿಗೆಂಬಂತೆ ದಿನ ದಿನಕ್ಕೆ ರಾಧೆ ಕೃಶಿಸಿ ಹೋಗುತ್ತಿದ್ದಳು.

ಂ ಂ ಂ

ರಮಾಕಾಂತನಿಗಿನ್ನವಿಲ್ಲವಾದರೂ ಹೆತ್ತವರ ಬಲವಂತಕ್ಕೆ ಬಲಿಯಾಗಿ ಮದುವೆಗೊಪ್ಪಿದ್ದನು. ಮದುವೆಯ ತರಾತುರಿ ಮನೆಯಲ್ಲಿ ರಭಸದಿಂದ ನಡೆಯುತ್ತಿತ್ತು.

ಆದರೆ ರಮಾಕಾಂತನಿಗಾಗಾಗ ರಾಧೆಯ ನೆನಪಾಗುತಿತ್ತು. ಅವಳು ಕಾಲೇಜಿಗೆ ಬಾರದಂದಿನಿಂದ ಅವನಿಗಾವುದೋ ಆತ್ಮೀಯ ಸೊತ್ತೊಂದು ಬಿಸಾಡಿಹೋದಂತಾಗಿತ್ತು. ಆದರೆ ರಾಧೆ ಯಾರ ಮಗಳೆಂಬುದನ್ನು ಖಾನಾಗ ಕೇಳಿ ತಿಳಿಯುದತ್ಸ ವೈಶಿಷ್ಟತೆಗಾಗಿ ಮುಖ ನೊಂದುಕೊಂಡಿದ್ದನು.

ಬರಲಿರುವ ಹೆಣ್ಣು ತರಬಹುದಾದ ಹೇರಳ ಸಂಪತ್ತು ಹೆತ್ತವರನ್ನು ಆಕರ್ಷಿಸಿತ್ತು. ಅದರಲ್ಲಿಯೇ ಅವರು ಮಗನ ಅಭಿಪ್ರಾಯಕ್ಕೂ ಬೆಲೆ ಕೊಡದೆ ಮದುವೆಯ ಇಚ್ಛಿತಾರ್ಥವನ್ನು ಪೂರೈಸಿ ಬಿಟ್ಟಿದ್ದರು.

ರಮಾಕಾಂತನ ಮದುವೆಯ ದಿನ ದಿಬ್ಬಣದ ಜೊತೆಗೆ ಶ್ರೀಪತಿರಾಯರೂ ಹೊರಟಿದ್ದರು.

ಅಂದವರ ಮನೆಯಲ್ಲಿ ರಾಧೆ ಮಾತ್ರ ಅನ್ನ ಆಹಾರವಿಲ್ಲದೆ ಮುಸುಕೆಳೆದು ಮಲಗಿ ಬಿಟ್ಟಿದ್ದಳು.

ದಿಬ್ಬಣ ವಧುವಿನ ಗೃಹ ಸಮೀಪಿಸುತ್ತಿದ್ದಂತೆ ಯೋರೋ ಎದುರಾಗಿ ಓಡಿ ಬರುವುದು ಕಂಡಿತು.

ಬಂದ ಯುವಕನಾಗ ಹೊವುದೋ ಮಾತನ್ನು ಸುಗುಣಾನಂದರ ಕಿವಿಯಲ್ಲಿ ಪಿಸುದನಿಯಲ್ಲಿ ಹೇಳಿದನು.

ಆ ಮಾತನ್ನು ಕೇಳಿದ ಅವರ ಮುಖ ಬೆಳಿಚಿಕೊಂಡಿತು. ಅವರಾಗ ಅಲ್ಲಿಯೇ ಕುಳಿತುಬಿಟ್ಟರು. ಅರೆಕ್ಷಣದಲ್ಲಿ 'ವಿಷಯ' ಎಲ್ಲರ ಕಿವಿ ಮುಟ್ಟಿ ಹಾಹಾಕಾರವೆದ್ದಿತು.

ವಧು ಗೃಹದಲ್ಲಿ ನಡೆದ ಅಕಸ್ಮಿಕ ಮರಣವು ದಿಬ್ಬಣ ಹಿಂತಿರುಗಲು ಕಾರಣವಾಯಿತು.

ಆ ಸಂಬಂಧ ಮುಂದಿನ್ನು ಕಡಿದು ಹೋಯಿತೆಂದು ನುಡಿದರಾಗ ಹಿರಿಯರು. ಸುಗುಣಾನಂದರಿಗೆ ಸಿಗುವ ಸಂಪತ್ತು ಹೋಯಿತಲ್ಲವೆಂಬ ವ್ಯಥೆಯ ಜೊತೆಗೆ ಮಗನ ಮದುವೆ ನಿಂತು ಹೋದುದು ವಿಷಾದವೆನಿಸಿತು.

ಆದರೆ ರಮಾಕಾಂತನಿಗೇನೋ ಸಂತೋಷವಾಯಿತು. ಇಷ್ಟು ಮುಹೂರ್ತಕ್ಕೆ ಮದುವೆ ತಪ್ಪಿ ಹೋಗುವುದುಚಿತವಲ್ಲವೆಂದು ಪೆನೆದ ನೆಂಟರಿಷ್ಟರು ಮತ್ತೊಂದು ಹುಡುಗಿಯ ಪತ್ತೆತರದೊಡಿಗಾರಂಭಿಸಿದರು-

ಶ್ರೀಪತಿರಾಯರಾಗ ಇದೆಲ್ಲವೂ ವಿಧಿಯಾಟ ಇರಬಹುದೆಂದು ಮೆಲ್ಲ ರಾಧೆಯ ಪ್ರಶಸ್ತಿಪಡೆತ್ತಿದರು.

ಸುಗುಣಾನಂದರಾಗ ಆಫೀಸಿನ ಗೆಳೆತನದಿಂದ ಒಲ್ಲೆಯನ್ನಾಲಾರದೆ ಮಗನನ್ನು ಮುಂದೊಡ್ಡಿದರು.

ರಮಾಕಾಂತನಾಗ ತಾನು ಪ್ರೀತಿಸಿದ ರಾಧೆಯುವಳೆಂದು ತಿಳಿದಾಗ ಸಂತೋಷದಿಂದೊಪ್ಪಿ ಬಿಟ್ಟನು.

ಆಗ ನೆರದವರೆಲ್ಲಾ ಇದು ಋಣಾನುಬಂಧವೆಂದು ಭಾವಿಸಿದರು.

ಮುಹೂರ್ತಕ್ಕಿನ್ನು ಹೆಚ್ಚಿನ ಕಾಲಾವಕಾಶವಿಲ್ಲವೆಂದು ತಿಳಿದ ಶ್ರೀಪತಿರಾಯರು ಅದನ್ನು ಬೇಗ ಆಣಿಯಾಗಿ ಮಗಳನ್ನು ಹತ್ತಿರ ದೇವಾಲಯಕ್ಕೆ ಕರೆತರಲು ಜೊತೆಯಲ್ಲಿ ನಾಲ್ಕಾರು ಮಂದಿಯನ್ನು ಕರೆದೊಯ್ದರು.

ಹೆಚ್ಚಿನ ಆಡಂಬರವಿಲ್ಲದೆ ಊರ ಮುಂದಿನ ರಾಮಾಂಜನೇಯ ದೇವರ ಗುಡಿಯಲ್ಲಿಯೇ ಮದುವೆಯ ಶಾಸ್ತ್ರ ಪೂರೈಸುವುದೆಂದು ವರನ ಕಡೆಯವರು ಕಾದು ಕುಳಿತರು.

ರಾಯರು ಮನೆಯ ಮೆಟ್ಟಲೇರುತ್ತಿದ್ದಂತೆ "ರಾಧೆ...ರಾಧೆ" ಎಂದು ಮಗಳನ್ನು ಕರೆಯುತ್ತಾ ನಡೆದರು.

"ನೀವು ಮನೆಯಿಂದ ಹೊರಡುವಾಗ ಮುಸುಕೆಳೆದು ಮಲಗಿದವಳು ಮೇಲೇಳಲಿಲ್ಲವೆಂದು" ಹೇಳಿದರು ವಿಶಾಲಾಕ್ಷಮ್ಮ. ಆಗವರು ಮಗಳ ಮುಸುಕೆಳೆದು ಬೈದಡವಿದಾಗ ರಾಧೆ ಕಟ್ಟಿಗೆಯ ತುಂಡಿನಂತಾಗಿದ್ದಳು.

ಆಗವರಿಬ್ಬರು ಸತ್ತ ಶವದ ಮೇಲುರುಳಿ ಮಗಳ ಮದುವೆ ಕಾಣುವ ಋಣ ತಮಗಿಲ್ಲವಾಯ್ತೆಂದು ರೋಧಿಸ ತೊಡಗಿದರು.

Ask for

AZAD

nitbit

BISCUITS

Azad Industries, Mangalore-1

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪ್ರಾಣೀಯುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

NAVAYUGA 8—2—1968
Registered with the Registrar
of News Papers for India
under No. R. N. 3546/57

REGD. No. B. G. 176
LICENCE No. 31
Licensed to Post without Prepayment

ಪುಡಿಗತೆಗಳು

ಶ್ರೀ ಇನ್ನೊಬ್ಬರ ಸಲಹೆ

ಆತ ನೋಡಲಿಕ್ಕೆ ಚೆಂದಾಗಿದ್ದಾನೆ. ಒಳ್ಳೇ ಪರ್ಸನಾಲಿಟೀ. ಮಾತು ತುಂಬ ಮಧುರ. ಇನ್ನೊಬ್ಬರಿಗೆ ಆಲೋಚನೆ ಹೇಳುವಾಗ ಎಷ್ಟು ಆಳವಪ್ಪಾ ಇವನ ಬುದ್ಧಿ ಅನಿಸುತ್ತೆ.

ಈತನ ಹತ್ತಿರ ಸ್ವಲ್ಪ ಹಣವಿತ್ತು. ಆತನಿಗೆ ಅದು ಗೊತ್ತಾಯಿತು. ಈತನೇ ಆತನ್ನ ನಂಬಿ ಹೇಳಿದ್ದೂ ಅನ್ನಿ. ಆತ ಈತನ ಹಣ ಅಭಿವೃದ್ಧಿಗೂಲಿಕ್ಕೆ ಒಂದು ಮಾರ್ಗ ಹೇಳಿದ. ಒಂದು ಉದ್ಯಮಕ್ಕೆ ಇಳಿಸಿದ. ಈತ ಆತನನ್ನೆ ನಂಬಿದ್ದರಿಂದ ಆತ ಹಣದಲ್ಲಿಯೂ ಕೈಯಾಡಿಸುತ್ತ ಸಹಾಯ ಮಾಡುವವನಾಗಿತಾನೂ ತುಂಬ ಮೆರೆದಾಡಿದ.

ಹೋದ ಹೋದ ಹಾಗೆ ಆ ಉದ್ಯಮದಿಂದ ಲಾಭ ಬರುವುದು ಕಾಣಲಿಲ್ಲ. ಆತ ಇನ್ನಿಷ್ಟು ಹಣ ಹಾಕಿದರೆ ನಾಳ್ಕರಷ್ಟು ಲಾಭ ಖಂಡಿತ ಅಂದ. ಈತನ ಹತ್ತಿರ ಹಣ ತೀರಿತ್ತು. ಸೂರಾ ಮುಳುಗುವ ಸ್ಥಿತಿ. "ನಿಮ್ಮ ಮಾತು ಕೇಳಿ ಹೀಗಾಯಿತು" ಎಂದ ಈತ.

"ಇನ್ನೂ ನನ್ನ ಮಾತು ಕೇಳಿದರೇನೇ ಲಾಭ. ಆರಂಭದಲ್ಲೇ ಲಾಭ ಬರುತ್ತೇನು? ಅಂಥಾ ಲಾಭ ಸಿಕ್ಕಿದರೂ ಸ್ಥಿರವಲ್ಲಿ. ನುರಳಿ ಯಿಷ್ಟವ ಮಾಡು. ಇನ್ನಿಷ್ಟು ಹಣ ತಾ. ನಾನು ಲಾಭತೋರಿಸಿ ಕೊಡುತ್ತೇನೆ. ಧನ ಪ್ರಸಂಚದಲ್ಲಿ ಈ ಬಗೆಯ ಸೋಲು ಗಲುವು ಸಹಜವೇ" ಎಂದ ಆತ.

"ಈ ವ್ಯಸನದಿಂದ ಆತ್ಮಹತ್ಯೆ ಮಾಡಿಕೊಂಡರೆ, ಅದೂ ಸಹಜವೇ" ಅಂದಾಗ ಆತ ಎಂದು ಈತನಿಗೆ ತೋರಿತು. ಇನ್ನೂ ತೋರಿ ಏನು ಪ್ರಯೋಜನ?

ಇನ್ನೊಬ್ಬರ ಸಲಹೆಯನ್ನು ಕೇಳುವುದು ತಪ್ಪಲ್ಲ; ಅವರು ಹೇಳುವುದೂ ತಪ್ಪಲ್ಲ. ತಾನೂ ಯೋಚಿಸಿಕೊಳ್ಳಬೇಕು. ತನ್ನ ಸ್ವಂತ ನಿಲುಮೆ ಹೇಗೆ ಎಂಬುದನ್ನೂ ನೋಡಿಕೊಳ್ಳಬೇಕು. ಇನ್ನೊಬ್ಬರ ಮಾತುಗಳ ಎಂಟನೇ ಒಂದು ಭಾಗದಷ್ಟು ಮಾತ್ರ ನಂಬಿದರೆ ಸಾಕು. ಸೂರಾ ಇನ್ನೊಬ್ಬರ ಸಲಹೆಯನ್ನೇ ಆಧಾರವಾಗಿಟ್ಟುಕೊಂಡು ಬಾಳುವವನ ಜೀವನ ಇಳಿಬಿದ್ದ ಕಗ್ಗತ್ತಲೆಯ ದಾರಿ.

—"ನವಗಿರಿನಂದಿ"



ಉ ಸಿ ರು

ತೆರೆ ಮೂಲೆಗಳ ಹಬ್ಬಿ,
ಉಸಿರಿಬಿಸಲೆಯನು ದಾಟಿ,
ಬೀಸುತಿದೆ ಗಾಳಿ ಬಸವಳಿದನೆಲದ ಎಡೆಗೆ.
ಬೆಟ್ಟಗಳ ತೊಡೆಯನ್ನು ಸವರಿ,
ಬಂಡೆಗಳ ತೆಕ್ಕೆಯಲಿ ತೂರಿ,
ಗಿರಿಯ ನೆತ್ತಿಯ ಮೆಟ್ಟಿ,
ಮುತ್ತಿಕ್ಕುತಿಗೆ ಮುಗಿಲ;
ಕಾಣುತಿದೆ—ಇಲ್ಲ—ಬರಿ ಮೂಯ!

ಎಲ್ಲಡಗಿತು ಫೀಲಗಜ್ಜಿನ ದೀಪ್ತಿ,
ಯುಗಯುಗದ ಬೆಳಕು?
ಆರಿ ಹೋಗಿದೆ ತಂಪು.
ಬರಿ ಮಬ್ಬನಲಿ ಒಣಗಾಳಿ
ಕೇಳಿ ಹಾಕುತ್ತಿದೆ, ಮೂಲೆಯಿಂದ
ರಕ್ತವನು ಹೀರಿ!

ಹುಳುರೆಲ್ಲ ಸತ್ತು ಕರಗಿ,
ಧೂಳಿನಲಿ ಸೇರಿ ನಾರುತಿದೆ;
ಉಸಿರಡಗಿದ ತಾಯಿಯೆದೆ ಮೇಲೆ
ಆಡುತಿದೆ ಹಾಲು ಹಸುಳೆ!
ಮಬ್ಬುಗತ್ತಲೆಯಲ್ಲಿ
ಕಾಣುವುದೆ ಸಾವಿನಲಿ ಹುಟ್ಟು?
ಕೇಳುವುದೆ ಉಸಿರಿನೊಳಗುಟ್ಟು?
ಊಡುವವರಿಲ್ಲ—
ಅದರು ಏಕೆ ನಡುತಿದೆ ಹಸುಳೆ!

ಒಣ ಬೆರಳುಗಳ ನರ್ತನವೆ
ಬಂಡೆಗಳ ಮೇಲೆ;
ನಾದವಿಂಗಿದ ಬೆಸುಸು ಜಡ ತಂತಿಯಲಿ!
ಹಸಿರು ಹೊದಿಕೆಯವೆಸೆದು,
ಬೀಸುತಿದೆ ಗಾಳಿ,
ಎದೆಯನು ಸೀಳಿ;
ಉಸಿರು ನಿಂತಿದೆ! ಹೊ! ಬೀಸುತಿದೆ ಗಾಳಿ

—ಕೆ. ಟಿ. ಗಟ್ಟಿ
ಎಂ. ಎ. ಬಿ. ಎಡ್.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಲಲ್ ವೆಂಕಟ್ರಾವ್, ಎಲ್. ಐ.ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಸ್., ಇವರು ಮುನ್ನುಡಿಯಲ್ಲಿ ತೊಡಗಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬದಲಾಗುತ್ತಿರುವ ಭಾರತದ ಚಿತ್ರ

ಆರ್ಥಿಕ ರಂಗ

* ಭಾರತ ಸ್ವತಂತ್ರವಾದ ಬಳಿಕ ರಾಷ್ಟ್ರದ ಆದಾಯ ನಿರಂತರ ಹೆಚ್ಚುತ್ತಾ ಬಂದಿದೆ.

* 1950ರಿಂದ ಈಚೆಗೆ ಭಾರತೀಯರ ಸರಾಸರಿ ವಯೋಮಾನ 32 ರಿಂದ 50ಕ್ಕೆ ಏರಿದೆ.

* ಬೇಸಾಯ ಕ್ಷೇತ್ರದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಶೇ. 73ರಷ್ಟು ಹೆಚ್ಚಿದೆ (1967—68ರ ಅಂದಾಜಿನ ಪ್ರಕಾರ)

* ಉಕ್ಕಿನ ಉತ್ಪಾದನೆ 15 ಲಕ್ಷ ಟನ್‌ಗಳಿಂದ 70ಲಕ್ಷ ಟನ್‌ಗಳಷ್ಟಾಗಿದೆ.

* ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ 23 ಲಕ್ಷ ಕಿಲೋವ್ಯಾಟ್‌ಗಳಿಂದ 12-57 ದಶಲಕ್ಷ ಕಿಲೋವ್ಯಾಟ್‌ಗಳಷ್ಟಾಗಿದೆ ಈ ಅಭಿವೃದ್ಧಿಯಲ್ಲದೆ ಶಾಂತಿಗಾಗಿ ಅಣುಶಕ್ತಿ ಕಾರ್ಯಕ್ರಮವಿದೆ.

* ಮೊದಲ ಅಣುಶಕ್ತಿ ಕೇಂದ್ರ 1968ರ ಅಕ್ಟೋಬರ್ ತಿಂಗಳಲ್ಲಿ ಕಾರ್ಯಾರಂಭಮಾಡಲಿದೆ.

* ಕೈಗಾರಿಕಾ ಉತ್ಪಾದನೆ ಶೇ 162 ರಷ್ಟು ಹೆಚ್ಚಿದೆ.

* ಹತ್ತಿ ಜವಳಿಯ ಉತ್ಪಾದನೆಯಲ್ಲಿ ಶೇ. 80ರಷ್ಟು ಸಕ್ಕರೆಯ ಉತ್ಪಾದನೆಯಲ್ಲಿ ಶೇ 200ರಷ್ಟು ಹೆಚ್ಚಳವಾಗಿದೆ.

* ರೇಡಿಯೋ ರಿಸೀವರ್, ಸೈಕಲ್‌ಗಳು, ಹೊಲಿಗೆಯಂತ್ರಗಳು ಇವೇ ಮೊದಲಾದವುಗಳ ಉತ್ಪಾದನೆ ಶೇ 10ರಿಂದ 15ರಷ್ಟು ಹೆಚ್ಚಿದೆ.

* ಎಲ್ಲಾ ನಮೂನೆಯ ಯಂತ್ರಗಳ ತಯಾರಿಕೆ 30ಕೋಟಿ ರೂ.ಗಳಿಂದ 500 ಕೋಟಿ ರೂ.ಗಳಷ್ಟಾಗಿದೆ.

* ಶುದ್ಧ ಪೆಟ್ರೋಲಿಯಂ ವಸ್ತುಗಳ ಉತ್ಪಾದನೆ ಈಗ 1 ಕೋಟಿ 50 ಲಕ್ಷ ಟನ್‌ಗಳಷ್ಟಾಗಿದೆ.

* ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಲಕ್ಷ ರೂ. ಹೆಚ್ಚು ಕೈಗಾರಿಕಾ ಘಟಕಗಳು ಸ್ಥಾಪನೆಗೊಂಡಿವೆ.

* ಗ್ರಾಹಕರ ವಸ್ತುಗಳ ಕೈಗಾರಿಕೆಗಳು, ಹಾಗೂ ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ಬಹುತೇಕ ವಸ್ತುಗಳು, ಈಗ ಭಾರತದಲ್ಲೇ ತಯಾರಾಗುತ್ತಿವೆ.

ನಗೆ ಬಿಂದು

ಒಂದು ವ್ಯತ್ಯಾಸ

ಒಬ್ಬ—"ನನ್ನ ಮಗ ಕಾಲೇಜಿನಲ್ಲಿ ಕಲಿಯುತ್ತಿದ್ದಾನೆ. ಆತನು ಬರೆದ ಪತ್ರ ಓದಬೇಕಾದರೆ ಮೊದಲಾಗಿ ಡಿಕ್ಷನರಿ ಹತ್ತಿರ ಇರಿಸಿಕೊಳ್ಳಬೇಕು."

ಬೇರೊಬ್ಬ—"ನನ್ನ ಮಗನೂ ಕಾಲೇಜಿನಲ್ಲಿ—ಅದೇ ಕಾಲೇಜಿನಲ್ಲಿ ಕಲಿಯುತ್ತಾನೆ. ಆತನ ಪತ್ರ ಓದಿಯುವ ಮುನ್ನ ಬೇಂಕಿನಲ್ಲಿ ನನ್ನ ಬಾಬ್ತು ಹಣ ನಿಷ್ಠೆದೆಯೆಂದು ಪರಿಶೋಧಿಸಬೇಕು."

o o o

ಸರಿಯಾದ ಉತ್ತರ

"ಹೃದಯಕ್ಕೆ ಅತೀ ಸಮೀಪವಾಗಿರುವುದೇನು?..."

"ಅಂಗಿಯ ಜೇಬು, ಸಾರ್!...."

o o o

ನಿಯಮಾನುಸರಣೆ

ರೈಲುಗಾಡಿಯಲ್ಲಿ ಪ್ರಯಾಣ ಬೆಳೆಸಿದ ಪವದಂಪತಿಯರ ಪೈಕಿ ಸುರುಪನು ಕೆಳಕ್ಕುರುಳಿ ಬಿದ್ದನು.

ಗಾಡಿ ಓಡುತ್ತಿದೆ.

ಸಹ ಪ್ರಯಾಣಿಕ—"ಅಪಾಯ ಸೂಚಕ ಸರಪಣಿ ಎಳೆಯುತ್ತೇನೆ..."

ಪತ್ನಿ—"ಬೇಡ. ನಿಯಮವನ್ನು ಉಲ್ಲಂಘಿಸಬಾರದು. ರೂ. 50ಕ್ಕೂ ಮಿಕ್ಕಿ ಬೆಲೆ ಬಾಳುವ ಸಾಧನ ಬೀಳದೆ ಗಾಡಿ ನಿಲ್ಲಿಸಿದರೆ ಸರಪಣಿಯನ್ನು ದುರುಪಯೋಗ ಮಾಡಿಸಿದ್ದಕ್ಕೆ ದಂಡ ತೆರಬೇಕಾದೀತು.."

o o o

—ಎಚ್. ಎಂ. ವಿಜಯನಾರಾಯಣ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



15-2-1968

ಬೆಲೆ ೨೦ ಪೈಸೆ

ಗುಪ್ತಲಿಪಿಯಾದ ಅಗೋಚರ ಬ್ರಹ್ಮ

ಅದ್ಭುತ ಕಾರ್ಯಕರ್ತ ಡಿಯನ್ಸೈ

ಲೇಖಕರು: ಶ್ರೀ ರಾಜಗೋಪಾಲ ಪಿ. ಕೆ.

ಪ್ರಕೃತಿಯಲ್ಲಿ ಎಲ್ಲಿ ನೋಡಿದರೂ ಮನುಷ್ಯ ಮನುಷ್ಯನಿಗೇ ಜನ್ಮ ಕೊಡುತ್ತಾನೆ; ನಾಯಿ ಯಾವಾಗಲೂ ನಾಯಿ ಮರಿಯನ್ನೇ ಇಡುತ್ತದೆ. ಸಿಂಹದ ಮರಿಗೆ ಯಾವಾಗಲೂ ತನ್ನ ತಂದೆಯ ಗಂಭೀರ ಸಾಹಸ ಬಂದೇ ಬರುತ್ತದೆ. ಹಕ್ಕಿಗಳ ಮರಿಗಳು ತಾವಾಗಿಯೇ ರೆಕ್ಕೆ ಬಲಿದು ಹಾರಾಡುತ್ತವೆ. ನೀರಿನಲ್ಲಿ ವಾಸಿಸುವ ಮೀನಿನ ಮರಿಗಳು ಯಾರೂ ಕಲಿಸದೆ ಈಜುತ್ತವೆ. ಮಾತ್ರವಲ್ಲ ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಕೆಲವರು ಹುಚ್ಚರು, ಕೆಲವರು ಬುದ್ಧಿವಂತರು; ಕೆಲವರು ಆರೋಗ್ಯವಂತರಾದರೆ ಇನ್ನು ಕೆಲವರು ರೋಗದಿಂದ ಬಳಲುವವರು; ಜನ್ಮತಃ ಪೀಡಿತರು. ಕೆಲವರು ಶುಶ್ರೂಷಕರಾದರೆ ಇನ್ನು ಕೆಲವರು ದಡ್ಡರು; ಕಂದು ತೊಗಲಿನ ತಂದೆ ತಾಯಿಗಳಿಗೆ ಅದೇ ಬಣ್ಣದ ಮಗು; ಬಿಳಿ ಬಣ್ಣದ ತಂದೆ ತಾಯಿಗಳಿಗೆ ಬಿಳಿ ಬಣ್ಣದ ಮಗು; ಒಂದು ವಂಶದಲ್ಲಿ ಒಬ್ಬನಿಗೆ ಒಂದು ಭಯಂಕರ ರೋಗವಿದ್ದರೆ ಮೊಮ್ಮಕ್ಕಳಿಗೆ ಪುನಃ ಅದೇ ಭಯಂಕರ ರೋಗ; ತಂದೆಯದೇ ಗುಣಸ್ವಭಾವ ಮಗನಿಗೆ; ಇಂತಹ ಸಾಮ್ಯಗಳಿದ್ದರೂ ಅನೇಕ ತರದ ವ್ಯತ್ಯಾಸಗಳು ತಂದೆ ಮಕ್ಕಳಲ್ಲಿ; ಭೂಲೋಕದಲ್ಲಿ ಯಾವ ಎರಡು ವ್ಯಕ್ತಿಗಳೂ ಒಬ್ಬನನ್ನೊಬ್ಬರು ಹೋಲಲಾರರು; "ಈ ಎಲ್ಲಾ ಮೇಲಿನ ಸಾಮ್ಯ ಹಾಗೂ ವ್ಯತ್ಯಾಸಗಳಿಗೆ ಕಾರಣಗಳೇನು? ಇವುಗಳೆಲ್ಲವನ್ನೂ ನಡೆಸುತ್ತಿರುವ ಆದಿ ಮೂಲ ಶಕ್ತಿ ಯಾವುದು? ಅಗೋಚರನಾದ ಆ ಪರಮಾತ್ಮ ಈ ಎಲ್ಲ ಕಾರ್ಯಗಳನ್ನು ನಡೆಸುತ್ತಿರುವ ಮೂಲಪುರುಷನೇ"? ಇದು ಶತಮಾನಗಳಿಂದ ಮಾನವನ ವಿದುಳನ್ನು ಕೆರೆಯುತ್ತಿದ್ದ, ಈಗಲೂ ಕೆರೆಯುತ್ತಿರುವ ಮಾನವನ ದೊಡ್ಡ ಸಮಸ್ಯೆಗಳಲ್ಲೊಂದು! ಅರಿಸ್ಟಾಟಲನಿಂದ ಹಿಡಿದು ಇಂದಿನ ವರೆಗೆ ಜೀವ ವಿಜ್ಞಾನಗಳನ್ನು ತಲೆಕೆರೆಸುವಂತೆ ಮಾಡಿದ ಬೃಹದ್ ಸಮಸ್ಯೆ ಇದು. ಆ ಮೂಲ ಪುರುಷನೇ ಡಿಯನ್ಸೈ! ಗುಪ್ತ ಲಿಪಿಯಾದ ಅಗೋಚರ ಬ್ರಹ್ಮ!

ಬೆಕ್ಟೀರಿಯದಿಂದ ಹಿಡಿದು ಅಖಂಡ ಪ್ರಚಂಡ ಪ್ರಾಣಿ ಹಾಗೂ ಸಸ್ಯ ವರ್ಗಗಳೆಲ್ಲವುಗಳಲ್ಲೂ ಸೂಕ್ಷ್ಮ ಗುಪ್ತಗಾಮಿನಿಯಾಗಿ ತನ್ನ ಅದ್ಭುತ ಕೆಲಸಗಳನ್ನು ನಡೆಸುತ್ತಿರುವ ಈ ಶಕ್ತಿ ಗಾಳಿಯ ವರೆಗೆ ಮಾನವನಿಗೆ ಅಗೋಚರ! ನಮ್ಮ ದೇಹದೊಳಗೆ ನಮ್ಮ ಟಿಶ್ಯೂವಿನೊಳಗೆ, ಅದರ ಸೆಲ್‌ಗಳೊಳಗೆ, ಅದರ ನ್ಯೂಕ್ಲಿಯಸ್‌ಗಳೊಳಗೆ ಅದರ ಕ್ರೋಮೊಸೋಮ್‌ಗಳೊಳಗೆ ಅಂತರಾಳದ ಬಲದಲ್ಲಿ ಕುಳಿತು ಇದು ಮಾಡುತ್ತಿರುವ ಕಾರ್ಯ ನಿಜಕ್ಕೂ ಆಶ್ಚರ್ಯಕರ! ಆದರೂ ಸತ್ಯ. ಪ್ರೊಟೊಸೊವಾದಿಂದ ಹಿಡಿದು ಮಂಗ ಮಾನವನ ವರೆಗೆ ಬೆಕ್ಟೀರಿಯ, ಅಲ್ಗೇಯಂತಹ ಜಲೀಯ ಸಸ್ಯಗಳಿಂದ ಹಿಡಿದು ಲ್ಯಾಂಡ್ ಪ್ಲಾಂಟ್‌ಗಳ ವರೆಗೆ ಎಲ್ಲಾ ಜೀವ ವಸ್ತುಗಳಲ್ಲಿ ಅವಿಶ್ರಾಂತವಾಗಿ ನಿರಂತರವಾಗಿ ಅವಿರತವಾಗಿ ನಡೆಯುತ್ತಿದೆ ಇದು ತನ್ನ ಅಂತ್ಯವಿಲ್ಲದ ಕಾರ್ಯವನ್ನು. ಅದುದರಿಂದ ವ್ಯಕ್ತಿ, ವ್ಯಕ್ತಿಗಳೊಳಗೆ ಪ್ರಭೇದ, ವ್ಯಕ್ತಿ ವ್ಯಕ್ತಿ ಸಾಮ್ಯ, ವ್ಯಕ್ತಿಯ ಗುಣ ನಡತೆ ಹಾಗೂ ಜೀವ ವಸ್ತುಗಳ ವಿಧಿಯನ್ನು ನಿರ್ಧರಿಸುವ ಶಕ್ತಿ ಈ ಡಿಯನ್ಸೈ. ಮಾನವರಾದ ನಾವು ಯಾರೂ ನಮ್ಮ ದಡ್ಡತನಕ್ಕೆ, ನಮ್ಮ ಜನ್ಮತಃ ರೋಗಗಳಿಗೆ ಮೊದಲಾದುವುಗಳಿಗೆ ದುಃಖಿಸಿ ಪ್ರಯೋಜನವಿಲ್ಲ. ಇವೆಲ್ಲವೂ ನಾವು ನಮ್ಮ ತಾಯಿಯ ಹೊಟ್ಟೆಯಲ್ಲಿ ಒಂದು 'ಸೆಲ್' ಆಗಿ ಜೀವನವನ್ನು ಪ್ರಾರಂಭಿಸಿದ ದಿನದಿಂದಲೇ ನಿರ್ಣಯವಾಗಿ ಹೋಗಿದೆ. ನಮ್ಮ ಮುಂದಿನ ಎಲ್ಲಾ ರೀತಿ ನೀತಿ, ನಮ್ಮ ಎಲ್ಲಾ ಗುಣನಡತೆ, ಬಣ್ಣ ಬೆಡಗು ಎಲ್ಲವೂ ಆ ಒಂದು ಸೆಲ್‌ನಲ್ಲೇ ಸಂಕ್ಷಿಪ್ತಗೊಳಿಸಲ್ಪಟ್ಟ ಸ್ಥಿತಿಸುಲ್ಲಿ ಅಡಕವಾಗಿ ಹೋಗಿದೆ.

ಜೀವಶಾಸ್ತ್ರದ ಗುಟ್ಟನ್ನು ಒಡೆಯಲಿಕ್ಕಾಗಿ ಮಾನವನು ಬಹಳ ಹಿಂದಿನಿಂದಲೇ ಪ್ರಯತ್ನಿಸುತ್ತಿದ್ದ; ವಿಜ್ಞಾನಿ ಸಮಸ್ಯೆಯನ್ನು ಬಿಡಿಸಿದಷ್ಟು ಸಮಸ್ಯೆ ಮತ್ತಷ್ಟೂ ಜಟಿಲವಾಗತೊಡಗಿತು. ಇನ್ನು ಕೂಡಾ 'ಪ್ರೊಟೊಪ್ಲಾಸಂ'ನ ಸರಿಯಾದ ರಾಸಾಯನಿಕ ಹಾಗೂ ಭೌತಿಕ ಗುಣಗಳನ್ನೂ ತಿಳಿಯಲು ವಿಜ್ಞಾನಿ ಅಸಾಧ್ಯನಾಗಿದ್ದಾನೆ. ಒಮ್ಮೆ ಪ್ರೊಟೊಪ್ಲಾಸ್ಮ್‌ನ ಸರಿಯಾದ ಗುಣಗಳನ್ನು ಅವನು ತಿಳಿದನೆಂದಾದರೆ ಕೃತಕ ಮಾನವನ ಸೃಷ್ಟಿಯಲ್ಲಿ ಅವನು ಜಯಶೀಲನಾದಂತೆಯೇ ಸರಿ.

ಆಸ್ಟ್ರಿಯಾದ ಕ್ರೈಸ್ತ ಸನ್ಯಾಸಿಯಾದ ಮೆಂಡಲನು ಬಟಾಣಿ ಗಿಡಗಳ ಮೇಲೆ ಪ್ರಯೋಗಿಸಲ್ಪಟ್ಟ ಪ್ರಯೋಗ 'ಅನುವಂಶಿಕತೆ'ಯ ಅಧ್ಯಯನಕ್ಕೆ ನಾಂದಿಯಾಯಿತು. ಸ್ವಿಸ್ ಜೀವಶಾಸ್ತ್ರಜ್ಞನಾದ ವೀಶ್ಶರ್ ವಿಜ್ಞಾನಿ ಗಂಡಂರಲ್ಲಿ ಸೆಲ್ ಮತ್ತು ಮೀನುಗಳ ಸ್ಪರ್ಮ್‌ಗಳಲ್ಲಿ ಪೊತ್ತೆಮೊದಲನೆಯದಾಗಿ ಡಿಯನ್ಸೈಯನ್ನು ಕಂಡುಹಿಡಿದನು. ಶತಶತಮಾನಗಳಿಂದ ಗುಟ್ಟಾಗಿ ಉಳಿದ ಅನುವಂಶಿಕತೆಯ ಗುಟ್ಟು ರಟ್ಟಾಯಿತು!! ಇದೇ ಡಿಯನ್ಸೈ ಇತರ ಎಲ್ಲಾ ಜೀವ ವಸ್ತುಗಳ ಕ್ರೋಮೋಸೋಮುಗಳಲ್ಲಿ ಕಂಡು ಬಂತು. ಕ್ರಮಾನುಗತವಾಗಿ ಪಾರಂಪರ್ಯವಾಗಿ ಬರುವ ಗುಣಗಳ ಸಾಗಾಟಕ್ಕೆ ಡಿಯನ್ಸೈಯೇ ಕಾರಣ ಎಂಬುದು ಸಿದ್ಧವಾಯಿತು. ಪವಾಡಪುರುಷನಾದ ಡಿಯನ್ಸೈ ಸಂತಾನ ಅಭಿವೃದ್ಧಿಸಮಯದಲ್ಲಿ ಸಮಸೂತ್ರವಾಗಿ ಕ್ರೋಮೋಸೋಮುಗಳ ಮೂಲಕ ತಂದೆ-ತಾಯಿಗಳಿಂದ ಮಕ್ಕಳಿಗೆ ಬರುತ್ತದೆ. ಈ ಕ್ರೋಮೋಸೋಮುಗಳ ಜೊತೆಗಾರಿಕೆ ಹಾಗೂ ವಿಚ್ಛೇದನೆ—ಈ ಆಟ ಪ್ರಕೃತಿಯಲ್ಲಿ ಯಾವಾಗಲೂ ನಡೆಯುತ್ತಿವೆ. ಆದುದರಿಂದ ನಮ್ಮೆಲ್ಲರ ದೇಹದಲ್ಲಿ ನಮ್ಮ ಅಜ್ಜ, ತಾತ, ಮುತ್ತಜ್ಜಂದಿರು ಈಗಲೂ ಜೀವಿಸುತ್ತಿದ್ದಾರೆ. ಅವರ ದೇಹದಲ್ಲಿದ್ದ ಅದೇ ಕ್ರೋಮೋಸೋಮು, ಅದೇ ಡಿಯನ್ಸೈ ಈಗಲೂ ನಮ್ಮ ದೇಹದಲ್ಲಿ ಕಾರ್ಯವೆಸಗುತ್ತಿದೆ. ಅವರು ಈಗ ನಮ್ಮ ಕಣ್ಣ ಮುಂದೆ ಇಲ್ಲದಿದ್ದರೂ ಅವರ ಡಿಯನ್ಸೈ ಮೊಲೆಕಲ್ಸ್ ಈಗಲೂ ಸುಸೂತ್ರವಾಗಿ ಚುರುಕಾಗಿ ಜೀವಿಸುತ್ತಿದ್ದು ನಮ್ಮ ಎಲ್ಲಾ ಜೀವಂತ ಜೀವಕೋಶಗಳಲ್ಲಿ ಕಾರ್ಯವೆಸಗುತ್ತಿವೆ. ಈ ಕ್ರೋಮೋಸೋಮುದಳ ಪರಸ್ಪರ ಜೋಡುವಿಕೆ, ವಿಚ್ಛೇದನ ಸಂತಾನಾಭಿವೃದ್ಧಿ ಸಮಯದಲ್ಲಿ ನಡೆಯುತ್ತವೆ. ಎಲ್ಲಿಯಾದರೂ ಅಜ್ಜ ಮುತ್ತಜ್ಜಂದಿರಂತಿರುವ ಅದೇ ಕ್ರೋಮೋಸೋಮುಗಳು ಒಬ್ಬ ವ್ಯಕ್ತಿಗೆ ಬಂತು ಎಂದಾದರೆ ಅವನು ತನ್ನ ಅಜ್ಜಮುತ್ತಜ್ಜರನ್ನೇ ಹೋಲುತ್ತಾನೆ. ಅದೇ ನಡೆ, ಅದೇ ನುಡಿ, ಅದೇ ನಡಿಗೆ, ಅದೇ ಬಣ್ಣ, ಅದೇ ಹಾವಭಾವ ಅದೇ ಸ್ವರ, ಅದೇ ಗುಣಸ್ವರ ಎಲ್ಲವೂ ಇವನಲ್ಲಿ ಕಂಡು ಬರುತ್ತದೆ. ಭೂಮಿಯಲ್ಲಿ ಪ್ರಪ್ರಥಮವಾಗಿ ಜೀವಕ್ಕೆ ಬಂದ ಪ್ರೊಟೊಸೋವಾಗಳ ದೇಹದಲ್ಲಿದ್ದ ಅದೇ ಕ್ರೊಮೋಸೋಮುಗಳು, ಅದೇ ಡಿಯನ್ಸೈ ವಿಕಾಸವಾಗುತ್ತಿರುವ ಹಂತಾಂಗದ ತಲೆತಲಾಂತರಗಳ ಮೂಲಕ ಹಾದು ಬಂದು ಇಂದು ಜೀವಿಸುತ್ತಿರುವ ಎಲ್ಲಾ ಪ್ರಾಣಿ ಸಸ್ಯಗಳ ದೇಹದಲ್ಲಿ ರಕ್ಷಿಸಲ್ಪಟ್ಟಿವೆ, ಅದೇ ನಮ್ಮೆಲ್ಲರ ಸೆಲ್‌ಗಳಲ್ಲಿ ಕಾರ್ಯವೆಸಗುತ್ತಿದೆ ಎಂದರೆ ಅಚ್ಚರಿಯೊಡನೆ ನಿಜದ ಸಂಗತಿ.

ಡಾ| ಮೊರ್ಗನ್ ಎಂಬವನು ಡ್ರೊಸೊಫಿಲಾ ಎಂಬ ಕೀಟದ ಮೇಲೆ ಮಾಡಿದ ಸಾವಿರಾರು ಪ್ರಯೋಗಗಳು ಅನುವಂಶಿಕತೆಯ ಗುಟ್ಟನ್ನು ಬಯಲುಗಿಳಿಸಿದವು. ಮಿಲಿಯಗಟ್ಟಲೆ ಇಂತಹ ಕೀಟಗಳು "ಅನುವಂಶಿಕತೆ"ಯ ಅಧ್ಯಯನಕ್ಕಾಗಿ ತಮ್ಮನ್ನು ಧಾರೆ ಎರೆದವು. ಹತ್ತು ವರ್ಷಗಳ ನಿರಂತರ ಶ್ರಮದ ನಂತರ ಮೊರ್ಗನು ಅನುವಂಶಿಕತೆಯ ಕುರಿತಾಗಿ ಅನೇಕ ಸಿದ್ಧಾಂತಗಳನ್ನು ಪ್ರಚುರಪಡಿಸಿದನು. ಕೆಲವು ಗುಣಗಳು ಲೈಂಗಿಕ ಕ್ರೊಮೋಸೋಮುಗಳಿದ್ದರೆ ಇನ್ನು ಕೆಲವು ಗುಣಗಳು ಇತರ ಕ್ರೋಮೋಸೋಮುಗಳಲ್ಲಿರುತ್ತದೆ. ಉದಾಹರಣೆಗೆ ಹೇಮೋಫೈಲಿ ಎಂಬ ರಕ್ತಸ್ರಾವದ ಒಂದು ರೋಗವಿದೆ. ಇದು ಯಾವಾಗಲೂ ಗಂಡು ಸರಲ್ಲೇ ಕಂಡು ಬರುತ್ತದೆ. ಆದರೆ ಆ ರೋಗವಿರುವ ವ್ಯಕ್ತಿಯ ಯಾವ ಮಕ್ಕಳಿಗೂ ಆ ರೋಗ ಬರುವುದಿಲ್ಲ. ಆದರೆ ಆ ವ್ಯಕ್ತಿಯ ಮಗಳ ಗಂಡು ಮಕ್ಕಳಿಗೆ ಮಾತ್ರ ಆ ರೋಗ ಬರಲು ಸಾಧ್ಯ. ಇದಕ್ಕೆ ಕಾರಣವೇನೆಂದರೆ ಹೇಮೋಫೈಲಿ ರೋಗ ಒಂದು ಲೈಂಗಿಕ ಸಂಬಂಧ ಗುಣ ಆರೋಗಕ್ಕೆ ಇರುವ 'ಜೀನ್'ಗಳು ತಂದೆಯಿಂದ ಮಗಳಿಗೆ ಹೋಗುತ್ತವೆ. ಆದರೆ ಅವು ಮಗಳಲ್ಲಿ ಪ್ರಭಾವವನ್ನು ತೋರಿಸಲು ಸಮರ್ಥವಾಗುತ್ತವೆ. ಮುಂದಿನ ಆ 'ಜೀನ್'ಮನಃ ಅವಳ ಗಂಡು ಮಕ್ಕಳಿಗೆ ಬರುವಾಗ ಅದರ 'ಜೀನ್'ಗಳು ಕಾರ್ಯ ಪ್ರವೃತ್ತವಾಗುತ್ತವೆ.

ಇನ್ನು ಕೆಲವು ಗುಣಗಳು ದೇಹದಲ್ಲಿರುವ Dna ಅಣುಗಳ ಒಟ್ಟು ಮೊತ್ತವನ್ನು ಹೊಂದಿರುತ್ತವೆ. ಉದಾಹರಣೆಗಾಗಿ "ದನಗಳ ಹಾಲು ಕೊಡುವಿಕೆ." "ಹಾಲು ಕೊಡಲಿಕ್ಕಾಗಿ" ಎನ್ನುವದಕ್ಕೆ ಇರುವ ಡಿಯನ್ಸೈ "ಜೀನ್"ಗಳ ಸಂಖ್ಯೆ ಕ್ರೋಮೋಸೋಮುಗಳಲ್ಲಿ ಹೆಚ್ಚಾದಷ್ಟು ಅದು ಹಾಲು ಕೊಡುವ ಅಂಶ ಹೆಚ್ಚಾಗುತ್ತದೆ.

ಅನೇಕ ಕುಟುಂಬಗಳಲ್ಲಿ ತಲೆಮಾರುಗಳಿಂದ ವಿಜ್ಞಾನಿ, ಕವಿಗಳು, ಸಂಗೀತ ಕಲಾವಿದರು ಬರಲು ಇವೆಲ್ಲವೂ ಡಿಯನ್ಸೈಯ ಪ್ರಭಾವವೇ ಆಗಿದೆ. ಅಖಿಲ ಜೀವ ವಿಜ್ಞಾನವನ್ನೇ ತನ್ನಲ್ಲಿ ಸೆಳೆದಿಟ್ಟ ಈ ಡಿಯನ್ಸೈ ಅಖಿಲ ಜೀವ ವಿಜ್ಞಾನವನ್ನೇ ತಲೆಕೆಳಗೆ ಮಾಡ ಹೊರಟಿದೆ. ಅತಿ ಸೂಕ್ಷ್ಮವಾದ ಸೈಟೊಪ್ಲಾಸ್ಮೋಪ್‌ದಳ ಮೂಲಕ ಬಿಂದು ಪರಿಧಿಯಾಗಿ ಮಾತ್ರ ಕಾಣಬಲ್ಲ ಈ ಅದ್ಭುತ ಶಕ್ತಿಯೊಳಗೆ ಅಡಗಿದೆ ಈ ವಿಶ್ವ ವಿಶಾಲತೆಯ ಅಖಂಡ ಕೋಟಿಗಟ್ಟಲೆ ಸಸ್ಯ ಪ್ರಾಣಿ ಪ್ರಪಂಚದ ನಿಚಿತ್ರ ಪ್ರಕಾಂಡ ರಹಸ್ಯಮಯ ಗುಪ್ತ ಕಥೆ!

ಒಂದೇಂದು ಪ್ರಾಣಿ ವರ್ಗಕ್ಕೆ ಇಂತಿಷ್ಟೇ 'ಕ್ರೋಮೋಸೋಮು'ಗಳು ಎಂಬ ಲೆಕ್ಕವಿದೆ. ಜೀವಕಣದ ಒಳಗಡೆ ಇವು ನಿದ್ರಿಸುತ್ತಿರುತ್ತವೆ. ಇವುಗಳ ಒಳಗಿರುವ ಎರಡು ಉದ್ದನೆಯ ಸುರುಳಿಯಂತಹ ಕ್ರೊಮೊನೆಮೊಟ ಎಂಬ ಎರಡು "ಗೆರೆಗಳಲ್ಲಿ' ಮಣಿ ಸರಗಳಂತೆ ಇರಿಸಲ್ಪಟ್ಟಿದೆ ಡಿಯನ್ಸೈ. "ಸೃಷ್ಟಿಯ ಮೇಲೆ ವಿಜಯ. ಸ್ಥಿತಿಯ ಬಗ್ಗೆ ನಿಯಂತ್ರಣ, ಲಯದ ಕುರಿತಾದ ಸಾಧನೆ ಇವು ಇಂದಿನ ವಿಜ್ಞಾನದ ವಿಶೇಷತೆ.

(ಎಲ್ಲಿಯೇ ಕುಳಿ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3

ನವಯುಗ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೪	೧೫—೨—೧೯೬೮	No. 24

ಕುಬೇರ—ಕುಚೇಲ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉ ಥಾಂಟರು ಬರ್ಮಿಯರು. ವಿದೇಶೀ ದಾಸ್ಯ ಶೃಂಖಲೆಯಿಂದ ಮುಕ್ತವಾದ ಅಭಿವೃದ್ಧಿ ಹೊಂದುತ್ತಿರುವ ದೇಶವೊಂದಕ್ಕೆ ಸೇರಿದವರು. ಅಭಿವೃದ್ಧಿ ಪಥಗಮನ ಮಾಡುತ್ತಿರುವ ರಾಷ್ಟ್ರಗಳು ಯೊವ ಯೊವ ಕಷ್ಟಕಾರ್ಪಣ್ಯಗಳನ್ನೂ ವಿಘ್ನವಿಡ್ಡೂರಗಳನ್ನೂ ಎದುರಿಸಬೇಕೆಂಬುದನ್ನು ಸರಿಯಾಗಿ ಬಲ್ಲವರು ದೆಹಲಿಯಲ್ಲಿ ಸೇರಿರುವ ಅಂಕ್ಟಾಡ್ ಪರಿಷತ್ತಿಯಿಂದ ಇವರು ಅತ್ಯಮೂಲ್ಯವಾದ ಸಲಹೆಯನ್ನು ಮುಂದಿಟ್ಟು ಅಭಿವೃದ್ಧಿಹೊಂದಿದ ರಾಷ್ಟ್ರಗಳ ಕಣ್ಣುಗಳನ್ನು ತೆರೆಯಿಸುವ ಪ್ರಯತ್ನವನ್ನು ಮಾಡಿದರು. ವಿಶ್ವದ ಯೊವ ಮೂಲೆಯನ್ನು ನೋಡಿದರೂ ಇಂದು ನಮಗೆ ತೋರುವುದು ಅಶಾಂತಿಯ ದೃಶ್ಯ. ವಿಶ್ವದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಎನ್ನುವವರು ಈ ಬಗ್ಗೆ ಮುತುವರ್ಜಿಯಿಂದ ಕಾರ್ಯ ಪ್ರವೃತ್ತರಾಗುವುದು ಗೋಚರಿಸುತ್ತಿಲ್ಲ. ವಿಶ್ವದ ರಾಷ್ಟ್ರರಾಷ್ಟ್ರಗಳ ನಡುವೆ ತಿಳುವಳಿಕೆ ಮೂಡಬೇಕು. ಸ್ನೇಹಲತೆ ಅಂಕುರಿಸಬೇಕೆನ್ನುವವರು ಈ ಬಗ್ಗೆ ಪ್ರಯತ್ನ ಮಾಡುತ್ತಿಲ್ಲ. ಇದಕ್ಕಿರುವ ಏಕಮೇವ ಕಾರಣವೆಂದರೆ 'ಕಳ್ಳ ಕಳ್ಳಗೆ ನೆಂಟು'. ಕೈಯಮಿಲಕ್ಕ ಕೈಯಿಂದಲಾದರೆ ಮಾತ್ರ ಗೌರವವೆಂಬ ದುರಭಿಮಾನ. ಇದರಿಂದಾಗಿಯೇ ಅಂತಾರಾಷ್ಟ್ರೀಯ ಭದ್ರತೆ ತಪ್ಪಿ ಹೋಗಿದೆ.

ಉ. ಥಾಂಟರು ಆರ್ಥಿಕ ಹಾಗೂ ಸಾಮಾಜಿಕ ಭದ್ರತೆಯೇ ಅಂತಾರಾಷ್ಟ್ರೀಯ ಭದ್ರತೆಯ ಗುರಿ ಮುಟ್ಟುವ ಪ್ರಮುಖಾಂಶವೆಂದಿದ್ದಾರೆ. ಶಸ್ತ್ರಾಸ್ತ್ರಗಳ ಮೇಲಾಟದಿಂದಾವಲಿ, ಸೈನಿಕ ಬಲದ ಬೆದರಿಕೆಯಿಂದಾಗಲೀ ಭದ್ರತೆ ಮೂಡುವುದಿಲ್ಲವೆಂಬುದವರ ಅಭಿಮತ. ಇದನ್ನು ವಿಶ್ವಸ್ಫೋಟಿಯಾದವನು, ವಿಶ್ವಶಾಂತಿ ಬಯಸುವವನು, ಏಕ ವಿಶ್ವದ ಪ್ರತಿಪಾದಕನು ಕಂಡಿತಕ್ಕೂ ಒಪ್ಪುತ್ತಾನೆ. ಸುಖ—ಸಂಮೃದ್ಧಿಗಳು ಆನ್ಯೋನ್ಯಾಶ್ರಯ ಬಯಸುವ ಸಂಗತಿಗಳು. ಸಂಮೃದ್ಧಿಯಿರುವಲ್ಲಿ ಸುಖ—ಶಾಂತಿಗಳು ತಾವಾಗಿಯೇ ಬಂದು ಆವಾಸ ಮಾಡತ್ತವೆ. ಆದರೆ, ಪ್ರಕೃತಿಯು ವಿಶಾಲ ಪ್ರಪಂಚದ ಒಂದೊಂದು ದೇಶವನ್ನೂ ಒಂದೊಂದು ರೀತಿಯಾಗಿ ರೂಪಿಸಿದೆ. ಒಂದೆಡೆ ಸಂಮೃದ್ಧಿ ತುಂಬಿ ತುಳುಕಾಡುತಿದ್ದರೆ, ವತ್ತೊಂದೆಡೆ ದರಿದ್ರತೆ ತಾಂಡವವಾಡುತ್ತಿದೆ. ಈ ಜಗತ್ತಿನ ಕಾಲಂಶ ಭೂಭಾಗ ಸಾಂಪತ್ತಿಕವಾಗಿ ಸಮೃದ್ಧವಿದ್ದು ಉಳಿದ ಭಾಗಗಳಲ್ಲಿ ಬಡತನವೇ ಮೂರ್ತಿಮತ್ತಾಗಿ ಕುಣಿಯುತಿತ್ತಿದೆ ಇಂತಹ ವಿಷಮ ಪ್ರಾಕೃತಿಕ ಸನ್ನಿವೇಶವಿರುವಾಗಲೂ ಬಡ ದೇಶಗಳು ತಮ್ಮ ಉನ್ನತಿಗಾಗಿ ಭಗೀರಥ ಪ್ರಯತ್ನ ನಡೆಸಿದರೂ ಜನಸಂಖ್ಯಾಭಿವೃದ್ಧಿಯು ಇದರ ಪ್ರಯೋಜನವನ್ನು ಮಣ್ಣುಗೂಡಿಸುತ್ತಿದೆ. ಹಾಗಾಗಿ ಅಸಮತೆಯು ಮತ್ತಷ್ಟು ಬೆಳೆಯುತ್ತದೆಯೇ ಹೊರತು ಸಮತೆಯುಂಟಾಗುವುದಿಲ್ಲ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನನ ಸಂಖ್ಯಾ ಪ್ರಮಾಣದಲ್ಲಿ ಹೆಚ್ಚಳವನ್ನು ಸಾಧಿಸಲು ನಾನಾ ಕ್ರಮಗಳನ್ನು ಕೈಕೊಂಡರೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಜನನ ನಿಯಂತ್ರಣಕ್ಕೆ ಉತ್ತೇಜನ ನೀಡುತ್ತವೆ. ಅನಭಿವೃದ್ಧ ರಾಷ್ಟ್ರಗಳು ನಿರಾಶೆಯ ಗಾಢಾಂಧಕಾರದಲ್ಲೇ ನಾರ ತೊಡಗುತ್ತವೆ. ಈ ವಿಷಮಾವಸ್ಥೆಯಲ್ಲಿ ಕುಬೇರ ರಾಷ್ಟ್ರಗಳ ಕಣ್ಣು ತೆರೆಯಬೇಕು. ಅವು ತಮ್ಮ ಸಂಪತ್ತಿನ ಒಂದಂಶವನ್ನು ಉಳಿದ ದೇಶಗಳ ಪ್ರಗತಿಗಾಗಿ ವಿನಿಯೋಗಿಸುವ ಪರಿಪಾಠ ಇಟ್ಟುಕೊಳ್ಳಬೇಕು--ಇದು ವಿಶ್ವ ಬ್ಯಾಂಕಿನ ಅಧ್ಯಕ್ಷ ಯುಜ್ಜರ ಅಭಿಪ್ರಾಯ.

ನೈಜ ಶಾಂತಿಪ್ರಿಯ ಸಂಮೃದ್ಧ ದೇಶಗಳು ನಿಶ್ಶರ್ತವಾಗಿ ಉಳಿದವರಿಗೆ ಸಹಾಯ ಮಾಡಲು ಮುಂದೆ ಬಂದರೆ, ಪ್ರಗತಿಪಥೇಚ್ಛು ರಾಷ್ಟ್ರಗಳೂ ಸಾಂಪತ್ತಿಕ ಉನ್ನತಿಯನ್ನು ಸಾಧಿಸಬಲ್ಲುವು. ದೇಶಪೊಂದು ಸ್ವಯಂ ಪರಿಪೂರ್ಣತೆಯನ್ನು ಪಡೆದುಕೊಂಡರೆ, ಮತ್ತೆ ಅಸಮಾನತೆಯ ಭೂತ ಅದನ್ನು ಕಾಡಲಾರದು. ಆರ್ಥಿಕೋನ್ನತಿಯು ಮೂಲವಿಂದು ಔದ್ಯೋಗಿಕೋನ್ನತಿಯನ್ನೇ ಬಲವಾಗಿ ಅವಲಂಬಿಸಿದೆ. ಕೃಷ್ಯುತ್ಪನ್ನ— ಔದ್ಯೋಗಿಕೋತ್ಪನ್ನಗಳಲ್ಲಿ ಉನ್ನತಿಯನ್ನು ಸಾಧಿಸಬೇಕಾದರೆ, ಅಸಮೃದ್ಧಿ ದೇಶಗಳಿಗೆ ಅಂತರಿಕ ಮತ್ತು ಬಾಹ್ಯ ಸಹಾಯ ಸಹಕಾರ ದೊರೆಯಲೇ ಬೇಕು. ಬ್ರಹ್ಮಸಮೃದ್ಧಿಮಗಳಿಗೆ ವಿದೇಶೀ ಭಂಡವಳವನ್ನೇ ಬಳಸುವುದು ಅನಿವಾರ್ಯವಾಗುತ್ತದೆ. ಇಂದು ಕೆಲವೊಂದು ಸಂಮೃದ್ಧ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸಹಾಯ ನೀಡುವಲ್ಲಿ ಉತ್ಸಾಹ ತೋರಿಸುತ್ತಿವೆಯೇನೋ ನಿಜವೇ. ಆದರೆ, ಉತ್ಸಾಹದ ಹಿಂದೆ ನಿರುತ್ಸಾಹದ ಮುದ್ರೆಯೂ ಕಾಣುತ್ತದೆ ತಮ್ಮ ನೀತಿ—ಧ್ಯೇಯ—ಗುರಿಗಳನ್ನು ಅಂಗೀಕರಿಸಬೇಕೆಂಬ ಅಪರೋಕ್ಷ ಒತ್ತಡ ಹೇರಲು ಅವು ಮುಂದಾಗುತ್ತವೆ. ಇಂತಹ ಒತ್ತಡದಿಂದ ಬರುವ ನೆರವು ನೈತಿಕವಾಗಿ ಗುಲಾಮಿ ಪದ್ಧತಿಯ ಪುನರುತ್ಥಾನಕ್ಕೆ ಕಾರಣವಾಗುವುದು, ಸ್ವತಂತ್ರ ದೇಶಗಳ ಸ್ವಾತಂತ್ರ್ಯಕ್ಕೇನೇ ಕೊಡಲಿಯಿಕ್ಕುವುದು. ಕೊರತೆಯೊದಾಗ ಒಂದು ದೇಶಕ್ಕೆ ಒಂದಷ್ಟು ಧಾನ್ಯವನ್ನೋ, ಉಪಕರಣಗಳನ್ನೋ, ಸಂಪತ್ತನ್ನೋ ಕೊಟ್ಟು ಬಿಟ್ಟರೆ ಇವನ್ನು ಪಡೆದ ದೇಶಗಳ ಸಂಕಟ ಪರಿಹಾರವಾಗದು. ತಮಗೆ ಬರಬಹುದಾದ ಸಂಕಟವನ್ನು ಶಾಶ್ವತವಾಗಿಯೇ ಎದುರಿಸುವಂತಹ ಶಕ್ತಿ ಅವುಗಳಲ್ಲಿ ಮೂಡಿ ಬಂದರೆ ಮಾತ್ರ ಅವುಗಳ ಕಷ್ಟ ದೂರವಾಗಿ ವಿಶ್ವದಲ್ಲಿ ಅಸಮಾನತೆ ನೀಗಿ ಸಮಾನತೆ ಸ್ಥಾಪಿತವಾಗುತ್ತದೆ, ಸಮೃದ್ಧಿ ತುಂಬುತ್ತದೆ, ಶಾಂತಿ ನೆಲಸುತ್ತದೆ ಭಾರತವು ವಿದೇಶಗಳಿಂದ ವಿಪುಲ ಪ್ರಮಾಣದ ಸಹಾಯವನ್ನು ಪಡೆಯುತ್ತಿರುವ ದೇಶ. ಆದರೆ, ಇತ್ತೀಚೆಗಿನ ಕೆಲವು ವರ್ಷಗಳಿಂದ ವಿದೇಶೀ ನೆರವು ಡೋಲಾಯಮಾನವಾಗಿಯೇ ಉಳಿದುದೊಂದು ಇದಕ್ಕೊಂದು ನಿದರ್ಶನ ಅಹಾರಾಭಾವದಿಂದ ಭಾರತೀಯರನ್ನು ಸಾಯಗೊಡಲಾರೆವು ಎಂದು ಹೇಳಿದ ಅಮೆರಿಕೆ ಅದರಲ್ಲೂ ತನ್ನ ಕಪಿಮುಷ್ಟಿಯನ್ನು ಬಿಟ್ಟಿರುವುದಿಲ್ಲ. ಇಂತಹ ನೀತಿಯನ್ನು ಸಂಪನ್ನ ರಾಷ್ಟ್ರಗಳು ಅನುಸರಿಸುವ ವರೆಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಯೋಜನಾಬದ್ಧ ಪ್ರಗತಿ ಮಾರ್ಗ ಗಮನ ಮಾಡುವುದೂ ಕಷ್ಟವಾಗುತ್ತದೆ. ಸೈನಿಕ ಶಕ್ತಿ ಸಂವರ್ದನೆಯಿಂದಲೇ ಒಂದು ದೇಶದ, ವಿಶ್ವದ ಉನ್ನತಿ ಸಾಧ್ಯವಾಗದು. ತಮ್ಮ ಮಿಗಿತೆಯ ಸಂಪತ್ತನ್ನು ಬಡ ರಾಷ್ಟ್ರಗಳ ಉನ್ನತಿಗಾಗಿ ಬಳಸುವುದರಿಂದಲೇ ಮಾನವ ಕೋಟಿಯ ಕಲ್ಯಾಣ ಸಾಧ್ಯವಾಗುತ್ತದೆಂಬುದು ನಿರ್ವಿವಾದ ಇದನ್ನೇ ವ್ಯಕ್ತಿಗಳಿಗೂ ಅನ್ವಯಿಸಿದರೆ, ಅನರ್ಥ ದೂರವಾಗುತ್ತದೆ.

ಕೆಲಂಡರ್ ಸ್ವೀಕಾರ

ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್, ಭದ್ರಾವತಿ, ಮೆಜೆಸ್ಟಿಕ್ ಪ್ರೆಸ್, ಉಡುಪಿ, ಹೊಟೆಲ್ ಟೂರಿಸ್ಟ್ ಬೆಂಗಳೂರು, ಸಂಜಯ ಇಂಡಸ್ಟ್ರೀಸ್, ಬೆಂಗಳೂರು, ಎಸ್. ಆರ್. ಬೀಡಿ ವರ್ಕ್ಸ್, ಉಡುಪಿ, ಸ್ವೇಸ್ ಟಯರ್ ಎಂಡ್ ರಬ್ಬರ್ ಪ್ರೊಡಕ್ಟ್ಸ್ ಲಿ ಕೊಯಂಬುತ್ತೂರು, ಈ ಸಂಸ್ಥೆಗಳ ಚಿತ್ರಸಹಿತ ಕೆಲಂಡರುಗಳನು ಆದರದಿಂದ ಸ್ವೀಕರಿಸಿದ್ದೇವೆ.

(ಸಂ. ನ.)



ಎ. ಬಿ. ಶೆಟ್ಟಿ ಸ್ಮಾರಕ
ವಿದ್ಯಾರ್ಥಿನಿಲಯ,
ಮೈಸೂರು-2

ವಿದ್ಯಾರ್ಥಿನಿಲಯದ ಹೊಸ ಕಟ್ಟಡದ
ಶಂಕುಸ್ಥಾಪನೆಯನ್ನು

ತಾ. 18—2—1968ನೇ ಭಾನುವಾರ ಬೆಳಿಗ್ಗೆ 9-30 ಘಂಟೆಗೆ

ಮೈಸೂರು ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರ್
ಡಾ॥ ಕೆ. ಸಿ. ನಾಯಕ್ ರವರು
ರಾಳಿದಾಸ ರಸ್ತೆಯ (ಆಹಾರ ಸಂಶೋಧನಾಲಯದ ಆವರಣ)
ನಿವೇಶನದಲ್ಲಿ ನೆರವೇರಿಸುವರು.

ಶ್ರೀ ಎಸ್. ಎಂ. ಕೃಷ್ಣ, ಎಂ. ಪಿ,
ಅವರು ಅಧ್ಯಕ್ಷತೆ ವಹಿಸುವರು.

ತಾವು ಬರಬೇಕಾಗಿ ಪ್ರಾರ್ಥನೆ.

R. S. V. P.
ಎ. ರಾಮಣ್ಣ,
ಕಾರ್ಯದರ್ಶಿ.

ನಿಲಯದ ಅಧ್ಯಕ್ಷರು ಮತ್ತು
ಸದಸ್ಯರು.

ಫೋನ್: 1821 & 319

ಮುಖಪುಟದಲ್ಲಿ

ಇದೇ ತಾ. 18-1-68ರಂದು ಶ್ರೀ ಕೃಷ್ಣಾಪುರ ಪರ್ಯಾಯ ಪಟ್ಟದನ್ನೇರಿದ ಶ್ರೀ ಪೇಜಾವರ ಮಠದ ಶ್ರೀ ಮದ್ವಿಶ್ವೇಶತೀರ್ಥ ಶ್ರೀಪಾದಂಗಳವರನ್ನು ಅವರ ಪಟ್ಟದ ದೇವರೊಂದಿಗೆ ತಾ. 15-1-68ರಂದು ಸಂಪ್ರದಾಯದಂತೆ ಶ್ರೀ ಕೃಷ್ಣಾಪುರ ಮಠದ ಶ್ರೀ ಮದ್ವಿದ್ಯಾರಕ್ಷ ತೀರ್ಥ ಶ್ರೀ ಪಾದಂಗಳವರು ತನ್ನ ಮಠಕ್ಕೆ ವೈಭವದಿಂದ ಬರಮಾಡಿಸಿದೇವರ ಕಾಣಿಕೆ ಮೊಲಿಕಾ ಮಂಗಳಾರತಿಗಳೊಂದಿಗೆ ಸತ್ಕರಿಸಿದರು.

ಶ್ರೀ ಕೃಷ್ಣಾಪುರ ಮಠದಲ್ಲಿ ಚಿನ್ನದ ಮಂಟಪದಲ್ಲಿ ಪೇಜಾವರ ಮಠದ ಶ್ರೀರಾಮ ಸಿತಾ ದೇವರನ್ನು ಇಂಪಲಾಗಿದ್ದು ಮಂಟಪದ ಇಕ್ಕೆಲಗಳಲ್ಲಿ ಉಭಯ ಶ್ರೀಪಾದಂಗಳವರು ನಿಂತಿರುವುದನ್ನು ಚಿತ್ರದಲ್ಲಿ ನೋಡಬಹುದಾಗಿದೆ.

ನೀವೂ ಯೋಚಿಸಿ—

ನಮ್ಮದು ಅಭದ್ರ ಪ್ರಜಾಪ್ರಭುತ್ವವೆ?

ಬರೆದವರು:—ಶ್ರೀ ಪಿ. ಜೆ. ಕೃಷ್ಣ, ಕುಂದಾಪುರ

ಅಬ್ರಹಾಂ ಲಿಂಕನ್ ಪ್ರಜಾಪ್ರಭುತ್ವವನ್ನು "ಜನರಿಂದ, ಜನರಿಗೆ, ಜನರಿಗಾಗಿ ಇರುವ ಸರಕಾರ"ವೆಂಬುದಾಗಿ ವಿವರಿಸಿರುತ್ತಾನೆ ಇದರಲ್ಲಿ ಪ್ರಜೆಗಳು ತಮಗೆ ಬೇಕಾದ ಉತ್ತಮ ಆಡಳಿತ ವರ್ಗವನ್ನು ಅಪ್ರತ್ಯಕ್ಷವಾಗಿ ಚುನಾಯಿಸುತ್ತಾರೆ. ಇಂಥ ಒಂದು ಸರಕಾರವನ್ನು ಸ್ಥಾಪಿಸಲು ಸುಲಭ. ಆದರೆ ಸುಧಾರಿಸಲು ಕಷ್ಟ— 'ಜನರಲ್ಲಿ ವಸ್ತು ಪ್ರೇಮಕ್ಕಿಂತ ಹೆಚ್ಚು ದೇಶಾಭಿಮಾನವೂ, ಪಕ್ಷಗಳ ಸದಸ್ಯರಲ್ಲಿ ಅಧಿಕಾರ ಪ್ರೇಮಕ್ಕಿಂತ ಹೆಚ್ಚಿನ ಸೇವಾ ಭಾವನೆಯೂ ಇದ್ದಲ್ಲಿ ಮಾತ್ರ ಈ ಒಂದು ಪದ್ಧತಿಯು ಫಲಕಾರಿ'ಯಾಗಬಹುದು: ಆಂಗ್ಲೇಯರು ಈ ಒಂದು ವಿಷಯದ ಮಟ್ಟಿಗೆ ತೆಗೆದುಕೊಂಡಷ್ಟು ಜಾಗ್ರತೆಯನ್ನು, ನಮ್ಮ ದೇಶದಲ್ಲಿ ನಾವು ತೆಗೆದುಕೊಳ್ಳುತ್ತಿಲ್ಲ.

ಸಂವಿಧಾನದ ಅರ್ಥವೇ ತಿಳಿಯದ ಸಾಮಾನ್ಯ ಬಡವನೊಬ್ಬ, ಹಣದಾಸೆದಿಂದ ಲಂಚಕ್ಕೆ ತುತ್ತಾಗಿ, ಬರೇ ಜಾತಿ ರಾಷ್ಟ್ರಗಳು ಮತ್ತು ಕೆಲವೊಮ್ಮೆ ಬಲವಂತಕ್ಕೆ ಮಣಿದು, ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗುವಷ್ಟು ಪರಿಜ್ಞಾನವಿಲ್ಲದೆ ಅಭದ್ರ ಸರಕಾರವೊಂದನ್ನು ಕಟ್ಟುತ್ತಾನೆ. ಇದಕ್ಕೆ ಮುಖ್ಯ ಕಾರಣ— ಅವಿದ್ಯೆ—ಬಡತನ- ಭಾರತದಲ್ಲಿ ಸೇಕಡಾ ಎಪ್ಪತ್ತೈದರಷ್ಟು ಮಂದಿ ಅವಿದ್ಯಾವಂತರು. ಈ ಒಂದು ಕಾರಣದಿಂದ ತಮಗೆ ಬೇಕಾದ ಯೋಗ್ಯ ಸರಕಾರವನ್ನು ರೂಪಿಸಿಕೊಳ್ಳಲಾಗದೆ ಮೋಸ ಹೋಗುತ್ತಾರೆ. ಆದರೆ ಇತ್ತೀಚೆಗೆ ನಡೆದ ಮಹಾ ಚುನಾವಣೆಯಲ್ಲಿ ಸಹ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದ್ದರೂ ಕೆಲವು ರಾಜ್ಯಗಳನ್ನು ಕಾಣುವಾಗ ಯೋಗ್ಯ ಸರಕಾರವನ್ನು ತಾವೇ ಸ್ವತಃ ಕಟ್ಟುವುದಕ್ಕೆ ಅನರ್ಹರು ಎನ್ನುವುದು ಗಣನೀಯ ಅಂಶ.

ನಮ್ಮ ದೇಶದಲ್ಲಿ ಇಂದು ಜನಸಂಖ್ಯೆ ಬೆಳೆಯುತ್ತಾ ಇದೆ. ಜನಸಂಖ್ಯೆ ಬೆಳೆದಹಾಗೆ ಆಹಾರ ಉತ್ಪಾದನೆ ಇಳುವರಿಯೂ ಗಣನೀಯ ಸಹಜ ಸರಕಾರ ಕೃಷಿರಂಗಕ್ಕೆ ನಿರುತ್ಸಾಹಕರವಾದ ಪ್ರೋತ್ಸಾಹವನ್ನು ನೀಡುತ್ತಿದೆ. ಪ್ರತಿಯೊಬ್ಬ ಅಧಿಕಾರಿಯೂ ಲಂಚವಿಲ್ಲದೆ ಬಡ ರೈತನಿಗೆ ಬೇಕಾದ ಸಹಾಯ ಸವಲತ್ತುಗಳನ್ನು ಕೊಡಲು ನಿರಾಕರಿಸುತ್ತಾನೆ. ಪ್ರತಿಯೊಬ್ಬನೂ ತನ್ನದೇ ಆದ ಸ್ವಾರ್ಥದ ಜಗತ್ತಿನಲ್ಲಿ ಮೈಮರೆತು ನಿಸ್ವಾರ್ಥದ ಮಾಲಿವಾಡವನ್ನು ಥಂಸಿಕೊಂಡಿದ್ದಾನೆ—ಅಷ್ಟೇ.

ನೈಸರ್ಗಿಕ ಸಂಪತ್ತು ಧಮ್ಮಲ್ಲಿ ಹೇರಳವಾಗಿದೆ. ಆದರೆ ಅದನ್ನು ಉಪಯೋಗಿಸಿಕೊಳ್ಳುವವರಿಗೆ ಸರಕಾರ ಎಷ್ಟರ ಮಟ್ಟಿನ ಸಹಕಾರ ನೀಡುತ್ತಿದೆ ಎಂಬುದು ನಾವು ತಿಳಿದುಕೊಳ್ಳಬೇಕಾದ ಒಂದು ಗಣನೀಯ ಅಂಶ.

ಸರಕಾರದ ಆಡಳಿತ ವರ್ಗದಲ್ಲೇ ಇರುವ ಕಚ್ಚಾಟ, ಅಧಿಕಾರ ದಾಹ ಹಣದಾಹ ಮತ್ತು ಒಂದು ಪಾರ್ಟಿಯಿಂದ ಇನ್ನೊಂದು ಪಾರ್ಟಿಗಿರುವ ತೀರ ವ್ಯತಿರಿಕ್ತವಾದ ಧ್ಯೇಯ ಧೋರಣೆಗಳು ಇಂದು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಅಯಶಸ್ವಿಯಾಗಲು ಕಾರಣವಾಗಿವೆ.

ಇಂದು ದಿನಹೋದಂತೆಲ್ಲಾ ಪಾರ್ಟಿಗಳ ಸಂಖ್ಯೆ ಹೆಚ್ಚುತ್ತಾ ಇದೆ. ಆದರೆ ಅಮೇರಿಕ ನೋಡಿ, ಇಂಗ್ಲೆಂಡ್ ನೋಡಿ, ಪಾರ್ಟಿಗಳ ಒಮ್ಮತದಿಂದ, ಬರೇ ಎರಡು ಮೂರು ಪಾರ್ಟಿಗಳಿದ್ದು, ಅಲ್ಲಿ ಇನ್ನೂ ಭದ್ರ ಸರಕಾರವಿರಲು ಕಾರಣವಾಗಿದೆ. ಆದರೆ ಇಂದು.... ನಮ್ಮ ದೇಶದಲ್ಲಿ ಒಂದು ಪಾರ್ಟಿಯಿಂದ ಇನ್ನೊಂದು ಪಾರ್ಟಿಗೆ ಹಾರುವವರೂ ಹೆಚ್ಚು. ಅವರೊಳಗೇ ಒಮ್ಮತವಿಲ್ಲದೆ, ಒಡಕುಗಳು ಹೆಚ್ಚುದ್ದು ಸರಕಾರದ ಭದ್ರತೆಗೆ ಗಂಡಾಂತರಕಾರಿಯಾಗಿದೆ.

ಇವೆಲ್ಲಾ ಕಾರಣಗಳು ಅಲ್ಲದೆ, ರಾಜ್ಯಗಳಲ್ಲಿ ಸಹ ಒಡಕುಗಳು ಹೆಚ್ಚಿದ್ದು, ಪ್ರತಿಯೊಂದು ರಾಜ್ಯವೂ ಕೇಂದ್ರವನ್ನು ಧಿಕ್ಕರಿಸಿ, ತಾನೊಂದು ಪ್ರತ್ಯೇಕ, ಸ್ವತಂತ್ರ ರಾಜ್ಯ. ಮತ್ತೆ ಕೆಲವು ದೇಶಗಳೆಂದು ಸಹ ತಿಳಿದುಕೊಂಡಂತಿದೆ. ಇದರಿಂದ ರಾಷ್ಟ್ರೀಯ ಐಕ್ಯ ಒಡೆದು, ದೇಶ ಸ್ವಾತಂತ್ರ್ಯ ಕಳೆಯುವುದರಲ್ಲಿ ಸಂಶಯವಿಲ್ಲ.

ಇಂದು ನೀರಾವರಿ ಯೋಜನೆಗಳು ನದಿಯ ನೀರು, ಉಕ್ಕಿನ ಕಾರ್ಖಾನೆಗಳಿಂದ ಹಿಡಿದು, ಸಣ್ಣ ಸಣ್ಣ ಹಳ್ಳಿಗಳಿಗಾಗಿ ಸಹ ಕಾದಾಟ ಸಾಗಿದೆ. ಒಂದು ರಾಜ್ಯ ತನ್ನ ಬೇಡಿಕೆಗಳ ಪೂರೈಕೆಗಾಗಿ ರೈಲನ್ನು ನಿಲ್ಲಿಸುವ ಚಳುವಳಿ ಹೂಡಿದರೆ, ಮತ್ತೊಂದು ರಾಜ್ಯ ರೈಲುಗಳನ್ನೇ ಉರುಳಿಸುವ ಯತ್ನದಲ್ಲಿ ತೊಡಗಿದೆ. ಒಂದು ರಾಜ್ಯದವರು, ಸಾರ್ವಜನಿಕ ವಸ್ತುಗಳನ್ನು ಸುಟ್ಟರೆ, ಬೇರೊಂದು ರಾಜ್ಯದವರು, ಸಾರ್ವಜನಿಕರನ್ನೇ ಸುಡುತ್ತಿದ್ದಾರೆ. ದೇಶದಲ್ಲಿ ಕೆಲವರು ಉಪವಾಸದಿಂದ ಸಾಯುವ ಪರಿಸ್ಥಿತಿಯಲ್ಲಿ ನರಳುತ್ತಾ ಬಿದ್ದಿರುವಾಗ ಮತ್ತೆ ಕೆಲವರು ಆಹಾರ ಧಾನ್ಯಗಳನ್ನು ಮುಚ್ಚಿಟ್ಟು, ರಾಷ್ಟ್ರೀಯ ಸಮತಾವಾದಕ್ಕೆ ಭಂಗವನ್ನು ತಂದೊಡ್ಡುತ್ತಿದ್ದಾರೆ.

ಮತ್ತೆ ಕೆಲವು ರಾಜಕೀಯ ಪುಡಾರಿಗಳು ವಿದ್ಯಾರ್ಥಿಗಳನ್ನು ಹಿಂದಿನಿಂದ ಪ್ರೇರೇಪಿಸಿ, ವಿಧ್ವಂಸಕ ಕೃತ್ಯಗಳಿಗೆ ಅವರನ್ನು ಬಳಕುವಮಾಡಿ, ಮುಂದಿನ ಪೀಳಿಗೆಯನ್ನೇ ನಾಶಪಡಿಸಿದ್ದಾರೆ.

ಈ ಎಲ್ಲಾ ನಿದರ್ಶನಗಳಿಂದ ವ್ಯಕ್ತವಾಗುವ ಅಂಶವೇನೆಂದರೆ "ನಮ್ಮ ದೇಶದಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು."

ಇಂಥ ಸಂದರ್ಭದಲ್ಲಿ ಸರದಾರ ಪಟೇಲ್‌ರಂತಹ, ರಾಜಕೀಯ ಮುತ್ಸದ್ಧಿತನ, ವ್ಯಾವಹಾರಿಕ ನೀತಿಯುಳ್ಳ, ಸ್ಥೈರ್ಯ ನಾಯಕರು ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕು.

ಜೋನ್ ಏಡಮ್ಸ್ ಹೇಳಿರುವಂತೆ "Democracy never lasts long; It soon wastes exhausts and murders itself. There never was a democracy that did not commit suicide." (ಪ್ರಜಾಪ್ರಭುತ್ವ ಬಹಳ ಕಾಲದ ವರೆಗೆ ಉಳಿಯಲಾರದು. ಅದು ತಕ್ಷಣ ಹಾಳಾಗುತ್ತದು, ಆಯುಷ್ಯವನ್ನು ಕಳೆಯುತ್ತದು ಮತ್ತು ತನ್ನನ್ನು ತಾನೇ ಕೊಲೆ ಮಾಡಿಕೊಳ್ಳುತ್ತದು. ಎಲ್ಲಿಯೂ, ತನ್ನನ್ನು ತಾನೇ ಆತ್ಮಹತ್ಯೆ ಮಾಡಿಕೊಳ್ಳದ ಪ್ರಜಾಪ್ರಭುತ್ವವೇ ಇಲ್ಲ-)ಎಂಬ ಅವನ ಮಾತುಗಳು ನಮ್ಮ ದೇಶಕ್ಕೆ ಈಗಿನ ಪರಿಸ್ಥಿತಿಯಲ್ಲಿ ಬಹಳಷ್ಟು ಮಟ್ಟಿಗೆ ಒಪ್ಪಿಕೊಳ್ಳುತ್ತದೆ.

In the Court of the Munsif, Udipi, S. K.

O. P. No. 1/68

1. Manjunatha Nayak,
2. Jagannatha Nayak.
3. Sharada alias Vanamala S. Nayak by her General Agent K. Mahabala Shetty— Petitioners.

NOTICE

Is hereby given that the petitioners aforesaid have applied to the above Court for the issue of a Succession Certificate in their favour to collect the debts and securities standing in the name of the deceased K. Sheshagiri Nayak, son of Nagi Hengsu, who died on 9—8—61 at Kokkarne of Pejamangoor village, as his sole legal representatives and the said petition stands posted to 21—2—1968 for filing of objections, if any.

P.N. Krishnamoorthy Rao,
Advocate.

Udipi, 6-2-1968.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ತಿನಲ್ಲಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು: ಜಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

In the Court of the Munsif, Udipi, S. K.

O P. No. 2/68

1. Manjunatha Nayak.
2. Jagannatha Nayak.
3. Sharada alias Vanamala S. Nayak by her General Agent K. Mahabala Shetty— Petitioners.

NOTICE.

Is hereby given that the petitioners aforesaid have applied to the above Court for the issue of a Succession Certificate in their favour to collect the debts and securities standing in the name of the deceased K. Venkatraya Nayak, son of Nagi Hengsu and nephew of Mahalinga Nayak of Kokkarne, who died on 14-11-57 as his sole legal representatives and the said petition stands posted to 21—2—68 for filing of objections, if any

P.N Krishnamoorthy Rao,
Advocate.

Udipi, 6-2-1968.



ಅಭಿಪ್ರಾಯ

ಪ್ರಭುತ್ವ ಸಂಪನ್ನ ಗಣರಾಜ್ಯ

ಬರೆದವರು :
ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ

ಜನವರಿ ಇಪ್ಪತ್ತಾರು ಭಾರತೀಯರಾದ ನಮಗೆ ಪರ್ವದಿನ. ಭಾರತಾಧ್ಯಂತ ಶ್ರೀನಗರದಿಂದ ಶ್ರೀಸಾಮೂನ್ಯನ ವರೆಗೆ ಎಲ್ಲರೂ ಈ ದಿನವನ್ನು ಹಬ್ಬದೋಪಾದಿಯಲ್ಲಿ ಆಚರಿಸಿ ಬಹುರಾಡಂಬರವನ್ನು ಪ್ರದರ್ಶಿಸುವರು.

ಆದರೆ ವಿದೇಶದಲ್ಲಿ ಸಂಸ್ಕೃತಿವಂತರೆಂದು ಕರೆಸಿಕೊಳ್ಳುವ ನಾವು ಈ ದಿನವನ್ನು ಪರ್ವದಿನವೆಂದು ಕರೆಯುತ್ತೇನೆ. ವಿನಾ ಈ ದಿನದ ಮಹಿಮೆಯನ್ನು ಅರಿತು ನಡೆಯುವುದಿಲ್ಲ. ಪ್ರಭುತ್ವ ಸಂಪನ್ನ ಗಣರಾಜ್ಯವೆಂದು ಘೋಷಿಸಿದ ದಿನವಿದು.

ಪ್ರಜಾಕಲ್ಯಾಣ ರಾಜ್ಯ ಬರಬೇಕೆಂದು ಪರಕೀಯರಾದ ಆಂಗ್ಲರೆದುರು ಇಾವು ಸಿಡಿದೆದ್ದು ಏಕದೇಹಿಗಳಂತೆ ಹೋರಾಡಿದ್ದೇನೋ ನಿಜ. ಆದರೆ ಇಂದಿನ ಭಾರತ ಪರಿಸ್ಥಿತಿಯಲ್ಲಿ ಪ್ರಜಾಕಲ್ಯಾಣ ಸರ್ಕಾರ ತರಲು ಸಾಧ್ಯವೆ? ಇಂದು ರಾಜ್ಯ ಘಟಕದಿಂದ ರಾಷ್ಟ್ರಘಟಕದ ವರೆಗೆ ಭೂ ಸಮಸ್ಯೆ, ಗಡಿ ಸಮಸ್ಯೆ, ರಾಜಧನ ಸಮಸ್ಯೆ, ಭಾಷಾ ಸಮಸ್ಯೆ ಮುಂತಾದ ಸಮಸ್ಯೆಗಳ ಪೆಡಂಭೂತಗಳು ಭಾರತವನ್ನು ಇಂದು ನುಂಗ ಹೊರಟಿವೆ.

ಈ ಭೂತಗಳನ್ನು ಸೃಷ್ಟಿಸಿದವರು ನಮ್ಮವರೆ ಮೀರಲು ಹೊರಟ ರಾಜಕೀಯ ಧುರೀಣರು. ಈ ರಾಜಕಾರಣಿಗಳು ರಾಷ್ಟ್ರ ನಿರ್ಮಾಣದ ತತ್ವಗಳನ್ನು ಮರೆತು ಸಲ್ಲದ ಕಾರ್ಯಕ್ಕೆ ಕೈಯಿಕ್ಕುತ್ತಾರೆ.

ಭಾರತೀಯ ಸಂವಿಧಾನದ ಒಗನೇ ಅನುಚ್ಛೇದವು ಸಮಸ್ತ ಭಾರತೀಯ ಪೌರರಿಗೂ ಅಸ್ತಿಯನ್ನು ಗಳಿಸುವ ಅನುಭವಿಸುವ ಮತ್ತು ಪರಿಭಾರಿ ಮಾಡುವ ಹಕ್ಕನ್ನು ಕೊಟ್ಟಿದೆ. ಇಂತಿರುವಾಗ ಒಂದೊಮ್ಮೆ ಸ್ವಜಾತಂತ್ರ ಸೋಷಲಿಜಂ ಎನ್ನುವ ನಮ್ಮ ಆಡಳಿತಗಾರರು ಕಾಯಿದೆ ಮೂಲಕ ಕೃಷಿರಂಗವು ಅಸ್ತವ್ಯಸ್ತ ಆಗುವಂತೆ ಮಾಡಿ ಗ್ರಾಮ ಶಾಂತಿಯನ್ನು ಪ್ರಕ್ಷುಬ್ಧಿಸಿದರು. ಇದರಿಂದ ದೇಶರಿಸಿದ ಜನತೆ ಸುಪ್ರೀಂ ನ್ಯಾಯಾಲಯದ ಮೆಟ್ಟಿಲಾಂತರ ರೈತವಾರಿಗಳಿಗೆ ಭೂಕಾನೂನು ಅನ್ವಯಿಸುದಿಲ್ಲವೆಂತ ತೀರ್ಪಿಸಿದರೂ ಮತ್ತೆ ಇನೇ ಕಲಂ ತಿದ್ದುಪಡಿ ಮಾಡಿ ಇಲ್ಲದ ಸಮಸ್ಯೆಗೆ ಸರಕಾರ ಧಾರಿ ಮಾಡಿದೆ.

ಇನ್ನು ರಾಜಧನದ ಸಂಗತಿ. ಈ ಧನವನ್ನು ಹಿಂದಿನ ರಾಜಕಾರಣಿ ಸರ್ದಾರ್ ಪಟೇಲರು ರಾಜರಿಂದ ಉಳ್ಳವಿಸುವ ರಾಷ್ಟ್ರೀಯ ಪ್ರತಿಯನ್ನು ಅರಸು ತಲೆವಾರು ಪ್ರಕಾರ ಪರಿಹರಿಸಿದ್ದರು. ಬೀಗಿರುವಾಗ ರಾಜ ಮನೆತನದವರಿಗೆ ವಿಶೇಷ ಸವಲತ್ತು ಸಲ್ಲದು, ಇದರಿಂದ ಅವರನ್ನು ಸಮಾಜ ಉಚ್ಚ ವರ್ಗವೆಂದು ತಿಳಿಯುತ್ತದೆ. ಇದು ನಮ್ಮ ತತ್ವಕ್ಕೆ ವಿರೋಧವೆಂದು ಇದರ ರದ್ದತಿಗೆ ತೊಡಗಿದ್ದಾರೆ ರಾಜಕಾರಣಿಗಳು. ಇದರ ಪರಿಣಾಮ ದೊಡ್ಡದೇ. ಏಕೆಂದರೆ ಅವರೊಡನೆ ಇಂದು ಅಧಿಕರ ದಂಡ ಇಲ್ಲದಿದ್ದರೂ ಪ್ರಭಾವ ದಂಡ ಇನ್ನೂ ಉಂಟು. ಇವರು ಜನತೆಯ ಮೇಲೆ ತಮ್ಮ ಪ್ರಭಾವ ಬೀರಿದರೆ ಪರಿಣಾಮ ಸ್ವಲ್ಪ ದೊಡ್ಡದೇ ಆಗಬಹುದು.

ರಾಜ್ಯವಟ್ಟ ರಾಷ್ಟ್ರವಟ್ಟ ಸಮಸ್ಯೆಗಳಿಗೆ ಇದೊಂದು ನಿದರ್ಶನ.

ಈ ಸಮಸ್ಯೆ ಆಂದೋಳನಕ್ಕೆಲ್ಲಾ ಕಾರಣ ಸಂವಿಧಾನವನ್ನು ಆಗಾಗ ತಿದ್ದುಪಡಿ ಮಾಡಲು ಬರುವುದು. ಅಮೇರಿಕದ ಸಂವಿಧಾನದಂತೆ ಕಠಿಣ ಸಂವಿಧಾನ ನಮ್ಮಲ್ಲಿ ಇದ್ದಿದ್ದರೆ ಎಷ್ಟೋ ಸಮಸ್ಯೆಗಳು ಹುಟ್ಟುತ್ತಿದ್ದಿಲ್ಲ.

ನಮಗೆ ಆಡಳಿತ ಸ್ವಾತಂತ್ರ್ಯ ಇದ್ದುದೇನೋ ನಿಜ. ಹಾಗೆಂದು ಸಂವಿಧಾನವನ್ನು ತಿದ್ದುಪಡಿ ಮಾಡುತ್ತಾ ಹೋಗುವುದು ತರವಲ್ಲ. ಸಂವಿಧಾನ ತಿದ್ದದೆ ಜನತೆಯ ಆರ್ಥಿಕ ಸಾಮಾಜಿಕ ಪ್ರಗತಿ ಸಾಧ್ಯವಿಲ್ಲ ಎಂಬ ಮಾತು ಒಪ್ಪತಕ್ಕದ್ದೇ. ಆದರೆ ಆರ್ಥಿಕ ಸಾಮಾಜಿಕ ಪ್ರಗತಿ ಬರೆ ಸಂವಿಧಾನ ತಿದ್ದುಪಡಿಯಿಂದ ಸಾಧ್ಯವಿಲ್ಲ. ಜನರ ಮನೋಮಟ್ಟಕ್ಕೆ ಸರಿಯಾದ ಶಾಸನವಿರಬೇಕು. ಹೊರತು ಜನರ ಮನೋಮಟ್ಟ ಒಂದು ರೀತಿ ಸರಕಾರದ ಶಾಸನ ಒಂದು ರೀತಿಯಾದರೆ ಆ ಶಾಸನಕ್ಕೆ ಜನತಾ ಸರಕಾರದಲ್ಲಿ ಬೆಲೆಯಿಲ್ಲ.

ಸಂವಿಧಾನ ರಚನೆಯಾಗಿ ೧೮ ವರ್ಷವಾದುದಷ್ಟೆ. ಇಷ್ಟು ವರುಷದೊಳಗೆ ಸಂವಿಧಾನ ಎಷ್ಟು ಸಲ ತಿದ್ದುಪಡಿಯಾಗಿದೆ ಎಂದು ಯೋಚಿಸಿದರೆ ಸ್ವಲ್ಪ ಬೇಸರವಾಗತಕ್ಕದ್ದೇ. ನಮ್ಮ ಪ್ರಜಾಸ್ವಭುತ್ವ ಆಡಳಿತ ಸಂವಿಧಾನ ನಿರ್ದೇಶಿಸಿದ ಸಾರಿಯಲ್ಲಿ ನಡೆದರೆ ಭದ್ರವಾಗಿ ಬೇರೂರುತ್ತದೆ. ಆದರೆ ಬೇಕಾದುದಕ್ಕಿಂತ ಹೆಚ್ಚು ನಾವು ಬೇಡವಾದ ನಮಸ್ಯೆಗಳನ್ನೇ ಎತ್ತಿಕೊಂಡು ದೇಶದ ಅಶಾಂತಿಗೆ ಕಾರಣವಾಗಿದ್ದೇವೆ ನಮ್ಮ ಆಡಳಿತಗಾರರು ರಾಷ್ಟ್ರೀಯ ಏಕತೆಗೆ ಭದ್ರತೆಯೆಂದು ತಮ್ಮ ದೃಷ್ಟಿಗೆ ತೋರಿದ ಶಾಸನ ಮಾಡಿ ರಾಷ್ಟ್ರೀಯ ಏಕತೆಗೆ ಮಾರಕವಾದ್ದಾರೆ. ರಾಜಕಾರಣಿಗಳ ಸಂಕುಚಿತ ದೃಷ್ಟಿ ಅಪರಿಪಕ್ವ ಜ್ಞಾನಗಳೇ ಇದಕ್ಕೆ ಕಾರಣ. ನಮ್ಮ ದೇಶಕ್ಕೆ ಜನಹಿತ ಮತ್ತು ದಕ್ಷ, ನಿಷ್ಪಕ್ಷಪಾತ ಆಡಳಿತ ನಡೆಯಿಸುವ ರಾಜಕಾರಣಿಗಳು ಬೇಕಾಗಿದ್ದಾರೆ, ವಿನ ನಮ್ಮ ಭಿನ್ನಪಕ್ಷಕ್ಕಾಗಿ ಹೋರಾಡುವವರಲ್ಲ. ಇಂದು ಪ್ರಧಮತಃ ಗಮನ ಕೊಡಬೇಕಾದುದು ಪ್ರಜೆಗಳ ನೈತಿಕ, ಬೌದ್ಧಿಕ, ದೈಹಿಕ ವಿಕಾಸಕ್ಕೆ ಈ ವಿಕಾಸವನ್ನು ಸಾಧಿಸದೆ, ಬರೇ ಕಾಯಿದೆಯಿಂದ, ಭೌತಿಕ ಸೆ-ಗೊತ್ತುವಳಿಗಳಿಂದ ಸಾಧಿಸಲಾಗದು. ಕರ್ಮಠತೆಯಿದಕ್ಕೆ ಅವಶ್ಯಕ.

(ಎಂಟನೇ ಪುಟ ನೋಡಿರಿ)

A National Product
Providing Employment for more than
35,000 Workers

Made out of the finest Materials

MANGALORE
GANESH
BEEDIES

Smokers cannot afford to miss them

HEAD OFFICE
MANGALORE GANESH BEEDI WORKS
VINOBA ROAD : : : : MYSORE—5
Telephone : 421 Telegrams : AROMA

ಪಾಕಿಸ್ಥಾನದ ಅಧ್ಯಕ್ಷ ಅಯೂಬರ—

'ಒಡೆಯನಲ್ಲ ಗೆಳೆಯ'

೧

ಬರೆದವರು :

ಶ್ರೀ ಬಿ. ನರಸಿಂಗರಾವ್, ಕಾಸರಗೋಡು.

೧೯೬೭ ಆಗಸ್ಟ್ ತಿಂಗಳಲ್ಲಿ ಪಾಕಿಸ್ಥಾನದಲ್ಲಿ ಎರಡು ಪುಸ್ತಕಗಳು ಪ್ರಕಾಶಿತಗೊಂಡವು. ಇವುಗಳಿಗೆರಡೂ ವಿಶ್ವದ ಹಂಬೆಲ್ಲ ವಿಮರ್ಶೆ, ಟೀಕೆಗೊಳಗಾದವು. ಅಯೂಬ ಖಾನರ ಆತ್ಮಕತೆ "ಒಡೆಯನಲ್ಲ ಗೆಳೆಯ"(Friends not masters) ಹಾಗೂ ಚೌದರೀ ಮಹಮ್ಮದ್ ಅಲ್ಲಿಯವರ "ಜಹೂರೀ ಪಾಕಿಸ್ಥಾನ್"—ಇವೇ ಆ ಎರಡು ಬಹು ಚರ್ಚಿತ ಪುಸ್ತಕಗಳು. ಪಾಕಿಸ್ಥಾನದಲ್ಲಿ ಈ ಎರಡೂ ಪುಸ್ತಕಗಳಿಗೆ ಬಹಳ ಉತ್ತಮ ಸ್ವಾಗತ, ಬೇಡಿಕೆ ಇದೆ. "ಒಡೆಯನಲ್ಲ, ಗೆಳೆಯ" ವಿಶ್ವದ ಎಲ್ಲೆಡೆಗಳಿಂದಲೂ ವಿಮರ್ಶೆಗೆ ಒಳಗಾಗಿದೆ.

ಪುಸ್ತಕದ ಹೆಸರು

"ಒಡೆಯನಲ್ಲ ಗೆಳೆಯ" ಆಗಸ್ಟ್ ೧೦ ರಂದು ಪ್ರಕಟಗೊಂಡರೂ, ಪತ್ರಿಕೆಗಳಲ್ಲಿ ಈ ಮೊದಲೇ ಅದರ ಉಲ್ಲೇಖ, ವಿಮರ್ಶೆ ಕಾಣ ಬರುತಿತ್ತು. ಈ ಪುಸ್ತಕದ ಹೆಸರನ್ನು "ಸ್ಥಾಯಿತ್ವವೇ ಸುಖದಾಯಕ" ಎಂದು ಇಟ್ಟರೂ ಕೊನೆಗೆ ಅದನ್ನು "ಒಡೆಯನಲ್ಲ ಗೆಳೆಯ" ಎಂದು ಮಾರ್ಪಡಿಸಿದರು. ಈ ಹೊಸ ಹೆಸರು ಅಧ್ಯಕ್ಷ ಅಯೂಬ್ ೧೯೬೫ರಲ್ಲಿ ನೀಡಿದ ಭಾಷಣದಿಂದ ಆಯಿತಾಗಿದೆ. ಆ ಭಾಷಣದಲ್ಲಿ ಅವರು ಅಮೇರಿಕಾವನ್ನು ವಿಶ್ವಾಸಘಾತಕ ಮಿತ್ರನೆಂಬ ಪೆಲೆಯಲ್ಲಿ ಟೀಕಿಸಿದ್ದರು. ವಿಶ್ವದಲ್ಲಿ ಪಾಕಿಸ್ಥಾನದ ಅ-ಸುರಕ್ಷಿತೆಯನ್ನು ಸಾರಬಲ್ಲ ಸಾಧ್ಯತೆ ಈ ಪುಸ್ತಕಕ್ಕೆ ಇದೆ.

ಜನಪ್ರಿಯತೆ

ಈ ಪುಸ್ತಕವು ಜಪಾನಿ, ಫಾರ್ಸಿ, ಟರ್ಕೀ ಭಾಷೆಗಳಿಗೂ ಅನುವಾದವಾಗುತ್ತಿದೆ. ಕಾಶ್ಮೀರವು ಪಾಕಿಸ್ಥಾನದೊಡನೆ ಸೇರಿದ್ದ ಭೂಪಟವನ್ನೊಳಗೊಂಡ ಎರಡು ಚಿತ್ರಗಳನ್ನು ಭಾರತೀಯ ಪ್ರಕಟಣೆಯಿಂದ ಹೊರತುಪಡಿಸಲಾಗಿದೆಯೆಂದೂ ತಿಳಿದು ಬರುತ್ತಿದೆ. ಪುಸ್ತಕದ ಉರ್ದೂ, ಬಂಗಾಲಿ ಅನುವಾದವೂ ಶೀಘ್ರದಲ್ಲೆ ನೆರವೇರಲಿದೆ. ಅಯೂಬಖಾನರು ತನ್ನ ಮಂತ್ರಿಮಂಡಲದ ಪ್ರತಿಯೋರ್ವ ಸದಸ್ಯನಿಗೂ ಒಂದೊಂದು ಪ್ರತಿಯನ್ನು ಹಸ್ತಾಕ್ಷರ ಸಮೇತ ಇತ್ತಿದ್ದಾರೆ.

ಇದುವರೆಗೆ ಮಾರಾಟವಾಗದಷ್ಟು ಶೀಘ್ರದಲ್ಲಿ ರಾವಲ್ಪಿಂಡಿಯಲ್ಲಿ ಈ ಪುಸ್ತಕದ ಮಾರಾಟವಾಗಿದೆ. ಪಾಕಿಸ್ಥಾನದಲ್ಲಿ ಇದರ ಸಾದಾ ಪ್ರತಿಯ ಬೆಲೆ ಹನ್ನೆರಡೂವರೆ ರೂಪಾಯಿ.

ಕಟ್ಟಾ ಮುಸ್ಲಿಮ್ ಪರಿವಾರ

ತಮ್ಮ ರಾಜಕೀಯ ಆತ್ಮಕಥೆಯಲ್ಲಿ ಅಯೂಬಖಾನರು ತಮ್ಮ ಕೌಟುಂಬಿಕ ಕತೆಗಳನ್ನೂ ಹೆಣೆದಿದ್ದಾರೆ. ಅನು ಸಂಕ್ಷೇಪದಲ್ಲಿ ಕೇವಲ ಎಂಟು ಪುಟದಷ್ಟೆ ಇದೆ. ಉಳಿದ ವಿಷಯವೆಲ್ಲ ರಾಜಕೀಯದ್ದೇ. ತಾಯಿ ತನ್ನ ತಂದೆಯ ದ್ವಿತೀಯ ಪತ್ನಿಯ ಮಗನೆಂದಿದ್ದಾರೆ ಅಯೂಬರು. ತಂದೆ ಮೇಜರ್ ಆಗಿದ್ದರು. ಜನ್ಮಸ್ಥಳ ರಾವಲ್ಪಿಂಡಿಯಿಂದ ೫೦ ಮೈಲು ದೂರದಲ್ಲಿದೆ. "ತಂದೆ ಪವಿತ್ರ ವಿಚಾರಗಳ ವ್ಯಕ್ತಿ. ಕಟ್ಟಾ ಮುಸ್ಲಿಮ್ ರಾಷ್ಟ್ರವಾದಿ. ನಾನು ಹೇಸರಕತ್ತೆಯನ್ನೇರಿ ಶಾಲೆಗೆ ಹೋಗುತಿದ್ದೆ. ಚಿಕ್ಕಂದಿನಲ್ಲೆ ಕುರಾನಿನ ಪಠನಕ್ಕೆ ತೊಡಗಿದೆ. ಶಾಲೆಯಲ್ಲಿ ನಾನು ಸಾಮಾನ್ಯ ವಿದ್ಯಾರ್ಥಿ." ಎಂದು ಬರೆದಿದ್ದಾರೆ ಅಯೂಬ್. ಅನಂತರ ಅವರು ಸಿಖ್ ಶಾಲೆಯನ್ನು ಸೇರಿದರು; ಯುವಕ ಅಯೂಬ್ ಅಲೀಗಢಕ್ಕೆ ಆಗಮಿಸಿದರು ಉಚ್ಚ ಶಿಕ್ಷಣಕ್ಕೆ. ಇಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಲ್ಲರೂ ಆತನನ್ನು ಉರ್ದೂ ಉಚ್ಚಾರಣೆಯ ಬಗ್ಗೆ ಗೇಲಿ ಮಾಡುತಿದ್ದರು. ೧೯೨೭ ಜೂನ್‌ನಲ್ಲಿ ಸೆಂಡ್‌ಹರ್ಸ್ಟ್‌ಗೆ ಅವರನ್ನು ಆಯಲಾಯಿತು. ಹೀಗೆ ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳುವುದರಿಂದ ಮುಕ್ತಿ ದೊರೆಯಿತು. ಇದಕ್ಕೋಸ್ಕರ ಆತನಿಗೆ ಬಹಳ ಸಂತಸವೇ ಆಯಿತು.

ಸೈನಿಕ ಜೀವನ

"ಒಡೆಯನಲ್ಲ ಗೆಳೆಯ" ಪುಸ್ತಕದಲ್ಲಿ ೨೪೦ ಪುಟಗಳಿವೆ; ಇಂಗ್ಲೆಂಡಿನಲ್ಲಿ ಸೈನಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ತಾನು ಓರ್ವ ಗುಲಾಮ ದೇಶದ ನಾಗರಿಕನೆಂಬಾತನಿಗೆ ತೋಚಿತು. ತನ್ನ ಹಿರಿಯ ಕಮಾಂಡಿಂಗ್ ಆಫೀಸರ್‌ನೊಡನೆ ಆತನಿಗೆ ಉತ್ತಮ ಮೈತ್ರಿಯಿತ್ತು. ಸಮಕಾಲೀನ ಪಾಕಿಸ್ಥಾನೀ ರಾಜನೀತಿಜ್ಞರೊಡನೆ ಆತನಿಗೆ ಬಹಳಷ್ಟು ವಿರೋಧವಿತ್ತು. ವಿರೋಧವನ್ನು ಪ್ರಕಟಿಸುವ ಸಾಹಸ ಅವರಲ್ಲಿದ್ದೆ ಇತ್ತು. ಇದು ಸೇನಾ ಶಿಕ್ಷಣದಿಂದ ದೊರೆತ ಗುಣವೇ ಆಗಿತ್ತು.

ವಿದೇಶ ಧೋರಣೆ

ಓರ್ವ ಪಾಕಿಸ್ಥಾನಿ, ಏಶಿಯನ್, ಮುಸ್ಲಿಮ್ ಈ ದೃಷ್ಟಿಯಲ್ಲಿ ಅಯೂಬ್ ವಿಶ್ವವನ್ನು ಕಾಣಲು ಯತ್ನಿಸಿದ್ದಾರೆ. ವಿದೇಶ ಘಟನೆಗಳ ಬಗ್ಗೆ ಬರೆಯುತ್ತಾ ೧೯೬೫ರಲ್ಲಿ ತನ್ನ ರಶ್ಯಾ ಪ್ರವಾಸದ ಬಗ್ಗೂ ಬರೆದಿದ್ದಾರೆ. ತಾನು ತೆರಳಿದಲ್ಲೆಲ್ಲ ತನಗೆ ಆತ್ಮವಿಶ್ವಾಸದ ಬಗ್ಗೆ ದೃಢ ನಂಬುಗೆಯೂ ಯಿತೆಂದೂ ಅಯೂಬ್ ಅಂದಿನ್ನಾರೆ. ಭಾರತವನ್ನು ಹಿಗಳೆಯುತ್ತ, ಅದರ ಧೋರಣೆ, ಕಾರ್ಯಕ್ರಮಗಳು ಪಾಕಿಸ್ಥಾನಕ್ಕೆ ತೀರಾ ವಿರುದ್ಧವೆಂದಿದ್ದಾರೆ. ತನ್ನ ವಿದೇಶ ಧೋರಣೆಯು ಭಾರತದೊಡನೆ ಶಾಂತಿಯನ್ನೇ ಬಯಸುವುದೆಂದು, ಅವರ ವಾದ. ೧೯೫೧ರಲ್ಲಿ ಪಾಕ್ ಪ್ರಧಾನಿಯಾಗಿದ್ದ ಲಿಯಾಖತ್ ಅಲ್ಲಿಯವರು ಭಾರತದೊಡನೆ ಯುದ್ಧ ಸಾರಲು ಯತ್ನಿಸಿದರೂ ತಾನು ಅವರನ್ನು ಎದುರಿಸಿದನೆಂದೂ ಅಯೂಬರ ಬಡಾಯಿ! ೧೯೫೮ರಲ್ಲಿ ಆಕ್ರಮಿತ ಕಾಶ್ಮೀರದ ಮುಂದಾಳು ಗುಲಾಮ್ ಅಬ್ಬಾಸ್ ಕಾಶ್ಮೀರವನ್ನು ಮತ್ತೆ ಆಕ್ರಮಿಸಲು ಗಲಭೆಯೆಬ್ಬಿಸಿದರೂ ತಾನು ಒಪ್ಪಲಿಲ್ಲವೆಂದಿದ್ದಾರೆ ಅಯೂಬ್. ಅರ್ಥಾತ್ ತಾನು ಭಾರತದೊಡನೆ ಯುದ್ಧ ಮಾಡಲು ಇಚ್ಛಿಸುತ್ತಿಲ್ಲವೆಂದೇ ಅಯೂಬರ ಪೊಳ್ಳು ವಾದ. 'ಓದುವುದು ಶಾಸ್ತ್ರ, ಇಕ್ಕುವುದು ಗಾಳ' ಎಂಬುದಕ್ಕೆ ಬೇರೆ ಉತ್ತಮ ಉದಾಹರಣೆಯೇನಿದೆ?

ಪಾಕಿಸ್ಥಾನದ ವಿದೇಶ ಧೋರಣೆಯ ಪ್ರಸ್ತಾಪ ಬಂದಾಗಲೆಲ್ಲ ಭಾರತ ವಿರೋಧಿ ಭಾವವು ಎದ್ದು ಕಾಣುತ್ತದೆ. ೧೯೬೨ರಲ್ಲಿ ಚೀನಾವು ಭಾರತವನ್ನಾಕ್ರಮಿಸಿದಾಗ ಚೀನಿ ದೃಷ್ಟಿಕೋಣವನ್ನೇ ಅಯೂಬರೂ ಇಟ್ಟುಕೊಂಡು ಭಾರತೀಯ ಸೇನೆಯ ಕಾರ್ಯಕ್ರಮವನ್ನು ಹೀಗಳೆದಿದ್ದಾರೆ. ಭಾರತದ ಸೇನೆಯನ್ನು, ರಾಜಕೀಯ ಮುಂದಾಳುಗಳನ್ನು ಉತ್ತೇಜನಗೊಳಿಸಲೇ ಚೀನಾ ಭಾರತವನ್ನಾಕ್ರಮಿಸಿತೆಂದೇ ಅಯೂಬರ ಮೂರ್ಖ ವಾದ. ಅಲ್ಲದೆ ಕಾಶ್ಮೀರವನ್ನು ಕಬಳಿಸುವ ತನ್ನ ಹಳೆಯ ವಾದವನ್ನೆ ಇವರಲ್ಲಿ ಮರುಕಳಿಸಲಾಗಿದೆ.

ಭಾರತದ 'ಯುದ್ಧ ವಿರೋಧಿ ಮೈತ್ರಿ' ಯು ನೋಸ, ಕುತಂತ್ರಗಳ ಹಿನ್ನೆಲೆಯಲ್ಲಿ ಇದೆಯೆಂದು ಅವರಿಗೆ ಕಾಣುತ್ತದೆ. ಭಾರತವು ಪಾಕಿಸ್ಥಾನದ ಸೇನಾ ಬಲವನ್ನು ಕ್ಷಯಿಸುವ ತಂತ್ರವೇ ಇದು ಎಂದು ಅಯೂಬರ ವಾದ. ಇದರಿಂದ ಕಾಶ್ಮೀರವು ಭಾರತದ ಪೂರ್ಣ ಆಡಳಿತೆಗೆ ಬರುವುದಂತೆ! "ತನ್ನ ಸಾಂಸ್ಕೃತಿಕ, ರಾಜಕೀಯ ಐಕ್ಯವು ಪೂರ್ತಿಗೊಳ್ಳಲು ಪಾಕಿಸ್ಥಾನಕ್ಕೆ ಕಾಶ್ಮೀರದ ಅಗತ್ಯವಿದೆ. ಭಾರತವು ಎಂದೂ ನೆರೆಯ ಶಕ್ತಿಶಾಲೀ ಮುಸ್ಲಿಮ್ ಅಸ್ಥಿತ್ವವನ್ನು ಮನ್ನ ಮಾಡದು."

ಶೇಖ್ ಅಬ್ದುಲ್ಲಾ ಹಾಗೂ ಕಾಶ್ಮೀರ

ಭಾರತೀಯ ಕಾಂಗ್ರೆಸ್ ಹೋಳಾಗಿದ್ದು, ಭಾರತದ ರಶ್ಯಾ ಮೊದರಿಯ ಸಮಾಜವಾದವನ್ನು ಅನುಸರಿಸುತ್ತಿನೆಯೆಂದು ಅಯೂಬ್ ಭವಿಷ್ಯ ನುಡಿದಿದ್ದಾರೆ. ೧೯೬೪ರಲ್ಲಿ ನೆಹರೂರ ಆದೇಶದಂತೆ ಶೇಖ್ ಅಬ್ದುಲ್ಲಾ ಹಾಗೂ ಅಫಜಲ್ ಬೇಗ್ ಪಾಕಿಸ್ಥಾನಕ್ಕೆ ಅಯೂಬರನ್ನು ಭೆಟ್ಟಿಯಾಗಲು ತೆರಳಿದ್ದರು. "ಆಗ ತಾನು, ಅದರ ಭವಿಷ್ಯವು ಪಾಕಿಸ್ಥಾನವು ಕಾಶ್ಮೀರದೊಡನೆ ಸೇರುವುದರ ಮೇಲೆ ಹೊಂದಿಕೊಂಡಿದೆಯೆಂದಿದ್ದೆ."

ಶೇಖ್ ಅಬ್ದುಲ್ಲಾ ೧೯೬೧ ಸಪ್ತಂಬರ್ ೧೧ರಂದು ಈ ಪ್ರಸ್ತಾಪವನ್ನೆದುರಿಸಿದ್ದಾರೆ. "ಶ್ರೀ ನೆಹರೂ ನಮ್ಮನ್ನು ಅಯೂಬರಲ್ಲಿ ಕಳಿಸಿದ್ದು ಯಾವತ್ತೂ ರಾಜಕೀಯ ಕಾರ್ಯಕ್ಕಾಗಿಯಲ್ಲ. ನಾವು ಕೇವಲ ಸಾಂಸ್ಕೃತಿಕ ಐಕ್ಯಕ್ಕಾಗಿ ಹಣಗಾಡಿದ್ದೆವು." ಅಲ್ಲದೆ ಅಯೂಬರಿಗೆ ಅವರು ಒಂದು ಪತ್ರವನ್ನು ಬರೆಯುತ್ತಾ ಹೀಗೆಂದಿದ್ದಾರೆ— "ನನ್ನ ದೃಷ್ಟಿಯಲ್ಲಿ ರಾಷ್ಟ್ರಪತಿ ಅಯೂಬರು ಪ್ರಕಟಿಸಿದ ಯಾವತ್ತೂ ವಿಚಾರಗಳು ನನ್ನ ಪಾಲಿಗೆ ಅನ್ಯಾಯವನ್ನೇ ಸೂಚಿಸಿವೆ. ಕೇವಲ ನನಗಷ್ಟೆ ಅಲ್ಲ, ಸ್ವರ್ಗೀಯ ನೆಹರೂರವರಿಗೂ ಅವು ಅನ್ಯಾಯವನ್ನೇ ಸೂಚಿಸುತ್ತದೆ. ನಾನು ಕಾಶ್ಮೀರವನ್ನು ಪಾಕಿಸ್ಥಾನದೊಡನೆ ಸೇರಿಸುವ ಯಾವತ್ತೂ ಪ್ರಸ್ತಾಪಕ್ಕೆ ಒಪ್ಪಿಲ್ಲ."

೧೯೬೦ರ ಸೆಪ್ಟೆಂಬರ್‌ನಲ್ಲಿ ತನ್ನ ಹಾಗೂ ನೆಹರೂರವರ ಭೆಟ್ಟಿಯು, ನೆಹರೂ ಅವರು ಬಳಲಿದ್ದನ್ನು ತನಗೆ ಅಂದು ಮಾಡಿತೆಂದಿದ್ದಾರೆ ಅಯೂಬರು. "ಅಲ್ಲದೆ ಈ ಭೆಟ್ಟಿಯಿಂದ ಯಾವ ಲಾಭವೂ ದೊರೆತಿಲ್ಲ. ಅತನೋರ್ವ ರಾಜಕೀಯ ಮುಂದಾಳಾಗಿದ್ದನು ನಿಜ. ತನ್ನ ಕೆಲವು

ಪ್ರತಿಯೋರ್ವ ಗ್ರಾಹಕ ನಮಗೆ ಮಹಾರಾಜ

ನಮ್ಮೊಡನೆ ವ್ಯವಹರಿಸುವ ವ್ಯಕ್ತಿ ನಮಗೆ ಕೇವಲ ಗ್ರಾಹಕನಲ್ಲ. ಬ್ಯಾಂಕಿಂಗ್ ಸಂಸ್ಥೆಯಲ್ಲಿ ಮಾನವೀಯ ಸಂಬಂಧಕ್ಕಿರುವ ಪ್ರಾಮುಖ್ಯವನ್ನು ಬಲ್ಲ ನಾವು ನಮ್ಮ ಗ್ರಾಹಕರನ್ನು ಎಲ್ಲಕ್ಕಿಂತಲೂ ಹೆಚ್ಚೆಂದು ಬಗೆದಿದ್ದೇವೆ.

ವ್ಯಕ್ತಿಗೆ ಹೇಗೋ ಹಾಗೆ ಸಿಂಡಿಕೇಟ್ ಬ್ಯಾಂಕಿಗೆ ತನ್ನದೇ ಆದ ವ್ಯಕ್ತಿತ್ವವಿದೆ. ಸ್ನೇಹಮಯ, ಸೇವಾನಿಷ್ಠ, ವಿಶ್ವಾಸಪೂರ್ಣ ಎಂಬ ಗುಣವಿಶೇಷಗಳಿಂದ ಕೂಡಿದ ತನ್ನ ವ್ಯಕ್ತಿತ್ವದಿಂದ ಈ ಬ್ಯಾಂಕು ರಾಜ-ಮಹಾರಾಜರಿಂದ ತನ್ನ ತೀರಾ ಕಿರಿಯ ಠೇವಣಿದಾರನವರೆಗೆ ಎಲ್ಲರನ್ನೂ ಸಮಾನ ರೀತಿಯಲ್ಲಿ ನೋಡಿಕೊಳ್ಳುತ್ತದೆ. ಸೇವೆಯ ಉತ್ಕೃಷ್ಟತೆಯಿಂದ ಸಿಂಡಿಕೇಟು ಅವರೆಲ್ಲರನ್ನು ರಾಜರಂತೆ ಬಗೆಯುತ್ತದೆ. ಸಿಂಡಿಕೇಟಿನ ಈ ಗುಣವೇ ಅದರ ಪಟ್ಟು ಲಕ್ಷಕ್ಕೂ ಮಿಕ್ಕಿರುವ ಖಾತೆದಳಿಗೆ ಕಾರಣವಾಗಿದೆ.

ನಮ್ಮ ವ್ಯವಹಾರ ಸೂತ್ರವಿಷ್ಟೆ: ನಮ್ಮಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಲು ಯಾವೊಬ್ಬನೂ ನಮಗೆ ಕಿರಿಯನಲ್ಲ; ನಮ್ಮ ಬಾಗಿಲನ್ನು ಹೊಕ್ಕುವ ಎಲ್ಲಾ ಗ್ರಾಹಕರೂ ನಮ್ಮಿಂದ ರಾಜಮರ್ಯಾದೆ ಪಡೆಯಬಲ್ಲವರಾಗಿದ್ದಾರೆ.

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ವಿಚಾರಗಳನ್ನು ಅವರೂ ಒಪ್ಪಿದ್ದಾರೆ..."

ಚೀನಾದ ಪ್ರಸ್ತಾಪ

ಪಾಕಿಸ್ತಾನವು, ಅಮೇರಿಕಾ ಚೀನಾಗಳ ಉಭಯ ಪಕ್ಷೀಯ ಧೋರಣೆಯನ್ನು "ಹಗ್ಗದ ಮೇಲೆ ನಡೆಯುವ ಕ್ರಿಯೆ" ಎಂದಿದೆ. ೧೯೪೯ರಲ್ಲಿ ಚೀನಾ, ಪಾಕಿಸ್ತಾನದೊಡನೆ ಪ್ರಥಮವಾಗಿ ಪರಿಚಯ ಪಡೆಯಿತು; ಗಡಿಗಳ ಬಗ್ಗೆ ಒಪ್ಪಂದವೂ ಆಯಿತು. ಭಾರತದ ಮುಂದಾಳುಗಳಲ್ಲಿ ಚೀನಾಕ್ಕೆ ವಿಶ್ವಾಸವಿರದಿರುವುದರಿಂದ ಒಪ್ಪಂದ ನಡೆಯುವುದು ಕಷ್ಟಕರವೇ. ತಾನು ಅಮೇರಿಕಾದ ಇಚ್ಛೆಗೆ ವಿರುದ್ಧವಾಗಿ ಚೀನಾದೊಡನೆ ಮೈತ್ರಿ ಸಾಧಿಸಿದ್ದೇನೆಂದು ಅಯೂಬ್‌ಖಾನ್ ಒಪ್ಪುತ್ತಾರೆ. "ಕಾಸಬ್‌ಲಾಂಕಾದಿಂದ ತೊಡಗಿ ಜಕಾರ್ತಾದ ವರೆಗೆ ಒಂದು ವಿಶಾಲ ಮುಸ್ಲಿಮ್ ರಾಷ್ಟ್ರವನ್ನು ಸ್ಥಾಪಿಸುವ ಕನಸನ್ನು ಅಯೂಬ್ ಕಾಣುತಿದ್ದಾರೆ. ಭಾರತದ ಹೊರತಾಗಿಯೂ ಆ 'ಮಹಾರಾಷ್ಟ್ರ'ವು ಅಸ್ತಿತ್ವಕ್ಕೆ ಬರಬಹುದೆಂದು ಅಯೂಬರ ಆಶಾವಾದ.

ಸ್ವಪ್ರಶಂಸೆ—ಆತ್ಮವಿಶ್ವಾಸ

ಅಯೂಬರು ಅಧ್ಯಕ್ಷ ಪದವಿ ತನ್ನ ಕೈಗೆ ಬರುವ ಮೊದಲಿನ ಪಾಕಿಸ್ತಾನದ ರಾಜಕೀಯ ಸ್ಥಿತಿಯನ್ನು ವಿವರಿಸಿ, ತನ್ನ ರಾಜ್ಯದಲ್ಲಿ 'ಕ್ರಾಂತಿ' ನಡೆದಿದೆಯೆಂದಿದ್ದಾರೆ. ತನ್ನ ವಿಚಾರ ಧಾರೆಯನ್ನು ಜನತೆ ಸ್ವಾಗತಿಸಿದ್ದಾರೆಂದು ಅವರ ಅಭಿಪ್ರಾಯ. "ಭೂಸುಧಾರಣೆಯ ಹೆಸರಲ್ಲಿ ೬೦೦೦ ಜಮೀನ್ದಾರರಿಂದ ೨೭೦ ಲಕ್ಷ ಎಕ್ರೆ ಭೂಮಿಯನ್ನು ವಶಪಡಿಸಲಾಗಿದೆ. ಇದೊಂದು ದೊಡ್ಡ ಸಾಮಾಜಿಕ 'ಕ್ರಾಂತಿಯೇ' ಧರ್ಮಾಂಧ ಮೌಲವಿಗಳ ವಿರೋಧವಿದ್ದರೂ ತಾನು 'ಪ್ರಜಾಸತ್ತೆ'ಯನ್ನು ಯಶಸ್ವಿಯಾಗಿ ಆಚರಣೆಗೆ ತಂದಿದ್ದೇನೆಂದು ಅಯೂಬರ ನುಡಿ. ಪೂರ್ವ ಪಾಕಿಸ್ತಾನದ ಸಮಸ್ಯೆಯನ್ನು ಉಲ್ಲೇಖಿಸಿದರೂ ಅದಕ್ಕೆ ಪರಿಹಾರವೇನೂ ಹೇಳಿಲ್ಲ.

ಹುಸ್ತಲದ ಕೊನೆಯಲ್ಲಿ ೧೯೬೫ರಲ್ಲಿ ನಡೆದ ಅಧ್ಯಕ್ಷ ಚುನಾವಣೆಯ ಬಗ್ಗೆ ಉಲ್ಲೇಖವಿದೆ. ಜಿನ್ನಾರ ಸಹೋದರಿ ಕುಮಾರಿ ಫಾತಿಮಾರನ್ನು ಅಯೂಬರು ಎದುರಿಸಿದ್ದರು. ಅವಳನ್ನು ಪಾಕಿಸ್ತಾನಿಗಳು ಗೌರವದಿಂದ "ಮಾದರಿ ಮಿಲ್ಲತ್" ಎಂದು ಕರೆಯುತಿದ್ದರು. ಸರಕಾರದ ಧೋರಣೆಯನ್ನು ಎದುರಿಸುವ ಮೊದಲು ಅದನ್ನು ಜಿನ್ನಾಗಿ ಅರ್ಥಮಾಡಿಕೊಳ್ಳಬೇಕೆಂದು ಜನ್ನಾಳನ್ನು ಅಯೂಬರು ಕೇಳಿಕೊಂಡಿದ್ದರು. ಶ್ರೀಮತಿ ಜಿನ್ನಾ ಅದನ್ನು ಆಚರಣೆಗೆ ತರಲೇ ಇಲ್ಲವೆನ್ನುತ್ತಾರೆ ಅಯೂಬ್; ಕೊನೆಗೂ ಶ್ರೀಮತಿ ಜಿನ್ನಾ ತನ್ನನ್ನೆದುರಿಸಿದಳಲ್ಲಾ ಎಂಬುದೇ ಅಯೂಬರ ಬೇಡ. ತಾನೇ ಏಕಾಧಿಪತಿಯೆಂಬ ಆತನ 'ಆತ್ಮ-ವಿಶ್ವಾಸ'ಕ್ಕೆ ಶ್ರೀಮತಿ ಜಿನ್ನಾ ಕೊಡಲಿಯೇಟು ಬಿದ್ದಿದ್ದಳು!

ಪದ್ಮಾ ನದಿಯ ನಾವಿಕ

ನಾವಿಕ ಸುತ್ತಲೂ ಕಣ್ಣಾಡಿಸಿದ. ಕತ್ತಲೋ ಕತ್ತಲು. ಪದ್ಮಾ ನದಿ ಮಾನವಾಗಿ ಹರಿಯುತ್ತಿದ್ದಾಳೆ ಓ! ಹರಸನಹಳ್ಳಿ ತುಂಬಾ ದೂರವಿದೆ ಅಲ್ಲಿಗೆ ಹೋಗಬೇಕು ತಾನು ನಾಳೆ ಮುಂಜಾನೆ ಅಲ್ಲಿನ ಸಂತೆಯಲ್ಲಿ ತನ್ನ ಸರಕುಗಳನ್ನು ಸಾರಬೇಕು. ಸರಿ, ಈಗಲೇ ಹೊರಡುವುದು ಉತ್ತಮ, ಎಂದುಕೊಂಡು ದೋಣಿ ಬಿಚ್ಚಿ ಹೊರಟ. ಮುಂದೆ, ಮುಂದೆ, ಮುಂದೆ ಎಷ್ಟು ದೂರ ಬಂದಿದ್ದೇನೆ ಎಂಬ ಅರಿವು ಆತನಿಗೆ ಆಗಲಿಲ್ಲ. ನಾಳೆ ತನಗೆ ಎಷ್ಟು ಲಾಭ ಬಂದೀತು ಎಂಬುದೊಂದೇ ಯೋಜನೆ ಈ ಗುಂಗಿನಲ್ಲಿ ದೋಣಿ ಒತ್ತುವ ಆಯಾಸವೂ ಗೊತ್ತಾಗಲಿಲ್ಲ

ಮುಂಜಾನೆಯ ಕೋಳಿ ಕೂಗಿದಾಗ, ಇನ್ನೇನು ಹರಸನಹಳ್ಳಿ ಹತ್ತಿರ ಬಂದಿರಬಹುದು ಎಂದುಕೊಂಡು ಸಿಡ್ಡೆಗಣ್ಣಲ್ಲಿ ಸುತ್ತಲೂ ನೋಡಿದ. ಎಲಾ! ಅದೇ ಜಾಗ! ಕಣ್ಣುಜ್ಜಿಕೊಂಡು ಚೆನ್ನಾಗಿ ನೋಡಿದ. ಹೌದು, ತಾನು ಹೊರಟ ಜಾಗವೇ ಇದು ರಾತ್ರಿಯಿಡೀ ದೋಣಿ ಒತ್ತುತ್ತಲೇ ಇದ್ದರೂ ಹೊರಟ ಜಾಗದಿಂದ ಹೆಚ್ಚಿಗೆ ದೂರ ಬಂದಿರಲಿಲ್ಲ. ಕಾರಣ? ಬಲವಾದ ಪ್ರವಾಹಕ್ಕೆ ಎದುರಾಗಿ ಹೊರಟಿದ್ದ ಆತ.

ನಮ್ಮ ದೇಶದ ಪರಿಸ್ಥಿತಿಯೂ ಸಾಮಾನ್ಯ ಇದೇ ರೀತಿ. ಜನರ ಜೀವನ ಮಟ್ಟವನ್ನು ಸುಧಾರಿಸಲು ಇಪ್ಪತ್ತು ವರ್ಷ ಕಾಲ ಪ್ರಯತ್ನಿಸಿದಾಗ್ಯೂ ನಾವು ಹೊರಟಿಲ್ಲಿಂದ ಹೆಚ್ಚು ದೂರ ಬಂದಿಲ್ಲ. ಕೆಲವೆಡೆಗಳಲ್ಲಿ ಪ್ರಗತಿಯಾಗಿರುವುದೇನೋ ನಿಜ. ಆದರೆ ಆಹಾರದ ಪರಿಸ್ಥಿತಿಯನ್ನು ನೋಡಿ. 1951 ರಿಂದ 65 ವರೆಗಿನ 14 ವರ್ಷಗಳಲ್ಲಿ ದೇಶದ ಆಹಾರೋತ್ಪಾದನೆ 170 ಲಕ್ಷ ಟನ್ನು ಅಧಿಕಗೊಂಡಿದ್ದು. ಆದರೂ ಪ್ರತಿಯೊಬ್ಬ ವ್ಯಕ್ತಿಗೆ ದೊರೆಯುವ ಆಹಾರದ ಪ್ರಮಾಣ 0.4 ಟನ್ನು ಕಡಿಮೆಯಾಗಿರುತ್ತು. ಉದ್ಯೋಗದ ಮಟ್ಟಗೂ ಅಷ್ಟೇ. ಶಿಕ್ಷಣ ಕ್ಷೇತ್ರದಲ್ಲೂ ಅದೇ ವಾದು. ಇನ್ನೆಷ್ಟೋ ಕ್ಷೇತ್ರಗಳಲ್ಲಿ ನಮ್ಮ ಪ್ರಯತ್ನಗಳೆಲ್ಲ ನೀರು ಪಾಲಾಗಿವೆ ಕಾರಣ: ಏಗುತ್ತಿರುವ ನಮ್ಮ ಜನಸಂಖ್ಯೆ. ವರ್ಷಕ್ಕೆ 130 ಲಕ್ಷ ಜನ ನಮ್ಮ ದೇಶದಲ್ಲಿ ಹೆಚ್ಚಾಗುತ್ತಿದ್ದಾರೆ. ಈ ಸಮಸ್ಯೆ ನಿಜವಾಗಿಯೂ ಅತಿ ಗಂಭೀರವಾದ ಸಮಸ್ಯೆ.

ನೀವು ಈ ಸಮಸ್ಯೆಯನ್ನು ಪರಿಹರಿಸಬಹುದು. ಕುಟುಂಬ ಯೋಜನೆ ಮಾಡಿರಿ. ಇಂದೇ ಕುಟುಂಬ ಯೋಜನಾ ಕೇಂದ್ರಕ್ಕೆ ಹೋಗಿ ಉಚಿತ ಸೇವೆ ಪಡೆಯಿರಿ. ಮಿತ ಕುಟುಂಬ ಯೋಜನಾ ಕೇಂದ್ರಗಳು ಕೆಂಪು ಬಣ್ಣದ ತ್ರಿಕೋಣ ಸಂಕೇತವನ್ನು ಹೊಂದಿವೆ. ಇದು ಕುಟುಂಬಯೋಜನಾಸೇವೆಯ ಗುರುತು.

ಸ್ವಲ್ಪ ಮಕ್ಕಳನ್ನು ಪಡೆಯಿರಿ. ಎರಡು ಮಕ್ಕಳ ಸಂತರ. ಸಂತಾನ ಪ್ರಾಪ್ತಿ ನಿಲ್ಲಲಿ.



ಕೆಎಚ್‌ಪಿ 67/190

ಗುಪ್ತಲಿಪಿಯಾದ ಅಗೋಚರ ಬ್ರಹ್ಮ ಅದ್ಭುತ ಕಾರ್ಯಕರವೇ ಡಿಯನ್ಸೈ

(ಎರಡನೇ ಸುಟದಿಂದ)

ಈ ಡಿಯನ್ಸೈ ಕಣಗಳು ಸುರುಳಿಯಾಕೃತಿಯಲ್ಲಿ ತಿರುವಲ್ಪಟ್ಟು ಒಂದೆಲ್ಲಿಂದು ಜೋಡಿಸಲ್ಪಟ್ಟಿವೆ. ಅದು ಗುರುಳಿಯಾಕೃತಿಯಾಗಿ ರಚಿಸಲ್ಪಟ್ಟ ಮೂಲಗೆ ಮೆಟ್ಟಲನ್ನು ಹೋಲುವುದು. ಡಿಯನ್ಸೈ ಅಥವಾ ಇದೇ ಹೆಸರು "Deoxyribo nucleic acid". ಇಂತಹ ಡಿಯನ್ಸೈ ಸರಪಳಿಗಳು ಸಾಧಾರಣ ಉಷ್ಣತೆಯನ್ನು ಇದಿರಿಸಲ್ಪಟ್ಟವು. ಅವರೆ ಜಲಜನಕ ಬಾಂಬುಗಳಂತಹ ಪ್ರಬಲ ಅಣು ಪ್ರಸರಣಾ ಕಾರ್ಯ ವಾತಾವರಣದಲ್ಲಂತೂ ಅವರೆ ಅಣು ಪ್ರಸರಣ ಕಿರಣಗಳು ಎಮ್ಮ ದೇಹವನ್ನು ಹೊಕ್ಕು ಡಿಯನ್ಸೈ ಸರಪಳಿಗಳನ್ನು ತುಂಡರಿಸುತ್ತವೆ. ಇದರಿಂದಲಾಗಿ ಮುಂದಿನ ಜನಾಂಗದ ಜನತೆ ಅನೇಕ ರೀತಿಯ ರೋಗಗಳಿಗೆ ಗುರಿಯಾಗುವುದು ಮಾತ್ರವಲ್ಲದೆ ವಿವಿಧ ತರದ ಅಂಗ ವೈಕಲ್ಯಕ್ಕೆ ಕುರುಡುತನಕ್ಕೆ, ಕಿವುಡುತನಕ್ಕೆ ಬರಿಯಾಗಬೇಕಾಗುತ್ತದೆ. ಹಿರೋಶಿಮಾ, ನಾಗಸಾಕಿಗಳಲ್ಲಿ ಪ್ರಯೋಗಿಸಲ್ಪಟ್ಟ ಬಾಂಬುಗಳಿಂದ ಒರೆ ಮಿಲಿಯ ಗಟ್ಟಲೆ ಜನರು ಮೃತ್ಯು ದೇವತೆಯನ್ನು ಅಪ್ಪಿದುದು ಮೃತ್ಯುವು ಉಳಿದ ವ್ಯಕ್ತಿಗಳ ಶೇಷ ಜೀವನ ಹಾಗೂ ಮುಂದಿನ ಸಮಸ್ತ ಜನಾಂಗದ ಜೀವನವೇ ಅತ್ಯಂತ ಕಷ್ಟಮಯವಾಗಿ ವ್ಯತೀತವಾಗಿ ತ್ತಿದೆ.

ಪ್ರಕೃತಿಯಲ್ಲಿ ಸಕಲವಾಗಿ ತಿಳಿದವರು ನಮುಂಜಕರಾಗಿ ಹುಟ್ಟುವುದಿಲ್ಲ. ಇದಕ್ಕೆ ಕಾರಣವೇನು? ಇದಕ್ಕೂ ವಿಜ್ಞಾನಿ ಕಾರಣ ಕಂಡು ಹಿಡಿದಿದ್ದಾರೆ ಕ್ರೋಮೋಸೋಮುಗಳು ವಿಭಜನೆ ಕಾಲದಲ್ಲಿ ಸರಿಯಾದ ವಿಭಜನೆಗೆ ಗುರಿಯಾಗದೆ ಇರುವುದೇ ಇದಕ್ಕೆ ಕಾರಣ. ಹಾಗೆ ವ್ಯಕ್ತಿಯ ಒಂದು ಭಾಗ ಬರೇ ಹೆಣ್ಣತನಕ್ಕೆ ಇರುವ ಕ್ರೋಮೋಸೋಮುಗಳನ್ನು ಪಡೆದರೆ ಇನ್ನೊಂದು ಭಾಗ ಬರೇ ಗಂಡುತನಕ್ಕಿರುವ ಕ್ರೋಮೋಸೋಮುಗಳನ್ನು ಪಡೆಯುತ್ತವೆ.

ಡಿಯನ್ಸೈಯಂತಹ ಇನ್ನೊಂದು ಸ್ಯೂಕ್ಲಿಯಿಕ್ ಎಸಿಡ್ ಆರ್ಎನ್ಎ ಅಥವಾ ರಿಬೊನ್ಯೂಕ್ಲಿಯಿಕ್ ಎಸಿಡ್. ಇದು ಮಾನವನ ನೆನಪಿನ ಶಕ್ತಿಗೆ ಕಾರಣವಾದ ಎಸಿಡ್. ಇದು ನ್ಯೂಕ್ಲಿಯಿಕ್‌ನ ಒಳಗೆ ಮಾತ್ರವಲ್ಲ ಹೊರಗಿನ ಸೈಟೋಪ್ಲಾಸಂನಲ್ಲೂ ಕಂಡು ಬರುತ್ತದೆ. ಇದರ ಅಂತಹಟ್ಟಿದ್ದನ್ನು ಮಾನವನಲ್ಲಿ ನೆನಪಿನ ಶಕ್ತಿ ಹೆಚ್ಚಿರುತ್ತದೆ. ಇದು ಸಾಧಾರಣ ಎಂಟ ವರ್ಷಗಳ ವರೆಗೆ ಮನುಷ್ಯನಲ್ಲಿ ಹೆಚ್ಚಿರುತ್ತದೆ. ಮನುಷ್ಯನು ಮುದುಕನಾದಂತೆ ಅದರ ಅಂಶ ಕಡಿಮೆಯಾಗಿ ನೆನಪಿನ ಶಕ್ತಿ ಕುಂಠಿತವಾಗುವುದು. ಅದುದರಿಂದ ವಿದ್ಯಾರ್ಥಿಗಳಲ್ಲಿ ಆರ್ಎನ್ಎ ಪ್ರಮಾಣ ಹೆಚ್ಚುವಂತೆ ಮಾಡಲು ಸಾಧ್ಯವಾದರೆ ಜ್ಞಾಪಕ ಶಕ್ತಿ ಕಲಿಯುವ ಶಕ್ತಿ—ಎರಡನ್ನೂ ಹೆಚ್ಚಿಸಬಹುದು. ವೈಜ್ಞಾನಿಕ ದೃಷ್ಟಿ ಈ ಸಂಗತಿಯತ್ತ ಹರಿಯುತ್ತಿದೆ.

ಕ್ರೋಮೋ ಸೋಮು, ಡಿ. ಎನ್. ಎ.; ಆರ್. ಎನ್. ಎ. ಇವುಗಳ ಬಗ್ಗೆ ವೈಜ್ಞಾನಿಕ ಸಂಶೋಧನೆ ನಡೆದಷ್ಟು, ಸಮಸ್ಯೆ ಬಿಡಿಸಿದಷ್ಟು ಹೆಚ್ಚಷ್ಟು ಅದು ಜಟಿಲವಾಗುತ್ತಿರುವುದು ಒಂದು ಔಚಿತ್ಯಕರ ವಿಷಯ. ಕ್ರೋಮೋಸೋಮು, ಡಿಯನ್ಸೈ ಏನೇ ಇರಲಿ—ಇವೆಲ್ಲವನ್ನು ಪಡೆಯುವ ಸಕಲ ಲೋಕ ಧಿರೂಪುಕರಾದ ಒಬ್ಬ ಪರಬ್ರಹ್ಮ, ಒಬ್ಬ ಸಚ್ಚಿದಾನಂದ ಕೇಶವ, ಒಬ್ಬ ದೇವರು ಈ ಲೋಕದಲ್ಲಿ ಇದ್ದೇ ತೀರಬೇಕು. ಮಾತ್ರವಲ್ಲ ಅವನ ಅಸ್ತಿತ್ವವಿಲ್ಲದೇ ಹೋದಲ್ಲಿ ಜಗತ್ತಿನ ಅಸ್ತಿತ್ವ ಸಾಧ್ಯವಿಲ್ಲ.

ಪ್ರಭುತ್ವ ಸಂಪನ್ನ ಗಣರಾಜ್ಯ

(ಎರಡನೇ ಸುಟದಿಂದ)

ನಾವು ಎಮ್ಮ ಸಂವಿಧಾನ ಕೊಟ್ಟ ಪವಿತ್ರವಾದ ಹಕ್ಕುಗಳನ್ನು ರಾಷ್ಟ್ರ ಬಾಂಧವರ ಎಳಿಗೆ ಅಂತಾರಾಷ್ಟ್ರೀಯ ರಂಗದಲ್ಲಿ ಭಾರತದ ಘನತೆಗೆ, ಎಲ್ಲಾ ರಾಷ್ಟ್ರಗಳೊಡನೆ ಸೌಹಾರ್ದಯುತ ಎದ್ದು ಅನ್ಯೋನ್ಯತೆಯನ್ನು ಸಾಧಿಸುವುದು, ವಿಶ್ವ ಸಮಸ್ಯೆಗಳನ್ನು ನ್ಯಾಯ ದೃಷ್ಟಿಕೋನದಿಂದ ನೋಡುವುದು, ಮಾನವೀಯತೆಗಾಗಿ ಸತ್ಯ ಧರ್ಮದಿಂದ ಹೋರಾಡುವುದು, ಶಾಂತಿ ಪ್ರೇಮ ಭಾರತವನ್ನು ಸುಖೀ ರಾಜ್ಯದ ಗುರಿಯತ್ತ ಕೊಂಡೊಯ್ಯುವುದು.—ಮುಂತಾದುವುಗಳ ಕಡೆಗೆ ಗಮನ ಕೊಡಬೇಕು.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. I. A. 124/1967
S. C. 66/67

ವಾದಿ—ಕಾವೇರಿ ಸೆಟ್ಟಿ.

ಪ್ರತಿವಾದಿ—ಮಂಜ ನ್ಯಾಕ, ಮೊಗೇರ ಮಂಕ ಮಗ, ಹಳ್ಳಾಡಿ ಗ್ರಾಮದ ಹೊಳೆಮೊಗೆ ಕಳಿಸಿ ಮನೆಯಲ್ಲಿರುವವ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸಿದ್ದು,

ಮೇಲಿನ ದಾವೆಯನ್ನು ಸುನಾಹಾ ಸ್ವಾಲಿಗೆ ತೆಗೆದುಕೊಂಡು ತನ್ಮಯಿಂದ ತೀರ್ಮಾನಿಸಬೇಕಾಗಿ ವಾದಿಯು ದಾಖಲು ಮಾಡಿದ ಮೇಲಿನ ಅರ್ಜಿ ತನ್ಮಯು ತಾರೀಖು 16—2—1968 ಕ್ಕೆ ಇಟ್ಟಿರುತ್ತದೆ. ಆ ಕಾರಣ ನಿಮ್ಮದ್ದೇನಾದರೂ ಅಕ್ಷೇಪಣೆಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟ್‌ನಲ್ಲಿ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ತಿಳಿಸಿರುತ್ತದೆ.

(ಕೋರ್ಟು ಹುಂ ಪ್ರಕಾರ)

Y. Tejappa Shetty
Advocate for Plff.

Coondapoor, 24—1—1968

ಪುಡಿಗತೆಗಳು:

೬ ನಂಬಬಾರದಯ್ಯಾ

"ಈಗ ಮಂತ್ರಿಯಾಗಿ ಬಂದವರು ಯಾರು ಗೊತ್ತೆ? ನನ್ನ ಸ್ನೇಹಿತನೇ. ಹಂದೆ ಪಾನಾಗ ಅವನೂ ಎಷ್ಟೋ ಸಾರಿ ಒಂದೇ ಮೇಜು ಮೇಲೆ ಕಾಫೀ ಕುಡಿದಿದ್ದೇನೆ...ವ್ಯಾಜಿಸ್ಟ್ರೇಟರ ಮಕ್ಕಳು ನನ್ನ ಹೆಸರಿನ ಟ್ಯೂಶನ್ ಹೇಳಿಸಿಕೊಂಡವರು.... ಪತ್ರಿಕೆಗಳು ಸಂಪಾದಕ ನನ್ನ ಅತ್ತೆಯ ಚಿಕ್ಕಪ್ಪನ ಮಗಳ ಅಳಿಯ....ಹೇಳಿದ ಉಳ್ಳವರು ಇನ್ಸ್‌ಪೆಕ್ಟರು ನನ್ನ ಡಿಯರೆಸ್ಟ್ ಫ್ರೆಂಡು. ಶಾಲೆಯಲ್ಲಿ ನಾನು ಅವನ ಮೇಲೆ ಚೆಂಡು ಬಿಸುಡುವುದೇನು—ಅವ ನೆಲ ಹಿಡಿಯುವುದೇನು?..."ಹೀಗೆ ಪ್ರತಿಯೊಬ್ಬರೂ ತನ್ನವರೇ ಎಂಬ ಹಾಗೆ ಮಾತಾಡುವವನು ತನ್ನ ಹೊಸ ಮಿತ್ರನಾಗಿ ಬಂದ ಭೂಪಾಲ. ಅವನಾಗಿ ಮೇಲೆ ಬಿದ್ದು ಬಿದ್ದೇ ತನ್ನ ಮಿತ್ರನಾದದ್ದು.

ಒಮ್ಮೆ ಹೇಳಿದಂತೆ ಇನ್ಸ್‌ಪೆಕ್ಟರಿಂದ ನನಗೊಂದು ಕೆಲಸವಾಗಬೇಕಿತ್ತು. "ನಾನು ಒಂದೇ ದಿನದಲ್ಲಿ ಮಾಡಿಸಿ ಕೊಡುತ್ತೇನೆ!" ಅಂದ. ನನ್ನಿಂದಲೇ ಕಾಫಿ ಇಡ್ಲೀ ಗಿಟ್ಟಿಸಿಕೊಂಡ ಭೂಪಾಲ. ಅವನ ಮೂಲಕವೇ ಪ್ರಯತ್ನ ಸಾಗಿಸಿದೆ. ಆ ಒಂದೇ ದಿನ ಬರಲು ಸಲುವತ್ತು ದಿನ ಬೇಕಾಯಿತೆಂಬ ಸತ್ಯ ಆಗ ಗೊತ್ತಾಯಿತು.

"ಇದೇನಮ್ಮ, ಇಷ್ಟು ದಿನವಾಯಿತಲ್ಲಾ—" ಎಂದು ಕೇಳಿದ್ದಕ್ಕೆ ಅತ ಹೇಳಿದ ಉತ್ತರ: "ನನಗೆ ಪರಿಚಯವಿದ್ದವ ಪಾದ್ದರಿಂದಲೇ ಸಲುವತ್ತು ದಿನದೊಳಗೆ ಮುಗಿಯಿತು. ಇಲ್ಲದಿದ್ದರೆ ನಾಲ್ಕು ತಿಂಗಳು ಬೇಕಾಗುತಿತ್ತು ಫಿಫಗೆ".

ಇವನ್ನು ಕೇಳುವಾಗ ಒಬ್ಬರು ಭಕ್ತರು ದೇಗುಲ ಮೂರು ನೆನಪಾಗುತ್ತದೆ. ಅವರು ದೇವರಿಗೆ ಹೇಳಿಕೊಂಡು ಸಲಾಯಿಸುತ್ತಾ ಇರುವ ಪರಕೆಗಳಿಗೆ ಲೆಕ್ಕವೇ ಇಲ್ಲ. ಅವರೂ ಅವರು ಯಾವಾಗಲೂ ಕೊರತೆಗಳಿಂದ, ನೋವುಗಳಿಂದ ಕೊರಗಿಕೊಂಡೇ ಇರುತ್ತಾರೆ. "ಮತ್ತೇಕೇ ಸುಮ್ಮನೆ ಪರಕೆ ಹೇಳಿಕೊಳ್ಳಿರಿ?" ಎಂದು ಕೇಳಿದ್ದಕ್ಕೆ ಅವರು ದೇಗುಲದುತ್ತರ ನನ್ನನ್ನು ಮೂಕನಾಗಿಸಿತ್ತು: "ಪರಕೆ ಹೇಳಿಕೊಳ್ಳುತ್ತಾ ಇರುವುದರಿಂದಲೇ ಇಷ್ಟರ ಮಟ್ಟಿಗಾದರೂ ಬದುಕಿಕೊಂಡಿದ್ದೇನೆ, ಇಲ್ಲದಿದ್ದರೆ ನನ್ನ ಗತಿ ಇನ್ನೂ ನಿಕೃಷ್ಟವಾಗುತಿತ್ತು."

"ನವಗಿರಿನಂದ"

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. 232/1967 of Munsif Court Mangalore— Execution Case No. 8/1967.

K. P. ವಿಜಯನ್ & Co., ಮಂಗಳೂರು—ಇದರ ಪಾರ್ಟನರ್ K. P. ವಿಜಯನ್ —ಅರ್ಜಿದಾರ.

ಮತ್ತು

B. ತೇಜಪ್ಪ ಶೆಟ್ಟಿ—ಮಂಡಾಡಿ ಕಾಳಿಪ್ಪ ಶೆಟ್ಟಿ ಮಗ, Proprietor of 'Jagajeevan Rice Mills' Kokkarne— ಉಡುಪಿ ತಾಲ್ಲೂಕು ನಂಬ್ರ 34ನೆ ಕುದಿಗ್ರಾಮದ ಕೊಳ್ಳರ್ಕೆ —ಎದ್ರಿ.

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲ್ಕಂಡ ಅಮ್ಲಜ್ಜಾರಿ ಅರ್ಜಿಯಲ್ಲಿ ಎದ್ರಿಯಕ್ಕಿನ ಸ್ಥಿರಾಸ್ತಿಗಳು ಜಪ್ತಿ ಆಗಿದ್ದು ಸದ್ರಿ ಜಪ್ತಿಯ ಪ್ರೊಸೀಡಿಂಗ್ ಆರ್ಡರ್ ಎದ್ರಿ ಮೇಲೆ ಜ್ಯಾರಿ ಬಗ್ಗೆ ಅಮ್ಲಜ್ಜಾರಿಯನ್ನು ತಾ. 2—8—1969ಕ್ಕೆ ಇಟ್ಟಿರುವುದ್ರಿಂದ ಎದ್ರಿಗೇನಾದರೂ ಆಕ್ಷೇಪಣೆಯಿರುವ ಸಂಗತಿಯಲ್ಲಿ ಅದನ್ನು ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಲಿಕ್ಕೆ ತಪ್ಪಿದರೆ ಸದ್ರಿ ಅಮ್ಲಜ್ಜಾರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for decree-holder.

ಉಡುಪಿ, ತಾ. 7-2-1968.

ಗೀತೆಯ ಕೈಗನ್ನಡಿ

ಶ್ರೀ ಮಧ್ವಾಚಾರ್ಯರ ಪ್ರಣೀತ ಭಗವದ್ಗೀತಾ ತಾತ್ಪರ್ಯ ಸಂಗ್ರಹ



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ವಿಸ್ತೃತ ಬೆಲೆ ರೂ. 1-50

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಎಲ್ಲೆಲ್ಲಿ ಏನೇನು?

ಗಂಗೊಳ್ಳಿ ಸೇತುವೆಯ ಉದ್ಘಾಟನೆ

ದ. ಕನ್ನಡದ ಕುಂದಾಪುರ ಸಬಡಿವಿಜನ ಅತಿ ದೊಡ್ಡ ಗಂಗೊಳ್ಳಿ ನದಿಗೆ ಕಟ್ಟಲಾದ 5 ಸೇತುವೆಗಳನ್ನು ತಾ. 8ರಂದು ರಾಜ್ಯದ ಮುಖ್ಯಮಂತ್ರಿ ಹಾಗೂ ಅ. ಭಾ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸುತ್ತಾ ದೇಹಕ್ಕೆ ರಕ್ತನಾಳಗಳಂತೆ ದೇಶದ ಪ್ರಗತಿಗೆ ಸೇತುವೆಗಳು ಚೇತನಕಾರಿಯೆಂದರು. ಕೇಂದ್ರ ಮಂತ್ರಿ ಡಾ|| ವಿ. ಕೆ. ಆರ್. ವಿ. ರಾವ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಾನ್ಯ ನಿಜಲಿಂಗಪ್ಪನವರು ದಿವಂಗತ ಯು.ಎಸ್. ಮಲ್ಯರ ಅಗಾಧಕಾರ್ಯ, ಬುದ್ಧಿ ಶಕ್ತಿ ಮತ್ತು ನಿಸ್ವಾರ್ಥಸೇವೆಯನ್ನು ಪ್ರಶಂಸಿಸಿ ಅವರು ದೇಶದ ಉನ್ನತಿಗಾಗಿ, ಬಂದರ್, ಕೃಷಿ ಕಾರ್ಖಾನೆಗಳ ಅಭಿವೃದ್ಧಿ ಇತ್ಯಾದಿಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಹಣ ಒದಗಿಸುವಂತೆ ಮಾಡಿದ್ದಾರೆಂದರು, ಮುಂದುವರಿಯುತ್ತಾ ಈ ಸೇತುವೆಗಳ ವಿಶಿಷ್ಟ ಉಪಯೋಗವನ್ನು ವಿವರಿಸಿ, ದ. ಕನ್ನಡ ಜಿಲ್ಲೆಯ ಎಲ್ಲಾ ಸೇತುವೆ ಕಾರ್ಯಗಳೂ ಮುಗಿದಂತಾಯಿತೆಂದರು. ಇಂಡಿಯಾದ್ "ಗೇಮ್ಸ್ ಆಫ್ ಇಂಡಿಯ"ದಿಂದ ಅಗಾಧಕಾರ್ಯವನ್ನು ಕೊಂಡಾಡಿದರು. ಸೇತುವೆಯ ಪೋಗ್ರಾಮ ಕೆಲವು ದಾರಿಯಲ್ಲಿ ಪರ್ಮಿಸಲಾದ ದಿವಂಗತ ಲಾಲ್ ಬಹದೂರ್ ಶಾಸ್ತ್ರಿಯವರ ಎದೆಮಟ್ಟದ ಪ್ರತಿಮೆಯೊಂದನ್ನು ಡಾ|| ವಿ. ಕೆ. ಆರ್. ವಿ. ರಾವ್ ಅನಾವರಣ ಗೈದರು. ಇದಕ್ಕೆ ಡಾ|| ರಾವ್ ಅಧ್ಯಕ್ಷ ಸ್ಥಾನದಿಂದ ದೂರಾಗಿ ದೇಶದ ಆರ್ಥಿಕ ಪ್ರಗತಿಗೆ ಶಿಕ್ಷಣಮತ್ತು ರಸ್ತೆಗಳ ಪಾತ್ರ ಅಪಾರವಾಗಿದೆಯೆಂದರು. ಪ್ರಾರಂಭದಲ್ಲಿ ಪ್ರಾರ್ಥನೆಯೊಡನೆ ರಾಜ್ಯದ ಲೋಕೋಪಯೋಗಿ ಸಚಿವ ಶ್ರೀ ವೀರೇಂದ್ರ ಪಾಟೀಲರು ಸ್ವಾಗತವನ್ನು ಬಯಸಿ ದಿವಂಗತರ ಮಲ್ಯರನ್ನು ದ. ಕನ್ನಡ ಜಿಲ್ಲಾಭಿವೃದ್ಧಿಯ ಕಾರಣಪುರುಷರೆಂದರು. ಇವರು 80ಸೇತುವೆಗಳ ರಚನಾ ಕಾರ್ಯಕ್ಕೆ ಕಾರಣಕರ್ತರೆಂದರು. ಅಲ್ಲದೇ ಇವರ ಪ್ರಯತ್ನದಿಂದ ರಚಿಸಲ್ಪಡುತ್ತಿರುವ ಹೊನ್ನಾವರ ಸೇತುವೆಯು 1969ರಲ್ಲಿ ಮುಕ್ತಾಯವಾಗಲಿದೆ, ಮಂಗಳೂರು ಬಂದರು ಆಯಾತ್ರು ಪೆದ್ದಾರಿಗಳಾದುವೆಂದರು. ಇನ್ನೊಂದು ಮರಂತೆಯಲ್ಲಿ ಪ್ರವಾಸಿ ಮಂದಿರವೊಂದು ಆಗಬೇಕೆಂದು ಆಲೋಚಿಸುತ್ತಿರುವಾಗಲೇ ಅವರು ಅಮರರಾದರು. ಆದರೆ ದಿವಂಗತ ಶಾಸ್ತ್ರಿಯವರು ಇದನ್ನು ಕಾರ್ಯರೂಪಕ್ಕೆ ತಂದಿರುವರೆಂದರು. ಅಂತ್ಯದಲ್ಲಿ "ಗೇಮ್ಸ್ ಆಫ್ ಇಂಡಿಯಾ ಲಿಮಿಟೆಡ್, ಬಾಂಬೆ" ಇದರ ಪೈರೆಕ್ಟರ್ ಶ್ರೀ ಎಸ್. ಡಿ. ಪಿಂಜೆಯವರು ಅಭಾರ ಮನ್ನಣೆಯಿತ್ತರು. ಮುಖ್ಯ ಇಂಜಿನಿಯರ್ ಶ್ರೀ ಕೆ. ಬಸಣ್ಣನವರು ಸೇತುವೆ ಕಾರ್ಯದ ವರದಿಗಳನ್ನೊಪ್ಪಿಸಿದರು. ಮೈಸೂರು ರಾಜ್ಯ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ|| ಕೆ. ನಾಗಪ್ಪ ಅಲ್ವರೂ ಈ ಸಮಯದಲ್ಲಿ ಉಪಸ್ಥಿತರಾದ್ದರು.

ಮಣಿಪುರ ಪಂಚಾಯತ್ ಸ್ವಂತ ಕಟ್ಟಡದ ಶಿಲಾನ್ಯಾಸ

ಉಡುಪಿ ತಾಲೂಕು ಮಣಿಪುರ ಪಂಚಾಯತಿ ವತಿಯಿಂದ ಸಂಚಾಯತ್ ಆಫೀಸಿನ ಸ್ವಂತ ಕಟ್ಟಡ, ಆರೋಗ್ಯ ಕೇಂದ್ರ ಮಾದರಿ ದವಾಖಾನೆ ಮತ್ತು ಮಹಿಳಾ ಮಂಡಲಗಳ ಸಂಯುಕ್ತಾಸನ ಕಾರ್ಯಕ್ರಮವು ಶ್ರೀ ಬಿ. ಎಸ್. ಶೆಟ್ಟಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್, ತಾಲೂಕು ಡೆವಲಪ್‌ಮೆಂಟ್ ಬೋರ್ಡ್, ಉಡುಪಿ ಇವರ ಅಧ್ಯಕ್ಷತೆಯಲ್ಲಿ ತಾ. 18-1-68ರಂದು ನೆರವೇರಿತು.

ಶ್ರೀ ಪಿ. ವಿ. ಪ್ರಭು ಅಸಿಸ್ಟಾಂಟ್ ಕಮಿಷನರ್, ಕುಂದಾಪುರ ಇವರಿಂದ ಆರೋಗ್ಯ ಕೇಂದ್ರ ಮಾದರಿ ದವಾಖಾನೆಯ ಶಿಲಾನ್ಯಾಸವೂ, ಶ್ರೀ ಪೆಜಮಾಡಿ ರಾಮಚಂದ್ರಾಚಾರ್ಯರ ಧರ್ಮಪತ್ನಿ ಶ್ರೀಮತಿ ಭವಾನಮ್ಮನವರು ಪಂಚಾಯತಿಗೆ ದಾನವಾಗಿ ಎಡೆಪಡುಕಟ್ಟೆಯಲ್ಲಿ ಕೊಟ್ಟಿರುವ ಸ್ಥಳದಲ್ಲಿ ಪಂಚಾಯತ್ ಆಫೀಸಿನ ಶಿಲಾನ್ಯಾಸವೂ ಮತ್ತು ಶ್ರೀ ಎಂ. ಸೋಮನಾಥ್, ಚೀಫ್ ಆಫೀಸರ್, ಉಡುಪಿ ಮುನಿಸಿಪಾಲಿಟಿ ಇವರಿಂದ ಮಹಿಳಾ ಮಂಡಲದ ಸಂಯುಕ್ತಾಸನೆಯೂ ಪೂರೈಸಲ್ಪಟ್ಟವು. ಈ ಸಂದರ್ಭದಲ್ಲಿ ಉಡುಪಿ ತಹಶೀಲ್ದಾರರಾದ ಮತ್ತು ಇಂಜಿ ಡಿವಿಜನ್ ಇ. ಡಿ. ಇ. ಅವರು ಬಾಸಣಿಗೆ ಮತ್ತು ಶ್ರೀ ಜನಾರ್ದನಾಚಾರ್ಯ ನೆಕರೂರವರ ಭಾಷಣ ಅನಾವರಣ ಮಾಡಿದರು.

ಶ್ರೀ ಪಿ. ವಿ. ಪ್ರಭುಗಳು ಮಾತನಾಡುತ್ತಾ ಮಣಿಪುರದಲ್ಲಿ ಈಗಾಗಲೇ ಕುಟ್ಟುವ ಹಲವಾರು ಸಾರ್ವಜನಿಕ ಸಂಘ ಸಂಸ್ಥೆಗಳನ್ನು ಮುಂದಕ್ಕೂ ಬಳ್ಳೆಯ ರೀತಿಯಲ್ಲಿ ಬೆಳೆಸಿಕೊಂಡು ಹೋಗಲು ಪಳ್ಳಿಗರು ಬಂದಾಗಿ ಮಾಡಿಯೆ. ಬೇಕು, ಹಾಗೂ ಪಕ್ಷಗಳ ಭೇದಭಾವಗಳನ್ನು ಬಿಟ್ಟು ದೇಶಸೇವೆಗಾಗಿ ಪಣತೊಡಬೇಕೆಂದು ಹೇಳಿದರು. ಶ್ರೀ ಸೋಮನಾಥರವರು ಮತ್ತು ಸಭಾಧ್ಯಕ್ಷರು ಮಣಿಪುರ ಪಂಚಾಯತಿನ ಕೆಲಸ ಕಾರ್ಯಗಳನ್ನು ಶ್ಲಾಘಿಸಿ ಮಣಿಗಾರವು ಒಂದು ಮಾದರಿ, ಹಾಗೂ ಉಡುಪಿ ತಾಲೂಕಿನಲ್ಲಿ ಉತ್ತಮ ಪಂಚಾಯತ ಎಂದು ಹೇಳಿ ಹರಸಿದರು.

ಪಂಚಾಯತ್ ಅಧ್ಯಕ್ಷ ಶ್ರೀ ಎನ್. ಅಣ್ಣಾಜಿ ಬಲ್ಲಾಳರು ಅತಿಥಿಗಳನ್ನು ಸ್ವಾಗತಿಸುತ್ತಾ ಮಣಿಪುರ ಗ್ರಾಮ ಪಂಚಾಯತಿಯಲ್ಲಿ ಈ ವರೆಗೆ ನಡೆದಿರುವ ಕೆಲಸಗಳನ್ನು ವಿವರಿಸಿದರು. ಈಗಾಗಲೇ ಗ್ರಾಮದಲ್ಲಿ 8 ಲಕ್ಷ ರೂಪಾಯಿಕ್ಕಿಂತ ಹೆಚ್ಚಿನ ಕೆಲಸ ಮಾಡಿದ ಪ್ರದೇಶವಾಗಿ ಯೋಜನೆಗಳು ನಡೆಯುತ್ತಿವೆ, ಗ್ರಾಮದ ಇತ್ಯಾದಿಗಳಲ್ಲಿ ವಿದ್ಯುತ್ ಸಂಪರ್ಕವಿದ್ದು 60 ರೂಪಾಯಿಕ್ಕಿ ವಿದ್ಯುತ್ ಚಾಲಿತ ಯಂತ್ರಗಳು ಕೆಲಸ ಮಾಡುತ್ತಿವೆ ಎಂದರು. ಉಡುಪಿಯಿಂದ ನೇರ ಸಂಪರ್ಕವಿರುವ ಬಗ್ಗೆ 3 ಲಕ್ಷ ರೂಪಾಯಿ ಖರ್ಚಿನಿಂದ ಅಲೆಪೊಂ ಸೇತುವೆಯ ಕೆಲಸ ಪೂರೈಸುವ ಹಂತದಲ್ಲಿದೆ ಎಂತಲೂ, ಇನ್ನು ಗ್ರಾಮದ ಮೂಡ ಬದಿಯಲ್ಲಿ ಕಾಲು ಸಂಕದ ಬಗ್ಗೆ ರೂ. 50,000/- ಮಂಜೂರಾತಿ ಬಗ್ಗೆ ಸರಕಾರದ ಮುಟ್ಟದಲ್ಲಿದೆ ಎಂತಲೂ ಶೀಘ್ರದಲ್ಲಾಗುವ ನಿರೀಕ್ಷೆ ಇದೆ ಎಂದೂ ಹೇಳಿದರು.

ಶೈಕ್ಷಣಿಕ ರಂಗದಲ್ಲಿ 3 ಪ್ರಾಥಮಿಕ ಶಾಲೆಗಳು 1 ಹಾಯರ್ ಎಲಿಮೆಂಟರಿ ಮತ್ತು ಒಂದು ವಯಸ್ಕರ ಶಿಕ್ಷಣ ಶಾಲೆಗಳೂ ಎರಡು ಶಿಶುವಿಹಾರ ಕೇಂದ್ರಗಳನ್ನು ಕೂಡಿರುವ ಸ್ಥಳದ ಬಗ್ಗೆ 6 ಬಾವಿ, ಎಂಡು ಅಂಚೆ ಕಚೇರಿ, ಸಾರ್ವಜನಿಕ ಟೆಲಿಫೋನ್ ಆಫೀಸು ಎರಡು, ಇನ್ನು ಅಲ್ಲಿನ್ನಿ ಕಾಲು ಸಂಕ, ಗ್ರಾಮ ಸೇವಕರ ಮನೆ ಇತ್ಯಾದಿ ನಮ್ಮ ಗ್ರಾಮದಲ್ಲಿದೆ ಎಂದರು. ಪಶುವೈದ್ಯ ಶಾಲೆಯ ಬಗ್ಗೆ ವಿಶೇಷ ಪ್ರಯತ್ನ ನಡೆದಿದೆ ಹಾಗೂ ಬೇಗ ಆಗುವ ನೀರಿಕ್ಷೆ ಇದೆ ಎಂದರು.

ರಾತ್ರಿ ಪಯಸ್ಕರ ಶಾಲೆಯ ಮತ್ತು ಮಹಿಳಾ ಮಂಡಲಗಳ ಸಂಯುಕ್ತ ವಾರ್ಷಿಕೋತ್ಸವವು ಶ್ರೀ ಸೋಮನಾಥರವರ ಅಧ್ಯಕ್ಷತೆಯಲ್ಲಿ ಜರಗಿ, ಮುಖ್ಯ ಸೇವಕಿ ಶ್ರೀಮತಿ ಯಮುನಾ ಇವರು ಮಂಡಲದ ಕಾರ್ಯಭಾರವನ್ನು ವಿವರಿಸಿದರು. ಶ್ರೀ ಕೆ. ಸತ್ಯಮೂರ್ತಿ ಹೊಳ್ಳ, ಎಡ್ವೊಕೇಟ್ ಇವರು ಬಹುಮಾನ ವಿತರಣೆ ಮಾಡಿದರು. ವಿವಿಧ ವಿನೋದಾವಳಿಗಳೂ ಸಭೆಯ ಮುಖ್ಯವಾಯಿತು.

ಭಕ್ತಿಗೀತೆಯ ಉದ್ಘಾಟನೆ

26ನೇ ಜನವರಿಯಂದು ಹಂಗಾರಕಟ್ಟೆಯಲ್ಲಿ ಜಿ. ನಾರಾಯಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಯಂ. ಆರ್. ಶೆಟ್ಟಿ ಹೀರೆಬೆಟ್ಟು, ಇವರು ಬರೆದ "ಭಕ್ತಿಗೀತೆ" ಎಂಬ ಪುಸ್ತಕವನ್ನು ವಾರಂಬಳ್ಳಿ ಪಂಚಾಯತ್ ಅಧ್ಯಕ್ಷ ಶ್ರೀ ಹಿರಿಯಣ್ಣ ಶೆಟ್ಟಿಯವರು ಉದ್ಘಾಟಿಸಿದರು. ಅದರಲ್ಲಿನ ಕೆಲವು ಹಾಡುಗಳನ್ನು ಲೇಖಕರೂ ಕೆಲವು ಭಕ್ತರೂ ಹಾಡಿತೋರಿಸಿದರು. ಈ ಕಾರ್ಯಕ್ರಮದ ಅಂಗವಾಗಿ ಹೆಗ್ಗರ ಶ್ರೀ ಕೃಷ್ಣಮೂರ್ತಿ ತಂತ್ರಿಗಳಿಂದ ಹರಿಕಥಾ ಕಾಲಕ್ಷೇಪವು ಜರಗಿತು.

ಕ್ರಿಕೆಟ್ ಪಂದ್ಯಾಟ

ಉಡುಪಿ ತಾಲೂಕು ಮಟ್ಟದ ಹಾಯರ್ ಎಲಿಮೆಂಟರಿ ಶಾಲಾ ಕ್ರಿಕೆಟ್ ಕೂಟದ ಪಂದ್ಯಾಟವು ತಾ. 5-2-68ರಂದು ಉಡುಪಿ ಅಜ್ಜರಕಾಡು ಮೈದಾನದಲ್ಲಿ ಬ್ರಹ್ಮಾವರ ಸಿ. ಎಜ್ ಎ ಶಾಲೆಗೂ ಉಡುಪಿ ಯು. ಬಿ. ಯಂ. ಸಿ. ಶಾಲೆಗೂ ನಡೆದು ಯು. ಬಿ. ಯಂ. ಸಿ. ಶಾಲೆಯವರು 7 ವಿಕೇಟು 5 ರನ್ನುಗಳ ಪ್ರತಿಂದ ಜಯ ಗಳಿಸಿರುವರು. ಉಡುಪಿ ಯು. ಬಿ. ಯಂ. ಸಿ. ಶಾಲೆಯ ಪರವಾಗಿ ರಮೇಶನ ಉತ್ತಮ ಬೌಲಿಂಗ್, ನಾಯಕ ಸಾಮುಯೇಲನ ಅದರ್ಶ ವಿಕೇಟ್ ಕೀಪಿಂಗ್, ಆಟಗಾರರ ಅತ್ಯುತ್ತಮ ಫೀಲ್ಡಿಂಗ್ ನಿಂದಾಗಿ ಪ್ರಥಮ ಇನ್ನಿಂಗ್ಸ್‌ನಲ್ಲಿ 14 ರನ್ನುಗಳ ಲೀಡ್ ಇದ್ದ ಸಿ. ಎಚ್. ಎ. ಶಾಲೆಯವರು ದ್ವಿತೀಯ ಇನ್ನಿಂಗ್ಸ್‌ನಲ್ಲಿ ಕೇವಲ 15 ರನ್ನುಗಳಿಗೆ ತಮ್ಮ ಎಲ್ಲಾ ವಿಕೇಟುಗಳನ್ನು ಕಳೆಕೊಳ್ಳುವಂತಾಗಿ ಯು. ಬಿ. ಯಂ. ಸಿ. ಶಾಲೆಯ ಜಯಗಳಿಸುವಂತಾಯಿತು.

ಮಣಿಪಾಲ್ ಕಾಲೇಜ್ ಆಫ್ ಎಜುಕೇಶನ್ ವಾರ್ಷಿಕೋತ್ಸವ

ಉಡುಪಿ-ಮಣಿಪಾಲ್ ಕಾಲೇಜ್ ಆಫ್ ಎಜುಕೇಶನ್ ಇದರ ವಾರ್ಷಿಕೋತ್ಸವವು ತಾ. 1-2-68ರಂದು ಡ | ಟಿ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ರಮೇಶ ಪೈಯವರು ಸ್ವಾಗತ ಭಾಷಣ ಮಾಡಿದರು ಪ್ರಾಧ್ಯಾಪಕ ಶ್ರೀ ವಿಶ್ವನಾಥ ಅವರು ಸಂದೇಶವನ್ನೋದಿದರು ಮತ್ತೆ ವಿದ್ಯಾರ್ಥಿ ಶ್ರೀ ಲಕ್ಷ್ಮೀನಾರಾಯಣರಾಯರು ಮಾಡಿದ ಸ್ವಾಸ್ತಿವಾಚನಕ್ಕೆ ಯೂನಿಯನ್ ಅಧ್ಯಕ್ಷಿ ಶ್ರೀಮತಿ ಪ್ಲಿಲಿಯಾ ರೆಬೆಲ್ಲೋ ಉತ್ತರವಿತ್ತರು ಬಳಿಕ ಶ್ರೀಮತಿ ಶಾರದಾ ಪೈಗಳು ಬಹುಮಾನ ವಿತರಣೆ ಗೈದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಆಂಚನಾರವರು ಶಾಲೆಯಿಂದ ವರದಿಯೊಪ್ಪಿಸಿದರು. ಡಾ|| ಮಾಧವ ಪೈಗಳು ಮಾರ್ಗದರ್ಶನ ಮತ್ತು ವಿದ್ಯಾರ್ಥಿಗಳ ಹಿಂಗಾಳ್ಕೆತನಗಳ ಅಸಮಾಧಾನವೂಂದು ಮಾಡಿದೆ, ಅವರಲ್ಲಿ ಉದಾತ್ತ ಭಾವನೆಗಳು ಬೆಳೆದು ಸಾರ್ಥಕ ಹಾಗೂ ರಚನಾತ್ಮಕ ಪ್ರವೃತ್ತಿಗಳನ್ನು ಬೆಳಗಿಸಬೇಕು. ಇವುಗಳ ಹೆಚ್ಚಳಗಾರಿಕೆ ಅಧ್ಯಾಪಕರುಗಳದ್ದೆಂದರು. ಕೊನೆಯದಾಗಿ ಅವರು ಸೆಕೆಂದರು ಅಧ್ಯಾಪಕರುಗಳಿಗೆ ತಂದೆಯ ಪ್ರೀತಿ ವಾತ್ಸಲ್ಯೆಯೊಂದನ್ನು ಸ್ಥಾಪಿಸುವ ಆಲೋಚನೆಯಿದೆಂದರು. ಶ್ರೀ | ಸುಬ್ಬಣ್ಣ ಅವರು ಧನ್ಯವಾದವನ್ನರ್ಪಿಸಿದರು.

ಚಲಚ್ಚಿತ್ರ ಸಂಗೀತ ಸ್ಪರ್ಧೆ

ಉಡುಪಿಯ ಶ್ರೀ ರಾಮಕೃಷ್ಣ ಫೋನೋಟಾರ್ ಲಿಮಿಟೆಡ್ ಇವರು ಇದೇ ನಾರ್ಚ ತಿಂಗಳ ಮೊದಲಲ್ಲಿ ಉಡುಪಿಯ ಮತ್ತು ಆಳುವಾಸಿನ ಚಲಚ್ಚಿತ್ರ ರಸಿಕರಿಗಾಗಿ ಚಲಚ್ಚಿತ್ರ ಸಂಗೀತ ಸ್ಪರ್ಧೆಯೊಂದನ್ನು ಏರ್ಪಡಿಸಲಿದ್ದು, ಇದರಲ್ಲಿ ಭಾಗವಹಿಸುವವರು ಬಾರತದ ಯಾವುದೇ ಬಾಷೆಯ ಚಲಚ್ಚಿತ್ರದ ಹಾಡುಗಳನ್ನು ಎಷ್ಟೇ ಸಂಖ್ಯೆಯಲ್ಲಿ, 10 ನಿಮಿಷಗಳ ಅವಧಿಯಲ್ಲಿ ಹಾಡ ಬಹುದು. ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಸ್ಪರ್ಧೆಗಳಿದ್ದು, ಭಾಗವಹಿಸುವವರಿಗೆ ಪ್ರಮೋಶನ್ ಸರ್ಟಿಫಿಕೆಟ್, ಪ್ರವೇಶ ಧನವಿಲ್ಲ ಹಾಡುವಾಗ ಶ್ರುತಿಯನ್ನೊದಗಿಸಲು ಹಾರ್ಮೋನಿಯಂ ಅಥವಾ ತಂಬೂರಿಯನ್ನು ಇತರರ ನೆರವಿಲ್ಲದೆ ಬಳಸಬಹುದು. ಮಾರ್ಚ ತಾ. 3ನೇ ಶನಿವಾರ ಅಪರಾಹ್ನ ಮತ್ತು ತಾ. 3ನೇ ಪೂರ್ವಾಹ್ನ ಮತ್ತು ಅಪರಾಹ್ನ ಉಡುಪಿಯ ಕಲ್ಪನಾ ಟೂರಿಸ್ಟ್ ಹಾಲಿನಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಮೊದಲ ಎರಡು ಸ್ಥಾನಗಳನ್ನು ಗಳಿಸಿದವರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದಲ್ಲದೆ, ನಿರ್ಣಾಯಕರು ಬಯಸಿದಲ್ಲಿ ಇತರ ಪ್ರೋತ್ಸಹ ಬಹುಮಾನಗಳನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವವರು ಉಡುಪಿ ಮತ್ತು ಆಳುವಾಸಿನ ನಾಲ್ಕು ಮೈಲುಗಳ ವರ್ತುಲದೊಳಗಿನ ಊರಲ್ಲಿ ವಾಸಿಸುವವರಾಗಿರಬೇಕು. ಸ್ಪರ್ಧಾಳುಗಳು ತಮ್ಮ ಹೆಸರು, ವಿಳಾಸ ಮತ್ತಿತರ ವಿವರಗಳನ್ನು ಶ್ರೀ ಪಿ. ಮನೋಹರ ಪೈಯ, ಪ್ರಭಾಕರ ಬಿಲ್ಡಿಂಗ್ಸ್, ಉಡುಪಿ, ಇವರಲ್ಲಿ ನಿಶ್ಚಿತಪಡಿಸಿಕೊಳ್ಳಬೇಕು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 229/1967.

ದಿ ಪಾಂಗಾಳ ನಾಯಕ ಬೇಂಕ್ ಲಿಮಿಟೆಡ್, ಉಡುಪಿ ಇದ್ದ Power of attarney Holder P. ಸುಬ್ಬಣ್ಣ ನಾಯಕ —ವಾದಿ

1. R. ಪೆಂಕಟೇಶ ಬಾಳಿಗ, ಗಣಪತಿ ಬಾಳಿಗರ ಮಗ, 2. ಕೆ. ಗೋವರ್ಧನ ಶೆಟ್ಟಿ, ಅನಂತಯ್ಯ ಶೆಟ್ಟರ ಮಗ, ಮಾಂಗಳೂರು ತಾಲ್ಲೂ ಮೆನ್ಸಟೆಟ್ಟು ಗ್ರಾಮದ ಕಿನ್ನಿಗೋಳಿಯಲ್ಲಿರುವವರು —ಪ್ರತಿವಾದಿರು.

ನೀವು ವಾದಿರ ಕಿನ್ನಿಗೋಳಿ ಬ್ರಾಂಚಿನಿಂದ ರೂಪಾಯಿ 1000ನ್ನು ಸಾಲವಾಗಿ ಪಡೆದು ಅ ಬಗ್ಗೆ ತಾ. 18-7-1964ರಲ್ಲು ಬರೆಕೊಟ್ಟ ಡಿನೂಂಡ ಪ್ರೋಮಿಸರಿ ನೋಟಿನ ಬಾಬ್ತು ನಿಮ್ಮಿಂದ ಇನ್ನು ಬಾಕಿ ಬರಬೇಕ್ಕ ಅಸಲು ಬಡ್ಡಿ ರೂಪಾಯಿ 969—10ಕ್ಕೆ ವಾದಿರು ನಿಮ್ಮ ಮೇಲೆ ದಾಕ್ಲು ಮಾಡಿದ ಸದ್ರಿ ದಾವೆಯು ತಾ. 28-2-1968ಕ್ಕೆ ನಿಮಗೆ ಅಳ್ಳರ ನೋಟೀಸಿಗೆ ಇಟ್ಟಿದೆ. ಆ ಕುಂಟು ನಿಮಗೆ ಅಕ್ಷೇಪ ಇದ್ದರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಮಂ ಪ್ರಕಾರ ಕಿಳಿಸಿಯದೆ.

K. S. Kamath,
Advocate for Plaintiff

Karkala, 3—2—68.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದ ಔಷಧಿ ಮತ್ತು ದೆಶ್ಯ ವೈದ್ಯರೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

READ & ADVERTISE IN NAVAYUGA WEEKLY

ವಿವಾಹ ಸಮಾರಂಭಗಳು

ಡಾ| ವೈ. ಸೀತಾರಾಮ ಶೆಟ್ಟಿ ಪುತ್ರಿ ಡಾ ಗೂ ದಿ| ಎ.ಬಿ. ಶೆಟ್ಟಿ ನೊಮ್ಮಗಳು ಕುಮಾರಿ ವಿನಯ ಅವರನ್ನು ಶ್ರೀ ರಾಪು ಸಂಜೀವ ಶೆಟ್ಟಿ, ಕಲ್ಲಾವರ ಇವರ ಪುತ್ರ ಚಿ. ಚಂದ್ರಶೇಖರ ಶೆಟ್ಟಿ ಅವರು ತಾ. 8—2—68ರಂದು ಕುಂದಾಪುರ ನಗರೂ ಸ್ಕೋರ್ಟ್ಸ್ ಪೆವಿಲಿಯನಲ್ಲಿ ರಚಿಸಲಾದ ಚಪ್ಪರದಲ್ಲಿ ವಿಜೃಂಭಣೆಯಿಂದ ವಿವಾಹವಾದರು. ಎಲ್ಲಾ ಕಡೆಗಳಿಂದಲೂ ಬಂಧು ಮಿತ್ರರು ಬಹು ಸಂಖ್ಯೆಯಲ್ಲಿ ಆಗಮಿಸಿದ್ದರು. ಕುಂದಾಪುರದಲ್ಲಿ ಈ ವರೆಗೆ ಇಷ್ಟು ಸಂಭ್ರಮದ ವಿವಾಹ ಸಮಾರಂಭ ಜರಗಲಿಲ್ಲವೆನ್ನಬಹುದಾಗಿದೆ

ಂ ಂ ಂ

ಮೂಡಬಿ ಎಂ. ಎಲ್. ಎ.ಗಳೂ ಕುಂದಾಪುರದ ಎಡ್ವಕೇಟರೂ ಆದ ಶ್ರೀ ಯೆ.ಡ್ರರೆ ಮಂಜಯ್ಯ ಶೆಟ್ಟರ ಪುತ್ರಿ ಸಾ| ಶಕುಂತಳಾ ಅವರನ್ನು ಕಲಿರಾಜ್ ಡಾ| ಕೆ. ಸಿ. ಅಳ್ವರ ಪುತ್ರ ಚಿ| ತಾರಾನಾಥ ಅಳ್ವರು ತಾ. 11—2—68ರಂದು ಮಂಗಳೂರು ಪುರಭವನದಲ್ಲಿ ವೈಭವದಿಂದ ವಿವಾಹವಾದರು. ಊರು ಪರಪೂರುಗಳಿಂದ ಅತ್ಯಧಿಕ ಸಂಖ್ಯೆಯಲ್ಲಿ ಬಂಧು ಮಿತ್ರರು ಆಗಮಿಸಿದ್ದರು.

ಂ ಂ ಂ

ಶ್ರೀ ದೇವಪ್ಪ ಶೆಟ್ಟರ ಪುತ್ರಿ ಕು| ಪಾರ್ವತಿಯನ್ನು ಶ್ರೀ ಮಲಾಡಿ ಮುಂಡಪ್ಪ ಶೆಟ್ಟಿ ಪುತ್ರ ಶ್ರೀ ರಾಜೀವ ಶೆಟ್ಟರು ತಾ. 11—2—68ರಂದು ಮಂಗಳೂರಲ್ಲಿ ಮುಜೀರ್ ಸಿ. ವಿ. ನಾಯಕ್ ಹಾಲ್‌ನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಬ್ರಹ್ಮಕಲಶಾಭಿಷೇಕ ಮಹೋತ್ಸವ

ಪೊಳಲಿ ಶ್ರೀ ದುರ್ಗಾಪರಮೇಶ್ವರೀ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ತಾ. 14—2—68ನೇ ರಾತ್ರಿ ಬ್ರಹ್ಮಕಲಶಾಭಿಷೇಕ ನಡೆದು ತಾ. 16ರಂದು ಕೊಡಮಣ್ಣಾಯ ದೈವದ ಮಂಚ ಸ್ಥಾಪನೆ ಕಲಶಾಭಿಷೇಕಾದಿಗಳೂ ತಾ. 16ರಂದು ಸಂಪ್ರೋಕ್ಷಣೆ, ಮಂತ್ರಾಕ್ಷತೆಗಳೂ ನಡೆಯಲಿವೆಯೆಂದೂ ಸುಹಾಜನರು ದೇವತಾ ಸೇವೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಬೇಕೆಂದೂ ಆಡಳ್ತಿ ಮೊಕ್ತೇಸರ ಶ್ರೀ ಟಿ. ರಮಾನಾಥ ಮೂರ್ಕರು ಅಪೇಕ್ಷಿಸುತ್ತಾರೆ.

ಉಡುಪಿ ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

1966 ಜನವರಿ 20ರಂದು ಮೂರು ತಿಂಗಳ ಕಾಲದಲ್ಲಿ ನಡೆದ ಶಾಂತ ರೀತಿಯ ಸತ್ಯಾಗ್ರಹವನ್ನು ಹಿಂತೆಗೆಯುವಾಗ್ಗೆ ನಮಗೆ ಪದವಿ ಶಿಕ್ಷಣ ಜಾರಿಗೆ ತಂದು ನಮ್ಮೆಲ್ಲರಿಗೂ ಪದವಿಯನ್ನು ಸರಕಾರ ನೀಡುವುದಾಗಿ ಆಶ್ವಾಸನೆ ಕೊಟ್ಟದ್ದು ಪತ್ರಿಕಾ ಪ್ರಕಟಣೆಗಳ ಮೂಲಕ ಸ್ಪಷ್ಟ ಪಡಿಸಿದೆ. ಆದರನ್ನಯ ಡಿಪ್ಲಮೋ ಶಿಕ್ಷಣವನ್ನು ರದ್ದುಪಡಿಸಿ ಎಲ್ಲಾ ವಿದ್ಯಾರ್ಥಿಗಳನ್ನು ಬಿ. ಯಸ್. ಎ. ಯಂ. (B. S. A. M.) ಪದವಿಗೆ ಸೇರಿಂದವರನ್ನಾಗಿ ಪರಿಗಣಿಸಿ 1966 ಒಕ್ಟೋಬರ್ 18ರಂದು ಅಜ್ಞೆ ಹೊರಡಿಸಿ ಪಾಠ ಕೃಮವನ್ನು ಜಾರಿಗೆ ತಂದಿತು. ಆದರೆ ಜುಲೈ 67ರಲ್ಲಿ ಸರಕಾರ ತನ್ನ ಹಿಂದಿನ ಅಜ್ಞೆಯನ್ನು ಬದಲಾಯಿಸಿ ಸುನಃ ಡಿಪ್ಲಮೋ ಎಂದು ಪರಿಗಣಿಸಿದೆ. ನಮಗೆ B. S. A. M. ಪದವಿಯನ್ನು ವಿಶ್ವವಿದ್ಯಾನಿಲಯವು ಕೊಡುವುದಾಗಿ ಒಪ್ಪಿಕೊಂಡಾಗ್ಯೂ ಮತ್ತು ನಾವು ಮೇಲಿಂದ ಮೇಲೆ ಸರಕಾರಕ್ಕೆ ಮನವಿ ಮಾಡಿಕೊಂಡಾಗ್ಯೂ ನಮಗೆ ಪದವಿ ಶಿಕ್ಷಣ ಸೌಲಭ್ಯವನ್ನೀಯಲು ಯಾವ ರೀತಿಯೂ ಪ್ರಯತ್ನಿಸದೆ ಸರಕಾರವು ನಿರ್ಲಕ್ಷ್ಯ ಭಾವನೆಯನ್ನು ತಾಳಿದೆ. ಆದ್ದರಿಂದ ಈವರ್ಷ ಹೊಸ ಬೇಸಿಕ ಆಯುರ್ವೇದೀಯ ವಿದ್ಯಾರ್ಥಿಗಳ ಭವಿಷ್ಯತ್ತಿಗಾಗಿ ಅನ್ಯದಾರಿ ಕಾಣದೆ ಅನಿವಾರ್ಯವಾಗಿ ನಾವು ಫೆಬ್ರವರಿ 100ರ ಮುಷ್ಕರವನ್ನು ಪ್ರಾರಂಭಿಸಿದ್ದೇವೆ. ಫೆಬ್ರವರಿ150 ಒಳಗೆ ಸರಕಾರ ನಮ್ಮ ಬೇಡಿಕೆಗಳಿಗೆ ಗಮನ ಹರಿಯದಿದ್ದಲ್ಲಿ 150 ನಂತರ ವಿಧಾನ ಸೌಧದ ಎದುರು ಯುಸೂರಿ ರಾಜ್ಯದ ಎಲ್ಲಾ ಆಯುರ್ವೇದೀಯ ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುವುದಾಗಿ ಎಚ್ಚರಿಸಿದ್ದಾರೆ ಎಂದು ವಿದ್ಯಾರ್ಥಿ ಪ್ರತಿನಿಧಿಗಳು ತಿಳಿಸುತ್ತಾರೆ.

ಅಧ್ಯಕ್ಷತೆಗೆ ಸನ್ಮಾನವಿದ್ದೇ ಇದೆ

ವಿಶ್ವಸಂಸ್ಥೆಯ ಬುದ್ಧ—ಉಥಾಂಟ್

ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಎಂದು ಎರಡನೇ ಬಾರಿ ಆಯ್ಕೆಗೊಂಡಿದ್ದಾರೆ ಉಥಾಂಟ್. ಅದೂ ಅವಿರೋಧವಾಗಿ. ೧೯೬೨ ನವೆಂಬರ್ ೩೦ರಂದು ಪ್ರಥಮ ಸಲ ಈ ಹುದ್ದೆಗೆ ಆರಿಸಲ್ಪಟ್ಟ ಉಥಾಂಟರು ೧೯೬೬ನವೆಂಬರ್ ೩೦ರಂದು ನಿವೃತ್ತ ಹೊಂದಬೇಕಿತ್ತು. ಆದರೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ೧೯೬೬ ಡಿಸೆಂಬರ್ ೨೦ರಂದು ಒಮ್ಮತದಿಂದ ಮತ್ತೆ ಊರವರನ್ನೇ ಈ ಮಹತ್ವದ ಸ್ಥಾನಕ್ಕೆ ಆಯ್ಕೆ ಮಾಡಿತು. ಡಾಗ್ ಹ್ಯಾಮರ್ ಶೀಲ್ಡ್‌ರ ಅಕಾಲಿಕ ನಿಧನದಿಂದ ವಿಶ್ವಸಂಸ್ಥೆಯ ಮುಖ್ಯ ಕಾರ್ಯದರ್ಶಿಯ ಸ್ಥಾನಕ್ಕೆ ತೆರವಾದಾಗ ಸುಯೋಗ್ಯ ಅಭ್ಯರ್ಥಿಯಾಗಿ ದೊರೆತ ಉಥಾಂಟರು ಮುಳ್ಳಿನ ಹಾಸಿಗೆಯಂತಿರುವ ತಮ್ಮ ಹುದ್ದೆಯಲ್ಲಿ ಬಹುಜನರ ಮೆಚ್ಚಿಗೆ ಪಡೆದಿದ್ದಾರೆ.

ಪ್ರಪಂಚದ ಅನೇಕಾನೇಕ ಸರಕಾರಗಳ ಆಮಂತ್ರಣಗಳನ್ನು ಮನ್ನಿಸಿ ಉಥಾಂಟ್‌ರು ಆ ಸರಕಾರಗಳೊಂದಿಗೆ ಉಭಯತಂಗಿ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಿದರು. ೧೯೬೬ರಲ್ಲಿ ಮೆಕ್ಸಿಕೋ ಪಾಕಾವ ಮತ್ತು ಚಿಲಿ ದೇಶಗಳಿಗೆ ಹೋಗಿ ಬಂದರು. ೧೯೬೭ರಲ್ಲಿ ಬರ್ಮಾ ದೇಶದ ಆಮಂತ್ರಣಕ್ಕೆ ಓಗೊಟ್ಟು ತಾಯ್ನಾಡನ್ನು ಸಂದರ್ಶಿಸಿದರು. ೧೯೬೭ ಎಪ್ರಿಲ್‌ನಲ್ಲಿ ಉಥಾಂಟರು ನವದೆಹಲಿಗೆ ಬಂದರು ಮತ್ತು ಅಂತರ್‌ರಾಷ್ಟ್ರೀಯ ತಿಳುವಳಿಕೆ ಬಗೆಗಿನ ಪ್ರಥಮ ಜವಾಹರಲಾಲ ನೆಹರೂ ಪ್ರಶಸ್ತಿಯನ್ನು ಪಡೆದರು.

ತಾತ್ಕಾಲಿಕ ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಎಂದು ಆಯ್ಕೆಗೊಂಡ ಸಮಯದಲ್ಲಿ ಉಥಾಂಟರು ತಮ್ಮ ಬರ್ಮಾ ದೇಶದ ವಿಶ್ವಸಂಸ್ಥೆಯ ಖಾಯಂ ಪ್ರತಿನಿಧಿಯಾಗಿದ್ದರು (೧೯೫೭—೧೯೬೧). ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಹದಿನಾಲ್ಕನೇ ಅಧಿವೇಶನದ ಉಪಾಧ್ಯಕ್ಷರಾಗಿ ೧೯೫೯ರಲ್ಲಿ ಕೆಲಸ ಮಾಡಿದರು. ೧೯೬೧ರಲ್ಲಿ ವಿಶ್ವಸಂಸ್ಥೆಯ ಕಾಂಗೋ ಸಂಧಾನ ಸಮಿತಿಯ ಚೇರ್‌ಮನ್‌ರಾಗಿ ದುಡಿದರು.

ಉಥಾಂಟರು ಬರ್ಮಾ ರಾಜಕೀಯದಲ್ಲಿ ನುರಿತ ಮುತ್ಸದ್ದಿಗಳಾಗಿದ್ದಾರೆ. ೧೯೫೧ರಲ್ಲಿ ಫೈಯಲಂಗ್ ಮತ್ತು ಇಂಡೋನೇಷಿಯಾ ದೇಶಗಳಿಗೆ ತಮ್ಮ ದೇಶದ ಸದ್ಭಾವನಾ ನಿಯೋಗವನ್ನು ಒಯ್ದರು.

ಂ ಂ ಂ

ಬರ್ಮಾದ ಪಾಂಟನ್‌ವಾ ಎಂಬಲ್ಲಿ ೧೯೧೫ ಜನವರಿ ೨೨ರಂದು ಉಥಾಂಟರು ಜನಿಸಿದರು. ಪಾಂಟನ್‌ವಾದ ನ್ಯಾಶನಲ್ ಹೈಸ್ಕೂಲ್‌ನಲ್ಲಿಯೂ ಮುಂದೆ ರಂಗೂನಿನ ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿಯೂ ಇವರ ವಿದ್ಯಾಭ್ಯಾಸ ನಡೆಯಿತು. ತಮ್ಮ ಐನೇ ವಯಸ್ಸಿನಲ್ಲಿ ಬರ್ಮಾ ಶಿಕ್ಷಣ ವಿಸ್ತೀರ್ಣ ಸಂಘದವರು ಏರ್ಪಡಿಸಿದ್ದ ಅಖಿಲ ಬರ್ಮಾ ಅನುವಾದ ಸ್ಪರ್ಧೆಯಲ್ಲಿ ಉಥಾಂಟರು ಜಯಗಳಿಸಿದರು.

ಪ್ರಪಂಚದಲ್ಲಿ ಯುದ್ಧದ ಕಾರ್ಮೋಡ ಕೂಡುತ್ತಲೇ ಇವೆ. ಉಥಾಂಟರು ಕವಿದ ಕಾರ್ಮೋಡಗಳನ್ನು ಚದರಿಸುತ್ತಲೇ ಇದ್ದಾರೆ. ಪ್ರಪಂಚದಲ್ಲಿ ಶಾಂತಿನೆಲೆಗೊಳ್ಳುವುದೆಂಬ ನಿರ್ಧಾರದಿಂದ ಆದರೆ ಶಾಂತಿಚಿತ್ತದಿಂದ ಪ್ರಯತ್ನಿಸುತ್ತಲೇ ಇದ್ದಾರೆ. ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ವೇಳೆ ನವದೆಹಲಿಗೆ ಬಂದ ಉಥಾಂಟರು ಮೋಸ್ಕೋ — ಲಂಡನ್‌ಗಳಿಗೂ ಹಾರಿ ವಿಯತ್ನಾಮ ಕದನ ವಿರಾಮಕ್ಕೊಂದು ಹೊಸ ಸೂತ್ರವನ್ನು ಕಂಡುಹಿಡಿಯುವ ನಿರೀಕ್ಷೆಯಿದೆ.

ನೂತನ ಕಾರ್ಯಾಲಯದ ಉದ್ಘಾಟನೆ

ಕಟ್ಟಿಗೋಳಿ, ಯುಗಪುರುಷ ಮೂಸ ಪತ್ರಿಕೆ ಬಗ್ಗೆ ಶ್ರೀ ಕೆ. ಯಂ. ಶ್ಯಾಮ ಶೆಟ್ಟರು ಕಟ್ಟಿಸಿರುವ "ಕಲ್ಯಾಣ ಸದನ"ದಲ್ಲಿ ನೂತನ ಕಾರ್ಯಾಲಯದ ಉದ್ಘಾಟನಾ ಸಮಾರಂಭವು ಶ್ರೀ ಕೆ. ಗೋವಿಂದಕೃಷ್ಣ ಅಸ್ರಣ್ಣರ ಹಸ್ತದಿಂದ ತಾ. 4-2-68ರಂದು ಶ್ರೀ ಎ. ಯಸ್. ರಾಮಕೃಷ್ಣರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.



ಇದಕ್ಕೆ ನಾನು ಮಾಡಬೇಕಾದ ಕೆಲಸ ಇಷ್ಟೇ:
ಪ್ರತೀ ತಿಂಗಳು ನನ್ನ ಸಂಬಳದಿಂದ ಉಳಿತಾಯದ
ಹಣವನ್ನು ಕಳೆದು ಕೊಡುವಂತೆ ನನ್ನ
ಉದ್ಯೋಗಪತಿಗಳಿಗೆ ಅಧಿಕಾರ ಪತ್ರ ಕೊಡಬೇಕು.
ಉಳಿದ ಕೆಲಸ ಅವರೇ ಮಾಡುತ್ತಾರೆ.
ಅಫೀಸುಗಳಲ್ಲಿ ಕೆಲಸ ಮಾಡುತ್ತಿರುವವರಿಗೂ
ಈ ಸೌಲಭ್ಯವಿದೆ.
ನಿಮಗೆ ಸಮೀಪದಲಿರುವ ಅಂಚೆ ಕಚೇರಿಯಿಂದ
ಪೂರ್ಣ ವಿವರಗಳನ್ನು ಪಡೆಯಿರಿ.

ಇದರಲ್ಲಿ ಉಳಿತಾಯ
ಬಹು ಸುಲಭ!

ರಾಷ್ಟ್ರೀಯ ಉಳಿತಾಯ ಸಂಸ್ಥೆ

67/393

ಕಥಾ ಪ್ರಪಂಚ

ಹರಿ ಬರೆಯಿಸಿದ ಪತ್ರ

ಬರೆದವರು:
ಶ್ರೀ ಗೋಪಾಲ ರಾವ್ ಎ.

ಆಫೀಸು ಬಿಟ್ಟು ನೇರವಾಗಿ ಮನೆಗೆ ಬಂದ ಸುರೇಶನಿಗೆ ಒಂದು ಪತ್ರಕಾದಿತ್ತು. ವಿಳಾಸವನ್ನು ಬರೆದ ಬರಹವನ್ನು ಗಮನಿಸಿದ ಸುರೇಶ, ತನ್ನ ಪತ್ನಿಯದೇ ಆಗಿರಬೇಕೆಂದು ಊಹಿಸಿ ಒಡೆದು ಓದ ತೊಡಗಿದ. ಓದುತ್ತಾ ಹೋದಂತೆ ಆತನ ಸಿಟ್ಟು ನೆತ್ತಿಗೇರ ತೊಡಗಿತು. ಮೊದಲೇ ಆಫೀಸಿನ ಮಿತಿ ಮೀರಿದ ಕೆಲಸದಿಂದ ದಣಿದಿದ್ದ ಆತನಿಗೆ ಪತ್ನಿಯ ಪತ್ರಕಂಡು ಮತ್ತಷ್ಟು ಸಿಟ್ಟು ಬಂತು. ಕೊನೆಯ ನಾಲ್ಕು ಸಾಲುಗಳಲ್ಲಿ "ಬರಲು ಇನ್ನು ಒಂದು ವಾರವಾದರೂ ತಡವಾದೀತು; ಮನೆಕಡೆ ಜೋಕೆ. ಹೋಟೇಲಿನ ಊಟ ರುಚಿಸಲಿಕ್ಕಿಲ್ಲ. ಮುಂಜಾನೆ ಬೇಗ ಎದ್ದರೆ ಅನ್ನ ಮಾಡಿಟ್ಟು ಆಫೀಸಿಗೆ ಹೋಗಬಹುದು. ಎಂದು ಬರೆದುದನ್ನು ಕಂಡು ಸಿಟ್ಟಿನ ಭರದಲ್ಲಿ ಜೇಬಿನಲ್ಲಿದ್ದ ಬೆಂಕಿಪೊಟ್ಟಣವನ್ನು ತೆಗೆದು ಕಾಗದಕ್ಕೆ ಬೆಂಕಿ ಹಚ್ಚಿದ. ಆದೇ ಬೆಂಕಿಯಲ್ಲಿ ಒಂದು ಸಿಗರೇಟು ಹೊತ್ತಿಸಿ ತುಟಿಯ ಮಧ್ಯೆ ತಗುಲಿಸಿ ಹೊಗೆ ಬಿಡಲಾರಂಭಿಸಿದ.

ಒಂದು ಮೂಸದ ಹಿಂದೆ ಸುರೇಶನಿಗೆ ಆತನ ಮೂವನಿಂದ ಒಂದು ಪತ್ರ ಬಂದಿತ್ತು. ತನ್ನ ತಂಗೆಯ ಶ್ರಾದ್ಧದ ಪ್ರಯುಕ್ತ ಸರೋಜಳನ್ನು ಕಳುಹಿಸುವಂತೆ ಬರೆದಿದ್ದರು. ವಿವಾಹವಾಗಿ ಆರು ತಿಂಗಳೂ ಪೂರ್ತಿಯಾಗಿರಲಿಲ್ಲ. ಆಕೆಯನ್ನು ಕಳುಹಿಸಲು ಸುರೇಶನಿಗೆ ಇಷ್ಟವಿರಲಿಲ್ಲ ಆದರೆ ಯಾವುದೋ ಒಂದು ವಿಷಯಗಳಿಗೆಯಲ್ಲಿ ಸರೋಜಳ ಮಾತಿನ ಮೇಲಿಗೆ ಮರುಳಾಗಿ ತವರಿಗೆ ಹೋಗಲು ಅಪ್ಪಣೆ ಕೊಟ್ಟಿದ್ದ. ನಾಲ್ಕು ದಿವಸಗಳಿಗೆಂದು ಹೋದವಳು, ಒಂದು ತಿಂಗಳಾದರೂ ಬರಲೇ ಇಲ್ಲ. ಹೋಟೇಲಿನ ಸೂಡ ಬೆರೆಯಿಸಿದ ಅನ್ನವನ್ನು ಉಂಡು ಸುಸ್ತಾಗಿದ್ದ ಸುರೇಶನಿಗೆ "ಬರಲು ಇನ್ನು ಒಂದು ವಾರವಾದರೂ ತಡವಾದೀತು" ಎಂದು ಬರೆದ ತನ್ನವಳ ಮೇಲೆ ಮೇರೆ ಮೀರಿದ ಕೋಪ ಬಂತು.

ಅರ್ಧ ಮೂದಿಯಾಗಿದ್ದ ಸಿಗರೇಟನ್ನು ಎಸೆದು ಮನಸ್ಸಿನಲ್ಲೇ ಏನೋ ಗುಣಾಕಾರ ಹಾಕಿಕೊಂಡು ಡ್ರಾವರನಲ್ಲಿದ್ದ ಕವರನ್ನೆಳೆದು ಪತ್ರಿಗೆ ಕಾಗದ ಬರೆಯಲಾರಂಭಿಸಿದ. ಕೋಪದ ಆವೇಶದಲ್ಲಿ ಏನೇನೋ ಗೀಚಿದ. ಕೊನೆಯ ನಾಲ್ಕು ಸಾಲುಗಳಲ್ಲಿ "ಇಲ್ಲಿ ನಾನು ಜ್ವರದಿಂದ ಹಾಸಿಗೆ ಹಿಡಿದರೂ ಕೇಳುವವರಿಲ್ಲ. ಈ ಪತ್ರ ನೋಡಿ ಬಾರದಿದ್ದಲ್ಲಿ ನನ್ನ ಹೆಣವನ್ನು ನೋಡ ಬೇಕಾದೀತು. ಆಷ್ಟೆ!" ಎಂದು ಬರೆದು ಟಪ್ಪಾಲು ಮಾಡಿದ.

ಂ ಂ ಂ

ಪತ್ರ ಕಂಡ ಕೂಡಲೆ ಉಟ್ಟ ಬಟ್ಟೆಯಲ್ಲೆ ಹೊರಟು ನಿಂತಳು ಸರೋಜ. ತಂದೆ ಕಾಶಿಪತಯ್ಯನವರು ಎಷ್ಟು ಸಮಾಧಾನ ಪಡಿಸಿದರೂ ಆಕೆ ಕೇಳಲಿಲ್ಲ. "ಏನೋ ಮನಸ್ಸಮಾಧಾನವಿಲ್ಲದೆ ಈ ರೀತಿ ಬರೆದಿದ್ದಾನೆ ಎಂದು? ಅವರು ಹೇಳಿದಾಗ ಸರೋಜ ಏನೂ ಉತ್ತರಿಸಲಿಲ್ಲ. ಯಾವುದೋ ಒಂದು ತೀರದ ವಿಮನಸ್ಕತೆಯಿಂದ ಕೆಲವನ್ನೇ ನೋಡುತ್ತ ಕುಳಿತಿದ್ದಳು. ಸರೋಜಳನ್ನು ಕಳುಹಿಸಿಕೊಡಲು ರೈಲು ಸ್ಟೇಷನ್ನಿಗೆ ಬಂದ ಕಾಶಿಪತಯ್ಯನವರಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ. ರೈಲು ಹೊರಟಾಗ ಏನಾದರೂ ಹೆಚ್ಚು ಕಡಿಮೆ ಯಾದರೆ ಕೂಡಲೆ ತಾರು ಮಾಡು" ಎಂದು ತಿಳಿಸಿ ಮನೆಯತ್ತ ಹೆಜ್ಜೆ ಹಾಕಿದರು. ಅಳಿಯನಿಗೆ ಮಗಳು ಹೊಂಟ ವಿಚಾರಕ್ಕೆ ತಂತಿ ಕೊಟ್ಟರು.

ಂ ಂ ಂ

ತನ್ನನ್ನು ಕರೆದೊಯ್ಯಲು ರೈಲು ಸ್ಟೇಷನ್ನಿಗೆ ಸುರೇಶ ಒಂದೇ ತೀರುವನೆಂದು ಭಾವಿಸಿದ ಸರೋಜಳ ಭಾವನೆ ತಪ್ಪಾಗಿತ್ತು. ರೈಲಿನಿಂದಿಳಿದು ಅತ್ತ ಇತ್ತ ನೋಡಿದರೂ ಸುರೇಶನ ಸುಳಿವೇ ಇಲ್ಲ. ತಾನೇ ಒಂದು ಟಾಂಗವನ್ನು ಗೊತ್ತು ಪಡಿಸಿ ಮನೆಯ ದಾರಿ ಹಿಡಿದಳು.

ದಾರಿ ಸಾಗಿದಂತೆ ಆಕೆಯ ಎದೆ ಡವಡವನೆ ಹೊಡೆದುಕೊಳ್ಳಲಾರಂಭಿಸಿತು. ಒಂದು ವೇಳೆ ಪತ್ರದಲ್ಲಿ ಬಂದ ಸುದ್ದಿ ಸುಳ್ಳಿಂದಾದರೆ ಪತಿಯನ್ನು ಹೇಗಾದರೂ ಒಲಿಸಿಕೊಳ್ಳಬಹುದು. ಆದರೆ ನಿಜವಾದಲ್ಲಿ ..... ಇದನ್ನು ಯೋಚಿಸುವುದಕ್ಕೂ ಆಕೆಯಿಂದಾಗಲಿಲ್ಲ. ಒಂದು ಕ್ಷಣ ಸರೋಜ ನಖಶಿಖಾಂತ ನಡುಗಿದಳು. ಟಾಂಗದಲ್ಲಿ ಕುಳಿತು ಮೋಡ ತುಂಬಿದ ಆಗಸವನ್ನೆ ಶೂನ್ಯ ದೃಷ್ಟಿಯಿಂದ ನೋಡುತ್ತಿದ್ದಳು.

ಟಾಂಗಾದವಳಿಗೆ ಹಣ ಕೊಟ್ಟು ಸರೋಜ ಮನೆಯತ್ತ ಹೆಜ್ಜೆ ಹಾಕತೊಡಗಿದಳು. ದೂರದಿಂದಲೇ ಬಾಗಿಲಿಗೆ ಬಿಗಿದಿದ್ದ ಬೀಗವನ್ನು ಗಮನಿಸಿ ಆಕೆಗೆ ತಾನು ಕಿಂತ ಭೂಮಿ ಯ ಭಾಗವೇ ಕುಸಿದು ಬೀಳುವಂತೆ ಭಾಸವಾಯಿತು. ತಿಪ್ಪರಲ್ಲಿ ನೆರೆಮನೆಯ ವತ್ಸಲಕ್ಕ ಬಂದು "ಸ್ವಲ್ಪ ಮನೆಕಡೆ ಬರ್ರಿರಾ ಸರೋಜಕ್ಕಾ" ಎಂದಾಗ ಸರೋಜಳಿಗೆ ಏನು ಹೇಳಬೇಕೆಂದೇ ತೋಚದಾಯಿತು. ಯಾಂತ್ರಿಕವಾಗಿ ವತ್ಸಲಕ್ಕನನ್ನು ಹಿಂಬಾಲಿಸಿದಳು. ಒತ್ತಾಯಪೂರ್ವಕವಾಗಿ ಒಂದು ಕಪ್ ಕಾಫಿಯನ್ನಿತ್ತು ಆಕೆ ಕುಡಿದು ಮುಗಿಸಿದ ಬಳಿಕ ವತ್ಸಲ ವಿಷಯ ವನ್ನರುಹಿದಳು. "ನಿನ್ನೆ ವಿಪರೀತ ಜ್ವರ ಬಂದುದರಿಂದ ನನ್ನವರು ಅವರನ್ನು ಆಸ್ಪತ್ರೆಗೆ ಸಾಗಿಸಿದರು" ಎಂದು ಹೇಳಿದರಾದರೂ ಸುರೇಶನಿಗೆ "ಟೈಫಾಯ್ಡ್" ಎಂದು ಆಕೆ ಹೇಳಲಿಲ್ಲ. ವತ್ಸಲಕ್ಕ ಮಾತು ಮುಗಿಸಿದಾಗ ಸರೋಜಳ ನಯನದ್ವಯಗಳು ತೇವಗೊಂಡಿದ್ದುವು.

ರೂಂ ನಂಬರ್ ಮತ್ತು ಆಸ್ಪತ್ರೆಯ ಹೆಸರನ್ನು ಕೇಳಿ ತಿಳಿದ ಸರೋಜ ಆಸ್ಪತ್ರೆಯತ್ತ ಧಾವಿಸಿದಳು.

ರೂಂನ್ನು ಹುಡುಕಿ ತೆಗೆದರೂ ಒಳಗಡೆ ಪ್ರವೇಶಿಸಲು ಆಕೆಗೆ ಧೈರ್ಯಬಾರದಾಯಿತು. ಒಂದು ಕ್ಷಣ ಯೋಚಿಸಿ ರೂಂನ್ನು ಪ್ರವೇಶಿಸಿದ ಸರೋಜಳಿಗೆ, ಮಂಚದಲ್ಲಿ ಮಲಗಿದ್ದ ಎಲುಬಿನ ಹಂದರವಾಗಿದ್ದ ಸುರೇಶನನ್ನು ನೋಡಲೂ ಸಾಧ್ಯವಾಗಲಿಲ್ಲ. ಸರೋಜಳನ್ನು ಕಣ್ಣು ತುಂಬ ನೋಡಿದ ಸುರೇಶ ಎಡ ಮುಗ್ಗುಲಿಗೆ ಹೊರಳಿದ. ತನ್ನಿಂದ ಎಂತಹ ಅಚಾತುರ್ಯವಾಯಿತೆಂದು ನೆನೆದಾಗ ಸರೋಜಳಿಗೆ ತಾನಿನ್ನು ಬದುಕಿದ್ದು ಪ್ರಯೋಜನವಿಲ್ಲವೆಂದು ವ್ಯಕ್ತವಾಯಿತು. ಆಕೆಗೆ ನಿಂತಿರಲೂ ಶಕ್ತಿಸಾಲದೆ ಅಲ್ಲೇ ಇದ್ದ ಕುರ್ಚಿಯಲ್ಲಿ ಕುಳ್ಳಿರಿಸಿದಳು. ಅವಳಿಗೆ ತನ್ನ ಸುತ್ತಲೂ ಕತ್ತಲೆ ಕವಿದಂತಾಗಿ ದಿಕ್ಕೇ ತೋಚದಂತಾಯಿತು. ಆಕೆಯ ನಯನದ್ವಯಗಳಿಂದ ಕಣ್ಣೀರು ತುಂಬಿ ಹರಿದು ಕಪೋಲಗಳನ್ನು ಒದ್ದೆ ಮಾಡಿತು. ಬಲ ಮುಗ್ಗುಲಿಗೆ ಹೊರಳಿದ ಸುರೇಶ ಅದನ್ನು ಗಮನಿಸಿ "ಹುಚ್ಚು ಹುಡುಗಿ, ನೀನೇಕೆ ಅಳುತ್ತಿರುವೆ. ನಿನಗೆ ಪತ್ರ ಬರೆದ ದಿನ ನನಗೇನೂ ಆಗಲಿಲ್ಲ. ಆದರೆ ಮರುದಿನದಿಂದ ಸ್ವಲ್ಪ ಜ್ವರ ಬಂದಿತ್ತು. ಅಷ್ಟೆ." ಎಂದು ಹೇಳಿದಾಗ ಸರೋಜಳಿಗೆ ಆಶ್ಚರ್ಯವಾಯಿತು.

"ಹಾಗಾದರೆ ಪತ್ರದಲ್ಲಿ ಬರೆದುದು ಸುಳ್ಳೆ?" ಕುತೂಹಲದಿಂದ ಕೇಳಿದಳಾಕೆ.

"ಹೌದು! ಸಿಟ್ಟಿನಿಂದ ಆ ರೀತಿ ಬರೆದೆ. ಆದರೆ ಅದು ನಾನು ಬರೆದುದಲ್ಲ. ದೇವರ ಪ್ರೇರೇಪಣೆಯಿಂದ ನಾನು ಬರೆದ ಪತ್ರ. ಇಲ್ಲವಾದಲ್ಲಿ ಇಂದು ನಾನು ಅಂದು ಬರೆದಂತೆ ನನ್ನ ಜೀವಂತ ಹೆಣವನ್ನು ನೀನು ನೋಡಬೇಕಾಗಿತ್ತೆ ಮುಂದಾಗುವುದನ್ನು ಮುಂಚಿತವಾಗಿಯೇ ದೇವರು ನನಗೆ ತಿಳಿಸಿದ್ದರು" ಎಂದು ಸುರೇಶ ಹೇಳಿದಾಗ ಸರೋಜ

"ಹೀಗೆಲ್ಲಾ ಅಮಂಗಳ ಶಬ್ದವನ್ನೇಕೆ ನುಡಿಯುವಿರಿ" ಎಂದಳು.

ಅತಿಯಾಗಿ ಮಾತನಾಡಿದುದರಿಂದ ಸುರೇಶನಿಗೆ ಕಮ್ಮು ಬರಲಾರಂಭಿಸಿತು. ಸಂಜ್ಞೆ ಮೂಲಕ ಡಾಕ್ಟರರನ್ನು ಕರೆಯುವಂತೆ ಅಜ್ಞಾಪಿಸಿದ.

ಮನಸ್ಸಿನಲ್ಲಿ ಎಷ್ಟೇ ವೇದನೆಗಳಿದ್ದರೂ ಅದನ್ನೆಲ್ಲಾ ನುಂಗಿಕೊಂಡು ಸರೋಜ ಡಾಕ್ಟರರನ್ನು ಕರೆತರಲು ಧಾವಿಸಿದಳು. ಡಾಕ್ಟರರೊಂದಿಗೆ ಸರೋಜ ಬಂದಾಗ ಸುರೇಶ ಇಹಲೋಕದ ಯಾತ್ರೆಯಿಂದ ಮುಕ್ತನಾಗಿದ್ದ.

"ಮುಂದಾಗುವುದನ್ನು ಮುಂಚಿತವಾಗಿಯೇ ದೇವರು ನನಗೆ ತಿಳಿಸಿದ್ದರು" ಎಂದು ಹೇಳಿದ್ದ ಸುರೇಶನ ಮಾತಿನಲ್ಲಿದ್ದ ದೃಢತೆ ಈಗ ಸರೋಜಳಿಗೆ ಅರಿವಾಗದಿರಲಿಲ್ಲ.

Ask for

AZAD

nitbit

BISCUITS

Azad Industries, Mangalore-1



NAVAYUGA 15-2-1968
Registered with the Registrar
of News Papers for India
under No. R. N. 3546/'67

REGD. No. B. G. 176
LICENCE No. 31
Licensed to Post without Prepayment

'ಪತ್ನಿ'ಯರಿಗೊಂದು ಕಿವಿ ಮಾತು

ಹೀಗೆ ಮಾಡಬೇಡಿ!

ಬರೆದವರು: ಶ್ರೀ ಬಿ. ನರಸಿಂಗ ರಾವ್

ದಿನಕರರಾಯರು ಅದೇ ತಾನೆ ಆಫೀಸಿನಿಂದ ಚಿತ್ರೈಸುತಿದ್ದರು. ಮನೆಯ ಹೊಸ್ತಿಲಲ್ಲಿ ಕಾಲಿಡುತಿದ್ದಹಸ್ತೆ. ಅಷ್ಟರಲ್ಲೇ ಪತ್ನಿಯ ಪ್ರಶ್ನೆ—"ರಾಮೂಗೆ ಅಂಗೀ ಹೊಲಿಸಿತಂದ್ರಾ?" "ಇಲ್ಲ! ಇದೀಗ್ಲೆ ತಂದೆ...' ಅಂದವರೇ ದಿನಕರರಾಯರು ಹಾಗೇ ಮನೆಗೆ ಬೆನ್ನು ತಿರುಗಿಸಿದರು. 'ಕೇಳೀಂದ್ರೆ, ಕಾಫೀ ಕುಡ್ದೇ ಹೋಗೀಂದ್ರೆ...." ಅನ್ನುವ ಪತ್ನಿಯ ವಾಣಿನ್ನು ಕೇಳಲು ತಾಳ್ಮೆಯಿರದೆ ದಿನಕರರಾಯರು ತೆರಳಿದರು. ಪತಿ-ಪತ್ನಿಯರಲ್ಲಿ ಅದೇನೋ ಪ್ರೀತಿಯಲ್ಲಿ ಕಡಿತವಾದಂತಿತ್ತು.

ಇದೇ ಹಪ್ಪನ್ನು ಉಮಾ ಬೆಳಗ್ಗೆಯೂ ಮಾಡಿದ್ದಳು. ಬೆಳಗ್ಗೆ ದಿನಕರರಾಯರು ಆಫೀಸಿಗೆ ತೆರಳುವ ಸಿದ್ಧತೆಯಲ್ಲಿದ್ದರು. ಆಗಲೇ ರಾಮೂನ ಅಂಗಿಯ ಬಗ್ಗೆ ಅವಳು ಮೂರು ಬಾರಿ ಪತಿಯೊಡನೆ ನುಡಿದುದಾಗಿತ್ತು. ಆಗ ದಿನಕರರಾಯರು ಆಫೀಸಿನ ಸಿದ್ಧತೆಯಲ್ಲಿ ಕೆಲವು ಫೈಲುಗಳನ್ನು ನೋಡುತಿದ್ದರು. ಅದುದರಿಂದಲೇ ಉಮಾ ನುಡಿದದ್ದೇನೆಂದು ಅವರು ಗಮನಿಸಲಿಲ್ಲ. ಉಮಾ ಮೂರು ಬಾರಿ ಪತಿಯನ್ನು ಈ ರೀತಿ ಎಚ್ಚರಿಸುವ ಬದಲು ಒಂದು ಕಾಗದ ಚೂರಿನಲ್ಲಿ ಬರೆದು ಕೈಯಲ್ಲಿ ಕೊಟ್ಟಿದ್ದರಾದರೆ ದಿನಕರರಾಯರು ಅವನ್ನು ಮರೆಯುತ್ತಿರಲಿಲ್ಲ. ಪತಿ—ಪತ್ನಿಯರಲ್ಲಿ ವೈಧಾ ವಿರಸಕ್ಕೆ ದಾರಿಯಾಗುತ್ತಿರಲಿಲ್ಲ.

ಉಮಾಳಂತಹ ಪತ್ನಿಯರು ಅದೆಷ್ಟಿರಬಹುದು!

ಕೆಲವೊಮ್ಮೆ ಪತಿಯು ಪೇಟೆಯಿಂದ ತಂದ ಸಾಮಾನುಗಳ ವಿಷಯದಲ್ಲಿ ಪತ್ನಿ ಬೆಲೆ, ಗುಣದ ಬಗ್ಗೆ ತರ್ಕ ಇತ್ಯಾದಿ ನಡೆಸುತ್ತಾಳೆ. ಇದರ ಅರ್ಥ ಪತ್ನಿಯು ಲೋಭಿಯೆಂದೇನೂ ಅಲ್ಲ. ಸಾಮಾನ್ಯವಾಗಿ ಸ್ತ್ರೀಯರೆಂದ ಮೇಲೆ ಯೋಚಿಸಿಯೇ ಹಣವನ್ನು ಖರ್ಚುಮಾಡುವರು. ಅಲ್ಲದೆ ಕೆಲವು ಬಾರಿ ಪತ್ನಿಯು ಪೇಟೆಯಲ್ಲಿ ವೈವಹರಿಸಿ ಸಾಮಾನುಗಳನ್ನು ತಂದಾಗ ಪತಿಗೆ ಹಿಡಿಸದಿರಲೂ ಬಹುದು. ಇದನ್ನು ತಡೆಗಟ್ಟಲು ಒಬ್ಬರನ್ನೊಬ್ಬರು ತರ್ಕ ವಿತರ್ಕಕ್ಕೆ ಎಳೆಸುವುದು ಅನುಚಿತ. ಬದಲಾಗಿ ಇಬ್ಬರೂ ಸೇರಿ ಪೇಟೆಗೆ ತೆರಳಿ "ಶಾಪಿಂಗ್" ಮಾಡಬೇಕು. ಇಲ್ಲವಾದರೆ ಮನೆಯಲ್ಲಿ ಚಿಕ್ಕ ಸಟ್ಟೆ ವಾಗ್ಯುದ್ಧವಾಗದಿರದು.

ಕೆಲವರು ಸ್ತ್ರೀಯರಿಗೆ ತಮ್ಮ ಪತಿಯು ಏನೂ ಮಡಿಯುವುದಿಲ್ಲ ಎಂಬ ತಪ್ಪು ದೋರಣೆಯಿರುತ್ತದೆ. ಏಕೆಂದರೆ ಪತಿಯು ಮಡಿಯುವುದು ಮನೆಯಿಂದ ದೂರಕ್ಕೆ. ಆದದ್ದನ್ನು ಪತ್ನಿಯೇ ನೂ ಪೋಡಿರಬಾರಳು. ಆದುದರಿಂದ ಅವಳು ಸದಾ ಪತಿಯನ್ನು ಜರೆಯುವಳು. ಪತಿಯಂತೂ ಆಫೀಸಿನಲ್ಲೇ, ಇನ್ನೆಲ್ಲೇ ದುಡಿದು ಸಂಪಾದಿಸಿ, ಸಂಜೆ ಅಯಾಸಗೊಂ[illegible] ಪತ್ನಿಯ ಉಬ್ಬಿದ ಮುಖ. ಇದನ್ನು ಪತಿಯು ಎಂದೂ ಬಯಸಲಾರ. ತನ್ನ ದುಡಿಮೆಯ ವಾತಾವರಣದಿಂದ ಮನೆಗೆ ಬಂದಾತನಿಗೆ ಪತ್ನಿಯ ಪಳನ್ಮುಖ, ಆಯಾಸ ಪರಿಹಾರಕ್ಕೇನಾದರೂ ಉಪಾಹಾರವನ್ನೆ ಬೇಕಿರುವುದು. ಇದನ್ನು ಪತ್ನಿಯು ಪಾಲಿಸಬೇಕು. ಪತಿಯು ದುಡಿದುವುದು ಮನೆಯ ಹೊರಗೆ— ಆಫೀಸಿನಲ್ಲೋ, ಕಾರ್ಖಾನೆಯಲ್ಲೋ ಪತ್ನಿಯು ಮನೆಯ ಒಳಗೆ ದುಡಿಯುವಳು. ಇಬ್ಬರೂ ಜೆನ್ನಾಗಿ, ಮನಃಪೂರ್ವಕ ದುಡಿದರೇ ಸಂಸಾರದ ನಾಗಾಟ ಸುಲಭ.

ಕೆಲವೊಮ್ಮೆ ಮಕ್ಕಳನ್ನು ಪತಿ ಜೆನ್ನಾಗಿ ಥಳಿಸುವುದಿದೆ. ಆಗ ಪತ್ನಿಯು ಮಕ್ಕಳ ವಕಾಲತ್ತನ್ನು ವಹಿಸಬಾರದು. ಬದಲಾಗಿ ಪತಿಯ ಸಿಟ್ಟು ತಣಿದ ಮೇಲೆ, ಪತಿ ಉತ್ತಮ 'ಮೂಡ್' ನಲ್ಲಿದ್ದಾಗ, ಈ ಕುರಿತೇನಾದರೂ ಹೇಳಬಹುದು. ಬದಲಾಗಿ ಪತಿಯನ್ನೂ ತಡೆದು ಮಕ್ಕಳನ್ನು ನೆಳೆದುಕೊಂಡೊಯ್ದರೆ ಸಮಸ್ಯೆಯನ್ನೂ ಉಲ್ಬಣಿಸುವುದು.

ಇಂತಹ ಚಿಕ್ಕ ಸಟ್ಟೆ, ದೈನಂದಿನ ವ್ಯವಹಾರದಲ್ಲಿ ಪತ್ನಿಯು ಸಮಯಸಿಯೇ, ವರ್ತಿಸಬೇಕು.

ಮಡದಿ ಬೇಕು

ಅನಂತರಾಮ ಯೇತಡ್ಕ

ಮಡದಿಯೊಬ್ಬಳು ಬೇಕು, ಮನೆತುಂಬಿ
ಬರಬೇಕು
ಬಗೆಯ ಬೇಗೆಯ ಕಳೆಯ
ಹೆಣ್ಣು ಬೇಕು.
ಎನ್ನ ಮನ ಮೈಗೇನು ಬೇಕು
ಬೇಡೆಂಬುದನು
ಅರಿತು ನಡೆಯುವ ಮಡದಿ ನನಗೆ
ಬೇಕು.
ತವರೂರ ಬಳಗದಾನಂದದುತ್ಸವದಲ್ಲಿ
ಪತಿಯ ಮರೆಯುದ ಬಗೆಯ
ಮಡದಿಬೇಕು
ಮನೆಯೊಳಗೆ ಬಂದಾಗ ಎನ್ನ ಮುಖ
ಕಂಡಾಗ
ನಗುತ ನಲಿಸುತಲಲಿನ
ಮಡದಿ ಬೇಕು.
ಎರಡು ಮನೆತನಗಳವಳು ಕೀರ್ತಿ
ತುಂಬಲು ಬೇಕು
ಬಲು ಜಾಣೆ ಗಂಭೀರೆಯೊಗಬೇಕು
ಎನ್ನ ಮನ ಮೈಯೆಲ್ಲ ಅವಳದಾಗಲೆ
ಬೇಕು
ಹೊಣೆಯರಿತು ಬಗೆಯರಿವ
ಬುದ್ಧಿ ಬೇಕು.
ಸಿರಿತನಕೆ ಬಡತನದ ಮೋಡ
ಮುಸುಕುತಲಿರಲು
ಎನ್ನ ಮಡದಿಯ ಮುಖವು
ಬಾಡದಿರಲಿ.
ಸಿರಿತನವು ಬಂದಾಗ ಬಡತನದ
ನೆನಪಿರುವ
ಬಗೆಯ ಭಾಗ್ಯದ ಹೆಣ್ಣು
ಜೊತೆಯೊಳಿರಲಿ.
ಮೃದು ಮಧುರ ಮಾತುಗಳ ಸರಸ
ಸಲ್ಲಾಪಗಳ
ನಸು ನಗೆಯ ನಯವಿನಯ
ಮನೆಗೆ ಬರಲಿ.
ಮೃದು ಮಧುರ ಕಂಠದಲಿಬಗೆ
ಬಗೆಯ ರಾಗದಲಿ
ದಿನದ ಬೇಸರ ಕಳೆಯ ಮಡದಿ ಬರಲಿ.
ಶೃಂಗಾರ ಸಾಧನದ ಹಡವರಿತು
ಬೇಕೆನುವ
ಚೊಕ್ಕ ಚಿನ್ನದ ಹೆಣ್ಣು ನನಗೆ ಬೇಕು.
ಶಂಗಾರ ಬಟ್ಟೆಗಳ ಕ್ಷಣಿಕ ಸುಖ
ದಾಸೆಗಳ
ಮೋಹ ಗೆಲ್ಲುವ ಪತ್ನಿ ನನಗೆ ಬೇಕು.
ಅತ್ತೆ ಮಾವಂದಿರನು ತಾಯಿ
ತಂದೆಯರೆಂದು
ಬಗೆವ ಭಾಗ್ಯದ ಹೆಣ್ಣು ಮನೆಗೆ
ಬರಲಿ.
ಭಾವನಾದಿನಿಯರನ್ನು ಒಡಹುಟ್ಟುಗಳು
ಎಂದು
ಪ್ರೇಮದಲಿ ಭಾವಿಸುವ ಮಡದಿ
ಬರಲಿ.
ಬಿಳುಪು ಕಪ್ಪುಗಳೆಂದು ವೈಬಣ್ಣ
ಭಾವಿಸದೆ
ಗುಣದಳತೆ ಬಣ್ಣದಲಿ ಮಾಡಲೊಲ್ಲೆ.
ಗುಣವು ಇಲ್ಲದ ಹೆಣ್ಣು ಅಪ್ಸರೆಯೆ ಆಗಿ
ಇರಲಿ
ಗುಣವಂತೆ ಶ್ಯಾಮಲೆಯ ಜೊತೆಯು
ಬೆಲ್ಲ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಶ್ವನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)

—ಪ್ರತಿಗಳಿಗೆ ಬರೆಯಿರಿ—
ಸರ್ವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನಾಲಿಗೆ

ಚಲಿಸಿತು ಸತ್ಯದ ನಾಲಿಗೆ
ಮಲಿಯಿತು ಮಿಥ್ಯದ ಹಲ್ಲಿಗೆ
ಹಲ್ಲಿಗೆ—ನಾಲಿಗೆ ಸೇರಿತು
ಮಿಥ್ಯಕೆ-ಸತ್ಯವು ಸೋತಿತು.
ಬೆಂಕಿಯ ಮಾತನು ಉಗುಳಿತು
ಕಹಿಯ ಬೇಜವ ಬಿತ್ತಿತು.
ವಿಷದ ಫಲ ಕೊಟ್ಟಿತು
ಸವಿದ ಮನವನು ನೊಂದಿಸಿತು.
ಹೇಳುವೇ ಕೇಳಲೇ ನಾಲಿಗೆ
ನಿನಗಿಲ್ಲ ಸುಖ ಕೊನೆಗೆ
ಕೆತ್ತಿಸೆ ನೀ ಸತ್ಯದ ಸಲಿಗೆ
ಮರುಳಾಗದಿರು ಎಂದೂ ಸುರುಚಿಗೆ

ಕೆ. ಟಿ. ಸ್ವಾಮಿ, ನಾಯಕನಹಟ್ಟಿ.

ಮನ ಬೇರೆ

ಒಂದು ಮನೆಯಂಗಳದಲ್ಲಿ ಆಡುತ್ತಿದ್ದ ಮಕ್ಕಳ ಪೈಕಿ ಒಬ್ಬನೊಂದಿಗೆ ಪೋಲೀಸ್ ಇನ್ಸ್‌ಪೆಕ್ಟರರು ವಿಚಾರಿಸಿದರು:—

"ತಂದೆ ಮನೆಯಲ್ಲಿದ್ದಾರೊ?"

"ಇದ್ದಾರೆ....'

ಇನ್ಸ್‌ಪೆಕ್ಟರ್ ಬಾಗಿಲು ತಟ್ಟಿ ನೋಡಿ ವಿಫಲವಾಗಿ ಮರಳಿ ಆ ಹುಡುಗನನ್ನೇ ವಿಚಾರಿಸಿದ:—

"ತಂದೆ ಮನೆಯಲ್ಲಿದ್ದಾರೆಂದು; ಇಲ್ಲಿ ಯಾರೂ ಇದ್ದಂತೆ ಕಾಣುವುದಿಲ್ಲ....?'

"ನನ್ನ ಮನೆ ಇದಲ್ಲ; ಆಚೆ ಬೀದಿಯಲ್ಲಿ..."

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



22—2—1968

೨೦
ಪೈಸೆ

ಕಥಾ ಪ್ರಪಂಚ

ಆಸೆ ಕುದೇರೀತೇ...?

ಬರೆದವರು - ಶ್ರೀ ಜಿ. ಎಸ್. ಅವಧಾನಿ

"ಬದಲ್‌ಗಯೂ ಇನ್ಸಾನ್..."

—ಪಕ್ಕದ ಹೋಟೇಲಿನ ರೇಡಿಯೋ ಕೀರಚುತ್ತಿತ್ತು

....."ಹೌದು ಪಾರ್ವತಮ್ಮ, ಕಾಲ ಕೆಟ್ಟೈಗ್ಹೋತಿ. ಏನ್ಬಂತೋ ಕಲಿಕಾಲ...."

"ಬರದೆ ಏನು ಗಂಗಮ್ಮ? ಇಂತಹ ಹರೆಯದ ಹೆಂಣುಗಳೆಲ್ಲ ಜಾರಣಿಯಾಗಿ ಸೂಳೆಯ ಬಾಳು ಸಾಗಿಸುತ್ತಿರುವಾಗ ಕಾಲ ಏನ್ಬಂತು?".....

ಪಾರ್ವತಮ್ಮ ಮತ್ತು ಗಂಗಮ್ಮನ ಚರ್ಚೆ ಮತ್ತು ಕಿವಿಗೆ ಕೂರ್ದನಿಯಂತೆ ಚುಚ್ಚತೊಡಗಿತು...

"ಸೂಳೆ!"

"ಹೌದು ನಾನು ಸೂಳೆ! ಏನನ್ನು ಬಯಸಿದೆನೋ....ಅದರೆ....ಅ...ದ....ರೆ... ಅದದ್ದೊಂದು... ನಾನು ವೇಶ್ಯೆ!! ಅಯ್ಯೋ....ಎಂತೆಂತಹ ಬಿರುಘುಡಿಯ ತಾಪಕ್ಕೆ ಸಿಲುಕಬೇಕಾಯ್ತು..."ದೈವಸಂಕಲ್ಪವಂನಾರ್‌ಮೀರ್ವರ್..." ಅಯಿತು ನನ್ನ ಗತಿ.... ಬಾಳು ಬಂಡಾಯಿತು. ಬಂಗಾರದ ಬಾಳಿನ ಕನಸನ್ನು ಕಾಣುತ್ತಿರುವಾಗ.... ಪುರುಷರ ಕಾಮತೃಷೆಯನ್ನು ಪರಿಹರಿಸುವ ಹಾದರದ ಬಾಳನ್ನು ಕಾಣಬೇಕಾಯ್ತು.... ರಾತ್ರಿ ಹಗಲೆನ್ನದೇ ಸದಾ ಪರರ ಸುಖಕ್ಕಾಗಿ ಮೈ ಬಟ್ಟೆ ಮಲಗಬೇಕು... ಎಂತಹ ಜನ! ಕುಡಿದು ಉನ್ಮತ್ತರಾಗಿ ತೂಗುತ್ತ ಬಿಗಿದಪ್ಪುವರೆಷ್ಟೋ ಜನ.... ಎಂತೆಂತಹ ರೋಗದಿಂದ ಬಳಲಿ ಬೆಂದವರೆಂದಿಷ್ಟು.... ಹ್ಹುಂ... ಇವರೆಲ್ಲರಿಗಾಗಿ ಮೈ ಸವಸಿ ಸವಸಿ ಕೊನಗೊಂದು ದಿನ...ರೋಗದಿಂದ ಮೊರಳಾಡಿ ರೌರವ ನರಕ ಸೇರುವದು .....'

"ಲತಾ....ಲತಾ.... ಕೂಡ್ಲೆ ಏರಿ ಉಟ್ಕೊಂಡು ತಯಾರಾಗಿ ಕಳಗ್ಬಾ" ಪುಟ್ಟರಂಗಮ್ಮನ ಮಾತು ಲತಾಳ ವಿಚಾರಧಾರೆಗೆ ಧಕ್ಕೆ ತಂದಿತು. ಹಾಗೆಯೇ ಎದ್ದು ಕನ್ನಡಿಯಲ್ಲಿ ಮುಖ ನೋಡಿಕೊಂಡು ಇದ್ದುದನ್ನೆ ಸರಿಪಡಿಸಿಕೊಂಡು ಗಳಿಗೆಯ ಗಂಡನ ದರ್ಶನಕ್ಕಾಗಿ ಹೊರ ಹೊರಟಳು..."

ಂ ಂ ಂ

ವಿಷ್ಣುಪಂತರು ಮುಕ್ಕಿಸಾಲ್ಬಿ ಬಡಗಾವಸ್ತರು. ಬಡತನದ ಭಾಗ್ಯದೇವತೆಯು ಅವರಿಗಾಗಿಯೇ ಹಾರ ಹಿಡಿದು ನಿಂತಿರುವಳೋ ಏನೋ? ಒಂದೆರಡು ಆಸೆ ನಿಂದ ಸಂಸಾರವನ್ನು ಸಾಗಿಸುವದು ಎಷ್ಟು ದುಸ್ತರವೆಂಬುದು ಅವರಿಗೊಬ್ಬರಿಗೇ ಗೊತ್ತು. ದಿನವೆಲ್ಲ ಅಸೀಸಿನಲ್ಲಿ ಕಳೆದರೆ ಮತ್ತಲ್ಲಿಯ ಸುಖ? ಅವರ ಈ ಬಡಿಮೆಯ ಜಕ್ರವು ಅವ್ಯಾಹತವಾಗಿ ತಿರುಗುತ್ತಾ ಸಂಸ್ಯಾಸಾನ ಹೊಂದದೆ, ಸರಿಭ್ರಮಣಿಸುತ್ತಲೇ ಇತ್ತು, ಸುಬ್ಬಮ್ಮ ಭಾವದೋ, ನೂಗಿಗೆ ಕವಡೆಯಷ್ಟು ಕಟ್ಟಿಕೊಂಡು ದುಡಿದರೂ, ಅರೆಹೊಟ್ಟೆ ಊಟ, ಅರೆಬರೆ ಬಟ್ಟೆ....ಹೀಗೆ ಸಾಗಿತ್ತು ಜನರ ದಿನನಿತ್ಯದ ವ್ಯಾಪಾರ....

"ಶಾಂತಾ" ಅವರಿಬ್ಬರ ಹಿರಿಯ ಹುಡುಗಿ. ಪ್ರಾಥಮಿಕ ಶಾಲೆಯ ಹೊಸ್ತಿಲನ್ನು ಒಂದೆರಡು ವರ್ಷ ತುಳಿದು, ತನ್ನ ಶಿಕ್ಷಣಕ್ಕೆ ಕಡಿವಾಣ ಹಾಕಿ ನಿಲ್ಲಿಸಿದ್ದಳು. ಹೆಣ್ಣು ಮಕ್ಕಳೆಂದ ಮೇಲೆ ವಯಸ್ಸು ನಿಂತಿರುತ್ತದೆಯೇ? ಮೈಕೈ ತುಂಬಿ ಹರೆಯದ ಅವಳ ಅಂಗಾಂಗದಲ್ಲಿ ಪ್ರವಹಿಸಿ ಕಂಡವರ ಬಾಯಿಯಲ್ಲಿ— 'ವಯಸ್ಸಾಗಿದೆ ಅದ್ರೂ ನೋಡಿ ಮದ್ವೆ ಇಲ್ಲ" ಎನ್ನಿಸಿಕೊಂಡಿದ್ದಳು. "ಮದ್ವೆ" ಎಂದರೆ ಸಸಾರಾನೇ? ಹರಿಯರು ಅದ್ಕೆ ಹೇಳ್ತಾರೆ ನೋಡಿ— "ಮದ್ವೆ ಮಾಡಿ ನೋಡು, ಮನೆ ಕಟ್ಟಿ ನೋಡು" ಅಂತ. ಅದು ನಿಜವಾಗಿಯೂ ಸತ್ಯ ನೋಡಿ. ಅದರಲ್ಲೂ ಈ ಕಲಿಯುಗದಲ್ಲಿ—ಕ್ಷಮಿಸಿ— ವರದಕ್ಷಿಣೆ ಯುಗದಲ್ಲಿ ಹೆಣ್ಣು ಮಕ್ಕಳ ಮದ್ವೆ ಮಾಡೋದಂದರೆ ಎಷ್ಟು ಕಷ್ಟ ಅನ್ನೋದು, ಹೆಣ್ಣು ಹೆತ್ತ ತಾಯಿತಂದೆಗಳಿಗೇ ಗೊತ್ತು. ನಮ್ಮ ವಿಷ್ಣುಪಂತರಿಗೂ ಅದೇ ಅವಸ್ಥೆಯಾಗಿತ್ತು. ಎಲ್ಲೆಲ್ಲಿಯೂ 'ವರ'ನೆಂಬ ವಸ್ತುವನ್ನು ಹುಡುಕಿ ಹುಡುಕಿ ಕೊನೆಗೆ ನಿರಾಶರಾಗಿ ಎರಡು ತೊಟ್ಟು ಕಣ್ಣೀರು ಹರಿಸಿ ತೆಪ್ಪಗಾಗಿದ್ದರು.

ಶಾಂತಾ ಊರಿನ ಅಂಡಲೆವ ಪುಂಡು ಪೋಕರಿಗಳ ಕಣ್ಣಿಗೆ ಬಲಿಬಿದ್ದಳು. ಕೆಲ ಉತ್ಸಾಹದ ಯುವಕರೊಂದಿಗೆ ಸಲುಗೆ ಬೆಳೆಸಿ ತನ್ನ ಮೈಯನ್ನು ಅವರಿಗರ್ಪಿಸಿ ಅದೇನೋ ಒಂದು ತರಹದ ಅವ್ಯಕ್ತ ಸುಖವನ್ನನುಭವಿಸಿದಳು, ,ಪಾಪ! ತಂದೆತಾಯಿಗಳೇನು ಮಾಡ್ಯಾರು? "ಅವಳದೂ ಮೈಯಲ್ಲವೇ? ಜೀವನದಲ್ಲಿ ಸುಖಶಾಂತಿ ಬೇಡವೇ?" ಎಂದು ಸುಮ್ಮಗಿದ್ದರು. ಆದರೆ ಸಮಾಜದ ದೂರಿಗೆ ಮಾತ್ರ ಎರವಾಗಿದ್ದರು. ಶಾಂತಾ ಕೊನೆಗೂ ತನ್ನ ತಾಯಿತಂದೆಗಳ ಸುಖಕ್ಕಾಗಿ ಆ ದಾರೋ ತರುಣನೊಂದಿಗೆ ಬೊಂಬೈಗೆ ಓಡಿಹೋಗಿದ್ದಳು.... "ಮುಗಿಯಿತು ಅವಳ ಕತೆ' ಎಂದು ಸುಮ್ಮನೆ ತಮ್ಮ ಜೀವನ ಚಕ್ರವನ್ನು ಇವರು ಉರುಳಿಸಿದ್ದರು....

ಎರಡನೆಯವಳೇ "ಲತಾ". ಸುರದ್ರೂಪಿಯೂ, ಸುಂದರಳೂ ಆಗಿದ್ದಳು. ಬಾಲ್ಯದಲ್ಲಿಯೇ ಚುರುಕು ಬುದ್ಧಿಯವಳಾದ ಲತಾ ಐದನೆಯ ಇಯತ್ತೆಯ ವರೆಗೆ ಕಲಿತಿದ್ದು ಹೊರಗಿನ ಫ್ಯಾಶನ್ ಕಲಿತಿದ್ದಳು. (ಬಡವಳಿಗೆ ಫ್ಯಾಶನ್ನಿಗಾಗಿ ಹಣವಲ್ಲಿ ದೊರಕಿತು ಅಂತಿ ಕೇಳಬ್ಯಾಡಿ... ಇದ್ದುದರಲ್ಲೇ ಫ್ಯಾಶನ್) ಲತಾ ಹದಿನಾರು ವರ್ಷದವಳಾಗಿ ಮೈತುಂಬಿಕೊಂಡು ಬೆಳೆದು ಫಿಂತಿದ್ದಳು. ಅವಳಿಗೆ ಸ್ವಲ್ಪ ಅಸೆ ಆಕಾಂಕ್ಷೆ ಹೆಚ್ಚು. ಅವಳ ಒರಗೆಯ ಗೆಳತಿಯರೆಲ್ಲ ಪತಿಯ ಮನೆ ಸೇರಿ ತಾಯಿಯಾಗಿದ್ದರು.

ಲತಾಳಿಗೆ ತಾನೂ ಓರ್ವ ಮಡದಿಯಾಗಬೇಕು.... ನಡುನಗುವ ಮುದ್ದು ಕಂದಮ್ಮನನ್ನು ಎತ್ತಿ ತೊಡೆಯ ಮೇಲೆ ಮಲಗಿಸಿ ಮುದ್ದಿಡಬೇಕು....ಪತಿಯೊಡನೆ ಪರಮ ಪ್ರೇಮದಿಂದ ಬಾಳ್ವೆ ಸಾಗಿಸಬೇಕು....ತಾನೂ ಓರ್ವ ಉತ್ತಮ ಗೃಹಿಣಿಯಾಗಿ ಭಾಂತಾಂಬೆಯ ಮಡಿಲಲ್ಲಿ ಜೀವ ಸವೆಸಬೇಕು...ಎಂದು ಆಶಾಗೋಪುರ ಕಟ್ಟಿದ್ದಳು. ಅವಳ ಮನದಲ್ಲಿ ಆ ಆಸೆಯ ಜಿಗುರು ಮೂಡಿತು.... ಆದರೆ— 'ಲಗ್ನ' ಮಾತ್ರವಾಗದೇ ಅವಿವಾಹಿತೆಯಾಗಿ ಫಿಂತಿದ್ದಳು. ಲಗ್ನವಾದರೂ ಹ್ಯಾಗೆ ಆಗಬೇಕು? ಶಾಂತಾಳ ಘಟನೆಯಿಂದಲೇ ಇವಳಿಗೆ ಲಗ್ನವಾಗದಿದ್ದದ್ದು. ಅದರಲ್ಲೂ ವರದಕ್ಷಿಣೆಯೆಂಬ ಕಂಟಕ ವ್ಯವಹಾರವು ತಂದೆತಾಯಿಗಳ ಕತ್ತಿಗೆ ಕುತ್ತಾಗಿತ್ತು.

ಂ ಂ ಂ

"ಓಹೋ.... ಬಾ ಪುಟ್ಟರಂಗಮ್ಮ... ಬಾಳ ಅಪರೂಪ ಆಗಿ ಬಂದ್ಬಿಟ್ಟೆ.... ನಮ್ಮ ಮನೇ ದಾರಿ ಈಗ ಕಂಡಿತಾ...." ಎಂದು ಮನೆಗೆ ಬಂದ ಪುಟ್ಟರಂಗಮ್ಮನನ್ನು ಸ್ವಾಗತಿಸಿದಳು ಬಸಮ್ಮ. ಪುಟ್ಟರಂಗಮ್ಮ ಟ್ಯಾಕ್ಸಿಯವನಿಗೆ ಹಣ ಕೊಟ್ಟು ಬಸಮ್ಮನನ್ನು ಕಂಡು ಆನಂದದಿಂದ ಮಾತನಾಡುತ್ತ ಅವರ ಮನೆಯ ಪಡಸಾಲೆ ಸೇರಿದಳು. ಊಟ ಉಪಚಾರವೆಲ್ಲ ಆದ ಮೇಲೆ ತಾಂಬೂಲ ಚರ್ವಣಕ್ಕಾಗಿ ಇಬ್ಬರೂ ಪಡಸಾಲೆಯ ಮೂಲೆಯಲ್ಲಿ ಕುಳಿತರು.

ಪುಟ್ಟರಂಗಮ್ಮ ಮೈಸೂರಿನಿಂದ ಬಂದಿದ್ದಾಕೆ. ಅವಳ ವೃತ್ತಿಯೆಂದರೆ ವೇಶ್ಯಾವೃತ್ತಿ. ಸದಾ ಶ್ರೀಮಂತರ ನೌಕರ ವರ್ಗದವರ ಸುಖಕ್ಕಾಗಿ ಎಲ್ಲೆಲ್ಲಿಂದಲೋ ಹುಡುಗಿಯರನ್ನು ಕೂಡಿಸಿ ಒಂದು ದಂದೆಯನ್ನೇ ಕೈಕೊಂಡಿದ್ದಳು. ಮೈಸೂರಿನಲ್ಲಿ 'ದಸರಾ' ಬಂತೆಂದರೆ ಎಲ್ಲಿಲ್ಲದ ಗಲಾಟೆ. ಎಲ್ಲರಿಗೂ ಒಂದೊಂದು ತೆರನಾದ ಉತ್ಸಾಹ ಹುಮ್ಮಸ್ಸು. ಅಂತೆಯೇ ನಮ್ಮ ಪುಟ್ಟರಂಗಮ್ಮನಿಗೂ ಉತ್ಸಾಹ ಗಡಿಬಿಡಿ. ದಸರೆಗಾಗಿ ಎಲ್ಲೆಲ್ಲಿಂದಲೋ ಗಿರಾಕಿಗಳು ಬರುತ್ತಿದ್ದರು. ಅದಕ್ಕಾಗಿ ಅವಳಿಗೆ ಹುಡುಗಿಯರ ಆವಶ್ಯಕತೆ ಇತ್ತು. ಹಾಗಿಲ್ಲದಿದ್ದರೆ ಅವಳ ವೃತ್ತಿ ಸಾಗುವದು ಹ್ಯಾಗೆ? ಅಂತೆಯೇ ಅವಳು ಹುಡುಗಿಯರನ್ನು ಹುಡುಕಲು ತನ್ನ ಬಂಧುವಾದ ಬಸಮ್ಮನ ಮನೆಗೆ ಬಂದಿದ್ದಳು ತಾಂಬೂಲ ಅಗಿಯುತ್ತ ಬಸಮ್ಮನೇ—

"ಏನ್ ರಂಗಮ್ಮ ಹ್ಯಾಗೆ ಸಾಗಿದೆ ಫೈನ್ ಯಾವಾರಾ?"

"ಏನೋ....ಸಾಗಿದೆ ಹೀಗೆ...."

"ಯಾಕೆ ಹಾಗೆ ಬೇಸರ ಪಟ್ಕೊಂತೀ? ಯೇನ್ ಬೇಜಾರ್?"

(ದನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾಕೀಟುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಮುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—0
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೫	೨೨—೨—೧೯೬೮	No. 25

ಸ್ವಾಹಾ ನಾಟಕ

ಮಹಾರಾಷ್ಟ್ರ—ಕರ್ನಾಟಕದ ಸೀಮೂ ಪ್ರಶ್ನೆಗೀಗ ಹೊಸರೂಪ ಕೊಡುವಲ್ಲಿ ಗೃಹಮಂತ್ರಿ; ಯಶವಂತರಾವ್, ಬಲವಂತರಾವ್ ಚವನರು ಯಶಗಳಿಸುವ ದಾರಿ ಹಿಡಿದಿದ್ದಾರೆ. ಇತ್ತೀಚೆಗೆ ಕಾಂಗ್ರೆಸ್ ಸಂಸದೀಯ ದಳವು ಸಭೆ ಸೇರಿದಾಗ, ಈ ಪ್ರಶ್ನೆಯ ಮೇಲೆ 'ರಾಷ್ಟ್ರೀಯ ಅಭಿಪ್ರಾಯ' ತಿಳಿಸುಕೊಳ್ಳಬೇಕೆಂಬ ವಾದಕ್ಕೆ ಪುಷ್ಟಿದೊರೆಯಿತೆಂದು ಗೊತ್ತಾಗಿದೆ. ಈ ಹಿಂದೊಮ್ಮೆ ಎಲ್ಲ ಪಕ್ಷಗಳ ನಾಯಕರನ್ನು ಭೆಟ್ಟಿಯಾಗಿ ರಾಜಕೀಯ ಒಮ್ಮತ ಮೂಡಿಸಬೇಕೆಂದು ಚವನರು ಸಂಚು ಹೂಡಿದ್ದರು. ಈ ಹೊಸ ದಾರಿ ಹಿಡಿದುದರ ಅರ್ಥವೇನು? ಕರ್ನಾಟಕ ರಾಜ್ಯದ ಗೌರವವನ್ನು, ರಾಷ್ಟ್ರೀಯ ಭಾವನೆಯನ್ನು ಅಕಾರಣವಾಗಿ ಕೆದಲುವುದು— ಮರಾಠಿಗಳಿಗೆ ತೃಪ್ತಿಯನ್ನು ತರುವುದಕ್ಕಾಗಿ!

ಚವನರ ಈ ಹೊಸ ನೀತಿಗೆ ಅವರೊಬ್ಬರೇ ಕಾರಣರಲ್ಲ, ಕೇಂದ್ರ ಸಚಿವ ಸಂಪುಟವು ಸಾಮೂಹಿಕವಾಗಿ ಹೊಣೆ ಹೊತ್ತಿದೆಯೆಂಬುದು ತಾತ್ವಿಕವಾಗಿ ಸರಿಯಾದರೂ ಇಂತಹ ಅಸಂಬದ್ಧ ದಾರಿಗೆ ದೀಪ ಹಿಡಿದವರು ಸ್ವಯಂ ಚವನರೇ. ಮೊದಲಿನಿಂದಲೂ ಚವನರು ಮರಾಠಿಗಳ ಪಕ್ಷಪಾತಿಗಳೆಂಬುದನ್ನು ಎಲ್ಲರೂ ಬಲ್ಲರು. ಮರಾಠಿಗಳ ಒತ್ತಡದ ಪರಿಣಾಮವಾಗಿಯೇ ನಿಜಲಿಂಗಪ್ಪನವರನ್ನು ಒತ್ತಾಯದಿಂದಲೇ ಒಪ್ಪಿಸಿ ಮಹಾಜನ ಆಯೋಗವನ್ನು ನೇಮಿಸಿದರು. ಆ ಮೇಳಯಲ್ಲೇ ಸಂಬಂಧಿಸಿದ ಎಲ್ಲ ಪಕ್ಷಗಳೂ ಇದರ ವರದಿಯನ್ನು ಒಪ್ಪಿಕೊಳ್ಳಬೇಕೆಂಬ ತಿಳುವಳಿಕೆಗೆ ಬರಲಾಗಿತ್ತು. ಆದರೆ, ಮಹಾರಾಷ್ಟ್ರಸರಕಾರವೂ ಶಾಸನಸಭೆಯೂ ಈ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿತು—ಆಯೋಗದ ವರದಿ ಕರ್ನಾಟಕದ ಪರವಾಗಿ ಪಕ್ಷಪಾತ ಮಾಡಿದಯೆಂಬುದು ಅದರ ಕಾರಣ. ಅದರ ಮೇಲೇದ ರಾಷ್ಟ್ರೀಯ ಅಭಿಪ್ರಾಯದ ಸೋಗು ಮುಂದ ಬಂದಿದೆ. ಈ ಸೋಗನ್ನು ಚವನರೂ ಮರಾಠಿಗರೂ ಈಗ ಮುಂಗೆ ಮಾಡುವುದ ಕೈಂತ ಆಯೋಗ ನೇಮಕ ಮಾಡಲು ಒತ್ತಾಯ ಹೇರುವುದಕ್ಕೆ ಮೊದಲೇ ಮಾಡಬೇಕಿತ್ತು. ಆಗ ಇದಕ್ಕೆ ಕರ್ನಾಟಕವೂ ಒಪ್ಪತಿತ್ತು ಎನ್ನೋಣ. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲವೆಂಬುದನ್ನು ಕನ್ನಡಿಗರು ಬಲ್ಲರು. ಒಂದು ವೇಳೆ ಮಹಾಜನ ಆಯೋಗವು ಬೆಳಗಾಂವಿ, ಕಾರವಾರ ನಗರವನ್ನೂ ಇನ್ನಿತರ ಮರಾಠಿಗಳು ಬಯಸಿದ ಪ್ರದೇಶಗಳನ್ನೂ ಸಂಪೂರ್ಣವಾಗಿ ಅವರಿಗೇ ಕೊಡಮಾಡಿದ್ದರೆ, ಅದನ್ನು ಮರಾಠಿಗರು ನ್ಯಾಯಪೂರ್ಣ ವರದಿಯೆಂದು ಎದೆಗಪ್ಪುತಿದ್ದರು—ರಾಷ್ಟ್ರೀಯ ಭಾವನೆಯೆಂಬ ವಿಶಾಲ ಮನೋಭಾವ ಅವರಲ್ಲಿಲ್ಲ ಅದು ರಾಜ್ಯ ಮಟ್ಟದಲ್ಲಿ ಸಂಕುಚಿತವಾಗಿದೆ. ಇದೀಗ ರಾಷ್ಟ್ರೀಯ ಅಭಿಪ್ರಾಯವಾದರೂ ಮಹಾರಾಷ್ಟ್ರದ ಮಹತ್ವಾಕಾಂಕ್ಷೆಯನ್ನು ಈಡೇರಿಸದೆ ಹೋದರೆ, ಆಗ ಸಾತ್ತೊಂದು ಡೊಂಕು ದಾರಿಯನ್ನು ಅವರು—ನಾಯಕ—ಚವನರು ಹಿಡಿದೇ ತೀರುವರು. ಹಾಗಾಗಿ ಕರ್ನಾಟಕದ ಮೇಲೆ ರಾಜಕೀಯ ಹಲ್ಲೆ ನಡೆಸುವುದಷ್ಟೇ ಇವರ ಇಂಗಿತ—ತಮ್ಮ ತೃಪ್ತಿಗಾಗಿ!

ಕರ್ನಾಟಕದಲ್ಲಿ ಕಾಂಗ್ರೆಸ್ಸು ಛಿದ್ರವಾಗಿದೆ. ಇದೀಗ ಕೇಂದ್ರ ಸರಕಾರವು ಮಹಾರಾಷ್ಟ್ರದ ಪರವಾಗಿ ಅನ್ಯಾಯವನ್ನು, ಅಪ್ರಾಮಾಣಿಕತೆಯನ್ನು ಎತ್ತಿ ಹಿಡಿಯಲು ಕಟಿಬದ್ಧವಾದರೆ, ಇಲ್ಲಿನ ಕಾಂಗ್ರೆಸ್ ಪಕ್ಷವು ಛಿದ್ರವಿಚ್ಛಿದ್ರವಾಗುವುದು. ಕರ್ನಾಟಕದ ಜನತೆ ಶಾಂತಿಪ್ರಿಯರು ನಿಜ; ಗೊಂದಲ—ಚಳುವಳಿಗಳು ಅವರಿಗೆ ಬೇಕಿಲ್ಲ ನಿಜ. ರಾಷ್ಟ್ರೀಯ ಹಿತ—ರಾಷ್ಟ್ರೀಯ ಐಕ್ಯಕ್ಕಾಗಿ ಸರ್ವ ತ್ಯಾಗಕ್ಕೂ ಸಿದ್ಧವೇ. ಇದರಿಂದಾಗಿಯೇ ಅದು ಮರಾಠಿಗರಂತೆ ಯಾವ ಹಿಂಸಾತ್ಮಕಕ್ರಿಯೆಗಳಿಗಿಳಿದಿಲ್ಲ. ಆಯೋಗದ ರಚನೆಯು ಸ್ವೀಕೃತವಾಗದಿದ್ದರೂ, ಕೊನೆಗೂ ಅದನ್ನು ಒಪ್ಪಿತು; ವರದಿಯ ವಿವರಗಳು ತಿಳಿಯುವುದಕ್ಕೆ ಮೊದಲೇ ಅದು ಉಭಯ ರಾಜ್ಯಗಳಿಗೂ ಬಂಧನಕಾರಿಯೆಂದು ಸಾರಿ, ಅದರಂತೆ ನಡೆಯಿತು. ಇದು ಕನ್ನಡಿಗರ ದೌರ್ಬಲ್ಯವಲ್ಲ; ರಾಷ್ಟ್ರೀಯ ಭಾವನೆಯ ಪ್ರತೀಕ. ಗಡಿ ಸಮಸ್ಯೆಗೊಂದು ಪೂರ್ಣ ವಿರಾಮ ಹಾಕಬೇಕೆನ್ನುವ ಒಂದೇ ಒಂದು ಉದ್ದೇಶದಿಂದ ಕರ್ನಾಟಕವು ಮಹಾಜನ ಆಯೋಗ ವರದಿಯನ್ನು ಒಪ್ಪಿದೆಯಷ್ಟೆ ಅದರ ಲಾಭಾಲಾಭಗಳ ದೃಷ್ಟಿಯಿಂದಲ್ಲ. ಕೇಂದ್ರ ನಾಯಕರೂ ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷವೂ ಕನ್ನಡಿಗರನ್ನು ಹೇಗಾದರೂ ನೋಡಿಕೊಳ್ಳಬಹುದು, ಮರಾಠಿ ತೋಳವನ್ನು ತೃಪ್ತಿ ಪಡಿಸಲು ಕನ್ನಡಕುರಿಯನ್ನು ಬಲಿಗೊಡಬಹುದುಎಂದು ನಂಬಿದ್ದರೆ, ಮದ್ರಾಸ-ಕೇರಳಗಳು ಕಾಂಗ್ರೆಸಿಗೆ ಮುಳುವಾದಂತೆಯೇ ಕನ್ನಡ ರಾಜ್ಯದಲ್ಲೂ ಆಗಬಹುದು. ಇತ್ತೀಚೆಗಿನ ಉಪಚುನಾವಣೆಗಳು ಇದನ್ನೇ ಸಾರಿ ಹೇಳಿವೆ. ರಾಜ್ಯ-ಭಾಷೆಗಳ ಮೇಲಣ ಮಮತೆ ಮರಾಠಿಗಳಿಗೆ ಮಾತ್ರವಲ್ಲ, ಕನ್ನಡಿಗರಿಗೂ ಇದೆ; ಜತೆಗೆ ರಾಷ್ಟ್ರೀಯಾಭಿಮಾನವೂ ಇದೆ. ಕನ್ನಡಿಗ ಮಯೂರಶರ್ಮನು ಆಂಧ್ರವಾರ್ಕ ಪ್ರಸಂಗದಿಂದ ಪಲ್ಲವೇಂದ್ರನ ವಿರುದ್ಧ ಸಿಡಿದೆದ್ದು ಮಯೂರವರ್ಮನಾದನೆಂದು ಇತಿಹಾಸ ಹೇಳುತ್ತದೆ. ಕಾಂಗ್ರೆಸ್ ಅಧ್ಯಕ್ಷರೂ ರಾಜ್ಯದ ಮುಖ್ಯಮಂತ್ರಿಯೂ ಆದ ನಿಜಲಿಂಗಪ್ಪನವರು ಈ ಹೊಸ "ಸ್ವಾಹಾ ನಾಟಕ"ಕ್ಕೆ ಕನ್ನಡಿಗರನ್ನು ಬಲಿ ನೀಡಬಾರದು.

ಸುಶಿಕ್ಷಿತ ನಿರುದ್ಯೋಗಿ

ಬಿ. ಇ. ಪದವೀಧರನಾದವನೊಬ್ಬ ತಾನು ಕಲಿತ ವಿದ್ಯೆಗೆ ತಕ್ಕ ಉದ್ಯೋಗ ಸಿಗದಿದ್ದುದರಿಂದಾಗಿ 'ಶಕ್ತಿ ಪ್ರದರ್ಶನ'ದಂತಹ ಹೊಸ ಉದ್ಯೋಗವನ್ನು ಕೈಗೊಳ್ಳಬೇಕಾಯಿತಂತೆ. ಈ ಸಂಗತಿಯನ್ನು ಕೇಂದ್ರ ಸಚಿವ ಕೆ. ಎಲ್. ರಾವ್ ತಿಳಿಸಿದರು. ಇಂಜಿನಿಯರಿಂಗ್ ಪದವೀಧರರಲ್ಲಿ ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿದೆಯೆಂಬುದಕ್ಕಿದೊಂದು ಉದಾಹರಣೆ. ಇದಕ್ಕೆ ನಮ್ಮ ಆರ್ಥಿಕ ಹಿನ್ನಡೆಯು ಕಾರಣವೆಂದು ಊಹಿಸಲಾಗಿದ್ದು, ಈ ಹಿನ್ನಡೆ ಬಹುಕಾಲ ಮುಂದುವರಿಯಲಾರದೆಂದೂ ಆ ಮೇಲೆ ಪರಿಸ್ಥಿತಿ ಸುಧಾರಿಸುವುದೆಂದೂ ಹಾ। ರಾಯರು ಅಭಿಮತ. ಆದರೆ, ನಮ್ಮಲ್ಲಿ ಇಂಜಿನಿಯರರ, ತಂತ್ರಜ್ಞರ ಮತ್ತಿತರ ವಿಶೇಷಜ್ಞರ ಕೊರತೆ ಬೇಕಷ್ಟಿದ್ದೇ ಇದೆ. ನಾವು ಇವರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಿಲ್ಲವಷ್ಟೆ. ಪ್ರಕೃತಿಯೂ ಕೆಲವೆಡೆ ಉದಾರಿಯಾಗಿ ಕೆಲವೆಡೆ ಕಠೋರಿಯಾಗಿರುವಂತೆಯೇ ಈ ತಂತ್ರಜ್ಞರ ಕಥೆ ಕೂತ. ಆದರೂ ನಮ್ಮ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಲ್ಲ ಬಗೆಯ ಇಂಜಿನಿಯರಿಂಗ್ ಅಧ್ಯಾಪಕಗಳನ್ನೂ ಒದಗಿಸುವುದರಿಂದ ತುಸು ಉತ್ಕೃಷ್ಟವಾದ ಬಹುದು. ರಾಜ್ಯ ಸಚಿವ ವೀರೇಂದ್ರ ಪಾಟೀಲರು ಈ ಬಗ್ಗೆ ಕ್ರಮ ಕೈಕೊಳ್ಳುವುದಾಗಿ ಹೇಳಿದ್ದಾರೆ. ಇದು ಸ್ವಾಗತಾರ್ಹ. ಇದೇ ಬಗೆಯಲ್ಲಿ ಶಿಕ್ಷಣದ ಇತರ ರಂಗದಲ್ಲೂ ಸ್ವತಂತ್ರ ಉದ್ಯೋಗಗಳನ್ನು ಕಲಿಸಲು ಪ್ರೇರಕವಾಗಬಹುದಾದ ಶಿಕ್ಷಣಕ್ರಮದ ಅಗತ್ಯವಿದೆ; ಇಲ್ಲವಾದರೆ, 'ಸುಶಿಕ್ಷಿತ ನಿರುದ್ಯೋಗಿ'ಗಳು ಈಗಲೇ ದೇಶದ ಆರೋಗ್ಯಕ್ಕೆ ಕಂಟಕಪ್ರಾಯರಾಗಿದ್ದಾರೆ—ಮುಂದೆ ಮಾರಕವೂ ಆಗಬಹುದು.

ವಚನ ಸುಧೆ

ಅನಸೂಯಃ ಕೃತಪ್ರಜ್ಞಃ
ಶೋಭನಾ ನ್ಯಾಚರನ್ ಸದಾ ।
ನ ಕೃಚ್ಛ್ರಂ ಮಹದಾಪ್ನೋತಿ
ಸರ್ವತ್ರಚ ವಿರೋಚತೇ ॥

ದೋಷದೃಷ್ಟಿಯಿಲ್ಲದ ಶುದ್ಧ ಬುದ್ಧಿಯೂ ಇದನು ಯಾವಾಗಲೂ ಶುಭಕಾರ್ಯಗಳನ್ನು ಮಾಡಿಕೊಳ್ಳುತ್ತ ಸುಖ ಹೊಂದುತ್ತಾನೆ; ಎಲ್ಲೆಡೆಯೂ ಆತನಿಗೆ ಸಮ್ಮಾನ ದೊರೆಯುತ್ತದೆ.

ಮಾಯಾಚಿತ್ರ

ಮೇಲೆ— ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿನ ದರ್ಪಣ ತೀರ್ಥದ ಪಕ್ಕದಲ್ಲಿ ಶಿಲೆಕಲ್ಲಿನ ಮೇಲಿರುವ "ಮುದ್ರಪಾದ".

ಕೆಳಗೆ— ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನಡೆಯುವ ಬ್ರಹ್ಮ ರಥೋತ್ಸವ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟಂಡರ್ಡ್ ಡಿಸೆಲ್ ಇಂಜಿನ್‌ಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿವೆ

ದೇಶವಿಖ್ಯಾತವಾದ

ಜೀಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್/ಕೆರೊಸಿನ್ ಇಂಜಿನ್‌ಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು.

ನರಸಣ್ಣನ ಸರಸ



ನಂಬೂದ್ರಿವಾದರಿಗೂ ನ್ಯಾಯಾಲಯ ನಿಂದನೆಯ ಅಪರಾಧದ ಮೇರೆ ನ್ಯಾಯಾಲಯ ಶಿಕ್ಷೆ ವಿಧಿಸಿತಂತೆ!

ಗೇಹ ರಾಜ್ಯದಲ್ಲಿ

ಹಚ್ಚಿದ ಕಿಚ್ಚು ಹರಡದಿರುತ್ತೆ?

"ಅಲ್ರಿ, ಎಷ್ಟು ಹೊತ್ತಾಯ್ತು? ಏನ್ಸ್ಥಿತಿ? ಮನೆಯೆಂಬುದೊಂದಿದೆ. ತನ್ನ ದಾರೀ ತಾಣೋ ಒಂದು ಪ್ರಾಣೀ ಇದೇಂ ತಾದ್ರೂ ಧ್ಯಾನ ಬೇಡ್ವೆ?"

"ಬೇಕೇ ಬೇಕು. ಅದುದರಿಂದ್ಲೇ ನೋಡು ನಡುರಾತ್ರಿ ಆಗೋ ಹೊತ್ತಾದ್ರೂ ಮೂರ್ತಿವಂತ್ತಾಗಿ ಬಂದುಬಿಟ್ಟಿರೋದು...."

"ಅಲ್ರಿ, ಯಾಕೆ ಇಷ್ಟುಹೊತ್ತೂಂತೆ?"

"ಯಾಕೆ ಅಂದ್ರೆ, ಏನೋ ಶುರು ಕೆಲಸವಿತ್ತೂನ್ನು. ಅದನ್ನ ಮುಗಿಸಿ ಸಾಲ್ಕು ಹೆಜ್ಜೆ ಇಡೋದ್ರೊಳ್ಗೆ....'

"ಹ್ಞೂಂ, ಏನಾಯ್ತು?"

"ಆಗೋದೇನು ಬಂತೆ? ಭವ್ಯ ಹಳೆ ದೋಸ್ತಿ, ಗೋವಿಂದು ಸಿಕ್ಕಿದ..."

"ಸರಿ ಹಾಗಾದ್ರೆ, ಬಿಡಿ, ಮತ್ತೇನು ಮಾತಿನ ಮಲ್ಲರಿಬ್ರೂ ಸೇರ್ಬಿಟ್ಟು ನಡುರಾತ್ರಿಯಾಯ್ತು ತಾನೆ"

"ಅಪರೂಪಕ್ಕೆ ಬೆಂಗಳೂರಿಂದ ಬಂದವ ಅದು—ಇದು ಅಂತ ಸಾಲ್ಕಾರು ಮಾತಾಡ್ತಾ ಇರೋದ್ರೊಳ್ಗೆ ಹೊತ್ತು ಹೋಯ್ತೂನ್ನು...."

'ಓ, ಈಗ ಗೋವಿಂದು ಬೆಂಗಳೂರಿನಲ್ಲಿರೋದೆ?"

'ಹ್ಞೂಂ...'

"ಅಲ್ರಿ, ಅಲ್ಲಿ ಹಿಂದಿ ಗಲಾಟೆ ಬಾರಿ ಅದೆ ಅಂತೆಲ್ಲ?'

"ಹ್ಞೂಂ....ಅಂದು ಆರಂಭವಾದದ್ದು, ಕಾಲೇಜುಗಳೆಲ್ಲಾ ಮುಚ್ಚಿದ್ದು, ವಾತಾವರಣ ತಿಳಿಗೊಂಡಿತೂಂತ ಕಾಲೇಜುತೆರೆದದ್ದು, ಮತ್ತೆ ಚಳುವಳಿ ಮುಂದುವರಿದದ್ದು, ಕಾಲೇಜುಗಳನ್ನು ಅಕ್ಷಿರ್ದಿಷ್ಟಾವಧಿಯ ವರೆಗೆ ಮುಚ್ಚಿದ್ದ—ಏನತ್ ಬೆಂಗೂರೂ ರಾಜ್ಯ ನಗರಾಂದೋಲನ ಮಹಾತ್ಮ—ಅಂತೆ...."

"ಅಲ್ರಿ, ಮೈಸೂರ್ನಲ್ಲಿ ಒಂದ್ಸಲ ಚಳುವಳಿ ಫಿಲ್ಡಿಸಲು ನಿರ್ಧರಿಸಿದವ್ರು ಮತ್ತೆ ಆರಂಭ ಮಾಡಿದ್ರೂಂತಲ್ಲಾ?'

"ಹ್ಞೂಂ...."

"ಯಾಕೇಂತ?"

"ಯಾಕೇಂದ್ರೆ, ಜನರಲ್ ಕಾರ್ಯಸ್ಥನವರನ್ನು ಭಾಷಣ ಮಾಡಲು ಕರೆತಂದರು. ಅವರು ಅಂದರು—ಚಳುವಳಿ ಬಿಟ್ಟು ಕಾಲೇಜುಗಳಿಗೆ ಹೋಗಿ. ಈ ಪ್ರಶ್ನೆಯನ್ನು ನಾಯಕರಿಗೆ ಬಿಡಿ. ತಾನೂ ದ್ವಿಭಾಷಾ ಸೂತ್ರವನ್ನು ಒಪ್ಪುತ್ತೇನೆ.'

'ಆದ್ರೂ ಅವ್ರ ಮಾತಿಗೆ ಬೆಲೆ ಬರಲಿಲ್ಲಾಂದ್ರೆ..."

"ಯಾಕೆ ಬರಬೇಕೂಂತ? ದ್ವಿಭಾಷಾ ಸೂತ್ರವನ್ನು ಬೆಂಬಲಿಸುವ ಮೇಧಾವಿಗಳಿದ್ದಾರೆ. ಸಮಸ್ಯೆಯ ಪರಿಹಾರಕ್ಕೆ ನಾಯಕರನ್ನೇ ನೆಮ್ಮದರೆ, ತಾವು ಫಿರ್ಕಾದ್ರರು, ಮೊಸೆಯಿಲ್ಲದವರು ಆಯ್ತಲ್ಲಾ....ಆ ಕೆಲಸವನ್ನೂ ತಾವೇ ಮಾಡುತ್ತೇವೇಂತ ಚಳುವಳಿ ಮುಂದುವರಿಸಿದರು.... ಏನಾಯ್ತುದರಲ್ಲಿ?"

"ಹಾಗಿರುವಾಗ ಎರಡು ದಿನ ಮೊದಲು ನಿಲ್ಲಿಸುವ ನಿರ್ಣಯ ಮಾಡಿದ್ದು ಮತ್ತೆ ಬದಲಾಯ್ಸಿದ್ದು ಯಾಕೆ?'

'ಅಯ್ಯೋ, ನೀನೊಂದು. ಇಂದು ಮತ್ತೆ ನಡೆಯುತ್ತಿರುವುದೇನು? ಸರಕಾರಿ ಆಜ್ಞೆ, ಶಾಸನ, ನೀತಿಯಿಂದ ಹಿಡಿದು ಶ್ರೀ ಸಾಮಾನ್ಯನ ನಾಲಿಗೆಯಿಂದ ಹೋಡುವ ನುಡಿಮುತ್ತುವರೆಗೆ ತನಕವೆಲ್ಲವೂ ಪ್ಲೇಗ್ರಾಂಡಿನಲ್ಲಿ ಓಡಾಡುವ ಜೆಂಡು ಹಾಗೇನೇ ವಿದ್ಯಾರ್ಥಿಗಳ ನಿರ್ಣಯ...."

"ಅಲ್ರಿ, ಬೆಂಗಳೂರಲ್ಲಿ ಹುಡುಗರು ಹುಡುಗಿಯರ ಕಾಲೇಜಿಗೂ ನುಗ್ಗಿದರಂತೆ! ರಂಪಾಟ ಮಾಡಿದರಂತೆ—ಈ ಯೆಲ್ಲ ನಡತೆ ಉಪಕುಲಪತಿಗಳಿಗೆ ಅರ್ಥವಾಗದಂತೆ!"

"ಯಾಕೆ ಅರ್ಥವಾಗಬೇಕು? ಆರಂಭದಲ್ಲಿ ಪೋಲೀಸರು ಬಂದುದರಿಂದಲೇ ಗಲಭೆಯೊಯಿತು ಎಂದುದು ಕೆಲವು ಮಹನೀಯರು ಈಗ ಪೋಲೀಸರು ಬಾರದೆ ಅವಾಂತರವಾಯಿತು ಎಂದಂತಾಯಿತು....'

"ಅದಿರ್ಲಿ. ಈಗ ಮತ್ತೊಂದು ಚಳವಳಿ ಆರಂಭವಾಗಿದೆಯಂತಲ್ಲಾ?"

"ಏನು?"

"ಇಂಗ್ಲಿಷ್ ಬೇಡ ಚಳುವಳಿಯಂತೆ ತಮಿಳ್., ಇಂಗ್ಲಿಷ್ ಚಿತ್ರ ಪ್ರದರ್ಶಿಸ ಬಾರದೂಂತ...'

"ಹ್ಞೂಂ... ಕನ್ನಡ ಚಳುವಳಿಗಾರರದ್ದು ತಾನೆ?;

"ಹೌದೂಪ್ಪಿ."

'ನಿಜ. ಅಣ್ಣಾದುರೈಗೆ ಕರಿ ನಿಶಾನೆ ತೋರಿಸಿದ್ರು. ಕನ್ನಡಕ್ಕೆ ಸೂಕ್ತ ಸ್ಥಾನವೂನ ನೀಡಬೇಕೂಂತ ಹೇಳಿದ್ರು..... ಇಂಗ್ಲಿಷೂ ಬೇಡ ಅಂದ್ರು....ಅದೂ ಒಂದು ಚಳುವಳಿ...'

"ಅಲ್ರಿ, ಇಂಗ್ಲಿಷ್ ಬೇಕು ಅನ್ನೋರೂ ನಡುವೆ ಅದು ಬೇಡ ಅನ್ನೋರೂ ಇದ್ದಾರಲ್ಲಾ?"

"ಅಲ್ಲವೇ ಮತ್ತೆ, ಹಿಂದಿ ಬೇಡ ಅನ್ನೋರೂ, ಬೇಕು ಅನ್ನೋರೂ ಇದ್ದೇ ಇದ್ದಾರೆ...'

"ಅದು ಸರೀನ್ನಿ. ಅಲ್ರಿ, ನೋಡಿ ಕಾಲೇಜು ವಿದ್ಯಾರ್ಥಿಗಳಿಗೆ ಹಿಂದಿ ಕಲಿಯಲೇ ಬೇಕೆಂಬ ಒತ್ತಾಯ ಎಲ್ಲಿದೆ? ಅವರು ಬೇಕಾದುದನ್ನು ದ್ವಿತೀಯ ಭಾಷೆಯಾಗಿ ಆರಿಸಿ ಕೊಳ್ಳುವ ಅವಕಾಶವಿದೆ ತಾನೆ? ಅವರಿಗೆ ಹಿಂದಿ ಬೇಡವಾದರೆ, ಬೇರೆ ಭಾಷೆಯನ್ನು ಆಯ್ದುಕೊಳ್ಳಬಹುದಲ್ಲಾ?"

"ಇದೀಗ ಪ್ರಶ್ನೆ. ತಮ್ಮ ದೇಶದ ಕಥೆ ಇಲ್ಲಿ ವರೆಗೆ ಬಂದಿದೆ..."

"ಅಂದ್ರೆ?"

"ನೋಡು, ಇತ್ತೀಚೆಗೊಂದು ಪ್ರಸಂಗ ನಡೆಯಿತು...."

"ಏನದು?'

'ಅದೇ ನಮ್ಮ ರಾಜ್ಯದ ಆಹಾರ ಮಂತ್ರಿ, ಜತ್ತಿಯವರು ಎಲ್ಲೋ ಹಿಂದೂರಲ್ಲಿ ಬಸವಗೀತೆ ಭಗವದ್ಗೀತೆಗಿಂತಲೂ ಹೆಚ್ಚಿನದೆಂದು ಹೇಳಿದ್ರಂತೆ. ಈಗ ಇದ್ರ ಮೇಲೆ ನಡೆಯುತ್ತಿದೆ ವಾಗ್ವಾದ. ಮಾನ್ಯ ಮಂತ್ರಿಯವರಿಗೆ ಭಗವದ್ಗೀತೆಯ ಕರಾಕಿ ಏನು ಗೊತ್ತು ಅಂತ್ಲೂ ಸವಾಲು."

"ಅದಿರಲಿ. ಅದಕ್ಕೂ ಇದಕ್ಕೂ ಸಂಬಂಧವೇನು?"

ಇದೇ ನೋಡು. ಒಬ್ಬ ಮಂತ್ರಿಯಾಗಿಬಿಟ್ಟಾಂತೆಂದ್ರೆ, ವೇದ ಪುರಾಣ, ರಾಮಾಯಣ, ಭಾರತ, ಗೀತೆ—ಎಲ್ಲವುಗಳ ಮೇಲೂ ವಿಮರ್ಶೆ ಮಾಡುವ ಲೈಸೆನ್ಸ್ ಪಡೆದುಕೊಂಡಂತೆ. ಅವನು ರಾಜಕೀಯ, ಸಾಹಿತ್ಯ, ಶಿಕ್ಷಣ—ಅದೆಲ್ಲಾ ಯಾಕೆ, ಈ ಸೂರ್ಯನ ಕೆಳಗೆ ಏನೇನಿದೆಯೋ ಅವೆಲ್ಲದರ ಮೇಲೂ ಟೀಕೆ ಟಿಪ್ಪಣಿ, ವಿಮರ್ಶೆ ಮಾಡುವ ಯೋಗ್ಯತೆ ಪಡೆದು ಕೊಂಡಾಂತ ಅರ್ಥ.'

"ಹ್ಞೂಂ....ಸರೀನ್ನಿ...."

"ಹಾಗೇನೇ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳೂಂತಾದ ಕೂಡಲೇ ಅವರು ಯಾವ ಚಳುವಳಿಯನ್ನೂ ಮಾಡುವ ಅರ್ಹತೆ ಹೊಂದುತ್ತಾರೇಂತ ತೋರುತ್ತೆ. ಜವಾಬ್ದಾರಿಯನ್ನು ಹೊರುವ ಕಷ್ಟ ಅವರಿಗಿರುವುದಿಲ್ಲ, ಹಾಗೇನೇ ತಿಳುವಳಿಕೆಯಿಲ್ಲದ ಪರಿಸ್ಥಿತಿಯಲ್ಲೂ ಅವರಿಲ್ಲ. ಹಾಗಾಗಿ ದುರುದ್ದೇಶ ಸಾಧನೆಗಾಗಿ ಬಳಸಿಕೊಳ್ಳುವುದು ಸುಲಭ. ಕಿಚ್ಚನ್ನು ಒಮ್ಮೆ ಹಚ್ಚಿದರೆ ಮತ್ತೆ ಅದು ತನಗೆ ತಾನಾಗಿಯೇ ಪ್ರಜ್ವಲಿಸುತ್ತದೆ."

"ಅಲ್ರಿ, ಈ ಮಕ್ಕಳು ಹಿಂದಿ, ಬೇಡಿ ಅಂತ ಕೂಗುವುದರ ಬದಲು ಲೆಕ್ಕ ಬೇಡಿ ಅಂತ ಕೂಗುತಿದ್ರೆ ಎಷ್ಟೋ ಜನ ಪಾಸಾಗಿ ಹೋಗುತಿದ್ರು...."

"ಹೌದೇ, ಯಾವುದು ಬೇಕು—ಯಾವುದು ಬೇಡ ಅನ್ನೋದನ್ನ ಇತ್ಯರ್ಥ ಮಾಡೋರು ಬೇರೆ ಇದ್ದಾರಲ್ಲಾ?"

(ಬಂಭತ್ತನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 386/1967

ಸಿಂಡಿಕೇಟ್ ಬೇಂಕ್ ಲಿಮಿಟೆಡ್, ಮಣಿಪಾಲ ಇದರ ರಿಕವರಿ ಆಫೀಸರ್ M. S. ಭಂಡಾರಿ —ವಾದಿ

ಮತ್ತು

1 K. ಗೋವರ್ಧನ ಶೆಟ್ಟಿ, ಅನಂತಯ್ಯ ಶೆಟ್ಟರ ಮಗ; 2 R. ಪಂಚಾಯೇ ಬಾಳಿಗ, R. ಗಣಪತಿ ಬಾಳಿಗರ ಮಗ—ಪ್ರತಿವಾದಿರು

ಮಂಗಳೂರು ತಾಲ್ಕು ತಾಳಿಪಾಡಿ ಗ್ರಾಮದ ಕೆನ್ಸಗೋಳಿ, ಯವರೊಳಗೆ—

ವಾದಿ ಬೇಂಕಿಗೆ ನಿಮ್ಮಿಂದ ತಾರೀಖು 29—9—1966ನೇ ದಿವಾಂಡ್ ಪ್ರಾಮಿಸರಿ ನೋಟು ಪ್ರಕಾರ ಬರತಕ್ಕ ಅಸಲು ಬಡ್ಡಿ ರೂಪಾಯಿ 976—39 ಬರಬೇಡುವಂತೆ, ವಾದಿ ಬೇಂಕಿನವರು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಖು 7-3-1968ನೇ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ, ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ, ನೀವು ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳಬಹುದಾಗಿಯೂ, ತಪ್ಪುದರೆ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಈ ಮೂಲಕ ಕೋರ್ಟು ಹುಕುಮು ಪ್ರಕಾರ ನಿಮಗೆ ತಿಳಿಯಪಡಿಸೋಣಾಗುತ್ತದೆ.

S. Rajagopal Achar
Advocate for Plaintiff

Karkal, 16—2—1968

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಕೇವಣಾತಿಗಳ ಮೇಲೆ 5% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಬೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R.E.P. 419/1967 O.S. 86/1957

ಅರ್ಜಿದಾರ—ಕೆ. ಅಂಣಪ್ಪ ಶೆಟ್ಟಿ ಎದ್ರಿರು —ರುಕ್ಮಿಣಿ ಸೆಡ್ತಿ(ಪ್ರಾತಿ)ಸಹಾ ಸೆಡ್ತಿ ವೃಷಭರಡೆಯಲ್ಲಿ—

16 ಪಾರ್ವತಿ ಸೆಡ್ತಿ, 18 ಶಂಕರ ಶೆಟ್ಟಿ—ಚಂದಮ್ಮ ಸೆಡ್ತಿ ಮಕ್ಕಳು.

20 ನಾರಾಯಣ ಶೆಟ್ಟಿ—ಸರ್ವೇಶ್ವರಿ ಸೆಡ್ತಿ ಮಗ.

28 ನಾಗಮ್ಮ ಸೆಡ್ತಿ, 25 ಭುಜಂಗ ಶೆಟ್ಟಿ, 26 ಶೇಖರ ಶೆಟ್ಟಿ—ಪಾರ್ವತಿ ಸೆಡ್ತಿ ಮಕ್ಕಳು.

ಉಡುಪಿ ತಾಲ್ಕು ಅಲರೆ ಗ್ರಾಮದ ಕೆರಾಡಿಯಲ್ಲಿರುವವರು. ಇವರಿಗೆ—

ಮೇಲ್ಕಂಡ ದಿಕ್ಕಿನ ಹೊಂದಿದ ಅರ್ಜಿದಾರನು ಆತನಿಗೆ ಬಹಾ ನಿವೃತ್ತಿಗಳ ಬಗ್ಗೂ, ಅಲ್ಲದೇ ದಿಕ್ಕಿಯ 5000ದಿಂದ 86ನೇ ವರೇಗಿನ ಎದ್ರಿರಿಗೆ ಬಹ ನಿವೃತ್ತಿಗಳನ್ನು ಪಡೆಯುವ ಹಕ್ಕನ್ನು ತಾನು ತಾ. 9—6—61ರಲ್ಲು ಟ್ರಾನ್ಸ್ಫರಾಯಪಡದ ಸಂಗ್ತಿ ಮಂಜೂರು ಮಾಡಿ, ಆ ಕುರಿತಾದ ನಿವೃತ್ತಿ ಹೊಂದುವರೆಯೂ ಸಹಾ ಎದ್ರಿರ ಮೇಲೆ ನಿವೃತ್ತಿ ಕೇಳಿ ಮೇಲ್ಕಂಡ ಅಮಲ್ಲಾರಿ ದಾಖಲು ಮಾಡಿದ್ದು, ಅದರಲ್ಲಿ ನಿಮ್ಮ ಹಾಜರಾತಿ ಬಗ್ಗೆ ತಾ. 5—3—1968ಕ್ಕೆ ಇಟ್ಟಿರುತ್ತದೆ. ಈ ಕುರಿತು ನಿಮ್ಮವೇನಾದರೂ ಆಕ್ಷೇಪಣೆಯಿರುವಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಞಾಪಿಸಪಡಿಗತಕ್ಕದ್ದೆಂತ ಈ ಮೂಲಕ ತಿಳಿಯಪಡಿಸಿಯದೆ. ತಪ್ಪುದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮುಂದಿನ ಹುಕುಂ ಕೊಡಿಸಲಾಗುತ್ತದೆಂತ ತಿಳಿದಿರಲಿ.

(ಕೋರ್ಟು ಅಪ್ಪಣೆ ಮೇರೆಗೆ,
ವೈ. ತೇಜಪ್ಪ ಶೆಟ್ಟಿ, ಬಿ.ಎ.ಬಿ.ಎಲ್,
ವಾದಿ ಪರ ಎಡ್ವೆಕೇಟ್

ಕುಂದಾಪುರ, ತಾ. 16-2-1968.

ಶುದ್ಧ ಹರಟೆ

ಕೊನೆಗೂ ಬರೆದೇ ಬಿಟ್ಟೆ

ಬರೆದವರು:
ಶ್ರೀ ಯಕು. ಕೆ. ಕಾರಂತ, ಉಡುಪಿ.

ಬೀಚಿ ಗೀಚಿದರೆ ಸಾಹಿತ್ಯವಂತೆ! ಅರೆ, ನಾನು ಗೀಚಿದರೆ...? ಹೌದು; ಏನಾದರೂ ಬರೆಯಬೇಕು. ಏನನ್ನು? ಈ ಪ್ರಶ್ನೆಗೆ ಉತ್ತರ ಸಿಕ್ಕುವುದು ಅಷ್ಟೊಂದು ಸುಲಭ ಸಾಧ್ಯವಲ್ಲವೆಂದೆನಿಸಿತು ನನಗೆ.

ಹೆಚ್ಚು ದಿನಗಳಲ್ಲಿ, ವಿಶೇಷ ಸಂಚಿಕೆಗೆ ಲೇಖನ ಬರೆಯುವುದಾದರೆ ಬೇಗನೆ ಬರೆದು ಕಳುಹಿಸಬೇಕು. ಬರೆಯುವುದಾದರೂ ಏನನ್ನು? - ಈ ಸಮಸ್ಯೆಯನ್ನು ಮೊದಲು ಬಿಡಿಸಬೇಕು. ಹಾಗಾದರೆ ಕತೆಯೊಂದನ್ನು ಬರೆದು ಕಳುಹಿಸಲೆ? ಕತೆ ಏನಾದರೊಂದನ್ನು ಬರೆದು ಬಿಡಬಹುದು ಎನ್ನುವ. ನಾನು ಬರೆದ ಕತೆಯನ್ನು ಓದುವವರು ಬೇಕಲ್ಲ. ಕತೆಗೆ ಸಾಕಷ್ಟು ವಿಷಯ ಸಂಗ್ರಹಿಸಬೇಕು. ನಾನೆಷ್ಟೋ ಕಾದಂಬರಿಗಳನ್ನು ಓದಿದ್ದೇನೆ. ಶ್ರೀಗಳಾದ ಶಿವರಾಮ ಕಾರಂತ, ಅ.ನ.ಕೃ., ತಾ.ರಾ.ಸು, ತ್ರಿವೇಣಿ, ಎಸ್. ಎಲ್. ಭೈರಪ್ಪ ಇವರು ಬರೆದ ಕಾದಂಬರಿ ಪುಸ್ತಕಗಳೆಂದರೆ ನನಗೆ ಬಹು ಆಚ್ಚುಮೆಚ್ಚು. ಶ್ರೀ ಕಾರಂತರ 'ಜೋಮನ ದುಡಿ', ಶ್ರೀ ಅ. ನ. ಕೃ. ರ 'ಸಂಧ್ಯಾರಾಗ, ದಿವಂಗತ ತ್ರಿವೇಣಿಯವರ 'ಬೆಕ್ಕಿನ ಕಣ್ಣು'—ಈ ಕಾದಂಬರಿ ಪುಸ್ತಕಗಳನ್ನು ಆಗಿಂದಾಗ್ಗೆ ಓದುತ್ತಾ ಇರುತ್ತೇನೆ. ಹಾಗಾದರೆ, ನಾನು ಮೆಚ್ಚಿ ಮೇಲಿನ ಯಾವುದೇ ಒಂದು ಕಾದಂಬರಿ ಪುಸ್ತಕದ ಸಹಾಯದಿಂದ ಹೊಸ ಕತೆಯನ್ನು ಬರೆಯಲೆ? ಕತೆಗೂ ಕಾದಂಬರಿಗೂ ವ್ಯತ್ಯಾಸವಿದೆ. ಕತೆ ಚಿಕ್ಕದಾಗಿರುತ್ತದೆ; ಕಾದಂಬರಿ ದೊಡ್ಡದಾಗಿರುತ್ತದೆ. ಎಂದರೆ ಕೇವಲ ಪುಟಗಳ ಸಂಖ್ಯೆಯಲ್ಲಿ ಅಲ್ಲ, ಜೀವನ ದರ್ಶನ ಕಾದಂಬರಿಯಲ್ಲಿ ಕತೆಗಿಂತಲೂ ವಿಸ್ತೃತವಾದದ್ದಿರುತ್ತದೆ. ಜೀವನದ ಚುಟುಕು ದರ್ಶನವನ್ನು ಕೊಡುವುದು ಕತೆಯ ಉದ್ದೇಶ, ಅದಕ್ಕೂ ಹೆಚ್ಚಿನ, ದೀರ್ಘವಾದ ದರ್ಶನವನ್ನು ಒದಗಿಸುವುದು ಕಾದಂಬರಿಯ ಉದ್ದೇಶ. ಹೀಗೆ ಉದ್ದೇಶವೇ ಬೇರೆಯಾದ ಮೇಲೆ ಕಾದಂಬರಿಯ ರೂಪರಚನೆಗಳೆರಡೂ ಬೇರೆ ಬೇರೆಯಾಗಿರಬೇಕೆಂದಾಯಿತು. ಇದರಿಂದಾಗಿ ಕತೆ ಬರೆಯುವ ಸಾಹಸ ಸುಲಭಸಾಧ್ಯವಲ್ಲ. ಆದರೂ ಬರೆಯಬೇಕು. ಓದುಗರ ಅಭಿರುಚಿಯನ್ನು ಅನುಸರಿಸಿ ಬರೆದ ಮೇಲೇ ಈ ೨೦ನೆ ಶತಮಾನದಲ್ಲಿ ಓದುಗರು ಸಿಕ್ಕಬಹುದು. 'ಲೋಕೋ ಭಿನ್ನರುಚಿ.' ಯಾರ ಅಭಿರುಚಿಗೆ ಸರಿಯಾಗಿ ಬರೆಯಬೇಕು? ಅಂತೂ, ಬರೆಯುವ ಕತೆಯಲ್ಲಿ ನಾಯಕ, ನಾಯಕಿಯರ ಚಿತ್ರಣ ವಿರಬೇಕು, ಕಣ್ಣಿಗೆ ವ್ಯಾಧಾನ್ಯತೆ ಕೊಡಬೇಕು, ಹೆಣ್ಣಿನ ಹೆಸರು ಆಧುನಿಕದ್ದಿರಬೇಕು. ರೂಪಲಾವಣ್ಯ ಒನಪುವಯ್ಯಾರ ಇತ್ಯಾದಿ ಇಂದಿನ ಸಿನೇಮ ನಟಿಯರಂತಿರಬೇಕು. ವರ್ಣನೆಯಲ್ಲಿ ಅವಳ ಶುಟಿಯನ್ನು ತೊಡೆಕಾಯಿಗೆ ಹೋಲಿಸಿದರೆ ಮಾತ್ರ ಸಾಲದು. ಕಣ್ಣುಗಳನ್ನು ತಾವರೆಗೆ ಹೋಲಿಸಬೇಕು. ಹೀಗೆಲ್ಲ ಬರೆದು ಹೆಣ್ಣಿನ ನಿಜವಾದ ಬಾಳಿನ ದರ್ಶನವನ್ನು ಓದುಗರ ಮುಂದಿಡಬೇಕು. ಇಷ್ಟೆಲ್ಲವನ್ನು ರೂಪಿಸಿ ಕತೆ ಬರೆಯುವುದು ಹೇಗಪ್ಪಾ ಎಂದೇ ಚಿಂತಿಸಿ ಚಿಂತಿಸಿ ಸಾಕಾಯಿತು. ಹಾಗಾದರೆ, ಕತೆ ಬರೆಯುವುದು ಬೇಡ, ಮತ್ತೆ, ಏನನ್ನು ಬರೆಯಲಿ? ಹರಟೆ ಬರೆದರೆ ಆಗಬಹುದೆ ಎನಿಸಿತು. ನಮ್ಮಲ್ಲಿ ಹರಟೆ ಹೊಡೆಯುವವರೇ ಹೆಚ್ಚು ಮುಂದಿನುವಾಗ ನಾನು ಬರೆದ ಹರಟೆ ಯಾರಿಗೆ ರುಚಿಸೀತು? ಯಾವುದಾದರೊಂದು ವಿಷಯದ ಬಗ್ಗೆ ಹರಟೆ ಬರೆಯಬಹುದು ಎನ್ನಿ. ಬರೆದೆನೆಂದರೆ, ಅದು ಸಂಚಿಕೆಯಲ್ಲಿ ಹೊರಬಿತ್ತೆಂದರೆ, ಓದುಗರ ಕಣ್ಣಿಗೆ "ಇವ ಯಾರಪ್ಪ, ಹರಟೆ ಬರೆದವನು ಇದೆಂತಹ ತಲೆಹರಟೇ?" ಎಂದು ತೋರಿದರೆ ನಾನು ಬರೆದುದ್ದು ಏನು ಸಾರ್ಥಕವಾದಂತಾಯಿತು? ಹರಟೆಯ ವಿಷಯ ಬೇಡ ಎಂದು ಮನಸ್ಸಿಗೆ ಏನೋ ತೋಚಿಸಿತು. ಏನಾದರೂ ಬರೆಯಬೇಕೆಂಬ ಈ ಹುಚ್ಚು ಮನಸ್ಸಿಗೆ ಎಂದು ಬಿಡುವುದೆ ಎಂಬೀ ವಿಚಾರಧಾರೆಯಲ್ಲೇ ಮಗ್ನನಾಗಿ ಒಂದುವರೆ ನಿಮಿಷ ಕಣ್ಣು ಮುಚ್ಚಿ ಕುಳಿತೆ. ಆಫೀಸರರು ನನ್ನ ಬಳಿಯಿಂದಲೇ ಹಾದು ಹೋದುದು ಕೂಡ ಗೊತ್ತಾಗಲಿಲ್ಲ. ಆದರೆ ಕೆಳಗಿನ ಮಹಡಿಯಲ್ಲಿ ಗ್ಲಾಸು ಒಡೆದ ಶಬ್ದ ಕೇಳಿದೊಡನೆ ವಿಚಾರಧಾರೆಯು ಕಟ್ಟಿಹೋಯಿತು. ಎದುರಿಗೆ ದೈನಂದಿನದ ಕೆಲಸ ನನ್ನನ್ನೇ ನೋಡುತ್ತಿತ್ತು. ಕೆಲಸಕ್ಕೆ ಕೈ ಹಾಕಿದರೆ ಮನಸ್ಸು ಬರಬೇಕಲ್ಲ— ಪುನಃ ಆಲೋಚನೆಗೆ ಪ್ರಾರಂಭವಾಯಿತು.

ಏನಾದರೂ ಬರೆಯುವುದಂತೂ ಖಂಡಿತ. ಬರೆದುದು ಮಾತ್ರ ಪಡಪೋಶಿಯಾಗಬಾರದು ಎಂದುಕೊಂಡೆ. ಯಾವನೊಬ್ಬನ ಜೀವನ ಚರಿತ್ರೆ ಬರೆದರೆ ಆಗಬಾರದೇಕೆ? ಎಂದು ತೋಚಿತು. ಬೇರೊಬ್ಬರ ಜೀವನ ಚರಿತ್ರೆ ಬರೆಯುವುದಕ್ಕಿಂತ ನನ್ನ ಜೀವನ ಚರಿತ್ರೆ ಬರೆದರೆ ಏನಾದೀತು ಎಂದು ತುಸು ಆಲೋಚಿಸುವಷ್ಟರಲ್ಲಿ, ನನ್ನ ಬಾಲ್ಯಜೀವನದತ್ತ ಕಡೆ ಮನಸ್ಸು ಹರಿಯಿತು.

"ಸೊರಗೆ ಹೂವು ಕೊಯ್ಯಲು ಮರಹತ್ತಿದೆ. ನಾನು ಯಾವಾಗಲೂ ಹೂವು ಕೊಯ್ಯುವ ಮರದಲ್ಲಿ ನೆರೆಮನೆ ಹುಡುಗನನ್ನು ಕಂಡೆ. ರೇಗಿತು ನನಗೆ. ಕೂಡಲೇ ಕೆಂಗಣ್ಣಿನಿಂದಲೇ ಮರಹತ್ತಿ ಅವ ಕೂತ ಟೊಂಗೆಯನ್ನೇ ಅಲುಗಾಡಿಸಿದೆ. ಹುಡುಗ ಧೊಪ್ಪನೆ ಬಿದ್ದ, ಪೆಟ್ಟಾಯಿತು. ಅನಂತರ ಅವನ ತಾಯಿ ಕೂಗುತ್ತಾ, ಬಯ್ಯುತ್ತಾ ಓಡಿ ಬಂದಳು. ಇತ್ತ ನನ್ನ ತಾಯಿಯಿಂದ ನನಗೆ ಬಡಿತದ ಸುರಿಮಳೆ ದೊರಕಿತು."- ಈ ಚಿತ್ರ ಕಣ್ಣ ಮುಂದೆ ಕುಣಿದಾಡಿತು.

ಈ ತುಂಟತನದ ಪ್ರಸಂಗದೊಂದಿಗೆ ಶಾಲಾ ಶಿಕ್ಷಣ—ಉದ್ಯೋಗಕ್ಕಾಗಿ ಅಲೆದಾಟ—ಶಿಕ್ಷಕ ವೃತ್ತಿ—ಮುಂಬಾಯಿಗೆ ಪ್ರಯಾಣ—ಪಾಟುಪಾತಿನಲ್ಲಿ ಮಲಗಿಕೊಂಡ ಪ್ರಸಂಗ—ಉದ್ಯೋಗ ಪ್ರಾಪ್ತಿ, ಮದುವೆ, ಸಂಸಾರ—ಊರಿಗೆ ಪುನರಾಗಮನ- ಈ ಎಲ್ಲವನ್ನು ಜತೆಗೂಡಿಸಿ ರಮ್ಯವಾಗಿ ಬರೆಯಬೇಕು ಎಂದು ಅನಿಸಿಯೇ ಬಿಟ್ಟಿತು. ಆದರೆ ಎರಡು ಮೂರು ಪುಟಗಳಲ್ಲಿ ಈ ಎಲ್ಲ ವಿಷಯಗಳನ್ನು ಮುಗಿಸುವುದು ಹೇಗಪ್ಪಾ! ಅದು ಸಾಧ್ಯವೇ ಇಲ್ಲ.

ಈ ರೀತಿ ಮನಸ್ಸಿನೊಳಗೆ ಕುಮುಲುವಿಪ್ಲವ ನಡೆಯಿತು. ನನಗೆ ಏನು ಹೊಳೆಯಿತೋ ಏನೋ, ನನ್ನ ಪಕ್ಕದ ಸಹೋದ್ಯೋಗಿಯೊಡನೆ ಕೇಳಿಯೇ ಬಿಟ್ಟೆ "ಏನನ್ನು ಬರೆಯಲಿ' ಎಂದ ಕೂಡಲೇ ಅವರು 'ಅದನ್ನೇ' ಬರೆಯಿರಿ ಎಂದರು. ಅವರು ಹೇಳಿದ 'ಅದನ್ನೇ' ಈಗ ಬರೆದು ಮುಗಿಸಿದೆ.

ಸಂಪತ್ತಿನಲ್ಲಿ ಆಸಕ್ತಿ ಬೇಕು ಸಂಪತ್ತಿಗಿಂತಾ ಹೆಚ್ಚಾಗಿ ತನ್ನ ಕುಟುಂಬದಲ್ಲಿ ಆಸಕ್ತಿ ಬೇಕು. ಅದಕ್ಕಿಂತ ಹೆಚ್ಚಾಗಿ ತನ್ನ ಆತ್ಮದ ಬಗ್ಗೆ ಹೆಚ್ಚಿನ ಚಿಂತನೆ ಬೇಕು.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

S. C. 672/67

ಪರಮೇಶ್ವರ ಪುರಾಣಿಕ —ವಾದಿ
ಪರಮೇಶ್ವರ ಭಟ್ಟ ಸಹಾ—ಪ್ರತಿವಾದಿರು

ಸದ್ರಿ ವಾದಿರ ಕಡೆಯಿಂದ ಈ ಮೂಲ್ಯ ಜಾಹೀರು ಮಾಡಿಕೊಳ್ಳುವದೇನಂದ್ರೆ—

3ಸತ್ಯನಾರಾಯಣ ಭಟ್ಟ ತಮ್ಮನ್ಯಾನೆ ವೆಂಕಟ್ರಮಣ ಭಟ್ರ ಮಗ, 4 ರಾಮಕೃಷ್ಣ ಭಟ್ಟ, 5 ಮಂಜುನಾಥ ಭಟ್ಟ, 6 ವೆಂಕಪ್ಪಯ್ಯ ಭಟ್ಟ, 8 ಗಣಪತಿ ಭಟ್ಟ, 10 ಮನೋಮಂಮ್ಮ, 11 ಪಾರ್ವತಿ ಅಮ್ಮ—ಬಟೇಲ್ ಶಂಕರ ಭಟ್ಟರ ಮಕ್ಕಳು.

3ರಿಂದ 8ನೇ ವರೆಗಿನ ಪ್ರತಿವಾದಿರು ಕುಂದಾಪುರ ತಾಲ್ಕು ಉಪ್ಪುಂದ ಗ್ರಾಮ.10 ನೇ ಪ್ರತಿವಾದಿ 10ನೇ ಪ್ರತಿವಾದಿರು ಗಣಪತಿ ಹೆಗ್ಗಡೆ ಹೆಂಡ್ತಿ ಹೊನ್ನಾವರ ತಾಲ್ಕು ಯಡಗುಂಜಿ ಗ್ರಾಮ, 11ನೇ ಪ್ರತಿವಾದಿರು ಗಣಾನನ ಭಟ್ಟರ ಹೆಂಡ್ತಿ ಕುಮಟಾ ಕ್ಸಬಾ.

ವಾದಿಗೆ ಪ್ರತಿವಾದಿರಿಂದ ಬರತಕ್ಕ ಗೇಣಾಕಿಗೆ ಮಾಡಿದ ದಾವೆಯು ತಾ. 6.3.68ಕ್ಕೆ ಅಪ್ಪೈರ್ ತಕ್ಕಗೆ ಇಡೋಣಾಗಿದೆ. ಆ ಕುರಿತು ನಿಮ್ಮದೇನಾದ್ರೂ ಉದಾರಣೆಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟ್ ಮುಂದೆ ಸ್ವತಹಾನ ಇಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಯ ತಿಳಿಯಪಡ್ಸಿದೆ.

M. M. Hebbar
Advocate

Coondapoor, Date 12—2—68

ಮಕ್ಕಳ ಕನಸಿನ ಜಗತ್ತು

ನಿಮ್ಮ ಮಕ್ಕಳಿಗೆ ತಮ್ಮದೇ ಆದ ವಿಚಿತ್ರ ಯೋಜನೆಗಳಿವೆ. ತಮ್ಮ ಭವಿಷ್ಯದ ಬಗೆಗೆ ಅವರ ಕನಸುಗಳನ್ನು ಪ್ರಾಯಶಃ ನೀವು ಓದಲಾರಿರೋ ಏನೋ. ಒಬ್ಬಾತ ಡಾಕ್ಟರನಾಗಬೇಕೆಂದು ಬಯಸಿದರೆ ಎರಡನೆಯವ ಇಂಜಿನಿಯರನಾಗಬೇಕೆಂದೂ, ಮೂರನೆಯವ ಸ್ವಂತ ವ್ಯಾಪಾರ ಯಾ ಉದ್ದಿಮೆಯಲ್ಲಿ ತೊಡಗಬೇಕೆಂದೂ ಹಂಬಲಿಸುವನು.

ಹೆತ್ತವರಾದ ನೀವು ನಿಮ್ಮ ಮಕ್ಕಳ ಕನಸಿಗೆ ರೂಪುಕೊಡಲು ಅವರ ಮುಂದಿನ ಜೀವನದ ಬಗ್ಗೆ ಈಗಿಂದಿಗೇಲೇ ಸನ್ನಾಹ ಮಾಡಬೇಕು. ಅವರ ಭವಿಷ್ಯದ ಸುರಕ್ಷಿತತೆಗೆ ನೀವು ಮಾಡಬೇಕಾದ ಕೆಲಸ ಒಂದೇ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಉದ್ಯೋಗ ಜೀವನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ರಮವಾಗಿ ಹಣವನ್ನು ಕೂಡಿಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಕುಂದಾಪುರ ಮು. ಕೋರ್ಟ್‌ನಲ್ಲಿ

O. S. 407/67

ವಾದಿ —ಬಿ. ಸಂಜಯ್ಯ
ಪ್ರತಿವಾದಿ —ಶ್ರೀಧರ ಸೇಟ್

ಸದ್ರಿ ಪ್ರತಿವಾದಿಗೆ ಯಿದೆ ಮೂಲಕ ತಿಳಿಸುವದೇನೆಂದರೆ—

ಪ್ರತಿವಾದಿ ಶ್ರೀಧರ ಸೇಟ್, ನರಸಿಂಹ ಸೇಟರ ಮಗ, "ಲಕ್ಷ್ಮಿ ಬಾಗ್", ಕೊಡಿಯಾಳಬೈಲು, ಮಂಗಳೂರು—8.

ಪ್ರತಿವಾದಿಯಿಂದ ವಾದಿಗೆ ಬರತಕ್ಕ ಹಕ್ಕಿನ ಬಾಬ್ತು ಅವ್ವಜಿಗೆ ವಾದಿಯು ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುವದ್ರಿಂದ ಸದ್ರಿ ದಾವೆಯು ತಾರೀಖು 27—2—68ಕ್ಕೆ ತಪ್ಪಿಗೆಯಿಟ್ಟಿರುವದ್ರಿಂದ ಆ ಕುರಿತು ಉದಾರಣೆಯೇನಾದರೂ ಇದ್ದರೆ ಆ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟ್‌ನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇದ್ದೆ ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಪೈಸಲು ಮಾಡೋಣಾದೀತಂತ ಈ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plaintiff

ದೇಶ್ಯಾಂ: ಕುಂದಾಪುರ, ತಾ. 14—2—68.

ಪಶ್ಚಿಮ ಬಂಗಾಳದಲ್ಲಿ

ಅರಾಜಕತೆಯ ಇನ್ನೊಂದು ಮೈಲಿಗಲ್ಲು

ನವೆಂಬರ ೨೯ರಂದು ಬಂಗಾಳ ವಿಧಾನ ಸಭೆಯ ಅಧಿವೇಶನವನ್ನು ರಾಜ್ಯಪಾಲರು ಕರೆದಾಗ, ಯಾವ ಕಾರ್ಯಕ್ರಮವನ್ನೂ ನಡೆಯ ಬಿಡದೆ ಸ್ಪೀಕರ್ ಬಿಜಯ ಕುಮಾರ ಬ್ಯಾನರ್ಜಿಯವರು ರೂಲಿಂಗ್ ನೀಡಿ ಘೋಷ ಮಂತ್ರಿಮಂಡಳವನ್ನು ತಾನು ಮನ್ನಿಸುವುದಿಲ್ಲವೆಂದೂ ಆದುದರಿಂದ ವಿಧಾನ ಸಭೆಯನ್ನು ಅನಿರ್ದಿಷ್ಟಕಾಲ ಮುಂದುಹಾಕುವೆನೆಂದೂ ಘೋಷಿಸಿ ಹೊರನಡೆದು, ಸಾಂವಿಧಾನಿಕ ಬಿಕ್ಕಟ್ಟನ್ನುಂಟುಮಾಡಿದ್ದರು. ಇಲ್ಲಿರುವ ಒಂದೇ ಒಂದು ಪ್ರಶ್ನೆಯೆಂದರೆ, ರಾಜ್ಯಪಾಲರಿಗೆ ಸಚಿವ ಸಂಪುಟವನ್ನು ಕಿತ್ತು ಹಾಕುವ ಅಧಿಕಾರವಿದೆಯೇ ಎಂಬುದು. ನ್ಯಾಯವೇತ್ತರಲ್ಲಿಯೇ ಭಿನ್ನಮತವಿರುವ ಈ ಪ್ರಸಂಗದ ಮೇಲೆ ಕಲ್ಕತ್ತ ಉಚ್ಚನ್ಯಾಯಾಲಯವು ಬಹುಮತದ ತೀರ್ಪಿತ್ತು ಇದೆ ಎಂದು ತೀರ್ಮಾನಿಸಿತು.

ಅಜಯ-ಬಸು ನಾಯಕತ್ವದ ಸಂಯುಕ್ತರಂಗವೀಗ ಆತ್ಮರಕ್ಷಣೆಯಲ್ಲಿ ತೊಡಗಿದೆ. ತಾವು ಗೆಯ್ದ ಅಪರಾಧ—ಅನ್ಯಾಯವನ್ನು ಮುಚ್ಚಿಡುವುದಕ್ಕಾಗಿ ಒಂದಲ್ಲ ಒಂದು ಗೊಂದಲವೆಬ್ಬಿಸುವುದು ಮಾತ್ರ ಅವರಿಗಿಂದು ಬೇಕಾಗಿದೆ. ಇದಕ್ಕಾಗಿ ನಾನಾ ಬಗೆಯ ಚಳವಳಿ—ಪ್ರದರ್ಶನ—ಶಾಸನ ಭಂಗ ಕ್ರಮಗಳನ್ನು ಕೈಕೊಂಡರೂ ಅವರ ಬೇಳೆ ಸರಿಯಾಗಿ ಬೇಯಲಿಲ್ಲ. ಫೆಬ್ರವರಿ ೧೪ರಂದು ಅಲ್ಲಿ ನಡೆದ ಘಟನೆಗಳು ಪ್ರಜಾಪ್ರಭುತ್ವಕ್ಕೆ ಫಿಜಕ್ಕೂಗಂಡಾಂತರತರುವಂಥದ್ದೇ. ರಾಜ್ಯಪಾಲರು ಜಂಟಿ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ—ಮಾಡಲಿಲ್ಲ ಎನ್ನುವುದರಲ್ಲಿಯೂ ಭಿನ್ನಮತ. ವಿಧಾನ ಸಭೆ—ವಿಧಾನ ಪರಿಷತ್ತುಗಳ ಅಧ್ಯಕ್ಷರ ನಿರ್ಣಯ—ನಿಲುವುಗಳಲ್ಲಿಯೂ ಮತಭೇದ. ರಾಜ್ಯಪಾಲರಂಗಾಗಿ ಇಡಿಸಲಾಗಿದ್ದ ಕುರ್ಚಿಯನ್ನು ಸದಸ್ಯರು ಆಕ್ರಮಿಸಿದ್ದು—ದಿಂಬನ್ನು ರಾಜ್ಯಪಾಲರತ್ತ ಬಿಸಿಯಿಟ್ಟದ್ದು, ಎಲ್ಲವೂ ಅಸಭ್ಯ, ಅಕಾಲಿಕ ವರ್ತನೆಯೆಂದು ಯಾರಾದರೂ ಹೇಳಬೇಕು.

ಅಂದು ಬ್ಯಾನರ್ಜಿಯವರು ತಾನು ನೀಡಿದ್ದ ರೂಲಿಂಗನ್ನು ಬದಲಿಸಬೇಕಾದ ಪ್ರಮೇಯವಿನ್ನೂ ಒದಗಿಲ್ಲವೆಂದು ಮತ್ತೆ ರೂಲಿಂಗ್ ನೀಡಿ ವಿಧಾನ ಸಭೆಯನ್ನು ಮುಂದೂಡಿದರು. ನವಂಬರ ೨೯ರಂದು ವಿಧಾನ ಸಭೆಯ ಕಾರ್ಯಕಲಾಪಗಳನ್ನು ನಡೆಯಗೊಟ್ಟಿದ್ದರೆ ರಾಜ್ಯಪಾಲರ ಕ್ರಮಕ್ಕೆ ಬಹುಮತದ ಬೆಂಬಲ ದೊರೆಯುತ್ತಿತ್ತು—ಸಂಯುಕ್ತರಂಗದ ದಾಂಧಲೆಗಳ ನಿಜವಾದ ಅರ್ಥ ಪ್ರಜಾಪ್ರಭುತ್ವವಾದಿಗಳಿಗೆ ತಿಳಿಯುತ್ತಿತ್ತು.

ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಕಾಂಗ್ರೆಸಿನ ಒಂದು ಸಂಗಡ ಅಶುಲ್ಯ ಘೋಷರ ಮೇಲಿನ ಪೂರ್ವಾಗ್ರಹದಿಂದಲೋ, ತನಗೆ ಮಂತ್ರಿ ಪದವಿ ಸಿಗಲಿಲ್ಲವೆಂದೋ ಕಾಂಗ್ರೆಸ್ ತ್ಯಜಿಸಿ ತನ್ನದೇ ಒಂದು ಪಕ್ಷ ರಚಿಸಿದೆ—ವಿಚಿತ್ರವೆಂದರೆ, ಈ ಪಕ್ಷವು ಸರಕಾರ ರಚಿಸಲು ಮುಂದೆ ಬಂದಿರುವುದು—ಸಂಯುಕ್ತರಂಗವೂ ಇದಕ್ಕೆ ಬೆಂಬಲ ನೀಡುವುದಾಗಿ ರಾಜ್ಯಪಾಲರಿಗೆ ಹೇಳಿರುವುದು! ಹೀಗಾಗಿ, ಇಂದಿನ ಘೋಷರ ಸಚಿವ ಸಂಪುಟವು ಬಹುಮತ ಕಳೆದುಕೊಂಡಂತಾಗುವುದು. ಬಹುಮತವನ್ನು ಕಳೆದುಕೊಂಡಿದೆಯೆಂಬ ಕಾರಣದಿಂದ ಪದಚ್ಯುತಿಯಾದಂತೆನಿಗೆ ಸಂಯುಕ್ತರಂಗ ಸರಕಾರ ಹುರಿಯಾಗಿತ್ತು. ಈಗ ರಾಜ್ಯಪಾಲರು ಘೋಷ ಸಂಪುಟವನ್ನು ಚೈತನ್ಯಗೊಳಿಸುತ್ತಾರೆಯೇ ಇಲ್ಲವೆ? ಎಂಬುದನ್ನು ನೋಡುವ ಕಾತರ ಸಂಯುಕ್ತ ರಂಗಕ್ಕೆ. ವಿಧಾನ ಸಭೆಯನ್ನು ನಡೆಯಗೊಟ್ಟರೆ, ಡಾ| ಘೋಷರು ಉರುಳಬಹುದು(ಉರುಳದೆ ನಿಲ್ಲಲೂ ಬಹುದು) ಇದರಲ್ಲೇನು ತವಾಶೆ? ರಾಜ್ಯಪಾಲರನ್ನು ನನೆಹುಡಿಗೆ ಹುರಿಮಾಡುವುದೂ ಹೇಗಾದರೂ ಮಾಡಿ ರಾಷ್ಟ್ರಪತಿ ಆಳಿಕೆಯನ್ನಾದರೂ ತರುವಂತೆ ಮಾಡಿತ ಮ್ಮ ಆಳಿಕೆಯ ಪ್ರತಿಷ್ಠೆಯುಳಿಸುವ ಪ್ರಯತ್ನ ಮಾಡುವುದೂ ಅದರ ಗುರಿ. ಅದಕ್ಕೆ ಡಾ| ಘೋಷರು ಮುಖ್ಯಮಂತ್ರಿಯಾದರೂ ಒಂದೇ, ಹೊಸ ಪಕ್ಷದ ಶಂಕರ ಬ್ಯಾನರ್ಜಿಯವರಾದರೂ ಒಂದೇ. ಸಂಯುಕ್ತರಂಗದ ಇಂದಿನ ಘೋಷೋದ್ದೇಶ, ರಾಜಕೀಯ ಅಸ್ಥಿರತೆಯನ್ನು ಮೂಡಿಸುವುದು. ಇದರಿಂದ ತನ್ನ ಕ್ರಾಂತಿಯ ದಾರಿಯನ್ನು ಸುಗಮಮಾಡುವುದು.

ಅಜಯ ಮುಖರ್ಜಿಯವರು ಅಂದು ಬೇಗನೆ ವಿಧಾನ ಸಭೆಯಲ್ಲಿ ವಿಶ್ವಾಸಮತ ಪಡೆಯುವುದಕ್ಕೆ ನಿರಾಕರಿಸಿದ್ದರು. ಆದರೆ, ಘೋಷರು ಹಾಗೆ ಮಾಡಲು ಹಿಂಜರಿಯಲಿಲ್ಲ. ವಿಧಾನ ಸಭೆ ನಡೆಯಲು ಅಧ್ಯಕ್ಷರು ಅವಕಾಶ ನೀಡದೆ ಹೋದುದು ಬೇರೆ ಮಾತು. ಸರಕಾರವನ್ನು ಮನ್ನಿಸುವುದು, ಬಿಡುವುದು ವಿಧಾನ ಸಭಾಧ್ಯಕ್ಷರ ಕಾರ್ಯವಲ್ಲವೆಂಬುದು ಬಹುಮತದ ಅಭಿಪ್ರಾಯ. ಹೈಕೋರ್ಟು ತೀರ್ಮಾನದ ಹಿನ್ನೆಲೆಯಲ್ಲಾದರೂ ಬ್ಯಾನರ್ಜಿಯವರು ತಮ್ಮ ನಿಲುಮೆಯನ್ನು ಇಂದು ಬದಲಿಸಬೇಕಿತ್ತು. ಅವರು ಹಾಗೆ ಮಾಡದೆ ಮತ್ತೂ ಮತ್ತೂ ಬಿಕ್ಕಟ್ಟನ್ನೇ ಹೆಚ್ಚಿಸುವಲ್ಲಿ ಸಂಯುಕ್ತರಂಗದ ಕುತಂತ್ರಜಾಲಕ್ಕೆ ತಪ್ಪು ಬಲವಾದ ಕಾರು ಜೋಡಿಸಿ ಹೊರಟಿದ್ದಾರೆ.

ರಾಜ್ಯಪಾಲ ಧರ್ಮವೀರರೀಗ ಏನು ಮಾಡಬೇಕು? ವಿಧಾನ ಮಂಡಳಗಳ ಅಧಿವೇಶನ ಅನಾಗರಿಕ-ಕಾಡು ಮನುಷ್ಯರ ಸಮ್ಮೇಳನದಂತಾಯಿತು. ಡಾ| ಘೋಷರು ವಿಶ್ವಾಸಮತ ಪಡೆಯಲು ಮುಂದಾದರೂ ಅದಕ್ಕೆ ಅವಕಾಶವನ್ನು ಸಂಯುಕ್ತರಂಗವೂ ವಿಧಾನ ಸಭಾಧ್ಯಕ್ಷರೂ ನೀಡುತ್ತಿಲ್ಲ. ಇಲ್ಲಿ ತಪ್ಪು ಹೂರದ್ದು? ಡಾ| ಘೋಷರದೇ? ವಿರೋಧಿ ಪಕ್ಷದವರದ್ದೇ? ಅಥವಾ ರಾಜ್ಯಪಾಲರ ಕ್ರಮದ್ದೇ?

ತಪ್ಪು ವಿರೋಧಿ ದಳಗಳದ್ದು ಎಂಬುದು ನಿರ್ವಿವಾದ. ಆದರೂ ಕಾಂಗ್ರೆಸ್—ಪಿಡಿಯ.ಫ್ನ ಸುಮಾರು ೧೭—೧೮ ಜನ ಶಾಸಕರು ಡಾ| ಘೋಷರಿಂದ ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡಿರುವುದಾಗಿ ರಾಜ್ಯಪಾಲರಿಗೂ ತಿಳಿಸಿರುವುದರಿಂದ ಡಾ| ಘೋಷರು ಬಹುಮತ ತನ್ನನ್ನು ಕಳೆದುಕೊಂಡಿರುವ ಸಂಭವವೂ ಇದೆ.

ಅಕೆ ಕಚೇರಿಯಲ್ಲಿ ಸೂಪರಿಂಟೆಂಡೆಂಟ್; ಕುಶಲಳೂ ಮತ್ತು ಹರ್ಷಚಿತ್ತಳೂ ಆಗಿದ್ದಾಳೆ. ಕೇವಲ ಟೈಪಿಸ್ಟ್ ಆಗಿದ್ದ ಆಕೆ, ಶ್ರಮ ಹಾಗೂ ಶ್ರದ್ಧಾವಂತ ದುಡಿಮೆಯಿಂದ, ಇಂದು ಈ ಸ್ಥಾನಕ್ಕೆ ಏರಿದ್ದಾಳೆ. ಹೇಗೆ?... ಆಕೆಯ ಮಾತಿನಲ್ಲೇ ಕೇಳೋಣ; "ನನ್ನ ಮನೆಯ ಬಗ್ಗೆ ನನಗೆ ಹೆಚ್ಚು ಚಿಂತೆ ಇಲ್ಲದಿರುವುದರಿಂದ, ನನ್ನ ಕೆಲಸದನ್ನು ಮನಸ್ಸಿಟ್ಟು ಮಾಡುತ್ತೇನೆ. ನನ್ನ ಮೂರು ಮಕ್ಕಳಿಗೆಲುತ್ತಮ ಶಿಕ್ಷಣವನ್ನೂ, ಯೋಗ್ಯವಾದ ಇತರ ಸೌಕರ್ಯಗಳನ್ನೂ ಒದಗಿಸಲು ಸಾಕಾಗುವಷ್ಟು ಹಣವನ್ನು ನನ್ನ ಪತಿ ಮತ್ತು ನಾನು ಗಳಿಸುತ್ತಿದ್ದೇವೆ. ಈಗ್ಗ ಆರು ವರ್ಷಗಳ ಹಿಂದೆ, ನನಗೆ ಮೂರನೇ

ಮಗುವಾದ ನಂತರ ಇನ್ನು ಹೆಚ್ಚಿಗೆ ಮಕ್ಕಳು ಬೇಡವೆಂದು ನಾವು ನಿರ್ಧರಿಸಿದೆವು. ನಾನು ನಿಜವಾಗಿ ಸುಖಿ "

ಅವಳು ಸುಖಿ—

ನೀವು?

ವಿಧಾನ ಸಭೆಯ ಅಧ್ಯಕ್ಷರ ರೂಲಿಂಗಿನಿಂದ ವಿಧಾನ ಸಭಾ ಕಾರ್ಯಕಲಾಪ ನಡೆಯಲು ಸಾಧ್ಯವಾಗುತ್ತಿಲ್ಲವಾದುದರಿಂದ ಇಂದು ಇರುವೆ ಪಾರಿ ಮೂರು—

(1) ಡಾ| ಘೋಷರ ಸಚಿವ ಸಂಪುಟವು ಬಹುಮತ ಕಳೆದುಕೊಂಡಿದೆಯೆಂದು ಕತ್ತು ಹಾಕುವುದು.

—ಅದರೆ, ಘೋಷರ ತಪ್ಪಿಲ್ಲ. ಅವರಿಗೆ ಬಹುಮತವಿಲ್ಲವೆಂದೂ ಧೈರ್ಯವಾಗಿ ಹೇಳುವಂತಿಲ್ಲ. ಅದರ ಮೇಲೆ ಕತ್ತು ಹಾಕಿ ಇನ್ನೊಮ್ಮೆ ಗೊಂದಲಕ್ಕೆ ಅವಕಾಶನೀಡಬೇಕೇ?

(2) ರಾಷ್ಟ್ರಪತಿ ಆಳಿಕೆಯನ್ನು ತರುವುದು.

—ಡಾ| ಘೋಷರು ಬಹುಮತ ಸಡೆದಿರುವರಾದರೆ, ಇದು ಅನ್ಯಾಯ ದ್ದಾಗುವುದು; ಪ್ರಜಾಪ್ರಭುತ್ವದ ಕೊಲೆಯಾಗುವುದು.

(3) ಸಂವಿಧಾನದ ೩೫೬(೨) ನೆ ವಿಧಿಯಂತೆ ಕ್ರಮ ಕೈಗೊಳ್ಳುವುದು.

—ಈ ವಿಧಿಯಂತೆ ಕ್ರಮ ಕೈಕೊಂಡರೆ, ರಾಜ್ಯ ವಿಧಾನ ಮಂಡಳಕ್ಕಿರುವ ಕೆಲವು ಅಧಿಕಾರಗಳನ್ನು ಪಾರ್ಲಿಮೆಂಟ್ ವಹಿಸಿಕೊಂಡು ಸ್ಪೀಕರರನ್ನು ತೆಗೆದುಹಾಕಲು ಇರುವ ನಿಯಮವಳಿಯನ್ನು ತಿದ್ದುಪಡಿ ಮಾಡಬಹುದು.

ಅದರೆ, ಕಾಂಗ್ರೆಸ್ಸಿನಲ್ಲಿನ ಬಿಕ್ಕಟ್ಟಿನಿಂದ ಈ ಮೂರನೆಯ ಕ್ರಮ ಕೈಕೊಂಡರೂ ವಿಧಾನ ಸಭೆಯಲ್ಲಿ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಹೋದರೆ ಸಂಯುಕ್ತರಂಗದ ಸದಸ್ಯರೇ ಗೆದ್ದು ಬರುವ ಸಂಭವವಿದೆ. ಇದರಿಂದ ಕಾರ್ಯ ನಮ್ಮದಿಯಾಗದು.

ಅಂತೂ ಬಂಗಾಳದ ರಾಜಕೀಯ ಬರಿಯ ಗೌಡ ಬಂಗಾಳಿಯಾಗಿಯೇ ಮುಂದುವರಿಯುತ್ತಿದೆ. ರಾಜ್ಯಪಾಲರು ರಾಜ್ಯದಲ್ಲಿ ಸಂವಿಧಾನಕ್ಕೆ ಧಕ್ಕೆಯುಂಟಾಗಿದೆಯೆಂದು ವರದಿ ನೀಡಿದ್ದಾರೆ. ಬೇಕಾದ ಕ್ರಮಕೈಕೊಳ್ಳುವ ಆ ನಿರ್ಧಾರವನ್ನು ಕೇಂದ್ರಕ್ಕೇ ಬಿಟ್ಟಿದ್ದಾರೆ. ಅಂದರೆ, ಅವರು ವೈಯಕ್ತಿಕವಾಗಿ ಘೋಷ ಸಂಪುಟವನ್ನು ಕಿತ್ತು ಹಾಕ ಬಯಸುವುದಿಲ್ಲ.

ಕೇಂದ್ರವೇನು ಮಾಡಬಲ್ಲುದು? ಯಾವ ಕ್ರಮಕೈಕೊಳ್ಳುವುದು?—ಇದು ಎಲ್ಲರೂ ಕುತೂಹಲದಿಂದ ಕೇಳುತ್ತಿರುವ ಪ್ರಶ್ನೆ. ಸಂಯುಕ್ತರಂಗದ ಅನ್ಯಾಯ—ಅತ್ಯಾಚಾರಗಳನ್ನು ಕಚ್ಚೆದೆಯಿಂದ ಎದುರಿಸುವುದಾದರೆ, ಅಲ್ಲಿ ರಾಷ್ಟ್ರಪತಿ ಆಡಳಿತೆಯನ್ನು ಘೋಷಿಸಿದರೆ, ಘೋಷ್ ಸಂಪುಟಕ್ಕೆ ವಿಶ್ವಾಸ ಮತ ಯಾಚಿಸುವ ಅವಕಾಶವೊಂದನ್ನು ನೀಡಬೇಕು. ಯಾರಿಗೆ ಗೊತ್ತು. ಈಗ ನಡೆದು ಹೋದ ಅಸಂತುಷ್ಟರು ಮತ್ತೆ ಹತ್ತಿರ ಬರಬಾರದೆಂದಿದೆಯೆ? ಬಂದರೂ ಬರಬಹುದು; ಹೊಸಬರೂ ಬರಬಹುದು; ಘೋಷರು ಉಳಿದರೂ ಉಳಿಯಬಹುದು— ಉರುಳಿದರೆ ಚಂತೆಯೇನು? ಮತ್ತೆ ಇದೆಯಲ್ಲ, ಮಂದಿನ ಕ್ರಮ—ರಾಷ್ಟ್ರಪತಿ ಆಳಿಕೆ!

—ರಾ.

ನಿರ್ಮಲ, ನಿಷ್ಕಳಂಕ ಸ್ವಾತಂತ್ರ್ಯದಿಂದ ಬೇರೇನನ್ನಾದರೂ ಅಪೇಕ್ಷಿಸುವವನು ಹುಚ್ಚು ಗುಲಾಮನೆ ಅಗಿರುವನು!

○ ○ ○

ಶರೀರ ಶ್ರಮವನ್ನು ತಿರಸ್ಕರಿಸಿ ನಾವು ಕೆಟ್ಟೆವು

ಶ್ರಮದಿಂದಲೇ ಜ್ಞಾನ ಲಭಿಸುತ್ತದೆ

ತಾಯಿ ಅಡಿಗೆ ಮಾಡುತ್ತಾಳೆ. ನಾವು ತಾಯಿಗೆ ಗೌರವಿಸುತ್ತೇವೆ. ಆದರೆ ತಾಯಿಯ ತಾಯಿತನ ಅಡಿಗೆ ಮಾಡುವದರಲ್ಲೇ ಇರುತ್ತದೆ. ಚನ್ನಾಗಿ ಅಡಿಗೆ ಮಾಡುವದು, ಮಕ್ಕಳಿಗೆ ಪ್ರೇಮದಿಂದ ಬಡಿಸುವದು, ಇದರಲ್ಲಿ ಎಷ್ಟೊಂದು ಜ್ಞಾನ ಹಾಗೂ ಪ್ರೇಮಭಾವ ತುಂಬಿದೆ ಗೊತ್ತೇ? ತಾಯಿಯು ಕೈಯೊಳಗಿಂದ ಅಡಿಗೆಯ ಕೆಲಸವನ್ನು ಕಿತ್ತುಕೊಂಡರೆ ಅವಳದೊಂದು ಪ್ರೇಮ ಸಾಧನೆಯೇ ಕೈಬಿಟ್ಟು ಹೋದೀತು! ಪ್ರೇಮಭಾವನೆಯನ್ನು ವ್ಯಕ್ತಪಡಿಸುವ ಈ ಸಂಧಿಯನ್ನು ಯಾವ ತಾಯಿಯೂ ಬಿಟ್ಟುಕೊಡಲು ತಯಾರಾಗಲಿಕ್ಕಿಲ್ಲ, ಅದೇ ಅವಳ ಜೀವನದ ಆಧಾರ. ನಾನು ಒಂದಿಲ್ಲೊಂದು ಯುಕ್ತಿವಾದ ಬೇಳಿ ಹೆಣ್ಣು ಮಕ್ಕಳ ಮೇಲೆ ಅಡಿಗೆ ಮಾಡುವ ಹೊರೆಯನ್ನು ಹೊರಿಸಲಿಚ್ಛಿಸುತ್ತೇನೆಂದು ಯಾರೂ ತಿಳಿದುಕೊಳ್ಳಬೇಡಿರಿ. ಅವರ ಮೇಲಿನ ಹೊರೆ ಕಡಿಮೆಯಾಗಬೇಕೆಂಬುದೇ ನನ್ನ ಇಚ್ಛೆ. ಆದ್ದರಿಂದಲೇ ನಾವು ಆಶ್ರಮದಲ್ಲಿ ಅಡಿಗೆಯ ಕೆಲಸವನ್ನು ಹೆಚ್ಚಾಗಿ ಗಂಡಸರ ಕಡೆಯಿಂದಲೇ ಮಾಡಿಸುತ್ತೇವೆ. ನನ್ನ ಬೇಳಿಕೆ ಇಷ್ಟೇ—ತಾಯಿಯು ಅಡಿಗೆ ಕೆಲಸ ಬಿಟ್ಟುಬಿಟ್ಟರೆ ಅವಳ ಕೈಯಲ್ಲಿಯ ಜ್ಞಾನ ಸಾಧನ ಹಾಗೂ ಪ್ರೇಮ ಸಾಧನವೊಂದು ಕೈಬಿಟ್ಟು ಹೋಗುತ್ತದೆ. ಅದೇ ಪ್ರಕಾರ ನಾವು ಶರೀರ ಪರಿಶ್ರಮವನ್ನು ತಿರಸ್ಕರಿಸುತ್ತ ಹೋಗಿ ಜ್ಞಾನ ಸಾಧನವನ್ನು ಕಳೆದುಕೊಳ್ಳುತ್ತೇವೆ.

ಪುಸ್ತಕ ಪಾಠ ಮಾಡುವದು ಶಿಕ್ಷಣವಲ್ಲ.

ದಿನದಲ್ಲಿ ೮—೯ ತಾಸು ಪಾಠ ಕಲಿಸಿ ಮಕ್ಕಳನ್ನು ಪಾಸು ಮಾಡಿಸುವ ಶಿಕ್ಷಕ ಲೋಕಪ್ರಿಯನಾಗುತ್ತಾನೇನೋ ನಿಜ. ದೊಡ್ಡವರಿಗೇ ದುಡಿತ ತಪ್ಪಿಸಿಕೊಳ್ಳಬೇಕೆಂಬ ಹಂಬಲ ಹತ್ತಿರುವಾಗ ಚಿಕ್ಕ ಮಕ್ಕಳಿಂದ ಕೆಲಸ ಮಾಡಿಸಬೇಕೆಂದರೆ ಯಾರು ಕೇಳುತ್ತಾರೆ?

ವ್ಯಾಯಾಮವೆಂಬುದು ವ್ಯರ್ಥವಾದ ದುಡಿತ

ಮಕ್ಕಳಿಗೆ ಕೆಲಸ ಕೊಡಿರಿ. ಆದರೆ ಇಂತಿಷ್ಟು ಉತ್ಪಾದನೆ ಮಾಡಲೇಬೇಕೆಂಬ ಆಗ್ರಹ ಬೇಡ ಅನ್ನುವವರೂ ಇದ್ದಾರೆ. ಆದರೆ ತಮ್ಮ ದುಡಿತದಿಂದ ಏನಾದರೂ ನಿರ್ಮಾಣವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಕಂಡ ಹೊರತು ಮಕ್ಕಳಿಗೆ ಆನಂದವಾದೀತೇ? ಕಾಲು ಹಾಕದೆ ಕಲ್ಲು ತೆರವಿರಿ. ವ್ಯಾಯಾಮವಾಗುತ್ತದೆ ಎಂದರೆ ಮಕ್ಕಳು ಕೇಳುತ್ತವೆಯೇ? ಆಂಥ ವ್ಯರ್ಥದ ಉದ್ಯೋಗದಲ್ಲಿ ಆನಂದವಿಲ್ಲ. ಉತ್ಪಾದನದಲ್ಲಿಯೇ ನಿಜವಾದ ಆನಂದವಾಸುತ್ತದೆ!

ಕಳ್ಳಿಗರ ಸಹಕಾರ ಹೇಗೆ ಸಿಕ್ಕೀತು

ಇಂದು ಶಾಲೆಗೆ ಹೋಗುವ ಮಕ್ಕಳು ದುಡಿತಕ್ಕೆ ಹಿಂಜರಿಯುತ್ತಾರೆ ಎಂದು ತಂದೆತಾಯಿಗಳೇ ಹೇಳುತ್ತಾರೆ. ಶಾಲೆಯಲ್ಲಿ ಮಕ್ಕಳ ಪುಸ್ತಕ ಪಾಠ ನೋಡಲಿಕ್ಕೆ ತಂದೆ ತಾಯಿ ಎಂದಾದರೂ ಬರುತ್ತಾರೆಯೇ? ಅವರಿಗೆ ಅದರಲ್ಲಿ ಆಭಿರುಚಿಯೇ ಇಲ್ಲ. ಶಿಕ್ಷಣದಲ್ಲಿ ಉದ್ಯೋಗವೂ ಸೇರಿದರೆ ಈ ಪರಿಸ್ಥಿತಿಯಲ್ಲೇ ಪರಿವರ್ತನೆವಾಗುತ್ತದೆ. ಹಳ್ಳಿಗರ ಹತ್ತಿರವೂ ಎಷ್ಟೋ ಜ್ಞಾನ ಭಾಂಡಾರವಿರುತ್ತದೆ. ನಮ್ಮ ಶಿಕ್ಷಕರೇನೂ ಸರ್ವಜ್ಞನಾಗಿ ಇರುವದು ಶಕ್ಯವಿಲ್ಲ. ಅವನು ಊರಲ್ಲಿಯ ಜನರ ಹತ್ತರ ಹೋಗಿ ಉದ್ಯೋಗದಲ್ಲಿಯ ತನ್ನ ಅಡಚಣೆಗಳನ್ನು ಹೇಳಲೇಬೇಕಾಗುವದು. ಒಕ್ಕಲಿಗರು ಕಾಲೇಜಿನಲ್ಲಿ ಕಲಿತವರಲ್ಲ ಆದ್ದರಿಂದ ಅವರ ಹತ್ತರ ಜ್ಞಾನ ಇಲ್ಲ ಎಂದು ನಾವು ತಿಳಿಯುತ್ತೇವೆ. ಅದರೆ ನಮ್ಮ ಹತ್ತರ ಇರುವದು ಪುಸ್ತಕೀ ಜ್ಞಾನ ಮಾತ್ರ. ನಾವು ಪ್ರತ್ಯಕ್ಷವಾಗಿ ಉದ್ಯೋಗ ಮಾಡಿದ ಹೊಸತು ಅದು ವ್ಯವಹಾರದಲ್ಲಿ ಬರುವದಿಲ್ಲ! ಮತ್ತು ಅದರಲ್ಲಿ ಪ್ರಗತಿ ಹಾಗೂ ವೃದ್ಧಿಯಾಗುವದಿಲ್ಲ. ಊರಲ್ಲಿಯ ಜನರ ಸಹಕಾರ ನಮಗೆ ಬೇಕಿದ್ದರೆ ಶಾಲೆ ಒಳ್ಳಿ ಉದ್ಯೋಗ ಆರಂಭಿಸಲೇಬೇಕು. ನಮ್ಮ ಹಾಗೂ ಅವರ ಇಬ್ಬರ ಸಹಕಾರದಿಂದಲೇ ಉಭಯರ ಜ್ಞಾನದಲ್ಲಿ ಸುಧಾರಣೆಯಾದೀತು.

○ ○ ○

ಹಿಂದೀ ಮತ್ತು ಹಿಂದುಸ್ತಾನಿ

(ಗಾಂಧೀ)

ವಿದೇಶೀ (ಇಂಗ್ಲಿಷು) ಭಾಷೆಯ ಮಾಧ್ಯಮದಿಂದ ಮಕ್ಕಳ ವಿದ್ಯೆಯು ಶಿಥಿಲವಾಗಿಬಿಟ್ಟಿದೆ. ಅವರ ಸ್ನಾಯುಗಳ ಮೇಲೆ ಅನಾವಶ್ಯಕ ಒತ್ತಡ ಬಿದ್ದಿದೆ. ಅವರನ್ನು ಗಿಳಿವಾರೆಕರನ್ನಾಗಿಯೂ ನರಲು ಮಾತ್ರ ಮಾಡುವವರನ್ನಾಗಿಯೂ ಮಾಡಿದೆ. ಹಾಗೂ ಮೌಲಿಕ ಕಾರ್ಯ ಮಾಡಲಿಕ್ಕೂ ಬಾರದಂತೆ ಮಾಡಿಬಿಟ್ಟಿದೆ. ಆದ್ದರಿಂದ ಅವರಿಗೆ ತಾವು ಪಡೆದ ಶಿಕ್ಷಣದ ಸಾರವನ್ನು ತಮ್ಮ ಮನೆಯವರಿಗೂ ಸಾಮಾನ್ಯ ಜನತೆಗೂ ಮುಟ್ಟಿಸಲು ಬರದಂತಾಗಿದೆ. ವಿದೇಶೀ ಮಾಧ್ಯಮವು ನಮ್ಮ ಮಕ್ಕಳನ್ನು ತಮ್ಮ ಮನೆಯಲ್ಲೇ ವಿದೇಶಿಗಳನ್ನಾಗಿ ಮಾಡಿ ಇರಿಸಿದೆ. ಇಂದಿನ ಶಿಕ್ಷಣ ಪದ್ಧತಿಯು ಅತ್ಯಂತ ಕರುಣಾಜನಕ ಮಾಧ್ಯಮವಿದು, ವಿದೇಶೀ ಮಾಧ್ಯಮವು ನಮ್ಮ ದೇಶೀ ಭಾಷೆಗಳ ಪ್ರಗತಿ ಹಾಗೂ ವಿಕಾಸಕ್ಕೆ ತಡೆಹಾಕಿದೆ.

ಇಂಗ್ಲಿಷು ಅಂತರರಾಷ್ಟ್ರೀಯ ವ್ಯಾಪಾರದ ಭಾಷೆಯಾಗಿದೆ. ಕೂಟ ನೀತಿಯ ಭಾಷೆಯಾಗಿದೆ. ಅದಕ್ಕೆ ಸಮೃದ್ಧವಾದ ಸಾಹಿತ್ಯ ಭಂಡಾರವಿದೆ. ಅದು ನಮಗೆ ಪಾಶ್ಚಾತ್ಯ ವಿಚಾರ ಹಾಗೂ ಸಂಸ್ಕೃತಿಯ ಪರಿಚಯ ಮಾಡಿ ಕೊಡುತ್ತವೆ. ಆದ್ದರಿಂದ ನಮ್ಮಲ್ಲಿ ಕೆಲವರಿಗೆ ಇಂಗ್ಲಿಷ ಭಾಷೆಯ ಜ್ಞಾನ ಅತ್ಯವಶ್ಯವಿದೆ. ಅವರು ರಾಷ್ಟ್ರೀಯ ವ್ಯಾಪಾರ ಹಾಗೂ ಅಂತರರಾಷ್ಟ್ರೀಯ ಕೂಟ ನೀತಿಯ ವಿಭಾಗವನ್ನೂ, ನಮ್ಮ ರಾಷ್ಟ್ರಕ್ಕೆ ಪಶ್ಚಿಮವಾಹಿಕ್ಯ, ವಿಚಾರ ಹಾಗೂ ವಿಜ್ಞಾನದಲ್ಲಿ ಉತ್ತಮ ಅಂಶಗಳನ್ನು ಆಯ್ದು ಕೊಡುವ ವಿಭಾಗವನ್ನೂ ನಡಿಸಲಿ! ಅಂದರೆ ಮಾತ್ರ ಇಂಗ್ಲಿಷ್ ಭಾಷೆಯ ಯಥಾಯೋಗ್ಯ ಉಪಯೋಗ ಮಾಡಿಕೊಂಡಂತೆ ಅದೀತು. ಆದರೆ ಇಂದಾದರೋ ಇಂಗ್ಲಿಷು ನಮ್ಮ ಹೃದಯದಲ್ಲಿಯ ಅತ್ಯಂತ ಪ್ರಮುಖ ಸ್ಥಾನವನ್ನೇ ಆಕ್ರಮಿಸಿಕೊಂಡು ಬಿಟ್ಟಿದೆ! ಮತ್ತು ನಮ್ಮ ಮಾತೃ ಭಾಷೆಯನ್ನು ಅದರ ಸ್ಥಾನದಿಂದ ಹೊರದೂಡಿ ಬಿಟ್ಟಿದೆ. ಇಂಗ್ಲಿಷ ಜನತೆಯೊಡನೆಯ ನಮ್ಮ ದಾಸ್ಯದ ಸಂಬಂಧದಿಂದಾಗಿಯೇ ನಮ್ಮಲ್ಲಿ ಇಂಗ್ಲಿಷ್ ಭಾಷೆಗೆ ಹೀಗೆ ಅಸ್ವಾಭಾವಿಕ ಸ್ಥಾನವು ಪ್ರಾಪ್ತವಾಗಿದೆ. ಇಂಗ್ಲಿಷ್ ಭಾಷಾ ಜ್ಞಾನವಿಲ್ಲದೆಡೂ ಭಾರತೀಯ ಬುದ್ಧಿಯು ಸರ್ವೋತ್ಕೃಷ್ಟ ವಿಕಾಸ ಮಾಡಿಕೊಳ್ಳುವಂತಾಗಬೇಕು. ಇಂಗ್ಲಿಷ ಭಾಷೆಯ ಜ್ಞಾನ ಮಾಡಿಕೊಂಡ ಹೊರತು ಉತ್ತಮ ಸಮಾಜದಲ್ಲಿ ಸ್ಥಾನ ಪಡೆಯುವದೇ ಶಕ್ಯವಿಲ್ಲ ಎಂಬುದಾಗಿ ನಮ್ಮ ಹುಡುಗ-ಹುಡುಗಿಯರ ತಲೆಯಲ್ಲಿ ವಿಚಾರ ಹಾಕುವದರಿಂದ, ಭಾರತದ ಪುರುಷತ್ವ ಹಾಗೂ ಸ್ತ್ರೀತ್ವಗಳ ಮೇಲೆ ಹಿಂಸೆ ಮಾಡಿದಂತಾಗುತ್ತದೆ! ಇಂಥ ಅಪಮಾನಜನಕ ವಿಚಾರವನ್ನು ಸಹನ ಮಾಡುವದೇ ಶಕ್ಯವಿಲ್ಲ ಇಂಗ್ಲಿಷ ಭಾಷೆಯ ಮೋಹದಿಂದ ಬಿಡುಗಡೆ ಹೊಂದುವದು ಸಹಿ ಸ್ವರಾಜ್ಯಕ್ಕೆ ಅತ್ಯವಶ್ಯವೂ ಅನಿವಾರ್ಯವೂ ಆದ ಒಂದು ಅಂಗವಾಗಿದೆ!

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯವಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಬಾಲುಕೋಟಿ, ಉಡುಪಿ, ದ. ಕನ್ನಡ.

ವೀರಾಂಗನೆ - ಚಾಂದ ಬೀಬಿ

ಬರೆದವರು:
ಕುಮಾರಿ ಸ್ವರ್ಣಲತಾ, ಶಿರಾಡಿಪಾಲ್.

ಭಾರತೀಯರು ಇತಿಹಾಸದಲ್ಲಿ ತಮ್ಮ ಧೈರ್ಯಶೌರ್ಯಾದಿ ಪರಾಕ್ರಮಗಳಿಂದ, ಕೀರ್ತಿಶಿಖರದಲ್ಲಿ ರಂಜಿಸುತ್ತಿರುವ ಭಾರತೀಯ ವೀರ ರಮಣಿಯರಲ್ಲಿ, ಮುಸ್ಲಿಂ ಸ್ತ್ರೀಯರ ಸಂಖ್ಯೆ ಬಹಳ ಕಡಿಮೆಯೆಂದೇ ಕಾಣುತ್ತಿದೆ.

ಬಾಬರನ ಮಗಳಾದ 'ಗುಲ್ ಬದನ್ ಬೇಗಮ್' ಎಂಬವಳು, "ಹುಮಾಯುನಾಮಾ" ಎಂಬ ಸುಂದರವಾದ ಕೃತಿಯನ್ನು ರಚಿಸಿ, ವಿದುಷಿಯೆಂದೆನಿಸಿ, ಪ್ರಖ್ಯಾತಿ ಹೊಂದಿದ್ದಳು. ವಿದುಷಿಯರೆಂದೆನಿಸಿ ಮೆರೆದ ಇನ್ನೂ ಹಲವು ಮಂದಿ ಮುಸ್ಲಿಂ ಸ್ತ್ರೀಯರು ಇರಬಹುದು. ಅದು ರಾಜನೀತಿಜ್ಞರಾಗಿ ರಾಜಕಾರ್ಯದಲ್ಲಿ ಪ್ರವೀಣೆಯರಾದ ರಮಣಿಯರು, ತೀರ ಕಡಿಮೆಯೆಂದೇ ಹೇಳಬೇಕಾಗುವುದು. ಸುಲ್ತಾನಾ ರೋಜಿಯಾ, ಮಹಾರಾಜ್ಞಿ ನೂರ್ ಜಹಾನ್, ಮೊದಲಾದವರ ಹೆಸರುಗಳು, ನೆನಪಿಗೆ ಬರುತ್ತವೆ. ಆದರೆ ಮೊದಲನೆಯವಳ ಕಾರ್ಯಕ್ಷೇತ್ರ ಬಹಳ ಚಿಕ್ಕದಾಗಿತ್ತು. ಸರದಾರರ ಪರಾಕ್ರಮದೆದುರು, ಆಕೆ ಸೋಲನ್ನೊಪ್ಪಿಕೊಳ್ಳಬೇಕಾಯಿತು.

ಇನ್ನು 'ನೂರ್‌ಜಹಾನ್' ಈಕೆಯು ಚರಿತ್ರೆಯತ್ತ ದೃಷ್ಟಿ ಬೀರಿದಾಗ, ಈಕೆ, ಮಹಾ ರಾಜಕಾರಣಪಟು, ಹಾಗೂ ಯುಕ್ತಿ ಕೌಶಲ್ಯಕಾರಿಣಿ, ಎಂದು ಕಂಡು ಬರುವುದು. ಆದರೆ ಆಕೆಯ ಶಕ್ತಿ, ಪೌರುಷಗಳು, ಯುಕ್ತಿ, ಕುಯುಕ್ತಿಗಳಲ್ಲೇ ಪ್ರಯೋಗಗೊಂಡಿದೆಯೇ ಹೊರತು, ಅವಳು ಸ್ವತಃ ರಣರಂಗದಲ್ಲಿಳಿದು, ಯುದ್ಧ ಮಾಡಿದ ಉಲ್ಲೇಖ ಎಲ್ಲಿಯೂ ಕಂಡು ಬರುವುದಿಲ್ಲ. "ಮುಸ್ಲಿಂ ಸಮಾಜದ ದ್ರಮುಖ ವೀರಾಂಗನೆ ಯಾರು?" ಎಂಬ ಪ್ರಶ್ನೆಗೆ ಉತ್ತರವಾಗಿ ಚಾಂದ ಬೀಬಿಯ ಚರಿತ್ರೆಯ ಕಡೆಗೆ ಲಕ್ಷ್ಯ ಕೊಡಬೇಕಾಗುವುದು. ಮುಸ್ಲಿಂ ಸಮಾಜದ ಏಕ ಮಾತ್ರ ಪ್ರಮುಖ ವೀರಾಂಗನೆಯೆಂದು ಪ್ರಸಿದ್ಧಳಾಗಿ, ಮುಸ್ಲಿಂ ಸ್ತ್ರೀ ಸಮಾಜಕ್ಕೆ ಕೀರ್ತಿಯನ್ನು ಗಳಿಸಿಕೊಟ್ಟ, 'ಚಾಂದ ಬೀಬಿ'ಯು ಇತಿಹಾಸದಲ್ಲಿ ತನ್ನ ಹೆಸರನ್ನು ಅಮರಗೊಳಿಸಿರುವಳು.

ಅಹಮ್ಮದ್ ನಗರದ "ನಿಜಾಂಶಾಹಾ" ರವರ ಮಗಳಾದ ಚಾಂದ ಬೀಬಿಯು ೧೫೪೭ನೇ ಇಸವಿಯಲ್ಲಿ ಜನಿಸಿದಳು. ವಿಜಾಪುರದ ಆಲಿ ಆದಿಲ್ ಶಾಹಾರವರೇ ಈಕೆಯ ಪತಿ. ಚಾಂದ ಬೀಬಿಯು ರಾಜ್ಯ ಕಾರ್ಯಗಳಲ್ಲಿ, ತನ್ನ ಪತಿಗೆ, ಸಲಹೆ ಸೂಚನೆಗಳನ್ನು ಕೊಡುತ್ತಿದ್ದಳಲ್ಲದೆ, ವಾಯು ವಿಹಾರಕ್ಕೂ, ಶಿಕಾರಿಗೂ ಈಕೆ ಪತಿಯೊಡನೆ ತಪ್ಪದೆ ಹೋಗುತ್ತಿದ್ದಳು. ಸುಮಾರು ಸನ್ ೧೫೮೦ರಲ್ಲಿ ಈಕೆಯ ಪತಿ ಸ್ವರ್ಗವಾಸಿಯಾದನು. ಆ ಬಳಿಕ ತನ್ನ ಮಗನನ್ನು ಸಿಂಹಾಸನದಲ್ಲಿ ಕೂರಿಸಿ, ತಾನೇ ಸ್ವತಃ ರಾಜ್ಯ ಸೂತ್ರಗಳನ್ನು ನಡೆಸತೊಡಗಿದಳು, ಚಾಂದಬೀಬಿ.

ಸಂದರ್ಭವನ್ನು ಕಾಯುತ್ತಲೇ ಇದ್ದ ಶತ್ರುಗಳು, ಚಾಂದಬೀಬಿಯ ಪತಿಯು ತೀರಿ ಹೋದ ಸುದ್ದಿ ತಿಳಿದೊಡನೆಯೇ ವಿಜಾಪುರಕ್ಕೆ ಮುತ್ತಿಗೆ ಹಾಕಿದರು. ಆದರೆ ಚಾಂದಬೀಬಿಯು ಸ್ವಲ್ಪವೂ ಧೈರ್ಯಗೆಡಲಿಲ್ಲ. ಶತ್ರುಗಳನ್ನು ಎದುರಿಸಿ ತನ್ನ ರಾಜ್ಯವನ್ನು ರಕ್ಷಿಸಿಕೊಂಡಳು. ಅಷ್ಟು ಮಾತ್ರವಲ್ಲ, ಈಕೆ ತನ್ನ ತಂದೆಗೂ ತುಂಬಾ ಸಹಾಯ ನೀಡಿದಳು.

ಒಂದು ಸಲ ಮುರಾದನು ತನ್ನ ಪ್ರಚಂಡವಾದ ಸೇನೆಯೊಡನೆ, ಅಹಮ್ಮದ್ ನಗರಕ್ಕೆ ಮುತ್ತಿಗೆ ಹಾಕಿದ್ದನು. ಆ ಸಮಯದಲ್ಲಿ ಮುರಾದನ ಮಹಾ ಸೇನೆಯನ್ನು ಪ್ರತಿಭಟಿಸಿ ತೋರಿಸಿದ ಚಾಂದ ಬೀಬಿಯ ಪೌರುಷ ಪರಾಕ್ರಮಗಳು ಅದ್ಭುತವಾಗಿದ್ದವು. ವಿಜಾಪುರ ಮತ್ತು ಅಹಮ್ಮದ್ ನಗರಗಳ ಮೇಲೆ ಏರಿ ಬಂದ ಶತ್ರುಗಳನ್ನು, ತನ್ನ ಅಲ್ಪ ಸಂಖ್ಯಾ ಬಲವುಳ್ಳ ಪಡೆಯಿಂದಲೇ ಹೊಡೆದೋಡಿಸಿದ ಚಾಂದಬೀಬಿಯು, ಪತಿಕುಲ, ಪಿತೃಕುಲಗಳೆಂಬವನ್ನೂ ಉದ್ಧಾರ ಮಾಡಿ, ಹೆಣ್ಣು ಎಂದರೆ ಉಭಯಕುಲೋದ್ಧಾರಕೆ, ಎಂಬುದನ್ನು ತನ್ನ ಸಾಹಸದಿಂದ ತೋರಿಸಿಕೊಟ್ಟಳು!

ಸಂದರ್ಭ ದೊರೆತರೆ ಮುಸ್ಲಿಂ ಸ್ತ್ರೀಯರೂ ಎಂತಹ ಧೈರ್ಯ ಪರಾಕ್ರಮಗಳನ್ನು ತೋರಿಸಿ ಆದರ್ಶಂಗಾಗಬಲ್ಲರು ಎಂಬುದಕ್ಕೆ ಚಾಂದಬೀಬಿಯೇ ನಿದರ್ಶನವಾಗಿರುವಳು. ಆದರ್ಶಳಾದ ಈ ವೀರಾಂಗನೆ ಸನ್ ೧೫೯೯ರಲ್ಲಿ ದೈವಾಧೀನಳಾದಳು.

ದೇವಸ್ಥಾನ ಯಾ ವಿಗ್ರಹವಿರುವುದು ಪಾಪ ಯಾ ಕುರುಡು ನಂಬಿಕೆಯಲ್ಲ. ಇಂಥಾ ಸಾಮೂಹಿಕಪೂಜಾ ಕೇಂದ್ರಗಳಿರುವುದು ಮಾನವ ಜೀವನದ ಅಮೂಲ್ಯ ಅವಶ್ಯಕತೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. No. 594/1967

ಜುಲಾಂಪು ಲೋಚೊ — ವಾದಿ

ಅಪ್ಪು ಸೆಟ್ಟಿ — ಪ್ರತಿವಾದಿ

ಸದ್ರಿ ದಾವೆಯ ಪ್ರತಿವಾದಿ ಅಪ್ಪು ಸೆಟ್ಟಿ—ಪೈಸ ಮಂಜಯ್ಯ ಸೆಟ್ಟಿ ಮಗ, ಉತ್ತರ ಕನ್ನಡ ಜಿಲ್ಲಾ ಭಟ್ಕಳ ತಾಲ್ಲೂಕು ಸೂಜಿ ಗ್ರಾಮ.

ಪ್ರತಿವಾದಿ ಆದ ನೀವು ವಾದಿಗೆ ತಾ: 24—12—1965ರಲ್ಲಿ ರೂಪಾಯಿ 176—00 ಕ್ಕೆ ಬರೊಕಟ್ಟಿ ಡಿಮಾಂಡ್ ನೋಟಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಕೂಡಾ ರೂ. 191—00ಕ್ಕೆ ಮತ್ತು ನಂತ್ರದ ಬಡ್ಡಿ ಕೋರ್ಟು ಖರ್ಚು ವಗೈರೆ ಬಗ್ಗೆ ನಿಮ್ಮ ಮೇಲೆ ಮಾಡಿದ ದಾವೆಯ ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 4—3—1968ಕ್ಕೆ ಅಬ್ಬೈರ ಸಾರಿಗೆ ತಪ್ಪಿಗೆ ಇಡೋಣಾಗಿದೆ. ಈ ಕುರಿತು ನಿಮ್ಮ ಅಭ್ಯೇಪ ಇದ್ದಲ್ಲಿ ಸದರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ.

G. Ramakrishna Rao,
B.A.,LL.B.,
Advocate.

ಕುಂದಾಪುರ, ತಾ. 13—2—1968.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. No. 378/1967

ಸುಲೋಚನ ಬಾಯಿ — ವಾದಿಳು.

1. ನಾಗ, 2. ಕಾವೇರಿ ಹೆಂಗ್ಸು — ಪ್ರತಿವಾದಿಯರು

ಸದ್ರಿ ದಾವೆಯ 2ನೇ ಪ್ರತಿವಾದಿಳು ಕಾವೇರಿ ಹೆಂಗ್ಸು, ನಾಗಿಮನೆ ಹೊಟ್ಟಿ ಹೆಂಗ್ಸಿನ ಮಗಳು, ಕುಂದಾಪುರ ತಾಲೂಕು ಉಪ್ಪಿನಕುದ್ರು ಗ್ರಾಮ.

ಪ್ರತಿವಾದಿರಾದ ನೀವು ಕೂಡಾ ಎರಡು ಜನರು ವಾದಿಳಿಗೆ ತಾರೀಕು 6—6—1964 ರಲ್ಲು ರೂಪಾಯಿ 900—00ಕ್ಕೆ ರಿಜಿಸ್ಟ್ರೇಶನ್ ಬರೊಕಟ್ಟಿ ಈಡು ದಸ್ತಾವೇಜಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 363—00 ನಂತ್ರದ ಬಡ್ಡಿ ಕೋರ್ಟು ಖರ್ಚು ವಗೈರೆ ಬಗ್ಗೆ ನಿಮ್ಮ ಮೇಲೆ ಮಾಡಿದ ದಾವೆಯ ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 4—3—1968ಕ್ಕೆ ಅಬ್ಬೈರ ಸಾರಿಗೆ ತಪ್ಪಿಗೆ ಇಡೋಣಾಗಿದೆ. ಈ ಕುರಿತು ನಿಮ್ಮ ಅಭ್ಯೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ

G. Ramakrishna Rao,
B.A.,LL.B.,
Advocate.

ಕುಂದಾಪುರ, ತಾ. 13.2.1968.

ಗೀತೆಯ ಕೈಗನ್ನಡಿ



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

In the Court of Munsif,
Belthangady, S. K.

S. C. No. 39/67

M. Gopalayya ... Plaintiff.
and
Babu Devadiga ... Defendant.

THIRD PARTY NOTICE.

To

Smt. B. Lakshmi Amma.
W/o Sri. M. Gopalayya,
Residing at Venoor,
P. O. Venoor.

The defendant in the above suit contends that he has discharged Rs. 200/- due to the plaintiff to you, during the sickness of the plaintiff, on your representation that you had been instructed by the plaintiff to collect the said amount to meet the medical expenses of the plaintiff and has produced a receipt to the said effect. The defendant further contends that if the plaintiff disowns the said payment, you are liable to indemnify him to the same extent along with interest at 6¼ per cent from the date of payment together with the proportionate costs of the suit. Please take notice that the matter stands posted to 22—2—1968 for your appearance. Please be aware that if you fail to put in your appearance and put in your say, the matter would be decided in your absence.

B. K. Suryanarayana Rao,
Advocate for Defendant,
Belthangady, Date: 5—2—1968.

ಹಚ್ಚೆದ ಕಿಚ್ಚು ಹರಡದಿರುತ್ತೆ?

(ನಾಲ್ಕನೇ ಪುಟದಿಂದ)

'ಅಂದ್ರೆ?'

'ನಾವು ಕಳಿಸಿದ ಜನತಾ ಪ್ರತಿನಿಧಿಗಳು, ನಮ್ಮ ನಡುವಿರುವ ಬುದ್ಧಿ ಜೀವಿಗಳು, ದೀರ್ಘಾನುಭವಿಗಳು ಎಲ್ಲರೂ ಒಂದುಗೂಡಿ, ಯಾವುದನ್ನು ಹೇಗೆ ಯಾರು ಹೇಳಿಕೊಡಬೇಕು ಎಂದು ಗೊತ್ತು ಮಾಡುತ್ತಾರೆ. ಹಿರಿಯರ ಮಾತನ್ನು ಮನ್ನಿಸುವುದು ಕಿರಿಯರ ಕರ್ತವ್ಯವಾದರೆ, ಹಿರಿಯರು ಗೊತ್ತು ಮಾಡಿದ್ದನ್ನು ಕಲಿಯುವುದೂ ಅವರ ಕರ್ತವ್ಯ. ತಮ್ಮ ಕಷ್ಟವನ್ನು ಮಕ್ಕಳು ಅರ್ಥಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವರ ಹಿರಿಯರು ಅರ್ಥ ಮಾಡಿಕೊಳ್ಳುತ್ತಾರೆ.'

'ಅಂದ್ರೆ, ವಿದ್ಯಾರ್ಥಿಗಳ ಹಿಂದಿ ವಿರೋಧ ಅರ್ಥವಿಲ್ಲದ್ದು ಅಂತ ತಾನೆ?"

'ವಿರೋಧವೇ ಅರ್ಥವಿಲ್ಲದ್ದು. ಯಾರಿಗೆ ಯಾವ ಭಾಷೆ ಕಲಿಯಬೇಕೆಂದಿದೆಯೋ ಅದನ್ನು ಕಲಿಯುವ ಅಧಿಕಾರವಿದೆ. ಹಿಂದಿಬೇಕು ಅನ್ನುವವರು ಇದ್ದಾರೇನ್ನು ಈ ಬೇಕು—ಬೇಡಗಳ ಪ್ರಶ್ನೆ ಹೊಂದಾಣಿಕೆಯಿಂದ ಬಗೆ ಹರಿಯಬೇಕಲ್ಲದೆ ದೊಂಬಿ—ಚಳವಳ—ಹಿಂಸಾಕೃತಿಗಳಿಂದಲ್ಲ....'

'ಹೋಗಲಿ ಬಿಡಿ.....ಯಾರು ಜೇಕೋದು? ನಮ್ಮದು ಸುಂಡಾಟಿಕೆಗೆ ಹೆದರುವ ಸರಕಾರ ಅನ್ನೋ ಮಾತು ಜಗಜ್ಜಾಹಿರವಿರುವಾಗ..."

'ಹಾಗೇನಿಲ್ಲ..."

"ಮತ್ತೆ ಹೇಗೆ?'

"ಮತ್ತೆ?—ಅದು ಮತ್ತೆ. ಸದ್ಯ ಹೀರೆ ...'

'ಅಯ್ಯೋ, ನೀನೊಂದು...."

'ನೀನೂ ನಾನೂ ಸೇರಿದ್ರೆ ಒಂದು....."

'ಹ್ಹಾಂ....'

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟನಲ್ಲಿ

O. S. 366/1963 R.E.P. 243/1967

ದುಗ್ಗಪ್ಪಾಚಾರಿ—ಅರ್ಜಿದಾರ

1 ಸಿಂಕ್ರಯಾಚಾರಿ, 2 ಮಂಜುನಾಥಾಚಾರಿ —ಎದ್ರಿರು

ಕೃಷ್ಣಯಾಚಾರಿ ಮಗಂದಿರು, ಬೆಳ್ಳಂಪಳ್ಳಿ ಗ್ರಾಮಸ್ಥ ಉಡುಪಿ ತಾಲೂಕು.

ಸದ್ರಿ ಎದ್ರಿಗೆ—

ಅರ್ಜಿದಾರನು ಎದ್ರಿರ ಮೇಲೆ ಸದ್ರಿ ಕ್ರಿಯ ಅವಾಲ್ಯಾಂಯನ್ನು ಏಕೆ ನಡೆಸಬಾರದು ಎಂಬ ಬಗ್ಗೆ ಎದ್ರಿರ ಆಕ್ಷೇಪ ಇದ್ದಲ್ಲಿ ತಾ. 18—8—1968ಕ್ಕೆ ಈ ಕೋರ್ಟು ಮುಂದೆ ಹಾಜರಿರುವಿದಿಸತಕ್ಕದ್ದು.

ಪಿ. ರಾಮಚಂದ್ರ ರಾವ್,
B. A. B. L.
ಅರ್ಜಿದಾರನ ಎಡ್ವೋಕೇಟ್

ಉಡುಪಿ, 16—2—68.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 26—4—1966.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ನಾ. ಸ.)

ಸಂಸಾರ ಚಿತ್ರ—(ಒಂಭತ್ತು ಕತೆಗಳು)

ಬರೆದವರು: ಶ್ರೀ ಆನಂದಕಂಗ.

ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು: ೧೬೩. ಬೆಲೆ: ರೂ. ೩.೦೦

ಕನ್ನಡದ ಸುಪ್ರಸಿದ್ಧ ಕಥೆಗಾರರಾದ ಆನಂದಕಂದರ ಈ ಕಥಾ ಸಂಕಲನವು ಈಗಾಗಲೇ ನಾಲ್ಕು ಮುದ್ರಣಗಳನ್ನು ಕಂಡಿದೆ—ಇದರಿಂದಲೇ ಇದರ ಜನಪ್ರಿಯತೆಯನ್ನು ಗುರುತಿಸಬಹುದು. ಇಲ್ಲಿರುವ ಒಂಭತ್ತು ಕಥೆಗಳೂ ಜೀವನದ ಒಂದೊಂದು ಮಗ್ಗಲ್ಲನ್ನು ಚಿತ್ರವನ್ನು ನಮ್ಮ ಮುಂದಿಡುತ್ತವೆ. ಸಮೂರು ಮೂವತ್ತೈದು ವರ್ಷಗಳ ಹಿಂದೆ ಬರೆದ ಈ ಕಥೆಗಳ ಪ್ರತಿಭ್ಯಾಯಿಯನ್ನು ನಾವು ಇಂದಿನ ಕೆಲವು ಉದಯೋನ್ಮುಖ ಕಥೆಗಾರರ ಕಥೆಗಳಲ್ಲಿಯೂ ಕಾಣುತ್ತೇವೆ. 'ಜೀವದ ಹೂವು' ಸಂಕಲನದ ಚಿಕ್ಕ ಕಥೆ. ಉಳಿದುವುತುಸು ದೊಡ್ಡದಾಗಿವೆ.

ಶ್ರೀ ಆನಂದಕಂದರು ಕಥೆ ಹೆಣೆಯುವಲ್ಲಿ ಅತ್ಯಂತ ಕುಶಲರು. ವಸ್ತು ಚರಿತ್ರ ಚಿತ್ರಣ, ಕಥೋಪಕಥನ, ಸನ್ನಿವೇಶಗಳನ್ನು ಶ್ರೀಯುತರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇದಕ್ಕೆ ಕಲಶವಿಡುವಂತೆ ಶ್ರೀಯುತರ ಭಾಷೆ ಮತ್ತು ಶೈಲಿಗಳು ಸರಳ ಮನೋಜ್ಞವಾಗಿವೆ. ಅಲ್ಲಲ್ಲಿ ಪಡೆ ನುಡಿಗಳನ್ನೂ ಬಳಸಿಕೊಂಡ ಶೈಲಿಯಲ್ಲಿ ಪ್ರಭಾವೋತ್ಪಾದಕ ಗುಣ ತಾನೇ ಮೂಡಿ ಬಂದಿದೆ.

ಮಾನವ ಜೀವನದ ಹೂವುದಾದರೂ ಒಂದು ಘಟನೆಯನ್ನು ಚಿತ್ರಿಸುವ ಶುದ್ಧ ಚಿತ್ರವೇ ಕಥೆ. ಮಾನವ ಸಂಸಾರಕ್ಕೆ ಅತಿನಿಕಟವಾದ ಘಟನೆಗಳನ್ನೇ ಆಯ್ದು ಬರೆದ ಇಲ್ಲಿನ ಕಥೆಗಳು ಯಾವ ಕಾಲಕ್ಕೂ ಹಳೆಯದಾಗವು. ನವುರಾದ ಭಾಷೆ, ಘನವಾದ ಉದ್ದೇಶಗಳು "ಸಂಸಾರ ಚಿತ್ರ"ಕ್ಕೆ ವಿಶೇಷ ಕಳೆ ಮೂಡಿದೆ. ಇದೊಂದು ಅತ್ಯುತ್ತಮ ಚಿರಂತನ ಕಥೆಗಳ ಸಂಕಲನ.

ದಕ್ಷಿಣಾ ಪಥದ ಸಂತರು:

ಬರೆದವರು: ಶ್ರೀ ವಿ. ನಾ.

ಪ್ರಕಾಶಕರು: ಸಂಪಾದಕರು, 'ಆರಾಧನೆ', ಶ್ರೀ ಮೂರಿಕಾಂಬಾ ದೇವಸ್ಥಾನ, ಸಿರಸಿ (ಉ. ಕ.)

ಪುಟಗಳು: ೧೧೧. ಬೆಲೆ: ರೂ. ೧.೫೦.

ಸಾಧುಸಂತರು, ವೀರ ಶೂರಂಗಳ ಜನ್ಮಭೂಮಿ ಭಾರತ. ಅಂತಹವುಗಳಲ್ಲಿ ದಕ್ಷಿಣ ಭಾರತದ ಹದಿನಾಲ್ಕು ಸಂತರ ಸಂಕ್ಷಿಪ್ತ ಚರಿತ್ರೆಯನ್ನು ಕನ್ನಡಿಗರಿಗೆ ಶ್ರುತಪಡಿಸುವ ಪ್ರಯತ್ನವಿಲ್ಲಿ ನಡೆದಿದೆ. ಇವರಲ್ಲಿ ಕೆಲವರು ಇತಿಹಾಸದ ಮಧ್ಯಕಾಲಕ್ಕೂ ಇನ್ನು ಕೆಲವರು ಆಧುನಿಕ ಕಾಲಕ್ಕೂ ಸೇರಿದವರು.

ಶ್ರೀ ವಿ.ನಾ.ರವರು ಜೀವನ ಚರಿತ್ರೆಯನ್ನು ಚುಟುಕಿನಲ್ಲಿ ಬರೆಯ ಹೊರಟರೂ ಅವರು ಪ್ರಕೃತಿಪ್ರಿಯರು, ಭಾವುಕರು. ಆದುದರಿಂದಲೇ ಅಲ್ಲಲ್ಲಿ ಪ್ರಾಕೃತಿಕ ವರ್ಣನೆಗಳು ಸಹಜವಾಗಿಯೇ ಮೂಡಿ ಬಂದಿವೆ. ಇದರಿಂದಾಗಿ ಮುಖ್ಯೋದ್ದೇಶಕ್ಕೆ ಹಾನಿ ತಟ್ಟಿಲ್ಲ. ಶ್ರೀಯುತರ ಶೈಲಿಯೂ ಸರಳ ಸುಂದರವಿದೆ. "ದಕ್ಷಿಣಾ ಪಥದ ಸಂತರು" ಒಂದು ಉಪಾದೇಯ ಸಂಗ್ರಹ. ದಕ್ಷಿಣಾ ಪಥದಲ್ಲಿ, (ಕನ್ನಡ ರಾಜ್ಯದಲ್ಲಿಯೂ,) ಪ್ರಸಿದ್ಧರಾದ ಸಂತರು ಅನೇಕರಿದ್ದಾರೆ. ಇವರ ಪರಿಚಯವೂ ನಮಗೆ ಅಗತ್ಯ. ಈಗ ಪ್ರಕಟವಾದ ಗ್ರಂಥವು ಈ ಸಂತ ಪರಿಚಯ ಸಾಹಿತ್ಯದಲ್ಲಿ ಮೊದಲನೆಯ ಪುಷ್ಪವಾಗಲಿಯೆಂದು ಹಾರೈಸುತ್ತೇವೆ. ಇನ್ನು ಇಲ್ಲಿನ ಸಂತರ ಚರಿತ್ರೆಯನ್ನು ಕಾಲಾನುಕ್ರಮದಲ್ಲಿ ಜೋಡಿಸಬಹುದಿತ್ತೆನಿಸುತ್ತದೆ. ಸುಂದರವಾದ ಮುದ್ರಣ, ಪದ್ಮಭೂಷಣ ಚೇಂಪ್ರೆಯವರು ಆಕರ್ಷಕೆಯನ್ನು ಹೆಚ್ಚಿಸಿವೆ.

ವಿಕಾಸ (ನಾಟಕ)

ಬರೆದವರು: ಶ್ರೀ ಕೆ. ಎನ್. ಭಟ್, ಶಿಂಡಿಪಾಲ್.

ಪ್ರಕಾಶಕರು: ವಿಚಾರ ಸಾಹಿತ್ಯ ಮಾಲೆ, ಕಡಿರುಬ್ಯಾವರ (ದ. ಕ.)

ಪುಟ: ೪೬. ಬೆಲೆ: ರೂ. ೧.೦೦

ಗ್ರಾಮೋನ್ನತಿ ಸಾಧನೆಗಾಗಿ ಸರಕಾರ ಸಮೂದ ವಿಕಾಸ ಯೋಜನೆಯನ್ನು ವ್ಯವಸ್ಥೆಗೊಳಿಸಿ, ತನ್ಮೂಲಕ ಶ್ರೀತರಿಗೆ ಹಲವು ಬಗೆಯ ಅನುಕೂಲ ಮಾಡಿಕೊಡಲು ಮುಂದೆ ಬಂದರೂ ಅದನ್ನು ಸಮರ್ಪಕವಾಗಿ ಬಳಸಲು ಹಿಂಜರಿದು, ಕುತ್ಸಿತ ಭಾವನೆಯಿಂದ ಕಾಣುವ ನಮ್ಮ ರೈತಾಪಿ ಜನರ ಕಣ್ಣು ತೆರೆಯಿಸುವಲ್ಲಿ ಈ 'ವಿಕಾಸ' ನಾಟಕ ಸಮರ್ಥವೆನಿಸಬಹುದು. ಈ ಬಗೆಯ ನಾಟಕ ಪ್ರಾಯಃ ಕನ್ನಡದಲ್ಲಿ ಇದೇ ಮೊತ್ತಮೊದಲನೆಯದಿರಬೇಕು. ೧೯೬೬ರಲ್ಲೇ ಇದರ ಮೊದಲ ಮುದ್ರಣಗೊಂಡ ಈ ನಾಟಕ ಇಷ್ಟರಲ್ಲೇ ದ್ವಿತೀಯ ಮುದ್ರಣವನ್ನೂ ಕಂಡಿದೆ—ಇದು ನಾಟಕದ ಜನಪ್ರಿಯತೆಗೊಂದು ಉದಾಹರಣೆ.

ನಾಟಕೀಯ ತತ್ವಗಳ ದೃಷ್ಟಿಯಲ್ಲಿ ಈ ನಾಟಕವು ಸಾಮಾನ್ಯವಾಗಿ ಒಳ್ಳೆಯದಾಗಿದೆ. ಆದರೂ ಅಲ್ಲಲ್ಲಿ ಬರುವ ದೀರ್ಘ ಸಂಭಾಷಣೆಗಳು ಪ್ರೇಕ್ಷಕರ ಮನಸ್ಸಿಗೆ ಹಿತವನ್ನುಂಟು ಮಾಡಲಾರವೆಂದೇ ಹೇಳಬೇಕು. ಹಿನ್ನೆಲೆಯಲ್ಲಿ ಹಾಡಬೇಕಾದ ವಸ್ತುಗಳು ನಾಟಕೀಯ ದೃಷ್ಟಿಯಿಂದೇನೋ ಉತ್ತಮವಿವೆ; ಆದರೆ ಅದನ್ನು ಹಾಡುವಾಗ ಅರ್ಥವಿಸಿಕೊಳ್ಳಬಹುದಾದ ಪ್ರೇಕ್ಷಕರ ಸಂಖ್ಯೆ (?) ಆದರ್ಶಮಯವಾದ ಕಥಾವಸ್ತುವನ್ನು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಜನತೆಯ ಮೇಲೆ ಉತ್ತಮ ಪ್ರಭಾವ ಬೀರುವಲ್ಲಿ 'ವಿಕಾಸ' ಯಶಸ್ವಿಯಾಗಿದೆ. ಸರ್ವವಿಧದಲ್ಲೂ ಹಿತಕರ ಸಾಹಿತ್ಯ ನಿರ್ಮಾಣದಲ್ಲಿ ಚಿಕ್ಕ ಸುಟ್ಟ ದೋಷಗಳು ಅನಿವಾರ್ಯವೇ.

—ಗೋರಾ.

ಕರ್ನಾಟಕ ಸಂಘ, ಉಡುಪಿ

ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಬೇಕಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ॥ ಕೆ. ಎಲ್. ಎತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಪುಟ್ಟ, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಣಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಒದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಶಾಲುಕೋಟ, ಉಡುಪಿ, ದ. ಕ.

ಚುಟುಕ

ನಳುಕೆನಲ್ಲಿ ಪಣ್ಣೀರ ಸ್ನಾನ,
ಹಿತ, ಮಿತ, ಲಘು ಆಹಾರ,
ಸಕಾಲದಲಿ ಮದುವೆ;
ಇದುವೆ ಜೀವನದ ಮಂತ್ರ,
ಆರೋಗ್ಯ ಯಂತ್ರ.

ಸಕಾಲ ಯೂವಾಗ... ?
ಕುಡಿಮಿಸೆ ಬರಿಬಾಗ
ಎದೆಯುಬ್ಬಿ ಖಂಡಾಗ
ಅದುವೇ ಸಕಾಲ
ಮದುವೇಗೆ ಕಾಲ
ಸರಕಾರ ಸಾರುತಿದೆ,
ಜನತೆ ಕುಡಿಮಿರುತಿದೆ;
ದಂಡಿಗಿಪ್ಪತ್ತೈದು
ಹೆಣ್ಣಿಗಿಪ್ಪತ್ತು...
ಇದು ಅನಾಚಾರಕ್ಕೇ ದಾರಿ
ಸಂಸ್ಕೃತಿಗೆ ಗೋರಿ

—ಕವಿ ಹೆಬ್ಬಾರ್

ಕಷ್ಟವೆಂದು ತೋರಿದುದನ್ನು ಎದುರಿಸುವಾತನೇ ಜೀವನದಲ್ಲಿ ಮೇಲೇರಬಲ್ಲ. ತನ್ನ ಕೈಯಲ್ಲಿ ಸಾಧ್ಯವಿಷ್ಟೇ ಎಂದು ಆ ವೃತ್ತದೊಳಗೆ ಜೀವಿಸುವವನು ಸಾಮಾನ್ಯತೆಯ ಗಡಿ ದಾಟಲಾರ.

o o o

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. & S. C. No. 4/1968.

ದಾವೆ S. ಶೆಟ್ಟಿ-ಸೇಸಾ ಶೆಟ್ಟಿ ವಿಧವೆ. ಉಡುಪಿ ತಾಲೂಕು ಉಳಿಯೂರು ಗೋಳಿ ಗ್ರಾಮ —ಅರ್ಜಿದಾರಳು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ:—

ತಾರೀಕು 9.3.1968ರಲ್ಲು ಉಡುಪಿ ತಾಲೂಕು ಉಳಿಯೂರುಗೋಳಿ ಗ್ರಾಮದಲ್ಲಿ ಮೃತ ಪಟ್ಟ ಅರ್ಜಿದಾರಳ ಗಂಡ ನಾಗಪ್ಪಶೆಟ್ಟಿ ಮಗ ಸೇಸಾ ಶೆಟ್ಟಿಬಾಬ್ತು ಮಂಗಳೂರು Special Land Acquisition Officer ಸ್ತ L. A. C. No. 11/1961ರಲ್ಲಿ ತಾರೀಕು 12.6.1967 ರಲ್ಲು ನಂಬ್ರ 14/1967 ನೇ ಎವಾರ್ಡ್ ಮೇರೆಗೆ ಸದ್ರಿ ಉಳಿಯೂರು ಗೋಳಿ ಗ್ರಾಮದ ಸ. ನಂಬ್ರ 200/7B ಸ್ಥಳಕ್ಕೆ ನಿಶ್ಚಯಿಸಿದ Compensation ಲೂವೇಜು ರೂಪ್ಯಾ 480-80ನ್ನು ಪಡಯುವರೆ ಅರ್ಜಿದಾರಳ ಹೆಸರಲ್ಲು ನಾರೀಸು ಹಕ್ಕು ಸರ್ಟಿಫಿಕೇಟು ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 11.3.1968 ಕ್ಕೆ ಯಿಟ್ಟುರುತ್ತದೆ. ಅಕ್ಕೆಯವುಳ್ಳವರು ಆ ದಿನ ಸಮಾರ್ಪಾಸ್ ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳಬಹುದು.

K. Balachandra Rao
Advocate for Petitioner
Udipi, 17—4—1968.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳನ್ನೆಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ಕರ್ಮ ಪ್ರತಿಗಳಿಗೆ ವಿಚಾರಿಸಿರಿ:

ಧೇನಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಮಿಲೇಗ್ರಿಸ್ ಕೋಲೇಜಿನ ಸಾಂಸ್ಕೃತಿಕ ಸಂಘಗಳ ಸಮಾರೋಪ ಭಾಷಣ

ಕಲ್ಯಾಣಪುರದ ಮಿಲೇಗ್ರಿಸ್ ಕೋಲೇಜಿನ ಸಾಂಸ್ಕೃತಿಕ ಸಂಘಗಳ ಸಮಾರೋಪ ಭಾಷಣವನ್ನು ಮಂಗಳೂರಿನ ಸ್ಟೂಟ್ ಆಲೋಶಿಯಸ್ ಕೋಲೇಜಿನ ರೆಕ್ಟರರಾದ ರೆ. ಫಾ. ಯಂ. ಲೂಯಿಸರು ತಾ.16-2-68ರಲ್ಲು ಮಾಡಿದರು. ಪ್ರಿನ್ಸಿಪಾಲ್ ಪಿ. ಗುರುರಾಜ ಭಟ್ಟರು ಅಧ್ಯಕ್ಷತೆಯನ್ನು ವಹಿಸಿದ್ದರು. ವಿದ್ಯಾರ್ಥಿಗಳು ಸಂತೋಷದಿಂದ ಸ್ವಾಗತ, ವಂದಿ ಸ್ವಾಚನ, ಭಾಷಣ ಮಾಗೂ ಮನೋರಂಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳು ಸಂಸ್ಥೆಯ ಕಾರ್ಯ ತತ್ಪರತೆಯನ್ನು ಹೊಗಳಿ ಕರ್ತವ್ಯದ ದಿಸೆಯಲ್ಲಿ ಶ್ರದ್ಧೆಯಿಂದ ಮುಂದುವರಿಯುವಂತೆ ವಿದ್ಯಾರ್ಥಿಗಳನ್ನು ಅಶೀರ್ವದಿಸಿದರು. ಕೆಲವು ಹಿತವಚನಗಳನ್ನು ಪ್ರಿನ್ಸಿಪಾಲರು ಹೇಳಿದ ಅನಂತರದಲ್ಲಿ ಧನ್ಯವಾದ ಅರ್ಪಣೆಯೊಂದಿಗೆ ಸಭೆಯು ಮುಕ್ತಾಯ ಗೊಂಡಿತು.

ವಾರ್ಷಿಕೋತ್ಸವ

ಯು. ಕಮಲಾ ಬಾಯಿ ಹೈಸ್ಕೂಲಿನ ವಾರ್ಷಿಕೋತ್ಸವ ತಾ. 9ರಂದು ಜರಗಿತ್ತು. ಉಡುಪಿಯ ಡಾ| ಕೆ. ಮೋಹನದಾಸ ಪೈಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಲೀಲಾ ಎಂ. ಪೈಯವರು ಪಾರಿತೋಷಕವನ್ನು ವಿತರಣೆಮಾಡಿದರು. ಶಾಲಾ ವ್ಯವಸ್ಥಾಪಕ ಶ್ರೀ ಕೆ. ಕೆ. ಪೈಯವರು ಸ್ವಾಗತ ಭಾಷಣಮಾಡುತ್ತ ಹೈಸ್ಕೂಲಿನ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಡಾ| ಯು. ಎಲ್. ನಾರಾಯಣ ರಾವ್ ಮತ್ತು ಡಾ| ಟಿ. ಎಂ. ಎ. ಪೈಯವರ ಸಹಕಾರವನ್ನು ಸ್ಮರಿಸಿ ಊರವರ ಉದಾರ ಸಹಕಾರ ಬಯಸಿದರು. ಮುಖ್ಯೋಪಾಧ್ಯಾಯ ಶ್ರೀ ಅನಂತಯ್ಯ ಹಂದೆಯವರು ತಮ್ಮ ವರದಿಯಲ್ಲಿ ಶಾಲೆಯ ಬಹುಮುಖವಾದ ಚಟುವಟಿಕೆಗಳನ್ನು ವಿವರಿಸಿದರು. ಮನರಂಜನೆಯ ಕಾರ್ಯಕ್ರಮವೂ ಕೊನೆಯಲ್ಲಿತ್ತು.

ವರ್ಧಂತ್ಯುತ್ಸವ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 10ರಂದು ನಗರ ಸಭಾಪತಿ ಶ್ರೀಯುತ ಮಂಜುನಾಥ ಮಧ್ವಸ್ಥರ ಹಿರಿತನದಲ್ಲಿ ನಡೆಯಿತು. ಶ್ರೀಕೆ. ಶ್ರೀಧರ ಪೈಯವರು ಶಾಲಾಧ್ಯಾಪಕರಾಗಿದ್ದಾಗ ಲಕ್ಷ್ಯಾಂಶವಾಗಿ ಸ್ಮಾರಕ ಶ್ರಮಯೋಗಶಾಲೆಯನ್ನು ಉದ್ಘಾಟಿಸಿದರು. ಮುಖ್ಯೋಪಾಧ್ಯಾಯ ಶ್ರೀ ಗುರುರಾಜ ಭಟ್ಟರು ತನ್ನ ವರದಿಯನ್ನು ಓದಿ ಸಭಿಕರನ್ನು ಸ್ವಾಗತಿಸಿದರು. "ಶ್ರೀ ಕೃಷ್ಣ ಗಾರುಡಿ" ನಾಟಕವನ್ನು ವಿದ್ಯಾರ್ಥಿಗಳು ಆಡಿದರು. ಈ ಸಂದರ್ಭದಲ್ಲೇ ಇಂದ್ರಾಳಿಯ ಶ್ರೀ ರಾಮಚಂದ್ರ ಭಟ್ಟರು ತನ್ನ ಜೀವಾವಧಿಯಲ್ಲಿ ಪ್ರತಿವರ್ಷವೂ ಶಾಲಾ ವಿದ್ಯಾರ್ಥಿಗಳಿಗೆ ಸಿಹಿ ಪಂಡಿಯನ್ನು ಹಂಚುವುದಾಗಿ ವಾಗ್ದಾನ ನೀಡಿದ್ದು, ಇದು ಇತರರಿಗೆ ಅನುಕರಣೀಯವಿದೆ.

ವಾರ್ಷಿಕೋತ್ಸವ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 11ರಂದು ಎಂ. ಎಲ್. ಎ. ಶ್ರೀ ಎಸ್. ಕೆ. ಅಮೀನರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷ ಪ್ರೊ| ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದ ಬಳಿಕ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಸದಾಶಿವರಾಯರು ವರದಿಯೋದಿದರು. ಅಧ್ಯಕ್ಷರು ಸಂಘದ ಬಹುಮುಖೀ ಚಟುವಟಿಕೆ, ಕಾರ್ಯಶೀಲತೆಯನ್ನು ಪ್ರಶಂಶಿಸಿದರು. ಮೂಕ್ಕೆ ಶಾಲೆಯಲ್ಲಿ ಕಟ್ಟಲಾಗುವ ಬಾಲವಾಡಿ ಶಾಲೆಗೆ ಸಂಘದ ಕಾಣಿಕೆಯಾಗಿ ರೂ. 1,500ಗಳನ್ನು ಈ ಸಂದರ್ಭದಲ್ಲಿ ನೀಡಲಾಯಿತು. ಕೊನೆಗೆ "ಶ್ರೀಮದ್ರಮಾರಮಣ ಗೋವಿಂದ ಗೋವಿಂದಾ" ಎಂಬ ನಾಟಕವನ್ನು ಅಭಿನಯಿಸಲಾಯಿತು.

ಮಣಿಪಾಲ್ ಕಾಲೇಜುಗಳು ಬಂದ್

ಮಣಿಪಾಲ, ಫೆ. 04—ಇಲ್ಲಿಯ ಕಸ್ತೂರಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜನ್ನು ಇಂದು ಅನಿರ್ದಿಷ್ಟ ಕಾಲದ ವರೆಗೆ ಮುಚ್ಚಲಾಯಿತು. ಹಾಸ್ಟಲುಗಳನ್ನು ತೆರವು ಮಾಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

ಈ ಕಾಲೇಜುಗಳ ಕೆಲವು ವಿದ್ಯಾರ್ಥಿಗಳು ಫೀಸ್ ಬೆಳಗ್ಗೆ ಹಿಂದಿ ವಿರೋಧಿ ಮತ ಪ್ರದರ್ಶನ ನಡೆಸುವಾಗ ಕಾಲೇಜುಗಳನ್ನು ಮುಚ್ಚಬೇಕೆಂಬುದಕ್ಕಾಗಿ ಕಲ್ಲುಗಳನ್ನು ಎಸೆದು ಗಾಜುಗಳನ್ನು ಒಡೆದರು, ಅದಕ್ಕೆ ಮುಂಚೆ ನಡೆದ ಪ್ರದರ್ಶನಗಳಿಂದಾಗಿ ಒಂದು ವಾರ ಮುಚ್ಚಲ್ಪಟ್ಟ ನಂತರ ಕಾಲೇಜುಗಳು ಪುನರಾಂರಂಭವಾಗಿದ್ದವಷ್ಟೆ.

ಅಡಳಿತ ವರ್ಗದವರು ತರಗತಿಗಳಿಗೆ ಹಿಂತಿರುಗಬೇಕೆಂದು ಮನವಿ ಮಾಡಿಕೊಂಡಾಗ್ಯೂ ಮತಪ್ರದರ್ಶನವನ್ನು ಅನಿರ್ದಿಷ್ಟವಾಗಿ ಮುಂದುವರೆಸಬೇಕೆಂದು ಪ್ರದರ್ಶನಕಾರರು ಉದ್ದೇಶಿಸಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗದಿರುವಂತೆ ಮಾಡುವುದಕ್ಕಾಗಿ ಕಾಲೇಜುಗಳನ್ನು ಮುಚ್ಚಲಾಯಿತು.

ಈ ಕಾಲೇಜುಗಳಲ್ಲಿ ದೇಶದ ನಾನಾ ಕಡೆಗಳಿಂದ ಹಾಗೂ ವಿದೇಶಗಳಿಂದ ಬಂದ ಸುಮಾರು ೧೬೦೦ ವಿದ್ಯಾರ್ಥಿಗಳಿದ್ದರೆ.

ಕೆಲಂಡರ್ ಸ್ವೀಕಾರ

1. ಜನರಲ್ ಇಂಜಿನಿಯರಿಂಗ್ [ಪ್ರೈವೆಟ್] ಲಿ. ಮಿಟೆಡ್, ಶ್ರೀ ರಾಮಪುರ್, ಅಹಮ್ಮದ್‌ನಗರ ಇದರ ಸೇಲ್ಸ್ ಮತ್ತು ಸರ್ವಿಸಿನ ವಿಕ್ಟರ್ ಟ್ರೇಡಿಂಗ್ ಕೋಪರೇಶನ್, ಪಳ್ಳಿ ಮಂಗಳೂರು.

2. ಫೇಮಸ್ ಪೂಟ್ವೇರ್ ಹೌಸ್, ಸಂತೆಕಟ್ಟೆ, ಉಡುಪಿ.

3. ದಿ ಜನರಲ್ ಇಂಜಿನಿಯರಿಂಗ್ ಕಂಪನಿ ಕೊಯಮುತ್ತೂರು ಇದರ ವಿಶಾಂಟರಾದ ವಿಕ್ಟರ್ ಟ್ರೇಡಿಂಗ್ ಕೊಪರೇಶನ್, ಪಳ್ಳಿ ಮಂಗಳೂರು.

ಇವರ ಅಂದವಾದ ಕೆಲಂಡರುಗಳನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. (ಸಂ. ನ.)

ಶ್ರೀ ಎಂ. ಎಸ್. ಭಂಡಾರಿಯವರ ನಿಧನ

ಸಿಂಡಿಕೇಟ್ ಬ್ಯಾಂಕಿನ ದಕ್ಷ ಠಿಕವರಿ ಆಫೀಸರರಾಗಿ ನಿಷ್ಠಾವಂತ ಸೇವೆ ಸಲ್ಲಿಸಿದ್ದ ಶ್ರೀ ಎಂ. ಎಸ್. ಭಂಡಾರಿಯವರು ತಾ. 14-2-68ರಂದು ಕೆಲವೇ ದಿನಗಳ ಅಸ್ವಸ್ಥತೆಯಿಂದ ತಮ್ಮ 58ನೇ ವಯಸ್ಸಿನಲ್ಲಿ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ದಿವಂಗತರು 30 ವರ್ಷಗಳಿಂದ ಶ್ರದ್ಧೆಯಿಂದ ದುಡಿದ ಆದರಣೀಯ ಆಫೀಸರರಾಗಿದ್ದರು. ಇವರ ನಿಧನದ ಸಂತಾಪ ಸೂಚನಾರ್ಥವಾಗಿ ತಾ. 16ರಂದು ಬ್ಯಾಂಕಿನ ಹೆಡ್ ಆಫೀಸಿಗೆ ರಜೆ ಕೊಡಲಾಗಿತ್ತು.

ಮಕ್ಕಳ ಲಲಿತ ಕಥಾವಸ್ತು ಪ್ರದರ್ಶನ

ಲೋಕಲ್ ಲೈಬ್ರೆರಿ ಅಥಾರಿಟಿಯ ಉಡುಪಿ ಶಾಖೆಯ ವತಿಯಲ್ಲಿ ಇದೇ ತಾ. 17 ಮತ್ತು 18ರಂದು ಮುನ್ಸಿಪಲ್ ಮಿ| ಗಾಂಧಿ ಟೇಸಿಕ್ ಡಾ| ಎ| ಶಾಲಾಕಟ್ಟಡದಲ್ಲಿ ಪುಸ್ತಕ ಹಾಗೂ ಮಕ್ಕಳ ಲಲಿತ ಕಲಾ ವಸ್ತು ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ತಾ. 17ರಂದು ಶ್ರೀ ಟಿ. ಎ. ಪೈಗಳು ಪ್ರದರ್ಶನವನ್ನು ಉದ್ಘಾಟಿಸುತ್ತ ಇದರ ಪ್ರಾಯೋಜನವನ್ನು ವಿವರಿಸಿದರು. ಶ್ರೀ ಎಂ. ಮಧ್ವರಾಜರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಶ್ರೀ ಕೆ. ಕೃಷ್ಣಗಳು ವಿಶ್ವಕವಿ ರವೀಂದ್ರನಾಥ ಠಾಗೋರರ ಭಾವಚಿತ್ರವನ್ನು ಅನಾವರಣ ಗೈದರು. ಶಾಲಾ ವಿದ್ಯಾರ್ಥಿ ಅರುಣ ಕುಮಾರ್ ರವರು ಮೂಕನಾಟದ ದಶಕ ಅಧ್ಯಕ್ಷರ ಭಾಷಣವಾಯಿತು. ರಾತ್ರಿ ಮಕ್ಕಳ ಯಕ್ಷಗಾನಬಯಲಾಟ ನಡೆದು ಮರುದಿನ ಶ್ರೀ ವಿ. ಜೆ. ಅಲ್ಸಿಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ಜರಗಿತು.

ಶ್ರೀ ಮಧ್ವನವಮಿ ಆಚರಣೆ

ಮದ್ರಾಸ್ ಪರಿಮಾಣದಲ್ಲಿರುವ ದಿನಂಗತ ಭಕ್ತ ಶ್ರೀ ಸೀತಾರಾಮ ರಾಯರ ಸ್ವಗೃಹವಾದ ದಾಸಸಾದನದಲ್ಲಿ 8-2-68ರಂದು ಮತ್ತು 9-2-68ರಂದು ಶ್ರೀ ಮಧ್ವನವಮಿ ಉತ್ಸವವು ಉತ್ತಮ ಕಲ್ಪದಂದ ನಡೆಯಿತು. ಎರಡು ದಿನಗಳಲ್ಲಿಯೂ ಸಚ್ಛಾಸ್ತ್ರಪಾರಾಯಣ, ವಿಶೇಷ ಪೂಜೆಗಳು ಮತ್ತು ದ್ವಾದಶ ಸುವಾಸಿನೀ ಸಮಾರಾಧನೆ ಮುಂತಾದ ಕಾರ್ಯಕ್ರಮಗಳು ನಡೆದವು.

8—2—1968ರಂದು ಸಂಜೆ ಶ್ರೀ ಜಿ. ಕೆ. ತಿಮ್ಮಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ವಿಠಲೋಪಾಧ್ಯಾಯರು ಭಾಷಣ ಮಾಡುತ್ತ (1) ಎಲ್ಲ ಶಾಸ್ತ್ರಗಳಲ್ಲಿ ಭಾರತ ಉತ್ತಮ (2) ಭಾರತದಲ್ಲಿ ಗೀತೆಯು ಉತ್ತಮ (3) ಗೀತೆಯಲ್ಲಿ ವಿಷ್ಣು ಸರ್ವೋತ್ಕೃಷ್ಟತ್ವವು ಸಮರ್ಥಿಸಲ್ಪಟ್ಟಿದೆ (4) ಶ್ರೀ ಮಧ್ವಾಚಾರ್ಯರ ಸಿದ್ಧಾಂತವೇ ಸರ್ವೋತ್ಕೃಷ್ಟ ಸಿದ್ಧಾಂತ ಮುಂತಾದ ವಿಷಯಗಳನ್ನು ಸಮರ್ಥಿಸಿದರು. ಅಧ್ಯಕ್ಷರ ಭಾಷಣ ಧನ್ಯವಾದಗಳೊಡನೆ ಸಭೆಯು ಮುಕ್ತಾಯವಾಯಿತು.

ರಾತ್ರಿ ಭಜನೆಯೊಂದಿಗೆ ಶ್ರೀ ಮಧ್ವಾಚಾರ್ಯರ ಭಾವ ಚಿತ್ರದ ಮೆರವಣಿಗೆಯಾಗಿ ದೇವಪ್ರಸಾದಕ್ಕೆ ಬಂದ ಮೇಲೆ ಅವಶಿಷ್ಟ ಭಜನೆ, ರುದ್ರಾಭಿಷೇಕ, ಅಷ್ಟಾವಧಾನ, ಫಲ ಮಂತ್ರಾಕ್ಷತೆ ಮತ್ತು ಪ್ರಸಾದ ವಿತರಣೆಗಳೊಡನೆ ಅಂದಿನ ಕಾರ್ಯವು ಮುಗಿಯಿತು.

9-2-68ರಲ್ಲಿ ಶ್ರೀ ಕೆ. ವಿಠಲೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶ್ರೀ ಜಿ. ಕೆ. ತಿಮ್ಮಣ್ಣಾಚಾರ್ಯರು ಭಾಷಣಮಾಡಿದರು.

ಭಕ್ತ ಶ್ರೀ ಸೀತಾರಾಮರಾಯರ ಸಾಹುತ್ರರಾದ ಶ್ರೀ ನಾರಾಯಣದಾಸರು, ಇಲ್ಲಿನ ಸಂಸ್ಕೃತ ಕಾಲೇಜಿನ ಅಧ್ಯಕ್ಷರಾದ ಶ್ರೀ ಜಾಲ ಸಾಂಪ್ರದಾಯಿಕ ಶಾಸ್ತ್ರಿಗಳು, ಶ್ರೀ ಕೃಷ್ಣಮಾಚಾರ್ಯರು ಮುಂತಾದ ಶ್ರೀಮತೀಯರಾದ ಅನೇಕ ಪಂಡಿತರುಗಳು ಶ್ರೀ ಮಧ್ವ ಮತದ ವೈಶಿಷ್ಟ್ಯವನ್ನು ಹಲವು ವಿಧದಂದ ಸಮರ್ಥಿಸಿದರು. ಅಧ್ಯಕ್ಷ ಭಾಷಣ, ವಿದ್ವತ್ಸಂಭಾವನೆ ಮತ್ತು ಶ್ರೀ ಸಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಧನ್ಯವಾದದೊಡನೆ ಅಂದಿನ ಸಭೆಯು ಮುಕ್ತಾಯವಾಯಿತು.

Ask for

AZAD

nitbit

BISCUITS

Azad Industries, Mangalore-1

ಆಸೆ ಈಡೇರೀತೇ...?

(ಎರಡನೇ ಪುಟದಿಂದ)

"ಬೇಸ್ರ ಹೇಗೈತೆ ಬಂತು ಬಿಡು...ಈ ವೃತ್ತೀನೆ ಹಾಗೆ?'

"ಯಾಕೆ ಆ ವೃತ್ತೀನೇ ಹಾಗೆ....ಅಂತ ಹೆಚ್ಚಿನ ಹಣ ಸಿಗುವ ವೃತ್ತಿ ಮತ್ತೆ ಯಾವುದಿದೆ ತಾನೇ?"

"ಹೌದೌದು....ಬಾಳೆ ದೊಡ್ಡ ವೃತ್ತಿ ಇದು ಬಿಡು...ಸರಿಯಾಗಿ ಹೆಣ್ಣುಗಳಿದ್ದೆ ಸರಿಯಾದ ಗಿರಾಕಿಗಳೇಗೆ ಬರಬೇಕು ನ ನ್ನಲ್ಲಿಗೆ?"

"ಏನು ನಿನ್ನತಾವ ಈಗ ಒಳ್ಳೊಳ್ಳೆ ಹುಡ್ಗೀರಿಲ್ವಾ?'

"ಇದ್ದಿದ್ರೆ ನಾನ್ಯೇಕೆ ಇಲ್ಲಿಗೆ ಬರ್ತಿದ್ದೇ ಳು" ಎಂದು ತಂದ ಬಂದ ಉದ್ದೇಶಕ್ಕೆ ಪೀಠಿಕೆ ಹಾಕಿದಳು. ಒಸಾಮ್ಮ—"ಇದೇ ಷ್ ನಂನ ಮನೆಕೂಳ್ ಕೊಯಾಕೆ ಬಂ ದ ಶನ"ನೋ ಅಂತ ಸ್ವಲ್ಪ ಗಡಿಬಿಡಿಯಿಂ ದ—"ಇಲ್ಯಾಕೆ ಬಂದ ಬಿಡು, ಏನೋ ನಂಟ್ರು ಮನ...ನಾನಿದ್ದೀನಿ ಅಂತ ನೋ ಡ್ಲೋಗಾಕೆ ಬಂದಿಲ್ವಾ?

"ಅದ್ದೌದು...ನೋಡು ..ಮೈಸೂರಿನ ಲ್ಲಿ ದಸರಾ ಅಂದ್ರು ಬಹಳ ದೊಡ್ಡ ಉತ್ಸ ವ....ಅದ್ಕ ಬೇರ ಬೇರ ಕಡಿಯಿಂದ ಜನ ಬರ್ತಾರೆ.ಅಂತಯೇ ನನಗೂ ಗಿರಾಕಿಗಳು ಸಕ್ರಗ ಹ್ಯಾಗ ಇಂವೆ ಮುತ್ತತ್ತದಯೋ ಹಾಗಯೇ ಮುತ್ತವರು. ಆವಾಗ್ಗ ಒ ಳ್ಳೊಳ್ಳೆ ಹುಂಬುಗಳಲ್ಲದಿದ್ದರೆ ಸುಮ್ನೆ ಮೂಲ ಮ್ಯಾಲ ಉಗಳ್ಕೊಳ್ಳೋದು. ಅ ದ್ಕ ಈಗ್ಗಿಂದಲೇ ಹುಡ್ಗೀರ ಕಾಡಿಸಬೇ ಕು....ಅದ್ಕ ಇಲೆ ಯೂರ್ತ್ಯಾದ್ರ ಒಳ್ಳೆ ಹುಡುಗಯಿದ್ದರ ನಿನ್ನ ಸಮೇಯದಿಂದ ಕರ್ಕೊಂಡು ಹೋಗೋರ ಆಗುತ್ತವನೋ ಅಂತ ಬಂದ ಎಂದು ತಂನ ಬಂದ ಉ ದ್ದೇಶವನ್ನು ಬಾಯ್ಬಿಟ್ಟಿಗೆ ವಿವರಿಸಿದಳು.

ಬಸಮ್ಮ ಸ್ವಲ್ಪ ಶಾಂತಿಯಿಂದ "ಹ್ಞೂಂ ...ಈಗ ಅರ್ಥಾಯ್ತು ಬಿಡು ..ನೋಡು ನೀನೇಳೊ ಕೆಲ್ಸ ಬಹಳ ಸುಲಭ ಎಲ್ಲಿ. ಬಹಳ ಬಿಗಿ, ಇಲ್ಯಾರಿದ್ದಾರೆ ಬಿಡು..."

"ನಿನ್ನ ಸಡಾಯ ಇತ್ತು ಅಂದ್ರೆ ಅದೆ ಲ್ಲ ಏನು ಬಸವಿ?"

"ಅದೆಲ್ಲ ಆಗೋಕಿಲ್ಲ ನೋಡು" ಎಂ ದು ಹೇಳಿ, ಏನೋ ಹೊಳೆದವಳಂತೆ— "ನೋಡು ನಿನ್ನ ನಸೀಬ ಹೆಂಗೈತೋ ಏ ನೋ—ಚಲೊ ಇದ್ರೆ ನಿನ್ನ ಜಾನ್ಸ.... ನೋಡು ಇದೇ ಊರ್ನ ವಿಷ್ಣುಪಂತ ಗು ಮಾಸ್ತರ ಹುಡ್ಗಿ ಒಬ್ಬಿದ್ದಾಳೆ...." ಎಂದ್ರ ಅವರ ಮನೆಯ ಸೂರ್ವಾತಿಯಾನವನ್ನೆ ಲ್ಲ ಹೇಳಿ, ಲತಾಳನ್ನು ಕರೆದುಕೊಂಡು ಹೋಗುವ ಯೋಚನೆಯನ್ನು ಹೂಡಿ ದಳು.

ಂ ಂ ಂ

ಒಂದೆರಡು ದಿನ ಪುಟ್ಟರಂಗಮ್ಮ ಲತಾ ಳನ್ನು ಆನಂದದಿಂದ, ಸಂತೋಷದಿಂದ ಸ್ವಾ ಗತಿಸಿ ಉಪಚರಿಸಿದಳು. ಅಲ್ಲದೆ ಅವಳಿಗ ಆ ವಿದ್ಯೆ (ವೇಶ್ಯಾವೃತ್ತಿ) ಗೊತ್ತಿಲ್ಲದ ಕಾ ರಣ ಎಲ್ಲವನ್ನು ತಿಳಿಸಿದಳು.

ದಸರೆಗಾಗಿಯಿಸಿದ್ದ ಉತ್ಸಾಹ ತರುಣ ರೊಂದಿಗೆ ಮೈ ಒತ್ತಿ ಸುಖದ ಸ್ವಾದವ ನ್ನು ಹೀರಿ, ತನ್ನ ವೃತ್ತಿಯೇ ಸುಖವೆಂ ದು ತಾಯಣ್ಣದ ಮಟ್ಟಸಿಂದ ದಿನದಲ್ಲಿ ಎಷ್ಟೇ ಗಿರಾಕಿಗಳು ಬಂದರೂ ಅವರಿಗ ಶರೀರ ಒಪ್ಪಿಸುತ್ತಿದ್ದಳು.

ಸಾಗಿತು. ಹೀಗೆಯೇ ಅವಳ ದಿನನಿತ್ಯ ದ ಕೆಲಸ—ಸ್ವಲ್ಪ ದಿನ ಅದರಲ್ಲೇ ಕಳೆ ದ ಮೇಲೆ, ಎಲ್ಲವೂ ಅರಿವಾಯಿತು.... ಅವಳು ಬಯಸಿದ್ದ ಆಸೆಯು ಈಡೇರದೇ ವಿಧಿ ಈ ವೃತ್ತಿಯತ್ತ ನೂಕಿತ್ತು. ಅವಳಿ ಗ ತನ್ನ ಬಾಳಿನ ಬಗ್ಗೆಯೇ ಜಿಗುಪ್ಸೆ ಉಂಟಾಯಿತು. ತನ್ನ ಹೀನ ಜೀವನವ ನ್ನು ಕಂಡು ತಾನೇ ಮರುಗುತ್ತಿದ್ದಳು. ಒಳ್ಳೆಯ ಪತಿಯ ಕೈ ಹಿಡಿದು ತಾಯಿ ಯಾಗಿ ಮೆರೆಯಬೇಕೆಂದಿದ್ದವಳು ದಿನಕ್ಕೆ ನೂರಾರು ಪತಂಗಳೊಡನ ಮೈ ಸವಸಿ 'ಸೂಳೆ'ಯಾಗಿದ್ದಳು. ಆದರೂ ಹೊಟ್ಟೆ ಯ ಪಾಡಿಗಾಗಿ ಮತ್ತು ರಂಗಮ್ಮನ ಉದ್ಯೋಗಕ್ಕೆ ಅಡೆತಡೆಗಾಬಾರದೆಂದು ಬಂ ದ ಬಂದವರಿಗೆ ತನ್ನ ಯೌವನವನ್ನು ಅರ್ಪಿಸುತ್ತಿದ್ದಳು....

ಆದರೆ....ಅವಳು ಬಯಸಿದ ಆಸೆ ಮಾತ್ರ ಹುಸಿದಾಗಿತ್ತು. ಅಂತಹ ಆಸೆಯನ್ನು ಬಯಸಿದ ವಾತ್ರಕ್ಕೇ ಅದು ಸಿಗುವದು ಸಾಧ್ಯವಿಲ್ಲ ಎಂಬ ದನ್ನು ವರೆಯದೇ ತನ್ನ ದುರಂತ ಬಾಳನ್ನು ಸಾಗಿಸುತ್ತ ನ ಡೆದಿದ್ದಳು....ಆದರೆ....ಅವಳು ಬಯಸಿದ ಆಸೆ ಅವಳನ್ನು ಅಣಕಿಸುತ್ತಿತ್ತು —'ಆಸೆ ಈಡೇರೀತೇ?' ಎಂದು.

— —

ಪತಿಯೆನಗೆ ಬೇಕು

ಪ್ರೀತಿಗಿಂ ವಿಗಿಲಾದ ಭಾಗ್ಯ ಬೇಡೆನು
ನಾನು
ಪ್ರೇಮದಮೃತವನೀವ ಪತಿಯೆನಗೆ
ಬೇಕು
ಬಡತನದಿ ಸಿರಿತನದಿ ಕೈಬಿಡದೆ ನಡೆಸುವಾ
ಅಕ್ಕರೆಯ ಸಕ್ಕರೆಯ ಪತಿಯೆನಗೆ
ಬೇಕು.
ಹೆಣ್ಣನನ ಕೀಳೆಂದು ಬಗೆವ
ಗಂಡುಗಳಿಹರು
ಹೆಣ್ಣನುನ್ನತಿಯರಿವ ಪತಿಯೆನಗೆ
ಬೇಕು
ಗಂಡು ಹೆಣ್ಣಿಗೆ ಹೊನ್ನು, ಹೆಣ್ಣು ಗಂಡಿಗೆ
ಕಣ್ಣು
ಎಂದು ಅರಿತು ಬಾಳುವ ಪತಿಯೆನಗೆ
ಬೇಕು.
ಮೈ ಮೋಹದತಿಯಾಸೆ, ರೂಪ ಯುವ್ವನ
ದಾಸೆ
ಕ್ಷಣಿಕ ಸುಖವಾಶಿಸುವ ಪತಿಯ
ನಾನೊಲ್ಲೆ.
ಹೂವಿನಿಂ ಹೂವಿಗಲೆದಾಡುವಾ
ದುಂಬಿಗಳ
ತೆರನಿರುವ ಗಂಡಿನೊಡ
ನಾಟನಾನೊಲ್ಲೆ.
ಹೆಣ್ಣಿಗಾಸರೆಬೇಕು ಹೆಣ್ಣು ಗಂಡಿಗು
ಬೇಕು
ಜೊತೆ ಬಾಳವರಿಯುವ ಪತಿಯೆನಗೆ
ಬೇಕು

ಪುರುಷ ಪ್ರಕೃತಿಗೆ ಜೊತೆ, ಜೊತೆಯಾಗಿ
ಇರುವಂತೆ
ಪ್ರೇಮ ಬಂಧನವಿರುವ ಪತಿಯೆನಗೆ
ಬೇಕು.
ನಾಡಿನಾಶ್ರಯದಲ್ಲಿ ನಾಡಿನೇಳಿಗಗಾಗಿ
ಕೂಡಿ ಬಾಳುವ ಬಗೆಯ ಪತಿಯು
ಬೇಕು
ಸುಖ ದುಃಖವರಿತರಲಿ ವಿಚಾರ
ವಿನಿಮಯಬೇಕು
ಒಂದಕ್ಕೆನ್ನೊಂದು ಪೂರಕವೆ ಆಗ
ಬೇಕು.
ಕೋಪತಾಪಗಳಿಂದ ಕಪಟ ಮತ್ಸರದಿಂದ
ಗೋಳು ಪೊಯ್ಯುವ ಹುಂಬ
ಪತಿಯೆ ನಗೆ ಬೇಡ
ಸಕಲ ಸದ್ಗುಣವಂತ, ಹದವರಿತು
ನಡೆವಂತ
ವಿದ್ಯೆ ಬುದ್ಧಿಯನರಿತ ಪತಿಯೆನಗೆ
ಬೇಕು.
ಮಿತಿಯಿಲ್ಲದತಿಯಾಗಿ ಪ್ರೇಮಿಸುವ
ಚಟವುಳ್ಳ
ಪ್ರೇಮ ಪೂಜೆಯ ಕಾಮಿ ಪತಿಯೆನಗೆ
ಬೇಡ
ವಿದ್ಯೆ ಬುದ್ಧಿಯೆ ಸಿರಿಯು, ಸದ್ಗುಣವೆ
ಸೌಂದರ್ಯ
ಹೆಣ್ಣುಮಿದ ಗಂಡುಗಲಿ ಪತಿಯೊಗ
ಬೇಕು.
ಸಕಲ ಶಕ್ತಿಯ ಗಂಡು ಅಬಲೆ ಹೆಣ್ಣಿಗೆ
ಸೋತು
ಶ್ರೋಷಣೆಗೆ ನವೆಯುವುದ ನಾ
ನೋಡಲಾರೆ.
ಅಬಲೆಯೂ ನಾನಲ್ಲ ಸಬಲೆಯಲ್ಲವೆ ಅಲ್ಲ
ಗಂಡನೊಳ ದಾಸ್ಯವನು ನಾ
ಸಹಿಸಲಾರೆ.
ದ್ವಿದಳ ಧಾನ್ಯಗಳಂತೆ ಜೊತೆಯ
ಬಾಳನು ಬಯಸಿ
ಮದುವೆಯಾಗುವ ಗಂಡು ಪತಿಯೊಗ
ಬೇಕು
ಚಲಚಿತ್ರ ನಾಟಕದ ಕೀಳು
ಪ್ರೇಮವನೊಲ್ಲೆ
ನಿತ್ಯ ನಿಶ್ಚಲ ಪ್ರೇಮಿ ಪತಿಯೊಗ
ಬೇಕು.

—ಅನಂತರಾಮ ಯೇತಡ್ಕ.

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone. 261448

The only Qualified optometrist of South

Shetty's Optics & Contact Lens Clinic

London Qualified Optometrists

ಸಿಟಿ ಗೆಸ್ಟ್ ಹೌಸ್ ಸ್ಟ್ರೀಟ್, ಬಾಲ್ಯಾರ್ ಸ್ಟ್ರೀಟ್ ಪೋಸ್ಟ್ ಆಫೀಸಿನ ಎದುರು
ಬೊಂಬಾಯಿ - ೧.

ಲಂಡನ್ ತರಬೇತಾದ ಹಾಗೂ ಜಗದ್ವ್ಯಾಪಿ ಅನುಭವಿಗಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರ್ ಗಳ ಅದೃಶ್ಯ ಭಾಗಗಳಿರುವ 'ಬೈಫೋಕಲ್ಸ್ ಲೆನ್ಸ್'ನ ತಜ್ಞರು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಪ್ರಾಚೀನವಾದ ಆಯುರ್ವೇದ ಔಷಧಿ ಮತ್ತು ದೆಹಲಿ ವೈದ್ಯಕೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

NAVAYUGA 22—2—1968
Registered with the Registrar of News Papers for India under No. R. N. 3546/'57

REGD. No: B. G: 176
LICENCE No. 31
Licensed to Post without Prepayment

ಪುಟ್ಟನ ಪಿಟೀಲು

ಪುಟ್ಟನ ಸಮಸ್ಯೆ

ಬರೆದವರು:
ಶ್ರೀ ಕೆ. ಜೆ. ಸೆಟ್ಟಿ

ದೀಪಾವಳಿಯ ಸಮಯ. ಪುಟ್ಟನ ತಾಯಿ ತುಸು ಕೋಪ ಬಂದವಳಂತೆ ನಟನೆ ಮಾಡಿ ಹೇಳಿದಳು—

"ಅಲ್ಲವೇನೋ ವರ್ಷಕ್ಕೊಮ್ಮೆ ಹಬ್ಬದ ಸಮಯಕ್ಕೂ ಒಂದು ಹೊಸ ಸೀರೆ ತರಲಿಕ್ಕಿಲ್ಲವೇ?...."

"ತರಬೇಕಮ್ಮಾ—ಆದರೆ..." ಪುಟ್ಟ ತಲೆ ಕೆರೆದುಕೊಂಡ.

'ಏನು ಆದರೆ?— ಹಬ್ಬ ಬಂತಲ್ಲ. ಒಂದು ಸೀರೆ ತಂದು ಕೊಡು ನೋಡು ವಾ...'

"ಅಲ್ಲಮ್ಮಾ ಹೆದಲಿಗೆ ಹೋಗಿ ತರ್ತೇನೆ ಅಂದ್ರೆ ಅಂಗಡಿಯಲ್ಲೆಲ್ಲಾ ಯಜಮಾನ್ರು—ಕೆಲ್ಸದವರೆಲ್ಲಾ ಇರ್ತಾರೆ. ರಾತ್ರಿಗೆ ಹೋಗಿ ತರ್ತೇನೆ ಅಂದ್ರೆ, ಅಂಗಡಿಗೆ ಬಾಗಿಲು ಹಾಕಿ ಮೂರು ಮೂರು ಬೀಗ ಜಡಿದೇ ಹೋಗ್ತಾರೆ— ಮತ್ತೆ ಹೇಗೆ ತರುವುದೂಂತ—"

ಪುಟ್ಟನ ಮುಖ ಪ್ರಶ್ನಾರ್ಥಕವಾಗಿತ್ತು. ಮೋಡ ಕವಿದ ಅವಳ ಮುಖ ತಿಳಿಯಾಯಿತು. ಅವಳು ನಕ್ಕು ಒಳಗೆ ಹೋದಳು.

"ನೀನೇ ನೀರು ಬೆರಸಿ"

ಪುಟ್ಟನ ಮನೆಯಲ್ಲಿ ಎರಡು ಎಮ್ಮೆಗಳು. ಅವನ ತಾಯಿ ಹಾಲು ಮಾರುತ್ತಿದ್ದಳು. ಒಂದು ದಿನ ತಾಯಿ ಅಣ್ಣನ ಮನೆಗೆ ಮದುವೆಗಾಗಿ ಹೊರಟಿದ್ದಳು. ಹೊರಡಲು ಹೊತ್ತಾಯಿತೆಂದು ಚಡಪಡಿಸುತ್ತಾ ಹಾಲು ಕರೆದು ತಂದಿಟ್ಟು ಪುಟ್ಟನಲ್ಲಿ ಹೀಗೆಂದಳು—

"ನೋಡಪ್ಪಾ, ಮದುವೆಗೆ ಹೋಗಲು ಹೊತ್ತಾಯಿತು. ಬಸ್ಸು ಹೋದುತ್ತೋ ಏನೋ? ಈ ತಂಬಿಗೆಯಲ್ಲಿ ಹಾಲಿದೆ. ಇದಕ್ಕೆ ಆರು ಕುಡ್ತೆ ನೀರು ಬೆರಸಿ ಪೇಟೆಗೆ ಕೊಂಡು ಹೋಗಿ ಕೊಡು.' ಎಂದು ಅವಸರವಾಗಿ ಹೊಂಟು ಹೋದಳು.

ಪುಟ್ಟ ಹೂಂ ಎಂದಷ್ಟೇ ಹೇಳಿ ಒಳಗೆ ಬಂದ. ಆಕೆ ಮಾಡಬೇಂದು ಪಾತ್ರೆ ಹುಡುಕಿದ. ಸಿಗಲಿಲ್ಲ. ಅಯ್ಯೋ, ಈಗೇನು ಮಾಡಲಪ್ಪಾ ಎಂದು ಪುಟ್ಟ ತಬ್ಬಿಬ್ಬಾದ. ಕೊನೆಗೆ ಸಮಾಧಾನವಾಯಿತು.

ತಂಬಿಗೆಯಲ್ಲಿದ್ದ ಹಾಲನ್ನೂ — ಮತ್ತೊಂದರಲ್ಲಿ ಫಾರನ್ನೂ ಹಿಡಿದುಕೊಂಡು ಪೇಟೆಗೆ ಹೋದ. ಪುಟ್ಟನ ಕೈಯಲ್ಲಿದ್ದ ಎರಡು ಪಾತ್ರೆ ನೋಡಿ, ಸಾಹುಕಾರರು ಆಶ್ಚರ್ಯಗೊಂಡರು.

"ಇದೇನೋ ಇವೊತ್ತು ಎರಡು ತಂಬಿಗೆ ಹಾಲು ತಂದೆ?...."

'ಸ್ವಾಮೀ — ಇವೆರಡೂ ಹಾಲಲ್ಲ. ಒಂದು ಹಾಲು ಇನ್ನೊಂದು ನೀರು."

ರಾಯರಿಗೆ ಆಶ್ಚರ್ಯವೂ ವಿಚಿತ್ರವೂ ಏಕಕಾಲಕ್ಕೇ ಆಯಿತು.

"ಅದೇಕೋ ನೀರು ತಂದೆ?"

'ತಾಯಿ, ಹಾಲಿಗೆ ಆರು ಕುಡ್ತೆ ನೀರು ಹಾಕು ಎಂದು ಹೋಗಿದ್ದಳು. ಅವಸರದಿಂದ ಬೆರಸಿಟ್ಟು ಹೋಗಲಾಗಲಿಲ್ಲ. ಆದರೆ ನಾನು ಮನೆಯೆಲ್ಲಾ ಹುಡುಕಿದರೂ ಅಳೆಯಲು ಪಾತ್ರೆ ಸಿಗಲಿಲ್ಲ. ಅದಕ್ಕಾಗಿ ನೀರನ್ನು ಇಲ್ಲಿಗೇ ತಂದಿದ್ದೇನೆ. ಇದರಿಂದ ಆರು ಕುಡ್ತೆ ನೀರನ್ನು ನೀವೇ ತೆಗೆದು ಬೆರಸಿಕೊಳ್ಳಿ ಸ್ವಾಮಿ....'

ಪುಟ್ಟ ಎರಡೂ ತಂಬಿಗೆಯನ್ನು ಸಾಹುಕಾರರ ಕೈಗಿತ್ತು ನಿರ್ವಿಕಾರವಾಗಿ ನಿಂತುಕೊಂಡ.

ಮಂತ್ರಿಗಳೆಲ್ಲಿ?

ಹೂವ ಲೆಸದ ಮೇಲೋ ಪುಟ್ಟ ಒಮ್ಮೆ ಬೆಂಗಳೂರಿಗೆ ಹೋದ. ಬೆಂಗಳೂರಿಗೆ ಹೋದ ಮೇಲೆ ಮಂತ್ರಿಗಳನ್ನೂ ನೋಡಿ ಬರೋಣವೆಂದು ಮನಸ್ಸಾಯಿತು; ದೇವಸ್ಥಾನಕ್ಕೆ ಬಂದ ಮೇಲೆ ಹಣ್ಣುಕಾಯಿ ಮಾಡಿಸೋಣವೆಂಬ ದೈವೀಕ ಭಾವಪ್ರಜ್ಞೋದಕರಂತೆ. ಮಂತ್ರಿಗಳ ಮನೆ ಎಂದ ಮೇಲೆ ಯಾರಿಗೆ ಗೊತ್ತಿರುವುದಿಲ್ಲ ದಾರಿ?—ಅದ ಮನ್ಸಿಪಲ್ ಮಾರ್ಕೇಟಿನಂತೆ. ಕೇಳಿಕೊಂಡೇ ಬಂದ ಪುಟ್ಟ.

ಎದುರಿನ ದೊಡ್ಡ ಗೇಟು ಮುಚ್ಚಿತ್ತು. ಬದಿಯಲ್ಲೇ ಇದ್ದ ಕಿರಿಗೇಟಿನಿಂದ ಒಳ ಬಂದ. ಮನೆಯ ಎದುರಿನ ಬಾಗಿಲು ಮುಚ್ಚಿತ್ತು. ಕರೆ ಗಂಟೆ ಒತ್ತಿದ ಜೋರಾಗಿ. ಬಾಗಿಲು ತೆರೆದು ಒಬ್ಬಾಕೆ ಕಸಬರಿಕೆ ಹಿಡಿದುಕೊಂಡೇ ಎದುರಾದಳು.

"ಮಂತ್ರಿಗಳೆಲ್ಲಿದ್ದಾರಮ್ಮಾ? ಅವರನ್ನು ಕಾಣಬೇಕಿತ್ತು....' ಪುಟ್ಟ ಪ್ರಶ್ನಿಸಿದ.

"ಅವರು ಊರೊಳಗಿಲ್ಲರೀ—ಕೆಲವು ದಿವಾಯಿತು..."

"ಮತ್ತೆಲ್ಲಿ ಸಮುದ್ರದೊಳಗಿದ್ದಾರಾ?...' ಪುಟ್ಟ ತಕ್ಷಣ ಕೇಳಿದ—ಬಾಗಿಲು ದಢಾರನೆ ಬಿತ್ತು. ತೆರೆದಿಟ್ಟ ಗೇಟನ್ನು ಹಾಗೇ ಮುಚ್ಚಿ ಹೊರಬಂದ ಪುಟ್ಟ.

ಬಾಯೊಳಗೇ ಇದೆ

ಏನೋ ಚಪ್ಪರಿಸುವ ಹಾಗೆ ಕಂಡು ಬಂತೆಂದು, ಒಬ್ಬಾತ ಹುಡುಗನನ್ನು ಗುರುಗಳು ಕೇಳಿದರು.

'ಏನೋ ಅದು ಬಾಯಿಯಲ್ಲಿ?'

"ಏನೂ ಇಲ್ಲ ಸಾರ್' ಎಂದ ಹುಡುಗ ಮತ್ತೆ ಬಾಯಿ ಮುಚ್ಚಿದ. ಗುರುಗಳ ಕುತೂಹಲ ಕೆರಳಿತು.

'ಏನೂ ಇಲ್ಲವೇ?"

"ಇಲ್ಲ'

ಪುಟ್ಟ ತಕ್ಷಣ ಎದ್ದು ನಿಂತು ಹೇಳಿದ —'ಇದೆ ಸಾರ್ ಅವನ ಬಾಯಲ್ಲಿ!....'

"ಏನೂ ಇಲ್ಲವಲಾ....' ಹುಡುಗ ಬಾಯಿ ತೆರೆದು ತೋರಿಸಿದ.

"ಆದೆ! ಮತ್ತೇನೊ ಅದು? ಹಲ್ಲು ಹಾಲಗೆ ಎಲ್ಲಾ ಬಾಯೊಳಗೇ ಇರುವಾಗ ಏನೂ ಇಲ್ಲವೆನ್ನತ್ತಿಯಲ್ಲಾ?....'

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಗಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮನೆಯ ಹೆಂಡತಿಯರು, ದಿಭಾಜಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಗೂಡುವ ವಿಧಾನವು ವಿವರಿಸಲ್ಪಟ್ಟ ಗೃಹಪೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪುಡಿಗತೆಗಳು

೭ ಗೋಪೂನ ವಾರ್ತಾಪ್ರಸಾರ

ನಮ್ಮ ಗೋಪೂ ಇದ್ದಾನಲ್ಲ, ಅವನು ದಿನಾ ರೀಡಿಂಗ್ ರೂಮಿಗೆ ಹೋಗಿ ಬರುತ್ತಾನೆ. ಎಲ್ಲಾ ಪತ್ರಿಕೆಗಳ ತಲೆಬರಹಗಳನ್ನೂ ಓದಿಕೊಂಡು ಬರುತ್ತಾನೆ. ಬಂದು ಮನೆಯವರೊಡನೆ ತಾನು ಸರ್ವ ಸಮಾಚಾರಗಳನ್ನೂ ಬಲ್ಲವನ ಹಾಗೆ ಪಂಟಿಗಟ್ಟಲೆ ಮಾತಾಡುತ್ತಾನೆ. ವ್ಯಾಖ್ಯಾನ ಮಾಡುತ್ತಾನೆ.

"ನಗರದಲ್ಲಿ ಗಲೀಜು ಗಲ್ಲಿಗಳ ಅಭಿವೃದ್ಧಿ" ಎಂಬ ತಲೆಬರಹವನ್ನು ಕುರಿತು ಅವನು ಮನೆಗೆ ಬಂದು ಹೀಗೆ ಸುದ್ದಿಯನ್ನು ಗರಂ ಮಾಡಿಕೊಂಡು ಹೇಳತೊಡಗಿದ: "ಇನ್ನು ಮೇಲೆ ನಗರಗಳೆಲ್ಲೆಲ್ಲಾ ಗಲೀಜು ಗಲ್ಲಿಗಳನ್ನು ತಂಬಾ ನಿರ್ಮೂಲ ಮಾಡುತ್ತಾರಂತೆ. ಸಂದುಗೊಂದಿಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಅಂಗಡಿಯಂದ ಅಂಗಡಿಗೆ ತಿರುಗಾಡುವ ಪ್ರಜೆಗಳು ದೇಹಬಾಧೆಗಳನ್ನು ಸಹಿಸಿಕೊಂಡು ಕಣ್ಣುಕಣ್ಣು ಬಿಟ್ಟು ಹುಡುಕಬೇಕಾಗಿಲ್ಲ. ಇದು ಪಂಚವಾರ್ಷಿಕ ಯೋಜನೆಯಲ್ಲೇ ಸೇರಿಬಿಟ್ಟ ಅಭಿವೃದ್ಧಿ ಕಾರ್ಯದ ಯೋಜನೆಗಳ್ಳ ತುಂಬಾ ಜನೋಪಯೋಗಿ ಯೋಜನೆ....."

'ನಟ ಮನ್ಮಥ ಚಂದ್ರಶೇಖರ ನಟೀರತಿ ಇಂದುಮತಿಗೂ ವಿವಾಹವಾಯಿತು' ಎಂಬ ಸುದ್ದಿಯೊಂದಿಗೆ ಬಂದ ಗೋಪು ಬಹಳ ಆಟ್ಟಹಾಸದಿಂದ ಹೀಗೆಂದ:

"ಕೇಳಿದಿರಾ, ಇಷ್ಟರ ವರೆಗೂ ಮದುವೆಯೇ ಮಾಡಿಕೊಳ್ಳದಿಲ್ಲವೆಂದು ಹೇಳುತ್ತಾ ಇದ್ದ ನಟ ಮನ್ಮಥಚಂದ್ರ ಈಗ ಗಫ್‌ಲಿಫ್ ಅಂತ ಮದುವೆ ಮಾಡಿಕೊಂಡು ಬಿಟ್ಟ. ಇನ್ನು ಅವನು ಸಿನಿಮದಲ್ಲಿ ನಟಿಸುತ್ತಾನೋ ಇಲ್ಲವೋ? ಏಕೆಂದರೆ ಅವನ ಹೆಂಡತಿಯ ಹೆಸರೇ ಪತ್ರಿಕೆಯಲ್ಲಿ ಇಲ್ಲ. ಅದರಿಂದಲೇ ತಿಳಿಯುತ್ತದೆ, ಅವಳು ಒಳ್ಳೇ ಕುಟುಂಬದ ಹುಡುಗಿ ಅಂತ. ಅಂಥವಳು ಗಂಡನನ್ನು ಕಂಡ ಕಂಡ ಹುಡುಗೇರೊಟ್ಟಿಗೆ ನಟಿಸಲಿಕ್ಕೆ ಬಿಟ್ಟಾಳೆ?.... ಇನ್ನೂ ಒಂದು ಹೊಸ ಸಮಾಚಾರ ಇವತ್ತು. ನಟೀರತೀ ಅಂತ ಖ್ಯಾತಳಾದ ಇಂದುಮತಿ ಕೂಡಾ ಯಾವನೋ ಒಬ್ಬ ಪೂರಾಯನ್ನ ಮದುವೆ ಮಾಡಿಕೊಂಡಾಯಿತು. ಅವಳ ಗಂಡನೂ ಒಳ್ಳೆಯ ಕುಟುಂಬದವನಾಗಿರಬೇಕು. ಪತ್ರಿಕೆಯಲ್ಲಿ ಹೆಸರು ಹಾಕಿಸಿಕೊಳ್ಳಲಿಲ್ಲ ಬಿಟ್ಟ. ಅಂಥವ ಇನ್ನು ಮೇಲೆ ಹೆಂಡತಿಯನ್ನು ಸಿನಿಮದಲ್ಲಿ ನಟಿಸಲು ಬಿಡೋದುಂಟೆ? ಅಂತೂ ಎರಡು ತಾರೆಗಳು ಗೃಹಸ್ಥ ಕೋಣೆಯೊಳಗೆ ಹೊಕ್ಕು ಸಿನಿಪೂರಂಗದಿಂದ ಮರೆಯಾದ ಹಾಗಾಯಿತೂ ಅನ್ನಿ....'

—"ನವಗಿರಿನಂದ."

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

29—2—1968

೨೦
ಪೈಸೆ

ಸರಿತಾ

ಬರೆದವರು : ಶ್ರೀ ಕ. ಸಚ್ಚಿದಾನಂದ ಉಡುಪ.

"ಸಚ್ಚೂ...ನೀವು ಈ ರೀತಿ ಕರಟೆ ಗಿರಟೆ ಬರೆಯುವುದಕ್ಕಿಂತ ಒಂದು ಪತ್ರಿಕೆಯನ್ನು ಹೊರಡಿಸಬಹುದಲ್ಲ? ಅದೊಂದು ಬಾರಿ ಸರಿತಾ ನನ್ನಲ್ಲಿ ಕೇಳಿದಳು.

'ಹಾಂ' ಎಂದು ಒಪ್ಪಿಗೆ ಸೂಚಿಸಿದ್ದೂ ಆಯಿತು. ಮೂತುಕತೆಯ ಎರಡು ತಿಂಗಳುಗಳಲ್ಲೇ ನನ್ನದೊಂದು ಪತ್ರಿಕೆ "ಸರಿತಾ" ಪ್ರಕಾಶಗೊಂಡಿತು.

ಅಂದು ನನ್ನ ಪತ್ರಿಕೆಯ ಕಾರ್ಯಾಲಯದಲ್ಲಿ ಕೆಲಸ ಮಾಡಿ ಬೇಸತ್ತು ಮನೆಗೆ ಬಂದೆ. ಸರಿತಾ ಮನೆಯ ವರಾಂದದಲ್ಲಿ ಸೊಂಟಕ್ಕೆ ಕೈಯಿಟ್ಟು ತಲೆತಗ್ಗಿಸಿ ನಿಂತಿದ್ದಳು. ನನ್ನನ್ನು ದೂರದಲ್ಲಿಯೇ ಬರುತ್ತಿದ್ದನ್ನು ಕಂಡು ನನಗೆ ಮುಂದೆ ಹೋಗಲು ದಾರಿಮಾಡಿ ಕೊಡುವಂತೆ ತನ್ನ ನೀಳವಾದ ದೇಹವನ್ನು, ಮತ್ತೂ ಆತ್ಮಕಥೆ ಮಾಲಿಸಿ ತಲೆತಗ್ಗಿಸಿ ನಿಂತಳು. ನನ್ನ ಕಡೆ ನೋಡುವ ಪ್ರಯತ್ನವನ್ನೇ ಮಾಡಲಿಲ್ಲ! ಅವಳ ಬಳಿಗೆ ಬಂದು ಐದಾರು ನಿಮಿಷ ಹೊತ್ತಿನಷ್ಟು ಅವಳ ಬಳಿಯಲ್ಲೇ—ಅವಳ ಕಡೆಗೆನೇ ದೃಷ್ಟಿ ಹಾಯಿಸುತ್ತಾ ನಿಂತೆ. ಬಯಕೆಯ ಮೆಗ್ಗೆ ಆರಳಿ 'ಸರಿತಾಳ ಮೂತನಾಡಿಸೋಣ' ಎಂದು ಮನದಲ್ಲಿಯೇ ಆಶೆಯ ಹಾಸಿದೆ ಹಾಸಿದೆ.

ಮತ್ತೊಮ್ಮೆ—"ಛೆ! ನನ್ನಲ್ಲಿ ಅವಳಿಗೇನು ಮೂತನಾಡಿದರೇ? ನಾನೇನು ಅವಳಿಗೆ ಅಪರಿಚಿತನೇ?" ಎನ್ನುತ್ತಾ ಎರಡು ಹೆಜ್ಜೆಗಳಷ್ಟು ಮುಂದೆ ನಡೆದ.

ಅವಳು ಉಟ್ಟ ಕಂಪು ಸೀರೆ, ಕೆಂಪು ಸೀರೆಯ ಮೇಲೆ ಎರಡು-ಮೂರು ಅಂಗುಲಗಳಷ್ಟು ಪಸರಿದ್ದ ಆ ಹಳದಿ-ಬಿಳಿ ಮಿಶ್ರಿತ ಬಣ್ಣದ ದೇಹ, ಅದರ ಮೇಲೆ ತೊಟ್ಟುಕೊಂಡ ರವಕೆಯನ್ನು ಕಂಡು "ಸರಿತಾಳಲ್ಲಿ ಮೂತಾಡಿಯೇ ತೀರಬೇಕು" ಎಂದು ಪುನಃ ಹಿಂದೆ ಮುಖಮಾಡಿ 'ಯಾವಾಗ ಬಂದೆ ಸರಿತಾ?' ಎಂದೆ

"ಕಿಸ್ನೆ" ಎಂದು ನನ್ನ ಪ್ರಶ್ನೆಗೆ ನಿರುತ್ತರವನ್ನು ಸರಿತಾ ಬಾವಿಯೊಳಗಿಂದ ಕಪ್ಪೆ ಗುಟುರುವಂತೆ ಮಾತು ಹೊರಡಿಸಿದಳು. ಆದರೂ ಅವಳ ಮಾತಿನಲ್ಲಿ ಹಿಂದಿನಂತೆ ಪೂರ್ಣಯರ್ಯ ತುಂಬಿತ್ತು!

'ಅವನೂ ಬಂದನೇ?"

"ಇಲ್ಲ"

"ಎಷ್ಟು ದಿನಾ ಇಲ್ಲಿರುವಿ?"

"ಒಂದು ನಾಲ್ಕಾರು. ದಿನಾ ..."

"ಮತ್ತಾಮ್ಮೆ ಬರುವುದು?...'

"ಯಾಕೆ ಈ ಪ್ರಶ್ನೆ...?'—ಸರಿತಾಳ ಪ್ರಶ್ನೆ

ಇದಕ್ಕೆ ನಾನು ಉತ್ತರಿಸಲು ಅಸಾಧ್ಯನಾಗಿ "ಸರಿ" ಎನ್ನುತ್ತಾ ಮುಂದೆ ನಡೆದ. ಊಟಕ್ಕೆ ಕುಳಿತಾಗ ತಾಯಿ "ಸರಿತಾ, ಗಂಡನ ಮನೆಯಿಂದ ಬಂದಿದ್ದಾಳೆ ಸಚ್ಚೂ...." ಎಂದಳು.

"ಅದಕ್ಕೆ ನಾನೇನೂ ಮಾಡಬೇಕಮ್ಮ ...?" ಎಂದು ಮುಂದ ಮಾತೆತ್ತದೆ ಊಟ ಮಾಡತೊಡಗಿದೆ.

"ಪಾಪ! ಅವಳು ಎಷ್ಟು ಕ್ಷೀಣವಾಗಿ ಬಿಟ್ಟಿದ್ದಾಳೆ?"

'..... ..."

"ಅವಳ ಗಂಡ ಅವಳಿಗೆ ಕಟು ಕೆಲಸಗಳನ್ನು ಕೊಡುತ್ತಿರಬೇಕು. ಅಲ್ವೇ ಸಚ್ಚೂ....' ಎಂದಳು

"ಏನಗೇನು ಗೊತ್ತಪ್ಪಾ!'

"ಏನಗವಳು ಬರುವಾಗ ಸಿಕ್ಕಿದ್ದಳೆ?"

"ಹಾಂ, ಹೌದಮ್ಮ ಮೂತನಾಡಿಸಿದೆ, ಮೂತನಾಡಿದಳು."

ತಾಯಿ ಸರಿತಾಳ ಕುರಿತು ಮತ್ತೂ ಮತ್ತೂ ಏನೇನೋ ವಿವರಿಸುತ್ತಾ ಕುಳಿತಳು. ಆದರೆ ನಾನು ಮಾತ್ರ ಅವಳ ಮಾತಿಗೆ ಒಂದಿಷ್ಟೂ ಗಮನ ಕೊಡದೆ ಊಟ ಮಾಡುತ್ತಾ ಇದ್ದೆ. ನಾನು ಅವಳ ಕುರಿತು ಏನು ಕೇಳುತ್ತಿರಲಿ? ಅದೂ ಅಲ್ಲದೆ, ನನಗೂ ಅವಳಿಗೂ ಇರುವ ಸಂಬಂಧವಾದರೂ ಏನ ?

ಮರುದಿನ ನಮ್ಮ ಮನೆಯ ಹಿಂದುಗಡೆಯ ಬಾವಿಯಿಂದ ಸರಿತಾ ನೀರು ಸೇದಿ ಹೂವಿನ ಗಿಡಬಳ್ಳಿಗಳಿಗೆ ಸಿಂಪಡಿಸುತ್ತಿದ್ದಳು. ನಾನು ಮೆಲ್ಲನೆ ಅವಳ ಕಡೆಗೆ ನಡೆದು "ನನ್ನ ತಾಯಿ, ನೀನು ಬಹಳ ಕ್ಷೀಣವಾಗಿದ್ದೀಯಂತ ರಾಗ ಎಳೆಯುತ್ತಾಳಲ್ಲಾ!' ಎಂದು ಧೈರ್ಯವಾಗಿ ನುಡಿದೆ.

ನಾನು ಅಲ್ಲಿಗೆ ಬಂದುದನ್ನು ಕಂಡು ಸರಿತಾ ತಬ್ಬಿಬ್ಬಾದಳು.

"ತಾಯಿಯೇ ಏಕೆ ಅನ್ನುವುದು? ನೀವೇ ನನ್ನನ್ನು ನೋಡುತ್ತಿದ್ದೀರಲ್ಲಾ?'

'ನನ್ನನ್ನು ಕೀಳು "ನೀವು" ಎಂದು ಸಂಭೋಧಿಸಲು ಕಾರಣ?'

ಮುಂದೆ ಸರಿತಾಳು ನುಡಿಯಲಾರದಾದಳು ಅತ್ತಿತ್ತ ನೋಡುತ್ತಾ ನಿಂತು ಬಿಟ್ಟಳು

"ಯಾರಾದರೂ ನಮ್ಮ ಮಾತುಗಳನ್ನು ಕೇಳುವರು ಎನ್ನುವ ಭಯವೇ? ಸರಿತಾ?' —ನಾನು ನ ಡಿದೆ.

'ಇಲ್ಲ" ಮೆಲ್ಲನೆ ಉತ್ತರಿಸಿದಳು.

"ನಿನ್ನ ಗಂಡ ನಿನಗೆ ಕಷ್ಟದ ಕೆಲಸಗಳನ್ನು ಕೊಡುತ್ತಿರುವುದು ಸಹಜವೇ?'

"ಯಾರು ಹೇಳಿದರು ನಿಮಗೆ?' ಸರಿತಾ ಕೇಳಿದಳು

'ಯಾರೂ ಇಲ್ಲ....ನನ್ನ ಮನಸ್ಸು?

ಸರಿತಾ ಒಂದೇ ಸವನೆ ಬಾಗಿದ ಮುಖವನ್ನು ಮೇಲೆತ್ತಿ ನನ್ನನ್ನೊಮ್ಮೆ ನೋಡಿದಳು. ಅವಳ ಮುಖವು ಆಶ್ಚರ್ಯಭರಿತವಾಗಿತ್ತು. ಮತ್ತೊಮ್ಮೆ ನಕ್ಕು "ಹಾಂ ಅಲ್ಲಾ ಸರಿತಾ ನನ್ನ ತಾಯಿ ಅಂದದ್ದು" ಎಂದೆ.

"ಈ ಪ್ರಶ್ನೆಯನ್ನು ಕೀವು ಕನ್ನಲ್ಲಿ ಕೇಳಬಾರದಾಗಿತ್ತು!"

"ಹಾಂ, ಹೌದು Sorry Saritha, ನಾನು ಕೇಳಬಾರದಾಗಿತ್ತು. Please excuse me" ಎನ್ನುತ್ತಾ ನಾನು ಮನೆಗೆ ಹಿಂದಿರುಗಿದೆ.

ಸರಿತಾ ಅಂದಿನಿಂದ, ಕನ್ನಿಂದ—ನನ್ನ ಮಾತುಗಳಿಂದ ದೂರವಿರಲು ಹವಣಿಸುತ್ತಿದ್ದಳು. ಆದರೆ ನಂತರ ನಾನೂ ಅವಳಲ್ಲಿ ಮಾತನಾಡುವ ಗೋಜಿಗೆನೇ ಹೋದಲೇ ಇಲ್ಲ.

ಮೂರು ವರುಷಗಳ ಹಿಂದೆ ಆ ಬಾವಿಯ ಬಳಿಯಲ್ಲೇ ಇರುವ ಮರದ ಬುಡದಲ್ಲಿ ನನ್ನ ಮಾತುಕತೆಯಾಗುತಿತ್ತು.

"ಸರಿತಾ ನಿನ್ನ ಮದುವೆಯ ವಿಚಾರ ನಿಶ್ಚಯವಾಯಿತೇ?'

"ಹೌದು!'

"ನಿನಗೆ ಆ ಮದುವೆಯಲ್ಲಿ ಒಪ್ಪಿಗೆ ಇದೆಯೇ?' ನಾನು ಕೇಳಿದೆ.

"ಂಭಿರ್ಚಿಯೇನೂ ಇಲ್ಲ ..ಆದರೂ ತಂದೆ-ತಾಯಿಯರ ಮಾತಿಗೆ ನಾನೇನು ಮಾಡಲು ಸಾಧ್ಯ?'

'ನಿನಗೆ ಈ ಮದುವೆಯಲ್ಲಿ ಒಪ್ಪಿಗೆಯಿಲ್ಲಾಂತ ಸೂಚಿಸಬಹುದಲ್ಲಾ"

"ಹಾಗೆಂದರೆ ನೀವು ನನ್ನನ್ನು ಮದುವೆ ಮಾಡಿಕೊಳ್ಳುವಿರಿ ಎಂದು ಅರ್ಥವೇ?'

ಈ ಪ್ರಶ್ನೆಗೆ ನಾನು ಆ ಕೂಡಲೇ ಉತ್ತರ ನೀಡಲು ಅಸಾಧ್ಯವಾದೆ. 'ಹಾಂ' ಉತ್ತರ ಕೊಡ ಬಯಸಿದರೂ ಬಾಯಿಯಿಂದ ಮಾತುಗಳು ಹೊರಡದಾದವು. ಯಾಕೆ? ನಾನು ಹೇಡಿ. ತಂದೆಯ ಅಪ್ಪಣೆಯ ಕೆಲಸಗಳ ವಿನಾ ಬೇರಾವ ಕೆಲಸಕ್ಕೆ ಕೈ ಹಾಕುವ ಜನ ನಾನಲ್ಲ!

ಅಂತೂ ಅವಳು ಮತ್ತೊಬ್ಬನನ್ನು ಮದುವೆಯಾಗುವಳೆಂದು ಒಪ್ಪಿಗೆಯಾದ ನಂತರ ನಾನೇನು ಸೂಚಿಸಲಿ? ಎಂದು ನಾನು ಸುಸ್ತಾದೆ ಅನಂತರವೂ ಅವಳು ಈ ಮದುವೆಯ ವಿಚಾರದಲ್ಲಿ ಮಾತನಾಡಲೂ ಇಲ್ಲ.

ಅಂದು ಸರಿತಾಳ ಕಣ್ಣಗಳಿಂದ ಧಾರು ಉದುರುತ್ತಿದ್ದವು. ನಾನೂ ಮರುಗಿ 'ಸರಿತಾ, ಅಳಬಾರದು! ನೀನು ನನ್ನವಳೇ ಎಂದು ತಿಳಿದುಕೋ, ನೀನು ಎಂದೆಂದಿಗೂ ನನ್ನವಳಾಗಿಯೇ ಇರುವಿ. ನನ್ನ ಮಾತನ್ನು ನಂಬಿಕೋ' ಎಂದು ಅವಳ ಕಣ್ಣೀರನ್ನು ಒರಸುತ್ತಾ ಆ ಶ್ವಾಸನೆ ಕೊಟ್ಟೆ.

ಮಗುದೊಮ್ಮೆ ತಾಯಿ ಜೊತೆ ಮನೆಗೆ ಬಂದಾಗ ಅವಳ ಮುಖದ ಮೇಲಿನ ಚರ್ಮವು ಹಳದಿ ಬಣ್ಣದಿಂದ ಶೋಭಿಸುತಿತ್ತು. ಕಾರಣ ಆ ದಿನ ಅಭ್ಯಂಗನ ಸ್ನಾನ ಮಾಡಿದ್ದಾಳೋ ಏನೋ. ತಲೆ ಕೂದಲನ್ನು ಉದ್ದವಾಗಿ ಬಿಟ್ಟು ಕೊಂಡಿದ್ದಳು. ಒಂದು ಎಲೆ ಸಹಿತ ಮಲಾಬಿ ಹೂ ಆ ಕಾಡಿಗೆಯಂತಹ ಕಪ್ಪು ಬಣ್ಣದ ಶಿರದಲ್ಲಿ ಬಂಗಾರದ ಸರ ಮಾಲೆಯಲ್ಲಿ ಶೋಭಿಸುತ್ತಿರುವ ಮುತ್ತಿನಂತೆ ಗೋಚರಿಸುತಿತ್ತು.

ನಾನು ಅವಳನ್ನೊಮ್ಮೆ ದೃಷ್ಟಿಸಿದೆ. ನಾನು ನೋಡುವ ಮೊದಲು ಅಲ್ಲೇ ತುಂಬಾ ಹೊತ್ತು ಅಳುತ್ತಾ ನಿಂತಿದ್ದಳೋ ಏನೋ?

"ನಾಳೆ ನನ್ನ ಮದುವೆ!' ಸರಿತಾ ಧೈರ್ಯವಾಗಿ ನುಡಿದಳು.

ಸರಿತಾಳ ಮಾತುಗಳನ್ನು ಕೇಳುತ್ತಿರುವಾಗಲೇ ನನ್ನ ಮನಸ್ಸಿಗೆ ತುಸು ನೋವಾಯಿತು. ನನ್ನನ್ನು ನಾನು ಸ್ಪರಿಸಿಕೊಂಡು ಬಾಯಿಯಿಂದ ಮಾತು ಹೊರಡುವ ಮೊದಲು 'ನನ್ನ ಪತಿಯೂ ನಿಮ್ಮಂತೆ ಸಹೃದಯದಿಂದ ಬೆಳಗಲಿ—ಎಂದು ಆಶೀರ್ವಾದ ಬೇಡಲು ನಿಮ್ಮಲ್ಲಿಗೆ ಬಂದಿದ್ದೇನೆ' ಎನ್ನುತ್ತಾ ಕನ್ನ ತಾಲು ಮಟ್ಟಿ ಕಮಸ್ಕರಿಸುತ್ತಾ ಕೇಳಿಕೊಂಡಳು.

'ಏನು ನಾನು ಸಹೃದಯಿಯೇ?" ಎಂದು ನನ್ನಲ್ಲಿಯೇ ನಾನು ಪ್ರಶ್ನಿಸಿದೆ. ಮತ್ತೊಮ್ಮೆ ಅವಳ ಶಿರದ ಮೇಲೆ ಕೈಯಿಟ್ಟು ಆಶೀರ್ವದಿಸಿದೆ. ಈ ನೇಳೆ ನನ್ನ ಕಂಠೇರ ಹನಿಗಳು ಇವಳ ತಲೆ ಮೇಲೆ ಬಿದ್ದವು.

o o o

(ಹನ್ನೊಂದನೇ ಪುಟ ನೋಡಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪ್ರಯಾಣಿಕರಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ನವಯುಗ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೬	೨೯—೨—೧೯೬೮	No. 26

ನಾವೇ ನಾಗರಿಕರು

ಕರ್ನಾಟಕದ ವಿಧಾನ ಸಭೆಯು ಆರಂಭದಲ್ಲೇ ಗೊಂದಲ—ಗಲಭೆಗಳಿಗೆ ಕಾರಣವಾಯ್ತು. ರಾಜ್ಯಪಾಲರ ಭಾಷಣಾರಂಭಕ್ಕೆ ಮೊದಲೇ ವಿರೋಧಿ ಪಕ್ಷಗಳು ಸಭಾತ್ಯಾಗ ಮಾಡಿದರು. ಸ್ವತಂತ್ರ ಭಾರತದ ವಿಧಾನ ಸಭೆಗಳು, ಸಂಸತ್ತುಗಳಲ್ಲಿ ನಡೆಯುತ್ತಿರುವ ಸಭಾತ್ಯಾಗಗಳ ಸಂಖ್ಯೆಯನ್ನು, ಅವುಗಳ ಕಾರಣವನ್ನು ತಿಳಿಯುವಾಗ, 'ಸಭಾತ್ಯಾಗ'ವು ತನ್ನ ಬೆಲೆಯನ್ನೇ ಕಳೆದುಕೊಂಡಿದೆಯೆಂದು ಯೂರಾದರೂ ಹೇಳಬಹುದು. ವಿದ್ಯಾರ್ಥಿಗಳಲ್ಲಿ ಅಶಿಸ್ತು ಸಾರ್ವಜನಿಕರಲ್ಲಿ ಬೇಜವಾಬ್ದಾರಿ ಮತ್ತು ಶಾಸಕರಲ್ಲಿ ಸಭಾತ್ಯಾಗಗಳು ಮನೆಮಾತಾಗಿವೆ ಇಂದು. ಕರ್ನಾಟಕದ ಶಾಸನ ಸಭೆಯ ಉದ್ಘಾಟನೆಯಾಯಿತು. ಮುಂದೆ ನಡೆದದ್ದೇನು? ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಗೊಂಡುದರಿಂದ ಯಾವುದಾದರೊಂದಕ್ಕೆ ರಾಜಿನಾಮೆ ನೀಡಬೇಕು ಎಂಬ ಹೇಳಿಕೆ—ಕೇಳಿಕೆ, ಆಗ್ರಹ — ಮುಂದುವರಿದು ಗದ್ದಲ-ಗೊಂದಲ. ಅದೂ ಮೊದಲ ದಿನದಲ್ಲಿ ನಿಜಲಿಂಗಪ್ಪನವರೇ-ಕೇಂದ್ರ ವ್ಯಕ್ತಿಯೇ ಸಭೆಯಲ್ಲಿ ಅಪಹಸ್ಯತಾರುವಾಗಿ ವಿರೋಧಿ ಪಕ್ಷಗಳು ಅಭಿಪ್ರಾಯವನ್ನು ಮುಖ್ಯ ಮಂತ್ರಿಗಳಿಗೆ ತಿಳಿಸಬಹುದು; ರಾಜ್ಯದ ಹಿತದೃಷ್ಟಿಯಿಂದ ಸಲಹೆ ನೀಡಬಹುದು. ಆದರೆ, ಅದಕ್ಕಾಗಿ ಅವರ ಮೇಲೆ ಒತ್ತಾಯ ಸಲಾತ್ಯಾರ ತರುವುದು ನ್ಯಾಯವಾಗದು. ಯಾವ ಪದವಿಯನ್ನು ತ್ಯಜಿಸಬೇಕು, ಅಥವಾ ಎರಡನ್ನೂ ಇಟ್ಟುಕೊಳ್ಳಬೇಕೇ ಎಂದು ಗೊತ್ತು ಮಾಡುವ ಅಧಿಕಾರ ನಿಜಲಿಂಗಪ್ಪ ಮತ್ತವರ ಪಕ್ಷಕಾಂಗ್ರೆಸ್‌ಗೆ ಸೇರಿದ ಸಂಗತಿ. ಇದರಲ್ಲಿ ಮತ್ತಾರೂ ಕೈ ಹಾಕಲು ಅವಕಾಶವಿಲ್ಲ.

ಮುಖ್ಯಮಂತ್ರಿಯವರು ಕಾಂಗ್ರೆಸ್ ಅಧ್ಯಕ್ಷರಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚಿನ ಗಮನ ನೀಡಲು ಅನುಕೂಲವಾಗುವುದಿಲ್ಲ, ರಾಜ್ಯಕ್ಕಿರುವ ವಿವಿಧ ವಿವಾದಗಳಲ್ಲಿ ನ್ಯಾಯದ ಪಕ್ಷ ಹಿಡಿಯಲು ಕಷ್ಟವಾಗುವುದು—ಎಂದು ಮುಂತಾದ ದೂರುಗಳನ್ನು ಪೂರ್ಣ ಅಲ್ಲಗಳೆಯುವುದಾಗುವುದಿಲ್ಲ. ಉದಾಹರಣೆಗಾಗಿ ಮಹಾಜನ ವರದಿಯ ಮೇಲೆ ರಾಜ್ಯದ ವಾದವನ್ನೆ ಕೇಂದ್ರದ ಮುಂದೆ ಮಂಡಿಸುವಲ್ಲಿ ಈ ಅಧ್ಯಕ್ಷತೆಯ ಬೇಡನೆಂದರೂ ಅಡ್ಡಬಂದೇ ಬರುತ್ತದೆ. ನದೀ ನೀರಿನ ವಿವಾದ, ಭಾಷಾ ಚಳುವಳಿಯ ಪೆಡಂಭೂತ,—ಇವೇ ಮೊದಲಾದ ಸಮಸ್ಯೆಗಳನ್ನೂ ಪರಿಹಾರಗೊಳಿಸುವಲ್ಲಿ ಈ ದ್ವಂದ್ವ ಬೇಡವೆಂದರೂ ಅಡ್ಡ ಬರುತ್ತದೆ. ಈಯೆಲ್ಲವನ್ನೂ ಅರಿತುಕೊಂಡು ಕಾಮರಾಜರು ಆಗಲೇ ಅಂದದ್ದು — ಮುಖ್ಯ ಮಂತ್ರಿಪದ ತ್ಯಜಿಸಬೇಕು ಅಂತ. ಆದರೆ, ಯಾವ್ಯಕಾನೂನೂ ಉಭಯ ಪದಗಳಲ್ಲಿ ಮುಂದುವರಿಯಲು ಅಡ್ಡಬರುವುದಿಲ್ಲ. ಆದುದರಿಂದ ವಿರೋಧಿ ಪಕ್ಷಗಳ ಆಶಯವೇನೋ ಉಚ್ಚಮಟವಾದದ್ದು, ಆದರೂ, ಇದನ್ನು ಮಂಡಿಸಿದ ರೀತಿ, ಮಾತ್ರ ಸರಿಯಲ್ಲ. ಕೊನೆಗೆ ಸೂಚಿಸಿದಂತೆ— 'ನೀವೂ ಮಾನವರು, ಯಾವುದಾದರೊಂದಕ್ಕೆ ರಾಜಿನಾಮೆ ನೀಡಿಸಿ' ಎಂಬ ವಿನಯ ಆರಂಭದಲ್ಲೇ ತೋರಿಸಿದ್ದರೆ, ಇನ್ನೂರಕ್ಕೂ ಮೀರಿದ ವಿಧಾನ ಸಭಾಸದರ ಎರಡು ದಿನ ಉಳಿಯುತಿತ್ತು; ಅಷ್ಟು ಜನರ ಅಷ್ಟು ದಿನದ ಭತ್ತೆ ಅನಾವಶ್ಯಕವಾಗಿ ಹಾಳಾಗುವುದು ಉಳಿಯುತಿತ್ತು. ವಿಧಾನ ಸಭೆಯ ವಾತಾವರಣವೂ ಶಾಂತವಿರುತಿತ್ತು.

ಶಾಸಕರು ರಾಜ್ಯದ ಹಿತಚಿಂತನೆಯನ್ನು ಮಾಡುವವರು; ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳಲು ಸಹಕಾರ ನೀಡಬೇಕಾದುದು ಅವರ ಧರ್ಮ. ಭಾಷಾ ಚಳುವಳಿಯ ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದನ್ನು ನಾಯಕರಿಗೂ ಹಿರಿಯರಿಗೂ ಬಿಟ್ಟುಕೊಟ್ಟು ವಿದ್ಯಾರ್ಥಿಗಳು ಕಾಲೇಜುಗಳಿಗೆ ಮರಳಬೇಕು ಎಂದು ಹೇಳುತ್ತಾರೆ ಅರಿತವರು. ಚಳವಳ ಆರಂಭಿಸಿ ಸರಕಾರದ ಗಮನವನ್ನು ಸಮಸ್ಯೆಯತ್ತ ಎಳೆದಿದ್ದೀರಿಯೆಂದೂ ಅವರ ಬೆನ್ನು ತಟ್ಟುತ್ತಾರೆ. ಇದೇ ರೀತಿ ನಿಜಲಿಂಗಪ್ಪನವರು ಎಂಡೂ ಪದಗಳಲ್ಲಿ ಮುಂದುವರಿಯುವುದು ತಮಗೆ ಇಷ್ಟವಿಲ್ಲವೆಂಬತ್ತ ಕಾಂಗ್ರೆಸ್‌ಗೆ ಗಮನ ಸೆಳೆದರೆ ಸಾಕಿತ್ತು, ಅದಕ್ಕಾಗಿ ಅಧ್ಯಕ್ಷತೆನ್ನು ತ್ರಿಶಂಕುವಿಗೆ ಅಟ್ಟು ಬೇಕಾದ ಅಗತ್ಯವಿಲ್ಲ. ಇದಕ್ಕೆ ಮೊದಲೂ ನಮ್ಮ ವಿಧಾನ ಸಭೆಯಲ್ಲಿ ಗೊಂದಲಗಳು ನಡೆದಿವೆ. ಪಶ್ಚಿಮ ಬಂಗಾಳ ವಿಧಾನ ಸಭೆಯೊಡನೆ ಹೋಲಿಸುವಾಗ ನಾವೆನ್ನೂ ತುಂಬ ನಾಗರಿಕತೆಯನ್ನು ಉಳಿಸಿಕೊಂಡಿದ್ದೇವೆ — ಇದೇ ದೇವಗೊಂದು ಅಭಿಮಾನ.

ಇದಾವ ನಿಷ್ಠೆ?

ತಮಿಳುನಾಡಿನಲ್ಲೀಗ ಒಳಿಯು ಚಳುವಳ ಮತ್ತೆ ಹುನರಾರಂಭವಾಗಿದೆಯೆಂದು ಮನವರಿಕೆ—ಇದರಿಂದ ಮುಖ್ಯಮಂತ್ರಿ ಅಣ್ಣಾದುರೈಗೆ (ಅದಕ್ಕಿಂತ ಹೆಚ್ಚಾಗಿ ಇಂದಿರಾ ಗಾಂಧಿಗೆ) ತಲೆತುರಿಕೆ! ಹಿಂದೆ ಪ್ರತ್ಯೇಕ ದ್ರವಿಡ ಸ್ಥಾನ ಕಟ್ಟುವ ಕನಸು ಕಾಣುತ್ತಿದ್ದವರು ಮುಂದದಕ್ಕೆ ಮರ್ಗ ಹಸನುಗೊಳಿಸಲೋ ಎಂಬಂತೆ ತಮ್ಮ ಪ್ರತ್ಯೇಕತೆಯ ನೀತಿಯನ್ನು ಬಿಟ್ಟು ಕೊಟ್ಟು ಡಿಎಂಕೆಯನ್ನು ಸೇರಿದ್ದನ್ನು ನೆನಪಿಸಬಹುದು. ಇಂದು ಡಿಎಂಕೆ ಮದ್ರಾಸದಲ್ಲಿ ಬಲವಾಗಿ ಬೇರುಬಿಟ್ಟಿದೆ. ಹಿಂದೀ ಭಾಷೆಯ ವಿರುದ್ಧವಾಗಿ ಸರಕಾರವೇ ಉಗ್ರ ಕ್ರಮಗಳನ್ನು ಕೈಗೊಂಡಿರುವಾಗ, ರಾಜ್ಯವಾಸಿಗಳೂ ಹಿಂಸಾತ್ಮಕತೆಕ್ಕೆ ತೊಡಗಿದುದು ಅಸಹಜವೆಂದು ಹೇಳುವಂತಿಲ್ಲ. ಇದೀಗ, ಕಾಲೇಜ್ ವಿದ್ಯಾರ್ಥಿಗಳು ಸ್ವತಂತ್ರ ತಮಿಳುನಾಡಿನ ಕನಸು ಕಂಡು ತಮ್ಮದೇ ರಾಷ್ಟ್ರ ಧ್ವಜ, ರಾಷ್ಟ್ರ ಗೀತೆಗಳನ್ನು ಪ್ರಚಾರಕ್ಕೆ ತರುವ ಆಂದೋಲನ ಆರಂಭ ಮಾಡಿದ್ದಾರೆ. ಭಾರತದ ರಾಷ್ಟ್ರ ಧ್ವಜ—ರಾಷ್ಟ್ರ ಗೀತೆ—ಸಂವಿಧಾನಗಳನ್ನು ಶವದ ಪೆಟ್ಟಿಗೆಯಲ್ಲಿ ಭದ್ರವಾಗಿಡುವ ದಿನವನ್ನವರು ಗಣಿಸುತ್ತಿರಬಹುದು. ಅಲ್ಲಿನ ಡಿಎಂಕೆ ಸರಕಾರವು ಇದನ್ನು ಬಹಿರಂಗವಾಗಿ ಖಂಡಿಸುತ್ತದೆ ನಿಜ. ಆದರೆ, ತಮ್ಮ ರಾಜ್ಯದಲ್ಲಿ ಇಂಗ್ಲಿಷ್ ಅಥವಾ ತಮಿಳಿನಲ್ಲಿ ಅಚ್ಚು ನೀಡುವ ಆದೇಶ ಬರುವ ತನಕ ಎನ್ ಸಿ ಸಿ, ಎಸಿಸಿಗಳನ್ನೇ ಸ್ಥಗಿತಗೊಳಿಸಿದ ವೀರ ಅಣ್ಣಾದುರೈಯ ಅಂತರಂಗ ಹೇಳಿಕೊಳ್ಳಬಹುದು ಭಾರತ ನಿಷ್ಠವಿದೆಯೆಂದು ಹೇಳುವುದು ಸಾಧ್ಯವಿಲ್ಲ. ಭಾಷಾ ಚಳುವಳಿಯನ್ನು, ಅರಾಷ್ಟ್ರೀಯ ಕೃತ್ಯಗಳನ್ನು ಅವರು ಎದುರಿಸಿದ ರೀತಿ ಸಮರ್ಥನೀಯವಾಗಿಲ್ಲ. ಹೀಗೆ ಮದ್ರಾಸದಲ್ಲಿ ಸ್ವತಂತ್ರ ತಮಿಳುನಾಡು ಕೇರಳ, ಬಂಗಾಳಗಳ್ನೆ ಪರತಂತ್ರ ಚೈನಾ ನಾಡು ಅಸ್ಸಾಮದಲ್ಲಿನ ನಾಗಾಲ್ಯಾಂಡಿನೊಡನೆ, ಮಿಜೋಲ್ಯಾಂಡ್ — ಕಾಶ್ಮೀರದಲ್ಲಿ ಶೇಖಲ್ಯಾಂಡ್ ಕಚ್ಚಿನಲ್ಲಿ ಪಾಕೇಲ್ಯಾಂಡ್..... ಒಂದೊಂದೇ ಲ್ಯಾಂಡ್ ನಾಡುಗಳ ನಿರ್ಮಾಣಕ್ಕೆ ಆರಂಭವಾದರೆ, ಮತ್ತೆ ಒಂದೇ ದೇಶ — ಒಂದೇ ಜನವೆಂಬ ನಮ್ಮ ಘೋಷಣೆ ಬರಿಯ ಘೋಷಣೆಯಾಗಿಯೇ ಉಳಿಯುವುದು — ಕಾಲುಜಾರಿ ಹಳ್ಳಕ್ಕೆ ಬಿದ್ದ ಮೇಲೆ ಎಚ್ಚರಾಗುವುದಕ್ಕಿಂತ ಪರಿಸ್ಥಿತಿಯನ್ನು ಆರಂಭದಲ್ಲೇ ಎದುರಿಸಬೇಕು. ಶತ್ರುವು ಬಾಲಕನಾಗಿದ್ದರೂ ಅತನನ್ನು ಕೊಂದುಬಿಡಬೇಕು—ಅರಾಷ್ಟ್ರೀಯತೆಯ ಬೀಜವನ್ನು ಮೊಳೆಯುವುದಕ್ಕೆ ಮೊದಲೇ ಸುಟ್ಟು ತೆಗೆಯಬೇಕು.

ಮುಖ ಚಿತ್ರ

ಅಫ್ಘಾನ್ಯದ ಪತ್ರಕರ್ತರಿಗೆ ತರಬೇತಿ ಕೇಂದ್ರವನ್ನು ಹಂಗೇರಿಯ ಪತ್ರಕರ್ತರ ಸಂಘವು ನಡೆಸುತ್ತಿದೆ. ಚಿತ್ರದಲ್ಲಿ ಅಫ್ಘಾನದ ತರಬೇತಿದಾರರು ಪ್ರಶಸ್ತಿಪತ್ರವನ್ನು ಪಡೆದುತ್ತಿರುವುದನ್ನು ಕಾಣಬಹುದು.

ವಿವಾಹ ಸಮಾರಂಭಗಳು

ಬ್ರಹ್ಮಾವರ ಮೂಡುಗಡಿ ಶ್ರೀ ಪದ್ಮನಾಭ ವಾರಂಬಳ್ಳಿಯವರ ಪುತ್ರ ಶ್ರೀ ಬಿ. ಸುನಾಗರಾಜ ವಾರಂಬಳ್ಳಿಯವರು ಕೋಟ ಹೇರೆದೇವಸ್ಥಾನದ ಶ್ರೀನಿವಾಸ ಭಟ್ಟ ಪುತ್ರಿ ಚಿ| ಸೌ| ಜಯಲಕ್ಷ್ಮಿಯನ್ನು ತಾ. 17-2-68ರಂದು ವಧುವಿನ ಗೃಹದಲ್ಲಿ ವಿವಾಹವಾದರು.

ಶ್ರೀ ವಡ್ಡರ್ಸೆ ಪರಮೇಶ್ವರ ಹೊಳ್ಳರ ಪುತ್ರ ಶ್ರೀ ಶಿವರಾಮ ಹೊಳ್ಳರು (ಬೆಂಗಳೂರಿನ ಸುನೋಲಾಜಾನ ಎಂಟರ್ ಪ್ರೈಸಸ್‌ನ ಮಾಲಕರು) ದಿ| ಶ್ರೀ ವಾರಂಬಳ್ಳಿ ವಾಸುದೇವ ಪಾತಾಳರ ಪುತ್ರಿ ಸೌ ರತ್ನಾವತಿಯನ್ನು ತಾ. 23-2-68ರಂದು ಬೆಂಗಳೂರಿನ ಪೆಬ್ಬರ್ ಶ್ರೀ ವೈಷ್ಣವ ಸಭಾ ಕಲ್ಯಾಣ ಮಂಟಪದಲ್ಲಿ ವಿವಾಹವಾದರು. ಸಂಜೆ ಈ ಸಂಬಂಧ ಸತ್ಕಾರ ಸಮಾರಂಭವೊಂದನ್ನು ನಿರ್ವಹಿಸಲಾಗಿತ್ತು.

ವಚನ ಸುಧೆ

ಶ್ರೀಮಂಗಲಾರ್ಥ ಪ್ರಭವತಿ
ಪ್ರಗಲ್ಭಾತ್ಮಾ ಸಂಪ್ರವರ್ಧತೇ
ದಾಕ್ಷಾತ್ಕೃತ್ತು ಕುರುತೇ ಮೂಲಂ
ಸಂಯಮೋಽಪಿ ಪ್ರತಿಷ್ಠತಿ ॥

ಶುಭಕರ್ಮಗಳಿಂದ ಭಾಗ್ಯದ ಲಕ್ಷ್ಮಿ ಹುಟ್ಟುತ್ತಾಳೆ, ಪ್ರಗಲ್ಭತೆಯಿಂದ ಅವಳು ಬೆಳೆಯುತ್ತಾಳೆ, ಚತುರತೆಯಿಂದ ಬೇರು ಬಿಡುತ್ತಾಳೆ; ಸಂಯಮದಿಂದ ಭದ್ರವಾಗಿ ನೆಲೆನಿಲ್ಲುತ್ತಾಳೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 667/67

ವಾದಿ: ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಕುಂದಾಪುರ.

ಪ್ರತಿವಾದಿಗಳು: ಸುಬ್ಬಯ್ಯ ಶೆಟ್ಟಿ ಕೂಡಾ.

ಕುಂದಾಪುರ ತಾಲ್ಲೂಕ ಕನ್ಯಾನ ಗ್ರಾಮದ ಬೆದ್ರಕೆರೆಯಲ್ಲಿರುವ ಮೇಲಣ ದಾವೆಯ 1ನೇ ಪ್ರತಿವಾದಿ ಸುಬ್ಬಯ್ಯ ಶೆಟ್ಟಿ, 2ನೇ ಪ್ರತಿವಾದಿ ಅಣ್ಣಪ್ಪ ಶೆಟ್ಟಿ, 3ನೇ ಪ್ರತಿವಾದಿ ಕಂಯಣ ಶೆಟ್ಟಿ, 4ನೇ ಪ್ರತಿವಾದಿ ಸುಬ್ಬಕ್ಕ ಶೆಟ್ತಿ ಕೂಡಾ 4 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ: —

ನಿಮ್ಮಿಂದ ಕಳೆದ ಕ್ರೋಧಿ ಸಂವತ್ಸರದ ಮಾಘ ಬಹುಳ 30ಕ್ಕೆ ಬಾಕಿ ಚಾಲನೇಗೆ ಗೇಣಿ ಬಾಕಿ ವಸೂಲಿ ಕುರಿತು ವಾದಿ ಮಾಡಿದ ಮೇಲಣ ದಾವೆ ತಾ. 22-3-68ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುತ್ತದೆ. ಆ ದಿನ ನೀವು ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಕೊಡಲಿಕ್ಕೆ ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ದಾವೆಯನ್ನು ಏಕಪಕ್ಷವಾಗುವುದೆಂಬ ಸಂಗತಿಯನ್ನು ನಿಮಗೆ ಈ ಮೂಲಕ ತಿಳಿಯಪಡಿಸಲಾಗಿದೆ.

(By order of the Court)

(Sd.) Narayan Rao,
Advocate for the Plff.

Coondapoor, 24—2—68.

ನರಸಣ್ಣನ ಸರಸ

'ಪ್ರಧಾನಿ ಮಗ ವಿದೇಶಿ ಹುಡುಗಿಯನ್ನು ಮದುವೆಯಾದ; ಉಭಯ ಸಂಸ್ಕೃತಿಗಳ ಸಮ್ಮಿಳನದಿಂದ ಹೊಸ ಸಂಸ್ಕೃತಿಯೊಂದು ಆರಂಭವಾಗುವುದನ್ನೇ ಕಾಯುತ್ತಿದ್ದೇನೆ....?

ಗೇಹರಾಜ್ಯದಲ್ಲಿ

ನಾಲ್ಕು ಮಳೆಗಾಲ ಕಳೆಯೋದ್ರೊಳ್ಗೆ....?

"ಕೇಳಿದ್ಯೇನೇ, ನಮ್ಮ ಜನತಾ ಪ್ರತಿನಿಧಿಗಳು ಎರಡು ದಿವ್ಸ ಬಿಟ್ಟಿಯೋಗೇ ಭತ್ತೆ ಪಡೆದ್ರಂತಲ್ಲಾ?"

'ಅಂದ್ರೇನವ್ರು ಸುಂಸುಮ್ನೇ ಕಂತಿದ್ರೇನು?'

"ಹಾಗೇನಿಲ್ಲಾನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪಡೆಯಗೊಡದೆ ನಿಜಲಿಂಗಪ್ಪನವ್ರು ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದಾರೆ, ರಾಜ್ಯದ ಮುಖ್ಯ ಮಂತ್ರಿಗಳೂ ಆಗಿದ್ದಾರೇಂತಲ್ಲಾ ಅದರಿಂದಾಗಿ ಅವ್ರೊಂದಕ್ಕೆ ರಾಜಿನಾಮೆ ನೀಡಬೇಕೆಂದೂ ಗೊಂದಲ ಎಬ್ಬಿಸುತ್ತಾನೇ ಕಳೆದ್ರಂತೆ....'

"ಅಲ್ರಿ, ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದರೆ, ಅವ್ರಿಗೇನಂತೆ?"

"ಎರಡೂ ಹುದ್ದೆಗಳಲ್ಲಿದ್ದು ಕಾರ್ಯನಿರ್ವಹಿಸುವುದು ಒಬ್ಬನಿಂದ ಸಾಧ್ಯವಿಲ್ಲ—ಅದುದರಿಂದ ಒಂದನ್ನು ಬಿಡಿ, ಎನ್ನುತ್ತಾರೆ ಅವರು...."

"ಅಲ್ರಿ, ಒಬ್ಬನಿಗೆ ಸಾಧ್ಯವಿದೆಯೋ ಇಲ್ಲವೋ ಎಂಬುದು ಬೇರೊಬ್ಬನಿಗೆ ಹೇಗೆ ಗೊತ್ತು?"

'ಅದನ್ನೇ ನೋಡು, ಮುಖ್ಯ ಮಂತ್ರಿಗಳು ಅಂದದ್ದು. ಅದೆಲ್ಲಾ ವ್ಯಕ್ತಿಯ ಶಕ್ತಿಯನ್ನು ಹೊಂದಿಕೊಂಡಿದೆ. ನಾನು ಎರಡನ್ನೂ, ನಾನೂ ನನ್ನ ಪಕ್ಷವೂ ಬಯಸುವಷ್ಟು ದಿನ ಎರಡೂ ಹುದ್ದೆಗಳಲ್ಲಿ ಮುಂದುವರಿಯುತ್ತೇನೆ ಅಂತ....'

"ಅದು ಸರೀನ್ಸಿ. ಅದ್ರೂ ಈ ಮತ್ತು ವಿರೋಧಿ ಪಕ್ಷಗಳಿಗೆ ಸಮಾಧಾನ ತರಲಿಲ್ಲವಂತಲ್ಲಾ?"

"ಯಾಕೆ ತರಬೇಕಾಂತೆ? ಕಾಂಗ್ರೆಸ್ ಅಧ್ಯಕ್ಷರೇ ರಾಜ್ಯ ಮುಖ್ಯ ಮಂತ್ರಿಯಾಗಿರುವುದರಿಂದ ರಾಜ್ಯಹಿತ ಸಾಧನೆಗೆ ಅತಂಕವಾಗುತ್ತದೆ; ರಾಜ್ಯಕೋಶದ ಹಣ ಇವರ ಪಕ್ಷಕ್ಕಾಗಿ ವೆಚ್ಚವಾಗುತ್ತದೆ ಎಂದೂ ಅವು ದೂರುತ್ತವೆ.'

"ಸರೀನ್ಸಿ. ಇದಕ್ಕೆ ಕೀಡಿದ ಉತ್ತರವೂ ಅವ್ರಿಗೆ ಸಮಾಧಾನ ತರಲಿಲ್ಲವಂತೆ ಮತ್ತೂ ಮತ್ತೂ ಎರಡೂ ಕುದುರೆ ಸವಾರಿ, ದ್ವಂದ್ವ ಅಂತ ಜಗಿದಾಡುತ್ತ ಇದ್ರಂತೆ....'

"ಹ್ಹೂಂ. ಮತ್ತೇನು? ಏನಾದ್ರೂ ಹಿಡಿದು ಕೊಂಡು ಜೋತಾಡ್ತಾ ಇರೋದು. ರಾಜ್ಯದ ಹಿತ ದೃಷ್ಟಿಯಿಂದ ಇದೂ ಒಂದು ದೃಷ್ಟಿಯಿಂದ ಒಳ್ಳೆಯದೇ ಅನ್ನು...."

"ಅಲ್ರಿ, ಶಾಮರಾಜರು ನಿಜಲಿಂಗಪ್ಪನವರ ಹೆಸರನ್ನು ಒಪ್ಪಬೇಕಾದರೆ, ಮುಖ್ಯ ಮಂತ್ರಿ ಪದವಿಗೆ ರಾಜಿನಾಮೆ ನೀಡಬೇಕು ಅಂತ ಹೇಳಿದ್ರಂತೆ ನೋಡ್ರಿ ಮುಂದೆ ಅರ್ಜಿಯಟ್ಟಾಗಿ ಕೆಲ್ಸ ಆಗ್ಬೇಕಾಯ್ತು. ರಾಜಿನಾಮೆ ಮುಂದೆ ನೀಡ ಬಹುದೂಂತ ತಿಳುವಳಿಕೆಗೆ ಬರಲಾಗಿತ್ತಲ್ಲಾ?"

"ಅಷ್ಟೆಲ್ಲಾ ಯಾಕೆ? ನಿಜಲಿಂಗಪ್ಪನವ್ರೇ ಅಂದಿದ್ದರಲ್ಲಾ, ಹೊಸ ನಾಯಕನ ಆಯ್ಕೆ ಬೇಕನೇ ಆಗುವುದೂಂತ, ಮುಂದೆ, ಮುಂಗಡ ಪತ್ರದ ಅಧಿವೇಶನದ ವರೆಗೆ ಅವೇ ಮುಖ್ಯ ಮಂತ್ರಿಯಾಗಿ ಮುಂದುವರಿಯುವುದಾಗಿಯೂ ಗಮನ ಮುಖ ಇತ್ತು...."

"ಮತ್ತೇಗ, ವಿರೋಧಿ ಪಕ್ಷದವರು ಯಾಕೆ ಹಾರಾಡಿದ್ರು?"

"ಏನೂಂತನ್ನೋದು, ಅವ್ರಿಗೆ ಅವ್ರ ಮೂತನ್ನ ನೆನಪಿಗೆ ತಂದುಕೊಡೋದ ಕೈಂತನ್ನೋಣಾ....'

"ಅದಕ್ಕೆಲ್ಲಾ ಎರಡು—ಮೂರು ದಿನ ಹಗರಣ ಮಾಡಬೇಕೇನು? ಸಭಾಧ್ಯಕ್ಷರ ವಿನಂತಿ—ಪ್ರಾರ್ಥನೆಗಳನ್ನೆಲ್ಲಾ ಅರಣ್ಯರೋದನ ಮಾಡಬೇಕೇನು?"

"ಅದೆಲ್ಲಾ ಪತ್ರಿಕೆಗಳ ವರದಿ. ಅದನ್ನು ಪೂರಾ ನಂಬೋಕಾಗುತ್ತೆಯೆ?"

"ಅಂದ್ರೆ ಪತ್ರಿಕೇಲಿ ಬರೋ ಸುದ್ದಿಯೆಲ್ಲಾ ಸುಳ್ಳೂಂತ್ಲೇ ನೀವನ್ನೋದು?"

"ಹಾಗಲ್ವೆ, ಪತ್ರಿಕೇಲಿ ತಪ್ಪು ಆಚ್ಚಾದ್ರೂ ಮುಂದೊಂದು ದಿನ ಮೂಲೆಯಲ್ಲಿ ತಿದ್ದುಪಡಿಯನ್ನೂ ಹಾಕಿದ್ರೆ ಸರಿ ಹೋಗುತ್ತೆ...'

"ಅದು ಹಾಗಿರ್ಲಿ. ಶಾಮರಾಜರು ಅಂದು ಹೇಳಿದ್ದನ್ನೇ ಇಂದು ನಮ್ಮ ಪ್ರತಿನಿಧಿಗಳೂ ಅಂದ್ರಾನ್ಸಿ. ಅದ್ರೂ, ಈ ಹೊತ್ತಲ್ಲಿ ಈ ಪ್ರಸ್ತಾಪವೇಕೇಂತ—'

"ಇದ್ರಲ್ಲಿ ಒಂದಲ್ಲ, ಎರಡು ಮುಖ್ಯ ಉದ್ದೇಶಗಳಿವೆಂತ ನನ್ನ ಮನ್ಸು ಹೇಳುತ್ತೆ—"

"ಅಂದ್ರೆ, ದ್ವಂದ್ವ—"

"ಅಲ್ವೆ ದ್ವೈತ..."

"ಹ್ಹೂಂ... ಯಾವುದು?"

"ನೋಡು, ಮುಖ್ಯ ಮಂತ್ರಿಯವರು ಮುಂಗಡ ಪತ್ರ ಅಧಿವೇಶನವಾದ ಕೂಡಲೇ ತಮ್ಮ ಮಾತಿನಂತೆ ರಾಜಿನಾಮೆ ನೀಡಿದರೆ, ಅದಕ್ಕೆ ಕಾರಣ, ತಾವು ಅಧಿವೇಶನಾರಂಭದಲ್ಲಿ ಸುರಿಸಿದ ಪ್ರಶ್ನೆಗಳು, ಬರಿಸಿದ ನಿಲುವಳಿ ಸೂಚನೆಗಳ ಸುರಿಮಳೆ ಅಂತ ತಮ್ಮ ಬೆನ್ನನ್ನು ಜನತೆಯ ಮುಂದೆ ತಾವೇ ತಟ್ಟಿಕೊಳ್ಳಬಹುದು..."

"ಹೌದ್ರಿ. ಅದು ಸರೀನ್ಸಿ. ಮತ್ತೆ ಇನ್ನೊಂದು...."

"ಇನ್ನೊಂದು...ಅದು ಭಾರಿ ರಹಸ್ಯವಾದದ್ದು...."

"ಅಂದ್ರೆ....?"

"ರಹಸ್ಯ ಅಂದ್ರೆ ಗೊತ್ತಿಲ್ವೆ? ಗುಟ್ಟು, ಗುಟ್ಟು...."

"ಹೌದ್ರಿ, ಆ ರಹಸ್ಯ ಯಾವುದಂತೆ?'

"ಅದು ರಾಜ್ಯದ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷಕ್ಕೆ ಸಂಬಂಧಿಸಿದ್ದು."

"ಹೌದು, ಅಂದ್ರೆ ಅದು ಯಾವುದಂತೆ?"

"ನೋಡು, ಭಾರೀ ಗುಟ್ಟಿದು—

"ಹ್ಹೂಂ...."

"ಈಗ ನಿಜಲಿಂಗಪ್ಪನವರು ನಾಯಕತ್ವಕ್ಕೆ ರಾಜಿ ನಾಮೆ ನೀಡಿದರೆ, ಹೊಸ ನಾಯಕನ ಆಯ್ಕೆಯು ಸುಗಮವಾಗಿ ನಡೆಯಲಾರದು, ಪಕ್ಷದಲ್ಲಿ ಈಗಿರುವ ಸಮತೋಲನ ಸ್ಥಿತಿಯು ತಪ್ಪಿ ಹೋಗಿ, ಪಕ್ಷ ಹರಿಹಂಚಾಗಿ ಹೋಗಬಹುದು ಅಂತ ಹೆದರಿಕೆ ಕೆಲವರಿಗೆ..."

"ನಾಯಕನ ಆಯ್ಕೆ ಒಮ್ಮತದಿಂದಾಗುವುದೆಂದು ಹೇಳಲಾಗಿತ್ತಲ್ಲಾ?'

'ಹ್ಹೂಂ....ಆದ್ರೆ ನೋಡು, ಮುಖ್ಯ ಮಂತ್ರಿಯಾಗುವ ಅರ್ಹತೆಯಿರುವ ಹಲವರು ನಮ್ಮಲ್ಲಿದ್ದಾರೆ...."

"ಹ್ಹೂನ್ಸಿ. ಕಂಠಿ, ಜತ್ತಿ ಮೊಜ ಮುಖ್ಯ ಮಂತ್ರಿಗಳು' ಹೆಗ್ಗಡೆ-ಪಾಟೀಲರು ನಿಜಲಿಂಗಪ್ಪನವರ ಕೈಗಳು—ಯಾರನ್ನು ಬಿಡುವುದ, ಯಾರನ್ನು ಹಿಡಿಯುವುದು ಅದಕ್ಕೆಂದೇ ಬಲಲಾಲೋಚನೆಯೇನು?"

'ನಿಜಲಿಂಗಪ್ಪನವರೇ ನಾಯಕರಾಗಿ ಮುಂದುವರಿಯುವಂತೆ ಮನವೊಲಿಸಲಾಗತ್ತಿದೆ ಎಂದೂ ಸುದ್ದಿ."

'ಓಹೋ, ಇದಕ್ಕಾಗಿಯೇ ಈ ರಂಪಾಟವೆನ್ಸಿ. ನಿಜಲಿಂಗಪ್ಪನವರನ್ನು ಹೇಗಾದರೂ ರಾಜಿನಾಮೆ ಕೀಡುವಂತೆ ಮಾಡಿ ಪಕ್ಷದ ಕಚ್ಚಾಟದ ಚಂದ ನೋಡುವ ಆತುರ ವಿರೋಧೀ ಪಕ್ಷಗಳಿಗೇನ್ಸಿ...."

"ಮತ್ತೆಂಥದು? ಇದೇ ರಾಜಕೀಯ. ಬಂಗಾಳದ ವಿಧಾನ ಸಭಾಪತಿ ಬಿಜಯ ಕುಮಾರ ಮುಖರ್ಜಿಯವರು ತಮ್ಮನ್ನು ರಾಷ್ಟ್ರಪತಿಗಳು ಸಭಾಪತಿ ಸ್ಥಾನದಿಂದ ಕಿತ್ತು ಹಾಕಿದ್ದರ ವಿರುದ್ಧ ಕೋರ್ಟಿನಲ್ಲಿ ಅಪೀಲು ಮಾಡುತ್ತಾರಂತೆ!'

'ಓಹೋ,"

"ಇನ್ನೂ ಕೇಳು...'

'ಏನು?'

"ಕೇರಳದ ಮುಖ್ಯ ಮಂತ್ರಿ ನಂಬೂದ್ರಿಪಾದರಿಗೆ ನ್ಯಾಯಾಲಯ ನಿಂದ ಮೇಲೆ ಶಿಕ್ಷೆಯಾಯಿತಲ್ಲಾ? ಕೇರಳ ವಿಧಾನ ಸಭಾಪತಿಯವರು ಈ ತೀರ್ಪಿಗೆ ಮನ್ನಣೆ ನೀಡುವುದಿಲ್ಲ ಅಂತೆ.'

"ಅಂದ್ರೆ?"

"ಅದು ಅವರಿಗೇನೇ ಗೊತ್ತು...."

"ಹ್ಹೂಂ, ಹೋಗ್ಲಿ ಬಿಡಿ, ಅದೆಂಥದೇ ಪ್ರತ್ಯೇಕ ತಮಿಳು ರಾಜ್ಯದ ಚಳುವಳಿ ಆರಂಭವಾಗಿದೆಯಂತಲ್ಲಾ, ಪ್ರತ್ಯೇಕ ರಾಷ್ಟ್ರ ಧ್ವಜ ಹಾರಿಸಿದ್ರಂತೆ..."

"ಹ್ಹೂಂ"

"ಇದೆಂತ ತಮಿಳ್ ಲ್ಯಾಂಡ್ ಚಳುವಳೀಂತ...."

"ಎಂಥದೂಂದ್ರೆ? ಏನಾದ್ರೂ ಬೇಕು ಕೆಲವ್ರಿಗೆ...."

"ಅಲ್ರಿ, ಉತ್ತರ ಪ್ರದೇಶದಲ್ಲಿ ಚರಣ ಸಿಂಗರ ಅಧಿಕಾರ ತ್ಯಾಗ ಬುದ್ಧಿಗೆ ಕಪ್ಪ ಕೊಡಬೇಕು..."

"ಹ್ಹೂಂ....ಹೌದೂನ್ಸು. ಆದ್ರೆ ಅಲ್ಲಿ ಬದಲಿ ಸರಕಾರ ಮಾತ್ರ....'

"ಅದು ಹಾಗೆಯೇ ಬಿಡಿ. ಯಾವುದೇ ಒಂದು ಪಕ್ಷ ಬಹುಮತ ಪಡೆಯದೆ ಹೋದರೆ, ಇದೇ ಕಥೆ....'

"ಹ್ಹೂಂ, ಈಗಾದ್ರೂ ಗೊತ್ತಾಯ್ತಲ್ಲ...?'

"ಈ ಒಂದು ವರ್ಷದಲ್ಲಿ ಕಲಿತದ್ದು ಮತ್ತೆಂಥದು?"

'ಅಗ್ಲಿ, ಇದನ್ನೇ ನಮ್ಮ ಜನತೆಯೂ ರಾಜಕೀಯ ಪಕ್ಷಗಳೂ ತಿಳಿದುಕೊಂಡಿದ್ದರೆ, ದೇಶದ ಆರೋಗ್ಯಕ್ಕೆ ಒಳ್ಳೆಯದು....'

'ಹ್ಹೂಂ, ನಾಲ್ಕು ಮಳೆಗಾಲ ಕಳೆಯೋದ್ರೊಳ್ಗೆ ಇನ್ನೇನೇನಾಗಲಿದೆಯೋ.'

'ಅಷ್ಟು ದೂರ ಯಾಕೆ? ಈ ಮಳೆಗಾಲ ಆರಂಭವಾಗುವುದ್ರೊಳ್ಗೆ ಏನೇನಾದುತ್ತೆ ಯಾರಿಗೆ ಗೊತ್ತು?"

"ಅಯ್ಯಯ್ಯ, ನಿಮ್ಮದೊಂದು.... ....ಕುಸು..."

"ಅದ್ರಲ್ಲೇನು ಬಂತೆ?"

"ಏನೂ ಇಲ್ಲನ್ಸಿ...ಅದರೂ...."

"ಅದ್ರೂ ಇಲ್ಲ, ಹೋದ್ರೂ ಇಲ್ಲ. ಇರೋದೆಲ್ಲಾ ಇದ್ರೆ ಮಾತ್ರ...."

"ಹ್ಹೂಂ.....ಹಾಗಿರುವಾಗ ಇಲ್ಲದುಂಟೆ?'

"ಬೇಕಾಗಿರೋದೂ ಅದೇ...."

'ಹ್ಹೂಂ....'

—ಗೋರಾ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಶೇವಜಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸ್—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. I. A. 58/67
in S. C. 33/67.

ಯಮ್. ಗೋಪಾಲಯ್ಯ —ವಾದಿ
ದೇಜು ಹೆಂಗ್ಸು ಸಹಾ —ಪ್ರತಿವಾದಿರು.

ಬೆಳ್ತಂಗಡಿ ತಾಲ್ಲೂ ವೇಣೂರು ಮಹಾಲಿಂಗೇಶ್ವರ ಹತ್ತಿರವಿರುವ ಯಮ್. ಗೋಪಾಲಯ್ಯರ ಹೆಂಡ್ತಿ B ಲಕ್ಷ್ಮಿಯವರಿಗೆ—

ಮೇಲಿನ ವ್ಯಾಜ್ಯದಲ್ಲಿ ನಿಮ್ಮ ಮೇಲೆ 3rd Party Proceedings ಮಾಡಿ ಜಪ್ತಿ ನಿಮ್ಮ ಹಾಜರಾತಿಬಗ್ಗೆ ತಾ.11-8-1966 ಕ್ಕೆ 11ಗಂಟೆಗೆ ಇಟ್ಟಿದೆ. ನಿಮ್ಮದೇನಾದರೂ ಆಕ್ಷೇಪ ಇದ್ದರೆ ಆ ದಿನ ಹಾಜರಿರಬೇಕು. ಇಲ್ಲವಾದಲ್ಲಿ ನಿಮ್ಮನ್ನು ಕಿವ್ವಾ ಮಾಡಿ ತನ್ನ ಮುಂದುವರಿಸಲಾಗುವುದು, ಎಂದು ಕೋರ್ಟು ಹುಕುಂ ಪ್ರಕಾರ ಈ ನೋಟಿಸು ಮಾಡಲಾಗಿದೆ.

N. J. Kadamba
Advocate, Beltangady

ಬೆಳ್ತಂಗಡಿ, ತಾ, 19—9—66.

ಕಾಸರಗೋಡಿನಲ್ಲೇನಿದೆ ?

ಬರೆದವರು : ಶ್ರೀ ಎಚ್. ಎಂ. ನಾರಾಯಣ ಭಟ್

ಮಹಾಜನ ಆಯೋಗದ ಶಿಫಾರಸಿನ ಪ್ರಕಾರ ಕಾಸರಗೋಡು ತಾಲೂಕಿನ ಚಂದ್ರಗಿರಿ—ಪಯಸ್ವಿನಿ ನದಿ ಮತ್ತು ಅಡೂರು ಗುಡ್ಡಗಳ ಸಾಲಿನ ಬಡಗು ಭಾಗದ ಪ್ರದೇಶವು ಮರಳಿ ಮೈಸೂರು ರಾಜ್ಯದ ಅರ್ಥಾತ್ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾದ ಬೇಕಾಗಿದೆ.

ಈ ಪ್ರದೇಶವು ದಕ್ಷಿಣ ಕನ್ನಡದ ಅವಿಭಾಜ್ಯ ಅಂಗ.

ಮಂಜೇಶ್ವರ, ಕುಂಬಳೆ ಮತ್ತು ಕಾಸರಗೋಡು ಫಿರ್ಕಾಗಳಲ್ಲಾಗಿ ಹದಿನಾರು ಪಂಚಾಯ್ತ್ ಬೋರ್ಡು ಮತ್ತು ಒಂದು ಮುನಿಸಿಪಾಲಿಟಿಯಲ್ಲಾಗಿ ಒಟ್ಟು 71 ಗ್ರಾಮಗಳಿರುವ ಈ ಪ್ರದೇಶ ಬಹಳ ಫಲವತ್ತಾಗಿರುವುದಲ್ಲದೆ ನಿವಾಸಿಗಳು ಶಾಂತಚಿತ್ತರೂ ಉಚ್ಚ ಸಾಂಸ್ಕೃತಿಕ ಪರಂಪರೆಯುಳ್ಳವರೂ ಆಗಿರುವರು.

ಪಂಚಾಯ್ತ್‌ವಾರು ಗ್ರಾಮಗಳು

ಪೊರ್ಕಾಡಿ ಪಂಚಾಯ್ತಿನ ಪಾವೂರು, ಪೊರ್ಕಾಡಿ, ಪಾತೂರು, ಮತ್ತು ಕೊಡ್ಲಮೊಗರು.

ವಿಂಜ ಪಂಚಾಯ್ತಿನ ಕೋಳಿಯೂರು, ಕಳಿಯೂರು, ಕಡಂಬಾರು, ತಲೆಕಳ, ವಿಂಜ, ಕುಳೂರು, ಮಾಡಂಬೈಲು ಮತ್ತು ಮಜಬೈಲು.

ಮಂಜೇಶ್ವರ ಪಂಚಾಯ್ತಿನ ಕುಂಜತ್ತೂರು, ಬಂಗ್ರ ಮಂಜೇಶ್ವರ, ಬಡಾಜೆ, ಉದ್ಯಾವರ ಮತ್ತು ಹೊಸಬೆಟ್ಟು.

ಮಂಜಲ್ಪಾಡಿ ಪಂಚಾಯ್ತಿನ ಬೇಕೂರು, ಉಪ್ಪಳ, ಮುಳಿಂಜ, ಕೋಡಿಬೈಲು, ಕುಬಣೂರು, ಮಂಗಲ್ಪಾಡಿ, ಶಿರಿಯಾ, ಇಚ್ಲಂಗೋಡು ಮತ್ತು ಹೇರೂರು.

ಪೈವಳಿಕೆ ಪಂಚಾಯ್ತಿನ ಕಯ್ಯೂರು, ಪೈವಳಿಕೆ, ಚಿಪ್ಪಾರು, ಬಾಯಾರು ಮತ್ತು ಕುಡಾಲಮೇರ್ಕಳೆ.

ಕುಂಬಳೆ ಪಂಚಾಯ್ತಿನ ಕಿದೂರು, ಇಚ್ಲಂಪಾಡಿ, ಉಜಾರುಳ್ಳಾರು, ಬಂಬ್ರಾಣ, ಆರಿಕ್ಕಾಡಿ, ಕೊಪ್ಪಳಾಡಿ ಮತ್ತು ಮೊಗ್ರಾಲು.

ಪುತ್ತಿಗೆ ಪಂಚಾಯ್ತಿನ ಎಡನಾಡು, ಪುತ್ತಿಗೆ, ಮುಗು, ಅಂಗಡಿಮೊಗರು, ಬಾಡೂರು ಮತ್ತು ಕಣ್ಣಾರು.

ಎಣ್ಮಕಜೆ ಪಂಚಾಯ್ತಿನ ಮೈಪಾಡಿ, ಎಣ್ಮಕಜೆ, ಕಾಟುಕುಕ್ಕೆ ಮತ್ತು ಪಡ್ರೆ.

ಬೆಳ್ಳೂರು ಪಂಚಾಯ್ತಿನ ನೆಟ್ಟಣಿಗೆ ಮತ್ತು ಬೆಳ್ಳೂರು.

ಕುಂಬ್ಡಾಜೆ ಪಂಚಾಯ್ತಿನ ಉಬ್ರಂಗಳ ಮತ್ತು ಕುಂಬ್ಡಾಜೆ.

ಬದಿಯಡ್ಕ ಪಂಚಾಯ್ತಿನ ಬೇಳ ಮತ್ತು ಪೆರಡಾಲ.

ಮಧೂರು ಪಂಚಾಯ್ತಿನ ಪಟ್ಲ, ಕೂಡ್ಲು, ಮಧೂರು, ಶಿರಿಬಾಗಿಲು ಮತ್ತು ಮೊಗ್ರಾಲ್ ಪುತ್ತೂರು.

ಚಂಗಳ ಪಂಚಾಯ್ತಿನ ಮಟ್ಟತ್ತಡ್ಕ, ಚಂಗಳ, ಪಾಡಿ ಮತ್ತು ನೆಲ್ಲಿಕಜೆ.

ಮುಳಿಯಾರು ಪಂಚಾಯ್ತಿನ ಮುಳಿಯಾರು.

ಕಾರಡ್ಕ ಪಂಚಾಯ್ತಿನ ಕಾರಡ್ಕ ಮತ್ತು ಆದೂರು.

ದೇಲಂಪಾಡಿ ಪಂಚಾಯ್ತಿನ ಅಡೂರು ಮತ್ತು ದೇಲಂಪಾಡಿ.

ಕಾಸರಗೋಡು ಮುನಿಸಿಪಾಲಿಟಿಯ ಅಡ್ಕತ್ತ ಬೈಲು, ತಳಂಗರೆ ಮತ್ತು ಕಾಸರಗೋಡು ಕಸಬಾ.

ಬಾಕಿ ಉಳಿಯುವ ಗ್ರಾಮಗಳು

ಬೇಡಡ್ಕ ಪಂಚಾಯ್ತಿನ ಬಂದಡ್ಕ, ಕುತ್ತಿಕೋಲು, ಬೇಡಡ್ಕ ಮತ್ತು ಕೊಳತ್ತೂರು. ಚೆಮ್ನಾಡು ಪಂಚಾಯ್ತಿನ ತೆಕ್ಕಿಲ, ಪೆರುಂಬಳೆ, ಚೆಮ್ನಾಡ್ ಮತ್ತು ಕಲ್ಲಾಡು—ಹೀಗೆ 8 ಗ್ರಾಮಗಳು ಕೇರಳದಲ್ಲಿ ಉಳಿಯುತ್ತವೆ. ಇವು ಚಂದ್ರಗಿರಿ—ಪಯಸ್ವಿನಿ ನದಿ—ಅಡೂರು ಗುಡ್ಡಗಳ ಸಾಲಿನ ದಕ್ಷಿಣಕ್ಕಿವೆ.

ಕೇರಳ ಶಾಸನ ಸಭಾ ಕ್ಷೇತ್ರಗಳು

ಪೊರ್ಕಾಡಿ, ವಿಂಜ, ಮಂಜೇಶ್ವರ, ಮಂಗಲ್ಪಾಡಿ, ಪೈವಳಿಕೆ, ಕುಂಬಳೆ, ಪುತ್ತಿಗೆ, ಎಣ್ಮಕಜೆ ಮತ್ತು ಬದಿಯಡ್ಕ ಪಂಚಾಯ್ತ್ ಕ್ಷೇತ್ರಗಳು ಮಂಜೇಶ್ವರ ಶಾಸನ ಸಭಾ ಕ್ಷೇತ್ರ. ಇದರಲ್ಲಿನ ಮತದಾರರು 61,866.

ಮಧೂರು, ಚಂಗಳ, ಮುಳಿಯಾರು, ಕಾರಡ್ಕ, ದೇಲಂಪಾಡಿ, ಕಾಸರಗೋಡು ಮುನಿಸಿಪಾಲಿಟಿ ಮತ್ತು ಚೆಮ್ನಾಡ್ ಪಂಚಾಯ್ತ್ ಕ್ಷೇತ್ರಗಳು ಕಾಸರಗೋಡು ಶಾಸನ ಸಭಾ ಕ್ಷೇತ್ರವಾಗಿದೆ. ಇದರಲ್ಲಿ ಒಟ್ಟು ಮತದಾರರು 62,342.

ವಿಧಿ ಶಿಫಾರಸಿನ ನ್ಯಾಯದ ನೈಸರ್ಗಿಕ ಗಡಿಯ ದಕ್ಷಿಣ ಭಾಗದ ಬೇಡಡ್ಕ ಪಂಚಾಯ್ತ್ ಹೊಸದುರ್ಗ ಶಾಸನ ಸಭಾ ಕ್ಷೇತ್ರಕ್ಕೊಳಪಟ್ಟಿದೆ.

ಹೀಗೆ ಈ ತಾಲೂಕಿನ ಎರಡು ಪಂಚಾಯ್ತಿಗಳ ಎಂಟು ಗ್ರಾಮಗಳು ಇನ್ನು ಕೇರಳದ ಭಾಗವಾಗಿಯೇ ಉಳಿಯಲಿವೆ.

ಇದಿ ಕಾಸರಗೋಡು ತಾಲೂಕೂ ಕಾಸರಗೋಡು ಲೋಕ ಸಭಾ ಕ್ಷೇತ್ರಕ್ಕೊಳಪಟ್ಟಿದ್ದು ಎಡ ಕಮ್ಯೂನಿಸ್ಟ್ ಧುರೀಣ ಶ್ರೀ ಎ. ಕೆ. ಗೋಪಾಲನ್ ಈಗ ಪ್ರತಿನಿಧಿಯಾಗಿರುವರು.

ಮಂಜೇಶ್ವರ ಎಂ. ಎಲ್. ಎ. ಶ್ರೀ ಕಳ್ಳಿಗೆ ಮಹಾಬಲ ಭಂಡಾರಿ ಮತ್ತು ಕಾಸರಗೋಡು ಎಂ. ಎಲ್. ಎ. ಶ್ರೀ ಯು. ಪದ್ಮನಾಭ ಕುಣಿಕುಳ್ಳಾಯರಾಗಿರುವರು. ಈರ್ವರೂ ಪ್ರತಿಭಾನ್ವಿತ ವಕೀಲರು. ಕರ್ನಾಟಕ ಪ್ರಾಂತೀಕರಣ ಸಮಿತಿಯ ಧುರೀಣರು. ಉತ್ಸಾಹಶೀಲ ಕ್ರಿಯಾಶಕ್ತಿಯುಳ್ಳ ಸಂಘಟಕರೂ!

ಜನ ಸಂಖ್ಯೆ

ಮರಳಿ ಮೈಸೂರಿನ ಭಾಗವಾಗಬೇಕಾಗಿರುವ ಈ ತಾಲೂಕಿನ ಭಾಗದ ವಿಸ್ತೀರ್ಣ 287 ಚ. ಮೈಲಿ; ಜನ ಸಂಖ್ಯೆ ಎರಡು ಲಕ್ಷಕ್ಕೂ ಮಿಕ್ಕಿದೆ.

1951ನೇ ಇಸವಿಯ ಜನಗಣತಿ ಮೇರೆಗೇ ಜನ ಸಂಖ್ಯೆ 1,94,649 ಆಗಿತ್ತು.

1967ರ ಚುನಾವಣಾ ವೇಳೆ ಒಟ್ಟು ಮತದಾರರ ಸಂಖ್ಯೆ 1,14,186 ಆಗಿತ್ತು.

ಕೇರಳದೆಲ್ಲೇ ಉಳಿಯುವ ಈ ತಾಲೂಕಿನ ಭಾಗದ 8 ಗ್ರಾಮಗಳ ವಿಸ್ತೀರ್ಣ 73 65 ಚ. ಮೈಲಿ; ಜನಸಂಖ್ಯೆ 30ಸಾವಿರ.

ನದಿಗಳು

ಮಹಾಜನ ಆಯೋಗದ ವರದಿ ಕಾರ್ಯರೂಪಕ್ಕೆ ಬಂದಾಗ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ನೈಸರ್ಗಿಕ ಗಡಿಯಾಗಿ ಚಂದ್ರಗಿರಿ—ಪಯಸ್ವಿನಿ ನದಿಯಿರುವುದು. ಕಾಸರಗೋಡು ತಾಲೂಕಿನಲ್ಲಿ ಇದೇ ದೊಡ್ಡ ನದಿ.

ಶಿರಿಯಾ ನದಿಗೆ ಬಾಡೂರಿನಲ್ಲಿ ಒಂದು ಆಣೆಕಟ್ಟು ನಿರ್ಮಿತವಾಗಿದೆ.

ಕುಂಬಳೆ, ಮೊಗ್ರಾಲು, ಉಪ್ಪಳ, ಬಡಾಜೆ ನದಿಗಳು ಮಿಕ್ಕವು.

ತಾಲೂಕಿನ ಉತ್ತರದಲ್ಲಿ ತಲಪಾಡಿನ ದಿಯು ನೈಸರ್ಗಿಕ ಗಡಿಯಾಗಿದೆ.

ನದೀ ತೀರಗಳು ಬಹಳ ಫಲವತ್ತಾಗಿವೆ. ಸಮುದ್ರ ದಂಡೆಯಲ್ಲಿ ಮತ್ಸ್ಯಗಾರಿಕೆಯೊಂದಿಗೆ ಹುರಿಗಾರಿಕೆಯೂ ಬೆಳೆಯುತ್ತಿದೆ. ಈ ಉದ್ಯಮಗಳನ್ನೇ ಹೊಂದಿರುವ ಸಾವಿರಾರು ಮಂದಿಯಿದ್ದಾರೆ.

ಸಂಸ್ಥಾನ್ಮೂಲಗಳು

175 ಎಕ್ರೆ ವಿಸ್ತೀರ್ಣದ ಕೇಂದ್ರ ತೆಂಗು ಸಂಶೋಧನಾ ಕೇಂದ್ರ; ವಿಶಾಲವಾದ ಪರಪ್ಪೆಯ ಅರಣ್ಯ ಪ್ರದೇಶ (ಹಸಿರು ಭಾಗಾರದ ಗನಿ); ನೂರಾರು ಎಕ್ರೆಗಳಲ್ಲಿ ಮೊಸ ಮತ್ತು ಸಾವಿರಾರು ಎಕ್ರೆ ಹಳೆಯ ಗೇರು ಬೀಜದ ತೋಟ; 50 ಸಾವಿರ ಎಕ್ರೆ ಭತ್ತದ ಗದ್ದೆ; 8000 ಎಕ್ರೆ ಅಡಿಕೆ ತೋಟ; 3000 ಎಕ್ರೆ ತೆಂಗಿನ ತೋಟ; 500 ಎಕ್ರೆ ಕಾಳು ಮೆಣಸು; ಸಾವಿರ ಎಕ್ರೆ ಕಬ್ಬು, ನೂರಾರು ಎಕ್ರೆ ಸಾಗುವಾನಿ ತೋಪುಗಳೂ ಗೆಡ್ಡೆಗೆಣಸು ಮತ್ತು ತರಕಾರಿಗಳೂ!

(ಎಂಟನೇ ಸುಟ ನೋಡಿರಿ)

ಎರಡು ಅಥವಾ ಮೂರು ಮಕ್ಕಳು... ಸಾಕು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿನ್ಹೆ

DA 67/458

ಒಂದು ಸಂಸ್ಮರಣೆ

ಶ್ರೀ ದೀನದಯಾಳು ಉಪಾಧ್ಯಾಯರು

ಭಾಷಾ ಬಡಬಾಗ್ನಿಗೆ ಬೀಳದಂತೆ ಎಚ್ಚರಿಸಿದ ಭಾರತೀಯ ಉಪಾಧ್ಯಾಯರಿವರು

ಬರೆದವರು: ಶ್ರೀ ಶಿವಶಂಕರ

ಭಾಷಾ ಬಡಬಾಗ್ನಿಯಲ್ಲಿ ಬಡ ಭಾರತೀಯರು ಬಿದ್ದು ಬಳಲಿ ಬಸವಳಿದು ಬೆಂಡಾಗಿ ಹೋಗಿದ್ದಾರೆ. ಆದರೂ ರಾಜಕೀಯ ರೋಷದಲ್ಲಿ ಅವರು ಭ್ರಮೆಗೊಳಗಾಗಿ ತಮ್ಮ ಸ್ವದೇಶ ಬಾಂಧವರ ಸರ್ವನಾಶಕ್ಕೆಯಲೂ ಹೇಸದಿದ್ದಾರೆ. ಯೋಚನಾಶೀಲ ಭಾರತೀಯ, ವಿಚಾರವಂತ ಭಾರತೀಯ ಯೋಚಿಸುತ್ತಿದ್ದಾನೆ—ಪ್ರಪಂಚದ ಇನ್ನಾವ ದೇಶದಲ್ಲಾದರೂ ಈ ರೀತಿ ಆದೀತೇ? ಸ್ವದೇಶದ ಜನರು ತಮ್ಮ ದೇಶದ ಭಾಷೆಯನ್ನು ನಾಶಗೈಯ್ಯಲು ಎಲ್ಲಾದರೂ ಪ್ರಯತ್ನಿಸಿಯಾರೇ? ಆದರೆ ಇಲ್ಲಿ, ನಮ್ಮ ದೇಶದಲ್ಲಿ, ನಡೆಯುತ್ತಿದೆಯಲ್ಲಾ! ಇಂತಹ ಪ್ರಚಾರವನ್ನು ನಡೆಸಿದವರು ಪ್ರತ್ಯೇಕತಾ ವಾದಿಗಳು, ಪರದೇಶೀಯರಗುಲಾಮರು ಮಾತ್ರವಲ್ಲ, ಮೇಧಾವಿಯೆಂದುಕೊಳ್ಳುವ ಕೆಲರು ರಾಜಾಜೀಯವರಂತಹವರು. ಆಗ ಬಡ ಜನತೆಯ ಮುಂದೆ ಇದೇ ಸರಿಯೂದ ವಿಧಾನವೆಂದು ಪ್ರಚಲಿತ ಪ್ರಧಾನಿಯವರಾಗಲೀ ರಾಷ್ಟ್ರಾಧ್ಯಕ್ಷರಾಗಲೀ, ಸೂಚಿಸಿತ್ತಿಲ್ಲ. ಉಪ ರಾಷ್ಟ್ರಾಧ್ಯಕ್ಷರಾದರೋ ಸ್ವಲ್ಪವಾದರೂ ಧೈರ್ಯ ತೋರಿಸಿದ್ದಾರೆ. ಅದರ ಫಲವಾಗಿ ವಿಂದ್ಯ ಪರ್ವತಶ್ರೇಣಿಯೂ ಈಚೆಯೂ ಭಾಷಾ ಬಡಬಾಗ್ನಿ ಭುಗ್ಗನೆದ್ದಿತು. ಕಾಲ್ದೆಸೆಗಳಿಗೂ ಅದು ನಾಲಿಗೆ ಚಾಚಿತು.

ಭಾಷಾ ಬಡಬಾಗ್ನಿಯಲ್ಲಿ ಭಾರತೀಯರು ಬೀಳದಂತೆ ಎಚ್ಚರಿಸಿದವರ ಅಗ್ರೇಸರರ ಸಾಲಿನಲ್ಲಿ ಉಪಾಧ್ಯಾಯರಿಗೆ ಸ್ಥಾನ ಇದ್ದೇ ಇದೆ. ಉಪಾಧ್ಯಾಯ.... ತಟ್ಟನೆ ಜ್ಞಾಪಕಕ್ಕೆ ಇಂದು ಬರುವದು ಶ್ರೀ ದೀನ ದಯಾಳ ಉಪಾಧ್ಯಾಯರ ಹೆಸರು. ಆದರೆ, ದುರಾದೃಷ್ಟವಶಾತ್, ಅವರಿಂದು ನಮ್ಮ ನಡುವೆ ಇಲ್ಲ....

ಭಾಷೆಯ ಹೆಸರಿನಲ್ಲಿ ದಬ್ಬಾಳಿಕೆ, ಕ್ರೂರ ಲಟ್ಟಿದಾಳ ನಡೆಯುತ್ತಿದ್ದ ದಿನಗಳು ಅವು. ಮದ್ರಾಸು ಮಹಾನಗರವು ರಾಜಕೀಯ ಮದರಾಸುಗಳಿಂದಾಗಿ ಮಹಾನರಕವಾಗಿತ್ತು. 'ಉತ್ತರ'ದವನೆಂದಾದರೆ ಸರಿ ಅವನ ಭಾಯಿಯಿಂದ 'ಇನ್ಾದಿ ಒಲ್ರಿಗೆ' ಹೇಳಿಸದೆ ಬಿಡುವಂತಿಲ್ಲ. "ಉತ್ತರ"ದ ಸಂಸತ್ ಸದಸ್ಯರು ಬಂದಾಗ ವಿರುದ್ಧ ಪ್ರದರ್ಶನ ನಡೆಸಬೇಕು, ಕಪ್ಪು ಬಟ್ಟೆ ಕಾಣಿಸಬೇಕು....ಹೀಗೆ ಕೆಲ ರಾಜಕೀಯ ಪುಢಾರಿಗಳು ಯೋಚಿಸಿಕೊಂಡಿದ್ದ ದಿನಗಳವು. ವಿದ್ಯಾಲಯಗಳಿಗೆ 'ಕ್ರಿಸ್ ಮಸ್'ನೆವನ, ಅಷ್ಟೇ. ಅದಕ್ಕಿಂತ ಮುಂಚೆವಾಗಿಯೇ ಬಾಗಿಲುಗಳನ್ನು ಹಾಕಲಾಗಿತ್ತು.

ಆಗ, ಕೇರಳದಲ್ಲಿ ಭಾರತೀಯ ಜನಸಂಘದ ವಾರ್ಷಿಕ ಅಧಿವೇಶನ ನಡೆಯುವದಿತ್ತು. ಅದಕ್ಕೆ ಅಧ್ಯಕ್ಷದ ಸಂಘದ ಸದಸ್ಯರೂ, ಮಂತ್ರಿಗಳೂ ಬರುವವರಿದ್ದರು. ಅಲ್ಲದೆ ಹೊಸ ಅಧ್ಯಕ್ಷರು ಆಗಮಿಸುವವರಿದ್ದರು. ಭಾರತೀಯ ಜನಸಂಘವಂತೂ ಅಂಗ್ಲ ಭಾಷಾಡಳಿತ ವಿರೋಧಿ ಹಾಗೂ ಹಿಂದೀ ಪ್ರಿಯ ಪಕ್ಷ. ಅದರ ಸದಸ್ಯರೊಬ್ಬರು ಕೇರಳ ಸಭೆಯಲ್ಲಿ ಭಾಷಾ ತಿದ್ದುಪಡಿ ಮಸೂದೆಯ ಪ್ರತಿಯನ್ನು ಸುಟ್ಟು ಹಾಕಿದ್ದರು. ಅವರಿಗೆ ವಿರುದ್ಧ ಪ್ರದರ್ಶನ ನಡೆಸದೆ ಇನ್ನಾರಿಗೆ ಕಪ್ಪು ಬಟ್ಟೆ ಕಾಣಿಸುವದು? ಆದರೆ, ಆಗ, ಗುಜು ಗುಜು ಮಾತೆದ್ದಿತು. ಅಧ್ಯಕ್ಷ ಸ್ಥಾನ ನೆನ್ನೇರಲು ಬರುವವರು ಪಂಡಿತ ದೀನದಯಾಳಉಪಾಧ್ಯಾಯರೆಂಬವರು, ಪ್ರದರ್ಶನದ ಮಾತು ನಿಂತು ಹೋಯಿತು. ಸಂಘದಿಗೆ ಹೋಗಿರುವ ದ್ರಾವಿಡ ಕಡದ ಸದಸ್ಯರಲ್ಲಿ ಹೆಚ್ಚಿನವರಿಗೆ ಪಂಡಿತ ದೀನದಯಾಳ್ಜೀಯವರ ಪಾಂಡಿತ್ಯದ ಅನುಭವವಾಗಿತ್ತು. ಭಾರತೀಯರ ಹೃದಯದಲ್ಲಿ ದೀನದಯಾಳ್ಜೀಯವರು ಸ್ಥಾನ ಪಡೆದುಕೊಂಡಿದ್ದರು.

ಭಾರತೀಯ ಜನಸಂಘದ ಭಾವೀ ಅಧ್ಯಕ್ಷರು ಕೇರಳಕ್ಕೆ ಬಂದರು. ಅಧಿವೇಶನ ಆರಂಭವಾಯಿತು. ಶ್ರೀ ದೀನದಯಾಳ ಉಪಾಧ್ಯಾಯರು ಅಧ್ಯಕ್ಷ ಭಾಷಣಕ್ಕೆ ಆರಂಭಿಸಿದರು—ಅಂದು ತಮ್ಮ ಭಾಷಣದಲ್ಲಿ ಅವರು ಭಾರತದಲ್ಲಿರುವ ಸಮಸ್ಯೆಗಳನ್ನು ಪ್ರತಿನಿಧಿಗಳ ಮುಂದಕ್ಕಿಟ್ಟರಲ್ಲದೆ ಅವೆಲ್ಲಕ್ಕೂ ಪರಿಹಾರೋಪಾಯವನ್ನು ಸೂಚಿಸಿದ್ದರು.

"ದೇಶದ ಗೌರವ ಹಾಗೂ ಸಹಜ ಜ್ಞಾನದ ದೃಷ್ಟಿಯಿಂದ ಇಲ್ಲಿಯ ವ್ಯವಹಾರಕ್ಕೆ ಇಲ್ಲಿಯ ಭಾಷೆಗಳು ಅವಶ್ಯಕವಿವೆ. ಭಾರತೀಯ ಭಾಷೆಗಳನ್ನು ವಿದ್ಯಾಲಯದ ಅಂತಸ್ತಿನಲ್ಲೂ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಲು ಈ ವರ್ಷ ನಮ್ಮ ಶಿಕ್ಷಣ ಶಾಖೆಯು ಮನಸ್ಸು ಮಾಡಿರುತ್ತದೆ. ಅದರ ಈ ಯೋಜನೆಯನ್ನು ಸಂಸತ್ತಿನ ಸಂಬಂಧಪಟ್ಟ ಸಮಿತಿ, ವಿದ್ಯಾ ಮಂತ್ರಿಗಳ ಸಮ್ಮೇಳನ ಮತ್ತು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳ ಸಮ್ಮೇಳನಗಳು ಸಮರ್ಥಿಸಿವೆ. ಹಾಗಿದ್ದರೂ ಕೆಲ ಇಂಗ್ಲೀಷ್ ಇಫಿಯರು ಈ ನಿರ್ಣಯವನ್ನು ವಿರೋಧಿಸುತ್ತಿದ್ದಾರೆ. ಅದಕ್ಕೆ ಅವರು ಕೆಲ ನೆವನಗಳನ್ನು ಮುಂದಿಟ್ಟಿರುತ್ತಾರೆ. ಅವರ ಈ ಸಮಸ್ಯೆಗಳು ಕಾಲ್ಪನಿಕ ಹಾಗೂ ತತ್ಕಾಲಿಕ ಇವೆ. ಅವರು ಈ ರೀತಿ ಇಲಿಯನ್ನು ಹುಲಿ ಮಾಡುವ ಬದಲು ಸ್ವಾವಲಂಬಿಕತನದಿಂದ ಸಂಪರಿಹರಿಸಲು ಪ್ರಯತ್ನಿಸಬೇಕು. ಕಾಂಗ್ರೆಸ್ಸೇತರ ಪಕ್ಷಗಳ ಆಡಳಿತ ನಡೆಯುವ ರಾಜ್ಯಗಳಲ್ಲಿ ಪ್ರಾದೇಶಿಕ ಭಾಷೆಗಳ ಸ್ವಯೋಗ ಅಧಿಕವಾಗಿರುತ್ತದೆ. ಅಲ್ಲಿಗೆ ಇನ್ನು ಕೆಲವೇ ತಿಂಗಳುಗಳಲ್ಲಿ ಜನತಯ ವ್ಯವಹಾರ ಜನರ ಭಾಷೆಯಲ್ಲೇ ನಡೆಯುವಂತಾಗುತ್ತದೆ. ಆ ಸರ್ಕಾರಗಳಿಗೆ ನನ್ನ ಅಭಿನಂದನೆಗಳು.

ಹಿಂದಿ ಗೊತ್ತಿಲ್ಲದವರ ಯಾವದೇ ಹಕ್ಕನ್ನು ಮೊಟಕುಗೊಳಿಸುವ ಕ್ರಮವನ್ನು ಜನಸಂಘ ಸಮರ್ಥಿಸುವದಿಲ್ಲ. ಸೇವಾ ಆಯೋಗದ ಎಲ್ಲಾ ಪರೀಕ್ಷೆಗಳೂ ಪ್ರಾದೇಶಿಕ ಭಾಷೆಗಳ ಮಾಧ್ಯಮದಲ್ಲಿ ನಡೆಯಬೇಕು. ಕೆಲಸಕ್ಕೆ ಸೇರಲಿಕ್ಕೆ ಯಾವದಾದರೊಂದುವಿಷ್ಟ ಭಾಷೆಯ ಜ್ಞಾನದ ಲಭಾವ ತಡೆಯಾಗಿರ ಕೂಡದೆಂದು ಜನಸಂಘವು ಸ್ಪಷ್ಟವಾಗಿ ಹೇಳುತ್ತಿದೆ. ಬದಲಾವಣೆಯ ಸಮಯದಲ್ಲಿ ಆಂಗ್ಲ ಭಾಷೆಯನ್ನು ಸಡೋಗಿಸಲೂ ಅಡ್ಡಿ ಮಾಡಕೂಡದು."

ಭಾಷಾ ಬಡಬಾಗ್ನಿಯಲ್ಲಿ ಬಿದ್ದು ಭಾರತೀಯರು ಬೆಂದು ಹೋಗಬಾರದೆಂದು ಶ್ರೀ ದೀನ ದಯಾಳ್ ಉಪಾಧ್ಯಾಯರು ಸ್ಪಷ್ಟ ಮಾರ್ಗದರ್ಶನ ಮಾಡಿದ್ದಾರೆ. ಭಾರತದಲ್ಲಿ ಭಾರತೀಯ ಭಾಷೆಯೇ ಆಡಳಿತ ಭಾಷೆಯಾಗಿರಲು ಸಾಧ್ಯ. ಅದಕ್ಕಾಗಿ ಕೆಲವರು ಕಷ್ಟ ಪಡಬೇಕಾದೀತು. ಇದು ವರೆಗೂ ಕೇಂದ್ರ ಸರಕಾರದ ಕೃಪೆಯಿಂದಾಗಿ ಆಂಗ್ಲ ಭಾಷೆಯೊಂದೇ ಭಾಷೆ, ಇತರವು ಕೀಡು ಜನರ ಭಾಷೆಯೆಂದು ಕೆಲವರುತಿಳಿದುಕೊಂಡಿದ್ದಲ್ಲಿ ಅದನ್ನು ಇನ್ನು ಮುಂದೆ ಬದಲಾಯಿಸಲೇ ಬೇಕಾಗುತ್ತದೆ. ಅವರಿಗೆ ಭಾರತೀಯ ಭಾಷೆಯ ಜ್ಞಾನವಿಲ್ಲವೆಂಬ ಕಾರಣದಿಂದಾಗಿ ಅವರನ್ನು ಸಮುದ್ರಕ್ಕೆಸೆಯುವದೂ ನ್ಯಾಯವಿರುವದಿಲ್ಲ. ಪ್ರಾದೇಶಿಕ ಭಾಷೆಗೆನೇ ಪರಮೋಚ್ಚ ಪದವಿಯನ್ನಿತ್ತಲ್ಲಿ ಕೇರಳದ ಮಲೆಯಾಳ ಕಾಶ್ಮೀರದಲ್ಲಿ ಕಾಲಿಸುವಂತಿಲ್ಲ. ಅಸ್ಸಾಮಿನ ಅಸಾಮಿ ಮಹಾರಾಷ್ಟ್ರದಲ್ಲಿ ಮಾತ್ರಕತೆ ಮಾಡುವಂತಿಲ್ಲ. ಆದುದರಿಂದಲೇ ಅವರು ಸಂಪರ್ಕ ಭಾಷೆಯ ಅವಶ್ಯಕತೆಯನ್ನು ಒತ್ತಿ ಹೇಳಿರುವರು. ಸಂಪರ್ಕ ಭಾಷೆಯ ಪಾತ್ರ ಭಾಷಾ ಹೂಗಳನ್ನು ಪೋಣಿಸಲಿಕ್ಕಾಗಿ. ಆದುದರಿಂದ ಮೊದಲು ಬೇಕಾಗುವದು ಹಾ—ಹಗ್ಗ ಅಲ್ಲ. ಆನಂತರ ಹಗ್ಗ. ಅದೇ ಸಂಪರ್ಕ ಭಾಷೆ.

ಶ್ರೀಯುತರ ಮಾತಿನಿಂದ ಅವರಿಗೆ ಭಾರತದ ಎಲ್ಲಾ ಭಾಷೆಗಳ ಮೇಲೂ ಸಮಾನ ಅಭಿಮಾನವಿತ್ತೆಂಬುದು ಸ್ಪಷ್ಟವಾಗುತ್ತದೆ. ಭಾರತೀಯ ಭಾಷೆಗಳು ಕಮಲದಳಗಳು. ಅವೆಲ್ಲವು ಸೇರಿದರೇನೇ ಆಕರ್ಷಣೀಯ ಪುಷ್ಪ. ಅದನ್ನರಿತುಕೊಳ್ಳದೆ ತನ್ನ ದಳವೇ (ಭಾಷೆಯೇ) ಪೂರ್ಣ ತಾವರೆಯೆಂದು ಮೆರೆದಾಡುವವರು ನಿಜವಾಗಿಯೂ ಅರೆಗಳೇ ಇದ್ದಾರೆ. ತನ್ನ ಭಾಷೆ ಮೇಲು, ಅವನ ಭಾಷೆ ಕೀಳೆನ್ನುವದು ಸರಿಯಲ್ಲ, ಎಲ್ಲವೂ ನಮ್ಮ ಭಾಷೆಗಳೇ. ಈ ಅನುಭಾವ ಭಾರತೀಯರೆಲ್ಲರಲ್ಲಂಟಾಯಿತೆಂದರೆ ಭಾಷಾ ಬಡಬಾಗ್ನಿಕ್ಕೆ ಆಸ್ಪದವೇ ಇರಲಿಕ್ಕಿಲ್ಲ.

ಸಂಪರ್ಕ ಭಾಷೆಯನ್ನು ಯಾರ ಮೇಲೂ ಹೇರುವ ಮನಸ್ಸು ಶ್ರೀಯುತರಿಗಿರಲಿಲ್ಲ. ಸಂಪರ್ಕ ಭಾಷೆಯನ್ನು ಯಾರ ಮೇಲೂ ಹೇರುವದು ಸರಿಯಲ್ಲ. ಅವರಾಗಿಯೇ ಸ್ವ-ಉತ್ಸಾಹದಿಂದ ಅದನ್ನು ಬರಮಾಡಿಸಿಕೊಳ್ಳಬೇಕು. ಅಲ್ಲಿ ವ್ಯಾಪಾರದ ಮಾತಿಗೆ—ಅಂದರೆ ನಾನು ಹಿಂದಿ ಕಲಿಯುತ್ತೇನೆ, ನೀನು ತಮಿಳು ಕಲಿಯುವಿಯಾ? ನಾನು ಹಿಂದಿ ಕಲಿಯಬೇಕಾದಲ್ಲಿ ನೀನು ಕನ್ನಡ ಕಲಿಯಲೇ ಬೇಕು, ಯಾಕೆಂದರೆ ಹಿಂದಿ ನನಗೆ ಹೆಚ್ಚಿನ ಭಾರ—ಭಾರದ ಮಾತಿಗೆ ಎಡೆಯೇ ಇಲ್ಲ; ಪರಸ್ಪರ ತಿಳುವಳಿಕೆ, ಅಷ್ಟೇ. ಅದನ್ನೇ ಉಪಾಧ್ಯಾಯರು ನನಗೆ ತಿಳಿಸಿದ್ದರು.

ಹೌದು. ನಿಜವಾಗಿಯೂ ಅವರು ಉಪಾಧ್ಯಾಯರೇ ಹೌದು. ಕ್ಲಿಷ್ಟ ಸಮಸ್ಯೆಗಳ ಕುರಿತು ಕೇಳಿದಾಗಲೂ ಅವರು ಬಹಳ ಸುಲಭವಾಗಿ ಅರ್ಥವಾಗುವಂತೆ ಹೇಳಿಕೊಡುತ್ತಿದ್ದರು. ಆದುದರಿಂದಲೇ ಶ್ರೀಯುತರನ್ನು "ಅಜಾತ ಶತ್ರು"ವೆಂದು ಕರೆದಿರುವರು. ಶ್ರೀ ರಾಜಾಜಿಯವರು ಶ್ರೀಯುತರನ್ನು ಉತ್ತಮ ಪಂಡಿತವರೇಣ್ಯರೆಂದು ಪ್ರಶಂಶಿಸಿರುವರು. ಭಾಷಾ ಬಡಿದಾಟ ನಡೆಯುತ್ತಿದ್ದಾಗ, ಭಾಷಾಂಧಕಾರ ಹಬ್ಬಿದ್ದಾಗ ಜನತೆಗೆ ಸಂಪರ್ಕ ಭಾಷೆಯ ಸರಿಯೂದ ತಿಳುವಳಿಕೆಯನ್ನು ಮಾಡಿಕೊಟ್ಟವರಲ್ಲಿ ಶ್ರೀಯುತರೂ ಒಬ್ಬರು. ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ಮುನ್ಶಿಯವರು ಶ್ರೀಯುತರಿಗೆ ಗೌರವ ಸಲ್ಲಿಸುತ್ತ ಅವರನ್ನು ಐಕ್ಯತೆಯ ಪ್ರವಾದಿಯೆಂದು ಹೇಳಿರುವರು. ಭಾಷಾ ಬಡಿದಾಟದ, ಬಿಕ್ಕಟ್ಟಿನ ನಡುವೆ, ಶ್ರೀ ರಾಜಾಜಿಯವರು ತಮಿಳ್ನಾಡಿನ ರಾಜ್ಯ ಸರ್ಕಾರದ ಸಹಾಯದಿಂದ ಕೇಂದ್ರದ ಮೇಲೆ "ಯುದ್ಧ"ಸಾರಿದ್ದ ಸಮಯದಲ್ಲಿ ಭಾಷೆಯ ಹೆಸರಲ್ಲಿ ದೇಶ ವಿಭಜನೆಯಾಗುತ್ತದೆಂದು ಕೆಲವರು ಬೆದರಿಸಿದಾಗ, ಇವರೆಲ್ಲರನ್ನು ಐಕ್ಯತೆಯ ದಾರದಲ್ಲಿ ಪೋಣಿಸಿದವರು ಶ್ರೀ ದೀನದಯಾಳ ಉಪಾಧ್ಯಾಯರು.

ಕಲ್ಲಿಕೋಟೆಯ ಭವ್ಯ ಸ್ವಾಗತ ಅವರಲ್ಲಿ ವೈಯುಕ್ತಿಕ ಬದಲಾವಣೆಯನ್ನುಂಟುಮಾಡಲಿಲ್ಲ. ಜನವರಿ ದಿನಾಂಕ ಎರಡರಂದು ದೊಡ್ಡ ಬಳ್ಳಾಸ ರಂದಲ್ಲಾಡಿದ ಕೆಲ ಮಾತುಗಳು:

"ನಾವು ಹಿಂದೂಸ್ಥಾನದವರೆಂಬ ಭಾವನೆ ಮನಸ್ಸಿನಲ್ಲಿ ಮೂಡಿದಾಗ ಎಲ್ಲ ಕೆಲಸವೂ ಅದಕ್ಕೆ ತಕ್ಕಂತೆ ನಡೆಯುತ್ತದೆ.... ನಮ್ಮನ್ನೆಲ್ಲ ಒಂದುಗೂಡಿಸುವ ಯಾವುದಾದರೂ ಒಂದು ಶಕ್ತಿ ಇದ್ದರೆ ಅದು 'ಹಿಂದೂ' ಶಬ್ದ. ಆದಿಕಾಲದಿಂದ ಹರಿದು ಬಂದಿರುವ ನಮ್ಮ ಇತಿಹಾಸ, ಧರ್ಮ, ಸಂಸ್ಕೃತಿ, ನಮ್ಮ ಕಲ್ಪನೆಗಳು, ವಿಚಾರಗಳು ಹೀಗೆ ಎಲ್ಲವೂ ಸಮಾವೇಶಗೊಂಡಿರುವ ಶಬ್ದ ಅಂದರೆ 'ಹಿಂದೂ'....ಎಲ್ಲಿ ವರೆಗೆ ಈ ವಿಚಾರ ನಮ್ಮೆದುರು ಬರುವದಿಲ್ಲವೋ ಅಲ್ಲಿಯ ವರೆಗೆ ನಮ್ಮ ಕರ್ತೃತ್ವವನ್ನು ಒಂದುಗೂಡಿಸಿ ಅದರ ಉಪಯೋಗ ಪಡೆಸುವಲಾರೆವು. ಅದು ಇಲ್ಲದೆಂದೇ ಕನ್ನಡ, ತಮಿಳು, ತೆಲುಗು, ಇತ್ಯಾದಿ ಭಾಷೆಗಳು ಬೇರೆ ಬೇರೆಯೆಂದು ಕಾಣುತ್ತಿವೆ. ಆದರೆ ಒಮ್ಮೆ "ಹಿಂದೂ"ಅನ್ನುವ ಜ್ಞಾಪಕ ಬಂದಿತೆಂದರೆ ತಮಿಳರೂ ಹಿಂದೂಗಳೇ, ತೆಲುಗರೂ ಹಿಂದೂಗಳೇ ಎನ್ನುವ ಆತ್ಮೀ

ಯತೆ ಬರುತ್ತದೆ. ಎಲ್ಲ ಭಾಷೆ, ಪ್ರಾಂತಗಳು, ಜನರು, ಮಹಾಪುರುಷರೆಲ್ಲರ ಬಗ್ಗೆಯೂ ಅತ್ಯೋಗ್ಯ ಭಾವನೆ ಉಂಟಾಗುತ್ತದೆ....ನಮ್ಮತನ ಅರಿವಾದಾಗ, ನಮ್ಮ ಹಿಂದೂ ಜೀವನ ಪದ್ಧತಿ, ನಮ್ಮ ರಾಷ್ಟ್ರ ಜೀವನದ ಅರಿವು ಆದಾಗ ನಮ್ಮ ಎಲ್ಲ ಶಕ್ತಿಯೂ ಆದರ್ಶಕ್ಕಾಗಿ ವಿನಿಯೋಗವಾಗುವುದು. ಆದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ....ನಮ್ಮ ಪೂರ್ವಜರ ಕೃಪೆಣೆ ಇದ್ದರೆ ಅವರ ಎಲ್ಲ ಗುಣಗಳನ್ನೂ ಅಂಗೀಕರಿಸಿ ಮುನ್ನಡೆಯುತ್ತೇವೆ. ಅವರ ಗುಣ ಸಂಪತ್ತಿನಿಂದ ವೃದ್ಧಿಗೆಳೆಯುತ್ತೇನೆ. ನಾವೆಲ್ಲರೂ ಒಂದೇ, ನಮ್ಮ ದೇಶ ಒಂದೇ, ಇತಿಹಾಸ ಒಂದೇ ಇತ್ಯಾದಿ ವಿಚಾರಗಳು ಸಾಮಾನ್ಯನಿಗೆ ಚೆನ್ನಾಗಿ ಗೊತ್ತಿದೆ. ದೊಡ್ಡದೊಡ್ಡ ವರಿಗೆ ಗೊತ್ತಿರುವದಿಲ್ಲ. ಹಿಂದಿ, ತೆಲುಗು, ಕನ್ನಡ ಸೂತನಾಡುವಾಗ ಆತ್ಮೀಯ ಭಾವನೆ ಇದ್ದರೆ ತಾನಾಗಿ ಅರ್ಥವಾಗುತ್ತದೆ; ಮಗು ಅಳುತ್ತ, ತೊದಲು ನುಡಿಯಿಂದ ಮಾತನಾಡಿದರೂ ತಾಯಿಗೆ ತಿಳಿಯುವುದೆ ಎಲ್ಲರಿಗೂ ಈ ದೃಷ್ಟಿ ಲಭಿಸಿದರೆ ಎಷ್ಟೆತ್ತು ಕೋಟಿ ಜನರು ಏನನ್ನು ಮಾಡಲಾರರು? ....ಹೀಗೆ ರಾಷ್ಟ್ರವೇ ನಮ್ಮ ಜೀವನದ ಕೇಂದ್ರ ಬಿಂದು. ಇಂಥನ ಸ್ಥಿತಿಯಲ್ಲಿ ಇದನ್ನು ಮರೆತೆವೆಂದರೆ ರಾಜ್ಯ-ರಾಜ್ಯಗಳೊಳಗಿನ, ಭಾಷೆ-ಭಾಷೆಗಳೊಳಗಿನ ಸಂಘರ್ಷ ಬೆಳೆದೀತು....*

ಪ್ರಸ್ತುತ ಚಿತ್ರವನ್ನು ಎಬ್ಬಿಸಿಟ್ಟದ್ದಾರೆ ಉಪಾಧ್ಯಾಯರು. ಅವರ ಈ ವೈಶಿಷ್ಟ್ಯ ಪೂರ್ಣ ಗುಣವನ್ನು ತಿಳಿದುಕೊಂಡವರ, ಈಗಿನ ಪರಿಸ್ಥಿತಿಯಲ್ಲಿ ಅವರು ಅಂತಾಗಬಾರದಾಗಿತ್ತೆಂದು ಉದ್ಗಾರ ತೆಗೆದಿರುವರು.

ಯಾವ ಭಾಷೆಯನ್ನೂ ಅವರು ವಿರೋಧಿಸುವದಿಲ್ಲ. ಆಂಗ್ಲ ಭಾಷೆ ಏನೇ ಇರಲಿ, ಅವರು ವೈರಮನೋಭಾವನೆಯಿಂದ ಕಂಡವರಲ್ಲ. ಆಂಗ್ಲ ಭಾಷೆಯಲ್ಲೂ ಅವರು ಮಹಾನ್ ಕೃತಿಗಳನ್ನು ರಚಿಸಿದ್ದಾರೆ. ಆಂಗ್ಲ ಭಾಷೆ ಇಲ್ಲಿ ಅಡಳಿತ ಭಾಷೆಯಾಗಿರಕೂಡದೆಂಬುದೇ ಅವರ ಪ್ರಸ್ತುತ ಅಭಿಪ್ರಾಯ. ಆಂಗ್ಲ ಭಾಷಾ ವ್ಯಾಮೋಹದಾಗೂ ಪ್ರಾದೇಶಿಕ ಭಾಷಾ ದುರಭಿಮಾನದಿಂದ ಯಾರಾದರೂ ಇತರ ಭಾಷೆಗಳನ್ನು ಕಳೆದಾಗ ಅವರ ಕೋಮಲ ಮನಸ್ಸಿಗೆ ನೋವಾಗುತ್ತಿತ್ತು.

ಭಾಷಾ ಬಡಬಾಗ್ನಿಯಲ್ಲಿ ಬೇಳದಂತೆ ಚ್ಚರಿಸಿದ ಭಾರತೀಯ ಉಪಾಧ್ಯಾಯರ ಪಾರ್ಥಿವ ಶರೀರವನ್ನು ಇನ್ನು ನಾವು ಕಾಣಲಾರೆವು. ಈ ವಿಷಯದಲ್ಲಿ ನಾವು ದುರದೃಷ್ಟವಂತರೇ ಸರಿ. ಇಂತಹ ಪಂಡಿತರತ್ನ, ದೀನದಯಾಳುವನ್ನು, ಉಪಾಧ್ಯಾಯರನ್ನು, ಮಹಾಮೇಧಾವಿಯನ್ನು ಒಗ್ಗಟ್ಟಿಗಾಗಿ ಜೀವನದ ಪ್ರತಿಯನ್ನು ಅರ್ಪಿಸಿದವರನ್ನು, ರಾಜಕೀಯ ಸನ್ಯಾಸಿಯನ್ನು, ನಿಸ್ವಾರ್ಥಿಯನ್ನು, ಪ್ರಾಮಾಣಿಕನನ್ನು, ದೇಶಭಕ್ತನನ್ನು, ಅವೈರಿಕಿಂತಲೂ ಅಜಾತ ಶತ್ರುವೆಂದೆಲ್ಲರೂ ತಿಳಿದುಕೊಂಡಿದ್ದ ಪಂಡಿತ ದೀನದಯಾಳ ಉಪಾಧ್ಯಾಯರನ್ನು ಅಂತ್ಯಗೊಳಿಸುವ ಅಧಮಾಧಮರು ಇದ್ದಾರೆಂಬುದು ಆಶ್ಚರ್ಯದ ಸಂಗತಿಯೇ ಇದೆ, ತಲೆತಗ್ಗಿಸುವಂತಹ ವಿಷಯವೇ ಇದೆ.

ಕೆಳಗೆ ತೀರ್ಮಾನ

ಹೊಸ ಪ್ರದರ್ಶನಕ್ಕೊಂದು ದಾರಿ

ಕಛ್‌ರಣದ ವಿವಾದದ ಕೇಲಿ ನ್ಯಾಯ ಮಂಡಳಿಯು ತನ್ನ ನಿರ್ಣಯವನ್ನು ನೀಡಿದೆ. ಈ ಪ್ರದೇಶದ ಮೂರುವರೆ ಸಾವಿರ ಚದರ ಮೈಲ ಪ್ರದೇಶವು ತವಗೆ ಸೇರಿದುದೆಂಬುದು ಪಾಕಿಸ್ತಾನದ ವಾದ. ಇದಕ್ಕೆಂದೇ ಎರಡೂವರೆ ವರ್ಷಗಳಿಗೆ ಮೊದಲದು ಆಕ್ರಮಣವನ್ನೂ ಮಾಡಿತ್ತು. ಮತ್ತೆ ವಿವಾದವನ್ನು ನ್ಯಾಯ ಮಂಡಳಿಗೊಪ್ಪಿಸಲು. ಉಭಯ ಪಕ್ಷಗಳೂ ಒಪ್ಪಿದವು

ಕಛ್‌ರಣವು ಭಾರತಕ್ಕೆ ಸೇರಿದ್ದು. ಆದರೂ ಪಾಕಿಸ್ತಾನ—ಭಾರತಗಳ ಗಡಿಯನ್ನು ಈ ಪ್ರದೇಶದಲ್ಲಿ ಸರಿಪಡಿಸಿ ಗೊತ್ತು ಪಡಿಸುವುದು ಮಾತ್ರ ಬಾಕಿಯಿದ್ದು, ನ್ಯಾಯ ಮಂಡಳಿಯು ಈ ಕಾರ್ಯವನ್ನು ಮಾಡಬೇಕಿತ್ತು. ಭಾರತವು ತನ್ನ ಪರವಾಗಿ ಯುಗೋಸ್ಲಾವಿಯವನ್ನೂ ಪಾಕಿಸ್ತಾನವು ಇರಾಣವನ್ನೂ ನಾಮಕರಣ ಮಾಡಿದುವು. ಯುನೈಟ್ಡ್ ರಾಷ್ಟ್ರ ಸಂಘವು ಸ್ವೀಡನ್ನನ್ನು ನೇಮಿಸಿತು. ಈ ಮೂರು ದೇಶಗಳ ನ್ಯಾಯವಾದಿ ಪ್ರತಿನಿಧಿಗಳ ಮುಂದೆ ಉಭಯ ಪಕ್ಷಗಳೂ ತಂತಮ್ಮ ವಾದಗಳನ್ನು ಪ್ರಬಲವಾಗಿಯೇ ಮಂಡಿಸಿದುವು

ನ್ಯಾಯ ಮಂಡಳಿಯು ಅಂತಿಮ ತೀರ್ಮಾನಕ್ಕೆ ಬಂತು. — ಇದರಂತೆ ಈಗ ಭಾರತದ ವಶವಿರುವ ಕಛ್‌ರಣದಲ್ಲಿ ಮೂನ್ನೂರು ಚದರ ಮೈಲಿಗಳಷ್ಟು ಭಾಗವನ್ನು ಪಾಕಿಸ್ತಾನ ಹೊಂದುವುದು. ಇದರಿಂದ ಪಾಕಿಸ್ತಾನವು ಸಂತುಷ್ಟವಾಗಿದೆ ಭಾರತೀಯರು ಮಾತ್ರ ಖಿನ್ನರಾಗಿದ್ದಾರೆ.

ಭಾರತ ಸರಕಾರ ತನ್ನ ವಾದವನ್ನು ಸಮರ್ಥ ರೀತಿಯಲ್ಲಿ ಮಂಡಿಸಲಿಲ್ಲ—ಇದು ವಿರೋಧ ಪಕ್ಷೀಯರ ಖಚಿತ ಅಭಿಪ್ರಾಯ. ಆದುದರಿಂದ ಇಂದಿರಾ ಗಾಂಧಿಯವರ ಸಚಿವ ಸಂಪುಟ ಅಧಿಕಾರದಲ್ಲುಳಿಯಬಾರದು—ಎಂತಲೇ ಅವಿಶ್ವಾಸ ನಿರ್ಣಯ.

ವಿರೋಧ ಪಕ್ಷೀಯರಿಗೆ ಕಂದೂ ಗೊತ್ತು—ಅವಿಶ್ವಾಸ ನಿರ್ಣಯ ನಿಜಕ್ಕೂ ಬಿದ್ದು ಹೋಗುತ್ತದೆ, ಒಂದು ವೇಳೆ ಇಂದಿರಾ ಗಾಂಧಿ ಸಂಪುಟ ಉರುಳಿದರೂ ನ್ಯಾಯ ಮಂಡಳಿಯ ನಿರ್ಣಯ ಬದಲಾಗುವುದಿಲ್ಲ ಅಂತ್ಯವಿದೆಲ್ಲಾ ಏನ? ವೀರಾವೇಶ— ಉದ್ವೇಗ — ಗೂಂದಲ—ಗಡ್ಡಲ!

ಇಂದಿರಾ ಸಂಪುಟವು ನ್ಯಾಯಮಂಡಳಿಯ ತೀರ್ಪನ್ನು ಒಪ್ಪಬೇಕು ಎನ್ನುವ ನಿರ್ಧಾರಕ್ಕೆ ಬಂದಿದೆ. ಅಂತಾರಾಷ್ಟ್ರೀಯ ದೃಷ್ಟಿಯೇ ಇದಕ್ಕೆ ಕಾರಣ. ಆದರೂ ಅದಕ್ಕೊಂದೇ ಚಿಂತೆ. ನಿರ್ಣಯವು ಗವರ್ನರ್‌ಮಂತ್ರದ ನಿರ್ಣಯವಾಗಿ ಬಂತು. ಇದೇ ಅದರ ಎಡವಟ್ಟಿನವ ತಂತು.

ಮಾಜಿ ಗವರ್ನರ ಜನರಲ್ ಇತ್ಯಾದಿ ಬಿರುದಾಂಕಿತ ಚಕ್ರವರ್ತಿ ರಾಜಗೋಪಾಲಾಚಾರಿಯವರು ತೀರ್ಪನ್ನು ಮನ್ನಿಸಬೇಕು ಅಂದಿದ್ದಾರೆ ಹೆಚ್ಚಿನ ವಿರೋಧಿ ಪಕ್ಷಗಳ ನಾಯಕರು ತಿರಸ್ಕರಿಸಬೇಕಂದಿದ್ದಾರೆ ಒಂದು ಬ್ರಹ್ಮ ಪ್ರದರ್ಶನ, ಬಂದ್ ಆರಂಭಿಸುವುದಕ್ಕ ಇದಕ್ಕಿಂತ ಉತ್ತಮವಕಾಶ ಬೇರೆಯಿಲ್ಲ!

ಕೇಂದ್ರದ ಮಾಜಿ ಶಿಕ್ಷಣ ಮಂತ್ರಿ ಎಂ.ಸಿ. ಛಾಗ್ಲಾ ಅವರು ಕಛ್ ತೀರ್ಮಾನವನ್ನು ಕಡಗಣಿಸಬೇಕೆಂದಿದ್ದಾರೆ, ಇದು ನ್ಯಾಯ ಮಂಡಳಿಯ ತೀರ್ಮಾನವಲ್ಲ, ರಾಜಕೀಯ ಮಂಡಳಿಯ ನಿರ್ಣಯವೆನ್ನುತ್ತಾರೆ ಅವರು. ಒಂದು ಭೂಪ್ರದೇಶದ ಸ್ವತ್ತು ಪಾಕ್ ನೆಲವಿರುವುದರಿಂದ ಅದು ಪಾಕಿಸ್ತಾನಕ್ಕೆ ಬರುವಂತೆ ಗಡಿ ನಿರ್ಣಯ ಸಬೇಕು ಎಂಬುದಕ್ಕೆ ನ್ಯಾಯ ಸಮರ್ಥನೆಯೆಲ್ಲಿಳ್ಳತ್ತೂ ಇಲ್ಲ. ರಾಜಕೀಯ ಪೂರ್ವಗ್ರಹ ಮಾತ್ರ ಅಡಗಿದೆ. ಆದುದರಿಂದ ರಾಜಕೀಯ ಮಂಡಳಿಯಂತೆ ತೀರ್ಮಾನ ಮಾಡಿದ ಈ ನ್ಯಾಯ ಮಂಡಳಿಯ ನಿರ್ಣಯವನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಎನ್ನುತ್ತಾರೆ ವಿರೋಧಿಗಳು.

ಹೀಗೆ, ತೀರ್ಮಾನವು ಇಂದಿರಾ ಸಂಪುಟಕ್ಕೆ ಸಂಕಟವಾದಂತೆ ದೇಶದಲ್ಲಿ ಭಿನ್ನಭಿನ್ನ ಮತಗಳು ಹೊರಟಿರುವಂತೆಯೇ ಮಾಧ್ಯಮದಿಂದ ತೀರ್ಮಾನ ತಿರಸ್ಕರಿಸಿದರೆ, ಗಂಭೀರ ಪರಿಣಾಮವನ್ನುದಿಸಬೇಕಾದೀತೆಂಬ ಎಚ್ಚರಿಕೆಯೂ ಬಂದಿದೆ. ಇದು ಸುಳ್ಳು—ಯೋಗಗಳಿಂದ ಕೂಡಿದ ಪಾಕಿಸ್ತಾನೀ ಮಾತುಗಳು ಭಾಷೆಯಲ್ಲಿದ್ದರೂ ಹೊಗುವುಕ್ಕೆಂದಿದ್ದೆ?

ಅಂತಾರಾಷ್ಟ್ರೀಯ ದೃಷ್ಟಿಯಿಂದ ಕಛ್ ನಿರ್ಣಯವನ್ನು ಒಪ್ಪಲೇ ಬೇಕಾಗುವುದು-ಇದು ಇಂದಿರಾ ಗಾಂಧಿಯ ಮಾತು ಈ ಬುದ್ಧಿ ಇಂದಿರಾಗಿ ಯಾವಾಗ ಬಂತೋ ತಿಳಿಯುವುದಿಲ್ಲ. ಮಹಾಜನ ಆಯೋಗ ನೇಮಕದ ವೇಳೆ ಮಹಾರಾಷ್ಟ್ರ—ಕರ್ನಾಟಕಗಳು ಆಯೋಗದ ಸಲಹೆಗಳನ್ನು ಒಪ್ಪಬೇಕು ಎಂದು ಒಪ್ಪಿದ್ದರೂ ಈಗ ಕೇಂದ್ರ ನ್ಯಾಯ ಕರಾಡುವ ಹೊಸ ನಾಟಕ ಇಂದಿರಾ ಗಾಂಧಿಯವರ ಈ ವೈಶಿಷ್ಟಕ್ಕೆ ದೂರವಾದುದು. ಕಛ್‌ರಣದ ಭಾಗವನ್ನು ಪಾಕಿಸ್ತಾನಕ್ಕೆ, ಒಂದು ವಿದೇಶಕ್ಕೆ ಬಿಟ್ಟು ಕೊಡುವಷ್ಟು ಉದಾರರಾದ ಇವರು ದೇಶದ ಭಾಗವನ್ನು ದೇಶದ ಒಂದು ರಾಜ್ಯದಲ್ಲಿಯೇ ಉಳಿಯಗೆಡುವುದ್ದು ಉದಾಸೀನತೆಯೇಕೆ ತೋರಿಸುತ್ತಾರೆ-ಇದು ಕನ್ನಡಿಗರ ಪ್ರಶ್ನೆ.

ಇಂದಿರಾ ಸಂಪುಟ ಕಛ್ ತೀರ್ಮಾನಕ್ಕೆ ಶರಣಾಗುವುದೂ—ಇದರಿಂದ ಸ್ವಲ್ಪ ವಿರೋಧವನ್ನು ಎದುರಿಸಬೇಕಾಗುವುದೂ ನಿಜ.



ಶ್ರೀ ಕಂಠಯ್ಯ
ಪ್ರಧಾನ ಕಾರ್ಯದರ್ಶಿ
ಉ ಧಾಂಟ್

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ, ಆರೋಗ್ಯವರ್ಧಕ ಹಾಗೂ ಉಲ್ಲಾಸಕರ ಟಾನಿಕ್
ಪ್ರಾಚೀನವಾದ ಆಯುರ್ವೇದ ವಿಧಿ ಪ್ರಕಾರ ಪ್ರಸಿದ್ಧ ವೈದ್ಯರಿಂದ ತಯಾರಿಸಲ್ಪಟ್ಟಿದೆ, ಇದರಿಗೆ ಬರೆದುಂ

SHANKAR PHARMACY
BHADRAVATI (MYSORE)

"NAVAJEEVA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಕಾಸರಗೋಡಿನಲ್ಲೇನಿದೆ?

(ಐದನೇ ಪುಟದಿಂದ)

ಆಹಾರ ಧಾನ್ಯಗಳ ಮಟ್ಟಿಗೆ ಈ ತಾಲೂಕು ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನೇ ಹಿಂದೆ ಅವಲಂಬಿಸಿತ್ತು. ಅಡಿಕೆ, ಕೊಬ್ಬರಿ, ಗೇರುಬೀಜ, ಕಾಳು ಮೆಣಸು, ಮರ, ಹುರಿಹಗ್ಗ, ಎಣ್ಣೆ, ತರಕಾರಿ, ಮುಂತಾದುವೇ ಇಲ್ಲಿಂದ ಹೆಚ್ಚಾಗಿ ನಿರ್ಯಾತ.

ಕಾಸರಗೋಡು — ಮಂಗಳೂರುಗಳ ನಡುವಣ ರೇಲ್ವೆಯು ಕೆಲವೆಡೆಗಳಲ್ಲಿ ಸಮುದ್ರಕ್ಕೆ ಅತಿ ಸಮೀಪದಲ್ಲಿ ಸಾಗುತ್ತಿದ್ದು ಪಡುಗಡಲ ಈ ರಮ್ಯ ತೀರದಲ್ಲಿ ಪ್ರಯಾಣವು ಉತ್ಸಾಹದಾಯಕವಿದೆ.

ರಾಷ್ಟ್ರೀಯ ಹೆದ್ದಾರಿ

ಪಶ್ಚಿಮ ತೀರ ರಸ್ತೆಯು ರಾಷ್ಟ್ರೀಯ ಹೆದ್ದಾರಿಯ ಭಾಗವಾಗಿದ್ದು ಈ ತಾಲೂಕಿನ ಕರಾವಳಿಯ ಮೂಲಕ ಹಾದು ಹೋಗುತ್ತಿದೆ.

ಒಂದು ಸೇತುವೆ ಮತ್ತು ನೇರ ರಸ್ತೆಗಳ ನಿರ್ಮಾಣವಾಗುತ್ತಿರುವುದು ಪೂರ್ತಿಗೊಂಡಾಗ ಕಾಸರಗೋಡಿನಿಂದ ಮಂಗಳೂರಿಗೆ ಕರಾವಳಿ ರಸ್ತೆಯಲ್ಲಿ ಕೇವಲ ಮೂವತ್ತು ಮೈಲಿ ಮೋಟಾರು ಪ್ರಯಾಣ ಮಾಡಿದರಾಯ್ತು. ಈಗ ಈ ಎರಡು ನಗರಗಳ ಮಧ್ಯೆ ವಿಟ್ಲಕ್ಕಾಗಿ ಹಾದು ಹೋಗುವ ರಸ್ತೆಯ ಮೂಲಕ 56 ಮೈಲಿ ದೂರ.

ಯಕ್ಷಗಾನ ಕಲೆಯ ತವರೂರು ಎನಿಸಿದ ಈ ತಾಲೂಕಿನಲ್ಲಿ ಅನೇಕ ಯಕ್ಷಗಾನ ಸಂಘಗಳೂ ಸದಾ ಪ್ರವರ್ತಿಸುತ್ತಿವೆ.

ಕುಂಬಳೆ, ಕೋಳಿ ಅಂಕ, ಭಜನೆ, ಬಯಲಾಟ ಮುಂತಾದುವುಗಳು ಸಾಂಸ್ಕೃತಿಕ ಹಾಗೂ ಮನರಂಜನಾ ಚಟುವಟಿಕೆಗಳಾಗಿವೆ.

ಅನೇಕ ಮಂದಿ ಪ್ರಸಿದ್ಧ ಬರೆಹಗಾರರೂ, ಕವಿಗಳೂ, ಸಾಹಿತಿಗಳೂ, ಕಲಾವಿದರೂ ಇಲ್ಲಿ ಹುಟ್ಟಿ ಬೆಳೆದಿದ್ದಾರೆ.

ವಿದ್ಯುತ್ ಪೂರೈಕೆ ಸೀಮಿತವಾಗಿದ್ದುದರಿಂದಾಗಿ ಕೃಷಿ—ಕೈಗಾರಿಕೆಗಳವಿಕಸನಕ್ಕೆ ಹೆಚ್ಚಿನ ಸಹಾಯ ಈ ವರೆಗೂ ದೊರೆತಿಲ್ಲ. ವಿದ್ಯುತ್ ಸರಬರಾಜಿಗೆ ಪ್ರಶೇಷದ ಅನೇಕ ಗ್ರಾಮಾಂತರ ಪ್ರದೇಶಗಳಿವೆ. ನಿಸರ್ಗರಮಣೀಯತೆಯ ದೃಶ್ಯಗಳನ್ನು ಅಲ್ಲಿ ಪ್ರದರ್ಶಿಸಿದಂದ ಬೆಟ್ಟಗಳೂ ಗಿರಿಗಳೂ ಅನೇಕ.

ಅತಿ ಅವಗಣಿಸಲ್ಪಟ್ಟ ಪ್ರದೇಶಗಳಲ್ಲಿ ಪ್ರಥಮ ಸ್ಥಾನ ಈ ತಾಲೂಕಿಗೆ ಸಲ್ಲುತ್ತಿದೆಯೆಂದು ಶ್ರೀ ಯು. ಪಿ. ಕುಣಿಕುಳ್ಳಾಯರು ಕೇರಳ ಶಾಸನ ಸಭೆಯಲ್ಲಿ ವಿವರಿಸಿದ್ದರು.

ಈಗ ಮೈಸೂರು ವಿಧಾನ ಸಭಾಧ್ಯಕ್ಷ ಸ್ಥಾನದಲ್ಲಿರುವ ಶ್ರೀ ಬಿ. ವೈಕುಂಠ ಬಾಳಿಗರು ಮದ್ರಾಸು ಶಾಸನ ಸಭಾ ಸದಸ್ಯರಾಗಿದ್ದಾಗ ಈ ತಾಲೂಕಿನ ಮಂಜೇಶ್ವರ ಕ್ಷೇತ್ರವನ್ನೂ ಪ್ರತಿನಿಧೀಕರಿಸಿದ್ದರು.

ಶ್ರೀ ಬೆವಗಲ್ ಶಿವರಾಯರು ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಲೋಕ ಸಭಾ ಸದಸ್ಯರಾಗಿದ್ದಾಗ ಇಡೀ ಕಾಸರಗೋಡು ತಾಲೂಕನ್ನೂ ಪ್ರತಿನಿಧೀಕರಿಸಿದ್ದರು.

ಕೇರಳಕ್ಕೆ ಬಲಾತ್ಕಾರವಾಗಿ ಸೇರ್ಪಡೆಗೊಳಿಸಲ್ಪಡುವ ಮುನ್ನ ಈ ತಾಲೂಕು ಕಾಂಗ್ರೆಸ್ ಪಕ್ಷದ ಹಿಡಿತದಲ್ಲಿತ್ತು.

ಕಾಂಗ್ರೆಸ್ ಪಕ್ಷವು 1956ರಲ್ಲಿ ಮಾಡಿದ್ದ ಅನ್ಯಾಯವನ್ನು ಈಗಲಾದರೂ ಸರಿಪಡಿಸಿದರೆ "ಸತ್ಯಮೇವ ಜಯತೇ" ಎಂಬ ಮಾತಿನ ಅರ್ಥವು ಈ ತಾಲೂಕಿನ ನಿವಾಸಿಗಳಿಗೆ ಬಲು ಬೇಗನೇ ಮನವರಿಕೆಯಾಗೀತು. ದಕ್ಷಿಣ ಕನ್ನಡದೊಂದಿಗೆ ಪುನರ್ವಿಲೀನೀಕರಣಕ್ಕಾಗಿ ಶಾಂತಿಯುತ ಪ್ರಜಾಸತ್ತಾತ್ಮಕ ಚಳವಳಿಗಳನ್ನೇ ಹೂಡಿದ—ಹೂಡಿ ಸಾಧಿಸಿದ ಕೃತಾರ್ಥತೆಯು ನಿಟ್ಟುಸಿರು ಇಲ್ಲಿನ ಜನರ ಮುಖಗಳಿಂದ ಹೊರಹೊಮ್ಮುವುದು.

ಈ ಪ್ರದೇಶವು ದಕ್ಷಿಣ ಕನ್ನಡದ ಭಾಗವೇ ಆಗಿ ವರ್ಷಡುವ ಅ ಸುದಿನವನ್ನು ಲಕ್ಷಾಂತರ ಕಣ್ಣುಗಳು ಕಾಣಲು ಆತುರದಿಂದಿವೆ.

ಪ್ರಾಚೀನ ಕೋಟೆಗಳು

ಕಾಸರಗೋಡು ಮತ್ತು ಕುಂಬಳೆಯಲ್ಲಿ ಪ್ರಾಚೀನ ಕೋಟೆಗಳಿವೆ. ಇವು ಚಾರಿತ್ರಿಕ ಪ್ರಾಧಾನ್ಯತೆಯುಳ್ಳವುಗಳು.

ಮುಳಿಯಾರು, ಮಧೂರು, ನೆಕ್ರಾಜೆ, ಮುಂತಾದ ಗ್ರಾಮಗಳಲ್ಲಿಯೂ ಕೋಟೆಗಳ ಕುರುಹುಗಳಿವೆ.

ವಿದ್ಯಾ ಸಂಸ್ಥೆಗಳು

ಮಂಜೇಶ್ವರ, ಕೊಡ್ಲಮೊಗರು, ಪೈವಳಿಕೆ, ಮಂಗಲ್ಪಾಡಿ, ಮೀಯಪದವು, ಕುಂಬಳೆ, ನೀರ್ಚಾಲು, ಪೆರಡಾಲ, ಅಗಲ್ಪಾಡಿ, ಪೆರ್ಲ, ಎಡನೀರು, ಕಾಸರಗೋಡಿನಲ್ಲಿ ಮೂರು, ಮುಳಿಯಾರು ಮತ್ತು ಉಡುರಿ ನಲ್ಲಾಗಿ ಒಟ್ಟು 16 ಹೈಸ್ಕೂಲು (ಈ ಪೈಕಿ ಒಂದು ಹಯರ್ ಸೆಕೆಂಡರಿ)ಗಳಲ್ಲಿ 260 ಮಂದಿ ಅಧ್ಯಾಪಕರೂ 6000ಕ್ಕೂ ಮಿಕ್ಕಿ ವಿದ್ಯಾರ್ಥಿಗಳೂ ಇರುವರು.

178 ಪ್ರಾಥಮಿಕ ಶಾಲೆಗಳಲ್ಲಾಗಿ ಒಟ್ಟು 1425 ಅಧ್ಯಾಪಕರೂ 37500 ಕ್ಕೂ ಮಿಕ್ಕಿ ವಿದ್ಯಾರ್ಥಿಗಳೂ ಇದ್ದಾರೆ.

ಹೈಸ್ಕೂಲುಗಳ ಪೈಕಿ ಏಳು ಮಾತ್ರವೇ ಸರಕಾರಿ. ಪ್ರಾಥಮಿಕ ಶಾಲೆಗಳಲ್ಲಿಯೂ ಹೆಚ್ಚಿನವು ಖಾಸಗಿ.

ಕಾಸರಗೋಡಿನಲ್ಲಿ ಸುಸಜ್ಜಿತ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿದೆ.

ಮೂಡಿಪ್ಪಾಡಿಯಲ್ಲಿ ಅಧ್ಯಾಪಕರ ತರಬೇತಿ ಶಾಲೆಯಿದೆ.

ವಿದ್ಯಾನಗರದಲ್ಲಿ ಸರಕಾರೀ ಕುರುಡರ ಶಾಲೆಯಿದೆ.

ಗಾಜಿನ ಬಳೆ ಮತ್ತು ಹರಳುಗಳ ನಿರ್ಮಾಣ ಹಾಗೂ ತರಬೇತಿ ಕೇಂದ್ರವು ಕಾಸರಗೋಡಿನಲ್ಲಿದೆ.

ಕೈಗಾರಿಕೋದ್ಯಮಗಳು

ಹೆಂಚು, ಇಟ್ಟಿಗೆ, ಚರ್ಮ ಹದಗಾರಿಕೆ, ಮೀನಿನೆಣ್ಣೆ, ಬಾಚಣಿಗೆ, ಎಣ್ಣೆಗಾಣ, ಕೈಮಗ್ಗದ ಒಟ್ಟೆ ಇತ್ಯಾದಿ ಕೈಗಾರಿಕೋದ್ಯಮಗಳು ಪ್ರಧಾನವಾದವು.

ವಿದ್ಯಾನಗರದಲ್ಲಿ ಹೊಸದಾಗಿ "ಇಂಡಸ್ಟ್ರಿಯಲ್ ಎಸ್ಟೇಟ್" ಸ್ಥಾಪಿತವಾಗಿದೆ.

ಮೋಪಿನ ವ್ಯಾಪಾರವೂ ಬೃಹತ್ಪ್ರಮಾಣದಲ್ಲಿದೆ.

ಕಾಸರಗೋಡಿನಲ್ಲಿ ತಯಾರಾಗುವ ವಿಶಿಷ್ಟ ಜಾತಿಯ ಟೊಪ್ಪಿಗೆಗಳು ವಿದೇಶಗಳಿಗೆ ನಿರ್ಯಾತವಾಗುತ್ತವೆ.

ಅರೇಳು ಮುದ್ರಣಾಲಯಗಳಿವೆ. ಎರಡು ಸಾಪ್ತಾಹಿಕಗಳೂ (ಕನ್ನಡ) ಎರಡು ಮಾಸಪತ್ರಿಕೆಗಳೂ ಪ್ರಕಟಿಸಲ್ಪಡುತ್ತಿವೆ.

"ಲಿಥೋ" ಟೈಸುಗಳನ್ನು ತಯಾರಿಸುವ ಒಂದು ಸಂಸ್ಥೆಯೂ ಇದೆ.

ಪವಿತ್ರ ಕ್ಷೇತ್ರಗಳು

ಆಡೂರು, ಮಧೂರು, ಕುಂಬಳೆ, ಮುಜುಂಕಾವು, ಕಾಸರಗೋಡು, ಪೆರಡಾಲ, ಅಗಲ್ಪಾಡಿ, ಮಲ್ಲ, ಮುಳಿಯಾರು, ಕಂಟಾರು, ಎಡನೀರು, ಕುಮಾರ ಮಂಗಲ, ನೆಟ್ಟಣಿಗೆ, ಕಾಟುಕುಕ್ಕೆ, ಕೋಳಿಯೂರು, ಮಂಜೇಶ್ವರ, ಅನಂತಪುರ, ಮುಂತಾದಲ್ಲಿನ ಪುಣ್ಯಕ್ಷೇತ್ರಗಳು ಸಂದರ್ಶನೀಯ.

ಸಾರಿಗೆ ಸೌಕರ್ಯ

ಇನ್ನಷ್ಟು ಹೆಚ್ಚಬೇಕಾಗಿದೆ. ವಿಪುಲ ಸಾಧ್ಯತೆಗಳಿವೆ. ಕಾಸರಗೋಡು- ಪುತ್ತೂರು; ಕಾಸರಗೋಡು -ಮಡಿಕೇರಿ;- ಕುಂಬಳೆ- ಸುಳ್ಯ; ಕುಂಬಳೆ - ಪುತ್ತೂರು; ಉಪ್ಪಳ - ಪುತ್ತೂರು; ಮಂಜೇಶ್ವರ - ಪುತ್ತೂರುಗಳ ಪಡುವೆ ನೇರ ಬಸ್ ಸರ್ವೀಸುಗಳಿವೆ.

ಎಲ್ಲವೂ ಖಾಸಗಿ ಬಸ್ಸುಗಳು. ಕೇರಳ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸು ಕಾಸರಗೋಡಿನಿಂದ ದಕ್ಷಿಣಕ್ಕೆ ಮಾತ್ರ.

ರೇಲ್ವೆ ನಿಲ್ದಾಣಗಳು

ಅತಿ ದಕ್ಷಿಣದ ರೇಲ್ವೆ ನಿಲ್ದಾಣ ಕಾಸರಗೋಡಿನಿಂದ ಮಂಗಳೂರಿಗೆ 29 ಮೈಲಿ ರೇಲ್ವೆ ಪ್ರಯಾಣದ ಮಧ್ಯೆ ಕೂಡ್ಲು, ಕುಂಬಳೆ, ಶಿರಿಯ, ಉಪ್ಪಳ, ಮಂಜೇಶ್ವರ ನಿಲ್ದಾಣಗಳು ಈ ತಾಲೂಕಿನಲ್ಲಿವೆ.

ಮದ್ರಾಸು, ತಿರು-ಕೊಚ್ಚಿ ಪ್ರದೇಶಗಳಿಂದ ಮಲಬಾರು ತೀರದ ಮೂಲಕ ಮಂಗಳೂರಿಗೆ ಬರುವ ರೇಲ್ವೆ ಕಾಸರಗೋಡಿಗಾಗಿಯೇ ಬರಬೇಕು.

ಅಡಿಕೆ, ಕೊಬ್ಬರಿ, ಹಸಿ ಮತ್ತು ಒಣ ಮೀನು, ಗೋಡಂಬಿ, ತರಕಾರಿ, ಕಾಳು ಮೆಣಸು ಮುಂತಾದವು ರೇಲ್ವೆ ಮೂಲಕವೂ ಸಾಗಿಸಲ್ಪಡುತ್ತಿವೆ.

ಕಾಸರಗೋಡು — ಮಂಗಳೂರುಗಳ ನಡುವೆ ವ್ಯಾಪಾರಿಗಳು, ಕೃಷಿಕರು, ವಿದ್ಯಾರ್ಥಿಗಳು ಹಾಗೂ ಸಂದರ್ಶಕರು ಬಹು ಸಂಖ್ಯೆಯಲ್ಲಿ ಎಲ್ಲಾ ಗಾಡಿಗಳಲ್ಲಿಯೂ ತುಂಬಿರುತ್ತಾರೆ.

ಕಚೇರಿಗಳು

ಕಾಸರಗೋಡು ಪ್ರಧಾನ ನಗರ. ಇದನ್ನು ದೊಡ್ಡ ರೇವಾಗಿ ಅಭಿವೃದ್ಧಿಗೊಳಿಸಿ ಇಲ್ಲಿಂದ ಕಾರವಾರದ ತನಕವೂ ಜಲಯಾನ ಸೌಕರ್ಯ ಕಲ್ಪಿಸಲು ಸಾಧ್ಯವಿದೆ. ರೆವಿನ್ಯೂ ಡಿವಿಜನಲ್ ಹೆಡ್ ಕ್ವಾರ್ಟರ್ಸ್, ಜಿಲ್ಲಾ ವಿದ್ಯಾಧಿಕಾರಿ, ಸಬ್ ಕೋರ್ಟು, ಟ್ರೇಕ್ಸ್ ಆಫೀಸುಗಳು, ಪೆ.ಜ ಸ್ಟೇಟ್—ಮುನ್ಸೀಫ್ ಕೋರ್ಟುಗಳು, ಸಬ್ ಜೈಲು, ತಾಲೂಕು ಕಚೇರಿ, ಸಪ್ಲೈ ಆಫೀಸು, ಇಂಜಿನಿಯರುಗಳ ಕಚೇರಿಗಳು, ಪೋಲೀಸ್, ಅರಣ್ಯ, ಎಕ್ಸೈಸ್, ಆರೋಗ್ಯ, ಕೃಷಿ, ಬ್ಲೋಕು ಡೆವಲಪ್‌ಮೆಂಟ್, ಸಹಕಾರ, ರಿಜಿಸ್ಟ್ರೇಶನ್, ರೇಷ್ಮೆ ಇತ್ಯಾದಿ ಖಾತೆಗಳ ಕಚೇರಿಗಳು ಫೋನ್ ವಿನಿಮಯ, ತಂತೀ ಟಪ್ಪಾಲು—ಹೀಗೆ ಹಲವು ಕಾಸರಗೋಡಿನಲ್ಲಿವೆ. ಕಾಸರಗೋಡು, ಆದೂರು, ಬದಿಯಡ್ಕ, ಕುಂಬಳೆ ಮತ್ತು ಮಂಜೇಶ್ವರಗಳಲ್ಲಿ ಪೋಲೀಸ್ ಠಾಣೆಗಳಿವೆ.

ತಾಲೂಕು ಕೃಷಿಕರ ಸಹಕಾರ ಮಾರಾಟ ಸಂಘವು ಒಂದು ಹಿರಿಯ ಸಂಸ್ಥೆ. ಅನೇಕ ಸಹಕಾರ ಸಂಸ್ಥೆಗಳಿವೆ.

ಕಾಸರಗೋಡಿನಲ್ಲಿ ನೂರಕ್ಕೂ ಮಿಕ್ಕಿ ವಕೀಲರಿದ್ದಾರೆ. ಇವರಲ್ಲಿ ಹೆಚ್ಚಿನವರು ಕನ್ನಡಿಗರು. ಈ ತಾಲೂಕಿನಲ್ಲಿ ಕನ್ನಡ ದೈನಿಕ, ಸಾಪ್ತಾಹಿಕ, ಮಾಸಿಕಗಳ ಪ್ರಚಾರವೇ ಹೆಚ್ಚು.



ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ
ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನ-ಗಳು ಮತ್ತು ಪಂಪು ಸೆಟ್ಟುಗಳು
ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿವೆ
ದೇಶವಿಖ್ಯಾತವಾದ
ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು
ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್
ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್/ಕೆರೊಸಿನ್ ಇಂಜಿನ-ಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು.

READ & ADVERTISE IN
NAVAYUGA WEEKLY

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ನ.)

ಸಮುದ್ರದಂಚಿನ ಸಂಜೆ

ಲೇಖಕರ : ಶ್ರೀ ಪಿ. ವಿ. ಶಾಸ್ತ್ರಿ.

ಪ್ರಕಾಶಕರು: ಶ್ರೀ ಮೂರಿಕಾಂಬಾ ಪ್ರಕಾಶನ ವಿಭಾಗ, ಶಿರಸಿ, ಉ. ಕ.

ಪುಟಗಳು: ೨೦೪.

ಬೆಲೆ: ರೂ. ೨—00.

ರಾಜಣ್ಣ—ಸುನೀಲ ಅಣ್ಣ-ತಂಗಿಯರು. ಇವರಿಬ್ಬರೂ 'ಸ್ವಭಾವದ ಆಕಸ್ಮಿಕ'ದಿಂದ ಚಾರಿತ್ರ್ಯವನ್ನು ಕಳೆದು ನವ ಚರಿತ್ರರಾಗಿ ಒಂದು ಮಹಾ ಸಮಸ್ಯೆಯ ನಿರ್ಮಾಪಕರಾಗಿ ಬೆಳವಣಿಕಾರರಾಗಿ, ಪರಿಹಾರಕಾರಕರಾಗಿ ಕಾದಂಬರಿಯುದ್ದಕ್ಕೂ ನಿಲ್ಲುತ್ತಾರೆ. ಚರಿತ್ರಹೀನತೆಗೆ ಅಸ್ಮಹತ್ಯೆಯನ್ನು ಪರಿಹಾರವೆಂದು ಹೇಳುವವರಿದ್ದಾರೆ, ದೂರ ಪ್ರವಾಸವನ್ನು ಮಾಡಿಸುವವರೂ ಸಚ್ಚಹಿಡಿಸುವವರು ಇದ್ದಾರೆ. ಈ ಕಾದಂಬರಿಯಲ್ಲಿ ಈ ಬಗೆಯ ಕೃತಕತೆಯನ್ನು ಪಾಷಂಡತನವನ್ನು ತರದೆ, ಆದರ್ಶವನ್ನು ಬಲಾತ್ಕಾರವಾಗಿ ಎಳೆದು ತಂದು ಸಖಾಂತವಾಗಿ ಲೇಖಕರು ಮುಗಿಸಿದ್ದಾರೆ.

ತಮ್ಮಿಂದ ಅಪರಾಧವಾಯಿತೆಂದು ತಿಳಿದರೂ ಮುಂದದನ್ನೇ ಅನಿವಾರ್ಯವಾಗಿ ನೆಮ್ಮಿ ಸಾಧನೆಗೆ ಹೊರಟ ಅಣ್ಣ-ತಂಗಿಯರ ಜೀವನ ಪಡುವಲ್ಲಿ ನಾನಾ ದುರಂತಗಳಿಗೆ ದಾರಿ ಮಾಡಿಕೊಡುತ್ತದೆ. ಆದರೂ ಅವರ ಸುದೈವದಿಂದ ಸಮಸ್ಯೆ ಶ್ರಮೇಣ ಪರಿಹಾರವಾಗುತ್ತದೆ. ಕಾದಂಬರಿಯಲ್ಲಿ ಅನೇಕ ಹೃದಯ ಸ್ಪರ್ಶಿ ಅಂಶಗಳಿವೆ. ಪಂಕಜಾಚಾರ್ಯ ಮತ್ತು ಶಿವರಾಮ ಹೆಗಡೇರ ವೃತ್ತಾಂತ-ಪಾತ್ರ ಚಿತ್ರಣ ಸಮಾಜದ ಒಂದೊಂದು ಚಿತ್ರ, ಸರಸಕ್ಕಳದೂ ಆದರ್ಶ ಚರಿತ್ರ, ನರಸರಾಯ.ರದೂ ಕಡಿಮೆಯಲ್ಲ.

ಕಥೆ ಬರೆಯುವುದರಲ್ಲಿ ಪಳಗಿದ ಲೇಖಕರು ಕಾದಂಬರಿ ಬರೆದು ಮುಗಿಸುವುದರಲ್ಲಿ ಸಾಕು ಸಾಕಾಗಿ ಹೋಯಿತು ಎಂದಿದ್ದಾರೆ. ಕಾದಂಬರಿ ಓದುವಾಗ ಇದು ಬಹುಮಟ್ಟಿಗೆ ನಿಜವೆನ್ನಿಸುತ್ತದೆ. ಆದರೂ ಲೇಖಕರ ಸರಳ ಭಾಷೆ ಕಥನ ಕಲೆ ಈ ಸತ್ಯವನ್ನು ಮರೆಯುವಂತೆ ಮಾಡುತ್ತದೆ. ಕಾದಂಬರಿಕಾರರು ಸಮಸ್ಯಾತ್ಮಕ ಕಾದಂಬರಿಯೇ ಉತ್ತಮವೆಂದು ಒಪ್ಪಿಕೊಂಡು, ಇದಕ್ಕೊಂದು ಪರಿಹಾರ ಸೂಚಿಸದೆ ಹೋದರೇನು ಪ್ರಯೋಜನವೆಂದು ಕೇಳಿ, ಅಣ್ಣ-ತಂಗಿಯರಲ್ಲೇ ಲೈಂಗಿಕ ಸಮಸ್ಯೆಯನ್ನು ಆಕಸ್ಮಿಕವಾಗಿಯೇ ತಂದು, ಅದನ್ನು ಮುಂದಕ್ಕೂ ಮಾನವ ಸಹಜ ಪ್ರವೃತ್ತಿಯೆಂದು ಸಮರ್ಥಿಸಿ ಸಮಾಜದ ಮುಂದೆ ನಿಲ್ಲಿಸುತ್ತಾರೆ. ಆದರ್ಶ-ಶುದ್ಧಾತ್ಮತೆಯ ಹೆಸರಿನಲ್ಲಿ ಮಾನವ ಸಹಜ ಪ್ರವೃತ್ತಿಯನ್ನು ಅದುಮುವಂತೆ ಮಾಡಿದ್ದಾರೆ. ಅಣ್ಣ-ತಂಗಿಯರು ಯಾವ ಸಂಸಾರದಲ್ಲಿಲ್ಲ? ಆದರೆ, ಅವರು ಪರಸ್ಪರರಲ್ಲಿ ಲೈಂಗಿಕ ಕೃಷ್ಟಿ ಹೊಂದುವಂತಹ ಘಟನೆ ನಂಬುವುದಕ್ಕೆ ತುಂಬ ಕಷ್ಟ. ಆಧುನಿಕತೆಯ ಬಿರುಗಾಳಿಯಲ್ಲಿ ಸಿಲುಕಿದವರೂ ಎದುರಿಸದ ಇಂತಹ ಸಮಸ್ಯೆಯೊಂದನ್ನೇಕೆ ಕಾದಂಬರಿಕಾರರು ಎತ್ತಿಕೊಂಡರೆಂದು ತಿಳಿಯದಾಗಿದ್ದಿಲ್ಲ—ಹಾಗಾಗಿ ವಸ್ತು—ಆದರ ಉದ್ದೇಶದಲ್ಲಿ ಕೃತಕತೆಯೇ ತಾಂಡವಾಡುತ್ತದೆ. ಈ ಕಾದಂಬರಿಯು ಉತ್ತರ ಕನ್ನಡ ಜಿಲ್ಲೆಯ ಬರಹಕಾರರಿಗೇರ್ಪಡಿಸಿದ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದುದು. ಶ್ರೀ ಶಾಸ್ತ್ರಿಯವರು ಚರಿತ್ರ ಚಿತ್ರಣಕ್ಕೆ ಹೆಚ್ಚಿನ ಅವಕಾಶ ನೀಡಿ, ಸಮಾಜದ ಸಹಜ ಸಮಸ್ಯೆಗಳನ್ನೆತ್ತಿ ಅವಕ್ಕೆ ಸೂಕ್ತ ಪರಿಹಾರ ಸೂಚಿಸಲು ಮುಂದೆ ಬಂದರೆ, ಸಾಹಿತ್ಯಕ್ಕೂ, ಸಮಾಜಕ್ಕೂ ಲಾಭ. ಕಾದಂಬರಿಗಳು ಮನರಂಜನೆಗೆ ನೆರವಾಗಬೇಕು; ನೈತಿಕತೆ ಬೆಳೆಯಲು ಅವಕಾಶ ನೀಡಬೇಕು. ಕೃತಕತೆ, ಕಾಲ್ಪನಿಕತೆಯ ಬರದೆಯ ಮೇಲಿರುವ ಸಮುದ್ರದಂಚಿನ ಸಂಜೆ, ಉಪಾದೇಯವೆನಿಸದ ಸಮಸ್ಯೆಯನ್ನೊಳಗೊಂಡ ಕಥೋಪಕಥನ ಪ್ರಧಾನವಾದ ಹೊಸ ಬಗೆಯ ಕಾದಂಬರಿ.

—ಗೋದಾ.

ಸಂಗ್ರಹ್ಯ ಸಂಕಲನಗಳು

‡‡

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಗುಡಿಮುಸ್ತುಗಳು	1—50
ವಿಚಿತ್ರ ಕಳ್ಳಸೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಟಲಾಗಿಗೆ ಬರೆಯಿರಿ

ಪವಭಾರತ ಪುಸ್ತಕ ಭಂಡಾರ, ಉಡುಪಿ.

ಪುಡಿಗತೆಗಳು

ಈ ರಾಮವ್ವ ಯಾರು ಗೊತ್ತೆ?

ಈಗ ಇವಳನ್ನು ನೋಡಬೇಕೆಂತಲೂ ನಿಮಗೆ ಕಾಣುವುದಿಲ್ಲ.

ಇವಳು ಯಾರು ಗೊತ್ತೇ?

ಪ್ರಸಿದ್ಧ ಸಿನಿಮಾ ತಾರೆ ರಮ್ಯರತ್ನ ಮೂಲೆ. ಮೊದಲು ಕೀವೆಲ್ಲಾ ಬಾಯಿ ಬಾಯಿ ಬಿಟ್ಟು ನಟೇಮಣಿ ಇವಳೇ.

ಪಾಪ, ಇವಳೇನು ಮಾಡಿಯಾಳು?

ನಿರ್ಮಾಪಕರನ್ನು ಅನುಸರಿಸಿಕೊಂಡು ತಾನೇ ಸಿನಿಮಾ ನಿರ್ಮಾಪಕರು ಇರುತ್ತಾರೆ?

'ಏನು ಮಾಡೋಣ ರಾಮವ್ವಾ ಅಲ್ಲ—ರಮ್ಯರತ್ನಾ? ಈಗ ನಿನಗೆ ಪಾತ್ರ ಕೊಡಲಾಗದ್ದಕ್ಕೆ ವೈಷ್ಣ ಪಡ ತೀನೆ.' ಎಂದು ಕಾರಮ್ಯಳ್ಳ ತೋರಿಸಿದ್ದಾರೆ.

ಏಕೆಂದು ತಿಳಿಸುದ ಆಶ್ಚರ್ಯಪಟ್ಟ ಅವಳು ತನ್ನನ್ನೇ ತಾನು ನೋಡಿಕೊಂಡು ತಿಳಿದುಕೊಳ್ಳಬೇಕಾಯಿತು.

ಹಿಂದೆ ತಾನು ಈಗಿನಷ್ಟು ಉಬ್ಬಿದ್ದೆನೆ?

ಹಿಂದೆ ಹಡದ ಉಬ್ಬರವಿದ್ದಾಗ, ಮುಂದೆ ಮೈ ಹೀಗೆ ಉಬ್ಬೀತು ಅಂತ ಅಂದುಕೊಂಡಿದ್ದೆನೆ?

ತಿಳಿದ ಕೊಳ್ಳಬೇಕಿತ್ತು.

ಎಂತಹ ಲಕ್ಷಾಂಗಿಯಾಗಿದ್ದಳು! ಪೌಡರು,ಸೋಪು,ಸೀರೆ, ಬಟ್ಟೆ ಮೊದಲಾದ ಜಡವಸ್ತುಗಳೆಲ್ಲ ಅವಳ ಹೆಸರಲ್ಲೇ ಮೊಂಟವಾದ ಕಾಲದ ಪ್ರಚಾರಿಸಿದ ಸುಂದರಿ, ಹಣ ಪ್ರವಾಹವಾಗಿ ಸುಂದಿತ್ತ. ಅವಳು ನಟಿಸಿದ ಸಿನಿಮಾ ನೋಡಲು ಏನು ಜನ ಪ್ರವಾಹ! ಕಾರಿನಲ್ಲಿ ಅಳ್ಳದೆ ಬೀದಿಯನ್ನು ಮುಟ್ಟದವಳಲ್ಲ. ಗಂಪೋ ಗುಂಪು. ಕಾರೋ ಕಾರು. ಕ್ಯೂಗಳ ಮೂಲೆಯೇ ಮೂಲೆ. ಅವಳನ್ನು ನೋಡಲು ಜನರು ಗಂಟೆಗಟ್ಟಲೆ ತಪಸ್ಸು ಮಾಡುವರು. ಯಾವಾಗಲೂ ಸ್ಟುಡಿಯೋ ಸವಾರಿ; ಶೂಟಿಂಗ್ ಸರಂಪರೆ!

ಪ್ರಥಮಬಾರಿ ಡೈರೆಕ್ಟರ್ ನಿರ್ಮಾಪಕರು ಅವಳನ್ನು ಒತ್ತಾಯ ಪೂರ್ವಕ ಅಮಂತ್ರಿಸಿದಾಗ ಹೇಗೋ ಏನೋ ಎಂದು ಒಪ್ಪಿದ್ದಳು. ಹೊಸ ಮದುಮಗಳಿಗೆ ಪತಿಗೃಹಕ್ಕೆ ಮೊದಲಬಾರಿ ಹೋದಾಗ ಆಗುವಂತಹ ಭಯ ಸುಖವಾಗಿತ್ತು ಅಗ.

ಅವಳು ಚಿಕ್ಕ—ಎಂಟು ವರ್ಷದ ಹುಡುಗಿಯಾಗಿದ್ದಾಗ, ಗ್ರಾಂಫೋನ್ ರಿಕಾರ್ಡಿನ ಇದಿರಿನಲ್ಲಿ ಅವಳ ಪಾಡಿಗೆ ಅವಳು ಹಾಡಿಕೊಂಡು ಕುಣಿದಾಗ, ಅದನ್ನು ನೋಡಿ ತಂದೆಯೂ ಬಂದ ಅತಿಥಿಯೂ ಮೆಚ್ಚಿದ್ದೇ, ಸಿನಿಮಾಕ್ಕೆ ಸೇರಿಸುವಾ ಅಂತ ತೋರಲು ಕಾರಣವಾಯಿತು. ಆ ಅತಿಥಿ ಸಿನಿಮಾ ಸಂಬಂಧಿಕ. ಆಗ ಅವಳು ಕೇವಲ ರಮ್ಯ, ಬಾಲೆ ರಮ್ಯ.

ಆ ವೇಳೆ ಹೆಣದ ಅಭಿಷೇಕ ವನೆಯೊಳಗೆ ಹೊಕ್ಕು ರಮ್ಯರತ್ನ ಮೂಲಾ ಆದಳು. ಮೈ ಮರೆತಳೆ. ಉಬ್ಬಿದಳೆ. ಮೂಲೆ ಸೇರಿದಳು.

ಉಬ್ಬಿದ ಬೆಲೂನು ಗಾಳಿ ಹೋದ ಮೇಲೆ ಆಗುವ ಹಾಗಾಯಿತು. ಬಡ ರಾಮವ್ವನಾದಳು.

ಅವಳ ಪಾಡಿಗೆ ತಾಲೆಗೆ ಹೋಗಿ ಬರುತ್ತಾ ಇದ್ದವಳು. ತಾನು ನಡ ಗಾಲದಲ್ಲಿ ರಮ್ಯ ರತ್ನ ಮೂಲಾ ಆಗಿ ಕಡೆಗಾಲದಲ್ಲಿ ರಾಮವ್ವನಾದೇನೆಂದು ಯೋಚಿಸಿರಲೇ ಇಲ್ಲ. ಅವಳೇನು, ಅವಳಪ್ಪನೂ ಯೋಚಿಸಿರಲಿಲ್ಲ.

ಈಗಿದ್ದಿದ್ದಾರೆ ಅವಳ ಅಪ್ಪ ಅಮ್ಮಂದಿರು?

ಮಕ್ಕಳೆ? ಮರಿಗಳೆ? ಯಾರಿದ್ದಾರೆ ಬಡ ರಾಮವ್ವನಿಗೆ?

ತಾನು ಮತ್ತೆ ರಮ್ಯ ರತ್ನ ಮೂಲಾ ಆಗಬೇಕೆಂದರೆ ಕಂಡ ಸ್ವಪ್ನವನ್ನು ಮತ್ತೆ ಕಾಣಬೇಕೆಂಬ ಬಯಕೆ ತಾನೆ?

ಅದಕ್ಕೆ ದೀರ್ಘ ನಿದ್ರೆ ಮಾಡಬೇಕು.

ಅಳುವವರು ಯಾರಿದ್ದಾರೆ?

—"ನವಗಿರಿನಂದ"

ಕೆನರಾ ಬ್ಯಾಂಕಿನ ಹೊಸ ಸೇವೆ

ಸಣ್ಣ ಕೈಗಾರಿಕೋದ್ಯಮಿಗಳಿಗೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದಿರುವವರಿಗೆ ಸಲಹೆ ನೀಡುವ ಉದ್ದೇಶದಿಂದ ಕೆನರಾ ಬ್ಯಾಂಕ್ ಕೈಗಾರಿಕಾ ವಾರ್ತೆ ಮತ್ತು ಮಾರ್ಗದರ್ಶನ ಸೇವಾ ವಿಭಾಗವನ್ನು ಹೊಸತಾಗಿ ಆರಂಭಿಸಿದೆ.

ಅವಶ್ಯ ಮಾಹಿತಿ ನೀಡುವುದು, ನೆರವನ್ನು, ಆರ್ಥಿಕ ಸಹಾಯವನ್ನು ಒದಗಿಸುವುದು—ಇವು ಸೇವಾ ಯೋಜನೆಯಲ್ಲಿ ಅಂತರ್ಗತವಾಗಿವೆ. ಈ ಬಗ್ಗೆ ಆಸಕ್ತಿಯಿರುವವರು ಬೆಂಗಳೂರಿನಲ್ಲಿನ ಬ್ಯಾಂಕಿನ ಆಡಳಿತ ಕಚೇರಿಯಲ್ಲಿರುವ ಕೈಗಾರಿಕಾ ವಾರ್ತೆ ಮತ್ತು ಮಾರ್ಗದರ್ಶನ ಸೇವಾ ವಿಭಾಗದೊಡನಾಗಲೀ, ಬ್ಯಾಂಕಿನ ತಮಗೆ ಸಮೀಪದ ಶಾಖೆಯಲ್ಲಾಗಲೀ ವ್ಯವಹರಿಸಿ ಹೆಚ್ಚಿನ ತಿಳುವಳಿಕೆಯನ್ನು ಪಡೆಯಬಹುದು.

ಇಷ್ಟು ಮಾತ್ರವಲ್ಲದೆ ಪ್ರತಿ ತಿಂಗಳ ಎರಡನೆಯ ಶನಿವಾರ ಅಪರಾಹ್ನದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತಿತರ ಅಧಿಕಾರಿಗಳು ಬ್ಯಾಂಕಿನ ಆಡಳಿತ ಕಚೇರಿಯಲ್ಲಿ ಯಾವುದೇ ಸಣ್ಣ ಮಟ್ಟದ ಕೈಗಾರಿಕೋದ್ಯಮಿ, ವೃತ್ತಿಪರರ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಅವಕಾಶ ಮಾಡಿಕೊಂಡಿದ್ದಾರೆ. ಅಪೇಕ್ಷಿತರು ಈ ಅವಕಾಶದ ಸದುಪಯೋಗಪಡೆಯಬಹುದು.

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯವಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಎಲ್ಲೆಲ್ಲಿ ಏನೇನು?

ವಾರ್ಷಿಕೋತ್ಸವ

ಕಿನ್ನಿಗೋಳಿ- ಸ್ಥಾನೀಯ ತಾಳಿಪಾಡಿ ಪೊಂ ಪೈ ಹಯರ್ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಡಾ| ಯಸ್. ಆರ್. ಮೊಕಾಶಿ ಅವರ ಅಧ್ಯಕ್ಷತೆಯಲ್ಲಿ ತಾ. 17-2-68 ರಂದು ಜರಗಿತು.

ಸ್ವಾಗತ ಗೀತೆಯಾಗಲು ಪ್ರಧಾನಾಧ್ಯಾಪಕ ರೆ| ಫಾ| ಬಿ. ಎ. ಡಿಸೋಜರು ಹೂಹಾರಗಳ ಮೂಲಕ ಪ್ರಧಾನಾತಿಥಿಗಳನ್ನು ಗೌರವಿಸಿದರು. ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಸ್ವಾಗತ ಭಾಷಣ ಮಾಡಿದರು.

ಶ್ರೀ ಬಿ. ಯಸ್. ಶೆಟ್ಟರು ಶಾಲಾ ಸಂಕ್ಷಿಪ್ತ ವರದಿಯನ್ನೋದಿ ಒಪ್ಪಿಸಿದರು

ಅಟ ಪಾಟಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆಯಾದ ಬಳಿಕ ಶ್ರೀ ಗೋಲ್ಡ್ ಸ್ಮಿತ್ ಸಿಂಡಿಕೇಟ್‌ವರು ಸಂದೇಶವಾಚನ ಗೈದರು.

ಡಾ| ಯಸ್. ಆರ್. ಮೊಕಾಶಿಯವರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಈ ಶಾಲೆಯ ಅಭಿವೃದ್ಧಿಗೆ ಗರಿಷ್ಠ ಹಿರಿಮೆ ಹಾಗೂ ಸಂಗೀತ ಸಾಹಿತ್ಯಾದಿಗಳ ಪ್ರಾಮುಖ್ಯವನ್ನು ಕುರಿತು ನಿಜವಾಗಿಯೂ ಕಿನ್ನಿಗೋಳಿಯು ಬಹುದೊಡ್ಡ ಮಹತ್ವದ ಪ್ರದೇಶವೆಂದೇ ಭಾವಿಸಿದಂತಾಗಿದೆಯೆಂದು ತಿಳಿಸಿ ಉಜ್ವಲ ಭವಿಷ್ಯ ಕೋರಿದರು.

ಮನರಂಜನಾಂಗವಾಗಿ ವಿವಿಧ ನಾಟಕಗಳಲ್ಲದೆ, ನೃತ್ಯಗಳಾದವು. ಶ್ರೀ ಕೆ. ಬಾಲಕೃಷ್ಣಾಚಾರ್ಯ ಹಾಗೂ ಶ್ರೀ ಕೆ. ಯಸ್. ಪದ್ಮನಾಭಾಚಾರ್ಯರ ಬಳಗದವರ ವೃಂದಗಾನ ಸೆರವೇರಿತು. ಕೊನೆಗೆ ಶಾಲಾ ವಿದ್ಯಾರ್ಥಿನಾಯಕ ಶ್ರೀ ಜೋಸ್‌ಸೆರಾನ್ ಧನ್ಯವಾದಾರ್ಪಣೆ ಗೈದರು.

ಮಕ್ಕಳು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಆಸ್ಪತ್ರೆ

ಉಡುಪಿಯ ಹಳೆಯ ಸಂಕಾರ್ಣ ಆಸ್ಪತ್ರೆಯಲ್ಲಿ ಮಹಿಳೆಯರಿಗಾಗಿ 50 ಹಾಸಿಗೆ ಮಕ್ಕಳಿಗೆ 20 ಹಾಸಿಗೆಗಳುಳ್ಳ ಪ್ರತ್ಯೇಕ ವಿಭಾಗದ ಉದ್ಘಾಟನಾ ಸಮಾರಂಭವು ಜಿಲ್ಲಾ ವೈದ್ಯಾಧಿಕಾರಿ ಡಾ| ಎ. ಡಿ. ಪೌಲ್‌ರವರ ಅಧ್ಯಕ್ಷತೆಯಲ್ಲಿ ತಾರೀಕಿದ ಶ್ರೀ ಕುರ್ಕಿದ್ ಹುಸೇನ್‌ರವರಿಂದ ನೆರವೇರಿತು.

ಆರಂಭದಲ್ಲಿ ಆಸ್ಪತ್ರೆಯ ಮೆಡಿಕಲ್ ಅಧೀಕ್ಷರಾದ ಡಾ|ಕೆ. ಮಹಾಲಿಂಗನವರು ಸ್ವಾಗತಿಸಿದರು. ಜನಾಬ್ ಕುರ್ಕಿದ್ ಹುಸೇನರು ತಮ್ಮ ಉದ್ಘಾಟನಾ ಭಾಷಣದಲ್ಲಿ ಉಡುಪಿಯ ಜನರು ಇದರ ಸಂಪೂರ್ಣ ಪ್ರಯೋಜನವನ್ನು ಹೊಂದಬೇಕೆಂದೂ, ಸರಕಾರವು ಇಷ್ಟಿಗೆ ಅವಶ್ಯಕವಾಗಿರುವ ಸೌಲಭ್ಯ, ಶಿಬ್ಬಂದಿ ಹಾಗೂ ಡಾಕ್ಟರುಗಳನ್ನು ಒದಗಿಸಿ ಕೊಡಬೇಕೆಂದು ಹೇಳಿದರು.

ಡಾ| ಪಿ. ಆರ್. ನಾಯ್ಕರು ಮಾತನಾಡುತ್ತಾ ರೋಗಕ್ಕೆ ಚಿಕಿತ್ಸೆ ಪೂರ್ವದ ಶುಶ್ರೂಷೆಯೂ ಪ್ರಾಮುಖ್ಯವಾಗಿದೆಯೆಂದರು. ಅಲ್ಲದೆ ಈ ವಿಭಾಗದಲ್ಲಿ ಸಂತಾನ ನಿಯಂತ್ರಣ ವಿಭಾಗ ಕೋಲಿಯೋಪೆಕ್ಟಿನ್ ವಿಭಾಗಗಳನ್ನು ತೆರೆಯಬೇಕೆಂದು ಸೂಚಿಸಿದರು. ಅನಂತರ ಡಾ| ಸಿ. ಎಚ್. ಶಿವರಾಮಾಚಾರ್‌ರವರು ಮಾತನಾಡುತ್ತಾ ಮಣಿಪಾಲ ಆಸ್ಪತ್ರೆಯಿಂದ ಸಾಧ್ಯವಿರುವ ಸಹಕಾರವನ್ನು ತಾವು ನೀಡುವುದಾಗಿಯೂ, ಉಡುಪಿಯ ಸರಕಾರಿ ವತ್ತು ಮಿಶನ್ ಆಸ್ಪತ್ರೆಗಳೂ ಪರಸ್ಪರ ಸಹಕರಿಸಿಕೊಂಡು ಸೇವೆ ಸಲ್ಲಿಸಬೇಕೆಂದರು.

ಸಭೆಗರ ಸರವಾಗಿ ನಗರ ಸಭಾಪತಿ ಶ್ರೀ ಕೆ. ಎಂ. ಮಧ್ವಸ್ಥ, ಶ್ರೀ ಎನ್. ಎಸ್. ರಾಮಾಚಾರ್ ಮತ್ತು ಡಾ| ಕೆ. ಆರ್. ಭಾಗವತರು ಮಾತನಾಡಿದರು.

ಡಾ| ಎ. ಡಿ. ಪೌಲ್‌ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಈ ಜಿಲ್ಲೆಯ ವೈದ್ಯಕೀಯ ಕ್ಷೇತ್ರದಲ್ಲಿ ರಾಜ್ಯದ ಇತರ ಪ್ರದೇಶಗಳಿಗಿಂತ ಹೆಚ್ಚು ಭಾಗ್ಯಶಾಲಿಯಾಗಿದೆಯೆಂದರು. ಹಾಜಿ| ಅಬ್ದುಲ್ಲಾರವರು ಈ ಜಾಗವನ್ನು ದಾನವಾಗಿತ್ತರು, ಅವರ ಘನಉದ್ದೇಶ ಫಲಿಸಿದಂತಾಗಿದೆಯೆಂದರು. ಕೊನೆಯಲ್ಲಿ ಡಾ| ಕೆ. ಮಹಾಲಿಂಗನವರು ಧನ್ಯವಾದ ಸಮರ್ಪಿಸಿದರು.

ಹಾಸ್ಯನಟ ಬಾಲಕೃಷ್ಣರಿಗೆ ಸತ್ಕಾರ

ಉಡುಪಿ ರಂಗಭೂಮಿಯವರು ತಾರೀಕು 20-2-68ರಂದು 100 ಬತ್ತಿಗಳಲ್ಲಿ ನಟಿಸಿದ ಹಾಸ್ಯನಟ ಶ್ರೀ ಟಿ. ಎನ್. ಬಾಲಕೃಷ್ಣರವರನ್ನು ಗೌರವಿಸಿದರು. ವಿ. ಜೆ. ಯೂನಿಯನ್ ಕ್ಲಬ್‌ನ ವತಿಯಲ್ಲಿ ಸಮಾರಂಭವೊಂದನ್ನು ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀ ವಿ. ಜೆ. ಅಲ್ಬೆಯವರು ಸ್ವಾಗತಿಸಿ ಬಾಲಕೃಷ್ಣರವರ ಸೇವೆಯನ್ನು ಕೊಂಡಾಡಿದರು. ನಗರದ ಪ್ರಮುಖ ಸಂಘ ಸಂಸ್ಥೆಯವರಿಂದ ಹಾರಾರ್ಪಣೆಯಾದ ನಂತರ ರಂಗಭೂಮಿಯ ಅಧ್ಯಕ್ಷ ಡಾ| ಕೆ. ಎಲ್. ಐತಾಳರು ಮಾನಪತ್ರವನ್ನು ಅರ್ಪಿಸಿದರು. ಪ್ರಿನ್ಸಿಪಾಲ್ ಶ್ರೀ ಕೆ. ಶಿ. ಹರಿದಾಸ ಭಟ್ಟರೂ ಶ್ರೀ ಆರ್. ಆರ್. ಕಾಂಜರಾರೂ ಅಭಿನಂದನ ಭಾಷಣ ಮಾಡಿದರು. ಶ್ರೀ ಬಾಲಕೃಷ್ಣರವರು ಮಾತನಾಡುತ್ತ ಕನ್ನಡಿಗರಿಗೆ ಶುದ್ಧ ಸ್ಪುಟಿಯೋ ಇಲ್ಲದ್ದರಿಂದಾಗುವ ಅನಾನುಕೂಲತೆಗಳನ್ನೂ ತನ್ನ ಬಾಲ್ಯ ಜೀವನದ ಪರಿಸ್ಥಿತಿಯನ್ನೂ ವಿವರಿಸಿ ತಾನು ಸ್ಥಾಪಿಸಲಿರುವ ಸ್ಟುಡಿಯೋಕ್ಕೆ ಜನರ ಸಹಕಾರ ಕೋರಿದರು. ಅಧ್ಯಕ್ಷ ಸ್ಥಾನದಿಂದ ಡಾ| ಪಾಥವ ಪೈಯವರು ಮಾತನಾಡುತ್ತ ಬಾಲಕೃಷ್ಣರವರು ತಮ್ಮ ನವೀನ ಪ್ರಯತ್ನದಲ್ಲಿ ಯಶಸ್ವಿಯಾಗಲೆಂದರು. ಕಾರ್ಯದರ್ಶಿ ಶ್ರೀ ಕೆ. ಆನಂದ ಗಾಣಿಗರು ಧನ್ಯವಾದ ಅರ್ಪಿಸಿದರು.

ಗೃಹ ಪ್ರವೇಶ

ಶ್ರೀಮತಿ ಮತ್ತು ಶ್ರೀ ಕೆ. ಕೆ. ಶೆಟ್ಟರು ಮಂಗಳೂರಿನ ಪಡೀಲ್‌ನಲ್ಲಿ ಹೊಸತಾಗಿ ಕಟ್ಟಿಸಿರುವ ನವನೀತ ಎಂಬ ಹೊಸ ಮನೆಯ ಪ್ರವೇಶ ಸಮಾರಂಭವು ತಾ. 18-2-68ರಂದು ಸಂಜೆ ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಮಂಗಳೂರಿನ ಮತ್ತು ಅಸಾಪಾಸಿನ ಗಣ್ಯ ಮಾಹಾನೀಯರೇಕರು ಆಗಮಿಸಿದ್ದರು.

ಸಿಂಡಿಕೇಟಿನ ಹೊಸ ಶಾಖೆಗಳು

ಸಿಂಡಿಕೇಟ್ ಬ್ಯಾಂಕಿನ 5 ಹೊಸ ಶಾಖೆಗಳು ತಾ. 27-2-68ರಂದು ದ. ಕ. ಜಿಲ್ಲೆಯ ಹಿರಿಯಡ್ಕ, ವೇಣೂರು, ಕೋಟೇಶ್ವರದಲ್ಲಿ, ಹಾಸನ ಜಿಲ್ಲೆಯ ಬಾಣಾವರದಲ್ಲಿ, ರಾಯಚೂರ್ ಜಿಲ್ಲೆಯ ಜವಾಲಗೆರೆಯಲ್ಲಿ ತೆರೆಯಲ್ಪಟ್ಟಿವೆ. ಒಂದೇ ಜಿಲ್ಲೆಯಲ್ಲಿ ಒಂದು ಬ್ಯಾಂಕಿನ 50 ಶಾಖೆಗಳಿರುವುದು ಭಾರತದ ಬ್ಯಾಂಕುಗಳಲ್ಲಿ ಇದೇ ಮೊದಲನೆಯದಾಗಿದೆ. ಮೇಲಿನ ಮೊದಲಿನ 3 ಶಾಖೆಗಳ ತೆರೆಯುವಿಕೆಯಿಂದ ಸಿಂಡಿಕೇಟ್ ಬ್ಯಾಂಕಿಗೆ ದ. ಕನ್ನಡದಲ್ಲಿ 50 ಶಾಖೆಗಳಾದಂತಾಯಿತು.

ಶ್ರೀ ಎಡನೀರು ಮಠದ ವಾರ್ಷಿಕೋತ್ಸವ

ಶ್ರೀ ಎಡನೀರು ಮಠ ಹಾಗೂ ಶ್ರೀ ವಿಷ್ಣು ಮಂಗಲ ದೇವಾಲಯದ ವಾರ್ಷಿಕೋತ್ಸವವು ತಾ. 18-2-68ರಂದ 17-2-68ರ ತನಕ ಜರಗಿತು. ಧ್ವಜಾರೋಹಣವು ಶ್ರೀಮದ್ಭಾರತಿ ಮಠಾಧೀಶರಾದ ಶ್ರೀ ಕೇಶವಾನಂದ ಭಾರತಿ ಶ್ರೀಪಾದಂಗಳವರ ಸನ್ನಿಧಿಯಲ್ಲಿ ತಾ. 13 ರಂದು ಜರಗಿತು.

ಶ್ರೀ ಮಠದಲ್ಲಿ ಪೂರ್ವಾಹ್ನ ಉಪ್ಪುಪೂಜೆಯೂ ಅನಂತರ ಧ್ವಜಾರೋಹಣ, ಶ್ರೀ ಭೂತಬಲಿ, ಮಧ್ಯಾಹ್ನ ಶ್ರೀ ದೇವರಿಗೆ ಮಹಾಪೂಜೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವಾಯಿತು ಸಂಜೆ ಮರಳಿ ಚಿತ್ರೀಸಿದ ಉಡುಪಿ ಫಲಿಮಠದ ಮಠಾಧೀಶರಾದ ಶ್ರೀರಘುವಲ್ಲಭ ತೀರ್ಥ ಶ್ರೀ ಪಾದಂಗಳವರನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು.

ಮರುದಿನ ಮಧ್ಯಾಹ್ನ ಸಂಗೀತ ಕಾರ್ಯಕ್ರಮ ಹಾಗೂ ತುಲಾ ನಾಟಕಾಭಿನಯವೂ ಜರಗಿತು. ಅನಂತರ ಎಡನೀರು ತರುಣ ಕಲಾವೃಂದದವರಿಂದ 'ದ್ರೌಪದೀ ವಿಜಯ' ಎಂಬ ಯಕ್ಷಗಾನ ಪ್ರಯೋಗ ನಾಟಕವು ರಸವತ್ತಾಗಿ ಅಭಿನಯಿಸಲ್ಪಟ್ಟಿತು. ಆ ದಿನ ಆಗಮಿಸಿದ್ದ ಉಡುಪಿ ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರನ್ನು ವಿಜೃಂಭಣೆಯಿಂದ ಸಂಸ್ಥಾನೋಚಿತ ಗೌರವದಿಂದ ಸ್ವಾಗತಿಸಲಾಯಿತು.

ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ

ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವು ಮೈಸೂರು ಉಪಸಚಿವ ಶ್ರೀ ಆರ್. ಪರಮಾನಂದ ಸಾಗರ್‌ರವರ ಅಧ್ಯಕ್ಷತೆಯಲ್ಲಿ ಇದೇ ತಾ. 13 ರಂದು ಜರಗಿತು.

ಆರಂಭದಲ್ಲಿ ಪ್ರಿನ್ಸಿಪಾಲ್ ಡಾ. ಎಸ್. ಆರ್. ಮುಕಾಶಿಯವರು ಪಂಡಿತ ದಿನದಯಾಳು ಉಪಾಧ್ಯಾಯರ ಅಕಾಲ ನಿಧನದ ಕುರಿತು ಸಂತಾಪವನ್ನು ವ್ಯಕ್ತಪಡಿಸುವ ಗೊತ್ತುವಳಿಯನ್ನು ಮಂಡಿಸಿದರು. ಪ್ರೊ. ಶ್ರೀಪತಿ ಉಪಾಧ್ಯಾಯರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಪಿ. ವಿ. ಆಚಾರ್ಯರು ಮೊನ್ನ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಮೊನ್ನ ಸಚಿವರು ಮಾತನಾಡುತ್ತಾ ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಅವರು ಹಿಂದಿನ ಗುರುಕುಲ ಪದ್ಧತಿಯನ್ನು ಪ್ರಶಂಸಿಸಿದರು. ಇಂದು ಆ ಪದ್ಧತಿಯ ಅನುಸರಣೆ ಅವಶ್ಯವಾಗಬಹುದೆಂದು ಅವರು ಹೇಳಿದರಲ್ಲದೆ ಅದೆನೂರು ಮಠದ ಶ್ರೀಪಾದಂಗಳವರ ಸೇವೆಯು ಅಭಿನಂದನಾರ್ಹವೆಂದರು.

ಅದನೂರು ಮಠದ ಶ್ರೀ ವಿಶ್ವಾಧೀಶ ತೀರ್ಥ ಶ್ರೀಪಾದಂಗಳವರು ತಮ್ಮ ಭಾಷಣದಲ್ಲಿ ಪ್ರಾದೇಶಿಕ ಭಾಷೆ ಶಿಕ್ಷಣೋದ್ಧಾರವಾಗಬೇಕೆನ್ನುವುದು ಸಮರ್ಪಕವಲ್ಲವೆಂದರು. ಕೊನೆಯಲ್ಲಿ ಪ್ರಿನ್ಸಿಪಾಲ್ ಪೊಕಾಶಿಯವರು ಧನ್ಯವಾದಾರ್ಪಣೆಗೈದರು.

ಸದ್ಭೂಷಣ ಡಾ| ಕಾರಂತರಿಗೆ ಸನ್ಮಾನ

ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ವಿವಿಧ ಸಂಘಗಳ ಆಶ್ರಯದಲ್ಲಿ ಸದ್ಭೂಷಣ ಡಾ| ಕೆ. ಶಿವರಾಮ ಕಾರಂತರನ್ನು ಸನ್ಮಾನಿಸುವ ಸಮಾರಂಭವು ತಾ. 11-2-68ರಂದು ವಕೀಲ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಪ್ರೊ. ಕೆ. ಶ್ರೀಪತಿ ಉಪಾಧ್ಯಾಯರು ಸ್ವಾಗತಿಸಿ, ಸಂದೇಶಗಳನ್ನು ಓದಿದರು. ವಿವಿಧ ಸಂಘಗಳ ಕಾರ್ಯದರ್ಶಿಗಳು ಮೊನ್ನ ಅತಿಥಿಗಳಿಗೆ ಹಾರಾರ್ಪಣೆ ಮಾಡಿದ ತರುವಾಯ ಪ್ರೊ. ಎಂ. ರಾಜಗೋಪಾಲಾಚಾರ್ರರು ಡಾ| ಕಾರಂತರಿಗೆ ಮಾನಪತ್ರಾರ್ಪಣೆ ಮಾಡಿದರು.

ಡಾ| ಕಾರಂತರು ಮಾತನಾಡುತ್ತಾ ತನ್ನ ಜೀವನದ ಕಾಲು ಹೇಳಿ, ತನಗೆ ದೊರಕಿರುವ ಪ್ರಶಸ್ತಿಗಿಂತಲೂ ತಾನು ಬಹಳ ದುಡಿಮೆ ತನಗೆ ಸಂತೋಷವನ್ನು ಕೊಟ್ಟಿದೆಯೆಂದರು. ರಾಜಕೀಯ ಮಾಯಾತ್ವಾಕಾಂಕ್ಷೆಗೆ ವಿದ್ಯಾರ್ಥಿಗಳು ಬಲಿ ಬೀಳದೆ ಸಫಲವಾದ ಜೀವನ ಮಾರ್ಗವನ್ನು ಅನುಸರಿಸಬೇಕೆಂದು ಅವರು ಹೇಳಿದರು.

ಅದನೂರು ಮಠದ ಶ್ರೀಪಾದಂಗಳವರು ಡಾ| ಕಾರಂತರು ಅಭಿರುಚಿಯ ಸಂಜ್ಞಾನವಿದ್ದು ಅದರ ಬೆನ್ನ ಹಿಂದ ಹೋದುದರಿಂದ ಅನಂತರಿಗೆ ಈ ಸ್ಥಾನಮಾನ ದೊರಕಿದೆಯೆಂದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಶ್ರೀ ಪಿ. ವಿ. ಆಚಾರ್ಯರು ಮಾತನಾಡುತ್ತಾ ಕಾರಂತರ ಮೇಲೆ ನಮಗಿರುವ ಅಭಾರ ಗೌರವವನ್ನು ವ್ಯಕ್ತಪಡಿಸಿ, ಅವರಿಂದ ಮಾರ್ಗದರ್ಶನ ಸಡೆಯಲೋಸುಗ ಇಂಥ ಸಮಾರಂಭವನ್ನು ಏರ್ಪಡಿಸಲಾಗಿದೆಯೆಂದರು. ಕೊನೆಯಲ್ಲಿ ಶ್ರೀ ಕೆ. ಸಾಧು ಶೆಟ್ಟ ಧನ್ಯವಾದ ಸಮರ್ಪಣೆಯೊಡನೆ ಮೇಲೆ ವಿವಿಧ ವಿನೋದಾವಳಿಗಳಾದುವು.

ಮಣಿಪಾಲದ ಕಾಲೇಜುಗಳ ಪುನರಾರಂಭ

ಮಣಿಪಾಲ, ಫೆ. ೨೪— ಅಲ್ಲಿಯ ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜು ಫೆಬ್ರವರಿ ೨೭ನೇ ಮಂಗಳವಾರ ಪುನರಾರಂಭವಾಗಿವೆ.

ಈ ಕಾಲೇಜುಗಳ ಹಾಸ್ಟೆಲ್‌ಗಳನ್ನು ಆ ದಿನ ಪುನಃ ತೆರೆಯಲಾಗಿದೆ. ವಿದ್ಯಾರ್ಥಿಗಳ ಹಿಂದಿ ವಿರೋಧಿ ಚಳುವಳಿಯಿಂದ ಪರಿಸ್ಥಿತಿ ವಿಷಮಗೊಂಡಿದ್ದರಿಂದ ಅವುಗಳನ್ನು ಕಳೆದ ೧೪ರಂದು ಅನಿರ್ದಿಷ್ಟವಾಗಿ ಮುಚ್ಚಲಾಗಿತ್ತು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. and S. C. No. 2/68.

1) ಶಮಾದೇವಿ, 2) K. ಶ್ರೀದೇವಿ, 3) K. ಅನಂತರಾಮ ಭಟ್ಟ, 4) ಭಾರತಿ, 5) ಶಾರದ (ಮೈನರ್, ಗಾರ್ಡಿಯನ್ ತಾಯಿ 1ನೇ ಅರ್ಜಿದಾರಳು)

—ಅರ್ಜಿದಾರರು.

ಮತ್ತು

K. ನಾರಾಯಣ ಭಟ್ಟ — ಎದ್ರಿ.

ಎದ್ರಿಗೆ ಮತ್ತು ಇತರ ಸಮಸ್ತರೀಗೆ ಈ ಸೂಚನೆ ತಿಳಿಯಪಡಿಸುವುದೇನೆಂದರೆ—

1ನೇ ಅರ್ಜಿದಾರಳ ಗಂಡ ಮತ್ತು ಮಿಕ್ಕ ಅರ್ಜಿದಾರರ ತಂದೆ ಮತ್ತು ಎದ್ರಿಯ ಚಿಕ್ಕತಂದೆ ಕಳೆದ 1952ನೇ ಇಸವಿಯ ನವೆಂಬರ ತಿಂಗಳಲ್ಲಾಯ್ತು ಕಾಣೆಯಾಗಿರುವ(unheard) ಎಲ್ಲಾರು ವಿಶ್ವನಾಥ ಭಟ್ಟರ ಬಂತಕ್ಕ ಅರ್ಜಿಯಲ್ಲಿ ಕಾಣಿಸಿರುವ ಆಸ್ತಿಗಳನ್ನು ವಸೂಲು ಮಾಡುವರೇ ಅರ್ಜಿದಾರರ ಬಗ್ಗೆ ಒಂದೇ ಅರ್ಜಿದಾರರ ಹೆಸರಿಗೆ ಸಕ್ಸೆಷನ್ ಸರ್ಟಿಫಿಕೇಟು(Succession certificate) ಕೊಡಿಸಬೇಕಾಗಿ ಅರ್ಜಿದಾರರು ದಾಕ್ಲು ಮಾಡಿರ ಸದ್ರಿ ಅರ್ಜಿಯು 12—3—1968ಕ್ಕೆ ನೋಟೀಸಿನ ಬಗ್ಗೆ ಇಟ್ಟಿಯದೆ. ಅಕ್ಕೆಪಕ್ಕ ಉಳ್ಳಂಥವರು ಸದ್ರಿ ದಿನ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಕೊಡಬಕ್ಕದ್ದು. ತಪ್ಪದ್ರೆ ಅಂಥವರ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಿದುದೆ.

Sd/-
Bola Raghurama Shetty,
Advocate for Petitioners.

Karkala, Dated: 23—2—1968.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನೂ ತಾರೀಕನ್ನೂ ನಿರೀಕ್ಷಿಸಿರಿ.

ಸರಿತಾ

(ಎರಡನೇ ಸುಟದಿಂದ)

ಅಂತೂ ಸರಿತಾಳ ಮದುವೆ ಮುಗಿದು ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಆದಕ್ಕೆ ನಾಮಕರಣ ಮಾಡುವ ದಿನವೇ ಅದು ಮೃತ್ಯುವಶವಾಯಿತು. ಗಂಡ ಕ್ಷಯರೋಗದ ಪೀಡಿತ. ಗಂಡನ ತಾಯಿ ಕಸ್ಮಾಂದಂದಷ್ಟು ಸೇವೆಯನ್ನು ಮಾಡುತ್ತಾ, ಗಟ್ಟಳ. ಜೀವನದಲ್ಲಿ ಸುಖ ದುಃಖಗಳ ಕಿರಗಳನ್ನು ಕಂಡಳು. ಆದರೆ ಇನಗೆ, ಮತ್ತೆ ತಂದೆ ತಾಯಿಗಳ ಬಳಿಯಲ್ಲೇ ಬಗ್ಗ ಗಾರಳು, ಸುಖ ದುಃಖಗಳೆರಡೂ ಬರುತ್ತಿದ್ದುದಿಲ್ಲದ ದಿನ್ನೆಯಂತೆ ಕಂಡಿತು.

ಸರಿತಾಳ ತನುಮನಗಳೆರಡೂ ಬಡವಾಗಿ ಬಟ್ಟುವು. ಅವಳ ಕಣ್ಣುಗಳಾಡೂ ಕಣ್ಣುಗೊಂಬೆಯು ಒಳಸೇರಿದುವು. ಸ್ವರವೂ ತೀರ ಬದಲಾವಣೆಯಾಯಿತು. ನಿಜ! ಅವಳಿಗೆ ಗುಟುಬದ ಸಾಗರದಲ್ಲಿ ಸ್ನಾನ.

ಮದದೊಮ್ಮೆ ಮನೆಗೆ ಒಂದು ಹಿಂದಿರುಗಿ ಹೊರಡುವ ದಿನ "ನನ್ನ ಆಶೀರ್ವಾದಗಳೆಲ್ಲವೂ ಚಿನ್ನದ ಫಲ ಕೊಟ್ಟವಲ್ಲವೇ ಸರಿತಾ?" ಎಂದು ಕೇಳಿದೆ.

'ಯಾವ ಆಶೀರ್ವಾದಗಳು?"

"ನಿನ್ನ ಗಂಡ ನನ್ನಂತೆ..."

'ಹಾಂ"

ನಾನು ಸುಮ್ಮನಾದೆ.

'ಇನ್ನೇನು ಕೇಳುವುದಿಲ್ಲವೇ?'

ನಾನು ಕಣ್ಣೆತ್ತಿ ನೋಡಿದೆ. ಅವಳ ಕಣ್ಣುಗಳಲ್ಲಿ ನೀರು ಉದುರುತ್ತಿದ್ದುವು.

"ನೀನು ಹಿಂದಿನ ನಮ್ಮಿಬ್ಬರ ನೆನಪುಗಳನ್ನು ಮರುಕಳುಹಿಸುವೆಯೋ?"

"ಹೌದು'

"ನಿಜವೇ ಸರಿತಾ?'

'ರಾತ್ರಿ ಹಗಲೂ ನಿಮ್ಮ ಕುರಿತೇ ಯೋಚಿಸುತ್ತಾ ಇರುತ್ತೇನೆ" ಮತ್ತೊಂದು ಕ್ಷಣ ಸರಿತಾ ಸುಮ್ಮಳಾದಳು.

"ಇನ್ನು ನಾನು ಹೋಗಲೇ?" ಸರಿತಾ ಅಂದಳು.

"ಇದನ್ನು ನನ್ನಲ್ಲೇಕೆ ಕೇಳುತ್ತಿರುವೇ? ಹೋಗಲೇ ಬೇಕೆಂದು ಇಲ್ಲಿಗೆ ಬಂದಿರುವೆ!

"ಈ ಮಾತು!'

"ಅಲ್ಲಾ ಇನ್ನು ಒಂದೆರಡು ದಿನಾ ಇರಬಹುದಲ್ಲವೇ? ನಾನೆಂದೆ

"ನಾನು ಇಲ್ಲೇ ಇರಬೇಕೆಂಬ ಆಶಯವೆ?' ಸರಿತಾ ನನ್ನನ್ನೇ ಪ್ರಶ್ನಿಸಿದಳು. ನಾನು ತಲೆತಗ್ಗಿಸಿದೆ. ಮತ್ತೊಮ್ಮೆ ನನಗೆ "ಈ ಪ್ರಶ್ನೆಯನ್ನೇಕೆ ಕೇಳಿದೆ?" ಎನ್ನುವಂತಾಯಿತು. ನಾನು ಉತ್ತರ ಕೊಡದೆ ಕುಳಿತಿದ್ದೆ. ಸರಿತಾ ಹೊರಡಲು ಅನುವಾದಳು.

"ನೀನೇನು ಮಾತನಾಡದೆ ಸುಮ್ಮನಾದಿರಿ?' ಸರಿತಾ ನನ್ನನ್ನು ಕೇಳಿದಳು.

'ನೀನು ನಿನ್ನ ಪತಿಯೊಂದಿಗೆ ಸುಖವಾಗಿರು! ಹೋಗಿ ಬಾ ಸರಿತಾ" ನನ್ನ ಬಾಯಿಯಿಂದ ಮಾತುಗಳು ಅಕಸ್ಮಾತ್ತಾಗಿ ಹೊರಬಂದುವು.

ಸರಿತಾ ಕಣ್ಣೀರಿಳಿಸುತ್ತ ಹೊರ ನಡೆದಳು.

o o o

ಆರು ತಿಂಗಳ ಮೇಲೆ ಸರಿತಾ ಮನೆಗೆ ಹಿಂದಿರುಗಿ ಬಂದಳು.

'ಸರಿತಾ ಮನೆಯಲ್ಲಿ ಇರಲು ಬಂದಿದ್ದಾಳೆ ಸಚ್ಚು .' ತಾಯಿ ಅಂದಾಗ ನನಗೆ ಎಲ್ಲಿಲ್ಲದ ಆಶ್ಚರ್ಯವಾಯಿತು!

"ಯಾವ ಮನೆಯಲ್ಲಿ?" ನಾನು ಕೇಳಿದೆ.

"ತನ್ನ ತಂದೆಯ ಮನೆಯಲ್ಲಿ."

ಒಂದು ಬಾರಿ ಸಂತೋಷವಾಯಿತು ನನಗೆ, ಮತ್ತೊಮ್ಮೆ ಸರಿತಾ ಏಕಾಂಗಿಯಾಗಿ ಏಕಾಗಿ ಬಂದಳು?' ಎನ್ನುವ ಪ್ರಶ್ನೆ ಕಾಡಿತು.

'ಬಾಬ! ಸರಿತಾಳ ಗಂಡ ತೀರಿ ಹೋದನಂತೆ!" ತಾಯಿ ಮರುಗುವ ಧ್ವನಿಯಲ್ಲಿ ಅಂದಳು. ಒಟ್ಟು ದುಃಖಭರಿತನಾದೆ. ಮತ್ತೊಮ್ಮೆ ಮನಸ್ಸಿಗೆ ಏನೋ ಒಂದು ಯೋಚನೆ ಹೊಳೆದು,

"ಅಮ್ಮಾ ನಿನಗೆ ಸರಿತಾಳನ್ನು ಸೊಸೆಯನ್ನಾಗಿ ಮಾಡಿದರೇನಮ್ಮ?' ಧೈರ್ಯವಾಗಿ ನುಡಿದೆ.

'ಏನೆಂದೆ? ಸರಿತಾಳನ್ನ ಸೊಸೆಯನ್ನಾಗಿ ಮಾಡುವುದೇ? ನಿದ್ದೆಯಲ್ಲಿ ಕನಸು ಕಾಣುತ್ತಿರುವೆಯೋ ಸಚ್ಚು. ಅಥವಾ ಬುದ್ಧಿ ಕೆಟ್ಟು ಹೋಗಿದೆಯೋ? ತಂದೆ ಎಲ್ಲಿಯೊದರೂ ನಿನ್ನ ಮಾತುಗಳನ್ನ ಕೇಳಿದರೆ ಏನಂದಾರು? ಅವೇಕ ಬಂದನಳೆಂತೆ ತಾಯಿ ನುಡಿದಳು.

"ತಂದೆಯ ವರ ಮಾತು ಬಿಟ್ಟು ಬಿಡಮ್ಮ' ನಿನ್ನ ಮಾತಿದ್ದರೆ ತಿಳಿಸ ಎಂದೆ.

ತಾಯಿ ಮಾತಿಕ್ಕದೆ ಸೀದಾ ತಂದೆಯ ವರ ಕೋಣೆಗೆ ನಡೆದು ನನ್ನ ಮತ್ತು ಸರಿತಾಳ ವಿಷಯ ವಿವರಿಸಿದಳು. ಆಗ ನಾನು ಹೊರಗೆ ಗಗನದ ಕಡೆಗೆ ಕಣ್ಣು ಹಾಯಿಸಿ ನಿಂತು ಕೊಂಡಿದ್ದ ಸರಿತಾಳನ್ನಿಗೆ ನಡೆದು "ನಿನ್ನಲ್ಲಿ ಒಂದು ಕೆಲಸವಾಗಬೇಕು" ಎಂದೆ.

"ಏನದು?"

"ನೀನು ಈಗಲೇ ತಂದೆಯ ವರ ಕೋಣೆಗೆ ಹೋಗಿ "ಸಚ್ಚೂ ನಾನು ಸೊಸೆಯೂ ಗದಿದ್ದರೆ ಮನೆ ಬಿಟ್ಟು ಹೋಗುತ್ತಾನಂತೆ, ಇಲ್ಲದಿದ್ದರೆ ನಾನು ಇಲ್ಲಿಂದ ಹೋಗಬೇಕೂಂತ ಹಟ ಮಾಡ್ತಾನೆ' ಎಂದು ಹೇಳು. ಮುಂದಿನ ವಿಚಾರಕ್ಕೆ ನಾನೇ ಉತ್ತರ ಮಾಡಿದ್ದೇನೆ" ಎಂದೆ.

ಅಂತೆಯೇ ಸರಿತಾ ತಂದೆಯವರ ಕೋಣೆಗೆ ಹೋಗಿ ನನ್ನ ಮಾತನ್ನು ವಿವರಿಸಿದಳು. ಸರಿತಾ ಹೊರಗೆ ಹೋದ ನಂತರ ತಂದೆ-ತಾಯಿಯವರಲ್ಲಿ "ಸಚ್ಚು ಮನೆ ಬಿಟ್ಟು ಹೋದರೆ ಯೋಗ್ಯವೋ ಅಥವಾ ಸರಿತಾ?...." ಎಂದರು.

ಅದಕ್ಕೆ ತಾಯಿ "ಇಬ್ಬರೂ ನಮ್ಮ ಮನೆಯಲ್ಲೆ ಇರುವುದೇ ಒಳ್ಳೆತು.

'ಅಂದರೆ ಸರಿತಾ ನಿನ್ನ ಸೊಸೆಯೇ?" ತಂದೆ ಅಂದರು.

"ಹೌದು?' ಎಂದಾಗ ನಾನ....?

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಗಿ ಬೆಲೆ ರೂ. 1-50

ರಬರ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಕೆಟ್ಟ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಅದು ನಮ್ಮ ಭಾರತ

ಲೇಡೀಸ್ ಸೀಟ್

ಬಸ್ಸು ಹತ್ತುವ ಹೋಗ ಬಂದಾಗಲೆಲ್ಲ ಸೀಟಿನ ಮೇಲಿನ ಅಕ್ಷರಗಳನ್ನು ನೋಡಿ ಕುಳಿತ ಕೊಳ್ಳುವ ಸಂಪ್ರದಾಯ ಕೆಲವರಲ್ಲಾದರೂ ಇರಬಹುದು. ಬೇಕಾದಷ್ಟು ಸ್ಥಳವಿದ್ದಾಗ ಇದರ ಅಗತ್ಯವೇನೂ ಕಂಡು ಬರಲಿಕ್ಕಿಲ್ಲವಾದರೂ ಸ್ಥಳ ಸಂಕೋಚದ ಸಮಯದಲ್ಲಿ ಅಥವಾ ತುಂಬ ಸ್ತ್ರೀಯರು ಹತ್ತುವಾಗ ಹೆಂಗಸರ ಸೀಟನ್ನು ಹೆಂಗಸರಿಗಾಗಿ ಬಿಟ್ಟು ಎಡುವ ಔದಾರ್ಯವಾದರೂ ನಿಮ್ಮಲ್ಲಿದ್ದೀತು.

ಮೊನ್ನೆಯೊಮ್ಮೆ ಒಂದು ಪ್ರಸಂಗ ನಡೆಯಿತು. ಸ್ವಲ್ಪ ದಲಾಯಿಸ ದಿನ. ಬಸ್ಸಿಗಾಗಿ ಒಬ್ಬರ ಮಂದಿ ಕಾದಿರುವ ಗಡಿಬಿಡಿಯ ಸಮಯ. ಕಾಲ ತುಂಬ ಹೊತ್ತನ ಮೇಲೆ ಬಸ್ಸು ಬಂದರೆ ಸ್ಥಳ ದೊರಕಿಸಿಕೊಳ್ಳುವ ಗದ್ದಲ ಹೇಳಬೇಕೇ? ಬಾಯಿದ್ದವನು ಬಾಳಿಬಾಳನು, ಎಂದು ಹೇಳುವ ಕಾಲ, ಬಲವಿದ್ದವನ ಹೇಗಾದರೂ ನಿರ್ಬಲರನ್ನ ದೂಡಿ ಸಾಹಸ ಗೈಯುವ ಸಮಯ, ಹೆಂಗಸರು ಮಕ್ಕಳು, ಮಕ್ಕಳನ್ನು ಹಿಂದೆ ತಳ್ಳಿ ಮೇಲೆ ಹತ್ತುವ ಪೌಂಷ ಜೀವಿಗಳಿಗೂ ಕಡಿಮೆಯೇನಿಲ್ಲ. ಅದರೂ ಬೇಗನೇ ಹೋಗುವ ಆತುರದಲ್ಲಿ ಅಂತಹ ಸಣ್ಣ ಸಣ್ಣ ಪ್ರಮಾದಗಳು ನಡೆದರೆ ಅಪರಾಧವೆಷ್ಟುವಂತೆಯೂ ಇಲ್ಲ ಅಷ್ಟು ಇನ್ನೂ ಒಂದು ತಮಾಷೆ ಘಟನೆಯಿತು.

ಸಣ್ಣ, ಸಣ್ಣ, ಎರಡು ಮಕ್ಕಳನ್ನು ಕರೆದು ಕೊಂಡು ಕೈಯಲ್ಲೊಂದು ಮಗುವನ್ನೆತ್ತಿಕೊಂಡ ಮಹಿಳೆ, ಆಕೆಯನ್ನು ಹಿಂಬಾಲಿಸಿದ ವೃದ್ಧೆ ಬಹಳ ಸಾಹಸ ಮಾಡಿ ಗಂಡಸರೊಂದಿಗೆ ಬಸ್ಸು ಹತ್ತುವ ಸ್ಪರ್ಧೆಯಲ್ಲಿ ವಿಜಯ ಪಡೆದು, ಮೇಲೆ ಬಂದೆವೆಂದು ಸಮಾಧಾನದ ಉಸಿರುಗರೆದು, ಕುಳಿತು ಕೂಗುವಲೆಂದು "ಲೇಡೀಸ್ ಸೀಟ್"ನತ್ತ ನೋಡುವಾಗ ಅಲ್ಲಿ ಸ್ಥಳವಿದೆ. ಆದರೆ.... ಸೀಟಿಗಡ್ಡವಾಗಿ ಬಲಿಷ್ಠನಾದ ಯುವಕನೊಬ್ಬ ನಿಂತಿದ್ದ.

"ಸ್ವಲ್ಪ ಈಚೆಗೆ ಬನ್ನಿ. ನಾವು ಕುಳಿತು ಕೊಳ್ಳೋಣ.' ಮಗುವನ್ನೆತ್ತಿಕೊಂಡ ಮಹಿಳೆ ವಿನಯದಿಂದ ಕೇಳಿದಳು.

"ಇಲ್ಲಿ ಸ್ಥಳವಿಲ್ಲ ಹೆಂಗಸರಿದ್ದಾರೆ."

ಆಗಾದರೆ ಗಂಡ, ಉಡುಗೆಯ ಈತ ಹೆಂಗಸರಂತೆ ಹೇ ಎಂದು ಸಂದೇಹದಿಂದ ನಕ್ಕರು ಕೆಲವರು.

'ಎಕ್ಕ ಹೆಂಗಸರೇ ಕೇಳ್ತಿದ್ದಾರಲ್ಲಿ' ಎಂದ ಉದಾರ ಹೃದಯಿಯೊಬ್ಬ.

"ನಮ್ಮನ ಹೆಂಗಸರು ಒಳ್ಳೆರೆ ನೋಡಿ.' ಎಂದು ಕಲ್ಲ ಪ್ರತಿಮೆಯಂತೆ ನಿಶ್ಚಲವಾಗಿ ನಿಂತ ಎತ ಹಲಿಸಿದ್ದ (ಆತನ ಸಂಬಂಧದ) ಇಬ್ಬರು ಬಡಗಿಯರು ನಿದಾನವಾಗಿ ಹೆಜ್ಜೆ ಇಟ್ಟು ಮೇಲೇರಿದರು.

ಅವರ ವೈಯಾರದಿಂದ ಕುಳಿತು ಆತನನ್ನು ನೋಡಿ ನಗುತ್ತಿದ್ದ ಆತ ಕೃಷ್ಟಿಯ ಉಸಿರು ಬಿಟ್ಟು ತನ್ನ ಸ್ಥಳ ಹುಡುಕಲಿಕ್ಕಾಗಿ ಮುಂದ ನಡೆದ.

ಕಂಡವರು — ಸ್ಫೂರ್ತಿ

NAVAYUGA 28—2—1960
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿನೋದ ಲೇಖನ

ಪರಾರಿ ಪಾದುಕೆ...?

ಬರೆದವರು: ಶ್ರೀ ಮ. ಗೋ. ರಾವ್.

ಗಡಿಬಿಡಿಯ ಹೊತ್ತು. ಜನಸಂದಣಿ ಕಿಕ್ಕಿರಿದಿತ್ತು. ಅದೊಂದು ಬೀಜೀ ಹವರು (Busy hour). ಚಪ್ಪಲಿಗೆ ವಿರಾಮ ಕೊಟ್ಟು ಅದನ್ನು ಕಳಚಿಟ್ಟು ದೇವಳದೊಳಗೆ ದೇವರ ದರ್ಶನಕ್ಕೆಂದು ಹೋದ ನನ್ನ ಹಿಂಬದಿಯಿಂದ ಒಂದು ಮಹಾ ಗೋವು ಬಂದಿರಲು ಅದರ ಕೋಡುಗಳಿಗೆ ಹೆದರಿದ ನಾನು ಹಿಂದೆ ನೋಡುತ್ತ ಮುಂದೆ ನಡೆದೆ. ಗ್ರಹಚಾರ..... ವಶಾತ್ ಮುಂದಿನಿಂದ ಒಂದು ಮಾನವ ಪ್ರಾಣಿ ಬರುತ್ತಿತ್ತೆಂದು ನಾನೇಗೆ ತಿಳಿಯಲಿ? ಅಲ್ಲೇ ಬಲವಾದ ಢಿಕ್ಕಿ ಹೊಡೆಯುವವನಿದ್ದೇನೋ ಏನೋ' (ಅವಳು) ಬದಿಗೆ ಸಾಗಿ ಗೋಡೆಗೆ ಢಿಕ್ಕಿ ಹೊಡೆದುದರ ಪರಿಣಾಮವಾಗಿ ಕೈಯಲ್ಲಿ ಅಲಂಕಾರಾರ್ಥ ಇಟ್ಟಿದ್ದ 'ಬೆಂಗಾಲು'ಗಳು ಅರಥೂಳಾಯಿತು. ನನ್ನ ಮುಖ ಕೆಂಪಡರಿತು. ಮನಸ್ಸು ಅಯ್ಯೋ! ಹೋಯಿತೇ? ಅಂದಿತ್ತು. ನಳಗೆ ನನ್ನ ಹಿಂದಿದ್ದ ಗೋವಿನ ಮೇಲೆ ಎಲ್ಲಿಲ್ಲದ ಸಿಟ್ಟು ಬಂದು ಆ ಸಿಟ್ಟು ಸಿಟ್ಟನ್ನದೆ ಮುಂದೆ ನಡೆಯುವಂತೆ ಮಾಡಿತು. ಬಳಿ ಕಳೆದುಕೊಂಡ ಮಹಿಳೆ ಪಾಪ!..... ಆರಥೂಳಾಗಿದ್ದ ಬಳೆಗಳನ್ನು ಒಟ್ಟೈಸುತ್ತಿದ್ದುದನ್ನು ಕಂಡು ಕನಿಕರವಾಗಿ ಮುಂದೆ ನಡೆದ ನನ್ನ ಕಾಲುಗಳು ಹಿನ್ನಡೆದು ಅವಳ ಬಳಿ ಫಿಂತು ವಿನೀತನಾಗಿ ಅತಿ ವಿನಯದಿಂದ "I am very sorry" ಎಂದೆ. ಆಗ ಅಕೆ ಅಲೋಚನೆಗೆ ಆಮಂತ್ರಣವೀಯದೆ 'nevermind" ಎಂದು ನಸುನಕ್ಕು ಅಂದಳು. ನನಗದು ವ್ಯಂಗ್ಯವಾಗಿ 'No mind' ಎಂದಂತಾಗಿ "What you said?" ಅಂದೆ.

"What a man you are?' ಪುನಃ ಆ ತರುಣಿಯ ಪ್ರಶ್ನೆ.

'I am.....'

ನನ್ನ ಉತ್ತರವನ್ನು ಉತ್ಸುಕತೆಯಿಂದ ಕೇಳದೆ ಆಕೆ ಸರಸರನೆ ಮುಂದೆ ಹೆಜ್ಜೆ ಇಟ್ಟು ನಡೆದೇ ಬಿಟ್ಟಳು. ನಾನೂ ಒಮ್ಮೆ ಬುರುಗುಟ್ಟಿ ನೋಡಿ (ಅಣಕ ಮಾತ್ರ) ದೇವಳದೊಳಗೆ ನಡೆದೆ. ಎರಡೇ ನಿಮಿಷ! ..... ಸರಿ... .... ಹೊರಗೆ ಬಂದೆ..... ಅರೆ..... ಅಶ್ಚರ್ಯ..... Really wonderful..... ನನ್ನ ಪಾದುಕೆ.... ಹಿಂದದ ಪಾದರಕ್ಷೆಗಳು..... ಹೊಸತು ಚಪ್ಪಲಿಗಳೆರಡು ಕಾಣೆ..... lost... Oh! My God.! ಎಂದು ಗಟ್ಟಿಯಾಗಿ ಒಳಗೇ ಅರಚಿದೆ. ಹುಡುಕು...search ....ಎಂದು ಮನಸ್ಸು ಗೊಣಗುತಿತ್ತು.' ಸರಿ....ಮನಸ್ಸಿಗೆ ಮರು ಹೋಗದ ಮಾನವನಿದ್ದಾನೆಯೇ? ಹೇ! ವಿಧಿಯೇ! 'ಹನ್ನೆರಡೂ ಮುಕ್ಕಾಲರೆ' ಹೊಸತು ಪಾದರಕ್ಷೆ...ನನ್ನ ಸಹ ಜೀವನಕ್ಕೆ ಕೊಡಗಿತ್ತು ....ಅಗನ್ನೂ ನೋಡೋಕೆ. ಆಗಲಿಲ್ಲವೇ? ನಿನಗೆ—ಅದೂ ಬೇಕಾಯಿತೆ...' ನಿರಾಶೆ ನನ್ನನ್ನು ಮುತ್ತಿತು. ಅಂಗಡಿಯವರು ಮತ್ತೆ ಹೇಗೆ ಜೀವಿಸುವುದು....ಎಂದು ಎಣಿಸುತ್ತಿದ್ದಾಗಲೇ ಒಂದು ಪಾದುಕೆ ಮೂಲೆಯಲ್ಲಿ ಅಂಗಾತ ಮಲಗಿತ್ತು....ಪ್ರಾಯಶಃ ತನ್ನ ಜೊತೆಯವನಿಲ್ಲದ್ದಕ್ಕೆ ಇವನು ಮುಷ್ಕರ ಸೂಚಕವಾಗಿ ಹೀಗೆ ಬಿದ್ದಿರಬೇಕು ಎಂದು ಎಣಿಸಿ ಕಾಲಿಗಿಕ್ಕಿ ನನ್ನದೋ ಎಂದು ಎವೆಯಿಕ್ಕದೆ ನೋಡ ತೊಡಗಿದೆ' ನನ್ನದಲ್ಲದೆ ಮತ್ತೆನೇನು?—ಆದರೆ....ಏನು ಮಾಡಲಿ....ಏಕ ಚಪ್ಪಲಿ ಧಾಲೆ' ಎಂದು ಜನ ಅನ್ನಲಿಕ್ಕಿಲ್ಲವೇ? ಇದೂ ಒಂದು peculiar type ಎಂದಾರು. ಅದನ್ನು ಬಿಟ್ಟು ಹೋಗಲೂ ಮನಸ್ಸು ಬಾರದು. ಕೊಂಡು ಹೋಗಲು ಕನಸೆ ಒಪ್ಪದು. ಬಿಟ್ಟು ತೆರಲು ಆತ್ಮ ಕೇಳದು. ಕೊಂಡು ಒಯ್ಯಲು ಮನವು ತಾಳದು....ಹೀಗೆಯೇ ಎಷ್ಟೋ ಹೊತ್ತು ಹೇಳತ್ತಲಿದ್ದೆ...ಅಷ್ಟೇ...ಪಕ್ಕದಲ್ಲಿನ್ನೊಂದು....ಪೈದ್ಧಾ ಪಾದುಕೆ ನಿದ್ದೆ ಮಾಡುತಲಿತ್ತು. ಹದ್ದು.... ರಣ ಹದ್ದಿನಂತೆ ಬಿದ್ದುಕೊಂಡಿತ್ತು. ನನ್ನ ಪಾದುಕೆಯೊಡನೆ ಪರಿಣಯಕ್ಕೆ ಸಿದ್ಧವಾಗಿ ಕುಳಿತಂತಿತ್ತು. ಇದು ಗಡಿಬಿಡಿಯಲ್ಲಿ by mistake, ಪ್ರವಾದ ವಶಾತ್ ನಡೆದುದಾಗಿರಬೇಕು ಎಂದು ನನ್ನ ಅಂತರಾತ್ಮ ಸಮಾಧಾನ ಹೇಳಿತು. ಆದರೂ ನನ್ನ ಸ್ವಾರ್ಥ ಭಾವನೆ ಕೇಳುವುದೇ? ಇಲ್ಲ ....ಅದಕ್ಕೆ ಸಿಟ್ಟು ಹಾಲಿನಂತೆ ಉಕ್ಕಿ ಬಂದಿತು. ಆದರೆ ಅದು helpless ಆಗಿತ್ತು. ಸರಿ ಹಳತೊಂದು! ಹೊಸತೊಂದು! ಚರಣಗಳಿಗದು ದುಂದು! ಬರಿದುಂದು ಸರಿಯೆಂದು! ಗೊಣಗುತ್ತ ನನ್ನ ಕಾಲ್ಗಳಿಗೆ ಒಂದೇ ರೀತಿಯಲ್ಲಿದ್ದ ಎರಡು ಪಾದುಕೆಗಳನ್ನು ತೊಡಿಸಿದೆ. ಅಂದ ನೋಡಿದೆ...ಚೆಂದವಾಯಿತು ಎಂದು ಕೊಂಡೆ....ಎರಡು ಹೆಜ್ಜೆ ಮುಂದೆ ನಡೆದೆ. ಆಗ.....really my luck .... I am a lucky man ಅನ್ನಬೇಕು....ಅದೃಷ್ಟಶಾಲಿ ಅಂದರೆ ತಪ್ಪೇನು—ನಾನು ನಿಂಕಲ್ಲಿಗೆ ಗಡ್ಡ ಬಿಟ್ಟು ಗಿಡ್ಡ ಅನಾಮಿ ಮೋರ್ವನು ಬಂದು "ಎಣಕ್ಕುಂ"... ನಿಂಗಳಕ್ಕ.... ಅಂದರು. "ಒಣಕ್ಕಂಗೆ ಪ್ರತಿಯಾಗಿ ಎಣಕ್ಕುಂ ಅಂದೆ. ನನ್ನ ದೃಷ್ಟಿ ಅತನ ಕಾಲ್ಗಳೆಡೆ ಹರಿಯಿತು. ಕಣ್ಣುಗಳು ಮಿಸಿ ಮಿಸಿ ಪೆಕ್ಕಿತು...ಪಾಪ....ಅವನೂ ನನ್ನ ಅವಸ್ಥೆಯಲ್ಲೇ ಇದ್ದೆ.... ನನ್ನ ಕಾಲುಗಳನ್ನಾತ ನೋಡದೆ... "ಇಂಗೆ....ಚಪ್ಪಲಿ....ಇಂಗೆ ...'ಎನ್ನುತ್ತ ಹುಡುಕಿದ, ಹುಡುಕುತ್ತಾ ಇದ್ದ....ನನ್ನ ಚಪ್ಪಲಿ ಪಡೆಯಲೋಸುಗ 'ನಿಂಗಳಕ್ಕ್ ಚಪ್ಪಲಿ ವೇಂಡವಾ' ಎಂದು ಭಾಷೆ ಗೊತ್ತಿಲ್ಲದ ಭಾಷೆಯಲ್ಲಿ ಅಂದೆ. ಮತ್ತು ನನ್ನ ಕಾಲಿನಲ್ಲಿದ್ದ ಅವನ ಪಾದರಕ್ಷೆ ಕಳಚಿಸಿದೆ, ಅತನೂ ನನ್ನ ಕಾಲಲ್ಲಿರಬೇಕಾದ, ಮೊದಲಿದ್ದ ನನ್ನ ನಯೂಪಾದುಕೆಯನ್ನು ಬಂಧ ಮುಕ್ತನ ಸ್ವಾಗಿಸಿದ. ಜೊತೆಗೆ "Sorry" ಅಂದ.

ನನ್ನ 'ಸಾರಿ'ಯೊರಗೆ ಬೇಕು. ನನಗೆ ನಿಜವಾಗಿಯೂ ಸಂತೋಷ ಉಕ್ಕೇರಿ ಹರಿದಿತ್ತು ..ಹರುಷದ ಹೊನಲು ಹರಿದು 'ಥೇಂಕ್ಯೂ' ಎಂದು ನಾದ ಗೈದಿತು. ಅತನೂ "Thank you" ಅಂದ ನನ್ನ ಕಳೆದು ಹೋದ ಪಾದುಕೆಯ ಮನನಿಲನದಿಂದ ಹುಟ್ಟಿಳಿ ಚಿತ್ರನಂದ ನಾನು ಈಗಲೂ ಆಗಾಗ ಆ ಘಟನೆಯನ್ನ ನೆನೆದಾಗ ನಗುವೆಂಬ ದೇವಿ ಎನ್ನ ಬಳಿ ಸುಳಿದಾಗ, ನಾನು ಗಟ್ಟಿಯಾಗಿ ನಕ್ಕಾಗ, ನನ್ನ ಮಿತ್ರರು ಕಂಡು 'ಯಾಕೆ ನಗುವಿರಿ ? ಎಂದಾಗ, ನಾನೀ ವಿಷಯ ಅವರಿಗೆ ತಿಳಿಸುವುದಿದೆ. ಆಗವರು Silly point' ಎನ್ನುವುದೂ ವಾಡಿಕೆಯಾಗಿದೆ. ಅದರಂ ಪಾದುಕೆಗಳು ಇಂದಿಗೂ ನನ್ನ (ಎರಡು ವರುಷಗಳು ಸಂದು.) 'ಸಹಯಾತ್ರಿಯಾಗುತ್ತಲಿವೆ. ಆದರೆ ಮಂಜನ 'ನಯೂ ಚಪ್ಪಲಿ" ಎನ್ನುವುದರ ಬದಲಾಗಿ "ಲೋಸ್ಟ್ ಚಪ್ಪಲ್' ಎಂದು ತರಿಯ ತ್ರಿದ್ದೇನೆ. ಇಲ್ಲಿಗೆ ಪಾದುಕಾ ಪರಾಣಕ್ಕೆ ಪೂರ್ಣ ವಿರಾಮವಿಶ್ಯಲೇ ??

ನಗೆ ಬಿಂದು

ಚರಿತ್ರೆ ಪಾಠ

ಪೊಷ ಅಧ್ಯಾಪಕ— 'ಶಿವಾಜಿ ಯಾರು? .."

ವಿದ್ಯಾರ್ಥಿ— 'ನಮ್ಮ ತರಗತಿಯಲ್ಲಿ ಯಾರೂ ಇಲ್ಲ, ಸಾರ್!..."

ಅಷ್ಟೇ ತಾನೆ?

ಒಬ್ಬನು ಪತ್ರಿಕೆಯನ್ನೋದಿ,—'ನೋಡಿದಿರಾ?....ಹಂದಿಯ ಹೃದಯವನ್ನು ಮನುಷ್ಯ ಹೃದಯದ ಬದಲು ಶಸ್ತ್ರ ಚಿಕಿತ್ಸಾ ಮೂಲಕ ಇರಿಸಿದರಂತೆ...."

"ಒಂದು ದೃಷ್ಟಿಯಲ್ಲಿ ಹಾಗೆ ಮಾಡಿದರೆ ಮನುಷ್ಯರ ಬುದ್ಧಿ ಸ್ವಲ್ಪ ಸುಧಾರಿಸಲೂ ಬಹುದು..."

'ಹಂದಿಯದಕ್ಕಿಂತ ನಾಯಿಯ ಹೃದಯ ಪರಿಣಾಮಕಾರಿಯಾಗುತ್ತೆ ಏನೋ...!"

"ಮನುಷ್ಯರಿಗೆ ಹೃದಯವೆಂಬುದೊಂದು ಇದ್ದರೆ ತಾನೆ?...'

ಹೆಸರು ಹಾಗಲ್ಲ

ವೈದಾನಿನಲ್ಲಿ ಆಡಿ ಬಳಲಿದ್ದ ಓರ್ವನು ಒಂದು ಮರಕ್ಕೆರಗಿ ಆರಾಮವಾಗಿ ಕುಳಿತಿದ್ದುದನ್ನು ಕಂಡ ಸ್ನೇಹಿತನು ವಿಚಾರಿಸಿದ: —

"ಯು. ಆರ್. ರಿಲೇಕ್ಸಿಂಗ್?...'

"No. I am ಶ್ರಿಲೋಕ್ಸಿಂಗ್...!'

—ಎಚ್. ಎಂ. ವಿಜಯನಾರಾಯಣ

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟ ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು ಡಾ. ಕೊರಡ್ಲಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯನ್ನು ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹಿರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ರೆ ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

7—3—1968

೨೦
ಪೈಸೆ

ಕಥಾ ಪ್ರಪಂಚ

ಬಾವಿಯಲ್ಲಿ ಒಂದು ಹೆಣ

ಬರೆದವರು: ಶ್ರೀ ರಾಧಾಕೃಷ್ಣ, ಪುತ್ತೂರು.

ಒಂಬತ್ತೂವರೆಗೆ ಅಫೀಸಿಗೆ ಹೊರಟ ನಾನು ವಾರ್ಗದ ಬದಿಯಲ್ಲಿರುವ ಬಾವಿಯ ಸುತ್ತ ಜನರ ಗುಂಪನ್ನು ಕಂಡು ಏನೆಂದು ಅಚ್ಚರಿಗೊಂಡು ಗುಂಪಿನೆಡೆಗೆ ಹೋದೆ. ಒಬ್ಬನಿಂದೊಬ್ಬ ಮಾತನಾಡುತ್ತಿರುವುದನ್ನು ಕೇಳಿಯೇ ವಿಷಯ ತಿಳಿಯಿತು.

ಆ ಬಾವಿಯಿಂದ ಯಾರೂ ನೀರನ್ನು ಉಪಯೋಗಿಸುತ್ತಿರಲಿಲ್ಲ. ಯಾಕೆಂದರೆ ಆ ಬಾವಿಗೆ ಹಿಂದೆ ಒಂದು ದನ ಬಿದ್ದು ಸತ್ತು ಹೋಗಿತ್ತು. ಆ ಬಾವಿಯನ್ನು ತೋಡಿಸಿದಾತನು ಈಗ ನಮ್ಮೂರಲ್ಲಿಲ್ಲ. ಆತನ ಮನೆಯೂ ಬಿದ್ದು ಹೋಗಿದೆ. ಆದರೂ ಯಾರೂ ಬಾವಿಯನ್ನು ಮುಚ್ಚಿಸುವ ಗೋಜಿಗೆ ಹೋಗಿರಲಿಲ್ಲ.

ಪೋಲೀಸಿನವರಿಬ್ಬರು ನೆರೆದ ಜನರನ್ನು ಗದರಿಸಿ ಒತ್ತರಿಸುತ್ತಿದ್ದರು. ಜನ ಬಾವಿಗೆ ಇಣಿಕಿ ಕುತೂಹಲ ತಣಿಸಿ ಕೊಳ್ಳಲೆತ್ನಿಸುತ್ತಿದ್ದರು. ಹತ್ತಿರ ಹೋದಂತೆ ಮೂಗಿಗೆ ಏನೋ ವಾಸನೆ ಬರತೊಡಗಿತು. ಕೊಳೆತ ಹೆಣದ ವಾಸನೆ!

ಈ ದಿನ ಬೆಳಗ್ಗೆ ಜನಿಯ ಮೇರ ಕೆಲಸಕ್ಕೆ ಹೊರಟವನು ಬೀಡಿ ತೆಗೆದುಕೊಳ್ಳಲೆಂದು ಅಂಗಡಿಗೆ ಹೋಗುವಾಗ, ಹತ್ತಿರದ ದಾರಿಯೆಂದು ಬಾವಿಯ ಬದಿಯಲ್ಲಿ ಬಂದಾಗ ವಾಸನೆ ಬಂದಿತಂತೆ. ಇಣಿಕಿ ನೋಡಲಾಗಿ ಬಾವಿಯಲ್ಲಿ ಒಂದು ಹೆಣ ತೇಲುತ್ತಿತ್ತಂತೆ. ಅದನ್ನು ನೋಡಿ ಗಾಬರಿಯಾದ ಅವನು ಅಂಗಡಿಯವರಿಗೆ ತಿಳಿಸಿದನಂತೆ. ಅಂಗಡಿಯ ಸುಬ್ರಾಯ ಭಟ್ಟರು ಊರಕಾವಲಿಗೆ ಎಂದಿರುವ ಪೋಲೀಸು ವೆಂಕಪ್ಪಯ್ಯನಿಗೆ ತಿಳಿಸಿದರಂತೆ. ಆತ ನೋಡಿ, ತಾಲೂಕು ಕೇಂದ್ರಕ್ಕೆ ಸೈಕಲಿನಲ್ಲಿ ಹೋಗಿ ಸಬ್ ಇನ್ಸ್‌ಪೆಕ್ಟರ್‌ರವರಿಗೆ ವಿಚಾರ ತಿಳಿಸಿ, ಹೆಡ್ ಕಾನ್‌ಸ್ಟೇಬಲ್‌ರೊಬ್ಬರನ್ನು ಕರೆದುಕೊಂಡು ಬಂದಿದ್ದ. ಇಷ್ಟರಲ್ಲೇ ಗಂಟೆ ಹನ್ನೊಂದಾಗಿತ್ತು. ಜನರು ತುಂಬಾ ನೆರೆದು ಬಿಟ್ಟಿದ್ದರು.

ಯಾರದಾಗಿರಬಹುದು ಹೆಣ? ಯಾರು ಕಾಣೆಯಾಗಿದ್ದಾರೆ ಊಗಲ್ಲ? ಹೆಣ ಬಿದ್ದು ಒಂದು ದಿನವಂತೂ ಕಳೆದಿರಲೇಬೇಕು. ಅಲ್ಲದೆ ಅದು ತೇಲಲಾರದು. ತಾನಾಗಿಯೇ ಬಿದ್ದುದೋ ಅಲ್ಲಾ ಯಾರಾದರೂ ಕೊಲೆ ಮಾಡಿ ತಂದು ಹಾಕಿದರೋ? ಅಥವಾ ಶರಾಬು ಕುಡಿದುಗೊಂಡು ಹೋಗುವಾಗ ಅಕಸ್ಮಾತ್ತಾಗಿ ಬಿದ್ದುದೋ ಎಂದೆಲ್ಲಾ ಊಹಾ ಪೋಹಗಳು ನಡೆದಿದ್ದುವು.

ಈ ಮಧ್ಯೆ ಹೆಣವನ್ನು ಮೇಲಕ್ಕೆತ್ತುವ ಪ್ರಯತ್ನ ನಡೆದಿತ್ತು. ಯಾರೊಬ್ಬನೂ ಹೆಣವಿದ್ದ ಬಾವಿಗಿಳಿಯಲು ತಯಾರಾಗಿರಲಿಲ್ಲ. ಹೆಣದೊಂದಿಗೆ ಪ್ರೇತವೂ ಬಾವಿಯಲ್ಲಿದ್ದೀತು ಎಂಬ ಭಯ ಹೆಚ್ಚವರಿಗಾದರೆ, ಈ ವಾಸನೆಯಲ್ಲಿ ಹೇಗೆ? ಎಂದು ಕೆಲವರಿಗೆ.

ಕೊನೆಗೂ ನಾಲ್ಕು ರೂಪಾಯಿ ಕೊಡುತ್ತೇವೆಂದು ಹೇಳಿದ ಮೇಲೆ ಬಳ್ಳಿ ಮೊಗಲಿ ಬಾವಿಗಿಳಿಯಲು ಒಪ್ಪಿದ. ಒಂದಿಬ್ಬರು ಮೇರರು ಕೊರಗರು ಸಹಾಯಕ್ಕೆ ನಿಂತರು- ಅಂಗಡಿಯಿಂದ ಹುರಿಹಗ್ಗ ಬಂತು- ಯಾರ ಮನೆಯಿಂದಲೋ ಬಿದಿರೇಣಿಯೊಂದನ್ನು ತಂದು ಬಾವಿಗಿಳಿಸಿದರು. ಬಿದಿರೇಣಿಯ ಮೂಲಕ ಬಾವಿಗಿಳಿದ ಬಳ್ಳಿ ಮೊಗಲಿ; ಹೆಣದ ಸೊಂಟದ ಸುತ್ತ ಹಾಗೂ ಕುತ್ತಿಗೆಯ ಸವಿಪ ಹೇಗೋ ಹಗ್ಗ ಬಿಗಿದ. ಖಾಲ್ಯಾರು ಮಂದಿ ಕೂಡಿ ಹೆಣವನ್ನೆಳೆದು ಮೇಲೆ ಹಾಕಿದರು. ಜನರೊಮ್ಮೆ ಹೆಣದ ಸುತ್ತ ನೊಣದಂತೆ ಮುತ್ತಿ ವಾಸನೆ ತಡೆಯಲಾರದೆ ಹಿಂದೆ ಸರಿದರು.

ಹೆಡ್ ಕಾನ್‌ಸ್ಟೇಬಲರವರು ಒಂದಿಬ್ಬರು ಊರವರಿಂದಿಯನ್ನು ಕರೆದುಕೊಂಡು ಹೆಣದ ಬಳಿ ಬಂದರು. ಹೆಣದ ಮುಖ ಪರಿಚಯ ಯಾರಿಗಾದರೂ ಇದೆಯೋ ಎಂದು ನೋಡಿ ಎಂದರು. ಕೆಲವರು ಹತ್ತಿರ ಹೋಗಿ ನೋಡತೊಡಗಿದರು. ಹೆಣ ಬಾತುಕೊಂಡಿತ್ತು. ಹಗ್ಗ ಹಾಕಿದ ಕಡೆ ಚರ್ಮ ಸುಲಿದು ಹೋಗಿತ್ತು. ಗುರುತು ಸಿಗುವುದು ಅಸಾಧ್ಯವೇ ಆಗಿತ್ತು. ಒಂದು ದೊಡ್ಡ ಕೋಣನ ಗಾತ್ರವೇ ಆಗಬಹುದೆನಿಸಿತು ನಳಿಗೆ. ವಾಸನೆ ತಡೆಯಲಾರದಷ್ಟಿತ್ತು. ನಾನು ಮತ್ತಷ್ಟು ಹಿಂದೆ ಸರಿದು ನಿಂತೆ.

'ಪುಟ್ಟಯ್ಯನ ಹಾಗಿದೆ' ಎಂದು ಯಾರೋ ಗಟಗುಟ್ಟಿದರು. "ಪುಟ್ಟಪ್ಪನನ್ನು ನಿನ್ನೆ ಕಟ್ಟೆಯ ಹತ್ತಿರ ನಾನು ಕಂಡಿದ್ದೇ ದ್ದೇನೆ" ಎಂದು ಮತ್ತೊಬ್ಬರು ಹೇಳಿದರು. "ಚೆನ್ನಪ್ಪನಂತೆ ಕಾಣುತ್ತದೆ" ಎಂದಾಗ ಚೆನ್ನಪ್ಪನ ತಮ್ಮ ಅಲ್ಲೇ ಇದ್ದವನು "ಅಣ್ಣ ಇವತ್ತು ಹುತ್ತೂಂಗೆ ಹೋದ" ಎಂದ. ಹೀಗೇ ಯೋಚನೆ ಮುಂದುವರಿಯಿತ್ತು. ಕೂಡಿಕನಲ್ಲಿದ್ದರೆ ಹೀಗೆ ಬಾವಿಗೆ ಬೀಳುವ ಪ್ರಸಂಗ ಬರುತ್ತಿರಲಿಲ್ಲ ಎಂಬುದು ಎಲ್ಲರ ಮನಸ್ಸಿನಲ್ಲಿ ಇದ್ದ ವಿಚಾರ; ಅಷ್ಟರಲ್ಲಿ ಒಬ್ಬನ ದೃಷ್ಟಿ ಹೆಣದ ಕಾಲಿನ ಕಡೆ ಹರಿದು ಬಂದು ಕಡೆಕಟ್ಟೆ ಬಾಕಿದಂತಿರುವುದನ್ನು ಕಂಡು ಅದೇನೆಂದು ಹತ್ತಿರದಿಂದ ನೋಡಿದ. ಕಾಲಿನಲ್ಲಿ ಬೆಳ್ಳಿಯ ಬಳೆ ಇತ್ತು. ಈಗ ಪತ್ತೆಯಾಗುವುದು ಸ್ವಲ್ಪ ಸುಲಭವಾಯಿತು ಕಾಲಿನಲ್ಲಿ ಬೇಡಿ ಇರುವವರು ಯಾರು?

"ನಮ್ಮ ಸರಾಯಿ ರಾಮಣ್ಣನನ್ನು ಕಾಣದೆ ಮೂರು ದಿನವಾಯಿತು. ಅವನ ಕಾಲಿನಲ್ಲಿ ಬೇಡಿ ಇತ್ತು' ಎಂದರೊಬ್ಬರು. 'ಅವನೇ ಆಗಿರಬಹುದು' ಎಂಬ ಸಮರ್ಥನೆಯೂ ಬಂತು. ಹೆಣದ ಮೈಯ್ಯನ್ನು ಬಿಗಿದಿದ್ದ ಅಂಗಿಯನ್ನು ಗುರುತಿಸುತ್ತಾ ಇದು ರಾಮಣ್ಣನದೇ ಅಂಗಿ ಎಂದು ಆತನ ನೆರೆಯವರೊಬ್ಬರು ಗುರುತಿಸಿದರು. ಅಂತೂ 'ಹೆಣ' ಸರಾಯಿ ರಾಮಣ್ಣನದೆಂದಾಯಿತು. ಕೊಲೆಯೋ? ಆತ್ಮಹತ್ಯೆಯೋ? ಆಕಸ್ಮಿಕವೋ ಎನ್ನುವುದೇ ಉಳಿದ ಯೋಚನೆಗೆಯಾದ ವಿಚಾರವಾಗಿತ್ತು.

ಹೆಡ್‌ಕಾನ್‌ಸ್ಟೇಬಲರು ಪಂಚನಾಮೆ ಬರೆಯ ತೊಡಗಿದರು. ಈತ ಸತ್ತುದು ಊರಿಗೆ ಉಪಕಾರವಾದಂತೆ. ಮಾರಿ ಹೋದಂತೆ—ಕೆಲವರು ಆತ್ಮದಿಂದ ಹೊರಟರು. ಅಂಗಡಿ ಭಟ್ಟರು ಹೊಟ್ಟೆ ತಿಕ್ಕಿಕೊಳ್ಳುತ್ತಾ ನನಗೆ ಆತನಿಂದ ನೂರು ರೂಪಾಯಿಗಿಂತಲೂ ಹೆಚ್ಚು ಬರಬೇಕಾದ ಹಣವಿತ್ತು ಎಂದು ಗೊಣಗಿಕೊಂಡರು. ಅಚ್ಚುತಯ್ಯನವರು ಹಾಗೇ ಆಗಬೇಕವಳಿಗೆ ಕಳ್ಳ, ಹೆಂಡಕುಡುಕ, ನಮ್ಮ ತೋಟದಿಂದ ಅವ ಅಡಿಕೆ ಕದ್ದುದಕ್ಕೆ ಲೆಕ್ಕವಿಲ್ಲ. ಮಣ್ಣು ತಿಂದೇ ಹೋಗಲಿ ಎಂದು ಶಪಿಸುತ್ತಾ ಹೊರಟರು.

ರಾಮಣ್ಣ ಇಪ್ಪತ್ತಾರು ವರ್ಷಗಳ ತರುಣ. ಇಸ್ಪರೊಳಗೆ ಆತ ಮಾಡದಿದ್ದ ಕೆಟ್ಟ ಕಾರ್ಯಗಳೊಂದೂ ಇಲ್ಲ. ಕಳ್ಳತನ, ಕುಡಿತ, ಜೂಜು, ಸೂಳೆಗಾರಿಕೆ ಎಲ್ಲವೂ ಅವನಲ್ಲಿ ತಾವೇ ತಾವಾಗಿ ಮೆರೆಯುತ್ತಿದ್ದುವು. ಅವನು ಏನು ಮಾಡಿಯಾನು? ಏನು ಮಾಡಲಿಕ್ಕಿಲ್ಲ ಎನ್ನುವುದು ಸಾಧ್ಯವಿಲ್ಲ. ಅವನ ತಂದೆ ನಮ್ಮೂರ ಶ್ರೀಮಂತ ಪಣಿಪ್ಪಯ್ಯನವರ ಒಕ್ಕಲು, ಬೇಸಾಯಗಾರ. ಸಾಧುಜನ. ಅವಳ ಒಬ್ಬನೇ ಮಗ ರಾಮಣ್ಣ. ಸಂಗದೋಷದಿಂದ ಕೆಟ್ಟ ನಡತೆಗಳಿದವನು ಅಳದ ವರೆಗೆ ಇಳಿದು ಹೋಗಿದ್ದ. ಹತ್ತು ಜನರಂತೆ ಉತ್ತಮ ರೀತಿಯಲ್ಲಿ ಬದುಕಿ ತಂದೆಯ ಜೀವಕ್ಕೆ ತಂಪನ್ನುಂಟು ಮಾಡೆಂದು ಬೋಧಿಸಿದ ಧಣಿಗೇ ಎದುರು ನಿಂತಿದ್ದ.

"ನಾನು ಕುಡಿದರೆ ನಿಮ್ಮ ಜಾತಿ ಹೋಗುತ್ತದೆಯೇ? ನಾನು ಕುಡಿಯುತ್ತೇನೆ ಏನ ಬೇಕಾದರೂ ಮಾಡುತ್ತೇನೆ. ನನಗೆ ಹೇಳಲು ನೀವ್ಯಾ ಯಾರಂತೆ' ಎಂದು ಗದರಿಸಿದ್ದ. ಅವನ ತಂದೆಗಂತೂ ಅವನ ಕೆಟ್ಟ ಹತ್ತಿಕ್ಕಲು ಸಾಧ್ಯವಾಗಲೇ ಇಲ್ಲ. ರಾಮಣ್ಣನಿಗೆ ಅವನ ಸೋದರ ಮಾವನಿಂದಾಗಿಯೇ ಕೆಟ್ಟ ಚಟಗಳೆಂಟಿದುವು ಎಂದು ಊರವರು ಹೇಳುತ್ತಾರೆ. ಮನೆಯಲ್ಲೇನೂ ಕೆಲಸಗಳಿಲ್ಲದ ರಾಮಣ್ಣ ಹೆಚ್ಚಿನ ಸಮಯವನ್ನು ಸೋದರ ಮಾವನಲ್ಲೇ ಕಳೆಯುತ್ತಿದ್ದ. ಮಾವನಿಂದ ಪ್ರಸಾದ ರೂಪವಾಗಿ ಆತನಿಗೆ ಒಂದೊಂದೇ ಚಟಗಳು ಅಂಟಿಕೊಂಡಿದ್ದುವು.

ರಾಮಣ್ಣನ ಮಾವ ಗುಡ್ಡಪ್ಪ—ಚಿಲ್ಲಿ ಹಿಡುವಳಿದಾರ. ಹೊಟ್ಟೆ ಒಟ್ಟಿಗೆ ತೊಂದರೆ ಇಲ್ಲ. ದುಶ್ಚಟಗಳು ಅಂಟಿಕೊಂಡವ. ತನ್ನ ಹೆಚ್ಚಿನ ವೇಳೆಯನ್ನು ಅಲ್ಲೇ ಕಳೆಯುತ್ತಿದ್ದ ರಾಮಣ್ಣನಿಗೂ ಅದು ಅಂಟಿಕೊಂಡಿತು. ಆದರೆ ಅದೇ ಮಾವ ಅಳಿಯಂದಿರೊಳಗೆ ಒಮ್ಮೆ ಚಿಕ್ಕದೊಂದು ಕಾರಣಕ್ಕಾಗಿ ಜಗಳವಾಗಿ ರಾಮಣ್ಣ ಅಲ್ಲಿಗೆ ಹೋಗುವುದನ್ನೇ ಬಿಟ್ಟಿದ್ದ. ಸಾಲ್ಕು ವರ್ಷಗಳ ಹಿಂದೆ ನಡೆದ ಘಟನೆಯದು.

ಗುಡ್ಡಪ್ಪ ಸರಾಯಿ ಕುಡಿಯುತ್ತಿದ್ದುದು ಚೋಮಕ್ಕನ ಮನೆಯಲ್ಲಿ. ಚೋಮಕ್ಕಳ ಮಗಳು ಚೆನ್ನಿ, ಆತನಿಗೆ ಭೋಗ ಪತಿಯಾಗಿದ್ದಳು. ಗುಡ್ಡಪ್ಪನೊಂದಿಗೆ ಕುಡಿಯಲು ಹೋಗುತ್ತಿದ್ದ ಇಪ್ಪತ್ತೈದು ವರ್ಷಗಳ ತರುಣ ರಾಮಣ್ಣನಿಗೆ ಆಕೆಯನ್ನು ಕಂಡ ಒಂದು ರೀತಿಯ ಆಕರ್ಷಣೆಯುಂಟಾಗಿತ್ತು. ಗುಡ್ಡಪ್ಪನಿಗೆ ಐವತ್ತು ವರ್ಷಗಳು ಕಳೆದಿದ್ದು, ಶರೀರವೂ ಜಗ್ಗು ಬಿದ್ದಿತ್ತು. ಹೆಣದ ಬಲದಿಂದ ಆ ಎಳೆಯವಳು ಅವನಿಗೆ ದೊರಕಿದ್ದಳಷ್ಟೆ. ರಾಮಣ್ಣನಂತಹ ತರುಣನನ್ನು ಕಂಡಾಗ, ಮೊದಲೇ ಜಾರಿ, ರುಚಿಕಂಡಿದ್ದ ಚೆನ್ನಿ ಮರುಳಾದುದು ಹೆಚ್ಚಲ್ಲ. ಗುಡ್ಡಪ್ಪನಿಲ್ಲದ ಒಂದು ದಿನ ರಾಮಣ್ಣನೊಬ್ಬನೇ ಕುಡಿಯಲು ಹೋದಾಗ, ಚೋಮಕ್ಕ ಕಟ್ಟೆಗೆಗಂದು ಕಾಡಿಗೆ ಹೋಗಿದ್ದಳು. ಚೆನ್ನಿ ಆ ಸಂದರ್ಭವನ್ನು ಚೆನ್ನಾಗಿಯೇ ಸಾಧಿಸಿದಳು. ಬಿಸಿ ತಾಗಿದಾಗ ಬೆಣ್ಣೆ ಕರಗದಿರುತ್ತದೆಯೇ? ಆ ಸಂಬಂಧ ಅಲ್ಲಗೇ ಫಲ್ಲಲಿಲ್ಲ. ನಿಂತಿದ್ದರ ತೊಂದರೆ ಇರಲಿಲ್ಲ. ಚೆನ್ನಿ ರಾಮಣ್ಣನ ಗೆಳತನ ಬೆಳೆಯಿತು. ಅಲ್ಲಿ ಸಂದರ್ಭ ಸಂಧಿಸಿ ಕೂಡುವುದೂ ನಡೆಯತೊಡಗಿತು. ಬೆಕ್ಕು ಅಣ್ಣು ಮುಚ್ಚಿ ಹಾಲು ಕುಡಿದರೆ?

ಗುಟ್ಟು ರಟ್ಟಾಗಿ ಗುಡ್ಡಪ್ಪ ಗೌಡನು ವೀರಾವೇಶ ತಾಳಿದರು. ಗುಂಪಿಗೇ ತರುವಂತ್ರವಾಗಿ ಪರಿಣಮಿಸಿದ್ದ ರಾಮಣ್ಣನನ್ನು ಸಿಕ್ಕಾಬಟ್ಟೆ ಬೈದು "ಇನ್ನು ಮುಂದೆ ನನ್ನ ಮನೆಗಾದರೂ ಚೆನ್ನಿಯ ಮನೆಗಾದರೂ ಕಾಲಿಟ್ಟೆಯಾದರೆ ಸೊಂಟ ಮುರಿಸಿಯೇನು" ಎಂದು ಗದ್ದರಿಸಿ ಬಿಟ್ಟರು. ರಾಮಣ್ಣನಿಗೂ ಸಿಟ್ಟು ಬಾರದೆ ಇರಲಿಲ್ಲ. ಆದರೆ ಆತ ತಪ್ಪುಗಾರನಾದುದರಿಂದ ತೆಪ್ಪಗಿರಬೇಕಾಯಿತು. ಮಾವನಲ್ಲಿ ಈವರೆಗೆ ಧರ್ಮಕ್ಕೆ ತೀರುತ್ತಿದ್ದ ಚಟಕ್ಕೆ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ವಲ್ಲಿ ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 3% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೭	೭—೩—೧೯೬೮	No. 27

ವ್ಯವಹಾರ ದೃಷ್ಟಿ

ಕರ್ನಾಟಕದ ವಿತ್ತಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಲ್ಪ ಉಳಿತಾಯದ ಮುಂಗಡ ಪತ್ರವನ್ನು ಮಂಡಿಸಲು, ಸಮರ್ಥರಾಗಿದ್ದಾರೆ—ಒಳ್ಳೆ ಎಂಬ ವಿಷಯದಲ್ಲಿ ಇನ್ನೂ ಭಿನ್ನಾಭಿಪ್ರಾಯವಿದೆ. ಉಳಿತಾಯವು ಬರಿಯ ತೋರಿಕೆಯದಷ್ಟೇ ಎಂದು ಕೆಲವರ ವಾದ. ಆದರೂ ತೋರಿಕೆಗಾದರೂ ಉಳಿತಾಯದ ಮುಂಗಡ ಪತ್ರವನ್ನು ಮಂಡಿಸಿದ ಶ್ರೀ ಹೆಗ್ಗಡೆಯವರನ್ನು ಹೊಗ ತೆಗೆದ ಜೀರದ ಬಗ್ಗೆ ಜನತೆ ಅಭಿನಂದಿಸಬೇಕು. ಇರುವ ತೆರಿಗೆಗಳು, ಕೇಂದ್ರದ ಸಹಾಯ ಮತ್ತು ರಿಜರ್ವ್ ಬ್ಯಾಂಕಿನ ಓವರ್‌ಡ್ರಾಫ್ಟ್‌ಗಳಲ್ಲಿಯೇ ಆಯ-ವ್ಯಯಗಳ ಇಬ್ಬಾಯಿಗಳನ್ನು ಕೂಡಿಸುವ ಜಾಣತನವನ್ನು ಮಾನ್ಯ ಮಂತ್ರಿಗಳು ತೋರಿಸಿದ್ದಾರೆ.

ಈ ಬಾರಿಯ ಮುಂಗಡಪತ್ರ ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ. ಭೂಕಂದಾಯವನ್ನು ರದ್ದುಗೊಳಿಸಲಾಗುವುದೆಂಬ ಕೇಳಿಕೆ—ವದಂತಿ—ಭರವಸೆಗಳ ನಡುವೆ ತತ್ಪರಿಸುತಿದ್ದ ಜನತೆಗೆ ಸರಕಾರವೀಗ ಸರಿಯಾದ ಉತ್ತರ ಕೊಡಿದೆ. ಭೂಮಾಲಿಕರ ವತಿಯಿಗೊಳಗಾಗಿ ಭೂಕಂದಾಯ ರದ್ದು ಮಾಡಲಿಲ್ಲವೆಂದು ವಿರೋಧ ಪಕ್ಷದವರು ದೂರಬಹುದು. ಅದಕ್ಕೆ ಅರ್ಥಮಂತ್ರಿಯವರ ಉತ್ತರ - ಕಂದಾಯ ರದ್ದು ಮಾಡುವುದಕ್ಕೆ ಮೊದಲು ಬೇರೆ ಉತ್ಪನ್ನ ಮೂಲವನ್ನು ಕಂಡು ಹಿಡಿಯಬೇಕು. ಇನ್ನಿತರ ತೆರಿಗೆಗಳ ಬದಲು ಭೂಕಂದಾಯವೇ ಇಷ್ಟವೆಂದು ರೈತರು ಅಭಿಪ್ರಾಯ" ಎಂದು ಆರ್ಥಿಕ ಸ್ಥಿತಿಗತಿಗಳು ಚೇತರಿಸಿಕೊಳ್ಳದೆ ಯಾವುದೇ ಸೌಲಭ್ಯ ಕೊಡಿದರೆ ಲಾಭವಾಗದು. ಜನತೆಯ ಮೇಲೆ ಪ್ರತ್ಯಕ್ಷ ಭಾರವನ್ನು ತಪ್ಪಿಸುವುದಕ್ಕಾಗಿ ಪರೋಕ್ಷ ಭಾರವನ್ನು ಹೇರುವುದು ಯಾರಿಗೂ ಅಪೇಕ್ಷಣೀಯವಲ್ಲ. ಸಂಡನ್ಸ್ಕೂಲಗಳ ಅಭಾವದಲ್ಲಿ ಉಚಿತ ಮಾಧ್ಯಮಿಕ ಶಿಕ್ಷಣವನ್ನು ನಾವು ಕೊಡುತ್ತಿರುವುದರಿಂದ ಎಷ್ಟು ನೆಚ್ಚವಾಗುತ್ತಿದೆ? ದೇಶದ ರಾಷ್ಟ್ರೀಯ ಆದಾಯ ಹೆಚ್ಚಿದಂತೆಯೇ ಗ್ರಾಮೀಣ ಆದಾಯವೂ ಹೆಚ್ಚಿದೆ. ಆದರೆ, ಗ್ರಾಮೀಣ ತೆರಿಗೆಗಳ ಪ್ರಮಾಣವು ಬಹಳ ಕಡಿಮೆ ಯಾಗುತ್ತಿರುತ್ತಿದೆ. ಗ್ರಾಮಗಳಲ್ಲಿ ಬಂಡವಳ ಹೂಡುವ ಪ್ರವೃತ್ತಿ ಹೆಚ್ಚಾದಂತೆ ಅಲ್ಲಿನ ಆಯವೂ ಹೆಚ್ಚುತ್ತದೆ, ತೆರಿಗೆ ಹೆಚ್ಚಾಗಿ ಬೀಳಬಾರದು. ನ್ಯಾಯ. ನಮಗಳಲ್ಲಿ ಸರಮಾವಧಿ ತಂಗಾಳಿಗಳಿರುವುದನ್ನು ನೆನಪಿಸಿಕೊಂಡರೆ, ತೆರಿಗೆ ಪದ್ಧತಿಯನ್ನು ಪುನರ್ಪರಿಶೀಲಿಸಲಿದು ಸೂಕ್ತ ಸಮಯವೆಂಬುದು ವಿಜ. ಸರಕಾರಿ ವಲಯದ ಉದ್ಯಮ ಕ್ಷೇತ್ರವು ತನ್ನ ಆದರ್ಶ ನೀತಿಯಿಂದ ವ್ಯವಹಾರ ಪ್ರೀತಿಗೆ ಇಳಿಯಬೇಕು; ಮತ್ತು ಲಾಭಗಳಿಸಲು ರಕ್ತವಾಗಬೇಕು—ಎಂಬ ಆಶಯ ಅರ್ಥಮಂತ್ರಿಗಳದ್ದು. ಇದನ್ನು ಎಲ್ಲರೂ ಒಪ್ಪುತ್ತಾರೆ. ಪಾಸಿಗಿ ಉದ್ಯಮಗಳು, ಬಸ್ಸು ಕಂಪೆನಿಗಳು ಅಧಿಕ ಪ್ರಮಾಣದಲ್ಲಿ ಲಾಭಗಳಿಸುತ್ತಿರುವಾಗ ಸರಕಾರಿ ವಲಯದ ಪ್ರಗತಿ ನಾಮಮಾತ್ರವಾಗುತ್ತ ನಡೆಯುವುದು ರಾಜ್ಯ ಸರಕಾರಕ್ಕೆ ಗೌರವ ತರುವಂಥದುದಲ್ಲ. ಇಲ್ಲಿ ಬೇಕಾಗಿರುವುದು ಪ್ರಾಮಾಣಿಕ ವ್ಯಾವಾರೀ ನೀತಿ. ೧೯೬೮—೬೯ನೆಯ ವರ್ಷದ ವಾರ್ಷಿಕ ಯೋಜನೆಯು ಸುಮಾರು ೬೦ ಕೋಟಿ ರೂಪಾಯಿ ಗಳದ್ದಾಗಿರುವುದು, ಇದರ ಪ್ರಮಾಣ ಹಿಂದಿನ ವರ್ಷದಷ್ಟೇ. ಇದರ ಮೊತ್ತವನ್ನು ಏರಿಸುವ ಸಾಧ್ಯತೆಯಿಲ್ಲವಾದರೂ ಕಡಿಮೆ ಮಾಡಬಾರದೆಂಬುದೇ ಮುಂಗಡ ಪತ್ರದ ಆಶಯ. ನೀರಾವರಿಯ ಸೌಲಭ್ಯವನ್ನು ಪಡೆದಿರುವ ಪ್ರದೇಶಗಳಲ್ಲಿ ಕೀರಾವರಿಯ ಮೇಲಿನ ಉಪತೆರಿಗೆಯನ್ನು ಹೇರುವ ಇರಾದೆ ಸರಕಾರಕ್ಕಿದೆ. ಇದನ್ನು ಕೆಲವರು ವಿರೋಧಿಸಬಹುದಾದರೂ ವಿರೋಧ ಸಾಧ್ಯವಾದುದೆಂದು ಹೇಳಲಾಗದು.

ಮುಂಗಡ ಪತ್ರದ ಇನ್ನೊಂದು ಮಹತ್ವದ ಅಂಶವೆಂದರೆ, ಸರಕಾರಿ ಮತ್ತು ಸರಕಾರೀ ಕೃಪಾಪೋಷಿತ ಸಂಸ್ಥೆಗಳ ನೌಕರರಿಗೆ ಈ ತಿಂಗಳಿಂದ ಕೇಂದ್ರದ ದರದಲ್ಲಿ ಹುಟ್ಟಿಭತ್ತೆಯನ್ನು ಕೊಡಮಾಡಿದುದು. ವೇತನಾಯೋಗವು ನವಂಬರ್‌ ೬೭ ಮತ್ತು ಓಪ್ರಿಲ್ ೬೮ರಿಂದ ಜಾರಿಗೆ ತರುವಂತೆ ಎರಡು ಮಧ್ಯಾವಧಿ ವರದಿಯನ್ನು ಕಳಿಸಿದ್ದರೂ ಸರಕಾರವು ಮೊದಲನೆಯದನ್ನು ಅಡಿಗೆ ಹಾಕಿ ಎರಡನೆಯದನ್ನು ಒಂದು ತಿಂಗಳು ಮೊದಲೇ ಜಾರಿಗೆ ತಂದು "ಜಾಣತನ"ವನ್ನು ತೋರಿಸಿದೆ. ಹೆಚ್ಚಿದ ತುಟ್ಟಿಭತ್ತೆಯ ಮೂರರಲ್ಲೊಂದಂಶವನ್ನು 'ಉಳಿತಾಯ ಯೋಜನೆ'ಯ ಮೂಲಕ ನೀಡುವ "ಮಾಂಡಿ ಯೋಜನೆ"ಯನ್ನು ಘೋಷಿಸಿದೆ. ನೌಕರರು ಈ ಬಗ್ಗೆ ಏಕಾಭಿಪ್ರಾಯ ತಳೆದಿಲ್ಲವೆಂಬುದು ಕಂಡಿತ. ನಿವೃತ್ತ ವೇತನದಾರರ ಕಡೆಗೂ ಸರಕಾರದ ಕೃಪಾದೃಷ್ಟಿ ಬೀರಿ, ಅವರ ತುಟ್ಟಿಭತ್ತೆಯಲ್ಲಿಯೂ ಏರಿಕೆಯಾಗಿದೆ. ಇದು ಸ್ವಾಗತಾರ್ಹ.

ರಾಜ್ಯಾದಾಯದ ಐದಂಶ್ಟೊಂದು ಪಾಲು ಶಿಕ್ಷಣ ಇಲಾಖೆ ತಿನ್ನುತ್ತದೆ—ಇದು ರಾಜ್ಯ ಸಚಿವರಿಗೊಂದು ಕಲೆನೋವು. ಶಿಕ್ಷಣವೊಂದು ದೀರ್ಘಕಾಲಿಕ ಬಂಡವಳ ವಿನಿಯೋಗವಾದುದರಿಂದ ಇದಕ್ಕಾಗಿ ಕರುಬುವುದು ನ್ಯಾಯವಲ್ಲ. ಆದರೂ 'ಆದರ್ಶ' 'ನೀತಿ' ಗಳ ಹೆಸರಿನಲ್ಲಿ ಮೋಲ ಗುವುದನ್ನು ನಿಲ್ಲಿಸಿದರೆ ಈ ಬಾಬತ್ತಿನಲ್ಲಿ ಕೋಟ್ಯಂತರ ರೂಪಾಯಿ ಗಳ ಮಿತವ್ಯಯ ಸಾಧ್ಯವಿದೆ. ಮದ್ಯಪಾನ ಪ್ರತಿಬಂಧವನ್ನು ಕಿತ್ತೆಸೆಯುದರಿಂದ ೧೨ ಕೋಟಿ ರೂಪಾಯಿಗಳ ಹೆಚ್ಚಿನ ವರಮಾನ ರಾಜ್ಯ ಬೊಕ್ಕಸಕ್ಕಾಗುವ ನಿರೀಕ್ಷೆ—ಇದು ವಾಸ್ತವಿಕವಾಗಿ ಇನ್ನೂ ಹೆಚ್ಚಾಗಬಹುದು—ಈ ಹೆಚ್ಚಿನ ಆದಾಯದ ಪರಿಣಾಮವಾಗಿಯೇ ಉಳಿತಾಯದ ಮುಂಗಡಪತ್ರ ಸಿದ್ಧವಾಯಿತು ಎಂದರೂ ತಪ್ಪಲ್ಲ. ಆದೇನೇ ಇರಲಿ, ಅರ್ಥ ಮಂತ್ರಿ ಹೆಗ್ಗಡೆಯವರು "ವ್ಯವಹಾರ" ನೀತಿಯುಕ್ತ ದೃಷ್ಟಿಯಿಂದ ಕೆಲಸ ಮಾಡಿದ್ದಾರೆ. ಆದರ್ಶದ ಕುದುರೆಯ ಕಡಿವಾಣವನ್ನು ನಿಜಕ್ಕೂ ಬಿಟ್ಟೇ ಬಿಡುತ್ತಾರೆಯೆ?

ಪದಚ್ಯುತೆ—ರಾಣಿ

ಕೊಯಂಬತ್ತೂರ್, ಕ್ಯಾದಿ ನಾಗರಿಕ ಪ್ರದೇಶದಲ್ಲಿ ರಾಷ್ಟ್ರ ವಿರೋಧಿ ಘಟನೆಗಳು ನಡೆಯುತಿದ್ದಾಗ, ವಿದ್ರೋಹಿ ವಿದ್ಯಾರ್ಥಿಗಳನ್ನು ಪೋಲೀಸರಾಗಲೀ ಇತರರಾಗಲೀ ಹಡೆಯಲಿಲ್ಲ ಅವರದ್ದು ಪ್ರತ್ಯೇಕ ತಮಿಳುನಾಡು ಬೇಡಿಕೆಗೆ ಪರೋಕ್ಷ ಬೆಂಬಲ. ಕೇಂದ್ರ ಸರಕಾರದಿಂದ ತಮಿಳ್ ಸರಕಾರಕ್ಕೆ ಈ ಸಂಬಂಧದಲ್ಲಿ ಎಚ್ಚರಿಕೆ ಬಂದಿತೆಂದೂ ಈ ಬಗೆಯ ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ರಾಜ್ಯ ಸರಕಾರವು ವಿಫಲವಾದರೆ, ಕೇಂದ್ರವು ನಡುವೆ ಪ್ರವೇಶಿಸುವುದು ಅನಿವಾರ್ಯವಾಗುವುದೆಂದು ಅದರಲ್ಲಿ ಸೂಚಿಸಲಾಗಿತ್ತೆಂದೂ ಕೆಂ ವದಂತಿ. ಅಣ್ಣಾದುರೈ—ರಾಜಾಜಿ ಜಂಟಿ ಹೇಳಿಕೆಯ ಭಾಷೆ—ಅರ್ಥ ಮತ್ತು ಆ ಹೇಳಿಕೆಯೊಡನೆಯೇ ಚಳುವಳಿಯ ಸ್ಥಗಿತ—ಇವು ಕೆಂವದಂತಿಯನ್ನು ಸಮರ್ಥಿಸುತ್ತವೆ. ತೋರಿಕೆಗೆ ಒಬ್ಬಿಬ್ಬರ ಮೇಲೆ ಅಪರಾಧ ಹೊರಿಸಿ ವಿಚಾರಣೆಗೆ ಗುರಿಪಡಿಸಬಹುದಾದರೂ ತಮಿಳುನಾಡು ಸರಕಾರದ 'ಕೇಂದ್ರ ವಿರೋಧಿ ಧೋರಣೆ'ಯೇ ಅಲ್ಲಿನ ಅರಾಜಕತೆಯ—ಅನಾದರಕ ಕೃತ್ಯಗಳಿಗೆ ನಾಂದಿ. ದ್ರಾ.ಮು.ಕ. ಪಕ್ಷವು "ಪ್ರತ್ಯೇಕ (ಸ್ವತಂತ್ರ) ತಮಿಳು ನಾಡಿನ ಬೇಡಿಕೆಯನ್ನು ಬಿಟ್ಟು ಕೊಟ್ಟೆವೆಯೆಂದು ಹೇಳಿದರೂ ಅದರ ಇತಿಹಾಸ—ಆಚರಣೆ ಇದನ್ನು ನಮ್ಮ ಧಿಕ್ಕರಿಸುವುದಿಲ್ಲ. ಅಂಧ ಕನ್ನಡ, ಮಳೆಯಾಳ ಭಾಷೆಗಳನ್ನು ದಾಸರನ್ನಾಗಿರಿಸಿ, ತಾನು ರಾಣಿಯಾಗಿ ಮೆರೆದಿದ್ದ ಬ್ರಿಟಿಷರ ಕಾಲದ ತಮಿಳ್‌ನಾಡು ಸಸ್ತಿ ಇಂಗ್ಲಿಷಿನ ಸಹಾಯದಿಂದ ತನ್ನ ಕಳೆದ ಕೊಂಡ ರಾಣಿಪಟ್ಟವನ್ನು ಮತ್ತೆ ಪಡೆಯುವ ಕನಸು ಕಾಣುತ್ತಿದೆಯೆ? ಅಂತಿದ್ದರದು ಭರಿಯ ಭ್ರಾಂತಿ!

ವಚನ ಸುಧೆ

ನಸ್ಯಾದ್ವನಮೃತೇವ್ಯಾಘ್ರಾ
ವ್ಯಾಘ್ರೈರ್ವನಸ್ತು ವೃತೇ ವನಂ
ವನಂ ಹಿ ರಕ್ಷತೇ ವ್ಯಾಘ್ರೈ
ವ್ಯಾಘ್ರಾನ್ ರಕ್ಷತಿ ಕಾನನಂ||

• ಹುಲಿಬಿಟ್ಟಿವಾದರೆ, ಕಾಡು ಉಳಿಯದು; ಕಾಡಿಲ್ಲದೆ ಹುಲಿಯಿರದು ಏಕೆಂದರೆ, ಹುಲಿಯು ಕಾಡನ್ನೂ ಕಾಡು ಹುಲಿಯನ್ನೂ ರಕ್ಷಿಸುತ್ತದೆ.

ಮುಖಚಿತ್ರ

ಹಂಗೆರಿ — ಅಸ್ಟ್ರಿಯಾ ನಿರ್ಮಿತ 'ಸುಜನ್ನೆ''ಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದ ಫ್ರೆಂಚ್ ತಾರೆ ಎಂಸ್ಟ್ಲ್ ಪೆಟಿಟ್. (ಬಲ)

ಕಂದಾಯದ ಮು. ಕೋರ್ಟಿನಲ್ಲಿ
O.S 504/67

ವಾದಿ, —ಪೆಪ್ರಿ ಮತ್ತಾಸ್.
ಪ್ರತಿವಾದಿರು —ಪೆಟ್ಟಾ ದಿ. ಸೋಜ ಕೂಡಾ

ತಿನೇ ಪ್ರತಿವಾದಿಗೆ ತಿಳಿಸುವದೇನೆಂದರೆ-
ತಿನೇ ಪ್ರತಿವಾದಿಗಳು ಗಿರಿಜಾ ಹೆಂಗಸ್ಸು ಕೊರಾಜಿ ಹೆಂಗ್ಸಿನ ಮಗಳು—ಹೊಸಾಳು ಗ್ರಾಮದ ಹೊಸಾಳ ರೋಡಿನಲ್ಲಿ ಸ್ವತ್ಯಾನಂದ ಮನೆಯಲ್ಲಿರುವವಳು.

ವಾದಿಯು ನಿಮ್ಮ ವಗೈರೆರ ಮೇಲೆ ಯಾಡು ದಸ್ತೈವಜಿನ ಬಾಬ್ತು ಬರತಕ್ಕ ಅಬ್ಬಜಿಗೆ ಮೇಲ್ಕಂಡ ದಾವೆಯನ್ನು ದಾಕಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 16—8—68ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಉಪಾಧಿಯದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಾಣ ಮಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜಾಬ್ತೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ಪೈಸಲು ಮಾಡೋಣದೆಂತಿಂತಯೂ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plaintiff

ಮೊಳ್ಳಾಂ: ಕುಂದಾಪುರ,
ತಾರೀಕು. 1-8-68.

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ಮೂಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ

ವಾರ್ಷಿಕ ಚಂದಾ ರೂ. ೧೦

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O S. 242/1967.

ರುಕ್ಮಿಣಿ ಅಮ್ಮ —ವಾದಿ.
vs
ಶ್ರೀನಿವಾಸ ಶಿವತ್ತಾಯ —ಪ್ರತಿವಾದಿ.
S/o ಸೀತಾರಾಮ ಶಿವತ್ತಾಯ, ಸಾ ಡಿಗಂಬ್, ಶಿವಳ್ಳಿಗ್ರಾಮ, ಉಡುಪಿ ತಾಲೂಕು.

ವಾದಿರು ಪ್ರತಿವಾದಿರ ವೇಲೆ ವರ್ಷದ ಅಶನಾರ್ಥ ಬಾಕಿ ಬಗ್ಗೆ ದಾಖಲು ಮಾಡಿದ ಸದ್ರಿ ನಂಬ್ರವನ್ನು ತಾ. 21-8-68ಕ್ಕೆ ತನ್ನಿಗೆ ಇಟ್ಟಿದೆ ಎಂದು ತಿಳಿಸೋಣಾಗಿದೆ.

ಪಿ. ರಾಮಚಂದ್ರ ರಾವ್
B. A. B. L.
ವಾದಿ ಕಡೆ ಎಡ್ವೋಕೇಟು,
ಉಡುಪಿ, 1-8-68.

ಗೇಹರಾಜ್ಯದಲ್ಲಿ

ಹೊಸ ಟ್ಯಾಕ್ಸ್ ಪ್ರಪೋಸಲ್ಲು

"ಓಹೋ, ಅಲ್ರಿ, ಇದೆಂಥದೂಂತ?'

'ಯಾವುದು?'

'ನಿಮ್ಮ ಅರ್ಥಮಂತ್ರಿ ಮುರಾರ್ಜಿ ಭಾಯಿಯವ್ರು ಭಾರೀ ತೆರಿಗೆ ಬೇರಿ ಬಿಟ್ರಲ್ಲಾ....?"

"ಹ್ಹೂಂ ..."

"ಅಲ್ರಿ, ಇಷ್ಟೆಲ್ಲಾ ತೆರಿಗೆ ಹಾಕಿದ್ರೂ ಮತ್ತೂ ೨೦ ಕೋಟಿ ರೂಪಾಯಿಗಳ ಕೊರತೆಯಿಂದಲೇ ಮುಂಗಡ ಪತ್ರ ಕೊನೆಗೊಂಡಿದೆಯಲ್ಲಾಂತ...."

"ಸರೀನ್ನಿ ಭಾರತೀಯರ ವರಮಾನದಂತೆಯೇ ಭಾರತೀಯ ಮುಂಗಡ ಪತ್ರಾನ್ನು....'

"ಅಂದ್ರೆ....?"

"ಅಂದ್ರೆ, ಎರಡೂ ಸಮುದ್ರ ಪಾತಳಿಯಲ್ಲೇ ಇರುವುದೂನ್ನು...."

"ಎಷ್ಟು ಮಣಿಲು ಸುರಿದರೂ ಅದು ತುಂಬೋದಿಲ್ಲಾಂತ ತಾನೇ ನೀವನ್ನೋದು?"

"ಹ್ಹೂಂ...."

"ಅಲ್ರಿ, ನೋಡಿ, ರೇಲ್ವೆ ಮಂತ್ರಿ ಸೂಣಾಚ್ಚನವರು ರೇಲ್ವೆ ಪ್ರಯಾಣ-ಸಾಗಾಟ ದರವನ್ನು ಏರಿಸಿದರೆ, ಮುರಾರ್ಜಿಯವರು ಎಲ್ಲವುಗಳ ಬೆಲೆಯೇರಿಸಿಬಿಟ್ಟ.'

"ಎಲ್ಲಿಯೇ, ಹಾಗೇನೂ ಇಲ್ಲಾಳ್ಳು. ಏನೋ ಕೆಲವು ಸರಕುಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿದ್ರು ನಿಜ. ಆದ್ರೂ ಇದರಿಂದ ಶ್ರೀ ಸಾಮಾನ್ಯನಿಗೇನೂ ಹೆಚ್ಚಿನ ಹೊರೆ ಬೀಳುವುದಿಲ್ಲ."

"ಆಹ, ನೀವೊಂದು ಕಾರ್ಡಿಗೆ ಹತ್ತು ಪೈಸೆ, ಇನ್ಲಾಂಡಿಗೆ ಹದಿನೈದು, ಕವರಿಗೆ ಇಪ್ಪತ್ತು...."

"ಭಾರಿ ಆಯ್ತೇ...'

"ಮತ್ತೆ, ಆರು ಪೈಸೆ ಎಲ್ಲಿ? ಹತ್ತಿಲ್ಲಿ?'

'ಸಾಚಿಕೆ ಆಗೋದಿಲ್ವೆ?"

"ಯಾಕೆ? ಅರ್ಥದ್ದು ಅದುದಾದರೂ ಏನೀಗ?"

"ನೋಡು, ನಿನ್ನಮ್ಮನಿಗೆ ನಿನ್ನಪ್ಪ ಕಾಣ ಬೇಕೂಂತಾರಾನ್ನು. ಒಂದು ಕಾರ್ಡ್ ಗೀಚಿ ಹಾಕಿದ್ರೆ...."

"ಅದು ಸರೀನ್ನಿ....ಹಣವೂ ಲಾಭ, ಸಮಯವೂ ಲಾಭ....'

"ಮತ್ತೆ ರೇಟು ಜಾಸ್ತಿ ಅಂತೀಯಲ್ಲಾ?'

"ಅಲ್ರಿ, ಜನ ಸೇವೆ ಮಾಡೋದಿಕ್ಕೆ ಅಂಚೆ ತಂತಿ ಶಾಖೆಯಿರೋದು ಅದು...."

'ಏನೇಳಂತಿಯ? ಅಂಚೆ ತಂತಿ ಶಾಖೆ ಇರ್ಬೇಕ್ರು, ನಮ್ಮ ಸೇವೆಯನ್ನು ತಾವೇ ಮಾಡಿಕೋ ಬೇಕು. ಅದರ ಖರ್ಚಿಗಾಗಿ ತಾವೇ ಹಣ ಕೂಡಿಸಬೇಕು...."

"ಹ್ಹೂಂ...'

"ಮತ್ತೆ ನೋಡು, ಈಗಿನ ಒಂದು ಕಾರ್ಡೂ ಸಿದ್ಧಪಡಿಸುವಲ್ಲೇ ಆರು ಪೈಸೆ ಬೀಳಬಹುದಂತೆ..."

'ಅದು ಸರೀರಿ. ನಮ್ಮ ಅಂತೂ ಮದುವೆ ಪತ್ರಿಕೆ ಕಾರ್ಡಿನಲ್ಲಲ್ಲ ಮಾಡ್ಸಿದ್ದು? ನೋಡಿ ಒಂದು ಕಾರ್ಡಿಗೇನೇ ಇಪ್ಪತ್ತೈದು ಪೈಸೆ ಅಂತೆ!'

"ಅದೆಲ್ಲಾ ಆಡಂಬರ. ಆದ್ರೂ ಅಂಚೆ ಕಾರ್ಡಿಗೆ ಹತ್ತು ಪೈಸೆ ಮಾಡಿದ್ರಿಂದ ಏರಿದ್ದು ಹೆಚ್ಚು ಎಂಬ ಒಂದು ದುರ್ಭಾವನೆ ಬಿಟ್ಟು ಬಿಟ್ರೆ....'

"ಅದು ಸರಿ. ಮತ್ತೆ ನೋಡಿ, ಉಳಿದವುಗಳ ಏರಿಕೆಯೂ ಹಾಗೇನೇ. ಆದ್ರೆ ಇಷ್ಟೆಲ್ಲಾ ಏರ್ಸಿದ್ರೂ ನೋಡಿ, ಉಳಿತಾಯ ಇಪ್ಪತ್ತು—ಇಪ್ಪತ್ತೈದು ಕೋಟಿ ಮಾತ್ರವಂತೆ!'

"ಇದರಿಂದಲೇ ನೀವು ಲೆಕ್ಕ ಹಾಕಬಹುದಲ್ಲಾ, ಏರಿಸಿದ್ದು ಏನೂಂತ?'

"ಹ್ಹೂಂ ...ಅಲ್ರಿ, ಮಕ್ಕಳು ತಿನ್ನುವ ಚಾಕಲೇಟುಗಳಿಗೂ ತೆರಿಗೆ ಜಾಸ್ತಿಯಂತೆ! ಅದು ಅನ್ಯಾಯ ನೋಡಿ...'

"ಯಾಕೆ?'

'ಮಕ್ಕಳು ಅಂದ್ರೆ ದೇವ್ರಿಗೆ ಸಮ. ಹಾಗಿರುವಾಗ....'

"ಅಲ್ವೆ, ನಿನ್ನೆ ಶುಕ್ರವಾರ. ದೇವಸ್ಥಾನಕ್ಕೆ ಹೋಗಿದ್ದಿಯಾ?'

'ಹ್ಹೂಂ...'

'ನೋಡಿದ್ದಿಯಾ ಬೋರ್ಡನ್ನು?"

"ಎಂಥ ಬೋರ್ಡು?"

'ಅದೇ...ಸೇವೆಗಳ ಪಟ್ಟಿ....'

"ಹೌದೂನ್ನಿ....'

'ನೋಡು, ಕಾರ್ತೀಕ ಪೂಜೆ ಒಂದು ರೂಪಾಯಿ ಇದ್ದದ್ದು ಈಗ ಸೇಕಡಾ ಐವತ್ತರಷ್ಟು ಉಂಡಿ....'

'ಅಲ್ರಿ, ಎಣ್ಣೆ, ಸಕ್ಕರೆ, ಬೆಲ್ಲ....ಎಲ್ಲವುಗಳ ಬೆಲೆ ಗಗನ ಮುಟ್ಟಿರುವಾಗ, ಅವ್ರಾದ್ರೂ ದರಯೇರಿಸದೆ ಹೋದ್ರೆ ದಿವಾಳಿಯಾಗುವುದಿಲ್ವೆ?!

"ಹಾಗೇನ್ನೋಡು, ಮಕ್ಕಳಂತಿರುವ ದೇವರ ನೈವೇದ್ಯ ಚಾಕಲೇಟು ಉತ್ಪಾದನಾ ವೆಚ್ಚ ಹೆಚ್ಚಾಗಿರುವಾಗ ಸರಕಾರಕ್ಕೂ ಒಂದು ಪಾಲು ಯಾಕೆ ಕೊಡಬಾರದು? ಸರಕಾರವೇನು, ದೇವರೇನು?"

"ರಾಜಾ ಪ್ರತ್ಯಕ್ಷ ದೇವತಾ ಅಂತಾರೆ ನೋಡಿ....'

'ಮತ್ತೆ ಹಾಗಿರುವಾಗ..."

'ಅಲ್ರಿ, ನನಗೊಂದು ಯೋಚನೆ'

"ಏಳದು, ನನ್ನ ಧೀಗೆ ಸ್ಫುರಿತವಾದುದು?"

"ನೋಡಿ, ನಮ್ಮದು ಹೇಳಿ ಕೇಳಿ ದೇವರು ದಿಂಡರ ದೇಶ.'

"ಹ್ಹೂಂ..."

"ಸಾಧು ಸನ್ಯಾಸಿ ಫಕೀರ—ಪಾದ್ರಿಗಳ ದೇಶ...."

"ಹೌದೂನ್ನು. ಅಂದ್ರೆ ಧಾರ್ಮಿಕ ಭಾವನೆಯ ದೇಶಾನ್ನು...."

"ಧಾರ್ಮಿಕ ಭಾವನೆಯ ದೇಶಾಂತ ಅನ್ನೋದು ಕಷ್ಟವಾದ್ರೂ ಧಾರ್ಮಿಕ ಆಚರಣೆಯ, ಉಪದೇಶದ ದೇಶಾಂತ ಅನ್ನ ಬಹುದೂನ್ನಿ.'

"ಹ್ಹೂಂ, ಹಾಗಾದ್ರೆ ಹಾಗೆ..."

"ಅಲ್ರಿ, ಯಾವುದೇ ದೇಶ—ಮಂದಿರದಲ್ಲಿ, ಗುಡಿ—ಗೋಪುರದಲ್ಲಿ ದೇವರ ಸೇವೆಯಾಗಬೇಕಾದ್ರೆ ಇಷ್ಟು ಹಣ ತೆರಬೇಕೂಂತ ಫಲಗದಿ ಮಾಡಿರ್ತಾರಲ್ಲಾ..."

"ಹೌದು. ದೇವ್ರಿಗೆ ಇಷ್ಟು, ಅರ್ಚಕರಿಗೆ ಇಷ್ಟು, ಬ್ರಹ್ಮಾದಾಯ ಇಷ್ಟು, ಇತರರಿಗೆ ಇಷ್ಟು, ಅಡಳಿತಕ್ಕೆ ಇಷ್ಟು ಎಂದು ಮುಂತಾಗಿ ಲೆಕ್ಕ ಇದೆ...'

"ನೋಡಿ, ಅದ್ರೊಟ್ಟಿಗೆ ಸರ್ಕಾರಕ್ಕೆ ಇಷ್ಟು ಅಂತ ಗೊತ್ತು ಮಾಡಿದ್ರೆ ಹೇಗೇಂತ?'

'ಭಲೆ, ಭಲೆ... ಭಾರಿ ಯೋಜನೆ!'

"ಏನು ಹಾಸ್ಯ ಮಾಡ್ತೀರಾ?'

'ಅಯ್ಯೋ, ಹಾಸ್ಯ ಏನು ಬಂತೆ? ಇದು ಹಾಸ್ಯ ಅಲ್ಲ, ಪರಿಹಾಸ್ಯ, ಪರಿಹಾಸ್ಯ ಕಣೇ...."

"ಅಂದರೆ?'

'ಭಾರೀ ಚಲೋ ಯೋಚನೇಂತ. ಆದ್ರೆ ನೋಡು, ಇದನ್ನೆಲ್ಲಾ ಲೆಕ್ಕ ಹಿಡಿಯೋದು ಹೇಗೇಂತ?'

'ಅದಕ್ಕೇನಾಗ್ಬೇಕ್ರಿ? ನಿನೆವೂ ಟಿಕೇಟುಗಳ ಮೂಲಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಸೂಲು ಮಾಡೋದಿಲ್ವೆ? ಹಾಗೇನಾದ್ರೂ ವ್ಯವಸ್ಥೆ ಮಾಡಬಹುದು. ಟ್ಯಾಕ್ಸ್ ಅಫೀಸಿನ ಸೀಲಿಲ್ಲದ ಟಿಕೇಟ್‌ಗಳು, ಟಿಕೇಟಿಲ್ಲದ ಸೇವೆಗಳು ಅಕ್ರಮವೆಂದು ಘೋಷಿಸಿ...."

'ಅದೆಲ್ಲಾ ಸರಿಯೇ. ಆದ್ರೆ. ಆಗ ದೇವಸ್ಥಾನದಂಥ ಪವಿತ್ರ ಸ್ಥಾನಗಳೂ ಪೋಲೀಸು ಸ್ಥಾನವಾಗಿ ಅಪವಿತ್ರವಾದಾವು..'

"ಓಹೋ, ಈಗ ಭಾರಿ ಪವಿತ್ರತೆ ತುಂಬಿ ತುಳುಕಾಡ ತ್ತಿದೆಯಲ್ಲ...."

'ಏನೇ. ಈ ರೀತಿ ಮಾತಾಡುತ್ತಿಯಾ?"

"ಏನು ಅಂದ್ರೆ, ಮತ್ತೆ ಪಣ್ಣವನ್ನು ಏಲಂ ಹಾಕುವ ಸ್ಥಿತಿಗೆ ಬಂದು ಮುಟ್ಟಿರೋ ನಾವು ದೇವ್ರನ್ನೂ ಹರಾಜು ಮಾಡುವುದೊಂದು ಬಾಕಿ—'

"ಈ ಹೆದ್ರಿಕೆಯಿಂದ್ಲೇ ದೇವ್ರು ಕಲ್ಲಾಗಿ ಗುಡಿಯೊಳಗೆ ಕೂತಿದ್ದಾನೆ. ಅಲ್ವೆ... ನೋಡು..."

"ಏನು?"

"ನಿನ್ನ ಸಲಹೆ ಅತ್ಯಂತ ಸಾಧ್ಯ, ಪರಿಶೀಲಿಸಲು ಅರ್ಥಮಂತ್ರಿಗೆ ಒಪ್ಪಿಸೋಣ - ಧಾರ್ಮಿಕ ಮಂದಿರಗಳು ರಾಜ್ಯದ ಆಂಕೆಯಲ್ಲಿರುವಂಥವು ನೋಡು. ಮುರಾರ್ಜಿ ವಿದೇಶೀ ಮಧ್ಯದ ಮೇಲೂ ಭಾರೀ ಟೇಕ್ಸ್ ಹೇರಿದ್ದಾರೆ....'

"ಹ್ಹೂಂ....ಅದು ಸರಿಯೇ ಅಲ್ರಿ....'

'ಹಾಗೇನೇ ವಿದೇಶೀ ಹುಡುಗಿಯರನ್ನು ನಿರ್ಯಾತ ಮಾಡುವವರ ಮೇಲೂ ವಿಪರೀತ ತೆರಿಗೆ ಹೇರಬೇಕಿತ್ತು...

"ಓ...., ನೀವು ನಮ್ಮ ಸೋನಿಯಾ ಪೈಸೋ....'

"ಹಾಗಲ್ವೆ, ನೋಡು, ವಿದೇಶೀ ಹುಡುಗಿಯನ್ನು ನಮ್ಮ ಹುಡುಗರು ಮದುವೆಯಾದ್ರೆ, ನಮ್ಮ ಹುಡುಗಿಯರು ಅವಿವಾಹಿತರಾಗಿ ಉಳಿಯಬೇಕಾಗುವುದು. ಏರ ತ್ತಿರುವ ಜನಸಂಖ್ಯೆಯ ಏರಿಕೆಗೆ ಮತ್ತಷ್ಟು ಬೆಂಬಲಕೊಟ್ಟಂತೆ...."

"ಇಲ್ಲವಾದ್ರೂ ಮದುವೆ ಅಂದ್ರೆ ಬೆಂಬಲ ತಾನೆ?!

"ಹಾಗಲ್ವೆ? ವಿದೇಶೀ ಹುಡುಗಿಯೊಬ್ಬಳನ್ನು ಹೆಚ್ಚಾಗಿ ದೇಶ ಸಾಕಬೇಕಾಗುತ್ತಲ್ಲಾ?'

"ಹ್ಹೂಂ....ಅದೊಂದು ಫಿಜಾಸ್ಥಿ....'

'ನಾಲ್ಕನೆಯ ಮಗುವಿಗೆ ಜನ್ಮ ಕೊಡುವುದೂ ವಿದೇಶೀ ಹುಡುಗಿಯನ್ನು ಫಿರ್ಯಾತ ಮಾಡುವುದೂ ಸರಿಸಮಾಫವೇ!"

(ಬಂಭತ್ತನೇ ಪುಟ ನೋಡಿರಿ)

ನಾಯೆಕ್ಸ್

ಶ್ರೇಷ್ಠತೆಯ ಗುರುತು
ತಾಂತ್ರಿಕ ದೃಷ್ಟಿಯಿಂದ
ಭಾರತದಲ್ಲಿನ
ಪರಿಪೂರ್ಣ
ಗಡಿಯಾರ

ಎಸ್. ವಾಮನ್ ನಾಯೆಕ್ ಎಂಡ್ ಸನ್ಸ್
ಕೆ. ಎಸ್. ರಾವ್ ರೋಡ್, ಮಂಗಳೂರು-1



ನಾಯೆಕ್ಸ್ ಗಡಿಯಾರ

ಬಾವಿಯಲ್ಲಿ ಒಂದು ಹೆಣ

(ಎರಡನೇ ಪುಟದಿಂದ)

ಈಗ ತಾನೇ ದಾರಿ ನೋಡಿಕೊಳ್ಳಬೇಕಾಗಿ ಬಂತು, ರಾವ ಣ್ಣನಿಗೆ.

ಇದೆಲ್ಲ ರಾಮಣ್ಣನ ತಂದೆಗೆ ತಿಳಿದಿದ್ದರೂ ಅವನೇನೂ ಮಾಡುವಂತಿರಲಿಲ್ಲ ತಂದೆ ಬೈದರೂ ತಾಯಿ ಅತ್ತರೂ ಬಾಗದ ಮರವಾಗಿ ಬೆಳೆದಿದ್ದ ಅವನು. ರಾಮಣ್ಣನಿಗೆ ಕುಡಿಯಬೇಕು ಕುಡಿಯುವುದಕ್ಕೆ ಹಣಬೇಕು ಹಣಕ್ಕಾಗಿ ದುಡಿಯಬೇಕು. ತಾನು ಕೀಳು ಜನವಾಗಬೇಕೆ? ಎಂದ ಅಹಂಕಾರ ಬೇರೆ ಅದಕ್ಕಾಗಿ ಅತ ಕಂಡುಕೊಂಡ ದಾರಿ ಕಳ್ಳತನ. ಮೊದ ಮೊದಲು ಮನೆಯಿಂದಲೇ ಚಿಕ್ಕಪುಟ್ಟ ಕಳ್ಳತನ ನಡೆಸಿದ. ಗೆಳೆಯನಾಗಿ ದೊರೆತವನೆಂದತೆ ದೂರದ ನಂಟ ಬಾಬು. ಬಾಬು ನೋಡುವವರಿಗೆ ಬಹಳ ಒಳ್ಳೆಯವನು. ಹಾಗೆ ಧನಿ ಹೀಗೆ ಧನಿ ಎಂದು ಬಾಗಿ, ಕಾಗ್ಗಿ ಮಾತನಾಡುತ್ತಾನೆ. ಅತ ಕೆಲಸಕ್ಕೆ ಹೋಗುವುದೆಂದಿಲ್ಲ. ಬೇರೇ ಉತ್ಪಾದನೆ ನೆಯೂ ಅವನಿಗಿಲ್ಲ. ಆದರೂ ಇಷ್ಟೇಟು ಆಟದಲ್ಲಿ ಹಣ ಹಾಕುತ್ತಾನೆ. ಕುಂಜಾರಾಮನಲ್ಲಿ ಸರಾಯಿ ಕುಡಿಯುತ್ತಾನೆ. ಹೇಗೆ? ಎಂಬ ಯೋಚನೆ ಬಂದು, ಸಮಯ ಸಾಧಿಸಿ ಕೇಳಿದ ರಾಮಣ್ಣ. ತಿಳಿಸಿಕೊಟ್ಟ ಬಾಬು. "ಭಟ್ಟರ ಅಡಿಕೆ ತೋಟ ಯಾರದ್ದು' "ಅವರದ್ದು" ಥೂ ಪೆಂಗೇ! ಅವರದಲ್ಲ. ನಮ್ಮದು. ನೀನೂ ಬಾ. ನಾಡಿದು ಹೋಗೋಣ ಒಂದು ರಾತ್ರೆಯಲ್ಲಿ ಇಪ್ಪತ್ತೈದು ರೂಪಾಯಿ ನಿನಗೆ. ಇಪ್ಪತ್ತೈದು ನನಗೆ."

ಇದು ರಾಮಣ್ಣನಿಗಾದ ಮೊದಲ ಪಾಠ. ಅಂದಿನಿಂದ ರಾಮಣ್ಣ ಬಾಬುವಿನ ಒಡನಾಡಿಯಾದ ಒಂದು ದಿನ ರಾಮಣ್ಣನ ನೆರೆಯ ಶೀನಪ್ಪಯ್ಯನವರ ತೋಟದಿಂದ ಅಡಿಕೆ ತೆಗೆಯುತ್ತಿದ್ದಾಗ ಬಾಬು ಸಿಕ್ಕಿ ಬಿದ್ದಿದ್ದ-ಬೇಲಿಯ ಹೊರಗಿದ್ದ ರಾಮಣ್ಣ ಇವನ್ನು ತಿಳಿದು, ಒಳಗೆ ಜಿಗಿದು ಬಾಬುವಿನ ಸಮೀಪ ಬರುತ್ತಾ ದೊಣ್ಣೆಯನ್ನೆತ್ತಿ 'ಬದುಕ ಬೇಕಾದರೆ ಓಡಿ. ಎಲ್ಲಾದರೂ ಈ ವಿಚಾರ ಹೊರಗೆ ಹಾಕಿದರಾ ನಿಮ್ಮನ್ನು ಬಲಿ ತೆಗೆದುಕೊಳ್ಳುತ್ತೇವೆ' ಎಂದು ಹೆದರಿಸಿದ್ದ. ಶೀನಪ್ಪಯ್ಯನಿಜವಾಗಿಯೂ ಹೆದರಿ ಓಟಕಿತ್ತಿದ್ದರು.

ರಾಮಣ್ಣ ಹಾಗೂ ಬಾಬುವಿನ ಪರಿಚಯವಿಲ್ಲದ ಪೋಲೀಸಿನವರೇ ಕಡಿಮೆ. ಅವರಿಂದ ಅಗಾಗ ಶಾಕಾಯಿ ಲವಣಾಯ ಪೋಲೀಸರಿಗೂ ದೂರ ಕುತ್ತಿದ್ದುದೇ ಅದಕ್ಕೆ ಕಾರಣ. ಇಷ್ಟಿಗೆ ಬೀಟ್ ಪೋಲೀಸರಾಗಿ ವಾರಕ್ಕೊಬ್ಬರು ಬರುತ್ತಿದ್ದರು. ಇತ್ತೀಚೆಗೆ ಇಲ್ಲಿ ನಡೆಯುತ್ತಿದ್ದ ಕಳವುಗಳೇ ಇದಕ್ಕೆ ಕಾರಣ. ಸರಾಯಿ ಕುಡಿದುಕೊಂಡು ಪೇಟೆಯಲ್ಲಿ ಜನಗಳಾದುದೂ ಇಷ್ಟಾಗಿ ಬಂದವರಂ ಹೆಂಡರು ಮಕ್ಕಳಿಗೆ ಆಭರಣ ದೊರೆಯಿತೇ ಹೊರತು ಊರವರಿಗೆ ಏನೂ ಉಪಕಾರವಾಗಲಿಲ್ಲ.

ರಾಮಣ್ಣನ ನಡತೆಯನ್ನು ತಿದ್ದುವುದಕ್ಕಾಗಿ ಪ್ರಯತ್ನ ಪಟ್ಟವರಿಗೇನೂ ಕಡಿಮೆ ಇಲ್ಲ. ರಾಮಣ್ಣನ ತಂದೆಯೊಡನೆ ಅವನ ಧನಿ ಗಣಪ್ಪಯ್ಯನವರು ಕೆಲವು ವರ್ಷದ ಹಿಂದೆ ಹೇಳಿದ್ದರು. "ನಿಮ್ಮ ರಾಮಣ್ಣನನ್ನು ಹೀಗೇ ಬಿಟ್ಟರೆ ಅವನು ನಿಷ್ಪ್ರಯೋಜನನಾಗಿ ಹೋಗುತ್ತಾನೆ. ಈಗಲೇ ನಡತೆ ಕೆಟ್ಟ ಅವನು ಇನ್ನಷ್ಟು ಹಾಳಾಗುವ ಮೊದಲೇ ಅವನ ಕುತ್ತಿಗೆಗೊಂದು ಕೊಡಂಟಿ (ಹೆಣ್ಣು) ಕಟ್ಟಿದರೆ ಅಗುತ್ತಿತ್ತು. ಸಂಸಾರದ ಭಾರ ಬಿದ್ದಾಗಲಾದರೂ ಕಸ್ತದ ಅರಿವಾಗಿ ತನ್ನ ನಡತೆಯನ್ನೆ ತಿದ್ದಿಕೊಳ್ಳುತ್ತಿದ್ದನೋ ಏನೋ' ಎಂದು.

ರಾಮಣ್ಣನ ತಂದೆಗೆ ಧನಿಗಳ ಮಾತು ಸರಿ ಎನಿಸಿತ. ಆಗಲೇ ದೂರದ ಸಂಬಂಧಿಕರೊಬ್ಬರಲ್ಲಿಂದ ಒಂದು ಹೆಣ್ಣಿನ ಪ್ರಸ್ತಾಪವೂ ಬಂದಿತು. ರಾಮಣ್ಣನ ಮದುವೆಯೂ ನಡೆದು ಹೋಯಿತು ಇಪ್ಪತ್ತು ಮೂರರ ರಾಮಣ್ಣನಿಗೆ ಹದಿನೇಳರ ಚೆಲುವೆ ಗೌರಿ ಪತ್ನಿಯಾಗಿ ಮನೆ ತುಂಬಿದಳು. ಆದರೇನು. ತಾಯಿ ಬಾಲ ನಳಿಕೆಗೆ ಹಾಕಿದರೆ ಸರಿಹೋದೀತೇ?

ವಿವಾಹವಾದುದರಿಂದ ರಾಮಣ್ಣನ ನಡತೆ ತಿದ್ದಲಿಲ್ಲ ಮುಂದಿಗಿಂತ ಜೋರಾಗಿಯೇ ಇತ್ತು. ಕೋಳಿ ಜೂಜು ಇಸ್ಪೇಟುಗಳಲ್ಲಿ ಹಗಲನ್ನು ಕಳೆದು ರಾತ್ರೆ ಬಾಬುವಿನೊಂದಿಗೆ ಸಣಾರಿ ಬಿಟ್ಟು ಹೆಂಡ ಕುಡಿದು ಮನೆಗೆ ಬರುತ್ತಿದ್ದ. ಪಾಪ, ಆ ಗೌರಿಯ ಗತಿ! ವಿಪರೀತ ಕುಡುಕನಾದ್ದರಿಂದ ಅವನಿಗೆ ಸರಾಯಿ ರಾಮಣ್ಣನೆಂದು ರೂಢನಾಮ ಉಂಟಾಯಿತು.

ಆದರೆ ಅತ ಬಾವಿಗೆ ಬಿದ್ದುದು ಏಕೆ? ಹೇಗೆ? ಎಂಬುದು ಎಲ್ಲರಿಗೂ ಪ್ರಶ್ನಾರ್ಥಕವಾಗಿಯೇ ಉಳಿದು ಮಾತಿಗೊಂದು ವಿಚಾರವಾಯಿತು.

ಹೆಡ್ ಕಾನ್‌ಸ್ಟೆಬಲರು ವಿಚಾರಣೆ ನಡೆಸುತ್ತಾ ಸುತ್ತು ಮುತ್ತಲಿನವರಲ್ಲಿ "ಕೊನೆಯದಾಗಿ ರಾಮಣ್ಣನನ್ನು ಕಂಡವರು ಯಾರು? ಎಷ್ಟು ಹೊತ್ತಿಗೆ ಹಾಗೂ ಎಷ್ಟು?" ಎಂದು ವಿಚಾರಿಸಿದರು. ಹೋಟೇಲು ಸುಬ್ಬಣ್ಣ ಮುಂದೆ ಬಂದು ಗುರುವಾರ ರಂಜೆ ಅವನು ನಮ್ಮಲ್ಲಿ ಜಾ ಕುಡಿದುದುಂಟು" ಎಂದ. "ಅನಂತರ ನೋಡಿದವರು ಯಾರಾದರೂ ಇದ್ದೀರೋ? 'ಸ್ವಲ್ಪ ಹೊತ್ತಿನ ನಂತರ ಕುಂಜಾರಾಮ ಮುಂದೆ ಬಂದು ಗುರುವಾರ ರಾತ್ರಿ ಹತ್ತು ಗಂಟೆಸುವರೆಗೂ, ಅತ ತನ್ನಲ್ಲಿದ್ದನೆಂದೂ ಅವನ ಗೆಳೆಯ ಬಾಬ ಪೂ ಇದ್ದನೆಂದೂ ಹೇಳಿದ. "ನಂತರ ಅವರು ಎತ್ತ ಹೋದರು" ಎಂದು ಪೋಲೀಸಿನವರು ಕೇಳಲಾಗಿ "ಇಬ್ಬರೂ ಕುಡಿದು ಅಮಲೇರಿತ್ತು ಬೆಳಗಾದ ಮೇಲೆ ಹೋಗಿರೆಂದು ನಾನು ಹೇಳಿದೆನಾದರೂ ಬೇರೆ ಕೆಲಸವಿದೆ ಎಂದು ಜೊತೆಯಾಗಿ ಹೊರಟು ಹೋದರು' ಎಂದ ಕುಂಜಾರಾಮ. "ನಂತರ ಯಾರಾದರೂ ಕಂಡಿದ್ದೀರೋ?" ಎಂದು ಕೇಳಿದ್ದಕ್ಕೆ ಉತ್ತರ ಬಂಲಿಲ್ಲ. "ಅ ಬ್ಬ ... ಲ.ಟೆ ಏನಾದರೂ ಆದುದು ಯಾರಿಗಾದರೂ ತಿಳಿದಿದೆಯೇ?' ಎಂದು ಕೇಳಿದರು. "ಸುಮಾರು ರಾತ್ರೆ ಹನ್ನೊಂದು ಗಂಟೆಯ ಹೊತ್ತಿಗೆ ನನಗೆ ಎಚ್ಚರವಾದಾಗ ಇದೇ ಬಾವಿಯ ಕಡೆಯಿಂದ ಜೋರಾಗಿ ಮಾತು ಕೇಳಿಸುತ್ತಿತ್ತು. ನಿದ್ದೆಯು ಸರಿಯಾಗಿ ಬಿಟ್ಟೆರಲಿಲ್ಲವಾದ್ದರಿಂದ. ಹೂರು? ಯಾಕೆ? ಎಂದು ನನಗೆ ತಿಳಿಯಲಿಲ್ಲವೆಂದು" ಹತ್ತಿರದ ಮನೆಯ ಶಂಭಯ್ಯನವರು ಹೇಳಿದರು

"ರಾಮಣ್ಣನನ್ನು ಯಾರಾದರೂ ದ್ವೇಷಿಸುತ್ತಿದ್ದರೋ?" ಎಂಬ ಪ್ರಶ್ನೆಗೆ ಅಂಗಡಿ ಸುಬ್ರಾಯ ಭಟ್ಟರೇ ಉತ್ತರಿಸಿದರು. "ಯಾರು ಎಂದು ಯಾಕೆ,ಎಲ್ಲರಿಗೂ ಅತ ಆದದವನೇ ಅತ ಮಹಾ ಕುಡುಕ. ಕಳ್ಳತನದಲ್ಲೂ ಪಳಗಿದವನು" ಎಂದರು ಬಾವಿಯ ಸುತ್ತಲೂ ಪರೀಕ್ಷಿಸಿದ್ದಾಯಿತು. ಹೆಣವನ್ನು ಪರೀಕ್ಷಿಸಿದ್ದಾಯಿತು ಬಾವಿ ಸುಮಾರು ಹತ್ತು ಗಜ ಆಳವಾಗಿತ್ತು. ಅಲ್ಲಲ್ಲಿ ಪೊದೆಗಳು ಬೆಳೆದಿವೆ. ಮಧ್ಯೆ ಒಂದು ಪೊದೆ ಕಿತ್ತು ಹೋಗಿತ್ತು.ಹೆಣದ ತಲೆಯಲ್ಲಿ ಒಂದು ಚಿಕ್ಕ ಗಾಯವಿತ್ತು. ಅದು ಯಾವುದೇ ಆಯುಧಗಳಿಂದಾದುದೆನ್ನುವಂತಿಲ್ಲವೆಂದು ಹೆಡ್‌ಕಾನ್‌ಸ್ಟೇಬಲರು ಅಭಿಪ್ರಾಯ ಪಟ್ಟರು. ಕುಡಿದು ಅಮಲೇರಿ ದಾರಿ ತಪ್ಪಿ ಹೋಗಿ ಅಕಸ್ಮಾತ್ ಬಿದ್ದಿರಲೂ ಬಹುದು ಬೀಳುವಾಗ ಪೊದೆಯನ್ನು ಹಿಡಿಯ ಲೆತ್ನಿಸಿರಬಹುದು. ಆ ಪೊದೆಯೂ ಕಿತ್ತು ಬಂದಾಗ ಅತ ಬಾವಿಗೆ ಬಿದ್ದಿರಬಹುದು. ಇದು ಕೊಲೆ ಆಗಿರಲಾರದು. ಆತ್ಮಹತ್ಯೆ ಅಥವಾ ಅಕಸ್ಮಿಕ ಎರಡರಲ್ಲೊಂದು ಎಂದು ಅಂದಾಜು ಮಾಡಲಾಯಿತು.

ರಾಮಣ್ಣನ ತಂದೆಯನ್ನು ಕರೆಸಿದ್ದೂ ಆಯಿತು. ಅತ ಭೋರಿಟ್ಟು ಅಳಲಿಲ್ಲ ಆದರೂ ತುಂಬಾ ದುಗುಡಹೊಂದಿದವನಂತೆ ಕಾಣುತ್ತಿತ್ತು. ಹೆಣವನ್ನು ನೋಡಿ ತನ್ನ ಮಗ ಹೌದೆಂದು ಹೇಳಿದ. ಹಾಗೇ ತಲೆಗೆ ಕೈಕೊಟ್ಟು ಕುಳಿತ. ರಾಮಣ್ಣನ ತಾಯಿ ಮೂರ್ಛೆ ಅತ್ತು ಕರೆದು ರಂಪಾಟ ಮಾಡಿದಾಗ ಪೋಲೀಸಿನವರು ಗದರಿಸುವ್ಮಾಗಿರಬೇಕಾಯಿತು. ರಾಮಣ್ಣನಿಗೆ ಬೇಸರ ಬಂದು ಆತ್ಮಹತ್ಯೆ ಮಾಡಿಕೊಳ್ಳುವಂಥಾ ಸಂಗತಿಗಳೇನಾದರೂ ಇದೆಯೆ ದುಂಟೋ ಎಂದು ಅತನ ತಂದೆಯನ್ನು ವಿಚಾರಿಸಿದಾಗ ಇಲ್ಲವೆಂದು ತಲೆ ಅಲ್ಲಾಡಿಸಿದನು. ಹೆಣವನ್ನು ಡಾಕ್ಟರರ ಪರೀಕ್ಷೆಗಾಗಿ ತಾಲೂಕು ಕೇಂದ್ರದ ಸರಕಾರೀ ಆಸ್ಪತ್ರೆಗೆ ಸಾಗಿಸಲಾಯಿತು.

ಡಾಕ್ಟರರು ಪರೀಕ್ಷಣಂತರ ಆ ದಿನ ಅತ ವಿಪರೀತ ಅಮಲು ಸೇವಿಸಿದ್ದ ಎಂಬುದು ಗೊತ್ತಾಯಿತು. ಅತೀ ಅಮಲು ಪೋರತನದಿಂದಾಗಿ ಉಂಟಾದ ಅಕಸ್ಮಿಕವೆಂದು ಪೋಲೀಸಿನವರು ಆ ವಿಷಯವನ್ನು ಬಿಟ್ಟುಬಿಟ್ಟರು.

ಆದರೆ ಊರವರ ಊಹೆಗಳು ಬೇರೆಯೇ ಇತ್ತು. ಅತನನ್ನು ಯಾರೋ ಸಿಟ್ಟಿನಿಂದ ಕೊಲೆಮಾಡಿ ಬಾವಿಗೆ ಹಾಕಿರಬೇಕು ಎಂದು ಕೆಲವರೆಂದರೆ; ಅತನನ್ನು ಕೊಲೆಯದಾಗಿ ಕುಡಿದಿನ ರಾತ್ರೆ ಪೇಟೆಯಲ್ಲಿ ಬಹಳ ಹಲಾಟೆ ನಡೆದಿತ್ತು. ಕೊನೆಗೆ ಯಾರೋ ಬಾವಿಗೆ ತಳ್ಳಿರಬೇಕು. ಆದರೆ ಯಾರೂ ಗುಟ್ಟು ಬಿಡುವುದಿಲ್ಲ ಎಂದು ಕೆಲವರು ಹೇಳಿಕೊಳ್ಳುತ್ತಾರೆ. ಸರಾಯಿ ತಯಾರಿಸುವ ಕುಂಜಾರಾಮನು ಅತ ವಿಪರೀತ ಕುಡಿದುದರಿಂದ ದಾರಿತಪ್ಪಿ ಆ ಕಡೆ ಬಂದಾಗ ಬಿದ್ದಿರಬೇಕೆಂದು ಅಭಿಪ್ರಾಯ ಪಟ್ಟ. ಈ ವಿಚಾರಗಳೆಲ್ಲ ಹೀಗಿದ್ದರೂ ರಾಮಣ್ಣನ ಗೆಳೆಯ ಬಾಬುವಿನ ಪತ್ತೆ ಇರಲಿಲ್ಲ. ಬಾಬುವಿನ ವಿಚಾರ ಪೋಲೀಸರಿಗೆ ತಿಳಿದಿತ್ತಾದರೂ ಅವನೂ ರಾಮಣ್ಣನೂ ಗೆಳೆಯರೆಂದು ಎಲ್ಲರಿಗೂ ಗೊತ್ತಿದ್ದದ್ದರಿಂದ,ಅವನ ವಿಚಾರವಾಗಿ ಹೆಚ್ಚಿಗೆ ಯೋಚಿಸಲಿಲ್ಲ. ಆದರೆ ರಾವ ಣ್ಣನ ಎಂದು ರಾಣಿಯೊದನೋ ಅಂದಿನಿಂದ ಬಾಬುವನ್ನೂ ಕಂಡವರಿಲ್ಲ.

ಈ ವಿಚಾರಗಳಿಗೆ ಆರು ತಿಂಗಳು ಕಳೆಯಿತು. ಸೊನ್ನೆ ಮೊನ್ನೆ ನಾನು ಮಂಗಳೂರಿಗೆ ಹೋಗಿದ್ದಾಗ ರಾಮಣ್ಣ ಹೇಗೆ ಬಾವಿಗೆ ಬಿದ್ದ ಎಂಬುದು ನನಗೆ ಸರಿಯಾಗಿ ತಿಳಿಯಿತು. ಆದರೆ ಆ ವಿಚಾರ ಯಾರಿಗೂ ಹೇಳುವುದಿಲ್ಲವೆಂದು ಮಾತು ಕೊಟ್ಟಿದ್ದೇನಾದರೂ ನಿಮಗೆ ಹೇಳದಿರಲಾರೆ. ಮಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ನಾನು ನಿಂತಿದ್ದಾಗ, ಗೂಡ್ಸ್‌ಗಾಡಿಗೆ ನಾನೂ ನು ಹೊರಟ್ತಿದ್ದ ವ್ಯಕ್ತಿಯೊಬ್ಬನ ಕಡೆಗೆ ನನ್ನ ಗಮನಹರಿಯಿತು.ಪರಿಚಿತನಂತೆ ಕಾಣಿಸಿದ್ದನಾದರೂ ಯಾರೆಂಬುದು ಕ್ಷಣದಲ್ಲಿ ಹೊಳೆಯಲಿಲ್ಲ. ಹಾಗೇ ನೋಡಿದೆ. ಬೆಳೆದ ಕುರುಚಲು ಗಡ್ಡ. ಅಲ್ಲಲ್ಲಿ ಹರಿದ ಧೂಳಿನಿಂದ ಕೆಂಬಣ್ಣ ತಾಳಿದ ಟೋಪಿ, ಗುಳಿಬಿದ್ದ ಕಣ್ಣುಗಳು ಆದರೂ ಪರಿಚಿತ ವ್ಯಕ್ತಿ! ಯಾರು? ಹೋ! ಬಾಬು. ರಾಮಣ್ಣನ ಗೆಳೆಯ. ಹಿಂದೊಮ್ಮೆ ನನ್ನಿಂದ ಹತ್ತು ರೂಪಾಯಿ ಕೈಗಡ ತೆಗೆದುಕೊಂಡವನು ಹಿಂದಕ್ಕೆ ಕೊಟ್ಟಿರಲಿಲ್ಲ. ಅನೇಕ ಬಾರಿ ಕೇಳಿ ಸಾಕಾಗಿ ನಾನು ಮೌನ ತಾಳಿದ್ದೆ. ಆರು ತಿಂಗಳುಗಳಿಂದ ಅವನ ಪತ್ತೆ ಇಲ್ಲ

'ಬಾಬೂ' ಎಂದು ಕರೆಯುತ್ತಾ ಅತನನ್ನು ಸಮೀಪಿಸಿದೆ ಅತ ಅತ್ತ ಇತ್ತ ನೋಡಿ ಓಡಲು ಪ್ರಯತ್ನಿಸಿದ. ಯಾಕೆ ಹೊರಟೆ ನಿಲ್ಲು. ನಿನಗೆ ನನ್ನ ಪರಿಚಯವಿಲ್ಲವೇ? ನೀನು ನಮ್ಮೂರ ಬಾಬು ಅಲ್ಲವೇ?' ಎಂದು ಕೇಳಿದೆ. ಅತ ಯಾಕೋ ಮತ್ತೊಮ್ಮೆ ನನ್ನ ಕಡೆಗೆ ನೋಡಿ ಗಲಿಬಿಲಿಗೊಂಡವನಂತೆ ಫಿಂತ. ಅತನ ದೃಷ್ಟಿಯಲ್ಲಿ ಏನೋ ಬೇಡಿಕೆ ದೈನ್ಯತೆ ಇತ್ತು. "ಬಾ ಹೋಗೋಣ ಹೊರಗೆ, ಕಾಫಿ ಕುಡಿಯೋಣ" ಎಂದೆ. ಇಬ್ಬರೂ ಹೊರಗೆ ಬಂದು ಹೊರಟೆವು. ಹೋಟೆಲೊಂದಕ್ಕೆ ಹೊಕ್ಕು ಕಾಫಿ ಹುಯ್ದುಕೊಂಡೆವು. ಅಲ್ಲಿಂದ ಹೊರಡುತ್ತಾ ಏನಯ್ಯಾ ನಿನ್ನ ಕತೆ? ಎಂದು ಕೇಳಿದೆ. 'ಕತೆ ಏನು ರಾಯರೇ, ಕಾಣುತ್ತಿದೆಯಲ್ಲಾ" ಎಂದ.

"ಹಾಗಲ್ಲ. ನೀನು ಊರಿನಿಂದ ಯಾಕಾಗಿ ಇಲ್ಲಿಗೆ ಬಂದೆ? ನೀನೆಲ್ಲಿದ್ದೀಯೆಂದೇ ಯಾರಿಗೂ ತಿಳಿದಿಲ್ಲ. ನಿನ್ನ ಗೆಳೆಯ ರಾಮಣ್ಣ.... "ನನಗೆ ಸೊತ್ತಿದೆ ಧನೀ ಹೇಳ

(ಹನ್ನೊಂದನೇ ಪುಟ ನೋಡಿರಿ)

ಅಕ್ಕಿ ಕಾಳಿಡುವ
ಎಲ್ಲಾ ಕರದು ಸಿದಿತ ಮತ್ತು ನೋವುಗಳಿಗೆ
50 ವರ್ಷ ಉಪಯೋಗ
ಆಕಾಶ ಔಷಧಾಲಯ

ನೀವೂ ತಿಳಿಯಿರಿ

ಮದ್ರಾಸು ಮದರಾಸುಗಳ ಮಹಾನಗರವಾದಾಗ .....

ಬರೆದವರು— ಶ್ರೀ ಶಿವಶಂಕರ

ಮದ್ರಾಸಿನಲ್ಲಿ ಗರ್ಟಜಕ್ಕಿಂತಲೂ ಈ ವರ್ಷ ಚಳಿ ಅಧಿಕ. ಇದು ಇಲ್ಲಿಯ ಇಂದಿನ ರಾಜಕೀಯಕ್ಕೂ ಅನ್ವಯಿಸುತ್ತದೆ. ಅಂದರೆ ಹಿಂದೀಯ ಚಳಿ ಅಧಿಕವಾಗಿರುತ್ತದೆ. ಆದರಿಂದ ಮೈಕಾಯಿಸಿಕೊಳ್ಳಲು ಅವರು ಕಂಡದ್ದೆಲ್ಲಾ ಬೆಂಕಿ ಇಡುತ್ತಿದ್ದಾರೆ. ಅವರಿಗೆ ಅಂತಹ ಮನೋಭಾವನೆ ಆದೆಂತು ಬಂತು?

ಇಂಡಿಯೊದಲ್ಲಿ ಇಂಗ್ಲೀಷೇ ಇರಬೇಕೆನ್ನುವ ವಾದ ತಮಿಳ್ನಾಡಿಗೇನೂ ಹೊಸತಿರುವದಿಲ್ಲ. ಭಾರತೀಯರು ಅಕ್ರಮಣಗಾರ ಆಂಗ್ಲೇಯರನ್ನು ಆಡಳಿತದ ಅಂಗಣದಿಂದ ಹೊರಹಟ್ಟಲು ಯೋಚಿಸಿದಂದೇ, ಚತುರ ಬ್ರಿಟಿಷರು ಕೆಲವರನ್ನು ತಮ್ಮ ಜುಟ್ಟಿಯಲ್ಲಿ ಹಾಕಿಕೊಂಡು 'ಇಂಗ್ಲೀಷ್ ವಾದಿ'ಗಳನ್ನಾಗಿ ಮಾಡಿದ್ದರು. ಅವರ ಸಂತತಿಯವರು ಇಂದೂ ಇದ್ದಾರೆ. ಇವರಿಗೆ ಇಂದು ಪಕ್ಷಬಲ ಅಧಿಕಾರದಿಂದ ಅಟ್ಟಿಲ್ಪಟ್ಟಿರುವ ಅತ್ಯಪ್ಪ (ಅ) ರಾಜಕೀಯ ವಾದಿಗಳು.

ಗಲಾಟೆಯ ಪ್ರಬಲ ಪ್ರಹಾರದಿಂದ ಪರಿಹಾಟಕ್ಕೊಳಗಾದ ಬ್ರಿಟಿಷರು ತಮ್ಮ ಕಾರ್ಯ ಸಾಧನೆಗಾಗಿ ಕಾಂಗ್ರೆಸ್ಸನ್ನು ಕಟ್ಟಿದರಾದರೂ, ಹಳಸಿದ ಪದಾರ್ಥಗಳಿಂದ ಔಷಧವನ್ನು ಉಂಟುಮಾಡುವಂತೆ, ದೇಶಭಕ್ತರು ಕಾಂಗ್ರೆಸ್ಸನ್ನು ಮೂರ್ಪಡಿಸಿದಾಗ ತಂತ್ರಶಾಲಿ ಆಂಗ್ಲರು ಜಸ್ಟೀಸ್ ಪಾರ್ಟೀ ಮುಂತಾದ ಬೊಂಬೆ ಗುಂಪುಗಳನ್ನು ಕಟ್ಟಿದರು. ಅವಂತರ ಮದ್ರಾಸಿನಲ್ಲಿ ದ್ರಾವಿಡಳ್ಳಗಮಿನ ಬೀಜವನ್ನು ಬಿತ್ತಿ ನೀರೆರೆದರು. ಆದರಿಂದ ಬಂದ ಒಂದು ಶಾಖೆ ದ್ರಾವಿಡ ಮುನ್ನೇಟ್ರ ಕಳಗಂ.

ಗವರ್ನರ್ ಜನರಲ್ ಗದ್ದುಗೆಯಿಂದ ಕ್ರಮಶಃ ಕೆಳಗೆ ದಬ್ಬಲ್ಪಟ್ಟು ಕೊನೆಗೆ ಪಿಂಚಣಿದಾರ ರಾಜಕೀಯ ವಾದಿಯನ್ನಾಗಿ ಮಾಡಿದೊಡನೆ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಇನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲವೆಂದರು. ತಾನು ಬೆಳೆಸಿದ ಕಾಂಗ್ರೆಸ್ಸೇ ತನಗೆಗಂಡು ಬಗೆದಾಗ, ಅದನ್ನು ಜೀವಂತ ಬಿಡುವದು ನ್ಯಾಯವೇ? ಶ್ರೀ ರಾಜಾಜಿ ಅಂದೇ ಶಪಥ ಮಾಡಿದರು—ಕಾಂಗ್ರೆಸ್ಸನ್ನು ಸಂಪೂರ್ಣ ನಾಶಮಾಡಿಯೇ ಬಿಡುತ್ತೇನೆಂದು. ಅದಕ್ಕಾಗಿ ಅವರು ಪ್ರಯತ್ನಿಸುತ್ತಿದ್ದಾರೆ; ತನ್ನ ಶೇಷಜೀವನವನ್ನು ಅದಕ್ಕಾಗಿ ಅರ್ಪಿಸಿರುವೆನೆಂದೂ ಅವರಾಡುವರು. ಅವರಿಲ್ಲಿ ಹಿಂದಿ ಭಾಷೆಯನ್ನು ತಾಲೇಗಳಲ್ಲಿ ಕಡ್ಡಾಯ ಪಾಠವನ್ನಾಗಿ ತಂದಾಗ ಕಾಂಗ್ರೆಸ್ಸ್ ಅವರ ಕಾಲು ಜಾರಿಸಿ ಬಿಟ್ಟ ಕಾರಣ ಅದೇ ಹಿಂದಿಯ ಹೆಸರಿನಲ್ಲಿ ಕಾಂಗ್ರೆಸ್ಸಿನ ಕಾಲು ಜಾರಿಸಿ ಬಿಡಲು ಅವರೀಗ ಹೋರಾಡುತ್ತಿದ್ದಾರೆ. ಅವರ ಪಾಲಿಗದು ಹೋರಾಟ ವಿಶ್ವವಲ್ಲ ಯುದ್ಧ. ರಷ್ಟದ ಶವಂಬರ ತಿಂಗಳ ಮೊದಲ ವಾರದಲ್ಲಿ ಆಂಗ್ಲ ವ್ಯಾಮೋಹಿಗಳ ಕೂಟ ಮದ್ರಾಸ್ ಮಹಾನಗರದಲ್ಲಿ ನಡೆದಿದ್ದಾಗ ಹಿಂದಿಯನ್ನು ಬಂಧಿಯನ್ನಾಗಿ ಮಾಡಿ ಇಂಗ್ಲೀಷನ್ನು ಇಲ್ಲಿ ಇರುವಂತೆ ಮಾಡಲು ಆರಂಭಿಸಿರುವ ಯುದ್ಧ ಬಹಳ ದಿನಗಳವರೆಗೆ ಇರಬಹುದು. ಭಾರತ ಸರಕಾರದ ಬಳಿ ಬಲಶಾಲೀ ಸೇನೆ ಇದೆ. ಈ ವಿಷಯದಲ್ಲಿ ಅವರಿಗೆ ಉತ್ತರ ಭಾರತದವರ ಸಹಾಯವೂ ಇದೆ. ಆದುದರಿಂದ ತಂತ್ರಗಳನ್ನು ಆಡಬೇಕಾಗಿದೆಂದು ಶ್ರೀ ರಾಜಾಜೀ ಹೇಳಿರುವರು. ಅಂದರೆ ಶ್ರೀ ರಾಜಾಜಿಯವರಿಂದು 'ದಿಲ್ಲಿ ದೊರೆ'ಗಳ ವಿರುದ್ಧ ಯುದ್ಧ ಮಾಡುತ್ತಿದ್ದಾರೆ. ಅವರ ಪಕ್ಕದಲ್ಲಿ ಮಿತ್ರರಾಗಿ ರಂಗದಲ್ಲಿರುವವರು ದ್ರಾ. ಮು. ಕ.ದವರು, ಮುಸ್ಲಿಂ ಲೀಗ್‌ಗಳು ಮತ್ತು ಕಮ್ಯೂನಿಸ್ಟರು ಅಲ್ಲದೆ ಅಂತಹ ದೇಶದ್ರೋಹಿ ದುಃಶಕ್ತಿಗಳು. 'ದಿಲ್ಲಿ ದೊರೆ'ಗಳ ಪಂಡಿಗೆ ಮದರಾಸಿನ ಮುಖ್ಯಮಂತ್ರಿ ತಿರು ಅಣ್ಣಾದೊರೈಯ ಮಣಿದರೂ, ವಶವಾದರೂ, ಒಲಿದರೂ ದ್ರಾ. ಮು. ಕ. ದವರು ತಮ್ಮ ಕೈ ಬಿಡಕೂಡದೆಂದು ಅವರು ವಿಜ್ಞಾಪಿಸಿಕೊಂಡಿದ್ದಾರೆ. ಇವರೆಲ್ಲರೂ ಬೆರ್ಜಪ್ಪನನ್ನು ಕಂಡು ಬೆದರಿ ಓಡಿದರೂ, ಸ್ಥಿತಿಗತಿಯ ಒತ್ತಡಕ್ಕೆ ಮೊರುಹೋದರೂ, ತಾನೊಬ್ಬನೇ ಇದ್ದುಕೊಂಡು ಕಾಳಜಿ ಮುಂದುವರಿಸುವದಾಗಿ ಅವರು ತಿಳಿಸಿರುವರು.

ಅವರಿಗಿಂತ ತಾವೇನೂ ಹಿಂದಿಲ್ಲವೆಂಬುದನ್ನು ದ್ರಾ. ಮು. ಕ.ದ ಮುಂದಾಳುಗಳು ಪ್ರಕಟಪಡಿಸಿರುವರು. ದ್ರಾ. ಮು. ಕ.ದ ಎಂ. ಪಿ. ತಿರು ಮುರಸೋಲಿ ಮಾರಪ್ಪನವರು ಲೋಕ ಸಭೆಯಲ್ಲಿ ಭಾಷಾ ತಿದ್ದುಪಡಿ ಮಸೂದೆಯ ಕುರಿತು ಮಾತಾಡುವಾಗ ತಮಿಳರಿಗೆ ಹಿಂದಿಯು ಪರಕೀಯ ಭಾಷೆ. ಹಿಂದಿ ಸಾಮ್ರಾಜ್ಯದ ವಿರುದ್ಧ ತಾವು ಹೋರಾಡುವದಾಗಿ ಅವರು ಹೇಳಿದರು. ಅವರ ಪಕ್ಷದ ಇನ್ನೊಬ್ಬ ಸದಸ್ಯ ತಿರು ಕೃಷ್ಣಮೂರ್ತಿಯವರು. ದ್ರಾ. ಮು. ಕ.ದ ಬೇಡಿಕೆಗಳನ್ನು ಒಪ್ಪಿಕೊಳ್ಳದಿದ್ದಲ್ಲಿ ರಾಜಕೀಯ ಭೂಕಂಪ ಉಂಟಾಗುತ್ತದೆಂದೂ ಆಂತರಿಕ ಕದನ ಆಗುತ್ತದೆಂದೂ ಯುದ್ಧದ ಬೆದರಿಕೆಯನ್ನೂ ಹಾಕಿರುವರು.

ಈ ರೀತಿ, ಹಿಂದೆ ಉನ್ನತ ಸ್ಥಾನದಲ್ಲಿದ್ದು ಇದೀಗ ಪಿಂಚಣಿದಾರರಾಗಿರುವ ವಯೋವೃದ್ಧ ಶ್ರೀ ರಾಜಾಜಿ ಹಾಗೂ ಇಂದು ಒಂದು ಪ್ರಾಂತ್ಯದ ಆಡಳಿತದ ಆಸನವನ್ನೇರಿರುವ ಪಕ್ಷದ ಪ್ರಮುಖರು ಕದನದ ಕೇಕೆಯನ್ನು ಹಾಕಿದುದೇ ತಡ, ಅವರ ಪಚ್ಚೆ ಬೆಳಕಿಗಾಗಿ ಕಾದುಕೊಂಡಿದ್ದ ಗಲಾಟೆ ಪ್ರಿಯರು ರಸ್ತೆಗಿಳಿದು ಬಿಟ್ಟರು. ಬೆಕ್ಕಿನ ಬಿಡಾರ ಬೇರೆ ಮಾಡಿಕೊಂಡಲ್ಲಿ ಅಪಾಯವೆಂದರಿತ ತಿರು ಕಾಮರಾಜ ಹಾಗೂ ಸಿ. ಸುಬ್ರಹ್ಮಣ್ಯಂ ಅವರು ಹಿಂದೀ ವಿರುದ್ಧ, ಕೇಂದ್ರದ ವಿರುದ್ಧ ಅಂದರೆ ತನ್ನ ಮುಖದ ವೇಲೆಯೇ ಉರುಳಿಕೊಂಡರು. ಈ ಪ್ರವಾಹವನ್ನು ತಡೆಗಟ್ಟುವ ಅಣೆಕಟ್ಟು ಎಲ್ಲಿದೆ?

ಇದ್ದಕ್ಕಿದ್ದಂತೆ ಗುಡಿಸಲುಗಳು ಸುಟ್ಟು ಬೂದಿಯಾಗುತ್ತಿದ್ದ ದಿನಗಳಿದ್ದುವು. ಕ್ಷಣಾರ್ಧದಲ್ಲಿ ಧಡಬಡನೆ ಕಾರ್ಖಾನೆಯಂತ್ರಾಲಯ, ಕಾರ್ಯಾಲಯಗಳು ಮುಚ್ಚಲ್ಪಟ್ಟ ದಿನಗಳಿದ್ದುವು. ಆದ ಜನರು ಹೆದರಿಕೊಂಡಿದ್ದರೂ ಅವು ಒಂದು ನಿರ್ದಿಷ್ಟ ಸ್ಥಳಕ್ಕೆ, ರಂಗಕ್ಕೆ ಮೀಸಲಾಗಿದ್ದುವು. ಈ ಕದನ ಕಹಳೆ ಹಾಗಲ್ಲ. ಭಾಷಾ ಬಡಿದಾಟದ ಬಡಬಾಗ್ನಿ ಎಲ್ಲೆಲ್ಲು ತನ್ನ ನಾಲಗೆಯನ್ನು ಚಾಚಿತು. ದ್ರಾ ಮು. ಕ. ಉರಿಸಿದ ಕಿಚ್ಚಿಗೆ ತಿರು ರಾಜಾಜಿ ಪತಿಯೆಣ್ಣೆಯನ್ನು ಸುರಿದರು. ತಿರು ಕಾಮರಾಜ ಹಾಗೂ ಸಿ. ಸುಬ್ರಹ್ಮಣ್ಯಂ ಅದಕ್ಕೆ ಗಾಳಿ ಬೀಸಿದರು.

ಆಗ ವಾರಣಾಸಿ, ಲಕ್ನೌ, ಇಂದ್ರಪುರಿ, ದಿಲ್ಲಿ ಮುಂತಾದೆಡೆಗಳಿಂದ ವಿದ್ವಂಸಕ ಕೃತ್ಯಗಳ ಸಮಾಚಾರಗಳು ಕೇಳಿಬರುತ್ತಿದ್ದುವು. ಅಲ್ಲಿ ತಮಿಳರನ್ನು ಥಳಥಳಲಾಗುತ್ತಿದೆಯೆಂದು ಇಲ್ಲಿ ದುಷ್ಪ್ರಚಾರ ಮಾಡಲಾಯಿತು. ಸಿಡಿಮದ್ದಿಗೆ ಕೊಳ್ಳಿಯಿಟ್ಟಂತಾಯಿತು. ಆದರೆ ದ್ರಾ.ಮು.ಕ.ವು ಅಧಿಕಾರದ ಆಸನದಲ್ಲಿರುವದರಿಂದ ನೇರವಾಗಿ ಕಳದಲ್ಲಿಳಿಯುವಂತಿಲ್ಲ. ಆದುದರಿಂದ ಶ್ರೀ ರಾಜಾಜಿಯವರ ಶಕುನಿ ತಂತ್ರದಂತೆ ಶಾಲಾ ವಿದ್ಯಾರ್ಥಿಗಳನ್ನು ಇದಕ್ಕಾಗಿ ಛೂ ಬಿಡಲಾಯಿತು. ವಿದ್ಯಾರ್ಥಿಗಳ ಹೆಸರಿನಲ್ಲಿ ಅವರ ಪಡುವೆ; ಅವರಿಗಿಂತಲೂ ಅಧಿಕ ಸಂಖ್ಯೆಯಲ್ಲಿ ರಾಜಕೀಯ ಪೋಲಿಗಳೂ ಸೇರಿಕೊಂಡರು. ಕೇಂದ್ರ ಸರಕಾರವನ್ನೆದುರಿಸುವ ಸೇನೆ ಹೊರಟಿತು—ದಿಲ್ಲಿಯನ್ನು ಧ್ವಂಸಗೊಳಿಸಲು!

ನಗರದ ಮಿಂಟ್ ಸ್ಟ್ರೀಟ್‌ನಲ್ಲಿ ಹೆಚ್ಚಾಗಿ ಇರುವವರು ಉತ್ತರ ಭಾರತದಿಂದ ಬಂದು ತಂಗಿರುವವರು. ಈಗಿನ ಪೀಳಿಗೆ ಉತ್ತರ ಭಾರತದಿಂದ ಬಂದುದಲ್ಲ. ಹಿಂದಿನವರು ಗುಜರಾಥಿನಿಂದ ಬಂದವರಿದ್ದಾರೆ. ಅವರು ವ್ಯಾಪಾರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಈ ಸ್ಥಳಕ್ಕೆ ಸಾಹುಕಾರ ಪೇಟೆಯೆಂದು ಹೆಸರು. ಯುದ್ಧಕ್ಕೆ ಇದಕ್ಕಿಂತ ಉತ್ತಮ ಸ್ಥಳ ಯಾವುದು? ಸೇನೆ ಇಲ್ಲಿ ಮುನ್ನುಗ್ಗಿತು, ಹಿಂದಿ ನಾಮಫಲಕಗಳನ್ನು ಹಿಡಿ ಬಾಯಿ ಮಾಡಲಾಯಿತು. ಅಂಗಡಿಗಳನ್ನು ಪುಡಿ ಮಾಡಲಾಯಿತು. ದಾರಿಯಲ್ಲಿ ಸಿಕ್ಕಿದ ವಾಹನಗಳ ಪಾಡು ಅವಸ್ಥೆಯಾಗಿತ್ತು. ಸೈಕಲಿನಿಂದ ಹಿಡಿದು ಬಸ್ಸ್-ಲಾರಿಗಳ ವರೆಗೂ ಎಲ್ಲಾ ವಾಹನಗಳನ್ನೂ ತಡೆದು ನಿಲ್ಲಿಸಿ ಇವುಗಳ ಮೇಲೆ ಹಿಂದೀ ವಿರೋಧ ಘೋಷಣೆಗಳನ್ನು ಬರೆದು ಚಾಲಕರಿಂದ ಹಾಗೂ ಪ್ರಯಾಣಿಕರಿಂದ "ಹಿಂದಿ (ಇಂದಿ) ನಾಶವಾಗಲಿ, ಇಂಗ್ಲೀಷೇ ಇರಬೇಕ್"ನ್ನುವ ಘೋಷಣೆಗಳನ್ನು ಯಾಕಿಸಲಾಯಿತು, ದಾರಿಯಲ್ಲಿದ್ದ ಸಿಹಿತಿಂಡಿಗಳ ಅಂಗಡಿಗಳ ಬೀಗಗಳನ್ನು ಒಡೆದು ಒಳಗೆ ಹೋಗಿ ಕಂಠಪೂರ್ತಿ ಅಲ್ಲಿದ್ದ ತಿಂಡಿಗಳನ್ನು ಈ ಸೈನಿಕರು ತಿಂದರು. (ಸಿಹಿತಿಂಡಿಗಳ ಹೆಸರು ಹಿಂದಿಯಲ್ಲಿ ತಾನೇ ಇರುವದು! ಈ ಹಿಂದಿಯನ್ನು ನಾಶಮಾಡುವದು ಹೇಗೆ?) ಹಿಂದೀ ಮಾತಾಡುವವರ ಮನೆಯೊಳಗೆ ಘುಗ್ಗಿ ಗಲಾಟೆ ಮಾಡಲಾಯಿತು. ಅವಿಭಜಿತ ಭಾರತದ ರೈಲ್ವೆ ಹಾಕಿ ಪಂದ್ಯಾವಳಿದಲ್ಲಿ ಭಾಗವಹಿಸಿ ಹಿಂದಕ್ಕೆ ಹೋಯತ್ತಿದ್ದ ಆಗ್ನೇಯ ರೈಲ್ವೆ ಆಟಗಾರರನ್ನು ಸುಮ್ಮನೆ ಬಿಡಲಿಲ್ಲ. ಅವರನ್ನು ಚೆನ್ನಾಗಿ ಹೊಡೆಯಲಾಯಿತು. ಉತ್ತರ ಭಾರತದ ಎಲ್ಲಾ ಗುಂಪುಗಳ ಮೇಲೂ ಕೈ ಇಡಲಾಗಿತ್ತು—ಅವರಿಗೆ ಪಂಜಾಬಿ, ಬಂಗಾಲಿ, ಮರಾಠಿ ಮುಂತಾದ ಭಿನ್ನ ಭಾವವೇ ಇರಲಿಲ್ಲ.

'ದಿಲ್ಲಿ ದೊರೆ'ಗಳ ವಿರುದ್ಧ ಯುದ್ಧ ಮಾಡುವದೆಂದರೆ ಏನು? ಕೇಂದ್ರ ಸರಕಾರದ ಕೈಯ್ಯಲ್ಲಿರುವ ರೈಲ್ವೆ, ಅಂಚೆ, ತಂತಿ, ಜೀವವಿಮೆ ಮುಂತಾದ ರಂಗಗಳಿಗೆ ಸಂಬಂಧಪಟ್ಟ ಕಾರ್ಖಾನೆ, ಕಾರ್ಯಾಲಯಗಳನ್ನು ಸುಡುವದು ತಾನೇ? ಆದುದರಿಂದ ಹಿಂದಿ ವಿರೋಧಿ ತಿರು ಚಕ್ರವರ್ತಿ ಹಾಗೂ ತಿರು ಅ. ದೊರೈಯವರ ಸೈನ್ಯವು ರೈಲು ನಿಲ್ದಾಣಗಳಿಗೆ ಮುತ್ತಿಗೆ ಹಾಕಿತು. ಅಲ್ಲಿದ್ದ ಹಿಂದಿ ನಾಮಫಲಕಗಳನ್ನು, ಪ್ರಧಾನಿ ಇಂದಿರಾಜೀಯವರ ಚಿತ್ರಪಟಗಳನ್ನು ಕಿತ್ತೆಸೆಯಲಾಯಿತು. ರೈಲು ಚಲಾವಣೆಗೆ ಅಡ್ಡಿಯುಂಟು ಮಾಡಲಾಯಿತು. ರೈ

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದ ಔಷಧಿ ಮತ್ತು ದಕ್ಷ ವೈದ್ಯಕೀಯ
ಸಲಹೆಗಾಗಿ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಲುಗಳ ಮೇಲೆ ಸಿಕ್ಕಾಬಟ್ಟೆ ಹಿಂದೀ ವಿರೋಧಿ ತಮ್ಮ ಪ್ರಿಯ ಘೋಷಣೆಗಳನ್ನು ಬರೆಯ ಲಾಯಿತು. ಪ್ರಯಾಣಿಕರಿಂದ ಆವನ್ನು ಸುವರ್ ಹೇಳಿಸಲಾಯಿತು. ಅಷ್ಟರಿಂದ ತೃಪ್ತಿಪಡದ ಸೈನಿಕರು ಇನ್ನೂ ಮುಂದಡಿಯಿಟ್ಟರು. ನಡುದಾರಿಯಲ್ಲಿ ರೈಲುಗಳನ್ನು ನಿಲ್ಲಿಸಿ, ರೈಲುಗಳವೆಲೆ ಬರೆದು ಪ್ರಯಾಣಿಕರಿಂದ ಹೇಳಿಸಿ, ಪಾಷಾಣ ಮೆಳೆಗರೆದು ಬಂಡಿಗಳನ್ನು ಬಿಡಲಾಗುತ್ತಿತ್ತು. ಕೇವಲ ಕೆಲವೇ ಬಂಡಿಗಳು ಓಡುತ್ತಿದ್ದುವು. ಶಾಲೆ-ಕಲಾ ಶಾಲೆಯಲಿಗೆ ಯಾರೂ ಹೋಗುವಂತಿಲ್ಲ ಅವರನ್ನು ತಡೆದು, ಹೊಡೆದು ಹಿಂದಕ್ಕೆ ಕಳುಹಿಸಲಾಗುತ್ತಿತ್ತು. ಅದು ಅರ್ಧ ವರ್ಷದ ಪರೀಕ್ಷೆ ನಡೆಯುವ ಸಮಯವೆಂಬುದು ಗಮನಿಸಿಯ ಅಂಶ ಇದೆ. ಕೆಲವು ವಿದ್ಯಾಲಯಗಳಲ್ಲಿ (ಉದಾ.—ವಿವೇಕಾನಂದ ಕಾಲೇಜ್) ಪರೀಕ್ಷೆ ನಡೆಯುತ್ತಿದ್ದಾಗ ಚಕ್ರವರ್ತಿ—ದೊರೈಗಳ ಸೈನಿಕರು ಒಳಗೆ ನುಗ್ಗಿ ಪತ್ರಿಕೆಗಳನ್ನು ಘರ ಘರನೆ ಹರಿದು ಹಾಕಿ ಹಗರಣ ನಡೆಸಿ ಬಿಟ್ಟರು.

ಗ್ರಂಟಿಬರಲ್ಲಿ ಶ್ರದ್ಧೇಯ ರಾಧಾಕೃಷ್ಣನ್ ರವರ ಮನೆಯಲ್ಲಿ (ಪುಸ್ತಕಾಲಯವನ್ನು) ಸುಟ್ಟಿದ್ದಂತೆ ಈ ಸಲ ಈ ಸೈನ್ಯವು ಹಿಂದೀ ಪ್ರಚಾರ ಸಭೆಯತ್ತ ಧಾವಿಸಿತು. ಮದ್ರಾಸು ಮಹಾನಗರದ ಹಿಂದಿ ಪ್ರಚಾರ ಸಭೆಗೆ ಪ್ರಾಮುಖ್ಯತೆ ಇದೆ. ಯಾವದನ್ನು ರಾಜಾಜಿ ಉತ್ಸಂದ ಹಾಗೂ ದಕ್ಷಿಣದ ಐಕ್ಯತೆಗಾಗಿ ಹಿಂದೆ ಕಟ್ಟಿದ್ದರೋ ಅದನ್ನು ಅವರಿಂದು ತನ್ನ ಅನುಯಾಯಿಗಳ ಮೂಲಕ ನಾಶ ಮಾಡಲು ಕಾರಣರಾದರು! ಹಿಂದಿ ಪುಸ್ತಕಗಳನ್ನು ಭಸ್ಮೀ ಭೂತಗೊಳಿಸಲಾಯಿತು. ಹಗೆಯ ಹೊಗೆ ಎದ್ದಿತು. ಅಲ್ಲಿದ್ದ ಸಾರಾಲಿ ಮಂತಾದ ಅಸನಾದಿರಳನ್ನು ಹಿಂದಿ ವಿರೋಧಿ ಸೈನಿಕರು ಬಿಡಲಿಲ್ಲ. (ಅವೂ ಹಿಂದಿಯತ್ತಿದ್ದುವೇನು?) ಎಲ್ಲವನ್ನು ಹುಡಿ ಹುಡಿ ಮಾಡಲಾಯಿತು.

ಕೇಂದ್ರ ಸರಕಾರದ ಕೈಯಲ್ಲಿರುವ ಮುಖ್ಯ ರಂಗ 'ರಿಸರ್ವ ಬ್ಯಾಂಕ್' ಸೈನಿಕರು ಅದನ್ನು ಬಿಟ್ಟಾರೇ? ಅಲ್ಲಿಗೆ ಹೋಗಿ ತಮಗಿಷ್ಟಬಂದಂತೆ ಬರೆದು ಹಾಕಿದರು. ಸುಣ್ಣವಶಾತ್, ಅಲ್ಲಿದ್ದವರ ಹತ್ತಿರ ರೂಪಾಯಿ ನೋಟುಗಳ ಕಟ್ಟುಗಳನ್ನು ಹೊರಗೆ ತರಲು ಹೇಳಲಿಲ್ಲ! ನೋಟಿನಲ್ಲಿ, ನಾಣ್ಯಗಳಲ್ಲಿ ಹಿಂದೀ ಇದೆಯಲ್ಲಾ! ಆದುದರಿಂದ ನೋಟುಗಳನ್ನು ಸುಡುವದು ಬೇಡವೇ? ನಾಣ್ಯಗಳಿಗೆ ತಾರಾ ಹಚ್ಚುವದು ಬೇಡವೇ? ಇವೆಲ್ಲ ನಾಸಿಕದಿಂದ ತಾನೇ ಬಂದವು. ಗಾಂಧೀಜೀಯವರ ಸ್ವದೇಶಿ ಚಳುವಳಿ ಮತ್ತೇನಿದೆ? ಅನ್ಯದೇಶಗಳ ಬಟ್ಟೆಗಳನ್ನು ಸುಟ್ಟಂತೆ ತಿರು ಮೂರನ್ ಸಡೆಯಾ ಉತ್ಸಂದ ನೋಟುಗಳನ್ನು ಸುಡಬೇಕಲ್ಲವೇ? ಇಲ್ಲದಿದ್ದಲ್ಲಿ ಇವರೆಂತು ದಕ್ಷಿಣದ ಮಹಾತ್ಮಾ ಮೂರನ್ ಅಥವಾ ಮುಂಸೋಲಿ ಗಾಂಧಿಯಾಗಲು ಸಾಧ್ಯ?

ಹಣದ ಮೇಲೆಯೇ ಹಾಯಾಗಿರುವ ಕೇಂದ್ರ ಸರಕಾರದ ಇನ್ನೊಂದು ರಂಗ ಜೀವವೇ.. ಇಲ್ಲಿಯ ಜೀವವಿಸೆಯ-ಕಾರ್ಯಾಲಯ ಕಟ್ಟಡವು ಉನ್ನತ ಕಟ್ಟಡವಿದೆ. ಅದರ ಮೇಲೆ ಬಣ್ಣಬಣ್ಣವಾಗಿ 'ಯೋಗಕ್ಷೇಮ....' ವನ್ನೂ ಬರೆದಿಡಲಾಗಿತ್ತು. ಹಿಂದೀ ವಿರೋಧಿ ಸೈನಿಕರು ಕೇಂದ್ರ ಸರಕಾರದ ಈ ಕೋಟೆಯ ಮೇಲೆ ಲಗ್ಗೆ ಹತ್ತಿದರು. ಈ 'ಯೋಗಕ್ಷೇಮ' ವನ್ನು ರಸ್ತೆಯಲ್ಲಿಸೆಯಲು ಅವರು ಅನ್ನುವಾದರ. ತಮ್ಮ ಜೇಬುಗಳಲ್ಲಿ ನೋಟುಗಳ ಕಟ್ಟುಗಳಿದ್ದು ಅವುಗಳ ಮೇಲೂ ದೇವನಾಗರಿ ಲಿಪಿಯಲ್ಲಿ ಬರೆದ ಅಕ್ಷರಗಳಿವೆ. ಅವನ್ನು ಯಾರೂ ಸುಡಲಿಲ್ಲ. ತಮ್ಮ ಕಿಸೆಯಲ್ಲಿದ್ದ ಕಾಸಿಗಾದರೂ ತಾರು ಹಚ್ಚಲಿಲ್ಲ. ಆದರೆ ಸಾರ್ವಜನಿಕರ ಯೋಗಕ್ಷೇಮನ್ನು ಕಾಪಾಡಲು ಇವರು ಮುಂದಾದರ! ಪೋಲೀಸರೇ ಪಕ್ಕದಲ್ಲಿ ನಿಂತುಕೊಂಡು ಪಿಳಿಪಿಳಿ ನೋಡುವಾಗ, ಸಾರ್ವಜನಿಕರೂ ಮಾಡುವದಾದರೂ ಏನು? ಗಲಾಟೆಖೋರರ ಹಿಂದುಗಡೆ ರಾಜ್ಯ ಸರ್ಕಾರವೇ ಇರುವಾಗ ಮುಗ್ಧ ಜನತೆ ಅದೇನು ಮಾಡಲು ಸಾಧ್ಯ?

ಕೇಂದ್ರದ ಇನ್ನೊಂದು ಕೇಲಿ ಅಂಚೆ ಹಾಗೂ ತಂತಿ ಇಲಾಖೆ ಇದೆ. ಚಕ್ರವರ್ತಿಯವರ ಸೈನ್ಯ ಅತ್ತ ಹೊರಟಿತು. ಅಲ್ಲಿದ್ದ ಪ್ರಧಾನಿ ಇಂದಿರಾಜಿಯವರ ಚಿತ್ರಗಳನ್ನು ಪುಡಿಮಾಡಲಾಯಿತು. ಹಾಗೆಯೇ ಅನೇಕ ಪುಸ್ತಕಗಳನ್ನು ಹರಿದು ಚೂರು ಮಾಡಲಾಯಿತು. ಪುಣ್ಯವಶಾತ್ ರೂಪಾಯಿ ನೋಟು, ಕವರು, ಕಾರ್ಡು, ಅಂಚೆ ಚೀಟಿ ಮುಂತಾದುವುಗಳನ್ನು ಹಾಳುಮಾಡಲಿಲ್ಲ!

ದ್ವೇಷದ ದಾವಾಗ್ನಿ ಧಗಧಗನೆ ಉರಿಯಲಾರಂಭವಾಯಿತು. ಶ್ರೀ ಚಕ್ರವರ್ತಿ ರಾಜಾಜಿ ಹಾಗೂ ತಿರು ಅಣ್ಣಾದೊರೈಯವರ ಮಾತುಗಳು ವಿಧ್ವಂಸ ಪಡೆಗೆ ಪ್ರೋತ್ಸಾಹವನ್ನಿತ್ತುವು. ಇವೆಲ್ಲಾ ನಡೆಯ ತ್ರಿದ್ದಾಗ ನಗರ ರಕ್ಷಕರು (ಪೋಲೀಸರು) ಪಿಳಿಪಿಳಿ ನೋಡುತ್ತ ಪ್ರೇಕ್ಷಕರಂತೆ ನಿಂತಿದ್ದುದರಿಂದ ಪ್ರೋತ್ಸಾಹಾಗ್ನಿಗೆ ಗನಿಯೆಣ್ಣೆ ಸುರಿದಂತಾಯಿತು. ಇದೇ ಸಮಯದಲ್ಲಿ, ಶ್ರೀ ರಾಜಾಜಿ ಅದಕ್ಕೆ ಗಾಳಿ ಬೀಸಿದರು, ತನ್ನ ಹುಟ್ಟು ಹಟ್ಟಿದ ನೆವನದ ಮೇಲೆ ಒಂದು ವಿಶೇಷ ಕೂಟಕ್ಕೇರ್ಪಾಡು ಮಾಡಲು ಹೇಳಿ, ಆ ಕೂಟದಲ್ಲಿ ಅವರು, ಅನೇಕ ಮೂಲೆಗಳಿಂದ ಬಂದ ಒತ್ತಡದ ಫಲವಾಗಿ ಮದ್ರಾಸಿನ ಮುಖ್ಯ ಮಂತ್ರಿ ತಿರು ಅಣ್ಣಾದೊರೈಯವರು ಈ ಯುದ್ಧದಿಂದ ಹಿಂದಡಿಯಿಟ್ಟರೂ ಆಳುವ ಪಕ್ಷ ಆಳಬಾರದು, ಹಾಗೆ ಆಳುತ್ತಾ ಕೂತುಕೊಂಡರೂ ತಾನು ಸುವ್ವಗುಳಿಯುವದಿಲ್ಲ. ಯುದ್ಧವನ್ನು ಮುಂದರಿಸಿಯೇ ತೀರುವೆನು ಎಂದು ಹೇಳಿದರು.

ಮದ್ರಾಸ್ ಮಹಾನಗರದ ನಿಲ್ದಾಣದೊಳಗೆ ಕೊಚ್ಚಿನ್ ಮೆಯಿಲ್ ಬರಲು ಕೆಲವೇ ನಿಮಿಷಗಳಿದ್ದುವು ದಾರಿಯಲ್ಲಿ ಆ ಬಂಡಿಯನ್ನು ಹಡೆದು, ಪ್ರಯಾಣಿಕರನ್ನು ಕೆಳಗಿಳಿಯಲು ಹೇಳಿ, ಅದರ ಮೇಲೆ ಗನಿಯೆಣ್ಣೆ ಸುರಿದು ಬೆಂಕಿ ಕೊಡಲಾಯಿತು. ಈ ಮೆಯಿಲಿನಲ್ಲಿ ಕೊಚ್ಚಿಯಿಂದ ಹಿಂದಿ ಪಾರ್ಸೆಲುಗಳು ಬಂದಿದ್ದುವೇನು? ಕೊಚ್ಚಿನ್ ಮೆಯಿಲೆಂದರೆ ಕೋಳಿಗಳ ಮೆಯಿಲ್! ನಗರಕ್ಕೆ ಕೋಳಿ—ಕೋಳಿ ಮೊಟ್ಟೆ ಆ ಬಂಡಿಯಲ್ಲೇ ಹೆಚ್ಚಾಗಿ ಬರುವದು. ಸೈನಿಕರು ಕೊಳ್ಳೆ ಹೊಡೆಯಲು ಸಾಧ್ಯವಾದುದನ್ನು ಕೊಳ್ಳೆ ಹೊಡೆದರು. ಇತರವು ದ್ವೇಷದ ದಾವಾಗ್ನಿಯಲ್ಲಿ ಧಗಧಗನೆ ಸುಟ್ಟು ಭಸ್ಮವಾದುವು. ಇದನ್ನು ಕಾಣಲು, ಭಸ್ಮಾಸುರನ ಆಟವನ್ನು ಕಾಣಲು, ಸಾರ್ವಜನಿಕ ಕಾಮಗಾರಿ ಮಂತ್ರಿ ತಿರು ಕರುಣಾನಿಧಿ ಬಂದಿದ್ದರು. ಇದನ್ನೇಕೆ, ಇಲ್ಲಿ ಸುಟ್ಟರೆಂದು ಕೇಳಿದರು. ಕೇಳಿದುದೇ ತಡ! ಕಟ್ಟನೆ ಅವರ ಮೇಲೆಯೇ ಕಲ್ಲು ಬಿತ್ತು.

ಕವಿ ಮಾತು

ತ್ಯಾಗದ ಒರೆಗಲ್ಲು

ಬರೆದವರು— ಶ್ರೀ ಎಂ. ರಂಗರಾವ್

ತ್ಯಾಗಿಗಳ ಪರೀಕ್ಷೆಗೆ ಅಧಿಕಾರವೇ ಒರೆಗಲ್ಲೆಂದು ಹೇಳಬಹುದು. ಅಧಿಕಾರದಲ್ಲಿ ಕುಳಿತು ತನ್ನ ತ್ಯಾಗವನ್ನು ಉಳಿಸಿಕೊಂಡವನೇ ನಿಜವಾದ ತ್ಯಾಗಿ ಎನಿಸಿಕೊಳ್ಳಬಲ್ಲನು. ಇದನ್ನು ಗ್ರಹಿಸಿಕೊಂಡೇ ಮಹಾತ್ಮಾ ಗಾಂಧಿ, ಭಾರತ ದೇಶಕ್ಕೆ ಸ್ವಾತಂತ್ರ್ಯವು ಕೈಗೂಡಿದಾಗ, ತ್ಯಾಗಕ್ಕೆ ಇನ್ನೊಂದು ಹೆಸರಾದ ಕಾಂಗ್ರೆಸ್ಸು ಎಂಬ ಹೆಸರು ಅಧಿಕಾರದಲ್ಲಿ ಕುಳಿತುಕೊಳ್ಳುವುದು ಬೇಡವೆಂದುಕೊಂಡು, ಆ ಹೆಸರನ್ನು ಅಲ್ಲಿಗೇ ಮುಕ್ತಾಯಗೊಳಿಸುವ ಅಭಿಪ್ರಾಯವನ್ನು ಹೇಳಿರಬೇಕು.

ಅದೇನು ಮಾತು? ಸರ್ವ ಸಂಗ ಪರಿತ್ಯಾಗಿದಳಾದ ಮಹಾತ್ಮರಂತಹವರ ಮಾತು ಮಹಾತ್ಮರಿಗೇ ಆಯಿತು. ಎಷ್ಟೋ ತ್ಯಾಗಗಳನ್ನು ಮಾಡಿ, ಕಷ್ಟನಷ್ಟಗಳನ್ನು ಅನುಭವಿಸಿ, ತ್ಯಾಗದ ಚರಿತ್ರೆಯನ್ನೇ ಮಾಡಿಕೊಂಡಿರುವ ಕಾಂಗ್ರೆಸ್ಸು, ಅಮೂಲ್ಯವಾದ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಾಗ, ಅಧಿಕಾರವೆಂಬ ಕಾಣಿಕೆಯನ್ನು ತೆಗೆದುಕೊಳ್ಳಲು ಅಡ್ಡಿ ಹೇಳುವುದುಂಟೆ? ಅಷ್ಟು ಬಹು ಸಂಖ್ಯಾತರಾದ ಕಾಂಗ್ರೆಸ್ ಪ್ರಜಾ ಸಮುದಾಯಕ್ಕೆ ಮೋಸವನ್ನುಂಟು ಮಾಡದ? ಕಾಂಗ್ರೆಸ್ ಎಂಬ ಹೆಸರನ್ನು ತೆಗೆಯುವುದೂ ಸಮ, ಅದನ್ನು ಕೊಲ್ಲುವುದೂ ಸಮ. ಕೂಡದು, ಅದು ಅದೇ ಹೆಸರಲ್ಲಿ ಅಧಿಕಾರ ಕಾಣಿಕೆಯನ್ನು ಪಡೆದುಕೊಳ್ಳಲೇ ಬೇಕು.

ಈ ಬಗೆಯ ಬಹು ಜನಾಭಿಪ್ರಾಯದಿಂದಲೇ, ಕಾಂಗ್ರೆಸ್ಸಿನ ಆಳಿಕೆ ಪ್ರಾರಂಭವಾಯಿತು ಭಾರತ ದೇಶದಲ್ಲಿ.

ಅದೇನು ಸಾಮಾನ್ಯ ಅಧಿಕಾರವೆ? ಅಧಿಕಾರ ಮಾಡುವ ದೇಶ-ಭಾರತ ದೇಶ. ಇದೇನು ಸಾಮಾನ್ಯ ದೇಶವೆ? ಭೂಪ್ರದೇಶ ವಿಸ್ತಾರ ದೇಶಗಳಿಂದ ಒಡಗೂಡಿ ಖ್ಯಾತವಾದುದು ಈ ಭರತ ಖಂಡ. ಅಷ್ಟು ದೇಶಗಳೂ ಅಮಲಿನಲ್ಲಿರುತ್ತಿದ್ದರೆ ಕತೆ ಹೇಗಾಗುತ್ತಿತ್ತು? ಪುಣ್ಯವಶಾತ್ ಪಾಕಿಸ್ತಾನವೆಂಬ ಹೊಸ ಹೆಸರಿನಿಂದ ಒಂದೂ-ಅರೆ ಕಾಲಿನ ರುಂಡು ಪ್ರಾಂತಭೆದಲ್ಲೇ ಬೇರೆ ಹೋಯಿತು. ಉಳಿದುವೆಲ್ಲ ಶಾಂತವಶೇಷವಾಗಿ ಹೋದ ಕಾಲಘಟ್ಟವದು. ಸಂಸ್ಥಾನಿಕ ರೂಪಗಳಾಗಿ ಹರಿ ಹಂಚಾಗಿದ್ದ ಸಣ್ಣ ದೊಡ್ಡ ರಾಜರನ್ನೂ, ಸಂಸ್ಥಾನಾಧಿಪತಿಗಳನ್ನೂ ಒಲಿಸಿ ಸರಿಮಾಡಿಕೊಂಡು, ಒಳ್ಳೆಯ ರೀತಿಯಲ್ಲಿಯೇ ಪ್ರಜಾರಾಜ್ಯ ಪರಿಪಾಲನೆಸಾಗಿತ್ತು. ರಾಜ್ಯ ಪರಿಪಾಲನೆ ಮಾಡಲು ಭಾರತೀಯರೇನೂ ಹಿಂದುಳಿದಿಲ್ಲ ಎಂಬುದನ್ನೂ ಜಗತ್ತಿಗೆ ತೋರಿಸಿ ಕೊಡುವ ಸಂದರ್ಭಗಳೂ ತುಂಬ ಬಂದುವು. ಎಷ್ಟೋ ಅಭಿವೃದ್ಧಿಗಳನ್ನು ಸಾಧಿಸಿತು ಕಾಂಗ್ರೆಸ್ಸು ಸರಕಾರ. ಅಪೋಷ ಶಾಯಕಮಣಿಯಾದ ನೆಹರೂರ ಸೂತ್ರ ಚಾಲನೆಯಿಂದ ಭಾರತ ದೇಶವು ಅಭಿವೃದ್ಧಿಯ ಪಥವನ್ನು ಹಿಡಿದೆತ್ತಿನ್ನುವುದರಲ್ಲಿ ಸಂದೇಹವೇ ಇಲ್ಲ.

ಅಧಿಕಾರವೆಂದ ಮೇಲೆ ಎಷ್ಟೇ ಒಳಿತು ಸಾಧಿಸಬೇಕೆಂಬ ಉದ್ದೇಶವಿದ್ದರೂ ಸುತ್ತು ಮುತ್ತಲಿನ ಸುಷ್ಟ ದುಷ್ಟ ಶಕ್ತಿಗಳಿಂದ, ಅವುಗಳ [illegible] ಯಿಂದ, ಒತ್ತಡಗಳಿಂದ ಅನೇಕ ಕೆಡುಕುಗಳು ಅಧಿಕಾರ ಗದ್ದುಗೆಯನ್ನು ಅಂಟಿಕೊಳ್ಳುತ್ತವೆ. ಕೆಲವು ದುಷ್ಟ ಶಕ್ತಿಗಳು ವಿವೇಕಿಗಳನ್ನು ಕೂಡ ತನ್ನಿಷ್ಟ ಪ್ರಕಾರ ಬಗ್ಗಿಸುವಂತೆಯೂ ಮಾಡಿ ಬಿಡುತ್ತವೆ. ಈ ಸಂದರ್ಭದಲ್ಲೇ ಇದೆ ತ್ಯಾಗದ ಒರೆಗಲ್ಲು.

'ಮಂಕುತಿಮ್ಮನ ಕಗ್ಗ'ದ ರಸಋಷಿ;
'ಜೀವನ ಧರ್ಮಯೋಗ'ದ ಕೊಡುಗೆ.

ಶ್ರೀ ಡಿ. ವಿ. ಜಿ.

ಲೇಖಕರು: ಶ್ರೀ ಎಂ. ವಿ. ಶರ್ಮಾ, ತದ್ದಲಸೆ.

ದುಂಡನೆಯ ನಗುಮುಗ, ವಿಶಾಲವಾದ ಹಣೆ, ಗಂಭೀರ ದನಿ, ತಲೆಯ ಮಧ್ಯದಲ್ಲಿ ಕೂದಲಿಲ್ಲದ ಕನ್ನಡಕ ಧರಿಸಿದ ಡಿ. ವಿ. ಜಿ. ಯನ್ನು ಕಂಡಾಗ ಅವರ ಉಳ್ಳುಳ್ಳುವ ತೇಜಸ್ಸಿಗೆ ಪ್ರತಿಯೊಬ್ಬನೂ ನಮಿಸುವದೇ ಸ್ವತ್ತು. ಅವರ ಸಹೃದಯತೆ, ನಯ-ವಿನಯ, ಸ್ನೇಹ-ಸೌಜನ್ಯ, ಸುಸಂಸ್ಕೃತ ರೀತಿ ಯೊರನ್ನು ತಾನೇ ಬಂಧಿಸಲಾರದು! ಕನ್ನಡದ ಹಿರಿಯ ಸಾಹಿತಿತಪಸ್ವಿಯಾಗೂ ಮಹಾದಾರ್ಶನಿಕರು ಇವರು. ೧೯೪೪ ನವೆಂಬರ್ ೧೦, ಕನ್ನಡ ಮಡಿಯಲ್ಲಿ ವಿ. ಡಿ. ಕೆ. ಭಾರದ್ವಾಜರು ಶ್ರೀ ಡಿ. ವಿ. ಜಿಯವರ ಪರಿಚಯವನ್ನು ಮಾಡಿ ಕೊಡುತ್ತ 'ವಿಲಾಯತಿ ಅಮೇರಿಕಾ ಮೊದಲಾದ ದೇಶಗಳಲ್ಲಿ ಅವರೂ ಜನಿಸಿದ್ದರೆ ಸ್ವಧಾನ ಮಂತ್ರಿಗಳ ಸ್ಥಾನವನ್ನಲಂಕರಿಸಿ ಅವರ ಜೀವನ ಚರಿತ್ರೆಯ ಸಾವಿರಾರು ಪ್ರತಿಗಳು ದೇಶಾಂತರಗಳಲ್ಲಿ ಮಡುಗಾಡ ಬಹುದಾಗಿತ್ತು' ಎಂದು ಅವರ ಹಿರಿಮೆಯನ್ನು ಬರೆದರು.

ಮರು ಸಂಚಿಕೆಯಲ್ಲಿಯೇ ಶ್ರೀ ಡಿ. ವಿ. ಜಿ. ಯವರು ಇದನ್ನಾಕ್ಷೇಪಿಸಿ ಬರೆದರು. "ಹೊರಾದರೂ ಯಾವ ಕಾರಣದಿಂದಾದರೂ ತಮ್ಮಪ್ಪತ್ಯವಾಗಿ ಇದ್ದದ್ದಲ್ಲಾಯಾಗಿ ಇದ್ದುಕೊಳ್ಳಬೇಕೆಂದು ಆಶೆ ಪಟ್ಟರೆ ಅಂದವರಿಗೆ ನಮ್ಮ ಪ್ರಪಂಚದಲ್ಲಿ ಸ್ಥಳ ವಿರಕೂಡದೇ?' ಎಂದು ಡಿ. ವಿ ಜಿ.ಯವರ ಅಕ್ಷೇಪ.

ಹಿಡಿದ ಕೆಲಸಕ್ಕೆ ಎಷ್ಟೇ ತೊಂದರೆ ಬಂದರೂ ಅದನ್ನು ಎಡಬಿಡದೆ ಸಾಧಿಸಿಯೇ ತೀರುವ ಗಟ್ಟಿವಾದಿ ಶ್ರೀ ಡಿ.ವಿ.ಜಿ. ಕನ್ನಡದ ಪುಣ್ಯರುಜ್ಞೀವನದ ಆಚಾರ್ಯಪುರುಷರಾದ, ಸಾಹಿತ್ಯ ಕಲೆಗಳಲ್ಲಿ ಪಾಂಡಿತ್ಯ ಪಡೆದ, ರಾಜಕೀಯ ಅಧ್ಯಾತ್ಮದ ಸಂಡಿತರೂ ಹೌದು.

ಡಿ. ವಿ. ಜಿ. ೧೮೮೮ರಲ್ಲಿ ಜನಿಸಿದರು. ಬಾಲಕರುವಾಗಲೇ ಕರಿಣತಮವಾದ ಪತ್ರಿಕೋದ್ಯಮವನ್ನು ಅವಲಂಬಿಸಿದರು. ಸುಮಾರು ೫೦ ವರ್ಷಕ್ಕೂ ಹೆಚ್ಚು ಕಾಲ ಪತ್ರಿಕಾ ವೃತ್ತಿಯಲ್ಲಿ ದುಡಿದರು. ೧೯೦೮ರಲ್ಲಿಯೇ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ "ಭಾರತಿ"ಯ ಸಂಪಾದಕರಾಗಿದ್ದರು. ಅನಂತರ ೧೯೧೩ರಲ್ಲಿ ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಹಕಾರದಿಂದ 'ದಿ ಕರ್ನಾಟಕ' ಎನ್ನುವ ಪತ್ರಿಕೆ ಹೊರಡಿಸಿ ಹತ್ತಿದರು. ಇದು ಇಂಗ್ಲೀಷ ಪತ್ರಿಕೆಯಾಗಿದ್ದು ವಾರಕ್ಕೆರಡು ಬಾರಿ ಪ್ರಕಟವಾಗುತ್ತಿತ್ತು. ಕೊನೆಗೆ ಇದೇ ಪತ್ರಿಕೆ 'ಕರ್ನಾಟಕ ರಿವ್ಯೂ ಆಫ್ ರಿವ್ಯೂಸ್' ಎಂಬ ಮಾಸ ಪತ್ರಿಕೆಯಾಗಿ ಪರಿವರ್ತನೆಗೊಂಡು ಡಿ. ವಿ. ಜಿ.ಯವರ ಸಂಪಾದಕತ್ವದಲ್ಲಿಯೇ ಹೊರಡತೊಡಗಿತು.

ಡಿ. ವಿ. ಜಿ. ಮುಖ್ಯ ವಿಚಾರ ಸರಣಿಯವರು. ಕಾರಣ ಪತ್ರಿಕೋದ್ಯಮದಲ್ಲಿ ಸ್ವೈಪ್ರವಾಗಿಯೇ ಜ್ಞಾನವನ್ನು ಗಳಿಸಿಕೊಂಡರು. ಭಾಷಾ ಶುದ್ಧಿ ವಿಚಾರ ಹರಿತವಾದ ಲೇಖನಗಳಿಗೆ ಅವರು ಅಂದಿನಿಂದಲೂ ಹೆಸರಾಗಿದ್ದರು.

'ಜೀವನದಲ್ಲಿ ಕಷ್ಟಪಟ್ಟೇ ಸುಖ ಸಿಗಬೇಕು. ಅದೇ ನಿಜವಾದ ಸುಖ. ಕಷ್ಟವಿಲ್ಲದೆ ಹಗುರಾಗಿ ದೊರೆತ ಸುಖ ಹಗುರಾಗಿಯೇ ಹೊಸಟು ಹೋಗುತ್ತದೆ' ಎಂದು ಸುಖದ ಕುರಿತು ಅಭಿಪ್ರಾಯ ಪಡುತ್ತಾರೆ. ಪ್ರಪಂಚದ ಪ್ರತಿಯೊಬ್ಬ ಜೀವಿಯಲ್ಲಿಯೂ ಸಮಾನತ್ವ, ಸೋದರತ್ವ, ಕರುಣೆ, ತ್ಯಾಗಗಳ ಭಾವನೆ, ಬೆಳೆದು ಬರಬೇಕೆಂದು ಡಿ. ವಿ. ಜಿಯವರು ಒತ್ತಿ ಒತ್ತಿ ನುಡಿಯುತ್ತಾರೆ. ಧರ್ಮ ವಿವೇಕ ಸಿದ್ಧವಾದದ್ದು. ಕರುಣೆ ಸ್ವಭಾವ ಸಿದ್ಧವಾದದ್ದು. ಧರ್ಮವನ್ನು ಬಿಟ್ಟು ಕರುಣೆ ಅವರ್ಥಕರವಾದುದು! ಎನ್ನುತ್ತಾರೆ.

'ದೇವರ' ಕುರಿತು ನುಡಿಯುತ್ತಾ 'ನಾವು ಯಾವು ಯಾವುದನ್ನು ಒಳ್ಳೆಯದೆಂದು ತಿಳಿಯುತ್ತೇವೆಯೋ ಯಾವು ಯಾವುದ ಕ್ಕಾಗಿ ಬುದ್ಧಿ, ಶಕ್ತಿ, ಧನ, ಕಾಲವನ್ನು ವೆಚ್ಚ ಮಾಡಲು ಸಿದ್ಧರಾಗುತ್ತೇವೆಯೋ ಅದಿಷ್ಟವೂ ದೇವರು' ಅನ್ನುತ್ತಾರೆ.

ಡಿ. ವಿ. ಜಿ. ಅಪೂರ್ವ ಪತ್ರಿಕಾನುಭವದ ಮೂಲಕ ೧೯೨೮ರಲ್ಲಿ ಬಾಗಿಲು ಕೋಟೆಯಲ್ಲಿ ಪಡೆದ ಅಖಿಲ ಕರ್ನಾಟಕ ವೃತ್ತ ಪತ್ರಿಕಾ ಕರ್ತರ ಪ್ರಥಮ ಪುಷ್ಪಕ್ಕೆ ಅಧ್ಯಕ್ಷರಾಗಿದ್ದರು. ಇಂದಿಗೂ ಅವರು ತಮ್ಮ ಪತ್ರಿಕಾ ವೃತ್ತಿಸಾಯುವನ್ನು ಬಿಟ್ಟುಕೊಟ್ಟಿಲ್ಲ. ಸಾರ್ವಜನಿಕರ ಜೀವನದ ಸರ್ವಾಂಗೀಣ ಉನ್ನತಿಗಾಗಿ ಸ್ಥಾಪಿಸಿದ 'ಗೋಖಲೆ ಸಾರ್ವಜನಿಕ ಸಂಸ್ಥೆ'ಯ ಮುಖಪತ್ರವಾಗಿ 'ಪಬ್ಲಿಕ್ ಆಫೈರ್ಸ್' ಮೂಲಕ ಇಂದು ಕೂಡ ಸಾಹಿತ್ಯ ಹಾಗೂ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ.

'ದಿವಾನ್' ಸಿ. ರಂಗಾಚಾರ್ಯ, ಗೋಪಾಲಕೃಷ್ಣ ಗೋಖಲೆ, ಮಂಕಾದ ಜೀವನ ಚರಿತ್ರೆಗಳನ್ನೂ "ಶ್ರೀ ವಿದ್ಯಾರಣ್ಯ ವಿಜಯ" "ತಿರೋತ್ತಮೆ" "ಕನಕಲತಾ" ಮುಂತಾದ ಅಮೂಲ್ಯ ಪಾಟಕಗಳನ್ನೂ ಬರೆದಿರುತ್ತಾರೆ. "ಜೀವನ ಸೌಂದರ್ಯ ಮತ್ತು ಸಾಹಿತ್ಯ" "ಸಾಹಿತ್ಯಶಕ್ತಿ" ಮುಂತಾದವು ಅವರ ವಿದ್ವತ್ತೆಯನ್ನು ತೋರಿಸುವಂತ ಗ್ರಂಥಗಳಾಗಿವೆ. ರಾಜ್ಯ ಶಾಸ್ತ್ರದ ಕುರಿತು ಉದ್ಗ್ರಂಥವನ್ನು ಬರೆದಿರುತ್ತಾರೆ. "ವಸಂತ ಕುಸುಮಾಂಜಲಿ ಅಂತಪುರದ ಗೀತೆಗಳು" "ಉಮರ ಖಯ್ಯಾಂ" ಇವು ಇವರ ಶ್ರೇಷ್ಠ ಕವನ ಪುಸ್ತಕಗಳು. "ಇಂದ್ರವಜ್ರ" "ಚಿಕ್ಕೂಜಿ" ಕಥಾ ಸಂಕಲನಗಳು.

ಡಿ. ವಿ. ಜಿ. "ಯವರ ಮಂಕುತಿಮ್ಮನ ಕಗ್ಗ" ಕನ್ನಡ ಸಾರಸ್ವತ ಲೋಕದಲ್ಲಿಯೇ ಅದ್ಭುತವೂ ಅಪೂರ್ವವೂ ಆದ ಗ್ರಂಥ. ಸಂಸ್ಕೃತದಲ್ಲಿ ಸುಭಾಷಿತಗಳಂತೆ ಕನ್ನಡದಲ್ಲಿ "ಮಂಕುತಿಮ್ಮನ ಕಗ್ಗ".

ಕವಿ ಕುಮೆಂಪುರವರು ಕಗ್ಗದ ಕುರಿತು

"ಹಸ್ತಕ್ಕೆ ಬರೆನಕ್ಕೆ, ಓದುತ್ತ ಓದುತ್ತ
ಮುಸ್ತಕಕ್ಕಿಟ್ಟು ವಿಸ್ತರದ ದರ್ಶನಕೆ
ಗಂಭೀರವಾದ
ಶುಭ್ರ ತುದಿಯಲಿ ನಿನ್ನ ಪುಸ್ತಕಕೆ
ಕೈಮುಗಿದೆ ಮಂಕುತಿಮ್ಮ"

ಎಂದಿದ್ದಾರೆ ಅಂದಾಗ 'ಕಗ್ಗ'ದ ಮಹತ್ವ ವೆಷ್ಟಿರಬಹುದು!

ನಮ್ಮ ಬಾಳ್ಗೆ ಸಲ್ಲುವ ತತ್ವ ಮಥನವನ್ನು ನಮ್ಮ ಆಯುಸ್ಸಿದ ಅಲ್ಪ ವೇಳೆಯನ್ನು ಕಳೆಯುವ ಬಗೆ ಹೇಗೆ? ಸುರುಸಾರ್ಥವೆಂದರೇನು? ಜಗತ್ತಿಗೂ ಧರ್ಮಗೂ ನಂಟು ಎಷ್ಟರ ಮಟ್ಟಿಗಿದೆ? ವಿದ್ಯೆ ನಾಗರಿಕತೆಯ ಪ್ರಯೋಜನ ಎಷ್ಟಿದೆ? ಬುದ್ಧಿ ಕಾರ್ಯ ಎಷ್ಟು? ಬಾಳಿನ ಅಳವೆಷ್ಟು? ಸಮಾಜಕ್ಕೆ ಧರ್ಮದ ಸಲ್ಲಬೇಕಾದ ಪಾಲು ಎಂಥದು?.... ನಾವು ತಿಂದು ಬದುಕುವ ಅನ್ನ ಯಾವ ರೀತಿಯಿಂದ ಗಳಿಸಿದುದು? ಇತ್ಯಾದಿ ಸಮಸ್ಯೆಗಳ ಕುರಿತು ಡಿ. ವಿ. ಜಿ. ಅಳವಾಗಿ ವಿಚಾರಿಸಿ ರಸಿಕರಿಗೆ ನೀಡಿದ್ದಾರೆ. ಯಂತ್ರವತ್ತಾಗಿ ಬಾಳುವ ಇಂದಿನ ಬಾಳಿನಲ್ಲಿ ನಮ್ಮ ಜೀವನಕ್ಕೆ ದುಡ್ಡು ಕಾಸಿನ ಗಳಿಕೆಯ ಬಲೆ ಹೆಚ್ಚಿ ನಮ್ಮ ಅಂತರಂಗದ ಸಿರಿ ದರಿದ್ರವಾಗುತ್ತಿದೆ. ಧರ್ಮ ಬುದ್ಧಿಯೋಟ ತೀವ್ರಗಾಮಿಯಾಗಿ ಹೃದಯವಂತಿಕೆ ಹಿಂದೆ ಬೀಳುತ್ತಲಿದೆ. ನಮ್ಮ ಬುದ್ಧಿಬಲದಿಂದ ಎನು ಪಡೆದರೂ ತೃಪ್ತಿಯಿಲ್ಲ, ಬರೀ ಗಾಳಿ ಸುದ್ದಾಟವಾಗುತ್ತಿಲದ ಬುದ್ಧಿ ಪಡೆಯ ಬೇಕಾದುದು ಸತ್ಯವನ್ನು, ಶುಭವನ್ನು ಅಂದಾದ ತಿಳಿಗಣ್ಣು ಬುದ್ಧಿಗೆ ಮಾಡಿ ಬರಬೇಕು.

'ಮತಿಯು ತಾಂ ಸತ್ಯ ಶುಭವ ವಪ
ವಾಂಶಗಳ
ಗತಿಯನರಸುತ ನಡೆಯೆ ಪೌರುಷ
ಪ್ರಗತಿ
ಮತ-ನೀತಿ ಶಾಸ್ತ್ರದಳು ರಾಜ್ಯ
ಸಂಧಾನಗಳು
ಮತಿಯ ಕಿಂಚಿದ್ವಿಜಯ ಮಂಕು
ತಿಮ್ಮ'

ನಮ್ಮ ಪೌರುಷ ಪ್ರಗತಿಯ ಕಲ್ಪನೆಯನ್ನು ಇಲ್ಲಿ ಹೇಳಿದ್ದಾರೆ.

ಬದುಕು ಒಮ್ಮೊಮ್ಮೆ ಘೋರಿ ದುಃಖದಿಂದ ಕೂಡಿದಾಗ ತಿರಸ್ಕಾರವುಂಟಾಗುತ್ತದೆ. ನಾವು ದುರ್ಬಲರು ಎಂಬ ಭಾವನೆ ಮೂಡಿ ಆತ್ಮಶಕ್ತಿ ಕುಂದುತ್ತದೆ. ಎಂಥ ನಿರಾಶೆಯಲ್ಲಿಯೂ ನಮ್ಮ ಆತ್ಮವನ್ನು ಬಾಗಿಸಬಾರದೆಂದು ಡಿ. ವಿ. ಜಿ. ಹೇಳುತ್ತಾರೆ.

ರಾಗಿ ಮುದ್ದೆಯ ಮಂಗಿ ನಲಿದು
ಬಾಳ್ವಾತಂಗೆ
ಕಾಗೆ ಕದ್ದುಣುವ ಭಕ್ಷ್ಯವ ಕಂಡು
ಕರುಬೇ?
ಭೋಗುವದು ಹುಸಿವಣ್ಣ ವಿಣಿಸೆಂತಪ್ಪು
ದಾದೊಡಂ

ಬಾಗಿಸದಿರಾತ್ಮವನ್—ಮಂಕತಿಮ್ಮ.

ಧರ್ಮ, ವೇದ-ಪುರಾಣಗಳನ್ನು, ಭಗವದ್ಗೀತೆಯನ್ನು ಓದಿ ಮನನ ಮಾಡಿಕೊಂಡು ಈ ಕವಿ ತನ್ನ ಬಾಳನ್ನು ಸುನೀತಗೊಳಿಸಿದ್ದಾರೆ. ಅವರ ಗಂಭೀರ ವಾಣಿ, ಅವರ ಅನುಭವದ ಸಿರಿಯನ್ನು ಈ ಕೃತಿಯಲ್ಲಿ ಸೂರೆಗೊಂಡಿದ್ದಾರೆ

ಈ ಕಗ್ಗವನ್ನು ಕೊನೆಯ ವರೆಗೂ ಓದಿ ಮುಗಿಸಿದಾಗ ನವ ಗೊಂದು ನೆಮ್ಮದಿ ದೊರೆಯುತ್ತದೆ. ಘೋರಿ ಮೂಯವಾಗಿ ಬಾಳಿನಲ್ಲಿ ವಿಶ್ವಾಸ ದೃಢತೆ ಹುಟ್ಟುತ್ತದೆ. ಲೋಕ ರೂಢಿಯ ಜ್ಞಾನ, ಜನದ ಜೀವನದಲ್ಲಿಯ ಕಷ್ಟ-ಸುಖಗಳ ಸಮನ್ವಯ ದೃಷ್ಟಿ ಬರುತ್ತದೆ. ನಮ್ಮ ದೇಹವೊಂದು ಗುಡಿ, ಅದನ್ನು ಎಷ್ಟೆಷ್ಟು ಪವಿತ್ರವಾಗಿಟ್ಟು ಆರೋಗ್ಯದಿಂದಿಟ್ಟು ಬೆಳೆಸುತ್ತೇವೆಯೋ ಅಷ್ಟು ಸುಖ ಶಾಂತಿ ದೊರೆಯುತ್ತದೆ. ನಮ್ಮ ಬಾಳಿನ ಸಾರ್ಥಕತೆಯನ್ನು ಹೇಳಿದ್ದಾರೆ.

"ಹುಲ್ಲಾಗು ಬೆಟ್ಟದಡಿ ಮನೆಗೆ
ಮಲ್ಲಿಗೆಯೊಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ
ಸುರಿಯೆ
ಬೆಲ್ಲ ಸಕ್ಕರೆಯೊಗು ದೀನ ದುರ್ಬಲ
ರಿಗೆ

ಎಲ್ಲರಲಿ ಒಂದಾಗು—ಮಂಕುತಿಮ್ಮ.

ಇಂಥ ನೈವಿಧ್ಯಮಯ ಜೀವನದಲ್ಲಿ ಪ್ರತಿಯೊಂದು ವಿಷಯ ವಿವೇಚನೆಯು ಇದರಲ್ಲಿದೆ.

ಇಂಥಹ ಅಪೂರ್ವ, ವೈಶಿಷ್ಟ್ಯಪೂರ್ಣ ಇನ್ನೊಂದು ಕೊಡುಗೆ "ಜೀವನ ಧರ್ಮ ಯೋಗ" ಕನ್ನಡ ಸಾರಸ್ವತ ಲೋಕಕ್ಕೊಂದು ಧ್ರುವತಾರೆ. ಪ್ರತಿಯೊಬ್ಬನೂ ಓದಿ ಆನಂದ ಹೊಂದಬೇಕಾದ ಹೊತ್ತಿಗೆ. ಅದಕ್ಕೆ ಅಕಾಡೆಮಿ ಪ್ರಶಸ್ತಿ ಸಿಕ್ಕಿದ್ದು ನಿಜಕ್ಕೂ ಎಲ್ಲರೂ ಅಭಿನಂದನೀಯ.

ಡಿ. ವಿ. ಜಿ. ಕರ್ನಾಟಕದ ಕರ್ಮಯೋಗಿಗಳು. ಕನ್ನಡ ಸಾಹಿತ್ಯ ಪಂಪತ್ವ, ಗೋಖಲೆ ಸಾರ್ವಜನಿಕ ಸಂಸ್ಥೆ ಇವೆರಡೂ ಇವರ ಬಹುಮುಖ ಸೇವೆಯ ಸಾಕ್ಷಿಗಳಾಗಿ ನಿಂತಿವೆ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ವೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ವೈತನ ಭಾಗ್ಯನಿಧಿಯಾಗಿವೆ

ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್/ಕೆರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು.

ಎಲ್ಲೆಲ್ಲಿ ಏನೇನು?

ಶ್ರೀ ವೆಂಕಟರಮಣ ದೇವಾಲಯ ಪ್ರತಿಷ್ಠಾಪನೆ

ಬೆಳ್ತಂಗಡಿ ತಾಲೂಕು ಕಡಿರುದ್ಯಾವರ ಗ್ರಾಮದ ಮಜ ಎಂಬಲ್ಲಿ ಶ್ರೀ ಪಳಂಬ್ಯ ಎಲ್ಲಂಗೌಡರು ನೂತನವಾಗಿ ನಿರ್ಮಾಣ ಮಾಡಿಸಿದ ಶ್ರೀವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ತಾರೀಕು 19–20–21ನೇ ಫೆಬ್ರವರಿ ಮೂರು ದಿನಗಳಲ್ಲಿ ವಿಧ್ಯುಕ್ತ ರೀತಿಯಲ್ಲಿ ವೇದೋಕ್ತ ಪ್ರಕಾರ ಶ್ರೀ ಇಂದಿಬೆಟ್ಟು ದಾಸ್ ಉಪಾಧ್ಯಾಯರ ದಿಗ್ದರ್ಶನದಲ್ಲಿ ಶ್ರೀವೆಂಕಟ್ ಇರ್ಮಡ್ಕತ್ತಾಯರ ನವೀನ ಕುಂಗೂರು ಕೃಷ್ಣ ತಂತ್ರಿ ಮತ್ತು ಪಾರ್ಪಳ್ಳಿಯವರ ದಿವ್ಯ ಹಸ್ತದಿಂದ ವಿಗ್ರಹ ಪ್ರತಿಷ್ಠಾಪನೆ, ಬ್ರಹ್ಮಕಲಶಾದಿ ಸರ್ವ ದೇವತಾ ಕಾರ್ಯಗಳು ಯಥಸ್ಥಿತಿಯಾಗಿ ನೆರವೇರಿದುವು. ಈ ಮಹಾ ಸಮಾರಂಭದ ಅಂಗವಾಗಿ ತಾ. 19ರಂದು ಭಜನೆ, 20ರಂದು ಸದ್ವಾಸನೆ ಕಲ್ಯಾಣ ಯಕ್ಷಗಾನ ಜರಗಿದುವು. ತಾ. 21ರಂದು ಬೆಳಗ್ಗೆ ಪೂಜೆ ಕೇರಿ ಶ್ರೀ ಕಂಜರ್ಪಣೆ ಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಜರಗಿತು. ಪ್ರಾರಂಭದಲ್ಲಿ ಶ್ರೀವೆಂಕಟ್ ರಂಗನಾಥ ಸಂಗೀತಾಶ್ರಯ ಪ್ರಾರ್ಥನೆ ಹಾಡಿದರು. ಮೆಸ್ತರ್ ಬಾಸುದೇವ ನ್ಯಾಕರು ಸ್ವಾಗತ ಭಾಷಣ ಮಾಡಿದರು. ಪಳಂಬ್ಯ ವಿನಯಚಂದ್ರ ಗೌಡರು ದೇವಸ್ಥಾನದ ಕುರಿತು ಅಯ್ಯಪ್ಪಯಗಳ ಪರಿಚಯವನ್ನು ಮಾಡಿದರು. ಹಿತ ಚಿಂತಕರ ಭಾಷಣದಲ್ಲಿ ಮಿತ್ತಬಾಗಿಲು ಪಂಚಾಯತ್ ಪ್ರೇಸಿಡೆಂಟ್ ಶ್ರೀ ಬಿ. ಕೆ. ವೆಂಕಟ ಸುಬ್ಬರಾಯರು, ಮಹಾಸನಾಡುತ್ತ ಶ್ರೀಮಾನ್ ಎಲ್ಲಂಗೌಡರ ಧಾರ್ಮಿಕ ಸೇವೆಯು ಸನಾತನ ಧರ್ಮದುದ್ಧಾರಕ್ಕಾಗಿ ನಡೆದ ಸೇವೆ, ಸರ್ವರೂ ಜೀವನ ಪಾವನತೆಗಾಗಿ ದೇವರನ್ನು ಸೇವಿಸುವದು ಮತ್ತವಶ್ಯವೆಂದು ದೇವಸ್ಥಾನಗಳ ಕಡೆಗೆ ಗ್ರಾಮಸ್ಥರು ಗಮನಹರಿಸಿ, ದೇವಸ್ಥಾನ ಧ್ವನಿ ತಮ್ಮದೇ ಎನ್ನುವ ಮನೋಭಾವನೆಯಿಂದ ಸರ್ವಸಹಕಾರದಿಂದಲೂ ನಡೆಸಿಕೊಂಡು ಹೋಗಬೇಕಾಗಿ ವರ್ತಮಾನ ಕಾಲದ ಅವಶ್ಯಕತೆಗಳನ್ನು ವಿಶದವಾಗಿ ತಿಳಿಯಪಡಿಸಿದರು. ಶ್ರೀ ಧರ್ಮಸ್ಥಳ ಕ್ಷೇತ್ರ ಸಿದ್ಧವನ ಗುರುಕುಲದ ಶ್ರೀ ಜನ ರಾಜ ಶಾಸ್ತ್ರಿ ನ್ಯಾಯತೀರ್ಥರು ಮಾಂಬರಿಸುತ್ತ, ವಿಶ್ವದಲ್ಲಿ ಜ್ಞಾನ ಸಾಗರವೆಂದು ಹೊರಾದ ಭಾರತದ ಹಿರಿಮೆಗೆ ಗೌರವಯುತವಾದ ಶ್ರೀ ಎಲ್ಲಂಗ ಗೌಡರ ಸೇವೆಯನ್ನು ಎಲ್ಲರೂ ಅನುಕರಿಸುವಂತಾಗಲಿ ಎಂದು ಅರಿಸಿದರು. ಅಧ್ಯಕ್ಷರು ಭಾಷಣದಲ್ಲಿ 'ದೇವರ ಭಯವೇ ಜ್ಞಾನದ ಆರಂಭ' ಎಂಬುದಾಗಿ ಮನಸಿ ಪ್ರಯೋಜನವಾಗಿರುವುದರಿಂದ ಜನ್ಮ ಸಾರ್ಥಕತೆಗೆ ದೇವರ ಸೇವೆಯೇ ಮುಖ್ಯವೆಂದರು. ಶಿಲ್ಪಿಗಳಿಗೆ, ಕರ್ಮಚಾರಿಗಳಿಗೆ ಬಹುಮಾನ ವಿತರಣೆಯಾಯಿತು. ಧನ್ಯವಾದದ ನಂತರ ಮಹಾ ಸಂತರ್ಪಣೆ ನಡೆಯಿತು. ರಾತ್ರಿ ರಂಗಪೂಜೆ ನಡೆದ ಬಳಿಕ ಶ್ರೀ ಕೊಡ್ಡಿ ದುರ್ಗಾ ಪರಮೇಶ್ವರಿ ಭಜನಾ ಮಂಡಳಿಯವರಿಂದ ಭಜನೆ ಜರಗಿತು.

ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ

ಮುಲ್ಕಿ:- 19–2–68. ಬಂಬಿರ ಯೂನಿಯನ್‌ವಾಡದ ಸಂಘದ ವತಿಯಿಂದ ನಡೆಯುತ್ತಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ ಮುಲ್ಕಿ, ಅದರ ಐದನೆಯ ವಾರ್ಷಿಕೋತ್ಸವವು ಜಿಲ್ಲಾಧಿಕಾರಿ ಶ್ರೀ ಯು. ಎಲ್. ನಾಗೇ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕುಮಾರಿಯರಾದ ಉಮಾ ಮತ್ತು ಸದ್ಭವಳಿಯರಿಂದ ಪ್ರಾರ್ಥನೆಯೊಡನೆ ಬಳಿಕ ಭವನದ ಆಡಳಿತ ಸಮಿತಿ ಅಧ್ಯಕ್ಷರಾ. ಕೆ. ಬಾಬು ಶೆಟ್ಟಿ ಸ್ವಾಗತ ಭಾಷಣ ಮಾಡಿದರು. ಭವನದ ಗೌರವ ಕಾರ್ಯದರ್ಶಿ ಶ್ರೀ ಹರೇಕಳ ಕೆ. ಜಿ. ಮಹ್ಮಾಯಿರವರು ವರದಿಯನ್ನೂ ಶ್ರೀ ಜಿ.ಯಂ. ಶೆಟ್ಟಿ ಸಂದೇಶಗಳನ್ನೂ ಓದಿದರು. ಶ್ರೀ ಯನ್. ಭವನಾಲ ಶೆಟ್ಟಿ ಮಾಡಿದ ಸ್ವಾಸ್ತಿ ವಾಚನಕ್ಕೆ ಶ್ರೀ ನಾರಾಯಣ ನ್ಯಾಕರು ಉತ್ತರವನ್ನಿತ್ತರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ತಮ್ಮ ಓದಿನ ಕಡೆಗೆ ವಿಶೇಷ ಲಕ್ಷ್ಯ ಕೊಡುವುದರ ಅವಶ್ಯಕತೆಯನ್ನು ವಿವರಿಸಿ ಹೇಳುತ್ತಾ, ಇತರ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಓದಿನಲ್ಲಿ ಹಿಂದುಳಿದವರೇ ಎಂದು ಹೇಳಿದರು. ವಿದ್ಯಾರ್ಥಿಗಳು ತಮ್ಮ ದಿನಚರ್ಯೆಯ ಕೆಲಸಗಳನ್ನು ಕ್ರಮಬದ್ಧವಾಗಿ ಶಿಸ್ತಿನಿಂದ ಮಾಡಿಕೊಳ್ಳುವ ಅಭ್ಯಾಸ ಮಾಡಬೇಕೆಂದು ಅವರು ಹೇಳಿದರು. ಗೌರವ ಕಾರ್ಯದರ್ಶಿಯಿಂದ ಮಂದನಾರ್ಪಣೆಯೊಡನೆ ಬಳಿಕ ವಿವಿಧ ವಿನೋದಾವಳಿಗಳು ನಡೆದುವು. ಬಳಿಕ ಶ್ರೀ ನಿಕ್ಕಾಜೆ ಜಗನ್ನಾಥ ಶೆಟ್ಟಿಯರ ಹಾಡುಗಾರಿಕೆ ಮತ್ತು ಶ್ರೀ ಕೋಟೆಕಾರು ದೇವಣ್ಣ ಶೆಟ್ಟಿಗರ ಮೃದಂಗವಾದನದಿಂದಲೂ ಶ್ರೀಗಳಾದ ಕೆ. ಕೆ. ಪೈ. (ಕೃಷ್ಣ) ದೇರಂಜೆ ಸೀತಾರಾಮಯ್ಯ (ಧರ್ಮರಾಯ) ಪೆರ್ಲ ಕೃಷ್ಣ ಭಟ್ಟ (ಅರ್ಜುನ) ಜಯರಾಮ ಶೆಟ್ಟಿ (ಕರ್ಣ) ಮತ್ತು ಮೂಡುಬಿರಿ ಮಂಜುನಾಥ ಭಂಡಾರಿ (ಶಲ್ಯ) ಇವರ ಅರ್ಥವಿವರಣೆಯಿಂದಲೂ ಕರ್ಣಪರ್ವ ಎಂಬ ಯಕ್ಷಗಾನ ಕೂಟವು ಜರುಗಿತು.

ಗೋವಿಂದ ಪೈ ಜಯಂತಿ

ಶ್ರೀರಾಷ್ಟ್ರಕವಿ ಗೋವಿಂದ ಪೈ ಜಯಂತಿ ಮಹೋತ್ಸವವು ತಾ. 14.3.68ರಂದು ಸಂಜೆ ಗಂ. 4ಕ್ಕೆ ಮುರ್ತಲ್ಲು ವಿದ್ಯಾದಾಯಿನೀ ಶಾಲಾ ಮಂದಿರದಲ್ಲಿ ಜರಗಲಿದೆ. ಶ್ರೀಗಳಾದ ಕುದ್ರಿ ವಾಸುದೇವ ಶೆಟ್ಟಿ, ಡಾ. ಪಿ. ನಾರಾಯಣ ರಾವ್, ಎಲ್. ಎಂ. ಪಾಟೀಲ್, ಕೆಳ್ಳಂಜೆ ಗೋಪಾಲಕೃಷ್ಣ ಭಟ್ಟ, ಪಿ. ವಾಸುದೇವ ರಾವ್ ಮೊದಲಾದವರು ಈ ಸಭೆಯಲ್ಲಿ ಭಾಗವಹಿಸಲು ದಯಮಾಡಿ ಒಪ್ಪಿರುತ್ತಾರೆ. ಸಾಹಿತ್ಯಾಭಿಮಾನಿಗಳು, ಸಹಭಾಗಿಗಳಾಗ ಬೇಕಾಗಿ ಸಂಘಕ್ಕೆಲ್ಲಾ ವಿಜಯ ಸಾಹಿತ್ಯಮಾಲೆಯ ಮುತ್ತುಗಳೆಯರ ಬಳಗದ ಪರವಾಗಿ ಶ್ರೀ ಕೆ. ವೆಂಕಟರಾಯಾಚಾರ್ಯರು ವಿಜ್ಞಾಪಿಸುತ್ತಾರೆ.

ವಾರ್ಷಿಕ ಜೆಕಣದೂಟ

ಮುಲ್ಕಿ 14.3.1968, ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ಜೆಕಣದೂಟವು ಭವನದಲ್ಲಿ ಜರಗಿತು. ಮಂಗಳೂರಿನ ಪ್ರಸಿದ್ಧ ಸರ್ಜನರಾದ ಡಾ. ಯು. ವಿ. ಶೆಟ್ಟರು ಮುಖ್ಯ ಅತಿಥಿಗಳಾಗಿದ್ದರು. ಡಾ. ಕೆ. ಬಾಬು ಶೆಟ್ಟರು ಸ್ವಾಗತಿಸಿದರು. ವಿಜಯ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಜಿ. ಶೆಟ್ಟಿಯವರು ತಮ್ಮ ಭಾಷಣದಲ್ಲಿ ಈ ವಿದ್ಯಾರ್ಥಿ ಭವನವು ಯೋಗ್ಯ ರೀತಿಯಲ್ಲಿ ನಡೆಯುತ್ತಿರುವುದೆಂದು ಹೇಳಿದರು. ಮುಖ್ಯ ಅತಿಥಿಗಳು ವಿದ್ಯಾರ್ಥಿ ಭವನಗಳ ಅಗತ್ಯವೇನೆಂಬುದನ್ನು ವಿವರಿಸಿ ಹೇಳಿದರು. ಗೌರವ ಕಾರ್ಯದರ್ಶಿಯಾದ ಶ್ರೀ ಹರೇಕಳ ಕೆ. ಜಿ. ಮಹ್ಮಾಯಿರವರು ವಂದನಾರ್ಪಣೆ ಮಾಡಿದರು. ಕಿನ್ನಿಗೋಳಿ, ಪಡುಪಣಂಬೂರು, ಮುಲ್ಕಿ, ಸುರತ್ಕಲ್ ಮಂಗಳೂರು ಮೊದಲಾದ ಕಡೆಗಳಿಂದ ಬಂದ ಅನೇಕ ಅತಿಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಯುಗಾದಿ ಸಂದೇಶ

ಯುಗಾದಿ ಬಂದಿದೆ ಓ! ಬಾಂಧವರೇ,
ಯುಗಾದಿಯ ಕಾಯುತ ನಿಂತವರೇ. ||
ಯುಗಾದಿ ಶುಭದಿನ ಸಂತಸ ತರಲಿ—
ನವವರ್ಷ ಹರ್ಷಮಯ ನಿನುಗಾಗಿರಲಿ
ಸಾಗರದಲ್ಲಿ ತೆರೆ ಏಳುವ ತೆರದಲಿ
ಸಂತಸವಲೆಗಳು ಅನಂತವಿರಲಿ.
ನಮ್ಮೊಳಗಿನ ಚರ ಸ್ನೇಹದ ಲತೆಯಲಿ,
ಹೊಸ ದಿನದಲಿ ಹೊಸ ಚಿಗುರೆಲೆ ಬರಲಿ
ಸಿಹಿ ಹೃದಯ ಸಿಹಿ ಸವಿವಂತಾಗಲಿ,
ಪ್ರೇಮದ ಹೊನಲದು ಹರಿಯುತ್ತಿರಲಿ ||
ವಿದ್ಯಾರ್ಥಿಗಳೆಲ್ಲರ ಬುದ್ಧಿ ಪಟಲದಲಿ,
ವಿಧ್ವಂಸಕಾರ್ಯದ ಒಗೆ ದೇಸಿಕೆಮಾಡಲಿ
ನಮ್ಮದನೇ ನಾವ್ ಕೆಡಿಸಿದೆವೆಂಬಾ
ಜ್ಞಾನೋದಯವನು ಆಗಲಿ ಇಂದೇ.
ಸರಕಾರವು ನಾವೇ ಆಗಿಹೆವೆಂಬಾ
ಸದ್ಭಾವನೆ ಶುಭ ದಿನದಲಿ ಬರಲಿ.
ಇದುವೆ ಯುಗಾದಿಯ ಸಂದೇಶ
ಬಾಳಿ ಬೆಳಗಲಿ ಭಾರತ ದೇಶ
ಯುಗಾದಿ ಬಂದಿದೆ ಓ! ಬಾಂಧವರೇ.
ಕಹಿಯನು ಮರೆಯಲು ಕಾದವರೇ. ||

— ಕೆ. ವಿ. ಹೆಬ್ಬಾರ್, ಮಧೂರು.

ಪರೀಕ್ಷೆಗೆ ಪ್ರಯೋಗ

ತಂದೆ — 'ರಾಮ! ಬಿ ಎಸ್‌ಸಿ. ಪಬ್ಲಿಕ್ ಪರೀಕ್ಷೆ ಪ್ರಾರಂಭವೆಂದು?...'

ರಾಮು — "ಇಂದು..."

"ನೀನು ಉಯ್ಯಾಲೆಯಲ್ಲಿ ಆಡುತ್ತಿರುವುದೇಕೆ?..."

'ಗಡಿಮೂರದ ಪೆಂಡ್ಯಲಮಿಷ ತತ್ವದ ಪ್ರಾಯೋಗಿಕ ನೆಲೆಯ ಮಾಹಿತಿ ತಿಳಿಯುವ ಪಾಠ....."

o o o

ಒಳ್ಳೆಯದೇ ಆಯ್ತು

ಪತಿ — 'ನಾನು ಯೋಚಿಸುತ್ತಲೇ ಇದ್ದೆ; ದೇವರು ಈ ಸ್ತ್ರೀಯರಿಗೆ ಸ್ವಲ್ಪವೂ ಕೂಡಾ ಹೆಚ್ಚು ಬುದ್ಧಿ ಕೊಡುತ್ತಿದ್ದರೆ."

ಪತ್ನಿ — "ಅದು ನಮ್ಮ ಭಾಗ್ಯ! ಹಾಗಾಗಿದ್ದರೆ ಜೀವನವಿಡೀ ನೀವು ಅವಿವಾಹಿತ ಜೀವನ ನಡೆಸಬೇಕಾಗುತ್ತಿತ್ತು."

"ನಿರೀಕ್ಷಿಸಿರಿ"

ಇದಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನೂ ತಾರೀಕನ್ನೂ ನಿರೀಕ್ಷಿಸಿರಿ.

Statement about ownership and other particulars about Newspaper: NAVAYUGA

FORM IV (Rule 8)

1.	*Place of Publication*	... UDIPI
2.	*Periodicity of its Publication*	... WEEKLY
3.	*Printer's Name*	... K. H. SHETTY
	Nationality	... INDIAN
	Address	... Palukote, Udipi (S. K.)
4.	*Publisher's Name*	... K. H. SHETTY
	Nationality	... INDIAN
	Address	.. Palukote, Udipi (S. K.)
5.	*Editor's Name*	... K. H. SHETTY
	Nationality	... INDIAN
	Address	... Palukote, Udipi (S. K.)
6.	*Names and addresses of individuals who own the Newspaper and partners or shareholders holding more than one percent of the total capital.*	K. H. SHETTY Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

(Sd.) K. H. SHETTY,
Signature of Publisher.

Date 2—3—1968

(ನಾಲ್ಕನೇ ಪುಟದಿಂದ)

"ಹೆಜ್ಜಾಂ... ಸರೀನ್ಸಿ.

'ಈ ಬಾರಿಯಂತೂ ಭಾರೀ ಲೇಟಾಯ್ತು. ಮುಂದಿನ ಬಜೆಟ್ ತಯಾರಿಗೆ ಮೊದಲೇ ಈ ಸೂಚನೆಯನ್ನು ಮುರಾರ್ಜಿ ಭಾಯಿ ಹರಿಶೀಲಿಸುವರೆಂದು ಹಾರೈಸೋಣ."

"ಹ್ಞಾಂ..."

"ಏನ.?'

"ಏನೂ ಇಲ್ಲ. ಹೀಗೇ..."

"ಹೆಜ್ಜಾಂ... ಹ್ಞಹ್ಞ..."

—ಗೋರಾ

ಪ್ರಕಟಣೆ

ಉಡುಪಿ ಸಿವಿಲ್ ಜಡ್ಜ್ ಕೋರ್ಟು

S. C. 67/64. S. L. A. 60/67.

ಕೆ. ಕೃಷ್ಣಯ್ಯ ಶ್ಯಾನುಭಾಗ-ಅರ್ಜದಾರ ಮತ್ತು

ಲಕ್ಷ್ಮೀನಾರಾಯಣ ಕಿನಿ ಕೊಡಾ — —ಯೆದ್ರಿರು.

ತಿನ ಯೆದ್ರಿಳು ಸಮಿತ್ತಾ ಬಾಯಿ. ಪಂಡಲೀಕ ಕಿನಿ ವಿಧವೆ—ಉಡುಪಿ ತಾಲ್ಲುಕ ಯೆಣುಗುಡ್ಡೆ ಗ್ರಾಮದ ಕರೆಯಾದಿ—ಇವರಿಗೆ ತಿಳಿಸುವದೇನಂದರೆ—

ಮೇಲ್ಕಂಡ ಅರ್ಜದಾರನು—ಸದ್ರಿ ದಿಕ್ಕಿ ಮೇಲೆ ಯಾಕೆ ಅಮಲಜಾರಿ ನಡಿಸಕೂಡದು ಯೆಂಬ ಬಗ್ಗೆ ಮಾಡಿದ ಸದ್ರಿ ಅರ್ಜಿ ತಾರೀಕು. 16—3—68 ರಲ್ಲಿ ಅಳ್ಳಿರುತ್ತಾ ತಿನ ಯೆದ್ರಿಳಿಗೆ ಅಕ್ಷೇಪ ಹೇಳಕ್ಕಿದ್ದಯೆದ್ರೆ ಸದ್ರಿ ದಿವ್ಸ - ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿ ಕೊಳ್ಳತಕ್ಕದ್ದುಯೆಂದು ಸಾಂಗ್ರಿ ತಿನ ಯೆದ್ರಿಳಿಗೆ ತಿಳಿಸೋಣಾಗಿಯದೆ—

N. V. Kamath
Advocate for Petitioner

ಉಡುಪಿ, 18-2-68.

ಸಿಂಡಿಕೇಟ್ ಬ್ಯಾಂಕ್-ಪ್ರಗತಿ

1967ನೆ ವರ್ಷದಲ್ಲೂ ಸಿಂಡಿಕೇಟ್ ಬ್ಯಾಂಕು ಉತ್ತಮ ಪ್ರಗತಿ ಸಾಧಿಸಿದೆ. ವರ್ಷದ ಕೊನೆಯಲ್ಲಿ ಠೇವಣಾತಿಯು ರೂ. 50.15 ಕೋಟಿ ಇತ್ತು. ಬ್ಯಾಂಕು ಕೊಡಿಸಿದ ಸಾಲಗಳ ಮೊತ್ತ ರೂ. 46 43 ಕೋಟಿಯಿತ್ತು. ಸಾಲಗಳು ಠೇವಣಿಯ ಸೇ. 93ರಷ್ಟು ಸಾಮಾಜಿಕ ನಿಯಂತ್ರಣ ಕಾಯಿದೆಕ್ರಮಗಳಂತೆ ಕೃಷಿ, ಕೈಗಾರಿಕೆ, ಉದ್ದಿಮೆ ಮೊದಲಾದುವುಗಳಿಗೆ ಸಾಲ ಕೊಡುವ ಉದ್ದೇಶದಿಂದ ಸಾಮಾನ್ಯ ಸಾಲಗಳನ್ನು ಬ್ಯಾಂಕು ಮಿತ ಪ್ರಮಾಣದಲ್ಲೇ ಇಟ್ಟುಕೊಂಡಿದೆ.

ತೆರಿಗೆ—ಬೋನಸ್‌ಗಳಿಗೆ ಹಣ ಪ್ರತ್ಯೇಕಿಸಿಟ್ಟ ಬಳಿಕ ಬ್ಯಾಂಕು ರೂ.25.26 ಲಕ್ಷ ಲಾಭ ಗಳಿಸಿದ. ಇದರಲ್ಲಿ 6.5ಲಕ್ಷವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗಿದೆ. ಈಗ ಕಾಯ್ದಿಟ್ಟ ನಿಧಿ ರೂ. ಒಂದು ಕೋಟಿ. ಶೇರ್ ಪ್ರೀಮಿಯಂ ಸೇರಿ ಒಟ್ಟು ಕಾಯ್ದಿಟ್ಟ ನಿಧಿಯು ರೂ. 1.45 ಕೋಟಿ. ಶೆತ್ತ ಭಂಡವಳ ರೂ. 1.14 ಕೋಟಿ. ಶೆತ್ತ ಭಂಡವಳ ಮತ್ತು ಕಾಯ್ದಿಟ್ಟ ನಿಧಿಗಳ ಒಟ್ಟು ಮೊತ್ತ 1966ರ ಕೊನೆಯಲ್ಲಿ ರೂ. 34 ಕೋಟಿ ಇದ್ದರೆ 1967ರ ಅಂತ್ಯದಲ್ಲಿ ರೂ. 2 59 ಕೋಟಿಗೇರಿದೆ.

ರೂ. 100ರ ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರುಗಳ ಮೇಲೆ ಸೇ. 5.57ರಂತೆ, ರೂ. 10ರ ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರುಗಳ ಮೇಲೆ ಸೇ. 7.15ರಂತೆ ಎ ಬಿ ಮತ್ತು ಸಿ ವರ್ಗಗಳ ಈಕ್ವಿಟಿ ಶೇರುಗಳ ಮೇಲೆ ಸೇ. 20ರಂತೆ ಡಿವಿಡೆಂಡ್ ಹಂಚಲು ಡೈರೆಕ್ಟರರು ಹಿಂದಿನ ವರ್ಷದಂತೆಯೇ ಸಿಫಾರಸು ಮಾಡಿದ್ದಾರೆ. ಈ ಡಿವಿಡೆಂಡುಗಳು ಆದಾಯ ತೆರಿಗೆ ಕಡಿತಕ್ಕೊಳಗಾಗುತ್ತವೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 338/1967.

Dr. ಕೆ. ಪಿ. ಭಟ್ —ವಾದಿ.

ವಾಸುದೇವ ಸುಬ್ರಾಯ ಭಟ್ಟ, ಸಹಾ —ಪ್ರತಿವಾದಿಗಳು.

1. ವಾಸುದೇವ ಸುಬ್ರಾಯ ಭಟ್ಟ, ಕಿದಿಯೂರು ಸುಬ್ರಾಯ ಭಟ್ಟ ಮಗ. Shivaji Darbar Hotel, Jawhar Thana Dt. Post Jawar ಎಂಬಲ್ಲಿರುವವ—

ಸದ್ರಿ ಪ್ರತಿವಾದಿ ಆದ ನನಗೆ ಈ ಮೂಲಕ ತಿಳಿಸುವದೇನಂದ್ರೆ —

ರೆಂಜಾಳ ಸಾವಿತ್ರಿ ಅಮ್ಮ ಎಂಬವರು ಉಮೇಂದ್ರ ಭಟ್ಟರಿಗೆ ತಾ. 23 8. 1879ರಲ್ಲಿ ರಿಜಿಸ್ಟ್ರಿ ಬರೆಸಿ ಕೊಟ್ಟ ವೈವಾಹಿಕ ಹಸ್ತಾ ಪತ್ರ ಪ್ರಕಾರ ಆಸ್ತಿ ಜವಾಬ್ದಾರಿಯಿಂದ ವಾದಿಗೆ ಸರಾಭವ ಸಂಭವದ ಅಂತ್ಯದ ಬಗ್ಗೆನಿನ 6 ವರುಷಗಳ ಸಲುವಳಿಕೆ, ಬಡ್ಡಿ ಕೂಡಾ ರೂಪಾಯಿ 453—78ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಖು 22-3-1968ಕ್ಕೆ ನಿಮಗೆ ಆಕ್ಷೇಪ ನೋಟೀಸಿನ ಇಟ್ಟಿದೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟ್ ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡ ತಕ್ಕದ್ದು. ತಪ್ಪದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff.

Karkala, 27—2—68.

ಪುಟ್ಟಸ ಪಿಟೀಲು

ಆ ಭಾಷೆ ಯಾವುದು?

ಬರೆದವರು - ಶ್ರೀ ಕೆ. ಜೆ. ಶೆಟ್ಟಿ

ಪುಟ್ಟನಿಗೆ ಮದುವೆ ಮಾಡಬೇಕೆಂದು ಅವರವರು ಹೆಣ್ಣು ತೋರಿಸ ತೊಡಗಿದರು.

ನೋಡಿದುದರಲ್ಲಿ ಯಾವುದೂ ಅವನ ಮನಕ್ಕೆ ಮೆಚ್ಚಿಗೆಯಾಗಲಿಲ್ಲ. ಕೊನೆಗೊಮ್ಮೆ ಅವನ ಬಾಲ್ಯದ ಗೆಳೆಯ ತಿರುಪತಿ ತನ್ನ ಮಾವನ ಮಗಳನ್ನೇ ಮಾತಾಡಿದ. ದಾಕ್ಷಿಣ್ಯ ಎದುರುಸಿಂತು ಪುಟ್ಟನಿಗೆ ನಿರಾಕರಿಸಲಾಗಲಿಲ್ಲ. ಒಂದುದಿನ ಪುಟ್ಟನೂ ತಿರುಪತಿಯೂ ಹೆಣ್ಣು ನೋಡಲೆಂದು ಹೋದರು.

ಕ್ರಮದಂತೆ ಆಗುವುದೆಲ್ಲಾ ಆಯಿತು. ಹುಡುಗಿಯ ಬಣ್ಣ ಮತ್ತು ರೂಪ ಮೆಚ್ಚಿಗೆಯಾಯಿತು ಪುಟ್ಟನಿಗೆ. ಆತ ಕೇಳಿದ

'ಹುಡುಗಿಗೆ ಹಿಂದಿ ಬರುತ್ತೆಯೆ?' ಪುಟ್ಟ ಕೇಳಿದ. ಮಾತೃಭಾಷೆ ಬಾರದಿದ್ದರೂ ದೊಡ್ಡದಲ್ಲ. ಪುಟ್ಟನ ದೃಷ್ಟಿಯಲ್ಲಿ ಹಿಂದಿಬರಬೇಕು. ಕಾರಣ ಅದು ರಾಷ್ಟ್ರಭಾಷೆ. ಅದು ಬಂದರೆ ಯಾವ ಊರಿಗಾದರೂ ವಲಸೆ ಹೋಗಬಹುದಲ್ಲಾ?—

'ಅಯ್ಯೋ ಹಿಂದೀ— ಸಂಸ್ಕೃತ ಬಿಡಿ ಅವಳಿಗೆ ಎಲ್ಲದಕ್ಕೂ ಮೂಲವಾದ ಪೈಶಾಚ ಭಾಷೆಯೂ ಬರುತ್ತೆ. ....." ತಿರುಪತಿಯು ಶಿಫಾರಸು ಮಾಡಿದ.

"ಹಾಗಾದರೆ ಆಗಲಿ, ಮದುವೆಗೆ ಒಪ್ಪಿದ ಪುಟ್ಟ. ಎಂದು ನೆಮ್ಮದಿ ಮುಗಿಯಿತು. ತಿಂಗಳು ಮೂರಾರು ಕಳೆದರೂ ಪುಟ್ಟನಹೆಂಡತಿ ಮಾತಾಡಲಾರಳು. ಎಲ್ಲವೂ ಕೈ ಸನ್ನೆಯಿಂದಲೇ ನಡೆಯುತ್ತಿತ್ತು. ಒಂದು ದಿನ ಕೋಪಗೊಂಡು— ತಿರುಪತಿಯನ್ನು ಕೇಂಡು ಮಾತಾಡಿದ 'ಏನಪ್ಯಾ ...ನಿಮ್ಮ ಹುಡುಗಿ ಮಾತೆ ಆಡುವುದಿಲ್ಲ...."

"ಅಯ್ಯೋ—ಹೇಳಿಲ್ಲವೇನಯ್ಯಾ—" ಅವಳದು ಪೈಶಾಚ ಭಾಷೆಎಂದ ತಿರುಪತಿ ಕಡ್ಡಿ ಮುರಿದಂತೆ ಮಾತು ಮುಗಿಸಿದ. "ಪೈಶಾಚಭಾಷೆ ಎಂದರೆ ಯಾವುದಯ್ಯಾ ಅದು.— ಹಿಂದೀ—ಸಂಸ್ಕೃತ ಯಾವುದರಲ್ಲಿ ಆಡಿದರೂ —ಆಕೆಗೆ ಮೌನವ್ರತ..."

"ಏನು— ಏನು ಪುಟ್ಟಾ ಹಾಗಾದರೆ— ಹಿಂದೀಗಾಗಲೀ ಸಂಸ್ಕೃತಕ್ಕಾಗಲೀ ಎಲ್ಲದಕ್ಕೂ ಮೂಲ ಪೈಶಾಚ—ಎಂದ ತಿರುಪತಿ. ಅದಾವುದೇ ಹಾಗಂದರೆ?

"ಅದೇ ಆಕೆ ಕೈ ಕಣ್ಣು ಸನ್ನೆ ತೋರಿಸುವುದಿಲ್ಲವೆ?

"ಅಯ್ಯೋ ಅದು ಮೂಕರ ಭಾಷೆಯಲ್ಲ ವೇನಯ್ಯಾ"

"ಹೂಂ; ನಾನೂ ಅದೇ ಅಂದಿರೋದು ಪೈಶಾಚ ಎಂದರೆ ಪಿಶಾಚಿಗಳ ಭಾಷೆ. ಅದು ಮೂಕರವೇ ಸರಿ....ಎಲ್ಲದಕ್ಕೂ ಮೂಲ ಅದೇ ಅಲ್ಲವೇನಯ್ಯಾ?-ತಿರುಪತಿಯ ಮಾತು ಕೇಳಿ ಪುಟ್ಟನ ತಲೆಗೆ ವಿದ್ಯುತ್ ಶಕ್ತಿಯಂಟ್‌ಕೊಟ್ಟ ಹಾಗಾಯಿತು. ಬಾಯೇ ಭಾಷಾದವಳಿಗೆ ಭಾಷೆ ಬರುವುದಾದರೂ ಹೇಗೆ?

ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ

ಉಡುಪಿ, ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ತಾ. 2-3-68ರಂದು ಪ್ರಿನ್ಸಿಪಾಲ್ ಡಾ ಎಸ್. ಆರ್. ಮೊಕಾಶಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ಪರ್ಧಾಸಂಯೋಜಕಿಯರಾದ ಕುಮಾರಿ ಟೆಂಡೆಂಟ್ ಸಿ. ಎಸ್. ಶೆಟ್ಟಿರು ಸ್ವಾಗತ ಭಾಷಣ ಮಾಡಿದರು. ಡಾ। ಬಿ. ಶೆಟ್ಟಿರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಬಿ. ಲಕ್ಷ್ಮೀನಾರಾಯಣ ಹೆಗ್ಡೆಯವರು ಮಾಡಿದ ಸ್ವಾಗತವಂದನೆಗಳಿಗೆ ಶ್ರೀ ಕೆ. ಪ್ರಭಾಕರ ಶೆಟ್ಟರು ಉತ್ತರಿಸಿದರು. ಶ್ರೀಮತಿ ಮೊಕಾಶಿಯವರು ಬಹುಮಾನ ವಿತರಣೆ ಮಾಡಿದ ತರುವಾಯ ಅಧ್ಯಕ್ಷ ಡಾ। ಮೊಕಾಶಿಯವರು ತಮ್ಮ ಭಾಷಣದಲ್ಲಿ ಕೆಲ ಹಿತವಚನಗಳನ್ನಾಡಿದರು. ಅಂತ್ಯದಲ್ಲಿ ಕನ್ನಡ ನಾಟಕ ಮತ್ತು ಯಕ್ಷಗಾನ ಮನರಂಜನ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.

ಮರುದಿನ ರಾತ್ರಿ ಭೋಜನ ಕೂಟ ನೆರವೇರಿತು.

ಕೋಟಿ— ಚೆನ್ನಯ ಉತ್ಸವ

ಎಣ್ಣೂರು ಅದಿ ಶ್ರೀ ಕೋಟಿ-ಚೆನ್ನಯರೆಂಬ ದೈವೇರುಗಳ ಉತ್ಸವವು ಸುಳ್ಯ ತಾಲೂಕಿನ ಎಣ್ಣೂರು ಬೀಡಿನಲ್ಲಿ ತಾ. 11—3—68 ರಿಂದ 19—3—68ರ ತನಕ ಪೂರ್ವ ಪದ್ಧತಿಯಂತೆ ಜರಗಲಿರುವುದೆಂದೂ ಸರ್ವರೂ ಬಂದು ದೈವೇರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಕಟ್ಟ ಬೀಡಿನ ಪರವಾಗಿ ಶ್ರೀ ಕೆ. ಬಿ. ವಿಠಲ್ ರೈಗಳು ಅಪೇಕ್ಷಿಸುತ್ತಾರೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

L. Case No. 29/68.

ಸಾಲ್ವಡೋರ್ ಕ್ಯಾಸ್ಟಲಿನೊ —ಅರ್ಜಿದಾರನು

ಇರೆನ್ಯೂಸ್ ಫ್ರಾಂಶಿಸ್ ಸಾಲ್ದಾಂಞ— ತೋಮಸ್ ಸಾಲ್ದಾಂಞರ ಮಗ—ವಂಬ್ರ 16ನೆ ಬಡಗಬೆಟ್ಟು ಗ್ರಾಮದ ಉಡುಪಿ ತಾಲೂಕು —ಎದ್ರಿ.

ಅರ್ಜಿದಾರನು ಎದ್ರಿಯ ಬಾಬ್ತು ಸ್ತ್ರೀ ಜಪ್ತಿ ಕೇಳಿ ದಾಖಲು ಮಾಡಿದ ಮೇಲಿನ ಅಮಲಜ್ಜಾರಿಯು ತಾ. 16-3-68ಕ್ಕೆ ಇಟ್ಟಿದೆ. ಆ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ಅಮಲಜ್ಜಾರಿಯಲ್ಲಿ ಮೇಲ್ಕಂಡ ಕೋರ್ಟ್ ಮುಂದೆ ಹಾಜ್ರಾಗಲಿಕ್ಕೆ ತಪ್ಪದರೆ ಎದ್ರಿಯ ಗೈರು ಹಾಜರಿಯಿಂದ ಸದ್ರಿ ಅಮಲಜ್ಜಾರಿ ತೀರ್ಮಾನಿಸಲ್ಪಡುವದು.

(Sd.) Gratian C. Rego
Pleader for Petitioner

ಉಡುಪಿ, ತಾರೀಖು 2-3-1968.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 512/1967.

P. ವಿಟ್ಟಲ್‌ದಾಸ್ ಹೆಗ್ಡೆ (ಗೀವರ್) —ವಾದಿ.

ದೇವಮ್ಮ ಹೆಂಗ್ಸು —ಪ್ರತಿವಾದಿಳು.

ಪ್ರತಿವಾದಿಳು. ಶ್ರೀಮತಿ ದೇವಮ್ಮ ಹೆಂಗ್ಸು, ಕುಂಞ ಗೌಡರ ಹೆಂಡತಿ, ಬೆಳ್ತಂಗಡಿ ತಾಲೂಕು—ಕಡಿಮುಜ್ಜಾವರ ಗ್ರಾಮದ ಪರ್ಕೋಟ್ಟು ಎಂಬಲ್ಲಿ ಇರುವವಳು. ಇವಳಿಗೆ ಈ ಮೂಲಕ ತಿಳಿಸುವುದೇನಂದರೆ—

ವಾದಿ ಗೀವರರಿಗೆ ನಿಮ್ಮಿಂದ ಕಳೆದ ತಾ. 31-3-67ರ ವ್ಯಾಪಿಗೆ ಬಾಕಿ ಬಾಲಗೇಣಿ ಗೇಣಿ ಬಾಕಿ ರೂಪಾಯಿ 730—67ನ್ನು ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯ ನ್ನು ನಿಮಗೆ ನೋಟೀಸಿನ ಬಗ್ಗೆ ತಾ. 18—3—68ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದರೆ ಆ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಕೋರ್ಟ್ ಮುಂದೆ ಹಾಜರಾಗಿ ಉದಾಹರಿಸಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾಗುವುದು.

(ಕೋರ್ಟ್ ಹುಕುಂ ಪ್ರಕಾರ)

Baikadi Vasudeva Rao,
Advocate for Plaintiff

ಕಾರ್ಕಳ, 2—3—68.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ಡ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಕಾಫೀಯುಡಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಹೊಸಕೆರೆ ಚಿದಂಬರಯ್ಯನವರ
ಗೀತೆಯ ಸಮೂಲ ಭಾಷಾಂತರ
ಗೀತೆಯ ಕೈಗನ್ನಡಿ
450 ಪುಟಗಳ ಪವಿತ್ರ ಕಿಸೆ ಹೊತ್ತಿಗೆ
ಬೆಲೆ ರೂ. 1-50
ನವಯುಗ ಪ್ರೆಸ್, ಉಡುಪಿ

ಬಾವಿಯಲ್ಲಿ ಒಂದು ಹೆಣ

(ಎಂಟನೇ ಪುಟದಿಂದ)

ಬೇಡಿ" ಎಂದ. "ಹ್ಯಾ! ನೀನು ಅನಂತರ ಊರು ಬಿಟ್ಟವನೇನು?" ಎಂದು ಕೇಳಿದ್ದಕ್ಕೆ ಹೌದೆಂದು ತಲೆ ಅಲ್ಲಾಡಿಸಿದ. "ಕಾರಣವಿರಬೇಕಲ್ಲ ನೀನು ಊರು ಬಿಡಲು?" "ರಾಮಣ್ಣನೂ ನಾನು ಗೆಳೆಯರು. ಊರವರಿಗೆ ನಾವು ಕೆಟ್ಟವರೆನ್ನಿಸಿದೆವಾದರೂ, ಅವನಿಗೆ ನಾನೂ, ನನಗೆ ಅವನೂ ಅನ್ಯೋನ್ಯರಾಗಿಯೇ ಇದ್ದೆವು. ಅಂತಹ ಗೆಳೆಯನನ್ನೇ ಕಳೆದುಕೊಂಡ ನಾನು ಅಲ್ಲಿದ್ದೇನು ಫಲವೆನ್ನಿಸಿ ಊರಿನಿಂದ ಹೊರಟೆ. ಊರೂರು ತಿರುಗಿದ ನಂತರ ಈಗ ಇಲ್ಲಿದ್ದೇನೆ. ಎರಡು ವಾರಗಳಾಯಿತು" ಎಂದ.

"ಅಲ್ಲಾ, ಬಾಬು ರಾಮಣ್ಣ ಹೇಗೆ ಸತ್ತ ಎಂಬುದು ಇನ್ನೂ ಗುಟ್ಟಾಗಿಯೇ ಉಳಿಯಿತಲಾ! ಈ ಬಗ್ಗೆ ನಿನಗೇನಾದರೂ ಗೊತ್ತಿದೆಯೇ?" ಎಂದು ಕೇಳಿದ ನಾನು ಬಾಬುವನ್ನೇ ನೋಡುತ್ತಿದ್ದೆ. ಆತನ ಕಣ್ಣುಗಳು ಹೆದರಿಗೂಡಿದುವು. ಆತ ಭಯಪಟ್ಟಂತೆ ಕಂಡಿತು. "ನಾನು ಹೋಗುತ್ತೇನೆ ರಾಯರೇ" ಎಂದು ಅವನು ನಾವು ಕುಳಿತಿದ್ದಲ್ಲಿಂದ ಏಳಲನುವಾದ. "ನಿಲ್ಲಯ್ಯ, ಏನವಸರ. ನಾನು ಕೇಳಿದ್ದಕ್ಕೆ ಉತ್ತರ ಕೊಡಾ ಕೊಟ್ಟಿಲ್ಲ ನೀನು" ಎಂದು ಅಲ್ಲೇ ಕುಳ್ಳಿರಿಸಿದೆ. "ರಾಯರೇ ನಾನು ಕೊಲೆಗಾರ. ದಮ್ಮಯ್ಯ ಯಾರಲ್ಲೂ ಹೇಳಬಾರದು ಧನಿ" ಎಂದು ಕಟ್ಟೆಯಿಂದ ಮುಖ ಮುಚ್ಚಿಕೊಂಡು ಬಿಕ್ಕಳಿಸತೊಡಗಿದ ಬಾಬು.

"ಅಯ್ಯಾಯಿತಲ್ಲ ನೀಮಿಬ್ಬರೂ ಆತ್ಮೀಯ ಗೆಳೆಯರಾಗಿದ್ದೂ ಹೀಗಾಗಲು ಕಾರಣವೇನು?" ಎಂದು ಕೇಳಿದೆ. "ಆತ ಗೆಳೆತನವೂ ವೈರವಾಗಿ ಬಿಡುವುದಿಲ್ಲವೇ? ಪಮ್ಮಲ್ಲೂ ಹಾಗಾಯಿತು. ನನಗಿಂತಲೂ ರಾಮಣ್ಣ ಕಡಿಯುತ್ತಿದ್ದುದು ಹೆಚ್ಚು. ಇಸ್ಟೇಟನಲ್ಲಿ ಹಣ ಕಳೆದುಕೊಳ್ಳುತ್ತಿದ್ದದೂ ಹೆಚ್ಚು. ಹಾಗೆ ಆತ ಕಳೆಯುತ್ತಿದ್ದ ಹಣ ಬರುತ್ತಿದ್ದದೆಲ್ಲಿಂದ? ನಾವು ಕಳ್ಳರು ಎಂದು ಎಲ್ಲರಿಗೂ ಗೊತ್ತಿತ್ತು. ಆದರೆ ಯಾರಿಗೂ ಹಿಡಿದು ಕೊಡುವ ಧೈರ್ಯವಾಗಲಿಲ್ಲ. ಅದು ಸಾಧ್ಯವೂ ಇರಲಿಲ್ಲ ಪೋಲೀಸರೂ ನಮ್ಮ ಗಳೆ ಬಂಧಾಗಿದ್ದರು.'

"ಇದ್ದ ಆಡಿಕೆ ಮಾರಿ ಬಂದ ಹಣವನ್ನು ಸರಿಪಾಲು ಮಾಡಿಕೊಳ್ಳುತ್ತಿದ್ದೆವು. ಆದರೆ ರಾಮಣ್ಣನಿಗೆ ಅದು ಸಾಲದೆ ಆಗಾಗ ಹೆಚ್ಚು ಹಣ ಬೇಡತ್ತಿದ್ದ. ಹಾಗೆ ನಾನವನಿಗೆ ಹೆಚ್ಚಾಗಿ ಕೊಟ್ಟ ಹಣ ೦೦೦—೦೦ ರೂಪ್ಯಾಗಳಿಗೂ ಮಿಕ್ಕೇತು ರಾಮಣ್ಣನ ಮಂಡಣ್ಣಕ್ಕೆ ಎರಡು ದಿನ ಮೊದಲು ನಾವಿಬ್ಬರೂ ಸೇರಿ ಆತನ ಧನಿ ಗಣಪ್ಪಯ್ಯನವರ ತೋಟದಿಂದ ಅಡಿಕೆ ಕದ್ದವು. ನಮಗೆ ಅದನ್ನು ಮಾರಿದಾಗ ರೂ. 125—00 ಸಿಕ್ಕಿತು. ನಾನು ಅದರಲ್ಲಿ 50—00 ರೂಪ್ಯಾಗಳನ್ನು ರಾಮಣ್ಣನಿಗೆ ಕೊಟ್ಟಾಗ ಅವನು ನನಗಿನ್ನೂ ಇಪ್ಪತ್ತೈದು ರೂಪ್ಯಾ ಬೇಕೆಂದು ಕೇಳಿದ. ನಾನು "ಕೊಡಲಾರೆ ನೀನೇ ನನಗೆ ಕೊಡುವುದಕ್ಕಿರುವುದು ಹಾಗೇ ಇದೆಯಲ್ಲ' ಎಂದೆ. ಇಷ್ಟು ಮಾತಾದ ನಂತರ ಅವನನ್ನು ಕುಡಿಯಲು ನಾನೇ ಕರೆದೊಯ್ದೆ. ಕಂಜಾರಾಮನಲ್ಲಿ ಕುಡಿದೆವು. ಆಗ ತಾನೇ ದೊರೆತ ಹಣವು ಕೈಯ್ಯಲ್ಲಿದ್ದುದರಿಂದ ಇಬ್ಬರೂ ಶಕ್ತಿಮೀರಿ ಕುಡಿದೆವು. ನಾನು ಒಂದು ಬಾಟಲು ಕುಡಿದಿದ್ದರೆ ರಾಮಣ್ಣನಾಗಲೇ ಒಂದೂವರೆ ಬಾಟಲು ಹೊಯ್ದುಕೊಂಡಿದ್ದ. ಸಾಮಾರು ಹತ್ತೂವರೆಗೆ ನಾವು ಅಲ್ಲಿಂದ ಹೊರಟೆವು. ರಾತ್ರೆ ಏಳು ಗಂಟೆಗೆ ಅಲ್ಲಿಗೆ ಹೋದವರು ಅಷ್ಟು ಹೊತ್ತು ಕುಡಿತ ಹಾಗೂ ಮಾಂಸದ ತುಂಡುಗಳನ್ನು ತಿನ್ನುವುದರಲ್ಲಿ ಕಳೆದಿದ್ದೆವು.

"ನಾವಲ್ಲಿಂದ ಹೊರಟು ಮಾರ್ಗಕ್ಕೆ ಬಂದೆವು. ತೂರಾಡುತ್ತಾ ಮುಂದುವರಿದೆವು. ಅಲ್ಲಿ ನನ್ನ ಕೈಹಿಡಿದು ನಿಲ್ಲಿಸುತ್ತಾ "ನನಗೆ ಇಪ್ಪತ್ತೈದು ರೂಪ್ಯಾ ಕೊಡು ಬಾಬಣ್ಣ" ಎಂದ ರಾಮಣ್ಣ. "ಇಲ್ಲ ನನಗೀ ಹಣ ಬೇಕಾಗಿದೆ. ನಿನಗಾಗಲೇ ಕೊಟ್ಟಿದ್ದೇನಲ್ಲಾ ಎಂದೆ." ಅದಾಗಲಿಕ್ಕಿಲ್ಲ ನನಗೆ ಇಪ್ಪತ್ತೈದು ರೂಪ್ಯಾ ಕೊಡಲೇಬೇಕು ಕೊಡದಿದ್ದರೆ.... ...ಎಂದು ರಾಮಣ್ಣ ಹೇಳುವಾಗ ನನಗೂ ಸಿಟ್ಟು ಬಂತು. "ಕೊಡದಿದ್ದರೆ?" ಎಂದು ಕೇಳಿದೆ. "ಧನಿಗಳಲ್ಲಿ ನಾನೇ ಅಡಿಕೆ ಕದ್ದವರೆಂದು ಹೇಳುತ್ತೇನೆ. ನಾನೇ ಹೇಳುವವನಾದ್ದರಿಂದ ನನ್ನನ್ನು ಬಿಟ್ಟು ನಿನ್ನ ಪ್ರಾಣವರು ಪೋಲೀಸಿಗೆ ಕೊಡುತ್ತಾರೆ, ನಿನ್ನ ಧನಿಯೋ ನೀನೇ, ಹೋಗ ಮಣ್ಣು ತಿನ್ನು" ಎಂದೆ. ನನಗೂ ರೋಷವೇರುತ್ತಿತ್ತು. "ಹಾಗಿದ್ದರೆ ಕೊಡುವುದಿಲ್ಲವೇ?" ಎಂದ "ಇಲ್ಲಾ" ಎಂದೆ. ಅಷ್ಟು ಹೊತ್ತಿಗಾಗಲೇ ನಾವು ಬಾವಿಯ ಬಳಿಗೆ ಬಂದಿದ್ದೆವು. "ಬಾಬಣ್ಣ ನೀನು ಕೊಡದಿದ್ದರೇನು ನಾನು ತೆಗೆದು ಕೊಳ್ಳುತ್ತೇನೆ" ಎಂದು ರಾಮಣ್ಣ ನನ್ನ ಅಂಗಿ ಹಿಡಿದುಕೊಂಡ. ಹೋ. ಅಲ್ಲಿಯ ವರೆಗೆ ಬಂದೆಯೋ ಎಂದು ನಾನವನ ದವಡೆಗೆ ಒಂದು ಕೊಟ್ಟೆ. ಆತ ಒಮ್ಮೆ ಹಿಂದೆ ಸರಿದ. ಗೆಳೆತನ ಹಾರಿ ಹೋಗಿತ್ತು.

"ಕರಾಯಿಯ ಅಮಲಿನಲ್ಲಿ ನಾನೇನು ಮಾಡುತ್ತಿದ್ದೇನೆ ಎಂಬುದೇ ತಿಳಿದಿರಲಿಲ್ಲ. ರಾಮಣ್ಣ ನನ್ನಿಂದ ಬಲಶಾಲಿ. ಹಾಗೇ ನನಗಿಂತಲೂ ಹೆಚ್ಚು ಕುಡಿದಿದ್ದರಿಂದ ಅವನಿಗೆ ಏನು? ಎಂತೆಂಬುದೇ ತಿಳಿಯದಾಗಿತ್ತು. ನಾನು ಹೊಡೆದದ್ದೇ ತಡ ಆತ ಕೆರಳಿ, ನನ್ನ ಕಟ್ಟೆ ಹಿಡಿದುಕೊಂಡು ಹೊಡೆದು ಬಂದ. ನಾನು ಶಕ್ತಿ ಹಾಕಿ ಅವನನ್ನು ಹಿಂದೆ ನೂಕಿದೆ....' ಬಾಬು ಅಳುತ್ತಿದ್ದ. "ಕುಡಿತ ಬಹಳ ಕೆಟ್ಟದ್ದು ಸ್ವಾಮಿ, ಮನಸ್ಸ್ವತ್ವವನ್ನೇ ಕೊಲ್ಲುತ್ತದೆ" ಎಂದ.

ಮುತ್ತೇಗಾಯಿತೆಂದು ಕೇಳಬೇಕಾಗಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಬಾಬು ತಲೆ ಎತ್ತಿದ. ನಾನು ಮೌನವಾಗಿ ಕುಳಿತಿದ್ದೆ. ಧನೀ, ಆ ಗಳಿಗೆಗೆ ಧನಗೆ ನಾನೇ ಸತ್ತಂತೆನ್ನಿಸಿತು. ಗೆಳೆಯನ ಕೊಲೆಗಾರನಾಗಿ ಊರವರಿಗೆಂತು ಮುಖ ತೋರಿಸುವುದೆಂದು ಅದೇ ರಾತ್ರೆ ಊರು ಬಿಟ್ಟೆ.

ಮೈಸೂರು ಉಪಕರಣಗಳ ಕಾರ್ಖಾನೆ, ಯಾನವ

ಮೈಸೂರು ಸರಕಾರ.

ಉತ್ತಮ ದರ್ಜೆಯ ಉಪಕರಣಗಳ ಮತ್ತು ಸಾಧನೆಗಳ ತಯಾರಕರು:-

1. ಶ್ರೇಷ್ಠ ದರ್ಜೆಯ ಉಕ್ಕಿನಿಂದ ತಯಾರಿಸಲ್ಪಡುತ್ತವೆ.
2. ನುರಿತ ಕೆಲಸಗಾರರಿಂದ ಅತ್ಯಾಧುನಿಕವಾದ ರೀತಿಯಲ್ಲಿ ಹದಕೊಡಲಾಗುತ್ತದೆ.
3. ಮಾರುವ ಮುನ್ನ ಎಲ್ಲ ಉಪಕರಣಗಳನ್ನು ವಿಶೇಷ ರೀತಿಯಲ್ಲಿ ಪರೀಕ್ಷಿಸಲಾಗುತ್ತೆ.
4. ನೀವು ಕೊಡುವ ಹಣಕ್ಕೆ ಖಾತ್ರಿಯಾದ ಮಾಲುಗಳು—
   ಕಾರಣ ಅವು ಯಾವ ತರಹ ಕಠಿಣ ಕೆಲಸಗಳಲ್ಲಿಯೂ ಉಪಯೋಗಕರವಾಗಿರುತ್ತವೆ.
   ಮತ್ತು ಬಹಳ ಕಾಲ ನೀವು ಅದನ್ನು ತೃಪ್ತಿಕರವಾಗಿ ಉಪಯೋಗಿಸಬಹುದು.
5. ವ್ಯವಸಾಯಕ್ಕೆ, ಕಾಮಗಾರಿ ಕೆಲಸಗಳಿಗೆ 'ಟೀ' ಮತು. ಕಾಫಿ ತೋಟಗಳ ಕೆಲಸಕ್ಕೆ ಅಗತ್ಯವಾದದ್ದು.

ನಿಮ್ಮ ಅಗತ್ಯಗಳಿಗೆ ಫ್ಯಾಕ್ಟರಿಯಲ್ಲಿ ಅಥವಾ ನಿಮ್ಮ ಪ್ರಾಂತ್ಯದಲ್ಲಿ ಇರುವ
ನಮ್ಮ ಅಧಿಕೃತ ಏಜಂಟರಲ್ಲಿ ವ್ಯವಹರಿಸಿರಿ.

NAVAYUGA 7—3—1968
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ತೇಗುಮರಗಳ ಸುವರ್ಣ ಖಣಿ

ಅಂದಮಾನ್ ನಿಕೋಬಾರ್ ನಡುಗಡ್ಡೆಗಳು

೨

ಅಂದ ಚೆಂದದ ತವರೂರೆನಿಸಿರುವ ಅಂದಮಾನ ಮತ್ತು ನಿಕೋಬಾರ ದ್ವೀಪಗಳಿಗೆ ಬಾಕತದ ಕಾಯ್ದೆಲದಿಂದ ಬೀಸಿದ ಗಾಳಿಯು ನವ ಚೈತನ್ಯವನ್ನು ನೀಡುತ್ತಲಿದೆ. ನವೀನ ಜೀವನ ಚಿಮ್ಮುತ್ತ ಬರುತ್ತಲಿದೆ ಈ ಪುಟ್ಟ ದ್ವೀಪಗಳಿಗೆ. ಕಳೆದ ವರ್ಷದ ಸಾರ್ವತ್ರಿಕ ಚುನಾವಣೆಯಲ್ಲಿ ಮೊಟ್ಟ ಮೊದಲಿನ ಸಲ ಈ ದ್ವೀಪಗಳು ಲೋಕ ಸಭೆಗೆ ತಮ್ಮ ಪ್ರತಿನಿಧಿಯನ್ನು ಆಯ್ಕೆಮಾಡಿ ಕಳುಹಿಸಿದವು.

ಗಡೀಪಾರು ಶಿಕ್ಷೆಗೆ ಒಳಗಾಗಿದ್ದ ಕೈದಿಗಳನ್ನು ಸಾಗಿಸುವ ಸ್ಥಳವಾಗಿದ್ದ ಅಂದಮಾನ ಮತ್ತು ನಿಕೋಬಾರ ದ್ವೀಪಗಳಲ್ಲಿ ಕಳೆದ ಎರಡು ದಶಕಗಳಲ್ಲಿ ಹೊಸ ಬಾಳಿನ ನವೋದಯವಾಗಿ ಪ್ರಗತಿಯ ಹೆಜ್ಜೆಗಳು ಮೂಡಿವೆ. ಅಂದಮಾನ್-ನಿಕೋಬಾರ ಸುಮಾರು ಎರಡು ನೂರು ಚಿಕ್ಕ ದೊಡ್ಡ ದ್ವೀಪಗಳಿಂದ ಕೂಡಿದ ಸಮೂಹ. ಅವುಗಳ ಪೈಕಿ ಐದು ದ್ವೀಪಗಳು ದೊಡ್ಡವೂ ಹತ್ತಿರ—ಹತ್ತಿರವಾಗಿಯೂ ಇರುವಂಥವು. ತಾಯ್ನಾಡಾದ ಭಾರತದಿಂದ ಈ ನಡುಗಡ್ಡೆಗಳು ೭೫೦ ಮೈಲಿ ದೂರದಲ್ಲಿವೆ. ಈ ನಡುಗಡ್ಡೆಗಳ ಒಟ್ಟು ಕ್ಷೇತ್ರ ೩೫೦ ಚದರ ಮೈಲಿ.

ಜನಸಂಖ್ಯೆ

೧೯೬೧ ಜನಗಣತಿಯ ಪ್ರಕಾರ ಅಂದಮಾನ—ನಿಕೋಬಾರ್ ನಡುಗಡ್ಡೆಯ ಸಮೂಹದ ಜನಸಂಖ್ಯೆ ೬೩೫೪೪. ಈಗ ಅಲ್ಲಿನ ಜನಸಂಖ್ಯೆ ಸುಮಾರು ೫೦೦೦೦ದಷ್ಟಾಗಿವೆ ಎಂದು ಅಂದಾಜು. ಇಲ್ಲಿನ ನಿವಾಸಿಗಳಲ್ಲಿ ಸುಮಾರು ಹದಿನಾಲ್ಕು ಸಾವಿರ ಜನರು ಗಿರಿಜನಾಂಗ ವರ್ಗಕ್ಕೆ ಸೇರಿದವರು.

ಸ್ನೇಹಶೀಲ ಆಂಗ್ಲೇಯರು, ಬಡೆದಾಟ ಸ್ವಭಾವದ ಜಾರವಾಗಳು, ನಿಗ್ರಾಯಿಟೋಗಳು ಮತ್ತು ನಿಕೋಬಾರಿಗಳು ಇವರೆಲ್ಲ ಈ ಗಿರಿಜನಾಂದ ವರ್ಗಕ್ಕೆ ಸೇರಿದವರು. ಪುಟ್ಟ ಅಂದಮಾನ ದ್ವೀಪದಲ್ಲಿ ೧೩೦ ಅಂಗೇ ಜನಾಂಗದ ಜನರನ್ನೂ, ಕೆಲವು ನಿಗ್ರಾಯಿಟೋ ಕುಟುಂಬದವರನ್ನು ಕಾಣಬಹುದು. ನಿಗ್ರಾಯಿಟೋಗಳು ಬಹು ಪುರಾತನ ಜನಾಂಗವಾಗಿದ್ದು ಪೂರ್ವೇತಿಹಾಸ ಕಾಲದಲ್ಲಿ ಬಹುಶಃ ಅವರು ಇಲ್ಲಿ ಆಗ್ನೇಯ ಏಶಿಯಾದ ಹುಂಬ ಪಸರಿಸಿದ್ದಿರಬಹುದು. ಅಂದಮಾನದ ಮಧ್ಯ ಪ್ರದೇಶದ ದಟ್ಟ ಕಾಡುಗಳಲ್ಲಿ ಸುಮಾರು ೫೦೦ ಜಾರವಾಗಳು ನೆಲಸಿದ್ದಾರೆ. ಅಂದಮಾನದ ಗಿರಿಜನಾಂಗ ಕ್ಷಯ ಹೊಂದುತ್ತಿದೆ. ಬರ್ಮಾ ದೇಶದ ಕಡೆಯಿಂದ ಬಂದಿರಬಹುದೆಂದು ನಂಬಲಾಗಿರುವ ನಿಕೋಬಾರಿಗಳು ಆಧುನಿಕ ಜೀವನ ಕ್ರಮಕ್ಕೆ ಹೊಂದಿಕೊಳ್ಳುತ್ತಲಿದ್ದಾರೆ. ನಡುಗಡ್ಡೆಯ ಇತರ ಜನರು ರಾಂಚಿಯ ಸಂತಾಳರು, ತಮಿಳರು, ಮಲೆಯಾಳಿ ಇವರಾಗಿದ್ದಾರೆ.

ಮಿತವ್ಯಯ

ಈ ನಡುಗಡ್ಡೆಗಳ ಕಾಡುಗಳಲ್ಲಿ ತೇಗಿನ ಮರಗಳು ಹೇರಳವಾಗಿ ಬೆಳೆಯುತ್ತಿವೆ. ನಡುಗಡ್ಡೆಗಳನ್ನು ಮುತ್ತಿದ ಕಡಲಿನಲ್ಲಿ ಮೀನುಗಳು ವೆಗ್ಗಳವಾಗಿ ದೊರೆಯುತ್ತಿವೆ. ವನಶ್ರೀಯ ಉಪಯೋಗವನ್ನು ದ್ವೀಪದ ನಿವಾಸಿಗಳು ಪಡೆಯುತ್ತಲಿದ್ದಾರೆ, ಅಲ್ಲದೆ ಪ್ಲಾಂಟೇಶನ್ ಕೆಲಸ, ಮತ್ಸ್ಯೋದ್ಯಮ, ಹಂದಿ ಸಾಕುವದು, ಬೇಸಾಯ, ತೆಂಗಿನ ತೋಟ ಮುಂತಾದ ವ್ಯವಸಾಯಗಳಲ್ಲಿಯೂ ಒಟ್ಟು ಸುಮಾರು ೩೧ ಸಾವಿರ ನಿವಾಸಿಗಳು ನಿರತರಾಗಿದ್ದಾರೆ.

'ತೇಗು ಮರಗಳು ಸುವರ್ಣ ಖಣಿ' ಎಂದು ಖ್ಯಾತಿ ಪಡೆದಿವೆ. ಈ ದ್ವೀಪಗಳಲ್ಲಿ ತೇಗು ಮರಗಳ ಅನೇಕಾನೇಕ ಜಾತಿಗಳು ಹುಲುಸಾಗಿ ಬೆಳೆದಿವೆ. ಪ್ಲೈವುಡ್ ಮತ್ತು ಬೆಂಕಿಪೊಟ್ಟಣ ಕೈಗಾರಿಕೆಗಳು ತಲೆಎತ್ತಿವೆ. ೧೯೬೫—೬೬ನೆ ಸಾಲಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಮೌಲ್ಯದ ವನಶ್ರೀ ಉತ್ಪನ್ನ ಇಲ್ಲಿ ದೊರೆತಿದೆ, ಮತ್ತು ಅದೇ ಸಮಯದಲ್ಲಿ ಇಲ್ಲಿಂದ ಸುಮಾರು ೨೧,೦೦೦ಟನ್ ತೇಗಿನ ಮರಗಳನ್ನು ರಫ್ತು ಮಾಡಲಾಗಿದೆ. ನಾಲ್ಕು ಸಾವಿರಕ್ಕೂ ಹೆಚ್ಚು ಎಕರೆ ಕ್ಷೇತ್ರದಲ್ಲಿ ತೆಂಗಿನ ಮರಗಳನ್ನು ಬೆಳೆಸಲಾಗಿದೆ.

ಖನಿಜ ಸಂಪತ್ತು

ರಬ್ಬರನ್ನು ಬೆಳೆಯಲು ಈ ದ್ವೀಪ ಸಮೂಹ ಬಹು ಹುಲುಸಾದ ಸ್ಥಳ. ಕಲ್ಲಿದ್ದಲು, ಕಬ್ಬಿಣ, ರತ್ನಪಡಿಗಳು, ಫಿಕ್ಕಲ್, ಮುಂತಾದ ಖನಿಜ ಸಂಪತ್ತು ಈ ದ್ವೀಪಗಳಲ್ಲಿ ಹುದುಗಿದೆ ಎಂದು ನಂಬಲಾಗಿದೆ. ಅಲ್ಲದೆ ತೈಲ ಸಂಪತ್ತು ಇಲ್ಲಿ ಅಡಗಿದೆ ಎಂದು ಪರಿಗಣಿಸಲಾಗಿದೆ ಅಂದಮಾನ್ ನಿಕೋಬಾರ್ ನಡುಗಡ್ಡೆಗಳ ಗುಂಪಿಗೆ ೧೩೦೦ ಮೈಲಿ ಉದ್ದದ ಕರಾವಳಿ ಇದೆ; ೧೮೦೦೦ ಚದರ ಮೈಲಿ ಪ್ರದೇಶದ ಕಡಲಲ್ಲಿ ಮತ್ಸ್ಯೋದ್ಯಮವನ್ನು ಕೈಕೊಳ್ಳಬಹುದು. ೧೯೬೫ರಲ್ಲಿ ಸುಮಾರು ೨೨೪ ಟನ್ ಮೀನುಗಳನ್ನು ಇಲ್ಲಿ ಹಿಡಿಯಲಾಯಿತು.

ಪ್ರತೀಯ ಯೋಜನಾವಧಿಯಲ್ಲಿ ಈ ದ್ವೀಪಗಳ ಅಭಿವೃದ್ಧಿಗೋಸುಗ ೯೯-೩ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಇದರಲ್ಲಿಯ ಹೆಚ್ಚಿನ ಹಣವನ್ನು ಸಂಪರ್ಕಸಾಧನೆಗಳ ಸುಧಾರಣೆಗೆಂದು ಖರ್ಚು ಮಾಡಲಾಯಿತು. ಸಾಮಾಜಿಕ ಸೇವೆ, ಬೇಸಾಯ, ಚಿಕ್ಕ ಬಂದರುಗಳ ಅಭಿವೃದ್ಧಿ ಮುಂತಾದ ಕಾರ್ಯಗಳಿಗೆ ಉಳಿದ ಹಣವನ್ನು ವೆಚ್ಚ ಮಾಡಲಾಯಿತು.

ಶಿಕ್ಷಣ

೧೯೬೫—೬೬ರಲ್ಲಿ ಇಲ್ಲಿ ಒಟ್ಟು ಹನ್ನೆರಡು ಶಿಕ್ಷಣ ಸಂಸ್ಥೆಗಳು ಕೆಲಸ ಮಾಡುತ್ತಿದ್ದವು. ನಾಲ್ವತ್ತು ಹೊಸ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಯಿತು. ಮೂವತ್ತು ಶಾಲೆಗಳನ್ನು ಮೂಲ ವೃತ್ತಿ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸಲಾಯಿತು. ಆರು ಮಾಧ್ಯಮಿಕ ಮೂಲ ಶಿಕ್ಷಣದ ಶಾಲೆಗಳನ್ನು ಸ್ಥಾಪಿಸಲಾಯಿತು. ರಾಜಧಾನಿ ಪೋರ್ಟಬ್ಲೇರ್‌ನಲ್ಲಿ ಸರಕಾರಿ ಹೈಸ್ಕೂಲ್ ಇದೆ. ಬೇರೆ ಬೇರೆ ಮಾತೃಭಾಷೆಯವ್ಯ ಮಕ್ಕಳಿಗೆಂದು ಅನೇಕ ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳು ಕೆಲಸ ಮಾಡುತ್ತಿವೆ.

ಸಂಪರ್ಕ ಸಾಧನೆಗಳು

ನಡುಗಡ್ಡೆಯಿಂದ ನಡುಗಡ್ಡೆಗೆ ಹೋಗಲು ಸಂಪರ್ಕ ಸಾಧನೆಗಳ ಅಭಾವ ತೀವ್ರವಾಗಿದೆ. ಬೇಸಾಯ ಮತ್ತು ಕೈಗಾರಿಕೆಗಳ ಉತ್ಕರ್ಷಕ್ಕೆ ಉತ್ತಮ ಮಾರ್ಗಗಳ ರಚನೆ ಅವಶ್ಯ. ದೋಣಿಗಳೇ ಅಂತರ್‌ದ್ವೀಪ ಸಂಪರ್ಕ ಸಾಧನೆಗಳಾಗಿವೆ. ೬೫—೬೬ರ ಅವಧಿಯಲ್ಲಿ ೯೯ ಕಿಲೋಮೀಟರ ಉದ್ದ ಮಾರ್ಗಗಳನ್ನು ಕಲ್ಪಿಸಲಾಯಿತು.

ನಡುಗಡ್ಡೆಗಳಿಗೆ ಅತ್ಯಂತ ರಮಣೀಯ ಸಮುದ್ರ ತೀರವಿದೆ, ಅದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾರ್ಪಡಿಸಬಹುದಾಗಿದೆ. ಭೋರ್ಗರೆವ ಸಮುದ್ರ, ಹೆಚ್ಚು ಹಸಿರು ಮುರಿಯುವ ಕಾನನ, ತೆಂಗಿನ ತೋಟ, ಸಮುದ್ರದ ತೀರ, ಒಳ ಚಾಚಿರುವ ತೀರ ಪ್ರದೇಶಗಳು ಇವೆಲ್ಲವುಗಳು ನಡುಗಡ್ಡೆಗಳ ರಮಣೀಯತೆಯನ್ನು ಇನ್ನಿಷ್ಟು ಹೆಚ್ಚಿಸಿವೆ. ಪೋರ್ಟಬ್ಲೇರನಿಂದ ಐದು ಮೈಲಿ ದೂರದಲ್ಲಿರುವ ಕಾರ್ಬನ್ಸ್ ಕವ್ ದೋಣಿಗಳ ವಿಹಾರಕ್ಕೂ ಮೀನು ಹಿಡಿಯಲಿಕ್ಕೂ, ಸಮುದ್ರ ಸ್ನಾನಕ್ಕೂ ಯೋಗ್ಯವಾಗಿರುವ ಮನಾಕರ್ಷಕ ಸ್ಥಳವಾಗಿದೆ. ಕಾರ್ಬನ್ಸ್ ಕವ್ ಮತ್ತು ಪೋರ್ಟಬ್ಲೇರ್ ಸ್ಥಳಗಳಲ್ಲಿ ಪ್ರವಾಸೀ ಮಂದಿರಗಳಿವೆ.

ಅಂದಮಾನ-ನಿಕೋಬಾರ ದ್ವೀಪಗಳು ನಿರ್ಗಾದ ನೆಲೆವೀಡಾದಂತೆ, ತಾಯ್ನಾಡಾದ ಭಾರತಕ್ಕೆ ಆಯಕಟ್ಟಿನ ಸ್ಥಳಗೂ ಆಗಿವೆ!

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ವೈಡಾ ಕೊರಡ್ಡಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯನ್ನು ಕೊಡಮಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಪೈದ್ಯ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟಿ ಖರ್ಚು ಬೇರೆ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ
ಬೆಲೆ: 0-19 ಪೈಸೆ.

ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



14—3—1968

೨೦
ಪೈಸೆ

ಕಥಾ ಪ್ರಪಂಚ

ಕೈ ಕೊಟ್ಟ ರಂಗ!

ಬರೆದವರು: ಶ್ರೀ ನ. ಭ. ನೆಂಪು

ಅಂದು ರಾಯರು ನಿದ್ದೆಯಿಂದ ಏಳುವಾಗ ಬೆಳ್ಳಗೆ ಬೆಳಗಾಗಿತ್ತು. ಆದರೇ ದಯಕ್ಕೆ ಮೊದಲೇ ಎದ್ದು ಚಾಪೆಯಲ್ಲಿಯೇ ಕುಳಿತುಕೊಂಡು "ರಂಗನಾಯಕ! ರಾಜೀವ ಲೋಚನ...." ಉದಯರಾಗ ಹಾಡುತ್ತಿದ್ದ ಅವರಿಗೆ ಅಂದೇಕೋ ಗಾಢವಾದ ನಿದ್ದೆ ಬಂದಿತ್ತು.

ರಾಯರ ಉದಯರಾಗವನ್ನು ಕೇಳಿದಾಗಲೇ ರಂಗನು ಎದ್ದು ತನ್ನ ಕೆಲಸಕ್ಕೆ ಪ್ರಾರಂಭಿಸುತ್ತಿದ್ದನು. ಆತನು ಮತ್ರ ರಾಯರಂತೆ ತಡವಾಗಿ ಏಳಲಿಲ್ಲ ಆ ದಿನ. ಅರ್ಧರಾತ್ರಿಯೂಗುವಾಗಲೇ ಎದ್ದು ತನ್ನ ನಾಲಿನ ಕೆಲಸವನ್ನು ಮಾಡಿದ್ದನು.

ಸೂರ್ಯೋದಯಕ್ಕೆ ಸರಿಯಾಗಿ ಎದ್ದ ರಾಯರು ಎಂದಿನಂತೆ ಕಣ್ಣುಚ್ಚಿಕೊಳ್ಳುತ್ತ ತನ್ನ ಸೇವಕನಾದ ರಂಗನನ್ನು ನಾಲ್ಕು ಸಾರಿ ಕರೆದರು. ಪ್ರತಿದಿನ ರಾಯರು ಕರೆದಾಗ 'ಓ' ಎನ್ನುತ್ತಿದ್ದ ಆತನು ಅಂದುಓಗೊಡಲಿಲ್ಲ. ಮತ್ತೂ ನಾಲ್ಕು ಸಲ 'ರಂಗಾ' ಎಂದು ಕರೆದರು. ಎಲ್ಲಿಯೂ ಆತನ ಸುಳಿವೇ ಇರಲಿಲ್ಲ. ಹೊರಗೆಲ್ಲಿಯೂ ದರೂ ಹೋಗಿರಬಹುದೆಂದು ಸದ್ಯ ಸುಮ್ಮನಾದರು ರಾಯರು.

ಗಂಟೆ ಏಳು ಹೊಡೆಯಿತು. ಪೆಂಡುಲಂ ಪಡಿಯೊರದ 'ಅಲಂಕಾಂ' ರಾಯರನ್ನು ಬಡಿದೆಬ್ಬಿಸಿತು. ಅಷ್ಟ ಹೊತ್ತಾದರೂ ಆತನು ಬಾರದೇ ಇರುವುದನ್ನು ನೋಡಿ ಗಾಬರಿಯಾಯಿತವರಿಗೆ. ಹಿಂದಿನ ರಾತ್ರಿ ಬೀಗದ ಕೀಗಳನ್ನು ಆತನ ವಶ ಕೊಟ್ಟಿರುವುದು ಫಕ್ಕನೆ ನೆನಪಾಗಿ ಸಂಶಯದಿಂದಲೇ ತನ್ನ ಕೋಣೆಯ ಕಡೆ ಓಡಿದರು.

ರಾಯರು ಭಂಡಾರದ ಕಡೆ ಬಂದಾಗ ಬಾಗಿಲು ತೆರೆದುಕೊಂಡೇ ಅವರನ್ನು ಸ್ವಾಗತಿಸಿತು. ಒಳಗೆ ಪೆಟ್ಟಿಗೆಗಳೆಲ್ಲಾ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಒಡವೆ, ಹಣ ಎಲ್ಲಾ ಖಾಲಿಯಾಗಿದ್ದುವು. ಈ ಸನ್ನಿವೇಶವನ್ನು ನೋಡಿದ ರಾಯರ ಕಣ್ಣಿಗೆ ಕತ್ತಲೆ ಕವಿಯಿತು. ಪತ್ನಿಯನ್ನೊಮ್ಮೆ ಕರೆದು ತಲೆ ತಿರುಗಿ ನೆಲಕ್ಕುರುಳಿದರವರು.

ಪತಿಯು ಕೂಗಿದ್ದನ್ನು ಕೇಳಿದ ರಾಯರ ಮಡದಿ ಸೀತಮ್ಮ ಅಡುಗೆ ಕೋಣೆಯಿಂದ ಓಡಿಕೊಂಡೇ ಬಂದರು. ಕೋಣೆಯಲ್ಲಿ ಪತಿಯು ಮೂರ್ಛೆ ಹೋಗಿರುವುದನ್ನು ನೋಡಿ ಇಷ್ಟಷ್ಟು ಗಾಬರಿಯಾಯಿತವರಿಗೆ. ನೀರನ್ನು ತಂದು ರಾಯರ ತಲೆಗೆ ಚಿಮುಕಿಸಿದಾಗಲೇ ಸ್ಮೃತಿ ಬಂತು ರಾಯರಿಗೆ. ಸೀತಮ್ಮನಿಗೂ ವಿಷಯ ಅರ್ಥವಾಗಿ ಇಬ್ಬರೂ ಹಣೆಹಚ್ಚಿ ಅಳತೊಡಗಿದರು; ತಮ್ಮ ಕೃಪಣತೆಗಾಗಿ ತಮ್ಮನ್ನೇ ಶಪಿಸಿಕೊಂಡರು.

ಂ ಂ ಂ

ರಾಯರು ಅಗರ್ಭ ಧನಿಕರು. ಆದರೆ ಶ್ರೀಮಂತರ ಯಾವ ಲಕ್ಷಣವೂ ಅವರಲ್ಲಿ ಕಂಡುಬರದು. ಯಾವಾಗಲೂ ಸಾದಾ ಉಡುಪಿನಿಂದಲೇ ಇರುತ್ತಾರೆ ಅವರು. ಊಟವೂ ಹಾಗೇ, ಅದಷ್ಟು ಉಳಿತಾಯ ಮಾಡುವಾ ಎಂದು ಒಂದೇ ಊಟ ಮಾಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಮದುವೆ ಮಾಡಿ ಗಂಡನ ಮನೆಗೆ ಕಳಿಸಿದ ಒಬ್ಬಳು ಮಗಳನ್ನು ಬಿಟ್ಟು ರಾಯರಿಗೆ ಬೇರೆ ಸುಕ್ಕಳೂ ಇರಲಿಲ್ಲ. ಮತ್ತೆ ತಾನು ಈ ರೀತಿ ಹಣವನ್ನು ಏಕೆ ಕೂಡಿಡುತ್ತೇನೆಂದು ಅವರಿಗೇ ತಿಳಿಯದು, ಪಾಪ!

ಸೀತಮ್ಮ ರಾಯರ ಅರ್ಧಾಂಗಿ ಎಂದ ಮೇಲೆ ರಾಯರ ಗುಣಾವಗುಣಗಳು ಅವರಲ್ಲಿಯೂ ಇರುವುದು ವಿಶೇಷವೇನಲ್ಲ. ಮಧ್ಯಾಹ್ನದ ಹೊತ್ತಿಗೆ ಅವರಲ್ಲಿಗ ಯಾರಾದರೂ ಬಂದು "ತಮ್ಮ, ಕುಡಿಯಲು ಒಂದು ಲೋಟ ನೀರು ಕೊಡಿ" ಎಂದು ಕೇಳಿದರೆ "ಎಲ್ಲರಿಗೆ ನೀರು ಕುಡಿಸುತ್ತೇನೆಂದು ಹರಿಕೆಯನ್ನು ನಾನು ಹೊತ್ತುಕೊಂಡಿಲ್ಲ" ಎನ್ನುತ್ತಾರೆ. ಇಲ್ಲವೆ "ಅಲ್ಲಿ ತಂಬಿಗೆ ಇದೆ ನೋಡು. ಬಾವಿಯಿಂದ ಎತ್ತಿಕೊಂಡು ಬೇಕಷ್ಟು ಕುಡಿ" ಎಂದು ಹೇಳುತ್ತಾರೆ. ತಾವಂತೂ ಕೈಯಾರೆ ನೀರು ಕೊಡಲಾರರು. ಅವರೂ ಕೃಪಣತನಕ್ಕೆ ಹೆಸರಾದವರು.

ರಾಯರ ತಂದೆ ತಾಯಿಗಳ ಶ್ರಾದ್ಧ ಮಾತ್ರವಲ್ಲದೆ ಬೇರೇನೂ ವಿಶೇಷ ಕಾರ್ಯಶ್ರದ್ಧೆ, ಅನ್ನದಾನ ಅವರಲ್ಲಿ ನಡೆಯುವುದಿಲ್ಲ.

ಂ ಂ ಂ

ರಾಯರಲ್ಲಿಗೆ ಒಮ್ಮೆ ಅಪರಿಚಿತನು ಬಂದು "ಸ್ವಾಮಿ, ನಾನು ಬಡವನಾಗಿದ್ದೇನೆ ಉದ್ಯೋಗ ಮಾಡಿ ಜೀವಿಸುವ ಎಂದರೆ ಎಲ್ಲಿಯೂ ಈ ವರೆಗೆ ಕೆಲಸ ಸಿಗಲಿಲ್ಲ. ಮಹಾತ್ಮರಾದ ತಾವು ದಯವಿಟ್ಟು ನಿಮ್ಮಲ್ಲಿ ಕೆಲಸ ಮಾಡಿ ಉಳಿಯಲು ನನಗೆ ಎಡೆಕೊಡಬೇಕು" ಎಂದು ರಾಯರಲ್ಲಿ ಕೇಳಿದನು.

ಯಾರ ಮೇಲೂ ದಯೆ ತೋರದ ಅವರಿಗೆ ಅಂದೇಕೋ ಆತನನ್ನು ನೋಡಿ ಕನಿಕರವಾಯಿತು. ಮೇಲಾಗಿ ಆತನೊಟ್ಟು ಅಕ್ಷರಸ್ಥ ಎಂದೂ ಆತನ ಮಾತಿನಿಂದ ತಿಳಿದು ಬರುತ್ತಿತ್ತು. ಅವನನ್ನು ಕೆಲಸಕ್ಕೆ ಸೇರಿಸಿಕೊಂಡರೆ ಏನಾದರೂ ಪ್ರಯೋಜನಕ್ಕೆ ಬಿದ್ದೀತು ಮತ್ತು ತನ್ನ ಧರ್ಮಪತ್ನಿಗೂ ಸುಖವಾದೀತೆಂದು ಯೋಚಿಸಿ ಅವನ ಕುಲಗೋತ್ರ ಎಲ್ಲವನ್ನೂ ವಿಚಾರಿಸಿ ಪತ್ನಿಯ ಒಪ್ಪಿಗೆಯನ್ನೂ ಪಡೆದು ಬಂದ ವ್ಯಕ್ತಿಯನ್ನು ತನ್ನ ಮನೆಯೊಳಗೆ ಸೇರಿಸಿಕೊಂಡರು ರಾಯರು, ಕೆಲಸಕ್ಕೆಂದು.

ಬಂದ ವ್ಯಕ್ತಿಯಾದರೋ ಬಲು ಮೋಸಗಾರ. ರಾಯರ ಸಂಪತ್ತಿನ ವಿಷಯವನ್ನು ತಿಳಿದು ಅದನ್ನು ಹೇಗಾದರೂ ಸುಲಿದೆ ಮಾಡಲೇಬೇಕೆಂದು ಹೊಂಚು ಹಾಕಿಕೊಂಡೇ ಬಂದಿದ್ದನಾತ. ರಾಯರು ಆತನ ನುಣ್ಣನೆಯ ಮಾತುಗಳಿಗೆ ಮರುಳಾಗಿ ಅವನಿಗೆ ಆಶ್ರಯವಿತ್ತರು.

ರಾಯರ ಮನೆಗೆ ರಂಗ ಈಗಹೊಸಬ. ಆದರೆ ಬಂದು ಸೇರಿದ ಕೆಲವೇ ದಿನಗಳಲ್ಲಿ ತನ್ನ ಉತ್ತಮ ಕೆಲಸಗಳಿಂದ ರಾಯರ; ಸೀತಮ್ಮನವರ ಮೆಚ್ಚುಗೆಗಳಿಗೆ ಪಾತ್ರನಾಗಿದ್ದ. ಕಾಫಿ, ಅಡಿಗೆಯ ಕೆಲಸಗಳ ಹೊರತು ಬಾಕಿ ಎಲ್ಲಾ ಕೆಲಸಗಳನ್ನೂ ರಂಗನೇ ಮಾಡುತ್ತಿದ್ದ.

ರಾಯರು ಊಟ ಕಾಫಿ ಕೊಟ್ಟು ತಿಂಗಳೊಂದರ ಸಂಬಳ ರೂ. ಮಾತ್ರ ಸಂಬಳ ಕೊಡುವುದಾಗಿ ಹೇಳಿದ್ದರೂ ಆತನು ಕೆಡಿಸಿ ಸಂಬಳಕ್ಕೆ ಹೆಚ್ಚು ಕೆಲಸ ಮಾಡುವುದನ್ನು ನೋಡಿ "ಭಂಬಿಗಸ್ತ" ಎಂದು ಭಾವಿಸಿದ್ದರು ಆತನನ್ನು. ಕೆಲವೊಮ್ಮೆ ಆತನ ಕೈಯಲ್ಲಿ ತನ್ನ ಬೀಗದ ಕೀಗಳನ್ನೂ ಕೊಡುತ್ತಿದ್ದರು. ಇಂತಹ ಸಂದರ್ಭವನ್ನೇ ಆತ ಕಾಯುತ್ತಿದ್ದ.

ಒಂದು ರಾತ್ರಿ ರಾಯರು ತನ್ನ ನಿತ್ಯ ಕರ್ಮವನ್ನೆಲ್ಲ ಕೇರಿಸಿ, ಉಪಾಹಾರವನ್ನು ಪೂರೈಸಿ ಹೊರಗೆ ಬಂದು ತನ್ನ ಹಾಸಿಗೆಯಲ್ಲಿ ಬರಗಿಕೊಂಡರು. ರಂಗನನ್ನು ಕರೆದು "ರಂಗಾ, ನಾಳೆ ತೀರ್ಥಕ್ಕೆ ಬೇಕಾಗುವ ಪಾತ್ರೆಗಳನ್ನು ಪತ್ತಾಯದಿಂದ ತೆಗೆದು ತೊಳೆದು ಸ್ವಚ್ಛ ಮಾಡಿ ಇಟ್ಟು ಬಿಡು" ಎಂದು ಕೀಗಳ ಗೊಂಚಲನ್ನು ಆತನ ಕೈಯಲ್ಲಿ ಕೊಟ್ಟರು.

ರಂಗನು ಪತ್ತಾಯದಿಂದ ಪಾತ್ರೆಗಳನ್ನೆಲ್ಲಾ ತೆಗೆದು ಬರುವಾಗ ರಾಯರಿಗೆ ಗಾಢವಾದ ನಿದ್ರೆ ಬಂದಿತ್ತು. ಪಾತ್ರೆಗಳನ್ನೆಲ್ಲ ತೊಳೆದಿಟ್ಟು ತಾನು ಮಲಗಿಕೊಂಡನು.

ಸೀತಮ್ಮನೂ ಮುಸುರೆಗಳನ್ನೆಲ್ಲ ಬದಿಗಿಟ್ಟು ಬಾಗಿಲು ಹಾಕಿಕೊಂಡು ಒಳಗೆ ಮಲಗಿದರು. ರಾಯರು ಬೀಗದ ಕೀಗಳನ್ನು ರಂಗನಲ್ಲಿ ಕೊಟ್ಟದ್ದ. ಅವರಿಗೆ ತಿಳಿದಿರಲಿಲ್ಲ.

ಈಗ ರಂಗನ ಕೈಯಲ್ಲಿ ರಾಯರ ಸರ್ವಸ್ವವೇ ಸಿಕ್ಕಿದಂತಾಯಿತು. ತಾನಾಗಿಯೇ ಬಂದ ಈ ಸುಯೋಗವನ್ನು ಕಳೆದುಕೊಳ್ಳುವುದು ಸರಿಯಲ್ಲವೆಂದು ಅಂದೇ ಜಾರಲು ನಿಶ್ಚಯ ಮಾಡಿದನು.

ಅರ್ಧ ರಾತ್ರಿಯ ಸಮಯ. ಸುತ್ತಲೂ ಅಂಧಕಾರ ಕವಿದಿತ್ತು. ರಾಯರೂ ಸೀತಮ್ಮನೂ ಗಾಢ ನಿದ್ರೆಯಲ್ಲಿದ್ದರು. ರಂಗನಿಗೆ ಮಾತ್ರ ನಿದ್ರೆಯೇ ಬಂದಿರಲಿಲ್ಲ. ಆತ ಹಾಸಿಗೆಯಿಂದ ಎದ್ದು ರಾಯರ ಮಂಚದ ಕಡೆಗೊಮ್ಮೆ ಟಾರ್ಚನ್ನು ಹಿಡಿದು ನೋಡಿದ. ಅವರು ಕುಂಭಕರ್ಣನ ನಿದ್ರೆ ಮಾಡಿದ್ದರು. ಇದುವೇ ಸಂದರ್ಭ ಎಂದುಕೊಂಡು ರಾಯರ 'ಭಂಡಾರ'ದ ಬೀಗವನ್ನು ತೆಗೆದು ಒಳಗೆ ಹೋಗಿ ಪೆಟ್ಟಿಗೆಗಳ ಬೀಗಗಳನ್ನೆಲ್ಲಾ ತೆಗೆದನು ರಾಯರು ಸಂಗ್ರಹಿಸಿಟ್ಟ ಹಣವನ್ನೂ, ಸಕಲಾಭರಣಗಳನ್ನೂ ಹೊರಗೆ ತೆಗೆದು ಗಂಟುಕಟ್ಟಿಕೊಂಡು ಎದುರಿನ ಬಾಗಿಲನ್ನು ತೆರೆದು ತನ್ನ ದಾರಿ ಹಿಡಿದನು. ಅಮಾವಾಸ್ಯೆಯ ಇರುಳಾದರೂ ತಾರೆಗಳ ಬೆಳಕಿನ ಜತೆಗೆ ಕುರುಡು ಟಾರ್ಚ್ ಒಂದು ಇದ್ದುದರಿಂದ ಆತನ ಪ್ರಯಾಣ ಸುಗಮವಾಯಿತು. ಎಲ್ಲಿಂದಲೋ ಬಂದ ವ್ಯಕ್ತಿ ರಾಯರ ಸಂಪತ್ತಿಗೆ ಕೈಕೊಟ್ಟು ತಿರುಗಿ ಎಲ್ಲಿಗೋ ಪರಾರಿ ಹೊಡೆದು ಬಿಟ್ಟ.

ಂ ಂ ಂ

ಮರುದಿನ ರಾಯರ ತಾಯಿಯ ಶ್ರಾದ್ಧವು ಕಣ್ಣೀರಿನ ಅಪಣೆಯಿಂದಲೇ ಕಳೆಯಿತು.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪ್ರಾಧಾನ್ಯತೆಯುಳ್ಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಿಷ್ಟ ಹೊಟೆಲ್.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ತಾಯಿನಾಡು

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೮	೧೪—೩—೧೯೬೮	No. 28

ಮತ್ತೊಂದು ವಿವಾದ

ಕಛ್ಚರಣದ ಬಗ್ಗೆ ನ್ಯಾಯಮಂಡಲಿಯ ಬಹುಮತದ ಅಭಿಪ್ರಾಯವನ್ನು ಒಪ್ಪಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಭಾರತ ಸರಕಾರವು ನಿರ್ಧರಿಸಿದೊಡನೆಯೇ ಇನ್ನೊಂದು ವಿವಾದ ಹುಟ್ಟಿಕೊಂಡಿದೆ. ಇದು ಪಾಕಿಸ್ತಾನದೊಂದಿಗಲ್ಲ; ದಕ್ಷಿಣದ ಸಿಂಹಳದೊಂದಿಗೆ. ಭಾರತ—ಸಿಂಹಳಗಳ ನಡುವಣ ಕೇಂಬೆ ಕೊಲ್ಲಿಯಲ್ಲಿ 'ಕಛತೀವು' ಎನ್ನುವ ಅತಿಸುಟ್ಟ ದ್ವೀಪ. ಇದರ ಉದ್ದ ಸುಮಾರು ಒಂದು ಮೈಲಿಯಿದ್ದರೆ, ಅಗಲ ಕೆಲವು ಗಜಗಳು. ಇಲ್ಲಿರುವುದು ಸಂತ ಅಂತೋನಿಯ ಒಂದು ಇಗರ್ಜಿ. ಜನರಾಗಲೀ ಸಾಕು ಪ್ರಾಣಿಗಳಾಗಲೀ ಇಲ್ಲಿ ವಾಸವಿಲ್ಲ. ವರ್ಷಕ್ಕೊಂದು ಬಾರಿ ಇಲ್ಲಿ ನಡೆಸುವ ಹಬ್ಬಕ್ಕೆ ಭಾರತೀಯರೂ ಸಿಂಹಳೀಯರೂ ಹೋಗುತ್ತಾರೆ; ಹಬ್ಬಗಳಲ್ಲಿ ಪಾಲ್ಗೊಂಡು ಮರಳುತ್ತಾರೆ. ತಮಗೆ ತಾವೇ ಸಿದ್ಧತೆ ಮಾಡಿಕೊಳ್ಳುತ್ತಾರೆ. ಆದರೆ, ಈಗ ಪುಟ್ಟದ್ವೀಪದ ಕಡೆಗೆ ಎಲ್ಲರ ಗಮನ ಹರಿದಿದೆ. ಸಿಂಹಳವು ಅದು ತನ್ನದೆಂದೂ ಭಾರತವು ತನಗೆ ಸೇರಿದ್ದೆಂದೂ ವಿವಾದ ಆರಂಭವಾಗಿದೆ. ಎರಡೂ ಕಡೆಗಳು ಈ ಬಗ್ಗೆ ಸಂಬಂಧಿಸಿದ ದಾಖಲೆಗಳನ್ನು ತೆಗೆದಿವೆ. ಇದ್ದರೂ ಇರಬಹುದು. ಕಛತೀವು ರಾಮನಾಡು ರಾಜ್ಯ ವಶವಿದ್ದ ಪ್ರದೇಶವೆಂದೂ ಅದು ಭಾರತದ ಅವಿಭಾಜ್ಯ ಅಂಗವೆಂದೂ ಮದ್ರಾಸ ಸರಕಾರವು ತಿಳಿಸಿ, ಈ ಸಂಬಂಧದ ದಾಖಲೆಗಳನ್ನು ಕೇಂದ್ರ ಸರಕಾರಕ್ಕೆ ಕಳಿಸಿದೆಯೆಂದು ವದಂತಿ. ಇತ್ತಿಗೆ ಸ್ವಾತಂತ್ರ್ಯದಿಂದಲೂ ತನ್ನ ಬಳಿಯಿರುವ ಇನ್ನಿತರ ಸಾಕ್ಷ್ಯಗಳಿಂದಲೂ ಭಾರತ ಸರಕಾರವು ಕಛತೀವು ನಡುಗುಡ್ಡೆಯ ಮೇಲಿನ ತನ್ನ ಅಧಿಕಾರವನ್ನು ಉಳಿಸಿಕೊಳ್ಳಬೇಕು.

ಇದೇ ಬಗೆಯ ಅಭಿಪ್ರಾಯವನ್ನು ಸಿಂಹಳವೂ ಹೊಂದಿದೆ. ಅಲ್ಲಿನ ಪ್ರಧಾನಿ ಡಡ್ಲೆ ಸೇನಾ ನಾಯಕೆಯವರು ಕಛತೀವು ನಡುಗುಡ್ಡೆಯ ಮೇಲೆ ಸಿಂಹಳವು ಪರಿಣಾಮಕಾರಿ ಹತೋಟಿಯನ್ನು ಹೊಂದಿದೆಯೆಂದೂ, ತನ್ನ ವಾದಕ್ಕೆ ಚಾರಿತ್ರಿಕ ದಾಖಲೆಗಳ ಆಧಾರವಿದೆಯೆಂದೂ ಅಂದಿದ್ದಾರೆ. ಇದನ್ನೂ ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ಇದೇ ತಂಗಳ ನಡುವಲ್ಲಿ ಕಛತೀವನ್ನಿಟ್ಟು ಸಂತ ಅಂತೋನಿ ಹಬ್ಬದ ಆಚರಣೆ ನಡೆಯಲಿದ್ದು ಈ ಬಗ್ಗೆ ಸಿಂಹಳವು ಎಚ್ಚರಿಕೆಯಿಂದಾಗಿ ಸಕಲ ಸಿದ್ಧತೆಗಳನ್ನು ಸೂಚಿಸುತ್ತಿದೆ ಎಂದು ತಿಳಿಯುತ್ತದೆ. ಈಗ ಈ ನಡುಗುಡ್ಡೆಯು 'ವಿವಾದ ಗ್ರಸ್ತ' ನಡುಗುಡ್ಡೆಯಾಗಿ ಪರಿಣಮಿಸಿದುದರಿಂದ, ಸಿಂಹಳದ ಕ್ರಮಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸುಮ್ಮನಿದ್ದ ಶಾಂತಿಗೆ ದಾರಿಮಾಡಿಕೊಡಬೇಕಲ್ಲದೆ ಮತ್ಸ್ಯಾವತಾರಿಯೂ ನಮಗೆ ಇರುವುದಿಲ್ಲ. ಭಾರತದ ಪ್ರಧಾನಿ ಇಂದಿರಾ ಗಾಂಧಿಯವರೂ ಸಿಂಹಳದ ಪ್ರಧಾನಿ ಸೇನಾ ನಾಯಕೆಯವರೂ ವಿವಾದವೇನೇ ಇದ್ದರೂ ಅದನ್ನು ಸಂಧಾನದ ಮೂಲಕ ಶಾಂತ ಸೂರ್ಗದಿಂದಲೇ ಇತ್ಯರ್ಥಗೊಳಿಸಬಹುದೆಂದು ಅಂದಿದ್ದಾರೆ. ಇದು ಸದ್ಯವೇ ಪಡೆಯಬಹುದಾದ ಹೋರಾಟ—ಹೊಡೆದಾಟಗಳ ದಾರಿಯನ್ನು ತಡೆದಿದೆ. ಸದ್ಯಕ್ಕೆ ಸಮಾಧಾನ. ಇದರ ನಡುವೆ ಕಛತೀವು ನಡುಗುಡ್ಡೆಯ ಮೂರನೆಯ ಒಂದು ಮೂಲ ರಾಷ್ಟ್ರವೊಂದು ನೋಟ ಹರಿಸಿದೆ. 'ಅದು ಸೂರ್ಯ ಮುಳುಗದ ಸಾಮ್ರಾಜ್ಯ'ವಾಗಿ ಮೆರೆದಾಡಿ ಗತವೈಭವಗಳ ದಿವ್ಯ ಸ್ವಪ್ನ ರಾಣತ್ತಿರುವ ಬ್ರಿಟನ್. ಸಿಂಹಳ ಅಥವಾ ಭಾರತಗಳಿಗೆ ಸ್ವಾತಂತ್ರ್ಯ ಕೊಡುವಾಗ ಈ 'ವಿವಾದ ಗ್ರಸ್ತ ನಡುಗುಡ್ಡೆ'ಯ ಉಲ್ಲೇಖವಿಲ್ಲವಂತೆ. ಆದುದರಿಂದ ಅದು ತನಗೆ ಸೇರಿದ್ದು ಎಂದರ ಇಂಗಿತವಿದ್ದರೆ ಆಶ್ಚರ್ಯವಲ್ಲ. ಆದರೆ, ರಾಮನಾಡು ಮಹಾರಾಜರ ರಾಜ್ಯಕ್ಕೆ ಸೇರಿದ್ದೆಂಬುದಕ್ಕೆ ಆಧಾರ—ಸಾಕ್ಷ್ಯಗಳು ಪಟ್ಟಿಯಾಗಿದ್ದರೆ, ಬ್ರಿಟನ್ನಿನ ವಾದ ಹುಸಿಯಲ್ಲದ್ದು. ಅಂತೂ ಇದುವರೆಗೆ ಪಾಕಿಸ್ತಾನ— ಭಾರತಗಳ ನಡುವೆ ಸುತ್ತು ಮಾತುಕತೆಗಳು ನಡೆಯುತಿದ್ದರೆ, ಇನ್ನು ಸಿಂಹಳ—ಭಾರತಗಳು ಸುತ್ತು ಮಾತಿಗೆ ತೊಡಗುತ್ತವೆ. ನಮ್ಮ ಜೀವನವೇ ಈ ಮಾತುಕತೆಗಳಿಗೆ ಮೀಸಲಾಗಬಾರದು. ಕಛ್ಚಣದ ನ್ಯಾಯ ಮಂಡಳಿ ತೀರ್ಪಿನಿಂದ ಬೇರಾದಷ್ಟು ಸಾರ ಕಲಿತ ಭಾರತ ವಿವಾದಗಳನ್ನು ಯಾತ್ರೆಯೇ ನ್ಯಾಯ ಮಂಡಳಿಗೆ ಒಪ್ಪಿಸುವುದನ್ನು ಇನ್ನು ಮುಂದೆ ಒಪ್ಪಬಾರದು. ಸಾಕ್ಷ್ಯ—ಆಧಾರಗಳಿಗೆ ಮನ್ನಣೆ ಕೊಡುವ ಸತ್ಯಸಂಧತೆಯಿದ್ದರೆ, ವಿವಾದವು ಇತ್ಯರ್ಥವಾಗುವುದೇನೂ ದೊಡ್ಡದಲ್ಲ; ಆದರೆ, ರಾಜನೀತಿಯಲ್ಲಿ ಇದು ಸಾಧ್ಯವೆ?

ನಮ್ಮ ಭೂಭಾಗಗಳಾವುವು, ನಮ್ಮ ಗಡಿಯಲ್ಲಿದೆ ಎಂಬುದನ್ನು ಕಂಡುಕೊಂಡು, ಗಡಿ ರಕ್ಷಣೆಯ ಕಾರ್ಯದಲ್ಲಿ ಇಪ್ಪತ್ತು ವರ್ಷ ಸಂದರೂ ನಾವಿನ್ನೂ ಪೂರ್ಣ ತಜ್ಞರಾಗಿಲ್ಲವೆಂಬುದಕ್ಕೆ ಈಗಿನ ವಿಧ್ಯಮಾನಗಳೇ ಸಾಕ್ಷಿ. ನಮ್ಮ ಸೀಮೆಗಳಲ್ಲಿ ಸಮುದ್ರ ಕರಾವಳಿಯೇ ಬಹುಭಾಗವಾಗಿರುವುದು ಸುಸ್ಪಷ್ಟ. ಅದೂ ಸಮುದ್ರದಲ್ಲಿರುವ ನಮಗೆ ಸೇರಿದ ಕುದುರು—ನಡುಗುಡ್ಡೆಗಳಲ್ಲಿ ನಮ್ಮ ಸಾರ್ವಭೌಮತ್ವವನ್ನು ಪರಿಣಾಮಕಾರಿಯಾಗಿ ಜಮಾಯಿಸದೆ ಹೋದರೆ, ಅವೂ ವಿವಾದಗ್ರಸ್ತ ಪ್ರದೇಶಗಳಾಗಿ ಒಂದೊಂದಾಗಿಯೇ ನಮ್ಮ ಕೈ ಬಿಡಬಹುದು. ಕಛ್ಚಣದ ಪ್ರಕರಣದಿಂದ ನಾವು ಪಾಠ ಕಲಿತುಕೊಂಡಿರುವುದು ನಿಜವಾದರೆ, ನಮ್ಮ ಗಡಿ ತಮಡೆ ಸರಿಯಾಗಿ ಗೊತ್ತಿರಬೇಕು; ಗಡಿರಕ್ಷಣೆಯತ್ತ ನಮ್ಮ ನೇರ ದೃಷ್ಟಿಯಿರಬೇಕು. ಇಲ್ಲ, ನಮ್ಮ 'ಶಾಂತಿ'ಯ ದುರ್ಲಾಭವನ್ನು ವಿದೇಶೀಯರು ಪಡೆದೇ ತೀರ ತ್ತಾರೆ.

ಸಂಸ್ಕೃತ ಸನ್ಮಾನ

ಹಲವು ದರಕಗಳ ನಂತರವೀಗ ಸಂಸ್ಕೃತ ಭಾಷೆಯತ್ತ ಬುದ್ಧಿ ಜೀವಿಗಳ ದೃಷ್ಟಿ ಹರಿದಿದೆ. ಇದಕ್ಕೆ ಇತ್ತೀಚೆಗೆ ದೇಶದಲ್ಲಿ ಎದ್ದ ಭಾಷಾ ವಿವಾದ ಕ್ರಾಂತಿ ಜ್ವಾಲೆಯೇ ಕಾರಣವೆನ್ನಬೇಕು. ಭಾರತೀಯ ಸಂಸ್ಕೃತಿಯ ಜೀವನದ ವೇದಾಂತದ ಭಂಡಾರದ ಬೀಗದ ಕೈ ಸಂಸ್ಕೃತ. ಇದೇ ರಾಷ್ಟ್ರ ಭಾಷೆಯಾಗಬಾರದೇಕೆ? ಎಂದು ಹಲವರು ಪ್ರತಿಸಿದರೆ, ಅದೇ ರಾಷ್ಟ್ರ ಭಾಷೆಯಾಗಬೇಕು ಎನ್ನುತ್ತಾರೆ ಇನ್ನು ಕೆಲವರು. ಆದುದಂದಲೇ ಏಕತೆ ಮೂಡುವುದು; ಭಿನ್ನತೆ ಅಳಿಯುವುದು ಎಂದು ಹಲ್ಲಿಂದ ಹುಟ್ಟುವವರೂ ಇದ್ದಾರೆ, ಉಳಿದವರಲ್ಲಿ ಕೆಲವರು. ಬ್ರಿಟಿಷರು ಇಲ್ಲಿ ಶಿಕ್ಷಣ ಪ್ರಚಾರಕ್ಕೆ ತೊಡಗಿದಾಗ ಸಂಸ್ಕೃತ ಮತ್ತು ದೇಶೀಯ ಭಾಷೆಗಳಿಗೂ ಪ್ರಾಧಾನ್ಯ ನೀಡಲು ಸಿದ್ಧರಿದ್ದರು. ಆದರೆ, ಆ ಕಾಲದ ಇಂಗ್ಲಿಷ್ ಇಸಿಯರು "ನಮಗೆ ಇಂಗ್ಲಿಷ್ ಭಿಕ್ಷೆ ನೀಡಿ" ಅಂದರು. ರೋಗಿ—ವೈದ್ಯರ ಅಭಿಪ್ರಾಯದಲ್ಲಿ ಸಾಮ್ಯಬಂತು. ಸೊಸೆಯಾಗಿ ಬಂದವಳು ಅತ್ತೆಯನ್ನು ವಿಧವೆಯನ್ನಾಗಿ ಮಾಡಿದಳು. ಆದರೂ ಸಂಸ್ಕೃತ ಭಾಷೆಯ ಅಧ್ಯಯನವು ಸ್ಥಗಿತಗೊಳ್ಳಲಿಲ್ಲ; ಅದರ ಅಧ್ಯಾಸ ಅಧ್ಯಯನಗಳು ಪ್ರತಿಕೂಲ ಸ್ಥಿತಿಯಲ್ಲೂ ನಡೆದುವು, ನಡೆಯುತ್ತವೆ. ಆದರೆ, ಇಂದು ವಿಚಾರಿಸಬೇಕಾದ ಪ್ರಶ್ನೆ ಸಂಸ್ಕೃತವನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡುವುದಾದರೆ, ನಮ್ಮ ದೇಶದ ಭಾಷಾ ಸಮಸ್ಯೆ—ಪರಿಹಾರಗೊಳ್ಳುವುದು ನಿಜವೆ? ನಮ್ಮ ಇಂಗ್ಲಿಷ್ ಮೋಹ, ಮಾತೃಭಾಷಾ ಮೋಹಗಳು ಇದಕ್ಕೆ ಅಡ್ಡ ಬರಲಾರವೆ?

ಚಿತ್ರ ಪ್ರದರ್ಶನ

ಮಣಿಪಾಲ— ಇದೇ ತಾ ೧೦ರಿಂದ ೪ ದಿನಗಳ ಪರ್ಯಂತ ಸಂಗೀತ ಭೂಷಣ ವಿಶಾರದ ಬಿ. ವಿ. ಸುಂದರರಾಜ ಐಯ್ಯಂಗಾರರವರು ಮಣಿಪಾಲದ ನೆಹರೂ ಲೈಬ್ರೆರಿ ಹಾಲ್‌ನಲ್ಲಿ ದಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಪುಣ್ಯಕ್ಷೇತ್ರಗಳ ಚಿತ್ರ ಪ್ರದರ್ಶನ ಮತ್ತು ಗಾಯನ ಮುಖೇನ ನ್ಯಾಸ್ಯಾನವನ್ನು ಜರಗಿಸಿದರು.

ಸರಸಣ್ಣನ ಸರಸ

ರೊಡೇಸಿಯಾ ಸರಕಾರವನ್ನು ಅಂಕೆಗೆ ತರಲು ನಮ್ಮಲ್ಲಿಂದ ಸೈಯಂಸೇವಕರನ್ನು ಕಳಿಸಬಾರದೇ? ಅಂತ....

ವಚನ ಸುಧೆ

ಆತ್ಮಜ್ಞಾನ ಮನಾಯಾಸ
ಸ್ತಿತಿಕ್ಷಾ ಧರ್ಮನಿತ್ಯತಾ ||
ಪಾತ್ರೆ ಚೈವ ಗುಪ್ತಾ ದಾನಂ
ನಸ್ಯೇತಾನ್ಯೇತ್ರೇಷು ಭಾರತ ||

ಆತ್ಮಜ್ಞಾನ, ದುಃಖದೂರತೆ, ಸಹನಶೀಲತೆ, ಧರ್ಮಪರಾಯಣತೆ, ವಚನಪಾಲನೆ, ದಾನಶೀಲತೆ—ಇವು ಅಧರುಗಳಲ್ಲಿ ಎಂದಿಗೂ ಇರುವುದಿಲ್ಲ.

ಪುಸ್ತಕ ಚಿತ್ರ

ಶ್ರೀ ಕುತ್ತೆತ್ತೂರು ಸೀತಾರಾಮ ರಾಯರು ಶ್ರೀ ಉಡುಪಿ ಪೇಜಾವರ ಮಠಾಧೀಶರನ್ನು ಪರ್ಯಾಯಕ್ಕೆ ಪೂರ್ವಭಾವಿಯಾಗಿ ಸನ್ಮಾನಿಸಿದರು.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ

ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನೂ ಪಾತ್ರೀಕನ್ನೂ ನಿರೀಕ್ಷಿಸಿರಿ.

ಗೇಹ ರಾಜ್ಯದಲ್ಲಿ

ಪೂರು ಯಯಾತಿಗಳ ಕಾಲವಿದಲ್ಲ

೧

'ನೋಡಿ, ಇದೊಂದು ಎಂಥ ತಮಾಶೇಂತ?"

"ಯಾವುದು?'

'ಅಲ್ರಿ, ಆರಂಭ ಶೂರಾ: ಖಲು ದಾಕ್ಷಿಣಾತ್ಯಾ: ಅಂತ ಹಿಂದಿನವ್ರು ಮಾತು. ಆದ್ರೆ, ಈಗ ನೋಡುವಾಗ ಮರಾಠಿಗಳಿಗೇ ಮೊಳಲಪಡೂಂತ....'

"ಅಯ್ಯೋ, ಏನಾಯ್ತು?'

'ಅಗೋದೇನು? ಅಂದು ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದ ತೀರ್ಪಾಗಕ್ಕೆ ಏಕ ಸದಸ್ಯಾಯೋಗ ರಚಿಸಬೇಕೆಂದು ಆರಂಭ ಶೂರರಾದರು....'

"ಸರೀನ್ನು. ಆಗ ಆದರ ವರದಿಯನ್ನು ಉಭಯ ಪಕ್ಷಗಳೂ ಒಪ್ಪಬೇಕೆನ್ನುವುದರಲ್ಲಿಯೂ ಅವರೇ ಅರಂಭಶೂರರು...?

'ಹೌದ್ರಿ, ಆ ಮೇಲೆ ವರದಿ ಪ್ರಕಟವಾದ ಮೇಲೆ ಅದನ್ನ ವಿರೋಧಿಸುವುದರಲ್ಲಿಯೂ ಅವರೇ ಅಗ್ರಗಾಮಿಗಳು.'

"ಹ್ಞೂಂ... ರಾಷ್ಟ್ರೀಯ ಅಭಿಪ್ರಾಯ ಮೂಡಿಸಬೇಕೆನ್ನುವುದರಲ್ಲಿ ಈಗವರು ಮುಂದೆ.'

'ಅಲ್ರಿ, ಅದೆಲ್ಲಾ ಬಿಟ್ಟು ಈಗ ಇನ್ನೊಂದು ವಿಚಾರ ಹೊರತಂದಿದ್ದಾರಂತೆ...'

'ಏನದು?"

'ಅರುವತ್ತು ವಯಸ್ಸುಗಳಿಗೆ ಮೀರಿದ ಕಾಂಗ್ರೆಸಿಗರಾರೂ ಹುದ್ದೆಗಳಲ್ಲಿರಬಾರದು, ಕಾಂಗ್ರೆಸಿಗರು ಹತ್ತು ವರ್ಷಕ್ಕಿಂತ ಹೆಚ್ಚುಕಾಲ ಶಾಸನ ಸಭಾ ಸದಸ್ಯತ್ವವೇ ಮೊದಲಾದ ಪದವಿಗಳಲ್ಲಿರಬಾರದು. ಅಧಿಕಾರಕ್ಕೆ ಬರುವ ಮಂತ್ರಿಗಳೂ ಹಾಗೂ ಅನಂತರದ ತನ್ನ ಆಸ್ತಿಪಾಸ್ತಿಗಳ ವಿವರಗಳನ್ನು ಕಾಂಗ್ರೆಸಿಗರು ಪ್ರದೇಶ ಕಾಂಗ್ರೆಸ್‌ಗೆ ಕೊಡಬೇಕು...."

'ಇದೇನೇಯೆ?'

'ಏಕೆ, ಭಾರೀ ಹಗುರವಾಗಿ ತೆಗೆದುಕೊಳ್ತೀರಿ?'

"ಅಲ್ರೆ, ಇಂಥದೇ ಸೂತ್ರವನ್ನು ನೀಲಂ ಸಂಜೀವ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಿದ್ದಾಗ ಹೇಳಿದ್ದರು. ಅವರೂ ಇದನ್ನೇ ಒಂದು ರೀತಿಯಿಂದ ಸಮರ್ಥಿಸಿದರು. ಅದನ್ನೇ ಈಗ ಮರಾಠಿ ಬಲಮುರಿ ಶಂಖದಿಂದ ಸುರಿಯುತಿದ್ದಾರೆ ಅಷ್ಟೆ.'

'ಅಂದ್ರೆ ದಾಕ್ಷಿಣಾತ್ಯರ ಆರಂಭ ಶೂರತನಕ್ಕೇನೂ ದಕ್ಕೆ ಬಟ್ಟೆಲ್ಲ ಅಂತಾಯಿತು...."

"ಅಲ್ರೆ, ಯಾರು ಏನಂದರೇನು? ಅಂದದ್ದನ್ನೆಲ್ಲಾ, ಬಿಡು, ಹತ್ತರಲ್ಲಿ ಒಂದನ್ನಾದರೂ ಕಾರ್ಯರೂಪಕ್ಕೆ ತರುವವರು ಯಾರು?"

"ಮಹಾರಾಷ್ಟ್ರ ಕಾಂಗ್ರೆಸ್‌ನ ನೀತಿ ಒಳ್ಳೆಯದೇ ಅಲ್ವೆ?"

"ನಿಜಕ್ಕೂ. ಆದರೆ ನೆನಪಿಡು; ಈ ನಿಯಮಗಳನ್ನು ಜ್ಯಾರಿಗೆ ತಂದರು ಅನ್ನು. ಅದು ಕಾಂಗ್ರೆಸಿಗರಿಗೆ ಮಾತ್ರ ಅನ್ವಯವಾಗುವುದು ತಾನೆ?'

"ಹ್ಞೂಂ, ಏನಾಯಿತು?

"ಆಗೋದೇನು? ಒಂದು ವೇಳೆ, ಈ ನೀತಿಯನ್ನು ಕಟ್ಟುನಿಟ್ಟಾಗಿ ಅನ್ವಯಿಸಿದರೆ, ಬೇಡ, ಸೇ. ಅರವತ್ತು ಅನ್ವಯಿಸಿದರೆ, ಅಲ್ಲಿಗೆ ಕಾಂಗ್ರೆಸಿನ ಸಮಾಧಿ ತೋಡಿದಂತೆಯೇ"

'ಹೇಗೆ?'

'ಹೇಗೆ, ನೋಡ, ಅರುವತ್ತು ವರ್ಷದವರೆಗೆ ಕಾಂಗ್ರೆಸ್ಸು; ಆ ಮೇಲೆ, ಇದೆಯಲ್ಲ ಜನ ಕಾಂಗ್ರೆಸ್ಸು, ಕೇರಳ ಕಾಂಗ್ರೆಸ್ಸು, ಬಂಗ್ಲಾ ಕಾಂಗ್ರೆಸ್, ಬಂಡುಗಾರ ಕಾಂಗ್ರೆಸ್ಸು.....'

'ಒ.....'

"ಹಾಗೆಯೇ ಹತ್ತು ವರುಷಗಳ ತನಕ ಕಾಂಗ್ರೆಸ್ ಮಂತ್ರಿ. ಹನ್ನೊಂದನೆಯ ವರ್ಷ 'ಸಂಯುಕ್ತರಂಗ ಸರಕಾರದ ಮಂತ್ರಿ' ಹೀಗೆ ಪ್ರತ್ಯಕ್ಷ ರಂಜಕಾರಣದಿಂದ ನಿವೃತ್ತನಾಗಲು ಯಾರೂ ಒಪ್ಪುವುದಿಲ್ಲ. ಚರಣಸಿಂಗ್, ಅಜಯ ಮುಖರ್ಜಿ ಮೊದಲಾದವರು ಈಗಾಗಲೇ ಜನತೆಗೆ ಪಾಠವಿತ್ತಿದ್ದಾರೆ, ಸಕ್ಸಾಂಕರ ಸಾಧ್ಯವೆಂದು.'

'ಅಲ್ರಿ, ಅರುವತ್ತು ತುಂಬಿದವರು ಅಥವಾ ಹತ್ತು ವರ್ಷ ಹುದ್ದೆಯಲ್ಲಿದ್ದವರ ಮೇಲೆ ಪ್ರತಿಬಂಧ ಹೇರಿದರೆ?"

"ನೋಡು, ಇಂದು ಕಾಂಗ್ರೆಸ್ಸು ಬದುಕಿ ಉಳಿದಿರುವುದು ಈ ಪ್ರಾಯದಾಟಿದ, ಅಥವಾ ಅದಕ್ಕೆ ಹತ್ತಿರದವರ ಬೆಂಬಲದಿಂದ. ಯುವಜನಾಂಗವನ್ನು ಕಾಂಗ್ರೆಸ್ ಸಂಪೂರ್ಣ ಮರೆತು ಬಿಟ್ಟಿದೆ. ಅಜ್ಜಯ್ಯನ ನೀತಿಯನ್ನು ಮೊಮ್ಮಗ ಕೇಳುತ್ತಾನೆಯೆ? ಈ ಅಜ್ಜಯ್ಯಗಳು ನಿವೃತ್ತರಾಗಿ ಮಕ್ಕಳಿಗೆ, ಮೊಮ್ಮಕ್ಕಳಿಗೆ ಕೀಲಿಕೈ ನೀಡಿ ತಾವು ಮಾರ್ಗದರ್ಶನ ಮಾಡುತ್ತ ಇರಬೇಕು. ಇದಕ್ಕೆ ನಿರ್ಬಂಧ ಹಾಕುವುದು ಹೇಗೆ? ಅವರಾಗಿ ತಿಳಿದು ನಡೆಯುದಿದ್ದರೆ, ಮೊಮ್ಮಗ ಬೇರೆಯೇ ಮನೆ ಮಾಡುತ್ತಾನೆ. ಅವನಿಗೂ ಯಜಮಾನ ಅನಿಸುವ ಆಸೆಯಿಲ್ಲವೆ? ಎಲ್ಲರೂ ಹಾರುವಿನಂತೆ ಅಪ್ಪನಿಗೆ ತಮ್ಮಯೌವನ ಕೊಡಲು ಮಂಡಾಗುವುದಿಲ್ಲ...."

"ಅದ್ರೆ ನೋಡಿ, ಅರುವತ್ತು ತುಂಬಿದವರನ್ನು ದೂರ ಮಾಡಿದ್ರೆ ಅವ್ರು ಬೇರೆಯೇ ಪೀಕಲಾಟಿಗೇಳಿಸ್ತಾರೆ. ಈಗ, ರಾಜಾಜಿಯನ್ನು ನೋಡಿ...."

'ಹೌದು, ಅವರಿಗೆ ಕಾಂಗ್ರೆಸ್ಸಿನಲ್ಲಿ, ಸ್ಥಾನ ದೊರೆಯಲಿಲ್ಲ; ಕಟ್ಟಿದರು ಸ್ವತಂತ್ರ ಪಕ್ಷವನ್ನು, ಬೆಂಬಲಿಸಿದರು ದ್ರಾವಿಡ ಕಳಗವನ್ನು—ಇನ್ನೇನು, ಕಾಂಗ್ರೆಸ್ಸನ್ನು ನೆಲಸಮ ಮಾಡಿಯೇ ತಾನು ಗೋರಿ ಸೇರುವುದಾಗಿ ಗುಡುಗುತ್ತಾರೆ...."

'ಹಾಗಾದ್ರೆ ಇನ್ನೊಂದು ಕೆಲಸ ಮಾಡಬಹುದು. ಅರುವತ್ತು ತುಂಬಿದವರು ಮಾತ್ರ ಅಧಿಕಾರದಲ್ಲಿ ಉಳಿಯಬಹುದು.'

"ಅದ್ರೂ ಹಾಗೇ ಅರುವತ್ತರ ವರೆಗೆ ಯುವಕ ಕಾಂಗ್ರೆಸ್, ಆ ಮೇಲೆ ಕಾಂಗ್ರೆಸ್...."

'ಇದು ಒಳ್ಳೆ ಕಥೆಯಾಯ್ತಲ್ಲ? ಇದಕ್ಕೆ ಸೂಕ ಪರಿಹಾರವೂ ಇಲ್ಲಹಾಗಾದ್ರೆ?"

"ಅದೇ ಅಂದದ್ದು ನೋಡ, ಪೂರು ಯಯಾತಿಗಳ ಕಾಲ ಕಳೆದು ಹೋಗಿದೆ.?

"ಹ್ಞೂಂ...'

"ಇಲ್ಲಿ ಬಾ...."

"ಹ್ಞೂಂ....'

"....ಅಲ್ಲವೆ?'

"ಹ್ಞೂಂ...'

—ಗೋರಾ

ಕಲ್ಪನಾ ಲಹರಿ

ಹೃದಯಾಂತರಂಗದಲಿ
ಮೃದು ತರದ ಭಾವದಲಿ
ಹೆದವಾದ ಹೊಂಬೆಳಕು ತಾ ಬೆಳಗಿದಾಗ!
ಒಂದೆರಡು ತರವಲ್ಲ
ಹೇಳಲಸದಳ ಸೊಲ್ಲ
ತಳದಿಂದಲಾಲಹರಿ ಉಕ್ಕಿಹರಿದಾಗ
ಕಾಳ್ಗಿಚ್ಚು ಉದಿಸಿತ್ತು
ಬಾಳ್ಗೆ ಬಾಳೆನಿಸಿತ್ತು,
ಪೀಳಿಗೆಗೆಯೊಡಾರ ಈ ಬಾಳು ಮುತ್ತು!
ಲೆಕ್ಕವಿಡಿಕೆ ಹಿಡಿದೆತ್ತಿ
ಮಿಕ್ಕುದನು ಬದಿಗೊತ್ತಿ
ನಕ್ಕು ಕೈಕೇಲಿಬಿಳಲೈತಂದೆ ಸುತ್ತು!
ಕಲಿಯುಗದ ಹಾದಿಯಲು
ಬಲಿಕೊಡುವ ಗಾದಿಬಲು
ಕಲಿವರನು ಬಂದಿಪನು ಮೇಘುಗಳ ಹೊತ್ತು!
ಕಾವವನದೀ ಸೊತ್ತು
ಭಾವನೆಯ ಸಂಪತ್ತು
ನವ ಭಾವ ಪ್ರಾಣ ಪ್ರಾಣಕು ಮನವನ್ನು ಹೊತ್ತು!
ನವ ಲಹರಿ ಐತಂದು
ನನ್ಯತೆಯ ತಳೆದೊಂದು
ಭವ್ಯ ಭಾವನ ಲಹರಿ ಹೊರ ಹೊರಳಿ ಬಂದು!
ಶಬ್ದ ಸರಣಿಯುನಿಂದು
ಸ್ನಿಗ್ಧತೆಯ ಹೊಸೆದೊಂದು
ಸ್ಥಬ್ದತೆಯುಇಳಿಸುವುದು ತಾ ಬಿಂದು ಬಿಂದು.
ಕೊಳೆಹಳ್ಳ ಪಳ್ಳದಲು
ಹೊಳೆ ಸರಸ ಶರಧಿಯಲು
ಮಳೆರಾಯ ತುಂಬಿರ್ದ ಈ ಉದಕ ದಘ್ಯ!
ಎನಿತೆನಿತೊ ಜೀವಿಗಳು
ಘನಬಾಳು ನಡೆಸುವವು
ದಿನವು ಕೃತಕೃತ್ಯತೆಯ ಪಡೆವುದನಘ್ಯ!
ಅಗ್ನಿಯೂ ಪ್ರಭೆಯ ನ್ನ
ನನ್ನ ನಾನುಣಬೇಕು
ಭಗ್ನ ಜ್ವಾಲೆಯುದೆಂದು ಗೊತ್ತಿರದ ಹಾತೆ!
ಹತ್ತಿರಕ್ಕೆ ಹಾಯುತ್ತ
ಲತ್ತಿತ್ತ ಸುಳಿಯುತ್ತ
ಸುತ್ತಿ ಸುತ್ತಿಯು ಕೊನೆಗೆ ಜೀವನಕೆ ಸೊತೆ!

—ಶ್ರೀ ಮ. ಗೋ. ರಾವ್

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಸನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸ್—'ವಿಜಯ ಬ್ಯಾಂಕ್ ಬಿಲ್ಡಿಂಗ್',
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—3

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ನೀವು—ನಿಮ್ಮ ಭಾಷೆ

ಭಾಷೆಯ ಭೂಷಣತೆ

ಬರೆದವರು:

ಶ್ರೀ ಕೆ ಎಸ್. ಪದ್ಮನಾಭಾಚಾರ್ಯ, ಕನ್ನಡ-ಹಿಂದೀ ವಿದ್ವಾನ್.

ಮಾನವನು ಸಮಾಜ ಜೀವಿಯು! ಆತ ಬದುಕನ್ನು ತನ್ನ ಸಮಕ್ಷಮುತ್ತಲಿರುವ ಜನರೊಡನೆ ಬೆರೆತು ಸವೆಸಬೇಕಾಗುತ್ತದೆ! ಹಾಗೆ ಜನ ಸಮೂಹದೊಡನೆ ಕೂಡಿ ತನ್ನ ಬದುಕನ್ನು ಬಂಗಾರ ಮಾಡಿಕೊಂಡು ಇರುವುದಕ್ಕೆ ನಿರಂತರವೂ ಮಾಡುತ್ತಿರುವ ಚಟುವಟಿಕೆಗಳೆಲ್ಲವನ್ನೂ ಭಾಷೆಯ ಮೂಲಕವೇ ಕೈಗೊಳ್ಳುತ್ತಾನೆ!

ಚಟುವಟಿಕೆಯೆಂಬುದು, ಮಾನವ ಜೀವನದ ಸಹಜ ಗುಣ! ಅದನ್ನು ಬಳಸಿಕೊಳ್ಳದೆ 'ಸುಮ್ಮನಿರುತ್ತೇವೆ' ಎಂದರೆ, ಪ್ರಾಣಿಯಂತೆ ಬಾಳಬೇಕಾಗುತ್ತದೆ! 'ತಾನೊಬ್ಬನೇ ಏನಾದರೂ ಚಟುವಟಿಕೆ ನಡೆಸಿಕೊಂಡಿದ್ದೇನೆ' ಎಂದರೂ ಅದು ಸಮಾಜ ಜೀವಿಗೆ ಒಗ್ಗುವುದಿಲ್ಲ! ಹಾಗೆ ತನ್ನನ್ನು ಸಮೂಹದಿಂದ ಬೇರ್ಪಡಿಸಿಕೊಂಡು ಇರಲು ಮಾನವನಿಗೆ ಸಾಧ್ಯವಾಗುವುದಿಲ್ಲ!

ಸಮಾಜದೊಡನೆ ಕೂಡಿ, ತನ್ನ ಬಾಳಿನ ವ್ಯವಹಾರವನ್ನು ಸಾಗಿಸಬೇಕಾಗಿರುವುದು ಅವಶ್ಯ. ಅಂತಹ ವ್ಯವಹಾರಕ್ಕೆ ಭಾಷೆಯೇ ಮುಖ್ಯ ಸಾಧನ! ಭಾಷೆಯ ಮುಖಾಂತರವೇ ಪರಸ್ಪರ ತಿಳಿದುಕೊಂಡು, ತಿಳಿಸಿಕೊಂಡು, ಸ್ನೇಹ ಸೌಹಾರ್ದದಿಂದ ಜೀವನವನ್ನು ಬೆಳೆಸುತ್ತಾನೆ! ಬೆಳಗಿಸುತ್ತಾನೆ!

ಒಂದೊಂದು ದೇಶದಲ್ಲಿ ಒಂದೊಂದು ಭಾಷೆ ಬಳಕೆಯಲ್ಲಿದೆ! ಆ ಭಾಷೆಯ ಮೂಲಕವೇ ವಿಚಾರ ವಿನಿಮಯ ನಡೆಯುತ್ತದೆ. ಜನ ಸಮೂಹ ಹೆಚ್ಚು ಹೆಚ್ಚು ನಾಗರಿಕವಾದಂತೆ, ಜನರಲ್ಲಿ ಪರಸ್ಪರ ವ್ಯವಹಾರ ಹೆಚ್ಚಿದಂತೆ, ಆ ಭಾಷೆಯು ಬೆಳೆದು, ಅದು ಒರೇ ಮಾತಿನಿಂದ ಇರದೆ, ಅದು ಲಿಪಿಯನ್ನು ಪಡೆದ, ಮತ್ತೆ ಓದುವ ಬರೆವ ಭಾಷೆಯಾಗುತ್ತದೆ! ಹಾಗೆ ಭಾಷೆಯನ್ನು ಮತ್ತೆ ಓದು ಬರಹಗಳ ಮೂಲಕ ಬಳಸಿಕೊಂಡು ಬೆಳೆಸಿಕೊಂಡು, ನಾವು ನಮ್ಮ ವ್ಯವಹಾರಗಳನ್ನು, ಶುದ್ಧವಾಗಿ ಸುಗಮವಾಗಿ ಸಾಗಿಸಿಕೊಳ್ಳುತ್ತೇವೆ! ಅದಕ್ಕೆ 'ಸಾಹಿತ್ಯಿಕ ಭಾಷೆ' ಎನ್ನುತ್ತೇವೆ! ಎಲ್ಲ ಭಾಷೆಗಳ ಚರಿತ್ರೆಯಿದೇ.

ಕೆಲವು ಭಾಷೆಗಳು, ಹಾಗೆ ಜನ ಸಮೂಹದ ವ್ಯವಹಾರದ ಒತ್ತಡದ ಕಾರಣದಿಂದ, ಸಾಹಿತ್ಯಿಕ ಭಾಷೆಯಾಗಿ ಸಿದ್ಧಗೊಂಡು ಬೆಳೆಯುತ್ತವೆ! ಅಂತಹ ನಮ್ಮ ಕನ್ನಡ ಭಾಷೆಯೇ ಉದಾಹರಣೆ! ಆದರೆ, ಕೆಲವು ಭಾಷೆಗಳು, ಅಂತಹ ಒತ್ತಡ ಇರದೆ, ಒರೇ ಮಾತಾಡುವ ಮಾತಿನ ಭಾಷೆಯೇ ಆಗಿರುತ್ತದೆ! ನಮ್ಮ ತುಳು ಭಾಷೆಯೇ ಇದಕ್ಕೆ ಉದಾಹರಣೆ! ಕನ್ನಡ ಭಾಷೆಯನ್ನೇ ಪ್ರಾದೇಶಿಕ ಭಾಷೆಯಾಗಿ ಬಳಸಿಕೊಳ್ಳುತ್ತಿದ್ದೇವೆ!

ಶಾಲೆಯಲ್ಲಿ, ಬೇರೆ ಬೇರೆ ವಿಷಯಗಳ ಪಾಠಗಳನ್ನು ಕಲಿಯುತ್ತಾರೆ! ಅದೆಲ್ಲಾ, ಕನ್ನಡ ಭಾಷೆಯ ಮುಖಾಂತರವೇ ಸಾಗುತ್ತದೆ! ಅದಕ್ಕೆ ಅನುಕೂಲವಾಗುವಂತೆ, ಭಾಷಾ ಪಾಠದಲ್ಲಿ ಸ್ಪಷ್ಟ ಉಚ್ಚಾರಣೆಯಿಂದ, ಮಕ್ಕಳು ಶುದ್ಧವಾಗಿ ಮಾತಾಡುವಂತೆ, ಮತ್ತೆ ತಾವು ಮಾತಾಡುವುದನ್ನು ಶುದ್ಧವಾಗಿ ಓದಿ-ಬರೆದು ತಿಳಿಸುವಂತೆ ಕಲಿಸುವುದೇ ಭಾಷಾ ಪಾಠದ ಮುಖ್ಯ ಉದ್ದೇಶವಾಗಿರುತ್ತದೆ!

ಸಮಾಜ ಜೀವಿಯಾದ ಮಕ್ಕಳು, ಮುಂದೆ ಸಮಾಜದಲ್ಲಿ ಯೋಗ್ಯ ನಾಗರಿಕರಾಗಿ, ಮಾತು ಓದು ಬರಹಗಳಿಂದ, ಉತ್ತಮ ವ್ಯವಹಾರಗಳನ್ನು ಎಲ್ಲರೊಡನೆ ಉಚ್ಚ ಮಟ್ಟದಲ್ಲಿ ಕೂಡಿ ನಡೆಸಬೇಕಾಗುತ್ತದೆ! ಅದಕ್ಕೆಲ್ಲಾ ಭಾಷೆಯೇ ಮಾಧ್ಯಮ. ಸುಂದರವಾದ ಭಾಷೆಯನ್ನು ಸುಂದರವಾದ ಮಾತು-ಓದು-ಬರಹಗಳ ಮೂಲಕ ಬಳಸಿಕೊಂಡಂತೆ, ವ್ಯವಹಾರಗಳೂ ಸುಂದರವಾಗುತ್ತವೆ! ಆದಕ್ಕಾಗಿ, ಶಾಲೆಯಲ್ಲಿ ಕ್ರಮಬದ್ಧವಾಗಿ ಭಾಷಾ ಪಾಠವನ್ನು ಮಾಡಬೇಕಾಗುತ್ತದೆ!

ಭಾಷೆ ಭಾವದೊಡನೆ ಬೆರೆತು, ಉತ್ತಮ ವಿಷಯ—ವಿಚಾರಗಳ ಸಂಪರ್ಕದಿಂದ ರಸಭರಿತವಾಗಿ ವ್ಯಕ್ತವಾಗುವಾಗ, ಅದು ಸಾಹಿತ್ಯವೆನಿಸುತ್ತದೆ ಸಾಹಿತ್ಯಾಧ್ಯಯನದಲ್ಲಿ ಜ್ಞಾನ ಆನಂದ ಎಂಬ ಎರಡು ವಿಧದ ಪ್ರಯೋಜನವಿದೆ. ಆ ಆನಂದವು ಮನಸ್ಸನ್ನು ಪರಿಷ್ಕರಿಸುವಂತಹದಾಗಿದ್ದು, ಆ ಪರಿಷ್ಕೃತ

(ಎಂಟನೇ ಪುಟ ನೋಡಿರಿ)



ಭಕ್ತ ಶ್ರೀ ಗೋವಿಂದ ದಾಸ್

ಸಿಂಡಿಕೇಟ್ ಬ್ಯಾಂಕ್

ತನ್ನ ಹೊಸ 5 ಶಾಖೆಗಳನ್ನು

ಈ ಕೆಳಗಿನ ಗ್ರಾಮಾವಲಯಗಳಲ್ಲಿ
ಮಾರ್ಚ್ 27, 1968ರಂದು ತೆರೆದಿದೆಯೆಂದು ತಿಳಿಸಲು
ಹರ್ಷಪಡುತ್ತದೆ.

ಕೋಟೇಶ್ವರ	ದಕ್ಷಿಣ ಕನ್ನಡ ಜಿಲ್ಲೆ
ಹಿರಿಯಡಕ	
ವೇಣೂರು	
ಬಾಣಾವರ	ಹಾಸನ ಜಿಲ್ಲೆ
ಜಾವಲಗೆರ	ರಾಯಚೂರು ಜಿಲ್ಲೆ

ಮೇಲಿನ ಶಾಖೆಗಳ ಹೆಚ್ಚಳದಿಂದ ಸಿಂಡಿಕೇಟ್ ಬ್ಯಾಂಕು ತನ್ನ ಶಾಖೆಗಳ ಸಂಖ್ಯೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 50ಕ್ಕೂ, ಹಾಸನ ಜಿಲ್ಲೆಯಲ್ಲಿ 2ಕ್ಕೂ ಮತ್ತು ರಾಯಚೂರು ಜಿಲ್ಲೆಯಲ್ಲಿ 4ಕ್ಕೂ ಏರಿಸಿ, ಮೈಸೂರು ರಾಜ್ಯದಲ್ಲಿ ತನ್ನ ಒಟ್ಟು ಶಾಖೆಗಳ ಸಂಖ್ಯೆಯನ್ನು 120ಕ್ಕೆ ಮುಟ್ಟಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಶಾಖೆಗಳನ್ನು ತೆರೆದು ಸಿಂಡಿಕೇಟ್ ಬ್ಯಾಂಕು, ದೇಶದ ಇತರ ಬ್ಯಾಂಕುಗಳು ಯಾವದೇ ಜಿಲ್ಲೆಯಲ್ಲಿ ಅಥವಾ ನಗರದಲ್ಲಿ ಹೊಂದಿರುವ ಶಾಖೆಗಳಿಗಿಂತ ಹೆಚ್ಚಿನ ಸಂಖ್ಯೆಯ ಶಾಖೆಗಳನ್ನು ಒಂದೇ ಜಿಲ್ಲೆಯಲ್ಲಿ ಹೊಂದಿರುವ ಏಕೈಕ ಬ್ಯಾಂಕಿಂಗ್ ಸಂಸ್ಥೆಯೆನಿಸಿಕೊಂಡಿದೆ.

ವ್ಯಾಪಕ ಪ್ರಮಾಣದ ದಕ್ಷ, ಪರಿಪೂರ್ಣ ಆರ್ಥಿಕ ಸೇವೆಗೆ

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 224

ಶಿಸ್ತು ಬಂಡವಾಳ ಮತ್ತು ಕಾದಿಟ್ಟ ನಿಧಿ: ರೂ. 3-50 ಕೋಟಿ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿವೆ

ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಏಜೆಂಟ್

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್/ಕೆರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು.

ಭಕ್ತಿ ಜ್ಞಾನ ವೈರಾಗ್ಯ ತ್ರಿವೇಣಿ

ಶ್ರೀ ಕುತ್ತಿತ್ತೂರು ಸೀತಾರಾಮರಾಯರು

ಪರಶುರಾಮ ಕ್ಷೇತ್ರದ ಮಂಡಳೂರು ಸದಾಶಿವ ಕುತ್ತಿತ್ತೂರು ಎಂಬ ಒಂದು ಹೆಳ್ಳಿ. ಉಡುಪಿ ಹಲವಾರು ವರಾಧೀಶರಿಂದ ಅಪ ಗೃಹೀತರಾದ ಭಕ್ತಜ್ಞಾನ ವೈರಾಗ್ಯಗಳ ಮೂರ್ತಿಯೆನಿಸಿದ ಶ್ರೀ ಗೋವಿಂದದಾಸ ಮತ್ತು ಶ್ರೀಮತಿ ಗಂಗಾಬಾಯಿಯವರಿಗೆ ಶ್ರೀ ಸೀತಾರಾಮರಾಯರು ಮೂರನೆಯ ಪುತ್ರರಾಗಿ ೯-೪-೧೯೪೯ರಲ್ಲಿ ಜನಿಸಿದರು. ಶ್ರೀ ಗೋವಿಂದದಾಸರು ಒಟ್ಟು ಏಳು ಗಂಡು ಮತ್ತೊಂದು ಹೆಣ್ಣು ಹೀಗೆ ಎಂಟು ಮಕ್ಕಳ ತಂದೆಯೆನಿಸಿ ಎಪ್ಪತ್ತು ವರ್ಷಗಳ ಕಾಲ ಈ ಲೋಕದಲ್ಲಿ ಭಗವದ್ಸೇವಕರಾಗಿ ಬಾಳಿ ೧೯೫೯ರಲ್ಲಿ ಪರಿಂಧಾಮವನ್ನೈದಿದರು.

"ತಂದೆಯ ಗುಣ ಮಕ್ಕಳಲ್ಲಿ"ಎಂಬಂತೆ ಶ್ರೀ ಗೋವಿಂದದಾಸರ ಮಕ್ಕಳೂ ಜ್ಞಾನ ಭಕ್ತಿ ವೈರಾಗ್ಯಗಳ ಮೂರ್ತಿಗಳು. ಶ್ರೀ ಸೀತಾರಾಮರಾಯರಿಗೆ ಹಿರಿಯರಲ್ಲಿ ಭಕ್ತಿ, ಕಿರಿಯಲ್ಲಿ ವಾತ್ಸಲ್ಯ. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಶ್ರೀ ಪಾವಂಜೆ ಗೋಪಾಲಕೃಷ್ಣಯ್ಯನವರಿಂದ ಓನಾಮ ಪಾಕ ಸಿಕೊಂಡು ಮುಂದೆ, ಮೈಸೂರಿನಲ್ಲಿ ಎಫ್. ಎ. ತನಕ ಓದಿ, ಮಂಗಳೂರಿನ ಕಲೆಕ್ಟರರ ಕಛೇರಿಯಲ್ಲಿ ಉದ್ಯೋಗಕ್ಕೆ ಸೇರಿದರು. ಇದರಿಂದ ಬರುವ ವೇತನವು ಮನೆಯಲ್ಲಿನ ಬಡತನದ ಭೂತವನ್ನು ತೃಪ್ತಿಪಡಿಸಲು ಸಾಲದೆಂದು ಅಧಿಕಾರಿಗಳ ಬರಲು, ಸ್ವತಂತ್ರೋದ್ಯೋಗವೇ ಉತ್ತಮವೆಂಬ ನಿರ್ಧಾರಕ್ಕೆ ಬಂದರು ತಂದೆಯವರಿಗೆ ದೈವ ಪ್ರೇರಣೆಯಾದಂತೆ, ಅವರ ಅನ ಮತಿ ಪಡೆದು ಮನೆಯಲ್ಲಿ ಹಿರಿಯಣ್ಣ ಶ್ರೀ ಹಯಗ್ರೀವಾಚಾರ್ಯರನ್ನು ಇರಿಸಿ, ಉಳಿದ ಸಹೋದರರೊಡನೆ ಶ್ರೀ ಸೀತಾರಾಮರಾಯರು ಮೈಸೂರಿಗೆ ಬಂದು ಹೋಟೇಲು ಉದ್ಯಮವನ್ನಾರಂಭಿಸಿದರು. ಇದು ಹೋಟೇಲು ಉದ್ದಿಮೆಯ ಹೊಸದಾರಿ ತುಳಿಯುವುದಕ್ಕೆ ದಾರಿಯಾಯಿತು.

ಮೈಸೂರಿನಿಂದ ಶ್ರೀ ರಾಯರು ಮದ್ರಾಸು—ನೀಲಗಿರಿ ಮುಂತಾದ ಪುಗಳ್ಳಲ್ಲೂ ಹೋಟೇಲು ತೆರೆದರು. ಅವೆಲ್ಲವೂ ಜನಪ್ರಿಯವಾದುವು, ಅದರಪ್ರಾಯವಾದುವು ಸರ್ವೋತ್ಕೃಷ್ಟವೆನಿಸಿದುವು. ಶ್ರೀ ರಾಯರು 'ಹೋಟೇಲ್ ರಾಜಾ' ಎಂಬ ಗೌರವಕ್ಕೂ ಪಾತ್ರರಾದರು.

ಶ್ರೀ ಸೀತಾರಾಮರಾಯರು ನಿರಾಡಂಬರ ವ್ಯಕ್ತಿ. 'ನನ್ನದೆಲ್ಲವೂ ಹಯ ಸೊತ್ತು. ಇದನ್ನು ನನ್ನದೆಂದು ತಿಳಿದರೆ, ನನ್ನ ಮತ್ತಿದರ ಸಂಶಯಂಗುತ್ತದೆ' ಇದು ಶ್ರೀ ರಾಯರ ಬಿಚಿತ ಮತ— ಇಲ್ಲಿಯೇ ರಾಯರ ವೈರಾಗ್ಯವೆನ್ನು ಪ್ರಬಲವಾಗಿತ್ತೆಂದು ತಿಳಿಯುತ್ತದೆ. ಶ್ರೀ ಗೋವಿಂದದಾಸರು ಊರ್ತ್ವಪಡೆ ಮದ್ರಾಸದಲ್ಲಿ ತಂಗಿ ಶ್ರೀ ಪಾರ್ಥಸಾರಥಿಯ ನ್ನು ಸೇವಿಸುತ್ತ ಭಕ್ತವೃಂದವನ್ನು ಆಕರ್ಷಿಸಿದ್ದರು. ಇವರಿಂದ ಸೆಳೆಗೊಂಡ ಶ್ರೀ ಪಾರ್ಥಸಾರಥಿಯ ಶ್ರೀ ದಾಸರ ಮಕ್ಕಳನ್ನು ಮದ್ರಾಸಕ್ಕೆ ಆಹ್ವಾನಿಸಿ ಅನುಗ್ರಹಿಸಿದನೆಂದು ಹೇಳಬಹುದು.

೧೯೪೦ರಲ್ಲಿ ಮದ್ರಾಸದಲ್ಲಿ 'ದಾಸ ಪ್ರಸಾದ'ವು ನಿರ್ಮಿತವಾಯಿತು. ಆ ವೇಳೆ ತ್ರಿಮತಿಯರು ಪೀಠಾಧಿಪತಿಗಳು, ರಂಜಮಠಾಧೀಶರು ಮತ್ತಿತರ ಗಣ್ಯ ಮಹನೀಯರು 'ಅದು ಒರೇ ಮನೆಯಲ್ಲ, ಮನೆಯ ರೂಪದಲ್ಲಿರುವ ದೇವಾಲಯ'ವೆಂದು ಉದ್ಗರಿಸಿದರು — 'ದಾಸ ಪ್ರಸಾದ' ಈ ಬಡಿಯಲ್ಲೇ ಇದೆ.

ಶ್ರೀ ಸೀತಾರಾಮರಾಯರು ದೈವಿಕ ಮನೋವೃತ್ತಿಯ ನ್ನು ಜಠರಲ್ಲಿ ಬೆಳೆಯುವ ಧ್ಯೇಯವನ್ನಿಟ್ಟುಕೊಂಡ ಶ್ರೀಮಂತ ಧೀಮಂತ ವ್ಯಕ್ತಿ. ಇದಕ್ಕಾಗಿಯೇ ಶ್ರೀ ರಾಯರು ತಮ್ಮ ಬಳಿ ಹರಿಯಿರಿಸಿದ ಸಂಪತ್ತಿನ ಸದುಪಯೋಗ ಮಾಡುತ್ತ ಬಂದರು. "ದೇಹಕ್ಕೆ ಆಹಾರವನ್ನು ಕೂಡುವಂತೆ ಭಕ್ತಿ—ಜ್ಞಾನಗಳನ್ನು ಆಹಾರ ರೂಪವಾಗಿ ಆತ್ಮನಿಗೂ ಕೊಡಬೇಕು. ಆ ಆಹಾರವೇ ಉಪದೇಶ ವಾಕ್ಯಗಳು— ಭಗವತ್ ವಿಗ್ರಹಗಳಿಂದ ಉಂಟಾಗುತ್ತದೆ' ಎನ್ನುವ ಶ್ರೀ ರಾಯರು ಭಗವಂತನನ್ನು ಸದಾ ಆರಾಧಿಸುತ್ತಲೇ ಬಂದರು.

೧೯೫೦ರಲ್ಲಿ ತನ್ನ ಮಾತೃಶ್ರೀಯವರ ಜ್ಞಾಪಾರ್ಥವಾಗಿ 'ಧರ್ಮಪ್ರಕಾಶ'ವನ್ನು ಸ್ಥಾಪಿಸಿದರು. ಇಲ್ಲಿ ತ್ರಿವ ತೀಯ ಬ್ರಾಹ್ಮಣ ಬಾಲಕರಿಗೆ ಧರ್ಮೋಪನಯನ, ಮಂತ್ರ ಸದಾಚಾರ ಶಿಕ್ಷಣ, ವಾಚನಾಲಯ, ಪುಸ್ತಕ ಭಂಡಾರ, ಮದ್ರಾಸಾಲಯ, ಸಂಸ್ಕೃತ ವಿದ್ಯಾಶಾಲೆ, ಸಂಗೀತ ಶಾಲೆ, ಭಜನಾ ಪದ್ಧತಿಯ ಉಪದೇಶ, ಧಾರ್ಮಿಕ ಗ್ರಂಥ ಪ್ರಕಟಣೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು — ಹೀಗೆ ಒಂದಲ್ಲ ಹತ್ತಾರು ಕಾರ್ಯಕ್ರಮಗಳು ಉಚಿತವಾಗಿ ನಡೆಯುತ್ತಿವೆ.

೧೯೬೦ರಲ್ಲಿ ಇಲ್ಲೇ ಅಖಿಲ ಭಾರತ ಮಧ್ವ ಮಠಾ ಮಂಡಲದ ಅನೆಯ ಅಧಿವೇಶನ ನಡೆಯಿತು ೧೯೬೬ರಲ್ಲಿ ಮಧ್ವ ನವಮಿ ಉತ್ಸವ, ೬೬ರಲ್ಲಿ ಶ್ರೀಮತಿ ಗಂಗಾಬಾಯಿಯವರ ಶತಮಾನೋತ್ಸವ, ೬೭ರಲ್ಲಿ ಶ್ರೀ ಪೇಜಾವರ ಶ್ರೀಯವರ ಸತ್ಕಾರ—ಮೊದಲಾದವು ಅಭೂತಪೂರ್ವವಾಗಿ ನೆರವೇರಿದುವು.

ಶ್ರೀ ರಾಯರ ದರ್ಮ-ಭಕ್ತಿ ಭಾವನೆಗಳ ಹೂ ಎತ್ತರ್ತ್ತೂ ರಂಗು ಹೂಡಿತು. ಇದರ ಪರಿಣಾಮವಾಗಿ, ೧೯೫೯ರಲ್ಲಿ ಉಡುಪಿಯಲ್ಲಿ 'ಗೋವಿಂದ ಬಿಷ್ಯಂಗೇ ನಿ ಮೋಹಗೊಂಡಿತು. ಇದರಂತೆಯೇ ೧೯೬೦ರಲ್ಲಿ ರಾಮೇಶ್ವರದಲ್ಲಿ 'ಗಂಗಾ ಪುಷ್ಕರಣಿ'ಯೂ ಉದ್ಭವಗೊಂಡಿತು.

೧೯೫೮ರಲ್ಲಿ ಘಟಕಾಚಲದಲ್ಲಿ ಸುಂದರ ಮಂದಿರವನ್ನೂ ಅದರಲ್ಲಿ ವೇಣು ಗೋಪಾಲ ಕೃಷ್ಣನ ಪ್ರತಿಮೆಯನ್ನೂ ನೂತನಿಸಿದರು. ೧೯೬೦ರಲ್ಲಿ ಇವರ ಪ್ರಾಯೋಜಕತ್ವದಲ್ಲಿ ಶ್ರೀ ಕೃಷ್ಣ ಮಂದಿರ ನಿರ್ಮಾಣ, ಶ್ರೀ ಕೃಷ್ಣ ಪ್ರತಿಷ್ಠೆ ಮತ್ತು ಕಲ್ಯಾಣ ಮಂಟಪಗಳು ಮೈಸೂರಿನಲ್ಲಿ ಸ್ಥಾಪಿತವಾದುವು. ಅದೇ ವರ್ಷ ತಿರುಪತಿಯಲ್ಲಿಯೂ ಒಂದು ಕಲ್ಯಾಣ ಮಂಟಪವನ್ನು ಶ್ರೀ ರಾಯರು ಕಟ್ಟಿಸಿದರು.

ಉಡುಪಿಯ ಪುತ್ತಿಗೆ ಮಠಾಧೀಶ ಶತಾಯುಷಿ ಶ್ರೀ ಶ್ರೀ ಸುಧೀಂದ್ರ ತೀರ್ಥರ

ವಾಗ್ದಾನ ನೆರವೇರಿದ ಶರವಾಯ ಪೂಜ್ಯ ಮಾತೃಶ್ರೀಯವರು ಶ್ರೀ ಕೆ. ಸೀತಾರಾಮರಾಯರನ್ನು ಆಶೀರ್ವಚಿಸುತ್ತಿರುವುದು.

ಶತಮಾನೋತ್ಸವದ ಜೀರ್ಣೋದ್ಧಾರ ಕಾರ್ಯ, ವಿದ್ವಜ್ಜನ ಸಮ್ಮಾನಗಳನ್ನು ಮಾಡಿಸಿದ್ದಲ್ಲದೆ, ರಜತ ರಥ ನಿರ್ಮಾಣದಲ್ಲಿ ಸಹಕಾರ ನೀಡಿದರು. ತಮ್ಮ ಪಟ್ಟಾಭಿಷೇಕ ಶ್ರೀಕೃಷ್ಣನ ಸೇವೆಗೆ ನ್ನು ನಾನಾ ವಿಧವಾಗಿ ಮಾಡಿದರು.

ಶ್ರೀ ರಾಯರು ಧರ್ಮ ಪ್ರಚಾರ, ಧರ್ಮ ಸುಧಾ ಪ್ರತಿಷ್ಠಾಪನೆಗಾಗಿ ತನ್ನಲ್ಲಿ ಹರಿಯುತ್ತಿರುವ ಸಂಪತ್ತನ್ನು ಧಾರಾಳವಾಗಿ ಉಪಯೋಗಿಸಿದ ಶ್ರೀಮಂತ ವ್ಯಕ್ತಿ. ಧರ್ಮದಂತೆಯೇ ಧಾರ್ಮಿಕ ಕಾರ್ಯಗಳಿಗೂ ಅವರು ಎತ್ತಿದ ಕೈ. ಮದ್ರಾಸಿನಲ್ಲಿ ಪೀಠಾಧಿಪತಿಗಳ ಸಂಸ್ಥಾನದಲ್ಲಿ ಇಲ್ಲವೇ ಅವರ ಅನುಗ್ರಹದಿಂದ ನಡೆಯುವ ಪೂಜೆ, ಆರಾಧನೆ, ವಿದ್ವತ್‌ಗೋಷ್ಠಿ, ವಿದ್ವಜ್ಜನ ಗೌರವಾರ್ಪಣೆ ಮೊದಲಾದ ಪುಣ್ಯ ಯಾರೂ ಮರೆಯುವಂತಿಲ್ಲ. ಶೈಕ್ಷಣಿಕ ಕಾರ್ಯಗಳಿಗೂ ಇವರ ಉದಾರ ನೀತಿ ನೆರವಾಗಿದೆ. ಇತ್ತೀಚೆಗೆ ಸುರತ್ಕಲ್ಲಿನ ಶ್ರೀ ಗೋವಿಂದದಾಸ ಕಾಲೇಜಿನ ಸ್ಥಾಪನೆ ಒಂದು ಉದಾಹರಣೆ ಮಾತ್ರ.

ಶ್ರೀ ಸೀತಾರಾಮ ರಾಯರನ್ನು ಹಲವಾರು ಬಿರುದುಗಳು ತಾವಾಗಿಯೇ ಅರಸಿ ಬಂದುವು. ಅವುಗಳ ಬಗ್ಗೆ ಅವರ ಅಭಿಪ್ರಾಯ—'ಅವನ್ನು ಸ್ವೀಕರಿಸಿದರೆ, ಅದು ಅವನಿಗೆ ಸೇರಿದ್ದೆಂದು ನಾನು ಒಪ್ಪಿದಂತಾಗುವುದು....' ಎಂತಹ ಔದಾತ್ರ ಭಾವನೆ!

ಶ್ರೀ ಸೀತಾರಾಮರಾಯರಿಗೆ ತಮ್ಮ ಗುರುಗಳಲ್ಲಿ ಅಂತರ್ವಿತ ಭಕ್ತಿ. ತನಗೆ ಅಕ್ಷರಾಭ್ಯಾಸ ಆರಂಭಿಸಿದ ಶ್ರೀ ಬಾವಂಜೆ ಗೋಪಾಲಕೃಷ್ಣಯ್ಯನವರ ಹುಟ್ಟುಹಬ್ಬದ ದಂದು ಅವರ ಆರಾಧನೆಯನ್ನು ವಿಶೇಷ ವೈಭವದಿಂದ ನಡೆಸಿಕೊಂಡು ಬರುತ್ತಿದ್ದರು ಇದಕ್ಕೊಂದು ನಿದರ್ಶನ ಯತಿಗಳು, ವಿದ್ವಾಂಸರು, ಭಕ್ತರು, ಒಡವರು—ಶ್ರೀ ಸೀತಾರಾಮ ರಾಯರ ಚಿತ್ರ ರಂಗಮಂದಿರೂ ಸಲ್ಲುವುದು

ಶ್ರೀ ರಾಯರು ತಮ್ಮ ಮಕ್ಕಳಲ್ಲಿ ಒನೆಯವರಾದ ಶ್ರೀ ಕೆ. ನಾರಾಯಣದಾಸರನ್ನು ಸಂಸ್ಕೃತ ವಿದ್ಯೆಕೊಡಿಸಿ, ಅವರಿಂದ ಧರ್ಮಪ್ರಚಾರವನ್ನು ಮಾಡಿಸುವ ಇರಾದೆಯನ್ನಿಟ್ಟುಕೊಂಡಿದ್ದರು. ಅದರಂತೆ ಅವರು ಹಲವು ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ತಮ್ಮ ಮಕ್ಕಳಲ್ಲಿಯೂ ಧಾರ್ಮಿಕ ಭಕ್ತಿ ಭಾವನೆಯು ಆರಂಭದಿಂದಲೇ ಬೆಳೆಯಬೇಕೆಂತೆ ಅವರು ಎಚ್ಚರ ವಹಿಸಿದ್ದರು. ಆಹ್ನಿಕ, ದೇವತಾರ್ಚನೆ, ಭಜನೆ—ಮೊದಲಾದವುಗಳು ಶ್ರೀ ರಂಗಂ ವಂಶಾವಳಿಯ ನಿತ್ಯಾಚರಣೆ. ಶ್ರೀ ಪುರಂದರದಾಸರ ಪುಣ್ಯದಿನ, ಮಧ್ವನವಮಿಯಂದು ಶ್ರೀ ರಾಯರೇ ಭಜನೆಯಲ್ಲಿ ಅಗ್ರಗಾಮಿಯಾಗುತ್ತಿದ್ದರು.

ಭಕ್ತಿ—ಜ್ಞಾನ—ವೈರಾಗ್ಯಮೂರ್ತಿ ಶ್ರೀ ಸೀತಾರಾಮರಾಯರನ್ನು ೧೯೫೮ ರಲ್ಲಿ ಹೃದಯ ರೋಗ ಕಾಡಿತು. ಅವರಿಂದ ಇನ್ನೂ ಹೆಚ್ಚು ಸೇವೆ ಮಾಡಿಸಿಕೊಳ್ಳುವ ಇರಾದೆಯು ಶ್ರೀಕೃಷ್ಣನಲ್ಲಿತ್ತು. ಎಂತಲೇ ಶ್ರೀ ರಾಯರು ಕೆಲ ಸಮಯದ ಅಸ್ವಸ್ಥತೆಯಿಂದ ಸಂಪೂರ್ಣ ಚೇತರಿಸಿಕೊಂಡರು. ಮುಂದೆ ಹತ್ತು ವರ್ಷಗಳ ಕಾಲ ಭಗವದ್ಸೇವೆ—ಗುರು ಸೇವೆ ವಿದ್ಯಾಸೇವೆ ದರಿದ್ರ ಸೇವೆ ಮಾಡುತ್ತ ಮೆರೆದರು. ಇತ್ತೀಚೆಗೆ ಅವರು ತೀವ್ರ ಅಸ್ವಸ್ಥತೆಗೆ ಪಕ್ಕಾದರು. ಆದರೂ ಅದನ್ನು ಗಮನಿಸದೆ, ತಮ್ಮ ಶಿಷ್ಯರಾದ ಶ್ರೀ ಗಂಗೂಬಾಯಿಯ ವರನ್ನೂ ಪರಿವಾರದವರನ್ನೂ ಕೂಡಿಕೊಂಡು ಬದರೀ ಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿದರು. ಪ್ರಾಯಶಃ ಅವರ ಅಂತಿಮ ಭೌತಿಕಾಂಶವು ಇದೇ ಇದ್ದಿರಬಹುದು. ತಾನು ಭೌತಿಕ ಶರೀರವನ್ನು ತ್ಯಜಿಸಬೇಕಾದ ದಿನ ಸಮೀಪಿಸುತ್ತಿರುವುದೂ ಅವರಿಗೆ ನೇರ್ಪಡಾಯಿತು. "ದಾಸನ್ನ ಮಾಡಿಕೊ ಎನ್ನ | ನಾಸಿರ ನಾಮದ ವೆಂಕಟರಮಣ" ಎಂದು ಹಾಡುತ್ತ ಉತ್ತರಾಯಣ ಪುಣ್ಯಕಾಲದಲ್ಲೇ ಅವರು ಎದುರು ನೋಡುತ್ತಿದ್ದರು. ಶ್ರೀ ಸೀತಾರಾಮರಾಯರ ತೀರ್ಥರೂಪರೂ ಇವರ ಗುರು ಶತಾಯುಷಿ ಶ್ರೀ ಶ್ರೀ ಸುಧೀಂದ್ರ ತೀರ್ಥರೂ ಉತ್ತರಾಯಣ ಪೂರ್ವದಲ್ಲಿ ತಿಥಿಯಲ್ಲೇ ಶ್ರೀ ಕೃಷ್ಣ ಸಾಯುಜ್ಯ ಹೊಂದಿದ್ದರೆ. ಅವರ ಅನುಗ್ರಹದಿಂದಲೂ ಶ್ರೀ ರಾಯರು ಪುಣ್ಯಪಲದಿಂದಲೂ ಉತ್ತರಾಯಣದ ಮೊದಲ ಪೂರ್ವಾಹ್ನದಲ್ಲಿ ದಿನವೇ ನಿರ್ಯಾಣಕ್ಕೆ ಪ್ರಾಪ್ತರಾಯಿತು.

ತಾ. ೧೪-೧-೬೮ರಂದು ಅವರು ಹೇಳುತ್ತಿದ್ದರು— 'ಶ್ರೀ ಪೇಜಾವರ ಶ್ರೀ ಶ್ರೀಯವರಿಗೆ ನನ್ನ ಅತ್ಯವಸ್ಥೆ ಅರ್ಪಿಸುತ್ತೇನೆ' ಅದು ನಿಜವಾಯಿತು. ಮೇಲೂರಿನಿಂದ ಮನೆಗೆ ಧಾವಿಸಿ ದೇವರಲ್ಲಿ ನಿವೇದನೆ ಮಾಡಿ ತಾಯಿಂದ ಆಶೀರ್ವಾದ ಪಡೆದು ವಾಯುಸ್ತುತಿ ಪಠನ, ಶ್ರವಣ, ಧನ್ವಂತರಿ, ಜಪ ಮುಗಿಸಿ ತೀರ್ಥಪ್ರಾಶನ ಮಾಡಿ, ಅಂದೆಯವರ ಚಿತ್ರಪಟ ನೋಡುತ್ತಿದ್ದಂತೆಯೇ ಇಡಿ ಶರೀರ ತ್ಯಾಗ ಮಾಡಿದರು. ಅಂದಂತೆ ಯಂತೆ ತಾ. ೧೮ರಂದು ಶ್ರೀ ಪೇಜಾವ ಶ್ರೀ ಶ್ರೀಯವರ ಪರ್ಯಾಯೋತ್ಸವದಲ್ಲಿ ಶ್ರೀ ರಾಯರ ಅಸ್ಥಿಯೇ ಭಾಗವಹಿಸಿತ.

ಶ್ರೀ ಸೀತಾರಾಮರಾಯರ ಉದಾರ-ಆದರ್ಶ—ಸೇವಾ ಪ್ರಧಾನ ಜೀವನದ ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿ. 'ಧರ್ಮೋ ರಕ್ಷತಿ ರಕ್ಷಿತ' ಎಂಬ ಆರ್ಷೋಕ್ತಿಯನ್ನು ಅಕ್ಷರಶಃ ಸತ್ಯವೆಂದು ತೋರಿಸಿದ ಶ್ರೀ ರಾಯರ ಹೆಸರು ಮೂರ್ಧ ಜನಾಂಗದಲ್ಲಿ, ಹೋಟೇಲು ಉದ್ದಿಮೆದಾರರಲ್ಲಿ, ಭಕ್ತಜನರಲ್ಲಿ, ವಿದ್ವಜ್ಜನರಲ್ಲಿ ಮಾತ್ರವಲ್ಲ ಪ್ರತಿಯೊಬ್ಬನಲ್ಲಿಯೂ ಅವಶ್ಯ ಉಳಿದೇ ಉಳಿಯುವುದು ಶ್ರೀ ಸೀತಾರಾಮರಾಯರು ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ, ಶಕ್ತಿ-ಆತ್ಮಶಕ್ತಿ ಸಂಪನ್ನ ವ್ಯಕ್ತಿ.



ಶ್ರೀ ಕೆ. ಸೀತಾರಾಮರಾಯರು





ಬದ್ರಿನಾಥ ದೇವಸ್ಥಾನದಲ್ಲಿ ಶ್ರೀ ಕೆ. ಸೀತಾರಾಮರಾಯರು

ಭಾಷೆಯ ಭೂಷಣತೆ

(ಐದನೇ ಪುಟದಿಂದ)

ಮನಸ್ಸಿನೊಡನೆ ಉಂಟಾಗುವ ಜ್ಞಾನವು ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ.

ಆದರಂತೆ ಮಕ್ಕಳು ಮುಂದೆ ಸುಸಂಸ್ಕೃತರಾಗುವುದಕ್ಕೆ ಅನುಕೂಲವಾಗಿ, ಅ ಮಕ್ಕಳಿಗೆ ಸಾಹಿತ್ಯಾಧ್ಯಯನದಲ್ಲಿ ಒಲವನ್ನೂ ಅಭಿರುಚಿಯನ್ನೂ ಉಂಟು ಮಾಡಿಸುವುದೇ ಈ ಭಾಷಾ ಪಾಠದ ಮೂಲ ನೆಯ ಉದ್ದೇಶವಾಗಿರುತ್ತದೆ!

ಅಂದರೆ, ಈ ಭಾಷಾ ಪಾಠವು, ಸಾಹಿತ್ಯದ ಕಡೆಗೆ ಒಲವನ್ನು ಹುಟ್ಟಿಸುತ್ತದೆ! ಏಕೆಂದರೆ, ಭಾಷೆಯ ಪರಿಪೂರ್ಣತೆಯೇ ಸಾಹಿತ್ಯ! ಮುಂದೆ ಮಕ್ಕಳು ಅಂತಹ ಸಾಹಿತ್ಯಾಧ್ಯಯನ ಮಾಡಿ, ತಾವೂ ಸಾಹಿತಿಗಳಾಗಿ, ಹೊಸ ಹೊಸ ಸಾಹಿತ್ಯವನ್ನು ನಿರ್ಮಾಣ ಮಾಡುವುದಕ್ಕೂ ಅರ್ಹವಾಗುತ್ತವೆ! ಅದೇ ಭಾಷಾ ಪಾಠದ ಉದ್ದೇಶವೂ ಆಗಿರುತ್ತದೆ!

ಮಾನವ ಬುದ್ಧಿಜೀವಿ! ಅವನಿಗೆ ವಿಶೇಷವಾದ ತಿಳಿವಳಿಕೆ ಶಕ್ತಿ ಇದೆ, ಆ ಶಕ್ತಿಯಿಂದ ಅವನು ಪ್ರಸಂಗದಲ್ಲಿ ಅಡಕವಾದ ವಿವಿಧ ವಿಷಯ ವಿಚಾರಗಳನ್ನು ತಿಳಿದುಕೊಳ್ಳುತ್ತಾನೆ! ಅಂದರೆ, ಅವುಗಳನ್ನು ಪ್ರತ್ಯಕ್ಷವಾಗಿ ಕಂಡು, ಅಥವಾ ಅಪ್ರತ್ಯಕ್ಷವಾಗಿ ಊಹಿಸಿ, ತರ್ಕಿಸಿ, ವಿಮರ್ಶಾತ್ಮಕವಾಗಿ ತಿಳಿದುಕೊಳ್ಳುತ್ತಾನೆ! ಆಗ ಆ ತಿಳಿವಳಿಕೆ ಶಕ್ತಿಯು ಎರಡು ಮುಖವಿಶಿಷ್ಟವಾದ ಭಾವನೆ—ಕಲ್ಪನೆಗಳು ಅವನ ಮಾನಸಿಕ ಸಾಧನೆಯಾಗಿ ಬೆಳೆದು, ಅವನ ತಿಳಿವಳಿಕೆಗಳನ್ನು ಹೆಚ್ಚಿಸುತ್ತವೆ.

ಅತನು ಒಂದು ವಿಷಯ—ವಿಚಾರವನ್ನು ಅನೇಕ ವಿಧವಾಗಿ ಭಾವಿಸಿಕೊಳ್ಳುತ್ತಾನೆ, ಕಲ್ಪಿಸಿಕೊಳ್ಳುತ್ತಾನೆ. ಅದರಿಂದ ಅದರ ಸತ್ಯವನ್ನು ಶೋಧಿಸಿ ತಿಳಿಯುತ್ತಾನೆ. ಹಾಗೆ ತನ್ನ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಾನೆ.

ಹಾಗೆ, ಅಂತಹ ಅನೇಕ ವಾಸ್ತವಿಕ ಹಾಗೂ ಭಾವುಕ ಸುಂದರ ಭಾವನಾ ಕಲ್ಪನಾ ಚಿತ್ರಗಳನ್ನು ಭಾಷೆಯ ಸುಂದರ ಜೌಕಟ್ಟಿನಲ್ಲಿ ನೆಲೆ ನಿಲ್ಲಿಸಿ, ಭಾಷೆಯ ಮುಖಾಂತರವೇ ತಿಳಿಸುವ ಸಾಧನೆಗೆ ನಾವು "ಸಾಹಿತ್ಯ" ಎನ್ನುತ್ತೇವೆ. "ಕಾವ್ಯಂ ರಸಾತ್ಮಕಂ ವಾಕ್ಯಂ" ರಸಭರಿತ ವಾಕ್ಯಗಳನ್ನು ನಾವು "ಕಾವ್ಯ" ಎನ್ನುತ್ತೇವೆ.

'ಕಾವ್ಯಾದಿಂದ ಫಲಪ್ರದಂ" ಎಂಬಂತೆ ಕಾವ್ಯದ ಎಲ್ಲ ಪ್ರಾಕಾರಗಳೂ ಮಾನವನಿಗೆ ಆನಂದವನ್ನು ಕೊಡುವ ಗುಣವನ್ನೇ ಹೊಂದಿರುತ್ತವೆ. ಆದರಂತೆ, ಸಾಹಿತ್ಯವು ಮಾನವ ಜೀವನದೊಡನೆ ಹಾಸುಹೊಕ್ಕಾಗಿ ಬೆರೆತು ವರ್ತಿಸಿದಾಗ ಮಾನವನ ಜೀವನ ಸರಸವಾಗುತ್ತದೆ.

ಆದ್ದರಿಂದಲೇ 'ಸಂಸಾರ ವಿಷ ವೃಕ್ಷಸ್ಯ ದ್ವೇ ಫಲೇ ಹ್ಯಮೃತೋಪಮೇ—ಕಾವ್ಯಾಮೃತ ರಸಾಸ್ವಾದಂ ಅಲಾಪಃ ಸಜ್ಜನೈಶ್ಚಹ' ಎಂಬ ಮಾತು ಪ್ರಸಿದ್ಧವಾಗಿದೆ. ಅಂದರೆ, 'ಸಂಸಾರ ವಿಷ ವೃಕ್ಷಕ್ಕೆ ಎರಡು ಅಮೃತೋಪಮ ವಿಚಾರವಿದೆ. ಅದರಲ್ಲಿ ಒಂದು ಕಾವ್ಯಾಮೃತ ರಸಾಸ್ವಾದ ಇನ್ನೊಂದು ಸಜ್ಜನರೊಡನೆ ಮಾತುಕತೆ. ಸಾಹಿತ್ಯದ ಅಮೃತ ರಸದ ಆಸ್ವಾದವು, ಮಾನವನ ಜೀವನದ ಎಲ್ಲಾ ಕಷ್ಟಗಳನ್ನೂ ತಣಿಸಬಲ್ಲುದು.

'ಕಾವ್ಯಾಮೃತ ರಸಾಸ್ವಾದ'ವೆಂದರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿರುವ ರಸಭರಿತ ಸನ್ನಿವೇಶದಿಂದ ವಿಮರ್ಶಿಸಿರುವ ವಿಷಯ—ವಿಚಾರಗಳನ್ನು ತಿಳಿದು ಅನುಭವಿಸುವ ಆನಂದ, ಆದ್ದರಿಂದಲೇ ಕಾವ್ಯಾನಂದವನ್ನು 'ಬ್ರಹ್ಮಾನಂದದ ಸೋಪಾನ' ಎಂದು ವರ್ಣಿಸಿದ್ದಾರೆ. ಅಸೊಂದು, ಅನುಭವ ವೇದ್ಯವಾದ ಇನ್ನಿತರ ಆನಂದಕ್ಕಿಂತ ಬೇರೆಯಾದ ಉತ್ಕೃಷ್ಟ ಆನಂದ.

ಅದು, ಮನಸ್ಸನ್ನು ಅಮೃತವಾಗಿ, ಪರಿಶುದ್ಧಗೊಳಿಸುತ್ತದೆ. ಮನಸ್ಸಿನ ವರ್ತನೆಯನ್ನು ಪರಿಪಕ್ವಗೊಳಿಸಿ, ಅದಕ್ಕೆ ಉತ್ತಮ ಸಂಸ್ಕಾರವನ್ನು ಕೊಡುತ್ತಿರುತ್ತದೆ. ಅದರಿಂದ ಮಾನವನಲ್ಲಿ ಮಾನವತೆಯನ್ನು ಬೆಳೆಸಿ, ಅಪನನ್ನು ದಾನವತೆಯತ್ತ ಹೋಗಗೊಡದಂತೆ ಮಾಡಿ, ನಿರಂತರ ರಕ್ಷಿಸುತ್ತಾ ಇರುತ್ತದೆ.

ಹೀಗೆ, ಭಾಷೆಯು ಒಂದು ಕಡೆಯಿಂದ ಜೀವನದ ಶುದ್ಧ ವ್ಯವಹಾರ ಸಾಧನೆಗೆ ನೆರವಾದರೆ, ಮತ್ತೊಂದೆಡೆಯಿಂದ, ಭಾಷೆಯ ಪರಿಪೂರ್ಣರೂಪದ ಸಾಹಿತ್ಯವು, ಜೀವನಕ್ಕೆ ಅನನ್ಯ ಆನಂದವನ್ನು ಕೊಟ್ಟು ಪೋಷಿಸುತ್ತದೆ. ಜೀವನವನ್ನು ಪರಿಪೂರ್ಣವನ್ನಾಗಿ ಮಾಡುತ್ತದೆ. ಆದರಿಂದ ಮಾನವನು ಉತ್ತಮ ಸಂಸ್ಕಾರಗೊಂಡು, ಸುಸಂಸ್ಕೃತನಾಗುತ್ತಾನೆ.

ಇಂತಹ ಭಾಷೆಯ ಈ ಮಹಾ ಸಾಧನೆಗೆ, ಶಾಲೆಯ ಭಾಷಾ ಪಾಠವು ಪ್ರಾಂಭ ಸಹಕಾರಿಯಾಗಿರುತ್ತದೆ. ಹಾಗೆ, ಮಕ್ಕಳನ್ನು ಮುಂದಿನ ಆ ಮಹಾ ಮಾರ್ಗದತ್ತ ಹೋಗಗೊಡುವುದೇ ಈ ಭಾಷಾ ಪಾಠದ ಮೂರನೆಯ ಮುಖ್ಯ ಉದ್ದೇಶವಾಗಿರುತ್ತದೆ! ಇದೇ ಭಾಷೆಯ ಭೂಷಣತೆಗೆ ಮಹಾ ಸಾಧನವಾಗಿರುತ್ತದೆ!

ಅಭಿಪ್ರಾಯ

ರಾಜಧನ ರದ್ದತಿ

ಬರೆದವರು :
ಶ್ರೀ ಬಿ.ಎಜ್. ಶಾಂತಾರಾಮ ಶೆಟ್ಟಿ

ಸಮತಾವಾದದ ದೇಶದಲ್ಲಿ ಉಚ್ಚ ನೀಚ ಬಡವ ಶ್ರೀಮಂತರೆಂಬ ಭೇದ ಇರಬಾರದೆಂಬುದ್ದೇಶದಿಂದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಒಂದು ಗೊತ್ತವಳಿಯನ್ನು ಕೈಗೊಂಡು, ನರೇಂದ್ರರಿಗೆ ನೀಡುತ್ತಿರುವ ರಾಜಧನ ವಿಶೇಷ ಹಕ್ಕು ಬಾಧ್ಯತೆ ರದ್ದತಿಗಳಿಗೆ ಪೂರ್ಣಾಯಿಸಿರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಈ ನಿರ್ಣಾಯ ಸರಿಯೆ ಎಂದು ವಿವೇಚಿಸುವ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸರ್ದಾರ್ ವಲ್ಲಭಭಾಯಿ ಪಟೇಲರು ರಾಜರಿಗೆ ವಿಶೇಷ ಸವಲತ್ತನ್ನು ರಾಜಧನವನ್ನು ಕೊಟ್ಟು ಅವರು ಭಾರತೀಯ ಒಕ್ಕೂಟದೊಳಗೆ ಸೇರುವಂತೆ ಮಾಡಿದ್ದರು, ರಾಜಮನೆತನದವರೂ ಕೆರಳಿದರೆ ಭಾರತವು ಪ್ರಜಾಪ್ರಭುತ್ವದಾರಿಯಲ್ಲಿ ನೆಮ್ಮದಿಯಿಂದ ಸಾಗುವಂತಿಲ್ಲವೆಂದು.

ಇಂತಿರುವಾಗ ವಿಕಾಯಕಿ ನಮ್ಮ ಇತ್ತೀಚಿನ ಆಡಳಿತಗಾರರು. ರಾಜರಿಗೆ ವಿಶೇಷ ಸವಲತ್ತು ಪ್ರಜಾಸತ್ತಾತ್ಮಕ ವಿಧಾನಕ್ಕೆ ತಕ್ಕುದಲ್ಲ, ಆದ್ದರಿಂದ ರಾಜಧನ ರದ್ದತಿಯೆಂಬ ಪ್ರಶ್ನೆಯನ್ನು ಎತ್ತಿ ಇನ್ನೊಂದು ಆಂದೋಳನಕ್ಕೆ ಅನುಗೊಳಿಸುತ್ತಿದ್ದಾರೆ.

ಈ ರಾಜಧನದಿಂದ ನಮ್ಮ ಸಂಕಾರಕ್ಕೆ ಸೋರಿ ಹೋಗುವಂತದೇನಿಲ್ಲ. ಎಂತೆಂದರೆ ಮೂರು ಸಾವಿರ ಕೋಟಿ ರೂಪಾಯಿ ವರ್ಷಾದಾಯನಿರುವ ಸರಕಾರಕ್ಕೆ ಐದು ಕೋಟಿ ರೂಪಾಯಿ ರಾಜಧನ ಕೊಟ್ಟರೆ ಬಹಳ ಆದಾಯ ಕುಂದುವುದಿಲ್ಲ. ನರೇಂದ್ರರ ಧನತೆಯನ್ನು ಎತ್ತಿ ಹಿಡಿಯುವ ಗೌರವ ಧನದ ಪ್ರಶ್ನೆಯನ್ನು ಎತ್ತಿದರೆ ಈ ಧನತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ರಾಜ ಮಹಾ ರಾಜರುಗಳು ಸುಮ್ಮನೆ ಬಿಡಲಿಕ್ಕಿಲ್ಲ. ಸರಕಾರದ ಕೋಟ್ಯಾಂತರ ರೂಪಾಯಿ ಸೊತ್ತು ನಾಶ ರಾಷ್ಟ್ರಾಧ್ರೋಹಗೂಂಡಾಗಿರಿ ಮುಂತಾದ ಅಕೃತ್ಯಗಳು ನಡೆಯುವುದು ಖಂಡಿತ.

ಆದ್ದರಿಂದ ಈ ರಾಜಧನ ಪ್ರಶ್ನೆಯನ್ನು ಒಂದೇ ಸಲ ಬಗೆಹರಿಸಲು ನಮ್ಮ ಸರಕಾರ ಮನಗೊಡದೆ ಸಾವಧಾನವಾಗಿ ಬಗೆಹರಿಸಬೇಕು. ಅಂದರೆ ಈಗ ಇರುವ ರಾಜರುಗಳಿಗೆ ಅವರ ಜೀವಮಾನಪರ್ಯಂತ ರಾಜಧನವನ್ನು ಕೊಟ್ಟು ಇವರ ತಲೆಗೆ ರಾಜಧನ ಫಿಲ್ಲಿಸಬೇಕು. ಅಂದರೆ ಇವರ ನಂತರದವರಿಗೆ ರಾಜಧನ ವಿಶೇಷ ಹಕ್ಕುಬಾಧ್ಯತೆ ನಿಲ್ಲಿಸಿ ಅವರನ್ನು ನಮ್ಮಂತೆ ಸರಿ ಸಮಾನರಾಗಿಸಬೇಕು ಅದು ಬಿಟ್ಟು ವಿಕಾಯಕಿ ವಿಶೇಷ ಹಕ್ಕು ಬಾಧ್ಯತೆ ರದ್ದತಿ ಮಾಡುತ್ತೇವೆ ಎಂದು ಹೊರಟರೆ ಈ ತನಕ ಅರಾಮ ಜೀವನ ನಡೆಸಿದ ಮಾಜಿ ಅರಸರು ಕೆರಳುವುದು ಖಂಡಿತ. ಇದರಿಂದ ಮೊದಲೆ ಹದಗೆಟ್ಟ ರಾಷ್ಟ್ರ ನೆಮ್ಮದಿ ಇನ್ನೂ ಹದಗೆಡುವುದು. ಆದ್ದರಿಂದ ಶತಮಾನದ ಸಂಪ್ರದಾಯವನ್ನು ಒಂದೂ ಮೈಗೆ ಬದಲಾಯಿಸಲು ಹೊರಡುದಕ್ಕಿಂತ ಸಾರಾಸಾರ ವಿಚಾರ ಮಾಡಿ ಬದಲಾಯಿಸುವುದು ಉತ್ತಮ. ಹಣಕ್ಕಿಂತಲೂ ರಾಷ್ಟ್ರ ನೆಮ್ಮದಿ ಮಿಗಿಲಲ್ಲವೇ?

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಮೆಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ಸ.)

ಸೋಮರಾಜ ಪ್ರತಾಪ—(ಯಕ್ಷಗಾನ)

ಲೇಖಕ: ಶ್ರೀ ನಿಂಜೂರು ರಾಯಪ್ಪ ರೈ.

ಪ್ರಕಾಶಕರ : ?

ಪುಟಗಳ : ೪೪, ಬೆಲೆ: ರೂ. ೦-೬೦.

ಅತ್ರಿ ಮಹರ್ಷಿಯ ಪುತ್ರ ಸೋಮನು ಸೋಮರಾಜನಾಗಿ ಹಸ್ತಿನಾವತಿಯಲ್ಲಿ ರಾಜಧಾನಿಯನ್ನು ಕಟ್ಟಿ ರಾಜನಾಗಿ, ಹೈಮವತೀ ನಗರಾಧಿಪ ನಿರ್ಮಾಲ್ಯ ರಾಜನ ಮಗಳು ಪದ್ಮಾವತಿಯನ್ನು ವಿವಾಹವಾದುದ ಸಂದರ್ಭದಲ್ಲಿ ಭೂ—ಸ್ವರ್ಗ ಲೋಕಗಳಲ್ಲಿ ಆಕಸ್ಮ ತೋರಿಸುವ ಪ್ರತಾಪವೇ ಇಲ್ಲಿನ ಪ್ರಧಾನವಸ್ತು ಇದೇ ವಸ್ತುವನ್ನು ಹಿಗ್ಗಿಸಿ ಬೆಳೆಸಿ ಬರೆದ ಈ ಯಕ್ಷಗಾನವು ಹೊಸ ಪ್ರಸಂಗ. ಇದರಲ್ಲಿನ ಕಥಾನಕವು ಸ್ವರ್ಗಕ್ಕೂ ಹರಡುವುದರಿಂದ, ದೇವತೆಗಳು, ತ್ರಿಮೂರ್ತಿಗಳು ಮತ್ತವರ ರಾಣಿಯರ ದರ್ಶನವೂ ಅನಿವಾರ್ಯವಾಗುತ್ತದೆ.

ಯಕ್ಷಗಾನದ ಯಶಸ್ಸು ರಂಗಮಂಟಪದಲ್ಲಿ ಮಾತ್ರ ಸಾಧ್ಯ. ಸೋಮರಾಜ ಪ್ರತಾಪವನ್ನೂ ಮೊಟಕುಗೊಳಿಸಿ ರಂಗಮಂಟಪಕ್ಕೆ ತರುವ ಪ್ರಯತ್ನ ಮಾಡಬಹುದು ಶ್ರೀ ರೈಯವರ ಭಾಷೆ ಸರಳವಿದೆ; ಆದರೆ, ಭಾಷೆಯಲ್ಲಿ ಸ್ವಾಧೀನತೆಯೂ, ಪ್ರಭುತ್ವವೂ ಕಡಿಮೆಯೆಂದೇ ಹೇಳಬೇಕು ಇದರಿಂದಾಗಿ ಕೃತಿಯಲ್ಲಿ ಪಾಕಕ್ಕಿಂತಲೂ ಶಯ್ಯೆ ಸುಗಮವಾಗಿಲ್ಲ. ಯಕ್ಷಗಾನವು ಜನಸಾಮಾನ್ಯರ ಮನೋರಂಜನೆಯ ಸಾಧನ—ಈ ದೃಷ್ಟಿಯಿಂದ ಈ ಕೃತಿ ಸ್ವಾಗತಾರ್ಹ.

ಈ ಕೃತಿಗೆ ಮೂಲ, ಪ್ರಾಕೃತ ಭಾಷಾ ಮೂಲದ 'ಕಥಾ ಕಲ್ಪತರು' ವಿನ ಕಥೆಯ ಮಂತಿ ಅನುವಾದವೆಂದು ತಿಳಿಯಬಹುದೆ. ಆದುದರಿಂದ ಇಲ್ಲಿ ಪರಭಾಷಾ ಸಾಹಿತ್ಯದ ಪರಿಚಯವೂ ನಮಗಾಗುವುದೊಂದು ಹೆಚ್ಚಿನ ಲಾಭ.

ಸವಾಡಗಳ ಸಿದ್ಧಾಂತ—

ಮೂಲ: ಶ್ರೀ ಯೋಗಾನಂದ ಪರಮಹಂಸ

ಅನುವಾದ: ಶ್ರೀ ಎ. ಪಿ. ಸುಬ್ಬಯ್ಯ.

ಪ್ರಕಾಶಕರು: ಶ್ರೀ ಪುರಂದರ ರೈ, ಪುಣಾಚ, ಪುತ್ತೂರು, ದ. ಕ.

ಪುಟಗಳ : ೧೯. ಬೆಲೆ: ೦ - ೩೦.

ಅಮೆರಿಕೆಯಲ್ಲಿ ಸೆಲ್ಫ್ ರಿಯಲೈಸೇಷನ್ ಫೆಲೊಷಿಪ್ ಎಂಬ ಸಂಸ್ಥೆಯನ್ನೂ ಭಾರತದಲ್ಲಿ ಯೋಗೋದ ಸತ್ಸಂಗ ಸೊಸೈಟಿಯನ್ನೂ ಕಟ್ಟಿ ೧೯೫೨ರಲ್ಲಿ ಸಮಾಧಿಹೊಂದಿದ ಶ್ರೀ ಯೋಗಾನಂದ ಪರಮಹಂಸರ ಆತ್ಮಚರಿತ್ರೆಯ ಒಂದು ಅಧ್ಯಾಯವಿದು. 'ಸವಾಡ'ವೆಂದರೆ ಅದ್ಭುತ ಕಾರ್ಯ. ಇದನ್ನು ಸಾಧನೆಯಿಂದಲೇ ಸಾಧಿಸುವುದು ಸಾಧ್ಯ. ಒಂದು ಕಾಲದಲ್ಲಿ ಆಕಾಶದಲ್ಲಿ ಹಾರುವುದೆಂದರೆ ಹುಚ್ಚು ಕಲ್ಪನೆ—ಇ ಮ ಅಸಾಧ್ಯವೆಂದು ನಂಬಲಾಗಿತ್ತು. ಆದರೆ, ವೈಜ್ಞಾನಿಕ ಸಾಧನೆಯಿಂದದು ಸಾಧ್ಯವಾಗಿದೆ, ಭೌತಿಕ ವಿಜ್ಞಾನಿಗಳಂತೆಯೇ ಯೋಗಿಗಳು, ಸಾಧು ಸಂತರು, ಋಷಿ ಮುನಿಗಳು ತಮ್ಮ ಸಾಧನೆಗಳಿಂದಲೇ ಅದ್ಭುತ ಸಾಧನೆಗಳನ್ನು ಸಾಧಿಸಿದ್ದಾರೆ. ಇವನ್ನೇ 'ಸವಾಡ'ಗಳೆನ್ನುತ್ತಾರೆ. ಇವು ನೀರಿನಿಂದ ವಿದ್ಯುತ್ತನ್ನು ಪಡೆಯಬಲ್ಲೆವಾದರೆ, ಚಂದ್ರಲೋಕದಲ್ಲಿ ಇಳಿಯಬಲ್ಲೆವಾದರೆ, ಇಂತಹ ಸಾಧನೆಯೂ ಸವಾಡವೇ ತಾನೆ? ನಿಶ್ಚಯವೇ ವಿಶ್ವಸನೀಯಪರಿಣ ಒಂದು ಸವಾಡ—ಇದನ್ನು ನಾವು ನಂಬುವುದಾದರೆ, ನಮ್ಮ ದೇಶದ ಯೋಗಿಗಳ ಸವಾಡಗಳ ಬಗ್ಗೆ ಸಂದೇಹ ಪಡಬೇಕಾಗಿಲ್ಲ. ಭೌತಿಕ ತತ್ವಗಳಿಂದ ಅಳೆಯಲಾಗದ, ಹುಡುಕಲಾಗದ ಶಕ್ತಿ—ಪರಮಾತ್ಮ—ಬ್ರಾಹ್ಮಿಸ್ಥೇ ಇದೆ. ಇದರಲ್ಲಿ ವಿಶ್ವಾಸ ಹುಟ್ಟಿಸುವುದೇ—ಹಲವು ಉದಾಹರಣೆಗಳಿಂದ ಮಂದಟ್ಟು ಮಾಡುವುದೇ ಈ ಹೊತ್ತಗೆಯ ಉದ್ದೇಶ. ಶ್ರೀ ಸುಬ್ಬಯ್ಯನವರು ಇಂಗ್ಲಿಷ್ ಮೂಲದ ಈ ಧಾರವನ್ನು ಅನುವಾದಿಸಿದ್ದಾರೆ. ಮುಂದಿನ ಅಧ್ಯಾಯಗಳೂ ಕನ್ನಡಿಗರ ಕೈಗಳಿಗೆ ಬೇಗನೆ ಸಿಗುವಂತಾಗಲಿ

—ಗೋರಾ.

ಹೊಸ ಪ್ರಕಟಣೆಗಳು

ಪುರೂರವ—(ಗೀತ ನಾಟಕ)

ಬರೆದವರು: ಶ್ರೀ ನಾ. ಮೊಗಸಾಲೆ.

ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ.

ಪುಟಗಳು: ೬೪ ಬೆಲೆ: ರೂ. ೧-೫೦.

Revival of Ayurveda—By Dr. I. K. P. Sharma.

ಪ್ರಕಾಶಕರು: ಭಾರತೀಯ ಆಯುರ್ವೇದ ಪ್ರಕಟಣಾಲಯ, ಮಂಗಳೂರು-6

ಪುಟಗಳು: ೩೦.

ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪ

ಪ್ರಕಾಶನ: ಕೆನರಾ ಬ್ಯಾಂಕ್, ಲಿ; ಸಾರ್ವಜನಿಕ ಸಂಪರ್ಕ ವಿಭಾಗ, ಆಡಳಿತ ಕಛೇರಿ, ಬೆಂಗಳೂರು-೨.

ಪುಟಗಳು: ೧೨.

ನಿವೇದನೆ (ತತ್ವವಾದ ಪರ್ಯಾಯ ವಿಶೇಷ ಸಂಚಿಕೆ)

ಪ್ರಧಾನ ಸಂಪಾದಕರು:

ಶ್ರೀ ಪಂ. ಪಂಥರಿನಾಥಾಚಾರ್ಯ ಗಲಗಲಿ ಮತ್ತು ಶ್ರೀ ಹ. ಬಿ. ಜೋಶಿ.

ಪುಟಗಳು: ೧೬೨. ಬೆಲೆ: ರೂ. ೧-೦೦

ವಿಮರ್ಶೆ ಯಥಾವಕಾಶ.

ಅದು ಸ್ವಾಭಾವಿಕ

"ನನ್ನ ಮಗ ಬಹಳ ಬುದ್ಧಿವಂತ"

"ಆಗಿರಬಹುದು. ತಾವರೆಯೂ ಕೆಸರಲ್ಲೇ ಹುಟ್ಟುವುದಲ್ಲವೆ?"

ನಾಯ್ಕನಹಟ್ಟಿ ರಥೋತ್ಸವ

ಚಳ್ಳಕೆರೆ ತಾಲೂಕು ನಾಯ್ಕನಹಟ್ಟಿ ಸ್ವೀಯುದ್ರ ಸ್ವಾಮಿಯ ರಥೋತ್ಸವವು ತಾ. 15—3—56ರಿಂದ ತಾ. 18—3—56 ರ ತನಕ ನಿಜ್ರಂಭಣೆಯಿಂದ ಜರಗಲಿರುವುದೆಂದೂ ಸರ್ವರಿಗೂ ಸ್ವಾಗತವೆಂದೂ ಧರ್ಮಕರ್ತರುಗಳು ತಿಳಿಸುತ್ತಾರೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಂ.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯನ್ನು ಕೊಟ್ಟಿದ್ದಾರೆ.

ಮಕ್ಕಳು, ಹೆಂಗಸರು, ವಿದ್ಯಾರ್ಥಿಯರು ಇದರ ಬಲ್ಲ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗ್ರಂಥವೆದ್ದು. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ಯಾಕ್ಸ್ ಬೇರೆ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಎಲ್ಲೆಲ್ಲಿ ಏನೇನು?

ಮುಲ್ಕಿ ತಾಲೂಕು ರಚನೆ ಬಗ್ಗೆ ಸಾರ್ವಜನಿಕರ ಒತ್ತಾಯ

ಮುಲ್ಕಿಯ ಯೂನಿಯನ್ ಕ್ಲಬ್‌ನಲ್ಲಿ ತಾ. 2ರಂದು ಡಾ|| ಎಸ್. ಚಂದಾ (ಅಧ್ಯಕ್ಷರು) ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆದು ಪ್ರತ್ಯೇಕ ಮುಲ್ಕಿ ತಾಲೂಕೊಂದನ್ನು ರಚಿಸುವಂತೆ ಸರಕಾರವನ್ನು ವಿನಂತಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ದ. ಕ. ಜಿಲ್ಲೆಯ ಅದರಲ್ಲೂ ಮಂಗಳೂರು ತಾಲೂಕಿನ ಜನಸಾಂದ್ರತೆಯನ್ನು ಗಮನಿಸಿ ಮುಲ್ಕಿ ಸಿರ್ಕಾದ 30 ಗ್ರಾಮಗಳು, ಕಾರ್ಕಳದ 3 ಗ್ರಾಮಗಳು, ಸುರತ್ಕಲ್ ಸಿರ್ಕಾದ 6 ಗ್ರಾಮಗಳು ಹಾಗೂ ಉಡುಪಿಯ 10 ಗ್ರಾಮಗಳೂ ಹೀಗೆ ಒಟ್ಟು 49 ಗ್ರಾಮಗಳು ಪೊಸ ಮುಲ್ಕಿ ತಾಲೂಕಿನಲ್ಲಿರುವಂತೆ ಸೂಚಿಸಲಾಗಿದೆ.

ಆ ಗ್ರಾಮಗಳೆಂದರೆ ಕಾರ್ಕಳ ತಾಲೂಕಿನ ಇನ್ನ, ಮುಂಡ್ಕೂರು, ಮುಲ್ಲಡ ಗ್ರಾಮಗಳು, ಉಡುಪಿ ತಾಲೂಕಿನ ಬೆಜಮೂಡಿ, ನಡಿಸಾಲ್ಕಾ, ಪಾದಬೆಟ್ಟು, ನಂದಿಕೂರು, ಫಲಿಮಾರು, ಬಡಾ ಎರ್ಮಾಳು, ತೆಂಕ ಎರ್ಮಾಳು, ಎಲ್ಲೂರು, ಪಿಲಾರು, ಸಾಂತೂರು ಗ್ರಾಮಗಳು, ಸುರತ್ಕಲ್ ಸಿರ್ಕಾದ ಚೆಲ್ಲಿರು, ಸೊರಂಜೆ, ಬಡಗ ಎಕ್ಕಾರು, ತೆಂಕ ಎಕ್ಕಾರು, ಪೆರ್ಮುದೆ, ಜೇಲಂತಕಟ್ಟು ಗ್ರಾಮಗಳು.

ಈ ವಿಷಯಗಳಿಗಾಗಿ ಈ ಕೆಳಗಿನವರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀಗಳಾದ ಡಾ|| ಎಸ್. ಚಂದಾ (ಅಧ್ಯಕ್ಷರು), ಎಂ. ಆರ್. ಎಚ್. ಸೊಂಜಾ (ಕಾರ್ಯದರ್ಶಿ), ವಿ. ದೇವದಾಸ್ ಕಾಮತ್, ಎಚ್. ನಾರಾಯಣ ಸಾಲ್, ಡಾ|| ಎಂ. ಆರ್. ಕಾಮತ್, ಎಚ್. ಶೀನ ಶೆಟ್ಟಿ, ಯು. ಕೃಷ್ಣರಾವ್.

ಈ ಸಂಬಂಧ ನಿರ್ಣಯಗಳನ್ನು ಅಂಗೀಕರಿಸಲು ಸರಕಾರಕ್ಕೆ ಕಳುಹಿಸುವಂತೆ ಎಲ್ಲಾ ಪಂಚಾಯತ್ ಬೋರ್ಡುಗಳನ್ನು ವಿನಂತಿಸುವಂತೆ ನಿರ್ಧರಿಸಲಾಯಿತು.

ಬ್ರಹ್ಮೋತ್ಸವದೇಶ

ಪುತ್ತೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಟ್ರಸ್ಟಿಗಳಲ್ಲೊಬ್ಬರೂ, ಟಂಬರ್ ಕಂಟ್ರಾಕ್ಟರೂ ಆದ ಶ್ರೀ ಡಿ. ಕೆ. ಹೆಬ್ಬಾರರ ಕೃತಿಯ ಪುತ್ರ ಶ್ರೀ ದಿನೇಶ ಹೆಬ್ಬಾರರ ಬ್ರಹ್ಮೋತ್ಸವದೇಶ ಸಮಾರಂಭವು ತಾ. 8—3—68 ರಂದು ಕುಳ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವರ ಸನ್ನಿಧಿಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪುಸ್ತಕಗಳ ಬಿಡುಗಡೆ

ಬೆಂಗಳೂರು, ನಾ. 3— ಚಿತ್ರದುರ್ಗ ವಿಭಾಗದ ವಿದ್ಯಾರ್ಥಿಗಳಾದ ಶ್ರೀ ಕೆ. ವಿಠಲ ಶೆಣೈಯವರು ಬರೆದು, ಮಂಗಳೂರಿನ ಶ್ರೀನಿವಾಸ ಬ್ರದರ್ಸ್‌ರಿಂದ ಪ್ರಕಾಶಿಸಲ್ಪಟ್ಟ "ಯೋಚಿಸಿ ಒಣ್ಣ ಹಾಕು" ಮತ್ತು "ವಿಚಿತ್ರ ವಿಶ್ವ" ಪುಸ್ತಕಗಳನ್ನು ಶಿಕ್ಷಣ ಸಚಿವ ಶ್ರೀ ಕೆ. ವಿ. ಶಂಕರ ಗೌಡರು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭಾಭವನದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಾಂಗದ ಪ್ರಾಧ್ಯಾಪಕ ಶ್ರೀ ಎ. ಸಿ. ದೇವೆ ಗೌಡರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಸೀತಾಪಹಾರ ನೃತ್ಯನಾಟಕ

ಸುರತ್ಕಲ್ ಗಣೇಶ ನೃತ್ಯ ಕಲಾ ಕೇಂದ್ರದ ವತಿಯಿಂದ ತಾ. 2ರಲ್ಲಿ ವಿದ್ಯಾದಾಯಿನೀ ಕಲಾಮಂದಿರದಲ್ಲಿ ನೃತ್ಯನಾಟಕ ಹಾಗೂ ಇತರ ನೃತ್ಯಗಳ ಕಾರ್ಯಕ್ರಮವು ಜರಗಿತ್ತು. ಹಾಡಿನ ರೂಪದ ಈ ಕತೆಯ ಅಭಿನಯ ವರ್ಗದಲ್ಲಿ ಶ್ರೀ ಕೆ. ಯಸ್. ಮಧ್ಯಸ್ಥರು ಹಾಗೂ ಶ್ರೀಮತಿ ಮಧ್ಯಸ್ಥರು ರಾಮ ಸೀತೆಯರಾಗಿ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀ ಕೆ. ವೆಂಕಟರಾಯ ಡಾಕ್ಟರರು ಸ್ವಾಗತಿಸುತ್ತಾ ಈ ಕೇಂದ್ರವು ಸರಕಾರ ಪರೀಕ್ಷೆಗೆ ತಕ್ಕಂತೆ ನೃತ್ಯ, ಸಂಗೀತ ವಾದ್ಯಗಳ ಅಭ್ಯಾಸ ಮಾಡಿಸುವುದರಿಂದ ಉಪಚಾರ ಜನರ ಸಹಕಾರವನ್ನು ಕೋರಿದರು. ಕೊನೆಗೆ ಶ್ರೀ ಮಧ್ಯಸ್ಥರು ಧನ್ಯವಾದ ಸೂಚಿಸಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಶಂಕು ಸ್ಥಾಪನೆ

ಮೈಸೂರು ವಾಣಿವಿಲಾಸ ಮೊಹಲ್ಲಾದ ಶಾಂತಿಮಠ ರಸ್ತೆಯಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಲು ಸರಕಾರ ಕೊಟ್ಟಿರುವ 3 ಎಕ್ರೆ ಜಾಗದಲ್ಲಿ ಕಟ್ಟಡ ಕಟ್ಟಲು ಶಂಕು ಸ್ಥಾಪನಾ ಸಮಾರಂಭವು ತಾ. 18—2—68 ರಂದು ನಡೆಯಿತು. ಲೋಕಸಭಾ ಸದಸ್ಯರು ಶ್ರೀ ಎಸ್. ಎಂ. ಕೃಷ್ಣ ಅವರು ಅಧ್ಯಕ್ಷತೆ ವಹಿಸಿದರು. ಸಮಾರಂಭದಲ್ಲಿ ಸಂಸ್ಥಾನ ವೃಷಸಾಯ ವಿಜ್ಞಾನನಿಲಯ ವಿದ್ಯಾನಿಲಯದ ಉಪಕುಲಪತಿ ಡಾ|| ಕೆ. ಸಿ. ನಾಯಕರವರು ನೆರವೇರಿಸಿದರು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ದೇವದಾಸ ರೈಯವರು ಶುಭ ಸಂದೇಶಗಳನ್ನು ಓದಿದರು.

ಡಾ|| ನಾಯಕರವರು ಶಂಕುಸ್ಥಾಪನೆಯನ್ನು ಹಾಕಿದನಂತರ ಮಾತಾಡುತ್ತಾ, ಶ್ರೀ ಎ. ಬಿ. ಶೆಟ್ಟರ ಪೂರ್ಣಾಪಂಡಯ ತನಗಿರುವುದಾಗಿಯೂ ಮೊದಲು ಅವರ ಸಹಾಯ ಅನಂತರ ಅವರ ಕೈಕೆಳಗೆ ಕೆಲಸಮಾಡುವ ಹೀಗೆ ಎಲ್ಲಾ ಹಂತಗಳಲ್ಲಿ ಅವರ ಸಂಪರ್ಕ ಹೊಂದಿದ್ದೆಂದರು. ಶ್ರೀ ಶೆಟ್ಟರು ಹೇಗೆ ಸಮಾಜಸೇವೆ ಆರಂಭಿಸಿದರೆಂಬುದನ್ನು ಅವರು ವಿವರಿಸಿದರು. ಅನಂತರ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಅವರು ಜಿಲ್ಲೆಯ ಸರ್ವತೋಮುಖವಾದ ಪ್ರಗತಿ ಸಾಧಿಸಿದರೆಂದರು, ಶಾಸನಸಭೆ ಪ್ರವೇಶಿಸಿ ಮಂತ್ರಿಗಳಾಗಿ ದಕ್ಷತೆಯಿಂದ ಆಡಳಿತ ನಿರ್ವಹಿಸಿದರಲ್ಲದೆ ಅಲ್ಲಿ ಎಲ್ಲರ ಮೆಚ್ಚುಗೆಯನ್ನು ಪಡೆದಿದ್ದಾರೆಂದರು. ಅವರು ದೇಶಾಭಿಮಾನಿಗಳಾಗಿದ್ದರು. ಅಂತವರ ಹೆಸರಿನಲ್ಲಿ ಅವರಿಗಾರ್ಥವಾಗಿ ಕಟ್ಟಲ್ಪಡುವ ಈ ನಿಲಯದ ಶಂಕುಸ್ಥಾಪನೆ ಹಾಕಲು ತನಗೆ ತುಂಬಾ ಸಂತೋಷವಾಗಿದೆಯೆಂದರು.

ಶ್ರೀ. ಎಸ್. ಎಂ. ಕೃಷ್ಣರವರು ಮಾತನಾಡುತ್ತಾ ಹಿರಿಯರಾಜಕಾರಣಿಗಳಾದ ಶ್ರೀ ಎ. ಬಿ. ಶೆಟ್ಟರ ಸ್ಮಾರಕಾರ್ಥ ವಿದ್ಯಾರ್ಥಿನಿಲಯ ಸ್ಥಾಪಿಸಿರುವುದು ಸಂತೋಷದಾಯಕವಾದುದು ಅವರು ಇನ್ನು ಕೆಲಕಾಲ ಇದ್ದಿದ್ದರೆ ಸಂಸ್ಥಾನದ ರಾಜಕೀಯ ಇತಿಹಾಸವೇ ಬದಲಾಗುತ್ತಿತ್ತು ಅಂತಹವರ ಹೆಸರಿನಲ್ಲಿ ನಿಲಯ ಕಟ್ಟುವುದು ಸಮಯೋಚಿತವಾದುದು ಮುಂತಾಗಿ ಹೇಳಿದರು.

ನಿಲಯ ವಾರ್ಡನ್ ಡಾ|| ಎಸ್. ಟಿ. ವೆಂಕಟಯ್ಯನವರು ಧಂಯನಗಳನ್ನಿರ್ಪಿಸಿದರು. ಕವಾರಿ ಶಕುಂತಳಾ ಅವರ ರಾಷ್ಟ್ರ ಗೀತೆಯೊಡನೆ ಸಮಾರಂಭ ಕೊನೆಗೊಂಡಿತು.

ಸಮಾರಂಭಕ್ಕೆ ಉನ್ನತಾಧಿಕಾರಿಗಳೂ ಕಾಲೇಜುಗಳ ಅಧ್ಯಾಪಕರೂ, ವಿದ್ಯಾರ್ಥಿಗಳೂ ಪುರಸ್ಕಮುಖರೂ ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು.

ಬಹುಮಾನ ವಿತರಣೆ

ಶಿರಸಿ:— ತಾ. 28—2—68ನೇ ದಿನ ಇಲ್ಲಿಯ ಕೆ. ಡಿ. ಸಿ. ಬ್ಯಾಂಕಿನ ಹೋಲಿನಲ್ಲಿ ಜೀವವಿಮಾ ವ್ಯವಹಾರ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವು ಜರಗಿತು. 1966ನೇ ಸಾಲಿನ ಉಡುಪಿ ಹಾಗೂ ಬೆಂಗಳೂರು ಎರಡು ಡಿವಿಜನ್ಸಿಗೆ ಮೀಸಲಾಗಿಟ್ಟ ವಿಮಾ ಕೇಸಂಟಿ. ರಾಷ್ಟ್ರೀಯ ಸ್ಪರ್ಧೆಯ ಹಾಗೂ 10—2—67ರಿಂದ 28—2—67ನೇ ಅವಧಿಯ ಸ್ಪೇಷಲ್ ಮೇನೆಜಿಗ್ಸ್‌ನ್ನು ವಿಜಯಸ್ಪರ್ಧೆಯಲ್ಲಿಯ ಎರಡೂ ಬಹುಮಾನವನ್ನು ಹಾಗೂ ಪ್ರಶಸ್ತಿ ಪತ್ರಿಕೆಯನ್ನು ಸಹ ಶಿರಸಿಯ ಶ್ರೀ ವಿ. ಎಂ. ಭಾಗ್ವತರಿಗೆ ಸಮಾರಂಭದ ಮುಖ್ಯ ಅತಿಥಿಗಳಾದ ಉಡುಪಿ ಡಿವಿಜನಲ್ ಮೇನೆಜರ ಶ್ರೀ ಎಸ್. ದರಿಯರನ್ನ ಇವರ ಅನ್ಯತ ಹಸ್ತದಿಂದ ಕೊಡಲ್ಪಟ್ಟಿತು. ಸಮಾರಂಭದಲ್ಲಿ ಆಸ್ಪಯಿಂದ ಕೆಲಸ ಮಾಡಿದ ಕೆಲವು ಏಜೆಂಟರುಗಳಿಗೆ ಹಾಗೂ ಡೆವಲ್‌ಮೆಂಟ್ ಆಫೀಸರ ಶ್ರೀ ಪಿ. ಎ. ಹೆಗಡೆ, ಶ್ರೀ ವಿ. ಎಸ್. ಹೆಗಡೆ ಇವರುಗಳಿಗೆ ಸಹ ಪ್ರಶಸ್ತಿ ಪತ್ರಿಕೆಯನ್ನು ನೀಡಲಾಯಿತು.

ಸಮಾರಂಭದಲ್ಲಿ ಶಿರಸಿ ಬ್ರಾಂಚಿನ ಎ. ಬಿ. ಎಂ. ಶ್ರೀ ಆರ್. ಎಂ. ಕಾಮತರಿಂದ ಸ್ವಾಗತ ಭಾಷಣವೂ ವಿಮಾ ವ್ಯವಹಾರದ ಮಹತ್ವದ ಕುರಿತು ಎ. ಡಿ. ಎಂ. ಶ್ರೀ ವಾಸ್ ಹಾಗೂ ಶಿರಸಿ ಬ್ರಾಂಚಿನ ಬಿ. ಎಂ. ಶ್ರೀ ವಿ. ಎಸ್. ನರಸಿಂಹಾಚಾರರೂ ಮತ್ತು ವಿಮಾ ಟ್ರೇನಿಂಗ್ ಇನಸ್ಪೆಕ್ಟರರಾದ ಶ್ರೀ ಬಿ. ಎಂ. ಶೆಟ್ಟಿಯವರೂ ಮಾತನಾಡಿದರು. ಅಧ್ಯಕ್ಷರಾದ ಶ್ರೀ ಎಸ್. ದರಿಯರನ್ನ ಇವರು ಜೀವ ವಿಮಾ ವ್ಯವಹಾರದಲ್ಲಿ ಏಜೆಂಟರ ಕರ್ತವ್ಯದ ಬಗ್ಗೆ ವಿಶದವಾಗಿ ತಿಳಿಯಪಡಿಸಿದರು.

ಏಜೆಂಟರ ಪರವಾಗಿ ಶ್ರೀ ವಿ. ಆರ್. ಭಾಗ್ವತರು ಮಾತನಾಡುತ್ತಾ ತನ್ನ ಯಶಸ್ಸಿನ ಕಾರಣ ಮುಖ್ಯವಾಗಿ ಪಾಲಿಸಿದಾರರ ಸೇವೆಯೇ ಎಂತಾ ತಿಳಿಸಿದ್ದಲ್ಲದೆ ಜೀವವಿಮಾ ಕೆಲಸವನ್ನು ಯಾವ ರೀತಿ ಮಾಡಬೇಕು ಹೇಗೆ ಬೇಕೆಂಬುದರ ಬಗ್ಗೆ ವಿವರವಾಗಿ ತಿಳಿಯಪಡಿಸಿದರು. ಕೊನೆಗೆ ಏಜೆಂಟರಾದ ಶ್ರೀ ಎಸ್. ಎಂ. ಹೆಗಡೆ ಬಾಳೇಸರ ಇವರಿಂದ ಆಭಾರ ಮನ್ನಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವಿವಾಹ ಸಮಾರಂಭಗಳು

ಕೊರಂಗ್ರಪಾಡಿ ಪಡುಮನೆ ದಿ. ದೇವಯ್ಯ ಹೆಗ್ಗೇರ ಪುತ್ರ ಶ್ರೀ ಯಶೋರಾಜ ಹೆಗ್ಗೇರ್ ಕಾಂಜರಕಟ್ಟೆ ಹೊಸಮನೆ ದಿ| ಭವಾನಿ ಶಂಕರ ಶೆಟ್ಟಿ ಪುತ್ರಿ ಸೌ| ಸಾನಂದಳನ್ನು ತಾ. 1—3—68ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಶ್ರೀ ಸಾಂತೂರು ಸಾಮನಡಿ ಕೆ. ತಿಮ್ಮಪ್ಪ ಶೆಟ್ಟಿ ಪುತ್ರಿ ಕುಮಾರಿ ಸುಮಿತ್ರಳನ್ನು ಶ್ರೀ ಬೆಲ್ಲಾಡಿ ಆನಂದ ಹೆಗ್ಗೇರ ಪುತ್ರ ಶ್ರೀ ಕುಶಲ ಹೆಗ್ಗೇರರು ತಾ. 3—3—68ರಂದು ಉಡುಪಿ ಅಲಂಕಾರ್ ಥಿಯೇಟರಿನಲ್ಲಿ ವೈಭವದಿಂದ ವಿವಾಹವಾದರು.

ಶ್ರೀ ಉದಿಯಾವರ ಶಿವರಾಯರ ಪುತ್ರಿ ಚಿ. ಸುನೀತಿಯನ್ನು ಶ್ರೀ ವಿಷ್ಣುಮೂರ್ತಿ ಮಿತ್ತಂತಾಯರ ಪುತ್ರ ಶ್ರೀ ಅನಂತ ಪದ್ಮನಾಭ ಮಿತ್ತಂತಾಯರು ತಾ. 8-3-68ರಂದು ಉಡುಪಿ ಪುತ್ತಿಗೆ ಮಠದಲ್ಲಿ ವಿವಾಹವಾದರು.

ಶ್ರೀ ವೆಂಕಪ್ಪ ರೈಗಳ ನಿಧನ

ಶ್ರೀ ಸಾವಣೂರು ಗುತ್ತು ವೆಂಕಪ್ಪ ರೈಗಳು ತನ್ನ 68ನೇ ವಯಸ್ಸಿನಲ್ಲಿ ತಾ. 8-3-68 ರಂದು ನಿಧನ ಹೊಂದಿದರು. ದಿವಂಗತರು ದೈವ ಭಕ್ತರೂ ವಿದ್ವಾಂಸರೂ ಆಗಿದ್ದು ಜನಾನುರಾಗ ಗಳಿಸಿದ್ದರು.

ಬೆಳ್ತಂಗಡಿ ವಿಲೇಜು ಪಂಚಾಯತು

ಪ್ರಕಟಣೆ

ಈ ಕೆಳಗೆ ನಿವರಿಸಿದ ಏಟಮುಗಳನ್ನು ತಾ. 26—3—68ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಬೆಳ್ತಂಗಡಿ ಪಂಚಾಯತ್ ಚೆಯರ್‌ಮೇನರು ಪಂಚಾಯತು ಆಫೀಸಿನಲ್ಲಿ ಬಹಿರಂಗ ಏಲಂ ಮಾಡುವರು.

ಕ್ರ. ಸಂ.	ವಿಷಯ	ಅವಧಿ
1.	ಸೂರ್ಕೇಟು ವರಿ ವಸೂಲಿ ಹಕ್ಕು	1—4—68ರಿಂದ 31—3—69
2.	ಹಸಿ ಮೀನು ವ್ಯಾಪಾರದ ವರಿ ವಸೂಲಿ ಹಕ್ಕು (ಪ್ರತೀ ಸೋಮವಾರ ಸಂತೆಯ ದಿನ ಹೊರತು)	do
3.	ಮೂರ್ಕೇಟು ಬಳಿಯ ಪಂಚಾಯತು ಸ್ಥಾಲದಲ್ಲಿ 18ರಿಂದ 8ರ ತನಕ ವ್ಯಾಪಾರ ಮಾಡುವ ಹಕ್ಕು	do
4.	ಬಂಡಿ ಮಠ (ಕಾರ್ಟರ್ ಸ್ಟಾಂಡ್)ದ ವರಿ ವಸೂಲಿ ಹಕ್ಕು	do

ಏಲಂ ಶರತ್ತುಗಳನ್ನು ಆಫೀಸು ಸಮಯದಲ್ಲಿ ವಿಚಾರಿಸಿಕೊಳ್ಳಬಹುದು. ಏಲಂನ್ನು ಯಾವುದೇ ಕಾರಣ ಕೊಡದೇ ಮುಂದೂಡುವ ಯಾ ಶಿರಸ್ಕರಿಸುವ ಹಕ್ಕನ್ನು ಪಂಚಾಯತು ಕಾದಿರಿಸಿದೆ.

ವಿಲೇಜು ಪಂಚಾಯತು, ಬೆಳ್ತಂಗಡಿ (ದ. ಕ.)
ತಾರೀಖು 6—3—1968

ಸಹಿ/- ಪಿ. ನಮಿರಾಜ ಹೆಗ್ಗೆ
ಚೆಯರ್‌ಮೇನ್.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರೆಯಲ್ಲಿ ಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಅಂತೂ ಈ ತಿಂಗಳಾಂತ್ಯದ ಒಳಗೆ ಯಾವದೇ ಉತ್ತರವಿಲ್ಲದಿದ್ದರೆ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸುತ್ತೇವೆ. ಅದನ್ನು ಸ್ವೀಕರಿಸುವಂತೆ ವಿನಂತಿ.

ಮೆನೇಜರ್, ನವಯುಗ.

READ &
ADVERTISE IN
NAVAYUGA WEEKLY

ಶ್ರೀ ಗೋವಿಂದ ಪೈಯವರ ದಾರ್ಶನಿಕ ಕವಿತೆಯ ವಿಚಾರ

ಬರೆದವರು. ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

ಕವಿಯು— ಮಹಾಕವಿಯು ಲೌಕಿಕ ವಸ್ತು-ವಿಚಾರಗಳನ್ನು ವರ್ಣನಾಲಂಕಾರ ರಸಮಯವಾಗಿ ಹೆಣೆಯಬಲ್ಲನಾದರೆ, 'ದಾರ್ಶನಿಕ ಕವಿ'ಯು ಅದಕ್ಕಿಂತಲೂ ಮಿಕ್ಕಿದ ಅಲೌಕಿಕ ವರ್ಣನಾಲಂಕಾರ ರಸಗಳಿಂದ ಕಾವ್ಯವನ್ನು ಹೊಸೆದು ಚಿರಂತನವಾದ ಉಪಕಾರವನ್ನು ನವಾಗಿ ಮಾಡುತ್ತಾನೆ ಶ್ರೀ ಗೋವಿಂದ ಪೈಗಳ ಕೃತಿಗಳಲ್ಲಿ ಕೆಲವು ಕವಿತೆಗಳೂ, ಕೆಲವು ಖಂಡ ಕಾವ್ಯಗಳೂ ಕಂಗೊಳಿಸುವಂತೆ, ಕೆಲವು ಕೃತಿಗಳು ದಾರ್ಶನಿಕಗಳಾಗಿ ರಾರಾಜಿಸುತ್ತಿವೆ. ವಸ್ತುತಃ "ಪರಮಾತ್ಮನೆಲ್ಲಿರುವನು" ಎಂಬೀ ಕೃತಿಯು ಪರಾಮರ್ಶೆ ಇಲ್ಲಿ ಕೊಂಚ ಬರೆಯಲಾಗಿದೆ. ಈ ಬಗೆಗೆ ಸಹೃದಯರು ತಮ್ಮ ವಿಚಾರಗಳನ್ನು ಮೊದಲು ಪ್ರಕಟಿಸುವಂತೆ ಮೊದಲ ವಿಜ್ಞಾಪನೆಗಳು.

"ಪರಮಾತ್ಮನಾರೆಂದು ತಿಳಿಯಲೆಳಸುವೆಯೊ?
ಇರುವನೆತ್ತಲೆನುತ್ತ ಕೇಳಲಿಚ್ಛಿಸುವೆಯೊ? ॥ ೧ ॥
ಅಣುರೇಣು ತೃಣಕಾಷ್ಠಗಳಲಿರುವನವನ,
ಕಣುಗಳನು ತೆರೆದವರ್ಗೆ ಗೋಚರಿಸುತಿಹನು ॥ ೨ ॥"

೧. ದೇವನು, ಜಗತ್ತು, ಜೀವಿಗಳು ಎಂಬೀ ತ್ರಿವಿಧ ವಿಷಯಗಳು ಪರಸ್ಪರ ಹೇಗೆ ಹೊಂದಾಣಿಕೆಯನ್ನು ಪಡೆಯುತ್ತವೆ, ಇವು ಬೇರೆ ಬೇರೆ ಕಾಣುವಂತಿದ್ದರೂ, ಇವುಗಳ ಸಂಬಂಧವೇನೆಂದು ವೇದಾಂತದಲ್ಲಿ ಬಹುವಾಗಿ ಹೇಳಿದೆ. ಸಾಮಾನ್ಯ ಲೌಕಿಕರಿಗೆ ಅದನ್ನು ಪರಾಮರ್ಶಿಸಿ ಹೇಳಿದರೆ "ಮನಂಬುಗು"ವುದಿಲ್ಲದೆ, ಕೇವಲ ಪಾರಿಭಾಷಿಕ (ಸಾಂಕೇತಿಕ) ರೀತಿಯಿಂದ ವೇದ್ಯವಾಗದು. 'ಪರಮಾತ್ಮನೆಲ್ಲಿರುವನು' ಎಂಬುದು ಚಿಕ್ಕ ಕೃತಿ. ಇಲ್ಲಿ ತಿಳಿಸುವಿಕೆಗಳಿಂದಲೆ ಪರಮಾತ್ಮನ ತಾಣಗಳ—ರೂಪಗಳ ಪರಿಚಯವಿದೆ; ಇಲ್ಲಿ ಪರಮಾತ್ಮನ 'ವಿರೂಪರೂಪ' ದರ್ಶನವಿದೆ. ಅದೇ ಇಲ್ಲಿಯ ವೈಶಿಷ್ಟ್ಯವಾಗಿದೆ! ಇಲ್ಲಿ 'ಪರಮಾತ್ಮನಾರು?', 'ಅವನೆಲ್ಲಿರುವನು' ಎಂಬೀ ಜಿಜ್ಞಾಸೆ ಕಾಣುತ್ತಿದೆ.

"ತದೇವ ವಿದಿತ್ವಾತಿಮೃತ್ಯುಮೇತಿ. ನಾನ್ಯಃ ಪಂಥಾ ಅಯನಾಯವಿದ್ಯತೇ" ಅಂದರೆ, ಅವನನ್ನೆ ತಿಳಿದು ಅತಿ ಮೃತ್ಯುವನ್ನು (ಮೋಕ್ಷವನ್ನು) ಹೊಂದುವನು, ಅವನ ಆಶ್ರಯಕ್ಕೆ (ಪ್ರಾಪ್ತಿಗೆ) ಬೇರೆ ದಾರಿಯಿಲ್ಲವೆಂದು ಉಪನಿಷತ್ತಿನ ಕವಿ "ದ್ರಷ್ಟಾರ"ನ ವಾಣಿ, ಯಾಗಾದರೆ, ಹೀಗೆ ತಿಳಿಯುವುದೆಂಬ ಪ್ರಶ್ನೆಗೆ ಮುಂದೆ ಉತ್ತರಿಸಲಾಗಿದೆ.

೨. ಪರಮಾತ್ಮ, ಎಲ್ಲಿರುವನು ಎಂಬೀ ಪ್ರಶ್ನೆಯಲ್ಲಿ ಎರಡು ನುಡಿಗಳು ಇದರಂದ ಪರಮಾತ್ಮ ಬೇರೆ, ಅವನಿರುವ ತಾಣ ಬೇರೆಯೆಂದು ಅರ್ಥವಾಗತದೆ ಇದಕ್ಕೆ ಅಲ್ಲೇ ಉತ್ತರವಿದೆ 'ಎತ್ತಲು ಇರುವನು', ಎಂದರೆ 'ಎಲ್ಲೆಲ್ಲು' ಅವನಿರುವನೆಂದ. ಆದರೂ ಮತ್ತೆ 'ಎತ್ತಲು' ಅಂದರೇನೆಂದು ಆಕಾಂಕ್ಷೆಯೊದಗಿ, ಎರಡು ಸಾಲುಗಳಲ್ಲಿ ಸಾಧನೆಗಳು ವಿವರಣೆಗಳು ಹೇಳಿವೆ. 'ಅಣುರೇಣು ತೃಣ ಕಾಷ್ಠಗಳಲ್ಲಿ' ಅವನಿದ್ದಾನೆ; ಕಣ್ಣುಗಳನ್ನು ತೆರೆದು ನೋಡಿದರೆ, ಗೋಚರಿಸುವನು ಎಂಬುದೆ ಸಾರ.

'ಅಣು'ವಿನಿಂದ ಮಹತ್ತಿನ ತನಕ, ಅಣುವಿಗಿಂತ ಅಣುವಾಗಿಯೂ ಮಹತ್ತಿಗಿಂತ ಮಹತ್ತಾಗಿಯೂ ಅವನಿದ್ದಾನೆ 'ತೃಣಕಾಷ್ಠ'ದಿಂದ ಹಿಡಿದು (ಅಚರದಿಂದ ತೊಡಗಿ) ಎಲ್ಲೆಡೆ (ಚೇತನಕ) ಅವನಿರುವನೆಂದು. ತಾತ್ಪರ್ಯ ಈ ರೀತಿ ನೋಡಲು (ಗೋಚರಿಸಲು) ಕಣ್ಣುಗಳನ್ನು ತೆರೆದು (ಅಂತರ್ದೃಷ್ಟಿಯಿಂದ) ನೋಡಬೇಕೆಂದು ಸೂಚನೆಯಿದೆ. ಮುಂದಿನ ಹತ್ತು ಸೊಲ್ಲುಗಳಲ್ಲಿ (ಇಪ್ಪತ್ತು ಸಾಲುಗಳಲ್ಲಿ)—ಈ ಬಗೆಗೆ ಇಪ್ಪತ್ತರ ವಿಷಯರೂಪಗಳ ಹೇಳಿವೆ

೩. ಸೂರ್ಯನು ಪರಮಾತ್ಮನ ಪ್ರತಿಚ್ಛಾಯೆಯ ರೂಪವನ್ನು ಇರಿಸಿದ್ದಾನೆ. "ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತಿ" ಎಂಬ ಸೂರ್ಯಸ್ತುತಿಯಿದೆ, 'ಸೂರ್ಯ ಆತ್ಮಾ ಜಗತಃ' ಎಂದು ವೈದಿಕೋಕ್ತಿಯಿದೆ! ಅಂತೆ, ಮನುಜನಲ್ಲಿ ದೇವನು ಪ್ರಜ್ಞ ಪ್ರತಿಮೆ, (ಪ್ರತಿರೂಪ) ಮಡಗಿದ್ದಾನೆ. ಪ್ರತಿಯೊಬ್ಬನ ಜೀವದೊಂದಿಗೆ ಪರಮಾತ್ಮನ ಅಂಶವೂ ದೇಹದಲ್ಲಿ ಅಡಗಿದೆ ದೇಹದಿಂದ ಜೀವ ಮಾತ್ರವಲ್ಲ, ಪರಮಾತ್ಮನೂ ಅಗಲಿದಾಗಲೆ ದೇಹ ಜೀವಗಳ ವಿಯೋಗ (ಮರಣ)ವಾಗುವುದು. 'ಬಿಂಬೋಪಮ ಪ್ರತಿಬಿಂಬಗಳ ರಸ್ಮಿ' ಎಂಬುದು ಕೇಳತ್ತವೆ, 'ಸೋಹಂ ಬ್ರಹ್ಮಾಸ್ಮಿ' 'ತತ್ತ್ವಮಸಿ' ಇತ್ಯಾದಿ ಶ್ರುತಿಯಿದೆ!

೪. ಭೂಮಂಡಲದಂತೆ ನಭೋಮಂಡಲವಿದೆ. ಭೂಮಿಯು ಪರಿಭ್ರಮಣದಿಂದ ನಭೋಮಂಡಲವೂ ಚಲಿಸಿದಂತಿದೆ ಆಕಾಶದಲ್ಲಿ ಹಗಲು ಬೆಳಗುವ ಸೂರ್ಯನಂತೆ, ರಾತ್ರಿ ಬೆಳಗುವ ಚಂದ್ರನಂತೆ, ಸದಾ ಸಂಚರಿಸುವ ನಕ್ಷತ್ರಗಳೂ ಇವೆ. ಕೈಪ್ಪೆ ಮುಚ್ಚಿಬಿಡಿದಂತೆ ಮನೆ ಗೆತ್ತಿದೆ. ಅದೇ ಇಲ್ಲಿ ಪರಮಾತ್ಮನ ಎಮೆಯೊಟೆಯೆಂದು. ಪರಮಾತ್ಮನು ನಾಲ್ಕು ತಿಂಗಳು-ಚಾತುರ್ಮಾಸ್ಯದಲ್ಲಿ ನಿದ್ರಿಸುವನೆಂಬ ಕತೆಯಿದೆ. ಆದರೆ, ದೇವನು ಸದಾ ಜಾಗರೂಕನೇ ಇದ್ದಾನೆ. ಅವನ ರೆಪ್ಪೆಯೊಟದಂತೆ ಚಕ್ಕಿ ವಿನ ಗತ್ತಿದೆಯೆಂದರ್ಥ ಇನ್ನು ಮುಂದಿಲಿಂದ ಸುಂದ ವಿಳೆಯೆಂದರೆ, ದೇವನ ಸಂತೋಷದಿಂದ ಸೂಸುವ ಕಣ್ಣೀರು. ಮಳೆಯಿಂದ ಸೃಷ್ಟಿಗೆ ಆನಂದ, ದೇವನಿಗೂ ಅದೇ ಆನಂದ ಮಳೆಯು ಕೆಲವೊಮ್ಮೆ ಸುರಿಯ, ಪುದರಿಂದ ಸಂತೋಷಾಶ್ರುವಂತಿದೆಯೆಂಬುದು ಸೈಜು ಮಳೆಯಿಂದಲೆ ಸಂತಸದ ಸುಗ್ಗಿ! ಮಳೆಯು ದೇವನ ಕಣ್ಣಿನ ಸುಗ್ಗಿ!

೫. ಚರಾಚರ ಜೀವಿಗಳ ಬದುಕೆಂದರೆ ಉಸಿರಾಡುವುದು ವಿಷ್ಯ. ಆ ಗಾಳಿ ದೇವನ ತಂಗಾಳಿಯುಸಿರೆಂದುದು. 'ಪ್ರಾಣಾದ್ವಾಯುರಜಾಯತ' ಎಂಬ ಶ್ರುತಿಯಿದೆ. ಮತ್ತೆ, ಚಳಿಗಾಲ ಎಲ್ಲೆಡೆ ಮುದಡಿಸುತ್ತಿದೆ, ಆಗ ಲೋಕವು ಮುಂದಿನ ಜೀವನದ ಸುಖದ ಕನಸು ಕಾಣುತ್ತಿದೆ. ವಸಂತದ ವಿಶೇಷ ಸಮಾರಂಭಕ್ಕೆ ಮೊದಲು ಹೇಮಂತ—ಶಿಶಿರಗಳಲ್ಲಿ ಸನ್ನಾಹವಿದೆ. ಲೋಕವೇ ದೇಹವಾದ ಪರಮಾತ್ಮನು ಹೀಗೆ ಕನಸು ಕಾಣುವುದೆಂದರೆ ತಪ್ಪ

ಶ್ರೀ ಮೊಗಾರ್ಜ ದೇವಾಯಿ, ಅವರೊಂದಿಗೆ ಶ್ರೀ ಕೆ. ಸೀತಾರಾಮರಾಯರು

NAVAYUGA 14--3--1968
Registered with the Registrar
of News Papers for India
under No. R. N. 3546/'57

REGD. No. B. G: 176
LICENCE No. 31
Licensed to Post without Prepayment

ಶ್ರೀ ವಿ. ವಿ. ಗಿರಿಯವರೊಂದಿಗೆ ಶ್ರೀ ಕೆ. ಸೀತಾರಾಮರಾಯರು.

ಲ್ಲ, ಮುಂದೆ ಈ ಕನಸು ನನಸಾಗುತ್ತದೆ.

೬. ಹಳ್ಳವು ನೀರಿನ ಚಿಕ್ಕ ಕಾಣ, ಅದು ದೇವನ ಮೆಲ್ಲಡಿಯಾಗಿ ಕಾಣುವುದು. ದಾಗೆ ನೆರೆಯ ಹೊಯ್ಲು ಓಡುವ ರೀತಿಯದೆ. ಸೃಷ್ಟಿಯಲ್ಲಿ ಅಚಲವಾಗಿದ್ದರೂ ಜಲವೊಂದು ಚರವಾಗಿ ಸಾಗುವುದು, ಅದಕ್ಕೆ 'ಪ್ರವಾಹ'ವೆನ್ನುವುದು.

೭. ಅವೊಂದು ದನಿಯು ದಿಗಂತದ ತನಕ ಹರಡುತ್ತದೆ, ದಿಕ್ಕುಗಳೆ ಪರವೂತ್ತನ ಕಿವಿಗಳೆಂದಿದೆ. ಆ ದನಿಯೆಡಗುವ ಕಾಣವು 'ಶಬ್ದಗುಣ'ವಾದ ಆಕಾಶ. 'ಆಕಾಶವಾಣಿ'ಯೆಂದರೆ ದೇವವಾಕ್ಕೆವೆಂದು ಪುರಾಣಗಳಲ್ಲಿ ಕೇಳುತ್ತದೆ. ಆಗಸವು ದೇವನ 'ಸುದಿದಾಣ'ವಾಗಿದೆ!

೮. ವಸಂತಕಾಲವೆಂದರೆ ಎಲ್ಲಾ ಜೀವಿಗಳು ನಲಿವ ಕಾಲ. ದೇವನೂ ಅದಲೀಲಾರ್ಥವಾಗಿ ಆಡುವನೆಂದುದು ಸಾಹ, ಆದಾಗ, ಹಲವು ಹಕ್ಕಿಗಳು ದಾಡಿದರೂ, ಕೋಗಿಲೆಯ ದನಿ ಇಂಪಾಗಿದೆ, ಅದುವೆ ದೇವನ ದಾಡುಗಾರಿಕೆಯ ರೂಪಾಂತರವೊಂದಾಗಿ ಹೇಳಿದೆ.

೯. ಗಿಡಮರಗಳಲ್ಲಿ ಅರಳಿದ ಪರಿಮಳದ ಹೂಗಳು ದೇವನ ಮುಗುಳು ನಗೆಯಂತಿವೆ. ಕಡಲು ಸಂಜೆ-ಮುಂಜಾವೆ ಕೆಂಪನೆ ಹೊಳೆಯುವುದನ್ನು, ಬಲು ದೂರದ ಎತ್ತರದಲ್ಲು ಕಾಣುವುದನ್ನು ದೇವನ ಫಲುಗನ್ನಡಿಯೆಂದಿದೆ.

೧೦. ಚಂದಿರನ ತಾಗದಿರು ಬಿಳುಪಾಗಿ ದೇವನ ನಗುವಂತಿದೆ. ಇಂದ್ರಧನುವು ದೇವನ ಶೋಕಾಲಿಯಂತೆ ಕಾಂತಿ ಕೂಳ್ಳಲಾಗಿದ್ದ.

೧೧. ಸಲ್ಲವರ ತಿಳವೇ ಎಲ್ಲವನ್ನು ತಿಳಿವ ದಾರಿ, ಹಾಗೆ ಧನುರ್ಧಾರಿಯು ಕೈಯಿಂದ ದೇವನು ಬಿಲ್ಲು ಬಾಗಿಸುವನು, ದುಷ್ಟರ ಶಿಕ್ಷೆಯನ್ನು (ಶಿಷ್ಟರ ರಕ್ಷೆಯನ್ನು) ಮಾಡುವನೆಂದರ್ಥ. (ಬ್ರಾಹ್ಮಣ್ಯವೇ—ಬ್ರಹ್ಮಜ್ಞಾನವೇ ಎಲ್ಲಕ್ಕೂ ಹೆಚ್ಚಿನ ತಿಳಿವಾಗಿದೆ. ರಾಜನು ದೇವನ ಅಂಶದಿಂದ ಕೂಡಿದ್ದಾನೆಂಬುದು ಇಲ್ಲಿ ಮನನೀಯ!)

೧೨. ಅನೇಕ ವಿಧದ ಬಣ್ಣಗಳೇ ಮೇಲೇರಿತಕ್ಕ ಆಕಾಶದ ಸೋಪಾನಗಳು. ಆಕಾಶದಲ್ಲಿ ಸೂರ್ಯ ಕಿರಣದ ವಿವಿಧ ವರ್ಣಗಳು ಹರಡಿದಯೆಂಬುದು ಗಮನೀಯ. ಪರಂತು, ಸ್ಪಷ್ಟವಾಗಿ ಪ್ರವಹಿಸುವ ಬೆಳಕೆ ದೇವನ ಸಾಗಾಟದ ನಿದರ್ಶನವೆಂದು ಇಲ್ಲಿಯ ನಿರೂಪಣ ಜ್ಞಾನವು 'ಜ್ಯೋತಿ'ಯೆಂಬುದು ಪ್ರಾಚೀನ ಸೂಕ್ತಿಯೊಂದು.

ಈ ಪಾಡಿನಲ್ಲಿ ದೇವನ ವಿರಾಡ್ರೂಪದ ವಿಚಾರವಿದೆ. ಇದರ ತುದಿ ಬಗೆ 'ವಿಶ್ವಾಂಜಲಿ'ಯೆಂದು ಮೊದಲ ಸೂಲ್ಲುಗಳಲ್ಲೂ ಕಾಣುವುದು. ಸುರುಚಾಗೂ ಕ್ತ, ಹಾಗೂ ಇತರತ್ರ ಹೇಳಿದ ವಿಚಾರಾಂಶಗಳನ್ನು ಜ್ಞಾಪಿಸಿಕೊಂಡರೆ, ಈ ಪಾಡಿನ ಬಗೆ ಬೇಗನೆ ಹೊಳೆಯುತ್ತದೆ. ಪರಂತು, ಅವೊಂದು ಸೂಲ್ಲು ಕೇವಲ ಅಪವಾದವಲ್ಲ, ಅನೇಕ ಸಾರಗಳ ಸಂಕಲನವಾಗಿದೆ. ಇಲ್ಲಿ 'ದಾಶಕ್ತಿಕ'ವಾಗಿ ಶ್ರೀ ಗೋವಿಂದ ಪೈಯವರು ಕಾಣಿಸಿದ ವಿಶೇಷಾಂಶಗಳನ್ನು ಇಲ್ಲಿ ಎಂದೂ ಮರೆಯಲಾಗದು. ಆ

ನಗೆ ಬಿಂದು

ಹೀಗೂ ಆಯ್ತು

ಪತ್ರಿಕೆಯೋದುತ್ತಿದ್ದ ಮಗಳು—"ಅಮ್ಮಾ! ಪ್ರಧಾನಿ ಇಂದಿರಾ ಗಾಂಧಿಗೂ ಈಗ ತಲೆಯೂಯ್ತೆ?..."

ತಾಯಿ—"ಏನಾಗಿದೆ?...."

"ಇಂದಿನ ಪತ್ರಿಕಾ ವರದಿ ನೋಡು...."

'ಏನಿದೆ?...."

"ಪ್ರಧಾನಿಯ ಕ್ಷೇಮ ಪರಿಹಾರ ನಿಧಿಗೆ ಉದಾರ ಸಂಭಾವನೆಯೆಂದು ಪ್ರಾರ್ಥಿಸಲಾಗಿದೆಯೆಂದಿದೆ...."

ಆಯುರ್ವರ್ಧನೆಗೆ

ಒಬ್ಬನ ಹಸ್ತರೇಖಾ ಲಕ್ಷಣ ಹೇಳುತ್ತಾ, "ನಿಮಗೆ 48 ವಯಸ್ಸು ಆಯಸ್ಸು ...." ಎಂದ.

'ಅಯ್ಯಯ್ಯೊ! ಹಾಗಾದರೆ ಇನ್ನು ಒಂದೇ ವರ್ಷವೆಂದೊ? ಈಗಲೇ 47 ಆಯ್ತು ...."

"ಗಾಬರಿ ಬೇಡ....ಇನ್ನೂ ಹತ್ತು ಪೈಸೆ ಕೊಡಿರಿ. ಅದನ್ನೇ 60 ಮಾಡಲಾಗುವುದೋ ನೋಡುತ್ತೇನೆ...."

—ಎಚ್. ಎಂ. ವಿಜಯನಾರಾಯಣ.

ಪೊಂದು ರಮ್ಯ ವಸ್ತು—ವಿಷಯವಿದ್ದರೆ, ಅದರ ವಿಶೇಷವನ್ನು ಕಾಣುವ ಕಣ್ಣು (ತಿಳಿವು) ಇದ್ದರೇನೇ ಉಭಯ ಸಾರ್ಥಕವು! ಪರಮಾತ್ಮ ದರ್ಶನದ ಈ ಹೆದ್ದಾರಿಯಲ್ಲಿ ಶ್ರೀ ಗೋವಿಂದ ಪೈಗಳು ತೋರಿದ ವಿಚಾರ ನಮಬಗೆಗುಲ್ಲಿ ಏವಂಶಲಾಗಿದೆ. ರಸಿಕರು ಇದರತ್ತ ಹೆಚ್ಚು ಗಮನಿಸಬೇಕಾಗಿ ಹಾರಯಿಸಿಕೆಯಳು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 367/47
R. E. P. 669/1967
I. A. 1

ದೇವು ಭಂಡಾರಿ— ವಾದಿ—ಅರ್ಜಿದಾರ
ಪಕೀರ ಭಂಡಾರಿ ಕೂಡಾ — ಎದ್ರಿರು

1. ಗಂಗಯ್ಯ ಭಂಡಾರಿ, ವೆಂಕಮ್ಮನ ಮಗ, ಆರ್ಯಾಪು ಗ್ರಾಮದ ಚನ್ನಡ್ಕ,
4. ಲಲಿತ— ವೆಂಕಮ್ಮನ ಮಗಳು, ವ, ಸುಂದರ ಭಂಡಾರಿ ಹೆಂಡ್ತಿ— ಉಳ್ಳಾಲ ಕಸಬಾ ತೊಕ್ಕೊಟ್ಟು,
6. ರುಕ್ಮಯ್ಯ ಭಂಡಾರಿ— ವೆಂಕಮ್ಮನ ಮಗ, ಆರ್ಯಾಪು ಗ್ರಾಮದ ಚನ್ನಡ್ಕ
—ಎದ್ರಿರು

ಇನ್ನೆ ಪ್ರತಿವಾದಿ ವೆಂಕಮ್ಮನು ಮೃತಪಟ್ಟದ್ದಿಂದ ಅವಳ ವಾರಿಸುದಾರರಾಗಿ ಎದ್ರಿರನ್ನು ಕೂಡಾ ಕಕ್ಷಿಯಲ್ಲಿ ಕೂಡಿಸಿ ಅರ್ಜಿದಾರ ಮುಂದರಿಸುವಂತೆ ಮಾಡಿದ ಈ ಅರ್ಜಿಯ ನೋಟೀಸಿನ ವ್ಯಾದ ತಾರೀಕು 28-3-1968 ಕ್ಕೆ ಇಟ್ಟಿರುತ್ತದೆ. ಆ ದಿನ 11 ಘಂಟೆಗೆ ಎದ್ರಿರು ಈ ಕೋರ್ಟು ಮುಂದೆ ಹಾಜರಾಗಿ ಬರದ ಹ ಮೂಲಕ ತಮ್ಮ ಆಕ್ಷೇಪಣೆಗಳನ್ನು ಹೇಳಿ ಕೊಳ್ಳತಕ್ಕದ್ದು. ಲಸ್ಟ್ರೈ ಎದ್ರಿರನ್ನು ತಿವಾಯ ಎಂತ ಮಾಡಿ ಮುಂದರಿಸಲಾದೀತು ಎಂತ ಈ ಕೋರ್ಟು ಹ್ಯಾಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd.) B. Ramachandra Rao,
M. A., B. L.,
Pleader for Petitioner.

ಪುತ್ತೂರು, ತಾ. 4-3-1968.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

21—3—1968

೨೦ ಪೈಸೆ

ಕೆಥಾ ಪ್ರಪಂಚ

ಹೊಸ ಬಾಳು

ಬರೆದವರು: ಶ್ರೀ ಎಚ್. ಸುಬ್ರಾಯ ಭಟ್ಟ, ಚೋನಾಳಿ.

ನಾಗವೇಣಿ

ನನಗೀಗ ಯೌವನ ಕಳೆದು ಮುಪ್ಪು ಸವೆಯಿಸಿ ತೊಡಗಿದೆ ಎಂಬುದನ್ನು ನನ್ನ ನರೆತ ಕೂದಲುಗಳ ಜೊತೆಗೆ ಇರಗಳ ಸುಕ್ಕೂ ಸಾರತೊಡಗಿದೆ. ಆದರೆ ನನ್ನ ಮನದಲ್ಲಿ ಮಾತ್ರ ನಾನಿನ್ನೂ ಯುವತಿಯೆಂಬ ಭಾವನೆ ಉಳಿದಿರುವುದಾದರೂ ಮೊದಲಿನ ಚೈತನ್ಯ ನನ್ನಲ್ಲಿಲ್ಲವೆಂಬುದನ್ನೀಗ ಒಪ್ಪದೆ ವಿಧಿಯಿಲ್ಲ.

ಆಗಾಗ ತಲೆದೋರುವ ಕಾಹಿಲೆಗಳು ನನ್ನ ಫಿರ್ಮಲ ದೇಹವೀಗ ತವರ್ಮನೆಯಾಗಿದೆ. ಮೊದಲಿನ ಧೈರ್ಯ ಸ್ಥೈರ್ಯವಡಗಿ ಅದೇಕೋ ಅಧೈರ್ಯವೇ ಮೇಲೆದ್ದು ಕಾಣುವುದು. ಸಂತೋಷದ ದಿನವಳಿದುದರ ಪ್ರತೀಕವೆಲ್ಲವಾಗದಿರಲೆಂದು ಸದಾ ದೇವರನ್ನು ನಾನೀಗ ಪ್ರಾರ್ಥಿಸ ಹತ್ತಿರುವೆ.

ನನ್ನ ಮೊರೆಯನ್ನೀಗ ದೇವರು ಕೇಳದಂತಿಲ್ಲ; ನನ್ನ ಮೇಲವನು ಮುನಿಸಿಕೊಂಡಂತೆ ದಿನ ದಿನಕ್ಕೂ ನನಗೆ ದುಃಖ ಹೆಚ್ಚಾಗತೊಡಗಿದೆ.

ನನ್ನ ದುಃಖವನ್ನೀಗ ಯಾರೊಡನೆ ಹೇಳಲೆಂಬುದೇ ತೋಚುತ್ತಿಲ್ಲ. ನನ್ನವರೆಂಬುವರಾರೂ ನನಗರುವಂತೆ ಕಾಣುತ್ತಿಲ್ಲ. ನಾನೀಗ ಅಲೆಗಳ ಮಧ್ಯೆ ಸಿಲುಕಿದ ನಾವೆಯಂತೆ; ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ಅನಾಥಳಾಗಿರುವೆ. ನನ್ನ ಬಾಳೆಲ್ಲಾ ಬರಡಾಗಿ ಕಾಣಹತ್ತಿದೆ. ಇದೆಲ್ಲವಕ್ಕೂ ಕಾರಣವಾರೆಂಬುದನ್ನೀಗ ಯೋಚಿಸ ಹತ್ತಿರುವೆ.

ಯೋಚಿಸುತ್ತಿದ್ದಂತೆ ತಲೆ ಚಿಟ್ಟೆನ್ನುವುದು. ನಾನು ನಡೆದು ಬಂದ ದಾರಿ; ಮಾಡಿದ ಕೆಲಸ; ಪಡೆದ ಭಾಗ್ಯ ಒಂದೇ ಅಲ್ಲ.

ನನ್ನ ಹುಟ್ಟು ಒಂದು ಶುಭಕರ ಮನೆತನದಲ್ಲಾಯಿತು. ಹೆತ್ತವರಿಗೊಬ್ಬಳೇ ಮಗಳಾದ ಕಾರಣ ತವರ್ಮನೆಯಧಿಕಾರವೂ ಲಭಿಸಿತು.

ವಯೋಮಾನಕ್ಕೆ ಸರಿಯಾಗಿ ನನಗೂ ಮದುವೆಯಾಯಿತು. ನನ್ನ ಕೈಹಿಡಿದವರಾಗ ನಳಗಮರೂಪರಲ್ಲವೆಂಬುದು ಲೋಕ ಪ್ರಸಿದ್ಧ ವಿಚಾರವಾಗಿದ್ದರೂ ಮರ್ಯಾದೆಯಿಂದಲೇ ಕಾಲ ತಳ್ಳಿ ಒಂದು ದಿನ ಕಾಣೂ ತಾಯಿಯಾದೆ.

ಹೆತ್ತ ಮಕ್ಕಳನ್ನು ಮಮತೆಯಿಂದ ಕಾಣುತ್ತಿದ್ದೆ. ಆದರದು ಗಂಡಾಗಿಲ್ಲವಲ್ಲ ಎಂಬ ಕೊರಗೊಂದು ಕಾಣುತಿತ್ತಾಗ. ಹೇಗೋ ದಿನಗಳುರುಳುರುಳಿ ಹೋದಂತೆ ನನ್ನ ಹೆತ್ತವರೂ ಕಾಲವಾಗಿ, ಉಳಿದೆಲ್ಲ ಭಾರವೂ ನನ್ನ ತಲೆಯ ಮೇಲೆ ಬಿದ್ದಾಗೊಮ್ಮೆ ಹೌದಾಯಿತು.

ಆದರೂ ಇದ್ದುದರಲ್ಲಿಯೇ ಧೈರ್ಯತಂದು ದಿನ ನೂಕತೊಡಗಿದೆ. ಹೀಗಿರಲೊಂದು ದಿನ ನಮ್ಮ ಎದುರು ಮನೆಗೊಂದು ಹೊಸ ಸಂಸಾರ ಬಂದು ಬಾಡಿಗೆಗೆ ಹಿಡಿಯಿತು. ಆ ಚಿಕ್ಕ ಸಂಸಾರ ಚೊಕ್ಕ ಬಂಗಾರದಂತೆ. ಕಂಡವಳಿಗೆ ಅದೇ ಹೋ ಕಂಬಿಟ್ಟಾಗುತಿತ್ತು.

ಆ ಮನೆಯ ಯಜಮಾನ ನೋಡಲು ಸುಂದರ ಯುವಕನಾಗಿದ್ದ. ಯಾವುದೋ ಆಫೀಸಿನ ಕೆಲಸ ಹಿಡಿದಿರಬೇಕೆಂದು ಊಹಿಸಿದ ಸಾನವನ್ನು ದಿನಕ್ಕೆರಡು ಬಾರಿ ಕಾಣುತ್ತಿದ್ದೆ. ಅವನನ್ನು ಕಾಣುವಾಗ ನನಗಾವುದೋ ಅವ್ಯಕ್ತ ಆನಂದವಾಗುತಿತ್ತು. ಮತ್ತೊಮ್ಮೆ ಆ ಭಾಗ್ಯ ನಾನು ಪಡೆದು ಬಂದಿಲ್ಲವೆಂಬ ಸಂಕಟವೂ ಆಗುತ್ತಿತ್ತು. ಒಮ್ಮೊಮ್ಮೆ ನನ್ನಲ್ಲಿ ಅವನು ನನ್ನ ಮಾತಾಡಿಸಬಾರದೆ? ಎಂದೆನ್ನಿಸುತಿತ್ತು.

ಆ ಸೌಭಾಗ್ಯವನ್ನು ಒಂದು ದಿನ ವಿಧಿ ನನಗೆ ಒದಗಿಸಿ ಕೊಟ್ಟಿತು. ನನ್ನವರಂದು ಹೃದಯ ಕ್ರಿಯೆ ನಿಂತು ಕೊನೆಯುಸಿರೆಳೆದಾಗ ದುಃಖವನ್ನು ತನ್ನ ನಯ ಮಾತಿನಿಂದ ಶಮನಗೊಳಿಸಿದವನೂ ಅವನೆ. ಆ ಮೇಲೆ ದಿನವೂ ನನ್ನ ಯೋಗ ಕ್ಷೇಮ ವಿಚಾರಿಸಿ ನೆರವು ನೀಡುವುದನ್ನು ಆನಂದದಿಂದಲೇ ಸ್ವೀಕರಿಸಿದೆ.

ಪ್ರಾಯ ಬಲಿತ ಮಗಳನ್ನು ಧಾರೆಯೆರೆಯಲು ಅವನ ನೆರವೂ ನನಗಾಯಿತು.

ಅಪ್ಪರೊಳಗಾಗಿ ನಮ್ಮಿಬ್ಬರ ಅತ್ಮಬಂಧ ದಾಗ ದೇಹ ಬೆರೆತದ್ದಾಗಲೂ ಅರಿವಾಗಿದ್ದಿಲ್ಲ.

ಅವನ ಮಡದಿ ಮಕ್ಕಳನ್ನು ಊರಲ್ಲಿ ಬಿಟ್ಟು ಬಂದವಳು ಮತ್ತೆ ಅತ್ತ ಮುಖ ಹಾಕಲಿಲ್ಲ.

ತನು ಬೆಂದು ಮನನೊಂದ ಅವನ ಮಡದಿಯ ಶಾಪ ನನಗೆಂದು ತಟ್ಟಲಾರಬಹುದೇ ಎಂಬ ಸಂದೇಹ ಬರ ತೊಡಗಿದೆ.

ಅಂದು ನಮ್ಮಿಬ್ಬರ ಪ್ರೇಮ ಸಂಕೇತವಾಗಿ ಉದರದಲ್ಲೊಂದು ಶಿಶು ಬೆಳೆಯ ತೊಡಗಿತು. ಮತಿಂದರಿಂದ ಸಮಾಜದಲ್ಲೆಂದೂ ಸ್ಥಾನಮಾನ ಸಿಗಲಾರದೆಂದು ತಿಳಿದು ಹೆತ್ತ ಶಿಶುವನ್ನು ಕರುಣೆಯಿಲ್ಲದೆ ಅದೆಲ್ಲಿಯೋ ಸಾಗಿಸಲುಬಂದಿಷ್ಟೂ ಅಳುಕಿಲ್ಲದೆ ಒಪ್ಪಿಬಿಟ್ಟೆ. ಹೆತ್ತದ್ದು ನಾನಾದರೂ ಕಂದಾ ಎಂದು ಕರೆಯಲು ಹಿಂಜರಿದು ಅದನ್ನೆಂದು ಅನಾಥವಾಗಿರಿಸಿದೆ. ಅದಾದರೂ ಇಂದಿರುತ್ತಿದ್ದಿದ್ದರೆ...

ನನ್ನ ದುರ್ವ್ಯವಹಾರ ಕಂಡ ಮಗಳೂ ನನ್ನಿಂದ ದೂರಾಗಿ ಬಿಟ್ಟಳು.

ನಾನು ನಂಬಿ ಬಂದ ಅವನೂ ಈಗ ತನ್ನ ಮಡದಿ ಮಕ್ಕಳನ್ನರಸಿ ಹೊರಟು ಹೋದನು. ನನ್ನಿಂದ ದೂರಾಗಲು ಹೊರಟು ನಿಂತ ಅವನನ್ನಾಗ ತಡೆದು ನಿಲ್ಲಿಸಲು ಮನವೇಕೋ ಹಿಂಜರಿದು ಹೋಯಿತು. ಹಾಗಾಗಿ ನಾನೀಗ ಅನಾಥಳಾಗಿ ಉಳಿದು ಬಾಳ ಬೇಕಾದುದನ್ನು ಯೋಚಿಸಿದಂತೆ ದುಃಖವೇ ಹೊನಲಾಗಿ ಹರಿದು ಬರುವುದು.

ನನ್ನನ್ನು ಕಂಡವರೆಲ್ಲರೂ ಮುರಿದು ಹೋಗ ಹತ್ತಿರುವರು. ಈ ಲೋಕವೇ ನನಗೀಗ ಸೆರೆಮನೆಯಾಗಿ ಕಾಣುತ್ತಿದೆ. ಕಾಲನ ಕರೆಗಾಗಿ ಕಾದು ಕುಳಿತಿರುವೆನಾದರೂ ಅದೇಕೋ ಅವನೂ ನನ್ನ ಮೇಲೆ ಮುನಿದು ಕೊಂಡಂತಿದೆ.

ನನ್ನ ಪಾಲಿಗನ್ನುಳಿದಿರುವ ದಾರಿ ಒಂದೇ ಒಂದು. ಅದೇ ಆತ್ಮಹತ್ಯೆ.

ಆತ್ಮಹತ್ಯೆ ಮಾಡಿಕೊಂಡಾದರೂ ಈ ಜೀವನರಂಗದಿಂದ ಹೊರ ಹೋಗಬೇಕೆಂಬ ಇಚ್ಛೆ ನನಗಾಗ ಹತ್ತಿದೆ. ಹಿಡಿದ ಧರ್ಮಾರವನ್ನೆಂದೂ ಬದಲಿಸದೆ ಅದೇ ಪಥದಲ್ಲಿ ಸಾಗಿ ಹೋಗಿ ಬಿಡುವುದೊಳಿತಾಗಿ ಕಾಣುತ್ತಿದೆ.

ರಮಾಕಾಂತ

ಇದೆಲ್ಲವೂ ವಿಧಿಯಾಟವೆಂದೇ ಹೇಳಬೇಕು. ಇಲ್ಲವಾದರೆ ನಾನಾಗ ನಾಗವೇಣಿಯ ಮೋಹಪಾಶದಲ್ಲೆಂದೂ ಬೀಳುತ್ತಿದ್ದಿಲ್ಲ. ಸುಂದರ ಮಡದಿ ಪ್ರೀತಿಯ ಮಕ್ಕಳನ್ನು ಅಲಕ್ಷಿಸಿ; ಸಮಾಜದ ನಿಂದೆಗಾಗಲಿ, ಮಡದಿಯ ಕಣ್ಣೀರಿಗಾಗಲಿ ಕರಗದೆ ಹೋಯಿತು ನನ್ನ ಮನವಂದು.

ಆದರೆ ನಾನೀಗ ಇದ್ದಕ್ಕಿದ್ದಂತೆ ನಾಗವೇಣಿಯ ಮೇಲೆ ಮುನಿದು ಹೊಂಟು ಬಂದು ಮಕ್ಕಳನ್ನು ಸೇರಿದ್ದ ವಂಚಿಸಿ ಹಾಸಿಗೆಯ ಮೇಲೆ ಮಲಗಿದಂತಾಗಿದೆ.

ಕೈ ಹಿಡಿದವಳೇ ನನ್ನನ್ನು ಕಡೆಗಣಿಸಿದ ಮೇಲೆ ಮಕ್ಕಳು ಅದೆಂತು ಗೌರವ ಕೊಟ್ಟಾರು?

ದಿನ ಬೆಳಗೆ ಚುಚ್ಚು ಮಾತುಗಳನ್ನು ಕೇಳಿ ನನ್ನ ಕಿವಿಗಳೆಂಡೂ ತೂತಾಗಿ ಹೋದುವು.

ದುಡಿದು ಹಾಕುವ ಚೈತನ್ಯ ನನ್ನಲ್ಲಿಲ್ಲವೆಂಬುದನ್ನು ಅವರೆಲ್ಲರೂ ಕಂಡ ಕೊಂಡಂತೆ ದಿನ ದಿನಕ್ಕೂ ತಾತ್ಸಾರವೆ ನನ್ನ ಪಾಲಿಗೆ ದೊರೆತ ಸೌಭಾಗ್ಯವಾಗಿ ಕಾಣುವುದು.

ನಾನಂದು ಅದೆಂತು ಮಡದಿ ಮಕ್ಕಳನ್ನು ತೊರೆದು ನಾಗವೇಣಿಯ ಕಡೆಗಣ್ಣ ನೋಟಕ್ಕೆ ಬಲಿ ಬಿದ್ದೆನೋ ಅದೇ ನನಗಿಂದು ಮುಳುವಾದಂತಾಯಿತು.

ಯೌವನ ಕಳೆದು ಮುಪ್ಪು ಸವೆಯಿಸುತ್ತಿದ್ದಂತೆ ನಾಗವೇಣಿಯಿಂದ ತಿರಸ್ಕೃತನಾದಾಗ ಜೀವನದ ವೇಲೆಯೇ ಜಿಗುಪ್ಸೆ ಬರತೊಡಗಿತು.

ಅಂದು ನಮ್ಮಿಬ್ಬರ ರಹಸ್ಯ ಸಂಬಂಧ ಬೇರಾರಿಗೂ ತಿಳಿದಿಲ್ಲವೆಂದು ನಾವಂದು ಭಾವಿಸಿದ್ದರೂ ಹೊರಗಿನ ಗುಸು ಗುಸು ಸದ್ದು ಆಗಾಗ ಕೇಳಬರುತಿತ್ತು. ಆದರದನ್ನು ಹಾಗೆಂದು ಸಾರಲು ಮಾತ್ರ ಯಾರೊಡನೆಯೂ ಸರಿಯಾದ ಪುರಾವೆ ಇದ್ದಿರಲಿಲ್ಲ.

ಲೋಕದ ಕಣ್ಣಿಗೆ ನಾನು ನಾಗವೇಣಿ ಮನೆಯ ಲೆಕ್ಕ ಪತ್ರ ಇಡುವ ಒಬ್ಬ ಶಾನುಭಾಗಳಾಗಿದ್ದೆ. ಮುಂದೆ ಅವಳ ಮನೆಗೆಲಸವೆಂಬುದು ನನ್ನ ಸರಕಾರಿ ಕೆಲಸಕ್ಕೂ ರಾಜೀನಾಮೆ ಕೊಡಿಸಿತು. ಈಗೆಲ್ಲವೂ ನನಗೆ ಬರಿಯ ಕನಸಾಗಿ ಕಾಣುವುದು. ನಮ್ಮಿಬ್ಬರ ಸಂಬಂಧ ಸಾರುವ ಯಾವ ಕುರುಹೂ ಕಾಣುತ್ತಿಲ್ಲ ಇನಗೀಗ.

ಆದರೆ ನಮ್ಮಿಬ್ಬರ ಸಂಬಂಧ ಸಾರುವ ಆ ಮಗುವನ್ನಂದು ನಾನು ಏಕಾಂತ ಸ್ಥಳದಲ್ಲಿ ಬಿಟ್ಟು ಬಾರದಿರುತ್ತಿದ್ದರೆ ಲೇಸಾಗುತ್ತಿತ್ತೆಂದು ನನಗೀಗ ಕಾಣುವುದು.

ಆದೊಂದು ಇರ ತ್ತಿದ್ದರೆ ನಾಗವೇಣಿ ಎಂದೂ ನನ್ನ ಹೊರದೂಡುವ ಮನ ಮಾಡುತ್ತಿದ್ದಿಲ್ಲವೆಂಬ ಭಾವನೆ ಬರುವುದು.

ಕೊನೆಗಾಲದಲ್ಲಿ ಕೈ ಹಿಡಿದ ಮಡದಿ ಮಕ್ಕಳೇ ನನಗಾಶ್ರಯವೆಂದು ನಂಬಿ ಬಂದರೆ ಇಲ್ಲಿಯೂ ನನಗೆ ಕಾದಿರುವುದು ಅಪಮಾನಕರ ಮಾತುಗಳು. ಇದನ್ನೆಲ್ಲಾ ಸಹಿಸಿ ಕೊಂಡಿರಲು ನನ್ನಲ್ಲೀಗ ಶಕ್ತಿಯೇ ಉಳಿದಂತಿಲ್ಲ.

ಕ್ಷಣ ಕ್ಷಣಕ್ಕೂ ಈ ಜೀವನದ ಪರ್ಯಾವಸಾನ ಯೋಚಿಸಿ ನನ್ನ ತಲೆಯೇ ಭಾರವಾಗಹತ್ತಿದೆ. ಆದರೂ ಇನಗೆ ಸಾವು ಸವಿಯಾಸಿದಂತೆ ಕಾಣುವುದಿಲ್ಲ. ಇನ್ನು ನನಗುಳಿದಿರುವ ದಾರಿಯೆಂದರೆ ಆತ್ಮಹತ್ಯೆದ ಹೊರತು ಬೇರೇನೂ ಕಾಣುತ್ತಿಲ್ಲ. ಹೇಗಾದರೂ ಜೀವನ ಒಂದು ಕೊನೆಗೊಂಡರೆ ಸಾಕು.

ಅನಾಥ

ನನಗೆ ಹೇಳುವಂತಹ ವಯಸ್ಸೇನೂ ಆಗಿರಲಾರದು. ನಾನು ಹುಟ್ಟಿದ ದಿನ, ವಾರ, ನಕ್ಷತ್ರ; ಯಾರೂ ಬರೆದಿಟ್ಟಂತಿಲ್ಲ. ಹೆತ್ತತಂದೆ ಯಾರೆಂದು ಅರಿಯದ ಅನಾಥನಾದ ನನ್ನ ಜಾತಕವನ್ನಾದರೂ ಯಾರು ಬರೆದಿಡಬೇಕು?

ನನ್ನ ಸಾಕಿ ಸಲಹಿದ ಆ ಮುದುಕಿ ಕಣ್ಮುಚ್ಚಿದಂದಿನಿಂದ ಈ ಪ್ರಪಂಚವೇ ನನಗೆ ಕಾಡಾಗಿ ಕಾಣುತ್ತಿದೆ. ನನ್ನವರೆಂಬುವರಾರೂ ಇನಗಿದ್ದಂತಿಲ್ಲ. ಎಲ್ಲಾ ಕಡೆಗಳಿಂದಲೂ ಕೇಳಿ ಬರುವ ಅಪಮಾನಕರ ಮಾತುಗಳಿಂದ ಇನಗೀಗ ಅದಕ್ಕು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ,

ಶೇವಜಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ,

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3

ನವಯುಗ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨೯	೨೧—೩—೧೯೬೮	No. 29

ಮತ್ತೊಂದು ಅವಕಾಶ

ಬ್ರಿಟಿಷರ ಮತ್ತೊಂದು ವಸಾಹತು ಮೊರಿಷಸ್ ಸ್ವತಂತ್ರವಾಗಿ, ಕಾಮನ್‌ವೆಲ್ತ್ ಕೂಟದ ಸದಸ್ಯ ರಾಷ್ಟ್ರವಾಯಿತು. ಭಾರತೀಯ ಮೂಲದವರೇ ಅಧಿಕ ಸಂಖ್ಯಾತರಾಗಿರುವ ಈ ಪುಟ್ಟ ದ್ವೀಪವನ್ನು ತನ್ನ ತಾನೇ ನೋಡಬೇಕಾಯಿತು. ದೂರದ ಹಿಂದೂ ಸಾಗರದಲ್ಲಿ ದಕ್ಷಿಣ ಆಫ್ರಿಕೆಗೆ ನಮಗಿಂತ ಅತ್ಯಂತ ಹತ್ತಿರವಿರುವ ಈ ದ್ವೀಪದ ಬಗ್ಗೆ, ಭಾರತವು ಬಹಳ ಕಳಕಳಿಯನ್ನು ತೋರಿಸಬೇಕಾಗುತ್ತದೆ. ಪರದಾಸ್ಯ ಶೃಂಖಲೆಯಿಂದ ಮುಕ್ತಿ ಪಡೆದಿದ ಮೊರಿಷಸ್ ಸ್ವತಂತ್ರಗೊಂಡಿತಾದರೂ ಅದು ತನ್ನದೇ ಆದ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಮೊರಿಷಸ್‌ನಲ್ಲಿ ಭಾರತೀಯ ಸಂಜಾತರಿರುವುದು ಅಧಿಕವಾದುದರಿಂದ ಭಾರತದ ಜವಾಬ್ದಾರಿಯೂ ಇಲ್ಲಿ ಹೆಚ್ಚಿದೆ. ಈ ದ್ವೀಪದ ಅಭಿವೃದ್ಧಿಯಲ್ಲಿ ಭಾರತವು ತಾಂತ್ರಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಆಸಕ್ತವಾಗಿದೆ. ಇದರೊಂದಿಗೆ ಇನ್ನು 'ಮುಂದೆ, ಹಲವಾರು ವಿಧಾನಗಳಿಂದ ಮೊರಿಷಸ್‌ನ ಸರ್ವಾಂಗೀಣ ಉನ್ನತಿಗೆ ತ್ರಿಕರಣಪೂರ್ವಕವಾಗಿ ಮುಂದೆ ಬರಬೇಕಾಗಿದೆ. ಮೊರಿಷಸ್‌ನ ಜನತೆಯೂ ಇದನ್ನೇ ಬಯಸುತ್ತದೆ. ಭಾರತವು ತನಗೊಂದು ದಿಕ್ಕಾಗಬೇಕೆನ್ನುತ್ತದೆ ಅದು. ಆದರೆ, ಈ ಬಗೆಯ ಅಭಿಮತ ಸಂಪೂರ್ಣ ಜನತೆಯದೆಂದು ಹೇಳಲಾಗದು. ಅಲ್ಲಿರುವ ಭಾರತೀಯ ಸಂಜಾತರ ಅಭಿಪ್ರಾಯವಿದು. ಈ ಪುಟ್ಟ ದ್ವೀಪದಲ್ಲಿ ಮುಸ್ಲಿಮರಿದ್ದಾರೆ; ಇವರ ಸಂಖ್ಯೆ ಕಡಿಮೆ. ಹಿಂದೂಗಳಿದ್ದಾರೆ; ಫ್ರೆಂಚ್ ಮಿಶ್ರಕುಲವಂದಿಗರ ಸಂಗಡವೂ ಇದೆ. ಮುಸ್ಲಿಮರು ಹಿಂದೀಯರಿಗೂ ಮಿಶ್ರಕುಲವಂದಿಗರಿಗೂ ಉಪದ್ರವ ಕೊಡುತ್ತಿರುತ್ತಾರೆ—ಈ ವರ್ಗದವರಿನ್ನೂ ಸುಸಂಸ್ಕೃತರಾಗಿರುವುದಿಲ್ಲ. ಆಫ್ರಿಕನ್ ಸಂಜಾತರು ಮೊರಿಷಸ್ ದ್ವೀಪವನ್ನು ಮಲಗಾಸಿ ರಾಷ್ಟ್ರ ಸಮುದಾಯಕ್ಕೆ ಸೇರಿಸಬೇಕೆಂದು ಆಶಿಸುತ್ತಿದ್ದಾರೆ—ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಗಿರಲು ಅವರಿಗೆ ಇಷ್ಟವಿಲ್ಲ—ಇದಕ್ಕಾಗಿ ಚಳವಳಿಯನ್ನೂ ಅವರು ನಡೆಸುತಿದ್ದಾರೆ. ಫ್ರೆಂಚರ ಬಗ್ಗೆಯೂ ಆಸಕ್ತಿಯಿದ್ದೇ ಇದೆ. ಹೀಗೆ ಸತ್ತೆಯ ಬಗ್ಗೆಯೇ, ಜನಜೀವನವನ್ನು ಅಸ್ತವ್ಯಸ್ತಗೊಳಿಸಲು ಬೇಕಷ್ಟು ಭಿನ್ನಮತಗಳು— ವಿರೋಧ ಭಾವನೆಗಳು ಮೊರಿಷಸ್‌ನಲ್ಲಿವೆ. ಇವೆಲ್ಲವುದರಿಗೆ ಕಲಶವಿಡುವಂತೆ ಜನಸಂಖ್ಯಾ ಪ್ರಮಾಣವೂ ತ್ವರಿತಗತಿಯಿಂದ ಏರುತ್ತಲೇ ಹೋಗುತ್ತಿದೆ; ಇತರ ವಸಾಹತುಗಳು ಸ್ವತಂತ್ರಗೊಂಡಾಗ ಇದ್ದಂತೆಯೇ ಆರ್ಥಿಕ ಸ್ಥಿತಿಗತಿಗಳೂ ಉಳ್ಳಲಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಭಾರತವು ಕಾಳಜಿವಹಿಸುವುದು ಅನಿವಾರ್ಯ; ಆದರೆ, ಈ ಬಗ್ಗೆ ತೀವ್ರ ಎಚ್ಚರಿಕೆಯೂ ಅಗತ್ಯ.

ಬ್ರಿಟಿಷ್ ವಸಾಹತು ಶಾಹಿ ಪತನದ ಅಂತಿಮ ಘಟ್ಟವನ್ನು ತಲಪುತ್ತಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ನೌಕಾ ಪಡೆಗಳಿಗೆ ಬೆಸಂಗಾದ ಬ್ರಿಟನ್ ಹಿಂದೂ ಸಾಗರದಿಂದ ದೂರ ಸರಿಯುತ್ತದೆ. ಒಂದಲ್ಲ ಒಂದು ಸಾಕಾನೆಲೆಯನ್ನು ಕಟ್ಟಲು ಹವಣಿಸಿದರೂ ಅದರ ಆಶಯ ಈಡೇರುವ ಸಲ್ಲಕ್ಷಣಗಳಿನ್ನೂ ಅಗೋಚರವೇ. ವಿಯತ್ನಾಮದಲ್ಲಿ ಬೇಗೆಗೆ ಸಿಕ್ಕಿಕೊಂಡಿರುವ ಅಮೆರಿಕೆಯ ಭವಿತವ್ಯವೂ ಸಂದಿಗ್ಧವೇ. ಇದೇ ಹೊತ್ತು ಸಾಮ್ರಾಜ್ಯವಾದಿಯಾಗಿ ಮೆರೆಯುವ ಕನಸು ಕಾಣುತ್ತಿರುವ ಕೆಂಪು ಚೀನಾ ಹಿಂದೂ ಸಾಗರದಲ್ಲಿ ತನ್ನ ಕೆಚ್ಚಾಲಗೆಯನ್ನು ಬಹಳಷ್ಟು ವಿಶಾಲಕ್ಕೆ ಹರಡಿಸುವ ತರಾತುರಿಯಲ್ಲಿದೆ. ಜಪಾನವಿದನ್ನು ದಟ್ಟಿ ತನ್ನ ಪ್ರಭಾವವನ್ನು ಬೀರುವ ಹವಣಿಕೆಯಲ್ಲಿದೆ. ಅಮೆರಿಕೆ-ಬ್ರಿಟನ್ನುಗಳು ಪ್ರತ್ಯಕ್ಷವಾಗಿ ಈ ವಿಶಾಲ ಸಮುದ್ರದಲ್ಲಿ ವಿಹರಿಸುವ ಅವಕಾಶ ಲಭ್ಯವಾಗುವುದರಿಂದ ತನ್ನ ಅರೆಬಾಲಬಡಕ ಪಾಕಿಸ್ತಾನವನ್ನು ಎತ್ತಿಕಟ್ಟುವ ಯೋಜನೆ ಮಾಡಿದರೂ ತಪ್ಪಲ್ಲ. ಹೀಗೆ ಪಾಕಿಸ್ತಾನವನ್ನು ಹುರಿದುಂಬಿಸುವುದರಿಂದ ಅದನ್ನು ಕೆಂಪು ಚೀನಾದ ಜೀವಿಯಿಂದ್ತಿ ತನ್ನ ಬೆನ್ನ ಮೇಲೆ ಕೂತುಕೊಳ್ಳಿಸಿದಂತಾಗುವುದು. ಹೀಗಿರುವಾಗ, ಭಾರತವೂ ಹಿಂದೂ ಸಾಗರದಲ್ಲಿ ತನ್ನ ಕಳೆದುಕೊಂಡ ಪ್ರಭಾವವನ್ನು ಪಡೆಯುವುದು ಅಗತ್ಯವಿದೆ. ನೆಪ್ಟ ನೆರೆ ಹೊರೆಯವರೊಡನೆ ಒಂದಲ್ಲ ಒಂದು ನೆಪದಿಂದಾಗಿ ವಿವಾದಗಳು ಹೆಚ್ಚುತ್ತ ಬರುತ್ತಿರುವುದನ್ನು ಗಮನಿಸುವಾಗ, ನಾವು ಅತ್ಯಂತ ಜಾಗರೂಕರಾಗಿ ವರ್ತಿಸುವ ಅಗತ್ಯ ಎಂದಿಗಿಂತ ಹೆಚ್ಚಾಗಿದೆ.

ನಮ್ಮ ಡೊಂಕುದಾರಿ

ದೇಶ ಸ್ವತಂತ್ರವಾದರೂ ನಮಗೆ 'ನಮ್ಮತನ'ವೆಂಬುದಿನ್ನೂ ಮೂಡಿಲ್ಲ. ಭಾರತೀಯರಲ್ಲಿ ನಾನಾ ಪ್ರಕಾರದ ಭಿನ್ನತೆಯಲ್ಲೇ ಏಕತೆಯನ್ನು ಸಂರಕ್ಷಿಸಿಕೊಂಡು ಬಂದ ಧೀಮಂತ ಜನಾಂಗ ನಮ್ಮದು. ಆದರೆ, ಇತ್ತೀಚೆಗಿನ ನಮ್ಮ ಹಲವಾರು ನಡವಳಿಕೆಗಳು ನಮ್ಮಲ್ಲಿನ ಏಕ ಸೂತ್ರತೆ ಸಡಿಲಾಗುತ್ತಿರುವುದನ್ನೂ ನಮ್ಮಲ್ಲಿ 'ನಮ್ಮತನ' ಬೆಳೆದಿಲ್ಲವೆಂಬುದನ್ನೂ ಎತ್ತಿ ತೋರಿಸುತ್ತಿವೆ. ಉದಾಹರಣೆಗೆ ನಿರಾಶ್ರಿತರ ಪ್ರಶ್ನೆಯನ್ನು ಎತ್ತಿಕೊಳ್ಳಬಹುದು. ಬೇರೆ ಬೇರೆ ಭಾಷೆಯನ್ನಾಡುವ ನಿರಾಶ್ರಿತರು ತಂತಮ್ಮ ಭಾಷಾಸಂಗಡವೊಂದನ್ನು ಕಟ್ಟಲು ಬಯಸುತ್ತಿರುವುದು ಶೋಚನೀಯ. ದಂಡಕಾರಣ್ಯದಲ್ಲಿ ಮರಿಬಂಗಾಳಿ, ಮರಿಕೇರಳಿಗಳು ಜನ್ಮವೆತ್ತಿರುವುದೊಂದು ನಿದರ್ಶನ. ಹಾಗೆಯೇ ಭಾಷಾಭಿಮಾನದಲ್ಲಿ ತಮಿಳರೂ ಕಡಿಮೆಯವರಲ್ಲವೆಂಬುದನ್ನು ಇತ್ತೀಚೆಗಿನ ಭಾಷಾ ಚಳವಳಿಯು ವೇಳೆ ತೋರಿಸಿಕೊಟ್ಟಿದ್ದಾರೆ. ಪ್ರತ್ಯೇಕ ತಮಿಳುನಾಡಿನ ಕೂಗನ್ನೂ ಅವರು ಮುಷ್ಟೀಕರಿಸಿದ್ದಾರೆ; ಕನಸಿನ ಸ್ವತಂತ್ರ ತಮಿಳುನಾಡಿಗೊಂದು ರಾಷ್ಟ್ರ ಧ್ವಜ, ರಾಷ್ಟ್ರ ಗೀತೆಯನ್ನೂ ಅವರು ಕಟ್ಟಿದ್ದಾರೆ. ಭಾಷೆಯ ಯೆಸರಿನಲ್ಲಿ ಸಾರ್ವಜನಿಕ ಲೂಟಗೆ ಉತ್ತೇಜನವಿತ್ತಿದ್ದಾರು; ಭಾರತೀಯ ರೇಲ್ವೆಗಳಿಗೆ ರೂ. ೨೦ ಲಕ್ಷಕ್ಕೂ ಮಿಕ್ಕಿದ ನಷ್ಟವನ್ನು ಮಾಡಿ ತಮ್ಮ ಭಾಷೆಯ ಬೆಲೆಯನ್ನು ಕಟ್ಟಿದ್ದಾರೆ. ಇದಕ್ಕೆ "ನಮ್ಮತನ"ಕ್ಕೂಂದು ಸಂಕುಚಿತ ಅರ್ಥಕಟ್ಟಿಕೊಂಡಿರುವುದೂ ಅದನ್ನಾದರೂ ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೂ ಮುಖ್ಯ ಕಾರಣ. ಇನ್ನೇದಾರಿಯಲ್ಲಿ ಮಂಗಾಜ್ಯಗಳನ್ನೂ ಮರಿಂಗ್ಯಗಳನ್ನು ನಾವು ಬೆಳೆಸುತ್ತ ಹೋಗುವುದರಿಂದ ನಾವೊಂದಾಗುವುದಿಲ್ಲ; ಇದನ್ನು ಬುದ್ಧಿಜೀವಿಗಳು ತೀವ್ರವಾಗಿ ಪರಿಗಣಿಸಬೇಕು. ಇಂತಹ ದುಃಶ್ಯಕ್ಕಿಗಾಗಿ ಹತ್ತಿಕ್ಕಲು ಆಡಳಿತಮೂಲ ಸೂಕ್ತ ಕ್ರಮ ಕೈಗೊಳ್ಳಬೇಕು.

ವಚನ ಸುಧೆ

ಅಕೀರ್ತಿಂ ವಿನಯೋ ಹಂತಿ
ಹಂತ್ಯನರ್ಥಂ ಪರಾಕ್ರಮಃ।
ಹಂತಿ ನಿತ್ಯಂ ಕ್ಷಮಾ ಕ್ರೋಧ
ಮಾಚಾರೋ ಹತ್ಯ ಲಕ್ಷಣಮ್॥

ವಿನಯವು ಅಪಕೀರ್ತಿಯನ್ನು, ಪರಾಕ್ರಮವು ಅನರ್ಥವನ್ನು ಕ್ಷಮೆಯು ಕ್ರೋಧವನ್ನು ಸದಾಚಾರವು ಕುಲಕ್ಷಣವನ್ನು ಸದಾ ದೂರಮಾಡುತ್ತದೆ.

ವಿಶ್ವವಿದ್ಯಾ ಸದನದ ವಾರ್ಷಿಕೋತ್ಸವ

ಬೆಂಗಳೂರಿನ ಬಸವನಗುಡಿಯ ಪಟಾಲಮ್ಮಗುಡಿ ಬೀದಿಯಲ್ಲಿರುವ ವಿಶ್ವ ವಿದ್ಯಾ ಸದನ ಸರ್ವರಿ, ಪ್ರೈಮರಿ ಮತ್ತು ಹೈಸ್ಕೂಲಿನ ತೃತೀಯ ವಾರ್ಷಿಕೋತ್ಸವವು ಮಾರ್ಚ್ ೩೧ರಂದು ನ್ಯಾಯಾಂಗ ಸಚಿವ ಎಸ್. ಆರ್. ಕಂಠಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಸ್ಥೆಯ ಸ್ಥಾಪಕ—ಡೈರೆಕ್ಟರ್ ಶ್ರೀ ಗಣಪತಿ ಶರ್ಮರು ಸ್ವಾಗತ ಭಾಷಣ ಮಾಡುತ್ತಾ ಸಂಸ್ಥೆಯ ಹುಟ್ಟು ಯಾಗೂ ಬೆಳವಣಿಗೆಯ ಪಾಡುಗಳು ಮಾತಿಕೊಟ್ಟರು. ಶ್ರೀಮತಿ ಜಾನಕಿ ಶರ್ಮರು ವರದಿ ವಾಚನ ಮಾಡಿದರು.

ಅಟ ಸಾಧಾರಣ ವಿಜಯಿಯಾದವರಿಗೆ ಅಧ್ಯಕ್ಷರಿಂದ ಬಹುಮಾನ ವಿತರಣೆಯಾದ ಮೇಲೆ ಶಿಕ್ಷಣ ಇಲಾಖೆಯ ಆರ್ಡಿನರಿ ಡೈರೆಕ್ಟರ್ ಎ. ಬಿ. ದೇಸಾಯಿಯವರು ಸಂಸ್ಥೆಯ ಕಾರ್ಯಕಲಾಪಗಳನ್ನು ಪ್ರಶಂಸಿಸುತ್ತ ಸಾರ್ವಜನಿಕರು ಖಾಸಗಿ ವಿದ್ಯಾ ಸಂಸ್ಥೆಗಳಿಗೆ ನೆರವು ನೀಡಬೇಕಾದ ಅಗತ್ಯವನ್ನು ತಿಳಿಸಿದರು. ಶ್ರೀ ಸಿ. ವಿ. ಪಾಲಾಳ್, ಕಾಲಾಗಿ ವಿದ್ಯಾರ್ಥಿ ಸಂಘದ ಸಮಾರೋಪ ಭಾಷಣ ಮಾಡುತ್ತ ವಿದ್ಯಾರ್ಥಿಗಳು ಶಿಸ್ತಿನಿಂದ ನಡೆದುಕೊಳ್ಳಬೇಕೆಂದು ಹೇಳಿ ಅಧ್ಯಾಪಕರ ಸ್ವಂದದ ಆರ್ಥಿಕ ಸ್ಥಿತಿ ಉತ್ತಮ ಗೊಳಿಸುವುದು ಸರ್ಕಾರದ ಕೆಲಸವೆಂದು ಹೇಳಿದರು.

ಶ್ರೀ ಕಂಠಯ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಸಂಸ್ಥೆಯ ಸ್ಥಾಪಕರಾದ ಶ್ರೀ ಶರ್ಮರ ಕಾರ್ಯದಲ್ಲಿ ಯಶಸ್ಸನ್ನು ಕೋರಿದರು. ಮತ್ತು ದೇಶದ ಭಾಷಾ ಸಮಸ್ಯೆಯ ಪರಿಹಾರಕ್ಕೆ ತ್ರಿಭಾಷಾ ಸೂತ್ರವೇ ಸೂಕ್ತವೆಂದರು. ಶ್ರೀ ಎಸ್. ಶ್ರೀಕಂಠರ ಮೂರ್ತಿಗಳು ಧನ್ಯವಾದ ಸಮರ್ಪಣೆಮಾಡಿದ ನಂತರ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ನೃತ್ಯ, ನಾಟಕ ಮೊದಲಾದ ಮನೋರಂಜನೆಯ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ನರಸಣ್ಣನ ಸರಸ

"ಸರಕಾರೀ ಬಸ್ಸಿನಂದ ಪೆಟ್ರೋಲ್ ಹಾಕುವಾಗ ಇಬ್ಬರನ್ನು ಬಂಧಿಸಿದರಂತೆ ... ಬೊಸ ಟೈರು ತೆಪ್ಪಿಸಿ ಒಟ್ರೆಡಾಡ್ ಟೈರು ಹಾಕುವಾಗ?"

ಮುಖಚಿತ್ರ

ನಿ| ಕೆ. ಸೀತಾರಾಮರಾಯರ ಮಾತೃಶ್ರೀ ಗಂಗಾಬಾಯಿ

ಕೃತಜ್ಞತಾ ಸಮರ್ಪಣೆ

ಮಹನೀಯರೆ,

ನನ್ನ ಪುತ್ರಿ ಮ. ಮರವೂರು ಬೀಡು ಡಾ| ದಯಾನಂದ ಹೆಗ್ಡೆಯವರ ಸೊಸೆ ಚಿ| ಸೌ| ಉಷಾ ಕುಮಾರಿಯ ವಿವಾಹ ಸಮಾರಂಭವು ಶ್ರೀ ಆಡೆಕಳ ರಾಮಯ್ಯ ಶಾಯ್ಯರ ಪುತ್ರ ಮ. ವೆರ್ನೆದಿ ಮ್ಯಾಲ ಶೈಗಳ ಅಳಿಯ ಚಿ| ಸದಾನಂದ ನಾಯ್ಕರೊಡನೆ ತಾ. 17—3—68ರಂದು ಮಂಗಳೂರಿನ ಟೌನ್ ಹಾಲ್‌ನಲ್ಲಿ ನೆರವೇರಿತು. ಈ ಶುಭ ಸಮಾರಂಭಕ್ಕೆ ದಯಮಾಡಿ ಶುಭಾಶೀರ್ವಾದಗಳನ್ನು ಕಳುಹಿಸಿ ವಧೂವರರನ್ನು ಆಶೀರ್ವದಿಸಿದ ಸಮಸ್ತ ಹಿತಾಕಾಂಕ್ಷಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮಂಗಳೂರು,
ತಾ. 18-3-68.

ಬೈಲು ಹೊಸಮನೆ ರಾಜೀವ ಛಂದಾರಿ
(ಪ್ರೆಸಿಡೆಂಟ್, ತಾಲೂಕ್ ಬೋರ್ಡ್)

ಗೇಹ ರಾಜ್ಯದಲ್ಲಿ

ಸಾಹಸಕ್ಕೆ ಮಾಡುವ ಹೆಬ್ಬಯಕೆ

"ಅಲ್ರಿ, ನ್ಯಾಯಾಲಯದಲ್ಲೇ ಅನ್ಯಾಯ ಕೂಡೋ ಹೋದ್ರೆ...."

"ಯಾಕೆ, ಏನಾಯ್ತಾ?"

"ಅಗೋದೇನಂತೆ? ನೋಡಿ, ಅಲ್ಲಾ, ನಿಂಗೊತ್ತಿಲ್ವಾ?"

"ಯಾವ ನ್ಯಾಯಾಲಯ? ಎಂತಹ ಅನ್ಯಾಯ? ಯಾವುದರ ಬೇಳ್ದೆ ಗೊತ್ತಿಲ್ವಾ ಅಂತಂದ್ರೆ ಹೇಗೆ?"

"ಅಲ್ರಿ, ಅದೇ ನೋಡಿ ಸರ್ವೋಚ್ಚ ನ್ಯಾಯಾಲಯ, ಅದ್ರ ನ್ಯಾಯಮೂರ್ತಿಗಳಿಗೆ ಅನ್ಯಾಯ ನಡೆಯಿತಲ್ಲಾ?"

"ಹಾಗೆ ಹೇಳು. ನ್ಯಾಯ ಮೂರ್ತಿಗ್ರೋವರ್ ಅವರ ಮೇಲೆ ಇಂತಹವಾದ ಘಟನೆ ತಾನೇ ನೀನುಲ್ಲೇಬಿಸುವುದು?"

"ಹ್ಹೂಂ ಅದೇ ನೋಡಿ, ಎಂತಹ ಅನ್ಯಾಯ!"

'ಅನ್ಯಾಯವೇನೋ ನಿಜಾನ್ನು. ಪುಣ್ಯಕ್ಕೆ ಜೀವಕ್ಕೇನೂ ಅಪಾಯವಿಲ್ಲ; ಗಾಯಮುಖರಾಗುತ್ತಿದ್ದಾರೆ...."

'ಅದು ಸರೀರಿ. ಆದ್ರೆ, ನ್ಯಾಯಾಧೀಶರ ಜೀವ ರಕ್ಷಣೆಗೇನು ರಕ್ಷಕರು ಇಲ್ಲವೇನು?'

'ಇದ್ದಾರೇನ್ನು. ಆದ್ರೆ ಅವ್ರು ನ್ಯಾಯಾಸ್ಥಾನಕ್ಕೆ ಬೋಗ.ವ್ದಿಲ್ಲ.'

"ಅಲ್ರಿ, ನಿಮ್ಮ ಮಂತ್ರಿಮಂಡಳದ ಎಲ್ಲರಿಗೂ ಅಲ್ಲಿ ಶರೀರ ರಕ್ಷಕರ ತಂಡ ಸುತ್ತುವರಿಯಬೇಕಾಗುತ್ತದೆ. ಅಂದ್ರೆ, ಅವ್ರ ಶರೀರಕ್ಕೆ ಬೆಲೆ ಹೆಚ್ಚು, ನ್ಯಾಯಾಧೀಶರ ಶರೀರಕ್ಕೆ ಬೆಲೆ ಕಡಮೆಯೇನು?'

"ಛಿ, ಛಿ.... ಹಾಗೆಲ್ಲಾ ಏನೇನೋ ಹೇಳಿದರೆ ಹೇಗೆ? ಆ ಸಂಪ್ರದಾಯ ಇರಲಿಲ್ಲವೆಂದು ತೋರುತ್ತೆ...."

"ಇನ್ನೇಗೆ ಮಾಡಬೇಕಾಯ್ತಲ್ಲ?'

"ಮಾಡಬಹುದೂನ್ನು.",

"ಅಲ್ರಿ, ಆ ತಳಿಗೇಡಿ ಯಾರಾಗಿ ಇಂಥದು ಬಂದ ಅಂತ....'

"ಅವನನ್ನೇ ಕೇಳು..."

"ಎಲ್ಲಿದ್ದಾನವನು?"

"ಇವದಿಲ್ಲಿಯಲ್ಲಿ...."

"ಅಯ್ಯೋ, ಅಷ್ಟು ದೂರ ಹೋಗೋದು ಬ್ಯಾಗೇಂತ?"

"ನಿಜಲಿಂಗಪ್ಪ, ಜತ್ತಿ, ರಾಮಕೃಷ್ಣ ಹೆಗ್ಗಡೆ, ಎಲ್ರೂ ಹೋಗಿದ್ದಾರೆ ನೋಡು, ಹಾಗ...."

'ಅಲ್ರಿ, ಹಾಗೆಲ್ಲಾ ಮಂತ್ರಿಗಳು ವಿಧಾನ ಮಂಡಲ ಬಿಟ್ಟು ದೆಹಲಿ ಹಿಡಿದ್ದರಿಂದ ತಾನೇ ಇಲ್ಲಿ ಗಲಾಟೆ ನಡೆದದ್ದು?"

"ಮಂತ್ರಿಗಳು ಇಲ್ಲದ್ದಕ್ಕೂ ಈ ಗೊಂದಲಕ್ಕೂ ಏನೇನೂ ಸಂಬಂಧವಿಲ್ಲ.'

"ಮತ್ತೆ?"

"ನೋಡು, ಗಲಾಟೆ ಮಾಡುವವರನ್ನು ತಡೆಯಬಹುದು; ಗಲಾಟೆ ಮಾಡಲೆಂದೇ ಒಂದವರನ್ನು ತಡೆಯುವುದು ಹೇಗೆ?'

"ಅಂದ್ರೆ?"

"ಕೇಳು, ಮಂತ್ರಿಗಳು ಇಲ್ಲ ನಿಜ; ಉಳಿದವರು ಇಲ್ವೆ? ಸಾಮುದಾಯಿಕ ಹೊಣೆಗಾರಿಕೆ ಸಜೀವ ಸಂಪುಟದ್ದು. ಮಂತ್ರಿಗಳು ಯಾಕೆ, ಎಲ್ಲಿ ಹೋಗಿದ್ದಾರೆ, ಎಲ್ಲಾ ಗೊತ್ತಿದ್ದ ಗೊತ್ತಿದ್ದೂ ಸಭಾ ಕಾರ್ಯಕ್ರಮ ನಡೆಯಬೇಕಾಗಿದ್ದು ಎಂದರೆ, ಇದು ಎಳೆಯ ಬಗೆಯ ಮನೋವೃತ್ತಿ."

"ಹ್ಹೂಂ.... ಇದೂ ಒಂದು ತರಾವರೆ... ಗೊಂದಲ ಮಾಡೋಕೆ ಏನಾದ್ರೂ ಹೆಳಿಕ್ಕಿದರೆ ಸಾಕ. ಶಾನೆ?"

"ಮತ್ತೆಂಥದು"

'ಅಲ್ರಿ, ನ್ಯಾಯಾಧೀಶರಿಗೆ ಇರಿದವನ ಹೆಸರು...."

"ಮದನ ಮೋಹನದಾಸನಂತೆ."

"ಅವನ ಕೆಲಸ?"

'ಹೇಳಿಕೊಳ್ಳುವಂಥದ್ದೇನೂ ಇಲ್ಲಾನ್ನು. ಅವನ ಕಥೆ ಭಾರಿ ಇದೆ...."

"ಅಂದರೆ?"

"ಮದನ ಮೋಹನನಿಗೆ ಈಗಷ್ಟೆ ವರ್ಷವಂತ. ಹಿಂದೊಮ್ಮೆ ಕಲ್ಕತ್ತದಲ್ಲಿ ಹಡಗು ಸಾಗಾಣಿಕೆ ಕಂಪೆನಿಯಲ್ಲಿ ಕೆಲಸಕ್ಕಿದ್ದನಂತೆ.'

"ಓಹೋ! ಒಳ್ಳೆ ಉದ್ಯೋಗ. ಮತ್ತೆ ಅದನ್ನು ಬಿಟ್ಟದ್ದು...."

"ನೋಡು, ಆ ಅವಧಿಯಲ್ಲಿ ವಿದೇಶಯಾತ್ರೆಯನ್ನೂ ಮಾಡಿದ್ದಾನಂತೆ...'

"ಭಾರೀ ಧನವೈಭವ...."

'ಅದೇನೋ, ಕಂಪೆನಿಯ ಕೆಲಸ ಕಳೆದುಕೊಂಡನಂತೆ.'

'ಯಾಕೆರಬಹುದು?'

"ಪ್ರಾಯ, ಏನೋ ಮಾನಸಿಕ ದೌರ್ಬಲ್ಯದಿಂದಿರಬಹುದು. ಬ್ರಿಟನ್ನಿನಲ್ಲಿರುವಾಗ, ಏನೋ ಚಿಕಿತ್ಸೆಯನ್ನು ಸಡೆದಿದ್ದನಂತೆ.'

'ಹ್ಹೂಂ, ಮತ್ತೆ?"

"ಮತ್ತೇನು? ಅವನ ಮನಸ್ಸಿನಲ್ಲಿ ಭಾರತ, ಭಾರತೀಯ ಸಂಸ್ಕಾರ, ಹಿರಿಯ ಅಧಿಕಾರಿಗಳ ಬಗ್ಗೆ ದ್ವೇಷ ಬೆಳೆಯಿತಂತೆ.'

'ಹ್ಹೂಂ.... ಭಾರೀ ಸೋಜಿಗ..."

'ಮುಂಬಯಿಗೆ ಬಂದನಂತೆ....'

"ಅಲ್ರಿ, ಅವನ ಹುಟ್ಟೂರು?"

"ಹುಟ್ಟೂರು? ಪ್ರಾಯ ಉತ್ತರ ಪ್ರದೇಶವೇ ಇರಬಹುದೂನ್ನು...."

"ಯಾವುದೇ ಇರಲಿ. ಮುಂದೇನಾಯಿತು?"

"ಮುಂಬಯಿಯಲ್ಲಿ ಆತನೊಮ್ಮೆ ಹೈಕೋರ್ಟಿನ ದೀಪಗಳನು ಒಡೆದು ಹಾಕಿದನಂತೆ....'

"ಅಂದ್ರೆ ಮೊದಲಿಂದಲೂ ಆತನಿಗೆ ನ್ಯಾಯಾಲಯದ ಮೇಲೆಯೇ ಕಣ್ಣು...."

'ಅದಕ್ಕಾಗಿ ಏನು ತಿಂದಳ ಶಿಕ್ಷೆಯಾಯಿತಂತೆ..."

"ಹ್ಹೆಂ....ಮುಂದೆ?"

'ಭಾರತವನ್ನೇ ಬಿಟ್ಟು ಓಡುವ ಪ್ರಯತ್ನ ಮಾಡಿದನಂತೆ...'

"ಯಾವಾಗ?"

"ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದ ಮೇಲೆ...."

"ಅದಕ್ಕಾಗಿ..."

'ಪೂರ್ವ ಪಾಕಿಸ್ತಾನಕ್ಕೆ ಓಡಿಹೋಗುವ ಪ್ರಯತ್ನ ಮಾಡಿದನಂತೆ...."

"ಪಾಪ, ಪ್ರಯತ್ನ ಫಲಕಾರಿಯಾಗಲಿಲ್ಲ, ಅಲ್ಲವೆ?"

"ಹ್ಹೂಂ... ಅಲ್ಲಿಂದ ಫಿರಾಶಣಾಗಿ ಬಹಲಿಗೆ ಬಂದನಂತೆ .. ಅಲ್ಲೊಂದು ಚಹದ ಅಂಗಡಿಯಲ್ಲಿ ಕೆಲಸಕ್ಕಿದ್ದನಂತೆ."

'ಮತ್ತೆ ನ್ಯಾಯಾಲಯದಲ್ಲಿ ಅನ್ಯಾಚಾರವೆಗಲು ಕಾರಣ?'

'ಅದೋ ಭಾರೀ ಸೋಜಿಗ...'

'ಏನೂಂದ್ರೆ?"

"ಕೌತುಕಮಯ ಕಾರ್ಯವಾಡಬೇಕು ಎಂಬ ಹೆಬ್ಬಯಕೆ...."

"ಇದೊಳ್ಳೇ ಬೇಪಾಯ್ತಲ್ಲ!'

"ಯಾಕೆ?"

"ಕೌತುಕಮಯ ಕಾರ್ಯ ಮಾಡಬೇಕೆಂದು ಯಾರ್ಯಾರನ್ನಾದರೂ ಇರಿಯುವುದೆ? ಇದೊಂದರಲ್ಲೇ ಕೌತುಕವಿರುವುದೇನು?'

"ನೋಡು, ಅವನ ಮಾತು—ಹೇಳಿಕೆ ಎಲ್ಲವನ್ನು ಗಮನಿಸುವಾಗ...."

"ಏನು?"

"ಮಾನಸಿಕ ದೌರ್ಬಲ್ಯದಿಂದ ಏನೂ ತಿದ್ದಾನೆಂದು ಭಾಸವಾಗುತ್ತದಂತೆ..."

"ಅಲ್ಲಿಗೆ ಸರಿಹೋಯ್ತು...."

"ಏನು?"

'ಪ್ರೈವರುಗಳ ಅಜಾಗರೂಕತೆಯಿಂದ ಆಕ್ಸಿಡೆಂಟ್ ನಡೆದ್ರೂ, ಕಂಠಪೂರ್ತಿ ಕುಡಿದಿದ್ದಾನೆಂತ ಸರ್ಟಿಫಿಕೇಟು ಬಂದ್ರೆ, ಬ್ರೇಕ್ ಫೈಲ್ ಆಯ್ತೂಂತಾದ್ರೆ, ಕೇಸಿನ ಪಜ್ಜ ಹೋಯ್ತೂಂತ ಲೆಕ್ಕ. ಅದೇ ಅವರ ಸಂಜೀವಿನಿ—"

"ಇರಬಹುದೂನ್ನು...."

"ಹಾಗೇನೇ, ಕೊಲೆ, ಕೊಲೆ ಪ್ರಯತ್ನ ಮಾಡಿದವರೆಲ್ಲಾ ಮಾನಸಿಕ ದೌರ್ಬಲ್ಯದವರೆಂದು ಬಿಟ್ರೆ ಅಲ್ಲಿಗೆ ಸೀರಿಯಸ್ಸೇನು ಉಳೀತು?"

"ಅಲ್ರೆ...."

'ಅಂ...."

"ಒಬ್ಬನನ್ನು ಕೊಲ್ಲಬೇಕು, ಇರಿಯಬೇಕು—ಇತ್ಯಾದಿ ಭಾವನೆಗಳೆಲ್ಲಾ ಮಾನಸಿಕ ದೌರ್ಬಲ್ಯದಿಂದಲೇ ಹುಟ್ಟುವುದು. ಮತ್ತೆ ಅದು ದೃಢವಾಗಬಹುದು....'

"ಅದು ಸರೀರಿ. ಆದ್ರೆ ಹೀಗೆಲ್ಲಾ ಆದ್ರೆ ಲೋಕದಲ್ಲಿ ಬದುಕುವುದು ಹೇಗೇಂತ?"

"ಯಾಕೆ?'

'ಏನೋ ಆಯಿತು, ಹೊಡೆದು ಬಿಟ್ಟೆ .....ಹೀಗೆಲ್ಲಾ ಮಾತಾಡಿದ್ರೆ, ಅದಕ್ಕೆ ಬೆಲೆ ಬರೋಕೆ ತೊಡಗಿದ್ರೆ ಎಲ್ರಲ್ಲೂ ಕೌತುಕದ ಕೃತಿ ಮಾಡುವ ಹೆಬ್ಬಯಕೆ ಮೂಡುತ್ತೆ... ಡಿ. ಡಬ್ಲ್ಯೂ' ಎಚ್. ಚಳುವಳಿಯಲ್ಲಿ ಇರುವವರೂ ಪಾಲುಗೊಳ್ಳುವಂತೆ...'

"ಅಲ್ರೇ, ಮದನಮೋಹನದಾಸ ತಾಜಕ್ಕೂ ಮಾನಸಿಕ ದುರ್ಬಲಿಯಿರಬಹುದು.'

"ಯಾರು ಇರಬಾರ ಅಂತಾರೆ?"

"ಮತ್ತೆ?"

"ನಿಮಗೇನ? ಈಗ್ಲೇ ತಾಳೂ ಹತ್ತಾವರೆ. ನನಗೆ ಬೇಗ ಬರೋದಕ್ಕೂ ಮಾನಸಿಕ ದೌರ್ಬಲ್ಯ ಅಡ್ಡಿಯಾಗುತ್ತೇನು?'

'ಛಿ, ಛಿ....ಎಂತಹ ಮಾತದು? ಏನೋ ಕೆಲಸವಿತ್ತು; ತಡವಾಯ್ತು. ನನಗೆ —ನಿನಗೆ ದೌರ್ಬಲ್ಯಬೇಕೆ?"

'ಸದ್ಯ ಇದೇ ರೀತಿಯಲ್ಲಾದ್ರೂ ದೇವ್ರು ಕೊನೆತನ್ನ ಇಟ್ಟರಲಿ...'

"ಇಟ್ಟೇ ತೀರ್ತಾನೆ. ಇದೇ ರೀತಿಯಲ್ಲಿ ಯಾಕೆ? ಇದಕ್ಕಿಂತ ಉತ್ತಮ ರೀತಿಯಲ್ಲಿ'

"ನೀವೊಬ್ರು ಅಶಾವಾದಿ...'

'ಅಶೆಯೇ ಜೀವನ ವರ್ಧದ ಜ್ಯೋತಿ'

'ಹ್ಹೂಂ, ಅಂತ್ಲೇ ನಮ್ಮಂಥವ್ರು ಇನ್ನೂ ಜೀವ ಬಿಡಲಿಲ್ಲ...ಆಯ್ತೋ...ಏನ್ರೀ ಇದು?"

"ಇದು....ಇದೇ...."

—ಗೋರಾ.

ನುಡಿಮುತ್ತುಗಳು

ಇಚ್ಛಾನುಸಾರಿಯಾಗಿ ಶಾಸ್ತ್ರ ಪದ್ಧತಿಯನ್ನು ಬಿಟ್ಟವನಿಗೆ ಇಹ ಮತ್ತು ಪರ ಇವೆರಡರಲ್ಲೂ ಸುಖವಿಲ್ಲ.

ಂ ಂ ಂ

ಜಡತ್ವದಲ್ಲಿ ಪ್ರತ್ಯಕ್ಷ ದೇವರೆನಿಸಿರುವ ತಂದೆ, ತಾಯಿ, ಗುರುಗಳನ್ನು ಶ್ರದ್ಧೆಯಿಂದ ಪೂಜಿಸು. ಆಗ ನಿನಗೆ ಪರಮಾತ್ಮನ ಅನುಗ್ರಹವು ತನ್ನಷ್ಟಕ್ಕೇ ಬರುವುದು.

ಂ ಂ ಂ

ನಾಡಾಭಿಮಾನವಿಲ್ಲದ ಮಾನವನಿಗೆ ಎಂದೂ ಸದ್ಗತಿ ದೊರಕದು.

ಂ ಂ ಂ

ತನ್ನನ್ನು ತಾನು ಅರಿಯದವನೇ ಜಡತ್ವದಲ್ಲಿ ಅತಿ ದೊಡ್ಡ ಅಜ್ಞಾನಿಯಾಗಿರುವನು.

ಂ ಂ ಂ

ದೇವರ ದಯವೇ ಜ್ಞಾನದ ಅಂಶ.

ಸಂಗ್ರಹ— ಕೆ. ಪ್ರಕಾಶ ಉಪಾಧ್ಯಾಯ, ಉಡುಪಿ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿವೆ

ದೇಶಪ್ರಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಪರಿಶುದ್ಧ ಪಕ್ಷ—

ಕಾಂಗ್ರೆಸಿನ ಸಂಘಟನೆ ಹಳ್ಳಿಹಳ್ಳಿಗಳಲ್ಲಿ ಪ್ರಾರಂಭವಾಗಬೇಕು

ಬರೆದವರು:

ಶ್ರೀ ಅತ್ರಾಡಿ ಸತೀಶ ಹೆಗ್ಡೆ, ಎಂ. ಎ. ಸಿ. ಸಿ. ಸದಸ್ಯರು, ಉಡುಪಿ.

ಭಾರತವು ಸಂಕ್ರಮಣಾವಸ್ಥೆಯಲ್ಲಿದೆ. ಇಲ್ಲಿನ ರಾಜಕೀಯವು ಅನಿಶ್ಚಿತತೆಯಲ್ಲಿದೆ. ಭಾರತವು ಅಂತರಿಕವಾಗಿ ಹಲವು ಸಮಸ್ಯೆಗಳ ಆಘಾತದಿಂದ ತತ್ತರಿಸಿದೆ. ಸ್ವಾತಂತ್ರ್ಯಾನಂತರ ಕಾಂಗ್ರೆಸು ಧಾರಣದಾದ್ಯಂತ ಆಡಳಿತ ಸೂತ್ರ ವಹಿಸಿಕೊಂಡಾಗ ಅದು ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಷ್ಠಾನಕ್ಕೆ ತರಲು ಶಕ್ತಿ ಮೀರಿ ಪ್ರಯತ್ನಿಸಿದ ಬಗ್ಗೆ ಯಾರಿಗೂ ಸಂದೇಹವಿಲ್ಲ.

ನಮ್ಮ ಜನ ಬದಲಾವಣೆಯನ್ನು ಬಯಸುತ್ತಾರೆ. ಇದು ಚರಿತ್ರೆಯ ಕಾಲದಿಂದಲೂ ತಳೆದು ಬಂದ ವಿಚಾರ. ಅಂತೆಯೇ ಮೂರು ಚುನಾವಣೆಗಳಲ್ಲಿ ಕಾಂಗ್ರೆಸ್ಸೇ ಅಧಿಕಾರದಲ್ಲಿ ಮುಂದುವರಿದುದು ಅನೇಕರಿಗೆ ಇಷ್ಟವಿಲ್ಲದಾಯಿತು. ವಿರೋಧ ಪಕ್ಷಗಳು ಜನರ ಅಭಿಲಾಷೆಗೆ ಪ್ರೇರಕಶಕ್ತಿ ನೀಡಿದವು. ಸ್ವಾಭಾವಿಕ, ನಾನೂ ಜಕ ಅಥವಾ ಅನುಭವಶೂನ್ಯತೆಯ ಫಲವಾಗಿ ಉಂಟಾದ ಎಲ್ಲಾ ದೋಷಗಳಿಗೂ ಕಾಂಗ್ರೆಸ್ಸನ್ನೇ ದೂರಿ ಬಹುದೊಡ್ಡ ರಂಪಾಟವೆಬ್ಬಿಸಿದವು ಅಲ್ಲದೇ ಕಾಂಗ್ರೆಸ್ಸಿನೊಳಗೆ ಸೇರಿಕೊಂಡ ಕೆಲವೊಂದು ಪ್ರತಿಗಾಮಿ ಶಕ್ತಿಗಳೂ ಅದರ ಕೀರ್ತಿಗೆ ಬೇಕಷ್ಟು ಕಲಂಕ ಹಚ್ಚಿಸಿದವು. ಅಧಿಕಾರ ಯಂತ್ರವು ಬ್ರಿಟಿಷರ ಕಾಲದ್ದೇ ಮುಂದುವರಿದು ಬಂದದ್ದರಿಂದ ಕಾಂಗ್ರೆಸ್ಸಿನ ಆಡಳಿತಕ್ಕೆ ಅವು ಹೊಂದಿಕೊಳ್ಳಬೇಕಾದಾಗ ಸಮಯ ಸಂದರ್ಭವರಿತು ಬೇಕಷ್ಟು ಕೆರುಕುಳ ಕೊಡಲು ಮರೆಯಲಿಲ್ಲ. ಈ ಎಲ್ಲಾ ಪರಿಣಾಮಗಳಿಂದ ಕಾಂಗ್ರೆಸು ನೊಸ್ಸನ ಮಹಾ ಚುನಾವಣೆಯಲ್ಲಿ ಕೆಲವು ಕಡೆ ಬಹುಮತ ಕಳೆದುಕೊಳ್ಳುವಂತಾಯಿತು.

ಈ ಚುನಾವಣೆ ಮುಗಿದು ಒಂದು ವರ್ಷವಾಗಿದೆ. ಈ ಅವಧಿಯಲ್ಲಿ ಕಾಂಗ್ರೆಸೇತರ ಸಂಸ್ಥಾನಗಳು ಯಾವ ರೀತಿ ಜನತಾ ಸೇವೆಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿವೆ ಎಂಬುದನ್ನು ಜನರು ಪ್ರತ್ಯಕ್ಷ ಅನುಭವಿಸುವಂತಾಗಿದೆ. ಪಕ್ಷದ ಬಲ ಸಂಘಟನೆಯಲ್ಲಿ ಏಳು ಕುದುರೆಯ ಮೇಲೆ ಒಮ್ಮೆಗೇ ಸವಾರಿ ಮಾಡುವ ಸಾಂಧಿಸು ಅವಸ್ಥೆಯಿಂದ ಸರಕಾರಗಳು ಉರುಳತೊಡಗಿವೆ. ವಿಭಿನ್ನ ಪಕ್ಷಗಳು ಅಧಿಕಾರ ಪೀಠದಲ್ಲಿ ಕುಳಿತುಕೊಳ್ಳಲು ಹವಣಿಸಿದರೆ ಯಾವ ದುರಂತ ಕಾದಿದೆ ಎಂಬುದನ್ನು ಜನ ಪ್ರತ್ಯಕ್ಷ ನೋಡುವಂತಾಯಿತು.

ಆದರೆ ಈ ಪರಿಸ್ಥಿತಿಯಿಂದ ಕಾಂಗ್ರೆಸು ಸಾರ ಕಲಿಯುವ ಅಂಶ ಬಹಳವಿದೆ. ಕಾಂಗ್ರೆಸು ಇನ್ನು ಕೇವಲ ಪ್ರೇಕ್ಷಕನಾಗಿ ಕುಳಿತುಕೊಳ್ಳುವಂತಿಲ್ಲ. ಅಥವಾ ಕಾಂಗ್ರೆಸ್ಸೇತರ ಸರಕಾರಗಳ ಪತನದಿಂದ ತಮಗೆ ಪುನಃ ಮಾಲೆ ಬೀಳಬಹುದೆಂಬ ಅಹಂಭಾವವೂ ಸರಿಯಲ್ಲ. ಜನರು ಕಾಂಗ್ರೆಸ್ಸನ್ನು ಒಮ್ಮೆ ತಿರಸ್ಕರಿಸಿದ್ದರೂ ಅದು ಬದಲಾವಣೆ ಮಾಡಲು ವಿರೋಧಿ ಪಕ್ಷಗಳ ಅತಿರಂಜಕ ಪ್ರಭಾವದಿಂದ ಎಂಬುದನ್ನು ನಾವು ಪುನಃ ವಿಶ್ವಾಸ ಹುಟ್ಟಿಸಬೇಕು.

ಕಾಂಗ್ರೆಸಿನ ಮೇಲೆ, ಅದರ ತತ್ವದ ಮೇಲೆ ಜನರಿಗೆ ಎಂದೆಂದಿಗೂ ವಿರುದ್ಧಾಭಿಪ್ರಾಯವಿಲ್ಲ. ಕಾಂಗ್ರೆಸ್ಸಿನೊಳಗೆ ಸೇರಿಕೊಂಡಿರುವ ಪ್ರತಿಗಾಮಿ ಶಕ್ತಿಗಳ ಕೆಲವೊಂದು ಕಾಯಕದ ಬಗ್ಗೆ ಮಾತ್ರ ಜನರಿಗೆ ಜಿಗುಪ್ಸೆ ಬಂದಿದೆ. ಒಂದು ರಾತ್ರಿಯಲ್ಲಿ ಒಂದು ಹಣ್ಣು ಕೆಟ್ಟಿತೆಂದು ಎಲ್ಲಾ ಹಣ್ಣುಗಳನ್ನು ಕೊಳೆತದ್ದೆಂದು ದೂಷಿಸುವುದಲ್ಲ. ಕೊಳೆತ ಹಣ್ಣನ್ನು ಬೇಗ ಒಗೆದರೆ ಉಳಿದ ಮಾಗಿದ ಹಣ್ಣುಗಳು ನಮಗೆ ದೊರೆಯುವುದು ಖಂಡಿತ.

ಇಂದು ಕಾಂಗ್ರೆಸ್ಸು ಜನಸಂಪರ್ಕ ಬೆಳೆಸಿಕೊಳ್ಳಬೇಕು. ಅದನ್ನು ನಾವು ಕೇವಲ ಚುನಾವಣಾ ಕಾಲದಲ್ಲಿ ಮಾತ್ರ ಮಾಡುವುದಲ್ಲ. ಮಂತ್ರಿಗಳು ಬಂದಾಗ ಭಾಷಣ, ಉದ್ಘಾಟನಾ ಸಮಾರಂಭಗಳ ಮೂಲಕ ಮಾತ್ರ ನೆರವೇರಿಸುವುದಲ್ಲ.

ಪ್ರತಿ ಹಳ್ಳಿಗೂ ಪ್ರತ್ಯೇಕ ಸಮಸ್ಯೆಗಳಿವೆ. ಅವಶ್ಯಕತೆಗಳಿವೆ. ಈ ಅವಶ್ಯಕತೆಗಳು ಆ ಹಳ್ಳಿಯ ಕೆಲವೊಂದು ಹಿತಾಸಕ್ತಿಗಳಿಂದಾಗಿ ಸ್ವಾರ್ಥಪೂರಿತವಾಗಿ ಎಷ್ಟೋ ಜನರಿಗೆ ಅನ್ಯಾಯವಾಗುವ ರೀತಿಯಲ್ಲಿ ಸಾಧಿಸಲ್ಪಡಬಹುದು. ಹಾಗೆಯೇ ಒಬ್ಬ ಹಳ್ಳಿಯ ಮುಖಂಡ ಅವನ ಸ್ವಾರ್ಥದಿಂದ ಒಂದು ಯೋಜನೆಯನ್ನು ತನಗೆ ಬೇಕಾದ ಹಾಗೆ ಪರಿವರ್ತಿಸಿದರೆ ಅದರಿಂದ ಆ ಮುಖಂಡನು ಆತುಕೊಂಡ ಪಕ್ಷದ ಬಗ್ಗೆ ಅಥವಾ ಆ ಕಾರ್ಯ ನೆರವೇರಿಸಿದ ಬಗೆಯ ಬಗ್ಗೆ ಜನರು ವಿರೋಧ ತಾಳುತ್ತಾರೆ. ಯಾವುದೇ ಒಂದು ಕಾರ್ಯ ಹಳ್ಳಿಯ ಸಮಸ್ತ ಜನರ ಕಲ್ಯಾಣಕ್ಕೆ ಅನುಕೂಲವಾಗುವಂತೆ ನಡೆಯಬೇಕು. ಅದು ಹೇಗೆ ಸಾಧ್ಯ? ಅದಕ್ಕಾಗಿ ಹಳ್ಳಿಯ ವಿಕಟ ಸಂಕರ್ಷವನ್ನೂ ಕಾಂಗ್ರೆಸ್ ಕಾರ್ಯಕರ್ತರು ಇಟ್ಟುಕೊಳ್ಳಬೇಕು. ಇದು ಬರೆದಷ್ಟು ಸುಲಭ ಕೆಲಸವಲ್ಲ. ಆದರೂ ಪ್ರತಿ ಹಳ್ಳಿಯಲ್ಲೂ ಕಾಂಗ್ರೆಸ್ ಒಂದು ಯುವಕ ಮಂಡಲವನ್ನು ಸಂಘಟಿಸಿ ಕಾಂಗ್ರೆಸಿನ ಚೇತನಾತ್ಮಕ ಬೆಳವಣಿಗೆ ಸಾಧಿಸಬೇಕು. ಕಾಂಗ್ರೆಸಿನ ತತ್ವ ಧೋರಣೆ, ಹಾಗೂ ಅದರ ಯೋಜನೆ ಅದು ಜನರಿಗೆ ಕೊಡಮಾಡಿದ ಸವಲತ್ತುಗಳ ಬಗ್ಗೆ ತಿಳುವಳಿಕೆ ನೀಡಲು ಈ ಯುವಕರು ಕಾರ್ಯ ಸಾಧಿಸಬೇಕು. ಈಗ ಎಷ್ಟೋ ಯೋಜನೆಗಳು, ಸವಲತ್ತುಗಳನ್ನು ಸರಕಾರ ಜನರಿಗೆ, ಕೃಷಿಕರಿಗೆ ನೀಡಿದೆ; ಅದರ ಸಂಯೋಜ ಜ್ಞಾನ ಅಥವಾ ತಿಳುವಳಿಕೆ ದೊರೆಯದೆ ಹಳ್ಳಿಯ ಕೆಲ ಪುಢಾರಿಗಳು ಅದನ್ನು ಪಡೆಯುತ್ತಿದ್ದಾರೆ. ಇಂದು ರೈತನಿಗೆ ನೀಡಿದ ಸವಲತ್ತುಗಳು ರೈತನಿಗೆ ಖಂಡಿತವಾಗಿಯೂ ದೊರಕುತ್ತಿಲ್ಲ. ಪಂಪುಸೆಟ್ಟುಗಳು, ಗೊಬ್ಬರಕ್ಕೆ ಸಾಲ, ಬಾವಿ ತೋಡಲು ಸಹಾಯ, ಕೃಷಿಗೆ ಸಹಕಾರ, ಹೀಗೆ ಎಷ್ಟೋ ಸವಲತ್ತುಗಳಿವೆ, ಆ ಬಗ್ಗೆ ಬ್ಲಾಕ್ ಡೆವಲಪ್‌ಮೆಂಟ್ ಬೋರ್ಡು, ತಾಲೂಕು ಆಫೀಸಿಗೆ ಬಂದರೆ ಅಲ್ಲಿಯ ಅಧಿಕಾರಿಗಳು ತಮ್ಮ ಕೆಲಸವೇ ಅತಿ ಹೆಚ್ಚಿಗೆ ಎಂದು ಮೂಗಿನ ಕೇಳ ಬಂದವನನ್ನು ಗದರಿಸುವುದೂ ಉಂಟು, ಸತಾಯಿಸುವುದೂ ಉಂಟು ಇದರ ಎಲ್ಲಾ ಸಿಟ್ಟನ್ನು ಆತ ತೆಗೆಯುವುದು ಕಾಂಗ್ರೆಸ್ಸಿನ ಮೇಲೆ. ಇದಕ್ಕೆ ನಮ್ಮ ನಿರಕ್ಷರತೆಯೂ ಒಂದು ಕಾರಣ. ಈ ಅನಾವಶ್ಯಕ ಅಪವಾದ, ಸಂಶಯಗಳನ್ನು ದೋಗಲಾಡಿಸಲು ಕೃಷಿಕನೊಂದಿಗೆ ನೇರ ಸಂಪರ್ಕವಿಡಲು ಉತ್ಸಾಹೀ ವಿದ್ಯಾವಂತ ಕಾಂಗ್ರೆಸ್ ಸ್ವಯಂಸೇವಕರು ನಮ್ಮ ಹಳ್ಳಿ ಹಳ್ಳಿಗಳಲ್ಲೂ ಇರಬೇಕು. ಅದೇ ಹಳ್ಳಿಯವರಾದರೆ ಯೋಜನೆಗಳನ್ನು ರೂಪಿಸಲಿಕ್ಕೂ ಜನರಿಗೆ ಸಹಕರಿಸಲಿಕ್ಕೂ ತುಂಬಾ ಅನುಕೂಲವಾಗುತ್ತದೆ. ಹಳ್ಳಿಗೆ ಒಂದು ಯೋಜನೆ ಬೇಕಾದಾಗ ಈ ಕಾರ್ಯಕರ್ತರು ಹಳ್ಳಿಯ ಅಧ್ಯಾಯ ಸಂಗ್ರಹಿಸಿ ಪ್ರತಿನಿಧಿಗಳಾದ ಕೆಲವರ ಸ್ವಾರ್ಥಕ್ಕೆ ಆ ಯೋಜನೆ ಸೇರಿ ಹೋಗದಂತೆ ಮಾಡಲು ಸಾಧ್ಯವಿದೆ. ಇದನ್ನು ಹೇಗೆ ಕಾರ್ಯಗತಗೊಳಿಸಬೇಕೆಂದು ಸ್ವತಃ ಪರೀಕ್ಷಿಸುವ ಇಚ್ಛೆಯಿಂದ ನಾನು ಇತ್ತೀಚೆಗೆ ಅನೇಕ ಹಳ್ಳಿಗಳನ್ನು ಸಂದರ್ಶಿಸಿದೆ. ಹಳ್ಳಿಗರೊಂದಿಗೆ ನೇರವಾಗಿ ಪ್ರಸ್ತಾಪಿಸಿದೆ, ಚರ್ಚಿಸಿದೆ. ಅಲ್ಲಿನ ವಿದ್ಯಾವಂತ ತರುಣರು ಕಾಂಗ್ರೆಸ್ಸಿನ ಬಗ್ಗೆ ಉತ್ಸಾಹಭರಿತರಾಗಿದ್ದಾರೆ. ಅವರು ಸಮಾಜ ಸೇವೆ ಸಲ್ಲಿಸಲು ತುಂಬಾ ಆಸಕ್ತಿ ಹೊಂದಿದ್ದಾರೆ. ಹಳ್ಳಿಗಳಲ್ಲಿ ಕೆಲವೊಂದು ವ್ಯಕ್ತಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಟೀಕೆಯೇ ಹೊರತು, ಸಂಸ್ಥೆಯ ಬಗ್ಗೆ ಟೀಕೆ ಕಡಿಮೆ "ಅವರು ಕಾಂಗ್ರೆಸ್ ಕಾಂಗ್ರೆಸಿನ ಬಲದಿಂದ ಅವರು ಈ ಅನ್ಯಾಯ ಮಾಡಿದ್ದಾರೆ" ಎಂದೇ ಅವರ ಆಕ್ಷೇಪ. ಈ ಪರಿಸ್ಥಿತಿ ಇನ್ನು ಮುಂದೆ ನಿರ್ಮಾಣವಾಗಲು ನಾವು ಬಿಡಬಾರದು. ಕಾಂಗ್ರೆಸು ಯಾರೊಬ್ಬರ ವೈಯಕ್ತಿಕ ಸೊತ್ತೂ ಅಲ್ಲ. ಆ ರೀತಿ ಕಾಂಗ್ರೆಸ್ಸಿಗೆ ಅಪಮಾನಮಾಡು

(ಎಂಟನೇ ಪುಟ ನೋಡಿರಿ)

ಗೀತೆಯ ಕೈಗನ್ನಡಿ

ಹೊಸಗನ್ನಡಿ ಪಿಡಂಬರಯ್ಯನವರ ಗೀತೆಯ ಸಮೂಲ ಭಾಷಾಂತರ

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕೆ ಬೆಲೆ ರೂ. 1-50

ರಟಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಕೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ಪಡುಮಾಡಿ ಅಥವಾ ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟೋ ಪತ್ರಿಕೆ ಬೇಡ ಹೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳುಹಿಸಿ ತುಂಬಾ ಉಪಕಾರವಾಗುವುದು.

ಅಂತೂ ಈ ತಿಂಗಳಾಂತ್ಯದ ಒಳಗೆ ಯಾವದೇ ಉತ್ತರವಿಲ್ಲದಿದ್ದರೆ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸುತ್ತೇವೆ. ಅದನ್ನು ಸ್ವೀಕರಿಸುವಂತೆ ವಿನಂತಿ.

ಮೆನೇಜರ್, ನವಯುಗ.

ನೀವೂ ತಿಳಿಯಿರಿ

ತಮಿಳುನಾಡಿನಲ್ಲಿ ಭಾಷಾಕಾಳಗ

ಬರೆದವರು: ಶ್ರೀ ಶಿವಶಂಕರ

ಮದ್ರಾಸ್ ಮಹಾನಗರ ವ ದರಾಸುಗಳ ದಾಂಧಲೆಯಿಂದ ಧಗಧಗಿಸಿದರೂ ದಿಲ್ಲಿಯ ಜೇವತೆಗಳು ಆಸನದ ಮೇಲೆ ಕುಳಿತುಕೊಂಡು ಭಾಷಾ ತಿದ್ದುಪಡಿ ಮಸೂದೆಯ ಓಟೇಲನ್ನು ಬಾಸುವದನ್ನು ನಿಲ್ಲಿಸಲಿಲ್ಲ. ಇಲ್ಲೇನು ನಡೆಯುತ್ತಿದೆಂಬುದನ್ನು ಕಾಣಲು ಪ್ರಧಾನಿಯವರು ಬರಲಿಲ್ಲ. ಕಾಶ್ಮೀರ-ರಾಂಚಿಗಳಿಗೆ ಓಡಾಡಿದ್ದ ಶ್ರೀಮತಿ ಇಂದಿರಾಜೀಯೊಗಲೀ, ಗೃಹಮಂತ್ರಿ ಶ್ರೀ ಛವಾಣಾರಾಗಲೀ, ಉಪ ಪ್ರಧಾನಿ ಶ್ರೀ ಮೊರಾರ್ಜಿಯವರಾಗಲೀ ಇಲ್ಲಿಗೆ ಬಂದು ತತ್ಕರಿಸಿದ್ದ ಜನತೆಗೆ ಧೈರ್ಯವನ್ನೋ, ಸಾಂತ್ವನದ ಮಾತುಗಳನ್ನಾಡಲೋ ಮನಸ್ಸು ಮಾಡಲಿಲ್ಲ! ಕೊನೆಗೂ ದ್ವೇಷದ ದಾವಾಗ್ನಿ ಧಗಧಗಿಸುತ್ತಿರುವದನ್ನು ದ್ರಾ.ಮು.ಕ.ದವರು ಕಂಡರು. ದಿಲ್ಲಿ ಗಾದಿಯಿಂದ ಶ್ರೀಮತಿಜೀಯವರು ಇಲ್ಲಿಗೆ ರಾಜ್ಯಪಾಲರ ಬಳಿ ವಿಚಾರಿಸಿ ನೋಡಿದರು. ಪಂಜಾಬಿನ ಆಟ ಇಲ್ಲಿ ಬೇಡವೆಂದು ರಾಜ್ಯಪಾಲರು ಇಲ್ಲಿಂದ ದೊರೆಗಳಿಗೆ ಮನ್ನಾಯಿಸಿದ್ದರು. ಆಗ ಅವರಿಗೆ ಒಳ್ಳೆಯ ನೆವನ ಸಿಕ್ಕಿತು. ತಮಿಳು ಮಹಾಧಿವೇಶನದ ಹೆಸರು ಹೇಳಿ ನೋಡಿದರು. ಅತ್ತ ಕಿವಿಗೊಡಲು ಅವರ ಸೈನಿಕರು ಸಿದ್ಧವಾಗಿಲ್ಲ. ಕೊನೆಯ ಉಪಾಯ—ಗಲಾಟೆಯನ್ನು ನಿಲ್ಲಿಸದಿದ್ದಲ್ಲಿ ತಾನಾಗಿದೇ ರಾಜಿನಾಮೆ ಕೊಟ್ಟು ಬಂದು ಅವರೊಂದಿಗೆ ಸೇರುವದಾಗಿಯೂ, ಜಾಗೆ ಸೇರಿದಾಗ ಹಿಂದಿ ತರುವ ಸರಕಾರ ಅಸಫಲವನ್ನೇರುತ್ತದೆಂದೂ ಅವರು ತಿಳಿಯಪಡಿಸಿ, ಯಾವದು ಬೇಕೆಂದು ಕೇಳಿದರು. ಅವರ ಸೈನಿಕರು ಇನ್ನೇನು ಮಾಡಲು ಸಾಧ್ಯ? ತಮಿಳು ಕಾನ್ಫರೆನ್ಸಿನ ಮುಕ್ತಾಯದವರೆಗೆ ಗಲಾಟೆ ನಡೆಯ ಕೂಡದೆಂದು ಎಲ್ಲರೂ ಹೇಳಲಾಯಿತು. ಉಪಾಯಗಾರ ಶ್ರೀ ರಾಜಾಜಿ ಇಲ್ಲೂ ಹಿಂದಕ್ಕೆ ಬೀಳಲಿಲ್ಲ. ಮುಖ್ಯ ಮಂತ್ರಿಯವರಿಗಿಂತಲೂ ಮಂಚಿತವಾಗಿ, ಗಲಾಟೆ ನಿಲ್ಲಿಸಬೇಕಾದ ರಾಷ್ಟ್ರೀಯ ಸಭೆಯೊಂದನ್ನು ಕರೆದು, ತಾನು ಮುಂದಿನ ಕ್ರಮ ಕೈಗೊಳ್ಳುವದಾಗಿಯೂ ಅವರು ಬಹಿರಂಗವಾಗಿ ಹೇಳಿದರು. ಇತ್ತ ಪರಿಸ್ಥಿತಿ ತನ್ನ ಎಣಿಕೆಯ ಹದ್ದನ್ನು ಮೀರಿ ಹೋಗುತ್ತಿರುವದನ್ನು ಕಂಡ, ತನ್ನ ಮೇಲೆಯೇ ಕಲ್ಲು ಬೀಳಲಾರಂಭವಾದಾಗ, ದ್ರಾ. ಮು. ಕ.ದ ಮುಖಂಡರು—ದೊರೆಗಳು ಸುಮ್ಮಗುಳಿಯುವಂತಿಲ್ಲ. ತಿರು ಅಣ್ಣಾದೊರೈಯವರು, ಮಕ್ಕಳು ಗಲಾಟೆ ಮಾಡಕೂಡದೆಂದೂ, ಗಲಾಟೆ ಮಾಡಿದವರು ದ್ರಾ. ಮು. ಕ. ಮಂತ್ರಿ ಮಂಡಲವನ್ನು ಮಲಗಿಸಲು ನೋಡುವ ಲೂಟಗಾರರೆಂದೂ, ಅವರ ಮೇಲೆ ಕ್ರಮಕೈಗೊಳ್ಳವದಾಗಿಯೂ ಹೇಳಿದರು. ಕೂಚ್ಚಿನ್ ಮಿಯಿಲ್ ಪ್ರಕರಣದಲ್ಲಿ ತಿರು ಕರುಣಾನಿಧಿಯವರ ಮೇಲೆ ಕಲ್ಲು ಬಿದ್ದ ಮೇಲೆ, ಅಂದು ಸಾಯಂಕಾಲ ಕೆಲವರನ್ನು ಬಂಧಿಸಲಾಯಿತು. ಈ ವರ್ತನೆಗಳ ಗಾಳಿಯಲ್ಲಿ ಹಬ್ಬಿ ಹೋಯಿತು. ಪ್ರಕ್ಷುಬ್ಧ ವಾತಾವರಣ ಒಮ್ಮಿಂದೊಮ್ಮೆಲೆ ತಣ್ಣಗಾಯಿತು. ಕಲ್ಲಿಕೋಟೆಯಲ್ಲಿ ನಡೆದ ಭಾರತೀಯ ಜನಸಂಘದ ಅಧಿವೇಶನಕ್ಕಾಗಿ ಹೋಗುವಾಗ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಮದ್ರಾಸಿನಲ್ಲಿಳಿದು ತಿರು ಅಣ್ಣಾದೊರೈಯವರನ್ನು ಭೇಟಿಯಾಗಿದ್ದರು. ಭೇಟಿಯ ಸಮಯದಲ್ಲಿ—ಹಿಂದೀ ವಿರುದ್ಧ ಹೋರಾಟ ನಡೆದಾಗ ಪೋಲೀಸರು ಪ್ರೇಕ್ಷಕರಂಗಿದ್ದರೆಂದೂ ಪೋಲೀಸರು ವಧೆ, ಬಂದಲ್ಲಿ ಪರಿಸ್ಥಿತಿ ಬಿಗ್ಬಣಗೊಳ್ಳಬಹುದೆಂದು ಭಾವಿಸಿಕೊಂಡು ಸುಮ್ಮಗಿರಲು ಅವರಿಗೆ ಆಜ್ಞೆ ಕೊಟ್ಟಿದುದಾಗಿ ತಿರು ಅಣ್ಣಾದೊರೈಯವರು ಹೇಳಿದ್ದರೆಂತೆ ಕ್ರಮ ಕೈಗೊಳ್ಳದಿರಲು ಪೋಲೀಸರ ಕೈ ಕಟ್ಟಿಹ್ಯವೆಂದೂ ತಿರು ಅಣ್ಣಾದೊರೈಯವರು ಪತ್ರಿಕೆಗಳಿಗೆ ತಿಳಿಸಿರುವರು. ಹಾಗಿದ್ದಲ್ಲಿ ಪೋಲೀಸರೇತಕ್ಕೆ ಕ್ರಮ ಕೈಗೊಳ್ಳಲಿಲ್ಲ? ಪೋಲೀಸರನ್ನು ಯಾರೋ ತಡೆದಿರಲೇ ಬೇಕಲ್ಲವೇ? ಯಾರು? ಹೂಕೆ? ಬೆಕ್ಕು ಹೊರಗೆ ಬರಲೇಬೇಕು.

ತಿರು ಅಣ್ಣಾದೊರೈಯವರು ತಪ್ಪಿನ ಹೊರೆಯನ್ನು ಕಾಂಗ್ರೆಸಿಗರ ತಲೆಯಮೇಲೆ ಹೊರಿಸಲು ಪ್ರಯತ್ನಿಸುತ್ತಿದ್ದಾರೆ. ಇದರಲ್ಲಿ ತಿರು ಕಾಮರಾಜ ದಾಗೂ ತಿರು ಸುಬ್ರಹ್ಮಣ್ಯಂರವರ ಪಾತ್ರ ಕಮ್ಮಿಯಿನಲ್ಲ. ಶ್ರೀ ರಾಜಾಜಿಯವರು ತಮ್ಮ ಅಭಿಪ್ರಾಯ ಬೇಧವನ್ನು ಯುದ್ಧವೆಂದು ಕರೆದಿರುವರು ಮತ್ತು ಭಾರತ ಸರಕಾರದ ಸೇನೆಯ ಹಾಗೂ ಉತ್ತರ ಭಾರತೀಯರ ವಿರುದ್ಧ ಯುದ್ಧಮಾಡಲು ಹೇಳಿದರು. ತಿರು ಮುರಸೋಲಿ ಮಾರನ್‌ರವರು ತಾವು ಮಹಾತ್ಮಾ ಗಾಂಧಿ ಪಾತ್ರ ವಹಿಸುವದಾಗಿ ಹೇಳಿದ್ದರು. ತಿರು ಕೃಷ್ಣಮೂರ್ತಿಯವರು 'ರಾಜಕೀಯ ಭೂಕಂಪ' ಉಂಟಾಗುತ್ತದೆಂದೂ, ಅಂತರಿಕ ಕದನವೇ ನಡೆಯುತ್ತದೆಂದು ಹೇಳಿರುವರು. ಈ ಮಾತುಗಳ ಅರ್ಥವೇನು? ದ್ರಾ. ಮು. ಕ.ದ ಅಣ್ಣಿ ತನ್ನ ತಮ್ಮಂದಿಗೇತಕ್ಕೆ ಇವಾಬ್ದಾರಿಯುತ ಹಿತ ವಾಕ್ಯಗಳನ್ನು ಹೇಳಲಿಲ್ಲ? ಏತಕ್ಕೆ ಎಚ್ಚರಿಗೆ ಕೊಡಲಿಲ್ಲ.

ಸರಿ! ನಡೆದುದಲ್ಲಾ ನಡೆದು ಹೋಯ್ತು—ಮಕ್ಕಳಿಂದಲೋ ಗೂಂಡಾಗಳಿಂದಲೋ ರಾಜಕೀಯ ಉದ್ದಮಿಗಳಿಂದಲೋ ಯಾರಿಂದಲೋ ಹಡೆದು ಹೋಯ್ತು—ಬಿಡೋಣ. ಈಗ ಕೆಟ್ಟ ಮೇಲಾದರೂ ಬುದ್ಧಿ ಬಂದಿರುತ್ತದೆಯೇನು? ಅದೂ ಇಲ್ಲವಲ್ಲ! ತಿರು ಅಣ್ಣಾದೊರೈ ಮುಂತಾದವರು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಸೂಚಿಸಬಹುದಾಗಿತ್ತು— 'ಹಿಂದಿ ಹೇರುವದನ್ನು ತಡೆಯುವ ಜವಾಬ್ದಾರಿಯನ್ನು ಹಿರಿಯರಿಗೆ ಬಿಟ್ಟುಬಿಟ್ಟು ನೀವು ಜ್ಞಾನ ಪಡಿಸಿರಿಂದು! ಆದರೆ ಇವರು ಹೇಳಿದ್ದೇನು? ತಮಿಳು ಕಾನ್ಫರೆನ್ಸ್ ಮುಗಿಯುವ ವರೆಗೆ ಗುಲ್ಲೆಬ್ಬಿಸಬೇಡಿರಿಂದು! ಅನಂತರ?

ಇರಲಿ. ತಮಿಳು ಕಾನ್ಫರೆನ್ಸಿನಲ್ಲಾದರೂ ಈ ಇಂಗ್ಲಿಷ್ ಇನಿಯ ಮಾಡಿದ್ದೇನು? ಇಲ್ಲಿ ನಡೆದದ್ದು—ಅದು ಹಿಂದಿ ವಿರೋಧಿ ಪ್ರಚಾರ ಸಭೆ. ಅನ್ಯಾನ್ಯ ದೇಶಗಳ ಪ್ರತಿನಿಧಿಗಳು ಜೈಸ್ಸಾಗಿಯೇ ಮಾಡಿದ್ದಾರೆ. ಫ್ರಾನ್ಸಿನಿಂದ ಒಂದೆ ಪ್ರತಿನಿಧಿಯು ಪ್ರಾಚೀನ ಕಾಲದ ತಮಿಳರು ಹೊರ ದೇಶಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರೆಂದೂ; ಅವರು ಸಂಸ್ಕೃತ ಭಾಷೆಯನ್ನು ಪಯೋಗಿಸುತ್ತಿದ್ದರೆಂದೂ ಹೇಳಿದ ಮೇಲೆ ಅಂಗ್ಲ ವ್ಯಾಮೋಹಿಗಳು ಅಡ್ಡ ಬಂದರು. ಸಂಸ್ಕೃತಕ್ಕೂ ತಮಿಳಿಗೂ ಸಂಬಂಧವಿಲ್ಲವೆಂದರು! ಅಲ್ಲಿ ತಿರು ಅಣ್ಣಾದೊರೈಯವರಿಂದ ಹಿಡಿದು ತಿರು ಅಸೈತಂಬಿಯವರೆಗೆ ದ್ರಾ. ಮು. ಕ. ದ ಮುಂದಾಳುಗಳು ಹೇಳಿದ್ದು ಒಂದೇ ಹಾಡು—ತಮಿಳು ಗುಲಾಮಿ ಭಾಷೆಯಾಗಿರಲಿಲ್ಲ. ಈಗ ಹಿಂದಿಯ ಅದರ ಮೇಲೆ ನೊಗವನ್ನೇರಿಸಲು ಪ್ರಯತ್ನಿಸುತ್ತದೆ. ಅದು ತಮಿಳು ಭಾಷೆ, ಸಂಸ್ಕೃತಿ, ಕಲಾಚಾರದಗಳನ್ನು ನಾಶಮಾಡ ತ್ತದೆ. ಅದನ್ನು ತಮಿಳರೆಂದೂ ಸಹಿಸಲಾರರು. ಈ ಅವಾಯವನ್ನೆದುರಿಸಲು ಪ್ರಪಂಚದ ಮೂಲೆ ಮೂಲೆಗೆ ಚಲ್ಲಿರುವ ತಮಿಳನೂ ಹಿಂಜರಿಯಲಾರನು! ತಮಿಳು ಕಾನ್ಫರೆನ್ಸಿನ ಸಮಯ ಅಲ್ಲೇ ಇನ್ನೊಂದು ಕೂಟವೂ ನಡೆದಿತ್ತು. ಅದುವೇ ಹಿಂದೀ ವಿರೋಧಿ ವಿದ್ಯಾರ್ಥಿಗಳ ಕಾನ್ಫರೆನ್ಸ್! ಅಲ್ಲಿ ನಡೆದ ಕಾನ್ಫರೆನ್ಸಿನಲ್ಲಿ ಕೆಲ ತೀರ್ಮಾನಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ಈಗ ಪ್ರಯೋಗಕ್ಕೆ ತರಲಾಗುತ್ತದೆ.

ಅಂತೂ, ದ್ರಾ. ಮು. ಕ.ದ ಧುರೀಣರು ಬೊಟ್ಟು ತೋರಿಸುತ್ತಿದ್ದ ತಮಿಳು ಕಾನ್ಫರೆನ್ಸ್ ನಡೆದು ಹೋಯ್ತು. ಇನ್ನು ವಿದ್ಯಾರಂಗಗಳನ್ನು ತೆರೆಯಲೇನು ಕಷ್ಟ? ಆದರೆ ತಮಿಳ್ನಾಡಿನಲ್ಲಿ "ಅನಿರ್ಧಿಷ್ಟಕಾಲ" ವಿದ್ಯಾರಂಗಗಳನ್ನು ಸರಕಾರವು ಮುಚ್ಚಿತ್ತು. ಕೆಲ ಸಂಸ್ಥಗಳು ತೆರೆದಾಗ ಅವಕ್ಕೆ ಸ್ಪಷ್ಟ ಸೂಚನೆಯನ್ನು ಕೊಟ್ಟು ಮುಚ್ಚಿಸಲಾಯಿತು. ತಿರು ಅಣ್ಣಾದೊರೈಯವರು ಗಲಾಟೆ ಮಾಡಿದವರು ದ್ರಾ. ಮು. ಕ.ದ ವಿರೋಧಿಗಳಿದ್ದು, ಅವರ ಮಂತ್ರಿ ಮಂಡಲವನ್ನು ಮಲಗಿಸಿ ಬಿಡಲು ಸಂಚು ಹೂಡಿದ್ದೆಂದೂ, ಇನ್ನು ಸರಿಯಾದ ಕ್ರಮವನ್ನು ಕೈಗೊಳ್ಳಲಾಗುವದೆಂದೂ ಹೇಳಿದ್ದರು. ಅವರ ಸರಿಯಾದ ಕ್ರಮ ಇದೇ ಏನು?—ಬಾಲೆಗಳನ್ನು ಮುಚ್ಚಿಳುವದು! ಅದೂ ಅನಿರ್ಧಿಷ್ಟ ಕಾಲ! ವಿದ್ಯಾಲಯಗಳಿಗೆ ಸರಿಯಾದ ರಕ್ಷಣೆಯನ್ನು ಕೊಡುವದು ಪೋಲೀಸ್ ಮಂತ್ರಿಯವರ ಕೆಲಸ ಅಲ್ಲವೇನು? ಮತ್ತೇಕೆ ಈ ದ್ವಿಮುಖ ಧೋರಣೆ, ಆ ರಹಸ್ಯವು ಇದೀಗ ಬಯಲಿಗೆ ಬಂದಿರುತ್ತದೆ.

ಶ್ರೀ ರಾಜಾಜಿಯವರು, ನೀರು ಯುದ್ಧವನ್ನು ಮಾಡುವ ಬದಲು ಬೇರೆ ಚಟುವಟಿಕೆಗಳನ್ನು ಪಡೆಸಬೇಕಾಗುತ್ತದೆಂದು ಹೇಳಿದ್ದರು. ಶ್ರೀ ಅಣ್ಣಾದೊರೈಯವರು ವಿದ್ಯಾರಂಗಕ್ಕೆ ಬಂಗಿಲು ಹಾಕಿದ್ದಾರೆ. ಅಂದರೆ ವಿದ್ಯಾರ್ಥಿ ಪ್ರಮುಖರಿಗೆ ಕೆಲ ಸೂಚನೆಗಳನ್ನು ಕೊಡಲಾಗಿರುತ್ತದೆ. ಅವರು ನಗರದೊಳಗೆ (ಹಾಗೆಯೇ ತಮಿಳ್ನಾಡಿನಲ್ಲಿ) ಮಾತ್ರ ಗಲಾಟೆ ಮಾಡಿದರೆ ಸಾಲದು. ಆಂಧ್ರ, ಕರ್ನಾಟಕ, ಕೇರಳಕ್ಕೆ ಹೋಗಿ ಅಲ್ಲಿನ ವಿದ್ಯಾರ್ಥಿಗಳನ್ನು ಪ್ರೇರೇಪಿಸಿ ಗಲಭೆ ಎಬ್ಬಿಸಬೇಕು. ಆಂಧ್ರಕ್ಕೆ ಹೋಗಿರುವವರ ಪ್ರಭಾವ ತಿರುಪತಿಯಿಂದಾಚೆಗೆ ಹೋಗಿರುವದಿಲ್ಲ. ಬೆಂಗಳೂರಿನಲ್ಲಿ ಅವರು ತಮ್ಮ ಆಟವನ್ನು ಆಡಿರುವರು. ಈ ಸಲ ಕೇರಳದಲ್ಲಿ ಅವರ ಬಾಲ ಆಡುವ ಲಕ್ಷಣ ಕಂಡು ಬರುತ್ತಿಲ್ಲ.

ಈ ಮಧ್ಯೆ ತಿರು ಅಣ್ಣಾದೊರೈಯವರು ಉತ್ತರ ಭಾರತದ ಪಂಜಾಬಿ, ಬಂಗಾಲಿ, ರಾಜಸ್ಥಾನಿಗಳನ್ನು ಸಂತೈಸಲು ಪ್ರಯತ್ನಿಸುತ್ತಿದ್ದಾರೆ. ಮರು ಗೋವಿಂದ ಸಿಂಘರ ಜನ್ಮ ದಿನೋತ್ಸವದಂದು ಗುರುದ್ವಾರಕ್ಕೆ ಹೋಗಿ ತಿರು ಅಣ್ಣಾದೊರೈಯವರು ತಮಿಳು ಮತಕ್ಕೂ ಸಿಖ್ಖ್ ಮತಕ್ಕೂ ಸಾಮ್ಯತೆ ಇದೆಯೆಂದೂ, ಸಿಖ್ಖರ ಮೇಲೆ ತಮಗೇನೂ ಸಿಟ್ಟಿಲ್ಲವೆಂದೂ ಹೇಳಿರುವರು. ಆದರೆ ಗಲಭೆಯು ಸಮಯ ನಡೆದುದಾದರೂ ಏನು? ಪೋಲೀಸರ ಎದುರೇ ಪುಂಡ ಮಕ್ಕಳು ಕೊಡಾ ಸಿಖ್ಖರನ್ನು ನಿಲ್ಲಿಸಿ ಅವರ ವಾಹನಗಳ ಮೇಲೆಲ್ಲಾ ತಮ್ಮ ಬರಹಗಳನ್ನು ಬರೆದು "ಇನ್ನಾದಿ ಒಳಗೆ" ಹೇಳಿಸಿ ಜೈಸ್ಸಾಗಿ ಥಳಿಸಿ ಬಿಟ್ಟಿರುವರು; ಯುದ್ಧದ ಸಮಯ ಸೆಟ್ಟು ತಿಂದಿರುವ ಬಂಗಾಲಿ, ಗುಜರಾತಿ ಮತ್ತು ಮರಾಟಿಗರನ್ನು ಸಂತೈಸಲು ತಿರು ಅಣ್ಣಾದೊರೈ ಪ್ರಯತ್ನಿಸಿರುವರು.

ಇನ್ನೊಂದು ಬದಿಯಲ್ಲಿ ತಿರು ಅಣ್ಣಾದೊರೈಯವರು ದೇಶದ ಐಕ್ಯತೆಯ ಮಾತೆತ್ತುತ್ತಿದ್ದಾರೆ. ದೇಶದ ಐಕ್ಯತೆಗಾಗಿ ಸಂಪರ್ಕ ಭಾಷೆಯಾಗಿ ಒಂದು ದೇಶೀಯ ಭಾಷೆ ಇರುವ ಅಗತ್ಯವಿಲ್ಲವೇನು? ತಿರು ಅಣ್ಣಾದೊರೈಯವರ ಆಟ ಅಲ್ಲಿಗೇನೇ ಸೀಮಿತವಾಗಿಲ್ಲ. ಕದನ ಕಹಳೆಯನ್ನೂದಿದ ಮೇಲೆ ದಿಲ್ಲಿಯ ಧ್ವಜ ಇಲ್ಲಿ ಹಾರಬಹುದೇನು? ತಮಿಳು ಕಾನ್ಫರೆನ್ಸಿನ ಮುಕ್ತಾಯವನ್ನೇ ನಿರೀಕ್ಷಿಸಿ ಕೂಂಡಿದ್ದ ಈ ಸೈನಿಕರು ಸಂಕಾರದ ತ್ರಿವರ್ಣ ಧ್ವಜವನ್ನು ಕೋಟೆಯಿಂದ ಕಳಗಿಳಿಸಿ ಬಿಟ್ಟರು! ಇನ್ನು ದ್ರಾವಿಡ ಕ. ದ ಧ್ವಜವನ್ನು ಮೇಲಕ್ಕೆ ಹಾರಿಸುವುದೊಂದೇ ಬಾಕಿ!

ಅದು ಸಾಧ್ಯವೇ?

ಅಂತೂ ಮದ್ರಾಸು ಮಹಾನಗರವು ಮಾನವ ವದರಾಸುಗಳ ಮದೋನ್ಮತ್ತ "ಕಾಳಗ"ದಿಂದಾಗಿ ಮಹಾ ನರಕವಾಗಿ ಹೋಯಿತು. ಸುಮಾರು ಹತ್ತು ದಿನಗಳ ಸಂಗರಣದಿಂದಾಗಿ ಹಾಹಾಕಾರವೆದ್ದಿತು. ತಿರು ರಾಜಾಜಿಯವರ ಕದನ ಕರೆಗೆ ಓಗೊಟ್ಟು ಕೆಲವರೇನೋ ಇಲ್ಲಿ ಮುಂದೆ ಬಂದಿದ್ದರು. ಆದರೆ ಅದನ್ನೇ "ಬಹುಮತ" ವೆನ್ನಲು ಸಾಧ್ಯವೇನು? ಇದೇ ರೀತಿ ಹಿಂದೆ ಆಗ್ಲೇಯರ ಆಶ್ರಯಕ್ಕೊಳಗಾಗಿದ್ದವರು ಸ್ವಾತಂತ್ರ್ಯ ಪ್ರಿಯ ಜನತೆಯ ಮೇಲೆ ಕ್ರೂರ ದಬ್ಬಾಳಿಕೆ, ಅಟ್ಟಹಾಸ ನಡೆಸಿದ್ದು, ಇಂದು ಎಷ್ಟೇ ಅದು ಅಸಂತೋಷ

ಸಿನಿಮಾ ಸಂಗತಿ

ಅನುದಿನದ ಕಥೆ - ಗಾಂಧಿನಗರ

ಅನುದಿನದ ಕಥೆ

ಚಿತ್ರದ ಹೆಸರು "ಗಾಂಧಿನಗರ". ಭಾರತಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಅಹಿಂಸೆಯ ಪ್ರತಿಮೂರ್ತಿ— ಸತ್ಯ-ಧರ್ಮಗಳ ಪ್ರತಿಬಿಂಬವಾದ ಮಹಾತ್ಮಾ ಗಾಂಧೀಜಿಯವರ ಸ್ಮರಣೆ ಅನುದಿನ ಜನಮನದಲ್ಲಿ ಉಳಿಯಲೆಂಬ ಸದಾಶಯವೇ ಈ ಹೆಸರಿನ ಹಿನ್ನೆಲೆಯಾಗಿರಬೇಕು.

ಈ ಚಿತ್ರದಲ್ಲಿ ಪೂಜ್ಯ ಬಾಪೂಜಿಯವರ ಧ್ಯೇಯ-ಆದರ್ಶಪಥಗಳ ಪ್ರತಿಪಾದನೆಯ ಪ್ರಯತ್ನವನ್ನು ಚಿತ್ರಕಥಾ ಲೇಖಕರಾದ ಎಸ್. ಭಾವನಾರಾಯಣ ಅವರು ಮಾಡಿದ್ದಾರೆ. ಈ ಚಿತ್ರದಲ್ಲಿ ಗಾಂಧಿನಗರವೆಂಬ ಚಿಕ್ಕ ವರಾರವೊಂದನ್ನು ರೂಪಿಸಿ, ಅದರ ಸುತ್ತ ಕಥೆ ಹೆಣೆದ ಭಾವನಾರಾಯಣ ಅವರು ಪ್ರಸ್ತುತ ಜನಜೀವದ— ನಡೆ-ನುಡಿಗಳತ್ತ ತಮ್ಮ ಭೂತಕನ್ನಡಿ ಹಿಡಿದಿದ್ದಾರೆ ಗಾಂಧೀಜಿಯವರ ತತ್ವಗಳನ್ನೂ ಪ್ರತಿಪಾದಿಸಿದ್ದಾರೆ.

ಗಾಂಧಿನಗರ—ಚಿಕ್ಕ ವರಾರ. ಅಲ್ಲಿನ ನಿವಾಸಿಗಳೋ ಒಬ್ಬೊಬ್ಬರೂ ಒಂದೊಂದಕ್ಕೆ ಉದಾಹರಣೆ. ಇದರ ನಡುವೆ ಕಾಲೇಜು ವಿದ್ಯಾರ್ಥಿಯೊಬ್ಬ. ಈ ಪರಿವಾರದ ವರಾರದ ಯುವಮನ ಒಬ್ಬ ಶ್ರೀಮಂತ.

ಗಾಂಧಿನಗರದ ವರಾರ ವಾಸಿಗಳೆಲ್ಲರಿಗೂ ಬೇಕಾದವನಾಗಿದ್ದ—ಎಲ್ಲರ ಆಪ್ತಬಂಧುವೂ ಆಗಿದ್ದ ಆ ಕಾಲೇಜು ವಿದ್ಯಾರ್ಥಿಗೆ ವರಾರದ್ದು ದಿನಕ್ಕೊಬ್ಬರ ಮನೆಯಲ್ಲಿ ಊಟ, ದಿನಕ್ಕೊಬ್ಬ ತಾಯಿಯ ಉಪಚಾರ....

ಆ ವಿದ್ಯಾರ್ಥಿಯಲ್ಲಿ ವರಾರ ವಾಸಿಯ ಮಗಳೊಬ್ಬಳಿಗೆ ಅನುರಾಗ....ಅವಳಲ್ಲಿ ಅವನಿಗೂ ಒಲವು.... ಆದರೆ ಮನದ ಭಾವನೆಗಳನ್ನು ತೋರ್ಪಡಿಸಲು ಯಾರೊಬ್ಬರಿಗೂ ಧೈರ್ಯ ಸಾಲದು ಇವರಿಬ್ಬರಲ್ಲಿ....

ವಿಧಿಯ ಒಳ ಸಂಚಿನಿಂದ ಓದುವುದನ್ನು ಬಿಟ್ಟು ಸೈಕಲ್ ರಿಕ್ಷಾತುಳಿದು ದಿನದೂಡುತ್ತಿದ್ದ ಆ ವಿದ್ಯಾರ್ಥಿ ಕಳ್ಳತನದ ಆರೋಪ ಹೊತ್ತು, ಕಾರಾಗೃಹವಾಸ ಅನುಭವಿಸಿ ಬಂದಾಗ ಗಾಂಧಿನಗರದ ನಿವಾಸಿಗಳ ಕಣ್ಣಲ್ಲಿ ಕೀಳಾಗಿ ಕಾಣಬಂದ... ಮುಂದೇನು....?

ಮುಂದೇನು ಎಂಬ ಆ ಪ್ರಶ್ನೆಗೆ ಉತ್ತರ ಬೇಕೆ?...ಅದಕ್ಕೆ ವಿಜಯವರ್ಧನ್ ಮೂವೀಸ್ ಅದರ "ಗಾಂಧೀನಗರ"ದಲ್ಲಿನಿಯಲ್ಲಾ...

ಸಾಹಿತ್ಯ ಸೌರಭ

ಭಾವ ನಾರಾಯಣರ ಈ ಕಥೆಗೆ ಒಪ್ಪುವಾದ ಸಂಭಾಷಣೆ ಹಾಗೂ ಹಾಡುಗಳನ್ನು ಬರೆದವರು ಉತ್ಸಾಹೀ ತರುಣ ಚಿ. ಉದಯ ಶಂಕರ್. "ಸಂಸಕಾಗಲಿ, ವಿರಸಕಾಗಲಿ ಸಮಾನತೆಯ ಇದೆ ನಮಗೆ ..." —"ಕಾಣದ ಊರಲಿ ನೀ ಕುಳಿತಿರುವೆ" — ಇವು ಉದಯ ಶಂಕರ ಸಾಹಿತ್ಯದ ತುಣುಕುಗಳಿಗೊಂದೆರಡು ನಿದರ್ಶನಗಳಾಗಿವೆ.

ಈ ಒಪ್ಪುವಾದ ಸರಸ— ಸಾಹಿತ್ಯಕ್ಕೆ ವಧುರ ನಿನಾದದ ಇಂಪಿನ ಸಂಗೀತ ಸಂಯೋಜಿಸಿದವರು, ತರುಣ ನಿರ್ದೇಶಕ ಸತ್ಯಂ.

ತಾಂತ್ರಿಕ ವಿಶೇಷ

ಹಲವು ಚಿತ್ರಗಳ ಪ್ರಾಪ್ತಿ-ಅನುಭವ ಪಡೆದ ಕೆ. ಜಾನಕೀರಾಂಗ ಛಾಯಾಗ್ರಹಣ, ಬಾಲ್‌ಜಿ ಯಾದವ್ ಅವರ ಸಂಕಲನ ಗೋಡ್ಗಾಂವ್‌ಕರ್ ಅವರ ಕಲಾ ಸಂಯೋಜನೆ-ಇವೆಲ್ಲಾ ಚಿತ್ರದ ತಾಂತ್ರಿಕ ಬಳಗದ ವಿಶೇಷಗಳು. ಇವರೊಂದಿಗೆ ನಿತ ತಾಂತ್ರಿಕ ತಜ್ಞರ ಸಹಕಾರವೂ ಇದೆ ಅನ್ನಿ!

ತಾರಾ ಬಳಗ ವೈಶಿಷ್ಟ್ಯ

ಚಿತ್ರದ ಮತ್ತೊಂದು ವಿಶೇಷವೆಂದರೆ ಒಪ್ಪುವಾದ ತಾರಾಬಳಗ. ಕನ್ನಡದ ಹೆಸರಾಂತ ಕಲಾವಿದರೆಲ್ಲರೂ ಇಲ್ಲಿ ಒಕ್ಕೂಡಿದ್ದಾರೆ. ವಿದ್ಯಾರ್ಥಿಯಾಗಿ ವರನಟ ರಾಜ್‌ಕುಮಾರ್ ಅರು ಮತ್ತೊಮ್ಮೆ ಅತ್ಯಂತ ಭಾವಪೂರ್ಣ ಅಭಿನಯದ ದಾಖಲೆಯನ್ನಿಲ್ಲಿ ಕೊಡಿದ್ದಾರೆ. ಅತನ ಮನನೆಳೆದ— ಅನುರಾಗ ತೋರಿದ ಚೆಲುವೆಯಾಗಿ ಕಲ್ಪನಾ ಮನೋಜ್ಞ ಅಭಿನಯದ ದಾಖಲೆ ಮಾಡಿದ್ದಾರೆ ಇವರೊಂದಿಗೆ ಕೆ. ಎಸ್. ಅಶ್ವತ್ಥ್, ನರಸಿಂಹರಾಜು, ಬಾಲಕೃಷ್ಣ, ದ್ವಾರಕೀಶ್, ರಾಘವೇಂದ್ರರಾವ್, ಹನುಮಂತಾಚಾರ್, ದಿನೇಶ್, ಕೃಷ್ಣಶಾಸ್ತ್ರಿ, ಗಣಪತಿ ಭಟ್, ಕಪ್ಪರಾಜ್, ಬಿ. ವಿ. ರಾಧಾ, ರೇವತಿ (ಜ್ಯೂ.), ಜಯಶ್ರೀ, ರ

ಕಂಡುಬಂತ. ಇಂಗ್ಲೀಷ್ ಇನಿಯರು ಸ್ವದೇಶೀ ಭಾಷಾ ಪ್ರೇಮಿಗಳ ಮೇಲೆ "ಯುದ್ಧ"ವನ್ನು ಸಾರಿಬಿಟ್ಟರು. ನಮ್ಮಲ್ಲಿ ಜನ ಜಾಗೃತಿ ನಿಜವಾಗಿ ಆಗಿದ್ದಲ್ಲಿ ಆಂಗ್ಲೇಯರ ಅಳ್ವಿಕೆಯ ಅಂತ್ಯದೊಂದಿಗೆ ಆಂಗ್ಲ ಭಾಷಾ ಅಳ್ವಿಕೆಯೂ ಅಂತ್ಯವಾಗುತ್ತಿತ್ತು. ನನಗೆ ಸ್ವಾಂಜ್ಯ ಮಾತ್ರವಲ್ಲ ಸ್ವಾತಂತ್ರ್ಯವೂ ಸಿಗುತ್ತಿತ್ತು.

ಧರ್ಮದೀಪ—

ಸತ್ಸಂಗ

ಹಾಲು ಮತ್ತು ನೀರನ್ನು ಬೆರೆಸಿದರೆ ಒಂದಕ್ಕೊಂದು ಹೊಂದಿಕೊಂಡು ಎಲ್ಲವೂ ಹಾಲಿನಂತೆಯೇ ಬಿಳಿ ಬಣ್ಣ ತಾಳುತ್ತದೆ. ಬೆರಕೆಯಾದ ಮೇಲೆ ಒಂದನ್ನೊಂದರಿಂದ ವಿಂಗಡಿಸಲಾಗುವುದಿಲ್ಲ. ಹಾಲು ತನ್ನತನವನ್ನು ಉಳಿಸಿಕೊಂಡು ನೀರನ್ನು ತನ್ನ ಮಟ್ಟಕ್ಕೆ ಏರಿಸುತ್ತದೆ. ಅದೇ ರೀತಿ ಸಜ್ಜನರ ಗೆಳೆತನದಿಂದ ದುರ್ಜನರೂ ಸಜ್ಜನರಾಗುತ್ತಾರೆ.

ಂ ಂ ಂ

ಸೌದೆಯನ್ನು ಸಂಗ್ರಹಿಸಿ, ಅದಕ್ಕೆ ಬೆಂಕಿ ಹೊತ್ತಿಸಿ ಅದು ಪ್ರಜ್ವಲಿಸಿದಾಗ ಅನೇಕರು ಬಂದು ಅದರ ಲಾಭ ಪಡೆದು

ಮೂದೇವಿ, ಪಾಪಮ್ಮ, ರಾಧಾಕುಮಾರಿ ಮತ್ತು ಚಿ. ಪ್ರಭಾಕರ್ ಮುಂತಾದ ಖ್ಯಾತರ ತಾರಾಬಳಗವನ್ನೇ ಇಲ್ಲಿ ಕಲೆಹಾಕಲಾಗಿದೆ?

ಹೊಸತನದ ನಿರ್ದೇಶನ

ಪೂಜ್ಯ ಗಾಂಧೀಜಿಯವರ ಆದರ್ಶ ತತ್ವಗಳನ್ನು ಪ್ರತಿಪಾದಿಸುವ, ಜನ ಜೀವನದತ್ತ ಕ್ಷ—ಕಿರಣ ಬೀರುವ ಈ "ಗಾಂಧಿನಗರ"ದ ಸೂತ್ರಧಾರರು ಮತ್ಯಾರೂ ಅಲ್ಲ. "ಲಗ್ನ ಪತ್ರಿಕೆ", 'ತೂಗುದೀಪ"ಗಳಿಂದ ಹೆಸರಾಂತ, ಚಿತ್ರೋದ್ಯಮದ ಗರಡಿಯಲ್ಲಿ ಸಾಮು ಮಾಡಿದ ತರುಣ ಕನ್ನಡಿಗ ರವಿ, (ಕೆ. ಎಸ್. ಎಲ್. ಸ್ವಾಮಿ) ಉತ್ಸಾಹಿ. ವಿಜಯ ವರ್ಧನ್ ಮೂವೀಸ್ ಅವರು ಆರ್ಪಿಸುವ ಈ ಚಿತ್ರದ ನಿರ್ಮಾಪಕರು ಸಿ. ವೆಂಕಟ ರೆಡ್ಡಿ.

"ಗಾಂಧಿ ನಗರ" ಫೆಬ್ರವರಿ—೯ರಂದು ಕನ್ನಡ ನಾಡಿನಲ್ಲಿ ಬೆಂಗಳೂರಿನ ಖ್ಯಾತ ಚಿತ್ರ ಹಂಚಿಕೆದಾರರಾದ ವಿಜಯ ಪಿಕ್ಚರ್ಸ್ ಸರ್ಕ್ಯೂಟ್ ಅವರ ಹಂಚಿಕೆಯಲ್ಲಿ ತೆರೆ ಕಂಡಿದೆ.

ಗೋಲ್ಡನ್ ಸೀನ್ ಸ್ಟುಡಿಯೋವಿನಲ್ಲಿ ತಯಾರಾದ ಈ ಚಿತ್ರದ ಮುಂಬೈ, ಕರ್ನಾಟಕದ ಹಂಚಿಕೆದಾರರು ಶ್ರೀನಿವಾಸ ಪಿಕ್ಚರ್ಸ್, ಗದಗ್.

ಚಳಿ ಕಾಯಿಸಿಕೊಳ್ಳುತ್ತಾರೆ. ಅದರಂತೆ ಸ್ವಪ್ರಯತ್ನ ಹಾಗೂ ಸಾಧನೆಗಳಿಂದ ಭಗವದ್ಭಕ್ತಿ ಹಾಗೂ ಅನುಗ್ರಹ ಪಡೆದ ಸತ್ಪುರುಷರ ಸಾನ್ನಿಧ್ಯದಿಂದ ಇತರರೂ ಲಾಭ ಪಡೆದು ತಮ್ಮ ಜೀವನವನ್ನು ಎತ್ತರಿಸಿಕೊಳ್ಳುತ್ತಾರೆ.

ಂ ಂ ಂ

ಜೋರನನ್ನು ಕಂಡಾಗ ಆತನು ಜೋರನೆಂಬ ಭಾವನೆಯೂ, ವಕೀಲನನ್ನು ಕಂಡಾಗ ನ್ಯಾಯ ಶಾಸ್ತ್ರದ ಕಲ್ಪನೆಯೂ, ನಮಗೆ ಬರುವಂತೆ ಸಭ್ಯ ಜನರನ್ನು ಕಂಡಾಗ ಸದ್ಭಾವನೆಯು ನಮ್ಮಲ್ಲಿ ಜಾಗೃತವಾಗುತ್ತದೆ. ಈ ಜಾಗೃತ ಸದ್ಭಾವನೆ ಸದಾ ನಮ್ಮಲ್ಲಿರಬೇಕಾದರೆ ಕವ್ಯಾರನು ತನ್ನ ಕುಲುಮೆಯ ಬೆಂಕಿಗೆ ಆಗಾಗ ತಿದಿ ಒತ್ತಿ ಜೀವಂತವಿಡುವಂತೆ ಸಜ್ಜನರ ಸಂಘ ಸಂಪರ್ಕ ಅತ್ಯಗತ್ಯ.

ಂ ಂ ಂ

ಅಕ್ಕಿಯನ್ನು ತೊಳೆದ ನೀರನ್ನು ಕುಡಿದರೆ ಕಳ್ಳು ಕುಡಿದು ಮೈ ಮರೆತವನಿಗೆ ಪ್ರಜ್ಞೆ ಬರುತ್ತದೆ. ಅಕ್ಕಿ ತೊಳೆದ ನೀರು ಉನ್ಮತ್ತತೆಯನ್ನು ಪರಿಹರಿಸುತ್ತದೆ ಅದರಂತೆ ಅಹಂಕಾರ, ಸ್ವಾರ್ಥಕಾಮನೆಗಳಿಂದ ಉನ್ಮತ್ತನಾಗಿರುವ ಐಹಿಕ ಮಾನವನ ಈ ಉನ್ಮಾದತೆ ಸಜ್ಜನರ ಸಂಗದಿಂದ ಇಳಿಯುತ್ತದೆ. ಕಣ್ಣಿಗೆ ಅಡರಿದ ಮಾಯೆ ಸರಿದೆ ನಾಶವಾಗುತ್ತದೆ.

ಂ ಂ ಂ

ಸೌದೆ ಹಸಿಯಾಗಿದ್ದರೂ ಅದನ್ನು ಬೆಂಕಿಯ ಮೇಲಿರಿಸಿದರೆ ಅದು. ಬೆಂಕಿಯ ಶಾಖದಿಂದ ಒಣಗಿ ಬೆಂಕಿ ಹೊತ್ತಿ ಬೆಂಕಿಯ ಕೆಂಡವೇ ಆಗುತ್ತದೆ. ಅದರಂತೆ ಸತ್ಪುರುಷರ ಸಹವಾಸದಿಂದ ವ್ಯಕ್ತಿಯು ತನ್ನ ದೋಷ ದೋಷಗಳನ್ನು ಕಳೆದುಕೊಂಡು ಸತ್ಪುರುಷನೇ ಆಗುತ್ತಾನೆ.

ಂ ಂ ಂ

ಆನೆಯನ್ನು ಯಾ ಕೋಣನನ್ನು ಚೆನ್ನಾಗಿ ಮೈಯಿಸಿ ಬಿಟ್ಟುಬಿಟ್ಟರೆ ಅವು ಹುನಹ ಕೆಸರಿನಲ್ಲಿ ಬಿದ್ದು ತಮ್ಮ ಮೈಯನ್ನು ಹೊಲಸು ಮಾಡಿಕೊಳ್ಳುತ್ತವೆ. ಆದರೆ ಹಾಗೆ ತೊಳೆದ ಆನೆ ಕೋಣಗಳನ್ನು ಒಂದು ಕೊಟ್ಟಿಗೆ ಯಾ ಮರದಡಿಯಲ್ಲಿ ಕಟ್ಟಿ ಹಾಕಿದರೆ ಅವು ಶುಭ್ರವಾಗಿಯೇ ಇರುತ್ತವೆ. ಅದ್ದರಿಂದ ಸತ್ಸಂಗದಿಂದ ಪುನೀತನಾದವನ ಸತತ ಸಂಸ್ಸಗದಲ್ಲಿರುವ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಹಿಂದಿನ ಮಲಿನತೆ ಆತನನ್ನು ಆಕರ್ಷಿಸದಿರದು.

ಂ ಂ ಂ

ಕಲಿಯುಗದಲ್ಲಿ ಸತ್ಸಂಗವೇ ಮೋಕ್ಷಕ್ಕೆ ದಾರಿ. ಭಗವಂತನ ಚರಣದಲ್ಲಿ ಮನಸ್ಸನ್ನು ಕೇಂದ್ರೀಕರಿಸಿದವನು ಯಾವ ಐಹಿಕ ಕಾರ್ಯ-ಕರ್ಮಗಳನ್ನು ಮಾಡಿದರೂ ಕೆಸರಲ್ಲಿ ಹುಟ್ಟಿದ ಕಮಲ ಪತ್ರದಂತೆ ನಿರ್ಲಿಪ್ತನಾಗಿ ತನ್ನ ಸಮಾನತೆಯನ್ನು ಉಳಿಸಿಕೊಂಡು ಜೀವನ ಸಾರ್ಥಕ್ಯ ಪಡೆಯುವನು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ವಿವೇಚನೆ

ನಾಟಕದಲ್ಲಿ ಪೂರ್ವರಂಗ

ಬರೆದವರು: ಶ್ರೀ ಸ. ನಾರಾಯಣ

ಪ್ರಾಚೀನ ಭಾರತದಲ್ಲಿ ನಾಟಕಾಭಿನಯದ ಆರಂಭದಲ್ಲಿ ಆಡಂಬರ ಪೂರ್ಣ ವಿಧಿಯೊಂದನ್ನು ನೆರವೇರಿಸುತ್ತಿದ್ದರು. ನಾಟಕ ಆರಂಭದ ಈ ಪೂರ್ವ ಕ್ರಿಯೆಯನ್ನು 'ಪೂರ್ವರಂಗ' ಎಂದು ಕರೆಯುತ್ತಿದ್ದರು. ನಗಾರಿ ಬಾರಿಸಿ ನಾಟಕದ ಆರಂಭವಾಗುವುದೆಂದು ಸೂಚನೆ ನೀಡುತ್ತಿದ್ದರು. ಆನಂತರ ಗಾಯಕರು ಮತ್ತು ವಾದಕರು ರಂಗಭೂಮಿಯ ಮೇಲೆ ಒಂದು ನಿರ್ದಿಷ್ಟ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ಸಮೂಹಗಾನ ಆರಂಭವಾಗುತ್ತಿತ್ತು. ಮೃದಂಗ, ವೇಣುವೀಣಾದಿ ವಾದ್ಯಗಳ ನಾದ ಮತ್ತು ನರ್ತಕರ ನೂಪುರ ಝಂಕಾರದೊಡನೆ ನಾಟಕದ ಆರಂಭವಾಗುತ್ತಿತ್ತು. ಈ ವರೆವಿಗಿನ ಕ್ರಿಯೆಗಳು ಪರದೆಯ ಹಿಂದೆ ಆಗುತ್ತಿದ್ದವೇ ಅಥವಾ ಪರದೆಯ ಮುಂದೆ ಆಗುತ್ತಿದ್ದವೇ ಎಂಬ ಬಗ್ಗೆ ಪಂಡಿತರಲ್ಲಿ ಅಭಿಪ್ರಾಯ ಭೇದವಿದೆ. ಆದರೆ ನಾಟಕದ ಆರಂಭದಲ್ಲಿ "ಅವತರಣ"ವೆಂಬ ಕ್ರಿಯೆಯು ಉಲ್ಲೇಖವಿರುವುದರಿಂದ ಇವು ಪರದೆಯ ಹಿಂದಲ್ಲ ರಂಗಭೂಮಿಯ ಮೇಲೆ ಪಡೆಯುತ್ತಿದ್ದಿರಬಹುದೆಂದು ಊಹಿಸಬಹುದಾಗಿದೆ.

ಮೇಲಿನ ಕ್ರಿಯೆಯ ಅನಂತರ ಸೂತ್ರಧಾರ ಪ್ರವೇಶಿಸುತ್ತಿದ್ದ. ಅವನ ಒಂದು ಪಾರ್ಶ್ವದಲ್ಲಿ ಭೃಂಗಾರದಲ್ಲಿ ನೀರನ್ನು ತೆಗೆದುಕೊಂಡು ಭೃಂಗಾರಧರನಿರುತ್ತಿದ್ದನು. ಜರ್ಜರ (ಧ್ವಜ)ವನ್ನು ಹಿಡಿದುಕೊಂಡು ಮತ್ತೊಂದು ಬದಿಯಲ್ಲಿ ಜರ್ಜರಧರನಿರುತ್ತಿದ್ದನು. ಈ ಇಬ್ಬರು ಪಾರ್ಶ್ವಕರೊಂದಿಗೆ ಸೂತ್ರಧಾರನು ಐದು ಹೆಜ್ಜೆ ಮುಂದೆ ಬರುತ್ತಿದ್ದನು. ಬ್ರಹ್ಮನ ಪೂಜೆಯ ಉದ್ದೇಶದಿಂದ ಸೂತ್ರಧಾರ ಒಂದು ಬಗೆಯ ವಿಶೇಷ ಅಭಿನಯ ಭಂಗಿಯಿಂದ ಐದು ಹೆಜ್ಜೆ ಮುಂದೆ ಬರುತ್ತಿದ್ದನು. ಅನಂತರ ಸೂತ್ರಧಾರ ಭೃಂಗಾರದಿಂದ ನೀರನ್ನು ತೆಗೆದುಕೊಂಡು ಆ ಜಲದಿಂದ ಪ್ರೋಕ್ಷಣಾದಿಗಳಿಂದ ಪವಿತ್ರಪಡಿಸುತ್ತಿದ್ದನು. ಅವನು ವಿಶೇಷ ಆಡಂಬರಪೂರ್ಣ ಅಭಿನಯ ಭಂಗಿಯಿಂದ ವಿಘ್ನವನ್ನು ಜರ್ಜರ ಮಾಡುವ ಜರ್ಜರವನ್ನು ನಿರಿಸುತ್ತಿದ್ದನು. ಭಿನ್ನಭಿನ್ನದೇವತೆಗಳಿಗೆ ವಂದಿಸುತ್ತಿದ್ದನು. ಬಲಗಾಲಿನ ಅಭಿನಯದಿಂದ ಶಿವನಿಗೂ ಮತ್ತು ವಾಮ ಪಾದದ ಅಭಿನಯದಿಂದ ವಿಷ್ಣುವಿಗೂ ಪ್ರಣಾಮ ಮಾಡುತ್ತಿದ್ದನು. ಮೊದಲನೆಯದು ಪುರುಷ ಮತ್ತು ಎರಡನೆಯದು ಸ್ತ್ರೀ ಪಾದವೆಂಬ ನಂಬಿಕೆ ಇತ್ತು. ಬಲಗಾಲನ್ನು ನಾಭಿಯವರೆಗೆ ಎತ್ತಿದಾದ ಅದು ಪುಂಸಕಳಾಳಾಗುತ್ತಿತ್ತು. ಈ ಭಂಗಿಯಲ್ಲಿ ಸೂತ್ರಧಾರ ಬ್ರಹ್ಮನನ್ನು ವಂದಿಸುತ್ತಿದ್ದನು.

ಅನಂತರ ಸೂತ್ರಧಾರ ವಿಧಿಪೂರ್ವಕವಾಗಿ ನಾಲ್ಕು ಬಗೆಯ ಹೂಗಳಿಂದ ಜರ್ಜರವನ್ನು ಪೂಜಿಸುತ್ತಿದ್ದನು. ಆಗ ನಾಂದಿ ಪಾಠವಾಗುತ್ತಿತ್ತು. ಅವನು ಸಕಲ ದೇವತೆಗಳಿಗೂ ಮತ್ತು ಬ್ರಾಹ್ಮಣಾದಿಗಳಿಗೂ ನಮಸ್ಕಾರ ಮಾಡುತ್ತಿದ್ದನು. ದೇವತೆಗಳನ್ನು ಕಲ್ಯಾಣಕ್ಕಾಗಿ ಪ್ರಾರ್ಥಿಸುತ್ತಿದ್ದನು. ಅರಸನಿಗೆ ವಿಜಯ ಕಾಮನೆಯನ್ನು ವ್ಯಕ್ತಗೊಳಿಸುತ್ತಿದ್ದನು. ದರ್ಶಕರಿಗೆ ಧರ್ಮವೃದ್ಧಿಯಾಗಲೆಂಬ ಶುಭಾಕಾಂಕ್ಷೆಯನ್ನು ಪ್ರಕಟಗೊಳಿಸುತ್ತಿದ್ದನು. ಕೊನೆಯಲ್ಲಿ ಸಮಸ್ತ ದೇವತೆಗಳು ಪ್ರಸನ್ನರಾಗಲಿ ಎಂಬ ಶುಭೇಚ್ಛೆಯನ್ನು ಪ್ರಕಟಿಸುತ್ತಿದ್ದನು. ಪ್ರತಿಯೊಂದು ಶುಭಾಕಾಂಕ್ಷೆಯು ಸಮರ್ಪಕವಾದ ಮೇಳ ಪಾರಿ ಪಾರ್ಶ್ವಕರು 'ಏವಮಸ್ತು' (ಹಾಗೆಯೇ ಆಗಲಿ) ಎಂದು ಪ್ರತಿವಚನ ಹೇಳುತ್ತಿದ್ದರು. ಹೀಗೆ ನಾಂದಿ ಪಾಠ ಸಮಾಪ್ತವಾಗುತ್ತಿತ್ತು.

ಶುಷ್ಕಾವ ಕೃಷ್ಣಾ ವಿಧಿಯ ಅನಂತರ ಅವಕಾಶಕ್ಕೆ ಅನುಕೂಲವಾದ ಮಾತಿರುವಂಥ ಶ್ಲೋಕವನ್ನು ಪಠಿಸುತ್ತಿದ್ದನು. ಅಂದರೆ ಯಾವ ದೇವತೆಯ ಪೂಜೆಯ ಸಂದರ್ಭದಲ್ಲಿ ನಾಟಕ ಪಡೆಯುತ್ತಿತ್ತೋ ಆ ದೇವತೆಯ ಸ್ತುತಿಯ ಶ್ಲೋಕವಾಗಿರುತ್ತಿತ್ತು; ಅಥವಾ ಯಾವ ಅರಸನ ಉತ್ಸವದ ಸಂದರ್ಭದಲ್ಲಿ ನಾಟಕವಾಗುತ್ತಿತ್ತೋ ಅವನ ಸ್ತುತಿಯ ಶ್ಲೋಕವಾಗಿರುತ್ತಿತ್ತು. ಅವನು ಬ್ರಹ್ಮ ಸ್ತುತಿಯನ್ನು ಮಾಡಿ ಜರ್ಜರದ ಸನ್ಮಾನಕ್ಕಾಗಿಯೂ ಒಂದು ಶ್ಲೋಕವನ್ನು ಹೇಳುತ್ತಿದ್ದನು. ಆಗ ಚಾರಿ ನೃತ್ಯ ಆರಂಭವಾಗುತ್ತಿತ್ತು. ಅದರ ವಿಸ್ತೃತ ವ್ಯಾಖ್ಯೆ ಮತ್ತು ವಿಧಿ ನಾಟ್ಯ ಶಾಸ್ತ್ರದ ಹನ್ನೊಂದನೆಯ ಅಧ್ಯಾಯದಲ್ಲಿದೆ.

ಚಾರಿ ನೃತ್ಯ ಪ್ರಯೋಗ ಪಾರ್ವತಿಯ ಪ್ರೀತ್ಯರ್ಥವಾಗಿ ಪಡೆಯುತ್ತಿತ್ತು. ಪೂರ್ವಕಾಲದಲ್ಲಿ ಶಿವ ಈ ವಿಶೇಷ ಭಂಗಿಯಲ್ಲಿ ಪಾರ್ವತಿಯೊಂದಿಗೆ ಈ ಕ್ರೀಡೆಯಾಡಿದ್ದನಂತೆ. ಈ ಸವಿಲಾಸ ಅಂಗ ವಿಶೇಷಿತ ರೂಪದ ಚಾರಿಯ ನಂತರ ಮಹಾಚಾರಿಯ ವಿಧಾನವನ್ನು ನಾಟ್ಯಶಾಸ್ತ್ರದಲ್ಲಿ ಕೊಟ್ಟಿದೆ. ಈ ಕಾಲದಲ್ಲಿ ಸೂತ್ರಧಾರ ಜರ್ಜರೇಧ್ವಜವನ್ನು ಪಾರಿಪಾರ್ಶ್ವಕರ ಕೈಗೆ ಒಪ್ಪಿಸುತ್ತಿದ್ದನು. ಅನಂತರ ಭೂತಗಣದ ಪ್ರೀತ್ಯರ್ಥವಾಗಿ ಪಾಂಡವದ ವಿಧಾನ ನಡೆಯುತ್ತಿತ್ತು. ಆಗ ವಿದೂಷಕ ಪ್ರವೇಶಿಸಿ ಅಸಂಗತವಾದ ಮಾತಾಡುತ್ತಿದ್ದನು. ಇದರಿಂದ ಸೂತ್ರಧಾರನ ಮುಖದ ಮೇಲೆ ಸ್ಮಿತ ಹಾಸ್ಯ ಮಿನುಗುತ್ತಿತ್ತು. ಅನಂತರ ಪ್ರಯೋಜನೆ ಪಡೆಯುತ್ತಿತ್ತು.

ಪ್ರಯೋಜನೆಯಲ್ಲಿ ನಾಟಕ ವಿಷಯ, ವಸ್ತು ಅರ್ಥಾತ್ ಯಾರ-ಯಾವ ಜಯ ಅಥವಾ ಸೋಲಿನ ಕಥೆ ಅಭಿನಯಿಸಲ್ಪಡುವುದೆಂಬ ಮಾತುಗಳು ಪ್ರಸ್ತಾಪಿಸಲ್ಪಡುತ್ತಿದ್ದವು. ಈ ಮಾತುಗಳನ್ನು ಸೂತ್ರಧಾರನೇ ಹೇಳುತ್ತಿದ್ದನು. ಆಗ ನಾಟಕ ಆರಂಭವಾಗುತ್ತಿತ್ತು. ಮೇಲೆ ಹೇಳಿರುವ ಮಾತುಗಳನ್ನು ಶಾಸ್ತ್ರದಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಅದರ ಜೊತೆಯಲ್ಲಿ ಈ ಕ್ರಿಯೆಯನ್ನು ಸಂಕ್ಷೇಪವಾಗಿಯೂ ಮಾಡಬಹುದೆಂದು ಹೇಳಿದೆ. ಅಗತ್ಯವೆನಿಸಿದಲ್ಲಿ ಅಪೇಕ್ಷಿಸಿದಲ್ಲಿ ಇನ್ನು ವಿಸ್ತಾರವಾಗಿ ಹೇಳಲು ಅವಕಾಶವಿದೆ. ಮೇಲೆ ಹೇಳಿರುವ ಕ್ರಿಯೆಗಳ ಪ್ರಯೋಗದಿಂದ ಅಪ್ಸರೆಯರು, ಗಂಧರ್ವರು, ದೈತ್ಯ, ದಾನವ, ರಾಕ್ಷಸ, ಗುಹ್ಯಕ, ಯಕ್ಷ ಇತ್ಯಾದಿ ದೇವಗಣ, ರುದ್ರಗಣ ಪ್ರಸನ್ನವಾಗಿ ನಾಟಕ ನಿರ್ವಿಘ್ನವಾಗಿ ಸಮಾಪ್ತವಾಗುವುದೆಂಬ ನಂಬಿಕೆ ಇತ್ತು.

ನಾಟ್ಯ ಶಾಸ್ತ್ರದ ಅನಂತರದ ಲಕ್ಷಣ ಗ್ರಂಥಗಳಲ್ಲಿ ಈ ವಿಷಯ, ಈ ವಿಧಿ ಅಷ್ಟು ವಿಸ್ತಾರಪೂರ್ವಕವಾಗಿ ಪ್ರಸ್ತಾಪಿಸಲ್ಪಟ್ಟಿಲ್ಲ. ದಶರೂಪಕ, ಸಾಹಿತ್ಯದರ್ಪಣ ಮುಂತಾದುವುಗಳಲ್ಲಿ ಬಹು ಸಂಕ್ಷೇಪವಾಗಿ ಈ ವಿಷಯ ಬಂದಿದೆ. ಅನಂತರ ನಾಟಕಾರಂಭದ ಈ ಪೂರ್ವರಂಗ—ಈ ಕ್ರಿಯೆ ಅಷ್ಟು ವಿಸ್ತಾರವಾಗಿ ಆಡಂಬರ ಪೂರ್ಣವಾಗಿ ಪಡೆಯುತ್ತಿರಲಿಲ್ಲವೆಂದು ವಿಶ್ವನಾಥನ ಸಾಹಿತ್ಯ ದರ್ಪಣದಿಂದ ತಿಳಿದು ಬರುತ್ತದೆ. ಕ್ರಿ. ಶ. ಒಂದನೆಯ ಶತಮಾನದ ನಂತರ ಬಹುಕಾಲದ ವರೆಗೆ ಈ ಬಗೆಯ ನಿಯಮ ರೂಢಿಯಲ್ಲಿತ್ತು. ಆನಂತರ ಈ ಕ್ರಿಯೆಯು ಮೊದಲಿನಂತೆ ನಡೆಯುತ್ತಿರಲಿಲ್ಲವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಕಾಂಗ್ರೆಸ್ ಸಂಘಟನೆ ಹಳ್ಳಿಹಳ್ಳಿಗಳಲ್ಲಿ ಪ್ರಾರಂಭವಾಗಬೇಕು

(ಸದನ ಸಂಚಿಕೆಯಿಂದ)

ನಮಗೆ ಯಾರೇ ಆದರೂ ಅವನಿಗೆ ಸಾಮೂಹಿಕ ಬಹಿಷ್ಕಾರ ಹಾಕಿ ಕಾಂಗ್ರೆಸ್ಸಿನ ಹೆಸರಿನ ದುರುಪಯೋಗ ಅವನಿಂದ ಪಡೆಯುವಂತೆ ಮಾಡಬೇಕು. ಇದೂ ಹಳ್ಳಿಗಳಲ್ಲಿರುವ ವಿದ್ಯಾವಂತ ತರುಣರಿಂದ ಸಾಧ್ಯ. ಇವರು ಆಗಾಗ್ಗೆ ಸಂಘಟನೆಯ ಮೂಲಕ ಒಟ್ಟು ಸೇರಿ ಗ್ರಾಮಗಳ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಪಂಚಾಯತ ಬೋರ್ಡು ಸಹಾಯ ನಿರ್ವಹಣೆಯ ಬಗ್ಗೆ ವಿವೇಚಿಸಬೇಕು. ಹಳ್ಳಿಗಳ ಅವಶ್ಯಕತೆಗಳ ಈಡೇರಿಕೆಯ ಬಗ್ಗೆ ಯೋಗ್ಯ ಮಾರ್ಗದರ್ಶನ ಕೊಡಬೇಕು.

ಪ್ರಾಥಮಿಕ ಹಳ್ಳಿಗಳವರು ಸಾಂಸ್ಕೃತಿಕವಾಗಿಯೂ ಜನರ ಸಂಪರ್ಕ ಬೆಳೆಯುವ ಕಾರ್ಯಕ್ರಮ ರೂಪಿಸಬಹುದು. ಸಮ್ಮಿಲನ ವಿಚಾರ ಗೋಷ್ಠಿಗಳಿಂದ ಜನರೊಳಗೆ ಐಕ್ಯ ಭಾವ ಬೆಳೆಸಬಹುದು. ಈ ಎಲ್ಲಾ ಕಾರ್ಯಕ್ರಮವನ್ನು ಈಗಿಂದೀಗಲೇ ಪ್ರಾರಂಭಿಸಿ ಹಳ್ಳಿಗಳಲ್ಲೇ ಕಾಂಗ್ರೆಸಿನ ಬಲವಾದ ಅಸ್ತಿವಾರ, ಸಂಘಟನೆ ಸಾಧಿಸಿದರೆ ಕಾಂಗ್ರೆಸ್ಸು ಅಜೇಯ ಶಕ್ತಿಯಾಗಿ ಎಂದೆಂದೂ ಉಳಿಯುವುದು. ಭಾರತೀಯರ ಪುರೋಭಿವೃದ್ಧಿಗಾಗಿ ಭಾರತದ ಉತ್ಕರ್ಷಕ್ಕಾಗಿ, ಭಾರತದ ಎಲ್ಲ ಜನರ ಹಿತಕ್ಕಾಗಿ—ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳೊಂದೇ ಜನಪ್ರಿಯವಾಗಿದೆ. ಅದು ಕೆಲವೊಂದು ಜನರ ಅನ್ಯಾಯದಿಂದ ಹಾಳಾಗುವಂತಾಗಬಾರದು. ಅದನ್ನು ಇಂದಿನ ಯುವಕರು ಖಂಡಿತ ನೆರವೇರಿಸಬಲ್ಲರು ಎಂಬ ಧೈರ್ಯ ನನಗಿದೆ.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವನ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದ ವಿಧಿ ಮತ್ತು ದೇಶೀ ವೈದ್ಯತೀಯ
ಸಲಹೆಗಳಿಗೆ, ಇದರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಬೆಳದಿಂಗಳು

ಅತ್ತ ತೆಂಗಿನ ಮರ
ಇತ್ತ ಮಾವಿನ ಮರ
ಮೇಲೆ ಸುಂದರ ಸಗ್ಗ
ಇಲ್ಲಿ ಬಳ್ಳಿ ತೊಟ್ಟಿಲ ಹಗ್ಗ
ಗಂಗೆ ತೊಟ್ಟಿಲು
ಮಗು ತುಂಬಾ ಚಂದಿರ
ತೊಟ್ಟಿಲಲಿ ಮಲಗಿರಲು
ಬಹುಸುಂದರ!
ಕಿಡ್ಡಿಯಿಂದೆದ್ದ ಚಂದಿರನು
ಸಗ್ಗದಲಿ ಜಿಗಿಯುತ್ತ
ತೊಟ್ಟಿಲನು ಒದೆಯುತ್ತ
ಮೇಲೇಳುತಿರುವನು
ಗಾಳಿ ಜೋಗುಳ ಹಾಡುತಿದೆ
ಭುವಿಯು ಅಂಗಳದಿ ಬಿಳಿಯು ಹಸುಸಿಂದು
ಕರುವಿಗೆ ಹಾಲು ಕುಡಿಸುತಿದೆ
ನಕ್ಷತ್ರಗಳ ರಾಜ ಎಂದು
ಸಂಗಾತಿಯರು ಬಂದು
ಮುತ್ತಿಟ್ಟರು
ಎದ್ದ ಚಂದಿರನು
ನೊರೆ ಹಾಲು ಕುಡಿದು
ಚಲ್ಲಿದನು ಹಾಲ ಭುವಿಗೆ
ಅದೇ ಬೆಳದಿಂಗಳು ನಮಗೆ

—ಮಲ್ಲಾರಿ, ರಾಮಗಿರಿ.

ಚಿಂತೆಪಡುತ್ತೀರೇಕೆ?

ಬರೆದವರು: ಶ್ರೀ ಬಿ ನರಸಿಂಗ ರಾವ್

ಚಿಂತೆಗೂ ಚಿತೆಗೂ ಹತ್ತಿರದ ಸಂಬಂಧ. ಚಿಂತೆಯು ಮನುಷ್ಯನನ್ನು ಚಿತೆಯ ಕಡೆ ಬೇಗನೆ ಕೊಂಡೊಯ್ಯುತ್ತದೆ. ಚಿಂತೆಗೊಳಗಾದವರು ಬಾಳನ್ನು ನಿರಾಶೆಯಲ್ಲಿ ಕಳೆದು, ನಿರಾಶೆಯಲ್ಲೆ ಸಾವನ್ನಪ್ಪುವರು ಚಿಂತೆಗೊಳಗಾದವನ 'ಸುಟ್ಟ ಮುಖ'ವನ್ನು ನೋಡಲು ಯಾರೂ ಬಯಸುವರು. ಚಿಂತೆಯಿಂದ ಮನಸ್ಸಿಗೂ ತ್ರಾಸ, ದೇಹಕ್ಕೂ ಅಪಾಯ. ಚಿಂತೆಯಷ್ಟು ದೊಡ್ಡ ರೋಗವಿಲ್ಲ. ಅದೇ ಅವನ ದೈಹಿಕ ರೋಗಕ್ಕೆ ಮೂಲ.

ಗಾಬರಿಪಡದಿರಿ

ಚಿಂತೆಯೆಂಬುದು ಆರೋಗ್ಯಕ್ಕೂ, ಬಾಳಿನ ಸುರೋಗತೆಗೂ ಶಾಪವೇ ಆಗಿದೆ. ಆದುದರಿಂದ ಹೃನ್ನಗಳಲ್ಲಿ ನೆಲಸಿದ ದುಶ್ಚಿಂತೆಗಳ ಕುರಿತು ಯೋಚಿಸುವ ಬದಲು ಅವನ್ನು ಕಿತ್ತೊಗೆಯಲು ಯತ್ನಿಸಿ ಮತ್ತೆ ಅದು ನಿಮ್ಮ ಮನವನ್ನು ಹೊಕ್ಕಗೊಡದಂತೆ ಜಾಗ್ರತೆ ವಹಿಸಿ. ಸಮಸ್ಯೆಗಳನ್ನು ಬಾಳಿನಲ್ಲಿ ಎಲ್ಲರೂ ಎದುರಿಸಲೇಬೇಕು. ಎದುರಿಸಲು ಧೈರ್ಯವಂತರಾ ಪರಮಾತ್ಮನು ಎಲ್ಲರಿಗೂ ನೀಡಿದ್ದಾನೆ. ಯಾವತ್ತೂ ಸಮಸ್ಯೆಯನ್ನು 'ಭೀಕರ'ವೆಂದು ಬಗೆಯಲಾಗದು. ಸಮಸ್ಯೆಗಳೆ ಸೃಷ್ಟಿ ನಮ್ಮಿಂದಲೇ ಆಗಿರುವುದರಿಂದ ಅವುಗಳ ಪರಿಹಾರವೂ ಸಾಧ್ಯ. ಸಮಸ್ಯೆಯನ್ನೆದುರಿಸಲು ನಿಮ್ಮ ಪೂರ್ತಿ ಶಕ್ತಿಯನ್ನು ಉಪಯೋಗಿಸಿರಿ. ಕೆಲವೊಮ್ಮೆ ಸೋಲಬಹುದು. ಆದರೆ ಕಂಗೆಟ್ಟು ಗಾಬರಿಗೊಳ್ಳಲಾದರು, ಸೋಲನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಿ. ಪರಮಾತ್ಮನಲ್ಲಿ ವಿಶ್ವಾಸವಿಟ್ಟರೆ ಯಾವ ಸೋಲೂ ಮಾನವನನ್ನು ಘಾಸಿಗೊಳಿಸದು. ಹೊನ್ನಿನ ನಾಳೆಯೊಂದಿದ್ದೇತೆಂಬುದು ಆಸ್ಥಿಕಭಾವ ಸದಾ ನೆನೆದಿರುವ. ಅತನಿಗೆ ಸೋಲಿನಿಂದ ಚಿಂತೆಯೂಗುವ ಬದಲು, ಅದನ್ನು ಎದುರಿಸಲೂ ಪ್ರೇರಣೆಯು ದೊರಕುವುದು

ಆಶಾವಾದಿಗಳಾಗಿರಿ

ನಿರಾಶೆಯು ಸಕಲ ಸೋಲುಗಳಿಗೆ ಹೇತು. ನಿರಾಶೆಯನ್ನು ಕಿತ್ತೊಗೆದು ಆಶಾವಾದಿಗಳಾಗಿರಿ. ಸಿಕ್ಕಿದ್ದರಲ್ಲಿ ತೃಪ್ತಿಪಡೆಯಿರಿ. ಅಸಾಧ್ಯವಿಷಯಕ್ಕಾಗಿ ಪರಿತಪಿಸುವುದು ಮೂರ್ಖತನ. ಆಗಲೇ ಚಿಂತೆಗಳಾಂದಿ. ತನ್ನ ಪಾಲಿಗೆ ಬಂದದ್ದೆ ಸುಜಾತ್ಯವೆಂದು ಬಗೆಯಬೇಕು. ಪರಮಾತ್ಮನು ಪ್ರಮಾಣ ಎಂದೂ ಅನ್ಯಾಯಗೈಯಲಾರ. ಅತನ ಸಮತಾವಾದೀ ದೃಷ್ಟಿಗೆ ತೋಚಿದ್ದಷ್ಟೇ ಆತ ಸಕಲರಿಗೂ ಕೊಟ್ಟಿರುವ. ಆದುದರಿಂದ ನಿರಾಶೆಯ ಅಂಧಕಾರದಲ್ಲಿ ಆಶೆಯ ಉಜ್ವಲ ಜ್ಯೋತಿಯನ್ನು ಹಚ್ಚಿರಿ. ಆಗಲೇ ಚಿಂತೆಯಿಂದ ಮುಕ್ತಿ

ವರ್ತಮಾನದಿಂದ ಆನಂದಪಡಯಿರಿ

ವರ್ತಮಾನವನ್ನು ಆನಂದದಲ್ಲಿ ಕಳೆಯಲು ಯತ್ನಿಸಿರಿ. ಕಳೆದ ನಿನ್ನೆಯ ಬಗ್ಗೆ ಚಿಂತಿಸದಿರಿ. ಕಳೆದದ್ದು ಕಳೆದು ಹೋಯಿತು. ಹೊನ್ನಿನ ನಿನ್ನೆಯನ್ನು ನೆನೆದು ಇಂದನ್ನು ಮಣ್ಣುಪಾಲು ಮಾಡಲಾಗದು. ಇಂದಿನ ಗಳಿಗೆಯನ್ನು ಮಣ್ಣುಪಾಲು ಮಾಡಿದರೆ ಅದು ಮತ್ತೆ ದೊರೆಯದು. ನಾಳೆ ಏನು ಅದಕ್ಕಾಗಿಯೂ ಚಿಂತೆಗೊಳಗಾಗುವಿರಿ ಅದುದರಿಂದ ಇದನ್ನು ಆನಂದದಲ್ಲಿ ಕಳೆಯುವುದರ ಬಗ್ಗೆ ಏನ್ಮೃದೃಷ್ಟಿಯನ್ನು ಕೇಂದ್ರೀಕರಿಸಿ. 'ಆನಂದ ಪಡೆಯಿರಿ' ಎಂದರೆ ನಿಮ್ಮ ದೈನಂದಿನ ಕೆಲಸವನ್ನು ಕೈ ಬಿಟ್ಟು ಆನಂದ ಪಡೆಯಿರಿ ಎಂದರ್ಥವಲ್ಲ ದೈನಂದಿನ ಕೆಲಸವನ್ನು ಶ್ರದ್ಧೆಯಿಂದ ಗೈಯಬೇಕು. ಕೆಲಸ ಮಾಡದೆ ಇದ್ದಾಗ ಬುರಾಲೋಚನೆಗಳೂ, ದುಃಖದ ಗಳಿಗೆಗಳೂ ನಿಮ್ಮ ಮನವನ್ನು ಹೊಗುವುವು. ಆದುದರಿಂದ ಸಾಧ್ಯವಾದಷ್ಟು ಕಾರ್ಯತತ್ಪರರಾಗಿರಬೇಕು.

ಹಸನ್ಮುಖಿಗಳಾಗಿರಿ

ನಗು, ಸ್ವೇಚ್ಛೆ ಮುಗುಳ್ನಗು ಚಿಂತೆಯ ಮಹಾ ವಿರೋಧಿ. ಆದುದರಿಂದ ಸದಾ ಮಂದಸ್ಮಿತರಾಗಿರಿ ನಗುವಿನಷ್ಟು ಉತ್ತಮ ಔಷಧವಿಲ್ಲ ಚಿಂತೆಯನ್ನೆದುರಿಸಲು. ನಗುವುದರಿಂದ ದೈಹಿಕ ಆರೋಗ್ಯವೂ, ಮಾನಸಿಕ ಆರೋಗ್ಯವೂ ಹಸನಾಗುವುದು. ಹೃದಯ ತೆರೆದು ನಗಬೇಕು. ಬಳನ್ನುನಗೆಗಡಲಲ್ಲಿ ಕಳೆದರೆ ಬಾಳು ಹಸನಾದೀತು, ಚಿಂತೆ ಇಲ್ಲದಾದೀತು.

ಇನ್ನಿತರ ಉಪಾಯಗಳು

ಚಿಂತೆಯನ್ನೆದುರಿಸಲು ನಮ್ಮ ದೈನಂದಿನ ಚಟುವಟಿಕೆಗಳನ್ನೂ ಸಾಕಷ್ಟು ಮಾರ್ಪಡಿಸಬೇಕು. ಉತ್ತಮ ಮಿತ್ರರನ್ನು ಪಡೆಯಿರಿ. ಅವರಲ್ಲಿ ಬೆರೆತು—ಕಲೆತು ಇರುವಾಗ ಚಿಂತೆಯು ಹತ್ತಿರ ಸುಳಿಯದು. ನಗು ತುಂಬಿದ ಸಂಭಾಷಣೆ ಗೈಯಿರಿ. ಸಮಯವನ್ನು ಸಮೂಜ ಸೇವೆಗೂ ಉಪಯೋಗಿಸುವುದು ಉತ್ತಮ ಸುದಲ್ಲಿ ಉತ್ತಮ. ಇದರಿಂದ ನಮ್ಮ ಮನಸ್ಸಿಗೆ ಹೊಸ ಅನುಭವ ಉಂಟಾಗುತ್ತದೆ. ಸದಾ ಒಂದೇ ರೀತಿಯ ಚಟುವಟಿಕೆ ತರವಲ್ಲ ಬಾಳಿನಲ್ಲಿ ಹೊಸತನ್ನು ಕಾಣಬೇಕು, ಅನುಭವಿಸಬೇಕು. ಅದು ಮನಸ್ಸಿಗೂ ಆನಂದ.

ಸೈಮರೆದು ವ್ಯಾಯಾಮ ಮಾಡುವುದೂ ಇದಕ್ಕೆ ಸಹಕಾರಿ. ಜ್ಞಾನಾರ್ಜನೆಗಾಗಿ ಗ್ರಂಥಗಳನ್ನೋದುವುದೂ, ಮುದ್ದು ಕಸಬು ಇತ್ಯಾದಿ ನಡೆಸುವುದೂ ಚಿಂತೆಯನ್ನು ಹತ್ತಿರಕ್ಕೆಲು ಸಹಾಯಕ

ಏಕಾಗ್ರದ್ದರೂ ಪರಮಾತ್ಮನಲ್ಲಿ ಅಚಲ ವಿಶ್ವಾಸವಿಟ್ಟವನಿಗೆ, ಚಿಂತೆಯ ಒಂದೂ ತಲೆದೋರದು. ಆದುದರಿಂದ ಪರಮಾತ್ಮನಲ್ಲಿ ವಿಶ್ವಾಸವು ಸದಾ ಇರುವಂತೆ ಪ್ರಾರ್ಥಿಸಿ.

ಎಲ್ಲೆಲ್ಲಿ ಏನೇನು?

ಮುಲ್ಕಿ ತಾಲೂಕು ರಚನೆಗೆ ಬ್ಲಾಕ್ ಕಾಂಗ್ರೆಸ್ ಒತ್ತಾಯ

ತಾ 10-3-66ರಂದು ಮುಲ್ಕಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ಎಂ ಆರ್. ಎಸ್ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಕಳದಿನಲ್ಲಿರುವ ಕಾಂಗ್ರೆಸ್ ಅಫೀಸಿನಲ್ಲಿ ಜರಗಿತು.

ಮಂಗಳೂರು ತಾಲೂಕು ಮತ್ತು ಮುಲ್ಕಿ ಕ್ಷೇತ್ರದ ಜನಸಾಂದ್ರತೆಯನ್ನು ಗಮನಿಸಿ ಮುಲ್ಕಿ ರೆವನ್ಯೂ ಫಿಕ್ಸಾದ 30 ಗ್ರಾಮಗಳು, ಕಾರ್ಕಳದ ಮೂರುಗ್ರಾಮಗಳು, ಉಡುಪಿ ತಾಲೂಕಿನ 10ಗ್ರಾಮಗಳು, ಸುರತ್ಕಲ್ಲಿನ 6 ಗ್ರಾಮಗಳು ಹೀಗೆ ಒಟ್ಟು 49 ಗ್ರಾಮಗಳನ್ನು ಒಳಗೊಂಡ ಪ್ರತ್ಯೇಕ ಮುಲ್ಕಿ ತಾಲೂಕನ್ನು ರಚಿಸುವಂತೆ ಮೈಸೂರು ಸರ್ಕಾರವನ್ನು ಏನಂತಿಸುವ ನಿರ್ಣಯವೊಂದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಹಲವಾರು ಸಣ್ಣ ಸುಟ್ಟ ನೀರಾವರಿ ಯೋಜನೆಗಳನ್ನು ಕೂಡಲೇ ಮಂಜೂರು ಮಾಡುವಂತೆ ಎಂ ಪಿ ಸಿ ಸಿ ಅಧ್ಯಕ್ಷರ ಮೂಲಕ ಮೈಸೂರು ಸರಕಾರದ ಸಣ್ಣ ನೀರಾವರಿ ಶಾಖೆಯ ಉಪ ಮಂತ್ರಿಗಳನ್ನು ವಿನಂತಿಸುವುದಾಗಿ ನಿರ್ಧರಿಸಲಾಯಿತು. ಅಲ್ಲದೆ ಇನ್ನಿತರ ಕಾಮಗಾರಿಗಳನ್ನು ಶೀಘ್ರದಲ್ಲೇ ಮಂಜೂರು ಮಾಡುವಂತೆ ಸಾರ್ವಜನಿಕ ಕಾಮಗಾರಿ ಖಾತೆಯ ಸಚಿವರನ್ನು ಕೇಳಿಕೊಳ್ಳುವುದಾಗಿ ನಿರ್ಧರಿಸಲಾಯಿತು. ರಸ್ತೆಗಳ ಕಾರ್ಯವನ್ನು ಬೇಗನೆ ಪೂರ್ಣಗೊಳಿಸುವಂತೆ ಮಂಗಳೂರಿನ ಸುತ್ತಮುತ್ತಿಂದಿಗೆ ಎಂಜಿನಿಯರರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಮೂಲಕ ಕೇಳಿಕೊಳ್ಳಲಾಯಿತು.

ಐದು ಲಕ್ಷ ರೂ ಗಳಿಗಿಂತ ಕಡಿಮೆ ವೆಚ್ಚವಾಗಿರುವ ಸಣ್ಣ ನೀರಾವರಿ ಯೋಜನೆಗಳ ಮೇಲೆ ನೀರು ತೆರಿಗೆ ಹೊರಿಸಬಾರದು ಎಂದು ಮೈಸೂರು ಮುಖ್ಯ ಮಂತ್ರಿಗಳನ್ನು ಎಂ ಪಿ ಸಿ ಸಿ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳಲಾಯಿತು.

ಡಾ। ಶೆಟ್ಟೀಸ್ ಕ್ಲಿನಿಕ್ ಮತ್ತು ನರ್ಸಿಂಗ್ ಹೋಂ ಉದ್ಘಾಟನೆ

ಡಾ। ಟಿ ರಾಮನಾಥ ಶೆಟ್ಟರ ಕ್ಲಿನಿಕ್ ಮತ್ತು ನರ್ಸಿಂಗ್ ಹೋಂನ ಪ್ರಾರಂಭೋತ್ಸವವು ತಾ. 1ರಂದು ಸುರತ್ಕಲ್ಲಿನಲ್ಲಿ ಡಾ। ಯಂ ಪುರುಷೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು

ಆರಂಭದಲಿ ಪ್ರಾರ್ಥನೆಯಾದ ಬಳಿಕ ಶ್ರೀ ಎ ರಾಮಣ್ಣನವರು ಆತಿಥಿಗಳನ್ನು ಸ್ವಾಗತಿಸಿದರು ನಂತರ ಅತಿಥಿಗಳಾದ ಡಾ। ಎಂ. ದೇವದಾಸ ಅಡಪರ ಮತ್ತು ಅಧ್ಯಕ್ಷರ ಪರಿಚಯ ಮಾಡಿ ಕೊಟ್ಟರು ಅನಂತರ ಶ್ರೀ ಪಿರಂಜನ ಶೆಟ್ಟರಿಂದ ಸಂದೇಶ ವಾಚನವಾಯಿತು

ಡಾ। ಅಡಪರು ತಮ್ಮ ಉದ್ಘಾಟನಾ ಭಾಷಣದಲ್ಲಿ ವೈದ್ಯಕೀಯ ವೃತ್ತಿಯಲ್ಲಿ ಖಾಸಗಿ ವೈದ್ಯರ ಲಾಭ್ಯವನ್ನು ವಿವರಿಸುತ್ತಾ ಆ ಪಾತ್ರವನ್ನು ಜವಾಬ್ದಾರಿಯಿಂದ ಯಶಸ್ವಿಯಾಗಿ ನಡೆಸುವ ಶಕ್ತಿ ಡಾ। ಶೆಟ್ಟರದ್ದಿದೆ ಎಂದು ಹೇಳಿ ಅವರಿಗೆ ಯಶಸ್ಸು ದೊರೆಯಲೆಂದು ಹಾರೈಸಿದರು

ಅನಂತರ ಮಂಗಳೂರಿನ ಡಾ ಮೋನಪ್ಪ ಬೆಳ್ಳೆ ಮತ್ತು ವಿದ್ಯಾದಾಯಿನಿ ಹೈಸ್ಕೂಲಿನಮುಖ್ಯೋಪಾಧ್ಯಾಯರಾದ ಶ್ರೀಯುತ ವಾಸ ದೇವರಾಯರು ಮಾತನಾಡಿ ಡಾ। ಶೆಟ್ಟರಿಗೆ ಪೂರ್ಣ ಯಶಸ್ಸು ದೊರೆಯ ಬೇಂದು ಹಾರೈಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಡಾ। ಶೆಟ್ಟರು ತವ ಸ್ವಂತಬಲದಿಂದ ಇಲ್ಲೀ ತಮ್ಮ ವೈದ್ಯವೃತ್ತಿಯನ್ನು ಆರಂಭಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಅವರಿಗೆ ಯಶಸ್ಸನ್ನು ಕೋರಿದರು.

ಕೊನೆಯಲ್ಲಿ ಡಾ। ಶೆಟ್ಟರು ವಂದನಾರ್ಪಣೆಗೈದರು

ಸಂತಾಪ ಸೂಚಕ ಸಭೆ

ಉಡುಪಿ ಮೋಡರ್ನ್ ಹಾ ಎ ಶಾಲೆಯಲ್ಲಿ ಅಧ್ಯಾಪಕರಾಗಿ ಮತ್ತು ಪಟ್ಟಯಾಗಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಶ್ರೀಕೃ. ಮಂಜುನಾಥ ನಾಯ್ಕರ ನಿಧನದ ಬಗ್ಗೆ ಸಂತಾಪ ಸೂಚಕಸಭೆಯು ಮೋಡರ್ನ್ ಹಾ. ಎ. ಶಾಲೆಯಲ್ಲಿ ಶಾಲಾ ಸಹಾಯಕ ಅಧ್ಯಾಪಕರಾದ ಶ್ರೀ ಕೃಷ್ಣಮೂರ್ತಿ ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು.

ಸಭೆಯಲ್ಲಿ ದಿವಂಗತರ ಜೀವನದರ್ಶನಗಳನ್ನು ಮತ್ತು ಎರಡೂ ಶಾಲೆಗಳಿಗಾಗಿ ಸಲ್ಲಿಸಿದ ಅಪಾರ ಸೇವೆಯ ಕುರಿತು ಶ್ರೀಯುತರಾದ ರಮಾನಾಥರಾಯರು, ರತ್ನಾಕರ ಅಡಿಗರು, ಜನಾರ್ಧನರಾಯರು ಹಾಗೂ ಶ್ರೀಮತಿಯರಾದ ಕಮಲ ಮತ್ತು ಶಕಿಕಲಾವರು ಮಾತನಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾರೈಸಿ, ಮಾನವ ಪ್ರಾರ್ಥನೆಯನ್ನು ಅಭಿನಯಿಸಲಾಯಿತು ದಿವಂಗತರು ಎರಡು ಶಾಲೆಗಳ ಆಡಳಿತಾಧಿಕಾರಿಯಾದ ಶ್ರೀ ಕೆ ಜಗನ್ನಾಥನಾಯ್ಕರ ಸಹೋದರರು.

ನಿಧನ

ಪೆಂಪಳ್ಳಿ ನಡುಪಾಲು, ಮುಚ್ಚಾಡಿ ಪುಟ್ಟಯ್ಯ ಶೆಟ್ಟಿ ವಿಧಿವಶ ನರ್ಸಿಶೆಟ್ಟರು ತಾ 10.3.66 ರಂದು ತಮ್ಮ 74ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು, ದಿವಂಗತರು ಮಂಗಳೂರು ದೈವಭಕ್ತಿಯುಳ್ಳ ಪರೋಪಕಾರಿಗಳೂ ಆಗಿದ್ದು ಜನರ ಪ್ರೀತಿ ವಿಶ್ವಾಸಗಳಿಸಿದ್ದರು. ಇವರು ತಮ್ಮ ಹಿಂದೆ ಇಗಂಡು ಎಣ್ಣು ಮಕ್ಕಳನ್ನೂ ಅಪಾರ ಬಂಧುಬಳಗದವರನ್ನೂ ಬಿಟ್ಟು ಅಗಲಿರುವರು.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನೂ ತಾರೀಕನ್ನೂ ನಿರೀಕ್ಷಿಸಿರಿ

ಮಂಗಳಾ ಅಣೆಕಟ್ಟು ಭಾರತದ ಜುಟ್ಟು!
ಪಾಕಿಗಳ ಕೈಯೊಳಗೆ ನಾವದನು
ಕೊಟ್ಟು!
ಕೈಮುಗಿದು ಕುಜಿದಾಯ್ತು— ಬೇಡ
ಪಡಲಿಲ್ಲ!
ಇದರರ್ಥವೇನೆಂದು ಪರಕಿನವೆ ಬಲ್ಲ!
—"ಕಲ್ಪಿತ"

"NAVAYUGA" Kannada Weekly is recommended for High Schools and Public Libraries by the Director of Public instruction in Mysore, Bangalore vide their letter-No. CL-4 17-4/65-66 dated 26-4-1966.

ಧ್ರುವಪ್ರದೇಶದ ಮಂಜುಗಡ್ಡೆಗಳೆದೆಯಲ್ಲಿ
"ಸುರಂಗಭವನ" ನಿರ್ಮಿಸಿ ವಿಹರಿಸುವ

ಧ್ರುವಕರಡಿಗಳು

ಬರೆದವರು: ಶ್ರೀ ಎಚ್. ಎಂ. ನಾರಾಯಣ ಭಟ್

ಬಿಳಿ ರಕ್ತವುಳ್ಳ ಒಂದು ಜೀವಿ ಉತ್ತರ ಧ್ರುವ ಪ್ರದೇಶದ ಮಂಜುಗಡ್ಡೆಗಳೆದೆಯಲ್ಲಿ ಜೀವಿಸುವುದು ಒಂದು ಆಶ್ಚರ್ಯ. ಆದರೆ ನೀಳವೂ ದಪ್ಪಗೂ ಇರುವ ಬಿಳಿ ರೋಮಗಳುಳ್ಳ ಒಂದು ಹೊದಿಕೆ ಹೊದ್ದು ಕೊಂಡಿರುವಾಗ ಅದನ್ನು ಶೀತವಾಗಲೀ—ಹಿಮ ಗಾಳಿಯೂಗಲೀ ಬಾಧಿಸವು. ಶರೀರದ ಉಷ್ಣವನ್ನು ಉಳಿಸಿಕೊಳ್ಳಲು ಸದಾಯಕವಾದ ನೈಸರ್ಗಿಕ ನಿಯಮಗಳುಳ್ಳ ಅದರ ಶರೀರದಿಂದಾಗಿ ಧ್ರುವ ಕರಡಿಯು ವಿಶ್ವಪ್ರಖ್ಯಾತವಾಗಿದೆ.

ಶುಭ್ರವಾದ ಹಿಮಗಿರಿಗಳೆದೆಯಲ್ಲಿ ಧ್ರುವ ಕರಡಿಗಳೊಂದಿಗೇ ವಾಸಿಸುವ ಎಸ್ಕಿಮೋ ಜನರು ಈ ಪ್ರಾಣಿಗಳನ್ನು 'ನನ್ನೋಕ್' ಎನ್ನುವರು.

ಸಾಮಾನ್ಯವಾಗಿ ಹಿಂಡು ಹಿಂಡಾಗಿ—ಜತೆಯಾಗಿ ಇರುವ—ದಾಂಪತ್ಯ ಜೀವನ ಪ್ರೇಮಿ ಧ್ರುವ ಕರಡಿಗಳು ಮಾಂಸಾಹಾರಿಗಳು.

ಆ ಪ್ರದೇಶದಲ್ಲಿ ವಿಹರಿಸುವ ಸೀಲ್, ವಾಲ್ರಸ್ ಮುಂತಾದ ಜಂತುಗಳನ್ನು ಬೇಟೆಯಾಡಿ ಇವು ತಿನ್ನುತ್ತವೆ. "ಹಿಮಬಂಡೆ"ಗಳ ಮೇಲೆ ನಿಗೆಯುತ್ತಾ ವೇಗವಾಗಿ ಇವು ಓಡಬಲ್ಲವು. ಕೊಳ್ಳೆಯನ್ನೋಡಿಸಿ ಹಿಡಿದು ಅದನ್ನು ಹೊಡೆದೂ ಬಡಿದೂ ಕಡಿದೂ (ಕಚ್ಚಿಯೂ) ಕೊಂದು ತಿನ್ನುವವು. ಧ್ರುವ ಕರಡಿಗಳಿಗೆ ಬಲಿಷ್ಠವಾದ ಪಾದಗಳಿವೆ. ಉದ್ದ ಕಾಲುಗಳ ತ.ದಿದುಂಡಲ್ಲ ಚೂಪಾದ—ನೀಳವಾದ ಉಗುರುಗಳೂ! ಅಗತ್ಯ ಬಿದ್ದರೆ ಈಜಾಡಿಯೂ ಧ್ರುವ ಕರಡಿಗಳು ಮೀನನ್ನೂ ಬೇಟೆಯಾಡಬಲ್ಲವು. ವಾಲ್ರಸ್‌ನ್ನು ಹಿಡಿದು ಕೊಲ್ಲುವ ಮುನ್ನ ಉಗ್ರವಾದ ಹೋರಾಟಕ್ಕೆ ಧ್ರುವ ಕರಡಿ ಸಿದ್ಧವಾಗ ಬೇಕಾಗುತ್ತದೆ. ಮೀನು ಮತ್ತಿತರ ವಸ್ತುಗಳನ್ನು ತಿಂದು ವಿರಮಿಸುವ ವಾಲ್ರಸ್‌ಗಳು ಏನಾದರೂ ಕೆರಳಿದನಿಯನ್ನಾದರೂ ಸೂಕ್ಷ್ಮವಾಗಿ ತಿಳಿದು ಆತ್ಮರಕ್ಷಣೆಗಾಗಿ ಮಂಜುಗಟ್ಟೆದ ಅಥವಾ ತೆಳ್ಳಗಿನ ನೀರಿಗೆ ಹಾರಿ ತಪ್ಪಿಸಲೆತ್ನಿಸುವವು. ಆದ್ದರಿಂದ ನಿಶ್ಶಬ್ದವಾಗಿಯೇ ಕೊಳ್ಳೆಯನ್ನು ಬೇಟೆಯಾಡಲು ಹೊರಟ ಧ್ರುವಕರಡಿ ಕೊಳ್ಳೆಯನ್ನು ಹಿಡಿದ ಬಳಿಕ ಗರ್ಜಿಸಿಕೊಂಡೇ ಅದನ್ನು ಕೊಲ್ಲುತ್ತದೆ. ಹಿಡಿತದಿಂದ ತಪ್ಪಿಸಿ ನೀರಿಗೆ ಹಾರಿ ತಪ್ಪಿಸುವ ಕೊಳ್ಳೆಯನ್ನು ಧ್ರುವಕರಡಿ ಹಿಂಬಾಲಿಸಿ ಕೊಳ್ಳೆಯ ತಲೆಗೇ ಬಡಿದು ಕೊಲ್ಲುತ್ತದೆ.

ವಿಶಿಷ್ಟ ಸ್ವಭಾವ

ಕರಡಿ ವರ್ಗಗಳ ಪೈಕಿ ಧ್ರುವಕರಡಿಯದು ವಿಶಿಷ್ಟ ಸ್ವಭಾವ. ವಿಕ್ಕಿ ಕರಡಿಗಳು ಶತ್ರುವನ್ನು ಹಿಡಿದು ತಲೆ ಬಗಿದು ಕೊಲ್ಲಲೆತ್ನಿಸುವಾಗ ಧ್ರುವಕರಡಿಗಳು ಶತ್ರುವನ್ನು ಕಚ್ಚಿ ತುಂಡರಿಸಲೆತ್ನಿಸುವವೆನ್ನಲಾಗಿದ್ದು ನೀಳವೂ ಹರಿತವೂ ಇರುವ ಹಲ್ಲುಗಳನ್ನೂ ಬಲಯುತವಾದ ದವಡೆಯೆಲುಬುಗಳನ್ನೂ ಪ್ರಯೋಗಿಸಿ ಶತ್ರುವಿಗೆ ಮಾರಕವಾದ ಗಾಯಗಳನ್ನುಂಟುಮಾಡಲು ಧ್ರುವಕರಡಿ ಸಮರ್ಥವಾಗಿದೆ. ಕೊಳ್ಳೆಯು ಸಂಪೂರ್ಣ ಸತ್ತ ಬಳಿಕವೇ ಅದನ್ನು ಧ್ರುವಕರಡಿ ತಿನ್ನಲಾರಂಭಿಸುವುದು. ಅಷ್ಟರ ತನಕವೂ ಕೊಳ್ಳೆಯು ಚಿತ್ರಹಿಂಸೆಗೊಳಗಾಗಿರುವುದು ಧ್ರುವಕರಡಿಗೆ ವಿನೋದ.

ಮಿಕ್ಕ ಕರಡಿಗಳಿಗಿಂತಲೂ ಆಕರ್ಷಕ ರೂಪು ಭೀಮಾಕಾರ—ಇರುವ ಧ್ರುವಕರಡಿಗೆ "ಧ್ರುವ ಪ್ರದೇಶದ ಏಕಚ್ಛತ್ರಾಧಿಪ"ನೆಂಬ ಬಿರುದು ಸಲ್ಲುತ್ತದೆ.

ಹೇಮಂತ ಕಾಲದಲ್ಲಿ ಧ್ರುವಕರಡಿಗಳು ಕಿದ್ರಿಸುವುದೇ ಇಲ್ಲವೆಂಬುದು ಮತ್ತೊಂದು ವೈಶಿಷ್ಟ್ಯ. ಮುಂದಿನ ತಿಂಗಳುಗಳಿಗಿರುವ ಆಹಾರ ಸಂಗ್ರಹಣಾ ಕಾರ್ಯದಲ್ಲಿ ಗಂಡು ಕರಡಿಗಳು ತೊಡಗಿರುವಾಗ ಹೆಣ್ಣು ಕರಡಿಗಳು 'ಮಂಜುಗಡ್ಡೆಗಳನ್ನು ಕೊರೆದು 'ಸುರಂಗ ಭವನ' ನಿರ್ಮಾಣ ಕಾರ್ಯ ಪ್ರಾರಂಭಿಸುತ್ತವೆ. ಇಂತಹ ಸುರಂಗ ಭವಗಳಲ್ಲಿ ಆಹಾರ ಸಂಗ್ರಹ, ಮರಿಗಳನ್ನು ಹೆರುವುದು ಮತ್ತು ಸಾಕುವುದು. ಮರಿಗಳೂ ಹೆತ್ತವರಂತೆಯೇ ಬಿಳಿ ವರ್ಣದವಾಗಿರುವವು. ಚಿಕ್ಕಂದಿನಿಂದಲೇ ಅಲ್ಲಿನ ಹವೆಯಿಂದ ರಕ್ಷಣೆ ಹೊಂದಲು ಅಭ್ಯಾಸ ಮಾಡುವ ಈ ಮರಿಗಳಿಗೂ "ರೋಮ ಪೋಷಾಕು"ಗಳು ಪ್ರಕೃತಿದತ್ತವಾಗಿರುವವು.

ಕೆಲವು ಸಂದರ್ಭಗಳಲ್ಲಿ ಸತ್ತು ತೀರದ ಸಮೀಪ ಬಿದ್ದಿರುವ ತಿಮಿಂಗಿಲ ಮತ್ತಿತರ ಭೀಮಾಕೃತಿಯ ಮೀನುಗಳು ಇವಕ್ಕೆ ಸಿಗುತ್ತವೆ. ಆಗಲೇ ಧ್ರುವ ಕರಡಿಗಳಿಗೆ ಹಬ್ಬದ ಔತಣ—ಸಡಿಕಾರ ಭೋಜನ ಪದ್ಧತಿ.

ಇವಕ್ಕೂ ಶತ್ರುಗಳು!

ಇಷ್ಟು ಕ್ರೂರವಾದ ಧ್ರುವಕರಡಿಗಳಿಗೂ ಮನುಷ್ಯನೇ ಶತ್ರು! ಎಸ್ಕಿಮೋ ಜನರು ತಮ್ಮ ಚೂಪಾದ ಆಯುಧಗಳನ್ನೆಸೆದು ಧ್ರುವಕರಡಿಗಳನ್ನೂ ಬೇಟೆಯಾಡುವಾಗ ಸುಧಾರಿತ ಮನುಷ್ಯನು ಕೋವಿಯನ್ನು ಪಯೋಗಿಸಿ ಬೇಟೆಯಾಡುವನು. ಎರಡೂ ವರ್ಗಗಳ ಮನುಷ್ಯರ ಉದ್ದೇಶ ಸಮಾನವಾದದ್ದು. ಧ್ರುವಕರಡಿಗಳ ಚರ್ಮ ಎಲ್ಲರಿಗೂ ಬೇಕು!

ರೋಮಸಹಿತ ಇರುವ ಧ್ರುವಕರಡಿಯ ಚರ್ಮಕ್ಕೆ ಆಕರ್ಷಣೀಯ ಬೆಲೆ ಮತ್ತು ಬೇಡಿಕೆ.

ಶ್ರೀಮಂತ ಯುವಕ-ಯುವತಿಯರೂ ಸಿನೆಮಾ ತಾರೆಯರೂ ಸಾಮಾನ್ಯವಾಗಿ ಉಪಯೋಗಿಸುವ "ಫರ್ ಕೋಟು"ಗಳು ಹಿಮಕರಡಿಯಿಂದ ಪ್ರತ್ಯೇಕಿಸಲ್ಪಟ್ಟ ಸಂಸ್ಕರಿಸಲ್ಪಟ್ಟವುಗಳು. ಧ್ರುವಕರಡಿಯ ಚರ್ಮದಿಂದ ಇತರ ತೊಡಿಗೆಗಳನ್ನೂ ನಿರ್ಮಿಸುವರು.

(ಸಂಗ್ರಹ)

ಕಡಿಮೆ ವೆಚ್ಚದಲ್ಲಿ ಹೆಚ್ಚು ಸಂರಕ್ಷಣೆ

L.T.-L.K.

ಮೋಟಾರ್ ಸ್ಟಾರ್ಟರ್

ದೇಶದಲ್ಲಿ ಬಡೆದ ಬರಗಾಲದಿಂದಾಗಿ ರೈತರಿಗೆ ನೀರಾವರಿಯವರಲ್ಲಿ ಬಾವಿತೋಡಲ್ಲೂ ವಿದ್ಯುತ್ತಿರುವಲ್ಲಿ ಪಂಪು ಸೆಟ್ಟುಗಳನ್ನು ಸೂರೈಸಲು ಸರಕಾರವು ಗಮನ ಕೊಟ್ಟಿದೆ. ರಾಜ್ಯ ಸರಕಾರಗಳು ನೀರಾವರಿಗೆ ವಿದ್ಯುತ್ ಪಂಪುಗಳನ್ನು ಕೊಳ್ಳಲು ಸಹಾಯ ನೀಡಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಬಾಗಿ ಬ್ಯಾಂಕು ಚಿಕ್ಕ ಹಿಡುವಳಿದಾರರಿಗೂ ಕೈಪುಷ್ಟನ್ನೆ ಹೆಚ್ಚಿಸಲು ಸಾಲ ನೀಡುವುದಕ್ಕೂ ಆರಂಭ ಮಾಡಿದೆ.

ದೇಶದ ನೂರಾರು ರೈತರು ಪಂಪು ಸೆಟ್ಟುಗಳನ್ನು ಬಳಸ ಬಲ್ಲವರಾದರೂ ಉಪಯೋಗಿಸಲು ಹೆದರುತ್ತಾರೆ. ಪಂಪಿನ ಮೋಟಾರುಗಳು ಸಕ್ಕನೆ ಸುಟ್ಟು ಹೋಗುತ್ತಿರುವುದನ್ನವರು ಕೇಳುತ್ತಿರುವುದೇ ಇದಕ್ಕೆ ಮುಖ್ಯ ಕಾರಣ. ಹರಿಯುವ ವಿದ್ಯುಚ್ಛಕ್ತಿಯು ಏರಿಳಿತದಿಂದ ಮೋಟಾರುಗಳು ಸುಟ್ಟುಹೋಗಬಹುದು. ಇದನ್ನು ತಪ್ಪಿಸುವ ಸಾಧನವೊಂದಿದೆ. ಅದು ಮೋಟರ್ ಸ್ಟಾರ್ಟರ್. ಪಂಪು ಸೆಟ್ಟಿನೊಡನೆ ಈ ಮೋಟರ್ ಸ್ಟಾರ್ಟರ್‌ನ್ನು ಜೋಡಿಸುವುದಕ್ಕೆ ತುಂಬ ವೆಚ್ಚವು ಬರುವುದು.

ಈ ಜೋಡನೆಯನ್ನು ಸುಲಭ ಮತ್ತು ಸರಳ ಹಾಗೂ ಅಗ್ಗವಾಗಿಸಲು 'ಲಾರ್ಸನ್ ಆಂಡ್ ಟೂಬ್ರೋಲಿಮಿಟೆಡ್' ಇವರು ಹೊಸಕೊಂದು ನೀರಾವರಿ ಪೆನಲನ್ನು ಸಿದ್ಧಪಡಿಸಿದ್ದಾರೆ. ಇದನ್ನು ಜೋಡಿಸಲು ಪ್ರತ್ಯೇಕ ಪಂಪ್ ಕೋಣೆ ಬೇಕಾಗಿಲ್ಲ. ಮೈದಾನ ಜಾಗದಲ್ಲಿಯೂ ಇದನ್ನು ಸ್ಥಾಪಿಸಬಹುದು.

LT-LK ಬ್ರಾಂಡಿನ ಈ ಉತ್ಪಾದನೆಯು ಈ ವಾರದಿಯ ತಯಾರಿಕೆಗಳಲ್ಲಿ ಭಾರತದಲ್ಲಿಯೇ ಮೊತ್ತ ಮೊದಲನೆಯದು. ಇದರಲ್ಲಿ ಒಂದು ಫ್ಯೂಸ್ ಬಾಕ್ಸ್ ಮತ್ತೊಂದು ಐಸೊಲೇಟರ್ ಇವೆ. ಐಸೊಲೇಟರ್ ಹಿಲ್-ಆಫ್ ಸ್ವಿಚ್ಚಾಗಿದ್ದು ಫ್ಯೂಸಿಗೆ ಬಲಪಡಿತ್ತದೆ. ಫ್ಯೂಸ್ ಬಾಕ್ಸಿನಲ್ಲಿಮೂರು ಫ್ಯೂಸ್‌ಗಳಿದ್ದು, ಶಕ್ತಿ ಸರಬರಾಯಿಯ ಏರಿಳಿತಗಳನ್ನು ತಡೆದು ಸ್ಥಾವರ ಕೆಡದಂತಿಡಿಸ ಬಲ್ಲದು. ಈ ಸ್ಟಾರ್ಟರುಗಳು ಪಂಪ್‌ಸೆಟ್ಟಿನ ಅಶ್ವ ಬಲಕ್ಕನುಸಾರ ನಾಲ್ಕು ಮೋಡಲ್‌ಗಳಲ್ಲಿದೆ.

ಈ ನೀರಾವರಿ ಪೆನಲ್ ಮೇಲು ಉಕ್ಕಿನಿಂದ ತಯಾರಾಗಿದ್ದು ನುಣುಪಾಗಿದೆ. ಹಿಂದಿನ ತಗಡು ಪೆಲ್ ಮೊಡಿದ್ದು ಮುಂದಿನದು ಹಿಂಜಿದ ಬಾಗಿಲುಗಳು. ಇನ್ಸುಲೇಟರ್‌ನಲ್ಲಿ ಒಳಬೀಗ್ಗ ಪೂರೈಕೆಯಾಗುವುದನ್ನು ಸಂಕೇತಿಸುವ ದೀಪವಿದೆ. ಸಾಡ್‌ಲಾಕ್ ಅಕ್ಕಮ ಪೂರೈಕೆಯನ್ನು ತಡೆಯಲು ನೆರವಾಗಿದೆ.

ನಾಲ್ಕು ಮೋಡಲ್‌ಗಳಲ್ಲಿ ದೊರೆಯುವ ಈ LT-LK ನೀರಾವರಿ ಪೆನಲ್‌ನ ಬೆಲೆ ರೂ. ೩೯೦ರಿಂದ ರೂ. ೬೭೦ರ ವರೆಗಿದೆ. ವಿದ್ಯುತ್ ಪಂಪು ಸೆಟ್ಟುಗಳಿಗೆ ಈ ಮೋಟರ್ ಸ್ಟಾರ್ಟರುಗಳು ಉತ್ತಮ ಸಂರಕ್ಷಕಗಳಾಗಿವೆ.

ವಿವಾಹ ಸಮಾರಂಭಗಳು

ಮಂಗಳೂರು ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿ ಇವರ ಪುತ್ರಿ ಸಾ|ಉಷಾ ಕುಮಾರಿಯನ್ನು ಶ್ರೀ ಅಡೆಕಳ ರಾಮಯ್ಯ ನಾಯ್ಕರ ಪುತ್ರ ಶ್ರೀ ಮದನ ಮೋಹನ ನಾಯ್ಕರು ತಾ. 17-3-68ರಂದು ಮಂಗಳೂರು ಟೌನ್ ಹಾಲಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು. ಈ ಸಮಾರಂಭಕ್ಕೆ ಬಹು ಸಂಖ್ಯೆಯಲ್ಲಿ ಬಂಧುಮಿತ್ರರು ಆಗಮಿಸಿ ಪಧೂವರರನ್ನು ಆಶೀರ್ವದಿಸಿದ್ದರು. ಮೈಸೂರು ಸರಕಾರದ ಗೃಹಸಚಿವ ಶ್ರೀ ಆರ್. ಎಂ. ಪಾಟೀಲರೂ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ| ಕೆ. ನಾಗಪ್ಪ ಆಳ್ವರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶ್ರೀ ಎಸ್. ಮುಕುಂದ ರಾವ್, ಎಂ. ಎಲ್. ಸಿ. ಇವರ ಪುತ್ರಿ ಕುಮಾರಿ ಅರುಣ ಇವರನ್ನು ಶ್ರೀ ಮೇಗಿನಪೇಟೆ ನರಸಿಂಹ ಹರಿ ರಾಮತರ ಪುತ್ರ ಶ್ರೀ ವಾಸುದೇವ ರಾಮತರು ತಾ. 17-3-68 ರಂದು ಮಂಗಳೂರು ಬಸೆಂಟ್ ಕಾಲೆಯಲ್ಲಿ ವೈಭವದಿಂದ ವಿವಾಹ ಮಾಡಿದರು.

ಸ್ಮರಣೆ

ಯದುಕುಲ ತಿಲಕ ಪಾಂಚಜನ್ಯಧಾರಿ
ಸಾಧುಶೀಲ ಚಾಲಕ ಪಂಚತತ್ವಸ್ಫುರಿ
ಭಕ್ತಜನ ರಂಜಕ ಯೋಗಿ ಭಾವಧಾರಿ
ಮುಕ್ತ ಮನಭಾವುಕ ನಾಮ ಏಕಾಕ್ಷರಿ

ಕವಿದಿಹ ಕತ್ತಲೆ ಕರುಣೆಯ ಕಿರಣ
ಮನ ಮಾಯಾ ಬಂಧನ ಶ್ರೀಘ್ರನಿವಾರಣ
ಅಗಣಿತ ಗುಣಗಣ ತೋರೋ ಹೃನ್ಮಣಿ
ಮನಮಂದಿರೋದ್ಭಾಸಿಪವಿರೋ ಹೃನ್ಮಣಿ

ಗಾನವ ಹಾಡುತ ಧ್ಯಾನವ ಮಾಡುತ
ಕಾಣಲು ಬಯಸುವೆ ನಿನ್ನನು ದೇವಾ
ಅರಿಯಲಬಾನು ತವ ಘನ ಭಾವಾ
ಮರ್ಧನ ಮನಮದ ಪ್ರಭೋರಾಧಾಕಾಂತ

ಬಾಲನು ನಾನು ಜನನಿಯ ರೂಪದಿ
ಪಾಲನ ಮಾಡೇ ಭಕ್ತಿ ರಸ ಜೇನದಿ
ಸ್ನಾನವ ನೀಡೋ ಕರುಣೋದಕದಿ
ಪಾಸಿಗೆ ಹಾಸು ಭಕ್ತಿಯೋಗ ಮನದಿ

—ಆರ್. ಎಲ್. ನಾಯಕ್,
ಬೆಂಗಳೂರು.

ಪ್ರಕಟಣೆ

ತಾ. 15-2-68ರಲ್ಲಿ ಕಾಸು ಮಂಜುನಾಥ ನ್ಯಾಕರು ಬಾಂಗಾಳದಲ್ಲಿ ಒಬ್ಬ ಅಪರಿಚಿತ ಜನದ ಹತ್ತಿರ ಕಾಸು ಅಬ್ದುಲ್ ರಜಾಕ ಸಾಹೇಬರಿಗೆ ಡಿಲಿವರಿ ಕೊಡಲು ಕಳುಹಿಸಿದ Eastern Star Cycle Frame No. E. 15196, Green colour ದಪ್ಪ ಪಟ್ಟಿ ಕ್ಯಾರಿಯರ್ ಇದ್ದುಗೇರ್ ಶೇಪ್ ಲೈಟ ನಂಬರ್ F(S)ದ ಸೈಕಲನ್ನು ಹಿಡಕೊಂಡು ಹೋದ ಜನ ಮತ್ತು ಸೈಕಲು ಕಾಣದಾಗಿದೆ. ಪತ್ತೆ ಮಾಡಿಕೊಟ್ಟವರಿಗೆ ಸೈಕಲಿನ ಅರ್ಧ ಕ್ರಯದಷ್ಟು ಬಹುಮಾನ ಕೊಡಲಾಗುವುದು.

ಕೆ. ಮಂಜುನಾಥ ನ್ಯಾಕ, ಕಾಸು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. 80/1954: R. I. A. 486/1960
Execution Case No. 44/1967.

ಅಣ್ಣಪ್ಪ ಶೆಟ್ಟಿ — ಅರ್ಜಿದಾರ.
ಮತ್ತು
ಮಂಜಯ್ಯ ಶೆಟ್ಟಿ ಕೊಡಾ —ಎದ್ರಿರು
ಇವರೊಳಗೆ

ಎದ್ರಿರು:—

1) ಮಂಜಯ್ಯ ಶೆಟ್ಟಿ ಮಂಜಮ್ಮ ಶೆಟ್ಟಿರ
6) ಹಿರಿಯಣ್ಣ ಶೆಟ್ಟಿ ಮಕ್ಕಳು.
10) ವನಜ ಶೆಟ್ಟಿ—ಮೂಕಮ್ಮ ತಡ್ತಿ ಮಗಳು.

(1)ನೇಯವನು ಕುಂದಾಪುರ ತಾಲೂಕು ಬೇಳೂರು ಗ್ರಾಮದವನಲ್ಲಿಯೂ, (6) ಮತ್ತು (10)ನೇಯವರು ಉಪ್ಪಿ ತಾಲೂಕು ನೆಡೂರು ಗ್ರಾಮದವನಲ್ಲಿಯೂ ಇರುವವರು—ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ಅಮಲ್ದಾರಿಗೆ ಕಾರಣವಾದ ಪಾರ್ಟೀಶನ್ ಸ್ಟಿಲಿಮಿನರ ವ ಪ್ರೈನಲ್ ಡಿಕ್ರಿ ಪ್ರಕಾರ ಅರ್ಜದಾರನ ಹಿಸಗೆ ನಿಂಗಡಿಸಲ್ಪಟ್ಟ ಸ್ವಿರಾಸ್ತಿಗಳನ್ನು ಡಿಲಿವರಿ ಅಪೇಕ್ಷಿಸಿ ಅರ್ಜದಾರನು ದಾಖಲು ಮಾಡಿದ ಸದ್ರಿ ಅಮಲ್ದಾರಿಯು ತಾರೀಖು 28—3—1968ಕ್ಕೆ ಇಟ್ಟಿರುತ್ತದೆ. ಆ ಕಾರಣ ಶಿವಮಗೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿನ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜ್ಞಾಪಿಸಿ ಮಾಡಿಕೊಳ್ಳಬೇಕು—ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ನಿಮ್ಮ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟಿನ ಹುಕುಂ ಪ್ರಕಾರ)

K. Balachandra Rao,
Advocate for Petitioner.

Udipi, 16—3—1968.

ಹೊಸ ಬಾಳು

(ಎರಡನೇ ಸುಟದಿಂದ)

ಬೇಗ ಈ ಲೋಕವನ್ನೇ ಬಿಟ್ಟು ಹೋಗಬೇಕೆಂಬ ಮನಸ್ಸಾಗ ಹತ್ತಿದೆ.

'ನಿನ್ನ ಹೆಸರೇನು? ಜಾತಿ ಯಾವುದು? ಹುಟ್ಟೂರಾವುದ? ಯಾರ ಮಗ ನೀನು?' ಎಂದು ಕೇಳುವ ತುದಿ ಮೊದಲಿಲ್ಲದ ಪ್ರಶ್ನೆಗಳಿಗೆ ಯಾವ ಉತ್ತರವನ್ನು ಕೊಡಲಿ ನಾನು?

ನಾನಂದು ಹುಟ್ಟಿದಾಗಲೇ ನನ್ನ ಕತ್ತು ಹಿಚುಕಿ ಕೊಂದಿದ್ದರೆ ನಾನೀಗ ಈ ಅವಮಾನ ಸಹಿಸಬೇಕಾಗಿರಲಿಲ್ಲ. ಹೆತ್ತ ಮಕ್ಕುವನ್ನು ಕರುಣೆಇಲ್ಲದೆ ಬಿಟ್ಟು ಹೋಗುವ ಆ ನನ್ನ ತಾಯಿ ಅದೇಕೆ ಹಾಗೆ ಮಾಡಿಲ್ಲವೋ ನಾಕಾಣೆ.

ಆದರೆ ಆಗಾಗ ಎಲ್ಲರಂತೆ ಈ ಪ್ರಪಂಚದಲ್ಲಿ ನನಗೂ ಅಪ್ಪ ಅಮ್ಮ ಇದ್ದಾರೆಂಬ ಭಾವನೆ ಬರುವುದು. ಅದರವರು ಯಾರೆಂದು ತಿಳಿಯದ ಹತಭಾಗ್ಯ ನಾನೆಂದೆನಿಸುವಾಗ ಮಾತ್ರ ಗಂಗಾ ಪ್ರವಾಹದಂತೆ ಕಣ್ಣೀರು ಮೇಲಕ್ಕಿ ಬರುವುದು.

ಎಲ್ಲರಂತೆ ನನಗೂ ಅಪ್ಪ ಅಮ್ಮ ಇರುತ್ತಿದ್ದರೆ ನಾನಿಂದು ಬೀದಿಬೂಗುಳಿಯುತ್ತಿದ್ದಿಲ್ಲ. ಕಂಡವರ ಕುಹಕ ನುಡಿ ಕೇಳಬೇಕಾಗಿದ್ದಿಲ್ಲ ಹೆರವರ ಮನೆ ಬಾಗಿಲಲ್ಲಿ ಕೈಚಾಚಿ ನಿಲ್ಲಬೇಕಾಗಿದ್ದಿಲ್ಲ. ಕೊಳಕು ಚಿಂದಿ; ದಂಳಿನ ಹಾಸಿಗೆಯೂ ನನ್ನ ಸಂಪತ್ತಾಗುತ್ತಿದ್ದಿಲ್ಲ.

ಆದರೀಗ ನನ್ನೀ ದುಃಖವನ್ನು ಯಾರೊಡನೆ ತೋಡಿಕೊಳ್ಳಲೆಂಬುದೇ ತಿಳಿಯುತ್ತಿಲ್ಲ. ನನ್ನ ಬಗ್ಗೆ ಕನಿಕರ ತೋರಿದವರಾರನ್ನೂ ನಾನಿವರೆಗೆ ಕಂಡಿಲ್ಲ. ಮುಂದಿನ್ನು ಕಾಣುವೆನೆಂಬ ಆಶೆಯೂ ನನಗುಳಿದಿಲ್ಲ.

ಯಾರಿಂದಲೂ ಪ್ರೀತಿಸಲ್ಪಡದ ಯಾರಿಗೂ ಬೇಡವಾದ ನಾನಿನ್ನು ಯಾಕೆ ಬದುಕ ಬೇಕು? ನನ್ನವರೆಂಬುವರಾರೂ ಈ ಪ್ರಪಂಚದಲ್ಲಿಲ್ಲದ ಮೇಲೆ ವಾತ್ಸೇಕೆ ನಾ ಘುಳಿಯಲಿ? ನಾಘುಳಿದು ಯಾವ ಪುರುಷಾರ್ಥ ಸಾಧಿಸಲಿಕ್ಕಿದೆ? ಹಾಗೆಂದು ಮರಣವೇನು ನೆನಸಿದಾಕ್ಷಣ ಒದಗಿ ಬರಲಾರದೆಂಬುದೂ ಖಂಡಿತ.

ಸಾವಿಗೆ ಮರಣ ಸಮೀಪಿಸಲು ವಯಸ್ಸೂ ಆಗಿಲ್ಲ. ಕಾಯಿಲೆಯೂ ಕಾಣುತ್ತಿಲ್ಲ.

ಆದರೆ ನನಗೆ ಮತ್ತೀ ಜಗತ್ತಿನಲ್ಲಿ ಬದುಕ ಬೇಕೆಂಬಾಸೆ ಲವಲೇಶವೂ ಉಳಿದಿಲ್ಲ. ಹಾಗೆಂದು ಮರಣ ತಂದುಕೊಳ್ಳುವ ಉಪಾಯವಂದರೆ ಆತ್ಮಹತ್ಯೆಯ ಹೊರತು ಅನ್ಯದಾರಿ ಕಾಣಲಾರದು. ಚಿಕ್ಕ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಮಹಾ ಪಾಪ ಎಂದೆನ್ನುವ ಮಂತಿಗಳಾದರೂ ನನ್ನ ನೆಂದಿಗೂ ಬರುವುದು ತೀರಾ ಅಸಂಭವ.

ಹಾಗಿರುವಾಗ ನಾನೇಕೆ ಹಿತೋಪದೇಶವ ಘಡಿಸುತ್ತ ಮನ ಹರಿಸುವುದು? ನೆನೆಸಿದ ನಿರ್ಧಾರ ಹಿಂತೆಗೆಯದೆ ಅದನ್ನು ಬೇಗ ಈ ಪ್ರಪಂಚದಿಂದ ಸಾಗಿ ಹೋಗುವ ದಾರಿ ಕುಡುಕಿಕೊಳ್ಳಬೇಕು.

೦೦ ೧೦ ೦೦

ಅಮಾವಾಸ್ಯೆಯ ಕಾರಿರುಳು ಆತ್ಮಹತ್ಯೆ ಮಾಡಿಕೊಳ್ಳುವವರಿಗೆ ಕಾದು ಕುಳಿತಂತಿದ. ಇಲ್ಲವಾದರ ಲೋಕವನ್ನೆಲ್ಲಾ ತನ್ನ ಕಪ್ಪುನಾಲಗೆಯಿಂದ ಕಬಳಿಸಿ ಕುಳ್ಳಿರತ್ತಿದ್ದಿಲ್ಲ. ಬದುಕಬೇಕೆಂಬುವವರಿಗೆ ಅಂದಿನ ರಾತ್ರಿ ಧೈರ್ಯವನ್ನೇ ತೋರುವಂತಿತ್ತು.

ಆಗಸದಲ್ಲಿ ಬೆಳಗುವ ನಕ್ಷತ್ರಗಳ ಕ್ಷೀಣ ಕಿರಣ ಭೂದೇವಿಯನ್ನು ಚುಂಬಿಸಲು ಹಾತೊರೆದು ಕಾದದ್ದು ವ್ಯರ್ಥವೆನ್ನಿಸುವಂತೆ ಮಾಡಿತ್ತು. ಅಂದಿನ ರಾತ್ರಿ.

ಎದೆ ನಡುಗಿಸುವ ಕರಾಳ ರಾತ್ರಿಯಲ್ಲಿ ಗೂಗೆಗಳ ಕೂಗಿನ ಹೊರತು ಮತ್ತಾವ ಸದ್ದೂ ಕೇಳಿ ಬರುತ್ತಿದ್ದಿಲ್ಲ.

ಆ ಕಗ್ಗತ್ತಲಲ್ಲಿ ದೇವೀ ಕೊಳದ ಕೆರೆಯ ತೊರೆಕೆಗೆ ಶಾಂತವಾಗಿತ್ತು. ಆದರೆ ಅದರ ಇತಿಹಾಸ ಬಲ್ಲವರಾರೂ ಹಾಗೆಂದು ಹೇಳಲಾರರು.

ಅಮಾವಾಸ್ಯೆಯ ದಿನ ರಾತ್ರಿ ಅತ್ತ ಸುಳಿಯುವುದಿರಲಿ; ಅದರ ಹೆಸರು ಹೇಳಲೂ ಜನ ಹೆದರುತ್ತಿದ್ದರು. ಕಾರಣ ಅದು ಪ್ರೇತಗಳ ತವರೂರೆಂಬ ಭಾವನೆ ಅವರದ್ದಾಗಿತ್ತು.

ಅದೇ ಕೆರೆಯ ಬಳಿಗಾಗಿ ಆತ್ಮಹತ್ಯೆಗೆಂದು ಹೊಂಟಿದ್ದನಂದು ರವಾಳಾಂತ. ಅವನ ಬರುವಿನ ನಡಿಗೆ ಬೇರಾವ ಆಲೋಚನೆಗೂ ಎಡೆಮಾಡಿ ಕೊಟ್ಟಿದ್ದಿಲ್ಲ.

ಆದರೆ ಕೆಡೆ ಮುತ್ತಿದ್ದವನಿಗಾಗ ಕೆರೆಯ ಬಳಿ ಕಾಲಿಗೆಡವಿದ ಸೊಕ್ಕು ಮುಗ್ಗರಿಸುವಂತೆ ಮಾಡಿದಾಗ ಒಮ್ಮೆಲೆ ನಾವರಿಸಿ ನಿಂತನು.

ಪುನಃ ಕಾಲಲ್ಲೊಮ್ಮೆ ತಡವಿ ನೋಡುವಾಗ ಮೃದುವಾಗಿ ಕಂಡಿತು. ಕೂಡಲೇ ಕುಳಿತು ಕೈಯಿಂದ ಮುಟ್ಟಿನೋಡಿದನು.

ಆಗವನಿಗೆ ಅದು ಒಂದೋ ಶವವಿಂಬೇಕೆಂದು ತಿಳಿಯಲು ತಡವಾಗಲಿಲ್ಲ.

ತನ್ನಂತೆಯೇ ಜೀವನದಲ್ಲಿ ಜಿಗುಪ್ಸೆಗೊಂಡ ಬೇರಾರೋ ಆತ್ಮಹತ್ಯೆಮಾಡಿಕೊಂಡಿರಬಾರದೇಕೆ ಎಂಬ ಸಂಶಯವೂ ಮನೆಮಾಡಿತು. ಇಲ್ಲವಾದರೆ ಬೇರಾರೂ ಅಮಾವಾಸ್ಯೆಯ ದಿನದಂದು ಅತ್ತ ಸುಳಿಯುತ್ತಿದ್ದಿಲ್ಲ.

ಆಗಲೇ ಅವನ ಧೈರ್ಯ ಕುಸಿಯತೊಡಗಿತ್ತು. ಆದರೂ ಮತ್ತೊಮ್ಮೆ ತಡವಿ ನೋಡಿ ಹೊಗುನೆಂಬ ನಿರ್ಧಾರಕ್ಕೂಬಂದನು. ಮೂಗಿನ ಬಳಿ ಬೆರಳಿಟ್ಟು ನೋಡುವಾಗ ಬಿಸಿಯುಸಿರು ಕೈಗೆ ಸೋಂಕಿದಂತಾಗಿ ಇನ್ನೂ ಸತ್ತಿಲ್ಲವೆಂದು ತೀರ್ಮಾನಿಸಿದನ.

ಕ್ಷಣಕಾಲ ತಡೆದು 'ಅಮ್ಮಾ' ಎಂಬ ನರಳಿಕೆ ಅವನ ತೀರ್ಮಾನ ನಿಜವೆಂದು ನಿರ್ಧರಿಸಿತು. ಆಗವನು ಉಟ್ಟಬಟ್ಟೆಯಿಂದ ಗಾಳಿ ಬೀಸಲು ಮೊದಲು ಮಾಡಿದನು.

ಆಗವನಿಗೆ ಆ ಕತ್ತಲಿನಲ್ಲೂ ಅದಾವುದೋ ನೆರಳು ತನ್ನಬಳಿ ಸಾಗಿ ಹೋದಂತಾಗಿ ಮೈಯೆಲ್ಲಾ ಬೆವರಿತು. ಮೆಲ್ಲ ಕೇಳಿಬರುವ ನಡಿಗೆಯ ಸದ್ದು ಮನುಷ್ಯರದೆಂದು ಕಂಡಿತ. ಆಗ ತನ್ನೆಲ್ಲಾ ಧೈರ್ಯವನ್ನು ಕ್ರೋಢೀಕರಿಸಿ "ಯಾರದು?" ಎಂದನು ಗಟ್ಟಿಯಾಗಿ

ಅವನ ಪ್ರಶ್ನೆಗೆ ಉತ್ತರವದೆ ಕಲ್ಲುಕಟ್ಟೆಯ ಮೇಲೆ ಹೋಗಿ ನಿಂತದ್ದೆಮುಸುಕು ಮುಸುಕಾಗಿ ಕಂಡಿತು.

ಆಗವನಿಗೆ ಎಲ್ಲಿಲ್ಲದ ಧೈರ್ಯ ಬಂತು. ಹೆಗೂ ತಾನು ಆತ್ಮಹತ್ಯೆಗೆಂದು ಬಂದವನಿನ್ನೇಕೆ ಅಳುಕು. ಇದೇನೆಂದು ಪರೀಕ್ಷಿಸಿಯೇ ತೀರಬೇಕೆಂದು ಹಿಂದಿನಿಂದ ಹೋಗಿ ತನ್ನೆರಡು ಕೈಗಳಿಂದ ಗಟ್ಟಿಯಾಗಿ ಹಿಡಿದನು.

ತೋಳ ತೆಕ್ಕೆಯಲ್ಲಿರುವವನೊಬ್ಬ ಬಾಲಕನೆಂದು ತಿಳಿಯಲು ತಡವಾಗಲಿಲ್ಲ.'ನನ್ನನ್ನು ಬಿಟ್ಟುಬಿಡಿ' ಎಂದು ಅರಚಿದರೂ ಅವನನ್ನು ಬಿಡದೆ ಹಿಂದಕ್ಕೆಳೆದನಾಗ.

"ಯಾರ ಮಗು ನೀನು? ಇಲ್ಲೇಕೆ ಈ ಕೆಲಕ್ಕೆ ಮನ ಮಾಡಿದೆ?' ಎಂದು ಮೃದುವಾಗಿ ಕೇಳಿದ.

"ನಾನಾರೋ ನಮಗೆ ತಿಳಿಯದು. ಈ ಪ್ರಪಂಚದಲ್ಲಿ ನನಗಾರೂ ಇಲ್ಲ.' ಎಂದು ಬಿಕ್ಕಿ ಬಿಕ್ಕಿ ಅಳುವ ಬಾಲಕನ ಮೇಲೆ ಕರುಣೆ ಉದಯಿಸುತಿತ್ತು.

"ನಿನ್ನ ಹೆತ್ತಮ್ಮನಾದರೂ ಯಾರೆಂದು ಹೇಳು ಮಗ.'. ಎಂದನು.

'ಅಮ್ಮಾ...! ಎಂದು ಕರೆಯುವ ಭಾಗ್ಯ ನನಗಿದ್ದಿಲ್ಲ."

"ಪಾಪ ಚಿಕ್ಕಂದಿನಲ್ಲಿಯೇ ನಿನ್ನಮ್ಮನಾಗಿ ಹೋಗಿ'ಬೇಕು ಪಾಪ.' ಎಂದು ಕನಿಕರದಿಂದ ನುಡಿದನು.

"ಇಲ್ಲ ನನ್ನ ಅಮ್ಮ ಸತ್ತಿಲ್ಲ. ಅದರವಳಾರೆಂದು ಮಾತ್ರ ನನಗೆ ತಿಳಿಯದು." ಎಂದನಾಗ ಅಳುತ್ತಾ.

ಅವನ ಅಳುವಿಕೆಗೆ ಕಾರಣ ಆತ್ಮಹತ್ಯೆಗೆ ತಡೆಯೊಡ್ಡಿದೋ ಅಥವಾ ಹೆತ್ತಮ್ಮನ ನೆನಪೋ ಎಂಬುದನ್ನು ಮಾತ್ರ ಅವನಾಗ ಊಹಿಸಲಾದ.

ಆಗ ಮುಳಿದ ತಿಳಿ ಗಾಳಿಯಿಂದ ಎಚ್ಚೆತ್ತ ಹೆಂಗಸು 'ಮಗೂ! ಮಗ!' ಎಂದು ಕನವರಿಕುವಂತೆ ಕಂಡಿತು.

ಆ ತರೆ ತನ್ನಮ್ಮನದೆಂದು ಕಂಡಿತಾ ಬಾಲಕನಿಗೆ. ಆಗವನೂ 'ಅಮ್ಮಾ! ಅಮ್ಮಾ!' ಎಂದನು.

ಪುನಃ "ಮಗೂ! ಕಂದಾ! ಬಾ" ಎಂದು ಕರೆದಾಗ ತಾಯಿ ಬಳಿಗೋಡುವ ಕರುವಿನಂತೆ ಕಗ್ಗತ್ತಲಲ್ಲಿಯೂ ಅವಳನ್ನು ಗುರುತಿಸಿ ಮಡಿಲಲ್ಲಿ ಮುಖವಿಟ್ಟು ಅಳಹತ್ತಿದನ.

ರಮಾಕಾಂತನಾಗ ಅವರಾರೋ ತಾಯಿ ಮಕ್ಕಳೇ ಇರಬೇಕೆಂದು ಭಾವಿಸಿ ಯಾರಮ್ಮ ನೀನು? ಈ ಮಗುವನ್ನೇಕೆ ಅಗಲಿ ಬಂಡಿ ಹೇಳು?" ಎಂಬುದನ್ನು ಕೇಳಿದನಳಾಗ ಬೆಚ್ಚಿಬಿದ್ದು ಕೇಳಿದಳು: 'ನೀನಾರು ರಮಾಕಾಂತನಲ್ಲವೆ?' ಎಂದುದನ್ನು ಕೇಳಿ ಅವನೂ ಹೌದಾರಿ ಕೇಳಿದ.

'ನಾಗನೇಣಿ ಇದೇನು ನೀನಿಲ್ಲಿ?'

ಆಗ ಮೂವರೂ ತನ್ನ ತನ್ನ ಕರುಣ ಕಥೆಯನ್ನು ಹೇಳಿಕೊಂಡರು. ಆಗವರಿಗೆ ಅವನೇ ತಮ್ಮಿಬ್ಬರ ಪ್ರೇಮದ ಪ್ರತೀಕವೆಂಬುದು ತಿಳಿಯಿತು. ಹಕ್ಕಿಗಳು ಚಿಲಿಪಿಲಿ ಧ್ವನಿಯಿಂದ ಅವರ ಹೊಸ ಬಾಳಿಗೆ ಸ್ವಾಗತ ಬಯಸಿದುವು.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ಸಿಹಿತಿನಸು ಕಾಫೀಯುಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ವಿಶಾಲಾತ್ಮ ಹೊಟೆಲ್.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಹಂಚಲವಾದ ಮನಸ್ಸನ್ನು ಸುಭಕ್ತರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸಜ್ಜಾಯಿಗಳನ್ನೆಯೇ ತತ್ಪರವಾಗುವಂತೆ ಮಾಡುವುದೇ ಕೃತಿ

ಬೆಲೆ: 0-19 ಪೈಸೆ.

ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:-

ಪವಯುಗ ಪ್ರೆಸ್, ಉಡುಪಿ.

NAVAYUGA 21—3—1966
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನೆನಪಿನ ಮುಣಿಗಳು

— ೧ —

ದೇವರನ್ನು ನೇರಾಗಿ ಪ್ರೀತಿಸುವವನು ಶ್ರೇಷ್ಠನೋ, ಜನರನ್ನು ಪ್ರೀತಿಸುತ್ತ ಜನಸೇವೆ ಮಾಡಿಕೊಂಡು ದೇವರಗೊಡವೆ ಇಲ್ಲದವನು ಶ್ರೇಷ್ಠನೋ—ಎಂದು ಕೇಳಿದರೆ, ದೇವರನ್ನು ನೇರಾಗಿ ಪ್ರೀತಿಸಿ ಮಹಾ ಭಕ್ತನೆನಿಸುವುದು ಅವನೊಬ್ಬನ ಸ್ವಾರ್ಥಕ್ಕಾಯಿತೆಂದೇ ಹೇಳಬೇಕು. ಅದಕ್ಕಿಂತ ದೇವರ ಸೃಷ್ಟಿಯೂದ ಇತರ ಜೀವಿಗಳನ್ನೂ ಸಹೋದರ ಜನತೆಯನ್ನೂ ಪ್ರೀತಿಸುತ್ತ ಸೇವೆ ಪರೋಪಕಾರಗಳನ್ನು ಮಾಡುತ್ತ, ದೇವರ ಪ್ರೀತಿಯನ್ನು ಕೂಡಾ ಆ ಕಾರ್ಯಕ್ಕೇ ಬಳಸುತ್ತ ಇರುವವನೇ ಶ್ರೇಷ್ಠನೆಂದು ಹೇಳಬಹುದು. ಇಂಥವನಿಂದ ಇತರರೂ ದೇವರ ಭಕ್ತರಾಗುವಂತೆ ಮಾಡಬಹುದು. ಅದಾಗದಿದ್ದರೂ ಚಿಂತಿಲ್ಲ; ಇತರರಿಗೆ ಒಳಿತೇ ಮಾಡುವವನು ದೇವರಿಗೆ ಪ್ರೀತಿಯವನೇ ಆಗುತ್ತಾನೆ. ಅಣ್ಣತಮ್ಮಂದಿರು ಪರಸ್ಪರ ಪ್ರೀತಿಯಿಂದಿದ್ದರೆ ತಂದೆಗೆ ಎಷ್ಟು ಸಂತೋಷವಾಗುತ್ತದೋ ಹೇಳಲು ಸಾಧ್ಯವೆ? ಹಾಗಾಯೇ ದೇವರೂ ಅಂಥವನನ್ನು ತುಂಬ ಮೆಚ್ಚಿಕೊಂಡನು.

ಆದುದರಿಂದ ಒಬ್ಬನು ನಾಸ್ತಿಕನೆಂಬ ಮಾತ್ರಕ್ಕೆ ಅವನನ್ನು ಬಹಿಷ್ಕರಿಸಬೇಕಾಗಿಲ್ಲ. ಅವನಿಂದ ಇತರರಿಗೆ ಎಷ್ಟರ ಮಟ್ಟಿಗೆ ಒಳಿತಾಗುತ್ತದೆ? ಅವನ ಜ್ಞಾನವು ಯಾವ ರೀತಿಯಲ್ಲಿ ಹೊರ ಸೂಸುತ್ತಿದೆ—ಎಂಬುದರ ಮೇಲಿನಿಂದ—ಅವನ ಶ್ರೇಷ್ಠತ್ವ ಅಧಮತ್ವಗಳು.

ಒಳ್ಳೆಯ ಕಾರ್ಯ ಮಾಡುವವರೆಲ್ಲ ದೇವರಿಗೆ ಪ್ರೀತಿಯವರೇ.

ಹಿಂದಿನ ಭಕ್ತಿಯುಗಕ್ಕೂ ಇಂದಿನ ವಿಜ್ಞಾನಯುಗಕ್ಕೂ ವ್ಯತ್ಯಾಸವುಂಟು. ಇದು ಸಹಜ ವ್ಯತ್ಯಾಸವೇ. ದಿನ ಹೋದ ಹಾಗೆ ಬುದ್ಧಿ ಅರಳುತ್ತಾ ಬರುತ್ತದಲ್ಲವೇ?—ಹಾಗೆ ಬಂದ ವ್ಯತ್ಯಾಸವೇ ಇದು. (ಅದರೊಂದಿಗೆ ಅವನಿಗಿಂತ ತಾನು ಮೇಲಾಗಬೇಕೆಂಬ ಮೂಲ ಸ್ವಭಾವವು ಅಂಟಿಕೊಂಡೇ ಇರುವುದರಿಂದ ಬುದ್ಧಿವಂತಿಕೆಯ ಹೆಚ್ಚಳದ ಸ್ಪರ್ಧೆಯ ಅನರ್ಥವನ್ನು ಬದಿಗಿರಿಸಿ ನೋಡುವಾಗ) ಈಗ ಪ್ರತ್ಯಕ್ಷ ಪ್ರಮಾಣಗಳನ್ನೇ ನಂಬುವಂತಹ ಪರೀಕ್ಷಣಾ ದೃಷ್ಟಿ ಬಂದಿದೆ. ಹಿಂದಿನವರ ಅಂಧವಿಶ್ವಾಸ ಕುಂದಿದೆ. ಪ್ರತಿಯೊಂದನ್ನೂ ಪರೀಕ್ಷೆ ಮಾಡಿ ಏನು ಏಕೆ ಎಂಬ ಪ್ರಶ್ನೆಗಳೊಂದಿಗೆ ಪ್ರಮಾಣಪೂರ್ವಕ ಗೊತ್ತುಹಚ್ಚಿಕೊಳ್ಳುವ ವಿಜ್ಞಾನಯುಗವಿದು. ಸುಮ್ಮನೆ ಹೆಂಬುವುದು ಅಜ್ಞಾನ. ಉದಾಹರಣೆಗೆ ಮಡಿ ಮೈಲಿಗೆ, ಎಂಜಲು ಮುಸುರೆ ಮುಂತಾದುವುಗಳನ್ನು ಮೂಢತನದಿಂದ ಆಚರಿಸುವುದು ಅಜ್ಞಾನ. ಇವುಗಳಲ್ಲಿ ಅಡಗಿರುವ ಆರೋಗ್ಯ ಸ್ವೈರ್ಯ ಮುಂತಾದ ಸೂತ್ರಗಳನ್ನು ಕಂಡುಕೊಂಡು ಆಚರಿಸುವುದು ವಿಜ್ಞಾನ. ಸ್ನಾನ ಮಾಡಿದರೆ ಮಡಿಯೊಯಿತೆಂಬ ಅಜ್ಞಾನದಿಂದ ಸುಮ್ಮನೆ ಬುಳು ಬುಳು ಮಾಡಿಕೊಂಡು ಕೊಳೆ ಬಟ್ಟೆ ಉಟ್ಟುಕೊಂಡು ವರ್ತಿಸುವುದು ಅಜ್ಞಾನವಲ್ಲದೆ ಮತ್ತೇನು? ಒಳಗೂ ಹೊರಗೂ ಪರಿಶುದ್ಧವಾಗಿದ್ದು ವಿಜ್ಞಾನ ದೃಷ್ಟಿಯಿಂದ ಇತರರಿಗೆ ಒಳಿತಾಗುವಂತೆ ನಡೆದುಕೊಳ್ಳುವವನು ಸ್ನಾನ ಮಾಡಿದ ಪ್ರತ್ಯಕ್ಷ ಭಕ್ತನಂತೆ ಕಾಣದಿದ್ದರೂ ತತ್ವತಃ ಭಕ್ತನೇ ಆಗಿರುತ್ತಾನೆನ್ನಲು ಏನೂ ಅಡ್ಡಿಯಿಲ್ಲ.

—ಎಂ. ರಂಗರಾವ್

ಪ್ರತ್ಯಾಲೋಚನ
ಎಲ್ಲಾ ರೀತಿಯ ಸಿದಿತ ಪುಷ್ಟಿ ನೋವುಗಳ ಶಮನಕ್ಕೆ
೩೦ ವರ್ಷ ಪ್ರಾಯದ

ಸ್ವಾತಂತ್ರ್ಯ

ತೊಟ್ಟಿಲೊಳು ಮಲಗಿ
ಮರಗಟ್ಟಿಹುದು ದೇಹ,
ನರನರವು ಸೆಳೆ ಸೆಳೆದು,
ಜೊಂಪಿನಲಿ ತೂಗುತಿದೆ ಮಿದುಳು;
ಸಾಕು ಈ ಉಯ್ಯಾಲೆಯೊಟ,
ಈ ಕನಸು, ಈ ನಿದ್ರೆ, ಈ ಸ್ವಾತಂತ್ರ್ಯ
ತೋಳಿನಾಸರೆಗಾಗಿ ಬೇಡುತಿದೆ
ಹೃದಯ;
ಎಚ್ಚರಿಸು, ಎಚ್ಚರಿಸಿ ಎತ್ತಿಕೊಳೆನ್ನ,
ಅಪ್ಪು — ಮಂದ ಕನಸು!

ಮಂಜುಗಟ್ಟಿರುವ ತುಟಿಯ
ಮುತ್ತಿಕ್ಕಿ ಇಂಪಸದಿಂದ ಬೆಸೆದುಬಿಡು
ನಿನ್ನ ತುಟಿಗಳಿಗೆ;
ನಾಲಗೆಯ ಮಿಡಿದು ನುಡಿಸು
ನಿನ್ನ ರೂಪ ವೈಭವ,
ಹರಿದುಬಿಡು ಎನ್ನ ಬಂಧನವ
ಈ ಏಕಾಂತ ದೇಗುಲದಿಂದ;
ಬಂದಿಯಾಗಿರಿಸೆನ್ನ ನಿನ್ನೆದೆಯ ತುರಂಗದಲಿ
ಸಾಕು ಈ ತೊಟ್ಟಿಲಿನ ಉಯ್ಯಾಲೆ
ಸೆರೆಯಾಸರೆಯ ನೀಡು ನಿನ್ನತೋಳಿನಲಿ.

ಕನಸಿನಲಿ ಕರುಬುತಿಹ ಎನ್ನಿಚ್ಛೆರವ
ಕೆತ್ತು ನಿನ್ನಿಚ್ಛೆರಕೆ ಬೆಸೆ;
ಮಳೆವಿಲ್ಲ ತಂತಿಯಲ್ಲಿ ನಡೆಸಿ
ಸೆಳೆ ಎನ್ನ ನಿನ್ನೆದೆಗೆ.
ಸಾಕು ಈ ತೊಟ್ಟಿಲಿನ ಸ್ವಾತಂತ್ರ್ಯ,
ಸರಳುಗಳ ಹಿಂದೆ
ಈಡೆಯಿನ ಜಡ ವೈಭೋಗ!
ತೊಡಿಸು ನಿನ ಬಾಹುಗಳಶೃಂಖಲೆಯ
ನಕ್ಷತ್ರ ವೀಚಿಗಳ
ಗಡಿಯೊಳಗೆ
ಸುತ್ತಿಬಿಡು
ಜೀವ ಭಾವಗಳ!

ಕೆ. ಟಿ. ಗಟ್ಟಿ ಎಂ. ಎ. ಬಿ. ಎಡ್.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಡಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ನರ್ಸಿಂಗಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೆಗಿನ ವಿಧಾನ ಸರಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೈಸೆ ಬೇಕು)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಳ್ಳ ವೇಟೆಗಾರನಿಗೆ

ಟೆನೋಪಾಲ ಉಡುಪು ಬೆಳ್ಳಕ್ಕಿಹಾಂಗ
ಕಾಣಪ್ಪ ಒಡೆದ ಚೆಂದ
ಗುಣವಂತನಂತೆ ಕೈಮುಗಿದು ನಡೆ
ಭಾಷಣಕೆ ನೀನೆ ಮುಂದು!
"ನಾವೇನು ಕಡಿಮೆ" ಇತಿಹಾಸ ಹೇಳು
ಉರುಳಿಸು ನಿನ್ನ ಗಾಲಿ
'ಬುದ್ಧಬಸವರತತ್ವರಾಮರಹಿಮರಸತ್ವ'
ಇರಲಿ, ಭಾಷಣದಿ ಶೈಲಿ!
ದಯೆ ಧರ್ಮನೀತಿ ಮಂತ್ರದ ಗೀತೆ
ಹೇಳಪ್ಪ ಭಾಷಣದಿ ನೀತಿ
ಮೂಡಲ್ಲಿ ಮೂತನಲ್ಲಿ ಈ ಕೆಲಸ ಪೂರ್ತಿ
ತಂಬು ಕೆಸೆ ತುಂಬ ಭರ್ತಿ
ಅದೇ ನಿನ್ನ ವೇದಾಗಮದ ಮಾತು
ಆ ಮೇಲೆ ಇನ್ನೇನು ಬೇಕು?
ಅಕ್ಕಿಯಲಿ ಹಂಳ ಬೆಣ್ಣೆಯಲಿ ಹಿಟ್ಟು
ಎಣ್ಣೆಯಲಿ ನೀರು ಹಾಕು!
ಕಿಲೋ ಬರಲಿ ಅದರಪ್ಪ ಬರಲಿ
ತಕ್ಕಂಗ ಹಾಂದಿ ನೋಡಿ
ಶಾಲಾ ಮಾಸ್ತರಂತೆ ನೀತಿಯಲಿ ನಡೆವ
ಬುದ್ಧಿಗೇಡಿಯಾಗ ಬೇಡಿ
ಪೇಪರ್‌ದಿ ಜನ ಒದರುತ್ತ ಇರಲಿ
ಜಾಹಿರಾತಿಗೆ ರೊಕ್ಕನಿಡಿ
ಸರಕಾರ ಕಣ್ಣು ಕಂಪಾಗದಂತೆ
ಚುನಾವಣೆಗೆ ರೊಕ್ಕ ನೀಡಿ!
ಸಾಮಾನ್ಯ ಬದುಕು ನಿಮಗೇತೆ ಬೇಕು?
ಅದಕಾಗಿ ಲಾಡಿ ಹುಡುಕು
ಟೆಂಡರವೆ ನೋಡು ವ್ಯಾಪಾರ ಮಾಡು
ಇರಲಿರಲಿ ಇಂಥ ಕೊಳಕು
ಜನರೆಲ್ಲ ಬಂದು "ದೇಶವೇ ಬಂದಾ"
ಎಂಡರೂ ಅಡ್ಡಿಯಿಲ್ಲ.
ಪೆಟ್ರೋಲು ಸುರುವಿ ಏನೆಲ್ಲ ಸುಟ್ಟು
ಹೋದರೂ ಚಿಂತೆಯಿಲ್ಲ!

ಶ್ರೀ ಪುಂಡಲೀಕ ಪಾಟೀಲ,
ಹಿರೇಬಾಗೆವಾಡಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 25—4—1966.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

28—3—1968

೨೦
ಪೈಸೆ

ಕಥಾ ಪ್ರವೇಶ

ಸುಖದ ಸೆರೆ

ಬರೆದವರು :
ಶ್ರೀಮತಿ ಯತೋದಾ ಯುತ್ ಜೆನ್ನಿ

ಅಕ್ಕ ಶಾರದೆ ತಂಗಿ ವತ್ಸಲೆ.

ಶಾರದೆಗೆ ಹದಿನಾರರಲ್ಲೇ ಮದುವೆಯಾಗಿ ಈಗ ಆಕೆ ಆರೇಳುಮಕ್ಕಳ ತಾಯಿಯಾಗಿ ಸಂಸಾರದ ನೊಗಕ್ಕೆ ಹೆಗಲೊಡ್ಡಿ ಸೋತು ಕ್ರಶವಾದಾಕೆ. ಆಕೆಯ ಗಂಡ ಸಣ್ಣ ಅಂಡಡಿಯೊಂದರ ಮಾಲಿಕ, ಆತನ ಉತ್ಪತ್ತಿ ಇಂತಿಷ್ಟೇ ಎಂದು ನಿರ್ಧಾರದಿಂದ ಹೇಳುವಂತಿಲ್ಲ. ಆದರೂ ಸಂಸಾರದ ಮೆಚ್ಚಕ್ಕೆ ಮಾತ್ರ ಏನೇನೂ ಸಾಲುವಂತಿರಲಿಲ್ಲವೆಂಬುದು ಆವರ ಶಿಷ್ಟ ಬಡತನವೇ ಹೇಳುತಿತ್ತು.

ಹರಕು ಸೀರೆ, ಕೆದರಿದ ತಲೆಕೂದಲು, ಕೃಶವಾದ ಮೈಕೈಗಳು ಶಾರದೆಯ ಸಂಕಟವೆಲ್ಲವನ್ನೂ ಸಾರಿ ಹೇಳ ತಿತ್ತು.

ಆದರೆ ವತ್ಸಲಾಗೆ ಆ ಯಾವ ತಾಪತ್ರಯಗಳೂ ಇರಲಿಲ್ಲ. ನಲುವತ್ತರ ವಯಸ್ಸಿನ ಆಕೆ ಇನ್ನೂ ಅವಿವಾಹಿತೆಯಾಗಿ ಇಪ್ಪತ್ತರ ತರುಣಿಯಂತೆ ಸಿಂಗರಿಸಿಕೊಂಡು ಬೆಡಗು ಬಿನ್ನಾಣಗಳಿಂದ ನಡೆಯುತ್ತಿದ್ದರೆ ಒಮ್ಮೆ ನೋಡಿದಾತನಿಗೆ ಇನ್ನೊಮ್ಮೆ ನೋಡೋಣ ಎನಿಸುವಂತಹ ಆಕರ್ಷಣೆ. ಅಕ್ಕನ ಸಂಸಾರದ ಸಂಕಷ್ಟಗಳನ್ನೆಲ್ಲ ನೋಡಿದ ವತ್ಸಲಾ ಎಷ್ಟೋ ಬಾರಿ ಘಾಡಿಯುತ್ತಿದ್ದಳು.

"ಅಯ್ಯೋ!....ಏನು ಮದುವೆಯೋ!... ಅಸಹ್ಯ....ಹೆಣ್ಣಿಗೆ ಮದುವೆಯೊಂದು ಸಂಕೋಲೆ. ಆ ಸಂಕೋಲೆಯಲ್ಲಿ ಸಿಕ್ಕಿದ ಮೇಲೆ ಅವಳು ತನ್ನೆಲ್ಲ ಸುಖ ಸಂತೋಷಗಳಿಗೂ ತಿಲಾಂಜಲಿ ಕೊಡಬೇಕು. ಅಷ್ಟೆ. ಸದಾ ಕಾಲವೂ ಸಂಸಾರ, ಮಕ್ಕಳು, ಅಳು, ಇಷ್ಟೇ ಸಂಸಾರದ ಸ್ವಾರಸ್ಯ.' ತಂದೆ, ತಾಯಿಂದಿರನ್ನು ಬಾಲ್ಯದಲ್ಲೇ ಕಳೆದುಕೊಂಡ ಆಕೆ ಮದುವೆಯ ವಿಚಾರದಲ್ಲಿ ಒತ್ತಾಯನೂಡಿ ಮನವೊಲಿಸುವವರೂ ಇರಲಿಲ್ಲ. ಆಕೆಗದರ ಆವಶ್ಯಕತೆಯೂ ಕಾಣಿಸುತ್ತಿರಲಿಲ್ಲ. ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇರಿದ ಆಕೆಗೆ ಆರ್ಥಿಕ ಅಡಚಣೆಯೂ ಇರಲಿಲ್ಲ.

ಇಂದುಮತಿ ಶಾರದೆಯ ಹೊಟ್ಟೆಯಲ್ಲಿ ಮೂರನೆಯ ಮಗಳಾಗಿ ಜನಿಸಿದಾಕೆ. ತಮ್ಮ ಬಡತನಕ್ಕೆ ಹೊರೆಯಾಗಿ ಹುಟ್ಟಿದ ಹೆಣ್ಣು ಮಕ್ಕಳೆಂದರೆ ಶಾರದೆಗೆ ಮೊದಲಿನಿಂದಲೂ ಸಿಟ್ಟು, ಬೆಗುವ್ವೆ, ವ್ಯಥೆ, ಎಂದೇ ಇಂದುಮತಿಗೆ ಐದು ವರ್ಷವಾದಂತೆ ವತ್ಸಲಾ ಆಕೆಯ ಸ್ನೇಹಕ್ಕೆ ಮಗಳಾಗಿ ಪುನರ್ಗ್ರಹಿಸುವೆನೆಂದು ಹೊಡಿದಾಗ ಶಾರದೆ ಸಂತೋಷದಿಂದಲೇ ಇಂದುಮತಿಯನ್ನು ವತ್ಸಲೆಯ ವಶಕ್ಕೊಪ್ಪಿಸಿದಳು. ಇಂದುಮತಿಗಾದರೋ ಚಿಕ್ಕಮ್ಮನೆಂದರೆ ಮೊದಲಿನಿಂದಲೂ ಒಂದು ರೀತಿಯ ಗೌರವ, ಪ್ರೀತಿ, ವಿಶ್ವಾಸ. ತಾಯಿ ಅನಾದರದಲ್ಲಿ ಬೆಳೆದ ಹೆಣ್ಣು ಇಂದುಮತಿ ಚಿಕ್ಕಮ್ಮನ ಪ್ರೇಮಭೂಷಣ್ಯನಡೆಸುಡಿಗಳಿಗೆ ಯೌವನಗಾಗಲೂ ಮನಸೋಲುತ್ತಿದ್ದಳವಳು. ಸದಾ ಸಿಡಿಮಿಡಿಗುಟ್ಟುತ್ತಾ ಕೆಲಸ ಸಾಗಿಸುವ ಬಾಡಿದ ಸುಖದ ಹರಕು ಸೀರೆಯ ತಾಯಿಗಿಂತ, ಬಣ್ಣಬಣ್ಣದ ಸಿಲ್ಕಿನ ಸೀರೆಯ ಕೊರಳಲ್ಲಿ ಚೈನಿನ, ಎಡಕೈಗೆ ರಿಸ್ಟ್ ವಾಚಿನ, ನವೀನ ಉಡುಪಿನ ಚಿಕ್ಕಮ್ಮ ಹೆಚ್ಚು ಮಾಲು ಆಕರ್ಷಣೀಯವಾಗಿದ್ದಳು.

ಆದ್ದರಿಂದಲೇ ಆಕೆ ನಗುನಗುತ್ತಲೇ ಆರೇಳು ಮೈಲು ದೂರದ ಪೇಟೆಯ ಸಣ್ಣ ದಾದರೂ ಸುಂದರವಾದ ಬಾಡಿಗೆ ಮನೆಗೆ ಚಿಕ್ಕಮ್ಮನೊಂದಿಗೆ ಪ್ರವೇಶಿಸಿದಳು.

ಆ ಮೇಲೆ ಹೊಸ ಜೀವನದ ಆರಂಭ. ಬೆಳಗ್ಗೆ ಚಹಾ, ಹಾಲು, ತಿಂಡಿ, ಹಣ್ಣು ಹಂಪಲು. ಆಮೇಲೆ ಬಣ್ಣಬಣ್ಣದ ಅಂಗಿಯೊಂದಿಗೆ ಶಾಲೆಯ ಪ್ರವೇಶ. ಅಲ್ಲಿ ಮಕ್ಕಳ ಒಡನಾಟ, ವಸೆಯಲ್ಲಿ ಬಯಸಿದ ಆಟಿಗಳು, ವಸ್ತು ಒಡವೆಗಳು, ಎಲ್ಲವೂ ದೊರಕಿದಾಗ ಇಂದುಮತಿ ಸುಖಸಾಮ್ರಾಜ್ಯದಲ್ಲಿ ತೇಲತೊಡಗಿದಳು.

ವತ್ಸಲೆ ಇಂದುಮತಿಯನ್ನು ಪ್ರೀತಿಯಿಂದಲೇ ಸಾಕತೊಡಗಿದಳು. ಅವಳಿಗೆ ಯಾವ ಕೊರತೆಯೂ ಉಂಟಾಗದಂತೆ ಬಯಸಿದ್ದೆಲ್ಲವನ್ನೂ ತೆಗೆದುಕೊಡುತ್ತಿದ್ದಳು. ಕ್ರಮೇಣ ಇಂದುಮತಿಗೆ ತಾಯಿ-ತಂದೆಅಕ್ಕ-ತಂಗಿಯರೆನೆಪೂ ಮುಕುರು ಮುಕುರಾಗ ತೊಡಗಿತು. ಸುಖದ ಸವಿಯಲ್ಲಿ ಮೈಮರೆತ ಅವಳಿಗೆ ಕಷ್ಟದ ತವರೂರನ್ನ ಕಂಡಿಗೆ ಹೋಗಬೇಕೆಂಬ ಆಸೆಯೂ ಇರಲಿಲ್ಲ.

ಹಗಲಾ ದಿನಗಳಲ್ಲಿ ಚಿಕ್ಕಮ್ಮನೊಂದಿಗೆ ಸಿನಿಮಾ, ತಿರುಗಾಟ, ಪ್ರವಾಸಗಳೆಂದು ಅಲೆಯುವುದು. ಹೀಗೆಯೇ ದಿನಗಳು ಕ್ಷಣದಂತೆ ಉರುಳುತ್ತಿದ್ದವು. ನಗು ನಗುತ್ತಲೇ ಜೀವನ ಸಾಗಿಸಿದ ಇಂದುಮತಿ,ಎಸ್. ಎಸ್. ಎಲ್. ಸಿ. ವರೆಗಿಸಿದಳು. ಅಲ್ಲೇ ಹತ್ತಿರದ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದ ವತ್ಸಲಾಳಿಗೆ ಹಣದ ತಾಪತ್ರಯ ಅಷ್ಟೇನೂ ಇರದಿದ್ದರೂ ಇಂದುಮತಿಯನ್ನು ಕಾಲೇಜಿಗೆ ಕಳಿಸುವಷ್ಟು ಶ್ರೀಮಂತಿಕೆಯೂ ಇರಲಿಲ್ಲ. ಹಾಗಾಗಿ ಇಂದುಮತಿ ಮನೆಯಲ್ಲೇ ಕುಳಿತಿರಬೇಕಾಯಿತು. ಆದರೇ ಆಕೆಯ ತಂಗಿ ರಮಾಳ ಆಮಂತ್ರಣವನ್ನು ತಂದೆ ತಂದಿದ್ದರು. ಇಂದುಮತಿಗಾದರೋ ಆಶ್ಚರ್ಯ. ತನಗಿಂತಲೂ, ಎರಡು ವರ್ಷ ಚಿಕ್ಕವಳಾದ ತಂಗಿಯ ಮದುವೆಗೆ ಇಷ್ಟೇಕೆ ಅವಸರ? ಎಂದು. ಆ ತಂದೆಯೊಡರೋ ಇಂದುಮತಿಯನ್ನು ಚಿಕ್ಕಮ್ಮನ ವಶಕ್ಕೊಪ್ಪಿಸಿದಾಗಲೇ ಅವಳ ಬಗ್ಗೆ ತಮ್ಮ ಹೊಣೆ ತೀರಿತೆಂದು ನಿಶ್ಚಿಂತೆಯಿಂದ ತಮ್ಮ ಮುಂದಿನ ಮಕ್ಕಳ ವಿಚಾರಕ್ಕೆ ಲಕ್ಷ್ಯಕೊಟ್ಟು ರಮಾಳ ಮದುವೆಯ ಸಿದ್ಧತೆ ನಡೆಸಿದ್ದರು.

ಇಂದುಮತಿಗಾದರೋ ಜೀವನದಲ್ಲಿ ಮದುವೆಯು ಅತ್ಯಂತ ಪ್ರಧಾನ ಸ್ಥಾನವನ್ನು ವಹಿಸುತ್ತದೆ ಎಂದೇನೂ ಎನಿಸಿರಲಿಲ್ಲ. ತನ್ನ ಚಿಕ್ಕಮ್ಮ ಇನ್ನೂ ಅವಿವಾಹಿತೆಯಾಗಿಯೇ ಸುಖಸಂತೋಷದಿಂದ ಜೀವ್ಯದಿಯಿಂದ ಬಾಳುತ್ತಿಲ್ಲವೇ ಎಂಬ ಸಮಾಧಾನ ಬೇರೆ. ಆದರೂ ಒಮ್ಮೊಮ್ಮೆ ಯೋಚಿಸುತ್ತಾ ಕುಳಿತುಕೊಂಡಾಗ ಏನೇನೋ ಭಾವನೆಗಳುಂಟಾಗಿ ಮನಸ್ಸು ಅಲ್ಲೋಲ ಕಲ್ಲೋಲವಾಗುವುದೂ ಇತ್ತು.

ಚಿಕ್ಕಮ್ಮ ಹೇಗಿದ್ದರೂ ಎಲ್ಲರಂತಿಲ್ಲ ಅವರ ರೀತಿ ನೀತಿ ಧೋರಣೆಗಳೇ ಬೇರೆ. ಇದರಲ್ಲಿ ಸುಖವಿದೆಯೇ? ಅದರೆ ನಗು ನಗುತ್ತಾ ಬಾಳುವ ಚಿಕ್ಕಮ್ಮ ದುಃಖಿಯೇ? ಸಡತನದ ಬೇಗೆಯಲ್ಲಿ ಬಳಲ ಬೇಕಾಗಿದ್ದ ತನ್ನನ್ನು ಚಿಕ್ಕನ್ನು ಕರೆತಂದು ಸುಖವಾಗಿರಿಸಲಿಲ್ಲವೆ?

ಅದರೆ... ಚಿಕ್ಕಮ್ಮ ಯಾವಾಗಲೂ ಮದುವೆ ಸಮಾರಂಭಗಳಿಗೆಲ್ಲ ಏನಾದರೂ ನೆಪ ಹೇಳಿ ತಪ್ಪಿಸಿಕೊಳ್ಳುತ್ತಾಳೆ. ಹತ್ತು ಜನರು ಸೇರುವ ಸಾಮೂಹಿಕ ಕಾರ್ಯಗಳಿಗೆ ಆಕೆ ಹೋಗುವುದೆಂದೇ ಇಲ್ಲ ಎಲ್ಲರಿಗೂ ಸಂತೋಷವನ್ನೊದಗಿಸುವ ಸಮಾರಂಭ ಅವಳಿಗೆ ಅಪ್ರಿಯವೆನಿಸುತ್ತಿದೆ. ಆ ವಿಚಾರ ಇಂದುಮತಿ ಒಮ್ಮೆಯೂ ಚಿಕ್ಕಮ್ಮನನ್ನು ಪ್ರಶ್ನಿಸಿರಲಿಲ್ಲ.

ರಮಾಳ ಮದುವೆಗೂ ಚಿಕ್ಕಮ್ಮ ಇಂದುಮತಿಯನ್ನು ಒತ್ತಾಯದಿಂದಲೇ ಕಳುಹಿಸಿದ್ದಳು.

'ನೀವು ಬಂದರೆ ಮಾತ್ರ ನಾನು ಹೋಗೋದು ಚಿಕ್ಕಮ್ಮ.' ಎಂದು ಹಟ ಹಿಡಿದ ಇಂದುಮತಿಯ ಕೆನ್ನೆಯನ್ನು ಮೃದುವಾಗಿ ಹಿಂಡಿ ನಕ್ಕು ನುಡಿದಳು ವತ್ಸಲಾ.

"ನನಗೆ ರಜೆಯಿಲ್ಲ ಇಂದೂ. ನಿನ್ನನ್ನೂ ಕಳುಹಿಸದಿದ್ದರೆ ನಿಮ್ಮಮ್ಮ ನನ್ನನ್ನು ಸುಮ್ಮನೆ ಬಿಡಲಿಕ್ಕಿಲ್ಲ. ಅಂತಹ ಅಪವಾದ ನನಗೆ ಬೇಡಮ್ಮ." ಇಂದುಮತಿಯ ಹಟ ಚಿಕ್ಕಮ್ಮನಿದಿರು ಪಡೆಯುದ ಅವಳೊಬ್ಬಳೇ ತಂಗಿಸು ಮದುವೆಗೆ ತೆರಳಬೇಕಾಯ್ತು.

ಮದುವೆ ಮನೆಗೆ ಹೋಗುವಾಗ ಇಂದುಮತಿಗಿದ್ದ ಉತ್ಸಾಹ, ಸಂತೋಷ ಅಲ್ಲಿಗೆ ಹೋದ ಮೇಲೆ ಉಳಿಯಲಿಲ್ಲ.

ಮದುವೆ ಮಂಟಪದಲ್ಲಿ ಕುಳಿತಿದ್ದ ನೂತನ ವಧೂವರರ ಸಂತೋಷ, ಸಂಭ್ರಮಗಳನ್ನೆಲ್ಲ ಹೋಡ.ಹೋಡುತ್ತಲೇ ಆಕೆಗೆ, ತನಗಿಲ್ಲದ ಸುಖವೊಂದನ್ನು ತಂಗಿ ಅನುಭವಿಸುತ್ತಾಳಲ್ಲ ಎಂಬ ಮೋವೊಂದು ಒಳಗಿಂದೊಳಗೇ ಕಾಣಿಸಿತು.

ಅಷ್ಟು ಸಾಲದ್ದಕ್ಕೆ ಮದುವೆಗೆ ಬಂದ ಹೆಂಗಸರ ಗುಂಪಿನಿಂದ ಬಂದ ಮಾತುಗಳೋ!

"ಅಕ್ಕನಿಗೆ ಮದುವೆಯಾದದೆ ತಂಗಿಗೆ ಮಾಡಿದರಲ್ಲ! ಇನ್ನು ಅವಳನ್ನು ಯಾರು ಮದುವೆಯಾಗ್ತಾರೆ ಲಕ್ಷ್ಮಮ್ಮ?"

"ಅವಳಿಗೆ ಮದುವೆಯೂ ಮತ್ತೇನು? ಅವಳ ಚಿಕ್ಕಮ್ಮ ವತ್ಸಲಾ ಇಲ್ಲವೇ? ಬೀದಿ ಬಸನಿಯಂತೆ! ಯಾರೇನೇ ಇವಳೂ."

"ಥೂ .. ಎಂತಹ ಅಸಹ್ಯ ಸೀತಮ್ಮ. ನಾಚಿಕೆಗೇಡು."

ಕೋಣೆಯೊಳಗೆ ಸೀರೆ ಬದಲಿಸುತ್ತಿದ್ದ ಇಂದುಮತಿಗೆ ಈ ಎಲ್ಲ ಮಾತುಗಳೂ ಕೇಳಿಸಿದವು.

(ಪನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೇಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಶ್ಚಾತ್ಯರಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಸುಭದ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಯಾಸತ್ಯಗಳನ್ನಿಯೇ ತತ್ವರವಾಗುವಂತೆ ಮಾಡುವ ಕೃತಿ

ಬೆಲೆ: 0-10 ಪೈಸೆ.

ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ :-

ಪವಯುಗ ಪ್ರೆಸ್, ಉಡುಪಿ.

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೩೦	೨೮—೩—೧೯೬೮	No. 30

ನೀರಿನ ವಿವಾದ ಕೋರ್ಟಿಗೆ?

ಕೃಷ್ಣಾ ನದಿಯ ನೀರಿನಲ್ಲಿ ಕನ್ನಡಿಗರಿಗೆ ಸಿಗಬೇಕಾದ ನ್ಯಾಯವಾದ ಪಾಲು ಸಿಗುತ್ತಿಲ್ಲ—ಇದು ಕನ್ನಡಿಗರ ಕೊರಗು. ೧೯೬೨ರಿಂದಲೂ ಇರುವ ಈ ಅಂತಾರಾಜ್ಯ ವಿವಾದವಿನ್ನೂ ಬಗೆಹರಿದಿಲ್ಲ. ಯಾರಿಗೆ ಎಷ್ಟು ನೀರು? ಸಂಧಾನದ ಮೂಲಕ ವಿವಾದ ಬಗೆಹರಿಯಲಿಲ್ಲ; ಮೂತ್ರಕತೆಗಳ ಮೂಲಕ ಸಾಧ್ಯವಾಗಲಿಲ್ಲ. ಮಹಾರಾಷ್ಟ್ರ—ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ಸಂಬಂಧಿಸಿದ ಈ ನೀರಿನ ವಿವಾದ ಇತ್ಯರ್ಥವಾಗದೆ ಮೂರು ರಾಜ್ಯಗಳ ಅಭಿವೃದ್ಧಿಗೆ ತೊಂದರೆಯುಂಟಾಗಿದೆ. ಇತ್ತೀಚೆಗೆ ಮಹಾರಾಷ್ಟ್ರ ಸರಕಾರವು ಸುಪ್ರೀಂ ಕೋರ್ಟಿಗೆ ವಿವಾದವನ್ನೊಯ್ಯಲು ಮುಂದಾಗಿದೆ. ಎರಡೂ ಮಾರ್ಗಗಳನ್ನು ಕರ್ನಾಟಕ ಸರಕಾರವೂ ಅನುಸರಿಸಲು ಈಗ ಮನಮಾಡಿದೆ. ೧೯೬೭ ಅಕ್ಟೋಬರ ೩೦ರೊಳಗೆ ಈ ವಿವಾದವನ್ನು ಕೇಂದ್ರ ಸರಕಾರವು ಬಗೆಹರಿಸದಿದ್ದರೆ, ಸಂಚಾಲಕತೆಗೆ ಒಪ್ಪಿಸಬೇಕೆಂದು ಅದೇ ವರ್ಷ ಜುಲೈ ತಿಂಗಳಲ್ಲಿ ರಾಜ್ಯ ಸರಕಾರವು ತಿಳಿಸಿದ್ದರೂ, ಇದಕ್ಕಾಗಿ ಕೇಂದ್ರದತ್ತ ಯಾವುದೇ ಪ್ರಯತ್ನ ನಡೆಯಲಿಲ್ಲ. ಹೆಸರಿಗೆಂಬಂತೆಂಡು ಬಾರಿ ಮಾತುಕತೆ ನಡೆಯಿತಾದರೂ ಅದು ಯಾವ ಪ್ರಯೋಜನಕ್ಕೂ ಬರಲಿಲ್ಲ.

ಕನ್ನಡ ರಾಜ್ಯವೂ ಭಾರತ ಒಕ್ಕೂಟದ ಒಂದು ಅಂಗ, ಕನ್ನಡಿಗರೂ ಭಾರತೀಯರು ಮಕ್ಕಳು—ಇವರನ್ನು ಕೇಳುವವರೇ ಇಲ್ಲವೆ? ಎಂಬುದು ಲೋಕೋಪಯೋಗಿ ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಚಿಂತೆ. ಕೇಂದ್ರ ಸರಕಾರ ಕನ್ನಡಿಗರ ಬಗ್ಗೆ ಉದಾಸೀನತೆಯನ್ನೇ ತೋರಿಸುತ್ತಿದೆ ಎಂಬುದಕ್ಕೆ ಇದೂ ಇನ್ನೊಂದು ನಿದರ್ಶನ. ಕರ್ನಾಟಕ— ಮಹಾರಾಷ್ಟ್ರ ಸೀಮೆ ವಿವಾದದಲ್ಲಿ ಮಹಾಜನ ಆಯೋಗದ ವರದಿಯನ್ನು ಮೂಲೆಗೆ ತಳ್ಳಿದ ಮಹಾರಾಷ್ಟ್ರ ಸರಕಾರದ ಬೆನ್ನು ಕೇಂದ್ರ ತಟ್ಟಲಾರಂಭಿಸಿತು. ರಾಷ್ಟ್ರೀಯ ನೀತಿಯನ್ನು ನಿರೂಪಿಸುವ ನೆವದಿಂದ ಕನ್ನಡಿಗರನ್ನು ಅಪಮಾನಿಸಲು ಕೇಂದ್ರ ಸರಕಾರ ಮುಂದಾಯಿತು. ಈಗ, ಮಹಾರಾಷ್ಟ್ರ—ಆಂಧ್ರಗಳನ್ನು ಓಲೈಸಿಕೊಳ್ಳುವ ಹವಣಿಕೆಯಿಂದ ಕನ್ನಡದ ಹಿತಕ್ಕೆ ಸೂಂದರೆ ತಂದೊಡ್ಡುತ್ತಿದೆ—ಅಂದರೆ, ಕನ್ನಡಿಗರು ನಿರ್ವೀರ್ಯರು ಎಂಬಷ್ಟು ಕುತ್ಸಿತ ಭಾವನೆಯು ಅದರದ್ದಿರಬಹುದು. ಕನ್ನಡಿಗರು ಅನ್ಯಾಯವನ್ನು, ಅತ್ಯಾಚಾರವನ್ನು ನುಂಗಿಕೊಂಡಿರುತ್ತಾರೆ—ರಾಷ್ಟ್ರೀಯ ಸಮಗ್ರತೆಯ ದೃಷ್ಟಿಯಿಂದ, ಶಾಂತಿಯನ್ನು ಕೆದಕದ ದೃಷ್ಟಿಯಿಂದ. ಆದರೆ, ಕೇಂದ್ರವು ಇದನ್ನು ತಪ್ಪಾಗಿ ಅರ್ಥಮಾಡಿಕೊಳ್ಳಕೂಡದು. ಕನ್ನಡಿಗರನ್ನು, ಬೇರೆಯವರನ್ನು, ಕೃಷ್ಟಿಪಡಿಸಲು ಬಲಿ ಕೊಡುವುದಕ್ಕೂ ಅದು ಮುಂದುವರಿದರೂ ಅಚ್ಚರಿಯಿಲ್ಲ. ಕೃಷ್ಣಾನದೀ ನೀರಿನ ಬಗ್ಗೆ ಕೇಂದ್ರ ನೀರಾವರಿ ಮಂತ್ರಿ ಡಾ. ಕೆ. ಎಲ್. ರಾವ್ ಆಂಧ್ರದ ಪಕ್ಷ ಹಿಡಿದು ವಾದಿಸುತ್ತಾರೆಂದೂ ಗೃಹ ಮಂತ್ರಿ ಜವನ ಪ್ರಭೃತಿಗಳು ಮಹಾರಾಷ್ಟ್ರದ ಹಿತ ಸಂರಕ್ಷಕರೆಂದೂ ಈ ಕಳ್ಳಸ್ಪರ್ಗಂಡಪ್ಪಗಳ ವಧೆ ಸಿಕ್ಕಿ ಕನ್ನಡದ ವೈಣಸು ಚಟ್ಟಯಾಯಿತೆಂದೂ ಹೇಳುವವರಿದ್ದಾರೆ ಇಂತಹ ಆರೋಪ ಸರ್ವೇ ಸಾಮಾನ್ಯವಾದರೂ ಸಂಪೂರ್ಣ ಅಲ್ಲಗಳೆಯುವಂತಿಲ್ಲ. ನಮ್ಮ ರಾಜ್ಯದ ಶ್ರೀ ಪೂಣಚ್ಚ ರಾಜ್ಯದ ಸತ್ ಸಂಪ್ರದಾಯದಂತೆ ಇಡಿಯ ಭಾರತದ ಹಿತಚಿಂತನೆಯನ್ನೇ ಹೊತ್ತಿದ್ದಾರಲ್ಲದೆ, ರಾಜ್ಯದ ಕಡೆಗೆ ಗಮನವೀಯಲು ಬಿಡುವಿಲ್ಲದಿದ್ದಾರೆ. ಆದರೆ, ಡಾ. ಕೆ. ಎಲ್. ರಾವ್ ಇಂತಹ ಆರೋಪ ತನ್ನ ಮೇಲೆ ಬರುವುದೆಂದೇ ಅದರಿಂದ ನುಸುಳಿಕೊಂಡಿದ್ದಾರೆ. ಈ ಪ್ರಶ್ನೆಯು ಅತ್ಯಂತ ತೊಡಕಿನದೆಂದೂ. ಅದುದರಿಂದ, ಇದನ್ನು ಪ್ರಧಾನ ಮಂತ್ರಿಯವರೇ ಬಿಡಿಸುವುದು ಅಗತ್ಯವೆಂದೂ ಕಾಶ್ಮೀರ ಪ್ರಶ್ನೆಯನ್ನು ಅವರ ಕೈಗೆ ನೊದಲೇ ಒಪ್ಪಿಸಿರುವುದೆಂದೂ ಅವರು ಹೇಳಿದ್ದಾರೆ. ಅಂದರೆ, ಪ್ರಧಾನಿಗಳುವರೇ ವಿವಾದ ಪರಿಹಾರಕ್ಕೆ ದಿನ ದೂಡುವವರು. ಮತ್ತೆ ಕೇಳಬೇಕೆ? ಜವಳರ ಕಿರುಕುಶ ಪ್ರಭಾವದ ಮುಂದೆ ಸಮಸ್ಯೆ ಇನ್ನೂ ಪರಿಹಾರ ಕಾಣದಿದೆ.

ಆದರೆ, ಇಲ್ಲಿ ಗಮನಿಸಬೇಕಾದ ಅಂಶವೊಂದೆ. ನೀರಿನ ವಿವಾದ ಬಗೆಹರಿಯದಿರುವುದರಿಂದ ಕನ್ನಡದ ಪಲ ಒಣಗಿ ಹೋಗಿದೆ. ಇದು ಇತ್ಯರ್ಥವಾಯಿತೆಂದರೆ, ನೀರಾವರೀ ಸೌಲಭ್ಯಗಳನ್ನು ರಾಜ್ಯದ ಉತ್ತರ ಭಾಗಕ್ಕೆ ಅಧಿಕಾಧಿಕವಾಗಿ ಒದಗಿಸಿ, ಅದನ್ನು ಬಂಗಾಲದಿಂದ ತಪ್ಪಿಸುವ ಪ್ರಯತ್ನ ಮಾಡಬಹುದಿತ್ತು. ಕೇಂದ್ರವು "ಹಾವು ಸಾಯದಂತೆಯೂ, ಕೋಲು ಮುರಿಯದಂತೆಯೂ" ಎಂಬ ನೀತಿಯನ್ನು ಅನುಸರಿಸುತ್ತಿರುವುದು ಸ್ವದೇಶಕ್ಕೆ ಮಂತ್ರಾಲ್ಲ ನಿಡೇಶಗಳಿಗೂ ಗೊತ್ತು. ಇದನ್ನೇ ಬೇರಾಗಿ ದುರ್ಬಲ ನೀತಿಯೆನ್ನುವುದು. ಇಂತಹ ಶಿಥಿಲ ನೀತಿಯಿಂದ ಯಾವ ಕಾರ್ಯವೂ ಸಾಧ್ಯವಾಗುವುದಿಲ್ಲ. ಅದರಲ್ಲೂ ಸಂಬಂಧಿತ ರಾಜ್ಯಗಳಲ್ಲಿಯೂ ಕೇಂದ್ರದಲ್ಲಿಯೂ ಕಾಂಗ್ರೆಸ್ ಪಕ್ಷೀಯ ಸರಕಾರವೇ ಇದ್ದು ವಿವಾದ ಕೊನೆಗೊಳಿಸಲಾಗಲಿಲ್ಲವೆಂದರೆ, ತಲೆಗಿಂತ ಕಾಲೇ ಖಲಶಾಲಿಯೆಂದಾಯಿತಲ್ಲವೆ? ಕರ್ನಾಟಕದ ಮುಖ್ಯಮಂತ್ರಿಯವರು ಕಾಂಗ್ರೆಸ್ ಅಧ್ಯಕ್ಷರಾಗಿರುವಷ್ಟು ಸಮಯ ಕೇಂದ್ರಕ್ಕೆ ಲಾಲಿ ಹೊಡೆಯಲು ಉತ್ತಮ ಸಾಧನವೊಂದು ಸಿಕ್ಕಂತಾಯಿತು- ಇಂದಿರಾಜಿ ಹೋಗುಳ ಕೇಳಿ ಕನ್ನಡದ ಮಗು ನಿದ್ದೆ ಹೋಗಬೇಕು, ಅಲ್ಲಿ, ನಿದ್ದೆ ಹೋದಂತಾದರೂ ನಟಿಸಬೇಕು. ಈಗ ಶ್ರೀ ವೀರೇಂದ್ರ ಪಾಟೀಲರು ವಿವಾದದ ಬಗ್ಗೆ ಸಂಧಾನ ಸಾಕು, ಕಾಯ್ದೆ ಕ್ರಮವನ್ನು ಅದೆಷ್ಟೇಕೇಟ್ ಜನರಲ್‌ಗೆ ಬಿಡುತ್ತೇವೆ ಎಂಬ ಘೋಷಣೆ ಕಾರ್ಯರೂಪಕ್ಕೆ ಬರುವುದೆ? ಇದರಲ್ಲೂ ಕುಸು ಸಂದೇಹವೇ. ಇಂದಿರಾಜಿ ನಡುವೆ ಪ್ರವೇಶಿಸಿ, ಒಮ್ಮೆಗೆ ತಡೆದರೆ, ನವ್ಯ ಕಡತಂದ ವೀರಾವೇಶ ಮುಂದೆಲ್ಲಿ?

ಯಲವಿಗಿ ದುರಂತ

ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಆಗದಂತಹ ರೇಲ್ವೆ ಅವಘಡ ಯಲವಿಗಿಯಲ್ಲಾಯಿತು. ಹಾವೇರಿ— ಹುಬ್ಬಳ್ಳಿಗಳ ನಡುವಿಗೆ ಹುಬ್ಬಳ್ಳಿಯಿಂದ ಸುಮಾರು ೪೦ ಕಿಲೋಮೀಟರ್ ದೂರದಲ್ಲಾದ ಈ ದುರಂತ ಪ್ಯಾಸೆಂಜರ್ ಮತ್ತು ಡೆಕ್ಕನ್ ಎಕ್ಸ್‌ಪ್ರೆಸ್‌ಗಳು ಒಂದಕ್ಕೊಂದು ಡಿಕ್ಕಿ ಹೊಡೆದುದರಿಂದ ಸಂಭವಿಸಿತು. ಸುಮಾರು ಐವತ್ತಕ್ಕೂ ಮಿಕ್ಕಿ ಸಾವುಗಳೂ ಅದಕ್ಕೂ ಹೆಚ್ಚು ನೋವುಗಳೂ, ಬೃಹತ್ಪ್ರಮಾಣದ ಆರ್ಥಿಕ ನಷ್ಟವೂ ಸಂಭವಿಸಿದ ಈ ದುರ್ಘಟನೆ ರೇಲ್ವೆಗಳ ಇತಿಹಾಸದಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ಪ್ಯಾಸೆಂಜರ್ ರೈಲು ನಿಶ್ಚಿತ ಸಮಯಕ್ಕೆ ಬಾರದುದರಿಂದ ಅದು ನಿಲ್ದಾಣದಲ್ಲಿಯೇ ಉಳಿದಿತ್ತೆಂಬುದು ದುರಂತಕ್ಕೊಂದು ಕಾರಣವಾದರೆ, ಎಕ್ಸ್‌ಪ್ರೆಸ್ ನಿಲ್ದಾಣವನ್ನು ಪ್ರವೇಶಿಸಲು ಅನುಮತಿ ನೀಡಿದವರ ಅಜಾಗ್ರತೆ ಇನ್ನೊಂದು ಕಾರಣವೆನಿಸುತ್ತದೆ. ಭಾರತೀಯ ರೇಲ್ವೆಗಳು ಅತ್ಯಂತ ದೊಡ್ಡ ರಾಷ್ಟ್ರೀಕೃತ ಸಾರಿಗೆ ವ್ಯವಸ್ಥೆ. ಇವುಗಳ ಮೇಲೆ ಒಂದಲ್ಲ ಅನೇಕ ದೂರುಗಳು ಜನತೆಯಿಂದಲೂ ಜನತಾ ಪ್ರತಿನಿಧಿಗಳಿಂದಲೂ ನಾವು ಕೇಳುತ್ತೇವೆ. ಇವುಗಳಲ್ಲಿ ಸೌಕರ್ಯ — ಅಧಿಕಾರಿಗಳ ಕರ್ತವ್ಯ ದೋಷಗಳೇ ಪ್ರಮುಖವಾಗಿವೆ. ಯಲವಿಗಿ ದುರಂತದ ಬಗ್ಗೆ ಬೆಂಗಳೂರು ಮುಖ್ಯ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಗೋಪೀವಲ್ಲಭ ಐಯ್ಯಂಗಾರರು ನ್ಯಾಯಾಂಗ ತನಿಖೆ ನಡೆಸಲಿದ್ದಾರೆ. ದುರಂತದಲ್ಲಿ ನೊಂದವರಿಗೆ—ಯಾ ಅವರ ಪರಿವಾರಕ್ಕೆ ಕೇಂದ್ರ ಸರಕಾರವು ಪರಿಹಾರ ಕೊಡುತದೆ. ಆದರೆ ಈ ದುರಂತ ಮಾನವ ನಿರ್ಮಿತವಾದುದೆಂದು ಖಚಿತವಾದರೆ, ಈ ಬಗೆಯ ದುರಂತಕ್ಕೆಡೆ ಕೊಟ್ಟವರನ್ನು ಉಗ್ರವಾಗಿ ದಂಡಿಸಲೇ ಬೇಕು. ಮಾನವ ಜೀವದೊಂದಿಗೆ ಬೆಂಕಿಯಾಟವಾಡುವುದು ಅಮಾನವತೆಯ ಪರಮಾವಧಿಯೆ ತಿಳುವಳಿಕೆ ಇದ್ದೇ ಆಗಲೀ, ಇಲ್ಲದೆಯೇ ಆಗಲಿ ಬೆಂಕಿಯನ್ನು ಮುಟ್ಟಿದರೆ ಸುಡುತ್ತದೆ. ಮಾನವತೆಯ ರಕ್ಷಣೆಯಲ್ಲಿ ಕರ್ತವ್ಯಲೋಪ, ಅಸಡ್ಡೆಗಳು ಅಡ್ಡಿಯಾಗಬಾರದು. ಯಲವಿಗಿದುರಂತದಲ್ಲಿ ಸಿಕ್ಕಿಬಿದ್ದವರ ಬಗ್ಗೆ ಅನುಕಂಪವನ್ನು ಎಲ್ಲರೂ ಪ್ರಕಟಿಸುತ್ತಾರೆ.

ವಚನ ಸುಧೆ

ಸಂಸಾರಯತಿ ಕೃಷ್ಣಾನಿ
ಸರ್ವತ್ರ ವಿಚಿಕಿತ್ಸತೇ।
ಚರಂ ಕರೋತಿ ಕ್ಷಿಪ್ರಾರ್ಥೇ
ಸ ಮೂಢೋ ಭರತರ್ಷಭ॥

ಭರತ ಶ್ರೇಷ್ಠ, ತಾನು ಮಾಡಿದ ಕೆಲಸಗಳನ್ನು ವ್ಯರ್ಥವಾಗಿ ಪ್ರಚಾರ ಮಾಡುವವನನ್ನು, ಎಲ್ಲೆಡೆಯಲ್ಲೂ ಸಂದೇಹ ಪಡುವವನನ್ನು ಮತ್ತು ಬೇಗನೇ ಆಗುವ ಕೆಲಸದಲ್ಲಿ ತಡ ಮಾಡುವವನು ಮೂಢನೆಂದು ಕರೆಯಲ್ಪಡುತ್ತಾನೆ.

ಶ್ರೀ ಗೋವಿಂದ ಪೈ ಜಯಂತಿ

ಸುರತ್ಕಲ್ಲು ವಿದ್ಯಾದಾಯಿನೀ ಶಾಲೆಯಲ್ಲಿ ನಿಜವು "ಸಾಹಿತ್ಯಮೂರ್ತಿಯ ಪತಿಯಿಂದ ತಾ. ೨೪ರಲ್ಲಿ ಶ್ರೀ ಗೋವಿಂದ ಪೈ ಜಯಂತಿ ಸಭೆಯು ಶ್ರೀ ಕುದ್ರಿ ವಾಸುದೇವ ಶೆಣೈ (ಪ್ರಭಾತ ಸಂಪಾದಕ), ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ ಮತ್ತು ಡಾ. ಪಿ. ನಾರಾಯಣ ರಾಯರು ಭಾಷಣಕಾರರಾಗಿದ್ದರು. ಕುಮಾರಿ ಚಂದ್ರಲೀಲೆಯು ಪ್ರಾರ್ಥನೆ ಹಾಡಿದರು. ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ಶ್ರೀ ಪೈ ಗುಣಸ್ತವನವನ್ನಾಶ್ರೀ ಪಿ. ಸಿ. ವಾಸುದೇವರಾಯರು ಶ್ರೀ ಪೈಗಳ ೩ ಕವಿತೆಗಳನ್ನೂ ಹಾಡಿದರು. ಶ್ರೀ ಕೆ. ವಾಸುದೇವ ರಾವ್ ಚಿತ್ರಿಸಿದ ಶ್ರೀ ಪೈಗಳ ರೇಖಾ ಚಿತ್ರದ ಅನಾವರಣ ಮತ್ತು ಆದಿತ್ಯ ಪುರಾಣದ ಪಂಚಯದ ಪ್ರಕಟನೆಯೂ ನೆರವೇರಿಸಲಾಗಿದ್ದುವು. ಪ್ರಾರಂಭದಲ್ಲಿ ಶ್ರೀ ಎಚ್. ವಾಸುದೇವರಾವ್ ಮಹಿಳೆಯರ ಸಂದೇಶಗಳನ್ನು ವಾಚಿಸಿದ್ದರು. ಶ್ರೀ ಕೆ. ವೆಂಕಟರಾಯಾಚಾರ್ಯರು "ಖ್ರೈಸ್ತ ಸಮಾಜ ಸಾಂಗ್ರಹಾಲಯ"ದ ವರದಿಯನ್ನು ಓದಿದರು. ಕೊನೆಗೆ ಧನ್ಯವಾದ ಸಾಹಿಸಿದರು. ಶ್ರೀ ಪೈಗಳವರ ಕೃತಿಗಳ ಪ್ರದರ್ಶನವೂ ಜತೆಗೊಂಡಿತ್ತು.

ನರಸಣ್ಣನ ಸರಸ

ಇಲಿಯ ಹೆಣನೆಂದರೆ ನಲುವತ್ತು ಪೈಸೆಗೆ ಕೊಂಡಿರಯ್ಯಾ!

ಮುಂಬಯಿ ನಗರದಲ್ಲಿ
ತಾ. 10—3—68ರಂದು
ರಜತ ಮಹೋತ್ಸವವನ್ನು ಆಚರಿಸಿದ
ಮಲ್ಲಾಡಿ ಹಳ್ಳಿಯ
ಅನಾಥ ಸೇವಾಶ್ರಮದ ನಿರ್ಮಾತೃ
ಶ್ರೀಶ್ರೀ ರಾಘವೇಂದ್ರ ಸ್ವಾಮೀಜಿಯವರು

ಗೇಟ ರಾಜ್ಯದಲ್ಲಿ

ಬಿಹಾರದಲ್ಲಿ ಮೀಸೆ ಹೊತ್ತವರು

೧

"ಏಯೋ, ನೋಡೀಂದ್ರೆ...."

"ಏನೇ ಅದು ನೋಡೋದು?"

"ನಿನ್ನೆ ಜಾಗೇಲೇ ಎಣ್ಣಾದ್ರೂ ನೆನ್ಕ ಮೂತೂಂದ್ರೆ ಭಾರೀ ತಿರಸ್ಕಾರ.'

"ಹ್ಹೂಂ.... ಒಂದು ರೀತಿಯಿಂದ ಅದೂ ಉಚಿತಾನ್ನು.'

"ಅಣ್ಣಾದ ದೃಷ್ಟಿಯಿಂದ್ಲೋ?'

'ಮೀಸೆ ಹೊತ್ತ ದೃಷ್ಟಿಯಿಂದ...'

'ಹ್ಹಹ್ಹಹ್ಹ....'

'ಏನೇ ಖಾರ ನಗು ಬರುತ್ತೆ?'

'ನನ್ನೆ ನಗು ಬಂದ್ರೆ ಕೆಟ್ಟ ಕೇಳುತ್ತೆ!'

"ರೇಗೇದು ಯೂಕೆ? ಅದ್ರೂನೂ ಹೊಟ್ಟೆಯೊಳ್ಗೆ ಒಂದು ಧೂಂ ಸಂಕ್ಷ...."

'ಅಲ್ರೀ, ಧೀನೆಲ್ಲಿ ಮೀಸೆ ಹೊತ್ತಿದ್ದೀರೇಂತ. ಇಲ್ಲದ ಮೀಸೆಯನ್ನು ಇದೇಂದ ಸುಳ್ಳು ಸುಳ್ಳು ನುಡಿವಾಗ ನಗು ಬಾರದೆ ಇರುತ್ತೆ?"

"ಓಹೋ, ಜಾಗೆ. ಅಂದ್ರೆ ನಿನ್ನ ದೃಷ್ಟಿಯಲ್ಲಿ ನಾವು ಮೀಸೆ ಹೊತ್ತವರ್ಲ್ಲು."

"ಬಳಿದವ್ರ ಕಥೆ ನಂಗೆ ಹೊತ್ತಿ? ನೀವೆಂತೂ ಅಲ್ಲ. ಮುಖ ನೋಡೋವಾಗ ಗೋತ್ತಾಗೊಲ್ಲೆ?'

"ಅಲ್ರೆ ನೋಡು, ಕೆಲವೊಮ್ಮೆ ನೋಡಿದ್ದೂ ತಪ್ಪಾಗುತ್ತೆ."

"ಯೂಕೆ?'

"ಯೂಕ ಅಂದ್ರೆ? ಇಲ್ಲಿ ಕೇಳು. ಬಿಹಾರ ಇದೆ ತಾನೆ?"

'ಅಯ್ಯೋ, ಯೂರಿಲ್ಲಾಂತಾರೆ? ಪಾಪ ಬಳಗಾಲ ಬಡೆದದ್ದೇ ಬಿಹಾರಕ್ಕೆ ನೋಡಿ. ಅದರ ಹಸ್ರು ನಾಯೋವರ್ನ್ನೂ ಮರ್ತು ಹೋಗಲಿಕ್ಕಿಲ್ಲ.'

"ಅಂಥ ಬರಗಾಲ ಬಡಿದು ಬಳಲಿ ಬೆಂಡಾಗಿ ಬೀಳುತಿದ್ದ ಬಿಹಾರಿಗಳು ಮೀಸೆ ಹೊತ್ತಿದ್ದಾರೆಂದು ಅಂದ್ರೆ ಫಂಡೋಕಾಯ್ತೆ?'

"ಅಂದ್ರೆ ಏನು? ಬರೀ ಒಗಟು ಸುಡೀ ಬೇಡಿ.'

"ಅಲ್ರೆ, ಕಳದ ವರ್ಷ ಸಾರ್ವತ್ರಿಕ ಚುನಾವಣೆಯ ನಂತರ ಅಲ್ಲಿ ಕಾಂಗ್ರೆಸು ಬಹುಮತ ಪಡೆಯಲಿಲ್ಲ.'

'ಅಲ್ಲಿಂತೇನು? ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಹರಿಯಾಣ, ಪಂಜಾಬ ಗಳಲ್ಲೂ ಬರಲಿಲ್ಲ. ಮದ್ರಾಸು—ಕೇರಳ ಗಳಲ್ಲಿಂತೂ ಇನಿಂಗ್ಸ್ ಡಿಫೀಟ್.'

'ಸರಿಯೇ, ಆಗ ಅಲ್ಲಿ ಮಹಾಮಾಯಾ ಪ್ರಸಾದ ಸಿಂಗರ ನಾಯಕತ್ವದಲ್ಲಿ ಸಂಯುಕ್ತ ರಂಗವು ಮಂತ್ರಿ ಮಂಡಳ ಸ್ಥಾಪಿಸಿತು.'

'ಅದು ಬಿದ್ದು ಹೋಗಿ ಎರಡು ತಿಂಗಳಾಯ್ತು ಬಂತಲ್ಲಾ....?"

"ಹೌದೇ, ಆನಂತರದ ಕಥೆ ಗೊತ್ತಿದೆಯಾ?'

"ಅದೆಂತದೋ, ಕಾಂಗ್ರೆಸ್ ಮತ್ತೆ ಮಂಡಲರ ಪಕ್ಷಗಳು ಸರಕಾರ ರಚಿಸಿದುವಂತೆ...."

"ಹ್ಹೂಂ, ಬಿ. ಮಂಡಲರು ವಿಧಾನ ಮಂಡಲದ ಸದಸ್ಯರಾಗುವ ವರೆಗೆ ಕಾಂಗ್ರೆಸ್ ಮುಖ್ಯಮಂತ್ರಿಯಿದ್ದರು. ಮುಂದವರು ರಾಜೀನಾಮೆ ಮಂಡಲರನ್ನು ಮುಖ್ಯಮಂತ್ರಿ ಮಾಡಿದರು..."

"ಹೌದು, ಎಲ್ಲಿಯೋ ಓದಿದ್ದೆನೆಪ."

"ಈಗ ಇನ್ನೂ ತಮಾಷೆ. ೪೭ ದಿನಗಳಲ್ಲೇ ಬಿ. ಪಿ. ಮಂಡಲರ ಸಚಿವ ಸಂಪುಟ ಉರುಳಿ ಹೋಯಿತು."

"ಯಾಕೆ? ಏನು ಕಾರಣ?'

'ಕಾರಣ ಏನೂಂತನ್ನೋದು? ಕಾಂಗ್ರೆಸ್ ಸದಸ್ಯರಲ್ಲಿ ಸುಮಾರು ೧೫—೨೦ ಜನ ಪಕ್ಷಾಂತರಗೊಂಡರು.

"ಅಂದರೆ, ಬಂಗಾಳದಲ್ಲಿ ಕಾಂಗ್ರೆಸಿಗರು ಮಾಡಿದಂತೆಯೇ.

"ಅದೂ ಸರಿಯೇ. ಸಚಿವ ಸಂಪುಟದಲ್ಲಿ ಸ್ಥಾನ ದೊರೆಯಲಿಲ್ಲವೆಂಬ ಅಸಮಾಧಾನವಿರಬಹುದೂನ್ನು. ಈ ಪಕ್ಷಾಂತರಿಗಳು ಸಂಯುಕ್ತ ರಂಗಕ್ಕೆ ಬೆಂಬಲ ಕೊಟ್ಟರು. ಹಾಗಾಗಿ ಅವಿಶ್ವಾಸ ನಿರ್ಣಯ ಮಂಡಿತವಾಗಿ ಮಂಜೂರಾಯ್ತು.

'ಅಲ್ಲಿಗೆ ಸರಿಯೂಯಿತು."

'ಏನು?'

"ಆ ಬಂಗಾಳ ಹುಯೂನ ಪರ್ಯಂತ ಪ್ರಜಾಸತ್ತೆಗೆ ಜಯತ್ರೀ."

'ಛೆ, ಛೆ, ಜಾಗೇನೂ ಇಲ್ಲ."

'ಇಲ್ಲಾಂದ್ರೆ? ಬಿಹಾರದಲ್ಲಿಯೂ ರಾಷ್ಟ್ರಪತಿ ಆಳಿಕೆ. ."

"ಅದೇ ಈಗ ತಂಟೆ...."

"ಏನು?'

"ಬಿಹಾರದಲ್ಲಿಗೆ ಮತ್ತೆ ಸಂಯುಕ್ತ ರಂಗ ಅಧಿಕಾರಕ್ಕೆ ಬಂದಿದೆ. ಹೊಸ ನಾಯಕರು ಭೋಲಾ ಶಾಸ್ತ್ರಿ..."

"ಎಂಥದ್ರಿ ಇದು? ನಿನ್ನ ಕಾಂಗ್ರೆಸ್ಸು, ವಿರೋಧಿ ಪಕ್ಷಗಳ ಸರಕಾರನ್ನು ಉರುಳಿಸುವುದರಲ್ಲೇ ನಿರತವಾಗಿದೆಯಂತೆ...."

'ಯಾರೇ ಹಾಗೆಂದವರು?'

'ಯಾರ್ಯಾರು ಯೂಕೆ? ಮಾಜಿ ಗವರ್ನರ್ ಜನರಲ್ ಚಕ್ರವರ್ತಿ ರಾಜಾಜಿಯವರೂ ಮುಖ್ಯಮಂತ್ರಿ ಅಣ್ಣಾದೊರೈ ಅವರೂ ವಿದ್ಯಾರ್ಥಿಗಳಿಗೆ ನೀಡಿದ ಕರೆಯಲ್ಲಿ ಬಹಿರಂಗಪಡಿಸಿದ್ದಾರಲ್ಲಾ...'

'ಅದೊಂದು, ರಾಜಾಜಿ....ಅಣ್ಣಾದುರೈ...."

"ಏನು ಅಣ್ಣೂ ಸನಾ?'

"ರಾಜಾಜಿ ಮೇಲೆ ಗೌರವವಿದೆ. ಅದರೆ, ಅವರು ಮಾಡುವ ಕೆಲಸದ ಮೇಲೆ ಮಾತ್ರ ಜಿಗ ಸ್ಲೆ...."

'ಅಲ್ಲಿ, ಅಂಥಾದ್ದೇನು ಮಾಡಿದರು?.

"ಮಾಡೋದೇನೇ, ಕನ್ನಡಾಂಬೆಗೆ ಅಪಚಾರ ಮಾಡಿದರು...."

"ಅ್ಹ.... ಏನು?'

'ಕನ್ನಡ ಅಂದ್ರೆ ಮಾದ್ರಿಗಳು ತಿಳ್ದಿದ ತೆಲುಗು ಲಿಪಿಯಲ್ಲಿ ಬರೆಯುವ ಬಹು ಮಟ್ಟಿನ ತಮಿಳು ಭಾಷೆ ಎಂದಿದ್ದಾರಂತೆ.!

'ಓಯ್, ಇದೆಂಥದು?

'ಯೂಕೆ?"

"ಅಲ್ರಿ, ಕನ್ನಡವೆಷ್ಟು ಮಾದ್ರೀನ! ತೆಲುಗು ಅರ್ವಾಚೀನವಾದದ್ದು. ಸಾಹಿತ್ಯಕ ದೃಷ್ಟಿಯಿಂದಲೇ ಕನ್ನಡ ಕ್ರಿ. ಶ.ದ ಆರಂಭಕ್ಕೆ ಮುಟ್ಟುತ್ತದೆ—ತಮಿಳಿನಂತೆಯೇ. ಮಾದ್ರಿಗಳು ಇಲ್ಲಿ ಬರುವುದಕ್ಕೆ ಮೊದಲೇ ಕನ್ನಡ ಪ್ರಗತ್ಯವಾಗಿ ಬೆಳೆದಿದೆ. ಕನ್ನಡ ದಿಂದಲೇ ತೆಲುಗು ಹುಟ್ಟಿದ್ದು ಎಂಬ ವಾದವೂ ಇದೆ. ಹಾಗಿರುವಾಗ..."

'ಅನಂದ್ದ ಪ್ರಲಾಪ!"

"ಯಾರದ್ದು?"

"ರಾಜಾಜಿ ಸುದ್ದು"

"ಮತ್ತೆ ಅಣ್ಣಾದುರೈ?'

'ನೋಡು, ಶಿವಸೇನೆಯ ಬಾಳ ಠಾಕ್ರೆ ಅಣ್ಣಾದುರೈಗೆ ಅಭಿನಂದನೆ ನೀಡಿದ್ದಾರೆ...'

"ಏನಂತೆ? ಮುಂಬಯಿಗೆ ಬಂದರೆ ಓಡಿಸುತ್ತೇನೆ ಅಂತಲೆ?"

"ಅವರದ ವಾದಬೇಡ್ವೇ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಜ್ಯಾಂಗದಲ್ಲಿ ಆವಶ್ಯಕತೆಗನುಸಾರ ಸಡಿಸುವುದಿಲ್ಲ; ರಾಷ್ಟ್ರೀಯ ಐಕ್ಯದ ಬಗ್ಗೆ ದೃಢ ನಿಲುವು ತಳೆಯುತ್ತೇನೆ ಎಂದು ಡಿ ಎಂ ಕೆ ನೀತಿ ತಳೆದರೆ, ತಮ್ಮ ಬೆಂಬಲವನ್ನು ಶಿವಸೇನೆ ನೀಡುವುದಂತ.'

'ಹ್ಹೂಂ...."

'ಸದ್ಯ ಹಿಂದಿಯೊಡನೆ ಇಂಗ್ಲಿಷ್ ಸಹ ಅಧಿಕೃತವಾಗಿ ಮುಂದುವರಿಯಬೇಕೆಂದೂ ಮುಂದೊಂದು ದಿನ ಹಿಂದಿಯೇ ಏಕೈಕ ಸಂಪರ್ಕ ಭಾಷೆಯಾಗಬೇಕೆಂದೂ ಶಿವಸೇನೆಯು ನೀತಿ—ಇದು ಡಿ ಎಂ ಕೆಗೆ ಬೆಂಬಲ..."

"ಇಲ್ಲಿಯೇ ನೋಡಿ ಜಾರಿಹೋದು.?"

'ಯಾರು?"

"ಠಾಕ್ರೆ...."

"ಯೂಕೆ?"

"ಹಿಂದಿಯೇ ಬೇಡ ಎಂದು ಅಣ್ಣಾ ಹೇಳುವಾಗ ಮುಂದೊಂದು ದಿನ ಅದೇ ಬೇಕು ಎನ್ನುವದೊಡನೆ ಕೈ ಬೇಗೆ ಮಿಲೀಯುವಾಯಿತು."

'ಇದೇ ಅಣ್ಣಾಗೆ ಅಪಾಯ. ಈಗ ಅಣ್ಣಾ ಏನನ್ನುತ್ತಾರೆ ಎಂಬುದನ್ನು ಮದ್ರಾಸದ ಭವಿಷ್ಯವು ಹೊಂದಿಕೊಂಡಿದೆ.'

'ಇದೆಲ್ಲಾ ಏನ ? ಏಕೆ?"

"ಅಲ್ರೆ, ನಿನ್ನ ರಾಜಾಜಿ—ಅಣ್ಣಾಜಯವ್ರ ಕಥೆ ಅಂದದ್ದು. ಅವ್ರು ಅನ್ನೋದೆಲ್ಲಾ ತಮ್ಮ ಬೇಳೆ ಬೇಯಿಸಿಕೊಳ್ಳೋಕೆ ಮಾತ್ರ.'

"ಅಂದ್ರೆ ಕೇಂದ್ರ ಸರಕಾರ ಕಾಂಗ್ರೆಸ್ಸೇತರ ಸರಕಾರವನ್ನು ಉರುಳಿಸುವ ಪ್ರಯತ್ನ ಮಾಡೋದಿಲ್ವೆ?"

"ಬಿಹಾರದೇ ಅದಕ್ಕೆ ದೃಷ್ಟಾಂತ. ಮತ್ತೆ ನೋಡು...."

'ಏನು.!'

"ಬಿಹಾರದ ರಾಜ್ಯಪಾಲರಾಗಿ ಫಿತ್ರಾನಂದ ಕೂಸಂಗೋಗೋತಮಾನೇಮಕವಾದಾಗಲೇ ಸಂಯುಕ್ತರಂದ ಆಕ್ಷೇಪಣೆ ಹೊರಸಿ, ತನ್ನ ಸರಕಾರವನ್ನುರುಳಿಸಲೆಂದೇ ಇವರ ನೇಮಕವೆಂದು ಮಲ್ಲಿಬ್ಬಿಸಿತು; ಸ್ವಾಗತಕ್ಕೂ ವಿರುದ್ಧ ವಂತ್ರಿ ಹೊರತು ಬೇರೆ ಯೂರೂ ಹೋಗದಾಂದೆಂದು ವಿಧಿಸಿತು.'

"ಹ್ಹೂಂ, ಕೂಸಂಗೋಗೋ ರಾಜ್ಯಪಾಲರಾದ ಮೇಲೆಯೇ ಸಂಯುಕ್ತ ರಂಗ ಸರಕಾರ ಉರುಳಿದ್ದು ತಾನೆ?'

'ಅದು ಸರಿ. ಅದ್ರೆ ಇದ್ರಲ್ಲಿ ಕೂಸಂಗೋ—ಕೇಂದ್ರ ಸರಕಾರದ ತಪ್ಪೇನು? ಪಕ್ಷಾಂತರ ಪಿಡುಗು ಸಂಯುಕ್ತ ಸರಕಾರಕ್ಕೆ ಮುಳುವಾಯಿತು. ಈಗ ಅದೇ ಪಿಡುಗು ಮಂಡಲರಿಗೂ ಬಡಿಯಿತು.'

"ಅಲ್ರಿ, ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳಿಕೆ ತಂದ ಮೇಲೆ ಇಲ್ಲಿ?"

"ಅಲ್ಲಿನ ಕಥೆಯೇ ಬೇರೆ. ಅಲ್ಲೆದ್ದು ದು ಸಂವಿಧಾನಕ್ಕೆ ಬಿತ್ಕಟ್ಟು. ಇಲ್ಲಿ ಸಂವಿಧಾನ ರೀತಿಯಲ್ಲೇ ಮಂತ್ರಿ ಮಂಡಲ ಪತನ...."

"ಅದು ಸರಿರಿ. ಒಂದು ವರ್ಷದಲ್ಲಿ ನಾಲ್ಕು ಮುಖ್ಯ ಮಂತ್ರಿಗಳನ್ನು ಪಡೆದ ರಾಜ್ಯ ಬಿಹಾರ. ಇನ್ನೂ ಮುಂದಿನ ನಾಲ್ಕು ವರ್ಷಗಳಲ್ಲಿ ಅದೆಷ್ಟು ಸರಕಾರಗಳ ಪತನ—ಉತ್ಥಾನವಾಗಲಿವೆಯೋ! ಅದೆಲ್ಲೆ, ಭವಿಷ್ಯನಲ್ಲೋ ಏನೋ, ಹಿಂದೆ ದಿನಕ್ಕೆ ಮೂರು ಸರಕಾರ ರಚನೆಗೊಂಡದ್ದೂ ಇದೆಯಂತಲ್ಲಾ..."

"ಈಗ ಹೇಳು, ಬಿಹಾರದವರು ಬರಗಾಲ ಪೀಡಿತರಾಗಿ ಬಳಲಿ ಬೆಂಡಾಗಿ ಬಿಸು ಸುಯ್ದುರೂ ಮೀಸೆಯನ್ನು ಹೊತ್ತೇ ಇದ್ದಾರೋ ಇಲ್ಲವೋ ಅಂತ!'

"ಕಂಡಿತಕ್ಕೂ — ಮೀಸೆಯಿದ್ದವರು ಅಂದ್ರೆ ಅನ್ನ ಸ್ಥಿ. ಅದ್ರೆ...."

"ಅದ್ರೆಯೇನ ?"

"ಅನ್ನ ಮೀಸೆಯಿಂದ ಹನತೆಗೇನೂ

(ಒಂಭತ್ತನೇ ಪುಟ ನೋಡಿರಿ)

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ; ಹಾಗೂ ಎಲ್ಲಾ ತರದ ವಿಚಾರಿಸಿದೆ.

HOTEL SATKAR
Boarding & Lodging
Near Corporation Office, 9, Mission Road
Bangalore-2

ನಾವು ನಡೆದ ದಾರಿ

ಭಾರತದಲ್ಲಿ ಕರ್ನಾಟಕದ ಸ್ಥಾನ

ಬರೆದವರು : ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಕರ್ನಾಟಕ ಭಾರತ:— ಭಾರತದ ಸಂಸ್ಕೃತಿಗೆ ಕರ್ನಾಟಕವು ಸಾಹಿತ್ಯ, ಸಂಗೀತ, ಲಲಿತಕಲೆ ಮತ್ತು ರಾಜಕೀಯ ತತ್ವದ ಮುಖಾಂತರ ತನ್ನ ಕಾಣಿಕೆಯನ್ನು ಸಲ್ಲಿಸಿ ಅದನ್ನು ಬೆಳೆಸಿದೆ. ಹೀಗಿದ್ದರೂ ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಒಂದು ಅಂಗವಾಗಿದೆ. ಇದು ಭಾರತೀಯ ಸಂಸ್ಕೃತಿಯನ್ನು ಬಿಟ್ಟು ಬೇರೆಯಾಗಿಲ್ಲ. ಭಾರತೀಯ ಸಂಸ್ಕೃತಿಯ ಇತಿಹಾಸದಿಂದ ಕರ್ನಾಟಕದ ಕಾಣಿಕೆಗಳಾದ ಚಾಲುಕ್ಯ ರಾಷ್ಟ್ರಕೂಟ, ಹೊಯ್ಸಳರ ವಾಸ್ತು ಶಿಲ್ಪ, ರಾಮಾನುಜ ಮತ್ತು ಮಧ್ವಾಚಾರ್ಯರ ತತ್ವಜ್ಞಾನ, ವಿಜಯನಗರದ ಕಾಣಿಕೆ, ಕರ್ನಾಟಕ ಫೌಜದಾರ ರಾಜಕೀಯ ಭದ್ರತೆ, ಬಸವೇಶ್ವರ ಮುಂತಾದ ಶರಣರ ಭಕ್ತಿಯ ವಚನಗಳು, ಮತ್ತು ದಾಸರಿಂದ ನಿರ್ಮಿತ ಭಕ್ತಿ ಸಾಹಿತ್ಯವನ್ನು ಅಳಿಸಿದರೆ, ಭಾರತೀಯ ಸಂಸ್ಕೃತಿ ಅ ಮಟ್ಟಿಗೆ ನಿರ್ಜೀವವೇ ಸರಿ. ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯೊಂದಿಗೆ ಹಾಸು ಹೊಕ್ಕಾಗಿರುವುದು ನಿರ್ವಿವಾದ.

ಆರ್ಯ — ದ್ರಾವಿಡ ಸಂಗಮ:— ಧರ್ಮ, ತತ್ವ ಜ್ಞಾನಗಳು ಕರ್ನಾಟಕ ಸಂಸ್ಕೃತಿಯಲ್ಲಿ ಆಡಕವಾಗಿವೆ. ಮೂಲೆ ಮೂಲೆಗಳಲ್ಲಿರುವ ಗುಡಿಗಳು, ಶಿಲಾ ಶಾಸನಗಳು, ವೀರಕಲ್ಲುಗಳು ಲಲಿತ ಕಲಾಕೃತಿಗಳು ಕರ್ನಾಟಕ ಸಂಸ್ಕೃತಿಯ ಹಿರಿಮೆಯನ್ನು ಸಾರುತ್ತಿವೆ. ಈ ಸಂಸ್ಕೃತಿಯ ಮುಖ್ಯ ವೈಶಿಷ್ಟ್ಯ—ಆರ್ಯ--ದ್ರಾವಿಡ ಸಂಸ್ಕೃತಿಯ ಸಮ್ಮಿಲನ. ಇದನ್ನು ಇಂದೂ ನೋಡಬಹುದು. ಮುಖ್ಯವಾಗಿ ನಮ್ಮ ಭಾಷೆ, ಕನ್ನಡದಲ್ಲಿ ಸಂಸ್ಕೃತ ಶಬ್ದಗಳು ಸಮಾನ ಸಂಖ್ಯೆಯಲ್ಲಿವೆ. ಆದರೆ ಇತರ ದ್ರಾವಿಡ ಭಾಷೆಗಳು ಹಾಗಿಲ್ಲ; ತಮಿಳು ಭಾಷೆಯು ಸಂಸ್ಕೃತ ಭಾಷೆಯ ವರ್ಚಸ್ಸಿಗೆ ಹೆಚ್ಚು ಬೀಳಲಿಲ್ಲ. ತೆಲುಗು ಮಲೆಯಾಳಿ ಭಾಷೆಗಳು ಸಂಸ್ಕೃತ ಭಾಷೆಗೆ ಮಾರು ಹೋದುವು. ಕನ್ನಡನಾಡಿನಲ್ಲಿಯ ವಿವಾಹ, ನಾಮಕರಣ ಉಪನಯನಾದಿ ಧಾರ್ಮಿಕ ಕರ್ಮಗಳು ವಿದ್ಯುಕ್ತವಾಗಿ ನಡೆಯುತ್ತಾ ಇರುವುದೇ ಆರ್ಯ ಸಂಸ್ಕೃತಿಗಳ ಪ್ರತೀಕ. ಕನ್ನಡನಾಡಿನರೂಢಿಯಲ್ಲಿಯ ನಾಗಪೂಜೆ, ಭೂತ ಪೂಜೆ, ಗ್ರಾಮ ದೇವತಾ ಪೂಜೆ ಇತ್ಯಾದಿಗಳು ದ್ರಾವಿಡ ಸಂಸ್ಕೃತಿಯ ಕುರುಹುಗಳು. ಕರ್ನಾಟಕದ ಶಿಲ್ಪಗಳಲ್ಲೂ ಆರ್ಯ ದ್ರಾವಿಡ ಸಂಸ್ಕೃತಿಯ ಸಂಗಮವನ್ನು ನೋಡಬಹುದು. ಕನ್ನಡದ ಬುದ್ಧಿ ಜೀವಿ ಆರ್ಯ ಸತ್ವದಿಂದ ಸ್ಫೂರ್ತಿ ಪಡೆದಿದ್ದರೆ ಕನ್ನಡಿಗರ ಕಲಾ ಪಂಥಕ ದ್ರಾವಿಡ ಸಂಸ್ಕೃತಿಯಿಂದ ಸ್ಫೂರ್ತಿ ಪಡೆದುದಾಗಿದೆ. ಆರ್ಯ-ದ್ರಾವಿಡ ಸಂಸ್ಕೃತಿಗಳ ಸಮ್ಮಿಲನವನ್ನು ಕರ್ನಾಟಕದಲ್ಲಿ ನಿಚ್ಚಳವಾಗಿ ನೋಡಬಹುದು.

ರಾಜಕೀಯ ಕಾಣಿಕೆ:—

ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಮತ್ತು ರಾಜಕೀಯ ಭದ್ರತೆಗೆ ಕರ್ನಾಟಕದ ಕಾಣಿಕೆ ಬಹಳವಾಗಿದೆ. ಕರ್ನಾಟಕದ ಬಲ್ಲವರ್ತಿಗಳು ದಕ್ಷಿಣ ಭಾರತಕ್ಕೆ ರಾಜಕೀಯ ಭದ್ರತೆಯನ್ನು ಒದಗಿಸಿ ಭಾರತೀಯ ಸಂಸ್ಕೃತಿಯನ್ನು ಕಾಪಾಡಿದುದು ಮೊದಲನೆಯ ಕಾಣಿಕೆ. ಕನ್ನಡಿಗರು ಒಂದು ಸಾವಿರ ವರ್ಷ ಹಿರಿಯರಸರಾಗಿ ವಿಶಾಲ ಸಾಮ್ರಾಜ್ಯವನ್ನು ಆಳಿದರು. ಕ್ರಿಸ್ತ ಶಕ 7ನೇ ಶತಮಾನದಿಂದ 16ನೇ ಶತಮಾನದ ವರೆಗೆ ಕನ್ನಡ ನಾಡಿನಲ್ಲಿ ರಾಜಕೀಯ ಭದ್ರತೆಯನ್ನು ಉಳಿಸಿಕೊಂಡು, ದಕ್ಷಿಣಭಾರತದಲ್ಲಿ ಆಗ ಪರಕೀಯವಾಗಿದ್ದ ಇಸ್ಲಾಂ ಸಂಸ್ಕೃತಿಯ ಹರಡುವಿಕೆಯನ್ನು ತಡೆಗಟ್ಟಿದರು.

ರಾಜಕೀಯ ನೀತಿ:-

ಕರ್ನಾಟಕದ ರಾಜಕೀಯ ತತ್ವಕ್ಕೆ ಪ್ರಜೆಗಳ ಹಿತವನ್ನು ಕಾಪಾಡುವ ಗುರಿ ಇದ್ದಿತು. ಶಾಸನಗಳಿಂದ ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆಯನ್ನು ರಾಜರು ಮಾಡುತ್ತಿದ್ದರೆಂದೂ ತಿಳಿದು ಬರುತ್ತದೆ. ಕಲ್ಯಾಣ ಚಾಲುಕ್ಯ ಆರನೆ ಸೋಮೇಶ್ವರನು 'ಮಾನಸೋಲ್ಲಾಸ' ಎಂಬ ಪುಸ್ತಕದಲ್ಲಿ ರಾಜರು ಹೇಗೆ ರಾಜ್ಯ ನಡೆಸಬೇಕೆಂಬ ವಿಚಾರ ತಿಳಿಸಿದ್ದಾನೆ. ಮಧುರ ಕೃತಿಯಿಂದಾಗಿ ಸುಮೇರ ರಾಜ್ಯದ ಕಲ್ಪನೆಯನ್ನು ಕನ್ನಡಿಗರು 15ನೇ ಶತಮಾನದಲ್ಲಿ ಹೊಂದಿದ್ದರೆಂದು ತಿಳಿಯಬಹುದು. ಇವನು ವಿಜಯನಗರದ ಸಾಮ್ರಾಟ ಇಮ್ಮಡಿ ದೇವರಾಯನ ಕಾಲದವನು. ಅವನ ಅಭಿಪ್ರಾಯದಂತೆ ರಾಜ್ಯದ ಉದ್ದೇಶ ಹೀಗಿರಬೇಕು : "ಪ್ರಜೆಗಳಿಗೆ ಪುಷ್ಟಿಕರವಾದ ಆಹಾರವನ್ನು ಒದಗಿಸಬೇಕು, ಬಟ್ಟೆಬರೆಯನ್ನು ಒದಗಿಸಬೇಕು. ರಾಜ್ಯವು ಪ್ರಜೆಗಳ ದಾಹ, ಸಂತಾಪ, ನಾನಾ ಸಂಕಟಗಳನ್ನು ಪರಿಹಾರ ಮಾಡಬೇಕು. ಉದಾರ ಹೃದಯದಿಂದ ಈ ಕಾರ್ಯ ಕೈಗೊಳ್ಳಬೇಕು. ಪ್ರಜೆಗಳಿಗೆ ವಸತಿ ಸೌಕರ್ಯ ಕಲ್ಪಿಸಬೇಕು. ಪ್ರತಿಯೊಬ್ಬ ಪ್ರಜೆಯೂ ಗುಡಿಸಲಾಗಲಿ, ದನಕ್ಕೆ ಕೊಟ್ಟಿಗೆಯಾಗಲಿ, ಸುಖವಂತರಾಗಬೇಕು. ಜನರು ಹೆದ್ದಾರಿಯಲ್ಲಿ ಹೋಗದಂತೆ ಕಂಟಕರಾದದಂತೆ, ಸಮಾಜ ಭಯಂಕರವಾಗದಂತೆ, ತಕ್ಕ ಶಾಸನಗಳನ್ನು ಮಾಡಿ ದುಷ್ಟ ಶಿಕ್ಷೆಗೆ ಶಿಷ್ಟ ಸಂರಕ್ಷಣಾ ಕಾರ್ಯ ಮಾಡಬೇಕು.' 12ನೇ ಶತಮಾನದಲ್ಲಿ ರಾಜ್ಯದಲ್ಲಿ ಶಾಂತಿ ನೆಲಸಲು ದಂಡವನ್ನು ಉಪಯೋಗಿಸಬಹುದೆಂದೂ, ಜನರ ಸಂತೃಪ್ತಿಯನ್ನು ಅವರ ಸೌಹಾರ್ದದಿಂದ ಪಡೆಯ ಬೇಕೆಂದೂ ಕನ್ನಡಿಗರರಸರು ಅರಿತಿದ್ದರು. ಕನ್ನಡ ನಾಡಿನಲ್ಲಿ ಪ್ರಜೆಗಳಿಗೆ ರಕ್ಷಣೆಯಿತ್ತು; ಯೋಗ್ಯ ಆಡಳಿತ ಇತ್ತು ಮತ್ತು ಅವರು ಶ್ರಮಜೀವಿಗಳಾಗಿದ್ದರು ಎಂಬ ವಿಚಾರವನ್ನು ಪರದೇಶೀ ಯಾತ್ರಿಕರು ಉಲ್ಲೇಖಿಸುತ್ತಾರೆ. ಹೊಯ್ಸಳ ಆರನೆ ಇಮ್ಮಡಿ ವೀರಬಲ್ಲಾಳನ ಶಾಸನದಲ್ಲಿ ಬಲ್ಲಾಳದೇವರಸರು ಕಲ್ಯಾಣ ಪರ್ಯಂತವಾಗಿ ಸಕಲ ಜನ ಕಲ್ಯಾಣ ಮಹೋತ್ಸಾವಾದಿನೇಕ ಚ್ಛತ್ರಚ್ಛಾಯೆಯಿಂ ಸುಖ ಸಂಕಥಾ ವಿನೋದದಿಂದ ರಾಜ್ಯ ಸೈಯುತ್ತಲಿದ್ದರೆಂದು ಹೇಳಲಾಗಿದೆ. ಇದರಿಂದಾಗಿ ಕನ್ನಡಿಗರಿಗೆ ಸಕಲಜನ ಕಲ್ಯಾಣದ ಕಲ್ಪನೆ ಇತ್ತೆಂದು ತಿಳಿಯಬಹುದು. ಕಲ್ಯಾಣ ಚಾಲುಕ್ಯರು ಉದಾರ ರಾಜನೀತಿಯಿಂದ ಎರಡು ಮೂರು ಶತಮಾನಗಳ ಕಾಲ ರಾಜ್ಯವಾಳಿದರು. ಅವರಲ್ಲಿ ಇಮ್ಮಡಿ ಸೋಮೇಶ್ವರನು ತನ್ನ ಸಾಮ್ರಾಜ್ಯವನ್ನು ಮೂರು ಪ್ರಾಂತ್ಯಗಳಾಗಿ ಮಾಡಿ ಅಲ್ಲಿ ತನ್ನ ನಂಬಿಗಸ್ಥರನ್ನು ಮಾಂಡಲೀಕರನ್ನಾಗಿ ಮಾಡಿದನು. ಇದರಿಂದ ಚಾಲುಕ್ಯರು ರಾಜಾಧಿಕಾರದ ವಿಕೇಂದ್ರೀಕರಣದ ರಹಸ್ಯವನ್ನು ತಿಳಿದಿದ್ದರೆಂದು ಕಾಣುತ್ತದೆ. ಇಷ್ಟಲ್ಲದೆ ಕರ್ನಾಟಕದ ವಿವಿಧ ರಾಜವಂಶಗಳೂ, ಭಾರತದ ಇತರ ಪ್ರಾಂತ್ಯಗಳಲ್ಲಿ ರಾಜ್ಯಗಳನ್ನು ಸ್ಥಾಪಿಸಿ ಆ ಪ್ರದೇಶಗಳಲ್ಲಿ ರಾಜಕೀಯ ಭದ್ರತೆಯನ್ನು ತಂದು, ಅಲ್ಲಿನ ಕಲೆ, ಸಾಹಿತ್ಯವನ್ನು ಪ್ರೋತ್ಸಾಹಿಸಿದರೆಂಬುದು ಕನ್ನಡಿಗರಿಗೆ ಹೆಮ್ಮೆಯ ವಿಚಾರ. ಆಂಧ್ರ, ಬಂಗಾಳ, ಒರಿಸ್ಸಾ, ಗುಜರಾತ್, ನೇಪಾಳಗಳಲ್ಲಿ ಕನ್ನಡದ ಅರಸುಗಳು ಆಳಿದುದು ನಮಗೆ ಅಭಿಮಾನಾಸ್ಪದವಾಗಿದೆ.

ಸ್ಥಳೀಯ ಸರಕಾರ: - ಕನ್ನಡಿಗರು ಸ್ಥಳೀಯ ಸರಕಾರವನ್ನು ಅಲಕ್ಷಿಸಲಿಲ್ಲ. ಸ್ಥಳೀಯ ಸರಕಾರವನ್ನು 'ಮಹಾ ಸಭೆ' ಗಳು ನಡೆಸುತ್ತಿದ್ದವು. ಆ ಸಭೆಯು ಹಲವಾರು ಪಂಗಡಗಳನ್ನು ಒಳಗೊಂಡಿತ್ತು. ರಾಜರುಗಳು ಆ ಸಭೆಯ ಸಹಾಯದಿಂದಲೇ ಆಡಳಿತ ಫಡೆಸುತ್ತಿದ್ದವು. ಈ ಸಭೆಗಳು ವ್ಯಾಪಾರ, ಕೈಗಾರಿಕೆ, ಅಳತೆ, ತೂಕ, ಸುಂಕ, ಸಾರಿಗೆ, ಸ್ಥಳೀಯ ನ್ಯಾಯ ಪಾಲನೆ ಸಾರ್ವಜನಿಕ ಕಾರ್ಯಗಳನ್ನು ನೋಡುತ್ತಿದ್ದವು. ನಾಡಿನರಸನು ಸರಿಯಾದ ಕಾಲವನ್ನು ನೋಡಿ ಪ್ರದೇಶದ ಆಕಾರತೆಯನ್ನು ಕಂಡುಈ ಸಭೆಗಳಿಗೆ

(ಎಂಟನೇ ಪುಟ ನೋಡಿರಿ)

ವಿದ್ಯಾರ್ಥಿಗಳ ನೆರವಿಗೆ
ಸಿಂಡಿಕೇಟ್ ಬ್ಯಾಂಕು

ಭಾರತದಲ್ಲಿ ತಾಂತ್ರಿಕ ಮತ್ತು ಉಚ್ಚ ಶಿಕ್ಷಣ ಪಡೆಯಲು ಬಯಸುವ ಯೋಗ್ಯ ವಿದ್ಯಾರ್ಥಿಗಳಿಗೆ ಸಿಂಡಿಕೇಟ್ ಬ್ಯಾಂಕು ರೂ. 3000ದ ವರೆಗಿನ ಸಾಲವನ್ನು ನೀಡುತ್ತದೆ; ವಿದೇಶ ಶಿಕ್ಷಣಕ್ಕಾಗಿ ಬ್ಯಾಂಕು ಕಳೆದ ಹಲವು ವರ್ಷಗಳಿಂದ ವಿದ್ಯಾರ್ಥಿಗಳಿಗೆ ರೂ. 5000ದ ವರೆಗಿನ ಸಾಲ ನೀಡುವ ಯೋಜನೆಯನ್ನು ಇರಿಸಿಕೊಂಡಿದೆ.

ಹಣದ ನೆರವನ್ನು ನೀಡುವಲ್ಲಿ ಬ್ಯಾಂಕು ತನ್ನೊಡನೆ ಈ ಮೊದಲೇ ವ್ಯವಹಾರ ಸಂಪರ್ಕವಿಟ್ಟುಕೊಂಡಿರುವ ಮಂದಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡುತ್ತದೆ. ಇವು ಸಿಂಡಿಕೇಟಿನಲ್ಲಿ ಇಷ್ಟರಲ್ಲೇ ಖಾತೆಯನ್ನು ತೆರೆದಿಲ್ಲವಾದರೆ ಇಂದೇ ಒಂದನ್ನು ತೆರೆಯಿರಿ. ಕೇವಲ ರೂಪ್ಯಾ 5ನ್ನು ತೆತ್ತು ಸಿಂಡಿಕೇಟಿನಲ್ಲಿ ಖಾತೆಯನ್ನು ತೆರೆಯುವ ಅವಕಾಶವಿದೆ.

ಮೇಲಿನ ಸೌಲಭ್ಯಗಳ ಸದುಪಯೋಗವನ್ನು ಹೊಂದಲು ಸಿಂಡಿಕೇಟ್ ಬ್ಯಾಂಕು ನಾಡಿನ ವಿದ್ಯಾರ್ಥಿಗಳನ್ನು ಆಹ್ವಾನಿಸುತ್ತದೆ. ವಿದ್ಯಾರ್ಥಿಗಳ ನೆರವಿನ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಿಂಡಿಕೇಟಿನ ಯಾವುದೇ ಶಾಖೆಯಿಂದ ತಾವು ಪಡೆಯಬಹುದು.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 224

ಠೇವಣಿ ಭಂಡವಾಳ ಮತ್ತು ಕಾಯಿಟ್ಟ ನಿಧಿ: ರೂ. 2,59 ಕೋಟಿ.

— ಟಿ. ಎ. ಪೈ
ಚೆಯರ್‌ಮೇನ್.

ಬರೆದವರು: ಶ್ರೀ ಶಿವಶಂಕರ

ತಮಿಳು ನಾಡಿನಲ್ಲಿ ಅಖಿಲ ಪ್ರಪಂಚ ತಮಿಳ್ ಸಮ್ಮೇಳನ ನಡೆದಾಗ

ಉತ್ತರದವರ ಅಪೇಕ್ಷೆಯ ವಿರುದ್ಧವಾಗಿ, ಅಂದರೆ ಹಿಂದಿ ಆಡಳಿತ ಭಾಷೆಯಾಗುವದರ ವಿರುದ್ಧವಾಗಿ ಯುದ್ಧ ಮಾಡಲು ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಇಂಗ್ಲೀಷ್ ಇನಿಯರಿಗೆ ಕರೆ ಇತ್ತಿದ್ದರು; ಅಂತೆಯೇ ಅಂತರ್ಯುದ್ಧಕ್ಕೆ ದ್ರಾವಿಡ ಮುನ್ನೇಟ್ರ ಕಳ್ಳಗಂ ಸೂಚನೆ ಇತ್ತಿತ್ತು. ಇಂತಹ ಸಮಯದಲ್ಲೇ ಬ್ರಿಟಿಷ್ ಕೌನ್ಸಿಲ್, ಕಮ್ಯೂನಿಸ್ಟ್ ಪಾರ್ಟಿ, ಮುಸ್ಲಿಂ ಲೀಗುಗಳಂತಹ ದೇಶದ್ರೋಹಿ ದುಃಶಕ್ತಿಗಳು ಎದುರು ನೋಡುತ್ತಿರುತ್ತವೆ. ಆಚಾರ್ಯರವರ ಮಾರ್ಗದರ್ಶನ, ದ್ರಾ. ಮು. ಕ. ದ ಅಪ್ಪಣೆಯಂತೆ ವಿದ್ಯಾರ್ಥಿಗಳ ವೇಷದಲ್ಲಿ, ಜೆಸಿನಲ್ಲಿ, ಹೇಡಿ ರಾಜಕೀಯ ಪಕ್ಷಗಳು ಭಾರೀ ಹರಣ ನಡೆಸಿ ಬಿಟ್ಟವು. ಅದನ್ನು ಅಂಕೆಯಲ್ಲಿಟ್ಟುಕೊಳ್ಳಲು ಅಮಾತ್ಯರುಗಳಿಗೆ ಅಸಾಧ್ಯವೆನಿಸಿತು. ಇದು ದಶಂಬರ ತಿಂಗಳ ಕೊನೆಯ ಭಾಗದಲ್ಲಿ ನಡೆದದ್ದು. ಜನವರಿಯಲ್ಲಿ ತಮಿಳ್ನಾಡಿನ ಮದ್ರಾಸ್ ಮಹಾನಗರದಲ್ಲಿ ಅಖಿಲ ಪ್ರಪಂಚ ತಮಿಳು ಮಹಾ ಸಭೆ ನಡೆಯಲು ಏರ್ಪಾಡು ಆಗುತ್ತಿತ್ತು. ರಣರಂಗದ ನಡುವೆ ಮಹಾ ಸಭೆ ಅಥವಾ ಪ್ರದರ್ಶನ ನಡೆಯಲು ಸಾಧ್ಯವೇನು? ಆದುದರಿಂದ ಮಂತ್ರಿ ತಿರು ಕರುಣಾನಿಧಿಯವರು, ತಮಿಳು ಕಾನ್ಫರೆನ್ಸ್ ಮುಗಿಯುವ ವರೆಗಾದರೂ ಗಮ್ಮಿರಬೇಕೆಂದು ವಿದ್ಯಾರ್ಥಿಗಳ ಬಳಿ ಕೇಳಿಕೊಂಡರು. ವಿದ್ಯಾರ್ಥಿಗಳು ಒಪ್ಪಿದರು. ಕ್ರಿಸ್‌ಮಸಿನ ರಜೆಯನ್ನು ಹಾಗೆಯೇ ಮುಂದರಿಸಲಾಯಿತು. ತಮಿಳು ಕಾನ್ಫರೆನ್ಸಿನಲ್ಲಿ ವಿದ್ಯಾರ್ಥಿಗಳಿಗೆ ಭಾಗವಹಿಸಲು ಸುಲಭ ಸಾಧ್ಯವಾಗಬೇಕೆಂದು ಈ ಏರ್ಪಾಡು! ಒಂದು ರೀತಿಯ ಶಾಂತಿ ತಮಿಳ್ನಾಡಿನಲ್ಲಿ ಪಸರಿಸಿತು. ಜಗತ್ತಿನ ನಾನಾ ದೇಶಗಳಿಂದ ಪ್ರತಿನಿಧಿಗಳು ಮಹಾ ಸಮ್ಮೇಳನದಲ್ಲಿ ಭಾಗವಹಿಸಲು ಮಹಾ ನಗರ ಮದ್ರಾಸಿಗೆ ಬಂದರು.

ಸುಮಾರು ಒಂದು ವಾರ ಕಾಲದಿಂದ ಬಸ್ಸಿನಲ್ಲಿ ಪ್ರಯಾಣಮಾಡಲೂ ಹೆದರುತ್ತಿದ್ದ ಮದ್ರಾಸು ನಗರ ನಿವಾಸಿಗಳು ಪ್ರಯಾಣಕ್ಕೆ ಮುಂದೆ ಬಂದರು. ಎಲ್ಲಿ ನೋಡಿದರೂ ಬಸ್ಸ್ ನಿಲ್ದಾಣಗಳಲ್ಲಿ ಜನ ಜಂಗುಳಿ ಹೆಚ್ಚಿತು. ಅವರು ಕೆಡಲ ಕಡೆ ಹೋಗಲು ತವಕ ಪಡುತ್ತಿದ್ದರು. ಅಲ್ಲಿ ಅನೇಕಾನೇಕ ವಿಗ್ರಹಗಳನ್ನು ನಿಲ್ಲಿಸಲು ಏರ್ಪಾಡು ಮಾಡಲಾಗಿತ್ತು.

ನಗರದಲ್ಲಿ ಈ ರೀತಿ "ರಣರಂಗ" ಶಾಂತಗೊಂಡು ಮಹಾ ಪ್ರದರ್ಶನದ ಪರದಾಟಕ್ಕೆ ಆರಂಭವಾಯಿತು. ಇಂತಹ ಭಾರೀ ಪ್ರದರ್ಶನಕ್ಕಿಂತ ಮುಂಚೆ ಗಣಪತಿ ಪೂಜೆ, ಧ್ವಜಾರೋಹಣ ಮುಂತಾದ ಕಾರ್ಯಕ್ರಮ ಘಡಿಯುವದು ಸ್ವಾಭಾವಿಕ. ಆದರೆ ತಮಿಳು ಪ್ರದರ್ಶನದಲ್ಲಿ ನಡೆದುದು ಹಾಗಲ್ಲ. ತಮಿಳು ಪ್ರದರ್ಶನದ ಸಮಯ ಕಡಲಕರೆಯ ಉದ್ದಕ್ಕೆ ತಮಿಳು ಖ್ಯಾತಿಗೆ ಸೇವೆ ಸಲ್ಲಿಸಿರುವ ಪ್ರಮುಖರ ವಿಗ್ರಹಗಳನ್ನು ನಿಲ್ಲಿಸಲು ತೀರ್ಮಾನವಾಗಿತ್ತು. ಈ ವಿಗ್ರಹಗಳನ್ನು ನಿಲ್ಲಿಸುವ ಮುಂಚೆ ಮದ್ರಾಸಿನ ಪ್ರಚಲಿತ ಮುಖ್ಯ ಮಂತ್ರಿ ತಿರು ಅಣ್ಣಾದೊರೈಯವರ ವಿಗ್ರಹವನ್ನು ನಿಲ್ಲಿಸಲಾಯಿತು. ಅದರ ಅನಾವರಣ ಮಾಡಿದವರು ತಿರು (ಮಿಸ್ಟರ್) ಆರ್ಕಾಟ್ ರಾಮಸ್ವಾಮಿ ಮೊದಲಿಯೂರ್‌ರವರು. ಇವರು ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲಿಯೂರ್‌ರವರ ಸಹೋದರರು. ಇವರ ನೇತೃತ್ವದಲ್ಲೇ ಮದ್ರಾಸ್ ಮಹಾನಗರದಲ್ಲಿ ಇಂಗ್ಲಿಷ್ ಇನಿಯರ ಕಾನ್ಫರೆನ್ಸ್ ಘಡೆದದ್ದು. ಇದೀಗ ಅವರು ತಮಿಳು ಕಾನ್ಫರೆನ್ಸಿಗೆ ಬಂದಿರ. ತ್ತಾರೆ! ಬ್ರಿಟಿಷರ ಕಾಲದಲ್ಲಿ ಇವರು ಜಸ್ಟೀಸ್ ಪಾರ್ಟಿಯ ಪ್ರಮುಖರಾಗಿದ್ದರು ಮತ್ತು ತಿರು ಕಾ. ನ. ಅಣ್ಣಾದೊರೈಯವರ ರಾಜಕೀಯ ಗುರುವೂ ಆಗಿದ್ದರು. ಇದು ನಡೆದದ್ದು ಜನವರಿ ದಿನಾಂಕ ಒಂದರಂದು.

ದಿನಾಂಕ ಎರಡರಂದು ಇನ್ನೂ ಹತ್ತು ವಿಗ್ರಹಗಳ ಅನಾವರಣ ಕಾರ್ಯಕ್ರಮ ನಡೆಯಿತು. ಈ ಹತ್ತು ವಿಗ್ರಹಗಳನ್ನು ಕಡಲು ಕರೆಯ ರಸ್ತೆಯ ಉದ್ದಕ್ಕು ನಿಲ್ಲಿಸಲಾಗಿರುತ್ತದೆ. ಹತ್ತು ವಿಗ್ರಹಗಳ ಅನಾವರಣ ಕಾರ್ಯಕ್ರಮವನ್ನು ಹತ್ತು ಜನರು ಏಕ ಕಾಲದಲ್ಲಿ ನಡೆಸಿದರಾದರೂ, ಒಂದೆಡೆ ಪ್ರಚಲಿತ ಮುಖ್ಯ ಮಂತ್ರಿ, ಮಾಜಿ ಮುಖ್ಯ ಮಂತ್ರಿ ಹಾಗೂ ಇತರ ಗಣ್ಯರು ವ್ಯಕ್ತಿಗಳು ಕಲೆತು ಅಲ್ಲಿ ಹತ್ತು ಭಾವಚಿತ್ರಗಳ ಅನಾವರಣ ಕಾರ್ಯಕ್ರಮ ಒನ್ಮೆಲೆ ನಡೆಯುವಂತೆ ಭಾಗವಹಿಸಿದರು. ತಿರು ವಳ್ಳುವರ್, ಶಂಖಿ, ಅವ್ವೈಯ್ಯಾರ್, ಕನ್ನಗಿ, ಭಾರತಿ, ಚಿದಂಬರ ಪಿಳ್ಳೈ, ಭಾರತಿದಾಸ, ಕಾಲ್ಡ್‌ವೆಲ್ಸ್, ವೀರಮಾಮುನಿವರ್ ಮತ್ತು ಪೋಪ್—ಇವರ ಹತ್ತು ವಿಗ್ರಹಗಳವು. ಇದರಲ್ಲಿ ಕಾಲ್ಡ್‌ವೆಲ್ಸ್ ಮಾತ್ರ ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತಿದ್ದು, ಮಿಕ್ಕೆಲ್ಲರೂ ಭಿನ್ನ ಭಿನ್ನ ಭಂಗಿಗಳಲ್ಲಿ ನಿಂತು ಕೊಂಡಿದ್ದಾರೆ. (ವಿಗ್ರಹಗಳ ವಿಷಯ ಪ್ರತ್ಯೇಕವಾಗಿ ನೋಡೋಣ. ಇಲ್ಲಿ ಇಷ್ಟೇ ಸಾಕು.)

ದಿನಾಂಕ ಮೂರರಂದು ನಗರದಲ್ಲಿ ಎಲ್ಲೆಲ್ಲಿದ್ದ ಸಡಗರ, ಕಾರ್ಯಾಲಯ—ಕಛೇರಿ, ಕಾರ್ಖಾನೆ ಮುಂತಾದವುಗಳಿಗೆ ರಜೆ ಕೊಡಬೇಕೆಂದು ಮದ್ರಾಸು ಸರ್ಕಾರ ಆಜ್ಞೆ ಇತ್ತಿದ್ದಂತೆ, ಎಲ್ಲರಿಗೂ ರಜೆ ಕೊಡಲಾಗಿತ್ತು. ಈ ದ್ವಿತೀಯ ಮಹಾ ಸಭೆಯ ಉದ್ಘಾಟನೆಗೆ ದಿಲ್ಲಿಯಿಂದ ರಾಷ್ಟ್ರಾಧ್ಯಕ್ಷ ಶ್ರೀ ಝಾಕೀರ ಹುಸೇನರು ಬಂದಿದ್ದರು. ಶ್ರೀ ಝಾಕೀರ ಹುಸೇನರು 'ಈದ್' ಪ್ರಾರ್ಥನೆಯಲ್ಲಿ ಭಾಗವಹಿಸಬೇಕಾಗಿತ್ತು. ಆದು ಯಾವಾಗವೆಂಬುದು ನಿಶ್ಚಿತವಾಗಿ ಗೊತ್ತಿಲ್ಲದ ಕಾರಣ, ದಿನಾಂಕ ಮೂರರಂದು ಮದ್ರಾಸಿನ ಮಸೀದಿಯಲ್ಲಿ ಆದಕ್ಕಾಗಿ ವಿಶೇಷ ಏರ್ಪಾಡು ಮಾಡಲಾಗಿತ್ತು. ಆದರೆ ಆ ಹಬ್ಬ ದಿನಾಂಕ ೨ರಂದೇ ಬಂದುದರಿಂದ ಇಲ್ಲಿನ ವಿಶೇಷ ಏರ್ಪಾಡು ಹಾಗೆಯೇ ಉಳಿಯಿತು. ಇಲ್ಲಿ ಮುಖ್ಯ ವಿಷಯವೆಂದರೆ ಅಧ್ಯಕ್ಷರು ಮಸೀದಿಗೆ ಪ್ರಾರ್ಥನೆ ಸಲ್ಲಿಸಲು ಹೋಗುವದಲ್ಲ, ಇಲ್ಲಿಗೆ ದ್ರಾ. ಮು. ಕ. ದ ಮನೋಭಾವನೆಯೇ ಹಿಂದೆ ಶ್ರೀ ರಾಧಾಕೃಷ್ಣನ್‌ರವರು ರಾಷ್ಟ್ರಾಧ್ಯಕ್ಷರಾಗಿದ್ದಾಗ ಮಧುರೈಯ ಮೀನಾಕ್ಷಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ಬರುವರೆಂಬ ಸುದ್ದಿ ತಿಳಿದೊಡನೆ ಈ ದ್ರಾ. ಮು. ಕ., ಅಂದಿನ ವಿರೋಧ ಪಕ್ಷ, ವಿರೋಧಿಸಿತ್ತು. ಈಗ ಇವರೇ ಏರ್ಪಾಡು ಮಾಡಿದ್ದಾರೆ! ಅಂದಿಗೆ ಅದೇ ಸುಖ, ಇಂದಿಗೆ ಇದೇ ಸುಖವೇನು? ಇಲ್ಲಿ ದ್ರಾ. ಮು. ಕ. ವು ಶ್ರೀ ಝಾಕೀರ ಹುಸೇನರು ರಾಷ್ಟ್ರಾಧ್ಯಕ್ಷ ಪದವಿಯ ಚುನಾವಣೆಗೆ ನಿಂತಿದ್ದಾಗ ವಿರೋಧಿಸಿರುವದನ್ನು ಜ್ಞಾಪಿಸಿಕೊಳ್ಳಬಹುದು. ರಾಷ್ಟ್ರಾಧ್ಯಕ್ಷರು ದ್ರಾ. ಮು. ಕ. ಕ್ಕೆ ಜೆಸ್ಸಾಗಿ ಬುದ್ಧಿವಾದ ಹೇಳಿ ಹೋಗಿದ್ದಾರೆ.

ದಿನಾಂಕ ಮೂರರಂದು ಬೆಳಿಗ್ಗೆ ಮದ್ರಾಸು ವಿಶ್ವವಿದ್ಯಾನಿಲಯದ ಪರೀಕ್ಷಾ ಭವನದಲ್ಲಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಕಲಾ ಪ್ರದರ್ಶನವನ್ನು ತೆರೆದರು. ಆರಂಭದಲ್ಲೇ ಆಚಾರ್ಯರವರು ಆಂಗ್ಲ ಭಾಷೆಯಲ್ಲಿ ಭಾಷಣ ಆರಂಭಿಸಿ ಬಿಟ್ಟರು. ತಮಿಳು ಶಿವಪೂಜೆಯ ಆರಂಭದಲ್ಲೇ ಇಂಗ್ಲೀಷ್ ಕರಡಿ ಎದುರು ಬಂದುಬಿಟ್ಟಿತು. ಅವರು ಅಲ್ಲಿ ತಾವು ಕಂಡುಹಿಡಿದಿರುವ ದ್ವಿಭಾಷಾ ಸೂತ್ರವನ್ನು— ಪ್ರಾದೇಶಿಕ ಭಾಷೆ ಮತ್ತು ಇಂಗ್ಲೀಷ್—ವಿವರಿಸಿದರೂ, ಅನಂತರ ಅಖಿಲ ಭಾರತಕ್ಕೆನೇ ಕಲಿಸುವದು ಸಮ್ಮೇಳನದ ಗುರಿಯಾಗಿರಬೇಕೆಂದರು. ಕಲಿಸುವದಾದರೂ ಯಾವ ಪಾಠವನ್ನು? —ವಿಶಾಲ ಮನೋಭಾವನೆ, ಸಹಿಷ್ಣುತೆ ಮತ್ತು ಸಂಸ್ಕೃತಿ! ಅಖಿಲ ಭಾರತವು ಅದನ್ನು ತಮಿಳರಿಂದ ಇಂಗ್ಲೀಷಿನ ಮೂಲಕ ಕಲಿತುಕೊಳ್ಳಬೇಕು!

ಮದ್ಯಾಹ್ನವೇ ಶ್ರೀ ಚಕ್ರವರ್ತಿರಾಜಾಗೋಪಾಲಾಚಾರಿಯವರೆತ್ತಿ ಹೇಳಿರುವ "ತಮಿಳರ ವಿಶಾಲ" ಮನೋಭಾವನೆ, ಸಹಿಷ್ಣುತೆ ಮತ್ತು ಸಂಸ್ಕೃತಿಯ ಸ್ಪಷ್ಟ ಪರಿಚಯವು ಅನ್ಯಾನ್ಯ ರಾಷ್ಟ್ರಗಳಿಂದ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದ ಪ್ರತಿನಿಧಿಗಳಿಗಾಯಿತು. ಅವರಿಗೆ ಮಾತ್ರವಲ್ಲ ಜಗತ್ತಿಗನೇ ತಿಳಿದು ಹೋಯಿತು. ಅಂತರ್‌ರಾಷ್ಟ್ರೀಯ ಸಮ್ಮೇಳನದ ನಿಮಿತ್ತ ಭಾರತದ ಅಂಚೆ ಇಲಾಖೆಯು ವಿಶಿಷ್ಟ ಅಂಚೆ ಚೀಟನ್ನು ಪ್ರಕಟಿಸಿತ್ತು. ಈ ಸಮ್ಮೇಳನವು ಮದರಾಸಿನಲ್ಲಿ ನಡೆದಿರುವದರಿಂದ ಅಂಚೆ ಇಲಾಖೆಯುಮಂತ್ರಿಯವರು ಮದರಾಸಿನ ಮುಖ್ಯ ಮಂತ್ರಿಯವರ ಬಳಿ ಸಂದರ್ಭೋಚಿತ ಅಂಚೆ ಚೀಟಿನ ನಮೂನೆಯನ್ನು ಕಳುಹಿಸಿಕೊಡಲು ತಿಳಿಸಿದ್ದರು. ಮಾನ್ಯ ಮುಖ್ಯಮಂತ್ರಿಯವರು ಕಳುಹಿಸಿಕೊಟ್ಟರು. ಅಂಚೆ ಚೀಟುಗಳು ಅಚ್ಚಾದುವು. ಮುಖ್ಯ ಅಂಚೆ ಕಛೇರಿಗಳಲ್ಲಿ ಮಾರಾಟಕ್ಕೆ ಸಿದ್ಧವಾಗಿ ಬಂದುವು. ಮದ್ರಾಸಿನಲ್ಲಿ ಮಾನ್ಯಮುಖ್ಯಮಂತ್ರಿಗಳು ಅದರ ಸಮಾರಂಭವನ್ನು ನಡೆಸಲಿದ್ದರು. ಆಗ ದಿಢೀರನೆ "ಅದು ಸಾಧ್ಯವಿಲ್ಲ" ಎಂಬ ಮಾತು ಕೇಳಿಬಂತು. ಸಮಾರಂಭ ನಡೆಯಲೇ ಇಲ್ಲ. ಅದಕ್ಕೆ ಕಾರಣವಾದರೂ ಏನು? ಅಂಚೇ ಚೀಟಿನಲ್ಲಿ ಹಿಂದಿ ಅಕ್ಷರಗಳು ಇದ್ದದ್ದು! ಹೌದು ಅವರು ಕಳುಹಿಸಿಕೊಟ್ಟಿದ್ದ ನಮೂನೆಯಲ್ಲಿ ಹಿಂದಿಯಲ್ಲೇನೂ ಬರದಿರಲಿಲ್ಲ. ಆದರೆ ಕೇಂದ್ರ ಸರಕಾರವು ಅದರಲ್ಲಿ "ದೂನ್ಯಾ ಅಂತಾರಾಷ್ಟ್ರೀಯ ಸಮ್ಮೇಳನ—ತಮಿಳ್ ಅಧ್ಯಯನ ಸಂಗೋಷ್ಠಿ--ಭಾರತ"ವೆಂದು ಸೇರಿಸಿತು. ಅದನ್ನು ಸಹಿಸಿಕೊಳ್ಳಲು ಮುಖ್ಯಮಂತ್ರಿಗಳಿಗೇನೇ ಸಾಧ್ಯವಾಗಲಿಲ್ಲ! ಇದಂತಹ ವಿಶಾಲ ಮನೋಭಾವನೆ! ವಿಷಯ ಅಲ್ಲಿಗೇನೇ ಮುಗಿಯಲಿಲ್ಲ. ತಾನು ಕಳುಹಿಸಿ ಕೊಟ್ಟಿದ್ದ ನಮೂನೆಯಲ್ಲಿ ತಮಿಳು ಅಕ್ಷರಗಳಿದ್ದು ಅವನ್ನು ಕೇಂದ್ರ ಸರಕಾರ ಉದ್ದೇಶಪೂರ್ವಕವಾಗಿ ಪ್ರಕಟಿಸಿಲ್ಲವೆಂದು ಅವರು ಆರೋಪಿಸಿದರು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಪಾತಕರಿಯಾದ ಆಯುರ್ವೇದ ಔಷಧಿ ಸುತ್ತು ದೆಲ್ಲಿ ವೈದ್ಯಕೀಯ ಸಲಹೆಗಳಿಗೆ, ಇತರರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಡಾ| ರಾಮಸುಭಗ ಸಿಂಘ ಸಂಪರ್ಕ ಸಚಿವರಿಗೆ ಆಶ್ಚರ್ಯ ವಾಯಿತು. ಅವರು ತಿರು ಅಣ್ಣಾ ದೊರೈಯವರ ನಮೂನೆಯ ನ್ನು ತಿರುಗಿಸಿ ತಿರುಗಿಸಿ, ತಲೆಕೆಳಗೆ ಮಾಡಿಯೂ ನೋಡಿದರು. ತಿರು ಅಣ್ಣಾದೊರೈಯವರ ತಲೆಯ ಅವರ ಕಣ್ಣಿಗೆ ಬೀಳಲೇ ಇಲ್ಲ. ಹುಡುಕಿ ಹುಡುಕಿ ನೋಡಿದಾಗ ಒಂದೆಡೆಯಲ್ಲಿ "ತಿರುಕ್ ಕುರಾಲ್" ತಮಿಳಿನಲ್ಲಿ ಬರೆದದ್ದು ಕಂಡು ಬಂತು. ಅದು ಅಂಚೆ ಚೀಟಿನಲ್ಲಿ ಇದೆ. ಮತ್ತೆ ಬಟ್ಟೆ ಹೋದದ್ದು ಯಾವದು? ಮಾನ್ಯ ಮುಖ್ಯ ಮಂತ್ರಿಯವರು ಕಳುಹಿಸಿ ಕೊಟ್ಟಿದ್ದ ನಮೂನೆಯಲ್ಲಿ ಅ ಅಕ್ಷರಗಳಿಲ್ಲವೆಂದು ಶ್ರೀ ಸುಭಗ ಸಿಂಘರು ಹೇಳಿದರೂ, ತಿರು ಅಣ್ಣಾದೊರೈಯವರು ಒಪ್ಪಲು ಸಿದ್ಧರಿಲ್ಲ. ಮಾನ್ಯ ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಯವರ ನಮೂನೆಯನ್ನು ಪತ್ರಿಕೆಗಳವರ ಮುಂದಕ್ಕಿಟ್ಟರು. ಊರು ಏನು ಹೇಳಿದರೂ ತಿರು ಅಣ್ಣಾದೊರೈಯವರು ಆಗ ಕೇಳುವಂತಿಲ್ಲ. ಆ ಕಾರ್ಯಕ್ರಮ ಅಲ್ಲಿಗೆನೇ ನಿಂತು ಹೋಯಿತು. ಆದರೆ ಊರು ಸುಳ್ಳು ಹೇಳಿದ್ದೆಂಬುದು ಹೊರಗೆ ಬರಬೇಕಲ್ಲಾ? ಸಮ್ಮೇಳನ ಮುಗಿದ ಮೇಲೆ, ಬೇರೆ ದಾರಿ ಇಲ್ಲದೆ, ತಿರು ಅಣ್ಣಾದೊರೈಯವರು ತಮಿಳು ವಾಕ್ಯವನ್ನು ಕಳುಹಿಸಿಲ್ಲವೆಂಬುದನ್ನು ಒಪ್ಪಿಕೊಂಡರೂದರೂ, ಜವಾಬ್ದಾರಿಯನ್ನು ಹೊರಲು ಮುಂದಕ್ಕೆ ಬರಲಿಲ್ಲ. ತಾನು ಹಿಂದೀ ಶಬ್ದಗಳನ್ನು ಕಳುಹಿಸಿರಲಿಲ್ಲ. ಹಿಂದೀ ಪ್ರೇಮಿಗಳು ಆ ಶಬ್ದಗಳನ್ನು ಹಾತಿ ಕೊಂಡರು. ಅವರಿಗೆ ತಮಿಳಿನ ಮೇಲೆ ಅದಿಕ್ಕಿತಾದರೂ ಅಕ್ಕರೆ ಇರುತ್ತಿದ್ದಲ್ಲಿ ತಮಿಳು ಶಬ್ದಗಳನ್ನೂ ಹಾಕುತ್ತಿದ್ದರು; ಇದು ಅವರ ಹಿಂದೀ ಸಾಮ್ರಾಜ್ಯ ವಾದಿಗಳ ಮನೋಭಾವನೆಯೆಂದು ರೀಕಿಸಿದರು. ಜಟ್ಟಿ ಅಡಿಗೆ ಬಿದ್ದರೂ ಮೀಸೆಗೆ ಮಣ್ಣು ತಾಗಿಲ್ಲವೆಂದರು. ಅಂತೂ ಊರು ಸುಳ್ಳಾಡಿದ್ದೆಂಬುದು ಗೊತ್ತಾಗಿ ಹೋಯಿತು.

ಶ್ರೀ ಆಚಾರ್ಯರಲ್ಲಿ ಮೌನ ವ್ರತವನ್ನಾಚರಿಸುವವರಾದರೂ ಈ ಪಾಪ ಕೃತ್ಯದಲ್ಲಿ ಅವರಿಗೂ ಪಾಲಿದೆ. ಹಿಂದಿ— ತಮಿಳು ಇವೆರಡೂ ಭಾರತದ ಭಾಷೆಗಳೆವೆ. ಹಿಂದಿ ತಮಿಳುಗಳ ನಡುವೆ ಅದೇನಾದರೂ ಹಿತಕ್ಕೇನಾದರೂ ಧಕ್ಕೆ ಬಂದಿದ್ದಲ್ಲಿ ಅದನ್ನು ಪ್ರಪಂಚದ ಇತರಾದೇಶಗಳಿಂದ ಬಂದಿರುವವರ ಮುಂದೆ ಪ್ರದರ್ಶಿಸ ಬೇಕಾಗಿರಲಿಲ್ಲ. ಅಂತೂ ಸಮ್ಮೇಳನದ ಸಮಯ ಮಿಸ್ಟರ್ ರಾಜಾಜಿ ಯಾಗೂ ತಿರು ಅಣ್ಣಾದೊರೈಯವರ "ತಮಿಳು ಸಂಸ್ಕೃತಿ"ಯ ಪರಿಚಯ ಎಲ್ಲರಿಗೂ ಆಗಿಹೋಯಿತು. ಯೋಚನಾಶೀಲ, ಬುದ್ಧಿವಂತ ಜನತೆ ಅದರ ನಂತರ ಎಚ್ಚರವಾಗಿರುತ್ತದೆ. ಈ ರೀತಿ ಸುಳ್ಳುಹೇಳಿ ಜನತೆಯನ್ನು ದಾರಿ ತಪ್ಪಿಸುತ್ತಿರುವ "ನೇತಾ"ಗಳಿಗೆ ನೇತಾಡಲೇಗೆ ಅವರು ಸಿದ್ಧರಿಲ್ಲ. ಆದರೂ ಹಳೆಯ ವಾಸನೆ, ಅಭ್ಯಾಸ ದೋಷ ಬಲಿದೇ ಉಳಿಯುತ್ತದೆ. ಅದನ್ನು ಬದಲಾಯಿಸುವದು ಸುಖವಲ್ಲ.

"ಅಂಚೆ ಚೀಟು ಪ್ರಕರಣ"ವು ಚುನಾವಣಾ ವೇದಿಕೆ ಮೇಲಿನ ಭಾಷಣವಲ್ಲ. ದೇಶ ವಿದೇಶಗಳಿಂದ ಬಂದಿದ್ದ ಪ್ರತಿನಿಧಿಗಳ ಮುಂದೆ "ತಾನು ಕರ್ಶ್ಚಂದ್ರ"ನೆಂದು ಕಟ ಹಿಡಿದು ಮಾಡಿದ ಘೋಷಣೆ ಆಗಿರುವಾಗ ಇನ್ನಾವ ದೇಶದಲ್ಲಾದರೂ ಈ ರೀತಿ "ಸುಳ್ಳು"ಹೇಳುವ ಮಂತ್ರಿಗಳು, ಅದರಲ್ಲೂ ಮುಖ್ಯ ಮಂತ್ರಿಗಳು ಮತ್ತೆ ಆಸನದಲ್ಲಿರಲು ಸಾಧ್ಯವೇನು? ಆದರೆ ಇಲ್ಲಿ ನಡೆಯುತ್ತಿದೆ!

ದ್ವಿತೀಯ ಅಂತರ್ರಾಷ್ಟ್ರೀಯ ತಮಿಳು ಸಮ್ಮೇಳನಕ್ಕಾಗಿ ಸರಕಾರೀ ಯಂತ್ರವನ್ನು ಪ್ರಯೋಗಿಸಿಕೊಂಡು ಭಾರೀ ನಿಧಿಯನ್ನು ಸಂಗ್ರಹಿಸಿತ್ತು. ಅಷ್ಟು ಮಾತ್ರವಲ್ಲ, ಅದು ವರೆಗೂ ಭಯ ಹುಟ್ಟಿಸುತ್ತಿದ್ದ ಹಿಂದೀ ವಿರೋಧಿ "ಯುದ್ಧ"ವನ್ನು ಸ್ಥಗಿತಗೊಳಿಸಿತ್ತು. ಈ ಅಪೂರ್ವ ದೃಶ್ಯವನ್ನು ಕಾಣಲು ಜನತೆ ಕುತೂಹಲದಿಂದಿತ್ತು. ಅಂದು ಮಧ್ಯಾಹ್ನವೇ "ದ್ವೀಪ ಮೈದಾನ"ದಿಂದ ಕಡಲ ಕರೆಯವರೆಗೂ ಜನತೆ ಜಾಗಮಿಕ್ಕೆದಲ್ಲಿ ನಿಂತುಕೊಳ್ಳಲಾರಂಭಿಸಿತ್ತು. ಭಾರತೀಯ ಸಂಸ್ಕೃತಿಯ ಅಂಗ ತಮಿಳು ಸಂಸ್ಕೃತಿಯನ್ನು ಕಾಣುವ ಲವಲವಿಕೆ ಅವರಿಗೆ ಭಾರತದ ರಾಷ್ಟ್ರಾಧ್ಯಕ್ಷ ಶ್ರೀ ಝಾಕೀರ ಹುಸೇನರೇ ಆದರು ಕಾಣಲು ಬಂದಿರುವಾಗ ಶ್ರೀ ಸಾಮಾನ್ಯನ ಸಂಗತಿ ಹೇಳಬೇಕೇ?

ದ್ವೀಪ ಮೈದಾನದಿಂದ ಭಾರೀ ಉತ್ಸವದ ಮೆರವಣಿಗೆ ಹೊರಟಿತ. ತಮಿಳ್ನಾಡಿನ ಚರಿತ್ರೆಗೆ ಪರಿಚಯ ಮಾಡಿಸಿ ಕೊಡುವಂತೆ, ಜ್ಞಾಪಕಪಡಿಸಿಕೊಡುವಂತೆ, ಅನೇಕಾನೇಕ ವೇಷಗಳು ಹೊರಟುವು. ಚಾರಿತ್ರಿಕ ಘಟನೆಗಳನ್ನು ರೂಪಿಸುವ ವೇಷಗಳು ಎಂತ್ರವಲ್ಲ, ರಥದ ಮಾದರಿಗಳು, ದೇವಸ್ಥಾನದ ಮಾದರಿಗಳೂ ಮೆರವಣಿಗೆಯಲ್ಲಿದ್ದುವು. ಶ್ರೀ ಝಾಕೀರ ಹುಸೇನರು ಅವನ್ನು ಕಾಣಲು ವಿಶೇಷ ಏರ್ಪಾಡಿನಂತೆ ವೇದಿಕೆಯಲ್ಲಿದ್ದರು. ಮೆರವಣಿಗೆ ಮುಂದಕ್ಕೆ ಮುಂದಕ್ಕೆ ಹೋದ ಮೇಲೆ ರಾಷ್ಟ್ರಾಧ್ಯಕ್ಷರು ಅಲ್ಲಿಂದ ಹೋದರು. ನೋಡಿತ್ತಿದ್ದ ಜನತೆ ಕಡಲು ಕರೆಯತ್ತ ಕಾಲು ಹಾಕಿತು. ಅಲ್ಲಿ ರಾಷ್ಟ್ರಾಧ್ಯಕ್ಷರು ದ್ವಿತೀಯ ಅಂತರ ರಾಷ್ಟ್ರೀಯ ತಮಿಳು ಸಮ್ಮೇಳನವನ್ನು ಉದ್ಘಾಟಿಸಿದರು.

ಅಲ್ಲಿ ಅವರು ಪ್ರಾಚೀನ ತಮಿಳ್ನಾಡಿನ ವೈಭವದ ಕುರಿತು ವಿವರಿಸಿದರು. ದೇಶ-ವಿದೇಶಗಳಿಂದಿಗೆ ತಮಿಳ್ನಾಡಿನವರು ವ್ಯಾಪಾರ ಮಾಡುತ್ತಿದ್ದರು. ಜಾಗಿದ್ದರೂ ಅವರು ಹಿಂದುದೇಶ ತಾಯ್ನಾಡೆಂಬುದನ್ನು ಮರೆತಿರಲಿಲ್ಲ. ಪಾವಿತ್ರ್ಯದೇವಿಗೆ ಮಂದಿರ ಕಟ್ಟಲು ಬೇಡ ರಾಜನು ಹಿಮಾಲಯದಿಂದ ಕಲ್ಲನ್ನು ಆರಿಸಿ ತಂದು, ಗಂಗೆಯ ಪವಿತ್ರ ಜಲದಲ್ಲಿ ಶುದ್ಧಗೊಳಿಸಿ ತಂದಿದ್ದನು. ಕುಲಶೇಖರ ಆಳ್ವಾರ್, ರಾಮಾನುಜಾಚಾರ್ಯ ಮುಂತಾದ ಸಂತರು ಅದೆಂತು ಸಂಸ್ಕೃತದ ಮೂಲಕ ಅಖಿಲ ಭಾರತ ಖ್ಯಾತಿಯನ್ನು ಪಡೆದರೆಂಬುದನ್ನು ಅವರು ತಿಳಿಸಿದರು. ಅವರು ಪ್ರಾದೇಶಿಕ ಹಾಗೂ ಭಾಷಾ ಬಿಗಿತಗೊಳಗಾಗದಂತೆ ವರಕವಿ ಸುಬ್ರಹ್ಮಣ್ಯ ಭಾರತಿಯವರು ಹಾಡಿರುವದನ್ನು ಜ್ಞಾಪಕಪಡಿಸಿ, ಇಂದು ಧರ್ಮ ಕಡುವೆ ಅವರು ಇರುತ್ತಿದ್ದಲ್ಲಿ ಅದೆಂತು ಸಹಿಸಿಕೊಳ್ಳುತ್ತಿದ್ದರೆಂದು ಪ್ರಶ್ನಿಸಿದರು.

ಹಿತವಚನಗಳನ್ನಾಡಿದ ರಾಷ್ಟ್ರಾಧ್ಯಕ್ಷರು ತಮ್ಮ ಮುಂದಿನ ಪ್ರಯಾಣಕ್ಕೆ ಹೊರಟರು. ಇತ್ತ ತಮಿಳು ಕಾನ್ಫರೆನ್ಸಿನ ಕಾರ್ಯಕಲಾಪಗಳು ಅರಂಭವಾದುವು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಕೇವಹಾತಿಗಳ ಮೇಲೆ 3% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಹೆಲ್ಡಿಂಗ್"ಸ್,
ಫೈಟ್ ಪಾಸ್ ಟಿಸ್ ರೋಡ್
ಮಂಗಳೂರು—3

ಭವಿಷ್ಯ ಚಿಂತನೆ

ಆಯೇಷಾಬಿಯ ಜಾಣತನ

ಆಯೇಷಾಬಿಗೆ ಆರು ಜನ ಮಕ್ಕಳ-ಜೊಚ್ಚಲು ಮಗನಿಗೆ ಈಗ ೧೦ ವರ್ಷ. ಳನೆಯ ತರಗತಿಯಲ್ಲಿ ಒದಿತ್ತಿದ್ದಾನೆ. ಅವನಿಗೆ ೮ ವರ್ಷ ವಯಸ್ಸಿನ ಓರ್ವ ತಂಗಿ ಇದ್ದಾಳೆ; ಅವಳು ಎರಡನೆಯ ತರಗತಿಯಲ್ಲಿ ಓದುತ್ತಿದ್ದಾಳೆ. ಮೂರನೆಯ ಮಗುವಿಗೆ ಇನ್ನೂ ಆರು ವರ್ಷ ತುಂಬಿಲ್ಲ. ನಾಲ್ಕನೆಯ ಮಗುವಿಗೆ ಎರಡು ವರ್ಷ ಐದನೆಯದಕ್ಕೆ ಒಂದು ವರ್ಷ ಮಾತ್ರ ತುಂಬಿದೆ. ಆರನೆಯ ಮಗು ಮೊನ್ನೆ ತಾನೇ ಜನಿಸಿತು.

ಇದು ಆಯೇಷಾಬಿಯ ಕೊನೆಯ ಮಗು.....!

"ಏಕೆ ಎಂದಿರಾ?

ಆಯೇಷಾಬಿ ಕುಟುಂಬ ಯೋಜನಾ ಶಿಬಿರದಲ್ಲಿ ಮಕ್ಕಳಾದಂತೆ ಶಸ್ತ್ರ ಚಿಕಿತ್ಸೆ ಮಾಡಿಕೊಂಡಿದ್ದಾಳೆ.

ಆಯೇಷಾಬಿಯ ಗಂಡ ಓರ್ವ ಕಾರ್ಮಿಕ. ಅವನ ದಿನದ ಗಳಿಕೆ ಅವನ ಕುಟುಂಬಕ್ಕೆ ಸಾಲದು. ಆದಕ್ಕಾಗಿ ಅವನ ಹೆಂಡತಿ ಅವರಿವರ ಮನೆಯಲ್ಲಿ ಕೆಲಸ ಮಾಡಿ ಗಂಡನಿಗೆ ನೆರವಾಗುತ್ತಿದ್ದಾಳೆ.

ಆಯೇಷಾಬಿಗೆ ತಾನು ಐದನೆಯ ಮಗುವಿಗೆ ತಾಯಿ ಆಗಲಿದ್ದೇನೆ ಎಂದು ತಿಳಿದಾಗ ದುಃಖವಾಯಿತು. ಆದಕ್ಕಾಗಿ ತನ್ನನ್ನೂ, ತನಗೆ ಅಂಟಿಕೊಂಡಿರುವ ಬಡತನವನ್ನೂ ಮನಸಾರೆ ಶಪಿಸಿದಳು. ಮಗು ಜನಿಸಲು ಇನ್ನೇನು ಒಂದೆರಡು ತಿಂಗಳು ಮಾತ್ರ ಉಳಿದಿದ್ದವು. ಜನಿಸಲಿರುವ ಮಗುವನ್ನು ಹೇಗೆ ಜೋಪಾನ ಮಾಡಬೇಕೆಂಬುದೇ ಅವಳಿಗೆ ಒಂದು ದೊಡ್ಡ ಚಿಂತೆಯಾಯಿತು.

ಆಯೇಷಾಬಿ ತನ್ನ ಗೆಳತಿಯರಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದಳು. ಯಾರೂ ಈ ವಿಷಯದಲ್ಲಿ ಅವಳಿಗೆ ಸೂಕ್ತ ಸಲಹೆ ಕೊಡಲಿಲ್ಲ. ಮಂತ್ರಾಲೋಚನೆ ಮುಗಿಯುವ ತನಕ ಮಗು ಕಾಯಲಿಲ್ಲ. ಆರನೆಯ ಮಗು ಜನಿಸಿತು.

ಮಗು ಜನಿಸಿದಾಗ ತಾಯಿಗೆ ಸಹಜವಾಗಿ ಸಂತೋಷವಾಗದ್ತದೆ. ಆಯೇಷಾಬಿಗೆ ಸಂತೋಷವಾಯಿತು. ಮಗುವಿನ ಭವಿಷ್ಯ ಯೋಚನೆಯಿಂದಾಗಿ ಈ ಸಂತೋಷದ ಸಂದರ್ಭದಲ್ಲೂ ದುಃಖಿ ಒತ್ತರಿಸಿ ಬಂತು.

ಮಗುವಿಗೆ ಹೊಲೆಯೂಡಿರುವಾಗ ಅವಳ ಕಣ್ಣಲ್ಲಿ ನೀರು ದಳದಳನೆ ಸುರಿಯುತ್ತಿತ್ತು. ಅಕ್ಕ ಜೇಬುನ್ನಿಸಾ ಮಗುವನ್ನು ನೋಡಿಕೊಂಡು ಹೋಗಲು ಬಂದಳು.

ಆಯೇಷಾಬಿಯ ಆರೋಗ್ಯದ ವಿಚಾರವಾಗಿ ಕೇಳಿದಳು. ಕಣ್ಣೀರಿಗೆ ಕಾರಣವೇನು ಎಂದಳು.

"ಅಕ್ಕ ನೀನೇ ಹೇಳು; ನಾವು ಸ್ಥಿತಿವಂತರೇ? ಇಷ್ಟು ಜನ ಮಕ್ಕಳನ್ನು ಹೇಗೆ ಸಾಕಬೇಕೆಂಬುದೇ ಹಗಲಿರುಳು ಧನ್ನನ್ನು ಕೊರೆಯುತ್ತಿದೆ."

"ದೇವರೇ ನನಗೆ ಈ ಪರಿಯಾಗಿ ಮಕ್ಕಳನ್ನು ಕೊಡಬೇಡ" ಎಂದು ನಾನು ಪ್ರಾರ್ಥಿಸಿದ್ದೇನೆ. ದೇವರು ನನ್ನ ಮೊರೆ ಕೇಳಲಿಲ್ಲ. ನಾನು ಶಿಕ್ಷಹಾಯುಕಳಾಗಿದ್ದೇನೆ. ಹೇಳು, ನಾನು ಈಗ ಏನು ಮಾಡಲಿ? ಹೇಳು ಅಕ್ಕ"

ಜೇಬುನ್ನಿಸಾ ಧೈರ್ಯ ತಂದು ಕೊಂಡಳು. ತಂಗಿಯ ಕಣ್ಣೀರನ್ನು ಒರೆಸುತ್ತ "ತಂಗಿ ನಿರಾಶಳಾಗಬೇಡ, ನನಗೆ ಒಂದು ಉಪಾಯ ಹೊಳೆದಿದೆ. ನಿನಗೆ ಗೊತ್ತಿಲ್ಲವೇ, ನಾನೂ ಆರು ಮಕ್ಕಳ ತಾಯಿ. ನನ್ನ ಗಂಡನೇನೂ ಜವೀಂದ್ರನಾರನಲ್ಲ. ಸುದೈವದಿಂದ ನನ್ನ ಎರಡು ಮಕ್ಕಳು ದೊಡ್ಡವರಾಗಿದ್ದಾರೆ. ತಮ್ಮ ಹೊಟ್ಟೆ—ಬಟ್ಟೆಗಾಗಿ ದುಡಿಯುತ್ತಿದ್ದಾರೆ.

"ಇನ್ನೊಂದು ಮಕ್ಕಳನ್ನು ಸಾಕುವುದು ಹೇಗಪ್ಪಾ? ಎಂದು ನಾನೂ ಚಿಂತಿಸಿದ ದಿನಗಳು ಎಷ್ಟೋ. ಆದರೆ ನನಗೆ ಈಗ ಸಂತೋಷವಾಗಿದೆ. ನನಗೆ ಇನ್ನು ಮುಂದೆ ಮಕ್ಕಳೇ ಆಗುವುದಿಲ್ಲವೆ?" ಆ

(ಒಂಭತ್ತನೇ ಪುಟ ನೋಡಿರಿ)

ಭಾರತದಲ್ಲಿ ಕರ್ನಾಟಕದ ಸ್ಥಾನ

(ಸಂದೇ ಪುಟದಿಂದ)

ಹಕ್ಕನ್ನು ಅನುಸ್ಥಾಪ ಮಾಡುತ್ತಿದ್ದನು. ಕ್ಷಾಮಡಾಮರಗಳು, ಅಗ್ನಿ ಭಯ, ಶತ್ರು ಭಯ, ಮೊದಲಾದ ಸಂದರ್ಭಗಳಲ್ಲಿ ಪೌರ ಪ್ರಮುಖರು ಅರಸನ ಬಳಿಗೆ ಬೋಗಿ ಪರಿಹಾರವನ್ನು ಪ್ರಾರ್ಥಿಸಿ ಪಡೆಯುತ್ತಿದ್ದರು. ಇದೇ ರೀತಿಯಲ್ಲಿ ನಗರದ ಆಡಳಿತವನ್ನು ಪಗರದ ಸಭೆಗಳು ನಡೆಸುತ್ತಿದ್ದವು. ರಾಜನಾಗಲಿ ಯೂ ಅವರ ಪ್ರತಿನಿಧಿಗಳಾಗಲಿ ನಗರದ ದೈನಂದಿನ ಆಡಳಿತದಲ್ಲಿ ಮಧ್ಯ ಪ್ರವೇಶಿಸುತ್ತಿರಲಿಲ್ಲ. ಸಾಂಚ್ಯತ್ಯ ದೇಶಗಳಿಗೆ ಕಂದಾಯದ ಕಲ್ಪನೆ ಅರುವ ಮೊದಲೇ ಕನ್ನಡಿಗರಿಗೆ ಇದರ ಅನುಭವ 14ನೇ ಶತಮಾನದಲ್ಲಿ ಆಗಿತ್ತು. ವಿಜಯನಗರದ ರಾಸನದ ಪ್ರಕಾರ ಕನ್ನಡನಾಡಿನ ರೈತರು ಮತ್ತು ವರ್ತಕರು ಪ್ರಜೆಗಳಿಗೆ ರಕ್ಷಣೆ ಕೊಡುವುದ ಅಶ್ವಾಸನೆಯ ಮೇಲೆ ಕಂದಾಯವನ್ನು ಕೊಡುತ್ತಿದ್ದರೆಂದು ತಿಳಿದು ಬಂದಿದೆ. ಕನ್ನಡನಾಡಿನ ರಾಜಕೀಯದ ಇನ್ನೊಂದು ವೈಶಿಷ್ಟ್ಯವೇನೆಂದರೆ ಇಲ್ಲಿನ ಸ್ತ್ರೀಯರು ರಾಜ್ಯ ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ವಹಿಸಿರುವುದು. ಆದರಲ್ಲಿ ರಾಜಪಾಲರಾಗಿಯೂ ಕೆಲವರು ರಾಣಿಯರಾಗಿಯೂ ಉತ್ತಮ ಆಡಳಿತವನ್ನು ಒದಗಿಸಿದ್ದರು. ಇಡೆಟೂರು ಪ್ರಾಂತ್ಯದ ರಾಜಪಾಲರಾಗಿ ರಾಷ್ಟ್ರಕೂಟ ಅರಸ ಅಮೋಘ ವರ್ಷನ ಮಗಳಾದ ರೇವವಬ್ಬ ದೇವಿಯು ಆಡಳಿತವನ್ನು ನಡೆಸಿದ್ದಳು. ಇಂಗಳಿಗೆಯಲ್ಲಿ ತ್ರಿಭೋಗಾಭ್ಯಂತರ ಸಿದ್ಧಿಯಾಗಿ ಕದಂಬ ವಂಶದ ಜಕ್ಕಲದೇವಿ ಆಳುತ್ತಿದ್ದಳು. ಪಶ್ಚಿಮ ಚಾಲುಕ್ಯ ಅರಸ ವಿಕ್ರಮಾದಿತ್ಯನ ತಂಗಿ ಅಕ್ಕಲದೇವಿ 45 ವರ್ಷ ಬಿಗದಜ ಪ್ರಾಂತ್ಯವನ್ನು ಆಳಿದ್ದಳು, ಕಲ್ಯಾಣಿ ಚಾಲುಕ್ಯ ಅರಸ ವಿಕ್ರಮಾದಿತ್ಯನ ರಾಣಿಯಾದ ಚಂದ್ರಲೇಖಾದೇವಿ, ಮಲ್ಲಿಕಾದೇವಿ, ಪದ್ಮಲ ದೇವಿಯರೂ ಸಾಮ್ರಾಜ್ಯದ ನಾನಾ ಭಾಗಗಳಲ್ಲಿದ್ದು, ಆಡಳಿತದಲ್ಲಿ ಭಾಗಿಯಾಗಿದ್ದರು. ಒಟ್ಟಿನಲ್ಲಿ ಕರ್ನಾಟಕದ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದರೆಂದರೆ ಕಪ್ಪಾಗಲಾರದು.

ಧಾರ್ಮಿಕ ಭಾವನೆ:— ಕರ್ನಾಟಕ ಸ್ವಾಧ್ಯಾತ್ಮದತವರುಮನೆಗಳಲ್ಲಿ ಕನ್ನಡಿಗರು ಹಲವಾರು ಮತಗಳನ್ನು ಪ್ರೋತ್ಸಾಹಿಸಿದ್ದರು. ಇಲ್ಲಿನ ಅನೇಕ ರಾಜ್ಯಗಳ ಸ್ಥಾಪನೆಗೆ ಧರ್ಮ ಗುರುಗಳೇ ಕಾರಣರಾಗಿದ್ದರು. ಮೊತ್ತ ಮೊದಲನೆಯದಾಗಿ ಕನ್ನಡಿಗರು ಬೌದ್ಧ ಮತವನ್ನು ಪ್ರೋತ್ಸಾಹಿಸಿದರು. ಅಶೋಕನ ಶಾಸನದ ಮುಖಾಂತರ ಕ್ರಿ. ಪೂ. 3ನೇ ಶತಮಾನದಲ್ಲಿ ಕರ್ನಾಟಕದ ಉತ್ತರ ಭಾಗದಲ್ಲಿ ಬೌದ್ಧ ಧರ್ಮದ ಪ್ರಚಾರ ನಡೆದಿತ್ತೆಂದು ತಿಳಿದು ಬಂದಿದೆ. ಅಶೋಕನು ಬನವಾಸಿ ಮತ್ತು ಮಹಿಷಿ ಮಂಡಲಗಳಿಗೆ ಬೌದ್ಧ ಧರ್ಮ ಪ್ರಚಾರಕರನ್ನು ಕಳುಹಿಸಿದ್ದನೆಂದು ಇತಿಹಾಸದಿಂದ ತಿಳಿಯುತ್ತದೆ. ಆದರೆ ಅಶೋಕನ ನಂತರ ಇಲ್ಲಿ ಬೌದ್ಧ ಧರ್ಮ ಹೆಚ್ಚಿನ ಪ್ರಾಮುಖ್ಯ ಪಡೆಯದೆ ಜೈನ ಧರ್ಮವು ಪ್ರಚಾರವಾದುದು ಆಶ್ಚರ್ಯಕರ. ಕರ್ನಾಟಕದ ಅರಸರಲ್ಲಿ, ದಂಡನಾಯಕರಲ್ಲಿಯೂ ಕವಿಗಳಲ್ಲಿ ಜೈನರಿದ್ದರು. ಜೈನರು ಕನ್ನಡದಲ್ಲಿ ತಮ್ಮ ಧರ್ಮದ ತಿರುಳನ್ನು ಬೋಧಿಸಿ ಕನ್ನಡ ಭಾಷೆಗೆ ಅಮೋಘ ಸೇವೆ ಸಲ್ಲಿಸಿದ್ದಾರೆ. ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತಗಳನ್ನು ಇಲ್ಲಿ ಪ್ರೋತ್ಸಾಹಿಸಲಾಯಿತು. 12ನೇ ಶತಮಾನದಲ್ಲಿ ವೀರಶೈವ ಮತವನ್ನು ಬಸವೇಶ್ವರರು ಪ್ರಚಾರಮಾಡಿ ಕನ್ನಡನಾಡಿನಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿದರು. ಕ್ಲಿಷ್ಟವಾದ ಶತ್ರುಗಳನ್ನು ಕನ್ನಡದ ಸುಲಭ ಶೈಲಿಯಲ್ಲಿ ಬೋಧಿಸಿ ಜನರ ಅಜ್ಞಾನವನ್ನು, ಹೋಗಲಾಡಿಸಲು, ಅವರು ತೆಗೆದುಕೊಂಡ ಕ್ರಮ ಪ್ರಶಂಸನೀಯ. ಕ್ರಿ. ಶ. 16ನೇ ಶತಮಾನದಲ್ಲಿ ಪಡೆದ ದಾಸಕೂಟ ಚಳವಳಿ ಇದೇ ರೀತಿಯ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿತು. ಕನ್ನಡಿಗರು ಇಸ್ಲಾಂ ಮತ್ತು ಕ್ರಿಸ್ತ ಮತಗಳಿಗೆ ಪ್ರೋತ್ಸಾಹ ನೀಡಿದರು. ಭಾರತದ ಇತರೆಡೆಗಳಲ್ಲಿ ಇಸ್ಲಾಂ ಮತದವರನ್ನು ತುಚ್ಛೀಕಾರವಾಗಿ ನೋಡುವ ಸಮಯದಲ್ಲಿ ಕನ್ನಡನಾಡಿನಲ್ಲಿ ಅವರನ್ನು ಯೋಗ್ಯರೀತಿಯಲ್ಲಿ ನೋಡಿಕೊಳ್ಳುತ್ತಿದ್ದರೆಂದು ಅರಬ ಯಾತ್ರಿಕರು ತಿಳಿಸಿದ್ದಾರೆ. 10ನೇ ಶತಮಾನದಲ್ಲಿ ರಾಷ್ಟ್ರಕೂಟರು ಮುಸ್ಲಿಮರನ್ನು ಗವರ್ನರರಾಗಿ ನೇಮಿಸುತ್ತಿದ್ದರೆಂದು ತಿಳಿದು ಬರುತ್ತದೆ. ಕನ್ನಡಿಗರು ಪರಮತ ಸಹಿಷ್ಣುಗಳು. ಧರ್ಮ ಸಹಿಷ್ಣುತೆ ಕನ್ನಡಿಗರ ಹುಟ್ಟುಗುಣ. ಇದು ಕನ್ನಡ ನಾಡಿನ ಧಾರ್ಮಿಕ ವೈಶಿಷ್ಟ್ಯ. ಇದಕ್ಕೆ ನಿದರ್ಶನವಾಗಿ ಕನ್ನಡದ ರಾಜಕೀಯ ಇತಿಹಾಸವಿದೆ. ಬನವಾಸಿಯ ಕದಂಬರು ವೈದಿಕ ಧರ್ಮದವರಾದರೂ, ಆ ವಂಶದ ಮೃಗೇಶನು ಜೈನ ಧರ್ಮಕ್ಕೆ ಸಹಾಯ ಮಾಡಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ರಾಷ್ಟ್ರಕೂಟರ ಅಮೋಘವರ್ಷನು ಜೈನನಾದರೂ ಲಕ್ಷ್ಮೀ ದೇವಾಲಯವನ್ನು ಕಟ್ಟಿಸಿದನು. ಚಾಲುಕ್ಯರ 2ನೇ ಜಯಸಿಂಹನ ಸಹೋದರಿ ಅಕ್ಕಾದೇವಿ ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳಿಗೆ ಆಶ್ರಯವಿತ್ತಿದ್ದಾಳೆ. ವೈಷ್ಣವ ಭಕ್ತರಾದ ಹೊಯ್ಸಳರು ಇನ್ನಿತರ ಮತಗಳನ್ನು ಪ್ರೋತ್ಸಾಹಿಸಿದ್ದರು. ವಿಜಯನಗರದ ಅರಸನಾದ ಸುಕ್ಕರಾಯನ ಕಾಲದಲ್ಲಿ ನಡೆದ ಜೈನ—ರಾಮಾನುಜರಲ್ಲಿ ಉಂಟಾದ ವ್ಯಾಜ್ಯವನ್ನು ಅಲೌಕಿಕ ನ್ಯಾಯ ಬುದ್ಧಿಯಿಂದ ತೀರ್ಮಾನಿಸಿ ಕನ್ನಡಿಗರು ಧರ್ಮ ಸಹಿಷ್ಣುತೆಯನ್ನು ಚರಿತ್ರೆಯ ಕಾಲದಲ್ಲಿಯೇ ಬೆಳಕಿಗೆ ತಂದಿದ್ದರು. ವಿಜಯನಗರದ ಅರಸರು ಮುಸಲ್ಮಾನ ಮತ್ತು ಕ್ರಿಸ್ತಮತವನ್ನು ಪ್ರೋತ್ಸಾಹಿಸಿದರು. ಅವರು ಹಂಪೆಯಲ್ಲಿ ಮುಸಲ್ಮಾನರಿಗಾಗಿ ಮಸೀದಿಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಕೆಳದಿಯ ಅರಸರು ವೀರಶೈವರಾದರೂ ಶೃಂಗೇರಿ ಮಠಕ್ಕೆ ಬೇಕಾದಷ್ಟು ಉಂಬಳಿಗಳನ್ನು ಕೊಟ್ಟರು. ಹೈದರಾಲಿ ಟಿಪ್ಪು ಸುಲ್ತಾನರು ಸರ್ವಮತ ಸಹಿಷ್ಣುವಾಗಿದ್ದರು. ಮರಾಠ, ಪೇಶ್ವೆಯರು ಶೃಂಗೇರಿ ಮಠವನ್ನು ದಾಳಿ ಮಾಡಿದ ಬಳಿಕ ಟಿಪ್ಪುವು ಶೃಂಗೇರಿ ಮಠದ ಮುಖಂಡರ್ಮಾಣಾಕ್ಕಾಗಿ ಉಂಬಳಿ ಬಿಟ್ಟಿದ್ದನು. ಕರ್ನಾಟಕದ ಕರಾವಳಿ ಭಾಗದ ಮುಸ್ಲಿಮೇತರ ಜನರನ್ನು ಟಿಪ್ಪು ಸುಲ್ತಾನನು ಹೀಡಿಸಿದ್ದನಲ್ಲದೆ, ಉಳಿದ ಭಾಗಗಳ ಯಾವ ಧರ್ಮೀಯರನ್ನೂ ಅವನು ಹಿಂಸಿಸಿರಲಿಲ್ಲ. ಕರಾವಳಿ ಭಾಗದಲ್ಲಿ ಟಿಪ್ಪು ಧರ್ಮ ಅಸಹಿಷ್ಣುತೆ ತೋರಿಸಲು ರಾಜಕೀಯ ಕಾರಣಗಳಿದ್ದವು. ಕನ್ನಡಿಗರ ಈ ಧರ್ಮ ಸಮನ್ವಯ ಭಾವವನ್ನು ಕರ್ನಾಟಕ ಸಾಹಿತ್ಯದಲ್ಲಿ ಕೂಡಾ ನೋಡಬಹುದು. "ಒಟ್ಟನ ಕ್ಷಿಕನ್ನಡದಜನರಲ್ಲಿ ಜೈನರ ಅಹಿಂಸೆ, ಬೌದ್ಧರ ಸಮತ್ವ, ಶೈವರ ಜ್ಞಾನ, ವೈಷ್ಣವರ ಭಕ್ತಿ, ಕ್ರೈಸ್ತರ ಅನುಕಂಪ, ಮುಸ್ಲಿಮರ ಬಂಧು ಪ್ರೇಮಗಳಿಹುದು ನೋಡಬಹುದು" ಎಂದು ಅಸ್ಥಾನ ವಿದ್ವಾಂಸ ಶಿವಮೂರ್ತಿ ಶಾಸ್ತ್ರಿಯವರು ಅಭಿಪ್ರಾಯ ಪಡುತ್ತಾರೆ.

ಶಿಲ್ಪಕಲೆಗಳು:—ಭಾರತೀಯ ಶಿಲ್ಪ ಕಲೆಗಳಿಗೆ ಕರ್ನಾಟಕವು ತನ್ನದೇ ಆದ ಕಾಣಿಕೆ ನೀಡಿದೆ. ಕನ್ನಡ ನಾಡು ಶಿಲ್ಪಕಲೆಗೆ ಪ್ರಸಿದ್ಧವಾದುದು. ಇಲ್ಲಿನ ರಾಜರು ಹಲವಾರು ದೇವಸ್ಥಾನಗಳನ್ನು ಕಟ್ಟಿಸಿ, ಶಿಲ್ಪ ಕಲೆಯನ್ನು ಪ್ರೋತ್ಸಾಹಿಸಿದರು. ಕನ್ನಡ ನಾಡಿನ ಶಿಲ್ಪಕಲೆ ಆರ್ಯರ ಬುದ್ಧಿವಂತಿಕೆಯನ್ನೂ ದ್ರಾವಿಡರ ಕೈ ಚಾತುರ್ಯ ಹೊಂದಿದೆಯೆಂದು ಭಾರತೀಯ ಶಿಲ್ಪ ಕಲಾಭ್ಯಾಸದಲ್ಲಿ ತಜ್ಞರೆನಿಸಿಕೊಂಡಿರುವ ಫರ್ಗುಸನರು ಅಭಿಪ್ರಾಯ ಪಡುತ್ತಾರೆ. ಈ ಶಿಲ್ಪ ಕಲೆಯನ್ನು ಚಾಲುಕ್ಯರೂ ಹೊಯ್ಸಳ ಶಿಲ್ಪ ಎಂದು ಇತಿಹಾಸ ತಜ್ಞರು ವರ್ಗೀಕರಿಸುತ್ತಾರೆ. ಐದನೇ ಶತಮಾನದಿಂದ ಆರಂಭವಾಗಿ, 13ನೇ ಶತಮಾನದವರೆಗೆ ಚಾಲುಕ್ಯ ಶಿಲ್ಪ ಕನ್ನಡ ನಾಡಿನಲ್ಲಿ ಇದ್ದಿತು. ಕರ್ನಾಟಕದಲ್ಲಿ ಶಿಲ್ಪ ಕಲೆಗೆ ಕಳಹದಿಯನ್ನು ಹಾಕಿದವರು ಕದಂಬರು. ಅವರು ತಮ್ಮ ಮುಖ್ಯಪಟ್ಟಣಗಳಾದ ವೈಜಯಂತಿ, ಹಲಸಿ ಎಂಬಲ್ಲಿ ಹಲವಾರು ದೇವಾಲಯಗಳನ್ನು ಕಟ್ಟಿಸಿದರು. ಚಾಲುಕ್ಯರ ಕಾಲದಲ್ಲಿ ಕನ್ನಡ ನಾಡಿನಲ್ಲಿ ಶಿಲ್ಪಕಲೆ ಪರಿಪೂರ್ಣತೆಯನ್ನು ಪಡೆಯಿತು. ಚಾಲುಕ್ಯ ಅರಸರು ಐಹೊಳೆ, ಪಟ್ಟದಕಲ್ಲು, ಮತ್ತು ಬಾದಾಮಿಯಲ್ಲಿ ದೇವಾಲಯಗಳನ್ನು ಕಟ್ಟಿಸಿದರು. ನಂಗಳೇಶ ಮತ್ತು ಕೀರ್ತಿವರ್ಮರು ಬಾದಾಮಿಯಲ್ಲಿ ಐದು ಗುಹಾಂತರ ದೇವಾಲಯಗಳನ್ನು ಕಟ್ಟಿಸಿದರು. ಕರ್ನಾಟಕದಲ್ಲಿ ಶಿಲ್ಪಕಲೆಯು ಹೊಯ್ಸಳರ ಕಾಲದಲ್ಲಿ ವೈಭವಪೂರ್ಣವಾಗಿತ್ತು. ಹಳೇಬೀಡು ಬೇಲೂರುನಲ್ಲಿರುವ ದೇವಾಲಯಗಳು ಹೊಯ್ಸಳ ಕಾಲದ ಶಿಲ್ಪಕಲೆಯ ವೈಭವವನ್ನು ಸಾರುತ್ತವೆ. ಹೊಯ್ಸಳರ ದೇವಾಲಯಗಳು ಇತರ ದಕ್ಷಿಣ ಭಾರತ ದೇವಾಲಯಗಳಂತೆ ಹೆಚ್ಚಾಗಿ ಎತ್ತರವಿಲ್ಲ. ದೇವಾಲಯ ಚಿಕ್ಕದಾದರೂ ಅದನ್ನು ಒಂದು ನಕ್ಷತ್ರಾಕಾರದ ಜಗತ್ತಿನ ಮೇಲೆ ಕಟ್ಟಲಾಗುವುದರಿಂದ ಅವರ ದೇವಸ್ಥಾನದ ರೀತಿಯು ಎದ್ದು ಕಾಣುತ್ತದೆ. ದೇವಸ್ಥಾನದಲ್ಲಿರುವ ಅದ್ಭುತವಾದ ಕಲಾಕೃತಿಗಳು ನೋಡಿದವರನ್ನು ಬೆರಗುಗೊಳಿಸುತ್ತವೆ. ಅವರ ಶಿಲ್ಪಕಲೆ ಅತ್ಯಂತ ಸೈಕ್ಷ್ಮಕ್ಕೆ ಹೆಸರಾದುದು. ವಿಜಯನಗರದ ಆಂಸರೂ ಶಿಲ್ಪಕಲೆಯನ್ನು ಪ್ರೋತ್ಸಾಹಿಸಿದರು. ಮೂರ್ತಿ ಶಿಲ್ಪಕ್ಕೆ ಕನ್ನಡನಾಡು ಹೆಸರುವಾಸಿಯಾದುದು. ಶ್ರವಣ ಬೆಳಗೊಳ, ಕಾರ್ಕಳ, ವೇಣೂರುಗಳಲ್ಲಿರುವ ಗೋಮಟೇಶ್ವರವು ಕರ್ನಾಟಕದಲ್ಲಿ ಮೂರ್ತಿ ಶಿಲ್ಪ ಎಷ್ಟು ಪರಿಪಕ್ವತೆಯನ್ನು ಮುಟ್ಟಿದೆ ಎಂದು ಸಾರುತ್ತದೆ.

ಸಾಹಿತ್ಯದಲ್ಲಿ ವೈಶಿಷ್ಟ್ಯ:—ಕನ್ನಡಿಗರು ಸಾಹಿತ್ಯ ಪ್ರೇಮಿಗಳು. ಕನ್ನಡದ ಅರಸರು ಕನ್ನಡ ಭಾಷೆಯ ಸಾಹಿತ್ಯವನ್ನು ಬೆಳೆಸಿದ್ದಲ್ಲದೆ, ಇತರ ಭಾಷೆಗಳಾದ ಪ್ರಾಕೃತ, ಸಂಸ್ಕೃತ, ತೆಲುಗು, ತಮಿಳು ಮತ್ತು ಮರಾಠಿ ಭಾಷೆಯ ಸಾಹಿತ್ಯವನ್ನು ಪ್ರೋತ್ಸಾಹಿಸಿ ಭಾರತೀಯ ಸಾಹಿತ್ಯವನ್ನು ವಿಸ್ತಾರಗೊಳಿಸಿರುವರು. ಇದು ಕನ್ನಡಿಗರ ಉದಾರ ಭಾವನೆಯನ್ನು ತೋರಿಸುತ್ತದೆ. ಕದಂಬ ಮತ್ತು ಜೈನ ಪಂಡಿತರು ಪ್ರಾಕೃತ ಭಾಷೆಯನ್ನು ಹೆಚ್ಚಾಗಿ ಉತ್ತೇಜಿಸಿದರು. ಕ್ರಿಸ್ತ ಯುಗದ ಆರಂಭದಿಂದ ಸಂಸ್ಕೃತ ಭಾಷೆಯನ್ನು ಕನ್ನಡಿಗರು ಪ್ರೋತ್ಸಾಹಿಸಿದರು. ಕನ್ನಡ ನಾಡಿನ ಅನೇಕ ಅರಸರು ಪಂಡಿತರಿಗೆ ಪೋಷಕರಾಗಿರುವುದಲ್ಲದೆ ಸ್ವತಃ ಕವಿಗಳೂ, ಗ್ರಂಥಕರ್ತರೂ ಆಗಿದ್ದರು. ಪಂಗ ಮನೆತನದ ದುರ್ವಿನೀತನು ಗುಣಾಢ್ಯನ ಬೃಹತ್ಕಥೆಯನ್ನು ಸಂಸ್ಕೃತಕ್ಕೆ ರೂಪಾಂತರಿಸಿದನು. ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ ಮತ್ತು ವಿಜಯನಗರದ ರಾಜರುಗಳಲ್ಲಿ ಅನೇಕರು ಗ್ರಂಥಕರ್ತರಿದ್ದರು. ಸಂಸ್ಕೃತ ಸಾಹಿತ್ಯಕ್ಕೂ ಕನ್ನಡನಾಡಿನ ಮಹಿಳೆಯರು ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಕನ್ನಡಿಗರು ತೆಲುಗು ಭಾಷೆಯ ಪ್ರಚಾರಕ್ಕೂ ಆಸ್ಪದಕೊಟ್ಟಿದ್ದರು. ಪಂಪ ಭಾರತದ ಚಂಪೂ ಶೈಲಿಯನ್ನು ಅನುಸರಿಸಿ ಪನ್ನಯ ಕವಿ ಆಂಧ್ರ ಮಹಾಭಾರತವನ್ನು ರಚಿಸಿದನು. ಅನೇಕ ಆಂಧ್ರ ಕವಿಗಳು ಕರ್ನಾಟಕಕ್ಕೆ ಬಂದು ಕನ್ನಡ ಅರಸರಿಂದ ಮನ್ನಣೆ ಪೋಷಣೆಯನ್ನು ಪಡೆದಿದ್ದರು. ಮಿಕ್ಕ ಅರಸರಿಗಿಂತ ವಿಜಯನಗರದ ಅರಸರು ತೆಲುಗಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದರು. ಇದೇ ರೀತಿಯಲ್ಲಿ ತಮಿಳು ಮರಾಠಿ ಭಾಷೆಗಳಿಗೆ ಕನ್ನಡ ಅರಸರಿಂದ ಪ್ರೋತ್ಸಾಹ ದೊರೆಯಿತು. ಕನ್ನಡಿಗರು ತಮ್ಮ ಭಾಷೆಯೊಂದಿಗೆ ಇತರ ಭಾಷೆಗಳನ್ನು ಬೆಳೆಸಿದುದು ಕನ್ನಡ ನಾಡಿನ ಸಾಹಿತ್ಯದ ವೈಶಿಷ್ಟ್ಯ.

ಉಪಸಂಹಾರ:—ಆರ್ಯ— ದ್ರಾವಿಡ ಸಂಗಮದಿಂದ ಉಂಟಾದ ಕನ್ನಡ ಸಂಸ್ಕೃತಿಯು ರಾಜಕೀಯ ಭದ್ರತೆ, ಧಾರ್ಮಿಕ ಭಾವನೆ, ಪರಮತ ಸಹಿಷ್ಣುತೆ, ಕಲೆ, ಸಾಹಿತ್ಯಗಳನ್ನು ಭಾರತೀಯ ಸಂಸ್ಕೃತಿಗೆ ಕಾಣಿಕೆಯಾಗಿ ಕೊಡಿದೆ.

(ವಿವಿಧ ಮೂಲಗಳಿಂದ)

ಇದು ಕಾರಣ

ಹೊಟೆಲಿನಲ್ಲಿ ನಿತ್ಯವೂ ಹುರಿದ ಶೇಮಿಗೆ ತಿನ್ನುತ್ತಿದ್ದ ಒಬ್ಬ ಗ್ರಾಹಕನಿಗೆ ಅಂದು ರುಚಿ ವ್ಯತ್ಯಾಸದ ಅರಿವಾಯ್ತು. ಕಳೆದ 10 ವರ್ಷಗಳಿಂದಲೂ ಇಲ್ಲದ ರುಚಿ ಭೇದ! ಮೆನೇಜರನಲ್ಲಿ ಕಾರಣ ವಿಚಾರಿಸಿದ. ತಾನು ವಿಚಾರಿಸಿ ಹೇಳುವುದಾಗಿ ಒಪ್ಪಿದ ಮೆನೇಜರ್ ತೀವ್ರ ಅಪ್ಪೀಕ್ಷಣೆಯ ತರುವಾಯ ತಿಳಿಸಿದ:—

"ಎಣ್ಣೆ ಬಾಣಲೆಯಲ್ಲಿದ್ದ ಮೊದಲಿನ ಎಣ್ಣೆಯನ್ನು ಕೆಲಸದವರು ನಿನ್ನೆ ಮಧ್ಯಾಹ್ನ ಚೆಲ್ಲಿಕೆಡ್ಡರು. ಇಂದು ಹೊಸ ಎಣ್ಣೆಯನ್ನು ಹೊಯ್ದು ಹುರಿಯಬೇಕಾಯ್ತು...

ಬೇಸರದ ಸಂಗತಿ—

ರಾಷ್ಟ್ರಮಾರಕ ವಿದ್ಯಾರ್ಥಿ ಅಶಿಸ್ತು

ಬರೆದವರು: ಶ್ರೀ ಬಿ. ಎಚ್. ಶಾಂತಾರಾಮ ಶೆಟ್ಟಿ.

ಇಂದಿನ ವಿದ್ಯಾರ್ಥಿಗಳೇ ನಾಳಿನ ರಾಷ್ಟ್ರ ನಿರ್ಮಾಪಕರು. ಅಂದರೆ ಇಂದು ಕಾಲೇಜು ಜೀವನದಲ್ಲಿ ರಾಷ್ಟ್ರಜ್ಞಾನ ತಿಳಿದು ಮುಂದೆ ರಾಷ್ಟ್ರವನ್ನು ಆಳುವವರು ಈ ವಿದ್ಯಾರ್ಥಿಗಳು ಪ್ರಾಥಮಿಕ, ಮಾಧ್ಯಮಿಕ; ಪ್ರೌಢ ವ್ಯಾಸಂಗ ಮಾಡಿ ಕಾಲೇಜು ಜೀವನಕ್ಕೆ ವಿದ್ಯಾರ್ಥಿ ಕಾಲಿಡಬೇಕಾದರೆ ಪ್ರಾಯ ಪ್ರಬುದ್ಧನಾಗಿರಬೇಕು.

ಏಕೆಂದರೆ ಪ್ರಾಯಪ್ರಬುದ್ಧನಾಗದ ವಿದ್ಯಾರ್ಥಿ ರಾಷ್ಟ್ರಜ್ಞಾನ ಪಡೆಯಲಾರ. ಇಂದು ಪ್ರಾಯಪ್ರಬುದ್ಧರಾಗಿ ಜ್ಞಾನದ ತುಟ್ಟತುದಿಯಲ್ಲಿರುವ ವಿದ್ಯಾರ್ಥಿಗಳು ಮಾಡುತ್ತಿರುವ ಗೊಂದಲವನ್ನು ನೋಡಿದರೆ ಕಣ್ಣೀರು ತೊಟ್ಟಿಕ್ಕುವಂತಾಗುತ್ತದೆ.

ಆಯೇಷಾಬಿಯ ಜಾಣತನ

(ಏಳನೇ ಪುಟದಿಂದ)

ಯೇಷಾಬಿ ಕುತೂಹಲದಿಂದ ಕೇಳಿದಳು.

"ಕುಟುಂಬ ಯೋಜನಾ ಶಿಬಿರವಿದೆ. ಅಲ್ಲಿ ಮಕ್ಕಳಾಗದಂತೆ ಚಿಕಿತ್ಸೆ ಮಾಡುತ್ತಾರೆ" ಎಂದು ನನ್ನ ಪೆರಿಮನೆಯವರೊಬ್ಬರು ನನಗೆ ಹೇಳಿದರು. ನನಗೆ ಅಚ್ಚರ್ಯವಾಯಿತು. ಮಾರನೆ ದಿನ ನನ್ನ ಮನೆ ಬಾಗಿಲಿಗೆ ಬಂದ ಆರೋಗ್ಯ ವೀಕ್ಷಕಿಯನ್ನು ಕೇಳಿಯೇ ಬಿಟ್ಟೆ. ಆಗ ಎಲ್ಲವೂ ತಿಳಿಯಿತು. ಅವರನ್ನೂ ಕರೆದುಕೊಂಡು ಕುಟುಂಬ ಯೋಜನಾ ಶಿಬಿರಕ್ಕೆ ಹೋದೆ."

"ಮುಂದೆ ಏನಾಯಿತು?"

"ಅದೆಲ್ಲಾ ತುಂಬ ಸರಳ. ಅಲ್ಲಿ ಫನಗೆ ಶಸ್ತ್ರ ಚಿಕಿತ್ಸೆ ಮಾಡಿದರು. ನಾನು ಶಿಬಿರದಲ್ಲಿ ಏಳು ದಿನಗಳ ವರೆಗೆ ಇದ್ದೆ. ಉಣ್ಣಲು ಬ್ರೆಡ್ ಹಾಲು, ಹಣ್ಣುಗಳನ್ನು ಅನ್ನಸಾರನ್ನು ಕೊಟ್ಟರು."

"ಡಾಕ್ಟರುಗಳು, ನರ್ಸ್‌ಗಳು ನಿನ್ನೊಂದಿಗೆ ಹೇಗೆ ನಡೆದುಕೊಂಡರು?"

"ಅವರೆಲ್ಲ ತುಂಬ ಒಳ್ಳೆಯವರು. ನನಗೆ ಸಹಾಯ ಮಾಡಿದರು. ರಂಪ್ರಿಯಾ ಬಂದು ನನ್ನ ಆರೋಗ್ಯದ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಿದ್ದರು"— ಎಂದಳು. ಆಯೇಷಾಬಿ, ಅವಳ ಕಣ್ಣುಗಳಲ್ಲಿ ಕೃತಜ್ಞತೆ ಮೂಡಿತ್ತು.

"ಹೆಚ್ಚು ಮಕ್ಕಳಿದ್ದಷ್ಟು ಒಳ್ಳೆಯದು ನಿನಗೆ ಅನಿಸುವುದಿಲ್ಲವೆ?"

"ಇಲ್ಲ, ಬಹಳ ಮಕ್ಕಳಿದ್ದಷ್ಟೂ ಅವುಗಳ ಪಾಲನೆ— ಪೋಷಣೆ ಕಷ್ಟ" ಕೂಡಲೇ ಆಯೇಷಾಬಿಯ ಉತ್ತರ ಬಂದಿತು.

"ಈಗ ನನಗೆ ಹೇಗೆ ಅನ್ನಿಸುತ್ತಿದೆ."

"ನನಗೆ ಈಗ ಆತ್ಮ ವಿಶ್ವಾಸ ಬಂದಿದೆ. ನಾನು ಆರುಮಕ್ಕಳನ್ನು ಸರಿಯಾಗಿನೋಡಿಕೊಳ್ಳಬಲ್ಲೆ. ಅವರಲ್ಲಿ ಮೂವರು ಈಗಾಗಲೇ ಹೊರು-ಚಾರು ಕೆಲಸ ಮಾಡತೊಡಗಿದ್ದಾರೆ. ನನಗೆ ಮಕ್ಕಳಾದದಂತೆ, ಸಹಾಯ ಮಾಡುವವರಿಗೆ ನಾನುಚಿಬಹುದೆ"

"ಮಗು ಅಷ್ಟೇ ಅಳಲಾರಂಭಿಸಿತ್ತು"

ರಾಷ್ಟ್ರದ ಯಾವ ಸಮಸ್ಯೆಯೇ ಇರಲಿ ವಿದ್ಯಾರ್ಥಿಗಳು ಸಮೂಹ ಘೋಷಣೆಗಳೊಡನೆ ಸೇರಿಕೊಂಡು ಮಾಡುತ್ತಿರುವ ಗೊಂದಲವನ್ನು ನೋಡಿದರೆ ಈ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ಬಂದಿರುವರೋ ವಿದ್ಯಾಜೀವನದ ಸವಿ ಸವಿಯಲು ಬಂದಿರುವರೋ ಎಂದು ಆಲೋಚಿಸುವಂತಾಗಿದೆ. ಉದಾಹರಣೆಗೆ ಭಾಷಾ ಗೊಂದಲದ ವೇಳೆ, ಹಿಂದಿ ವಿರುದ್ಧ ವಿದ್ಯಾರ್ಥಿಗಳು ನಡೆಸಿರುವ ಹಿಂಸಾತ್ಮಕ ಚಳುವಳಿ ಕರ್ನಾಟಕದ ಘನತೆಗೊಂದು ಶಾಶ್ವತ ಅಪಕೀರ್ತಿಯ ಬೊಟ್ಟಿಡುವಂತೆ ಮಾಡಿದೆ.

ನಮ್ಮ ವಿದ್ಯಾರ್ಥಿಗಳಿಗೆ ರಾಜಕೀಯ ಪರಿಜ್ಞಾನವಿದ್ದಿದ್ದರೆ ಇಂಥ ಗಲಭೆಗಳು ನಡೆಯುತ್ತಿರಲಿಲ್ಲ.

ಇಂದು ಕೆಲವು ವಿದ್ಯಾರ್ಥಿಗಳಿಗೆ ಬೇಕಾದುದು ಜ್ಞಾನವಲ್ಲ; ಗೊಂದಲ ಗಲಾಟೆ ಇವಿಲ್ಲವಾದರೆ ಅವರಿಗೆ ಕಾಲೇಜು ಜೀವನ ಮಜಾ ಅನಿಸುವುದಿಲ್ಲ. ಹೀಗಿರುವಾದರೆ, ರಾಷ್ಟ್ರದ ಭಾವೀ ಪೌರರು ತಾವು ಎಂದು ತಿಳಿದಿದ್ದರೆ, ವಿದ್ಯಾರ್ಥಿಗಳು ಗೂಂಡಾಗಳಂತೆ ರಾಷ್ಟ್ರಘಾತುಕ ಅಕೃತ್ಯಗಳನ್ನು ಮಾಡುತ್ತಿದ್ದರೆ?

ಹಿಂದಿ ಭಾಷೆ ನಮ್ಮ ದಕ್ಷಿಣಕ್ಕೆ ತುಸು ತ್ರಾಸದಾಯಕವೆಂಬುದು ಒಪ್ಪತಕ್ಕದ್ದೆ. ಆದರೆ, ಸಂವಿಧಾನದಲ್ಲಿ ನಿರೂಪಿಸಿದ ವಿಷಯವನ್ನು ಬಿಡುವುದು ಸರಿಯಲ್ಲ. ಹಿಂದು ವರ್ಗಕ್ಕೆ ಅಸಮಾಧಾನವಾದುವೆಂತ ಆ ವಿಷಯವನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಿದೆ ಬಿಡುವುದು ಸಂವಿಧಾನಕ್ಕೆ ಅಪಚಾರ ಮಾಡಿದಂತೆ.

ಸರ್ಕಾರವೆಂದರೆ ಸ್ವಯಂ ಚಾಲಿತ ಯಂತ್ರವಲ್ಲ. ಜನತಾ ಪ್ರತಿನಿಧಿಗಳಿಂದ ನಡೆಯುವಂತಹುದು. ನಮ್ಮ ಸರ್ಕಾರ ಬಹುಮತದ ಫಲಾರ್ಥಕ್ಕೆ ಕಟ್ಟುಬೀಳುವುದು ಪ್ರಜಾಪ್ರಭುತ್ವದ ಮೂಲ ತತ್ವಗಳಲ್ಲಿ ಒಂದು.

ಅಲ್ಪಮತದ ಜನತೆಕೆರಳಿ ಗೊಂದಲವೆಬ್ಬಿಸಿದರೆ ಸರಕಾರ ಕೆಂಡವಾಗುವುದು. ಏಕೆಂದರೆ ಅಲ್ಪ ಮತದವರೇ ಇಷ್ಟು ಕೆರಳಿ ಚದುರುವಳಿಯಲ್ಲಿ ತೊಡಗಿದರೆ ಬಹುಮತದವರು ಏನು ತಾನೇ ಮಾಡಬಹುದು?

ನಮ್ಮಲ್ಲಿ ವಿದ್ಯಾರ್ಥಿಯಿಂದ ಮುದುಕರ ವರೆಗೆ ಎಲ್ಲರಿಗೂ ಸರ್ವತಂತ್ರ ಸ್ವಾತಂತ್ರ್ಯವಿದೆ. ಈ ಸ್ವಾತಂತ್ರ್ಯವನ್ನು ರಾಷ್ಟ್ರ ಮಾರಕ ಕೃತ್ಯಗಳಿಗೆ ಉಪಯೋಗಿಸಿದರೆ ಇಂದಿನ ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಾಪಕರಾಗುವರೆ ಬದಲು ಪರದೇಶಗುಲಾಮರಾಗಿ ಬಾಳಬೇಕಾದೀತು. ಇವರನ್ನು ಮನ ಬಂದಂತೆ ನಡೆಯುವುದು ಸ್ವಾತಂತ್ರ್ಯವಲ್ಲ; ಸ್ವೇಚ್ಛೆ. ಪ್ರಜಾಪ್ರಭುತ್ವವನ್ನು ಅರಿಯಬೇಕಾದ ವಿದ್ಯಾರ್ಥಿ ಸ್ತಂಭ ಅಲ್ಲಾಡ ಹತ್ತಿದರೆ ಪ್ರಜಾಪ್ರಭುತ್ವ ಛಿದ್ರವಾಗಿ ಛಿಲ್ಲಿಲಿಕ್ಕಿಲ್ಲ.

ವಿದ್ಯಾರ್ಥಿ ಗಲಭೆ ಇದೇ ರೀತಿ ಮುಂದುವರಿದರೆ ನಮ್ಮ ಪ್ರಜಾಪ್ರಭುತ್ವ ಅಡಳಿತ ಸಮೂತ್ರವಾಗಿ ಮುಂದುವರಿಯಲಾರದು.

ಪರಕೀಯರಾದ ಆಂಗ್ಲರೆದುರು ನಾವು ಅಸಹಕಾರ ಚಳುವಳಿ, ಸತ್ಯಾಗ್ರಹ ಮಾಡಿದ್ದೇವೆ ವಿನಾಃ ಈಗಿನಂತೆ ಜನತಾ ಸೊತ್ತುಗಳನ್ನು ನಾಶಮಾಡುವಂತಹ ಕುಕೃತ್ಯಕ್ಕೆ ಇಳಿಯಲಿಲ್ಲ. ನಮ್ಮ ರಾಷ್ಟ್ರದ ಸೊತ್ತುಗಳನ್ನು ನಾಶಮಾಡುವುದೆಂದರೆ, ನಮ್ಮ ಮನೆಯ ಸೊತ್ತುಗಳನ್ನು ನಾವೇ ನಾಶ ಮಾಡಿಕೊಂಡಂತೆ, ಸಮಸ್ಯೆಗಳಿಗೆ ಪ್ರಜಾಶಾಂತ್ರಿಕ ಮಾರ್ಗಗಳ ಮೂಲಕವೇ ಪರಿಹಾರ ಹುಡುಕಬೇಕು.

ಬಿಹಾರದಲ್ಲಿ ಮಿಸೆ ಹೊತ್ತವರು

(ನಾಲ್ಕನೇ ಪುಟದಿಂದ)

ಪ್ರಯೋಜನವಿಲ್ಲವಾಗುತ್ತಲ್ಲಂತೆ...'

"ಅದ್ದೇ ನೋಡು, ಜನ ಸೇವಕರೆಲ್ಲಾ ದಿನದಿನಾ ಹುಟ್ಟುತ್ತಿರೋ ಮಿಸೆಯನ್ನು ಕಸಿ ಕಟ್ಟೋದು, ಕೀಸಿ ತೆಗೆಯೋದು...."

"ಅಂದ್ರೆ, ಈಗ ನೂರು ಗಂಡಸರಲ್ಲಿ ತೊಂಬತ್ತೊಂಬತ್ತು ಜನ ಜನಸೇವಕರು...."

'ಪಂಚಪ್ರಸ್ಥಲ್ಲಿ ಘೋರಕ್ಕೆ ನೂರರಷ್ಟು...'

"ಘೋರೀ ಘೂಟ ಇದ್ದೇರಿ...."

"ಏನ್ನ ಹಾಗೇನೇ ಅನ್ನ...ಹ್ಹಾಂ...."

"ಹ್ಹಾಂ....ನಾಲ್ಕುದಿನ ತಾಳಿ...'

"ಹ್ಹಾಂ.....ಮತ್ತೇನು ಮಾಡೋದು ಕ್ಯಾಗುತ್ತೇ ಕಾಲಕ್ಕೆ ಕುಟಿಲಾಗಿ."

— ಗೋರಾ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿವೆ

ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೂಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಬೀಳ್ಕೊಡುವ ಸಮಾರಂಭ

ಉಡುಪಿ ಬಾರ್ಸ್‌ಟ್ಯೂಟೋರಿಯಲ್ ಕೋಲೇಜಿನಲ್ಲಿ ತಾ.17-8-68ರಂದು ಪ್ರಿನ್ಸಿಪಾಲ್ ಡಾ| ಎಸ್. ಆರ್. ಮೊಬಾಶಿ ಇವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುವಸಮಾರಂಭವು ಜರಗಿತು. ವ್ಯಾಖ್ಯಾನಾ ನಂತರ ಶ್ರೀ ರಾಮಚಂದ್ರಪಾಂಗಾಣ್ಣರವರು ಸ್ವಾಗತಿಸಿದರು. ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳಾದ ನಂತರ, ವಿದ್ಯಾರ್ಥಿಗಳ ಪರವಾಗಿ ಶ್ರೀ ಗಳಾದ ಜಯಶಂಕರ ಶೆಟ್ಟಿ, ಸುಬ್ರಹ್ಮಣ್ಯಶಾಸ್ತ್ರಿ, ಸದಾಶಿವ ಕುಂದರ್, ಪರಿದಾಸ ಶ್ಯಾನುಭೋಗ್; ಜಯಲಕ್ಷ್ಮಿ ಮೊದಲಾದವರು ಸಂಸ್ಥೆಗೆ ಹಾರಿಕೆ ಶುಭಾಶಯಗಳನ್ನು ಕೋರಿ ಭಾಷಣ ಗೈದರು. ಸಮಾರಂಭದ ಮುಖ್ಯ ಅತಿಥಿಗಳಾದ ಡಾ| ವಿಜಯೇಂದ್ರ ಮಾಸ್ತಿ, ಕೂರಾಡಿ ಸದಾಶಿವ ಕಲ್ಮಾಡಿ, ಆರ್. ಎಸ್. ಕಾಮತ್, ಎಸ್. ಸೀತಾರಾಮ ಕಾಮತ್, ಬಿ. ಎನ್. ಆಚಾರ್ಯ ಮೊದಲಾದ ಮಹನೀಯರು, ಬಾರ್ಸ್ ಟ್ಯೂಟೋರಿಯಲ್ ಕೋಲೇಜಿನ ವಿಸ್ತಾರವಾದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು.

ಅಧ್ಯಕ್ಷರಾದ ಡಾ| ಮೊಬಾಶಿಯವರು ತಮ್ಮ ಭಾಷಣದಲ್ಲಿ—ಇಂದಿನ ವಿದ್ಯೆಯಲ್ಲಿರುವ ಕೆಲವು ಲೋಪ ದೋಷಗಳನ್ನು ವಿವರಿಸಿದರು. ಮುಂದುವರಿಸುತ್ತಾ ಅವರು ವಿದ್ಯಾರ್ಥಿಗಳು ಶಿಕ್ಷಣ, ಗುರುಗಳು ಹಾಗೂ ತಮ್ಮ ಸಂಸ್ಥೆಯ ಮೇಲಿನ ಅಭಿಮಾನಕ್ಕಿಂತಲೂ ಹೆಚ್ಚಾಗಿ ಬರೀ ಕೈಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಉತ್ತಮವಾದ ಫಲಿತಾಂಶಗಳನ್ನು ತರುವುದರಿಂದಲೇ ಭಾರತದಲ್ಲಿ ನಿಜವಾದ ನಾಗರಿಕರಾಗಬಹುದೆಂದು ಹೇಳಿದರು.

ಕೊನೆಗೆ ಸಂಸ್ಥೆಯ ಪ್ರಮುಖ ವ್ಯವಸ್ಥಾಪಕ ಡಾ| ಕೆ. ಕೆ. ಕಲ್ಮಾಡಿರವರು ಧನ್ಯವಾದ ಸಮರ್ಪಣೆ ಗೈದರು.

ಗೊರೆಟ್ಟಿ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನೆ

ಕಲ್ಯಾಣಪುರದಲ್ಲಿ ಕಟ್ಟಲ್ಪಟ್ಟ ಗೊರೆಟ್ಟಿ ಆಸ್ಪತ್ರೆಯ ನೂತನ ಕಟ್ಟಡವನ್ನು ತಾರೀಕು 15-8-68ರಂದು ಬೆಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಸರ್ಜನ್ ಡಾ| ಪಾಲರು ವಹಿಸಿದ್ದರು.

ಜಿಲ್ಲಾಧಿಕಾರಿಗಳು ಕ್ರೈಸ್ತ ಮಿಶನರಿಗಳ ಸೇವಾದೀಕ್ಷೆಯನ್ನು ಪ್ರಶಂಸಿಸುತ್ತಾ ಜಾತಿಮತ ಬೇಧವಿಲ್ಲದೆ ಎಲ್ಲರೂ ಅದರಲ್ಲಿ ಸಹಕಾರ ನೀಡಬೇಕೆಂದು ಕರೆಯಿತ್ತರು. ದೇವರ ಕೆಲಸವೆಂಬ ಭಾವನೆಯಿಂದ ಮಾಡಿದ ಜನಸೇವೆಯ ನೆನ್ನೆದಿಗೆ ಅಪಾರ ಸೇವೆ ಗೈದ ಈ ಮಿಶನರಿ ಸಂಸ್ಥೆಗಳಿಗೆ ನಾವೆಲ್ಲ ಆಭಾರಿಗಳು. ಜನತಾ ಸೇವೆಯೇ ಜನಾರ್ಧನ ಸೇವೆಯೆಂಬ ಭಾವನೆಯಿಂದ ಉನ್ನತ ಮಟ್ಟದ ಕಾರ್ಯ ಕರ್ತರನ್ನು ಪಡೆದುತ್ತಿರುವ ಕ್ರೈಸ್ತ ಸಂಥಕ್ಕೆ ನಾವು ಋಣಿಗಳಾಗಿರಬೇಕು. ಎಂದು ಹೇಳುತ್ತಾ ಅವರು ಆಸ್ಪತ್ರೆಗೆ ಶುಭ ಕೋರಿದರು.

ಆರಂಭದಲ್ಲಿ ಬಿಷಪ್ ರೈಟ್‌ರೆವರೆಂಡ್ ಡಾ| ಬೆಸಿಲ್ ಡಿ'ಸೋಜಾರವರು ಸ್ವಾಗತಿಸಿದರು. ಎಕೆಡಿಮಿಯ ಅಧ್ಯಕ್ಷ ಡಾ| ಮಾಧವ ಪೈಗಳು ಕಣ್ಣಾರ್ ಆಸ್ಪತ್ರೆಯ ಕಜ್ಜರ ಸೇವೆ ಸಹಕಾರದ ಭರವಸೆಯನ್ನು ಈ ಸಂಸ್ಥೆಗೆ ಕೊಡುತ್ತಾ ಒಳ್ಳೆಯದನ್ನು ಮಾಡಲು ಸಾಧ್ಯವಾಗದಿದ್ದರೆ ಒಳ್ಳೆಯದನ್ನಾ ನೋಡಿ ಮಚ್ಚಬೇಕು ಎಂದು ಸಂದೇಶ ನೀಡಿದರು; ಇಂದು ಹಳ್ಳಿಗಳಲ್ಲಿ ಯೋಗ್ಯ ಸಾಕಿರ್ಯ ದೊರಕದೆ ಆಗುತ್ತಿರುವ ಅನಾಹುತಗಳನ್ನು ವಿವರಿಸಿ ಉಡುಪಿಯಲ್ಲಿ ಈಗಿಗಿಂತ ಮೂರು ಪಾಲಷ್ಟಾದರೂ ಹಾಸಿಗೆಗಳ ಸಂಖ್ಯೆಹೆಚ್ಚಾಗಬೇಕೆಂದರು.

ಅಧ್ಯಕ್ಷರು ನೂತನಾಡಳಿತ ಇಂದು ಸರಕಾರವು ವೈದ್ಯಕೀಯ ಸಾಲಭ್ಯ ನೀಡಲು ಯತ್ನಿಸುವುದಾದರೂ ಖಾಸಗಿ ಆಸ್ಪತ್ರೆಗಳಲ್ಲಿ ನೂತ್ರ ಮಾನವತಾ ದೃಷ್ಟಿಯ ಸೇವಾಭಾವನೆಯನ್ನು ನೋಡಲು ಸಾಧ್ಯವಾಗದಿರುವುದೆಂದರು ಅವರು ಖಾಸಗಿ ಕ್ಷೇತ್ರದಲ್ಲಿ ಹುಟ್ಟಿರುವ ಗೊರೆಟ್ಟಿ ಆಸ್ಪತ್ರೆಗೆ ಉಜ್ವಲ ಭವಿಷ್ಯ ಕೋರಿದರು.

ಎಲ್ಲೆಲ್ಲಿ ಏನೇನು?

ಕೊಲ್ಲಿ ಜಾತ್ರೆ

ಚಿಕ್ಕಂಗಳಿ ತಾಲೂಕು ಮಿಸ್ಕಬಾಗಿಲು ಗ್ರಾಮದ ಕೊಲ್ಲಿ ಶ್ರೀ ದುರ್ಗಾ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ ಉತ್ಸವಾದಿಗಳು ಪೂರ್ವಾಲು ಪದ್ಧತಿ ಪ್ರಕಾರ ತಾ. 29-3-66 ನೇ ಶುಕ್ರವಾರದಿಂದ ತಾ. 4-4-1966 ನೇ ಗುರುವಾರದ ತನಕ ಜರಗುವದೆಂತಲೂ ತಾ. 3-4-1966 ನೇ ಬುಧವಾರ ದರ್ಶನ ಬಲಿ ರಥೋತ್ಸವಾದಿಗಳು ನಡೆಯುವುದೆಂತಲೂ ದೇವಸ್ಥಾನದ ಶ್ರೀ ಕೂಡಪಟ್ಟು ಪೆಂಕಟಸುಬ್ಬರಾವ್ ತಿಳಿಯಪಡಿಸುತ್ತಾರೆ.

ಸಂಧ್ಯಾ ಕಾಲೇಜಿನ ಯೂನಿಯನ್ ಉದ್ಘಾಟನೆ

ಉಡುಪಿ ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಯೂನಿಯನ್ ಉದ್ಘಾಟನೆಯು ಕಳೆದ ತಾ. 16 ರಂದು ಡಾ|| ಸಿ. ಎಚ್. ಶಿವರಾಮಪ್ಪ ಇವರಿಂದ ಜರಗಿತು. ಪ್ರಿನ್ಸಿಪಾಲ್ ವಿ. ದಾಮೋದರ ರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಯೂನಿಯನ್ ಅಧ್ಯಕ್ಷ ಶ್ರೀ ಯಸ್. ಸದಾಶಿವ ರಾಯರು ಸ್ವಾಗತಿಸಿದ ಬಳಿಕ ಜತೆ ಕಾರ್ಯದರ್ಶಿ ಶ್ರೀ ಬಿ. ರಾಘವೇಂದ್ರ ಶೆಟ್ಟರು ಅತಿಥಿಗಳಿಗೆ ಹೂಮಾಲೆ ಗೈದರು.

ಡಾ|| ಸಿ. ಎಚ್. ಶಿವರಾಮಪ್ಪರು ತನ್ನ ಉದ್ಘಾಟನಾ ಭಾಷಣದಲ್ಲಿ ಜೀವನದ ಮೌಲ್ಯಗಳ ಕುರಿತು ಮಾತನಾಡುತ್ತಾ, ಮಾನವನ ಸಾರ್ಥಕ ಬಾಳನ್ನು ಬದುಕಬೇಕಾದರೆ ಅಳವಡಿಸಿಕೊಳ್ಳಬೇಕಾದ ಗುಣಗಳನ್ನು ವಿವರಿಸಿ, ವೈಜ್ಞಾನಿಕ ಸಾಧನೆಗಳು ಮಿಗಿಲಾಗಿ ಸಾಮರಸ್ಯ ಜೀವನವನ್ನು ಕಲಿಯಬೇಕುಎಂದರು.

ಕಾರ್ಯಕ್ರಮದ ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಪಿ. ಬಾಬುನಾಥರು ಧನ್ಯವಾದ ಸಮರ್ಪಿಸಿದರು.

ಅಕಾಡೆಮಿ ರಜತೋತ್ಸವ

ಮಣಿಪಾಲ, ತಾ. 12-ಬರುವ ಎಪ್ರಿಲ್ 10 ರಿಂದ ಮೇ 10 ರ ವರೆಗೆ ನಡೆಸಲಾಗುವ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ರಜತ ಮಹೋತ್ಸವ ಪ್ರಾಂಗಣ ಡಾ|| ಟಿ. ಎಂ. ಎ. ಪೈಯವರ ಎಂಟನೇ ಜನ್ಮದಿನೋತ್ಸವದ ಕಾರ್ಯಕ್ರಮಗಳಲ್ಲಿ ಹೆಸರಾಂತ ಶಿಕ್ಷಣ ತಜ್ಞರು, ಸಾಹಿತಿಗಳು, ಬ್ಯಾಂಕ್ ಉದ್ಯಮಿಗಳು ಹಾಗೂ ಕೈಗಾರಿಕೋದ್ಯಮಿಗಳು ಭಾಗವಹಿಸುವ ಕಾರ್ಯಕ್ರಮ ಇದೆ.

ಉಡುಪಿ ಲಾ ಕಾಲೇಜಿನಲ್ಲಿ ಎಪ್ರಿಲ್ 10 ರಿಂದ ಮೇ 10 ರ ವರೆಗೆ ಶೈಕ್ಷಣಿಕ ಪ್ರದರ್ಶನವನ್ನೂ, ಎಪ್ರಿಲ್ 10 ರಂದು ಸಿಂಡಿಕೇಟ್ ಬ್ಯಾಂಕಿನ ಸಹಕಾರದಿಂದ ಬ್ಯಾಂಕ್ ಉದ್ಯಮಿಗಳ ಸಮ್ಮೇಳನವನ್ನೂ, ಎಪ್ರಿಲ್ 20 ರಂದು ಡಾ|| ಟಿ. ಎಂ. ಎ. ಪೈಯವರಿಗೆ ಸಾರ್ವಜನಿಕ ಸನ್ಮಾನ ಸಮಾರಂಭವನ್ನೂ ಏರ್ಪಡಿಸಲು ಆಲೋಚಿಸಲಾಗಿದೆ.

ಒಬ್ಬೇಶ್ವರರ ಎಂಟನೇ ಶತಮಾನೋತ್ಸವವನ್ನೂ ಎಲ್ಲಾ ಭರದಿಂದ ಆಚರಿಸಲಾಗುವುದು ಈ ಉತ್ಸವದ ಅವಧಿಯಲ್ಲಿ ಪ್ರತೀದಿನ ರಾತ್ರಿ ಹನುಮಂಜನ ಕಾರ್ಯಕಲಾಪಗಳನ್ನು ಏರ್ಪಡಿಸಲಾಗುವುದು ಎಂದು ಆಚರಣಾ ಸಮಿತಿ ತಿಳಿಸಿದೆ.

ಕರ್ನಾಟಕ ಸಂಘ, ಅಸಲ್ಪೆ ಮುಂಬಯಿ, ವಾರ್ಷಿಕೋತ್ಸವ

ನಮ್ಮ ಸಂಘದ 4 ನೇವರ್ಷದಾಂತ್ಯೋತ್ಸವವೂ, ಕನ್ನಡ ವಿದ್ಯಾಭವನದ ಪಾರಿತೋಷಕ ವಿತರಣ ಸಮಾರಂಭವೂ, ತಾ. 10—3—66 ರಂದು ಗ್ರಾಂಟ್‌ರೋಡ್‌ನ ಹಿಂದೂ ಸಭಾ ಸದನದಲ್ಲಿ ಶ್ರೀ ಪಿ. ಯು. ಉಪಾಧ್ಯಾಯ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಲಾಲ್‌ಬಿಹಾರಿ ಎ. ರಕ್ಕರ್ ಪ್ರಮುಖ ಸಮಾಜ ಸೇವಕರೋದಗರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕುಮಾರಿ ಭಾರತಿ ಡಿ. ಕೋಟ್ಯಾನ್ ಮತ್ತು ಬಳಗದವರಿಂದ ಪ್ರಾರ್ಥನೆಯೊಡನೆ ಬಳಿಕ ಸಂಘದ ಅಧ್ಯಕ್ಷ ಶ್ರೀ ಸೋಮೇಶ ಆರ್. ಪುತ್ರನವರು, ಸ್ವಾಗತ ಭಾಷಣ ಮಾಡುತ್ತಾ ಶ್ರೀ ಉಪಾಧ್ಯಾಯರ ಮತ್ತು ಲಾಲ್‌ಬಿಹಾರಿಯವರ ಸಂಕ್ಷಿಪ್ತ ಪರಿಚಯವನ್ನು ಮಾಡಿ ಸರ್ವರನ್ನೂ ಸ್ವಾಗತಿಸಿದರು.

ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ವಿಠಲ ಎ. ಜತ್ತನವರು ಶುಭ ಕೋರಿ ಬಂದಿರುವ ಸಂದೇಶವಾಚನವನ್ನು ಮಾಡಿದರು.

ಶ್ರೀ ಉಪಾಧ್ಯಾಯರ ದಿವ್ಯ ಹಸ್ತದಿಂದ ಶಾಲಾವಿದ್ಯಾರ್ಥಿಗಳಿಗೆ ಮತ್ತು ಸಂಘದ ಕೆಲವು ಕಾರ್ಯಕರ್ತರಿಗೆ ಬಹುಮಾನ ವಿತರಣೆಯೊಡನೆ ಬಳಿಕ ಶ್ರೀ ಎಸ್. ನಟರಾಜನ್, ಶ್ರೀ ಕುಮಾರ್ ಮತ್ತು ಡಾ|| ಬಾಂಬಕೋಡಿಯವರು ಸಂಘದ ಬೆಳ್ಳಿಯನ್ನು ಬಯಸಿ ಸಮರ್ಪಿಸಿದ ಭಾಷಣವನ್ನು ಗೈದು ಅದಕ್ಕೆ ಶುಭವನ್ನು ಕೋರಿದರು.

ಮುಖ್ಯ ಅತಿಥಿ ಶ್ರೀ ಲಾಲ್‌ಬಿಹಾರಿ ಮತ್ತು ಅಧ್ಯಕ್ಷರಾದ ಶ್ರೀ ಉಪಾಧ್ಯಾಯರು, ತಮ್ಮ ಭಾಷಣಗಳಲ್ಲಿ ಸಂಘದ 4 ನೇ ವರ್ಧಾಂತ್ಯೋತ್ಸವಕ್ಕೆ ತಮ್ಮನ್ನು ಆಮಂತ್ರಿಸಿ ಗೌರವಿಸಿದುದಕ್ಕೆ ಉಪಕಾರ ಸ್ಮರಿಸಿ, ವಿದ್ಯೆಯಂತಹ ಪುಣ್ಯ ಕಾರ್ಯದಲ್ಲಿ ಸಂಘವು ತೊಡಗಿರುವ ಸೇವೆಯನ್ನು ಕೊಂಡಾಡಿದರಲ್ಲದೆ, ಇನ್ನೊಂದು ಶಿಸ್ತಿನಿಂದ ಇಂದಿನ ಸಮಾರಂಭವನ್ನು ನೆರವೇರಿಸಿದುದಕ್ಕಾಗಿ ಕಾರ್ಯಕರ್ತರೆಲ್ಲರನ್ನೂ ಹೃದಯಕ್ಕೆ ಹಿಡಿದಾಡಿ, ತಮ್ಮಿಂದಾದಷ್ಟು ಸಹಾಯವನ್ನು ಈಡಲು ಸದಾ ಸಿದ್ಧರಿದ್ದೇನೆಂದು ಭರವಸೆಯನ್ನಿತ್ತರು.

ಅಂತ್ಯದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ವಿಠಲ, ಎಸ್. ಅಮೀನರು ಧನ್ಯವಾದಗಳನ್ನರ್ಪಿಸಿದರು. ಬಾಲಾ ಮಕ್ಕಳಿಂದ ಸ್ವತ್ತ ಶ್ರೀ ಸಂಸ್ಕೃತ ಮೆಂಡನ್‌ರಿಂದ ಸೊಗಸಾದ "ಆಧುನಿಕ ಹಂಚೇರನೆ" ಮತ್ತು ಶ್ರೀ ಗೀತಾಂಜಲಿ ಕಲಾ ಮೇಳದ ಯಕ್ಷಗಾನ ಮಂಡಳಿ, ಅಸಲ್ಪೆ ಇವರಿಂದ "ಕುಶಲವರ ಕಾಳಗ" ಎಂಬ ಪುಣ್ಯಕತೆಯು ಬಯಲಾಟ ರೂಪವಾಗಿ ಆಕರ್ಷಣೀಯವಾಗಿ ಅಂದಿನ ಸಮಾರಂಭವು ಮುಕ್ತಾಯವಾಯಿತು.

ವಿವಾಹ ಸಮಾರಂಭ

ಶ್ರೀ ಬಾಳ್ಕಟ್ಟ ಬೀಡು ಚಂದ್ರಶೇಖರ ಹೆಗ್ಗೇರುಪುತ್ರ ಶ್ರೀ ಶ್ರೀನಿವಾಸ ಹೆಗ್ಗೇರು ಶ್ರೀ ಬೈಲು ಮೇಗಿನ ಮನೆ ಮಂಜಪ್ಪ ಆಳ್ವರಪುತ್ರಿ ಸೌ|| ಸರ್ವಾಣಿಯನ್ನು ತಾ. 21-3-66 ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ನೆನಪಿನ ಮಣಿಗಳು

೨

ಚಿಕ್ಕಂದಿನಲ್ಲಿ ನೋಡಿದ್ದು ಮಾಡಿದ್ದು ಅನುಭವಿಸಿದ್ದು ಕಲಿತದ್ದು ಎಂದೆಂದೂ ಮರೆಯದೆ ಮನಸ್ಸಿನಲ್ಲಿ ಹಸಿರಾಗಿರುವ ಹಾಗೆ, ಪ್ರಾಯ ತಂಬಿದ ಮೇಲೆ ಬಂಧಿಸಿಕೊಂಡ ಅನುಭವಗಳೆಲ್ಲವೂ ದಿನಕ್ಕೆ ಮೇಣ ಮಾಸಿ ಮಾಸಿ ಮಂಕಾಗಿ ಕ್ರಮೇಣ ಅಳಿಸಿಹೋಗುತ್ತವೆ.

ಬಾಲ್ಯದಲ್ಲಿ ಬಾಯಿಪಾಠ ಮಾಡಿದ, ಮೂಡುವನೂ ರವಿ, ತೆಂಕಣಗಾಳಿಯೂ ಮೊದಲಾದ ಪದ್ಯಗಳೂ, ಕಾಗಕ್ಕ ಗುಬ್ಬಕ್ಕನ ಕಥೆಗಳೂ, ನೋಡಿದ ಮೂಕ ಚಿತ್ರಗಳೂ ಕಲಿತ ಮಂತ್ರಗಳೂ ನೆನಪಿರುವ ಹಾಗೆ ಇತ್ತೀಚಿನ ಅನುಭವಗಳು ನೆನಪಿನಲ್ಲಿ ಳಿಯುವುದಿಲ್ಲ. ಅಂಕಲೇ ಬಾಲ್ಯ ತಾರುಣ್ಯಗಳನ್ನು ವಿದ್ಯಾಭ್ಯಾಸದ ಕಾಲಗಳೆಂದು ವಿಧಿಯೇ ಮಾಡಿಟ್ಟಿದೆ. ಆಗ ಸಾಧ್ಯವಾದಷ್ಟು ಒಳ್ಳೆಯ ವಿಷಯಗಳನ್ನು ಮನಸ್ಸಿನ ಪದರಿನೊಳಗೆ ಅಂಟಿಸಿಕೊಳ್ಳಬೇಕಾದುದು, ಮಾನವ ಜನ್ಮದವರಿಗೆ ಅಗತ್ಯವೆಂತಲೇ ತಾರುಣ್ಯದ ಅವಧಿಯವರೆಗೂ ವಿದ್ಯಾಭ್ಯಾಸದ ಕಾಲವೆಂದು ಎಂದೆಂದಿನಿಂದಲೋ ನಡೆದು ಕೊಂಡು ಬಂದ ಪದ್ಧತಿ. ಆ ಕಾಲದಲ್ಲಿ ಅವರಿಗೆ ಯಾವ ಸಂಸಾರ ತಾಪತ್ರಯಗಳೂ ತಗಲದಂತೆ ನೋಡಿಕೊಳ್ಳುತ್ತಿದ್ದರು. ಹಿರಿಯರು.

ಆದರೆ ಈಗ ಕಾಲ ವ್ಯತ್ಯಾಸವಾಗಿದೆ. ಸಂಸಾರ ತಾಪತ್ರಯಗಳ ಬಿಸಿಗಳೂ ಅವರಿಗೆ ತಗಲುವಂತಾಗಿಬಿಟ್ಟಿದೆ. ಮಾತ್ರವಲ್ಲ ಆಗಲ್ಕಿಂತ ಮೇಲಿನ ದೊಡ್ಡ ದೊಡ್ಡ ರಾಜಕೀಯ ವ್ಯತ್ಯಾಸಮಯಗಳೂ ಚಲ್ಲಾಪಿಲ್ಲಿಯಾಗಿ ಸಿಡಿದು ಹೆಡೆಗೆ ಹುಟ್ಟಿಡಿಗಳ ನುಂದೆಗಳಿಗೂ ಬಂದು ಬಡಿದಿವೆ. ಬಿಡಿಸಿಕೊಳ್ಳಬೇಡವೆಂದು ದೂರ ಹೋಗಲಿಕ್ಕೂ ಆಗದಂತೆ ಅನಿವಾರ್ಯವೆನಿಸುವಂತೆ ಬಿಡಿದಿದೆ, ಅದರಲ್ಲಿ ಸಿಕ್ಕಿ ಕೊಳ್ಳದೆ ಪಾಪ ಅವರೇನು ತಾನೇ ಮಾಡಿಯಾರು?

ಮೊದಲೇ ಮಕ್ಕಳು ಅನುಕರಣಶೀಲರು. ಕಣ್ಣಾರೂ ವಿದ್ಯಾಜ್ಞಾನಿಗೊಂದಿಗೆ ಬೆಳೆದಾಗ ಗಂಟು ನೆಂಟು ಬಿದ್ದು ಹೋಗಿ ದೇ. ಹಮ್ಮ ಮಂಯಿನ ಜೀವನವೇ ಹಾಳಾಗಬಾರದೆಂಬ ಭಯದಿಂದಲೇ ಪ್ರತಿಯೊಬ್ಬ ಹರುಣ ವಿದ್ಯಾರ್ಥಿಯೂ ಹೋರಾಟದೊಂದಿಗೆ ಬಿಟ್ಟೆಲೆಯ ಬೇಕಾಗಿದೆ. ತರುಣ ರಕ್ತ ಆವೇಶವು ತಾನೆ? ಹಿರಿಯ ಮುಂದಾಳು ರಾಜಕಾರಣಿಗಳೂ ಅವನ ಬೆನ್ನನ್ನು ಚಪ್ಪರಿಸುವಾಗ, ತರುಣರು ಹುರಿದುಂಬುತ್ತಾರೆ. ಘೋಷಣೆ ಹೊರಡಿಸುತ್ತಾರೆ. ಗಲಾಟೆ ಶುರುವಾಗುತ್ತದೆ.

ಆಗ ಅರ್ಧಾರ್ಧ ಗೊತ್ತಿಲ್ಲದ ಚಿಕ್ಕ ಹುಡುಗರೂ ಮೊದಲಿಗೆ ತೆಗೆದು ಗುಂಪು ಕಟ್ಟಿಕೊಂಡು, ಕಲ್ಲಾಟ ಕಲಿ ಚಾಕುಗಳಿಂದ ಗೀರುವುಗಳನ್ನು ಪ್ರಾರಂಭಿಸುತ್ತಾರೆ. ಕಾರ್ಯಾ ಮೇಲೆಯೋ ತಪ್ಪು ಯಾವ ಯಾವ ಕಷ್ಟ ಪ್ರಸಂಗಗಳ ಮೇಲೆ, ಯೋ ಮಾಡಿ.

ನಿಜವಾದ ಅಂತಃಸಾಕ್ಷಿಯ ದೃಷ್ಟಿಯಲ್ಲಿ ನೋಡಿದರೆ- ಮೂಲ ಕಾರಣ ಹಿಂದಿರುವ ಮಾಡಿಟ್ಟ ಪಂಜರಂಗದಲ್ಲೇ ಇದೆ ಎಂಬುದು ಗೊತ್ತಾಗದಿರದು.

—ಎಂ. ರಂಗರಾವ್

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯವಾಡಿ ಅದಷ್ಟು ತ್ವರೆಯಲ್ಲಿ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟೋ ಪತ್ರಿಕೆ ಬೇಡವೆಂದಿರುವವರು ಹಾಗಾಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಅಂತೂ ಈ ತಿಂಗಳಾಂತ್ಯದ ಒಳಗೆ ಯಾವದೇ ಉತ್ತರವಿಲ್ಲದಿದ್ದರೆ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸುತ್ತೇವೆ. ಅದನ್ನು ಸ್ವೀಕರಿಸುವಂತೆ ವಿನಂತಿ.

ಮೆನೇಜರ್, ನವಯುಗ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಹೌಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ

ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ

ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನೂ ತಾರೀಕನ್ನೂ ನಿರೀಕ್ಷಿಸಿರಿ.

ಸುಖದ ಸೆರೆ

(ಎರಡನೇ ಸಂಚಿಕೆಯಿಂದ)

ಮಂಗಳದ ವ್ಯಂಗ್ಯ ಕುಹಕ ನಗುವಿನೊಂದಿಗೆ ಇಂದುಮತಿಯು ಪೃಥಿವಿಯ ಮೂಲೆಯಲ್ಲಿಲ್ಲೋ ಅಡಗಿಕೊಂಡಿದ್ದ ಹೆಣ್ಣಿನ ಸಪ್ತ ಆಸೆಯೊಂದು ಕೆರಳಿ ಕಿಂತಿತ್ತೆ. ಕಥೆ ಕಾದಂಬರಿಗಳನ್ನೋದಿದಾಗ, ಚಲನಚಿತ್ರಗಳನ್ನು ನೋಡಿದಾಗ ಕಂಡ ಬರುವ ಪ್ರಿಯ ಪ್ರೇಯಸಿಯರ ಸುಂದರ ಚಿತ್ರಣ ಸುನಂದೊಳಗೇ ಮೂಡಿದಾಗ ಉಂಟಾಗುವ ಸಂಗನಸುಗಳು ಇಂದುಮತಿಯ ಮೈಕಾಳಿ ತನ್ನನ್ನು ಅಣಕಿಸುವಂತಾಯಿತು.

ಮದುವೆಯ ಗದ್ದಲವೆಲ್ಲ ಶಾಂತವಾಗುವ ವರೆಗೂ ಇಂದುಮತಿಗೆ ಅಲ್ಲಿ ನಿಲ್ಲುವುದು ಸಾಧ್ಯವಾಗಲಿಲ್ಲ. ಆಕೆ ಎರಡೇ ದಿನಗಳಲ್ಲಿ ಚಿಕ್ಕಮ್ಮನ ಮನೆಗೆ ಮರಳಿ ಬಂದಳು.

ಮದುವೆ ಮನೆಯಿಂದ ಹಿಂತಿರುಗಿದ ಇಂದುಮತಿ ಪೂರ್ವದಿನಪ್ಪು ಗೆಲುವಾಗಿಲ್ಲ ಎಂಬುದು ವ್ಯಕ್ತವಾಗಿ ಬೇಗನೇ ತಿಳಿಯಿತು. ಸಗಲಿಡೀ ಮನೆಯಲ್ಲಿ ಸುಮ್ಮನೆ ಕುಳಿತು ಬೇಗದಂಗುತ್ತಿರುವುದೂ ಅವಳ ಮನಸ್ಸಿಗೂಂದು ಕೆಲಸದ ಆಗತ್ಯವಿದೆಯೆಂದೂ ತಿಳಿದುಕೊಂಡು ವತ್ಸಲೆ ಅಕ್ಕೆ ಪತ್ರ ದಾರಿಯನ್ನು ಕಂಡುಹಿಡಿದಳು.

"ಇಂದೂ.... ನಮ್ಮ ಶಾಲೆಯಲ್ಲಿ ಒಂದು 'ವೆಕ್ಸ್ಟಿ' ಖಾಲಿಯಾಗಿದೆ. ಒಬ್ಬಳು ಮದುವೆಯಾಗಿ ಕೆಲಸ ಬಿಟ್ಟಿದ್ದಾಳೆ. ಅದನ್ನು ನಿನಗೆ ಕೊಡಿಸುವಂತೆ ಮೇಲಿನವರೊಡನೆ ಕೇಳಿದ್ದೇನೆ. ಅವರು ಒಪ್ಪಿ ನಾಳೆಯೇ ಬರಹೇಳಿದ್ದಾರೆ' ಎಂದಳು ವತ್ಸಲೆ.

ಚಿಕ್ಕಮ್ಮನ ಮಾತಿಗೆ ಹೂಂಗುಟ್ಟಿದಳು ಇಂದುಮತಿ.

ಉದ್ಯೋಗಕ್ಕೆ ಸೇರಲು ಯಾವೊಂದು ಉತ್ಸಾಹವನ್ನೂ ತೋರ್ಪಡಿಸಲಿಲ್ಲ. ಏಕಂದರೆ ಚಿಕ್ಕಮ್ಮನ ಬಳಿ ಇದ್ದ ಮೇಲೆ ಇನ್ನೂ ಆಕೆಗೆ ಹೊರಯಾಗಿ ಹೊತ್ತು ಕಳೆಯುವುದೂ ಸರಿ ಎನಿಸಲಿಲ್ಲ. ಆಕೆ ದುಡಿದು ತನ್ನ ಹೊಟ್ಟೆಹೊರೆಯುವುದು ತಾನು ಕೂಳಿತು ಉಣ್ಣುವುದು ಸಮಂಜಸವೆನಿಸಲಿಲ್ಲ. ಹಾಗಾಗಿ ಮರುದಿನ ಚಿಕ್ಕಮ್ಮನ ಹಿಂಬಾಲಿಸಿ ವ್ಯಾನೇಜರರ ಮನೆಗೆ ಮರಳಿದಳು ಇಂದುಮತಿ.

ಆ ದಿನ ಶಾಲೆಯಲ್ಲಿ ಹೇಗೋ ಹೊತ್ತು ಕಳೆದಂಯಿತು. ಸಂಜೆ ಮಾಗುತ್ತಲೇ ಶಾಲೆ ಬಿಟ್ಟು ಚಿಕ್ಕಮ್ಮ ಮತ್ತು ಸಹೋದ್ಯೋಗಿನಿಯರೊಂದಿಗೆ ಮನೆಯ ದಾರಿ ಹಿಡಿದಾಗ ವತ್ಸಲಾ ಕೆಗುತ್ತಾ ಕಾಡಿದಳು.

"ಇಂದೂ ತಿಗೆ ನಾನು ಖಂಡಿತ ಮದುವೆ ಯ ರುವುದಿಲ್ಲ ನೋಡಿ. ಊಳೆ, ಹೆಂಗಸರೂ ಬ್ರಹ್ಮಚಾರಿಣಿಯರಾಗಿ ಆದರ್ಶ ರೀತಿಯಲ್ಲಿ ಸೇವೆ ಸಲ್ಲಿಸುವುದು ಸಾಧ್ಯವಿಲ್ಲವೇ? ಸನ್ಯಾಸಿ ಪಟ್ಟ ಪುರುಷರಿಗೆ ಮಾತ್ರ ವಿಧಿಸಲಾಗಬೇಕೇ? ನೀವೇ ಹೇಳಿ."

ಸಹೋದ್ಯೋಗಿನಿಯರು ನಕ್ಕರು. ಏಕೆಂದರೆ ಅವರಲ್ಲಿಬ್ಬರಿಗೆ ಆಗಲೇ ಮದುವೆಯಾಗಿತ್ತು. ಬ್ರಹ್ಮಚರ್ಯದ ಬಗ್ಗೆ ಮಾತು ಬೆಳೆಸುವುದು ಅವರಿಗೆ ಬೇಕಾಗಲಿಲ್ಲ.

"ನೋಡು ಇಂದೂ, ಜೀವನವೆಂದರೆ, ಹೆಣ್ಣಿನ ಬಾಳೆಂದರೆ ಕೇವಲ ಮನೆ, ಸಂಸಾರ, ಮಕ್ಕಳನ್ನು ಹೆರುವುದರಲ್ಲೇ ಮುಗಿಯುತ್ತೆ ನೋಡು, ಅದರಲ್ಲೇನು ಸುಖ, ಸಂತೋಷ, ಸಾರ್ಥಕತೆಯಿದೆ? ನೀನೇ ಹೇಳು!" ಎಂದು ದಾರಿಯುದ್ದಕ್ಕೂ ಬ್ರಹ್ಮಚರ್ಯದ ಬಗ್ಗೆ ಸನ್ಯಾಸಿಣಿಯರ ಬಗ್ಗೆ ಆದರ್ಶ ನಡೆಮಡಿಗಳ ಬಗ್ಗೆ ಉಪನ್ಯಾಸವೇಯಾತ್ತಾ ಮನೆ ಸೇರಿದಳು ವತ್ಸಲಾ.

ಇಂದುಮತಿಗೆ ಮಾತ್ರ ಚಿಕ್ಕಮ್ಮನ ವಿಚಾರದಲ್ಲಿ ವಿಸ್ಮಯವೇ. ಅಂತಹ ಆದರ್ಶ ಸಾಧನೆಯ ಕನಸು ಕಾಣುತ್ತಿರುವ ಚಿಕ್ಕಮ್ಮ ನೈಲಾನ್ ಸೀರೆಯ ಧಗಳ ಜೀವನಕ್ಕೇಕೆ ಮನ ಸೋತಿದ್ದಳೋ? ದಿನಕ್ಕೊಂದು ಖಗಿಯ ಶೃಂಗಾರ, ವಿಲಾಸಗಳೇಕೆ? ಬೆಡಗ, ಬಿನ್ನಾಣಗಳಿಂದ ವೈಯ್ಯಾರ ತೋರ್ಪಡಿಸುವುದೇಕೆ ಇದಕ್ಕೆ ಪ್ರತ್ಯುತ್ತರ ಮಾತ್ರ ಇಂದುಮತಿಗೆ ತೊಳೆಯಲಿಲ್ಲ. ಮರುದಿನ ಭಾನುವಾರ. ಚಿಕ್ಕಮ್ಮ ದೇವಾಲಯವೆಂದು ಮನೆಯಲ್ಲೇ ಉಳಿದು ಇಂದುಮತಿಯನ್ನು ಸಿನಿಮಾಕ್ಕೆಂದು ಕಳುಹಿಸಿದ್ದಳು. ಆದರೆ ಅಸರೂಪಕ್ಕೆ ಬಂದ ಒಳ್ಳೆಯ ಕನ್ನಡ ಚಿತ್ರವೆಂದು ಇಂದುಮತಿ ಹೋದಾಗಲೇ ಸೀಟುಗಳೆಲ್ಲ ಭರ್ತಿಯಾಗಿದ್ದವು. ನಿರಾಸೆಗೊಂಡ ಆಕೆ ಬೇಸರದಿಂದಲೇ ಮನೆಯ ದಾರಿ ಹಿಡಿದಳು.

ಚಿತ್ರಮಂದಿರದಿಂದ ಮನೆಗೆ ಅರ್ಧಗಂಟೆಯ ದಾರಿ. ಆದರೂ ಭಾರವಾದ ಮನಸ್ಸಿನಿಂದ ನಡೆಯುತ್ತಿದ್ದ ಆಕೆಯ ಕಾಲುಗಳೂ ನಿಧಾನವಾಗಿ ಚಲಿಸುತ್ತಿದ್ದುದರಿಂದ ಮುಕ್ಕಾಲು ಗಂಟೆಯೇ ಬೇಕಾಯಿತು. ಮನೆಯ ಬಾಗಿಲು ಮುಚ್ಚಿತ್ತು. ಚಿಕ್ಕಮ್ಮ ನಿದ್ರಿಸುತ್ತಿರಬೇಕು. ಇನ್ನೇನು ಕರೆಯಬೇಕು ಎನ್ನುವಷ್ಟರಲ್ಲೇ ಒಳಗಿನ ಪಿಸು ಮಾತುಗಳು ಇಂದುಮತಿ ಸ್ವರವೆತ್ತದಂತೆ ತಡೆದವು.

"ರಾಜಾ....ನಿಮಗಾಗಿ ನಾನು ಸಿನಿಮಾ ತಪ್ಪಿಸಿಕೊಂಡೆ ಅಲ್ಲದೆ ಅವಳನ್ನು ಒತ್ತಾಯದಿಂದ ಕಳಿಸಿದಂತೆ ಕಳಿಸಿದೆ.'

ಹಾ...ಪಂಡಸಿನ ಧ್ವನಿಯೂ ಕೇಳಿಸಿತ್ತಿದೆ.

"ನಮ್ಮದೇ ಒಂದು ಸಿನಿಮಾ ರಾಣೀ. ಅಲ್ಲವೇನು?"

ಮನಃ ನಗು.

ಇಂದುಮತಿಗೆ ನೆಲ ಭೂಮಿಯೇ ಕುಸಿದಂತಾಯಿತು. ಕಣ್ಣುಗಳಿಗೆ ಕತ್ತಲೆ ಕವಿದಂತೆ ಸುತ್ತಲೂ ಶೂನ್ಯತೆ, ಅಂಧಕಾರ... ಏನೇನೂ ಕಾಣಿಸುತ್ತಿರಲಿಲ್ಲ.

ತುಸು ಹೊತ್ತಿನ ನಂತರ ಚೇತರಿಸಿಕೊಂಡ ಇಂದುಮತಿ ಮೆಲ್ಲ ಮೆಲ್ಲನೆ ಮನೆಯ ಮೆಟ್ಟಲಿಳಿದು ನಡೆದಳು.



ಬಾ! ಕನ್ನಡದ ತಾಯೆ

ಬಾ! ಕನ್ನಡದ ತಾಯೆ ಜೈ ಜಯವೆ,
ಭಕ್ತಿ ಭಾವದ ತಂಬಿ, ಶಿ ಬಾಗುವೆ,
ತುಂಗೆ—ಕಾವೇರಿಯರ ಜಲಜಲ ಜಲ ಸೇಚನದಿ
ನಿನ್ನ, ಸಿರಿಚರಣಗಳ—ನಾ ತೊಳೆಯುವೆ,
ಮನಸೆಳೆವ—ಕಂಪುಗಿವ—ಶ್ರೀಗಂದ ಲೇಪನದಿ
ನಿನ್ನ ಮೈಸಿರಿ ಕಂಡು—ನಾ ತಣಿಯುವೆ
ಪಸ್ತಿದಂತದ-ಕಂಕಣದ ಕರಡಿಗೆಯ ತೆರೆದು
ನಿನ್ನ ಮೊಗದಾವರೆಗೆ-ತಿಲಕವಿಡುವೆ
ನಯವಾದ ರೇಷಿಮೆಯ-ಸೀರೆಯನು ನಿನಗುಡಿಸಿ
ನಯನ ಮೋಹಕ ರಂಗ-ಕಂಡು ನಲಿವೆ.
ಜಾಜಿ ಮಲ್ಲಿಗೆ ಹೂವ ಮಾಲೆಗಳ-ಭಕ್ತಿಯಲಿ
ನಿನ್ನ ಮುಡುಬಿಗೆ ಮುಡಿಸಿ ತವಕಿಸಿರುವೆ
ನವರತ್ನ ಮಣಿ ಖಚಿತ-ದಿವ್ಯ ಸಿಂಹಾಸನದಿ
ಕುಳ್ಳಿರಿಸಿ—ಜಾತುವೆನು—ನಿನ್ನ ವೈಭವವ
ಲಗರುಚಂದನ ಬತ್ತಿಯುರಿಸಿ—ಅತ್ತರು ಸುರಿಸಿ
ಪಸರಿಸುವೆ—ಪರಿಮಳವ—ಪ್ರತಿಭಾನ್ವಿತೆ.
ಕರ್ಪೂರ ಸಹಿತ ನೀಲಾಂಜನ ಬೆಳಗುವೆನು
ಇದೊ ಮಂಗಳಾರತಿಯು—ಸಂಪ್ರೀತೆ.
ಹೊಸ್ತ ಹುವಾಣದಲಿ—ಪಣ್ಣುಕಾಯಿಯನಿರಿಸಿ
ನಿತ್ಯ ಸನ್ನಿಧಿಯಲ್ಲಿ—ವೈಜಾಚ ವೆ
ಕಾಯೇ! ಇದೊ ತಂಬಿರುವೆ, ಸ್ವೀಕರಿಸು ತಾಂಬೂಲ
ನಿನ್ನ ಚಂದ ಟಿ—ಚಲಿಸೆ—ಹಾಂಕೈಯುವೆ
ಬಾನಿನಂಗಳದಲ್ಲಿ—ಬೆಳಗುತಿಹ—ತಾರೆಗಳ
ಮಾಲೆಗಳ—ನಿನಗಾಗಿ—ಪೋಣಿಸಿರುವೆ
ಮೆಲ್ಲ ಮೆಲ್ಲನೆ—ಬೀಸಿ ಬಂದ—ಮಾರುತನಿದೊ
ನೂಡುವನು—ಚಾಮರದ ಸೇವೆ
ಪಡುಗಡಲ ರಂಬೆ—ನಿನ್ನಯ ಪಾದವನು ತೊಳೆಯೆ
ಸಡಗರದಿ—ತೆರೆಗಳ —ತೇಲಿಬಹೆಳೂ
ತನ್ನೊಡಲ ಗರ್ಭದಲಿ—ಹೆ ದುಗರುವ ರತ್ನಗಳ
ರಾಶಿಯನೆ—ಕಾಣಿಕೆಯ ಪೀಯಲಿಸಲು
ಹಕ್ಕಿ ಬಳಗಗಳೆಲ್ಲ—ಕೆಕ್ಕೆ ಬಿಚ್ಚಿ - ಹಾರಾಡುತಿವೆ
ಹಾಡುತಿವೆ—ಕನ್ನಡದ ಗೀತ ಗಾನ
ಎಳೆದಳಿರು—ತೋರಣವ—ಕಟ್ಟಿ ಗಿಡ ಬಳ್ಳಿಗಳು
ಮೊಗ್ಗುಗಳ— ಹೂವಾಗಿ—ಅರಳಿಸಿಹುವು.
ಇನ್ನೇನು ಬೇಕು? ಧ್ಯಾನಾವಾಹನಾ ಪೂಜೆ
ನನ್ನುತಳೆ, ಮೈದೋರು—ಮಮತೆ ಬೀರು
ಕನ್ನಡದ ಕುಲಕೋಟಿ—ಕಾದಿಹುದು ನಿನಗಾಗಿ
ನಿಷ್ಠ ಮಡಿಲಿನಲಿನಲಿಯೇ—ತವಕಿಸಿಹರು.
ಬಾ ಕನ್ನಡದ ತಾಯೆ, ಕೈಮುಗಿಯುವೆ
ಭಕ್ತಿ ಭಾವದ ತಂಬಿ—ಶಿರಬಾಗುವೆ.

ಜೈ ಕರ್ನಾಟಕ,

—"ವಿಚಿತ್ರ ಯೋಚಕ."

ಆಕೆಯ ಮೈ ಕ್ರೋಧದಿಂದ ತರನ್ನಾರದಿಂದ ಕಂಪಿಸುತಿತ್ತು. ಛೀ.... ಎಂತಹ ನೀಚ ವರ್ತನೆ! ತಾನಿನ್ನೂ ಚಿಕ್ಕಮ್ಮನ ಜೀವನವನ್ನು ತಿಳಿಯದೇ ಅದೇ ಕೆಸರಿನಲ್ಲಿ ಬಿದ್ದುಕೊಂಡು ಬಾಳಿದೆನಲ್ಲ. ಅಸಹ್ಯ! ಇದೆಂಹತ ಹೊಲಸು ಬದುಕು? ಬಾಯಲ್ಲಿ ಬಣ್ಣದ ಮಾತುಗಳನ್ನಾಡಿ ಒಳಗಿಂದೊಳಗೇ ಅನೀತಿ ಮಾರ್ಗದಲ್ಲಿ ನಡೆಯುವ ಚಿಕ್ಕಮ್ಮನದು ಸಭೀ ಜೀವನವೇ?

ಚಿಕ್ಕಮ್ಮನ ಆಡಂಬರ ಪ್ರಿಯತೆ, ವೈಭವದ ಬದುಕು, ವಿಲಾಸೀ ಜೀವನ ಎಲ್ಲದರ ಅರ್ಥ ಇಂದುಮತಿಗೆ ಇಂದು ತಿಳಿಯಿತು.

'ಪಪ್ಪ ತಾಯಿ...ತವರು....ಬಡತನವೇ ಅದರೂ ಗೌರವಯುತವಾದ, ಧೀರತೆಯುಕ್ತವಾದ ಬಾಳುವೆ. ಕಷ್ಟದಲ್ಲೂ, ಸುಖವಿದೆ. ದುಃಖದಲ್ಲೂ ಸಂತೋಷವಿದೆ.

'ಚಿಕ್ಕಮ್ಮನ ಸುಖ....ಊ ಹ್ಹೂ.... ಇನ್ನೆಂದೂ....ಈ ನರಕಕ್ಕೆ ಇಳಿಡಲಾರೆ. ಈ ಸುಖದ ಸೆರೆಯಿಂದ ಬಿಡುಗಡೆ ಹೊಂದಿ ಬಂದುದೇ ನನ್ನ ಸುದೈವ..." ಎಂದು ತೃಪ್ತಿಯ ನಿಟ್ಟುಸಿರು ಬಿಟ್ಟು ತವರಿನ ದಾರಿ ಹಿಡಿದಳು ಇಂದುಮತಿ.

ಒಂದು ಸತ್ಯ

ಅಧ್ಯಾಪಕ —"ಈ ದಿನ ಎಲ್ಲರಿಗಿಂತಲೂ ಶಾಲೆಗೆ ಮೊದಲು ಬಂದವರಾರು—ಈ ತರಗತಿಯಲ್ಲಿ?"

ವಿದ್ಯಾರ್ಥಿ—"ನಾನು, ಸಾರ್! ಕಂಡವರು ಅನೇಕರಿದ್ದಾರೆ....'

ಬೇರೊಬ್ಬ—'ನಾನು ಸಾರ್!...'

"ಸಾಕ್ಷಿ ಯಾರು?..."

"ಆಗ ಇಲ್ಲೇ ಇದ್ದ ಇದೇ ವಿದ್ಯಾರ್ಥಿ, ಸಾರ್!...."

—ಎಚ್. ಎಂ. ವಿಜಯ ನಾರಾಯಣ

NAVAYUGA 28—3—1966
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ನ.)

ಭಾರತ ಯಾತ್ರೆ

ಲೇಖಕರು: ಶ್ರೀ ಡಿ.ಟಿ. ರಂದಸ್ವಾಮಿ ಮಾರಾಟಗಾರರು: ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧

ಪುಟಗಳು: ೧೪೭. ಬೆಲೆ ರೂ. ೨-೦೦

ನಮ್ಮ ಭಾರತ ಅನಾದಿ ಕಾಲದಿಂದಲೂ ಮಹಾತ್ಮರ ತಪೋಭೂಮಿ, ಭಗವಂತನ ಕ್ರೀಡಾಸ್ಥಳ. ಇದರಿಂದಾಗಿಯೇ ಇಲ್ಲಿನ ಕಣ ಕಣವೂ ಪವಿತ್ರ—ಪಾವನ; ಇಲ್ಲಿ ಹಲವಾರು ಪುಣ್ಯಕ್ಷೇತ್ರಗಳು ಪ್ರಸಿದ್ಧಿ ಹೊಂದಿವೆ. ಇವುಗಳಲ್ಲಿ ಪ್ರತಿಯೊಂದರ ಹಿಂದೆಯೂ ಒಬ್ಬ ಇಲ್ಲಿ ಒಬ್ಬ ಮಹಾತ್ಮನ ಚರಿತ್ರೆದ ಹಿರಿಮೆಯಿದೆ.

'ಭಾರತ ಯಾತ್ರೆ' ಎಂಬ ಈ ಗ್ರಂಥದಲ್ಲಿ ಕಛ್ಛಾಕುಮಾರಿಯಿಂದ ಹಿಡಿದು ಬದರಿಯ ವರೆಗಿನ ಸುಮಾರು ಅರುವತ್ತು ಪ್ರಮುಖ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯವಿದೆ—ಸಚಿತ್ರವಾಗಿದೆ. ಯಾತ್ರಾರ್ಥಿಗಳಿಗೆ ಮಾಡಬಹುದಾದ ಧಾರ್ಮಿಕ ವಿಧಿಗಳ ವಿವರವನ್ನೂ ತಿಳಿದುಕೊಳ್ಳಬೇಕಾದ ಎಚ್ಚರಿಕೆಗಳನ್ನೂ ಲೇಖಕರು ಅಲ್ಲಲ್ಲಿಯೇ ಕೊಟ್ಟಿದ್ದಾರೆ—ಇದು ತುಂಬ ಅನುಕೂಲ.

ಈ ಗ್ರಂಥವು ಯಾತ್ರಾರ್ಥಿಗಳಿಗೊಂದು ಪಟ್ಟಿ ಕೈಗನ್ನಡಿಯಾದರೆ ಇನ್ನಿತರರಿಗೆ ಕ್ಷೇತ್ರ ಪರಿಚಯ ಪುಸ್ತಕವೂ ಆಗಬಲ್ಲುದು. ಆದುದರಿಂದ "ಭಾರತ ಯಾತ್ರೆ" ಸ್ವಾಗತಾರ್ಹ ಕೃತಿಯೆಂಬುದು ನಿಸ್ಸಂದೇಹ.

ಆದರೂ ಕೆಲವೆಡೆ ಸಂಧಿಗ್ಧವಾದ ವಿಚಾರಗಳನ್ನು ಲೇಖಕರು ಕೊಟ್ಟು ಇತಿಹಾಸಕ್ಕೆ, ಜನಶ್ರುತಿಗೆ ದ್ರೋಹ ಬಗೆದಿದ್ದಾರೆಂದು ಅಭಿಪ್ರಾಯವಾಗಿಯೇ ಹೇಳಬೇಕಾಗುತ್ತದೆ—ಇಂತಹ ದ್ರೋಹದಿಂದ ಜನತೆಯನ್ನು ತಪ್ಪುದಾರಿಗೊಯ್ದಂತಾಗುತ್ತದೆ. ಉದಾಹರಣೆಗೆ, (ಪುಟ ೪೯)—"ಉಡುಪಿಯ ಬಳಿಯಿರುವ ಶಿವಳ್ಳಿಯು ದ್ವೈತ ಮತ ಸ್ಥಾಪಕರಾದ ಮಧ್ವಾಚಾರ್ಯರ ಜನ್ಮಸ್ಥಳ." (ಪುಟ ೯೩) ಪರೀಕ್ಷಿದ್ರಾಜನು ಈ ಪುಣ್ಯರ ತೀರ್ಥದ ಬಳಿ ಸರ್ಪಯಜ್ಞ ಮಾಡಿದ್ದನೆಂದು ಹೇಳುವುದುಂಟು" ಹಾಗಿಯೇ ವಿಠೋಧಾಭಾಸದಳೂ ಕೆಲವೆಡೆ ತಲೆ ಹಾಕಿದೆ: ಉದಾ:-ಪುಟ ೯೭ರಲ್ಲಿ ಸಂತ ಕವಿ "ತೋಸ್ವಾಮಿ ತುಲಸೀ ದಾಸರು ರಾಮಘಟ್ಟ (ಚಿತ್ರಕೂಟ) ದಲ್ಲಿ ರಾಮ ದರ್ಶನ ಲಾಭ ಪಡೆದರೆಂದು ಹೇಳಿದರೆ ಪುಟ ೧೧೭ರಲ್ಲಿ ಶ್ರೀರಾಮಚಂದ್ರನ ದರ್ಶನ ಮಥುರೆಯಲ್ಲಾದುದೆಂದು ಹೇಳುತ್ತಾರೆ. ಪುಟ ೧೧೫ರಲ್ಲಿ ಬುದ್ಧನು ಬುದ್ಧಗಯೆಯಲ್ಲಿ ಮಹಾಪರಿನಿರ್ವಾಣ ಪಡೆದನೆಂದಿದ್ದರೆ, ಪುಟ ೧೧೬ರಲ್ಲಿ ಆತನು ಪರಿನಿರ್ವಾಣ ಪಡೆದುದು ಕುಶಿನಾರದಲ್ಲಿ ಎಂದು ಸೂಚಿಸಲಾಗಿದೆ.

ಈ ಬಗೆಯ 'ಸಣ್ಣಪುಟ್ಟ' ದೋಷ, ಲೋಪ, ಅಧಾಸಗಳು ಪುಣ್ಯಕ್ಷೇತ್ರಗಳ ಸಂದರ್ಶನದಲ್ಲಿ ಅಪೇಕ್ಷಣೀಯವಾದರೂ ಸತ್ಯಕ್ಕೆ ಸಮೀಪವಾದ ಐತಿಹ್ಯಗಳಲ್ಲಿ ತಪ್ಪುದಾರಿಗೊಯ್ಯುವುದು ಸಲ್ಲದು.

ಚಾರುಚಯನ

ಪ್ರಬಂಧಕಾರರು: ಶ್ರೀ ಕೊಡಕ್ಕೂರು ಅನಂತಪದ್ಮನಾಭ ಉಡುಪ.

ಪ್ರಕಾಶನ: ಯುಗಪುರುಷ ಪ್ರಕಟಣಾಲಯ, ಕೆಸ್ಸಿಗೋಳಿ, ದ. ಕ.

ಪುಟಗಳು: ೯೬; ಬೆಲೆ: ರೂ. ೧.೫೦

'ಚಾರುಚಯನ' ಶ್ರೀ ಉಡುಪರ ೧೯ 'ಲಲಿತ ಪ್ರಬಂಧ'ಗಳ ಸಂಕಲನ. ನಿಬಂಧವು ಆಂಗ್ಲ ಸಾಹಿತ್ಯದ ಕೊಡುಗೆಯೆಂಬುದನ್ನು ಒಪ್ಪುವುದಾದರೂ ಇದರ ರಚನೆಗೆ ಗಡಿನ ಚಿಂತನ-ಮಥನದೊಡನೆ ಶೈಲಿಯ ಕುಸುರಿಯೂ ಅನಿವಾರ್ಯವೇ. "ಚಾರುಚಯನ"ದ ನಿಬಂಧಗಳು ಆಕಾರದಲ್ಲಿ ಕಿರಿಯವು. ಆದುದರಿಂದ ಇಹಳದರಲ್ಲಿ ಹೇಳಬೇಕಾದುದನ್ನು ಚುಟುಕಿನಲ್ಲೇ ಹೇಳುವುದು ಅವಶ್ಯವಾಗಿದೆ. 'ನಂಬಿ ಕೆಟ್ಟವರಿಲ್ಲ", 'ಕಾಯಕವೇ ಕೈಲಾಸ" ಮೊದಲಾದ ಕೆಲವು ನಿಜವಾಗಿಯೂ ಲಲಿತ ನಿಬಂಧಗಳಾಗಿವೆ. ಕೆಲವು ನಿಬಂಧಗಳು ಲಾಲಿತ್ಯಕ್ಕೆ ಅವಕಾಶವಿದ್ದರೂ ಒಟ್ಟಿನಲ್ಲಿ ಇಲ್ಲಿನ ನಿಬಂಧಗಳೂ ಸಾಧಾರಣ ಒಳ್ಳೆಯವಿವೆಯೆನ್ನಬಹುದು.

ಶ್ರೀ ಉಡುಪರ ಶೈಲಿ ಸರಳ—ಸುಲಭವಿದೆ; ನಿಬಂಧದ ಭಾಷೆ—ಶೈಲಿಗಳ ಸರಳ—ನಿರಾಡಂಬರವಿದ್ದನ್ನು ನಿಬಂಧದ ಯಶಸ್ಸಿಗೆ ಕಳೆಯೇರುತ್ತದೆ; ಮೊದಲಿನೆಯ "ನಿಬಂಧ" "ವಲಿಯಲಿ ಜಿಗಿಯುತಲಿ"ಯಲ್ಲಿ ಬಳಸಿದ ಗೀತಮಯ ಶೈಲಿ ಇಂಪಾಗಿದೆ; ಆದರೆ, ಇದನ್ನು ಮುಂದಿನಾವ ನಿಬಂಧದಲ್ಲಿಯೂ ನಾವು ಕಾಣಲಾರೆವು.

ನಿವೇದನ

"ತತ್ತ್ವವಾದ" ಮೂಸಿಕದ ಪರ್ಯಾಯ ಮಹೋತ್ಸವ ಸಂಪುಟ "ನಿವೇದನೆ". ಉಡುಪಿಯಲ್ಲಿ ಈ ವರ್ಷಾರಂಭದಲ್ಲಿ ಶ್ರೀಕೃಷ್ಣಮಠದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಶ್ರೀ ಮದಾಚಾರ್ಯರ ಸರ್ವಜ್ಞ ಪೀಠಾರೋಹಣ ಗೈಯ್ದು, ಶ್ರೀ ಕೃಷ್ಣ ಸೇವಾದೀಕ್ಷಿತರಾದ ಸುಸಂದರ್ಭಕ್ಕೆ ಒಪ್ಪುವಿಡುವ ಲೇಖನ—ಕವಿತೆಗಳಿಂದ ಕೂಡಿದ ನಿವೇದನ ಒಂದು ಉತ್ತಮ 'ಸ್ಮಾರಕ ಸಂಚಿಕೆ'. ಕನ್ನಡ, ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿನ ವಿದ್ವಾಂಸರ ಕೃತಿಗಳು ಇಲ್ಲಿವೆ. ಶ್ರೀಶ್ರೀ ಪಾದಂಗಳವರ ಪರಿಚಯ—ಅವರ ಸೇವಾಭಾವನೆ— ಸಾಧನೆ ಸಿದ್ಧಿಗಳಿಗೆ, ಸಹೃದಯತೆ, ಧರ್ಮ ಪರಾಯಣತೆಗೆ ಪ್ರಾಧಾನ್ಯವಿದ್ದರೂ ದ್ವೈತ ಸಿದ್ಧಾಂತಗಳ ಪರಿಚಯ ಲೇಖನಗಳೂ ಇಲ್ಲಿವೆ. ಮಾಧ್ವ ಸಮಾಜದ ಅಭ್ಯುದಯಕ್ಕೆ ಮಾರ್ಗಗಳಲ್ಲಿ ಸೂಚಿತವಾಗಿವೆ.

ಹಲವಾರು ಪ್ರಕೃತೋಪಯೋಗಿ ಲೇಖನಗಳೂ, ಚಿತ್ರಗಳೂ ಅನೇಕಾನೇಕ ಮಹನೀಯರ ಶುಭ ಸಂದೇಶಗಳಿಂದಲೂ ಕೂಡಿದ ಈ ಸಂಪುಟವು ಪರ್ಯಾಯದ ನೆನಕೆಯನ್ನು ಸದಾ ಉಳಿಸಬಲ್ಲುದು. ಇಂತಹ ಸಂಗ್ರಾಹ್ಯ ಸಂಪುಟವನ್ನು ಪ್ರಮಗಿತ್ತ ಪ್ರಧಾನ ಸಂಪಾದಕರಾದ ಪಂ: ಪಂಡರಿನಾಥಾಚಾರ್ಯ ಗಲಗಲಿ, ಶ್ರೀ ಜಿ. ಬಿ. ಜೋಶಿ ಸುವರ್ಣ, ವ್ಯವಸ್ಥಾಪಕ ಸಂಪಾದಕ ಶ್ರೀ ಕೆ. ನಾರಾಯಣ ರಾವ್ ಅವರನ್ನೂ ಹೃತ್ಪೂರ್ವಕ ಅಭಿನಂದಿಸುತ್ತೇವೆ.

—ಗೋರಾ

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ, ಹೆರಿಗೆ ವಿಭಾಗ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಖರ್ಚು ಬೇಕೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಹೊಸ ಪ್ರಕಟಣೆಗಳು

೧ ಕನ್ನಡದ ಕವಿ ರತ್ನಗಳು—

ಲೇಖಕರು: ಶ್ರೀ ಭಾಸ್ಕರ ಪಡುಬಿದ್ರಿ. ಪ್ರಕಾಶನ: ಪ್ರೇಕ್ಷಕ ಪಬ್ಲಿಕೇಶನ್ಸ್, ೫೧, ಮಹಾವೀರ ಬಿಲ್ಡಿಂಗ್ಸ್, ೧೧, ಹೋಮಜಿ ಸ್ಟ್ರೀಟ್, ಮುಂಬಯಿ—೧.

ಪುಟಗಳು: ೧೯೯. ಬೆಲೆ: ರೂ. ೨-೦೦

೨ ಶ್ರೀಮತಿ ಇಂದಿರಾ ಗಾಂಧಿ—

ಲೇಖಕಿ: ಶ್ರೀಮತಿ ಜಿ. ಎಸ್. ಬಿ. ಪ್ರಕಾಶನ: ವಾಸುದೇವ ಪಬ್ಲಿಕೇಶನ್ಸ್, C/o ಕೆ. ಭೋಜರಾವ್ ಮತ್ತು ಕಂಪನಿ, ಕೊಡಿಯಾಲ ಬೈಲು, ಮಂಗಳೂರು—೩.

ಪುಟಗಳು: ೨೦. ಬೆಲೆ: ೦—೨೫.

೩ ಸಪ್ತಸ್ವರ: ಲೇಖಕಿ: ಶ್ರೀಮತಿ ಎಚ್. ಆರ್. ಇಂದಿರಾ. ಪ್ರಕಾಶನ: ಸಾಹಿತ್ಯ ಮಂದಾರ, ಬಡಗುಪೇಟೆ, ಉಡುಪಿ-೧.

ಪುಟಗಳು: ೪೪. ಬೆಲೆ: ರೂ. ೧-೦೦.

೪ ಯೋಚಿಸು, ಬಣ್ಣ ಹಾಕು ಚಿತ್ರ ವಿಶ್ವ—ಎರಡೂ ಪುಸ್ತಕದ ರಚಯಿತರು: ಶ್ರೀ ಕೆ. ವಿಠಲ ತೆಕ್ಕೆ. ಪ್ರಕಾಶಕರು: ಶ್ರೀನಿವಾಸ ಬ್ರದರ್ಸ್, ರಥ ಬೀದಿ, ಮಂಗಳೂರು—೧.

ಬೆಲೆ: ಕ್ರಮವಾಗಿ ರೂ. ೩.೦೦ ಮತ್ತು ರೂ. ೨.೫೦.

ವಿಮರ್ಶೆ ಯಥಾವಕಾಶ

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ





4—4—1968

೨೦
ಪೈಸೆ

ಕೆಥಾ ಪ್ರಸಂಗ

ಮನ ಮಂಬಿದ ವೀಣಾ

ಬರೆದವರು. ಶ್ರೀ ಯೆನ್. ಕೃಷ್ಣ ಮುಕಾರಿ.

ನಾನು ಕೋಲೊಳಗೆ ಕಾಲಿಟ್ಟಾಗ ಆಕೆಗಾಗಿ ತಂದ ಜೊಸ ಕಾಟೋಲ್ಲಿ ಕುಳಿತಿದ್ದಳು. ನಾನೊಮ್ಮೆ ಬೆರೆನೋಟ ಬೀರಿದನು ಪಕ್ಕೆ. ಆಕೆಯೋ! ಎನೂ ಆಗೆರವಳಂತೆ ಮುಮ್ಮುಗೆ ಮಿಗುಕಾದಬೆ ಕುಳಿರಿದ್ದಳು. "ಕಾಫಿ ತರಲೇ? ಕೈಕಾಲು ತೊಳೆದು ಕೊಂಡು ಬನ್ನಿ" ಎಂದು ಕನ್ನೊದನೆ ಹೇಳಲಿಲ್ಲ. ಏಕಪ್ಪಾ! ಬಹಳ ಗಂಭೀರ ಸಮಾಧಿ ಇಂದು ಎಂದ ಕೊಂಡೆ ಮನದಲ್ಲೇ....

ಆಕೆಯ ಜಟವೆಂದರೆ, ಅಬ್ಬಾ! ಆ ಒಂದು ಪೀರ ತರಲು ಎಷ್ಟು ಹಟ ಹಿಡಿದಿದ್ದಳೆಂಬೆ! ಆ ವಿಂಗಾಡೊಕನ ಎರುವ ನೊದಲು ನವ ಗೆ ಇಬ್ಬರಿಗೂ ಸದಾ ಸಿದ್ಧ ಆಕನವಾಗಿತ್ತು. ಅದರಲ್ಲೇ ಕೂಡ.ಪ್ರದು ಪಾಡುವುದು ನೋಡುವುದು ಮಂಗುವುದು ಎಲ್ಲಾ ನಡೆಯುತಿತ್ತು. ರಾತ್ರಿಯಲ್ಲಿ ಒಂದಿಗೇ. ಏಕೋ ಏನೋ ಒಂದು ರಾತ್ರಿ ನನ್ನ ಕೈ ಆಕೆಗೆ ಬಾಗಿದ್ದೇ ತಡ "ಊಂ! ಏನೂಂದ್ರಿ? ಬೀಗಿ ಬೆಂಕಳಾಡಿ ನನ್ನ ಚಟ್ಟೆಮಾಡಿ ಬಿಡುತ್ತೀರಾ?" ಎಂದಳು. ಫಿಜವಾಗಿಯೂ ಅಂದು ನಾನು ಬಹಳ ಹೊರಳಾಡಿರಬೇಕು. ಬಹುವಾರು ಯೋಚನೆಗಳು ತಲೆಯಲ್ಲಿ ಮುಂಬಾಡಿದ್ದುದರಿಂದ ಸರಿಯಾಗಿ ನಿದ್ದೆಯೂ ಬರುತ್ತಿರಲಿಲ್ಲ. ಆ ದಿನ ಬೇಗ ಮಾಡಲು ನನಗೆ ಸಾಕು ಸಾಕಾಯಿತು. ಎಲ್ಲಿ ನನ್ನ ಕೈತಾಗಿ ಆಕೆಯ ಸುಖ ನಿದ್ದೆಗೆ ಅಡಚಣೆಯಾಗಿ ಪುದೋ ಎಂಬ ಭಯ ಬೇರೆ!

ಮರುದಿನ ಆಕೆಯೊಡನೆಂದೆ ನೀನು ಬೇರೆ ಮಲಗದರೆ ಒಳ್ಳೆಯದೆಂದು. ನನ್ನ ಪ್ರತಿಯೊಂದು ಕಾರ್ಯಕಲಾಪಗಳಲ್ಲೂ ಮಾರು ನುಡಿಯದ ಆಕೆ ಹೆಚ್ಚೇನೂ ತೊಂದರೆಯಿಲ್ಲದೆ ಇದನ್ನೂ ಒಪ್ಪಿಕೊಂಡಳು. ಆದರೆ ನಾನು ಒಂದರಿಂದ ಪಾಠಾಗುವುದ ಕ್ಕೋಸ್ಕರ ಇನ್ನೊಂದು ಕಷ್ಟವನ್ನು ನೆತ್ತಿ ಮೇಲೆ ಎಳೆದು ಕೊಂಡಿದ್ದೆ. ಅದೆಂದರೆ ಆಕೆಗಾಗಿ ಒಂದು ಹಾಸುಗೆಯನ್ನು ಕೊಂಡುಕೊಳ್ಳುವುದು. ಹೊಟ್ಟೆಗೆ ಬಟ್ಟೆ ಕಟ್ಟುವ ನಾನು ಚಟ್ಟೆಗೆ ಎಲ್ಲಿ ತಲುವುದು? ಆದರೂ ಒಂದು ಮಂಚವನ್ನೇ ತರಬೇಕೆಂದು ಕೊಂಡೆ. ಸಾವಿರ ಯೋಚನೆಗಳನ್ನು ತಲೆಯಲ್ಲಿ ಮಾಕಿಕೊಂಡು ಇದನ್ನು ಪ್ರತಿ ದಿನ ಮಾರೆತು ಬಿಡುತಿದ್ದೆ–ಅಲ್ಲಿ ಮರೆತು ಹೋಗುತಿತ್ತು.

ಬೆಳಗೆ ಆಫೀಸಿಗೆ ಹೊರಟಾಗ "ಪ್ರೋ ಡೀಂದ್ರಿ!...ಬರುವಾಗ ಎಂದು ತನ್ನವಿಶಾಲ ಕಣ್ಣುಗಳನ್ನು ತರದು ಕೆಂಬಣಿ ಸ್ವರದಲ್ಲಿ ಕೋಗಿಲೆಯಂತೆ ನುಡಿದು ಸ್ವರ್ಗಕ್ಕೂ ನವಗೂ ಮೂರು ಬೆರಳ ಅಂತರ ಸೂಡುತಿದ್ದಳು. ಅದು ಮನಸ್ಸಿಚನೆಯೂ ಗಿರುತ್ತದೆ. ನಾನು 'ಈ ದಿನ ಖಂಡಿತ ಮರಿಯುವುದಿಲ್ಲ. ತಂದೇ ತರುತ್ತೇನೆ.....' ಎಂದು ಹೊರಟು ಬಿಡುತ್ತೇನೆ. "ಇಲ್ಲಿ ಕೋಡಿ, ಹೋಗುವಾಗ..."

"ನಾನೇ ಬಾಗಿಲೆಳೆದು ಕೊಳ್ಳುತ್ತೇನೆ: ನೀನು ನಿನ್ನ ಕೆಲಸ ಮಾಡು" ಎಂದು ಆಕೆಯ ಅರೆ ಮಾತಿಗೆ ನನ್ನ ಇಡಿ ಉತ್ತರವಿತ್ತು ಮುನ್ನಡೆಯುತ್ತೇನೆ.

ವೀಣ ಗೂ ನನಗೂ ಸಂಬಂಧ ಬೆಳೆದು ಇಗೀಗ ಎರಡು ವರ್ಷಗಳಾಗಿವೆ. ನನ್ನ ಮತ್ತು ಆಕೆಯ ಈ ಎರಡು ವರ್ಷಗಳೆಂದರೆ ಆಕೆಯ ಮಾತಿನಲ್ಲಿ ಎರಡುರಸ ವರ್ಷಗಳು, ನನ್ನ ಅಭಿಪ್ರಾಯದಂತೆ ಎರಡು ರಸನಿಮಿಷಗಳು. ನಮ್ಮ ಈ ತನಕದ ಬಾಳ್ವೆ ಜಾಲ್ಲೇನಿನಂತೆ ಸವಿಯಾಗಿತ್ತು. ನಾನಾಕೆಯನ್ನು ನನ್ನ ಕೋಣೆಗೆ ಕರೆದು ತಂದಾಗ ಆಕೆ ಎಷ್ಟೆತ್ತರಕ್ಕೆ ಬಳಿದಿದ್ದ ಕೋ ಈಚಲಿ ಜಾಗೆಯೇ ಇದ್ದಾಳೆ. ಮೊದಮಾಗಿ ಆಕೆ ಬಂದಾಗ ವಸಂತ ಕಾಲದ ಚಿಗುರಿನಂತೆ ಇದ್ದಳು. ಈಗ ದಿನ ಕಳೆದಂದಿಂದ, ಸೂಕ್ಷ್ಮವಾಗಿ ನೋಡಿದರೆ, ಮೈ ಬಣ್ಣ ಬದಲಾಗಿದೆ. ಗೃಹಿಣಿಯ ಎಷ್ಟ ದಿನ ತಾನೆ ತನ್ನ ಎಳೆವಯ ಹೊಳಪಿನಲ್ಲಿರ ಬಲ್ಲಳು?

ನಾನು ಆಕೆಯನ್ನು ಕೆಟ್ಟ ಕತನ ಎತ್ತಿಕೊಂಡೇ ತಂದಿದ್ದೆ! ಅಂದು ಸಂಜೆಯ ಮಬ್ಬು ಹರಡಿತ್ತು. ಆಕೆ ನನ್ನ ಕೋಣೆಯೊಳಗೆ ಕಾಲಿಡುವಾಗ, ಗುಮ್ಮಲಿದ್ದ ನನ್ನ ಕೆಲವು ಗಳೆಯರು 'ಮಿಕಿಮಿಕಿ' ನೋಡುತಿದ್ದರು ನವಿ ಬ್ಬರನ್ನು. "ಇಂತಹ ಚೆಲ ವೆಯನ್ನು ಎಲ್ಲಿಂದ ಹೊರಸಿದ ಪಪ್ಪಾ" ಎಂದೋ "ಪರವಾಗಿಲ್ಲ!.... ಜೋಡಿ ಚೆನ್ನಾಗಿದೆ" ಎಂದೋ (ಅವರ ಮನದಲ್ಲಿ ಭಾವನೆಗಳು ಏಳತ್ತಿರಬೇಕು. ಇನ್ನು ಕೆಲವರು ತುಟಿಯ ಭಗುವಿನಲ್ಲೆ "ನಮಗೆ ಮಂಡಳವಾಗಲಿ" ಎಂದು ಶುಭ ಕೋರುತ್ತಿರುವಂತೆ ತೋರುತ.

ನನ್ನ ಕೆಲವು ಆಪ್ತ ಮಿತ್ರರು ನನ್ನೊಂದಿಗೆ ಕೋಣೆಯೊಳಗೆ ಪ್ರವೇಶಿಸಿದ್ದರು. ಅವರ ಕಣ್ಣು ನನ್ನ ಹಾಸುಗೆಯ ಮೇಲೆ ಕುಳಿತಿದ್ದ ಆಕಯ ಕಡೆಗೆ ಹೊರಳಿತ್ತು. ಆಕೆ ತನ್ನ ತಲೆ ತುಂಬಾ ಸೆರಗನ್ನು ಎಳೆದು ಕೊಂಡಿದ್ದಳು.

"ಬಸ್ಸಿನಲ್ಲಿ ಖಂದಿರಾ ಅಲ್ಲ! ನಡೆದು ಕೊಂಡೇ....."

"ಎಲ್ಲ ಸಿಡುತ್ತನೆ ಬಂದುಗಳು? ಅಲ್ಲದೆ ಅಂಯೊಡನೆ ನಡೆದು ಬರುವುದೇ ಹಿತವೆಂದು ಕಂಡಿತು."

"ಯಾಕೆ?"

"ಇನ್ನೇನು? ಈ ಜನರೊಂದಿಗೆ ಜೋರಾಟ ಪಡೆಸಿ ತಲೆತಲೆ ತಾಗಿಸಿ ಬಸ್ಸಿನಲ್ಲಿ ಇಲ್ಲಿ ಮುಟ್ಟುವಾಗ ನನಗೇ ಸುಸ್ತಾಗುತ್ತದೆ. ಇನ್ನು ಇವಳ ಪಾಡೇನು ಹೇಳಿ?" ಎಂದು ಜೆಮ್ಮೆಯಿಂದ ಆಕೆಯೆಡೆ ನೋಡಿ ಉತ್ತರವಿತ್ತಿದ್ದೆ ಅವರಿಗೆ, ಅವರ ಕಣ್ಣನ್ನು ಆಕೆಯ ಮೇಲಿದ್ದುದರಿಂದ ನಾನೆಂದೆ...

"ಎದ್ದು ಫಿಂಡುಕೊಳ್ಳಿ! ನೋಡು! ಇವರು ನನ್ನ ಗೆಳೆಯರು. ಇನ್ನಿಲ್ಲಿಗೆ ಬಂದು ಹೋಗುತ್ತಾ ಇರುತ್ತಾರೆ ಇವನ ಹೆಸರು ಮುರಳಿ, ಇವ ನಾಡೆ, ಈಕೆಯವ ಗಿರಿಧರ" ಎಂದು ಪರಿಚಯ ಮಾಡಿಸಿದೆ. ಆಕೆ ಮಾತಾಡದಿದ್ದುದನ್ನು ಕಂಡು ಗೆಳೆಯರು ನನ್ನ ಕಡೆಗೆ ನೋಡಿದರು. ಕೊಳೆಯ ಕಷ್ಟ "ನಮಸ್ಕಾರ" ಎನ್ನ ಬಾರದೆ? ಹೇಳಿದು ಹುಡುಗಿಯರಂತೆ ಆಕೆ ಸುಧಾರಿಸಿಲ್ಲವಾದರೂ ಹಳ್ಳಿಯ ಸುಗ್ಗೆಂದು ತಿಳಿಯದಂತೆ 'ಏನೇ? ನಮಸ್ಕಾರಂ ಎನ್ನು' ಎಂದು ಭುಜದ ಮೇಲೆ ಕೈಯಿಟ್ಟಾಗ ನನಗೆ 'ಊಂ' ಎನ್ನುವಂತೆಯೂ ಮೋಹಕ ನಾದದಲ್ಲಿ

"ನಮಸ್ತೇ" ಎಂದಿದ್ದಳು ನನ್ನ ನಲ್ಲೆ. ನನ್ನ ತುಟಿಗಳಲ್ಲಿ ನಗು ಮಿಂಚಿತು.

ಆ ಬಳಿಕ ನಾವು ಬಹಳ ಅಪ್ಯರಾಯಿತ್ತು. ಇದು ಅತಿಯಾದ ಮಾತೆಂದು ತೋರಬಹುದು. ಎಂದರೆ ಸತಿ-ಪತಿ ಮಾದವರು ಅಕ್ಕಿಪಾರು ಎನ್ನಬಹುದು ಜನ. ಎಷ್ಟು ಮಂ ಎಯಿದ್ದರೆ ಜಂಗ?

ನಾನು ಅರಿದಂತೆ ಆಕಗೆ ಯಾವ ಗಾಯಿಯನ್ನು ತೊಂಡುಹೋಗಲಿಲ್ಲ. ರಾತ್ರಿಯಿಡಿ ಆಕ ಮೌನವಾಗಿದ್ದಳು. ನನಗೂ ಅಂದು ಒಡಳ ಅಯೂಳವಾಗಿತ್ತು. ಅವಳ ನ್ನ ಮೈದಡವಿ ಸಂತೈಸುವ ತಾಳ್ಮೆಯೂ ಇಂಲಿಲ್ಲ. ನನ್ನ ಹಾಸಿಗೆಯುರುಳಿಸಿ ಬಿದ್ದುಕೊಂಡೆ. ಅಂದಾಕೆ ಪ್ರಾಯಶಃ ನೆಲದಲ್ಲೇ ಮಲಗಬೇಕು.

ಉಷೆ ಮೂಡುವ ಮೊತ್ತಾಗಿರಬೇಕು. ಯಾರೋ ವೀಣಾ ಕಿಟಾರನ ಒಮ್ಮೆ ಕಿರುಚಿದಳು. ನನಗೂತಟ್ಟನೆ ಎಚ್ಚರವಾಯಿತು.

"ಏನಾಯಿತೇ?? ಎಂದು ದೀಪ ಉರಿಸಿದೆ. ಆಕೆ ನಿಡುಸುಯ್ಯುತ್ತ ನೆಲದಲ್ಲಿ ಸುಮ್ಮನೆ ಮಸುಕಾಡುತ್ತಿದ್ದಳು.

"ಇಲಿಯಿರಬೇಕು ಕಣಿ! ಅಷ್ಟಕ್ಕೆ ಹೂರಾದರೂ ಹೆದರುತ್ತಾರೆಯೇ!?" ಎಂದಾಗ ಆಕೆಯಿಂದ ಕೋಪದ ಮರುತ್ತರ ಬರಬಹುದೆಂದು ಭಾವಿಸಿದ್ದೆ ನಾನು. ಆದರೆ ಆಕೆ ಬರೆ ಬಿಟ್ಟುಸಿರು ಬಿಟ್ಟಳ್ಳೆ! ನಾನು ಪಕ್ಕದಲ್ಲಿ ಕಲ್ಯಾಣದಂತೆ ನಿಂತಿದ್ದಾಗ ಯಾವ ಭಯ? ನನ್ನೊಡನೆ ಚೆನ್ನಾಟವಾಡಲು ಬಯಸಿದ್ದಳೇನೋ ಆಕೆ. ಉಷೆ ಕಾಲದ ತಂಪು ಹಿತವಾಗಿತ್ತು. ನ ನನ್ನೂ ತಿಳಿಯಾಗಿತ್ತು.

ಬೆಳ್ಳನೆ ಆಕೆಯ ಬಳಿಗೆ ಹೋಗಿ ನಾನು ಪಿಳು ದನಿಯಲ್ಲಿ "ವೀಣಾ...." ಎಂದೆ. ಆಕೆ ಮರುದನಿಗೊಡಲಿಲ್ಲ. ಕಾಲುದಪ್ಪಿ ಮೊಗ ಕಡೆ ತಿರುಗಿಸಲಿಲ್ಲ. ಛೀ; ಹುಡುಗಿಯರಿಗೆ ಇಷ್ಟು ಕೋಪವಿರಬಾರದು. ಅದೂ ಈ ಎಳೆವಯ ಲ್ಲೆ! ಮನಸ್ಸಿನಲ್ಲಿ ಆಕೆಯ ವರ್ತನೆಯ ಬಗ್ಗೆ ಆತಂಕವಿದ್ದರೂ, ಪಾಪ! ನನ್ನನ್ನೇ ನೆಚ್ಚಿ ಬಂದ ಕೋಮಲೆಗೆ ನಾನು ಕಷ್ಟ ಕೊಟ್ಟರೆ ದೇವರಾದರೂ ಮೆಚ್ಚಬೇಕಲ್ಲ? ಆಕೆಯನ್ನು ಮೆಲ್ಲ ತಬ್ಬಿ ಕೆ ಕೈಗಿಸಿದೆ.

"ಹೀಗೆಲ್ಲಾ ಕೋಪಿಸಬಾರದು. ನೀನೇ ನನ್ನ ಉಸಿರೆಂದುಕೊಂಡ ನನ್ನ ಮೇಲೆ ನೀನೇ ರೀತಿ ಕೋಪಗೊಂಡರೆ ನನ್ನಂಥವನ ಪಾಡೇನು ಬೇಳು" ಎಂದಾಕೆಯ ಮೈ ಪಡವಿದಾಗ ಆಕೆಗೂ ಸಂತೃಪ್ತಿವಾಗಿರಬೇಕು.

"ನನ್ನ ಕ್ಷಮಿಸಿ" ಎಂದಾಕೆ ನನ್ನೆದೆಗೆ ಒರಗಿದಳು. ಎಷ್ಟಾದರೂ ಅಬಲೆಯರು ಹಾಗೆ..."

ನನ್ನೊಂದು ಕೈ ಆಕೆಯ ಕೂದಲನ್ನು ನೇವರಿಸುತ್ತಿತ್ತು. ಇನ್ನೊಂದು ಆಕೆಯ ಅಂಗಾಂಗಗಳ ಮೇಲೆ ಸರಾಗವಾಗಿ ಸರಿದಾಡುತ್ತ! ' ಏನ ಕೋಪಂಂತನ.... ನಿನ್ನ ರಾಗಲಿಸರು!....ಆಕೆ ನನಗಾಗಿ ಹಾಡುತ್ತಿದ್ದಳು....ಅಲ್ಲಿ ಬೇರೆ ಯಾರೂ ಇರಲಿಲ್ಲ ಆಕೆಯ ಹಾಡು ಕೇಳಲು.

ಬೆಳಗಾದೊಡನೆ ನೆರೆಮನೆಯವರು ಕೇಳಿದರು ಏನ್ರೀರಾತ್ರಿವೀಣಾ ಹಾಡುತ್ತಿದ್ದಳೆ?"

"ಹೂಂ"ಎಂದವರಿಗೆ ಸೂಕ್ಷ್ಮ ಉತ್ತರವಿತ್ತೆ. ಅಂದೇ ಮಧ್ಯಾಹ್ನ ಊರೆಲ್ಲಾ ಸುತ್ತಿ ಆಕೆಗಾಗಿ ಅರಾಮ ಗಾದಿಯನ್ನು ತಂದೆ.

ಸಂಜೆ ಆಫೀಸಿನಿಂದ ಮರಳಿದಾಗ ಆಕೆಯ ದಿವ್ಯ ದರ್ಶನ! ಆರಾಮವಾಗಿ ಕುಳಿತು ನಿದ್ದೆ ಮಾಡುತಿದ್ದಳು. "ಎಂಥಾ ದಿನ ಚರಿಯಪ್ಪಾ ಈಕೆಯದು!" ಎಂದು ಮೈ ಮುಟ್ಟಿದರೆ ಸಾಕು "ಬಂದಿರಾ" ಎನ್ನುವಳು. ನನ್ನ ಸಿಟ್ಟು ಗಾಳಿಗೆ ಸಿಕ್ಕಿದ ಗಾಳಿಪಟವಾಗುವುದು. ಆಗ,

"ವೀಣಾ ತಿಂಗಾಡಿಕೊಂಡುಬರೋಣ ಇಡೆ!"

"ಬೇಡಪ್ಪಾ! ನೀವಿದ್ದಲ್ಲೇ ಸ್ವರ್ಗ! ಇನ್ನು ಹೊರಗೇಕೆ.'

"ಪಳಗೆ ಮತ್ತೆ!" ಎಂದು ನಾನು ಆಕೆಯನ್ನೇ ಅನುಮೋದಿಸಿ ಜಡೆ ಹಿಡಿದುದೇ ತಡ ಆಕೆ ತನ್ನ ಕೋಮಲಸ್ವರದಲ್ಲಿ ಮೋಹಕವಾಗಿ 'ಕಂಡು ಕಂಡು ನೀಯೆನ್ನ....' ಹಾಡ ಹೊಡಗಿದಳು. ಅದು ಮುಗಿದು "ಎರಡು ಕಂಗಳು ಸಾಲದು ಕೃಷ್ಣಾ..." ಎಂದಾಗ ಹೊರಗಿಂದ ಹಾಡು ಕೇಳುತ್ತ ಒಳಗೆ ಬಂದ ಮುರಳಿ ಕೇಳಿದ "ಅಣ್ಣಾ, ವೀಣೆ ತಂದು ಎರಡು ವರ್ಷವಾಯ ತಲ್ಲ."

"ಹೌದು, ವೀಣೆ ಬಂದು ವರ್ಷವೆರಡು ಕಳೆದಿತ್ತು"

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಕೇವಲಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೩೧	೪—೪—೧೯೬೮	No. 31

ಕೀಲಕದ ಭವಿಷ್ಯ

ಪ್ಲವಂಗ ಸಂವತ್ಸರ ಕಳೆದು ನಾವು ಭಾರತೀಯರು ಕೀಲಕಕ್ಕೆ ಕಾಲಿಟ್ಟಿದೇವೆ. ಪ್ರಾಯಶಃ ಅತ್ಯಂತ ಕಷ್ಟದಲ್ಲಿಯೇ ಆದರೂ ಅತ್ಯಂತ ಯಶಸ್ವಿಯಾಗಿಯೇ ನಾವೀ ವರ್ಷವನ್ನು ಕಳೆದಿದ್ದೇವೆ. ಬ್ರೋ ತಿಷಿಗಳ ಭವಿಷ್ಯವಾಣಿಯನ್ನು ನಂಬುವುದಾದರೆ, ಈ ಕೀಲಕ ಸಂವತ್ಸರ ಸುಖ, ದುಃಖಗಳ ಸಮ್ಮಿಶ್ರಣದಿಂದಿರುವುದಾದರೂ ಪಾಕಿಸ್ತಾನ ಮತ್ತು ಕೆಂಪು ಚೀನಾಗಳು ದೇಶವನ್ನು ಆಕ್ರಮಣ ಮಾಡುವುದೂ ಕೇಳಬೇಕಾಗುತ್ತದೆ. ನಮ್ಮ ಎರಡು ನೆರೆಯ ಹಿತಶತ್ರುಗಳು ಯಾವ ಕಾಲಕ್ಕೂ ಮೇಲೇರಿ ಬರಬಲ್ಲರೆಂಬುದನ್ನು ಎಲ್ಲರೂ ನಂಬುತ್ತಾರೆ. ಯೇಳನುಗ್ಗುವ ಶತ್ರುಗಳಿವರಲ್ಲಿ. ಭವಿಷ್ಯ ವಾಣಿಯು ಎರಡೂ ಹೋರಾಟದಲ್ಲಿ ನಮಗೆ ಜಯವು ಸಿದ್ಧವೆಂದು ಯೇಳಿದೆಯಾದರೂ ಯುದ್ಧದ ಸ್ವಾತಂತ್ರ್ಯ ಸಂಗ್ರಾಮ ಹೇಳಿಯಂತೆ ಭವಿಷ್ಯ ವಾದಿಗಳ ಮಾತನ್ನೇ ನಂಬಿ ಸುಮ್ಮನಾಗಿಯುವುದು ಸಾಧ್ಯವಿಲ್ಲ.

ಕೆಂಪು ಚೀನಾದ ಶಕ್ತಿಯು ಸೈನಿಕವಾಗಿ ಹೆಚ್ಚಿದುದು. ಅದರ ಕಣ್ಣು ಭಾರತದ ಮೇಲೆಯೇ ಇದೆ. ಹಿಂದೂ ಮಹಾಸಾಗರದಲ್ಲಿ ಬ್ರಿಟಿಷಿನ ನೌಕಾಪಡೆಯ ಪ್ರಭಾವ ಕಡಿಮೆಯಾಗುತ್ತಿದೆ. ಒಂದೆರಡು ವರ್ಷಗಳಲ್ಲಿ ಇದು ಸಂಪೂರ್ಣವಾಗಿ ದೂರವಾಗಬಹುದು. ಆಗ, ತನ್ನ ಶಕ್ತಿ ಪ್ರದರ್ಶನಕ್ಕೆ ಚೀನಾವೊಂದು ಸದವಕಾಶ ಪಡೆಯುವುದು. ವಿಶ್ವದಲ್ಲಿ ರಷ್ಯಕ್ಕೆ ಪ್ರತಿಸ್ಪರ್ಧಿಯಾಗಿ ಏಂತ. ಆಫ್ರೋಏಶ್ಯಾದ ನಾಯಕ ಪಟ್ಟವೂಲೆಯನ್ನು ಹಾಕಿಸಿಕೊಳ್ಳುವುದಕ್ಕಾಗಿಯೇ ಚೀನಾದ ಪ್ರಯತ್ನ. ಆದಕ್ಕಾಗಿ ಭಾರತವನ್ನು ಮೆಟ್ಟುವುದೇ ಅದರ ಗುರಿ. ಆದುದರಿಂದಲೇ ಅದು ನಾಗಾ ಮಿಜೋ ಪ್ರದೇಶಗಳ ಬಂಡುಗಾರರಿಗೆ ಗೆರಿಲ್ಲಾ ತರಬೇತಿ ನೀಡುತ್ತಿದೆ; ಶಸ್ತ್ರಾಸ್ತ್ರಗಳನ್ನು ಪೂರೈಸ್ತಿದೆ; ಅಪ್ರತ್ಯಕ್ಷವಾಗಿ ಭಾರತದ ವಿರುದ್ಧ ಭಾರತೀಯರನ್ನೇ ಎತ್ತಿ ಕಟ್ಟಲು ಅದು ನಿಲುಕುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತದೆ. ಇದಕ್ಕೆ ಪಾಕಿಸ್ತಾನದ ಸಂಪೂರ್ಣ ಸಹಕಾರ ಕೆಂಪು ಚೀನಾಕ್ಕಿದೆ. ಇತ್ತೀಚಿಗಿನ ದಿನಗಳಲ್ಲಿ ಅಸ್ಸಾಮ ರಾಜ್ಯದಲ್ಲಿ ಮೊಳೋ ಪರ ಕರ ಸತ್ಕರ್ಮಗಳು ದೊರೆಯುತ್ತಿವೆಯೆಂದು ವದಂತಿ. ಪಶ್ಚಿಮ ಬಂಗಾಳದಲ್ಲಿ ಕಳೆದ ವರ್ಷ ನಡೆದ "ಫಲ್ಗುಲ್‌ಬಾರಿ" ಪ್ರಕರಣ, ಆ ರಾಜ್ಯದಲ್ಲಿ ಕೆಂಪು ಚೀನೀಯ ಬಾಲ ಬಡಕ ಕಮ್ಯೂನಿಸ್ಟ್ ಪಕ್ಷದ ಪ್ರಭಾವಗಳು ಕೆಂಪು ಚೀನೀಯ ಪ್ರಭಾವವನ್ನೇ ಸೂಚಿಸುತ್ತಿವೆ. ಕೇರಳ, ಗುಜರಾತುಗಳ ರಾಜ್ಯ ಅಸ್ಸಾಮ, ನಾಗಾಲೆಂಡ್, ನೇಫಾ ಮೊದಲಾದೆಡೆ ನಿಜವಾಗಿ ಏನು ನಡೆಯುತ್ತಿದೆ ಎಂಬುದು ಯಾರಿಗೂ ತಿಳಿಯದು. ಡಾಗಿರುವಾಗ, ಪಶ್ಚಿಮ ಪಾಕಿಸ್ತಾನದ ಸಹಾಯದಿಂದ ಈ ಪ್ರದೇಶದಲ್ಲಿ ದೊಂಬಿಯೆಬ್ಬಿಸಲು ಶತ್ರುಗಳಿಗೆ ಅನುಕೂಲ ವಾತಾವರಣವೇ ಇದೆ—ಇನ್ನೊಂದೆರಡು ತಿಂಗಳುಗಳಲ್ಲಿ ಚೀನಾದಲ್ಲಿ ತರಬೇತಿ ಹೊಂದಿದ ಬಂಡುಗಾರ ನಾಗಾರು ಮರಳಿ ಬರಲಿದ್ದಾರೆಂದು ವಾರ್ತೆ—ಆ ಸಮಯದಲ್ಲಿ ಬಂಡೆದ್ದೆಬ್ಬಿಸುವ ಸೂಚನೆಯಿದೆ ಎಂಬ ಊಹೆ. ಇದೇ ರೀತಿ ಪಾಕಿಸ್ತಾನದ ಅಯಾಯ ಕೂಡ- ಅಧ್ಯಕ್ಷ ಫೀಲ್ಡ್ ಮಾರ್ಶಲರು ಅಸ್ವಸ್ಥರಿದ್ದಾರೆ. ಅದರೆ ಪಾಕಿಸ್ತಾನದ ಭಾರತ ವಿರೋಧೀ ನೀತಿಯು ನೆಮ್ಮದಿಯಿಂದಿದೆ. ಎಲ್ಲ ಸಮಸ್ಯೆಗಳನ್ನು ಸಂಧಾನದ ಮೂಲಕ ಇತ್ಯರ್ಥಗೊಳಿಸಲು ಬಯಸುವ ಅಯೂಬ್ ಖಾನನು, ಮಾತಿಡೆ ಮೊದಲೇ ಕದನರು ಜೇರುತ್ತಾರೆ. ಉಕ್ಕಿನ ನರೆ ಹೊರಿಯನ್ನು ಹೊಂದುವ ಇರಾದೆಯಿಂದ ಭಾರತವು ಹಲವು ಬದಿಯಲ್ಲಿ ತ್ಯಾಗ ಬುದ್ಧಿಯನ್ನು ತೋರಿಸುತ್ತ ಬಂದಿದೆ—ಇದನ್ನೇ ಅವಾರ್ಥ ಮಾಡಿಕೊಂಡ ಪಾಕಿಸ್ತಾನಿಗಳು ಆಕ್ರಮಣಕಾರಿಯೇ ಬಸುಸುಟ್ಟುತ್ತಿದ್ದಾರೆ. ಎಂಡೂವರೆ ವರ್ಷಗಳಿಗೆ ಮೊದಲು ಭಾರತದ ಮೇಲೆ ತಾವು ಮಾಡಿದ್ದ ಆಕ್ರಮಣದಲ್ಲಿ ಸಂಪೂರ್ಣ ಸೋಲುಂಡ ಪಾಕಿಸ್ತಾನವು ತನ್ನ ಹಲವಾರು ಟ್ಯಾಂಕು, ವಿಮಾನ ಇತ್ಯಾದಿ ಸೈನಿಕ ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡುದನ್ನೂ ಆ ಕಾರಣದಿಂದಾಗಿ ಅದರ ಸೈನಿಕ ಶಕ್ತಿಯು ಕುಂಠಿತವಾದುದನ್ನೂ, ತನ್ನ ಕಳೆದುಕೊಂಡ ಶಕ್ತಿಯನ್ನು ತುಂಬಿಕೊಳ್ಳಲು ಪಾಕಿಸ್ತಾನ ನಾಲ್ಕು ಶತ್ರು ಆಸೆಗಣ್ಣುಗಳಿಂದ ನೋಡಿದ್ದನ್ನೂ ಅನೇಕಿಯೇ ನೆನಪಿಸಬಹುದು. ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಪಾಕಿಸ್ತಾನಕ್ಕೆ ಶ್ರುಶ್ರೂಷ—ಪರೋಕ್ಷವಾಗಿ ಶಸ್ತ್ರಾಸ್ತ್ರಗಳ ನೆರವನ್ನು ನೇರವಾಗಿಯೂ ಮೂಲಕವಾಗಿಯೂ ನೀಡುತ್ತಿರುವುದನ್ನೂ ಮರೆಯುವಂತಿಲ್ಲ. ಭಾರತವು ರಷ್ಯದಿಂದ ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡ ಭಾರತ ಉಪಖಂಡದಲ್ಲಿ ಅಸಮತೋಲನ ಹುಟ್ಟಿದೆ; ಇದರಿಂದಾಗಿ ಭಾರತ—ಪಾಕ್ ಸಮತೋಲಗೊಳಿಸುವ ಕ್ರಮವೆಂದು ಇತ್ತೀಚೆಗೆ ಅಮೆರಿಕೆಯು ಇಟಲಿಯ ಮೂಲಕ ಪಾಕಿಸ್ತಾನಕ್ಕೆ ಪ್ಯಾಟನ್ ಟ್ಯಾಂಕುಗಳನ್ನು ಪೂರೈಸ್ಸಲು ಮುಂದೆ ಬಂದುದನ್ನೂ ವರದಿಯಾಗಿದೆ. ಕಾಶ್ಮೀರದ ಹಳೆಯ ಹುಲಿ ಶೇಖ್ ಅಬ್ದುಲ್ಲಾರ ಗೊತ್ತು—ಗುರಿ, ಧರ್ಮ—ನೀತಿಯಿಲ್ಲದ ಹೇಳಿಕೆಗಳು ಪಾಕ್ ಬೆಂಕಿಗೆ ಗಾಳಿ ಬೀಸುತ್ತಿವೆ. ಅದಕ್ಕೂ ದೆಚ್ಚಾಗಿ, ಪಾಕ್ ಆಕ್ರಮಿತ ಕಾಶ್ಮೀರದ ಭಾಗವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟು ಭಾರತ ತೆಪ್ಪಗಿರಬೇಕು ಎನ್ನುವ ವಿಚಿತ್ರವಾದಿ ಭಾರತೀಯರೂ ಇದ್ದಾರೆ. ದೇಶದೊಳಗಡೆಯೂ ಚೀನೀ—ಪಾಕಿ ವಾದಿಗಳು ಲಕ್ಷ ಸಂಖ್ಯೆಯಲ್ಲಿದ್ದಾರೆ.

ಅನುಕೂಲ ಹವಾಮಾನ—ವಾತಾವರಣಗಳು ಲಭ್ಯವಾದಾಗ, ಶತ್ರುಗಳಿಗೆ ವಾರಿಸುಗುಮವಾಗುವುದು. ಆ ದೃಷ್ಟಿಯಿಂದಲೇ ಜೂನ್ ತಿಂಗಳು—ಇತ್ತಂಬರ ತಿಂಗಳು ಶತ್ರುಗಳಿಗೆ ಅನುಕೂಲ. ಆ ಭವಿಷ್ಯವಾದಿಗಳೂ ಇದೇ ಅವಧಿಯನ್ನು ಆಕ್ರಮಣಾವಧಿಯೆಂದು ಕರೆದಿದ್ದಾರೆ. ಅದರೆ, ಆಕ್ರಮಣದ ಭೀತಿ ಹಿಂದಿನಿಂದಲೂ ಇದೆ; ಶತ್ರುಗಳು ಆಕ್ರಮಣ ಮಾಡಿದರೆ, ಅದನ್ನು ಸದೆ ಬಡಿಯುವ ಶಕ್ತಿ ನಮ್ಮಲ್ಲಿದೆ—ಇದು ರಕ್ಷಣಾ ಸಚಿವರ ವೀರವಾಣಿ ಇದು ನಿಜ. ಆದರೆ, ದೇಶದ ಒಳಗಿರುವ ಶತ್ರುಗಳ ಸಂಗಡವನ್ನು ಮೊದಲು ನಿರ್ಮೂಲ ಮಾಡಬೇಕು; ಎಡ ಕಮ್ಯೂನಿಸ್ಟ್ ಪಕ್ಷವನ್ನು ನಿರ್ಬಂಧಿಸುವುದರಿಂದಷ್ಟೇ ಫಲವಿಲ್ಲ—ಆ ಭಾವನೆ ಹುಟ್ಟದಂತೆ ಎಚ್ಚರಿಕೆಯ ನೀತಿ—ಧೋರಣೆ, ಪ್ರಯತ್ನ ಅವಶ್ಯ.

ಎರಡರಿಂದ—

ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷ ಪದ—ರಾಜ್ಯ ಮುಖ್ಯಮಂತ್ರಿ ಪದವೆರಡೂ ದೋಣಿಗಳಲ್ಲೂ ಕಾಲಿಟ್ಟು ಮೂರು ತಿಂಗಳುಗಳ ಜಂಟಿ ಹೂತ್ರಿ ಮುಗಿಸಿದರು. ಇದೀಗ ಅವರು ದೆಹಲಿ ದೋಣಿಯಲ್ಲೇ ಎರಡೂ ಕಾಲುಗಳನ್ನಿಡುವ ಯೋಚನೆ ಮಾಡಿ, ವಿಧಾನ ಸಭೆಯಲ್ಲಿ ಘೋಷಿಸುವ ಧೈರ್ಯ ಮಾಡಿದ್ದೇ ತಡ, ಮತ್ತೆ ಅಪಸ್ವರವೊಂದು ಕೇಳಬಂತು. ಶ್ರೀ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷ ಪಟ್ಟದಿಂದ ಕೆಳಗಿಳಿಸುವ ಪ್ರಯತ್ನ ಒಳಗಿಂದೊಳಗೆ ನಡೆಯ ಹತ್ತಿದೆ ಎಂದು ತಿಳಿವದಂತೆ. ಪ್ರಧಾನಿಯವರ ಪ್ರಬಲ ಸಮರ್ಥಕರೇ ಈ ನಾಟಕದ ತೆರೆಯ ಹಿಂದೆ ಇರುವರೆಂದೂ ಕೇಳಿ ಬರುತ್ತಿದೆ. ಇದರರ್ಥವೇನು? ಶ್ರೀ ನಿಜಲಿಂಗಪ್ಪನವರ ಇತ್ತೀಚೆಗ ಕೆಲವೊಂದು ಅಭಿಪ್ರಾಯಗಳು ಇವರಿಗೆ ಸರಿ ಬರಲಿಲ್ಲವೆಂದು ತೋರುತ್ತದೆ. ಅಧಿಕೃತ ಭಾಷಾ ನಿರ್ಣಯ, ಕೃಷ್ಣಾ ನದಿಯ ನೀರಿನ ಬಗ್ಗೆ ರಾಯದ ಕ್ರಮ, ರಾಜಕೀಯ ಪದದಲ್ಲಿರುವ ವ್ಯಕ್ತಿಗಳಿಂದ ತಮ್ಮ ಆಸ್ತಿ-ಪಾಸ್ತಿ ಘೋಷಣೆ, ಬಿಹಾರದಲ್ಲಿ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸದಸ್ಯರ ಪಕ್ಷಾಂತರ—ಇವೇ ಮೊದಲಾದ ಜಲವಾರು ಘಟನೆಗಳ ಬಗ್ಗೆ ನಿಜಲಿಂಗಪ್ಪನವರು ಮುಕ್ತ ಮನಸ್ಸಿನವರು. ಇದನ್ನು ಸಹಿಸದವರು, ಗುಪ್ತಾಧಿಕೇರನೆ ನಡೆಯಬೇಕೆಂದು ಸೂಚನೆ ನೀಡಿದ್ದಾರೆಂದು ಊಹಿಸಬಹುದು. ಶ್ರೀ ನಿಜಲಿಂಗಪ್ಪನವರು ಯಾವುದಕ್ಕೂ ಸಿದ್ಧವೇ. ಅಧ್ಯಕ್ಷ ಪದ ಅವರಿಗೆ ಬಂದದ್ದೂ ಅಯಾಚಿತವಾಗಿ, ಅದು ಹಾಗೆಯೇ ಹೋದರೂ ಅವರಿಗೂ ದುಃಖವಿಲ್ಲ; ಇತರರಿಗೂ ಇಲ್ಲ. ಆದರೆ, ಇಂತಹ ಕಪಟ ಕಾರಸ್ಥಾನಗಳು ಬೆಳೆಯುತ್ತ ಬಂದರೆ, ಕಾಂಗ್ರೆಸ್ಸು ದುರ್ಬಲವಾಗುತ್ತ ಬರುತ್ತದಲ್ಲದೆ, ಶಕ್ತಿಶಾಲಿಯಾಗುವುದಿಲ್ಲ. ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ ಉಳಿಯಬೇಕು, ಬೆಳೆಯಬೇಕು.

ವಚನ ಸುಧೆ

ಯಸ್ಯ ಪಕ್ಷಮುಪಾದತ್ತೇ
ಕಾರ್ಯೇ ಸರ್ವಸ್ವಂ ಫಲಂ।
ಫಲಾರ್ಥಿ ಕರ್ಮಂ ನ ಲಭತೇ
ಬೀಜಾದ್ಯೈಷ ಫಲಂಯಥಾ ||

ಮಾಡಿದ ಕರ್ಮವನ್ನು ಹೊಂದಿದವನು ಹೆಚ್ಚಿಂದ ಕಾರ್ಯದಲ್ಲಿ ಸಡೆಯುತ್ತಾನೆ; ಬೀಜದಿಂದ ಮುಂದೆಯೂ ಜನ್ಮ ಪಡೆಯುತ್ತಾನೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 26—4—1966.

ಸರಸಣ್ಣನ ಸರಸ

ರಾಜ್ಯ ಸಭೆ—ವಿಧಾನ ಪರಿಷತ್ತುಗಳ ಚುನಾವಣೆಗಳಲ್ಲಿ ವಿರೋಧ ಪಕ್ಷಗಳು ಛಿದ್ರವಾಗಿ ಹೋಗುವಂತೆ...

ಮುಖಚಿತ್ರ

ಕಡಿಯಾಳ ಡಾ. ಎ. ಶಾಲೆಯ ಹಳೆಯ ವಿದ್ಯಾರ್ಥಿಗಳು ಅಡಿದ ಟಿಪ್ಪು ಸುಲ್ತಾನ್ ನಾಟಕದ ಎರಡು ದೃಶ್ಯಗಳು.

ಮೇಲೆ:— 'ದೇಶ ದ್ರೋಹ ಬಗೆಯುವವನು ನನ್ನ ಹೆಣ್ಣಿಯ ಮಗುವಿದ್ದರೂ ಅವನನ್ನು ಸೀಳಿ ಚಿಪ್ಪೆತ್ತೇನೆ.' ಟಿಪ್ಪುಸುಲ್ತಾನ್ (ಶ್ರೀ ಗೋಪಾಲ ಶೆಟ್ಟಿಗಾರ್)ನ ಪ್ರತಿಜ್ಞೆ.

ಕೆಳಗೆ:— 'ವಿದೇಶಿಯರ ಗುಲಾಮಗಿರಿಗಿಂತ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುವುದನ್ನೇ ಬಯಸುತ್ತೇನೆ' — ಪ್ರಮುಖ (ಶ್ರೀ ಪುಂಡರೀಕಾಕ್ಷ ಭಾಂಗ್)ನ ಕಾರ್ಯವಾಹಿಣಾಪಿ (ಶ್ರೀ ರಾಮಕೃಷ್ಣ ಭಟ್) ಹೇಳುತ್ತಾನೆ.

ಗೇಣೆರಾಜ್ಯದಲ್ಲಿ

ಗೆಲ್ಲುವ ಕೋಳಿ ಯಾರದ್ದು?

'ಕೇಳಿದ್ದೇನೆ.?'

'ಏನು?'

'ನೋಡಿ, ನಿಮ್ಮ ನಿಜಲಿಂಗಪ್ಪನವ್ರು ಸಕ್ತ ವಿಧಾನ ಸಭಾಧಿವೇಶನಾನಂತ್ರ ಧಿಕಾರ ಬಿಟ್ಟಾರಂತೆ.'

'ನಾವು ಕೊಡ್ಲೇ ಕೇಳ್ಲಿಲ್ವಾ? ಇದ್ರೋ ವಿಶೇಷವಾದ್ರೂ ಏನೂಂತ?'

'ಹ್ಹಾನ್ನಿ. ನೀನೇನೋ ಕೇಳಿದ್ರಿ. ಆ ಪ್ರಿ ಎಲ್ರಿಗೆ ಬಿಡ್ತಾರೋ ಅಥವಾ ಎಲ್ ಫೂಲ್ ಮಾಡ್ತಾರೋ ಅಂತ ಯಾ ಕೇಳ್ದಿದ್ರು....'

'ಅಯ್ಯೋ, ನೀನೊಬ್ಬ ವಿರೋಧಿ ಪಡವರಂತೆ ಆಡ್ತಿದೀಯಲ್ ಅಲ್ಲೆ, ಇದೆಲ್ಲ ಪೊದರೇ ರೊತ್ತಾಗಿತ್ತು. ಆದರೂ ನ್ಮ ಮೂಮೂಲು ಸರ್ಕಾರಿ ಫೀತಿಯಂತೆ ನಿಸ್ಸಾನಕ್ಕೆ ಬರೋದಾಗ ತುಂಬ ತಡಯುತ್ತು.'

"ನೋಡಿ, ನಿಮ್ದು ಆದೆಲ್ಲಾಬೇಡ. ಂದಿನ ನಾಯಕ ಯಾನೇ ಮುಖ್ಯಂತ್ರಿ ಯಾರಾಗ್ಬೇಕು ಅನ್ನೋ ವಿಷಯಲ್ಲಿ ಸಾಮರಸ್ಯ ಮೂಡಿಲ್ಲವಾದ್ದರಿಂದ್ಲೇ ತ ಮಾಡಿದ್ರು."

"ಇರಬಹುದೂನ್ನು. ಆದರೆ, ಇನ್ನೂ ಸಾಮರಸ್ಯ ಕಂಡು ಬರಲಿಲ್ಲ; ಕಂಡು ಬ ವ ಸಲ್ಲಕ್ಷಣಗಳೂ ಗೋಚರವಾಗಿಲ್ಲ. ಾಗಿರುವಾಗ, ನಿನ್ನ ಊಹಾ ಪೋಹಲ್ಲಿವೂ ನಿರರ್ಥಕವಲ್ಲವೆ?"

"ನೋಡಿ, ವಿಧಾನ ಸಭೆಯಲ್ಲಿ ಅಷ್ಟು ಜೋರು ಮಾಡಿದ್ದರಿಂದ್ಲೇ ಅವ್ರು ಇನ್ನಾರೂ ನಾಯಕತನ ಬಿಡುವ ಮನಸ್ಸು ಮಾಡಿದರು....'

"ಮತ್ತೆ ಅದೇ ಹಳೇ ರಾಗಕ್ಕೇ ತೊಡದೆಯಲ್ಲಾ? ಆನ ಹೋಗುತ್ತಿರುವಾಗ ಾಯಿ ಬೊಗಳ-ತ್ತೆ; ಆಗ ನಾಯಿ ಅಂ ಕೋಬಹುದು — ನನ್ನ ಹದ್ರಿಕೆಯಿಂ ಾ ಅನೆ ಓಡುತ್ತಾ ಇದೇಂತ—ಡಾಂಗಾ ಸ್ತಿಲ್ಲ...."

"ಅದು ಏನೇ ಆಗ್ಲಿ, ಈಗ ಹೇಳಿ, ನಮ್ಮ ವಂದಿನ ನಾಯಕರು ಯಾರು?"

"ಯಾರಾಗ್ಬಹುದು? ನೀನೇ ಅಂದು ಬಿಡು....'

"ಯಾರಾದ್ರೇನಂತೆ ಸಂಗೆ?"

"ಮತ್ಕಾರಾದ್ರೇನಂತೆ ನಂಗೆ?"

"ಹಾಗಲ್ರೀ. ನಿಮ್ಮ ತಲೆ ಹೇಳೋ ಹಾಗೆ, ಯಾರಾದಾರು?"

'ನಾನಂತೂ ಆಗೋದಿಲ್ಲ..'

'ಅಲ್ರಿ, ನಿಮಗೆ ತಮಾಷೆಯಾಯ್ತಲ್ಲ'

'ಯಾಕೆ, ನನ್ನ ಪ್ರಶ್ನೆ ಅನರ್ಥವೇನು?'

"ನಿನ್ನ ಪ್ರಶ್ನೆಯೇ ಅಂತಿರುವಾಗ"

'ಛೆ....ಛೆ....ಹಾಗಲ್ಲೆ....'

"ಮತ್ತೆ?"

"ನೋಡು. ಸದ್ಯ ವಿಧಾನಸಭೆಯಲ್ಲಿ ಕಾಂಗ್ರೆಸ್ ಮಜಾಂಟ ಪಕ್ಷ.'

'ಯಾರು ಅಲ್ಲಾಂತಂದ್ರು ಅದು ಅಲ್ಲವಾಗೋಲ್ಲ....'

"ಗೊತ್ತು, ಗೊತ್ತು, ಗೊತ್ತು...."

"ಹಾಗಿರುವಾಗ ನಾಯಕ ರಾಜಿನಾಮೆ ಕೊಟ್ರೆ, ಹೊಸ ನಾಯಕನನ್ನು ಆರಿಸಿ ಕೊಳ್ಳಬೇಕಾವ್ರು ಕಾಂಗ್ರೆಸ್ ಎಂಪ್ಲೈಗಳು...'

"ಅದು ನಂನ್ಗೂ ಗೊತ್ತಿ. ಅದೇ ಯಾರನ್ನು ಆರ್ಸಿಯಾರೂಂತ...."

"ನಾಲ್ಕಾಣೆ ಕಾಣಿಕೆಯಿಡು. ಕಣಿ ಹೇಳ್ತೇನಿ...'

"ಅಯ್ಯೋ, ಬಾಪದೇ, ಅಲ್ರಿ, ಈ ಕೆಲ್ಸ ಯಾವಾಗ್ನಿಂದ ಆರಂಭ?"

"ಹೂವ ಕೆಲ್ಸ?"

"ಇದೇ...ಈ ಕೆಲ್ಸ..."

"ಅಂದರೆ..."

"ಅಂದ್ರೆ...."

"ಹ್ಹಾಂ, ತಿಳೀತು ಬಿಡು. ಅದನ್ನ ಆರಂಭ ಮಾಡಿದ್ದು ಈಗ್ನಿಂದ್ಲೇ...."

"ಅಂದ್ರೆ ನಾನೇ ಹಹಲಾ ಗಿರಾಕಿ...."

"ಹ್ಹಾಂ...."

"ಅಂದ ಮೇಲೆ ಒಂದು ಪ್ರಶ್ನೆ ಮುಖತ್ತಾಗಿ ಹೇಳ್ಬೇಕಲ್ರಿ?'

'ಮತ್ತೆ ಪಹಲಾ ಗಿರಾಕಿಯೇ ಅಬಿಂ ಗಿರಾಕಿಯೂ ಆಗಿ ಬಿಟ್ರೆ....'

'ನಿನ್ನುದೊಂದು ತಲೆ....ಅದ್ರಲ್ಲಿ ತುಂಬಿರ ವುದೇ ಕೊಳೆ...'

'ತೊಳೀ ಬಹುದಲ್ಲಾ, ಸೋಪು ಹಾಕಿ...."

'ಸೋಪೇ ಯಾಕೆ ಬೇಕು? ನೀಗೇಪುಡಿ ಯೂಗೋದಿಲ್ವೆ?"

'ಸರೀನ್ನು...ಇನ್ನು ಸುಣ್ಣದ ಚೂರ್ಣದಿಂದ ತೊಳೀದಿದ್ರೆ ಸಾಕು."

"ಇವತ್ತು ಅಗ್ಲಿಲ್ಲ ಬಿಡಿ. ನಾಳೆ."

'ಹ್ಹಾಂ....'

'ಅಂದ್ರೆ....'

'ಅಂದ್ರೆ....'

'ಏನು?'

'ಎಂಟಾಣೆ ಕೊಡಬೇಕು...'

'ಒಳ್ಳೆ ಪಜೀತ್ತಿದೂಯ್ತಲ್ಲಾ...'

'ಯಾಕೆ'

'ನಾನೂ ನಿನ್ಗೆ ಮಜೂರಿ ಕೊಡ್ಬೇಕೆ?'

"ನಾನೂ ನಿನ್ಗೆ ಕಣಿ ಕೂಲಿಕೊಡ್ಬೇಕೆ?"

"ಓ ಒಳ್ಳೇ ಘಾಟೀ ಹುಡುಗಿ ಕಣಿ ನೀನು....ಹ್ಹಾಂ ಏನು ನಿನ್ನ ಪ್ರಶ್ನೆ...?

"ಅದೇ ನಮ್ಮ ಮುಂದಿನ ನಾಯಕ ಯಾರೂಂತ?"

"ಯಾರು ಅಂತ ಫಿರ್ದುಷ್ಟವಾಗಿ ಹೇಳೋಕೆ ಸಾಧ್ಯವಿಲ್ಲ. ನಮ್ಮ ಬಳಿ ಸಂಜಾಂಗವಿದ್ರೆ ತಾನೇ ಮನೆ ಕಟ್ಬೋದು?'

"ರಾಜಕೀಯಾಂತಂದ್ರು ಸಂಜಾಂಗವಿಲ್ದ ಮನೆ ತಾವೆ?"

"ಹ್ಹಾನ್ನು, ಈಗ ಎರಡು—ಅಥವಾ ಮೂವರಲ್ಲಿ ಯಾರಾದರೊಬ್ಬರು ಆಗುವ ಛಾನ್ಸ್ ಇದೆ..."

'ಒಂದು ಜತ್ತಿ, ಇನ್ನೊಂದು ಪಾಟೀಲರು....'

'ನೋಡು, ನಿನಗೆಲ್ಲಾ ಗೊತ್ತು. ಮತ್ತೆ ನನ್ನ ಬಾಯಿ ಬಿಡಿಸೋಕೆ ತೊಡಗಿದ್ದೀಯ?'

'ಅಲ್ರಿ, ಶ್ರೀ ಪಾಟೀಲರು ನಿಜಲಿಂಗಪ್ಪನವರ ಆಪ್ತಶಿಷ್ಯರು. ಜತ್ತಿಯವರು ಹಿಂದೊಮ್ಮೆ ಮುಖ್ಯ ಮಂತ್ರಿಯಾಗಿ ಅನುಭವವಿದ್ದವರು; ಅದ ಮೇಲೆ ಮುರಾರ್ಜಿಭಾಯಿಯವರ ಅನ್ಗ್ರಹ ಪಡೆದವರು. ಮತ್ತೊಬ್ಬರು ಯಾರು?"

"ಮತ್ತೊಬ್ಬರು ಯಾರೂ ಇಲ್ಲಾನ್ನು"

"ಅಲ್ರಿ ರಾಮಕೃಷ್ಣ ಹೆಗ್ಗಡೆಯವರು ನಿಜಲಿಂಗಪ್ಪನವರ ಖಲಗೈ ಅಂಟೆ ಯುವಕ,ಸಮರ್ಥ ಹಾಗಿರುವಾಗ, ಅವರು.."

"ನಾನಂದ ಮೂರನೆ ಹೆಸರು ಅದೇ. ಅಲ್ರಿ, ಇವರು ಉತ್ತರ ಕರ್ನಾಟಕದವರಲ್ಲ; ದೌಡಾಂತ ಅನಿವಾರ್ಯವಾಗಿ ಒಪ್ಪಿಕೊಂಡರೂ, ಲಿಂಗಾಯತರಲ್ಲ; ಅಪ್ಪನೂ ಅಲ್ಲ,ಅಯ್ಯನೂ ಅಲ್ಲ".

"ಅಂದ್ರೆ ಕರ್ನಾಟಕ ಮುಖ್ಯ ಮಂತ್ರಿ ಲಿಂಗಾಯತರೇ ಆಗ ಬೇಕೇನು?'

"ಆಗೋಕೇನಂತೆ? ಆರು ತಿಂಗಳ ಮಟ್ಟಿಗೆ ಖಾನೂನು ಆಗಬಹುದು. ಅದ್ರಿ, ಕಡೆದು ಖಂದಿರೋ ನವಾಂಳಳಿಯಂತೆ ಇಲ್ಲಿ ನಡೆಯೋದು ಅಪ್ಪ—ಅಯ್ಯನವರ ಕೋಳಿ ಕಾಳಗ. ಇದ್ರಲ್ಲಿ ಗೆಲ್ಲೋವ್ರು ಅಪ್ಪನವರೇ..."

"ಅದೇನೇ ಇರ್ಲಿ. ನಮ್ಮ ಜಾತ್ಯತೀತ ರಾಷ್ಟ್ರದಲ್ಲಿ..."

'ಹ್ಹಾಂ....ಬಿಹಾರದಲ್ಲಿ ನೋಡು ಒಬ್ಬ ಹರಿಜನ ಮುಖ್ಯ ಮಂತ್ರಿಹೂದು, ಆಂಬೇಡ್ಕರರು ಸ್ವರ್ಗದಲ್ಲಿಯೇ ಆನಂದಾಶ್ರು ಸುರ್ಸಿದ್ರು. ಇನ್ನು ನೋಡು ಮುಂದಿನ ಬಾರಿ ಹರಿಜನನೊಬ್ಬನನ್ನು ರಾಷ್ಟ್ರಪತಿಯನ್ನಾಗಿ ಮಾಡಿದರೆ ಸರಿ, ಗಾಂಧೀಜಿಯವರ ಕನಸಿನ ರಾಮರಾಜ್ಯ ಸ್ಥಾಪನೆಯಾದಂತೆಯೇ."

"ಅದೆಲ್ಲಾ ಹೋಗ್ಲಿ..."

"ಹೋಗ್ಲಿ ಹೂರು ಬೇಡಾಂತಾರೆ?"

"ಅಲ್ರಿ, ಹೆಗ್ಗಡೆ ಸುಮ್ಮ ಆಗೋಲ್ಲನ್ನಿ. ಸರಿ. ಪಾಟೀಲ— ಜತ್ತಿಯವ್ರಲ್ಲಿ ಯಾರ ಪಕ್ಷತ್ರ ಒಳ್ಳೇದುಂಟು?"

"ಎರಡೂ ಬಲವಾದ ಕೋಳಿಗಳು, ಭಗವದ್ಗೀತೆ—ಬಸವಗೀತೆಗಳ ಬಗ್ಗೆ ಅಲ್ಲ ಸಲ್ಲದ ಮೂಕನಾಡಿ ಜತ್ತಿಯವರು ಗೀತಾ ಪ್ರಿಯರನ್ನು ಎದುರು ಹಾಕಿಕೊಂಡಿದ್ದಾರೆ. ಆದ್ದರಿಂದ, ಹೆಗ್ಗಡೆಯವರು ಬರುವುದು ಸಾಧ್ಯವಿಲ್ಲವಾದರೂ ಪಾಟೀಲರ ನಕ್ಷತ್ರವೇ ಅಲ್ಪ ಸ್ವಲ್ಪ ಹೊಳೆಯುವಂತಿದೆ...."

"ಅಲ್ರಿ, ಗ್ಯಾರಂಟಿ ಹೇಳಿ...."

"ಗ್ಯಾರಂಟಿಯೇ ಈ ಸಂಸಾರ—ಖಾಯಂತ್ವ, ಎಲ್ಲವೂ ಖಾಗ್ಯಾರಂಟಿಯಿರುವಾಗ...'

"ಅಲ್ರಿ,ಆ ಯೇದಲ್ಲಿ ಜತ್ತಿ ಮತ್ತು ಪಾಟೀಲಂಬ್ಬರೇ ಇರುವುದಂತಲ್ಲಾ....'

'ಹ್ಹಾಂ...."

"ಅಲ್ರಿ, ನಿಜಲಿಂಗಪ್ಪನವರ ಕೃಪೆಯೂರ ಮೇಲೆ?'

"ಯಾರ ಮೇಲೇಂತ ಬಾಯಿ ಬಿಡುತ್ತಾರೆಯೆ? ಸರ್ವ ಸಮ್ಮತವಾದ ನಾಯಕನಾಯ್ಕೆ ಆಗಲಿಲ್ಲಂತಾದ್ರೆ ಖಚಿತವಾದ ನಾಯಕನೇ ಆಯ್ಕೆಯಾಗುವುದು ಸ್ವಾಭಾವಿಕ. ನೊನ್ನೆ ಮೊನ್ನೇ ಯಾರೋ ಅನ್ನುತಿದ್ರು—ಹೆಚ್ಚಿನ ಎಮ್ಮೆಲ್ಯೆಗಳು ತಾನೇ ಮುಖ್ಯ ಮಂತ್ರಿಯಾಗಬೇಕೆಂಬ ಆಶೆಯಿಟ್ಟುಕೊಂಡಿದ್ದಾರಂತೆ...."

"ಅಲ್ರಿ, ಈ ಆಶೆಯ ಪರಿಣಾಮ ಕಾಂ

(ಒಂಭತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S. C. No, 376/1967.

ಎಸ್. ಕೆ. ಆರ್. ಹೆಬ್ಬಾರ್ —ವಾದಿ.

ಮತ್ತು

ಲಿಂಗಪ್ಪ ಗೌಡ—ಗಂಡಿಬಾಗಿಲು ಪೂವಣ ನಾಡರ ಮಗ— ಬೆಳ್ಳಂಗಡಿ ತಾಲೂಕು ನಂ ಯ ಗ್ರಾಮ —ಪ್ರತಿವಾದಿ.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ವಾದಿಗೆ ತಾ. 6-9-1965ರಲ್ಲು ಎರಿಕೊಟ್ಟ ದಿವಾಂಡ್ ಸ್ರೊನಿಸಿರಿ ನೋಟಿನ ಲ್ಲಿ ಬಡ್ಡಿ ವಗೈರೆ ನಿವೃತ್ತಿ ಕೇಳಿ ಮೂಡಿದ ಮೊಕದ್ದಮೆಯು ನಿಮ್ಮ ಹಾಜರಾತಿಯಿಲ್ಲದೆ ತಾ. 6-4-68ಕ್ಕೆ ಇಟ್ಟಿದೆ. ನಿಮ್ಮದೇ ಜವಾಬ್ದಾರಿ ಅಪೇಕ್ಷಿಸಿದ್ದರೆ ಆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಸಾಜ್ರಾಗಿ ಜಾಬ್ತೀರು ಮಾಡಿಕೊಳ್ಳಬೇಕ್ದು. ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

K. Balachandra Rao,

Advocate for Plaintiff.

ಉಡುಪಿ, 24-8-68.



ವಿಚಾರವರ್ಷ

ಭಾರತೀಯರಿಗೊಂದು ಭಾಷೆ ಬೇಕು

ಬರೆದವರು: ಶ್ರೀ ಎಂ. ರಂಗ ರಾವ್.

ಸ್ವತಂತ್ರಭಾರತ ದೇಶಕ್ಕೆ ಪ್ರಭುತ್ವ ಭಾಷೆಯಾಗಿ ಹೆಮ್ಮದೇ ಆದ ಒಂದು ಭಾಷೆಬೇಕೆಂಬುದು, ಬಹಳ ಹಿಂದಿನಿಂದ—ಸ್ವಾತಂತ್ರ್ಯ ಲಭ್ಯಕ್ಕೆ ಪೂರ್ವದೆ ಆಮೋದಿಸಿಕೊಂಡ ಮಾತು. ಅದು ಹಿಂದೀ ಭಾಷೆಯಾಗಿರಲಿ ಎಂಬುದನ್ನು ಬಹುತೇಕ ಮಂದಿಯ ಅಭಿಪ್ರಾಯವೂ ಆಗಿತ್ತು. ಅಂತಲೇ ಹಿಂದೀ ಭಾಷೆಯು ಬಳಕೆ, ಒಂದು ಬಗೆಯಿಂದ ಕೇಂದ್ರಸರ್ಕಾರದ ಆದೇಶದಲ್ಲೇ ಅದರೂ ಅನೇಕ ಹಿಮ್ಮುಚ್ಚಿದ ಕಡೆಗೂ ಇದ್ದೇ ಇದ್ದಿತು.

ಸಂವಿಧಾನದಲ್ಲಿ ವಮೂದಿಸಲಾದಂತೆ ಸ್ವಾತಂತ್ರ್ಯ ಪ್ರಾಪ್ತಿಯಾಗಿ ಹದಿನೈದು ವರ್ಷಗಳಾದ ಮೇಲೆ ಇಂಗ್ಲೀಷಿನ ಸ್ಥಾನದಲ್ಲಿ ಹಿಂದಿಯನ್ನು ಬಳಸಬೇಕು. ಅದರಂತೆ ಹಿಂದೀ ಭಾಷೆ ಕೇಂದ್ರದ ಧರ್ಮಿಕೊಂಡ ಅಧಿಕಾರ ಭಾಷೆಯಾಗಿ ಬರಲಿರುವ ಸಂದರ್ಭದಲ್ಲಿ, ತಮಿಳುನಾಡು ಮೊದಲಾದ ಪ್ರಾಂತಗಳಲ್ಲಿ ತೀವ್ರ ಪ್ರತಿಭಟನೆಗಳೆದ್ದು, ಕೊನೆಗೆ ನೆಹರೂ ಪ್ರಧಾನಿಗಳು 'ಭರವಸೆ' ಕೊಟ್ಟುದರ ಪರಿಣಾಮವಾಗಿ ಗಲಭೆ ಪ್ರಶಾಂತವಾಯಿತು

ನೆಹರೂಗಳ ಅನಂತರ...ಇತ್ತೀಚೆಗೆ ಮತ್ತೆ ಹಿಂದೀಯ ಪಟ್ಟಾಭಿಷೇಕ ತೀವ್ರವಾಗಿ ತಲೆ ಎತ್ತಿತಷ್ಟೆ? ಕೂಡಲೇ ಅನೇಕ ರಾಷ್ಟ್ರಗಳಲ್ಲಿ ಕೂಡಾ ಪ್ರತಿಭಟನೆಗಳು ಎದ್ದುವು. ತರ್ಜನೆ ಭರ್ಜನೆಗಳೇನು, ವಾದ ಪ್ರತಿವಾದಗಳೇನು?....ಎಂತಹುದೋ ಹಿಂದು ವಿಧದ ಸಂತೆಯನ್ನುಂಟು ಮಾಡಲು ಪ್ರಮುಖರಿಗೆಲ್ಲ ಸಾಕೋ ಸಾಕಾದ ಪರಿಸ್ಥಿತಿಯುಂಟಾಗಿದೆ. ಈ ಗಲಭೆಗಾಟದಲ್ಲಿ ಹಿಂದೀ ಕಿರೀಟ ಧಾರಣೆ ಆದ ಹಾಗೆ ಆಗಿಯೂ ಅರ್ಧಾಂಬರ್ಧದಲ್ಲಿ ನಿಂತ ಹಾಗೆ ಕಾಣುತ್ತಿದೆ. ಅಲ್ಲಿ ಇಲ್ಲಿ ಝಂಗ್ ಗುರ್ ಎನ್ನುವುದೂ ಕೇಳಿಸುತ್ತಿದೆ. ಒಟ್ಟಿನ ಮೇಲೆ ಏನಾಗುವುದೋ ಎಂದು ಪ್ರಜೆಗಳು ಕಹತಹಿಸಿಕೊಂಡಿದ್ದಾರೆ.

ಹಿಂದಿಯ ಪಾಡು ಇಂತಹ ಪರಿಸ್ಥಿತಿಗೆ ಬಂದುದನ್ನು ನೋಡುವಾಗ, ಅದರ ಬೆಳವಣಿಗೆಯೂಡುದು ಸಾಲದಂದೇ ಕಾಣುತ್ತದೆ. ಅದು ಪಟ್ಟಾಭಿಷೇಕ ಸಾಮಿಯಡಿಕೆಳ್ಳುವುದಕ್ಕೆ ಸಾಕಷ್ಟು ಬೆಳವಣಿಗೆ ಹೊಂದಿಲ್ಲವೆಂದೇ ಕಾಣುತ್ತದೆ. ಇದುವರಗೆ ಅದರ ಬೆಳವಣಿಗೆಗೆ ಮಾಡಲ್ಪಟ್ಟ ಕೃಷಿ ಕಾರ್ಯಗಳೂ ಸಾಲದಂದೇ ಕಾಣುತ್ತದೆ.

ಭಾರತ ದೇಶವೆಂಬುದು ಅನೇಕ ರಾಷ್ಟ್ರಗಳ ಒಂದು ಖಂಡ. ಈ ಖಂಡದಿಂದ ಪಾಕೀಸ್ತಾನವೆಂದುಕೊಂಡು ತುಂಡೊಂದು ಹೋಗಿದ್ದರೂ ಅದೊಂದು ಸಣ್ಣ ತುಂಡಿನ ಕೆಳಗೇ ಲೆಕ್ಕ. ಇಂತಹ ಭಾರತ ಖಂಡದ ಅನೇಕ ರಾಷ್ಟ್ರಗಳಲ್ಲಿ ಅನೇಕ ಭಾಷೆಗಳುಂಟು; ಅವುಗಳಲ್ಲಿಯೂ ಒಂದು ಹಿಂದಿ; ಅದಕ್ಕೆ ಬಹುತೇಕರೂ ಉಂಟು.

ಹೀಗೆ ಬಹುಜನರಿದ್ದರೂ ಭಾರತೀಯರು ಒಗ್ಗಟ್ಟನ್ನು ತರುವ ಶಕ್ತಿ ಅದಕ್ಕಿಲ್ಲವೇನೋ ಎನ್ನುವಂತೆ ಕಾಣುತ್ತಿದೆ ಈಗಿನ ಪರಿಸ್ಥಿತಿಯಿಂದ.

ಹಾಗಾದರೆ ಇಂಗ್ಲೀಷಿನಂತೆ ಒಗ್ಗಟ್ಟು ತರುವಂತಹ ಭಾಷೆ ಯಾವುದು? ಯಾವುದನ್ನು ತಂದರೆ ಇನ್ನೊಂದಕ್ಕೆ ಅಸೂಯೆ ಯಾಗುವುದಿಲ್ಲ? ಪರಕೀಯ ಭಾಷೆಯಾದ ಇಂಗ್ಲೀಷಿನಿಂದ, ಇಡೀ ಇಂಡಿಯಾ ವನ್ನಾಳಲು ಈ ಹಿಂದೆ ಹೇಗೆ ಸಾಧ್ಯವಾಯಿತು? ಅದಕ್ಕಿಂತ ಮೊದಲು ಇಂಡಿಯಾದ ಪರಿಸ್ಥಿತಿ ಹೇಗಿತ್ತು? ಯಾವುದ ಪ್ರಾಂತ್ಯದ ಭಾಷೆ ಭಾರತೀಯ ಭಾಷೆ? ಹಿಂದೀ ಎಂಬುದು ಹಿಂದುಗಳಿಗೆ ಮಾತ್ರ ಪ್ರತ್ಯೇಕಿಸಿದ ಭಾಷೆ ಎಂದಾಗದೆ? ಕ್ರೈಸ್ತ, ಮುಸ್ಲಿಮರ್, ಸೀಖ್, ಪಾರ್ಸಿ, ಆಂಗ್ಲೋ ಇಂಡಿಯನ್ ಮೊದಲಾದವರೆಲ್ಲರೂ ಹಿಂದೀಶರರೇನು? ಹೀಗಾದರೆ ನಮ್ಮ ಭಾರತೀಯ ಭಾಷೆ ಎಂದು ಯಾವುದೂ ಇಲ್ಲವೆಂದರೆ ಸಾಚಿತೇಗೇಡಲ್ಲವೇನು?

ಈ ಬಗೆಗು ಅನೇಕ ಪ್ರಶ್ನೆಗಳು ಏಳುವ ಪರಿಸ್ಥಿತಿ ಈಗ ಉಂಟಾಗಿದೆ. ಇವೆಲ್ಲಕ್ಕೂ ಸಮಾಧಾನ ಕೊಡುವುದರಿಂದಿಗೇ ಭಾರತೀಯ ಏಕಮತ್ಯವನ್ನೂ ಕಾಪಾಡಬೇಕಾಗಿದೆ.

ಇದಕ್ಕೆ ಸಹಕಾರಿಯಾಗುವಂತೆ ನಮ್ಮ ದೃಷ್ಟಿಯನ್ನು ಸ್ವಲ್ಪ ಹಿಂದಕ್ಕೆ ಹಾಯಿಸಿ ನೋಡುವುದರಿಂದ ಏನಾದೀತು? ನೋಡೋಣ.

ಇಂಗ್ಲೀಷರೊಂದಿಗೆ ಇಂಗ್ಲೀಷು ಬಂದಿತೆನ್ನುವುದು ನಿರ್ವಾದ. ಇಂಗ್ಲೀಷು ಇಲ್ಲಿಗೆ ಬರುವುದಕ್ಕೆ ಮೊದಲು, ಭಾರತ ದೇಶವು ಅನೇಕ ರಾಜರಿಂದ, ನವಾಬರಿಂದ, ಸುಲ್ತಾನರಿಂದ, ಜಮೀನುದಾರರಿಂದ, ಕಾಳೇಗಾರರಿಂದ, ರೆಡ್ಡಿ ರಾಜರಿಂದ ಬೇರೆ ಬೇರೆ ವಿಭಾಗಗಳಾಗಿ ಆಳಲ್ಪಡುತ್ತಿತ್ತು. ಇಂಗ್ಲೀಷರು ಅದೆಲ್ಲವನ್ನೂ ಒಂದು ಮಾಡಿ ಅಖಿಲ ಭಾರತದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಇಂಗ್ಲೀಷರೂ ಇಂಗ್ಲೀಷು ಬಲ್ಲವರೂ ಮೇಲ್ಪದವರಾಗಿ ಕಾಣಿಕೆ ತೊಡಗಿದರು.—ಅಂದಿನಿಂದ ಇಂಗ್ಲೀಷರ ಕೂಡಾ ದರ್ಪ, ಪ್ರೇಮ, ತಂತ್ರ, ತತ್ವ ಪ್ರಚಾರ ಮುಂತಾದ ಅನೇಕ ಬಗೆಗಳಿಂದ ಇಂಗ್ಲೀಷು ಭಾಷೆಯನ್ನು ಪ್ರಚಾರಕ್ಕೆ ತಂದರು. ನಮ್ಮ ತಾಯಿ ಭಾಷೆಯನ್ನು ಕಡೆಗಣಿಸುವಷ್ಟು ಅಂಗ್ಲ ಮೋಹ ಹಿಡಿಯಿತು ಪ್ರಜೆಗಳಿಗೆ....ಕೊನೆಗೆ ಭಾರತಕ್ಕೆ ನಡೆದು...ಬ್ರಿಟಿಷರು ಅಧಿಕಾರ ಬಿಟ್ಟು ಹೋದರು. ಅವರ ಭಾಷೆ ಇಲ್ಲೇ ಉಳಿಯಿತು. ಅದನ್ನು ತೆಗೆದುಕೊಂಡು ಹೋಗಲು ಅವರಿಗಾಗಲಿಲ್ಲ; ಆಗಲಿಕ್ಕೂ ಇಲ್ಲ. ಕಾರಣ ಭಾಷೆ ಸರಸ್ವತೀ ಸ್ವರೂಪವದ್ದು.

ಅಂತೂ ಇಂಗ್ಲೀಷಿನಿಂದ ಮಾತೃಭಾಷೆಗೆ ಅಲ್ಪಸ್ವಲ್ಪ ದಾಸಿ ಕಾಣಿಸಿದರೂ (ಅದು ಆಗಿಂದಾಗಲೇ ಎಚ್ಚರಿಸಲ್ಪಟ್ಟೂ ಇತ್ತು) ಅದರಿಂದಾದ- ಆಗುತ್ತಿರುವ ಜ್ಞಾನಾಭಿವೃದ್ಧಿ, ಆವಶ್ಯಕತೆಯ ಅಗತ್ಯಗಳು ಅಪಾರವೆಂದೆ ತಪ್ಪುಗಲಾರದು. ಇಂಗ್ಲೀಷು ರಾಜಭಾಷೆಯ ಪಟ್ಟದಿಂದ ಕೆಳಗಿಳಿದರೂ, ಅದರ ಮಹತ್ವಗಳು ಶತಮಾನ ಪರ್ಯಂತ ನಿಲ್ಲುವಂತಹುದೆನ್ನಲೂ ಅಡ್ಡಿಯಿಲ್ಲ.

ಇದರಿಂದ ಏನು ತಿಳಿದ ಹಾಗಾಯಿತೆಂದರೆ, ಇಂಗ್ಲೀಷು ಬೇಕು-ಬೇಡ ಎಂಬುದಕ್ಕೆ ಇಲ್ಲಿ ಉತ್ತರವಿಲ್ಲ; ಇಂಗ್ಲೀಷಿನಂತಹುದೊಂದು ಪರಭಾಷೆ ಅಖಿಲಭಾರತದ ರಾಜ ಭಾಷೆಯಾದುದು ಅ ಭಾಷೆಯವರು ಚಕ್ರಾಧಿಪತ್ಯ ನಡೆಸಿದುದರಿಂದಲೇ ಎಂದು ಗೊತ್ತಾದುತ್ತದೆ. ಮತ್ತು ಅದರಿಂದಾಗಿಯೇ ಸ್ವಾತಂತ್ರ್ಯ ಏನಾಸೆಯೂ, ಅಖಿಲ ಭಾರತೀಯರೂ ಒಂದೇ ಎಂಬ ಭಾವನೆಗೆ ಪುಟವೂ ಉಂಟಾಯಿತು. ಅದಕ್ಕಿಂತ ಮೊದಲು ಹಾಗಿರಲಿಲ್ಲ, ಬೇರೆ ಬೇರೆ ರಾಜರೂ ಸುಲ್ತಾನರೂ ಬೇರೆ ಬೇರೆ ಪ್ರಭವ ಬೀರಿ ಕೊಂಡಿದ್ದವರೇ.

ಹಾಗಾದರೆ ಇಡೀ ಭರತಖಂಡದಲ್ಲಿ ಭಾರತೀಯರು ಸಂಸ್ಕೃತಿಯನ್ನು ಪ್ರತಿಬಿಂಬಿಸಿಕೊಂಡಿದ್ದ ಭಾಷೆ ಯಾವುದು?- ಎಂದು ನೋಡುವಾಗ, ಅಜರಾಮರವಾಗಿರುವ ಸಂಸ್ಕೃತವು ನಮ್ಮ ಕಣ್ಣಮುಂದೆ ನಿಲ್ಲುತ್ತದೆ.

ಸಂಸ್ಕೃತ—ಹೆಸರಿನಿಂದಲೇ ಅದು ಸಂಸ್ಕರಿಸಲ್ಪಟ್ಟ ಭಾಷೆ ಎಂದು ಗೊತ್ತಾಗುತ್ತದೆ ಏಕೆ ಸಂಸ್ಕರಿಸಲ್ಪಟ್ಟಿತು? ಅನಾದಿಯೂ ಅಪೌರುಷೇಯವೂ ಎನಿಸುವ ವೇದ ಕಾಲದ ಸಂಸ್ಕೃತ ಭಾಷೆಗೂ, ಉಪನಿಷತ್ತುಗಳ ಸಂಸ್ಕೃತಕ್ಕೂ ವ್ಯತ್ಯಾಸವಿದೆ. ವೇದಕಾಲದ ಅದೊಂದು ಬಗೆಯ ಅಡುಬಾಳುವುದೂ ಪ್ರಾಕೃತ ವತ್ತು ಇತರ ಭಾಷೆಗಳ ಅನೇಕ ಶಬ್ದಗಳನ್ನು ಸೇರಿಸಿ ಸಂಸ್ಕೃತವೆಂಬ ಭಾಷೆ ಸೃಷ್ಟಿಯಾಗಿ, ಪಾಣಿನಿಯಿಂದ ವ್ಯಾಕರಣೀಕೃತಗೊಂಡ, ಅಕಟ್ಟುಪಾಡಿನೊಳಗೇ ಸಂಸ್ಕೃತ ಭಾಷೆ ಮೆರುಗೇರಿ, ಸುಮಾರು ಮೂರುಸಾವಿರ ವರ್ಷಗಳಿಂದ ಭಾರತ ದೇಶದಲ್ಲಿ ಎಷ್ಟೋ ಭಾಷೆಗಳಿದ್ದರೂ, ಎಷ್ಟೋ ರಾಜರಿದ್ದರೂ, ಎಷ್ಟೋ ಪ್ರಭೇದಗಳಿದ್ದರೂ, ಅವೆಲ್ಲಕ್ಕೂ ಅತೀತವಾಗಿ, ಭಾರತೀಯ ಸಂಸ್ಕೃತಿಯನ್ನು ಭಾರತ ರಾಷ್ಟ್ರಗಳ ಪರವರಗಳಲ್ಲಿಯೂ ಸಂಯೋಜಿಸುತ್ತಾ, ತಾನು ಮಾತ್ರ ಇದ್ದ ಹಾಗೇ ಇದ್ದು ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಭಾಷೆಯೆಂದ್ರೆ ಸಂಸ್ಕೃತವೇ ಎಂದು ಹಿಂದೆಯೂ ಇಂದೂ ಮುಂದೂ ಹೇಳಬಹುದು, — ಎದೆಕಟ್ಟಿಯೇ ಹೇಳಬಹುದು. ಅದೀಗ ಪಂಡಿತರ ನಡುವೆ ಸಜೀವವಾಗಿ ಪೂಜಾವಂದಿರಗಳಲ್ಲಿದ್ದರೂ ಪ್ರತಿ ಭಾರತೀಯನಿಗೂ ಸಂಸ್ಕೃತವೆಂದರೆ ಅಭಿಮಾನವಿದ್ದೇ ಇರುತ್ತದೆ. ಭರತಖಂಡದೊಳಗಿನ ಅನೇಕ ಭಾಷೆಗಳಿಗೆ ಅದೇ ವ್ಯತ್ಪತ್ತಿ, ಅದೇ ಲಿಪಿ, ಅದೇ ಬೆನ್ನೆಲುಬು.

"ಅಯ್ಯೊ, ಸ್ವತಂತ್ರ ಭಾರತೀಯರಿಗೆ, ನಮ್ಮ ಭಾರತ ಸಾಮ್ರಾಜ್ಯದ ಭಾಷೆ ಯಾವುದು?" ಎಂದು ಯಾರಾದರೂ ಕೇಳಿದರೆ ಸಂಸ್ಕೃತವೆಂದು ಧಾರಾಳವಾಗಿ ಹೇಳಬಹುದು. ಜಂಕ ಬೇಕಾಗಿಲ್ಲ. ಅದರಿಕ್ಷಡವೆನ್ನುವಂತಿದೆಯೇ ತಮಿಳು ಎನ್ನುವಂತಿದೆಯೇ? ಇನ್ನೂ...? ಅದರಿ ಹಿಂದೀ ಎಂದು ಹೇಳಬೇಕೆಂದು ನಮ್ಮ ಸಂವಿಧಾನ ಹೇಳುತ್ತದೆ; ಅದಕ್ಕೆ ತಾನೇ ಇಷ್ಟೆಲ್ಲ ಗಲಾಟೆ, ಗೊಂದಲ? ಈಗ ಆ ಹಿಂದೀ ಭಾಷೆ ಅಖಿಲ ಭಾರತೀಯರಿಗೂ ಒಪ್ಪಿಗೆಯಾಗುವಂತೆ ಸಂಸ್ಕರಿಸಲ್ಪಡುವುದಾಗಿ ಭಾರತ ದೇಶದ ಪ್ರಥಮ ಪ್ರಧಾನಿಯಿಂದ ಹೇಳಲಾಗುತ್ತಿದೆ. ಅದು ಈಗ ಪ್ರಚಾರದಲ್ಲಿರುವ ಹಿಂದಿಯಂತಿರುವುದಿಲ್ಲವೆಂದೂ ಹೇಳಲಾಗುತ್ತಿದೆ. ಈ ಮಾತು ಕೇಳುವಾಗ ಎರಡು ಮೂರು ಸಾವಿರ ವರ್ಷಗಳ ಹಿಂದೆ, ಸಂಸ್ಕೃತ ಹುಟ್ಟಿದ ರೀತಿ, ಆಗಿನ ಪರಿಸ್ಥಿತಿ ನೆನಪಾಗುತ್ತದೆ. ಆಗ ಕೂಡ ಭಾಷಾ ಸಮಸ್ಯೆ ಗೊಂದಲವಾಗಿದ್ದ ಕಾರಣದೇ ಭಾರತೀಯ ಏಕಮತ್ಯವನ್ನು ಬೆಸೆಯಲಿಕ್ಕಾಗಿ ಭಾಷೆಗಳನ್ನು ಸಂಸ್ಕರಿಸಿ 'ಸಂಸ್ಕೃತ'ವೆಂಬಿಸಿರಬೇಕು.

ಹಾಗೆಯೇ ಇನ್ನು ಹಿಂದಿಯೂ ರಾಷ್ಟ್ರಾಂತರಗೊಂಡು ಸೊಗಯಿ ಬರುವ ಸೊಬ

(ಎಂಟನೇ ಪುಟ ನೋಡಿರಿ)

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ವಿಚಾರ ವರ್ಷ

ತಮಿಳರೂ ಭಾರತೀಯರೇ ಅಲ್ಲವೇನು?

ಬರೆದವರು: ಶ್ರೀ ಶಿವಶಂಕರ

ಮದ್ರಾಸು ಮಹಾ ನಗರದಲ್ಲಿ ನಡೆದ ತಮಿಳು ಮಹಾ ಸಭೆಗೆ ಮದರಾಸು ವಿಶ್ವ ವಿದ್ಯಾಲಯದ ಭವನ ಹಾಗೂ ದ್ವೀಪ ವೈದ್ಯಾನದಲ್ಲಿ (ಐಲೇಂಡ್ ಗ್ರೌಂಡ್) ಬಾರೀ ವಿಪಾಡು ಮಾಡಲಾಗಿತ್ತು. ಪ್ರಚಾರ ಕಾರ್ಯವು ಭರದಿಂದ ಸಾಗಿತ್ತು. ಎಲ್ಲರ ಬಾಯಿಯಲ್ಲೂ ತಮಿಳು ಮಹಾ ಸಭೆಯ ಮಾತೇ ಮಾತು. ಅದಕ್ಕಾಗಿ ತಾನೇ ಹಿಂದಿಯನ್ನೆದುರಿಸುವ ನೆವದಲ್ಲಿ ಗಲಾಟೆ ಮಾಡುತ್ತಿದ್ದ ಮಕ್ಕಳು 'ಶಾಂತ'ರಾಗಿ ಬಿಟ್ಟರು? ಭಾರೀ ಆಕರ್ಷಣೇಯ, ಮನೋರಂಜಕ ಮೆರವಣಿಗೆ ಜನತೆಯ ಮನಸ್ಸನ್ನು ಸೆಳೆದಿತ್ತು. ಆದರೆ ಅಂದೇ ಬೀಚಿನ ಹೆಗರಣ, ಮಿಸ್ಟರ್ ಸಿ. ರಾಜಗೋಪಾಲಾಚಾರಿಯವರ ದ್ವಿಭಾಷಾ (ಎರಡು ನಾಲಗೆಯ!) ವಾದದಿಂದ ಮಹಾ ಸಭೆ ಆರಂಭವಾದುದರಿಂದ ಶ್ರೀ ಸಾವಾಮ್ಯನಿಗೆ ಅದೇನೋ ಒಂದು ಸಮಾಧಾನ ಆಗಿ ಬಿಟ್ಟಿತು. ಅದೂ ಅಲ್ಲದೆ ಮುಂಬಿನ ಕಾರ್ಯಕಲಾಪಗಳೆಲ್ಲಾ, ಮಾತುಕತೆ, ಭಾಷಣ ವೈಗೆರೆಗಳೆಲ್ಲಾ ಆಂಗ್ಲ ಭಾಷೆಯಲ್ಲೇ ನಡೆದುದರಿಂದ ತಮಿಳು ಪ್ರಿಯರಿಗೆ ಅದರಲ್ಲೂ ಭಾರತೀಯ ಭಾಷಾ ಪ್ರೇಮಿಗಳಿಗೆ ಭಾರೀ ಹೊಡೆತ ಸಿಕ್ಕಿದಂತಾಯಿತು. ಕಂಬರ್, ಸುಬ್ರಹ್ಮಣ್ಯ ಭಾರತಿ ಅಥವಾ ಅಸ್ಟ್ರೈಡ್ಯಾರ್ ಮುಂತಾದವರ ಪ್ರತಿಮೆಗಳ ಅನಾವರಣ ಮಾಡುವ ಮೊದಲೇ ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಮಹಾ ಮುಂದಾಳು ತಿರು ಸಿ. ಅಣ್ಣಾ ದೊರೈಯವರ ಪ್ರತಿಮೆಯನ್ನು ಅನಾವರಣ ಮಾಡಿದುದರಿಂದ ರಾಜಕೀಯ ವಾದಿಗಳ ಮನಸ್ಸಿನಲ್ಲಿ ಕಂದ್ಯಾಟದ ಮನೋಭಾವನೆ ಎದ್ದಿತು. ಇವೆಲ್ಲವುಗಳ ಹಿನ್ನೆಲೆಯಲ್ಲಿ ತಮಿಳು ಕಾನ್ಫರೆನ್ಸ್ ಭರ್ಜರಿಯಿಂದ ನಡೆಯಿತು.

ಕಾನ್ಫರೆನ್ಸನ್ನು ಕರೆದ ಶ್ರೀ ಸುಬ್ಬಯ್ಯನವರು ಪ್ರತಿನಿಧಿಗಳಿಗೆ ಸ್ವಾಗತ ಬಯಸಿದರು. ಇದು ತಮಿಳು ಅಧ್ಯಯನ ಸಂಗೋಷ್ಠಿಯ ದ್ವಿತೀಯ ಸಮ್ಮೇಳನ. ಹಿಂದಿನ ಸಮ್ಮೇಳನವು ಕೌಲಾಲಂಪುರದಲ್ಲಿ ನಡೆದಿತ್ತು. ಇದರಲ್ಲಿ ಸುಮಾರು ಇಪ್ಪತ್ತು ದೇಶಗಳಿಂದ ಸುಮಾರು ಇನ್ನೂರ ಪ್ರತಿನಿಧಿಗಳು ಭಾಗವಹಿಸಿದ್ದರು. ದ್ವಿತೀಯ ಸಮ್ಮೇಳನವು ತಮಿಳು ನಾಡಿನಲ್ಲಿ ನಡೆಯಬೇಕೆಂದು ಆಗ ಇಲ್ಲಿ ಮುಖ್ಯ ಮಂತ್ರಿಯಾಗಿದ್ದ ಶ್ರೀಭಕ್ತವತ್ಸಲಂ ಅಹ್ವಾನವಿತ್ತಿದ್ದ ಮೇರೆಗೆ ಈ ವರ್ಷ ಇಲ್ಲಿ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಸುಮಾರು ಎಲ್ಲತ್ತು ದೇಶಗಳಿಂದ ಸುಮಾರು ನಾನ್ನೂರು ಪ್ರತಿನಿಧಿಗಳು, ಅಂದರೆ ಎರಡು ಪಾಲಷ್ಟು ಅಧಿಕವಾಗಿ, ಭಾಗವಹಿಸಿದರು. ಅನ್ಯಾನ್ಯ ದೇಶವಲಿಂದ ಆಗಮಿಸಿದ್ದ ಪ್ರತಿನಿಧಿಗಳು ತಾವು ಭಾರತದಲ್ಲಿದ್ದೇವೆಂಬುದನ್ನಾದರೂ ಮರೆತಿರಲಿಲ್ಲ. ಮದ್ರಾಸು ಆ ಭಾರತದ ಒಂದು ಅಂಗವೆಂಬುದನ್ನವರು ಅರಿತುಕೊಂಡಿದ್ದು, ಅದೇ ದೃಷ್ಟಿಯಲ್ಲಿ ವಾದಿಸುತ್ತಾಡಿದರು. ಆದರೆ ಅದಕ್ಕೆ ವಿರುದ್ಧವಾಗಿ, ತಮಿಳು ನಾಡಿನ ಕೆಲ ಪ್ರತಿನಿಧಿಗಳು ಬೇರೆ ಪ್ರತಿನಿಧಿಗಳನ್ನೆದುರಿಸಿದರು. ತಮಗೂ ಉಳಿದ ಭಾರತಕ್ಕೂ ಅದೇನೂ ಸಂಬಂಧವೇ ಇಲ್ಲವೆಂಬಂತೆ ಅವರು ವಾದಿಸಿದರು. ಇದು ಮೊದಲನೆಯ ದಿನವೇ ಬೆಳಕಿಗೆ ಬಂದುಬಿಟ್ಟಿತು.

ಸಮ್ಮೇಳನದ ಕಾರ್ಯದರ್ಶಿ ಪ್ರಾಂಜೇಸ್ ಪಿಳ್ಳೈಯೋಝುಟ್ 'ಪ್ರಾಚೀನ ವಸ್ತು ಶಾಸ್ತ್ರ ಮತ್ತು ತಮಿಳ್' ವಿಷಯದ ಮೇಲೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಫ್ರಾಂಚ್ ಭಾಷೆಯಲ್ಲಿ ಪ್ರೊಫೇಸರ್ ಪಿಳ್ಳೈಯವರ ನಾಗರೀಕತೆಯು ನಾಶವಾಗಿದೆಯೆಂದರೂ ತಮಿಳುನಾಡಿನ ನಾಗರೀಕತೆ ಜೀವಂತವಾಗಿ ಉಳಿದುಕೊಂಡಿದೆ. ತಮಿಳು ನಾಡಿನ ನಾಗರೀಕತೆಯು ದೇಶದೇಶಗಳಲ್ಲಿ ಹಬ್ಬಿಹರಿದ್ದನೆ. ಪರರಾಷ್ಟ್ರಗಳಲ್ಲಿ ತಮಿಳು ನಾಗರಿಕತೆಯನ್ನು ಪ್ರಚಾರ ಮಾಡಲು ಯೋಗಿಸುವ ತಮಿಳರು ಸಂಸ್ಕೃತವನ್ನು ಸಂಪರ್ಕ ಭಾಷೆಯನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದರೆಂದು ಅವರು ಹೇಳಿದುದನ್ನು ಸಭಿಸಿಕೊಳ್ಳಲು ಇಲ್ಲಿಯ ಕೆಲ ಪ್ರತಿನಿಧಿಗಳಿಗೆ ಸಾಧ್ಯವಾಗಲಿಲ್ಲ. ಅವರಿಗೆ ತಟ್ಟನೆ ಕೋಪ ಬಂದು ಬಿಟ್ಟಿತು. ಅವರದನ್ನು ಖಂಡಿಸಿಯೇ ಬಿಟ್ಟರು.

ಮದರಾಸು ವಿಶ್ವವಿದ್ಯಾಲಯದ ಡಾ| ಕೆ. ಕೆ. ಪಿಳ್ಳೈಯವರು, "ಅಕ್ಷರ ಆಕ್ರಮಣದಿಂದಲೇ, ತಮಿಳಿನ ಪ್ರಾಚೀನತೆಯ ಕುರಿತು ಆರಂಭಿಸಿ ಬಿಟ್ಟರು. ಹೊರದೇಶದಿಂದ ಬಂದಿರುವ ಪ್ರಾ| ಪಿಳ್ಳೈಯೋಝುಟ್‌ರಂತಹವರು ತಮಿಳುನಾಡು ಭಾರತದ ಒಂದು ಅಂಗವೆಂಬ ದೃಷ್ಟಿಯಿಂದ ಮಾತಾಡಿದಲ್ಲಿ ಇದೇ ದೇಶದ ಪ್ರತಿನಿಧಿಡಾ| ಪಿಳ್ಳೈಯವರು ಅಕ್ಷರ ಆಕ್ರಮಣದ ಕುರಿತು ಮಾತಾಡಿದರು!

ಅಂತಹ ಇನ್ನೊಂದು ಪ್ರಸಂಗ: ಮಲೇಷ್ಯಾದಿಂದ ಬಂದಿದ್ದ ಪ್ರತಿನಿಧಿ ಶ್ರೀ ಅರುಣಾಚಲಂ ತನ್ನ ಮಾತಿನ ಮಧ್ಯೆ ಭಾರತದಲ್ಲೆಲ್ಲಾ ಗೋವಿಗೆ ಅಗ್ರಸ್ಥಾನ ಸಲ್ಲುತ್ತಿರುವಂತೆ ತಮಿಳುನಾಡಿನಲ್ಲೂ ಇದೆಯೆಂದಾಗಲೂ, ಕೆಲವರು ಅದನ್ನು ಎದುರಿಸುತ್ತ ಸಂಗಮ್ ಸಾಹಿತ್ಯದಿಂದ ಉಲ್ಲೇಖಿಸಿದರು. ಆದರೂ ತಮಿಳುನಾಡು ಪ್ರತ್ಯೇಕವೆಂಬುದನ್ನು ಸ್ಪಷ್ಟಪಡಿಸಲು ಅವರಿಂದ ಸಾಧ್ಯವಾಗಲೇ ಇಲ್ಲ. ದನಕ್ಕೆ ಗೌರವ ಸ್ಥಾನ ಸಿಗುತ್ತಿರಲಿಲ್ಲವೆಂದೂ ಅದು ಧನ ದನ್ಯಾನದಲ್ಲಿತ್ತೆಂದೂ ವಾದ ಹೂಡುವದರಲ್ಲೇ ಅವರು ತೃಪ್ತಿಪಡಬೇಕಾಯಿತು.

ಅದೇ ರೀತಿ ಪೂಂಪುಹಾರಿನಲ್ಲಿ [ದ್ವೀಪ ವೈದ್ಯಾನದಲ್ಲಿ] ತಾವ ವಿವಾದವೆದ್ದಿತ. ಅಲ್ಲಿ ಶ್ರೀ ಕರು ತಿರುಮಾರ್‌ರವರು [ಮದ್ರಾಸ್ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸಿನ ನಾಯಕ] ತಮ್ಮ ಭಾಷಣದಲ್ಲಿ, ಪಾಣಿನಿಗಿಂತಲೂ ತೋಳಕಾಪಿಯರ್ ಹಿಂದಿನವರೆಂದು ಹೇಳಿ, ಇದರಿಂದ ಆಗಿನ ಕಾಲದಲ್ಲಿ ತಮಿಳು ಭಾಷೆ ಹಾಗೂ ಸಾಹಿತ್ಯ ಸಾಕಷ್ಟು ಬೆಳೆದಿತ್ತೆಂದರು. ಪಾಣಿನಿ, ಸಂಸ್ಕೃತ ವ್ಯಾಕರಣಕಾರ, ಹೆಸರು ಕೆವಿಗೆ ಬಿಸ್ಕುದೇ ತಡ;ಕೆಲವರು ಸಿಡಿದೆದ್ದರು. ಇಲ್ಲಿ ಗಮನಿಸಬೇಕಾಗಿರುವ ವಿಷಯ ಒಂದಿದೆ. ಪಾಣಿನಿಗಿಂತ ತೋಳಕಾಪಿಯರ್ ಹಿಂದಿನವರೆಂದು ಅವರು ಬೇರೆ ದೃಷ್ಟಿಯಿಂದ, ಸಮಯದ ದೃಷ್ಟಿಯಿಂದ ಹೇಳಿದ್ದರೂ ಇನ್ನೊಂದು ವಿಷಯ ಬಯಲಾಗುತ್ತದೆ. ತೋಳಕಾಪ್ಪಿಯರ್ ತಮಿಳಿನಲ್ಲಿ ವ್ಯಾಕರಣ ಸುಸ್ತಕ ತೋಳಕಾಪ್ಪಿಯಂ ಬರೆದಿರುವರು. ಅದರಲ್ಲಿ, ಒಬ್ಬನು ತಮಿಳು ವ್ಯಾಕರಣದಲ್ಲಿ ಪೂರ್ಣ ಪಾಂಡಿತ್ಯ ಪಡೆದವನೆಂದಾಗಬೇಕಾದಲ್ಲಿ ಅವನು ಸಂಸ್ಕೃತ ವ್ಯಾಕರಣವನ್ನು ಕಲಿತಿರಬೇಕೆಂದಿದೆ. ಆದುದರಿಂದಲೇ ಕೆಲ ಪ್ರತಿನಿಧಿಗಳು ಸಿಟ್ಟಿಗೆದ್ದರು. ಲೋಕ ಸಭೆಯಲ್ಲಿ ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಮಂದಾಳಾಗಿರುವ ತಿರು ಕೆ. ಅಂಬಳ್ಳಗನ್ ಅವರಿಗೆ ಆಗ್ರೋಶರಂದರು. ಅವರು ತಮಿಳು ಭಾಷೆಯ ವಿಶೇಷತೆಯ ಕುರಿತು ಅದೇನೂ ಆಡದೆ, ತಮಿಳು ಚಂದ್ರವನ್ನು ಹಿಡಿಯಲು ಹಿಂದಿ ರಾಹು ಬರುತ್ತಿದೆ. ತಮಿಳಿಗಿಂದು ಹಿಂದಿಯಿಂದ ಅಪಾಯು ಬರುದಿರುತ್ತದೆ. ತಮಿಳನ್ನು ನಾಶಮಾಡಲುಹಿಂದಿ ಹವಣಿಸುತ್ತಿದೆ.ಹಿಂದಿ ಹೆಗರಣದಿಂದಾಗಿ ಭಿನ್ನಭಿನ್ನಪಕ್ಷಗಳಪ್ರಮುಖರಾಗಿರುವ ತಿರು ಅಣ್ಣಾ ದೊರೈ, ಮಿಸ್ಟರ್ ರಾಜಗೋಪಾಲಾಚಾರಿ, ತಿರು ಕಾಮರಾಜ, ತಿರು ಶಿವಜ್ಞಾನ, ಗ್ರಾಮಣಿ, ಜಹಾಬ್ ಇಸ್ಮಾಯಿಲ್ ಮುಂತಾದವರಿಂದು ಒಂದಾಗಿರುವರು ಇಂಡಿಯನ್ ನಾಶರೀಕತೆಯ ಮೂಲ ಗಂಗಾ ಬಯಲಿನಲ್ಲಿರದೆ, ಕುಮರಿಯ ಮೊಪೆಯಲ್ಲಿದೆಯೆಂದು, ತವಗೆ ಹಿಂದಿಯ ವೈರಿದ್ದ, ಉತ್ತರ ಭಾರತದ ವೈರಿದ್ದ, ಹೆಗಿಯ ವಿಷವನ್ನು ಕಾರಿದರು. ಅದರಿಂದ ತಮಿಳಿಗಾದ ಪ್ರಯೋಜನವೇನು?

ಪ್ರಪಂಚ ತಮಿಳು ಅಧ್ಯಯನ ಅಧಿವೇಶನವು ಭಾಷೆಗೆ ಸಂಬಂಧಪಟ್ಟ ವಿಷಯ. ಪ ದರಾಸಿನ ಕಾಂಗ್ರೆಸ್ ಮಂತ್ರಿಮಂಡಲವು ತಮಿಳು ಮಹಾ ಸಭೆಗೆ ಆಮಂತ್ರಣವಿತ್ತಿತ್ತು. ಆದರೆ, ತಮಿಳು ಮಹಾ ಅಧಿವೇಶನ ನಡೆಯುವಾಗ ಆಮಂತ್ರಣ ಕೊಟ್ಟಿದ್ದ ಕಾಂಗ್ರೆಸ್, ರಾಜಕೀಯದಲ್ಲಿ ಹೇಳ ಹೆಸರಿಲ್ಲದ್ದಾಗಿ ಹೋಗಿ ಬಿಟ್ಟಿತು! ಅಧಿಕಾರಕ್ಕೆ ಬಂದ ದ್ರಾವಿಡ ಮುನ್ನೇಟ್ರ ಕಳ್ಳಗಂ ಅದನ್ನು ತನ್ನ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡಿತು. "ತಮಿಳಿಗೆ ಅಪಾಯು ಬಂದಿರುತ್ತದೆ. ಪ್ರಪಂಚದಲ್ಲಿರುವ ತಮಿಳರೇ ಒಂದಾಗಿರಿ. ಹಿಂದಿ ಹೇರುವಿಕೆಯನ್ನೆದುರಿಸಲು ಒಂದಾಗೂಡಿರೆಂಬ ಘೋಷಣೆಯುಳ್ಳ ಅದು ಸಭೆಯ ಮುಂದಕ್ಕಿಟ್ಟಿತು.

ಪ್ರಪಂಚ ಪ್ರದರ್ಶನಕ್ಕೆ ಬಂದವರೆಲ್ಲರೂ ತಮಿಳರೇ ಏನು? ರಷ್ಯಾ, ಯುಗೊಸ್ಲೋವಿಯಾ, ಇಸ್ರೇಲ್ ಮುಂತಾದ ದೇಶಗಳಿಂದ ಬಂದಿದ್ದವರು ತಮಿಳರಲ್ಲ ಅಂದೊಡನೆ ಅವರಿಗೆ ತಮಿಳು ತಿಳಿದುಕೊಳ್ಳುವ ಹಕ್ಕಿಲ್ಲವೆಂದಲ್ಲ. ಅವರು ತಮಿಳಿನ ಭಾರವನ್ನು ಹೊರಲು ತಮ್ಮಿಂದ ಸಾಧ್ಯವಿಲ್ಲವೆಂದು ಹೇಳಬೇಕೆಂದೇನಿಲ್ಲ. ಅಯಾಯ ದೇಶಗಳಲ್ಲಿ ತಮಿಳು ಭಾಷೆಯನ್ನು ಕಲಿಸುವ, ತಮಿಳು ಭಾಷಾ ವಿಶಾರದರೇ ಪ್ರಪಂಚ ತಮಿಳು ಅಧ್ಯಯನ ಅಧಿವೇಶನದಲ್ಲಿ ಭಾಗವಹಿಸಬೇಕೇ ವಿನಃ ರಾಜಕೀಯ ವಾದಿಗಳಲ್ಲ. ಹಾಗಿದ್ದರೂ ರಾಜಕೀಯೋದ್ಧಮಿ ತಿರು ಅಂಬಳ್ಳಗನ್‌ರವರು ತಮಿಳಿನ ವಿಷಯ ಮಾತಾಡುವದನ್ನು ಬಿಟ್ಟು ಸಂಸ್ಕೃತ, ಹಿಂದಿ ಭಾಷೆಗಳನ್ನು ತೆಗಳಿ ಬಿಟ್ಟರು. "ತಮಿಳರೇ ಒಂದಾಗಿರೆಂಬ ಕೂಗಿನನ್ನೆತ್ತಿರುವರು.

ತಮಿಳಾದರೂ ಏನಿದೆ? ಅದೂ ಭಾರತೀಯ ಭಾಷೆ ಅಲ್ಲವೇನು? ತಮಿಳರಾದರೂ ಭಾರತೀಯರೇ ಅಲ್ಲವೇನು? ಇದ

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ತಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಂಡಿತಿನಸು ಜಾಫೀಯುಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ವಿಶಾಲ ಹೊಟೆಲ್.

ಕಹಿಯಾಗಿದ್ದರೂ ಸಿಹಿ

ಸೈನಿಕ ಜೀವನದಲ್ಲಿ ತನಿಪೆಗಳ ಸುರಿಮಳೆ

ಸೇನಾಪಡೆಯಲ್ಲಿ ದಂಡನಾಯಕರಿಂದ ಹಿಡಿದು ಸಣ್ಣ ತುಕಡಿಯ ಅಧಿಕಾರಿಯವರೆಗೆ ಅನ್ಯಾದೃಶ ತನಿಪೆಗಳಾಗುತ್ತಿರುತ್ತಿವೆ. ಇವುಗಳು ವಿವಿಧ ಕಾಲದಲ್ಲಿ ಅನೇಕಾನೇಕ ಉದ್ದೇಶಗಳಿಗಾಗಿ ನಡೆಯುತ್ತಿರುತ್ತವೆ. ವಾರ್ಷಿಕ, ಮಾಸಿಕ, ಸಾಪ್ತಾಹಿಕ, ದೈನಿಕ ತನಿಪೆಗಳಿಗಂತೂ ಕೊನೆಯಿಲ್ಲ.

ಆದರೆ ಪ್ರತಿ ತನಿಪೆಗೂ ಪರಮೋದ್ದೇಶವೊಂದಿದೆ. ಸೇನಾಪಡೆ ಹೂಡುವುದು ಅಪರೀಕ್ಷಿತ ತುರ್ತು ಪರಿಸ್ಥಿತಿಯನ್ನು ಎದುರಿಸಲು ಸದಾ ಸನ್ನದ್ಧವಾಗಿರುವುದೇ ಇವರ ಧ್ಯೇಯವಾಗಿದೆ. ಸೈನಿಕರು, ಯುದ್ಧಾಸ್ತ್ರಗಳ, ಮದ್ದು—ಗುಂಡು, ಸಾರಿಗೆ ಸೌಕರ್ಯ ಮುಂತಾದುವುಗಳ ತನಿಪೆಗೆ ಅಂತ್ಯವೆಂಬುದೇ ಇಲ್ಲ.

ಬಗೆಹರಿಯದ ಚಿಂತೆ

ಹಿರಿಯ ಸೇನಾಧಿಕಾರಿಯು ಅನೇಕ ಕಡೆ ಹಂಚಿ ಹೋಗಿರುವ ಡಿವಿಜನ್, ಬ್ರಿಗೇಡ್, ಬೆಟಾಲಿಯನ್‌ಗಳು ಸಾಕ್ಷ್ಯ ಗಾರಿಕ್ಷಣೆಗಾಗಿ ನಿಂತಿರುವ ಸೇನಾ ತಂಡವನ್ನು ತನಿಪೆಮಾಡಲು ನಿರ್ಧರಿಸಿದಾಗಲೆಲ್ಲರೂ ಎಚ್ಚರವಂತರಾಗುತ್ತಾರೆ. ಸೇನಾ ದಂಡನಾಯಕರ ತನಿಪಾ ಪ್ರದರ್ಶನ ಕಾರ್ಯಕ್ರಮ ಪಟ್ಟಿ ಸ್ವೀಕರಿಸಿದ ಕ್ಷಣದಿಂದ ಸ್ಥಳೀಯ ಸೇನಾಧಿಕಾರಿ ಮೊದಲುಗೊಂಡು ಸಾಮಾನ್ಯ ಯೋಧನವರೆಗೆ ಎಲ್ಲರೂ ಫಿದ್ರೆಯೇ ಬಾರದ; ಇವರೆಲ್ಲರೂ ಸ್ವವಾಸ ಬರಲಿರುವ "ಮುದುಕ"ನು (ಕೆಲಿಯ ಸೇನಾಧಿಕಾರಿಯರು ಹಿರಿಯ ಸೇನಾಧಿಕಾರಿಗಳನ್ನು ಸಿಟ್ಟಾಗಿದಿಂದ ಹೀಗೆ ಕರೆಯುತ್ತಾರೆ) ಏನು ಎಷ್ಟು ಪತ್ತೆಮಾಡುವನೋ ಎಂದು ಚಿಂತೆಯಿಂದ ಹಾಸಿಗೆಯಲ್ಲಿ ಏಳಿಗೆಟ್ಟೆ ಹೊರಳಾಡುತ್ತಾರೆ.

ತನಿಪೆ ನಡೆಯುವ ದಿನ "ಮುದುಕ" ಸೇನಾ ಕೇಂದ್ರಕ್ಕೆ ಆಗಮಿಸುವ ಮುನ್ನ ಪ್ರಕ್ಷುಬ್ಧ ವಾತಾವರಣವಿರುತ್ತದೆ. ಪ್ರತಿಯೊಬ್ಬರೂ ಸಿಡಿಗುಟ್ಟುತ್ತಿರುತ್ತಾನೆ. ಅವರ ಮನಸ್ಸು ಪಾಲಿಯಾಗಿರುತ್ತದೆ; "ಮುದುಕ" ಕೇಳಬಹುದಾದ ಪ್ರಶ್ನೆಗಳಿಗೆ ಉದ್ವಿಗ್ನತೆಯಿಂದ ಉತ್ತರ ನೆನಪಿಸಿಕೊಳ್ಳುತ್ತಿರುತ್ತಾನೆ.

ಮಿನುಗಿದ ಮಂದಹಾಸ

ತನಿಪಾಧಿಕಾರಿಯೊಡ ಜನರಲ್ ಸೇನಾ ಘಟಕಕ್ಕೆ ಬಂದಾಗ ಅಲ್ಲಿನ ಸರ್ವ ಅಧಿಕಾರಿವರ್ಗ ಹಿರಿಯ ಉಪ ಅಧಿಕಾರಿ (ಜೂನಿಯರ್ ಕಮೀಷನ್ಡ್ ಅಧಿಕಾರಿ) ಸ್ವಾಗತಿಸುತ್ತಾರೆ. ಜನರಲ್ ಕಿರಿಯ ಸೇನಾಧಿಕಾರಿಯೊಂದಿಗೆ ಗತಕಾಲದ ಹಲವು ಘಟನೆಗಳನ್ನು ಸ್ಮರಿಸಿಕೊಂಡು ತಾವು ಘಟಕದಲ್ಲಿ ಕಳೆದ ಕುಂದರಾ ದಿನಗಳ ಬಗ್ಗೆ ವಾಂಚಲ್ಯವಿಂದ ಮಾತನಾಡುತ್ತಾರೆ. ಇದರಿಂದ ಇಡಿ ಘಟಕದಲ್ಲಿ ಮಡಿಡಿದ್ದ ಪ್ರಕ್ಷುಬ್ಧತೆ ಕರಗಿ ಹೋಗುತ್ತದೆ.

ಜನರಲ್ ಕಣ್ಣಿಗೆ ಎಲ್ಲೆಲ್ಲೂ ಶುಭ್ರ ಸುಂದರತೆಯೇ ಕಾಣಿಸುತ್ತದೆ. ಇಡಿ ಘಟಕವಲ್ಲಿ ಸರ್ವತ್ರವೂ ಅಚ್ಚುಕಟ್ಟಾಗಿರುತ್ತದೆ. ಜನರಲ್ ತನಿಪೆ ಪಡೆದ ವಿವಿಧ ಸ್ಥಳಗಳಲ್ಲಿ ನಿಯುಕ್ತವಾದ ವ್ಯಕ್ತಿಗಳಿರ ತ್ತಾರೆ. ಇದನ್ನೆಲ್ಲ ನೋಡಿದ ಜನರಲ್ ಮಂದಹಾಸ ಮಿನುಗಿಸುತ್ತಾನೆ.

"ಮುದುಕ" ತನ್ನೊಳಗೇ ನಗೆ ಹೊಮ್ಮಿಗುತ್ತ ತಾನು ಕಿರಿಯ ಸೇನಾಧಿಕಾರಿಯೊಡಾಗ ಮಾಡಿದ್ದ ಇಂತಹ ಕಾರ್ಯಗಳನ್ನೆಲ್ಲ ಸ್ಮರಿಸಿಕೊಳ್ಳುತ್ತಾನೆ! ಜನರಲ್ ತನಿಪೆ ನಡೆಸಿ ನಿರ್ಗಮಿಸಿದರೆ ಇಡಿ ಘಟಕವೇ ನಿಟ್ಟುಸಿರು ಬಿಡುತ್ತದೆ. ಅನಂತರ ಎಲ್ಲರೂ ಘಟಕದ ಅಧಿಕಾರಿಯ ಸುತ್ತ ನೆರೆದು ಜನರಲ್ ಘಟಕದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯವೇನೆಂದು ಕೆರಳಿದ ಅಕ್ಕರೆಯಿಂದ ಕೇಳುತ್ತಾರೆ.

ಆರೋಗ್ಯವರ್ಧಕ

ಸೇನಾ ಪಡೆಯ ಹಿರಿದ ದೃಷ್ಟಿಯಿಂದ ಈ ತನಿಪೆ ಆರೋಗ್ಯವರ್ಧಕದಂತಿರುತ್ತದೆ. ಸೇನೆಯ ದಂಡನಾಯಕ ಮತ್ತಿತರ ಹಿರಿಯ ಅಧಿಕಾರಿಗಳಿಗೆ ತಮ್ಮ ನೇತೃತ್ವದಲ್ಲಿರುವ ಸೇನಾಪಡೆ, ಅದರ ಕಾರ್ಯಕ್ಷಮತೆ, ದಕ್ಷತೆ, ಯೋಧರ ರೀತಿನೀತಿ, ಚಿಂತನೆ, ಸಮಸ್ಯೆಗಳನ್ನು ಅರಿತುಕೊಳ್ಳಲು ಅವಕಾಶ ಸಿಗುತ್ತದೆ.

ಈ ತನಿಪೆಯಿಂದ ಸೇನಾಪಡೆಗಳಿಗೆ ಹಿರಿಯ ಸೇನಾಧಿಕಾರಿಗಳ ಪರಿಚಯ, ಅವ

ನ್ನೊಪ್ಪಿಕೊಳ್ಳಲು ದ್ರಾ. ಮು. ಕ. ಸಿದ್ಧವಿಲ್ಲ. ಇಂತಹ ರಾಜಕೀಯಕ್ಕೆ ತಮಿಳನ್ನು ಉಳಿಸುವದಕ್ಕಾಗಿ ಹೊರಾಂದರೂ ಆಕ್ರಮಣ ಪಡೆಸಿಕಲ್ಲಿ ಅವರಿಗೆ ಸಹಾಯ ಮಾಡ ಪದರಲ್ಲೇನಾದರೂ ಸಂದೇಹವಿದೆ ಏನು? ಪಾಕ್, ಚೈನಾ, ರಷ್ಯಾ, ಅಥವಾ ಅಮೇರಿಕವು ತಮಿಳ್ನಾಡು ಬಿಟ್ಟು ಉಳಿದ ಭಾರತವನ್ನು ಮಾತ್ರ ಆಕ್ರಮಿಸಿಕೊಳ್ಳುವೆವೆಂದಲ್ಲಿ ಖಂಡಿತವಾಗಿ ಇವರು ಆಕ್ರಮಣಗಾರರಿಗೆ ಜಯಚಂದನಾಗುವದರಲ್ಲಿ ಸಂದೇಹವೇ ಇಲ್ಲ. ಇದಕ್ಕೆ ತಿರು ಅಂಬೆಡ್ಕರ್‌ರವರು ತಮಿಳುಮಾಧಿಪೇಶಕದಲ್ಲಾಡಿರುವ ಮಾತ ಗಳ ಅಧಾರವೇ ಸರಿ. ಹಾಗಿಲ್ಲದಾದಲ್ಲಿ "ಹಿಂದಿಯ ಹೇರುವಿಕೆಯನ್ನೆದುರಿಸಲು" ಅವರು ಅನ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಹಾಯವನ್ನು ಯಾಚಿಸುತ್ತಿರಲಿಲ್ಲ. ಇದು ದ್ರಾ. ಮು. ಕ. ದ ಬಣ್ಣವನ್ನು ಹೊರಹೆಡವಿರುತ್ತದೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ಸ.)

ಸತ್ತಾವ ಇದ್ದಾವ:

ಲೇಖಕರು: ಶ್ರೀ ಎಂ. ವಿ. ಶರ್ಮಾ.
ಪ್ರಕಾಶನ: ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ, ಉ. ಕನ್ನಡ.
ಪುಟಗಳು: ೭೯. ಬೆಲೆ. ರೂ ೧ ೭೦.

ಸಾಹಿತ್ಯಕರು ಸತ್ತು ಬದುಕಿದವರ ವರ್ಗದಲ್ಲಿ ಸೇರುತ್ತಾರೆ. ಅರ್ಥವತ್ತಾಗಿಯೇ ಇಟ್ಟ ಶೀರ್ಷಿಕೆಯ ಈ ಪುಸ್ತಕದಲ್ಲಿ ಆಧುನಿಕ ಕನ್ನಡ ಸಾಹಿತ್ಯಕರಲ್ಲಿ ಎಂಟು ವ್ಯಕ್ತಿಗಳ ಪರಿಚಯವನ್ನೂ ಅವರ ಕೃತಿಗಳ ಸ್ಥೂಲ ಚಿತ್ರವನ್ನೂ ಕೊಟ್ಟು ಅವರೆಂತು ಅಮರರಾದರೆಂಬುದನ್ನು ಪ್ರಮಾಣೀಕರಿಸಲಾಗಿದೆ. ಆಧುನಿಕ ಕಾಲದ ಕನ್ನಡದ ಆಚಾರ್ಯ ಪುರುಷ ಬಿ. ಎಂ. ಶ್ರೀ. ನಾಟಕ ರಚನಾಕಾರ್ತೃದ ಕ್ರಾಂತಿ ಪುರುಷ ಟಿ. ಪಿ. ಕೈಲಾಸಂ, ಪೌರಾಣಿಕ ಕಾದಂಬರಿಕಾರ ದೇವುಡು, ಕನ್ನಡ ಕಂಠಪುರೋಹಿತ ಅಲೂರ, ಕಥೆಗಾರ್ತಿ ಕೊಡಗಿನ ಗೌರಮ್ಮ, ರಾಷ್ಟ್ರ ಕವಿ ಗೋವಿಂದ ಪೈ, ಸಾಹಿತಿ—ವಿಮರ್ಶಕ ಶೀ. ನಂ. ಶ್ರೀ ಪಾರಿಜಾತ ತ್ರಿವೇಣಿಯವರ. ಐದೂ ರೂಪದ ವ್ಯಕ್ತಿವಾದರೂ ಅವರ ಪೆಸರ—ಅವರು ಮಾಡಿದ ಸೇವೆಗಳು ಸದಾ ಅಮರವಾಗಿವೆಯೆಂಬುದನ್ನಿಲ್ಲಿ ಪ್ರತಿಪಾದಿಸಲಾಗಿದೆ.

ಕನ್ನಡದಲ್ಲಿ ಈ ಬಗೆಯ ಸಂಗ್ರಹಗಳು ಅಪೂರ್ವ. ಅಲ್ಲಲ್ಲಿ, ಪತ್ರ—ಪತ್ರಿಕೆಗಳಲ್ಲಿ ಬರುವ ಲೇಖನ—ಇವೂ ಆಧುನಿಕ ಸಾಹಿತ್ಯಕಾರರ ಬಗ್ಗೆ ಇರುವುದು ಅಪರೂಪಗಳಂದಲೇ ಸಾಹಿತ್ಯಾಭಿರುಚಿಯ ಕೃಷ್ಟಿಪಟ್ಟುಕೊಳ್ಳಬೇಕಾಗುತ್ತದೆ. ಇಂತಹದುರಲ್ಲಿ "ಸತ್ತಾವ ಇದ್ದಾವ" ಒಂದು ಸ್ವಾಗತಾರ್ಹ ಕೃತಿ. ಲೇಖಕರ ನಳ್ಳುರಾದ ತಿಳಿ ಭಾಷೆಯಲ್ಲಿ ಅಭಿವ್ಯಕ್ತವಾದ ವಿಚಾರಧಾರೆ ಅವರ ಜ್ಞಾನ—ಅಧ್ಯಯನಗಳ ಪ್ರತೀಕವೆನ್ನಬಹುದು. ಹಳೆಯ ಕವಿ ಪರಿಚ

ರ ಧೋರಣೆ ಹಾಗೂ ಯುದ್ಧ ಮೊದಲಾದ ವಿವಿಧ ಸಮಸ್ಯೆಗಳ ಬಗ್ಗೆ ಅವರ ವಿಚಾರಧಾರೆ ಏನೆಂಬುದರ ಅರಿವಾಗುತ್ತದೆ.

ಯದಲ್ಲೇ ನಿಂತಿದ್ದ ಕನ್ನಡ ಸಾಹಿತ್ಯ ಚರಿತ್ರೆಗೆ ಇದೊಂದು ಸೂಕ್ತ ಕಾಣಿಕೆ—ಹೊಸ ಸಾಹಿತ್ಯ ಚರಿತ್ರೆಗೊಂದು ಸೋಪಾನ.

ಯೋಚಿಸು—ಬಣ್ಣ ಪಾಕ:
ಲೇಖಕರು: ಶ್ರೀ ಕೆ. ವಿಠಲ ಶೆಣೈ.
ಪ್ರಕಾಶನ: ಶ್ರೀನಿವಾಸ ಬ್ರದರ್ಸ್, ರಥಬೀದಿ, ಮಂಗಳೂರು-೧ (ದ. ಕ.)
ಪುಟಗಳು. ೪೦ ಬೆಲೆ ರೂ. ೩.೫೦.

ಹರಿಂದಲ ವಯಸ್ಸಿನ ಮಕ್ಕಳಲ್ಲಿ ವಿಜ್ಞಾನಾಭಿರುಚಿಯನ್ನು ಹುಟ್ಟಿಸಲು ಮೂಲತಃ ಅವರ ವಿಚಾರ ಶಕ್ತಿಯನ್ನು ಬೆಳೆಸುವ ಉದ್ದೇಶದಿಂದ ಈ ಪುಸ್ತಕವು ರಚಿತವಾಗಿದೆ. ಮಕ್ಕಳು ಪರಿಮಿತ ಅನುಭವಳ್ಳವರು—ಅದರೂ ಪ್ರಕೃತಿಯ ವಸ್ತು ಘಟನೆಗಳ ಬಗ್ಗೆ ಕುತೂಹಲ ಅವರಲ್ಲಿದ್ದೇ ಇದೆ 'ಅದೇನ ?' 'ಅದು ಯಾಕೆ?' ಎಂದ ಮುಂಕಾದ ಪ್ರಶ್ನೆ ಮಗುವಿನ ಬಾಯಿಯಿಂದ ಕೇಳಿ ಬೇಳ ಸಾಕಾದ ತಾಯ್ತಂದೆಯರೂ ಇದ್ದಾರೆ. ಮಕ್ಕಳು ಪ್ರತಿದಿನ ನೋಡುವ ತಮ್ಮ ಅನುಭವದ ಪರಿಮಿತಿಯೊಳಗೆ ಬರುವ ವಿನೋದ, ವಿಚಾರ, ಚಟುವಟಿಕೆಗಳನ್ನು ಲೇಖಕರು ಇಲ್ಲಿ ಉದ್ದೇಶ ಸಾಧನೆಗಾಗಿ ಆಯ್ದುಕೊಂಡಿದ್ದಾರೆ. ಚಿತ್ರಗಳಲ್ಲಿ ಸ್ವಭಾವತಃ ಮಕ್ಕಳು ಆಸ್ಥರಾಗಿರುವುದರಿಂದ ಚಿತ್ರದಾಕಾರ ಬಗ್ಗೆಯೂ ಒಲವು ಹರಿಸಿದ್ದಾರೆ. ಪಶು ಪಕ್ಷಿ, ಕೈಮಿಕೇಟ್, ಮರಬಳ್ಳಿ, ಯಂತ್ರತಂತ್ರ, ವಾಹನ ಹವಾಮಾನ, ಭೂಮಿ ಆಕಾಶ—ಇವುಗಳ ಬಗ್ಗೆ ಹಲವು ಮೂಲ ಕಲ್ಪನೆಗಳನ್ನು ಮೂಡಿಸುವ ಲೇಖಕರ ಉದ್ದೇಶ ಇಲ್ಲಿ ಸಂಪೂರ್ಣ ಸಫಲವಾಗಿದೆ.

ಈ ಬಗೆಯ ಸಚಿತ್ರ ಕೃತಿಗಳು ಕನ್ನಡ ಭಾಷೆಯಲ್ಲಿಲ್ಲವೆಂದೇ ಹೇಳಬೇಕು. ಭಾಷಾ ಪುಸ್ತಕಗಳ ಪ್ರಚಾರ ಕ್ಷೇತ್ರ ಪರಿಮಿತ; ಸಚಿತ್ರ ಪುಸ್ತಕಗಳ ಉತ್ಪಾದನಾ ವೆಚ್ಚ ಅಧಿಕತೆಹಾಗಾಗಿ, ಪುಸ್ತಕದ ಬೆಲೆ ಹೆಚ್ಚುವುದು ಅನಿವಾರ್ಯವೇ. ಕನ್ನಡದ ಹರಿಂದಲ ವಯಸ್ಸಿನ ಮಕ್ಕಳು ತಾಯ್ತಂದೆಯರು ಈ ಪುಸ್ತಕವೂ ಮಗುವಿನ ಜ್ಞಾನಾಭಿವೃದ್ಧಿಗೆ ರಚನಾತ್ಮಕ ಆಹಾರವೆಂದು ಮನಗಾಣಬೇಕು; ಮೂರೂವರೆ ರೂಪಾಯಿ ತೆತ್ತು ಕೊಂಡುಕೊಳ್ಳಬೇಕು ಅಂದರೆ ಇದರಂತಹ ಹತ್ತಾರು ಪುಸ್ತಕಗಳು ಕನ್ನಡದಲ್ಲಿಯೂ ಪ್ರಕಟಗೊಳ್ಳುವುದು ಸಾಧ್ಯವಾಗುತ್ತದೆ. ಪ್ರಕಾಶಕ—ಲೇಖಕರೆ ಈ ಸಾಹಸ ಸ್ತುತಿಯನೀಯ, ಸಾರ್ಥಕ. ಅವರಿಗೆ ತಕ್ಕ ಪ್ರೋತ್ಸಾಹ ಅವಶ್ಯಕ.

ಶ್ರೀ ಸಿದ್ದಪ್ಪನ ಹಳ್ಳಿ ನಿಜಲಿಂಗಪ್ಪ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಕಳೆದ ಫೆಬ್ರವರಿ ಅರಂದು ಕೆನರಾ ಬ್ಯಾಂಕ್ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ಬೇಳೆ ಪ್ರಕಟಿಸಿದ ಪುಸ್ತಿಕೆಯಿದು. ಇದರಲ್ಲಿ ಶ್ರೀ ನಿಜಲಿಂಗಪ್ಪನವರ ಜೀವನೇತಿಹಾಸವನ್ನು ಸರಳ ಭಾಷೆಯಲ್ಲಿ ಚುಟುಕಿನಲ್ಲಿ ಕೊಡಲಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ, ಸ್ವತಂತ್ರ ಭಾರತೀಯ ಗಣರಾಜ್ಯಕ್ಕೆ ಅ

(ಅಂಳತ್ತೆಯ ಸುಟ ನೋಡಿರಿ)

"ನಿರೀಕ್ಷಿಸಿರಿ"
ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು
ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ
ಕವಿಕಲೇಖ
ಅಥವಾ
ವೀರಸೇನ ವಿಜಯ
ನಿಮ್ಮೂರಿಗೆ ಬರುವ ದಿನವನ್ನೂ ತಾರೀಕನ್ನೂ ನಿರೀಕ್ಷಿಸಿರಿ.

ಹಿಂದೂ—ಮುಸ್ಲಿಂ ಐಕ್ಯತೆಯ ಅವತಾರಿ

ಮಹಾತ್ಮ ಕಬೀರ್

ಬರೆದವರು—ಶ್ರೀ ಎಂ. ಎ. ರಮಾ, ತದ್ದಲಸೆ

ಅಂದು ನಮ್ಮ ಭವ್ಯ ಭರತ ಖಂಡದಲ್ಲಿ ಜಾತೀಯತೆಯ ಕಣ್ಣು ಮುಚ್ಚಾಲೆಯಾಟ ನಡೆದು ಪರಸ್ಪರ ವೈಷಮ್ಯಕ್ಕೆ ಕೊಟ್ಟಿದ್ದವು. ಸ್ಪೃಶ್ಯಾಸ್ಪೃಶ್ಯತೆ, ಉಚ್ಚ—ನೀಚಗಳ ಭಾವನೆಯು ಎಲ್ಲೆ ಮೀರಿದ್ದಿತು. ಇನ್ನೊಂದೆಡೆ ವಾಸ್ತವಿಕ ಜಗತ್ತನ್ನು ಮರೆತು, ಆದರ್ಶಗಳಿಗೆ ಬಲಿಯಾಗಿ ಮೈ ಮರೆತ ಪಂಡಿತೋತ್ತಮರು ಸಾಮಾಜಿಕ ಜೀವನದಲ್ಲಿ ಕಿರುಬಯೋಗಿಗಳಾದಾಗ, ಏನೊಂದು ಇಲ್ಲದೆ ಸಮಾಜ ಹದಗೆಟ್ಟಾಗ, ಇದ್ದ ಜೀವನದಲ್ಲೇ ಆದರ್ಶವನ್ನು ಬೆರೆಸಿ ಒಳ್ಳೆಯ ಬಾಳನ್ನು ಬಾಳಬೇಕೆಂದು ಸಾರುವ ವೈಚಾರಿಕಯೊಬ್ಬ ಅವತರಿಸಿ ಬಂದ. ಅವನೇ—ಕಬೀರ.

ಕಬೀರ ಜನ್ಮ

ಮಹಾತ್ಮರಾದ ಸ್ವಾಮೀ ರಾಮಾನಂದರು ಒಂದಾನೊಂದು ದಿನ ಒಂದ ಭಕ್ತರನ್ನು ಆಶೀರ್ವದಿಸುತ್ತಿರುವಾಗ ತಮಗೆ ಭಕ್ತಿಯಿಂದ ಎರಗಿ ನಮಸ್ಕರಿಸಿದ ಓರ್ವ ಪೆಂಗಳನ್ನು ವಿಧವೆಯೆಂದು ಅರಿಯದೆ 'ಸುಪುತ್ರವತೀ ಭವ' ಎಂದು ಹರಸಿದರಂತೆ. ಮಹಾತ್ಮರ ವರವು ಫಲಿಸಿ ಹೆತ್ತ ಮಗು ಕಬೀರನನ್ನು ಸಮಾಜದ ನೀತಿ ಭಯಮಗಳಿಗೆ ಅಂಜಿ ಕಾತಿಯಲ್ಲಿರುವ 'ಲಹರತಾರ್' ಎಂಬ ಸರೋವರದ ಸನಿಕದಲ್ಲಿ ಮೇಲಿಸಿರಲು ಅದೇ ದಾರಿಯಲ್ಲಿ ತನ್ನ ಪೀಮಾಳೆಂದಿಗೆ ನಡೆದು ಹೋಗುತ್ತಿದ್ದ ನೀರಾರ ನೀರೂ ಎಂಬಾತ ಅ ಅನಾಥ ಮಗುವನ್ನು ತಂದು ಸಾಕಿದನಂತೆ.

ಮಹಾತ್ಮಾ ಕಬೀರರು ಜನ್ಮತಃ ಹಿಂದುವಾಗಿ ಮುಸಲ್ಮಾನ ದಂಪತಿಗಳ ಆಶ್ರಯದಲ್ಲಿ ಬೆಳೆದರು. ಕಬೀರರು ಗಳನೇ ಶತಮಾನದಲ್ಲಿ ಜನಿಸಿದ ಒಬ್ಬ ಮಹಾ ಮಹಿಮರು.

ಕಾಲ್ತುಳಿತ ಶಿಷ್ಯನಾಗಲು ಕಾರಣವಾಯ್ತು

ಬಾಲ್ಯದಲ್ಲಿಯೇ ಕಬೀರರಿಗೆ ಜ್ಞಾನ ದಾಹ ತಲೆದೋರಿತ್ತು. ಗುರುವಿನಾಗಿ ಅರಸಿದರು; ಜ್ಞಾನ ಪಿಪಾಸೆಗಾಗಿ ಅಂಡಲೆದರು. ಆದೇ ಹೇಳಿಯಲ್ಲಿಯೇ ರಾಮಾನಂದರ ತತ್ವಗಳು, ಭಕ್ತಿ, ಪಂಥ ಅವರನ್ನು ಆಕರ್ಷಿಸಿದ್ದವು. ಆದರೆ ಅಂದಿನ ಧಾರ್ಮಿಕ ವೈಷಮ್ಯ ಕಬೀರರಿಗೆ ರಾಮಾನಂದರ ಶಿಷ್ಯತ್ವವನ್ನು ಸ್ವೀಕರಿಸಲು ಪ್ರತಿಕೂಲವಾಗಿತ್ತು. ಆದಕ್ಕಾಗಿ ಕಬೀರರು ಒಂದು ಯೋಜನೆ ಮಾಡಿ ರಾಮಾನಂದರು ಇಳಿಯುವ ಮೆಟ್ಟಲ ಮೇಲೆ ಮಲಗಿದರು. ನಿತ್ಯಕ್ರಮದಂತೆ ಒಂದ ರಾಮಾನಂದರು ಮೆಟ್ಟಲುಗಳನ್ನಿಳಿಯುತ್ತಿರುವಾಗ ಮಲಗಿದ್ದ ಕಬೀರರ ವೃಷ್ಟಸ್ಥಲದ ಮೇಲೆ ಕಾಲನಿಟ್ಟರು. ತಾವು ಕಾಲನಿಟ್ಟದ್ದು ಕರಿಣ ಕಲ್ಲಿನ ಮೇಲಲ್ಲ, ಯಾವುದೋ ಪ್ರಾಣಿಯ ಮೃದು ದೇಹದ ಮೇಲೆ ಎಂದು ತಿಳಿದಾಕ್ಷಣ ಅವರ ಬಾಯಿಯಲ್ಲಿ 'ರಾಮ ರಾಮ' ಎಂಬ ಶಬ್ದ ಹೊರಟಿತು. ಈ ಬಗೆಯಾಗಿ ಹೊರಟ "ರಾಮ" ಶಬ್ದವೇ ಬಾಲಕ ಕಬೀರರಿಗೆ ಮಂತ್ರೋಪದೇಶವಾಯಿತು. ಅಂದಿನಿಂದಲೇ ಅವರು ರಾಮಾನಂದರ ಶಿಷ್ಯ ಕೋಟಿಯಲ್ಲಿ ಒಬ್ಬರಾದರು.

ದೀನರ ದೇವರು:

ಕಬೀರರು ವೃತ್ತಿಯಲ್ಲಿ ನೆಯ್ಗೆಯವರು ದಿನವೂ ನೇಯ್ದ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮಾರಿ ಬರುತ್ತಿದ್ದರು. ಬಂದ ಹಣವನ್ನು ತಮಗಾಗಿಯೂ ಇಟ್ಟುಕೊಳ್ಳದೆ ಧಾರಾಳವಾಗಿ ದೀನರಿಗೆ ಹಂಚಿ ಬಿಡುತ್ತಿದ್ದರು. ಒಂದು ಬಾರಿ ಮಾರಲಿಕ್ಕೆ ಹೋದಾಗ ಒಬ್ಬ ಬಡ ವೃದ್ಧನು ಅತಿಹೂದ ಚಳಿಯಿಂದ ಗಡಗಡನೆ ನಡುಗಿ ಮುದುರಿ ಕುಳಿತುಕೊಂಡಿದ್ದ. ಪಾಗೆಯೇ ಇದ್ದಲ್ಲಿ ಇನ್ನೊಂದೆರಡು ತಾಸಿನಲ್ಲಿ ಅವನ ಪ್ರಾಣಪಕ್ಷಿ ಹಾರಿ ಹೋಗುವುದರಲ್ಲಿತ್ತು. ಈ ದೃಶ್ಯ ಕಂಡ ಕಬೀರರ ಹೃದಯ ಕರಗಿ ನೀರಾಗಿ ಹರಿಯಿತು. ತಮ್ಮಲ್ಲಿದ್ದ ಒಂದೇ ಒಂದಾದ ಚಾದರವನ್ನು ಅವನಿಗೆ ಕೊಟ್ಟು ಉಪಚರಿಸಿದ ಕಥೆ ಸರ್ವವಿದಿತ. ಈ ಬಗೆಯಾಗಿ ಅವರು ದೀನರ ಸೇವೆಯೇ ಈಶನ ಸೇವೆ ಎಂದು ತಿಳಿಯುತ್ತಿದ್ದರು.

ಕಬೀರ ಪಂಥ

ಕಬೀರರು ಓದಿ ಬರೆದವರಲ್ಲ. ಅವರು ಅರಿತದ್ದ— ಜ್ಞಾನಾರ್ಜನೆ ಮಾಡಿದ್ದು ಲೋಕವೃಷಮಂರಿಂದ. ಹಿಂದೂ ಧರ್ಮದಲ್ಲಿರುವ ಸ್ಪೃಶ್ಯಾಸ್ಪೃಶ್ಯತೆ, ಜಾತಿ-ಭೇದಗಳ ವಿಭಾಗ, ಮುಸಲ್ಮಾನ ಧರ್ಮದಲ್ಲಿರುವ ಹಲಾಲ್ — ಹರಾಮ್— ಮುಂತಾದವುಗಳ ವಿಚಾರವನ್ನು ಸಾಕಷ್ಟು ಅರಿತು; ಬಡವ—ಬಲ್ಲಿದ; ಉಚ್ಚ—ನೀಚ; ಮಸೀದಿ—ಮಂದಿರಗಳ ವ್ಯತ್ಯಾಸವನ್ನು ಹೋಗಲಾಡಿಸಲು, ತಮ್ಮದೇ ಆದ ಒಂದು ಪಂಥವನ್ನು ನಿರ್ಮಿಸಿದರು. ಅದೇ—ಕಬೀರ ಪಂಥ.

ಅಹಿಂಸಾವಾದಿ:

ಕಬೀರರು ಅಹಿಂಸಾವಾದವನ್ನು ಕಟ್ಟುವಾಗಿ ಪಾಲಿಸಿದ್ದಾರೆ. ಹಗಲೆಲ್ಲಾ ಮಸೀದಿಯಲ್ಲಿ ದೇವರ ಧ್ಯಾನ ಮಾಡಿ ರಾತ್ರಿ ಹಸುವಿನ ಮಾಂಸದ ಸಾರನೆಯೊಂದಿಗೆ "ರೋಜಾ" ವ್ರತ ಮಾಡತಕ್ಕ ಮುಸಲ್ಮಾನರನ್ನು ಕುರಿತು ಕಬೀರರು ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟ ಸಕಲ ಜೀವರಾಶಿಗಳಲ್ಲೊಂದಾದ ಹಸುವನ್ನು ಕಡಿದು ಕೊಚ್ಚಿತಿಂದರೆ ಸೃಷ್ಟಿಕರ್ತನಾದ ದೇವರು ಹೇಗೆ ತಾನೇ ಪ್ರಸನ್ನನಾದಾನು? ಎಂದು ಕೇಳಿದ್ದಾರೆ.

ಎಲೆತಿಂದು ಕೀರು ಕುಡಿದು ಜೀವಿಸಿದ್ದ ಅಪರಾಧಕ್ಕಾಗಿ ಕುರಿಯು ತನ್ನ ಚರ್ಮವನ್ನು ಸುಲಿಸಿಕೊಳ್ಳಬೇಕಾದರೆ ಆ ಕುರಿಯನ್ನೇ ತಿನ್ನುವ ಮಾನವನ ಅಪರಾಧಕ್ಕೆ ಯಾವ ಶಿಕ್ಷೆ ಕಾದಿದೆಯೋ? ಎಂದು ಕಬೀರರು ತಿಳಿಸುತ್ತಿದ್ದಾರೆ.

ಪರ್ವತ ಪೂಜೆ:

ಮೂರ್ತಿ ಪೂಜೆ, ಸ್ನಾನ, ತಪ, ಧ್ಯಾನ, ಯೋಗಗಳಲ್ಲಿ ನಂಬಿಕೆ ಇಲ್ಲದ ಕಬೀರರು ಕೃಷ್ಣನ ಮೂರ್ತಿಯನ್ನು ಪೂಜಿಸುವದನ್ನು ನೋಡಿ ವ್ಯಂಗ್ಯವಾಗಿ ಕಲ್ಲಿಗಿಂತಲೂ ದೊಡ್ಡದಾದ ಪರ್ವತವನ್ನೇ ಪೂಜಿಸಿದರೆ ದೇವರು ಏಕೆ ಸಿಗಲಾರದೆಂದು ಕೇಳಿದ್ದಾರೆ.

ದಿಪಕ್ಕೆ ಮೂರು ಹೊತ್ತು ಸ್ನಾನಾದಿಗಳನ್ನು ಮಾಡಿದ್ದರಿಂದಲೇ ದೇವರು ಸಿಕ್ಕುವದಾದರೆ ಯಾವಾಗಲೂ ನೀರಿನಲ್ಲಿಯೇ ವಾಸಿಸುವ ಮೀನು ಮೊಸಳೆಗಳಿಗೆ ಮೊದಲು ದೇವರು ಸಿಕ್ಕಬೇಕಲ್ಲವೇ?

ಮುಂಡನ ಮಾಡಿಸಿ, ದಿಗಂಬರರಾಗಿ ಸಂಸಾರ ತೊರೆದು, ಪರ್ಣ ಆಹಾರ ಮಾಡಿದ ಮಾತ್ರಕ್ಕೆ ಮೋಕ್ಷ ಸಿಗುವದಾದರೆ ಬಾರಿ ಬಾರಿಗೂ ಕೂದಲು ಕತ್ತರಿಸಲ್ಪಟ್ಟು ಎಲೆ ಹುಲ್ಲುಗಳಿಂದಲೇ ಜೀವಿಸುವ ಆಡು ಕುರಿಗಳು ಮೋಕ್ಷ ಪಡೆಯಲು ಅರ್ಹವಾದುದಾಗಿಲ್ಲವೇ? ಎಂದು ಕಬೀರರು ಪ್ರಶ್ನಿಸಿದ್ದಾರೆ.

ಹೀಗೆ ಸಮಾಜದ ಹಲವಾರು ಮೂಢ ನಂಬಿಕೆಗಳನ್ನು ಕಂಡು, ರಹಸ್ಯಮಯ ಲಿಗೆಳೆದು ಕಬೀರರು ಅದಕ್ಕೆ ಧೂತಗನ್ನಡಿ ಹಿಡಿದು ಜನ ಸಾಮಾನ್ಯರಿಗೆ ಅರಿವಾಗುವಂತೆ ಮಾಡಿ ಮುಕ್ತಿ ಮಾರ್ಗದರ್ಶಕರಾಗಿದ್ದಾರೆ.

ಬೀಜಕಗಳು

ಕನ್ನಡ ಸಾರಸ್ವತ ಲೋಕದಲ್ಲಿ ಸರ್ವಜ್ಞನ "ವಚನ"ಗಳು ಅತಿ ಮಹತ್ವ ಪಡೆದಂತೆ ಕಬೀರರ "ಬೀಜಕ"ಗಳು ಸರ್ವಮಾನ್ಯವಾಗಿವೆ. ಕಬೀರರು ತಮ್ಮ ಬೀಜಕಗಳನ್ನು ಸರಳವಾಗಿ, ಸ್ವಾಭಾವಿಕವಾದ ಉಪಮಾನ, ಉಪಮೆಯುಳಿಂದ ಹಳ್ಳಿಯ ಜನರಿಗೆ ಜನ ಸಾಮಾನ್ಯರ ಭಾಷೆಯಲ್ಲಿ ಅರುಹಿದರು. ಕಬೀರರಿಂತ್ತ ಉಕ್ತಿಗಳೇ ಉಪದೇಶವಾಗಿ ಪಂಥಾಮಸಿ ಭಕ್ತರಿಂದ ಮಹಾ ಗ್ರಂಥಗಳಾದವು. ಈ ಗ್ರಂಥಗಳೇ "ಬೀಜಕ"ಗಳೆಂದು ಕರೆಯಲ್ಪಟ್ಟವು. ಈ ಬೀಜಕಗಳು ರಮೈನ್, ಸಬದ್, ಮತ್ತು ಸಾಖಿಗಳೆಂದು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ.

ಒಂದು ವೇಳೆ ಕಬೀರರು ಜನ ಸಾಮಾನ್ಯರ ಭಾಷೆಯಲ್ಲಿ ಅರುಹದೇ ಪಂಶುದ್ಧ ಭಾಷೆಯ ಕಡೆ ಗಮನಕೊಟ್ಟಿದ್ದರೆ ಸಂಸ್ಕೃತ ಶಾಸ್ತ್ರ ಸದಂತೆ ಇದೂ ಕೇವಲ ಕಬ್ಬಿಣದ ಕಡಲೆಯಾಗಿ ಪಂಡಿತೋತ್ತಮರ ಸ್ವತ್ತಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಕಬೀರರ ಉಕ್ತಿಗಳಲ್ಲಿ ಕಾವ್ಯಕ್ಕೆ ಸಹಜವಾದ ಅಲಂಕಾರಗಳು ದೊರಯುತ್ತವೆ. ಉಪಮಾನ, ಉತ್ಪ್ರೇಕ್ಷೆಯಾದಿಗಳು ಅವರ ಪ್ರತಿಯೊಂದು ಬೀಜಕಗಳಲ್ಲಿಯೂ ಕಾಣಬಹುದು.

ಮನೆಗಹರಡಲ್ಲಿ ಮುಕ್ತಿ.....

ಕಬೀರರು ತಮ್ಮ ಪೂರ್ವ ಇಪ್ಪತ್ತನೆಯ

ರಾಷ್ಟ್ರಕ್ಕೆ ಅನ್ನದಾತನಾದ ಅನ ಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿದ

ದೇಶವಿಖ್ಯಾತವಾದ

ಜೀಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ವಮುಸ್ಸಿನಲ್ಲಿ ಐಹಿಕ ಜೀವನದಿಂದ ಮುಕ್ತರಾದರು.

ಕಾಶಿಯಲ್ಲಿ ಕೈವಲ್ಯರಾದರೆ ಹೇಗೆ ಮುಕ್ತಿಯು ಸುಲಭ ಸಾಧ್ಯವೋ ಅಂತೆಯೇ ಮುಗಿಪರದಲ್ಲಿ ವ್ಯತಿಯನ್ನೈದಿದರೆ ನರಕವಾಸವು ನಿಶ್ಚಯವೆಂದು ಗ್ರಹಿಕೆಯಿದೆ.

ಕಬೀರರು ಹರಿಜನಗಳಲ್ಲಿ ನಂಬಿಕೆ ಇಟ್ಟಿದವರಾದ್ದರಿಂದ ಮುಗಪರಕ್ಕೆ ಹೋಗಿ ಅಲ್ಲಿ ತಮ್ಮ ಜೀವನ ಜೂತ್ರೆಯನ್ನು ಮುಗಿಸಿದರು.

ಮುಗಹರದಲ್ಲಿ ಬಾಳುವುದೇಗಿದರೆ ನರಕವಾಸವೆಂದು ಜೇಳುವ ಜನಗಳಿಗೆ ಗಲಿ, ನಾವಾಗಲಿ, ಸಾಯುವವರೆಗೂ ಸ್ವರ್ಗ-ನರಕಗಳ ವಿಷಯವಾಗಿ ಏನನ್ನೂ ಖಾತ್ರಿಯಾಗಿ ನುಡಿಯಲಾರೆವು. ಒಂದು-ಮೊತ್ತ ನಾವು ನೆನಪಿಡಬೇಕು ಇಷ್ಟೆ ಸಲ್ಲ ನವರು ಅಲ್ಲಿಯೂ ಸಲ್ಲುತ್ತಾರೆ."

ಹಿಂದೂ—ಮುಸ್ಲಿಂ ಐಕ್ಯದ ಅವತಾರವಾಗಿ, ಮಾನವ ಸೇವೆಯ ಮಹಾಪಾರ ಹೇಳಿ ಹೋದ ಕಬೀರರು ಇಲ್ಲಿ ಸಲ್ಲುವವರಾಗಿದ್ದಾರೆ. ಭಿನ್ನ ಭಿನ್ನ ಧರ್ಮೀಯರೂ ಒಟ್ಟಾಗಿ ಬಾಳುವರೆಂಬ ಭಾರತೀಯ ಸಂದೇಶರಂಯರೆಯನ್ನು ದೃಢಪಡಿಸಿದವರಲ್ಲೊಬ್ಬರಾಗಿ ಬಾಳಿದ ಕಬೀರರು ನಮಗೆ ಅನುಂದೀ. ಇಂಥವರು, 'ಅಲ್ಲಿ' ಸಲ್ಲದಿರುವರೆ?

ಗಲ್ಲುವ ಕೋಳಿ ಯಾರದ್ದು?

(ನಂತರದ ಮುಂದಿನದು)

ಗ್ರೈಸ್ ಪಕ್ಷದಲ್ಲಿ ಒಡೆತಕ್ಕೆ ಕಾರಣವಾಗಿ ಮಧ್ಯ ಪ್ರದೇಶದಂತೆ ಇಲ್ಲಿಯೂ ಪಕ್ಷಾಂತರ ಪ್ರಾಬಲ್ಯ ಅಂಥಾವಾದೀತೆ?"

'ಅಗ್ಲಿ, ಊರು ಬೇಡಂಕರೆ? ನಮಗೂ ಒಂದೇ ಕಾರ್ಯಕ್ರಮ ನೋಡಿ ನೋಡಿ ಸುಸ್ತಾಗಿದೆ. ಒಂದು ಬದಲು ಅಂಕ ವಾದರೂ ನಡಿಯಲಿ. ಹೇಗಿರುತ್ತೋ ನೋಡೋಣ; ಅಗಡೆ?"

"ಅಲ್ಲಿ, ಫೀಲೂ ಹೀಗನ್ನೋದು?"

'ಅಲ್ವೆ, ನ ನನ್ನೋದನ್ನು ಹೂರು ಕೇಳ್ತಾರೆ?'

'ನಾನು ಕೇಳೋದಿಲ್ವೆ?'

'ಹ್ಞೂಂ....ಒಂದೊಂಡ್ಯಲ....'

ನೋಡ್ರಿ, ಯಾವಾಗ್ಲೂ ಕೇಳೋಲ್ವೆ?"

"ಹ್ಞೂ, ದೇವ್ರುಶ್ರವಣೇಂದ್ರಿಯ ಸರೀ ಇಟ್ಟಿದೀಂ. ಕೇಳ್ತಿ. ಆದ್ರೆ ಅನ್ತಂತ ನಡೆದದ್ದು?"

"ಅಲ್ರಿ, ಎಲ್ಲ ಫೀವ್ರು ಹೇಳಿದಂತೆಯೇ ನಡೆಯೋದಾದ್ರೆ, ನಾವು..."

'ಅದೇ ಅಂದದ್ದು. ನಾನು—ಫೀನು ಇಬ್ರು ಇರುವಾಗಲೇ ಒಮ್ಮತದ ನಿರ್ಧಾರ ಸಾಧ್ಯವಾಗದಾಗ, ನೂರು ಇಪ್ಪತ್ತು ಜನ ಏನು ತೀರ್ಮಾನ ಮಾಡ್ತಾರೆ?"

'ಅಂದ್ರೆ, ಪಕ್ಷದಲ್ಲಿ ಒಕ್ಕಟ್ಟಲ್ಲ!'

'ಇದೆ ನಮ್ಮ ಯಾಗೇನೇ. ಮಾನಸಿಕವಾಗಿ ಒಂದಾಗಿಲ್ಲ. ಒಂದು ಗಂಡಿಗೆ ಕಟ್ಟಿದ್ದರಿಂದ ಬೇಕಾಗಿಯೋ ಬೇಡವಾಗಿಯೋ ಎಳೆಯುತ್ತಿದ್ದೆ. ನೋಡದ ನೋಲೆಯೇ ಕಣ್ಣು....'

'ನಿನ್ನ ನನ್ನನ್ನೇ....'

'ಅದನ್ನೂ ಹೇಳಬೇಕೆ?'

ಕೊಡಾಜೆಯಲ್ಲಿ ಸ್ನಾತಕೋತ್ತರ ಕೇಂದ್ರಕ್ಕೆ ಶಂಕುಸ್ಥಾಪನೆ

ಮಂಗಳೂರಿನಿಂದ ಸದಿಮೂರು ಮೈಲು ದೂರದ ಕೊಡಾಜೆಯಲ್ಲಿ ಶಕ್ತಿಶ್ಚಿತುವ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಶಿಲಾನ್ಯಾಸವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಕಳೆದ ತಿ 23ರಂದು ನೆರವೇರಿಸಿದರು.

ಪ್ರಾರಂಭದಲ್ಲಿ ವಿಧಾನ ಪರಿಷತ್ತಿನ ಸದಸ್ಯರೂ ಯುವಜನಸಂಘದ ಸಂಯೋಜಕರೂ ಶ್ರೀ ಕೆ. ಎಸ್. ಎನ್. ಅಡಿಗರು ಸ್ವಾಗತಿಸುತ್ತಾ ಇದೊಂದು ಮಂಗಳೂರಿನ ಚರಿತ್ರೆಯಲ್ಲೊಂದು ಸಾರ್ಥಕ್ಯದ ದಿನವೆಂದರು. ಡಾ ಶ್ರೀಮಾಲಿಯವರ ದಯೆಯಿಂದ ಸಾಧ್ಯವಾದ್ದರಿಂದ ಸರಕಾರದ ಬೆಂಬಲವೇ ಈ ಕೇಂದ್ರದ ಅಸ್ತಿವಾರವೆಂದರು.

ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಎಲ್. ಶ್ರೀಮಾಲಿ, ರಿಜಿಸ್ಟ್ರಾರ್ ಶ್ರೀ ಕೆ. ಎಸ್. ರಾಮಚಂದ್ರನ್ ಮತ್ತು ನಗರ ಸಭಾಧ್ಯಕ್ಷ ಶ್ರೀ ಕೆ. ವಿಶ್ವನಾಥ ಕಾಮತ್, ಹಾಗೂ ಶ್ರೀ ಕೆ. ಎಸ್. ಎನ್. ಅಡಿಗರು ಮಂತ್ರಿಗಳನ್ನು ಸ್ವಾಗತಿಸಿದರು. ಅಚಲಕ ಶ್ರೀ ಸೀತಾರಾಮ ರಾಯರ ನಿರ್ವಹಣೆಯ ಶಿಷ್ಟಾಚಾರ ಹಾಗೂ ಕೊಂಬುವಾದ್ಯಗಳೊಂದಿಗೆ ಶಿಲಾನ್ಯಾಸ ಕಾರ್ಯವನ್ನು ಶ್ರೀ ಎಸ್. ನಿಜಲಿಂಗಪ್ಪನವರು ನಡೆಸಿಕೊಟ್ಟರು.

ನೂತನ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಇಂದು ರಾಜ್ಯದ ಎಲ್ಲ ರಂಗಗಳಲ್ಲಿ ಸ್ವಾವಲಂಬನೆ ನೆಲೆಸಬೇಕಾಗಿದೆ. ವಿದೇಶೀಯರ ಕೈ ಕಾಯುವ ಬದಲು ನಮ್ಮವರಾಗಬಾರದು. ಹಿಂದೂ ದೇಶವೇ ನಮಗೆ ಆಧಾರವೆಂದು ಅಭಿಮಾನವನ್ನು ನಮ್ಮ ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ವಿದ್ಯಾರ್ಥಿಯನ್ನು ರಾಜ್ಯಯೋಗ್ಯನನ್ನಾಗಿಯೂ, ಯೋಗ್ಯ ನಾಗರಿಕನನ್ನಾಗಿಯೂ ನಿರ್ಮಿಸುವ ಶಿಕ್ಷಣಕ್ರಮ ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯವಿದೆ ಎಂದು ಅವರು ಹೇಳಿದರು. ಸ್ಥಳೀಯ ಜನರ ಉತ್ಸಾಹ ಬೆಂಬಲ, ಸಹಕಾರಗಳಿಂದ ಇದೇ ಕೇಂದ್ರ ಮುಂದೆ ವಿಶ್ವ ವಿದ್ಯಾನಿಲಯವೂ ಆಗಬಹುದು ಎಂದು ಅವರು ನುಡಿದರು.

ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಕೆ. ಎಲ್. ಶ್ರೀಮಾಲಿಯವರು ಮಾತನಾಡುತ್ತಾ ಮಂಗಳೂರು ಜನತೆಗೆ ಇಂದು ಮಗು ಹುಟ್ಟಿದೆ ಸಂಭ್ರಮ. ಈ ಮಗು ಬೆಳೆದು ದೊಡ್ಡವಾಗಾಗ ಮೈಸೂರು ವಿಶ್ವವಿದ್ಯಾಲಯವನ್ನು ದ. ಕ. ಜಿಲ್ಲೆಗೆ ಕಾಣಿಸುವುದರ ಮೂಲಕ ಕನ್ಯಾದಾನವನ್ನೇ ಮಾಡಬಹುದೆಂದರು. ಅವರು ಮುಂದುವರಿಯುತ್ತಾ ಸಮಾಜದಲ್ಲಿ ಅವಶ್ಯಕತೆಗಳನ್ನು ಸಂಧಿಸಲು ಶಿಕ್ಷಣದಲ್ಲಿ ಸುಧಾರಣೆ ಆಗಬೇಕು. ಈ ಕೇಂದ್ರದಲ್ಲಿ ನಡೆಯಲಿರುವ ಅಧ್ಯಯನಗಳು ಬರೀ ಜಿಲ್ಲಾ ಅವಶ್ಯಕತೆಗಳನ್ನು ಮಾತ್ರ ಪೂರೈಸಿ, ರಾಜ್ಯ ಹಾಗೂ ಸಮಾಜದ ಅವಶ್ಯಕತೆಗಳನ್ನು ಸಂಧಿಸುವುವು. ಸ್ವಾವಲಂಬನೆಯ ನಿಟ್ಟಿನಿಂದ ಕಾರ್ಯವಾಗಬೇಕೆಂದು ಬಯಸುವೆ ಈ ಕಾಲೇಜನ್ನು ಯಾರೂ ಖಾಸಗೀಕರಿಸುವುದಿಲ್ಲವೆಂದರು.

ಪ್ರಾರಂಭದಲ್ಲಿ ಶ್ರೀ ಟಿ. ಯು. ಸುಬ್ಬರಾಯರಿಂದ ಸ್ವಾಗತಿಸಲ್ಪಟ್ಟು. ಕೊನೆಯಲ್ಲಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀ ಕೆ. ರಾಮಚಂದ್ರನ್ ವಂದನಾರ್ಪಣೆಗೈದರು.

ವಿದಾಯದ ಸತ್ಕಾರ

ಉಡುಪಿ, ಮಾರ್ಚ್-೨೨, ಉಡುಪಿ ಮೋಡರ್ನ್ ಜೂನಿಯರ್ ಬೇಸಿಕ್ ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ೨ನೇ ತರಗತಿಯ ಮಕ್ಕಳನ್ನು ಬೀಳ್ಕೊಡುವ ಸಮಾರಂಭವು ಶ್ರೀ ಎಸ್. ಎಲ್. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ವ್ಯವಸ್ಥಾಪಕ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತಿಸಿದರು. ವಿದ್ಯಾರ್ಥಿಗಳಲ್ಲಿ ಸೀತಾ ಕುಮಾರಿ, ರಮೇಶ, ಸೂರ್ಯ ಪ್ರಕಾಶ ಮತ್ತು ಕುಮಾರಿ ಪದ್ಮಾ ಹಾಗೂ ಉಪಾಧ್ಯಾಯರುಗಳು ತಮ್ಮ ಶಾಲಾ ಜೀವನದ ಕುರಿತ ಮಾತನಾಡಿದರು. ಶಾಲಾ ಅಧ್ಯಾಪಕ ಶ್ರೀ ಕೆ. ಕೃಷ್ಣಮೂರ್ತಿ ವಂದನಾರ್ಪಣೆ ಮಾಡಿದರು. ಶ್ರೀ ಎ. ಟಿ. ಅಧ್ಯಯನದ, ೨ನೇ ತರಗತಿಯ ಮಕ್ಕಳು ಶಾಲೆಗೆ ಕೊಟ್ಟ ಕೊಡುಗೆಯನ್ನು ಶಾಲಾ ವ್ಯವಸ್ಥಾಪಕರಿಗೆ ಹಸ್ತಾಂತರಿಸಿ ಕೆಲವು ಮಾತುಗಳನ್ನಾಡಿದರು. ಲಗುಸಾರ, ಫೊಟೋ ಕಾರ್ಯಕ್ರಮಗಳಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಜಿ. ಎಲ್. ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಕೃತಿ ಪರಿಚಯ

(ನಿನ್ನೆ ಮುಂದಿನದು)

ಮೂಲ್ಕಿ ಕಾಣಿಕೆಯಾಗಿರುವ ಶ್ರೀ ನಿಜಲಿಂಗಪ್ಪನವರ ವ್ಯಕ್ತಿತ್ವ—ಗುಣ—ಸ್ವಭಾವ—ದೇಶ ಸೇವಾ ದೀಕ್ಷೆ— ಕಾರ್ಯ ಸಾಧನೆ ಎಲ್ಲವುಗಳ ವಿವರಣೆ ರಾಜಕೀಯ ರಂಗಕ್ಕೇ ಬಹುವಾಗಿ ಸಂಬಂಧಿಸಿದರೂ, ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಬಾಲಕ ನಿಜಲಿಂಗಪ್ಪನ ಪರದ್ದು ಮಾನವೀಯತೆಯ ಕಥೆಯೇ ನಿಜ. ಕೆ.ರಾಬ್ಯಾಂಕಿಳ ಈ ಪ್ರಕಟಣೆ ಸಕಾಲಿಕ ಹಾಗೂ ಸೂಕ್ತ ಉಪಯುಕ್ತ.

—ಗೋರಾ

"ಹ್ಞೂಂ; ಈ ಮಟ್ಟಿಗಾದ್ದೂ ಒಮ್ಮ ನಸ್ಸು ಇದೆ ತಾವೇ? ಸದ್ದು ಅದೇ ಪಣ್ಣ.'

"ಪಡೆದಪ್ಪಲ್ಲದೆ ಬರ್ಕ್ಯದೇ ಅಂತೊಬ್ಬ ಕವಿ ಹೇಳಿದ್ದಾನೆ...."

'ಕವಿ ಕೇಳ್ತಾನೆ ನೀವು ಉತ್ತರಿಸುತ್ತೀರಿ....ಅಬ್ಬಬ್ಬ...'

'ಹೇಗೆ...?'

'ಹ್ಞೂಂ...'

—ಗೋರಾ.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ-ಸತ್ಕಾರಕ್ಕೆ ಸಿದ್ಧವಿರುವ
ಹೊಟೆಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2
ಇಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವು ಊಟ, ಉಪಾಹಾರದ ವ್ಯವಸ್ಥೆಯಿದೆ;
ಹಾಗೂ ಎಲ್ಲಾ ಪರದ ವಾಗಿದೆ.
HOTEL SATKAR
Boarding & Lodging
Near Corporation Office, 9, Mission Road
Bangalore-2

ಕವಿಯ ಕಣಿಗೆ

ಣಿ

ಹೂ ಚೇನ ಸುರಿಯಲುರಿ
ಹೂ ಮಳೆಯು ಕರೆಯ ಪೆರೆ
ಕನ್ನಡದ ಪಂಪರವು ಪಸರಿಸುತಲಿರೆ.
ಸೌಂದರ್ಯವದು ಘನಿಸೆ
ಮಿಂಚಿಹೊಲು ಸಂಜಲಿಸೆ
ಕನ್ನಡಮ್ಮನ ಕಂದ ಲಾಸ್ಯ ನಿಲಿಸೆ.
ಚಂದ್ರಿಕೆಯು ಚೆಲುವಿನಲಿ
ಮಳೆಬಿಲ್ಲು ತೋರಲಲಿ
ಕನ್ನಡದ ಕವನವದು ಬಾಂದಳದಲಿ
ಅಲೆಗೈದು ನೆಲೆ ಜಾಚಿ
ಸಂತಸದ ನೆಲೆ ತೋರ್ಚಿ
ಸೀಪ್‌ನಿಯ ಸಿಂಚಿಸುತ ಸಂಚರಿಸಲಿ
ಹಸಿರು ಹಚ್ಚನೆ ಅರಳಿ
ಬಾಳ್ತೆನೆಯ ಬಾಲಿನಲಿ
ಕಳಕಳಿಸಿ ಸುಳಿ ಸುಳಿಯು ಸುವ್ವಳಿಯಲಿ
ನಿರುನಗೆಯು ಬೀರುತ್ತ
ಸಿರಿಮೊಗವ ತೋರುತ್ತ
ಕುಡಿನೋಟ ಹರಿಸುವಳು ನಾಡಿನತ್ತ

—ಪಿ. ಕೆ. ಪ್ರಕಾಶರಾವ್.

ಸಂಗ್ರಾಹ್ಯ ಸಂಕಲನಗಳು

#

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಗುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಳಗಾಗಿ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ಮೂಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ

ವಾರ್ಷಿಕ ಚಂದಾ ರೂ. ೧೦

READ &
ADVERTISE IN
NAVAYUGA WEEKLY

ಮುಂಬಯಿಯಲ್ಲಿ

ಶಿವಸೇನೆಯು ಬಲವಾಯಿತು!

ಮುಂಬಯಿಯಲ್ಲಿ ಕಾಂಗ್ರೆಸ್‌ನ ಪ್ರತಿಷ್ಠೆ ಕಳೆದ ವರ್ಷದ ಸಾರ್ವತ್ರಿಕ ಚುನಾವಣೆಯ ವೇಳೆಯೇ ಕುಂದುತ್ತ ಬಂದಿರುವುದು, ಇದೀಗ ನಡೆದ ಕಾರ್ಪೊರೇಶನ್ ಚುನಾವಣೆಗಳಲ್ಲಿ ಮತ್ತಷ್ಟು ದೃಢಪಟ್ಟಿದೆ. ಇದಕ್ಕೆ ಮುಖ್ಯ ಕಾರಣ ವಿರೋಧಿ ಪಕ್ಷಗಳ ಬಲದಲ್ಲಿ ಸಂವರ್ಧನೆಯಾಗಿರುವುದಲ್ಲ; ಸಂಕುಚಿತ ಮನೋಭಾವನೆಯ ಶಿವಸೇನೆಯ ಹಾಂಡತನ ವೃದ್ಧಿ. ಕಾರ್ಪೊರೇಶನ್ನಿನ ೧೪೦ ಸ್ಥಾನಗಳಲ್ಲಿ ಕಾಂಗ್ರೆಸ್ಸೂ ಅದರ ಬೆಂಬಲಿಗರೂ ಒಟ್ಟು ೨೪ ಸ್ಥಾನಗಳನ್ನು ಮಾತ್ರ ಪಡೆದಿದ್ದರೆ, ಶಿವಸೇನೆಯೂ ಅದರ ಮಿತ್ರ ಪಕ್ಷವೂ ೫೧ ಸ್ಥಾನಗಳನ್ನು ಗಿಟ್ಟಿಸಿಕೊಂಡಿವೆ. ಸಂಪೂರ್ಣ ಮಹಾರಾಷ್ಟ್ರ ಸಮಿತಿಯು ಸಂಪೂರ್ಣ ಸೋಲನ್ನೇ ಅನುಭವಿಸಿದೆ. ಇದರ ಸದಸ್ಯರಾದ ಎಡ ಬಲ ಕಮ್ಯೂನಿಸ್ಟರು ಕೇವಲ ಮೂರು ಸ್ಥಾನಗಳನ್ನು ಮಾತ್ರ ಪಡೆಯಲು ಶಕ್ತರಾದರು.

ಇದು ವರೆಗೆ ಮುಂಬಯಿ ಕಾರ್ಪೊರೇಶನ್ ಕಾಂಗ್ರೆಸ್ಸಿನ ಭದ್ರ ಮುಷ್ಟಿಯೊಳಗೇನೇ ಇತ್ತು. ಇದೀಗ ಮೊತ್ತ ಮೊದಲ ಬಾರಿಗೆ ಬ್ರಹನ್ಮುಂಬಯಿ 'ಪರ ಪ್ರಾಂತ'ಗತವಾಗುವ ಗಳಿಗೆ ಬಂದಿದೆ. ಕಾಂಗ್ರೆಸ್ಸು ಸ್ವತಂತ್ರರ ಸಹಾಯದಿಂದ ಅಧಿಕಾರ ಗಳಿಸಬಹುದು. ಆದರೆ, ಅಧಿಕಾರದಲ್ಲಿ ಯಾರೇ ಉಳಿಯಲಿ, ಅದು ಮುಳ್ಳಿನ ಕಿರೀಟವೆಂಬುದು ಸ್ಪಷ್ಟವೇಹೆ. ಪಕ್ಷಾಂತರದ ಪಿಡುಗು ಇಲ್ಲೂ ಸೋಂಕದಿರುವುದೆಂದು ನಂಬಲಾಗದು.

ಶಿವಸೇನೆಯ ಪ್ರಾಬಲ್ಯವು ಮುಂಬಯಿಯಲ್ಲಿ ಹೆಚ್ಚಿದಂತೆಯೇ ಅದರ ಬೇರು ಮಹಾರಾಷ್ಟ್ರದಲ್ಲಿ ಬಲವಾಗುತ್ತಲೇ ಹೋಗುತ್ತದೆ. ಡಿ ಎಂ ಕೆಯ ಆರಂಭ ಮತ್ತು ಅದು ಬೆಳೆದು ಬೃಹದ್ವೃಕ್ಷವಾದ ಬಗೆಯನ್ನು ಬಲ್ಲವರು ಶಿವಸೇನೆಯ ಬೆಳವಣಿಗೆಯನ್ನು ಊಹಿಸಬಲ್ಲರು. ತಮಿಳ ಭಾಷೆಯನ್ನು ಎತ್ತಿ ಹಿಡಿಯುವುದಕ್ಕಿಂತಲೂ ಭಂಡತ್ವ ಹಿಂದೀ ಭಾಷೆಯನ್ನು, ಭಾಷೀಯರನ್ನು ಮೆಟ್ಟುವುದರಲ್ಲಿಯೇ ಫಿರಂತಾಗಿ ಕೂಬ್ಬಿ ಫೀತ ಡಿ ಎಂ ಕೆಯಂತೆಯೇ 'ಮಹಾರಾಷ್ಟ್ರೀಯ'ರೆಂಬ ಸಂಕುಚಿತ ಮನೋಭಾವನೆಯನ್ನು ಕೆರಳಿಸಿ, ಶಿವಸೇನೆಯು ತ್ರಿವಿಕ್ರಮಾವತಾರವನ್ನು ತಾಳಿತ್ತದೆ. ಡಿ ಎಂ ಕೆ ಹಾವಿಗೆ ಹಾಲೆರೆದವರು ಕಾಮರಾಜರು ರಾಜಾಜಿಯವರಾದರೆ, ಶಿವಸೇನಾ ಸರ್ಪವನ್ನು ಸಾಕುವವರು ವಿ ಪಿ. ನಾಯಕರು ಮತ್ತು ಎಸ್. ಕೆ. ಪಾಟೀಲರು. ಇಷ್ಟು ಗಮನ ಹಂಸದೆ ಹೋದರೆ, ಕಾಂಗ್ರೆಸ್ಸಿನ ಗೋರಿಯನ್ನು ಕಾಂಗ್ರೆಸಿಗರೇ ಕಟ್ಟುವಲ್ಲಿ ಸಶಕ್ತರಾಗುತ್ತಾರೆ.

ಇದರ ಜತೆಗೆ ಇನ್ನೂ ಒಂದು ಭಯ ರಾಷ್ಟ್ರೀಯವನ್ನು ಕಾಡುತ್ತಿದೆ. ಡಿ ಎಂ ಕೆ, ಶಿವಸೇನೆಯಂತಹ ಪ್ರಾದೇಶಿಕ 'ಪಕ್ಷ'ಗಳು ಪ್ರಾದೇಶಿಕ ಭಾವನೆಯಷ್ಟೇ ಉದ್ರೇಕಿಸುತ್ತ ನಡೆದರೆ, ರಾಷ್ಟ್ರೀಯ ಏಕ್ಯ ಧೂಳಿ ಧೂಸರವಾಗುವುದಿಲ್ಲವೆ? ಅದುದರಿಂದ, ಕೇಂದ್ರದ ಆಳುವರು ಶಿಥಿಲವಾಗುತ್ತಿರುವ ರಾಷ್ಟ್ರೀಯ ಏಕ್ಯವನ್ನು ಬಲಪಡಿಸಲು ಉಗ್ರ ಸೂತ್ರ ಕಾರ್ಯಕ್ರಮ ಕೈಕೊಳ್ಳುವತ್ತ ಲಕ್ಷ್ಯಹರಿಸಬೇಕು; ಬರಿಯ ಖಂಡನೆಯ ಮಾತುಗಳಿಂದಲೇ ದುರ್ಬಲ ಧೀತಿಯಿಂದ ಕಾರ್ಯ ಸಾಧನೆಯಾಗುವುದಿಲ್ಲ.

ಎಲ್ಲೆಲ್ಲಿ ಏನೇನು?

ಉಪ್ಪಿನಂಗಡಿಯಲ್ಲೊಂದು ತೈತರ ಮೇಳ

ಹಿಂದೆ ಭಟ್ಟದ ಮೇಲಿಂದ ಬೆಳೆದ ಮಾಲುಗಳ ಪೈಕಿ ಕಂದು ಮುಖ್ಯವಾಗಿ ಭತ್ತವನ್ನು ಭಟ್ಟದ ಕೆಳಗೆ ತಂದು ಅದಕ್ಕೆ ಬದಲಾಗಿ ಅಲ್ಲಿಂದ ಉಪ್ಪನ್ನು ಪಡೆಯಲಾಗುತ್ತಿತ್ತಂತೆ. ಇದು ಮಂಗಳೂರಿನಿಂದ ೩೨ ಮೈಲು ದೂರದಲ್ಲಿರುವ ಉಪ್ಪಿನಂಗಡಿ ಗ್ರಾಮದಲ್ಲಿ ನಡೆಯುತ್ತಿದ್ದ ವ್ಯಾಪಾರ ವಿಧಾನವು. ಇದು ಹಿಂದಿನ ಮಾತಾಯಿತು. ಆದರೆ ಮೊನ್ನೆ ಅಲ್ಲಿನ ಜನ ಕೃಷಿಕರಿಂದ ವಿಜಯ ವಿಧಾನವು. ಅಡಿಕೆ ಫಲಕ್ಕೆ ತಗೆಯಲು ಯೋಜ ಭತ್ತಕ್ಕೆ ಎತ್ತು ಉಪ್ಪು(ಗೊಬ್ಬರ)ಕಾಕಬೇಕೆಂಬ ಚರ್ಚೆ ಭತ್ತ, ಗಿಟ್ಟಿನ ವ್ಯಾಪಾರ ವಿಧಾನವಲ್ಲ.

ಉಪ್ಪಿನಂಗಡಿಯ ನಟ್ಟಿ ಬೈಲು ಪ್ರದೇಶದಲ್ಲಿ ನಡೆದ ಈ ರೈತರ ಕೂಟಕ್ಕೆ ಮಂಗಳೂರಿನ ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರ್‌ರವರಿಂದ ಮಾರ್ಗದರ್ಶನ. ಪೊಂಬೆ ನಾರಾಯಣ ಭಟ್ಟರು ಬ್ಲಾಕ್ ಮಟ್ಟದಲ್ಲಿ ನಡೆದ ಬೆಳೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ರೈತ ಎತ್ತುವಿನಂತು ಹೇಳಿದರು. ಸ್ವಾಮಿ ಹಿಂದು ಎಕರೆಯಲ್ಲಿ ೩ ಅಡಿ ೪ ಭತ್ತವನ್ನು ಸುಮಾರು 101 ಮೂಡಿ ತೆಗೆದಿದ್ದೇನೆ. ಬೇರೆಯವರೂ ಸುಖವಾಗಿ ಮಾಡಲಿಹೆಬೆ! ರಜಭಾಸ್ ಎಂಬ ಪ್ರಕಾರ ಕೊಡಲೇ ಒಬ್ಬರಿಂದ ಉದ್ಧಾರ ಒಂದು ಎಕರೆಯಲ್ಲಿ ತಾನೇ ಮಾಡಿದ್ದು ಮಾರಾಯ? ಒಂದ್ಹತ್ತಿಕರೆಯಲ್ಲಾದರೂ ಬೆಳೆ ತೆಗೆದಿದ್ದರೆ ವಿ. ಆರ್. ೩ನಂಬರ ಹುದು. ಒಂದೆಕರೆಯೊಡದೇನು, ನೂರು ಎಕ್ರೆ ಆದ್ರೇನು? ಕಷ್ಟ ಪಟ್ಟು ಮಾಡಿದರೆ ಹೊಸ ಭತ್ತದ ತಳಗಳಿಂದ ಪ್ರಯೋಜನವಿದ್ದೇ ಇದೆ' ಭಟ್ಟರ ಉತ್ತರ.

ಕಾಂತಡೂರು ಪಂಚಾಯತ್ ಪ್ರೆಸಿಡೆಂಟ್ ಶ್ರೀ ಕಾಯಿಲ್ಪ ರೈಗಳಿಂದ ಹೊಸ ತಳಗಳ ಕುರಿತು, ದೀರ್ಘ ವಿವರಣೆ. ವ್ಯವಸಾಯಕ್ಕೆ ಮುಂಚೆಯೇ ಬೇಕಾದ ಎಲ್ಲಾ ಉಪಕರಣಗಳೂ ಮತ್ತು ಕ್ರಿಮಿನಾಶಕಗಳನ್ನು ನಾನೇ ಸಂಗ್ರಹಿಸಿದ್ದೆ. ಬೇರೆಯವರೂ ಇದೇರೀತಿ ಮಾಡಿದರೆ ಬೆಳೆದು. ಎಲ್ಲವನ್ನೂ ವ್ಯವಸಾಯ ಇಲಾಖೇನೇ ಕಾಯೋದು ಸರಿಯಲ್ಲ.

"ಪಂಪು ಸೆಟ್ಟುಗಳಿಗೆ ಖಾಸಗೀ ಸಂಸ್ಥೆಗಳಿಗಿಂತ ಸರಕಾರ ಸಂಘದವರೇ ಏಕೆ ಹೆಚ್ಚು ಬೆಲೆಗೆ ಮಾರುತ್ತಾರೆ. ಹೀಗಾದ್ರೆ ನಾವು ಹೇಗೆ ಸರಕಾರ ಸಂಘಗಳಲ್ಲಿ ನಂಬಿಕೆ ಇಡುವುದು? ಕುತ್ತಾರು ಬಾಲಕೃಷ್ಣ ರೈಗಳ ಪ್ರಶ್ನೆ; ಡೆಪ್ಯುಟಿ ಡೈರೆಕ್ಟರರಿಂದ ಸಾಕಷ್ಟು ಸಮಾಧಾನ.

ಸರಕಾರ ಒದಗಿಸುವ ಗೊಬ್ಬರ ನಾವೂ ಬಳಸ ಬಹುದೇ? ಚಾಲಗೇಣಿ ರೈತನೊಬ್ಬನ ಶಂಕೆ. 'ಏಕಿಲ್ಲ, ಸರಕಾರಕ್ಕೆ ಎಲ್ಲರೂ ಒಂದೆ. ಎಲ್ಲರೂ ಅದು ಒದಗಿಸುವ ಪ್ರಯೋಜನ ಪಡೆಯ ಬೇಕು' ಎಂದು ಉತ್ತರ.

ಡೆಪ್ಯುಟಿ ಡೈರೆಕ್ಟರರು ಹೇಳಿದರು. 'ಪಕ್ಷಿಜಳನ್ನಿದ ಜಿಲ್ಲೆಯಲ್ಲಿ ಮನಸ್ಸು ಮಾಡಿದರೆ ಇನ್ನೂ ಹೆಚ್ಚು ಇಳುವರಿ ತೆಗೆಯಲು ಸಾಧ್ಯ. ನಿಮ್ಮ ಮಣ್ಣಿನಲ್ಲಿ ಅಮ್ಲದ ಅಂಶ ಹೆಚ್ಚಿದೆ. ಅದನ್ನು ಸರಿಯಾದ ರೀತಿಗೆ ತರಲು ಸುಣ್ಣ ಹಾಕುವುದು ಸೂಕ್ತ. ಅದಕ್ಕಾಗೇ ಸರಕಾರ ಸುಣ್ಣವನ್ನು ಕಡಿಮೆ ದರದಲ್ಲಿ ಒದಗಿಸುತ್ತದೆ. ಬೇಸಿಕ್ ಸ್ಲಾಗ್ ಗೊಬ್ಬರವನ್ನು ಬೇರು ಹೆಚ್ಚಿಗೆ ಬಳಸಿ.

ಉಪ್ಪಿನಂಗಡಿಯಲ್ಲಿ ಭತ್ತ—ಉಪ್ಪು ಕುರಿತು ವಿಚಾರ ಅಲ್ಲಿಗೇ ಮುಕ್ತಾಯ.

ಪ್ರಶಸ್ತಿ ಪತ್ರ ವಿತರಣೆ

ಉಡುಪಿ ತಾಲೂಕಿನಲ್ಲಿ ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಪ್ರಶಸ್ತಿ ಪತ್ರಗಳನ್ನು ವಿತರಣೆಮಾಡುವ ಸಮಾರಂಭವು ಮಹಾತ್ಮಾ ಗಾಂಧಿ ಮಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. ೩೦ರಂದು ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಸಮಾಯಿಕ ವಿದ್ಯಾರ್ಥಿಕಾರಿ ಶ್ರೀ ಬ್ಯಾಮ ಭಟ್ಟರು ಸ್ವಾಗತಭಾಷಣ ಮಾಡಿದರು. ಉಡುಪಿ ತಾಲೂಕಿನವರಾದ ಸರ್ವಾಧ್ಯಕ್ಷರಾಶ್ರೀ ಶ್ರೀಧರಾಚಾರ್ ಪಲಿಮಾರ್‌ರವರು ತಾಲೂಕಿನಲ್ಲಿದ ಪ್ರಾಥಮಿಕ ಶಿಕ್ಷಣದ ಪ್ರಗತಿಯ ವರದಿಯನ್ನು ಓದಿದರು. ಶ್ರೀ ಯಸ್. ರಘುರಾಮ ಹೆಗ್ಡೆಯವರು ಸಂದೇಶಗಳ ವಾಚನಮಾಡಿದರು. ಜಿಲ್ಲಾ ವಿದ್ಯಾರ್ಥಿಕಾರಿ ಶ್ರೀ ಯಸ್. ಯಸ್. ಕೃಷ್ಣರಾಯರು ಪ್ರಶಸ್ತಿ ಪತ್ರಗಳು ಮತ್ತು ಪರ್ಯಾಯ ಫಲಕಗಳನ್ನು ವಿತರಣೆಮಾಡಿ ಭಾಷಣ ಮಾಡಿದರು. ಉತ್ತಮ ಶಾಲಾಭಿವೃದ್ಧಿ ಸಮಿತಿ ಪರ್ಯಾಯ ಫಲಕವನ್ನು ಸ್ವೀಕರಿಸಿದ ಕಿದಿಯೂರು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಎ. ಬಿ. ಅಲ್ಡೆಯವರು ಪ್ರತಿಭೋಚಿತ ಭಾಷಣ ಮಾಡಿದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಎಂ. ಮಧ್ವರಾಜರು ಅಧ್ಯಾಪಕರ ಸೇವೆಯನ್ನು ಗುರುತಿಸಿ ಗೌರವಿಸುವ ಸರಕಾರದ ಈ ಯೋಜನೆ ಸ್ವಾಗತಾರ್ಹವೆಂದು ಹೇಳಿದರು. ಕೊನೆಗೆ ಶ್ರೀ ಪಿ. ಕೃಷ್ಣರಾಯರು ವಂದನಾರ್ಪಣೆಗಳನ್ನು ಸಲ್ಲಿಸಿದರು.

ಲೆವಿ ಕುರಿತು ವಿಚಾರ ಸಂಕಿರಣ

ಉಡುಪಿ ತಾ. ೩೧ ಮಾರ್ಚ್, ಮಣಿಪಾಲದ ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನ್ ಇದರ ನೇತೃತ್ವದಲ್ಲಿ ಉಡುಪಿ ಮುಕುಂದ ಭವನದ ಮಾಂಡಲ್ಲಿ ಸಾಮಾಜಿಕ ಸಭಾ ವ್ಯವಸ್ಥೆಯಿಂದ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸರಕಾರದಿಂದ ಕಡ್ಡಾಯ ಧಾನ್ಯ ವಸೂಲಿ (ಲೆವಿ) ಕುರಿತ ವಿಚಾರ ಸಂಕಿರಣ (ಸೆಮಿನಾರ್) ಸಾವ್ಯವಸ್ಥಿತ ರೀತಿಯಲ್ಲಿ ಯಶಸ್ವಿಯಾಗಿ ಜರುಗಿತು. ಇದರಲ್ಲಿ ಪ್ರಗತಿಶೀಲ ಕೃಷಿಕರಾದ ಶ್ರೀಗಳಾದ ಯೆಡ್ತರ ಮಂಜಯ್ಯ ಕಟ್ಟೆ, ಪಿ. ಅನಂದಕುಂದರ ಹೆಗ್ಡೆ, ವೈ. ಎಸ್. ಪಟ್ಟಣ್ಣ, ಎಂ. ಆನಂದ ಆಳ್ವ, ಪಿ. ಅಚ್ಯುತ ಪ್ರಭು, ಬಿ. ಜನಾರ್ದನ ರೈ, ಎಸ್. ಡಿ. ಕೊಂಬ್ರಿಪೈಲ್, ಬಿ. ನಾರಾಯಣ ನಾಯಕ್, ಪಿ. ಶ್ರೀನಿವಾಸ ರಾವ್, ಎಸ್. ಧರ್ಮಸಾಮ್ರಾಜ್ಯ, ಜಿ. ಎಸ್. ಭಟ್ಟ, ಪಿ. ಶೀನ ಶೆಟ್ಟಿ, ಪಿ. ಗೋಪಾಲಕೃಷ್ಣ ನಾಯಕ್, ಕೆ. ಪಿ. ಪೆಕರಾಯರು ಭಾಗವಹಿಸಿದ್ದರು. ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಕೆ. ವಿ. ಬೇರಿಂಯರು ಮುದ್ರಿತ ಪ್ರಬಂಧವನ್ನು ಓದಿದರು. ಚರ್ಚೆಯಲ್ಲಿ ಭಾಗವಹಿಸಿದ ರೈತರು ತಮ್ಮ ಅಭಿಪ್ರಾಯಗಳನ್ನು ಚುಟುಕಿನಲ್ಲಿ ವ್ಯಕ್ತಪಡಿಸಿದರು. ಲೆವಿ ಕೊಡುವುದು ಅಗತ್ಯ, ಕೃಷಿಗೆ ದೇಶದ ಹಿತದೃಷ್ಟಿಯಿಂದ ಸ್ವಲ್ಪ ತ್ಯಾಗ ಮಾಡುವುದು ಅಗತ್ಯ. ಆದರೆ ಬಗೆದು ಮಾಡಿದ ಬೆಲೆಯನ್ನು ಹೆಚ್ಚಿಸುವುದು, ಕೃಷಿಕರಿಗೆ ಪ್ರೋತ್ಸಾಹದ ದೃಷ್ಟಿಯಿಂದ ಅತ್ಯಗತ್ಯ. ಕೃಷಿಕರಿಗೆ ಸರಕಾರ ಹೆಚ್ಚಿಗೆ ಸಲಕರಣೆ ಸಾಲಿಯನ್ನು ಕೊಟ್ಟು ಪ್ರೋತ್ಸಾಹಿಸಬೇಕು. ಎಂಬಿತ್ಯಾದಿ ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾದವು. ಶ್ರೀ ಬೆರಿಂಯರು ಚರ್ಚೆಗಳಿಗೆ ಉತ್ತರ ಕೊಟ್ಟರು. ಕೊನೆಯಲ್ಲಿ ಶ್ರೀ ಟಿ. ಎ. ಪೈಗಳು ಭಾಷಣ ಮಾಡುತ್ತ, ಜಗತ್ತಿನ ಹಾಗೂ ರಾಷ್ಟ್ರದ ವಿಭಿನ್ನ ಆಹಾರ ನೀತಿಯನ್ನೂ ನಮ್ಮ ಸರಕಾರದ ಆಹಾರ ಧೋರಣೆಯಲ್ಲಿರುವ ದೋಷ ದೋಷಗಳನ್ನೂ ವಿವರಿಸಿದರು. ಅಂತರ್ ಜಿಲ್ಲಾ, ಅಂತರ ರಾಜ್ಯ ಸಾಗಾಟದ ತಡೆಯನ್ನು ತೆಗೆದು ಹಾಕಿ ಕಂಟ್ರೋಲ್‌ಗಳನ್ನು ಮಾಡಾಡಿದರೆ ಪರಿಸ್ಥಿತಿಯ ಸುಧಾರಣೆ ಬರುವುದೆಂದರು. ಭಾಗವಹಿಸಿದ ಕೃಷಿಕರಿಗೂ ಸಭೆಕರಿಗೂ ವಂದನೆಗಳನ್ನು ಅರ್ಪಿಸಿದರು. ಬಳಿಕ ಶ್ರೀ ಉಡುಪರು ಧನ್ಯವಾದ ಸಮರ್ಪಿಸಿದರು. ಕೃಷಿಕರ ಇಂಥ ವಿಚಾರ ಸಂಕಿರಣ ಜರುಗುವುದು ಜಿಲ್ಲೆಯಲ್ಲಿ ಮೊತ್ತವಲ್ಲ ರಾಜ್ಯದಲ್ಲಿ ಇದೇ ಮೊದಲನೆಯದೆನ್ನ ಬಹುದು.

ಚುಟುಕಗಳು

೧

ಕನ್ನಡ ಮಾಧ್ಯಮ

'ಪ್ರಾಗ್ರೂಪ'ರೆಂದರೆ ಪ್ರಿನ್ಸಿಪಾಲರೆಂದರ್ಥ|
ವ್ಯಾಖ್ಯೆರೆಂದಿರಿ ಮತ್ತೆ ಎಲ್ಲೇ ಅನರ್ಥ ||
ಇಂಗ್ಲೀಷಿನಿಂದ ಕನ್ನಡದತ್ತ ತಿರುಗಿ।
ಬರುವಾಗ ಮೈಯೆಲ್ಲ ಕಣ್ಣಾಗಿ ಜರುಗಿ ||

೨

ಹಾರಗಳ ಭಾರ

ಸಚಿವರೊಬ್ಬರ ಕೆಂಡಳೊಳುಳುರು
ಬಿತ್ತಂತೆ।
ವೈದ್ಯಮಂಡಳಿ ಚಿಕಿತ್ಸೆಯ ನಡೆಸಿತಂತೆ||
ಮುಂಜಾಗ್ರತೆಗೆ ಧೀರ ಬೇರೆ ಹೇಳಿ
ದನು ।
ಹಾರಗಳ ಭಾರ ಹೊರಬಾರದೆಂಬುದವು||

೩

ರಾಜಕೀಯದ ಪರ್ವತಗಳು

ಹಿಂದೆ ಪರ್ವತಗಳಿಗೆ ರೆಕ್ಕೆಯಿತ್ತಂತೆ ।
ಇಂದ್ರನೇ ಪಕ್ಷ ಖಂಡನ ಗೆದ್ದನಂತೆ||
ಇಂದೀಗ ಪಕ್ಷ ಹೀನ ಸ್ಥಿತಿಯು ಸಲವು|
ರಾಜಕೀಯದ ಪರ್ವತಗಳು ಹಾರುವುವು||

೪

ಅಹಿತವಾದರೆ....!

ಸಾಹಿತ್ಯ ಸಮ್ಮೇಳನಾಧ್ಯಕ್ಷನಾದ ।
ರಂಜಕಾರಣೆ ಮಾಡಿದನು ಸಿಂಹನಾದ ||
"ಸಾಹಿತ್ಯ-ಸಹಿತ-ಶಬ್ದದ ಭಾವಕೂಪ |
ಅಹಿತವಾದರೆ ಧನಗೆ ಬರಬಹುದು
ಕೋಪ" ||

—"ಕಶ್ಚಿತ್"

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯಮಾಡಿ ನಿಜಾಂಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ನಿರಾಶೆಯನ್ನು ಹತ್ತಿಕ್ಕಬೇಕು; ವಿಶ್ವಾಸವನ್ನು ಬೆಳೆಸಬೇಕು

ಬರೆದವರು: ಶ್ರೀ ಬಿ. ನರಸಿಂಗ ರಾವ್

ನಮ್ಮಲ್ಲಿ ಹೆಚ್ಚಿನವರು ಯುವಕರು. ಜೀವನದ ಹೊಸ್ತಿಲಿಗೆ ಕಾಲಿಡುತ್ತಿದ್ದಾರಷ್ಟೆ. ಶುಭ ಪ್ರತೀಕ್ಷೆಯೊಂದೊಡಗೂಡಿ ಅವರು ಮುಂದಡಿಯಿಡುತ್ತಿದ್ದಾರೆ. ಇದಕ್ಕೆ ಅವರಿಗೆ ಅಚಲ ವಿಶ್ವಾಸದ ಗುಣವನ್ನು ಬೆಳೆಯಬೇಕಾದದ್ದಿದೆ. ಯುವಕರಾದಲ್ಲಿ, ಅವರಲ್ಲಿ ಧೈರ್ಯ, ನಿರುತ್ಸಾಹ, ಅವಿಶ್ವಾಸ ಇತ್ಯಾದಿ ಗುಣದಳು ಬೆಳೆಯಲು ಬಿಡದಂತಹ ಮನಃಸ್ಥಿತಿಯಿರಬೇಕು. ನಿರುದ್ಯೋಗ, ಮನೆಯಲ್ಲಿ ದಾರಿದ್ರ್ಯ, ಪ್ರೇಮ ಎಂಬಿತ್ಯಾದಿಯಾಗಿ ಸಮಸ್ಯೆಗಳಲ್ಲಿ ಸಿಲುಕಿಕೊಂಡ ಅನೇಕ ಯುವಕರು ಇರಬಹುದು. ಕೊನೆಗೆ ಈ ಸಮಸ್ಯೆಗಳನ್ನೆದುರಿಸಲು ದಾರಿಗಾಣದ ಕೆಲವರು ಆತ್ಮಹತ್ಯೆ ಮಾಡಿಕೊಂಡ ಪ್ರಸಂಗಗಳೂ ಇವೆ.

ಮನೆಯಲ್ಲಿ ದಾರಿದ್ರ್ಯವಿರುವುದರಿಂದ ಓರ್ವ ವಿದ್ಯಾರ್ಥಿಗೆ ತನ್ನ ಶಿಕ್ಷಣವನ್ನು ಮುಂದರಿಸಲು ಆಸ್ಪದವಿರುವುದು. ಎಸ್. ಎಸ್. ಎಲ್. ಸಿ. ಮುಗಿಸಿ ಮನೆಯಲ್ಲಿ ಹಸುವನ್ನೂ, ಹರಿಯರ ಕಷ್ಟದ ಹೊರೆಯನ್ನೂ, ಸಹಿಸಿ ಇಂಥ ತಳ್ಳುವ ಯುವಕರಿಷ್ಟೆ! ಉದ್ಯೋಗಕ್ಕಾಗಿ ಅಲೆದೂ ಅಲೆದೂ, ಸೋತು ಸುಣ್ಣವಾಗಿ ಆ ಯುವಕರು ಅಧಃಪತನಗೊಳ್ಳುವುದೂ ಇದೆ. ಅಂತಹ ಯುವಕರಲ್ಲಿ ಆಶೆ, ಉತ್ಸಾಹಗಳನ್ನು ಬೆಳೆಸುವುದು ಹೇಗೆ?

ಬಾಳೆಯದೊಂದು ದೀರ್ಘ ಯಾತ್ರೆ; ಕಷ್ಟಕರ ಯಾತ್ರೆ. ಅನುಭವದಿಂದೊಡಗೂಡಿ ಅಲ್ಲಿ ನಾವು ನಡೆಯಬೇಕು. ಜೀವನದ ಮಾರ್ಗದಲ್ಲಿ ನಾವು ತಲುಪಿದ್ದೇವೆ, ಅದಷ್ಟು ಉನ್ನತ ಪದವಿಯನ್ನು ಸೇರಿದ್ದೇವೆಂಬುದಲ್ಲ. ಬಾಳನ್ನು ಹೇಗೆ ಬಾಳಿದ, ಹೇಗೆ ಬಾಳಲು ಯತ್ನಿಸಿದೆ ಎಂಬುದೇ ಇದರ ಒರೆಗಲ್ಲು. ಯಾವತ್ತೂ ಅಡ—ತಡೆಗಳನ್ನು ಸಂಗಡಿಸದೆ, ಇಚ್ಛಾಭಂಗಕ್ಕೊಳಗಾಗದೆ ಈ ಬಾಳಿನ ಪಯಣವನ್ನು ಗೈಯುವುದು ಸುಲಭವಲ್ಲ. ಇದಕ್ಕೆ ಸ್ವಲ್ಪ ಶ್ರಮದ ಅಗತ್ಯವಿದೆ. ನಮ್ಮಲ್ಲಿ ಆತ್ಮವಿಶ್ವಾಸ ಬೆಳೆದರೆ ಮಾತ್ರ ನಾವು ಇತರಂಗ ಮಾದರಿಯಾಗಿ ನಿಲ್ಲಬಹುದು. ಓರ್ವನು ಕೃತಂಬಾ ಸಂಪಾದಿಸಿರಬಹುದು. ಇನ್ನೊಬ್ಬ ಕೃತಂಬಾ ದುಡಿದರೂ, ಸಂಪಾದಿಸಲು ಅಷ್ಟು ದೂರುಳಿದಿರಬಹುದು. ಆದರೆ ಇದರಲ್ಲಿ ಮೊದಲನೇಯವನು ಸಫಲನೆನ್ನುವುದು ಎಂದೂ ಸರಿಯಲ್ಲ.

ಹಸುವಿನಿಂದ ಬಳಲುವವನಿಗೆ ತತ್ತ್ವೋಪದೇಶ ಬೇಕಿಲ್ಲ. ಪ್ರೇಮದ ಹೆಸರಲ್ಲಿ ವಿವೇಕವನ್ನು ಕಳೆದುಗೆಯುವಾಗ ಅವರನ್ನು ಹಿಡಿದು ನಿಲ್ಲಿಸಲಾಗದು. "ನಮ್ಮ ತತ್ವ ಜ್ಞಾನವು ಕಳೆದು ಹೋದ ದುಃಖವನ್ನು ಸಹಿಸಲೂ, ಬರಲಿರುವ ಕಷ್ಟವನ್ನೆದುರಿಸಲೂ ನಮಗೆ ಶೈರ್ಯವಿಗೆಯಾಗಿರಬಹುದು. ಆದರೆ ಪ್ರಸ್ತುತ ಅನುಭವಿಸುವ ದುರಂತವನ್ನು ಅದೆಂದೂ ಕಡಿಮೆ ಮಾಡದು" ಎಂದೋರ್ವ ತತ್ವಜ್ಞಾನಿ ಹಾಡಿದ್ದಾನೆ.

ಸಮಸ್ಯೆಗಳನ್ನು ಎಲ್ಲರೂ ಎದುರಿಸಲೇ ಬೇಕು. ಅದರಿಂದ ಓಡಿಹೋಗಲಾದದು, ಜಾಗೆ ಮಾಡಿದರೆ ಪರಿಹಾರ ದೊರೆಯದು. ಆದರೆ ನಿರಾಶೆಯಿಂದೊಡಗೂಡಿ, ಕಂಗೆಟ್ಟು ಒದನ್ನು ಎದುರಿಸುವ ಬದಲು, ಧೈರ್ಯದಿಂದ ಸೆಡ್ಡೇ ತೀರುವೆನೆಂಬ ಆತ್ಮವಿಶ್ವಾಸದಿಂದೊಡಗೂಡಿ ಎದುರಿಸಲು ಶ್ರಮಿಸಬೇಕು. ಇಂದು ಪಟ್ಟ ಕಷ್ಟ, ನಾಳೆ ಸಮಗೊಂದು ಅನುಭವದ ವಾರವಾಗಿರುವುದು.

ಮೂರ್ಖ ಸುಖಕ್ಕೆ ಇರುವ ದಾರಿಯೂ ಏನು? ಆರೋಗ್ಯ, ಸಂಪತ್ತು, ಬುದ್ಧಿ, ಪ್ರತಿಷ್ಠೆ, ರಕ್ಷಣೆ ಇವೆಲ್ಲ 'ಸುಖಾಸುಖ'ವನ್ನು ಕೊಡಬಲ್ಲವು ಎಂಬುದು ಓರ್ವ ತತ್ವಜ್ಞಾನಿಯ ಮತ. ಆದರೆ ಇವೆಲ್ಲಾ ಇದ್ದರೂ ಮನಸ್ಸಿಗೆ ಶಾಂತಿಯಿಲ್ಲವಲ್ಲದೆ? ಹೌದು! ಮನಃಶಾಂತಿಯೂ 'ಸುಖ'ಕ್ಕೆ ಅತ್ಯಗತ್ಯವೆಂಬುದು ಸರ್ವವಿದಿತ.

ಪ್ರತಿಯೊಂದು ದಿನವೂ ನಮ್ಮ ಬಾಳಿನ ಒಂದೊಂದು ಘಟ್ಟವಷ್ಟೆ ಇದೆ. ಹೊಸ ಪರೀಕ್ಷೆಗಳನ್ನು ಎದುರಿಸಲು, ಹೊಸ ಪ್ರಯೋಗವನ್ನು ಗೈಯಲು, ಜೀವನದಲ್ಲಿ ನೂತನ ಅನುಭವ ಪಡೆಯಲು ಪ್ರತಿಯೊಬ್ಬರೂ ಸಿದ್ಧರಿರಬೇಕು. ಪ್ರತಿ ದಿನವೂ ಕೃತಕ ಮಳೆ ತರಿಸುವ ವಿಧಾನದಲ್ಲಿ ಅಮೆರಿಕ ಸಾಧಿಸಿರುವ ಪ್ರಗತಿ

ಕೃತಕ ಮಳೆ ತರಿಸುವ ವಿಧಾನದಲ್ಲಿ ಅಮೆರಿಕ ಸಾಧಿಸಿರುವ ಪ್ರಗತಿ

ವಾಷಿಂಗ್ಟನ್ ಮಾರ್ಚ್ 20— ಕೃತಕ ವಿಧಾನಗಳ ಮೂಲಕ ಮಳೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ಅಮೆರಿಕ ಕಳೆದ ಏಳು ವರ್ಷಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ ಎಂದು ವರದಿಯೊಂದು ತಿಳಿಸಿದೆ.

ಒಳಾಡಳಿತ ಇಲಾಖೆಯ ಬ್ಯೂರೊ ಧೃತಿಗೆಡದೆ ಮನೋಧೈರ್ಯದಿಂದೊಡಗೂಡಿ' ಯಾವ ಅಪಸ್ವರಾದರೂ ಸ್ಥೈರ್ಯದಿಂದೆದುರಿಸುವೆ' ಎಂದೇ ಮುಂದರಿಯಬೇಕು. ನಮ್ಮ ಮನಸ್ಸೇ ನಮ್ಮ ಧರ್ಮಾಸ್ತ್ರ. ಮನಸ್ಸಿಗೆ ಸದಾ ಆಶಾಭಾವವನ್ನೂ ತಂದೊಡ್ಡುವ ವಿಚಾರವನ್ನೇ ಗೈಯಬೇಕು. ವಿನಸ್ಸೆಂಬ ಮರ್ಕಟವನ್ನು ಬಿಗಿಹಿಡಿದು ವರ್ತಿಸದಿದ್ದರೆ ಬಾಳಲ್ಲಿ ಗೆಲುವು ಕಷ್ಟ ಸಾಧ್ಯ. ಜೀವನದಲ್ಲಿ ಒಳಿತನ್ನೆ ಕಾಣಲು ಮನಸ್ಸಿಗೆ ಪರಿಶ್ರಮ ಕೊಡಬೇಕು. ದೊರೆತದ್ದೇನೆ ಅದರೂ ಸಂತೋಷದಿಂದ ಸ್ವೀಕರಿಸಿ, ಅದನ್ನು ಅನುಭವಿಸಬೇಕು. ನಾವು ಕಷ್ಟವನ್ನು ಅನುಭವಿಸಲು ಹುಟ್ಟಿದ್ದೆ. ಅದನ್ನೆದುರಿಸಲಷ್ಟೆ ಹುಟ್ಟಿದ್ದೇನೆ ಎಂದು ಎಲ್ಲರೂ ತಿಳಿಯಬೇಕು. ದಯಾಮಯನಲ್ಲಿ ಅಚಲ ವಿಶ್ವಾಸವಿದ್ದರೆ ಯಾವ ನಿರಾಶೆಯೂ ನಮ್ಮ ಮನಸ್ಸಿಗೆ ತಟ್ಟದು.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮೇಲ್ಪಟ್ಟು ಬೆಲೆ ರೂ. 1-50

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳನ್ನು

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಆಪ್ ರೆಕ್ಲಮೇಷನ್‌ನ ಈ ಪದವಿ, ವಾತಾವರಣ ಜಲಸಂರಕ್ಷಣೆ ಎಂಬೇಗ ಕಾರ್ಯಕ್ಕೆ ಮದಲ್ಲಾಗಿರುವ ಪ್ರಗತಿಯನ್ನು ವಿವರಿಸಿದೆ. ವಾತಾವರಣದಲ್ಲಿನ ನೀರಿನ ಹೆಚ್ಚಿನಂಶವನ್ನು ಧರೆಗಿಳಿಸಿ ಮಾನವನ ಉಪಯೋಗಕ್ಕಾಗಿ ರಿಸರ್ವಾಯರುಗಳಲ್ಲಿ ಸಂಗ್ರಹಿಸುವುದು ಈ ಕಾರ್ಯಕ್ರಮದ ಗುರಿ.

"ಕ್ಲೌಡ್ ಸೀಡಿಂಗ್ ವಿಧಾನದಿಂದ ಸಹಜ ಮಳೆಯನ್ನು ಹೆಚ್ಚಿಸುವ ಸಾಮರ್ಥ್ಯವು 1961ರ್ಲ್ಲ ಕಾರ್ಯಕ್ರಮ ಪ್ರಾರಂಭವಾದಂದಿನಿಂದ ಗಮನಾರ್ಹವಾಗಿ ಉತ್ತಮಗೊಂಡಿದೆ ಎಂದು ವರದಿ ಸ್ಪಷ್ಟಪಡಿಸಿದೆ" ಎಂದು ರಿಕ್ಲಮೇಷನ್‌ನ ಕಮಿಷನರ್ ಡ್ಯಾಲ್ಯ್ ಬ ಡೊವಿಗೀ ಹೇಳಿದರು.

ಈಗ ಪರಿಶ್ರಮಿಸಲಾಗುತ್ತಿರುವ ವಿಧಾನಗಳಿಂದ "ರಾಷ್ಟ್ರದ ನೀರು ಸರಬರಾಜು ವ್ಯವಸ್ಥೆಗೆ ವರ್ಷಾಪ್ರಾಂತ್ಯ ಸುಮಾರು 470 ದಶಲಕ್ಷ ಎಕರೆ—ಅಡಿಗಳಷ್ಟು ಹೊಸ ನೀರನ್ನು ಒದಗಿಸಲು ಸಾಧ್ಯವಾಗುವುದು' ಎಂದು ಕಮಿಷನರ್ ಹೇಳಿದ್ದಾರೆ 'ಪ್ರತಿ ಎಕರೆ—ಅಡಿ ನೀರಿಗೆ ಒಂದರಿಂದ ಸಾಲು ಡಾಲರ್‌ಗಳಷ್ಟು ಹೆಚ್ಚು ಬೆಗಲ ವುದು, ಇದರಿಂದ ದೊರೆಯುವ ಪ್ರಯೋಜನಗಳು ಪ್ರತಿ ಎಕರೆ—ಅಡಿಗೆ ಒರಿಂದ ೨೨ ಡಾಲರ್‌ಗಳಷ್ಟಾಗುವುದು' ಎಂದರವರು.

ಈ ಕಾರ್ಯಕ್ರಮವನ್ನು 'ವ್ಯಾಟರ್‌ಷೆಡ್ ಪ್ರೊಟೆಕ್ಟ್' ಎಂದ ಕರೆಯಲಾಗಿದೆ. 1970ರ ಮೊತ್ತಿಗೆ ಈ ವಿಧಾನವನ್ನು ರಾಷ್ಟ್ರವ್ಯಾಪ್ತಿಯಾಗಿ ಅಳವಡಿಸಿ ತುಮಂಬೆ ತಂತ್ರಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಮಳೆಯನ್ನು ಸರಾಸರಿ ಶೇಕಡ 10ರಷ್ಟು ಹೆಚ್ಚಿಸುವುದು ಈ ಕಾರ್ಯಕ್ರಮದ ಗುರಿ.

ಸಾಧಿತವಾಗಿರುವ ಪ್ರಗತಿಯನ್ನು ಅಧರಿಸಿ, 1972ರ ಮೊತ್ತಿಗೆ ಈ ಕಾರ್ಯಕ್ರಮವನ್ನು ಪರಿಮಿತ ಪ್ರಮಾಣದಲ್ಲಿ ಆಚರಣೆಗೆ ತರಲು ಸಾಧ್ಯವಾಗುವುದು. ಎಂದು ವರದಿ ಸೂಚಿಸಿದೆ. ಕಾರ್ಯಕ್ರಮವನ್ನು ಆಚರಣೆಗೆ ತರುವ ಮುನ್ನ ಅನೇಕ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ ಎಂದೂ ವರದಿ ಎಚ್ಚರಿಸಿದೆ.

ನನ್ನ ನಾವಿಕ

ನನ್ನ ನಾವಿಕ! ಸೇರಿಸು ಅಂಚಿನಡೆಗೆ
ಸಾಗಿಸು ಎನ್ನನು ಗುರಿಯ ಕಡೆಗೆ
ಸುಖ—ಕಷ್ಟ ಬರುವುದು ಅಲೆಯಾಗಿ
ನಡೆಸು ದೋಣಿ ಸರಾ ಸರ"

ಜೀವನದ ದೋಣಿ ಸಾಗುತಿದೆ
ನನ್ನ ಮನವು ಝಲ್ಲೆನುತಿದೆ
ಕಟ್ಟಿ, ಸೋತು ಹೋಗುವುದು
ತನು ಗಡ-ಗಡನ ನಡುಗುವುದು

ತಲುಪೇ ತಲುಪುವೆನು ಗುರಿ
ಮನದಿ ಹರವಿದುದು ಬೇರೊರಿ
ಅದರೇಘ? ದೇವ ದೇವನ ಆಟ
ಇರಲೆನ್ನ ಮೇಲೆ ಕರುಣೆಯ ನೋಟ!

— 'ಮಲ್ಲಾರಿ'

NAVAYUGA 4—4—1960
Registered with the Registrar of News Papers for India under No. K. N. 3546/57

REGD: No. B. G. 176
LICENCE No. 31
Licensed to Post without Prepayment

ವಿಜ್ಞಾನ ಸಂಶೋಧನೆಯ ಕೀಲಿಕೈ

ದುರ್ಬೀನು

ಬರೆದವರು : ಶ್ರೀ ಸ. ನಾರಾಯಣ

ಹಾಲೆಂಡ್ ದೇಶದ ಮಿಡಲ್‌ಬರ್ಗ್ ಪಟ್ಟಣದಲ್ಲಿ ಲಿಪರಹಿ ಎಂಬಾತನಿದ್ದ. ಆತ ಕನ್ನಡಕಗಳ ತಯಾರಕನಾಗಿದ್ದುದು ಸೂತ್ರವಲ್ಲದೆ ವ್ಯಾಪಾರಿಯೂ ಆಗಿದ್ದ. ಒಂದು ದಿನ ಆತ ಕನ್ನಡಕಗಳ ತಯಾರಿಕೆಯಲ್ಲಿ ಮಗ್ನನಾಗಿದ್ದ. ವಿವಿಧ ಬಗೆಯ ಗಾಜುಬಿಲ್ಲೆಯೊಂದಿಗೆ ಆಟವಾಡುತ್ತಿದ್ದ ಆವನ ಮಗ ತನ್ನ ಆಟದಲ್ಲಿ ಎರಡು ಗಾಜುಬಿಲ್ಲೆಗಳನ್ನು ಕೂಡಿಸಿ ಅದರ ಆಂಚಿನ ಮೂಲಕ ಒಂದು ಬದಿಯಿಂದ ನೋಡಿದಾಗ ಬಹು ದೂರದಲ್ಲಿದ್ದ ಚರ್ಚಿನ ಗೋಪುರ ಬಹು ಸಮೀಪದಲ್ಲಿರುವಂತೆ ತೋರಿತು. ತಾನು ಕಂಡ ಆಶ್ಚರ್ಯವನ್ನು ಮಗ ತಂದೆಗೂ ತೋರಿಸಿದ. ಲಿಪರಹಿ ನೋಡಿ ವಿಸ್ಮಯಗೊಂಡ. ಮಗನ ಮೂತು ಸತ್ಯ ಎಂಬುದು ಆವನಿಗೆ ಅರಿವಾಯಿತು. ಈ ಘಟನೆ ದುರ್ಬೀನಿನ ಶೋಧಕ್ಕೆ ಮೂಲ ಕಾರಣವಾಯಿತು. ಲಿಪರಹಿಯೇ ಮರದ ಒಂದು ಸ್ಟ್ಯಾಂಡಿನ ಮೇಲೆ ಎರಡು ಗೋಲಕಗಳನ್ನು ಜೋಡಿಸಿ ದುರ್ಬೀನನ್ನು ತಯಾರಿಸಿದ. ಆವನ ಪ್ರಯೋಗ ಯಶಸ್ವಿಯಾಯಿತು. ಇದು ವಿಶ್ವದ ಪ್ರಪ್ರಥಮ ದುರ್ಬೀನಾಯಿತು. ಈ ಮೂಲಕ ದುರ್ಬೀನು ಪ್ರಪಂಚಕ್ಕೆ ಪರಿಚಿತವಾಯಿತು.

ಈ ಘಟನೆ ಸಂಭವಿಸುವ ೩೦೦ ವರ್ಷಗಳ ಪೂರ್ವದಲ್ಲಿಯೇ ಕನ್ನಡಕಗಳ ಜನಕನಾದ ರೋಜರ್ ಬೇಕನ್ ದುರ್ಬೀನಿನ ವಿಷಯದಲ್ಲಿ ಬಹು ಪ್ರಯೋಗ, ಪ್ರಯತ್ನಗಳನ್ನು ನಡೆಸಿದ್ದ. 'ಬಹು ದೂರದ ನಕ್ಷತ್ರಗಳನ್ನು ಸಹ ಬಹು ಸಮೀಪದಲ್ಲಿರುವಂತೆ ದುರ್ಬೀನಿನ ಸಹಾಯದಿಂದ ಕಾಣಲು ಸಾಧ್ಯ' ಎಂದು ಸೂಚಿಸಿದ್ದ. ದುರ್ಬೀನಿಗಾಗಿ ಗೋಲಕಗಳನ್ನು ಸಹ ರೋಜರ್ ಬೇಕನ್ ತಯಾರಿಸಿದ್ದ. ಆದರೆ ಆವನ ಕಾಲದಲ್ಲಿಯೇ ದುರ್ಬೀನಿನ ಪಂಚಯ ಪ್ರಪಂಚಕ್ಕೆ ಆಗಲಿಲ್ಲ. ಆವನ ಅನಂತರ ಸುಮಾರು ೩೦೦ ವರ್ಷಗಳ ವರೆಗೆ ಯಾರೂ ಅದರ ಬಗ್ಗೆ ಆಸಕ್ತಿ ತಾಳಲಿಲ್ಲ.

೧೯೦೮ರಲ್ಲಿ ಲಿಪರಹಿಯು ರೋಜರ್ ಬೇಕನ್‌ನ ಸೂಚನೆಗಳನ್ನು ಅನುಸರಿಸಿ ಚೊಟ್ಟ ಮೊದಲ ಸುಬೀ. ನನ್ನು ತಯಾರಿಸಿ, ಬೆಳಕಿಗೆ ತಂದ. ಲಿಪರಹಿಯ ದುರ್ಬೀನು ರಚನೆಯಾದ ಎರಡು ವರ್ಷಗಳ ತರುವಾಯ ಇಟಲಿ ದೇಶದ ಪೇಡುವಾ ವಿಶ್ವ ವಿದ್ಯಾನಿಲಯದ ಪ್ರಖ್ಯಾತ ಶಾಸ್ತ್ರಜ್ಞ ಗೆಲಿಲಿಯೋ ಸಹ ಮತ್ತೊಂದು ದುರ್ಬೀನನ್ನು ತಯಾರಿಸಿದ. ಗೆಲಿಲಿಯೋ ತೋರಿಸಿ ತಯಾರಿಸಿದ ದುರ್ಬೀನು ಲಿಪರಹಿಯ ದುರ್ಬೀನಿಗಿಂತಲೂ ಭಿನ್ನವಾಗಿತ್ತು—ಆಧುನಿಕವಾಗಿತ್ತು. ಲಿಪರಹಿಯ ದುರ್ಬೀನಿಂದ ಕೇವಲ ಎರಡು ಮೈಲುಗಳ ಅಂತರದಲ್ಲಿದ್ದ ವಸ್ತುಗಳನ್ನು ಮಾತ್ರ ಕಾಣಲು ಸಾಧ್ಯವಿತ್ತು. ಆದರೆ ಗೆಲಿಲಿಯೋ ತಯಾರಿಸಿದ ದುರ್ಬೀನಿನಿಂದ ೫೦ ಮೈಲಿಗಳ ವರೆಗಿನ ವಸ್ತುಗಳನ್ನು ಸಹ ಬಹು ಸಮೀಪದಲ್ಲಿರುವಂತೆ ಕಾಣಲು ಸಾಧ್ಯವಿತ್ತು. ಈ ಎರಡು ದುರ್ಬೀನುಗಳಲ್ಲಿ ಮತ್ತೊಂದು ಗಣನೀಯ ವ್ಯತ್ಯಾಸವಿತ್ತು. ಲಿಪರಹಿಯ ದುರ್ಬೀನಿನಿಂದ ಗಮನಿಸಿದಾಗ ವಸ್ತುಗಳು ತಿರುವು ಮುರುವು (ತಲೆ ಕೆಳಗಾಗಿ) ಆಗಿ ಕಂಡರೆ ಗೆಲಿಲಿಯೋ ದುರ್ಬೀನಿನಿಂದ ವಸ್ತುಗಳನ್ನು ಇದ್ದಂತೆಯೇ (ನೇರವಾಗಿ) ಕಾಣಲು ಸಾಧ್ಯವಿತ್ತು.

ಗೆಲಿಲಿಯೋ ತಯಾರಿಸಿದ ದುರ್ಬೀನು ಅಲ್ಪ ಕಾಲದಲ್ಲಿಯೇ ಕೀರ್ತಿ ಪಡೆಯಿತು. ಪೊಸ ಪವಾಡಕ್ಕೆ ಪಲ್ಲವಿ ಹಾಡಿತು. ಆವನ ಹಾಗೂ ದುರ್ಬೀನಿನ ಕೀರ್ತಿ ದೇಶದಾದ್ಯಂತ ಹರಡಿತು. ಐವತ್ತು ಮೈಲಿಗಳ ದೂರದ ದೃಶ್ಯ, ವಸ್ತುಗಳನ್ನು ಸಮೀಪದಲ್ಲಿಯೇ ಕಾಣಲು ಸಾಧ್ಯ ಎಂದು ತಿಳಿದು ಜನರೆಲ್ಲ ವಿಸ್ಮಯಗೊಂಡರು. ಈ ದುರ್ಬೀನಿನ ಸುದ್ದಿ ವೆನಿಸ್ ನಗರವನ್ನು ತಲುಪಿದಾಗ ಅಲ್ಲಿಯ ಜನತೆ ಅದನ್ನು ಕಾಣಲು ಆಸೆ ವ್ಯಕ್ತಪಡಿಸಿತು. ವೆನಿಸ್ ನಗರದ ಅಧಿಕಾರಿಗಳ ಆಜ್ಞೆ ಹಾಗೂ ಆಮಂತ್ರಣಗಳನ್ನೇರಿಗೆ ಗೆಲಿಲಿಯೋ ತನ್ನ ದುರ್ಬೀನನ್ನು ಪ್ರದರ್ಶಿಸಲು ಅದರೊಂದಿಗೆ ವೆನಿಸ್ ನಗರಕ್ಕೆ ಪ್ರಯಾಣ ಬೆಳೆಸಿದ.

ವೆನಿಸ್ ನಗರದ ಜನತೆ ಗೆಲಿಲಿಯೋನ ದುರ್ಬೀನನ್ನು ಮನದಣಿಯೆ ನೋಡಿ ತೃಪ್ತರಾದರು. ಅಧಿಕಾರಿಗಳು ಉನ್ನತ ಕಟ್ಟಡಗಳ ಮೇಲೆ ಇಂತು ದುರ್ಬೀನಿನ ಸಹಾಯದಿಂದ ನಾಗರಿಕ ಮಧ್ಯೆ ಸಂಚರಿಸುವ ಹಡಗುಗಳನ್ನು ಹಾಗೂ ಇನ್ನಿತರ ದೃಶ್ಯಗಳನ್ನು ಕಂಡು ಹರ್ಷಿತರಾದರು.

ಗೆಲಿಲಿಯೋನಿಗೆ ಗ್ರಹ ನಕ್ಷತ್ರಗಳನ್ನು ವೀಕ್ಷಿಸುವ ಆಸೆಯಾಯಿತು. ರಾತ್ರಿಯ ಕಾಲದಲ್ಲಿ ಆವನು ತನ್ನ ದುರ್ಬೀನನ್ನು ಗಗನದೆಡೆಗೆ ಓರೆ ಮಾಡಿನೋಡಿದ ಗ್ರಹ ನಕ್ಷತ್ರಗಳು ಸಮೀಪದಲ್ಲಿರುವಂತೆ ಸ್ಪಷ್ಟವಾಗಿ ಕಂಡವು. ಗೆಲಿಲಿಯೋ ಮೊದಲಿಗೆ ತನ್ನ ದುರ್ಬೀನಿನ ಸಹಾಯದಿಂದ ಚಂದ್ರನ ಮೈ ವೀಕ್ಷಿಸಿದ, ವೀಕ್ಷಣೆಯಿಂದ ಆವನಿಗೆ ಚಂದ್ರನಲ್ಲಿ ಅರಿಯದ ಜ್ವಾಲಾಮುಖಿ ಪರ್ವತಗಳಿವೆ ಎಂದುಗೊತ್ತಾಯಿತು. ಬೆಳದಿಂಗಳು ಚಂದ್ರನ ಕಾಯ ಪ್ರಕಾಶವಲ್ಲ ಸೂರ್ಯನಿಂದ ಬಂದ ಪ್ರಕಾಶ ಕಿರಣಗಳು ಚಂದ್ರನಿಂದ ಪರಾವರ್ತನೆ ಹೊಂದಿ ಭೂಮಿಯನ್ನು ತಲುಪುತ್ತವೆ ಎಂಬ ಅಂಶವೂ ಆವನಿಗೆ ಮನನವಂತೆಯಾಯಿತು. ಸೂರ್ಯನ ವೀಕ್ಷಣೆಯಿಂದಲೂ ಅನೇಕ ಸಂಗತಿಗಳು ತಿಳಿದು ಬಂದವು. ಸೂರ್ಯ ಅಕಳಂಕನಲ್ಲ. ಸೂರ್ಯನ ಮೇಲೂ ಕಲೆಗಳಿವೆ. ಸೂರ್ಯನು ಭೂಮಿಯ ಸುತ್ತ ತಿರುಗುವುದಿಲ್ಲ. ಆದರೆ ಅದಕ್ಕೆ ಬದಲಾಗಿ ಭೂಮಿಯೇ ಸೂರ್ಯನ ಸುತ್ತ ಸುತ್ತುತ್ತದೆ' ಎಂಬುದನ್ನು ತಿಳಿಸಿದ.

ಗೆಲಿಲಿಯೋನ ಈ ಶೋಧ, ವಿಚಾರಧಾರೆ, ವಾದಗಳು ಅನೇಕ ಆಜ್ಞಾಪಾಲಿಗೆ, ಸಂಪ್ರದಾಯ ವಾದಿಗಳಿಗೆ ಸಂಬರಲಿಲ್ಲ. ಈ ಸಂಗತಿಗಳ ಪ್ರಕಟಣೆಯ ಕಾರಣದಿಂದ ಆವನು ಅನೇಕ ಕಷ್ಟಗಳನ್ನು ಕಷ್ಟಗಳನ್ನು ಎದುರಿಸಬೇಕಾಯಿತು. ತನ್ನ ಸಿದ್ಧಾಂತದ ಬಗೆಗೆ ಪೂರ್ಣ ನಂಬಿಕೆ ಇದ್ದದರಿಂದ ಗೆಲಿಲಿಯೋ ಯಾವುದಕ್ಕೂ ಅಂಜಲಿಲ್ಲ. ಗೆಲಿಲಿಯೋನ ದುರ್ಬೀನಿನ ಶೋಧದಿಂದ ವಿಶ್ವದ ಅನೇಕ ವಿಜ್ಞಾನಿಗಳು ಬೆಳಕಿಗೆ ಬಂದವು. ಆಧುನಿಕ ವಿಜ್ಞಾನ ಯುಗದಲ್ಲಿ, ಸಂಶೋಧನೆಗಳಲ್ಲಿ ದುರ್ಬೀನಿನ ಪಾತ್ರ ಪ್ರಮುಖವಾದುದು ಎಂಬುದನ್ನು ಮರೆಯುವಂತಿಲ್ಲ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಲು ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂದಸರು, ದರ್ಜಿಜೆಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗ್ರಹಿಕೆದ್ದು. ಹೊರೆದ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.



ನಗು ಬಿಂದು

ದಾಹಕ್ಕೆ ಔಷಧಿ

ಓರ್ವನು ಸರಕಾರೀ ಆಸ್ಪತ್ರೆಯನ್ನು ಪ್ರವೇಶಿಸಿ, ಮೆಡಿಕಲ್ ಅಫೀಸರನ್ನು ವಿಚಾರಿಸಿದನು: —

"ಡಾಕ್ಟ್ರೆ! ವಿಪರೀತ ದಾಹ.... ಏನಾದರೂ ಔಷಧಿ ಇದ್ದರೆ..."

"ಯಾಕಯ್ಯಾ, ಹೀಗೆ ಹೊಟ್ಟೆ ಹಾಕುತ್ತಿರುವೆ?.... ಇಲ್ಲಿಂದ ಕೊಡುವ ಔಷಧಿಗಳ ಬಗ್ಗೆ ನಾನು ಖಾತ್ರಿ ಹೇಳಬಲ್ಲೆ; ಯಾವುದೇ ಔಷಧಿಯೂ ದಾಹ ಶಮನವಾಗದಿರದು....."

ಂ ಂ ಂ

ಒಂದು ಜಾಹೀರಾತು

"ಧರ್ಮಪತ್ನಿಗಾಗಿ ಹೇರ್ ಓಯಲನ್ನು ಒಮ್ಮೆ ಹಚ್ಚಿದರೆ ಕೂದಲು ಉದುರುವುದು ನಿಲ್ಲುತ್ತದೆ. ಸೇಂಪ್ಲ್ ಅಪೇಕ್ಷಿಸುವವರಿಗೆ ಒಂದು ತಿಂಗಳಿಗೆ ಬೇಕಾದಷ್ಟು ಓಯಲ್ ಉಚಿತವಾಗಿ ಕೊಡಲ್ಪಡುವುದು...."

—ಎಲ್. ಎಂ. ವಿಜಯನಾರಾಯಣ

Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



11—4—1968

೨೦
ಪೈಸೆ

ಕಥಾ ಪ್ರಪಂಚ

ಸ್ಮಾರಕ

ಬರೆದವರು: ಶ್ರೀ ಎಚ್. ಸುಬ್ರಾಯ ಭಟ್ಟ, ಜೋಪಾಳಿ.

ರಾಗಿಣಿಯ ಕುತ್ತಿಗೆಗೆ ವಿಧವೆಯ ಗುರುತು ಬಿದ್ದು ಎಂಟು ವರ್ಷಗಳೇ ಉರುಳಿ ಹೋದುವು. ಇದ್ದೊಬ್ಬ ಮಗನ ಭವಿಷ್ಯ ನೆನೆದು ಇನ್ನೂ ಜೀವ ಹಿಡಿದಿದ್ದಳು. ಮದುವಿನ ಬಾಲ್ಯಲೀಲೆಯಲ್ಲಿ ತನ್ನ ದುಃಖವನ್ನು ತುಸು ಮರೆತಿದ್ದಳು. ಆದರೂ ಒಮ್ಮೊಮ್ಮೆ ಸಹಿಸಲಸಾಧ್ಯವಾದ ವೇದನೆಯೊಗುತಿತ್ತು.

ಗಂಡ ಸತ್ತು ಶವಸಂಸ್ಕಾರ ಮುಗಿದ ಮರುದಿನವೇ ರಾಗಿಣಿಯನ್ನು ವೈದ್ಯನ ಮನೆಯಿಂದ ಹೊರಹೊಡೆದ್ದನು. ಅಸಾಯಕಳಾದ ರಾಗಿಣಿಗೆ ತವರ್ಮನೆಯೂ ದಿಕ್ಕೆಟ್ಟದ ಕಾರಣ ಪರದೇಶಿಯಂತೆ ಕೂಲಿ ಮಾಡಿ ಜೀವಿಸತೊಡಗಿದಳು. ನ್ಯಾಯವಾಗಿ ಅವಳ ಪಾಲಿಗೆ ಬರಬೇಕಾದ ಸಂಪತ್ತನ್ನು ಅನ್ಯಾಯದಿಂದ ವೈದ್ಯನ ಅಪಹರಿಸಿದ್ದನು.

ಅನಾಥ ವಿಧವೆಯ ಸಹಾಯಕ್ಕಾರೂ ಮುಂದಾಗಲಿಲ್ಲ.

ಪತಿ ಜೀವಂತವಾಗಿರುವಾಗ ರಾಗಿಣಿಗಾವ ಚಿಂತೆಯೂ ಇರಲಿಲ್ಲ. ಮನೆಯಲ್ಲಿ ಅವಳ ಸ್ಥಾನವೂ ಹಿರಿದಾಗಿತ್ತು. ಆದರೊಂದು ದಿನ ಒಮ್ಮಿಂದೊಮ್ಮೆಲೆ ಕಾಣಿಸಿಕೊಂಡ ಕಾಹಿಲೆಗೆ ಒಂದಿರುಳು ರಮೇಶ ತುತ್ತಾಗಿ ಮಡದಿಯನ್ನು ವೈಧವ್ಯ ಸಾದರದಲ್ಲಿ ನೂಕಿ ಕಾಣದ ಲೋಕಕ್ಕೆ ಸಾಗಿ ಹೋಗಿದ್ದನು.

ಅಣ್ಣನ ಸಾವು ಶಂಕರನಿಗೆ ಸಂತೋಷವನ್ನೇ ತಂದಿತ್ತು, ಅಬಲೆ ಅತ್ತಿಗೆಯನ್ನು ಮನೆಯಿಂದ ಹೊರ ನೂಕಲು ಅವನ ಮನ ಸ್ವಲ್ಪವೂ ಹೇಸದಾಯಿತು.

ಕೈಹಿಡಿದ ಪತ್ನಿಯ ಕೈಗೊಂಬೆಯಾಗಿ ನಿಶ್ಚಿಂತೆಯಿಂದಿಳಿದ ಶಂಕರನಿಗೆ ರಾಗಿಣಿಯ ರೋದನ ಕಿವಿಮುಟ್ಟಲಿಲ್ಲ.

ಹೊಟ್ಟೆಯ ಹಸಿವು ಕಣ್ಣಿಗೆ ಕಾಣದಿದ್ದರೂ ಮಡದಿಗಾಗಿ ದುಡಿಯಲು ಮುಂದಾದಳು. ದಿನದ ಕೂಲಿಯಲ್ಲೇನೂ ಉಳಿಯದಿದ್ದರೂ ಯಿಚ್ಚಗೇನೂ ಕೊರತೆಯಾಗಲಿಲ್ಲ.

ನ್ಯಾಯಬದ್ಧವಾಗಿ ಬರಬೇಕಾದ ಸಂಪತ್ತನ್ನು ಪಡೆಯಲು ನ್ಯಾಯಾಲಯ ಹೊರತು ಅನ್ಯದಾರಿಯಿರಲಿಲ್ಲ. ಆದರೆ ಅಬಗೆ ವಕೀಲರನ್ನು ನೇಮಿಸಲು ಅವಳಲ್ಲೇನೂ ಹಣವಿದ್ದಿಲ್ಲ. ಹಾಗಾಗಿ ಹಗಲಿರುಳೂ ಅದೇ ಚಿಂತೆಯಲ್ಲಿಯೇ ಕೊರಗಿ ಸಣ್ಣಾಗುತ್ತಿದ್ದಳು.

ಂ ಂ ಂ

ಕಾಲಚಕ್ರ ಉರುಳುರುಳಿ ಹೋಯಿತು. ಅದರ ಕಾಲಗತಿಯಲ್ಲೇನೂ ವ್ಯತ್ಯಾಸ ಕಾಣದಾಯಿತು. ರಾಗಿಣಿಯ ಜೀವನದಲ್ಲಿ ಮಾರ್ಪಾಡಾಗದಿದ್ದರೂ ಮಗನ ಬೆಳವಣಿಗೆ ಸಲ ಶಿಕ್ಷಣತೊಡಗಿತು. ಉತ್ತಮ ಶಾಲದಲ್ಲಿ ಓದಿಸಿದ್ದರೂ ಭಗವಂತಿಯಂತೆ ಬೆಳೆಸಬೇಕಾಯಿತಲ್ಲವೆಂಬ ಚಿಂತೆಯೇ ಅಧಿಕವಾಗತೊಡಗಿತು.

ಅಗಲೇ ಹತ್ತಾರು ಜನ ವಕೀಲರ ಮನೆ ಬಾಗಿಲನ್ನು ತಟ್ಟಿದ್ದ ಬಂದಿದ್ದಳು, ಅವರ ಮಾಂಪೆ ಅತ್ತು ಕರೆದದ್ದು ವ್ಯರ್ಥವಾಗಿತ್ತು.

ನಿರಾಶೆಯ ಜಾಲದಲ್ಲಿ ಮುಸುಕಿದ್ದರೂ ಪ್ರಯತ್ನಿಸುವುದನ್ನು ಸಂಪೂರ್ಣ ಮರೆತಿರಲಿಲ್ಲ.

ಕೊಪೆಯ ಪ್ರಯತ್ನವೆಂದು ಪ್ರಸಿದ್ಧ ವಕೀಲ ರಾಮರಾಯರಲ್ಲಿಗೆ ಒಂದು ಮಾಂಜಾನ ಹೊರಟಳು.

ರಾಯರು ಹಾಸಿಗೆಯ ಂದಿದ್ದು ಮುಖ ತೊಳೆದು ಹೊರ ಬರುವಾಗಲೇ ರಾಗಿಣಿಯ ದರ್ಶನವಾಯಿತು.

ಕುರ್ಚಿಯಲ್ಲಿ ಕೂಡುತ್ತಾ "ಏನಮ್ಮಾ! ಯಾಕೆ ಬಂದೆ ಏನಾಗಬೇಕಿತ್ತು?" ಎಂದು ಕನಿಕರದಲ್ಲೇ ಕೇಳಿದರು.

ಕಣ್ಣೀರ ಧಾರೆಹರಿಸುತ್ತಾ ತನ್ನ ಕರುಣಾಜನಕ ಕಥೆಯನ್ನು ಹೇಳಿ ಮುಂದೆ ತನ್ನನ್ನುದ್ಧರಿಸಬೇಕೆಂದು ಕಾಲು ಹಿಡಿದ ಬೇಡಿದಳು.

ಕ್ಷಣಕಾಲ ಯೋಚಿಸಿದ ರಾಯರಿಗೂ ಮುಂಕ ಉಂಟಾಯಿತ.

"ಏನಾದರೂ ರಿಕಾರ್ಡು ತಂದಿರುವೆಯಾ?" ಎಂದು ಭಯವಾಗಿ ಕೇಳಿದರು.

'ಅನಾಥಳಾದ ತನ್ನಲ್ಲಾವ ರಿಕಾರ್ಡೂ ಇಲ್ಲ"ವೆಂದನು.

'ಆಗಲಿ ನಿನ್ನಿಂದಾದಷ್ಟು ಪ್ರಯತ್ನಿಸುವೆ. ನಾನೀಗ ಆಗತ್ಯ ಮದ್ರಾಸಿಗೆ ಹೋಗಬೇಕಾಗಿದೆ. ಅಲ್ಲೊಂದು ಕೇಸಿನ ತನಿಖೆಯಿದೆ. ಈಗಿಂದೀಗಲೇ ಹೊಂಡದಿದ್ದರೆ ಮತ್ತೆ ಟ್ರೈನು ತಪ್ಪುತ್ತೆ. ನಮಗೂ ಕೆಲಸಕ್ಕೊಂದು ಜನ ಬೇಕಿತ್ತು. ಇನು ನಮ್ಮಲ್ಲಿಯೇ ಇದ್ದುಬಿಡು." ಎಂದು ಬೇಗ ಬೇಗ ಡ್ರೆಸ್ಸು ಬದಲಾಯಿಸಿ ಲಾಫಿ ಕಡಿದು ಹೊರ ಬರುವಾಗಲೇ ಗಂಟೆ ಹತ್ತು ಬಾರಿಸಿತು.

ಎಲ್ಲಿ ಟ್ರೈನು ತಪ್ಪುತ್ತೋ ಎಂದು ವೇಗವಾಗಿಯೇ ಫಿಲ್ಟಾಣದತ್ತ ಹೆಜ್ಜೆ ಹಾಕತೊಡಗಿದರು.

ದಾರುಕಂಲು ಹಾಕುತ್ತಾ ಓಡುವ ರಾಯರು ದೂರದಿಂದಲೇ ಟ್ರೈನು ಹೊರಟ ದುದನ್ನು ಕಂಡು ನಿರಾಶರಾದರು.

ಭಾರೀ ಕೇಸೊಂದು ತನ್ನ ಅಜಾಗರೂಕತೆಯಿಂದ ಕಟ್ಟು ಹೋಗುವುದನ್ನು ನೆನೆದು ಮತಿಭ್ರಾಂತರಾದರು.

ರಾಯರ ಕೋಪಕಲ್ಲೆ ರಾಗಿಣಿಯತ್ತ ತಿರುಗಿತು.

"ತಾನು ಹೊರಡಲು ತಡವಾದುದಕ್ಕೆ ಕಾರಣ ಅವಳು. ಆ ಹಾಳು ಮೋರೆ ಹೊತ್ತು ಮನೆ ಬಾಗಿಲಿಗೆ ಮಂಜಾನೆ ಬಂದು ನನ್ನ ಕೆಲಸ ಹಾಳುಮಾಡಿದಳು. ಬೆಳಗ್ಗೆದ್ದು ವಿಧವೆ ಎದುರಾದರೆ ಅಂದಿನ ದಿನವೇ ಹಾಳಾಗುವುದೆಂಬ ಮಾತು ಕಾಯಿತ್ಯವೆಂಬ ದೀಗ ನಿದರ್ಶನಕ್ಕೆ ಇಂತು. ಅವಳ ಮುಖವಲೋಕನವೂ ದುರದೃಷ್ಟಕರ. ಈಗಿಂದೀಗಲೇ ಅವಳನ್ನು ಮನೆಬಿಟ್ಟು ಓಡಿಸದಿದ್ದರೆ ಇನ್ನಾವ ಅನಾಹುತವಾಗುವುದೋ!' ಎಂಬ ಯೋಚನೆಯ ಸುಳಿಗಾಳಿಯಲ್ಲಿಯೇ ಮಹಲೆಯತ್ತ ಹೆಜ್ಜೆ ಹಾಕಿದರು.

ರಾಯರು ಮನೆಗೆ ಬರುವಾಗ ರಾಗಿಣಿ ಮನೆಗೆಲಸದಲ್ಲಿ ಮಗ್ನಳಾಗಿದ್ದಳು.

ತನ್ನ ಮಡದಿ ಭವಿಷ್ಯದ ಭವ್ಯ ಸೌಧವನ್ನು ಮನದಲ್ಲಿಯೇ ಕಟ್ಟಿ ಹೊರಟಿದ್ದಳು.

ಮನೆಗೆಲಸದಲ್ಲಿ ಲ್ಲೀನಳಾದ ರಾಗಿಣಿ ಚಪ್ಪಲು ಸದ್ದಿಗೆ ರಾಯರ್ಮುಖ ನೋಡಿ ಬೆದರಿದಳು.

ಆ ಮುಖದಲ್ಲಾಗ ಶಾಂತ ಸೌಮ್ಯತೆಗೆ ಮೊಯವಾಗಿ ರುದ್ರ ಭೀಕರ ದೃಶ್ಯ ತಾಂಡವವಾಡುತಿತ್ತು.

ರಾಯರ ಪತ್ನಿ ಮಕ್ಕಳೂ ರಾಯರ ಕೋಪದುರಿ ಮುಖ ಕಂಡು ತಬ್ಬಿಬ್ಬಾದರು.

ಕೋಪದಾವೇಶದಲ್ಲಿ ರಾಯರಿಗೆ ಮಾತೇ ಬಾರದಾಯಿತು.

"ನಿನ್ನ ಹಾಳು ಮುಖವನ್ನೆಂದೂ ನನಗೆ ತೋರಬೇಡಿರು." ಎನ್ನ ಬೇಕಾದರೆ ಸಾಕು ಬೇಕಾಯಿತು.

ರಾಗಿಣಿಗಾವುದೂ ಅರ್ಥವಾಗದೆ ಬೊಂಬೆಯಂತೆ ನಿಂತು ನೋಡುತ್ತಿದ್ದಳು. ತನ್ನಿಂದಾವ ಅನರ್ಥ ಘಟಿಸಿತೆಂದೇ ಅವಳಿಗರ್ಥವಾಗಿರಲಿಲ್ಲ.

"ಏನು ಹೊರಡುವೆಯೋ, ಹೊರದ ಬ್ಬಲೇ?" ಎಂದು ಎರಡು ಹೆಜ್ಜೆ ಮುಂದಿಟ್ಟರು.

ಮಾನವಂತಳಾದ ರಾಗಿಣಿ ಪ್ರತಿಯೂಡದೆ ತನ್ನ ದುರ್ವಿಧಿಗಾಗಿ ಅಳುತ್ತಾ ಹೊರ ಹೊರಟಳು.

ರಾಮಂಗ ಉಸ್ಸೆನ್ನುತ್ತಾ ಆರಾಮ ಕುರ್ಚಿ ಯಲ್ಲಿ ಕುಸಿದು ಕುಳಿತರು.

ಮಡದಿ ಪತಿಯ ನೆರವಿಗೆ ಬಂದು ನ್ಯಾಯದ ನುಡಿಯ ಂದಲೇ ರಾಯರ ಕೋಪದ ಕಾರಣವರಿತು ರಾಗಿಣಿಯನ್ನು ಬಾಯ್ತುಂಬ ಶಪಿಸಿದರು.

ರಾಯರ ಮನೆಯಿಂದ ಹೊರಬಿದ್ದ ರಾಗಿಣಿಗೆ ಪ್ರಪಂಚವೇ ಬೇಡವೆನಿಸಿತು. ಅಶಾ ಸೌಧದ ಕೆಳಗೆ ಕಾಣುವ ಪೊದಲೇ ಮೊಯವಾದುದನ್ನು ನೆನೆದು ಕಣ್ಣೀರುಗರೆದಳು. ಹಗ್ಗವೆಂದು ಹಿಡಿಯ ಹೋದುದೇ ಹಾವಾಗಿ ಕಡಿತ್ತು.

ಎಲ್ಲವಕ್ಕೂ ವಿಗಿಲಾಗಿ ಅವಳ ಅತ್ಮಾಭಿಮಾನಕ್ಕೆ ಒರೆ ಎಳೆದಂತಾಯಿತು. ರಾಯರ ಮನೆಬಿಟ್ಟ ಹೆಜ್ಜೆ ದೂರ ನಡೆಯಲೂ ಕಾಲು ಬಾರದಂತಾಯಿತು.

ಹಾಳು ಬೇಗುಲದಲ್ಲಿ ಕುಳಿತು ಮನವನ್ನಪ್ಪಿ ಅಳುವಿನ ಹೊಳೆ ಹರಿಸಿದಳು.

ರಾಗಿಣಿ ಮರೆಯದರೂ ಅಂದಿನ ಘಟನೆ ರಾಯರ ಮನದಿಂದ ದೂರಾಗಲಿಲ್ಲ.

ಕತ್ತಲು ಕಳೆದು ಮತ್ತೆ ಬೆಳಗಾಯಿತು. ಬೆಳಗಿನ ರೇಡಿಯೋವಲ್ಲಿ ದಿನದಂತೆ ಉದಯರಾಗವಿದ್ದಿಲ್ಲ. ಬದಲು ಸಂತಾಪದ ಸುದ್ದಿಯೊಂದು ಹೊರ ಸೂಸಿತು.

"ನಿನ್ನೆ ಬೆಳಗ್ಗೆ ಮದ್ರಾಸಿಗೆ ಹೊರಟ ರೈಲು, ಫಿಲ್ಟಾಣದಿಂದ ನಾಲ್ಕತ್ತುಮೈಲು ದೂರದಲ್ಲಿ ಹಳಿತಪ್ಪಿ ಹಳ್ಳಕ್ಕೆ ಮಗುಚಿ ಮುಳುಗಿ ಹೋಯಿತು. ಅ ಬಗ್ಗೆ ತನಿಖೆ ನಡೆಯುತ್ತಿದೆ. ಎಂಬುದನ್ನು ಕೇಳಿ ರಾಯರು ಮೂಕರಾಗಿ ಕುಳಿತು ಬಿಟ್ಟರು.

ವಿಧವೆಯ ಮುಖವಲೋಕನವೇ ಅಪಶಕುನವೆಂದಿದ್ದವರಿಗೆ ಈಗ ಶುಭ ಶಕುನವಾಗಿ ತೋರ ತೊಡಗಿತ್ತು.

ತನ್ನ ಜೀವ ಉಳಿಯಲು ಕಾರಣಳಾದ ರಾಗಿಣಿ ದೇವತೆಯಾಗಿ ಕಾಣ ತೊಡಗಿದಳು.

ರಾಯರ ಪತ್ನಿಯಂತೂ ತನ್ನ ಮಾಂಗಲ್ಯವನ್ನುಳಿಸಲು ಕಾರಣಳಾದ ರಾಗಿಣಿಯನ್ನು ಹುಡುಕಿ ತರುವಂತೆ ಒತ್ತಾಯಿಸಿದಳು.

(ಹನ್ನೆಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾಕೀಟುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಿಷ್ಟ ಹೊಟೆಲ್.

ಫೋನ್ 226

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೩೨	೧೧—೪—೧೯೭೮	No. 32

ಜೀವನದ ಕಾಡುದಾರಿ

ದೇಶದ ನಾನಾ ಮೂಲೆಗಳಲ್ಲಿ ನಾನಾ ಕಾರಣಗಳಿಂದ ಗಲಭೆ-ಗೊಂದಲಗಳಿಂದು ಸರ್ವ ಸಾಮಾನ್ಯವಾಗಿ ಬಿಟ್ಟಿವೆ. ಕರ್ನಾಟಕ, ಅಸಾಮ, ಉತ್ತರ ಪ್ರದೇಶ, ಆಂಧ್ರ ಪ್ರದೇಶ ಹೀಗೆ ಹೆಚ್ಚಿನ ರಾಜ್ಯಗಳಲ್ಲಿ ಆಗಾಗ ಜಾತೀಯ ಗಲಭೆಗಳೂ ನಡೆದುವು. ಬರುಗಾಳಿ ಬೀಸಿದ ಮೇಲೆ ವನ್ಯ ಪ್ರದೇಶವು ವಿಧವೆಯಂತಾದ ಬಳಿಕ ಶಾಂತಿ ನೆಲಸುವುದು ಸಹಜ; ಕೋಮುವಾರು ಗಲಭೆಗಳ ಘಂಟರ ಪ್ರಾಹಾರದ ಅವಶ್ಯಕತೆಯನ್ನು ನೆನೆದುಂದು ಶಾಂತಿ ಸ್ಥಾಪನೆದು ಪ್ರಯತ್ನಗಳು ನಡೆದು ಶಾಂತಿ ಸಮಿತಿಗಳ ರಚನೆಯಾಗುವುದೂ ಇವು ಒಂದು ಬಗೆಯಾಗಿ ಕಾರ್ಯ ನಡೆಸಿ ಮತ್ತೆ ನಿಷ್ಕ್ರಿಯವಾಗುವುದೂ ಅನುಭವದಾಗುವಲ್ಲ. ಕೋಕದಲ್ಲಿ ನಡೆಯುವುದೂ ಇದೇ. ದ್ವೇಷ-ಸೂಯೆಗಳ ಉರಿ ಹೃದಯ ಭಟ್ಟಿಯಾಗ್ಲ ಕುದಿದಾಗ ಅಶಾಂತಿ ಹೆರಡುತ್ತದೆ. ವ್ಯಕ್ತಿ—ವ್ಯಕ್ತಿ; ಸಮೂಹ—ಸಮೂಹ, ದೇಶ—ದೇಶಗಳು ಹೋರಾಡುತ್ತವೆ, ಈ ಶತಮಾನದ ಪೂರ್ವಾರ್ಧದಲ್ಲೇ ಎರಡು ಲೋಕಸಂಗ್ರಾಮಗಳೂ ಸಂಗ್ರಾಮಾನಂತರ ಜನಾಂಗ ಸಂಘ ಸಂಯುಕ್ತ ರಾಷ್ಟ್ರ ಸಂಸ್ಥೆಗಳ ಸ್ಥಾಪನೆಯೂ ನಡೆದಿವೆ ಜನಾಂಗ ಸಂಘವು ಚಕ್ರಹಿಂಸೆಗೆ ಸುರಿಯಾಯಿತು. ಇದೀಗ ಸಂಯುಕ್ತ ರಾಷ್ಟ್ರ ಸಂಘದ ಅವಸ್ಥೆಯೂ ಅದಕ್ಕಿಂತ ಬೇರೆಯಾಗುವುದಿಲ್ಲ. ಜನಾಂಗ ಸಂಘದಂತೆ ಇದು ಕಾಲ ಮೃತ್ಯುವನ್ನಪ್ಪದಿದ್ದರೆ, ಅದಕ್ಕೆ ರಾಷ್ಟ್ರ—ರಾಷ್ಟ್ರಗಳ ಹೃದಯದಲ್ಲಿರುವ ಶಾಂತಿಯ ಬಗ್ಗಿನ ಕಾಳಜಿಗಿಂತ ಪರ ರಾಷ್ಟ್ರಗಳ ಶಕ್ತಿಯ ಬಗ್ಗಿರುವ ಸಂದೇಹವೇ ಕಾರಣವನ್ನಬೇಕು.

ಭಾರತದಲ್ಲಿ ಜಾತೀಯ ಗಲಭೆಯ ಬೀಜವನ್ನು ಬಿತ್ತಿದವರು ಬ್ರಿಟಿಷರು. ಎರಡು ಬಣಗಳನ್ನು ಹೊಡೆದಾಡಿಸಿ ಅವರು ವಿನೋದ ನೋಡುವ ಪ್ರವೃತ್ತಿಯವರು. ಸ್ವಾತಂತ್ರ್ಯದಲ್ಲಿರುವಾಗ ದೇಶದಲ್ಲಿಯೂ ಸ್ವೈರವಾಗಿ ಬ್ರಹತ್ ನರರಹಳ್ಳಿ ಕೋಮುವಾರು ಗಲಭೆಗಳು ನಡೆಯುತ್ತಿದ್ದುವು ಇವು ದೊಡ್ಡ ಹಿಂಸಾಕಾಂಡಗಳಾಗುತ್ತಿದ್ದುವು. ಆದರೆ, ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಜಾತೀಯ ಗಲಭೆಗಳು ನಡೆಯುತ್ತಿದೆಯಾದರೂ ಅವು ಉಗ್ರ ಸ್ವರೂಪವನ್ನು ಹೊಂದಿರುವುದಿಲ್ಲ. ಇದು ನಿಜವೆಂದು ಒಪ್ಪಿಕೊಳ್ಳಬೇಕು; ಹಿಂದೆ ನಡೆಯುತ್ತಿದ್ದ ಜಾತೀಯ ಗಲಭೆಗಳು ಕ್ರಾಂತಿಯ ಜ್ವಾಲೆಯನ್ನು ಹರಡಿಸುತ್ತಿದ್ದುವು; ವಿದೇಶರಾಧಿಗಳನ್ನು ಅಧಿಕ ಸಂಖ್ಯೆಯಲ್ಲಿ ಹಿಂಸೆಗೀಡು ಮಾಡುತ್ತಿದ್ದುವು: ಭೀಷಣತೆಯ ಪ್ರತೀಕವೆನಿಸುತ್ತಿದ್ದುವು. ಪರಿಣಾಮವಾಗಿ, ಜನಜೀವನವೇ ಅಸ್ತವ್ಯಸ್ತವಾಗುತ್ತಿತ್ತು; ತಲ್ಲಣಗೊಂಡ ಜನತೆಗೆ ಶೇ ಹೋಗುವುದೂ ಅನಿವಾರ್ಯವೆನಿಸುತ್ತಿತ್ತು. ಆದರೆ, ಇಂದು ಇಂತಹ ಪರಿಸ್ಥಿತಿಯಿರುವುದಿಲ್ಲ. ಗಲಭೆ ನಡೆಯುತ್ತದೆ; ಕೆಲವೊಂದು ವಿಶ್ವ ಜೀವಿತಗಳಿಗೆ ಹಾನಿ ಕಟ್ಟಿತ್ತದೆ; ಮುಂದೆ ತೋರಿಕೆಗೆ ಶಾಂತವಾಗುತ್ತದೆ. ಹಿಂದಿನ ಉಗ್ರತೆಯಾಗಲೀ ವ್ಯಾಪಕತೆಯಾಗಲೀ ಭೀಷಣತೆಯಾಗಲೀ ಇಂದಿಲ್ಲ. ಇಂದ ಮಾತ್ರಕ್ಕೆ ನಾವು, ನಮ್ಮ ಜನ ಸುಧಾರಿಸಿದ್ದೇವೆಯೆ? ಸುಧಾರಿಸಿಕೊಂಡಿದ್ದರೆ, ಈ ಗಲಭೆಗಳು ಪದೇ ಪದೇ ಮರುಕೊಳಿಸುವುದೇಕೆ? ಜಗತ್ತಿನಲ್ಲಿ ಯುದ್ಧ ನಡೆಯುತ್ತಿಲ್ಲ ಎಂದ ಮಾತ್ರಕ್ಕೆ ರಾಷ್ಟ್ರ—ರಾಷ್ಟ್ರಗಳಲ್ಲಿ ತಿಳುವಳಿಕೆ ಮೂಡಿದೆ; ಸ್ನೇಹಲತೆ ಚಿಗುರಿದೆ ಎಂದು ಅರ್ಥವಲ್ಲ. ಕ್ರಾಂತಿಯ ದಾವಾಗ್ನಿ ಒಳಗಿಂದೊಳಗೇ ಉರಿಯುತ್ತದೆ; ಸೂಕ್ತ ಅವಕಾಶ ಪ್ರಾಪ್ತವಾದಾಗ ಅದು ಭುಗಿಲೆದ್ದುತ್ತದೆ. ಹಾಗೆಯೇ ಈ ಜಾತೀಯ ದ್ವೇಷ ಭಾವನೆ ಬುಡದಿಂದ ಕಿತ್ತು ಹೋಗದೆ, ಗಲಭೆಯ ಬೀಜ ನಾಶವಾಗುವುದಿಲ್ಲ. ಇಂದಾಗುತ್ತಿರುವುದೆಂದರೆ, ಸಿಡಿದೆದ್ದ ಹಾವನ್ನು ಬುಟ್ಟಿಯೊಳಗೆ ಇಡುವ ಸಾಹಸ ಮಾತ್ರ. ಇದರಿಂದ ಕೋಮುವಾರು ಗಲಭೆಗಳು ಯಾವ ಕಾಲಕ್ಕೂ ಎಲ್ಲಿಯೂ ಏಳಬಹುದು. ಆದರೆ, ಒಂದು ಸಂಗತಿ ನಿಜ. ಹಿಂದೆ ನಡೆಯುತ್ತಿದ್ದ ಗಲಭೆಗಳು ಅಕಸ್ಮಾತ್ತಾಗಿ ನಡೆಯುತ್ತಿದ್ದುವು. ಜನತೆ ಸ್ವರಕ್ಷಣೆಯನ್ನು ಮಾಡಿಕೊಳ್ಳಲು ಅಸಮರ್ಥವಿತ್ತು; ದಾವಾಗ್ನಿಯಂತೆ ಅದು ಹರಡಿ, ಹಿಂಸಾಕಾಂಡವೆನಿಸುತ್ತಿತ್ತು. ಸರಕಾರ ಇತ್ತ ಲಕ್ಷ್ಯಹರಿಸುವುದರೊಳಗೇ ನಡೆಯಬಹುದಾದಷ್ಟು ಅನಾಹುತಗಳು, ಹಿಂಸೆ ನಡೆದು ಹೋಗುತ್ತಿದ್ದುವು. ಸರಕಾರದ ಸಹಾಯವನ್ನೇ ನಂಬಿಕೊಂಡಿದ್ದರೆ, ಇಂದಿಗೂ ಈ ಗೊಂದಲಗಳು ಉಗ್ರರೂಪ ತಾಳುತ್ತಿದ್ದುವು. ಆದರೆ, ಇಂದು ಜನತೆ ಸ್ವರಕ್ಷಣೆಯನ್ನು ಮಾಡಿಕೊಳ್ಳುವುದನ್ನೂ ತುಸು ಕಲಿತುಕೊಂಡಿದೆ. ಹಾಗಾಗಿ ಗೊಂದಲಗಾರರಿಗೂ ಧೈರ್ಯ ಕಡಮೆಯಾಗಿದೆ. ಉಷ್ಣತೆ ಅತ್ಯಂತ ಏರಿದಾಗ ಬಿಸುಗಾಳಿ ಬರುವಂತೆ ಅಸಹನೆ, ದ್ವೇಷ, ಹಿಂಸಾ ಪ್ರವೃತ್ತಿಗಳು ಸುಂಟಿತುಳುಕಾಡಿದಾಗ ಮಾತ್ರವೇ ತುಳುಕಿದ ಅಂಶ ಗೊಂದಲಗಳ ರೂಪದಲ್ಲಿ ಹೊರ ಬರುತ್ತದೆ.

ಕಾಡು ಮಾರ್ಗದಲ್ಲಿ ನಾವು ನಡೆಯುವಾಗ ಎಚ್ಚರವಾಗಿಯೇ ಇರುತ್ತೇವೆ. ಕ್ರೂರ ಪ್ರಾಣಿಗಳು, ಜಂತುಗಳು ಬಾರದುಲ್ಲಿ ಅಂಡಲೆಯುತ್ತವೆ, ಅವು ನಮಗೆ ಯಾವ ಕಾಲದಲ್ಲೂ ಅಪಾಯವೊಡ್ಡಬಹುದೆಂಬುದು ನಮಗೆ ಗೊತ್ತಿರುತ್ತದೆ. ಆದರೆ, ರಾಜಮಾರ್ಗದಲ್ಲಿ ನಡೆಯುವಾಗ ಇಂತಹ ಭಯ ಇರುವುದಿಲ್ಲ. ನಮ್ಮ ನಿತ್ಯ ಜೀವನ ಮಾರ್ಗವಾದರೂ ಇಂದು ಕಾಡುದಾರಿಗಿಂತ ಹೆಚ್ಚು ಒಳ್ಳೆಯದಿದೆ ಎನ್ನುವಂತಿಲ್ಲ. ರಾಜಕೀಯ ಪಕ್ಷಗಳು, ಸರಕಾರಗಳು, ಆಸಕ್ತಪಟ್ಟ ಭದ್ರವ್ಯಕ್ತಿ—ಸಮೂಹಗಳೂ ಈ ಕಾಡುದಾರಿಯಲ್ಲಿ ವಿಷ ಜಂತುಗಳನ್ನು, ಕ್ರೂರ ಹಿಂಸ್ರ ಪ್ರಾಣಿಗಳನ್ನೂ ಛೂ ಬಿಡುತ್ತಿದ್ದಾರೆ. ಇದನ್ನು ನಾವೂ ನಮ್ಮ ಜಪ ಅರ್ಥವಾಡಿಕೊಂಡಿದೆ; ಸ್ವರಕ್ಷಣೆಗೆ ಸರಕಾರವನ್ನೇ ಸಂಪೂರ್ಣ ನಂಬುವುದರಿಂದ ಪ್ರಯೋಜನವಿಲ್ಲ, ಸುಖವೂ ಇಲ್ಲವೆಂದು ಪ್ರಾಥಮಿಕ ರಕ್ಷಣೆಗೆ ಸಿದ್ಧತೆ ಮಾಡಿಕೊಂಡಿದೆ. ಕೆಲವೊಮ್ಮೆ ಇದುವೇ ಕೋಮುವಾರು ಗಲಭೆಗಳಿಗೆ ಪ್ರೇರಕ ಶಕ್ತಿಯಾಗಲೂ ಬಹುದು. ಜಾತೀಯತೆಯ ವಿಷಬೀಜವನ್ನು ಸರಕಾರವೇ ಅನೇಕ ಪ್ರಕಾರವಾಗಿ ಪೋಷಿಸಿದೆ; ಅಂಕುರಿಸುತ್ತದೆ; ಬೆಳೆಸುತ್ತದೆ. ಸಾರ್ವತ್ರಿಕ ಶಾಂತಿಯನ್ನು ಶಿಸ್ತು—ಸಂಯಮಗಳ ಅನುಷ್ಠಾನದಿಂದ ನೆಲೆಗೊಳಿಸುವುದು ಸರಕಾರದ ಕರ್ತವ್ಯಗಳಲ್ಲಿ ಒಂದು. ಆದರೆ, ಅಧಿಕಾರಿಗಳ ಮತ್ತು ಅಸಾಯಮಿದಳ ಮುಂದೆ ಸರಕಾರವು ಕೈಕಟ್ಟಿ ಕುಳಿತುಕೊಂಡ ಉದಾಹರಣೆಗಳು ದೇಶದ ಮೂಲೆ ಮೂಲೆಗಳಲ್ಲಿ ದೊರೆಯುತ್ತವೆ. ಕಾನೂನು ವ್ಯವಸ್ಥೆಯು ತೀರ ಶಿಥಿಲವಾಗಿರುವಾಗ ಜನತೆ ಊರನ್ನು ನಂಬಿ ಕೈಕಟ್ಟಿ ಕುಳಿತಿರಬೇಕು? ಫಲವಾದ ಕೋಮುವಾರು ಶಾಂತಿಯ ಕತ್ತಿ-ಚೂರಿಗಳನ್ನು ತೋರಿಸಿ ಬೆದರಿಸುವುದರಿಂದ ಸಾಧ್ಯವಿಲ್ಲ; ಸರಕಾರ ಕಾಡುಗಳಿಂದ ಅವೃತವಾದ ಜನ ಜೀವನ ಮಾರ್ಗವನ್ನು ರಾಜ ಮಾರ್ಗವಾಗಿ ಪರಿವರ್ತಿಸಬೇಕು; ವಿಷ ಜಂತುಗಳನ್ನೂ ಕ್ರೂರ ಹಿಂಸ್ರ ಪ್ರಾಣಿಗಳನ್ನೂ ಫಿರ್ಯಾಕ್ಷಿಣ್ಯವಾಗಿ ದಂಡಿಸಬೇಕು. ಆದರೆ, ಗಾಜನ ಮನೆಯಲ್ಲಿ ನೆಲಸುವವನು ಪರರ ಮನೆಗೆ ಕಲ್ಲು ಹೊಡೆಯುವ ಸಾಹಸ ಮಾಡಿಯಾನೆ?

ಒಳ್ಳೆದನು ಕಳ್ಳನೊವನೆ?

ಮಾನವನ ಗುಣ-ಸ್ವಭಾವಗಳು ಆತನ ಸಹವಾಸಿಗಳ ಗುಣ-ಸ್ವಭಾವಗಳಿಂದ ಪ್ರಭಾವಿತವಾಗುತ್ತವೆ ಎಂಬುದು ಸ್ವಯಂಸಿದ್ಧ. ಕವಿಯೊಬ್ಬನೇ ಸ್ವಜನೇಷು ಸಬ್ಬಂಧಿಯಾನು ಅಯೋಗ್ಯನೆಂದಿದೆ. ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ರಕ್ತ ಪರೀಕ್ಷೆ ಸ್ವಭಾವವನ್ನು ಅಳೆದಾಗ, ಬೆಳಗಾಂವಿ ಜಿಲ್ಲೆಯ ಭೀಭತ್ಸಕ್ರೀಡೆ—ಭೀಕರ ಕೊಲೆಗಳಲ್ಲಿ ಮೊದಲ ಸ್ಥಾನವನ್ನು ಕಳೆದ ವರ್ಷಗಳಿಂದ ಉಳಿಸಿಕೊಂಡಿದೆ ಎಂಬ ಸತ್ಯ ಕೇತಪ ಗಳಿಸಿದೆ.

ಪರಿಚಯ ಸುಧೆ

ಪರೋಪಕಾರ ಕಾರ್ಯ ಜಂಜಾರಂ
ಪ್ರಕೃತಿಗೆ ವಿಪರೀತವಾದಿದಂ ।
ಪರಿಹಾರ ಕಾಂಡ ಸಂ ಮಿತ್ರಂ
ಪರಕಾರಂ ಪರಿಹಾರಮುಂ ॥

ಹಿಂದೆಂದೂ ಕಾರ್ಯವನ್ನು ಕೈಯಿಕ್ಕುವುದಕ್ಕೆ ಮುಂದೆ ಪರಿಣಿಸ್ವಭಾವವನ್ನು ನುಡಿಯುತ್ತಿರುವ ಮಿತ್ರವನ್ನು, ಒಳಗೆ ವಿಷ ತುಂಬಿ ಮೇಲ್ಮೈ ಹಾಲು ಕಾಣುತ್ತಿರುವ ಗಡಿಗೆಯನ್ನು ಕೈಬಿಡುವಂತೆ ದೂರವಿಡಬೇಕು.

ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದ ಅತ್ಯಂತ ಸುಸಂಸ್ಕೃತ ಜಿಲ್ಲೆಯೆಂದು ಹೆಸರಾಗಿದ್ದು ಇದು ಈ ಕ್ರೀಡೆಯಲ್ಲಿ ಬಹಳಷ್ಟು ಹಿಂದೆ ಬಿದ್ದಿತ್ತು. ಇದೆಯ ನಡಿಗೆ ಎನ್ನೋಣ ಬೇಕಾದರೆ. ಆದರೆ, ಈಗೀಗ ಅದೂ ಕನ್ನ ರೆಕಾರ್ಡನ್ನು ಉತ್ತಮ ಪಡಿಸುತ್ತಿದೆಯೆಂದು ವರದಿಯಾಗಿದೆ. "ಒಳ್ಳೆದರ ಒಡನಾಡಿದ ಕಳ್ಳನೊಳ್ಳೆದನಕ್ಕು, ಒಳ್ಳೆದನು ಕಳ್ಳನೊಡಗೂಡೆ ಅವ ಶುದ್ಧ ಕಳ್ಳನೇ ಅಕ್ಕು...." ಎಂದು ಸಾಡಿದ ಲೋಕ ಕವಿ ಸರ್ವಜ್ಞನ ಪುಡಿ ಮತ್ತೊಂದು ಬಾರಿ ಸತ್ಯವಾಯಿತು.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಶೀಘ್ರ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾದಂತಾಗುವುದು.

ಅಂತೂ ಈ ತಿಂಗಳಾಂತ್ಯದ ಒಳಗೆ ಯಾವದೇ ಉತ್ತರವಿಲ್ಲದಿದ್ದರೆ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸುತ್ತೇವೆ. ಅದನ್ನು ಸ್ವೀಕರಿಸುವಂತೆ ವಿನಂತಿ.

ಮ್ಯಾನೇಜರ್, ನವಯುಗ.

ನರಸಣ್ಣನ ಸರಸ



ನಾಗಾ ಬಂಡಾಯಗಾರರ ಚೀನಾದ ನಂಟಾಯದಿಂದ ನಮ್ಮ ಮೇಲೆ ಏರಿ ಬರುತ್ತಾರಂತೆ! ಆಗ...

ಮುಖಚಿತ್ರ

ಕಡಿಯಾಳ ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿಗಳು ಅಭಿನಯಿಸಿದ "ಕಾನ್ವೆಂಟ್ ಶಾಳಗ"ದ ರಂಜನೀಯ ಎಂಡು ದೃಶ್ಯಗಳು.

ಗೇಹರಾಜ್ಯದಲ್ಲಿ

ಯಾವ್ದು ಸಾಯುದು, ಕೋಲು ಮುರಿಯದು

"ನೋಡ್ರಿ, ಅಧಿಕಾರ ಅಷ್ಟೋದು ಹೇಗೆ ಕೆಲಸ ಮಾಡಿಸುತ್ತೇಂತ...."

"ಯಾಕೆ? ಏನಾಯ್ತೂದ?"

"ಅಲ್ರಿ, ಚುನಾವಣೆ ವರ್ಷ ಹೊಸ ತೆರಿಗೆ ಹಾಕದಿರುವ್ದು, ಹೆಲವಾರು ಕಾರ್ಯಯೋಜನೆಗಳನ್ನು ಆರಂಭಿಸುವ್ದು, ಒಳ್ಳೆಯ ಕಾಯದೆಗಳನ್ನು ಮಾಡುವಲ್ಲಿ ಉತ್ಸಾಹ ತೋರಿಸುವ್ದು..."

"....ಇತ್ಯಾದಿ ಇತ್ಯಾದಿ..."

"ನಮ್ಮ ದೇಶಕ್ಕೆ ಮಾತ್ರ ಸೀಮಿತವಾದ ಬುದ್ಧಿವಂತೀಯ ರಾಜನೀತಿ ಎಂದು ತಿಳಿದು ಕೊಂಡಿದ್ದೆ...."

"ಇರಲಿ, ಈಗೇನಾಯ್ತು?"

"ಅಲ್ರಿ, ಏನೂ ತಿಳಿಯದವರಂತೆ ಮಾತಾಡ್ತಾ ಇದೀರಲ್ಲಾ?'

"ಅಯ್ಯೋ, ವಿಷಯ ಏನೂಂತ ತಿಳೀದೆ ಕೋದರೆ ಮಾಡೋದಾದ್ರೂ ಏನು? ಹೇಳೋದಾದ್ರೂ ಏಕು?"

"ಅಂತೂ ನನ್ನ ಬಾಯಿಂದಲೇ ಕೇಳಬೇಕು...."

'ಶಂಖದಿಂದಿಳದದ್ದೇ ತೀರ್ಥ...."

"ನೋಡಿ, ಅಮೆರಿಕೆ...'

"ಓ, ಅದೇ ತಾನೆ? ವಿಯತನಾಮದಲ್ಲಿ ಬಾಂಬುದಾಳಿ ನಿಲುಗಡೆಗೆ ಆಜ್ಞೆ ಮಾಡಿದ್ದು?"

"ಹ್ಹೂಂ, ಇದೆಲ್ಲಾ ಗೊತ್ತಿದ್ದೂ...."

"ಲೋಕದಲ್ಲಿ ಅನೇಕಾನೇಕ ಘಟನಾವಳಿ ಘಟನೆಗಳು ನಡೆಯುತ್ತವೆ. ಅಲ್ಲಿ ಅಷ್ಟೆಲ್ಲಾ ಪಡೀಲಿಲ್ಲಂತಾದ್ರೆ ೧೦-೨೦ ಸುದ್ದಿಗಳ ದೈನಿಕ ಪತ್ರಿಕೆಗಳಲ್ಲಿ ಹೊಸ ಕಲಂ ಸುರುಮಾಡಬೇಕಾಗಬಹುದು...."

"ಅದ್ಯಾವ ಕಲಂ?"

"ನೋಡು, ಈದು ಇದೆ ನೋಡು, ಮನೆ ಬೇಕಾಗಿದೆ ವರ ಬೇಕಾಗಿದೆ ಇತ್ಯಾದಿ ಬೇಕಾಗಿದೆ ಮಾರೆ. ಅದರ ಮುಂದೆ ಸುದ್ದಿ ಬೇಕಾಗಿದೆ, ಸುದ್ದಿಯ ಸೃಷ್ಟಿಕರ್ತರು ಬೇಕಾಗಿದ್ದಾರೆ, ಜಾಹೀರಾತು ಬೇಕಾಗಿದೆ ಎಂದು ಮುಂತಾದುವುಗಳ...'

'ಇದು ಭಾರೀ ತಮಾಷೆಯದ್ದು'

'ಅಲ್ರೆ, ಹೀಗಾಗ ಬಾರದೆಂದೇ ನಮ್ಮಲ್ಲಿ ಸುದ್ದಿಗಳೂ ಅವುಗಳ ಸೃಷ್ಟಿಕರ್ತರೂ ನವ ನವೋನ್ಮೇಷ ಶಾಲಿಗಳಾಗಿ ಹುಟ್ಟುತ್ತಾರೆ....'

"ಅದಿರ್ಲಿ, ಈಗ ನೋಡಿ, ಅಮೆರಿಕೆಯ ಅಧ್ಯಕ್ಷ ಜಾನ್ಸನ್ನರು ಬಾಂಬು ಧಾಳಿ ನಿಲುಗಡೆಗೆ ಆದೇಶ ಕೊಡಿದ್ದಾರಂತಲ್ಲಾ... ನವಂಬರದಲ್ಲಿ ಅಧ್ಯಕ್ಷೀಯ ಚುನಾವಣೆದ ಪೂರ್ವಭಾವಿಯಾಗಿ...."

"ಅಲ್ರೆ, ನಿಲುಗಡೆಗೆ ಆಜ್ಞೆ ಮಾಡಿದ್ದು ನಿಜ. ಆದ್ರೆ, ಇದಕ್ಕೂ ಅಧ್ಯಕ್ಷ ಚುನಾವಣೆಗೂ ಇರುವ ಸಂಬಂಧ ಅಂದರೆ, ನರಿಗೂ—ಕಾಯಿಗೂ ಇರುವಷ್ಟೇ."

'ಯಾಕೆ?"

"ಅಲ್ರೆ, ಆ ದೇಶದೊಡೆಯೇ ಜಾನ್ಸನ್ ಅಧ್ಯಕ್ಷ ಪದಕ್ಕೆ ಸ್ಪರ್ಧಿಸುವುದಿಲ್ಲವೆಂದೂ ಘೋಷಿಸಿದ್ದಾರೆ. ಹೀಗಿರುವಾಗ...'

'ಅದೆಲ್ಲಾ ಬಿಡಿ. ನಮ್ಮಲ್ಲಿ ನೋಡಿ, ಊಟದಲ್ಲಿ ಹರಂಬರೆ ಇದೆ....'

'ಅಂದ್ರೆ...'

'ಬೇಡಾಂತ ಒಂದು ಸಲ ಅಂದ್ರೆ ಹಾಕಬೇಡೀಂತ. ಅದನ್ನೇ ಘಾತ ಸಹಿತ ಅಂದು ಬಿಟ್ರೆ ಬೇಕೂಂತ. ಅವ್ರಿಗೆ ಹಾಕಿ ಅಂದ್ರೆ ನನಗೆ ಹಾಕಿ ಅಂತ....'

"ಇದೆಲ್ಲಾ ಒಳ್ಳೆಧಾವೆಕಣೋ. ನೀರ್ವಾಹಿ ಧಾರತೀಯಗಳ್ಳೂ ಈ ಬಗೆಯ ಸಂಕೇತಗಳು ಇರಲಾರವು. ಆದರ್ರಿ, ಅವೆಲ್ಲಾ ನಮ್ಮ ಮಟ್ಟಿಗೆ ಚುನಾವಣೆಗೆ ನಿಲ್ಲುವುದಿಲ್ಲ ಅಂತ ಒಂದೆರಡು ಕಲಂ ಮೇಳಿಕೆ ಕೊಡುವ್ದು; ತಮ್ಮ ಜೇಲ ವಾಚಕರ ಹೆಸರನ್ನಿಲ್ಲಿ ಒತ್ತಾಯ ಪಡಿಸುವ 'ಸಂಪಾದಕರಿಗೆ ಪತ್ರ' ಬರೆಸುವ್ದು, ಕೊನೆಗೆ ಮಿತ್ರರ ಬಲವಂತದಿಂದ ಸ್ಪರ್ಧೆಗಿಳಿಯುತ್ತೇನೆ ಅಂತ ಇನ್ನೊಂದು ಹೇಳಿಕೆ ಹೊರಡಿಸೋದು, ಅದನ್ನ ಸ್ವಾಗತಿಸೋದು. ಇಂತಹ ರಾಜಕಾರಣಿಗಳಿಗೆಂದೇ ಚುನಾವಣಾ ವರ್ಷ ಕೆಲವೊಂದು ಅಣಬೆ ಪತ್ರಿಕೆಗಳು ತಲೆಯೆತ್ತುವೆ...."

"ಅಂದ್ರೆ, ಅಮೆರಿಕೆಯಲ್ಲಿ ಹೀಗೆಲ್ಲಾ ನಡಿಯೋದಿಲ್ಲಂತೀರಾ?'

'ಕಂಡಿತಕ್ಕೂ ಇಲ್ಲ. ಘನ್ಮಲ್ಲದು ಬಿಟ್ಟೇ ಪ್ರಚಾರದ ಒಂದು ಸಾಧನವಾಗಬಹುದು. ಆಜ್ಞ ಜನತೆಯ ಮೇಲೆ ಪ್ರಭಾವ ಬೀರಬಹುದು. ಆದರೆ ಅಮೆರಿಕನ್ನರು ಈ ಮಟ್ಟಿಗೆ ಧಾರಿ ಸುಜ್ಞರು.'

"ಅಲ್ರಿ, ಅಧಿಕಾರದ ಆಸೆ ಅವರಿಗಿಲ್ಲ ವೇನು?"

'ಅವರೂ ಮನುಷ್ಯರೇ ಅಲ್ಲವೆ? ಆದುದರಿಂದ ಮಾನವೀಯ ದುರ್ಬಲತೆಗಳೆಲ್ಲವೂ ಅವರಲ್ಲಿಯೂ ಇದೇನ್ನ. ಹಂಫ್ರಿ, ಮಾರ್ಫಿ, ಕೆನ್ನೆಡಿ—ಇವರೆಲ್ಲ ಅಧ್ಯಕ್ಷ ಚುನಾವಣೆಯ ಸ್ಪರ್ಧಿಗಳು—ಇದು ಅಧಿಕಾರದ ಮೋಹವಲ್ಲದೆ ಮತ್ತೇನನ್ನು ಹೂಡುತ್ತದೆ?'

"ಪ್ರಜಾಸತ್ತೆಯ ಪ್ರಬಲ ಬಲವೇ ಚುನಾವಣೆ—ಬಹುಮತದ ಬಲ.'

"ಅದು ಸರೀನ್ನ. ಅಧಿಕಾರವೇ ಬೇಡವೆಂಬ ಫಿಲಿಸ್ತಿತ್ತು ವೈರಾಗ್ಯವಿದ್ದರೂ ಚುನಾವಣೆಯಾದರೂ ಹೇಗೆ ನಡೆಯಬೇಕು?'

"ಫಿಜ. ಆದಿರಲಿ, ಜಾನ್ಸನ್ನರ ವಿಯತನಾಮ ನೀತಿಯಲ್ಲಿ ಬದಲಾವಣೆ ಆದುದರಿಂದ, ಅವರು ಕಳೆದುಕೊಂಡ ಪ್ರತಿಷ್ಠೆ ಮತ್ತೆ ದಳಿಸಿಯೂರು ಅಲ್ಲವೆ?"

"ರಾಬರ್ಟ್ ಕೆನ್ನೆಡಿಯವರು ಜಾನ್ಸನ್ನರ ವಿಯತನಾಮ ನೀತಿಗೆ ನೇರ ಅಹ್ವಾನವನ್ನಿತ್ತಿದ್ದರು. ಅಮೆರಿಕನ್ನರಲ್ಲಿ ಮೂವರಲ್ಲಿ ಒಬ್ಬರೂ ಜಾನ್ಸನ್ ವಿಯತನಾಮ ನೀತಿಯನ್ನೊಪ್ಪುವುದಿಲ್ಲವಂತೆ. ಈ ಬಾರಿ ಸ್ಪರ್ಧೆಗಿಳಿದರು ಅವ್ರು ಗೆಲ್ಲುವ ಲಕ್ಷಣ ವಿಲ್ಲ. ಮತ್ತಾರೂ ಗೆದ್ದರೂ ವಿಯತನಾಮ ಸಮಸ್ಯೆಗೊಂದು ಪರಿಹಾರ ಕಂಡೇ ಕಾಣುತ್ತಾರೆ. ಅದಕ್ಕೆ ಮೊದಲು ತಾನೇ ಕ್ರಮ ಕೈಕೊಂಡರೆ ತನಗೇ ಬ್ಯಾತಿ ಬರುತ್ತದೆ....'

"ಅಲ್ರಿ, ತಾನು ಸ್ಪರ್ಧಿಸುವುದಿಲ್ಲವೆಂದಾದ ಮೇಲೆ..."

"ನಿಜವು ಹಾಗಲ್ಲ. ಕೀರ್ತಿ ಅವನಿಸಾಗರವುಳಿಯುವ ತಳಕಲುಳಿಯುವುದು. ವಿಯತನಾಮದ ಸರ್ವನಾಶ ಯಜ್ಞಕ್ಕೆ ನಾಂದಿ ಹಾಕಿದವರೇ ಮಾನವೀಯ ಶಾಂತಿಯ ದೃಷ್ಟಿಯಿಂದ ವಿಕಪಕ್ಷೀಯವಾಗಿ ಶಾಂತಿಸ್ಥಾಪನೆಯ ಕ್ರಮವನ್ನು ಕೈಕೊಂಡರು ಎಂದು ಜನತ್ತು ಕೊಂಡಾಡುವುದು...."

'ಹ್ಹೂಂ, ಅಲ್ರಿ, ಅದೆಂತದೋ ಕೆಲವೆಡೆ ಮಾತ್ರ ಬಾಂಬುದಾಳಿ ಮಾಡುವುದಂತೆ....'

'ಅಂದ್ರೆ, ಇಡಿಯ ಉತ್ತರ ವಿಯತನಾಮದಲ್ಲಿ ಮಾಡುವುದಿಲ್ಲ. ೨೦ನೆ ಅಕ್ಷಾಂಶ ರೇಖೆಯ ದಕ್ಷಿಣದಲ್ಲಿ ಮಾತ್ರ.'

"ಇದನ್ನೇ ಅಲ್ಲವೇ ರಕ್ಷದ ಪಾವ್ಡಾ ವಂಚನೆ ಎಂದು ಕರೆದದ್ದು?"

"ಹ್ಹೂಂ...ವಂಚನೆಯೂ ಇರಬಹುದು. ಆದ್ರವೇಲೆ ಆದೇಶ ಬಂದ ಮೇಲೆಯೂ ಬಾಂಬುದಾಳಿ ಮುಂದುವರಿದಿದೆ ಎಂಬ ವದಂತಿಯೂ ಇದೆ. ಅದೇಏನೇ ಇರಲಿ, ಜಾನ್ಸನ್ನರ ಈ ಕ್ರಮ ಪೂರ್ಣ ಬಾಂಬುದಾಳಿ ನಿಲ್ಲುವುದಕ್ಕೆ ಸೂತ್ರ ಪಾತನೆ ನಿಶಬಹುದು...."

'ಅಲ್ರಿ, ಇದೇ ಕ್ರಮವನ್ನು ಜಾನ್ಸನ್ ಮೊದಲೇ ಕೈಕೊಂಡಿದ್ದರೆ...'

"ಅಲ್ರೆ, ಫಿನ್ನೆ ರೆ....ಕತೆ ಬಿಚ್ಚಬೇಡ...."

"ಅಲ್ರಿ, ಈಗಿನ ಕಾಲವೆಲ್ಲ ಹಾಗೇ ತಾನೇ...."

'ಯಾಕೆ ಹಾಗಂತೀಯ?"

"ಪರಸ್ಪರ ಅವಲಂಬನೆಯ ಯುಗ ಅಂದ್ರೆ ರಯ ಕಾಲಾಂತ ಅರ್ಥ"

"ಅದು ಸರೀಕ್ಷು...."

"ಮತ್ತೆ ನೋಡಿ, ಜಗತ್ತಿನ ಹಿರಿಯ ಕಿರಿಯ ರಾಷ್ಟ್ರಗಳೆಲ್ಲಾ ಅಮೆರಿಕೆ ಬಾಂಬುದಾಳಿ ನಿಲ್ಲಿಸಬೇಕೆಂದು ಕರೆ ಕೊಡುವಾಗ ಅದನ್ನು ಕಡೆಗಣಿಸಿದ ಜಾನ್ಸನ್ ಈಗ್ಯಅನಿರೀಕ್ಷಿತವಾಗಿ...."

"ನೋಡು, ಒಂದು ಕಾಲದಲ್ಲಿ ಸುರಕ್ಷಿತವಾಗಿದ್ದ ಅಮೆರಿಕ, ಬ್ರಿಟನ್ನಗಳು ಈಗ ಶತ್ರುಕ ಹತ್ತಿವೆ. ಫ್ರಾಂಡಿನ ಅಪಮಾನ್ಯವಾಯಿತು; ಡಾಲರ್ ಪೇಟೆಯಲ್ಲಿ ನಡುಕ ಹುಟ್ಟಿತು. ಇದೀಗ ಕಾಯೂಕಲ್ಪ ಇಂಜೆಕ್ಷನ್ ನೀಡಿ ಅದನ್ನು ಕ್ಷೇಮದಲ್ಲಿಡಲು ಪ್ರಯತ್ನ ನಡೆದಿದೆ. ಆದರೆ, ಇದೇ ನೂ ಗ್ಯಾರಂಟಿಯಲ್ಲ.ಆಂತರಿಕವಾಗಿಯೂ ಜಾನ್ಸನ್ನರು ವಿರೋಧವನ್ನೆದುರಿಸ ಬೇಕಾಗಿದೆ. ಇದರಿಂದ ಬಹುಕಿ, ನಿವೃತ್ತ ಜೀವನದಲ್ಲಿ ಯಶಗಳಿಸಲು ಅವರೇಗಲೇ ಈ ಕ್ರಮ ಕೈ ಕೊಂಡಿದ್ದಾರೆ—"

"ಹ್ಹೂಂ..."

"ಜಾನ್ ಕೆನ್ನೆಡಿಯವರ ಅಪರೀಕ್ಷಿತ ಕೊಲೆಯಿಂದಾಗಿ ಅನಿರೀಕ್ಷಿತವಾಗಿಯೇ ಅಧ್ಯಕ್ಷ ಗದ್ದುಗೆಗೇರಿ, ಮುಂದಿನ ಚುನಾವಣೆಯಲ್ಲಿ ಅಭೂತ ವಿಜಯ ದಳಿಸಿದ ಜಾನ್ಸನ್ ಅನೀರೀಕ್ಷಿತವಾಗಿಯೇ ಅಧ್ಯಕ್ಷ ಪದವಿಗೆ ಸ್ಪರ್ಧಿಸದಿರುವ ದೃಢ ನಿರ್ಧಾರ ಮಾಡಿದ್ದಾರೆ."

"ಅಂತೂ ವಿಯತನಾಮದಲ್ಲಿ ಶಾಂತಿ ನೆಲೆಯೂರಬಹುದೆ?"

"ಸದ್ಯ ಜಾನ್ಸನ್ನರದ್ದು ಹಾವು ಸಾಯದ ಕೋಲು ಮುರಿಯದ ವಿಯತನಾಮ ನೀತಿಯಾಯಿತು. ಉತ್ತರ ವಿಯತನಾಮವು — ಇನ್ನರಿಂದಲೇ ತೃಪ್ತವಾಗುವುದು ಸಾಧ್ಯವಿಲ್ಲ...."

"ಮತ್ತೆ ಹೋರಾಟ...."

"ಹ್ಹಾ ನಡೆಯುತ್ತದೆ."

"ಇದರಿಂದ ಲಾಭ?"

"ಅಮೆರಿಕೆಯ ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು ಹಂಳಾಗುವುದು ತಪ್ಪುವುದು..."

"ಇದೆಂತಹ ರಾಜನೀತಿ... ಹೆಂತ್ತಿ ಹೊಡೆಯುವಾಗ ಗಂಡ ಕೂಗ್ತಿದ್ದಹಂತೆ—ಸಾಕೋ ನಿನಗೆ, ಮಾಡ್ತಿಯೋ ಹಾಗೆ ಅಂತ..."

"ಅಯ್ಯೋ, ಇನ್ನು ನನ್ಗತಿ?"

"ಏನಾಯ್ತು?"

"ಅಲ್ಲ,ಫೀನೇ ಹೊಡೆಯೋಕೆಬಂದ್ರೆ?"

"ಶಾಂತಂ ಪಾಪಂ.....ಏನು ಅಭದ್ರ ಮಾತಾಡ್ತೀರಿ! ಎಲ್ಲಾದ್ರೂ ಉಂಟೆ?"

"ಹಾಗಾದ್ರೆ ಸದ್ಯ ಬದುಕಿದೆ..."

"ನೋಡಿ, ನೀವು ಹೀಗೆಲ್ಲಾ ಮಾಡಿದ್ರೆ ...'

"ಇಲ್ರೆ, ಹಾಗೇಕೆ ಮಾಡಬೇಕು?"

"ಹ್ಹಂ....ಗೊತ್ತು ನನ್ನ ಬಂಗಾರ ಬಳೆ ಕ್ಯಾರಟ್ಟದ್ದೂಂತ...."

"ಬದುಕಿದೆ ಬಡ ಜೀವವೇ...."

"ಅಯ್ಯೋ....ಏನ್ರಿದು?"

'ಏನೂ ಇಲ್ಲಾನ್ನು..."

—ಗೋಲಾ.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ; ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

READ & ADVERTISE IN NAVAYUGA WEEKLY

ವಾತ್ಸ್ಯಾಯನನ ಕಲೆಗಳು

ಬರೆದವರು : ಶ್ರೀ ಸ. ನಾರಾಯಣ

ವಾತ್ಸ್ಯಾಯನನ ಕಾಮಸೂತ್ರ, ಸಂಸ್ಕೃತ ಗ್ರಂಥಗಳಲ್ಲಿ ಮಹತ್ವಪೂರ್ಣವಾದುದು. ಈ ಗ್ರಂಥಕ್ಕೆ ಮೊದಲೇ ಅನೇಕ ಶಾಸ್ತ್ರ ಗ್ರಂಥಗಳು ಇದ್ದವು, ವಿಪುಲ ಸಾಹಿತ್ಯ ಪ್ರಚಾರದಲ್ಲಿತ್ತು ಎಂಬ ಸಂಗತಿಯೂ ತಿಳಿದು ಬರುತ್ತದೆ. ಕಾಮಸೂತ್ರದ ಆರಂಭದಲ್ಲಿ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿ ಅವರ ಸ್ಥಿತಿಗಾಗಿ ಧರ್ಮ ಅರ್ಥ ಮತ್ತು ಕಾಮ ಎಂಬ ತ್ರಿವರ್ಗ ಸಾಧನದ ಸಲುವಾಗಿ ಒಂದು ಲಕ್ಷ ಅಧ್ಯಾಯದ ಗ್ರಂಥ ಬರೆದನೆಂದು ಪ್ರಸ್ತಾಪಿಸಲ್ಪಟ್ಟಿದೆ.

ಧರ್ಮ ಅರ್ಥ ಕಾಮ ಮೂರುಪಾರ್ಶ್ವಗಳ ಬಗೆಗೆ ವಸಿಷ್ಠ, ಬೃಹಸ್ಪತಿ ಮತ್ತು ನಂದಿ ಬೇರೆ ಬೇರೆ ಗ್ರಂಥಗಳನ್ನು ಬರೆದಿದ್ದಾರೆ. ನಂದಿಯ ಗ್ರಂಥ ಒಂದು ಸಾವಿರ ಅಧ್ಯಾಯ ಉಳ್ಳದ್ದು. ಅದನ್ನು ಔದ್ದಾಲಿಕ ಶ್ವೇತಕೇತುವು ಐದ ನೂರು ಅಧ್ಯಾಯಗಳಲ್ಲಿ ಬರೆದನು. ವಾಭ್ರವ್ಯ ಪಾಂಚಾಲಕ ಇದನ್ನು ೨೫೦ ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ಬರೆದನು.

ಈ ಗ್ರಂಥದಲ್ಲಿ ಸಾಧಾರಣ ಸಾಂಪ್ರಯೋಗಿಕ, ಭಾರ್ಯಾಧಿಕಾರಿಕ, ಪಾರದಾರಿಕ, ವೈಶಿಕ ಮತ್ತು ಔಪನಿಷದಿಕ ಎಂದು ಅಧಿಕರಣಗಳು. ಈ ಅಧಿಕರಣಗಳನ್ನು ಬೇರೆ ಬೇರೆ ಆಚಾರ್ಯರು ಬೇರೆ ಬೇರೆಯಾಗಿ ಸಂಗ್ರಹಿಸಿ ಬರೆದಿದ್ದಾರೆ. ಈ ಅಧಿಕರಣಗಳ ಸಾರವೇ ವಾತ್ಸ್ಯಾಯನನ ಕಾಮಸೂತ್ರ ಗ್ರಂಥ. ಈ ಗ್ರಂಥದಲ್ಲಿ ನಾಗರಿಕ ಜನಗಳಿಗೆ ಅಗತ್ಯವಾದ ಕಲೆ ಮತ್ತು ಪಾಂಚಾಲಮಾ ಹೇಳಿರುವ ಕಲೆಯನ್ನು ಪ್ರಸ್ತಾಪಿಸಲಾಗಿದೆ.

ವಾತ್ಸ್ಯಾಯನನು ಹೇಳಿರುವ ಕಲೆಗಳಲ್ಲಿ ಸುಮಾರು ಮೂರನೇ ಒಂದು ಭಾಗ ವಿಬದ್ಧ ಸಾಹಿತ್ಯಕವಾದುದು. ಉಳಿದವಲ್ಲಿ ಕೆಲವು ಮನೋವಿನೋದಕ್ಕೆ ಸಾಧಕವಾದುವು. ಇನ್ನು ಕೆಲವು ದೈನಂದಿನ ಉಪಯೋಗಕ್ಕೆ ಸೂಚಕವಾದುವು. ಇಲ್ಲಿ ಮುಖ್ಯವಾಗಿ ಸುಸಂಸ್ಕೃತರಿಗೆ, ಸಭ್ಯ ವ್ಯಕ್ತಿಗಳಿಗೆ, ನಾಗರಿಕರಿಗೆ ಅಗತ್ಯವಾದ ಕೆಲವು ಉಪಯುಕ್ತ ಕಲೆಗಳನ್ನು ಗಮನಿಸಬಹುದು. ಈ ಕಲೆಗಳ ಅವಶ್ಯಕತೆ ಜೀವನದಲ್ಲಿ, ಸಮಾಜದಲ್ಲಿ ಎಷ್ಟು ಎಂಬುದು ಪ್ರಸ್ತಾಪಿಸಲ್ಪಟ್ಟಿದೆ. ಸಂಸ್ಕೃತ ಸಾಹಿತ್ಯದಲ್ಲಿ ಈ ಕಲೆಗಳ ಬಗೆಗಿನ ವರ್ಣನೆ ವಿಶೇಷವಾಗಿದೆ.

ನಾನಾ ಬರೆಯ ನೂರಾರು ಕಲೆಗಳು ಆ ಕಾಲದ ಸಂಸ್ಕೃತ ಸಾಹಿತ್ಯದಲ್ಲಿ ವಿಶೇಷವಾಗಿ ದೊರೆಯುತ್ತಿದ್ದವು. ವಾತ್ಸ್ಯಾಯನನು ಸೂಚಿಸಿರುವ ಕಲೆಗಳ ಪ್ರಭಾವ ಸಾಹಿತ್ಯದಲ್ಲಿ ಮತ್ತು ಜನ ಜೀವನದ ಮೇಲೆ ವಿಶೇಷವಾಗಿತ್ತು ಎನ್ನುವ ಸಂಗತಿ ತಿಳಿದು ಬರುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ (ಕಾವ್ಯ ನಾಟಕಾದಿಗಳಲ್ಲಿ) ವಾತ್ಸ್ಯಾಯನನ ಕಾಮಸೂತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕಲೆಗಳು ಮತ್ತು ಕಾಮಸೂತ್ರ ವಿಧಾನ ಕಲೆಯೂ ಪ್ರಧಾನ ಮಾರ್ಗದರ್ಶಕವಾಗಿದೆ.

ವಾತ್ಸ್ಯಾಯನನು ಪ್ರಸ್ತಾಪಿಸಿರುವ ೬೪(ವಿದ್ಯೆ) ಕಲೆಗಳಲ್ಲಿ ಅನೇಕಕಲೆಗಳು ಜೀವನದಲ್ಲಿ ವೃದ್ಧಿಗೆ ಅತ್ಯಗತ್ಯವಾದುವು, ಉಪಯುಕ್ತವಾದುವು ಎಂಬುದನ್ನು ಸ್ಮರಿಸಬಹುದು. ನೃತ್ಯಾದಿ ಲಲಿತ ಕಲೆಗಳು ಸಮಾಜದ ಜನತೆಯ ಅನುಕೂಲತೆಗೆ, ಅವರ ಮನೋವಿಕಾಸಕ್ಕೆ ಎಂಬುದು ಗಮನಿಸಬೇಕಾದ ಅಂಶ. ಕಲೆಗಳು ಶಕ್ತಿ ಪ್ರಭಾವಗಳು ಸೀಮಿತವಾದುದಲ್ಲ. ಕಲೆಗೆ ಇಂದು ನಿನ್ನೆ ನಾಳೆಗಳೆಂಬ ಬಂಧವೇನಿಲ್ಲ. ಇದು ಎಲ್ಲ ದಿನಗಳಿಗೂ ಅಗತ್ಯವಾದುದು. ಎಲ್ಲ ಜನಗಳಿಗೂ ಉಪಯುಕ್ತವಾದುದು.

ಗೃಹ ನಿರ್ಮಾಣ ಕಲೆ (ವಾಸ್ತು ವಿದ್ಯೆ), ರತ್ನ ಪರೀಕ್ಷೆ, ಧಾತು ವಿದ್ಯೆ, ಬೆಂಕಿಯುಳ್ಳ ಕಲ್ಲುಗಳಿಗೆ ಬಣ್ಣ ಹಾಕುವುದು, ವೃಕ್ಷಾಯುರ್ವೇದ(ವನಗಿಡಗಳ ವಿದ್ಯೆ), ಶಾಸ್ತ್ರಗಳನ್ನು ಗುರುತಿಸುವುದು, ಆನೆ, ಕುದುರೆ ಮುಂತಾದುವುಗಳ ಲಕ್ಷಣ ಪರೀಕ್ಷೆ ಮುಂತಾದುವು ಉಪಯುಕ್ತ ಕಲೆಗಳು. ವರಾಹ ಮಿಹಿರರ ಬೃಹತ್ ಸಂಹಿತೆಯಿಂದಲೂ ಅನೇಕ ಕಲೆಗಳ ಪರಿಚಯವಾಗುತ್ತದೆ. ವಾಸ್ತು ವಿದ್ಯೆ, ವೃಕ್ಷಾಯುರ್ವೇದ, ಮಧ್ಯಲೇಪ, ಕುಕ್ಕುಟ ಲಕ್ಷಣ, ಶಕ್ಯಾಶನ, ಗಂಧಯುಕ್ತಿ, ರತ್ನ ಪರೀಕ್ಷೆ ಮುಂತಾದುವು ಮುಖ್ಯ ಕಲೆಗಳು. ಬೆಗರು ಮತ್ತು ಹುಂಜದ ಕಾಳಗ, ಗಿಳಿ ಮತ್ತು ಮೈನಾ ಹಕ್ಕಿಗಳಿಂದ ಓದಿಸುವುದು ಕೇವಲ ಮನೋ ವಿನೋದಕ್ಕೆ ಸಂಬಂಧಿಸಿದ ಕಲೆಗಳು.

ಪ್ರಾಚೀನ ಕಾಲದಲ್ಲಿ ಶ್ರೀಮಂತರ ಮನೆಗಳಲ್ಲಿ ಬೆಗರು, ಕೋಳಿ, ಗೌಜಲ ಹಕ್ಕಿ, ಗೊರವಂಕಪಕ್ಷಿಗೋಸ್ಕರ ಪ್ರತ್ಯೇಕ ಭಾಗವಿರುತ್ತಿತ್ತು. ಒಳಗಡೆ ಗಿಳಿ—ಮೈನಾ ಹಕ್ಕಿಗಳು ವಾಸಿಸುತ್ತಿದ್ದವು. ಧನಿಕರ ಅಂತಃಪುರಗಳಲ್ಲಿ ಕೋಗಿಲೆ, ಹಂಸ, ಕಾರಂಡವ, ಚಕ್ರವಾಕ, ಸಾರಸ, ಪಾವಲು ಮತ್ತು ಕೋಳಿಗಳನ್ನು ಅಭಿಮಾನದಿಂದ ಸಾಕುತ್ತಿದ್ದರು. ಅಂತಃಪುರ ದವರ ಮತ್ತು ನಾಗರಿಕರ ಮನೋವಿನೋದಗಳಲ್ಲಿ ಈ ಪಕ್ಷಿಗಳ ಪಾತ್ರ ವಿಶೇಷವಾಗಿತ್ತು.

ಹಾಡುವುದು, ವಾದ್ಯಗಳನ್ನು ನುಡಿಸುವುದು, ನೃತ್ಯ, ಚಿತ್ರರಚನೆ, ನೆಲದಮೇಲೆ ಬಣ್ಣಬಣ್ಣದ ಹೂಗಳಿಂದ ಮತ್ತು ಬಣ್ಣದ ಅಕ್ಕಿಯಿಂದ ಅನೇಕ ಬಗೆಯ ನೇತ್ರಾನಂದಕರ ಚಿತ್ರಗಳನ್ನು ಬರೆಯುವುದು (ತಾಂಡ ಲಾಸ್ಯ ಮತ್ತು ವಿಕಾರ) ಹೂವನ್ನು ಹರಡುವುದು, ಒಟ್ಟಿಗಳಿಗೆ ಬಣ್ಣ ಹಾಕುವುದು, ಹೂವಿನ ಹಾರ ಮಾಡುವುದು, ಗ್ರೀಷ್ಮಕಾಲದ ವಿಹಾರಕ್ಕಾಗಿ ಮರಕತ ಮತ್ತು ಕಲ್ಲುಗಳ ಗೃಹ ಮಾಡುವುದು, ಜಲಕ್ರೀಡೆಯಲ್ಲಿ ಮುರಜ-ಮೃದಂಗ ಮೊದಲಾದ ವಾದ್ಯಗಳನ್ನು ನುಡಿಸುವುದು, ಪ್ರಿಯೆಯ ಕಡೆ ಕೌಶಲ್ಯದಿಂದ ನೀರೆರೆಚುವುದು, ಹಾರ ಕಟ್ಟುವುದು, ಕೇಶವನ್ನು ಹೂಗಳಿಂದ ಸಿಂಗರಿಸುವುದು, ಕಿವಿಗೆ ಅನೆ ದಂತದ ಆಭರಣ ಮಾಡುವುದು, ಸುಗಂಧಿತ ದೀಪ—ಧೂಪ ಮತ್ತು ಬತ್ತಿಗಳನ್ನು ಮಾಡುವುದು, ಅಲಂಕಾರ, ಆಭರಣ ಧಾರಣೆಕೊಳ್ಳುವುದು, ಇಂದ್ರಜಾಲ, ಉಡಪು ಹೊಲಿಯುವುದು, ಭೋಜನ ವಸ್ತು ಪರಿಭೂತ, ಪತ್ರಾಹಾರಿಕೆ, ಸುಖಾಸನವನ್ನು ಮಾಡುವುದು, ವೀಣೆ ಡಮರುಗ ಮುಂತಾದುವನ್ನು ಬಾರಿಸುವುದು ಮುಂತಾದ ಕಲೆಗಳು ಆ ಕಾಲದಲ್ಲಿ ಎಲ್ಲ ನಾಗರಿಕರಿಗೂ ತಿಳಿದಿರಲೇ ಬೇಕಾಗಿತ್ತು. ಇವು ನಿತ್ಯ ಜೀವನದಲ್ಲಿ ಅತ್ಯಗತ್ಯವಾದ ಪ್ರಮುಖ ಕಲೆಗಳಾಗಿದ್ದವು.

ಸಂಸ್ಕೃತ ಸಾಹಿತ್ಯದಲ್ಲಿ ಈ ಕಲೆಗಳ ವರ್ಣನೆ ವಿಪುಲವಾಗಿರುವುದನ್ನು ಗಮನಿಸಬಹುದು. ಭಾರತೀಯ ಸಾಹಿತ್ಯದಲ್ಲಿ ಕಲೆ ಸಂಸ್ಕೃತಿಗಳಿಗೆ ಪ್ರಥಮ ಪುರಸ್ಕಾರ. ಆ ಕಾಲದ ಕಲೆಗಳನ್ನು ಗಮನಿಸಿದಾಗ ಅವರ ಕಲಾಭಿಮಾನ, ಕೌಶಲ್ಯ, ಕಲಾ ಪ್ರೇಮಿಯ ಅಭಿಮಾನ, ಹೃದಯ, ಕಲೆ ಅವರ ಜೀವನದಲ್ಲಿ ಹಾಸು ಹೊಕ್ಕಾಗಿ ಬೆರೆತಿದ್ದುದನ್ನು ತಿಳಿಯಬಹುದಾಗಿದೆ. ವಿಲಾಸಿನಿಯರು ಕಸೇರಿಗಳ ಮೇಲೆ ಪ್ರಿಯನು ಸೌಭಾಗ್ಯ ಮಂದಿರಿಯನ್ನು ಲಂಕೆ ಮಾಡಿದ್ದಾನೆ. ಮತ್ತೊಬ್ಬ ಪ್ರಿಯೆಯು ಕೆಂಪಡಿಗೆಗೆ ಆಗಂತ- ಎಲಂಬಿ- ಕೇಸರಿಯ ತೀರ್ಥ ಪುಷ್ಪವನ್ನು ತೊಡಿಸಿದ್ದಾನೆ. ಮತ್ತೆ ಒಂದು ಕಡೆ ವಿಲಾಸಿನಿಯು ಕಸೇರಿಗಳ ದೇಶದ ಗಂಧದ ಪತ್ರಲೇಪನ ಕಸೇರಿಗಳ ಮೇಲೆ ಕುಸುಮ ಬಾಣದಿಂದಾದ ಗಾಯದ ಮೇಲೆ ಹಾಕಿದ ಪಟ್ಟಿಯಂತೆ ಕಾಣುತ್ತಿದೆ. ಮತ್ತೊಂದು ಕಡೆ ಕಮಲ ಕೋವಲ ಪದತಲದ ಮೇಲೆ ಮೇಪಥ್ ಉಕಂಪಿತ ಕೈಯಿಂದ ಮಾಡಿದ ಅಲಕ್ತ ರೇಖೆ ಡೊಂಕಾಗಿದೆ. ಇನ್ನೊಂದು ಕಡೆ ನಾಗರಿಕರಿಂದ ಸ್ಕಂಧಿಲ ಪೀಠದ ಮೇಲೆ ಕುಸುಮಸ್ತರಣ ನಡೆಯುತ್ತಿದೆ. ಮತ್ತೊಂದು ಕಡೆ ಜಲಕ್ರೀಡೆದು ಸಮಯದಲ್ಲಿ ಕ್ರೀಡಾ ಕೊಳದಿಂದ ಉಂಟಾದ ಮೃದಂಗ ಧ್ವನಿಯು ತೀರದ ಮೇಲಿರುವ ನವಿಲುಗಳನ್ನು ಉತ್ಸಾಹಿಸಿ ಮಾಡಿದೆ. ಹೀಗೆ ನಾನಾ ಬಗೆಯ ಅಂಪ್ರಿತ ಕಲಾ ವಿಲಾಸ ವರ್ಣನೆ ಸಂಸ್ಕೃತ ಸಾಹಿತ್ಯದಲ್ಲಿ ಸಮೃದ್ಧವಾಗಿದೆ— ಸುಂದರವಾಗಿದೆ.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳನ್ನು

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಗ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು

ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಚುಚ್ಚಳರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳನ್ನಿಯೇ ಕಶ್ಚರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಿಯಾಂ ಪ್ರತಿಗಳಿಗೆ ವಿಶೇಷ.

ನವಯುಗ ಪ್ರೆಸ್, ಉಡುಪಿ.

ತಮಿಳು ಕಾನ್ಫರೆನ್ಸಿನಲ್ಲಿ ಪ್ರತ್ಯೇಕತಾವಾದಿಗಳಿಗೆ ಪ್ರಾಧ್ಯಾನ್ಯ
ರಷ್ಯಾ ಪ್ರತಿನಿಧಿಯ ಹಿತನುಡಿ

ಬರೆದವರು: ಶ್ರೀ ಶಿವಶಂಕರ

ಭಾರತದಲ್ಲಿ ನಡೆಯುವ ಪ್ರತೀಯೊಂದು ಸಭೆ, ಕಾನ್ಫರೆನ್ಸ್, ಪ್ರದರ್ಶನ, ಜಾತ್ರೆ ಇತ್ಯಾದಿಗಳಲ್ಲಿ ಭಾಗವಹಿಸಿ, ನಮ್ಮ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಲು ಪ್ರಭಾವ ಬೀರಲು ಪ್ರಯತ್ನಿಸುವವರಲ್ಲಿ ರಷ್ಯಾದವರಿಗೆ ಪ್ರಥಮ ಸ್ಥಾನ ಸಲ್ಲಬೇಕು. ಹಾಗೆಂದೇ, ಪ್ರಪಂಚ ತಮಿಳು ಕಾನ್ಫರೆನ್ಸಿನಲ್ಲಿ ರಷ್ಯಾದ ಪ್ರತಿನಿಧಿ ಭಾಗವಹಿಸಿರುವರು. ಭಾರತೀಯರಲ್ಲಿ ಬಿಕ್ಕಟ್ಟನ್ನುಂಟುಮಾಡಿ ಬಂಡವಾಳಶಾಹಿಯಗೆದುರಾಗಿ ಬಡವರ ಸ್ನೇಹಿಕಟ್ಟಿ, ಕಾರ್ಮಿಕರಿಂದ ಕತ್ತಿವ ಸೆಯಿಸುವವರಲ್ಲಿ ರಷ್ಯ ಸರಕಾರ ವಿಶೇಷ ಆಸ್ಥೆಯನ್ನು ವಹಿಸುತ್ತಿದೆಯೂದರೂ ಅದು ಪೂರ್ಣ ರಾಜಕೀಯ ವಿಷಯವಿದೆ. ಅದಕ್ಕಾಗಿ ಅದು ಇಲ್ಲಿಯ ಕಮ್ಯೂನಿಸ್ಟ್ ಪತ್ರಗಳನ್ನು ಪಯೋಗಿಸಿಕೊಳ್ಳುತ್ತಿದೆ. ಶ್ರೀ ನಾಮಸ್ಯೆಯ ಮೇಲೆ ಪರಿಣಾಮ ಬೀರಲು ಅದು ಸಾಂಸ್ಕೃತಿಕ ಸಮಿತಿಗಳನ್ನು ಕಳುಹಿಸುತ್ತಿದೆ. ಪ್ರಭಾವ ಬೀರುವ ಉದ್ದೇಶವನ್ನು ಅಲ್ಲಿಂದ ಅದ್ಯಾವ ರಂಗು ಹೆಸರನ್ನು ಪೇಳಿಕೊಂಡು ಬಂದ ಪ್ರತಿನಿಧಿಯೂ ಮರೆಯುವದಿಲ್ಲ.

ಮದ್ರಾಸಿನಲ್ಲಿ ಜರಿದ ದ್ವಿತೀಯ ತಮಿಳು ಕಾನ್ಫರೆನ್ಸಿನಲ್ಲಿ ಭಾಗವಹಿಸಿದ ರಷ್ಯಾದ ಪ್ರತಿನಿಧಿ ತನ್ನ ಕಾರ್ಯವನ್ನು ಬಹಳ ಜಾಗರೂಕತೆಯಿಂದ ಮಾಡಿಸಿ ಬಿಟ್ಟರು. ಹೆಸರೇನೋ ತಮಿಳು ಮಹಾ ಸಭೆ, ಆದರೆ ಅಲ್ಲಿ ನಿಜವಾಗಿ ನಡೆದದ್ದು 'ಹಿಂದಿ ವಿರುದ್ಧ ಪ್ರಚಾರ ಸಭೆ'. ನಿಜವಾಗಿ ರಷ್ಯಾದ ಪ್ರತಿನಿಧಿಗೆ ಹಿಂದಿ ಮೇಲೆ ತಮಿಳಾದರೇ ದ್ವೇಷವಿದ್ದಿತೇನೋ, ವಿಷೋ. ಆದರೆ ಪರಿಣಾಮವನ್ನುಂಟು ಮಾಡಬೇಕಾಯಿತ್ತು, ಅದಕ್ಕೆ ಸಂದರ್ಭವೂ ಸಿಕ್ಕಿತು. ಕಾನ್ಫರೆನ್ಸಿನಲ್ಲಿ ತಮಿಳರ ಪರವಾಗಿ ಅಲ್ಲ, ಹಿಂದಿಯ ವಿರುದ್ಧವಾಗಿ ಭಾರೀ ಭಾಷಣಗಳಾದುತ್ತಿದ್ದುವು–ದ್ರಾ. ಮು. ಕ. ದವರಿಂದ. ಆಗ ರಷ್ಯಾದ ಪ್ರತಿನಿಧಿಗಳ ಪ್ರಮುಖಿಡಾ|ಜೆಲಿಶೇವ್‌ಜೆನ್ನಾಗಿ ಅವರಿಗೆ ಭೀಮರೂಪ ಹಾಕಿದರು–ಪರೋಕ್ಷವಾಗಿ. ರಷ್ಯಾದಲ್ಲೂ ಹಲವಾರು ಭಾಷೆಗಳಿವೆ. ಅವುಗಳಲ್ಲಿ ಹದಿನೈದನ್ನು ರಾಷ್ಟ್ರೀಯ ಭಾಷೆಗಳನ್ನಾಗಿ ಸಂವಿಧಾನವು ಪರಿಗಣಿಸಿರುತ್ತದೆ. ಅದರಲ್ಲಿ ರಷ್ಯಾದ ಸಂಪರ್ಕ ಭಾಷೆ ಇದೆ. ಹಾಗಿದ್ದರೂ ಅಂತಾರಾಷ್ಟ್ರೀಯ ಸಭೆಗಳಲ್ಲಿ ಆಂಗ್ಲ ಭಾಷೆಯನ್ನು ಪಯೋಗಿಸಲಾಗುತ್ತಿದೆ. ಅಲ್ಲಿ ಹಿಂದಿ, ಬಂಗಾಲಿ, ತಮಿಳು ಮತ್ತು ಉರ್ದು ಕಲಿಸಲು ಏರ್ಪಾಡಿದೆ. ಕಲಾಶಾಲೆಗಳಲ್ಲಿ ಬಹಳ ವಿದ್ಯಾರ್ಥಿಗಳು ಅವನ್ನು ಕಲಿಯುತ್ತಾರೆಂದು ಅವರು ಹೇಳಿದರು.

ಇದು ಭಾರತಕ್ಕೂ ಅನ್ವಯಿಸುವುದಿಲ್ಲವೇನು? ರಷ್ಯಾದಂತೆ ಭಾರತವೂ ದೊಡ್ಡ ದೇಶ. ಅಲ್ಲಿ ಸಮಾನತೆಗೆ ಪ್ರಮುಖ ಸ್ಥಾನ ಸಲ್ಲುತ್ತಿದೆಯೂದಲ್ಲಿ ನಮ್ಮಲ್ಲಿ ವಿಕಸಿಗೆ ಉಚ್ಚ ಸ್ಥಾನವಿದೆ. ನಮ್ಮಲ್ಲೂ ಬಹಳವಾರು ಭಾಷೆಗಳಿವೆ. ಅಲ್ಲಯಂತೆ ಇಲ್ಲೂ ಕೆಲವನ್ನು ಮಾತೃ ಭಾಷೆಗಳನ್ನಾಗಿ ಸಂವಿಧಾನ ಪರಿಗಣಿಸುತ್ತಿದೆ. ಅಲ್ಲದೆ ಅಲ್ಲಿಯಂತೆಯೇ ಇಲ್ಲಿ ಹಿಂದಿಯನ್ನು ಸಂಪರ್ಕ ಭಾಷೆಯೆಂದು ಸಂವಿಧಾನವು ಸೂಚಿಸುತ್ತಿದೆ. ಹಾಗಿದ್ದೂ ಇಲ್ಲಿ ಬೊಬ್ಬೆ ಏತಕ್ಕೆ? ತಮಿಳು ಕಾನ್ಫರೆನ್ಸಿನ ಹೆಸರಿನಲ್ಲಿ ರಾಜಕೀಯ ವಾದದ ದ್ರಾ.ಮು.ಕ. ದವರು ಇತ್ತ ಉತ್ತರ ಕೊಡಬಲ್ಲರೇ? ಅಲ್ಲಿ ಪ್ರಬಲ ಕಮ್ಯೂನಿಸ್ಟ್ ಸಂಕಾರ ಇರುವದರಿಂದ ರಷ್ಯಾ ಭಾಷೆ ಬಿಟ್ಟುಳಿದ ಭಾಷೆಯವರು ಬಾಯಿಬಿಡುವಂತಿಲ್ಲವೇನು? ಇಲ್ಲಿ ನಿರ್ಬಲ ಸರಕಾರ ಇರುವದರಿಂದ ಇಷ್ಟು ಬಂದಂತೆ ಮಾತಾಡಬಹುದೆ, ಮಾಡಬಹುದೇನು? ವಾಹನ ಸಾಂಗೆಗಳನ್ನು ನಾಶಪಡಿಸಿದರೂ ಕೇಳುವವರಿಲ್ಲ, ಸಂಪರ್ಕ ಸಾಧನಗಳನ್ನು ಸುಟ್ಟರೂ ಉಸಿರು ಬಿಡುವವರಿಲ್ಲ! ಇದನ್ನು ಕೇಳಿದ ಮೇಲಾದರೂ ದ್ರಾ.ಮು.ಕ.ದವರಿಗೆ ಬುದ್ಧಿ ಬರಬೇಕಾಗಿತ್ತು. ಆದರೆ ವಿನಾಶ ಕಾಲದಲ್ಲಿ ಅದು ಅವರ ಕಿವಿಯ ಮೇಲೆ ಬೀಳುವಂತಿಲ್ಲ.

ರಾಷ್ಟ್ರೀಯ ಭಾಷೆಯ ವಿಷಯದಲ್ಲಿ ರಷ್ಯಾ ನಮಗೆ 'ಸುದ್ದಿ ಕಲಿಸಿರುವ' ಘಟನೆ ಇಲ್ಲಿ ಜ್ಞಾಪಕಕ್ಕೆ ಬರುತ್ತಿದೆ. ಅನ್ಯಾಜ್ಯೋತಿ ಭಾರತದ ಪ್ರಧಾನಿ (ಅಂದು) ಪಂಡಿತ ಜವಾಹರಲಾಲ ನೆಹ್ರೂಜೀಯವರ ಸಹೋದರಿ ಶ್ರೀ ವಿಜಯಲಕ್ಷ್ಮಿ ಪಂಡಿತಜೀಯವರು ರಷ್ಯಾಕ್ಕೆ ನಮ್ಮ ರಾಯಭಾರಿಯಾಗಿ ಅಧಿಕಾರ ಪತ್ರಗಳನ್ನು ತೆಗೆದುಕೊಂಡು ಹೋದರು. ಅಲ್ಲಿ ಅದನ್ನು ಕೊಟ್ಟರು. ಅಲ್ಲಿಯ ಸರಕಾರ ಅದನ್ನು ಸ್ವೀಕರಿಸಲು ಒಪ್ಪಲಿಲ್ಲ; ಕಾರಣವೆಂದರೆ ಅಧಿಕಾರ ಪತ್ರಗಳು ಆಂಗ್ಲ ಭಾಷೆಯಲ್ಲಿದ್ದುವು. ಆಂಗ್ಲ ಭಾಷೆಯು ಸ್ವತಂತ್ರ ಭಾರತದ ಭಾಷೆಯಲ್ಲವೆಂದು ಅದನ್ನು ಅವರು ಹಿಂದಕ್ಕೆ ಕೊಟ್ಟುಬಿಟ್ಟರು. ಶ್ರೀಮತಿ ಜೀಯವರು ಹಿಂದಿಯಲ್ಲಿದ್ದ ಪತ್ರಗಳನ್ನು ಕೊಟ್ಟ ಮೇಲೆಯೇ ಅಲ್ಲಿ ರಾಯಭಾರಿಯಾಗಿರಲು ಸಾಧ್ಯವಾಯಿತು; ಇದರಿಂದಲೂ ನಮಗೆ ಬುದ್ಧಿ ಬಂದಿರುವದಿಲ್ಲ. ಆ ದೇಶದೊಡನೆ ಇಂದು ಹಿಂದಿಯಲ್ಲಿ ವ್ಯವಹಾರ ನಡೆಯುತ್ತಿದೆ. ಇತರ ದೇಶಗಳೂ ಹಾಗೆ ಮಾಡಬೇಕೇನು? ನಮ್ಮ ಮುಖದ ಮೇಲೆ ಬಿಸಾಡ ಬೇಕೇನು? ಈ ಘಟನೆಯನ್ನು ಜ್ಞಾಪಕದಲ್ಲಿಟ್ಟುಕೊಂಡೇ ರಷ್ಯಾದ ಪ್ರತಿನಿಧಿ ಆ ರೀತಿ ಕಾನ್ಫರೆನ್ಸಿನಲ್ಲಿ ಹೇಳಿರಬೇಕು.

ರಷ್ಯಾದಿಂದ ನಾವೇನು ಬುದ್ಧಿ ಕಲಿಯಬೇಕಾಗಿಲ್ಲವಾದರೂ, ಪ್ರತಿ ತೆಗೆಯ ಬೇಕಾಗಿಲ್ಲವಾದರೂ, ದ್ರಾ. ಮು. ಕ.ದವರು ಇದರಿಂದ ಎಚ್ಚತ್ತೇಳಬೇಕಾಗಿತ್ತು. ದುರದೃಷ್ಟವಶಾತ್ ಹಾಗಾಗಲಿಲ್ಲ, ಮರುದಿನವೇ ಪ್ರತ್ಯೇಕತಾ ವಿಷದ ಸರ್ಪ ಬುಸ್ಸೆಂದಿತು.

ಡಾ| ಥಾಮಸ್ ಎಂಬವರು ವೇಲ್ಸಿನ ಉದಾಹರಣೆಯನ್ನು ತ್ತರು. ಬ್ರಿಟನಿನ ಸರಕಾರೀ ಭಾಷೆ ಇಂಗ್ಲೀಷ್ ಇದೆ. ವೇಲ್ಸಿನ ಜನರು ಇಂಗ್ಲೀಷ್ ಬಲ್ಲವರಿರುವದಿಲ್ಲ. ಅಲ್ಲಿ ವೇಲ್ಸ್ ಭಾಷೆ ಇದೆ. ಅದನ್ನು ನಾಶಮಾಡಿ ಆಂಗ್ಲ ಭಾಷೆ ಆಳ್ವಿಕೆ ನಡೆಸುತ್ತಿರುವದನ್ನು ಅರಿತು ಕೊಂಡ ವೇಲ್ಸಿನ ಜನರೀಗ ವೇಲ್ಸ್ ಭಾಷೆಗಾಗಿ ಹೆಣಗಾಡಲಾರಂಭಿಸಿರುವರು. ಅದೇ ರೀತಿ ತಮಿಳು ಭಾಷೆಯ ಮೇಲೆ ಹಿಂದಿ ಅಳ್ವಿಕೆ ನಡೆಸಲು ಪ್ರಯತ್ನಿಸುತ್ತಿದೆ. ಆದರೆ ಸ್ವಾತಂತ್ರ್ಯಪ್ರಿಯ ತಮಿಳು ಅದಕ್ಕೆ ಒಪ್ಪಲಾರದೆಂಬುದು ಅವರ ಅಭಿಪ್ರಾಯ.

ಹೌದು, ಬ್ರಿಟನಿನ ಸ್ಥಿತಿ ಹಾಗೆ ಇದೆ. ಆದರೆ ಅದೇ ವೇಲ್ಸ್ ಭಾಷೆಯನ್ನಾಡುವವನು ಪರರಾಷ್ಟ್ರಕ್ಕೆ ಹೋದಾಗ ಆಂಗ್ಲ ಭಾಷೆಯನ್ನಾಡುತ್ತಾನೆಂಬುದನ್ನು ಅಲ್ಲಗಳೆಯಲು ಸಾಧ್ಯ ಇರುವದಿಲ್ಲ. ವೇಲ್ಸ್ ಭಾಷೆಗೆ ಅಲ್ಲಿ ಸ್ಥಳವೇ ಇರುವದಿಲ್ಲ. ಇಂಗ್ಲೀಷ್ ಇಲ್ಲಿ ಮಾಡುತ್ತಿರುವದಾದರೂ ಏನನ್ನು? ಇಂಗ್ಲೀಷಿನಲ್ಲಿ ಮಾತಾಡಿದರೇನೇ ಅವನು ವಿದ್ವಾಂಸನು|ಯಾವ ಭಾಷೆಯಲ್ಲೇ ಮಾತನಾಡಲಿ ಆಂಗ್ಲ ಭಾಷೆಯ ಪದಗಳನ್ನು ಬೆರೆಸಿದರೇನೇ ಅವನು ನಾಗರಿಕನು! ಹೀಗೆ ದೇಶೀಯ ಭಾಷೆಗಳನ್ನು ಆಂಗ್ಲ ಭಾಷೆಯು ನಾಶಮಾಡುತ್ತಿದೆ. ಹಾಗಿದ್ದರೂ ದ್ರಾ. ಮು. ಕ.ದವರಿಗೆ ಅದೇ ಭಾಷೆ ಬೇಕು! ಆಂಗ್ಲ ಭಾಷೆಯ ಸ್ಥಾನವನ್ನು ಹಿಂದಿ ಆಕ್ರಮಿಸಿಕೊಳ್ಳುತ್ತಿದೆಂಬುದು ಅವರ ಪ್ರಚಾರ. ನಿಜವಾಗಿ ಪ್ರಾದೇಶಿಕ ಭಾಷೆಗಳೇ ಪ್ರಾದೇಶಿಕ ಆಡಳಿತ ಭಾಷೆಯಾಗಿ ಬಿಟ್ಟು, ಹಿಂದಿ ಸಂಪರ್ಕ ಭಾಷೆ ಆಗುತ್ತದೆ ಅಷ್ಟೆ! ಇದು ನೈಜ ಸ್ಥಿತಿ. ಆದರೂ ಆಂಗ್ಲ ವ್ಯಾಮೋಹಿಗಳು ಅದನ್ನು ಸಹಿಸಿಕೊಳ್ಳಲು ಸಿದ್ಧರಿಲ್ಲ. ಅವರು ಆಂಗ್ಲ ಭಾಷಾ ಅಧಿವೇಶನವನ್ನು ಆರೆಯುತ್ತಾರೆ. ಉತ್ತರ ಭಾರತೀಯರ ಹಾಗೂ ಭಾರತೀಯ ಸೇವೆಯ ವಿರುದ್ಧ ಹೋರಾಡಲು ಹುರಿಗುಂದಿಸುತ್ತಿದ್ದಾರೆ. ಅಲ್ಲದೆ ಅನ್ಯಾನ್ಯ ರಾಷ್ಟ್ರಗಳಲ್ಲಿರುವ ತಮಿಳರನ್ನು ಸಹಾಯಕ್ಕಾಗಿ ಕರೆಯುತ್ತಿದ್ದಾರೆ. ತಮಿಳು ಅಧ್ಯಯನ ಸಂಗೋಷ್ಠಿಯನ್ನು ರಾಜಕೀಯ ಪ್ರಚಾರದ ವೇದಿಕೆಯನ್ನಾಗಿ ಮಾರ್ಪಡಿಸಿಕೊಂಡು ಬಿಡುತ್ತಾರೆ.

ದ್ರಾ. ಮು. ಕ.ದ ಕಾರ್ಯದರ್ಶಿ ತಿರು ಫಟೆರಾಜನಾರವರು (ವಿಧಾನ ಪರಿಷತ್ತಿನ

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

P. & S. C No. 23/1968

ಮೃತ ಬಸ್ರೂರು ಶೇನಪ್ಪ ಶೆಟ್ಟಿಯವರಿಗೆ ಬರಬೇಕ್ಕಾದ ಸೊತ್ತಿನ ಬಾಬ್ತು—

ಶ್ರೀ ಎಸ್. ಸೂರಪ್ಪ ಶೆಟ್ಟಿ —ಅರ್ಜಿದಾರ

ದೇಶದ ಅರ್ಜಿದಾರರು ತನ್ನ ಮೃತಪಟ್ಟ ತಂದೆ ಕುಂದಾಪುರ ತಾಲೂಕು ಬಸ್ರೂರು ಶೇನಪ್ಪ ಶೆಟ್ಟಿಯವರ ಹೆಸ್ರಿನಲ್ಲಿರುವ ರೂ. 2,000/- ದಾಲ್ಯದ Madras Government Securities ಗಳ ಅಸ್ಲಿ ಬಾಂಡ್ ಕಳೆದು ಹೋಗಿ ಅದನ್ನು ತನಗೆ ಸರ್ಕಾರ ಸರ್ಟಿಫಿಕೇಟು ಕೊಡಿಸಬೇಕೆಂದು ಕೋರಿ ಅರ್ಜಿ ಇದೇ ತಾ. 30—5—1968 ಕ್ಕೆ ಇದೆ. ಆ ಬಾಬ್ತು ಆಕ್ಷೇಪವಿದ್ದಲ್ಲಿ ಆ ದಿನದೊಳಗೆ 11 ಘಂ. ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟು ಹುಕುಂ|ಪ್ರಕಾರ)

(Sd). K. Rajaram Hegde.

ಅರ್ಜಿದಾರನ ಎಡ್ವೋಕೇಟ್.

ಬಂಗಳೂರು 31—8—1968

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾಫಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾಫಿಕ್
ಪಾತರಿಯಾಕ ಆಯುರ್ವೇದ ಔಷಧಿ ಮತ್ತು ಪೌಷ್ಟಿಕ ಕೈಗಾರಿಕೆಯ ಸಿಲಿಪೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಸದಸ್ಯ) ಮಾತಾಡುತ್ತ ತಮಿಳನ್ನು ನಾಶ ಮಾಡಲು ತಮಿಳೇತರರು ಪ್ರಯತ್ನಿಸುತ್ತಿರುವದನ್ನು ತಡೆಯುವದೇ ಕಾನ್ಫರೆನ್ಸಿನ ಮೂಲ ಉದ್ದೇಶ. ಈ ಅಪಾಯಕರ ಪರಿಸ್ಥಿತಿಯಲ್ಲಿ, ರಾಜಕೀಯ ಭಿನ್ನತೆಗಳನ್ನು ಮರೆತು ಬಿಟ್ಟ ತಮಿಳರೆಲ್ಲರೂ ಒಬ್ಬ ಮನುಷ್ಯನಂತೆ ಒಳ್ಳಾವರೆಂಬುದರಲ್ಲಿ ಸಂದೇಹವಿಲ್ಲವೆಂದು ತನ್ನ ಧೈರ್ಯವನ್ನು ವ್ಯಕ್ತಪಡಿಸಿದರು. ತಮಿಳನ್ನು ನಾಶಮಾಡಲು ಪ್ರಯತ್ನಿಸುತ್ತಿರುವವರು ಯಾರು? ಕರ್ನಾಟಕದವರೇ? ಕೇರಳದವರೇ? ಆಂಧ್ರದವರೇ? ಮಹಾರಾಷ್ಟ್ರದವರೇ? ಉತ್ತರ ಪ್ರದೇಶದವರೇ? ಕಾಶ್ಮೀರದವರೇ? ಯಾರು? ಯಾರು? ಯಾರು- ಶ್ರೀ ನಟರಾಜನರಿಗೆನೇ ಗೊತ್ತು. ಅವರು ಮಾತಿನ ಬಾಣ ಬಿಟ್ಟದ್ದು ಹಿಂದಿಯ ಮೇಲೆ. ಅದೆಂತು ಹಿಂದಿ ತಮಿಳನ್ನು ನಾಶ ಮಾಡುತ್ತದೋ ಅವರಿಗೆನೇ ಗೊತ್ತು! ಭಾರತದಲ್ಲಿರುವ ಹಿಂದಿಯನ್ನೆದುರಿಸಲು ಅಮೇರಿಕ, ಮಲೇಷ್ಯಾ ಮುಂತಾದ ದೇಶಗಳಲ್ಲಿರುವ ತಮಿಳರೆಲ್ಲರೂ ಒಂದಾಗಬೇಕೆಂದವರು ಕರೆಕೊಡುತ್ತಿದ್ದಾರೆ. 'ಹಿಂದಿ ಹೇರುವಿಕೆ'ಯನ್ನು ತಡೆಯಲಿಕ್ಕಾಗಿ ಪಾಕಿಸ್ಥಾನ ಅಥವಾ ಚೈನಾ ಆಕ್ರಮಣ ನಡೆಸಿದಲ್ಲಿ ದ್ರಾ. ಮು. ಕ.ದವರು ಯಾರಿಗೆ ಸಹಾಯ ಮಾಡಿಯಾರು? ಮಲೇಷ್ಯಾ, ಅಥವಾ ಇಷ್ಟಾವರಾಷ್ಟ್ರವಾದರೂ ತಮಿಳಾಳೊಬ್ಬನ ನೇತೃತ್ವದಲ್ಲಿ ಸೇನೆಯನ್ನು ಆಕ್ರಮಣ ನಡೆಸಲು ಕಳುಹಿಸಿದಲ್ಲಿ ಈ ದ್ರಾ. ಮು. ಕ.ದವರು ಅವರಿಗೆ ಅಮೋಘ ಸ್ವಾಗತವನ್ನು ಕೊಡದೆ ಬಿಡುವದುಂಟೇ?

ಇದೇ ರೀತಿ ಅಂದು ಮಾತಾಡಿದವರಲ್ಲಿ ಅಗ್ರಗಣ್ಯರು ತಿರು ಮನೋಹರನ್‌ರವರು. ಇವರು ಲೋಕ ಸಭಾ ಸದಸ್ಯರಿದ್ದಾರೆ. ತಮಿಳಿಗಿಂದೂ ಅಪಾಯ ಇದೆ. ತಮಿಳರ ಮೇಲೆ ಇತರ ಭಾಷೆಯ ಭಾರವನ್ನು ಹೇರಲು ಕುಂಟು ನಡೆಯಲಾಗುತ್ತಿದೆ. ಇಪ್ಪತ್ತು ವರ್ಷಗಳ ಹಿಂದೆ ಮತೀಯ ವಿಷಯದ ಮೇಲೆ ದೇಶ ವಿಭಜನೆ ಆಯಿತು. ಇಂದು ಭಾಷೆಯ ಹೆಸರಿನ ಮೇಲೆ ವಿಭಜನೆ ನಡೆಯುತ್ತದೆ. ಈ ಕುಂತು ಅವರು ಕೇಂದ್ರ ಸರಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ಬಿಟ್ಟರು.

ತಮಿಳಿಗೆ ಅಪಾಯವಾದರೂ ಎಲ್ಲಿದೆ, ಯಾರಿಂದ? ಅವರೂ ಹಿಂದಿಯ ಕುರಿತೇ ಮಾತಿನ ಗುಂಡು ಹಾರಿಸಿರುವರು. ಅಲ್ಲದೆ ಪುನರ್ ದೇಶ ವಿಭಜನೆಯ ಬೆದರಿಕೆಯನ್ನು ಹಾಕಿರುವರು. ಅಲ್ಪಿಕೆ ಅಥವಾ ಅಡಳಿತದ ಅನುಸಂದಿಂದ ಆಂಗ್ಲ ಭಾಷೆಕೆಳಗೆ ಬಿತ್ತೆಂದರೆ ದೇಶ ಒಡೆದು ಹೋಗುತ್ತದೆ. ಇದೊಂದು ರಾಜಕೀಯ ನೊಲದ ಮಾತು, ಕಾಡಿಫಲ್ಲೊಂದು ಕಾಯಿ ಬಿದ್ದೊಡನೆ ಮಲಗಿಕೊಂಡಿದ್ದ ನೊಲವು ಭೂಮಿ ಒಡೆಯುತ್ತನ್ನುತ್ತ ಓಡತಂತೆ. ಆಗ ಇತರ ಪ್ರಾಣಿಗಳೂ ಅದನ್ನು ಅನುಸರಿಸಿದುವಂತೆ! ಕೂನೆಯಲ್ಲಿ ಸಿಂಹ ಅದನ್ನು ತಡೆದು ಫಿಲ್ಲಿಸಿತಂತೆ. ಹಾಗೆ ಇದೆ. ದ್ರಾ. ಮು. ಕ. ದವರ ದೇಶ ಒಡೆಯುತ್ತಿದೆನ್ನುವ ಕಥೆ ವಿಚಾರವಂತರು ರಾಜಕೀಯ ನೊಲದ ಮಾತಿಗೆ ಮರುಳಾಗುವಂತಿಲ್ಲ. ಮಿಸ್ಟರ್ ರಾಜಗೋಪಾಲಾಚಾರಿ, ತಿರು ಕಾಮರಾಜ, ತಿರು ಅಣ್ಣಾದೊರೈ, ಮಿಸ್ಟರ್ ಕೋದಂಡ ರಾವ್, ಜನಾಬ್ ಇಸ್ಮಾಯಿಲ್... ಇವರೆಲ್ಲರೂ ಆ ರಾಜಕೀಯ ನೊಲಗಳಿವೆ. ಇಲ ಕಾರಣದಿಂದಾಗಿ ಅ ಬೊಟ್ಟಿಯನ್ನು ಹಾಕುತಿದ್ದಾರೆ, ಅಷ್ಟೆ. ದೇಶ ಭಕ್ತ ಸಿಂಹ ಸದೃಶ ಭಾರತೀಯರು ಅವುಗಳ ಹಿಂದೆ ಓಡಲಾರರು. ಅವು ಓಡುತ್ತಿರುವುದನ್ನು ಕಂಡು, ನಗಬಹುದಷ್ಟೆ.

ಪ್ರತ್ಯೇಕತಾವಾದಿಗಳಿಗೆ ರಷ್ಯಾ ಪ್ರತಿನಿಧಿಯ ಹಿತವಚನವೂ ಕಿವಿಯ ಮೇಲೆ ಬೀಳಲಿಲ್ಲ. ದ್ವೇಷಪೂರ್ಣ ರಾಜಕೀಯ ಮದಿರೆಯನ್ನು ಮತ್ತ ಮಾಂ ಅದಾಗಲೇ ಕುಡಿದಾಗಿದೆ. ಈಗ ಅಡಳಿತದ ಕೊಳ್ಳಿ ಕೈಯಲ್ಲಿ ಸಿಕ್ಕಿಕೊಂಡಿದೆ. ಮಿಸ್ಟರ್ ಸಿ. ರಾಜಗೋಪಾಲಾಚಾರಿಯವರು ಅಂಗ್ಲ ಕೆಂಪಿರುಬೆಡಳನ್ನು ಮೇಲೆ ಬಿಡುತ್ತಿದ್ದಾರೆ. ಅದರ ಸರಿಣಾಮ ಸರ್ವ ವಿದಿತ ಎಲ್ಲಿಯನ್ನು ಮುಟ್ಟಲು ವೀಕ್ಷಕರು ಬಿಡಬಹುದೇ?

ಇತರರ ಕಷ್ಟ—ತೊಂದರೆಗಳನ್ನು ಕೇಳುವಷ್ಟು ತಾಳ್ಮೆಯು ನಿಮಗಿರಬೇಕು. ಇದು ಸೌಹಾರ್ದತೆಗಿರುವ ದಾರಿ. ತಮ್ಮ ಮನಸ್ಸಿನಲ್ಲಿದ್ದ ದುಃಖದ ಪ್ರವಾಹವನ್ನು ಯಾರಲ್ಲಾದರೂ ಸ್ವಲ್ಪ ತೋಡಿಕೊಂಡಾಗ, ಅತನ ದುಃಖದ ಹೊರೆಯು ಸ್ವಲ್ಪ ಕಡಿಮೆಯಾಗುತ್ತದೆ. ಆದುದರಿಂದ ಸ್ನೇಹಿತನೋರ್ವನ ನೈಜ ಪರೀಕ್ಷೆ ಇಲ್ಲೇ ನಡೆಯುತ್ತದೆ. ಇತರರಿಗೆ ಸಹಾಯ ಭೂತಿ ಪ್ರಕಟಿಸುವ ಸದ್ಗುಣವನ್ನು ನಿಮ್ಮಲ್ಲಿ ಇಂದೇ ಬೆಳೆಸುಗೊಡಿ.

ತನ್ನ ಸಮಸ್ಯೆಗಳನ್ನು ಹೊತ್ತುಕೊಂಡು ನಿಮ್ಮಲ್ಲಿಗೆ ಒಬ್ಬನು ಬರುತ್ತಾನೆಂದರೆ, ಅತನನ್ನು ಕೇವಲ ಮಾತಿನಲ್ಲಿ ಸಂತೈಸಲು ಶ್ರಮಿಸಿದರೆ ಸಾಲದು. ನಿಮಗೆ ಸಾಧ್ಯವಿದ್ದಷ್ಟೂ ಅತನ ಆ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು. ಮಾತಿನಂತೆಯೇ ಸಹಾಯ ಮಾಡಿ ಅತನಿಗೆ ನೀವು ನೀಡಬೇಕು. ಬಂದವರಿಗೆ ಸಹಾಯ ಗೈಯುವುದನ್ನೆ ಅಲ್ಲ, ಅಂತಹ ಸಂದರ್ಭಗಳನ್ನು ಅಜ್ಞಾನಸಿದ ಮನೋಸ್ಥಿತಿಯನ್ನು ನಾವು ಬೆಳೆಯಗೊಡಬೇಕು. ಇದೇ ಮಾನವ ಸ್ನೇಹಿಯ ಒಡೆಗಲ್ಲು. ನೀವು ಅದೇ ಕಾರಣ ಪರ ಊರಿಗೆ ಬಂದಿದ್ದೀರಿ. ನಿಮಗೆ ಅಲ್ಲಿಯ ವಾತಾವರಣ, ಜನ, ಭಾಷೆ ಇವೆಲ್ಲಾ ಹೊಸದು. ಅಂತಿದ್ದಾಗ ನಿಮಗೆ ಓರ್ವ ಅನುಭವಿತನು ಮಾರ್ಗದರ್ಶನ ನೀಡಿದಾಗ ಅದೆಷ್ಟು ಆನಂದವಾಗುತ್ತದೆ. ಈ ರೀತಿ ನಿಮ್ಮ ಕಷ್ಟಕಾಲಕ್ಕೆ ಇತರರು ಎರವಾಗುವಂತೆ, ನೀವೂ ಅವರ ಕಷ್ಟ ಪರಿಹಾರಕ್ಕೆ ಪ್ರಯತ್ನಿಸಬೇಕು. ಪರಸ್ಪರ ಸಹಾಯ ಸಹಕಾರವೇ ಸ್ನೇಹ ಸೌಹಾರ್ದವನ್ನೇರುವ ಸೋಪಾನ. ಇತರರನ್ನು ಗೇಲಿ ಮಾಡುವುದೋ, ಅದರಲ್ಲಿ ಕುಂದನ್ನು ಕಾಣುವುದೋ ನಿಮಗೆ ಹೇಳಿದ್ದಲ್ಲ. ಇತರರಿಗೆ ಸ್ಫೂರ್ತಿ, ಮಾರ್ಗದರ್ಶನ, ಸಹಾಯ ಗೈಯುವುದೇ ನಿಮಗೆ ಬೇಕಿದ ಕಾರ್ಯ.

ಮಾನವನು ಸಮಾಜ ಜೀವಿ. ಅಂತಿದ್ದಾಗ ಸಹ ಜಾಳ್ವೆಯು ಅತನದ್ದಾಗಿದೆ. ಪರಸ್ಪರ ಕೂಡಿಕೊಂಡು ಇರದಿದ್ದರೆ ಸಮಾಜದಲ್ಲಿ ಅನ್ಯೋನ್ಯತೆಯು ಕಾಣುಬಹುದು. ಆದುದರಿಂದ ವ್ಯಕ್ತಿ ಹಿತಕ್ಕಾಗಿಯೂ ಸಮಾಜ, ರಾಷ್ಟ್ರ, ವಿಶ್ವಹಿತಕ್ಕಾಗಿಯೂ 'ಸ್ನೇಹ—ಸೌಹಾರ್ದ'ದ ಅಗತ್ಯತೆ ಅಗತ್ಯ.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 499/67

ಮಾನ್ಯ. ರಾಮಮಾರ ರಾವ್

ಪ್ರತಿವಾದಿಯು, ಅತನ ಸೇರೆಗಾರ್ತಿ ಕೂಡಾ ೩ನೆ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

೩ನೆ ಪ್ರತಿವಾದಿ, ಸಂಜೀವ ಸೇರೆಗಾರ, ದೇವ ಸೇರೆಗಾರನ ಮಗ, ಉಡುಪಿ ತಾಲ್ಲೂಕು ಮೊಸರು ಗ್ರಾಮದ.

ವಾದಿ ಸ್ವಂತ ಕಟ್ಟಿದ ಸ್ವಾಧೀನತೆ ಸಗೆರೆ ಕುಂತು ವಾದಿಯು ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 16—4—68ಕ್ಕೆ ತನ್ನಾಗೆ ಯಿಟ್ಟಿರುವುದ್ರಿಂದ ಆ ಕುರಿತು ನಿಮಗು ಉದಾಹರಣೆಯೇನಾದರೂ ಯಾ ಸಮಯದಲ್ಲಿ ಸದ್ರಿ ತಾರೀಕು 16—4—68ನೆ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟ್‌ನಲ್ಲಿ ಹಾಜರು ಆಗಿ ಹಾಜರಿ ಮಾಡಿಕೊಳ್ಳತಕ್ಕದ್ದು. ಯಾವ್ದೆ ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಸೈಸಲು ಮಾಡಿಕೋಡಾದೀತೆಂತ ಯೊ ಮೂಲಕ ತಿಳಿಸಿಕೋಡಾಗುತ್ತದೆ.

M. Madhava Rao
Advocate for Plff.

ತಾ. ೩—4—68, ಮೊಳ್ಳಾಂ: ಕುಂದಾಪುರ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ಕರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಸೇವಾತಿಗಳ ಮೇಲೆ 3% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಪ್ರಧಾನ ಕಛೇರಿ—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಬೈಕ್ ಬಾಳ್ ಹಿಲ್ ರೋಡ್
ಮಂಗಳೂರು—3

ಪ್ರಕೃತಿ ಚಿಕಿತ್ಸೆ

ಸೂರ್ಯನ ಆಶೀರ್ವಾದ ಪಡೆಯಿರಿ

ಅಲೋಪತಿ, ಹೋಮಿಯೋಪತಿ, ಸಿದ್ಧ ವೈದ್ಯ, ಆಯುರ್ವೇದ, ಯೂನಾನಿ ಮೊದಲಾದ ವೈದ್ಯ ಪದ್ಧತಿಗಳಂತೆಯೇ ಪ್ರಕೃತಿ ಚಿಕಿತ್ಸೆಯೂ ಒಂದು ಖಚಿತ ವೈದ್ಯ ವಿಧಾನ. ಕ್ಷಯರೋಗಿಗಳನ್ನು ಶುದ್ಧ ಹವೆಗೆಂದು ಸಾಗರತೀರದೂರುಗಳಿಗೋ ಬೆಟ್ಟದೂರುಗಳಿಗೋ ಕರೆದೊಯ್ಯುವ ಸಲಹೆಗಳನ್ನು ಎಲ್ಲ ವೈದ್ಯರೂ ನೀಡುವುದುಂಟು. ಪ್ರಕೃತಿಯ ಪರಿಶುದ್ಧ ಹವೆಯು ರೋಗ ನಿವಾರಣೆಯಲ್ಲಿಯೂ ರೋಗ ಶ್ರಮಣದಲ್ಲಿಯೂ ಮಹತ್ವದ ಪಾತ್ರ ವಹಿಸಬಲ್ಲದು. ಉಸ್ಸಿ ರೋಗಿಗಳು ಬೆಣಚುಕಲ್ಲಿನ್ನು ಬಾಯಲ್ಲಿ ಹಾಕಿಕೊಂಡು ಸಮುದ್ರದಂಡೆಯಲ್ಲಿ ಕುಳಿತುಕೊಳ್ಳಬೇಕು ಎಂದು ಯೂರೋಪಿನವರೂ ವೈದ್ಯರು ಸಲಹೆ ನೀಡಿದರೆ ವೈದ್ಯ ಶಾಲೆಯಲ್ಲೇ ಕುಳಿತಿರಬೇಡಿ ಮತ್ತೆ! ನರದೌರ್ಬಲ್ಯವಿರುವವರು ಸೂರ್ಯನ ಬಿಸಿಲು ಸ್ನಾನ ಮಾಡಬೇಕೆಂದೂ ಹೇಳುತ್ತಾರೆ. ಮಹಾತ್ಮಾ ಗಾಂಧಿಯವರ ಆತ್ಮಶುದ್ಧಿಗಾಗಿ ಉಪವಾಸವೂ ಒಂದು ಬಗೆಯ ಪ್ರಕೃತಿ ಚಿಕಿತ್ಸೆ. ತನ್ನ ಮಗ ದೇವದಾಸನು ಜ್ವರಪೀಡಿತನಾಗಿ ಪ್ರಾಣಾಂತಿಕ ಪರಿಸ್ಥಿತಿಯನ್ನು ಹೊಂದಿದ್ದರೂ ಅವರು ಪ್ರಕೃತಿ ಚಿಕಿತ್ಸೆ ಮುಂದೇ ಯಮರಾಯನ ದವಡೆಯಿಂದ ಮಗನನ್ನು ಬಿಡಿಸಿ ತಂದರು.

ಕ್ಷಯರೋಗದ ದೋಷ ಹುಳುವು ಬ್ಯಾಕ್ಟೀರಿಯಾ ಮಗುಸಿದ್ದಾಗಲೇ ಕಡ್ಡಿ ಮಾಡಿಸಿದ್ದರು, ಮುಂದೆ ಮೊದ್ದಲಾದ ಮಾಲೆ ಈ ದೋಷ ನಿವಾರಣೆಯಾಗುವುದಿಲ್ಲ. ಅದುದರಿಂದ ಈ ದೋಷ ದೂರಮಾಡುವ ವಿಧಾನಗಳ ಬಗ್ಗೆ ತಲೆ ಕೆಡಿಸಿಕೊಂಡ ವಿದ್ವಾಂಸರು ಸೂರ್ಯನಲ್ಲಿ ಶರಣು ಹೋಗುವುದರಿಂದಲೇ ಈ ರೋಗ ನಿವಾರಣೆ ಸಾಧ್ಯವೆಂದು ಕಂಡುಕೊಂಡಿದ್ದಾರೆ.

ಅತಿ ಹೆಚ್ಚಿನ ಶಾಖವಿಲ್ಲದ ಸೂರ್ಯನ ಕಿರಣಗಳು ಏಕಕಾಲಕಾಲಿಗೆ; ಅವು ದೇಹಕ್ಕೆ ತಂಪನ್ನು ನೀಡುತ್ತವೆ; ಮನಸ್ಸಿಗೂ ಆಹ್ಲಾದವನ್ನು ತುಂಬುತ್ತವೆ. ಇದನ್ನು ಪ್ರತಿ ಪ್ರಾಣಿಯೂ ಅನುಭವದಿಂದ ಅರಿತುಕೊಂಡಿದೆ. ಉಷ್ಣವಲಯದ ಪ್ರಾಣಿಗಳು ಚಳಿಗಾಲಕ್ಕೂ, ಶೀತವಲಯದ ಪ್ರಾಣಿಗಳು ಬೇಸಿಗೆ ಕಾಲಕ್ಕೂ ಹಾತೊರೆಯುತ್ತಿರುತ್ತಾರೆ. ಮಲಯೂನಿಲ- ಸೂರ್ಯನ ತಂಗಿರಣಗಳು ದೇಹದ ಆಲಸ್ಯವನ್ನು ನೀಗಿಸುವುದು ಮಾತ್ರವಲ್ಲ, ದೇಹದ ಕೆಲವಾರು ದೋಷಗಳನ್ನು ನೀಗಿಸುವ ಶಕ್ತಿಯನ್ನೂ ಪಡೆದಿವೆ.

ಸ್ವಿಟ್ಜರ್ಲ್ಯಾಂಡಿನ ಹಾಫೊವಂನ ಬಳಿ ವರ್ಷ ಬರ್ಗದಲ್ಲಿ ವಾಗ್ದೋಷ ನಿವಾರಕ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಇದನ್ನೆಲ್ಲಿರುವ ಶಕ್ತಿವಾದರೂ ಅದೇ, ಪ್ರಕೃತಿಯ ಬೇಕಾದನಾದ ಸೂರ್ಯನ ಶಕ್ತಿ- ಪ್ರಕೃತಿ ಚಿಕಿತ್ಸೆ ಸೂರ್ಯ ರಶ್ಮಿಯನ್ನೂ ಉತ್ತಮ ಹವೆಯನ್ನೂ ಹೆಚ್ಚು ಹೆಚ್ಚು ಅನುಭವಿಸಿದರೆ, ಹೆಚ್ಚು ಹೆಚ್ಚು ಆರೋಗ್ಯ ಲಾಭವಾಗುವುದೆಂದು ಈ ಸಂಸ್ಥೆಯು ಡಣಾಡಂಗುರವಾಗಿ ಪ್ರಚಾರ ಪಡಿಸುತ್ತದೆ. ಈ ವಾಗ್ದೋಷ ನಿವಾರಕ ಸಂಸ್ಥೆಗೆ ಸಂಬಂಧಿಸಿದ ಅನೇಕ ಕಟ್ಟಡಗಳಿವೆ. ಇದು ವಿಶಾಲವಾದ ಬಯಲಲ್ಲಿ, ಆದರ ಸುತ್ತಣ ಇನ್ನು ಪ್ರದೇಶ—ಬೆಟ್ಟ ಸೋಪಾನಗಳಿಗೆ ಹೊಂದಿಕೊಂಡಿದೆ.

ಈ ಸಂಸ್ಥೆಯಲ್ಲಿ ಮೂರನೆಯ ತರಗತಿಯಿಂದ ಹತ್ತನೆಯ ತರಗತಿಯ ವರೆಗಿನ ವಿದ್ಯಾರ್ಥಿಗಳು ಕಲಿಯುವ ಅವಕಾಶವಿದೆ. ತಮ್ಮ ತಮ್ಮ ಮನೆಯನ್ನು ಬಿಟ್ಟು ಬಂದಿರುವ ಆ ಮಕ್ಕಳಿಗೆ ಇದು ಒಂದು ಶಾಲೆಯಂತಿದ್ದರೂ ಕಾಟುಂಬಿಕ ವಾತಾವರಣವು ಅವರಿಗೆ ದೊರೆಯುತ್ತದೆ. ಎಂತೆಂಟು ವಿದ್ಯಾರ್ಥಿಗಳ ಒಂದೊಂದು ತಂಡವನ್ನು ಮಾಡಿ ಅವರನ್ನು ಒಂದೇ ಕೋಣೆಯಲ್ಲಿ ಇರಗೊಟ್ಟಿದ್ದಾರೆ. ಈ ಸಂಸ್ಥೆಯಲ್ಲಿಗೆ ಒಟ್ಟು ನಾಲ್ಕು ವಿದ್ಯಾರ್ಥಿಗಳೂ, ಹದಿನಾರು ವಿದ್ಯಾರ್ಥಿನಿಯರೂ ಕಲಿಯುತ್ತಿದ್ದಾರೆ. ಸೂಕ್ತ ತರಬೇತಿ ಪಡೆದ ಇಬ್ಬರು ಈ ಮಕ್ಕಳ ಮೇಲ್ವಿಚಾರಣೆ ಮಾಡಿ ಎಚ್ಚರಿಸಿಕೊಂಡಿದ್ದಾರೆ.

ಒಂದೊಂದು ತಂಡಕ್ಕೂ ಎರಡೆರಡು ಮಲಗುವ ಕೋಣೆಗಳು, ಒಂದು ಅಡುಗೆ ಮನೆ, ಊಟದ ಮನೆ, ಅಧಿಕ ಆಟಕೆಗಳಿರುವ ಆಟದ ಕೋಣೆ ದೊರೆಯುತ್ತದೆ. ಮೇಲ್ವಿಚಾರಕರಿಗೆ ಬೇರೆಯೇ ಕೋಣೆಯಿದೆ. ಪ್ರತಿ ತಂಡದ ವಸತಿಗೆ ಹತ್ತಿಲು, ಕೈದೋಟವೂ ಪ್ರತಿ—ಪ್ರತ್ಯೇಕವಾಗಿಯೇ ಇದೆ. ವಿದ್ಯಾರ್ಥಿಯು ತನ್ನವರನ್ನು ಬಿಟ್ಟು ದೂರ ಒಂದಿರುವೆನೆಂಬ ಭಾವನೆಯನ್ನು ತಳೆಯದಂತೆ ಸಾಕಷ್ಟು ಮುಕ್ತಸ್ವಾತಂತ್ರ್ಯವನ್ನು ಕೊಡಲಾಗುತ್ತದೆ. ಅಂದರೆ, ಸಂಪೂರ್ಣ ಕೌಟುಂಬಿಕ ವಾತಾವರಣವು ಈ ಪುಟಾಣಿಗಳ ಹುಟ್ಟು ಮನೆಯಲ್ಲಿ ನೆಲೆಗೊಂಡಿದೆ. ಇಲ್ಲಿ ಹಿಡುತ್ತಿರುವ ಮಕ್ಕಳನ್ನು ಪ್ರಶ್ನಿಸಿ ಪರೀಕ್ಷಿಸಿದಾಗ ಅವರು ಮನೆಯನ್ನೇ ಮರೆತು ಬಿಟ್ಟಿರುತ್ತಾರೆ ಎಂಬುದು ನಿಜಕ್ಕೂ ಆಶ್ಚರ್ಯವೇ ಸರಿ. ಇಲ್ಲಿನ ಪ್ರಧಾನ ಚಿಕಿತ್ಸಾ ಸಾಧನಗಳು ಸೂರ್ಯ ಮತ್ತು ನಾಯು.

ಇಲ್ಲಿಂದ ತುಸು ದೂರದಲ್ಲಿ ಸಂಸ್ಥೆಯ ಆಡಳಿತ ಕಛೇರಿ ಮತ್ತು ಚಿಕಿತ್ಸಾಲಯಗಳಿವೆ. ಕಮ್ಮಾರಶಾಲೆ, ಚಿತ್ರ—ಪ್ರಯೋಗಶಾಲೆ ಮೊದಲಾದುವೂ ಇವೆ. ಈ ವಾಗ್ದೋಷ ನಿವಾರಕ ಸಂಸ್ಥೆಗೆ ತಗಲಿದ ವೆಚ್ಚ ೨೫ ಮಿಲಿಯನ್ ಮಾರ್ಕುಗಳು. ಇದು ಅತ್ಯಂತ ವಿಖ್ಯಾತಿಗಳಿಸುತ್ತಿದೆ.

ಧ್ವನಿ ಉಪಕರಣ, ಮೈಕ್ರೊಫೋನ್‌ಗಳನ್ನು ಅಳವಡಿಸಿರುವ ವಿಶೇಷ ಕೋಣೆಯೊಂದಿದ್ದು ಇದರಲ್ಲಿ ವಾಗ್ದೋಷ ಪೀಡಿತ ವಿದ್ಯಾರ್ಥಿಗಳ ನಾಟಕ, ವಾಚನ, ಗಾಯನ ಮತ್ತಿತರ ಸ್ಪರ್ಧೆಗಳು ನಡೆಯುತ್ತವೆ. ಇವುಗಳಲ್ಲಿ ಕಲಿಯುವುದರಿಂದ ಎಷ್ಟೋ ಮಕ್ಕಳ ದೋಷಗಳು ನಿವಾರಣೆಯಾಗಿದೆ.

ಸಂಸ್ಥೆಗೆ ಹೊಂದಿಕೊಂಡ ಒಂದು ಈಜು ಕೊಳವೂ ಇದೆ. ಇದರ ವಿಸ್ತೀರ್ಣ ೭೨ ಚದರ ಮೀಟರುಗಳು. ಇದರಲ್ಲಿ ಸುಮಾರು ೯ ಅಡಿ ತುಂಬಿರುತ್ತದೆ. ಇದನ್ನು ಸದಾಕಾಲ ಉಪಯೋಗಿಸುವ ಸೂಕ್ತ ವ್ಯವಸ್ಥೆ ಮಾಡಿದ್ದಾರೆ.

ಸ್ವಿಟ್ಜರ್ಲ್ಯಾಂಡಿನ ಈ ವಾಗ್ದೋಷ ನಿವಾರಕ ಸಂಸ್ಥೆ ಪ್ರಕೃತಿ ಚಿಕಿತ್ಸಾ ಕೇಂದ್ರವೂ ಆಗಿದೆ. ವಾಗ್ದೋಷ ನಿವಾರಣೆಯಲ್ಲಿ ಈ ಸಂಸ್ಥೆಯ ಸಾಧನೆಯೇನೂ ಕಡಮೆಯನ್ನುವಂತಿಲ್ಲ.

ಹೊತ್ತಿಸು ನಂದಾ ದೀಪವ

— ೧ —

ಇಪ್ಪತ್ತು ವರುಷಗಳ ಹಿಂದೆ ಕಂಡೆವು ಹೊಂಗನಸ,
ಕಟ್ಟಿದೆವು ಮನದಲಿ ಸುಖ ಸಾಮ್ರಾಜ್ಯವೊಂದನ್ನ,
ಸಗ್ಗಕೆ ಮೂರೇ ಗೇಣೆಂದು ಹಿರಿ ಹಿಗ್ಗಿದಂದವನು
ಇಂದು ಕಾಣುವೆವು ಬರಿದೆ ಭ್ರಾಂತಿ ಸಾಮ್ರಾಜ್ಯವನು!

— ೨ —

ಕಾಣುವನು ಅಲ್ಲಿ ಕಾಳ ಸಂತೆಯ ಕರಾಳ ಪುರುಷನು,
ಕಾಣುವೆವು ಇಲ್ಲಿ ಬೋಟು ನೋಟಿನ ಕಾತೆಗಳನು,
ಕಾಣುವೆವು ಅಲ್ಲಿ ಭಕ್ಷ್ಯಾದ್ಯಿಚ್ಛ ಕ್ರಿಯಕ್ಷಗಳ ದೂಷನ,
ಕಾಣುವೆವು ಅಲ್ಲಲ್ಲಿ ದೀನ ದಂದ್ರರ ತಾಂಡವ ನೃತ್ಯವನ್ನು!

— ೩ —

ಮೋಗಿಲ ಯೋಗಿ ಭೋಗಿಯಾದನೆ?
ಕರ್ಮಯೋಗಿ ಸುಖಿಯಾದನೆ?
ಸತ್ಯವಾದಿ ಹರಿಶ್ಚಂದ್ರನಾದನೆ?
ಧರ್ಮಜೋಗಿ ಅಶೋಕನಾದನೆ?

— ೪ —

ಅದೋ ತೋರುತಿದೆ, ಬೆಳ್ಳಿಚುಕ್ಕಿ ಬೆಳಗುತಿದೆ ಅನಂತ ದೂರದಲಿ,
ದಿಟ್ಟಿಸಿ ನೋಡು, ನಿಟ್ಟಿಸಿ ನೋಡು, ಕಳೆದುದಿರುದಳಿಗೆಗಳ ಎಡೆಯಲಿ,
ಕರಾಳ ಪುರುಷನ ಹಿಡಿದೆತ್ತಿ ಅಡಗಿಸು, ಕಂಸನ ವಧಿಸಿದ ಕೃಷ್ಣನಂದದಲಿ,
ಪಕ್ಷಪಾತಿಗಳ ಸೆರೆಹಿಡಿ ಮನವ, ಬಿಗಿದುಕಟ್ಟು ಎಳೆ ಕೂಟನ ಚಂದದಲಿ!

— ೫ —

ಏ ಮನುಜ! ನೋಡಿಷ್ಟಿ, ಕಣ್ತೆತ್ತಿ,
ನಿನ್ನದೇ ರಾಜ್ಯ, ಮಾಡ ಕರ್ಮವ,
ಸತ್ಯವಾಡು, ಅಧರ್ಮವ ತೊರೆ,
ಜಾಕು ಪಂಕ್ತಿಯ ಇವರಂಗೆ!

— ೬ —

ದೂರದಿರು ಕರಕಾರನ ಸುಮ್ಮನೆ,
ಮಾಡು ಸಹಕಾರವ ಗಮ್ಮನೆ,
ಬಗೆಯದಿರು ದ್ರೋಹವ ದಿಮ್ಮನೆ,
ಮೊಳಗಿಸು ಜಯಭೇರಿಯ ಗಜ್ಜನೆ!

— ೭ —

ಹೊತ್ತಿಸು ನಂದಾ ದೀಪವ ನಿನ್ನ ಮನದೆಗುಲದಲಿ!
ಆರ ಧಿರ ಮಾನವತೆಯ ಶುದ್ಧ ಅಂತರಂಗದಲಿ,
ಪೊರಡು ದಿಗ್ವಿಜಯಕ ವಾರ್ಥನಂತೆ! ಹಿಮ್ಮೆಟ್ಟದಿರು ರಣದಲಿ,
ವರಿಸುವಳು ಜಯವವಳು! ಮಾನವತಾಳುವಳು ಅಂದದಿ!

- ಯು. ಕೆ. ಕಾರಂತ.

ಹೀರಾಬಾಗ್, ಬನ್ನಂಜೆ,
ಉಡುಪಿ, ದ. ಕ.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನು ತಾರೀಕನ್ನೂ ನಿರೀಕ್ಷಿಸಿರಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ಸ.)

ಜೇನ ಹನಿಗಳು

ಸಂಪಾದಕ: ಶ್ರೀ ಕರಾಕೃ.

ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫.

ಪುಟಗಳು: ೧೫೦.

ಬೆಲೆ: ರೂ. ೩-೫೦. ಕ್ಯಾಶಿಕೋ ರೂ. ೬-೦೦.

ಕರ್ನಾಟಕ ಜಾನಪದ ಸಾಹಿತ್ಯ ಸಂಪಾದಕ--ಪ್ರಕಾಶಕದಲ್ಲಿ ಅದ್ವಿತೀಯರಾದ ಶ್ರೀ ಕರಾಕೃರವರ 'ಜೇನ ಹನಿಗಳು' ನಾಲ್ಕನೆಯ ಆವೃತ್ತಿಯನ್ನು ಹೊಂದಿರುವುದು ಅಭಿಮಾನವೇ. ಈ ಮೊದಲಿನ ಆವೃತ್ತಿಯನ್ನೇ ವಿಸ್ತರಿಸಿ ಹೆಚ್ಚು ಹೆಚ್ಚಿನ ಗೀತೆಗಳನ್ನು ಸೇರಿಸಿ, ಹೆಸರಿಡಿ, 'ಇನ್ನೇನು ಬಂದೇ ಬಿಡೋಣ' ಎನ್ನುವ ಲೇಖನಗಳನ್ನೂ ಹೊಸತಾಗಿ ಕೂಡಿಸಿ ಪುಸ್ತಕದ ಕಳೆಯನ್ನು ಹೆಚ್ಚಿಸುವ ಪ್ರಯತ್ನಗಳಲ್ಲಿ ಕಾಣುತ್ತವೆ. ಶ್ರೀ ಆರ್. ಎಸ್. ಎನ್.ರವರ ಚಿತ್ರಗಳು ಜಾನಪದ ಗೀತೆಗಳ ಸಂದರ್ಭ—ಸನ್ನಿವೇಶಗಳಿಗೆ ತಂಬ ಹೊಂದಿಕೆಯಾಗಿವೆ—ಇದರಿಂದ ಪುಸ್ತಕದ ಮೌಲ್ಯ ಹೆಚ್ಚಿದೆ ಎಂಬುದು ನಿರ್ವಿವಾದ.

ಜಾನಪದ ಗೀತೆಗಳ ಒಂದೊಂದು ತುಣುಕೂ ಜೇನ ಹನಿ, ಸವಿದಷ್ಟು ರುಚಿ. ಈ ಸಂಗ್ರಹದಲ್ಲಿನವಿಲ ಗೀತೆಗಳೂ ಇದಕ್ಕೆ ಸಾಕ್ಷಿ. ಜನತೆಯ ಬಾಯಿಯಲ್ಲಿ ಬಂದಂತೆಯೇ ಈ ಗೀತೆಗಳು ಅಚ್ಚಿನ ಮನೆಯನ್ನು ಕಂಡಿವೆ. ಇಲ್ಲಿ ಶುದ್ಧಾಚಾರ—ಉಚಿತ ಪಾಠದೆಂಬುದು ಇಲ್ಲ. ಮಾತೃಭಾಷೆ ಬೇರೆ ಬೇರೆಯಿದ್ದರೆ ಹಾಡೇ ಪಾಠಾಂತರ? ಹಾಂಗಾಗಿ ಜಾನಪದ ಭಾಷೆಯ ಪರಿಚಯವಿಲ್ಲದವರು ತಾವು ತಡಬಡಿಸಬಹುದು. ಶ್ರೀ ಕರಾಕೃರವರ ಉದ್ದೇಶ ಮಣ್ಣಿಗೂ ಹುಟ್ಟಿರುವ ಸಾಹಿತ್ಯವನ್ನು ಉಳಿಸುವುದು—ಈ ಕರ್ತವ್ಯವಾಲನೆಯಲ್ಲಿ ಸಂಪೂರ್ಣ ನೆರವೇರಿದೆ.

ಇಂತಹ ಇಬ್ಬಾಳಿ ಚಳಿಯೊಳಗೆ
ಬಾರಣಾ
ಬಾನೊಬ್ಬಳೆ ಇರಲಾರೆ....(ಪುಟ- ೨)
ಹಲಸಿನ ಕಾಯಿ ಬರಿ ಮುಳ್ಳೊಂದಾ
ದರೆ ಸಲ್ಲಿಸಿ
ನೋಡು ಸಿಹಿ ರುಚಿಯು...(ಪುಟ-೧೫)
ತಗಿ ಎನ್ನ ರತ್ನಾವ ತಗಿನನ್ನ ಚಿನ್ನಾವ
ತೆಗೆಯ ಭಂಗಾರದ ಅಗ.ಚೀಯ
.....(ಪುಟ-೨೬)

ಮೊದಲಾದೆಡೆಯಲ್ಲಿ ಶೃಂಗಾರ ರಸ ಜೇನು ಪ್ರವಾಹವಾಗಿ ಹರಿದಿದೆ 'ಕೃಷ್ಣನಿಗೆ ಬುದ್ಧಿ ಹೇಳಮ್ಮ' ಮತ್ತು 'ಸನ್ನಾಯಿ ಮಾಡಿ ಕರುದಾನು' ಎಂಬ ಗೀತೆಗಳಲ್ಲಿ ಬಾಸರ ಕೇರ್ಸನೆಯ ಮುದ್ರೆ ಗಾಢವಾಗಿದೆ. "ನೀರಿಗೆ ಹೊಂಟಾಳು ನೆರಿಯೂ ಕೆರೆಗೆ" ಎಂಬ ಗೀತೆಯು ಪಾರನು ಅಗ್ನಿ ಪರೀಕ್ಷೆಗೊಂದು ಉದಾಹರಣೆಯಾದರೆ, 'ಹಾಡು ಹೇಳಿರಣ್ಣಾ' ವ್ಯವಹಾರ ನೀತಿಗೊಂದು ನಿದರ್ಶನ. "ನಲ್ಲೆ ಮಂಚದ ಮೇಲಿಲ್ಲ...." "ಕಡು ಜಾಣೆ" "ಬೆಳ್ಳಿ ಸೆರಗಾಗಿ ಬೇಹ್ಯಾಳು" 'ಸುಳ್ಳು ಜಾನಪದ್ಲಾ ಬಲ್ಲೆ' ಎಂಬಿವು ಶೃಂಗಾರ ರಸ ಸಾಗರಗಳು.

ಶ್ರೀ ಜಿ. ಶಂ. ಪರಮಶಿವಯ್ಯನವರ ಹಿನ್ನುಡಿ ಶ್ರೀ ಕರಾಕೃ ಪ್ರಶಂಸೆ ಮಾತ್ರವಲ್ಲ, ಜಾನಪದದ ಸಾಹಿತ್ಯ ಸಂಗ್ರಹದ ಜಟಿಲ ಪ್ರಶ್ನೆಯ ಮೇಲೆ ಚೆಲ್ಲಿದ ಬೆಳಕು. ಶ್ರೀ ಚಿಪ್ಪೇ ಸ್ವಾಮಿಯವರ ಲೇಖನ 'ಇನ್ನೇನು ಬಂದೇ ಬಿಡೋಣ'ವು ಶ್ರೀ ಕರಾಕೃ ಮತ್ತು ಜಾನಪದ ಸಾಹಿತ್ಯದಲ್ಲಿ ಅನ್ಯೋನ್ಯತೆಯ ಪ್ರತಿಬಿಂಬ. ಈ ಬಗೆಯ ವಿಶಾಲತೆ, ಕಷ್ಟಸಹಿಷ್ಣುತೆಗಳಿಂದಲೇ ಮಣ್ಣಿನಡಿಯ ರತ್ನ ಮೇಲೆ ಬರಬಹುದು. ಶ್ರೀ ಕರಾಕೃರವರು ಮಾಡುವ ಕೆಲಸ ಅಮೋಘವಾದುದು. ಇದಕ್ಕೆ ಪ್ರೋತ್ಸಾಹ ಕೊಡಬೇಕಾದುದು ಜನತೆಯ, ಸರಕಾರದ ಕರ್ತವ್ಯ. ಜಾನಪದ ಗೀತೆಗಳ ತಿರುಳು ಸಾಮಾನ್ಯವಾಗಿ ಶೃಂಗಾರವೇ. ಇವನ್ನು ಶಾಲೆಗಳಿಗೆ ತರಿಸಿಕೊಳ್ಳುವಂತೆ ಸರಕಾರದ ಆಜ್ಞೆ ವಿಧಿಸುವುದಕ್ಕಿಂತ ಇತರ ರೀತಿಯಲ್ಲಿ ಅರ್ಥಿಕ ನೆರವಿತ್ತು ಜಾನಪದ ಸಾಹಿತ್ಯವನ್ನು ಸಂರಕ್ಷಿಸುವುದು ಸೂಕ್ತ.

ತುಂಬಿದ ಬಿಂದಿಗೆ

ಬರೆದವರು: ಶ್ರೀ "ಕಮಲನಾಲ"

ಪ್ರಕಾಶಕರು: ಯುಗಪುರುಷ, ಪ್ರಕಟಣಾಲಯ, ಕಿನ್ನಿಗೋಳಿ, ದ. ಕ.

ಪುಟಗಳು: ೭೨. ಬೆಲೆ: ರೂ. ೧-೫೦.

ಕನ್ನಡದ ಹೂಕ ಪೀಳಿಗೆಯ ಕವಿಗಳಲ್ಲಿ ಶ್ರೀ 'ಕಮಲನಾಭ' ಎಂಬ ಕಾವ್ಯನಾಮದಲ್ಲಿ ಶ್ರೀ ಕೆ. ಅನಂತಪದ್ಮನಾಭ ಉಡುಪರೂ ಸೇರಿದ್ದಾರೆ 'ತುಂಬಿದ ಬಿಂದಿಗೆ' ಶ್ರೀಯುತರ ಇಪಿಚಿಕ್ಕ ದೊಡ್ಡ ಕವಿತೆಗಳ ಸಂಕಲನ. ಇದನ್ನು 'ಕುಲಲಿತ ಕವನ ಸಂಕಲನ'ವೆಂದು ಕವಿಗಳು ಕರೆದಿದ್ದಾರೆ. ಇದು 'ಕನ್ನಡವು ಸುಲಿದ ಬಾಳೆಯ ಹಣ್ಣಿನಂತೆ' ಎಂದು ಹೇಳಿಕೊಂಡಂತೆ ಮಾತ್ರ 'ಕುಲಲಿತ' ಪದದ ಅರ್ಥವ್ಯಾಪ್ತಿಯನ್ನು ನ್ಯಾಯಪಾರಿಕಾರ್ಥದಲ್ಲಿ ತಂದಿರಿಸಿದರೆ, ಇಲ್ಲಿನ ಕವನಗಳಲ್ಲಿ ಹೆಚ್ಚಿನವು ನಿಜಕ್ಕೂ ಲಲಿತವೆನಿಸಿಕೊಳ್ಳುವುವು.

ಇಲ್ಲಿನ ಕವನಗಳಲ್ಲಿ ಹಿರಿದರ್ಥವಿದೆ. ಕಾವ್ಯಮಯ ಭಾಷೆಯ ಬೆಡಗು ಇದೆ; ಕವಿಯ ಆಳವಾದ ಅಭ್ಯಾಸ, ಜ್ಞಾನದ ಪರಿಚಯವಿದೆ. ಶೈಲಿ ಕೆಲವಡೆ ಕ್ಲಿಷ್ಟತೆಗೆಡೆಮಾಡಿದರೂ, ರೂಪಕತತ್ವಕ್ಕೆ ಮಣಿವಿತ್ತಂತೆ ಕಂಡು ಬಂದರೂ ಸುಂದರವಾಗಿದೆ. "ನಮಗೆ ನಾವ ಗೆಳೆಯರಿದ ಳಿಂತೋ..."ಎಂಬಲ್ಲಿ ಗೀತಾಚಾರ್ಯನ ಉಕ್ತಿ ನೆನಪಿಗೆ ಬರುತ್ತದೆ. 'ಜೆವರಿನೆಣ್ಣೆ ಸುರಿಯದಿರಲು ಸೊಗಸಾದ ಸೊಡರು ಬೆಳಗದು.' 'ಬಾಳ ಮರುಭೂಮಿಯಲಿ ಬೇಸರದ ಬೇಗೆಯುರಿ...' ಮೊದಲಾದೆಡೆ ರೂಪಕ ಮನೋಜ್ಞವಾಗಿದೆ.

'ಚಿಂತನ—ಮಂಥನ' 'ಅಲೆ' ಮೊದಲಾದುವಲ್ಲಿ ಈ ಗುಣ ಹೆಚ್ಚಿದೆ. 'ಮುಗಿಲೆರೆದು' 'ತುಂಬಿದ ಬಿಂದಿಗೆ' ಕವನದಲ್ಲಿ ರೂಪಕ ತತ್ವದಂಜಿತವಾಗಿದೆ 'ಸರಸ-ವಿರಸ'ದಲ್ಲಿ ವಿಡಂಬನೆಯನ್ನೂ 'ರಹಸ್ಯ-ಮಾಸ್ಯ'ದಲ್ಲಿ ಚಿಂತನ-ಮಂಥನದ ಆಳದ ಸಂಕೇತವನ್ನೂ 'ತಾರಾ-ಮಾರಾ'ದಲ್ಲಿ ಹಕ್ಕು-ಹೊಣೆಗಳೆರಡಕ್ಕೂ ಸಾಗರಿಕ ಭಾರ್ಯನಾಗಬೇಕೆಂಬ ತಿಳಿವನ್ನೂ 'ಅಂದು-ಇಂದು' ಧಾರವಕ ಸ್ವಾತಂತ್ರ್ಯ ಪೂರ್ವ—ಉತ್ತರ ಸ್ಥಿತಿಮನ್ನು ಸೂಚಿಸುತ್ತವೆ. ಕವಿಗಳು ಪರಭಾಷೆಯ ಸುಳಿಯನ್ನು ತಂದು ಕನ್ನಡಿಗರಿಗೆ ಉಣಿಸಿದ್ದಾರೆ. ಕರ್ಣಕನ ಸಾವನ್ನು ತೊರೆದ ಸನ್ನಿವೇಶ ಇದರ ತಿರುಳು ತಿರುಳಿಯನ್ನೆತ್ತಲು ಇದರ ಮೊದಲಿಗೆ ಮಂಡಿದನೀತನು ನಾಸ್ತಿ ಪಡಿದಿರೆ ಜೇಷಲ್ಲ" ಎಂಬಲ್ಲಿ (ಬಿಂದಿ) ಸಂತ ಕವಿಗಳ, ಅಂತರ ಸನಿಸಕೆ ಸಾಗಿದಂತೆಯೆ ಹಿಡಿದು ಕಿರಿದೆಳಿಸಿದೆಮಿಗೆ । ಗಂಧದುದುತರು ಶಬರಿಗುರಿಸುವ ಬಹಪಡಲುಗೆಯ ಕಟ್ಟಿಗೆ" ಎಂಬಲ್ಲಿ ಸಂಸ್ಕೃತ ಸುಭಾಷಿತಕಾರರ ನೆನಪಾಗುತ್ತದೆ.

ಕವನದಲ್ಲಿ ಗಾಂಭೀರ್ಯವನ್ನು ಬಳಸಿಕೊಂಡ ಬಗೆ ಅತ್ಯಂತ ಸಹಜವಾಗಿದೆ. ಶ್ರೇಯಸ್ಕರವಾಗಿದೆ. 'ಗಾಜಿಪರಮನೆಯೊಳಗೆ ಕಾನಡಗಿ ಹೊರ ಬದಿಗೆ ಕಲ್ಲ ತೂರುವ ಮೊದಲು ನೋಡಿಕೊಳ್ಳೊ"—ಇದು ಇಂದಿನ ರಾಜಕಾರಣಿಗಳಿಗೆ ಸಮರ್ಪಕವಾಗಿ ಹೊಂದಿಕೊಳ್ಳುತ್ತದೆ. ಮಾರೆಯೇ ಅಳದೂರನಿಲಿ ಮುಳಿದನಪಿ ಗಾಡನೆನಿಸಿದರು, ಶಿವ ಪೂಜೆಯಲಿ ಕರಡಿ ಕುಣಿದಂತೆ, ತಾನಡಿಗೆ ಬಿದ್ದರೂ ಮೂಗು ಮೇಲು, ಮಾವು ಬೆಳೆಯುವ ಮರದಲೆಂದಿನು ಹೊಂದಲಾರೆಳ್ಳು ಬೇವನು—ಮೊದಲಾದುವು ಮಾಗೆಯೇ. ಪದ್ಮಶ್ರೀ ಡಾ. ಮಾಧವ ಪೈ, ಕಟೀಲು ವಿದ್ಯಾಲಯದ ಅಧಿಕಾರಿಯಾಗಿದ್ದ ದಿ. ಶ್ರೀಧರ ಶೆಟ್ಟಿ, ಕಡಂಗೋಡ್ಲು ರವರ ಪರ ಕವನವೂ ಇಲ್ಲಿವೆ.

ಶ್ರೀ ಕಮಲನಾಭರ ಬರವಣಿಗೆ ಪ್ರಶಂಸನೀಯವೇ. 'ಕನ್ನಡ ಜೇನೊಳು ಸಕ್ಕದಿದಿನಿಸವಿ ಗಂಗಾಯುಮಜನಾ ಸಂಯೋಗ' ಎಂದು ನುಂಬದ ಇವರ ಶೈಲಿ ಸಾಹಿತ್ಯಕ ದೃಷ್ಟಿಯಿಂದ ಪ್ರೌಢವಾಗಿದೆ. ಸಂಧಿ, ಸಮಾಸ, ಸಂಸ್ಕೃತ ಪದಾಧಿಕ್ಯ, ರೂಪಕದಿಂದ ತುಂಬಿ ಮಳಲಾಡುತ್ತಿರುವ ಈ 'ತುಂಬಿದ ಬಿಂದಿಗೆ' ಸಾಹಿತ್ಯಕ್ಕೊಂದು ಉತ್ತಮ ಕಾಣಿಕೆ.

—ಗೋರಾ.

ಮೊದಲ ಪುಸ್ತಕಗಳು

(೧) ಜಾನಪದ ಮಣಿಯಾದ ಕಥೆ. ಲೇಖಕರು: ಶ್ರೀ ಎಚ್.ಎಸ್. ಶಿವಪ್ರಕಾಶ್. ಬೆಲೆ ರೂ. ೨-೫೦.

(೨) ಪಲ್ಲವಿ. ಕವನ ಸಂಕಲನ: ರಚಯಿತರು: ಶ್ರೀ ಕೆ.ಎಸ್. ನರಸಿಂಹ ಶೆಟ್ಟಿ. ಬೆಲೆ ರೂ. ೧-೦೦

ಮೇಲಿನೆರಡು ಪುಸ್ತಕದ ಪ್ರಕಾಶಕರು ಮೂಡಬಿದ್ರೆ ಪ್ರಕಟನಾಲಯ, ಕಿನ್ನಿಗೋಳಿ, ದ. ಕ.

೩. ಮನಸಾಕುಲ. ಸಂಚಿಕೆ ೩, ೪ ಸಂಪಾದಕ: ಪ್ರಭುಶಂಕರ. ಪ್ರಕಾಶನ: ಮನಸಾಕುಲ ಪ್ರಕಾಶನ, ೧೯, ಸಿರಿಸ್ ಬ್ಯಾಬಿಲ್ಡಿಂಗ್ ನಂ. ೧, ಲಿಬರ್ಟಿ ಗಾರ್ಡನ್, ಮಲಾಡ್ ವೆಸ್ಟ್, ಮುಂಬಯಿ- ೬೪. ಬೆಲೆ: ರೂ. ೨. ೦೦.

ವಿಮರ್ಶೆ ಯಥಾವಕಾಶ.

ಆಸ್ಪಾಲ್ಟ್ ವಿಧಾನದಿಂದ ಅಧಿಕ ಬೆಳೆ

ಮರಳಿನಿಂದ ಕೂಡಿದ ಮಣ್ಣಿನಲ್ಲಿ ನೀರನ್ನು ಸಂರಕ್ಷಿಸಲು, ಹೆಲದಡಿಯಲ್ಲಿ ೨ ಅಡಿಗಳ ಆಳದಲ್ಲಿ ನಿರ್ಮಿಸಲಾದ ಆಸ್ಫಾಲ್ಟ್ ಪದರದಿಂದಾಗಿ ಅಮೆರಿಕದಲ್ಲಿ ತರಕಾರಿ ಬೆಳೆಯಲ್ಲಿ ಅಧಿಕ ಉತ್ಪನ್ನವನ್ನು ಸಾಧಿಸಲಾಗಿದೆ. ಈ ವಿಧಾನವು ಅಮೆರಿಕದಲ್ಲಿ ಮತ್ತು ಪ್ರಪಂಚದ ಇತರ ಕಡೆಗಳಲ್ಲಿರುವ ಮರಳು ಪ್ರದೇಶಗಳ ಲಕ್ಷಾಂತರ ಎಕರೆಗಳಲ್ಲಿ ಹೆಚ್ಚು ಬೆಳೆ ತೆಗೆಯಲು ಸಹಾಯಕವಾಗಬಹುದು.

ಡೆಲಾವರ್‌ನ ಲಾರೆಲ್ ಬಳಿಯಿರುವ ಜೆ ಎಲ್. ಡೇಸ್ಟಿಂಗ್ಸ್ ಫಾರಂನಲ್ಲಿ ಎಕರೆಗಳ ಪ್ರಾಯೋಗಿಕ ಕ್ಷೇತ್ರದಲ್ಲಿ ಡೆಲಾವರ್ ವಿಶ್ವವಿದ್ಯಾನಿಲಯ ಮತ್ತು ಅಮೆರಿಕನ್ ಆಯಿಲ್ ಕಂಪನಿಯ ಸಹಕಾರದಿಂದ ಈ ಪ್ರಯೋಗವನ್ನು ನಡೆಸಲಾಯಿತು.

ಡೆಲಾವರ್‌ನಲ್ಲಿ ೧೯೬೭ರಲ್ಲಿ, ಕಳೆದ ವರ್ಷ ನಡೆಸಲ್ಪಟ್ಟ ಅತ್ಯಂತ ತೀವ್ರವಿದ್ದರೂ, ಆಸ್ಫಾಲ್ಟ್ ಬಳಸಿದ ಪ್ರದೇಶದಲ್ಲಿ ಬೆಳೆಯ ಅತ್ಯಧಿಕ ಉತ್ಪನ್ನಗಳನ್ನು ನೀಡಿದವು ಎಂದು ವಿಶ್ವವಿದ್ಯಾನಿಲಯದ ಕೃಷಿ ಎಂಜಿನಿಯರ್ ಇ. ಎನ್. ಸ್ಮಾಗ್ ಹೇಳಿದ್ದಾರೆ.

ಟೊಮ್ಯಾಟೋ ಬೆಳೆಯಲ್ಲಿ ಎಕರೆಯೊಂದಕ್ಕೆ ಶೇಕಡಾ ೬೦ರಷ್ಟು, ಸ್ಕ್ವಾಶ್ ಬೆಳೆಯಲ್ಲಿ ಶೇಕಡ ೧೧೦ರಷ್ಟು ಅಧಿಕ ಉತ್ಪಾದನೆಯಾಯಿತು ಎಂದವರು ವರದಿ ಮಾಡಿದ್ದಾರೆ. ಸಾಕಿಕಾಯಿ ಬೆಳೆಯಲ್ಲಿ ಶೇಕಡ ೩೫ರಷ್ಟು, ಆಲೂಗಡ್ಡೆಯ ಬೆಳೆಯಲ್ಲಿ ಶೇಕಡ ೩೭ರಷ್ಟು ಉತ್ಪಾದನೆ ಅಧಿಕವಾಯಿತು. ಎಲ್ಲ ಬೆಳೆಗಳ ಸರಾಸರಿ ಹೆಚ್ಚಳ ಶೇಕಡ ೩೭ರಷ್ಟು.

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ಮುಂಬಯಿ ವಿಲಾಸ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಮಂಗಳೂರು. ಕಾರ್ಕಳ, ದ. ಕನ್ನಡ.

ಎಲ್ಲೆಲ್ಲಿ ಏನೇನು?

ಮಾನ್ಯತೆ

ಮಣಿಪಾಲ, ಮಾ. ೩೦— ಮಣಿಪಾಲ ಹತ್ತು ವಂಗಳೂರಿನಲ್ಲಿರುವ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಕಲಿಯಬೇಕಾಗಿರುವ ವರಿಗೆ ಮೈಸೂರು ವಿಶ್ವವಿದ್ಯಾ ನಿಲಯ ಕೊಡುವ ಎಂ. ಬಿ. ಬಿ. ಎಸ್. ಪದವಿಗೆ ಇಂಗ್ಲಂಡಿನ ಜನರಲ್ ಮೆಡಿಕಲ್ ಕೌನ್ಸಿಲ್ ಮಾನ್ಯತೆ ಇತ್ತಿದೆ ಎಂದು ಕಾಲೇಜಿನ ದೀನ ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

ಹಲ್ಲುಗಳ ರಕ್ಷಣಾ ತಿಳುವಳಿಕೆ

ಮಣಿಪಾಲ, ಮಾ. ೩೦— ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ರಜತ ಮಹೋತ್ಸವದ ಸಂದರ್ಭದಲ್ಲಿ ಇಲ್ಲಿಯ ಡೆಂಟಲ್ ಸರ್ಕಾರಿ ಕಾಲೇಜು ದಂತ ಆರೋಗ್ಯ ಶಿಕ್ಷಣ ಕಾರ್ಯಕ್ರಮವೊಂದನ್ನು ಆರಂಭಿಸಿದೆ.

ಹಲ್ಲುಗಳ ರಕ್ಷಣೆ ಜೊಗೂ ದಂತ ವೈದ್ಯ ಚಿಕಿತ್ಸೆಯ ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಅವರ ತಂದೆ ತಾಯಿಗಳಿಗೆ ತಿಳುವಳಿಕೆ ಕೊಡುವ ಈ ಕಾರ್ಯಕ್ರಮವನ್ನು ಅಕಾಡೆಮಿಯ ಅಧ್ಯಕ್ಷ ಡಾ|| ರಾಜಗೋಪಾಲ್ ಡಾ|| ಟಿ. ಎಂ. ಎ. ಪೈಯವರು ಉದ್ಘಾಟಿಸಿದರು.

ದಂತ ಶಿಕ್ಷಣದ ಡೈರೆಕ್ಟರ್ ಡಾ|| ಸುಂದರ್ ಜೆ. ವಿಜಯಾನಾಯಿಯವರು ಕಾಲೇಜಿನಲ್ಲಿ ನಡೆಸಿದ ಚಿಕಿತ್ಸೆಗಳ ಬಗ್ಗೆ ಚಿತ್ರಗಳ ಸಹಾಯದಿಂದ ಭಾಷಣ ಮಾಡಿದರು. ಈ ಕಾರ್ಯಕ್ರಮ ಅಕಾಡೆಮಿಯ ಎಲ್ಲ ಸಂಸ್ಥೆಗಳಲ್ಲೂ ನಡೆಯುವುದು.

ಪರ್ಕಳೆ ಜಾತ್ರೆ

ಪರ್ಕಳೆ ಶ್ರೀ ಮಹಾಲಿಂಗೇಶ್ವರ ಗಣಪತಿ ದೇವಸ್ಥಾನದಲ್ಲಿ ತಾ. 14—3—68 ರಂದು ಬ್ರಹ್ಮಕಲಶೋತ್ಸವವೂ ತಾ 10ರಂದು ಅವಭೃತ ಚೂರ್ಣೋತ್ಸವ ಮತ್ತು ಜಾಮಂಡಿ ಕೋಲವೂ ವಿಜೃಂಭಣೆಯಿಂದ ಜರುಗಿದವು ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಸಚಿವ ಶ್ರೀ ಡಾ|| ಟಿ. ಎಂ. ಎ. ಪೈಗಳೂ, ಡೆಂಟಲ್ ಕಾಲೇಜಿನ ಪ್ರಿನ್ಸಿಪಾಲ್ ಸುಂದರ ವಜ್ರಾಯಿಯವರೂ ಆಗಮಿಸಿದ್ದರು. ಅತ್ಯಿತ್ತ ಪೊಕ್ಕೇಸರ ಪರ್ಕಳ ಗುರುವಂಜ ಮೋಯಿಸರು ಮತ್ತು ಆಡಳಿತ ಕಮಿಟಿಯ ಸದಸ್ಯರು ಅತಿಥಿ ಸತ್ಕಾರಮಾಡಿ ಪ್ರಸಾದ ವಿತರಣೆ ಗೈದು ಶುಭ ಕೋರಿದರು.

ಉತ್ಸವದ ಸಂದರ್ಭದಲ್ಲಿ ಪರ್ಕಳೆ ಶಾರದಾ ಕಲಾ ಮಂಡಳಿಯ ಪರವಾಗಿ ಶ್ರೀ ಮಾಲೀಧರ ಶಂಕ್ರ ಪಾರ್ಟಿಯವರು ಇರಿಕ್ಟ್ರಿಕ್ ಡೆಕೋರೇಶನ್ ಮೈಕ್‌ಸೆಟ್ ಇಗೈರೆ ಧರ್ಮಾರ್ಥ ಒದಗಿಸಿದ್ದರು.

ಅಧಿಕಾರಿ ವರ್ಗದ ಆಯ್ಕೆ

ಬೆಂಗಳೂರು ಎ. ಸ್. ಡಿ ಮೈಸೂರ್ ಸ್ಟೇಟ್ ಚೇಂಬರ್ ಆಫ್ ಎಗ್ರಿಕಲ್ಚರ್‌ನ ಅಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಯಾದರು.

ಅಧ್ಯಕ್ಷ— ಶ್ರೀ ಎನ್. ಶ್ರೀರಾಮರೆಡ್ಡಿ.

ಉಪಾಧ್ಯಕ್ಷರು ಶ್ರೀಗಳಾದ ಬಿ. ಎಸ್. ವಿಶ್ವನಾಥನ್ ಮತ್ತು ಕೆ. ಮೋಹನ ದೇವ ಅಳ್ವ.

ಪ್ರಧಾನ ಕಾರ್ಯದರ್ಶಿ— ಶ್ರೀ ಅಮರಾಮ, ಸದಸ್ಯರು.ಸರ್ವಶ್ರೀ ಡಿ.ಕೆ.ನರ್ಮಾಹೆಗ್ಡೆ, ಆರ್. ನಾಗನ್ ಗೌಡ, ಪಿ. ಎಸ್. ಗೌಡ, ಎಂ. ಎ. ಬಾಲ ಗಂಗಾಧರ ತಿಲಕ, ಬಿ. ಎ. ನಾಯಿಂಡ ಸ್ವಾಮಿ, ಅತ್ರಾಡಿ ಸತೀಶ ಹೆಗ್ಡೆ, ಕೆ. ಜಿ. ಗುರ್ಪ, ನಾರಾಯಣಶೆಟ್ಟಿ, ಬಿ.ಎಂ. ಹೊರಕೇರಿ, ಪಿ. ಎಸ್. ಹಿರೇ ಗೌಡರ್, ಕೆ. ಎಲ್. ಗೌಡ.

ಶ್ರೀ ಎನ್. ನರಸಿಂಹ ರೆಡ್ಡಿ, ಎಂ. ಸಿ. ಯವರ ಅಧ್ಯಕ್ಷತೆಯಲ್ಲಿ ಸೇರಿದ ಆಸಕ್ತರ ಸಭೆಯಲ್ಲಿ ಇವರನ್ನು ಆರಿಸಲಾಯಿತು.

ಉಡುಪಿ, ಎ. ಸ ಗಳಲಾಯಿಂದ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರು ಆಯ್ಕೆಯಾಗಿದ್ದಾರೆ.

ಅಧ್ಯಕ್ಷ: ಶ್ರೀ ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಗಳು.

ಉಪಾಧ್ಯಕ್ಷ: ಶ್ರೀ ಕೆ. ಮಂಜುನಾಥ ಮಧ್ಯಸ್ಥ. ಕಾರ್ಯದರ್ಶಿ: ಶ್ರೀ ಎಸ್ ಗೋಪೀ ಚಂದ್ರಾಚಾರ್. ಕೋಷಾಧ್ಯಕ್ಷರು: ಶ್ರೀ ಬಿ. ಪದ್ಮನಾಭ ಭಟ್ಟ, ಕೋಶಾಧಿಕಾರಿ, ಶ್ರೀ ಕೆ ಚಂದ್ರಶೇಖರ ಭಟ್ಟ. ಪುಸ್ತಕ ಭಂಡಾರ್ ಕಾರ್ಯದರ್ಶಿ—ಶ್ರೀ ಕೆ. ಯೊಪದ ಸರಳಾಯ.

ಸದಸ್ಯರು: ಸರ್ವಶ್ರೀ ಬಿ ಕೆ. ಸಾಮಗ, ಕೆ. ದಾಮೋದರ ಐತಾಳ, ಕೆ. ಚಂದ್ರಶೇಖರ ಸೋಮಯಾಜಿ, ಯು. ವಾಸುದೇವ ಭಟ್ಟ, ಯು.ಕೆ. ವಾಸುದೇವ ಆಚಾರ್ಯ ಮತ್ತು ಕೆ. ಸೀತಾರಾಮ ಭಟ್ಟ.

ಈ ವರ್ಷ ಕಲಾವೃಂದವು ತನ್ನ ರಜತ ಮಹೋತ್ಸವವನ್ನು ಆಚರಿಸಲಿದೆ.

ಹೊಸ ಶಾಖೆಗಳು

ಮಣಿಪಾಲ, ಎ. ೧. ಸಿಂಡಿಕೇಟ್ ಬ್ಯಾಂಕ್ ಲಿ. ಎಪ್ರಿಲ್ ತಿಂಗಳ ಪೂರ್ವಾರ್ಧದಲ್ಲಿ ಮೈಸೂರು ರಾಜ್ಯದಲ್ಲಿ ನಾಲ್ಕು ಮತ್ತು ಕೇರಳ ರಾಜ್ಯದಲ್ಲಿ ಒಂದು ಹೊಸ ಶಾಖೆಗಳನ್ನು ತೆರೆಯಿತ್ತಿದೆ. ತಾ. ೧೧-೪-೬೮ ರಂದು ಚಿಕ್ಕಮಗಳೂರು ಜಿಲ್ಲೆಯ ಬಾಸರಿ ಕಟ್ಟೆ, ಮಂಡ್ಯ ಜಿಲ್ಲೆಯ ಮಾಂಡ್ಯ ಪೇಟೆ, ಕೃಷ್ಣಾನಗರ ಜಿಲ್ಲೆಯಲ್ಲಿರುವ ಕೃಷ್ಣಾ ೪-೪ ರಂದು ಬೆಳಗಾಂ ಜಿಲ್ಲೆಯ ಮೆಡಿಕಲ್ ಕಾಲೇಜ್ ಕಾಂಪಸ್ ಮತ್ತು ರಾಯಚೂರು ಜಿಲ್ಲೆಯ ಮುಡಗಲದಲ್ಲಿಯೂ ಶಾಖೆಗಳು ಆರಂಭವಾಗುತ್ತವೆ.

ಈ ಹೊಸ ಶಾಖೆಗಳು ತೆರೆದ ಮೇಲೆ ಮೈಸೂರು ರಾಜ್ಯದಲ್ಲಿ ೧೨೪, ಕೇರಳ ರಾಜ್ಯದಲ್ಲಿ ೩೦ ಶಾಖೆಗಳನ್ನು ಸಿಂಡಿಕೇಟ್ ಹೊಂದಿದಂತಾಗುವುದು. ಈಗ ಶಾಖೆಗಳನ್ನು ಹೊಸತಾಗಿ ತೆರೆಯುವ ಸ್ಥಳಗಳಲ್ಲಿ ಬ್ಯಾಂಕಿಂಗ್ ಸೌಲಭ್ಯವು ಮೊದಲಿರಲಿಲ್ಲ. ೨೫ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಸ್ಥಳಗಳಲ್ಲಿ ಬ್ಯಾಂಕು ೧೧೧ ಶಾಖೆಗಳನ್ನೂ, ೫೦ ಸಾವಿರಕ್ಕಿಂತ ಹೆಚ್ಚು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವಲ್ಲಿ ೫೪ ಶಾಖೆಗಳನ್ನೂ ಬ್ರಹತ್ ನಗರಗಳಲ್ಲಿ ೪೪ ಶಾಖೆಗಳನ್ನೂ ಹೊಂದಿದಂತಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಸಿಂಡಿಕೇಟ್ ೫೦ ಶಾಖೆಗಳನ್ನು ಹೊಂದಿದೆ. ಒಂದೇ ಜಿಲ್ಲೆಯಲ್ಲಿ ಅಥವಾ ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಇಷ್ಟೊಂದು ಶಾಖೆಗಳಿರುವ ಭಾರತೀಯ ಬ್ಯಾಂಕು ಬೇರೊಂದಿಲ್ಲ.

ಗಿರಿಜನ ಸಮ್ಮೇಳನ

ನಾಗಪುರ ಎ. ಪ. ತಾ. ೩ ಮತ್ತು ೨ ರಂದು ಅಖಿಲ ಭಾರತದ ಗಿರಿಜನರ ಸಂಸತ್ ವಿಧಾನ ಮಂಡಳಗಳ ಸದಸ್ಯರು, ಕಾರ್ಯಕರ್ತರು ಸಭೆಸೇರಿದರು. ಕೇಂದ್ರದ ಮಂತ್ರಿಮಾನ್ಯ ಕೆ. ಜಿ. ಪಂತರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಸುಮಾರು ೪೦ ಗಿರಿಜನ ಸಂಸತ್ಸದಸ್ಯರು, ೩೦೦ ಗಿರಿಜನ ವಿಧಾನ ಮಂಡಳ ಸದಸ್ಯರು ಇಲ್ಲಿ ಕೂಡಿದ್ದರೆಂದು ತಿಳಿಯುತ್ತದೆ. ಬಿಹಾರ ಮತ್ತು ನಾಗಾಲ್ಯಾಂಡಿನ ಪ್ರತಿನಿಧಿಗಳೂ ಇಲ್ಲಿ ಸೇರಿದ್ದರು. ಸಮ್ಮೇಳನವು ಅಖಿಲ ಭಾರತ ಗಿರಿಜನ ಸಂಸ್ಥೆಯೊಂದನ್ನು ರಚಿಸುವ ನಿರ್ಣಯವನ್ನು ಸ್ವೀಕರಿಸಿ, ಅದಕ್ಕೆ ಅಧಿಕಾರಿ ವರ್ಗವನ್ನು ಆರಿಸಿತು.

ಅಯನ್ಸ್ ಗವರ್ನರರಾಗಿ ಶ್ರೀ ಎ. ದಾಮೋದರ ಪೈ

ಕೆನರಾ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಎ. ದಾಮೋದರಪೈ ಯವರು ೩೦-೪-೬೮ ಜಿಲ್ಲೆಯ ಲಯನ್ಸ್ ಇಂಟರ್ ನೇಶನಲ್ ಜಿಲ್ಲೆಯ ಗವರ್ನರರಾಗಿ ಆಯ್ಕೆಯಾಗಿದ್ದಾರೆ. ಈ ಜಿಲ್ಲೆಯು ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಕೇರಳಗಳನ್ನು ಒಳಗೊಂಡಿದೆ ಜಿಲ್ಲೆಯಲ್ಲಿ ೫೫೮ ಲಯನ್ಸ್ ಕ್ಲಬ್‌ಗಳಿವೆ ೧೯೬೮—೬೯ ರಲ್ಲಿ ಲಯನ್ಸ್ ಇಂಟರ್ ನೇಶನಲ್ ಆಂದೋಲನವು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಲಿರುವುದರಿಂದ ಶ್ರೀ ಎ ದಾಮೋದರ ಪೈಯವರ ಆಯ್ಕೆಗೆ ವಿಶೇಷ ಮಹತ್ವ ಬಂದಿದೆ.

ಶ್ರೀ ದಾಮೋದರ ಪೈಯವರು ಇನ್ನೂ ಹತ್ತು ಸಂಘ ಸಂಸ್ಥೆಗಳೊಡನೆಯೂ ಸಂಪರ್ಕವಿಟ್ಟುಕೊಂಡಿದ್ದಾರೆ ಮೈಸೂರು ಸ್ಟೇಟ್ ಫೈನಾನ್ಸಿಯಲ್ ಕಾರ್ಪೋರೇಶನ್‌ನ ಡೈರೆಕ್ಟರರು, ಜವಾಹರಲಾಲ ನೆಹರು ಬಾಲ್ ಬ್ಯಾಂಕ್ ಸೊಸೈಟಿಯ ಉಪಾಧ್ಯಕ್ಷರು ...ಇತ್ಯಾದಿ.

ಮೊನವರಲ್ಲಿ ಸಚೋದರತೆಯನ್ನು ಬಲಪಡಿಸುವುದು ಇಂಟರ್ ನ್ಯಾಶನಲ್ ಲಯನ್ಸ್ ಆಂದೋಲನದ ಗುರಿ. ಪ್ರತಿಯೊಬ್ಬ ಲಯನ್‌ನ ಧ್ಯೇಯ 'ನಾನು ಸೇವೆ ಮೈಯ್ಯವೆವು' ಎಂಬುದು.

ನವಸೃಷ್ಟಿ

ನವಸೃಷ್ಟಿಗೆಯ್ದ ವಿಶ್ವಾಮಿತ್ರ ಹೆಣಗಿ,
ದೊರೆತ್ರಿಶಂಕುವಿಗೆ ಗತಿಗಾಣಿಸಿದ ಕಡಗಿ॥
ಧವಭಾರತದ ರಾಜಕಾರಣವು ಸರದಿ
ಬಂದೀಗ ಜವದ ಗತಿಯೆತ್ತಣದು ನಿಜದಿ॥

—"ಕಶ್ಚಿತ್"

ಇಬ್ಬನಿ

ರವಿಯು ಉದಯಿಪ ಮುನ್ನ
ಭುವಿಯ ದಿಟ್ಟಿಸಿ ನನ್ನ
ಸವಿಮನವು ಅತ್ತಿತ್ತ ಹೊರಳಿದಾ ಸಮಯ|

ಹೊಳೆದಿದ್ದ ಇಬ್ಬನಿಯು
ಸೆಳೆದಿತ್ತು ವಜ್ರಮನ್ನು
ಕಳೆದಿದ್ದೆನಲ್ಲಿಯೇ ಎನಿತೊ ಸಮಯ.

ಮುತ್ತು ಚೆಲ್ಲಿದ ತೆರದಿ
ಹತ್ತೆಂಟು ಕಡೆಗಳಲಿ
ಸುತ್ತ ಹರಡಿದ ಗಮ್ಯ ಹನಿಗಳಂದ.

ಭೂ ದೇವಿ ಕೊರಳಿನಲಿ
ಸಾದರದಿದವ ಧರಿಸಿ
ದೇದೀಪ್ಯವಾಗಿರ್ಪ ಮಣಿಗಳಂದ.

ತಳರಿ ಕಾವಣದಲ್ಲಿ
ಬಳಯ ಬನದಂಚಿನಲಿ
ಫಳಿಯಾಗಿ ಚೆಲ್ಲಿತ್ತು ಧವಳ ಹರಳು.

ದೇವ ಚೆಲ್ಲಿದ ಮುತ್ತು
ಭೂ ದೇವಿಯೂ ಧತ್ತು
ಪಾವನವು ಈ ಹನಿಗು ವಜ್ರದರಳು.

ಸುಪ್ರಭಾತದ ಹೊತ್ತು
ವಿಪ್ರನರ್ಘ್ಯವಧಿತ್ತು
ಪ್ರಪ್ರಥಮ ದೇವಳಕೆ ಹೊರಡಲಣುವಾದ

ರವಿ ತಿರಿಗೆ ಬೆಳಕಿತ್ತು
ಭುವನ ತಿಮಿರವ ಕಿತ್ತು
ನವಿರಾದ ಕಿರಣಗಳ ಹರಡಲನುವಾದ

ಮೂಡು ದಿಶೆಯಲ್ಲಾತ
ಕೆಂಡದುಡುಗೆಯ ಕೊಟ್ಟು
ದಂಡಗಿನ ಮುಖಕಮಲ ದರ್ಶನವಧಿತ್ತ

ಅರೆ ನಿಮಿಷದಲಿ ಮತ್ತೆ
ಸೆರೆ ಹಿಡಿದ ಇಬ್ಬನಿಯ
ಮರೆಗೊಳಲು ಅಂತಿಯ ದಿನಕರನು ಇತ್ತ

ಮರುಗದಿರು ಇಬ್ಬನಿಯೆ
ಸೊರಗದಿರು ಎಲೆ ಹನಿಯೆ
ನರರವರು ನಿನ್ನಂತೆ ಕ್ಷೀಣು ಅವರಂತೆ

ಹುಟ್ಟು ಸಾವುದಳೆಲ್ಲ
ಬೆಟ್ಟದವ ಶಿವನಾಟ
ಕಟ್ಟುಕಟ್ಟಳೆಯಂತೆ ಈ ಬಾಳಕಂತೆ.

— ಮ. ಗೋ. ರಾವ್.

ಋತು ಗಾನ

ವಸಂತ ಋತು:

ಜಲಧಿಯಿಂದ ಸರಸಿಯಿಂದ
ಧರೆಯ ಜಲಾಶ್ರಯಿಸಳಿಂದ
ಕ್ಷೀಣಹನಿಯ ಮೆಲ್ಲಮೆಲ್ಲ ಹೀರಿಕೊಳ್ಳುವೆ.
ತುಣುಕು ತುಣುಕು ಹಸಿರಿಗಳನ್ನು
ಬಾಳ ಬಟ್ಟೆಯಲ್ಲಿ ಇರಿಸಿ
ಮುಗಿಲ ರೂಪದಲ್ಲಿ ನಾನು ಉಳಿಸಿಕೊಳ್ಳುವೆ.

ವರ್ಷ ಋತು:

ಧರೆಯ ಕಾವು ಏರಿದಾಗ
ಕ್ಷೀರಿಗಾಗಿ ಬಳಲಿದಾಗ
ಹೊಲಕೆ ಮಳೆಯ ರೂಪದಲ್ಲಿ ಕ್ಷೀರಭೆರೆಯುವೆ.
ಹಸುರು ತಳೆದ ಹೊಲಗಳೆಲ್ಲ,
ಫಲವ ತಾಳಿದಾಗಲೆಲ್ಲ
ಭುವಿಯ ಜನರ ಹರುಷ ಕಂಡು ಹಿಗ್ಗಿಕೊಳ್ಳುವೆ.

ವಸಂತ ಋತು — ವರ್ಷ ಋತು
ಮಿಗಿಲಾದ ಏಸರಿ ಉಳಿತಾಯಕ್ಕಾಗಿ
ಉಳಿತಾಯದ ಗುರಿ ಬಾಳಿ ಸುಖಕ್ಕಾಗಿ

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಒಂದು ಸಾಹಸದ ಪ್ರಸಂಗ

ಲೇಖಕರು : ಫ್ಲೈಟ್ ಲೆಫ್ಟಿನೆಂಟ್ ಎಂ. ವಾನಿಯ

ಚಳಿಗಾಲದ ಒಂದು ದಿನ. ಆಕಾಶ ಮೋಡಗಳಿಲ್ಲದೇ ಸ್ವಚ್ಛವಾಗಿತ್ತು. ಹಿತಕರವಾದ ತಂಗಾಳಿ ಬೀಸುತ್ತಿತ್ತು. ವಿಮಾನ ಬಲದ ಕೇಂದ್ರದಲ್ಲಿ ಅಂದು ಎಲ್ಲರ್ದ ಸಂಭ್ರಮ. ವಿಮಾನದಿಂದ ಮೊದಲ ಬಾರಿ ಕೆಳಕ್ಕೆ ಧುಮುಕಬೇಕಾಗಿದ್ದ ಪ್ಯಾರಷೂಟ್ ಸೈನಿಕರು ತನ್ನ ಮುಂದೆಯೇ ವಿಮಾನದತ್ತ ಹೊರಟಿದ್ದರು.

"ಆಹಾ ಇವರು ಎಷ್ಟು ಸುಸ್ವಿಗಳು!" ನನಗರಿವಿಲ್ಲದೆಯೇ ಬಾಯಿಯಿಂದ ಉದ್ಗಾರವೊಂದು ಹೊರಬಿತ್ತು. ಈ ಯೋಧರ ಬಗ್ಗೆ ನನಗೆ ಕೊಂಚ ಅಸೂಯೆ ಉಂಟಾಯಿತು.

ಯಾರಾದರೂ ಯೋಧರು ಮೊತ್ತಮೊದಲ ಬಾರಿ ವಿಮಾನದಿಂದ ಕೆಳಕ್ಕೆ ಧುಮುಕಲು ಹೋಗುತ್ತಿದ್ದರೆ ನನಗೂ ಆವೇಶ ಉಕ್ಕಿ ಬರುತ್ತಿತ್ತು. ಪ್ಯಾರಷೂಟ್ ತಲೆಯ ಮೇತ ಹಡೆಯುತ್ತಿದ್ದಾಗಿನ ಮೊತ್ತ ,ಇದು. ನಾನು ಮೊದಲ ಬಾರಿಗೆ ವಿಮಾನದಿಂದ ಕೆಳಕ್ಕೆ ಧುಮುಕಿ ಈಗಾಗಲೇ ಅನೇಕ ವರ್ಷಗಳು ಕಳೆದಿವೆ. ಅನೇಕ ವಿಮಾನಗಳಿಂದ, ಬಗೆಬಗೆಯ ಎತ್ತರದಿಂದ ನಾನು ಕೆಳಕ್ಕೆ ಧುಮುಕಿದ್ದೇನೆ. ಆದರೂ ಮೊದಲ ಬಾರಿ ವಿಮಾನದಿಂದ ಕೆಳಕ್ಕೆ ಧುಮುಕಿದಾಗ ನನಗುಂಟಾದ ರೋಮಾಂಚನೆ, ಹುರಿ ಸಾಧನೆಯ ತೃಪ್ತಿ, ಹುಸಿ ನೆನಪಿಗೆ ಎಂದೂ ಅಳಿಯಲಿಲ್ಲ.

ಆ ದಿನ ಮುಂದೆ ಹಾದುಹೋದ ಪ್ಯಾರಷೂಟ್ ಸೈನಿಕರಲ್ಲಿ ಪ್ರತಿಯೊಬ್ಬರ ಮುಖದಲ್ಲೂ ಭಯ, ಗಾಬರಿಯ ಕಳೆ— ಎದ್ದು ಕಾಣುತ್ತಿತ್ತು, ಯೋಧರು ಒಬ್ಬೊಬ್ಬರಾಗಿ ಕಾದುಕುಳಿತಿದ್ದ ವಿಮಾನದೊಳಕ್ಕೆ ನಡೆದು ಕಣ್ಮರೆಯಾದರು.

ನಮ್ಮ ವಿಮಾನವೂ ಬಂತು. ಪ್ಯಾರಷೂಟ್ ಸೈನಿಕರ ಎರಡನೆಯ ತಂಡದೊಂದಿಗೆ ನಾನು ವಿಮಾನವನ್ನು ಏರಿದೆ. ಎಲ್ಲಕ್ಕೂ ಕಟ್ಟಕಡೆಗಿದ್ದ ಆಸನದಲ್ಲಿ ಕುಳಿತುಕೊಂಡೆ. ಕೊನೆಯ ಸೈನಿಕ ಕೆಳಕ್ಕೆ ಧುಮುಕಿದ ಬಳಿಕ ನಾನು ಧುಮುಕಬೇಕಾಗಿದ್ದರಿಂದ ಎಲ್ಲಕ್ಕೂ ಕೊನೆಯ ಈ ಆಸನವನ್ನು ಆರಿಸಿಕೊಂಡಿದ್ದೆ.

ನನ್ನ ಮನಸ್ಸಿನಲ್ಲಿ ಯೋಚನೆಯ ಸುರುಳಿ ಬಿಚ್ಚಿಕೊಂಡಿತು, ಎಷ್ಟ ದೃಷ್ಟಿ ವಿಮಾನದಲ್ಲಿ ಎಲ್ಲಕ್ಕೂ ಮುಂದೆ ಬಾಗಿಲದ ಬಳಿ ಕುಳಿತಿದ್ದ ಸೈನಿಕನತ್ತ ಹರಿಯಿತು. ಈಗ ಅವನು ಏನು ಯೋಚನೆ ಮಾಡುತ್ತಿರಬಹುದು? ವಿಮಾನದಿಂದ ಕೆಳಕ್ಕೆ ಧುಮುಕುವ ಕಳೆಗೆ ಹತ್ತಿರವಾದಂತೆ, ಅವನ ಕೈ ಚಳಿಯಿಂದ ನಡುಗುತ್ತಿರಬಹುದೇ? ತಂಪೇತಿಯ ಕಾಲದಲ್ಲಿ ಪಡೆದ ಶಿಕ್ಷಣ ಕೊನೆಯ ಗಳಿಗೆಯಲ್ಲಿ ಕೈಕೊಡಬಹುದೆಂದು ಅವನು ಭಯಗ್ರಸ್ತನಾಗಿರಬಹುದೇ? ಇಲ್ಲ. ಅವನು ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಿರಬಹುದು. ಅವನ ಸಣ್ಣ ಪಲ್ಲ, ದಪ್ಪಕಣ್ಣುಗಳು, ಅತ್ತಿಗೆಯ ಹಿಂದ ತಾನು. ಎಲ್ಲಾ ಅವನ ಮನಸ್ಸಿನ ಪರದೆಯ ಮೇಲೆ ಒಂದೊಂದಾಗಿ ಸುಳಿದು ಮಾಯವಾಗಿರಬೇಕು. ಮುಂದೆ ಒಂದು ದಿನ ತಾನು ಪ್ಯಾರಷೂಟ್ ಸೈನಿಕನಾಗಿ ಎತ್ತರದಿಂದ ಭೂಮಿಗೆ ಧುಮುಕಬೇಕಾಗುವುದೆಂದು ಅವನು ಕನಸಿನಲ್ಲೂ ಎಣಿಸಿರಲಿಲ್ಲ.

ಎಲ್ಲಕ್ಕೂ ಮುಂದೆ ಬಾಗಿಲ ಬಳಿ ಕುಳಿತ ಸೈನಿಕ ಏಕೆ ಇನ್ನೂ ಕಾಣಿಸ್ತಾರಲಿಲ್ಲ? ತಂಪೇತಿಯಲ್ಲಿದ್ದ ಸೈನಿಕರನ್ನು ಇಷ್ಟು ಹೊತ್ತು ಕಾಯಿಸುತ್ತಿದ್ದು ಒಳ್ಳೆಯದಲ್ಲ. ವಿಳಂಬವಾಗಲು ಕಾರಣವಾದರೂ ಏನಿರಬಹುದು?

ಪ್ಯಾರಷೂಟ್ ಸೈನಿಕರನ್ನು ಕೆಳಗೆ ಕಳುಹಿಸುವವರಲ್ಲೊಬ್ಬ ನನ್ನತ್ತ ಬರುತ್ತಿದ್ದ. ಅವನು ಪ್ರಶಾಂತ ಚಿತ್ತವುಳ್ಳವನಾಗಿ ಕಂಡು ಬಂದನೂ, ಗಾಬರಿಗೊಂಡಿರುವುದು ಸ್ಪಷ್ಟವಾಗಿ ಕಂಡಿತು. ಅವನು ನನ್ನತ್ತ ಸ್ವಲ್ಪ ಬಾಗಿ ಮಾತನಾಡತೊಡಗಿದ. ವಿಮಾನದ ಎಂಜಿನ್‌ಗಳ ಸಪ್ಪಳ ಕಿವಿಗಡಚಿಕ್ಕುವಂತಿತ್ತು. ಆದರೂ ಅವನ ಮಾತಿನ ಭಾವದಿಂದ ಅವನು ಹೇಳುವುದನ್ನು ನಾನು ಅರ್ಥಮಾಡಿಕೊಂಡಿದ್ದೆ. "ವಿಪತ್ತಿನ ಗಳಿಗೆ ಆಗಲೇ ಬಂದಿತ್ತು.

ಏನು ಅನಾಹುತದಿತ್ತೊ, ಅದು ಕೊನೆಗೊಮ್ಮೆ ಆಗಿಯೇ ಬಿಟ್ಟಿತು. ಪ್ಯಾರಷೂಟ್ ನೆರವಿನಿಂದ ಧುಮುಕುವ ಸಾಹಸದಲ್ಲಿ ದುರಂತ ಸಾಟಕದ ಅನುಭವಾಗಿತ್ತು.

ನಾನು ವಿಮಾನದ ಮುಂಭಾಗದಿಂದ ನೋಡುತ್ತಿದ್ದೆ. ವಿಮಾನದಿಂದ ಕೆಳಕ್ಕೆ ಧುಮುಕುತ್ತ ಬಾಗಿಲ ಬಳಿ ಹತ್ತರಿಂದ ಹನ್ನೆರಡು ಅಡಿಗಳಷ್ಟು ಹಿಂದೆ ಹಾಳುತ್ತಿದೋ ಆಕೃತಿಯೊಂದು ನೇತಾಡುತ್ತಿರುವುದು ಕಂಡು ಬಂದಿತು. ಮೊದಮೊದಲು ಅದು ಕೇವಲ ಭ್ರಮೆಯೆಂದು ಕಂಡುಬಂದರೂ ಬಳಿಕ ಅದು ನಿಜರೂಪ ತಳೆಯಿತು. ಅವನು ಪ್ಯಾರಷೂಟ್ ಸೈನಿಕ ಎಂಬುದು ಈಗ ಸ್ಪಷ್ಟವಾಗಿತ್ತು. ವಿಮಾನವು ಅವನನ್ನು ಎಳೆದುಕೊಂಡು ಮುಂದೆ ಮುಂದೆ ಸಾಗುತ್ತಿತ್ತು.

ಪ್ಯಾರಷೂಟ್ ಯೋಧನನ್ನು ಇಳಿಸುವ ಸ್ಥಾನದ ಮೇಲೆ ವಿಮಾನ ಹಾರುತ್ತಿದ್ದಿತು. ಸೈನಿಕನ ಪ್ಯಾರಷೂಟ್ ಹೂವಿನಂತೆ ಅರಳಿ ಅವನು ಇಳಿಯಲು ಅನುಕೂಲ ಮಾಡಿಕೊಡುವುದೆಂದು ನಾವೆಲ್ಲ ತುಂಬಾ ಆತುರದಿಂದ ಕಾಯುತ್ತಿದ್ದೆವು.

ವಿಮಾನವು ಸೈನಿಕನು ಇಳಿಯ ಬೇಕಾದ ಸ್ಥಾನದಿಂದ ಮುಂದೆ ಚಲಿಸಿತು. ನಾನು ವಿಮಾನದ ಕಿಟಕಿಯಿಂದ ನೋಡುತ್ತಿದ್ದೆ. ಕೆಳಗೆ ದೂರದಲ್ಲಿ ಕೆಲವರು ನೆಟ್ಟ ದೃಷ್ಟಿಯಿಂದ ವಿಮಾನವನ್ನೂ ಅದರ ಹಿಂದಿನಿಂದ ತೂಗಾಡುತ್ತಿದ್ದ ಮನುಷ್ಯನನ್ನೂ ನೋಡುತ್ತಿದ್ದರು.

ವಿಮಾನದಿಂದ ಪ್ಯಾರಷೂಟ್ ಸೈನಿಕ ಏಕೆ ಇನ್ನೂ ಬಿಡುಗಡೆ ಹೊಂದಲಿಲ್ಲ? ಏನು ಅಚಾತುರ್ಯವಾಗಿರಬಹುದು? ಎಂಬ ಕುತೂಹಲ ಅವರ ಕಂಗಳಲ್ಲಿತ್ತು. ಇಷ್ಟರಲ್ಲೇ ಸೈನಿಕನ ಪ್ಯಾರಷೂಟ್ ಹೂವಿನಂತೆ ಅರಳಿತು, ನನಗೆ ಸ್ವಲ್ಪ ಸಮಾಧಾನವಾಯಿತು. ನಾನೂ ಈಗಲೇ ವಿಮಾನದಿಂದ ಕೆಳಗೆ ಧುಮುಕಲೇ ಎನ್ನಿಸಿತು. ಗಾಬರಿಗೊಂಡ ಅವನಿಗೆ ಕೊನೆಯ ಪಕ್ಷ ಸಮಾಧಾನ ನೀಡಲು ಸಾಧ್ಯ ಎಂದುಕೊಂಡೆ.

...ಕೆಳಗೆ ದೂರದಲ್ಲಿ ಒಂದುಗೋಧಿಯ ಹೊಲದಲ್ಲಿ ಎರಡು ಬಿಳಿಯ ಕೊಡೆಗಳು ಒರಗಿದುದು ಕಂಡು ಬಂತು. ಪ್ಯಾರಷೂಟ್ ಸೈನಿಕ ಕೆಳಗೆ ಬಿದ್ದಿದ್ದ. ಅವನಲ್ಲಿ ಯೊಡ್ಡೇ ಚಟುವಟಿಕೆಯಿರಲಿಲ್ಲ.

ಕೆಲವು ಹಳ್ಳಿಗರು ಕುತೂಹಲದಿಂದ ಅವನತ್ತ ಓಡಿ ಬರುತ್ತಿದ್ದರು. ಈಗ ಸೈನಿಕ ಒಂದು ಮಗ್ಗುಲಾಗಿ ಮಲಗಿದ್ದುದು ನನಗೆ ಕಾಣುತ್ತಿತ್ತು. ಇನ್ನು ವೇಗದಿಂದ ಇಳಿದು ಒಂದು ಅಪಾಯಕ್ಕೆ ಸಿಲುಕಾಗಬೇಕೆಂ[illegible]

ಸೈನಿಕನಿಗೆ ಸ್ವಲ್ಪ ದೂರದಲ್ಲಿ ಇಳಿದ. ಪ್ಯಾರಷೂಟ್ ಮೆಲ್ಲ ಅವನ ಕಡೆಗೆ ಹೋಗುವಾಗ ಸಣ್ಣ ಗಾಳಿ ಬೀಸಿ ಪ್ರವಾಹಕ್ಕೆಗೊಂಡಿತೆಂದು ಹೇಳಬೇಕು. ಸೈನಿಕ ನನ್ನತ್ತ ದೀನದೃಷ್ಟಿಯಿಂದ ನೋಡುತ್ತಿದ್ದ. ಅವನ ಬಲಗೈಗೆ ತೀವ್ರ ನೆಪ್ಪಾಗಿದ್ದರಿಂದ ರಕ್ತ ಸೋರಿಗಿ ಹರಿಯುತ್ತಿತ್ತು.

ಏನು ಅಪಾಯ ಸಂಭವಿಸಿದ್ದನ್ನು ಈಗ ನಾನು ಮನಗಂಡಿದ್ದೆನಾಗಿದ್ದೆ. ಅನುಭವವಿಲ್ಲದ ಸೈನಿಕ ಒಂದು ತಾಂತ್ರಿಕ ತಪ್ಪು ಮಾಡಿದ್ದ. ವಿಮಾನದಿಂದ ಅವನು ಕೆಳಕ್ಕೆ ಧುಮುಕುವಾಗ ಅವನ ಕೈ ಸ್ಥಿರ ರೇಕ್ಷೆ (ಸ್ಟಾಟಿಕ್ ಲೈನ್) ಮುಲ್ಲ ಸಿಲುಕಿಕೊಂಡಿತ್ತು. ಇದರಿಂದ ಅವನು ಪೇಚಾಡಬೇಕಾಯಿತು. ಪ್ಯಾರಷೂಟ್ ತೆರೆಯಲು ಇದರಿಂದ ಅಡಂಕವಾಯಿತು. ಅವನು ಗಂಟೆಗೆ ಗಿಂತ ವೇಗದಲ್ಲಿ ಕೆಳಗೆ ಬೀಳುತ್ತಿದ್ದ ತೊಡಗಿದಿಂದ ಬಿಡುಗಡೆ ಆದಾಗ ಪ್ಯಾರಷೂಟ್ ತೆರೆಯಿತು. ಅವನು ಕೆಳಗಿಳಿಯತೊಡಗಿದ. ಇಂತಹ ಪ್ರಸಂಗಗಳು ವಿರಳವಾಗಿವೆ ಎಂದು ಹೇಳಬಹುದು.

ಸೈನಿಕನಿಗೆ ತೀವ್ರ ಗಾಯವಾಗಿತ್ತು. ಹಳ್ಳಿಗರು ಅವನ ನೆರವಿಗೆ ಧಾವಿಸಿದರು. ಪ್ರತಿಯೊಬ್ಬರೂ ಸಹಾಯ ಮಾಡಬೇಕಾಯಿತು.

ಗಾಯಗೊಂಡ ಸೈನಿಕ ನರು ಮೂಕನಾಗಿದೇ ನೋವನ್ನು ಸಹಿಸಿಕೊಂಡಿದ್ದ. ನನ್ನತ್ತ ವಿಶ್ವಾಸಪೂರ್ಣ ದೃಷ್ಟಿಯಿಂದ ನೋಡಿ ತಿಳಿಸಿದ. ನನ್ನಲ್ಲಿ ಅವನಿಗೆ ಸಂಪೂರ್ಣ ಭರವಸೆ ಇತ್ತು. ನಾನು ಅವನ ಶಿಕ್ಷಕ. ಈ ಸಂದರ್ಭದಲ್ಲಿ ಅವನು ನೋವು ಅನುಭವಿಸಿದರೂ ಅದು ಅವನ ಒಳಿತಿಗಾಗಿಯೇ ಆಗಬೇಕು. ಇವನಂತಹ ಸೈನಿಕರೇ ಧೀರ ಯೋಧರು, ಸಾಹಸದಿಂದ ಅವರಾನ ವೈರ್ಯ ಎಂದ ಮನ್ನಣೆಗೆ ಪಾತ್ರರಾದರು. ದುರ್ದೈವದಿಂದ ಅವರಾಯ ನಾಂಧಸಿದರೆ ಅವರು ಅವಕಾಶಗಳನ್ನೂ ದೊರಕುವುದಿಲ್ಲ. ನಗುವಿಗ ತ್ತಲೇ ಎಂದುಕುತ್ತಾರೆ. "ಆಯ್ ಡಿಡ್ ಇಟ್ ಆಲ್ ಫಾರ್ ಯೂ" ಘೋಷಣೆ ಇವನಂತಹ ಶೂರರಿಗೆ ಅನ್ವಯಿಸದೆ ಇನ್ನಾರಿಗೆ ಅನ್ವಯಿಸಬೇಕು ಎಂದು ನನಗಾಗ ಅನ್ನಿಸಲಿಲ್ಲ.

ಸ್ಮಾರಕ

(ಎಂಡನೇ ಪುಟದಿಂದ)

ಉಟ್ಟ ಬಟ್ಟೆಯಲ್ಲಿಯೇ ಹೊರಬಿದ್ದ ರಾಯರಿಗೆ ರಾಗಿಜೆಯ ಹೆಚ್ಚು ದೂರ ಪಯಣಿಸಲಾರಲಾರೆಂಬ ನಂಬುಗೆಯಿಂದಲೇ ಹುಡುಕಿ ಬೇಸತ್ತರು.

ಹೂಂ ಇನ್ನು ವಿಚಾರಿಸಿದರೂ ರಾಗಿಜೆಯ ಸುಳಿವು ಸಿಗದಾಯಿತು. ಹುಡುಕಿಕೊಂಡು ಹೋದ ರಾಯರು ಭಾರವಾದ ಮನದಿಂದಲೇ ಹಾಳು ದೇಗುಲದ ದಂಡಿಯಲ್ಲಿಯೇ ಮನೆಯತ್ತ ಹೆಜ್ಜೆಹಾಕಿದರು.

ದೇಗುಲ ಪ್ರವೇಶಿಸಿದ ರಾಯರು ಎದುರು ಕೆರೆಯಲ್ಲಿ ತೇಲುವ ಶವ ಕಂಡು ನಿಂತುಬಿಟ್ಟರು.

ಅರೆ ಕ್ಷಣದಲ್ಲಿಯೇ ಕರ್ತವ್ಯ ನೆನೆದು ನೆರೆಯವರನ್ನು ಕೂಗಿ ಕರೆದರು. ಮಗ ನನ್ನಪ್ಪಿ ಶಾಂತತೆಯನ್ನು ಪಡೆದಿದ್ದ ರಾಗಿಜೆ ಎನ್ನು ಕಂಡ ರಾಯರಿಗೆ ದುಃಖ ಮೇಲುಕ್ಕಿ ಬಂತು. ತನಗೆ ಜೀವದಾನ ಮಾಡಿತ್ತ ಜೀವವನ್ನೇ ಬಲಿದಾನವಾಗಿತ್ತ ರಾಗಿಜೆಯ ಅಂತ್ಯ ಕ್ರಿಯೆಯನ್ನು ವಿಜೃಂಭಣೆಯಿಂದಲೇ ನೆರವೇರಿಸಿ ಸ್ಮಾರಕವೊಂದನ್ನೆತ್ತಿಸಿದ ರಾಯರು ದಿನವೂ ಕೈ ಮುಗಿದು ಬಲಿ ಮರೆಯದಾದರು.

ರಾಷ್ಟ್ರಕ್ಕೆ ಅನ್ನದಾತನಾದ ಅನ ಭವಸ್ಥ ರೈತನ ಪ್ರಥಮ ಆಯ್ಕೆಯ
ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು
ಸರ್ವ ವಿಧದಿಂದಲೂ ರೈತನ ಭಾಗ್ಯವಿಧಿಯಾಗಿವೆ
ದೇಶವಿಖ್ಯಾತವಾದ
ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು
ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—
ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್
ಫಳನೀರ್, ಮಂಗಳೂರು - 1
ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಹಂಧಾಹ್ವಾನ

ಇಬ್ಬರೊಳಗ ವಿವಾದ ಬೆಳೆಯಿತು.

"ಇನ್ನತ್ತ ಒಂದೇ ಪೆಟ್ಟಿಗೆ ಕೂಂಮು ಬಿಡುವೆನು....ಜಾಗ್ರತೆ!"

"ಹಾಗಾದರೆ,ಅದು ಮೊದಲು ಆಗಲಿ. ನಾನೇನು ಮಾಡುವೆನೆಂದು ಮತ್ತೆ ಹೇಳುತ್ತೇನೆ..."

NAVAYUGA 11—4—1969
Registered with the Registrar of News Papers for India under No. R. N. 3546/'67

REGD. No. B. G. 176
LICENCE No. 31
Licensed to Post without Prepayment

ಭ್ರಾಮಕ ಕಲ್ಪನೆ

ಬ್ಯಾಂಕ್ ರಾಷ್ಟ್ರೀಕರಣ

ಲೇಖಕ— ಎನ್. ಬಿ.

ರಾಷ್ಟ್ರೀಕರಣದ ವರ್ಣರಂಜಿತ ವ್ಯಾಖ್ಯೆ ಕಲ್ಪನಾ ಲೋಕದಲ್ಲಿ ವಿಹರಿಸುವಾಗ ಬಹು ಸುಂದರ ಸ್ವಪ್ನದಂತೆ ಕಾಣುತ್ತದೆ. ಆದರೆ ಅದು ವಾಸ್ತವಿಕತೆಗೆ ಬಂದಾಗ ದೊಡ್ಡ 'ಸೊನ್ನೆ'ಯಾಗಿ ಕಾಣುತ್ತದೆ. ಇಂದು ರಾಷ್ಟ್ರೀಕರಣಗೊಂಡ ವಿಮೆ, ಬಸ್ಸುಗಳಿದ್ದೇ ಪ್ರಧಾನ್ಯರಿಸುವಾಗ ಮೇಲಿನ ಮಾತು ಸತ್ಯವೆಂದು ತೋರುತ್ತದೆ.

ಈಗ ವಿಮೆಯ ವ್ಯವಹಾರ ಬಹಳಷ್ಟು ಬೆಳೆದಿದೆ ಎಂದು ಕಾರಣ ಕೊಡಲಾಗುತ್ತದೆ. ಆದರೆ ಅದಕ್ಕೆ ಸರಕಾರವು ಇತ್ತ ನೇರ ಸೌಲಭ್ಯಗಳು ಜನರಲ್ಲಿ ಆರ್ಥಿಕ ಶಕ್ತಿ ಹೆಚ್ಚಿದುದೇ, ನಮ್ಮ ಸಂಪನ್ಮೂಲಗಳು ವಿಕಸಗೊಂಡುದು ಕಾರಣವಾಗಿದೆ. ಆದರೆ ವಿಮೆಯು ಪಾಸಗಿಯವರ ಕೈಯಲ್ಲಿದ್ದಾಗ ಅದಕ್ಕಿತದಲ್ಲಿದ್ದ ದಕ್ಷತೆ, ಖಾಲಿಸಿದಾರರಿಗೂ ಸಂತೃಪ್ತಿ ಇದ್ದ ಹೊಂದಾಣಿಕೆ ಈಗ ಇಲ್ಲ. ಕೇವಲ ತಮ್ಮ ಸಂಬಳ, ಬೇಡಿಕೆಗಳ ಸಾಧ್ಯತೆಗಾಗಿ ಈ ಪ್ರೌಕರ ಶಾಹಿ ಅದ್ಯ ಗಮನಕೊಟ್ಟು ಖಾಲಿಸಿದಾರರ ಸೇವೆಗೆ ಕೊಡಬಹುದಾದ ಲಕ್ಷ್ಯವನ್ನು ನೀಡುತ್ತಿಲ್ಲ. 'ಯೂನಿಯನ್'ಗಳ ಬೇಡಿಕೆಗೆ ನ್ಯಾಯಸಂಗತ ಇರಬಹುದು. ಆದರೆ ತಮ್ಮ ಬೇಡಿಕೆ ಈಡೇರುವ ತನಕ ತಾನು ಧಾಳ ಎದುರಿಸುವುದಿಲ್ಲವೆಂದು. ಸ್ವೈಚ್ಛ ಮುಷ್ಕರ ಹೂಡಿದರೆ ಅದು ವಿಮೇಕ ಪೆಫಿಸಲಾರದು ಹೇಗೋ, ಹಾಗೆ ತಮ್ಮ ಕೇಳಿಕೆಗಳ ನೆಪದಲ್ಲಿ ಖಾಲಿಸಿದಾರರ ಕೆಲಸ ಕಾರ್ಯ ಕುಂಠಿತಗೊಳಿಸುವಂತಾದರೆ ಅದು ಕ್ಷಮ್ಯವೆನಿಸಲಾಗದು. ಇಂದು ವಿಮಾಕ್ಷೇತ್ರದಲ್ಲಿ ಬಗುವಿನ ಅಡಳಿತೆ ಇಲ್ಲ. ಪ್ರೌಕರು ತಮ್ಮ ಕಾರ್ಯವನ್ನು ಗಡಿಯಾರ ನೋಡಿ ಮಾಡುತ್ತಾರೆ. ಪ್ರಮೋಶನ್ ಸರ್ವಿಸಿನ ಮೇಲೆ ದೊರಕುತ್ತದೆ. ಅದರ ಬಗ್ಗೆ ಆಕ್ಷೇಪ ಬಂದರೆ ಹೇಗೂ ಹೋರಾಟಕ್ಕೆ ಯೂನಿಯನ್ ಇದ್ದೇ ಇದೆ. ಇಂತಹ ಒಂದು ನ್ಯಾಯ ಸರಕಾರಿ ಯಂತ್ರದಲ್ಲಿ ಪ್ರತಿಯೊಂದು. ಕಡೆ ಕಂಡು ಬರುತ್ತದೆ. ಹಾಗಾಗಿ ಎಲ್. ಜಿ. ಐ.ರಳ ಮುಷ್ಕರವು ಸಾರ್ವಜನಿಕರ ಅನುಭವನ್ನು ಫೀರೀಕ್ಷಿಸಿದಷ್ಟು ಪಡೆಯಲಿಲ್ಲ. ಎನ್. ಜಿ. ಓ.ಗಳು ನಿಜವಾಗಿಯೂ ಕಷ್ಟದಲ್ಲಿದ್ದಾರೆಂಬುದನ್ನು ಒಪ್ಪುವವರೂ, ಆದರೆ ಕಾರ್ಯನಿರ್ವಹಣೆಯು ಸಾರ್ವಜನಿಕರಿಗೆ ತೊಂದರೆ ಕೊಡುವುದರಿಂದಲೇ 'ಅವರಿಗೆ ಖಾಪೇಕ ಸಹಾಯ ಮಾಡಬೇಕು' ಎಂಬ ಘೋಷಣೆಯೂ ಜನಸಾಮಾನ್ಯರದ್ದಾಗಿದೆ.

ಬಸ್ಸು ರಾಷ್ಟ್ರೀಕರಣದಲ್ಲಿ ವ.ತ್ತೊಂದು ಹೊಸ ಅವಾಂತರವಿದೆ. ಅಲ್ಲಿ ಕೆಳಗಿನಿಂದ ಮೇಲಿನ ತನಕ ಲಂಚಾಸುರನ ಹಾವಳಿ, ಅನ್ಯಾಯ, ವಂಚನೆ, ಮೋಸಗಳ ಪರಿವಾರ ನಡೆಯುತ್ತಲೇ ಇದೆ. ರಾಷ್ಟ್ರೀಕೃತ ಬಸ್ಸುಗಳ ನಿರ್ವಹಣೆಯು ಇಂದಿಗೂ ಅಪಹಾಸ್ಯದ್ದಾಗಿದೆ.

ಈ ರೀತಿ ಸರಕಾರಿ ಯಂತ್ರವು ತನ್ನ ಬಂಚುಪ್ರವೇಶ ಮಾಡಿದಲ್ಲೆಲ್ಲಾ ದಕ್ಷತೆ ಲೋಪಗೊಂಡು ರಾಜಕೀಯ ಪ್ರಲೋಭನೆ ಹೆಚ್ಚುವುದನ್ನು ಕಾಣುವಾಗ ಇವೆಲ್ಲಕ್ಕಿಂತಲೂ ಭಿನ್ನವಾದ ವಿಷಯ ಪರಿಸ್ಥಿತಿಯನ್ನು ರೂಪಿಸುವ ಬ್ಯಾಂಕ್ ರಾಷ್ಟ್ರೀಕರಣದ ಮಾತು ಮತ್ತೊಂದು ರಾಷ್ಟ್ರಕ್ಕೆ ತನದ್ದು.

ಬ್ಯಾಂಕ್‌ಗಳು ಜನರ ಹಂಬಕೆ, ವಿಶ್ವಾಸದ ಮೇಲೆ ಮೇಲೆದ್ದು ಬರುವಂತಹದು. ಧಾರತದಂತಹ ಬಡ ರಾಷ್ಟ್ರ ಉಳಿತಾಯಕ್ಕಿಂತಲೂ ಜೀವನೋಪಾಯಕ್ಕಾಗಿ ಕಿತ್ತ ಸಮಸ್ಯೆಯನ್ನೆದಿರಿಸುವ ರಾಷ್ಟ್ರ. ಜೀವದೊಡನೆ ಸೆಣಸಾಡಿದ ಮೇಲೆ ಉಳಿತಾಯದ ಪ್ರಶ್ನೆ. ಆದರೂ ಈಗ ಉಳಿತಾಯದ ಬಗ್ಗೆ ಜನ ಆಸಕ್ತಿ ವಹಿಸಿದ್ದಾರೆ. ಈ ಆಸಕ್ತಿ ಕೆರಳಿದ ರೀತಿಯಲ್ಲೇ ಕಮರಿ ಹೋಗದಂತೆ ಅದರಲ್ಲಿ ವಿಶ್ವಾಸ, ಉತ್ಸಾಹ ಮೂಡಿಸಲು ಬ್ಯಾಂಕ್ ಆಕರ್ಷಕ ಯೋಜನೆ ಕೈಗೊಳ್ಳಬೇಕು. ಅದು ಏಕಪಕ್ಷೀಯವಾದರೆ ಹೊದಲೇ ಅರೆ ಮನಸ್ಸಿನ ನಮ್ಮ ಪ್ರಜೆ ಸಂಪೂರ್ಣ ಫಲಾಪೇಕ್ಷನಾದರೆ ಯೋಜನೆಗೇ ಕೊಡಲಿ ಪೆಟ್ಟು ಹಾಕಿದಂತಾಗಬಹುದು.

ಇದು ಸರಕಾರದ ಹತೋಟಿ ಈ ಬ್ಯಾಂಕ್ ರಾಷ್ಟ್ರೀಕರಣದ ಮೇಲೆ ಪರಿಣಾಮ ಎಷ್ಟರ ಮಟ್ಟಿಗೆ ಮಾಡುತ್ತದೆ ಎಂಬ ಊಹೆಗೆ ಹಾಗೂ ಸುಸ್ಥಿರ ಪ್ರಜ್ಞೆ ಮೂಡಲು ಜನಸಾಮಾನ್ಯನಿಗೆ ಇನ್ನು ದಶಕವೇ ಬೇಕಾದೀತು. ಬದಲಾವಣೆತ್ತಿರುವ ಸರಕಾರ, ಕಾನೂನಿನ ಬದಲಾವಣೆ, ಘಟನೆಯ ತಿದ್ದುಪಡಿ, ಇವುಗಳ ವಾರ್ತೆಯನ್ನು ನಿತ್ಯವೂ ಕೇಳುವ ಜನಸಾಮಾನ್ಯ ಸರಕಾರದ ಸ್ಥಿರತೆಯ ಬಗ್ಗೆಗೇ ಸಂಶಯ ತಾಳುತ್ತಿದ್ದಾನೆ. ಯಾವ ಸರಕಾರ ಬಂದರೂ, ರಾಷ್ಟ್ರೀಕರಣಗೊಂಡರೂ ತನ್ನ ಉಳಿತಾಯ ಭದ್ರವಾಗಿರುತ್ತದೆ ಎಂಬ ಭರವಸೆ ಅತಿಫಗಿಲ್ಲ. ಹಾಳೆ ಒಂದು ಕಾನೂನು ಬಂದು ತನ್ನ ಉಳಿತಾಯಕ್ಕೆಲ್ಲ ಮುಟ್ಟುಗೋಲು ಹಾಕಿದರೆ ಎಂಬ ಭಯ ಈಗಲೇ ಇದೆ. ಇನ್ನು ರಾಷ್ಟ್ರೀಕರಣ ಮಾಡಿದರೆ ಕೇಳುವುದೇ ಬೇಡ.

ಈಗ ಖಾಸಗಿ ಬ್ಯಾಂಕ್‌ದಳು ಗಿರಾಕಿಗಳಿಗೆ ನೀಡುವ ಸೌಲಭ್ಯಗಳು, ಶ್ರದ್ಧಿತವಾದ ನಿರ್ವಹಣೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಅಸಾಧ್ಯ. ಬ್ಯಾಂಕಿನ ನೌಕರರಿಗೆ ಉತ್ಸಾಹವಿರುವುದಿಲ್ಲ ಕೇವಲ ರಿಕಾರ್ಡುಗಳ ಆಧಾರದಲ್ಲಿ ತಮ್ಮ ನಿಯಮಿತ ವಿಧಾನದಲ್ಲಿ ಸೌಲಭ್ಯ ನೀಡುತ್ತಾರೆ. ಅವರಿಗೆ ಮೆಚ್ಚಿಗೆ ಪ್ರಮೋಶನ್‌ದಳ ಬಗ್ಗೆ ಕಾರ್ಯ ನಿರ್ವಹಣೆ ಅವಶ್ಯವಿಲ್ಲ. ಇಂದು 'ಸ್ಟೇಟ್ ಬ್ಯಾಂಕ್'ದಳ ನಾರ್ವಜನಿಕರಿಗೆ, ಅದೂ ವ್ಯವಹಾರದಳಿಗೆ, ಯಾವ ರೀತಿ ಉತ್ಸುಕ ಸರಕಾರ ನೀಡಿದೆ ಎಂಬುದನ್ನು ಪರಿಶೀಲಿಸಿದರೆ ತಿಳಿಯುತ್ತದೆ.

ರಾಷ್ಟ್ರೀಕರಣದಿಂದ ವ್ಯವಹಾರ ಕ್ಷೇತ್ರ ಸ್ಥಗಿತಗೊಳ್ಳುವುದು. ಪ್ರಾಮಾಣಿಕತೆ, ನಿರ್ವಹಣೆ ಯೋಗ್ಯತೆಗಿಂತ ರಾಜಕೀಯದಲ್ಲಾಲಿಗಳ ಶಿಫಾರಸಿಗೆ ಅತ್ಯಂತ ಹೆಚ್ಚಿನ ಬೆಲೆ ಬರುತ್ತದೆ. ಆರ್ಥಿಕ ಕ್ಷೇತ್ರವು ರಾಜಕೀಯ ಹಿತವಂದಿಗರ ಆಡೊಂಬಲವಾಗುವುದು. ಯೋಗ್ಯತೆಗಿಂತ ರಾಜಕೀಯ ವರ್ಚಸ್ಸು ಹಿತ ಸಂಬಂಧಿಸಿದ ದಲ್ಲಾಲಿತನಕ್ಕೆ ಮೇರೆ ಮೀರಿದ ಯೋಗ್ಯತೆ ಬರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕ್ ರಾಷ್ಟ್ರೀಕರಣವು ಜನಸಾಮಾನ್ಯರಿಗೆ ಸಣ್ಣ ಪುಟ್ಟ ವ್ಯಾಪಾರಿ ಜನತೆಗೆ, ಪ್ರಾಮಾಣಿಕ ವ್ಯವಹಾರಕ್ಕೆ ದೊಡ್ಡ ಆಘಾತವೊಡ್ಡುವುದು ಖಂಡಿತ. ಜನರೂ ಉಳಿತಾಯದ ಬಗ್ಗೆ ಸಾಶಂಕರಾಗಿ ಚಿನ್ನ, ಬೆಳ್ಳಿ ಒಡವೆ ವಸ್ತುಗಳು, ಮನೆ, ಭೂಮಿಗಳ ಬಗ್ಗೆ ಆಸಕ್ತಿವಹಿಸಿ, ಬೇರೆದ ಜನತೆಯು ಉಳಿತಾಯ ಪ್ರಮಾಣ ಬೇರೆ ದಾರಿ ಹಿಡಿಯುತ್ತದೆ. ಸ್ಟೇಟ್ ಬ್ಯಾಂಕ್ ಖಾಸಗಿ ಬ್ಯಾಂಕಿನೊಂದಿಗೆ ಸ್ಪರ್ಧಾತ್ಮಕವಾಗಿ ಕಾರ್ಯ ನಿರ್ವಹಿಸಿ ಆ ರೀತಿಯಲ್ಲಿ ಜನತೆಯ ವಿಶ್ವಾಸ ಪಡೆದು ಕೊಂಡಾ ಮೇಲೆ ರಾಷ್ಟ್ರೀಕರಣದ ಯೋಜನೆಗೆ ಕೈಹಾಕಲಿ. ಇಲ್ಲವಾದರೆ ಬಂಗಾರದ ಮೊಟ್ಟೆ ಇಡುವ ಹೇಂಟೆಯನ್ನು ಕೊಂದ ಸ್ವಾರ್ಥಿ ರೈತನ ಕತೆಯಂತೆ ಸಂಕಾರಂದಾಡಾಡುವುದು ಖಂಡಿತ.

(ಇದೇ ಲೇಖಕರ ಇಂಗ್ಲೀಷ್ ಲೇಖನವೊಂದರ ಅನುವಾದವಿದು.)

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪ್ರ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ. ಕೊರಡ್ಲಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್., ಇವರು ಮುನ್ನುಡಿಯನ್ನು ಕೊಂಡಾಡಿದ್ದಾರೆ.

ಮಕ್ಕಳು, ಹೆಂಡಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಪೈದ್ಯ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CE-4,17-4/65-66 dated 20-4-1966.

ಅಮೃತಾಂಜನ
ಎಲ್ಲಾ ನೋವುಗಳಿಗೆ ನಿವಾರಣೆ
ಎಲ್ಲಾಕಡೆ ಸಿದಿತವಾದ ನೋವುಗಳಿಗೆ
50 ವರ್ಷ ಉಪಯೋಗ
ಸಾರ್ವತ್ರಿಕ ಸಾರ್ವಕಾಲಿಕ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

18—4—1968

೨೦
ಪೈಸೆ

ಅನಂತನಾಥ ಪುರಾಣದ ಕಥೆ

ಲೇಖಕರು: ಶ್ರೀ ಸ. ನಾರಾಯಣ.

ಯಶೋಧರ ಚರಿತೆ (ಕ್ರಿ. ಶ ೧೨೦೯) ಮತ್ತು ಅನಂತನ ಥ ಪುರಾಣ (ಕ್ರಿ. ಶ. ೧೨೬೦) ಈ ಎರಡು ಹನ್ನನ ಪ್ರಸಿದ್ಧ ಕಾವ್ಯಗಳು. ಇವೆಂಡೂ ಕನ್ನಡದಲ್ಲಿ ದೊರೆಯುವ ಉತ್ಕೃಷ್ಟ ಗ್ರಂಥಗಳು ಶೃಂಗಾರ—ಪ್ರಣಯಗಳಿಗೆ ಪ್ರಾಧಾನ್ಯ ಇರುವುದನ್ನು ಇಲ್ಲಿ ಕಾಣಬಹುದು. ಅನಂತನಾಥ ಪುರಾಣದ ಕಥೆಯನ್ನು ಇಲ್ಲಿ ನಿರೂಪಿಸಲಾಗಿದೆ.

ವಸುಷೇಣ ಸುರಮ್ಯ ಮಂಡಲದ ಪೌದನಪುರದ ಅರಸು. ಅವನ ರಾಣಿವಾಸದಲ್ಲಿ ಅಸಂಖ್ಯಾತ ಮಡದಿಯರು. ಅಪ್ಸರೆಯರನ್ನು ಮೀರಿಸಿದ ಸೌಂದರ್ಯ ಅವರದು. ಅವನರಾಣಿವಾಸದಚಲುವೆಯರಲ್ಲಿ ಸುನಂದೆ ಮೆಚ್ಚಿನ ಮಡದಿ; ಅಸಮಾನ್ಯ ರೂಪವತಿ. ಅವಳ ಯೌವನ, ಲಾವಣ್ಯಗಳು ಅವನ ಕಣ್ಣಿಗೆ ತೃಪ್ತಿ ನೀಡಿದ್ದವು.

ಒಂದುದಿನ ವಸುಷೇಣ ಗಜಾರೋಹಣ ವಿನೋದದಲ್ಲಿದ್ದ.ಆಗ ಅವನಿಗೆ ಅವನ ಪ್ರಾಣಮಿತ್ರ ಚಂಡಶಾಸನ ಭೇಟಿಗಾಗಿ ಬರುತ್ತಿದ್ದಾನೆಂಬ ಸಂಗತಿ ಚಾರರಿಂದ ತಿಳಿಯಿತು. ವಸುಷೇಣ ಮತ್ತು ಚಂಡಶಾಸನ ಇಬ್ಬರೂ ಬಾಲ್ಯದಲ್ಲಿ ಒಟ್ಟಾಗಿ ಆಡಿ ಬೆಳೆದವರು. ಇಬ್ಬರದೂ ಗಳಸ್ಯ ಕಂಠಸ್ಯ ಎನ್ನುವಂತಹ ಸ್ನೇಹ. ಇಬ್ಬರೂ ಒಬ್ಬರನ್ನೊಬ್ಬರು ಭೇಟಿ ಮಾಡಿ ಬಹು ದಿನಗಳಾಗಿದ್ದು. ಗೆಳೆಯನ ಭೇಟಿಯನ್ನು ವಸುಷೇಣ ಕಾತುರದಿಂದ ನಿರೀಕ್ಷಿಸುತ್ತಿದ್ದ. ವಸುಷೇಣ ಗೆಳೆಯ ಚಂಡಶಾಸನನನ್ನು ಸಂಭ್ರಮದಿಂದ ಸ್ವಾಗತಿಸಿ, ಆಮನೆಗೆ ಕರೆದೊಯ್ದ. ಗೆಳೆಯನ ಆಗಮನದ ಸಂತೋಷಕ್ಕಾಗಿ ವಸುಷೇಣ ಕಾವ್ಯಗೋಷ್ಠಿ, ಗೀತ ನಾಟ್ಯ, ಜಟ್ಟಿ ಕಾಳಗ, ವಾಹನವಿಳಾಸ, ಕಂದುಕ್ರೀಡೆಗಳನ್ನು ಏರ್ಪಡಿಸಿದ. ಮಿತ್ರರಿಬ್ಬರೂ ಏಕಾಸನದ ವಾಸ, ಸಹವಿಳಾಸ ಕ್ರೀಡೆ, ಸಹಪಂಕ್ತಿ ಭೋಜನ. ಅವರಿಬ್ಬರ ಯೋಗಕ್ಷೇಮ ನೋಡಿಕೊಳ್ಳುವವಳು—ಅತಿಥಿ ಸತ್ಕಾರ ನಡೆಸಿದವಳು ವಸುಷೇಣನ ಪ್ರಿಯತಮೆ ಸುನಂದಾ ದೇವಿ.

"ಕುಸುಮ ಕೋದಂಡನ ವಶೀಕರಣ ಕಾಡಂ ಕೇಮ್ಮಿಸೆ ಯಿಟ್ಟು ಗಟ್ಟಗಟ್ಟ ತಿದಿ ಬಣ್ಣವಟ್ಟಂತೆ. ಸುನಂದೆ ಒಪ್ಪುವವಳು. ಅವಳ ಅಪೂರ್ವ ಲಾವಣ್ಯ, ಪಿಳಂಸ ಪ್ರಾಧಿಗಳು ಚಂಡಶಾಸನನನ್ನು ಸರೆ ಹಿಡಿದವು. ಚಂಡಶಾಸನ ಸುನಂದೆಯ ರೂಪ ಲಾವಣ್ಯಗಳಿಗೆ ಹೀಗೆ ಬರಗಾಗಿ ಹೋದ.? ಊಟಕ್ಕೆ ಕುಳಿತಾಗ ಒಡಿಸುತ್ತಲ್ಲದ್ದ ಸುನಂದೆಯ ಅಂಗಾಂಗ ಸೌಂದರ್ಯವನ್ನು ಸಮೀಪದಿಂದ ಕಂಡು ಭ್ರಮಿಸಿ ಊಟ ಮಾಡುವುದನ್ನೇ ಮರೆಯುತ್ತಾನೆ. ಚಂಡಶಾಸನ ಸುನಂದೆಯ ಸಮೀಪ ಕುಳಿತಿದ್ದರೂ ಅವನ 'ಸೋಂಕುವಾಸೆ' ಕೈಗೂಡದೆ, ಮೋಹಜ್ವರ ದಿನದಿನಕ್ಕೆ ಬೆಳೆಯುತ್ತದೆ. ಅವನ ಪ್ರೇಮ ಜ್ವರ ವೃದ್ಧಿಯಾಗಿ ಯಾವ ವೈದ್ಯೋಪಚಾರಕ್ಕೂ ಮಣಿಯದೆ ಕೊನೆಗೆ ಮರಣಮಂಚಲು ಸಹ ದುಸ್ಸಾಧ್ಯವಾದುದು. ಕುದರ್ಶನ ಚಂಡಶಾಸನನ ನರ್ಮಸಚಿವ. ಚಂಡಶಾಸನನ ಸ್ಥಿತಿಯನ್ನು ಅರಿತು ಅರಿಯದವನಂತೆ ಸದಶ ಪ್ರಸ್ತಾಪಿಸುತ್ತಾನೆ. "ಈ ಕಡೆ ನಂಟನ ಪತಿಯ ರೂಪ, ಸೋಲಿಸಿತೆನ್ನಂ" ಎಂದು ರಹಸ್ಯವನ್ನು ಗೆಳೆಯನಿಗೆ ತಿಳಿಸುತ್ತಾನೆ ಚಂಡಶಾಸನ. 'ರವ ಣೇ ಲೆ ಚೆನ ಚಾಂಪಿನಂ ಕಳೆಗುಡೋ ನಟ್ಟೆರ್ದ ಹೃಚ್ಛಲ್ಯಮಂ' ಎಂದು ಹಂಬಲಿಸುತ್ತಾನೆ. ಪರಸತಿಯನ್ನು ಪ್ರೀತಿಸುವುದು ತರವಲ್ಲ ಎಂದು ಬೇಕಿದೆ ಅವನ ಕುಮಿತ್ರ ಸುದರ್ಶನ"ಪರಿವಾರಕ್ಕೆ ಪಗ್ಗವಿಲ್ಲಂ; ನೋಡುವ ಕಣ್ಗಿಗ್ಗೆ ಡೆಶಟ್ಟಿಲ್ಲಂ" ಎಂದು ಪ್ರೋತ್ಸಾಹದವಾತುಡಳ್ಳಾಡುತ್ತಾನೆ.ಅವನ ಪ್ರೋತ್ಸಾಹ ಕೆಲವೇ ಮಾತುಗಳಲ್ಲಿ ಮುಗಿಯುತ್ತದಿಲ್ಲ. 'ಸುನಂದೆಗೆ ಚಂಡಶಾಸನನಲ್ಲಿ ಪ್ರೇಮ ಇಲ್ಲದಿಲ್ಲ", ಅವನ ಗಂಡ ಗಾಡಿಗೆ ಸೋಲದ ರಮಣಿ ಯಾರು? ಎಂದು ಕೆಲ ಹುಸಿ ಧೈರ್ಯ ಸ್ವಾಂತದಲಿಂದ ನುಂಬಿಸುತ್ತಾನೆ—ಉಬ್ಬಿಸುತ್ತಾನೆ. ಚಂಡಶಾಸನ ಕೃಪೆ ಪಾತ್ರನಾಗಬೇಕು,ಅಭಿಮಾನಿ ಮಿತ್ರನಾಗಬೇಕು ಎನ್ನುವ ಸ್ವಾರ್ಥದ ದೃಷ್ಟಿಯಿಂದ ಸುದರ್ಶನ ಅವನ್ "ಮನದ ಪಿರಾಜಕ್ಕೆ ವಚನರಚನಾ ಧೂಪಮಂ ತೋರಿ,ವಿರಹ ವಿಕಾರ ಮಂ' ಕೆರಳಿಸುವನ್ನು. ಕುಮಿತ್ರ ಸುದರ್ಶನನ ಉತ್ತೇಜನದಿಂದ ಚಂಡಶಾಸನನ ಚಿತ್ತ ವಿಕಾರವಾಗುತ್ತದೆ. ವಿರಹ ವ್ಯಥೆ ವಿಪರೀತವಾಗುತ್ತದೆ. ಸುನಂದೆಗೂ ತನ್ನಲ್ಲಿ ಅನುರಾಗವುಂಟು, ಆಕೆ ಅವನ್ನು ಪತಿ ಎನುವಿನಲ್ಲಿ ಪ್ರಕಟಿಸಲು ಹಿಂದಾಯುತ್ತಿರಬಹುದು ಎಂದು ಭಾವಿಸಿ ಭ್ರಾಂತಿಗೊಳಗಾಗುತ್ತಾನೆ ಚಂಡಶಾಸನ.

ಒಂದು ದಿನ ವಸುಷೇಣ, ಚಂಡಶಾಸನರಿಬ್ಬರೂ ವ್ಯಗ ಯಾ ವಿಹಾರ ಬೇಟೆಯ ಸಲುವಾಗಿ ಅರಣ್ಯಕ್ಕೆ ತೆರಳುವರು ವನ ವಿಹಾರದ ಬಯಕೆ ವಸುಷೇಣನಲ್ಲಿ ಮೂಡಿರುತ್ತದೆ. ಆ ಕಾರಣದಿಂದ ಅರಣ್ಯ ಭೋಜನ ಸಾಮಗ್ರಿಗಳೊಂದಿಗೆ ನಂದನ ವನಕ್ಕೆ ಬರುವಂತೆ ಪತ್ನಿ ಸುನಂದೆಗೆ ವಸುಷೇಣ ಹೇಳಿಕಳುಹಿಸುತ್ತಾನೆ. ಚಂಡಶಾಸನನಿಗೆ ಅಪೂರ್ವ ಅವಕಾಶ ತಾನಾಗಿಯೇ ಒದಗಿ ಬರುತ್ತದೆ. ಬೇಟೆಯ ರಭಸದಲ್ಲಿ ಗೆಳೆಯ ವಸುಷೇಣನಿಂದ ದೂರಯಾಗಿ, ಸುನಂದೆ ಬರುವ ದಾರಿಯಲ್ಲಿ ಕಾಯುತ್ತಾ ನಿಲ್ಲುತ್ತಾನೆ. ಸುನಂದೆ ಮಿತ್ರಪರಿವಾರದೊಂದಿಗೆ ಪಲ್ಲಕಿಯಲ್ಲಿ ಬರುವುದನ್ನು ಕಂಡು ಅವನ ಆಶೆಯ ಹೊನಲು ಹರಿಯುತ್ತದೆ. ಕೂಡಲೇ ಹಾವಿಯಲ್ಲಿ ಅಡ್ಡಬಂದು ಅಂಗರಕ್ಷಕನನ್ನು ಕೊಂದು ಸುನಂದೆಯನ್ನು ಎಳೆದೊಯ್ದು ತನ್ನ ರಥದಲ್ಲಿ ಕೂಡಿಸಿಕೊಂಡು ತನ್ನ ಊರತ್ತ ವೇಗದಿಂದ ಪ್ರಯಾಣ ಬೆಳೆಸುತ್ತಾನೆ.

ಪತಿಯೊಡನೆ ವನ ವಿಹಾರದ ಆನಂದದಲ್ಲಿದ್ದ ಸುನಂದೆ ಏನಾಯಿತು ಎಂದು ತಿಳಿಯುವ ಮೊದಲೇ ಕಾಮ ಪೀಡಿತ, ವಿಶ್ವಾಸಘಾತಕ, ಮಿತ್ರದ್ರೋಹಿ ಚಂಡಶಾಸನನ ಬಂದಿಯಾಗಿರುತ್ತಾಳೆ. ಸುನಂದೆಯ ದುಸ್ಥಿತಿ ವರ್ಣಿಸಲಸಾಧ್ಯ. ಅವಳ ಉಲ್ಲಾಸ ಇಳಿದು ಹೋಗಿರುತ್ತದೆ. ಪತಿಯ ವಚ್ಚಿನ ಗೆಳೆಯ ಚಂಡಶಾಸನನಲ್ಲಿ ಸುನಂದೆಗೆ ಎಳ್ಳಷ್ಟು ಅಭಿಮಾನವಿರಲಿಲ್ಲ. ಸುನಂದೆ ಪತಿವ್ರತೆ. ಮಹಾಸಾಧ್ವಿ. ("ಅವಳಿಂದೆ ಪತಿವ್ರತೆಯಿಲ್ಲ ನೋಡ, ಲೋಕದೊಳಾ") ಅವಳಿಗೆ ಸೀತೆಗೆ ಒದಗಿದ್ದ ಅವಸ್ಥೆಯೇ ಬಂದೊದಗಿತ್ತು (ರಾವಣನು ಕದ್ದೊಯ್ದ ಸೀತೆಯ ಅವಸ್ಥೆ ಅವಳಿಗೊದಗಿತು). ಸುನಂದೆ 'ಉರಗಂ ಪಿಡಿದಂತೆ ಬೆದಂ" ಮೂರ್ಛೆ ಹೋದಳು.

ಸುನಂದೆ ಎಚ್ಚೆತ್ತಳು.ತರುವಾಯ ಅವಳಿಗೆ ತನ್ನ ಸ್ಥಿತಿಯ ಅರಿವಾಯಿತು. ತನ್ನ ದುರವಸ್ಥೆಯನ್ನು ತಿಳಿದು ಬಾಯಿಬಿಟ್ಟು ಹಲ ಬಿದಳು; ದುಃಖಿಸಿದಳು;ಕೂಗಿದಳು. 'ನಾಡ ಜನಕ್ಕೆ, ಧರೆ, ಗಿರಿ, ದಿಗ್ದೇವಿಯರಿಗೂ ಮೊರೆಯಿಟ್ಟಳು. ಅವಳ ಆಕ್ರಂದನ, ಮೊರೆ ವ್ಯರ್ಥವಾದವು. ಕೊನೆಗೆ ದ್ರೋಹಿ ಚಂಡಶಾಸನನ್ನತ್ತ ತಿರುಗಿ ಅವಳ ಎದೆ ಚುಚ್ಚುವ ಮಾತುಗಳಿಂದ ಮೂದಲಿಸಿದಳು. ಅವಳ ಮಾತುಗಳು ಚಂಡಶಾಸನನ ಕಿವಿಗೆ ಬಿದ್ದವೋ ಇಲ್ಲವೋ? ಅವನು ಯಾವ ಮಾತನ್ನೂ ಅರಿಯುವ ವ್ಯರ್ಥ ಸಾಹಸ ಮಾಡಲಿಲ್ಲ. ಸುನಂದೆ ತನ್ನನ್ನು ಒಲಿದು ಬಂದ ಸ್ತ್ರೀ ಅಲ್ಲ ಎಂಬುದನ್ನು ತಿಳಿದರೂ ಚಂಡಶಾಸನನಿಗೆ ಏನೇ ಅಳ ಮಾಡಲಿಲ್ಲ. ಕೌಮಾರ್ಯ ಚಂಡಶಾಸನ ಮಿತ್ರಧರ್ಮವನ್ನು ಮರೆತಿದ್ದ. ಸುನಂದೆ ತನ್ನ ಪ್ರಿಯ ಮಿತ್ರನ ಪತ್ನಿಸೋದರಿಯ ಸಮಾನ ಎಂಬುದನ್ನು ಮರೆತಿದ್ದ. ಅವನ ಮನದಲ್ಲಿ ಸ್ನೇಹ ಧರ್ಮಕ್ಕೆ ಮೋಹಾವೇಶಕ್ಕೂ ಕ್ಷಣಕಾಲವೂ ಹೋರಾಟ ನಡೆಯಲಿಲ್ಲ. ಹೀಗೆ ಚಂಡಶಾಸನ ಸುನಂದೆಯನ್ನು ಬಲಾತ್ಕಾರದಿಂದ ಕರೆದೊಯ್ಯುತ್ತಿದ್ದ. ಸಿಂಹ ಬೊಡ ವಸುಷೇಣನ ಗಡಿನಾಡ ಸಾಮಂತ. ಆ ಕಡುಗಲಿ ಸುನಂದೆಯ ಆತ್ಮ ಮೊರೆಯನ್ನು ಕೇಳಿ ಚಂಡಶಾಸನನನ್ನು ತಡೆಯುವನು. ಇಬ್ಬರಿಗೂ ಮಲ್ಲಯುದ್ಧ ನಡೆಯುತ್ತದೆ. ಚಂಡಶಾಸನ ಸಿಂಹ ಚೊಡಪ ಶಿರಸ್ಸನ್ನು ಛೇದಿಸುತ್ತಾನೆ. "ಗಾಳಿಗೆ ಗರಿ ಮೂಡಿದಂತೆ, ವನಕ್ಕೆ ಮದವೊಗೆದಂತೆ" ಪ್ರಯಾಣವನ್ನು ಮುಂದುವರಿಸಿ ಸುನಂದೆಯೊಂದಿಗೆ ತನ್ನ ಕೋಟೆಯನ್ನು ಸೇರಿಕೊಳ್ಳುತ್ತಾನೆ.

ಬೇಟೆಯನ್ನು ಮುಗಿಸಿಕೊಂಡು ವನಕ್ಕೆ ಹಿಂದಿರುಗಿದ ವಸುಷೇಣ "ಬಂದಳೆ ದೇವಿ? ಪಂಕ್ತಿಗೆಡೆಮಾಡಿಸಿದಪ್ಪಳೆ? ಚಂಡ ಶಾಸನಂ ಬಂದನೆ?" ಎಂದು ಸಂಡಾರವನ್ನು ಪ್ರಶ್ನಿಸುತ್ತಾನೆ. ಅದೇ ವೇಳೆಗೆ ಸುನಂದೆಯ ಸಖಿಯರು ಅಳುತ್ತಾ ಬರುತ್ತಾರೆ. ಒಬ್ಬಳು ನಡೆದ ಅಘಾತಕವನ್ನು ತಿಳಿಸುತ್ತಾಳೆ. ಈ ಸುದ್ದಿ ಕಿವಿಗೆ ಬಿದ್ದೂಡನೆಯೇ ವಸುಷೇಣನ ಮುಖ ಚರ್ಯೆಯೇ ಬದಲಾಗುತ್ತದೆ. ಮಿತ್ರನೆನಿಗಿದ ದ್ರೋಹವನ್ನು ಕೆನೆದು ಅವನ ರಕ್ತಕುದಿಯುತ್ತದೆ. ಪ್ರಾಣ ಮಿತ್ರ ಚಂಡಶಾಸನ ವಸುಷೇಣನಿಗೆ ಪರಮ ಶತ್ರುವಾಗುತ್ತಾನೆ. ರೋಷ ಮತ್ತು ವ್ಯಥೆಗಳಿಂದ ವಸುಷೇಣ ತನಗೆ ಶತ್ರುವಾದ ಹುಟ್ಟಡಗಿಸಿ ಪ್ರಿಯತಮೆಯನ್ನು ಬಿಡಿಸಿ ತರುವ ವರೆಗೆ ಊಟವೂ ಬೇಡ ಎಂದು ನಿರ್ಧರಿಸುತ್ತಾನೆ. ಮಂತ್ರಾಲೋಚನೆಗೆ ಸಹ ಅವನ ಮನಸ್ಸು ಒಪ್ಪಲಿಲ್ಲ. "ಮುಂದನಾರಯ್ದುದೆ, ಪಿಂದಣಾರದೆ" ಅ ವನದಿಂದಲೇ ಸೈನ್ಯದೊಂದಿಗೆ ಹೊರಟು ಚಂಡಶಾಸನನ ಕೋಟೆಗೆ ಮುತ್ತಿಗೆ ಹಾಕುತ್ತಾನೆ. ದುರ್ಗದ ಪ್ರಜೆಗಳು "ಪರವೆಣ್ಣಂ ತಂದನೋ ತಂದನೆಂ ಪೆಗರ್ದಿದಪೆವೋರಿಯಂ" ಎಂದು ಒರಲುತ್ತಾರೆ. ಎರಡು ಸಡೆಗಳಿಗೂ ದಿನವೂ ಘೋರ ಕಾಳಗ ನಡೆಯುತ್ತದೆ.

ಸಂಜೆಯಾದ ಕಾರಣ ಯುದ್ಧ ನಿಲ್ಲುತ್ತದೆ. ಚಂಡಶಾಸನ ಸರ್ವಾಲಂಕಾರ

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಸಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ಶಿಂಡಿತಿನಸ ಪಾಕೀಯಗಳಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ನಿಕಷಪಾತ್ರ ಹೊಟೆಲ್.

ನವಯುಗ

ಫೋನ್ 226

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೩೩	೧೮—೪—೧೯೬೮	No. 33

ಪಕ್ಷಾಂತರ ಸಂಜೀವಿನಿ

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗೆ ಮೊದಲೂ ಪಕ್ಷಾಂತರ ಮರಕೋತಿ ಆಟವಾಡುತಿದ್ದ ಕೆಲವು ರಾಜಕೀಯ ಪುಡಾರಿಗಳಿದ್ದರು. ಆದರೆ, ಕಳೆದೊಂದು ವರ್ಷದಿಂದ ಈ ಆಟ ಖಚಿತವಾಗಿ ಬಿಟ್ಟಿದೆ. ಲೋಕಸಭೆಯ ತಿಲಕರ ಕಾಲದಲ್ಲಿ ಒಬ್ಬನಿದ್ದನಂತೆ—ಅತನಿಗೆ ಮತಾಂತರದ ಪಿತ್ಕಾಮಲೆ ಅಂಟಿತ್ತಂತೆ. ಪೂರ್ವಾಹ್ನ ಹಿಂದೂ, ಮಧ್ಯಾಹ್ನ ಮುಸ್ಲಿಂ ರಾತ್ರಿಗೆ ಕ್ರೈಸ್ತ ಹೀಗೆ ನೂರು ಬಗೆಯ ಮತಾಂತರ. ಇದೇ ಸುಟ್ಟಕ್ಕೆ ನಮ್ಮ ದೇಶದಲ್ಲಿ ಪಕ್ಷಾಂತರ ಕೇಳಿಲೆ ಇಂದು. ಹರಡಿದೆ ಇದರಿಂದಾಗಿ ಯಾರಿಗೂ ಯಾವ ಒಳಿತೂ ಆಗಿಲ್ಲವೆಂಬುದಕ್ಕೆ ಪ್ರತ್ಯಕ್ಷವೇ ಪ್ರಮಾಣ. ಒಂದು ಸ್ಥಿರ ಸರಕಾರ ರಚನೆಗೆ ಇದರಿಂದ ಮುಟ್ಟುಗೋಲು. ಈ ರೋಗದ ಜಾಡಳ ಮಿತಿಮೀರಿದುದರಿಂದಲೇ ಉತ್ತರ ಭಾರತದ ಹಚ್ಚೆಳ ರಾಜ್ಯದ ರಾಜಕೀಯ ಪರಿಸ್ಥಿತಿ ದಾರುಣವಾಗಿದೆ- ಪ್ರಜಾಪ್ರಭುತ್ವದ ಕಗ್ಗೊಲೆಗೂ ಈ ಪಿಡುಗು ನಾಂದಿಯಾಗಿದೆ.

ಇದನ್ನು ದೇಶದ ರಾಜಕೀಯ ಸ್ಥಿರತೆಗೆ ಮಾರಕವೆಂದು ದೇಶಹಿತ ಚಿಂತಕರು ಕರೆಯುತ್ತಲೇ ಇದ್ದರು. ವಾಯು ವೇಗದಲ್ಲಿ ಹರಡಿ ಬೀಸಿದ ಈ ಅಗ್ನಿಗೆ ಒಂದೊಂದೇ ಸರಕಾರಗಳು ಆಹುತಿಯಾದಾಗ, ರಾಜಕೀಯ ಸ್ಥಿತ್ಯಂತರದಿಂದ ಅಶಾಂತಿ ಹರಡಿದಾಗ, ಅಧಿಕಾರ ಕಾಂಕ್ಷಿಗಳು ತಮ್ಮ ಡಾಳ ಉರುಳಿಸಲೆತ್ನಿಸಿದಾಗ, ಪ್ರಜಾಪ್ರಭುತ್ವಕ್ಕೆ ಮಾರಕವಾದ ಈ ಪಕ್ಷಾಂತರವನ್ನು ತಡೆಗಟ್ಟುವ ಮಾತನ್ನು ಹಲವು ಮೇಧಾವಿಗಳು ಆಡತೊಡಗಿದರು. ಹಂಸಣ, ಸಂಜಾಬು, ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮಧ್ಯ ಪ್ರದೇಶಗಳಲ್ಲಿ ಮಂತ್ರಿ ಪದವಿಯ ಒರಗು ದಿಂಬಿನೊರಗುವ ಮಹಾದಾಶೆಯಿಂದ ಪಕ್ಷಾಂತರ ಇಂಜೆಕ್ಷನ್ ಚುಚ್ಚಿಸಿಕೊಂಡವರು—ಪ್ರತ್ಯಕ್ಷವಾಗಿ, ಪರೋಕ್ಷವಾಗಿ—ಎಷ್ಟು ಮಂದಿ? ಪಕ್ಷದ ಬೇಲಿಯನ್ನು ಹಾಂ ಬಂದರೆ, ನಗದು ಬಹುಮಾನ ಬೇರೆ, ಪುದ್ದ—ಸಂಬಳ ಬೇರೆ—ಹೀಗೆ ಎಂಡೂ ಕೈಗಳಲ್ಲಿ ಹೂಮಾಲೆ ಹಿಡಿದು ಸ್ವಾಗತಿಸಲು ಹಸನ್ಮುಖಿ ...ಗಿ ನಿಂತಿರುವ ಭಾಗ್ಯಲಕ್ಷ್ಮಿಯನ್ನು ನಿರಂತರ ಗೊಳಿಸುವ ಸ್ಥಿತಪ್ರಜ್ಞರು ಯಾರು? ಎತ್ತಿ ಸ್ಥರಂತೆ ಎಳ ಎತ್ತೀಪ್ರತಿಷ್ಠರಂಗಿಯೇ ಇರಬೇಕೆಂದು ಆದೇಶ ನೀಡುವ ಅಧಿಕಾರ ಪ್ರಜಾಸತ್ತೆಯ ಮೂಲಕ್ಕೇನೇ ಮಾರಕ. ಅಭಿಪ್ರಾಯ ಭೇದ ಪ್ರಜಾಸತ್ತೆದುಲ್ಲಿ ಸ್ವಾಭಾವಿಕ. ಮೇನಕೆಯನ್ನು ಕಂಡ ವಿಶ್ವಾಮಿತ್ರ ತಪೋ ಲಕ್ಷ್ಯವನ್ನು ತ್ಯಜಿಸಿ ಆಕೆಯನ್ನೆತ್ತಿಕೊಂಡ; ಮುಂದೆ ಅಲ್ಲೂ ಅಭಿಪ್ರಾಯ ಬದಲಾಗಿ ಮೇನಕೆಯನ್ನು ಪುತ್ರ ಸಮೇತ ಬಿಟ್ಟು ಮತ್ತೊಂದು ದಾರಿ ಹಿಡಿದ. ಇದು ದೌರ್ಬಲ್ಯವಲ್ಲ; ಮಾನವ ಸಹಜ ಪ್ರಕೃತಿ—ಇದನ್ನು ಗೆದ್ದುಕೊಂಡವ ಬರಿಯ ಪ್ರಜೆ—ಮಾನವನಲ್ಲ. ಅತ ದೇಶದ ನಿಷ್ಠಾವಂತ ಪ್ರಜೆ. ವಶಿಷ್ಠರಂತೆ, ಬ್ರಹ್ಮರ್ಷಿ, ರಾಮನಂತೆ ಅತಿಮಾನವ.

ಕೇಂದ್ರ ಗೃಹಶಾಖೆಗೆ ರಾಜ್ಯಗಳ ಅಭದ್ರ ರಾಜಕೀಯ ಪರಿಸ್ಥಿತಿಗಳಿಂದ ಪಿಡ್ಡೆಯಿಲ್ಲ; ತಲೆನೆಡಿತ ಬೇರೆ. ಕೇಂದ್ರದಲ್ಲಿಯೂ ಒಬ್ಬ ಚರಣಸಿಂಗ ಹುಟ್ಟಬಹುದೆ? ತನ್ನ ಕಪಿ ಸೇನೆಯೊಂದಿಗೆ ಬೇರೆಯಾಗುತ್ತಾನೆ; ಇಂದಿರಾ ಗಾಂಧಿ ಸಂಪುಟ ಉರುಳುತ್ತದೆ; ಕಾಂಗ್ರೆಸ್ಸು ಅಲ್ಪ ಮತೀಯ ಪಕ್ಷವಾಗುತ್ತದೆ ಎಂದ ಭವಿಷ್ಯವಾದಿಗಳೂ ಇದ್ದಾರೆ. ಪ್ಲವಂಗದಲ್ಲಿ ಈ ಪ್ಲವಂಗ ಕ್ರೀಡೆ ರಾಜ್ಯಗಳಿಗೆ ಮಾತ್ರ ಸೀಮಿತವಿತ್ತು; ಕೇಂದ್ರಕ್ಕೆ ಕಾದುನೋಡಬೇಕು. ಪ್ರಜಾಪ್ರಭುತ್ವವನ್ನು ಉಳಿಸುವ ಪ್ರಯತ್ನವನ್ನು ಗೃಹಶಾಖೆ ಖಾತೆ ಯೋಚಿಸಿತು. ಈ ಪ್ಲವಂಗ ಲಂಘನವನ್ನು ತಡೆಗಟ್ಟುವ ಬಗ್ಗೆ ಪರಿಶೀಲಿಸಿ ಒಂದು ವರದಿ ತಯಾರಿಸಿತು—ಪ್ರತಿನಿಧಿಗಳನ್ನು ಮತದಾರರು ಹಿಂದೆ ಕರೆದುಕೊಳ್ಳುವ ಹಕ್ಕು; ಮರಕೋತಿಗಳಿಗೆ ಅಧಿಕಾರಸ್ಥಾನ ನಿಷೇಧ, ಮಂತ್ರಿಮಂಡಳ ಗಾತ್ರದ ಮೇಲೆ ಮಿತಿ, ಪಕ್ಷಾಂತರಗೊಂಡವರು ತಮ್ಮ ಸಭಾ ಸ್ಥಾನಕ್ಕೆ ರಾಜೀನಾಮೆ ಕೊಳೆದುಕೊಂಡಂತಾಗುವುದು ಎಂದು ಮುಂತಾಗಿ ವರದಿ ಹೇಳುತ್ತದೆ. ಈ ಪ್ರತಿನಿಧಿ ಆಚಾರ ಸಂಹಿತೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ಗೋಲ ಮೇಜದಲ್ಲಿ ಚರ್ಚಿಸುವ ನಿರೀಕ್ಷೆಯಿದೆ. ರಾಜಕೀಯ ಪಕ್ಷಗಳಲ್ಲಿ ಈ ಆಚಾರ ಸಂಹಿತೆಯ ಬಗ್ಗೆ ಎಂಥಹ ಅಭಿಪ್ರಾಯ ಮೂಡುವುದೆಂದು ಈಗಲೇ ಹೇಳಬರುವಂತಿಲ್ಲ; ಪಕ್ಷಾಂತರ ರೋಗದಿಂದಲೇ ಕೆಲವು ಸರಕಾರಗಳು ಇಂದು ಅಧಿಕಾರದಲ್ಲಿವೆ ಯೆಂಬುದನ್ನು ಮರೆಯುವಂತಿಲ್ಲ. ಕೆಲವು ಪಕ್ಷಗಳೇ ಒಮ್ಮೆ ಒಂದು ಪಕ್ಷಕ್ಕೆ, ಇನ್ನೊಮ್ಮೆ ಇನ್ನೊಂದು ಪಕ್ಷಕ್ಕೆ ಬೆಂಬಲ ಕೊಡಿ 'ಸರಕಾರಾಂತರ'ಗೊಳ್ಳಲೂ ಸಾಧ್ಯವಿದೆ. ಇದಕ್ಕೆ ಪ್ರತ್ಯೇಕ ಸಂಹಿತೆಯ ತಯಾರಿಯಾಗಬೇಕೆ? ಮತ್ತು ಒಂದು ಸಂಗತಿ. ನಮ್ಮ ದೇಶದ ಸಂವಿಧಾನವು ವ್ಯಕ್ತಿಯು ಸ್ವತಂತ್ರವಾಗಿಯೂ ಶಾಸನ ಸಭೆ-ಸಂಸ್ಥೆಗಳಿಗೆ ಸ್ಪರ್ಧಿಸುವ ಅಧಿಕಾರವನ್ನೇ ನೀಡಿದೆ. ಹಾಗಿರುವಾಗ ಚಪಲಚಿತ್ತದ ಕಪಿಗಳು ಯಾವುದೇ ಪಕ್ಷದ ಬಂಧನಕ್ಕೆ ಒಳಗಾಗದೆ, ಸರ್ವತಂತ್ರ ಸ್ವತಂತ್ರರು ಯೇ ಸಂಸ್ಥೆ ಗೆದ್ದು ಬಂದು ತಮ್ಮ ಮರಕೋತಿ ಕೂಟವನ್ನು ಯಾಕೆ ಆಡಬಾರದು? ನಿಯಮ ನಿಷ್ಠೆ ಬಿಟ್ಟವರನ್ನು ನಿಯಮಾವಳಿಯು ಏನೂ ಮಾಡದು ಶೀಲ ಸಂವರ್ಧನೆಯು ಮನೋಧರ್ಮ ಬೆಳೆಯದೆ ಯಾವುದೇ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ; ಬಲಿಷ್ಠವಾಗುವುದಿಲ್ಲ. ಆಚಾರ ಸಂಹಿತೆಯೊಂದು ಆಭಾಸ ಮಾತ್ರ ಭಾಸವಾದೀತು.

ಮದ್ರಾಸದ ಚೆಳುವಳಿಗಾರರು

ಮದ್ರಾಸು ಯೂನೇ ತಮಿಳುನಾಡಿನ ಅಣ್ಣಾಧೀಮಂತ ವ್ಯಕ್ತಿ. ರೂಪಾಯಿಗೊಂದು ಪಲ್ಲ ಅಕ್ಕಿಯನ್ನು ಕೆಲವು ಪಡಿತರಗಳಲ್ಲಿ ನೀಡಿ ರಾಜ್ಯ ಸರಕಾರದ ಬೊಕ್ಕಸದಲ್ಲಿನ ಕೋಟಿಗಟ್ಟಲೆ ರೂಪಾಯಿ ದಾನಮಾಡಿದವರು. ದೇಶದಲ್ಲಿ ಕೆಲವು ಕಾಂಗ್ರೆಸ್ ಸರಕಾರಗಳೇ ಮದ್ಯಪಾನ ನಿಷೇಧವನ್ನು ಪಡಿಲು ಗೊಳಿಸಿವೆ; ಅಥವಾ ಕೆಟ್ಟು ಹಾಕಿವೆ. ನಾಲ್ಕನೆಯ ಅಖಿಲ ಭಾರತ ಮದ್ಯ ನಿರೋಧ ಸಮ್ಮೇಳನವನ್ನು ಉದ್ಘಾಟಿಸುತ್ತ ತಮ್ಮ ರಾಜ್ಯವು ನಿಷೇಧ ನೀತಿಯಿಂದ ಹಿಂದಡೆಯ ಡುವುದಿಲ್ಲವೆಂದು ಅಣ್ಣಾ ಡಣಾಡಂಗ ರವಂಗಿ ಸಾರಿದರು.

ಮದ್ರಾಸದ ಚೆಳುವಳಿಗಾರರು ಬರುತ್ತಾರಂತೆ... ಯಾವ ಅಣ್ಣಾಯ ಕಾದಿದೆಯೋ...'

ವಚನ ಸುಧೆ

ಸಾಜಸೋನ ಯೊತಿವೈರಂ
ಪರಹಿತಸರತೋ ವಿನಾಶಕಾಲೇಽಪಿ
ಪನ್ನೋಽಪಿ ಚಂದನತರುಃ;
ಸುರಯತಿ ಮುಖಂ ಕುಠಾರಸ್ಯ||

ಪರಹಿತ ಕಾರ್ಯದಲ್ಲಿ ಪರತನಾದ ಸಜ್ಜನನು ತನಾಶ ಕಾಲದಲ್ಲಿಯೂ ಯಾರನ್ನೂ ದ್ವೇಷಿಸುವುದಿಲ್ಲ. ಚಂದನ ಮರವು ತನ್ನ ಕಡಿಯುವ ಕೊಡಲಿಯ ಮುಖವನ್ನು ಪರಿಮಳಿಸುತ್ತದೆ

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನೆ ದಯಮಾಡಿ ಅದಷ್ಟು ತ್ವರೆಯಾ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟಕ್ಕೂ ಪತ್ರಿಕೆ ಬೇಡವೆಂದಿರುವವರು ಹಾಗೆಯೇ ನಮಗೆ ತಿಳಿಸಿ, ಈ ವರೆಗಿನ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾದಂತಾಗುವುದು.

ಅಂತೂ ಈ ತಿಂಗಳಾಂತ್ಯದ ಒಳಗೆ ಯಾವದೇ ಉತ್ತರವಿಲ್ಲದಿದ್ದರೆ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸುತ್ತೇವೆ. ಅದನ್ನು ಸ್ವೀಕರಿಸುವಂತೆ ವಿನಂತಿ.

ಮನೇಜರ್, ನವಯುಗ

ನರಸಣ್ಣನ ಕಂದ

'ಮದ್ರಾಸದಿಂದ ಮದ್ಯಪಾನ ನಿಷೇಧ ಚಳುವಳಿಗಾರರು

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಹಾರದ ವ್ಯವಸ್ಥೆಯಿದೆ;
ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR
Boarding & Lodging
Near Corporation Office, 9, Mission Road
Bangalore-2

ಮುಖಪತ್ರದಲ್ಲಿ
ಪ್ರಾಚೀನ ಶಿಲ್ಪ ಕಲೆಯ
ಒಂದು ಮಾದರಿ.

ಗೇಹರಾಜ್ಯದಲ್ಲಿ

ನರರ ಮೆಚ್ಚಿಸುವುದು ಬಲು ಕಷ್ಟ

"ಒಳ್ಳೆಯವ್ರು ಕೆಟ್ಟ ಕಾಲ ಇರೋದಿಲ್ಲ."

"ಹಾಗಲ್ವೆ, ಕೆಟ್ಟ ಕಾಲ ಯಾರೂ ಒಳ್ಳೆಯವ್ರಾಗಿರುವುದಿಲ್ಲ."

"ಊಹ್ಹೂಂ. ಒಳ್ಳೆಯವ್ರನ್ನ ಗವ್ವ ಪಡುವೆ ಉಳಿಸಿಕೊಳ್ಳೋಕೆ ಜನ ಭಾರೀ ಪುಣ್ಯ ಮಾಡಿರ್ಬೇಕು...."

"ಅಲ್ವೆ, ಒಳ್ಳೆಯವನಾಗಿದ್ರೂ ತಾನು ಒಳ್ಳೆಯವನೆಂದು ಹೇಳಿಕೊಳ್ಳೋಕಾದ್ರೂನೂ ಭಾರಿ ಪುಣ್ಯ ಮಾಡಿರ್ಬೇಕು...'

"ಅಯ್ಯಪ್ಪ, ಹೇಗೆ, ಏಕೆ? ಎಲ್ಲಿ"

"ಒಳ್ಳೇ ಪ್ರಶ್ನೆಯಾಯ್ತಲ್ಲ ಇದು."

"ಮತ್ತೆ ಹಾಗೆ ಬನ್ನಿ. ಒಂದೇ ನಾ ಹಂದಿರೋ ಮಾತನ್ನ ಗಪ್‌ಚುಪ್ ಅಂತ ಒಪ್ಪಿಕೊಂಡು ಹೆಪ್ಪಗಿರಿ. ಇಲ್ಲಾ, ನನ್ನ ಪ್ರಶ್ನೆಗೆ ಉತ್ತರ ಹೇಳಿ.... ಮತ್ತೆ ಬಾಯಿ ನಾಲಿಗೆ ಇದೇಂತ...."

"ಸಾಕೇ, ಸಾಕು ಮಾಡು. ಎಷ್ಟು ಮಾತಾಡೋದು?"

"ಅಲ್ರಿ, ಹೇಳ್ರಿ ನಾಲಿಗೆ ಕೊಟ್ಟಿದ್ದಾನೆ, ನನ್ನ ನಾಲಿಗೇಲಿ ನಾನು ಮಾತಾಡ್ತೀನಿ. ಫಿಂಗಂಟೇನು ಮುಳುಗುತ್ತೇಂತ...'

"ಹ್ಹೂಂ ಕಣೇ. ಗಂಟೆದ್ರಿ ತಾನೇ ಮುಳುಗೋದು? ಒಂದ್ಸೇಳೆ ಇತ್ತೂನ್ನು. ಮುಳುಗಿತೂನ್ನು. ಏನು ಗುಳ ಹೊಡೆಯೋದು?'

"ನೋಡಿ, ಈಗ ನನ್ನ ನಾಲಿಗೆ ಉದ್ದಾಂತಾದ್ರಿ ಮತ್ತೆ ಫೀವೇ ಮಾರು ಮಾರುದ್ದ ಅಡೋಕೆ ಆರಂಭ ಮಾಡಿದ್ರಿ. ಯಾರ ನಾಲಿಗೆ ಉದ್ದಾ?'

'ಹೂರದ್ದೇ ಇರ್ಲಿ...."

'ಹಾಗೆನ್ನಿ ಮತ್ತೆ. ಫಂದಲ್ಲಾಂತಲ್ಲ?"

"ಹೌದು ಹೌದು...'

"ಹೇಗೆ ಈ ದಿನ? ಏಕಾಂ ಗೆದ್ದೋ ಇಲ್ವಾ?"

'ಇಲ್ಲ...."

"ಮತ್ತಾರು ಗೆದ್ದಿರೋದು? ನೀ ವೇನು?"

"ಹ್ಹೂಂ...'

"ನೋಡ್ರೀಂತ್ರೆ....ನಾನು ಅಂದದ್ದನ್ನ ಹೌದೂಂತ ತಲೆಯಾಡ್ಸಿ ಒಪ್ಕೂಂಡು ಈಗ ಅಡಿಗೆ ಬಿದ್ರೂ ಮೂರು ಮೇಲೂಂತ....'

'ಅಲ್ವೇ, ಫೀನಂದದ್ದು ಏನೇ?'

"ಅದೂ ಮರ್ತು ಹೋಯ್ತೇನು? ಒಳ್ಳೆಯವ್ರು ಹೆಚ್ಚು ಕಾಲ ಇರೋದಿಲ್ಲ...."

"ಅದೇ ತಪ್ಪು ಅಂದನಲ್ಲ, ಹೆಚ್ಚ ಕಾಲ ಯಾರೂ ಒಳ್ಳೆಯವ್ರಾಗಿರೋದಿಲ್ಲ...."

"ಅಯ್ಯ, ಹ್ಹೂಂ...."

"ನೋಡೋಣ ಫಿನ್ನ ಶಥನವನ್ನು...."

"ನೋಡಿ, ಪ್ರಪಂಚದಲ್ಲಿ ಹಲವಾರು ಉದಾಹರಣೆಗಳು ಕಣ್ಣಿಗೆ ಕಂಡಿವೆ. ಆದಿ ಕಾಲದಿಂದ್ಲೂ ಹೀಗೇ ಅನ್ನಿ..."

"ಅಯ್ಯಪ್ಪ...'

"ನೋಡಿ, ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಕಾಡಿಗೆ ಹೋದ, ಪಡಬಾರದ ಸಂಕಟವನ್ನು ಅನುಭವಿಸಿದ. ಧರ್ಮರಾಯ ಪಟ್ಟ ಕಷ್ಟವನ್ನ ಯಾರು ಮರೆಯುಹುದು? ಹರಿಶ್ಚಂದ್ರ, ಶಿಬಿ ಚಕ್ರವರ್ತಿಗಳ ಕತೆ ಗೊತ್ತು ತಾನೆ? ಮತ್ತೆ ಏಸುಕ್ರಿಸ್ತ, ಸಾಕ್ರಟೀಸ್, ಶಂಕರ ಭಗವತ್ಪಾದ, ಲಿಂಕನ್, ಹೆಚ್ಚೇಕೆ, ನಮ್ಮ ಮಹಾತ್ಮಾ ಗಾಂಧಿ, ಜಾನ್ ಕೆನ್ನೆಡಿ, ನೆಹರು ಮತ್ತೀಗ ಮಾರ್ಟಿನ್ ಲೂಥರ್ ಕಿಂಗ್....'

"ಅದೆಲ್ಲಾ ಸರಿ. ಇವ್ರೆಲ್ಲಾ ಭಾರಿ ಒಳ್ಳೆಯವ್ರು....'

"ಅಲ್ಲವೇ ಮತ್ತೆ..."

'ಹ್ಹೂಂ. ಒಂದು ಕಾಲದಲ್ಲಿ ಭಾರಿ ಒಳ್ಳೆಯವರಾಗಿದ್ದರು. ಮತ್ತೆ ಕೆಟ್ಟವರಾಗ ತೊಡಗಿದ್ರು, ಅಂದ್ರೆ. ಯೂರೊಬ್ರೂ ಎಲ್ಲಾ ಕಾಲಕ್ಕೂ ಒಳ್ಳೆಯವರಾಗಿರೋದಿಲ್ಲ....'

"ಮತ್ತೂ ನಿಮ್ಮ ಹರವನ್ನ ಫೀವು ಬಿಡೋದಿಲ್ಲ.'

"ಇದು ಹಠ ಅಲ್ವೆ, ಇರೋ ಸತ್ಯ ಸಂಗತಿ."

"ಅಯ್ಯಪ್ಪ, ಹೀಗೆ ಹೇಳಿಕೊಳ್ಳೋಣ....'

"ನಿನ್ನ ಭಗವಾನ್ ರಾಮಚಂದ್ರನ ಪ್ರೇಗೆ ತೆಗೆದುಕೊಳ್ಳು. ಆತ ಯಾಕೆ ಕಾಡಿಗೆ ಹೋಗಬೇಕಾಯ್ತು? ನಿಜ; ಆತ ತನ್ನ ಧರ್ಮ ಪಾಲಿಸಿದ. ಸಂಕಟವನ್ನೂ ಧೈರ್ಯದಿಂದ ಇದಿರಿಸಿದ. ಆದರೆ, ರಾಮನ ವನವಾಸಕ್ಕೆ ಕಾರಣ?"

"ಮಲತಾಯಿ....'

'ಸರೀನ್ನು. ಮಲತಾಯಿ ಕಣ್ಣಿಗೆ ರಾಮ ಕೆಟ್ಟವನಾದ, ಮಗ ಭರತನಿಗೆ ರಾಜ್ಯ ದೊರೆಯಲಿರುವ ಈ ಆತಂಕ ಆಕೆಯ ಕಣ್ಣು ಕುಕ್ಕಿತು. ಅಂದರೆ, ರಾಮ ಆಕೆಯ ಮುಂದೆ ಬಹಳ ಕಾಲ ಒಳ್ಳೆಯವನಾಗಿ ಉಳಿಯಲಿಲ್ಲ....'

"ಹ್ಹೂಂ"

"ಮಹಾತ್ಮಾ ಯೇಸುವು ಕೆಟ್ಟವನೆನಿಸಿದ; ಶಿಲುಬೆಗೇರಿಸಲ್ಪಟ್ಟ....."

'ಹೌದು..."

"ಸಾಕ್ರಟೀಸನಿಗೆ, ಶಂಕರಾಚಾರ್ಯರಿಗೆ ವಿಷಪಾನ ಮಾಡಿಸಿದರು. ಲಿಂಕನ್, ಗಾಂಧಿ, ಕೆನೆಡಿ, ಕಿಂಗ್ ಇವರೆಲ್ಲ ಗುಂಡಿಗಾಹುತಿಯಾದರು. ಈ ಗುಂಡಿನ ಹಿಂದೆ ಈ ಮಹಾತ್ಮರ ಕೆಡುಕುವಿಕೆ ಅಡಗಿದೆ.'

"ಅಲ್ರಿ, ಮಹಾತ್ಮರಲ್ಲಿಯೂ ಕೆಡುಕು ಹೆಳುವುದು ಹೇಗೆ?'

"ಅವರು ಮಹಾತ್ಮರಾಗಿರೋದೇ ದೊಡ್ಡ ಕಲಂಕ."

'ಇದು ಒಳ್ಳೆ ತಮಾಶೆಯಾಯ್ತು.'

"ತಮಾಶೆಯಲ್ಲ, ಇದು ಸತ್ಯ ಸಂಗತಿ. ರಾಮನ ಮುಂದೆ ರಾವಣ ಫಿಂತ. ಧರ್ಮರಾಯನ ಮುಂದೆ ದುರ್ಯೋಧನ ಫಿಂತ. ಕತೆಗಳಲ್ಲಿ ಮಹಾತ್ಮರು ಗೆಲ್ಲುತ್ತಾರೆ; ವಾಸ್ತವ ಜಗತ್ತಿನಲ್ಲಿ ಅವರೇ ಸೋಲುತ್ತಾರೆ. ಅವರ ಸೋಲನ್ನು ಬಲಿದಾನ, ಅತ್ಯಾರ್ಪಣೆ ಎಂದು ನಾವು ಕರೆಯುತ್ತೇವೆ, ಅಷ್ಟೆ...."

"ಅಲ್ರಿ, ಇದೇನು ವಾದಾಂತ...'

"ವಾದ ಅಲ್ವೆ, ನೋಡು, ಲಂಚಾವತಾರ ನಾಟಕ ನೋಡ್ತಾರೆ— ದೊಡ್ಡ ದೊಡ್ಡ ಲಂಚಬೋರರು ತಮ್ಮ ಬುದ್ಧಿವಂತಿಕೆಗೆ ತಾವೇ ತಲೆದೂಗುತ್ತಾರೆ, ನಗುತ್ತಾರೆ. ನಾಡುಕಡೆ ದುರವಸ್ಥೆಗೆ ಮಮ್ಮಲನೆ ಮರುಗುತ್ತಾರೆ. ಆದರೆ, ತಮ್ಮ ವ್ಯವಹಾರದಲ್ಲಿ, ಏನು ಮಾಡುತ್ತಾರೆ?"

"ಹ್ಹೂಂ...."

'ನಿನೆಮಾದ ಪೆಥೆನೋಡು. ಪ್ರಥಮ ದರ್ಶನ—ಸುಲಭದಲ್ಲೇ ಕರಿನದಲ್ಲೇ ಪ್ರೇಮಾಂಕುರ— ಶಿವಪೂಜೆಯಲ್ಲಿ ಬೇರೆ ಕಡಿಗಳ ಪ್ರವೇಶ—ಕೊನೆಯಲ್ಲಿ ಕಲ್ಯಾಣಂ.... ಆದರೆ, ನಮ್ಮ ಯುವಕ—ಯುವತಿಯರೆಲ್ಲಾ, ನೋಡಿ ಆಫಂದಿಸುವ ಈ ಸಿನೆಮಾ ಮಾದರಿಯಲ್ಲೇ ಅನುಸರಿಸಿದರೆ ಮತಾಸಿತ್ವಗಳು ಸಾಲದ ಗುಂಡಿಗಳಿಯುವ ಪ್ರಮೇಯ ತಪ್ಪೀತು. ಆದರೆ ಯಾವ ತಂದೆತಾಯಿಯೂ ಈ ಬಗೆಯ ಸಲುಗೆ-ಮೆಚ್ಚುಗೆಮನ್ನು ನಮ್ಮ ದೇಶದಲ್ಲಂತೂ ಒಪ್ಪುವುದಿಲ್ಲ. ವಾಸ್ತವಿಕತೆ ಬೇರೆ, ತಾತ್ವಿಕತೆ ಬೇರೆ."

"ಹ್ಹೂಂ...."

"ಹಾಗೇನೇ ತಾತ್ವಿಕವಾಗಿ ಒಳ್ಳೆಯವರಾಗಿರುವವರು ಕಥೆಗಳಲ್ಲಿ ಮಾತ್ರ ಯಶಸ್ವಿಯಾಗುತ್ತಾರೆ. ನಿನೆಮಾ ಪ್ರಣಯಿಗಳು ಮಾತ್ರ ದಂಪತಿಗಳಾಗುತ್ತಾರೆ...."

"ಅದೂ ಈಗೀಗ ಮುರಿದು ಹೋಗ ತೊಡಗಿದೆ...."

"ಸರೀನ್ನು. ತಾತ್ವಿಕವಾಗಿ ನಿರ್ಮಾಣವಾಗುವ ನಾಟಕ—ನಿನೆಮಾ—ಕಾದಂಬರಿ ಕಥೆಗಳೆಲ್ಲ ದುರಂತವಾಗಿದ್ದರೇನೇ ಹೃದಯಂಗಮವೆನ್ನುವ, ತತ್ವವಾದಿಗಳೂ ಇದ್ದಾರೆ. ಹಾಗಾಗಿ ಹಾಗೆ. ಆದರೂ ಆ ಪ್ರಣಯಿಗಳೂ "ಬಲಿದಾನ" ಗೆಯ್ದು ಅಮರರಾಗುತ್ತಾರೇನು. ಇವರನ್ನು ಅನುಕರಿಸುವ ಪ್ರಣಯವಾದಿಗಳೂ ಕೆಲವಿದ್ದಾರೆನ್ನು."

"ಅಯ್ಯಪ್ಪ...."

'ಈ ವಾಸ್ತವಿಕ ಜಗತ್ತಿನಲ್ಲಿ ಎಲ್ಲರನ್ನೂ ಮೆಚ್ಚಿಸುವುದು ಹೆಚ್ಚತನ. ನೋಡು, ನಮ್ಮ ಹಾಸರು ಅಂದಿದ್ದಾರೆ—ಹರಿಯೇ ನಿನ್ನ ಮೆಚ್ಚಿಸಬಹುದು, ನರರ ಮೆಚ್ಚಿಸುವುದು ಬಲು ಕಷ್ಟ ಅಂತ...'

"ಹೌದೂನ್ನಿ....'

'ಹಾಗೇನೇ ಯೇಸು, ಸಾಕ್ರಟೀಸ್, ಶಂಕರ, ಲಿಂಕನ್, ಗಾಂಧಿ, ಕೆನೆಡಿಯವರ ಸಾಲಿಗೆ ಈಗ ಕಿಂಗೂ ಸೇರಿದ. ಇವರೆಲ್ಲರೂ ಒಳ್ಳೆಯವ್ರೆ. ಆದರೆಅವ್ರು ಎಲ್ರಿಗೂ ಎಲ್ಲ ಕಾಲದಲ್ಲಿಯೂ ಒಳ್ಳೆಯವರಾಗಿ ತೋರಲಿಲ್ಲ. ಹಾಗಾಗಿ ಅವಾಸ್ತವವ್ಯಕ್ತವನ್ನಸ್ಪ ಬೇಕಾಯ್ತು. ಅದುದಾಂದಲೇ ಅವರು ಅಮರರಾದರು.

'ಅಂದು ಸರೀನ್ನಿ. ನೋಡಿ ನೆಹರು ಕೂಡ ಹೆಚ್ಚ ಕಾಲ ಒಳ್ಳೆಯವರಾಗಿರ್ಲಿಲ್ಲ ಅಂದ್ರಿ....'

"ಅಲ್ಲವೇ ಮತ್ತೆ, ನೆಹರು ಕೊನೆಗಾಲಗಳು ಅವರು ಒಳ್ಳೆಯವರಲ್ಲವೆಂಬುದನ್ನು ತೋರಿಸಿ ಕೊಟ್ಟವು. ಚೀನೀಯರ ಆಕ್ರಮಣದಿಂದ ಅವರ ಧೃತಿ ತತ್ತರಿಸಿತು. ಒರ್ವ ಶಸ್ತ್ರವು ತನ್ನ ಮೇಲೆ ಗುಂಡೆಸೆದರೆ ಯಾರೂ ನೋಯುವುದಿಲ್ಲ; ತನ್ನ ಮಿತ್ರನೇತನಗೆ ಅಪಚಾರವೆಗುವಾಗ ಯಾರಿಗಾದರೂ ಎದೆಯೊಡೆಯುದಿದ್ದೀತೆ? ಅದೇ ನೇಳೆ ದೇಶದೊಳಗೂ ಅವರು ಜನ ಮನ್ನಣೆಗೆ ಎರವಾಗಿ ತೆಂಡಗಿದರು. ಮೃತ್ಯು ಮುಖರಾದ ಮೇಲಂತೂ ಈಗಿನ ನನ್ನೆಲ್ಲ ಸಂಕಟಗಳಿಗೂ ನೆಹರೂರವರೇ ಕಾರಣವೆಂದು ಹೇಳತೊಡಗಿದ್ದೇವೆ..."

"ನರರ ಮೆಚ್ಚಿಸುವುದು ಬಲುಕಷ್ಟ.."

"ಅದ್ದರಿಂದಲೇ ಕಿಂಗ್‌ರಮೇಲೂ ಬಿಳಿಯರಿಗೆ ರೇಗಿತು...."

"ಹ್ಹೂಂ...."

"ಈಗ ಹೇಳು ಯಾರು ಗೆದ್ರು...'

"ಗೆದ್ದವ್ರು? ಯಾರು? ನಾನು ಮತ್ತು ಫೀವು...."

"ಹ್ಹ ಹ್ಹ....ಹ್ಹ..."

—ಗೋರಾ.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ನಿಮ್ಮೂರಿಗೆ ಬರುವ ದಿನವನ್ನು ಕಾರೀಕನ್ನೂ ನಿರೀಕ್ಷಿಸಿರಿ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O.S. 320/1962 RLP 39/1966

ಎಚ್ಚಮ್ಮ ಶೆಡ್ತಿ—ಅರ್ಜಿದಾರಳು

Vs.

ಮುತ್ತಕ್ಕ ಶೆಡ್ತಿ ಕೂಡಾ— ಎದ್ರಿರು

6ನೇ ಎದ್ರಿ ನೇತ್ರಾವತಿ ಶೆಡ್ತಿ, D/o ಶಾಂತಮನೆ ಕೊರಂತೆ ಶೆಡ್ತಿ. 8ನೇ ಎದ್ರಿ ವಿಠಲ ಶೆಟ್ಟಿ. S/o ರುಕ್ಮಿಣಿ ಶೆಡ್ತಿ.

ನಂಬ್ರ 52ನೇ ಹೇರೂರು ಗ್ರಾಮ, ಉಡ್ಪಿ ತಾಲೂಕು.

ಅರ್ಜಿದಾರಳು 300ರ 15ನೇ ಎದ್ರಿರ ಸ್ತಿರಾಸ್ತಿಯನ್ನು ವಿಲಂ ಮಾಡುವ ಬಗ್ಗೆ ಹಾಜ್ಯ ಪಡಿಸಿದ ಇಸ್ತಿಹಾರಿನ ಶರತ್ತುಗಳನ್ನು ಸರ್ಕಾರಿಯವರೆ ಸದ್ರಿ ನಂಬ್ರವನ್ನು ತಾರೀಕು 4—6—1968ಕ್ಕೆ ಇಟ್ಟಿದೆ ಎಂದು ತಿಳಿಸೋಣಾಗಿದೆ.

ಪಿ. ರಾಮಚಂದ್ರ ರಾವ್, B. A. B. L.
ಎಡ್ವೋಕೇಟ್

ಉಡ್ಪಿ, 10—4—68

ಮರುಭೂಮಿಯಲ್ಲಿ ಬೆಳೆ

ನಿಸರ್ಗದೊಡನೆ ಹೋರಾಟ

ರಾಜಸ್ಥಾನ—ಗಾವುದ ಗಾವುದ ನಡೆದಂತೆಯೂ ಮರಳಂತಿ. ಇದೇಕೆ ಹೀಗೆ? ಹೆಚ್ಚು ಬೆಳೆ ಬೆಳೆಯಲು ಹುಲ್ಲುಗಾವಲನ್ನು ಮನುಷ್ಯಂತೆ ದನಗಳಿಂದ ಮೇಯಿಸಿದ ಮನುಷ್ಯಭೂಸಾರವನ್ನೇ ನಷ್ಟ ಮಾಡಿದ; ಶತ ಶತಮಾನಗಳಿಂದ ಗಾಳಿ-ನದಿಗಳ ಹೊಡೆತದಿಂದ ಭೂಮಿ ಕೊರೆದು ಸವೆದು ಹೋಯಿತು—ಇದು ಪರಿಣತರ ಅಂಬೋಣ.

ರಾಜಸ್ಥಾನದ ವಿಸ್ತೀರ್ಣ ಸಮರುಭೂಮಿ ಸಾವಿರ ಹೆಕ್ಟೇರು. ಇದರಲ್ಲಿ ಆರೂವರೆ ಸಾವಿರ ಹೆಕ್ಟೇರು ಬಂಜರು. ಕೃಷ್ಟೇತರ ಕೆಲಸಕ್ಕೆ ಉಪಯೋಗಿ. ಎಂಟೂವರೆ ಸಾವಿರ ಹೆಕ್ಟೇರು ಬೇರೆ ಬೇರೆ ಬಗೆಯ ಬೇಸಾಯಕ್ಕೆ ಅಳವಟ್ಟಿದೆ. ನಾಲ್ಕೂವರೆ ಸಾವಿರ ಹೆಕ್ಟೇರು ಬೀಳು ಭೂಮಿ. ಇಂದು ರಾಜಸ್ಥಾನದಲ್ಲಿ ಬೇಸಾಯಕ್ಕೆ ಒಳಪಟ್ಟ ಪ್ರದೇಶ ಹದಿನಾಲ್ಕೂವರೆ ಸಾವಿರ ಹೆಕ್ಟೇರು ಮಾತ್ರ; ಅಂದರೆ, ಒಟ್ಟು ಭೂಮಿಯ ಸೇ. ೪೧ ಭಾಗ.

ಮರುಭೂಮಿಯನ್ನು ಸಾಗುಭೂಮಿ ಮಾಡುವುದು ಸಾಧ್ಯ. ಇದಕ್ಕಾಗಿ ಮರಳು ಹೆಟ್ಟದಂತೆ ತಡೆಗಟ್ಟಬೇಕು; ಮರಳು ದಿನ್ನೆಗಳನ್ನು ಸ್ಥಿರೀಕರಿಸಬೇಕು. ರಾಜಸ್ಥಾನದ ಮರುಭೂಮಿಯನ್ನು ಕೃಷಿಯೋಗ್ಯ ಮಾಡುವ ಹೊಣೆ ಬಂಜರು ಭೂಮಿ ಬಳಕೆ ಸಂಶೋಧನಾ ಸಂಸ್ಥೆಯದ್ದು; ಇದು ೧೯೫೯ರಲ್ಲಿ ಸ್ಥಾಪನೆಯಾಯಿತು.

ಈ ಸಂಸ್ಥೆಯನ್ನು ಎರಡು ಉದ್ದೇಶಗಳಿಂದ ರಚಿತವಾಯಿತು: ಗಾಳಿಯಿಂದಾಗುವ ಭೂ ಸವೆತವನ್ನು ತಡೆಯ ಮಾಡುವ ವಿಧಾನಗಳನ್ನು ಕಂಡು ಹಿಡಿಯುವುದು, ಅರಿಬೀಳು ಭೂಮಿಯಲ್ಲಿ ಬಿದ್ದ ನೀರನ್ನು ಬಳಸಿ ಬೆಳೆ ತೆಗೆಯಲು ಮತ್ತು ಕಾಡು ಬೆಳೆಸಲು ಕ್ರಮಗಳನ್ನು ಸೂಚಿಸುವುದು.

ಜೀವಿ ಪರಿಸ್ಥಿತಿ ಶಾಸ್ತ್ರ, ಜಲಶಾಸ್ತ್ರ, ಗಣಿಶಾಸ್ತ್ರ, ಭೂಸಾರ ಶಾಸ್ತ್ರ, ಹವಾಮಾನ ಶಾಸ್ತ್ರಗಳ ದೃಷ್ಟಿಯಿಂದ ಈ ಸಂಸ್ಥೆಯು ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಸಮೀಕ್ಷೆ ಕೈಕೊಂಡಿದೆ. ಇಲ್ಲಿ ಹಲವಾರು ಸಮುದಾಯ ಅಭಿವೃದ್ಧಿ ಕ್ಷೇತ್ರಗಳ ಸಮೀಕ್ಷೆ ನಡೆಸಿ ಭೂ ಸುಧಾರಣೆಯ ಯೋಜನೆಯನ್ನು ತಯಾರಿಸಿ ಕೊಟ್ಟಿದೆ. ಭೂಸಾರ ರಕ್ಷಣೆಯ ಕಾರ್ಯಯೋಜನೆಯ ವಿಶೇಷ ಸಮೀಕ್ಷೆಗಳನ್ನೂ ಕೈಕೊಳ್ಳಲಾಗಿದೆ.

ಅರಣ್ಯಗಳನ್ನು ಬೆಳೆಸುವುದು, ಮರುಭೂಮಿಯಲ್ಲಿ ಬೇಸಾಯ, ಸಾಗುಮಾಡಿದ ಹುಲ್ಲುಗಾವಲು— ಬಯಲುಗಳ ರಕ್ಷಣೆ, ಭೂಸಾರ ರಕ್ಷಣೆ ಮುಂತಾದವುಗಳ ಮೇಲೆ ಸಂಶೋಧನೆಗಳು ಈಗ ನಡೆಯುತ್ತಿವೆ. ಬೇರೆ ಬೇರೆ ದೇಶಗಳಿಂದ ಸಮಾನ ಗುಣದಲ್ಲಿ ಬಳೆಯುವ ಗಿಡ—ಮರಗಳನ್ನು ತಂದು ನಾಟಲಾಗಿದೆ. ಇವುಗಳಲ್ಲಿ ಕೆಲವು ಆಶಾದಾಯಕವಾಗಿ ಬೆಳೆದಿದ್ದು, ಈ ಮರ—ಗಿಡಗಳನ್ನು ನಾಟಲು ಅನುಕೂಲತೆಯೊದಗಿಸಲಾಗುತ್ತಿದೆ. ಸುಮಾರು ೮೦೦ ಹೆಕ್ಟೇರ್ ಪ್ರದೇಶದ ಉರುಳುವ ಉಸುಕಿನ ದಿನ್ನೆಗಳನ್ನು ಸಾಂದ್ರ ವೃಕ್ಷಾರೋಪಣದಿಂದ ಸ್ಥಿರೀಕರಿಸುವುದು ಸಾಧ್ಯವಾಗಿದೆ; ಇಲ್ಲಿನ ಗಿಡ ಗಂಟಿಗಳನ್ನು ಉರುವಲಿಗೆ, ಹಸಿರು ಜಾನುವಾರುಗಳಿಗೆ ಬಳಸಿಕೊಳ್ಳಲಾಗುತ್ತಿದೆ. ನೀರಾವರಿ ಪ್ರದೇಶಗಳಲ್ಲಿ ಬೆಳೆ ರಕ್ಷಣೆಗಾಗಿ ರಕ್ಷಣಾ ಪಟ್ಟಿಯನ್ನೂ ರಚಿಸಲಾಗುತ್ತಿದೆ.

ಮರುಭೂಮಿಯಲ್ಲಿ ಸೆಜ್ಜೆ, ಜೋಳ, ಕಡಲೆ, ಬಿಶಲ ಮುಂತಾದ ಬೇರೆ ಬೇರೆ ಬೆಳೆಗಳನ್ನು ಬೆಳೆಸಬಹುದು. ಐದು ಹೆಚ್ಚು ಇಳುವರಿ ಕೊಡುವ ಹುಲ್ಲು ಜಾತಿಗಳನ್ನು ಬೆಳೆ— ಹವೆಗಳಗನುಸಾರವಾಗಿ ಬೆಳೆಸಿ, ನೈಸರ್ಗಿಕ ಬೆಳೆಯ ಮರುಜೀವಂತ ಪಟ್ಟಿ ಹೆಚ್ಚು ಫಲ ಪಡೆಯಲಾಗುತ್ತಿದೆ.

ಸಂಚಾರಿ ಗುಡ್ಡಗಾಡು ಜನಾಂಗದವರು ಮರುಭೂಮಿಯ ಸಮಸ್ಯೆ. ಇವರ ಆರ್ಥಿಕ—ಸಾಮಾಜಿಕ ಸಮೀಕ್ಷೆಗಳನ್ನು ಕೈಕೊಂಡು ಅವರ ಪುನರ್ವಸತಿಯ ಬಗ್ಗೆ ಯೋಜನೆಗಳು ಸಿದ್ಧವಾಗಿವೆ.

ಧಾನ್ಯ ಭಕ್ಷಕ ಪ್ರಾಣಿಗಳ ಬಗ್ಗೆಯೂ ಅಭ್ಯಾಸ ನಡೆದಿದೆ; ಅವುಗಳ ಉಚ್ಚಾಟನೆಗಾಗಿ ರಾಸಾಯನಿಕ ಮತ್ತು ಯಾಂತ್ರಿಕ ಉಪಾಯಗಳು ವ್ಯವಸ್ಥಿತವಾಗುತ್ತಿವೆ. ಮರು ಭೂಮಿಯ ಪಂಸರದಲ್ಲಿ ಕೂರಿ ಸಾಕಣೆಯ ಬಗ್ಗೆಯೂ ಅಧ್ಯಯನ ನಡೆಯುತ್ತಿದೆ.

ಮರುಭೂಮಿ ಅಭಿವೃದ್ಧಿ ಮಂಡಳಿಯು ರಾಜ್ಯ ಸರಕಾರಗಳ ಸಹಕಾರದಿಂದ ಶ್ರೀ ನಿಜಲಿಂಗಪ್ಪನವರೆ, ಜೀವನದಲ್ಲಿ

ಹೆಂಡತಿಯಿಂದ ಸ್ಫೂರ್ತಿ

ನಾನು ಶ್ರೀಮಂತನು ದೇವರೆಂದು ತಿಳಿಯುತ್ತೇನೆ. ಏಕೆಂದರೆ ಏನು ಈಗ ಮಹಾನ್ ಭಕ್ತ ಬಸವೇಶ್ವರ ಅಲ್ಲದೆ ಮಹಾತ್ಮ ಗಾಂಧೀಜಿಯವರು ದೇವರ ಸ್ಥಾನವನ್ನು ಪಡೆದಿದ್ದಾರೆಯೋ, ಆ ಸ್ಥಾನಗಳನ್ನು ಪಡೆಯಲು ಕಾರಣರಾದವರು ಅವರ ಹೆಂಡಂದಿರುಗಳು. ಒಂದು ವೇಳೆ ಅವರ ಹೆಂಡಂದಿರು ಪರವಾಗದಿದ್ದ ಪಕ್ಷದಲ್ಲಿ ಅದು ಸಾಧ್ಯವೇ ಇಲ್ಲ.

ನನ್ನ ದಾರಿಯಲ್ಲಿ ಪಸಿಗಿಂತ ಪತ್ನಿಯ ಸ್ಥಾನ ಹೆಚ್ಚಿನದು. ಆದ್ದರಿಂದ ಅವರ ಬಗ್ಗೆ ತಿಳಿಯ ಬಯಸುತ್ತೇನೆ. ಇದನ್ನು ಕೇಳಿ ನಿಮಗೆ ಆಶ್ಚರ್ಯವೆನಿಸಬಹುದು, ಆದರೆ ಸತ್ಯ. ನನ್ನ ಪತ್ನಿಯ ಪ್ರೇರಣೆ ಸ್ಫೂರ್ತಿಯಿಂದ ನಾನು ನಿಮ್ಮ ಮುಂದೆ, ನಿಮ್ಮ ಮತ್ತು ಮಾತೃಭೂಮಿಯ ಸೇವೆಗಾಗಿ ಮುಖ್ಯ ಮಂತ್ರಿಯ ಪದವಿಯಲ್ಲಿದ್ದೇನೆ.

ನನ್ನ ಈ ಪದವಿಗೆ ತಂದಂತಹ ಆ ದಿನವನ್ನು ಮರೆಯಲಾರೆ. ನನಗೆ ಮಾರ್ಗದರ್ಶನ ನೀಡಿದ ಆ ದಿನ ನನ್ನ ಜೀವನದಲ್ಲಿ ಪರ್ವದಿನ.

ನಾನು ಬಡಹರಿವಾರನಲ್ಲಿ ಜನ್ಮದೆತ್ತಿದ್ದೇನೆ. ಒಬ್ಬ ಸಾಮಾನ್ಯ ಪರೇಲನಾಗಿ ಜೀವನ ಸಾಗಿಸುತ್ತಿದ್ದೆ. ೧೯೯೧ನೇ ಡಿಸೆಂಬರ್ ೧೪ನೇ ಶಾಂತಿಕು ನನ್ನ ಜಿಲ್ಲೆಯಲ್ಲಿ ಸತ್ಯಾಗ್ರಹ ಆಂದೋಲನ ನಡೆಯುತ್ತಿತ್ತು. ಅದರಲ್ಲಿ ನಾನೂ ಭಾಗಗೊಂಡಿದ್ದೆ. ಆಂಗ್ಲ ಸರಕಾರ ಒಂದು ಆಜ್ಞೆಯನ್ನು ಆ ಸಮಯದಲ್ಲಿ ಹೊರಡಿಸಿತು— ಒಂದು ಗಂಟೆಯೊಳಗಾಗಿ ಎಲ್ಲರನ್ನೂ ಸೆರೆ ಹಿಡಿಯುವುದೆಂದು. ನಾನು ನನ್ನವಳ ಪತ್ರದ ಮೇಲೆ ವಿಷಯವನ್ನು ತಿಳಿಸಿದೆ.

'ಈ ದಿನ ನನ್ನ ಕೈಗಳಿಗೆ ಬೇಡಿ ಬೀಳುವುವು, ಇಲ್ಲಿಯವರೆವಿಗೆ ನೀನು ನನ್ನ ಮತ್ತು ಮಕ್ಕಳನ್ನು ಪಾಲಿಸಿದ್ದೀಯೆ, ನಾನು ಜೈಲಿಗೆ ಹೋದ ನಂತರ ನಿನಗೆ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಸುಖದಿಂದಿದ್ದವರು ಕಷ್ಟ ಬಂದರೆ ಸಹಿಸುವುದು ಕಷ್ಟ. ನಾನು ಜೈಲಿನಿಂದ ಹಿಂದಿರುಗಲು ಮೂರು-ನಾಲ್ಕು ವರ್ಷಗಳಾಗಬಹುದು" ಎಂದೆನು.

ಆದಕ್ಕೆ ನನ್ನವಳು ಧೈರ್ಯದಿಂದ ಉತ್ತರಿಸಿದಳು. 'ಇಷ್ಟುದಿನ ಸತ್ಯಾಗ್ರಹದಲ್ಲಿ ಭಾಗವಹಿಸಿ, ಈಗ ಜಯ ಬರುವ, ಸ್ವಾತಂತ್ರ್ಯ ಪಡೆಯುವ ಕಾಲದಲ್ಲಿ ಸತ್ಯಾಗ್ರಹವನ್ನು ತ್ಯಜಿಸುವುದೇ? ಇದಂತಹ ಮಾತು ಸತ್ಯಾಗ್ರಹದಲ್ಲಿ ಭಾಗವಹಿಸಿ ಸಫಲತೆಯನ್ನು ಪಡೆಯಲೇ ಬೇಕು" ಎಂದು ನನಗೆ ಸ್ಫೂರ್ತಿಯನ್ನು ನೀಡಿದಳು.

ನಾನು ಸಂತೋಷದಿಂದ ಜೈಲಿಗೆ ನಡೆದೆ. ಅಂತಹ ಸಮಯ ನನ್ನ ಜೀವನದಲ್ಲಿ ಆಗಾಗ್ಗೆ ಬಂದವು. ಅಂತಹ ಸಮಯದಲ್ಲಿ ನನಗೆ ಸ್ಫೂರ್ತಿಯನ್ನು ನೀಡಿದೆ, ಧೈರ್ಯವನ್ನು ಕೊಡಿದೆ. ನೀವಿಲ್ಲದೆ ನಾನು ಜೀವಿಸಲಾರೆ. ನೀವು ಸತ್ಯಾಗ್ರಹದಲ್ಲಿ ಸೇರಬೇಡಿ ಎಂದು ಕಣ್ಣೀರು ಸುರಿಸಿದ್ದರೆ, ನಾನು ಈ ದಿನ ನಿಮ್ಮ ಮುಂದೆ ಮುಖ್ಯಮಂತ್ರಿಯಾಗಿ ನಿಲ್ಲಲು ಸಾಧ್ಯವಾಗುತ್ತಿತ್ತೇ?

ನಾಮಾನ್ಯ ಪರೇಲನಾಗಿಯೇ ಇರಬೇಕಾಗಿತ್ತು. ನಮ್ಮ ಸ್ತ್ರೀಯರು ಶ್ರೇಷ್ಠರು, ವೀರರು, ಧೀರರು ಮತ್ತು ಬುದ್ಧಿವಂತರು; ಅಲ್ಲದೇ ಪುರುಷರಿಗೆ ಮಾರ್ಗದರ್ಶಕರು. "ಸ್ತ್ರೀಯ ಮಹತ್ವ ಹಿರಿದು".

(ಭಾರತ ವಾಡಯಿಂದ ಸಂಗ್ರಹ. ಕಳುಹಿಸಿದವರು: "ಮಲ್ಲಾರಿ.")

ಚುಟುಕಗಳು

೧

'ಭಾಷಾತೀತ ರಾಜ್ಯ'

"ಹಿಂದಿಗಂಧವಸಹ್ಯ"—"ಇಂಗ್ಲೀಷ್ ಹಟಾವೋ" |
"ಬೇಡದುದ ಹೊರಸಿದರೆ ಮತ್ತೆ ಘೇರಾವೋ" ||
ವ್ಯಾಜ್ಯವಿದು ಗೊಂದಲದ ಬೆಂಕಿ ಯೊಳಗಾಜ್ಯ |
ಇದು ನೋಡಿ ನಮ್ಮ ಭಾಷಾತೀತ ರಾಜ್ಯ ||

೨

ಪಂಥ...?

ಪಂಚಾಮೃತಿಯ ಚಂದ್ರಾವಣಿಗೆಂದು ನಿಂತ
ಕೆಂಚಣ್ಣ ಹೂಡಿದನು ಹೂವತೊಂದು ಪಂಥ ||
"ಮತ ನನಗೆ—ಹಿತ ನಿಮಗೆ—ಹೇಳ— ಗೋವಿಂದಾ !
ಊರಿಗೇನೊಂದನೂ ನಾ ಮಾಡೆನೆಂದು!! ||

—'ಕಪ್ಪಿತ್'

ನಿಮ್ಮ ಕೈಯಲ್ಲಿ ಉಳಿಯುವ ಕೊನೆಯ ರೂಪಾಯಿಯ ಬೆಲೆ ಬಲ್ಲಿರೆ ?

ರೂಪಾಯಿ ಒಂದಾದರೂ ಅದರ ಬೆಲೆ ಎಷ್ಟೋ ಪಾಲು ಮಿಗಿಲು. ತಿಂಗಳ ಉಳಿದ ದಿನಗಳ ಉದ್ದಕ್ಕೂ ಅದೊಂದೇ ರೂಪಾಯಿ ನಿಮ್ಮ ಪಾಲಿಗೆ ದೂರಕಿಸುವುದರಿಂದ ನೀವು ಸಹಜವಾಗಿ ಅದನ್ನು ಜಾಗ್ರತೆಯಾಗಿ ಬಳಸಲು ಇಚ್ಛಿಸುವಿರಿ, ಹಾಗೂ ಅದನ್ನು ಅತೀ ಹೆಚ್ಚಿನ ಉಪಯೋಗಕ್ಕಾಗಿ ವಿನಿಯೋಗಿಸುವಿರಿ. ಅಂದರೆ ಅದರ ಬೆಲೆ ಒಂದು ರೂಪಾಯಿಯಾಗಿರದೆ ಬಹಳಷ್ಟು ಪಾಲು ಹೆಚ್ಚಾಗಿ ತೋರುವುದು.

ಆದಾಯ ನಿಮ್ಮ ಕೈಗೆ ಸಿಂದ ದಿನದಿಂದಲೇ ನಿಮ್ಮ ಪ್ರತಿಯೊಂದು ರೂಪಾಯಿಯನ್ನು 'ಕೊನೆಯ ರೂಪಾಯಿ'ಯಾಗಿ ಯಾಕೆ ನೀವು ಮಾಡಲಾರಿರಿ? ಹಾಗೆ ಮಾಡಲು ತೀರಾ ಸರಳ ವಿಧಾನವಿದೆ. ಖರ್ಚಿನಲ್ಲಿ ಮಿತಿ, ವಿವೇಕಪೂರ್ಣ ಖರ್ಚು; ನೀವು ಜಾಗ್ರತೆಯಾಗಿ ಹೆಚ್ಚುಮಾಡುವ ಪ್ರತಿ ರೂಪಾಯಿಯು ಬೆಲೆ ಆ ಮೂಲಕ ಏರುವಂತಾಗುತ್ತದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು, ನಿಮ್ಮ ವರಮಾನದ ಕೊಂಚ ಭಾಗವನ್ನು ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬನ್ನಿರಿ.

FAITH OF ALL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಜೀವನ ಪರಿಚಯ

ಕಡಲ ಮಡಿಲಲ್ಲಿ

ಆರಬ್ಬಿ ಸಮುದ್ರ. ನಲಿಯುವ ಅಲೆಗಳು. ಕೆಂಪು ಹಾಗೂ ಹೊಂಬಣ್ಣದ ಕಿರಣಗಳು ಅಲೆಗಳನ್ನು ಮುತ್ತಿಡುತ್ತಿದ್ದವು. ಸೂರ್ಯ ಮುಳುಗಿ ಇನ್ನೂ ಹೆಚ್ಚು ಸಮಯವಾಗಿಲ್ಲ. ಕಡಲು ಶಾಂತವಾಗಿ ಮನಸೆಳೆಯುತ್ತಿತ್ತು. ಇದು ಕೇರಳದ ಕಡಲು ತೀರ; ಹೆಸರು ಕೋವಲಂ. ಕೇರಳದ ಜೆಲುವಿನ ತಾಣಗಳಲ್ಲಿ ಕೋವಲಂ ಮರೆಯಲಾರದ್ದು. ಜನರ ಮನಸೆಳೆಯುವ ಈ ಮನೋಹರ ಸಮುದ್ರತೀರ ತಿರುವನಂತಪುರದಲ್ಲಿದೆ. ಇಲ್ಲಿ ಸಮುದ್ರರಾಜ ಸಿಟ್ಟೇರಿ ಭೂಭಾಗವನ್ನು ಕಬಳಿಸಿದಂತೆ ಕಾಣುತ್ತಿದೆ. ನೋಡಲು ಚಿಕ್ಕ ಸರೋವರದಂತೆ ಕಂಡರೂ ಇದು ಸಮುದ್ರದ ಭಾಗವೇ. ಮರಳದಂಡೆಯಲ್ಲಿ ಗರಿಬಿಚ್ಚಿ ನಿಂತಿರುವ ತೆಂಗಿನಮರಗಳು ತಮ್ಮ ಸೋಗೆ ಕೈಗಳನ್ನು ಚಾಚಿ ಆತಿಥಿಗಳನ್ನು ಸ್ವಾಗತಿಸುವಂತೆ ಕಂಡರೆ ಇನ್ನೊಂದೆಡೆ ಬಲಿತು ಹಣ್ಣಾದ ಸೋಗೆಗಳನ್ನು ಹೊತ್ತ ತೆಂಗಿನಮರಗಳ ಸಾಲು, ಸೂರ್ಯನ ಅವಸಾನದ ಬಗ್ಗೆ ಶೋಕಸೂಚಕವಾಗಿ ತುಪಾಕಿಗಳನ್ನು ತಲೆಕೆಳಗೆ ಮಾಡಿ ಹಿಡಿದ ಸೈನಿಕರ ಸಾಲಿನಂತೆ ಕಾಣುತ್ತಿದ್ದುವು.

ಗಂಡಸರು, ಹೆಂಡಸರು, ತಮ್ಮ ಮಕ್ಕಳು ಮರಿಗಳೊಡನೆ ಬಟ್ಟೆಗಾದ ಬೇರೆ ಬೇರೆ ಭಾಗದಿಂದ ಬಂದು, ಸಂಜೆಯ ತಣ್ಣಗಿನಲ್ಲಿ ಸಮುದ್ರತೀರ ಸೌಂದರ್ಯದ ಗಮಿಡುಂಡು ತನ್ಮಯರಾಗಿ ತಮ್ಮ ದುಡಿತದ ಕಷ್ಟವನ್ನು ಮರೆತಿದ್ದರು. ಪ್ರಕೃತಿಯ ಸಂಸ್ಕೃತಿಸೂಚಕ ಅಭಿವ್ಯಾಯವಾದ ಕಡಲಗಾಳಿ ತಂಗಿಗೆ ಮಂಗಳನ್ನು ಅಲಿಂಗಿಸಿ ಬೀಸಿದರೆ ಸಂಜೆಯ ನೆಳ ಬೆಳಕು ಅಬ್ಬರದಿಂದ ಉಕ್ಕೆಡಾರುತ್ತಿರುವ ಅಲೆಗಳಲ್ಲಿ ಮಾಸಿ ಮಸುಕಾಗಿತ್ತು. ದಪ್ಪ ಮುಪ್ಪರಾದ ಬೆಸ್ತರು ತಮ್ಮ ದಿನದ ದುಡಿತಕ್ಕೆ ಸೊಂಟಕಟ್ಟಿ ಸಿದ್ಧರಾದುತ್ತಿದ್ದರು.

ಕಡಲೇ ಇವರಿಗೆ ಆಶ್ರಯ. ಕಡಲೇ ಇವರ ಜೀವನ ಸರ್ವಸ್ವ. "ಜನ ಮನ ಒಂದಂತೆ ಆನಂದಿಸಲಿ, ತೃಪ್ತರಾಗಲಿ, ಅದರೆ ಕಡಲ ಬೆಡಗಿನಲ್ಲಿ ತಲ್ಲೀನರಾಗಿ ಕ್ಷಣ ಹೊತ್ತು ಸುಮ್ಮನೆ ಕುಳಿತಿರಲಾರೆವು. ನಮ್ಮ ಕಟಮರಗಳು, ಸಿದ್ಧವಾಗಿವೆ. ಈಗಾಗಲೇ ಕಡಲಿಗೆ ಸಾಗಬೇಕು...."

"ನಾವು ಮೂವರುದಿನಬಿಟ್ಟುದಿನ ಕಡಲಿಗೆ ಸಾಗುತ್ತೇವೆ. ನಮ್ಮ ಕೆಲಸ ಗಂಟೆಗಳದ್ದು. ವಿಶ್ರಾಂತಿ — ವಿಹಾರ, ಊಟ, ವಿಷಾದ ಎಲ್ಲವೂ ಕಡಲ ಮಡಿಲಲ್ಲೇ. ಒಮ್ಮೆಮ್ಮೆ ನಾವು ಬೆವರಿಳಿಸಿ ದುಡಿದರೆ, ಅದಕ್ಕೆ ತಕ್ಕ ಪ್ರತಿಫಲ ಸಿಗುವುದಂತು. ಅದರೆ, ಅನೇಕಸಲ, ಪಿರಾಶೆಯೇ ನಮ್ಮ ದುಡಿಮೆಯ ಕೊಡುಗೆ. ಅದರೂ ನಾವು ಕಡಲಿಗೆ ಇಳಿದಾಗ ನಮ್ಮಲ್ಲಿ ಆಸೆಯ ಕಿರಣ ತಲೆ ಎತ್ತುತ್ತದೆ"

"ದೇವರೆ, ನಮಗೆ ಅನುಕೂಲವಾದ ಗಾಳಿಯನ್ನು ಅನುಗ್ರಹಿಸಿ ನಮ್ಮ ಕಟಮರಗಳು ಸುರಕ್ಷಿತವಾಗಿ ಕಡಲಿಗೆ ಹೋಗಿ ಬರಲಿ. ಆಳವಾದ ಕಡಲಿನಲ್ಲಿ ಸಾಗುವಾಗಲೂ ನಮ್ಮನ್ನು ಚಂಡಮಾರುತ ಪೀಡಿಸದಿರಲಿ. ನಮಗೆ ವಿಪುಲವಾದ ಮೀನಿನ ರಾಶಿ ದೊರೆಯಲಿ. ಆಳದ ಕಡಲಲ್ಲಿ ನಮಗೆ ಕೆಲಸದ ಘಂಟೆಗಳಲ್ಲ. ಹೆಚ್ಚು ದುಡಿಮೆಯೆಂದರೆ ಅದಕ್ಕೆ ಹೆಚ್ಚಿಗೆ ಕೂಲಿಯಿಲ್ಲ ನಮ್ಮ ಕೆಲಸದ ಆಳತೆ, ಸಮಯವನ್ನವಲಂಬಿಸಿಲ್ಲ. ಪ್ರತಿಫಲವೇ ಕೆಲಸದ ಆಳತೆ. ನಮಗೆ ಸಾಕಷ್ಟು ಮೀನು ಸಿಗದಿದ್ದರೆ ನಮ್ಮ ಕೆಲಸ ಮುಗಿದಿಲ್ಲ ಎಂದರ್ಥ. ನಮ್ಮ ಕೆಲಸಕ್ಕೆ ವಿಶ್ರಾಂತಿಯಿಲ್ಲ. ಅತಿ ಕಷ್ಟದ ಕೆಲಸ. ಪ್ರತಿಕ್ಷಣದಲ್ಲೂ ಅಪಾಯ ನಮ್ಮನ್ನು ಇಣಿಕಿ ನೋಡುತ್ತಿರುತ್ತದೆ"

"ಹಾಗಾದರೆ ಈ ಕೆಲಸಕ್ಕಾಗಿ ನೀನೇಕೆ ಸಾಯುವೆ? ಅಪಾಯವಿಲ್ಲದ ಕೆಲಸಗಳು ಎಷ್ಟೋ ಇವೆಯಲ್ಲವೆ!"

"ನಮಗೆ ನಮ್ಮ ಕೆಲಸದಲ್ಲಿರುವ ಸ್ವಾತಂತ್ರ್ಯ, ಸಂತೋಷವಲ್ಲ ಅಪಾಯಗಳನ್ನೆಲ್ಲಾ ಮರೆಯುವಂತೆ ಮಾಡುತ್ತವೆ. ನೀವು ಹೇಳಿದ ದೊರಕಿದರೆ, ನಮ್ಮನ್ನು ನಾವೇ ಮರೆಯುತ್ತೇವೆ. ನಮಗಾಗುವ ತೃಪ್ತಿ ಅಷ್ಟಿಷ್ಟಲ್ಲ. ಕೆಲಸವೇ ನಮ್ಮ ದೇವರು."

"ಇನ್ನು ದುಡಿಯುವುದು ಯಾರಿಗಾಗಿ"

"ನನಗಾಗಿ, ನನ್ನ ಚಿಕ್ಕ ಕುಟುಂಬಕ್ಕಾಗಿ; ನನ್ನ ಮುದ್ದು ಮಗಳು ನಾಳೆ ಇಲ್ಲಿ ನನ್ನಾಕೆಯೊಡನೆ ನನಗಾಗಿ ಬಾಯುತ್ತಿರುವಳು. ಕೆಲವು ಸಲ ಕಡಲಿನಲ್ಲಿ ವ್ಯಾಪಾರಿ ಹಡಗುಗಳು ಹಾಗೂ ದೊಡ್ಡ ದೋಣಿಗಳು ಇಮಗೆ ಸಿಗುವುದುಂಟು. ಅವುಗಳಿಂದ ಪ್ರಾವಿಕರು, ನಮ್ಮೆಡೆಗೆ ತಂಡಿತಿಂಡ ಸುಗಳನ್ನು ಒಮ್ಮೊಮ್ಮೆ ಪ್ರೀತಿಯಿಂದ ಎಸೆಯುತ್ತಾರೆ ನಾನು ಅವನ್ನು ಭದ್ರವಾಗಿ 'ಕಟಮರ' ದಲ್ಲಿರಿಸಿ, ನನ್ನ ಮುದ್ದು ಮಡದಿಗಾಗಿ ತರುತ್ತೇನೆ. ನನಗೆ ಒಬ್ಬಳೇ ಮಗಳು. ನಮ್ಮ ಮುದ್ದು ಸಾತಿ ಎಂದರೆ, ನಮ್ಮ ಕಣ್ಮಣಿ. ಅಂತಹ ಮಗುವನ್ನು ಪಡೆದ ನಾವು ಧನವಾಗಿಯೂ ಧನ್ಯರು. ಅವಳು ಸುಮ್ಮನೆ ಅಳುವುದಿಲ್ಲ. ತಂಟೆಮಾಡುವುದಿಲ್ಲ. ಯಾರೊಡನೆಯೂ ಜಗಳವಾಡುವುದಿಲ್ಲ. ನೆರೆಹೊರೆಯವರೆಂದರೆ ಅವಳಿಗೆ ತುಂಬಾ ಪ್ರೀತಿ."

"ಇಲ್ಲಿ ಮಲಗಿರುವವನಾರು?"

"ಅವನು ನನ್ನ ಗೆಳೆಯ. ಅವನಿಗೆ, ಆರು ಮಕ್ಕಳಿವೆ. ಎರಡು ಕಟಮರಗಳಿವೆ. ಆದರೂ, ಕಾಲಿಗೆಳೆದರೆ ತಲೆಗಿಲ್ಲ. ತಲೆಗೆಳೆದರೆ ಕಾಲಿಗಿಲ್ಲವೆಂಬಂದನಹ ಅವಸ್ಥೆ. ಮೊನ್ನೆ ಕಡಲಿಂದ ಬರುವಾಗ, ತಂದ ತಿಂಡಿ ತಿನಸುಗಳನ್ನು ಮಕ್ಕಳಿಗೆ ಕೊಡಹೋದಾಗ, ಮಕ್ಕಳು ಎಳೆದಾಡಿ, ಹೊಡೆದಾಡಿ, ತಿಂಡಿ ತಿನಸುಗಳನ್ನೆಲ್ಲಾ ತುಳಿದು ಮಳಲಿನ ಪಾಲು ಮಾಡಿದರು. ಯಾರಿಗೂ ಏನೂ ಸಿಗಲಿಲ್ಲ."

"ಇನೇನನ್ನು ದಿಟ್ಟಿಸಿ ನೋಡುತ್ತಿರುವೆ?"

"ಏನಿಲ್ಲ ದಿನ ನಿತ್ಯದ ಸಂಜೆ, ಸೂರ್ಯ ಮುಳುಗುತ್ತಿದ್ದಾನೆ. ಈ ನೋಟ ಎನ್ನೆ ಇದ್ದಂತೆ ಇಂದಿಲ್ಲ. ಇಂದಿನಂತೆ ನಾಳೆ ಇರಲಾರದು" ಎಂದು ಆತ ಕಟಮರದ ಕೊಳೆಯಿಂದ ಎದ್ದು ನಿಂತು ಸೊಂಟಕ್ಕೆ ಬಟ್ಟೆ ಬಿಗಿದ.

"ಏನಿಷ್ಟು ಅವಸರ, ಕುಳಿತುಕೋ. ಸ್ವಲ್ಪ ಮಾತಾಡೋಣ"

"ಇಲ್ಲ. ಸೂರ್ಯ ಈಗಾಗಲೇ ಮುಳುಗಿ ಹೋಯಿತು, ನಾನು ಕಡಲಿಗೆ ಹೋಗಲು ಸಿದ್ಧನಾಗಬೇಕು. ನೀವೆಲ್ಲ ಹೆಂಡತಿಮಕ್ಕಳೊಡನೆ, ಉಂಡುತಿಂದು ನಕ್ಕು ಕುಲಿಯುತ್ತಿರುವಾಗ ನಾವು ಏಳುತ್ತಿರುವ ಅಲೆಗಳತ್ತ ಹಾದುಹೋಗುತ್ತಿರುವೆವು...

ಗಾಳಿ ಅನುಕೂಲವಾಗಿದ್ದರೆ ನಮ್ಮ ಅದೃಷ್ಟ ಒಳ್ಳೆಯದು. ಈ ರಾತ್ರಿ ನಾವು ಕಡಲಿಗೆ ಹೊಂಟರೆ, ಮರುದಿನ ಸಾಯಂಕಾಲವೇ ಹಿಂದೆ ಬರುವುದು."

ಆತನೇ ಅಲ್ಲ ಅವನಂತಹ ಅನೇಕ ಬೆಸ್ತರು ಕಡಲಿಗೆ ಹೊರಡಲು ಅವಸರದಲ್ಲಿದ್ದರು. ಆತನ ಹೆಂಡತಿ, ಬುತ್ತಿತಂದು ಕಟಮರದ ಮೂಲೆಯಲ್ಲಿ ಸಿದಾಗ, ಮುದ್ದು ಮಗು ಸಾತಿಯೂ ತಿಕಮು ಕಂಕಳಿಂದ ಹಾರಿ ತಂದೆಯ ತೋಳತೆಕ್ಕೆಯಲ್ಲಿದ್ದಳು. ತಂದೆಯ ಭುಜದ ಮೇಲೆ, ಕುಪ್ಪಳಿಸಿ, ಮಿರಾಯಿ, ತಾಬೇಕಂದು ಕಾಡಿದಳು. ಆತ ಮಗುವಿನ ಉಬ್ಬಿದ ಕೆನ್ನೆಗಳ ಮೇಲೆ ಮುತ್ತಿಟ್ಟು ಆಕೆಯನ್ನು ಚುಂಬಿಸಿ ಮಡದಿಗೆ ಒಪ್ಪಿಸಿದಾಗ, ಏರುತ್ತಿರುವ ತೆರೆಗಳನ್ನೇ ದಿಟ್ಟಿಸುತ್ತಿದ್ದಳು ಆಕೆ.

ಆತ ಕಟಮರವನ್ನು ಹೊತ್ತು ಕಡಲಿಗೆ ಇಳಿಸಿದ. ತನ್ನ ಸಂಗಾತಿಗಳೊಡನೆ, ಕಟಮರದ ಮೇಲೆ ಹಾಂ ಕುಳಿತು, ಕಡಲಿಗೆ ಸಾಗಿದ.

ಚಿಲ್ಲೆ ಚುಕ್ಕಾಣಿಗಳಿಂದ ಕಟಮರ ಅಲೆಗಳ ಮೂಲಕ ಸಾಗುತ್ತಿತ್ತು. ಉನ್ನತವಾದ ಅಲೆಗಳ ರಾಶಿಯನ್ನೇರಿ ತೇಲಿ ಇಳಿದು ಕಟಮರ ಸಾಗುತ್ತಿದ್ದಾಗ ಜೀವನ ವಿಳಿತಗಳ ಸಂಕೇತದಂತೆ ಕಾಣುತ್ತಿತ್ತು.

"ಅಪ್ಪ ಅಪ್ಪ"...ಎಂದು ಮಗು ಕೈಚಾಚಿ ಕರೆದರು, ಆತನ ಮಡದಿ ತನ್ನ ಕೈಗಳನ್ನು ಆಲೆ ಆಕುರಗಳಿಂದ ಬೀಸಿ, ತನ್ನ ಪತಿಗೆ ಶುಭಸೂಚಕ ಕೋರುತ್ತಿದ್ದಳು. ದಂಡ, ಬಲು ದೂರ ಕಡಲಲ್ಲಿ ಸಾಗಿ, ಸಂಜೆಯ ಮಬ್ಬಿನಲ್ಲಿ ಕಣ್ಮರೆಯಾದ ಮೇಲೆ, ಆಕೆ ತನ್ನ ಮುದ್ದು ಮಗುವನ್ನೆತ್ತಿ ಮುದ್ದಿಡುತ್ತ, ಮನೆಯ ಕಡೆಗೆ ಹೆಜ್ಜೆ ಇಟ್ಟಳು.

ಇನ್ನೂ ಆಕಾಶ ಗಂಡಿನ ಗಳೆಯ ಕಡಲ ಕಡಗ ದಿಟ್ಟಿಸಿ ನೋಡುತ್ತ ಮುತ್ತಿಗಾಗಿ ತನ್ನ ನಾಡಿಯನ್ನು ಕಾಯುತ್ತಿದ್ದ.

ಈ ಚಿಕ್ಕದಾದ ಚಲನ್ನ ಸಂಸಾರ ರಥವನ್ನು ನಿಯಂತ್ರಿಸುತ್ತಿದ್ದ ಬಸ್ತನ ಹೆಸರು ಲಾರೆನ್ಸ್.

ಆತನಿಗೆ ತನ್ನ ಮನೆಯೇ ದೇಗುಲ. ತನ್ನ ಏಕಮಾತ್ರ ಪುತ್ರಿಯೇ ಪಂಚಪ್ರಾಣ. ಮಗಳಿಗೆ ಕಳೆದ ಆದಿತ್ಯವಾರದ ಸಂಜೆಯಲ್ಲಿ ಕೊಂಡ ಲಂಡ, ಆಕೆಯನ್ನು ಇನ್ನಷ್ಟು ಮುದ್ದು, ಮುದ್ದಾಗಿಸಿತ್ತು. ತನ್ನ ಮಡದಿಗೆ, ರವಿಕೆ ತರುವುದಕ್ಕೆ ಆತ ಮರೆತಿದ್ದಿಷ್ಟೆ. ಅವನುಡಾಕಿದ ಬಲೆಯನ್ನು ಕೊಡಾ ಅವನುಕೊಂಡದ್ದು ಅದೇ ದಿನ.

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ಸ.)

ನಾನಾಗುವೆ ಗೀಜಗನ ಹಕ್ಕಿ

ಕವಿ: ಶ್ರೀ ನೇಗಿಲಯೋಗಿ.

ಪ್ರಕಾಶಕರು: ಜನಪದ ಸಾಹಿತ್ಯ ಅಕಾಡಮಿ, ಮೈಸೂರು.

ಪುಟಗಳು: ೮೬. ಬೆಲೆ: ಸಾಧಾರಣ ರೂ. ೨. ಕ್ಯಾಲಿಕೋ ರೂ. ೪. ೫೦.

ಸರಕಾರದಲ್ಲಿ ಉನ್ನತ ಅಧಿಕಾರದಲ್ಲಿರುವ ಶ್ರೀ ಎಚ್. ಎಲ್. ನಾಗೇ ಗೌಡರು 'ನೇಗಿಲಯೋಗಿ' ಕಾವ್ಯನಾಮದಿಂದ ಸಾಹಿತ್ಯ ರಂಗದಲ್ಲೂ ಕೃಷಿ ಮಾಡುತ್ತಿದ್ದಾರೆ. ತನ್ನ ವಿದ್ಯಾರ್ಥಿ ದೆಸೆಯಿಂದಲೂ ಕವಿತೆ ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ಅಂದಿನಿಂದಲೂ ಆಗಾಗ ಬರೆದ ಸುಮಾರು ಕವನಗಳ ಸಂಕಲನ "ನಾನಾಗುವೆ ಗೀಜಗನ ಹಕ್ಕಿ".

ಈ ಕವನ ಸಂಕಲನದಲ್ಲಿ ಸ್ವತಂತ್ರ ಕೃತಿಗಳೂ ಇವೆ. ಅನುವಾದಿತಗಳೂ ಇವೆ. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಬರೆದುವೂ ಇವೆ; ನೂತನವೂ ಇವೆ. ಸಾಹಿತ್ಯಕ ಭಾಷೆಯಲ್ಲಿ ಬರೆದುವೂ ಇವೆ, ಜಾನಪದಕ್ಕೆ ನಿಕಟವಾದುವೂ ಇವೆ. ಇದೇ ಬಗೆಯ ಅಂತರವನ್ನು ಕವನಗಳ ವಸ್ತು, ಶೈಲಿ, ಓಜಸ್ಸುಗಳಲ್ಲಿಯೂ ನಾವು ಕಾಣುತ್ತೇವೆ. ಕವಿಯೊಬ್ಬನ ಮೂವತ್ತೈದು ವರ್ಷಗಳ ಅನುಭವ, ಜೀವನ, ದೃಷ್ಟಿಗಳ ವಿಲಿಕಿತವನ್ನು ನಾವಿಲ್ಲಿ ಕಾಣಬಹುದು.

ಬಂಧನವೀ ಮಾನವನ ಬಾಳು
ಸ್ವಾತಂತ್ರ್ಯವೇ ಜೀವನದ ಮೇಲು!

ಎಂದು 'ಕ್ವಿಟ್ ಇಂಡಿಯಾ' ಚಳುವಳಿಗೆ ಹೊಡಲೇ ಹಾಡಿದ್ದಾರೆ (೧೯೩೬) ಕವಿ. ಇದಕ್ಕಾಗಿಯೇ ತಾನು ಗೀಜಗನ ಹಕ್ಕಿಯಾಗುವ ಹಂಬಲವಿಟ್ಟುಕೊಂಡಿದ್ದಾರೆ. 'ಬಾಳಿನಲಿ ಸುಳ್ಳಮೆಳ್ಳನೆ! ತೇಲಾಡಲಿರುವ | ಬೆಣ್ಣೆಮುದ್ದೆ ಬೆಳ್ಮಗಲ | ಕಲ್ಪನೆ ಮುಟ್ಟಿ | ಅನೆ ಕುದುರೆ ಒಂಟೆಗಳ ಮೇಲೇರಿ | ಓಡಂಡು ತಿದ್ದಿತು ಭವನದ | ಮೇಲ್ಬಿಟ್ಟೆಪ್ಪ ದಿಟ್ಟ || 'ಬಾಲ್ಯದ ನೆನಪಿ'ನಲ್ಲಿ ಈ ಕವಿ ಹೃದಯ, ಕವಿ ದೃಷ್ಟಿ ಹೂಂಬಿ ತಂಬಿರಾಡುತ್ತದೆ. 'ಕೈ ತೊಳದ, ಬಾಯೊರಸಿ, ಸುಳ್ಳಿಗೆ ಎಲೆ ಅಡಿಕೆ | ಅಗಿವೇವು ಅಗಿವೇವು | ಅಜ್ಜನ ಅನುಕರಣ ಮಾಡಿ || -ಅದೇ ರವಿಯ ಈ ಸಾಲುಗಳು ಎಂಬ್ಬಿಟಿಸುವ ಒಂದು ಸಹಜ ಸನ್ನಿವೇಶವನ್ನು ಬಿಂಬಿಸುತ್ತವೆ. ಇಲ್ಲಿನ 'ಸುಳ್ಳಿಗೆ' ಎಂಬ ಒಂದು ಪ್ರಯೋಗ ಈ ಸಹಜತೆಯ ಔಚಿತ್ಯವನ್ನು ಹೆಚ್ಚಿಸಿದೆ.

'ರೈತ' ಕವನದಲ್ಲಿನ ರೂಪಕಮಾಲೆ ಕವಿಯ ಪ್ರತಿಭೆಗೊಂದು ಪ್ರದರ್ಶನ. 'ಶರ್ಮ ನೇಗಿಲು, ತ್ಯಾಗಗಳೆ, ದೈವಭಕ್ತಿ ಈಚು, ಸುಖದುಃಖ ನೊಗದಕೊಳ್ಳಿ, ಸಹನೆ ಸತ್ಯ ಎತ್ತು, ಸ್ವಧರ್ಮ ಮೇಣಿ, ಬಾಳು ಭೂಮಿ—ಇದನ್ನು ಉಳುವವ ರೈತ! ಮನೋಜ್ಞವಾದ ಈ ಕಲ್ಪನೆ ಉನ್ನತ ಕವಿ ಹೃದಯಕ್ಕೊಂದು ಉದಾಹರಣೆ. "ಜಡವಾದ ಬೀಜವ ಬಿತ್ತಿ ಚೇತನದ ಬೆಳೆಯ ನೆತ್ತುವ ರೈತ"ನನ್ನು ಎರಡನೆ ಸೃಷ್ಟಿ ಕರ್ತ ಎಂದು ಕರೆಯುವುದಕ್ಕೂ ಕವಿ ಹಿಂಜರಿಯುವುದಿಲ್ಲ. 'ಸರ್ವ ಜಡ ಚೇತನ ವಸ್ತುವಿಗುಂಟು ಮಾನವಗಾಗುವ ನೋವೆ!' ಎಂಬ ವೈಜ್ಞಾನಿಕ ಸತ್ಯವನ್ನು ಅರಿತುಕೊಂಡ ಕವಿ (ಗುಲಾಬಿಯ ದೂರು) ಆರೆ ದಿನದ ಬಳಿಕದೂ ಪರಿಚಿತದಲ್ಲಿ ಅಳಿಯ ಬೇಕೆಂದು ಬಯಸುತ್ತಾರೆ. "ಸೌಂದರ್ಯಮನಾಸ್ವಾದಿಸಲು ಬೇಕು ತುಂಬು ಹೃದಯ, ಇಷ್ಟಿದರೆ ಎಲ್ಲವೂ ಅಶ್ವತ್ಥಮಿಲ್ಲದ ಬರಿ ಬೇಳೆಕಟ್ಟೆ" —ವಿಷಯ-ಉಪಮೆ ವಾಸ್ತವಿಕ. "ಮೂಡಲು ಮಿನಿಗಿತು" ರೂಪಕ ತತ್ವಕ್ಕೆ ಇನ್ನೊಂದು ಉದಾಹರಣೆ. "ಹುಚ್ಚಿಳ್ಳ ಕೂಡ ಮಾಡಿಸಿ ಎಣೆದವರೆ ನಿಡ ಉಡಿಸಿ ಜೋಳದ ಬಾಲೇರ ಮೇಲೆ ತೆನೆದೀಪ ಹೊಳಿ...." ಇಲ್ಲಿನ ಭಾಷೆ ವರ್ಣ್ಯ ಮೋಹಕವಾಗಿ ಸಾಗಿದೆ. 'ರಜಕ್ಕೆ ಬಂದ ಸಿವಾಯಿ'ಯಲ್ಲಿ ವ್ಯಂಗ್ಯ ಇಣಿಕಿ, ಹಾಕಿ ಕ್ಷಮೆ. ಶಿಶುಮ್ಮ, ಹೃದಯ ಒಟ್ಟಲು, ಪ್ರಕೃತಿ ವೆಣ್ಣು, ಹಗಲು, ನಲ್ಲ, ಮೊದಲಾದ ರೂಪಕಗಳು—ಪ್ರತಿಮೆಗಳನ್ನು ಕವಿ ಗಣಿಸಲಿಲ್ಲೇ ಬಳಸಿದ್ದರೆಂಬುದು ಉಲ್ಲೇಖಾರ್ಹ. ಈ ಕಾಲಕ್ಕೆ ಇಷ್ಟು ಪೆಚ್ಚಿದೆ ವಾಚಕರೂ ಕಂಡಿದ್ದ ಯಾವಾಗೆಗೆ ಕವಿಹೃದಯ ಪೋಗೂಟ್ಟಿತ್ತು ಎಂಬುದು ಮನವರಿಕೆಯಾಗುವುದು. 'ಪಾಣಿ ಯಲ್ಲಿ ಕನ್ನಡಿಗ' ಎಂಬ ಕವನದಲ್ಲಿ ಗಣಿಸಲ್ಪಟ್ಟ 'ನೇಗಿಲಯೋಗಿ' ಕಂಡುಕೊಂಡ ಸತ್ಯವನ್ನು ಮೂವತ್ತೈದು ವರ್ಷಗಳು ಗತಿಸಿದರೂ ನಮ್ಮ ಜನ ಅರ್ಥಮಾಡಿಕೊಂಡಿಲ್ಲವೆಂದರೆ, ಜಡಹೃದಯಕ್ಕೂ ಕವಿಹೃದಯಕ್ಕೂ ದೂರಂಷ್ಟಿದೆಯೆಂದು ತಿಳಿಯುತ್ತದೆ.

ಕನ್ನಡ ಲಿಪಿ ಕುಡಿಪೊಡೆವ ಹಬ್ಬ
ಬೆಳೆಯಬೇಕು;
ಕನ್ನಡವೆ ಎಮ್ಮ ನುಡಿಯಾಗಬೇಕು,
ಪರ ಇಂಗ್ಲೀಷು ದಾಡಿಯ ಹಾಲನು
ಣುವುದಬಿಟ್ಟು,
ಇನ್ನಿತರ ಭಾಷೆಗಳ ಸಲ್ಲದ ಮೋಹ
ವನು ಬಿಟ್ಟು
.....
ಕನ್ನಡ ಮರಾಠಿ ಹಿಂದಿ ತೆಲುಗು ತುಳು
ಮರಾಠಿ—ಈ ಭಾಷೆಗಳು ಎಲ್ಲ
ಆಕ್ಕತಂಗಿಯರೆಂಬುದನು ಕಿನ್ನು ಬಲ್ಲೆ
ಯಲ್ಲೆ

ಇಂತಿರಲು ಒಬ್ಬರ ಮೇಲೊಬ್ಬರು
ಎಸೆಯಲೇಕೆ ಮತ್ಸರದ ಬಿಲ್ಲ!
ಸಖ್ಯತೆಯ ಬಳಿನಲಿ
ಅಡಗಿರುವುದಲ್ಲವೆ ಸುಖದ ಬೆಲ್ಲ!
ತಂತಮ್ಮ ನಾಡಿನಲಿ ಬೆಳೆಯುವಿ ತೆನೆ
ಗೂಡಿ
ಭಾಷೆಯ ಬೆಳೆಯನು ಹುಲುಸಾಗಿ
ಎಲ್ಲ!
ತಮ್ಮಲಿಲ್ಲದುದ ತರಿಸಿಕೊಂಡುಂಡರೆ
ತನ್ನಮ್ಮ ನಾಡಿಗಾಗುವುದು ಏಳಿಗೆಯು
ಮೆಲ್ಲ.
ಇದ ನೋಡಿ ವಕ್ಕಳಿಗೆ ಮರುಗುತಿಹ
ಭಾರತಾಂಬೆ ಹಾಡಲೇ ಸಂತಸದ
ಸೆಲ್ಲ!
ಈ ಸಮತೆ ಬುದ್ಧಿ ಬರುವಂತೆ
ಮಾಡೆಟ್ಟೆ ರಾತ್ರಿಯೆಲ್ಲ!
ಚಿಂತಾಮಣಿಯಾಗಿ ಸಂತಸದಿ ಬಾಳುವೆನು
ನಾನೆಲ್ಲ!

'ನಾನಾಗುವೆ ಗೀಜಗನ ಹಕ್ಕಿ'ಯೆಂದು ಒಳ್ಳೆಯ ಕವನ ಸಂಕಲನ.

—ಗೋರಾ.

ಹೊಸ ಪ್ರಕಟಣೆಗಳು

ಫಲ ಜ್ಯೋತಿಷ ಸಾರ ಸಂಗ್ರಹ

ಲೇಖಕರು: ಶ್ರೀ ಕೆ. ವಿ. ಕೃಷ್ಣಪ್ಪ.

ಪ್ರಕಾಶಕರು: ಜ್ಯೋತಿಷ್ಯ ಸಂಶೋಧನಾ ಕೇಂದ್ರ, ಬೆಂಗಳೂರು-೧.

ಪುಟಗಳು: ೫೬. ಬೆಲೆ: ರೂ. ೧-೦೦.

ಕೀಲಕ ಸಂಪತ್ಕರದ

ಶ್ರೀ ಭೈರವೇಶ್ವರೀ ಪಂಚಾಂಗ

ಕರ್ತೃ: ಶ್ರೀ ವೇದ ಶಾಸ್ತ್ರಿ ಹೆಬ್ಬಾಳ.

ಪ್ರಕಾಶಕರು: ಆರ್ಯವೈಶ್ಯ ಸಂಘ, ರಂಗಂಪೇಟೆ, (ಕುರಬೂರ).

ಬೆಲೆ: ರೂ. ೧-೦೦.

ವಿಮರ್ಶೆ ಯಥಾವಕಾಶ.

ವಿಚಿತ್ರ ಸಾಧನೆ—

ಯಂತ್ರವೂ ಮನುಷ್ಯರಂತೆ ಉಸಿರಾಡುತ್ತದೆ

ಮನುಷ್ಯರಂತೆಯೇ ಉಸಿರಾಡುವ ಯಂತ್ರವೊಂದನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ಸಾಧನವನ್ನೇ ಹೊಸ ವೈದ್ಯಕೀಯ ಸಾಧನಗಳನ್ನು ಮತ್ತು ಮುಳುಗುವವರು ಯಾಗೂ ಗಗನದೂರಿಗಳ ಉಸಿರಾಟದ ವ್ಯವಸ್ಥೆಯ ಸಾಧನಗಳನ್ನೂ ಪರೀಕ್ಷಿಸುವ ಮತ್ತು ಅಳತೆಯನ್ನು ಗುರುತು ಮಾಡುವ ಪ್ರಾಯೋಗಿಕ ಕಾರ್ಯಗಳಿಗೆ ಬಳಸಲಾಗುತ್ತಿದೆ.

ಈ ಸಾಧನವು ಶುದ್ಧ ಗಾಳಿಯನ್ನೆಳೆದುಕೊಂಡು ಬಿಸುಯಾದ, ತೇವವಾದ, ಇಂಗಾಲಾಮ್ಲದಿಂದ ಕೂಡಿದ ಗಾಳಿಯನ್ನು ಹೊರಕ್ಕೆ ಬಿಡುತ್ತದೆ. ಮಾನವರ ಸಹಜ ಉಸಿರಾಟದ ಕ್ರಮವೂ ಇದೇ ರೀತಿಯದು. ಒಬ್ಬ ಮನುಷ್ಯನ ಅಥವ ಪಶುಜನರ ಉಸಿರಾಟದ ಪ್ರವಾಣಕ್ಕೆ ಯಂತ್ರವನ್ನು ಹೊಂದಿಸಿಕೊಳ್ಳಬಹುದು; ಇದರಿಂದ ಜಲಾಂತರ್ಗತ ಸುರಂಗ ಧರಣಿಗಳ ಹಾಗೂ ದೊಡ್ಡ ಹೊರ ಗಗನವಾಹನಗಳ ಚಾಲಕ ತಂಡದವರಿಗೆ ಅಗತ್ಯವಾದ ಉಸಿರಾಟದ ವ್ಯವಸ್ಥೆಯನ್ನು ಪರೀಕ್ಷಿಸಬಹುದು.

ಪಲ್ಮನರಿ ಸಿಮ್ಯುಲೇಟರ್ ಎಂದು ಈ ಯಂತ್ರದ ಹೆಸರು. ರೋಗಿಗಳ ಅಮ್ಲಜನಕದ ಸೇವನಾ ಪ್ರಮಾಣವನ್ನು ನಿರ್ಧರಿಸಲು ಅಸ್ಪತ್ರೆಗಳಲ್ಲಿ ರೋಗಿಗಳ ಉಸಿರಾಟವನ್ನು ಅಳತೆ ಮಾಡುವ ರೆಸ್ಪಿರೇಟರಿ ಗೇಜ್ ಮುಂತಾದ ಸಾಧನಗಳನ್ನು ಅಳತೆ ಮಾಡುವ ಮತ್ತು ಪರೀಕ್ಷಿಸುವ ಕಾರ್ಯಗಳಿಗೆ ಸ್ವಯಂ ಸೇವಕರನ್ನು ಬಳಸಿಕೊಳ್ಳಲಾಗುತ್ತಿದೆ; ಇನ್ನು ಮುಂದೆ ಈ ಕೆಲಸವನ್ನು ಈ ಯಂತ್ರ ನಿರ್ವಹಿಸಲಿದೆ.

ಸಾಮಾನ್ಯವಾಗಿ ಒಂದು ಬಾಗಿಲ ಎತ್ತರ, ಅದರ ಎರಡರಷ್ಟು ಅಗಲ ಮತ್ತು ೭ ಅಡಿ ಆಳವಿರುವ ಒಂದು ದೊಡ್ಡ ಕ್ಯಾಬಿನೆಟ್‌ನಿಂದ ಈ ಸಿಮ್ಯುಲೇಟರ್ ರಚಿತವಾಗಿದೆ—ಈ ಕ್ಯಾಬಿನೆಟ್ ತುಂಬ ಚಕ್ರಗಳು, ವೈಲ್‌ಗಳ, ಬ್ಲಡ್‌ಗಳು, ಟಿಪ್ಪಣಿಗಳು, ಲೀವರ್‌ಗಳು, ಟ್ಯೂಬಿಂಗ್‌ಗಳು ಹಾಗೂ ವಿದ್ಯುತ್ ಬಿಡಿ ಭಾಗಗಳಿರುತ್ತವೆ. ಇವುಗಳಲ್ಲಿ ಕೆಲವು ಮತ್ತು ಮೇಲಕ್ಕೆ ಮತ್ತು ಕೆಳಕ್ಕೆ, ಹಿಂದಕ್ಕೆ ಮತ್ತು ಮುಂದಕ್ಕೆ ಉಸಿರಾಟಕ್ಕೆ ತಕ್ಕಂತೆ ಕ್ರಮಬದ್ಧವಾಗಿ ಚಲಿಸುತ್ತವೆ.

ಪ್ರತಿಯೊಂದು ಬಾರಿ ಉಸಿರಾಡಿದಾಗಲೂ ಜೋರಾದ ಸದ್ದು ಕೇಳಿ ಬರುವುದು

ಕ್ಯಾಬಿನೆಟ್‌ನಿಂದ ಹೊರ ಚಾಚಿರುವ ಒಂದಂಗುಲ ವ್ಯಾಸದ ಕೊಳವೆಯೊಂದು ಗಾಳಿಯನ್ನು ಎಳೆದುಕೊಳ್ಳುತ್ತದೆ ಮತ್ತು ಹೊರಕ್ಕೆ ಬಿಡುತ್ತದೆ. ಯಂತ್ರವು ಯಾವುದೇ ಕ್ರಮಬದ್ಧ ಅಥವ ಅಸಹಜವಾದ ಉಸಿರಾಟಕ್ಕೆ ಅನುಗುಣ ಕಾರ್ಯ ನಿರ್ವಹಿಸಬಲ್ಲದು ಮತ್ತು ಹಗಲು ರಾತ್ರಿ ಕಾರ್ಯ ಮುಂದುವರಿಸಬಲ್ಲದು.

ಈ ಯಂತ್ರವನ್ನು ಸೆಫ್ಲಿಲ್ವೇನಿಯದ ಪಿಟ್ಸ್‌ಬರ್ಗ್‌ನಲ್ಲಿರುವ ನೆಸ್ಟಿಂಗ್‌ಹೌಸ್ ರಿಸರ್ಚ್ ಲ್ಯಾಬರೇಟರೀಸ್‌ನ ಮೆಡಿಕಲ್ ಸರ್ವಿಸ್ ವಿಭಾಗದಲ್ಲಿ ಅಭಿವೃದ್ಧಿಗೊಳಿಸಲಾಯಿತು.

ಸ್ತ್ರೀ ಪುರುಷರೆಲ್ಲರ ಸಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (೧.)
(ಆಯುರ್ವೇದಿಯ ಟಾನಿಕ್)

ಕೃಷಿಕ ರಂಗ

ಕಬ್ಬಿನ ಬೆಳೆಗೆ ಗೆದ್ದಲು ಹತ್ತದಂತೆ ಕಾಪಾಡಿ

ಗೆದ್ದಲು ಸಾಮಾನ್ಯವಾಗಿ ಎಲ್ಲಾ ಬೆಳೆಗೂ ಹತ್ತುತ್ತದೆ. ಆದರಲ್ಲೂ ಕಬ್ಬಿನ ಬೆಳೆಗೆ ಹತ್ತುವುದು ಜಾಸ್ತಿ. ಏಕೆಂದರೆ ಕಬ್ಬಿನ ಬೀಜದಲ್ಲಿ ಹೆಚ್ಚು ಕೋಶಗಳಿರುವುದಿಲ್ಲ. ಅದು ಭೂಮಿಯಲ್ಲಿ ಇಡೀ ವರ್ಷ ಉಳಿಯುತ್ತದೆ. ಹೀಗಾಗಿ ಪ್ರತಿ ವರ್ಷ ಕಬ್ಬಿನ ಬೆಳೆಗಾರರಿಗೆ ನಷ್ಟವಾಗುವ ಸಂಭವವೇ ಹೆಚ್ಚು. ಆದ್ದರಿಂದ ಈ ಗೆದ್ದಲಿನಿಂದಾಗುವ ಹಾನಿಯನ್ನು ತಡೆಯುವುದು ಅವಶ್ಯಕ.

ರೈತರು ಗೆದ್ದಲು ನಿರೋಧಕದ ಮದ್ದನ್ನು ಉಪಯೋಗಿಸುವುದಕ್ಕೆ ಮುಂಚೆ, ಕಬ್ಬನ್ನು ನಾಟಿಮಾಡಬೇಕಾಗಿರುವ ಹೊಲ ಅಥವಾ ಗದ್ದೆಯಲ್ಲಿ ಯಾವ ಪ್ರಮಾಣದಲ್ಲಿದಲ್ಲಿ ಗೆದ್ದಲು ತಗಲುವುದು ಎಂಬುದನ್ನು ತಿಳಿದು ನಂತರ ಅದಕ್ಕೆತಕ್ಕ ಪರಿಮಾಣ ಮದ್ದನ್ನು ಉಪಯೋಗಿಸಬೇಕು. ಏಕೆಂದರೆ ಬೇಕಾದ ಪ್ರಮಾಣಕ್ಕಿಂತ ಹೆಚ್ಚು ಮದ್ದು ಉಪಯೋಗಿಸಿದರೆ ಸಸಿಗಳಿಗೆ ಅಪಾಯವಾಗುವ ಸಂಭವವುಂಟು. ಬೇರೆ ಬೇರೆ ನೆಲದಲ್ಲಿ ಗೆದ್ದಲು ತಗಲುವ ಪ್ರಮಾಣ ಬೇರೆ ಬೇರೆಯಾಗಿರುತ್ತದೆ. ಔಷಧಿಯನ್ನು ಉಪಯೋಗಿಸುವುದಕ್ಕೆ ಮುಂಚೆ ಗೆದ್ದಲು ತಗಲುವ ಪ್ರಮಾಣವನ್ನು ಕಂಡುಕೊಳ್ಳಲು ಅನೇಕ ಪ್ರಯೋಗಗಳನ್ನು ನಡೆಸಲಾಯ್ತು. ಅದಕ್ಕಾಗಿ ಗೆದ್ದಲು ಬೇಗನೆ ತಡಲುವಂತಹ ಪದಾರ್ಥಗಳಾದ ಕಬ್ಬಿನ ತುಂಡು, ಸಗಣಿಯ ಕುಳ್ಳುಗಳು, ಹರಳಿನ ಗಿಡದ ಕಾಂಡ, ಮುಸುಕಿನ ಜೋಳದ ತೆನೆ, ಕಬ್ಬಿನ ಗರಿ ಮುಂತಾದುವುಗಳನ್ನು ೧, ೫—ಸೆಂಟಿಮೀಟರಿನಿಂದ ೩೦ ಸೆಂಟಿಮೀಟರ್ ಉದ್ದವಿರುವಂತೆ ಕತ್ತರಿಸಿ ೧೫ ಸೆಂಟಿಮೀಟರ್ ಆಳದಲ್ಲಿ ವರ್ತುಳಾಕಾರವಾಗಿ ಜಮೀನಿನಲ್ಲಿ ಹೂತು ಇಟ್ಟು ಎಳರಿಂದ ಹದಿಮೂರು ದಿನಗಳವರೆಗೆ ಹಾಗೆಯೇ ಭೂಮಿಯಲ್ಲಿಯೇ ಇರುವಂತೆ ಮಾಡಲಾಯಿತು. ಹೀಗೆ ಪರೀಕ್ಷೆಗೆ ಪ್ರತಿ ಎಕರೆಗೆ ೪೦ ಮುಡಿಗಳಂತೆ ಪ್ರತಿ ಮುಡಿಗೂ ಹತ್ತು ಸೆಂಟಿಮೀಟರ್ ಅಂತರವಿರುವಂತೆ ನಡಲಾಯಿತು. ಕಿಯಮಿತ ಕಾಲವಾದ ನಂತರ ಈ ನೆಟ್ಟ ಪದಾರ್ಥಗಳನ್ನು ಕಿತ್ತು ಪರೀಕ್ಷಿಸಲಾಯಿತು. ಪ್ರತಿಯೊಂದು ಪದಾರ್ಥಕ್ಕೂ ಗೆದ್ದಲು ತಗಲಿದ ಪ್ರಮಾಣವನ್ನು ಹಾಗೂ ಬೇರೆ ಬೇರೆ ಹೊಲಗಳಲ್ಲಿ ಈ ಭಿನ್ನ ಭಿನ್ನ ಪದಾರ್ಥಗಳಿಗೆ ತಗಲಿದ ಗೆದ್ದಲಿನ ಪ್ರಮಾಣವನ್ನು ಪ್ರತ್ಯೇಕವಾಗಿ ಪರೀಕ್ಷಿಸಲಾಯಿತು. ಈ ಪ್ರಯೋಗವನ್ನು ೧೯೬೪ರಲ್ಲಿ ಸೆಪ್ಟೆಂಬರ್-ನವೆಂಬರ್ ಅವಧಿಯಲ್ಲಿ ರಾಮಪುರ ಮತ್ತು ಶಸೆಜಹಾನ್ ಪುರಗಳಲ್ಲಿ ಕೈಗೆಸಲಾಯಿತು. ಗೆದ್ದಲು ತಗಲಿದ ಸರಾಸರಿ ಶೇಕಡಾ ಪ್ರಮಾಣಗಳನ್ನು ಕೆಳಗೆ ಕೊಟ್ಟಿದೆ.

ಡೈಂಚಾ ಕಾಂಡ	೫೦.೩
ಕಬ್ಬಿನ ತುಂಡು	೫೫.೧
ಸಗಣಿ ಕುಳ್ಳು	೭೧.೫
ಹರಳು ಗಿಡದ ದಂಟು	೧೮.೯
ಮುಸುಕಿನ ಜೋಳದ ದಂಟು	೬೦.೮
ಕಬ್ಬಿನ ಗರಿ (ಸೂಲಂಗಿ)	೫೫.೧

ಅನಂತರ ಕಬ್ಬು ನೆಡುವುದಕ್ಕೆ ಮುಂಚೆ ಗೆದ್ದಲು ತಗಲುವ ಪ್ರಮಾಣವನ್ನು ಕಂಡುಹಿಡಿಯಲು ಸಗಣಿ ಕುಳ್ಳು, ಮುಸುಕಿನ ಜೋಳದ ದಂಟು, ಹಾಗೂ ಕಬ್ಬಿನ ತುಂಡುಗಳನ್ನು ಮತ್ತಾ ಉಪಯೋಗಿಸಲಾಯ್ತು. ಪರೀಕ್ಷೆಗೊಳಪಟ್ಟ ಪ್ರತ್ಯೇಕ ಹೊಲಗಳಲ್ಲಿ ಗೆದ್ದಲು ತಗಲುವ ಪ್ರಮಾಣವನ್ನು ನಿರೀಕ್ಷಿಸಿ ದಾಖಲೆ ಮಾಡಲಾಯಿತು. ಮೊಳಕೆ-ಮೊಳೆಯುವ ಕಾಲದಲ್ಲಿ ಕಬ್ಬಿನ ಗೆಣ್ಣುಗಳಲ್ಲಿ ಗೆದ್ದಲಿನಿಂದಾಗುವ ಪರಿಮಾಣವನ್ನು ದಾಖಲು ಮಾಡಲಾಯಿತು. ಪರೀಕ್ಷೆಗೊಳಪಡಿಸಿ ಪದಾರ್ಥಗಳಿಗೆ ನೂಂಕ್ಕೆ ನೂರರಷ್ಟು ಗೆದ್ದಲು ತಗಲಿದ ಹೊಲದಲ್ಲಿ ಕಬ್ಬು ಹಾಕಿದಾಗ ಸಂಪೂರ್ಣ ಬೆಳೆಯೇ ನಾಶವಾದುದು ಕಂಡು ಬಂದಿತು.

ಆದ್ದರಿಂದ ಕಬ್ಬು ನೆಡುವ ಮುಂಚೆಯೇ ಜಮೀನಿನಲ್ಲಿ ಗೆದ್ದಲು ಹತ್ತುವ ಪರಿಣಾಮವನ್ನು ಕಂಡು ಹಿಡಿಯುವುದು ಅವಶ್ಯಕ-ಹಾಗೂ ಗೆದ್ದಲು ನಿರೋಧಕ ಔಷಧಕ್ಕೆ ಆಗುವ ಖರ್ಚು ಎಕರೆಗೆ ಅಂದಾಜು ಒಂದು ರೂಪಾಯಿ ಮಾತ್ರ. ಇದು ನಡೆಸಿದ ಪ್ರಯೋಗಗಳಿಂದ ತಿಳಿದು ಬಂದಿದೆ.

ಅಮೂಲ್ಯ ಔಷಧಿ ಗುಣಗಳುಳ್ಳ

ಕದಳಿ ಬಾಳೆಹಣ್ಣು

ಬರೆದವರು:

ಶ್ರೀ ಎಚ್. ಎಂ. ನಾರಾಯಣ ಭಟ್.

"ಕದಳಿ" ಬಾಳೆಯ ಬಗ್ಗೆ ಅನೇಕ ವಿಗಳು ವರ್ಣಿಸಿದ್ದನ್ನು ಕಾಣಬಹುದಾದರೂ ಈ ಬಾಳೆಯ ಕೋಮಲತೆಯೂ ಅನೆಯ ಮದಕ್ಕೂ ಇರುವ ಅಂತರವನ್ನು ವ್ಯಕ್ತಪಡಿಸುವ "ಕದಳಿಯೊಳು ಮದದಾನೆ ಹೊಕ್ಕಂದದಲಿ" ಎಂಬುದಿಲ್ಲಿ ಪ್ರಸಕ್ತವಾಗಿದೆ.

ಪೌರಾಣಿಕ ಕವಿಗಳಂತೆಯೇ ಆಯುರ್ವೇದ ತಜ್ಞರ ದೃಷ್ಟಿಯೂ "ಕದಳಿ"ಯತ್ತ ಸರಿದಿದೆ; ಅನೇಕ ಸಂಶೋಧನೆಗಳ ಫಲವಾಗಿ ವೈದ್ಯ ಭೂಷಣರು ಕದಳಿ ಮತ್ತದರ ವಿವಿಧ ಭಾಗಗಳ ವೈದ್ಯಕೀಯ ಉಪಯೋಗಗಳನ್ನೂ ನಿರ್ಣಯಿಸಿದ್ದಾರೆ.

ಮಿತವಾಗಿಯೂ ವ್ಯವಸ್ಥಿತವಾಗಿಯೂ ಕದಳೀ ಫಲವನ್ನು ಸೇವಿಸಿದರೆ ದೇಹ ಪುಷ್ಟಿ, ಕಾಂತಿ, ರೂಪಲಾವಣ್ಯಗಳೂ ಹೆಚ್ಚಾಗುವುದು; ವಾತ, ಪಿತ್ತ, ರಕ್ತದೋಷ, ಮೇಹ ರೋಗ, ಪ್ರಮೇಹ, ಕ್ಷಯ ಇತ್ಯಾದಿಗಳ ನಿವಾರಣೆಗೂ ಸಹಾಯಕ; ತಲೆ ಕೂದಲು ಬೆಳೆಯಲು ಕದಳಿ ಬಾಳೆ ಬಡ್ಡೆ ಸೇವನೆ ಸಹಾಯಕ; ಶಕ್ತಿವರ್ಧಕವೂ. ಕೊಂಬೆಯ ಪಚ್ಚಡಿ ಅಥವಾ ಪಲ್ಯ ಆರೋಗ್ಯಕರ; ಮೂತ್ರಾತಿಸಾರ ನಿವಾರಣೆಗೂ ರಕ್ತ ಶುದ್ಧಿಗೂ ಜೀರ್ಣಶಕ್ತಿ ಹೆಚ್ಚಲೂ ಬಾಳೆ ದಂಡು ಸಮರ್ಥ; ಹೊಟ್ಟೆಯೊಳಗೆ ಪ್ರವೇಶಿಸಿರಬಹುದಾದ ರೋಗಾಣು ಅಥವಾ ಕೂಡಲನ್ನಾದರೂ ಹೊರ ಹಾಕುವ ಶಕ್ತಿ ಇದಕ್ಕಿದೆ; ದಂಡಿನ (ದಿಂಡಿನ ಅಥವಾ ತಿರುಳಿನ) ಪಚ್ಚಡಿ; ಪಲ್ಯ, ಉಪ್ಪಿನ ಕಾಯಿ, ಮತ್ತಿತರ ಮೇಲೋಗಗಳು ಹಳ್ಳಿ ಜೀವನದಲ್ಲಿ ವಿರಳವಲ್ಲ; ವಿಷ ವೈದ್ಯಕ್ಕೂ ಕದಳಿ ಬಾಳೆಯ ವಿವಿಧ ಭಾಗಗಳು ಒದಗುವುವು; ಕದಳಿ ಬಾಳೆಯ ಹೂವಿಗೂ ಕೊಂಬೆಯೂ ರಕ್ತ ಶುದ್ಧಿಗೆ ಒಳ್ಳೆಯದು. ಎಂಬಿತ್ಯಾದಿಯಾಗಿ ಭಿನ್ನ ಭಿನ್ನ ಸಂಧಾನಗಳ ವೇಳೆ ವಿವರಿಸಿದ್ದಾರೆ.

ಕದಳಿ ಎಲೆ ಊಟಕ್ಕೂ ನಾರು ಹಗ್ಗಕ್ಕೂ ಉಪಯೋಗಿಸಲ್ಪಡುತ್ತದೆ.

SR

ಸೇವನೆಯ ಆನಂದಕ್ಕೆ

ಅತ್ಯುತ್ಕೃಷ್ಟವಾದುದನ್ನೇ ಪಡೆಕೊಳ್ಳಿರಿ

ಎಸ್. ಆರ್.

ತಾಜಾ ನಿಪ್ಪಾಣಿ ತಂಬಾಕು

ಹೊತ್ತು

ಬೊಂಬಾಯಿ ಬೀಡಿ

ಇವುಗಳಿಂದ ತಯಾರಿಸಿದ ಬೀಡಿಗಳಾಗಿರುತ್ತವೆ.

S.R. Beedi Works. UDIPI S.K.

ಭಕ್ತಿಯ ಉದ್ದೇಶ ಹಾಗೂ ವಿಕಾಸ

(ವಿನೋಬಾ)

ಭಕ್ತಿಮಾರ್ಗ ಜನರ ಭಕ್ತಿಯು ಮೂರ್ತಿ ಪೂಜೆಯಲ್ಲೇ ಸಮಾಪ್ತವಾಗುತ್ತಿತ್ತು! ಮೂರ್ತಿಯನ್ನು ಎಬ್ಬಿಸುವದು, ಅದಕ್ಕೆ ಸ್ನಾನ ಮಾಡುವದು, ಅದಕ್ಕೆ ನೈವೇದ್ಯ ಮಾಡುವದು, ಮಲಗಿಸುವದು ಮೊದಲಾದ ಸೇವೆಗಳಲ್ಲಿಯೇ ಭಕ್ತಿಯ ಪರಿಸಮಾಪ್ತಿಯಾಗುತ್ತದೆ ಎಂದು ತಿಳಿಯುತ್ತಿದ್ದರು. ಹೀಗಾಗಿ ಅವರು ಲೋಕ ವಿಮುಖರಾಗಿ ಬಿಟ್ಟಿದ್ದರು. ಹಸಿದವರಿಗೆ ಉಣ್ಣಿಸುವದು ಬಿಟ್ಟು ಮೂರ್ತಿಗೆ ಉಣ್ಣಿಸುವ ನಾಟಕದಲ್ಲಿಯೇ ಅವರ ಭಕ್ತಿಯ ಇತಿಶ್ರೀ ಆಗುತ್ತಿತ್ತು! ಯೂಕಂದರೆ ಮೂರ್ತಿಗೇನೂ ಹಸಿವೆ ಆಗುವದು ಶಕ್ಯವಿಲ್ಲ! ಆದರೂ ಅದಕ್ಕೆ ಉಣ್ಣಿಸುತ್ತಿದ್ದರು. ಇದರಿಂದ ಅವರು ತಮ್ಮಲ್ಲಿಯ ದಯಾವೃತ್ತಿಗೆ ವಂಚನೆ ಮಾಡುತ್ತಿದ್ದರು.

ನನ್ನ ಕಲ್ಪನೆಯಂತಾದರೋ ಭಾರತದಲ್ಲಿ ಇಡೀ ಸಮಾಜದ ಮಾರ್ಗದರ್ಶನಕ್ಕಾಗಿಯೇ ಮೂರ್ತಿಪೂಜೆ ನಡೆಯುತ್ತಿತ್ತು. ಊರ ಮಧ್ಯದಲ್ಲಿ ದೇವಸ್ಥಾನ ಇರುತ್ತಿತ್ತು! ಮತ್ತು ಮಂದಿರದಲ್ಲಿಯ ದೇವರು ಮುಂಜಾನೆ ೪ ಗಂಟೆಗೇ ಎಳುತ್ತಿದ್ದರು! ಮತ್ತು ಆ ಕೂಡಲೆ ಊರ ಜನರಿಗೆಲ್ಲ ಏಳಿರಿ ಎಚ್ಚರಾಗಿರಿ ಎಂದು ಗಂಟೆ ಬಾರಿಸಿ ಸೂಚಿಸಲಾಗುತ್ತಿತ್ತು! ಮುಂದೆ ಪಡು ಮಧ್ಯಾಹ್ನ ಊಟದ ಹೊತ್ತಿಗೆ ಮತ್ತೊಮ್ಮೆ ಗಂಟೆ ಬಾರಿಸಿ ಪೂಜೆ ನಡೆಯುತ್ತಿತ್ತು. ಆಗಲೂ ಊರ ಜನರು ಬಂದು ದೇವದರ್ಶನ ತೆಗೆದುಕೊಂಡು, ಮನೆಗೆ ಹೋಗಿ ಊಟ ಮಾಡುತ್ತಿದ್ದರು! ಪುನಃ ಸಾಯಂಕಾಲ ಆರತಿ ಮುಗಿಸಿದ ತರುವಾಯ ದೇವರು ಮಲಗುವದೆಂದು ಹೇಳಲಾಗುತ್ತಿತ್ತು! ಆಗ ಜನರೂ ದೇವರಿಗೆ ನಮಸ್ಕರಿಸಿ ಹೋಗಿ ಮಲಗಿಕೊಳ್ಳುತ್ತಿದ್ದರು. ಈ ಪ್ರಕಾರವಾಗಿ ಇಡೀ ಊರಿಗೆ ಮಾದರಿಯಾಗಿಯೇ ದೇವಸ್ಥಾನದ ಕಾರ್ಯಕ್ರಮ ನಡೆಯುತ್ತಿತ್ತು. ಇದರಿಂದ ಗ್ರಾಮಜೀವನದಲ್ಲಿ ಕೆಲವಷ್ಟೆನ ಸಂಸ್ಕಾರ ಮಾಡುವಾಗುತ್ತಿತ್ತು. ಅಷ್ಟರಿಂದ ದುಃಖಿತರ ದುಃಖ ನಿವಾರಣೆ ಆಗುತ್ತಿರಲಿಲ್ಲ. ಆದ್ದರಿಂದ ಆಂದಿನ ಭಕ್ತಿಮಾರ್ಗವು ಲೋಕ ವಿಮುಖವಾಗಿತ್ತು. ಆದ್ದರಿಂದ ಮತ್ತು ಜನ ಸೇವೆಗಳನ್ನು ಜೋಡಿಸಿ ಭಕ್ತಿಯನ್ನು ಪರಿಪೂರ್ಣಗೊಳಿಸಿದಾಗಲೇ ಭಕ್ತಿಮಾರ್ಗದ ಉತ್ತಮ ವಿಕಾಸವಾಗುತ್ತದೆ.

ಇದೆಲ್ಲ ಜೀವನ ವಿಜ್ಞಾನ ೧೯ನೇ ೨೦ನೇ ಶತಮಾನಗಳಲ್ಲೇ ಭಾರತದಲ್ಲಿ ನಡೆಯಿತ್ತು. ಇದೊಂದು ಆಧುನಿಕ ಸಮಾಜದ ಕೊಡುಗೆ ಎಂದೇ ತಿಳಿಯಬೇಕು. ಇದಕ್ಕೆ ಪ್ರೇರಣೆ ಕೊಟ್ಟವರು ರಾಮಕೃಷ್ಣಪರಮಹಂಸರು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ದ್ರಾ. ಮು. ಕ. ಧೋರಣೆ— ದಾಸ್ಯಮನೋಭಾವನೆಯ ದ್ಯೋತಕ

ಬರೆದವರು: ಶ್ರೀ ಶಿವಶಂಕರ.

ಭಾರತದ ಅದ್ಯಾವ ಭಾಷೆಯೂ ಭಾರತದ ರಾಷ್ಟ್ರೀಯ ಅಥವಾ ಸಂಪರ್ಕ ಭಾಷೆ ಆಗಲು ಯೋಗ್ಯತೆ ಪಡೆದಿಲ್ಲ. ಅ ಯೋಗ್ಯತೆಯಿರುವ ಏಕಮೇವ ಭಾಷೆಯೆಂದರೆ ಆಂಗ್ಲ ಭಾಷೆ ಒಂದೇ ಅನ್ನುವದು ದ್ರಾ. ಮು. ಕ. ದ ವಾದವಾದರೂ ಇದೀಗ ಸ್ವಲ್ಪ ಮಟ್ಟಿಗೆ, ತೋರಿಕೆಯ ದೃಷ್ಟಿಯಿಂದಲಾದರೂ ಬದಲಾಗಿರುತ್ತದೆ. ಭಾರತದ ಸಂಪರ್ಕ ಭಾಷೆಯಾಗಿ ತಮಿಳಿಂಬೇಕೆಂದು ಅವರೀಗ ಕೇಳಿಕೊಳ್ಳುತ್ತಿದ್ದಾರೆ. ಅದು ಹಿಂದಿಗಿಂತಲೂ ಹಿಂದಿನ ಭಾಷೆ, ಎಲ್ಲ ಭಾಷೆಗಿಂತಲೂ ಹಳೆಯ ಭಾಷೆ, ಬಲಿತ ಭಾಷೆ ಇರುವದರಿಂದ ಸಂಪರ್ಕ ಭಾಷೆ ಆಗಬೇಕೆಂಬುದು ಅವರ ವಾದ. ತಮಿಳಿನ ಯೋಗ್ಯತೆಯ ಪ್ರಚಾರಕ್ಕಾಗಿ ತಮಿಳುನಾಡಿನಲ್ಲಿ ಅಂತಾರಾಷ್ಟ್ರೀಯ ದ್ವಿತೀಯ ಸಂಗೋಷ್ಠಿ ನಡೆಯಿತು.

ತಮಿಳು ಅಧ್ಯಯನ ಸಂಗೋಷ್ಠಿಯಲ್ಲಿ ತಮಿಳನ್ನು ಸಂಪರ್ಕ ಭಾಷೆಯನ್ನಾಗಿ ಉಪಯೋಗಿಸುವ ವಿಷಯವೂ ಚರ್ಚೆಗೆ ಬಂದಿರುತ್ತದೆ. ಶ್ರೀಮತಿ ಮಹೇಶ್ವರಿ ಬಾಲಕೃಷ್ಣನ್‌ರವರು ಆ ಕುರಿತು ಮಾತನಾಡುತ್ತ ತಮಿಳಿನಲ್ಲಿ ಬೇಕಾದಷ್ಟು ಶಬ್ದ ಸಂಗ್ರಹವಿಲ್ಲವೆಂದು ತಮಿಳು ಸರಿವಂತ ಭಾಷೆಯೆಂಬ ಗ.ಳೈಯನ್ನು ಒಡೆದುಬಿಟ್ಟರು. ಆಂಗ್ಲ ಭಾಷೆಯಲ್ಲಿರುವದರ ನಾಲ್ಕನೇ ಒಂದಂಶ ಶಬ್ದಗಳು ತಮಿಳಿನಲ್ಲಿರುವದಾಗಿ ಶ್ರೀಮತಿಯವರು ತಿಳಿಸಿದರು. ಇನ್ನಾದರೂ ಅಲ್ಲಿ ಅಲ್ಲಗಳೆದಿರುವದಿಲ್ಲ. ಆಂಗ್ಲ ಭಾಷೆಯ ಕಾಲಂಶ ಶಬ್ದಸಂಪತ್ತು ಉಳ್ಳವರು ಆಂಗ್ಲಭಾಷೆಯ ಕಾಲನ್ನೇ ಹಿಡಿಯುವದರಲ್ಲಿ ಸಂದೇಹವಿಲ್ಲ. ಅಲ್ಲದೆ ಅಲ್ಲಿ ದಾಯಾದಿ ಮತ್ಸರ್ಯಕ್ಕೆ ಅವಕಾಶವೂ ಇದೆ. ಸಂಸ್ಕೃತ ಭಾಷೆಯ ಕುರಿತಾಗಲೀ ಇತರ ನಮ್ಮ ದಕ್ಷಿಣ ಭಾರತದಭಾಷೆಗಳ ಕುರಿತಾಗಲೀ ಇಲ್ಲಿ ತಿಳಿಸುವುದು ಬೇಡ. ಈಗ ದ್ರಾ ಮು. ಕ. ವು ಹಿಂದಿಯನ್ನು ಹೀಗೆಳೆಯುತ್ತಿರುವದರಿಂದ ಆ ಭಾಷೆಯ ಕುರಿತೇ ನೋಡೋಣ. ಆಂಗ್ಲ ಭಾಷೆಗಿಂತಲೂ ಅದೆಷ್ಟೋ ಪಾಲು ಅಧಿಕ ಶಬ್ದ ಸಂಪತ್ತು ಹಿಂದಿಯಲ್ಲಿದೆಂಬುದನ್ನು ಅಲ್ಲಗಳೆಯುವ ಎದೆಗಾರಿಕೆ ಅದ್ಯಾರಿಗೂ ಇರುವದಿಲ್ಲ. ಈ ಎರಡು ವಿಷಯಗಳು ಫಿಜ ಸೆಂದಾದಲ್ಲಿ ಸಂಪರ್ಕ ಭಾಷೆಯಾಗಲು ಯಾವದು ಉತ್ತಮವೆಂದು ಸ್ಪಷ್ಟವಾಗುತ್ತದೆ. ಅದ್ಯಾವ ಭಾಷೆಯನ್ನೂ ಕೇವಲನೆನ್ನುವದು ಇದರ ಅಭಿಪ್ರಾಯವಲ್ಲ. ದ್ರಾ. ಮು. ಕ. ದ ವಾದದಲ್ಲಿ ಅದೆಂತು ಹುರುಳಿಲ್ಲವೆನ್ನುವದನ್ನು ತಿಳಿಸುವದೇ ಮುಖ್ಯ ಉದ್ದೇಶ. ತಮಿಳೂ ನಮ್ಮ ಭಾಷೆ, ಕನ್ನಡವೂ ನಮ್ಮ ಭಾಷೆ, ಹಿಂದಿಯೂ ನಮ್ಮ ಭಾಷೆ ಎನ್ನುವವರಿಗೆ ಕಸಿವಿಸಿಯಾದರೂ ದ್ರಾ. ಮು. ಕ. ದ ವರ್ಚಸ್ಸನ್ನು ಬೆಟ್ಟು ಮಾಡಿ ತೋರಿಸಬೇಕಾಗಿರುತ್ತದೆ.

ಅವರು ತನ್ನ ಮಾತಿನ ಮಧ್ಯೆ "ಈ ಮಾನ್ಯತೆಯನ್ನು ಅದೆಂತು ಸರಿಪಡಿಸಿಕೊಳ್ಳುವದೆ"ಂದು ಕೇಳಿ ಅದಕ್ಕೆ ಪರಿಹಾರೋಪಾಯವನ್ನು ಸೂಚಿಸಿದರು: ತಮಿಳು ಶಬ್ದಕೋಶವನ್ನು ದೊಡ್ಡದು ಮಾಡಬೇಕು. ತಮಿಳು ಅಡಳಿತ ಭಾಷೆಯಾಗಬೇಕಾದಲ್ಲಿ ವಿಸ್ತಾರ ಯೋಜನೆ ತೀರಾ ಅತ್ಯಾವಶ್ಯಕ. ವಿಸ್ತರಣಾ ಕಾರ್ಯ ಹೇಗೆಮಾಡಲು ಸಾಧ್ಯವಿದೆ? ಪುರಾತನ ಕಾಲದ ಹಾಗೂ ಬಳಕೆಯಲ್ಲಿಲ್ಲದ ಪದಗಳನ್ನು ಪುನಃ ಬಳಕೆಗೆ ತರುವುದರಿಂದ ಅದು ಸಾಧ್ಯ; ಹಾಗೆಯೇ ಇತರ ಭಾಷೆಗಳಿಂದ ಶಬ್ದಗಳನ್ನು ತೆಗೆದು ಕೊಳ್ಳುವದರಿಂದಲೂ ಅದು ಸಾಧ್ಯ. ಇದನ್ನು ತಪ್ಪೆನ್ನಲು ಸಾಧ್ಯವಿಲ್ಲ. ತಮಿಳು ಬೆಳೆಯಬೇಕು; ತಮಿಳು ನಾಡಿನಲ್ಲಿ ಅದು ಅಡಳಿತ ಭಾಷೆಯಾಗಲೇ ಬೇಕು. ಇದನ್ನೆದುರಿಸುವವನನ್ನು ಭಾರತೀಯನೆನ್ನಲು ಸಾಧ್ಯವೇನು?

ಹಲವಾರು ದೇಶಗಳಿಂದ ಬಂದಿರುವ ಪ್ರತಿನಿಧಿಗಳೆದುರು ಶ್ರೀಮತಿ ಮಹೇಶ್ವರಿಯವರು ಹಾಗೆಂದು ಬಿಟ್ಟೊಡನೆಯೆ ತಮಿಳು ಹೋಳಿಗೆ ಜಾರಿ ಬೆಳವಣಿಗೆಯುತ್ತಿದ್ದದಲ್ಲಿ ಬಿದ್ದು ಬಿಡುವದಿಲ್ಲ. ಶ್ರೀಮತಿಯವರು ಅದನ್ನು ಒತ್ತಿ ಹೇಳಲು ಕಾರಣವಿದೆ. ದ್ರಾ. ಮು. ಕ. ಹಾಗೂ ಅಂತಹ ಕೆಲವರು ತಮಿಳು ಭಾಷೆಯಲ್ಲಿರುವ ಜ, ಶ, ಹ, ಷ ಗಳನ್ನು ಸಹಿಸುವುದಿಲ್ಲ. ತಮಿಳಿನಲ್ಲಿ ಈ ಅಕ್ಷರಗಳಿವೆಯೂ ದರೂ ಅವು ಉತ್ತರದ (ಸಂಸ್ಕೃತ) ಅಕ್ಷರಗಳೆಂದು ಉಪಯೋಗಿಸುವುದಿಲ್ಲ. ಅದರಿಂದಾಗಿ ತಿರು ರಾಜಾಜಿಯೆಂದು ಬರೆಯುವುದನ್ನು ತಿರು ರಾಜಾಚಿಯೆಂದು ಬರೆಯ ಬೇಕಾಗುತ್ತದೆ. ಅಂತಹವರ ಬಳಿ ಷಹಜಹಾನೆಂದು ಬರೆಯಲು ಹೇಳಿ ಬೇರೆಯವರ ಬಳಿ ಓದಲು ಹೇಳಬೇಕು. ಬಹಳ ತಮಾಷೆಯಾಗಿರುತ್ತದೆ. ಹಾಗಿರುವಾಗ ಇರುವ ಅಕ್ಷರಗಳನ್ನು ಉಪಯೋಗಿಸಲು ಮೈಲಿಗೆಯಾಗುತ್ತದೆನ್ನುವ ಈ "ಮಡಿವಂತ" ತಮಿಳರ ಬಳಿ ಭಾಷೆಯನ್ನು ಬೆಳೆಸಲು ಹೇಗೆ ಹೇಳುವದು? ತಮಿಳಿನಲ್ಲಿ ಒಂದೇ 'ಕ' ಇದೆ—ಕನ್ನಡದಲ್ಲಿ ಕ, ಖ, ಗ, ಘ ಇವೆ, ಇವು ಒಂದು ಉದಾಹರಣೆ. ಹೀಗೆ ನಾಲ್ಕು ಅಕ್ಷರಗಳ ಬದಲು ತಮಿಳಿನಲ್ಲಿ ಒಂದೇ ಅಕ್ಷರವಿದ್ದು, ಸಮಯ ಸಂದರ್ಭಕ್ಕನುಸಾರವಾಗಿ ಬರೆದುದನ್ನು ಓದಬೇಕು. ಒಬ್ಬರು ಮತವೆಂದು ಬರೆದಲ್ಲಿ, ಮತ್ತೊಬ್ಬರು ಅದನ್ನು ಮದವೆಂದು ಓದಿದಲ್ಲಿ ಆಶ್ಚರ್ಯವೇನೂ ಇಲ್ಲ. ಈ ಶಬ್ದಗಳು ತಮಿಳಿನಲ್ಲಿ ಇಲ್ಲವೆಂದು ಮಡಿದು ವಾದವನ್ನು ಯಾರಾದರೂ ಸರಿಹರಿಸಬೇಕಾಗುತ್ತದೆ. ಇವೆಲ್ಲಕ್ಕಿಂತಲೂ ಭಾಷೆಯನ್ನು ಉಳಿಸಿ ಕೊಳ್ಳಲು ಬೆಳೆಸಿಕೊಳ್ಳಲೂ ಅದರ ಮೇಲೆ ಸದಭಿಮಾನ ಇರಬೇಕು. ದುರಭಿಮಾನ ಹಾಗೂ ತಾತ್ಸಾರ ಸಲ್ಲದು ದ್ರಾ. ಮು. ಕ.ಕ್ಕೆ ತಮಿಳಿನ ಮೇಲೆ ಸದಭಿಮಾನ ಇರುವ ಬದಲು ದುರಭಿಮಾನ ಹಾಗೂ ತಾತ್ಸಾರ ಭಾವನೆ ಇದೆ. ದುರಭಿಮಾನ ಪ್ರದರ್ಶನ ಅವರು ಎಡೆಬಿಡದೆ ನಡೆಸುತ್ತಿದ್ದಾರಾದಲ್ಲಿ ಇದೀಗ ತಾತ್ಸಾರವನ್ನು ಪ್ರಕಟಿಸಲಾರಂಭಿಸಿರುವರು. ತಮಿಳು ಕಾಡು ಭಾಷೆಯೆಂದು ಮೂದಲಿಸಲು ಅವರು ಮುಂದಾಗುತ್ತಿದ್ದಾರೆ. ಆಂಗ್ಲ ಭಾಷೆ ಆಧುನಿಕ ಹಾಗೂ ಶಾಸ್ತ್ರೀಯ (ವೈಜ್ಞಾನಿಕ) ಭಾಷೆಯೆಂದು ಅದರ ಗುಣಗಾನ ಮಾಡುವದರಲ್ಲೇ ಅವರು ಆನಂದ ಪಡುತ್ತಿದ್ದಾರೆ. ಹಾಗಿದ್ದರೂ ಅವರು ತಾವು ಪಟ್ಟೇ (ಶುದ್ಧ) ತಮಿಳರೆಂದು ಬಂಬಡ ಬಾರಿಸಿಕೊಳ್ಳುತ್ತಿದ್ದಾರೆ. ಶುದ್ಧ ತಮಿಳನು ಆನ್ಯ ಭಾಷೆಯ ಪದಗಳನ್ನು ಸೇರಿಸಿಕೊಳ್ಳಲು ಸಿದ್ಧನಾಗಲಿಕ್ಕಿಲ್ಲ. ಇಂತಹವರ ಮುಂದೆ ತಮಿಳನ್ನು ಬೆಳೆಸಲು, ಬಲಪಡಿಸಲು, ಶ್ರೀಮತಿಪಡುವರು ಹೇಳುತ್ತಿದ್ದಾರೆ! ಇದು ಬಂಡೆಯ ಮೇಲೆ ಕೊಡಹಾಲು ಸುರಿದಂತಲ್ಲವೇ?

ಪಟ್ಟೆ ತಮಿಳರ ಮೂದು ಮಾರಿಯುವಂತೆ ಶ್ರೀಮತಿಯವರು ಅದೇ ಸಂದರ್ಭ



ಕಾಗದಪತ್ರಗಳನ್ನು ಫೆರಿಯಾಗಿ ಅಂಚೆಗೆ ಹಾಕಿ

ಪ್ರತೀಚಿತ ಸಾಯಂಕಾಲದ ಮೊಲ್ಲೆ ರಾತ್ರಿಯಲ್ಲಿ ಕಾಗದಪತ್ರಗಳು ಅಂತಿ ಡಬ್ಬಿಗಳಲ್ಲಿ ಸಂಗ್ರಹವಾಗುತ್ತವೆ. ಹೀಗೆ ಒಮ್ಮೆಲೇ ರಾಶಿಯಾಗಿ ಬರೆದ ಪತ್ರಗಳನ್ನು ವಿಂಗಡಿಸಿ ವಿತರಣೆ ಮಾಡಬೇಕು. ಏನೂ ತಡವಾಗಿಹೂದು. ಅದು ಅಂಚೆ ಇಲಾಖೆಯ ಜವಾಬ್ದಾರಿ ಹೌದು

ಆದರೆ ನಿಮ್ಮ ಕಾಗದ ಪತ್ರಗಳನ್ನು ಅಂಚೆಗೆ ಹಾಕಲು ಕೊನೇ ಗಳಿಗೆಯ ತನಕ ಕಾಯಬೇಡಿ. ಅವನ್ನು ಹೇಗೆ ಡಬ್ಬಿಯಲ್ಲಿ ಹಾಕಿ. ಇದರಿಂದ ವಿಂಗಡಣೆಯ ಕೆಲಸದಲ್ಲಿ ಆಗಬಹುದಾದ ಅನಾವಶ್ಯಕ ವಿಳಂಬ ತಪ್ಪುತ್ತದೆ. ಮಾತ್ರವಲ್ಲ, ನಿಮ್ಮ ಪತ್ರ ಶೀಘ್ರದಲ್ಲಿ ಗುರಿ ತಲುಪುತ್ತದೆ.

ಈಗಲೇ ಅಂಚೆಗೆ ಹಾಕಿ. ನಂಜೆ ತನಕ ಕಾಯಬೇಡಿ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

67/537

ಪಲ್ಲಿ ಇಂದು ನಡೆಯುತ್ತಿರುವ ತಮಿಳು ಭಾಷಾಂತರದ ಕುರಿತೂ ಹೇಳಿರುವರು. ಆಂಗ್ಲ ಭಾಷೆಯಲ್ಲಿರುವ ಸರಕಾರೀ ದಾಖಲೆಗಳನ್ನು ತಮಿಳಿಗೆ ಭಾಷಾಂತರಿಸಿದಾಗ ಪೂರ್ವದ ಯಥಾರ್ಥತೆ ಯಾಗೂ ಸ್ಪಷ್ಟತೆ ಇರುವದಿಲ್ಲವೆಂಬುದು ಅವರ ಖಚಿತ ಅಭಿಪ್ರಾಯ. ಇದು ನಿಜವಿರಲೂ ಬಹುದು. ಅದಕ್ಕೆ ಕಾರಣ ತಮಿಳಿನಲ್ಲಿ ಶಬ್ದಗಳಿಗೆ ; ಕೊರತೆಯಿದೆಯೆಂದಲ್ಲ. ಆಂಗ್ಲ ಪದಕ್ಕೆ ಸರಿಯಾದ ಪದ ಪ್ರಯೋಗ ಮಾಡುವುದರಲ್ಲಿರುವ ಕ್ಲಿಷ್ಟತೆಯನ್ನು ಮರೆಯಲು ಸಾಧ್ಯವಿಲ್ಲ. ಹೌದು ಆಂಗ್ಲ ಪದಗಳಿಲ್ಲದ್ದಕ್ಕೂ ತಮಿಳಿನಲ್ಲೇ ಏಕೆ, ಇತರ ಭಾರತೀಯ ಭಾಷೆಗಳಲ್ಲೂ ಸರಿಯಾದ ಶಬ್ದಗಳಿರಬೇಕೆಂದೇನಿಲ್ಲ. ಅವೆಷ್ಟೋ ಭಾರತೀಯ ಭಾಷಾ ಶಬ್ದಗಳಿಗೆ ಸರಿಯಾದ ಆಂಗ್ಲ ಪದಗಳಿಲ್ಲದಿರುವಾಗ ಅದೂ ಸಾಧ್ಯವಿದೆ. ಆದೂರು ದೇಶ, ಸಂಪರ್ಕಕ್ಕೆ ಸಂಬಂಧ ಪಟ್ಟ ಶಬ್ದಗಳು ಇನ್ನೊಂದು ದೇಶದಲ್ಲಿರಲು ಸಾಧ್ಯ ಇರುವದಿಲ್ಲ. ಆದರೆ ಯಥಾರ್ಥತೆಗೆ ಯಥಾರ್ಥವಾಗಿ ಇದೇ ಒಂದು ಕಾರಣವಲ್ಲ. ಮೇಲೆ ತಿಳಿಸಿರುವಂತೆ ದ್ರಾ. ಮು. ಕ. ದವರು ಕೆಲ ಅಕ್ಷರಗಳನ್ನು ಬರೆಯದಿರುವಂತೆ ಹಲವಾರು ಭಾರತೀಯ ಶಬ್ದಗಳನ್ನು ಉಪಯೋಗಿಸುವದಿಲ್ಲ. ದ್ರಾ. ಮು. ಕ. ಮದಯಾಸಿಲ್ಲಿ ಆಡಳಿತ ಸೂತ್ರವನ್ನು ತೆಗೆದುಕೊಂಡಿದಂದಿನಿಂದ "ಸತ್ಯಮೇವ ಜಯತೇ" "ಆಕಾಶವಾಣಿ" ಮುಂತಾದುವುಗಳನ್ನು ಅದೇಶ ಮಾಡಿರುವದೇಯಲ್ಲದೆ, ಇನ್ನು ಬೇಗನೆ ಮರೆಯಲು ಸಾಧ್ಯವಿರುವದಿಲ್ಲ. ಅಷ್ಟೇ ಅಲ್ಲ ಬ್ರಾಹ್ಮಣರು ಉಪಯೋಗಿಸುವ ಹೇರಳವು ಪದಗಳನ್ನು ಈ ರುದ್ಧ ತಮಿಳಿನವರು ಉಪಯೋಗಿಸುವುದಿಲ್ಲ. ಬಸ್ಸುಕಡಲ್ಲಿ ಅಂತಹ ಶಬ್ದಗಳು ಸಿಗಲಾರವು. ಪರೀಕ್ಷೆಯ ಸಮಯದಲ್ಲಿ ಉತ್ತರ ಪತ್ರಿಕೆಗಳಲ್ಲಿ ಅಂತಹ ಪದಗಳನ್ನು ಪಯೋಗಿಸಿದಲ್ಲಿ ಅಂಕಗಳು ಅಷ್ಟೇ ಸಿಗುವುವೆ. ಇಂತಹವರ ಮುಂದೆ ತಮಿಳನ್ನು ಬೆಳೆಸಲು ಹೇಳಿದಲ್ಲಿ ಏನಾದರೂ ಪ್ರಯೋಜನವಾದೀತೆ?

ವಾಸ್ತವ ಪರಿಸ್ಥಿತಿ ಹೀಗಿದೆಯಾದರೂ ತಮಿಳುನಾಡಿನ ವಿದ್ಯಾ ಮಂತ್ರಿ ತಿರು ನೆಡುಂಚುಳ್ಳಿಯುಸ್ಸಾರವರು ಇಂಗ್ಲಿಷ ಮತ್ತೂ ಇತರ ಪರದೇಶಿ ಭಾಷೆಗಳ ಶಬ್ದಗಳನ್ನು ತಮಿಳಿಗೆ ಭಾಷಾಂತರಿಸಲು ಒಂದು ಸಂಯುಕ್ತ ಸಮಿತಿಯನ್ನು ರಚಿಸಲು ಮದ್ರಾಸು ಸರಕಾರವು ಪ್ರಯತ್ನಿಸುತ್ತಿರುವದಾಗಿ ತಮಿಳು ಮಹಾ ಸಭೆಯಲ್ಲಿ ತಿಳಿಯಪಡಿಸಿದರು. ಆಂಗ್ಲ ಅಲ್ಲದೆ ಅನ್ಯ ಭಾಷೆಗಳ ಭಾಷಾಂತರಕ್ಕೆ ಸರಕಾರ ಸಮಿತಿ ಸ್ಥಾಪಿಸಲು ಪ್ರಯತ್ನಿಸುತ್ತದೆ! [ಅದೆಂದು ಅವರ ಜನನವಾಗುತ್ತದೋ! ಅಲ್ಲಿಯವರೆಗೂ ದ್ರಾ. ಮು. ಕ. ಅಸನದಲ್ಲಿ ಇರುತ್ತದೇನು?] ಭಾರತೀಯ ಜನಪಂಥದ ಮಾಜೀ ನಾಯಕ ಡಾ| ರಘುವೀರ ಸೂಕ್ತ ಪದಗಳನ್ನು ಅಸ್ಪಷ್ಟ ಭಾರತೀಯ ಶಬ್ದಗಳನ್ನು ಸಿಡನೆ ತಯಾರಿಸಿ ಕೊಡುತ್ತಿದ್ದರು. ಅವರಿತ್ತಿರುವ ಶಬ್ದಕೋಶವು ಫಲವಾಗಿ ಭಾಷಾ ರಂಗಕ್ಕೊಂದು ಭಾರೀ ಕೊಡುಗೆಯೇ ಹೌದು. ಅದಕ್ಕಾಗಿ ನಾವೆಲ್ಲರೂ ಅವರಿಗೆ ಋಣಿಯಾಗಲೇಬೇಕು; ಆವಕಾಶ ಹಿಂದಿ ಮಾತಾಡುವವನು, ಉತ್ತರದವನು, ಆದುದರಿಂದ ರಘುವೀರ ಶಬ್ದಕೋಶ ಬೇಡವೆಂದುಬಿಟ್ಟು ದುರಭಿಮಾನದಿಂದ ಹೊಸ ಸಮಿತಿಯನ್ನು ಸ್ಥಾಪಿಸಲು ಶಕ್ಯವಿಲ್ಲವೆನ್ನೇ ನಿರೀಕ್ಷಿಸುತ್ತ ಕುಳಿತುಕೊಂಡಲ್ಲಿ ಯಾರಿಗೆ ನಷ್ಟ? ಹುನಾವಣೆಯ ಸಮಯದಲ್ಲಿ "ತಮಿಳ್" "ತಮಿಳ್"ಂದು ಹತ್ತರಿಸಿದವರಾಯಿತು. ಅಷ್ಟಂತರ ತಣ್ಣಗೆ ಇದ್ದು ಬಿಟ್ಟವರು ಇಂದಿನ ರಾಜಕೀಯವಾಗಿ ಬಿಟ್ಟಿದೆ.

ದ್ರಾ. ಮು. ಕ. ದ ಈ ಧೋರಣೆ ಅದರ ದಾಸ್ಯ ಮನೋಭಾವನೆಯ ದ್ಯೋತಕವೇ. ತಮಿಳನ್ನುಳಿಸುವ ಕಸಟ ನಾಳಿಕ ವಾಸ್ತಾಡುತ್ತ ಆಂಗ್ಲೇಯ ಭಾಷೆಯುಪ್ಪಾಡಿ ಆಂಗ್ಲೇಯರಾಗಲು ದ್ರಾ. ಮು. ಕ. ದವರು ಪ್ರಯತ್ನಿಸುತ್ತಿದ್ದಾರೆ. ತನ್ನಾಲಿ ರಾಮಕೃಷ್ಣನೇ ಸೇರಿತಿರುವಾಗ ಇವರಿಂದ ಅದು ಸಾಧ್ಯವಾದೀತೆ? ಆಂಗ್ಲ ವ್ಯಾಮೋಹದಿಂದಾಗಿ ಅವರಿಗೆ ಭಾರತೀಯ ಭಾಷೆಗಳ ಮೇಲೆ ದ್ವೇಷ ಉಂಟಾಗಿರುತ್ತದೆ. ಇಂಗ್ಲಿಷ್ ಇಂಗನ್ನು ತಿಂದ ಮಂಗನಂತೆ ಅವರಿಂದು ಆಟವಾಡುತ್ತಿದ್ದಾರೆ. ಈ ಬೂದು ಕಸಿಗಳು ತಾವು ಮಾತ್ರ (ತಮಿಳು ಭಾಷೆ ಮಾತಾಡುವ ದ್ರಾ. ಮು. ಕ. ಹಾಗೂ ತಿರು ರಾಜಾಜಿ ಗೋಷ್ಠಿ) ಕೆಡುತ್ತಿರುವದಲ್ಲದೆ, ಅವರು ಭಾರತೀಯ ಭಾಷಾ ವನ್ನವನ್ನೇ ನಾಶಮಾಡಲು ಪ್ರಯತ್ನಿಸುತ್ತಿದ್ದಾರೆ. ವಿಚಾರಶೀಲ, ದೇಶಭಕ್ತ ಜನತೆ ಅದಕ್ಕೆ ಮೂರುಹೋಗೀತೇ?

ಎಲ್ಲೆಲ್ಲಿ ಏನೇನು?

ಮಂಗಳೂರಲ್ಲಿ ಜನತಾ ಬಝಾರ್ ಉದ್ಘಾಟನೆ

ದ. ಕ. ಜಿಲ್ಲಾ ಸಂಪ್ಲಿಯ ಕೋಪರೇಟಿವ್ ಹೋಲ್ ಸೇಲ್ ಸ್ಟೋರ್ಸ್ ಲಿಮಿಟೆಡ್ ನವರು ಮಂಗಳೂರಲ್ಲಿ ನವೀನವಾಗಿ ರಚಿಸಿದ ಜನತಾ ಬಜಾರ್‌ನ ಉದ್ಘಾಟನಾ ಸಮಾರಂಭವು ತಾ. 12—4—68 ರಂದು ಸಹಕಾರಿ ಮಹಲ್‌ನಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ನಗರ ಸಭಾಪತಿ ಶ್ರೀ ಕೆ. ವಿಶ್ವನಾಥ ಕಾಮತರು ವಹಿಸಿದ್ದರು.

ಕುಮಾರಿ ರಂಜನಾರಾವ್ ಅವರಿಂದ ಪ್ರಾರ್ಥನೆಯೊಡನೆ ಸಂಘದ ಅಧ್ಯಕ್ಷ ಶ್ರೀ ಎಸ್. ನಿರ್ಮಲ್ಯಯ್ಯನವರು ಸ್ವಾಗತ ಭಾಷಣ ಮಾಡುತ್ತ ಸ್ಟೋರ್ಸ್‌ನ ಪೂರ್ವೇತಿಹಾಸವನ್ನು ವಿವರಿಸಿ ನ್ಯಾಯ ಬೆಲೆಯ ಸಮಸ್ತ ವಸ್ತುವ ದವೆಗಳನ್ನು ಒಂದೇ ಕಡೆಯಲ್ಲಿ ಒದಗಿಸಿಕೊಡುವುದೇ ಈ ಜನತಾ ಬಝಾರ್‌ನ ಉದ್ದೇಶವಾಗಿದೆಯೆಂದರು. ಉದ್ಘಾಟಕ ಶ್ರೀ ನಾಗೇಗೌಡರು ಜನತಾ ಬಜಾರ್‌ನ ಅವಶ್ಯಕತೆಯನ್ನು ಹೇಳಿ ಅದಕ್ಕೆ ಶುಭಕೋರಿದರು. ಅಧ್ಯಕ್ಷ ಶ್ರೀ ಕಾಮತರು ಬೆಲ್ಲಿಯಲ್ಲಿ ಸಹಕಾರಿ ಚಳುವಳಿಯನ್ನು ವಿವರಿಸಿ ದ| ಮೊಳಹಳ್ಳಿ ಶಿವರಾಯರು ಈ ಸ್ಟೋರ್ಸ್‌ಗಾಗಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ತಂದರು. ಸಂಸ್ಥೆಯ ಈಗಿನ ಅಧ್ಯಕ್ಷರೂ ಮಾಜಿ ಎಂ. ಎಲ್. ಸಿ. ಯವರೂ ಆದ ಶ್ರೀ ಎಸ್. ನಿರ್ಮಲ್ಯಯ್ಯನವರ ದಕ್ಷತೆಯನ್ನು ಕೊಂಡಾಡಿದರು. ಉತ್ತಮ ಆಡಳಿತ ವರ್ಗ ಹಾಗೂ ಸಿಬಂದಿಯಿಂದ ಈ ಸಂಸ್ಥೆಯು ರಾಜ್ಯದಲ್ಲಿಯೇ ಒಂದುಉತ್ತಮ ಸಂಸ್ಥೆಯಾಗಿದೆ ಎಂದು ಹೇಳಿ ಈ ಜನತಾ ಬಝಾರ್‌ಗೆ ಯಶಸ್ವಿಯನ್ನು ಕೋರಿದರು.

ಅಂತ್ಯದಲ್ಲಿ ಶ್ರೀ ಸಿ. ಶ್ರೀನಿವಾಸರಾಯರು ವಂದನೆಗಳನ್ನು ಅರ್ಪಿಸಿದರು.

ವಿವಾಹ ಸಮಾರಂಭ

ಕೆಮ್ಮಣ್ಣು ಪಡುಮನೆ ಅಣ್ಣಯ್ಯ ಶೆಟ್ಟಿ ಪುತ್ರಿ (ಎಲ್. ಐ. ಸಿ. ಯ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಜಯರಾಮ ಶೆಟ್ಟಿ ಸಹೋದರಿ) ಚಿ| ಶಾಂತಳನ್ನು ಯಡಪಾಲ ದೊಡ್ಡಮನೆ ದಿ| ಅಂಕಯ್ಯ ಶೆಟ್ಟಿ ಪುತ್ರ ಚಿ| ಕರುಣಾಕರ ಶೆಟ್ಟರು ತಾ. 7—4—68ರಂದು ಬೊಂಬಾಯಿಯ ಶಿವಾಜಿ ಪಾರ್ಕ್‌ನಲ್ಲಿರುವ ಜನತಾ ಸಮಾಜ ಸಭಾ ಸದನದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

o o o

ಬೊಂಬಾಯಿಯ ಶೆಟ್ಟೀಸ್ ಫಾರ್ಮಸ್ಯೂಟಿಕಲ್ಸ್ ಎಂಡ್ ಬಯೆಲೋಜಿಕಲ್ಸ್ ಲಿಮಿಟೆಡ್‌ನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಬಜ್ಜಾಲ್ ಸಂಜೀವ ಶೆಟ್ಟಿ ಪುತ್ರ ಚಿ| ಸದ್ಯನಾಥ ಶೆಟ್ಟಿ, ಶ್ರೀ ಬಿ. ರಮಾನಾಥ ಶೆಟ್ಟರ ಪುತ್ರಿ ಕುಮಾರಿ ಶಿರಿಯಮಳನ್ನು ತಾ. 19—4—68 ರಂದು ಹಿಕಂಡ್‌ಬ್ಯಾ ಪಟ್ಟುಮಲ್ ಮೆಮೋರಿಯಲ್ ಹಾಲ್, ಯುಸಿ ದೆಯರಾಮ್ ಸೇಠ ಸಿಲ್ ಕೊಲೇಜ್, ಬಾಂದ್ರಾ ಬೊಂಬಾಯಿ-50 ಇಲ್ಲಿ ವೈಭವದಿಂದ ವಿವಾಹವಾದರು. ವಿವಾಹದ ನಂತರ ಜರಗಿದ ಸತ್ಕಾರ ಸಮಾರಂಭಕ್ಕೆ ಭಾರೀ ಜನರು ಆಗಮಿಸಿ ವಧೂವರರನ್ನು ಆಶೀರ್ವದಿಸಿದ್ದರು.

"ಕಂಗೊಳಿಸುವ ಕಟೀಲು" ಉದ್ಘಾಟನೆ

ಕಿನ್ನಿಗೋಳಿ: ಜಿಲ್ಲೆಯ ಚರಿತ್ರಪ್ರಸಿದ್ಧ ಕ್ಷೇತ್ರ ಶ್ರೀ ಕಟೀಲಿನ ಕುರಿತು ಯುಗಪುರುಷ ಸಂಸ್ಥಾಪಕ ಶ್ರೀ ಕೊಡಕ್ಕೂರು ಆನಂದ ಪದ್ಮನಾಭ ಉಡುಪರು ಬರೆದ 'ಕಂಗೊಳಿಸುವ ಕಟೀಲು' ಎನ್ನುವ ಪುಸ್ತಕದ ಉದ್ಘಾಟನೆಯು ತಾ. 13—4—68ರಂದು ಶ್ರೀ ಬಿ. ರಾಜೀವ ಭಂಡಾರಿಗಳ ದಿವ್ಯಹಸ್ತದಿಂದ ಕಟೀಲುದೇವಾಲಯದಲ್ಲಿ ನೆರವೇರಿತು.

ಡಾ| ಗಜಾನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಮಾರಂಭದಲ್ಲಿ ಶ್ರೀ ಉಡುಪರು ಸ್ವಾಸ್ತ್ಯವಿಷಯಗಳ ಮಾತನಾಡಿದರು. ಶ್ರೀ ಕೆ. ಗೋಪಾಲಕೃಷ್ಣ ಅಕ್ಕಣ್ಣ, ಹಾಗೂ ಶಿವಾನಂದ ಮುಚ್ಚೋಪಾಧ್ಯಾಯ ಶ್ರೀ ಜಯರಾಮ ಶೆಟ್ಟರು ಭಾಷಣಗೈದು ಶ್ರೀ ಉಡುಪರ ಕರ್ತೃತ್ವವನ್ನು ಕೊಂಡಾಡಿದರು.

ಡಾ| ಗಜಾನಾಥ ಶೆಟ್ಟರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಕಟೀಲಿನ ಪರಿಚಯಕ್ಕೆ ಪುಸ್ತಕ 'ಕಂಗೊಳಿಸುವ ಕಟೀಲಿ'ನ ಔಚಿತ್ಯವನ್ನು ಒತ್ತಿ ಹೇಳಿದರು. ಶ್ರೀ ಕೊ. ಆ. ಉಡುಪರ ಧನ್ಯವಾದ ಸಮರ್ಪಣೆಯ ಅನಂತರ ಕಾರ್ಯಕ್ರಮ ಕೊನೆಗೊಂಡಿತು.

ವಚನ ಗಾಯನ ಸ್ಪರ್ಧೆ

ಉಡುಪಿ, ಎಕ್ಕಡಮಿ ಆಫ್ ಜನರಲ್ ಎಜ್ಯುಕೇಶನ್, ಸಂಸ್ಥೆಯ ಬೆಳ್ಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ, ಎಪ್ರಿಲ್ ದಿನಾಂಕ 28ರ ಶನಿವಾರ ಸಂಜೆ 9.30ಕ್ಕೆ ಉಡುಪಿ ಲಾ ಕಾಲೇಜಿನ ಆವರಣದಲ್ಲಿ ವಚನ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಶ್ರೀ ಬಸವೇಶ್ವರ, ಅಕ್ಕ ಮಹಾದೇವಿ ಮುಂತಾದ ಶಿವಶರಣರ ವಚನಗಳನ್ನು ಹಾಡಿ ಸ್ಪರ್ಧಿಸುವ ಹವ್ಯಾಸಿಗಳು (amateurs) ಎಪ್ರಿಲ್ 25ರ ಒಳಗೆ ತಲಪುವಂತೆ ತಮ್ಮ ವಿದ್ಯಾರ್ಥಿನಾಮಕಗಳನ್ನು ಕೆಳಕಂಡವರಿಗೆ ಕಳುಹಿಸತಕ್ಕದ್ದು. ಹೆಸರು, ವಯಸ್ಸು, ಸ್ಥಳ, ಮತ್ತು ವಿಳಾಸಗಳನ್ನು ಅರ್ಜಿಯಲ್ಲಿ ತಿಳಿಸಬೇಕು.

ಪ್ರಥಮ ಬಹುಮಾನ: ರೂ. 100=00
ದ್ವಿತೀಯ ಬಹುಮಾನ: ರೂ. 50=00
ತೃತೀಯ ಬಹುಮಾನ: ರೂ. 30=00

ಸರ್ವರಿಗೂ ಸ್ಪರ್ಧಾರ್ಥಿಗಳಿಗೆ ಬಹುಮಾನದ ಉಚಿತ ವಸತಿ ಮತ್ತು ಒದಗಿಸಲಾಗುವುದು.

ಕು. ಶಿ. ಹರಿದಾಸ ಭಟ್ಟ.
ಕಾರ್ಯದರ್ಶಿ,
ವಚನ ಗಾಯನ ಸ್ಪರ್ಧೆ,
ಮಹಾತ್ಮಾ ಗಾಂಧಿ ಕಾಲೇಜು,
ಉಡುಪಿ—2

ಭೂಕಂದಾಯ?

ಭೂಕಂದಾಯ ರದ್ದತಿಯ
ಘೋಷಣೆಯ ರದ್ದು
ಬಾಕಿಯೂದುದನೆಳೆಯೆ ಹಾರಿಹುದು
ಹದ್ದು
ಬಡ ಜನತೆಯನ್ನೊಲಿಸೆ ಮಾಡಿದೆವು ಆಜ್ಞೆ
ಕಂದಾಯ ರದ್ದತಿಯ ಕಾಗದ ಪತ್ರ ಕಾಣೆ

—ಮ. ಗೋ. ರಾಮ್

ಉಡ್ಪಿ ಮುನ್ಸಿಫ್ ಕೋರ್ಟನಲ್ಲಿ

O. S. No. 269/67

K. ವೆಂಕಟಗಿರಿ ಭಟ್ಟ—ವಾದಿ.

ಮತ್ತು

M. ರಾಮಚಂದ್ರ ರಾವ್, ಮಂಜುನಾಥಯ್ಯನವರ ಮಗ, ಉಡ್ಪಿ ತಾಲೂಕು ಮಣಿಪುರ ಗ್ರಾಮ — ಪ್ರತಿವಾದಿ

ಮೇಲಿನ ಪ್ರತಿವಾದಿಗೆ ಯಾ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿಯಾದ ಪ್ರತಿವಾದಿಯು ಕ್ರಯಕ್ಕೆ ಪಡೆದ ಕಾರಿನ ಬಾಬ್ತು ಬಾಕಿ ಹಣ ರೂಪಾಯಿ 1000.00 (ಒಂದು ಸಾವಿರಕ್ಕೆ ಪ್ರತಿವಾದಿಯು ವಾದಿಗೆ ಕೊಟ್ಟ ಸಿಂಡಿಕೇಟ್ ಚೇಂಕಿನ ಚೆಕ್ಕು Dishouner ಆದ ಬಾಬತ್ತಿನಲ್ಲಿ ಪ್ರತಿವಾದಿಯಿಂದ ವಾದಿಗೆ ಬರತಕ್ಕ ಸದ್ದಿ ರೂ. 1000.00 ಪ ಬಡ್ಡಿ ವಗೈರೆ ಕಳೆದು ರೂ. 1576.00ಕ್ಕೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಮೇಲಿನ ದಾವೆಯ ಪ್ರತಿವಾದಿಯು ಆಪ್ಪೀರು ನೋಟೀಸ್ ಬಗ್ಗೆ ತಾರೀಖು 6—6—68ಕ್ಕೆ ಮೇಲಿನ ಕೋರ್ಟನಲ್ಲಿ ತನ್ನಿಗೆ ಯುಟ್ಟಿರುವುದರಿಂದ ಪ್ರತಿವಾದಿಯು ಉದಾಸರಣೆ ವಗೈರೆ ಇರುವ ಸಂಗ್ರಿಯಲ್ಲಿ ಸದ್ದಿದಿನ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜ್ರಾಗಿ ಜ್ಯಾಬೀರು ಮಾಡಲಿಕ್ಕೆ ತಪ್ಪಿದ್ದಲ್ಲಿ ಸದ್ದಿ ದಾವೆ ಪ್ರತಿವಾದಿಯ ಗೈರು ಹಾಜ್ರಿಯಿಂದ ತೀರ್ಮಾನಿಸಲ್ಪಡುವದು ಎಂತಲೂ ಮೂಲ್ಯ ತಿಳಿಸಲಾಗುವುದೆ.

Sd/- B. Krishna Bhat
Advocate for Plaintiff

Udipi, 10—4—68

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ಬಿಲ್ಲ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯವಾಡಿ ವಿಚಾರಿಸಿಂ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಹಾಲುಕೋಟೆ, ಉಡುಪಿ, ದ. ಕ. ಕನ್ನಡ.

ಅನಂತನಾಥ ಪುರಾಣದ ಕಥೆ

(ಎರಡನೇ ಪುಟದಿಂದ)

ಭೂಷಿತನಾಗಿ ಸುನಂದೆಯನ್ನು ಸೆರೆಯಿಟ್ಟಿದ್ದ ಮಣಿಭದ್ರನ ಕೈ ಮಹಾ ವೈಭವದಿಂದ ಬರುತ್ತಾನೆ. ಚಂಡಶಾಸನ ಸುನಂದೆಯನ್ನು ಬಹುಕರಿಸಿಕೊಂಡು ಬಂದು ಒಂದು ದಿನ ಮಾತ್ರ ಆಗಿರುತ್ತದೆ. ಮಗಧ ಮಧ್ಯದಲ್ಲಿ ಸಿಂಹ ಚಂಡನ ಪ್ರತಿಭಟನೆ ಬಂದು ಒದಗಿರುತ್ತದೆ. ಅನಂತರ ರಾಜಧಾನಿ ತಲುಪಿದ ಮರುಳಳಿಗೆಯಲ್ಲಿಯೇ ವಸುಷೇಣ್ಯ ಕೋಟಿಗೆ ಮಂತ್ರಿಗೆ ಹಾಕಿಸುತ್ತಾನೆ. ಈ ದಿವಸದ ಹಗಲೆಲ್ಲಾ ಯುದ್ಧದಲ್ಲಿ ಮುಗಿದಿರುತ್ತದೆ. ಈ ಕಾರಣದಿಂದ ಚಂಡ ಶಾಸನ ಸುನಂದೆಯನ್ನು ಬೇಟೆಮಾಡಲು ಅವಳೊಡನೆ ಸಲುಗೆಯಿಂದ ಮಾತನಾಡಲು, ಅವಳ ಮನೋವ್ಯಥೆಯನ್ನು ಪರಿಹರಿಸಿ ಒಲಿಸಿಕೊಳ್ಳಲು ಅವಕಾಶ ಇಲ್ಲದಂತಾಗಿರುತ್ತದೆ ರಾತ್ರಿ ವಿರಾಮ ದೊರೆತ ಕಾರಣ ಚಂಡಶಾಸನ ಸುನಂದೆಯ ಬಳಿಗೆ ಬರುತ್ತಾನೆ. ಅನುಕಂಪದ ಮಾತುಗಳನ್ನಾಡುತ್ತಾನೆ. ತನ್ನ ವೈಭವವನ್ನು ಪ್ರದರ್ಶಿಸಿ, ಹಲ ಬಗೆಯ ಆಸೆಗಳನ್ನು ತೋರಿಸಿ ಅವಳ ಮನಸ್ಸನ್ನು ತನ್ನೆಡೆಗೆ ಸೆಳೆಯ ಕೊಳ್ಳಲು ಪ್ರಯತ್ನಿಸುವನು. ಆದರೆ ಸುನಂದೆ ಅವನ ಪ್ರಣಯ ಕೋರಿಕೆಯನ್ನು ತಿರಸ್ಕರಿಸುವಳು. ಕೋಪದಿಂದ ಕಿಡಿಕಿಡಿಯಾಗುವಳು. ಅವನ ಸಂಪತ್ತು ಅವಳ ಪಾಲಿಗೆ ಕಸಕ್ಕಿಂತಲೂ ಕಡೆಯಾಗುತ್ತದೆ. "ವಸುಷೇಣ ನೃಪನೆ ಕೈಬಿಡಿದ ಸುಂಗೊಡೆಯಂ, ಜಿತಾಗ್ನಿಗೂಡೆಯಂ' ಎಂದು ತನ್ನ ದೃಢ ನಿರ್ಧಾರವನ್ನು ತಿಳಿಸುತ್ತಾಳೆ ಸುನಂದೆ. ಅವಳು ನಿರಾಕರಿಸಿ, ಪ್ರತಿಭಟಿಸಿದಂತೆಲ್ಲಾ ಚಂಡಶಾಸನನ ಮೋಹ ದ್ವಿಗುಣಿತವಾಗುತ್ತದೆ. "ಬಿಡೆನಾಂ, ಪೀಂ ಸಯೆ ಸಾವೆನಸಲ್ಲದುಳಿಯೆಂ. ನೀನೊಲ್ದೊಡೇ ಸೊಲ್ಲದಿರ್ದೊಡಮೇಂ? ಅನೆಂಡಿಲ್ಲ ದೂಲ್ದೆಂ" ಎಂದು ತನ್ನ ಮನೋಧಿರ್ಧಾರವನ್ನು ವ್ಯಕ್ತಪಡಿಸುತ್ತಾನೆ ಚಂಡಶಾಸನ. ಸುನಂದೆ ತಳಗೆ ಒಲಿಯಲಿ, ಬಿಡಲಿ, ಸೆರೆಗೆ ಒಳಪಟ್ಟಾದರೂ ಅವಳು ತನ್ನ ಮನೆಯಲ್ಲಿದ್ದರೆ ಸಾಕು ಎಂದು ಹೇಳಿ ಹೊರಟು ಹೋಗುತ್ತಾನೆ.

ಚಂಡಶಾಸನ ಆ ರಾತ್ರಿಯೆಲ್ಲಾ ವಿರಹ ವೇದನೆಯಿಂದ ಪರಿತಪಿಸುತ್ತಾನೆ. ಅವನಿಗೆ ಒಂದು ಉಪಾಯವೂ ಹೊಳೆಯುತ್ತದೆ. "ವಸುಷೇಣ ಬದುಕಿರುವವರೆಗೆ ಸುನಂದೆ ತನ್ನನ್ನು ಒಲಿಯುವುದಿಲ್ಲ. ಅವನು ಸತ್ತನೆಂದು ತಿಳಿದ ಮೇಲಾದರೂ ಅವಳ ಹಟ ಹಳಿಮುಖವಾಗಬಹುದು" ಎಂದು ಯೋಚಿಸಿ ಪ್ರಾತಃಕಾಲವಾದೊಡನೆಯೇ "ತಾನು ರಾತ್ರಿ ಶತ್ರು ಸೈನ್ಯವನ್ನು ಮತ್ತು ಧ್ವಂಸಮಾಡಿ ವಸುಷೇಣನನ್ನು ಕೊಂದೆ" ಎಂದು ಸುದ್ದಿಯನ್ನು ಹುಟ್ಟಿಸುವನು. ಒಬ್ಬ ಇಂದ್ರಜಾಲಿಕ ಮಾಯೆಯಿಂದ ನಿರ್ಮಿಸಿದ ವಸುಷೇಣನ ಸಂದೇಶವನ್ನು ಹೆಗಲಿಸಿಕೊಂಡು ಸುನಂದೆಯಿದ್ದಲ್ಲಿಗೆ ಬಂದು "ವಸುಷೇಣನ ಪತ್ರ ಎಳೆಗೆಂದು ಸುನಂದೆ, ಸಿಡಿಲ್ಕೆ, ಮಾಳ್ಪ ಸೋವಡಿತಯನೀ ಒಸಿವ ಪಲಿಗ' ಎಂದು ಅವಳ ಮುಂದೆ ಕೇತಕ (ಮಲ್ಲಿಗೆ) ತಲೆಯನ್ನು ಹಾಕಿದನು. "ಶಿರಸ್ಸು ವಣಿ ಮುಕುಟ ಕೇಯೂರ, ಹಾರ ಇತ್ಯಾದಿಗಳು ತನ್ನ ವಲ್ಲಭನದು ಎಂದು ಗುರುತಿಸಿ ಸುನಂದೆ ಪತಿ ತೀರಿ ಹೋದನೆಂದು ದುಃಖಿಸುತ್ತಾಳೆ. ಮರುಕ್ಷಣದಲ್ಲಿಯೇ ಅವಳ ಆತ್ಮದೇಹವನ್ನು ಬಿಟ್ಟು ಹೊರಟು ಹೋಗುತ್ತದೆ.

ಉಪಾಯ ಫಲಕಾರಿಯಾಗುತ್ತದೆ, ಸುನಂದೆ ತನ್ನವಳಾಗುತ್ತಾಳೆ ಎಂದು ಭಾವಿಸಿದ್ದ ಚಂಡಶಾಸನ. ಆದರೆ ಸುನಂದೆಯ ಮರಣ ಅವನ ಪಾಲಿಗೆ ದೊಡ್ಡ ಪೆಟ್ಟಾಯಿತು ಅವನ ಅಸೆ. ಆಕಾಂಕ್ಷೆಗಳು ಮಣ್ಣಾಪಾಲಾದವು. ಅವನಿಗೆ ದುಃಖವೂ ಮೇರೆದಪ್ಪಿ ಬಂತು. ಸುನಂದೆಯ ಮರಣಕ್ಕಾಗಿ ಚಂಡಶಾಸನ ಶೋಕಿಸುತ್ತಾನೆ. ಅವಳ ಶವದ ಮೇಲೆ ಬಿದ್ದು ಅಪ್ಪಿಕೊಂಡು ಮೂರ್ಛೆ ಹೋಗುತ್ತಾನೆ. ಎಚ್ಚರಗೊಂಡು "ಬಾಯ್ಮುಚ್ಚಿದು ಮೋನದಿನೇ ಕಳೆದೇಂ ನೀಂ ಮನಂ ಪೋಡುವೆ? ಸಾವಿನಿಂ ಸರಳವಾಡುವರೇ?" ಎಂದು ಜನ್ಮಾಂತರದಲ್ಲಿ ಕೂಡದೂ ಅವಳ ನಿತ್ಯ ಸಂಗವು ದೊರೆಯದೆಂದು ಘೋರ ವ್ರತವೊಂದನ್ನು ನಿಶ್ಚಯಿಸುತ್ತಾನೆ. ಹೊಗೆಯ ಮಂಟಪದಲ್ಲಿ ಉರಿಯ ಹಾಸಿಗೆಯ ಮೇಲೆ ಅವನು, ಸುನಂದೆಯರ ಪ್ರಥಮ ಸಮಾಗಮ. "ನೀಂ ಸಯೆ ಸಾವೆನಲ್ಲದುಳಿಯೆಂ" ಎಂದು ಸುನಂದೆ ಎದುರಿನಲ್ಲಿ ಹೇಳಿದ್ದಂತೆಯೇ ಈಗ ಅವಳ ಮೃತ ದೇಹದೊಡನೆ ತಾನೂ ಚಿತೆಯೇರಿ ಪ್ರಾಣತ್ಯಾಗ ಮಾಡಬೇಕೆಂದು ಅಂತ್ಯ ಸಂಕಲ್ಪ ಮಾಡುತ್ತಾನೆ ಚಂಡಶಾಸನ. (ಪಂಡನು ಸತ್ತಾಗ ಚಂಡನಿ ಸಹಗಮನ ಮಾಡಿದ ಉದಾಹರಣೆಗಳು ಹಲವು. ಆದರೆ ಪ್ರಿಯೆ ಗತಿಸಲು ಅವಳ ಅವನ ಪತ್ನಿಯು ಅಲ್ಲ, ಅವನನ್ನು ಒಲಿದವಳೂ ಅಲ್ಲ—ಗಂಡನು ಸಹಗಮನ ಮಾಡುವುದು ಪ್ರಸಂಚತ್ತೆ ಹೊಸದು. ಇದು ಕವಿ ಜನ್ನನ ವಿನೂತನ ಕಲ್ಪನೆ.)

ಚಂಡಶಾಸನ ಸುನಂದೆಯನ್ನು ಹಿಂಬಾಲಿಸುವ ನಿರ್ಧಾರ ಮಾಡಿದ. ಅವನ ರಾಣಿಯರು ಅವನನ್ನು ಅನುಸರಿಸಲು ನಿಶ್ಚಯಿಸಿದರು. ತಾವು ಅವನ ನೆಳಲಂತೆ ಇರತಕ್ಕವರು—ಇನ್ನುಗೇಕೆ ಅವನ ಪಾಪದ ಮಾತು ಎಂದು ಆ ಪ್ರಮದೆಯರು ಸಹಗಮನಕ್ಕೆ ಅನುವಾದರು "ಮಲಿಂಗಮಲ್ಲಿಗೆಗಳ ಕೊಂಡೆಡೆ ಮಾಲೆ ಕೊರ್ಪುದು ಮಂತ್ರಿಗೆ"— ಆ ಸಂತ ಶ್ರೀ ಮತ್ತ್ರಿಯನಿಗೆ ಕೊರ್ಪುದು ಪ್ರಾಣಬಿಟ್ಟೆಳು.

ಸಹಗಮನದ ಸಂಭ್ರಮದಲ್ಲಿ ಮಗಧವು "ಕರುಣದ್ವೈತ ರೌದ್ರಾಕಾರ"ವಾಗಿದೆ. ಅದನ್ನು ಮುತ್ತಿಗೆ ಹಾಕಲು ಹೊರಟ ವಸುಷೇಣನಿಗೆ ಈ ವಾರ್ತೆ ಮುಟ್ಟುವುದು. ಈ ಸುದ್ದಿಯನ್ನು ತಿಳಿದು ದಿಗ್ಭ್ರಾಂತನಾಗುತ್ತಾನೆ ವಸುಷೇಣ. ಪ್ರಿಯೆಯ ಮರಣಾನಂತರ ತಾನು 'ಅಸುವೇಂದ ಬಾಳ್ವರಾರ್ಂತೆ ಇನ್ನು ಯಾವನಲ್ಲಿಗಾಗಿ ಕಾದಬೇಕು, ಯಾವ ಶತ್ರುಗಳನ್ನು ಕೊಲ್ಲಬೇಕು ಎಂದು ಭಾವಿಸಿ ಅವನು ನಿರ್ವೇಗದಿಂದ ತಪಸ್ಸಿಗೆ ತೆರಳುತ್ತಾನೆ. ಸುನಂದೆಯ ಮರಣ ವಸುಷೇಣ ಮತ್ತು ಚಂಡಶಾಸನರಿಬ್ಬರ ಮೇಲೂ ವಿಭಿನ್ನ ಪರಿಣಾಮವನ್ನು ಬೀರುತ್ತದೆ. (ಚಂಡಶಾಸನನ ಪ್ರಣಯ ಭಗ್ನವಾಗಿ ಸಿಕ್ಕಿದುದನ್ನೆಲ್ಲಾ ಭಗ್ನಮಾಡುವ ಮಹಾಜ್ವಾಲೆ, ವಸುಷೇಣನದು ಸ್ತಿಮಿತವಾದ ಪ್ರದೀಪ ಪ್ರಭೆ).

ಕಾವ್ಯದಲ್ಲಿ ಮುಂದೆ ವಸುಷೇಣರ ಜನ್ಮಾಂತರದ ಕಥೆಗೆ ಪ್ರಾಧಾನ್ಯತೆ ಇದೆ. ಸ್ತ್ರೀ ನಿಮಿತ್ತವಾದ ಬದ್ಧವೈರ ಬೇರೊಂದು ರೂಪದಲ್ಲಿ ಜನ್ಮಾಂತರಕ್ಕೆ ಬೆನ್ನಟ್ಟಿ ಬರುತ್ತದೆ. ವಸುಷೇಣ ವಸುದೇವ—ಸುರುಷೋತ್ತಮನಾಗಿ ಅವತರಿಸುತ್ತಾನೆ. ಮಧುಕೈಟಭ ದಾನವನಾಗಿ ಹುಟ್ಟಿದ ಚಂಡಶಾಸನ ಅವನಿಂದ ಸಂಹಾರ ಹೊಂದುತ್ತಾನೆ ಎಂಬುದು ಮುಂದಿನ ಕಥೆಯಲ್ಲಿ ಬರುವ ಮುಖ್ಯ ಸಂಗತಿ.

ಈ ಉಪಾಖ್ಯಾನದಲ್ಲಿ ಸುನಂದೆ, ಚಂಡಶಾಸನ ಮತ್ತು ವಸುಷೇಣರೇ ಮುಖ್ಯ ಪಾತ್ರಗಳು. ವಸುಷೇಣನ ಪಾತ್ರದಲ್ಲಿ ಮಹತ್ವವೇನೂ ಇಲ್ಲ. ಅದೊಂದು ಉಚಿತ ಪಾತ್ರವಷ್ಟೆ. ಆದರೆ ಸುನಂದೆ ಮತ್ತು ಚಂಡಶಾಸನರ ಪಾತ್ರಗಳು ಅದ್ವಿತೀಯ ಪಾತ್ರಗಳು. ಊಹೆಗೆ ಫಲುಕದ ಉನ್ನತ ಪಾತ್ರಗಳು. ಪಾತಿವ್ರತ್ಯದ ಅಚಲ ಸ್ತಂಭವನ್ನು ಅಪ್ಪಿ, ಅದಂಡಿಯಲ್ಲಿ ಪ್ರಾಣಬಿಡುತ್ತಾಳೆ ಸುನಂದೆ. ಅಲಭ್ಯಳಾದ ಅವಳನ್ನು ಅಪೇಕ್ಷಿಸಿ, ಮಿತ್ರ ದ್ರೋಹದಿಂದ ಮೊದಲಿಗೆ ಚಂಡಶಾಸನ ಎಲ್ಲರ ಕೋಪಕ್ಕೆ ಗುರಿಯಾಗುತ್ತಾನೆ. ಅನಂತರ ತನ್ನ ಕಲುಷಿತ ಪ್ರಣಯದ ಸತ್ವದಿಂದಲೇ, ತನ್ನನ್ನು ತಿರಸ್ಕರಿಸಿದ ಪ್ರಿಯಳು ಚಿತೆಯನ್ನೇರುವ ಲೋಕವಿಲಕ್ಷಣ ವರ್ತನೆಯಿಂದ ಚಂಡಶಾಸನ ಎಲ್ಲರ ಅನುಕಂಪಕ್ಕೆ ಪಾತ್ರನಾಗುತ್ತಾನೆ. ಜನ್ನ ಕವಿ ತನ್ನ ಅನಂತನಾಥ ಪುರಾಣದಲ್ಲಿ ಸುನಂದೆ ಮತ್ತು ಚಂಡಶಾಸನರ ಪಾತ್ರಗಳನ್ನು ಹೀಗೆ ರೂಪಿಸಿ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿದ್ದಾನೆ. ಸುನಂದೆ, ಚಂಡಶಾಸನರ ಪಾತ್ರಗಳು ಕಾವ್ಯದಲ್ಲಿ ಜೀವಂತ ಸತ್ವಪೂರ್ಣ ಸುಂದರ ಪಾತ್ರಗಳು ಎಂಬುದರಲ್ಲಿ ಎಡ ಮಾತಿಲ್ಲ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯವಿಧಿಯಾಗಿವೆ

ಗೇಲವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ನೆನೆಪಿನ ಮಣಿಗೆಗಳು

೩

ಪತ್ರಿಕೆಗಳಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡುವ ಒಂದೆರಡು ಪುಟಗಳು ಬರುವುದಂಟು. ಹಾಗೆ ಉತ್ತರ ಕೊಡುವ ವ್ಯಕ್ತಿ ಬಹಳ ಬುದ್ಧಿವಂತರೆಂದು ಸರ್ವ ಸಾಮಾನ್ಯವಾಗಿ ನಂಬಲಾಗುತ್ತದೆ. ಅಂತಹ ನಂಬುಗೆ ಸರಿಯಲ್ಲ.

ಇನ್ನೊಬ್ಬರಿಗೆ ಉಪದೇಶ ಹೇಳುವುದು ಸುಲಭವೆಂಬುದು ಗೊತ್ತಿದೆ ತಾನೆ? ಅದರ ಮೇಲೆ ಒರೆವಣಿಗೆಯಲ್ಲಿ ಉತ್ತರ ಕೊಡವಾಗ—ಚಟ್‌ಪಟ್ ಅಂತ ತಕ್ಷಣ ಕಡ್ಡಿ ಮುರಿದ ಹಾಗಿನ ಉತ್ತರ ಕೊಟ್ಟರೂ ಯೋಚಿಸಿ ವಿಧಾನವಾಗಿಯೇ ಬರೆದಿರುತ್ತಾರೆ. ಅವರು ತಮ್ಮ ನಿತ್ಯ ಜೀವನದಲ್ಲಿ ಅಷ್ಟು ಚತುರರಾಗಿರುವರೋ ಇಲ್ಲವೋ? ಅವರೂ ಪಮ್ಮ ನಿಮ್ಮ ಹಾಗಿನವರು ತಾನೆ? ಆದುದರಿಂದ ಅವರು ಕೊಟ್ಟ ಉತ್ತರಗಳನ್ನು ಕೇಳಿ ನಮ್ಮ ತಿಳುವಳಿಕೆಯೊಂದಿಗೆ ವಿವೇಚನೆ ಮಾಡಿಕೊಂಡು ಸ್ವೀಕರಿಸಿಕೊಳ್ಳುವುದು ಮೇಲು. ಅದರಲ್ಲಿಯ ಗುಣಗಳನ್ನು ನಮ್ಮ ಜೀವನದ ದಾರಿಗೆ ನೆನಪಿನ ದೀಪಗಳ ಹಾಗೆ ಮಾಡಿಕೊಳ್ಳುವುದು. ಜಾಣತನ. "ಅಬ್ಬ" ಎಂಥ ಬುದ್ಧಿವಂತಿಕೆಯ ಉತ್ತರ! ಅಷ್ಟ ಬುದ್ಧಿವಂತಿಕೆ ನಮಗೆ ಸುಟ್ಟರೂ ಬಾರದು." ಎಂದು ಕೊಳ್ಳುವುದು ಹೆಡ್ಡತನ. ಬುದ್ಧಿಯನ್ನು ಹರಿತ ಮಾಡಿಕೊಳ್ಳಬೇಕೆಂಬ ಮನಸ್ಸಿದ್ದರೆ ನಾವೂ ಬುದ್ಧಿವಂತರಾದೇವು. ಮನಸ್ಸು ಜಡವಾಗಿರಬಾರದು ಅಷ್ಟೆ. ಸುಮ್ಮನೆ ಮನರಂಜನೆಗಾಗಿ ಅದನ್ನು ಓದಿ ಮನ ಮುಟ್ಟಿ ಕುಳಿತು ಬಿಡುವುದಕ್ಕಿಂತಲೂ ಮನ ತೆರೆದು ವಿವೇಚನೆ ಮಾಡಿಕೊಳ್ಳುವುದರ ಮೂಲಕವಾಗಿ ನಮ್ಮ ಬುದ್ಧಿಯನ್ನು ಹರಿತಪಡಿಸಿಕೊಳ್ಳಬೇಕು.

ಮನರಂಜಿಸಿ ಕನ ಜಾಡಿಸುವುದೇ ಪ್ರಶ್ನೆ ಉತ್ತರಗಳ ಉದ್ದೇಶ.

—ಎಂ. ರಂಗರಾವ್.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.



NAVAYUGA 16-4-1968
Registered with the Registrar of News Papers for India under No. R. N. 3546/'57

REGD. No. B. G: 176
LICENCE No. 31
Licensed to Post without Prepayment

ಸತ್ಯ ಸಂಗತಿ

ದೂರವಾಣಿ ನಗರದ ಹತ್ತಿರದಲ್ಲಿ . . .

ಬೆಂಗಳೂರಿನ ದೂರವಾಣಿ ನಗರದಿಂದ ಕೃಷ್ಣರಾಜಪುರಕ್ಕೆ ಒಂದು ವೈಲಿ ದೂರ. ಸುಮಾರು ಬೆಳಗ್ಗೆ ೧ ಗಂಟೆ ಹನ್ನೊಂದು. ದಶಂಬರ 28ನೇ ತಾರೀಕು. ಸ್ಥಳ—ಇಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರ. ಒಂದೆಡೆ ಬೆಂಚಿನ ಮೇಲೆ ಮಹಿಳೆಯರು ಕುಳಿತಿದ್ದಾರೆ. ಇನ್ನೊಂದೆಡೆ ಗಂಡಸರು ಕುಳಿತಿದ್ದರು. ಕೇಂದ್ರದ ಶಸ್ತ್ರಚಿಕಿತ್ಸಾ ಕೋಣೆಯಿಂದ ಹಸನ್ಮುಖನಾಗಿ ಮುನಿಯಪ್ಪ ಹೊರ ಬರುತ್ತಿದ್ದ.

"ಈಗ ಹೇಗಿದ್ದಿ? ಎಂದರೆ, 'ಚನ್ನಾಗಿದ್ದೇನೆ' ಎಂದು ಮುನಿಸುಪ್ಪ ಪಕ್ಕದ ವಿಶ್ರಾಂತಿ ಕೋಣೆಗೆ ನಡೆದು ಮಲಗಿಕೊಂಡ. ಅಲ್ಲಿ ಮಲಗಿಕೊಂಡಿದ್ದ ಚಿಕ್ಕ ಮುನಿಸ್ವಾಮಪ್ಪ ನಾರಾಯಣಪ್ಪ ಹಾಗೂ ಲಕ್ಷ್ಮಯ್ಯ ಇವನನ್ನು ಸ್ವಾಗತಿಸಿದರು. ಇವರಲ್ಲಿ ಚಿಕ್ಕ ಮುನಿಸ್ವಾಮಪ್ಪನನ್ನು ಬಿಟ್ಟರೆ ಮಿಕ್ಕವರೆಲ್ಲ ಕೂಲಿಯಾಳುಗಳು. ದಿವಸಕ್ಕೆ ೩ ರೂ. ಸಂಪಾದನೆಯಿಂದ ಜೀವನ ನಾಗಿಸುವವರು. ಚಿಕ್ಕ ಮುನಿಸ್ವಾಮಪ್ಪನಿಗೆ ಮೂರು ಎಕರೆ ಜಮೀನಿದೆ. ಇದರ ಉತ್ಪತ್ತಿಯನ್ನು ಉಣ್ಣಲು ಐದು ಜನ ಮಕ್ಕಳು—ಜಮೀನಿನಲ್ಲಿ ಬೆಳೆಯುವ ರಾಗಿ, ಹೊಟ್ಟೆಗೆ ಸಾಕಾದರೆ ಬಟ್ಟೆಗೆ ಸಾಕಾಗುವುದಿಲ್ಲ. ಇದಕ್ಕಾಗಿ ಕೂಲಿ ಮಾಡಬೇಕು.

ಕೃಷ್ಣರಾಜಪುರದ ಸುತ್ತಮುತ್ತಲ ನೂರು ಹಳ್ಳಿಗಳಿಗೆ ಇದೊಂದೇ ಕೇಂದ್ರ. ಈ ಹಳ್ಳಿಗಳ ಒಟ್ಟು ಜನಸಂಖ್ಯೆ ಸುಮಾರು ನಾಲ್ಕು ಸಾವಿರ. ಇಲ್ಲಿ ಮಕ್ಕಳನ್ನು ಪಡೆಯಬಲ್ಲ ದಂಪತಿಗಳ ಸಂಖ್ಯೆ ಸುಮಾರು ಎಳುನೂರು.. ಇವರಲ್ಲಿ ಹೆಚ್ಚಿನವರಿಗೆ ಈಗಾಗಲೇ ನಾಲ್ಕೈದು ಮಕ್ಕಳಿವೆ. ಹಿಂದು, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಇತ್ಯಾದಿ ಬೇರೆ ಬೇರೆ ಧರ್ಮಗಳನ್ನು ಅವಲಂಬಿಸುತ್ತಿರುವ ಈ ಹಳ್ಳಿಗರಲ್ಲಿ ಹೆಚ್ಚಿನವರಿಗೆ ಕಾಲಿಗೆ ಎಳೆದರೆ, ತಲೆಗೆ ಇಲ್ಲ, ತಲೆಗೆ ಎಳೆದರೆ ಕಾಲಿಗೆ ಇಲ್ಲ ಎನ್ನುವ ಸಂಸ್ಥಿತಿ.

ನೂರು ಮೂರು ವರುಷಗಳ ಹಿಂದೆ ಕೃಷ್ಣರಾಜಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಟುಂಬ ಯೋಜನೆಯ ಬಗ್ಗೆ ಸೌಕರ್ಯವನ್ನು ಒದಗಿಸಲಾಗಿತ್ತು. ಹಳ್ಳಿಗರಿಗೆ ತಮ್ಮ ಬಡತನವನ್ನು ಹೆಚ್ಚದಂತೆ ತಡೆದು ಸಂಪಾದನೆಯನ್ನು ಉಳಿಸಿಕೊಳ್ಳಲು ದಾರಿಯೇ ಇದ್ದಿಲ್ಲ. ಎಷ್ಟು ರಷ್ಟಷ್ಟು ದುಡಿದರು ತಮಗೆ ನರ್ಷ ವರ್ಷ ಹುಟ್ಟುತ್ತಿರುವ ಮಕ್ಕಳಿಗೆ ಅನ್ನ ಬಟ್ಟೆಗಳನ್ನು ಒದಗಿಸಲು ಕಷ್ಟವಾಗುತ್ತಿತ್ತು. ಹೀಗೆ ಮಕ್ಕಳು ಹೆಚ್ಚುತ್ತಾ ಹೋದಂತೆ ಈ ಹಳ್ಳಿಗರು ಆಡಾಯವೇಷ ಹೆಚ್ಚಲಿಲ್ಲ.

ಆರೋಗ್ಯ ಸಿಬ್ಬಂದಿಯವರು ಈ ಸಮಸ್ಯೆಯನ್ನು ನಿವಾರಿಸಲು ಈ ಹಳ್ಳಿಗಳನ್ನು ಸಂಚರಿಸಿ—ಮಕ್ಕಳ ತಾಯಿತಂದೆಯರಿಗೆ ಕುಟುಂಬ ಯೋಜನೆಯ ರಹಸ್ಯಗಳನ್ನು ಮನವರಿಕೆ ಮಾಡುತ್ತಿದ್ದರು. ಆರಂಭದಲ್ಲಿ ಜನರಲ್ಲಿ ಭೀತಿ—ಸಂಶಯಗಳು ಎದ್ದು ಕಾಣುತ್ತಿದ್ದವು. ದಾಯಿಯ ನರ್ಸುಗಳ, ಆರೋಗ್ಯ ಸಂದರ್ಶಕರ ಮಾತುಗಳಲ್ಲಿ ಇವರಿಗೆ ನಂಬಿಗೆ ಹುಟ್ಟುತ್ತಿದ್ದಿಲ್ಲ.

ಹಳ್ಳಿಗಳಲ್ಲಿ ಕೆಲವು ಮುಖಂಡರಿರುತ್ತಾರೆ. ಈ ಮುಖಂಡರ ಮಾತೇ ಹಳ್ಳಿಗರಿಗೆ ವೇದವಾಕ್ಯ.

ಹಳ್ಳಿಯ ಮುಖಂಡರಿಗೆ ಆರೋಗ್ಯ, ಸಿಬ್ಬಂದಿಯವರ ಸಲಹೆ ಸರಿ ಹೋದುದೇ ತಡ, ಹಳ್ಳಿಗರಲ್ಲಿ ಎಲ್ಲಿಲ್ಲದ ಆಸಕ್ತಿ ತಲೆದೋರಿತು. ಕೆಲವೇ ದಿನಗಳಲ್ಲಿ ಒಬ್ಬರ ಬಳಿಕ ಇನ್ನೊಬ್ಬರಂತೆ ಆರೋಗ್ಯ ಕೇಂದ್ರಕ್ಕೆ ಬರತೊಡಗಿದರು. ಇಲ್ಲಿಗೆ ಬಂದು ಹೋದ ಮೇಲೆ ಅದರ ಪರಿಣಾಮ, ಲಾಭಗಳನ್ನು ನೆನಸಿ ತಮ್ಮ ಸುತ್ತಮುತ್ತಲ ಗೆಳೆಯರಿಗೂ ಈ ಬಗ್ಗೆ ಸಲಹೆ ಕೊಡಲಾರಂಭಿಸಿದರು. ಹಳ್ಳಿಗಳಲ್ಲಿ ಧೈರ್ಯ ತುಂಬಿತು. ಶಸ್ತ್ರ ಕ್ರಿಯೆ ಎಂದೊಡನೆಯೇ ಹೆದರುತ್ತಿದ್ದ ಹಳ್ಳಿಗರು ನಗುಮೊಗದಿಂದ ಸಾಲಾಗಿ ಕೇಂದ್ರಕ್ಕೆ ಬರತೊಡಗಿದರು.

ಹಂಡಸರ ಈ ಧೈರ್ಯ ಸಾಹಸಗಳು ಮಹಿಳೆಯರಲ್ಲಿ ಆಸಕ್ತಿಯನ್ನು ಹುಟ್ಟಿಸಿದವು. ವಂಶಧಾರಣೆಯಿಂದ ಏನೇನು ಅನರ್ಥವಾಗಲಿದೆಯೋ ಎಂದು ಶಂಕಿಸುತ್ತಿದ್ದ ಮಹಿಳೆಯರು ತಮ್ಮ ಕೈಗೂಸುಗಳನ್ನು ಎತ್ತಿಕೊಂಡು ಕೇಂದ್ರದ ಸಿಬ್ಬಂದಿಯ ಬಳಿಗೆ ಬಂದು ವಿಚಾರಿಸ ತೊಡಗಿದರು. ಒಬ್ಬಳ ಅನುಭವ ನಾಲ್ವರಿಗೆ ಧೈರ್ಯವಾಯಿತು. ಇಲ್ಲಿಗೆ ಬಂದು ಕಾಯುತ್ತಿದ್ದ ಮಹಿಳೆಯರನ್ನು ಪೋಡಿದರೆ ಸಂತತಿನಿಯಂತ್ರಣದ ಬಗ್ಗೆ ಈ ಮಹಿಳೆಯರಲ್ಲಿ ಉತ್ಸಾಹ ಎಷ್ಟರ ಮಟ್ಟಿಗೆ ಹೆಚ್ಚಿದೆ ಎಂದು ಗೊತ್ತಾಗುತ್ತಿತ್ತು.

ಇಷ್ಟರಲ್ಲಿ ದೂರವಾಣಿ ಕಾರ್ಖಾನೆಯ ರಕ್ಷಣಾ ಸಿಬ್ಬಂದಿಗೆ ಸೇರಿದ ವಿಲಿಯಂ ಫೆರ್ನಾಂಡೋ ಕೇಂದ್ರದ ಜಗಲಿಯನ್ನೇರಿ ಬೆಂಚಿನ ಮೇಲೆ ಕುಳಿತರೆ, ಅವನ ಹಿಂದೆ ಬಂದ ಅವನ ಗೆಳೆಯ ನರಸಪ್ಪ ಎದುರು ಪಡೆ ಬೆಂಚಿನ ಮೇಲೆ ಕುಳಿತ. ಸುಮಾರು ಎರಡು ತಿಂಗಳ ಹಿಂದೆ ಇಲ್ಲಿಗೆ ಬಂದು ತನ್ನ ಇಷ್ಟಾರ್ಥ ನೆರವೇರಿಸಿಕೊಂಡ ಫೆರ್ನಾಂಡೋ ಮೂರು ಮಕ್ಕಳ ತಂದೆ. ಆರು ಮಕ್ಕಳ ತಂದೆಯಾದ ತನ್ನ ಗೆಳೆಯ ನರಸಪ್ಪನ ಇಷ್ಟಾರ್ಥ ಸಿದ್ಧಿಗಾಗಿ ಈಗ ಇಲ್ಲಿಗೆ ಬಂದಿದ್ದಾನೆ. ಇವನು ದಾಖಲು ಮಾಡಿಸಿಕೊಂಡು ಶಸ್ತ್ರ ಚಿಕಿತ್ಸೆಯ ಕೋಣೆಗೆ ಹೋಗಬೇಕಷ್ಟೆ.

ವಿಲಿಯಂಗೆ ಹನ್ನೆರಡು ವರ್ಷಗಳ ಹಿಂದೆ ಮದುವೆಯಾಗಿತ್ತು. ಈತ ಭಾರತ—ಚೀನಾ ಹೋರಾಟ ಕಾಲದಲ್ಲಿ ನೇಫಾ ಗಡಿಯಲ್ಲಿದ್ದ. ಹೋರಾಟ ಮುಗಿದ ಮೇಲೆ ದೂರವಾಣಿ ಕಾರ್ಖಾನೆಯಲ್ಲಿ ಕಾವಲುಗಾರನಾದ. ತಪಗೆ ಎರಡು ಮಕ್ಕಳಾದಾಗಲೇ ತನ್ನ ಹೆಂಡತಿಗೆ ಇಷ್ಟು 'ಸಾಕೆಂದು" ಸಲಹೆ ಕೊಡುತ್ತಿದ್ದ. ಆದರೆ ಶಸ್ತ್ರ ಕ್ರಿಯೆಗೆ ಹೆದರಿದ ಆಕೆ ಸುಮ್ಮನಾಗಿದ್ದಳು. ಎರಡು ತಿಂಗಳ ಹಿಂದೆ ತಾನೇ ಆರೋಗ್ಯ ಕೇಂದ್ರಕ್ಕೆ ಹೋಗಿ ಬರುತ್ತೇನೆಂದು ತಿಳಿಸಿದಾಗ ಆತನ ಪತ್ನಿ ಮೌನದಿಂದ ಸಮ್ಮತಿಸಿದಳು.

ಮಂಗಳೂರಿನ ಕಂಕನಾಡಿಯ ಹತ್ತಿರದಲ್ಲಿ ಹುಟ್ಟಿಬೆಳೆದ ವಿಲಿಯಂ ಇಂದು ಬೆಂಗಳೂರಿನ ದೂರವಾಣಿ ಕಾರ್ಖಾನೆಯ ಕೆಲಸಗಾರರ ಸಹಾತಿಳ್ಳಿದ್ದಾನೆ. ಜನರಿಗೆಲ್ಲ ಅಚ್ಚುಮೆಚ್ಚಿನವನಾಗಿದ್ದಾನೆ. ಕುಟುಂಬ ಯೋಜನೆಯ ಪ್ರಚಾರದ ಬಗ್ಗೆ ದೀಕ್ಷೆ ತಳೆದ ಈ ಪಡುಹರೆಯದ ವಿಲಿಯಂ ತನ್ನ ಸ್ನೇಹಿತರನ್ನೆಲ್ಲ ಇಲ್ಲಿಗೆ ಕರೆತರುವೆನೆಂದು ಎದೆಕಟ್ಟಿ ಹೇಳುತ್ತಿದ್ದಾಗ, ಮುನಿಸುಪ್ಪ, ಮತ್ತು ಚಿಕ್ಕ ಮುನಿಸ್ವಾಮಪ್ಪ 'ನಮಸ್ಕಾರ ಹೋಗಿ ಬರುತ್ತೇವೆ' ಎಂದು ಕೈ ಮುಗಿದರು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಗಳಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರೆಡ್ಡಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡಸರು, ಗರ್ಭಿಣಿಯರು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಪಡಿಸುವ ವಿಧಾನವು ವಿವರಿಸಲ್ಪಟ್ಟ ಗೃಹಪೈದ್ಯ. ಹಿರಿದೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರತಿ ಬಿಡುಗಡೆ ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬಾಳ ಸಂಗಾತಿ

ಬೆಳಿಗಾರ ಬಣ್ಣದಿ
ಬರಿಕಾಲ ನೆಲದಿ
ಬಳುಕುತ್ತಾ ಬರುತಿಹಳು
ತಡವರಿಸಿ ನಡೆಯುವಳು
ತವಳದಲಿ ಕಣ್ಮನ ಚದುರಿಸಿಹಳು
ಹುಸಿ ಫಗೆಯ ಬೀರಿಹಳು
ಮನದಲ್ಲೆ ಶಪಿಸಿಹಳು
ಮನದಿನಿಯನ ಕಂಡಿಹಳು
ಅಳುಕುತ್ತ ಬಳುಕುತ್ತ
ನಾಚುತ್ತ ನಿಂತಿಹಳು
ಫಗೆಯನ್ನು ಬೀರಿಹಳು
ಫನಗಾಗಿ ಅವಳು
ಫಯವಿನಯ ತೋರಿಹಳು
ಪವಿತ್ರತೆಯಲಿ ನಿಂತಿಹಳು
ನಾನಾಗ ಅಂದೆ ಈಗೇಕೆ ಬಂದೆ?
ಭಯದಿಂದ ಬೆದರಿದಳು ಬಲುವಾಗಿ ಅವಳು
ಕೆಳೆಲ್ಲಾ ಕೆಂಪಿತ್ತು
ಕಾಲೆಲ್ಲ ನಡುಗಿತ್ತ
ಕೈ ಅತ್ತಾ ಸರಿದಿತ್ತ
ಮಾತೆಲ್ಲ ನಿಂತಿತ್ತ
ಶೃಪ್ತಿಯು ಕಂಡಿತ್ತ
ಮೌನವು ಸುತ್ತಿತ್ತ
ಮಳೆಯು ಬರುತ್ತಿತ್ತ
ಜ್ಞಾನತ್ತ ಅವಳತ್ತ ಬೇಸರಡೆಯಾಗಿ
ಹನಿಸೊನೆ ಮಳೆಯಲ್ಲಿ ಜೋರಾಗಿ ಹೋಗಿ
ಅತಿದೇವ ಸೇರಿದೆವು ಮನೆಯಲ್ಲಿ ಹೋಗಿ

—ಅ. ಗ. ಜಯಕುಮಾರ.

READ & ADVERTISE IN NAVAYUGA WEEKLY

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

25-4-1968

೨೦
ಪೈಸೆ

ಕಥಾ ಪ್ರಪಂಚ

ವೈಜಯಂತಿ

ಬರೆದವರು: ಶ್ರೀ ಕೆ. ಸಚ್ಚಿದಾನಂದ ಉಡುಪ.

ಅವನೊಬ್ಬ ವ್ಯಕ್ತಿ. ಹಳೆಯ ಮರದ ಬುಡದಲ್ಲಿ ಅವನದು ವಾಸ. ಅಲ್ಲೇ ಮೇಯುತ್ತಿದ್ದ ಆಡುಗಳಿಗೆಯ ಇವನ ಬಳಿಗೆ ಬರುತ್ತಿದ್ದುವು. ಆಗ ಇವನ ಅವುಗಳನ್ನು ಆಲಂಗಿಸುತ್ತಿದ್ದ. ಅವುಗಳ ಗಲ್ಲಕ್ಕೆ ಮುಖ ತಾಗಿಸಿ ಮುದ್ದಿಸುತ್ತಿದ್ದ. ಆಗಲೇ ವೈಜಯಂತಿ ಪಯಣವಾಗಿ ಬರುವ ಕಾಲ ಹೆಚ್ಚಿದ್ದು ಸಪ್ಪಳಗಳು ಕೇಳಿ ಬರುವುವು. ಪಕ್ಕನೆ ಹಿಂತಿರುಗಿ ನೋಡುವನು. ಪ್ರತಿದಿನವೂ ಶಿರದಲ್ಲಿ ರೊಟ್ಟಿ ತುಂಬಿದ ಬುತ್ತಿ ಅನ್ನದ ಸೀರಿನ ತಂಬಿಗೆ ಹಾಗೂ ಲೋಟದೊಂದಿಗೆ ಅವನ ಸಮೀಪಕ್ಕೆ ತಂದು ಇವುಗಳನ್ನೆಲ್ಲಾ ಕೆಳಗಿಟ್ಟು ಎರಡೂ ಕೈಗಳನ್ನು ಜೋಡಿಸುತ್ತಾ ವಿನಮ್ರವಾಗಿ—"ನಾನು ಬರುವ ವೇಳೆಯಲ್ಲೇನಂದರೂ ಹೆಚ್ಚು ಕಡಿಮೆಯಾಯಿತೇನು?" ಎಂದು ಬುತ್ತಿಯಂ ಬಾಯಿಯನ್ನು ಬಿಚ್ಚುವಳು.

ಇವಳ ಮೂಕ ಪ್ರೀತಿಯುದ್ಗೋತಕ, ಕಣ್ಣುಗಳಲ್ಲಿ ಪ್ರಶ್ನೆತೆಯ ದೌನ್ಯದ.

ಬಳಿಯಲ್ಲಿದ್ದ ಬಾವಿಯಿಂದ ನೀರನ್ನು ಸೇದಿ ತಂದು ಅವನ ಕೈಗಳನ್ನು ತೊಳೆದು "ಇದೋ ಊಟ ಮಾಡು" ಎಂದು ಶ್ರದ್ಧಾಪೂರ್ವಕವಾಗಿ ಅನ್ನುವಳು. ಅವನು ತನ್ನ ತೆರೆದ ಕಣ್ಣುಗಳಿಂದ ವೈಜಯಂತಿಯ ಶರೀರದ ಸಹಜ ಕಾಂತಿಯನ್ನು ಅವಳ ನಿರ್ವ್ಯಾಜ, ನಿರ್ವ್ಯಸನ, ನಿರ್ವಿಷ, ನಿರ್ವಿಕ್ರ ರೂಪದ ನಿರ್ಮಾಣವನ್ನು ಊಟದ ವೇಳೆಯಲ್ಲಿ ಕಂಡು ಸವಿಯುವನು.

ಆದರೆ ಅತ ಮೂಕನಾದ ಮೂಕ ವ್ಯಕ್ತಿ. ಇದರಿಂದ ಅವನ ಮನದ ಮನೆಯ ಹಂಚು ಬಲವಾದ ಬಿರುಗಾಳಿಯಿಂದ ಹಾರಿ ಹೋಗುವಂತಿತ್ತು.

"ಇದೇನು ಈ ತರಹ....ತಿನ್ನು...." ಎಂದಾಗ ವ್ಯಕ್ತಿ ರೊಟ್ಟಿಯನ್ನೊಮ್ಮೆ ನೋಡುವನು.

"ನಾನು ತಿನ್ನಿಸಲೇ?" ಎನ್ನುತ್ತಾ ವೈಜಯಂತಿ ರೊಟ್ಟಿಯನ್ನು ಪುಂಡು ಮಾಡುತ್ತಾ ಒಂದೊಂದೇ ತುಂಡನ್ನು ಬಾಯಿಗೆ ಹಾಕುವಳು. ಇವಳ ಕೈಯನ್ನು ದೂರ ಸರಿಸಿ ಸಂತೋಷಭರಿತನಾಗಿ ತಾನೇ ಸ್ವತಃ ತಿನ್ನ ತೊಡಗುವನು. ಮತ್ತೊಮ್ಮೆ ವೈಜಯಂತಿಯನ್ನು ನೋಡುವನು. ಆಗ ವೈಜಯಂತಿ ಮೊಸರಿನ ಕುಡಿಕೆಯನ್ನು ಅವಳ ಮುಂದಿಟ್ಟು ನೀರು ತರಲು ಧಾವಿಸುವಳು. ನೀರಿನಿಂದ ಅವನ ಕೈ ತೊಳೆಸುತ್ತಿಯನ್ನು ಮುಚ್ಚಿ ಬಳಿಯಲ್ಲೇ ಕುಳಿತು ಕತೆಯನ್ನು ಬೀಳಲು ಪ್ರಾರಂಭಿಸುವಳು.

ಇವಳು ಹತ್ತಿರದ 'ಕೋಡು' ಹಳ್ಳಿಯ ಸ್ತ್ರೀಮಂತ ವ್ಯಕ್ತಿಯ ಮಗಳು. ಮದುವೆಯಾದ ಸ್ವಂತರ ಗಂಡು ಕೋಪಗೊಂಡು ಇವಳನ್ನು ಇವಳ ತಾಯಿಯ ಮನೆಗೆ ಹಿಂತಿರುಗಿಸಿದನು. ಇನ್ನೂ ಒಂದೆರಡು ವರುಷವಾದರೂ ಗಂಡ ಇವಳನ್ನು ಕರೆದುಕೊಂಡು ಹೋಗಲು ಬರಲೂ ಇಷ್ಟ.

ವೈಜಯಂತಿ ಸದಾ ಈ ವ್ಯಕ್ತಿಯ ಬಳಿಗೆ ಬಂದು ಸೇವೆ ಮಾಡುವ ಹವ್ಯಾಸವನ್ನಿಟ್ಟುಕೊಂಡಿದ್ದಳು. ಆದರೆ ಈ ವ್ಯಕ್ತಿ ಮೂಕನಾಗಿದ್ದ. ಏಕಾಂತದಲ್ಲಿ ಕುಳಿತು ತನ್ನ ಕುರಿತ ಆಲೋಚಿಸುತ್ತಿದ್ದ. ವೈಜಯಂತಿಯು ಎಲ್ಲಾ ಕತೆಗಳನ್ನು ಕಿವಿಗೊಟ್ಟು ಕೇಳುತ್ತಿದ್ದ. ಅವಳು ಹಿಂತಿರುಗಿ ಹೋದಾಗ ನಿರಾಶನಾಗಿ ಬಿಡುವನು.

ಅವನು ಏನು? ಏನಲ್ಲ! ಅವನೊಬ್ಬ ಮಹಾಪುರುಷ ಅಥವಾ ದೇವನ ಸೇವಕ ಎನ್ನಬಹುದು. ಆದರೆ ಬಾಯಿಬಾರದ ಮೂಕ! ನೀರಲ್ಲಿ ತನ್ನ ಮುಖವನ್ನು ಕಂಡಾಗ ನಗುವನು. ಮುಖ ಮಾಡಿದ ಕಾಯಿ ಗೊಟೆಯಂತಿತ್ತು. ಮೂಗು ಚಪ್ಪಟೆ, ಕಾಲು ಮೊಟಕು; ಕಣ್ಣು ವಿಕಾರ.... ಅವನ ಕೈಯಲ್ಲೊಂದು ಮರದ ಕಡ್ಡಿಯ ಲೇಖನಿ—ಹಾಗೂ ಒಂದಿಷ್ಟು ಅರೆತೆರನಾದ ಶಾಯಿ. ಅತ್ತಿತ್ತ ಸಂಚರಿಸುವ ಜನರ ದೃಷ್ಟಿ ಇವನ ಕಡೆಗೆ ಬಿದ್ದಾಗ ಒಂದಾಣೆ—ಎರಡಾಣೆ ಎಂದು ಪುಡಿ ಕಾಸನ್ನು ಬಿಸಾಡುವರು ಯಾ, ಒಂದಿಷ್ಟು ಅನ್ನವನ್ನು ಈಯುವರು. ತನ್ನ ಕೃತಜ್ಞತೆಯನ್ನು ಕೈಯ ಮೇಲೆ ಶಾಯಿಯ ಮೂಲಕ ಲೇಖನಿಯನ್ನು ಉಪಯೋಗಿಸಿ ಸೂಚಿಸುವನು. ಇವನು ದೇವನ ಸೇವಕನೆಂತಲೋ ಅಥವಾ ಬೇರೆ ಅರ್ಥದಿಂದಲೋ ಏನೋ, ಜನರು ಮತ್ತಾ ಮತ್ತೂ ಪುಲಕಿತರಾಗಿ ಅವನನ್ನು ಆದರದಿಂದ ಅಭಿಮಾನಿಸುವರು.

ತಿಂಗಳುಗಳು ಉರುಳಿದುವು. ಆದರೂ ವೈಜಯಂತಿ ಊಟವನ್ನು ಈಯುವುದನ್ನು ಬಿಟ್ಟುಬಿಡಲಿಲ್ಲ. ಎಂದಿನಂತೆಯೂ ಈಗಲೂ ತನ್ನ ಮನಸ್ಸಿನಲ್ಲಿರುವ ಗುಪ್ತ ಅಥವಾ ಬೇರಾವ ವಿಚಾರಗಳನ್ನು ಇವನಲ್ಲಿ ದಿವರಿಸುವಳು. ಒಂದೊಮ್ಮೆ ವೈಜಯಂತಿ ತನ್ನ ಬಳಿಗೆ ಬಂದು ಮಾತನಾಡದಿದ್ದಲ್ಲಿ—ಊಟಕೊಡದಿದ್ದಲ್ಲಿ ಸೊಂದು ಕೊಳ್ಳುವನು.

ಕಲಪೊಮ್ಮೆ ಗಂಡನ ಮನೆಯಿಂದ ಬರುವ ಕಾಗದ ಪತ್ರಗಳನ್ನು ಕಂಣೀರಿಳಿಸುತ್ತಾ ಇವನೆದುರಲ್ಲಿ ಓದುತ್ತಿದ್ದಳು. ಮತ್ತೊಮ್ಮೆ ಇವನ ಕೂಡೆ ಪ್ರೀತಿ ವಿಶ್ವಾಸದ ಮಾತುಕತೆಯನ್ನಾಡುವಳು. ಆಗ ಸ್ವತಃ ನಗುವಳು ಹಾಗೂ ಅವನನ್ನು ನಗಿಸುವಳು. ಮಗುದೊಮ್ಮೆ "ನಾನೆಲ್ಲಿಯೂ ದೂರ ಇಲ್ಲಿಂದ ಹೊರಟು ಹೋದರೆ—ಗಂಡನ ಮನೆಯನ್ನು ಸೇರಿದರೆ ನಿನಗೆ ರೊಟ್ಟಿಯನ್ನು ತಯಾರಿಸಿ ತಿನ್ನಿಸುವರಾ" ರೆಂದು ಪ್ರಶ್ನಿಸುವಳು.

ಆದರೆ ಅವನು ಈ ಪ್ರಶ್ನೆ ಕೇಳಿದರೂ ಕೇಳಿದಂತೆ ವರ್ತಿಸುವನು. ಅವನಿಗೆ ಈ ಪ್ರಶ್ನೆಗೆ ಉತ್ತರ ಕೊಡಲೂ ಅಸಾಧ್ಯ.

ಇದೇ ತರಹ ಮತ್ತು ಅನೇಕ ದಿನಗಳು ಕಳೆದುವು.

ವೈಜಯಂತಿ ಪ್ರತಿದಿನದಂತೆ ಇಂದು ಬಂದಾಗ ಮೂರ್ಛಾಜಾಗಿದ್ದಳು. ಇಂದು ಅವಳು ಹೆಚ್ಚಿನ ಸೌಂದರ್ಯವನ್ನು ಹೊಂದಿದ್ದಳು. ಅವಳ ಮುಖ ಅರಳಿದ ಹೂವಿನಂತಿತ್ತು. ಶಿರದಲ್ಲಿ ಮಲ್ಲಿಗೆಯ ಹೂವಿನ ಎಸಳುಗಳು ಘಮಿಸುತ್ತಿದ್ದುವು. ಬರುತ್ತಲೇ ಇವನ ಕಾಲಿಗೆರಗಿದಳು. ಮತ್ತೆ ಮನಃ ಕೈಜೋಡಿಸಿ "ತಂದ ಊಟವನ್ನು ಸ್ವೀಕರಿಸು" ಎಂದು ಪ್ರಾರ್ಥಿಸಿಕೊಂಡಳು. ಅದು ಬರೇ ರೊಟ್ಟಿಯಿಂದ ಕೂಡಿದ ಊಟವಾಗಿರದೆ. ಲಡ್ಡು ಪಾಯಸಗಳಿಂದೊಡಗೂಡಿದಭಕ್ಷ್ಯಭೋಜ್ಯವಾಗಿತ್ತು. ಕೈತೊಳೆಯಲೆಂದು ನೀರು ತರಲು ಬಾವಿಯ ಕಡೆಗೆ ಧಾವಿಸಿದಳು.

ಅವಳು ನೀರು ಸೇದುತ್ತಿರುವಾಗ ಅಂಗಾಂಗಗಳೆಲ್ಲವೂ ಮಿಗ ಮಿಗಸೆಂದು ಹೊಳೆಯುತ್ತಿದ್ದುವು. ತಲೆಯ ಮಲ್ಲಿಗೆ ಹೂವು ಜಗಜಗನೆಂದು ಮಿಸುಗುತ್ತಿತ್ತು. ಈ ಸೌಂದರ್ಯವನ್ನು ಕಂಡ ಆ ವ್ಯಕ್ತಿಗೆ ಯಾವ ಹೊತ್ತು ತುಂಬಿದಾರದ ಸಂತೋಷ—ಉಲ್ಲಾಸ ಇಂದು ತುಂಬಿ ಬಂತು! ಅವನ್ನೊಮ್ಮೆ ತನ್ನ ಬಾಹುಗಳೆಡೆಯಲ್ಲಿ ಆಲಿಂಗಿಸಿ ಮುದ್ದಿಡಬೇಕೆಂದು ಅವನ ಮನಸಲ್ಲಿ ಅಭಿಲಾಷೆ ಹುಟ್ಟಿತು!

ವೈಜಯಂತಿ ಹಿಂತಿರುಗಿ ಬಂದಳು. ಅವನ ಕೈಗಳನ್ನು ತೊಳೆದು ಉಣ್ಣಿಸಲು ತೊಡಗಿದಾಗ ಅತನು ಬೇರೆ ಕಡೆಗೆ ಮುಖ ತಿರುಗಿಸಿದನು.

"ಏನು ಈ ರೀತಿ! ಊಟಮಾಡುವುದಿಲ್ಲವೆ?" ವೈಜಯಂತಿ ಆಶ್ಚರ್ಯದಿಂದ ಕೇಳಿದಳು.

ಅವನು ಸುಮ್ಮನಾದ.

"ಮಹಾಮೌನಿ.... ನಾನು ನಿನಗಾಗಿ ಆಸಕ್ತಿಯಿಂದ ಈ ರೀತಿಯ ಊಟವನ್ನು ತಯಾರಿಸಿ ತಂದಾಗ ಹೀಗೆ ಮಾಡುವುದೇ?" ಎಂದು ಒಂದೊಂದೇ ತುತ್ತು ಅನ್ನವನ್ನು ವೈಜಯಂತಿ ಅವನಿಗೆ ತಿನ್ನಿಸಿದಳು. ಆಗಲೂ ಅವನು ತಿನ್ನಲು ಹಿಂಜರಿದನು.

"ಇಂದು ನಿನಗೆ ಹಸಿವಾಗಿಲ್ಲವಾದರೂ ಒಂದಿಷ್ಟುತುತ್ತು ಅನ್ನವನ್ನು ತಿಂದು ನನ್ನನ್ನು ಕೃತಾರ್ಥಳಾಗುವಂತೆ ಮಾಡು. ಇಂದು ನಾನು ಸಂತುಷ್ಟಳಾಗಿದ್ದೇನೆ. ಇಂದು ನಿನ್ನ ಚರಣ ಕಮಲಗಳನ್ನು ಪೂಜಿಸಲು ಬಂದ ನನ್ನನ್ನು ಈ ರೀತಿ ಎಸಗುವುದೇ?" ಎನ್ನುತ್ತಾ ಮತ್ತೆರಡು ತುತ್ತುಗಳನ್ನು ಉಣ್ಣಿಸಿದಳು.

"ದೇವಾ.... ಇದು ನನ್ನ ಕೊನೆಯ ಕಾಣಿಕೆ, ನಿನಗೆ. ಇಂದು ಸಾಯಂಕಾಲ ನಾನು ಗಂಡನ ಮನೆಗೆ ಹೋಗುವವಳು...."

ಅವನು ಒಂದು ಬಾರಿ ಅವಕ್ಕಾದನು. ತಲೆಯು ಭಾರವಾದಂತೆ ಕಂಡಿತು. ತಲೆಯ ಮೇಲೆ ಮರುಳು ಲೋಕವೇ ಕೆಳಗುರುಳಿ ಬೀಳುವಂತೆ ಭಾಸವಾಯಿತು. ಊಟವನ್ನು ಬಿಟ್ಟು ಮತ್ತೊಂದು ವಗ್ಗುಲಿಗೆ ವಾಸ ಮಾಡಿ ಕುಳಿತ.

"ಊಟ ಮಾಡುವುದಿಲ್ಲವೇನು? ಇದೋ ತಿನ್ನು. ನಾನಿಲ್ಲಿ ಹೆಚ್ಚು ಕಾಲ ಕಳೆಸುವಂತಿಲ್ಲ." ವೈಜಯಂತಿ ಅಂದಳು

ಅವನು ಊಟದ ತಟ್ಟೆಯನ್ನು ದೂರ ಸರಿಸುತ್ತಾ ದುಃಖವನ್ನು ಪ್ರಕಟಿಸುತ್ತಾ ಅಲ್ಲಿಂದ ದೂರ ಸರಿದನು.

ವೈಜಯಂತಿ ಮೂಕಿತ್ತಲಿಲ್ಲ. ಸುಮ್ಮಗೆ ಅವನನ್ನೇ ನೋಡುತ್ತಾ ಕುಳಿತಳು. ಅವಳ ಕಣ್ಣುಗಳಿಂದ ಕಂಣೀರು ಬಿಂದುಗಳು ಕೆಳಗುದುಳಿದುವು.

ಮತ್ತೊಮ್ಮೆ, ಕ್ಷಣಕಾಲ ಕುಳಿತು ಯೋಚಿಸ ತೊಡಗಿದಳು.

"ನಿನಗೆ ಹಾಳಿಯಿಂದ ಊಟತರುವವರಾರೆಂದು ಯೋಚಿಸುತ್ತಿದ್ದೆ. ಆದರೆ ಅಂತರ್ಯಾಮಿಯಾದ ನೀನು ಇಂದು ನನ್ನ ಭೋಜನವನ್ನು ತಿರಸ್ಕರಿಸಿದೆ. ಇದರಿಂದ ನಾಳೆಯ ಕರ್ತವ್ಯ ಯೋಚಿಸುವುದು ಅನಿವಾರ್ಯವೆಂದು ಈಗ ತಿಳಿಯಿತು. ನನ್ನನ್ನು ಕ್ಷಮಿಸಿಬಿಡು...."

ವೈಜಯಂತಿ ಮರಳಿಹೋಗಲು ಅಣಿಯಾದಳು. ಅವನ ಕಾಲಿಗೆರಗಿ ಬುತ್ತಿಯನ್ನು ಶಿರದಲ್ಲಿಟ್ಟು ಕಣ್ಣೀರು ಒರಸುತ್ತಾ, ಅವಳನ್ನು ಕೊನೆಯಬಾರಿಗೆ ನೋಡುತ್ತಾ ನುಂದೆ ಹೆಜ್ಜೆ ಹಾಕಿದಳು. ತಂಗೆಲೆಗಳು ವೈಜಯಂತಿ ಹಿಡಿಗೆಗೆ ಚರಚರ ಶಬ್ದ ಮಾಡುತ್ತಿದ್ದುವು. ಸೂರ್ಯನ ಬಿಸಿಲನ್ನು ತಡೆಯಲು ಅಸಾಧ್ಯವಾಗಿತ್ತು.

ಅವನು ವೈಜಯಂತಿಯನ್ನು ಅವಳ ಹಿಡಿಗೆ - ಹಾವಭಾವವನ್ನು ನೋಡುತ್ತಾ

(ಹನ್ನೊಂದನೇ ಪುಟ ನೋಡಿರಿ)

ಸುಮ್ಮಸ್ಥಿತಿ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 87 ಶಾಖೆಗಳಿಂದ ಹೆಚ್ಚಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ,

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ;

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—3

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಫೋನ್ 526

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೩೪	೨೫—೪—೧೯೭೮	No. 34

ಹಿರಿದೆನಿಸಿದ ಹೊಣೆ

ಮೈಸೂರು ವಿಧಾನ ಸಭೆಯ ಅಧಿವೇಶನ ಮುಗಿಯಿತು. ಜತೆಗೆ ನಿಜಲಿಂಗಪ್ಪನವರೂ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸುವ ಕಾಲ ಸನ್ನಿಹಿತವಾಯಿತೆಂಬುದು ಮುನಃ ಅವರಿಂದಲೇ ಖಚಿತಗೊಳಿಸಲ್ಪಟ್ಟಿತು; ಕಾಂಗ್ರೆಸ್ ಅಧ್ಯಕ್ಷರು, ಮುಖ್ಯಮಂತ್ರಿ ಪದವಿ ಬಿಡುವ ಕುರಿತು ಕಾಂಗ್ರೆಸಿಗರಿಗಿಲ್ಲದ ಆತುರ ವಿರೋಧ ಪಕ್ಷಗಳವರಿಗೆ. ಅಂತೂ ನಿಜಲಿಂಗಪ್ಪನವರ ಬಾಯಿಯಿಂದಲೇ ಅವರು ಆಶ್ವಾಸನೆ ಪಡೆದರು. ವಿಧಾನ ಸಭೆಯ ಅವರಿಗೆ ಶುಭ ಕೋರಿ ವಿದಾಯ ಕೋರಿದೆ. ಅಂತೆಯೇ ಕರ್ನಾಟಕದ ಸಮಗ್ರ ಜನತೆ ಕೂಡಾ.

ಕಾಂಗ್ರೆಸ್ ಅಧ್ಯಕ್ಷ ಪೀಠವನ್ನು ಏರಿದ ಪ್ರಥಮ ಕನ್ನಡಿಗನ ಗೌರವ ನಿಜಲಿಂಗಪ್ಪನವರ ಪಾಲಿಗೆ ಬಂದಿದೆ. ಈ ಗೌರವ ಕೇವಲ ಸಂಖ್ಯಾತ್ಮಕವಲ್ಲ. ಈ ಗೌರವ, ಹಬ್ಬದ ಇಂದಿನ ಪರಿಸ್ಥಿತಿಯಲ್ಲಿ ಮುಳ್ಳಿನ ದಾರಿಗೆ. ಇಂದು ದೇಶದ ಸಂಧಿಕಾಲವೊಂದನ್ನು ಎದುರಿಸುತ್ತಿದೆ. ಅಂತೆಯೇ ಕಾಂಗ್ರೆಸ್ ಕೂಡಾ. ನಾಲ್ಕನೇ ಮಹಾ ಚುನಾವಣೆಯ ಬಳಿಕದ ವಿದ್ಯಮಾನಗಳು ದೇಶದ ಸಂಧಿಕಾಲಕ್ಕೆ ಸಾಕ್ಷಿ ಹೇಳುತ್ತಿವೆ. ಕಾಂಗ್ರೆಸ್ಸಿಗಂತೂ ಈ ಚುನಾವಣೆ ಹಿಂದೆಂದೂ ಕಲಿಸದ ಪಾಠವನ್ನು ಕಲಿಸಿದೆ. ಕಾಂಗ್ರೆಸ್ಸಿನ ಪ್ರಭಾವ ಹಲವು ರಾಜ್ಯಗಳಲ್ಲಿ ಶಿಥಿಲವಾಗಿದೆ. ಶಿಥಿಲವಾದ ಪ್ರಭಾವವನ್ನು ಸಂಗೋಪನಗೊಳಿಸುವುದರ ಜತೆ ಇಂದು ಕಾಂಗ್ರೆಸ್ ಸರಕಾರವಿರುವ ರಾಜ್ಯಗಳಲ್ಲಿ ಅದನ್ನು ಬಲಪಡಿಸಬೇಕಾಗಿದೆ ಭಾರತದ ಪ್ರಜಾಪ್ರಭುತ್ವಕ್ಕೆ ಕಾಂಗ್ರೆಸ್ ಒಂದು ಗುರಿಯನ್ನು ತೋರಿಸಬೇಕಾಗಿದೆ.

ಪಕ್ಷಾಂತರದ ಪಿಡುಗು ದಿನೇ ದಿನೇ ಹೆಚ್ಚತ್ತಿರುವ ಇಂದಿನ ರಾಜಕೀಯದಲ್ಲಿ ಸ್ಥಿರತೆ ಇಲ್ಲವಾಗಿದೆ. ಹಲವಾರು ಕಾಂಗ್ರೆಸ್ಸೇತರ ಸರಕಾರಗಳು ಉರುಳಿ ರಾಷ್ಟ್ರಪತಿ ಆಡಳಿತ ಜಾರಿಗೆ ಬರಲು ಮುಖ್ಯ ಕಾರಣವೇ ಈ ಪಿಡುಗು. ಕಾಂಗ್ರೆಸ್ಸಿಗರೂ ಈ ಪಿಡುಗಿನಿಂದ ಮುಕ್ತರಲ್ಲ. ಈ ಪಿಡುಗು ಇಂದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿ ಪರಿಣಮಿಸಿದೆಯಲ್ಲದೆ, ರಾಜಕಾರಣಿಗಳು ಗೊಂಬೆಗಳಂತೆ ವರ್ತಿಸತೊಡಗಿದ್ದಾರೆ. ಕಾಂಗ್ರೆಸ್ಸಿನಲ್ಲಿ ಶಿಸ್ತನ್ನು ಸಂಘಟಿಸುವವರ ಜತೆಗೆ ಈ ಪಕ್ಷಾಂತರದ ಪಿಡುಗಿಗೆ ಮುಟ್ಟುಗೋಲು ಹಾಕುವ ಜವಾಬ್ದಾರಿ ಈಗ ಕಾಂಗ್ರೆಸ್ಸಿನ ಮೇಲಿದೆ.

ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ಸಿನ ಗುರಿ ಸ್ವಾತಂತ್ರ್ಯಾರ್ಜನೆಗೆ ಸೀಮಿತವಾಗಿದ್ದರೆ ಆ ಬಳಿಕ ಅದರ ಗುರಿ ರಾಷ್ಟ್ರಕಟ್ಟುವುದಕ್ಕೆ ಸೀಮಿತವಾಯಿತು. ಅಧಿಕಾರ ಸ್ವಾಮೋಹ, ಭ್ರಷ್ಟಾಚಾರಗಳು ಕಾಂಗ್ರೆಸ್ಸಿಗರನ್ನು ಬಿಡಲಿಲ್ಲ. ಸಂಸ್ಥೆಯ ಪವಿತ್ರತೆಗೆ ಕಲಂಕ ತರುವ ಘಟನೆಗಳೂ ನಡೆಯದೆ ಉಳಿಯಲಿಲ್ಲ. ಕೇಂದ್ರಾಧಿಕಾರ ಮತ್ತು ಪ್ರಾಂತಾಧಿಕಾರಗಳ ಎದೆಯಲ್ಲಿ ಸಂಸ್ಥೆಯ ಶಿಸ್ತು ಪಾಲಿಸಿ ಕಷ್ಟಕರವಾಗಿ ಪರಿಣಮಿಸಿದೆ. ದೇಶದ ಜಾತ್ಯತೀತ ಧೋರಣೆಗೇ ಮಾರಕವಾಗಿರುವ ಕೋಮುವಾದ ಭೂತ ಕಾಂಗ್ರೆಸ್ಸಿಗರಲ್ಲೂ ಮನೆಮಾಡಿದೆ. ಈ ಎಲ್ಲ ದುಷ್ಟಪ್ರವೃತ್ತಿಗಳು ಕಾಂಗ್ರೆಸ್ಸಿನಲ್ಲಿ ಮನೆಮಾಡಿಕೊಂಡಿರುವುದು ಸಂಸ್ಥೆಯ ಶಿಸ್ತಿಗೆ ಅಪಾಯಕರವೆನಿಸಿದೆ. ಇಂದು ಕಾಂಗ್ರೆಸಿಗರಲ್ಲಿ ಶಿಸ್ತನ್ನು ಬೆಳೆಸಿ, ಆ ಸಂಸ್ಥೆಗೊಂದು ಹೊಸ ಚೇತನವನ್ನು ಕೊಡುವ ಕಾಲ ಸಮೀಪಿಸಿದೆ.

ಕಳೆದುಕೊಂಡ ಚೇತನವನ್ನು ಮುನಃ ಪಡೆಯಲು ಕಾಂಗ್ರೆಸ್ಸಿನ ಸಂಘಟನೆ ಇನ್ನಷ್ಟು ಶಿಸ್ತುಬದ್ಧವಾಗಿ ಹಾಗೂ ಕ್ರಮಪ್ರಕಾರವಾಗಿ ಪಡೆಯಬೇಕು. ಈ ಬಾರಿಯೇ ಕಾಂಗ್ರೆಸ್ ಮೂರು ಮರುಚುನಾವಣೆಗಳನ್ನು ಎದುರಿಸಬೇಕಾಗಿದೆ. ಇದು ಕಾಂಗ್ರೆಸ್ಸಿಗೊಂದು ಸತ್ವಪರೀಕ್ಷೆಯ ಕಾಲ. ವಿರೋಧಿ ಪಕ್ಷಗಳೆಲ್ಲಾ ಒಂದಾಗಿ ಕಾಂಗ್ರೆಸ್ಸನ್ನು ಎದುರಿಸುವ ಸಂದರ್ಭ ಬಂದಾಗ ಕಾಂಗ್ರೆಸ್ಸು ಈ ಸತ್ವಪರೀಕ್ಷೆಯಲ್ಲಿ ಜಯಶಾಲಿಯಾಗಿ ಬರಬೇಕಾಗಿದೆ.

ವಿಮಲ ಜಮಾಬ್ದಾರಿಯಿರುವ ಕಾಂಗ್ರೆಸ್ಸಿನ ಈ ಸಂಧಿಕಾಲದಲ್ಲಿ ಅದರ ಪರಮೋಚ್ಚ ಪೀಠ ನಿಜಲಿಂಗಪ್ಪನವರ ಪಾಲಿಗೆ ಬಂದಿದೆ. ಅಧಿಕಾರ, ಪದವಿಗಳನ್ನು ಹಾರೈಸದ ನಿಜಲಿಂಗಪ್ಪನವರು ಅವುಗಳು ಬಂದಾಗ ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿದ ಚರಿತ್ರೆಯುಳ್ಳವರು ಅವರೆಂದೂ ಅಧಿಕಾರಕ್ಕಾಗಿ ಹಂಬಲಿಸಿದ ಉದಾಹರಣೆ ಇಲ್ಲ. ಬದಲು ಅದು ಕಾಲುಬುಡಕ್ಕೆ ಬಂದಾಗ, ಅದನ್ನು ದೂರವಿರಿಸಿದವರು. ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ, ಆ ಪದವಿ ಫಲ ಕೊಡುವ ಮುನ್ನವೇ ತ್ಯಾಗಮಾಡಿದ ಹೊರ ಒಂದವರು. ಇದು ಅವರ ಹಿರಿತನವನ್ನು ತೋರಿಸುತ್ತಿದೆ. ಸಂಸ್ಥೆಯ ಶಿಸ್ತುಬದ್ಧ ಸೇವಕನಾಗಿ ಅವರು ಸಂಸ್ಥೆಗಾಗಿಯೇ ದುಡಿದವರು. ಅದನ್ನು ಬಿಟ್ಟು ಬಳಸಿದವರು. ಸ್ವೇಚ್ಛಪಟುವಾದ ಅವರ ವಿಶಾಲ ಹೃದಯ ಶಂಕರ ಸಿರಿಯ ಮೊಣೆಯನ್ನು ನಿರ್ವಹಿಸುವಲ್ಲಿ ಹೃಶಕ್ತ್ಯವಾದೀತು.

ಇಂದು ಕಾಂಗ್ರೆಸ್ಸಿನ ಪ್ರಥಮ ಪ್ರಜೆಯ ಮುನ್ನ ದೇಶವಾತ ಹಲವಾರು ವಿಶಿಷ್ಟ ಗುಣಗಳನ್ನು ಪಡೆದಿರಬೇಕು. ಈ ಕಾರ್ಯ ಬಹು ಸಂಕೀರ್ಣವಾದುದು; ಕ್ಲಿಷ್ಟವಾದುದು. ಎಂತಹ ದೈಹಿಕ, ಮಾನಸಿಕ ಶಕ್ತಿಯುಳ್ಳವರಾದೂ ಎದೆಕೊಡುವ ಜವಾಬ್ದಾರಿ ಈ ಸಂಸ್ಥೆಯ ನಾಯಕನ ಪೀಠಕ್ಕೆ ಬಿದ್ದಿದೆ. ಸರಳ ಹಾಗೂ ಉದಾರ ಸ್ವಭಾವದ ಶಿಸ್ತು ಹಾಗೂ ಸಂಯಮದ ಬಾಳನ್ನು ಬಾಳಿದ, ಉಜ್ವಲ ರಾಜಕೀಯ ಅನುಭವ ಹಾಗೂ ಹಿಸ್ಟೆಲೆಯುಳ್ಳ ನಿಜಲಿಂಗಪ್ಪನವರು ಈ ಗುರುತರ ಹೊಣೆ ನಿರ್ವಹಿಸಿ, ಕಾಂಗ್ರೆಸ್ಸಿಗೊಂದು ಚೇತನವನ್ನು ಕೊಟ್ಟು, ಆ ಸಂಸ್ಥೆ ಇನ್ನಷ್ಟು ಬಲವಾಗಿ ಜನಮನದಲ್ಲಿ ಬೇರೂರುವಂತೆ ಮಾಡುವರೆಂಬ ವಿಶ್ವಾಸ ಕನ್ನಡದ ಜನತೆಗಿದೆ. ಅವರು ಕನ್ನಡದ ಪ್ರಥಮ ಕಾಂಗ್ರೆಸ್ ಅಧ್ಯಕ್ಷರಾಗಿ, ಚರಿತ್ರಾರ್ಹ ಕಾರ್ಯಗಳನ್ನು ಸಾಧಿಸಲೆಂದು ಹಾರೈಸುತ್ತೇವೆ.

ಎಕೆಡೆಮಿಯ ಬೆಳ್ಳಿಹಬ್ಬ

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಪ್ರಯತ್ನದ ಫಲವನ್ನು ತೋರಿಸಿಕೊಟ್ಟಿರುವ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನ್‌ನ ಬೆಳ್ಳಿಹಬ್ಬವನ್ನು ಇನ್ನೇ ಬರುವ ಎಪ್ರಿಲ್ ೨೭ರಿಂದ ಮೇ ೩ರ ವರೆಗೆ ಅತಿ ವೈಭವಭರಿತವಾಗಿ ಜರಗಿಸುವ ಸಿದ್ಧತೆಗಳು ಈಗಾಗಲೇ ಪೂರ್ಣಗೊಳ್ಳುತ್ತ ಬಂದಿವೆ.

ಉಡುಪಿಯ ಇತಿಹಾಸದಲ್ಲೇ ಅತ್ಯಪೂರ್ವ ಎನಿಸಲಿರುವ ಈ ಉತ್ಸವದಲ್ಲಿ ಶಿಕ್ಷಣ ತಜ್ಞರು, ಉದ್ಯಮಿಗಳು, ಬ್ಯಾಂಕರುಗಳು ಹಾಗೂ ಹಲವಾರು ಕಲಾವಿದರು ಭಾಗವಹಿಸಿ ಶಿಕ್ಷಣ, ಬ್ಯಾಂಕ್ ಉದ್ದಿಮೆ ಹಾಗೂ ಇನ್ನಿತರ ವಿಚಾರಗಳ ಕುರಿತು ಚರ್ಚಿಸಲಿರುವರು.

ಎಕೆಡೆಮಿಯ ಬೆಳ್ಳಿಹಬ್ಬದ ಈ ಶುಭ ಸಂದರ್ಭದಲ್ಲಿ, ಆದರ ಸ್ಥಾಪಕರೂ, ರಿಜಿಸ್ಟ್ರಾರೂ ಆಗಿರುವ ಡಾ|| ಟಿ. ಎಂ. ಎ. ಪೈಗಳ ಎಂಭತ್ತೇ ಹುಟ್ಟುಹಬ್ಬ ಹಾಗೂ ಬಸವೇಶ್ವರರ ಎಂಟನೇ ಶತಮಾನೋತ್ಸವವೂ ಕೂಡಿ ಬಂದುದು ಒಂದು ಯೋಗವೆಂದೇ ಸ್ಮರಿಸಬೇಕು. ಈ ಸಂದರ್ಭದಲ್ಲಿ ಡಾ|| ಪೈಗಳನ್ನು ಸಾರ್ವಜನಿಕ ಪೌಲಿಯಲ್ಲಿ ಗೌರವಿಸುವ ಕಾರ್ಯಕ್ರಮವನ್ನು ಇರಿಸಿಕೊಳ್ಳಲಾಗಿದೆಯಲ್ಲದೆ ಬಸವೇಶ್ವರರ ಕುರಿತು ಉಪನ್ಯಾಸ, ನಾಟಕಗಳನ್ನು ಏರ್ಪಡಿಸಲಾಗಿದೆ. ಇದು ಯಥೋಚಿತವಾದ ಕಾರ್ಯ.

ಅನುಭವಿಗಳೂ, ದಕ್ಷರೂ ಆಗಿರುವ ಕಾರ್ಯಕರ್ತರನ್ನೊಳಗೊಂಡ ಈ ಉತ್ಸವ ಸಮಿತಿಯು ಈಗಾಗಲೇ ಉನ್ನತ ಮಟ್ಟದ ಸಿದ್ಧತೆಗಳನ್ನು ಈ ಬಗ್ಗೆ ಮಾಡಿದೆ. ಆಮಂತ್ರಿತರಾದ ದೇಶದ ವಿವಿಧ ಭಾಗಗಳ, ವಿವಿಧ ಕ್ಷೇತ್ರದ ತಜ್ಞರ ಕೂಡುವಿಕೆಯಿಂದ ಸಮಾರಂಭ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಪಜೆನ ಸುಧೆ

ಗೌರವಂ ಪ್ರಾಪ್ಯತೇ ದಾನಾತ್
ನತು ವಿತ್ತಸ್ಯ ಸಂಚಯಾತ್||
ಸ್ಥಿತಿರುಚ್ಚೈಃ ಪಯೋದಾನಾಂ
ಪಯೋಧೀನಾಮಧಃ ಸ್ಥಿತಿಃ||

ದಾನದಿಂದ ಘನಸ್ಥಿತಿ ಲಭಿಸುವುದಲ್ಲದೆ ಧನ ಸಂಗ್ರಹದಿಂದಲ್ಲ. ಮೋಡಗಳು ಎತ್ತರದಲ್ಲಿರುತ್ತವೆ, ಆದರೆ ಸಮುದ್ರವು ಪಾತಾಳದಲ್ಲೇ ಇರುವುದು.

ಡಾ|| ಪೈಗಳ ಹಿರಿತನ ಹಾಗೂ ಮಾರ್ಗದರ್ಶನದಲ್ಲಿ ಎಕೆಡೆಮಿ ವೈದ್ಯಕೀಯ ಕ್ಷೇತ್ರಕ್ಕೆ ಇನ್ನಷ್ಟು ಉತ್ತಮ ಸೇವೆಯನ್ನು ಸಲ್ಲಿಸಿ, ಈ ಭಾಗದ ನಾಡಿನ ಜನತೆಯ ಶ್ರೇಯೋಭಿವೃದ್ಧಿಗೆ ನೆರವಾಗಲಿ ಎಂದು ಹಾರೈಸುತ್ತೇವೆ.

ಇತರರ ಅನುಕರಣೆ ಮಾಡದೆ, ತನ್ನೊಟ್ಟಿಗೆ ತಾನು ಚಿಂತಿಸುವುದಲ್ಲವೇ ನಿಜವಾಗಿಯೂ ಸ್ವತಂತ್ರ.

ಅಂಚೆತಂತಿ ನೌಕರರ ಮಹಾ ಸಭೆ

ಉಡುಪಿ ಅಂಚೆ ತಂತಿವಿಭಾಗದ ಪೋಸ್ಟ್‌ಮೇನ್ ಮತ್ತು ನಾಲ್ಕನೇ ವರ್ಗದ ನೌಕರರ ಮಹಾ ಸಭೆಯು ಇತ್ತೀಚೆಗೆ ಉಡುಪಿ ಪ್ರಧಾನ ಅಂಚೆ ಕಛೇರಿಯಲ್ಲಿ ಶ್ರೀ ವಿ. ಟಿ. ಲೂವಿಸ್ ಪೋಸ್ಟ್ ಮಾಸ್ಟರ್ ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕೇಂದ್ರ ಸಂಘದ ಸಹ ಕಾರ್ಯದರ್ಶಿ ಮೊಯಿದೀನ್ ಕರ್ಮಚಾರಿಯರು ಮತ್ತು ಮೈಸೂರು ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯದ್ ಮಹಮ್ಮದ್ ಇವರೊಡನೆ ಮುಖ್ಯ ಅತಿಥಿಗಳಾಗಿದ್ದು ಉಡುಪಿಯಲ್ಲಿ ಈ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ಸಂಘಟನೆಯ ಯೋಜನೆಯನ್ನು ಬಲಗೊಳಿಸಬೇಕೆಂದು ಕರೆಕೊಟ್ಟರು. ಅನಂತರ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ಈ ಕೆಳಗಿನವರು ಚುನಾಯಿಸಲ್ಪಟ್ಟರು. ಅಧ್ಯಕ್ಷ—ಶ್ರೀ ಕೆ. ತಾರಾನಾಥ ವಿಲಿಯಂ ಪಿಂಟೋ ಎಕೆಡೆಮಿ ಉಡುಪಿ, ಉಪಾಧ್ಯಕ್ಷ—ಕೆ. ನರಸಿಂಹಯ್ಯ. ಕಾರ್ಯದರ್ಶಿ—ಕೆ. ಗೋಪಾಲ ಸೇರಿಗಾರ್, ಸಹ ಕಾರ್ಯದರ್ಶಿ—ಕೆ. ಟಿ. ಬಂಗೇರ, ಕೋಶಾಧಿಕಾರಿ—ಕೆ. ನಾಗೇಶ. ಪ್ರಭು ಹಾಗೂ ಇನ್ನಿತರ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಉಡುಪಿ ವಿಭಾಗದಲ್ಲಿ ಕುಂದಾಪುರ ಮತ್ತು ಉಡುಪಿ ತಾಲೂಕಿನ ಪೋಸ್ಟ್‌ಮೇನ್‌ರು ಹಾಗೂ ನಾಲ್ಕನೇ ತರಗತಿಯ ನೌಕರರು ಮತ್ತು ಇ. ಡಿ. ನೌಕರರು ಸದಸ್ಯರಾಗಿರುತ್ತಾರೆ. ಸಭಾಂತ್ಯಕ್ಕೆ ಟಿ. ಮಂಜುನಾಥ ಪ್ರಭುಗಳವರು ಧನ್ಯವಾದ ಸಮರ್ಪಿಸಿದರು.

ಫೋನ್ ನಂಬ್ರ ಬದಲಾವಣೆ

ಉಡುಪಿಯಲ್ಲಿ ಆಟೊಮೆಟಿಕ್ ಎಕ್ಸ್‌ಚೇಂಜ್ ಅಳವಡಿಸಲ್ಪಟ್ಟಿದ್ದು ಹಿಂದಿನ ನಂಬ್ರಗಳೆಲ್ಲ ಬದಲಾಗಿವೆ.

ನಮ್ಮ ಹಳೆ ನಂಬ್ರ 226
ಹೊಸ ನಂಬ್ರ 526

ನವಯುಗ & ನವಯುಗ ಪ್ರೆಸ್

ನಿಮಗೂ ಸ್ವಾಗತವಿದೆ

ದಕ್ಷಿಣ ಕನ್ನಡದ ಜಿಲ್ಲೆಯ ಕಡಬಾ ಮಲೆನಾಡಿನ ಒಂದು ಹಳ್ಳಿ. ಆದರೆ ವಿಶಿಷ್ಟ ಹಳ್ಳಿ. ಅಲ್ಲಿದು ಕೇಂದ್ರ ಹಳ್ಳಿಗೆ ಮತ್ತು ಮನೆಯನ್ನೂ ಗೌರವವನ್ನೂ ತಂದಿದೆಯೆ. ಸುತ್ತಮುತ್ತಲಿನ ಸುಮಾರು ನಲ್ವತ್ತು ಹಳ್ಳಿಗಳಿಗೆ ಸೇವೆಸಲ್ಲಿಸುತ್ತಿದೆ.

೧೯೪೫ರವರೆಗೂ ಈ ಪ್ರದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯ ಅನೇಕ ಜನರಿಗೆ ಔಷಧ ತಜ್ಞರ ತಪಾಸಣೆಯನ್ನು ಮಾಡಲು ಪ್ರಯತ್ನಗಳು ಫಲದಿನೆ— ಈ ಕೇಂದ್ರದ ಮುಖಾಂತರ. ತೀರ ಇತ್ತೀಚೆಗೆ ಕಡಬದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದೊಡ್ಡ ಸಂಸಾರವನ್ನುಹೊಂದಿದ ಅನೇಕರು ಸಹಾಯಕ್ಕಾಗಿ ಧಾವಿಸಿ ಬಂದು ನಡೆದ ಶಿಬಿರದಲ್ಲಿ ತಮ್ಮ ಅಭೀಷ್ಟವನ್ನು ಪೂರೈಸಿಕೊಂಡುಹೋದರು.

ಐತಪ್ಪ ಶೆಟ್ಟಿ ಒಬ್ಬ ಬೇಸಾಯಗಾರ. ಐವತ್ತು ವರ್ಷ ಸಮೀಪಕ್ಕೆ ಬಂದಿದ್ದಾನೆ. ತನ್ನ ಖುಷಿ ಜವಿಷಿನಿಂದ ವರುಷಕ್ಕೆ ಸುಮಾರು ಐವತ್ತು ಮುಡಿ ನೆಲ್ಲನ್ನು ಪಡೆಯುವ ಐತಪ್ಪ ಶೆಟ್ಟಿಯ ಮನೆಯೋಳಂದೋಕುಲ ಒಂಭತ್ತು ಮಕ್ಕಳು. ಹೊರಲಾರದ ಸಂಸಾರ. ಶಿಬಿರಕ್ಕೆ ಭೇಟಿ ಇತ್ತು ಶೆಟ್ಟಿ ಶಿಶ್ಚಿಂತೆಯಿಂದ ಮನೆಗೆ ಹೋದ. ಇನ್ನವನಿಗೆ ಹೆಚ್ಚಿನ ಮಕ್ಕಳನ್ನು ಹೊಂದುವ ತಾಪತ್ರಯವಿಲ್ಲ. ಕರಿಯಪ್ಪ ಗೌಡನಿಗೆ ಎಂಟು ಮಕ್ಕಳು ದುಡಿದು ಹೊಟ್ಟೆ ಹೊರೆದುಕೊಳ್ಳಬೇಕು. ಕಷ್ಟದ ಬದುಕು. ಇನ್ನೇನು ಅವನ ಸಂಸಾರದ ಗಾತ್ರ ಹೆಚ್ಚವದಿಲ್ಲ-ಈಗವನು ಶಿಬಿರಕ್ಕೆ ಬಂದು ಹೋಗಿದ್ದಾನೆ. ಲಕ್ಷ್ಮಣ ಪಾಯಕ ಒಬ್ಬ ಮೋಚಿ. ದಿನ ಒಂದಕ್ಕೆ ಮೂರು ರೂಪಾಯಿಯಷ್ಟು ಅವನ ಸಂಪಾದನೆ. ಆದರೆ ಎಂಟು ಮಕ್ಕಳಿಂದ ತುಂಬಿದ ಕುಟುಂಬ. ಈಗವನು ಸಾಬು ಬ್ಯಾರಿಯನ್ನು ಕರೆದುಕೊಂಡು ಶಿಬಿರಕ್ಕೆ ಬಂದಿದ್ದಾನೆ. ಸಾಬು ಬ್ಯಾರಿಗೆವರ್ಷಕ್ಕೆ ಕೇವಲ ಎರಡು ಮುಡಿ ಅಕ್ಕಿ ಬರುತ್ತದೆ. ಏಳುಮಕ್ಕಳ ಪಾಲನೆ ಪೋಷಣೆಯ ಹೊರೆಯಿಂದ ಗಾಸಿಗೊಂಡಿದ್ದಾನೆ. ಪದ್ಮಯ್ಯ ಗೌಡ ಮತ್ತು ಕುಂಞ್ಞಣ್ಣ ಗೌಡ ಇವರಿಗೂ ನಾಲ್ಕು-ಐದು ಮಕ್ಕಳು, ಇವರೆಲ್ಲ ಈಗಲಾದರೂ ನಿಯೋಜಿತ ಸಂಸಾರ ಹೊಂದಲೆಂದು ಆಶಿಸಿ ಶಿಬಿರಕ್ಕೆ ಬಂದು, ಬೆಳೆಯುತ್ತಿದ್ದ ತಮ್ಮ ಕುಟುಂಬದ ಗಾತ್ರಕ್ಕೆ ಪೂರ್ಣ ವಿರಾಮ ಹಾಕಿದರು.

ಕಡಬಾದ ಪ್ರಾಪಿತ ಬಾಳಪ್ಪ ತನ್ನ ಹೆಂಡತಿಯ ಸಲಹೆಯನ್ನು ಕೊನೆಗೂ ಕೃತಿಯಲ್ಲಿಳಿಸಿದ. ಒಂದು ಗಂಡು ಒಂದು ಹೆಣ್ಣು. ಹೀಗೆ ಎರಡೇ ಮುದ್ದುಮಕ್ಕಳು ಈಗ ಈ ದಂಪತಿಗಳಿಗೆ. "ಹೆಚ್ಚು ಮಕ್ಕಳಿಗೆ ಉಣಿಸಿ ತೊಡಿಸಿ ಶಿಕ್ಷಣ ಕೊಡಿಸಲು ಹೇಗೆ ಸಾಧ್ಯವಾಗಬೇಕು ಸ್ವಾಮಿ?" ಎಂದು ಅವಳು ಉದ್ಗಾರವೆತ್ತಿದ ಅದರಂತೆ ಶಿಬಿರಕ್ಕೆ ಬಂದ ಇನ್ನೊಬ್ಬ ವ್ಯಕ್ತಿ ಪ್ರಭಾಕರಭಟ್ಟ. ತನ್ನ ಅರನೇ ಮಗು ಹುಟ್ಟಿದ ಮೇಲೆ ಕುಟುಂಬ ಯೋಜನೆಯ ಮಾರ್ಗವನ್ನು ಮೆಟ್ಟಿಬಂದ. ಅಲ್ಲಿಇಲ್ಲಿ ಸುಣ್ಣ—ಬಣ್ಣ ಬಳಿದು ಜೀವನ ಸಾಗಿಸುತ್ತಿದ್ದ ಪ್ರಭಾಕರಭಟ್ಟಗೆ ಶಿಬಿರ ಪರಿಹಾರ ಕೊಟ್ಟಿತು. ಪಾಂಡೇಲಿ ಒಬ್ಬ ಹರಿಜನ. ತಪ್ಪ ಅರು ಮಕ್ಕಳ ಹೆಸರು ಕೂಡಲೇ ಹೇಳಲು ಅರಿಯ. ಇನ್ನೇನು ಯಾವದೇ ಹೊಳ ಮಗುವಿಗೆ ಅವನು ಹೆ

ಎಲೈಸಿಯ ಅಪೂರ್ವ ದಾಖಲೆ

1967—68ನೆ ಆರ್ಥಿಕ ವರ್ಷದಲ್ಲಿ ಎಲೈಸಿಯು ರೂ. ೯೦೨.೭೫ ಕೋಟಿ ಮೊತ್ತದ ೧೫.೧೫ ಲಕ್ಷ ಪ್ರಪೋಸಲ್ಲುಗಳನ್ನು ಪಡೆದಿದೆ. ಈ ಪೈಕಿ ಹಾಗೂ ಹಿಂದಿನ ವರ್ಷಾಂತ್ಯದಲ್ಲಿ ಪಾಲಿಸಿಯಾಗದಿರುವ ಪ್ರಪೋಸಲ್ಲುಗಳ ಪೈಕಿ ಒಟ್ಟು ರೂ. ೪೪೪.೫೧ ಮೊತ್ತದ ೧೪.೩೧ ಲಕ್ಷ ಪಾಲಿಸಿಗಳನ್ನು ನೀಡಿದೆ. ೧೯೬೫—೬೬ರಲ್ಲಿ ಕಾರ್ಪೊರೇಶನ್ನು ರೂ. ೭೯ ಕೋಟಿ ವ್ಯವಹಾರವನ್ನು ಮುಗಿಸಿದ್ದು ಆ ದಾಖಲೆಯನ್ನು ಈ ವರ್ಷದಲ್ಲಿ ಅತಿಕ್ರಮಿಸಿ ಹೊಸ ದಾಖಲೆಯನ್ನು ಸ್ಥಾಪಿಸಿದೆ.

ಇದು ವರೆಗೂ ಪಶ್ಚಿಮ ವಲಯವು ಪ್ರಥಮ ಸ್ಥಾನವನ್ನು ಗಳಿಸಲು ದಕ್ಷಿಣ ವಲಯದೊಡನೆ ಸೆಣಸಾಡುತಿದ್ದು ಈ ವರ್ಷ ಯಶಗಳಿಸಿದೆ. ಪಶ್ಚಿಮ ವಲಯದ ವ್ಯವಹಾರ ರೂ. ೨೨೪ ಕೋಟಿಯಿದ್ದರೆ ದಕ್ಷಿಣ ವಲಯದ ವ್ಯವಹಾರ ರೂ. ೨೧೬.೯೫ ಕೋಟಿ. ಐದು ವರ್ಷಗಳಲ್ಲಿ ಕೊಟೆಯ ಸ್ಥಾನ ಪಡೆಯುತಿದ್ದ ಮಧ್ಯ ವಲಯವು ಈ ಬಾರಿ ನಾಲ್ಕನೆಯ ಸ್ಥಾನ ಪಡೆದಿದೆ. (ವ್ಯವಹಾರ ರೂ. ೧೧೪.೪೯ ಕೋಟಿ)

ಬೊಂಬಾಯಿ ವಿಭಾಗವು ರೂ. ೧೦೪ ಕೋಟಿಗಳ ವ್ಯವಹಾರ ಮುಗಿಸಿ ಹಿಂದಿನಂತೆಯೇ ಪ್ರಥಮ ಸ್ಥಾನ ಉಳಿಸಿಕೊಂಡಿದೆ. ತಾವು ಪಡೆದ ಪ್ರೊಪೋಸಲ್ಲುಗಳಲ್ಲಿ ಸೇ. ೯೬-೪ನ್ನು ಪಾಲಿಸಿಯಾಗಿ ನೀಡಿ ಬೆಂಗಳೂರು ಮತ್ತು ಹೊರತಾ ವಿಭಾಗಗಳು ಯಶಗಳಿಸಿವೆ.

ಸಾಮಾನ್ಯ ವಿಮೆಯಲ್ಲೂ ಎಲೈಸಿ ಪ್ರಗತಿ ಗಳಿಸಿದೆ. ರೂ. ೧೨.೦೯ ಕೋಟಿ ಪ್ರೀಮಿಯಂ ಅದಾಯ ಗಳಿಸಿದೆ. ಇದರಲ್ಲಿ ಸೇ. ೨೨ ಅಗ್ನಿವಿಮೆ, ಸೇ. ೪೬ ನೌಕಾವಿಮೆ ಮತ್ತು ಸೇ. ೩೨ ಅಕಸ್ಮಿಕ ಮತ್ತು ಇತರ ವಿಮೆಗೆ ಸಂಬಂಧಿಸಿದೆ.

ನೆನಪಿನ ಮಣಿಗಳು

ಒಳ್ಳೆಯ

ಒಳ್ಳೆಯ ಅಡಿಗೆಯನ್ನು ಊಟ ಮಾಡುವಾಗ ಸುಮ್ಮನೆ "ಚೆನ್ನಾಗಿದೆ" ಎಂದು ಯಾರೂ ಹೇಳುವುದಿಲ್ಲ. ಮನೆಯಲ್ಲಿ ನಿತ್ಯ ದೂಟ ಮಾಡುವಾಗ ಹೊಗಳಿಕೆಯ ಮಾತೇನೂ ಬರುವುದಿಲ್ಲ. ಬಾಯಿಬಿಟ್ಟು ಚೆನ್ನಾಗಿದೆ ಎಂದು ಹೇಳುವುದಕ್ಕೋ ಉಣ್ಣುವುದು? ಚೆನ್ನಾಗಿರಬೇಕಾದ್ದು ಸಹಜ ತಾನೇ?

ಅದರಂತೆಯೇ ಲೇಖನ ವಿಷಯ ಗ್ರಂಥ ವಿಷಯಗಳೂ ಇರುತ್ತವೆ. ಇನ್ನೊಬ್ಬರು ಓದಲಿಕ್ಕೆ ತಾನೇ ಬರೆಯುವುದು? ಅದು ಒಳ್ಳೆಯದಾಗಿರಬೇಕಾದುದೂ ಸಹಜವೇ. ಅದುದರಿಂದ ಒಳ್ಳೆಯ ಪುಸ್ತಕ ಓದಿದಾಗ ಒಳ್ಳೆಯದಿದೆ ಎಂಬ ಅಭಿಪ್ರಾಯ ಬೇಕಾಗಿಲ್ಲ. ಬರಲಿಕ್ಕೂ ಇಲ್ಲ. ಅಭಿಪ್ರಾಯ ನಿಮಗೆ ಬೇಕಾದರೆ ಕೆಟ್ಟದಾಗಿ ಅಕ್ರಮವಾಗಿ ತಪ್ಪಾಗಿ ಬರೆಯ ನೋಡಬಹುದು. ಅನಾರೋಗ್ಯಕರವಾದ ಅಡಿಗೆ ರುಚಿಯಾಗಿ ನಾಲಗೆಯಚಾಪಲ್ಯಕ್ಕೆ ಹಿಡಿಸಿದರೂ ಅಭಿಪ್ರಾಯ ಹೊರಡುತ್ತದೆ. "ಆಃ! ಎಂಥ ರುಚಿ!" ಅಥವಾ "ಅಯ್ಯೊ! ಇದರಿಂದ ಆರೋಗ್ಯ ಕೆಡುತ್ತೆ!"

ಹಾಗೆಯೇ ಪುಸ್ತಕಗಳೂ ಏನೇನೋ ಬರೆದಾಗ ಹೊಗಳಿಕೆ ತೆಗಳಿಕೆ ಮುಂತಾದ ಅಭಿಪ್ರಾಯಗಳು ಬರ ತೊಡಗುತ್ತವೆ.

ಇದೆಲ್ಲ ಸಹಜವೇ. ಅಡಿಗೆಯಲ್ಲಿ ರುಚಿ—ಅರುಚಿ, ಹಬ್ಬ—ಹಾಡಿ—ಮದುವೆ ಮಂಜಿಗಳಲ್ಲಿ ವಿಶೇಷದಲ್ಲಾ—ಇರುವ ಹಾಗೆ, ಪುಸ್ತಕಗಳಲ್ಲಿಯೂ ಬಗೆ ಬಗೆಗಳಿವೆ. ಅನುಭವಿಸುವವನಿಗೆ ಎಚ್ಚರವಿರಬೇಕಾದ್ದೇ ಮುಖ್ಯ. ಎಲ್ಲವೂ ಬೇಕು, ಎಚ್ಚರವಿರಬೇಕು.

— ಎಂ. ರಂಗರಾವ್.

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ಮೂಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ

ವಾರ್ಷಿಕ ಚಂದಾ ರೂ. ೧೦

In the Court of Munsif
Kundapur

S. C.357/1958 R. E. P. 237/67
Nagar Vittal Nayak ... 1 lll- DH
vs
Soora Menya & others ...
Defts. Respondents.

To
1st Respt. Soora Menya,
2nd Respt. Ranga Menya—
Nephews of Shesha Menya,
Gujjadi village,
Kundapur Tq.

Sir,
Please take notice that the sale notice in respect of properties to be sold as per execution has been posted to 29—5—68 for your appearance to file objections if any, as otherwise it will be proceeded in your absence.

By order of Court
Narayana Kamath,
Advocate for Decree holder
Plaintiff.

Coondapur, 18—4—68.

ಕೃಷಿಕರ ಕಲ್ಪವೃಕ್ಷ
ಎಗ್ರಿಕಾರ್ಡ್

ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ಸಾಗುವಳಿಗೆ ಅವಶ್ಯಕವಿರುವ ಸಲಕರಣೆಗಳನ್ನು— ಮಾರಾಟಗಾರರಿಗೆ ಹಣತೆರದೆ ಸಿಂಡಿಕೇಟ್ ಬ್ಯಾಂಕ್ ಒದಗಿಸುವ ಕೇವಲ ಒಂದು ಕಾರ್ಡನ್ನು ತೋರಿಸಿ— ಮಾರಾಟಗಾರರಿಂದ ಪಡೆಯಬಹುದಾಗಿದೆ.

ಸಿಂಡಿಕೇಟ್ ಬ್ಯಾಂಕು ಜಿಲ್ಲೆಯ ತನ್ನ 50 ಶಾಖೆಗಳ ಮೂಲಕ ಅಲ್ಲಲ್ಲಿನ ರೈತರಿಗೆ, ಗೇಣಿ ಒಕ್ಕಲುಗಳಿಗೆ, ಬೇಡಿಕೆಯ ಮೇರೆಗೆ, ಅವರ ಹೆಸರಿನಲ್ಲಿ ಸಾಲವನ್ನು ಏರ್ಪಡಿಸಿ ಪ್ರತಿಯಾಗಿ ಅವರಿಗೆ ಎಗ್ರಿಕಾರ್ಡನ್ನು ಕೊಡುತ್ತದೆ.

ಎಗ್ರಿಕಾರ್ಡಿನಲ್ಲಿ ನಿರ್ದೇಶಿಸಲ್ಪಟ್ಟ ಒಟ್ಟು ಮೊತ್ತದವರೆಗೆ (ರೂಪಾಯಿ 500) ರೈತರು ಬ್ಯಾಂಕಿನ ಅಧಿಕೃತ ಮಾರಾಟಗಾರರಿಂದ ತಮಗೆ ಬೇಕಾದ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ದಳನ್ನು ಅಲ್ಲದೆ, ಅವಶ್ಯಕ ಸಂದರ್ಭದಲ್ಲಿ ಉಳುವೆ ಯಂತ್ರ, ಪಂಪುಸೆಟ್ಟು ಮತ್ತಿತರ ಕೃಷಿಉಪಕರಣಗಳ ಬಿಡಿ ಭಾಗಗಳನ್ನು ಪಡಕೊಳ್ಳಬಹುದು.

ಹೆಚ್ಚಿನ ವಿವರಗಳನ್ನು ಜಿಲ್ಲೆಯ ಕೃಷಿಕರು ಸಿಂಡಿಕೇಟ್ ಬ್ಯಾಂಕಿನ ತಮಗೆ ಸಮೀಪವಿರುವ ಶಾಖೆಯೊಡನೆ ಸಂಪರ್ಕ ಬೆಳೆಸಿ ಪಡೆಯಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಪರಿಚಯ

ಅಶ್ವಘೋಷ

ಬರೆದವರು :
ಶ್ರೀ ಸಿ. ನಾರಾಯಣ

ಅಶ್ವಘೋಷ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಕಾಣಬರುವ ಪ್ರತಿಭಾವಂತ ಕವಿಗಳಲ್ಲೊಬ್ಬ. ಇವನು ಕಾನಿಷ್ಕನ ಸಮಕಾಲೀನ; ಇವನ ಕಾಲ ಕ್ರಿ. ಶ. ಎರಡನೆಯ ಶತಮಾನದ ಆದಿಭಾಗ ಅಥವಾ ಮಧ್ಯಭಾಗ ಎಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. 'ಬುದ್ಧ ಚರಿತ' ಅಶ್ವಘೋಷನ ಅಮರ ಕೃತಿ. ಪಾಂಡಿತ್ಯ ಪ್ರತಿಭೆಗಳನ್ನು ಬೆಳಕಿಗೆ ತರುವ ವೈಶಿಷ್ಟ್ಯ ಸೂರ್ಯ ಗ್ರಂಥ. ಬುದ್ಧ ಚರಿತ ಕ್ರಿ. ಶ. ೪೧೪ರಿಂದ ೪೨೧ರ ಅವಧಿಯಲ್ಲಿ ಚೀನಿ ಭಾಷೆಗೆ ಅನುವಾದಿತವಾಯಿತು.

ಬುದ್ಧಚರಿತ, ಸೌಂದರಾನಂದ ಮತ್ತು ಸಾರಿಪುತ್ರ ಪ್ರಕರಣ ಅಶ್ವಘೋಷನ ಕೃತಿಗಳು ಎಂಬ ಸಂಗತಿ ಸ್ಪಷ್ಟವಾಗಿದೆ. ಇವುಗಳಲ್ಲದೆ ವಜ್ರಸೂಚಿ, ಗಂಡಿಸ್ತೋತ್ರಗಾಥೆ, ಸೂತ್ರಾಲಂಕಾರ ಮತ್ತಿತರ ಕೆಲವು ಕೃತಿಗಳು ಅವನವು ಎಂದು ಪಂಡಿತರು ಅಭಿಪ್ರಾಯ ಪಡುತ್ತಾರೆ.

ಬುದ್ಧ ಚರಿತವು ೮೮ ಅಂಕಗಳ ಬೃಹತ್ಕೃತಿ. ಆದರೆ ಕೇವಲ ೧೩ ಅಂಕಗಳು ಮಾತ್ರ ಉಳಿದಿವೆ. ಬುದ್ಧನ ಜೀವನಕ್ಕೆ ಸಂಬಂಧಿಸಿದ ಕೆಲವು ಅಮೂಲ್ಯ ನೀತಿ ಬೋಧಕ ಕಥೆಗಳು ಈ ಕೃತಿಯಲ್ಲಿ ಅಡಗಿವೆ. ಈ ಕಾವ್ಯ ರಮಣೀಯವಾದ ಪರಿಣಾಮಕಾರಿ ಕಾವ್ಯ ಎಂದು ಹೇಳಬಹುದಾಗಿದೆ. ಭಾರತದ ಪ್ರತಿಭಾವಂತ ಸಂಸ್ಕೃತ ಕವಿ ಕಾಳಿದಾಸನಿಗೆ ಅಶ್ವಘೋಷನ ಬುದ್ಧ ಚರಿತ ಕೃತಿ ಸ್ಫೂರ್ತಿ, ಮಾರ್ಗದರ್ಶನಗಳನ್ನು ನೀಡಿದ ಎಂಬ ಸಂಗತಿಯನ್ನು ಇಲ್ಲಿ ಸ್ಮರಿಸಬಹುದು. ಬುದ್ಧ ಚರಿತ ಕಾಳಿದಾಸನ ಮೇಲೆ ಪ್ರಭಾವ ಬೀರಿರುವಂತೆಯೇ ಆದಿಕಾವ್ಯ ರಾಮಾಯಣ ಕವಿ ಅಶ್ವಘೋಷನ ಮೇಲೆ ಪರಿಣಾಮಕಾರಿ ಪ್ರಭಾವ ಬೀರಿದೆ ಎಂಬುದನ್ನು ಮರೆಯುವಂತಿಲ್ಲ. ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ದೊರೆಯುವ ಪ್ರಾಚೀನ ಕಾವ್ಯಗಳಲ್ಲಿ "ಬುದ್ಧ ಚರಿತ"ಗ್ರಂಥಕ್ಕೆ ಮೊದಲ ಸ್ಥಾನವಿದೆ.

ಸೌಂದರಾನಂದ ಬುದ್ಧ ಚರಿತದಂತೆಯೇ ಪ್ರಸಿದ್ಧ ಕೃತಿ. ಈ ಕಾವ್ಯದಲ್ಲಿ ೨೦ ಕಾಂಡಗಳಿವೆ. ಬುದ್ಧನ ಮಲ ಸಹೋದರ ಅರಸ ಕುಮಾರ ನಂದ ಬೌದ್ಧ ಸನ್ಯಾಸಿಯಾದ ಕಥೆ ಈ ಗ್ರಂಥದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಬುದ್ಧ ಚರಿತದಂತೆಯೇ ಓದುಗರನ್ನು ಆಕರ್ಷಿಸುವ ಕೃತಿಯಾಗಿದೆ.

ಗಂಡಿ ಸ್ತೋತ್ರಗಾಥೆ ಕವಿಯ ಲೇಖನ ಸಾಮರ್ಥ್ಯವನ್ನು ಬೆಳಕಿಗೆ ತರುವ ಕೃತಿ. ಮತೀಯ ಸಂಬಂಧವಾದ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾನೆ. ಕವಿಯ ಅಭಿನೂತನತೆಗೆ ವಿಶೇಷ ಪ್ರಾಶಸ್ತ್ಯವಿದೆ. ಧಾರ್ಮಿಕ ಸಂಗತಿಗಳನ್ನು ಪ್ರಸ್ತಾಪಿಸಿದ್ದರೂ ದೂಷಣೆಗೆ, ಕೀಳು ಭಾವನೆಗೆ ಅವಕಾಶವಿಲ್ಲ.

ಸೂತ್ರಾಲಂಕಾರ ಅಶ್ವಘೋಷನ ಕೃತಿ ಎಂದೇ ಭಾವಿಸಲಾಗಿದೆ. ಆದರೆ ಮೂಲ ಕೃತಿ ಉಪಲಬ್ಧವಿಲ್ಲ. ಅದು ವಾದಿತ ಕೃತಿ ಮಾತ್ರ ಉಳಿದಿದೆ. ಸೂತ್ರಾಲಂಕಾರ ಗದ್ಯ ಪದ್ಯ ಮಿಶ್ರಿತ ಸಂಸ್ಕೃತ ಚಂಪೂ ಶೈಲಿಯಲ್ಲಿದೆ. ಬುದ್ಧ ಜಾತಕ (ಕಥೆ) ಸಂಗತಿಗಳನ್ನು ನಿರೂಪಿಸುವ ಸಲುವಾಗಿ ಈ ಗ್ರಂಥವನ್ನು ರಚಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ.

ಅಶ್ವಘೋಷನೊದಲು ಶ್ರೇಣಿಯ ಪ್ರತಿಭಾವಂತ ಸಂಸ್ಕೃತ ಕವಿ ಹಲವಾರು ವಿಷಯಗಳನ್ನು ಆಯ್ಕೆಮಾಡಿಕೊಂಡು ತನ್ನ ಜಾಣ್ಮೆ-ಪ್ರತಿಭೆ, ಪಾಂಡಿತ್ಯಗಳನ್ನು ಒಂದುಗೂಡಿಸಿ ಗ್ರಂಥಗಳನ್ನು ರಚಿಸಿದ್ದಾನೆ. ಸಂಸ್ಕೃತ ಸಾಹಿತ್ಯದಲ್ಲಿ ನೂತನ ಶೈಲಿ ಸಂಪ್ರದಾಯಗಳನ್ನು ಅವಿಷ್ಕಾರ ಮಾಡಿ, ಅನುಷ್ಠಾನಕ್ಕೆ ತಂದ ಕೀರ್ತಿ ಅಶ್ವಘೋಷನಿಗೆ ಲಭಿಸುತ್ತದೆ.

ಅಶ್ವಘೋಷನ ಜೀವನಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳು ಸಂಪೂರ್ಣವಾಗಿ ಗೊತ್ತಿಲ್ಲವಾದರೂ ಅಶ್ವಘೋಷ ಬೌದ್ಧ ಧರ್ಮ ಸ್ವೀಕರಿಸಿದ ಬಗೆಗೆ ಒಂದು ಕಥೆ ಇದೆ. ಇದು ಕವಿಯ ಜೀವನ ಮನೋಭಾವನೆಗಳನ್ನು ಬದಲಿಸುತ್ತದೆ.

ಅಶ್ವಘೋಷ ಹುಟ್ಟಿನಿಂದ ಬ್ರಾಹ್ಮಣ ಅವನ ತಂದೆಗೂ ವೇದ ವಾಂಗ್ಮಯ, ಪಂಡಿತ, ವೈದಿಕ ಧರ್ಮಾನುಯಾಯಿ ಕರ್ಮನಿಷ್ಠ. ಮಗನಿಗೆ ಯೋಗ್ಯ ಶಿಕ್ಷಣ ನೀಡಿದ. ಅಶ್ವಘೋಷ ಕಿರಿಯ ವಯಸಿನಲ್ಲಿಯೇ ತನ್ನ ಕೃತಿಗಳನ್ನು ಪ್ರಕಟಿಸಿ ಪ್ರತಿಭಾವಂತರ ಸಾಲಿನಲ್ಲಿ ನಿಂತ. ಅಶ್ವಘೋಷನ ತಂದೆ ಮಗನ ವಿದ್ಯಾಭ್ಯಾಸ ಸುಗಮವಾಗಲೆಂದು ಅವನನ್ನು ಗುರುಕುಲಕ್ಕೆ ಕಳುಹಿಸಿದರು.

ಗುರುಕುಲದಲ್ಲಿ ಸಕಲ ವಿದ್ಯಾ ಪಾರಂಗತನಾಗಿ, ಗುರುವಿನಿಂದ ಮೆಚ್ಚುಗೆ ಪಡೆದು ಅಶ್ವಘೋಷ ತಂದೆಯ ಮನೆಗೆ ಹಿಂದಿರುಗಿದ. ಅವನ ತಂದೆ ಪ್ರತಿಭಾವಂತ ಮಗನನ್ನು ಆದರದಿಂದ ಬರಮಾಡಿಕೊಂಡರು. ಕೆಲ ದಿನಗಳಲ್ಲಿಯೇ ಆ ನಗರಕ್ಕೆ ಒಂದು ನಾಟಕ ತಂಡ ಆಗಮಿಸಿತು. ಆ ತಂಡದಲ್ಲಿದ್ದ ನಟ-ನಟಿಯರು ಪ್ರತಿಭಾವಂತರು. ನಾಟಕ ಪ್ರದರ್ಶನಗಳು ಯಶಸ್ವಿಯಾದುವು. ನಗರದವರಾದಿಯರು ನಾಟಕಗಳನ್ನು ವೀಕ್ಷಿಸಿ ಮೆಚ್ಚಿ ನಾಟಕ ಮತ್ತು ನಟ ನಟಿಯರ ಭಾವಾಭಿನಯಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ನಾಟಕಗಳನ್ನು ವೀಕ್ಷಿಸಿ ಮೆಚ್ಚಿದವರಲ್ಲಿ ಅಶ್ವಘೋಷನೂ ಒಬ್ಬನಾಗಿದ್ದ. ಕಲಾವಿಲಾಸಿ ನಾಟಕ ತಂಡದ ಪ್ರಧಾನ ಪಾತ್ರಧಾರಿಣಿ ಅಪೂರ್ವ ಸುಂದರಿ. ಅವಳ ಸೌಂದರ್ಯ, ನೃತ್ಯ, ಗಾಯನ, ಭಾವಭಂಗಿ, ಅಭಿನಯಗಳಿಗೆ ಅಶ್ವಘೋಷ ಮರುಳಾಗಿಹೋದ. ಅಶ್ವಘೋಷ ನಾಟಕದ ನಟ-ನಟಿಯರನ್ನು ಭೇಟಿ ಮಾಡಿ ತನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದ. ಆ ವೇಳೆಗೆ ಅವರ ಪ್ರತಿಭೆ, ಪಾಂಡಿತ್ಯಗಳು ಎಲ್ಲರಿಗೂ ಪರಿಚಿತವಾಗಿದ್ದವು. ಪ್ರಧಾನ ನಟಿಯ ಸೌಂದರ್ಯ, ಗುಣ-ಗಾಂಭೀರ್ಯಗಳಿಗೆ ಮನಸೋತಿದ್ದ ಅಶ್ವಘೋಷ ಅವಳನ್ನು ಭೇಟಿ ಮಾಡಿ ಸಂತೋಷದಿಂದ ತನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ.

ಅಶ್ವಘೋಷ ಮತ್ತು ನಟಿಯ ಸ್ನೇಹ ದಿನದಿನಕ್ಕೆ ಹೆಚ್ಚಾಯಿತು. ಅವರಿಬ್ಬರ ಸ್ನೇಹ ಬಾಂಧವ್ಯವನ್ನು ಯಾವ ಶಕ್ತಿಯೂ ಅಲುಗಿಸಲು ಸಾಧ್ಯವಿರಲಿಲ್ಲ. ಅಶ್ವಘೋಷ ತನ್ನ ಮನದಾಸೆಯನ್ನು ನಟಿಗೆ ತಿಳಿಸಿದ. ಅವಳು ವಿರೋಧಿಸಲಿಲ್ಲ. ಸಂತೋಷದಿಂದ ಅವನವಳಾಗಲು ಸಮ್ಮತಿಸಿದಳು. ಆ ವೇಳೆಗೆ ಅಶ್ವಘೋಷ ಮತ್ತು ಅವನ ಗೆಳತಿ ನಟಿಯ ಪ್ರೇಮದ ಕಥೆ ನಗರದ ಮಾತಾಗಿತ್ತು. ಅಶ್ವಘೋಷ ಗೆಳತಿಯೊಂದಿಗೆ ಲೋಕದ ಚಿಂತೆಯನ್ನು ಮರೆತು ಸುಖಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದ.

ಮಗ ಸಾಮಾನ್ಯ ನಟಿಯೊಬ್ಬಳೊಂದಿಗೆ ಸ್ನೇಹದಿಂದ ಇರುವುದು, ಸ್ವೇಚ್ಛೆಯಾಗಿ ವರ್ತಿಸುವುದು ಅಶ್ವಘೋಷನ ತಂದೆಗೆ ಸರಿದೋರಲಿಲ್ಲ. ಅವರು ಧರ್ಮನಿಷ್ಠರಾಗಿದ್ದರು. ಧರ್ಮಕ್ಕೆ ಯಾವ ಬಗೆಯ ಲೋಪ ಬಂದರೂ ಸಹಿಸಲು ಸಿದ್ಧರಿರಲಿಲ್ಲ. ಸಮಾಜದ ಮುಖಂಡರು ಮತ್ತು ಧರ್ಮಧುರೀಣರು ಅಶ್ವಘೋಷನ ನಡತೆಯನ್ನು ಶಂಕಿಸಿ ದೂಷಿಸಲಾರಂಭಿಸಿದರು. ತಂದೆ ಮಗನ ಮನಸ್ಸನ್ನು ತಿದ್ದಲು ಪ್ರಯತ್ನಿಸಿ ವಿಫಲರಾದರು.

ಗತ್ಯಂತರವಿಲ್ಲದೆ ಅಶ್ವಘೋಷನ ತಂದೆ ನಟಿಯನ್ನು ಭೇಟಿಮಾಡಿ ತನ್ನ ಮನದಳಲನ್ನು ವ್ಯಕ್ತಪಡಿಸಿದರು. 'ನನ್ನ ಮಗನ ಮನಸ್ಸೂ, ನನ್ನ ಮಗನ ಸುಖ, ಸಂತೋಷ, ಜೀವನ ಎಲ್ಲವೂ ನಿನ್ನ ಕೈಯಲ್ಲಿದೆ. ಅವನನ್ನು ಬಿಟ್ಟು ಬಿಡು. ನಿನ್ನ ಮೇಲಿನ ಪ್ರೇಮದಿಂದ ಅವನು ಸಮಸ್ತವನ್ನು ಮರೆತಿದ್ದಾನೆ' ಎಂದು ಬೇಡಿದರು.

ನಟಿ ಅವರ ಬೇಡಿಕೆಯನ್ನು ನಿರಾಕರಿಸಲಿಲ್ಲ. ತನ್ನ ಪ್ರಿಯ ಅಶ್ವಘೋಷನ ಸುಖ ಸಂತೋಷ ಅಭ್ಯುದಯಗಳಿಗಾಗಿ, ಧರ್ಮ, ನೀತಿಗಳ ಸಲುವಾಗಿ ವೃದ್ಧ ಬ್ರಾಹ್ಮಣರ ಮಾತಿಗೆ ಸಂತೋಷದಿಂದ ಒಪ್ಪಿದಳು.

ಮನಸಾರೆ ಪ್ರೀತಿಸಿ ತ್ತಿದ್ದ ನಟಿಯಿಂದ ದೂರವಿರಲು ಅಶ್ವಘೋಷ ಸಿದ್ಧನಿರಲಿಲ್ಲ. ನಟಿ ಅಶ್ವಘೋಷನಿಂದ ದೂರವಿರಲು ಉಳಿದಿದ್ದ ಏಕೈಕ ಮಾರ್ಗವನ್ನು ಅನುಸರಿಸಲೇ ಬೇಕಾಯಿತು. ಪ್ರತಿಭಾವಂತ, ಮುಗ್ಧ ಮನೋಭಾವದ ಪ್ರಿಯ ಅಶ್ವಘೋಷನಿಂದ ದೂರವಾಗಲು ಅವಳು ಸಿದ್ಧವಿರಲಿಲ್ಲ. ಆದರೆ ಅವನ ತಂದೆಗೆ "ನಿಮ್ಮ ಮಗನನ್ನು ನಿನಗೆ ಒಪ್ಪಿಸುತ್ತೇನೆ. ಅವನ ಅಭ್ಯುದಯಕ್ಕೆ ಅಡ್ಡಿಯಾಗಿ ನಿಲ್ಲಬೇಡಿ. ಅವರು ಸುಖವಾಗಿದ್ದರೆ ಸಾಕು. ನಮ್ಮ ಪ್ರೇಮ ಪ್ರಕರಣ ಕನಸು ಎಂದು ತಿಳಿಯುತ್ತೇನೆ, ಅವರನ್ನು ಮತ್ತೆಂದೂ ಕಾಣುವುದಿಲ್ಲ ಆಲಿಸುವುದಿಲ್ಲ' ಎಂದು ವಾಗ್ದಾನ ಮಾಡಿದ್ದಳು.

ಕರ್ಮನಿಷ್ಠ ಶ್ರೋತ್ರಿಯ ಬ್ರಾಹ್ಮಣನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ನಟಿ ವಜ್ರವನ್ನು ಅರೆದು ಕುಡಿದು ಕೂನೆಯುಸಿರು ಎಳೆದಳು. ನಟಿಯ ತ್ಯಾಗ ಬಲಿದಾನಗಳನ್ನು ಕಂಡ ಅಶ್ವಘೋಷ ಮತ್ತು ಅವನ ತಂದೆ ಮಮ್ಮಲ ಮರುಗಿದರು. ಅಶ್ವಘೋಷನ ತಂದೆ 'ಈ ಕೊಲೆಗೆ ನಾನೇ ಕಾರಣ' ಎಂದು ದುಃಖಿಸಿದರು.

ಅಶ್ವಘೋಷನ ಮನೋಧರ್ಮವೇ ಬದಲಾಯಿತು. ತನಗಾಗಿ ತನ್ನ ಜನ್ಮವನ್ನು ಬಲಿಕೊಟ್ಟ ನಟಿಯ ಉದಾತ್ತ ಗುಣಗಳನ್ನು ಚಿಂತಿಸಿ ವೈರಾಗ್ಯ ತಾಳಿದ. ಬುದ್ಧನ ಉಪದೇಶ ಅವನ ನೊಂದ ಹೃದಯಕ್ಕೆ ಶಾಂತಿವರ್ಷ ಸುರಿಸಿತು. ಬೌದ್ಧ ಧರ್ಮವೆಂದು ಪ್ರಭಾವಿತನಾದ ಅಶ್ವಘೋಷ ಬೌದ್ಧ ಧರ್ಮ ದೀಕ್ಷೆ ಸ್ವೀಕರಿಸಿದ. ಮುಂದೆ ಅವನ ಸೇವೆ ಬೌದ್ಧ ಧರ್ಮಕ್ಕೆ ವಿನಿಯೋಗವಾಯಿತು.

ದಸರೆಯ ಹಬ್ಬ

ವೈಕುಂಠಲೀಲೆ ಬಾರಿ ದಶರಾದ ಹಬ್ಬ ರಾಜಭವನ ರಜತಗಿರಿ ಮೊದಲನೆಯಗಬ್ಬ ಮೊನಲೊನ್ನು ಹೇಳಿದರು ಇಷ್ಟಿಲ್ಲ ದಶರಾ ದಶರ ರದ್ದತಿಯಂತೆ! ಇದು ದೊಡ್ಡ

ದುಶರಾ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜಿವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನ್‌ಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯವಿಧಿಯಾಗಿವೆ

ದೇಶವಿಖ್ಯಾತವಾದ

ಜೀಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್
ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಅಮೃತಧಾರೆ
ಎಲ್ಲಾ ತರದ ೫೦ ವರ್ಷ ಸಿದ್ಧಿತ ಮತ್ತು ಮೂಲಾಯದ ನೋವುಗಳಿಗೆ
ಅಮೃತ ಧಾರೆ

ತಮಿಳು ತಾಯಿಹಾಲು - ಹಿಂದಿ ನಾಯಿಹಾಲು - ಆಂಗ್ಲ ಅಮೃತ

ಬರೆದವರು: ಶ್ರೀ ಶಿವಶಂಕರ

ಅವರು ಹೇಳುತ್ತಾರೆ

ನಾವು ಶುದ್ಧ ತಮಿಳರೆಂದೂ, ತಮಿಳನ್ನು ತಾಯಿಲೆಕ್ಕಾಗಿಯೇ ಇರುವವರೆಂದೂ ದ್ರಾ. ಮು. ಕ. ವು ಸಮರೂಪ ಮಯದ ಪರಿಚೆ ಇಲ್ಲದೆ ಪ್ರಚಾರಿಸುತ್ತಾ ಬಂದಿದೆ. ಸಂಸ್ಕೃತಕ್ಕಿಂತಲೂ ತಮಿಳು ನ್ಯಾಯೋಚಿತ ಭಾಷೆಯೆಂಬುದು ಅವರವಾದ. ಅಷ್ಟೆ ಇತರ ಭಾರತೀಯಭಾಷೆಗಳಿಗಿಂತ ಬಹಳಷ್ಟು ಬೆಳೆದಿರುವ ಭಾಷೆಯೆಂದೂ ಅವರು ಅಭಿಪ್ರಾಯಪಟ್ಟುಕೊಳ್ಳುವದುಂಟು. ಅದು ಕೇವಲ ಶುದ್ಧ ಬಡಾಯಿಯೆಂಬುದು ತಮಿಳ್ನಾಡಿನಲ್ಲಿ ನಡೆದ ತಮಿಳು ಅಧಿವೇಶನದ ತಮಿಳು ಬಂಧುಗಳಿಗಿಬಿಟ್ಟಿತ. ಭಾರತೀಯ ಸಂಸ್ಕೃತಿ, ತಮಿಳು ಭಾಷೆಯ ಸಿರಿವಂತಿಕೆಯ ಪ್ರಚಾರಕ್ಕಾಗಿ ಈ ಅಧಿವೇಶನವನ್ನು ಸಹಯೋಗಿಸಿಕೊಳ್ಳುವಬಯಲು ದ್ರಾ. ಮು. ಕ. ವು ಅದನ್ನು ತನ್ನ ಸ್ವಕ್ಷ ಪ್ರಚಾರ ಹಾಗೂ ಹಿಂದಿಯ ಪೇಲೆ ವಿಷಕಾರಲಿಕ್ಕಾಗಿಯೇ ಉಪಯೋಗಿಸಿಕೊಂಡಿತು. ಅಲ್ಲಿ ಆಂಗ್ಲಭಾಷೆಯೊಂದಿಗೆ ಹೋಲಿಸಿ ನೋಡುವಾಗ ತಮಿಳಲ್ಲೇನೂ ಇಲ್ಲವೆಂಬುದನ್ನು ದ್ರಾ. ಮು. ಕ. ದ ಮಿನೀಷರು ಖಂಡಾತುಂಡವಾಗಿ ಹೇಳಿಬಿಟ್ಟರು.

ಮದರಾಸಿನ ವಿದ್ಯಾಮಂತ್ರಿ ತಿರು ನೆಡುಂಜುಳ್ಳಿಯನ್‌ರವರು ಅಧಿವೇಶನದಲ್ಲಿ ಮಾತನಾಡುತ್ತ, ಪ್ರಪಂಚ ಸಾಹಿತ್ಯವಿಷಯದ ವಿಧಿಯಿಂದ ನುತ್ತ, ವೈಜ್ಞಾನಿಕ ಜ್ಞಾನ ವಿಧಿಯಿಂದ ದೇಶವಾಗಿ ತಮಿಳು ಉಪಯೋಗಿಸಿಕೊಳ್ಳುತ್ತದೆಂದು ಹೇಳಿದರು. ಎಲ್ಲರೂ ಹೇಳುತ್ತಿರುವ ಮಾತು ಇದು. ಆದರೆ ಇದು ದ್ರಾ. ಮು. ಕ. ಧುರೀಣಹಾಗೂ ವಿದ್ಯಾಮಂತ್ರಿಯ ತಿರುಮುಖದಿಂದ ಬಂದಾಗ ಅದಕ್ಕೆ ವೈಶಿಷ್ಟ್ಯ ಬರುತ್ತದೆ. ದ್ರಾ. ಮು. ಕ. ದ ಧುರೀಣರು— ತಮಿಳು ತಾಯಿ ಹಾಲು, ಹಿಂದಿ (ಇತರ ಭಾರತೀಯ ಭಾಷೆಗಳು) ನಾಯಿ ಹಾಲೆಂದು ಹೇಳಿರುವದನ್ನು ಮಕ್ಕಳು ಗೋಡೆಗಳಲ್ಲಿ ಬರೆದು ಹಾಕಿರುವರು. ತಿರು ನೆಡುಂಜುಳ್ಳಿಯನ್‌ರವರ ಪ್ರಪಂಚದಲ್ಲಿ ಭಾರತೀಯ (ತಮಿಳೇತರ) ಭಾಷೆಗಳಿಗೆ ಸ್ಥಾನವೇ ಇಲ್ಲವೆಂದು ಕಾಣುತ್ತದೆ. ಅಥವಾ ಅವರ ದೃಷ್ಟಿಯಲ್ಲಿ ತಮಿಳಿನೆದುರು ಇತರ ಭಾರತೀಯ ಭಾಷೆಗಳು ಬರೀ ಜೊಳ್ಳುಗಳೆಂದು ಕಾಣುತ್ತದೆ. ತಮಿಳೇತರ ಭಾರತೀಯ ಭಾಷೆಗಳಲ್ಲಿ ಸಾಹಿತ್ಯವೂ ಇಲ್ಲ, ಅವು ವೈಜ್ಞಾನಿಕವೂ ಅಲ್ಲ! ಎಂತಹಾ ಪ್ರಕಂಡಾ ಸತ್ರ! ಇಂತಹವರು ಪ್ರಪಂಚದ ಕುರಿತು ಮಾತಾಡುತ್ತಿದ್ದಾರೆ. ಇವರ ಪ್ರಪಂಚವೆಂದರೆ ಕೇವಲ ಆಂಗ್ಲ ಭಾಷೆ. ಅವರದನ್ನು ಅಮೃತವೆಂದೇ ಭಾವಿಸಿಕೊಂಡಿದ್ದಾರೆ. ಅದರ ಸಿಂಚನದಿಂದ ತಮಿಳನ್ನುಳಿಸಿಕೊಳ್ಳಲು ಅವರು ಹೋರಾಡುತ್ತಿದ್ದಾರೆ! ಕಾನೂನು—ನ್ಯಾಯ, ವಿಜ್ಞಾನ, ವೈದ್ಯಕೀಯ, ಯಂತ್ರ ಶಾಸ್ತ್ರಮುಂತಾದ ರಂಗಗಳಲ್ಲಿ ತಕ್ಕ ತಮಿಳು ಶಬ್ದಗಳಿಲ್ಲ. ಅದರ ಬದಲು ಈಗಿರುವ 'ಇಂಗ್ಲೀಷ್' ಶಬ್ದಗಳನ್ನು ಉಪಯೋಗಿಸಿಕೊಂಡು ಆ ರಂಗದಲ್ಲಿ ತಮಿಳಿಗೆ ಜೀವದಾನ ಮಾಡಬೇಕು.

ತಿರು ನೆಡುಂಜುಳ್ಳಿಯನ್‌ರವರಿಗೆ ಕಾನೂನಿನ ವಿಷಯ ಗೊತ್ತಿರಲಿಕ್ಕೆ ಕಾರಣವಿಲ್ಲ. ಆದುದರಿಂದ ಅವರು ಹೇಳಿರುವದನ್ನು ದೇವವಾಕ್ಯವೆಂದು ಪರಿಗಣಿಸಬೇಕಾಗಿಲ್ಲವೆಂಬುದು ನಿಜವಿದೆಯಾದರೂ ಅವರು ದ್ರಾ. ಮು. ಕ ದ ಧುರೀಣ ಹಾಗೂ ಮದರಾಸಿನ ವಿದ್ಯಾ ಮಂತ್ರಿ ಇರುವ ಕಾರಣ ಅವರ ಮಾತಿಗೆ ಭಾರ ಇದೆಯೆಂಬುದನ್ನು ಹಗುರವಾಗಿ ಕಡೆದೆಯಲು ಸಾಧ್ಯ ಇರುವದಿಲ್ಲ. ಶ್ರೀ ನೆಡುಂಜುಳ್ಳಿಯನ್‌ರವರು ಮಾತಾಡುವಾಗ ಅಲ್ಲಿ ಮದರಾಸಿನ ಮುಖ್ಯ ನ್ಯಾಯಾಧೀಶ ಶ್ರೀ ಅವಂತನಾರಾಯಣನ್‌ರವರು ಉಪಸ್ಥಿತರಿದ್ದರು. ಅವರು ತಿರು ನೆಡುಂಜುಳ್ಳಿಯನ್‌ರವರ ಜೊಳ್ಳು ವಾದವನ್ನು ಗಾಳಿಗೆ ತೂರಿ ಬಿಟ್ಟರು. ಕಾನೂನು ರಂಗದಲ್ಲಿ ತಮಿಳು ಪದಗಳಿಗೆ ಬರಗಾಲವಿಲ್ಲವೆಂದವರು ಪ್ರಪಂಚದ ಪ್ರತಿನಿಧಿಗಳಿಗೆ ಮನದಟ್ಟು ಮಾಡಿದರು. ಇದ್ದಕ್ಕಿದ್ದಂತೆ ಈಗ ಪ್ರಯೋಗದಲ್ಲಿ ಇರದಿರಬಹುದು. ಹಾಗೆಂದಾಕ್ಷಣ ತಮಿಳನಲ್ಲೇ ಇಲ್ಲವೆನ್ನುವದು ನಮ್ಮ ಜ್ಞಾನದ ಮಟ್ಟದ ಪರಿಚಯವೇ ಸರಿ. ಅಂತಹ ಶಬ್ದಗಳನ್ನು ಸೃಷ್ಟಿಸಬಹುದು, ಕಂಡು ಹಿಡಿಯಬಹುದು. ಅದಕ್ಕೆ ನುಸುಳ್ಳು ಬೇಕು. ಅಂಥಾದು ಕಡಿಮೆ ಹಾಗೂ ಧೈರ್ಯ ಅಲ್ಲ—ಶುದ್ಧ ಮೂರ್ಖತನ ಬೇಕು. ನ್ಯಾಯಮೂರ್ತಿಗಳು ಹೇಳಿದಂತೆ ನಡಿದಿರುವರು.

ಅವರ ಮಾತನ್ನು ಬೆಂಬಲಿಸಲೋ ಅನ್ನುವಂತೆ ಸಿಲೋನಿನಿಂದ ಬಂದಿದ್ದ ಪ್ರತಿನಿಧಿ ಶ್ರೀ ತಿರು ಸೆಲ್ವಂ (ಸಿಲೋನ್ ಸಚಿವ) ಅವರು ಮದರಾಸಿನ ವಿದ್ಯಾಮಂತ್ರಿಯವರಿಗೆ ಸಿಲೋನ್ ಸರಕಾರವು ಸಿದ್ಧಪಡಿಸಿರುವ 'ಪಾರಿಭಾಷಿಕ ಕೈಪಿಂಟ್'ನ್ನು ಉಡುಗೊರೆಯಾಗಿ ಕೊಟ್ಟರು. ಇದರಿಂದ ಅನ್ಯಾನ್ಯ ರಂಗಗಳಲ್ಲೂ ಸರಿಯಾದ ತಮಿಳು ಪದಗಳನ್ನು ಕಂಡು ಹಿಡಿಯಬಹುದೆಂಬುದು ಸ್ಪಷ್ಟವಾಗಿ ಹೋಯಿತು. ಅಂಗೈ ಹುಣ್ಣಿಗಿನ್ನು ಕನ್ನಡಿಬೇಕೇನ ?

ಹಾಗಿದ್ದರೂ, ಇಂತಹ ಛಿದ್ರ ಮನೋವೃತ್ತಿಯುಳ್ಳವರನ್ನು ಬೆಂಬಲಿಸುವವರು ಕೂಡಾ ಕೆಲವರಿದ್ದೇ ಇರುತ್ತಾರೆ. ಅವರು ಅಂತಹ ಅಧಿವೇಶಗಳಗಳನ್ನು ಅದಕ್ಕಾಗಿಯೇ ದುರ್ವಿನಿಯೋಗಿಸಿಕೊಳ್ಳುವದುಂಟು. ಮದರಾಸಿನಲ್ಲಿ ಹಾಗೂ ಕರ್ಣಾಟಕದ ಕೆಲ ನಗರಗಳಲ್ಲಿ ಹಿಂದೀ ವಿರುದ್ಧ ದಾಂಗೆಯೆದ್ದಾಗ ಅದಕ್ಕೆ ಹಿಂಬದಿಯಲ್ಲಿದ್ದವರು ಬ್ರಿಟಿಷ್ ಕೌನ್ಸಿಲಿನವರೆಂಬುದು ಈಗ ಬಯಲಾಗಿರುತ್ತದೆ. ಆಂಗ್ಲೇಯರು ಇಲ್ಲಿಂದ ಕಾಲ್ತೆಗೆದುಕೊಂಡರೂ ಅವರ ಆಂಗ್ಲ ಭಾಷೆ ಇಲ್ಲಿನ್ನೂ ಅಸ್ತಿತ್ವದಲ್ಲಿದೆ. ಅದಕ್ಕೆ ಉಳಿಯುವಿಕೆಗಾಗಿ ಅವರು ಅದೆಂತೆಂತೋ ಪ್ರಯತ್ನಿಸುತ್ತಿದ್ದಾರೆ. ತಮಿಳು ಅಧಿವೇಶನಕ್ಕೆ ಬಂದಿದ್ದ ಅವರ ಪ್ರತಿನಿಧಿಯು ಬಹಳ ಸೂಕ್ಷ್ಮವಾಗಿ ತನ್ನ ಕಾರ್ಯವನ್ನು ನಿರ್ವಹಿಸಿದರು. ಅಷ್ಟಿಂದ ಡಾ|| ಜಿ. ಆರ್. ಮೂರ್ತಿ ಬಂದಿದ್ದರು. ಅವರು ಮಾತಾಡಿ ಪತ್ರ ಸೈಕಲ್ ಮತ್ತು ಕಾಫಿ ಮುಂತಾದ ಅಂತಾರಾಷ್ಟ್ರೀಯ ಶಬ್ದಗಳನ್ನುಳಿಸಿಕೊಳ್ಳಬೇಕೆಂದರು. ಶುದ್ಧ ತಮಿಳರು ಇದಕ್ಕೇನೆನ್ನುವರೋ? ಮಿಸ್ಟರ್ ಮೂರ್ತಿರವರನ್ನು ಬೆಂಬಲಿಸಲೋ ಅನ್ನುವಂತೆ ಡಾ|| ಆರ್. ಇ. ಅಶೀರ್‌ರವರು 'ಬಸ್ಸ್' ಮುಂತಾದ ಪರಿಚಿತ ಪದಗಳನ್ನು ತಮಿಳಾಗಿಸಿಕೊಳ್ಳಬೇಕೆಂದು ಹೇಳಿದರು. ಇದು ಇಲ್ಲಿ ತಮಾಷೆಯೇ ಇದೆ. ಅದಾಗಲೇ ಮದರಾಸು ಸರಕಾರವು ಬಸ್ಸನ್ನು ಬದಲಾಯಿಸಿರುತ್ತದೆ. ಈಗ ಶ್ರೀ ಅಶೀರರವರು ಆಲೋಚನೆ ಕೊಡುತ್ತಿದ್ದಾರೆ! ಕಾಫಿಗೆ ಸರಿಯಾದ ತಮಿಳು ಪದ (ಪಾತ್ರೀಯ!)ಇದೆಯೋ ? ಇಲ್ಲವೋ ಅದರೂ ಕನ್ನಡದಲ್ಲಿ ಬಂದು ಶಬ್ದವಿದೆ. ಹಾಗಿದ್ದರೂ ತಮಿಳ್ನಾಡು ಇಂಗ್ಲಿಷ್ ಹಿಂಬುತಿಂದ ನೂರು ಕವಿಗಳು ಕನ್ನಡ ಕಸ್ತೂರಿಯ ಪರಿಮಳವರಿಯದೆ ಕನ್ನಡ ಕಸದಲ್ಲೇನಿದೆಂದು ಕಿರಿಚುತ್ತಿದ್ದಾರೆ!

ತಮಿಳು ತಾಯಿಹಾಲು, ಆಂಗ್ಲ ಅಮೃತವೆಂದು ದ್ರಾ. ಮು. ಕ. ದ ಧುರೀಣರು ಧಾಂ, ಧಂ ಬಾರಿಸಿದರೂ ತಮಿಳಿನ ಮೇಲೆ ನಿಜವಾಗಿ ಅಭಿಮಾನ ಉಳ್ಳವರು ಕೆಲವರಿದ್ದೇ ಇರುತ್ತಾರೆ. ಈ ಪರೀಕ್ಷೆಯು ಅಧಿವೇಶನದಲ್ಲಿ ನಡೆದೇ ಹೋಯ್ತು. ಮಾಜಿ ರಾಜ್ಯಪಾಲ, ಮಾಜಿ ಸಂಸದ ಸದಸ್ಯ ಶ್ರೀ ಕೆ. ಸಂತಾನಂರವರು, ವಿದ್ಯಾರಂಗದಲ್ಲಿ ಒಡನೆ ತಮಿಳು ಭಾಷೆ ಸುಸ್ಥಿತರಬೇಕೆನ್ನುವವರನ್ನು ಭಾಷಾಂಧರೆಂದು ಹೇಳಿದುದನ್ನು ತಿರು ಮಾ. ಪೊ. ಶಿವಜ್ಞಾನಗ್ರಾಮಣಿ (ವಿಧಾನ ಸಭಾ ಸದಸ್ಯ) ಖಂಡಿಸಿದರು. ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದರು. ಶ್ರೀ ಸಂತಾನಂ ಸೂಲಭದಲ್ಲಿ ಒಪ್ಪುವವರಲ್ಲ. ಉಪದ ಪ್ರಯೋಗವು ಸಂಸದಿನಲ್ಲೇ ನಡೆಯುತ್ತಿದೆನ್ನುವದು ಅವರ ಅಭಿಪ್ರಾಯ. ಒಡನೆ ಅತ್ಯಂಡಕ್ಕೂ ಇತ್ಯಂಡಕ್ಕೂ ವಾದಿ—ಪ್ರತಿವಾದಿಗಳು ಸಿದ್ಧವಾಗಿ ಬಿಡುತ್ತಾರೆ. ಆಗ ಕೆಲವರು ಉಪಾಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದುಂಟು. ಅಂತೆಯೇ ಮದ್ರಾಸು ವಿಶ್ವವಿದ್ಯಾಲಯದ ಶ್ರೀ ಸುಬ್ರಹ್ಮಣಿಯುವರು ವಾದವನ್ನು ಬಗೆಹರಿಸಲು ಅಸಫಲವನ್ನು ಕೇಳಿಕೊಂಡರು. ಅಂದು ಅಮೂಂಕದ ಪ್ರತಿನಿಧಿ ಡಾ|| ಜೆ. ಎ. ಬಿ. ವಿ ಬ್ಯುಟೆನಾನ್‌ರವರು ಅಧ್ಯಕ್ಷ ಸ್ಥಾನದಲ್ಲಿದ್ದರು. ವಾದದ ವಿಷಯ ಒಂದು ದೇಶಕ್ಕೆ ಸಂಬಂಧಪಟ್ಟ ವಿಷಯವಿದೆ. ಅಧಿವೇಶನವು ಅಂತಾರಾಷ್ಟ್ರೀಯವಿದೆ. ಆದುದರಿಂದ ಅದು ಸಂಬಂಧಸ್ಥ ಒಂದು ದೇಶದ ವ್ಯವಹಾರದಲ್ಲಿ ಕೈಹಾಕುವಂತಹ ವಿಷಯದ ಮೇಲೆ ತೀರ್ಪು ಕೊಡಲಾರದು. ಅಂತಹ ವಿಷಯಗಳನ್ನು ಇಲ್ಲಿ ಆಡಬಾರದು. ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಒಂದು ದೇಶದ ಆಂತರಿಕ ವ್ಯವಹಾರದ ವಿಷಯವನ್ನೇ ಗುದ್ದಿಯನ್ನಾಗಿ ಅಷ್ಟು ದಿನ ಆದನಿಸೂ ಅಡೆತಡೆ ಇಲ್ಲದೆ, ಲಂಡು ಲಗಾಮಿಲ್ಲದೆ ವಿಷಕಾರುತ್ತಿದ್ದವರಿಗೆ ಅನಿರೀಕ್ಷಿತವಾಗಿ ಶಟ್ಟನೆ ಲಗಾಮು ಹಾಕಿದಂತಾಯಿತು. ಅಧಿವೇಶನದ ಕೊನೆಯಲ್ಲಿ ಅಂತಹವರಿಗೆ ಮಂಗಳಾರತಿ ಮಾಡಲಾಯಿತು. ಶ್ರೀ ಬ್ಯೂಟೆನಾನ್‌ರವರ ಉಪಾಯಪೂರ್ಣ ಜಾಣ್ಮೆಯ ನುಡಿಗಳನ್ನು ಕೇಳಿದ ಮೇಲೆ ಶ್ರೀ ಸಂತಾನಂರವರು ತನ್ನ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡರು.

ವಾದ ಪ್ರತಿವಾದ ಭರದಿಂದ ನಡೆಯುತ್ತಿದ್ದಾಗ—ಶ್ರೀ ಸಂತಾನಂ ಹಾಗೂ ಶ್ರೀ ಶಿವಜ್ಞಾನಗ್ರಾಮಣಿಯವರು ವಿಷಯಗಳನ್ನು ವಿವರಿಸುತ್ತಿದ್ದಾಗ—ಈ ತಮಾಷೆಯನ್ನು ಕಂಡು ನಕ್ಕವರು ಇಸ್ರೇಲಿನ ಪ್ರತಿನಿಧಿಗಳು. ಆಂಗ್ಲ ಭಾಷೆಯಿಂದ ತಮಿಳಿಗೆ ಬದಲಾಯಿಸಲು ಮುವ್ವತ್ತು ವರ್ಷಗಳು— ಜೀವಮಾನ— ಬೇಕೆಂದು ಹೇಳಿದಾಗ ಅವರಿಂದ ನಗೆ ತಡೆದುಕೊಳ್ಳಲಾಗಲಿಲ್ಲ. ಅಂತಾರಾಷ್ಟ್ರೀಯ ಶಿಷ್ಟಾಚಾರ ಹಾಗೂ ತಮ್ಮ ಸಂಯಮ-ಶಿಸ್ತಿನ ಮೇರೆ ಮೀರಿಯೂ, ಅವರು ನಗಲೇಬೇಕಾಯಿತು. ಅದು ಅವರ ಅನುಭವ. ಯೆಹೋದಿಗಳು ಜಗತ್ತಿನ ನಾನಾ ರಾಷ್ಟ್ರಗಳಲ್ಲಿದ್ದರು. ಅದುವೇ ಅವರಿಗೆ ಪಿತೃಭೂಮಿಯೂ ಆಗಿತ್ತೆನ್ನಬಹುದು. ಅವರು ಹಿಬ್ರೂ ಭಾಷೆಯನ್ನು ಮರೆತಿದ್ದರೆನ್ನಬಹುದು. ಆದರೂ ರಾಷ್ಟ್ರದ ಭಾಷೆಗಳನ್ನು ಕಲಿತು ಅಲ್ಲಿ ಅವರು ಪ್ರಾಂಡಿತ್ಯ ಪಡೆದಿದ್ದರು. ಅಮೇರಿಕದಲ್ಲಿದ್ದ ಯೆಹೋದಿಗೆ ಅಮೇರಿಕನ್ (ಇಂಗ್ಲೀಷ್) ಭಾಷೆ, ಇಂಗ್ಲೇಂಡಿನಲ್ಲಿದ್ದವನಿಗೆ ಇಂಗ್ಲೀಷ, ಫ್ರಾನ್ಸಿನಲ್ಲಿದ್ದವನಿಗೆ ಫ್ರೆಂಚ್ ... ಹೀಗೆ ಆಯಾಯ ದೇಶದ ಭಾಷೆಗಳು ಅವರಿಗೆ ಕರತಲಾಮಲಕವಾಗಿದ್ದು ಹಿಬ್ರೂವಿನಲ್ಲಿ ಅವರು ಅದೇನನ್ನೂ ಕಂಡಿರಲಿಲ್ಲ. ಹಾಗಿದ್ದರೂ, ಅವರೆಲ್ಲರೂ ಇಸ್ರೇಲಿಗೆ ಬಂದುದೇ ತಡ, ಎಲ್ಲಾ ರಂಗಗಳಲ್ಲೂ ಹಿಬ್ರೂ ರಾಷ್ಟ್ರಭಾಷೆ ಆಯಿತು. ಪೆರೋಕಲೇಮಿನಲ್ಲಿ ಬ್ರಿಟಿಷರ ಅಧಿಕಾರ ನಡೆದಿತ್ತು. ಹಾಗಿದ್ದರೂ ಯೆಹೋದಿಗಳು ಯಶವಂತರಾದರು. ಆ ಮರಳು ಭೂಮಿಯಲ್ಲಿ ಹಾಗಾಗಿ ಜಹುದಾದಲ್ಲಿ ಫಲವತ್ತಾದ ಅವತಾರ ಪುರುಷರ ಪುಣ್ಯ ಭೂಮಿಯಲ್ಲೇತಕ್ಕೆ ಆ ದೇಶದ ಭಾಷೆಯೇ ಆಡಳಿತ ಭಾಷೆಯಾಗಿರಬಾರದು? ಇದಕ್ಕೆ ಅದಾಗಲೇ ಇಪ್ಪತ್ತು ವರ್ಷಗಳನ್ನು ಸಮುದ್ರದಲ್ಲಿ ಹುಣಿಸಿ ಹುಳಿ ಕಲಸಿದಂತಾಯಿತು. ಇನ್ನು ಮುವ್ವತ್ತು ವರ್ಷಗಳು ಬೇಕಂತೆ! ಅದನ್ನು ಸಹಿಸಿಕೊಳ್ಳಲಾಗದೆ ಇಸ್ರೇಲಿನ ಪ್ರತಿನಿಧಿ ಡಾ|| ಟೈಮ್ ರಾಬಿನ್ ತಮ್ಮ ದೇಶದ ವಿಷಯ ತಿಳಿಸಿದರು. ಕೋಣನ ಮುಂದೆ ಕೆನ್ನಿರಿ ಬಾರಿಸಿದರೆ ಏನು ಪ್ರಯೋಜನ?

ಸಿಲೋನಿನ ಪ್ರತಿನಿಧಿ ಶ್ರೀ ಕೆ. ಪಿ. ರತ್ನಂರವರು ಈ ವಿಷಯದಲ್ಲಿ ಶ್ರೀ ಲಂಕೆಯೂ ಹಿಂದಕ್ಕೆ ಬಿದ್ದಿಲ್ಲವೆಂದರು. ಸಿಂಹಳದಲ್ಲಿ ಸಿಂಹಳ ಭಾಷೆ ಇದೆ. ಅದೂ ಬ್ರಿಟಿಷರ ಕಪಿ ಮುಷ್ಟಿಯೊಳಗಿತ್ತು. ಹಾಗಿದ್ದರೂ ಅಲ್ಲಿ ವಿಶ್ವವಿದ್ಯಾಲಯದಲ್ಲಿಂದು ತಮಿಳು ಪೂರ್ವಮ ಭಾಷೆಯಾಗಿದೆಯೆಂದು ತಿಳಿಸಿದರು. ಸಿಲೋನಿನ ತಮಿಳಿನ ಪ್ರಧಾನವನ್ನು ಅದಾಗಲೇ ಶ್ರೀ ತಿರು ಸೆಲ್ವಂ

ಅಪರಾಧಗಳ ದಮನಕ್ಕೆ

ಪೋಲೀಸರಷ್ಟೇ ಜನತೆಗೂ ಹೊಣೆಯಿದೆ

ಲೇಖಕರು : ಡಾ॥ ಸಂಪೂರ್ಣಾನಂದ

"ಉದಾತ್ತಜನತೆಹೀನ ಸರಕಾರವನ್ನು ಹೊಂದಲಾರದು ಮತ್ತು ಹೀನ ಜನತೆ ಉದಾತ್ತ ಸರಕಾರವನ್ನು ಪಡೆಯಲಾರದು." ಎಂದು ಗುಡುಗಿದವರು ಶ್ರೀ ಸುರೇಂದ್ರನಾಥ ಬ್ಯಾನರ್ಜಿ. ಸಂದರ್ಭ-೧೯೦೫ ರಲ್ಲಿ ಜರುಗಿದ ಕಾಂಗ್ರೆಸಿನ ಬನಾರಸ್ ಅಧಿವೇಶನ. ಬ್ಯಾನರ್ಜಿಯವರ ಮಾತಿನಲ್ಲಿ ಪ್ರತಿಯೊಬ್ಬ ನಾಗರಿಕನು ಯೋಚಿಸಬೇಕಾದ ಒಂದು ಘನ ಸತ್ಯವು ಹುದುಗಿದೆ. ಆಡಳಿತದ ಒಂದು ಅವಶ್ಯಕ ಭಾಗವೆಂದ ಒಳ್ಳೆಯ ಪೋಲೀಸನು— "ಉದಾತ್ತ" ಎಂಬ ಶಬ್ದದ ಬದಲು ಸರಳವಾದ "ಒಳ್ಳೆಯ" ಎಂಬ ಪದವನ್ನು ಪ್ರಯೋಗಿಸೋಣ—ರಾಜ್ಯಶಕಟದ ಒಂದು ಮುಖ್ಯಅಂಶವಾಗಿದ್ದುದಾದರೆ, ಈ ಮಾತಿನ ಅರ್ಥ, ಒಳ್ಳೆಯ ಪೋಲೀಸ್ ಆಡಳಿತ ಮತ್ತು ಒಳ್ಳೆಯ ಜನತೆ ಜತೆಜತೆಯಾಗಿ ಮುಂದೆ ಹೋಗಲು ಸಾಧ್ಯವೆಂದೇ ಆಗುತ್ತದೆ. ಒಂದು ದೇಶದ ಬಹುಸಂಖ್ಯ ಜನರು ಒಳ್ಳೆಯವರಾಗಿಲ್ಲದಿದ್ದರೆ ಅಲ್ಲಿ ಪಾತಕಕನವನ್ನು ಸಮರ್ಥ ರೀತಿಯಲ್ಲಿ ತಡೆಗಟ್ಟಬಹುದೆಂಬುದು ಅಸಾಧ್ಯವೇ ಸರಿ. ಭಾರತೀಯರಾದ ನಾವು ಒಳ್ಳೆಯ ಜನರು ಎಂದು ಕರೆಯಿಸಿಕೊಳ್ಳಲು ಅರ್ಹರಾಗಿದ್ದೇವೆಯೇ ಎಂಬ ಬಗ್ಗೆ ಗಂಭೀರವಾಗಿ ಆಲೋಚಿಸುವ. ನಮ್ಮನ್ನು ಒಳ್ಳೆಯವರು ಎಂದು ಕರೆಯಲಾಗದು ಎಂಬುದೇ ನನ್ನ ಪ್ರಾಮಾಣಿಕ ಅಭಿಪ್ರಾಯ. ನಾವು ಒಳ್ಳೆಯ ಜನರೇ ಅಲ್ಲ.

ಇದರರ್ಥ ದಂಡನೆಯ ಕಾಠಿಣ್ಯ (ಫೀನಲ್ ಕೋಡ್) ಒಂದಿಲ್ಲೊಂದುಭಾವನ್ನು ಬುದ್ಧಿಪೂರ್ವಕವಾಗಿಯೇ ನಮ್ಮಲ್ಲಿ ಪ್ರತಿಯೊಬ್ಬನು ಉಲ್ಲಂಘಿಸಲು ಯತ್ನಿಸುತ್ತಿದ್ದಾನೆ ಎಂದಲ್ಲ. ಹಾಗೆ ಉಲ್ಲಂಘಿಸುವ ಧೈರ್ಯವೇ ನಮ್ಮಲ್ಲಿ ಬಹಳಷ್ಟು ಜನಕ್ಕೆ ಇಲ್ಲ. ಅಪರಾಧ ವಿಷಯಕ್ಕೆ ನಮ್ಮ ನಡವಳಿಕೆ ಹೇಗಿರಬೇಕೋ ಹಾಗಿದೆಯೇ? ಒಬ್ಬ ಮನುಷ್ಯ ಒಂದಿಲ್ಲ ಒಂದು ಕಾರಣದಿಂದ ಯಾವದೇ ಅಪರಾಧವನ್ನು ಮಾಡಿರಬಹುದು ಅಥವಾ ಮಾಡಿರಲಾರ; ಆದರೆ ನಾನು ಮಾಡದೇ ಇದ್ದ ಅಪರಾಧವನ್ನು ಅವನು ಕ್ಷಮಿಸುವದೇ ಅಥವಾ ಕ್ಷಮಿಸನೆ? ಭ್ರಷ್ಟಾಚಾರದ ಬಗ್ಗೆ ನಾವು ಮಾತಾಡುವಾಗ ನಮ್ಮ ವಾಕ್‌ಶ್ರೀ ಹೊಳೆಯಾಗಿ ಹರಿಯುತ್ತದೆ, ಆದರೆ ನಮ್ಮ ಸಾಮಾಜಿಕ ನಡತೆಯಲ್ಲಿ ಭ್ರಷ್ಟಾಚಾರಿಯಾದ ಮನುಷ್ಯನಿಗೆ 'ನಾನು ನಿಮ್ಮನ್ನು ಬಲ್ಲೆ, ಸದ್ಗೃಹಸ್ಥರೊಡನೆ ಕೂಡಿಕೊಂಡಿರಲು ನೀನು ಯೋಗ್ಯನಲ್ಲ' ಎಂದು ಹೇಳಲು ಪ್ರಯತ್ನಿಸುವೆವೆ?

ಅಪರಾಧದ ತಪಾಸಣೆಯಲ್ಲಿ ತೊಡಗಿದ ಪೋಲೀಸರಿಗೆ ಸಹಾಯ ಮಾಡಲು ಎಷ್ಟು ಜನ ಮುಂದೆ ಬರುವರು? ಪೋಲೀಸರಿಗೆ ಸೆರವು ಕೊಡುವ ವಿಷಯ ಒಮ್ಮೊಮ್ಮೆ ಗಂಡಾಂತರಕಾರಿಯಾಗಿ ತೋಚುವದೆಂಬುದನ್ನು ನಾನು ಬಲ್ಲೆ; ಆದರೆ ಬಹು ಜನರಾದರೂ ಆ ಗಂಡಾಂತರವನ್ನು ಹೊರಬೇಕಲ್ಲವೆ? ಕೊಲೆಪಾತಕ ಮಾಡಿದ ಮನುಷ್ಯನೊಬ್ಬನಿಗೆ ಅದ ಮರಣ ಶಿಕ್ಷೆಯನ್ನು ರದ್ದುಪಡಿಸಲು ಅಥವಾ ತಡಿಸೆಮಾಡಲು, ಏನೂ ಅಸ್ಥಿಯಿಲ್ಲದವರಂತೆ ವರ್ತಿಸುತ್ತಿದ್ದ ಜನರೇ ಕಿಡಂಡ ತೊಡಗುವದನ್ನು ನಾನೇ ಕಂಡಿದ್ದೇನೆ. ಮರಣ ಶಿಕ್ಷೆಯನ್ನು ರದ್ದುಪಡಿಸಬೇಕೇ-ಬೇಡವೇ ಎಂಬ ಪ್ರಶ್ನೆ ಬೇರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೊಲೆಯಾದ ಮನುಷ್ಯನು ಕೊಲೆ ಪಾತಕಿಯಷ್ಟೇ ಉತ್ತಮ ನಾಗರಿಕನಿದ್ದಿರಬಹುದು. ಎಲ್ಲಿಯವರೆಗೆ ಕೊಲೆ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುವದೋ ಅಲ್ಲಿಯವರೆಗೆ ಕೊಲೆಪಾತಕಿಯನ್ನು ಸಂರಕ್ಷಿಸಲು ಯತ್ನಿಸುವದು ಸ್ಪಷ್ಟ ಅಪರಾಧವೇ. ತಮ್ಮೆದುರಿನಲ್ಲಿ ನಡೆದ ಅಪರಾಧವನ್ನು ಕಂಡುಕಂಡೂ ಅದೆಷ್ಟು ಜನ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿರಲು ಪ್ರಯತ್ನಿಸುವದಿಲ್ಲ? "ಅಪರಾಧ ನಡೆದ ಸ್ಥಳದಲ್ಲಿ ನಾನು ಇರಲೇ ಇಲ್ಲ" ಎಂದು ಕಥೆಕಟ್ಟಿ ಹೇಳುವ ಜನರೇ ಅನೇಕ. ಪಾತಕಕನವು ನಡೆದಾಗ ನಾವು ವಿರುದ್ಧ ದಿಕ್ಕಿಗೆ ಮುಖ ಹೊರಳಿಸಿ ನಡೆದರೆ, ಪಾತಕನವದ ವಾರ್ತೆಯನ್ನು ಯೋಗ್ಯ ಅಧಿಕಾರಿಗಳಿಗೆ ಮುಟ್ಟಿಸದಿದ್ದರೆ ಅದು ಅತ್ಯಂತನೆಯಲ್ಲವೆ? ಪ್ರತಿಯೊಬ್ಬನ ಕರ್ತವ್ಯ ದೂರ ಕರ್ತವ್ಯವೂ ಅಲ್ಲ ಎಂಬ ತತ್ವಸಂತೆ ನಾವು ನಡೆದುಕೊಳ್ಳುತ್ತಿದ್ದೇವೆ. ಉಳಿದವರು ಪೋಲೀಸ್ ಸ್ಟೇಶನ್ನಿಗೆ ಹೋಗಿ ಸುದ್ದಿ ಮುಟ್ಟಿಸದಿದ್ದರೆ ನಾನೇಕೆ ಹೋಗಬೇಕು ಎಂಬುದು ನಮ್ಮ ವೃತ್ತಿ.

ಸುಳ್ಳು, ಮಾತಿನ ಅರ್ಥದಲ್ಲಿ ತಿರುವು ಮುರುವು, ಅಯೋಗ್ಯ ಅಂಶಗಳ ಬಗ್ಗೆ ಒತ್ತಿ ಹೇಳಿ ಸತ್ಯಸಂಗತಿಯನ್ನು ಹಿಂದೆ ತಳ್ಳುವುದು— ಇವೆಲ್ಲ ಸಂಗತಿಗಳು ಅಮುಖ್ಯವೆಂದು ಭಾವಿಸಲಾಗುತ್ತಿದೆ. ತಾನು ಮಾಡಿದ ಚಿಕ್ಕ ತಪ್ಪನ್ನು ಅಲಕ್ಷಿಸುವ ಅಥವಾ ಕ್ಷಮಿಸುವ ಪ್ರವೃತ್ತಿ ಮುಂದೆ ದೊಡ್ಡ ಅಪರಾಧವನ್ನು ಮಾಡಹುಚ್ಚತ್ತದೆ.

ಪ್ರಪಂಚದಲ್ಲಿ ನಾವು ಮಹಾ ಪಾತಕಿಗಳು ಎಂದು ನಾನು ಹೇಳ ಹೊರಟಿಲ್ಲ. ಉಳಿದ ದೇಶಗಳಲ್ಲಿಯೂ ನಮ್ಮ ದೇಶದ ಸಂಖ್ಯೆಯಷ್ಟೇ ಪಾತಕಿಗಳಿದ್ದಾರೆ ಎಂಬ ವಿಷಯ ನಮಗೆ ಸಮಾಧಾನ ತರಬೇಕಾದುದೇನಲ್ಲ. ನನ್ನಂತೆಯೇ ಪ್ರಪಂಚದಲ್ಲಿ ಅನೇಕ ಅಪರಾಧಗಳಿದ್ದಾರೆ ಎಂಬ ಸಂಗತಿ ನನ್ನ ಕಂಕಸ್ಸನ್ನು ಸೂಡೆದು ಹಾಕಲಾರದು. ಕಳೆದ ಕೆಲ ವರ್ಷಗಳಲ್ಲಿ ಗುಣಗಳ ಅರ್ಥಪಾತ ತೀವ್ರ ನಡೆದಿದೆ. ಜೀವನ ಪಾವಿತ್ರ್ಯದ ಗೌರವ ಕಮ್ಮರಿಯಾಗುತ್ತಿದೆ. ಕ್ರಿಮಿ-ಕೀಟಕಗಳ ಜೀವದ ಬಗ್ಗೆ ಕೂಡ ಪವಿತ್ರ ಭಾವನೆ ಸುಳ್ಳಿರಿಸಿಕೊಂಡ ಜನಸಾಂಗಕ್ಕೆ ಸೇರಿದ ಜನತೆ ಇಂದು ತಮ್ಮ ಸ್ವಾರ್ಥಕ್ಕೆ ಅಡ್ಡ ಬರುವ ಜನರ ಕೊಲೆಗೈಯ್ಯಲೂ ಹಿಂದೆ ಮುಂದೆ ನೋಡುವುದಿಲ್ಲ. ಹಿಂಸೆಯ ಕ್ರೂರಕೃತ್ಯಗಳು ಅವ್ಯಾಹತವಾಗಿ ಸಾಗಿವೆ. ಈ ಕೇಡಿನ ವಿರುದ್ಧ ಪೋಲೀಸರ ಕೈಯ್ಯಿ ಸಾಗದಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಪೊಲೀಸ ರಾಜಿಗೆ ಎಷ್ಟೇ ಭಯಂಕರ ಶಸ್ತ್ರಾಸ್ತ್ರಗಳನ್ನು ಒದಗಿಸಿದರೂ, ಅದರ ಸಂಖ್ಯೆ ಹೆಚ್ಚಿಸಿದರೂ, ಅಧಿಕಾರ ವರ್ಧಿಸಿದರೂ, ಅವುಗಳಿಂದ ಅಷ್ಟು ಪ್ರಯೋಜನವಿಲ್ಲ. ರೋಗದ ಮೂಲ ಸ್ಥಾನವನ್ನು ಕಂಡು ಹಿಡಿಯದೆ ಹೊಸ ವಿಧಾನಗಳನ್ನು ಸಂಶೋಧಿಸಲು ಸಾಧ್ಯವಿಲ್ಲ.

ಅಂಟಿದ ರೋಗ ಸೈತಿಕವಾದುದು; ಸಮಾಜದ ಸೈತಿಕ ಸ್ಥಿತ್ಯಾಧಿಕ್ಯದ ಪುನರ್ ಶುದ್ಧೀಕರಣ ಕಾರ್ಯ ನಡೆಯಬೇಕು. ಭಾರತವು ಹಿಂದೆ ಹೊರಳಿ ನೋಡಬೇಕಿ; ತಾಳಿಟ್ಟ ಜೆಡ್ಡಿಯಿಂದ ಹಿಂದೆ ಸರಿಯಬೇಕು. ಆಧುನಿಕತೆಯ ಆಮಿಷಕ್ಕೆ ಭಾರತವು ಶರಣಾಗಿದೆ. ದೇಶದ ವಾತಾವರಣದಲ್ಲಿ ಕ್ರಾಂತಿಕಾರೀ ಬದಲಾವಣೆ ಬರಬೇಕು. ಜೀವನ ಗೌರವ ಭಾವದಿಂದ ಜನಮಾನಸ ಸ್ಪಂದಿಸುವಂತಾಗಬೇಕು. ಮೊರೆಯು ವೈವಿಧ್ಯಗಳಿಂದ ತುಂಬಿದ್ದರೂ ಇಡಿ ಪ್ರಪಂಚದಲ್ಲಿ ಏಕೈಕ ಮೂಲಶಕ್ತಿಯೊಂದು ಬಾಂಧವ್ಯವನ್ನು ಹುಟ್ಟಿಸಿದೆ ಎಂಬ ಚೈತನ್ಯದ ಪಾರವನ್ನು ಕಲಿಸಬೇಕು. ವಿಶೇಷವಾಗಿ ಸಮಾಜದ ಗಣ್ಯ ವ್ಯಕ್ತಿಗಳ ಸ್ಥಾನದಲ್ಲಿದ್ದ ನಾವು ಪ್ರಾಚೀನ ಭಾರತವು ಅಧಿಕಾರಕ್ಕೆ ಮಹತ್ವ ಕೊಡದೆ ಧರ್ಮಕ್ಕೆ ಮಹತ್ವಕೊಟ್ಟಿತ್ತೆಂಬುದನ್ನು ಮರೆಯಬಾರದು, ಧರ್ಮದ ಕಟ್ಟುಪಾಟುಗಳಂತೆ ವರ್ತಿಸಲು ಎಲ್ಲರಿಗೂ ಕಲಿಸಬೇಕು. ಕರ್ತವ್ಯಕ್ಕೆ ಪ್ರಾಮುಖ್ಯವನ್ನು ಕೊಡಲಾಗುತ್ತಿತ್ತು ಎಂಬುದನ್ನೂ ಮರೆಯಲಾಗದು. ನಿಮ್ಮ ಕರ್ತವ್ಯದ ಬಗ್ಗೆ ಲಕ್ಷ್ಯವಿರಲಿ, ಹಕ್ಕುಗಳು ತಮ್ಮಷ್ಟಕ್ಕೆ ತಾವೇ ಲಕ್ಷ್ಯ ಹರಿವವು.

ಹಿಂದಿನ ದಿನದ ಚೈತನ್ಯವನ್ನು ಮುಖ್ಯಗಂದುಕೊಂಡಷ್ಟು ನಾವು ಉತ್ತಮ ಜನರ ಸಾಲಿಗೆ ಸೇರಿಕೊಳ್ಳುವೆವು.

ನಾನೇನೋ ಕನಸಿನ ರಾಜ್ಯದಲ್ಲಿ ಮಾತನಾಡುತ್ತಿರುವೆನೇನೋ ಎಂದೆನಿಸುತ್ತಿದೆ. ಹಾಗಿದ್ದರೂ ಇರಬಹುದು, ಆದರೂ ಕೆಲವು ಜನರು ಹಾಗೆ ಕನಸು ಕಾಣದಿದ್ದರೆ ಉಳಿದವರು ಜೀವನವನ್ನೂ ನಡೆಸಲಾರರು. ಹಕ್ಕುಗಳ ಬಗ್ಗೆ ಎತ್ತಿ ಹೇಳುವ ನಾವು ಕರ್ತವ್ಯದ ಬಗ್ಗೆ ಏಕೆ ಹಾಗೆ ಹೇಳಬಾರದು? ನಮ್ಮದುರಿನಲ್ಲಿ ಅಪರಾಧದ ಕೃತ್ಯ ನಡೆದುದನ್ನು ನೋಡಿ ಸುಮ್ಮನಾದರೆ ಅದು ಕರ್ತವ್ಯ ಲೋಪವೇ. ಕರ್ತವ್ಯ ಲೋಪ ದೋಷವನ್ನು ಎತ್ತಿ ತೋರಿಸಿ ಕರ್ತವ್ಯ ಪರಿಪಾಲನೆಯ ಪ್ರಜ್ಞೆಯನ್ನು ಕೆರಳಿಸಬೇಕು. ನಾನು ಈ ಬರಹದಲ್ಲಿ ಸಾರ್ವಜನಿಕರು ಮಾಡಬೇಕಾದ ಕರ್ತವ್ಯದ ಬಗೆಗೇ ಹೆಚ್ಚಾಗಿ ಒತ್ತಿ ಹೇಳಿದ್ದೇನೆ. ಪೋಲೀಸರು ಮಾಡಬೇಕಾದುದಕ್ಕೆಂಕಲೂ ಜನತೆ ಮಾಡಬೇಕಾದುದೇ ಮಹತ್ವದ್ದು ಎಂದು ನಾನು ಭಾವಿಸುವೆ. ರಾಷ್ಟ್ರೀಯ ಚಾರಿತ್ರ್ಯ ಮತ್ತು ರಾಷ್ಟ್ರೀಯ ಮನೋಭಾವದಲ್ಲಿ ಆಗ ಬೇಕಾದ ಬದಲಾವಣೆಗಳಾದಾಗ ಪೋಲೀಸರಿಗೆ ಬೇಕಾದ ಜನತೆ ಸಹಕಾರ ಸಿಗದೆ ಹೋಯಿತು ಎಂಬ ಸಮಾಧಾನ ಅವರದೇ ಆಗಿರಲಾರದು!

(ಸಿರಿಸಂಪತ್ತು) ಪ್ರಕಟ ಪಡಿಸಿದ್ದರು.

ಸಿಲೋನು, ಇಸ್ರೇಲಿನಲ್ಲಿ ನಡೆದಿರುವದು ಇಲ್ಲೇತಕ್ಕೆ ಆಗಬಾರದು? ಅದಕ್ಕೆ ಕಾರಣವೆಂದರೆ ಅಲ್ಲಿಯ ಜನರಿಗೆ ಅಲ್ಲಿಯ ಭಾಷೆಯ ಮೇಲೆ ಅಪಾರವಾದ ಗೌರವ—ಪ್ರೀತಿ ಇದೆ. ಇಲ್ಲಿ ಹಾಗಲ್ಲ, ನಾವು ಬಹುಬಣ್ಣದ 'ಆಂಗ್ಲ'ರಿದ್ದೇವೆ. ಆಂಗ್ಲ ಭಾಷಾ ಪದ ಪ್ರಯೋಗವು ಸ್ವರ್ಗಕ್ಕೂ ಅನುಮತಿ ತಂದುಕೊಡುತ್ತಿದೆ ಯೆಂದು ಭಾವಿಸಿಕೊಂಡಿದ್ದೇವೆ. ಅದೂ ಅಲ್ಲದೆ ನಮ್ಮ ತಾಯಿ—ತಂದೆಯವರು ಇಡಿಸಿದ ಅಚ್ಚಾತುರ್ಯ ಕಾರ್ಯದ ಫಲವಾಗಿ, ದುರದೃಷ್ಟವಶಾತ್, ಇಷ್ಟು ಹೆಚ್ಚಿದ್ದೇವೆಂದು ಸಾಬೀತಪಟ್ಟುಕೊಳ್ಳುತ್ತಿದ್ದೇನೆ. ಅವರು ಹಾಗಿರುವದಿಲ್ಲ. ಆದುದರಿಂದಲೇ ಯೆಹೂದಿಗಳೆಂದು ಉಳಿದ ಪ್ರಪಂಚದ ಗಮನವನ್ನು ಸೆಳೆದುಕೊಂಡು, ಬೆಪ್ಪುಕಟ್ಟುವಂತೆ ಮಾಡಿದ್ದಾರಾದಲ್ಲಿ, ನಾವು ಹಾಸ್ಯದ ವಿಷಯವಾಗಿ ಬಿಟ್ಟಿದ್ದೇವೆ.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಬಂದರೆ ನೀವು ವಿಶ್ರಾಂತಿ ಪಡೆಯುವಿರಿ.

ಏಕೆಂದರೆ ಇಲ್ಲಿ ಸ್ವಚ್ಛತೆಯ ಊಟ, ಉಪಚಾರದ ವ್ಯವಸ್ಥೆಯಿದೆ; ಹಾಗೂ ಎಲ್ಲಾ ಕಡೆ ವಿಶಾಲವಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ನಮ್ಮ ಯೋಜನೆಗಳು

ಎಲ್ಲೆಲ್ಲು ಗುಂಡಾಗಿದಾ ಸೌಕ್ಯ ಮಾಡು ಶ್ರೀ ಸಂಪೂರ್ಣಾನಂದರವರ ಬಿನ್ನಹುದು ನೇತು

ಶ್ರಮಬದ್ಧ ಸಾಧನೆಯು ಇಂದು ಆತ ಮುಖ್ಯ

ಶ್ರಮವಿರದ ಯೋಜನೆಗೆ ನಾವು

ಬಹುಶತ್ರು.

ರಂಜನೀಯ ಹಾಸ್ಯದ "ಗೌರಿ ಗಂಡ"

ದಕ್ಷಿಣ ಭಾರತದ ಚಿತ್ರೋದ್ಯಮದಲ್ಲಿ ಉತ್ತುಂಗದಲ್ಲಿರುವ ಒಂದು ಹೆಸರು ಚಿತ್ರ ಬ್ರಹ್ಮ ಸುಂದರರಾವ್ ನಾಡಕರ್ಣಿ. ದಾಕ್ಷಿಣಾತ್ಯ ಚಿತ್ರರಂಗದಲ್ಲಿ ಹಲವು ದಶಕಗಳಿಂದ ಮುಡಿಯುತ್ತಿದ್ದು, ಅನಾರ ಅನುಭವ ಪಡೆದವರು; ಹಲವು ಉತ್ತಮ ಚಿತ್ರಗಳ ಸೃಷ್ಟಿಗೆ ಹೆಸರಾದ ನಾಡಕರ್ಣಿಯವರು ಹಲವು ಪ್ರತಿಭಾವಂತರನ್ನು ತೆರೆಗೆ ಅರ್ಪಿಸಿದವರೂ ಹೌದು.

ನಾಡಕರ್ಣಿಯವರ ಚಿತ್ರಸೃಷ್ಟಿ ಕಾರ್ಯದಲ್ಲಿ ಅನೇಕ ಉತ್ತಮ ಚಿತ್ರಗಳು ಬೆಳಕು ಕಂಡಿವೆ. ಸ್ವರ್ಣೋತ್ಸವ ರಜತೋತ್ಸವಗಳನ್ನಾಚರಿಸಿದವು ಹಲವಿವೆ. ರಾಷ್ಟ್ರಪ್ರಶಸ್ತಿ ಸಂಪಾದಿಸಿದವೂ ಇವೆ.

ನಿರ್ಮಾತೃ ಬಿ. ರಾಘಾಕೃಷ್ಣರೊಂದಿಗೆ ನಾಡಕರ್ಣಿಯವರು ತಯಾರಿಸಿದ ನಿರ್ದೇಶಿಸಿದ ಜನಪ್ರಿಯ ಸಂತನ ಕಥೆಯಾಧಾರಿತವಾದ "ಸಂತ ತುಕಾರಾಂ" ಕನ್ನಡ ಚಿತ್ರವು ರಾಷ್ಟ್ರಪ್ರಶಸ್ತಿ ವಿಜೇತ ನಾಡಕರ್ಣಿಯವರ ಕಾಣಿಕೆಗಳಲ್ಲಿ ಒಂದು.

ಕನ್ನಡ ನಾಡಿನವರೇ ಆದ ಕನ್ನಡಿಗ ನಾಡಕರ್ಣಿಯವರು ಬಹು ಭಾಷಾ ಪರಿಶ್ರಮಿಗಳು, ಎಲ್ಲಾ ಭಾಷೆಗಳಿಗಿಂತಲೂ ಚಿತ್ರಭಾಷೆಯಲ್ಲಿ ಪರಿಣತರು. ಅಂತೆಯೇ ಈ ಬಾರಿ ಅವರು ಕನ್ನಡ ಜನಕೋಟಿಗೆ ಲಘು ಹಾಸ್ಯ ರಂಜನೆಯ ಔತಣ ನೀಡುವ ಸಾಹಸ ನಡೆಸಿದ್ದಾರೆ. ಆ ಚಿತ್ರ— ಶ್ರೀ ಪಣೇರ್ ಮೂವಿಟೋನ್ ಅವರ 'ಗೌರಿ ಗಂಡ' ಕನ್ನಡ ಚಿತ್ರ.

ಸರಸಮಯ ಕಥೆ

ಎರಡು ದಂಪತಿಗಳ ಜೋಡಿಯ ಈ ಕಥೆ ಅತ್ಯಂತ ರಮ್ಯವಾಗಿ, ಕುತೂಹಲ ಕೆರಳಿಸುವಂತೆ, ಮನೋಜ್ಞವಾಗಿ ಹೆಣೆಯಲ್ಪಟ್ಟಿದೆ ಇಲ್ಲಿ.

ಸಸೆ ಸಸೆ ಪ್ರಾಣಿ ರಾಮಣ್ಣ, ಗೌರಿಯ ಗಂಡ. ಕೂತರೆ ತಪ್ಪು, ನಿಂತರೆ ತಪ್ಪೆನ್ನುವ, ಅತಿ ಸಂದೇಹ ಸ್ವಭಾವದ ರಾಮಣ್ಣ ವಿಚಿತ್ರ ಕಲ್ಪನೆಗೆ ಅಡಿಯೊಳಾಗಿ ಮಡದಿಯನ್ನು ಸಂದೇಹಿಸಿದ. ಮದುವೆಯಾದ ಹೊಸತರಲ್ಲಿದ್ದಂತೆ ಇಲ್ಲ ತನ್ನ ಪಂಡ. ಏನೋ ಸಂಶಯದಿಂದ ತನ್ನ ಮೇಲಿನ ಪ್ರೀತಿ ಕಡಿಮೆಯಾಗಿದೆ ಎಂಬ ಸಂದೇಹ ಗೌರಿಗೆ. ಸಾಮಾನ್ಯ ಕಡಿದ ಈ ಜೋಡಿಯ ಪಯಣದ ಪಥದಲ್ಲಿ ಅಡ್ಡ ಬಂದಿತು. ಭಾರಿ ಹೋಟೆಲುಗಳ ಮೂಲಕ ಮದನ್ ಮೋಹನ್ ವತ್ತು ಚಿತ್ರ ತಾರೆ ಯಾಮಿನಿಯರ ಜೋಡಿ

ಮದನ್ ಮೋಹನ್ ಮತ್ತು ಯಾಮಿನಿ ದೇವಿ ಪರಸ್ಪರ ಪ್ರೀತಿಸಿ ರಹಸ್ಯ ವಿವಾಹವಾದವರು. ಪ್ರಸ್ತುತ ಅಭಿನಯಿಸುತ್ತಿರುವ ಚಿತ್ರಗಳು ಪೂರ್ಣವಾಗುವ ವರೆಗೆ ಮದುವೆ ಸುದ್ದಿ ರಹಸ್ಯವಾಗಿರಬೇಕು ಎಂಬ ಷರತ್ತು ತಾರೆಯದು. ಜೊತೆಗೆ ಅನುಕರ ಚಿತ್ರರಂಗದಿಂದ ನಿವೃತ್ತಿಯಾಗಿ ಗೃಹಿಣಿಯಾಗುವ ಸಂಕಲ್ಪ.

ಹರಕೆ ತೀರಿಸಲು ಚಾಮುಂಡಿ ಬೆಟ್ಟಕ್ಕೆ ಬಂದು, ಅಯಾಸಗೊಂಡು ಬಳಲಿ ಬೀಳಲಿದ್ದ ಯಾಮಿನಿಗೆ ರಾಮಣ್ಣ ಅಸರಿ ನೀಡಿದ್ದ ಅದನ್ನು ಕಂಡ ಗೌರಿ ತಪ್ಪಾಗಿಗ್ರಹಿಸಿದಳು. ಆ ಸಂದರ್ಭದಲ್ಲಿ ಗೌರಿಯ ಕೈಗೆ ಯಾಮಿನಿದು ಬಳಯಲ್ಲಿದ್ದ ಮದನ್ ಮೋಹನನ ಫೋಟೋ ಸಿಕ್ಕಿತು. ಗೌರಿಯ ಕೈಯಲ್ಲಿ ಫೋಟೋ ಕಂಡ ರಾಮಣ್ಣನ ಸಂದೇಹ ಹೆಚ್ಚಿತು. ಇದರ ಬಡಶೋಧಿಸಲು ಹೊರಟರು ಇಬ್ಬರೂ. ರಾಮಣ್ಣ ಯಾವಿ ನಿಯೊಡನೆ ಗೌರಿ ಮದನ ಮೋಹನನೊಡನೆ ಸಮಾಲೋಚಿಸಿದರು. ಸಮಸ್ಯೆ ತೀರದೆ ಮತ್ತಷ್ಟು ಬಲವಾಯಿತು. ಎರಡು ಸಂಸಾರಗಳೂ ಛಿದ್ರಛಿದ್ರವಾಗಬೇಕೆನ್ನುವಾಗ ಬೆಳಕು ಕಂಡಿತು.

ತಪ್ಪು ಗ್ರಹಿಕೆ—ಸಂದೇಹ ಭಾವನೆಗಳ ಸುತ್ತ ಎರಡು ಹೆಣ್ಣು—ಎರಡು ಗಂಡುಗಳ ಸಂಸಾರದ ನಡುವೆ ರಮ್ಯವಾಗಿ ಹೆಣೆದ ಕಥೆ. ಆರಂಭದಿಂದ ಅಂತ್ಯದ ವರೆಗೂ ಕುತೂಹಲ ಕೆರಳಿಸುವಂತಹ ಘಟನೆಗಳು ಪಡೆಯುಗ್ಗೆ ಚಿಮ್ಮಿಸುವಂತಹ ಸರಸ ಸನ್ನಿವೇಶಗಳ ; ಸಂದೇಹದ ಪರಿಣಾಮದ ಚಿತ್ರಣಗಳು.

ತಾರಾಗಣ

ಟಿ. ಉದಯಶಂಕರ ಅವರು ಈ ಚಿತ್ರಕ್ಕೆ ಸಂಭಾಷಣೆ ಹಾಗೂ ಗೀತೆಗಳನ್ನು ಬರೆದಿದ್ದಾರೆ. ಶಬ್ದಗಳ ಅಲಂಕರಣ—ಮಧುರ ಜೋಡಣೆ ಇವು ಉದಯಶಂಕರರ ಸಾಹಿತ್ಯದಲ್ಲಿ ಎದ್ದು ಕಾಣುವ ಭಾವ ವಿಶೇಷಗಳು.

ನಾಡಕರ್ಣಿಯವರು ಈ ಚಿತ್ರದ ಮೂಲಕ ಕನ್ನಡ ರಂಜಕಕಂಗಳ್ಕೆ ಹೊಸ ಸಂಗೀತ ಪಟು ತಾರೆ ಪಣೇರ್‌ರ ಪರಿಚಯ ಮಾಡಿಕೊಟ್ಟಿದ್ದಾರೆ. ಅವರು ಜೊಚ್ಚಲ ಕನ್ನಡ ಚಿತ್ರ ಕಲಳವಾದರೂ, ಪಳಗಿದವರಿಗಿಂತ ವಿಗಿಲಾಗಿ; ರಾಗ-ಭಾವಗಳನ್ನು ತುಂಬಿ, ಸಂಗೀತ ನಿರ್ದೇಶಿಸಿದ್ದಾರೆ.

ಡಿ. ವಿ. ರಾಜಂರಾಂರ ಉತ್ತಮ ಛಾಯಾಗ್ರಹಣ ಒಪ್ಪವಾಗಿಯೇ ಇದೆ. ನಾಡಕರ್ಣಿಯವರು ತಮ್ಮ ಈ ಚಿತ್ರದ ತಾಂತ್ರಿಕ ಬಳಗದಲ್ಲಿಯೂ ಪರಿಣತರನ್ನೇ ಕಲೆ ಹಾಕಿ, ಉತ್ತಮವಾದ ಚಿತ್ರಣಕ್ಕೆ ಇವರೆಲ್ಲರ ಸಂಯುಕ್ತ ಸಹಕಾರವನ್ನೇ ಪಡೆದಿದ್ದಾರೆ.

ಸರಸಮಯ ಕಥೆಗೆ ಒಪ್ಪವಾದ ತಾರಾಗಣ ಅಗತ್ಯವೆಂಬುದು ಹೆಳೆಯ ಹುಲಿ ನಾಡಕರ್ಣಿಯವರಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ನಸೆ ಪಸೆ ಮನ ಮೃ—ಸಂದೇಹದ ಪ್ರಾಣಿ ರಾಮಣ್ಣನಾಗಿ ಪರಸಿಂಹರ ಜು ತಮ್ಮ ತಾರಾ ಜೀವನದಲ್ಲಿಯೇ ವಿಶಿಷ್ಟತಮವಾದ ವಿಭಿನ್ನ ಪಾತ್ರ ನಿರ್ವಹಿಸಿ, ತುಂಬು ರಂಜನೆ ನೀಡಿದ್ದಾರೆ. ಸ್ವಾಭಾವತಿ ರಾಮಣ್ಣನ ಮಡದಿ ಗೌರಿಯಾಗಿ ಪಟಿಸಿದ್ದಾರೆ. ಬಿ. ವಿಜಯಲಕ್ಷ್ಮಿ (ವಂದನಾ) ಈ ಚಿತ್ರದಲ್ಲಿ ತಾರೆ ಯಾಮಿನಿ ದೇವಿಯಾಗಿಯೇ ಮೆರೆದಿದ್ದಾರೆ. ಮದನ್ ಮೋಹನ್‌ನಾಗಿ ರಾಜಶಂಕರ್ ತಮ್ಮ ಅಭಿನಯ ಪ್ರತಿಭೆಯ ಪೂರ್ಣ ಪ್ರಯೋಗ ಮಾಡಿದ್ದಾರೆ.

ಇಷ್ಟೆಲ್ಲಾ ಹೇಳಿದ ಮೇಲೆ "ಗೌರಿ ಗಂಡ" ಅನುಪಮ ಸರಸ ಸ್ವಾರಸ್ಯದ ತೊಡುಗೆ ಎನ್ನಲು ಬೇರೆ ಅಡ್ಡಿ ಏನಿದೆ?

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಮಾತ್ರೆಗಳ ಶಾಸ್ತ್ರೀಯವಾದ ಆಯುರ್ವೇದ ಔಷಧಿ ಮತ್ತು ಚಿಕ್ಕಿತ್ಸೆಯ ಕ್ರಮಗಳು
ಸಂಬಂಧಗಳಿಗೆ, ಅಜರಾಗಿ ಸರಿಯಿರಿ

SHANKAR PHARMACY
BHADRAVATI (MYSORE)

ಶಾಸಕರಿಗೊಂದು ಕಿವಿಮಾತು

ಭಾರತೀಯರಾದ ನಮ್ಮ ಅತ್ಯಮೂಲ್ಯ ನಿಧಿ ಆತ್ಮ ಗೌರವ ಮತ್ತು ಶಿಸ್ತು.

ಈ ನಿಧಿಗೆ ನಮ್ಮ ಪೂರ್ವಜರಾದ ಆರ್ಯರೂ ಅಜ್ಞಾನಾವಸ್ಥೆಯಲ್ಲಿರುವಾಗಲೂ ಅಧಿಕ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಗತಕಾಲದ ಭಾರತ ಪ್ರಭುತ್ವದಲ್ಲಿ ಯಾವ ಅಡಳಿತ ಬಂದಿದ್ದರೂ, ಆತ್ಮ ಗೌರವ ಮತ್ತು ಶಿಸ್ತನ್ನು ಕಳೆದ ಕೊಳ್ಳದೆ ಕಾಪಾಡಿಕೊಂಡು ಬಂದಿದ್ದಾರೆ ನಮ್ಮ ಪೂರ್ವಿಕರು.

ಆಧುನಿಕ ಕಾಲದಲ್ಲೂ ಪರಕೀಯರಾದ ಬ್ರಿಟಿಷ್ ಆಡಳಿತದ ವಿರುದ್ಧ ನಾವು ಶಿಸ್ತುಗೇಡಿಗಳಾಗಿ ವರ್ತಿಸಿ ಸ್ವಾತಂತ್ರ್ಯ ಸಂಪಾದಿಸಲಿಲ್ಲ.

ಇಂತಿರುವಾಗ ಜ್ಞಾನದ ತುಟ್ಟ ತುದಿಯಲ್ಲಿರುವ ಈ ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಶಿಸ್ತುಗೇಡಿಗಳಾಗಿ ವರ್ತಿಸುವುದು ಜ್ಞಾನದ ಪರಿಪೂರ್ಣತೆಯೇ ಎಂದು ವಿಚಾರಿಸುವ ಕಾಲ ಪ್ರಾಪ್ತವಾಗಿದೆ. ಶಿಸ್ತುಗೇಡಿಗಳಾಗಿ ವರ್ತಿಸುವುದೇ ಕ್ರಾಂತಿಕಾರಕ ವಿಚಾರವೆಂದು ಈಗಿನ ಕಾಲದ ಜನರು' ಭಾವಿಸಿದಂತಿದೆ. ಶ್ರೀ ಸಾಮಾನ್ಯನ ಮಾತು ಹಾಗಿರಲಿ, ಜನತಾ ಆಳಿತ ದೇಶದ ಜನತಾ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವ ರಾಜಕೀಯ ಧುರೀಣರಲ್ಲಿರುವ ಬಂಡವಾಳವೆಂದರೆ ಅಧಿಕಾರ ಕಾಂಕ್ಷೆ. ಪರನಿಂದೆಯಿಂದ ಜನ ಪ್ರೀತಿಗಳಿಸಿಕೊಳ್ಳುವ ಹಂಚಿಕೆ. ತಾವು ಮಹಾಜನತಾ ಸೇವಕರೆಂದು ತೋರಿಸುತ್ತಾ ಸ್ವಾರ್ಥ ಸಾಧಿಸುವುದೆ. ಇವರ ಗತ್ತುಗಾರಿಕೆಯ ಬಂಡವಾಳ. ಇಂತಹ ಹಲವು ಗತ್ತುಗಾರಿಕೆ ಇಂದು ಭಾರತದ ಪ್ರಜಾಪ್ರಭುತ್ವದಲ್ಲಿ ತುಂಬಿದೆ. ಪ್ರಜಾಪ್ರಭುತ್ವದಲ್ಲಿ ಜನತಾ ಪ್ರತಿನಿಧಿಗಳಾದ ತಮ್ಮ ಮನಸ್ಸಿಚ್ಛೆಯಂತೆ ನಡೆಯಬೇಕೆಂದು ಪ್ರತಿಯೊಬ್ಬ ಶಾಸಕನೂ ಭಾವಿಸಿದಂತಿದೆ.

ತಮ್ಮ ಮನಸ್ಸಿಚ್ಛೆಯಂತೆ ನಡೆಯದಿದ್ದರೆ ಪ್ರತಿಯೊಂದಕ್ಕೆ ಆಂದೋಲನ, ಘೇರಾವೋ ನಡೆಸುವುದೇ ಇವರ ಹವ್ಯಾಸವಾಗಿ ಹೋಗಿದೆ ಜನರ ಅನುಕೂಲ ಪ್ರತಿಕೂಲಗಳನ್ನು ಪರಸ್ಪರ ಚರ್ಚಿಸಿ ಶಾಸನ ಮಾಡಲು ವಿಧಾನ ಸಭೆ ಇರುವುದು. ಶಾಸಕರೇ ಮೋಜಾನೇತಾರಾದರೆ ಹೇಗೆ?

ವಿಸ್ತೃತವಾದ ಭಾರತದ ಏಳಿಗೆಯನ್ನು ಸಹಿಸಲಾರದೆ ಚೀನಾ ನಮ್ಮ ಭೂಸ್ಥಿತಿಯನ್ನು ತಗ್ಗಿಸಲು ಹವಣಿಸುತ್ತಿರುವಾಗ ಶಾಸಕರಿಗೆ ಮಾದರಿಯಾಗಿರಬೇಕಾದ ಶಾಸಕರೇ ಇಂಥ ವಿಚ್ಛಿದ್ರಕಾರಕ ಪ್ರವೃತ್ತಿಗೆ ತೊಡಗುವುದು ಸರಿಯೇ ಎಂದು ಪ್ರತಿಯೊಬ್ಬ ಶಾಸಕನು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಕಾಲವಿದು.

ಇದರಲ್ಲಿ ಆಡಳಿತ ಪಕ್ಷದ ಕರ್ತವ್ಯ ವಿಲ್ಲವೆಂದಲ್ಲ. ಅವರು ಪ್ರತಿಪಕ್ಷದ ಬೇಡಿಕೆಯನ್ನು ಸಾರಸಾರ ವಿಚಾರ ಮಾಡಿತಳ್ಳಿಹಾಕಬೇಕಲ್ಲದೆ ತಮ್ಮ ಧೋರಣೆಗೆ ವಿರುದ್ಧವೆಂದು ತಳ್ಳಿಹಾಕುವುದು ಜನತಾ ಪ್ರಭುತ್ವಕ್ಕೆ ತಕ್ಕುದಲ್ಲ.

ಅದರಂತೆ ಕಾಳಿದ್ದಲ್ಲಿ ಕಾಣದ ಮಾಡಿ ತೋರಿಸುವ ಆಂದೋಲನಕಾರರನ್ನು ಹತ್ತಿಕ್ಕುವುದು ಸರಕಾರದ ಅದ್ಯಕರ್ತವ್ಯ. ಇಂಥ ಆಂದೋಲನವನ್ನು ಬೆಳೆಯಗೂಟ್ಟಿರೆ ಪ್ರಜಾಪ್ರಭುತ್ವ ಸಿದ್ಧಾಂತವಾಗಲು ಬಹಳ ಸಮಯ ಹಿಡಿಯುವುದಿಲ್ಲ. ಜನತಾ ಕಲ್ಪವೃಕ್ಷರಾದ ಶಾಸಕರು ವಿಶ್ವದಲ್ಲಿಯೇ ಶಿಸ್ತಿನ ಪ್ರಜಾಪ್ರಭುತ್ವ ರಾಷ್ಟ್ರ ಭಾರತ ಎಂದು ನಮ್ಮ ಘನತೆಯನ್ನು ಎತ್ತಿಹಿಡಿಯುವ ಹಾಗೆ ವರ್ತಿಸುವುದು ಅವಶ್ಯ.

— ಶ್ರೀ ಎ. ಎಚ್. ಶಾಂತಾರಾಮ ಶೆಟ್ಟಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಎಲ್ಲೆಲ್ಲಿ ಏನೇನು?

ಪಣಂಬೂರು ಪೇಟೆಯ ಅಂಗಡಿದಾರರನ್ನು ಒಕ್ಕಲೆಬ್ಬಿಸದಿರಲು ಹೈಕೋರ್ಟು ನಿರ್ದೇಶ

ಪಣಂಬೂರು ಪೇಟೆಯ ಹದಿನಾರು ಮಂದಿ ಅಂಗಡಿ, ಹೋಟೆಲು ಮತ್ತು ಮಿಲ್ಲಿನ ಲೈಸನ್ಸ್ ದಾರರು ತಮಗೆ ಬಂದರ ಭೂಸ್ವಾಧೀನತಾ ಅಧಿಕಾರಿಗಳು ತಾ. 31-3-1968ರ ವರೆಗೆ ಲೈಸನ್ಸ್ ರೀತಿಯಲ್ಲಿ ಕೊಟ್ಟ ಅವಧಿಯನ್ನು ಮುನ್ನ ಮುಂದುವರಿಸಬೇಕೆಂದು ಕೇಳಿ ಬೆಂಗಳೂರಿನ ಹೈಕೋರ್ಟಿನಲ್ಲಿ ದಾಖಲು ಮಾಡಿದ ಅರ್ಜಿಯನ್ನು ಹೈಕೋರ್ಟು ನ್ಯಾಯಾಧೀಶ ಜಸ್ಟಿಸ್ ಶ್ರೀ ಜೆ. ಕೆ. ಗೋವಿಂದ ಭಟ್ ಮತ್ತು ಜಸ್ಟಿಸ್ ಶ್ರೀ ಸದಾನಂದ ಸ್ವಾಮಿಯವರು ಸ್ವೀಕರಿಸಿ, ತಾ. 17ರಂದು ರಿಟ್ ಸ್ವೀಕೃತ ವಿಚಾರಣೆಗಾಗಿ ಸರಕಾರಕ್ಕೆ ಆದೇಶ ಹೊಡಿದ್ದರೆ. ಅರ್ಜಿದಾರರು ಈ ಮೊದಲು ಭೂಸ್ವಾಧೀನತಾ ಅಧಿಕಾರಿಗಳಿಗೆ ಮನವಿ ಅರ್ಪಿಸಿ, ತಮಗೆ ನೀಡಿದ್ದ ಲೈಸನ್ಸ್ ಅವಧಿಯನ್ನು ವಿಸ್ತರಿಸಬೇಕೆಂದೂ, ಈ ಹಿಂದೆ ಭೂಸ್ವಾಧೀನತೆಯ ಪ್ರೊಸೀಡಿಂಗ್ಸ್‌ನ್ನೇ ತಡೆ ಹಿಡಿದ್ದರೆಂದೂ ಮೊಡಿದವರ ಅನೇಕ ಅರ್ಜಿಗಳು ಮತ್ತಾರಿಗೆ ಬಾಕಿ ಇರುವುದರಿಂದಲೂ, ಈ ಪೇಟೆ ಸ್ಥಳದ ಹಿಂದು ಮುಂದುಗಡೆ ಅನೇಕ ಸ್ಥಳಗಳ ಸ್ವಾಧೀನತೆಗೆ ಹಣದ ಅಭಾವದಿಂದ ಮೊದಲುಗಳು ಬಾಕಿ ಇರುವುದರಿಂದಲೂ ಅರ್ಜಿದಾರರಿಗೆ ಸರಕಾರವು ಅಕ್ರಾಸನೆ ಕೊಟ್ಟಿರುವ ಪುನರ್ವಾವೇಶನ ಕೇಂದ್ರದಲ್ಲಿ ಅಂಗಡಿ ಮಳಿಗೆಗಳನ್ನು ಮಂಗಳೂರು ಮೊಡದಿರುವುದರಿಂದಲೂ, ಈಗ ತಾವಿರುವ ಸ್ಥಳವು ಈ ಮೇಲಿನ ಕಾರಣಗಳಿಂದಾಗಿ ಬಂದರದ ಅಧಿಕಾರಿಗಳಿಗೆ ಸದ್ಯಕ್ಕೆ ಅಗತ್ಯವಿಲ್ಲದಿದ್ದದ್ದರಿಂದಲೂ, ಪುನಃ ಸಮಯೊವಕಾಶ ನೀಡಿ, ಲೈಸನ್ಸ್ ನೀಡಬೇಕೆಂಬುದಾಗಿ, ರಿಟ್ ಅರ್ಜಿದಾರರ ವ್ಯಾಧಿಸಲಾಗಿದೆ.

ಹೈಕೋರ್ಟು ನ್ಯಾಯಾಧೀಶರು ಅರ್ಜಿದಾರರ ಪರವಾಗಿ ಎಡ್ವೋಕೇಟ್ ಜನರಲರಿಗೆ "ಸ್ಟೇ ಆರ್ಡರ್" ಸ್ಥಿತ್ಯಂತರಗಾಗಿ ತನಕ ಅರ್ಜಿದಾರರ ಸ್ಥಳ ಸ್ವಾಧೀನತೆಗೆ ಒತ್ತಾಯಿಸಬಾರದೆಂದು ಆದೇಶ ನೀಡಿದರು.

ಪಣಂಬೂರಿನ ಉಸ್ತುವಾರಿ ಕಾರ್ಯದರ್ಶಿ ಶ್ರೀನಿವಾಸರಾಯರ ಮುಂದಾಳುತನದಲ್ಲಿ ಅರ್ಜಿದಾರರು ಈ ಕಾರ್ಯ ಸಾಧನೆಗಾಗಿ ಪ್ರಯತ್ನಿಸಿದವರಾಗಿದ್ದಾರೆ.

ಅರ್ಜಿದಾರರ ಪರವಾಗಿ ಎಡ್ವೋಕೇಟ್ ಶ್ರೀ ಕೆ. ಜಗನ್ನಾಥ ಶೆಟ್ಟಿ ಮತ್ತು ಶ್ರೀ ಸಂತೋಷ ಹೆಗ್ಡೆಯವರು ವಾದಿಸಿದ್ದಾರಾಗಿ ತಿಳಿದು ಬಂದಿದೆ.

ರಾಜಾಪುರ ಸಾರಸ್ವತ ಸಂಘ

ಮುಂಬೈ ರಾಜಾಪುರ ಸಾರಸ್ವತ ಸಂಘದ ಹದಿನೆಂಟನೆಯ ಮಹಾ ಸಭೆಯು ತಾರೀಕು 7-4-68ರಂದು ಶ್ರೀ ಟಿ. ಕೃಷ್ಣ ನಾಯಕರವರ ಅಧ್ಯಕ್ಷತೆಯಲ್ಲಿ ಶ್ರೀ ಪೆಸ್ಟ್ ಗುಜರಾತಿ ಸಭಾಭವನದಲ್ಲಿ ಜರಗಿತು. ಸಭೆಯ ಪ್ರಾರಂಭದಲ್ಲಿ ಗೌ|| ಕಾರ್ಯದರ್ಶಿಯನ್ನು ಶ್ರೀ. ಆರ್. ನಾಯಕರವರು ಸ್ವಾಗತಿಸಿದರು ಬಳಿಕ ವಾರ್ಷಿಕ ವರದಿ ಮತ್ತು ಆಯವ್ಯಯ ಪತ್ರಗಳು ಮಂಜೂರು ಮಾಡಲ್ಪಟ್ಟುವು. ವಿಶ್ವವಿದ್ಯಾಲಯ ಮಟ್ಟದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಾಲವನ್ನೂ ಯಲು ರೂ. 2500/-ನ್ನು ಮಂಜೂರು ಮಾಡಲಾಯಿತು. ಹೈಸ್ಕೂಲು ಮಟ್ಟದ ಹಿರಿಯ ವಿದ್ಯಾರ್ಥಿ ಮತ್ತು ಹಿರಿಯ ವಿದ್ಯಾರ್ಥಿನಿಯರಿಗೆ ತಲಾ ರೂ. 25/-ರಂತೆ ಬಹುಮಾನ ನೀಡಬೇಕೆಂದೂ, ಮೆಟ್ರಿಕ್ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿ, ಯಾ ವಿದ್ಯಾರ್ಥಿನಿಗೆ ಶ್ರೀ ಜಿ. ನಾಯಕ್ ಮೆಮೊರಿಯಲ್ ಪ್ರಾಜ್‌ನ್ನು ನೀಡಬೇಕೆಂದೂ, ವೇದ ಶಾಸ್ತ್ರ ಮತ್ತು ಸಾರೋಹಿತ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶ್ಯಾಮ ನಾಯಕ್ ಫಂಡಿನ್ ಬಡ್ಡಿಯನ್ನು ವಿತರಣೆ ಗೈಯಬೇಕೆಂದೂ ಸಮೂಹದ ಉಳಿಯ ದೇವಸ್ಥಾನಗಳಾದ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಹಿರಿಯ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಬಂಟಿಕಲ್‌ಗಳಿಗೆ ತಲಾ ರೂಪಾಯಿ 30/-ರಂತೆ ಕಾಣಿಕೆ ಪರಿಪಾಟಿಸಬೇಕೆಂದೂ ನಿಶ್ಚಯಿಸಲಾಯಿತು.

ಸಭೆಗೆ ಪರವಾಗಿ ವಿ. ಯಸ್. ಪ್ರಭು, ಡಿ. ಡಿ. ಪ್ರಭು, ಬಿ. ಎ. ನಾಯಕ್, ಯಸ್. ಯಸ್. ನಾಯಕ್, ಡಿ. ಡಿ. ನಾಯಕ್, ಡಿ. ಯಸ್. ನಾಯಕ್, ಕೆ. ಎ. ನಾಯಕ್ ಮತ್ತು ಯನ್. ಕೆ. ನಾಯಕರವರು ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತ ಸಮಾಜದ ಅಭಿವೃದ್ಧಿಯನ್ನು ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸಲು ಅನುಕೂಲವಾಗುವಂತೆ ವಿದ್ಯಾಭ್ಯಾಸವನ್ನು ವೃದ್ಧಿಸಿಕೊಂಡು ಮುನ್ನಡೆಯಬೇಕೆಂದರು. ಧನ್ಯವಾದಾರ್ಪಣೆಯೊಂದಿಗೆ ಅಂದಿನ ಸಭೆಯು ಮುಕ್ತಾಯಗೊಂಡಿತು.

ವಾರ್ಷಿಕ ಮಹಾಸಭೆ

ಶಿವ ಮೆಡಿಕಲ್ ರಿಲೀಫ್ ಎಸೋಸಿಯೇಶನ್ನಿನ ವಾರ್ಷಿಕ ಮಹಾಸಭೆಯು ತಾ. 15-4-1968ರಂದು ಡಾ|| ಬೈ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಜತೆ ಕಾರ್ಯದರ್ಶಿ ಡಾ|| ಕೆ. ಆರ್. ವೆಂಕಟಕೃಷ್ಣರವರು ಪ್ರಗತಿವರದಿಯನ್ನು ಪೇಶ್ಯಸಿದರು. ಅಧಿಕೃತ ಕಾರ್ಯದರ್ಶಿ ಡಾ|| ಎಸ್. ರಂಜಿಬಾಬು ಪೆಡ್ಡೆಯವರು ಪರಿಶೀಲಿತ ಲೆಕ್ಕಪತ್ರಗಳನ್ನೂ ಮುಂದಿನ ವರ್ಷದ ಅಂದಾಜು ಆಯವ್ಯಯದ ಪಟ್ಟಿಯನ್ನೂ ಮಂಡಿಸಿದರು. ಪರಿಶೋಧಿತರ ನೇಮಕ ಮೊದಲಾದ ಕಾರ್ಯಕ್ರಮಗಳೊಂದಿಗೆ ಸಭೆಯು ಮುಕ್ತಾಯ ವಾಯಿತೆಂದು, ಎಸೋಸಿಯೇಶನ್ನಿನ ಗೌರವ ಕಾರ್ಯದರ್ಶಿ ಡಾ|| ಕೆ. ನರಹರಿರಾವರು ತಿಳಿಸುತ್ತಾರೆ.

ಮೂಡಪ್ಪ ಸೇವೆ.

ಪರ್ಕಳ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ತಾ. 1-4-68ರಲ್ಲಿ ಪರ್ಕಳ ಗುರುಂಜ ಜೋಯಿಸರ ಮೂಡಪ್ಪ ಸೇವೆ ಪೂಜೆ ಪರಿಕ ನಡೆಯಿತು. ಈ ಪೂಜಾ ಕಾಲ ರಾತ್ರಿ 9ಗಂಟೆ ವೇಳೆ ಧ್ವಜಾರೋಹ ತುದಿಯಿಂದ ನೀರಿಳಿಯಲು ಪ್ರಾರಂಭವಾಗಿ ಹರಿದು ಬೋಗಕೊಡಗಿತು. ಧಾರಾಕಾರ ಇಳಿಯಿತು. ಮರುದಿನ ಹಗಲಿಡೀ ಸಾವಿರಾರು ಜನರು ಬಂದು ಆ ನೀರನ್ನು ತೀರ್ಥವೆಂದೆಣಿಸಿಕೊಂಡೊಯ್ದರು. ಅಂತೂ ಹಗಲು ರಾತ್ರಿ ನೀರಿಳಿಯುತ್ತಿತ್ತು. ತಾ. 2ರಂದು ಒಂದು ಉತ್ಸವದಂತೆ ಜನರು ಬಂದು ಹೋಗುತ್ತಿದ್ದರು. ಪ್ರೆಜಮರವು ಅಲ್ಲಾಡುತ್ತಿತ್ತು. ತಾ. 3 ರಂದು ರಾತ್ರಿ ವಿಶೇಷ ಪೂಜೆ ನಡೆಸಿ ಬ್ರಾಹ್ಮಣರಿಗೆ ತರುವಾಯ ನೀರಿಳಿಯುವದು ನಿಂತಿತು.

ಅಜೆಕಾರಿಗೆ ವಿದ್ಯುತ್ ಪೂರೈಕೆ

ಅಜೆಕಾರು, ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ವಿದ್ಯುತ್ ಸರಬರಾಯಿ ಪರೀಕ್ಷೆಯಲ್ಲಿದ್ದ ಅಜೆಕಾರು ಗ್ರಾಮದ ಜನತೆಗೆ ತಾ. 10ರಂದು ವಿದ್ಯುತ್ ಪೂರೈಕೆ ಲಭಿಸಿತು. ಸ್ವಾಮಿ ಇಲೆಕ್ಟ್ರಿಕಲ್ಸ್, ಕಾರ್ಕಳ ಮತ್ತು ಸ್ಥಳೀಯರು ರೆ. ಫಾ|| ಲಿಗೋರಿ ಡಿಸೋಜರವರ ಸತತ ಪ್ರಯತ್ನಗಳ ಫಲವಾಗಿ ದೊರೆತ ಈ ವಿದ್ಯುತ್ ಸೌಲಭ್ಯದ ಉದ್ಘಾಟನೆಯನ್ನು ಬೆಳ್ಳಾರಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಮಾಡಿದರು.

ಈ ಸಮಾರಂಭದ ಬಹಿರಂಗ ಸಭೆಯು ಸ್ಥಳೀಯ ಜ್ಯೋತಿ ಪ್ರೌಢಶಾಲೆ ಮೈದಾನದಲ್ಲಿ ಜರಗಿತು ವಿದ್ಯುತ್ ಸಲಕರಣಾ ಸಂಸ್ಥೆಯ ಮೂಲಕರಾದ ಸ್ವಾಮಿ ಇಲೆಕ್ಟ್ರಿಕಲ್ಸ್‌ನ ಪರವಾಗಿ ಶ್ರೀ ದೇವದಾಸ ಶೆಟ್ಟಿಯವರು ಸ್ವಾಗತಿಸಿದರು. ಅನಂತರ ರೆ. ಫಾ|| ಲಿಗೋರಿ ಡಿಸೋಜರು ಮಾತನಾಡುತ್ತ, ಇಲ್ಲಿನ ಜನತೆಯ ಮುಖ್ಯ ಬೇಡಿಕೆಗಳಾದ ಪ್ರೌಢಶಾಲೆ, ವಿದ್ಯುತ್ ಪೂರೈಕೆ ಮತ್ತು ಪಂಚಾಯ್ತಿಗಳನ್ನು ಬದಗಿಸುವಲ್ಲಿ ತಾವು ಗೈದ ಪರಿಶ್ರಮ ತಮಗೆ ಜನತೆ, ವಿ ಇಂಡೋ ಜರ್ಮನ್ ಸೋಶಿಯಲ್ ಸರ್ವಿಸ್ ಎಕ್ಸ್‌ಟೆನ್ಶನ್— ನವದೆಹಲಿ ಹಾಗೂ ಸ್ವಾಮಿ ಇಲೆಕ್ಟ್ರಿಕಲ್ಸ್ ಇವರ ಪರಿಶ್ರಮ ಜಾಗೂ ಸರಕಾರದನ್ನು ಸ್ಮರಿಸಿದರು.

ಜಿಲ್ಲಾಧಿಕಾರಿಗಳಾದ ಶ್ರೀ ನಾಗೇ ಗೌಡರು ರೆ. ಫಾ|| ಲಿಗೋರಿ ಡಿಸೋಜರವರ ಸಮಾಜ ಸೇವೆಯನ್ನೂ ಮತ್ತು ಸ್ವಾಮಿ ಇಲೆಕ್ಟ್ರಿಕಲ್ಸ್ ನವರ ಪರಿಶ್ರಮವನ್ನೂ ಶ್ಲಾಘಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಯನ್. ಮೋಹನದಾಸ ಅತ್ಯಂತಾಯರು ತಮ್ಮ ಭಾಷಣದಲ್ಲಿ ಗ್ರಾಮದ ಸರ್ವತೋಮುಖ ಏಳಿಗೆಯನ್ನು ಹಾರೈಸಿ ರೆ. ಫಾ|| ಲಿಗೋರಿ ಡಿಸೋಜರವರ ಶ್ರಮವನ್ನು ಪ್ರಶಂಸಿಸಿದರು. ಕೊನೆಯಲ್ಲಿ ಶ್ರೀ ದೇವದಾಸ ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

ಮುಖ್ಯಪ್ರಾಣನನ್ನು ಎಚ್ಚರಿಸಿರಿ!

ಉಡುಪಿ, "ಇಂದು ಹನುಮಜ್ಜಯಂತಿಯ ಪುಣ್ಯದಿನ ಹನುಮಂತನೆಂದರೆ, ಸ್ಫೂರ್ತಿ, ಸಾಹಸ ಮತ್ತು ಆತ್ಮ ವಿಶ್ವಾಸಗಳ ಪ್ರತೀಕ. ಪ್ರತಿ ಹಿಂದೂ ಶರೀರದಲ್ಲೂ ಹನುಮಂತನು— ಮುಖ್ಯಪ್ರಾಣನು ಇದ್ದೇ ಇದ್ದಾನೆ. ಆದರೆ, ಹೆಚ್ಚಿನವರ ಶರೀರದೊಳಗೆ ಆತ ಇನ್ನೂ ನಿದ್ರಿಸುತ್ತಿದ್ದಾನೆ. "ನೀವು ಹನುಮಂತ ನಿನಗೆಷ್ಟು ಶಕ್ತಿ?" ಎಂದು ಉದಯರಾಗ ಹಾಡಿದೊಡನೆ ಆತ ಎಚ್ಚರಗೊಳ್ಳಲಾರ. ರಾಮನಾಮವು ಆತನ ಕಿವಿಗೆ ಬೀಳಬೇಕು. ಆ ಮೇಲೆಯೇ ಆತ ಎದ್ದು ಕುಳಿತು ತೊಡಗುವನು. ಹಾಗಿದೆ, ರಾಮ ನಾಮದ ಪ್ರಭಾವಯುತ ಶಕ್ತಿ! ನಮ್ಮ ದೇಹದೊಳಗಿರುವ ಮುಖ್ಯಪ್ರಾಣನು ಎದ್ದು ಕುಣಿಯಬೇಕಾದರೆ, ರಾಮನಾಮವೇ ಅದಕ್ಕೆ ತಾರಕ ಮಂತ್ರವಾಗಿದೆ ಎಂದು ಶ್ರೀ ರಾಮನಾಮ ಲೃಕೇ ಅಭಿಂದ ನಾಮಸಂಕೀರ್ತನ ಸಮಾರೋಪ ಭಾಷಣದಲ್ಲಿ ಪರ್ಯಾಯ ಪೀಠಕ್ಕೆ ಶ್ರೀ ಪೇಜಾವರ ಸಂಸ್ಥಾನ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ಅಧ್ಯಕ್ಷಕೊಡಿಸಿ, ರಾಮ ಸಂಕೀರ್ತನೆಯ ಮಹತ್ವವನ್ನು ಅತ್ಯಂತ ಭಾವಪೂರ್ಣವಾಗಿ ವಿವರಿಸಿ ಹೇಳಿದರು.

ಸಂಕೀರ್ತನ ಸಮಾರಂಭವು ತಾರೀಕು 13—4—68ರಂದು ಶ್ರೀಹನುಮಜ್ಜಯಂತಿಯ ಅಂಗವಾಗಿ ಉಡುಪಿ ಶ್ರೀ ಕೃಷ್ಣ ಮಠದ ಮಂಟಪ ಮಧ್ಯಲಿನಲ್ಲಿ ಅಖಂಡವಾಗಿ ಜರಗಿತು. ಇದರಲ್ಲಿ ಭಾಗವಹಿಸಿದ ಸಮೂರು ನೂರೈವತ್ತು ಮಂದಿ ಶ್ರದ್ಧಾಳುಗಳಿಗೆ ಸರ್ವಜ್ಞಯ ಮಠದ ವತಿಯಿಂದ ಶ್ರೀ ಕೃಷ್ಣ ಪ್ರಸಾದ (ಪೃಸ್ಪಾನ್ನ ಭೋಜನ)ದ ಉತ್ತಮ ವ್ಯವಸ್ಥೆಯೂಗಿದ್ದಿತು. ಜರಗಿದ ಸಾರ್ವಜನಿಕ ಸಭೆಯಲ್ಲಿ ಮಂಡಳಿಯ ಕಾರ್ಯದರ್ಶಿ ಶ್ರೀ ಎ. ಲಕ್ಷ್ಮೀನಾರಾಯಣ ಕಿಣಿಯವರು ಮಂಡಳಿಯ ಅಧ್ಯಾತ್ಮಿಕ ಚಟುವಟಿಕೆಗಳನ್ನೂ ಗತ ಸಮಾರಂಭದ ವರದಿಯನ್ನೂ ಸಭೆಯ ಮುಂದೆ ಮಂಡಿಸಿದರು. ಅನಂತರ, ಹೆಚ್ಚಿನ ಸಂಖ್ಯೆಯಲ್ಲಿ ರಾಮನಾಮ ಬರೆದವರಿಗೆ, ಭಗವದೀತೆ ಮತ್ತು ಶ್ರೀ ರಂಮರಕ್ಷಾ ಸ್ತೋತ್ರವನ್ನು ಬಹುಮಾನ ಪಡಾದವರಿಗೆ, ಶ್ರೀಗಳವರು ತಮ್ಮ ದಿವ್ಯ ಹಸ್ತದಿಂದ ಪುರಸ್ಕಾರ ವಿತರಣೆ ಮಾಡಿ, ಸಮೂರೋಪ ಭಾಷಣ ಗೈದರು. ಮಂಡಳಿಯ ಉಪಾಧ್ಯಕ್ಷ ವೇದಮೂರ್ತಿ ಕೆ. ನಾರಾಯಣ ಹಂ ಭಟ್ಟರು ಧನ್ಯವಾದ ಸಮರ್ಪಿಸಿ, ಶ್ರೀಗಳವರ ಸರ್ವರಿಗೂ ಫಲ ಮಂತ್ರಾಕ್ಷತೆಗಳನ್ನಿತ್ತರು. ಅನಂತರ, ಪ್ರಸಾದ ವಿತರಣೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ತಮ್ಮೊಳಗಿನ ಬೆಳಕನ್ನು ಕಂಡವರು ದೇವಸ್ಥಾನದ ಬೆಳಕಿಗೆ ಕೈ ಮುಗಿಯಲು ಓಡಾಡರು.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಸಿ ಬ್ರಾಹ್ಮಣ ಸಮ ಸಿಹಿಯೂಟ ಭೋಜನ ಕಳಲ ವಿಧದ ಕಂಡಿತಿನುಸು
ಹಾಪೀಮಾಂಗ ಈ ಸಾಂಸ್ಥಿ ಅಂ ಕ್ಷ ಸಹಿತ ವಿಳಸಾಕ್ಷ ಹೊಟೆಲ್;

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 370/67

ಕುದ್ರಂಮ ಶಿದ್ರಿ ಕೊಡಾ — ವಾದಿರು.

ಮತ್ತು

ಪೂರ್ಟರ್ ಎಡ್ವಿ ಸಾಲಿನ್ಸ್ ಯಾನೆ ಸುಕ್ರನ್—ಅಬೆಲ್ ಅಂಮನ್ಸನ್ ಅಳಿಯ-ಉಳಿಯೂರು ಗೋಳಿ ಗ್ರಾಮದ ಕೈಸುಂಜಾಲು.

—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲ್ಯ ತಿಳಿಯಪಡಿಸುವುದೇನಂದರೆ: —

ವಾದಿರೂಗೆ ಪ್ರತಿವಾದಿಯಿಂದ ಬರತಕ್ಕ ಕ್ರೋಧಿ ಸಂ|ದ ಗೇಣಿವಸ್ತ್ರರೆ ಕೇಳಿ ವಾದಿಯ ಪ್ರತಿವಾದಿ ಮೇಲೆ ರೂ. 159—59ಕ್ಕೆ ಸೂಡಿದ ಮೇಲಿನ ದಾವೆಯ. ಪ್ರತಿವಾದಿಯ ಹಾಜ್ರಾತಿಯ ಬಗ್ಗೆ ತಾ. 18-5-68ಕ್ಕೆ ಸದ್ರಿ ಕೋರ್ಟಿನಲ್ಲಿ ತಪ್ಪಿಗೆ ಯುದೇಶಾಗಿಸುತ್ತದೆ. ಪ್ರತಿವಾದಿಯ ಅಕ್ಷೇಪತೆ ವಗೈರೆ ಯಾವ ದಾದ ಸಂಗ್ರಿಯಲ್ಲಿ ಸದ್ರಿ ತಾ. 18-5-68ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಗಲು 11 ಗಂಟೆಗೆ ದಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪುದಲ್ಲಿ ಪ್ರತಿವಾದಿಯ ಗೈರು ಹಾಜ್ರಿಯಲ್ಲಿ ಸದ್ರಿ ಸಂಗ್ರಿ ತೀರ್ಮಾನಿಸಲ್ಪಡುವುದು ಎಂದು ಸಂಗ್ರಿ ಈ ಮೂಲ್ಯ ತಿಳಿಸೋಣಾಗಿಯದೆ.

B. Ananda Shetty.
Advocate for Plaintiff

Udipi, Dated 17-4-1968

ಮದಿರಾ ಪುರಾಣ

(ಡಾ. ಜೀವರಾಜ ಮೇಹೆತಾ, ಮಾಜಿ ಮುಖ್ಯಮಂತ್ರಿ ಗುಜರಾತ)

ಕಾಂಗ್ರೆಸ್ ಸಂಸ್ಥೆಯು ೧೮೮೫ರಿಂದಲೂ ಭಾರತ ಸರಕಾರದ ಮದ್ಯಪಾನ ಪ್ರಚಾರಕ್ಕೆ ವಿರೋಧಿಸಿ ಠರಾವು ಮಾಡುತ್ತ ಬಂದಿದೆ. ೧೯೦೭ ಹಾಗೂ ೧೯೧೨ರಲ್ಲಿ ಭಾರತ ಶಾಸನಾಲಯದ ಕಡೆಗೂ ೧೯೧೫ರಲ್ಲಿ ವಾಯಿಸರಾಯರ ಕಡೆಗೂ ತಿಳಿಸುವಂಥ ಕಾಯದೆ ಜಾರಿಗಿತ್ತು. ಭಾರತ ಸರಕಾರದ ಅಬಕಾರಿ ನೀತಿಯನ್ನು ವಿರೋಧಿಸಿ ಪಾರ್ಲಿಮೆಂಟಿನಲ್ಲಿಯೂ ಪ್ರಸ್ತಾಪಿಸಲಾಗುತ್ತಿತ್ತು. ಮದ್ಯನಿಷೇಧ ಆಂದೋಲನದಿಂದ ಭಾರತದ ಸ್ವಾತಂತ್ರ್ಯ ಆಂದೋಲನಕ್ಕೆ ತುಂಬಾ ಸಹಾಯ ವಾಗುತ್ತಲಿತ್ತು.

೧೯೩೭ರಲ್ಲಿ ಗಾಂಧಿಜಿಯವರ ಧೋರಣೆಗೆ ಅನುಸರಿಸಿ ಮದ್ರಾಸ, ಮುಂಬಯಿ, ಉತ್ತರಪ್ರದೇಶ, ಬಿಹಾರ ಹಾಗೂ ಮಧ್ಯಪ್ರಾಂತಗಳಲ್ಲಿ ಮದ್ಯ ನಿಷೇಧವನ್ನು ಜಾರಿಗೊಳಿಸಲಾರಂಭಿಸಿತ್ತು. ಆದರೆ ೧೯೪೦ರಿಂದ ೧೯೪೭ ವರೆಗೆ ಕಾಂಗ್ರೆಸ್ಸು ಮಂತ್ರಿಮಂಡಳದಿಂದ ಹೊರಗಿದ್ದಾಗ ಈ ಪಾನಪ್ರತಿಬಂಧ ನೀತಿಯನ್ನು ಎಷ್ಟೋಮಟ್ಟಿಗೆ ಶಿಥಿಲಗೊಳಿಸಲಾಗಿತ್ತು. ಆದರೂ ಸ್ವಾತಂತ್ರ್ಯ ಸಂತರ ಮದ್ರಾಸ ಸರಕಾರವು ೪ ವರ್ಷಗಳಲ್ಲೂ ಮುಂಬಯಿ ಸರಕಾರವು ೬ ವರ್ಷಗಳಲ್ಲೂ ಪಾನನಿರೋಧವನ್ನು ವ್ಯಾಪಕಗೊಳಿಸಿತು.

೧೯೪೬—೪೭ರಲ್ಲಿ ಗಾಂಜಾ ಅಫೀಮು ಸಹಿತ ಮದ್ರಾಸ ಸರ್ಕಾರದ ಅಬಕಾರಿ ಉತ್ಪನ್ನ ೧೪ ಕೋಟಿ ಹಾಗೂ ಮುಂಬಯಿ ಸರ್ಕಾರದ್ದು ೯॥ ಕೋಟಿ ರೂ. ಇತ್ತು. ಈ ಹಾಫಿಯನ್ನು ತಂಬಿಕೊಳ್ಳುವ ಮುಂಬಯಿ ಸರ್ಕಾರವು ಕೂಡಿಸಿದ ಮಾರಾಟ ತೆರಿಗೆಯು ೧೯೪೬ - ೪೭ರಲ್ಲಿ ೧॥ ಕೋಟಿ ರೂ. ಅರ್ಥಾತ್ ಅಬಕಾರಿ ತೆರಿಗೆಯ ೧॥ ಪಟ್ಟು ಆಗಿತ್ತು.

ಆದರೆ ಮುಂದೆ ಪಾನಪ್ರತಿಬಂಧವನ್ನು ಜಾರಿಯಲ್ಲಿ ತರದ ಪ್ರಾಂತಗಳೂ ಸಗಟು ಮಾರಾಟಕರನ್ನು ವಸೂಲು ಮಾಡಿ ಹೆಚ್ಚಿದವು. ಆದರೆ ಪಾನಪ್ರತಿಬಂಧ ಮಾಡದ ಪ್ರಾಂತಗಳಲ್ಲಿ ಮಾರಾಟ ಕರವು ಹೆಚ್ಚು ಪ್ರಮಾಣದಲ್ಲಿ ಕೂಡುತ್ತಲೇ ಇರಲಿಲ್ಲ ಎಂಬುದು ಮಹತ್ವದ ಸಂಗತಿಯಾಗಿದೆ.

ವಿಕ್ರೀಕರದ ಮೇಲಿಂದ ಜನತೆಯಲ್ಲಿಯ ಕ್ರಯ ಶಕ್ತಿಯನ್ನು ಅಳೆಯು ಬರುತ್ತದೆ. ಮತ್ತು ಜನತೆಯ ಜೀವನ ಮಟ್ಟದ ವಿಶಿಷ್ಟತೆ ಗೊತ್ತಾಗುತ್ತದೆ! ಆದರೆ ಮದಿರಾಕರವು ಹೆಚ್ಚಿದಷ್ಟೂ ಜನತೆಯ ಆರ್ಥಿಕ, ಸಾಮಾಜಿಕ ಹಾಗೂ ಮಾನಸಿಕ ದುರ್ದಶೆ ಬೆಳೆಯುತ್ತದೆ. ಮದ್ಯಕರದಲ್ಲಿಯ ಹೆಚ್ಚಿನ ಭಾಗವು ಹೊಟ್ಟೆಗೂ ಕಡಿಮೆ ಹೂಣಾ ತಿನ್ನಲಾರದ ಬಡ ಜನತೆಯ ಕಡೆಯಿಂದಲೇ ವಸೂಲು ಮಾಡಲ್ಪಡುತ್ತದೆ.

ಅಮೇರಿಕೆಯಲ್ಲಿ ೧೯೨೧ರಿಂದ ೧೯೩೩ ವರೆಗೆ ಪಾನಪ್ರತಿಬಂಧ ಜಾರಿಯಲ್ಲಿತ್ತು. ೧೯೨೧ರಲ್ಲಿ ಅಮೇರಿಕೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ವಾರ್ಷಿಕ ಉಳಿತಾಯ ೧೪೬ ಡಾಲರ ಇತ್ತು. ಅದು ೧೯೩೬ರಲ್ಲಿ ೨೨೧ ಡಾಲರಿಗೆ ಏರಿತು. ಅದೇ ಪ್ರಕಾರ ಜೀವ ವಿಮೆಯು ೩೪೨ರಿಂದ ೬೮೦ ಡಾಲರಿಗೆ ಏರಿತು. ಪಾನಪ್ರತಿಬಂಧವಿರುವ ಕಾಲದಲ್ಲಿ ಪ್ರತಿಯೊಬ್ಬರ ಸರಾಸರಿ ಹಾಲು ಹೈನಗಳ ಉಪಯೋಗ ೨॥ ಪಟ್ಟಾಯಿತು. ಮತ್ತು ಹಣ್ಣುಗಳ ರಸ ಹಾಗೂ ಕಾಯಿಪಲ್ಯಗಳ ಮಾರಾಟವೂ ಕಲ್ಪನಾತೀತವಾಗಿತ್ತು.

ಇನ್ನೊಂದು ಸಂಗತಿಯನ್ನೂ ನೆನಪಿನಲ್ಲಿ ಇಡಬೇಕು. ಇಂದು ಅಬಕಾರಿ ಉತ್ಪನ್ನದ ಆಶೆಗೆ ಬಿದ್ದು ಸರಕಾರಗಳು ಮದ್ಯಪಾನ ಪ್ರಸಾರ ಕೈಕೊಂಡಿವೆ. ಆದರೆ ಅಬಕಾರಿ ಉತ್ಪನ್ನವು ಹೆಚ್ಚುತ್ತ ಹೋದಂತೆ ಇನ್ನಿತರ ಉತ್ಪನ್ನಗಳು ಕಡಿಮೆಯಾಗುವವು! ಮತ್ತು ಖರ್ಚಿನ ಬಾಬುಗಳು ಮತ್ತಷ್ಟು ಹೆಚ್ಚುವವು ಎಂದು ಕಂಡುಬಂದೀತು. ಮಾರಾಟಕರ ಹಾಗೂ ಮನೋರಂಜನ ಕರಗಳು ಉತ್ತರೋತ್ತರ ಕಡಿಮೆಯಾಗಬೇಕಾಗುವವು. ಯಾಕಂದರೆ ಕುಡಿತದಲ್ಲಿ ದುಡ್ಡು ಕಳಕೊಂಡವರ ಹೆಸರ ಮನೋರಂಜನಕ್ಕೆ ಖರ್ಚುಮಾಡಲಿಕ್ಕೂ ಹೆಚ್ಚಿನ ವಸ್ತುಗಳನ್ನು ಕೊಳ್ಳಲಿಕ್ಕೂ ಆರ್ಥಿಕ ಶಕ್ತಿಯೇ ಉಳಿಯಲಿಕ್ಕಿಲ್ಲ!

ಎರಡನೆಯದಾಗಿ ಕರಾರದ ಖರ್ಚು ಹೆಚ್ಚುವದು. ಯಾಕಂದರೆ ಮದ್ಯಮಾರಕಗಳ ಪ್ರಸಾರ ಹೆಚ್ಚಿದಷ್ಟೂ ಕಳವು, ದರೋಡೆ ಕೊಲೆಸುಲಿಗೆ, ಹೆಂಗಸರ ಮೇಲಿ ಅತ್ಯಾಚಾರ ಮೊದಲಾದ ಅಪರಾಧಗಳೂ ಹೆಚ್ಚುವವು. ಅದೆಲ್ಲವನ್ನು ಗೊತ್ತು ಹಚ್ಚುವದು, ಪ್ರಕರಣ ನಡಿಸುವದು, ಅಪೀಲು ಮಾಡಿಸುವದು, ಶಿಕ್ಷೆಯಾದವರನ್ನು ಜೈಲಿನಲ್ಲಿ ಇರಿಸುವದು, ಇವೆಲ್ಲ ಖರ್ಚಿಗೂ ಕಲ್ಪನೆ ಮೀರಿ ಹೆಚ್ಚುವವು!

ಮದ್ಯಪಾನದಿಂದ ಹೊಟ್ಟೆ, ಕರಳು, ರಕ್ತ ಸಂಚಾರ ಸಂಬಂಧದ ರೋಗಗಳು ಹೆಚ್ಚುವವು. ಮತ್ತು ಅವುಗಳ ಪರಿಹಾರಕ್ಕಾಗಿ ಸರಕಾರವು ಹೆಚ್ಚಿನ ಖರ್ಚು ಮಾಡಬೇಕಾಗುವದು. ಹೆಚ್ಚಿನ ಆಸ್ಪತ್ರೆಯಲ್ಲಿಯ ಸಂಖ್ಯೆಯೂ ಹೆಚ್ಚುವದು. ಕುಡುಕರ ಅರ್ಧವಿಕಸಿತ ಮಕ್ಕಳ ಲಾಲನೆ ಪಾಲನೆಗಳ ಭಾರವೂ ಸರಕಾರದ ಮೇಲೆ ಬೀಳುವದು.

ಮೇಲಾಗಿ ಕುಡುಕರಿಂದಾಗುವ ಹಾನಿಯೂ ಅಷ್ಟಿಷ್ಟಲ್ಲ. ಕುಡಿದು ಮೋಟಾರ ಪಡಿಸುವ ಡ್ರೈವರುಗಳು ಎಷ್ಟೋ ಅಪಘಾತ ಮಾಡಬಹುದು ದಾರಿ ಕಾ ರ ಪಡೆಯ್ವೇ ಜೀವ ಕಳೆದುಕೊಳ್ಳಬೇಕಾಗಬಹುದು. ಕೂಲಿಕಾರರ ಕುಡುಕತನದಿಂದ ಕಾರಖಾನೆಗಳಲ್ಲಿಯ ಉತ್ಪತ್ತಿ ಕಡಿಮೆಯಾಗುವದು. ಅನಿಷ್ಟಮಿತ ತನ ಹೆಚ್ಚುವದು.

ದೇಶದ ಜಡ ಸಂಖ್ಯೆಯೇನೋ ದಿನದಿನಕ್ಕೆ ಹೆಚ್ಚುತ್ತಲಿದೆ. ಖಾದ್ಯ ವಸ್ತುಗಳು ಕಡಿಮೆ ಯಾಗುತ್ತಲಿವೆ. ಇಂಥ ಅಭಾವ ಪರಿಸ್ಥಿತಿಯಲ್ಲಾ ಲಕ್ಷಾಂತರ ಜನರು ಜಾಯಿಯಲ್ಲಿ ಬೇಳಬೇಕಾಗಿದ್ದ ಅಕ್ಕಿ, ಜೋಳ, ಬೆಲ್ಲ, ಸಕ್ಕರೆ, ಖರ್ಜೂರ, ಗೇರಹಣ್ಣು ಮೊದಲಾದವು ಮದ್ಯ ತಯಾರಿಸಲಿಕ್ಕೆ ಉಪಯೋಗಿಸಲ್ಪಡುವವು.

ಒಟ್ಟಿಗೆ ಅಬಕಾರಿಕರದಿಂದ ರಾಜ್ಯ ಸರಕಾರಗಳ ಉತ್ಪನ್ನ ಹೆಚ್ಚುವದೆಂದು ಪ್ರತಿವಾದಿಸುವವರು ಇದರಿಂದ ಜನತೆಯಲ್ಲಿಯೂ ದೇಶದ ಸಂಪತ್ತಿಯಲ್ಲಿಯೂ ಅಪಾರವಾದ ಹಾನಿಯನ್ನು ಗಣನೆಯಲ್ಲೇ ತೆಗೆದುಕೊಂಡಿಲ್ಲ ಎಂದು ಎನಿಸಿಗೆ ಅಭಿಪ್ರಾಯವಿದೆ.

ಹಿಂದೆ ಮದ್ಯಸಾರವು ಔಷಧವೆಂದೂ ಉಪಯೋಗಿಸಲ್ಪಡುತ್ತಿದ್ದಿರಬಹುದು! ಆದರೆ ಇಂದಾದರೋ ಯಾವದೇ ರೋಗದಲ್ಲಿ ಅದು ಔಷಧವೆಂದು ಉಪಯೋಗಿಸಲ್ಪಡುತ್ತ ಇಲ್ಲ! ಹಲವಾರು ವರ್ಷಗಳಿಂದ ಎಷ್ಟೋ ದೇಶಗಳಲ್ಲಿ ಔಷಧಗಳ ಪಟ್ಟಿ (ಯಾದಿ)ಯೊಳಗಿಂದಲೇ ಮದ್ಯಸಾರವನ್ನು ಕಿತ್ತೊಗೆದಿದ್ದಾರೆ.

(ರಾಜಸ್ಥಾನ ಸಚಾಬಂದೀ ಸಮ್ಮೇಲನದಲ್ಲಿಯ ಭಾಷಣದಿಂದ.)

ಉಡುಪಿಯಲ್ಲಿ ಹೊಸ ಅಟೋಮೆಟಿಕ್ ಎಕ್ಸ್‌ಚೇಂಜಿನ ಪ್ರಾರಂಭೋತ್ಸವ

ಉಡುಪಿ ಸಂತೆಕಟ್ಟೆ ಪಾಲುಕೋಟೆಯಲ್ಲಿ ನೂತನವಾಗಿ ನಿರ್ಮಿಸಲಾದ ಕಟ್ಟಡದಲ್ಲಿ ಜೋಡಿಸಲಾದ ಸ್ವಯಂಚಾಲಿತ ದೂರವಾಣಿ ಸಂಪರ್ಕದ ಉದ್ಘಾಟನೆಯು ತಾ.20.4.68ರಂದು ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರಿಂದ ನೆರವೇರಿಸಲ್ಪಟ್ಟಿತು. ಉಡುಪಿ ಸಂಸ್ಕೃತಕಾಲೇಜಿನಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಶುಕ್ರಿಗೆ ಮಠಾಧಿಪತಿಗಳಾದ ಶ್ರೀಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರು ವಹಿಸಿದ್ದರು.

ಶ್ರೀ ಜಯಂತಿ ಬಾಯಿಯವರಿಂದ ಪ್ರಾರ್ಥನೆಯೊಡನೆ ಬಳಿಕ ಮಂಗಳೂರು ವಿಭಾಗದ ಡಿವಿಜನಲ್ ಇಂಜಿನಿಯರ್ ಟೆಲಿಗ್ರಾಫ್ ಶ್ರೀ ವೈ. ಜಿ. ಹೆಗ್ಡೆಯವರು ಸ್ವಾಗತ ಭಾಷಣ ಮಾಡಿ ಉಡುಪಿಯಲ್ಲಿ ಟೆಲಿಫೋನ್ ಜನಪ್ರಿಯವಾಗಿ ಪ್ರಗತಿ ಪಡೆದುದನ್ನೂ ಇದರ ಆರಂಭಕ್ಕೆ ಡಾ| ಪೈಗಳು ಮಾಡಿದ ಪ್ರಯತ್ನವನ್ನೂ ವಿವರಿಸಿದರು. ಇಂಜಿನಿಯರ್ ಟೆಲಿಗ್ರಾಫ್ ಶ್ರೀ ಕೆ. ಆರ್. ಶಿಣಿಯವರು ಸಂದೇಶಗಳನ್ನು ಓದಿದರು.

ಸಚ್ಚಶ್ರೀ ಡಾ| ಪೈಯವರು ಟೆಲಿಫೋನಿನ ಪ್ರಯೋಜನವನ್ನು ವಿವರಿಸಿ ಅದಕ್ಕೆಲ್ಲರೂ ಗ್ರಾಹಕರಾಗಿ ಇನ್ನಷ್ಟು ಬೆಳೆದು ಬರುವಂತಾಗಲೆಂದು ಹಾರೈಸಿದರು. ಅಧ್ಯಕ್ಷ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರು ಉಡುಪಿಯ ಬಹುಮುಖ ಬೆಳವಣಿಗೆಗೆ ಕಾರಣೀಭೂತರಾದ ಡಾ| ಪೈಗಳಿಂದ ಈ ಉದ್ಘಾಟನಾ ಸಮಾರಂಭ ಜರಗುವುದು ಯಥಾಯೋಗ್ಯವಾದುದೆಂದೂ ಟೆಲಿಫೋನನ್ನು ಹೆಚ್ಚಿನವರು ಉಪಯೋಗಿಸಲು ಅನುಕೂಲವಾಗಲಿಂತೆ ಅದರ ಚಂದಾದನ್ನು ರೂ. 200ರ ಒಳಗೆ ಇಳಿಸುವುದು ಉತ್ತಮವೆಂದೂ ಹೇಳಿ ಈ ಹೊಸ ಎಕ್ಸ್‌ಚೇಂಜ್ ಬೆಳೆದು ಬರುವಂತೆ ಆಶೀರ್ವದಿಸಿದರು.

ಕೊನೆಯಲ್ಲಿ ಸಹಾಯ ಡಿವಿಜನ್ ಆಫೀಸರ್ ಟೆಲಿಗ್ರಾಫ್ಸ್ ಶ್ರೀ ಎಚ್. ವಿ. ನಾಯಕರು ಧನ್ಯವಾದಗಳನ್ನರ್ಪಿಸಿದರು.

ಎನ್. ಜಿ ಪ್ರೋಗಳ ಹೋಮಿಗೆ ಶಿಲಾನ್ಯಾಸ

ಮೈಸೂರು ರಾಜ್ಯದ ಎನ್. ಜಿ. ಪ್ರೋಗಳ ಸಂಘದ ಉಡುಪಿ ತಾಲೂಕಾ ಶಾಖೆಯ ಎನ್. ಜಿ. ಪ್ರೋ. ಹೋಮಿನ ಶಿಲಾನ್ಯಾಸವನ್ನು ತಾ.18.4.68ರಂದು ಉಡುಪಿ ತಾಲೂಕಾ ಅಭಿವೃದ್ಧಿ ಅಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ನೆರವೇರಿಸಿದರು. ಉಡುಪಿ ಕಾಲೇಜಿನಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ವಹಿಸಿದ್ದರು. ಲಕ್ಷಾಣಕಾರದ ಬಳಿಕ ಸಂಘದ ಅಧ್ಯಕ್ಷ ಶ್ರೀ ಎಚ್. ಶಾಮರಾಯ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಉಪಾಧ್ಯಕ್ಷ ಶ್ರೀ ಕೆ. ಬಚ್ಚಶೆಟ್ಟರು ಸಂದೇಶವಾಚನ ಗೈದರು. ಪಿ ಜಾಂಟಿ ಶ್ರೀ ಎಲ್. ಡಿ. ಬಲ್ಲಾಳರು ಕಟ್ಟಡ ಯೋಜನೆಯ ವಿವರಗಳನ್ನಿತ್ತರು. ಬಳಿಕ ಶ್ರೀಗಳಾದ ಎ. ಜಿ. ಅಲ್ಲಿಯವರೂ ಎಚ್. ಎಸ್. ಕೆದ್ದಾಯರೂ ಭಾಷಣಮಾಡಿ ಈ ಯೋಜನೆಗೆ ಯಶಸ್ವಿಯನ್ನು ಕೋರಿದರು. ಶ್ರೀ ಎಚ್. ಎಲ್. ನಾಗೇಗೌಡರು ತಮ್ಮ ಭಾಷಣದಲ್ಲಿ ಸ್ಥಳೀಯ ಎನ್. ಜಿ. ಪ್ರೋಗಳ ಪ್ರಯತ್ನಕ್ಕೆ ಜಯವಾಗಲೆಂದು ತನ್ನ ಸಹಕಾರದ ಭರವಸೆಯನ್ನಿತ್ತರು. ಶ್ರೀ ಎಂ. ಮಧ್ವರಾಜರು ಈ ಸ್ತುತ್ಯ ಪ್ರಯತ್ನವನ್ನು ಶ್ಲಾಘಿಸಿ ರೂ. 5000 ದಾನ ಕೊಡುವುದಾಗಿ ಸಾರಿದರು. ಕೊನೆಗೆ ಕಾರ್ಯದರ್ಶಿ ಶ್ರೀ ಎಲಿಯಾಸ್ ಪಿಂಟೋರವರು ಧನ್ಯವಾದಗಳನ್ನು ಸಮರ್ಪಿಸಿದರು.

ಶ್ರೀನರಸಿಂಹ ಜಯಂತೀರಥೋತ್ಸವ

ಸುಬ್ರಹ್ಮಣ್ಯದ ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ಮಹಾ ರಥೋತ್ಸವವು ತಾ. 10—5—68ರಿಂದ 13—5—68ರ ತನಕ ವಾಡಿಕೆಯಂತೆ ಜರಗಲಿರುವುದೆಂದೂ ಸರ್ವರೂ ಬಂದು ಶ್ರೀ ದೇವರದರ್ಶನ ಪಡೆದು, ತೀರ್ಥ ಪ್ರಸಾದ ಸ್ವೀಕರಿಸಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

"ನಿರೀಕ್ಷಿಸಿರಿ"

ಇರಾ ಶ್ರೀ ಸೋಮನಾಥೇಶ್ವರ
ಯಕ್ಷಗಾನ ನಾಟಕ ಸಭಾ ಮಂಗಳೂರು

ಇವರ
ಈ ವರ್ಷದ ಅಮೋಘ ಕಲಾ ಕಾಣಿಕೆ

ಕನಕಲೇಖ

ಅಥವಾ

ವೀರಸೇನ ವಿಜಯ

ಹಿಮ್ಮೊಗಿಗೆ ಬರುವ ದಿನವನ್ನೂ ಕಾರೀಕನ್ನೂ ನಿರೀಕ್ಷಿಸಿರಿ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಸುಭಕ್ತವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-10 ಪೈಸೆ.

ರಿಯಾಯಿತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಕಡಿಮೆ ವೆಚ್ಚದಲ್ಲಿ

ಉಪ್ಪು ನೀರಿನ ಶುದ್ಧೀಕರಣ

ಪಿಟ್ಸ್‌ಬರ್ಗ್, ಏಪ್ರಿಲ್ 2— ಅಮೆರಿಕದ ಒಂದು ಕಂಪೆನಿ ಉಪ್ಪು ನೀರಿನ ಶುದ್ಧೀಕರಣಕ್ಕೆ ಹೊಸ ವಿಧಾನವೊಂದನ್ನು ಕಂಡುಹಿಡಿದಿದೆ. ಇದು ಕಡಿಮೆವೆಚ್ಚದ ವಿಧಾನವಾಗಿರುವುದರಿಂದ, ಎಲ್ಲೆಡೆಗಳಲ್ಲಿ ಬಳಕೆಗೆ ಇರುವ ಸಾಧ್ಯತೆಯಿದೆ ಎಂದು ನಿರೀಕ್ಷಿಸಲಾಗಿದೆ.

ಆಲ್‌ಅಲ್ಯಾಮಿನಿಯಂ ಕಂಪೆನಿ ಒಂದನ್ನು ಸಿದ್ಧಗೊಳಿಸಲಾಗಿದೆ ಎಂದು ಸೋಮವಾರ ಆರಿಸಿದ ಅಲ್ಯಾಮಿನಿಯಂ ಕಂಪೆನಿ (ಆಲ್ಕೋ) ಪ್ರಕಟಿಸಿದೆ. ಈ ಸಾಧನದಲ್ಲಿ ಉಪ್ಪು ನೀರು ಅಥವಾ ಕ್ಷಾರ ಮಿಶ್ರಿತ ನೀರನ್ನು "ಬಹು ಶುದ್ಧ ಜಲವಾಗಿ" ಪರಿವರ್ತಿಸಲು ಕೈಗಾರಿಕೆಗಳಲ್ಲಿ ನಿರ ಸಲ್ಪಡುವ ಗುವ ರಾಶಿಯನ್ನು ಉಪಯೋಗಿಸಿರುವುದು. ಇದು ಸಂಯೋಜಿಸಲ್ಪಟ್ಟಿದೆ ಎಂದು ಹೇಳಲಾಗಿರುವ ಸಮುದ್ರ ಜಲವನ್ನು ಶುದ್ಧಗೊಳಿಸಬಲ್ಲದು.

ಅಮೆರಿಕದಲ್ಲಿ ಬರುವ 15 ರಾಜ್ಯಗಳಿಗೆ ನಿರ್ಮಿಸಲಾಗುವ ಸಮುದ್ರ ಜಲ ಶುದ್ಧೀಕರಣ ಸ್ಥಾವರದಲ್ಲಿ ಇಂಥ ಕಾರ್ಯಾಚರಣೆ ಉಪಯೋಗಿಸಲಾಗುವುದು ಎಂದು ಆಲ್ಕೋದ ಅಧ್ಯಕ್ಷ ಮಿಸ್ಟರ್ ಡಿ. ಹೆ. ಹರ್ ಜೇಳಿದರು. ಈ ಹೊಸ ವ್ಯವಸ್ಥೆಗೆ ಈ ಕಾರಣಗಳಿಂದಾಗಿ ಅಂತರರಾಷ್ಟ್ರೀಯ ಮಹತ್ವವಿದೆ ಎಂದರವರು.

—ಇದು ಈಗ ಬಳಕೆಯಲ್ಲಿರುವ ಯಾವುದೇ ಬೃಹತ್ ವ್ಯವಸ್ಥೆಯಲ್ಲಿನ ಉತ್ಪಾದನೆಗಿಂತ ಕುಮಾರು ಅರ್ಧ ಅಧವ ಮೂರನೇ ಒಂದರ ವೆಚ್ಚದಲ್ಲಿ ಸ್ವಚ್ಛ ನೀರನ್ನು ಉತ್ಪಾದಿಸುತ್ತದೆ.

—ಇದರ ಎಲ್ಲ ಭಾಗಗಳ ರಚನೆ ಅಲ್ಯಾಮಿನಿಯಂನದಾಗಿದ್ದು ಚಲನಾಕ್ರಮ ಸರಳವಾಗಿರುವುದರಿಂದ, ಇತರ ಶುದ್ಧೀಕರಣ ವ್ಯವಸ್ಥೆಗಳಿಗಿಂತ ಬಹಳ ಕಡಿಮೆ ವೆಚ್ಚದಲ್ಲಿ ಕಾರ್ಯ ನಿರ್ವಹಿಸುವುದು.

(ಬಳಕೆಯಲ್ಲಿರುವ ಇತರ ವ್ಯವಸ್ಥೆಗಳ ಜಟಿಲವಾಗಿವೆ, ದುಬಾರಿ ವೆಚ್ಚದವುಗಳು ಸ್ಟೀಲ್, ಕಬ್ಬಿಣ— ಕೆಲ ಇದ ವ್ಯಾಟೇಟೇನಿಯಂ ಕೋಶಗಳಿಂದ ಸಿದ್ಧವಾಗಿವೆ.)

—ಸಾಂಪ್ರದಾಯಿಕ ಜಲಶುದ್ಧೀಕರಣ ವ್ಯವಸ್ಥೆಗಳು 20 ಡಿಗ್ರಿ ಫ್ಯಾರನ್‌ಹೀಟ್ (120 ಡಿಗ್ರಿ ಸೆಂಟಿಗ್ರೇಡ್) ನಲ್ಲಿ ಕಾರ್ಯನಿರ್ವಹಿಸುವುದಾದರೆ, ಈ ಹೊಸ ವ್ಯವಸ್ಥೆ ಅದಕ್ಕಿಂತ ಬಹು ಕಡಿಮೆ ಉಷ್ಣತೆಯಲ್ಲಿ ಕಾರ್ಯನಿರ್ವಹಿಸುವುದು. ಇದರಿಂದಾಗಿ ಕಾರ್ಯನಿರ್ವಹಣೆಯ ಜಾಗೂ ಆರ್ಥಿಕತೆ ವೆಚ್ಚಗಳು ಬಹು ಕಡಿಮೆಯಾಗುವುವು.

—ಕಲುಷಿತ ಉಂಟಾಗದ ನೀರಿನ ಸೂಚಿಕೆಯ ಸಿದ್ಧ ರಂಗೆ ಸಾಧ್ಯವಾಗುವುದು.

ಆಲ್ಕೋ ಸಂಸ್ಥೆಯು ನಾಲ್ಕು ವರ್ಷಗಳ ಹಿಂದೆ ಪ್ರಾಯೋಗಿಕ ಸ್ಥಾವರಗಳಲ್ಲಿ ಪ್ರಯೋಗಗಳನ್ನು ನಡೆಸಿದ ನಂತರ ಇದೀಗ ಈ ವ್ಯವಸ್ಥೆಯನ್ನು ಪ್ರಯೋಗ ಹಂತದಿಂದ ಹೊರಗೆ ತಂದು, ಬಳಕೆಗೆ ಕೊಡಿಗೊಳಿಸುತ್ತಿದೆ.

ಶುದ್ಧೀಕರಣ ವೆಚ್ಚಗಳು ಸಾವಿರ ಗ್ಯಾಲನ್‌ಗಳಿಗೆ 25 ರಿಂದ 50 ಸೆಂಟ್‌ಗಳನ್ನು

ಎಲ್ಲರೂ ಬಯಸುತ್ತಾರೆ

ಸದಾ ಹೊಸತನ್ನು ಕಾಣಬೇಕು

ಲೇಖಕರು: ಶ್ರೀ ಬಿ. ನರಸಿಂಗ ರಾವ್.

ಮನುಷ್ಯನಿಗೆ ದಿನವೂ ಉಂಟಾಗುವ ಅನುಭವಗಳು ವೈವಿಧ್ಯಪೂರ್ಣವೇ ಇದೆ. ಸಂಸಾರ ನಾಳೆಯಿಲ್ಲ. ನಾಳೆಯಂತೆ ನಿನ್ನೆಯೂ ಇರದು. ಆದರೂ ಆತನಿಗೆ ಕೆಲವು ಸ್ಥಿತಿ ಗೈದ ಕೆಲಸವನ್ನೆ ಗೈದು ತ್ತ, ಮಾಡಿದ ಮಾತನ್ನೇ ಹಾಡುತ್ತ, ಕಂಡದ್ದನ್ನೆ ಕಾಣುತ್ತ, ಪಡದ ಅನುಭವವನ್ನೇ ಪಡೆಯುತ್ತ ಮನಸ್ಸಿಗೆ ಬೇಸರ ತರಲುವುದಿದೆ.

ಉದಾಹರಣೆಗೆ ಓದಿ ಮಜೂರಿ ವಿಷಯ. ಅತ ಬೇಡಿಯನು. ಕಚ್ಚುವುದರಿಂದ ತನ್ನ ಹೆಂಡತಿ ಹೊರೆಯ ತ್ತಾನೆ. ದಿನವೂ ಬೆಳಗಾತ ಎದ್ದ ಕತ್ತರಿಯೊಂದನ್ನು ಕೈಗೆತ್ತಿ ಹಿಡಿದ. ಎಲೆಗಳನ್ನು ಕತ್ತರಿಸಿ, ಹೂಂತ್ರಿಕವಾಗಿ ಒಡಿಯನ್ನು ಕಟ್ಟುತ್ತಾನೆ ದಿನವೂ ಇದೇ ಕೆಲಸ. ಆದರೆ ಅಗುವುದು. ದಿನವೊಂದಕ್ಕೆ ಹತ್ತರಿಂದ ಐವತ್ತು ಲಕ್ಷ ಗ್ಯಾಲನ್‌ಗಳಷ್ಟು ಶುದ್ಧ ನೀರನ್ನು ಉತ್ಪಾದಿಸುವ ಸಾಂಪ್ರದಾಯಿಕ ಲವಣಜಲ ಶುದ್ಧೀಕರಣ ವ್ಯವಸ್ಥೆಗಳಲ್ಲಾದರೆ ಈ ವೆಚ್ಚ 85 ಸೆಂಟ್‌ಗಳಿಂದ ಒಂದು ಡಾಲರ್‌ವರೆಗಾಗುವುದು ಎಂದು ಆಲ್ಕೋದ ವಿಜ್ಞಾನಿಗಳು ಹೇಳುತ್ತಾರೆ.

ಹೆಚ್ಚು ಕಡಿಮೆಯಿಲ್ಲ ಅತಿಶಯ ಮೇವ ನಡೆ ಹೊಂತ್ರಿಕವಾಗಿ ಕಾಣ ತ್ತದೆ. ಗೈದ ಕೆಲಸವನ್ನೇ ಗೈಯುವುದು. ಅತನಿಗೆ ಅಡುಗೆ, ಧಾರಾಳಿಸ್ಥ, ಸಂಜೆ ಮಾಡಲು ಕಾರಣ ಗತ್ತದೆ. ಹಾಗೆ ಹೋಡಿದರೆ ಗ್ರಾಹಿಯೊಬ್ಬನ ಬಾಳೂ ಯಂತ್ರ, ಇದೇ ಕಾರ್ಯಕ್ರಮಗಳು. ಆಫೀಸ್ ಮೆನೇಜರ್ ಇರಲಿ ದೇವಸ್ಥಾನದ ಅರ್ಚಕರಿರಲಿ, ಹೋಟೆಲು ಮಾಲೆಯಿರಲಿ, ಎಲ್ಲರಿಗೂ ದಿನವೂ ಎಂದಿನ ದುಡಿಮೆಯನ್ನೇ ದುಡಿಯಬೇಕು.

ಈ ಯಾಂತ್ರಿಕ ದುಡಿಮೆಯು ಮನುಷ್ಯನ ಮನಸ್ಸಿಗೆ ಶಾಂತಿ, ಬೇಸರ ನೀಡುತ್ತದೆಂದೆನಲ್ಲ? ಅದಕ್ಕೆ ಪರಿಹಾರವಿಲ್ಲವೆ? ಇದೆ. ಎಲ್ಲಿ? ನಾವೇ ಅದಕ್ಕೆ ಪರಿಹಾರ ಗೈಯಬೇಕು.

ದಿನವೂ ನಾವು ಜೀವನದಲ್ಲಿ ಹೊಸತನ್ನು ಕಾಣಲು ಶ್ರಮಿಸಬೇಕು. ಮನಸ್ಸಿಗೆ ಅಗಲೇ ಉತ್ಸಾಹ. ನಾವು ದುಡಿಯುವ ಕಾರ್ಯಕ್ಷೇತ್ರದಲ್ಲಿ ಸ್ಫೂರ್ತಿಯಿಂದ, ಮನಸಿಟ್ಟು, ನಮ್ಮ ಕೆಲಸವನ್ನು ಪ್ರೀತಿಸಿ ದುಡಿಯಬೇಕು. ಆಗಲೇ ಈ ಯಾಂತ್ರಿಕ ಜೀವನದಲ್ಲಿ ಸೊಬಗು; ಸೌಂದರ್ಯ.

ದಿನವೂ ಹೋಟೆಲು ಊಟ ಉಂಡವನಿಗೆ ಮನೆಯ ಊಟದ ರುಚಿ ಬಹಳ ಚೆನ್ನು. ಅಂತೆಯೇ ತದ್ವಿರುದ್ಧವಾಗಿ, ಮನೆಯ ಅನುದಿನವೂ ಉಣ್ಣುವಾತನಿಗೆ ಹೋಟೆಲಿನ ಅನ್ನಕ್ಕೆ ಮೋಕ. ಇದು ವಿಶ್ವದ ಕ್ರಮ. ಒಂದು ಪರಿವರ್ತನೆ, ವೈವಿಧ್ಯತೆಯನ್ನೆಲ್ಲರೂ ಬಯಸುತ್ತಾರೆ. ಊರಿನಲ್ಲಿ ಕೊಳೆಯುವಾಗ ಪರಊರಲ್ಲಿದ್ದರೆ ಸುಖವಿತ್ತು ಎಂದು ತೋರಿದ್ದಿದೆ. ಪರಊರಿಗೆ ಬಂದಾಗ ಊರಿನ ಸೊಬಗಿನ ಬಗ್ಗೆ ಆಕರ್ಷಣೆ ಹೊಗುವುದಿದೆ.

ಎಷ್ಟೂ ಮನುಷ್ಯನ ಮನಸ್ಸನ್ನು ಹೊಂದಿಕೊಂಡಿದೆ. ವನವೆಂಬುದೊಂದು ಮುಕ್ತಿಯಂತೆ. ಮನಸ್ಸಿಗೆ ಶಾಂತಿ ಬೇಕಾದರೆ ದೈನಂದಿನ ಬಾಳಿನಲ್ಲಿ ವೈವಿಧ್ಯ ಕಾಣಬೇಕು. ಕಾಯಕವೇ ಕೈಲಾಸವೆಂದು ದುಡಿಯ ಬೇಕು. ನಮ್ಮ ದೈನಂದಿನ ಕಾಯಕ ಕ್ರಮದಲ್ಲಿ ಅಗಾಗ ವೈವಿಧ್ಯತೆಯನ್ನು ಕಂಡೊಡ್ಡಬೇಕು. ಕೆಲವೊಮ್ಮೆ ಸ್ಥಳ ಬದಲಾವಣೆಗಾಗಿ ಪ್ರಯಾಣ ಗೈಯ್ಯಬೇಕು. ಹೊಸ ಮನುಷ್ಯರ ಸಂಪರ್ಕ ಪಡೆಯ ಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ನಾವು ವಿಶ್ವವನ್ನು ಕಾಣ ವ, ಜಾನನ್ನು ಈಕ್ಷಿಸುವ ದೃಷ್ಟಿಗಳಲ್ಲಿ ಹೊಸತನವಿರಬೇಕು. ಆಗಲೇ ಬಾಳು ವೈವಿಧ್ಯಮಯ, ಆನಂದಮಯ.

ಶಿಕ್ಷಣ ನೀತಿ

ಶಿಕ್ಷಣದ ನೀತಿ ಸಿದ್ಧವಾಗುತಿಹುದು
ರಕ್ಷಣೆಯ ಭಾರವದು ತಲೆ ತಿನ್ನುತಿಹುದು
ಸಿದ್ಧವಾಗಿದೆ ಕರಡು ಶಿಕ್ಷಣದ ನೀತಿ
ಅಧಿವೇಶನದ ಚರ್ಚೆ ಕೊಡುವುದು

ಚಮತ್ಕಾರ

— ಮ. ಗೋ. ರಾಮ

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ಸಂಪೂರ್ಣವಾಗಿ ವಿಶೇಷ ಸಂಪುಟಗಳಿವೆ

ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

NAVAYUGA 25—4—1968
Registered with the Registrar of News Papers for India under No. R. N. 3546/'57

REGD. No. B. G. 176
LICENCE No: 31
Licensed to Post without Prepayment

ಲಘುಹರಟೆ

ಟೀಮಿಲ್ಲಾರೀ

ಲೇಖಕರು: ಶ್ರೀ ಶ್ರೀಪತಿಚಂದ್ರ ಹೆಜ್ಜಾಡಿ

"ಕಾಲಾಯ ತಸ್ಮೈ ನಮಃ" ಕೈಮುಗಿಯಬೇಕಾದ್ದೇ. ಈ ಕಾಲಾನೂ ಬಂತಲ್ಲಾ. ಅಲ್ಲಿದಿದ್ದರೆ ಯಾರನ್ನು ಕೇಳದಲ್ಲಾ, "Sorry, ಬಹಳ busyಯಾಗಿದ್ದೇನೆ, ಪುರ್ಸೊತ್ತಿಲ್ಲ. ಇನ್ನೊಂದ್ಸಲ ಮಾತ್ನಾಡೋಣ, ನಮಗೆ ಅಜರ್ಂಟ್ ಕೆಲಸವಿದೆ, ಬಶ್ರೀನಿ, ನಮಸ್ಕಾರ." ಈ ಚಮತ್ಕಾರದ ನಮಸ್ಕಾರಗಳಿಗಂತೂ ಬರಗಾಲವಿಲ್ಲ.

"ಅಯ್ಯೋ, ಪರೀಕ್ಷೆ ಹತ್ತಿರ ಬಂತು. ಓದೋಕೆ ಟೈಮಿಲ್ಲ. ಒಂದು ಪಿಕ್ಚರ್ ನೋಡೋಕಾದ್ರೂ ಟೈಮಿದೆಯೇ?" ವಿದ್ಯಾರ್ಥಿಗಳ ಅನ್ವೇಷ್ಟೆ.

"Good morning sir, ಸರ್ ನೀವು ನಿನ್ನೆ ಹೇಳಿದ ಪಾಠ ಸರಿಯಾಗಿ ಅರ್ಥವಾಗ್ಲಿಲ್ಲ. ಸ್ವಲ್ಪ ಹೇಳಿ ಕೊಡ್ತೀರಾ? ನಮಗೆ ಸರಿಯಾಗಿ ಓದೋದಕ್ಕೆ ಟೈಮಿರಲಿಲ್ಲ, ಹ್ಹಿ ಹ್ಹಿ ಹ್ಹಿ...."

"ಟೀಮಿಲ್ಲಾರೀ, ನನಗೆ ಬೇರೆ ಕೆಲಸ ಇಲ್ಲಾಂತ ಎಣಿಸಿದ್ದೀರಾ? ನಿಮಗರ್ಥವಾದರೆ ಪ್ರಾಣ ಹೊಣೆಯೇ? ಬೇಕಿದ್ರೆ ಪ್ರೈವೇಟಾಗಿ ಟ್ಯೂಶನ್ ತೆಗೆದುಕೊಳ್ಳಿ (ಧರ್ಮಕ್ಕೋ?) ಅದೇ ಮೇಷ್ಟ್ರು ಪಾಠ ಅರ್ಥವಾಗದೇ ಇದ್ದವರು 'ಸ್ಟಾಫ್‌ರೂಂ'ಗೆ ಬಂದು ಯಾವ ಹೊತ್ತಿನಲ್ಲೂ ಕೇಳಿಕೊಂಡು ಹೋಗಬಹುದು ಎಂದಿರಬೇಕೇ?

"ಏನೇ, ವಿಷ್ಯಾಡ್ತಾ ಇದ್ದಾ, ಗಂಟೆ ಎಂಟಾದ್ರೂ ನಿನ್ನ ಕೆಲ್ಸನೇ ಮುಗೀಲಿಲ್ಲಾ. ಆಫೀಸಿಗೆ ಹೋಗೋದಕ್ಕೆ ಹೊತ್ತಾಯ್ತು, ನಿನ್ನ ಕಾಫಿಯಾಗುವ ವರೆಗೆ ಕುಳಿತುಕೊಳ್ಳೋದಕ್ಕೆ ನಮಗೆ ಟೈಮಿಲ್ಲ."

"ಎಷ್ಟು ಹೊತ್ತಿನಿಂದ ಬಡಕೊಳ್ತಾ ಇದ್ದೀರಿ, ನಿಮಗೆ ಆಫೀಸಿಗೆ ಹೋಗೋದೊಂದೇ ಗೊತ್ತು. ಲೇಟಾಗುತ್ತೆ, ಲೇಟಾಗುತ್ತೆ. ಹ೸ೀ ಸೌದೆ ತಂದು ಹಾಕಿದ್ರೆ ಒಲೆ ಉರಿಸಬೇಕಲ್ಲಾ? ಹ೸ೀ ಸೌದೆ ಉರಿಸೋಕೆ ಕೆಲ್ಸಕ್ಕೆ ಬಂದ ಇಟ್ಟಿದ್ದೀರಾ? (ಕೆಲ್ಸದವಳು ಮಾಳ್ಳಳ್ಳಲ್ಲ.) ಈ ಮಕ್ಕಳನ್ನು ನೋಡಿಕೊಳ್ಳೋದಕ್ಕೇ ನನ್ಗೆ ಟೈಮಿಲ್ಲ. ಅದ್ರೊಂದಿಗೆ ನಿಮಗೆ ಈ ಬೆಳಗ್ಗಿನ ಕಾಫಿಯಂತೆ ಕಾಫಿ."

"ಈ ಶನಿ ಎಲ್ಲಿ ಗಂಟುಬಿತ್ತಪ್ಪಾ. ಹಳೇ ಮೇನೇಜರರ ಕಾಲದಲ್ಲಾದ್ರೆ ಆರಾಮವಾಗಿ ತಿರುಗಾಡಲು ಸಮಯ ಸಿಗುತ್ತಿತ್ತು. ಈ ಶನಿ ಬಂದ ಮೇಲೆ ಒಂದು ಸಿಗರೇಟು ಸೇದೋದಕ್ಕೂ ಟೈಮಿಲ್ಲಾ ಅಂತೀನಿ."

"ನನ್ನ ಸಮಯ ಅಮೂಲ್ಯವಾಗಿದೆ" ಬೋರ್ಡೊಂದನ್ನು ಹಾಕ್ಕೊಂಡು ಬಿಟ್ಟಿದ್ದಾರಲ್ಲಾ ಮೇಜಿನ ಮೇಲೆ. ಯಾರ ಸಮಯ ಅಮೂಲ್ಯವಾಗಿದೆ (ಅದನ್ನು ಓದುವವರದಿರಬೇಕು!) ಈ ಮೇನೇಜರ್‌ಗಿರಿ ಬಂದುಬಿಟ್ರೆ ಸಾಕ! ಟೆರೆರಿನ್ ಸೂಟ್ ಹಾಕ್ಕೊಂಡು ಕುರ್ಚಿಯಲ್ಲಿ ಕುಳ್ಳಿರಿಸಿದರೆ ಸಾಕು, "ಓ! ಬಹಳಾ ಪರವಾಗಿಲ್ಲ. ಒಳ್ಳೆ ರಸಿಕನ ಹಾಗಿದೆ" ಎಂದ್ಕೊಂಡು ಎಷ್ಟು ಲೇಡೀ ಟೈಪಿಸ್ಟ್‌ಗಳು ಬೇಕ್ರೀ ನೋಡಿನ ಮುಂದೆ. (ಗಂಟೆಬಟ್ಟೆ ಪಟ್ಟಾಂಗ ಹೊಡೆಯೋದಕ್ಕೆ!) ಅದೇ ಸಮಯವರಿತು ಇನ್ನಾರಾದ್ರೂ ಆತನ ಕೋಣೆ ಪ್ರವೇಶಿಸಿದರೆ ಸಾಕು, ಆತನ ಗ್ರಹಚಾರವೆಲ್ಲಾ ಬಿಟ್ಟು ಓಡಿ ಹೋಗಬೇಕು. "ಏನ್ರೀ, ನಿಮಗೆ ಕಣ್ಣು ಕಾಣೋದಿಲ್ವಾ. ಈ ಬೋರ್ಡು ಹಾಕಿರೋದು ಯಾಕ್ರೀ? ಮನುಷ್ಯನಿಗೆ ಸಮಯದ ಬೆಲೆ ಏನು ಅನ್ಗೋದು ಗೊತ್ತಿರಬೇಕ್ರೀ. ಹೊರಟು ಹೊಗ್ರೀ ಇಲ್ಲಿಂದ, ಆ ಮೇಲೆ ಬನ್ನಿ." ಮಳೆಗಾಲದ ಕುಡುಗಿನಂತೆ ಹೊರಡುತ್ತದೆ ಮಾತಿನ ಪ್ರವಾಹ (ಸ್ತ್ರೀ ರಾಜ್ಯದ ಮಧ್ಯದಲ್ಲಿ).

"ಇಂದಿನ ಈ ತುರ್ತು ಪರಿಸ್ಥಿತಿಯಲ್ಲಿ (ಒಮ್ಮೆ ಕೆಮ್ಮುತ್ತಾ) ನಾವು ಏನು ಮಾಡಬೇಕೆಂದರೆ ಮೊತ್ತ ಕಡಿಮೆ ಮಾಡಬೇಕು (ನೂರ ಒಂದನೇ ಬಾರಿ) ಕಾರ್ಯಮಗ್ನರಾಗಬೇಕು. ಕರ್ತವ್ಯವಿಮುಖರಾಗಬಾರದು. ರಾಷ್ಟ್ರವು ಗಂಡಾಂತರ ಪರಿಸ್ಥಿತಿಯಲ್ಲಿರುವಾಗ, ಭಾಷಾ ಗೊಂದಲ, ಆಗೊಂದಲ, ಈ ಗೊಂದಲ ಮೊದಲಾದ ಅಂತಃಕಲಹಗಳಿಗೆ ನಾವು ಎಡೆಕೊಡಬಾರದು. ಆಹಾರದ ಉತ್ಪಾದನೆ ಹೆಚ್ಚಬೇಕು. ಸರಕಾರಕ್ಕೆ ನಮ್ಮ ಕೈ (ಕೊಡಬೇಕು)ಲಾದ ಸಹಾಯ ಮಾಡಬೇಕು. ಅಲ್ಪಸಿಗಳಾಗಿ ಕುಳಿತುಕೊಳ್ಳಲು ನಮಗೆ ಟೈಮಿಲ್ಲ. ನಿಮ್ಮ ಅಮೂಲ್ಯ ಸಮಯವನ್ನು ಹಾಳು ಮಾಡಿ ನನ್ನ ಭಾಷಣ ಕೇಳಲು ನಿಮಗೆ ಟೀಮಿರಲಿಕ್ಕಿಲ್ಲ. ಆದ್ದರಿಂದ ನನ್ನೀ ಚಿಕ್ಕ ಭಾಷಣವನ್ನು (ಸೈಕ್ಲೋಸ್ಟೈಲ್ ಬರೆದು ಕೊಟ್ಟೆ) ಜೊತ್ಕಾಗಿ ಮುಗಿಸುತ್ತೇನೆ. ಏಕೆಂದರೆ ನನಗೆ ಹೆಚ್ಚು ಹೊತ್ತು ಭಾಷಣ ಮಾಡಲು ಟೈಮಿಲ್ಲ." ಭಾಷಣ ಭೈರವರ ಒಡ್ಡೋಲಗ ಮುಗಿಯಿತು. ಜನ ಚದುರಿದರು.

"ನಮಸ್ಕಾರ ಸ್ವಾಮಿ..... ನಿಮ್ಮ ಮುಂದಿನ ಕಾದಂಬರಿ ಯಾವುದ್ರೀ? ಅಚ್ಚಿನಲ್ಲಿದೆಯೋ ಅಥವಾ ಇನ್ನೂ ಬರೆಯುತ್ತಾ ಇದ್ದೀರಾ?"

"ಏನು ಬರೆಯೋದ್ರೀ ಮಣ್ಣು, ಕಾದಂಬರಿ ಬರೆದ್ರೆ ಏನು ಸಿಗುತ್ತೆ? (ಮಣ್ಣು!) ಹೊಟ್ಟೆ ತುಂಬಬೇಕಲ್ಲಾ? ಬರೆಯೋಕೆ ಸಮಯಾನೂ ಇಲ್ಲ. ಮನೇ ತುಂಬ ಪತ್ರಿಕೆಗಳೇ ಹೆಚ್ಚಾಗಿದೆ. ಮುಖ್ಯವಾಗಿ ಕಾದಂಬರಿ ಬರೆಯುವುದಕ್ಕೆ ಧಾರಾಳವಾಗಿ ಟೈಮಿರ ಬೇಕ್ರೀ, ಟೈಮು."

ವಿಜ್ಞಾನದ ಪ್ರಗತಿಯಿಂದ ಜಗತ್ತು ಹತ್ತಿರವಾಗಿದೆ. ಶಿಕ್ಷಣದಿಂದ ಮಾನವ ಪ್ರಗತಿ ಪ್ರಥಮ ಸೋಪಾನದ್ದಾನೆ(ಅಂತೆ). ಅದೇ ವೇಗದಲ್ಲಿ ಆತನ ಸಂಸ್ಕೃತಿ ಮುಂದುವರಿದಿಲ್ಲ ಎಂದು ಕೆಲವು ಬುದ್ಧಿಜೀವಿಗಳವಾದ (ನಿಜವಿರಬೇಕು.) ಪ್ರತಿಯೊಬ್ಬರಲ್ಲೂ ಕಂಡುಬರುವ ಸಮಸ್ಯೆ, ಸಮಯದ ಅಭಾವ. ಎಲ್ಲಿ ನೋಡಿದ್ರೂ ಅವಸರ. ಗುಲ್ಲು. ಇದರಿಂದ ಮಾನವ ಸಂತೋಷವಾಗಿದ್ದಾನೆಯೇ? (ಇನ್ನು ವಿಚಾರಿಸಬೇಕಷ್ಟೆ.) ಹಿಂದಿನವರು ಶಾಂತ ಸ್ವಭಾವದವರಂತೆ. ಸಹನ ಶೀಲರಂತೆ, ಅವಸರದ ಪ್ರಕೃತಿಯವರಲ್ಲ ವಂತೆ. ಅವರು ಸಂತೋಷವಾಗಿದ್ದರಂತೆ. ಇರುವ ಅತ್ಯಲ್ಪ ಆಯುಷ್ಯವನ್ನು ಯೋಗ್ಯ ರೀತಿಯಲ್ಲಿ ವಿನಿಯೋಗಿಸುವ ಕಲೆಯನ್ನು ಪ್ರತಿಯೊಬ್ಬ ಮಾನವನೂ ಕಲಿಯಬೇಕಾದುದು ಅವನ ಕರ್ತವ್ಯಗಳಲ್ಲೊಂದು ಎಂದು ಬುದ್ಧಿಜೀವಿಗಳು ಸೂಚಿಸುತ್ತಲೇ ಇದ್ದಾರೆ.

ಏನ್ ಸ್ವಾಮಿ, ಈ ಹಲೆಹರಟೆ ಓದೋದಕ್ಕೆ ಟೀಮಿಲ್ಲಾರೀ ಅಂತೀರಾ? ನಿಮಗೆ ಉತ್ತರಿಸೋಕೆ ನನ್ಗೂ ಟೈಮಿಲ್ಲ.'

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕೈಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿ, ದರ್ಭಾಯೆಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮುಖ್ಯವಾಗಿ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ. ಹೊಸದೆ ವಿಧಾನ ಸರಿಸ್ಥಾಳವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರತಿಯರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ತಾಯಿ—ಮಗು

ಅಮ್ಮಾ.... ಅಮ್ಮಾ.... ಅಮ್ಮಾ....
ಎಂದು, ಅಳುತ ಬರುವ ಕಂದನನ್ನ
ಓಡೋಡಿ ಬಂದು; ನನ್ನ ಚಿನ್ನಾ
ಅಳುಹೆ ಏಕೆ? ಎನುತ ಬರಸೆಳೆದು
ಮುತ್ತಿಟ್ಟು ತೊಡೆಯ ಮೇಲೆ ಮಲಗಿಸಿ
ಸೆರಗನ್ನ ಹೊಚ್ಚೆ
ಕುಪ್ಪಸವ ಬಿಚ್ಚಿ
ಎದೆಯನ್ನಾ ತೆರೆದು
ಬಾಯೊಳಗಿಡಲು
ಅತುರಾತುರವಾಗಿ ಚಪ-ಚಪ
ಹಾಲನುಂಡು, ಸೆರಗಿಂದ
ಹೊರ ಬಂದು ನಳುನಕ್ಕು ಮತ್ತೆ ಸೆರಗನ್ನ
ಸೇರಿ, ಮತ್ತೊಮ್ಮೆ ಹೊರಬಂದು
ಹೊಟ್ಟೆ ತುಂಬಿದಾ ಮಡದಲ್ಲಿ
ತಾಯಿಯಾ ಕೊರಳಲಿರುವ ಸರವನ್ನ
ತನ್ನ ಮಿದುವಾದ ಬೆರಳಿಂದ ಎಳೆವುದು;
ಮುಖವನ್ನು ಪರಚುವುದು
ನಾಕು ಚಿನ್ನಾ...ಚಿನ್ನಾ.... ಎಂದು
ಮತ್ತೊಮ್ಮೆ ಮುತ್ತಿಟ್ಟು ಅಪ್ಪಿ
ಅಲಿಂಗಿಸುವಳು ತಾಯಿ!

—'ಮೆಲ್ಲಾರಿ

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udupi, S. India

| | | |

The Splendour

of Silk

FROM THE MYSORE GOVT SILK WEAVING FACTORY
IS
UNRIVALLED

VIBRANT COLOURS
EXQUISITE DESIGNS
EXCLUSIVE QUALITY

Mysore Government
Silk Weaving Factory

MANANTHODY ROAD, MYSORE-4

ಫೋನ್ : 526
ಸಂಪುಟ ೪೭
ಸಂಚಿಕೆ ೩೫

ನಾಗರಿಕ

ಸ್ಥಾಪಕರು:
ದಿ ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಬಸವೇಶ್ವರರ ಎನೇ ಶತಮಾನೋತ್ಸವ, ಅಕಾಡೆಮಿಯ ರಜತ ಮಹೋತ್ಸವ ಸಂಚಿಕೆ ೧೯೬೮

ಡಾ॥ ಪೈ ಮತ್ತು ಎಕೆಡೆಮಿ

ನೆನ್ನೆಲ್ಲಿ ಕನಸು ಕಾಣುವವರು ಬಹಳ ಮಂದಿ. ಆದರೆ ಅದನ್ನು ನನಸಾಗಿಸುವಲ್ಲಿ ಪ್ರಯತ್ನಿಸುವವರು ಬಹಳ ಅಲ್ಪ. ಯೋಜನೆಗಳನ್ನು ರೂಪಿಸಲು ಈ ದೇಶದಲ್ಲಿ ಜನಗಳಿಗೆ ಕೊರತೆ ಇಲ್ಲ. ಆದರೆ ಅದನ್ನು ಕಾರ್ಯಗತಗೊಳಿಸಲು ಯತ್ನಿಸುವವರ ಸಂಖ್ಯೆ ಕಡಿಮೆ. ಆದರೆ ಡಾ॥ ಪೈರವು ಕನಸನ್ನು ಕಾಣಲಿಲ್ಲದೆ; ಅದನ್ನು ನನಸಾಗಿಸಿದ್ದರು. ಯೋಜನೆಗಳನ್ನು ರೂಪಿಸುವುದರ ಜತೆಗೆ ಅವನ್ನು ಕ್ಷಿಪ್ರದಲ್ಲೇ ಕಾರ್ಯಗತಗೊಳಿಸಬಲ್ಲರು.

ದೇಹದ ಜಾಡ್ಯಕ್ಕೆ ಔಷಧಿ ಕೊಡುವ ಡಾ॥ ಪೈಗಳು ಈ ದೇಶದ ಜಾಡ್ಯಕ್ಕೆ ಔಷಧಿ ಕೊಡುವುದರಲ್ಲಿ ನಿರತರಾಗಿದ್ದಾರೆ.

ಬಡತನ, ನಿರಕ್ಷರತೆಗಳಿಂದ ಕಂಗಾಲಾಗಿರುವ ಈ ದೇಶ ಕಟ್ಟಲು ಅವರು ತನ್ನದೇ ಆದ ಯೋಜನೆಗಳನ್ನು ರೂಪಿಸಿ, ಕೃತಕೃತ್ಯರಾಗಿದ್ದಾರೆ. ಅವರ ದೂರಾಲೋಚನೆಯು, ಜಾಣ್ಮೆ ಪ್ರತಿಭೆಯ ದ್ಯೋತಕ ಇಂದು ಮಣಿಪಾಲದಲ್ಲಿ ತಲೆಯೆತ್ತಿ ಫಿಂತಿರುವ ಸಂಸ್ಥೆಗಳು ಜಾಣ್ಮೆ ವಿದ್ಯಾಲಯಗಳು. ಅವುಗಳಲ್ಲಿ ಮುಖ್ಯವಾದುದು ಎಕೆಡೆಮಿ ಆಫ್ ಜನರಲ್ ಎಜುಕೇಶನ್.

೨೫ ವರ್ಷಗಳ ಹಿಂದೆ ಒಂದೆರಡು ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದ್ದ ಎಕೆಡೆಮಿ ಭವಿಷ್ಯದಲ್ಲಿ ೧೦ ಕಾಲೇಜುಗಳನ್ನೂ, ಪಲವಾರು ಹೈಸ್ಕೂಲುಗಳನ್ನೂ ತೆರೆದು ವಿದ್ಯಾ ಕ್ಷೇತ್ರದಲ್ಲಿ ಒಂದು ಪವಾಡವನ್ನೇ ನಿರ್ಮಿಸುವುದೆಂದು ಯಾರು ಊಹಿಸಿದ್ದರು? ಊಹಿಸಿದ್ದವರಿದ್ದರೆ ಅದು ಡಾ॥ ಪೈಗಳು ಮಾತ್ರಾ. ಅವರ ದೂರದೃಷ್ಟಿ ಹಾಗೂ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವ ಕೌಶಲ್ಯ ಅವರ ಅಮೂಲ್ಯ ಸೊತ್ತು. ಅವರ ದಕ್ಷ ಹಾಗೂ ಪ್ರಾಗತಿಕ ಮನೋಭಾವದ ನಾಯಕತ್ವದಲ್ಲಿ ಎಕೆಡೆಮಿ ಇಂದು ರಜತೋತ್ಸವವನ್ನು ಆಚರಿಸುವ ಸುಯೋಗ ಕಂಡಿದೆ.

ಎಕೆಡೆಮಿಯ ಸಂಸ್ಥೆಗಳನ್ನು ಪ್ರಜ್ಞೆಯುಳ್ಳ ಯಾರೊಬ್ಬನೂ ಅಲ್ಲಗಳೆಯುವಂತಿಲ್ಲ. ಮಣಿಪಾಲದಲ್ಲಾದ ಪ್ರಗತಿ, ಖಾಸಗಿ ಪ್ರಯತ್ನವು ದೇಶ ಕಟ್ಟುವುದರಲ್ಲಿ ಹೇಗೆ ನೆರವಾಗ ಬಲ್ಲುದೆಂಬುದಕ್ಕೆ ಜೀವಂತ ಪ್ರಾದೇಶಿಕ. ಜನರ ಸಹಕಾರದಿಂದ ಜನಂಗಾಗಿ ಬೇಕಾಗುವ ಸೌಕರ್ಯಗಳನ್ನೊದಗಿಸುವುದೇ ಡಾ॥ ಪೈಗಳ ಯೋಜನೆಗಳ ಗುಟ್ಟು. ಅವರು ತನ್ನ ಕಾರ್ಯಾರಂಭದಲ್ಲಿ ಎಂಟೆದೆಯ ಬಂಟರಂತೆ ಬಂದ ಎಡರು ತೊಡರುಗಳನ್ನು ಎದುರಿಸಿ, ಟೀಕೆ ಟಿಪ್ಪಣಿಗಳನ್ನು ಅಪಹಾಸ್ಯಂದು ಸಮಭಾವಕ್ಕೆ ತಂದುಕೊಳ್ಳದೆ ಕರ್ತವ್ಯ ನಿಷ್ಠೆಯಿಂದ ಮುಂದುದರು. ಜನರ ಟೀಕೆಗಳಿಗೆ ಕಿವಿಗೊಡುತ್ತಿದ್ದರೆ ಪ್ರಾಯಶಃ ಅವರು ಇಂದು ಬಹುತೇಕ ವಿದ್ಯಾಸಂಸ್ಥೆಗಳನ್ನು ಮುಚ್ಚಬೇಕಾಗುತ್ತಿತ್ತು.

ಖಾಸಗಿ ಪ್ರಯತ್ನದಲ್ಲಿ ಸಮಗ್ರ ಭಾರತದಲ್ಲಿ ಮೊತ್ತಮೊದಲು ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸರ್ವ ಪ್ರಥಮವಾದ ಈ ಯೋಜನೆಯ ನಿರ್ವಾಹಕನಲ್ಲಿ ಆದೆಷ್ಟು ಧೈರ್ಯ ಎದೆಗಾರಿಕೆ ಇರಬೇಡ?

ಎಕೆಡೆಮಿಯ ವಿದ್ಯಾಸಂಸ್ಥೆಗಳಾದರೂ ಅತ್ಯುಚ್ಚ ಮಟ್ಟವನ್ನು ಕಾಯ್ದುಕೊಂಡು ಬಂದಿವೆ. ಡಾ॥ ಪೈಗಳು ಈ ಕಟ್ಟಿನಲ್ಲಿ ಕಟ್ಟಿನಿಟ್ಟು. ಅತ್ಯುತ್ತಮಅಧ್ಯಾಪಕ ವರ್ಗ, ಸಲಕರಣೆಗಳು, ಕಟ್ಟಡಗಳು ಎಕೆಡೆಮಿ ವಿದ್ಯಾಸಂಸ್ಥೆಗಳು ಪಡೆದು ಬಂದ ಭಾಗ್ಯ. ಶಾಲೆ ಕಾಲೇಜುಗಳನ್ನು ತೆರೆದಂತೆ ಅವುಗಳ ಉಚ್ಚ ಮಟ್ಟವನ್ನು ಅವರು ಕಾಯ್ದುಕೊಂಡು ಬಂದಿದ್ದಾರೆ. ಇದು ಮೆಚ್ಚತಕ್ಕ ವಿಷಯ.

ಎಕೆಡೆಮಿಯ ಕುರಿತು ಇಂದು ಇರುವ ಟೀಕೆ ಒಂದೇ. ಅದು ಕ್ಯಾಪಿಟೇಶನ್ ಶುಲ್ಕದ ಕುರಿತಾದ ಟೀಕೆ. ಈ ಟೀಕೆ ಈ ಕಾಲೇಜುಗಳು ಹುಟ್ಟಿಕೊಂಡಾಗಲೇ ಇತ್ತು. ಅದನ್ನೇ ಒಂದು ಅಸ್ತ್ರವಾಗಿ ಎಲ್ಲರೂ ಬಳಸಿ ಪ್ರಯೋಗಿಸುತ್ತಿದ್ದರು. ವಿದ್ಯಾರ್ಥಿಗಳ ತಂದೆ ತಾಯಂದಿರು, ತಮ್ಮ ಮಕ್ಕಳಿಗಾಗಿ, ತಾವೇ ಖಾಲು ಮಹಿಸಿ ವಿದ್ಯಾಸಂಸ್ಥೆ ಕಟ್ಟಿದರೆ ಯಾರಿಗೆ ಯಾವ ನಷ್ಟವಾಗುವುದೋ ತಿಳಿದಿಲ್ಲ. ಸೀಟುಗಳ ಮಾರಾಟವಾಗುತ್ತಿದೆ ಎಂದರೆ, ಕಾಲೇಜುಗಳ ಪ್ರವೇಶಕ್ಕೆ ವಿಶ್ವವಿದ್ಯಾಲಯ ಫಿಬಂಧಿಸಿದ ಕಟ್ಟುಕಟ್ಟಳೆಗಳಿವೆ; ಅರ್ಹತೆಯ ನಡೆಸುವವರೂ ವಿಶ್ವವಿದ್ಯಾಲಯದವರು; ಡಿಗ್ರಿ ಕೊಡುವವರೂ ಅವರೇ. ಹಾಗಿರುವಾಗ ಸೀಟು ಪಡೆಯಲು ಶುಲ್ಕ ವಸೂಲು ಮಾಡಿದರೆ ಯಾವ ತಪ್ಪಾಗುವುದೋ ತಿಳಿಯದು. ಸರಕಾರೀ ಮೆಡಿಕಲ್ ಕಾಲೇಜುಗಳಲ್ಲಿ ಕಾಳ ಸಂತೆಯಲ್ಲಾದ ಸೀಟು ಮಾರಾಟದ ಅಧಿ ಕೇಳಿದರೆ, ಸರಕಾರದ ವಿರುದ್ಧ ಈ ಕುರಿತು ದಾಖಲಾದ ರಿಟ್ ಪಿಟಿಶನ್‌ಗಳನ್ನು ಎಣಿಸಿದರೆ ಇದಕ್ಕೇ ನೆನ್ನೋಣವಾ ?

ಎಕೆಡೆಮಿಯ ಕ್ಯಾಪಿಟೇಶನ್ ಫೀ ಪದ್ಧತಿಗೆ ಬಾಕಿ ಮಾಡುವ ಮಂದಿ, ಅದರ ಶಿಕ್ಷಣ ಸಂಸ್ಥೆಗಳ ಉಚ್ಚ ಮಟ್ಟದ ಕುರಿತು ಚಕಾರ ಶಬ್ದವೆತ್ತುವುದಿಲ್ಲ. ಬಾಕಿ ಮಾಡಬೇಕೆಂಬವನಿಗೆ ಹತ್ತು ಹಲವು ದಾರಿಗಳಿವೆ, ಆದರೆ ಆ ಟೀಕೆ ಕ್ರಿಯಾತ್ಮಕವಾದುದಾಗಿರಬೇಕು. ಅದರೆ ಈ ನೀತಿ ಎಕೆಡೆಮಿಯ ಟೀಕಾಕಾರರು ತಿಳಿಯುವವರಾಗಿದ್ದಾರೆ.

ರಜತ ಮಹೋತ್ಸವವನ್ನು ಆಚರಿಸುತ್ತಿರುವ ಎಕೆಡೆಮಿಯ ಪ್ರತಿಷ್ಠಾಪಕಾಚಾರ್ಯ ಡಾ॥ ಪೈಗಳು ಇದೇ ಸಂದರ್ಭದಲ್ಲಿ ತನ್ನ ಒನೇ ಹುಟ್ಟು ಹಬ್ಬವನ್ನೂ ಆಚರಿಸುತ್ತಿದ್ದಾರೆ ಜಿಲ್ಲೆಗೆ, ಉನ್ನತ ನಾಡಿಗೆ ಅಲ್ಲದೆ ಈ ದೇಶಕ್ಕೆ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ಡಾ॥ ಪೈ ಮತ್ತು ಎಕೆಡೆಮಿಗಳು ಬಹುಕಾಲ ಬಾಳಿ, ನಮ್ಮ ಜಿಲ್ಲೆ ಹಾಗೂ ನಾಡಿನ ಸುರೋಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಪಾತ್ರವಹಿಸಲೆಂದು ಆಶಿಸುತ್ತೇನೆ. ಡಾ॥ ಪೈಗಳಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಅರ್ಪಿಸುವುದರ ಜತೆಗೆ ಅವರ ಹೆಮ್ಮೆಯ ಕೂಸು ಎಕೆಡೆಮಿಗೂ ಭವ್ಯ ಭವಿಷ್ಯವನ್ನು ಹಾರೈಸುತ್ತೇನೆ.

ಕ್ರಾಂತಿಪುರುಷ ಬಸವಣ್ಣನವರು

ಬಿರಿಯ ಶತಕಗಳ ಮೊದಲು ಈ ನಾಡಿನ ಜನ ಜೀವನದಲ್ಲಿ ಮಿಂಚೊಂದು ಮಿಂಚಿ, ಜ್ಯೋತಿಯ ರೂಪ ತಾಳಿ, ಅಂಧಕಾರದಿಂದ ಬೆಳಕಿನೆಡೆಗೆ ಜಡ ಸಮುದಾಯವನ್ನೇ ಕೊಂಡೊಯ್ಯಿತು. ಹಾಂಭಿಕ ಆಚಾರ ವಿಚಾರಗಳಿಂದ ಧರ್ಮವು ಕೆಲವರ ಸೊತ್ತಾಗಿಯೇ ಉಳಿದು, ಆ ಧರ್ಮದರ್ಶಿಗಳು ಧರ್ಮದ ಹೆಸರಲ್ಲಿ ಜನರನ್ನೇ ಶೋಷಿಸುತ್ತಿದ್ದಾಗ ಬೆಳಗಿದ ಜ್ಯೋತಿಯದು. ಜಾತಿ ನೀತಿ, ಉಚ್ಚ ನೀಚ, ಬಡವ ಬಲ್ಲಿದ ಎಂಬ ಭೇದ ಭಾವದಿಂದ ಜನಮನ ಬೇಸತ್ತು ಮುಂದೇನೂ ದಾರಿಗಾಣದೆ ಪರಿಸ್ಥಿತಿಯು ಕೈಗೂಡುಗಳಾಗಿ ಕತ್ತಲಲ್ಲಿ ತಡವರಿಸುತ್ತಿದ್ದಾಗ ಮೂಡಿ ಬಂದ ಬೆಳಕದು. ಈ ಜ್ಯೋತಿಯೇ ತಮ್ಮ ನಡೆ ನುಡಿ, ಆಚಾರ ವಿಚಾರ ಜಾಗೂ ಶತ್ರ ಆದರ್ಶಗಳಿಂದ ಕನ್ನಡ ನಾಡಿನಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಗೆ ಕಾರಣರಾದ ಜಗಜ್ಯೋತಿ ಬಸವೇಶ್ವರರು. ಅವರ ಎಂಟನೆಯ ಶತಮಾನೋತ್ಸವವು ನಮ್ಮ ರಾಜ್ಯದಾದ್ಯಂತ ಬಹು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಎಂಟುನೂರು ಶತಕಗಳ ಹಿಂದಿನ ಒಬ್ಬ ಮಹಾ ಪುರುಷನನ್ನು ನಾವು ಇಂದು ನೆನಪು ಮಾಡಿಕೊಳ್ಳುತ್ತಿದ್ದೇವೆ.

ಬಸವಜ್ಞನವರು ಒಬ್ಬ ಐತಿಹಾಸಿಕ ಪುರುಷರು. ಅವರ ಐತಿಹ್ಯದ ಕುರಿತು, ಎಷ್ಟೇ ಲಲ್ಲವೆಗಳಿರಲಿ; ಅವರು ನಡೆಸಿದ ಪವಾಡಗಳ ಕುರಿತು ಎಷ್ಟೇ ಕಥಾನಕಗಳಿರಲಿ, ಅವರು ಒಬ್ಬ ಐತಿಹಾಸಿಕ ಪುರುಷರೆಂಬಲ್ಲಿ ಯಾವ ಅನುಮಾನವೂ ಇಲ್ಲ.

(ಎರಡನೇ ಪುಟ ನೋಡಿರಿ)

ಡಾ॥ ಟಿ. ಮಾಧವ ಪೈ ಅವರ ಸಂದೇಶ



ಅಕಾಡೆಮಿಯ ರಜತ ಮಹೋತ್ಸವವು ನಮ್ಮ ಕಡೆಯ ಎಲ್ಲ ಸಂಸ್ಥೆಗಳು ಕಳೆದ ೨೫ ವರ್ಷಗಳಲ್ಲಿ ಮಾಡಿರುವ ಒಳ್ಳೆಯ ಕಾರ್ಯವನ್ನು ಪ್ರಸಿದ್ಧಿಪಡಿಸುವುದಕ್ಕೆ ಅವಕಾಶ ಕೊಟ್ಟಿದೆ. ಈ ಯಶಸ್ಸು ಬಹುಸಂಖ್ಯಾತರು ತೋರಿಸುತ್ತಿರುವ ಆಸಕ್ತಿ ಹಾಗೂ ಮೆಚ್ಚುಗೆಯಿಂದ ಸಾಧ್ಯವಾಗಿದೆ. ನಿಮ್ಮಿಂದ ನನಗೆ ಸಿಕ್ಕ ರಚನಾತ್ಮಕ ಸಲಹೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ. ಈ ಸಂದರ್ಭದಲ್ಲಿ ನಾನು ನಿಮಗೆ ನನ್ನ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತೇನೆ.

ನೀವು ಯಾವಾಗಲೂ ಜೀವನದಲ್ಲಿನ ಒಳ್ಳೆಯ ಅಂಶಗಳಿಗಾಗಿ ಶ್ರಮಿಸುತ್ತಿದ್ದೀರಿ. ನಿಮ್ಮ ಪತ್ರಿಕೆ ಈ ಪ್ರದೇಶದಲ್ಲಿರುವ ಒಳ್ಳೆಯದನ್ನು ಹಾಗೂ ಶ್ರೇಷ್ಠವಾದುದನ್ನು ಯಾವಾಗಲೂ ಬೆಂಬಲಿಸುತ್ತಾ ಬಂದಿದೆ. ನಿಮ್ಮ ಜಿಲ್ಲೆಯಲ್ಲಿರುವ ಅಕಾಡೆಮಿಯ, ಹಾಗೂ ಇತರ ಖಾಸಗಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ನೀವು ಮತ್ತು ಇತರರು ಕೊಡುತ್ತಿರುವ ಇಂತಹ ಪ್ರೋತ್ಸಾಹದಿಂದ ನನ್ನ ದೇಶಭಾವೀ ಜನಾಂಗಗಳಿಗೆ ದೊಡ್ಡ ಸ್ಫೂರ್ತಿಯು ಸೆಲೆಯಾಗಿ ಪರಿಣಮಿಸುತ್ತದೆಂಬುದರಲ್ಲಿ ಸಂಶಯವಿಲ್ಲ.

ಮಣಿಪಾಲ ೨೬ ಎಪ್ರಿಲ್ ೧೯೬೮.

ಡಾ॥ ಟಿ. ಎಂ. ಎ. ಪೈ

ಶ್ರೀ ಟಿ. ಎಂ. ವೈ ಇವರ ಸಂದೇಶ



ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ, ಅದರಲ್ಲೂ ಅಭಿವೃದ್ಧಿ ಹೊಂದುತ್ತಿರುವ ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ ಪ್ರಜೆಗಳ ಜವಾಬ್ದಾರಿಯು ಹಿರಿದಾದದ್ದು. ತಮ್ಮ ಎಲ್ಲಾ ಆವಶ್ಯಕತೆಗಳಿಗೂ ಸರಕಾರದ ಮುಖ ನೋಡುತ್ತ ಕುಳಿತಿರುವುದರಿಂದಲು, ಜನರು ಪರಸ್ಪರ ಸಹಕಾರದಿಂದ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು. ಎಕನಮಿಕ್ ಅಂಡ್ ಜನರಲ್ ಎಜುಕೇಶನ್ ಸಂಸ್ಥೆಯು ಈ ತತ್ವವನ್ನು ಕಾರ್ಯದಲ್ಲಿ ಅಂಗೀಕರಿಸಿ ಅಳವಡಿಸಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತಾದ ಸಾಧನೆಗಳು ನೆರವಾಗಿವೆ. ಮುಖ್ಯವಾಗಿ ನಮ್ಮ ಜಿಲ್ಲೆಹಾಗೂ ಅಸುಪಾಸಿನ ಪ್ರದೇಶಗಳಲ್ಲಿ ಹಲವಾರು ವಿದ್ಯಾ ಸಂಸ್ಥೆಗಳನ್ನು ತೆರೆದು ದೇಶದ ಪ್ರಗತಿಗೆ ನೆರವಾಗಿದೆ. ಡಾ|| ವೈಯವರ ಶಕಗಿದ ಹಾಗೂ ಖಲಿತ ಮಾರ್ಗದರ್ಶನ ಈ ಪ್ರಗತಿಗೆ ಕಾರಣವಾಯಿತು.

ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಹಳೆಯ ಪತ್ರಿಕೆಗಳಲ್ಲೊಂದಾದ "ನವಯುಗ"ವು ಒಂದು ವಿಶೇಷ ಸಂಚಿಕೆಯನ್ನು ಹೊರತರುತ್ತಿರುವುದು ಸಮಯೋಚಿತ. ನಮ್ಮ ಜಿಲ್ಲೆಯ ಹಾಗೂ ರಾಜ್ಯದ ಅಭಿವೃದ್ಧಿಗೆ ಕಳಕಳಿಯಿಂದ ಶ್ರಮಿಸಿದ ಪತ್ರಿಕೆಗಳಲ್ಲಿ ನಿಮ್ಮದೂ ಒಂದು. ನಿಮ್ಮ ಈ ಪ್ರಯತ್ನಕ್ಕೆ ಯಶಸ್ಸನ್ನು ಕೋರುತ್ತೇನೆ.

ಮಣಿಪಾಲ, ೨೭-೪-೬೮ ಟಿ. ಎಂ. ವೈ.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಕೆ. ನಾಗಪ್ಪ ಆಳ್ವರ ಸಂದೇಶ

ನಾಡುನುಡಿಯ ಸೇವೆಯನ್ನು ಕಳೆದ ೪೨ ವರ್ಷಗಳಿಂದ ಮಾಡುತ್ತಿರುವ ನಿಮ್ಮ ಪತ್ರಿಕೆಯು ಜಗಜ್ಜ್ಯೋತಿ ಬಸವೇಶ್ವರರ ಎಂಟನೆಯ ಶತಮಾನೋತ್ಸವದ ಅಂಗವಾಗಿ ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸುವುದೆಂದು ತಿಳಿದು ಆನಂದವಾಯಿತು

ಬಸವೇಶ್ವರರು ತಮ್ಮ ನೂತನ ವಿಚಾರ ಧಾರೆಗಳಿಂದ, ಮಾನವ ಕೋಟಿಯ ಕಲ್ಯಾಣಕ್ಕಾಗಿ ಮಡಿದವರು. ಅವರು ಕನ್ನಡ ನಾಡಿಗೆ, ಕನ್ನಡದ ಜನಕ್ಕೆ ವೇಲಾಗಿ ಕನ್ನಡ ಸಾಹಿತ್ಯಕ್ಕೆ ಇತ್ತ್ರ್ಕೊಡುಗೆ ಅಮೂಲ್ಯವಾದುದು. ಸಮೃದ್ಧಿಯ ದೇಶವನ್ನು ಕಟ್ಟುವ ಇಂದಿನ ದಿನಗಳಲ್ಲಿ ಅವರು ಸಾರಿದ ತತ್ವಗಳು, ನೀಡಿದ ಉಪದೇಶಗಳು, ವಚನಗಳ ಮೂಲಕ ಬಿಂಬಿಸಿದ ವಿಚಾರಗಳು ಎಲ್ಲರೂ ತಿಳಿದು ಆಚರಣೆಗೆ ತಂದೇಕಾದ ವುಗಳು. ಅವರೊಬ್ಬ ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದ ಕ್ರಾಂತಿ ಪುರುಷರಾಗಿದ್ದಾರೆ. ನಮ್ಮ ಜನ, ನಿಮ್ಮ ಪತ್ರಿಕೆಯ ಈ ವಿಶೇಷ ಸಂಚಿಕೆಯು ಸಾಕ್ಷ ಉಪಯೋಗವನ್ನು ಮಾಡುವರೆಂದು ನಂಬಿ, ನಿಮ್ಮ ಈ ಕಾರ್ಯದಲ್ಲಿ ಯಶಸ್ಸನ್ನು ಕೋರುತ್ತೇನೆ.

ಬೆಂಗಳೂರು. ಡಾ. ಕೆ. ನಾಗಪ್ಪ ಆಳ್ವ.

(ಒಂದನೇ ಪುಟದಿಂದ)

ಗಾಂಧೀಜಿಯವರು ೧೯ನೇ ಶತಮಾನದಲ್ಲಿ ಬೋಧಿಸಿದುದನ್ನು ಬಸವಣ್ಣನವರು ೧೨ನೇ ಶತಮಾನದಲ್ಲೇ ಬೋಧಿಸಿದರು, ಆಚರಿಸಿ ತೋರಿಸಿದರು.

ಸೊಡ್ಡ ಡಂಭಾಚಾರದ ಢಂಬಿಕೆಗಳಿಗೆ ಮಾಟ್ಟದಲ್ಲೇ ತಿಲಾಂಜಲಿಯಿತ್ತ ಅವರದು ಕ್ರಾಂತಿಕಾರಿ ಮನೋಭಾವ. ಉಪನಯನ ಸಂಸ್ಕಾರವನ್ನು ನಿರಾಕರಿಸಿ, ಜಾತಿವೇದ ಮುನಿಗಳ ಬಳಿ ಸಾಗಿ, ಅಲ್ಲಿ ಶಿಷ್ಯವೃತ್ತಿ ಕೈಕೊಂಡು ಜ್ಞಾನಾರ್ಜನೆ ಮಾಡಿದರು ಅವರ ಜ್ಞಾನತೃಷೆಗೆ, ಜ್ಞಾನ ಭಂಡಾರಕ್ಕೆ ಸಾಕ್ಷಿ. ಕಲ್ಯಾಣರಾಜ್ಯದ ಮಂತ್ರಿಗಳಾಗಿ, ಆ ರಾಜ್ಯಕ್ಕೆ ಕಲ್ಯಾಣ ಎಂಬ ಹೆಸರಿಟ್ಟು ಅನ್ವರ್ಥನಾಮವನ್ನಾಗಿಸಿದುದು ಅವರ ವ್ಯವಹಾರ ಕುಶಲತೆಗೆ, ಆಡಳಿತಾ ನೈಪುಣ್ಯಕ್ಕೆ ಕನ್ನಡಿ ಅಧಿಕಾರಲಾಲಸೆ ಹಾಗೂ ಮೋಹಗಳಿಂದ ತನ್ನ ಕುರಿತು ಪಿತೂರಿ ಎಬ್ಬಿಸಿತಷ್ಟೆ ಸಮಾಧಿಗೆ ಇತರರು ಕೂಟ ಹೂಡಿ, ತಾನು ಢಂಬಿದ್ದ ಢಂಬಿಕೆಗಳಿಗೇ ಸೆಟ್ಟು ಬಿದ್ದಾಗ, ಅಧಿಕಾರ ಪದವಿಗಳಿಗಿಂತ ತತ್ವ ನಿಷ್ಠೆಯಿಂದೆಂದು ಸಾರಿ, ಮಂತ್ರಿ ಪದವಿ ತ್ಯಜಿಸಿದುದು ಅವರ ಉದಾತ್ತ ಚರಿತ್ರೆಯ ಪ್ರತಿಬಿಂಬ. ನಿಷ್ಠೆಯಲ್ಲಿ ಶಿಷ್ಯರಾಗಿ, ಕರ್ಮಯೋಗಿಗಳಲ್ಲಿ ಕರ್ಮಯೋಗಿಗಳಾಗಿ, ಕಾಯಕವೇ ಕೈಲಾಸವೆಂದು ಸಾರಿದರು ತಾವು ಇಂದು ಘೋಷಿಸುತ್ತಿರುವುದನ್ನು ಅವರು ಅಂದೇ ಘೋಷಿಸಿದ್ದರು. ನಾವು ಇಂದು ಆಚರಣೆಗೆ ತರಲೆತ್ನಿಸಿದುದನ್ನು ಅವರು ಅಂದೇ ಆಚರಣೆಗೆ ತಂದಿದ್ದರು.

ಜಾತಿಯು ಭೂತ ಪಿಶಾಚಿಯಾಗಿ ಎಡ್ಡುನಿಂತು ಕುಣಿತ್ತಿರುವಾಗ ಆ ಜಾತಿ ಭೂತದ ಅಪಾಯವನ್ನು ಬಸವಣ್ಣನವರು ಅಂದೇ ಸೂಚಿಸಿದ್ದರು. ಮನುಷ್ಯ ಹುಟ್ಟಿನಿಂದ ಜಾತಿ ಪಡೆಯುವುದಿಲ್ಲ. ಬದಲು ತನ್ನ ಕೃತ್ಯ ಹಾಗೂ ಆಚರಣೆಗಳಿಂದ ಜಾತಿ ಪಡೆಯುತ್ತಾನೆ ಎಂದರು. ಎಲ್ಲರೂ ದೇವರ ಮಕ್ಕಳೆಂದು ಸಾರಿ, ಮಾನವತೆಯ ಏಕತೆಗೆ ನೆರವಾದರು. ದೇವನೊಬ್ಬ ನಾಮ ಹಲವು ಎಂದು ಸಾರಿದರು. ಸಾಮಾಜಿಕ ಹಾಗೂ ಧಾರ್ಮಿಕ ಜೀವನದಲ್ಲಿ ಕ್ರಾಂತಿಕಾರಿ ದಾರಿಗಳನ್ನು ತೋರಿಸಿದರು.

ಬಸವಣ್ಣನವರ ವಿಚಾರ ಧಾರೆ ಅವರ ವಚನಗಳಲ್ಲಿ ರಸವತ್ತಾಗಿ ಮೂಡಿಬಂದಿದೆ. ಸಾಮಾನ್ಯ ಜನರ ಮನೋವಾಟ್ಟಕ್ಕೆ ಎಟುಕುವಂತೆ ಸರಳ ಶುದ್ಧ ಕನ್ನಡದಲ್ಲಿ ಪದ್ಯರೂಪದಲ್ಲಿ ಅವರು ನೀಡಿದ ವಚನಗಳು ನೀತಿ ಶಾಸ್ತ್ರದ ಆಗರ, ಸಾಹಿತ್ಯ ರಂಗಕ್ಕೆ ಅಪೂರ್ವವಾದ ಕಾಣಿಕೆ. ಸರ್ವಜನರ ಜನ ಜೀವನಕ್ಕೆ ಸಂಬಂಧಿಸಿದ ಅವರ ನೈತಿಕ ಬೋಧೆಗಳು ಕೇವಲ ವೀರ ಶೈವರಿಗಷ್ಟೇ ಅಲ್ಲ ಇತರರಿಗೂ ಆಚರಣೆಗೆ ಅರ್ಹವಾದುವು.

ಪದವಿ, ಅಧಿಕಾರಗಳ ವ್ಯಾಮೋಹ ತ್ಯಜಿಸಿದ ಅವರ ಆದರ್ಶ ಇಂದಿನ ರಾಜಕಾರಣಿಗಳಿಗೆ ದಾರಿದೀಪವಾಗಬೇಕು ಅವರು ಧರ್ಮ ಹಾಗೂ ಸಮಾಜದ ಕೂಡು ಪಡೆಸಿದ ಕ್ರಾಂತಿಗಳು ಅಧ್ಯಾತ್ಮಿಕ ವಿಚಾರ ಧಾರೆಗಳು. ಎಂಟು ಶತಮಾನಗಳ ಹಿಂದೆ, ಈ ರೀತಿ ಖಂಡತುಂಡ ಅಭಿಪ್ರಾಯ ವ್ಯಕ್ತಪಡಿಸಿ ಈ ನಾಡಿನ ಉನ್ನತ್ತಿಗೆ ಕಾರಣರಾದ ಭಕ್ತಿ ಭಂಡಾರಿ ಬಸವಣ್ಣನವರ ಉತ್ಸವವನ್ನು ರಾಜ್ಯ ಮಟ್ಟದಲ್ಲಿ ಆಚರಿಸುತ್ತಿರುವುದು ಅಭಿನಂದನೀಯವೆ.

ಬಸವಣ್ಣನವರು ಆಧ್ಯಾತ್ಮಿಕ ವಿಚಾರಧಾರೆಯ, ಜನ ಸಾಮಾನ್ಯರೊಡನೆ ಬೆರೆತು ಬಾಳಿದ, ಅನನ್ಯ ಭಕ್ತರು; ಸಮಾಜ ಸುಧಾರಕರು; ಧರ್ಮದರ್ಶಿಗಳು. ಕನ್ನಡದ ಜನ ಈ ಮಹಾತ್ಮರ ತತ್ವಗಳ ಪಾಲನೆಯಲ್ಲಿ ನಿರತರಾದರೆ ಈ ನಾಡು ಚಿನ್ನದ ನಾಡಾಗಲು ಹೆಚ್ಚಿನ ಇತರ ಪ್ರಯತ್ನ ಬೇಕಿಲ್ಲ.

ಮುಖ ಚಿತ್ರ

ರಾಜ್ಯ ಮಟ್ಟದ ಬಸವೇಶ್ವರ ಶತಮಾನೋತ್ಸವ ಸಮಿತಿಯ ಅಧ್ಯಕ್ಷರೂ, ರಾಜ್ಯದ ಅಬಕಾರಿ ಮಂತ್ರಿಗಳೂ ಆದ ಶ್ರೀ ಬಿ. ಡಿ ಜತ್ತಿಯವರು

ಸರಳ ಸ್ವಭಾವ, ನಿಷ್ಕಲಂಕ ಚಾರಿತ್ರ್ಯ ಹಾಗೂ ದಕ್ಷ ಆಡಳಿತಕ್ಕೆ ಇವರು ಇನ್ನೊಂದು ಹೆಸರು.

With best compliments

from

M. KRISHNA

Proprietor

SREE KRISHNA MOTOR SERVICE

HASSAN (Mysore State)

Phone : 247

A Great Son of India

On this happy occasion of the 70th Birthday of Dr T. M A Pai we offer him our most respectful compli ments and wish him many happy returns of the day

With his achievements in the service of the country he is a jewel in the crown of Mother India We, of the Syndicate Bank have a special reason to be proud of him He was a founder Director of our Bank and till recently, its Chairman Over a period of four decades he built up this Institution to its present size and status and brought glory to it What miracles he wrought in other spheres is history now.

He has been a pillar of strength to the Institution in its various stages of development. Even after his retirement, to remember his great achievements on occasions like this is indeed a source of strength So much can be said of what he has done, but so much more may be waiting for him to be done For this, may God spare him for many long years and grant him health and happiness. This is our prayer.



For Lifetime Security & Service

KOHINOOR ROLLING SHUTTERS & ENGINEERING WORKS PRIVATE LTD

FACTORY
B 79 Industrial Estate
R T Nagar Bangalore 10

REGISTERED OFFICE
53 Subedar Chatram Road
Bangalore 9, PHONE 24352

ಜೀವಾವಧಿಯ ಭದ್ರತೆ ಮತ್ತು ಸೇವೆಗೆ

ಕೊಹಿನೂರ್ ರೋಲಿಂಗ್ ಶಟರ್ಸ್ & ಎಂಜಿನಿಯರಿಂಗ್ ವರ್ಕ್ಸ್ ಪ್ರೈವೇಟ್ ಲಿ.,

ಫೇಕ್ಟರಿ:
ಬಿ-79 ಇಂಡಸ್ಟ್ರಿಯಲ್ ಎಸ್ಟೇಟ್,
ರಾಜಾಜಿನಗರ,
ಬೆಂಗಳೂರು-10.

ರಿಜಿಸ್ಟರ್ಡ್ ಆಫೀಸು:
53, ಸುಬೇದಾರ್ ಚತ್ರಂ ರೋಡ್,
ಬೆಂಗಳೂರು-9.
ಫೋನ್: 24352

ಡೀಲರರು.

ಮೆಸರ್ಸ್ ಎಲೈಟ್ ಸೇಲ್ಸ್ ಕೊರ್ಪೊರೇಶನ್,

8, ಕೊಡಿಯಾಲ್‌ಬೈಲ್ ಚರ್ಚ್ ಬಿಲ್ಡಿಂಗ್,
ಮಂಗಳೂರು—3.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಪನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡಸರು, ಗರ್ಭಿಣಿಯರು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ಸಿವರಿಸಲ್ಪಟ್ಟ ಗೃಹಸ್ಥೆಗೆ. ಹೊರಿಸಿ ವಿಶಾಲ ಸಮಿಸ್ಥಾರದಾಗಿ ವಿವರಿಸಲ್ಪಟ್ಟಿದೆ
ಬೆಲೆ: ರೂ ೨-೦೦ (ಪಿ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಎರಡು ಅಥವಾ ಮೂರು ಮಕ್ಕಳು... ನಾವು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿನ್ಹೆ

ಸುಖ ಸಂಸಾರಕ್ಕೆ ಮಿತಸಂತಾನವೇ ಯೋಗ್ಯ ದಾರಿ.

ಕುಟುಂಬ ಯೋಜನೆ

ವಿವರಗಳಿಗೆ ನಿಮ್ಮ ಸಮೀಪದ ಆರೋಗ್ಯ ಕೇಂದ್ರವನ್ನು ಭೇಟಿ ಮಾಡಿ.

ಶ್ರೀ ಬಸವೇಶ್ವರರ ಎಂಟನೇ ಶತಮಾನೋತ್ಸವ

ಸಮಾಜ ಸುಧಾರಕ ಶ್ರೀ ಬಸವೇಶ್ವರ

ಸಮಾಜದ ಘಟಕಗಳಾದ ವ್ಯಕ್ತಿಗಳು ಸರ್ವವಿಧದಿಂದಲೂ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ದೃಷ್ಟಿಯಿಂದ ಬೆಳೆದರೆ ಅದು ಸರ್ವಾಂಗ ಸುಂದರವಾಗುತ್ತದೆ. ಬಸವಣ್ಣನವರದು ಇಂತಹ ಸರ್ವಾಂಗ ಸುಂದರ ಸಮಾಜ ರಚನೆಯ ಯೋಜನೆಯಾಗಿತ್ತು.

ಬಸವೇಶ್ವರರ ದೃಷ್ಟಿಯಲ್ಲಿ ಸಮಾಜವೆಂದರೆ ಜಾತಿ, ಕುಲ, ಧರ್ಮದಲ್ಲ. ಶಿವಭಕ್ತಿಯು ಸರ್ವಸಮಾನತೆಗೆ ದಾರಿಯೆಂದು ತಿಳಿದು ಶಿವನೊಲಿದವರಿಗೆ, ಶಿವನ ಒಲಿಸಲು ಬಂದ ಶಿವಭಕ್ತರಿಗೆ ಜಾತಿಗುಂಟೇ ಎಂದು ಜಾತಿಗಳನ್ನು ಕಿತ್ತೆಸೆದು ನೂತನ ಸಮಾಜವನ್ನು ರಚಿಸುವುದೇ ಅವರ ಗುರಿಯಾಗಿದ್ದಿತು.

ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರನೊಂದೇ ಎಂದೆ
ಹಾರುವ ಮೊದಲು ಶ್ವಪಚ
ಕಡೆಯಾಗಿ
ಭವಿಯೊದವನೊಂದೇ ಎಂದೆ.

ಎಂಬುದು ಅವರ ನಿಲವು. ಆದರೆ ಸುಲ ಮೂಲವಾಗಿದ್ದ ಅಂದಿನ ಸಮಾಜಗಳಲ್ಲಿ ಆ ಕುಲಗಳ ಆಧಿಕ್ಯವನ್ನು ಒಪ್ಪಲೇಬೇಕಾಗುತ್ತಿತ್ತು. ಆದರಿಂದಾಗಿ 'ವಿಪ್ರ ಮೇಲು, ಶ್ವಪಚ—ಕೀಳು' ಎಂಬ ಭಾವನೆ ಅಧಿಕವಾಗಿತ್ತು. ಅಂತಹ ಸಮಾಜದಲ್ಲಿ ವರ್ಣಭೇದ, ವೃತ್ತಿಭೇದ, ಅಂಗಭೇದಗಳನ್ನು ತೊಡೆದು ಹಾಕಿ ಶಿವಭಕ್ತಿ ಸಾಧನೆಯನ್ನು ಪ್ರೇರೇಪಿಸಲು ಅವರು ಶ್ರಮಿಸಿದರು.

ಸ್ತ್ರೀ ಪುರುಷರೆಲ್ಲರಲ್ಲಿಯೂ ಶಿವಾಂಶನಾದ "ಆತ್ಮ"ನಿರುವುದರಿಂದ ಆತ್ಮನಿಗೆ ಯಾವ ಚಿಹ್ನೆಗಳೂ ಇಲ್ಲದಿರುವುದರಿಂದ ಆತ್ಮವುಳ್ಳವರಲ್ಲಿ ಭೇದವನ್ನರಸಲಾಗದು. ಶಿವಭಕ್ತಿಯ ಸಮನ್ವಯ ಮಾರ್ಗಕ್ಕೆ ಯಾರು ಬೇಕಾದರೂ ಬಂದು ಸೇರಬಹುದು ಎಂಬುದನ್ನವರು ಅರಿವು ಮಾಡಿಕೊಟ್ಟರು.

"ಹೊಲೆಯ" ಎಂಬುದು ಒಂದು ಜಾತಿಯಲ್ಲ, ಅದೊಂದು ಮನೋಧರ್ಮ. ಅದು ಎಲ್ಲ ಸಮಾಜದಲ್ಲಿಯೂ ಕಂಡು ಬರುವ ಕಲ್ಮಷ ಇಚ್ಛೆವೆ ಕಲ್ಮಷ; ಅದು ಎಲ್ಲಿಯೇ ಇದ್ದರೂ ಕೊಳೆಯೇ. ಆದ್ದರಿಂದ ಅಂತಹ ಕೊಳೆ ಪರಿತ್ಯಾಜ್ಯವಾದುದು ಎಂಬುದು ಬಸವಣ್ಣನವರ ಅಭಿಪ್ರಾಯ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ,

ಹೊಲೆಯ ಹೊಲಬಗನಾದರೆ
ಅತನ ಹೊಲೆಯಲ್ಲಿಪ್ಪುದು ಲೇಸು
ಕಂಡಯ್ಯ.

ಎಂದು ಆಡಿ ಹೊಲಬನ ಲೇಖನ ಜೀವನ ದೃಷ್ಟಿ ಯಾರಲ್ಲಿದೆಯೋ ಅವರೆಲ್ಲ ಪೂಜ್ಯರು, ಅವರ ಆಶ್ರಯದಲ್ಲಿ ಬೆಳೆಯುವುದು ಹಿತಕಾರಿ ಎಂಬ ಮಹೋನ್ನತ ಭಾವನೆಯನ್ನು ಪ್ರಚಾರ ಮಾಡಿದರು.

ಹಿರಿಯರನ್ನು ಮೇಲುಮಾಡಿ, ಕಿರಿಯರನ್ನು ಕೀಳುಮಾಡುವ ಪ್ರವೃತ್ತಿಯು ಎಂದಿಗಿಂದಲೂ ಇಡೇ ಇದೆ. ಆದರೆ ಆ ಹಿರಿಯತನಕ್ಕೆ ಉತ್ತಮ ಗುಣವೇ ಕಾರಣವೆಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸಿದರು.

ವ್ಯಕ್ತಿಗಳ ಜೀವನೋದ್ಧಾರವೇ ಮೂಲವಾದ ಉದ್ಯೋಗಗಳನ್ನು, ಎಲ್ಲವನ್ನು ಅಲ್ಲಗಳೆದಿದ್ದರೂ ಕೆಲವನ್ನಾದರೂ ಜೀವನವೆಂದು ಪರಿಗಣಿಸುವ ಅನಿಷ್ಟ ಪರಂಪರೆಯು ಅಂದು ಪ್ರಚಲಿತವಾಗಿದ್ದಿತು. ರಾಷ್ಟ್ರದ ಪ್ರಗತಿಗೇ ಕಾರಣವಾದ ಉದ್ಯೋಗಗಳ ಮಹಿಮೆಯನ್ನು ಎತ್ತಿ ತೋರಿಸುವುದು ಬಸವೇಶ್ವರರ ವಿಚಾರವಾಗಿದ್ದಿತು. ಉದ್ಯೋಗಗಳಲ್ಲಿ ಮೇಲು ಕೀಳು ಎಂಬ ವಿಚಾರವು ಸರಿಯಾದುದಲ್ಲವೆಂದು ತಿಳಿಸುವುದು ಬಸವಣ್ಣನವರ ಧ್ಯೇಯ.

ಸೆಟ್ಟಿಯೆಂದೆಂಬನೆ ಸಿರಿಯಾಳನ
ಮಡಿವಾಳನೆಂದೆಂಬೆನೆ ಮಾಚಯ್ಯನ
ಡೋಹಾರನೆಂದೆಂಬೆನೆ ಕಕ್ಕಯ್ಯನ
ಮಾದಾರನೆಂದೆಂಬೆನೆ ಚೆನ್ನಯ್ಯನ
ಆಳು ಹಾರುವನೆಂದರೆ ಕೂಡಲ
ಸಂಗಯ್ಯ ನಗ ವನಯ್ಯ

ಎಂದು ಬಸವಣ್ಣನವರು ಜನತೆಯ ಪ್ರಥಮತಃ ಅವರ ಉದ್ಯೋಗ, ಅವುಗಳಿಂದುದ್ಭವಿಸಿದ ಜಾತಿಗಳನ್ನು ಕಂಡು ಗೌರವಿಸುವ ಅನಿಷ್ಟ ಪದ್ಧತಿಯನ್ನು ಖಂಡಿಸಿ, ಆಯಾಯ ವ್ಯಕ್ತಿಗಳನ್ನು ವ್ಯಕ್ತಿಗಳ ಸಾಧನೆ, ವ್ಯಕ್ತಿಗಳ ಕೃತಿಗಳಿಂದ ಬೆಲೆಕಟ್ಟಬೇಕೆಂದು ತಿಳಿಸಿದರು.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವ
ನೋದಿ ಹಾರುವನಾದ

ಎಂದು ಹೇಳುವಲ್ಲಿ ವೇದವನೋದುವುದು ಉದ್ಯೋಗವಾದಂತೆ, ಅದರಂತೆಯೇ ಇತರ ಉದ್ಯೋಗಗಳೂ ಮಾನ್ಯ ಎಂಬ ಅವರ ವಾದ ಹಿರಿದಾದುದು.

ದೇವನ ಒಲುಮೆಗೆ ಪಾತ್ರರಾಗಬೇಕಾದರೆ ಲೋಕದ ಬಾಳನ್ನು ಬದುಕನ್ನು ನಡೆಯುವಿಕೊಂಡು ಹೋಗಬೇಕು. ಅಂತಹ ಬದುಕಿಗೆ ನಮ್ಮ ಇಹದ ಬಾಳು ಹೆಸರಾದಾಗಿರಬೇಕು 'ಇಹ'-'ಪರ'ದಬಾಳು ಪರಸ್ಪರ ಪೂರಕವಾಗಿವೆ. ಇಹದ ಬದುಕಿನ ನಿರ್ಣಾಯಕ್ಕೆ ಸಾಮಾಜಿಕವಾಗಿ ಮಾನವನು ಹೇಗೆ ವರ್ತಿಸುವನೆಂಬುದೇ ಮಾರ್ಗದರ್ಶಕ. ಆದ್ದರಿಂದ ಬಸವೇಶ್ವರರು,

ಪುಣ್ಯ ಪಾಪವೆಂಬುದು ತಮ್ಮಿಷ್ಟ
ಕಂಡಿರೇ

ಅಯ್ಯಾ ಎಂದಡೆ ಸ್ವರ್ಗ
ಎಾ ಪೋ ಎಂದಡೆ ನರಕ.

ದೇವ—ಭಕ್ತ-ಜಯ-ಜೀವರೂ ಎಂಬ ನುಡಿಯೊಳಗೆ ಕೈಲಾಸವನೈದುವುದೆ ಕೂಡಲ ಸಂಗನ ದೇವಾ -ಎಂದರು.

ಕೈಲಾಸವನ್ನು ಪಡೆಯುವುದು, ಪುಣ್ಯಗಳಿಸುವುದು, ಎಲ್ಲವೂ ಸಾಮಾಜಿಕ ವ್ಯವಹಾರದ ನೀತಿಯನ್ನೆ ಅವಲಂಬಿಸಿದೆ. ಸಮಾಜವನ್ನು ಸುಂದರವಾಗಿ ಮಾಡಿಕೊಳ್ಳಬಲ್ಲ ಶಕ್ತಿಯು ಮಾನವನ ರೀತಿ, ನಡೆವಳಿಕೆಯನ್ನೆ ಅವಲಂಬಿಸಿದೆ. ಒಂದೆಡೆ ಅನಾಚಾರ ಮಾಡುವುದು, ಇನ್ನೊಂದೆಡೆ ಸದ್ವಿಚಾರದ ಮಾತನಾಡುವುದು ಯಾವ ರೀತಿಯಿಂದಲೂ ಹಿತವಲ್ಲವೆಂಬುದು ಬಸವೇಶ್ವರರ ಮತ. ಅದನ್ನು ಅವರೇ

"ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ"

ಎಂದಿದ್ದಾರೆ. ನಡೆಯಂತೆ ನುಡಿಯದಿರುವುದೇ ನಮ್ಮ ವ್ಯವಹಾರದ ಎಲ್ಲ ತೊಂದರೆಗಳಿಗೂ ಕಾರಣ. ನುಡಿದಂತೆ ನಡೆವ ಗುಣವೊಂದು ಬೆಳೆದುಬಂದರೆ ನಮ್ಮ ಜೀವನದ ಬಡತನವೆಷ್ಟೋ ಮಟ್ಟಿಗೆ ನಿವಾರಣೆಯಾಗಲು ಕಾರಣ. ಆದರಿಂದ ದೇವನೊಲುಮೆಯು ಸಾಧ್ಯವೆಂಬುದು ಅವನ ನಿಲವು.

ಸಾಂಘಿಕ ಜೀವನದ ಮಹತ್ವ

ಬಸವೇಶ್ವರರು ಕೈಗೊಂಡ ಸಾಮಾಜಿಕ ಕ್ರಾಂತಿಯ ಇನ್ನೊಂದು ಅಂಶವೆಂದರೆ ಸಾಂಘಿಕ ಜೀವನದ ಮಹತ್ವವನ್ನು ಎತ್ತಿ ತೋರಿಸಿದುದು. ಬುದ್ಧಿಯಲ್ಲಿ, ಅನುಭಾವದಲ್ಲಿ, ಯೋಗದಲ್ಲಿ ಹಿರಿಯರಾದವರನ್ನೆಲ್ಲ ಒಂದೆಡೆ ಕಲೆಹಾಕಿ, ಅವರವರ ಬುದ್ಧಿಶಕ್ತಿಗನುಗುಣವಾಗಿ ಅವರವರ ಕಾರ್ಯಕ್ಷೇತ್ರವನ್ನು ಹಂಚಿಕೊಡಲಾಗಿತ್ತು. ವ್ಯಕ್ತಿಗಳ ಹಿರಿಮೆಯು ಸಮಾಜಕ್ಕೆ ಹಿರಿಮೆಯನ್ನು ತಂದಿತು. ಹಿರಿಯ ವ್ಯಕ್ತಿಗಳ ಆದರ್ಶವನ್ನು ಇತರ ವ್ಯಕ್ತಿಗಳು ಅರಿತುಕೊಳ್ಳುವುದಕ್ಕೆ ಅವಕಾಶವಾಯಿತು. ಅಂತಹ ಸಂಘಟನೆಗೆ ಕೇಂದ್ರ ಅವರು ಅನುಗೊಳಿಸಿದ್ದ ಅನುಭವ ಮಂಟಪ. ನಾಲ್ಕು ಜನ ವಿಚಾರವಂತರು ಒಂದೆಡೆ ಸೇರಿದರೆ ವಿವೇಚನೆಯು ಕಡಿ ಉದಯಿಸುತ್ತದೆ. ಅಂತಹ ಸಾಂಘಿಕ

(ಹದಿನಾರನೇ ಪುಟ ನೋಡಿರಿ)

ಫೋನ್ ನಂಬರುಗಳು- ಆಫೀಸ್: 100
ಮನೆ: 116
ಮದ್ದೂರು ಬ್ರಾಂಚ್: 37

ಗ್ರಾಮ್ಸ್: 'ಶ್ರೀನಿವಾಸ'

ಶ್ರೀ ಶ್ರೀನಿವಾಸ ಸಾಮಿಲ್ಸ್
ಅಂಡ್ ಟಿಂಬರ್ ಡಿಪೋ
ಶ್ರೀನಿವಾಸ ಲಾರಿ ಸರ್ವೀಸ್

ಪ್ರೊ:- ಎಂ. ಕೆ. ಶ್ರೀನಿವಾಸಯ್ಯ.

ಶ್ರೀನಿವಾಸ ದೇವಸ್ಥಾನದ ಬೀದಿ, ಮಂಡ್ಯ.

ಬ್ರಾಂಚ್: ಮದ್ದೂರು.

—ಂ ಂ—

ನಮ್ಮಲ್ಲಿ ಸುಲಭ ಸಾಗೂ ನ್ಯಾಯವಾದ ಬೆಲೆಗೆ ಮರಗಳನ್ನು ಕೊಯ್ದು ಕೊಡಲಾಗುವುದು. ಹಾಗು ಎಲ್ಲಾ ತರದ ಬಿಳಿಯ ಮರಗಳು ಮತ್ತು ಬೇಕಾದ ಅಳತೆಗೆ ಕಟ್ಟೋಸೆಸುಗಳು ಸದಾ ಸಾಂಗಾಟಿಕ್ಕೆ ಸಿದ್ಧವಾಗಿವೆ.

ಗ್ರಾಹಕರಾಗಿ ನಮ್ಮನ್ನು ಭೇಟಿ ಕೊಡಿ.

ರಾಜ್ಯ – ದೇಶ – ವಿದೇಶಗಳಲ್ಲಿ

ಬಸವ ಜಯಂತಿಯ ವ್ಯಾಪಕ ಆಚರಣೆ

ಮಾನ್ಯ ಬಿ. ಡಿ. ಜತ್ತಿಯವರ ಭಾಷಣವೊಂದರಿಂದ

ವಿಶ್ವದ ಜ್ಯೋತಿಗಳಲ್ಲಿ ಒಬ್ಬರಾದ ಶ್ರೀ ಜಗಜ್ಜ್ಯೋತಿ ಬಸವೇಶ್ವರರು ಮಧ್ಯಕಾಲೀನ ಭಾರತದ ಅನೇಕ ಪ್ರತಿಭಾಶಾಲಿಗಳೆಂದೂ ಪ್ರಧಾನಸಂತರೆಂದೂ ಮಾನವಕೋಟಿಯ ಉದ್ಧಾರಕರೆಂದೂ ಲೋಕ ವಿಖ್ಯಾತರಾದ ಮಹಾಪುರುಷರು. ಅವರ ಜನ್ಮಸ್ಥಳ ವಿಜಾಪುರ ಜಿಲ್ಲೆಯ ಇಂಗಳೇಶ್ವರ ಬಸವನಾಡಿ. ಅವರ ಜನ್ಮಕಾಲ ೧೧೩೧. ಮಹಾತ್ಮಾ ಬಸವೇಶ್ವರರು ಅಜನ್ಮಕ್ರಾಂತಿ ಪುರುಷರು. ಅಂದು ಧರ್ಮದ ಹೆಸರಿನಲ್ಲಿ ಅನಿಷ್ಟಮಂತ್ರಿತವಾಗಿ ನಡೆಯುತ್ತಿದ್ದ ಅಂಧ ಮತಾಚರಣೆಗಳನ್ನೂ ಹಿಂಸಾಚಾರಗಳನ್ನೂ ವಿರೋಧಿಸಿ ಕೇವಲ ಎಂಟನೆಯ ವಯಸ್ಸಿನಲ್ಲೇ ಕ್ರಾಂತಿ ಧ್ವಜವನ್ನು ಎತ್ತಿ ಹಿಡಿದ ಅಸಮಾನ ಧೀರರು. ಬಸವೇಶ್ವರರು ಕಲ್ಯಾಣದ ಬಿಜ್ಜಳ ರಾಜನ ಪ್ರಧಾನ ಅಮಾತ್ಯರಾಗಿದ್ದರು. ಆದರೆ ಕೆಲಗಾಲದಲ್ಲೇ ಅಂದಿನ ಕುಟಿಲ ರಾಜಕೀಯಕ್ಕೆ ಬೇಸತ್ತು ಕ್ರಿ. ಶ. ೧೧೬೭ರಲ್ಲಿ ಅವಮಾನ್ಯ ಪದವಿಯನ್ನು ತ್ಯಜಿಸಿದರು. ಕೂಡಲ ಸಂಗಮಕ್ಕೆ ನಡೆದು ಅಲ್ಲಿಯೇ ಐಕ್ಯರಾದರು. ಅವರು ಜನರ ಹೃದಯ ಬುದ್ಧಿಗಳ ಸಂಸ್ಕರಣವನ್ನೇ ತಮ್ಮ ಜೀವನ ಧ್ಯೇಯವಾಗಿಟ್ಟುಕೊಂಡಿದ್ದರು. ಲೋಕ ಕಲ್ಯಾಣ ಸಾಧನೆಗಾಗಿ—ವಿಲಾಸ ಭೋಗದಲ್ಲೂ ಸ್ವಾರ್ಥ ಸಾಧನೆಯಲ್ಲೂ ನಿರತವಾಗಿ, ಅಧಃಪಾತದ ದಾರಿ ಹಿಡಿದ ಜನಮನವನ್ನು ಪರಿಶುದ್ಧಿಸುವ ಸಲುವಾಗಿ ತಮ್ಮ ಜೀವನ ಸರ್ವಸ್ವವನ್ನೂ ಮುಡಿಪಾಗಿಟ್ಟರು.

ಬಸವೇಶ್ವರರು ಭಾರತದ ಅಸಾಧಾರಣ ಸಂತರು, ಕವಿಗಳು, ದಾರ್ಶನಿಕರು. ಭಾರತದ ಹಲವಾರು ಧಾರ್ಮಿಕ ಸುಧಾರಕರಲ್ಲೂ ಅನುಭಾವಿಗಳಲ್ಲೂ ಆತ್ಮಚ್ಛಾಸ್ವಾಭಾವನ್ನು ಹೊಂದಿದವರು. ಅವರ ಜಪ ಕಾಲಕ್ಕೆ ಅಂದಿನ ರಾಜಕೀಯ ರಂಗದಲ್ಲಿ ಹಾನಾ ರೀತಿಯ ಸಂಕ್ಷೋಭೆಯಿದ್ದವು. ಸಾಮಾಜಿಕ ಕ್ಷೇತ್ರದಲ್ಲಿ ಹಲವಾರು ಒಡಕುಗಳಿದ್ದವು. ಧಾರ್ಮಿಕ ಕ್ಷೇತ್ರದಲ್ಲಿ ಈರ್ಷ್ಯಾಸೂಯೆಗಳು ತಾಂಡವವಾಡುತ್ತಿದ್ದವು. ಹೀಗೆ ಸಮಾಜದ ಸಕಲ ರಂಗಗಳಲ್ಲೂ ವಿಜೃಂಭಿಸಿ ತೊಡಗಿದ್ದ ಬಗೆಬಗೆಯ ವಿಷಮತೆಗಳಿಂದ ದಿಗ್ಭ್ರಾಂತವಾದ ಜನಸಮುದಾಯವು ಪರಾಜಯ ಮತಿಯ ಕಡೆಗೆ ಒಲಿಯ ತೊಡಗಿದ್ದಿತು. ಹೀಗೆ ದಾರಿತಪ್ಪಿದ ಜನರಲ್ಲಿ ಬಸವೇಶ್ವರರು ಜೀವನ ನೈಪುಣ್ಯವನ್ನೂ, ಸ್ವಾವಲಂಬನೆಯನ್ನೂ ಸೋದರ ಭಾವವನ್ನೂ ಮೂಡಿಸಿದರು. ಅವರ ವಿಚಾರಗಳಲ್ಲಿ, ಜನರ ನಿಲುವಿನಲ್ಲಿ ಒಂದು ಬಗೆಯ ಸಾಮರಸ್ಯವನ್ನು ಕಲ್ಪಿಸಿದರು. ವಿಶ್ವಬಾಂಧವ್ಯ ಸಂದೇಶವನ್ನು ದೇಶದ ಮೂಲೆ ಮೂಲೆಗಳಿಗೆ ಹರಡಿದರು. ಸಜ್ಜಾರಿತ್ರ್ಯ, ದೈವ ಭಕ್ತಿ, ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಉದಾತ್ತ ತತ್ವಗಳನ್ನೂ ಅಸ್ಪಷ್ಟಕ್ಯಗಳನ್ನೂ ಬಿತ್ತರಿಸಿದರು.

ಬಸವೇಶ್ವರರು ಕನ್ನಡ ಗದ್ಯದ ಪಿತಾಮಹರೆಂದು ಪ್ರಖ್ಯಾತರಾಗಿದ್ದಾರೆ. ವೇದೋಪನಿಷತ್ತುಗಳಲ್ಲಿ ಗೂಢರೂಪಿತವಾದ ಸಾರ್ವಕಾಲಿಕ ತತ್ವಗಳೆಲ್ಲವೂ ಬಸವಣ್ಣನವರ ವಚನ ವಾಙ್ಮಯದಲ್ಲಿ ಜನ ಸಮುದಾಯಕ್ಕೂ ತಿಳಿಯುವಂತೆ ಸರಳವಾದ, ತಿಳಿಯೂದ ಗದ್ಯದಲ್ಲಿ ಕಾವ್ಯಮಯವಾಗಿ ನಿರೂಪಿತವಾಗಿದೆ.

ಬಸವೇಶ್ವರರ ಉಪದೇಶಾಮೃತವು ಯಾವ ಒಂದೇ ಗುಂಪಿಗಾಗಲಿ ಒಂದೇ ಜನ ವರ್ಗಕ್ಕಾಗಲಿ ಪರಿಮಿತವಾಗಿರಲಿಲ್ಲ—ದೇಶದ ಸಕಲ ಜನ ಸಮುದಾಯಕ್ಕೂ ಅನ್ವಯಿಸುವುದಾಗಿದ್ದಿತು. ಸ್ತ್ರೀಯರ ಉದ್ಧಾರಕ್ಕೂ, ಸ್ತ್ರೀ ಪುರುಷ ಸಮಾನತೆಗೂ ಬಸವೇಶ್ವರರು ಸತತವಾಗಿ ಹಣಗಿದರು. ಜನ್ಮದಿಂದಲೇ ಜಾತಿಯೆಂಬ ಭೇದಭೀತಿಯನ್ನು ಖಂಡಿಸಿ ದೇವನೊಂದಾತನೇ ಜಾತನೆಂಬ ದಿವ್ಯ ತತ್ತ್ವವನ್ನು ಸಾರಿ ಅದನ್ನು ಅನ ಷ್ಠಾನಕ್ಕೆ ತಂದ ಹಿರಿಮೆ, ಹೆಗ್ಗಳಿಕೆ ಅವರದು. ಬಸವೇಶ್ವರರು ತಮ್ಮ ಪೂಜ್ಯ ಗುರುಗಳಾದ ಅಲ್ಲಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಅನುಭವ ಮಂಟಪವೆಂಬ ಆಧ್ಯಾತ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಅನುಭವ ಮಂಟಪವು ಜಾತಿ ಮತ ಪಂಥ ಭೇದವಿಲ್ಲದ ಸಮಸ್ತ ಸ್ತ್ರೀ ಪುರುಷರಿಗೂ ಮುಕ್ತದ್ವಾರವಾಗಿದ್ದಿತು. ಬಡವ ಬಲ್ಲಿದರೆಂಬ ಭೇದವಿಲ್ಲದೆ ಆಳರಸರೆಂಬ ವ್ಯತ್ಯಾಸವಿಲ್ಲದ, ಸಕಲರೂ ಈ ಮಂಟಪದ ಸಮಾನ ಸದಸ್ಯರಾಗಿದ್ದರು.

ಆತ್ಮಶುದ್ಧಿಯೂ, ಪರಿಶುದ್ಧಕಾಯಕವೂ ಬಸವೇಶ್ವರರ ಧ್ಯೇಯ ಮಂತ್ರವಾಗಿದ್ದವು. ಮೈಮುರಿದು ದುಡಿಯಬೇಕೆಂದೂ ಜನರು ಪರೋಪ ಜೀವಿಗಳಾಗಕೂಡದೆಂದೂ, ಸ್ವಾರ್ಜಿತ ಧನದಲ್ಲಿ ಅತ್ಯಗತ್ಯವಾದುದನ್ನು ಮಾತ್ರ ವಿನಿಯೋಗಿಸಿ ಕೊಂಡು ಉಳಿದುದನ್ನು ಸಮಾಜ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕೆಂದೂ, ಅಹಿಂಸೆ, ದಯೆ, ಲೋಕಕಾರುಣ್ಯ, ಸತ್ಯಪರತೆ, ಸಮ್ಯಕ್ ಜೀವನ, ಸತ್ಕಾರ್ಯಪ್ರೀತಿ, ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಮೊದಲಾದ ಗುಣಗಳನ್ನು ಮೈಗೂಡಿಸಿ ಕೊಳ್ಳಬೇಕೆಂದೂ ತಮ್ಮ ಅನುಯಾಯಿಗಳಿಗೆ ಯಾವಜ್ಜೀವವೂ ಭೋಧಿಸಿದರು. ಮಂತ್ರಾಧಿಕಾರ, ಧರ್ಮಾಂಧತೆ, ಮೂರ್ತಿಪೂಜೆ, ಸವರ್ಣರಿಗೆ ಸರಂಪರಾಗತವಾಗಿ ವಿಶೇಷಾಧಿಕಾರ, ಸಾಮಾಜಿಕ ವೈಷಮ್ಯ ಮೊದಲಾದ ಅನಿಷ್ಟಗಳನ್ನು ವಿರೋಧಿಸಿದರು. ಬಸವೇಶ್ವರರ ಸಂದೇಶದಂದರೆ ಬುದ್ಧನ ಸಂದೇಶದಂತೆ ಪ್ರೇಮ ಸಂದೇಶ, ಕಾರುಣ್ಯ ಸಂದೇಶ ಶ್ರೀ ಕೃಷ್ಣನ ಸಂದೇಶದಂತೆ ಪ್ರಯೋಜನ ಪ್ರಧಾನ ಸಂದೇಶ, ಬಾಪೂಜಿಯವರ ಸಂದೇಶದಂತೆ ಸರ್ವೋದಯ ಸಂದೇಶ. ಬಸವೇಶ್ವರರು ಶ್ರೀ ರಾಮನಂತೆ ಉದಾರಾಂಗಿದ್ದರು, ಏಸುವಿನಂತೆ ಮೃದ ಶೀಲರಾಗಿದ್ದರು. ಬುದ್ಧನಂತೆ ಜ್ಞಾನಿಗಳಾಗಿದ್ದರು, ಮಹಮ್ಮದ್ದಿಂತೆ ಧೀರರಾಗಿದ್ದರು, ಮಹಾವೀರನಂತೆ ಭೂತ ದಯಾಪರರಾಗಿದ್ದರು.

ಬಸವೇಶ್ವರರು ಈ ಪ್ರಪಂಚಕ್ಕೆ ಅವತರಿಸಿ ಅಂಂ ವರ್ಷಗಳು ಸಂದು ಹೋದವು. ಬಸವೇಶ್ವರರ ಜೀವನ ಮಹಿಮೆಯನ್ನೂ, ಉಪದೇಶಾಮೃತವನ್ನೂ, ಅವರ ಕಾರ್ಯ ಸಾಧನೆಗಳನ್ನೂ ಲೋಕದ ಗಮನಕ್ಕೆ ತರುವ ಸಲುವಾಗಿ ಅವರ ಎಂಟುನೂರು ವರ್ಷಗಳ ಜಯಂತಿಯನ್ನು ದೇಶದ ನಾಲ್ಕೂ ಮೂಲೆಗಳಲ್ಲಿ ಮಾತ್ರವಲ್ಲದೆ, ವೈಭವಸಾರ್ವಾಗಿ ನಡೆಸಲಾಗುತ್ತಿದೆ. ಈ ಮಹಾಯೋಜನೆಯನ್ನು ಬಸವ ಸಮಿತಿ ಕೈಕೊಂಡಿದೆ. ಈ ಸಮಾರಂಭಗಳಿಗೆ ಸೂಕ್ತ ವ್ಯವಸ್ಥೆ ಮಾಡುವ ಸಲುವಾಗಿ, ನಮ್ಮ ರಾಜ್ಯ ಸರ್ಕಾರದವರು ರಾಜ್ಯ ಮಟ್ಟದಲ್ಲಿ ಒಂದು ಕಾರ್ಯಕಾರಿ ಮಂಡಲಿಯನ್ನೂ ಒಂದು ಮಹಾಪಂಚಕವನ್ನೂ ರಚಿಸಿದ್ದಾರೆ. ಈ ಸಮಾರಂಭಗಳು ೧೯೬೬ನೇ ಇಸವಿ ಡಿಸೆಂಬರ್ ತಿಂಗಳಿಂದ ಪ್ರಾರಂಭವಾಗಿ ೧೯೬೭ನೆಯ ಇಸವಿ ಮೇ ತಿಂಗಳ ವರೆಗೂ ನಡೆಯುವಂತೆ ಬಸವ ಸಮಿತಿಯು ತಾತ್ಕಾಲಿಕವಾಗಿ ನಿರ್ಧರಿಸಿದೆ. ಬೆಂಗಳೂರು ನಗರದಲ್ಲಿ, ಜಿಲ್ಲಾ ಹಾಗೂ ತಾಲೂಕು ಮುಖ್ಯ ಪಟ್ಟಣಗಳಲ್ಲಿ ಅಷ್ಟೇ ಅಲ್ಲದೆ, ಬಸವೇಶ್ವರರ ಜೀವನಕ್ಕೂ ಅವರ ಕಾರ್ಯಕಲಾಪಗಳಿಗೂ ಸಂಬಂಧಪಟ್ಟಿರುವ ಬಸವ ಕಲ್ಯಾಣ, ಬಾಗೇವಾಡಿ, ಉಳವಿ ಉಡುತಡಿ, ಸಂಗಮೇಶ್ವರ ಮೊದಲಾದ ಬೇರೆ ಕೆಲವಾರು ಊರುಗಳಲ್ಲೂ ಸಮಾರಂಭಗಳು ಘಡೆಯುತ್ತವೆ.

ಬಸವ ಸಮಿತಿಯು ಬಸವ ಕಲ್ಯಾಣದಲ್ಲಿ ಸುಮಾರು ಮೂರು ಲಕ್ಷ ರೂಪಾಯಿಗಳ ವೆಚ್ಚದಿಂದ ಒಂದು ಅನುಭವ ಮಂಟಪವನ್ನೂ, ಬೆಂಗಳೂರಿನಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಬಸವ ಭವನವನ್ನೂ ಕಟ್ಟಲು ನಿರ್ಧರಿಸಿದೆ. ಅನುಭವ ಮಂಟಪ ನಿರ್ಮಾಣ ಕಾರ್ಯವು ದಿನಾಂಕ 5-9-1966 ರಂದು ಪ್ರಾರಂಭವಾಗಿದ್ದು, ಈ ಕೆಲಸ ಮುಂದುವರಿಯುತ್ತಿದೆ. ಬಸವ ಭವನದ ನಿರ್ಮಾಣವೂ ಆಗುತ್ತದೆ.

ಬಸವ ಸಮಿತಿಯು ಬಸವೇಶ್ವರರ ಅಧಿಕೃತ ಜೀವನ ಚರಿತ್ರೆಯನ್ನು ಮತ್ತು ಅವರ ಮುಖ್ಯ ಸಮಕಾಲೀನರ ಜೀವನ ಚರಿತ್ರೆಗಳನ್ನೂ, ಹಾಗೂ ಒಂದು ಸ್ಮಾರಕ ಗ್ರಂಥವನ್ನು ಪ್ರಕಟಿಸುವ ಕೆಲಸವನ್ನು ಕೈಗೊಂಡಿದೆ, ಈ ಕೆಲಸದ ಜೊತೆಗೆ, ಬಸವ ಸಮಿತಿಯು ಬಸವೇಶ್ವರರ ೧೦೦ ವಚನಗಳನ್ನು ಈಗಾಗಲೇ ಇಂಗ್ಲಿಷ, ತಮಿಳು, ಸಂಸ್ಕೃತ, ತೆಲುಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಿಸಿದೆ. ಬಸವೇಶ್ವರ ವಚನಗಳ ಹಿಂದೀ ಅನುವಾದವೂ ಆಗಿದೆ. ಮರಾಠಿ, ಉರ್ದು, ಗುಜರಾಥಿ ಅನುವಾದಗಳೂ ಇವೆ. ಕಾಲಕ್ರಮದಲ್ಲಿ ಈ ವಚನಗಳು ಉಳಿದ ರಾಷ್ಟ್ರೀಯ ಭಾಷೆಗಳಲ್ಲೂ ಮತ್ತು ವಿದೇಶ ಭಾಷೆಗಳಲ್ಲೂ ಪ್ರಕಟವಾಗುವುವು.

ಬಸವ ಸಮಿತಿಯ ಕಲ್ಯಾಣ ಕಾರ್ಯಕ್ರಮಗಳು ಹೀಗಿವೆ:—

(ಹದಿನೈದನೇ ಪುಟ ನೋಡಿರಿ)



ಶ್ರೀ ಬಿ. ಡಿ. ಜತ್ತಿ

"NAVAYUGA" Kannada Weekly is recommended for High, Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 26—4—1966.

ಪ್ರಾಣ್ಯಾಂಡಿಯ
ಎಲ್ಲಾ ತರದ ಸಿದಿತ ಪುಕ್ಕ ನೋವುಗಳಿಗೆ
30 ವರ್ಷ ಪ್ರಾಯದ
ಪಾರ್ಲ ಪ್ರಾಂ

ಪ್ರಗತಿಪರ ವಿಚಾರಧಾರೆಗೆ ಇನ್ನೊಂದು ಹೆಸರು

ಮಹಾತ್ಮ ಬಸವೇಶ್ವರ

ಮಾನ್ಯ ಎಸ್. ನಿಜಲಿಂಗಪ್ಪನವರ ಭಾಷಣದ ಆಧಾರದಿಂದ

ಮಾನವತೆಯು ಅಜ್ಞಾನ, ಅಹಂಕಾರ ಅಲ್ಪತನಗಳಿಗೆ ಗುರಿಯಾಗಿ ತಪ್ಪುದಾರಿಯಲ್ಲಿ ನಡೆಯುವ ಸಂದರ್ಭದಲ್ಲಿ ಕೆಲವರು ಮಹಾತ್ಮರು ಜನಿಸುತ್ತಾರೆ, ಮಾನವ ಕಲ್ಯಾಣದ ಹಾದಿಯನ್ನು ತೋರಿಸುತ್ತಾರೆ. ಧರ್ಮವು ಗ್ಲಾನಿಗೊಂಡಾಗ, ಅಧರ್ಮವು ಹಬ್ಬತೊಡಗಿದಾಗ, ಸಾಧು— ಸಜ್ಜನರ ರಕ್ಷಣೆಗಾಗಿ, ದುರ್ಜನರ ನಾಶಕ್ಕಾಗಿ ಭಗವಂತನು ಅವತಾರ ತಾಳುತ್ತಾನೆ ಎಂಬ ಅಚಲ ವಿಶ್ವಾಸ ನಮ್ಮದು. ಇದು ಭಾರತೀಯ ಇತಿಹಾಸದಲ್ಲಿ ಮಾತ್ರವಲ್ಲ, ಜಾಗತಿಕ ಇತಿಹಾಸದಲ್ಲೂ ಹಲವು ಬಾರಿ ಸತ್ಯವೆಂಬುದು ಅನುಭವವೇದ್ಯವಾಗಿದೆ.

ಮಹಾತ್ಮಾ ಬಸವಣ್ಣನವರ ಅವತಾರವಾದುದೂ ಇಂಥಹುದೇ ಧರ್ಮಗ್ಲಾನಿಯ ಸನ್ನಿವೇಶದಲ್ಲಿ. ವಿಶ್ವಧರ್ಮದ ತಿರುಳನ್ನು ತನ್ನ ಇದುಕೆನಲ್ಲಿ ಅಳವಡಿಸಿಕೊಂಡು, ಅದನ್ನು ಜನರ ಮನೆ ಮನೆಗೆ ಸರಳ ವಿಧಾನಗಳಿಂದ ಮುಟ್ಟಿಸಿ, ಪರಿಣಾಮಕಾರಿಯೂದ ಶಾಂತ ಧಾರ್ಮಿಕಕ್ರಾಂತಿಯನ್ನು ನೇತೃತ್ವವಹಿಸಿದ ಬಸವಣ್ಣನವರು ಜನಮನದ ಅಚ್ಚುಮೆಚ್ಚಿನ ನಾಯಕರಾಗಿ ಹೃದಯಾಧಿಷ್ಠಿತ ಆರಾಧ್ಯ ಮೂರ್ತಿಯಾಗಿ ಅಮರರಾದರು.

ಮಹಾ ಪುರುಷರು ಜನಕಲ್ಯಾಣ ಚಿಂತಕರು; ಲೋಕಹಿತ ಸಾಧಕರು. ಇವರನ್ನು ಒಂದು ಧರ್ಮದ ಇಲ್ಲವೇ ಸಂಪ್ರದಾಯದ ಅಥವಾ ಒಂದು ದೇಶದ ಸೊತ್ತು ಎಂದು ಸಾಧಿಸುವುದು ಮಹಾಪರಾಧ; ಇದರಿಂದ ಸಾಧಕರ ಸಂಕುಚಿತ ಪ್ರವೃತ್ತಿಯು ತೃಪ್ತವಾದೀತೇ ಹೊರತು, ಸತ್ಯ—ನ್ಯಾಯಗಳ ದರ್ಶನವಾಗದು. ಇಂತಹ ಮಹಾ ವ್ಯಕ್ತಿಗಳ ಹುಟ್ಟು ವಿಶ್ವಕಲ್ಯಾಣ ಗರ್ಭದಿಂದ ಜನಿಸಿದೆ. ಆದುದರಿಂದ ಮಹಾತ್ಮರು ವಿಶ್ವದ ಸೊತ್ತು, ಮಾನವ ಜನಾಂಗದ ಅಮರ ಸೊತ್ತು. ಮಹಾತ್ಮಾ ಬಸವಣ್ಣನವರೂ ಅವರ ಅಮರ ವ್ಯಕ್ತಿತ್ವವೂ ಅವರ ಸಾಧನೆಗಳೂ ಜಾಗತಿಕ ಸೊತ್ತು. ಇಂತಹ ಓರ್ವ ಶಕ್ತಿ ಸಂಪನ್ನ ವ್ಯಕ್ತಿ ನಮ್ಮ ನಡುವೆ ಅವತಾರವೆತ್ತಿದ್ದರೆಂಬುದು ನಮಗೆ ಅಭಿಮಾನ.

ಸ್ವಸಂಪತ್ತೆ, ಸಮಾನತೆ ಮತ್ತು ಸಹೋದರತ್ವದ ತ್ರಿವೇಣಿ ವಿಶ್ವವ್ಯಾಪಿಯಾದುದು ಫ್ರಾನ್ಸದ ಮಹಾಕ್ರಾಂತಿ ಕಾಲದಲ್ಲಿ, ಎಂದರೆ ಸುಮಾರು ಎರಡೂವರೆ ಶತಮಾನಕ್ಕೆ ಮೊದಲು. ಆಗಲೆ, ಇದೇ ತ್ರಿವೇಣಿಯನ್ನು ಮಹಾತ್ಮಾ ಬಸವಣ್ಣನವರು ಎಂಟು ಶತಮಾನಗಳಿಗೆ ಹಿಂದೆಯೇ ಕಂಡುಕೊಂಡಿದ್ದರು. ತ್ರಿವೇಣಿಯಲ್ಲಿ ಜನ ಜನವನ್ನು ಜ್ಞಾನ ಮಾಡುವ ಹೇರಾಸೆಯನ್ನು ಇಟ್ಟುಕೊಂಡಿದ್ದರು. ಮಹಾಚಾರಗಳ ಜಟಿಲ ಜಾಲದಲ್ಲಿ ಜನತೆ ಸಿಕ್ಕು ಒದ್ದಾಡುತಿದ್ದಾಗ, ಅದಕ್ಕೆ ಭಕ್ತಿ ಮಾರ್ಗದ ಕೈದೀವಿಗೆ ತೋರಿಸಿ ಮುನ್ನಡೆಸಿದ ಮಾರ್ಗದರ್ಶಕರು ಅವರು. ಭಾವ ಶುದ್ಧಿಯಿಂದ ಕೂಡಿದ ಭಕ್ತಿ ಸಾಧನೆಯಿಂದ ಮಾನವನು ಸರ್ವ ಬಂಧನಗಳನ್ನೂ ನೀಗಿ ಶಿಷ್ಟ ಬಲ್ಲನೆಂಬುದನ್ನು ತೋರಿಸಿದವರು ಅವರು. ಜನ್ಮ, ವೃತ್ತಿ, ಸಂಸ್ಕಾರಗಳ ಮೂಲಕ ಮಾನವ ಮಾನವರಲ್ಲಿ ಉಚ್ಚ-ನೀಚ ಭಾವವನ್ನು ನಿರ್ಮಿಸಿದ ಅಂದಿನ ಸಾಮಾಜಿಕ ವೈಷಮ್ಯಗಳನ್ನು ತೊಡೆದು ಹಾಕಿದ ಧೀರರು ಅವರು. ಶುದ್ಧ ಭಕ್ತಿ, ಸದಾಚಾರ ಶಕ್ತಿಯ ಮೇಲೆ ಸಮಾಜದಲ್ಲಿ ಸಮಾನತೆಯನ್ನು ರೂಢಿಗೊಳಿಸಿದ ಕ್ರಾಂತಿ ದುರಂಧರರು.

ಈ ಬಗೆಯ ದೈವೀ ದೀಪಿಕೆ ಅವರಿಗೆ ಬಾಲ್ಯದಲ್ಲಿಯೇ ದೃಗ್ಗೋಚರವಾಯಿತು. ಸಾಂಪ್ರದಾಯಿಕ ಸಂಸ್ಕಾರಗಳನ್ನು ಅಲ್ಲಗಳೆದು ಅವರು 'ಬಾಗೇವಾಡಿಯ ಮನೆ ತೊರೆದ ಕೂಡಲ ಸಂಗಮದ ದುರುಳರ ಸೇರಿದರು. ಅಷ್ಟ ಧ್ಯಾನ ಅಂಕನೆ, ಸಾಧನೆಗಳಲ್ಲಿ ತೊಡಗಿ ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಂಡರು.

ಕಲ್ಯಾಣದ ಜಾಲುಕ್ಯರ ಪ್ರಭಾವ ಆಗತಾನೇ ಕುಂದಿತ್ತು. ಕಲಚೂರ್ಯ ಬಿಜ್ಜಳನು ರಾಜ್ಯ ಸೂತ್ರಗಳನ್ನು ಹಿಡಿದಿದ್ದನು. ಬಸವಣ್ಣನವರ ಸೋದರ ಮಾವ ಬಲದೇವ ಅವನ ಮಂತ್ರಿಯಾಗಿದ್ದನು. ಮಾವನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನವರು ಮದುವೆಯಾದುದರಿಂದ ಇವರೂ ಕಲ್ಯಾಣಕ್ಕೆ ಬಂದರು. ಬಿಜ್ಜಳನು ಬಸವಣ್ಣನವರ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ತನ್ನ ಆಸ್ಥಾನದಲ್ಲಿ ಸೇರಿಸಿಕೊಂಡನು. ತಮ್ಮ ಬುದ್ಧಿ ಮತ್ತೆ, ಸಾಮರ್ಥ್ಯ, ವ್ಯಕ್ತಿತ್ವಗಳಿಂದ ಬಸವಣ್ಣನವರು ರಾಜನಿಂದ ಲೆಕ್ಕನ ಏರಿಗೂ ಪ್ರೀತರೆನಿಸಿದರು. ಬಲದೇವನು ನೃತ್ಯಮುಖಾದ ಬಳಿಕ ಬಸವಣ್ಣನವರೇ ಮಂತ್ರಿಯಾದರು. ಇದು



ಶ್ರೀ ಎಸ್. ನಿಜಲಿಂಗಪ್ಪ

ಕೆಲವು ಪಟ್ಟಭದ್ರ ಹಿತಾಸಕ್ತರನ್ನು ರೇಗಿಸಿತು. ಬಸವಣ್ಣನವರು ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ, ಜನಜಾಗೃತಿಗೆ ಕಾರ್ಯಕ್ಕೆ ಓನಾಮ ಹಾಕಿದ್ದರು. ಇದು ಯಶಸಳಿಸಿತು; ಅವರ ಹಿರಿಮೆಯೂ ಬೆಳೆಯಿತು. ಸಂಪ್ರದಾಯವಾದಿಗಳಿಗೆ ಇದೊಂದು ಒಲ್ಲದ ತುತ್ತಾಯಿತು. ಬಸವಣ್ಣನವರು ಜಾತಿ, ಮತಗಳ ಮೇಲು—ಕೀಳು ಭಾವನೆಗಳನ್ನು ಕೂಡ ಮಾಡಲು ಮುಂದಾದಾಗ, ಅವರು ವರ್ಣ ಸಂಕರದ ಅಕ್ಷೇಪವೆತ್ತ ತೊಡಗಿದರು. ಪ್ರಗತಿಪರ ಮನೋಭಾವ ಮತ್ತು ಸಂಪ್ರದಾಯ ಪ್ರಿಯತೆಗಳ ನಡುವೆ ಮಹಾ ಸಂಗ್ರಾಮ ಆರಂಭವಾಯಿತು. ಇದು ದೊಡ್ಡ ಹಿಂಸಾಕಾಂಡಕ್ಕೆ ನಾಂದಿ ಹಾಕಬಹುದೆಂದೂ ತೋರಿತು. ಸುಲಭವಾಗಿಯೇ ಅಧಿಕಾರವನ್ನು ತ್ಯಜಿಸಿ ಬಸವಣ್ಣನವರು ಕೂಡಲ ಸಂಗಮ ಕ್ಷೇತ್ರವನ್ನು ಸೇರಿದರು. ಅಲ್ಲಿದ್ದುಕೊಂಡು ಸರ್ವ ಸಮಾನತೆಗಾಗಿ ಹೋರಾಡುವ ತನ್ನ ದೀಕ್ಷೆಯಿಂದ ತಿಲಾಂಶವೂ ಕದಲಲಿಲ್ಲ.

ಎನಗಿಂತ ಕಿರಿಯರಿಲ್ಲ
ತಿವಭಕ್ತರಿಗಿಂತ ಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ
ಕೂಡಲ ಸಂಗಮದೇವ, ಎನಗಿದೇ ದಿವ್ಯ.

ಎಂದು ಸಾರಿದ ಬಸವಣ್ಣನವರು ಮಾನವತೆಯ ಪಾರವನ್ನು ಕಲಿಸಿದರು.

ಜಾತಿವಿಡಿದು ಮೂಢಕವನರಸುವೆ
ಜ್ಯೋತಿವಿಡಿದು ಕತ್ತಲೆಯನರಸುವೆ
ಇದೇನೋ ಮರುಳು ಎಂದನವಾ?
ಜಾತಿಯಲ್ಲಿ ಅಧಿಕನೆಂಬೆ,
ವಿಪ್ರಶತಕೋಟಿಗಳಿದ್ದಲ್ಲಿ ಫಲವೇನು?
ಭಕ್ತ ಶಿವಾಮಣಿ ಎಂಬುದು ವಚನ
ನಮ್ಮ ಕೂಡಲ ಸಂಗನ ಶರಣರ ಸಾಮ
ಪರುಷವನಂಬಾ, ಕೆಡಬೇಡ ಮಾನವಾ,

ಎಂದು ಹೇಳಿದ ಅವರ ವಚನದಲ್ಲಿ ಜಾತ್ಯತೀತ ಸಮಾಜದ ಮೂಲವಿದೆ.

(ಪದಿನಾಲ್ಕನೇ ಪುಟ ನೋಡಿರಿ)

ನಮ್ಮ ನೂತನ ತಯಾರಿಕೆ

ಟಾನಿಕ್ ಪಿಲ್ಸ್

(ಆಯುರ್ವೇದಿಯ ಕೇಲ್ಸಿಯಂ ಮಾತ್ರೆಗಳು)

ಪ್ರಧಾನ ದ್ರವ್ಯ: ಪ್ರವಾಳ — ಶಂಖ — ಕಪರ್ದಿಕ — ಶೃಂಗ — ಮುಕ್ತಾ ಶುಕ್ತಿ — ಗೋದಂತಿ.

ಮುಖ್ಯ ಗುಣ: ಮಕ್ಕಳಿಗೆ ಹಲ್ಲು ಬರುವಾಗ ಕಾಣಿಸುವ ತೊಂದರೆಗಳು—ಅಪಚನ—ಅತಿಸಾರ— ಜ್ವರ —ಸೊರಗುವಿಕೆ. ಕುಂಠಿತ ಬೆಳವಣಿಗೆ — ಮೃದ್ವಸ್ಥಿ (ರಿಕೆಟ್ಸ್) ಶೋಷ ಇತ್ಯಾದಿ. ಗರ್ಭಿಣಿ ಮತ್ತು ಬಾಣಂತಿಯರಿಗೆ — ಕೇಲ್ಸಿಯಂ ಅಭಾವದಿಂದಾಗಿ ಕಾಣಿಸುವ ಆಯಾಸ-ಅಲಸ್ಯ.

ಪಾಚಕಾಂಗಗಳ ತೊಂದರೆಗಳು: ಅಂತ್ರದಾಹ—ಶೋಥ— ಆಮಾಶಯ— ಪಕ್ವಾಶಯಗಳಲ್ಲಿ ಅಧಿಕ ಪಿತ್ತಸ್ರಾವ—ಆಮ್ಲಪಿತ್ತ— ಅತಿಸಾರ—ಸಂಗ್ರಹಣಿ.

ಅಲ್ಲದೆ ರಕ್ತದಲ್ಲಿ ಉಷ್ಣಾಧಿಕ್ಯ—ದಾಹ (ಉರಿ) ಶೋಷ— ಜಡತೆ—ದೂಷಿತ ಪಿತ್ತ ವಿಕಾರಗಳಲ್ಲಿ ಗುಣಕಾರಿ.

ಪ್ರಮಾಣ: ಒಮ್ಮೆಗೆ ಎರಡು ಮಾತ್ರೆಗಳಂತೆ ದಿನಕ್ಕೆರಡು ಸಾರಿ ಜೇನುತುಪ್ಪದೊಂದಿಗೆ ಸೇವಿಸುವುದು

ಮಕ್ಕಳಿಗೆ: ಅರ್ಧದಿಂದ ಒಂದು ಮಾತ್ರೆ

ಪ್ಯಾಕಿಂಗ್: 100 ಮಾತ್ರೆ ರೂ. 55, 55, 110 ಮಾತ್ರೆಗಳ ಸೀಸೆಗಳು.

ವೈದ್ಯ ವ್ಯವಸಾಯಿಗಳಿಗೆ ಉಚಿತ ಮಾದರಿಗಾಗಿ ಕ್ರಯಪತ್ರಿಕೆ ಬರೆಯಬೇಕಾಗಿ ಕೋರಿಕೆ.

ತಯಾರಕರು:

ಸ್ವದೇಶಿ ಔಷಧಾಲಯ ಭಂಡಾರ (ರಿ.)

ಬಾಗಲಕೋಟೆ

ಶಿವದಾಸ ಗೀತೆಗಳ ಕಾಣಿಕೆ

ಲೇಖಕರು — ಶ್ರೀ ಎಲ್. ಬಸವರಾಜು

ಹರಿದಾಸರೆಂದರೆ ಹರಿಶರಣರು, ಶಿವದಾಸರೆಂದರೆ ಶಿವಶರಣರು. ಶಿವದಾಸ—ಹರಿದಾಸರೆರ್ವರೂ ರಾಗ ತಾಳ ನಿರ್ದಿಷ್ಟವಾದ ಗೇಯಕೃತಿಗಳನ್ನು ಕನ್ನಡದಲ್ಲಿ ಬರೆದಿಳುವರು. ಈ ಬಗ್ಗೆ ವಿವಾದಾಸ್ಪದವಾದುದೇನೂ ಇಲ್ಲ. ಆದರೆ ಗಣನೇಕಳನೂಳದ ಹರಿದಾಸರಿಗಿಂತ ಪೂರ್ವದಲ್ಲಿ ಯೇ ಗಣನೀಯ ಶತಮಾನದ ಬಸವಾದಿ ಶಿವದಾಸರು ಹಾಡುಗಳನ್ನು ಬರೆದಿರುವರೆಂದರೆ, ಅದಕ್ಕಿಂತ ಮಿಗಿಲಾಗಿ—ಹರಿದಾಸರು ವಚನಗಳನ್ನು ಬರೆದಿರುವರೆಂದರೆ, ಶಿವದಾಸರು ಉಗಾಭೋಗಗಳನ್ನು ಬರೆದಿರುವರೆಂದರೆ, ಯೋಗಿಗಾದರೂ ಆಶ್ಚರ್ಯವಾಗದಿರದು. ಈ ಪ್ರಪಂಚದಲ್ಲಿ "ಸತ್ಯ"ವೆನ್ನುವುದು ಪರಮಾಶ್ಚರ್ಯಕರವಾಗಿದ್ದರೂ ಅದರಲ್ಲಿ ಅವಾಸ್ತವ ಅಂಶವಿಲ್ಲ.

ಪುರಂದರದಾಸರ ಈ ಒಂದು ಉಗಾಭೋಗವನ್ನು ಕೇಳಿ:

"ಜಗವ ಸುತ್ತಿಹುದೆಲ್ಲ ನಿನ್ನ
ಮಾಯವಯ್ಯ! ನಿನ್ನ ಸುತ್ತಿಹುದೆಲ್ಲ
ಎನ್ನ ಮಾಯವಯ್ಯ! ಜಗವು
ನಿನ್ನೊಳಗೆ ನೀನು ಎನ್ನೊಳಗೆ,
ಜಗಕೆ ಬಲ್ಲಿದ ನೀನು, ನಿನಗೆ ಬಲ್ಲಿದ
ನಾನು! ಕರಿಯು ಕನ್ನಡಿ—
ಯೊಳಗೆ ಅಡಗಿಪ್ಪ ತೆರನಂತೆ, ನೀನು
ಎನ್ನೊಳಡಗಿಪ್ಪೆ ಪುರಂದರ ವಿಠಲ."

ಇದನ್ನು ಬಸವಣ್ಣನವರ ಈ ಮುಂದಣ ವಚನದೊಡನೆ ಹೋಲಿಸಿ:

"ಜಗವ ಸುತ್ತಿಹುದು ನಿನ್ನ ಮಾಯಯಯ್ಯ! ನಿನ್ನ ಸುತ್ತಿಹುದು ಎನ್ನ ಮನ ನೋಡಯ್ಯ!!
ನೀನು ಜಡಕ್ಕ ಬಲ್ಲಿದನು, ನಾನು ನಿನಗೆ ಬಲ್ಲಿದನು ಕಂಡಯ್ಯ; ಕರಿಯು ಕನ್ನಡಿಯೊಳಡಗಿದಂತಯ್ಯ, ಎನ್ನೊಳಗೆ ನೀನಡಗಿದೆ ಕೂಡಲ ಸಂಗಮದೇವ"

ಉಗಾಭೋಗವೆನಿಸಿಕೊಂಡ ಪುರಂದರದಾಸರ ಮೊದಲನೇ ಉಕ್ತಿಗೂ, ವಚನವೆನಿಸಿಕೊಂಡ ಬಸವಣ್ಣನವರ ಮೂರನೇ ಉಕ್ತಿಗೂ ಬಂಧದಲ್ಲಾಗಲಿ, ರಚನ ರೀತಿಯಲ್ಲಾಗಲಿ ಏನು ವ್ಯತ್ಯಾಸವಿದೆ? ಇರುವ ಒಂದೇ ಒಂದು ಗಮನಾರ್ಹವಾದ ವ್ಯತ್ಯಾಸವೆಂದರೆ— ಒಂದರಲ್ಲಿ ಪುರಂದರ ವಿಠಲ ಎಂಬ ಅಂಕಿತವಿದ್ದರೆ, ಇನ್ನೊಂದರಲ್ಲಿ ಕೂಡಲ ಸಂಗಮಯ್ಯ ಎಂಬುದಿದೆ.

ಒಂದೇ ಪ್ರಕಾರದ ಈ ಕೃತಿಗಳನ್ನು ಶಿವದಾಸರು "ವಚನ"ವೆಂದು ಕರೆದರೆ ಹರಿದಾಸರು "ಉಗಾಭೋಗ"ವೆಂದು ಕರೆದರು. ಉಗಾಭೋಗವೆಂದರೆ ತಾನೇ ಏನು? ಇದನ್ನು ವಿವರಿಸುವಲ್ಲಿ ಸಂಗೀತ—ವಿದ್ವಾಂಸರೊಳಗೆ ಏಕಾಭಿಪ್ರಾಯವಿಲ್ಲ. ಆದರೂ ಅವರೆಲ್ಲರೂ ಉಗಾಭೋಗದ ಸಂಬಂಧವಾಗಿ ಒಪ್ಪಿಕೊಳ್ಳುವ ಸಾಮಾನ್ಯ ಲಕ್ಷಣವೇನೆಂದರೆ "ಈ ಗೇಯ ಪ್ರಕಾರದಲ್ಲಿ ಪಲ್ಲವಿ—ಅನುಪಲ್ಲವಿ—ಚರಣ ಎಂಬ ವಿಭಾಗಗಳಿಲ್ಲ. ಅದು ನಿರ್ದಿಷ್ಟವಾದ ರಾಗ—ತಾಳದ ಅಂಕೆಗೆ ಒಳಗಾಗಿರುವುದೂ ಇಲ್ಲ—ಅದೊಂದು ಸರಳವಾದ ರಚನೆ ಮಾತ್ರ" ಎಂದು. ಬಸವಣ್ಣನವರಾದರೂ ತಮ್ಮ ವಚನಗಳ ಸಂಬಂಧವಾಗಿ ಹೇಳಿರುವುದಿಷ್ಟೇ:

"ತಾಳ—ಮೇಳ ಸರಿಸವಳರಿಯೆ!
ಓಜೆ ಬಜಾವಣೆಯ ಲೆಕ್ಕವನರಿಯೆ!
ಅವ್ಯತಗಣ—ದೇವಗಣನರಿಯೇ!
ಕೂಡಲ ಸಂಗಮ ದೇವ, ನಿನಗೆ
ಕೇಡಿಲ್ಲವಾಗಿ ನಾನು ಒಲಿದಂತೆ
ಹಾಡುವೆ!"

ಆದುದರಿಂದ ವಚನವೆಂದರಾಗಲಿ, ಉಗಾಭೋಗವೆಂದರಾಗಲಿ ಅವು ಒಂದೇ ವಿಧವಾದ ಗೇಯ ಕೃತಿ ಪ್ರಕಾರಕ್ಕಿರುವ ಎರಡು ಬೇರೆ ಬೇರೆ ಹೆಸರುಗಳು. ಅವನ್ನು ಹಾಡುವ ಸಂಪ್ರದಾಯ ಅವುಗಳ ರಚನಾ ಕಾಲದಷ್ಟೇ ಹಳೆಯದು. ಒಟ್ಟಿನಲ್ಲಿ ವಚನ ಅಥವಾ ಉಗಾಭೋಗವೆಂಬುದು ಲಯಪ್ರಧಾನ ಮಾತ್ರವಾಗಿದ್ದು ನಿರ್ದಿಷ್ಟ ಛಂದೋ ನಿರ್ಬಂಧವಿಲ್ಲದ, ಮತ್ತು ಗೇಯ ದೃಷ್ಟಿಯಿಂದ ಸರಾಗವಾಗಿದ್ದು—ನಿರ್ದಿಷ್ಟ ರಾಗ ತಾಳಗಳ ಕಟ್ಟುನಿಟ್ಟಿಲ್ಲದ ಸರಳವಾದೊಂದು ಗೇಯ ಕೃತಿ ಪ್ರಕಾರವೆನ್ನಬಹುದು.

ತಮ್ಮ ಉಕ್ತಿಗೆ ಶಿವದಾಸ ಪಂಥದವರು ಈ ಮೇಲಣ ವಚನ (ಅಥವಾ ಉಗಾಭೋಗ) ಬಂಧವನ್ನು ಮಾಧ್ಯಮವಾಗಿ ಹೆಚ್ಚು ಬಳಕೆಗೆ ತಂದರೆ, ಹರಿದಾಸಪಂಥದವರು ರಾಗತಾಳವಿಶಿಷ್ಟವಾದಪಲ್ಲವಿ-ಅನುಪಲ್ಲವಿ-ಚರಣವಿಭಕ್ತವಾದ ಹಾಡುಗಳನ್ನು ಹೆಚ್ಚು ಬಳಕೆಗೆ ತಂದರು. ಈ ಎರಡೂ ಪಂಥದವರು-ವ್ಯಷ್ಟಿಯ ಉದ್ಧಾರಕ್ಕಾಗಿಯೂ, ಆ ಮೂಲಕ ಸಮಷ್ಟಿಯ ಸುಧಾರಣೆಗಾಗಿಯೂ, ತಮ್ಮ ಭಕ್ತಿ-ಜ್ಞಾನ-ವೈರಾಗ್ಯ ಭಾವನೆಗಳನ್ನೂ, ತಾವು ಜೀವಿಸಿದ ದಿವ್ಯ ಜೀವನದ ರೀತಿನೀತಿಗಳನ್ನೂ ಈ ಎರಡೂ ಪ್ರಕಾರಗಳಲ್ಲಿ ಹೆಚ್ಚು ಹೆಚ್ಚು ಜನಪ್ರಿಯವಾಗುವಂತೆ ಅಭಿವ್ಯಕ್ತಗೊಳಿಸಿದರು. ವ್ಯಾಚುರ್ಯ ದೃಷ್ಟಿಯಿಂದ ವಚನವೆಂದಾಗ ಶಿವದಾಸರೂ, ಹಾಡು ಅಥವಾ ಕೀರ್ತನೆಗಳೆಂದಾಗ ಹರಿದಾಸರೂ ಥಟ್ಟನೆ ನಮ್ಮ ನೆನಪಿಗೆ ಬರುವರಾದರೂ ಶರಣರು ಕೀರ್ತನೆಗಳನ್ನಾಗಲಿ, ಹರಿದಾಸರು ವಚನಗಳನ್ನಾಗಲಿ ಬರೆಯಲಿಲ್ಲವೆನ್ನಲಾಗದು. ಹರಿದಾಸರು ವಚನಗಳನ್ನು ಬರೆದುದು ದಿವದ ಬೆಳಕಿನಷ್ಟು ದಿಟ. ಶಿವದಾಸರು ರಾಗತಾಳ ವಿಶಿಷ್ಟವಾದ ಹಾಡುಗಳನ್ನು ಬರೆದುದೂ ದಿಟ. ಆಷ್ಟೇ ಅಲ್ಲ ಅವನ್ನು ಅವರು ಹರಿದಾಸರಿಗಿಂತ ಕಡೆಯ ಪಕ್ಷ ಮುನ್ನೂರು ವರ್ಷಗಳಿಗೆ ಮುಂಚೆಯೇ ಬರೆದರು.

ಸು. ೧೨೨೫ರ ವೀರಾಲಿಂಗ ಮತ್ತು ಅವನ ಶಿಷ್ಯಖಾದ ಜಕ್ಕಣನೂ ತಮ್ಮ "ಏಕೋತ್ತರ ಶತಸ್ಥಲ"ವೆಂಬ ಗ್ರಂಥದಲ್ಲಿಯೂ ಅವರಾದ ಮೇಲೆ ಖಂಡ ಶಿವಲಿಂಗ ದೇವನು ತನ್ನ "ಶಿವಯೋಗ ಪ್ರದೀಪಿಕೆ"ಯಲ್ಲಿಯೂ, ಕ್ರಿ. ಶ. ೧೪೫೦—೧೫೫೦ರ ಹಾಳುಬೀಸಿನಲ್ಲಿ ಶೂನ್ಯ ಸಂಪಾದನೆಯನ್ನು ರೂಪಿಸಿ ಪರಿಷ್ಕರಿಸಿದ ಶಿವಗಣ ಪ್ರಸಾದಿ ಮಹಾದೇವಯ್ಯ, ಹಲಗೆಸೂರ್ಯ, ಮುಮ್ಮಡಿ ಪುರದ ಸಿದ್ಧಲಿಂಗ ಮತ್ತು ಗೊಳೂರು ಸಿದ್ಧವೀರಾಯರು ಶೂನ್ಯ ಸಂಪಾದನೆಯ ತಮ್ಮ ತಮ್ಮ ಪಾಠಗಳಲ್ಲಿಯೂ ಶಿವದಾಸರ ಹಾಡುಗಳನ್ನು ಜನಪದ ಸಾಹಿತ್ಯದಾಳದಿಂದ ಎತ್ತಿ ಉಲ್ಲೇಖಿಸಿ ಕರ್ನಾಟಕ ಸಾಹಿತ್ಯ ಮತ್ತು ಸಂಗೀತದ ಅಪೂರ್ವ ಕೃತಿರತ್ನಗಳನ್ನು ನಮಗೆ ದೊರಕಿಸಿ ಕೊಟ್ಟಿರುವರು. ಇವರೆಲ್ಲರೂ ವೀರಶೈವ ತತ್ವ ಮತ್ತು ಸಿದ್ಧಾಂತಗಳನ್ನೇ ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡು ಅವುಗಳ ನಿರೂಪಣೆಗೆ ಪರಮ ಪ್ರಮಾಣವೆಂಬ ದೃಷ್ಟಿಯಿಂದ ಅದಕ್ಕೆ ಅನುವಾಗುವಂತಹ ಹಾಡುಗಳನ್ನೇ ಆಯ್ದು ಉಲ್ಲೇಖಿಸುವುದಂದಂದ ಅವು ಭಾವದಲ್ಲಿಯಾಗಲಿ ಬಂಧದಲ್ಲಿಯಾಗಲಿ ಸಂಶಯವಾಗಿಲ್ಲವಾದರೂ, ಭವ್ಯವಾಗಿವೆ.

ಕಿನ್ನರಿ, ವೀಣೆ, ದಂಡಿಗೆ, ತಾಳ ಮುಂತಾದವುಗಳ ಹಿಮ್ಮೇಳದಲ್ಲಿ ಶಿವದಾಸರು ತಮ್ಮ ಗೀತೆಗಳನ್ನು ಹಾಡುತ್ತಿದ್ದರೆನ್ನಲು ವೀರಶೈವ ಸಾಹಿತ್ಯದಲ್ಲಿ ಬೇಕಾದಷ್ಟು ಸಾಕ್ಷ್ಯಾಧಾರಗಳಿವೆ. ಮಾದುಳಸಿದ್ಧನ ಕಿನ್ನರಿ, ಸಂಲೇಶ ಮಾದರಸನ ವೀಣೆ, ಬಸವಣ್ಣನ ದಂಡಿಗೆ, ಬಾಹೂರ ಬ್ರಹ್ಮಯ್ಯನ ತಾಳ—ಇವು ರೂಢಿಯ ಮಾತಾಗಿವೆ.

ವೀರಶೈವ ಅಧ್ಯಾತ್ಮಿಕ ಪ್ರಪಂಚದಲ್ಲಿ ಗಾನದಿಂದಲೇ ಶಿವನನ್ನು ಒಲಿಸಿ ಮುಕ್ತಿಯನ್ನು ಪಡೆದವರುಂಟು—ಈ ಸಂಬಂಧ ಸಳಲೇಶ ಮಾದರಸ, ಕನ್ನರ ಬ್ರಹ್ಮಯ್ಯ, ಸಿದ್ಧಬುದ್ಧಯ್ಯ, ಭದ್ರಗಾಯಕ ಮುಂತಾದವರು ಸ್ಮರಣೀಯರು.

"ನಾದ ಪ್ರಿಯ ಶಿವನೆಂಬರು ನಾದ ಪ್ರಿಯ ಶಿವನಲ್ಲಯ್ಯ" ಎಂದು ಹೇಳುವಲ್ಲಿ ಬಸವಣ್ಣನವರ

(ಹದಿಮೂರನೇ ಪುಟ ನೋಡಿರಿ)

With best compliments from

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding, Lodging & Restaurant

Phone— 72381 (5 lines) Grams— HOTELTOUR

ಬೆಂಗಳೂರು ಮಹಾನಗರದ ಕೇಂದ್ರಸ್ಥಾನದಲ್ಲಿರುವ ಮಹೋನ್ನತ ಊಟ ಮತ್ತು ವಸತಿ ಗೃಹ

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ

150 ಕೊಠಡಿಗಳ ಅತ್ಯಾಧುನಿಕ ವಿಶ್ರಾಂತಿ ಮತ್ತು ವಸತಿ ಗೃಹ

ರೇಸ್ ಕೋರ್ಸ್ ರೋಡು, ಆನಂದ ರಾವ್ ಸರ್ಕಲ್

ಬೆಂಗಳೂರು — 9

ಪ್ರೊ: ಕೆ. ಗುರುರಾಜಾಚಾರ್

ವಿಶೇಷ ಲೇಖನ

ಬಸವೇಶ್ವರರ ಜೀವನ ಮತ್ತು ಪಾಠಗಳು

ಶ್ರೀ ಸಿ. ಎಚ್. ಪ್ರಹ್ಲಾದ ರಾವ್

ಕರ್ನಾಟಕದ ಗೌರವಾನ್ವಿತ ಪುಣ್ಯ ಪುರುಷ ಜಗಜ್ಯೋತಿ ಬಸವೇಶ್ವರರ ಎಂಟನೇ ಶತಮಾನೋತ್ಸವವು ಉಚಿತ ರೀತಿಯಲ್ಲಿ ಕಳೆದ ದಶಂಬರದಿಂದ ಸೋ ವರೆಗೆ ಮೈಸೂರು ರಾಜ್ಯದಲ್ಲಿ ಆಚರಿಸಲ್ಪಡುತ್ತಿದೆ. ಬಸವೇಶ್ವರರು ಸಮಾಧಿ ಪಡೆದದ್ದು ೧೧೬೭ರಲ್ಲಿ.

ಸಮಗ್ರ ಮೈಸೂರು ರಾಜ್ಯದಲ್ಲಿ ಈ ಉತ್ಸವವು ಆಚರಿಸಲ್ಪಡುವುದಾದರೂ ಬಸವಣ್ಣನವರು ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದ ಕೂಡಲ ಸಂಗಮ, ಬಸವ ಕಲ್ಯಾಣ, ಬಾಗೇವಾಡಿ ಮತ್ತು ಉಳಿದಿಳ್ಳಲ್ಲಿ ಈ ಉತ್ಸವವು ವೈಭವಪೂರಿತವಾಗಿ ಆಚರಿಸಲ್ಪಡಲು ಏರ್ಪಾಟುಗಳಾಗಿವೆ.

ಕೂಡಲ ಸಂಗಮದ ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ಹಾಗೂ ಅಲ್ಲೊಂದು ವಿಶ್ರಾಂತಿ ಗೃಹವನ್ನು ಕಟ್ಟಲು ವಿಸ್ತಾರವಾದ ವ್ಯವಸ್ಥೆಗಳು ಮಾಡಲ್ಪಡುತ್ತಿವೆ. ಕೂಡಲಸಂಗಮವನ್ನು ಪ್ರವಾಸಿಗಳ ಆಕರ್ಷಣೀಯ ಕೇಂದ್ರವಾಗಿ ಮಾರ್ಪಡಿಸಲು ಅಲ್ಲಿ ಪ್ರವಾಸಿ ಮಂದಿರಗಳು ಹಾಗೂ ವಿಶ್ರಾಂತಿ ಗೃಹಗಳಿಗಾಗಿ ಒಂದು ಹಿರಿಯ ಯೋಜನೆಯನ್ನೇ ಕೈಗೊಳ್ಳಲಾಗಿದೆ. ಬಸವ ಕಲ್ಯಾಣದಲ್ಲಿ ಒಂದು ಪ್ರವಾಸಿ ಮಂದಿರವನ್ನು ಈಗಾಗಲೇ ರಚಿಸಲಾಗಿದೆಯಲ್ಲದೆ ಸಂದರ್ಶಕರ ಮಾರ್ಗದರ್ಶನಕ್ಕಾಗಿ ಪ್ರವಾಸಿ ಗೈಡ್ ಒಬ್ಬರನ್ನು ನೇಮಿಸಲಾಗಿದೆ.

ಈ ಉದ್ದೇಶಕ್ಕಾಗಿ ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆಯಲ್ಲದೆ ರಾಜ್ಯ ಸರಕಾರವು ಹಲವಾರು ಯೋಜನೆಗಳನ್ನು ಈ ಸಮಿತಿಯ ಮೂಲಕ ಕಾರ್ಯಪಡಿಸಲು ಏರ್ಪಾಡಿಸಿದೆ. ಈ ಸಮಿತಿಯು ಬಸವೇಶ್ವರರ ಸ್ಮಾರಕ ಸಂಚಿಕೆಯನ್ನು ಪ್ರಕಟಿಸುವುದಲ್ಲದೆ ಅವರ ಜೀವನ ಮತ್ತು ಸಾರಗಳ ಕುರಿತಾದ ಒಂದು ಚಲಚ್ಚಿತ್ರವನ್ನು ತಯಾರಿಸುತ್ತದೆ. ಭಾರತದ ಅಂಚೆ ಇಲಾಖೆಯು ಬಸವೇಶ್ವರರ ಎಂಟನೇ ಶತಮಾನೋತ್ಸವದ ಸಂದರ್ಭ ಒಂದು ವಿಶೇಷ ಅಂಚೆ ಚೀಟಿಯನ್ನು ಈ ತಿಂಗಳಲ್ಲಿ ಹೊರಡಿಸುತ್ತದೆ.

ಬಸವ ಜಯಂತಿಯು ಪ್ರತಿ ವರುಷವೇ ತಿಂಗಳಲ್ಲಿ ರಾಜ್ಯದಾದ್ಯಂತ ಆಚರಿಸಲ್ಪಡುತ್ತಿರುವುದಾದರೂ, ಈ ವರ್ಷ, ಶತಮಾನೋತ್ಸವದ ದೆಸೆಯಿಂದ, ಈ ಉತ್ಸವದ ಮಹತ್ವ ಹೆಚ್ಚಿದೆ.

ಬಸವೇಶ್ವರರು ಅಭ್ಯಾಯಿಕೆಯಲ್ಲಿ ಪ್ರವೇಶಿಸಿದ ಎಂಟುನೂರು ವರುಷಗಳ ಬಳಿಕ ಅವರ ಜೀವನ ಮತ್ತು ಬೋಧನೆಗಳು ಕಾಂತಿಯನ್ನು ಪಡೆದುದಲ್ಲದೆ ಮಹತ್ವವನ್ನು ಗಳಿಸಿವೆ. ಅವರು ಬುದ್ಧ ಮತ್ತು ಏಸುಕ್ರಿಸ್ತರ ಕಾಲದ ಬಳಿಕ ಹುಟ್ಟಿ, ಮಹಾತ್ಮಾ ಗಾಂಧೀಜಿಯವರ ಜನನವನ್ನು ಪೂರ್ವಕ್ಷಿಸಿದರು. ಈ ಮಹಾತ್ಮರ ಜೀವನ ಮತ್ತು ಪಾಠಗಳಲ್ಲಿ ಕುತೂಹಲಕಾರಿಯಾದ ಸಮಾನತೆಗಳು ಹಾಗೂ ಬೇಧಗಳು ಇರುವುದಾದರೂ, ಎಲ್ಲರ ಮೂಲ ತತ್ವವಾದ ಮಾನವತೆಯು ಅವರ ಕುರಿತು ಉದಾತ್ತ ಭಾವನೆ ಮೂಡುವಂತೆ ಮಾಡಿದೆ.

ಕನ್ನಡ ಸಂಸ್ಕೃತಿಯ ಸುಮಧುರ ಕುಸುಮವಾದ ಬಸವೇಶ್ವರರು, ಭಾರತದ ಜನತೆಯ ಕುರಿತಾಗಿ ವರ್ಣ, ಜಾತಿ ಮತ್ತು ಲಿಂಗಗಳನ್ನು ಮರೆತು ಮಾನವಾದಿದ ವಿಭೂತಿ ಪುರುಷರಲ್ಲಿ ಒಬ್ಬರಾಗಿದ್ದಾರೆ. ದುರಹಂಕಾರದಿಂದ ತುಂಬಿದ ಈ ಸಮಾಜದಲ್ಲಿ ಅವರು ಶಾಂತಿ ಮತ್ತು ಮಾನವತಾ ಸೌಹಾರ್ದದ ಸಂದೇಶವನ್ನು ಸಾರಿ ಹರಡಿದರು. ಅನುಕಂಪಭರಿತವಾದ ಅವರ ಬೋಧನೆಗಳು, ಅವರ ಕಾಲದ ಶತಮಾನಗಳ ಭವಿಷ್ಯದಲ್ಲಿ, ಗೊಂದಲಪೀಡಿತ ಮಾನವ ಸಮಾಜಕ್ಕೆ ಒಂದು ಕೊಡುಗೆಯಾಗಿದೆ.

ರಾಮ, ಕೃಷ್ಣ, ಬುದ್ಧರ ಜನನದಂತೆ, ಬಸವೇಶ್ವರರ ಜನನವೂ ಒಂದು ಅವತಾರವೆಂದು ಪರಿಗಣಿಸಲ್ಪಟ್ಟಿದೆ, ಅಲ್ಲದೆ ಅ ಕುರಿತು ಒಂದು ದಿವ್ಯವಾದ ಕಥೆಯೂ ಇದೆ.

ಮಕ್ಕಳಿಲ್ಲದ ಮಾದರಸ ಮತ್ತು ಮಾದರಾಂಬಿಕೆ ಎಂಬ ಬ್ರಾಹ್ಮಣ ದಂಪತಿಗಳು, ನಂದಿಕೇಶ್ವರನನ್ನು ಧ್ಯಾನಿಸಿ, ಅವನ ಕೃಪಾಕಟಾಕ್ಷದಿಂದ ಜನಿಸಿದ ಮಗುವಿಗೆ ಬಸವ ಎಂಬ ನಾಮಕರಣ ಮಾಡಲಾಯಿತು. ಹುಟ್ಟಿದ ಆ ಮಗುವು ನಿಶ್ಚಲವಾಗಿದ್ದು, ಯಾವ ಕೂಗನ್ನೂ ಮಾಡದೆ ಕಣ್ಣುಮೆಗಳನ್ನು ತೆರೆಯದೆ ವಿಚಿತ್ರ ಸ್ಥಿತಿಯಲ್ಲಿತ್ತು. ಈ ಅವಸ್ಥೆಯನ್ನು ಕಂಡ ತಂದೆತಾಯಿಗಳು ಕೋಕದಲ್ಲಿದ್ದರೆ. ಆದರೆ ಈ ಕೋಕ ಕಾಲ ಇರಲಿಲ್ಲ.

ದೈವ ಅಭ್ಯಾಯೋ ಎಂಬಂತೆ, ಜಾತವೇದ ಮುನಿಗಳೆಂಬ ಯೋಗಿಗಳು, ಆ ದಿನ ಬಾಗೇವಾಡಿಗೆ ಬಂದವರು ಈ ಸಂದರ್ಭದಲ್ಲಿ ಕಾಣಿಸಿಕೊಂಡರು. ನಿಶ್ಚಲವಾಗಿದ್ದ ಮಗುವನ್ನು ಕಂಡ ಜಾತವೇದ ಮುನಿಗಳು, ದೈವ ಕಟಾಕ್ಷವನ್ನು ಆಹ್ವಾನಿಸಿ, ಪವಿತ್ರವಾದ ಭಸ್ಮವನ್ನು ಮಗುವಿನ ದೇಹದ ಮೇಲೆ ಪ್ರಯೋಗಿಸಿದರು. ಕೂಡಲೇ ಮಗು ಕೂಗಲಾರಂಭಿಸಿತು. ಆನಂದ ತುಂದಿಲರಾದ ದಂಪತಿಗಳು ಮಗುವನ್ನು ಮುನಿಗಳ ಪಾದತಳದಲ್ಲಿಟ್ಟರು. ಮುನಿಗಳು ಮಗುವಿಗೆ ಬಸವ ಎಂಬ ನಾಮಕರಣವನ್ನು ಮಾಡಿ, ರಕ್ಷಾಬಂಧವಾಗಿ ಮಗುವಿನ ಕುತ್ತಿಗೆಗೆ 'ಇಷ್ಟಲಿಂಗ'ವನ್ನು ಕಟ್ಟಿದರು.

ಈ ಘಟನೆಯು ಒಂದು ನಾಟಕದ ಆರಂಭದ ದೃಶ್ಯವಾಗುವ ಎಲ್ಲಾ ಯೋಗ್ಯತೆಗಳನ್ನು ಸೂಚಿಸುತ್ತದೆ. ಬಸವಣ್ಣನವರು ದೀನರಲ್ಲಿ, ದರಿದ್ರರಲ್ಲಿ ತನ್ನವರನ್ನು ಕಂಡರು-ಅಲ್ಲದೆ ಜನ್ಮದಿಂದ ಉಚ್ಚ ನೀಚ ಎಂಬ ಬೇಧಭಾವನೆಯನ್ನು ದೂರ ಮಾಡಿದರು. ತನ್ನ ಜನನದಂತೆ, ಹುಟ್ಟು ಕೊಡುವ ಉಚ್ಚ ಸ್ಥಾನವನ್ನು ಅವರು ನಿರಾಕರಿಸಿದರು.

ಈ ಘಟನೆಯು ಅವರ ಮಹತ್ತಿಕೆಯು ಒಂದಂಶವನ್ನಷ್ಟೆ ಸೂಚಿಸುತ್ತದೆ. ಜಾತವೇದ ಮುನಿಗಳು ಭಸ್ಮ ಪ್ರಯೋಗದಿಂದ ಬಸವಣ್ಣನವರಿಗಿತ್ತ ಜೀವದ ನಿಹಾರೂಪ ಇಷ್ಟಲಿಂಗವನ್ನು ಕರುಣಿಸಿದ ಉಪಕ್ರಮಗಳು ಬಸವಣ್ಣನವರ ಜೀವನದಲ್ಲಿ ಒಂದು ನಾಟಕೀಯ ಪ್ರಭಾವವನ್ನು ಬೀರಿದುವು. ಈ ಪ್ರಭಾವವೇ ಅವರು ಬ್ರಾಹ್ಮಣ ಸಂಸ್ಕಾರದ ಉರನ್ನು ಮನ ಸವರಂಭವನ್ನು ತಿರಸ್ಕರಿಸುವಂತೆ ಮಾಡಿತಲ್ಲದೆ, ಗೃಹತ್ಯಾಗಮಾಡಿ ಕೂಡಲ ಸಂಗಮದಲ್ಲಿರುವ ಜಾತವೇದ ಮುನಿಗಳನ್ನು ಸೇರುವಂತೆ ಮಾಡಿತು. ಈ ಘಟನೆಯಿಂದಲೇ ಕೂಡಲ ಸಂಗಮವು ಒಂದು ಪವಿತ್ರ ತೀರ್ಥಕ್ಷೇತ್ರವೆನಿಸಿಕೊಂಡಿತು.

ಆಗ ಬಸವಣ್ಣನವರು ಸುಂದರ ಮತ್ತು ಬುದ್ಧಿ ಪ್ರೌಢನಾದ ಎಂಟು ವರ್ಷಗಳ ಬಾಲಕ. ತಾನು ಕೈಕೊಂಡ ಈ ನಿರ್ಣಯದ ಮಹತ್ತಿಕೆಯನ್ನು ಅವರು ಅರಿತಿದ್ದರು. ಈ ಸಂದರ್ಭ ಅವರು ತೋರಿದ ನೈತಿಕ ಧೈರ್ಯವು, ಅವರ ಮುಂದಿನ ಜೀವನದ ಮಹತ್ತಿಕೆಯ ಮುನ್ಸೂಚನೆಯಾಗಿತ್ತು. ಅವರು ಮಾಡಿದ ಈ ತ್ಯಾಗವು ಮಹತ್ವವಾಗಿತ್ತು. ಕಾರಣ, ಅವರು ಬಾಲಕನಾದಲ್ಲಿ ಮನೆಯನ್ನು ತ್ಯಜಿಸಿದಂತೆ ಮುಂದೆ ಸದರಿ ಮತ್ತು ಅಧಿಕಾರಗಳನ್ನು ತ್ಯಜಿಸಬೇಕಾಯಿತು.

ಕೂಡಲ ಸಂಗಮವು ಪ್ರಕೃತಿ ಸೌಂದರ್ಯದ ನೆಲೆವಿಡಾಗಿದ್ದು ಆಧ್ಯಾತ್ಮಿಕ ಚಿಂತನೆಗೆ ಸುಯೋಗ್ಯವಾದ ಕಾಣವಾಗಿದೆ. ಕೃಷ್ಣಾ ಮತ್ತು ಮಲಪ್ರಭಾರಿ ನದಿಗಳ ಸಂಗಮವೇ ಕೂಡಲ ಸಂಗಮ. ಜಾತವೇದ ಮುನಿಗಳ ಮಾರ್ಗದರ್ಶನದಲ್ಲಿ ಬಸವೇಶ್ವರರು ಹಲವಾರು ವಿಷಯಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಅವರ ವಿನಮ್ರ ಮತ್ತು ಸರಳ ದಾರಿಗಳು ಅವರನ್ನು ಜನಪ್ರಿಯಗೊಳಿಸಿದುವು. ಅವರ ಕಾರ್ಯಕ್ಷಮತೆ ಅವರ ಕೀರ್ತಿಯನ್ನು ಎಲ್ಲೆಡೆಗಳಲ್ಲೂ ಪಸರಿಸಿತು.

ಕೂಡಲ ಸಂಗಮದಿಂದ ಬಸವಣ್ಣನವರ ಕಾರ್ಯಕ್ಷೇತ್ರ ಚಾಲುಕ್ಯರ ಬಿಜ್ಜಳನ ರಾಜಧಾನಿಯಾದ ಕಲ್ಯಾಣಪಟ್ಟಣಕ್ಕಾಗಿತು. ತನ್ನ ಮಾವ ಬಲದೇವನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನವರು ವಿವಾಹವಾದರು. ಬಲದೇವನು ಬಿಜ್ಜಳನ ಮಂತ್ರಿಯಾಗಿದ್ದನು. ಬಲದೇವನ ಮರಣಾನಂತರ ಬಿಜ್ಜಳನು ಬಸವಣ್ಣನವರಲ್ಲಿ ಯೋಗ್ಯ ಉತ್ತರಾಧಿಕಾರಿಯ ಹಾಗೂ ಮಂತ್ರಿಯ ಲಕ್ಷಣಗಳನ್ನು ಕಂಡುಕೊಂಡನು. ಬಿಜ್ಜಳನು ತನ್ನ ಸಹೋದರಿಯೊಡನೆ ನೀಲಲೋಚನೆಯನ್ನು ಬಸವಣ್ಣನವರಿಗೆ ಕೊಟ್ಟು ವಿವಾಹ ಮಾಡಿದನು. ಬಿಜ್ಜಳನು ಬಸವಣ್ಣನವರು ಆಧ್ಯಾತ್ಮಿಕ ಪುನರುತ್ಥಾನದ ಕಾರ್ಯ ಮಾಡಲು ಎಲ್ಲಾ ಸ್ವಾತಂತ್ರ್ಯವನ್ನು ಕೊಟ್ಟನು.

(ಹನ್ನೆರಡನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿಷ್ಟಭೋಜನ ಸ್ವಾಗತಾರ್ಹ ಸ್ಥಳ ಸ್ವಚ್ಛತೆ ಸ್ವಾಗತ ಸ್ಥಳ ಸಭಾಧಿಪ ಕಂಡಿಶಿವಸು
ಶಾಖೀಯ ಸ್ವಾಗತಾರ್ಹ ಸ್ಥಳ ಸ್ವಚ್ಛತೆ ಸ್ಥಳ ವಿಶಿಷ್ಟ ಹೊಟೆಲ್

ಶಾಸ್ತ್ರ ಹಾಗೂ ಅಕಾಡೆಮಿ

ಅ ಕಾ ಡೆ ಮಿ ಯ

ಪ್ರಸಿದ್ಧ ಆಸ್ಪತ್ರೆ ತರಬೇತಿ ಕೇಂದ್ರವಾಗಿ ಗಾಂಧಿವಾದದ್ದು ಇಂದು ಒಂದು ವಿದ್ಯಾವಿದ್ಯಾಲಯವನ್ನು ಹೋಲುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ತೀರ ಪ್ರದೇಶದ ರಮ್ಯ ವಾತಾವರಣದಲ್ಲಿ ಈ ಸಾಧನೆ ನಡೆದಿದೆ

ಆ ಸಂಸ್ಥೆ ಮೂಲ್ಕಿಯಲ್ಲಿ. ಅದರ ಹುಟ್ಟು ಹಾಗೂ ಬೆಳವಣಿಗೆಯ ಸ್ಥಳವಾದ ಮಂಗಳೂರು ಸರ್ಕಾರಿ ಕಾಲೇಜು ಪ್ರಸಿದ್ಧವಾಗಿದೆ. ಅದರ ತೀರ್ಮಾನವೂ ಪ್ರಮಾಣವಾಗಿದ್ದಂತೆ ನಿರ್ಧರಿಸಿದೆ.

ಆಧುನಿಕ ಭಾರತದ ನಿರ್ಮಾಣಕರ ಸೈಕಿ ಒಬ್ಬರ ದೂರದೃಷ್ಟಿ ಹಾಗೂ ಧೀರತ್ವದಿಂದ ಕೂಡಿದ ಶಿಕ್ಷಣ ರಂಗದಲ್ಲಿನ ಸ್ವಜಂಪ್ರೇರಿತ ಪ್ರಯತ್ನದ ಫಲ ಇದು. ಅಕಾಡೆಮಿ. ಅಪ್ ಜನರಲ್ ಎಜುಕೇಶನ್ ಹಾಗೂ ಡಾ|| ಟಿ ಎಂ. ಎ. ಪೈ ಎಂಬ ಹೆಸರುಗಳು ಇದ್ದು ಒಂದೇ ನಾಣ್ಯದ ಎರಡು ಮುಖಗಳಾಗಿವೆ.

ಇದೀಗ ಅಕಾಡೆಮಿಗೆ ೨೫ ವರ್ಷಗಳು, ಡಾ ಪೈಯರಿಗೆ ೭೦ ವರ್ಷಗಳೂ ತುಂಬಿವೆ. ಈ ಸಂತೋಷದ ಸಂದರ್ಭದಲ್ಲಿ ಅಕಾಡೆಮಿಯ ರಜತಮಹೋತ್ಸವ ಹಾಗೂ ಡಾ|| ಪೈಯರವರ ೭೦ನೇ ಹುಟ್ಟು ಹಬ್ಬವನ್ನು ಒಟ್ಟಿಗೆ ಆಚರಿಸಲಾಗುತ್ತಿದೆ.

ಈ ಅವಧಿಯಲ್ಲಿ ಅಕಾಡೆಮಿ ಎಷ್ಟು ಪ್ರಗತಿಪರವಾಗಿ ಬೆಳೆದಿದೆ ಎಂದರೆ ಈಗ ಅದರ ಆಶ್ರಯದಲ್ಲಿ ೩೦ ಸಂಸ್ಥೆಗಳಿವೆ. ಎಲ್ಲಾ ವ್ಯಾಪ್ತಿ ಮಣಿಪಾಲದಲ್ಲೊಂದು ಸರ್ಕಾರಿ ಶಾಲೆಯಿಂದ ಹಿಡಿದು ಮಂಗಳೂರಿನಲ್ಲಿ ವೈದ್ಯಕೀಯ ವಿಜ್ಞಾನಗಳ ಪದವಿಯೋತ್ತರ ಶಿಕ್ಷಣದ ವರೆಗೆ ಹಬ್ಬಿದೆ; ಅದು ಮೂರು ಜಿಲ್ಲೆಗಳಲ್ಲಿ ಮಡಿಯಂತಹ ಪುಟ್ಟ ಹಳ್ಳಿ ಹಾಗೂ ಮಣಿಪಾಲದಂತಹ ಘನತೆ ನಗರವೆಂಬ ಭೇದವಿಲ್ಲದೆ ಸೇವೆ ಅಲ್ಲಿ ಪರಿಪೂರ್ಣವಾಗಿದೆ.

ಉಗಮ

ಈ ಅಗಾಧ ಪ್ರಗತಿಯ ಕಾರಣಿಗಳು ಹಲವಾರು. ಆದರೆ ಡಾ|| ಪೈಯರು ಮಂಗಳೂರಿನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾಕ್ಷೇತ್ರದಲ್ಲಿ ಅವರಿಗೆ ಭವ್ಯಭವಿಷ್ಯತ್ತು ಕಾದಿದೆ ಎಂಬುದು ಸ್ಪಷ್ಟವಾಗಿತ್ತು. ಅವರ ಹುಟ್ಟೂರಾದ ಉಲ್ಲಾಣಮುರದಲ್ಲಿ ಅವಂ ಹಳೇ ಶಾಲೆ ಇನ್ನೇನು ಮುಚ್ಚಲ್ಪಡುವ ಸ್ಥಿತಿಯಲ್ಲಿದ್ದಾಗ ಅವರು ಒಂದು ವರ್ಷ ವಿದ್ಯಾರ್ಜನೆಯನ್ನು ತ್ಯಜಿಸಿ ಶಾಲೆಗಾಗಿ ದನ ಸಹಾಯ ಮುಂತಾದವುಗಳನ್ನು ಸಂಗ್ರಹಿಸಿದ್ದರು. ಅವರು ಅಲ್ಲಿ ಶಿಕ್ಷಕರಾಗಿ ದುಡಿದರು. ಗಣಿತ ಶಾಸ್ತ್ರದಲ್ಲಿ ಒಂದು ಕರ್ಮ ಪುಸ್ತಕವನ್ನೂ ಬರೆದರು.

ಉಡುಪಿಯಲ್ಲಿ ೧೯೩೪ರಿಂದ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದ ಕಾಲದಲ್ಲಿ ಅವರು ಸಿಂಡಿಕೇಟ್ ಬ್ಯಾಂಕಿನ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಅವರ ಅಣ್ಣ ಶ್ರೀ ಉಮೇಂದ್ರ ಪೈಯ ವರು ಅದನ್ನು ಕೇವಲ ಎಂಟು ಸಾವಿರ ರೂಪಾಯಿ ಭಂಡವಾಳದೊಂದಿಗೆ ಆರಂಭಿಸಿದ್ದರು. ಆದರೆ ಸಂದರ್ಭ ಸಿಕ್ಕಾಗಲೆಲ್ಲ ಈ ತರುಣ ವೈದ್ಯರು ವಿದ್ಯಾಭ್ಯಾಸದ ಬಗ್ಗೆ ಮಾತನಾಡುತ್ತಿದ್ದರು. ನಿಜವಾದ ಪ್ರಗತಿ ಸಾಧಿಸಬೇಕೆಂದಾದರೆ ಈ ಪ್ರದೇಶದಲ್ಲಿ ಹೆಚ್ಚು ಹೆಚ್ಚಾಗಿ ಶಾಲೆಗಳೂ, ಕಾಲೇಜುಗಳೂ ಆರಂಭಗಂಗಬೇಕೆಂದು ಹೇಳುತ್ತಿದ್ದರು.

ಅವರ ಪ್ರಬುದ್ಧ ವಿಚಾರಗಳು ಅವರ ಸ್ನೇಹಿತರಿಗೆ ಮನವರಿಕೆಯಾದಾಗ ಅಕಾಡೆಮಿ ರೂಪುಗೊಂಡಿತು. ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಣ ಹಾಗೂ ಉದ್ಯೋಗ ಸೌಕರ್ಯಗಳ ಅಭಾವವನ್ನು ಪರಿಹರಿಸುವುದು ಅದರ ಉದ್ದೇಶವಾಗಿತ್ತು. ಅದರ ಕೃತಿಯ ಯೋಜನೆ ಇದಕ್ಕೊಂದು ಉದಾಹರಣೆಯಾಗಿತ್ತು. ಪರಿಸ್ಥಿತಿಯಲ್ಲಿ ಅನುತ್ತೀರ್ಣರಾದುದರಿಂದಾಗಿ ವಿವಿಧ ವೃತ್ತಿಗಳಲ್ಲಿ ತೊಡಗಲು ಅನರ್ಹರೆಂದೆನಿಸಿಕೊಂಡಿದ್ದವರಿಗೆ ತರಬೇತಿ ಕೊಡುವುದೇ ಆ ಕಾರ್ಯಕ್ರಮ. ಕುಲಮೆ ಕೆಲಸ, ದಾದಿಯರ ವೃತ್ತಿ, ಔಷಧಿಗಳ ವಿತರಣೆ, ನಾಜೂಕು ವಸ್ತುಗಳ ತಯಾರಿಕೆ ಮುಂತಾದ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಈಗಲೂ ನಡೆಸಲಾಗುತ್ತಿದೆ.

ಮೊದಲಿನಿಂದಲೂ ಸಹಕಾರ ಸೂತ್ರ ಅಕಾಡೆಮಿಯ ಮುಖ್ಯ ಅಂಗವಾಗಿತ್ತು. ಡಾ|| ಪೈಯರವರು ಅದರ ಎಲ್ಲ ಯೋಜನೆಗಳಲ್ಲಿ ಸಾರ್ವಜನಿಕರ ಹಾಗೂ ಹೆತ್ತವರ ಸಹಕಾರವನ್ನು ಗಳಿಸಿಕೊಂಡು ತನ್ನ ಸ್ಥಳಕ್ಕೆ ಎಂತಹ ಮಹತ್ವಾಧಿಕಾರಗಳನ್ನು ಮೂಡಬಹುದೆಂದು ತೋರಿಸಿದರು.

ಮಣಿಪಾಲದಲ್ಲಿದ್ದ ಜೂನಿಯರ್ ಬೇಸಿಕ್ ಶಾಲೆಯನ್ನು ಅಕಾಡೆಮಿ ೧೯೪೨ರಲ್ಲೇ ಪರಿಸಿಕೊಂಡು ಇಲ್ಲಿಯ ಮಕ್ಕಳ ಶಿಕ್ಷಣದ ಕಡೆಗೆ ಗಮನ ಹರಿಸಿತು. ಹತ್ತಿರದ ಯಾತ್ರಾರ್ಥಳವಾದ ಉಡುಪಿಯ ಜನರು ಇಲ್ಲಿಗೆ ಬರಲು ಹೆದರುತ್ತಿದ್ದಂತಹ ಕಾಲ ಅದು. ಆದರೆ ಪೈ ಸಹೋದರರು ಇಲ್ಲಿ ಬಂದು ನೆಲೆಸಿದ್ದರು. ಅಷ್ಟಕ್ಕೆ ಒಂದು ಹುಚ್ಚಿನ ಕಾರ್ಖಾನೆ ಮತ್ತು ಒಂದು ಮುದ್ರಣಾಲಯವನ್ನು ಸ್ಥಾಪಿಸಿದ್ದರು. ಆ ಮುದ್ರಣಾಲಯಕ್ಕೆ ೧೯೪೬ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿತು.

ಕಾಲೇಜುಗಳು

ಉಡುಪಿಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವುದಕ್ಕಾಗಿ ಡಾ|| ಪೈಯರವರು ಸಾರ್ವಜನಿಕರು ಹಾಗೂ ಅಧಿಕಾರಿಗಳೊಂದಿಗೆ ಮೊದಲು ಕೂಡಿಸಿದ ಮಾತುಕತೆಗಳು ವಿಫಲವಾದುವು. ಮಣಿಪಾಲದಲ್ಲಿಂದ ಪ್ರೌಢ ಶಾಲೆಯನ್ನು ಸ್ಥಾಪಿಸುವುದಕ್ಕೆ ಸಹ ಅನುಮತಿ ಸಿಗಲಿಲ್ಲ. ಆದರೆ ಅನೇಕ ಆತಂಕಗಳನ್ನು ಎದುರಿಸಿ ಅದರ ಮೂರು ವರ್ಷದೇ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜನ್ನು ಆರಂಭಿಸಲಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಅಂತಹ ಹಲವು ಕಾಲೇಜುಗಳ ಸ್ಥಾಪನೆಗೆ ಅದು ನಾಂದಿಯಾಯಿತು.

ಈ ಕಾಲೇಜನ್ನು ಭದ್ರ ತಳಹದಿಯ ಮೇಲೆ ರೂಪಿಸುವುದಕ್ಕಾಗಿ ಅಕಾಡೆಮಿ ಹಲವು ವರ್ಷಗಳ ವರೆಗೆ ಶ್ರಮಿಸಬೇಕಾಯಿತು. ಈಗ ಅದು ಆರ್ಟ್ಸ್, ಸೈನ್ಸ್ ಹಾಗೂ ಕಾಮರ್ಸ್ ವಿಷಯಗಳಲ್ಲಿ ಪದವಿಪೂರ್ವ ಶಿಕ್ಷಣ ಕೊಡುವ ಅತ್ಯುತ್ತಮ ಕಾಲೇಜುಗಳಲ್ಲಿ ಒಂದಾಗಿದೆ. ಕಳೆದ ವರ್ಷ ವೈಶೂರು ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಅದು ೦ ರ್ಯಾಂಕುಗಳ ಪೈಕಿ ೩ ರ್ಯಾಂಕುಗಳನ್ನು ಗಳಿಸಿ ಹೊಸದಾಖಲೆಯನ್ನು ಮಾಡಿತು.

ಆಗ ಅರ್ಜಿತೆ ಇದ್ದರೂ ವೃತ್ತಿ ಶಿಕ್ಷಣ ಕಾಲೇಜುಗಳಿಗೆ ಪ್ರವೇಶ ಸಿಗದೆ ಇದ್ದಂತಹ ವಿದ್ಯಾರ್ಥಿಗಳ ಸಮಸ್ಯೆ ಡಾ|| ಪೈಯರವರ ಮುಂದೆ ಬಂದಿತು. ಮಣಿಪಾಲದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ಅವರು ಆಲೋಚಿಸಿದರು. ಅದಕ್ಕೆ ಪ್ರತಿಫಲವಾಗಿ ಅಂದು ಹುಚ್ಚರೆಂದು ಕರೆಸಿಕೊಳ್ಳಬೇಕಾಯಿತು. ಆದರೆ ಅವರು ಆತ್ಮವಿಶ್ವಾಸ ಹಾಗೂ ದೃಢ ಸಂಕಲ್ಪದಿಂದ ಎಲ್ಲ ಅಡ್ಡಿಗಳನ್ನೂ ಎದುರಿಸಿ ಅವರ ಯೋಜನೆಯನ್ನು ಕಾರ್ಯಗತಗೊಳಿಸಿದರು. ಅದೂ ಕೂಡ ಬಹಳ ಯಶಸ್ವಿಯಾಯಿತು.

ಕಸ್ತೂರ್‌ಬಾ ಮೆಡಿಕಲ್ ಕಾಲೇಜು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಅದನ್ನು ಭಾರತದ ವೈದ್ಯಕೀಯ ಮಂಡಳಿ ಹಾಗೂ ಇಂಗ್ಲೆಂಡಿನ ವೈದ್ಯಕೀಯ ಮಂಡಳಿಗಳು ಮಾನ್ಯ ಮಾಡಿವೆ. ಸಹಕಾರ ಸೂತ್ರದ ಪ್ರಪ್ರಥಮ ಯಶಸ್ವೀ ಮೆಡಿಕಲ್ ಕಾಲೇಜಾಗಿ ಅದು ಈಗ ಅಮೆರಿಕದಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಪುಲೇಶಿಯಾ, ಸಿಲೋನ್, ಥೈಲ್ಯಾಂಡ್ ಹಾಗೂ ಪೂರ್ವ ಆಫ್ರಿಕಾದ ವಿದ್ಯಾರ್ಥಿಗಳು ಈಗಾಗಲೇ ಇಲ್ಲಿ ವ್ಯಾಸಂಗ ಪಡೆಯುತ್ತಿದ್ದಾರೆ.

ಅದರ ಇನ್ನೊಂದು ಹೆಮ್ಮೆಯ ವಿಷಯವೆಂದರೆ ಕೇವಲ ೧೫ ವರ್ಷಗಳೊಳಗೆ ೧೩೬ ವೈದ್ಯಕೀಯ ಪದವೀಧರರನ್ನೂ ೨೫ ಇಂಜಿನಿಯರ್‌ಗಳ ಪದವೀಧರರನ್ನೂ ಅದು ತರಬೇತಿಗೊಳಿಸಿದೆ. ಭಾರತದಲ್ಲಿ ಇಷ್ಟೊಂದು ಮೆಡಿಕಲ್ ಕಾಲೇಜಿಗೂ ಇದು ಸಾಧ್ಯವಾಗಿಲ್ಲ. ಮಣಿಪಾಲದಲ್ಲಿರುವ ಅಲಾಟಿಯ ವ್ಯಾಜ್ಯಯಂ ಇಡೀ ಪ್ರಪಂಚದಲ್ಲೇ ಅಂತಹ ಅತ್ಯುತ್ತಮವಾದ ಮತ್ತು ಸಂಗ್ರಹಾಲಯಗಳಲ್ಲೊಂದಾಗಿದೆ.

ಮಣಿಪಾಲದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ರೂಪಿಸುವ ಕಾರ್ಯ ಇನ್ನು ಒಂದೆರಡು ವರ್ಷಗಳಲ್ಲಿ ಮುಗಿದಾಗ ಈಗ ಇಲ್ಲಿರುವ ಪ್ರೀ—ಕ್ಲಿನಿಕಲ್ ವಿಭಾಗ ಸಹ ಇನ್ನೊಂದು ಕಾಲೇಜಾಗಿ ಪರಿವರ್ತಿತಗಾಬಹುದಾಗಿದೆ. ಅಲ್ಲದೆ ಈಗ ಮೆಡಿಕಲ್ ಕಾಲೇಜಿಗೆ ಸೇರಿದಂತಿರುವ ಡೆಂಟಲ್ ಸರ್ಜರಿ ಕಾಲೇಜು ಹಾಗೂ ಫಾರ್ಮಸಿ ಕಾಲೇಜು ಪ್ರತ್ಯೇಕವಾಗಿ ರೂಪುಗೊಳ್ಳಲಿವೆ. ವೈಶೂರುವಿಶ್ವವಿದ್ಯಾನಿಲಯಗಳಲ್ಲಿ ಇವೆ ಇಂತಹ ವಿಶೇಷ ಕಾಲೇಜುಗಳಾಗಿವೆ. ಈ ಕಾಲೇಜು ಸಂಕ್ಷಿಪ್ತವಾಗಿ ಬಿ. ಬಿ. ಎಸ್., ಫಾರ್ಮಸಿ ಡಿಪ್ಲೊಮಾ ಹಾಗೂ ಪ್ರಯೋ

ರಜತ ಮಹೋತ್ಸವ

ಪ್ರಗತಿಗೆ
ಸ್ವಸಹಾಯವೇ
ತಾರಕ ಮಂತ್ರ

ಗಾಲಯ ತಜ್ಞರು ಹಾಗೂ ವೈದ್ಯಕೀಯ ತಾಂತ್ರಿಕಜ್ಞರನ್ನು ತರಬೇತಿ ಗೊಳಿಸುವ ಕೋರ್ಸುಗಳನ್ನು ನಡೆಸುತ್ತಿದೆ.

ಇಷ್ಟೇ ಅಲ್ಲದೆ ಈ ಕಾಲೇಜು ಆರಂಭವಾದಾಗ ದೇಶದಲ್ಲಿ ಇನೆಯದಾಗಿದ್ದು, ಈಗ ಇಂಕ್ಕಿಂತ ಹೆಚ್ಚು ಮೆಡಿಕಲ್ ಕಾಲೇಜುಗಳಿದೆಯಾದರೂ ಇಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಕಳೆದ ವರ್ಷ ೧೦೦ ಮಕ್ಕಳಿಗಾಗಿ ೪೯೧ ಅಭ್ಯರ್ಥಿಗಳು ಬಂದಿದ್ದರು.

ಇಂಜಿನಿಯರಿಂಗ್ ಶಿಕ್ಷಣ ಪಡೆಯಲಿಚ್ಛಿಸುವವರೂ ಅನೇಕರಿದ್ದರು. ಹಾಗಾಗಿ ನಾಲ್ಕು ವರ್ಷಗಳ ನಂತರ ಮಣಿಪಾಲದಲ್ಲಿ ಮಣಿಪಾಲ ಇಂಜಿನಿಯರಿಂಗ್ ಕಾಲೇಜನ್ನು ಆರಂಭಿಸಲಾಯಿತು. ಈ ವರೆಗೆ ಸಾವಿರಕ್ಕೂ ಹೆಚ್ಚು ಇಂಜಿನಿಯರುಗಳು ಈ ಕಾಲೇಜಿನಲ್ಲಿ ತರಬೇತಿ ಗೊಂಡು ಹೊರಗಿದ್ದಾರೆ ಈಗ ಇರುವ ಸಿವಿಲ್, ಇಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗಗಳಲ್ಲದೆ ಕೆಮಿಕಲ್ ಇಂಜಿನಿಯರಿಂಗ್ ಹಾಗೂ ಮೆಟಲರ್ಜಿ ವಿಭಾಗಗಳನ್ನೂ ತೆರೆಯುವ ವಿಷಯ ಪರಿಶೀಲನೆಯಲ್ಲಿದೆ. ಅಧ್ಯಾಪಕರು ಹಾಗೂ ಶೃಂಗಾರಿಕೋದ್ಯಮಿಗಳಿಗೆ ಸಂಪರ್ಕ ಏರ್ಪಟ್ಟು ಪರಸ್ಪರರಿಗೆ ಲಾಭ ಸಿಗುವಂತೆ ಮಾಡುವುದಕ್ಕಾಗಿ ಒಂದು ಕೈಗಾರಿಕಾ ಜಾಲವನ್ನು ಈ ಕಾಲೇಜಿನಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕಸ್ತೂರ್‌ಬಾ ಮೆಡಿಕಲ್ ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜುಗಳು ಉಚ್ಚಮಟ್ಟದ ಅಧ್ಯಾಪಕ ವರ್ಗ ಹಾಗೂ ಸೌಲಭ್ಯಗಳನ್ನು ಹೊಂದಿವೆಯಲ್ಲದೆ ದೇಶದ ವಿವಿಧ ಭಾಗಗಳಲ್ಲಿ ಅಂತಹ ಕಾಲೇಜುಗಳು ಆರಂಭಿಸಲ್ಪಡುವುದಕ್ಕೆ ಸ್ಫೂರ್ತಿ ಕೊಟ್ಟಿವೆ. ಸರಕಾರ ಇಂತಹ ಕಾಲೇಜುಗಳನ್ನು ಹೆಚ್ಚಾಗಿ ಆರಂಭಿಸುವುದಕ್ಕೂ ಇವು ಕಾರಣವಾಗಿವೆ. ಅಷ್ಟೇ ಕೇಂದ್ರ ಹಾಗೂ ರಾಜ್ಯ ಸರಕಾರಗಳೂ ವಿಶ್ವವಿದ್ಯಾನಿಲಯವೂ ಕಳಿಸಿದ ತನಿಖಾ ಮಂಡಳಿಗಳು ಈ ಕಾಲೇಜುಗಳನ್ನು ಪ್ರಶಂಸಿಸಿವೆ ಈ ಕಾಲೇಜುಗಳ ಹಿರಿಯ ವಿದ್ಯಾರ್ಥಿಗಳು ತಮ್ಮ ವೃತ್ತಿಗಳಲ್ಲೂ, ಉಚ್ಚ ವಿದ್ಯಾಭ್ಯಾಸದಲ್ಲೂ ಪ್ರಶಂಸಗಳಾಗಿದ್ದಾರೆ. ಅವರ ಪೈಕಿ ಅನೇಕರು ವಿದೇಶಗಳಲ್ಲಿದ್ದಾರೆ.

ಉಡುಪಿಯಲ್ಲಿ ಅದೇ ವರ್ಷ (೧೯೫೭) ಆರಂಭವಾದ ಉಡುಪಿ ಲಾ ಕಾಲೇಜು ಹಾಗೂ ೧೯೬೫ರಲ್ಲಿ ಆರಂಭವಾದ ಮಣಿಪಾಲ ಎಜುಕೇಶನ್ ಕಾಲೇಜು ಸಹ ಉಚ್ಚ ಮಟ್ಟವನ್ನು ರೂಢಿಸಿಕೊಂಡಿವೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಪೂರೈಕೆಯ ದೃಷ್ಟಿಯಿಂದ ಸಾಲದ ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿರುವುದು ಈ ಲಾ ಕಾಲೇಜಿನ ವೈಶಿಷ್ಟ್ಯವಾಗಿದೆ. ಅದರ ಪುಸ್ತಕ ಭಂಡಾರದಲ್ಲಿ ಉರಿಯ ಗ್ರಂಥಗಳಿವೆ. ಎಜುಕೇಶನ್ ಕಾಲೇಜಿನಿಂದ ವಿಶ್ವವಿದ್ಯಾನಿಲಯ ಪರೀಕ್ಷೆಗೆ ಕುಳಿತ ಪ್ರಥಮ ತಂಡದವರೆಲ್ಲರೂ ತೇರ್ಗಡೆಯಾಗಿದ್ದರು

ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಶಿಕ್ಷಣದ ಬಳಿಕ ಡಾ॥ ವೈಯವರು ಮುಕ್ತ ಮಂತ್ರಿಯ ಹುದ್ದೆಗಳಿಗೆ ಹೋಗಿ ಅಲ್ಲಿಯೂ ಕಾಲೇಜುಗಳನ್ನು ಸ್ಥಾಪಿಸಿ ಅಗ್ಗದ ಬಗ್ಗೆ ಜನರನ್ನು ಹುರಿದಂಬಿಸಿದರು. ಅ ಕಡೆಗೆ ಓಗೊಡುವುದರಲ್ಲಿ ಕಾರ್ಕಳ ಮೊದಲನೆಯದಾಯಿತು ಅಲ್ಲಿಯ ಶ್ರೀ ಭುವನೇಂದ್ರ ಕಾಲೇಜಿನ ಉಚ್ಚ ಮಟ್ಟದಿಂದಾಗಿ ದೂರದ ಸ್ಥಳಗಳಿಂದಲೂ ಇಲ್ಲಿಗೆ ವಿದ್ಯಾರ್ಥಿಗಳು ಬರತ್ತಿದ್ದಾರೆ ೧೯೬೫ರಲ್ಲಿ ಮೂಲ್ಕಿಯಲ್ಲಿ ವಿಜಯ ಕಾಲೇಜು ಮತ್ತು ಕುಂದಾಪುರದಲ್ಲಿ ಭಂಡಾರ್‌ಕಾರ್ಸ್ ಕಾಲೇಜು ಆರಂಭಿಸಲ್ಪಟ್ಟಿವು. ಇನ್ನೆರಡು ವರ್ಷಗಳ ಬಳಿಕ ಇನ್ನೆರಡು ಕಾಲೇಜುಗಳನ್ನು— ಮೂಡಬಿದ್ರೆಯಲ್ಲಿ ಶ್ರೀ ಮಹಾವೀರ ಕಾಲೇಜು ಮತ್ತು ಕೃಷ್ಣಗೇರಿಯಲ್ಲಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತಿ ಸ್ಮಾರಕ ಕಾಲೇಜು ಆರಂಭಿಸಲಾಯಿತು.

ಶಾಲೆಗಳು

ಇದೇ ಕ್ರಮದಲ್ಲಿ ಕೆಲವು ಪ್ರಾಥಮಿಕ ಶಾಲೆಗಳನ್ನೂ ಆರಂಭಿಸಲಾಯಿತು. (ಮೊದಲೇ ಅಸ್ತಿತ್ವದಲ್ಲಿದ್ದ ಮಣಿಪಾಲ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಬೋಧನೆ ನಡೆಸಲಾಗುತ್ತಿದೆ) ಈ ಹೊಸ ಶಾಲೆಗಳು ಕಡಿಯಾಳಿ (ಉಡುಪಿ), ಪೆರ್ಡೂರು, ನಗರ, ಅಲೆವೂರು, ಪಕಳಕಾಟ ಮತ್ತು ಕಾರ್ಕಳ ಮುಂತಾದ ಕಡೆಗಳಲ್ಲಿ ಇವೆ. ಅಲ್ಲದೆ ಮಣಿಪಾಲದ ಸುತ್ತಲಿನ ಹಳ್ಳಿಗಳ ಸುಮಾರು ಕಡೆಗಳ ಒಂದು ಅಧ್ಯಾಪಕರ ತಂಡ ಶಿಕ್ಷಣಾರ್ಥ ಇಂಗ್ಲಿಷ್ ಭಾಷೆ ಮತ್ತು ಗಣಿತ ಸರಿ ಕಲಿಸಲು ಇಂಗ್ಲಿಷ್ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರ ಕೆಲಸ ಮಾಡುತ್ತಿದೆ. ಇದಲ್ಲದೆ ಅಗತ್ಯವಿದ್ದ ಕಡೆ ಇನ್ನೊಂದು ಸ್ಥಳದಲ್ಲಿ ಮಣಿಪಾಲ ಪ್ರಾಥಮಿಕ ಶಾಲೆಯನ್ನು ಆರಂಭಿಸಲಾಯಿತು. ಕಲ್ಯಾಣಪುರದಲ್ಲಿರುವ ಡಾ॥ ವೈಯ ಹಳೆಯ ಶಾಲೆಯೂದ ಹಿಂದಿನ ವೈಯರ್ ಎಲಿಮೆಂಟರಿ ಶಾಲೆಯನ್ನು ಇಲ್ಲಿಗೆ ಉಕಾಡೆಯ ವಹಿಸಿಕೊಂಡಿದೆ.

ಈ ಶಾಲೆಗಳ ಹಾಗೂ ಕಾಲೇಜುಗಳ ಸ್ಥಾಪನೆಯಿಂದಾಗಿ ಮಂಗಳೂರು ಮತ್ತು ಮದ್ರಾಸುಗಳಂತಹ ದೊಡ್ಡ ಊರುಗಳಿಗೆ ಹೋಗಿ ತಾಂಬ ಖರ್ಚು ಮಾಡಿ ವಿದ್ಯಾಭ್ಯಾಸ ಮಾಡಬೇಕಾಗಿದ್ದವರು ಈಗ ಅವರವರ ಊರುಗಳಲ್ಲೇ ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲದೆ ಬೇರೆ ಊರುಗಳಿಗೆ ಹೋಗಿ ಉಚ್ಚ ವಿದ್ಯಾಭ್ಯಾಸ ಮಾಡುವ ಅಸಮರ್ಥತೆ ಇಲ್ಲದಿದ್ದವರು ಅಂತಹ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಾಗಿದೆ. ತತ್ಪರಿಣಾಮವಾಗಿ ಅವರ ಸಂವಾದನಾ ಶಕ್ತಿ ಹಾಗೂ ಸೇವಾಶಕ್ತಿ ಹೆಚ್ಚಾಗಿವೆ. ಬೇರೆಲಾಗಿ ಅಷ್ಟೂ ಊರುಗಳು ಪ್ರಗತಿ ಹೊಂದುವಂತಾಗಿದೆ.

ಅಕಾಡೆಮಿ ಸಂಗೀತ ಹಾಗೂ ಲಲಿತ ಕಲೆಗಳ ಶಾಲೆ ಉಡುಪಿಯಲ್ಲಿರುವ ಮೂರು ಕೇಂದ್ರಗಳು (ಮಂಗಳಾದೇವಿ, ಕಲ್ಯಾಣಪುರ ಹಾಗೂ ಅಂಬಲಪಾಡಿ) ಮತ್ತು ಕಟಪಾಡಿಯಲ್ಲಿರುವ ಕೇಂದ್ರಗಳ ಮೂಲಕ ಸಂಗೀತ ಮತ್ತು ನೃತ್ಯ ವಿಭಾಗಗಳನ್ನು ಕಲಿಸಲಾಗುತ್ತಿದೆ. ಇಷ್ಟೇ ಅಲ್ಲದೆ ಉಡುಪಿ (ಪ್ರಧಾನ ವಿಷಯಕ್ಕೆ ತಿಂಗಳಿಗೆ ಎರಡು ರೂಪಾಯಿಗಳು). ಉಡುಪಿಯ ವಹಿಸಿ ಸಮೂಹದ ಆಶ್ರಯದಲ್ಲಿ ನಡೆಯುತ್ತಿರುವ ಗೃಹಿಣಿ ವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಬಟ್ಟೆ ಕತ್ತರಿಸುವುದರಲ್ಲಿ ಹಾಗೂ ಹೊಲಿಯುವುದರಲ್ಲಿ ತರಬೇತಿ ಕೊಡಲಾಗುತ್ತಿದೆ.

ಈ ಸಂಗೀತ ಶಾಲೆ ಹಾಗೂ ಮಣಿಪಾಲದ ಕಸ್ತೂರ್‌ಬಾ ಜನರಲ್ ಹಾಗೂ ಮೆಟರ್ನಿಟಿ ಆಸ್ಪತ್ರೆಗೆ ಸೇರಿದಂತಿರುವ ನರ್ಸಿಂಗ್ ಶಾಲೆ ಇನ್ನು ಕೆಲವೇ ವರ್ಷಗಳಲ್ಲಿ ಕಾಲೇಜುಗಳಾಗಿ ಮಾರ್ಪಾಟಾಗುವ ಸೂಚನೆಯಿದೆ. ಇಲ್ಲಿ ಆಸ್ಪಿಲಿಯರಿ ನರ್ಸ್ ಮಿಡ್ವೈಫರಿ ಹಾಗೂ ಜನರಲ್ ನರ್ಸಿಂಗ್ ಕೋರ್ಸುಗಳನ್ನು ನಡೆಸಲಾಗುತ್ತಿದೆ.

ಕಸ್ತೂರ್‌ಬಾ ಜನರಲ್ ಮತ್ತು ಮೆಟರ್ನಿಟಿ ಆಸ್ಪತ್ರೆಯ ಮೆಡಿಕಲ್ ರಿಲೀಫ್ ಸೊಸೈಟಿ ಮತ್ತು ಮೆಡಿಕಲ್ ರಿಲೀಫ್ ಟ್ರಸ್ಟ್ ಮಂಡಳಿಗಳು ರೋಗ ಪೀಡಿತರ ಸೇವಗಾಗಿ ನಡೆಸುತ್ತಿವೆ. ಅಲ್ಲದೆ ಅಮೆರಿಕದ ಸರಕಾರ ನೆರವು ಕೊಟ್ಟಿರುವ ಬರ್ಸ್ಟ್ ಯೂನಿಟ್‌ನಂತಹ ಸಾಧನಗಳಿಂದಾಗಿ ಒಳಗೆ ದೂರದ ಸ್ಥಳಗಳಿಂದಲೂ ರೋಗಿಗಳು ಅಲ್ಲಿಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ.

ಮಣಿಪಾಲದಲ್ಲಿರುವ ಅಕಾಡೆಮಿಯ ಸಾರ್ವಜನಿಕ ಪುಸ್ತಕ ಭಂಡಾರವಾದ ನೆಹ್ರೂ ಸ್ಮಾರಕ ಪುಸ್ತಕ ಭಂಡಾರ ಅಕಾಡೆಮಿಯ ಎಲ್ಲ ಪುಸ್ತಕ ಬಂಡಾರಗಳಿಗೆ ಕೇಂದ್ರವಾಗಿ ರೂಪ ಗೊಂಡಿದೆ. ಅಲ್ಲಿಯ ಮಾನೆಸ್ಕೋ ಪತ್ರಿಕಾಗಾರ ಕೇಂದ್ರ ಹಾಗೂ ಮಕ್ಕಳ ವಿಭಾಗ ಇದೆ.

ಡಾ॥ ವೈಯವರಿಗೆ ಈ ಯಾವ ಸಂಸ್ಥೆಯಲ್ಲೂ ಸ್ವಾರ್ಥ ಮನೋಭಾವವಿಲ್ಲ. ಅವುಗಳಲ್ಲಿ ಪ್ರತಿಯೊಂದಲ್ಲೂ ಧರ್ಮದರ್ಶಿ ಮಂಡಳಿಗಳು (ಟ್ರಸ್ಟ್) ಥವಾ ಸಮಿತಿಗಳು ಇದೆ ಬದಲಾಗಿ ಅವರು ಅವುಗಳಿಗೆ ಭದ್ರ ತಳಹದಿಯನ್ನೊದಗಿಸುವುದಕ್ಕಾಗಿ ಧನ ಸಹಾಯ, ಭೂದಾನ ಹಾಗೂ ಶ್ರಮದಾನ ಮಾಡಿದ್ದಾರೆ. ಎಲ್ಲಕ್ಕೂ ಮಿಗಿ

(ಹಂಸಂಟೀಸ ಪುಟ ನೋಡಿರಿ)

ಲೇಖಕರು
ಶ್ರೀಕರ್ ಎಲ್. ಭಂಡಾರ್‌ಕರ್



ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗಳಿಂದ ಕೂಡಿದ ವಿವಿಧ ಸಂಸ್ಥೆಗಳು

ಬಸವೇಶ್ವರರ ಜೀವನ ಮತ್ತು ಸಂದೇಶಗಳು

(ಒಂಭತ್ತನೇ ಪುಟದಿಂದ)

ನಾವರೂ ಕಾಲಾಭ್ರಮಣ ಬೀಜವಿದ ನಿಯಮದಂತೆ ಅವರಿಬ್ಬರಲ್ಲಿ ಮಂದೇಭ ಅನಿವಾರ್ಯವಾಯಿತು.

ಬಸವ ಮತ್ತು ಹೊಸಬರುಗಳ ನಡುವ ಸಂಘರ್ಷವೇ ಬಸವೇಶ್ವರರ ಮತ್ತು ಬಿಜ್ಜಳರ ಸಂಘರ್ಷದ ಕಾರಣ. ಬಸವಣ್ಣನವರು ಒಂದೇ ಅಧಿಕಾರ ಇಲ್ಲದೇ ಅಥ್ಯಾತ್ಮ ಜೀವನದ ಕಾರ್ಯಗಳನ್ನು ಒಂದನ್ನು ಅರಿಯಲೇಬೇಕೆಂದು ಬಿಜ್ಜಳನು ಬೇಕಿದನು. ಬಸವಣ್ಣನವರು ಕ್ಷಣ ಮಾತ್ರದ ಹಿಂಜರಿಕೆಯಿಲ್ಲದೆ ತನ್ನ ಆಯ್ಕೆಯನ್ನು ತಿಳಿಸಿದರು. ಅವರು ಪದವಿ ಹಾಗೂ ಅಧಿಕಾರವನ್ನು ತ್ಯಜಿಸಿ, ಕಲ್ಯಾಣವನ್ನು ತೊರೆದು ಕೂಡಲ ಸಂಗಮಕ್ಕೆ ಬಂದರು. ಬಿಜ್ಜಳರು ಊಹಿಸಿದಂತೆ ಬಸವಣ್ಣನವರ ಅಧಿಕಾರ ತ್ಯಾಗದ ಪರಿಣಾಮಗಳು ಕಲ್ಯಾಣ ರಾಜ್ಯದಲ್ಲಿ ಅಲೆದೋಂದಿ, ಕಲ್ಯಾಣವು ಒಂದ ಬರುಗಾಯ ಕೇಂದ್ರವಾಯಿತು. ಅಕ್ಕಿ ಕ್ರಾಂತಿಕಾರಕ ಬದಲಾವಣೆಗಳಾದುವು. ಇತ್ತ ಕೂಡಲ ಸಂಗಮದಲ್ಲಿ ಬಸವಣ್ಣನವರು ತನ್ನ ಮೂಲತತ್ವರನೇ ಪಡುಸ್ಸಿನಲ್ಲೇ ದೈವಸ್ವವನ್ನು ಸಂಪಾದಿಸಿದರು. ತಮ್ಮ ಕಾಲದಲ್ಲಿ ಒಬ್ಬ ಮಹಾಪುರುಷ ಪರಿಸರಿಸಿದರಲ್ಲಿ ಅವರು ಸಮಾಜದ ಪ್ರಗತಿಯ ದ್ಯೋತಕವಾಗಿ ಉಳಿದರು.

ಬಸವಣ್ಣನವರು ಒಬ್ಬ ಮಹಾ ಪುರುಷರಾಗಿದ್ದರು. ಅವರು ಹಲವು ವಿಭಿನ್ನ ಭಿನ್ನವಾಗಿದ್ದರು. ಸಾಮಾಜಿಕ ಅಧ್ಯಾತ್ಮ ಗುರು ಹಾಗೂ ಧಾರ್ಮಿಕ ಮೂಢ ಭಾವನೆಗಳು ಎಷ್ಟೇ ವೈಶ್ಯದ್ದಾಗಿರಲಿ ಅವುಗಳ ಎದುರಿಗೆ ಅವರೊಬ್ಬ ಜೀವಂತ ವಿರೋಧಿಗಳಾಗಿದ್ದರು. ಪ್ರಾಯಶಃ ಪ್ರಜಾಪ್ರಭುತ್ವ ಮೂಲ್ಯಬೆಳೆವಣಿಗೆಗೆ ಪ್ರೋತ್ಸಾಹವನ್ನಿತ್ತ ಮೊತ್ರಮೊದಲ ಪ್ರಜಾಪ್ರಭುತ್ವವಾದಿ ಅವರಾಗಿದ್ದರು ಸರ್ವ ವಿಧದ ಅಸಮಾನತೆಗಳನ್ನು ಅವರು ತ್ಯಜಿಸಿದರಲ್ಲದೆ, ಮೂಲ ತತ್ವದ ಮಾನವತೆಯ ದರ್ಶನವನ್ನು ಅವರು ಉತ್ತೇಜಿಸಿದರು.

ಸಂಕೀರ್ಣವಾದ ನಿಯಮ ಬದ್ಧ ವತಗಳು ಗೊಂದಲಮಯ ಸನ್ನಿವೇಶದತ್ತ ಸಾಗುತ್ತಿದ್ದ ಸಮಯದಲ್ಲಿ ಈ ಕ್ಷೇತ್ರಕ್ಕೆ ಬಸವಣ್ಣನವರ ಆಗಮನವಾಯಿತು. ಹುಟ್ಟಿನ ವೇಳೆ ನಿಂತಿದ್ದ ಈ ಕಿಳಿಯಾದ ಜಾತಿಗಳು ಪದ್ಧತಿಯ ತನ್ನ ಕಾರ್ಯಗಳ ಮೌಲ್ಯವನ್ನು ಕಳೆದು ಕೊಂಡಿತ್ತಲ್ಲದೆ ಸಮಾಜವೂ ಛಿದ್ರಾವಸ್ಥೆಯಲ್ಲಿತ್ತು. ಸಾಮಾಜಿಕ ಅಸಮಾನತೆಗಳು ಹಾಗೂ ಅನ್ಯಾಯ ಸ್ಥಿತಿಗಳು ಪ್ರತಿರೋಧವನ್ನು ಆಹ್ವಾನಿಸುವಂತಿದ್ದುವು. ಈ ಪ್ರತಿರೋಧವು ಬಸವಣ್ಣನವರಲ್ಲಿ ಮೂರ್ತಿಪಡೆಯಿತು. ಅವರು ಸಾಮಾಜಿಕ ಸಂಬಂಧಗಳ ಉಚ್ಚಾಟಿಸಿಗೆ ಕಾರಣ ಇತ್ತರಲ್ಲದೆ, ದೇವರು ಮತ್ತು ಕಾರ್ಯಗಳಲ್ಲಿ ಸಮಾನತೆಯನ್ನು ಸಾರಿ, ಲಿಂಗ ಮತ್ತು ಜಾತಿಬೇಧಗಳನ್ನು ತೊಡೆದು ಹಾಕಿದರು. ಪ್ರಜಲಿತ ಮಾತಿನ ಸರಣಿಯಲ್ಲಿ ಹೇಳುವದಾದರೆ, ಅವರು ಕೆಲಸದಲ್ಲಿ ಗೌರವವನ್ನು ಬೋಧಿಸಿದರಲ್ಲದೆ, ಕಾಯಕ ಮಾಡದೆ ಕಾಯ ಹೊರುವುದು ಕಳ್ಳತನವೆಂಬ ಭಾವನೆಯ ಸಾಮಾಜಿಕ ನಡವಳಿಕೆಯುಳ್ಳ ಸಮಾಜ ಪದ್ಧತಿಯನ್ನು ಎತ್ತಿ ಹಿಡಿದರು. ಕಾಯಕವೇ ಕೈಲಾಸವೆಂದು ಅವರು ಸಾರಿದರಲ್ಲದೆ ಸಾಮಾಜಿಕ ಸೊತ್ತುಗಳು ಎಲ್ಲರ ಸೊತ್ತುಗಳು ಎಂಬ ಭಾವನೆಯನ್ನು ಮೂಡಿಸಿದರು.

ಬಸವೇಶ್ವರರು ಒಬ್ಬ ಶ್ರೇಷ್ಠ ಭಕ್ತರಾಗಿದ್ದರು. ಅವರು ತನ್ನ ಭಕ್ತಿಗೆ ಪ್ರೀತಿಪಾತ್ರ ಸಂಗಾತಿಯನ್ನು ಆಳವನ್ನೂ ಕೊಟ್ಟರು. ಅವರೊಬ್ಬ ಕವಿಯಾಗಿದ್ದರಲ್ಲದೆ, ದೇವರ ವೇಲಣ ಅವರ ವಚನ ಅಮಂಖ್ಯ ರೂಪಗಳಲ್ಲಿ ಹೊರ ಹೊಮ್ಮುತ್ತಿತ್ತು. ಕನ್ನಡ ಸಾಹಿತ್ಯಕ್ಕೆ ಅವರ ವಚನಗಳು ಅಪೂರ್ವ ಕೊಡುಗೆಗಳಾಗಿವೆ. ಈ ವಚನಗಳು ಬಸವಣ್ಣನವರ ಕೈಯ್ಯಲ್ಲಿ ಪ್ರಜಾಪ್ರಭುತ್ವದ ಉಪಕರಣಗಳೆನಿಸಿ, ಜನ ಸಾಮಾನ್ಯರಿಗೆ ಇವುಗಳ ಪಾರಿಸಿಗುವಂತಾಯಿತು. ಅಡು ಭಾಷೆಗೆ ಸಮೃದ್ಧವಾಗಿರುವ ಈ ವಚನಗಳು, ಅತಿ ಸುಂದರ ಮತ್ತು ಮಧುರ ಅನುಭವಗಳ ಪ್ರತೀಕವೆನಿಸಿವೆ. ಕೂಡಲ ಸಂಗಮ ದೇವರ ಅಂಕಿತಗಳು ಇವರ ವಚನಗಳು, ಜ್ಞಾನದ ನಿಧಿಗಳೆನಿಸಿವೆ. ಜನರು ತನ್ನದೆನ್ನುವುದನ್ನು ಎಸ್ಟರ ಮಟ್ಟಿಗೆ ಮರೆತು ದೇವರಿಗೆ ಶರಣ ಗಿದ್ದರೆಂದರೆ, ಅವರ ಮನೆಹೊಕ್ಕ ಒಬ್ಬ ಕಳ್ಳನಲ್ಲೇ ತನಗೆ ಪರಿತ್ಯಾಗದ ಪಾಠ ಕಲಿಸಲು ಬಂದ ದೇವರನ್ನು ಕಂಡರು. ಇತರರ ಸೊತ್ತು ಹಾಗೂ ಧನಗಳು ಅವರ ಪಾಲಿಗೆ ತ್ಯಾಜ್ಯವಾಗಿದ್ದವು.

ಬಸವೇಶ್ವರರ ಸಾಧನೆಗಳಲ್ಲಿ ಅತಿ ಮಹತ್ವದ ಸ್ಥಾನ, ಅಧ್ಯಾತ್ಮಿಕ ಸಭೆಯ ರೂಪದ ಅನುಭವ ಮಂಟಪಕ್ಕೆ. ಮುನ್ನೂರಕ್ಕೂ ವಿಶಿಷ್ಟ ವಿವಿಧ ವೃತ್ತಿಗಳ ವ್ಯಕ್ತಿಗಳು ಸರ್ವೋತ್ಕೃಷ್ಟ ಧ್ಯಾನಕ್ಕಾಗಿ ಒಂದಾಗಿ, ಉಂಟಾದ ಅಪೂರ್ವವಾದ ಭಕ್ತರ ಕೂಟ ಇದಾಗಿತ್ತು. ಇಲ್ಲಿ ಅರಸನೂ ಭಿಕಾರಿಯೂ, ಸನ್ಯಾಸಿಯೂ ಪಾಪಿಯೂ, ಗಂಡಸೂ ಹೆಂಗಸೂ, ಉಚ್ಚ ಕುಲದವನೂ ನೀಚ ಕುಲದವನೂ, ಬಂಧುಗಳಂತೆ ಬೆರೆತಿದ್ದರು. ಅಲ್ಲಮಪ್ರಭು, ಅಕ್ಕಮಹಾದೇವಿ, ಕಾಯಕವೇ ಕೈಲಾಸವೆಂಬ ಬಸವಣ್ಣನವರ ತತ್ವಕ್ಕೆ ಅನುಸರಣವಾಗಿ ರಾಜರು ಮಾಡಿದಾಗಿದ್ದು ಕಟ್ಟಿಗೆ ಒಡೆಯುವವನಾದ ಮೊಳಿಗೆ ಮಾರಯ್ಯ ಮೊದಲಾದವರು ಈ ಅನುಭವ ಮಂಟಪಕ್ಕೆ ಶೋಭೆತಂದ ಅನರ್ಘ್ಯ ರತ್ನಗಳಾಗಿದ್ದರು. ಬಸವಣ್ಣನವರು ಅಸ್ಪೃಶ್ಯತೆಗೆ ಸನ್ನ ಬಹಿಷ್ಕರಿಸಿದರು ಮಾತ್ರವಲ್ಲ ಪ್ರಾಣ ಹಿಂಸೆಯ ನ್ನ ನಿರೋಧಿಸಿದರು. ಕಾಯಕವೆ ಕೈಲಾಸವೆಂಬ ಅವರ ತತ್ವದ ಸಮಾಜದ ತಳಹದಿರು ಮೇಲೆ ಆಧಾರವಾದ ಅವರ ವಿಶ್ವ ಬಾಂಧವ್ಯದ ಸಂದೇಶ ಇಂದು ಜಗತ್ತಿನ ಎಲ್ಲಾ ಜನರ ಹೃದಯಗಳಲ್ಲಿ ಪ್ರತಿಧ್ವನಿಸುತ್ತಿದೆ.

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವುಕೊಟ್ಟು, ಟೆಂಪರುಗೊಳಿಸಿದ ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೆ ಒರೆಗೆ ಹಚ್ಚಬಹುದು.

ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ, ದೀರ್ಘಕಾಲ ತಾಳಿಕೆ ಬರುತ್ತವೆ. ಇದರಲ್ಲಿ ಹಣ ತೊಡಗಿಸುವುದು ಒಂದು ಸುದ್ದೆವ.

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು.

ಶಿವದಾಸ ಗೀತೆಗಳ ಕಾಣಿಕೆ

(ಎಂಟನೇ ಪುಟದಿಂದ)

ಅಭಿಪ್ರಾಯ—ನಾದವು (ಅಂದರೆ ಸಂಗೀತವು) ನಿಷ್ಪ್ರಯೋಜಕವೆಂದಲ್ಲ. ಭಕ್ತಿ ಹೀನವಾದ ನಾದ ಮಾತ್ರ ನಿಷ್ಪ್ರಯೋಜಕವೆಂದು ನವವಿಧ ಭಕ್ತಿರಸಗಳಲ್ಲಿ ಒಂದಾದ ಕೀರ್ತನವು ಭಕ್ತಿ ಭಂಡಾರಿಯೂದ ಬಸವಣ್ಣನವರಿಗೇ ಆಗಲಿ, ಅವರ ಅನುಯಾಯಿಗಳಾದ ಯಾರಿಗೇ ಆಗಲಿ ತ್ಯಾಜ್ಯವೆನ್ನಲು ಕಾರಣವೇ ಇಲ್ಲ. ಭಾವ ಜೀವಿಯೂದ ಬಸವಣ್ಣನವರಿಗೆ "ನಾದ"ದ ಜೀವಾಳ ತಿಳಿದಿತ್ತು. ಅದು ಶಿವಸಾಕ್ಷಾತ್ಕಾರಕ್ಕೆ ಪವಿತ್ರ ಸಾಧನವೆಂಬ ದನ್ನೂ ಅವರು ಅರಿತಿದ್ದರು. ತಮ್ಮ ದೇಹವೇ ಒಂದು ವೀಣೆಯಾಗಿ ವೈಣಿಕ ಶಿವನಿಗೆ ಅಳವಡುವ ಒಂದು ಹಿರಿದು ಶಂಖಲ ಬಸವಣ್ಣನವರದಾಗಿತ್ತು. ಆದುದರಿಂದಲೇ ಅವರ ಪಾಲಿಗೆ "ಶಿವ" ಎಂದರೆ ಅದು "ನಾದಸ್ತಿಯ ಪಂದಿಸುವನೇರಿಕೊಂಡು ಅತೀತನ ಮೇಲೆ ಆನಂದ ಸಿಂಹಾಸನವಿಕ್ಕಿದೆ" ಅಭವ ಭವ್ಯವಾದೊಂದು ಶಕ್ತಿಯೆ ನಿಸಿತ್ತು.

ಚಿತ್ತವೃತ್ತಿ ನಿರೋಧವನ್ನೂ ಆ ಮೂಲಕ ಜೀವಶಕ್ತಿಯನ್ನೂ ಸಾಧಿಸಲು ಬಸವಣ್ಣನವರು ಉಪಕ್ರಮಿಂತಲೂ ಸಂಗೀತಕ್ಕೆ ಪವಿತ್ರೋನ್ನತ ಸ್ಥಾನವನ್ನು ಕೊಟ್ಟಿರುವರು—"ಕೋಟ್ಯಾನು ಕೋಟಿ ಜಪವ ಮಾಡಿ ಕೋಟಲೆಗೊಳ್ಳಲೇಕೆ ಮನವೇ? ಕಿಂಚಿತ್ ಗೀತವೊಂದನಂತ ಕೋಟಿ ಜಪ! ಜಪವೆಂಬುದೇಕ ಮನವೇ? ಕೂಡಲ ಸಂಗನ ಶರಣರ ಕಂಡು ಆಡಿ-ಪಾಡಿ ಬದುಕು ಮನವೇ!" ಎಂಬುದೇ ಅವರ ನಿಲುವು. ಅವರಂತೆಯೇ ಅವರ ಅರ್ಧಾಂಗಿಯೂದ ನೀಲಲೋಚನೆಯವ್ವನವರೂ, ಅವರ ಸಮಕಾಲೀನರಾದ ಅಲ್ಲಮಪ್ರಭು, ಚೆನ್ನ ಬಸವಣ್ಣ, ಸಿದ್ಧರಾಮಯ್ಯ, ಅಕ್ಕಮಹಾದೇವಿ, ಸೊಡ್ಡಳ ಚಾಚರಸ, ಹಾವಿನ ಹಾಳ ಕಲ್ಲಯ್ಯ, ಸಕಳೇಶ ಮಾದರಸ, ಒಂದನೇ ಫಿಜಪುಣ, ನಿಜಲಿಂಗ ಚಿಕ್ಕಯ್ಯ, ಅಮುಗಿದೇವಯ್ಯ, ಅದಯ್ಯ, ಬಹು ರೂಪಿ ಚೌಡಯ್ಯ, ಮತ್ತು ಅಗ್ಗಣಿ ಹೊನ್ನಯ್ಯಗಳು ರಾಗ ತಾಳ ನಿರ್ದಿಷ್ಟವಾದ ಹಾಡುಗಳನ್ನು ರಚಿಸಿರುವರು. ಈ ಎಲ್ಲರ ಸಿಕ್ಕಿರುವ ಹಾಡುಗಳನ್ನು ನಾನು ಸಂಪಾದಿಸಿರುವ ಶಿವದಾಸ ಗೀತಾಂಜಲಿಯಲ್ಲಿ ನೋಡಬಹುದು. ಇವರಿಷ್ಟೇ ಜನರಲ್ಲದೆ, ಬಸವಣ್ಣನವರಿಗಿಂತ ಪೂರ್ವದವರಾದ ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ, ಕಕ್ಕಯ್ಯ, ಕೊಂಡಗುಳಿ ಕೇಶಿರಾಜ ಮುಂತಾದವರೂ ಇಂತಹ ಹಾಡುಗಳನ್ನು ಬರೆದಿದ್ದರೆಂದೂ, ಅವನ್ನು ಗಾಯಕರು ಹಾಡುತ್ತಿದ್ದಂತೆಯೂ ಪಾಲ್ಕುರಿಕೆ ಸೋಮನಾಥನು ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಬರೆದಿದ್ದಾನೆ. ಆದರೆ ಬಸವಣ್ಣನವರಿಗಿಂತ ಪೂರ್ವದ ಶರಣರೊಬ್ಬರ ಒಂದು ಹಾಡೂ ನಮಗಿನ್ನೂ ಉಪಲಬ್ಧವಾಗಿಲ್ಲ. ನಮಗೆ ಸಿಕ್ಕಿರುವ ಅತ್ಯಂತ ಪ್ರಾಚೀನವಾದ ಹಾಡೆಂದರೆ ಬಸವಣ್ಣನವರ ಹಿರಿಯ ಸಮಕಾಲೀನನಾದ ಸಕಳೇಶ ಮಾದರಸನದು— ಅದರ ಛಂದಸ್ಸು ತ್ರಿಪದಿ, ಅದಕ್ಕೆ ರಾಗ ಶಂಕರಾಭರಣ.

ಪಾಲ್ಕುರಿಕೆ ಸೋಮನಾಥನು ತನ್ನ ಬಸವಪುರಾಣದಲ್ಲಿ ಈ ಸಕಳೇಶ ಮಾದರನ ಕಥೆಯನ್ನು ಹೇಳುವಾಗ— ಅತನು ವೀಣೆಯನ್ನು ನುಡಿಸುತ್ತ ಭಕ್ತಿಗೀತೆಗಳನ್ನು ಹಾಡುತ್ತ ಶಿವಧ್ಯಾನ ನಿರತನಾಗುತ್ತಿದ್ದುದನ್ನು ವಿವರಿಸಿದ್ದಾನೆ ಆ ವಿವರದಿಂದ ಸಕಳೇಶ ಮಾದರನಿಗೆ ಕಾಲಕ್ಕೇ ಅಥವಾ ಪಾಲ್ಕುರಿಕೆ ಸೋಮನಾಥನ ಕಾಲಕ್ಕೆ ಅಂದರೆ ೧೨—೧೩ನೇ ಶತಮಾನದ ಹೇಳಿಗೇ ಆ ಶಿವದಾಸರ ಪರಿಶ್ರಮದಿಂದ ಸಂಗೀತ ಶಾಸ್ತ್ರವು ಕರ್ಣಾಟಕದಲ್ಲಿ ಎಷ್ಟು ಉಚ್ಚಾಯ ಸ್ಥಿತಿಯನ್ನು ಮುಟ್ಟಿತ್ತು ಎಂಬುದನ್ನು ಮನಗಾಣಬಹುದು. ಆ ವಿವರ ಹೀಗಿದೆ:

"ಸಕಳೇಶ ಮಾದರಸನು ಯಾವ ಯಾವ ರಾಗ ದೇವರಿಗೆ ಪ್ರಿಯವೋ ಆಯಾರಾಗವು ಹೊಮ್ಮಿ ಧ್ವನಿಸುವ ರಾವಣಹಸ್ತ, ಬ್ರಹ್ಮವೀಣೆ, ಲಾವಣ್ಯವೀಣೆ, ಕೈಲಾಸವೀಣೆ, ಆಕಂಠವೀಣೆ, ಪಿನಾಕವೀಣೆ, ಸಾರಂಗವೀಣೆ, ಕೂರ್ಮವೀಣೆ, ಸ್ವಾಯಂಭುವೀಣೆ, ಗೌರೀವೀಣೆ, ಶಿವಕಾಣಿ ಮೊದಲಾದ ದಂಡಿಗೆಗಳನ್ನು ತೆಗೆದುಕೊಂಡು, ಮಾಗಚಾಳ, ಸಮಚಾಳ, ತಾಳಪಟ್ಟಿ, ಶತ್ರುಕಿಸಿಕಾಳಪಟ್ಟಿ, ಸಾರಣಿಗಳನ್ನು ಹೊಂದಿಸಿಕೊಂಡು, "ಸಕಳೇಶ, ಪಿತ್ಯಕಲ್ಯಾಣ, ಅವರಂಗ, ಪ್ರಾಣಾಯಾಮ, ಪಾದಮೂರ್ತಿ" ಎಂದು ಭಜಿಸುತ್ತ, ಅದೂ ದಾಸಪಟ್ಟದೇ ಅಂಚಿಕಾಟ್ಟಿಗೆ ಅಭಿಮುಖವಾಗಿ, ಸಪ್ತಸ್ವರಗಳಲ್ಲಿ ಉದಯ ಸಮಯ ಇಪ್ಪತ್ತೆರಡು ಶ್ರುತಿಗಳನ್ನು ಸೇರಿಸಿ, ಭಕ್ತಿರಸದಿಂದ ಪಾಂಚಕ ಪ್ರಣವೆಂಬ ಧ್ವನಿಯನ್ನೆಳೆದವಾಗಿ, ಚೌದಳ ಪೆಂಬ ಕಮಲದಲ್ಲಿ ಅಭಿಮುಖರೂಪವಾಗಿಯೂ, ಕಪ್ಪರಮಂಟಗಳ, ಸಂಧಿಸಿ, ಮಂದ್ರ—ಮಧ್ಯ—ತಾರದಳ, ಒಂದಿಳೊಂಡು, ಲಯಗಳೂ ಅಂಕಿತಗಳೂ ಅಕಿಶಯವಾಗಲು, ಲಾಲಿತ ಶುದ್ಧ ಸಾಲಗಗಳಿರುವ, ದೇಶೀ ಮಾರ್ಗಗಳು ಪ್ರಕಾಶಿಸುವ ದೃಶ್ಯ—ಮಧ್ಯ—ವಿಲಂಬಿತಗಳಲ್ಲಿ, ತಾಳವಾದ್ಯಗಳನ್ನು ಶೋಧಿಸಿ, ಧಾಳು ಮತ್ತು ಅಂಶಗಳನ್ನೂ ಮಾತು ಮತ್ತು ರೀತಿಗಳನ್ನೂ ಸೇರಿಸಿ ನಿಬದ್ಧರೂಪವಾಗಿಯೂ ಪೆಳ್ಳಿಪಳ್ಳಿ, ಜಾಯನ ಜಾಯಿ, ಪಂಜಳ, ಬಿಜರು, ವಿಷಮ, ಗ್ರಹಿಸೋಕ್ಷ, ಭಜವಣ, ರವಣೆ, ವಿರಾಯಿ, ನಿಜವಣಿ, ಕಾಳ, ದೇಶಿ ಶಾಳು, ಕಾಣಾಕಾಳ, ಮೊದಲಾದ ರಾಯಗಳು ಪ್ರಕಾಶಿಸಲು, ದೇಶಾಕ್ಷಿ, ಧನ್ಯಾಸಿ, ದೇಶಿ, ಮಲಹರಿ, ಸಕಲ ರಾಮ ಕ್ರಿಯ, ಲಲಿತ, ಸಾಳಂಗ, ನಾಟ, ಸುಜ್ಜರಿ, ಮೇಘ ರಂಜಿ, ಪೇಳಾವುಳಿ, ಮಾಳವಿ, ಸಿರಿ, ಚಿತ್ರಪೇಳಾವುಳಿ, ಮಾಳಿ, ಕಾಂಭೋಜಿ, ಗೌಳಪಂಚಕ ಬಂಗಾಳದ ಗುರಿಜ, ಭೈರವಿದ್ವಯ, ಪಡಪಂಚರ, ಗುಂಡಕ್ರಿಯ, ಕೃತಿಕ, ದೇವಕ್ರಿಯ, ಮಧ್ಯಮಾವತಿ, ತೋಡಿ, ವಸಂತ ಮೊದಲಾದ ಸ್ತ್ರೀ ರಾಗ ಪುರುಷರಾಗದಳಲ್ಲಿ ಗೀತೆಗಳನ್ನು ಹಾಡುತ್ತ, ಅಮಲವಾದ್ಯಗಳು ಮೊಳಗಲು ಕ್ರಮವಾಗಿ ಕೇಳಿಕ ಗತಿಯಿಂದ ನಾಟ್ಯ ಮಾಡುತ್ತಲೂ ಭಕ್ತರಿಗೆ ನಮಸ್ಕರಿಸುತ್ತಲೂ ಇದ್ದನು.

ಪಾಲ್ಕುರಿಕೆ ಸೋಮನಾಥನ ಈ ಹೇಳಿಕೆಗೆ ಬಸವಕಾಲೀನನಾದ ಗಣೇಶ ಮಣಿಯಯ್ಯನೆಂಬ ಶಿವಶರಣನ ಈ ಮಂದಣ ವಚನವನ್ನು ಗಮನಿಸಬಹುದು.

"ದೇಶಾಕ್ಷಿಯಲ್ಲಿದ ರಾಗ, ಉಪ್ಪಿಲ್ಲದೂಟ ಸಪ್ಪೆ ಕಾಣಿರಣ್ಣ. ಅಯ್ಯ, ಮಿಕ್ಕಿನ ರಾಗ, ಶಿವಪಲ್ಲದ ದೈವ, ಫಲವಿಲ್ಲ ಕಾಣಿರಣ್ಣ. ಅಯ್ಯ, ಮಿಕ್ಕಿನ ಪಂಬುರು ನಾದದರು ಶಿವನ ಕೇಳಿಸುವ ರಾಗ ಮಹಾಲಿಂಗ ಗಜೇಶ್ವರನ ನೆಚ್ಚಿನ ರಾಗ!".

ಈ ಎಲ್ಲ ಆಧಾರದ ಮೇಲಿಂದ, ಬಸವಣ್ಣನವರೂ ಅವರ ಸಮಕಾಲೀನ ಶಿವದಾಸರೂ ಕರ್ಣಾಟಕದ ವಾಗ್ಗೇಯಕಾರರಲ್ಲಿ ಮೊದಲಿಗರಾಗಿ ಕನ್ನಡ ಸಾಹಿತ್ಯ ಮತ್ತು ಕರ್ಣಾಟಕ ಸಂಗೀತಕ್ಕೆ ಅಪಾರ ಸೇವೆಯನ್ನೂ ಅಪೂರ್ವ ಕಾಣಿಕೆಯನ್ನೂ ಸಲ್ಲಿಸಿರುವರೆಂಬುದರಲ್ಲಿ ಸಂಶಯವಿಲ್ಲ.

ಇದೇ ಪರಂಪರೆಯನ್ನು ಬಳಿಕೋತ್ತರ ಕಾಲೀನ ಶಿವಶರಣರೂ ಪ್ರೋಜ್ವಲಗೊಳಿಸುತ್ತ ಮುಂದುವರಿಸಿಕೊಂಡು ಬಂದರು ಹದಿನೈದನೇ ಶತಮಾನದ ಹರಿದಾಸರು ಕನ್ನಡ ಸಾಹಿತ್ಯ ಮತ್ತು ಕರ್ಣಾಟಕ ಸಂಗೀತ—ಕ್ಷೇತ್ರಕ್ಕೆ ಸದಾರ್ಪಣ ಮಾಡುವುದಕ್ಕೆ ಜಲವಾರು ಶತಮಾನಗಳ ಮೊದಲೇ ಬಸವ ಪೂರ್ವಿಕರಾದ ಜೇಡರ ದಾಸಿಮಯ್ಯ ಮಂತಾದವರೂ, ಆಮೇಲೆ ಬಸವಾದಿ ಪ್ರಮಥರಲ್ಲಿ ಜೆಲವರೂ, ಅಪಾರ ಬಳಿಕೋತ್ತರ ಕಾಲೀನರಾದ ಕರಿಕ್ಷರಿದ ನಾಗಿದೇವ, ಗುರುಬಸವ, ನಿರ್ವಾಣಿ ಬೋಳೇಶ, ಬತ್ತಿಕೇಶ್ವರ, ಶಂಕರದೇವ ಮುಂತಾದವರೂ ಕರ್ಣಾಟಕದಲ್ಲಿ ಉಚ್ಚ ವಾಗ್ಗೇಯಕಾರರೆಂದು ಪ್ರಸಿದ್ಧರಾಗಿದ್ದರು. ಇದೇ ಪರಂಪರೆಯಲ್ಲಿ ಇವರಿಲ್ಲ ಅದ ಮೇಲೆಯೇ ಶತಮಾನದ ಹರಿದಾಸರ ಕಾಲಕ್ಕೆ ಬಂದವರೇ— ಎರಡನೇ ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮುಂತಾದವರು.

ಆದುದರಿಂದ ಬಸವಣ್ಣನವರೇ ಮೊದಲಾದ ಶಿವಶರಣರು ಕನ್ನಡದಲ್ಲಿ ಯೋಪಗೇಯ ಕೃತಿಗಳನ್ನು ರಚಿಸಿರುವರು ಮತ್ತು ಅಂದಿನ ಅವರ ಕರ್ಣಾಟಕ ಸಂಗೀತದ ನೆಲೆ—ಬೆಲೆ ಏನೆಂಬುದನ್ನು ಸಂಗೀತಜ್ಞರು ಸಂಶೋಧಿಸಿ, ಕನ್ನಡ ಸಾರಸ್ವತ ಪ್ರಪಂಚದ ಈ ಅಭೂತಪೂರ್ವ ನಿಧಿಯನ್ನು ಎತ್ತಿ ಬಳಕೆಗೆ ತಂದುಕೊಳ್ಳುವ ಕಾಲಲಬ್ಧಿ. ಬಸವಣ್ಣನವರ ಎಂಟನೆಯ ಶತಮಾನೋತ್ಸವದ ಈ ಶುಭ ಮುಹೂರ್ತದಲ್ಲಾದರೂ ಒದಗಿ ಬರಲಿ ಎಂದು ಹಾರೈಸುತ್ತೇನೆ.

(ಆಕಾಶವಾಣಿ ಕೃಪೆಯಿಂದ.)

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೆಲ್ ಸತ್ಕಾರ್
ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏನೆಂದರೆ ಇಲ್ಲಿ ವಸತಿ ಸೌಕರ್ಯವಿದೆ, ಊಟ, ಉಪಾಹಾರದ ವ್ಯವಸ್ಥೆಯೂ;
ಹಾಗೂ ಎಲ್ಲಾ ಪರಿಚಯ [illegible]
HOTEL SATKAR
Boarding & Lodging
Near Corporation Office, 9, Mission Road
Bangalore 2

ಮಹಾತ್ಮ ಬಸವೇಶ್ವರ

(ಸಂಚಿಕೆ ೪ರಿಂದ)

ಮನುಷ್ಯರಿಗೆಲ್ಲ ಸ್ವಾತಂತ್ರ್ಯ ಕೊಡಿರಿ. ಅದರ ಸೃಷ್ಟಿಕಾಲಕ್ಕೆ ಅದು ಉಚಿತವಿದ್ದಿರಲೂ ಬಹುದು. ಆದರೆ ಬದಲಾಗುತ್ತಿರುವ ಸಮಾಜಕ್ಕೆ ಹೊಸ ಹೊಸ ಜೀವನ ಮೌಲ್ಯಗಳು ಬೇಕೇ ಬೇಕು. ಇದಕ್ಕಾಗಿ ಬಸವಣ್ಣನವರು ಪ್ರಯತ್ನಿಸಿದರು. ಅವರ ಸುತ್ತ ಅವಿಸಿದ್ದ ಅನೈತಿಕ ಶೃಂಖಲೆಗಳನ್ನು ಕಡಿದು ಹಾಕಿದರು. ಅವರ ಅನುಭವ ಮಂಟಪದಲ್ಲಿ ಅಕ್ಕ ಮಹಾದೇವಿ, ಮುಕ್ತಾಯಕ್ಕ, ರಾಚಯ್ಯದೇವಿ, ಕದಿರೆ ಕಮ್ಮಟ್ಟೆ ಮೊದಲಾದ ಸ್ತ್ರೀಯರೂ ಇದ್ದರು.

ಕಾಶ್ಮೀರಲ್ ಹೇಳಿದ Work is worship ಎಂಬುದನ್ನು ನಾವಿಂದು ಒಪ್ಪುತ್ತೇವೆ. ಅದು ಆಂಗ್ಲ ಶಬ್ದದಿಂದಿಳಿದು ಬಂದ ನೀರು. ಆದರೆ, ಇದೇ ಸೈದ್ಧಾಂತಿಕವನ್ನು 'ಕಾಯಕವೇ ಕೈಲಾಸ'ವೆಂದು ಬಸವಣ್ಣನವರು ಅದಕ್ಕಿಗೆ ಮೊದಲೇ ಘೋಷಿಸಿದ್ದಾರೆ. ಜನರು ಒಂದಲ್ಲ ಒಂದು ಉದ್ಯೋಗ ಮಾಡಲೇ ಬೇಕು, ತಮ್ಮ ಕಸ್ಮ ಮಾಡಿಕೊಂಡಲೇ ಬಂಧಮ್ಮ ಬದಲಾಗ್ಗೆ ಸಾಗಿಸಬೇಕು. ನಾವು ಗಳಿಸಿದ್ದನ್ನ ದೈವೀಕಾರ್ಯಕ್ಕೆ ಬಳಸಬೇಕು. ಜಾತಿಯಲ್ಲಿ ಹಿಂದು ಕಿರಿದು ಭೇದವಿಲ್ಲ. ಕಮ್ಮಾರ, ಒಡಗಿ, ಕೈತ, ಚಮ್ಮಾರ ಎಲ್ಲರೂ ಅವರವರ ಕಾಯಕ ಮಾಡಲಿ; ಆದರೆ, ಈ ಕಾಯಕದಲ್ಲಿ ಶಿವತ್ವ, ಶುಭತ್ವ, ಪರಸ್ಪರ ಸಹಕಾರ ವಿರಲಿ—ಇದು ಅವರ ಮನೋಭಾವಗಿನ್ನ. ಈ ಶಿವತ್ವ, ಶುಭತ್ವ ಮತ್ತು ಸಹಕಾರಗಳು ಸಮಾಜಕ್ಕೆ ಸ್ವಾಸ್ಥ್ಯವನ್ನು ತಂದು ಕೊಡುತ್ತವೆ; ಅರ್ಥಕ್ಕೆ ಭದ್ರತೆಯನ್ನುಂಟು ಮಾಡುತ್ತವೆ—ಇದನ್ನು ಬಸವಣ್ಣನವರು ಸಸ್ಯಮಾಣವಾಗಿ ತೋರಿಸಿ ಕೊಟ್ಟರು. ಹಾಗಾಗಿ ಎಲ್ಲ ಜಗೆಯ ವ್ಯಕ್ತಿಗಳನ್ನು ಕೈಕೊಂಡ ಜನರು ಒಂದಾದ ಸಂಬಂಧ ಸಮಾಜವೊಂದು ರೂಪುಗೊಂಡಿತು. 'ಗ್ರಾಮರಾಜ್ಯ'ದ ಒಂದು ಕಲ್ಪನೆಯೇ ಇದು.

ಅಂದಾಗಲೇ ಸ್ವರ್ಗ, ಅನಾಚಾರದೇ ನರಕವೆಂಬುದು. ಬಸವಣ್ಣನವರ ಸೂತ್ರ. ಇದರಿಂದ ಭವಿಷ್ಯದ ಕಲ್ಪನೆ ಸುಲಭವಾಯಿತು. ನೈತಿಕ ಆಚರಣೆ ಬೆಳೆಯುವುದ ಸಾಧ್ಯವಾಯಿತು. ಧಾರ್ಮಿಕ—ಸಾಮಾಜಿಕ ಸಮಾನತೆಯ ತಳಹದಿಯ ಮೇಲೆ ಸಮಾಜ ನಿರ್ಮಾಣವಾಯಿತು. ಜಾತಿಭೇದ ನಿವಾರಣೆ ಅಸ್ತಿತ್ವಕ್ಕಿದ್ದರು, ಮಹಿಳೋದ್ಧಾರ, ಮೊದಲಾದ ಆಧುನಿಕ ವಿಚಾರ ಧಾರೆಗಳು ಬಸವಣ್ಣನವರ ಮನಸ್ಸಿನಲ್ಲಿ ಹುಟ್ಟಿಕೊಂಡನೆಯ ನೆಲೆಮಾಡಿದ್ದಲ್ಲಿಯೇ ಮೂಡಿದ್ದುವು. ಜಾತ್ಯಂಧತೆ ಅ ದಿನ ಜನತೆಯನ್ನು ಜಾತ್ಯತೀತಗೊಳಿಸಿದ ಅವರ ಸಾಹಸ ವಿಜಯ್ಯೂ ಪ್ರಶಂಸನೀಯವೇ.

ಧಾರ್ಮಿಕ—ಸಾಮಾಜಿಕ ರಂಗಗಳಲ್ಲಿ ಕ್ರಾಂತಿಕಾಕಳೆ ಬಾರಿಸಿದ ಬಸವಣ್ಣನವರು ಸಾಹಿತ್ಯರಂಗದಲ್ಲೂ ತನ್ನ ನೀತಿಯಿಂದ ವಿಜಯಶಿಖರಗಳಲ್ಲಿ. ಸಾಹಿತ್ಯವು ಸಂಡಿತರ ಸೆಂತ್ತು; ಸಾಂಪ್ರದಾಯಿಕ ಬಂಧನದಿಂದ ತುಂಬಿರ ವಸ್ತು—ಹೀಗಿದ್ದರೆ, ಅದರಿಂದ ಶ್ರೀ ಸಾಮಾನ್ಯನಿಗೇನು ಲಾಭ? ಜನಜನದ ಹೃದಯವನ್ನು ಸಾಹಿತ್ಯ ತಟ್ಟಬೇಕು; ಸುಲಭವಾಗಿ ಅತನ ಮನಬುದ್ಧಿಗಳನ್ನು ಸಂಸ್ಕರಿಸಬೇಕು— ಇದು ಸಾಹಿತ್ಯ—ಜನಸಾಹಿತ್ಯ. ಬಸವಣ್ಣನವರು ಈ ಬಗೆಯ ಜನಸಾಹಿತ್ಯ ನಿರ್ಮಾಣಕ್ಕೂ ಪ್ರೇರಕ ಶಕ್ತಿಯಾದರು ಆ ಕಾಲದಲ್ಲಿ ಕೂಲಿಷ್ಟತೆಯೂ ಕ್ಲಿಷ್ಟ ಗಹನತೆ ಗಹನತೆ ವಿಚಾರಗಳನ್ನು ಜನಭಾಷೆಯಲ್ಲಿ ಸರಳವಾಗಿ, ಹೃದಯಂಗಮವಾಗಿ ನಿರೂಪಿಸಿದ 'ವಚನ'ವೆಂಬ ಹೊಸ ಬಗೆಯ ಸಾಹಿತ್ಯ ಪ್ರಕಾರ ಬೆಳೆದು ಬಂತು. ಕನ್ನಡ ಸಾಹಿತ್ಯ ವಾಙ್ಮಯವು ಸುತ್ತೊಂದು ಕವಲಾಗಿ ಸಂಪೂರ್ಣವಾಗಿ ತುಂಬಿ ಹರಿಯಲು ಆರಂಭವಾಯಿತು. ನೂರಾರು ಶ್ರೀ ಸಾಮಾನ್ಯರೂ ವಚನಕಾರರಾದರು. ಮುಂಬೆ, ರಗಳೆ, ಷಟ್ಪದಿಗಳಲ್ಲಿ ಕಾವ್ಯರಚನೆಗಾರಂಭವಾಯಿತು.

ಬಸವಣ್ಣನವರು ತಮ್ಮ ವಚನಗಳಲ್ಲಿ ಪ್ರಬಲವಾದ ಅಸ್ತ್ರಗಳನ್ನು ಪ್ರಯೋಗ ಮಾಡಿದ್ದಾರೆ. ಮೂಢನಂಬಿಕೆ, ಅಜ್ಞಾನ, ವೈಷಮ್ಯಗಳನ್ನು ಜಲವಾಗಿ ಖಂಡಿಸಿದ್ದಾರೆ. ಅಂತರಂಗ ಶುದ್ಧಿಯನ್ನು ಬೋಧಿಸಿದ್ದಾರೆ. ಅತ್ಯ ಶ್ರದ್ಧೆಯನ್ನು ಪ್ರಬೋಧಿಸಿದ್ದಾರೆ. ದೈವೀಕ್ಷೆಯನ್ನು ಹಾಕೈಸಿದ್ದಾರೆ.

ಬೋಕದ ಹೊಂಕನ್ನು ತಿದ್ದಲು ಹೊರಡುವವರಿಗೆ 'ನಿಮ್ಮ ನಿಮ್ಮ ಕೈಯ ಸಂತೈಸಿಕೊಳ್ಳಿ;ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' ಎಂದು ಬಸವಣ್ಣನವರು ಹೇಳಿದರು. ಅವರು ಮಾನವ ಸಮಾಜದ ಲೋಕದೋಷಗಳನ್ನು ಗುರುತಿಸಿ ಅವನ್ನು ಮೀರಿ ನಿಲ್ಲುವ ನಿರ್ಧಾರವನ್ನು ಕೈಕೊಂಡರು. "ಕಾಮ ಮಾಯಂಗಳ ಕಳೆದವರಿಗೆ ಶರಣು' ಎಂದರು. "ಎಡಹು ಗುಳಿಗಳನ್ನು ದಾಟಲು ಕೂಡಲ ಸಂಗಮ ದೇವನ ಬಗೆಗೆ ಅನನ್ಯ ಭಕ್ತಿಯನ್ನು ಅಳವಡಿಸಿಕೊಂಡರು. ಭಕ್ತಿ ಭಂಡಾರಿಯಾಗಿ ಮೆರೆದರು.

ಸದಾಚಾರದಲ್ಲಿ ತೊಡಗಿದ ಜೀವಕ್ಕೆ ಭವಬಂಧನವಿಲ್ಲ. "ಆರು ಮುನಿದು ನಮ್ಮ ನೇನು ಮಾಡುವರು? ಊರು ಮುನಿದು ನಮ್ಮನೇನು ಮಾಡುವುದು?....ಅನೆಯ ಮೇಲೆ ಹೋಹೆನ ತ್ವಾನ ಕಚ್ಚಲಲ್ಲದೆ?' ಎಂದು ಕೇಳಿದ್ದಾರೆ. ತಾವೂ, ತನ್ನ ಪರಿಸರದವರೂ ಈ ಬಗೆಯ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳುವದರಲ್ಲಿ ಅವರು ಯಶಗಳಿಸಿದ್ದಾರೆ. ಮಹಾತ್ಮಾ ಗಾಂಧಿಯವರೂ ಈ ವಚನದಿಂದ ಪ್ರಭಾವಿತರಾಗಿದ್ದಾರೆ ತನ್ನ ಜೀವನವನ್ನು ಶುದ್ಧಗೊಳಿಸಿ ಮತ್ತೆ ಉಳಿದವರಿಗೆ ಅದನ್ನು ಬೋಧಿಸಿದ್ದಾರೆ.

ದೇವನೊಬ್ಬ ನಾಮ ಪಲವು
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದರೆ ಕೆಮಿಮೂಗ
ಕೊಯ್ದನು

ಎಂಬುದರಲ್ಲಿ "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬುದು ಪ್ರತಿಧ್ವನಿಸುತ್ತದೆ.

ಹೀಗೆ ತಿಳ್ಳ ಸದಾಚಾರ, ಪರ ಸಾಹಿತ್ಯ ಸದ್ಬೋಧನೆ, ಕ್ರಾಂತಿಗಳಿಂದ ಆಮರರಾದ ಬಸವಣ್ಣನವರ ಬಗೆಗೆ ಅವರ ಸಮಕಾಲೀನರಾದ ಅಲ್ಲಮ ಪ್ರಭುವೇಳಿದ ಈ ವಚನ ನೂರಕ್ಕೆ ನೂರನ್ನು ಸತ್ಯ—

ಕಲ್ಯಾಣವೆಂಬ ಪ್ರಣತಿಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಅಹಂಕಾರವೆಂಬ ಬತ್ತಿಗೆ
ಬಸವಣ್ಣನೆಂಬ ಜ್ಯೋತಿಯ
ಮುಟ್ಟಿಸಲು
ತೊಳಗಿ ಬೆಳಗುತಿದ್ದಿತಯ್ಯಾ ಶಿವನ
ಪ್ರಕಾಶ.

With best compliments from:

B. T. Venkatappa Setty

Proprietor,

SRI S.L.N. MOTOR SERVICE

BESAGARAHALLI

Maddur Tq. (Mandya Dt.)

We provide special buses for the conveyance of marriage, excursion and tourist parties at moderate charges.

PS:—Special concession allowed for students' educational tours.

ಬಸವ ಜಯಂತಿಯ ವ್ಯಾಪಕ ಆಚರಣೆ

(ಅರನೇ ಪುಟದಿಂದ)

ಬಸವೇಶ್ವರರ ಶಬ್ದ ನಿರೂಪಣೆಗಳನ್ನೂ ಅವರ ಉಪದೇಶ ಸಾರವನ್ನೂ ದೇಶದಲ್ಲಿ ಮೂಲೆಮೂಲೆ, ಅದಷ್ಟು ವಿಶ್ವಗೆ ಸಾರಬೇಕೆಗಳಲ್ಲೂ ಚಿತ್ರಿಸುವ ಉದ್ದೇಶದಿಂದ ಮೈಸೂರು ರಾಜ್ಯ ಸರಕಾರದವರೂ ಬಸವ ಸಮಿತಿಯ ಸ್ವಯಸ್ಥಾಪಕರೂ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ.

ಬಸವ ಕಲ್ಯಾಣ, ಬಾಗೇವಾಡಿ, ಕೂಡಲಸಂಗಮ, ಉಳವಿ, ಬಳ್ಳಿಗಾವೆ ಮೊದಲಾದ ಪುಣ್ಯ ಕ್ಷೇತ್ರಗಳಿಗೆ ನಿರಾತಂಕವಾಗಿ ಹೋಗಲು ರಸ್ತೆಗಳ ನಿರ್ಮಾಣ.

ಇವೆಲ್ಲ ಪುಣ್ಯ ಕ್ಷೇತ್ರಗಳಿಗೂ ವಿದ್ಯುದ್ದೀಪಗಳ ವ್ಯವಸ್ಥೆ

ಇವೆಲ್ಲ ಕ್ಷೇತ್ರಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆ.

ಬಸವ ಕಲ್ಯಾಣದಲ್ಲಿ ಅನುಭವ ಮಂಟಪದ ನಿರ್ಮಾಣ.

ಬೆಂಗಳೂರಿನಲ್ಲಿ ಬಸವ ಭವನದ ನಿರ್ಮಾಣ

ಬಸವ ಕಲ್ಯಾಣದಲ್ಲಿರುವ ಹಾಗೂ ಬೇರೆ ಕಡೆಗಳಲ್ಲಿರುವ ಶಿವಶರಣರ ಎಲ್ಲಾ ಪವಿತ್ರ ಸ್ಥಳಗಳ ಜೀರ್ಣೋದ್ಧಾರ.

ಬಸವೇಶ್ವರರ ಜೀವನ ಚರಿತ್ರೆಯ, ಅವರ ಸಮ ಸಾಹಿತ್ಯದ ಬಸವ ಸಂಸ್ಕೃತಿಯ ಪ್ರಕಟಣೆ, ಬಸವ ಜಯಂತಿಯ ಅಂಗವಾಗಿ ಒಂದು ವಾರದ ಗ್ರಂಥದ ಪ್ರಕಟಣೆ.

ಈ ಸಂಬಂಧ ಗ್ರಂಥಗಳನ್ನು, ಬಸವೇಶ್ವರರ ಜೀವನ ಚರಿತ್ರೆಯನ್ನು ಸ್ವಾತಂತ್ರ್ಯ ಗ್ರಂಥವನ್ನು ಕೈಗೆತ್ತಿಕೊಳ್ಳುವ ರಾಜ್ಯ ಸರ್ಕಾರದವರೇ ಕೈಗೆತ್ತಿಕೊಳ್ಳುವರು. ಬಸವಾದಿ ಶರಣರ ಸಮಕಾಲೀನದ ಜೀವನ ಚರಿತ್ರೆಯನ್ನು ಬಸವ ಸಮಿತಿಯು ಪ್ರಕಟಿಸುವುದು.

ಕಾರ್ಯದ ಪ್ರಥಮ ಇವೆಲ್ಲ ಗ್ರಂಥಗಳೂ ನಮ್ಮ ದೇಶದ ಎಲ್ಲಾ ರಾಷ್ಟ್ರೀಯ ಭಾಷೆಗಳಲ್ಲೂ ಪ್ರಕಟವಾಗುವುವು.

ಭಾರತ ಸರಕಾರವು ಕಳೆದ ವರ್ಷ ಸ್ಮಾರಕ ಮುದ್ರಾಂಕವನ್ನು ಹೊರಡಿಸಿದೆ.

ಬಸವೇಶ್ವರರ ಭಾವಚಿತ್ರದ ಪ್ರತಿಗಳನ್ನು ಬಸವ ಸಮಿತಿಯು ಪ್ರಕಟಿಸುವುದು.

ಬಸವ ಸಮಿತಿಯ ಪರವಾಗಿ ಬಸವ ಕಲ್ಯಾಣದ ಪ್ರದರ್ಶನದಲ್ಲಿ ಶಿವಶರಣರಿಗೆ ಸಂಬಂಧಿಸಿದ ಸಾಹಿತ್ಯ ಗ್ರಂಥಗಳೂ ತಾಳೆಗರಿ ಗ್ರಂಥಗಳೂ ಇತಿಹಾಸದ ಶತಮಾನಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳೂ ಸ್ಪರ್ಶಿಸಲ್ಪಡುತ್ತವೆ.

ಸದಾ ವೃದ್ಧಿ—ಸದಾ ಸೇವೆ



ಕೆನರಾ ಬ್ಯಾಂಕಿನ ಸಂಪನ್ಮೂಲಗಳು ಇಂದು
141.78 ಕೋಟಿ ರೂಪಾಯಿಯ ಹೊಸ ಶಿಖರವನ್ನೇರಿವೆ

31-12-1967ರಲ್ಲಿ ಇದ್ದ ಪರಿಸ್ಥಿತಿ :

ಠೇವಣಾತಿಗಳು	...	ರೂ. 126 56 ಕೋಟಿ
ಪೇಡ್-ಅಪ್ ಬಂಡವಾಳ	...	ರೂ 1 25 ಕೋಟಿ
ರಿಸರ್ವ್	...	ರೂ. 1 44 ಕೋಟಿ
ಇನ್ವೆಸ್ಟ್‌ಮೆಂಟ್‌ಗಳು	...	ರೂ. 38 39 ಕೋಟಿ
ಮುಂಗಡಗಳು	...	ರೂ. 80 35 ಕೋಟಿ
ಸಂಪನ್ಮೂಲಗಳು	...	ರೂ 141 78 ಕೋಟಿ

ನಿವ್ವಳ ಲಾಭ ... ರೂ. 9.64 ಲಕ್ಷ
ಶಾಖೆಗಳು ... 247

ಕಳೆದ ವರ್ಷದ ಪ್ರಾರಂಭದಲ್ಲಿ ನಿಮ್ಮ ಅಭಿವೃದ್ಧಿಗಾಗಿ ನಿರಂತರ ಸೇವೆಯ ಮತ್ತು ಪ್ರಗತಿಯ ಪ್ರತಿಜ್ಞೆಯನ್ನು ಮಾಡಿದ್ದೆವು. ಅದರಲ್ಲಿ ಯಶಸ್ವಿಯಾಗಿದ್ದೇವೆಂದು ಹೇಳಲು ಸಂತೋಷಪಡುತ್ತೇವೆ. ಮುಂದಿನ ವರ್ಷಗಳಲ್ಲಿಯೂ ಇದೇ ರೀತಿ ಮುಂದುವರಿಯುವೆವೆಂದು ಭರವಸೆ ಕೊಡುತ್ತೇವೆ. ನಾವು, ಕೆನರಾ ಬ್ಯಾಂಕಿನವರು, ನಮ್ಮ ಗ್ರಾಹಕರಿಗಾಗಿ ಹೊಸ ಹೊಸ ಸೇವಾ ಸಾಧನೆಗಳನ್ನು ಕಂಡುಹಿಡಿಯುವುದರಲ್ಲಿ ಸದಾ ನಿರತರಾಗಿದ್ದೇವೆ. ನಮ್ಮ ಅನೇಕ ಹಳೆಯ ಹಾಗೂ ಹೊಸ ಗ್ರಾಹಕರು, ನಮ್ಮಲ್ಲಿಟ್ಟಿರುವ ಅಚಲ ವಿಶ್ವಾಸವು ರಾಷ್ಟ್ರದ ಆರ್ಥಿಕ ಪ್ರಗತಿಗಾಗಿ ಆಧುನಿಕ ಬ್ಯಾಂಕಿಂಗ್ ವ್ಯವಹಾರವು ನಿರಂತರವಾಗಿ ಅತ್ಯುತ್ತಮವಾದ ಸೇವೆಯನ್ನೀಯಲು ನಮಗೆ ಉತ್ತೇಜನೆಯನ್ನೀಯುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸ್: ಸ್ಟೇಟ್‌ಬ್ಯಾಂಕ್ ಹಿಲ್, ಮಂಗಳೂರು.
ಆಡಳಿತ ಆಫೀಸ್: 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

SISTA'S-CB-33 kan

ಸಮಾಜ ಸುಧಾರಕ ಶ್ರೀ ಬಸವೇಶ್ವರ

(ಮುಂದಿನ ಸಂಚಿಕೆಯಿಂದ)

ಜೀವಕ್ಷಗಳ ಭಾಯಿಯು ಶೂನ್ಯ ಸಂವಾದನೆಯಲ್ಲಿ ಪಡಿಮೂಡಿದೆ. ಅಲ್ಲಿ ಶರಣರು, ಸಂಸಾರಿಗಳು, ರಾಜಕಾರಣಿಗಳು, ಮುಂಬಾಗಿ ಸಮಾಜದ ಎಲ್ಲ ವರ್ಗದ ಜನರೂ ಕಲೆತು ಮಾರ್ಗಾಯಿಸುತ್ತಿದ್ದರು. ಶಿವಶರಣರ ಮೂಲಕ, ಬೌದ್ಧಿಕ ನೆಲೆಯನ್ನು ಗುರುತಿಸುವ ಜಾತ್ಯಾತೀತ ಬಸವೇಶ್ವರರಿಗೆ ಅಧಿಕವಾಗಿದ್ದುದರಿಂದ ಪಲವಾರು ಉದ್ಯೋಗದ ಜನವೆಲ್ಲ ಯಾವ ಅಂತಸ್ತುಗಳ ಅಹಂಕಾರವಿಲ್ಲದೆ ಕೂಡಿ ಬಾಳುವ ಸಮಾಜವನ್ನು ನಿರ್ಮಿಸಲು ಸಾಧ್ಯವಾಯಿತು.

ಹಿಂದುಳಿದವರ ಬಗ್ಗೆ ಚಿಂತನೆಯಂತೆ ಬಸವೇಶ್ವರರು ಸ್ತ್ರೀಯರ ಉದ್ಧಾರದ ಬಗ್ಗೆಯೂ ಬಹುವಾಗಿ ಶ್ರಮಿಸಿದರು. ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವೇ ಇಲ್ಲದೇ ಇದ್ದ ಕಾಲದಲ್ಲಿ ಬಸವೇಶ್ವರರು "ಲಿಂಗ" "ವಯಸ್ಸ"ಗಳ ಭೇದವಿಲ್ಲದೆ ಸ್ವಾಯವಾಗಿ ಸಲ್ಲಬೇಕಾದ ಗೌರವವನ್ನು ಸಲ್ಲಿಸಿದರು.

"ಪರವಧುವ ಮಡಾದೇವಿಯೆಂಬೆ
ಎನ್ನ ಹೆತ್ತ ತಾಯ್ಗಳೆಂಬೆ"

ಎಂದು ಹೇಳಿದ ಅವರು ಸ್ತ್ರೀ ದೇವಿಯೂ ಹೌದು, ಮಾತೆಯೂ ಹೌದು. ಅಂದಮೇಲೆ ಅವಳಿಗೆ ಉತ್ತಮ ಸಂಸ್ಕಾರಗಳು ಬೇಡವೇ?

ಪರಸ್ತ್ರೀ ಪರಧನವೆಂಬ
ಜೂಬಿಂಗಂಜುವೆ
ಭಲಬೇಕು ಶರಣಂಗೆ ಪರಸತಿಯ
ನೊಲ್ಲನೆಂಬ

ಎಂಬ ಭಲವನ್ನು ಕಾಳಬೇಕೆಂದು ಬಸವೇಶ್ವರರು ಬೋಧಿಸಿದರು.

ಪರವಧುವ ನೋಡುವ ಪರಸಬೇಡ
ಕಂಗಳು ತಪ್ಪನೋಡಿದರೆ ಮಾರಿ

ಎಂದು ಪರಸ್ತ್ರೀ ವ್ಯಾಮೋಹವು ವ್ಯಕ್ತಿಗೂ ಸಮಾಜದ ಶೆಮ್ಮದಿಗೂ ಹಾನಿ ಎಂಬುದನ್ನು ಎತ್ತಿ ತೋರಿಸಿದರು. ಅಂತಹ ಉತ್ತಮ ಅವಕಾಶವಿದ್ದುದರಿಂದಲೇ ಮಡಾ ದೇವಿಯಕ್ಕನಂತಹ ಸ್ತ್ರೀಯು ಆಧ್ಯಾತ್ಮದ ಉನ್ನತ ಶಿಖರವನ್ನೇರಲು ಸಾಧ್ಯವಾಯಿತು.

ಧಾರ್ಮಿಕ ವಿಧಿವಿಧಾನದಲ್ಲಿ, ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ಪುರುಷನೊಂದಿಗೆ ಯಾವ ರೀತಿಯಿಂದಲೂ ಸ್ತ್ರೀಯು ಕಡಿಮೆಯಿಲ್ಲವೆಂಬುದನ್ನು ಬಸವೇಶ್ವರರು ಒಪ್ಪಿಕೊಂಡುದು ಮಹತ್ವದ ಸಂಗತಿಯೇ ಆಗಿದೆ. ಆದುದರಿಂದ ಸಮಾಜದ ಒಂದು ಪ್ರಮುಖ ವ್ಯಕ್ತಿಯಾದ ಸ್ತ್ರೀಯು ಪುರುಷನಂತೆಯೇ ಆಚಾರ ವಿಚಾರಗಳನ್ನು ಪಡೆಯ ಬೇಕಾದುದು ಅವಶ್ಯಕವೆಂದು ಶಿವಶರಣರು ಒಪ್ಪಿಕೊಂಡರು.

ಭಿನ್ನ ಭಿನ್ನ ಸಮಾಜದವರು ವೀರ ಶೈವಕ್ಕೆ ಮತಾಂತರ ಹೊಂದಿದ ಮೇಲೆ ಅವರಲ್ಲಿ ಪೂರ್ವ ಮತದ ಸಂಸ್ಕಾರವು ಉಳಿಯಲೇ ಬಾರದೆಂಬುದು ಬಸವೇಶ್ವರರ ವಿಚಾರ ಶರಣಿಯಾಗಿದ್ದಿತು. ಶಿವನಿಗೆ ಯಾವ ಗೋತ್ರವೂ ಇಲ್ಲ. ಶಿವಭಕ್ತರಾದವರಿಗೇಕೆ ಈಪೂರ್ವದ ಗೋತ್ರ ಎಂಬ ಕಾರಣದಿಂದ ಮೂಲತಃ ಜಾತಿಯಿಂದ ಹೊಲೆಯಾದ "ಹರಳಯ್ಯ"ನೂ ಮತ್ತು ಜಾತಿಯಿಂದ ವಿಪ್ರನಾದ ಮಧುವಯ್ಯನೂ ಶಿವಭಕ್ತರಾದ ಮೇಲೆ ಸಮಾನರು. ಅವರಿಬ್ಬರಿಗೂ ದೇಹ (ರಕ್ತ) ಸಂಬಂಧವನ್ನು ಬೆಳೆಸಿಕೊಳ್ಳುವ ಏರ್ಪಾಟು ಮಾಡಿದ್ದು ಶ್ರೀ ಬಸವೇಶ್ವರರ ಸಾಮಾಜಿಕ ಸುಧಾರಣೆಯಲ್ಲಿಯೇ ಅತ್ಯಂತ ಮಹತ್ವದ್ದು. ಉತ್ತಮ ಮತ್ತು ಅಧಮರೆಂದು ಪರಿಗಣಿಸಿದ ಇಬ್ಬರು ವ್ಯಕ್ತಿಗಳು ಶಿವಭಕ್ತಿಯ ಸಮಾನತೆಯ ಆಧಾರದ ಮೇಲೆ ಮತಾಂತರ ಹೊಂದಿ ತಮ್ಮ ಪೂರ್ವದ್ದನ್ನು ಮರೆತರು.

ಬಸವಣ್ಣನವರ ಕಾಲಕ್ಕೆ ಮತಾಂತರ ಹೊಂದಲು ಎಲ್ಲ ಕಾಲ ಜಾತಿಯವರಿಗೂ ಅವಕಾಶವಿದ್ದಿತು. ಕೆಲವರು ಮತಾಂತರ ಹೊಂದಿದರೂ ತಮ್ಮ ಪೂರ್ವ ಕುಲಾಭಿಮಾನವನ್ನು ತೊರೆದಿರಲಿಲ್ಲ. ಅವರನ್ನು ಕಂಡ ಬಸವೇಶ್ವರು

ಭಕ್ತರ ಕಂಡರೆ ಬೋಳಪ್ಪಿರಯ್ಯ
ಶಿವಗಣರ ಕಂಡರೆ ಬತ್ತಲೆಯಪ್ಪಿರಯ್ಯ
ಹಾರುವರ ಕಂಡರೆ ಹರಿನಾಮ
ವೆಂಬಿರಯ್ಯ
ಅವರವರ ಕಂಡರೆ ಅವರವರಂತೆ,
ಎಂದು ಬಿಂಡಿಸಿದರು.

ಯಾವುದಾದರೂ ಶುಭಕಾರ್ಯ ಮಾಡಲು ಶುಭದಿನ, ಶುಭವಾರ, ಶುಭ ನಕ್ಷತ್ರವೇ ಆಗಬೇಕೆಂದು ಪುರೋಹಿತರ ಬಳಿಗೆ ಓಡಿಹೋಗಿ ಮುಹೂರ್ತವನ್ನು ಕೇಳಿಕೊಂಡು ಬರುವವರನ್ನು ಕುರಿತು ಎಲ್ಲ ದಿನ, ಎಲ್ಲವಾರ, ಎಲ್ಲ ನಕ್ಷತ್ರಗಳೂ ಶುಭವೆಂದು ಹೇಳಿ, ಶಿವನಾಜ್ಞೆಯಿಂದ ನಡೆಯ ಬೇಕಾದುದನ್ನು ತಡೆಯುವವರಾರು? ಹಿರಿಯ ಮಹರ್ಷಿಗಳೇ ಸೇರಿ ಮುಹೂರ್ತವನ್ನು ನಿರ್ಧರಿಸಿ ಮದುವೆ ಮಾಡಿದ ರಾಮ, ಸೀತೆ, ಹರಿಶ್ಚಂದ್ರ ಇವರು ರಾಜ್ಯ ತ್ಯಾಗ ಮಾಡಬೇಕಾಯ್ತು. ದಾಂಪತ್ಯದ ವಿರಹವನ್ನು ದುಃಖವನ್ನು ಅನುಭವಿಸಬೇಕಾಯ್ತು ಎಂಬ ಅವರ ಮಾತು ಇಂದಿಗೂ ಮಹತ್ವದ್ದಾಗಿದೆ.

ಯಾರೇ ಇರಲಿ ಅವರ ಹಾಂಭಿಕ ಆಚಾರ—ವಿಚಾರ, ಪರರ ಸುಲಿಗೆಗಳನ್ನು ಮನವಾರೆ ತೆಗಳಿದರು. ಕುಲ ಮೂಲದಿಂದೊದಗುವ ಅಹಂಕಾರ, ಸಂಪತ್ತಿನಿಂದೊದಗುವ ಅಹಂಕಾರಗಳನ್ನು ತೆಗಳಿ ಶೀಲಕ್ಕೆ ಅತ್ಯಂತ ಬೆಲೆಕೊಟ್ಟರು ಬಸವಣ್ಣವರು. ಉತ್ತಮ ಶೀಲ ಪಾಲನೆ, ಆಚಾರ ಪಾಲನೆಯನ್ನು ಪ್ರಶಂಸಿಸಿ, ತೋರಿಕೆಯ ಮಡಿರುವನ್ನು ದೂರವಿರಿಸಿದರು. ಅಂಥಹವರ್ಗಕ್ಕೆ ಅವಕಾಶ ಕೊಡದಾದರು.

ಹೀಗೆ ಬಸವೇಶ್ವರರ ಸಾಮಾಜಿಕ ಸುಧಾರಣೆಗಳು ಬಹುಮುಖವಾಗಿ ಬೆಳೆದು ಕಾರ್ಯಾಚರಣೆಗೆ ಬಂದವು. ಅವುಗಳನ್ನು ಒಪ್ಪದ ಕೆಲವು ಜನಗಳಿಂದ ಕಾಲ ಕಾಲಕ್ಕೆ ವಿರೋಧವೂ ವ್ಯಕ್ತವಾಗುತ್ತಿದ್ದಿತು. ಕೆಲವೆಡೆ ಅವರ ಸುಧಾರಣೆಗಳು ತೀವ್ರಗಾಮಿಯಾಗಿದ್ದುದರಿಂದಲೇ ಅವರನ್ನು "ಕ್ರಾಂತಿಕಾರ"ರೆಂದು ಕರೆದಿರುವುದು ಸಮಂಜಸವಾಗಿದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಸರಿಮಳೆಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು: ಬೆಂಗಳೂರು, ಮಂಗಳೂರು ಮತ್ತು ಮೈಸೂರು

POWER FOR PROSPERITY

MANUFACTURERS
AND
DISTRIBUTORS
OF

POWER TRANSFORMERS.
TRANSMISSION LINE TOWERS
SCIENTIFIC SURVEYING
INSTRUMENTS
PLASTIC INDUSTRIAL ARTICLES.
STREET LIGHT FITTINGS.



GOVERNMENT ELECTRIC FACTORY
MYSORE ROAD BANGALORE

G E F

ಅಕಾಡೆಮಿಯ ಬಂಗಲೆ ಮಹೋತ್ಸವ

(ಪತ್ರಿಕೆಯ ವರದಿ)

[illegible] ಇ[illegible] ಅಕಾಡೆ[illegible] ಕ್ಷಿಣೆ ಕೊಟ್ಟಿದ್ದಾರೆ.

ಈಗ ರಜತ ಮಹೋತ್ಸವ ಸಮಾರಂಭ ಮತ್ತು ಬಂಗಲೆ ಹೊಸ [illegible] ಕೈಗಳನ್ನು ಆರಂಭಿಸುವ ಮುನ್ನ [illegible] ಅಂಗಳಿಸುವ ಸಂಗತಿಗಳನ್ನು [illegible] ಕೊಳ್ಳಬೇಕಾದ ಸಮಯ ಹರಿದಿದೆ. ಅದರ ಕೃಷ್ಟಪಡಿಸಲು ಅನೇಕ ಸಂದರ್ಭಗಳೂ ಸಿಕ್ಕಿದೆಗೂ ಬೊಟ್ಟಾಯಿತು. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು [illegible] ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಇಲ್ಲಿಗೆ ಬಂದಿದ್ದರು. ಇದು ಅಲ್ಪವೇ. ಪ್ರಧಾನ ಮಂತ್ರಿ ಮತ್ತು ಕೇಂದ್ರ ಸಚಿವರು ಮೊದಲಿನ ಅಕಾಡೆಮಿ ಇಂತಹ ಕಾರ್ಯಗಳು. ಆಗ ಭಾರತದಲ್ಲಿ ಒಳ್ಳೆಯವಾಗಿ ಆಗ ಬೇಕಾಗಿದೆ" ಎಂದಿದ್ದರು.

ಪರಿಣಾಮ

ಯುನೆಸ್ಕೋ ಕೋರಿಯರ್ ಪತ್ರಿಕೆ "ಡಾ॥ ವೈಯವರು ಸರ್ಕಾರದ ಮೂಲಕ ಕೈಗೊಂಡ ಶೈಕ್ಷಣಿಕ ಯೋಜನೆ ಮತ್ತು ಕೈಗೊಂಡ ಕಲಾಪ್ರಕಾರಗಳನ್ನು ಗಮನಿಸಿ ಅಕಾಡೆಮಿ ಧನಸಹಾಯ ಮಾಡಿದೆ...ಇಂಥ ಆಗಾಧ ಪ್ರಮಾಣದಲ್ಲಿ ನಮ್ಮ ಅಭೀಷ್ಟರಗಳು ಕೈಗೂಡಿ ಬರುವುದನ್ನು ಕಂಡು ಅನೇಕರಿಗೆ ಸಮಾಧಾನವಾಗುತ್ತದೆ. ಆದರೆ ಡಾ॥ ವೈಯವರ [illegible] ಇನ್ನೂ ಹಲವು ಯೋಜನೆಗಳನ್ನಿಟ್ಟು ಕೊಂಡಿದ್ದಾರೆ"...ಎಂದು ಬರೆಯುತ್ತದೆ.

ನಮ್ಮ ಎಲ್ಲ ಸಮಸ್ಯೆಗಳೂ ಶಿಕ್ಷಣದಿಂದ ಮಾತ್ರ ಬಗೆಹರಿಸಬಲ್ಲವು ಎಂಬುದು ಡಾ॥ ವೈಯವರ ನಂಬಿಕೆ ಮತ್ತು ಕೇವಲ ಅತ್ಯತ್ತಮ ಆಸ್ತಿ. ಅವರನ್ನು ಸುಶಿಕ್ಷಿತರನ್ನಾಗಿ ಮಾಡ ಬೇಕೆಂಬ ಹೆಚ್ಚಿನ ಭದ್ರತೆ ಯೂವುದೂ ಇಲ್ಲ. ಅವರಿಗೆ ಸಿಗುವ ಶಿಕ್ಷಣಕ್ಕೆ ಅನುಸಾರವಾಗಿ ಅವರ ಸಂಪಾದನಾ ಶಕ್ತಿಯೂ ಹೆಚ್ಚುತ್ತದೆ "ಒಬ್ಬ ಸರವೀಧರ ತನ್ನ ಜೀವನದಲ್ಲಿ ೬೦,೦೦೦ ರೂ. ಗಳಿಸಬಲ್ಲ. ಒಬ್ಬ ವೈದ್ಯರೋ ಅಥವಾ ಇಂಜಿನಿಯರಿಂಗ್ ಸಂಪಾದಕ ಸರವೀಧರ ತನ್ನ ಜೀವನದಲ್ಲಿ ೧,೦೦,೦೦೦ ರೂ. ವರೆಗೆ ಗಳಿಸಬಲ್ಲ", ಎನ್ನುತ್ತಾರೆ ಅವರು

ಅಕಾಡೆಮಿ ಸಂಸ್ಥೆಗಳಲ್ಲಿ ಸುಮಾರು ೧೦,೦೦೦ ವಿದ್ಯಾರ್ಥಿಗಳಿದ್ದಾರೆ. ಅ ವೈಶಿಷ್ಟವಾದ ೧,೦೦೦ ವಂದಿ ಪ್ರತಿ ವರ್ಷ ಪದವೀಗಳನ್ನು ಪಡೆದುಕೊಳ್ಳುತ್ತಾರೆ. ಅವರು ಪ್ರತಿ ವರ್ಷ ಸುಮಾರು ೧೦ ಲಕ್ಷ ರೂ. ಗಳ ವರೆಗೆ ದೇಶದ ಸಂಪಾದನಾ ಮಟ್ಟವನ್ನು ಹೆಚ್ಚಿಸುತ್ತಿದ್ದಾರೆ. ದೇಶಕ್ಕೆ ಅಕಾಡೆಮಿಯ ಅಪೂರ್ವ ಕಾಣಿಕೆ ಇದು ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ.

ಡಾ॥ ವೈಯವರು ನಾಡಿಗೆ ಸಲ್ಲಿಸಿರುವ ಸೇವೆಗೆ ಮನ್ನಣೆಯಾಗಿ ೧೯೬೮ರಲ್ಲಿ ರಾಷ್ಟ್ರಪತಿಯವರು ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನಿತ್ತರು. ಮೈಸೂರು ಸರಕಾರ ಅವರಿಗೆ ಎರಡು ಬಾರಿ ಸಾರ್ವಜನಿಕ ಸೇವಾ ಪ್ರಶಸ್ತಿಗಳನ್ನಿತ್ತು ಗೌರವಿಸಿದೆ. ಆದರೆ ಈ ಗೌರವಗಳಿಂದಾಗಲಿ ಕೆಲವು ಟೀಕೆಗಳಿಂದಾಗಲಿ ಅವರು ವಿಚಲಿತರಾಗದೆ ಯಥಾರೀತಿಯಲ್ಲಿ ಅಕಾಡೆಮಿಯನ್ನು ಶ್ರೀಮಂತಿಕೆಯ ಪಥದಲ್ಲಿ ಮುನ್ನಡೆಸುತ್ತಿದ್ದಾರೆ.

WANTED two trained teachers. Apply to the Manager, B. E. M. Higher Lie. School, Bailur (S. K.) on or before 14th May '68 Preference to trained, experienced, old students and locals.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ಕಮಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ

ಟಿ. ಎಸ್. ಕೃಷ್ಣಯ್ಯ ಸೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

PLEASE VISIT—

SRI LAKSHMI VILAS

Textile Show Room

MANDYA

(Mysore State)

for your daily requirement in textiles.

ನಿಮ್ಮ ನಿತ್ಯೋಪಯೋಗಿ ಬಟ್ಟೆಬರೆಗಳಿಗೆ ದಯಮಾಡಿ ಸಂಪರ್ಕಿಸಿರಿ

ಶ್ರೀ ಲಕ್ಷ್ಮೀ ವಿಲಾಸ್

ರೇಶ್ಮೆ ಜವಳಿ ಅಂಗಡಿ

ಮಂಡ್ಯ

ರಾಷ್ಟ್ರಕ್ಕೆ ಅಗ್ರಮಾನವಾದ ಅನುಭವಸ್ಥ ರೈತರ ಪ್ರಥಮ ಆಯ್ಕೆಯ

ಜಲಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತರ ಭಾಗ್ಯನಿಧಿಯಾಗಿಸಿ ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಬೆಂಗಳೂರು ನಗರದ ಮಹೋನ್ನತ ಆಕರ್ಷಣೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಡೆಯುವ

ಕಾಂಗ್ರೆಸ್ ವಸ್ತುಪ್ರದರ್ಶನ

1968

ಬೆಂಗಳೂರಿನ ಸುಭಾಸ್‌ನಗರದಲ್ಲಿ ಏಪ್ರಿಲ್ 6ರಿಂದ ಆರಂಭವಾಗಿದೆ

- ರಾಜ್ಯದ ಕೈಗಾರಿಕೆ, ವಾಣಿಜ್ಯ, ಕೃಷಿ ಹಾಗೂ ಸಂಪದಭಿವೃದ್ಧಿಗಳ ಪೂರ್ಣ ಚಿತ್ರ.
- ಪ್ರತಿದಿನ ಖ್ಯಾತ ಕಲಾವಿದರಿಂದ ಮನರಂಜನೆ.

= ಶಿಕ್ಷಣದೊಂದಿಗೆ ಮನರಂಜನೆ =

ರಾಜ್ಯ ಕಳೆದ ಎರಡು ದಶಕಗಳ ಅದ್ಭುತ ಪ್ರಗತಿಯ ಪಕ್ಷಿನೋಟ.

ಸುವ್ಯವಸ್ಥಿತ ಹಾಗೂ ಉತ್ತಮ ವಾದ ಎಲ್ಲ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಕ್ಕೆ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು – 3.

Phone— 5711, 5712, 5713 } 3 Lines.

ಉಡುಪಿಯಲ್ಲಿ ಎಕೆಡೆಮಿಯ ಪ್ರಥಮವರ್ಷದ ರಜತೋತ್ಸವ

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯ ರಜತಮಹೋತ್ಸವ ದಿನಗಳು ಜಗದ್ವಿಖ್ಯಾತ ಶೈಕ್ಷಣಿಕ ತಜ್ಞರೂ, ವೈದ್ಯರೂ, ಬ್ಯಾಂಕರೂ ಆದ ಡಾ॥ ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಒಂದು ವಾರದ ವಿಶೇಷ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವು ಇಲ್ಲಿಯ ಶ್ರೀ. ವಿಠ್ಠಲ್ ಕಾಮತ್ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳು ಎ. ಎಸ್. ಅಡ್ಯಾನವರಿಂದ ನೆರವೇರಿತು.

ಉಡುಪಿ ಲಾ ಕಾಲೇಜಿನ ವಿದ್ಯಾರ್ಥಿಗಳ ಮಧ್ಯೆ ಜರಗಿದ ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ॥ ಕೆ. ರಾಘವೇಂದ್ರ ಅಡಿಗರು ವಹಿಸಿದ್ದರು. ರಜತ ಮಹೋತ್ಸವ ಆಚರಣಾ ಸಮಿತಿ ಅಧ್ಯಕ್ಷರಾದ ಶ್ರೀ॥ ಅರೂರ ಲಕ್ಷ್ಮೀನಾರಾಯಣರು ನೆರೆದಿದ್ದವರಿಗೆ ಜನಸ್ತೋತ್ರವನ್ನು ಮಾಡಿ ಅಭ್ಯಾಗತರನ್ನು ಸ್ವಾಗತಿಸಿ ಕೃತಜ್ಞತೆಯನ್ನು ಕೊಟ್ಟರೊಂದಿಗೆ ಎಕೆಡೆಮಿಯ ಕಳೆದ ವರ್ಷಗಳಲ್ಲಿ ಮಾಡಿದ ಕಾರ್ಯಾಭಿವೃದ್ಧಿಯನ್ನು ವಿವರಗೊಳಿಸಿ, ಇಂಗ್ಲಿಷ್ ಮೀಡಿಯಂ ಸಂಸ್ಥೆಯು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ನಾಡಿನ ಅಭಿವೃದ್ಧಿಗೆ ಸ್ವಹಿತದ ಸೇವೆಯನ್ನು ಪ್ರಸ್ತಾಪಿಸಿ, ಎಕೆಡೆಮಿಯ ಈ ಕಾರ್ಯ ದೇಶ ವಿದೇಶಗಳಲ್ಲಿ ಪ್ರಖ್ಯಾತಿಗೊಂಡಿದೆ ಎಂದು ಹೇಳಿದರಲ್ಲದೆ ಇದರ ಪ್ರಮುಖ ಸೂತ್ರಧಾರಿಯಾದ ಡಾ॥ ಪೈಗಳ ದಕ್ಷತೆಯೇ ಈ ಪ್ರಗತಿಗೆ ಕಾರಣವೆಂದರು.

ದೇಶದ ಗಣ್ಯ ನಾಗರಿಕರಿಂದ ಮಾಗೂ ಅಮೆರಿಕಾದಿಂದ ಬಂದಿದ್ದ ಶುಭ ಸಂದೇಶಗಳನ್ನು ಶ್ರೀ. ಟಿ. ರಮೇಶ ಪೈಯವರು ಓದಿ ಹೇಳಿದರು. ಡಾ॥ ಟಿ. ಎಂ. ಎ. ಪೈಗಳ ಅಭಿನಂದನಾರ್ಥ ಏರ್ಪಡಿಸಲಾಗಿದ್ದ ಶೈಕ್ಷಣಿಕ ಸಾಧನೆ ಪ್ರದರ್ಶನವನ್ನು ಉದ್ಘಾಟಿಸಿ ಎಕೆಡೆಮಿಯು ಜನರ ಸಹಕಾರದಿಂದ ಮಾಗೂ ಬೆಂಬಲದಿಂದ ಬೆಳೆದು ಇಂದಿನ ಸ್ಥಿತಿಗೆ ಬಂದಿದೆ. ಇದು ಒಂದು ಕುಟುಂಬದ ಸೊತ್ತಾಗಿದೆ. ಈ ಸಂಸ್ಥೆ ಸಾಧಿಸಿರುವ ಕಾರ್ಯವನ್ನು ನಿರಾಕಾರ ಚಿತ್ತದಿಂದ ಪರಿಶೀಲಿಸುವ ಮನೋಭಾವ ನಮ್ಮ ಕಾರ್ಯಕ್ಕೆ ಬೆಳೆಯಬೇಕು. ಇಥರ ಸಹಕಾರದಿಂದ ಜನರಿಗಾಗಿ ಜನರು ಕಟ್ಟಿದ ಈ ಸಂಸ್ಥೆಯು ಮುನ್ನಡೆಯಲ್ಲಿ ಸರ್ವಜನರು ನೀಡುವ ಸಹಕಾರವನ್ನು ತಾನೆಂದೂ ಮರೆಯಲಾರೆ ಎಂದರು.

ಉದ್ಘಾಟಕರಾದ ಡಾ॥ ಎ. ಎಸ್. ಅಡ್ಯನವರು ಮಾತನಾಡುತ್ತಾ, ಉತ್ತಮ ಕಾರ್ಯಗಳಿಗೆ ಜನರ ಬಂಬಲ ಹೇಗೆ ದೊರೆಯುತ್ತದೆ ಎಂಬುದಕ್ಕೆ ಎಕೆಡೆಮಿಯು ಶಿಕ್ಷಣ ಸಂಸ್ಥೆಗಳೇ ನಿದರ್ಶನವೆಂದರು. ಡಾ॥ ಪೈಗಳು ಉತ್ತಮ ವಾದುದನ್ನೇ ಚಿಂತಿಸುತ್ತಿರುವರು. ಅದನ್ನು ದೃಢ ಸಂಕಲ್ಪದಿಂದ ಸಾಕ್ಷಾತ್ಕಾರವಾಗಿ ಕಾರ್ಯಗತಗೊಳಿಸುತ್ತಿರುವರು. ಅವರ ಈ ಸೇವಾ ತತ್ಪರತೆಯು ನಾಡಿಗೇ ಆದರ್ಶಪ್ರಾಯ. ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ತೆರೆದು ಅವರು ಈ ದೇಶದ ಅಭಿವೃದ್ಧಿಗೆ [illegible] ಡಾ॥ ಪೈಗಳದ್ದಾಗಿದೆ ಎಂದರು.

ಶ್ರೀಗಳಾದ ಎಚ್. ಸುಂದರರಾಮ್, ಎನ್. ಶ್ರೀಶ ಅಲ್ವಾಳ್, ಡಾ॥ ಪಿ. ಎ. ಕೋಶಿ, ಡಾ॥ ಜಿ. ಡಿ. ವೇಲಿಯತ್ ಇವರು ಡಾ॥ ಪೈಗಳ ವೈವಿಧ್ಯಮಯ ಚಟುವಟಿಕೆಗಳು ಹಾಗೂ ಅವರು ಕಟ್ಟಿದ ಶಿಕ್ಷಣಕ್ಷೇತ್ರವನ್ನು ಅಭಿವೃದ್ಧಿಪಡಿಸಿದ ಮಾರ್ಗ ಶ್ಲಾಘನೀಯವಾದ ಹಲವಾರು ಟೀಕಾಕಾರರು ಈ ಮುಂತಾದ ಟೀಕೆಗಳನ್ನು ಮಾಡುತ್ತಿರುವರು ಎಂದರೂ, ಎಕೆಡೆಮಿಯ ಸಾಧನೆಗಳನ್ನು ಅವರು ಅರಿತಂತಿಲ್ಲ. ಇಂದು ಟೀಕೆ ಮಾಡುವವರು ಬಹಳ ಜನ ಡಾ॥ ಪೈಗಳು ಈ ಟೀಕೆಗಳನ್ನು ಮನಸ್ಸಿಟ್ಟು ಸಂಕಲ್ಪದಿಂದ ಎದುರಿಸಿ ಮುನ್ನಡೆದಿದ್ದಾರೆ. ಎಕೆಡೆಮಿಯ ಸಾಧನೆಜನರಿಗೆ ಈ ಸಂಸ್ಥೆಯು ಮೆರೆದಿರುವ ನಂಬಿಕೆ



ಮಣಿಪಾಲದ ಇಂಜಿನಿಯರಿಂಗ್ ಕಾಲೇಜಿನ ಭವ್ಯ ಕಟ್ಟಡ

ಕರ್ನಾಟಕ ಸಂಘ, ಉಡುಪಿ
ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೆ ನಡೆಯುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ॥ ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ ೮೦ ಪೈಸೆ ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಹಾರ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಕಿಮಿಯುಸ್ತಗಳು	1—00
ವಿಚಿತ್ರ ಕಳ್ಳಸೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪರ್ವ	1—00

ಕೆಸಲಾಗಿ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

MODERN GARAGE

UDIPI (Estd. 1948)

extend their hearty Felicitations to

Padmashri Dr. T. M. A. PAI

on his Seventieth birthday celebrations

and

Silver Jubilee Celebrations of

The Academy of General Education, Manipal.

A well equipped garage and workshop with qualified technical personal

SERVICE STATION

attached.

MODERN GARAGE, UDIPI

FILL { Phone — 134 / Grams — Karnad } Residence 489

ಪದ್ಮಶ್ರೀ ಡಾ॥ ಟಿ. ಎಂ. ಎ. ಪೈ ಯವರ

ಎಪ್ಪತ್ತನೆಯ ಹುಟ್ಟುಹಬ್ಬ

ಹಾಗೂ

ದಿ ಅಕಾಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ

ಇವರ

ರಜತ ಮಹೋತ್ಸವದ ಸಂದರ್ಭದಲ್ಲಿ

ನಮ್ಮ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇವೆ-

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — ಎಸ್. ಆರ್. ಬಿಲ್ಡಿಂಗ್ಸ್,

ಉಡುಪಿ (ದ. ಕ.)

ಮ್ಯಾಲಕರು

ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಪೇಂದ್ರ ಬಾಗ್

ಅತ್ಯುತ್ತಮ ಚಲಚಿತ್ರಗಳನ್ನು ಪ್ರದರ್ಶಿಸುವ ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು.

Mysore State Chamber of Agriculture

President
Mr. N. Srinivas Reddy
B.Sc., (Agri.), M. P.

Vice-Presidents
B. S. Viswanathan,
B. Com., I. C. S.

K. Mohan Deva Alva,
B.Sc. (Agri.) F.R.E.S.,

General Secretary
Abasama.

18, Kurubara Sangha Buildings, 2nd Main Road, Gandhinagar,
Bangalore—9

Phone 28069

Dated 9th April 1968.

AN APPEAL

Sub. Formation of Indian Chamber of Agriculture & Chamber of Agriculture in different states.

Dear Reader,

We have constituted an organisation, called the Mysore State Chamber of Agriculture with headquarters at Bangalore for the purpose of bringing together the agricultural producer, the trader, and the consumer together on one platform so as to evolve a harmoneous method of functioning each in his sphere for the ultimate good of every one.

In this task it is needless to say that your interest should be very great. Hence we would be very happy to have your co-operation. It is our earnest desire that the idea of such Chamber of Agriculture for every State should be established and all such State Chambers should federate at the National level so as to evolve a well knit organisation from the farmer upto national level. We should be very happy to have your reactions on the subject leading to establish the Indian Chamber of Agriculture and the Chamber of Agriculture in each State.

Yours Sincerely,

for The Mysore State Chamber of Agriculture

Abasama,
General Secretary.

ಜೈ ಭಾರತ್ ಮಿಲ್ಸ್

ಚಿತ್ತರಂಜನ ಭವನ, ಉಡುಪಿ, ದ. ಕ.

ಫೋನ್: 311.

ಶುದ್ಧ ಮತ್ತು ತಾಜಾ

ತೆಂಗಿನೆಣ್ಣೆ, ಎಳ್ಳೆಣ್ಣೆ

ಮತ್ತು

ಉತ್ಕೃಷ್ಟ ಹಿಂಡಿಗಳ

ತಯಾರಕರು

ಲಕ್ಷಾಂತರ ಜನರ ಮೆಚ್ಚಿನ ಆಯ್ಕೆ

"ಕೆಲಿಗೂರ್" ಚಹಾದ ವಿತರಣೆಗಾರರೂ,

ಮೈಸೂರು ಫೀಡ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು-2

ಇವರ ಉತ್ಕೃಷ್ಟ ತಯಾರಿಕೆಗಳಿಗಿರುವ

'ಮಿಲ್ಕ್ ಕ್ಯಾನ್' ಗುರುತಿನ ಪಶು ಆಹಾರ

ಮತ್ತು

'ಬಾಸ್ಕೆಟ್' ಗುರುತಿನ ಕೋಳಿಗಳ ಆಹಾರಗಳಿಗೆ

ದಕ್ಷಿಣ ಕನ್ನಡ ಜಿಲ್ಲೆಗೆ ವಿತರಣೆಗಾರರು



Enchanting Perfume

Mysore Sandalwood Oil is the best in the world and is recognised as the world's standard of quality

Ensure that you get only the genuine Sandalwood Oil original containers with the Mysore Government seal and label

THE MYSORE GOVERNMENT SANDALWOOD OIL FACTORY
MYSORE

NAVA-YUGA
7 5 1968

REGD No B G 176
LICENCE No 1
Licensed to post
without prepayment

ನಿಮಗಳಂತೆ ಉಳಿಯಲು
ಬರೆದಿಟ್ಟ



ಮಹಿಳೆ ಶ್ರೀಗಂಧದ ಎಣ್ಣೆಯಿಂದ
ಕೂದಲಿನ ತಲೆ ಸಾಬೂನು ನಿಮ್ಮ ಚರ್ಮವನ್ನು
ಶುಭ್ರ ಹಾಗೂ ಆಂದವಾಗಿರುವುದು ಮತ್ತು
ಬಿಸಿಲಕಾಲ ಉಳಿಯುವ ಸುಗಂಧವನ್ನು ನೀಡುವುದು

ಮೈಸೂರು ಸ್ಯಾಂಡಲ್ ಸೋಪ್

ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಮೈಸೂರು-12

Edited, Printed & Published by K. H. Shetty at the Navayuga Press S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

9—5—1968

೨೦
ಪೈಸೆ

"ಅಣ್ಣ ತಾಯಿ"

ಬರೆದವರು:
ಶ್ರೀ ಮಲ್ಲಾರಿ, ರಾಮಗಿರಿ.

ಬಸ್ಸಿನಿಂದಿಳಿದ ಆನಂದ ತನ್ನ ಸಾಮಾನುಗಳನ್ನು ಹಿಡಿದು ಸ್ವಲ್ಪ ದೂರ ಹೋಗಿ ನಿಂತು ಸಾಮಾನುಗಳನ್ನು ಕೆಳಗಿಟ್ಟು ಸುತ್ತಲೂ ನೋಡಿದ. ಪಕ್ಕದಲ್ಲೇ ಸುಂದರವಾದ ಕೆರೆ. ಕೆರೆಯ ಆಚೆಗೆ ಬಸ್ಸಿನ ದಾರಿ. ಸುತ್ತಲೂ ಹಚ್ಚಿದ ಹೆಂಗ; ಬಾಳೆಯ ತೋಟದ ದೃಶ್ಯ ಅಂದರೆ. ಈ ಭಾಗ ನಿಜವಾಗಿಯೂ ಸೌಂದರ್ಯದ ಬೀಡು ಎಂದುಕೊಂಡನವನಿಗೆ. ಕೆರೆಯಲ್ಲಿ ಬಟ್ಟೆ ಧೂಳೆಬ್ಬಿಸುತ್ತಾ ಮುಂದೆ ನಡೆಯಿತು. ಆನಂದನನ್ನು ಬಿಟ್ಟರೆ ಬೇರೆ ಯಾವ ಪ್ರಯಾಣಿಕರೂ ಅಲ್ಲಿ ಇಳಿಯಲಿಲ್ಲ.

'ಲಗೇಜ ಏನು ಮಾಡೋದು. ದಾರಿ ಗೊತ್ತಿಲ್ಲವಲ್ಲಾ...' ಎಂದು ಆನಂದ ಯೋಚಿಸುತ್ತಿದ್ದಂತೆ ಹತ್ತಿರದಲ್ಲೇ ಒಂದು ಚಿತ್ರ ಗುರುತಿಲು ಅವನ ದೃಷ್ಟಿಗೆ ಬಿದ್ದ. ಇನ್ನೆ ನಾಮಾನುಗಳನ್ನು ಕೈಯಲ್ಲಿ ಹಿಡಿದು ನೇರವಾಗಿ ಗುರುತಿಲ ಕಡೆಗೆ ಹೋದ. ಒಬ್ಬ ಹಳ್ಳಿ ಮುಂಡ ಒಂದು ಕೈಯಲ್ಲಿ ಹಿಡಿದಿದ್ದ ಲೋಟದಲ್ಲಿ ಇನ್ನೊಂದು ಕೈಯಲ್ಲಿ ನೀರು ಸುರಿದು ಒಳಗಿನಿಂದ ಹೊರಬಂದ. ಅದನ್ನು ನೋಡಿದ ಶಕ್ಷಣ ಇದೊಂದು ಹೋಟೆಲಿರಬೇಕು ಎಂದು ಆನಂದ ಊಹಿಸಿದ. ಬೆಂಚಿನ ಮೇಲೆ ಸಾಮಾನುಗಳನ್ನು ಇಟ್ಟು ಕುಳಿತು ಕೊಳ್ಳುತ್ತಿದ್ದಂತೇ ಬಿ. ಬಿಳಿಯ ಯುವಕನ್ನು "ಏನು ಕೊಡಲಿ ಸ್ವಾಮಿ" ಎಂದರು

"ಏನಿದೆ?" ಎಂದ ಆನಂದ

"ಮೆಣಸಿನ ಕಾಯಿ, ಕುಸಾಲೆ ಮಂಡಕ್ಕಿ ಬಿಸಿ-ಬಿಸಿ, ಯಾವುದು ಕೂಡಲಿ?'

"ಒಂದು ಪ್ಲೇಟು ಮೆಣಸಿನ ಕಾಯಿ ಕೊಡ್ರಿ," ಎಂದ ಆನಂದ.

ಒಂದು ಎಂದು ಬೃಹತ್ಗೆದ ಕೂಳ್ಳುತ್ತಾ ಆನಂದ ಅಲ್ಲಾಡಿಗೆ ಕೇಳುವ ದಾರಿಯನ್ನು ಕೇಳಿ ತಿಳಿದುಕೊಂಡ. ಪಕ್ಕದಲ್ಲಿರುವ ದಾರಿಯನ್ನು ಹಿಡಿದು ನೇರವಾಗಿ ನಡೆದರೆ ಅರ್ಧ ಕಿ. ಮೀ. ಉಳ್ಳಾಣ ಸುನ್ನು ತಲುಪುತ್ತದೆ ಎಂದು ಹೋಟೆಲಿನ ಯುವಕನವರು ತಿಳಿಸಿದರು.

ಎಂದು ಘಂಟೆಗು ಸಮಯ. ಆನಂದ ಕಾಯುವಾರಿಯಲ್ಲಿ ಒಂಟಿಯಾಗಿ ನಡೆಯುತ್ತಿದ್ದ. ಸುತ್ತಲೂ ದಟ್ಟವಾದ ಕಾಡು, ಅಲ್ಲಲ್ಲಿ ಅಂಡಳಗಳು ಪುಂಡೆಗಳು. ಐದು ಘಂಟೆಯಾದರೂ ಸೂರ್ಯನ ಬಿಸಿಲು ಚುರುಕು ಮೊಡುತ್ತಿತ್ತು. ಆನಂದ ಸರ-ಸರನೆ ನಡೆಯುತ್ತಲೇ ಇದ್ದ.

ಆನಂದನ ಭಾವನವರು ಪತ್ರ ಬರೆದಿದ್ದರು—"ನೀನು ಎಂದ ಬರುತ್ತೀನೆ ಎಂದು ಪತ್ರಬರೆದರೆ ಅಂದ ಒಪ್ಪಿನ ಒಳಿಗಾಡಿ ತಗಿಸಿಕೊಂಡು ಬರುತ್ತೇನೆ" ಎಂದು. ಅದೇರೀತಿ ಆನಂದ ಪತ್ರ ಉತ್ತರಿಸಿದ್ದ ಇಂದ ಪಕಾರ್ಯಮ ನಮಗೆ ರಜಾ ಪ್ರಾರಂಭವಾಗುತ್ತೆ, ಇಂದು ತಾರೀಖು ಬರುತ್ತೇನೆ ಎಂದು. ಅಂತೆಯೆ ವ್ಯವಸ್ಥೆ ಸರಿಯಿಲ್ಲದ ಕಾರಣ ಪತ್ರ ತಲುಪಿರಲಿಕ್ಕಿಲ್ಲ, ಅದರು ಬಸ್ಸಿನ ಬಳಿ ಬಂದಿರಲಿಲ್ಲ.

ಅಣ್ಣನ ಬದ ಮೈದು ಸ್ವಭಾವದವನ್ನು ತಂದೆ ತಾಯಿಗಳಿಗೆ ಒಬ್ಬನೇ ಮುದ್ದು ಮಗ. ಮನೆಯ ನಾಲ್ಕು ಸಹೋದರಿಯರ ಮಧ್ಯದಲ್ಲಿ ಇವನೇ ಬುದ್ಧಿವಂತರು. ಮುದ್ದಾಗಿ ಸಾಕಿದ್ದರು, ಕಾಲೇಜಿನಲ್ಲಿ ಓದುತ್ತಿದ್ದ. ದಸರಾ ರಜಾ ಬಂದಿತ್ತು. ಅಕ್ಕನ ಊರಿಗೆ ಬರಬೇ ಬಹಳ ದಿನಗಳಾಗಿದ್ದವು. ನೋಡಿಕೊಂಡು ಬರೋಣ ಎನಿಸಿದ ಬಂದಿದ್ದ

ಊರಲ್ಲಿ ಮನೆಗಳು ಕಾಣಿಸ ತೊಡಗಿದವು. ಊರು ಹತ್ತಿರ ಬಂದಿತೆಂದು ತಿಳಿದು ಸ್ವಲ್ಪ ಧೈರ್ಯ ಬಂದಿತು. ಊರು ಎಷ್ಟರವಾದ ಪ್ರದೇಶದಲ್ಲಿದೆ ಇವನು ಕಗ್ಗಿನ ದಾರಿಯಲ್ಲಿ ನಡೆಯುತ್ತಿದ್ದಾನೆ.

ಅವನು ನಡೆದ ಒಂದು ದಾರಿ ಊರಿನ ಎಕ್ಕೆ ಕಾವಲೊರೆಯಿತು ಊರ ಮುಂದೆ ಹರಿಯುತ್ತಲೇ ಒಂದು ಚಿಕ್ಕ ಕೆರೆ ಕಾಣಿಸಿತು. ಹೆಂಗಳರು ಬಗಲಲ್ಲಿ, ತಲೆಯ ಮೇಲೆ ತೊಡಗಳನ್ನು ಹೊತ್ತು ಮಾತಾಡುತ್ತಾ ನಡೆಯುತ್ತಿದ್ದಾರೆ. ಮಕ್ಕಳು ಮಣ್ಣಿನಲ್ಲಿ ಆಟವಾಡುತ್ತಿದ್ದಾರೆ. ಕೆಲ ಗಂಡಸರು ಅಲ್ಲಲ್ಲಿ ಇಟ್ಟಿಯ ಮೇಲೆ ಕುಳಿತು ವೃತ್ತಪತ್ರಿಕೆಯ ಸುದ್ದಿ ಕಾಮಾಚಾರದ ಮೇಲೆ ಹರಟೆ ಹೊಡೆಯುತ್ತಾ ಕುಳಿತಿದ್ದಾರೆ. ಆನಂದ ಅವರತ್ತಿಗೆ ಹೋಗಿ "ಈ ಊರಲ್ಲಿ ರಾಲೆ ಎಲ್ಲಿದೆ? ಮೇಸ್ಟರ ಮನೆ ಎಲ್ಲಿದೆ?" ಎಂದು ವಿಚಾರಿಸಿದ.

"ಅದೊ ನೋಡಿ ಅಲ್ಲಿ ಒಂದು ಜಗಲಿಯ ಮನೆಯಿದೆಯಲ್ಲಾ—ಅಲ್ಲಿ ಹುಡುಗರು ಅಳುವಾಡುತ್ತಿದ್ದಾರಲ್ಲ—ಅದೇ ಮೇಸ್ಟರ ಮನೆ!" ಎಂದರು ತೈ ಕೋರಿಕುತ್ತಾ ಒಬ್ಬರು.

"ನೀನು ಮೇಸ್ಟರಿಗೆ ಏನು ಸಂಬಂಧ ಅವರ ಬೇಕು?" ಎಂದು ಮತ್ತೊಬ್ಬರ ಪ್ರಶ್ನೆ.

'ನಾನು ಮೇಸ್ಟರ ಭಾವ ಮೈದುನ' ಎಂದು ಹೇಳುತ್ತಾ ಆನಂದ ಮುಂದೆ ನಡೆದು ಹೋದ. ಬಸ್ಸಿನಿಂದ ಬಂದಿದ್ದರೂ ಕಾರಣ ಒಟ್ಟಿಗೆಲ್ಲಾ ಕೆಂದು ಧೂಳಿನಿಂದ ಮಲಿನವಾಗಿದ್ದವು. ಗಂಟಲಿಗೆ ತಲೆ ಕೆದರಿ ಹೋಗಿತ್ತು. ಮೈಯಲ್ಲಾ ಹರಿದು ಮುಖದ ಕಳೆಯನ್ನೆ ಕಸಿಸಿತ್ತು. ಅವನಿಗೆ ಎಷ್ಟು ಹೊತ್ತಿಗೆ ಮನೆಯನ್ನು ತಲುಪಿ ಸುಖ ತೊಳೆದುಬಿಟ್ಟೆ ಬರಲಿಸೇನೊ ಎನಿಸಿತ್ತು.

ಅಂಗಳದಲ್ಲಿ ಆಟವಾಡುತ್ತಿದ್ದ ಮಂಜು, ಲಂಡ ಆನಂದನನ್ನು ನೋಡುತ್ತಲೇ "ಮಾಮ ಬಂದ ಮಾಮ" ಎಂದು ಕೂಗುತ್ತಾ ಮನೆಯೊಳಗೆ ಓಡಿದರು. "ಅಮ್ಮಾ ಮಾಮ ಬಂದ ಆನಂದ ಮಾಮ", ಎಂದು ಸಮಾಚಾರವನ್ನು ತಲುಪಿಸಿದರು

ಒಳಗೆ ರಾಶಿ ಮಾಡುತ್ತಿದ್ದ ಅವನ ಅಕ್ಕನವರು ಹೊರಗೆ ಬಂದರು. ಆನಂದನನ್ನು ನೋಡಿ—

"ಯಾವಾಗ ಬಂದೆಯೂ ಆನಂದಾ ಯಾವ ಬಸ್ಸಿಗೆ ಬಂದೆ? ಬರ ಪತ್ರಕ್ಕೆ ಮುಂಚೆ ಒಂದು ಕಾಗದ ಹಾಕಬಾರದೆ?" ಸಾವಿರ ಪ್ರಶ್ನೆ ಸುರಿಸಿದರು.

ಅಕ್ಕ ತಮ್ಮನನ್ನು ಬಹು ಮಮತೆಯಿಂದ ವಿಚಾರಿಸುತ್ತಿದ್ದಳು. "ಅಮ್ಮಾ ಹಾಲು ಉಕ್ಕುತ್ತಿದೆ" ಎಂದು ಒಳಗಿಂದ ಮಂಜು ಬಂದು ಬೇಳೆದ ಆನಂದನ ಕೈ ಒಳಗೆ ನಡೆದರು.

"ತೆಗೆದ ಆದಿತ್ರಿ—? ದೂರ ಬಂದಿರೋಹಾಗಿದೆ"—ಎಂದು ಒಳನಡೆದರು.

"ಬ್ರಿಗೇ... ನನ್ನ ತಮ್ಮ ಈಗ ಊರಿಂದ ಬಂದ ಮಾತಾಡ ತ್ತಿದ್ದೆನೆ". ಎಂದು ಒಳಗಿನಿಂದಲೇ ಉತ್ತರಿಸಿದರು. ಅವರ ಅಕ್ಕ

ತಂದೆ ಮತ್ತು ಕಾಸಿ ಕುಡಿದ ಆನಂದ ಹೊರಬಂದ. ಆನಂದನ ತಂಗಿ ಬಂದವಳಾಗಿ ಕಾಫಿ ಕೊಟ್ಟರು. ಅವನು ಈಗ ಕುಡಿದ ಬಂದಿದ್ದಾನ್ರಿ... ಬೇಡ ಬೇಡ" ಎಂದರು.

ಆನಂದನನ್ನು ನೋಡಿದ ಅವರು ಹೆಣ್ಣು ಮಗಳು ಸ್ವಲ್ಪ ಹೊತ್ತಿ ಮೇಲೆ ಕಣ್ಣಲ್ಲಿ ನೀರ ತಂದುಕೊಡಳು. ಇದನ್ನು ನೋಡಿದ ಆನಂದನ ಅಕ್ಕ 'ಏಲೆ ಏನಾಯಿತು ಸಾವಿತ್ರಿಮ್ಮ ಎಂದು ಗಾಬರಿಯಿಂದ ಕೇಳಿದರು.

ಸಂಜೆ ಆವರಿಸ ತೊಡಗಿತ್ತು. ದೂರ ಹೋದ ದನಕರುಗಳು ಮನೆಗೆ ಹಿಂತಿರುತ್ತಿವೆ. ಪಕ್ಕಗಳು ಚಿಲಿಪಿಲಿ ಗುಟ್ಟುತ್ತಾ ಗೂಡು ಸೇರುತ್ತಿವೆ. ಆನಂದನ ಅಕ್ಕ ಲಾಟೀನನ್ನು ಒರಿಸಿ ದೀಪ ಹಚ್ಚಿದರು. ಸಾವಿತ್ರಮ್ಮನವರು ಹೊರಡಲು ಅಣಿ.

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಯ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು.
ಕಾಫೀಯುಳ್ಳ ಉಪಾಹಾರಕ್ಕೆ ಅನ್ನ ಸ್ಥಾನ ಪಡೆದ ವಿಶಾಲವಾದ ಹೊಟೆಲ್.

In the Court of the Munsiff, Udipi

O S. No 43/1968

Ramakrishnayya —Plaintiff

Vs

Ganga Ranga and another —Defendants

The defendants are hereby informed that the above suit is posted to 3—6—1968. They are directed to appear in person or by Pleader before this Court on that day at 11 A M failing which the suit will be decided in their absence.

(By order)

K. L. Aithal,

Vakil for Plaintiff

Udipi, 28—4—68.

In the Court of the Munsif of Mangalore.

I. & S. C No 5 of 1968

In the matter of the debts of late

N Krishnappa Deceased

1 N Yamuna, 2 K Malathi

3. N. Ramdas 4 K Jamunakshi

5. N Rajendra) Minors by

6 Ravindra) guardian

7. Geeta) mother 1st

8 Ramanatha) petitioner

Petitioners

Notice is hereby given that on the 6th day of December 1967 application was made to this Court by the petitioners, for grant of Succession Certificate with respect to certain debts and Securities of Sri N Krishnappa of Kulsaeker, Mangalore-5 who died on 5—5—1967, and that the said application stands posted to 4—6—1968 for hearing. Persons interested in opposing the said grant must file their caveat on or before the said date.

(By order of the Court)

S. R. Hegde,

Advocate for Petitioners

Mangalore, 23—4—1968.

ಫೋನ್ : 526

ಸಂಪುಟ ೪೭

ಸಂಚಿಕೆ ೩೬

ಕಸ್ತೂರಿ

೯—೫ ೧೯೩೮

ಸ್ವಾಮಿಗಳು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶಾಂತಿ ಮಾತುಕತೆ

ಅಧ್ಯಕ್ಷ ಜಾನ್ಸನ್ನರು ಪರಿಸ್ಥಿತಿಯು ಒತ್ತಡಕ್ಕೊಳಗಾಗಿಯೆಂಬಂತೆ ವಿಯತನಾಮದಲ್ಲಿ ಸೀಮಿತ ಪ್ರದೇಶದ ಮೇಲೆ ಬಾಂಬು ದಾಳಿಯನ್ನು ನಿಲ್ಲಿಸಲು ಆಜ್ಞೆ ಮಾಡಿ ಶಾಂತಿ ಮಾತುಕತೆಗೆ ತನ್ನ ಸಿದ್ಧತೆಯನ್ನು ಘೋಷಿಸಿ ನಾಲ್ಕು ವಾರಗಳೇ ಆಗಿದುವು. ಕೆಂಪು ಚೀನಾದ ಲಭಿಸ್ಯಾಯವನ್ನು ಸಂಪೂರ್ಣ ಕಡೆಗಣಿಸಿ ಉತ್ತರ ವಿಯತನಾಮದ ಈ ಮಾತುಕತೆಗಳಿಗೆ ದ್ವಾರಮುಚ್ಚಗೊಳಿಸಿದ್ದ ವೆತ್ನಾಂ ಜೋಯ್ದ್ಯವೆನಿಸಿದರೂ ಮಾತುಕತೆಗಳ ಹಿತದೃಷ್ಟಿಯಿಂದ ಇದನ್ನು ವಿಶ್ವದ ವಿಶಾಲ ಜನತೆ ಸಂತೋಷದಿಂದ ಸ್ವಾಗತಿಸಿತ್ತು. ಈ ಶಾಂತಿ ಮಾತುಕತೆಗಳು ಕೇವಲ ಪ್ರಾಸ್ತಾವಿಕವಾಗಿದ್ದುದೆಂದೆ ಇದು ಸಂಪೂರ್ಣ ಶಾಂತಿ ಸ್ಥಾಪನೆಗೆ ನೇರ ದಾರಿಯನ್ನು ತೋರಿಸಬಹುದೆಂಬ ಆಶೆಯಿತ್ತು. ಆದರೆ, ಶಾಂತಿ ಮಾತುಕತೆಗಳು ಎಲ್ಲಿ ಘಡಿಯುಬೇಕು? ಅಮೆರಿಕೆಯು ಬಾಂಬು ದಾಳಿಯನ್ನು ಸಂಪೂರ್ಣ ನಿಲ್ಲಿಸುವುದಕ್ಕಿಂತಲೂ ಮಾತುಕತೆಗಳಿಗೆ ಯೋಗ್ಯ ಉಭಯ ಸಮ್ಮತ ಸ್ಥಳವನ್ನಾರಿಸುವಲ್ಲಿಯೇ ದೊಡ್ಡ ಬಿರುಕು ಕಂಡುಬಂದಿತ್ತು. ವಿಶಾಲ ಜಗತ್ತಿನ ಸುಮಾರು ಹದಿನೈದು ನಗರಗಳಿಗೆ ಶಾಂತಿ ಸ್ಥಾಪನೆಯ ಪುಣ್ಯ ದೆಸೆಯಿಲೆಂದು ಜಾನ್ಸನ್ ಸೂಚಿಸಿದರೂ ವಿಯತನಾಮವು ಒಂದಲ್ಲ ಒಂದು ಕಾರಣ ಮುಂದೆ ಮಾಡಿ ಅವುಗಳ ಹೆಸರನ್ನು ಹಿಂದೆ ಹಾಕುತ್ತಲೇ ಬಂತು. ಹಾಗಾಗಿ ಮುಂಚಿದ ಶಾಂತಿಯ ಭರವಸೆಯೆಲ್ಲ ಮಾಯವಾಗಿ ಜಗತ್ಪ್ರಳಯಕ್ಕೆ ಮತ್ತೆ ಶ್ರೀಗಣೇಶ ಪಾಡಲಾಗುವುದೇ ಎಂಬ ಸಂದೇಹ ಶಾಂತಿಪ್ರಿಯ ರಾಷ್ಟ್ರಗಳಲ್ಲಿ ಮೂಡಿತ್ತು. ಹೊನಗೂ ವಿಯತನಾಮ ಮತ್ತು ಅಮೆರಿಕೆಗಳು ಫ್ರಾನ್ಸದ ರಾಜಧಾನಿ ಪ್ಯಾರಿಸ್ಸಿನಲ್ಲಿ ಶಾಂತಿ-ಸಂಧಾನಗಳ ಪ್ರಾಥಮಿಕ ಚರ್ಚೆ ನಡೆಸಲು ಒಪ್ಪಿರುವುದು ಜಗತ್ತಿನ ಸೌಭಾಗ್ಯ.

ಪ್ಯಾರಿಸ್ ಫ್ರಾನ್ಸುಗಳ ಜನನಿಯೆಂದು ಹೆಸರಾಗಿದೆ. ಇದು ಜಗತ್ತಿನ ಅತ್ಯಂತ ಫ್ಯೇಷನ್‌ಪ್ರಿಯ—ಸುಂದರ—ನಗರ. ಇಲ್ಲಿಂದಲೇ ಇತಿಹಾಸಾವಧಿಯಲ್ಲಿ ಕ್ರಾಂತಿಯ ಕಿಡಿಯು ಹಾರಿದೆ; ಶಾಂತಿಯ ಕೆರಟವೂ ಮೂಡಿದೆ. ಕ್ರಾಂತಿ ನಗರವಿರುವಂತೆಯೇ ಪ್ಯಾರಿಸ್ ಶಾಂತಿನಗರವೂ ಹೌದು. ಸಪ್ತವಾರ್ಷಿಕ ಯುದ್ಧವು ನೆಪೋಲಿಯನ್ ಕಾಲದ, ಕ್ರಿಮಿಯಾ ಸಮರ, ಮೊದಲನೆಯ ಜಾಗತಿಕ ಯುದ್ಧ ಮೊದಲಾದುವು ಜಗತ್ತನ್ನೇ ಕಲ್ಕಿಸುತ್ತಿದ್ದಾಗ ಶಾಂತಿಯನ್ನು ಕೊಡಮಾಡಿದ ನಗರ ಪ್ಯಾರಿಸ್. ಈ ನಗರದ ಸುಂದರ ವಾತಾವರಣವು ಶಾಂತಿಗೆ ಪ್ರೇರಕ ಶಕ್ತಿಯಾಗಿದೆಯೆಂದು ಜೀಳುವವರೂ ಇದ್ದಾರೆ. ಅದೇನೇ ಇದ್ದರೂ, ಫ್ರಾನ್ಸ್ ಸರಕಾರವು ತನ್ನ ರಾಜಧಾನಿಯ ಬಗಿಲನ್ನು ವಿಯತನಾಮ ಶಾಂತಿ ಮಾತುಕತೆಗಳಿಗೆ ತೆರೆದಿಡಲು ಸಿದ್ಧವಾಯಿತು; ಅಮೆರಿಕೆಯು ತಕ್ಷಣವೇ ಇದನ್ನು ಒಪ್ಪಿಕೊಂಡಿತು; ಇದಕ್ಕಿಂತ ಮೊದಲೇ ಎಂಬಂತೆ ವಿಯತನಾಮವೂ ಸಮ್ಮತಿಸಿತು. ಹಾಗಾಗಿ, ಒಂದು ಸಮಸ್ಯೆ ಪರಿಹಾರವಾಯಿತು; ಮುಂದೆ ಸಂಧಾನ ಮಾತುಕತೆಯ ವಿಷಯವೂ ಮತ್ತು ವಿಷಯ ಪಟ್ಟಿಯ ಬಗ್ಗೆಯೂ ಚರ್ಚೆಗಳು ಪ್ರಾರಂಭ ನೇರವಾಯಿತು.

ವಿಯತನಾಮದ ಯುದ್ಧ ಕಳೆದ ಮೂರು ವರ್ಷಗಳಿಂದಲೂ ನಡೆಯುತ್ತಿದೆ. ದಿನದಿಂದ ದಿನಕ್ಕೆ ಅದರ ಉಲ್ಬಣತೆ ಅಧಿಕವಾಗುತ್ತಲೇ ಬಂದಿತ್ತು. ಉತ್ತರ ವಿಯತನಾಮಕ್ಕೆ ಕೆಂಪು ಚೀನವು ಪ್ರತ್ಯಕ್ಷ ಪ್ರಚೋದನೆಯನ್ನೇ ನೀಡತಿತ್ತು. ರಶ್ಯ ಅಪ್ರತ್ಯಕ್ಷ ಪ್ರಚೋದನೆಯನ್ನೂ ಕೊಡುತಿತ್ತು. ಅಮೆರಿಕೆಯಾದರೂ ದಕ್ಷಿಣ ವಿಯತನಾಮದ ರಕ್ಷಣೆಯ ನೆಪ ಮಂದೊಡ್ಡಿ, ಈ ಯುದ್ಧವನ್ನು ತನ್ನ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಂಡಿತ್ತು. ಹಾಗಾಗಿ ಇದು ವಿಶ್ವಯುದ್ಧವಾಗಿ ಪರಿಣಮಿಸೀತೆಂಬ ಭಯವೂ ಅವರಿಸಿತ್ತು. ಒಂದು ವೇಳೆ ವಿಶ್ವಸಮರವು ಸಂಭವಿಸಿದರೆ, ವಿಶ್ವನಾಶ ಸುನಿಶ್ಚಿತವೆಂಬ ಭಯವು ಹೃದಯದಲ್ಲಿ ತುಂಬಿತ್ತು. ಆದರೆ ಪೂರ್ವ—ಪಶ್ಚಿಮಗಳ ಶಕ್ತಿಯು ಪರಿಮಾಣದ್ದಲ್ಲಿ ತಿಳಿಯಲಿಕೆಯಿಲ್ಲದುದರಿಂದ ಯುದ್ಧದ ಕಿಡಿಯು ಬಹುದೂರ ಹರಡಲಿಲ್ಲ.

ಇದೀಗ ಪರಿಸ್ಥಿತಿಯು ಭವಿಷ್ಯದ ಬಗ್ಗೆ ಚಿಂತನೆ ಮಾಡುವಾಗ, ಸಂಧಾನದ ಮಾತುಗಳು ಸಿಹಿ, ಪರಿಣಾಮಕಾರಿಯಾಗಲಂದೆಂದೇ ಅನಿಸುತ್ತದೆ. ಅಮೆರಿಕೆಯ ಬಾಂಬು ದಾಳಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬ ಕೇಳಿಕೆಯನ್ನು ಉತ್ತರ ವಿಯತನಾಮವು ಮುಂದಿಡಬಹುದು. ಇದು ಅದರ ಪಕ್ಷದ ಶರತ್ತು. ಇದಕ್ಕೆ ಜಗತ್ತಿನ ಇತರ ಹಲವಾರು ಶಾಂತಿಪ್ರಿಯ ರಾಷ್ಟ್ರಗಳ ಬೆಂಬಲವೂ ಇದೆ. ಧಾರಕನಾಂದರೂ ಬಹಳ ಅಂಬಲ್ಕಿ ಮೊದಲೇ ಬಾಂಬು ದಾಳಿಯ ಸಂಪೂರ್ಣ ನಿಲುಗಡೆಗೆ ಸಂಪೂರ್ಣ ಬೆಂಬಲ ನೀಡಿದೆ; ಅಮೆರಿಕೆಯು ಅಪಕ್ಷಪಾತೆಗೆ ಪ್ರಾಪ್ತವಾಗಿದೆ. ಅಂತರಿಕವಾಗಿ ಅಮೆರಿಕೆಯಲ್ಲಿಯೂ ವಿಯತನಾಮ ಯುದ್ಧವನ್ನು ಮುಂದುವರಿಸುವ ಜಾನ್ಸನ್ ನೀತಿ ಕಟು. ಟೀಕೆಗೆ ಸಿಲುಕಿದೆ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಜಾನ್ಸನ್ನರು ಪ್ರತಿಷ್ಠೆಯ ಪ್ರಶ್ನೆಯನ್ನು ಬದಿಗಿಟ್ಟು ರಾಜನೈತಿಕ ನಿರ್ಣಯವನ್ನು ಮಾಡಬೇಕಾದುದು ವಸ್ತುಸ್ಥಿತಿಯ ಕಾರ್ಯ. ಪ್ಯಾರಿಸ್ ಸಂಧಾನ ಮಾತುಕತೆಯು ಸಫಲವಾಗಿ ಜಗತ್ತಿನ ಶಾಂತಿ ಮಾತುಕತೆಗಳಲ್ಲಿ ಪ್ಯಾರಿಸ್ ಇನ್ನೊಂದು ಅಧಿಕ ಮೇಲೇರಲೆಂದು ಎಲ್ಲರ ಸದಾಶಯ.

ದೊಡ್ಡವರು, ದೇವರು

ದೊಡ್ಡವರು ಯಾರು ಎಂದು ಯಾರನ್ನಾದರೂ ಪ್ರಶ್ನಿಸಿದರೆ ಹೇಗೆ? ದೇವರು ಇದ್ದಾರೆಯೆ? ಇದ್ದರೆ ಹೇಗೆ? ಎಂಬಂತೆಯೇ ಇದೂ ಒಂದು ಗಹನವಾದ ಪ್ರಶ್ನೆ. ದೇವರ ಬಗ್ಗೆ ನಮ್ಮ ದೇಶದಲ್ಲಿ ಇಡೆಡೆ ಸ್ವಲ್ಪ ತರ್ಕ-ವಿತರ್ಕಗಳು ಜಗತ್ತಿನ ಮತ್ತಿನ ದೇಶದಲ್ಲಿ ನಡೆದಿರಲಾರದು. ದೇವರ ನಾಮ, ಆಕಾರ—ಸ್ವರೂಪ—ಗುಣಗಳ ಬಗೆಗೂ ಒಮ್ಮತವೆಂಬುದಿಲ್ಲ. ಮತ ಪ್ರತಿಷ್ಠಾಪನಾಚಾರ್ಯರಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ದೇವರನ್ನು ವರ್ಣಿಸಿದರೆ, ಮತ್ತೆ ಕೆಲವರು ಸಮನ್ವಯ ವಾದವನ್ನೇ ಮರೆಹೊಕ್ಕರು. ಹಾಗೆಯೇ ದೊಡ್ಡವರ ಬಗೆಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಬುದ್ಧಿಗೆ ತೋಚಿದಂತೆ ವ್ಯಾಖ್ಯಾನ ಮಾಡಬಹುದು. ಪ್ರಧಾನಿ ಇಂದಿರಾ ಗಾಂಧಿಯವರ ವ್ಯಾಖ್ಯಾನವಿದು.—"ಸುಟ್ಟಿನಿಂದ ಯಾರೂ ಶ್ರೇಷ್ಠರು (ಅರ್ಥಾತ್ ದೊಡ್ಡವರು) ಆಗುವುದಿಲ್ಲ." ಪ್ರಾಚೀನ ಕನ್ನಡ ಗ್ರಂಥವೊಂದರಲ್ಲಿ "ಮೆನ್ನುಳ್ಳವನೆ ಶಲೀನಂ" ಎಂಬ ಮಾತು ಇದೆ. "ದುಡ್ಡೆ ದೊಡ್ಡಪ್ಪ" ಎಂಬುದು ಇಂದು ಮನೆಮಾತಾಗಿದೆ. ವ್ಯಾವಹಾರಿಕ— ಲೌಕಿಕ ಜಗತ್ತಿನಲ್ಲಿ ಶ್ರೇಷ್ಠ ಯಾನೇ ದೊಡ್ಡವ ಎಂಬುದಕ್ಕೆ ಈ ವ್ಯಾಖ್ಯಾನವೇ ಸರಿಯಿರಬಹುದೆ?

ಪ್ರೀತಿಯ ಕನ್ನಡಕ ಧ್ವಜ ಬಡತನದ ರಕ್ಷಾಕವಚ ಹೊತ್ತಿರುವವನ ಪ್ರಯಾಣ ನಿರರ್ಥಕವಾಗದು.

○ ○ ○

ವಚನ ಸುಧೆ

ಧರ್ಮ ಎಂದ ಹರೋ ಹರಿ
ಧರ್ಮೋ ರಕ್ಷತಿ ರಕ್ಷಿತಃ ।
ತಸ್ಮಾದ್ಧರ್ಮೋ ನಸಂತ ತ್ಯೋ
ಮಾನೋಧರ್ಮೋ ಹತೋವಧೀತ್ ॥

ಅರ್ಥವಾದ ಧರ್ಮವು ಮನುಷ್ಯನನ್ನು ಕೊಲ್ಲ ಕೈದಿರಲಿ ಧರ್ಮವು ರಕ್ಷಿಸುತ್ತದೆ. ಆದುದರಿಂದ ಧರ್ಮವನ್ನು ಪರಿತ್ಯಜಿಸಬಾರದು. ಏಕೆಂದರೆ, ಪರಿತ್ಯಜಿಸಿದ ಧರ್ಮವು ನಮ್ಮನ್ನು ಸಂಹರಿಸಬಹುದು.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಬಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ,
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ;
ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR
Boarding & Lodging
Near Corporation Office, 9, Mission Road
Bangalore-2

ಮುಖಚಿತ್ರ

ಹಲವು ಅಧ್ಯಾತ್ಮಿಕ ಗ್ರಂಥ ಕರ್ತೃರೂ "ಗೀತೆಯ ಕೈಗನ್ನಡಿ" ಎಂಬ ಗೀತೆಯ ಭಾಷಾಂತರ ಕರ್ತೃರೂ ಆದ ದಿ| ಹೊಸಕೆರೆ ಚಿದಾಂಬರಯ್ಯನವರು

ನರಸಣ್ಣನ ಸರಸ

"ಹೊಸ ಸಂಯಕನ ಅಯ್ಯಯ್ಯ ಸುದ್ದಿಸ ದೈಲಿ ಒಡಾಪದಿರಲಿ ಅಂತ ವಿಕೋಲಿ ಪಸ್ಸಿದ ನಾಯಕರು ಅನ್ನುತ್ತಾರಂತೆ—ಸ್ವಪ್ನದ ಅಂತರಿಕ ವ್ಯಾಪಾರದಲ್ಲಿ ಇವರೇಕೆ ಹಸ್ತಕ್ಷೇಪ ನಡೆಸಬೇಕು?

ಅದ್ಭುತ ಪ್ರಪಂಚ

ಕೃಷಿ—ಪಶುಸಂಗೋಪನೆಗಳಲ್ಲಿ

ಇರುವೆಗಳೂ ಏರ್‌ಪ್ಲೇನೂ

ಲೇಖಕರು:

ಶ್ರೀ ಎಚ್. ವಿ. ನಾರಾಯಣ ಭಟ್

ಮನುಷ್ಯನು ಮಾತ್ರವೇ ಕೃಷಿ ಮತ್ತು ಪಶು ಸಂಗೋಪನಾ ಚಟುವಟಿಕೆಗಳಲ್ಲಿ ಮಗ್ನನಾಗಿರುವುದಲ್ಲ. ಕೆಲವು ಜಾತಿಯ ಇರುವೆಗಳೂ ಈ ಬಗೆಯ ಕಾರ್ಯಕ್ಕೆ ಸಮರ್ಥವಾಗಿವೆಯೆಂದರೆ ಆಶ್ಚರ್ಯವೆಂದೇ ತೋರಬಹುದಾದರೂ ಇದೊಂದು ಅದ್ಭುತ ಪ್ರಪಂಚ!

ಕೆಲವು ಜಾತಿಯ ಇರುವೆಗಳು ದನವನ್ನೂ ಸಾಕಿ ಹಾಲು ಕರೆಯುವವು!

ಇರುವೆ ಸಾಕುವ ದನ ಜಾನುವಾರು ವರ್ಗಕ್ಕೆ ಸೇರಿದವುಗಳೇ? ಎಂದು ಕೃಷ್ಣಿಸುವ ಕೆತೂಹಲವೂ ಸಹಜ!

ಸಸ್ಯಗಳ ಎಲೆಗಳಲ್ಲೂ ತಂತುಗಳನ್ನೂ ಅಂಟಿಕೊಂಡಿದ್ದ ಅವುಗಳಿಂದ ನೀರನ್ನು ಹೀರಿ ಜೇನು ಬಿಂದುಗಳನ್ನು ವಿಸರ್ಜನೆ ಮಾಡುವ ಜಾತಿಯ ತಿಗಣೆಗಳೂ ದೇಶಗಳೂ ಇವೆ. ಇವೇ ಇರುವೆಗಳ ದನಗಳು!

ಈ ವರ್ಗದ 'ಸಟ್ಟೆ'ಗಳನ್ನು ಒಂದೆರಡು ಸಸಿಗಳಲ್ಲಿ ಬೆಳೆಸಿ ಮೇಯಿಸಿ ನೋಡಿದರೆ ಕಾರ್ಯವನ್ನು ಇರುವೆಗಳು ಮಾಡುವವು.

ಇದನ್ನೆ, ಚೇಳಿ, ಅಳಸಂದಿ ಮುಂತಾದ ಸಸಿಗಳನ್ನೇರಿ ಇಳಿಯುವ ವಿಶಿಷ್ಟ ಜಾತಿಯ ಇರುವೆಗಳನ್ನು ನೋಡಿದ ಬಳಿಕ ಆ ಸಸಿಗಳಲ್ಲಿ ಇರುವೆಗಳಿಂದಲೇ ನಿರ್ಮಿಸಲ್ಪಟ್ಟ ಒಂದು ಜಾತಿಯ "ಕೊಡೆ"ಗಳಂತಹ 'ಪರ್ಣಶಾಲೆ'ಯೊಳಗೆ ಇರುವೆಗಳ ಲಾಲನೆ ಪಾಲನೆಗೊಳಪಟ್ಟ "ದವ"ಗಳ ಬಗ್ಗೆ ದೋಚಿಸಿದರಾಯ್ತು.

ಕೆಲವು ವೃಕ್ಷದ ಚಿಗುರೆಲೆಗಳೆಡೆಯಲ್ಲಿಯೂ ಇರುವೆಗಳ "ಹಟ್ಟಿ"ಯನ್ನು ಕಾಣಬಹುದು.

ಗಿಡದಳ ದೇಗುಗಳಿಂದಲೂ ರಸ ಹೀರಿ ತಿಲ್ಲುವ "ಗಿಡಹೇನ"ಗಳನ್ನು ಹುಡುಕಿಕೊಂಡು ಆಕೆ ಅಳಕ್ಕೆ ಸಾಗಲು ಅಗತ್ಯವಿರುವ ಸುರಂಗದಳಕ್ಕೂ ಇರುವೆಗಳು ತೋಡುವುದುಂಟು. ಜೇನು ಕರೆಯುವ ವಿಧಾನ ವಿಶಿಷ್ಟ. ಇರುವೆಗಳು ತಮ್ಮ ಸ್ಪರ್ಶನಿಗಳಿಂದ ಹೇನುಗಳ ಬೆನ್ನಿನ ಮೇಲೆ ಮುಂದಿನಿಂದ ಹಿಂದಕ್ಕೆ ಉಜ್ಜುವಾಗ "ದವ"ಗಳ ಹೊಟ್ಟೆಯ ಹಿಂಭಾಗದ ದ್ವಾರಗಳ ಮೂಲಕ ಸುರಿಯುವ ಜೇನಿನ ಹನಿಗಳನ್ನು ಇರುವೆಗಳು ಸಂಗ್ರಹಿಸುತ್ತವೆ.

ಉಷ್ಣಪಲಯ ಅನೇಕ ರಾಜ್ಯಗಳಲ್ಲಿನ ಕಾಫಿ ಮತ್ತು ಕಿತ್ತಳೆ ತೋಟಗಳಲ್ಲಿ "ಅಮೇರಿಕನ್ ಸೌಬಾ" ಎಂಬ ಹೆಸರ ಇರುವೆಗಳು ಇರುವೆಗಳ ಸಮೂಹದ ಕೃಷಿಕರೆಂದು ಅಮೇರಿಕಾದ ವರದಿಗಳಿವೆ.

'ಆಟೂ ಇರುವೆ'ಗಳೆಂದೂ ಈ ವರ್ಗದ ಇರುವೆಗಳಿಗೆ ಹೆಸರಿದೆ.

ಆತೀ ಕಡಿಮೆ ಸಮಯದಲ್ಲಿ ಒಂದು ತೋಟದ ಸಸಿಗಳ ಎಲೆಗಳೆಲ್ಲವನ್ನೂ ಇವು ಕತ್ತರಿಸಿ ಕೆಡಹುತ್ತವೆ.

ವರ್ಣರಂಜಿತ ಕೊಡೆಗಳನ್ನು ಧರಿಸಿ ನಡೆದು ಅಭ್ಯಾಸ ಪ್ರದರ್ಶಿಸುವ ಸರ್ಕಸ್ ಯುವತಿಯರಂತೆ ಸಸಿಗಳ ಗೆಲ್ಲುಗಳ ಮೇಲೆ, ತಲೆಯ ಮೇಲೆ ಸೊಪ್ಪುಗಳನ್ನೂ ಹೇರಿಕೊಂಡು ಸಾಮೂಹಿಕವಾಗಿಯೂ ಶಿಸ್ತು ಬದ್ಧವಾಗಿಯೂ ಸಾಗುವ ಈ ಇರುವೆಗಳು ಯಾವುದೋ 'ಪ್ರದರ್ಶನ'ದಲ್ಲೇ ಕಟ್ಟುಂತೆಯೂ ತೋರಬಹುದು.

ಹೀಗೆ ಸಾಗಿಸಿದ ಎಲೆ ತಂಡಗಳನ್ನು ತಿನ್ನದೆ ತಂತನ್ನು 'ನಿವಾಸ'ದಳಿರೂ 'ಮರಿಲು'—'ಭವನ'ಗಳಿರೂ ಹೊದಿಸುತ್ತವೆ. ಉಳಿದ ಎಲೆಗಳನ್ನು ಜಗಿದು 'ಕಂಪೋಸ್ಟ್' ತಯಾರಿಸುತ್ತವೆ. ವನಕ ಪ್ರದೇಶದಲ್ಲಿ ಕೂಡಿ ಹಾಕುವುದರ ಮೂಲಕ ಇವು 'ಕೃಷಿ ಸ್ಥಾವರ'ಗಳನ್ನು ಸ್ಥಾಪಿಸುತ್ತವೆ.

ಸಸ್ಯಾಹಾರಿಗಳಾದ 'ಆಟೂ ಇರುವೆ'ಗಳು ಈ ಸ್ಥಾವರದಿಂದ ಉತ್ಪಾದನೆಯಾಗುವ ಹಾವಸೆ ಶಿಲೀಂಧ್ರ ಆಗಟಿನ್ನೋ ಸೇವಿಸುತ್ತವೆ.

ಈ ಜಾತಿಗೆ ಸೇರಿದ ಇರುವೆಗಳಲ್ಲಿ "ಯೋಧ"ರೂ ಇದ್ದಾರೆ. ಇವರು ಸಶಸ್ತ್ರರೂ! ಹರಿತವಾದ ಹಲ್ಲುಗಳೇ ಇವುಗಳ ಮುಖ್ಯ ಆಯುಧ. ಎಲೆ ಕತ್ತರಿಸಲು ಹೋಗುವ "ಮಜೂರ" ವರ್ಗದ ಇರುವೆಗಳ ರಕ್ಷಣಾ ಕಾರ್ಯಗಳಲ್ಲಿಯೂ ಶಿಸ್ತು ಪರಿಪಾಲನೆಯ ಬಿಗಿಯಲ್ಲಿಯೂ ದಿಗ್ದರ್ಶನದಲ್ಲಿಯೂ ಈ ಯೋಧರ ಪಾತ್ರ ಪ್ರಧಾನವಾದುದು.

ಇಂತಹ ಇರುವೆಗಳ ಜೈತ್ರ ಯಾತ್ರೆಯ ನೇತೃತ್ವ ವಹಿಸುವುದರೊಂದಿಗೆ ತನ್ನ ಕಡೆಯವರಿಗೆ ರಕ್ಷಣೆಯನ್ನು ಒದಗಿಸುವುದರೊಂದಿಗೇ ಈ ಯೋಧರು ವಿಕ್ಷ ಜಾತಿಯ ಇರುವೆಗಳೊಂದಿಗೆ ಯುದ್ಧಕ್ಕೂ ಸಿದ್ಧರಾಗಿ 'ದಿಗ್ವಿಜಯ' ಸಾಧಿಸುವರು.

ಇಂತಹ ಯುದ್ಧದ ವೇಳೆ ಲಭಿಸುವ 'ಕೈದಿ'ಗಳನ್ನು ತಮ್ಮದೇ ಸಾಳಯಕ್ಕೆ ತಂದು 'ಗುಲಾಮ'ರಾಗಿಯೂ ಕೆಲಸ ಮಾಡಿಸುವರು.

—ಸಂಗ್ರಹ.

ಶ್ರೀ ಅ. ನ. ಕೃ. ಸನ್ಮಾನ ಸಮಾರಂಭ ಮತ್ತು ನಿಧಿ ಸಮರ್ಪಣೆ

ಕನ್ನಡ ಸಾಹಿತ್ಯ ರಂಗದಲ್ಲಿ ಚಿರನೂತನ ಸಂಶೋಧನ ಶಕ್ತಿಯಾಗಿ ಕನ್ನಡ ಸಾಹಿತ್ಯಕ್ಕೊಂದು ಹೊಸ ಪರಂಪರೆಯನ್ನು ತಮ್ಮ ವೈಯುಕ್ತಿಕ ಪ್ರತಿಭೆಯಿಂದ, ಸಾಧನೆಯಿಂದ, ಅನವರತ ನಿಷ್ಠೆಯಿಂದ ತಂದುಕೊಟ್ಟವರೆಂದರೆ ಕನ್ನಡದ ಸಿದ್ಧಹಸ್ತ ವರಸಾಹಿತಿ ಶ್ರೀ ಅ. ನ. ಕೃಷ್ಣರಾವ್ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಉದ್ದಾಮ ಶಕ್ತಿಯ ತಮ್ಮ ಲೇಖನಿ ಓಡಿಸಿ ಸಫಲವಾದ ರೀತಿಯಲ್ಲಿ ಕಾರ್ಯ ಸಾಧಿಸಿದ, ಜನಪ್ರಿಯತೆ ಪಡೆದ ಅಪೋಘ ವ್ಯಕ್ತಿತ್ವದ ಈ ಮಹಾ ಸಾಹಿತಿಗಳ ಇದೇ ಮೇ ತಿಂಗಳಲ್ಲಿ ತಮ್ಮ ಅರವತ್ತನೇ ವರ್ಷಕ್ಕೆ ಸಡಾಮಣಿ ಮಾಡಿದ್ದಾರೆ ಈ ಅರವತ್ತನೇ "ಜನ್ಮದಿನೋತ್ಸವ"ವನ್ನು ಪ್ರಾತಿನಿಧಿಕವಾಗಿ ಬೆಂಗಳೂರಿನಲ್ಲಿ ಜರುಗಿಸಲು ನಿರ್ಧರಿಸಿದ್ದೇವೆ.

ಶ್ರೀ. ಅ. ನ. ಕೃ. ಅವರು ಕರ್ನಾಟಕದ ಅಭಿಮಾನಿ ವ್ಯಕ್ತಿಯಾಗಿರುವಂತೆ ಅಂತರ್ ಪ್ರಾಂತೀಯ ಭಾಷಾ ಸಾಹಿತ್ಯ ರಂಗದಲ್ಲೂ ಓರ್ವ ಉಜ್ವಲ ವ್ಯಕ್ತಿಯಾಗಿಯೂ ಇದ್ದಾರೆ. ಪ್ರಗಾಢ ಪಾಂಡಿತ್ಯ ಅಕೃತ್ರಿಮ ನಿರೂಪಣಾ ಸೊಗಸು, ಜನಪ್ರಿಯ ಜೀವನವನ್ನು ತನ್ನದೇ ಅದ ರೀತಿಯಲ್ಲಿ ಚಿತ್ರಿಸುವ ನೈಪುಣ್ಯತೆ, ಅಂತಃಕರಣಕ್ಕೆ ಮೀರಿಗಿ ಮುಟ್ಟುವ ಶೈಲಿ ಶ್ರೀ ರಾಯರ ಮಹೋನ್ನತಿಯ ಗುಟ್ಟು. ಶ್ರೀ ರಾಯರ ಉತ್ತಮ ವಾಗ್ಮಿಗಳು; ಆಸಾಧಾರಣ ಸಂಘಟಕರು, ಮಹಾ ವಿದ್ವಾಂಸರ ಅಭಿಮಾನಿಗಳು.

ಶ್ರೀ ರಾಯರನ್ನು ಗೌರವಿಸುವುದರ ಮೂಲಕ ಕನ್ನಡ ಜನತೆ ಕನ್ನಡಾಂಬೆಯನ್ನು ಗೌರವಿಸಿದಂತಾಗುವುದು

ಇದೇ ಸಮಯದಲ್ಲಿ "ಕಾವ್ಯಧೇನು" ಎಂಬ ಬೃಹತ್ ಕಥಾ ಸಂಕಲನವನ್ನು ಶ್ರೀ ಅ. ನ. ಕೃ. ಅವರಿಗೆ ಅರ್ಪಿಸಲಾಗುವುದು.

ಈ ಎಲ್ಲ ಕಾರ್ಯಕ್ಕೆ ನಿಮ್ಮ ಸಂಪೂರ್ಣ ಸಹಕಾರ, ಮಾರ್ಗದರ್ಶನ, ಆರ್ಥಿಕ ಸಹಾಯವನ್ನು ಅಪೇಕ್ಷಿಸುತ್ತೇವೆ ಶ್ರೀ ಅ. ನ. ಕೃ. ಒಂದು ವ್ಯಕ್ತಿಯಲ್ಲ; ಕನ್ನಡ ಸಾಹಿತ್ಯರಂಗದ ಉಜ್ವಲ ಪರಂಪರೆಯ ಒಂದು ಶಕ್ತಿ, ಮಹಾ ಸಂಕೇತ ಎಂಬ ದನ್ನು ಸಾವು ಅರಿತು ಕಾರ್ಯೋನ್ಮುಖರಾಗೋಣ. 'ನಿಧಿ'ಗೆ ಹಣ ಕಳುಹಿಸುವವರು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

ಗುಂಡ್ಲಿ ರಾಮಕೃಷ್ಣ ಐತಾಳ,
ಸಂಚಾಲಕ:

ಶ್ರೀ ಅ. ನ. ಕೃ. ಸನ್ಮಾನ ಸಮಿತಿ,
'ಶ್ರೀ ರಾಮಚಂದ್ರ ನಿಲಯ'
ನಂ. ೨೫, ೨ನೇ ಮೈನ್ ರೋಡ್,
೨ನೇ ಕ್ರಾಸ್,
ಗಾಂಧೀನಗರ, ಬೆಂಗಳೂರು-೯.

Mysore State Chamber of Agriculture

President
Mr N. Srirama Reddy,
B Sc, (Agri), M P.

Vice-Presidents
B S Viswanathan,
B Com, F B I.
K. Mohan Deva Alva,
B.Sc. (Agrs) F R E S.,

General Secretary.
Abasama.

18, Kurubara Sangha Buildings, 2nd Main Road, Gandhinagar,
Bangalore—9

Phone 29069

Dated 9th April 1968.

AN APPEAL

Sub. Formation of Indian Chamber of Agriculture & Chamber of Agriculture in different states.

Dear Reader,

We have constituted an organisation, called the Mysore State Chamber of Agriculture with headquarters at Bangalore for the purpose of bringing together the agricultural producer, the trader, and the consumer together on one platform, so as to evolve a harmoneous method of functioning each in his sphere for the ultimate good of every one

In this task it is needless to say that your interest should be very great. Hence we would be very happy to have your co-operation. It is our earnest desire that the idea of such Chamber of Agriculture for every State should be established and all such State Chambers should federate at the National level so as to evolve a well knit organisation from the farmer upto national level We should be very happy to have your reactions on the subject leading to establish the Indian Chamber of Agriculture and the Chamber of Agriculture in each State.

Your's Sincerely,
for The Mysore State Chamber of Agriculture
Abasama,
General Secretary.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಕಂಗೆಟ್ಟಿರುವ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ಕತ್ತರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಿಯಾಯಿತಿ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ

ಉಡುತಡಿಯ–ಮಲ್ಲಿಗೆ

ಅಕ್ಕ ಮಹಾದೇವಿ

ಬರೆದವರು: ಶ್ರೀ ಬಸವರಾಜ ಕುಂಚೂರ.

ಬಸವಾಸಿಯ ಬನಸಿರಿಯಲ್ಲಿರಳಿದ ಪುಷ್ಪ ಲೋಕದ ಜನತೆಗೆ ತನ್ನ ಪರಿಮಳವನ್ನು ಸಾರ್ಥಕ ಬಾಳನ್ನು ಬಾಳಿ ಮಲ್ಲಿನಾಥನ ಅಡಿಯನ್ನು ಸೇರಿದ್ದು, ಹನ್ನೆರಡನೆಯ ಶತಮಾನದ ಶಿವ ಶರಣ-ಶರಣಿಯರ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯ. ಅಷ್ಟೇ ಏಕೆ? ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿಯೆ ಅಪರೂಪದ ಕಥಾವಸ್ತು! ಅಂಥ ಪ್ರಸಂಗವನ್ನು ನೀಡಿರುವ ಅನನ್ಯ ಹೆಣ್ಣೇ ಮಹಾದೇವಿ.

ಉಡುತಡಿಯ ಧನಾಢ್ಯರು, ಗುಣಾಢ್ಯರು ಮಹಿಳೆ ಶ್ರೇಷ್ಠರು, ಆಚಾರಂಪನ್ನರು ಗುಣ ಶೀಲರೂ, ಅದ ನಿರ್ಮಲ ಪ್ರಭುವರ ಮಗಳೇ ಮಹಾದೇವಿ ಸುಶೀಲೆಯು, ಪತಿಭಕ್ತೆ, ಸಂತಸ್ಥೆಯೂದ ಸುಮತಿ ಮೇ ಅವಳ ತಾಯಿ. ಬಹುದಿನದ ತಂದೆ ತಾಯಿಗಳ ಹರಕೆಯಿಂದ ಮನೆದೇವರಾದ ಶ್ರೀ ಶೈಲದ ಮಲ್ಲಿನಾಥನ ಕೃಪೆಯಿಂದ ಜನಿಸಿದವಳು ಮಹಾದೇವಿ. ಚಿಕ್ಕವಳಿರುವಾಗಲೆ ಯೌವನದಲ್ಲಿ ಇರುವ ಅಪ್ರತಿಮ ಸೌಂದರ್ಯ; ಮೇಲೆ ನಿರ್ಮಲ ಶಿಷ್ಟರ ಶಿಕ್ಷಣ. ಶಿವಭಕ್ತಿ ಸಂತಸ್ಥೆಯಾದ ತಾಯಿಯ ನೆರಳು ಯೌವನಾಗಲು ಅವಳ ಮೇಲೆಯೆ. ಚಿಕ್ಕವಳಿರುವಾಗಲೆ, ಮಲ್ಲಿನಾಥನ ಆರಾಧನೆ ಎಂದರೆ ಎಲ್ಲಿಲ್ಲದ ಹುಚ್ಚು. ನುಡಿ ಬಂಗಾರ ದಟ್ಟಿ ಉಟ್ಟ ದಿಟ್ಟ ಹೆಣ್ಣು ಇಟ್ಟ ಹೂಡಲೆ, ಕೋಡಿ ಮರದ ಗುರುಗಳಾದ ಶಿವಲಿಂಗ ಶಿವಾಚಾರ್ಯರ ಬಳಿಯಲ್ಲಿ ವಾಸ್ತ್ರಭ್ಯಾಸ ಆರಂಭವಾಯಿತು. ವೇದ, ಆಗಮ, ಶಾಸ್ತ್ರ ಪುರಾಣಗಳಲ್ಲಿ ವಾರಂವಾರ ಕಳಿಸಲಿಕ್ಕೆ ಬಹುಕಾಲ ಹಿಡಿಯಲಿಲ್ಲ. ಕನ್ನಡ ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯ ಪಡೆದಳು. ಹಂಚಾಚಾರ ಸಭಾಗಳ ಮಾಹಿತಿಯನ್ನು ಪಡೆದಳು. ಒಂದು ಬಾರಿ, ಪಜಾರೂಢನಾಗಿ, ಪೈಠಾಳಿಯಿಂದ ಹಿಂದಿರುಗಿ ಬರುತ್ತಿದ್ದ ಕೌಶಿಕ ರಾಜನ ಕಣ್ಣು ಅಟ್ಟದ ಮೇಲೆ ಕುಳಿತು ಉತ್ಸವವನ್ನು ವೀಕ್ಷಿಸುತ್ತಿದ್ದ ಮಹಾದೇವಿಯ ಮೇಲೆ ನಿಟ್ಟಿತು. ಆ ರೂಪರಾಶಿಗೆ ಮನಸೋತು ತಾನು ಎಳ್ಳಿದ್ದೇನೆ ಎಂಬುದನ್ನು ಸಹಿಸಲಾರದೆ ಕಣ್ಣಿಟ್ಟು ಹೋಗುತ್ತಿದ್ದ. ಗಡನಿಂಬೆಯ ವರ್ಣದ ವೈಭವ್ಯ. ಚೆಲುವಾದ ಮುಖ, ನೀರವಾದ ತಿಪ್ಪಿ ತೀಡಿದ ನಾಸಿಕ, ಕ್ರಾಂತಿಯುಕ್ತವಾದ ಕಣ್ಣುಗಳು ಬಿಂದ ಹಣ್ಣಿನ ಹಾಗಿರುವ ಬಾಯಿ, ಚೆಲುವಾದ ಚಿಂದುಟಿ, ಕಪ್ಪನೆಯ ಕೇಶರಾಶಿ, ಲಲಿಯಂತೆ ಬೆಳೆದ ದೇಹ, ಒಪ್ಪಾದ ಕುಚ, ಬಟ್ಟೆಗಳು ಬೆಳೆದ ರೂಪರಾಶಿಯೇ ಒಂದೆಡೆ ಮೈದಳೆದಂತಿತ್ತು. ಆ ಚೆಲ್ವ ರಾಶಿಗೆ ಮೋಹಗೊಂಡ ಕೌಶಿಕ, ತನ್ನ ರಾಣಿಯನ್ನಾಗಿ ಮಾಡಿಕೊಳ್ಳಲು ಮಹಾದೇವಿಯ ತಂದೆ ತಾಯಿಯರಿಗೆ ಕಿರುಕುಳ ಕೊಟ್ಟ; ಅರಸನಿಗೆ ಯಾವುದು ಅಸಾಧ್ಯ? ಅರಳು ಮರಳಿದರೆ ಊರೊಳಗೆ ಇರುವದಾದರ ಹೇಗೆ? ವೃದ್ಧ ತಂದೆ ತಾಯಿಗಳ ಯೋಗಕ್ಷೇಮ ಕ್ಕೋಸ್ಕರ ಗುರು ಗಳಾದ ಶಿವಲಿಂಗ ಶಿವಾಚಾರ್ಯರ ಸಲಹೆ ಮೇರೆಗೆ ಒಲ್ಲದ ಮನದಿಂದ ಒಪ್ಪಲೇ ಬೇಕಾಯಿತು.

ಅರಮನೆಯನ್ನು ಸೇರಿದ ಮಹಾದೇವಿ ಗುರು, ಲಿಂಗ, ಜಂಗಮರ ಸೇವೆಯನ್ನು ತೊಡಗಿದಳು. ಒಂದು ಸಾರಿ ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿತವಾದ ಬೀಗ, ಶಿವನೇ ಗಂಡನಾಗಬೇಕೆಂದು ಕರೆದ್ದ ಬೇಡ. ಕೌಶಿಕನೊಡನೆ ಒಡಂಬಡಲಿಕ್ಕೆಂದು ಒಂಟಿ ಇಂದಿನ, ಹೊರಟು ಹೋಗಲು ಹುಡೆಂದು. ದೊರೆ ಬಯಸಿದ್ದ ಸಾಮ್ರಾಜ್ಯದ ರಾಜಮಾರ್ಗ ಭಕ್ತರ ಸೇವೆ ವ್ಯಾಪಿಗಳ ಒಡೆಯ ಗುರು ಪ್ರಭುದೇವರ ಮಹಾದೇವಿ, ಕೌಶಿಕ ಸಂಗಡ್ಡಿಂದ ಮರುಮೆಗೆ ಮುಕ್ತ ಮಹಾದೇವಿ ಮಾತಿದ ಮೂರನೆ ಸಲ್ಲಿಗಳ. ಕೌಶಿಕ ಮಂಡ. ಅಗಲೆ ಅಕ್ಕನಾದ ದೊರೆ ಎಲ್ಲರ! "ಕೂಲ್ಲ ಮೊರಡಿಯ ಮುಳ್ಳ ಬಿಟ್ಟು ಗಿರಿ ಕಂತ್ತ ಒಂದಿಸಿತ. ನವಿಲೂ! ದಿಗಂಬರಿಯಾಗಿ ಹೊರಟ ಮಹಾದೇವಿಯನ್ನು ಅಪೇಕ್ಷರು ಅನೇಕ ರೀತಿಯಾಗಿ ಪರಿಹಾಸ್ಯ ಮಾಡಿದರು, ಈಗ್ಗೆ ಎಂಟು ನೂರು ವರ್ಷಗಳ ಕೆಳಗೆ ಸವಾಲಿದ ಎಲ್ಲ ದೂರುಗಳನ್ನೂ ಹೊಂಗಿಕೊಂಡು ದಿಟ್ಟಯಾಗಿ ನಡೆದ ಮಹಾದೇವಿಯ ಆ ಶೈರ್ಯ ಎಂಥವರನ್ನೂ ದಂಗುಪಡಿಸದಿರಲಾರದು. "ಬೆಟ್ಟದ ಮೇಲೆಂದು ವನೆಯ ಮಾಡಿ ಮೃಗಗಳಿಗೆ ಅಂಜದೊಡೆಂಥಮ್ಮ" ಇದು ಮಹಾದೇವಿಯ ಉತ್ತರ. ಹೂರಾರು ಬೈಲುಗಳ ದಾರಿಯನ್ನು ಕ್ರಮಿಸಿ ಕಲ್ಯಾಣಕ್ಕೆ ಆಗಮಿಸಿದಳು. ಬಸವನನ್ನ ಕಾಣಬೇಕೆಂಬ ಬಹುದಿನದ ಬಯಕೆ ಈಡೇರಿತ್ತು. "ಕಿರಿಯಳ್ಳವನ್ನ ಬಿಟ್ಟು ಹಿರಿದಾದ ಸರೋವರಕ್ಕೆ ಬಂದಿತ್ತು ಹಂಸ."

ಬಳ್ಳಿಯಾಗಿ ಬಂದ ಮಹಾದೇವಿಯನ್ನ ಕಂಡು ಶರಣರೆಲ್ಲರು ನಿಬ್ಬೆರಗಾದರು! ಅನುಭವ ಮಂಟಪದ ಪ್ರವೇಶ ಸುಲಭವಾಗಿ ಸಿಗಲಿಲ್ಲ. ಪ್ರಭು ದೇವರಿಗೂ ಮಹಾದೇವಿಗೂ ವಾಗ್ವಾದ ನಡೆಯಿತು. ಅನುಭವ ಮಂಟಪ ಅಧ್ಯಾತ್ಮಿಕ ಪ್ರಪಂಚದಲ್ಲಿ ಎಲ್ಲೂ ಸಿಗಲಾರದ್ದು ಪ್ರಭು ದೇವರ ಎಲ್ಲ ಸವಾಲುಗಳನ್ನೂ ಮಹಾದೇವಿ ಉತ್ತರಿಸಿದಳು. ಅಲ್ಲಮನೆ ಅಕ್ಕನ ವಾದ ಕೇಳಿದೆನೋ! ಎನಬೇಕಾಯಿತು. ಶರಣ ಸಂಕುಲ ಮನದಲ್ಲಿಯೇ ವಂದಿಸಿತು.

ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಮಾಚಿದೇವ ಮುಂತಾದ ಹೊಗಳಿದರು. ಮಹಾದೇವಿಯ ಕಿರಿಯ ವಯಸ್ಸಿದ್ದ ಹಿರಿದಾದ ವೈರಾಗ್ಯವನ್ನು ಕಂಡು ಬಸವಣ್ಣ "ಎನ್ನ ತಾಯಿ, ಮಹಾದೇವಿ" ಎಂದು ಕರೆದ ಒಬ್ಬನ ಮಾತು ಮೆಯ ಶ್ರೇಷ್ಠವನ್ನುಂಡು, ಉಣಬಡಿಸಿ ಶರಣ ಸಂಗದಿಂದ, ಮಹಾದೇವಿ, "ಮಹಾದೇವಿಯಕ್ಕ ಳಾದಳು". ವೀರ ಶೈವ ಧರ್ಮದ ಆಚಾರ ತತ್ವಗಳನ್ನು,ಬಸವಣ್ಣನಿಂದ ತಿಳಿದುಕೊಂಡಳು. ಬಸವ ಅಣ್ಣನೂ ಅದ ಗುರುವೂ ಅದ ಅಣ್ಣನ ಮಹಿಮೆಯಲ್ಲಿ ಅಕ್ಕನಿಗೆ ಯೂ ಕೊರತೆ ಇರಲಿಲ್ಲ. ಗುರುಗಂಬಿಕೆ ನೀಲಾಂಬಿಕೆಯರ ಉಪದೇಶ ತಾಯಿಯ ಸ್ನೇಹ ಮರೆಸಿತ್ತು. ಆದರೆ! ಚೆನ್ನನ್ನ ಕಾಣಬೇಕೆಂಬ ಆಸೆಯಿಂದ ಹೆತ್ತವಳು ಹೋಗಲೇಬೇಕೆಂದು ಹಟ ತೊಟ್ಟಳು. "ಅಲ್ಲಿದ್ದ ಚೆನ್ನನಿಲ್ಲವೆ?" ಎಂದು ಬಸವಣ್ಣ ಕೇಳಿದಾಗ, ಅದಕ್ಕಾಗಿ ಉತ್ತರ ಹೇಳದೆ, 'ನಾನು ಶ್ರೀ ಶೈಲದ ಗಿರಿಗೆ ಹೋಗಲೇಬೇಕು, ಕಡಲೇವನದ ಮಲ್ಲಿನಾಥನನ್ನು ಕಾಣಲೇಬೇಕು." ಅದೇ ಹಟ ಅಕ್ಕನದ. "ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲಿ ತಾರೆನಯ್ಯ" ಎಂದು ಶರಣಸತ್ತೀಮಕ್ಕಳ ವಂದಿಸಿ ಹೊರಟು ಬಿಟ್ಟಳು.

"ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಚೆಲುವನನ್ನು ಅರಸುತ್ತಾ ಹೊಳೆ, ಹಳ್ಳ ಗುಡ್ಡ ಬೆಟ್ಟಗಳನ್ನು ದಾಟಿ ಹಲವಾರು ದಿನಗಳ ಪಯಣದ ನಂತರ ಗಿರಿಗೆ ಬಂದೇ ಬಿಟ್ಟಳು. ವಸಂತನು ಅಡಿ ಇಟ್ಟಿದ್ದರಿಂದ ಬೆಟ್ಟವೆಲ್ಲಾ ಹಸಿರಾಗಿ ಮರ ಗಿಡ ಬಳ್ಳಿ ಚಿಲುವನ್ನು ತುಂಬಿಕೊಂಡು ಅಕ್ಕನನ್ನು ಸ್ವಾಗತಿಸಿದವು. ಸುಳಿವ ಗಾಳಿ, ಹರಿವ ಜಲ, ಕಂಠ ಉಬ್ಬಿ ಹಾಡುವ ಪಕ್ಷಿಗಳಿಂದ, ಚಿಗುರಿದ ಮಾಮರ ಎಲ್ಲವನ್ನೂ ಕೇಳಿದಳು "ನಮ್ಮ ಚೆನ್ನನನ್ನು ಕಂಡಿರೇನೆ? ಎಂದು;" ಮಲ್ಲಿನಾಥನನ್ನು ಕಾಣಬೇಕೆಂಬ ಹೃದಯದ ತಳಮಳ ನಿಮಿಷ ನಿಮಿಷಕ್ಕೂ ಹೆಚ್ಚಿತು. ಹಂಬಲ ಕೋಡಿ ಒಡೆದು ಹೃದಯ ಹೂಸಿ, ಚೆನ್ನಾ! ಮಲ್ಲಿನಾಥ! ಮಲ್ಲಿಕಾರ್ಜುನಾ! ಎಂದು ಗಡಚಿಕ್ಕುವಂತೆ ಕೂಗಿತು. ಅಷ್ಟೇ ಹಂಬಲದಿಂದ ಕಡಲೇ ವನದ ಕಡೆಯಿಂದ ಮತ್ತೊಂದು ದಿವ್ಯ ಧ್ವನಿ "ಮಹಾದೇವಿ!" "ಮಹಾದೇವಿ" ಎಂದು. ಆನಂದ ಬಾಷ್ಪಗಳನ್ನು ಸುರಿಸುತ್ತಾ ಕಡಲೇ ವನದಲ್ಲಿ ನಡೆದಳು. ಧ್ವನಿ ದಿವ್ಯ ಧ್ವನಿಯೊಡನೆ ಒಂದಾಯಿತು. ಉಡ ತಡಿಯ ಮಲ್ಲಿಗೆ ಗಿರಿಯ ಮಲ್ಲಿನಾಥನ ಪಾದವನ್ನು ಸೇರಿತು!

In the Court of Munsiff, Coondapoor

S. — 69/1968

Ramakrishna Mesta — Plaintiff

versus

Naga Mesta and another — Defendants

To

1) Naga Mesta, son of Durgappa Mesta

2) Kogga alias Durgayya Mesta, son of Naga Mesta

Both residing in Nadgimakotu mane of Shiroor village' Coondapoor Tq. (S. K.)

Sirs,

Please take notice that the suit filed by plaintiff against you for recovery of amounts due under pronote executed by you on 26—1—66 for Rs. 400/- stands posted to 14—6—68 for your appearance failing which it will be decided in your absence.

(By order of Court)

Narayana Kamath,
Advocate for plaintiff.

Coondapoor, 26—4—68.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ದ ಮತ್ತು ಅಕ್ಷರಿತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟಿವೆ.
ಗಿ ಸೆನ್ಸ್ ವರ್ಕಾ (ಸೆಂಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮದ್ರಾಸು ಮತ್ತು ಮೈಸೂರು

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 6—4—1966.

ಅಖಿಲ ಭಾರತೀಯ ಪ್ರಾತಿನಿಧ್ಯ ಸಂಸ್ಥೆ

ಕಲ್ಯಾಣದ ಅನುಭವ ಮಂಟಪ

— ಪಂಡಿತರತ್ನ ಶಿವಮೂರ್ತಿ ಶಾಸ್ತ್ರಿಯವರ ಭಾಷಣದ ಆಧಾರದಿಂದ —

ಕನ್ನಡ ಸಾಹಿತ್ಯದಲ್ಲಿ ವಚನ ಶಾಸ್ತ್ರತೆ ಪ್ರ ಗುಣಧರ್ಮ ವಿಶೇಷದಿಂದ ತನ್ನದೆ ಆದ ವೈಶಿಷ್ಟ್ಯ ಹೊಂದಿದೆ ಈ ವಚನ ಸಾಹಿತ್ಯವನ್ನು 'ಕನ್ನಡದ ಉಪನಿಷತ್ತು' 'ಕನ್ನಡದ ಶಿವಾನುಭವಗಳು' ಎಂದು ಕರೆದ ವಿದ್ವಾಂಸರಿದ್ದಾರೆ. ಪದ್ಯದ ಗಾಂಭೀರ್ಯ, ಗದ್ಯದ ಪೊಳ್ಳುತನವೂ ಶಿವಶರಣರ ವಚನಗಳಲ್ಲಿ ಹಾಸು ಹೊಕ್ಕಾಗಿವೆ. ಇವು ವೇದೋಪನಿಷತ್ತುಗಳಂತೆ ಬುದ್ಧಿ ಪ್ರಧಾನವೂ ಕಾವ್ಯ ನಾಟಕಗಳಂತೆ ಹೃದಯ ಪ್ರಧಾನವೂ ಆಗಿವೆ.

ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯರು ಪ್ರಪ್ರಥಮ ವಚನಕಾರರು. (೧೦೪೦) ಇವರಿಗೆ ಮೊದಲೂ ವಚನಗಳ ರಚನೆ ಆಗಿತ್ತು ಎಂಬುದಕ್ಕೆ ಅಂಶ: ಸಾಕ್ಷ್ಯಗಳು ದೇವರ ದಾಸಿಮಯ್ಯನ ವಚನಗಳಲ್ಲಿ ದೊರೆಯುತ್ತವೆ. ಸಿದ್ಧರಾಮದೇವ, ಮೂಗರ ಚೆನ್ನಯ್ಯ, ಏಕಾಂತದ ರಾಮಯ್ಯ ಮೊದಲಾದವರು ಮುಂದಿನ ಕೆಲ ವಚನಕಾರರು.

ಅನುಭವ ಮಂಟಪದಲ್ಲಿ (೧೧೬೩—೧೧೬೬) ವಚನ ಸಾಹಿತ್ಯ ಬೆಳೆದು ತಲೆಯೆತ್ತಿ ನಿಂತಿತು. ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮಡಿವಾಳ ಮಾಚಯ್ಯ, ಘಟ್ಟಿಲಾಂಬಿಕೆ, ಅಕ್ಕ ಮಹಾದೇವಿ ಹಡಪದ ಅಪ್ಪಣ್ಣ, ಅಯ್ದಕ್ಕಿ ಮಾರಯ್ಯ ಮೊದಲಾದವರು ಆ ಕಾಲದ ಪ್ರಸಿದ್ಧ ವಚನಕಾರರು. ಮುಂದೆ ೧೫—೧೬ನೆಯ ಶತಮಾನದಲ್ಲಿ ವಚನಕಾರರ ಪರಂಪರೆಯೊಂದು ತಲೆಯೆತ್ತಿತು. ಹಂಪೆಯ ತೆಕ್ಕಲಕೋಟೆಯ ಸಿದ್ಧಲಿಂಗೇಶ, ಅಮರ ಗುಂಡದ ಮಲ್ಲಿಕಾರ್ಜುನ ಶಂಭು, ಮಟ್ಟಿಯ ಮಲ್ಲಿಕಾರ್ಜುನ, ಕಲ್ಮಠದ ಪ್ರಭುದೇವರು ಮೊದಲಾದವರು ಈ ಕಾಲದವರು. ಅಲ್ಲಿಂದ ಮುಂದೆಯೂ ಕೆಲವು ವಚನಕಾರರು ಆಗಿ ಹೋಗಿದ್ದಾರೆ.

ಇವರೆಲ್ಲರೂ ಮಹಾನುಭಾವಗಳು. ಹಿರಿಮೆಯನ್ನು ಮೆರೆದ ಶರಣರು. ಮರಣವನ್ನು ಗೆದ್ದ ಮಹಂತರು. ಸರ್ವಾಂಗ ಧೀರರು. ಶರಣಳ್ಳಿದ ಕಲಿಗಳು. ನ್ಯಾಯ ನಿಷ್ಠುರರು. ಪ್ರತಿ ಸೃಷ್ಟಿಯನ್ನೇ ನಿರ್ಮಿಸುವ ಸಾಮರ್ಥ್ಯವುಳ್ಳವರು. ಈ ನೆಲದ ಮಣ್ಣಿನ ಕಣಕಣದಲ್ಲಿಯೂ ಅರಿವಿನ ಜ್ಯೋತಿಯನ್ನು ಮೂಡಿಸಿದ ಜ್ಯೋತಿರ್ಲಿಂಗರು. 'ನಾ ಹುಟ್ಟುವ ಮುನ್ನ ನೀನಿದ್ದೆಯೆ' ಎಂದು ಶಿವನನ್ನೇ ಪ್ರಶ್ನಿಸಿದವರು. ಸಕಲ ಜೀವರಿಗೆ ಹಿತವಾಗಲೆಂದು ಮಜ್ಜನಕ್ಕೆರೆದವರು ತಮ್ಮ ಕಣ್ಣಾಗಳಿಂದ ಲೋಕತ್ರೆ ಬೆಳಗುವನ್ನು ಬಿಚ್ಚಿದವರು. ಜಗಕೋಟಿಗೆ ನಡೆಯನ್ನು ನಡೆದುಳಿ, ಘಡಿಯನ್ನು ನುಡಿಯಲು ಕಲಿಸಿದವರು.

ಈ ಪ್ರಸಿದ್ಧ ವಚನಕಾರರಲ್ಲಿ ತನ್ನ ಸಮಕಾಲೀನರಾಗಿದ್ದ ಕೆಲವರ ಕುರಿತು ಬಸವಣ್ಣನವರೇ ತಮ್ಮ ವಚನಗಳಲ್ಲಿ ಹಾಡಿ ಅವರ ಹಿರಿಮೆಯನ್ನು ಸಾರಿದ್ದಾರೆ.

ಯೋಗಿಕುಲ ಚಕ್ರವರ್ತಿ ಶಿವಯೋಗಿ ಸಿದ್ಧರಾಮೇಶ್ವರನನ್ನು ಕುರಿತು —

ಎನಗೆ ನಿಮ್ಮ ಬಲವಲ್ಲದೆ ಮತ್ತಾರ
ಬಲವಯ್ಯ ಕೂಡಲ ಸಂಗಮ ದೇವಾ
ಎನಗೆ ನೀನು, ನಿನ್ನ ಸಿದ್ಧರಾಮನು
ಜೋಡು ಕಣ್ಣು ಕೇಳಾ ||

ಪ್ರಭು ದೇವರನ್ನು ಕುರಿತು—ಶಾಯುವಿಡಿದು ಬಂದಡೆ ನಿಮಗಾ ಭವವಿಲ್ಲ ಕೂಡಲ ಸಂಗಮ ದೇವರಲ್ಲಿ ಪ್ರಭು ದೇವರ ಸುಳುಹು ಅಗಮ್ಯವಾಯಿತ್ತು.

ಚೆನ್ನಬಸವಣ್ಣನನ್ನು ಕುರಿತು—

ಗುರುವಿಂಗೆ ನೀನೇ ಕರ್ತ
ಲಿಂಗಕ್ಕೆ ನೀನೇ ಕರ್ತ,
ಜಂಗಮಕ್ಕೆ ನೀನೇ ಕರ್ತ
ಕೂಡಲ ಸಂಗಮದೇವ ಸಾಕ್ಷಿಯಾಗಿ
ಎನಗೆಯೂ ನೀನೇ ಕರ್ತ.

ಮಹಾದೇವಿಯಕ್ಕನನ್ನು ಕುರಿತು—

ಹೆಂಗುಸೆನಂಗವ ನೋಡಿದರೆ
ಪುರಾತನರು
ಬಾಲತನದಂಗವ ನೋಡಿದರೆ
ಮರಾತನರು
ಬ್ರಹ್ಮವನಾಚರಿಸಿ ತನ್ನ ಮರೆಪ್ಪುದಿದ
ಹೋಡಿದರೆ ಪುರಾತನರು?

ಘಟ್ಟಿ ವಾಳಯ್ಯನನ್ನು ಕುರಿತು—

ಸತ್ತು ಹುಟ್ಟುವನಲ್ಲ, ಸಂದೇಹಿಸೂತ
ಕಿಯಲ್ಲ
ಆಕಾರ ನಿರಾಕಾರನಲ್ಲ ನೋಡಯ್ಯಾ
ಶಂಕೆಯಿಲ್ಲದ ಮಹಾಮಹಿಮ
ಮೋಳಿಗೆಯ ಮಾರಯ್ಯನನ್ನು ಕುರಿತು—
ಮನೆ ನೋಡಾ ಬಡವರು
ಮನ ನೋಡಾ ಧೀರರು
ಸೋಂಕಿನಲ್ಲಿ ಶುಚಿಗಳು
ನಿಮ್ಮ ಶರಣ ಸರ್ವಾಂಗ ಧೀರ
ಮೋಳಿಗೆ ಮಾರಿ ತಂದೆ.

ಮಡಿವಾಳ ಮಾಚಿದೇವನನ್ನು ಕುರಿತು—

ಎನ್ನ ಕಾಯದ ಕತ್ತಲೆಯ
ಕಳೆಯಲು ಅರಿಯೆನು.
ನನ್ನ ಜೀವದ ಘಲವಗೆಲಲರಿಯೆನು
ಎನ್ನ ಭಾವದ ಸೂತಕವ
ಕಳೆಯಲರಿಯೆನು.
ನಾನೆಂತು ಬಲ್ಲೆನಯ್ಯಾ
ನಿಮ್ಮ ಘನ ಮಹಿಮರ ನಿಲವು?
ಕೂಡಲ ಸಂಗಮ ದೇವಾ
ನಿಮ್ಮ ಶರಣ ಮಡಿವಾಳ
ಮಾಚಿ ತಂದೆಯ ಘನವ ನೀವೆ ಬಲ್ಲಿರಿ

ಚೆನ್ನಯ್ಯ, ಡೋಹರ ಕಕ್ಕಯ್ಯ, ಚಿಕ್ಕಯ್ಯನವರನ್ನು ಕುರಿತು—

ಅಪ್ಪಮ ಘಮ್ಮ ಮೂಗರ ಚೆನ್ನಯ್ಯ
ಬೆಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯಾ ||

ಮಹಾ ಮನೆಯಲ್ಲಿ ಸೇರಿದ್ದ ಶಿವಶರಣರು ಜಾತಿ, ಮತ, ಪಂಥ, ಕಾಲ, ದೇಶಗಳನ್ನು ಮೆಟ್ಟಿ ನಿಂದವರು. ವಿಶ್ವಭಕ್ತಿ, ಸಾಮ್ರಾಜ್ಯವನ್ನು ಕಟ್ಟಲು ಜೊತೆಗೂಡಿದ ಧೀರ ಕಲಿಗಳು, ಇಷ್ಟೊಂದು ಜನ ಅನುಭಾವಿಗಳು ಒಂದೇ ಕಾಲದಲ್ಲಿ ಒಂದೆಡೆ ಸೇರಿ ವಿಶ್ವದ ಸರ್ವ ಜನಗಳಿಗೆ ಆಧ್ಯಾತ್ಮದ ತಳಹದಿಯ ಮೇಲೆ ಅನುಭಾವದ ಬಲದಿಂದ ಪರಿಹಾರವನ್ನು ಹುಡುಕಲು ಪ್ರಯತ್ನ ಪಡೆದುದು ವಿಶ್ವದ ಇತಿಹಾಸದಲ್ಲಿ ಇನ್ನೆಲ್ಲಿಯೂ ಕಾಣದ ಅನುಭವ ಮಂಟಪದಲ್ಲಿ ಕಲೆತ ಶಿವಶರಣರು ಬಿರಿಯ ಕನ್ನಾಟಕದವರು ಮತ್ತು ಪ್ರವಲ್ಲ, ಇವರು ಭರತ ಖಂಡದ ಮೂಲೆಮೂಲೆಯಿಂದ ಬಂದು ಒಂದ ಗೂಡಿದರು. ಕಾಶ್ಮೀರದಿಂದ ಮಹದೇವ ಭೂಪಾಲ, ಆತನ ಪತ್ನಿ ರಾಣಿ ಮಹಾದೇವಿ ಮತ್ತು ರಾಜ ಕುಮಾರಿ ಬೊಂತಾದೇವಿ ಲ್ಯಾಣಕ್ಕೆ ಆಗಮಿಸಿದರು. ಗಾಂಧಾರ ದೇಶದಿಂದ (ಈಗಿನ ಅಫಘಾನಿಸ್ತಾನ) ಮಾಚಿಕು ಶಂಕರ ದೇವ ಬಂದನು. ಒರಿಸ್ಸಾ ರಾಜ್ಯದಿಂದ ರುಜ್ಜಾಪಿದೇವ ಮತ್ತು ಕಾಂತರಾಮಯ್ಯ, ಆಂಧ್ರದಿಂದ ತೆಲುಗು ಜೋಮ್ಮಯ್ಯ, ಸೌರಾಷ್ಟ್ರದಿಂದ ಧನಾಂಜಯ ವ್ಯಾಪಾರಿ ಆದಯ್ಯ, ಮಾಳದಿಂದ ಡೋಹರ ಕಕ್ಕಯ್ಯ, ಘೀಲಗಿಯಿಂದ ಬಸುರೂಪಿ ಚಾಡಯ್ಯ, ಅಲುಕೋಟೆಯಿಂದ ಗಣೇಶ ಮಸಣಯ್ಯ, ಬನವಾಸಿಯಿಂದ ಪ್ರಭುದೇವರು, ಉಡತಡಿಯಿಂದ ಮಹಾದೇವಿಯಕ್ಕ, ಹಿಪ್ಪರಗೆಯಿಂದ ಮಡಿವಾಳ ಮಾಚಿದೇವ, ಲಕ್ಕಡಿಯಿಂದ ಅಜಗಣ್ಣ, ವಂಕಾಯರ, ಸೊನ್ನಲಿಗೆಯಿಂದ ಸಿದ್ಧರಾಮ, ಅಮರೇಶ್ವರದಿಂದ ಅಮ್ಮುಗೆ ಮಾರಯ್ಯ ಮತ್ತು ಲಕ್ಕಮ್ಮ, ರಾಮಗೊಂಡೆಯಿಂದ ದಸಯ್ಯ, ವೀರಮ್ಮ ಮುಂತಾದವರು ಕಲ್ಯಾಣಕ್ಕೆ ಆಗಮಿಸಿದರು.

ಬಸವಣ್ಣನವರ ಕಾಲದಲ್ಲಿ ಕಲ್ಯಾಣದ ಅನುಭವ ಮಂಟಪವು ಅಖಿಲ ಭಾರತೀಯ ಪ್ರಾತಿನಿಧಿಕ ಸಂಸ್ಥೆಯಂತಿತ್ತು. ವಚನ ಸಮೂಹವನ್ನು ಕಾಡುತ್ತಿರುವ ನಾನಾರು ಸಮಸ್ಯೆಗಳಿಗೆ ಆಧ್ಯಾತ್ಮಿಕ ಪರಿಹಾರವನ್ನು ಕಂಡು ಹಿಡಿದು ಅದನ್ನು ಮನೆ ಮನೆಗೂ ಮುಟ್ಟಿಸುತ್ತಿದ್ದ ಈ ಸಂಸ್ಥೆಯಾಗಿತ್ತು. ರಾಜಕೀಯ ವ್ಯಕ್ತಿಗಳಿಂದಲೂ ಶಿಷ್ಟ ಭದ್ರ ಹಿತಾಸಕ್ತರಿಂದಲೂ ನಾನಾ ಪ್ರಕಾರದ ಕಷ್ಟಕಾರ್ಪಣ್ಯಗಳೂ ವಿಘ್ನ.—ವಿಡ್ಡಂಗಗಳೂ ಎಡೆಬಾಯಿತಿದ್ದರೂ ಕೆಚ್ಚೆದೆಯಿಂದ ಶಾಶ್ವತಶಾಂತಿಸ್ಥಾಪನೆ ಮಹಾಗಳದಲ್ಲಿ ಅಗ್ರಗಾಮಿಗಳಾದ ವಚನ ಸಾಹಿತ್ಯಕಾರರನ್ನು ಯಾರೂ ಮರೆಯ-ಲಾರರು. ಅವರ-ವಚನಗಳು ಒಂದೊಂದೂ ಅಮೃತದ ಬಿಂದುಗಳು. ಅವರಂದು ವಚನಾಮೃತವನ್ನು ಜನಜನಕ್ಕೆ ಕುಡಿಸಿದ್ದರು. ಜನವ ನವನ್ನು ಸುಧ

ಉಳಿತಾಯವನ್ನೇ ಖರ್ಚೆಂದು ಬಗೆದರೆ . . .

ಏನನ್ನೂ ಉಳಿಸಲಾರದವರಿಗೆ ಇದೊಂದು ಕಿವಿಮಾತು:

ಸಂಬಾವನೆ ನಿಮ್ಮ ಕೈಗೆ ಬಂದಂತೆ ಏನನ್ನೂ ಉಳಿಸದೆ ಖರ್ಚು ಮಾಡುವುದರಲ್ಲೇ ನಿಮಗೆ ತೃಪ್ತಿಯಿರುವುದಾದರೆ ನಿಮ್ಮ ಖರ್ಚಿನ ಪಟ್ಟಿಯಲ್ಲಿ ಒಂದು ಉಳಿತಾಯದ ಖಾತೆಯನ್ನು ಕೂಡಾ ಸೇರಿಸಿರಿ. ಅದೊಂದು ವೆಚ್ಚದ ಬಾಬ್ತೆಂದು ತಿಳಿದು ತೃಪ್ತಿ ಪಡಿರಿ. ನಿಮ್ಮ ಇತರ ಖರ್ಚುಗಳಂತೆ ಈ ಖರ್ಚು ಇಂದು ಮಾತ್ರ ತೃಪ್ತಿ ಕೊಟ್ಟು ಮುಂದೆ ಚಿಂತೆಗೆ ಈಡು ಮಾಡುವುದಿಲ್ಲ ಬದಲಿಗೆ ಅದು ಮುಂದೆ ಕೂಡಲಿರುವ ಸಂತೋಷ ಹಿರಿಪಾಯದು.

ಈ ಹೊಸ ಖರ್ಚಿನಿಂದ ಕೂಡಮಾತ್ರ ನಿಮ್ಮ ಉಳಿತಾಯ ಖಾತೆಯಲ್ಲೇ ಜಮೆಯಾಗಿ ಅದು ಕ್ರಮೇಣ ಬೆಳೆದು ಸಂಪತ್ತಾಗಿ ಮಾರ್ಪಡುವುದು. ಅತ್ಯಾಪತ್ತಿನ ದಿನಗಳಲ್ಲಿ ಅದು ನಿಮಗೊಂದು ಅಮೂಲ್ಯ ನಿಧಿಯಾಗಿ ಕಾಣುವುದು. ಉಳಿತಾಯ ಎಂಬ ಈ ಖರ್ಚಿನ ಸಾಲಿ ಒಮ್ಮೆ ನಿಮ್ಮ ಅನುಭವಕ್ಕೆ ಬಂದರೆ ನಿಮ್ಮ ಅನಾವಶ್ಯಕ ಖರ್ಚುಗಳೆಲ್ಲವೂ ಉಳಿತಾಯವಾಗಿ ರೂಪಾಂತರಗೊಳ್ಳುವುವು. ಪರಿಣಾಮ? ನಿಮ್ಮ ಮುಂದಿನ ಬದುಕಿನ ಸುಖ ರೂಪಗೊಳ್ಳುವುದು.

ಉಳಿತಾಯ ಖಾತೆಯಲ್ಲಿ ಹಣ ಖರ್ಚು ಮಾಡಲು ಇಷ್ಟರಲ್ಲೇ ನೀವು ನಿರ್ಧರಿಸಿದ್ದರೆ ಸಿಂಡಿಕೇಟ್ ಬ್ಯಾಂಕಿನಲ್ಲಿರುವ ಯಾವುದಾದರೊಂದು ಖಾತೆಯಲ್ಲಿ, ನಿಮ್ಮ ಇತರ ಖರ್ಚಿನ ಸಂದರ್ಭಗಳಲ್ಲಿ ಹಣ ಉಳಿಸಿರಿ.

ವ್ಯಯದ ಬಣ್ಣ ತಳೆದ ಉಳಿತಾಯ
ನೀಡುವುದು ಸುಖ ಬದುಕಿಗೊಂದು ಅಡಿಪಾಯ

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮೀಪ್ಪು

ಶಾಖೆಗಳು: 231

ಟಿ. ಎ. ಪೈ, ಚೇರ್ಮನ್ ಮೇನೇ

ನೀವೂ ತಿಳಿಯಿರಿ

ಅಗ್ನಿ ಸ್ಪರ್ಶ ನಿರೋಧ

ನಮ್ಮ ದೇಶದಲ್ಲಿ, ಪ್ರತಿವರ್ಷ, ಸರಿಸುಮಾರು 31 ಕೋಟಿ ರೂಪಾಯಿಗಳ ಮೌಲ್ಯ ಸರಕು ಮತ್ತು ಮನುಷ್ಯಜೀವಗಳು ಅಗ್ನಿಗೆ ಆಹುತಿಯಾಗುತ್ತಿವೆ. ಸುಮಾರು 1500 ಜನ ಮೃತಪಟ್ಟಿದ್ದಾರೆ. 10,000 ಪಶು ಪ್ರಾಣಿಗಳ ಭಸ್ಮವಾಗುತ್ತವೆ. ಲೆಕ್ಕಕ್ಕೆ ಸಿಗದ ನಷ್ಟ ಇನ್ನೂ ಹೆಚ್ಚಿರಬಹುದು.

ಜೀವನಾವಶ್ಯಕಗಳಲ್ಲಿ ಬೆಂಕಿಗೆ ಅತಿ ಮುಖ್ಯ ಸ್ಥಾನವಿದೆ. ಅದಾಗ್ಯೂ, ಅದು ವಿಧ್ವಂಸಕಾರಿ. ಚೂರುಪಾರಿಯಿಂದ ಆರಂಭವಾಗಿ, ಕ್ಷಣ ಮಾತ್ರದಲ್ಲಿ ಬೃಹತ್ ಪ್ರಮಾಣವನ್ನು ತಳೆದು, ತನಗೆ ಸಿಕ್ಕಿದ್ದೆಲ್ಲವನ್ನೂ ಕಬಳಿಸುವ ಆರತ್ತು ಬೆಂಕಿಯನ್ನು ಬಟ್ಟೆರೆ ಮತ್ತಾಪುದು ನಮಗೆ ಗೊತ್ತಿಲ್ಲ.

ಕೈಗಾರಿಕೆಗಳು ಹರಡಿದಂತೆ, ಕಾರ್ಖಾನೆಗಳು ಮತ್ತು ಕಾಮಗಾರಿ ಕೇಂದ್ರಗಳ ಸುತ್ತಮುತ್ತ ಅನಾಹುತಗಳು ಹೆಚ್ಚಿವೆ. ಅಗ್ನಿ ಶಮನ ಕಾರ್ಯವೂ ಒಂದು ಕ್ಲಿಷ್ಟತರ ಸಮಸ್ಯೆಯೇ ಆಗಿದೆ. ಇಂದು ಅಗ್ನಿ ಶಮನ ಕಾರ್ಯಕ್ಕೆ ಅತಿ ಹೆಚ್ಚಿನ ಧೈರ್ಯ ಸಾಹಸ ಕೌಶಲ್ಯವಷ್ಟೇ ಅಲ್ಲದೆ, ಭೌತಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೌತವಸ್ತು ಚಲನ ಶಾಸ್ತ್ರಗಳ ಸರಿಜ್ಞಾನವೂ ಬೇಕಾಗುತ್ತದೆ. ಅಗ್ನಿಶಮನ, ಬೆಂಕಿಯನ್ನು ಆರಿಸುವುದು, ಅಗ್ನಿ ಸಂಬಂಧವಾದ ಯಂತ್ರಶಿಲ್ಪ, ಅಗ್ನಿಸ್ಪರ್ಶಕ್ಕೊಳಗಾದವರನ್ನು ಪಾರುಗೊಳಿಸುವ ತಂತ್ರ, ಆಧುನಿಕ ಅಗ್ನಿಶಮನ ಯಂತ್ರೋಪಕರಣಗಳನ್ನು ಬಳಸುವ ವಿಧಾನ-ಈ ಎಲ್ಲ ವಿಷಯಗಳಲ್ಲಿಯೂ ಇಂದು ಅಗ್ನಿ ಶಮನದಳದವರಿಗೆ ತರಬೇತಿ ಅಗತ್ಯವಿದೆ. ನಾಗಪುರದಲ್ಲಿರುವ, ರಾಷ್ಟ್ರೀಯ ಅಗ್ನಿಶಮನ ಸೇವಾ ಕಾಲೇಜು, ಈ ಕೆಲಸವನ್ನು ನಿರ್ವಹಿಸುತ್ತಿದೆ. ಕೈಗಾರಿಕಾ ಕೇಂದ್ರಗಳು, ವಿಮಾನ ಸಂಚಾರ ವ್ಯವಸ್ಥೆ ವಿಭಾಗ ಮುಂತಾದ ಕಡೆಗಳಲ್ಲಿ ಅಗತ್ಯವಾದ ಅಗ್ನಿಶಾಮಕ ಸಿಬ್ಬಂದಿಗೆ ಈ ಕಾಲೇಜು ತರಗತಿಗಳನ್ನು ನಡೆಸುವುದು.

ಅಗ್ನಿಶಾಮಕ ದಳದ ಎಂಜಿನಿಯರುಗಳಿಗೆ ತರಬೇತಿ ನೀಡುವ ಕೇಂದ್ರವೊಂದನ್ನು ಸ್ಥಾಪಿಸುವ ಉದ್ದೇಶವೂ ಇದೆ.

ಶ್ರೀಸಾಮಾನ್ಯರಿಗೆ ತಿಳುವಳಿಕೆ

ಬಹುತೇಕ ಮನೆಗಳಲ್ಲಿ ಬೆಂಕಿಯ ಹಾವಳಿಗೆ ತುತ್ತಾಗುವವನೇ ಶ್ರೀಸಾಮಾನ್ಯ ವಿದ್ಯುಚ್ಛಕ್ತಿ ಸರ್ಕ್ಯೂಟ್‌ಗಳ ಒವರ್‌ಲೋಡ್, ಬೆಂಕಿಕಡ್ಡಿಗಳೊಂದಿಗೆ ಮಕ್ಕಳು ಆಟವಾಡುವುದು, ಹೊತ್ತಿದ ಒಲೆ, ಸ್ಟೌವ್‌ಮೇಲೆ ಆರಿಸದೆ ಹಾಗೆಯೇ ಬಿಡುವುದು, ಸಿಗರೇಟಿನ ತುಂಡುಗಳನ್ನು ಆರಿಸದೆ, ಉಪೇಕ್ಷೆಯಿಂದ ಬಿಸಾಡುವುದು, ಹೊತ್ತಿದ ಸಿಗರೇಟನ್ನು ಹಿಡಿದುಕೊಂಡು ನಿದ್ರೆಹೋಗುವುದು ಇತ್ಯಾದಿಗಳಿಂದ ಅಗ್ನಿ ಸ್ಪರ್ಶ ಸಂಭವಿಸುವುದು.

ಜನರು ಅಗ್ನಿ ಸ್ಪರ್ಶ ನಿರೋಧ ಮತ್ತು ಅಗ್ನಿ ಶಮನ ಕಾರ್ಯದಲ್ಲಿ ಮೂಲಭೂತ ತಿಳಿವಳಿಕೆಗಳನ್ನು ಪಡೆದಿದ್ದರೆ, ಸಾಧ್ಯತೆಯ ಪ್ರಮಾಣದಷ್ಟು ವಸ್ತುಗಳನ್ನು ಮತ್ತು ಜೀವಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಪ್ರತಿವರ್ಷವೂ ಬೆಂಕಿಯ ಅನಾಹುತದ ಕಡೆಗೆ ಗಮನವನ್ನು ಸೆಳೆಯುವುದು ಮತ್ತು ಅಗ್ನಿಶಮನ ಕಾರ್ಯದಲ್ಲಿ ಅವರಿಗೆ ತಿಳುವಳಿಕೆ ಕೊಡುವುದು, ಅಗ್ನಿ ಶಮನ ಸಪ್ತಾಹವನ್ನು ಏ

ವಾಗಿಸಿದ್ದರು; ಶಾಂತ ವಿಧಾನದ ಕ್ರಾಂತಿ ಪುರುಷರಂಗಿ ಜನಕಲ್ಯಾಣವನ್ನು ಸಾಧಿಸಿದ್ದರು.

ಇಂದು ವಚನ ಸಾಹಿತ್ಯದಂತಹ ಸರಳ ಉದ್ಬೋಧಕ ಸಾಹಿತ್ಯದ ಸ್ವಾಧ್ಯಾಯ ರಭಸ ದಿಂದಾಗ ಬೇಕಾಗಿದೆ. ಜನ ಮನದಲ್ಲಿ ಮನೆಮಾಡಿರುವ ಅಶಾಂತಿ, ಅಸಮಾಧಾನ, ಅತೃಪ್ತಿ, ಅಭದ್ರತೆಗಳ ವಾತಾವರಣವನ್ನು ದೂರಮಾಡಲು ಭೌದ್ಧಿಕ ಉನ್ನತಿಗಿಂತ ಆಧ್ಯಾತ್ಮಿಕ ಉನ್ನತಿಯೇ ಸಿದ್ಧಿಪ್ರದಾಯಕವೆಂಬ ಚಿರ ಸತ್ಯವನ್ನು ಮನಗಾಣಿಸಿ ಏಕ ಜಗತ್ತಿನ ಕಲ್ಪನೆಗೆ ಮೂರ್ತರೂಪ ಕೊಡುವ ಅಗತ್ಯವಿದೆ. ವಿಶ್ವ ಕಲ್ಯಾಣ, ವಿಶ್ವ ಸತ್ಯ, ಸಮಾನತೆ, ಸಹೋದರತೆ, ಸ್ವತಂತ್ರತೆಗಳ ಮಹತ್ವವನ್ನು ಎಂಟುಫಾರು ವರ್ಷಗಳಿಗೆ ಮೊದಲೇ ಈ ಶಿವಶರಣರು ಗುರುತಿಸಿದ್ದರೆಂಬುದು ಗಮನಾರ್ಹವೇ ಸರಿ.

ವಿಜ್ಞಾನದ ಮುಖಡೆ

ನೀರಿನ ರಕ್ಷಣೆಗೆ ಗರಸಿನ ಹೊಳಿಕೆ

[illegible]

ಪೈಲ್ 14 [illegible] ಅಚರಿಸುವುದರ ಉದ್ದೇಶವಾಗಿದೆ.

1911 [illegible] ಅಗ್ನಿಶಮನ ದಿನವನ್ನು ಆಚರಿಸಲಾಗುತ್ತಿದೆ. ತಂತ್ರಣ, ಅದೇ ದಿನ ಮುಂಬಾಯಿ ಬಂದರಿನಲ್ಲಿ ದೊಡ್ಡ ಪ್ರಮಾಣದ ಅಗ್ನಿಸ್ಪರ್ಶವಾಯಿತು.

ಅಗ್ನಿಶಮನ ಕಾರ್ಯ ಸಾಗರಿಕ ರಕ್ಷಣೆಯಲ್ಲಿ ಸಮಗ್ರವೆನಿಸಿಕೊಳ್ಳುತ್ತದೆ. ಆಧುನಿಕ ಸಮಾಜದ ಸವಾಲನ್ನು ಎದುರಿಸುವಲ್ಲಿ, ಅಗ್ನಿಶಮನ ಸೇವಾದಳ ಮತ್ತು ಸಾಗರಿಕ ರಕ್ಷಣಾ ದಳಗಳು ನಿಕಟ ಸಹಕಾರದಿಂದ ಕೆಲಸ ಮಾಡಬೇಕಾಗುತ್ತದೆ.

ಅಗ್ನಿಶಾಮಕ ವಿಭಾಗದ ಯಂತ್ರೋಪಕರಣಗಳನ್ನು ಅಧುನಿಕಗೊಳಿಸುವುದು ಇದೆಲ್ಲ ಅಗ್ನಿಶಾಮಕ ಕಾರ್ಯಕ್ಕೆ ಅದಲ್ಲಿ ಪ್ರಾಮುಖ್ಯವಾಗುತ್ತದೆ. ಆದರೆ ಅಗ್ನಿ ಸ್ಪರ್ಶವನ್ನು ನಿರೋಧಿಸುವುದು ಹೇಗೆ? ಈ ಪ್ರಯತ್ನ ದೇಶದ ಪ್ರತಿಯೊಬ್ಬ ಪ್ರಜೆಯ ಕೈಯಲ್ಲಿದೆ.

ಶ ನೀರನ್ನು ನೆಲದಿಂದ ಪಂಪ್‌ಮಾಡುತ್ತಿದ್ದಾರೆ. ಇದು ಹೀಗೆ ಮುಂದೆ ಮುಂದರೆ ಅತಿ ಬೆಲೆಬಾಳುವ ನೀರಾವರಿ ಉಪಕರಣಗಳು ನಿಷ್ಪ್ರಯೋಜಕವಾಗುವುವು.

ಅದೇರಿತದ ವಿಜ್ಞಾನಿಗಳು ಈ ಸಮಸ್ಯೆಗೆ ಒಂದು ಪರಿಹಾರವನ್ನು— ಮಣ್ಣಿನ ಪರಿಸರದ ವಿಶ್ರಣವನ್ನು (ಗರಸು) ಹೊಡೆಸುವ ವಿಧಾನವನ್ನು— ಕಂಡುಹಿಡಿದಿದ್ದಾರೆ.

ಮರಳು ಅಥವ ಗರಸಿನ ಪದರವು ನೀರನ್ನು ಹೆಪ್ಪಿಗೊಡಿಸಿ, ಹೆಚ್ಚಿನಂಶ ಆವಿಯಾಗಿ ಹೋಗದಂತೆ ತಡೆದು ನೀರನ್ನು ನೆಲದಡಿಯ ವಾಟರ್ ಟೇಬಲಿಗೆ ಇಳಿಸಿ ನ್ನುದು ಎಂದು ಕೃಷಿ ಸಂಶೋಧನ ತಜ್ಞರು ವರದಿ ಮಾಡಿದ್ದಾರೆ. ಇಂಥ ಪದರಗಳ ಮೂಲಕ ಎಕರೆಗೆ 100ರಿಂದ 12 ಅಂಗ ಲಗಳಷ್ಟು ಹೆಚ್ಚು ಮಳೆ ನೀರನ್ನು ನೆಲದ ವಾಟರ್ ಟೇಬಲ್‌ನಲ್ಲಿ ಸಂಗ್ರಹಿಸಲು ಸಾಧ್ಯವಾಗುವುದು ಎಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ.

ಆದರೂ ಸಮಸ್ಯೆಗಳು ಹಲವಿವೆ. ಇಂಥ ಮಿಶ್ರಣದ ಹೊಳಿಕೆಯ ಪ್ರದೇಶ ಕಳೆಗಳಿಂದ ವಿಮುಕ್ತವಾಗಿರಬೇಕು. ಏಕೆಂದರೆ ಅವು ನೀರನ್ನು ಹೀರಿ ಬಿಡುತ್ತವೆ. ಕಳೆ ನಾಶಕಗಳನ್ನು ಉಪಯೋಗಿಸುವುದಾದರೆ ನೆಲದ ನೀರನ್ನು ಕಲುಷಿತಗೊಳಿಸದಂಥ ಸಾಧನಗಳನ್ನು ಬಳಸಬೇಕು.

ಮೆಚ್ಚ ಮತ್ತೊಂದು ಮುಖ್ಯ ಅಂಶ. ಮರಳು ಮಿಶ್ರಿತ ಮಣ್ಣಿನಿಂದ ಗರಸನ್ನು ಹೊರ ತೆಗೆದು ಅದನ್ನು ಮೇಲ್ಮೈ ಮೇಲೆ ಹರಡ ಮಂಥ ಯಂತ್ರವೊಂದನ್ನು ಅರಿಜೋನಾದ ಟುಕ್ಸನ್‌ನಲ್ಲಿ ಅರಿಜೋನಾ ವಿಶ್ವವಿದ್ಯಾನಿಲಯದವರು ಅಭಿವೃದ್ಧಿಗೊಳಿಸುತ್ತಿದ್ದಾರೆ. ಇದರ ಕಾರ್ಯ ನಿರ್ವಹಣೆಯು ಮೆಚ್ಚ ಎಕರೆಗೆ 100ರಿಂದ 20 ಡಾಲರ್‌ಗಳಷ್ಟಾಗಬಹುದೆಂದು ಅಂದಾಜು.

ಗೀತೆಯ ಕೈಗನ್ನಡಿ

ಸೋಗೆರೆ ಚಿದಂಬರಯ್ಯನವರ ಗೀತೆಯ ಸಮೂಲ ಭಾಷಾಂತರ

ಮನೆಮನಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಬೆಲೆ ರೂ. 1 00

ಬಹುಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ಸಮಗ್ರಾಯ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಿನ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಕೆಟ್ಟ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ತಮ್ಮ ಭಾವನೆ, ಚಿಂತನೆಗಳಿಗಿಂಥಾ ತಮ್ಮ ವಾಗ್ವೈಭವನ್ನು ಕಡಿಮೆ ಮಾಡದ ವನಾರೂ ಉತ್ತಮ ಲೇಖಕ ಯೂ ಭಾಷಣಕಾರನಾಗಲಾರ.

○ ○ ○

ತನ್ನೊಳಗಿನ ಬೆಳಕನ್ನು ಕಂಡವರು ದೇವಸ್ಥಾನದ ಬೆಳಕಿಗೆ ಕೈ ಮುಗಿಯಲು ಬಿಡುತ್ತಾರೆ.

○ ○ ○ ○

ಬಿಟ್ಟು ತೊಲಗುವಾಗ ಬಿಡಲು ಏನಗೆ ನಿಟ್ಟುಸಿರಿಲ್ಲ. ಬಿಡಲು ಮನಗುಳ್ಳಗೆ ಇದೆ ಎಂಬಂತೆ ಈ ಜಗತ್ತಿನಲ್ಲಿ ಜೀವಿಸುವುದೇ ಸಾರ್ಥಕ ಜೀವನ.

○ ○ ○ ○

ಕಾವ ನೆಡಳು ಜೀವನದ ಸೇವಕರಾಗಿರದೆ ಜೀವನವು ಕಾಮನೆಗಳ ಸೇವಕನಂತಿದ್ದರೆ ಆ ಜೀವ ನಿರರ್ಥಕ.

○ ○ ○ ○

ಹಣವಿಲ್ಲದವ ಸಂಸತ್ತಿಲ್ಲದವ ಬಡವನಲ. ಸಹನೆ ಇಲ್ಲದವ, ಪ್ರೇಮ ಇಲ್ಲದವ ಕರುಣೆ ಇಲ್ಲದವ ಬಡ ಬಡವ.

○ ○ ○

ಪ್ರೀತಿಯ ಅನ್ನಡಕ ಧರಿಸಿ ಬಡತನದ ರಕ್ಷಣೆ ಕವಚ ತೊಟ್ಟಿರುವವನ ಪ್ರಯಾಣ ನಿರರ್ಥಕವಾಗದು.

○ ○ ○

ವ್ಯಕ್ತಿ - ರಾಷ್ಟ್ರ

ಲೇಖಕರು : ಬಿ. ನರಸಿಂಗ ರಾವ್, ಕಾಸಂಗೋಡು.

ವ್ಯಕ್ತಿಗಳಿಗಿದ್ದಂತೆ ರಾಷ್ಟ್ರಕ್ಕೂ ಒಳ್ಳೆಯ ಹಾಗೂ ಕೆಟ್ಟ 'ಕಾಲ'ವೆಂಬುದಿದೆ. ಕಷ್ಟ ಒಂದಾಗಿ ಕೆಂಗಾಲಾಗುವುದು, ಸುಖದಲ್ಲಿರುವಾಗ ಮೈ ಮರೆತು ಇರುವುದು; ಇವೆರಡೂ ವಿಶೇಷವೆನಿಸಿವೆ. ವ್ಯಕ್ತಿಯ ಬಾಳಿನಲ್ಲೂ ಎಂದಂತೆ ರಾಷ್ಟ್ರದ ಜೀವನದಲ್ಲಿ ಏರಿಳಿತವೆಂಬುದಿದೆ. ರಾಷ್ಟ್ರವೆಂದರೆ ಕೊನೆಗೆ, ವ್ಯಕ್ತಿಗಳಿಂದಲೇ ತುಂಬಿರುವುದಷ್ಟೆ?

ಆಕಾಶದ ಬೆಲೆಯೇನಿದೆ, ಮೈನಂದಿನ ಬಳಕೆಯ ವಸ್ತುಗಳಿಗೂ 'ಬೆಂಕಿ'ಯಂತೆ ಬೆಲೆ. ಮಾನವನಿಗೆ ಇಂದ ಆರ್ಥಿಕ ಅಡಚಣೆಯೇನೋ ವಿಪರೀತವೆ. ಆರ್ಥಿಕ ಸ್ಥಿತಿಯು ಸುಧಾರಿಸುವುದೂ ಎಲ್ಲರ ಬಾಳಿಗೆ. ಆದರೆ ಅವೆಲ್ಲಕ್ಕಿಂತಲೂ ಸಮಿತಿಗೆ 'ಆತ್ಮ ವಿಶ್ವಾಸ'ವನ್ನು, ನಮ್ಮಲ್ಲಿ ಬೆಳೆಸುಗೊಡಬೇಕಾದ ಅಗತ್ಯವಿದೆ. ನಮ್ಮ ಸುತ್ತಲೂ ನಮಗೆ ಭಯ ಭೀತಿಗಳನ್ನು ತಂದೊಡ್ಡುವ ಪರಿಸ್ಥಿತಿಗಳು ಸದಾ ಇದ್ದೇ ಇವೆ ಎಂಬುದು ಸರ್ವ ವಿಧಿತ. ಕೆಲವೊಮ್ಮೆ ನಮ್ಮ ಜೀವನದಲ್ಲಿ ಒಂದು ಘಟ್ಟಕ್ಕೆ ಬಲಿಬಿದ್ದೇವೆ. "ಎತ್ತ ಕಡೆಗೆ ನಾವು ಸಾಗುವುದು, ಎತ್ತ ಕಡೆ ನಮಗೆ ಸಾಗಬೇಕು?" ಎಂಬ ಪ್ರಶ್ನೆಯೇಳುತ್ತವೆ. ಇದು ಪ್ರತಿಯೋರ್ವನಿಗೂ ಉಂಟಾಗದ ಅನುಭವ.

ಕೋಮು ಸಂಸ್ಕೃತಿಯ ಬಗ್ಗೆ ಕೇಳಿರಬೇಕು. ಅದರ ಅಧಃಪತನವಾಗುವಾಗ "ರೋಮ್ ಸಾಮ್ರಾಜ್ಯದರೆ ಲೋಕ ನಾಶವಾದಂತೆಯೆ" ಎಂದು ಅಗಸ್ಟಿನ್ ಚರ್ಚ್ ದುಃಖದಿಂದ ನುಡಿದಿದ್ದ. ಆದರೆ ಅತನು ನುಡಿದಂತೆ, ನಡೆಯಲಿಲ್ಲ. ಏಕೆ? ಮಾನವನ ಒಂದು ಸಂಸ್ಕೃತಿಯು ಅಧಃಪತನವಾಗ, ಮತ್ತೊಂದು ಜನಿಸಿತು.

ಇಂದು ವಿಶ್ವದ ಘಟನೆಗಳನ್ನು ನೋಡುವಾಗ ವಿಶ್ವವು ಎಂದು ನಾಶವಾದೀತೆಂಬ ಹೆದರಿಕೆ ಆಗ ಬಹುದು ಇಷ್ಟೇ ಇವೆ. ಭಾರತದ ವಿಷಯವನ್ನೆ ಎತ್ತುವ. ನಮ್ಮ ಸಮಸ್ಯೆಗಳು ಅಂತರಿಕವೂ ಇವೆ. ಬಾಹ್ಯಾಕ್ರಮಣದಿಂದಲೂ ಉದ್ಭವಿಸಿವೆ. ಬಾಹ್ಯಾಕ್ರಮಣಕ್ಕಿಂತಲೂ ಅಂತರಿಕವಾಗಿ ಉದ್ಭವಿಸಿದ ಸಮಸ್ಯೆಗಳನ್ನು ದೆಸೆಯಲ್ಲಿ ನಮಗೆ ಸುಲಭ ಸಾಧ್ಯ. ಇಂದು ವಿದ್ಯಾರ್ಥಿಗಳು ವಿದ್ಯೆಯಲ್ಲದವರಿಗಿಂತಲೂ ಶುದ್ಧವಾಗಿ ವರ್ತಿಸುವುದು ಸಾಮಾನ್ಯ ಚಿತ್ರ. ಎಲ್ಲಿ ನೋಡಿದರೂ ಗಲಭೆ, ಅಕ್ರಮಣ, ಭೌರಾಮೋ, ಸಂಪ, ಮನುಷ್ಯರ ಇತ್ಯಾದಿಗಳದ್ದೇ ವೈಪರೀತ್ಯ. ಬೇಕಿದ್ದಕ್ಕೂ, ಬೇಡದ್ದಕ್ಕೂ ಎಲ್ಲಾ ಮುಷ್ಕರ, ಸತ್ಯಾಗ್ರಹ.

ಇದನ್ನೆಲ್ಲಾ ನೋಡುವಾಗ "ಭಾರತವು ಎತ್ತ ಸಾಗುತ್ತಿದೆ?" ಎಂಬ ಪ್ರಶ್ನೆ ವಿವೇಕವಿದ್ದವನಿಗೆ ಏಳದಿರದು. ಭಾರತೀಯರು, ಸಹಿಷ್ಣುತೆಯಲ್ಲಿ ಎಲ್ಲರನ್ನೂ ಮೀರಿಸಿದವರೆನ್ನುವರು, ಅದೇಕೆ ಹೀಗೆ ಅಸಹಿಷ್ಣುಗಳಾದರು? ಧರ್ಮದ ಅವಶ್ಯಕತೆಯನ್ನು ಹೆಚ್ಚಾಗಿ, ಭಾತಿಕವಾದಿಯೆ ನಮ್ಮ ಬಲವು ಹೆಚ್ಚಿದೆಂಬುದೇ ತಿಳಿಯಬರುವ ಅಂತೆ ಇಂದು ಆದರ್ಶ ಮೌಲ್ಯಗಳನ್ನು ಕೇಳುವವರೇ ಇಲ್ಲ. ಎಲ್ಲರಿಗೂ ತಾನು ತನ್ನದು ಎಂಬುದೇ ಏಕೋದ್ದೇಶ; ದುರುದ್ದೇಶ. ತನ್ನ ಉದ್ದೇಶವನ್ನು ಸಾಧಿಸಲು ಯಾವ ದಸ್ತಾರ್ಯಕ್ಕೂ ಹೇಸದಷ್ಟಾಗಿದ್ದರೆ ನಮ್ಮ ಜನತೆ ಯೂರಿಗೂ ಹೆದರದವರು ನಾವು, ಅನ್ನುವಷ್ಟಾಗಿದ್ದಾರೆ! ಕೊನೆಗೆ ದೇವರಿಗೂ ಹೆದರರು ಎಂದಮೇಲೆ ಮತ್ತೆ ಇವರನ್ನು ಯಾರು ತಾನೆ ತಡೆಯ ಬಲ್ಲರು? ಹಿಂದೆ ದೇವರ ಭಯವೇ ಇದ್ದಾಗದ ಆರಂಭ ಎಂದಿದ್ದರೆ ಇಂದೇನೋ "ಅತನ" ಭಯವಿಲ್ಲದೆ ಎಲ್ಲರೂ ಅಜ್ಞಾನಕ್ಕೆಳಸುತ್ತಿದ್ದಾರೆ.

ಇದಕ್ಕೆಲ್ಲಾ ಮದ್ದಾಗುವಲ್ಲದಿಲ್ಲ. ನಮ್ಮ ವಿದ್ಯಾಕ್ರಮದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕು. ನಾವು ಡಾಕ್ಟರರನ್ನು, ಇಂಜಿನೀಯರ್‌ಗಳನ್ನು, ವಿಜ್ಞಾನಿಗಳನ್ನು ತಯಾರಿಸುತ್ತಿದ್ದರೆ ಅವರನ್ನು 'ಉತ್ತಮ' ಡಾಕ್ಟರರಾಗಿ, 'ಉತ್ತಮ' ಇಂಜೀನಿಯರ್‌ಗಳಾಗಿ ತಯಾರಿಸಲು ಸಾಧ್ಯವಿರುವ ವಿದ್ಯೆ ಇಂದು ದೊರೆಯ ಬೇಕಾಗಿದೆ. ಪ್ರತ್ಯೇಕತಾವಾದ ಕೆಲವು ಸಂಸ್ಥೆಗಳಲ್ಲಿ ಅವರಿಗೆ ನೀಡಬೇಕು. ಮಾನವನು ಮಾನವನಾಗಿ ಬಾಳಲು ಕೇವಲ 'ಭೌತಿಕವಾದ' ಜ್ಞಾನ ಮಾತ್ರ ಸಾಕೆ! Man cannot live by bread alone ಎಂಬ ಮಾತಿದೆ. ಅಲ್ಪ ಸ್ವಲ್ಪ ಧಾರ್ಮಿಕ ಬೋಧನೆ, ಹಳೆಯ ಭಾರತೀಯ ಸಂಸ್ಕೃತಿಯ ಸುಳೆಯವಲ್ಲದ, ಸದಾ ಹೊಸದಾಗಿಯೇ ಬಾಣ ವಿಜ್ಞಾನದಂದದ್ದು ಪ್ರಹಸನವನ್ನು ವಿದ್ಯಾರ್ಥಿ ಮಾಡುವಂತಾಗಲಿ. ಅಂತೆಯೇ ಭಾರತದ ಸಂಸ್ಕೃತಿಯ ಉಳ್ಳವನು, ದೇಶದ ಅಂತರಿಕ ಸಮಸ್ಯೆಗಳಿಗೆ ಪರಿಹಾರ. ಏಕಂದರೆ ಇಂದಿನ ವಿದ್ಯಾರ್ಥಿಯೇ ನಾಳಿನ ನಾಗರಿಕನಷ್ಟೆ?

ನ್ಯಾಯಾನ್ಯಾಯಗಳ ಭೇದ, ಆತ್ಮ ವಿಶ್ವಾಸ, ಗುರುಹಿರಿಯರಲ್ಲಿಭಕ್ತಿ, ಗುಡಿಸೇರಿಸಬೇಕೆಂಬ ಹಂಬಲ, ಕಷ್ಟದಲ್ಲೂ ಸುಖದಲ್ಲೂ ಚಂಚಲ ಚಿತ್ತನಾಗದೆ, ಪರಮಾತ್ಮ

ಮಲ್ಲಿಗೆ

ಕಾಳ ರಾತ್ರಿಮಿಗೆ,
ಕೋಮಲಾಂಗಿಯ ಮೇಲೆ ಸೂಳು ನಗೆ
ಬೀರಿ, ಆಗದಿಂದ ಧರಣಿಗೆ,
ದಿಂಕಿಯುವ ನಕ್ಷತ್ರವ ಕಂಡು ಎದುರಿಗೆ,
ಕೈ ಮಾಡಿ ತೋರಿಸಿದಳು ಪೊಟ್ಟುಗೆ
ತಕ್ಷಣ ಹೊಗೆ ಕಂಡು ನಡೆದಾಗ ಅಲ್ಲಿಗೆ
ಕಾಲ ಕೆಳಗೆ ಮಲ್ಲಿಗೆ ನೊಗ್ಗಿ
ಗೋಮೇದಂತೆ ನಗುತಿತ್ತು ಹೀಗೆ—
"ನಾಳೆಯೇ ಅರಳಿ ಧನ್ಯತೆಯನ್ನು ಪಡೆವ
ನಾ ಮಡಿಯುವೆ"
ಎನ್ನುವ ಹಾಗೆ
"ನಿನ್ನಾ ಮಗುಳ್ಳಗೆ,
ಇನ್ನೂ ಅರಿಗಳಿಗೆ.
ನಿನ್ನೀ ಬೀಳುಡಿಗೆ,
ನನ್ನಾ ಅರ್ಚನೆಗೆ ಅರಿಗುಂಡಿಗೆ
ಉಷರೋಭನದ ಊಚ ಉಳ್ಳಿ, ತಂಗಿ
'ಮಲ್ಲಿಗೆ
ನಿನ್ನ ಮುಡಿಗೆಯ ಬಣ್ಣಿಗಲಿ ಹೇಗೆ?"

—ಶ್ರೀಕೆ. ಸಚ್ಚಿದಾನಂದ ಉಡುಪಿ

ನೆಲ್ಲಿ ವಿಶ್ವಾಸ ಮಿಸಿ ಬಾಳುವಂತಹ ನಾಗರಿಕ ಉತ್ಪಾದನೆ ಮಾಡಬೇಕೆ ದೇಶೋದ್ಧಾರ.

ಉಡ್ಪಿ ಮುನ್ಸಿಫರ ಕೋರ್ಟಿನಲ್ಲಿ
O. S. No. 256/1967
I. A. 1/68

ಅಳ್ಳನು ಪೂಜಾರ್ತಿ— ವಾದಿಳು
ಮತ್ತು
ಭೂದ ಪೂಜಾರಿ ಕೂಡಾ—
ಪ್ರತಿವಾದಿಯರು.
ಇವರೊಳಗೆ

ಉಡ್ಪಿ ತಾಲ್ಲೂ, ಉದ್ಯಾವರ ಗ್ರಾಮದಲ್ಲಿ ವಾಸಿಸುತ್ತಿರುವ ಕುಜಂಬ ಪೂಜಾರಿಯ ಮಗಳು 3ನೇ ಪ್ರತಿವಾದಿ ಕೆಮಲು ಪೂಜಾರ್ತಿ ಮತ್ತು ಸದ್ರಿ ತಾಲ್ಲೂ, ಏಣಗುಡ್ಡೆ ಗ್ರಾಮದಲ್ಲಿರುವ

4ನೇ ಪ್ರತಿವಾದಿ ಎರಲ ಕಟ್ಟ— ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ಮೇಲ್ಕಂಡ ದಾವೆಯಲ್ಲಿ ವಾದಿಯ ಪ್ರತಿವಾದಿಯರ ಮೇಲೆ ಮಾಡಿದ ಮೇಲ್ಕಂಡ ದಾವೆಯ ಲ್ಲಿನ ಮೊತ್ತ 4ನೇ ಪ್ರತಿವಾದಿಯರ ಹಾಜರಾತಿಗೆ ತಾ. 29—5—68ಕ್ಕೆ ಇಡೋಣಾಗಿಯೆದೆ. ಸದ್ರಿ 3 ದಾವೆ 4ನೇ ಪ್ರತಿವಾದಿಯರಿಗೆ ಅಲ್ಲೇಕ ಹೇಳಲಿಕ್ಕೆನಾದ್ದೂ ಇದ್ದರೆ ಸದ್ರಿ ದಿನ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿ ಕೊಳ್ಳತಕ್ಕದ್ದು ಎಂದೂ ಈ ದಾವೆಲಿಕ ತಿಳಿಸೋಣಾಗಿಯದೆ.

U. Ramakrishnachar.
Advocate for Plaintiff
ಉಡ್ಪಿ, ಪ. ಕ. 1—5—1968.

ಸಂಗ್ರಾಹ್ಯ ಸಂಕಲನಗಳು

‡‡

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಬಲು	1—70
ಪಂಚಗಜ್ಜಾಯ	2—00
ವಿಕಾಂಕ ನಾಟಕಗಳು	1—00
ಭಾವನದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಗುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00

ಕೆಳಗಾಗಿ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯನಿಧಿಯಾಗಿದ

ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು:—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್
ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಪದ್ಮಶ್ರೀ ಡಾ। ಪೈಯವರ ೭೧ನೆ ಹುಟ್ಟುಹಬ್ಬ

ಪದ್ಮಶ್ರೀಗಳ ಚರಣ ಪದ್ಮಗಳಿಗೆ ಜನತೆಯ ಅಪೂರ್ವ ಗೌರವಾರ್ಪಣೆ

ಎಕೆಡೆಮಿಯ ಕಡಿತ ಮಹೋತ್ಸವ ಭಾಗವಾ ಡಾ। ಮಾಧವ ಪೈಯವರ ೭೧ ನೆಯ ಹುಟ್ಟು ಹಬ್ಬದ ಎರಡನೆಯ ದಿನದಂದು ಬಸವೇಶ್ವರರ ಎಂಟನೆಯ ಶತಮಾನೋತ್ಸವವನ್ನು ಆಚರಿಸಲಾಯಿತು. ಈ ದಿವಸ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಶಾಖೆಯ ಅಧ್ಯಕ್ಷ ಡಾ। ವೃಥ ಶಂಕರ ಅವರು ವಹಿಸಿದ್ದರು. ವಂಗಳೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ವಿಜ್ಞಾನಂದಜೀಯವರು ಉತ್ಸವವನ್ನು ಉದ್ಘಾಟಿಸಿದರು. ಮೂಡಬಿದ್ರೆಗೋತ್ರದ ಉಲಕ್ಕಾಕರ ಶ್ರೀ ನಾರಾಯಣ ಶೆಟ್ಟಿ ಗುಜನಾಲವರೂ ಬೆಂಗಳೂರು ಸರಕಾರ ಕಾಲೇಜಿನ ಶ್ರೀ ಹೆ. ಪ. ಭಾಗರಾಜಯ್ಯನವರೂ ಉಪನ್ಯಾಸ ಕೊಡಿದರು.

ಬಸವೇಶ್ವರರೊಬ್ಬರು ಮಹಾ ಕ್ರಾಂತಿಕಾರರ ; ಎಂಟು ಶತಮಾನಗಳಿಗೆ ಮೊದಲೇ ಅವರು ಜಾತಿಭೇದವನ್ನು ತೊಡೆದು ಹಾಕುವಲ್ಲಿ ಅಡಿಪಾಯ ಹಾಕಿದರು; ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು; ಇಹಕ್ಕೂ ಪರಕ್ಕೂ ನಡುವೆ ಆಧ್ಯಾತ್ಮಿಕದ ಸೇತುವೆ ಕಟ್ಟಿದರು ಎಂದು ಮಂತ್ರಾಗಿ ಉಪನ್ಯಾಸಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಅಂದು ಮುಂಜಾನೆ ಸಮಾರಂಭದ ಆರಂಭವಾಗಿ ವಚನ ಸಾಹಿತ್ಯವಾಚನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಅನಸೂಯ ಬಿ. ಶೆಟ್ಟಿ ಮತ್ತು ಶ್ರೀಗಳಾದ ಎಚ್. ಕೆ. ರಾಮಚಂದ್ರಮೂರ್ತಿ, ವಿ. ಚಂದ್ರಶೇಖರ್, ಮತ್ತು ಎಂ. ರಾಜಗೋಪಾಲಾಚಾರ್ಯರು ತೀರ್ಪುಗಾರರಾಗಿದ್ದರು. ಇದರಲ್ಲಿ ಗೆದ್ದವರಿಗೆ ಬಹುಮಾನವನ್ನು ಪದ್ಮಶ್ರೀ ಮಾಧವ ಪೈಯವರು ವಿತರಣೆ ಮಾಡಿದರು.

ಸಮಾರಂಭದ ಆರಂಭದಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ತೊನೆಯಲ್ಲಿ ಶ್ರೀ ಎ. ಜೆ. ಆಲ್ಸಿಯವರು ಧನ್ಯವಾದ ಅರ್ಪಿಸಿದರು. ರಾತ್ರಿ "ರಂಗಭೂಮಿ"ಯ ಕಲಾವಿದರಿಂದ "ಜಗಜ್ಯೋತಿ ಬಸವೇಶ್ವರ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಮೂರನೆಯ ದಿನದ ಕಾರ್ಯಕ್ರಮವು ಎರಡು ಅಂಗಗಳಲ್ಲಿ ನಡೆಯಿತು. ಪೂರ್ವಾಹ್ನ "ರಾಷ್ಟ್ರಜೀವನದಲ್ಲಿ ಬೇಂಕುಗಳ ಪಾತ್ರ"ವೆಂಬ ವಿಷಯದ ಕುರಿತು ಮಣಿಪಾಲದ ಕೆ ಎಂ ಸಿ ಸಭಾಂಗಣದಲ್ಲಿ ವಿಚಾರ ಸಂಕಿರಣವೂ ಅಪರಾಹ್ನ ಡಾ। ಪೈಯವರಿಗೆ ಉಡುಪಿಯಲ್ಲಿ ಚೇಂಬರ್ ಆಫ್ ಕಾಮರ್ಸ್, ಇಂಡಸ್ಟ್ರಿ ಎಂಡ್ ಎಗ್ರಿಕಲ್ಚರ್‌ರವರ ಗೌರವಾರ್ಪಣೆಯೂ ನಡೆಯಿತು.

ವಿಚಾರ ಸಂಕಿರಣದ ಅಧ್ಯಕ್ಷಸ್ಥಾನವನ್ನು ಡಾ। ಸರೋಜಿನಿ ಮಹಿಷಿಯವರು ವಹಿಸಿದ್ದರು. ಡಾ। ಮಾಧವ ಪೈಯವರು ಇದನ್ನು ಉದ್ಘಾಟಿಸಿದರು. ಮುಂದೆ ನಡೆದ ವಿಚಾರ ಸಂಕಿರಣದಲ್ಲಿ ಈ ಕೆಳಗಿನವರು ಭಾಗವಹಿಸಿದ್ದರು:

ಬೇಂಕಿಂಗ್ ಮತ್ತು ವಾಣಿಜ್ಯ— ಡಾ। ಆರ್. ಸಿ. ಕೂಪರ್.

ಬೇಂಕಿಂಗ್ ಮತ್ತು ಉದ್ಯಮ— ಶ್ರೀ ಎ. ಎಸ್. ಮಹಕ್‌ಲಾಲ್.

ಬೇಂಕಿಂಗ್ ಮತ್ತು ಕೃಷಿ— ಡಾ। ಎ. ಎಂ. ಮಿಸ್ರೋ.

ಬೇಂಕಿಂಗ್ ಮತ್ತು ಅಭಿವೃದ್ಧಿ— ಡಾ। ಪಿ. ಆರ್ ಬ್ರಹ್ಮಾನಂದ.

ಬೇಂಕಿಂಗ್ ಮತ್ತು ಸರಕಾರ— ಶ್ರೀ ಬಿ. ಎನ್. ಅಡಾರ್‌ಕರ್.

ಬೇಂಕಿಂಗ್ ಮತ್ತು ಸಮಾಜ— ಶ್ರೀ ಜೆ. ಎಸ್. ಲಾಡ್.

ಬೇಂಕಿಂಗ್ ಸಮಸ್ಯೆಗಳು ಮತ್ತು ಮುನ್ನೋಟ— ಡಾ। ಕೆ. ವಿ. ಗೌಡ,

ಶ್ರೀ ಟಿ. ಎ. ಪೈಯವರು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಸಮಾರೋಪ ಭಾಷಣ ಮಾಡಿದರು. ಶ್ರೀ ಕೆ. ಕೆ ಪೈ ಅವರು ಧನ್ಯವಾದವರ್ಪಿಸಿದರು.

'ಗೌರವಾರ್ಪಣೆ'ಯ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಬೆಂಗಳೂರಿನ ಮೈಸೂರ್ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಶ್ರೀ ಪೈ. ಎಸ್. ಗಂಗಾಧರ ಶೆಟ್ಟರು ವಹಿಸಿದ್ದರು. ಶ್ರೀ ಟಿ. ರಮೇಶ ಪೈಯವರು ಸ್ವಾಗತಿಸಿದ ಬಳಿಕ ಶ್ರೀ ಅಮ್ಮುಂಜೆ ಅನಂತ ನಾಯಕರು ಡಾ। ಪೈಯವರಿಗೆ ಮಾನಪತ್ರವನ್ನು ಅರ್ಪಿಸಿದರು. ಡಾ। ಮಾಧವ ಪೈಯವರು ಉತ್ತರಿಸುತ್ತ ತಾನುಮಾಡಿದ ಕಾರ್ಯದ ಫಲವನ್ನು ಕರ್ನಾಟಕ ಕಾಣುವಂತಾದ ದಕ್ಕೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ಚೇಂಬರಿನ ಕಾರ್ಯದರ್ಶಿ ಶ್ರೀ ಕೆ. ಪ್ರಭಾಕರ ಪೈಯವರು ಧನ್ಯವಾದವರ್ಪಿಸಿದರು. ರಾತ್ರಿ ಶ್ರೀ ಸಿದ್ದರಾಜು ಜಂಬಲ್ದಿನಿಯವರಿಂದ ಬಸವಣ್ಣನಾಗಿ ಹಿಂಡಿಕೆಟ್ ಬೇಂಕಿನ ನೌಕರರಿಂದ "ಹೆಜ್ಜೆಗೊಂದು ಗಂಡು" ಎನ್ನುವ ನಾಟಕವೂ ನಡೆಯಿತು.

ಅದೇ ದಿನ ಶ್ರೀ ಕೃಷ್ಣ ಪ ಪದಲ್ಲಿ ಡಾ। ಪೈಯವರ ಹುಟ್ಟುಹಬ್ಬದ ನಿಮಿತ್ತವಾಗಿ ಬ್ರಹ್ಮ ರಥೋತ್ಸವವು ವೈಭವೋಪೇತವಾಗಿ ನೆರವೇರಿತು.

ಎಪ್ರಿಲ್ ೩೦—ಪದ್ಮಶ್ರೀ ಡಾ। ಮಾಧವ ಪೈಯವರ ೭೧ನೆಯ ಹುಟ್ಟುಹಬ್ಬ. ಅಂದು ಮೂಡಬಿದ್ರೆ ಶೈಕ್ಷಣಿಕ ಸಮ್ಮೇಳನವು ನಡೆಯಿತು. ಶ್ರೀ ಟಿ. ರಮೇಶ ಪೈಯವರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಎಸ್. ಎಸ್. ಒಡೆಯರ್ ಅವರು ಪ್ರಧಾನ ಭಾಷಣ ಮಾಡಿದರು. ಮುಂದೆ ವಿಚಾರ ಮಂಥನವು ಎರಡು ಭಾಗಗಳಲ್ಲಿ ನಡೆಯಿತು. ಆದೂ ವಿಭಾಗದ ಪರದಿಗಳನ್ನು ಓದಿದ ಕರ್ನಾಟಕ ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಸಮಾರೋಪ ಭಾಷಣ ಮಾಡಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಅಭಿನಂದನೆಯ ಪೀಠಿಸಿದರು.

ಸಂಜೆ ಮದ್ರಾಸ್ ವ್ಯಕ್ತಿ ಪದ್ಮಶ್ರೀ ಡಾ। ಮಾಧವ ಪೈ ಅವರ ಬಗ್ಗೆ ಜನತೆಗಿರುವ ಗೌರವಾಭಿಮಾನಗಳು ವ್ಯಕ್ತವಾಗುವಂತಹ ಬೃಹತ್ ಸಭೆ ನಡೆಯಿತು. ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಇದರಲ್ಲಿ ಜಿಲ್ಲೆಯ ಪ್ರಮುಖರೆಲ್ಲರೂ ಭಾಗವಹಿಸಿದ್ದರು. ಡಾ। ಪೈಯವರಿಗೆ ಅರ್ಪಿಸಲಾದ ಹಾರಗಳ ಜೊರೆಯೇ ಅವರ ಮೇಲಿನ ಪ್ರೀತಿ ಗೌರವಗಳನ್ನು ತೋರಿಸುತ್ತದೆ.

ಶ್ರೀ ಟಿ. ಎ. ಪೈಯವರು ಸ್ವಾಗತಿಸಿದ ಬಳಿಕ ಶ್ರೀ ಸಿ ಶ್ರೀನಿವಾಸ ಆಚಾರ್ಯರು ಮಾನಪತ್ರವನ್ನರ್ಪಿಸಿದರು. ಉದ್ದೇಶದಲ್ಲಿ ಪ್ರಮಾಣಿಕತೆ, ತೀವ್ರ ಸಹನೆ, ತಮ್ಮಲ್ಲಿ, ತಮ್ಮ ವಿಚಾರಗಳಲ್ಲಿ ಅಚಲ ವಿಶ್ವಾಸಗಳಿಗೆ ಹೆಸರಾದ ವ್ಯಕ್ತಿ ಡಾ। ಪೈಯೆಂದು ಅವರನ್ನು ಮಾನಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಈ ಗುಣಗಳಿಂದಲೇ ಅವರ ಕಾರ್ಯದಿಂದ ಅಪಾರ ಅನುಕೂಲಗಳನ್ನು ಪಡೆಯುವುದು ಸಾಧ್ಯವಾಗಿರೆಯೆಂದೂ ಹೇಳಲಾಗಿತ್ತು. ಉಡುಪಿಯ ರೋಟರಿ ಕ್ಲಬ್ಬಿನ ಪರವಾಗಿ ಮಾನಪತ್ರವನ್ನು ಡಾ। ಎಚ್. ಶಾಂತಾರಾಮರು ಅರ್ಪಿಸಿದರು. ಈ ಸಮಾರಂಭದ ಸಂಬಂಧವಾಗಿ ಪ್ರಕಟಿಸಲಾದ ಪರ್ಯಣ ಸಂಚಿಕೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಾದ ಶ್ರೀ ಎಸ್. ಎಸ್. ಒಡೆಯರರು ಉದ್ಘಾಟಿಸಿದರು. ಎಂ. ಜಿ. ಎಂ. ಕಾಲೇಜಿನಲ್ಲಿ ೧೦೦ ವಿದ್ಯಾರ್ಥಿನಿಯರಿಗಾಗಿ ಕಟ್ಟಲಾಗುತ್ತಿರುವ "ಶಾರದಾನಿಲಯ"ದ ಕಟ್ಟಡಕ್ಕೆ ಶ್ರೀಮತೀ ಶಾರದಾ ಟಿ. ಎಂ. ಎ ಪೈಯವರು ಪಂಚಾಂಗ ಫಲಕವನ್ನು ಅನಾವರಣ ಮಾಡಿದರು.

ಡಾ। ಸರೋಜಿನಿ ಮಹಿಷಿಯವರು ಮಾತನಾಡುತ್ತ ಸಮಾಜದ ಸುಖವೇ ತನ್ನ ಸುಖವೆಂದು ತಿಳಿದು ವಿವಿಧ ರಂಗಗಳಲ್ಲಿ ಅಗಾಧ ಸೇವೆ ಸಲ್ಲಿಸಿದ ಡಾ। ಪೈಯವರು ಕೃತಾರ್ಥವಾದ ಶುಂಠು ಜೀವನವನ್ನು ಬದುಕಿದ್ದಾರೆಂದರು. ಶ್ರೀ ಪಂಡರಿನಾಥಾಚಾರ್ಯ ಗಲಗಲಿಯವರು ಗೌರವಾರ್ಪಣೆ ಮಾಡುತ್ತ ಇನ್ನೊಂದು ಇನ್ನೂರು ವರ್ಷಗಳ ಬಳಿಕ ನಮ್ಮ ಮಂದಿ ಮರಿಗಳು ಡಾ। ಪೈಯವರನ್ನು ಶತಕುರುಸನೆಂದು ಹಾಡಿ ಹೊಗಳುತ್ತಾರೆ ಕಾಶಿಮಠ ಸಂಸ್ಥಾನದ ಮೂಲವೀರರು ಜ್ಞಾನದ ದೃಷ್ಟಿಯಲ್ಲಿ ಮಾಡಿದ ಮಹೋನ್ನತ ಕಾರ್ಯದಂತೆ ದಕ್ಷಿಣದ ಕಾಶಿಯೆನಿಸಿದ ಉಡುಪಿಯಲ್ಲಿ ಡಾ। ಪೈ ಅದ್ವಿತೀಯ ಕಾರ್ಯ ಸಾಧಿಸಿದ್ದಾರೆಂದರು.

ಡಾ। ಪೈಯವರು ಉತ್ತರಿಸುತ್ತ ವೃತ್ತಿಪರ ಕಾಲೇಜುಗಳ ಸ್ಥಾಪನೆಯ ವೇಳೆ ಮದ್ರಾಸು ಸರಕಾರದಲ್ಲಿ ಮಂತ್ರಿಯಾಗಿದ್ದ ಸಿ. ಎ. ಬಿ. ಶೆಟ್ಟಿ, ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳ ಸಂಪೂರ್ಣ ಸಹಕಾರವನ್ನು ಸ್ಮರಿಸಿ ತಂದುಕೊಂಡು ಇದಿಲ್ಲವಾಗಿದ್ದರೆ, ಈ ಕಾಲೇಜುಗಳು ಅಸ್ತಿತ್ವಕ್ಕೆ ಬರುತ್ತಿರಲಿಲ್ಲವೆಂದರು. ಬಡ ಜನರ ಮೇಲೆ ತೆರಿಗೆ ಹೊರಿಸಿ ಶ್ರೀಮಂತರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದು ಸರಿಯಲ್ಲ. ಅಧಿಕಾರ ಪ್ರಾಪ್ತ ಜನರು ತಮ್ಮ ಅಧಿಕಾರಾಸ್ತ್ರವನ್ನು ಜನಸಾಮಾನ್ಯರ ಕಷ್ಟ ನಿವಾರಣೆಗಾಗಿ ಉಪಯೋಗಿಸಬೇಕಲ್ಲದೆ ತಮ್ಮ ಚಾಪಲ್ಯಕ್ಕಾಗಿ ಅದನ್ನು ದುರುಪಯೋಗಪಡಿಸಬಾರದೆಂದರು. ಮುಂದೆ ತನಗೆ ನೀಡಿದ ಗೌರವಕ್ಕಾಗಿ— ಗದ್ಗದಿತರಾಗಿ ಈ ಸಂಸ್ಥೆಗಳನ್ನು ಪ್ರೀತಿಸಿರಿ—ಇವುಗಳ ಅವನತಿಯನ್ನು ತಾರೈಸಬೇಡಿರಿ—ಎಂದು ಕೋರಿದರು.

ಶ್ರೀ ಎಂ. ಪಿ.ಎಲ್. ಶಾಸ್ತ್ರಿಯವರು ಭಾಷಣ ಮಾಡುತ್ತ ವಿಶ್ವವಿದ್ಯಾಲಯವಾಗಲು ಮೈಸೂರು ರಾಜ್ಯದಲ್ಲಿ ಮನಿಪಾಲಕ್ಕಿಂತ ಅರ್ಹಸ್ಥಳ ಬೇರೊಂದಿಲ್ಲವೆಂದರು. ಡಾ। ಪೈಯವರು ಹತ್ತು ಕುಲಪತಿಗಳಿಗೂ ಹೆಚ್ಚಿನವರು, ಅವರ ಋಣ ತೀರಿಸುವುದು ಅಸಾಧ್ಯ. ಡಾ। ಪೈಯವರು ದೇಶ ಕಟ್ಟಲು ಸೊಂಟಕಟ್ಟಿದ್ದಾರೆ. ಈ ಕಾರ್ಯದಲ್ಲಿ ಸರಕಾರ— ವಿಶ್ವವಿದ್ಯಾಲಯಗಳು ಸಹಾಯ ನೀಡಬೇಕಲ್ಲದೆ ಹಸ್ತಕ್ಷೇಪ ನಡೆಸಿ ಕೆಡಿಸುವುದಲ್ಲವೆಂದು ಹೇ

Syndicate Bank opens two more branches at New Delhi.

Delhi the capital of India, the city that presents many splendours and blends the ancient with the modern and oriental with accidental, has proved a comfortable home for Syndicate Bank. The bank has already four branches in Delhi conveniently located at Connaught Circus, Asuf Ali Road, Chandni Chowk and Karol Bagh. The branch at Karol Bagh is run by women. Two more branches are being opened on 10—5—1968 in Delhi at the following addresses:

1 Syndicate Bank Ltd.
Apna Bazar Premises
East Patel Nagar
NEW DELHI—8.

2 Syndicate Bank Limited
Apna Bazar Premises
INA Market
NEW DELHI—23.

With the opening of the above branches, the Syndicate Bank will be having a net work of 231 branches spread all over India. Syndicate bank is the only Bank in India having more than 50 branches in a single district. It has almost one out of every 7 depositors and borrowing amounts in the Indian Banking System.

ಳಿದರು. ಮಣಿಪಾಲದ ಕಸ್ತೂರ್ಬಾ ಜನತಾ ಆಸ್ಪತ್ರೆಗೆ ಸಾರ್ವಜನಿಕರಿಗೆಗಳನ್ನು ಒದಗಿಸಲು ಸರ್ಕಾರಿಯೇ ಈ ಸ್ಥಾನಾಯಿಗಳು ಪಡಾಯಬೇಕೆಂತಿದಯಂದೂ ಇನ್ನು ಎರಡು ವರ್ಷ ರೂಪಾಯಿಗಳು ಜೇಕಾಗುವೆಯೆಂದೂ ಪ್ರೊಫೆ ಎ. ಪೈ ತಿಳಿಸಿದರು. ಇದಕ್ಕಾಗಿ ರೂ. ೩ ೦ ೦ ಅಥವಾ ಅದಕ್ಕಿಂತ ಹೆಚ್ಚು ಧನಸಹಾಯ ಮಾಡಿದವರ ಹೆಸರನ್ನು ಶ್ರೀ ಓ ರಮೇಶ ಪೈಯವರು ಬರೆದಿಟ್ಟರು. ತೊನೆಯಲ್ಲಿ ಡಾ. ಎ. ಕೃಷ್ಣರಾಯರು ವಂದನಾರ್ಪಣೆ ಮಾಡಿದರು.

ನಾಡುಂಗಾಲ ಶಾಕ್ಷಳದ ನಾರಾಯಣ ಸ್ವಾಮಿಯ ವರ ನಾಗಸ್ವರವಾದನವೂ ರಾತ್ರಿ ಕೆ.ಎಂ.ಸಿಯವರಿಂದ 'ಅಳಿಯ ದೇವರು' ಎಂಬ ನಾಟಕವೂ ನಡೆದುವು

ತಾ. ೧೨ ರ ವತ್ತುಸರಿಂದು ಶ್ರೀಕೃಷ್ಣನ ಪ್ರದರ್ಶನವು ಮಂದುವರಿಯಿತು.

ತಾ ೩ ರಂದು ಸನ್ಮಾನೋತ್ಸವಸಮಾರಂಭವು ನಡೆದು ಉಡುಪಿದಲ್ಲಿ ನೆರವಾದ ಸ್ವಯಂ ಸೇವಕರಿಗೆ ಡಾ॥ ಪೈಯವರು ಪ್ರಶಸ್ತಿಪತ್ರಗಳನ್ನು ವಿತರಣೆಮಾಡಿದರು. ಅಂದು ರಾತ್ರಿ ಅಷ್ಟಾವಧಾನ ಮತ್ತು ಮೇಳದವರಿಂದ ಯಕ್ಷಗಾನ ಬಯಲಾಟವು ನಡೆಯಿತು.

ಎಲ್ಲೆಲ್ಲ ಏನೇನು?

ಬಂಟರ ಯಾನೆ ನಾದವರ ಸಂಘದ ಮಹಾಸಭೆ

ನಾಳೆಯಂತೆ ಜಿಲ್ಲಾ ಬಂಟರ ಯಾನೆ ನಾದವರ ಸಂಘದ ವಾರ್ಷಿಕ ಮಹಾಸಭೆಯು ಉಡುಪಿಯಲ್ಲಿ ತಾ. ೨೩-೪-೬೯ ರಂದು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಎಷ್ಟೇಗಂಟೆಗೆ ಸರಿಯಾಗಿ ಶ್ರೀ ಎಂ. ರಾಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ನಿಜ್ಜರಿಗೆಯಿಂದ ಜರಗಿತು ಶ್ರೀ ಬಿ. ಎಸ್. ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದ ತರುವಾಯ ರಾಮಚಂದ್ರ ಕೋಟ್ಯಾಧಿಕಾರಿ ಮೊದಲಿಗರು ಒದಿದ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಜೂರುಗೊಳಿಸಲಾಯಿತು.

ಅಧ್ಯಕ್ಷರು ಉಪಯುಕ್ತ ಸೂಚನೆ ಸಲಹೆಗಳನ್ನುಳ್ಳ ಭಾಷಣ ಮಾಡಿದ ತರುವಾಯ ಮುಂದಿನ ವರ್ಷಕ್ಕೆ ಕಾರ್ಯಕಾರಿ ಸಮಿತಿಯೊಂದನ್ನಾರಿಸಲಾಯಿತು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಧನ್ಯವಾದಗಳನ್ನರ್ಪಿಸಿದರು.

ಬೆಳಗ್ಗಿನ ಕಾರ್ಯಕ್ರಮವು ಶ್ರೀ ಬೈ. ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಆಸ್ಪತ್ರೆ ಮತ್ತು ಶಿಕ್ಷಣಾಲಯಗಳ ಸಮಗ್ರ ಒಟ್ಟು ಹಿಗ್ಗನ್ನಿಸಲಾದ ಸೇವಾಕ್ಕೆ ಕೃಷಿ ಚಿಂಬಲ್ ಮತ್ತು ಶ್ರೀ ರಾಮಕೃಷ್ಣ ಕನ್ಸ್ಟ್ರಕ್ಷನ್ಸ್ ಕೂಟ— ಬಿಲ್ಡರ್ಸ್ ಸ್ಟೋರ್ಸ್‌ಗೆ ಸಹಕಾರವೀಯುವುದೇ ಮೊದಲಾದ ಅಂತೆ ವಿಚಾರಪಟ್ಟಿಯನ್ನು ಯೋಗಿಸಲಾಯಿತು. ಬಳಿಕ ಸಂಘಕ್ಕೆ ಒಂದೂವರೆ ಸಾವಿರ ರೂಪಾಯಿ ಧನ ಸಹಾಯ ಮಾಡಿದ ವಿಜಯಬೇಂಕಿನ ಅಧ್ಯಕ್ಷ ಶ್ರೀ ಎಂ. ಶಂಕರ್ ರಾಮ ಶೆಟ್ಟರ ತೈಲ ಚಿತ್ರವನ್ನು ಅನಾವರಣ ಮಾಡಲಾಯಿತು.

ಯೆಲ್ಲೂರಿನಲ್ಲಿ ಸಾಂಸ್ಕೃತಿಕೋತ್ಸವ

ಯೆಲ್ಲೂರಿನ ಶ್ರೀ ಸಿದ್ಧೇಶ್ವರ ದೇವಸ್ಥಾನದ ವಾರ್ಷಿಕ ಉತ್ಸವದ ಅಂಗವಾಗಿ ಸ್ಥಳೀಯ ಯುವಕಮಂಡಳದವು ಸಾಂಸ್ಕೃತಿಕೋತ್ಸವವನ್ನು ಐದು ದಿನಗಳಲ್ಲಿ ಸಾಂಗವಾಗಿ ಆಚರಿಸಿತು.

ತಾ. ೧೩—೪—೬೯ರಂದು ಸಾಂಸ್ಕೃತಿಕೋತ್ಸವದ ಉದ್ಘಾಟನೆಯು ಶ್ರೀ ಮುಳಿಯ ಮಾಣಿಲ ಭಟ್ಟ, ಅಡ್ವಕೇಟರವರಿಂದ ಶ್ರೀ ಬಿ. ವಾಸುದೇವ ಆಚಾರ್ಯ ಗವರ್ನಮೆಂಟ್ ಪ್ಲೀಡರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಅದೇದಿನ ಶ್ರೀ ಯು. ರಾಮಚಂದ್ರ ಆಚಾರ್ಯರವರ ನೇತೃತ್ವದಲ್ಲಿ ಯಕ್ಷ

ಗಾನ ಕೂಟವೂ ದ್ವಿತೀಯ ದಿನ ಶ್ರೀ ಪಿ. ಯಲ್. ಭಾಗವತೇಂದ್ರರಾಯರಿಂದ ಪರಿಕಥಾ, ತೃತೀಯ ದಿನ ಶ್ರೀ ನೆಂಕಪಿಂಡಾಪುರ್ಯನವರಿಂದ ಭಾರತಾಚಾರ್ಯನೂ ನಾಲ್ಕನೇ ದಿನ ವಿವಿಧ ಭಜನಾ ಮಂಡಳಿಯವರಿಂದ ಸಾಮೂಹಿಕ ಭಜನೆಯೂ, ಐದನೇ ದಿನ ಶ್ರೀ ಯು. ವಿ. ಭಟ್‌ರವರಿಂದ ಶ್ರೀಪರಮೇಶ್ವರ ಭಟ್ ಮತ್ತು ಪರಿವಾರ ಉಡುಪರ ಹಿಮ್ಮೇಳನದೊಂದಿಗೆ ಸಂಗೀತ ಕಚೇರಿಯೂ, ತಾ. ೨೬—೪—೬೯ರಂದು ಶ್ರೀ ಬಿ. ಸಾಂಬಯ್ಯ ಮತ್ತು ಶ್ರೀ ಪರಿವಾರ ಉಡುಪರ ಹಿಮ್ಮೇಳನದೊಂದಿಗೆ ಸಂಗೀತ ಕಚೇರಿಯೂ ಕೊನೆಯ ದಿನ ಸಾಯಂಕಾಲ ಸಾಮೂಹಿಕ ಪ್ರಾರ್ಥನೆ ಮತ್ತು ಮಂಗಳೀ ವಾದನ ಮೊದಲಾದ ಕಾರ್ಯಕ್ರಮಗಳೂ ಸಾಂಗವಾಗಿ ಜರಗಿದವು.

ಶಾಲಾ ವರ್ಷಾಂತ್ಯೋತ್ಸವ

ಶಿರ್ವಾಡಿ. ಶಿರ್ವಾಡಿ ಪೇಟೆಯ ಸಿಂಜಲ್ ಬ್ರಾಂಚ್ ಬ್ರಾಂಚ್ ಶಾಲಾ ವರ್ಷಾಂತ್ಯೋತ್ಸವವು ತಾ. ೨೯—೪—೬೯ ರಂದು ಶ್ರೀ ಶಿರ್ವಾಡಿ ವಿಠಲ ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಎಸ್. ಧರ್ಮಸಿಂಹ್ರಾಯ ಸ್ವಾಗತ ಭಾಷಣ ಮಾಡಿತ್ತ ಸಾರ್ಥಕ ಪ್ರಗತಿಯ ಸಭೆಯಲ್ಲಿ ಬೇಗ ನಡೆಯುತ್ತಿದೆ ಎಂಬುದನ್ನು ವಿವರಿಸಿದರು. ಶ್ರೀ ಪೈಲಿಲ್ ಜೇಕಬ್‌ರವರು ಸಂದೇಶಗಳನ್ನು ಮುಖ್ಯೋಪಾಧ್ಯಾಯ ಶ್ರೀ ಪಿ. ಲಿಲ್ಲಿ ಜೇಕಬ್‌ರವರು ವಾರ್ಷಿಕ ವರದಿಯನ್ನು ಒದಿದರು. ಶ್ರೀ ಪೊಕಿಂ ಸಾಲ್ದಾನರವರು ಸ್ವಾಗತವನ್ನಿತ್ತರು.

ಶಾಲಾ ಕರೆಸ್ಪಾಂಡೆಂಟ್ ರೆ. ಫಾ. ಜಾರ್ಜ್ ಪೆನ್ನಾಂಡಿಸ್‌ರವರು ಸಂಸ್ಥೆಯ ಅಭಿವೃದ್ಧಿಗೆ ಎಲ್ಲರ ಸಹಕಾರವನ್ನು ಕೋರಿದರು.

ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳ ನಂತರ ಶ್ರೀ ಶ್ರೀಧರ್ ಜೈನ್‌ರವರು ಧನ್ಯವಾದ ಸಮರ್ಪಿಸಿದರು.

ನಗೆ ಬಿಂದು

ಅಧ್ಯಾಪಕ— "ಕೇಶರ್-ಕಾರ್ಡ್ ಎಂಬುದು ಯಾವ ಸಂಧಿ?"

ವಿದ್ಯಾರ್ಥಿ—"ಅಪಾರ ಧಾನ್ಯಗಳ ಅಭಾವದಿಂದಾಗಿಯೇ ಜನರಿಗೆ ಒದಗಿಸಲ್ಪಡುವುದರಿಂದಾಗಿ 'ಲೋಪಸಂಧಿ' ಸಾರ್"

° ° °

ಬಸ್ಸಿನಿಂದ ಬಿದ್ದ ತಲೆಯೊಡೆದಿದ್ದ ತನ್ನ ಪತ್ನಿಯನ್ನು ಸರಕಾರೀ ಆಸ್ಪತ್ರೆಗೆ ಸಾಗಿಸಿದ ಗಂಡ ಒಪರೇಷನ್ ರೂಮಿನ ಹೊರಗಡೆ ಕಾದಿದ್ದ.

ಡಾಕ್ಟರ್— 'ಮಿಸ್ಸಿಸ್ ಹೊರಬಂದ ಹಾಗಿದೆ. ಈ ಮೊದಲೇ ಸ್ವಲ್ಪ ನಷ್ಟವಾಗಿದ್ದಿರಲೂ ಬಹುದು.....ಆದರೂ ಪ್ರಯತ್ನಿಸುವೆ.

"ಆ ಹೆದರಿಕೆಯಿಲ್ಲ, ಡಾಕ್ಟರ್! ಆಕೆಯ ತಲೆ ಉಳಿದರೆ ಸಾಕು; ಮಿದುಳು ಮೊದಲೇ ಇದ್ದಿರಲಿಲ್ಲ... ಹಾಗಾಗಿ ಹೋಗಿರಲೂ ಎಡೆಯಿಲ್ಲ.

° ° °

ತನ್ನ ಗಂಡ ಕಾಣೆಯೆಂದು ಯುವತಿಯೋರ್ವಳು ಪೋಲೀಸ್ ಅಧಿಕಾರಿಗೆ ದೂರಿತ್ತಳು.

"ಎಷ್ಟು ದಿನಗಳಿಂದ ಕಾಣೆ?"—ಪ್ರಶ್ನೆ.

"ಸುಮಾರು 40 ದಿನಗಳಾದವು."

"ಈ ವಿಷಯವೂ ತಿಳಿಸಿಲ್ಲವೇಕೆ? ..'

"ಒಡೆದ ಪಾದೆ ಇಂದು ಸಂಜೆಯ ವರೆಗೆ ಸಾಕಾಗ ಬಹುದು.... ಅಷ್ಟರೊಳಗೇ ಬಂದರೆ ಪತ್ತೆ ದೂರು ಅಗತ್ಯವಿಲ್ಲವೆಂದೇ ಭಾವಿಸಿ ಕಾದೆ....'

° ° °

"ಮಗೂ! ನಿನಗೆ ಡಾಕ್ಟರಾಗಲೋ ಇಂಜಿನಿಯರಾಗಲೋ ಅಭಿಲಾಷೆ?...."

"ಎರಡೂ ಬೇಡವಪ್ಪ ಸೇನಾಧಿಪತಿಯಾಗಬೇಕು."

"ಅದೇಕೆ?...."

"ಯಾರನ್ನು ಬೇಕಾದರೂ ಮುಂಡಿಸ್ಕಳು...."

"ಸೇನಾಧಿಪತಿಗೂ ಮುಂಡಿಸ ಭೀತಿಯಿದೆ."

"ಅದೆಲ್ಲಿಂದ?...."

"ಶತ್ರುವಿನಿಂದ...."

"ಹಾಗಾದರೆ ನಾನು ಶತ್ರುವಾಗಬೇಕ ...."

° ° °

"ಪ್ರಿಯೆ! ನಾವು ಹೀಗೆ ಬೀಚಿನಲ್ಲಿ ಯೂ ಪಾರ್ಕಿನಲ್ಲಿಯೂ ಪ್ರೇಮರಂಗಗಳನ್ನಭಿನಯಿಸಿ ಎಷ್ಟು ದಿನ ದೂಡುವುದು? ಇದರ ಕೊನೆಯೆಂದು?"

"ನನಗೆ ನನ್ನ ತಂದೆ ಒಂದು ಒಳ್ಳೆಯ ವಿವಾಹಸಂಬಂಧವನ್ನೆಲ್ಲಿದ್ದರೆ ಅದು ಯಶಸ್ವಿಯಾದರೆ ಈ ದುಸ್ಥಿತಿ ಕೊನೆಗೊಳ್ಳಬಹುದು ..'

° ° °

"ಇಂದಿನ ಸಂಬಾರಿಗೆ ಇಲಿ ಕೊಳೆತ ಹಾಗೆ ಒಂದು ದುರ್ವಾಸನೆಯೇಕೆ?"—ಯಜಮಾನ.

ಅಡಿಗೆಯವ ಸ್ವಲ್ಪ ಯೋಚಿಸಿ—

"ಬೇರೇನೂ ಕಾರಣ ತಿಳಿಯುವುದಿಲ್ಲ, ಇಲಿ ಗುರುತಿನ ಹಿಂಗನ್ನು ಸಾಂಬಾರಿಗೆ ಹಾಕಿದ್ದೇನೆ...."

° ° °

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಶಾಲುಕೋಟೆ, ಉಡುಪಿ, ದ. ಕನ್ನಡ.

ಕೋಕಿಲೆ

ಫಿನಗೆ—
ಕುಡಿವರಿವ ಕುರ್ತಕುತ್ತಿಗೆ,
ಶಿರಕೆ ಮುಂದರ ಹೊರ್ದುಗೆ
ತದ್ಯಮ ತರಗತಿಯು ಆ ಫಿನ್ನ ಕೂಗಿಗೆ,
ಮಮತೆ ತುಂಬಿದ ಮಯೂರದಂತಹ
ಬೆಳುಪೆ

ಕುಹು...ಕುಹು...ಕೂ....
ಕ ಹು...ಕುಹು....ಕೂ...

ಫಿನಗೆ—
ಧನುಪೆಯ್ಯೇಡಿಯಂತೆ ಬಾಗಿರುವ
ತೊಗೆ

ಒಯ್ಯೂರ ತುಂಬಿದ ನಡಿಗೆ,
ಮಾನಿಫಿಯು ಪತಾಂಶ ಶರಣಾತಿ
ಮಾಯೂರಪುರದ ರೂಪಿಗೆ.

ಗೊಂಗಾಟಕಿಂತಲೂ ಕೇನ ನಡಿಗೆ,
ಪ್ರಭಾತದ ಪ್ರಭಾತಿಯಲ್ಲಿ
ತೆಂಗು:—
ಪೊಂಗೆಗಳಲ್ಲಿ,
ಅಲ್ಲಿ—
ಇಲ್ಲಿ,
ಏಳ್ದ ನಿಹಿತ ಹಾಡಿಗೆ,
ಕುಂದಿದ ಕುಚಗಳು ಕಂಬಿಟ್ಟು,
ಬೇಸಾಗುವಷ್ಟು ಆ ನಿನ್ನ ಮಸಗೆಗೆ.

—ಶ್ರೀ ಕೆ.ಸಚ್ಚಿದಾನಂದ ಉಡಪ

"ಅಪ್ಪಾ! ವಿದೇಶದಿಂದ ಯಾವುದೇ ಅ ಸೊತವನ್ನು ಪ್ರೋತ್ಸಾಹಿಸಿನೆಂದ ಪ್ರಧಾನಿ ಇಂದಿರಾ ಗಾಂಧಿ ಈಗೇಕೆ ಹೀಗೆ ಮಾಡಿದರು.

"ಏನಾಯ್ತು? .....'

"ಅವರ ಸುಪುತ್ರ ರಾಜೀವ ಇಟೇಲಿದೀಂದ ಯುವತಿಯನ್ನೇ ತಂದೂ ಅಯ್ತು ಪ್ರಧಾನಿ ಸ್ವಾಗತಿಸಿ ಸತ್ಕರಿಸಿಯೂ ಆಯ್ತು ಕಾಣೆ!"

° ° °

ಶಾಲೆಗೆ ಹೋಗುತ್ತಿದ್ದ ರಾಮು ದಾರಿಯಲ್ಲಿ ಓರ್ವನು ಅಳುವ ಅಡಿನ ಕತ್ತಿಗೆ ಹಗ್ಗ ಬಿಗಿದು ಕೊಂಡೊಯ್ಯುವುದನ್ನು ಕಂಡು ವಿಚಾರಿಸಿದ:—

"ಈ ಆಡೇಕೆ ಅಳುತ್ತಿದೆ?"

"ಅದನ್ನು ತಲೆ ಕಡಿಯುವುದಕ್ಕಾಗಿ ಕೊಂಡು ಹೋಗಲಾಗುತ್ತಿದೆ."

"ಅಷ್ಟೇ ತಾನೆ?.... ಶಾಲೆಗೆಕೊಂಡು ಹೋಗುವುದೆಂದಾಗಿತ್ತು ನನ್ನ ಭಾವನೆ."

° ° °

ಪಂಡ— ಮನ ನ್ಯನ ಅಧಃಪತನವಾದಾಗ ಪ್ರಾಣಿಯಾಗುವನು. ಪ್ರಾಣಿ ಯ ಅಧಃಪತನವಾದರೆ.....?

ಹೆಂಡತಿ— ಫೀವೂ.....

° ° °

ವಕೀಲ— ಆ ಸಂಭವ ಸ್ಥಳದಿಂದ ಫೀವು ಎಷ್ಟು ದೂರದಲ್ಲಿದ್ದಿರಿ?

ಸಾಕ್ಷಿ— ನಾಲ್ಕು ಗಜ, ಎರಡಡಿ, ಒಂಭತ್ತೂವರೆ ಇಂಚು.....

ಅಷ್ಟು ಸರಿಯಾಗಿ ಹೇಗೆ ಹೇಳುವಿರಿ?

ಫಿಮ್ಮಂತಹವರು ಯಾರಾದರೂ ಮತ್ತೆ ಹೀಗೆ ಕೇಳದಿರಲೆಂದು ನಾನು ಅಂದೇ ಅಂದಾಜು ಮಾಡಿದ್ದೆ.

° ° °

ಎಚ್. ಎಂ. ವಿಜಯನಾರಾಯಣ.

ಆ ತಾಯಿ

(ಎರಡನೇ ಪುಟದಿಂದ)

ವಾಗಿ ನಿಂತು "ಬರುತ್ತೇನ್ರಿ.... ಜೋಕ್ತಾಯಿತು" ಎಂದು ಎದ್ದು ನಿಂತರು.

"ಕೂತುಕೊಳ್ಳಿ.... ಮನೆಗೆ ಹೋಗಿ ಏನು ಮಾಡುತ್ತೀರಿ ಹೋಗುವಿರಂತೆ" ಎಂದರು ಆನಂದನ ಅಕ್ಕ.

ಸಾವಿತ್ರಮ್ಮನವರು ಅವರ ಒತ್ತಾಯಕ್ಕೆ ಕುಳಿತರು. ಆಗಲೂ ಅವರ ಕಣ್ಣುಗಳು ಹನಿಗೂಡಿದ್ದವು. ವ ತಸ್ಸಿನೊಳಗಿನ ವಣು ಹೊರ ಹೊಮ್ಮಲು ಆಡಪಡಿಸುತ್ತಿತ್ತು. ಆದರೂ ಸಮಾಧಾನ ಮಾಡಿಕೊಳ್ಳುತ್ತ ಕುಳಿತರು.

"ಹಾದ .... ಸಾವಿತ್ರಮ್ಮನೋರೆ ಏಕೆ ನಿಮ್ಮ ಕಣ್ಣಲ್ಲಿ ನೀರು?" ಎಂದು ಆನಂದನ ಅಕ್ಕ ಮತ್ತೆ ಪ್ರಶ್ನಿಸಿದರು.

"ಏನೂ ಇಲ್ಲ"....ಸೆರಗಿನಿಂದ ಕಣ್ಣು ಒರೆಸಿಕೊಳ್ಳುತ್ತಾ "ಜೊತ್ತಾಯಿ ಬಂದುತ್ತೇನ್ರೀ" ಎಂದು ಹೊರಟು ಬಿಡಲೆಂಬುದು ಸಾವಿತ್ರಮ್ಮ. ಆನಂದನ ಅಕ್ಕನಿಗೆ ವಿಷಯ ತಿಳಿಯುವ ಕುತೂಹಲ ಮತ್ತೆ-ಮತ್ತೆ ಒತ್ತಾಯಪಡಿಸಿ ಕೇಳಿದರು.

"ನಿಮ್ಮ ತಮ್ಮನನ್ನು ನೋಡಿದ ಘಟನೆಯಿಂದ ನನ್ನ ಮಗ ಕೇಶವನ ನೆನಪು. ನನ್ನ ಮಗನ ರೂಪೇ ನಿಮ್ಮ ತಮ್ಮನದು. ಸ್ವಲ್ಪವೂ ಬೇರೆಯಲ್ಲ ನೋಡಿ".

ಒಂದು ವರ್ಷವಾಯಿತು ಹೋಗಿ. ನನ್ನ ಮನ ಕನ್ನಪ್ಪನ ಬಿಟ್ಟು ಹೊರವಾಗಿ. ಹೋಗಲಿ ಬಿಡಿ' ಎಂದು ಕಲ್ಲಿಸಿದರು.

"ಏನು ಹೇಳ್ರಿ, ತಮ್ಮ ನಿಮ್ಮ ಮಗನ ಕತೆ ಅಲ್ಲಿಗೆ ನಿಲ್ಲಿಸಿದಿರಲ್ಲು."

"ಅವನು ಬರೆದು ಬಿಟ್ಟು ಹೋದ ಅನೇಕ ಕತೆ—ಇವನ—ಚಿತ್ರ ಈಗಲೂ ನನ್ನ ಅಣಕಿಸಿ ನನ್ನ ಹೊಟ್ಟೆ ಉರಿಸುತ್ತಿವೆರ್ರಿ...."

"ಅವನ ಒಬ್ಬನೇ ಮಗನೆಂದು ಬಹು ಪ್ರೀತಿಯಿಂದ ಎಸ್. ಎಸ್. ಎಲ್ ಸಿ. ಪಾಸು ಮಾಡಿದ. ಮುಂದೆ ಪಿ. ಯು. ಸಿ. ಸೇರಿಸಿದೆ. ಅದನ್ನೂ ಪಾಸು ಮಾಡಿದ. ಆಷಂತರ ಡಿಪ್ಲೊಮಾ ಓದಿ ಒಂದು ವರ್ಷ ಟ್ರೈನಿಂಗಿಗಾಗಿ ಬೊಂಬಾಯಿಗೆ ಹೋದ ನೋಡ್ರಿ... ಅಲ್ಲೇ ಇತ್ತೇನೋ ಅವನಿಗೆ ಮಾಣ"

"ಅವನ ಸ್ವಭಾವ ಸ್ವಲ್ಪ ಸ್ವಭಾವ. ಆದರೆ ಹಟವೂ. ಪೊದಲೆ ಹೇಳಿದನ್ನು ಒಬ್ಬನೆ ಮಗ ಅಂತ. ಹಿಡಿದ ಹಟ ಮಾಡ ಬ್ರಹ್ಮ ಬಂದರೂ ಬಿಡುತ್ತಿರಲಿಲ್ಲ."

ಬೊಂಬಾಯಿಯಲ್ಲಿ ಒಂದು ರೂಮು ಮಾಡಿಕೊಂಡಿದ್ದ. ಇತ್ತಲೂ ಅದೇ ಸಂಸಾರಕ್ಕೆ ಮನೆಗಳು. ಒಂದು ಮನೆಯ ಮುಂದಿನ ರೂಮಿನಲ್ಲಿ ಬಾಡಿಗೆಯಿದ್ದ. ಆ ಮನೆಯವರು ಒಂದು ನೌಕರಿಯಲ್ಲಿದ್ದರು. ಅವರಿಗೆ ಮಗಳು. ಜನ ಮಣ್ಣು ಮಕ್ಕಳು. ಪೊದಲನೆಯ ಮಗಳಿಗೆ ಅಗಲೇ ಮದುವೆಮಾಡಿ ಕೊಟ್ಟಿದ್ದರು. ಎರಡನೆಯ ಮಗಳು ಈಗ ಮದುವೆಗೆ ಕಾಯುತ್ತಿದ್ದಳು. ಅವಳ ವಿದ್ಯಾವಂತೆ, ರೂಪವತಿ. ಅವಳ ರೂಪ ಯೌವನಾದರೂ ಮಂಗಳಗೌರಿಯಂತೆ ಇತ್ತು. ಆ ಮನೆಯಲ್ಲಿ ಇವನು ಅನೇಕ ಬಾರಿ ಹೋಗಿದ್ದ, ಅವಳೊಡನೆ ಮಾತಾಡಿ ಬಂದಿದ್ದ. ಅವಳನ್ನು ನೋಡಿದಂದಿನಿಂದ ಮದುವೆಯಾದರೆ ಇವಳನ್ನೆ ಎಂದು ನಿರ್ಧರಿಸಿದ್ದ.

"ಒಂದು ಬಾರಿ ನನಗೂ ಪತ್ರ ಬರೆದು ತಿಳಿಸಿದ್ದ. ಕಲ್ಲಿ ಒಬ್ಬ ಹುಡುಗಿಯನ್ನು ನಾನು ಮದುವೆ ಮಾಡಿಕೊಳ್ಳಲು ನಿರ್ಧರಿಸಿದ್ದೇನೆ. ನನ್ನ ಟ್ರೈನಿಂಗ್ ಪೂರ್ಣ ಆದ ತಕ್ಷಣ ನಾನು ಊರಿಗೆ ಹಿಂದಿರುತ್ತೇನೆ. ಅನಂತರ ಮದುವೆಯ ಏರ್ಪಾಡು ಮಾಡಿ ಎಂದು."

ಅವನ ಸುಖ ಸಂತೋಷವೇ ನನ್ನ ಸುಖಸಂತೋಷವಾಗಿತ್ತು. ಏಕೆಂದರೆ ಅವನು ಹುಟ್ಟಿ ಹಿಂದು ವರ್ಷದಲ್ಲೇ ಅವರು ನನ್ನನ್ನು ಬಿಟ್ಟು ಹೊರಟು ಹೋದರು. ಹೋದ ಮೇಲೆ ಇದ್ದ ಆಸ್ತಿಪಾಸ್ತಿಯನ್ನೆಲ್ಲ ಮಾರಿ ಹೇಗೂ ಕಷ್ಟನಷ್ಟಗಳನ್ನು ಅನುಭವಿಸಿ ಅವನಿಗೆ ಓದಿಸಿದೆ. ಮದುವೆಯೊಂದು ಮಾಡಿ ಮೊಮ್ಮಕ್ಕಳನ್ನು ನೋಡಿ ಆನಂದಿಸಬೇಕೆಂಬ ಆಸೆಯಿಂದ ಅವನ ಎದುರು ನಾನು ಅವನಿಗೆ ನೋವಾಗುವಂತೆ ಮಾತಾಡೂ ಒಡುತ್ತಿರಲಿಲ್ಲ."

ಆ ಹುಡುಗಿಯ ಇವನದೇ ಮದುವೆ ಆಗಬೇಕೆಂಬ ಆಸೆ. ಅವಳ ದೃಢ ನಿರ್ಧಾರವು ಆಗಿ. ಆದರೆ ಇವನನ್ನೇ ಮದುವೆಮಾಡಿಕೊಳ್ಳ, ಇನ್ನೊಬ್ಬನಿಗೆ ನನಗೆ ಮದುವೆಯೆ ಬೇಡ ಎಂದು.

"ಇನ್ನೇನು ಇದೆಲ್ಲಾ. ಇವರಿದ್ದ ಟ್ರೈನಿಂಗ್ ಮುಗಿಸಿ ಊರಿಗೆ ಬರುವ ಸ್ಟಾರ್ಟ್ ಆಯ್ತು. ನಾನು ಇನ್ನೇನು ಮಾಡಬಹುದು ಹೇಳಿ ಹೊರಟುಬಿಟ್ಟೆನೆ. ಅಲ್ಲಿ ಎಲ್ಲಾ ಸ್ವಲ್ಪ ಸ್ವಲ್ಪ ಮಾರಿಕೊಂಡು ಮದುವೆ ಏರ್ಪಾಡು. ಮಾಡೋಣಾ" ಎಂದು ತಿಳಿಸಿದ. ಕಡೆಗೆ ಆ ಹುಡುಗಿಯ ಕಡೆಯಿಂದ ಉತ್ತರವಿಲ್ಲ.

ಕಡ್ಡೀರೇ ಉತ್ತರವಾಯಿತು.

"ಇಷ್ಟದಿನ ಕಾನು. ಒಂದರೆ ನಾಕು ಎನ್ನುವ ಉತ್ಸಾಹದಿಂದ ನನ್ನನ್ನು ಬರಮಾಡಿಕೊಳ್ಳುತ್ತಿದ್ದಳು. ಎನ್ನ ಮಾತ, ಕಿಲ—ಕಿಲ ನಗ. ಆ ಸೈಮುದ ಎಲ್ಲ ಹೋಯ್ತು? ನನ್ನ ಕಂಡರೇಕೆ ಬೇಸರ' ಎಂದು ಯೋಚಿಸಿದ ಅವನ ಮನಸ್ಸು.

ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳುತ್ತಾ ಆ ಹುಡುಗಿ 'ನನ್ನನ್ನು ಮರೆತು ಬಿಡಿ" ಎಂದು ಹೇಳಿ ಒಳ ನಡೆದಳು.

ಅವನಿಗೂ ಅಲ್ಲಿ ಕ್ಷಣಕಾಲ ನಿಲ್ಲಲಾಗಲಿಲ್ಲ, ಸೀದಾ ತನ್ನ ರೂಮಿಗೆ ಬಂದ. ಅವನು ತನ್ನ ರೂಮಿಗೆ ಬರುವ ವರೆವಿಗೂ ಅವನಿಗೆ ಮೈಮೇಲೆ ಪ್ರಜ್ಞೆಯಿಲ್ಲ.

ಹೀಗೇಕಾಯಿತು....?ಅವಳು ಏಕೆ ಹೀಗೆ ಹೇಳಿದಳು?

'ನನ್ನನ್ನು ಮರೆತು ಬಿಡಿ....ನನ್ನನ್ನು ಮರೆತು ಬಿಡಿ' ಎಂಬ ಮಾತು ಕಿವಿಯಲ್ಲಿ ಕಾಡಿ ಸೀಸದನ್ನ ಹೊಯ್ದಂತೆ ಆಯಿತು.

"ಹಿಂದೆ ಅವಳ ತಂದೆ ಒಂದುದಿನ ಇವನು ಹೊರಗೆ ಕುಳಿತಿದ್ದಾಗ ಆಡಿದ ಮಾತು ಇವನ ಕಿವಿಗೆ ಬಿದ್ದಿತ್ತು.

"ಲಲಿತಾ, ನೀನು ಹಾಗೆಲ್ಲಾ ಆ ಹುಡುಗನ ಜೊತೆ ತಿರುಗಾಡುವುದು ಒಳ್ಳೆಯದಲ್ಲ. ಮನುಷ್ಯಗೆ ಬಂದವನು' ಎಂದು ಗದರಿಸಿದ್ದರು.

ಕೇಶವನಿಗೆ ದಿಕ್ಕೇ ತೋಚಲಿಲ್ಲ ಮನ

ಸುವ್ಯವಸ್ಥಿತ ಬಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

೫೦ ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್" ನಲ್ಲಿ

ಸಂಗಡ್ಡ ಬೆಳೆಸಿರಿ.

ಠೇವಣಾತಿಗಳ ಮೇಲೆ 7½ ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½ ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ನ್ಯಾಯ ಉಳಿತಾಯ ಯೋಜನೆ

"ಜೀವನ-ನಿಧಿ" ಯನ್ನು

ನಿಮ್ಮ ಉಳಿತಾಯವನ್ನು ನಿಧಿಯಾಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

[illegible] ಮಂಗಳೂರು - 3.

Phone

In the Court of the District Judge of South Kanara, Mangalore.

P. & S. C. No. 19 of 1968.

In the matter of the debts of late A. Abdul Khader ... Deceased.

1. Beebimma,
2. Beepathumma alias Puttu,
3. Abdul Rasheed } Minors repre-
4. Beebi Hahma } sented by guardian next friend mother, petitioner No. 2.

.. Petitioners.

Notice is hereby given that on the 12th day of March 1968 application was made to this Court by the petitioners, for grant of Succession Certificate with respect to certain debts and Securities of A. Abdul Khader, of Derangipet, Mangalore Taluk who died on 1-4-1955 and that the said application stands posted to 28-5-1968 for hearing. Persons interested in opposing the said grant must file their caveat on or before the said date.

(By order of the Court)

S. R. Hegde,
Advocate for Petitioners.

Mangalore, 23-4-1968.

ಉಡಿಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 377/1967

N. K. R. ಹೆಬ್ಬಾರ್ - ವಾದಿ.

ಮತ್ತು

ಬಾಬು ಮೈರಿ — ಗಂಡಿಬಾಗಿಲು ನಾರಾಯಣ ಮೈರಿಯ ಮಗ .. ಬೆಳ್ಳಂಗಡಿ ತಾಲೂಕು ನೆಂಬೂ ಗ್ರಾಮ — ಪ್ರತಿವಾದಿ

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ವಾದಿಗೆ ತಾ. 20-9-1966ರಲ್ಲಿ ಬರೆಯಲ್ಪಟ್ಟ ದಿನಾಂಕ ನೋಟಿನ ಅಲ್ಲಿ ಬಡ್ಡಿ ಮತ್ತು ಅಸಲು ವಗೈರೆ ಕೊಡಬೇಕಾದ ಮೇಲ್ಕಂಡ ವಾದಿಯವರಾದ ಮೇಲ್ಕಂಡ ದಾವೆಯು ನಿಮ್ಮ ವಿರುದ್ಧ ತಾ. 6-5-1968ಕ್ಕೆ ಇಟ್ಟಿದೆ. ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಕೂಡಾ ಕೋರ್ಟಿನಲ್ಲಿ ಕೇಳಬೇಕೆಂದು ಕಾಜರಾಗಿ ಜ್ಞಾಪಿಸಲು ಸೂಚಿಸಲ್ಪಟ್ಟಿದ್ದು ಕಟ್ಟಿದ್ದೆ ಎಂದು ಗೌರವಾಜರಿಯಿಂದ ನಿಮಗೆ ಕಟ್ಟಪಡಿಸಲ್ಪಟ್ಟಿದೆ.

ಕೋರ್ಟಿನ ಹುಕುಂ ಪ್ರಕಾರ

K. Balachandra Rao.
Advocate for Plaintiff

Udipi, 9-4-1968

ಅಮೃತಾಂಜನ

ಎಲ್ಲಾ ತರದ ನೋವುಗಳಿಗೆ

50 ವರ್ಷ ಪ್ರಾಯದ

NAVAYUGA 9—9—1968
Registered with the Registrar of News Papers for India under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಕಲೆ—ಸಂಸ್ಕೃತಿ

ಚೆಲುವಿನ ಹಚ್ಚೆ

ಬರೆದವರು:
ಶ್ರೀ ಸ. ನಾರಾಯಣ.

ಹಚ್ಚೆಯ ಸೌಂದರ್ಯ ಜನ ಸಾಮಾನ್ಯರಲ್ಲಿ ಮಾತ್ರವೇ ಅಲ್ಲದೆ ಶ್ರೀಮಂತರಲ್ಲಿಯೂ ಕಂಡು ಬರುತ್ತದೆ. ಭಾರತದಲ್ಲಿ ಅನೇಕ ಸ್ತ್ರೀಯರು, ಮುಖ, ಕೈ, ಕೈಗಳ ಮೇಲೆ ಹಚ್ಚೆ ಚುಚ್ಚಿಸಿಕೊಳ್ಳುತ್ತಾರೆ. ಜಳ್ಳಿಯ ಬಂಗಾಳರಲ್ಲಿ, ಹಿಂದಿನ ಕಾಲದ ಗುಹಿಳೆಯರಲ್ಲಿ ಈ ಗುರುತು ಇಂದಿಗೂ ಕಾಣ ಬರುತ್ತದೆ. ಗುಡ್ಡಗಾಡಿನ ಜನತೆಯಲ್ಲಿ ಈ ಸಂಪ್ರದಾಯ ಅಧಿಕವಾಗಿರುತ್ತದೆ.

ಸೂಜಿಯ ಮೊನೆಯಿಂದ ಚರ್ಮದಲ್ಲಿ ಬಣ್ಣಮುಂಬಿ, ಚರ್ಮವನ್ನು ಸೀಳಿ ಮತ್ತು ಬರೆ ಕೊಟ್ಟು ಗರುಸು ಮೂಡುವ ಮೂರು ವಿಧಾನಗಳಿಂದ ಹಚ್ಚೆ ಚುಚ್ಚುತ್ತಾರೆ. ಸ್ತ್ರೀಯರ ಕೈಕಾಲುಗಳ ಮೇಲೆ, ಮೈಯ ಮೇಲೆ, ತುಟಿಯ ಅಡಿಯಲ್ಲಿ ಹಚ್ಚೆಯ ಗುರುತುಗಳಿರುವುದು ಸಾಮಾನ್ಯ. ಹಚ್ಚೆಯಲ್ಲಿ ಅನೇಕ ಬಗೆಯ ಚಿತ್ರ, ಹೆಸರು, ಲತಾಪುಷ್ಪಗಳನ್ನು ಚಿತ್ರಿಸುವರು. ಒಬ್ಬ ಸ್ತ್ರೀಯ ಕೈಕಾಲುಗಳ ಮೇಲೆ ಪೂರ್ಣ ಹಚ್ಚೆ ಚುಚ್ಚಿಸುವ ಕಾರ್ಯ ಮುಗಿಯ ಬೇಕಾದರೆ ಕೆಲ ತಿಂಗಳು ಬೇಕಾಗುವುದು.

ಭಾರತದಲ್ಲಿ ಮಾತ್ರವೇ ಅಲ್ಲದೆ ಪರದೇಶದ ಸ್ತ್ರೀಯರಲ್ಲಿಯೂ ಈ ಬಗೆಯ ಸೈಸರ್ಗಿಕ ಅಲಂಕಾರ ರೂಢಿಯಲ್ಲಿರುವುದು ತಿಳಿದು ಬರುತ್ತದೆ. ಒಂದು ಬಾರಿ ಹಚ್ಚೆಯ ಗುರುತು ಮೂಡಿದರೆ ಅದನ್ನು ಯಾವ ಬಗೆಯಿಂದಲೂ ಅಳಿಸಲು ಸಾಧ್ಯವಿಲ್ಲ; ತೊಡದುಹಾಳುವಂತಿಲ್ಲ. ಅಸ್ಟ್ರೇಲಿಯಾದ ಪಶ್ಚಿಮ ತೀರದ ಜಾಲಿಸೀಳಿದ ಜನರು ತಮ್ಮ ಶರೀರಗಳ ಮೇಲೆ ಶಾಶ್ವತ ಬಗೆಯ ಪುಷ್ಪಗಳ ಅಲಂಕಾರವನ್ನು ಹಚ್ಚೆಯ ಮೂಲಕ ಹಚ್ಚಿಸಿಕೊಳ್ಳುತ್ತಾರೆ.

ಸ್ಕಾಟ್ಲೆಂಡಿನ ಕುಲೀನ ಸ್ತ್ರೀಯರು ಹಚ್ಚೆ ಚುಚ್ಚಿಸಿಕೊಳ್ಳುವ ರೀತಿ ವಿಚಿತ್ರ ಕರವಾದುದು. ಅಲ್ಲಿಯ ಜಾಲಿಕೆ ದೊಡ್ಡವಳಾದೊಡನೆ ಮೊದಲು ತುಟಿ ಮತ್ತು ಪಡ್ಡದ ಮೇಲ್ಭಾಗದಲ್ಲಿ ಚೂಪಾದ ಚೂಂಯಿಂದ ಸೀಳಿ ಅದರಲ್ಲಿ ಕಪ್ಪು ವರ್ಣದ ಜೊರ್ಜ (ಪ.ಡಿ) ಯನ್ನು ತುಂಬುತ್ತಾರೆ. ಅಸಹನೀಯ ಯಾತನೆಯಾದರೂ ಅವಳು ಅದನ್ನು ಸಹಿಸಿಕೊಂಡಿರುತ್ತಾಳೆ. ಅನಂತರ ಹಚ್ಚೆ ಚುಚ್ಚಿದವರಿಗೆ ಉಪಾಹಾರ ಕೂಡ ತ್ಯಾಗ. ಮೊದಲು ಊರಿನ ಪ್ರಮುಖರ ಮಗಳಿಗೆ ಹಚ್ಚೆ ಚುಚ್ಚುವಾಗ ಧರಬಲಿಯನ್ನು ಕೊಡುವ ಪಂಪಾಕವಿತ್ತು.

ಮೆಲೆನೇಶಿಯಾದ ಸ್ತ್ರೀಯರ ಪ್ರಮುಖ ಸೌಂದರ್ಯವೆಂದರೆ ಹಚ್ಚೆ. ಇಲ್ಲಿಯ ಪುರುಷರಲ್ಲಿ ಹಚ್ಚೆ ಚುಚ್ಚಿಸಿಕೊಳ್ಳುವ ರೂಢಿ ಇಲ್ಲ. ಎಡಾ ಮಿರಲ್‌ಟಿ ದ್ವೀಪದಲ್ಲಿ ಮುಖ ಮತ್ತು ಎದೆಯ ತುಂಬ ಹಚ್ಚೆ ಚುಚ್ಚಿಸಿಕೊಳ್ಳುವ ಸಂಪ್ರದಾಯವಿದೆ. ಈ ಜನರ ಮೈ ಬಣ್ಣ ಕಪ್ಪಾಗಿರುವುದರಿಂದ ಹಚ್ಚೆಯ ಬಣ್ಣ ಕಾಣುವ ಸಲುವಾಗಿ ಅವರು ಚರ್ಮವನ್ನು ಸುಟ್ಟು, ಅಥವಾ ಸೀಳಿ ಹಚ್ಚೆಯನ್ನು ಗುರುತು ಮಾಡುತ್ತಾರೆ. ಕನ್ಯೆಗೆ ವಿವಾಹ ಪೂರ್ವದಲ್ಲಿಯೇ ಈ ಕಾರ್ಯ ಮಾಡುವರು. ಚುಚ್ಚಿಸಿಕೊಳ್ಳುವ ಸಂಕಟ ತಾಳಲಾರದೆ ಸ್ವಲ್ಪ ಸ್ವಲ್ಪವೇ ಚುಚ್ಚಿಸಿಕೊಳ್ಳುತ್ತಾ ಒಂದೊಂದು ಚಿತ್ರದ ಗುರುತು ಮೂಡಿಸಿ ಮುಗಿಯ ಬೇಕಾದರೆ ತಿಂಗಳುಗಳೇ ಬೇಕಾಗುವುದು.

ಫಿಜಿದ್ವೀಪದಲ್ಲಿ ಹಚ್ಚೆಯ ಗುರುತು ಇಲ್ಲದಿರುವ ಸ್ತ್ರೀಯನ್ನು ಹುಡಿದು ಅವಳಿಗೆ ಒಲಕ್ಕಾರದಿಂದ ಹಚ್ಚೆ ಹಾಕುವರು. ಮುಖದ ಮೇಲೆ ಸಣ್ಣ ಸಣ್ಣ ವರ್ತುಲಗಳನ್ನು ಮೂಡುವರು. ಮೂರ್ಖಲ ದ್ವೀಪದ ಕುಲೀನ ಪುರುಷರು ತಮ್ಮ ಗಲ್ಲಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುವರು. ನೊಕೋರ ದ್ವೀಪದಲ್ಲಿ ಹಚ್ಚೆಯ ಕಾರ್ಯ ಆರಂಭವಾಗುವ ಮೊದಲು ಮಹಿಳೆ ಒಂದು ತಿಂಗಳ ಕಾಲ ಮನೆಯಲ್ಲಿ ಪರಿಶುದ್ಧಳಾಗಿದ್ದು ಪ್ರತಿಪಿತ್ಯವೂ ಸಮುದ್ರಸ್ನಾನ ಮಾಡಿ ಬರಬೇಕಾಗುತ್ತದೆ.

ಆಸ್ಟ್ರೇಲಿಯಾದಲ್ಲಿ ವಿವಾಹದ ಮೊದಲು ಹಚ್ಚೆ ಚುಚ್ಚುವರು. ಇಲ್ಲಿ ಉಳ್ಳವ ಹಚ್ಚೆ ಚುಚ್ಚುವ ರೂಢಿ ಇದೆ. ಆರಂಭದಲ್ಲಿ ಕನ್ಯೆಯನ್ನು ಒಬ್ಬ ವೃದ್ಧ ಸ್ತ್ರೀ ಮನೆಯಿಂದ ಬೇರೆಡೆಗೆ ಕರೆದೊಯ್ದು ಹಚ್ಚೆ ಹಾಕುವ ಭಾಗಕ್ಕೆಲ್ಲ ಮಣ್ಣಿನ ರಾಡಿ (ಕೆಸರು) ಮೆತ್ತುವಳು. ಅನಂತರ ಹುಲ್ಲು ಎಲೆಗಳನ್ನು ರಾಶಿಹಾಕಿ ಸುಟ್ಟು ಅದರ ಹೊಗೆ ಕುಡಿಯಲು ಹೇಳುವಳು. ಆ ಸಂದರ್ಭದಲ್ಲಿ ಕನ್ಯೆಗೆ ಪತಿ ಸೇವೆದು ಬಗ್ಗೆ ಉಪದೇಶ ಮಾಡಿಯುವುದು. ಕನ್ಯೆ ವೃದ್ಧೆಯ ಎದುರಿನಲ್ಲಿ ಕುಳಿತುಕೊಳ್ಳುವಳು. ವೃದ್ಧೆ ಕನ್ಯೆಯ ತಲೆಯನ್ನು ತನ್ನ ಮೊಣ ಕಾಲುಗಳಿಂದ ಒತ್ತಿ ಹಿಡಿದುಕೊಳ್ಳುವಳು. ಆಗ ಹಚ್ಚೆ ಚುಚ್ಚುವ ಪುರುಷರು ಕನ್ಯೆಯ ಬೆನ್ನಲ್ಲಿ ಒಂದು ಇಂಚು ಉದ್ದ, ಒಂದು ಇಂಚು ಅಗಲವಾದ ಗಾಯ ಮಾಡುವರು. ನೋವನ್ನು ತಾಳಲಾರದೆ ಅವಳು ಕಿರುಚುವಳು. ಪಾರಾಗಲು ಪ್ರಯತ್ನಿಸುವಳು. ಈ ಕಾರ್ಯ ಮುಗಿಯಲು ಸುಮಾರು ಒಂದು ಗಂಟೆ ಕಾಲ ಬೇಕಾಗುತ್ತದೆ. ಅನಂತರ ಅವಳ ಗಾಯಕ್ಕೆ ಎಣ್ಣೆ ಹಚ್ಚುವರು. ಅವಳ ತಲೆಗೆ ಪಕ್ಷಿಯ ಗರಿಯನ್ನು ಕಟ್ಟುವರು. ಅವಳು ಮರುದಿನ ಪೂರ್ಣ ಉಪವಾಸ ಮಾಡಬೇಕಾಗುತ್ತದೆ. ಕನ್ಯೆಯನ್ನೋವನ್ನು ಅನಂದದಿಂದ ಅನುಭವಿಸುವಳು. ತನ್ನ ಬೆನ್ನಲ್ಲಿ ಹಾಕಿದ ಹಚ್ಚೆ ಬಹು ಸುಂದರವಾಗಿದೆ ಎಂದು ತಿಳಿದಿರುತ್ತಾಳೆ. ಪ್ಯೂಗಿನಿಯಲ್ಲಿಯೂ ಹಚ್ಚೆ ಚುಚ್ಚುವ ರೂಢಿ ಇದೆ. ಸೊಡಿಯಿಂದ ಚರ್ಮದಲ್ಲಿ ವರ್ತುಲಾಕಾರದಲ್ಲಿ ಬಣ್ಣ ತುಂಬುವರು. ದೋನಿಯೋ ದ್ವೀಪದ ಕಾಯಿಫ ಜಾತಿಯ ಸ್ತ್ರೀಯರು ಹಚ್ಚೆ ಹಾಕುವುದರಲ್ಲಿ ಕುಶಲರು—ಪ್ರವೀಣರು ಎಂದು ಹೆಸರು ಪಡೆದಿದ್ದಾರೆ.

ಭಾರತದಲ್ಲಿ ಗುಡ್ಡಗಾಡು ಜನಾಂಗದವರಲ್ಲಿ, ಗ್ರಾಮೀಣ ಜನಾಂಗದವರಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುವ ಅಭಿರುಚಿ, ಸಂಪ್ರದಾಯ ಹೆಚ್ಚು ಲಂಬಾಣಿ (ಲಂಜಾಬಾರರು) ವಡಿಕೆಯರು ಹಚ್ಚೆ ಹಾಕಿಸಿಕೊಳ್ಳುವುದರಲ್ಲಿ ಅಗ್ರಗಣ್ಯರು. ಅವರ ಕೈ ಮೈಗಳು ಚಿತ್ರಮಯವಾಗಿರುತ್ತವೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಆತ್ಮಪಯುಕ್ತವಾದುದು
ಬೆಲೆ ರೂ. ೨-೦೦ [ಪ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿರು, ದರ್ಭಾಹಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿ ಗೃಹಪ್ರಯೋಗ. ಹಿರಿದೆ ವಿಧಾಕ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನೆನಪಿನ ಮಣಿಗಳು

"ಏನಿದೆ ಮಣ್ಣು?" "ಇದೇನೂ ರುಚಿಯಿಲ್ಲ. ಮಣ್ಣಿನ ಹಾಗಿದೆ"— ಹೀಗೆ ತಾತ್ಪರ್ಯ ಮಾಡಿ ಹೇಳುತ್ತಾರೆ. ಹಾದು, ತಿಂದು ನೋಡಿಯೇ ಹೇಳುತ್ತಾರನ್ನಿ. ಆದು ಬಾಯಿಗೆ ಸ್ವಲ್ಪವೂ ಸೈಸಲಾಗದಂಥಾದ್ದು.

ಆದರೆ ಮಣ್ಣಿನ ಮಾಹಿತ್ವವನ್ನು ಆಲೋಚನೆ ಮಾಡಿದರೆ, ಹಾಗೆ ತಾತ್ಪರ್ಯ ಮಾಡುವುದು ಎಷ್ಟು ತಪ್ಪು ಅನಿಸುವುದಿಲ್ಲವೆ?

ಒಂದು ಹೆಚ್ಚೆ ಮಣ್ಣಿಗಾಗಿ ಎಂತೆಂತಹ ವ್ಯಾಪ್ತಿಯಲ್ಲಿ! ಕೊಲೆ—ಹತ್ಯೆಯಲ್ಲಿ! ಮಣ್ಣಿನಿಂದ ಕೌರವ ಕೆಟ್ಟ— ಗಾದೆಯೇ ಇದೆ.

ಅದೆಲ್ಲ ಯಾಕೆ? ಕಣ್ಣ ಮುಂದೆಯೇ ಇದೆಯಲ್ಲಾ? ಮಣ್ಣಿನಲ್ಲೇ ಹುಟ್ಟುವ ಕಬ್ಬು ಅಕ್ಕಿ ಹಣ್ಣು ಮುಂತಾದುವೆಲ್ಲಾ ಧವ್ಯನಾಲಗೆಯ ಮೇಲೆ ಎಂತೆಂತಹ ಅಧಿಕಾರ ನಡೆಸುತ್ತವೆ! ಅಂತಲೇ ಪುರಂದರ ದಾಸರು 'ಮಣ್ಣಿಂದಾ ತೀರಾ ಮಣ್ಣಿಂದಾ—" ಅಂತ ಎಂದೋ ಹಾಡಿದ್ದಾರೆ. ನಾವು ಕೂಡಾ—

"ನೋಡಿದರೆಲ್ಲಾ ಒಂದೇ ಮಣ್ಣು
ಬಗೆ ಬಗೆ ರುಚಿಗಳ ಹಣ್ಣು
ದೇವರ ಮಾಟ ವಿಚಿತ್ರದಾಟ
ದೇವರಿಗರ್ಪಿಸಿ ತಿನ್ನು"—ಎಂದು ಹೇಳೋಣ.

—ಎಂ. ರಂಗರಾವ್

Edited, Printed & Published by K. B. Shetty at the Navayuga Press, Udupi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

16—5—1968

೨೦
ಪೈಸೆ